ಮನುಷ್ಯ ಜಾತಿ
ತಾನೊಂದೆ ವಲಂ

ಕನ್ನಡ ಸಾಹಿತ್ಯ ಪರಿಷತ್ತು-೧೦೦

(೧೯೧೫-೨೦೧೫)

34



ಪ್ರೊ. ಜಿ. ಅಶ್ವತ್ಥನಾರಾಯಣ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

[illegible]

ಕನ್ನಡ ಸಾಹಿತ್ಯ [illegible] – [illegible]

[illegible]

[illegible]

[illegible]

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ಕನ್ನಡ ಸಾಹಿತ್ಯ ಪರಿಷತ್ತು – ೧೦೦

(೧೯೧೫-೨೦೧೫)

(ಪರಿಷತ್ತಿನ ಇತಿಹಾಸ ಗ್ರಂಥ)

ಪ್ರೊ. ಜಿ. ಅಶ್ವತ್ಥನಾರಾಯಣ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

Kannada Sahitya Parishattu Centenary Publication

ಕನ್ನಡ ಸಾಹಿತ್ಯ ಪರಿಷತ್ತು-೧೦೦
ಪ್ರೊ. ಜಿ. ಅಶ್ವತ್ಥನಾರಾಯಣ
ಪ್ರಕಾಶಕರು :
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ಮುಖಪುಟ ವಿನ್ಯಾಸ : ಶ್ರೀ ಯು.ಟಿ. ಸುರೇಶ್
ಪುಟಗಳು : ೯೦೮
ಮುದ್ರಣ ಕಾಗದ : ೭೦ ಜಿ.ಎಸ್.ಎಂ.
ಎನ್.ಎಸ್.ಮ್ಯಾಪ್‌ಲಿಥೋ
ಬೆಲೆ : ೬೦೦=೦೦
ಪರಿಷತ್ತಿನಿಂದ ಮುದ್ರಣ: ೨೦೧೫
ಪ್ರತಿಗಳು : ೧೦೦೦

ಮುದ್ರಣ
ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

KANNADA SAHITYA PARISHATTU-100 - a historical study of Kannada Sahitya Parishattu by Prof. G. Ashwathanarayana
published by :
Kannada Sahitya Parishattu
Pampa Mahakavi Road
Chamarajapete
Bengaluru - 560018

Coverpage : Sri U.T. Suresh
Pages : 908
Paper : 70 G.S.M. N.S. Maplitho
Rs : 600=00
Edition by Parishattu : 2015
Copies : 1000

printed at
B.M. Sri Acchukoota Offset
Kannada Sahitya Parishattu
Pampa Mahakavi Road, Chamarajapete
Bengaluru - 560 018

ಪ್ರಕಟಣಾ ಸಮಿತಿ

ಅಧ್ಯಕ್ಷರು – ಶ್ರೀ ಪುಂಡಲೀಕ ಹಾಲಂಬಿ

ಸಮ್ಮೇಳನಾಧ್ಯಕ್ಷರು – ಡಾ. ಸಿದ್ಧಲಿಂಗಯ್ಯ
೮೧ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು

ಸದಸ್ಯರು

ಶ್ರೀ ಬಿ.ಎಂ. ಸದಾಶಿವಪ್ಪ ಶ್ಯಾಗಲೆ
ಶ್ರೀ ನೀಲಾವರ ಸುರೇಂದ್ರ ಅಡಿಗ
ಡಾ. ಸೋ.ಮು. ಭಾಸ್ಕರಾಚಾರ್
ಶ್ರೀ ಎಸ್.ಜಿ. ಕೋಟಿ
ಡಾ. ಮಳಲಿ ವಸಂತಕುಮಾರ್
ಡಾ. ಮಾನಸ
ಡಾ. ಎ.ವಿ. ನಾವಡ
ಶ್ರೀ ಬಿ.ಎನ್. ರಾಮಸ್ವಾಮಿ
ಶ್ರೀ ಎನ್. ನಾರಾಯಣ
ಡಾ. ವಸುಂಧರಾ ಭೂಪತಿ
ಡಾ. ರಾಜೇಂದ್ರ ಎಸ್. ಗಡಾದ
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್
ಡಾ. ಸುಜಾತಾ ಜಂಗಮಶೆಟ್ಟಿ
ಶ್ರೀ ಸಿ.ಕೆ. ರಾಮೇಗೌಡ
ಡಾ. ರಾಜಶೇಖರ ಹತಗುಂದಿ
ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಜೆ.ಎನ್. ಶಾಮರಾವ್
ಸಂಚಾಲಕ

ಅಧ್ಯಕ್ಷರ ನುಡಿ

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಸರ್ ಮಿರ್ಜಾ ಇಸ್ಮಾಯಿಲ್ ಅವರ ನೆರವಿನಿಂದ ಪುಷ್ಟಿ ಪಡೆಯಿತು. ಅಂದಿನಿಂದ ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹನೀಯರು ಅಲಂಕರಿಸಿದ್ದಾರೆ. ಕೇವಲ ೧೨೫ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೧೦,೦೦೦. ಎಲ್ಲ ಮೂವತ್ತು ಜಿಲ್ಲೆಗಳಲ್ಲೂ, ೧೭೬ ತಾಲ್ಲೂಕುಗಳಲ್ಲೂ, ೪ ಹೊರನಾಡು ಘಟಕಗಳಲ್ಲೂ ಪರಿಷತ್ತು ತನ್ನ ಶಾಖೋಪಶಾಖೆಗಳನ್ನು ವಿಸ್ತರಿಸಿಕೊಂಡಿರುತ್ತದೆ.

ಪರಿಷತ್ತಿನ ಪ್ರಕಟಣೆಗಳ ಸಂಖ್ಯೆಯೇ ೧೫೦೦. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಈ ಯೋಜನೆಯಡಿ ಎಂಟು ಸಂಪುಟಗಳು ಸಿದ್ಧವಾಗಿವೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ, ಈ ಮಾಲೆಯ ನೂರೂ ಪುಸ್ತಕಗಳು ಪ್ರಕಟಗೊಂಡಿವೆ. ಮೂರನೆಯದಾಗಿ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ಕನ್ನಡ ಸಾಹಿತ್ಯ ಪರಿಷತ್ತು – ೧೦೦ ಸಂಪುಟದ ಪ್ರಕಟಣೆ.

ಒಂದು ನೂರು ವರ್ಷಗಳ ಕಾಲ ಉಳಿದು ಬೆಳೆಯುವ ಸಂಸ್ಥೆಗಳು ಅಪರೂಪ. ಶತಮಾನವೆನ್ನುವುದು ಒಂದು ಸಂಸ್ಥೆಯ ಕಾಲಮಾನದಲ್ಲಿ ಬಹು ದೊಡ್ಡ ಸಾಧನೆ. ಆ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತು ಅದೃಷ್ಟವಂತ ಸಂಸ್ಥೆ; ಇಂಥ ಕಾಲಘಟ್ಟದಲ್ಲಿ ಅದರ ಅಧ್ಯಕ್ಷನಾಗಿರುವುದು ನನ್ನ ಬಹುದೊಡ್ಡ ಪುಣ್ಯ.

ಈ ಕಾಲಘಟ್ಟವನ್ನು ಸಾರ್ಥಕಗೊಳಿಸಬೇಕೆನ್ನುವ ಆಶಯದೊಂದಿಗೆ ನನ್ನ ಅಧಿಕಾರಾವಧಿಯನ್ನು ಆರಂಭಿಸಿದೆ. ನಾನು ಕನಸು ಕಂಡ ಹಲವು ಯೋಜನೆಗಳು ಕೈಗೂಡಿವೆ; ಕೆಲವೊಂದು ಯೋಜನೆಗಳು ಸಾಕಷ್ಟು ಕ್ರಮಿಸಿವೆ; ಆ ಸಮಾಧಾನ, ತೃಪ್ತಿ ನನಗಿದೆ.

ಪರಿಷತ್ತಿನ ಶತಮಾನದ ಇತಿಹಾಸವನ್ನು ದಾಖಲಿಸುವ ಮಹತ್ವದ ಯೋಜನೆಯನ್ನು ಕೈಗೊಳ್ಳಬೇಕೆಂದು ಯೋಜಿಸಿದಾಗ ಮೊದಲು ನನಗೆ ಹೊಳೆದದ್ದು, ಗುರುಸಮಾನರಾದ ಪ್ರೊ. ಜಿ. ಅಶ್ವತ್ಥನಾರಾಯಣ ಅವರು. ಎಪ್ಪತ್ತೆಂಟು ವರ್ಷದ ಅವರು ಸುಮಾರು ಅರವತ್ತು ವರ್ಷಗಳಿಗೂ ಹೆಚ್ಚು ಕಾಲ ಪರಿಷತ್ತಿನೊಂದಿಗೆ ಒಡನಾಡಿದವರು; ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದವರು; ಪರಿಷತ್ತಿನ ಒಳಗು ಹೊರಗು ಬಲ್ಲವರು. ಅವರನ್ನು ಇಂಥದೊಂದು ಗ್ರಂಥ ರಚಿಸಿಕೊಡಲು ಕೋರಿದಾಗ, ಅವರು ಪರಿಷತ್ತಿನ ಮೇಲಿನ ಪ್ರೀತಿ ಗೌರವಗಳಿಂದಾಗಿ ಒಪ್ಪಿಕೊಂಡು, ಈ ಬೃಹತ್ ಗ್ರಂಥವನ್ನು ರಚಿಸಿಕೊಟ್ಟಿದ್ದಾರೆ.

ಈ ಗ್ರಂಥ ಹರಹನ್ನು ಗಮನಿಸಿದರೆ, ಪರಿಷತ್ತಿನ ಬಗ್ಗೆ ಲಭ್ಯವಿರುವ ಅಪಾರ ಮಾಹಿತಿಯ ಅರಿವಾಗುತ್ತದೆ. ಒಂದು ಕ್ರಿಯಾಶೀಲ ಸಂಸ್ಥೆಯ ಇತಿಹಾಸ ಎಷ್ಟು ಅಧ್ಯಯನಯೋಗ್ಯ ಎಂಬುದು ಮನದಟ್ಟಾಗುತ್ತದೆ. ಈ ಗ್ರಂಥ ಪರಿಷತ್ತು ಕುರಿತ ಒಂದು ಮೌಲಿಕ ಆಧಾರ ಗ್ರಂಥ. ಅಪಾರ ಆಕರಸಾಮಗ್ರಿ, ಶೋಧನೆ, ಅದರ ವರ್ಗೀಕರಣ, ಕ್ರಮವರಿತ ಬರವಣಿಗೆ – ಹೀಗೆ ಒಂದು ಮಹಾಪ್ರಬಂಧವಾಗಿ ಇದು ಸಿದ್ಧಗೊಂಡಿದೆ. ಇಂಥ ಶ್ರಮದಾಯಕ, ಅಧ್ಯಯನಯೋಗ್ಯ ಗ್ರಂಥವನ್ನು ರಚಿಸಿಕೊಟ್ಟಿರುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ನನ್ನ ಗೌರವಪೂರ್ವಕ ಕೃತಜ್ಞತೆಗಳು.

ಈ ಮಹತ್ಕಾರ್ಯದಲ್ಲಿ ನನ್ನೊಡನೆ ಸಹಕರಿಸಿದ ಪ್ರಕಟಣ ಸಮಿತಿಯ ಎಲ್ಲ ಸದಸ್ಯರಿಗೆ ಹಾಗೂ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಬೃಹತ್ ಸಂಪುಟವನ್ನು ಅತ್ಯಲ್ಪ ಕಾಲದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್‌ನ ಎಲ್ಲ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು.

೨೩-೧೦-೨೦೧೫
ವಿಜಯದಶಮಿ
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಲೇಖಕನ ಮಾತು

ಕನ್ನಡ ಸಾಹಿತ್ಯ ಪರಿಷತ್ತು ನನ್ನ ಜೀವನದ ಅವಿಭಾಜ್ಯಾಂಗ. ಪರಿಷತ್ತಿನ ಹತ್ತಿರ ನಮ್ಮ ಮನೆ ಇತ್ತು. ನಾನು ಓದಿದ ಮಾಧ್ಯಮಿಕ ಶಾಲೆ, ಕೋಟೆ ಪ್ರೌಢಶಾಲೆ ಪರಿಷತ್ತಿನ ಎದುರು ಪುಟ್‌ಪಾತಿನಲ್ಲೇ ಹತ್ತಿರದಲ್ಲೇ ಇತ್ತು. ಶಾಲೆಗಿಂತ ಹೆಚ್ಚು ವೇಳೆ ಕಳೆಯುತ್ತಿದ್ದುದು ಪರಿಷತ್ತಿನಲ್ಲೇ. ಆಗ ಎಂ. ಆರ್. ಶ್ರೀನಿವಾಸಮೂರ್ತಿಗಳು (೧೯೫೦-೧೯೫೩) ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲ. ವಿಸೀ, ಕೆ. ಎಸ್. ನರಸಿಂಹಸ್ವಾಮಿ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ ಈ ಮೂವರೂ ದಿನವೂ ಸಂಜೆ ಪರಿಷತ್ತಿನ ಬಳಿ ಸೇರಿ ಲಾಲ್‌ಬಾಗಿಗೆ ವಾಕಿಂಗ್ ಹೋಗಿಬರುತ್ತಿದ್ದರು. ಸಂಜೆ ಆದರೆ ಪರಿಷತ್ತಿನ ಬಳಿ ಹತ್ತಾರು ಜನ ಕನ್ನಡ ಸಾಹಿತಿಗಳು ವಿದ್ವಾಂಸರು ಬಂದು ಸೇರುತ್ತಿದ್ದರು. ಉಭಯಕುಶಲೋಪರಿ ನಡೆಸುತ್ತಿದ್ದರು. ಸಾಹಿತ್ಯದ ಚರ್ಚೆ ನಡೆಯುತ್ತಿತ್ತು.

ಪರಿಷತ್ತಿನ ಹಳೆಯ ಕಟ್ಟಡ ಶ್ರೀಕೃಷ್ಣರಾಜ ಪರಿಷನ್ಮಂದಿರ ಕಟ್ಟಡ ಮಾತ್ರ ಆಗ ಇತ್ತು. ಅದರಲ್ಲಿ ಅಧ್ಯಕ್ಷರ ಕಚೇರಿ, ಈಗಿನ ಮಾರಾಟ ವಿಭಾಗ ಇರುವೆಡೆ ಪುಸ್ತಕ ಭಂಡಾರ ಎಡಗಡೆ ವರಾಂಡದಲ್ಲಿ ವಾಚನಾಲಯ ಬಲಗಡೆ ವರಾಂಡದಲ್ಲಿ ನಿಘಂಟು ಕಚೇರಿ ಇತ್ತು. ಪರಿಷತ್ತಿನ ವಾಚನಾಲಯಕ್ಕೆ ಹತ್ತಾರು ಪತ್ರಿಕೆಗಳು ಬರುತ್ತಿದ್ದರು. ದಿನಕರ ದೇಸಾಯಿ ಅವರ ಜನ ಸೇವಕ, ವಯಸ್ಕರ ಶಿಕ್ಷಣ ಶಾಲೆಯ ಬೆಳಕು ನಮಗೆ ಅಚ್ಚುಮೆಚ್ಚು. ಆಗ ಹತ್ತಾರು ಕೈ ಬರಹ ಮಾಸಪತ್ರಿಕೆಗಳು ಬರುತ್ತಿದ್ದವು. ಜ್ಯೋತಿ, ಅಮರ ಜ್ಯೋತಿ, ಕವಿಗಾನ, ವಿದ್ಯಾಗಣಪತಿ ಮೊದಲಾದ ಕೈಬರಹ ಪತ್ರಿಕೆಗಳು ತಪ್ಪದೆ ಪ್ರತಿತಿಂಗಳೂ ಬರುತ್ತಿದ್ದವು. ನಾನು ನನ್ನ ಗೆಳೆಯ ಶಂಕರ್ ಸೇರಿ 'ಕರಡಿ' ಎಂಬ ಮಾಸಪತ್ರಿಕೆ (ಕೈಬರಹ) ಹೊರಡಿಸುತ್ತಿದ್ದೆವು. ಶಂಕರ್ ರಾಜರತ್ನಂ ಅವರಂತೆ ಪದ್ಯಗಳನ್ನು ಬರೆದು ಅವರಿಂದಲೇ ಭೇಷ್ ಎನಿಸಿಕೊಂಡಿದ್ದ. ಅವನ ಕರಡಿ ಪತ್ರಿಕೆಗೆ ಮಕ್ಕಳ ಸಾಹಿತಿ ಚಂದ್ರರಾಜಶೆಟ್ಟಿ, ಸಿದ್ದಿಕಟ್ಟೆ ಚಿತ್ರ ಬರೆದು ಕಳಿಸುತ್ತಿದ್ದರು.

ಕೈಬರಹದ ಪತ್ರಿಕೆ ಕೊನೆಯಲ್ಲಿ ೨ ಖಾಲಿಹಾಳೆಗಳು ಇರುತ್ತಿದ್ದವು. ಅದರಲ್ಲಿ ನಿಮ್ಮ ಅಭಿಪ್ರಾಯ ತಿಳಿಸಿ ಎಂದು ಬರೆಯುತ್ತಿದ್ದೆವು. ವಾಚನಾಲಯದಲ್ಲಿ ಪುಸ್ತಕಭಂಡಾರದಲ್ಲೇ ಕುಳಿತು ಪತ್ರಿಕೆ- ಪುಸ್ತಕ ಓದುತ್ತಿರುವುದು. ಯಾರಾದರೂ ನಮ್ಮ ಕೈಬರಹ ಪತ್ರಿಕೆ ಓದಿ ಅಭಿಪ್ರಾಯ ಬರೆದರೆ ತಕ್ಷಣ ಅದನ್ನು ನೋಡಿ ಖುಷಿಪಡುವುದು. ಟೀಕೆಮಾಡಿದ್ದರೆ ಸಪ್ಪೆ ಮುಖ ನಮ್ಮದು. ಮತ್ತು ನಾವು ಕೈಬರಹ ಪತ್ರಿಕೆಗಳ ಬಾಲ ಸಂಪಾದಕರೆಲ್ಲ ಪರಿಷತ್ತಿನಲ್ಲೇ ಕಾಲಕಳೆಯುತ್ತಿದ್ದೆವು. ಆಗ ನಂಜತೆ ಸೇರುತ್ತಿದ್ದವರಲ್ಲಿ ಚಲನಚಿತ್ರರಂಗದ ಖ್ಯಾತ ಗೀತಕಾರ ಉದಯಶಂಕರ, ಮಕ್ಕಳಕೂಟದಲ್ಲಿ ಜತೆ ಆಟಗಾರ. ಸಂಜೆ ಆದರೆ ಪರಿಷತ್ತಿನ ಕಾರ್ಯಕ್ರಮಗಳಿಗೆ ಹಾಜರಾಗುವುದು. ಹೀಗೆ ನಮ್ಮ ಬಾಲ್ಯ ಯೌವನಗಳು ಪರಿಷತ್ತಿನಲ್ಲೇ ಕಳೆದವು. ನಮ್ಮ ಓದಿನ ಬಂಡವಾಳವೆಲ್ಲ ಪರಿಷತ್ತೇ. ಆಗ ಪುಸ್ತಕ ಭಂಡಾರದಲ್ಲಿ ಕೆ. ನಾಗರಾಜ ಎಂಬ ಲೈಬ್ರರಿಯನ್ ಇದ್ದರು. ದೊಡ್ಡ ವಿದ್ವಾಂಸರು ಎಲ್ಲಪ್ಪಶಾಸ್ತ್ರಿ, ಕರ್ಲಮಂಗಲಂ ಶ್ರೀಕಂಠಯ್ಯ ಅವರ ಜತೆ ಸಿರಿಭೂವಲಯ ಗ್ರಂಥದ ಸಂಶೋಧನೆಯಲ್ಲಿ ತೊಡಗಿದವರು. ಡಿ. ಎಲ್. ಎನ್., ವಿಸೀ, ತೀನಂಶ್ರೀ, ಎಎನ್, ಉಪಾಧ್ಯೆ ಮೊದಲಾದ ವಿದ್ವಾಂಸರಿಗೆ ಚಿರಪರಿಚಿತರು. ಅವರು ಕೇಳಿದ, ಅವರು ಕೇಳದಿದ್ದ ಪುಸ್ತಕ ಮಾಹಿತಿ ಒದಗಿಸುತ್ತಿದ್ದವರು. ನಮ್ಮ ಮನೆ ಹಿಂದೆ ಇದ್ದವರು ಅವರ ಜತೆ ಸದಾ ಇರುತ್ತಿದ್ದೆ. ಕನ್ನಡ ವಿದ್ವಾಂಸರ ಮತ್ತು ವಿದ್ವತ್ ಸಾಹಿತ್ಯ ಪರಿಚಯ ಅವರಿಂದ ಆಯಿತು. ಎಂ.ಆರ್. ಶ್ರೀ., ಮಗ ಭೀಮ, ವಿಸೀ ಮಗ ಸತ್ಯ, ಸದಾಶಿವಯ್ಯ ಅವರ ಮಗ ಉದಯಶಂಕರ ಹೀಗೆ ಸಾಹಿತಿಗಳ ಮಕ್ಕಳು ನನ್ನ ಜತೆಗಾರರರಾಗಿದ್ದರು. ಹೀಗೆ ಪರಿಷತ್ತಿನ ಸಂಪರ್ಕ ಬಂದಿತು. ಅನಕೃ, ರಾಮಮೂರ್ತಿ ಅವರು ಕನ್ನಡ ಚಳವಳಿ ಪ್ರಾರಂಭಮಾಡಿದ ಕಾಲದಲ್ಲಿ ಹಿರಿಯ ಗೆಳೆಯ ಸೈಕಲ್ ಸುಬ್ಬರಾವ್, ತಿ.ತಾ.ಶರ್ಮರ ಮಗ ಶ್ರೀರಂಗ ಮೊದಲಾದವರ ಜತೆಯಲ್ಲಿ ಪರಿಷತ್ತು ಇನ್ನೂ

ನಿಕಟವಾಯಿತು. ಶಿವಮೂರ್ತಿಶಾಸ್ತ್ರಿಗಳ ಕಾಲಕ್ಕೆ ಅಲ್ಲಿಂದೀಚೆ ಪರಿಷತ್ತಿನ ಚುನಾವಣೆ ವಿಚಾರಗಳಲ್ಲಿ ಚುರುಕಾಗಿ ಭಾಗವಹಿಸಿದೆವು. ಜಿ. ನಾರಾಯಣರ ಕಾಲದಲ್ಲಿ ಮನೆ ಮನೆಗೆ ಪುಸ್ತಕ ಒಯ್ಯುವ ಕಾರ್ಯಕ್ರಮದ ಕಾರ್ಯದರ್ಶಿ, ಹಂಪನಾ ಕಾಲದಲ್ಲಿ ಗೌರವ ಕಾರ್ಯದರ್ಶಿ ಹೀಗೆ ಪರಿಷತ್ತಿನ ನಿಕಟ ಸಂಪರ್ಕ ಬೆಳೆಯುತ್ತಾ ಹೋಯಿತು. ಇಂದಿಗೂ ಪರಿಷತ್ತು ನನ್ನ ಬಾಳಿನ ಅವಿಭಾಜ್ಯಾಂಗ. ಕನ್ನಡ ಹೆಸರಾದದ್ದು ಉಸಿರಾದದ್ದು ನನಗೆ ಪರಿಷತ್ತಿನಿಂದ.

ಕನ್ನಡ ಸಾಹಿತ್ಯ ಪರಿಷತ್ತು ಇಂದು ಶತಮಾನೋತ್ಸವದ ಸಂಭ್ರಮದಲ್ಲಿದೆ. ಕನ್ನಡ ನಾಡಿನ ಸಾಹಿತ್ಯ ಸಂಸ್ಥೆ ಇಂದು ಸಾಂಸ್ಕೃತಿಕ ಸಂಸ್ಥೆ ಆಗುವುದರ ಜತೆಗೆ ಕನ್ನಡಿಗರ ಆಶೋತ್ತರಗಳನ್ನು ಬಿಂಬಿಸುವ ಪ್ರಾತಿನಿಧಿಕ ಸಂಸ್ಥೆ ಆಗಿದೆ. ಕೇವಲ ಸಾಹಿತ್ಯ ಪರಿಷತ್ತಾಗಿ ಉಳಿದಿಲ್ಲ. ವಿದ್ವನ್ಮಣಿಗಳ ಕೂಟವಾಗಿ ಉಳಿದಿಲ್ಲ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಮ್ಮೇಳನ, ಪುಸ್ತಕ ಪ್ರಕಟನೆ, ಸಾಹಿತ್ಯದ ಕಾರ್ಯಕ್ರಮಗಳು, ಸಮಾವೇಶಗಳು ಮೊದಲಾದ ಚಟುವಟಿಕೆಗಳಿಂದ ನಾಡಿನಾದ್ಯಂತ ಜನಮನದ ಹೃನ್ಮಣಿ ಆಗಿದೆ; ಆಗಾಗ ವಾದಭೂಮಿಯೂ ಆಗಿದೆ. ಸಾಹಿತ್ಯಿಕ ಚಳವಳಿಗೆ ಹಿನ್ನೆಲೆ ಒದಗಿಸಿದೆ. ಆದರೆ ನೇರವಾಗಿ ಚಳವಳಿಗಳಲ್ಲಿ ಪರಿಷತ್ತು ಇಳಿದಿಲ್ಲ. ಪರಿಷತ್ತಿನ ಸಾಹಿತಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

ಶತಮಾನೋತ್ಸವ ಸಂಭ್ರಮವನ್ನು ಆಚರಿಸುವ ಭಾಗ್ಯ ಈಗಿನ ಅಧ್ಯಕ್ಷರಾದ ಪುಂಡಲೀಕ ಹಾಲಂಬಿ ಅವರಿಗೆ ಒದಗಿ ಬಂದಿದೆ. ಪರಿಷತ್ತಿನ ರಜತೋತ್ಸವ ಭಾಗ್ಯ ಬಿಎಂಶ್ರೀ ಅವರಿಗೆ, ಸ್ವರ್ಣೋತ್ಸವ ಭಾಗ್ಯ ಜಿ. ನಾರಾಯಣರಿಗೆ ಒದಗಿಬಂದಿತ್ತು. ಈ ಘಟ್ಟಗಳು ಪರಿಷತ್ತಿನ ಇತಿಹಾಸದಲ್ಲಿ ಮೈಲಿಗಲ್ಲುಗಳು.

ಶತಮಾನೋತ್ಸವದ ಅಂಗವಾಗಿ ಒಂದು ವರ್ಷದ ಆಚರಣೆಯಲ್ಲಿ ಹಲವಾರು ಐತಿಹಾಸಿಕ ಮಹತ್ವದ ಯೋಜನೆಗಳನ್ನು ಹಾಲಂಬಿ ಅವರು ಯೋಜಿಸಿದರು ಮತ್ತು ನಡೆಸಿದರು. ಅವುಗಳಲ್ಲಿ ಮುಖ್ಯವಾದವು ಸಮಾವೇಶಗಳು ಮತ್ತು ಪ್ರಕಟನೆಗಳು, ಶತಮಾನೋತ್ಸವ ಕಟ್ಟಡ ನಿರ್ಮಾಣಯೋಜನೆ, ಶತಮಾನೋತ್ಸವ ಶಾಶ್ವತ ಕನ್ನಡ ನಿಧಿ ಸ್ಥಾಪನೆ ಕಾರ್ಯಕ್ರಮಗಳು. ೧೦೦ ಕನ್ನಡ ಶ್ರೇಷ್ಠಕೃತಿಗಳ ಪುನರ್ಮುದ್ರಣ ಕಾರ್ಯ ಕೈಗೊಂಡು ಯಶಸ್ವಿಯಾಗಿದ್ದಾರೆ. ಗ್ರಂಥಗಳು ಪ್ರಕಟವಾಗಿವೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ೧೭ ಸಂಪುಟಗಳಲ್ಲಿ ೮ ಇವರ ಅವಧಿಯಲ್ಲಿ ಪ್ರಕಟವಾಗಿವೆ. ಪ್ರಕಟನಾ ಸಮಿತಿ ಸಂಚಾಲಕರಾದ ಜೆ. ಎನ್. ಶಾಮರಾವ್ ಅವರ ಪರಿಶ್ರಮ ಈ ಪ್ರಕಟನೆಗಳನ್ನು ಹೊರತರುವಲ್ಲಿ ಚಿರಸ್ಮರಣೀಯ. ಇದೇ ಸರಣಿಯಲ್ಲಿ ಜಿ. ಎಸ್. ಶಿವರುದ್ರಪ್ಪನವರು ಪ್ರಾರಂಭಿಸಿ ನಿಂತುಹೋದ 'ಸಾಹಿತ್ಯವಾರ್ಷಿಕ' (ಆಯಾ ವರ್ಷದಲ್ಲಿ ಕನ್ನಡದಲ್ಲಿ ಪ್ರಕಟವಾದ ಕನ್ನಡ ಗ್ರಂಥಗಳ ಮಾಹಿತಿ ಸಂಗ್ರಹ ಪುಸ್ತಕ ಪ್ರಕಟನೆ) ಸಾಹಿತ್ಯ ವಾರ್ಷಿಕ ೨೦೧೨ ಪ್ರಕಟಿಸಲು ಯತ್ನಿಸಿದ್ದಾರೆ. ಪರಿಷತ್ತಿನ ಬಗ್ಗೆ ೧೦೦ ವರ್ಷಗಳ ಇತಿಹಾಸದ ಸಾಕ್ಷ್ಯಚಿತ್ರ ತಯಾರಿ ನಡೆದಿದೆ.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಹೆಜ್ಜೆಗುರುತುಗಳನ್ನು ಗುರುತಿಸುವ, ಕನ್ನಡ ಸಾಹಿತ್ಯ ಪರಿಷತ್ತು – ೧೦೦ ಗ್ರಂಥವನ್ನು ತರಲು ಉದ್ದೇಶಿಸಿದರು. ಅದನ್ನು ರಚಿಸಲು ನನಗೆ ಹೇಳಿದರು.

ಅದಕ್ಕೆ ನಾನು ಹೇಳಿದೆ: ಇದು ದೊಡ್ಡ ಕೆಲಸ, ಒಬ್ಬರಿಬ್ಬರಿಂದ ಆಗುವಂಥದ್ದಲ್ಲ. ನಾಡಿನಾದ್ಯಂತ ಪತ್ರಿಕೆಗಳಲ್ಲಿ ಪುಸ್ತಕಗಳಲ್ಲಿ ಮಾಹಿತಿ ಅಡಗಿದೆ. ಸಾವಿರಾರು ಜನ ಪರಿಷತ್ತಿಗೆ ದುಡಿದವರಿದ್ದಾರೆ. ಅವರೆಲ್ಲರಲ್ಲೂ ಪರಿಷತ್ತಿನ ಬಗ್ಗೆ ಮಾಹಿತಿ ಇದೆ. ಪರಿಷತ್ಪತ್ರಿಕೆ, ಕನ್ನಡನುಡಿ ಮತ್ತು ನೂರಾರು ಪರಿಷತ್ತಿನ ಪ್ರಕಟನೆಗಳು ಕಚೇರಿ ದಾಖಲೆಗಳು ಇವೆ. ಇವೆಲ್ಲವನ್ನೂ ಪರಿಶೀಲಿಸಿ ವಿಷಯ ಸಂಗ್ರಹ ಮಾಡಿ ಪರಿಷತ್ತಿನ ಇತಿಹಾಸದ ಬಗ್ಗೆ ಕೆಲಸ ಮಾಡಬೇಕು. ಇದಕ್ಕೆ ಒಂದು ಸಮಿತಿ ರಚಿಸಿ ಎಂದೆ.

ಸಮಿತಿಗಿಮಿತಿ ಏನೂ ಬೇಡ. ಅದಕ್ಕೆಲ್ಲಾ ಸಮಯ ಹಿಡಿಯುತ್ತದೆ. ಶತಮಾನದ ವರ್ಷದಲ್ಲೇ ಗ್ರಂಥ ಬಂದರೆ ಔಚಿತ್ಯಪೂರ್ಣವಾಗಿರುತ್ತದೆ. ನಿಧಾನವಾಗಿ ಸಮಿತಿ ವ್ಯವಸ್ಥೆ, ಅಧಿಕೃತ ಪ್ರಮಾಣದ ಬೃಹದ್ಗ್ರಂಥ ರಚನೆ ಉಳಿದವರು ಮಾಡಲಿ ಅದಕ್ಕೆ ನಾಂದಿಯಾಗಲಿ ಈ ಗ್ರಂಥ ಎಂದರು. ಇದು ಕಷ್ಟದ ಕೆಲಸ ಅಲ್ಪಾವಧಿಯಲ್ಲಿ ಮಾಡುವುದು ಕಠಿಣ ಎಂದೆ. ಇಲ್ಲ ನೀವು ಸಮರ್ಥರು ನೀವು ಮಾಡಬಲ್ಲಿರಿ. ನೀವೊಬ್ಬರೇ ಬರೆಯಿರಿ ಎಂದು ಕಟ್ಟಪ್ಪಣೆ ಮಾಡಿದರು. ಅವರ

ದನಿ ಸದಾ ಎತ್ತರದ ದನಿ; ಮಾತು ಗಟ್ಟಿಮಾತು. ಅದು ಅವರ ಸ್ವಭಾವ ಮತ್ತು ಅವರು ಸದಾ ನಿಷ್ಕಳಂಕ ಹೃದಯದಿಂದ ದೃಢನಿರ್ಧಾರ ಕೈಗೊಳ್ಳುತ್ತಾರೆ.

ಪರಿಷತ್ತಿನ ಬಗ್ಗೆ ನನಗಿರುವ ಆರಾಧನಾ ಭಾವದಿಂದ ಅವರ ಅಭಿಮಾನ ಪ್ರೀತಿಗಳಿಗೆ ಶರಣಾಗಿ ಗ್ರಂಥರಚನೆಗೆ ಒಪ್ಪಿಕೊಂಡೆ. ನನಗಿದ್ದ ಬಂಡವಾಳ ಎಂದರೆ ೬೦ ವರ್ಷಗಳಿಂದ ಇರುವ ಪರಿಷತ್ತಿನ ನಿಕಟಪರಿಚಯ ಅಷ್ಟೆ. ಆದರೂ ಒಂದು ಪ್ರಯತ್ನ ಮಾಡೋಣ ಅಪೂರ್ಣಗ್ರಂಥವಾದರೂ ಪರಿಷತ್ತನ್ನು ಕುರಿತು ಇದುವರೆಗೆ ಬಂದಿರುವ ಗ್ರಂಥಗಳಿಗಿಂತ ಹೆಚ್ಚು ವಿವರ ಮಾಹಿತಿಯುಕ್ತ ಗ್ರಂಥವೊಂದನ್ನು ತರೋಣ. ಇದು ಮುಂದೆ ಬರಬಹುದಾದ ಅಧಿಕೃತ ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಕ್ಕೆ ಆಕರವಾಗಲಿ ಎಂಬ ಆಶಯದಿಂದ ಅವರ ಮಾತಿಗೆ ಒಪ್ಪಿಗೆ ಸೂಚಿಸಿದೆ.

ಪರಿಷತ್ತಿನ ಇತಿಹಾಸದ ವಿವರಗಳು ಈ ನೂರು ವರುಷಗಳಲ್ಲಿ ನಾಡಿನ ಪತ್ರಿಕೆಗಳಲ್ಲಿ ಚೆದರಿ ಹೋಗಿವೆ. ನೂರಾರು ಗ್ರಂಥಗಳಲ್ಲಿ ಲೇಖನ ರೂಪದಲ್ಲಿ ಅಡಗಿವೆ. ನಾನಾ ಸಂಸ್ಥೆಗಳ ಪ್ರಕಟನೆಗಳಲ್ಲಿ ಕಾಣಿಸಿಕೊಂಡಿವೆ. ಪರಿಷತ್ತಿಗೆ ದುಡಿದವರಲ್ಲಿ ಎಷ್ಟೋ ಜನರು ದಿವಂಗತರಾಗಿ ಪರಿಷತ್ತಿನ ಬಗ್ಗೆ ಅನುಭವಗಳು, ಮಾಹಿತಿಗಳು ಅವರು ಬರೆದಿಡದೆ ನಾಶವಾಗಿವೆ. ಈ ಬದುಕಿರುವ ಹಿರಿಯರಲ್ಲಿ ಸಾಕಷ್ಟು ಮಾಹಿತಿಗಳಿದ್ದರೂ ದೊರಕುತ್ತಿಲ್ಲ. ಉದಾಹರಣೆಗೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆಲ್ಲಾ ಪರಿಷತ್ತಿಗೆ ಸಂಬಂಧಿಸಿದಂತೆ ನಿಮ್ಮ ಜಿಲ್ಲೆಗಳಲ್ಲಿ ದೊರಕುವ ಮಾಹಿತಿ ತಿಳಿಸಿ ಎಂದು ಹಲವಾರು ಬಾರಿ ಕಾಗದ ಬರೆದು ಮನವಿ ಮಾಡಿಕೊಂಡರೂ ಒಬ್ಬಿಬ್ಬರ ವಿನಾ ಯಾರೂ ಸ್ಪಂದಿಸಲಿಲ್ಲ. ಪರಿಷತ್ತಿನ ಹಿಂದಿನ ಅಧ್ಯಕ್ಷರುಗಳಿಗೆ ಪರಿಷತ್ತಿಗೆ ನೀವು ಮಾಡಿದ ಸೇವೆಸಾಧನೆಗಳನ್ನು ತಿಳಿಸಿ ಎಂದಾಗ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರು ಉತ್ತರಿಸಲೇ ಇಲ್ಲ. ಹಳೆಯ ಪತ್ರಿಕೆಗಳು ದೊರಕಲಿಲ್ಲ. ಪರಿಷತ್ತಿನ ಕಚೇರಿಯಲ್ಲಿ ಪುಸ್ತಕಭಂಡಾರದಲ್ಲಿ ಸಾಕಷ್ಟು ಮಾಹಿತಿ ಸಿಕ್ಕರೂ ಬೇಕಾದಷ್ಟು ಮಾಹಿತಿ ಸಿಗಲೇ ಇಲ್ಲ. ಮುಖ್ಯ ಕಾರಣ ಹಿಂದಿನವರು ಪರಿಷತ್ತಿನಲ್ಲಿ ಐತಿಹಾಸಿಕ ಮಹತ್ವವುಳ್ಳ ಕಾಗದ ಪತ್ರಗಳನ್ನು ರಕ್ಷಿಸಿಲ್ಲ. ಉದಾಹರಣೆಗೆ, ಸಾವಿರಾರು ದತ್ತಿನಿಧಿಗಳಿವೆ. ಅವುಗಳ ಎಲ್ಲ ಮೂಲಪತ್ರಗಳು ಇಂದು ಸಿಗುವುದಿಲ್ಲ. ಪರಿಷತ್ಪತ್ರಿಕೆ ಕನ್ನಡನುಡಿಯ ಎಲ್ಲಾ ಸಂಚಿಕೆಗಳು ಲಭ್ಯವಿಲ್ಲ. ಅಚ್ಚುಕೂಟದಲ್ಲಿ ನಿಘಂಟಿನ ಪ್ರಕಟನ ವಿಭಾಗದಲ್ಲಿ ಕಚೇರಿಯಲ್ಲಿ ಪುಸ್ತಕಭಂಡಾರದಲ್ಲಿ ದುಡಿದ ಅನೇಕ ಹಿರಿಯರು ಈಗಿಲ್ಲ. ಪರಿಷತ್ತಿಗೆ ದುಡಿದ ಅನೇಕ ಮಹನೀಯರ ಮನೆಗಳಲ್ಲಿ ಸಾಕಷ್ಟು ಮಾಹಿತಿಗಳು, ಕಾಗದಪತ್ರಗಳು, ಗ್ರಂಥಗಳು ಸಿಗುವ ಸಂಭವವಿದೆ. ಅದರ ಸಂಗ್ರಹಕ್ಕೆ ಒಂದು ತಂಡವೇ ಬೇಕು. ಉದಾಹರಣೆಗೆ ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾದ ಕರ್ಪೂರ ಶ್ರೀನಿವಾಸರಾಯರ ಪುತ್ರರು ಇದ್ದಾರೆ. ಪರಿಷತ್ತಿಗೆ ಮೊದಲು ಜಾಗ ಕೊಟ್ಟ ನಾನಾರಾವ್ ಅವರ ಮೊಮ್ಮಗ, ಸುಮಾರು ೧೮ ವರ್ಷಗಳ ಕಾಲ ಶಂಕರಪುರದಲ್ಲಿ ಪರಿಷತ್ತು ಇದ್ದಾಗ ಆ ಮನೆಯ ಮಾಲೀಕರಾದ ವಾಜಪೇಯಂ ಸೂರಪ್ಪನವರ ಮಕ್ಕಳು ಮೊಮ್ಮಕ್ಕಳು ಇದ್ದಾರೆ. ಹೀಗೆ ಪರಿಷತ್ತಿಗೆ ಸಂಬಂಧಿಸಿದಂತೆ ಅನೇಕ ಹಿರಿಯ ಜನರನ್ನು ಅನ್ವೇಷಿಸಿ ಮಾಹಿತಿ ಸಂಗ್ರಹಿಸಬೇಕಾಗಿದೆ.

ಹೀಗೆ ಕಾಲಗರ್ಭದಲ್ಲಿ ಎಷ್ಟೋ ಮಾಹಿತಿಗಳು, ಅಡಗಿ ಹೋಗಿದ್ದರಿಂದ ಕಾಲಮಿತಿಯಿಂದ, ಲಭ್ಯವಾದಷ್ಟೆ ಗ್ರಂಥಗಳ, ಪತ್ರಿಕೆಗಳ ಮಾಹಿತಿ ಆಧರಿಸಿ ಈ ಗ್ರಂಥವನ್ನು ರಚಿಸಲಾಗಿದೆ.

ಪರಿಷತ್ತಿಗೆ ಸಂಬಂಧಿಸಿದಂತೆ ಈ ಮುಂಚೆ ಪ್ರಕಟವಾದ ಗ್ರಂಥಗಳಲ್ಲಿ ಲೇಖನಗಳಲ್ಲಿ ಇರುವ ಕೆಲವು ತಪ್ಪುಗಳನ್ನು ಸರಿಪಡಿಸಿದೆ.

ಉದಾಹರಣೆಗೆ ಪರಿಷತ್ತಿನ ಮೊದಲ ಸಮ್ಮೇಳನ ಮತ್ತು ಪರಿಷತ್ತಿನ ಸ್ಥಾಪನೆ ಬೆಂಗಳೂರು ಸರ್ಕಾರಿ ಕಲಾಕಾಲೇಜಿನಲ್ಲಿ (ಆಗ ಇಂಟರ್ ಮೀಡಿಯೇಟ್ ಕಾಲೇಜು ಅಂದರೆ ಕೊಲಿಜಿಯೆಟ್ ಹೈಸ್ಕೂಲ್ ಆಗಿತ್ತು) ಆಯಿತು. ಇದನ್ನು ಜ್ಞಾಪಕ ಚಿತ್ರಶಾಲೆಯಲ್ಲಿ ಡಿವಿಜಿ ಅವರು ಸ್ಪಷ್ಟವಾಗಿ ಬರೆದಿದ್ದಾರೆ. ಇದನ್ನು ಗಮನಿಸದೆ ಹಲವರು ಕೋಟೆ ಹೈಸ್ಕೂಲ್ ಎಂದು ತಪ್ಪಾಗಿ ಬರೆದಿದ್ದಾರೆ. ಕೋಟೆ ಹೈಸ್ಕೂಲಿನಲ್ಲಿ ನಡೆದಿದ್ದು ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನ. ಪರಿಷತ್ತಿನ ಕಚೇರಿ ೧೯೨೩ರವರೆಗೆ ನಾನಾರಾಯರ ಮನೆಯಲ್ಲಿತ್ತು ಎಂದು ಕೆಲವು ವಿದ್ವಾಂಸರು ಹೇಳಿದ್ದಾರೆ ಆದರೆ ೧೯೧೮ರ ವೇಳೆಗೆ

ಶಂಕರಪುರದ ಬಾಡಿಗೆ ಮನೆಗೆ ಹೋಗಿತ್ತು. ಇನ್ನು ಕೆಲವು ಮೊದಲ ಸಮ್ಮೇಳನ ೩ ದಿನ ನಡೆಯಿತು ಎಂದಿದ್ದಾರೆ. ಆದರೆ ೩ ದಿನ ಎಂದು ಆಹ್ವಾನಪತ್ರಿಕೆಯಲ್ಲಿ ಅಚ್ಚಾಗಿದ್ದರೂ ವಾಸ್ತವಿಕವಾಗಿ ನಾಲ್ಕು ದಿನ ನಡೆದಿದೆ. ಇಂಥ ಹಲವಾರು ದೋಷಗಳನ್ನು ಈ ಗ್ರಂಥದಲ್ಲಿ ಸರಿಪಡಿಸಿ ಹೇಳಲಾಗಿದೆ.

ಯಾವುದೇ ಸಂಸ್ಥೆ ಕ್ರಮಬದ್ಧವಾಗಿ ನಡೆಯಬೇಕಾದರೆ ಅಕ್ರಮಗಳನ್ನು ತಡೆಗಟ್ಟಬೇಕಾದರೆ ನಿಬಂಧನೆಗಳು ಬೆನ್ನೆಲುಬಾಗಿರುತ್ತದೆ. ಪರಿಷತ್ತಿಗೆ ಆಧಾರಸ್ತಂಭವಾಗಿರುವುದು ನಿಬಂಧನೆಗಳು. ಕಾಲಕಾಲಕ್ಕೆ ಅವಶ್ಯಕತೆ ತಕ್ಕಂತೆ ನಿಬಂಧನೆಗಳು ತಿದ್ದುಪಡಿಗಳಾಗಿವೆ. ಸಂಸ್ಥೆ ಸ್ಥಾಪನೆ ಆಗಿ ನಿಬಂಧನೆಗಳು ೧೯೧೫ರಲ್ಲಿ ರಚನೆ ಆದದ್ದು, ಒಂದೇ ವರ್ಷದಲ್ಲಿ ೧೯೧೬ರಲ್ಲೇ ತಿದ್ದುಪಡಿಗಳನ್ನು ಹೊಂದಿದೆ. ಹೀಗೆ ನಿಬಂಧನೆಗಳು ಆಗಾಗ ತಿದ್ದುಪಡಿಗಳಿಗೆ ಒಳಗಾಗಿ ಸಂಸ್ಥೆ ಪುಟವಿಟ್ಟ ಚಿನ್ನವಾಗಿದೆ. ನ್ಯಾಯತಜ್ಞರು, ವಿದ್ವಾಂಸರು ಸೇರಿ ದೀರ್ಘ ಚರ್ಚೆಗಳಿಂದ ನಿಯಮಗಳನ್ನು ರೂಪಿಸಿದ್ದಾರೆ. ಹೀಗಾಗಿ ಪರಿಷತ್ತಿನ ನಿಬಂಧನೆಗಳು ಎಲ್ಲಾ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಗಳಿಗೆ ಮಾದರಿ ನಿಬಂಧನೆಗಳಾಗಿವೆ. ಈಗ ಮತ್ತೆ ಇಂದಿನ ಬದಲಾದ ಪರಿಸ್ಥಿತಿಗಳಿಗೆ ನಿಬಂಧನೆಗಳ ತಿದ್ದುಪಡಿ ಆಗಲೇಬೇಕಾಗಿದೆ. ಆದರೆ ಇನ್ನೂ ಆಗಿಲ್ಲ. ಪರಿಷತ್ತಿನ ನಿಬಂಧನೆಗಳು ಪ್ರಾರಂಭದಲ್ಲಿ ಹೇಗಿತ್ತು ಇಂದು ಹೇಗಿದೆ ಎಂಬುದನ್ನು ತಿಳಿಯಲು ಮೊದಲಿನ ಮತ್ತು ಇಂದಿನ ನಿಬಂಧನೆಗಳನ್ನು ಪೂರ್ಣವಾಗಿ ಈ ಗ್ರಂಥದಲ್ಲಿ ಕೊಟ್ಟಿದೆ.

ಪರಿಷತ್ತು ನಾಡಿನಾದ್ಯಂತ ಕಾರ್ಯಕ್ರಮಗಳನ್ನು ಮಾಡುತ್ತಿರುವ ಏಕೈಕ ಸಂಸ್ಥೆ. ಬೇರೆ ಸಂಸ್ಥೆಗಳು ಒಂದೆಡೆ ಅಥವಾ ಕೆಲವೆಡೆ ಕಾರ್ಯಕ್ರಮಗಳನ್ನು ನಡೆಸುತ್ತವೆ. ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಅದರಾಚೆಗೂ ಹೊರನಾಡಿನಲ್ಲೂ ಕಾರ್ಯಕ್ರಮಗಳನ್ನು ಪರಿಷತ್ತು ಮಾಡಲು ಮುಖ್ಯಾಧಾರ ದತ್ತಿನಿಧಿಗಳು. ೧೫೦೦ಕ್ಕೂ ಮಿಕ್ಕ, ೨ ಕೋಟಿ ರೂ.ಗಳಿಗೂ ಮಿಕ್ಕ ಮೊತ್ತದ ಪರಿಷತ್ತಿನ ದತ್ತಿಗಳ ಪೂರ್ಣಪರಿಚಯ ಒಂದೆಡೆ ಸಿಗಲಿ ಎಂದು ಮೊದಲಬಾರಿಗೆ ಆ ಎಲ್ಲ ದತ್ತಿಗಳ ವಿವರಗಳನ್ನು ಅನುಬಂಧವಾಗಿ ಕೊಡಲಾಗಿದೆ.

ಪರಿಷತ್ತು ಮೊದಲಿನಿಂದಲೂ ಎಡಬಿಡದೆ ಇಂದೂ ಕೈಗೊಂಡಿರುವ ನಿರಂತರ ಕಾರ್ಯವೆಂದರೆ ಪುಸ್ತಕಗಳ ಪ್ರಕಟನೆ. ೧೫೦೦ಕ್ಕೂ ಮಿಕ್ಕು ಕನ್ನಡ ಗ್ರಂಥಗಳನ್ನು ಪ್ರಕಟಿಸಿದ ಮೊದಲ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಕಲೆ, ಸಾಹಿತ್ಯ ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಎಲ್ಲಾ ಬಗೆಯ ಗ್ರಂಥಗಳನ್ನು ಪರಿಷತ್ತು ಪ್ರಕಟಿಸಿದೆ. ಅವುಗಳನ್ನೆಲ್ಲಾ ಇಂದು ನೋಡಲೂ ಸಿಗುತ್ತಿಲ್ಲ. ಏಕೆಂದರೆ ಅವುಗಳನ್ನು ಮೊದಲಿನಿಂದಲೂ ಯಾರೂ ಸಂಗ್ರಹಿಸಿಲ್ಲ. ಯಾವ ಅಧ್ಯಕ್ಷರಿಗೂ ಈ ಕಡೆ ಗಮನ ಹರಿದಿಲ್ಲ. ಹೀಗಾಗಿ ಪರಿಷತ್ತು ಪ್ರಕಟಿಸಿದ ಎಲ್ಲಾ ಗ್ರಂಥಗಳು ಪರಿಷತ್ತಿನಲ್ಲೇ ಇಲ್ಲ. ಇವೆಲ್ಲವನ್ನೂ ಸಂಗ್ರಹಿಸಿ **ಪರಿಷತ್ತಿನ ಪ್ರಕಟನೆಗಳ ಸ್ಥಿರ ಪುಸ್ತಕ ಭಂಡಾರ ಸ್ಥಾಪನೆ** ಆಗಬೇಕಾದುದು ಜರೂರು ಕಾರ್ಯವಾಗಿದೆ. ಈ ಕಾರ್ಯಕ್ಕೆ ಹಿನ್ನೆಲೆಯಾಗಿ ಪರಿಷತ್ತು ಪ್ರಕಟಿಸಿದ ೧೫೦೦ಕ್ಕೂ ಮಿಗಿಲಾದ ಗ್ರಂಥಗಳನ್ನು ವಿಶೇಷ ಸಂಚಿಕೆಗಳನ್ನು ಕುರಿತು ಒಂದು ಪಟ್ಟಿ ಕೊಡಲಾಗಿದೆ. ಇದು ಪರಿಷ್ಕಾರವಾಗಬೇಕು. ಪೂರ್ಣವಾಗಬೇಕು. ಈಗ ದೊರೆತಷ್ಟನ್ನೇ ದೊರತಂತೆಯೇ ಕೊಟ್ಟಿದೆ.

ಪರಿಷತ್ತು ಏನು ಮಾಡಬೇಕು ಏನು ಮಾಡಿದೆ, ಯಾಕೆ ಮಾಡಿಲ್ಲ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಸಿಗುವುದು ಪರಿಷತ್ತಿನ ವಾರ್ಷಿಕ ವರದಿಗಳಲ್ಲಿ, ಸಮ್ಮೇಳನಾಧ್ಯಕ್ಷರ ಭಾಷಣಗಳಲ್ಲಿ ಮತ್ತು ಸಮ್ಮೇಳನಗಳ ಬಹಿರಂಗಾಧಿವೇಶನದ ನಿರ್ಣಯಗಳಲ್ಲಿ ಈ ಎಲ್ಲ ನಿರ್ಣಯಗಳಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಪರಿಷತ್ತು ಏನೇನು ಮಾಡಬೇಕು ಎಂಬುದನ್ನು ಪರಿಷತ್ತಿನ ಸದಸ್ಯರು, ನಾಡಿನ ಗಣ್ಯರು, ಸಾರ್ವಜನಿಕರು ಹೇಳಿದ್ದಾರೆ. ಅಮೂಲ್ಯ ಸಲಹೆಗಳು ವಿಚಾರಗಳು ಈ ನಿರ್ಣಯಗಳಲ್ಲಿವೆ. ಪರಿಷತ್ತಿನ ಅಧ್ಯಕ್ಷರು ಮತ್ತು ಕಾರ್ಯಸಮಿತಿ ಪರಿಷತ್ತು ಏನು ಮಾಡಬೇಕು ಎಂದು ತಿಳಿಯಲು ಪರಿಷತ್ತನ್ನು ಕುರಿತ ನಿರ್ಣಯಗಳನ್ನೆಲ್ಲಾ, ಪರಿಷತ್ತಿನ ಸಮ್ಮೇಳನಾಧ್ಯಕ್ಷರ ಭಾಷಣಗಳನ್ನೂ ವಾರ್ಷಿಕಾಧಿವೇಶನ ವರದಿಗಳನ್ನೂ ಅಗತ್ಯವಾಗಿ ಅಧ್ಯಯನ ಮಾಡಬೇಕು. ಮಾಡಿದರೆ ಒಳ್ಳೆಯದು.

ಈ ದೃಷ್ಟಿಯಿಂದ ಸಮ್ಮೇಳನಾಧ್ಯಕ್ಷರು ತಮ್ಮ ಭಾಷಣಗಳಲ್ಲಿ, ವಾರ್ಷಿಕಾಧಿವೇಶನದಲ್ಲಿ ಪರಿಷತ್ತಿನ ಸದಸ್ಯರು,

ಬಹಿರಂಗಾಧಿವೇಶನದಲ್ಲಿ ಸಾರ್ವಜನಿಕರು ನಿರ್ಣಯಗಳ ಸ್ವರೂಪದಲ್ಲಿ ಕಳೆದ ೧೦೦ ವರ್ಷಗಳಲ್ಲಿ ಏನು ಹೇಳಿದ್ದಾರೆ ಎಂದು ತಿಳಿಸುವ ಪ್ರಯತ್ನವನ್ನು ಈ ಗ್ರಂಥದಲ್ಲಿ ಮೊದಲ ಬಾರಿಗೆ ಮಾಡಿದೆ.

ಇದುವರೆಗೆ ೭೯ ಸಮ್ಮೇಳನಗಳು ನಡೆದಿವೆ ೨೪ ಜನ ಅಧ್ಯಕ್ಷರು ಪರಿಷತ್ತಿಗೆ ದುಡಿದಿದ್ದಾರೆ. ಇವರೆಲ್ಲರ ಸಂಕ್ಷಿಪ್ತ ಪರಿಚಯವನ್ನು ಅಧ್ಯಕ್ಷರ ಸಾಧನೆಗಳನ್ನು ತಿಳಿಸಲಾಗಿದೆ.

ಇಷ್ಟಾದರೂ ಇದು ಅಪೂರ್ಣಗ್ರಂಥ ಎಂದು ನನಗೆ ಮನವರಿಕೆ ಆಗಿದೆ. ಏಕೆಂದರೆ ಮಾಹಿತಿಗಳ ಕೊರತೆ ಹಾಗೂ ಕಾಲಮಿತಿ. ಆದರೂ ಸಹ ಇದುವರೆಗೆ ಪರಿಷತ್ತನ್ನು ಕುರಿತು ಬಂದಿರುವ ಗ್ರಂಥಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದೆ ಈ ಗ್ರಂಥ ಎಂದು ಭಾವಿಸಿದ್ದೇನೆ. ಮುಂದೆ ಬರುವ ಗ್ರಂಥಕ್ಕೆ ಆಕರ ಗ್ರಂಥವಾದೀತೆಂದು ನನ್ನ ನಂಬಿಕೆ.

ಈ ಗ್ರಂಥ ರಚನೆಗೆ ಹಲವಾರು ರೀತಿಗಳಲ್ಲಿ ಹತ್ತಾರು ಮಂದಿ ನೆರವಾಗಿದ್ದಾರೆ. ಪರಿಷತ್ತಿನ ಹಿಂದಿನ ಅಧ್ಯಕ್ಷರುಗಳಾದ ಸಾ.ಶಿ. ಮರುಳಯ್ಯ, ಜಿ.ವೆಂಕಟಸುಬ್ಬಯ್ಯ ಅವರು ತಮ್ಮ ನೆನಪುಗಳನ್ನು ಬರೆದು ಕಳಿಸಿದರು. ಅವುಗಳನ್ನು ಸಮಯೋಚಿತವಾಗಿ ಉಲ್ಲೇಖಿಸಲಾಗಿದೆ. ಇನ್ನು ಹಲವರು ಪರಿಷತ್ತಿನ ನೂರುವರ್ಷಗಳ ಸಮೀಕ್ಷೆ ಲೇಖನಗಳನ್ನು ಕಳಿಸಿದ್ದಾರೆ.

ಕೋ.ವೆಂ. ರಾಮಕೃಷ್ಣೇಗೌಡ, ಲಕ್ಷ್ಮಣ ತೆಲಗಾವಿ, ಗೀತಾಚಾರ್ಯ, ರಾನಂ ಚಂದ್ರಶೇಖರ, ಎ.ವಿ. ನಾವಡ, ದೇವರ ಕೊಂಡಾರೆಡ್ಡಿ, ಎಂ.ಜಿ. ನಾಗರಾಜ್ ಮುಂತಾದವರ ಆಸಕ್ತಿಗೆ ಕೃತಜ್ಞನಾಗಿದ್ದೇನೆ. ಪರಿಷತ್ತನ್ನು ಕುರಿತ ಲೇಖನಗಳ ಸಂಪುಟವನ್ನು ಪ್ರತ್ಯೇಕವಾಗಿ ತರಬೇಕಾಗಿದ್ದು ಅದರಲ್ಲಿ ಸೇರ್ಪಡೆ ಆಗಬೇಕಾದ ಲೇಖನಗಳಿವು. ಹಾಗಾಗಿ ಅವುಗಳನ್ನು ಇಲ್ಲಿ ಸೇರ್ಪಡೆ ಮಾಡಿಲ್ಲ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾದ ರಾ.ಹ. ದೇಶಪಾಂಡೆ ಅವರು ಪರಿಷತ್ತಿಗೆ ಸಲ್ಲಿಸಿದ ಸೇವೆಯ ಅಪೂರ್ವ ಲೇಖನ ಕಳಿಸಿ ಉಪಕರಿಸಿದ್ದಾರೆ. ಪರಿಷತ್ತಿಗೆ ಸಂಬಂಧಿಸಿದಂತೆ ಬರೆದ ಟಿ. ವಿ. ವೆಂಕಟಾಚಲಶಾಸ್ತ್ರಿಗಳ ಲೇಖನಗಳಿಂದ ಉಪಕಾರವಾಗಿದೆ. ವಾಜಪೇಯಂ ಸೂರಪ್ಪನವರ ಕುಟುಂಬದವರಾದ, ಶ್ರೀನಿವಾಸಮೂರ್ತಿ, ವೆಂಕಟೇಶ ಅವರು, ನಾನಾರಾಯರ ಕುಟುಂಬದವರು ಭೀಮಸೇನರಾವ್ ಮತ್ತು ಇತರರು ಉಪಯುಕ್ತ ಮಾಹಿತಿಗಳನ್ನು ಪರಿಷತ್ತಿನ ಸ್ಥಾಪನೆ ಬಗ್ಗೆ ವಿವರಗಳನ್ನು ನೀಡಿದ್ದಾರೆ ಈ ಕುಟುಂಬದವರನ್ನು ಪರಿಚಯಿಸಿದ, ಬಿ. ಎಸ್. ಪ್ರಹ್ಲಾದರಾವ್ ಮತ್ತು ವೆಂಕಟರಮಣಯ್ಯನವರ ಉಪಕಾರ ದೊಡ್ಡದು. ಪರಿಷತ್ತಿಗೆ ಸಂಬಂಧಿಸಿದ ಪತ್ರಿಕಾಲೇಖನಗಳನ್ನು ಸಂಗ್ರಹಿಸಿಕೊಟ್ಟ ಗುರುಪ್ರಸಾದ್ ಅವರನ್ನೂ ಪರಿಷತ್ತಿನ ನಿಘಂಟು- ಪ್ರಕಟನೆಗಳ ಬಗ್ಗೆ ಮಾಹಿತಿ ನೀಡಿದ ನಿಘಂಟುತಜ್ಞ ಗೆಳೆಯ ಎಸ್. ಕಾರ್ತಿಕ್ ಅವರ ಸಹಾಯವನ್ನು ನೆನೆಯಲೇಬೇಕು, ಅವರಿಗೆಲ್ಲಾ ವಂದನೆಗಳು.

ಗ್ರಂಥ ರಚನೆ ಕಾಲದಲ್ಲಿ ಹಸ್ತಪ್ರತಿ ಭಾಗಗಳನ್ನು ಓದಿ ವಿಮರ್ಶಿಸಿದ, ಈಚೆಗೆ ನಿಧನರಾದ ಆಪ್ತಗೆಳೆಯ ಸಾಹಿತಿ ಮಿತ್ರ ಎಂ. ಕೆ. ಗೋಪಿನಾಥರನ್ನು ನೆನೆಯಬೇಕು. ಕನ್ನಡ – ಇಂಗ್ಲಿಷ್ ಬೃಹತ್ ನಿಘಂಟನ್ನು ರಚಿಸಿ, ಕನ್ನಡದಲ್ಲಿ ವಿಕ್ರಮ ಸಾಧಿಸಿರುವ ತೆರೆಮರೆಯ ವಿದ್ವಾಂಸರಾದ ವಿ. ಕೃಷ್ಣ ಅವರು ಈ ಗ್ರಂಥದ ಕರಡಚ್ಚುಗಳನ್ನು ತಿದ್ದಿದ್ದಾರೆ. ಅವರ ವಿಶ್ವಾಸಕ್ಕೆ ಚಿರಋಣಿ. ಹೇಳಲೇಬೇಕಾದ ಇನ್ನೊಂದು ಮಾತಿದೆ. ಅಮೆರಿಕೆಯಲ್ಲಿರುವ ನನ್ನ ಮಗಳು ವಿಜ್ಞಾನಿ ಡಾ॥ ಕ್ಷಮಾ ಅಶ್ವತ್ಥ ಮತ್ತು ಅಳಿಯ ಜಯರಾಂ ಪದೇಪದೇ ಗ್ರಂಥ ರಚನೆ ಬಗ್ಗೆ ವಿಚಾರಿಸುತ್ತಾ ಉತ್ಸಾಹ ತುಂಬಿದ್ದಾರೆ. ನನ್ನ ಧರ್ಮಪತ್ನಿ ಲೇಖಕಿ, ನಿವೃತ್ತ ಪ್ರಾಧ್ಯಾಪಕಿ ಎಂ. ಆರ್. ಲಕ್ಷ್ಮೀದೇವಿ ಸಹಕಾರವಿಲ್ಲದಿದ್ದಲ್ಲಿ ಈ ಗ್ರಂಥ ರಚನೆ ಸಾಧ್ಯವಿರಲಿಲ್ಲ. ಆಕರಗ್ರಂಥಗಳನ್ನು ಮನೆಯ ಪುಸ್ತಕಭಂಡಾರದಲ್ಲಿ ಹುಡುಕಿಕೊಟ್ಟು, ಲೇಖನಗಳನ್ನು ಓದಿಸಿಕೇಳಿ, ಚರ್ಚಿಸಿ ತಿದ್ದಿ ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ಇವರಿಗೆಲ್ಲಾ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಇನ್ನು ಆಕರ ಸಾಹಿತ್ಯ ಕುರಿತು ಒಂದು ಮಾತು ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಸಂಗತಿ ಎಂದರೆ ಈ ಗ್ರಂಥ ರಚನೆಗೆ ನೆರವಾದ ಗ್ರಂಥಕರ್ತರು ಮತ್ತು ಗ್ರಂಥಗಳು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವ್ಯವಸ್ಥಾಪಕರಾಗಿ ಹಲವು ದಶಕಕಾಲ ಸೇವೆಸಲ್ಲಿಸಿದ ಆತ್ಮೀಯ ಮಿತ್ರರಾದ ಜಗನ್ನಾಥ ಹೇಮಾದ್ರಿ ಅವರು ಕೈವಾರ ರಾಜಾರಾವ್ ಅನಂತರ ಪರಿಷತ್ತನ್ನು, ಆಡಳಿತವನ್ನು ಚೆನ್ನಾಗಿ ತಿಳಿದಿದ್ದವರು ಪರಿಷತ್ತಿನ ಮಾಹಿತಿ ಅವರಿಗೆ ತಿಳಿದಷ್ಟು ಇತರ ಕಚೇರಿ ಸಿಬ್ಬಂದಿಗೆ ತಿಳಿದಿರಲಿಲ್ಲ. ಅವರು ಬರೆದ ಕನ್ನಡ ಸಾಹಿತ್ಯ ಪರಿಷತ್ತು (೨೦೦೬) ಗ್ರಂಥ ಅತಿ ಸಂಕ್ಷಿಪ್ತವಾದರೂ ಮೊದಲ ಬಾರಿಗೆ ಪರಿಷತ್ತಿನ ಬಗ್ಗೆ ಸಮಗ್ರ ನೋಟ ನೀಡಿದ ಗ್ರಂಥ. ಇದನ್ನೇ ಆಧಾರವಾಗಿಟ್ಟುಕೊಂಡು ಮತ್ತಷ್ಟು ಮಾಹಿತಿ ಸಂಗ್ರಹಿಸಿ

ಡಾ. ಎಂ. ಎಲ್. ಶಂಕರಲಿಂಗಪ್ಪನವರು ಕನ್ನಡ ಸಾಹಿತ್ಯ ಪರಿಷತ್ತು (೨೦೦೮) ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ. ಗ್ರಂಥ ಮತ್ತು ಪರಿಷತ್ತಿನ ನಿರ್ಣಯಗಳು ಗ್ರಂಥ ರಚಿಸಿದ್ದಾರೆ. ವೆಂಕಟೇಶ ಸಾಂಗ್ಲಿ ಅವರ ನಮ್ಮ ಪರಿಷತ್ತು (೧೯೭೭), ನಾ ರೇವಣ್ಣ ಸಿದ್ದಪ್ಪ ಅವರ ಕನ್ನಡ ನುಡಿ ನಿಪುಣರು ಗ್ರಂಥ, ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆ. ಎಸ್. ವಿ. ಶ್ರೀನಿವಾಸರಾವ್ ಅವರ (೨೦೧೦) ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು, ಪರಿಷತ್ತು ಪ್ರಕಟಿಸಿದ ಸಮ್ಮೇಳನಾಧ್ಯಕ್ಷರ ಭಾಷಣಗಳ ೬ ಸಂಪುಟಗಳು (೭ನೆಯದು ಅಪ್ರಕಟಿತ) ಜಿ.ಪಿ. ರಾಜರತ್ನಂ ಅವರ ಕನ್ನಡ ಸೇತುವೆ ಗ್ರಂಥ, 'ಚಿನ್ನದ ಬೆಳಸು' (೧೯೭೦) ಕೌಸ್ತುಭ (೧೯೭೭) ಸಂಪಾದಕರು ಎಂ.ವಿ. ಸೀತಾರಾಮಯ್ಯ. ಕನ್ನಡ ನುಡಿ, ಪರಿಷತ್ಪತ್ರಿಕೆ ಲೇಖನಗಳು, ಪರಿಷತ್ತಿನ ಸಮ್ಮೇಳನಗಳ ವಿಶೇಷ ಸಂಚಿಕೆಗಳು, ಕರ್ನಾಟಕ ವಿಶ್ವ ವಿಷಯಕೋಶ, ಜಿ. ನಾರಾಯಣ, ಹಂಪನಾ ಮೊದಲಾದವರು ತಮ್ಮ ಸಾಧನೆಗಳನ್ನು ತಿಳಿಸಿದ ಕೈಹೊತ್ತಿಗೆಗಳು ಪರಿಷತ್ತಿನ ಅನೇಕ ಹಿರಿಯರು. ವಿ.ಸೀ, ಬಿಜಿಎಲ್ ಸ್ವಾಮಿ, ನಿಟ್ಟೂರು ಶ್ರೀನಿವಾಸರಾವ್ ಮೊದಲಾದವರು ಹೇಳಿದ ಸಂಗತಿಗಳು, ಕಡೇಕಾರ್ ರಾಜಗೋಪಾಲ್, ಕಡೆಂಗೋಡ್ಲು ಶಂಕರಭಟ್ಟ, ಮಾನಾ ಚೌಡಪ್ಪ ರೆಡ್ಡಿ, ಹೆಚ್.ಎಸ್. ಪಾರ್ವತಿ ಮುಂತಾದವರು ಬರೆದ ಪರಿಷತ್ತನ್ನು ಕುರಿತ ಲೇಖನಗಳು, ಇನ್ನೂ ಅನೇಕ ಗ್ರಂಥ ಲೇಖನಗಳ ನೆರವನ್ನು ಪಡೆದಿದ್ದೇನೆ. ಅವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಈ ನನ್ನ ಗ್ರಂಥರಚನೆಗೆ ನೆರವಾದವರನ್ನು ಕುರಿತು ಸ್ಮರಿಸುವುದು ನನ್ನ ಕರ್ತವ್ಯವಾಗಿದೆ.

ಮೊದಲನೆಯದಾಗಿ ಈ ಅವಕಾಶವನ್ನು ಒದಗಿಸಿ ಹುರಿದುಂಬಿಸಿದ ಪರಿಷತ್ತಿನ ಅಧ್ಯಕ್ಷರಾಗಿ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಅದ್ದೂರಿಯಾಗಿ ನಡೆಸುತ್ತಿರುವ ಪುಂಡಲೀಕ ಹಾಲಂಬಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಎರಡನೆಯದಾಗಿ ಶತಮಾನೋತ್ಸವದ ಪುಸ್ತಕಗಳ ಪ್ರಕಟನೆಗಳ ಸಂಚಾಲಕರಾಗಿ ಗ್ರಂಥಪ್ರಕಟನೆಗಳಲ್ಲಿ ಅಪಾರ ಅನುಭವ ಪಡೆದಿರುವ ದಕ್ಷ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವ ಮಿತ್ರರಾದ ಜೆ. ಎನ್. ಶಾಮರಾಯರ ಸಹಾಯವನ್ನು ಎಷ್ಟು ಸ್ಮರಿಸಿದರೂ ಸಾಲದು. ಪಟ್ಟು ಹಿಡಿದು ಬರೆಸಿದ್ದಾರೆ. ಮಾಹಿತಿ ಸಂಗ್ರಹಕ್ಕೆ ಸೌಕರ್ಯಗಳನ್ನು ಒದಗಿಸಿದ್ದಾರೆ. ಮುದ್ರಣಕಾರ್ಯದಲ್ಲಿ ಅಹೋರಾತ್ರಿ ಶ್ರಮಿಸಿದ್ದಾರೆ. ಅವರಂತೆ ಪ್ರಾಮಾಣಿಕವಾಗಿ ನಿಸ್ವಾರ್ಥತೆಯಿಂದ ಹಗಲೂರಾತ್ರಿ ದುಡಿಯುವ ವ್ಯಕ್ತಿಗಳು ನಮ್ಮಲ್ಲಿ ತುಂಬ ಅಪರೂಪ. ಈ ಗ್ರಂಥ ಪ್ರಕಟನೆಯ ಬಹುಪಾಲು ಯಶಸ್ಸು ಅವರಿಗೆ ಸೇರಬೇಕು, ಅವರಿಗೆ ಹೊಗಳಿಕೆ ಕಂಡರೆ ಆಗದು; ಕರ್ತವ್ಯ ದೃಷ್ಟಿಯಿಂದ ಕೃತಜ್ಞತೆಗಳನ್ನು ಸೂಚಿಸಲು ಎರಡು ಮಾತು ಹೇಳಿದ್ದೇನೆ.

ಇನ್ನು ನಾನು ನೆನೆಯಲೇಬೇಕಾದವರು ಎಂದರೆ ಪರಿಷತ್ತಿನ ಪುಸ್ತಕಭಂಡಾರದ ಸಿಬ್ಬಂದಿ ಮುಖ್ಯವಾಗಿ ಜಯಂತಿ ಅವರು ಕೇಳಿದ ಪತ್ರಿಕೆ, ಪುಸ್ತಕಗಳನ್ನು ಬೇಸರವಿಲ್ಲದೆ ಶ್ರಮವಹಿಸಿ ಹುಡುಕಿಕೊಟ್ಟಿದ್ದಾರೆ. ಕಚೇರಿ ಸಿಬ್ಬಂದಿಯಲ್ಲಿ ದತ್ತಿನಿಧಿ ಶಿವಣ್ಣ, ಪ್ರಕಟನಾವಿಭಾಗದ ನಾಗವೇಣಿ, ಡಿಪಿಟಿ ವಿಭಾಗದ ಅವಿನಾಶ್, ನಾಗರತ್ನ, ಜಯಲಕ್ಷ್ಮಿ ಮೊದಲಾದ ಸಿಬ್ಬಂದಿ ವಿಭಾಗದವರು ಹಾಗೂ ಶೋಭಾ ಅವರು ಶ್ರಮಪಟ್ಟಿದ್ದಾರೆ. ಅವರಿಗೆಲ್ಲಾ ಧನ್ಯವಾದಗಳು. ಪರಿಷತ್ತಿನ ಪದಾಧಿಕಾರಿಗಳಾದ ಪಿ. ಮಲ್ಲಿಕಾರ್ಜುನಪ್ಪ (ಕೋಶಾಧಿಕಾರಿ) ಸಿ. ಕೆ. ರಾಮೇಗೌಡ, ಡಾ. ರಾಜಶೇಖರ ಹತಗುಂದಿ (ಕಾರ್ಯದರ್ಶಿಗಳು) ಸದಾ ವಿಚಾರಿಸುತ್ತಾ ಗ್ರಂಥರಚನೆಗೆ ಬೆಂಬಲಿಸಿದ್ದಾರೆ. ದತ್ತಿನಿಧಿ ಪಟ್ಟಿಯನ್ನು ಪರಿವರ್ತಿಸಿ, ಮುದ್ರಣಕ್ಕೆ ಅಣಿಮಾಡಿಕೊಟ್ಟ ಕನ್ನಡ ಗಣಕ ಪರಿಷತ್ತಿನ ಶ್ರೀ ಜಿ.ಎನ್. ನರಸಿಂಹಮೂರ್ತಿ ಅವರಿಗೆ ನನ್ನ ಧನ್ಯವಾದಗಳು.

ಕೊನೆಯದಾಗಿ ಒಂದು ಬಿನ್ನಹ. ಇದೊಂದು ಪ್ರಯತ್ನ ಅಷ್ಟೆ. ಅಧಿಕೃತ ಸಂಪೂರ್ಣ ಮಾಹಿತಿಯ ಗ್ರಂಥ ಬರಬೇಕಾಗಿದೆ. ದಯಮಾಡಿ ಓದುಗರು ನಾಡಿನ ಮಹನೀಯರು ಇದರಲ್ಲಿರುವ ಲೋಪದೋಷಗಳನ್ನು ತಿಳಿಸಬೇಕು. ಇಲ್ಲಿಲ್ಲದ ಮಾಹಿತಿಗಳು ತಿಳಿದಿದ್ದರೆ ತಿಳಿಸಬೇಕು. ಪರಿಷತ್ತಿಗೆ ಸಂಬಂಧಿಸಿದ ದಾಖಲೆಗಳಿದ್ದಲ್ಲಿ ಕಳಿಸಿಕೊಡಬೇಕು ಎಂದು ಸವಿನಯದಿಂದ ಕೇಳಿಕೊಳ್ಳುತ್ತೇನೆ.

– ಜಿ. ಅಶ್ವತ್ಥನಾರಾಯಣ
ಲೇಖಕ

ಪರಿವಿಡಿ

ಕನ್ನಡ ಸಾಹಿತ್ಯ ಪರಿಷತ್ತು - ೧೦೦
(೧೯೧೫-೨೦೧೫)

೧

ಅಧ್ಯಾಯ – ೧

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ರೀತಿ ಒಂದು ಐತಿಹಾಸಿಕ ಮಹತ್ವದ ಘಟನೆಯಾಗಿದೆ.

ಬ್ರಿಟಿಷರು ಟಿಪ್ಪುವನ್ನು ಸೋಲಿಸಿ ಮೈಸೂರು ರಾಜ್ಯವನ್ನು ವಶಪಡಿಸಿಕೊಂಡ ಮೇಲೆ ೧೮೮೧ರಲ್ಲಿ ಚಾಮರಾಜೇಂದ್ರ ಒಡೆಯರ್ ಪಟ್ಟಕ್ಕೆ ಬಂದರು. ಆಗಿನಿಂದ ದಿವಾನರ ಆಡಳಿತ ಪ್ರಾರಂಭವಾಯಿತು. ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಕಾಲದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ೧೯೧೨ರಲ್ಲಿ ದಿವಾನರಾದರು. ಇವರ ಅಧಿಕಾರಾವಧಿ ೧೯೧೨ರಿಂದ ೧೯೧೮ವರೆಗೆ ೬ ವರ್ಷಗಳು. ಈ ಮುಂಚೆ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನಕ್ಕೆ ಚೀಫ್ ಇಂಜಿನಿಯರಾಗಿ ೧೯೦೯ರಲ್ಲಿ ನೇಮಕಗೊಂಡಿದ್ದರು. ಅನಂತರ ಮೈಸೂರು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ೧೯೧೧ರಲ್ಲಿ ಮೈಸೂರು ಸಂಪದಭಿವೃದ್ಧಿ ಸಮಾಜ (ಮೈಸೂರು ಇಕನಾಮಿಕ್ ಕಾನ್ಫೆರೆನ್ಸ್) ಎಂಬ ಸಂಸ್ಥೆಯನ್ನು ಸ್ಥಾಪಿಸಲು ಮಹಾರಾಜರಿಗೆ ಸಲಹೆ ಕೊಟ್ಟಾಗ ಮಹಾರಾಜರು ಅದನ್ನೊಪ್ಪಿದರು. ಅದಕ್ಕನುಸಾರವಾಗಿ ಆ ಸಂಸ್ಥೆಯ ಅಂಗವಾಗಿ ೩ ಸಮಿತಿಗಳು ಏರ್ಪಟ್ಟವು.

೧. ಕಾರ್ಖಾನೆಗಳ ಕೈಗಾರಿಕಾ ಸಮಿತಿ

೨. ವಿದ್ಯಾಸಮಿತಿ

೩. ಭೂ ವ್ಯವಸಾಯ ಸಮಿತಿ

ವಿದ್ಯಾಸಮಿತಿಗೆ ಹೆಚ್. ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿ ವಿ. ಸುಬ್ರಹ್ಮಣ್ಯ ಅಯ್ಯರ್ ಅವರು ಕಾರ್ಯದರ್ಶಿಗಳಾಗಿ ನೇಮಕವಾದರು.

ಈ ವಿದ್ಯಾ ಸಮಿತಿಯವರು ಮುಖ್ಯವಾಗಿ ಎರಡು ಯೋಜನೆಗಳನ್ನು ನಿರ್ಧರಿಸಿದರು.

೧. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ

೨. ಕನ್ನಡ ಅಕಾಡೆಮಿ ಅಥವಾ ಇಂದಿನ ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ವಿಷಯದಲ್ಲಿ ದೇಶದ ವಿದ್ವಜ್ಜನರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂದು ವಿದ್ಯಾಸಮಿತಿಯು ಕೆಲವು ವಿಷಯಗಳನ್ನು ಸಂಕಲ್ಪಿಸಿ ಆ ಬಗ್ಗೆ ಹಲವು ಉಪನ್ಯಾಸಗಳನ್ನು ವಿದ್ವಜ್ಜನರಿಂದ ಏರ್ಪಡಿಸಿತು. ಹಾಗೆ ಏರ್ಪಟ್ಟಿದ್ದು ಬಿ. ಎಂ. ಶ್ರೀ ಅವರ ಉಪನ್ಯಾಸ ಮೈಸೂರು ನಗರದಲ್ಲಿ, ೧೯೧೨-೧೩ರಲ್ಲಿ. ಆಗ ಮೈಸೂರು ಪ್ರಜಾಪ್ರತಿನಿಧಿ ಸಭೆಯಸದಸ್ಯರು ದಸರಾ ಅಧಿವೇಶನಕ್ಕೆ ಬಂದಿದ್ದರು. ಎಂ. ವೆಂಕಟಕೃಷ್ಣಯ್ಯ, ಅಂಬಳೆ ಅಣ್ಣಯ್ಯ ಪಂಡಿತರು, ಕರ್ಪೂರ ಶ್ರೀನಿವಾಸರಾವ್, ಕೆ. ಕೃಷ್ಣಯ್ಯಂಗಾರ್ ಮೊದಲಾದ ಗಣ್ಯವ್ಯಕ್ತಿಗಳು ಬಂದಿದ್ದರು. ಮೈಸೂರಿನ ಗಾರ್ಡನ್ ಪಾರ್ಕಿನಲ್ಲಿರುವ ಡಿಸ್ಟ್ರಿಕ್ಟ್ ಆಫೀಸರ್ ಕಟ್ಟಡದಲ್ಲಿ ಸಭೆ ಸೇರಿತ್ತು. ಬೆಳಿಗ್ಗೆ ೯ರಿಂದ ೧೧ರವರೆಗೆ ಬಿಎಂಶ್ರೀ ಅವರು

ಉಪನ್ಯಾಸನೀಡಿದರು. ಅವರ ಭಾಷಣದ ಸಾರವನ್ನು ಡಿವಿಜಿ ಅವರು ಜ್ಞಾಪಕ ಚಿತ್ರಶಾಲೆ ಸಂಪುಟ ೩ ಪುಟ ೫೫ರಲ್ಲಿ ಸಂಗ್ರಹಿಸಿದ್ದಾರೆ. ಇಂಗ್ಲಿಷಿನಲ್ಲಿ ಬಿ. ಎಂ. ಶ್ರೀ. ಭಾಷಣವನ್ನು ಬರೆದು ತಂದಿದ್ದರು. ಆ ಭಾಷಣದಲ್ಲಿ "ಕನ್ನಡಕ್ಕೆ ಹೊಸ ಸಾಹಿತ್ಯ ಬೇಕಾಗಿದೆ. ಪ್ರಾಚೀನಸಾಹಿತ್ಯದ ಅಭ್ಯಾಸ ಮಾಡಿ ಭಾಷೆಯ ಹಳೆಯ ಶಬ್ದರಾಶಿ ಪ್ರಯೋಗಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಹೊಸಬರವಣಿಗೆಗೆ ಅದು ಅತ್ಯಂತ ಆವಶ್ಯಕವಾದ ಎಂಬುದಾಗಿಯೂ ಸಿದ್ಧತೆ.

ಸಂಸ್ಕೃತದ ಪರಿಚಯವಿಲ್ಲದಿದ್ದರೆ ಹೊಸ ಸಾಹಿತ್ಯಕ್ಕೆ ಬೇಕಾದ ಶಬ್ದಸಾಮಗ್ರಿ ಒದಗಲಾರದು. ಸಂಸ್ಕೃತ ಹೇಗೆ ಆವಶ್ಯಕವೋ ಇಂಗ್ಲಿಷ್ ಸಾಹಿತ್ಯವೂ ಹಾಗೇ ಅವಶ್ಯಕ. ಹೊಸಗನ್ನಡದಲ್ಲಿ ಹೊಸಹೊಸ ಛಂದಃಪ್ರಯೋಗಗಳು ಹೊಸಹೊಸ ಪದಸಂಯೋಜನೆಗಳೂ ಹೊಸಹೊಸ ಕಥಾಪ್ರಪಂಚದ ನಿರ್ಮಿತಿಗಳೂ ಸೇರಿ ನಮ್ಮ ಸಾಹಿತ್ಯ ಜನಜೀವನಕ್ಕೆ ಒಂದು ಹೊಸ ಪ್ರಚೋದಕಶೈಲಿಯಾಗಬೇಕು" ಎಂದು ಅವರು ಹೇಳಿದ್ದಾರೆ.

ಅನಂತರ ೧೯೧೪ರ ಇಸವಿಯಲ್ಲಿ ದಿ ಮೈಸೂರು ಎಕಾನಾಮಿಕ್ ಕಾನ್ಫೆರೆನ್ಸ್ (ಮೈಸೂರು ಸಂಪದಭ್ಯುದಯ ಸಮಾಜ) ಅವರು ವಾರ್ಷಿಕ ಸಮ್ಮೇಳನ ನಡೆಸಿದಾಗ ಆ ಸಭೆಯಲ್ಲಿ ಎಂ. ಶಾಮರಾವ್ ಅವರು ಶಿಕ್ಷಣಕ್ಕೆ ಸಂಬಂಧಿಸಿದಂತೆ ೭ನೇ ಅಂಶದಲ್ಲಿ ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ ಒಂದು ಸಂಸ್ಥೆಯ ಸ್ಥಾಪನಾವಿಷಯವನ್ನು ಮಂಡಿಸುವಂತೆ ಕೋರಿದ್ದರು. ಅದರಂತೆ ಸಭೆಯು "ಕರ್ನಾಟಕ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸಿದವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದಿರಬೇಕು: ಸರ್ಕಾರದವರು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜವು ಸರ್ಕಾರಕ್ಕೆ ಶಿಫಾರಸು ಮಾಡಬೇಕು" ಎಂದು ನಿರ್ಣಯಿಸಿತು.

ಅದರಂತೆ ೩೧ ಅಕ್ಟೋಬರ್ ೧೯೧೪ರಲ್ಲಿ ಸಂಪದಭ್ಯುದಯ ಸಮಾಜದ ವಿದ್ಯಾವಿಷಯಕ ಮಂಡಳಿಯವರು ಉಪಸಂಘವೊಂದನ್ನು ನಿರ್ಮಿಸಿ(ಉಪಸಮಿತಿಯನ್ನು ರಚಿಸಿ)ದರು. ಆ ಸಮಿತಿಗೆ ರಾವ್‌ಬಹದ್ದೂರ್ ಎಂ. ಶಾಮರಾವ್, ಕರ್ಪೂರ ಶ್ರೀನಿವಾಸರಾವ್ ಮತ್ತು ಪಿ. ಎಸ್. ಅಚ್ಯುತರಾವ್ ಅವರು ಸಭ್ಯರಾಗಿದ್ದರು (ಸದಸ್ಯರಾಗಿದ್ದರು). ಈ ಸಮಿತಿ ಕನ್ನಡ ನಾಡುಗಳ ಪ್ರಮುಖರನ್ನು ಬೆಂಗಳೂರಿಗೆ ಆಹ್ವಾನಮಾಡಿ ಕರ್ಣಾಟಕ ಭಾಷಾ ಪರಿಷ್ಕರಣಕ್ಕೂ ಕರ್ಣಾಟಕ ಗ್ರಂಥಾಭಿವೃದ್ಧಿಗೂ ಅನುಕೂಲವಾಗುವಂತೆ ಸಂಘವೊಂದನ್ನು ಏರ್ಪಡಿಸುವ ಕಾರ್ಯವನ್ನು ನಿರ್ವಹಿಸಬೇಕು" ಎಂದು ತೀರ್ಮಾನಿಸಿತು.

ಈ ಉಪಸಮಿತಿಯ ೧೯೧೫ ಜನವರಿ ೭, ಮೊದಲ ಸಭೆಯನ್ನು ೧೯೧೫ ಮಾರ್ಚಿ ೨ರಂದು ೨ನೇ ಸಭೆಯನ್ನು, ೧೯೧೫ ಮಾರ್ಚಿ ೨೨ರಂದು ೩ನೇ ಸಭೆಯನ್ನು ನಡೆಸಿತು. ಆ ೩ ಸಭೆಗಳ ಸಂಕ್ಷಿಪ್ತ ವಿವರಣೆ ಹೀಗಿದೆ:

ಮೊದಲ ಸಭೆ : (೭–೧–೧೯೧೫)

ಜನವರಿ ೭ರಂದು ನಡೆದ ಉಪಸಮಿತಿಯ ಮೊದಲ ಸಭೆಯಲ್ಲಿ ಮುಂಬಯಿ ಮತ್ತು ಮದರಾಸ್ ಪ್ರಾಂತದಿಂದ ಸಮ್ಮೇಳನಕ್ಕೆ ಗಣ್ಯರನ್ನು ಆಹ್ವಾನಿಸುವ ವಿಷಯ ಇತ್ಯರ್ಥವಾಯಿತು. ಮೈಸೂರು ಮತ್ತು ಬೊಂಬಾಯಿಯ ಶಿಕ್ಷಣ ಇಲಾಖೆಗಳು ನಿಗದಿಪಡಿಸಿರುವ ಕನ್ನಡ ಪಠ್ಯ ಪುಸ್ತಕಗಳಲ್ಲಿ ಸಾಹಿತ್ಯಿಕ ಸಮಾನಾಂತರ ರೂಪದ ಬಳಕೆ ಬಗ್ಗೆ ಮೈಸೂರು ಕನ್ನಡ ಭೇದವನ್ನು ಮೈಸೂರು ಶಿಕ್ಷಣ ಇಲಾಖೆಯ ಮೂವರು ರೀಡರುಗಳೊಂದಿಗೆ ಚರ್ಚಿಸಿ, ವರದಿ ತಯಾರಿಸಿ ಮುಂದೆ ನಡೆಯಲಿರುವ ಸಮ್ಮೇಳನದಲ್ಲಿ ಮಂಡಿಸಬೇಕೆಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಕೋರಲು ತೀರ್ಮಾನಿಸಲಾಯಿತು.

ಎರಡನೆಯ ಸಭೆ : (೨–೩–೧೯೧೫)

ಸಂಪದಭ್ಯುದಯ ಸಮಾಜದ ವಿದ್ಯಾವಿಷಯ ಸಮಿತಿಯು, ಉಪಸಮಿತಿಯ ಮೂವರು ಪ್ರಾಜ್ಞ ಸದಸ್ಯರು ೧೯೧೫ ಮಾರ್ಚಿ ೨ರಂದು ಎರಡನೆಯ ಸಭೆ ನಡೆಸಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿತು.

೧. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಇಬ್ಬರು ಲಿಂಗಾಯಿತರು, ಇಬ್ಬರು ಜೈನ ಪ್ರತಿನಿಧಿಗಳನ್ನು, ಬೊಂಬಾಯಿಯ ಕರ್ನಾಟಕಸಭೆ ಇಬ್ಬರು ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಕಳುಹಿಸುವಂತೆ ಪ್ರಾರ್ಥನೆ.

೨. ಬೊಂಬಾಯಿ ಶಿಕ್ಷಣ ಇಲಾಖೆಯ ಮೂರು ಕನ್ನಡಪುಸ್ತಕಗಳನ್ನು ಪರಿಶೀಲಿಸಿ, ಬೊಂಬಾಯಿ ಕನ್ನಡದಲ್ಲಿನ ಉಚ್ಚಾರಭೇದಗಳಲ್ಲಿರುವ ಬಗೆಗೆ ಸಂಕ್ಷಿಪ್ತವಾದ ವರದಿಯನ್ನು ಸಮ್ಮೇಳನಕ್ಕಾಗಿ ಸಿದ್ಧಪಡಿಸಬೇಕೆಂದು ಆರ್. ನರಸಿಂಹಾಚಾರ್, ಆರ್. ರಘುನಾಥರಾವ್, ಎಂ. ಲಕ್ಷ್ಮೀನಾರಣಪ್ಪ ಮತ್ತು ಬಿ. ಕೃಷ್ಣಪ್ಪ ಅವರುಗಳನ್ನೊಳಗೊಂಡ ಉಪಸಮಿತಿ ನೇಮಕ ಮಾಡುವುದು.

೩. ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಆಯ್ದ ಒಂದಕ್ಕಿಂತ ಹೆಚ್ಚು ವಿಷಯಗಳ ಬಗ್ಗೆ ಲೇಖನಗಳನ್ನು ಬರೆದು ೧೯೧೫ ಏಪ್ರಿಲ್ ೧೫ರೊಳಗೆ, ಪ್ರಾವಿಷನಲ್ ಸೆಕ್ರೆಟರಿ ಬಿ. ಕೃಷ್ಣಪ್ಪ ಅವರಿಗೆ ತಲುಪಿಸುವಂತೆ ಕೋರುವುದು.

ಆಯ್ದ ಐದು ಅಂಶಗಳು ಇಂತಿವೆ:

೧. ಕನ್ನಡನಾಡಿನ ಬೇರೆಬೇರೆ ಜಾಗಗಳಲ್ಲಿರುವ ಭಾಷಾಭಿಜ್ಞರಲ್ಲಿ ಐಕಮತ್ಯವನ್ನು ಪರಸ್ಪರ ಸೌಹಾರ್ದವನ್ನು ಹೆಚ್ಚಿಸುವುದಕ್ಕಾಗಿ ಉತ್ತಮೋಪಾಯಗಳನ್ನು ನಿರ್ಧರಿಸುವುದು.

೨. ಕನ್ನಡನಾಡಿನ ಬೇರೆಬೇರೆ ಭಾಗಗಳಲ್ಲಿ ಪ್ರಚಾರದಲ್ಲಿರುವ ಗ್ರಾಂಥಿಕಭಾಷೆಯನ್ನು ಒಂದೇರೂಪಕ್ಕೆ ತರಲು ತಕ್ಕ ಮಾರ್ಗವನ್ನು ನಿಶ್ಚಯಿಸುವುದು,

೩. ಕನ್ನಡವನ್ನೋದುವ ವಿದ್ಯಾರ್ಥಿಗಳಿಗೆ ಎಲ್ಲಾ ವಿದ್ಯಾಶಾಲೆಗಳಲ್ಲಿಯೂ ಪಾಠದ ಪುಸ್ತಕಗಳು ಒಂದೇ ಆಗಿರುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡುವುದು.

೪. ಕನ್ನಡವನ್ನಾಡುವ ಜನಸಾಮಾನ್ಯರಲ್ಲಿ ಲೋಕವ್ಯವಹಾರ ಜ್ಞಾನವು ಸರಳ ಹಾಗೂ ಸುಲಭವಾಗಿ ಹರಡುವಂತೆ ತಕ್ಕ ಸಣ್ಣಪುಸ್ತಕಗಳನ್ನು ಬರೆಯಿಸಿ ಪ್ರಚಾರಮಾಡುವುದಕ್ಕೆ ಸಾಧಕವಾದ ಉತ್ತಮೋಪಾಯಗಳನ್ನು ನಿರ್ಣಯಿಸುವುದು,

೫. ಕನ್ನಡದಲ್ಲಿ ಬರೆಯುವ ಭೌತಿಕಾದಿ ನಾನಾ ಶಾಸ್ತ್ರಗಳಲ್ಲಿ ಪ್ರಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಿಸುವುದಕ್ಕೆ ತಕ್ಕ ಉತ್ತಮೋಪಾಯಗಳನ್ನು ಪರಿಶೀಲಿಸುವುದು.

ಮೂರನೆಯ ಸಭೆ : (೨೨-೩-೧೯೧೫)

೧೯೧೫ ಮಾರ್ಚಿ ೨೨ರಂದು ಸೇರಿದ ಮೂರನೆಯ ಸಭೆಯಲ್ಲಿ ಸಮ್ಮೇಳನವನ್ನು ೩-೫-೧೯೧೫ರಲ್ಲಿ ನಡೆಸಲು ತೀರ್ಮಾನಿಸಿತು. ಮೇಲ್ಕಾಣಿಸಿದ ೫ ವಿಷಯಗಳ ಬಗ್ಗೆ ವಿದ್ಯಾವಿಷಯಕ ಸಮಿತಿಯ ಉಪಸಮಿತಿಯು ವಿನಂತಿ ಮೇರೆಗೆ ೩೧ ಲೇಖನಗಳು ಬಂದವು. ಆ ಪೈಕಿ ೭ ಇಂಗ್ಲಿಷಿನಲ್ಲಿ ಉಳಿದವು ಕನ್ನಡದಲ್ಲಿದ್ದವು [ಈ ಲೇಖನಗಳ ಪಟ್ಟಿಯನ್ನು ರಿಪೋರ್ಟ್ ಆಫ್ ದಿ ಕನ್ನಡ ಲಿಟರರಿ ಕಾನ್ಫರೆನ್ಸ್ ಪುಟ ೨ರಲ್ಲಿ ಪ್ರಕಟಿಸಿದೆ.*]

ಈ ಉಪನ್ಯಾಸಗಳನ್ನೆಲ್ಲ ಪರಿಶೀಲಿಸಿ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ನಿಯಮಗಳನ್ನು ನಿರ್ಧರಿಸುವ ವೇಳೆಯಲ್ಲಿ ಅದರ ಉದ್ದೇಶ ಸಾಧನಕ್ರಮಗಳನ್ನು ಮುಂದೆ ಹೇಳುವ ರೀತಿಯಲ್ಲಿ ವಿವರಿಸುತ್ತಾರೆ. (ಪರಿಷತ್ಪತ್ರಿಕೆ ಸಂ I ಸಂ I (ಪುಟ ೧-೩) ಸ್ವವಿಷಯ)

೧. ಕನ್ನಡ ಭಾಷೆಯಲ್ಲಿ ಪಂಡಿತಯೋಗ್ಯವಾದ ವ್ಯಾಕರಣ, ಚರಿತ್ರೆ, ನಿಘಂಟು ಈ ಮೂರನ್ನೂ ಬರೆಯಿಸುವುದು, ಅಥವಾ ಬರೆಯುವುದಕ್ಕೆ ಸಹಾಯಮಾಡುವುದು.

೨. ನವೀನಶಾಸ್ತ್ರಗಳಿಗೆ ಸಂಬಂಧಪಟ್ಟ ಕನ್ನಡ ಗ್ರಂಥಗಳಲ್ಲಿ ಪ್ರಯೋಗಿಸಲು ಯೋಗ್ಯವಾದ ಪಾರಿಭಾಷಿಕ ಶಬ್ದಗಳ ಕೋಶವನ್ನು ಪ್ರಕಟಿಸುವುದು.

೩. ತತ್ವಶಾಸ್ತ್ರ, ಪ್ರಕೃತಿವಿಜ್ಞಾನ, ಚರಿತ್ರೆ, ಸಾಹಿತ್ಯ ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಡುವ ಗ್ರಂಥಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ಪ್ರೋತ್ಸಾಹಕೊಟ್ಟು ಅವುಗಳನ್ನು ಪ್ರಚುರಪಡಿಸುವುದು.

೪. ಕನ್ನಡ ಭಾಷೆಗೂ ಕನ್ನಡ ಗ್ರಂಥಗಳಿಗೂ ಸಂಬಂಧಪಟ್ಟ ಎಲ್ಲಾ ಚರ್ಚಾಂಶಗಳನ್ನೂ ವಿಚಾರಮಾಡಿ ನಿರ್ಣಯಿಸುವುದು.

೫. ಕನ್ನಡವನ್ನುಳಿದು ಇತರ ಭಾಷೆಗಳಲ್ಲಿರುವ ಉತ್ತಮ ಗ್ರಂಥಗಳನ್ನು ಕನ್ನಡಿಸಿ ಪ್ರಕಟಿಸುವುದು.

೬. ಉತ್ಕೃಷ್ಟವಾದ ಪ್ರಾಚೀನ ಗ್ರಂಥಗಳನ್ನೂ, ಕನ್ನಡ ದೇಶಗಳ ಚರಿತ್ರೆಯನ್ನೊಳಗೊಂಡ ಗ್ರಂಥಗಳನ್ನೂ ಸಂಗ್ರಹಿಸಿ, ಅದನ್ನು ಪರಿಷ್ಕರಿಸಿ ಪ್ರಕಟಿಸುವುದೂ ಅಲ್ಲದೆ, ಕನ್ನಡನಾಡಿನ ಪೂರ್ವಸ್ಥಿತಿಯನ್ನು ವಿಶದಗೊಳಿಸುವ ವಸ್ತುಗಳನ್ನು ಕೂಡಿಟ್ಟು ಅವುಗಳನ್ನು ಕಾಪಾಡುವುದಕ್ಕಾಗಿ ಪ್ರಾಚೀನ ವಸ್ತುಸಂಗ್ರಹಾಲಯ ವನ್ನೇರ್ಪಡಿಸುವುದು.

೭. ಕರ್ಣಾಟಕ ಭಾಷಾಸಂಸ್ಕರಣ, ಕರ್ಣಾಟಕ ಗ್ರಂಥಾಭಿವೃದ್ಧಿಗಳನ್ನು ಕುರಿತು ಪಂಡಿತಯೋಗ್ಯವಾದ ಲೇಖನಗಳನ್ನೊಳಕೊಂಡ ಕನ್ನಡದ ಪತ್ರಿಕೆಗಳನ್ನು ಪ್ರಕಟಿಸುವುದು.

೮. ಕರ್ಣಾಟಕ ಗ್ರಂಥಕರ್ತರು ಬರೆದಿರುವ ಪುಸ್ತಕಗಳನ್ನು ಕೊಂಡುಕೊಳ್ಳುವುದರಿಂದಾಗಲಿ, ಅವರು ಬರೆದಿರುವ ಪುಸ್ತಕಗಳನ್ನು ಅಚ್ಚು ಹಾಕಿಸಿಕೊಳ್ಳುವುದಕ್ಕೆ ಮುಂಗಡವಾಗಿ ಹಣವನ್ನು ಕೊಡುವುದರಿಂದಾಗಲಿ, ಅವರ ಗ್ರಂಥಗಳ ಮುದ್ರಣಾಧಿಕಾರವನ್ನು (Copy-right) ಹಣಕೊಟ್ಟು ತೆಗೆದುಕೊಳ್ಳುವುದರಿಂದಾಗಲಿ ಅವರಿಗೆ ಪ್ರೋತ್ಸಾಹಕೊಟ್ಟು, ಸ್ವತಂತ್ರಗ್ರಂಥಗಳನ್ನು ಬರೆದು ತಾವೇ ಹಣ ವೆಚ್ಚಮಾಡಿ ಪ್ರಕಟಿಸುವ ಗ್ರಂಥಕರ್ತರಿಗೆ ಬಿರುದನ್ನಾಗಲಿ ಸಂಭಾವನೆಯನ್ನಾಗಲಿ ಕೊಡುವುದು.

೯. ಕರ್ಣಾಟಕ ಭಾಷೆಗೂ ಸಾಹಿತ್ಯಕ್ಕೂ ಸಂಬಂಧಿಸಿದ ಅಪೂರ್ವ ಪರಿಶೋಧನ ಕಾರ್ಯದಲ್ಲಿ ನಿರತರಾಗಿರುವ ಕನ್ನಡ ಅಥವಾ ಸಂಸ್ಕೃತ ವಿದ್ವಾಂಸರಿಗೆ ಪಂಡಿತವೇತನಗಳನ್ನು ಕೊಡುವುದು.

೧೦. ಕರ್ಣಾಟಕ ಭಾಷೋನ್ನತಿಗೂ, ಗ್ರಂಥಾಭಿವೃದ್ಧಿಗೂ ಸಂಬಂಧಪಡುವ ಸಮಸ್ತ ವಿಷಯಗಳನ್ನೂ ಆಯಾ ಸರ್ಕಾರದವರ ಪರಾಮರ್ಶಕ್ಕೆ ತಂದು ಅವನ್ನು ತೃಪ್ತಿಕರವಾಗಿ ವ್ಯವಸ್ಥೆಮಾಡಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು.

೧೧. ಕನ್ನಡ ಮಾತನ್ನಾಡುವ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಸ್ಥಳಗಳಲ್ಲಿ ಕನ್ನಡದ ವಾಚನಾಲಯಗಳನ್ನೂ ಪುಸ್ತಕಭಂಡಾರಗಳನ್ನೂ ಸ್ಥಾಪಿಸುವುದು.

೧೨. ಕನ್ನಡ ನಾಡುಗಳ ಪ್ರಮುಖರನ್ನು ಸೇರಿಸಿ ಆಗಾಗ ಸಭೆಗಳನ್ನೇರ್ಪಡಿಸುವುದು, ಮತ್ತು ಸಮರ್ಥರಾದ ವಿದ್ವಾಂಸರಿಂದ ಉಪನ್ಯಾಸಗಳನ್ನು ಮಾಡಿಸುವುದು.

ಅಲ್ಲದೆ, ಸಾಮಾನ್ಯವಾಗಿ ಕರ್ಣಾಟಕ ಭಾಷೋನ್ನತಿಗೂ ಗ್ರಂಥಾಭಿವೃದ್ಧಿಗೂ ಆವಶ್ಯಕವಾದ ಇತರ ಪ್ರಯತ್ನಗಳನ್ನು ಮಾಡುವುದು.

೨೨-೩-೧೯೧೫ರಲ್ಲಿ ಸೇರಿದ ಉಪಸಮಿತಿ ತೀರ್ಮಾನಿಸಿದಂತೆ ೩ ಮೇ ೧೯೧೫ರಂದು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಗಿ ಏರ್ಪಟ್ಟ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನವು "ಬೆಂಗಳೂರಿನ ಗೌರ್ನಮೆಂಟ್ ಹೈಸ್ಕೂಲಿನಲ್ಲಿ ವಿಶಾಲ ಹಜಾರದಲ್ಲಿ ಮಧ್ಯಾಹ್ನ ೩ ಗಂಟೆಗೆ ಪ್ರಾರಂಭವಾಯಿತು.

ನಿಯಮಿತ ಕಾಲಕ್ಕೆ ಎಷ್ಟೋ ಮುಂಚಿತವಾಗಿಯೇ ವಿಶಾಲವಾದ ಹಜಾರವೆಲ್ಲಾ ಜನಸಂದಣಿಯಿಂದ ತುಂಬಿತ್ತು."

(ಪರಿಷತ್‌ಪತ್ರಿಕೆ ಏಪ್ರಿಲ್ ೧೯೧೬)

ಬೆಂಗಳೂರು ಗೌರ್ನಮೆಂಟ್ ಹೈಸ್ಕೂಲ್‌ನಲ್ಲಿ ಎಂಬ ಮಾತನ್ನು ಸಾಹಿತ್ಯ ಪರಿಷತ್ತಿನ ಇತಿಹಾಸವನ್ನು ಬರೆಯಲು ಹೊರಟ ಹಲವು ಲೇಖಕರು ಕೋಟೆ ಪ್ರದೇಶದಲ್ಲಿರುವ ಪ್ರೌಢಶಾಲೆಯೆಂದು ಹೇಳಿದ್ದಾರೆ. ೧೯೧೫ರಲ್ಲಿ ಕೊಲಿಜಿಯೆಟ್ ಹೈಸ್ಕೂಲ್ ಎಂಬುದು ಈಗ ಬೆಂಗಳೂರಿನ ಸರ್ಕಾರಿ ಆರ್ಟ್ಸ್ ಕಾಲೇಜು (ಬೆಂಗಳೂರು ಸೆಂಟ್ರಲ್ ಕಾಲೇಜು ಎದುರಿಗಿದೆ) ಎಂಬುದನ್ನು ವೇಮಗಲ್ ಸೋಮಶೇಖರ್ ಒಂದು ಲೇಖನದಲ್ಲಿ ಹೇಳಿದ್ದಾರೆ. ಹೇಮಾದ್ರಿ, ಶಂಕರಲಿಂಗಪ್ಪ, ಲಕ್ಷ್ಮಣ ತೆಲಗಾವಿ ಮೊದಲಾದವರೆಲ್ಲ ಕೋಟೆ ಹೈಸ್ಕೂಲಿನಲ್ಲಿ ಪ್ರಥಮ ಸಾಹಿತ್ಯ ಸಮ್ಮೇಳನ ನಡೆಯಿತು ಎಂದು ಬರೆದಿರುವುದು ಸರಿಯಲ್ಲ. ಪ್ರಥಮ ಸಮ್ಮೇಳನದಲ್ಲಿ ಭಾಗವಹಿಸಿದ ಡಿವಿಜಿ ಅವರು ತಮ್ಮ ಜ್ಞಾಪಕ ಚಿತ್ರಶಾಲೆ – ಪುಟ ೫೭ರಲ್ಲಿ ಸ್ಪಷ್ಟವಾಗಿ "ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಎದುರುಗಡೆಯಿರುವ ಈಗಿನ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್ ಕಟ್ಟಡದ ನಡುವಣ ಸಭಾಮಂದಿರದಲ್ಲಿ" ಎಂದಿದ್ದಾರೆ.

ಸಮ್ಮೇಳನಕ್ಕೆ ಬಂದಿದ್ದ ಗಣ್ಯರ ಬಗ್ಗೆ ಪರಿಷತ್ಪತ್ರಿಕೆಯಲ್ಲಿ ಹೀಗೆ ಹೇಳಿದೆ:

"ಕರ್ಣಾಟಕದ ನಾನಾ ಪ್ರಾಂತಗಳ ಪ್ರಮುಖರೂ, ವಿದ್ವಾಂಸರೂ ದಯೆಮಾಡಿಸಿದ್ದರು. ಧಾರ್ವಾಡ, ಬಿಜಾಪುರ, ಬೆಲ್ಗಾಮು, ಗಾಲ್ವಿಯರ, ಬೊಂಬಾಯಿನಗರ, ಬೊಂಬಾಯಾಧಿಪತ್ಯದ ದೇಶೀಯ ಸಂಸ್ಥಾನಗಳು, ಮದರಾಸು ನಗರ, ಬಳ್ಳಾರಿ, ದಕ್ಷಿಣ ಕನ್ನಡೀಯ, ಮೈಸೂರು ಸಂಸ್ಥಾನದ ಡಿಸ್ಟ್ರಿಕ್ಟ್‌ಗಳು – ಈ ಪ್ರಾಂತಗಳ ಅನೇಕ ಪ್ರತಿನಿಧಿಗಳು ದಯೆಮಾಡಿಸಿ ಸಮ್ಮೇಳನವನ್ನು ಅಲಂಕರಿಸಿದ್ದರು. ಧಾರ್ವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘದ ಮತ್ತು ಕರ್ಣಾಟಕ ವಿದ್ಯಾವ್ಯಾಸಂಗ ಸಮಾಜದ, ಬೊಂಬಾಯಿ ನಗರದ ಕರ್ಣಾಟಕ ಸಭೆಯ, ಮತ್ತು ಮೈಸೂರು ಸಂಸ್ಥಾನದ ಕಾಲೇಜು ಮತ್ತು ಹೈಸ್ಕೂಲುಗಳ ಪ್ರತಿನಿಧಿಗಳೂ ದಯೆಮಾಡಿಸಿದ್ದರು. ಧಾರ್ವಾಡದ "ಕರ್ಣಾಟಕ ವೃತ್ತ ಮತ್ತು ಧನಂಜಯ," ಹುಬ್ಬಳ್ಳಿಯ "ಸಚಿತ್ರ ಭಾರತ" ಪತ್ರಿಕೆ, ಮಂಗಳೂರಿನ "ಸ್ವದೇಶಾಭಿಮಾನಿ" ಮತ್ತು ಮೈಸೂರು ಸಂಸ್ಥಾನದ ವೃತ್ತಾಂತ ಪತ್ರಿಕೆಗಳ ಸಂಪಾದಕರೂ ಹಾಜರಿದ್ದರು." ಹೀಗಿದ್ದುದರಿಂದ ಈ ಸಮ್ಮೇಳನಕ್ಕೆ ಕನ್ನಡ ನಾಡುಗಳ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಬಂದಿದ್ದಂತೆ ಭಾವಿಸಬಹುದು.

ಪರಿಷತ್ತಿನ ಸ್ಥಾಪನೆ ಎಲ್ಲಿ?

ಡಿವಿಜಿ ಅವರು ಸಭೆಗೆ ಬಂದವರನ್ನು ಕುರಿತು ಹೀಗೆ ಹೇಳಿದ್ದಾರೆ (ಜ್ಞಾ. ಚಿ.ಪು. ೫೭):

ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಎದುರುಗಡೆಯಿರುವ ಈಗಿನ ಆರ್ಟ್ಸ್ ಅಂಡ್ ಸಯನ್ಸ್ ಕಾಲೇಜ್ ಕಟ್ಟಡದ ನಡುವಣ ಸಭಾಮಂದಿರದಲ್ಲಿ.

ಪರಿಷತ್ತಿನ ಸಮಾರಂಭಕ್ಕಾಗಿ ಕನ್ನಡದೇಶದ ನಾನಾಭಾಗಗಳಿಂದ ಗಣ್ಯಜನ ಬಂದಿದ್ದರು. ಧಾರವಾಡದಿಂದ ರಾಮಚಂದ್ರ ಹಣಮಂತ ದೇಶಪಾಂಡೆ, ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು, (ಕರ್ಣಾಟಕ ಪ್ರಿಂಟಿಂಗ್ ಪ್ರೆಸ್ಸಿನ) ಜಠಾರ್‌ರವರು ಬಂದಿದ್ದರು. ಬಳ್ಳಾರಿಯಿಂದ ವಕೀಲ ತಿಮ್ಮಕೃಷ್ಣರಾಯರು, ಹೊಸಪೇಟೆಯ ರಾವ್‌ಬಹದ್ದೂರ್ ಸಿ. ಹನುಮಂತಗೌಡರು, ಮದರಾಸಿನಿಂದ ಬೆನಗಲ್ ರಾಮರಾಯರು, ಮಂಗಳೂರಿನಿಂದ ಮುಳಿಯ ತಿಮ್ಮಪ್ಪಯ್ಯನವರು, ಮೈಸೂರಿನಿಂದ ಪುಂಗನೂರು ರಾಘವೇಂದ್ರಾಚಾರ್ಯರು – ಮೊದಲಾದ ವಿದ್ವಾಂಸರು ದಯಮಾಡಿಸಿದ್ದರು. ಬೆಂಗಳೂರು ಹೊರಗಿನಿಂದ ಬಂದಿದ್ದವರು ನೂರೈವತ್ತು– ಇನ್ನೂರು ಮಂದಿ ಇರಬಹುದು. ಬೆಂಗಳೂರಿನ ಸ್ಥಳೀಕರು ಮುನ್ನೂರು – ನಾಲ್ಕುನೂರು ಮಂದಿ. ಒಟ್ಟಿನಲ್ಲಿ ಅದು ದೊಡ್ಡ ಸಭೆ. ಬಿ. ಎಂ. ಶ್ರೀಕಂಠಯ್ಯನವರು ಅದರಲ್ಲಿದ್ದ ಹಾಗೆ ನನಗೆ ಜ್ಞಾಪಕವಿಲ್ಲ. ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ – ಇವರು ಸಭೆಯಲ್ಲಿ ಎಲ್ಲಿಯೋ ಇದ್ದರಂತೆ. ಅವರಿಗೂ ನನಗೂ ಆಗ ಪರಿಚಯವಾಗಿರಲಿಲ್ಲ. ಅವರಿಬ್ಬರೂ ಆಗ್ಗೆ ಇನ್ನೂ ಅಪ್ರಸಿದ್ಧರು."

೩-೫-೧೯೧೫ ಮೊದಲನೇ ದಿನದ ಸಮ್ಮೇಳನ

ಅಗ್ರಾಸನಾಧಿಪತಿಗಳನ್ನು ಚುನಾಯಿಸುವುದು ಸಮ್ಮೇಳನದ ಕಾರ್ಯಗಳಲ್ಲಿ ಮೊದಲನೆಯದಾಗಿದ್ದುದರಿಂದ, ಅಲ್ಲಿ ಸೇರಿದ್ದ ಮಹಾಜನಗಳು ಮ ॥ ರಾ॥ ರಾಜಮಂತ್ರಪ್ರವೀಣ ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್., ಸಿ. ಐ.ಇ., ಎಂಬುವರನ್ನು ಅಗ್ರಾಸನಾಧಿಪತಿಗಳನ್ನಾಗಿ ಏಕಕಂಠ್ಯದಿಂದ ಚುನಾಯಿಸಿದರು. ಅಗ್ರಾಸನಾಧಿಪತಿಗಳು ಪೀಠವನ್ನಲಂಕರಿಸಿದ ಕೂಡಲೆ ಬೊಂಬಾಯಿಯ ಕರ್ಣಾಟಕ ಸಭೆಯ ಪ್ರತಿನಿಧಿಗಳಾದ ಮ॥ ವಿ. ಬಿ. ಧಾರ್ವಾಡಕರ್, ಬಿ. ಎ. ಯವರು ತಾವು ರಚಿಸಿದ್ದ ದೇವತಾಪ್ರಾರ್ಥನಾರೂಪದ ಕೃತಿಯೊಂದನ್ನು ಮಧುರಧ್ವನಿಯಿಂದ ಹಾಡಿದರು. ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರೂ, ಮ ॥ ಎಂ. ಎನ್. ಬಾಳರಾಜ ಅರಸಿನವರೂ, ರಾವ್ ಬಹದೂರ್ ಪ್ರೊಫೆಸರ್ ಎಸ್. ಮಂಗೇಶರಾಯರವರೂ, ಪ್ರೊಫೆಸರ್ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರವರೂ, ಮದರಾಸಿನ ಡಾಕ್ಟರ್ ಸಿ. ಬಿ. ರಾಮರಾಯರವರೂ ಬರೆದು ಕಳುಹಿಸಿದ್ದ ಪ್ರೋತ್ಸಾಹಕ ಪತ್ರಿಕೆಗಳನ್ನು ರಾವ್ ಬಹದ್ದೂರ್ ಎಂ. ಶಾಮರಾಯರವರು ಸಭೆಗೆ ಶ್ರುತಪಡಿಸಿದರು. ಸಭೆಯವರ ಸಂತೋಷಾತಿಶಯದ ಕೋಲಾಹಲದ ಮಧ್ಯದಲ್ಲಿ ಅಗ್ರಾಸನಾಧಿಪತಿಗಳು ಅನೇಕ ನವೀನ ವಿಷಯಗರ್ಭಿತವಾದ ತಮ್ಮ ಪ್ರೌಢೋಪನ್ಯಾಸವನ್ನು ಪಠಿಸುವರಾದರು. (ಇದು ಈ ಸಂಚಿಕೆಯಲ್ಲಿ ಪುಟ ೫ ರಿಂದ ೨೪ರವರೆಗೆ ಮುದ್ರಿಸಲ್ಪಟ್ಟಿದೆ.)

ಉಪನ್ಯಾಸ ಪ್ರವಾಹ

ಅದೇ ಮಧ್ಯಾಹ್ನಾತ್ಪರ ಸುಮಾರು ಎರಡೂವರೆ ಘಂಟೆಯಿಂದ ಆರು ಘಂಟೆಯವರೆಗೂ ಉಪನ್ಯಾಸಗಳು. ಕನ್ನಡ ನಾಡಿನ ಹಿರಿಮೆ, ಕನ್ನಡ ಭಾಷೆಯ ಹಿರಿಮೆ, ನಮ್ಮ ಪೂರ್ವಕವಿಗಳು, ನಮ್ಮ ಜನಕ್ಕೆ ಬೇಕಾಗಿರುವಂಥ ಸಾಹಿತ್ಯ, ಪರಿಷತ್ತಿನಿಂದ ದೇಶಕ್ಕೆ ಆಗಬಹುದಾದ ಪ್ರಯೋಜನಗಳು – ಈ ನಾನಾ ವಿಷಯಗಳನ್ನು ಕುರಿತು ವಿದ್ವಾಂಸರುಗಳು ತೀವ್ರವಾದ ಅಹಮಹಮಿಕೆಯಿಂದ ಭಾಷಣ ಮಾಡಿದರು. ಅವುಗಳಲ್ಲಿದ್ದ ಶಬ್ದಾಡಂಬರಗಳಿಂದಲೂ ಚರ್ವಿತಚರ್ವಣದಿಂದಲೂ ಕೆಲ ಮಂದಿಗೆ ತಲೆಚಿಟ್ಟುಹಿಡಿದು ಹೋಯಿತು.

ಅಗ್ರಾಸನಾಧಿಪತಿಗಳ ಉಪನ್ಯಾಸವು ಸಾಮಾಜಿಕರಿಗೆ ಆನಂದವನ್ನುಂಟುಮಾಡಿತು. ಅಹೂತರಾಗಿ ಬೊಂಬಾಯಿ ನಗರದಿಂದ ದಯೆಮಾಡಿಸಿದ್ದ ಮ॥ ಆರ್. ಎ. ಜಹಗೀರ್‌ದಾರ್ ಅವರು ಸಮ್ಮೇಳನದ ಪ್ರಥಮೋದ್ದೇಶವನ್ನು ಕುರಿತು ಬರೆದ ತಮ್ಮ ಲೇಖನವನ್ನು ಓದಿದರು. ಬಳಿಕ ದಕ್ಷಿಣ ಕನ್ನಡದ ಪುತ್ತೂರಿನಿಂದ ಆಹೂತರಾಗಿ ಬಂದಿದ್ದ ಮ॥ ಬೈಂದೂರು ಆನಂದರಾಯರು ಕನ್ನಡ ನಾಡುಗಳ ಗ್ರಾಂಥಿಕಭಾಷೆಯ ಏಕರೂಪತೆಯ ಸಾಧನಮಾರ್ಗವನ್ನು ಕುರಿತು ತಾವು ಬರೆದುದನ್ನು ಪಠಿಸಿದರು. ಆ ಮೇಲೆ ಮ॥ ಗೋವಿಂದರಾಜಯ್ಯಂಗಾರ್ಯರು ಸಮ್ಮೇಳನದ ಪ್ರಥಮೋದ್ದೇಶವನ್ನು ಕುರಿತು ತಾವು ಬರೆದುದನ್ನೂ, ತದನಂತರದಲ್ಲಿ ಮ॥ ಎಂ. ಎಸ್. ಪುಟ್ಟಣ್ಣನವರು ಕರ್ಣಾಟಕ ಭಾಷೆಯ ಪ್ರಾಚೀನ ನವೀನಸ್ಥಿತಿಗಳನ್ನು ಕುರಿತು ತಾವು ಬರೆದ ಲೇಖನವನ್ನೂ ಓದಿದರು. ಆಗ ಮಾಜಿ ಕೌನ್ಸಿಲರ್ ದಿವಾನ್‌ಬಹದೂರ್ ರಾಜಸಭಾಭೂಷಣ ಮ॥ ಪುಟ್ಟಣ್ಣಶೆಟ್ಟಿಯವರು ಆರು ಗಂಟೆಯಾಗಿ ಸಾಯಂಕಾಲವಾಗುತ್ತಾ ಬಂತೆಂತಲೂ, ಉಳಿದ ಲೇಖನಗಳನ್ನು ಓದಿ ನೋಡುವುದಕ್ಕೂ ಸಮ್ಮೇಳನದ ಮುಂದಿನ ದಿವಸಗಳಲ್ಲಿ ವಿಚಾರ ಮಾಡಬೇಕಾದ ವಿಷಯಗಳನ್ನು ನಿರ್ಧರಿಸುವುದಕ್ಕೂ ವಿಷಯ ನಿರ್ಧಾರಕ ಮಂಡಲಿಯೊಂದನ್ನು ಏರ್ಪಡಿಸುವುದು ಆವಶ್ಯಕವೆಂದು ತಿಳಿಸಿದರು. ಈ ಮಂಡಲಿಯಲ್ಲಿ ಮೈಸೂರಿನವರು ಒಂಬತ್ತು ಮಂದಿ, ಬೊಂಬಾಯಿ ಅಧಿಪತ್ಯದವರು ಆರುಮಂದಿ, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆ ಸಂಬಂಧಪಟ್ಟವರು ಇಬ್ಬರು, ಮದರಾಸಾಧಿಪತ್ಯದವರು ಮೂರು ಮಂದಿ, ಆವಶ್ಯಕವಿದ್ದಲ್ಲಿ ಮತ್ತಷ್ಟು ಮಂದಿ ಇರಬಹುದೆಂದು ತೀರ್ಮಾನವಾಯಿತು.

ಇಲ್ಲಿಗೆ ಪ್ರಥಮ ದಿವಸದ ಸಮ್ಮೇಳನವು ಮುಗಿಯಿತು. ಆ ಮೇಲೆ ವಿಷಯ ನಿರ್ಧಾರಕ ಮಂಡಲಿಯವರು ಅದೇ ಹಜಾರದಲ್ಲಿ ಕುಳಿತು ಸಮ್ಮೇಳನದ ಎರಡನೆಯ ದಿನದಲ್ಲಿ ಚರ್ಚಿಸಿ ತೀರ್ಮಾನಿಸಬೇಕಾದ ವಿಷಯಗಳ ಮಸೂದೆಯನ್ನು ಪರ್ಯಾಲೋಚಿಸಿ ನಿರ್ಧರಿಸಿದರು.

ಪ್ರಥಮ ಕನ್ನಡ ಸಮ್ಮೇಳನದಲ್ಲಿ ಇಂಗ್ಲಿಷ್ ಬಳಕೆ

ಮೊದಲ ದಿನ

೧೯೧೫ರಲ್ಲಿ ಇಂಗ್ಲಿಷಿಗೆ ಪ್ರಾಧಾನ್ಯ ಹೇಗಿತ್ತು ಸಾರ್ವಜನಿಕ ಜೀವನದಲ್ಲಿ ಎಂಬುದಕ್ಕೆ ಈ ಸಮ್ಮೇಳನದ ಕೆಲವು ಸಂಗತಿಗಳು ಸಾಕ್ಷಿಯಾಗಿವೆ.

ಮೊದಲ ಸಂಗತಿ ಎಂದರೆ ಸಮ್ಮೇಳನದ ಆಹ್ವಾನ ಪತ್ರಿಕೆ ಇಂಗ್ಲಿಷಿನಲ್ಲಿತ್ತು. ಈ ಬಗ್ಗೆ ಮೈಸೂರು ಸ್ಟಾರ್ ಪತ್ರಿಕೆ ೨-೫-೧೯೧೫ ಭಾನುವಾರ ಪುಟ ೫ರಲ್ಲಿ ಪ್ರಕಟವಾದ ವಾಚಕರ ಪತ್ರದಲ್ಲಿ ಈ ಸಂಗತಿಯನ್ನು ತಿಳಿಸಿ ಟೀಕಿಸಿದ್ದಾರೆ.

"ಬೆಂಗಳೂರಿನಲ್ಲಿ ಸೇರುವ ಕನ್ನಡಿಗರ ಸಮ್ಮೇಳನಕ್ಕೆ ಸಂಬಂಧಪಟ್ಟ ಆಹ್ವಾನಪತ್ರಿಕೆ ಮೊದಲಾದವುಗಳು ಇಂಗ್ಲಿಷಿನಲ್ಲಿ ಅಚ್ಚುಮಾಡಿಸಿ ಕಳುಹಿಸಲ್ಪಟ್ಟಿವೆ. ಆಹ್ವಾನ ಮಾಡಲ್ಪಟ್ಟವರಲ್ಲಿ ಬರಿಯ ಕನ್ನಡವನ್ನು ಬಲ್ಲವರು ಅದನ್ನು ಓದಿಸಿಕೊಳ್ಳುವುದಕ್ಕಾಗಿ ಇಂಗ್ಲಿಷ್ ಪ್ಯಾಸ್ ಮಾಡಿದವರಲ್ಲಿಗೆ ಹೋಗಬೇಕಾಯಿತು. ಸಮ್ಮೇಳನವನ್ನು ಕೂಡಿಸುವವರು ಕನ್ನಡಿಗರು, ಅಲ್ಲಿ ಸೇರುವವರು ಕನ್ನಡಿಗರು, ಅಲ್ಲಿ ಪಡೆದ ಲಾಭವು ಕನ್ನಡದ ಏಳ್ಗೆಯಾಗಿರುವಾಗ ಇಂಗ್ಲಿಷಿನ ಮಧ್ಯಸ್ತಿಕೆ ಯಾತಕ್ಕೆ? ಇದು ಪ್ರಥಮ ಕಬಳದಲ್ಲೇ ಮಕ್ಷಿಕಾಪಾತವಾದಂತಲ್ಲವೆ? ಇದು ಸ್ವಭಾಷಾಭಿಮಾನದ ಲಕ್ಷಣವೆ? ಇಂಥ ಪರಭಾಷಾ ಪ್ರೇಮದಿಂದಲೇ ಅಲ್ಲವೆ ನಮ್ಮ ಸ್ವಭಾಷಾಮಾತೆಯು ಮೂಲೆಮುಟ್ಟಾಗಿರುವುದು? ಆ ಹೀನಸ್ಥಿತಿಯನ್ನು ನಿವಾರಣೆ ಮಾಡುವ ಪ್ರಯತ್ನದಲ್ಲೂ ಇಂಥ ನಡೆಯಾದರೆ ಮುಂದಣ ಸಭೆಯ ಕೆಲಸವೂ, ಅದರ ಚರಿತಾರ್ಥವೂ, ಎಷ್ಟುಮಟ್ಟಿಗೆ ನಮ್ಮ ಭಾಷೆಗೆ ಹಿತವನ್ನು ಮಾಡುವುದೋ ನೋಡಬೇಕು ಎಂದು ನಮ್ಮ ಪತ್ರವ್ಯವಹಾರಕರೊಬ್ಬರು ಬರೆದಿರುತ್ತಾರೆ."

ಇಂಗ್ಲಿಷಿನಲ್ಲಿ ಪ್ರಾರಂಭೋಪನ್ಯಾಸ

ಸಮ್ಮೇಳನದ ಅಧ್ಯಕ್ಷರಾದ ಹೆಚ್. ವಿ. ನಂಜುಂಡಯ್ಯನವರ ಭಾಷಣವೂ ಇಂಗ್ಲಿಷ್‌ನಲ್ಲಿದ್ದು ಆ ಬಗ್ಗೆ ಡಿವಿಜಿ ಅವರು ಈ ರೀತಿ ಬರೆದಿದ್ದಾರೆ.

"ಹೆಚ್.ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿ ಪ್ರಾರಂಭೋಪನ್ಯಾಸ ಮಾಡಿದರು. ಆದರೆ ಇಂಗ್ಲಿಷಿನಲ್ಲಿ! ವೇದಿಕೆಯ ಎದುರುಗಡೆ ಮೊದಲನೆಯ ಸಾಲಿನ ನಾಲ್ಕೈದು ಪೀಠಗಳ ಪೈಕಿ ಒಂದರಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರು ಕುಳಿತಿದ್ದರು. ನಾನು ಅವರ ಪಕ್ಕದಲ್ಲಿದ್ದೆ. ನಂಜುಂಡಯ್ಯನವರು ಇಂಗ್ಲಿಷಿನಲ್ಲಿ ತಮ್ಮ ಮೊದಲ ಮಾತುಗಳನ್ನು ನುಡಿಯುತ್ತಿದ್ದಂತೆಯೇ ವೆಂಕಟನಾರಣಪ್ಪನವರು ಮೆಲ್ಲನೆಯ ಧ್ವನಿಯಲ್ಲಿ–

"Nonsense. ಇದು ಶುದ್ಧ Nonsense ಅಷ್ಟೆ" – ಎಂದರು. ನಂಜುಂಡಯ್ಯನವರಿಗೆ ಅದು ಕೇಳಿಸಿರಬೇಕು. ಅವರ ಎಡಮೀಸೆ ಹಾರಿತು. ಅವರನ್ನು ಬಲ್ಲವರಿಗೆ ಅದು ನಗುವಿನ ಲಾಂಛನವೆಂಬುದು ಗೊತ್ತಿತ್ತು. ನಂಜುಂಡಯ್ಯನವರು ವೆಂಕಟನಾರಣಪ್ಪನವರ ಟೀಕೆಯನ್ನು ಕೇಳಲಿಲ್ಲವೋ ಏನೋ ಎಂಬಂತೆ ಉಪನ್ಯಾಸ ಮುಗಿಸಿ ಸಭೆ ಪುನಃ ಅದೇ ಜಾಗದಲ್ಲಿ ಆ ಮಧ್ಯಾಹ್ನ ಎರಡೂವರೆ ಘಂಟೆಗೆ ಸೇರತಕ್ಕದ್ದೆಂದು ತೀರ್ಮಾನ ಹೇಳಿ, ವೇದಿಕೆಯಿಂದ ಇಳಿದು ಬಂದು ವೆಂಕಟನಾರಣಪ್ಪನವರ ಹತ್ತಿರ ನಿಂತು, "ಅದಕ್ಕೇನು ಕನ್ನಡದಲ್ಲಿ ಮಾತಿಲ್ಲವೋ?"

– ಎಂದು ಕೇಳಿದರು. ವೆಂಕಟನಾರಣಪ್ಪನವರು ನಕ್ಕರು. ನನ್ನ ಕಡೆ ತಿರುಗಿ "ಏನಪ್ಪಾ 'Nonsense' ಅಂಬೋದಕ್ಕೆ ಕನ್ನಡದಲ್ಲಿ?'– ಎಂದು ಕೇಳಿದರು. ನಾನು "ನಾನ್‌ಸೆನ್ಸ್" ಎಂದೆ. ಆ ಕ್ಷಣ ನನಗೆ ಬೇರೆ ಏನೂ ಹೊಳೆಯಲಿಲ್ಲ. ಆಮೇಲೆ ನಂಜುಂಡಯ್ಯನವರು ಒಂದು ಸಣ್ಣ ವಿವರಣೆ ಕೊಟ್ಟರು:

"ನಾವು ಈಗ ಮಾಡುತ್ತಿರುವ ಪ್ರಯತ್ನ ಕನ್ನಡ ತಿಳಿಯದ ಜನರಿಗೂ ತಿಳಿಯಬೇಕಾದದ್ದು. ನಮ್ಮ ಪರಿಷತ್ತಿಗೆ ಹಣ ಕೊಡಬೇಕಾದ ಸರಕಾರಕ್ಕೂ ತಿಳಿಯಬೇಕು; ಸರಕಾರದ ಮೇಲೆ ಉಸ್ತುವಾರಿ ನಡಸುವ ಬ್ರಿಟಿಷ್ ರೆಸಿಡೆಂಟರಿಗೂ ತಿಳಿಯಬೇಕು. ಅವರಿಗೆಲ್ಲ ತಿಳಿದರೆ ನಮಗೇನೂ ನಷ್ಟವಾಗದು; ಕೊಂಚ ಪ್ರಯೋಜನವೂ ಇರಬಹುದು ಅಲ್ಲವೇ?"

ಎರಡನೆಯ ದಿವಸದ ಸಮ್ಮೇಳನದಲ್ಲಿ ನಡೆದ ಕೆಲಸ (೪-೫-೧೯೧೫)

ಇದೇ ಹೈಸ್ಕೂಲಿನ ಹಜಾರದಲ್ಲಿ ಸಮ್ಮೇಳನವು ಅಪರಾಹ್ನ ೩ ಗಂಟೆಗೆ ಸರಿಯಾಗಿ ಸೇರಿತು. ಸಭೆಯ ಪ್ರಾರ್ಥನಾನುಸಾರವಾಗಿ ದಿವಾನ್ ಬಹದೂರ್ ರಾಜಸಭಾಭೂಷಣ ಮ॥ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು ಅಗ್ರಾಸನವನ್ನು ಅಲಂಕರಿಸಿದರು. ಮುಂದೆ ವಿವರಿಸಲ್ಪಡುವ ಸಲಹೆಗಳು ಚರ್ಚಿತವಾಗಿ ತೀರ್ಮಾನಿಸಲ್ಪಟ್ಟುವು. ಅವು ಯಾವುವೆಂದರೆ :-

೧. "ಕರ್ಣಾಟಕ ಭಾಷಾ ಸಂಸ್ಕರಣಕ್ಕಾಗಿಯೂ ಕರ್ಣಾಟಕ ಗ್ರಂಥಾವಳಿಯ ಅಭಿವೃದ್ಧಿಗಾಗಿಯೂ ಬೆಂಗಳೂರಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂಬ ಹೆಸರಿನೊಡನೆ ಪ್ರಧಾನಸಭೆಯೊಂದು ಸ್ಥಾಪಿತವಾಗಬೇಕು."

೨. "ಬೊಂಬಾಯಿ, ಮದರಾಸು, ಹೈದರಾಬಾದು ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಶಾಖೆಗಳಿರಬೇಕು; ಮತ್ತು ಈ ಪರಿಷತ್ತಿನ ಉದ್ದೇಶಗಳನ್ನೇ ಇಟ್ಟುಕೊಂಡು ಕೆಲಸಮಾಡುವ ಇತರ ಸಂಘಗಳನ್ನು ತನ್ನ ಜತೆಗೆ ಸೇರಿಸಿಕೊಳ್ಳುವುದಕ್ಕೆ ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಅಧಿಕಾರವಿರ ಬೇಕು."

ನಿಬಂಧನೆಗಳ ರಚನೆ

ಅಂದಿನ ಬೆಳಗ್ಗೆ ಸಂಸ್ಥೆಯ ನಿಯಮಾವಳಿಯನ್ನು ತಯಾರು ಮಾಡುವುದಕ್ಕಾಗಿ ನೇಮಕವಾಗಿದ್ದ ಉಪಸಮಿತಿ ತನ್ನ ನಿಯಮಗಳ ಕರಡುಪ್ರತಿಯನ್ನು ಒಪ್ಪಿಸಿತು. ಆ ಉಪಸಮಿತಿಯಲ್ಲಿದ್ದವರು ಕರ್ಪೂರ ಶ್ರೀನಿವಾಸರಾಯರು. ಡಾ॥ ಪಿ. ಎಸ್. ಅಚ್ಯುತರಾಯರು, ಪುಟ್ಟಣ್ಣನವರು, ಬಾಪು ಸುಬ್ಬರಾಯರು, ಆರ್. ರಘುನಾಥರಾಯರು, ಟಿ. ಲಕ್ಷ್ಮೀನರಸಿಂಹರಾಯರು; ನಾನೂ ಅದರಲ್ಲಿದ್ದೆ.

ಇಲ್ಲಿಗೆ ಎರಡನೆಯ ದಿನದ ಸಭೆಯು ಭರಕಾಸ್ತಾಯಿತು. ಬಳಿಕ ವಿಷಯ ನಿರ್ಧಾರಕ ಮಂಡಲಿಯವರು ಮೂರನೆಯ ದಿನ ಸಲಹೆಗಳನ್ನು ಕ್ರಮಪಡಿಸುವುದಕ್ಕೆ ಸಭೆಸೇರಿದರು.

ಮೂರನೆಯ ದಿನದ ಕೆಲಸ (೫-೫-೧೯೧೫)

ಅದೇ ಹಜಾರದಲ್ಲಿ ಮೂರನೆಯ ದಿವಸವೂ ಸಮ್ಮೇಳನವು ಅಪರಾಹ್ನ ೩ ಘಂಟೆಗೆ ಸರಿಯಾಗಿ ಸೇರಿತು. ಮ॥ ಕರ್ಪೂರ ಶ್ರೀನಿವಾಸರಾಯರ ಅಗ್ರಾಸನವನ್ನು ಅಲಂಕರಿಸಬೇಕೆಂದು ಡಾಕ್ಟರು ಅಚ್ಯುತರಾಯರವರು ಸಭೆಗೆ ಬಿನ್ನವಿಸಲು ಸಭೆಯವರೆಲ್ಲರೂ ಹರ್ಷಾತಿಶಯದ ಕಲಕಲದೊಡನೆ ಒಪ್ಪಿದರು.

ಆ ದಿವಸದಲ್ಲಿ ಪರಿಷತ್ತಿನ ರಚನಾಕ್ರಮವೂ, ನಿಬಂಧನೆಗಳೂ ಜಿಜ್ಞಾಸಾಪೂರ್ವಕವಾಗಿ ತೀರ್ಮಾನಿಸಲ್ಪಟ್ಟವು. (ನಿಬಂಧನೆಗಳ ಪೂರ್ಣಪಾಠವನ್ನು 'ನಿಬಂಧನೆಗಳು' ಅಧ್ಯಾಯದಲ್ಲಿ ಕೊಟ್ಟಿದೆ.)

ಮೂರನೆಯ ದಿನ ಕರಡು ನಿಯಮಾವಳಿಯು ಸಭೆಯ ಪರ್ಯಾಲೋಚನೆಗೆ ಬಂದಿತು. ಅದರ ಮೇಲೂ ಪಂಡಿತ ಭಾಷಣಗಳು. ದಾತೃಗಳು, ಪ್ರದಾತೃಗಳು, ಮಹಾಪ್ರದಾತೃಗಳ ಆಶ್ರಯದಾತರು, ಆಶ್ರಯಕರ್ತರು, ಪೋಷಕರು, ಪರಿಪೋಷಕರು - ಇಂಥ ಮಾತುಗಳೆಲ್ಲ ಚರ್ಚೆ. ಒಬ್ಬರು ಶಬ್ದಮಣಿದರ್ಪಣವನ್ನು ಹೇಳಿದರೆ ಇನ್ನೊಬ್ಬರು ಶಾಸನಪ್ರಯೋಗವನ್ನು ಹೇಳಿದರು..... ಹೀಗೆ ಬೆಳೆಯಿತು ವಿಚಾರಸರಣಿ.

ನಂಜಂಡಯ್ಯನವರು ಬಹುಮಟ್ಟಿಗೆ ನಗುತ್ತ, ಒಂದೊಂದು ಸಾರಿ ಕಟು ಟೀಕೆ ಮಾಡುತ್ತ, ಹಾಗೂ ಈ ಕೆಲಸವನ್ನು ಮೂರನೆಯ ದಿನ ಸಂಜೆ ನಾಲ್ಕು ಘಂಟೆಗೆ ಮುಗಿಸಿದರು.

ಪರಿಷತ್ತಿನ ಸ್ಥಾಪನಕಾರ್ಯದಲ್ಲಿ ಮೊದಲಿನಿಂದ ಕಡೆಯವರೆಗೂ ಶ್ರಮಿಸಿದವರು ಸೆಕ್ರೆಟರಿ ಬಿ. ಕೃಷ್ಣಪ್ಪ, ಎಂ. ಎ., ಅವರು. ಅವರ ಪಾಂಡಿತ್ಯ ಎಷ್ಟು ದೊಡ್ಡದೋ ಅವರ ತಾಳ್ಮೆಯೂ ಕಾರ್ಯದಕ್ಷತೆಯೂ ಅಷ್ಟು ಪ್ರಶಂಸನೀಯವಾದವು. ಆ ಮಹನೀಯರು ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಕನ್ನಡ ಪ್ರೊಫೆಸರಾಗಿದ್ದರು.

ಇದು ವಿಷಯ. ಮೊದಲು ಕರ್ನಾಟಕವೆ, ಕರ್ಣಾಕಟವೆ, ಕನ್ನಡವೆ? ಅಥವಾ ಕರಿನಾಡೆ? ಮೂರನೆಯದಾಗಿ ಕರ್ಣಾಟವೆ, ಕರ್ಣಾಟಕವೇ? ಅಥವಾ ಕಾರ್ಣಾಟಕೀ ಎಂದೆ? ನಾಲ್ಕನೆಯದಾಗಿ ಪರಿಷತ್ತೆ, ಸಂಸತ್ತೆ ಅಥವಾ ಪರಿಷದವೆ, ಅಥವಾ ಸಂಸದವೆ, ಅಥವಾ ಸಭಾ ಎನ್ನತಕ್ಕದ್ದೆ? ಸಭೆ ಸೇರಿದಾಗ ಅಧ್ಯಕ್ಷ ನಂಜುಂಡಯ್ಯನವರು ಹೀಗೆ ಹೇಳಿದರು:

"ಈಗ ಎರಡು ದಿನವೆಲ್ಲ ಹೆಸರನ್ನು ಚರ್ಚಿಸುವುದಕ್ಕಾಗಿ ಕಳೆದೆವಲ್ಲ. ಈಗಲಾದರೂ ಕೆಲಸಕ್ಕೆ ಉಪಕ್ರಮ ಮಾಡೋಣ. ನಿಮ್ಮಲ್ಲಿ ರಘುನಾಥರಾಯರೋ ರಾಘವೇಂದ್ರಾಚಾರ್ಯರೋ ಇನ್ನು ಯಾರಾದರೂ ಒಂದು ಹೆಸರನ್ನು ಸೂಚಿಸೋಣವಾಗಲಿ, ಅದನ್ನು ಸಭೆಯ ವೋಟಿಗೆ ಹಾಕುತ್ತೇನೆ. ಭಾಷಣಗಳು ಸಾಕು. ಆ ಸೂಚನೆ ಅಂಗೀಕಾರವಾಗದೆ ಹೋದರೆ ಆಮೇಲೆ ಇನ್ನೊಂದು ಸೂಚನೆ. ಅನಂತರ ಮತ್ತೊಂದು – ಕ್ರಮವನ್ನನುಸರಿಸೋಣ."

ಸಭೆಯಲ್ಲಿ ಯಾರೋ ಒಬ್ಬರು "ಇನ್ನೂ ಮಾತನಾಡುವವರಿದ್ದಾರೆ, ಸ್ವಾಮಿ" ಎಂದರು. ನಂಜುಂಡಯ್ಯನವರು "ಹೌದು ಹೌದು. ನಾವೆಲ್ಲ ಅದೇ. ಊರು ತುಂಬ ಮಾತನಾಡುವವರೇ. ಆದರೆ ಕೆಲಸವೂ ನಡೆಯಬೇಕಲ್ಲ?" ಎಂದರು. ಕೆಲಸಕ್ಕೆ ಉಪಕ್ರಮ ಮಾಡಿಸಿದರು.

ನಾಲ್ಕನೆಯ ದಿನ ೬-೫-೧೯೧೫

೬ನೇ ದಿನ ಮಧ್ಯಾಹ್ನ ಎರಡೂವರೆ ಗಂಟೆಗೆ ಪ್ರಾರಂಭವಾಯಿತು. ಕರ್ಪೂರ ಶ್ರೀನಿವಾಸರಾಯರು ಅಗ್ರಾಸನಾಧಿಪತಿಗಳಾಗಿದ್ದರು. ನಾಲ್ಕನೇ ದಿನದ ಸಭೆಯಲ್ಲಿ ನಿರ್ಣಯಗಳು ಮಂಡಿಸಲ್ಪಟ್ಟು ಅಂಗೀಕಾರವಾಯಿತು. ಪರಿಷತ್ತಿನ ಕಾರ್ಯಕಾರಿ ದಿನವಿಡೀ ರೂಪುಗೊಂಡಿತು.

ಸಮ್ಮೇಳನದ ಕಾರ್ಯವು ಇಲ್ಲಿಗೆ ಮುಗಿಯಲು, ಪಂಡಿತರುಗಳಾದ ಅಯ್ಯಾಶಾಸ್ತ್ರಿಗಳೂ, ದೇವೋತ್ತಮ ಜೋಯಿಸರೂ, ಶ್ರೀರಂಗಾಚಾರ್ಯರೂ, ಕೋದಂಡರಾಮಶಾಸ್ತ್ರಿಗಳೂ, ಮ ॥ ಚಿಕ್ಕೋಡಿಯವರೂ, ಕೇಶವಯ್ಯನವರೂ ಪರಿಷತ್ತಿನ ಉತ್ತರೋತ್ತರ ಶ್ರೇಯಸ್ಸನ್ನು ಬಯಸಿ ಪ್ರಾರ್ಥನಾರೂಪದಲ್ಲಿ ತಾವು ತಾವು ರಚಿಸಿದ ಪದ್ಯಗಳನ್ನು ಶ್ಲೋಕಗಳನ್ನೂ ರಾಗದಿಂದ ಓದಿದರು.

ಬೇರೆಬೇರೆ ಕನ್ನಡನಾಡುಗಳ ಮಹನೀಯರುಗಳ ಪರಿಚಯವನ್ನು ಸಂಪಾದಿಸಿಕೊಂಡು ಸನ್ಮಿತ್ರ ಮಂಡಲಿಯನ್ನು ವಿಸ್ತರಿಸಿಕೊಳ್ಳುವುದಕ್ಕೂ ಮೈಸೂರು ಸಂಸ್ಥಾನ ಪಂಡಿತರ ಮಂಡಲಿಯೊಡನೆ ಸಂಭಾಷಣೆಯನ್ನು ಬೆಳೆಯಿಸುವುದಕ್ಕೂ ಈ ಪರಿಷತ್ತಿನ ಮೂಲಕ ಅವಕಾಶವನ್ನು ಕಲ್ಪಿಸಿಕೊಟ್ಟು ಮಹೋಪಕಾರವನ್ನು ಮಾಡಿದುದಕ್ಕಾಗಿ ಮಹಾಪ್ರಭುಗಳಾದ ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರಕ್ಕೂ ಸಮ್ಮೇಳನವನ್ನೇರ್ಪಡಿಸಿದ ಮಹನೀಯರುಗಳಿಗೂ ಬೊಂಬಾಯಿ ಕರ್ಣಾಟಕದವರ ಪರವಾಗಿ ವಂದನೆಗಳನ್ನು ಸಮರ್ಪಿಸುತ್ತಾ ಮ ॥ ದೇಶಪಾಂಡೆಯವರೂ, ಜೋಷಿಯವರೂ,. ದೇಸಾಯಿಯವರೂ, ವಾಸುದೇವಾಚಾರ್ಯರವರೂ, ನರ್ಗುಂದಕರವರೂ, ಸೆಟ್ಲೂರವರೂ, ಜಹಗೀರ್ದಾರವರೂ, ಚಿಕ್ಕೋಡಿಯವರೂ, ಮಂಗಸೂಲಿಯವರೂ ಉತ್ಸಾಹಭರಿತರಾಗಿ ಪ್ರವಚನಗಳನ್ನು ಮಾಡಿದರು.

ಮೈಸೂರು ಸಂಪದಭ್ಯುದಯ ಸಮಾಜದವರ ಮೂಲಕ ಈ ಕರ್ಣಾಟ ವಿದ್ವನ್ಮಂಡಲಿಯ ಸಮ್ಮೇಳನವನ್ನು ಏರ್ಪಡಿಸಿ, ಬೇರೆಬೇರೆ ಕನ್ನಡ ನಾಡುಗಳಿಂದ ಆಹ್ವಾನವನ್ನು ಹೊಂದಿ ಬಂದ ಮಹನೀಯರನ್ನು ಒಂದೇ ಎಡೆಯಲ್ಲಿ ಸಂಧಿಸುವುದಕ್ಕೆ ತಮಗೆ ಅಸಾಧಾರಣವಾದ ಆನುಕೂಲ್ಯವನ್ನು ಕಲ್ಪಿಸಿಕೊಟ್ಟುದುದಕ್ಕಾಗಿ ಶ್ರೀಮನ್ಮಮಹಾರಾಜ ಸಾಹೇಬ್ ಬಹದೂರವರಿಗೂ ಅವರ ಸರ್ಕಾರಕ್ಕೂ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸುತ್ತಾ ಮದರಾಸು ಕರ್ಣಾಟಕದವರ ಪರವಾಗಿ ಮ ॥ ತಿಮ್ಮಕೃಷ್ಣರಾಯರವರೂ, ರಾಮರಾಯರವರೂ, ಮಂಗೇಶರಾಯರವರೂ, ವೆಂಕಟರಾಯರವರೂ ವಂದನೆಗಳನ್ನು ಸಮರ್ಪಿಸುತ್ತಾ ಮೃದುಮಧುರ ವಚನಗಳಿಂದ ಪ್ರಸಂಗಿಸಿದರು.

ಒಂದೇ ಸಮನಾದ ವಿನಯದೊಡನೆಯೂ ಸಾಮರ್ಥ್ಯದೊಡನೆಯೂ ಶ್ರದ್ಧೆಯೊಡನೆಯೂ ತಾಳ್ಮೆಯೊಡನೆಯೂ ಅಗ್ರಾಸನಾಧಿಪತಿಗಳು ಸಮ್ಮೇಳನದ ನಾಲ್ಕು ದಿವಸಗಳ ಕೆಲಸಗಳನ್ನು ನಡೆಯಿಸಿದುದು ಶ್ಲಾಘನೀಯವೆಂದೂ, ಸಮ್ಮೇಳನದ

ಏರ್ಪಾಡುಗಳನ್ನು ಸಮರ್ಪಕವಾಗುವಂತೆ ನಿರ್ಮಿಸಿದ ಮಹನೀಯರ ಸಾಮರ್ಥ್ಯವು ಅಸಾಧಾರಣವಾದುದೆಂದೂ ಅಂತಹವರ ಸಹಾಯವು ಪರಿಷತ್ತಿನ ಕಾರ್ಯನಿರ್ವಾಹಕ್ಕೆ ದೊರೆತುದು ಕರ್ಣಾಟಕ ಮಹಾಮಂಡಲಿಯ ಪುಣ್ಯೋದಯವೆಂದೇ ಹೇಳಬೇಕೆಂದೂ ಪರಮೋತ್ಸಾಹದಿಂದ ವರ್ಣಿಸುತ್ತ ಮ॥ ಮುದವೇಡಕರ್‌ರವರು ವಾಗ್ವೈಖರಿಯೊಡನೆ ವಂದನೆಗಳನ್ನು ಸಮರ್ಪಿಸಿದರು.

ನಾಲ್ಕನೇದಿನ ಸಂಜೆ ಬಂದಿದ್ದ ಮಹನೀಯರಿಗೆ ಏರ್ಪಡಿಸಿದ್ದ ಸಂತೋಷಕೂಟವನ್ನು ಡಿವಿಜಿ ಹೀಗೆ ಬಣ್ಣಿಸಿದ್ದಾರೆ, (ಜ್ಞಾ. ಚಿತ್ರಶಾಲೆ ಪುಟ ೫೯):

"ಅಂದು ಸಂಜೆ ಬಂದಿದ್ದ ಮಹನೀಯರ ಸಂತೋಷಕ್ಕಾಗಿ ಒಂದು ಸಂತೋಷಕೂಟವನ್ನೇರ್ಪಡಿಸಿತ್ತು. ಅದು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ಮಂದಿರದ ಆವರಣದಲ್ಲಿ. ಸದಸ್ಯರಲ್ಲಿ ಬಹುಮಂದಿ ಅಲ್ಲಿಯೇ ಬಿಡಾರ ಮಾಡಿಕೊಂಡಿದ್ದರು.

ಈ ಸಂತೋಷಕೂಟವನ್ನು ಏರ್ಪಡಿಸುವ ಯೋಚನೆ ಮಾಡಿ ನಾನು ನನ್ನ ಮಾನ್ಯಮಿತ್ರರಾದ ಸರಕಾರದ ಸೆಕ್ರೆಟರಿ ಡಿ. ಎಂ. ನರಸಿಂಹರಾಯರ ಸಹಾಯವನ್ನು ಬೇಡಿದೆ. ಎರಡು ಡೇರಾಗಳು. ಐವತ್ತು ಮೇಜುಗಳು, ಇನ್ನೂರು ಕುರ್ಚಿಗಳು, ನಾಲ್ಕು ಜಮಖಾನೆಗಳು – ಇವಷ್ಟನ್ನು ಸರಕಾರದ ಉಗ್ರಾಣದಿಂದ ಸಾಲ ಕೊಡಿಸುವುದಾದರೆ ಅದಕ್ಕೆ ತಗಲುವ ಬಾಡಿಗೆಯನ್ನು ನಾನು ಕೊಡುವುದಾಗಿ ಹೇಳಿದೆ. ಅವರು "ನಿನಗೆ ಯಾಕಯ್ಯ ಅಷ್ಟು ಶ್ರಮ? ಅಲ್ಲಿ ಹಾಸ್ಟೆಲ್ ವಾರ್ಡನ್ ಬಿ. ವೆಂಕಟೇಶಾಚಾರ್ಯರಿದ್ದಾರಲ್ಲ, ಅವರು ಈ ಸಹಾಯವನ್ನೆಲ್ಲ ನಿನಗೆ ಸುಲಭವಾಗಿ ಒದಗಿಸಬಹುದು" ಎಂದರು.

"ನನಗೆ ವೆಂಕಟೇಶಾರ್ಯರ ಪರಿಚಯ ಇಲ್ಲವಲ್ಲ?"

"ಅದೇನು ಕಷ್ಟ?"

– ಎಂದು ನರಸಿಂಗರಾಯರು ನನ್ನೊಡನೆ ವೆಂಕಟೇಶಾಚಾರ್ಯರನ್ನು ನೋಡಲು ಬಂದರು. ಪೂಜ್ಯರಾದ ವೆಂಕಟೇಶಾಚಾರ್ಯರಿಗೂ ನನಗೂ ಮೊದಲು ಭೇಟಿಯಾದದ್ದು ಹೀಗೆ. ಅವರು ಉತ್ಸಾಹದಿಂದ ಸಹಕರಿಸಿ ಎಲ್ಲ ವಿಧಗಳಲ್ಲಿಯೂ ಸಹಾಯ ಕೊಟ್ಟರು. ಆ ಕೂಟದಲ್ಲಿ ಪಿಟೀಲು ವಿದ್ವಾನ್ ಪುಟ್ಟಪ್ಪನವರ ಬಾಯಿ ಹಾಡಿಕೆ ನಡೆಯಿತು. ಬಹಳ ಸೊಗಸಾಗಿತ್ತೆಂದು ಕೇಳಿದವರೆಲ್ಲ ಹೇಳಿದರು. ಗಂಧಪುಷ್ಪ ವಿನಿಯೋಗವಾದ ಮೇಲೆ ಎಲ್ಲರೂ ಅಲ್ಲಿಂದ ಹೊರಡುವ ಸಮಯದಲ್ಲಿ ನಂಜುಂಡಯ್ಯನವರು ನನ್ನನ್ನು ಬೇರೆಯಾಗಿ ಕರೆದು ಕೇಳಿದರು:

"ಎಷ್ಟು ಖರ್ಚುಮಾಡಿದೆ? ಸಾಲ ಹೆಚ್ಚು ಮಾಡಿದ್ದರೆ ಹೇಳು." ಆಗ ಎಂ. ಶಾಮರಾಯರೂ ಇದ್ದರು. ಅವರೆಂದರು.

"ಮಾಡಲೇಳಿ ಹುಡುಗನ ಹುಚ್ಚು."

ಪರಿಷತ್ತಿನ ಸ್ಥಾಪನೆಯ ವಿವರಗಳನ್ನು ಮೊದಲ ಸಮ್ಮೇಳನದ ವರದಿಯನ್ನು ಅಂದಿನ ಪತ್ರಿಕೆಗಳು ಸಾಕಷ್ಟು ವಿವರವಾಗಿ ಪ್ರಕಟಿಸಿದವು. ಇಲ್ಲಿ ನಿದರ್ಶನಪೂರ್ವಕವಾಗಿ ಮೈಸೂರು ಸ್ಟಾರ್ ಪತ್ರಿಕೆ (೯-೫-೧೯೧೫) ಪ್ರಕಟಿಸಿದ ವರದಿ ಹೀಗಿದೆ:

ಮೈಸೂರು ಸ್ಟಾರ್ ೧೯೧೫ನೆಯ ಇಸವಿ ಮೇ ತಾರೀಖು ೯ನೇ ಭಾನುವಾರ, ಪುಟ ೫

ಕನ್ನಡಿಗರ ಸಮ್ಮೇಳನ

ಕನ್ನಡಿಗರ ಸಮ್ಮೇಳನವು ಕಳೆದ ತಾ॥ ೩ರಲ್ಲಿ ಬೆಂಗಳೂರು ಸರ್ಕಾರಿಯ ಹೈಸ್ಕೂಲ್ ಕಟ್ಟಡದಲ್ಲಿ ೧ನೆಯ ಕೌನ್ಸಿಲರ್ ಮ॥ ಎಚ್. ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಆರಂಭಿಸಲ್ಪಟ್ಟಿತು. ಧಾರವಾಡ, ಮದ್ರಾಸು, ಉಡುಪಿ ಮೊದಲಾದ ಕಡೆಗಳಿಂದ ಭಾಷಾಭಿಮಾನಿಗಳಾದವರು ಪ್ರತಿನಿಧಿಗಳಾಗಿ ಕರೆಯಲ್ಪಟ್ಟು ಬಂದಿದ್ದರಲ್ಲದೆ ಪ್ರೇಕ್ಷಕರ ಸಂಖ್ಯೆಯೂ ಹೆಚ್ಚಾಗಿ ಸೇರಿದ್ದಿತು. ಶ್ರೀಮದ್ಯುವರಾಜರು, ದಿವಾನರು ಮೊದಲಾದವರು ತಂತಿಯ ಮೂಲಕ ತಮ್ಮಭಿನಂದನಗಳನ್ನು ಕಳುಹಿಸಿದ್ದರು.

ಅಧ್ಯಕ್ಷರು ಕನ್ನಡ ಭಾಷೆಯಯುತ್ಪತ್ತಿ, ಪೂರ್ವದಲ್ಲಿ ಅದಕ್ಕಿದ್ದ ಶುದ್ಧತೆ, ಮತ್ತೂ ಉಚ್ಛ್ರಾಯಸ್ಥಿತಿ ಈಗ ಅದಕ್ಕೂ ತೆಲುಗು ತಮಿಳು ಮೊದಲಾದ ದ್ರಾವಿಡಭಾಷೆಗಳಿಗೂ ಇತರತಕ್ಕ ವ್ಯತ್ಯಾಸ – ಇವುಗಳನ್ನು ವಿವರಿಸುವ ಮತ್ತೂ ಮುಂದೆ ಅದು ಕರ್ನಾಟಕ ಪ್ರಾಂತಗಳಲ್ಲೆಲ್ಲಾ ಏಕಸ್ವರೂಪವನ್ನು ಹೊಂದಿ ಸೋದರಭಾಷೆಗಳಂತೆ ಉಚ್ಚಸ್ಥಿತಿಗೆ ಬರುವ ಉಪಾಯ ಮೊದಲಾಂಶಗಳನ್ನೊಳಗೊಂಡ ಒಂದು ದೊಡ್ಡ ಭಾಷಣವನ್ನು ಮಾಡಿದರು. ಅನಂತರ ವಿಷಯನಿರ್ಧಾರಕ ಭಾಷಣವನ್ನು ಮಾಡಿದರು. ಅನಂತರ ವಿಷಯನಿರ್ಧಾರಕಸಭೆಯು ಏರ್ಪಡಿಸಲ್ಪಟ್ಟು ಆ ದಿವಸದ ಸಭೆಯು ವಿಸರ್ಜಿತವಾಯಿತು. ವಿಷಯನಿರ್ಧಾರಕಸಭೆಯವರು ತಾ॥ ೪ರಲ್ಲಿ ದಿ ॥ ಬ॥ ಕೆ.ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲೂ ಸಭೆಸೇರಿದ್ದು, ಮೈಸೂರಪ್ರಾಂತಕ್ಕೆ ೧೨, ಬೊಂಬಾಯಾಧಿಪತ್ಯಕ್ಕೆ ೮, ಹೈದರಾಬಾದಿಗೆ ೨, ದಕ್ಷಿಣಮಹಾರಾಷ್ಟ್ರಕ್ಕೆ ೨ ಮತ್ತೂ ಕೊಡಗಿಗೆ ೧ ಈ ಪ್ರಕಾರ ೩೦ ಸಭ್ಯರನ್ನೊಳಗೊಂಡ ೧ ಕಾರ್ಯಕಾರಿಮಂಡಳಿಯು ಸ್ಥಾಪಿತವಾಗಿ, ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಸೆಕ್ರೆಟರಿ, ಮತ್ತೊಬ್ಬರು ಆಡಿಟರು ಹೀಗೆ ಅಧಿಕಾರಿಗಳು ನಿಯಮಿಸಲ್ಪಡಬೇಕೆಂದೂ; ಪ್ರಾಚೀನ ಕರ್ನಾಟಕ ಗ್ರಂಥಗಳು ಶೇಖರಿಸಲ್ಪಟ್ಟು ವ್ಯಾಖ್ಯಾನದೊಡನೆ ಪ್ರಚುರಪಡಿಸಲ್ಪಡಬೇಕು, ಗ್ರಂಥಶೋಧನೆಗೆ ಉತ್ತೇಜನವೂ, ಗ್ರಂಥಕರ್ತರಿಗೆ ಪ್ರೋತ್ಸಾಹವೂ ಕೊಡಲ್ಪಡಬೇಕು, ರೂ. ಗಳನ್ನು ಕೊಡತಕ್ಕವರು ಪೋಷಕರಾಗಿಯೂ, ೫೦೦ ರೂ. ಗಳನ್ನು ಕೊಡತಕ್ಕವರು ಆಶ್ರಯದಾತರಾಗಿಯೂ, ೧೦೦ ರೂ. ಗಳನ್ನು ಕೊಡತಕ್ಕವರು ಆಜೀವಸಭಾಸದರಾಗಿಯೂ ಮಾಡಲ್ಪಡತಕ್ಕುದೆಂದೂ; ಪ್ರತಿವರ್ಷದಲ್ಲೂ ೧೨ ರೂ. ಗಳನ್ನು ಕೊಡುವವರು ೧ನೆಯ ತರಗತಿಯ ಸಭ್ಯರಾಗಿಯೂ, ೪ ರೂ. ಗಳನ್ನು ಕೊಡುವವರು ೨ನೆಯ ತ॥ ಸಭ್ಯರಾಗಿಯೂ ಇರತಕ್ಕುದೆಂದೂ; ಒಂದು ಕಾರ್ಯಕಾರಿ ಮಂಡಳಿಯು ಏರ್ಪಾಟಾಗತಕ್ಕುದೆಂದೂ ನಿರ್ಧಾರಗಳಾಗಿ, ಮ ॥ ಗಳಾದ ಎಚ್. ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿಯೂ, ಎಂ. ಶ್ಯಾಮರಾಯರು ಉಪಾಧ್ಯಕ್ಷರಾಗಿಯೂ, ಸರದಾರ್ ಎಂ. ಕಾಂತರಾಜ ಅರಸಿನವರು, ಎಂ. ವೆಂಕಟಕೃಷ್ಣಯ್ಯನವರು, ಕರ್ಪೂರ ಶ್ರೀನಿವಾಸರಾಯರು, ಆರ್. ಎ. ನರಸಿಂಹಾಚಾರ್ಯರು, ಡಾ॥ ಅಚ್ಯುತರಾಯರು, ಆರ್. ರಘುನಾಥರಾಯರು, ಬಾಪು ಸುಬ್ಬರಾಯರು, ಅಯ್ಯಾಶಾಸ್ತ್ರಿಗಳು, ಕರಿಬಸವಶಾಸ್ತ್ರಿಗಳು, ಕೆ.ಪಿ. ಪುಟ್ಟಣ್ಣಸೆಟ್ಟರು, ಸಿ. ಕೃಷ್ಣರಾಯರು, ಸಿ. ವಾಸುದೇವಯ್ಯನವರು, ಎಂ. ಎಸ್.ಪುಟ್ಟಣ್ಣನವರು, ಬಿ. ಎಂ. ಶ್ರೀಕಂಠಯ್ಯನವರು, ಬಿ. ಕೃಷ್ಣಪ್ಪನವರು ಮೈಸೂರಸೀಮೆಯ ಪರವಾಗಿಯೂ; ಧಾರವಾಡದ ಟ್ರೇನಿಂಗ್ ಕಾಲೇಜಿನ ಮುಖ್ಯೋಪಾಧ್ಯಾಯರಾದ ವಿ. ಬಿ. ಜೋಷಿಯವರು, ಪಬ್ಲಿಕ್ ಪ್ರಾಸಿಕ್ಯೂಟರಾದ ಎಸ್. ಜಿ. ಕರಿಗುದರಿಯವರು, ಆರ್. ಎ. ಜಹಗೀರ್ದಾರ್‌ರವರು, ನರಗುಂದಕರ್‌ರವರು, ಪಿ.ಆರ್. ಚಿಕ್ಕೋಡಿಯವರು, ಮುದವೇಡಕರ್‌ರವರು, ಎಫ್.ಜಿ. ಹಳಕಟ್ಟಿಯವರು, ವಿ.ಬಿ. ಆಲೂರ್‌ರವರು ಮತ್ತೂ ವಿ. ಎನ್. ಮಗ್ದಾಳ್‌ರವರು ಬೊಂಬಾಯಾಧಿಪತ್ಯದ ಪರವಾಗಿಯೂ, ಬೆನಗಲ್ ರಾಮರಾಯರು, ರಾಜಗೋಪಾಲಕೃಷ್ಣರಾಯರು, ಮತ್ತೂ ಎ. ವೆಂಕಟರಾಯರು ಮದ್ರಾಸಾಧಿಪತ್ಯದ ಪರವಾಗಿಯೂ ಮೆಂಬರುಗಳಾಗಿ ನಿಯಮಿಸಲ್ಪಟ್ಟರು. ಕನ್ನಡಭಾಷೆಯನ್ನಾಡತಕ್ಕ ಪ್ರದೇಶಗಳಲ್ಲಿಯ ಬಾಲ್ಯವಿದ್ಯಾಭ್ಯಾಸವು ಕನ್ನಡದಲ್ಲೇ ಜರುಗುವಂತೆ ಮಾಡಲು ಪ್ರಾರ್ಥಿಸಬೇಕು; ಇದೇ ವಿಚಾರದಲ್ಲಿ ಮದ್ರಾಸು ಮತ್ತೂ ಬೊಂಬಾಯಿ ಸರ್ವಕಲಾಶಾಲೆಯವರನ್ನು ಪ್ರಾರ್ಥಿಸಬೇಕಲ್ಲದೆ, ಮದ್ರಾಸು, ಬೊಂಬಾಯಿ, ಹೈದರಾಬಾದು, ದಕ್ಷಿಣಮಹಾರಾಷ್ಟ್ರ, ದೇಶೀಯ ಸಂಸ್ಥಾನಗಳು ಇವುಗಳ ಕೋರ್ಟುಭಾಷೆಯೂ ಕನ್ನಡವಾಗಿರುವಂತೆ ಆಯಾ ಸರ್ಕಾರದವರನ್ನೂ, ಕನ್ನಡವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವಂತೆ ಇಂಡ್ಯಾ ಸರ್ಕಾರದವರನ್ನೂ ಪ್ರಾರ್ಥಿಸಿಕೊಳ್ಳಬೇಕೆಂದು ಅಧ್ಯಕ್ಷರು ಸೂಚಿಸಿದ ಮೇಲೆ ಕೆಲ ಮಂಗಳಪದ್ಯಗಳು ಹೇಳಲ್ಪಟ್ಟು ಸಮ್ಮೇಳನಕಾರ್ಯವು ಪರಿಸಮಾಪ್ತಿಗೊಳಿಸಲ್ಪಟ್ಟಿತು.

ಮುಕುರಿದುದು ಜನ ಧಾರವಾಡದಿ
ಪ್ರಕಟಗೊಳಿಸುತಲಲ್ಲಿ ಕರ್ನಾ
ಟಕದ ವಿದ್ಯಾವರ್ಧಕದ ಸಂಘವನು ತಾಪಿಸತೆ ॥
ಸಕಲ ಬಗೆಗಳ ಮಾಡಿದುದು ಪು
ಸ್ತಕವ ಬರೆದರಿಗಿತ್ತುದೈ ಕಾ
ಣಿಕೆಗಳಾದೊಡೆ ಜಯವು ಬಾರದಿರದಕೆ ಮರುಗಿದುದು॥ ೨೦

ಇನಿತು ಚಿಂತಿಸಿ ಧಾರವಾಡದ
ಜನರು ನಡುಕಟ್ಟು ತಲೆ ತಮ್ಮಯ
ಮನದಿ ಮೇಲ್ಮೆಗೆ ಪಲವು ಬಗೆಗಳ ಕಲ್ಪನೆಯ ಮಾಡಿ।
ಕೊನೆಗೆ ಕನ್ನಡ ತಾಯ ತಾಯಿಯ
ಮನೆಯೆನಿಪ ಮೈಸೂರ ಪೊಳಲಿನ
ಜನರ ನೆರವನು ಕೇಳ್ದರಾತುರದಿಂದ ಕೇಳುವುದೈ॥ ೨೧

ನಾಡ ನುಡಿ ಕನ್ನಡವು ತಮ್ಮದೆ
ನಾಡೆ ಕಲಿತವರಾರು ಜಗದೊಳ
ಗೀಡು ತಮಗಾರೆಂದು ಕೊಡಗಿವಿಯಂತೇ ಮೈಮರೆದು॥
ನಾಡೊಳಿದ್ದೂ ಯಿಲ್ಲದಂತೆಯೆ
ಗಾಢ ನಿದ್ದೆಯಲ್ಲಿದ್ದ ಮೈಸೂ
ರ್ನಾಡಿಗರನೆಚ್ಚರಿಸೆ ಯತ್ನವ ಮಾಡತೊಡಗಿದರು॥ ೨೨

ಬೇಡಿದರು ಮೈಸೂರ ಜನರನು
ತೋಡಿದರು ತಾಯ್ಪಡುವ ದುಃಖವ
ಕಾಡಿದರು ಕನ್ನಡದ ಮೇಲ್ಮೆಯ ಗೆಯ್ವುದಂದವರು॥
ಹೂಡಿದರು ಸಮ್ಮೇಳನಂಗಳ
ನೋಡಿದರು ಫಲ ದೊರೆಯದಾದುದ
ನಾಡಿದರು ಬಯಸಿರ್ದ ಕಾರ್ಯವು ವ್ಯರ್ಥವಾಯ್ತೆಂದು॥ ೨೩

ಎರಡು ಸಲ ಸಮ್ಮೇಳನಂಗಳ
ಕರೆಯೆ ಗಡ ಧಾರ್ವಾಡದೊಳು ಫಲ
ಬರದಲಾದುದ ಕಂಡು ಚಡಪಡಿಸಿದರು ಬಲವಾಗಿ॥
ಮರಳಿ ಧೃಢ ನಿಶ್ಚಯದಿ ಕೈಕೊಂ
ಡಿರದೆ ಮೈಸೂರ್ನಾಡಿನೊಳು ಮೂ
ರೆರಡು ವರ್ಷಗಳಲ್ಲಿ ಸಾಧ್ಯವ ಮಾಡಿದರು ಕೇಳೈ॥ ೨೪

ಹರಿದರೈ ನಿದ್ದೆಯನು ಗಡ ಕಣ್
ದೆರೆದರೈ ಮೈಸೂರ ಬುಧ ಜನ
ರರಿದರೈ ಕನ್ನಡದ ನಿಜಸ್ಥಿತಿಯನ್ನು ಮರಗುತಲಿ॥
ನೆರೆಧರೈಯೊಂದೆಡೆಯೊಳೆಲ್ಲರು

ಕರೆದರೈ ಧಾರ್ವಾಡ ಜನರೊಳು
ಬೆರೆದರೈ ನುಡಿಯೇಳ್ಗೆಗುರೆ ಸಾಧನವ ಮಾಡಲ್ಕೆ॥ ೨೫

ಶಾಲಿವಾಹನ ಶಕದ ಸಾವಿರ
ಮೇಲೆ ಏಣ್ನೂರ್ ಮೇಲೆ ಮೂವ
ತ್ತೇಳನೆಯ ಸಂವತ್ತು ರಾಕ್ಷಸನಾಮ ವರ್ಷದಲಿ॥
ಮೇಲ ವೈಶಾಖದಲಿ ಬಹುಳದ
ನಾಲಕನೆ ತಿಥಿ ಸೋಮವಾರದಿ
ಮೇಲಕವ ಮಾಡಲ್ಕೆ ನಿರ್ಣಯಿಸಿದರು ಸಂಭ್ರಮದಿ॥ ೨೬

ಆ ದಿನವೆ ಕನ್ನಡ ನೆಲೆಗ
ಟ್ಟಾದ ಮೈಸೂರ್ನಾಡಿನೊಳು ಪುಟ
ಭೇದನವು ಜಸವೆತ್ತು ಮೆರೆಯುವ ಬೆಂಗಳೂರಿನೊಳೂ॥
ಆದರದಿ ಸಭೆಗೆಯ್ಯೆ ನಿರ್ಣಯ
ಮಾದುದೈ ಕನ್ನಡದ ಜನರನು
ಭೇದವೆಣಿಸದೆ ಕರೆವುದಾದುದು ಸಭೆಗೆ ಸಂಭ್ರಮದಿ ॥ ೨೭

ಅನಿತು ನೆರೆಯುವ ಕನ್ನಡ ಮೇ
ಳನಕೆ ತಕ್ಕದ್ಧಿಕನ ಕಾರ್ಯಕೆ
ವಿನಯಶೀಲರು ರಾಜಮಂತ್ರಪ್ರವೀಣರೆಂದೆಂಬ॥
ಘನಬಿರುದನೊಂದಂಥ ಶ್ರೀಯುತ
ವಿನುತ ನಂಜುಂಡಯ್ಯನವರನು
ಅನುಮತಿಸೆ ಬೇಡಲ್ಕೆ ಕೃಪೆಯಿಂದೊಪ್ಪಿದರು ಮುದದಿ॥ ೨೮

ತಾವೆ ಬಲ್ಲಿದರೆಂಬ ಬಹುಳೊಣ
ಹೇವದಿಂದ ಪುಟ್ಟಿರ್ದು ಸುಡುತಿರು
ವಾ ವಿಷವ ನುಂಗಲ್ಕೆ ನಂಜಂಡಯ್ಯನಲ್ಲದಲೆ॥
ಆವನಿಹ ಪೇಳೆಂದು ಮನದಲಿ
ಭಾವಿಸಿ ಪರಿಯಿಂದಲವರನು
ಸೇವಿಸುತೆ ಬೆಸಗೊಳ್ಳಲೊಪ್ಪಿದರಯ್ಯ ಕರುಣದಲಿ॥ ೨೯

ಇಂತು ನಿಯಮಿಸಿದಂಥ ದಿನದೊಳು
ಸಂತಸದಿ ದಯವಿಟ್ಟು ಬರುವುದು
ನಿಂತು ಕಾರ್ಯವ ಸಾಂಗ ಮಾಡುವುದೆಂದು ಬಿನ್ನಪವ॥
ಇಂತು ಮೈಸೂರ್ಧಾರವಾಡದ
ಲಂತು ಮದರಾಸಿನಲಿ ವಿದ್ಯಾ
ವಂತರಿಗೆ ವಿನಯದಲಿ ಕಳುಹಿಸಿ ದಾರಿ ನೋಡಿದರು॥ ೩೦

ಸುದಿನವದು ಬರೆ ಹೇವವುಳ್ಳವರು

ಮುದದಿ ಬಂದರು ಬೆಂಗಳೂರಿಗೆ
ಹೃದಯದೊಳ್ಸಂತಸವ ಬಟ್ಟರೆ ಕಾರ್ಯದರ್ಶಿಗಳು॥
ಇದಿರುಗೊಳ್ಳುತೆ ಪ್ರೇಮದಿಂದಲಿ
ಮೊದಲೊಳೇರ್ಪಡಿಸಿದ್ದ ತಾಣಕೆ
ಕುದುರೆ ಬಂಡೆಗಳಲ್ಲಿ ಕರೆದೊಯ್ದಿಳಿಸಿದರು ಬಿಡದೆ ॥ ೩೧

ಬಂದ ಜನಗಳಿಗಂದು ಚಹವನು
ತಂದು ಕುಡಿಯಲ್ಕೆಂದು ಕೊಡುವರು
ಮುಂದೆ ವಿಶ್ರಮಕೆಂದು ತುಸು ಕಾಲವನು ಬಿಡುತಿಹರು॥
ಮಿಂದು ಬರೆ ಹನ್ನೊಂದು ಗಂಟೆಗೆ
ಚಂದದೂಟವ ನಿಂದು ಮಾಡಿಸು
ವಂದದಿ ಪರಿಯಿಂದ ಸತ್ಕರಿಸುವರು ಪ್ರತಿದಿನದಿ॥ ೩೨

ಸೋಮವಾರದಿ ಜನರು ಭರದೊಳು
ನೇಮಿಸಿದ ಕಾಲಕ್ಕೆ ಹೊರಡಲು
ವ್ಯೋಮದಿಂ ನುಡಿ ತಾಯಿ ನೋಡಲು ತನ್ನ ಭಾಗ್ಯಕ್ಕೆ॥
ಸೀಮೆಯಿನ್ನಿಲ್ಲೆಂದು ತುಂಬಿದ
ಪ್ರೇಮದಿಂ ಕಂಬನಿಗಳಾಗಳು
ಭೂಮಿಯಲ್ಲುದುರುವುವು ಪೇಳೆನೆ ಮಳೆಯು ಕರೆಯುವುದು ॥ ೩೩

ಮಳೆಯು ನಿಲೆ ನೆಲವೊಣಗೆ ಜನವದ।
ಬಳಿವಿಡಿದು ಮೆರವಣಿಗೆಯಿಂದಲಿ
ಸುಳಿದು ನಡೆದಲ್ಲಣಿಗೆ ಬಳಿಯಲಿ ಬರಲು ನೋಡಿದುದೈ॥
ಇಳೆಯೊಳಗೆ ನುಡಿ ತಾಯಿ ಜಯವನು
ತಳೆವಳೀ ಪಥದಿಂದ ಪೋಗೆಂ
ದೆಳೆದು ಕೈಗಳ ತೋರುತಿಹವೆನಲಿರುವ ಧ್ವಜಗಳನು॥ ೩೪

ಕೆಲರು ಕಾಲ್ಬಂಡೆಗಳ ಮೇಲೆಯು
ಕೆಲರು ಕುದುರೆಯ ಬಂಡೆಗಳ ಮೇಲ್
ಕೆಲರು ಯಂತ್ರದ ಬಲದಿ ನಡೆಯುವ ಬಂಡೆಗಳ ಮೇಲೂ॥
ಕೆಲರು ನಡೆಯುತಲಲ್ಲಿ ಬರುತಿಹ
ರೊಲಿದು ಸಭೆಗೈತಂದು ಭರದೊಳು
ಮಿಲಿತರಾಗುವ ಜನರ ಸಂದಟ್ಟಣೆಯ ನೋಡೆಂಬೆ॥ ೩೫

ಚಿಕ್ಕ ಮಕ್ಕಳಿಗಿಕ್ಕಿ ವಿದ್ಯೆಯ
ಚೆಕ್ಕೆ ಬುಧರನು ಮಾಳ್ಪ ಶಾಲೆಯ
ಪಕ್ಕೆಯಲ್ಲಿಹ ಭವ್ಯ ಮಂದಿರದಲ್ಲಿ ನೆರೆದಿರಲು॥

ಪೊಕ್ಕೆವಂಗಳವನ್ನು ಮೆಲ್ಲಡಿ
ಯಿಕ್ಕಿ ಸಭೆಯನು ಸೇರಿ ಕುಳ್ಳಿರ
ಲುಕ್ಕಿ ಹರುಷದಿ ಕಂಡೆವೈ ವೈಭವದ ಹೆಚ್ಚಳವ ॥ ೩೬

ಮಿಂಚು ತೂಗುಂಜೊಡರ ಸಾಲ್ಗಳ
ನಂಚು ಕೆಲದೋಳ್ಕಟ್ಟಿ ಪಾಸುಂ
ಮಂಚಮಂ ನೆಲಕಿಟ್ಟು ಮೇಲ್ವಾಸಿಂದೆ ಚಲ್ವಡಿಸಿ॥
ಸಂಚಿನಿಂ ಕುರಿಚಿಗಳ ಪಂತಿಯ
ಹಂಚಿ ನಿರುಗೆಯುಳಿಟ್ಟ ಸಬ್ಬವ
ಮಿಂಚಿಗೋಳ್ಪರ ಕಣ್ಗೆ ತೋರ್ಪಚ್ಚರಿಯನೇವೇಳ್ವೆಂ ॥ ೩೭

ಪ್ರೀತಿಯಿಂದಲಿ ಬಂದು ಸಭಿಕರು
ರೀತಿಯಿಂ ತಂತಮ್ಮ ತಾಣದಿ
ಕೂತು ನಂಜುಂಡಯ್ಯನವರುರೆ ಬರುವ ದಾರಿಯನು॥
ಆತುರದೆ ಕಾಯ್ಯುತ್ತಮಿರೆ ಸಂ
ಕೇತ ಸಮಯಕೆ ಬಂದರೆನುತಲೆ
ಚೇತರಿಸಿ ಭರದಿಂದೆರೆಲ್ಲರು ವಿನಯವಶರಾಗಿ ॥

ಶುದ್ಧದರ ಬುದ್ಧಿಯುಳ್ಳದು
ಸದ್ದು ಮಾಡದಲೆದ್ದು ಕುಳಿತರೆ
ಗದ್ದಲಡಗಿತು ಬಿದ್ದ ಸೂಜಿಯ ದನಿಯು ಕೇಳ್ವಂತೆ॥
ಅದ್ದಿಕರು ಬಂದೆದ್ದು ಸಭೆಯೊಳು
ಮುದ್ದು ನುಡಿಯೊಳು ತಿದ್ದಿ ಪೇಳಿದ
ರಿದ್ದ ನುಡಿ ಕೆಟ್ಟಿದ್ದ ಸ್ಥಿತಿಯನ್ನಾಂಗ್ಲ ಭಾಷೆಯಲಿ॥ ೩೯

ಅನುಬಂಧ - ೨

ಕನ್ನಡ ಪರಿಷತ್ತಿನ ಸ್ಥಾಪನೆಯಲ್ಲಿ ರಾ.ಹ. ದೇಶಪಾಂಡೆಯವರ ಕೊಡುಗೆ

"ಕನ್ನಡ ನಾಡು ನುಡಿಗಳ ಬಗ್ಗೆ ಅಮೂಲ್ಯ ಗ್ರಂಥ-ಲೇಖನಗಳನ್ನು ಬರೆದಿರುವ ಸಾಹಿತಿ ಡಾ. ರಾ.ಹ. ದೇಶಪಾಂಡೆ ಅವರು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪಕರಲ್ಲಿ ಪ್ರಮುಖರು. ಅವರು ಅಂದಿನ ಮುಂಬಯಿ ಕರ್ನಾಟಕದ ಜನರ ಸಹಕಾರದೊಂದಿಗೆ ಧಾರವಾಡದಲ್ಲಿ 'ಸಂಘ'ವನ್ನು ಸ್ಥಾಪಿಸಿದರು. ಅವರು ಹರಿದು ಹಂಚಿಹೋದ ಕನ್ನಡ ನಾಡಿನ ಎಲ್ಲ ಜನರೊಂದಿಗೆ ಸಂಪರ್ಕ ಬೆಳೆಸಲು ಯತ್ನಿಸಿದರು. ಅದರಲ್ಲಿ ಅಂದು ಕನ್ನಡ ಭಾಷೆಯನ್ನು ರಕ್ಷಿಸಿಕೊಂಡು ಬಂದ ಮೈಸೂರು ಸಂಸ್ಥಾನದೊಂದಿಗೆ ಸಂಪರ್ಕವನ್ನು ಬೆಳೆಸುವುದರತ್ತ ವಿಶೇಷ ಗಮನವಿತ್ತರು. ಅದುವೆ ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲು ಕಾರಣವಾಯಿತು."

ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸುವಲ್ಲಿ ರಾ. ಹ. ದೇಶಪಾಂಡೆ ಅವರು ಹೇಗೆ ಶ್ರಮಿಸಿದರು. ಪರಿಷತ್ತಿನ ಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದಾರೆ ಎಂಬುದನ್ನು ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು "ಕನ್ನಡ ಕಾರಣ ಪುರುಷ, ರಾ.ಹ.ದೇಶಪಾಂಡೆ ಮತ್ತು ಮೈಸೂರು ಸಂಸ್ಥಾನ" ಎಂಬ ದೀರ್ಘ ಲೇಖನದಲ್ಲಿ ವಿವರಿಸಿದ್ದಾರೆ. ಉತ್ತರ ಕರ್ನಾಟಕದ ಕಡೆಯಿಂದ ಆಲೂರು ವೆಂಕಟರಾಯರಂತೆಯೇ ರಾ. ಹ. ದೇಶಪಾಂಡೆ ಅವರೂ ಪರಿಷತ್ತಿನ ಸ್ಥಾಪನೆಗೆ ಕಾರಣಕರ್ತರಾಗಿದ್ದಾರೆ ಎಂಬುದಾಗಿ ಈ ಲೇಖನದಲ್ಲಿ ತಿಳಿಸಿದ್ದಾರೆ. ಅದರ ಆಯ್ದಭಾಗಗಳನ್ನು ಇಲ್ಲಿ ಉದಾಹರಿಸಿದೆ.

"ರಾ. ಹ. ದೇಶಪಾಂಡೆ ಅವರು ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಹುಟ್ಟು ಹಾಕುತ್ತಿದ್ದಂತೆ, ಅವರು ಮೈಸೂರು ಸಂಸ್ಥಾನದ ಅರಸು, ಅಧಿಕಾರಿಗಳು, ಜನಸಾಮಾನ್ಯರಿಂದ ಸಂಘವನ್ನು ಕಟ್ಟುವಲ್ಲಿಯ ತಮ್ಮ ಪ್ರಯತ್ನಕ್ಕೆ ತುಂಬು ಹೃದಯದ ಸ್ವಾಗತದೊಂದಿಗೆ ವಾತ್ಸಲ್ಯಮಯ ಬೆಂಬಲವನ್ನು ಬಯಸುವುದು ಸಹಜವಾಗಿತ್ತು. ಹಲವಾರು ಸಂದರ್ಭಗಳನ್ನು ಉಪಯೋಗಿಸಿಕೊಂಡು ಮೈಸೂರು ಅರಸರೊಂದಿಗೆ ಅಲ್ಲಿಯ ಅಧಿಕಾರಿಗಳೊಂದಿಗೆ ಸಾಹಿತಿ, ಸಂಶೋಧಕರೊಂದಿಗೆ ಆತ್ಮೀಯ ಸಂಬಂಧವನ್ನು ಬೆಳೆಸಿಕೊಂಡರು.

ರಾ. ಹ. ದೇಶಪಾಂಡೆ ಅವರ ದೂರದೃಷ್ಟಿಯ ಸೃಜನಾತ್ಮಕ ಕ್ರಮಗಳಿಂದಾಗಿ ಮೈಸೂರು ಸಂಸ್ಥಾನದ, ಜನರೊಂದಿಗೆ ನಿರಂತರ ಸಂಬಂಧ ಬಂದಿತು. ಅದರ ಫಲವಾಗಿ ಸಂಘವು ಕಾಲಕಾಲಕ್ಕೆ ಏರ್ಪಡಿಸುತ್ತಿದ್ದ ಕನ್ನಡ ಪರೀಕ್ಷೆಗಳಿಗೆ ಪರೀಕ್ಷಕರಾಗಿ ಮೈಸೂರಿನ ವಿದ್ವಾಂಸರು ತಮ್ಮ ಸರಕಾರದ ಖರ್ಚಿನಿಂದ ಧಾರವಾಡಕ್ಕೆ ಭೇಟಿ ನೀಡುವಂತಾಯಿತು.

ರಾ. ಹ. ದೇಶಪಾಂಡೆ ಅವರು ೧೮೮೨ರಲ್ಲಿ ಡೆಕ್ಕನ್ ಕಾಲೇಜಿನ 'ದಕ್ಷಿಣ ಫೆಲೋ' ಆಗಿ ನೇಮಕಗೊಂಡಾಗ ಕಾಲೇಜಿನ ವಿದ್ಯಾರ್ಥಿನಿಲಯದ ಉಸ್ತುವಾರಿಯನ್ನು ನೋಡಿಕೊಳ್ಳಬೇಕಿತ್ತು. ಮತ್ತು ಶಿಕ್ಷಣ ಮುಂದುವರೆಸಲು ಕಷ್ಟಪಟ್ಟು ಪುಣೆಗೆ ಬರುತ್ತಿದ್ದ ಕನ್ನಡ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಿತ್ತು. ವಿಶ್ವೇಶ್ವರಯ್ಯನವರು ಇಂಜನಿಯರಿಂಗ್ ವಿದ್ಯಾಭ್ಯಾಸಕ್ಕೆ ಪುಣೆಗೆ ಬಂದಾಗ ಅವರಿಗೆ ವಿದ್ಯಾರ್ಥಿ ವಸತಿಗೃಹದಲ್ಲಿ ಕೋಣೆಯನ್ನು ಒದಗಿಸಿದರು. ಸಂದರ್ಭ ಬಂದಾಗ ವೈದ್ಯರ ಕಡೆಗೆ ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ಅವರೊಂದಿಗೆ ಪುಸ್ತಕಗಳ ಅಂಗಡಿಗೆ ಹೋಗುತ್ತಿದ್ದರು. ಅಗತ್ಯಬಿದ್ದಾಗ ಅವರಿಗೆ ಧನಸಹಾಯವನ್ನು ಮಾಡಿದ್ದರು. ರಾ. ಹ. ದೇಶಪಾಂಡೆ ಅವರ ದಿನಚರಿಯಲ್ಲಿ ಈ ಬಗೆಗೆ ವಿವರಗಳಿವೆ.

೧೯೧೨ರಲ್ಲಿ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾದಾಗ ಅವರನ್ನು ಅಭಿನಂದಿಸಿ ಪತ್ರ ಬರೆದಾಗ ಆ ಪತ್ರದಲ್ಲಿ ದೇಶಪಾಂಡೆ ಅವರು ಎರಡು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

೧. ನಿಮ್ಮ ದಿವಾನಗಿರಿಯ ಕಾಲದಲ್ಲಿ ಕರ್ನಾಟಕ ಏಕೀಕರಣವಾಗಲಿ

೨. ಕನ್ನಡ ಭಾಷೆಯ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಯನ್ನು ಹಾಕಿಕೊಳ್ಳಲಿ

ಇದನ್ನು ನೆನಪಿಟ್ಟುಕೊಂಡರು ವಿಶ್ವೇಶ್ವರಯ್ಯನವರು, ದೇಶಪಾಂಡೆ ಅವರು ಇದೇ ಧ್ಯೇಯಗಳ ಮೇಲೆ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ್ದನ್ನು ಗಮನಿಸಿದ ವಿಶ್ವೇಶ್ವರಯ್ಯನವರು ಪರಿಷತ್ತಿನ ಸ್ಥಾಪನೆ ಸಂದರ್ಭದಲ್ಲಿ ಹಲವಾರು ವಿಧಗಳಲ್ಲಿ ದೇಶಪಾಂಡೆ ಅವರ ಮಾರ್ಗದರ್ಶನ ಪಡೆದರು.

ವಿಶ್ವೇಶ್ವರಯ್ಯನವರು ೧೯೧೪ರಲ್ಲಿ ಮೈಸೂರು ಸಂಸ್ಥಾನದ ಆರ್ಥಿಕ ಸಾಮಾಜಿಕ ಪ್ರಗತಿಗೆ ಹೊಸ ಯೋಜನೆಗಳನ್ನು ರೂಪಿಸುವುದರ ಜತೆಗೆ, ಕನ್ನಡ ಭಾಷೆ ಸಂಸ್ಕೃತಿಗಳ ಪುನರುಜ್ಜೀವನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ನಿರ್ಧರಿಸಿದ ದೇಶಪಾಂಡೆ ಅವರ ಸಲಹೆಗಳನ್ನು ನೆನಪಿಟ್ಟುಕೊಂಡಿದ್ದರು.

ಅನಂತರ ವಿಶ್ವೇಶ್ವರಯ್ಯನವರು ಮೈಸೂರು ಎಕನಾಮಿಕ್ಸ್ ಕಾನ್ಫರೆನ್ಸ್‌ನಲ್ಲಿ ಕೈಗೊಂಡ ನಿರ್ಧಾರಗಳ ಫಲವಾಗಿ ಕನ್ನಡ ಸಾಹಿತ್ಯವನ್ನು ಹೇಗೆ ರೂಪಿಸಿ ಸ್ಥಾಪಿಸಬೇಕೆಂದು ನಿರ್ಧರಿಸುವ ಅಂಗವಾಗಿ ನಡೆದ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದೇಶಪಾಂಡೆ ಅವರು ಮಂಡಿಸಿದ ಸಲಹೆಗಳಲ್ಲಿ ಒಂದೆಂದರೆ "ಕನ್ನಡ ಭಾಷೆ ಮತ್ತು ಸಾಹಿತ್ಯದ ಉನ್ನತಿಗಾಗಿ ಕನ್ನಡ ಲೇಖಕರ ಹಾಗೂ ಅಭಿಮಾನಿಗಳ ಸಂಘವೊಂದನ್ನು ಬೆಂಗಳೂರು ಅಥವಾ ಧಾರವಾಡದಲ್ಲಿ ಸ್ಥಾಪಿಸಬೇಕು."

ಹೀಗೆ ಸ್ಥಾಪಿತವಾಗಲಿರುವ ಪರಿಷತ್ತಿನ ವರ್ಗಣಿ, ಕಾಣಿಕೆ ವಿವಿಧ ವರ್ಗಗಳ ಸದಸ್ಯರು ಮೊದಲಾದವು ಹೇಗಿರಬೇಕು ಎಂಬುದನ್ನು ತಿಳಿಸಿದ್ದರು. ಕನ್ನಡ ಭಾಷಾ ಏಕೀಕರಣ, ಕರ್ನಾಟಕ ಏಕೀಕರಣದ ಬಗ್ಗೆ ರಾ. ಹ. ದೇಶಪಾಂಡೆ ಅವರು ಅಮೂಲ್ಯ ಸಲಹೆಗಳನ್ನಿತ್ತರು.

ಪರಿಷತ್ತಿನ ನಿಯಮಾವಳಿ ರಚಿಸಲು ರೂಪುಗೊಂಡ ಸಮಿತಿಯಲ್ಲಿ ಮತ್ತು ಆ ಪ್ರಕಾರ ನಡೆದ ಚುನಾವಣೆ ನಿರ್ವಹಣಾ ಸಮಿತಿಯಲ್ಲಿ ದೇಶಪಾಂಡೆ ಅವರಿದ್ದರು.

ದೇಶಪಾಂಡೆ ಅವರು ಬೆಂಗಳೂರಿಗೆ ಬಂದಾಗಲೆಲ್ಲ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ತಮ್ಮ ಮನೆಯಲ್ಲಿ ಭೋಜನಕೂಟ ಏರ್ಪಡಿಸುತ್ತಿದ್ದರು. ಅನಂತರ ದೇಶಪಾಂಡೆ ಅವರು ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ಮತ್ತು ಹಲವಾರು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ಕನ್ನಡ ಭಾಷೆಯ ಪ್ರಗತಿಗೆ ಕೈಗೊಳ್ಳಬೇಕಾದ ಅನೇಕ ವಿಚಾರಗಳನ್ನು ಮಂಡಿಸುತ್ತಿದ್ದರು.

೧೯೧೬ರಲ್ಲಿ ನಡೆದ ೨ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದೇಶಪಾಂಡೆ ಅವರು ಭಾಗವಹಿಸಿ "ಕನ್ನಡ ನುಡಿಯ ಬೆಳವಣಿಗೆಗಿರುವ ತೊಂದರೆಗಳ ನಿವಾರಣೆ" ಎಂಬ ಪ್ರಬಂಧ ಮಂಡಿಸಿ ನಾಡಿನ ದುಃಸ್ಥಿತಿಯನ್ನು ವರ್ಣಿಸಿ. ಅದನ್ನು ನಿವಾರಿಸಲು ಕೈಗೊಳ್ಳಬೇಕಾದ ಸಪ್ತಾಂಶಗಳ ಯೋಜನೆಯನ್ನು ಮಂಡಿಸಿದರು. (ವಿವರಗಳಿಗೆ ಪರಿಷತ್ಪತ್ರಿಕೆ ಸಂಪುಟ ೧ ಪುಟ ೧೫೭-೧೬೪ರಲ್ಲಿ ಪ್ರಕಟವಾದ ಪ್ರಬಂಧವನ್ನು ನೋಡಿ)

ಅನಂತರ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ (೧೯೧೭, ೧೯೧೮, ೧೯೧೯, ೧೯೨೦, ೧೯೨೧, ೧೯೨೨, ೧೯೨೩) ಸಕ್ರಿಯವಾಗಿ ಪಾಲ್ಗೊಂಡು, ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಆಯ್ಕೆಗೊಂಡು, ಸಮ್ಮೇಳನಗಳಲ್ಲಿ ಉಪಯುಕ್ತವಾದ, ಮಹತ್ವಪೂರ್ಣವಾದ ನಿರ್ಣಯಗಳನ್ನು ಮಂಡಿಸಿದ್ದಾರೆ. ಅನೇಕ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಏರ್ಪಟ್ಟ ಸಮಿತಿಗಳಲ್ಲಿ ದೇಶಪಾಂಡೆಯವರು ಇದ್ದಾರೆ.

ಆರ್. ನರಸಿಂಹಾಚಾರ್ಯ, ಕರ್ಪೂರ ಶ್ರೀನಿವಾಸರಾವ್ ಅವರನ್ನು ಸಮ್ಮೇಳನಾಧ್ಯಕ್ಷರ ಸ್ಥಾನಕ್ಕೆ ಸೂಚಿಸಿದವರು ದೇಶಪಾಂಡೆ ಅವರು. (೧೯೧೮, ೧೯೧೯ರಲ್ಲಿ)

ಪರಿಷತ್ತಿನ ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಮಾಡುವ ಸಂದರ್ಭದಲ್ಲಿ ಪರಿಷತ್ತಿನ ಕಚೇರಿ, ಮೈಸೂರಿನಲ್ಲಿ ಇರಬೇಕೆಂದು ಬೆಳ್ಳಾವೆ ವೆಂಕಟನಾರಣಪ್ಪನವರು ಸೂಚಿಸಿದರೆ, ಬೆಂಗಳೂರಿನಲ್ಲಿ ಇರುವುದೇ ಎಲ್ಲ ದೃಷ್ಟಿಗಳಿಂದ ಒಳ್ಳೆಯದು ಎಂದು ದೇಶಪಾಂಡೆ ಅವರು ಹೇಳಿದಾಗ ಎಲ್ಲರೂ ದೇಶಪಾಂಡೆ ಅವರ ನಿರ್ಣಯವನ್ನೇ ಅಂಗೀಕರಿಸಿದರು.

ಕನ್ನಡ ಷಟ್ಪದಿ ಕಾವ್ಯಗಳ ನಿಘಂಟನ್ನು ಪರಿಷತ್ತು ಸಿದ್ಧಪಡಿಸುವಲ್ಲಿ ದೇಶಪಾಂಡೆ ಅವರೂ ಶ್ರಮಿಸಿದ್ದಾರೆ. ಇದಕ್ಕಾಗಿ ೧೯೨೧ರ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದೇಶಪಾಂಡೆ ಅವರನ್ನು ಸನ್ಮಾನಿಸಲಾಯಿತು.

ಹತ್ತಾರು ಸಮ್ಮೇಳನಗಳನ್ನು ಮಹತ್ವದ ನಿರ್ಣಯಗಳನ್ನು ಮಂಡಿಸುವಲ್ಲಿ ಅನುಮೋದಿಸುವಲ್ಲಿ ಸಕ್ರಿಯವಾಗಿ ಪ್ರಮುಖಪಾತ್ರವಹಿಸುತ್ತಿದ್ದ ದೇಶಪಾಂಡೆ ಅವರು ಪರಿಷತ್ತಿನ ಪ್ರಾರಂಭ ಕಾಲದಲ್ಲಿ ಅದರ ಶ್ರೇಯೋಭಿವೃದ್ಧಿಗಾಗಿ ಪರಿಶ್ರಮಪಟ್ಟಿದ್ದಾರೆ.

ಪರಿಷತ್ತಿನ ಸಂಸ್ಥಾನಿಕ ಸದಸ್ಯರಲ್ಲಿ ಒಬ್ಬರಾಗಿ, ಅದರ ಸಂವಿಧಾನದ ರೂವಾರಿಗಳಲ್ಲಿ ಒಬ್ಬರಾಗಿ, ಹತ್ತಾರು ವರ್ಷಗಳ ಕಾಲ ಕಾರ್ಯ ನಿರ್ವಾಹಕ ಮಂಡಳಿ ಸದಸ್ಯರಾಗಿ, ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ರಚನಾತ್ಮಕ ಸಲಹೆಗಳನ್ನು ನೀಡಿರುವ ದೇಶಪಾಂಡೆ ಅವರು ಪರಿಷತ್ತಿನೊಂದಿಗೆ ಕೊನೆಯವರೆಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು. ಪರಿಷತ್ತಿನ ಸ್ಥಾಪನೆ ಮತ್ತು ಏಳಿಗೆಗೆ ನೆರವಾದ ಮಹನೀಯರಲ್ಲಿ ಅವರೊಬ್ಬರಾಗಿದ್ದಾರೆ. (ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರ ವಿಸ್ತೃತಲೇಖನವನ್ನು ಸಾರಾಂಶ ರೂಪದಲ್ಲಿ ಇಲ್ಲಿ ಕೊಡಲಾಗಿದೆ).

ಅನುಬಂಧ – ೩

ಆಲೂರ ವೆಂಕಟರಾಯರು ಮತ್ತು ಪರಿಷತ್ತು

ಆಲೂರ ವೆಂಕಟರಾಯರು ತಮ್ಮ ಆತ್ಮಕಥನ ಗ್ರಂಥ "ನನ್ನ ಜೀವನಸ್ಮೃತಿಗಳು" ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ:

"ನಾನು ಸಾರ್ವಜನಿಕ ಜೀವನವನ್ನು ಕೈಕೊಂಡಾಗ ವಾಙ್ಮಯ, ಇತಿಹಾಸ, ರಾಜಕಾರಣ ಮುಂತಾದ ಅನೇಕ ತರಹದ ಚಟುವಟಿಕೆಗಳನ್ನು ಏಕಸಮಯಾವಚ್ಛೇದದಿಂದ ಕೈಕೊಂಡೆನೆಂದು ಹಿಂದೆ ಹೇಳಿದೆನಷ್ಟೆ. ಅದರಲ್ಲಿ ಬಂದ ಅನುಭವದಿಂದ, ನಾನು ಭಿನ್ನಭಿನ್ನ ಕ್ಷೇತ್ರಗಳಲ್ಲಿ ಭಿನ್ನಭಿನ್ನ ಸಂಸ್ಥೆಗಳನ್ನು ಕಟ್ಟಿದೆನು. ನಾನು ವಾಙ್ಮಯಕ್ಷೇತ್ರದಲ್ಲಿ ಕಾಲಿಟ್ಟ ಕೂಡಲೆ ನನಗೆ ಬಂದ ಮೊದಲನೆಯ ಅನುಭವವೆಂದರೆ – ಉತ್ತರ ಕರ್ನಾಟಕ, ಮೈಸೂರು, ಮಂಗಳೂರು ಮುಂತಾದ ಭಾಗಗಳಲ್ಲಿರುವ ಕನ್ನಡದಲ್ಲಿ ಏಕರೂಪತೆ ಇಲ್ಲದಿರುವುದು. ಆಗ ನನಗೆ ತೀರ ಹೊಸದೊಂದು ವಿಚಾರ ಜಗ್ಗನೆ ಹೊಳೆಯಿತು. ಅದೇನೆಂದರೆ, ಕರ್ನಾಟಕದ ಎಲ್ಲ ಭಾಗಗಳ ಭಾಷೆಯಲ್ಲಿ ಏಕರೂಪತೆ ಉಂಟಾಗದೆ, ಕನ್ನಡದ ಉದ್ಧಾರವಾಗದೆಂಬ ಮಾತು. ತಟ್ಟನೆ ೧೯೦೭ರಲ್ಲಿ ಕರ್ನಾಟಕ ಗ್ರಂಥಕರ್ತರ ಸಮ್ಮೇಲನವನ್ನು ಹೂಡಿದೆ. ಕರ್ನಾಟಕತ್ವದ ಕಲ್ಪನೆಯಲ್ಲಿ ನನ್ನ ಜೊತೆಗೆ ನಿಂತು ಕೆಲಸ ಮಾಡಿದವರು ಎಂದರೆ ನರಗುಂದಕರ ರಾಮರಾಯರು. ಎಸ್. ಜಿ. ನರಸಿಂಹಾಚಾರ್ಯರು ಮೊದಲನೆಯ ಸಮ್ಮೇಲನಕ್ಕೆ ಅಧ್ಯಕ್ಷರು. ಮರುವರ್ಷ ೧೯೦೮ರಲ್ಲಿ ನಾನೂ ರಾಮರಾಯರೂ ಕೂಡಿ ಮತ್ತೆ ಇದೇ ಊರಲ್ಲಿ ಅದನ್ನೂ ಕೂಡಿಸಿದೆವು. ಅಂಥ ಸಮ್ಮೇಲನಗಳು ವಿವಿಧ ಭಾಗಗಳಲ್ಲಿ ಆಗಬೇಕೆಂದು ನಮ್ಮ ಇಚ್ಛೆ. ಆದರೆ ಆಗ ಅದು ನೆರವೇರಲಿಲ್ಲ: ಮುಂದೆ ನೆರವೇರಿತು."

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆ ವಿಚಾರ

ನಾನು ನನ್ನ ವಾಙ್ಮಯ ಚಟುವಟಿಕೆಗಳನ್ನು ನನ್ನ ಸ್ವಂತ ಹಣದಿಂದ, ಆದರೆ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಮಹತ್ವವನ್ನು ಕೊಟ್ಟು ಅದರ ಹೆಸರಿನಿಂದಲೇ ನಡಿಸಿದ್ದೆನು. ಹಾಗೇ ಕರ್ನಾಟಕ ಗ್ರಂಥಕರ್ತರ ಸಮ್ಮೇಲನವನ್ನು ಧಾರವಾಡದಲ್ಲಿ ಎರಡು ಸಲ ಕೂಡಿಸಿ, ಮೂರನೆಯದನ್ನು ಬೆಂಗಳೂರಿನಲ್ಲಿ ಕೂಡಿಸಲಿಕ್ಕೆ ಬಹಳ ಸಾಹಸಪಟ್ಟೆ, ನಾಲ್ಕೈದು ಸಲ ಇದೇ ಉದ್ದೇಶದಿಂದ ಬೆಂಗಳೂರು ಮೈಸೂರುಗಳಿಗೆ ಹೋಗಿ ಬಂದರೂ ಇಷ್ಟಕಾರ್ಯವು ಕೈಗೂಡಲಿಲ್ಲ. ಸ್ವಂತ ಕೈಯಿಂದ ಹಣ ಎಷ್ಟೆಂದು ಖರ್ಚು ಮಾಡುವುದು? ಆಗ ಬೆಂಗಳೂರಿನಲ್ಲಿ ವಾಙ್ಮಯ ವಿಷಯಕ ಒಂದು ಸಂಸ್ಥೆಯೂ ಇರಲಿಲ್ಲ. ಆಗ ಬಾಪೂ ಸುಬ್ಬರಾಯರೆಂಬವರು ಮೈಸೂರು ಪ್ರಾಂತದ ವಿಷಯದಲ್ಲಿ ಹೇಳಿದ ಮಾತು ನಿಜವೆಂದು ಮನವರಿಕೆಯಾಯಿತು. ಅದೇನೆಂದರೆ ಮೈಸೂರಿನವರಿಗೆ ತಾಯಿಯ ತೊಡೆಯ ಮೇಲೆ ಮಲಗಿ ಗುಟುಕು ಹಾಕಿಸಿಕೊಂಡೇ ಗೊತ್ತೆಂಬುದು. ಈಗಲೂ ಅದೇ ಅನುಭವ. ಕೊನೆಗೆ ಅಲ್ಲಿಯ ಡಾಯರೆಕ್ಟರರನ್ನು ಭೆಟ್ಟಿಯಾದೆ. ಅವರು ಸಹಾನುಭೂತಿ ತೋರಿಸಿದರು. ಆದರೆ ಅಷ್ಟರಲ್ಲಿ

ಅವರು ಸತ್ತುಹೋದರು. ೧೯೧೪ನೆಯ ಮಾರ್ಚ ತಿಂಗಳಲ್ಲಿ **"ಸಂಘ"**ವನ್ನು ಸಂದರ್ಶಿಸುವುದಕ್ಕೆ ರಾವಬಹಾದ್ದೂರ ಶ್ಯಾಮರಾಯರು ಬಂದಿದ್ದರು. ಅವರಿಂದ ಬೆಂಗಳೂರಿನಲ್ಲಿ ಸಮ್ಮೇಲನ ಕೂಡಿಸುವ ಅಭಿವಚನ ತಕ್ಕೊಂಡೆ. ನಾನು ಅದೇ ವರ್ಷ ತಿರುಪತಿಗೆ ಹೋದಾಗ ಕರ್ಪೂರ ಶ್ರೀನಿವಾಸರಾಯರನ್ನು ಕಂಡೆ. ಅವರು ಸಂಪೂರ್ಣವಾಗಿ ಸಹಾಯ ಮಾಡಿದರು ಮತ್ತು ಅವರಿಬ್ಬರ ಸಹಾಯದಿಂದಲೂ ನಂಜುಂಡಯ್ಯನವರ ಸಹಾನುಭೂತಿಯಿಂದಲೂ ವಿಶ್ವೇಶ್ವರಯ್ಯನವರ ಹೆಸರಿನ ಬಲದಿಂದಲೂ **"ಕರ್ನಾಟಕ ಸಾಹಿತ್ಯ ಪರಿಷತ್ತು"** ಸ್ಥಾಪಿತವಾಯಿತು. ಬಿ. ಕೃಷ್ಣಪ್ಪನವರು ಅದಕ್ಕೆ ಮೊದಲನೆಯ ಕಾರ್ಯದರ್ಶಿಗಳು. ಆದರೆ ಆ ಮೊದಲನೆಯ ಸಮ್ಮೇಲನದ ಮುಖ್ಯ ಕಾರ್ಯವನ್ನೆಲ್ಲ ನಾನು ಈ ಊರಿನಿಂದಲೇ ಅವರ ಹೆಸರಿನಲ್ಲಿ ನಡಿಸಿದೆ. ನನಗೆ ಹಣದ ಅಡಚಣೆ ಅತಿಶಯವಿದ್ದಾಗ್ಯೂ ಅಂದಿನಿಂದ ಬಹುಶಃ ಪ್ರತಿವರ್ಷ ಸಮ್ಮೇಲನಗಳಿಗೆ ಹೋದೆ. ಸಾಹಿತ್ಯ ಪರಿಷತ್ತಿನ ಸ್ಥಾಪನೆಯ ಸಲುವಾಗಿ ನಾನು ಮಾಡಿದ ಪ್ರಯತ್ನಗಳ ವಿಸ್ತಾರವಾದ ಮಾಹಿತಿಯು ೧೯೩೬ನೆಯ ಅಕ್ಟೋಬರದಲ್ಲಿ ಕೂಡಿದ ಧಾರವಾಡ ಜಿಲ್ಲೆಯ ಪ್ರಥಮ ಸಾಹಿತ್ಯಸಮ್ಮೇಲನದ ಸ್ವಾಗತ ಅಧ್ಯಕ್ಷನೆಂದು ನಾನು ಮಾಡಿದ ಭಾಷಣದಲ್ಲಿ ಬಂದಿದೆ. 'ಸಂಘ'ದ ಹೆಸರಿನಿಂದ ಮಾಡಿದ್ದೆಂದು ಅಲ್ಲಿ ಬರೆದದ್ದೆಲ್ಲವೂ ನಾನೊಬ್ಬನೇ ಮಾಡಿದ್ದೇ. ಗೌರವಕ್ಕಾಗಿ ಸಂಘದ ಹೆಸರು.

***

ಕರ್ನಾಟಕ ಗ್ರಂಥಕರ್ತರ ಸಮ್ಮೇಲನ ಕೂಡಿಸಿದೆ. ಅದನ್ನೇ ವಿಸ್ತೃತಗೊಳಿಸಿ ಕರ್ನಾಟಕ ಸಾಹಿತ್ಯ ಸಮ್ಮೇಲನ ಮಾಡಿದೆ. ಅವು ಅವ್ಯಾಹತವಾಗಿ ಕೂಡುತ್ತಲಿವೆ. ವಿದ್ಯಾವರ್ಧಕಸಂಘದಲ್ಲಿ ಕಾರ್ಯಮಾಡಿದೆ. ಅದರ ಕ್ಷೇತ್ರವನ್ನು ವ್ಯಾಪಕಗೊಳಿಸಿ, ಕರ್ನಾಟಕ ಸಾಹಿತ್ಯಪರಿಷತ್ತು ಸ್ಥಾಪಿಸಿದೆ. ಅವೆರಡೂ ಸಂಸ್ಥೆಗಳಲ್ಲಿ ಕೆಲಸ ಮಾಡಿದೆ. (ನನ್ನ ಜೀವನಸ್ಮೃತಿಗಳು – ಪುಟ ೩೫೪)

ನಾಡಿನ ಗಣ್ಯರ ಸಾಮೂಹಿಕ ಪ್ರಯತ್ನದ ಫಲ : ಏಕವ್ಯಕ್ತಿಯ ಸಾಹಸವಲ್ಲ

ಇಲ್ಲಿ ಒಂದು ಮಾತು ಹೇಳುವುದು ಅತ್ಯಗತ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಯಾರೊಬ್ಬರಿಂದಲೇ ಸ್ಥಾಪನೆ ಆಗಲಿಲ್ಲ. ಆ ಕಾಲದ ನಾಡಿನ ಏಕೀಕರಣದ ಹೋರಾಟಗಾರರೂ ಸಾಹಿತಿಗಳೂ ವಿದ್ವಾಂಸರೂ ಮೈಸೂರಿನ ಆಡಳಿತಗಾರರೂ, ಅಧ್ಯಾಪಕರೂ, ಸಾರ್ವಜನಿಕ ಗಣ್ಯರು ಹೀಗೆ ಹಲವಾರು ಗಣ್ಯವ್ಯಕ್ತಿಗಳ ನಾಡು – ನುಡಿ ಸೇವಕರ ಒಂದು ಗುಂಪಿನ ಜನರ ಸಂಯುಕ್ತ ಶ್ರಮ ತ್ಯಾಗಗಳ ಫಲವಾಗಿ ರೂಪುಗೊಂಡಿದ್ದು ಕರ್ನಾಟಕ ಸಾಹಿತ್ಯ ಪರಿಷತ್ತು. ಈ ಪೈಕಿ **ಆಲೂರು ವೆಂಕಟರಾಯರು, ಸರ್. ಎಂ. ವಿಶ್ವೇಶ್ವರಯ್ಯನವರಂತೆ ಪ್ರಮುಖ ಸಂಘಟಕರು, ಸ್ಥಾಪಕರ ಪೈಕಿ ಒಬ್ಬರು ಎನ್ನಬಹುದೇ ಹೊರತು. ನಾನೊಬ್ಬನೇ ಪರಿಷತ್ತಿನ ಸ್ಥಾಪನೆಗೆ ಕಾರಣಕರ್ತ ಎಂಬ ಧಾಟಿಯಲ್ಲಿ ಆಲೂರರು ಆತ್ಮಕಥೆಯಲ್ಲಿ ಬರೆದುಕೊಂಡಿರುವ ವಿಷಯಗಳು ಸಮರ್ಥನೀಯವಲ್ಲ.**

ಬೆಂಗಳೂರಿನಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಮಾಡಿದ ಪ್ರಯತ್ನಗಳೂ ಹೆಚ್.ವಿ. ನಂಜುಂಡಯ್ಯ, ಬೆಳ್ಳಾವೆ ವೆಂಕಟನಾರಣಪ್ಪ, ಕರ್ಪೂರ ಶ್ರೀನಿವಾಸರಾವ್, ಅಚ್ಯುತ್‌ರಾವ್, ಬಹಾದ್ದೂರ್ ಶ್ಯಾಮರಾವ್, ರಾ.ಹ. ದೇಶಪಾಂಡೆ ಇನ್ನೂ ಅನೇಕರು ಸೇರಿ ಅಹರ್ನಿಶಿ ನಡೆಸಿದ ಚಿಂತನೆ – ಪರಿಶ್ರಮಗಳಿಂದ ಕನ್ನಡ ಸಾಹಿತ್ಯ ಪರಿಷತ್ತು ರೂಪುಗೊಂಡು ಸ್ಥಾಪನೆಯಾಗಿದೆ. ಇದರ ಕಾರ್ಯದಲ್ಲಿ ಆಲೂರು ವೆಂಕಟರಾಯರ ಪಾತ್ರ ಪ್ರಮುಖವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಇದೇನೇ ಇರಲಿ. ಕನ್ನಡ ಸಾಹಿತ್ಯ ಪರಿಷತ್ತು ಮೊದಲನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೫ನೇ ಮೇ ೧೯೧೫ರಲ್ಲಿ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು.

ಅನುಬಂಧ – ೪

ಪರಿಷತ್ತಿನ ಶಾಸನಾಂಕಿತ ಪತ್ರ

CERTIFICATE OF INCORPORATION

Certificate under Section 41
of the Mysore Companies
Regulation No. III of 1895.

Register No. 328 of 1915-1916

IN THE OFFICE OF THE REGISTRAR OF JOINT STOCK COMPANIES
IN MYSORE

IN THE MATTER OF THE

KARANATAKA SAHITYA PARISHAT, BANGALORE

I hereby certify, pursuant to the Mysore Societies Regulation No. III of 1904, that the KARNATAKA SAHITYA PARISHAT, BANGALORE, is incorporated as a Society under the aforesaid Regulation. Fee paid Rupees Ten only.

SEAL OF THE
REGISTARAR OF
COMPANIES
MYSORE.

(Sd.) P. RAGHAVENDRA RAU,

Registrar of Joint Stock Companies

in Mysore.

BANGALORE
Dated 12th Nov, 1915



ಬೆಂಗಳೂರಿನಲ್ಲಿ ನಡೆದ ಒಂದನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನ - ೧೯೧೫

೨

ಅಧ್ಯಾಯ – ೨

ಪರಿಷತ್ತಿನ ನಿಬಂಧನೆಗಳು

ಯಾವುದೇ ಸಂಸ್ಥೆಗಾಗಲಿ ಅಂಗರಚನೆ ಅಥವಾ ನಿಬಂಧನೆ ಆಧಾರಪ್ರಾಯವಾದುದು. ಸಂಸ್ಥೆಗೆ ಚೌಕಟ್ಟು ಅದು. ಪರಿಷತ್ತಿನ ನಿಬಂಧನೆಗಳು ನೂರುವರ್ಷಗಳಲ್ಲಿ ಹತ್ತಾರುಬಾರಿ ಚರ್ಚೆಗೆ ಒಳಗಾಗಿ ಪುಟವಿಟ್ಟ ಬಂಗಾರವಾಗಿದೆ.

೧೯೧೫ರಲ್ಲಿ ಪ್ರಥಮ ಬಾರಿಗೆ ರೂಪುಗೊಂಡ ಕಸಾಪ ನಿಬಂಧನೆಗಳು ಜಾರಿಗೆ ಬಂದ ಅನಂತರ ೧೯೧೬ರಲ್ಲಿ ಕೆಲವು ತಿದ್ದುಪಡಿಗಳಿಗೆ ಒಳಗಾದವು. ಅನಂತರ ಹಲವಾರು ವರ್ಷ ಬಳಕೆಯಲ್ಲಿತ್ತು .

ಅನಂತರ ೧೯೨೫, ೧೯೩೫, ೧೯೪೦, ೧೯೪೭, ೧೯೫೪, ೧೯೬೭, ೧೯೭೩ ೧೯೭೮, ೧೯೮೩, ೧೯೮೮ ೧೯೯೧, ೧೯೯೭, ಈ ರೀತಿಯಾಗಿ ೧೨ ಬಾರಿ ತಿದ್ದುಪಾಟುಗಳಾಗಿವೆ. ೧೩ನೇ ಬಾರಿ ತಿದ್ದುಪಾಟು ಸಮಿತಿ ಮಾಡಿದ ಸಲಹೆಗಳು ಅಂಗೀಕಾರವಾಗದೆ ಉಳಿದಿದೆ. ಈಗ ಸದ್ಯಕ್ಕೆ ೨೦೧೫ರಲ್ಲಿ ಚಾಲ್ತಿಯಲ್ಲಿರುವ ನಿಬಂಧನೆಗಳನ್ನು (ಬೈಲಾ) ಎಂದರೆ ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಿಂದ ೧೫-೪-೧೯೯೮ರಲ್ಲಿ ಅಂಗೀಕೃತವಾಗಿರುವ ನಿಬಂಧನೆಗಳನ್ನು ಇಲ್ಲಿ ಕೊಡಲಾಗಿದೆ. ಇದರೊಂದಿಗೆ ಪರಿಷತ್ತು ಪ್ರಾರಂಭವಾದಾಗ ನಿಬಂಧನೆಗಳು ಹೇಗಿದ್ದವು ಎಂಬುದಕ್ಕೆ ನಿದರ್ಶನಕ್ಕಾಗಿ ೧೯೧೫ರ ನಿಬಂಧನೆಗಳನ್ನು (೧೯೧೬ರಲ್ಲಿ ಆದ ತಿದ್ದುಪಡಿಗಳೊಡನೆ ಇಲ್ಲಿ ಕೊಟ್ಟಿದೆ) ಹಾಗೆಯೇ ಈಗ ಚಾಲ್ತಿಯಲ್ಲಿರುವ ನಿಬಂಧನೆಗಳ ಪೂರ್ಣ ಪಾಠವನ್ನು ಕೊಡಲಾಗಿದೆ. ನೂರುವರ್ಷಗಳಲ್ಲಿ ಪರಿಷತ್ತಿನ ನಿಬಂಧನೆಗಳು ಹೇಗೆ ಮಾರ್ಪಾಟುಗಳಾಗಿವೆ ಎಂಬುದನ್ನು ಇವೆರಡನ್ನು ಹೋಲಿಸುವುದರಿಂದ ತಿಳಿಯುತ್ತದೆ.

ಕಾಲಕಾಲಕ್ಕೆ ನಿಬಂಧನೆಗಳು ತಿದ್ದುಪಾಟು ಆದಾಗ ನಡೆದ ಚರ್ಚೆಗಳು ಕಾನೂನಿನ ಚೌಕಟ್ಟಿನಲ್ಲಿ ತರ್ಕಬದ್ಧವಾಗಿ ಕೆಲವೊಮ್ಮೆ ಆವೇಶದಿಂದ ನಡೆದಿರುವುದನ್ನು ನೋಡಬಹುದು.

ಉದಾಹರಣೆಗೆ, ಒಂದು ನಿಬಂಧನೆಯ ತಿದ್ದುಪಾಟುಗಳ ಸಭೆಯಲ್ಲಿ ಸಕಲ ಸದಸ್ಯರಲ್ಲಿ ಸಭೆಯ ಅಧ್ಯಕ್ಷತೆಯನ್ನು ಪರಿಷತ್ತಿನ ಅಧ್ಯಕ್ಷರೇ ವಹಿಸಬೇಕೆಂದು ನಿಯಮ ಎಲ್ಲಿದೆ, ಯಾರು ವಹಿಸಬೇಕು ಎಂಬ ಪ್ರಶ್ನೆ ಉದ್ಭವಿಸಿ ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಚರ್ಚೆ ನಡೆಯಿತು.

ಇನ್ನೊಮ್ಮೆ ಇನ್ನೊಂದು ನಿಬಂಧನೆಗಳ ಅಂಗೀಕಾರದ ಸಭೆಯಲ್ಲಿ ತಿಳಿವಳಿಕೆ ಪತ್ರಗಳನ್ನು ಕಳಿಸಬೇಕು ಎಂದಿರಬೇಕೇ ತಲುಪಿಸಬೇಕು ಎಂದಿರಬೇಕೇ ಎಂದು ಚರ್ಚೆಯಾಯಿತು. ಕಳಿಸಬೇಕು ಎಂದಾಗ ನಾವು ಕಳಿಸಿದ ದಾಖಲೆ ನಮ್ಮಲ್ಲಿ ಇದ್ದರೆ ಸಾಕು ತಲುಪಿಸಬೇಕು ಎಂದಾಗ ನಮಗೆ ಜವಾಬ್ದಾರಿ ಇರುತ್ತದೆ . ಸದಸ್ಯರಿಗೆ ತಲುಪಬೇಕು ಆದ್ದರಿಂದ ರಿಜಿಸ್ಟರ್ಡ್ ಪೋಸ್ಟ್‌ನಲ್ಲಿ ಕಳಿಸಬೇಕು ಇತ್ಯಾದಿ ಚರ್ಚೆಯಾಯಿತು.

ನಿಬಂಧನೆಗಳ ತಿದ್ದುಪಾಟು ಸಮಿತಿಯಲ್ಲಿ ನಿಜಕ್ಕೂ ಗಹನ ಗಂಭೀರ ಚರ್ಚೆ ನಡೆಯುತ್ತದೆ. ಸಕಲ ಸದಸ್ಯರ ವಿಶೇಷ ಸಭೆಯಲ್ಲಿ ಅಂಗೀಕಾರಕ್ಕಾಗಿ ಮಂಡಿಸಿದಾಗ ಇರುವ ಕೆಲವು ಸಲಹೆಗಳು ತಿರಸ್ಕೃತವಾಗುವುದು. ಬಹು ಪಾಲು

ಸಲಹೆಗಳು ಅಂಗೀಕಾರವಾಗುತ್ತವೆ. ಆದರೆ ಒಂದೆರಡು ವಿಷಯಗಳು ತೀವ್ರ ಚರ್ಚೆಗೆ ಒಳಗಾಗಿರುವುದುಂಟು. ಆದರೆ ಒಂದು ಮಾತಂತೂ ನಿಜ. ಪರಿಷತ್ತಿನ ನಿಬಂಧನೆಗಳು ಕನ್ನಡದ ವಿದ್ವಾಂಸರಿಂದ ಕಾನೂನುತಜ್ಞರಿಂದ ಚರ್ಚಿತವಾಗಿ ರೂಪುಗೊಂಡಿದೆ. ಶತಮಾನದ ಅನುಭವದ ಫಲ ಪರಿಷತ್ತಿನ ನಿಬಂಧನೆಗಳು. ಆದರೂ ಸಹ, ದತ್ತಿ ನಿಧಿಗಳ ಸಲಹಾ ಸಮಿತಿ, ಗಮಕ ಸಲಹಾ ಸಮಿತಿ ಮುಂತಾದವು ಕಾರ್ಯಕಾರಿ ಸಮಿತಿ ನಿರ್ಧಾರದಿಂದ ರೂಪಿತವಾಗಿರುತ್ತವೆ. ಆದರೆ ಇವುಗಳು ನಿಬಂಧನೆಗಳಲ್ಲಿ ಉಲ್ಲೇಖಿತವಾಗಿರಬೇಕಾದ್ದು ಅಗತ್ಯವಿದೆ. ಉದಾಹರಣೆಗೆ ಗಮಕ ಕಲೆಯ ತರಗತಿಗಳು, ಶಿಕ್ಷಣ, ಗಮಕನತ್ತಿನಿಧಿ ಪ್ರಾರಂಭವಾದದ್ದೇ ಸಾಹಿತ್ಯ ಪರಿಷತ್ತಿನಿಂದ. ಗಮಕಕಲೆಯನ್ನು ಬೆಳೆಸಿದ್ದು ಪರಿಷತ್ತು. ಇಂದು ಅದರ ಸುಳಿವೇ ಇಲ್ಲ. ಗಮಕ ತರಗತಿಗಳನ್ನು ಪರಿಷತ್ತು ನಡೆಸುತ್ತಿಲ್ಲ. ನಿಬಂಧನೆಗಳಲ್ಲಿ ಉಲ್ಲೇಖವಾಗಿದ್ದರೆ ಗಮಕ ಪರಿಷತ್ತಿನಲ್ಲಿ ಉಳಿಯುತ್ತಿತ್ತು. ನಿಬಂಧನೆ ೫ (ಋ)ನಲ್ಲಿ ಗಮಕ ತರಗತಿ ಪರೀಕ್ಷೆ, ಸ್ಪರ್ಧೆ, ಏರ್ಪಡಿಸಬೇಕೆಂದಿದೆ. ಆದರೆ ಇಂಥ ಹತ್ತಾರು ತಿದ್ದುಪಾಟುಗಳನ್ನು ತರುವ ಉದ್ದೇಶದಿಂದ ರೂಪುಗೊಂಡ ನಿಬಂಧನೆಗಳಲ್ಲಿ ಉಲ್ಲೇಖಿತ ಸಮಿತಿ ಕಾರ್ಯಗಳು ಕಾರಣಾಂತರಗಳಿಂದ ಮುಂದುವರೆದಿಲ್ಲ. ಯಾವುದೇ ಸಂಸ್ಥೆ ಕೋರ್ಟು ಕಚೇರಿ ಬಾಗಿಲನ್ನು ಹತ್ತದಿರಬೇಕಾದರೆ ನಿಬಂಧನೆಗಳ ಅನುಸಾರವಾಗಿ ಕೆಲಸ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಸಂಸ್ಥೆಯವರು ಪ್ರತಿಯೊಂದು ಕೆಲಸವನ್ನು ಹಣದ ದೃಷ್ಟಿಯಿಂದ ಪರಿಶೀಲಿಸುವುದರ ಜತೆಗೆ ನಿಬಂಧನೆಗಳ ಅನುಸಾರ ಕೆಲಸಗಳು ನಡೆಯುತ್ತಿವೆಯೇ ಎಂಬುದನ್ನು ಗಮನಿಸುತ್ತಿರಬೇಕು.

ಮೊಟ್ಟ ಮೊದಲಿನ ಪರಿಷತ್ತಿನ ನಿಬಂಧನೆಗಳು (೧೯೧೫ ಮೇ ೫)

ನಿಬಂಧನೆಗಳ ರಚನೆಯ ಹಿನ್ನೆಲೆ

ಪರಿಷತ್ತಿನ ನಿಬಂಧನೆಗಳ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಂದೇ ದಿನದಲ್ಲಿ ಸಿದ್ಧಪಡಿಸಲಾಯಿತು. ವಿದ್ವಾಂಸರ ಮಂಡಳಿಯೊಂದು ಸಮ್ಮೇಳನದ ಸಭೆಯಲ್ಲೇ ರೂಪುಗೊಂಡು ಆ ಸಮಿತಿ ನಿಬಂಧನೆಗಳನ್ನು ರಚಿಸಿ ಮಂಡಿಸಿತು. ಚರ್ಚೆಯಾಗಿ ಅಂಗೀಕಾರ ಆಯಿತು. ಅತ್ಯಲ್ಪ ಕಾಲದಲ್ಲಿ ರೂಪಿತವಾದ ನಿಬಂಧನೆಗಳು ಸಮಗ್ರವಾಗಿ ಮಂಡನೆ ಆಯಿತು. ಅದರ ಹಿನ್ನೆಲೆಯನ್ನು ಇಲ್ಲಿ ಕೊಡಲಾಗಿದೆ.

ಶ್ರೀಮನ್ಮಹಾರಾಜರವರ ವರ್ಧಂತೀ ಮಹೋತ್ಸವದ ಕಾಲದಲ್ಲಿ ಸಂದ ೧೯೧೪ನೆಯ ಇಸವಿಯ ಸಂಪದಭ್ಯುದಯ ಸಮಾಜದ ವಾರ್ಷಿಕ ಸಮ್ಮೇಳನದಲ್ಲಿ ಕರ್ಣಾಟಕ ಭಾಷಾ ಸಂಸ್ಕರಣ ವಿಷಯವೂ ಕರ್ಣಾಟಕ ಗ್ರಂಥಾವಳಿಯ ವೃದ್ಧಿಯ ವಿಷಯವೂ ಚರ್ಚಿತವಾಗಿ,

"ಕರ್ಣಾಟಕ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು, ಮತ್ತು ಸರ್ಕಾರದವರು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯವನ್ನು ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜವು ಸರ್ಕಾರಕ್ಕೆ ಶಿಫಾರಸು ಮಾಡಬೇಕು" ಎಂದು ತೀರ್ಮಾನವಾಯಿತು.

ಈ ತೀರ್ಮಾನವನ್ನು ಅನುಸರಿಸಿ ೧೯೧೪ನೆಯ ಇಸವಿ ಅಕ್ಟೋಬರ್ ೩೧ರಲ್ಲಿ ಸಂಪದಭ್ಯುದಯ ಸಮಾಜದ ವಿದ್ಯಾವಿಷಯಕ ಮಂಡಲಿಯವರು ಉಪಸಂಘವೊಂದನ್ನು ನಿರ್ಮಿಸಿ.....

"ಮ॥ ರಾವ್ ಬಹದೂರ್ ಎಂ. ಶಾಮರಾವ್ ಎಂ.ಎ. ಮ॥ ಕರ್ಪೂರ್ ಶ್ರೀನಿವಾಸರಾವ್ ಬಿ.ಎಸ್.ಸಿ., ಎಲ್.ಸಿ. ಇ. ಮ॥ ಪಿ.ಎಸ್. ಅಚ್ಯುತರಾವ್, ಎಲ್.ಎಂ.ಎಸ್. ಎಂಬುವವರು ಉಪ ಸಂಘದವರಾಗಿ ಸೇರಿ ಕನ್ನಡ ನಾಡುಗಳ ಪ್ರಮುಖರನ್ನು ಬೆಂಗಳೂರಿಗೆ ಆಹ್ವಾನ ಮಾಡಿ, ಕರ್ಣಾಟಕ ಭಾಷಾ ಪರಿಷ್ಕರಣಕ್ಕೂ ಕರ್ಣಾಟಕ ಗ್ರಂಥಾಭಿವೃದ್ಧಿಗೂ ಅನುಕೂಲವಾಗುವಂತೆ ಸಂಘವೊಂದನ್ನು ಏರ್ಪಡಿಸುವ ಕಾರ್ಯವನ್ನು ನಿರ್ವಹಿಸಬೇಕು" ಎಂದು ತೀರ್ಮಾನಿಸಿದರು.

ಈ ಉಪ ಸಂಘದವರು ಮುಂದೆ ಎದುರಿಸುವ ಐದು ವಿಷಯಗಳನ್ನು ಗುರಿಯಲ್ಲಿಟ್ಟುಕೊಂಡು ಉಪನ್ಯಾಸಗಳನ್ನು ಬರೆದು ಕಳುಹಿಸಬೇಕೆಂದು ವಿದ್ವಾಂಸರುಗಳನ್ನು ಪ್ರಾರ್ಥಿಸಿದರು. ಆ ವಿಷಯಗಳು ಯಾವುವೆಂದರೆ....

ಎ) ಬೇರೆ ಬೇರೆ ಕರ್ಣಾಟಕ ಪ್ರಾಂತಗಳಲ್ಲಿರುವ ವಿದ್ವಾಂಸರುಗಳಲ್ಲಿ ಐಕಮತ್ಯವನ್ನೂ ಪರಸ್ಪರ ಸಹಾಯ

ಬುದ್ಧಿಯನ್ನೂ ಹುಟ್ಟಿಸುವುದಕ್ಕಾಗಿ ಮಾಡತಕ್ಕ ಉತ್ತಮೋಪಾಯಗಳು.

ಬಿ) ಬೇರೆ ಬೇರೆ ಕರ್ಣಾಟಕ ಪ್ರಾಂತಗಳ ಗ್ರಾಂಥಿಕ ಭಾಷಾರೂಪಗಳಲ್ಲಿ ಕಾಣಬರುವ ಪರಸ್ಪರ ಭೇದಗಳನ್ನು ಹೋಗಲಾಡಿಸಿ ಏಕರೂಪತೆಯನ್ನು ವ್ಯವಸ್ಥೆ ಮಾಡುವುದಕ್ಕೆ ಬೇಕಾಗುವ ಉಪಾಯಗಳು.

ಸಿ) ನಾನಾ ಪ್ರಾಂತಗಳ ಕನ್ನಡ ವಿದ್ಯಾರ್ಥಿಗಳಿಗೆ ವಿದ್ಯಾ ಶಾಲೆಗಳಲ್ಲೆಲ್ಲಾ ಪಾಠದ ಪುಸ್ತಕಗಳು ಒಂದೇ ಆಗುವಂತೆ ಏರ್ಪಡಿಸಿಕೊಳ್ಳುವುದಕ್ಕೆ ಬೇಕಾಗುವ ಪ್ರಯತ್ನಗಳು.

ಡಿ) ಕರ್ಣಾಟಕದ ನಾನಾಪ್ರಾಂತಗಳಲ್ಲಿರುವ ಸಾಮಾನ್ಯ ಜನರಿಗೆ ಪ್ರಯೋಜನವುಂಟಾಗುವಂತೆ ಲೋಕ ವ್ಯವಹಾರಜ್ಞಾನವನ್ನು ಸುಲಭವಾಗಿ ಬೋಧಿಸುವ ಸಣ್ಣಸಣ್ಣ ಪುಸ್ತಕಗಳನ್ನು ಬರೆಯಿಸಿ ಪ್ರಚಾರ ಮಾಡುವುದಕ್ಕೆ ಬೇಕಾಗುವ ಉತ್ತಮೋಪಾಯಗಳು.

ಇ) ಕರ್ಣಾಟಕದ ನಾನಾ ಪ್ರಾಂತಗಳಲ್ಲಿರುವ ಜನರ ಉಪಯೋಗಕ್ಕಾಗಿ ಬರೆಯುವ ಭೌತಿಕಾದಿ ಶಾಸ್ತ್ರಗ್ರಂಥಗಳಲ್ಲಿ ಪ್ರಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಿಸುವುದಕ್ಕೆ ಏರ್ಪಡಿಸಬೇಕಾಗಿರುವ ಉತ್ತಮೋಪಾಯಗಳು.

೧೯೧೫ನೆಯ ಮಾರ್ಚಿ ೨೭ರಲ್ಲಿ ಉಪಸಂಘದ ಸಭೆಯು ಕೂಡಿತ್ತು. ಅದರಲ್ಲಿ ೧೯೧೫ನೆಯ ಮೇ ೩ನೆಯ ತಾರೀಖಿನಲ್ಲಿ ಸಮ್ಮೇಳನದ ಕಾರ್ಯವು ಪ್ರಾರಂಭವಾಗಬೇಕೆಂದು ತೀರ್ಮಾನವಾಯಿತು.

ಉಪಸಂಘವು ನಿಯಮಿಸಿದ ವಿಷಯಗಳನ್ನು ಕುರಿತು ೩೧ ಲೇಖನಗಳು ಆಹೂತರಿಂದ ಬಂದುವು. ಇವುಗಳಲ್ಲಿ ೭ ಇಂಗ್ಲಿಷು ಭಾಷೆಯಲ್ಲಿದ್ದುವು. ಸಮ್ಮೇಳನದ ಸುದ್ದಿಯು ಕರ್ಣಾಟಕ ವಿದ್ವನ್ಮಂಡಲಿಗೆ ಪರಮ ಸಂತೋಷವನ್ನುಂಟು ಮಾಡಿತು, ಮತ್ತು ಬಹು ಜನ ದೊಡ್ಡ ಮನುಷ್ಯರು ತಾವಾಗಿಯೇ ತಂತಮ್ಮ ಉಪನ್ಯಾಸಗಳನ್ನು ಕಳುಹಿಸಿಕೊಟ್ಟರು.

ಮೂರನೇ ದಿನದ (೫-೫-೧೯೧೫) ಕಾರ್ಯಕಲಾಪಗಳಲ್ಲಿ ನಿಬಂಧನೆಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಅದೇ ಹಜಾರದಲ್ಲಿ ಮೂರನೆಯ ದಿನವೂ ಸಮ್ಮೇಳನವು ಅಪರಾಹ್ನ ೩ ಗಂಟೆಗೆ ಸರಿಯಾಗಿ ಸೇರಿತು. ಮ॥ ಕರ್ಪೂರ ಶ್ರೀನಿವಾಸರಾಯರು ಆಗ್ರಾಸನವನ್ನು ಅಲಂಕರಿಸಬೇಕೆಂದು ಡಾಕ್ಟರ್ ಅಚ್ಯುತರಾಯರವರು ಸಭೆಗೆ ಬಿನ್ನವಿಸಲು ಸಭೆಯವರೆಲ್ಲರೂ ಹರ್ಷಾತಿಶಯದ ಕಲಕಲದೊಡನೆ ಒಪ್ಪಿದರು.

ನಿಬಂಧನೆ ಸಮಿತಿ ಮುಂದಿಟ್ಟ ನಿಯಮಾವಳಿ ಅಂಗೀಕಾರವಾದವು.

ನಿಬಂಧನೆಗಳು (೧೯೧೫)

I. ಹೆಸರು – ಈ ಸಂಘಕ್ಕೆ ಕರ್ಣಾಟಕ ಸಾಹಿತ್ಯ ಪರಿಷತ್ತು (ಕನ್ನಡ ಅಕ್ಯಾಡೆಮಿ) ಎಂದು ಹೆಸರಿರತಕ್ಕುದು.

II. ಮುಖ್ಯ ಕಾರ್ಯಸ್ಥಾನ – ಈ ಪರಿಷತ್ತಿನ ಮುಖ್ಯ ಕಾರ್ಯಸ್ಥಾನವು ಬೆಂಗಳೂರಿನಲ್ಲಿರತಕ್ಕುದು.

III. ಉದ್ದೇಶ – ಕರ್ಣಾಟಕ ಭಾಷಾ ಪರಿಷ್ಕರಣವೂ, ಕರ್ಣಾಟಕ ಗ್ರಂಥಾಭಿವೃದ್ಧಿಯೂ ಈ ಪರಿಷತ್ತಿನ ಉದ್ದೇಶವಾಗಿರುತ್ತದೆ.

ಈ ಉದ್ದೇಶವನ್ನು ಸಾಧಿಸುವ ಮಾರ್ಗದಲ್ಲಿ ಮುಖ್ಯವಾದುವು ಯಾವುವೆಂದರೆ –

(೧) ಪಂಡಿತರೊಪ್ಪುವಂತೆ ಕರ್ಣಾಟಕ ವ್ಯಾಕರಣ, ಕರ್ಣಾಟಕ ಭಾಷಾ ಚರಿತ್ರೆ, ಕರ್ಣಾಟಕ ನಿಘಂಟುಗಳನ್ನು ಬರೆಯಿಸುವುದು ಅಥವಾ ಅವುಗಳನ್ನು ಬರೆಯುವವರಿಗೆ ಸಹಾಯವನ್ನು ಮಾಡುವುದು.

(೨) ನವೀನ ಶಾಸ್ತ್ರಗಳಿಗೆ ಸಂಬಂಧಪಟ್ಟ ಕನ್ನಡ ಗ್ರಂಥಗಳಲ್ಲಿ ಪ್ರಯೋಗಿಸಲು ಯೋಗ್ಯವಾದ ಪಾರಿಭಾಷಿಕ ಶಬ್ದಗಳ ಕೋಶವನ್ನು ಪ್ರಕಟಿಸುವುದು.

(೩) ತತ್ವವಿಚಾರ, ಭೌತಿಕಶಾಸ್ತ್ರ, ಚರಿತ್ರೆ ಸಾಹಿತ್ಯ ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಡುವ ಗ್ರಂಥಗಳನ್ನು ಬರೆಯುವುದಕ್ಕೆ ಪ್ರೋತ್ಸಾಹವನ್ನುಂಟು ಮಾಡುವುದೂ ಅಲ್ಲದೆ ಅವುಗಳನ್ನು ಪ್ರಕಟಪಡಿಸುವುದು.

(೪) ಕನ್ನಡ ಭಾಷೆಗೂ ಕನ್ನಡ ಗ್ರಂಥಗಳಿಗೂ ಸಂಬಂಧಪಟ್ಟ ಎಲ್ಲಾ ಚರ್ಚಾಂಶಗಳನ್ನೂ ವಿಚಾರಮಾಡಿ ನಿರ್ಣಯಿಸುವುದು.

(೫) ಕನ್ನಡವನ್ನುಳಿದು ಇತರ ಭಾಷೆಗಳಲ್ಲಿರುವ ಉತ್ತಮಗ್ರಂಥಗಳನ್ನು ಕನ್ನಡಿಸಿ ಪ್ರಕಟಿಸುವುದು;

(೬) ಉತ್ಕೃಷ್ಟವಾದ ಪ್ರಾಚೀನ ಗ್ರಂಥಗಳನ್ನೂ, ಕನ್ನಡಸಂಸ್ಥಾನಗಳ ಚಾರಿತ್ರವನ್ನು ಒಳಗೊಂಡಿರುವ ಗ್ರಂಥಗಳನ್ನೂ ಸಂಗ್ರಹಿಸಿ ಅವನ್ನು ಪರಿಷ್ಕರಿಸಿ ಪ್ರಕಟಿಸುವುದೂ ಅಲ್ಲದೆ, ಕನ್ನಡದೇಶಗಳ ಪೂರ್ವಸ್ಥಿತಿಯನ್ನು ವಿಶದಗೊಳಿಸುವ ವಸ್ತುಗಳನ್ನು ಕೂಡಿಟ್ಟು, ಅವುಗಳನ್ನು ಕಾಪಾಡುವುದಕ್ಕಾಗಿ ಪ್ರಾಚೀನ ವಸ್ತುಸಂಗ್ರಹಾಲಯವನ್ನೇರ್ಪಡಿಸುವುದು ;

(೭) ಕರ್ಣಾಟಕ ಭಾಷಾ ಸಂಸ್ಕರಣ, ಕರ್ಣಾಟಕ ಗ್ರಂಥಾಭಿವೃದ್ಧಿಗಳನ್ನು ಕುರಿತು ಪಂಡಿತರಿಂದ ರಚಿತವಾದ ಉಪನ್ಯಾಸಗಳನ್ನು ಒಳಗೊಂಡ ಪತ್ರಿಕೆಗಳನ್ನು ಪ್ರಕಟಿಸುವುದು.

(೮) ಕನ್ನಡ ಗ್ರಂಥಕರ್ತೃಗಳಿಗೆ, ಮುದ್ರಿತವಾದ ಕೆಲವು ಗ್ರಂಥ ಪ್ರತಿಗಳನ್ನು ಕೊಂಡುಕೊಳ್ಳುವುದರಿಂದಾಗಲೀ, ಅಥವಾ ಗ್ರಂಥಗಳನ್ನು ಅಚ್ಚು ಹಾಕಿಸುವುದಕ್ಕಾಗಿ ಹಣವನ್ನು ಮುಂಗಡವಾಗಿ ಕೊಡುವುದರಿಂದಾಗಲಿ ಅಥವಾ ಅವರಿಂದ ಗ್ರಂಥವನ್ನು ಪ್ರಕಟಿಸುವ ಸ್ವಾತಂತ್ರ್ಯವನ್ನು (Copy -Right) ಕೊಂಡುಕೊಳ್ಳುವುದರಿಂದಾಗಲಿ ಪ್ರೋತ್ಸಾಹವನ್ನುಂಟುಮಾಡುವುದೂ ಅಲ್ಲದೆ, ಗ್ರಂಥಗಳನ್ನು ಬರೆದು ತಾವೇ ತಮ್ಮ ಖರ್ಚಿನಿಂದ ಪ್ರಕಟಪಡಿಸುವ ಗ್ರಂಥಕರ್ತರುಗಳಿಗೆ ಬಿರುದುಗಳನ್ನಾಗಲಿ ಸಂಭಾವನೆಯನ್ನಾಗಲಿ ಕೊಡುವುದು ;

(೯) ಕರ್ಣಾಟಕ ಭಾಷೆಗೂ ಸಾಹಿತ್ಯಕ್ಕೂ ಸಂಬಂಧಿಸಿದ ಅಪೂರ್ವ ಪರಿಶೋಧನ ಕಾರ್ಯದಲ್ಲಿ ನಿರತರಾಗಿರುವ ಕನ್ನಡ ಅಥವಾ ಸಂಸ್ಕೃತ ವಿದ್ವಾಂಸರುಗಳಿಗೆ ಪಂಡಿತ ವೇತನಗಳನ್ನು ಕೊಡುವುದು :

(೧೦) ಕರ್ಣಾಟಕ ಭಾಷೋನ್ನತಿಗೂ, ಕರ್ಣಾಟಕ ಗ್ರಂಥಾಭಿವೃದ್ಧಿಗೂ ಸಂಬಂಧಪಡುವ ವಿಷಯಗಳನ್ನು ಆಯಾ ಸರ್ಕಾರದವರ ಪರಾಮರ್ಶಕ್ಕೆ ತಂದು ಅವನ್ನು ತೃಪ್ತಿಕರವಾಗಿ ವ್ಯವಸ್ಥೆ ಮಾಡಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು.

(೧೧) ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಸ್ಥಳಗಳಲ್ಲಿ ಕರ್ಣಾಟಕ ವಾಚನಾಲಯಗಳನ್ನೂ, ಕರ್ಣಾಟಕ ಪುಸ್ತಕಭಂಡಾರಗಳನ್ನೂ ಸ್ಥಾಪಿಸುವುದು.

(೧೨) ಕನ್ನಡನಾಡುಗಳ ಪ್ರಮುಖರುಗಳ ಸಭೆಗಳನ್ನು ಆಗಾಗ ಏರ್ಪಡಿಸುವುದು ; ಮತ್ತು ಸಮರ್ಥರಾದ ವಿದ್ವಾಂಸರುಗಳಿಂದ ಉಪನ್ಯಾಸಗಳನ್ನು ಮಾಡಿಸುವುದು.

(೧೩) ಕರ್ಣಾಟಕ ಭಾಷೋನ್ನತಿಗೂ, ಕರ್ಣಾಟಕ ಗ್ರಂಥಾಭಿವೃದ್ಧಿಗೂ ಆವಶ್ಯಕವಾದ ಇತರ ಪ್ರಯತ್ನಗಳನ್ನು ನಡೆಸುವುದು.

IV. ಪರಿಷತ್ತಿನ ರಚನಾ ಕ್ರಮ – ಈ ಕರ್ಣಾಟಕ ಸಾಹಿತ್ಯ ಪರಿಷತ್ತು ಪೋಷಕರನ್ನೂ, ಉಪಪೋಷಕರನ್ನೂ , ಪ್ರದಾತೃಗಳನ್ನೂ, ಆಶ್ರಯದಾತರನ್ನೂ, ಆಜೀವ ಸಾಮಾಜಿಕರನ್ನೂ, ಸಾಮಾನ್ಯ ಸಾಮಾಜಿಕರನ್ನೂ, ಒಂದನೆಯ ಮತ್ತು ಎರಡನೆಯ ವರ್ಗದ ಸನ್ಮಾನ್ಯ ಸಾಮಾಜಿಕರನ್ನೂ ಒಳಗೊಂಡಿರುತ್ತದೆ.

ರಾಜ್ಯಗಳನ್ನಾಳುವ ಪ್ರಭುಗಳು, ಉನ್ನತ ಪದವಿಯಲ್ಲಿರುವವರು, ಪ್ರಸಿದ್ಧ ವಂಶೀಯರು ಇವರು ಮಾತ್ರವೇ ಮಹಾ ಪೋಷಕರೂ ಆಗತಕ್ಕುದು.

ಒಂದು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ದ್ರವ್ಯವನ್ನು ಕೊಡುವವರು ಪ್ರದಾತೃಗಳಾಗಿ, (Donors),

೫೦೦ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಹಣವನ್ನು ಕೊಡುವವರು, ಆಶ್ರಯದಾತರಾಗಿ (Supporters) ೫೦ ರೂಪಾಯಿಗಳಿಗೆ ಕಡಿಮೆಯಾಗದಂತೆ ದ್ರವ್ಯವನ್ನು ಕೊಡುವವರು ಆಜೀವ ಸಾಮಾಜಿಕರಾಗಿ, ವಿಶೇಷ ಪಾಂಡಿತ್ಯದಿಂದಲೂ ಸಾಮರ್ಥ್ಯದಿಂದಲೂ ಪ್ರಖ್ಯಾತಿಗೊಂಡಿರುವುದರಿಂದ ಅಪೇಕ್ಷಿತರಾದವರು ಸನ್ಮಾನ್ಯ ಸಾಮಾಜಿಕರಾಗಿ, ವರ್ಷಕ್ಕೆ ೧೨ ರೂಪಾಯಿಗಳಿಗೆ ಕಡಿಮೆಯಿಲ್ಲದೆ ಚಂದಾಕೊಡುವವರು ೧ನೇ ವರ್ಗದ **ಸಾಮಾನ್ಯ ಸಾಮಾಜಿಕರಾಗಿ,** ವರ್ಷಕ್ಕೆ ೪ ರೂಪಾಯಿಗಳಿಗೆ ಕಡಿಮೆಯಾಗದಂತೆ ಚಂದಾ ಕೊಡುವವರು **೨ನೇ ವರ್ಗದ ಸಾಮಾನ್ಯ ಸಾಮಾಜಿಕರಾಗಿ** ಭಾವಿಸಲ್ಪಡತಕ್ಕದ್ದು.

V. ೨ನೆಯ ವರ್ಗದ ಸಾಮಾನ್ಯ ಸಾಮಾಜಿಕರು ಹೊರತು ಮಿಕ್ಕ ಸಾಮಾಜಿಕರೆಲ್ಲರಿಗೂ ಪರಿಷತ್ತಿನ ಸಾಮಾನ್ಯ ಸಭೆಗಳಲ್ಲಿ ತಮ್ಮ ಅಭಿಮತವನ್ನು ತಿಳಿಸುವ ಸ್ವಾತಂತ್ರ್ಯವಿರತಕ್ಕದ್ದು. ಮತ್ತು ಪರಿಷತ್ತಿನಿಂದ ಪ್ರಕಟವಾಗುವ ಗ್ರಂಥಗಳ ಮತ್ತು ಪತ್ರಿಕೆಗಳ ಒಂದೊಂದು ಪ್ರತಿಯು ಅವರಿಗೆ ಉಚಿತವಾಗಿ ದೊರೆಯುವುದು.

VI. ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ೨ನೆಯ ವರ್ಗದ ಸಾಮಾನ್ಯ ಸಾಮಾಜಿಕರಿಗೆ ತಮ್ಮ ಅಭಿಮತವನ್ನು ಸೂಚಿಸುವ ಅಧಿಕಾರವಿರುವುದಿಲ್ಲ. ಆದರೆ ಪರಿಷತ್ತಿನ ಪತ್ರಿಕೆಯ ಒಂದೊಂದು ಪ್ರತಿಯೂ ಅವರಿಗೆ ಉಚಿತವಾಗಿ ದೊರೆಯುವುದು.

VII. ಕಾರ್ಯನಿರ್ವಾಹಕ ಮಂಡಲಿ – ಕರ್ಣಾಟಕ ಸಾಹಿತ್ಯ ಪರಿಷತ್ತಿನ ಎಲ್ಲಾ ಆಡಳಿತಗಳನ್ನೂ ನಿಯಮಾನುಸಾರವಾಗಿ ಚುನಾಯಿಸಲ್ಪಟ್ಟ ಕಾರ್ಯನಿರ್ವಾಹಕ ಮಂಡಲಿಯು ನಡೆಯಿಸತಕ್ಕದ್ದು.

VIII. ಕಾರ್ಯ ನಿರ್ವಾಹಕ ಮಂಡಲಿಯಲ್ಲಿ ಒಬ್ಬರು ಅಧ್ಯಕ್ಷರು (President) ಒಬ್ಬರು ಉಪಾಧ್ಯಕ್ಷರು (Vice President) ಒಬ್ಬರು ಸಾಮಾನ್ಯ ಕೋಶಾಧ್ಯಕ್ಷರು (Honorary Treasurer) ಒಬ್ಬರು ಸಾಮಾನ್ಯ ಕಾರ್ಯದರ್ಶಿಗಳು (Honorary Secrertary)ಇವರ ಜತೆಗೆ ಬ್ಯಾಲಟ್ (Ballot) ಮೂಲಕ ಚುನಾಯಿಸಲ್ಪಟ್ಟ ೩೦ ಮಂದಿ ಸಾಮಾಜಿಕರೂ ಇರತಕ್ಕದ್ದು – ಕರ್ಣಾಟಕ ಸಾಹಿತ್ಯ ಪರಿಷತ್ತಿನ ಎಲ್ಲಾ ಆಡಳಿತಗಳನ್ನೂ ನಿಯಮಾನುಸಾರವಾಗಿ ಚುನಾಯಿಸಲ್ಪಟ್ಟ ಕಾರ್ಯನಿರ್ವಾಹಕ ಮಂಡಲಿಯು ನಡೆಯಿಸತಕ್ಕದ್ದು.

IX. ಅಧ್ಯಕ್ಷರೂ, ಉಪಾಧ್ಯಕ್ಷರೂ, ಸಾಮಾನ್ಯ ಕೋಶಾಧ್ಯಕ್ಷರೂ, ಸಾಮಾನ್ಯ ಕಾರ್ಯದರ್ಶಿಗಳೂ ಬೆಂಗಳೂರಿನ ನಿವಾಸಿಗಳಾಗಿಯೇ ಇರತಕ್ಕುದು. ೩೦ ಮಂದಿ ಸಾಮಾಜಿಕರುಗಳಲ್ಲಿ – ಮೈಸೂರು ಸಂಸ್ಥಾನಕ್ಕೆ ೧೨ ಮಂದಿ, ಬೊಂಬಾಯಿ ಅಧಿಪತ್ಯಕ್ಕೆ ೮ ಮಂದಿ, ಮದರಾಸು ಅಧಿಪತ್ಯಕ್ಕೆ ಐವರು, ಹೈದರಾಬಾದು ಸಂಸ್ಥಾನಕ್ಕೆ ಇಬ್ಬರು, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆ ಇಬ್ಬರು, ಕೊಡಗಿಗೆ ಒಬ್ಬರು ಇರಬೇಕಲ್ಲದೆ ಇವರು ಆಯಾಪ್ರಾಂತಗಳ ಸಾಮಾಜಿಕರಿಂದ ಬ್ಯಾಲಟ್ ಮೂಲಕ ಆರಿಸಲ್ಪಟ್ಟವರಾಗಿರಬೇಕು.

X. ಕಾರ್ಯನಿರ್ವಾಹಕ ಮಂಡಲಿಯಲ್ಲಿ ಚರ್ಚಿಸಲ್ಪಡುವ ವಿಷಯಗಳೆಲ್ಲವೂ ಬಹುಮತಾನುಸಾರವಾಗಿಯೇ ತೀರ್ಮಾನವಾಗತಕ್ಕುವು. ಯಾವುದಾದರೂ ಒಂದು ಸಭೆಯಲ್ಲಿ ಭಿನ್ನಾಭಿಪ್ರಾಯವು ಹುಟ್ಟಿ ಉಭಯಪಕ್ಷದ ಸಾಮಾಜಿಕರುಗಳ ಸಂಖ್ಯೆಯು ಸಮವಾದಲ್ಲಿ ಆಯಾ ಸಭೆಯ ಅಗ್ರಾಸನಾಧಿಪತಿಗಳಿಗೆ ಆ ವಿಷಯವನ್ನು ನಿರ್ಣಯಿಸುವ ಅಧಿಕಾರವಿರತಕ್ಕುದು.

XI. ಪರಿಷತ್ತಿನ ಪ್ರಥಮ ವರ್ಷದಲ್ಲಿ ಮಾತ್ರ ಎರಡನೆಯ ವರ್ಗದ ಸಾಮಾನ್ಯ ಸಾಮಾಜಿಕರುಗಳಿಗೂ ಕಾರ್ಯನಿರ್ವಾಹಕ ಮಂಡಲಿಯ ಸಾಮಾಜಿಕರನ್ನು ಚುನಾಯಿಸುವ ಅಧಿಕಾರವಿರತಕ್ಕುದು.

XII. ಕಾರ್ಯನಿರ್ವಾಹಕ ಮಂಡಲಿಯು ೩ ತಿಂಗಳಿಗೆ ಒಂದು ಸಲವಾದರೂ ಸಭಾಕಾರ್ಯಕ್ಕೆ ಸೇರತಕ್ಕುದು.

XIII. ಕಾರ್ಯನಿರ್ವಾಹಕ ಮಂಡಲಿಯ ಸಭೆಗೆ ಕಾರ್ಯನಿರ್ವಾಹಕ್ಕೋಸ್ಕರ ಐವರು ಸಾಮಾಜಿಕರಾದರೂ ಬಂದಿರಬೇಕು. ಈ ಐವರಲ್ಲಿ ಮೂವರು ಪರಿಷತ್ತಿನ ಅಧಿಕಾರಿಗಳಾಗಿರದೇ ಇರಬೇಕು.

XIV. ಕಾರ್ಯನಿರ್ವಾಹಕ ಮಂಡಲಿಯ ಎಲ್ಲಾ ಸಭೆಗಳಲ್ಲಿಯೂ ಅವುಗಳ ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ಅವುಗಳನ್ನು ವಿಮರ್ಶೆ ಮಾಡತಕ್ಕುದು.

XV. ಪರಿಷತ್ತಿನ ವಿವಿಧ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ. ಕಾರ್ಯನಿರ್ವಾಹಕ ಮಂಡಲಿಯ ಉಪಸಂಘಗಳನ್ನು ಏರ್ಪಡಿಸಿಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕುದು.

XVI. ಪರಿಷತ್ತಿಗೆ ಸೇರಬೇಕೆನ್ನುವವರ ಪ್ರಾರ್ಥನಾಪತ್ರಗಳನ್ನು ಪರಿಷತ್ತಿನ ಸಾಮಾಜಿಕರುಗಳಲ್ಲಿ ಇಬ್ಬರಾದರೂ ಅನುಮೋದಿಸಬೇಕು. ಮತ್ತು ಕಾರ್ಯನಿರ್ವಾಹಕ ಮಂಡಲಿಗೆ ಬಂದಿರುವ ಸಾಮಾಜಿಕರಲ್ಲಿ ಮೂರರಲ್ಲಿ ಒಂದು ಪಾಲಿಗಿಂತಲೂ ಹೆಚ್ಚು ಮಂದಿ ಆಕ್ಷೇಪಿಸಿದಲ್ಲಿ, ಅಂತಹವರನ್ನು ಪರಿಷತ್ತಿಗೆ ಸೇರಿಸಕೂಡದು.

XVII. ಪರಿಷತ್ತಿನ ಸಾಮಾನ್ಯ ಸಭೆಗೆ ಬಂದಿರುವವರಲ್ಲಿ ಮುಕ್ಕಾಲು ಪಾಲಿನಷ್ಟು ಸಾಮಾಜಿಕರು ಅನುಮತಿಸಿದ ಹೊರತು ಯಾರನ್ನೂ ಸಾಮಾನ್ಯ ಸಾಮಾಜಿಕರನ್ನಾಗಿ ಪರಿಷತ್ತಿಗೆ ಸೇರಿಸಿಕೊಳ್ಳಕೂಡದು. ಸನ್ಮಾನ್ಯ ಸಾಮಾಜಿಕರಿಂದ ಚಂದಾವನ್ನು ವಸೂಲುಮಾಡಕೂಡದು. ಅವರಿಗಿರುವ ಹಕ್ಕುಗಳೂ ಕರ್ತವ್ಯಗಳೂ ಯಾವುವೆಂದರೆ -

(೧) ಪರಿಷತ್ತಿನ ಸಭೆಗಳಲ್ಲಿ ತಮ್ಮ ಅಭಿಮತವನ್ನು ಸೂಚಿಸುವುದು.

(೨) ಪರಿಷತ್ತಿನಿಂದ ಪ್ರಕಟಿತವಾದ ಗ್ರಂಥಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಒಂದೊಂದನ್ನು ಉಚಿತವಾಗಿ ಪಡೆಯುವುದು.

(೩) ಪರಿಷತ್ತಿನ ಪುಸ್ತಕ ಭಂಡಾರದಿಂದ ಪುಸ್ತಕಗಳನ್ನು ನಿಯಮಾನುಸಾರವಾಗಿ ಎರವಲಾಗಿ ತೆಗೆದುಕೊಳ್ಳುವುದು.

(೪) ಪರಿಷತ್ತಿನ ಅಭಿಪ್ರಾಯಕ್ಕಾಗಿ ಕಳುಹಿಸಿಕೊಡುವ ಗ್ರಂಥಗಳನ್ನು ಓದಿ ಅವುಗಳ ಗುಣದೋಷಗಳನ್ನು ವಿಮರ್ಶಿಸಿ ಪರಿಷತ್ತಿನ ಅಧಿಕಾರಿಗಳಿಗೆ ತಿಳಿಸುವುದು.

XVIII. ಪರಿಷತ್ತಿನ ಸಾಮಾಜಿಕರುಗಳಲ್ಲಿ ಯಾರಾದರೂ ಕ್ರಿಮಿನಲ್ ಕೋರ್ಟಿನಲ್ಲಿ ಅಪರಾಧಿಯೆಂದು ಶಿಕ್ಷಿಸಲ್ಪಟ್ಟರೂ, ಕೆಟ್ಟ ನಡತೆಯವರೆಂದು ನಿರ್ಣಯಿಸಲ್ಪಟ್ಟರೂ, ಅಥವಾ ಇತರ ಕಾರಣಗಳಿಂದ ಪರಿಷತ್ತಿನ ಸಾಮಾಜಿಕರಾಗಿರಲು ಅನರ್ಹರೆಂದು ವಿಧಿಸಲ್ಪಟ್ಟರೂ, ಪರಿಷತ್ತಿನ ವಾರ್ಷಿಕ ಸಭೆಗೆ ಬಂದಿರುವ ಸಾಮಾಜಿಕರಲ್ಲಿ ಹೆಚ್ಚುಮಂದಿ ಅವರ ಹೆಸರನ್ನು ತೆಗೆದು ಹಾಕಬೇಕೆಂದು ಅಭಿಪ್ರಾಯಪಟ್ಟಲ್ಲಿ ಅಂಥವರ ಹೆಸರನ್ನು ಪರಿಷತ್ತಿನ ಪಟ್ಟಿಯಿಂದ ತೆಗೆದು ಹಾಕತಕ್ಕುದು.

XIX. ಪರಿಷತ್ತಿನ ಧನ - ಪೋಷಕರು ಮುಂತಾದವರುಗಳಿಂದಲೂ, "ಉಯಿಲು" ಗಳ ಮೂಲಕವೂ, ಪರಿಷತ್ತಿನಿಂದ ಪ್ರಕಟವಾಗುವ ಗ್ರಂಥಗಳ ಮಾರಾಟದಿಂದಲೂ ಇತರ ವಿಧಗಳಲ್ಲಿಯೂ ದೊರೆಯುವ ಧನವು ಪರಿಷತ್ತಿನ ಆಸ್ತಿಯಾಗಿರತಕ್ಕದು.

XX. ಚಾಲ್ತಿ ಖರ್ಚುಗಳಿಗಾಗಿ ಇಪ್ಪತ್ತೈದು ರೂಪಾಯಿಗಳು ಸಾಮಾನ್ಯ ಕಾರ್ಯದರ್ಶಿಗಳ ವಶದಲ್ಲಿರತಕ್ಕದ್ದು. ಮಿಕ್ಕ ಪರಿಷತ್ತಿನ ಧನವೆಲ್ಲವೂ ಸಾಮಾನ್ಯ ಕೋಶಾಧ್ಯಕ್ಷರ ಅಧೀನದಲ್ಲಿರತಕ್ಕುದು. ಕಾರ್ಯನಿರ್ವಾಹಕ ಮಂಡಲಿಯ ಅನುಮತಿಯಿಲ್ಲದೆ ಯಾವ ವ್ಯಯವನ್ನೂ ಮಾಡಕೂಡದು ; ಪರಿಷತ್ತಿನ ಸಾಮಾನ್ಯ ಸಭೆಯ ಅನುಮತಿಯಿಲ್ಲದೆ ಪರಿಷತ್ತಿನ ಸ್ವತ್ತನ್ನು ಆಧಾರ ಮಾಡಕೂಡದು, ಮಾರಲೂ ಕೂಡದು.

XXI. ಪರಿಷತ್ತಿನ ಲೆಕ್ಕಗಳನ್ನು ಪರಿಶೀಲಿಸಿ ಪರಿಷತ್ತಿನ ಮುಂದಿನ ವಾರ್ಷಿಕ ಸಭೆಗೆ ತಮ್ಮ ರಿಪೋರ್ಟನ್ನು ಒಪ್ಪಿಸುವುದಕ್ಕಾಗಿ ಪ್ರತಿ ವರ್ಷದ ವಾರ್ಷಿಕ ಸಭೆಯಲ್ಲಿಯೂ ಇಬ್ಬರು ಆಯವ್ಯಯ ಶೋಧಕರುಗಳನ್ನು ನೇಮಿಸತಕ್ಕುದು. ಪರಿಷತ್ತಿನ ಲೆಕ್ಕಗಳನ್ನು ಸಾಮಾಜಿಕರುಗಳಲ್ಲಿ ಯಾರು ಬೇಕಾದರೂ ನೋಡಬಹುದು.

XXII. ಪರಿಷತ್ತಿನ ಕೆಲಸಗಳೆಲ್ಲವೂ ಅಧ್ಯಕ್ಷರ, ಉಪಾಧ್ಯಕ್ಷರ ಮತ್ತು ಸನ್ಮಾನ್ಯ ಕಾರ್ಯದರ್ಶಿಗಳ ಮೇಲ್ವಿಚಾರಣೆಯಲ್ಲಿ ನಡೆಯತಕ್ಕುದು.

XXIII. ಪರಿಷತ್ತಿನ ಮುಖ್ಯವಾದ ಆಡಳಿತಗಳಲ್ಲಿ ಎಂದರೆ - ಲೇವಾದೇವಿಗಳಲ್ಲಿಯೂ, ಕೋರ್ಟಿನ ವ್ಯಾಜ್ಯಗಳಲ್ಲಿಯೂ ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ ಅಥವಾ ಸನ್ಮಾನ್ಯ ಕಾರ್ಯದರ್ಶಿಗಳಾಗಲಿ ಪರಿಷತ್ತಿನ ಪರವಾಗಿ ತಮ್ಮ ರುಜುವನ್ನು ಹಾಕಿ, ಪರಿಷತ್ತಿನ ಮುದ್ರೆಯನ್ನು ಒತ್ತಿ ಕಾರ್ಯವನ್ನು ನಿರ್ವಹಿಸತಕ್ಕುದು.

XXIV. ಪರಿಷತ್ತಿನ ಎಲ್ಲಾ ರಸೀದಿ ಚಲನ್‌ಗಳಿಗೂ ಸಾಮಾನ್ಯ ಕಾರ್ಯದರ್ಶಿಗಳೂ, ಸಾಮಾನ್ಯ ಕೋಶಾಧ್ಯಕ್ಷರೂ ರುಜುಗಳನ್ನು ಹಾಕತಕ್ಕುದು. ಇವರಿಬ್ಬರ ರುಜುಗಳು ಇಲ್ಲದ ರಸೀದಿಗಳೂ ಚಲನ್‌ಗಳೂ ಸ್ಥಿರಪಡಲಾರವು.

XXV. ಈ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಆವಶ್ಯಕವಾದಾಗಲೆಲ್ಲಾ ಉಪನಿಬಂಧನೆಗಳನ್ನು ಮಾಡಿಕೊಳ್ಳುವ ಅಧಿಕಾರವು ಕಾರ್ಯನಿರ್ವಾಹಕ ಮಂಡಲಿಗೆ ಇರತಕ್ಕುದು. ಕಾರ್ಯನಿರ್ವಾಹಕ ಮಂಡಲಿಯಲ್ಲಿ ಬಹುಮಂದಿ ಸಾಮಾಜಿಕರು ಒಪ್ಪಿದಕೂಡಲೇ ಈ ಉಪಬಂಧನೆಗಳು ಜಾರಿಗೆ ಬರತಕ್ಕುದು ಮತ್ತು ಪರಿಷತ್ತಿನ ವಾರ್ಷಿಕ ಸಭೆಯು ಕೂಡುವವರೆಗೂ ಜಾರಿಯಲ್ಲಿರತಕ್ಕುದು.

XXVI. ಪರಿಷತ್ತಿನ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಬೇಕಾಗುವ ನೌಕರರನ್ನೂ ಸೇವಕರನ್ನೂ ನೇಮಿಸಿಕೊಳ್ಳುವುದಕ್ಕೂ, ದಂಡಿಸುವುದಕ್ಕೂ, ತೆಗೆದುಹಾಕುವುದಕ್ಕೂ ಮತ್ತು ಅವರ ಸಂಬಳಗಳನ್ನು , ಬಹುಮಾನಗಳನ್ನೂ, ಭತ್ಯವನ್ನೂ ಗೊತ್ತುಮಾಡುವುದಕ್ಕೂ ಕಾರ್ಯನಿವಾಹಕ ಮಂಡಲಿಗೆ ಅಧಿಕಾರವಿರತಕ್ಕುದು. ಆದರೆ ಕಾರ್ಯನಿರ್ವಾಹಕ ಮಂಡಲಿಯವರ ಸಭೆಗಳಲ್ಲಿ, ಸಂಬಳ, ಬಹುಮಾನ, ಅಥವಾ ಭತ್ಯೆಗಳ ವಿಷಯವಾಗಿ ಚರ್ಚೆನಡೆಯುತ್ತಿರುವಾಗ, ಇವುಗಳನ್ನು ಹೊಂದತಕ್ಕವರು ಯಾವ ವಿಧದಲ್ಲಿಯೂ ತಮ್ಮ ಅಭಿಮತವನ್ನು ಸೂಚಿಸಕೂಡದು.

XXVII. ಪರಿಷತ್ತಿನ ಸಾಮಾನ್ಯ ಸಭೆಗಳ ನೋಟೀಸುಗಳನ್ನು ಸಾಮಾಜಿಕರುಗಳಿಗೆ ಅಂತಹ ಸಭೆಗಳು ಕೊಡುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಕಳುಹಿಸಿಕೊಡತಕ್ಕುದು.

XXVIII. ಪರಿಷತ್ತಿನ ರಚನಾಕ್ರಮವನ್ನು ಆ ಕುರಿತೇ ಆಗಲಿ ನಿಬಂಧನೆಗಳನ್ನು ಕುರಿತೇ ಆಗಲಿ, ಕಾರ್ಯನಿರ್ವಾಹಕ ಕ್ರಮವನ್ನು ಕುರಿತೇ ಆಗಲಿ, ಸಾಮಾಜಿಕರು ಸೂಚಿಸಬೇಕೆಂದಿರುವ ಬದಲಾವಣೆಗಳನ್ನು ಸಾಮಾನ್ಯ ಸಭೆಯ ನೋಟೀಸನ್ನು ಪಡೆದ ಒಂದು ವಾರದೊಳಗಾಗಿ ಲಿಖಿತದ ಮೂಲಕ ಸನ್ಮಾನ್ಯ ಕಾರ್ಯದರ್ಶಿಗಳಿಗೆ ಶ್ರುತಪಡಿಸತಕ್ಕುದು ಮತ್ತು ಸನ್ಮಾನ್ಯ ಕಾರ್ಯದರ್ಶಿಗಳು ಆ ಸೂಚನೆಗಳನ್ನು ಇತರ ಸಾಮಾಜಿಕರುಗಳಿಗೆ ಸಮ್ಮೇಳನದ ತಾರೀಖಿಗೆ ಕನಿಷ್ಠಪಕ್ಷ ಹತ್ತು ದಿವಸಗಳಿಗೆ ಮುಂಚೆಯೇ ತಿಳಿಸತಕ್ಕುದು.

XXIX. ವಾರ್ಷಿಕ ಸಮ್ಮೇಳನವು ನಡೆಯಬೇಕಾಗಿರುವ ಸ್ಥಳದಲ್ಲಿಯೇ ಇಂತಹ ಸಾಮಾನ್ಯ ಸಭೆಯೂ ನಡೆಯತಕ್ಕುದು. ಈ ಸಭೆಯಲ್ಲಿ ನಡೆಯಬೇಕಾದ ಕಾರ್ಯಗಳ ವಿವರವೇನೆಂದರೆ –

(೧) ಕಾರ್ಯನಿರ್ವಾಹಕ ಮಂಡಲಿಯವರು ಒಪ್ಪಿಸುವ ವಾರ್ಷಿಕ ರಿಪೋರ್ಟನ್ನೂ ಆಯವ್ಯಯ ಶೋಧಕರುಗಳು ಒಪ್ಪಿಸುವ ಆಯವ್ಯಯದ ಪಟ್ಟಿಗಳನ್ನೂ ಅಂಗೀಕರಿಸುವ ವಿಚಾರ –

(೨) ಮುಂದಿನ ವರುಷದ ಆಯವ್ಯಯದ ಪಟ್ಟಿಯ ವ್ಯವಸ್ಥೆ.

(೩) ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರಿಗಳನ್ನೂ ಸಾಮಾಜಿಕರನ್ನೂ ಚುನಾಯಿಸುವುದು.

(೪) ಬರವಣಿಗೆಯ ಮೂಲಕ ಕಾಲನಿಯಮಕ್ಕೆ ಅನುಸಾರವಾಗಿ ತಿಳಿಸಿರುವ ಇತರ ವಿಷಯಗಳ ವಿಚಾರ.

XXX. ವಾರ್ಷಿಕ ಸಮ್ಮೇಳನ ಕಾಲದಲ್ಲಿ ವಿದ್ವಾಂಸರು ಉಪನ್ಯಾಸ ಮಾಡುವಂತೆಯೂ, ಇತರ ಪ್ರೌಢ ಲೇಖನಗಳನ್ನು ಓದುವಂತೆಯೂ ಕಾರ್ಯನಿರ್ವಾಹಕರ ಮಂಡಲಿಯವರು ಏರ್ಪಡಿಸತಕ್ಕುದೂ ಅಲ್ಲದೆ ತಾವು ಅಂಗೀಕರಿಸಿರುವ ಉಪನ್ಯಾಸಗಳೂ ಪ್ರೌಢಲೇಖನಗಳೂ ಇಂತಿಂತಿರುವುದೆಂದು ಸಮ್ಮೇಳನದ ತಾರೀಖಿಗೆ ಮುಂಚೆಯೇ ಪ್ರಸಿದ್ಧ ಪಡಿಸತಕ್ಕುದು.

XXXI. ಕಾರ್ಯನಿರ್ವಾಹಕ ಮಂಡಲಿಗೆ ಅವಶ್ಯವೆಂದು ಕಾಣಬಂದಾಗ ಆಗಲಿ, ಅಥವಾ ತಮ್ಮ ಅಭಿಮತವನ್ನು ಸೂಚಿಸುವ ಹಕ್ಕುಳ್ಳ ಸಾಮಾಜಿಕರುಗಳಲ್ಲಿ ಎಂಟರಲ್ಲೊಂದು ಪಾಲಿಗೆ ಕಡಿಮೆಯಿಲ್ಲದಷ್ಟು ಮಂದಿ ಸಾಮಾಜಿಕರು ಅಪೇಕ್ಷಿಸಿದಾಗ ಆಗಲಿ, ಪರಿಷತ್ತಿನ ವಿಶೇಷ ಸಭೆಗಳನ್ನು ಏರ್ಪಡಿಸತಕ್ಕುದು.

ಉಪ ನಿಬಂಧನೆಗಳು (೧೯೧೫)

(೧) ಆವಶ್ಯಕತೆ ತೋರಿದಾಗ ಉಪಸಂಘಗಳನ್ನೂ ಅವುಗಳ ಪ್ರವರ್ತಕರೊಡನೆ (Conveners) ನಿಯಮಿಸಲು ಕಾರ್ಯನಿರ್ವಾಹಕ ಮಂಡಲಿಗೆ ಅಧಿಕಾರವಿರತಕ್ಕುದು. ಈ ಉಪಸಂಘಗಳಲ್ಲಿ ಪ್ರತಿಯೊಂದರಲ್ಲಿಯೂ ಕಾರ್ಯನಿರ್ವಾಹಕ ಮಂಡಲಿಯ ಸಾಮಾಜಿಕರೊಬ್ಬರಾದರೂ ಇದ್ದೇ ಇರಬೇಕು. ಸಾಮಾಜಿಕರಲ್ಲದ ಪ್ರಾಜ್ಞರನ್ನು ಈ ಉಪಸಂಘಗಳಿಗೆ ಸೇರಿಸಬಹುದು.

(೨) ಉಪಸಂಘಗಳಿಗೆ ಸೇರಲ್ಪಟ್ಟ ಪ್ರಾಜ್ಞರಿಗೆ ಯಥೋಚಿತವಾಗಿ ವೇತನಗಳನ್ನೂ ಕೊಡಲು ಕಾರ್ಯನಿರ್ವಾಹಕ ಮಂಡಲಿಗೆ ಅಧಿಕಾರವಿರತಕ್ಕುದು.

(೩) ಪ್ರಸಿದ್ಧ ಪಂಡಿತರನ್ನು ಪರಿಷತ್ತಿಗೆ ಸನ್ಮಾನ್ಯ ಸಾಮಾಜಿಕರನ್ನಾಗಿ ಸೇರಿಸಿಕೊಳ್ಳಬೇಕೆಂದು ಪರಿಷತ್ತಿನ ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡುವುದಕ್ಕೆ ಕಾರ್ಯನಿರ್ವಾಹಕ ಮಂಡಲಿಗೆ ಸ್ವಾತಂತ್ರ್ಯವಿರತಕ್ಕುದು.

(೪) ಕಾರ್ಯನಿರ್ವಾಹಕ ಮಂಡಲಿಯಲ್ಲಿ ಯಾವುದಾದರೂ ಒಂದು ಸ್ಥಾನವು ಖಾಲಿಯಾದರೆ (Vacant) ಮುಂದಿನ ವಾರ್ಷಿಕ ಸಭೆಯವರೆಗೂ ಹಂಗಾಮಿಯಾಗಿ ಇತರರನ್ನು ಆಸ್ಥಾನದಲ್ಲಿ ನೇಮಿಸಿಕೊಳ್ಳುವ ಅಧಿಕಾರವು ಕಾರ್ಯನಿರ್ವಾಹಕ ಮಂಡಲಿಗೆ ಇರತಕ್ಕುದು.

(೫) ಪರಿಷತ್ತಿನ ಕೆಲಸಗಳನ್ನು ಸನ್ಮಾನ್ಯ ಕಾರ್ಯದರ್ಶಿಯವರು ನಡೆಯಿಸತಕ್ಕುದು ಮತ್ತು ಕಾರ್ಯನಿರ್ವಾಹಕರ ಮಂಡಲಿಯ ಮೇಲ್ವಿಚಾರಣೆಗೆ ಒಳಪಟ್ಟು ಪರಿಷತ್ತಿನ ಆಫೀಸಿನ ನೌಕರರ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳತಕ್ಕುದು. ಪರಿಷತ್ತಿಗೆ ಸಂಬಂಧಪಟ್ಟ ಲಿಖಾವಟ್ಟನ್ನೂ, ಚಾಲ್ತಿ ಕೆಲಸಗಳನ್ನೂ ತಮ್ಮ ರುಜುವನ್ನು ಹಾಕಿ ಸಾಮಾನ್ಯ ಕಾರ್ಯದರ್ಶಿಯವರೇ ನಡೆಯಿಸತಕ್ಕುದು.

ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಸೇರಿ ರುಜು ಮಾಡಿದವರಿಗೆಲ್ಲಾ ಅಭಿಮತ ಪ್ರದರ್ಶಕಪತ್ರಗಳು ಕೊಡಲ್ಪಟ್ಟುವು. ಸಭೆಯವರ ಅನುಮತಿಯನ್ನೂ ಪಡೆದು ಅಗ್ರಾಸನಾಧಿಪತಿಗಳು ಮ॥ ಜಹಗೀರ್ದಾರ್, ಎಂ.ಎ.ಎಲ್.ಎಲ್.ಬಿ. ಯವರನ್ನೂ ಮ॥ ಬಿ. ಕೃಷ್ಣಪ್ಪ ಎಂ.ಎ. ಅವರನ್ನೂ ಮ॥ ಆರ್. ಎಚ್. ದೇಶಪಾಂಡೆ ಎಂ.ಎ. ಯವರ ಮೇಲ್ವಿಚಾರಣೆಯಲ್ಲಿ ಅಭಿಮತ ಪ್ರದರ್ಶಕ ಪತ್ರಗಳ ಎಣಿಕೆಯಿಂದ ಕಾರ್ಯನಿರ್ವಾಹಕ ಮಂಡಲಿಯವರನ್ನು ನಿರ್ಣಯಿಸುವ ಕಾರ್ಯಕ್ಕೆ ನಿಯಮಿಸಿದರು. ನಿಯಮಿತರಾದ ಅಧಿಕಾರಿಗಳೂ ಸಾಮಾಜಿಕರೂ ಯಾರು ಯಾರೆಂದರೆ....

ಪರಿಷತ್ತಿನ ಕಾರ್ಯಕಾರಿ ಸಮಿತಿ (೧೯೧೫)

ಅಧ್ಯಕ್ಷರು-ರಾಜಮಂತ್ರಪ್ರವೀಣ ಮ॥ ಎಚ್.ವಿ. ನಂಜುಂಡಯ್ಯನವರು, ಎಂ.ಎ., ಎಂ.ಎಲ್.ಸಿ.ಐ.ಇ.

ಉಪಾಧ್ಯಕ್ಷರು - ರಾಜಬಹದೂರ್ ಎಂ. ಶಾಮರಾಯರವರು, ಎಂ.ಎ.

ಸಾಮಾನ್ಯ ಕೋಶಾಧ್ಯಕ್ಷರು - ಡಾಕ್ಟರ್ ಪಿ.ಎಸ್. ಅಚ್ಯುತರಾಯರು

ಸಾಮಾನ್ಯ ಕಾರ್ಯದರ್ಶಿಗಳು-ಬಿ. ಕೃಷ್ಣಪ್ಪನವರು, ಎಂ.ಎ.

ಸಾಮಾಜಿಕರು - (೧) ಮೈಸೂರು ಸಂಸ್ಥಾನಕ್ಕೆ

ಮ॥ ಸರ್ದಾರ್ ಎಂ. ಕಾಂತರಾಜೇ ಅರಸಿನವರು, ಬಿ.ಎ., ಸಿ. ಎಸ್.ಐ.

" ದಿವಾನ್ ಬಹದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು

" ಕರ್ಪೂರ ಶ್ರೀನಿವಾಸರಾಯವರು, ಬಿ.ಎಸ್.ಸಿ., ಎಲ್.ಸಿ.ಇ.

" ಎಚ್. ಲಿಂಗರಾಜೇ ಅರಸಿನವರು

" ಎಂ. ವೆಂಕಟಕೃಷ್ಣಯ್ಯನವರು

" ಸಿ. ಕೃಷ್ಣರಾಯರು ಬಿ.ಎ.

" ಆರ್. ನರಸಿಂಹಾಚಾರ್ಯರು, ಎಂ.ಎ.

" ಆರ್. ರಘುನಾಥರಾಯರು, ಬಿ.ಎ.

" ಬಿ. ಸುಬ್ಬರಾಯರು, ಬಿ.ಎ.

" ಎಂ. ಲಕ್ಷ್ಮೀನಾರಾಯಣಪ್ಪನವರು ಬಿ.ಎ.

" ಸಿ. ವಾಸುದೇವಯ್ಯನವರು

" ಪಂಡಿತ ಕವಿತಿಲಕ ಅಯ್ಯಾಶಾಸ್ತ್ರಿಗಳವರು

(೨) ಬೊಂಬಾಯಿ ಅಧಿಪತ್ಯಕ್ಕೆ

ಮ॥ ವಿ.ಬಿ. ಜೋಶಿಯವರು ಬಿ.ಎ.

" ಎನ್.ಜಿ. ಕರ್ಗುದರಿಯವರು, ಬಿ.ಎ.ಎಲ್.ಬಿ.

" ಆರ್. ಎಸ್. ನರಗುಂದಕರರವರು

" ಆರ್.ಎ. ಜಹಗೀರ್ದಾರ್, ಎಂ.ಎ. ಎಲ್.ಎಲ್.ಬಿ.

" ಆರ್.ಎಸ್. ಚಿಕ್ಕೋಡಿಯವರು ಬಿ.ಎ.

ಮ॥ ಕೆ.ಎಚ್. ಮುದವೇಡಕರ್‌ರವರು

" ಪಿ.ಜಿ. ಹಳಕಟ್ಟಿಯವರು , ಬಿ.ಎ. ಎಲ್.ಎಲ್.ಬಿ.

" ವಿ.ಬಿ. ಆಲೂರವರು, ಬಿ.ಎ. ಎಲ್.ಎಲ್.ಬಿ.

(೩) ಮದರಾಸಿನ ಅಧಿಪತ್ಯಕ್ಕೆ

ಮ॥ ಬಿ. ರಾಮರಾಯರು, ಎಂ.ಎ. ಎಲ್.ಎಲ್.ಬಿ.

" ರಾಜಗೋಪಾಲಕೃಷ್ಣರಾಯರು

" ಎಚ್. ತಿಮ್ಮಕೃಷ್ಣರಾಯರು

" ಎಂ.ಡಿ. ಅಳಸಿಂಗರಾಚಾರ್ಯರು

" ಎ. ವೆಂಕಟರಾಯರು, ಬಿ.ಎ, ಎಲ್.ಟಿ.

(೪) ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆ

ಮ॥ ಟಿ.ಎಸ್. ಚಿಕ್ಕೋಡಿಯವರು

" ಆರ್.ಎಸ್. ಮಂಗಸೂಲಿಯವರು

(೫) ಹೈದರಾಬಾದು ಕರ್ಣಾಟಕಕ್ಕೆ

ಮ॥ ಕೃಷ್ಣಯ್ಯಂಗಾರ್ಯರವರು

" ಆರ್. ತಾತ ಅವರು, ಎಂ.ಎ. ಎಲ್.ಟಿ.

(೬) ಕೊಡಗು ಪ್ರಾಂತ್ಯಕ್ಕೆ

ಮ॥ ರಾವ್ ಬಹದೂರ್ ರಾಜಕಾರ್ಯ ಪ್ರಸಕ್ತ ಎ. ಮುತ್ತಣ್ಣನವರು

ಅಗ್ರಾಸನಾಧಿಪತಿಗಳ ಇಚ್ಛಾನುಸಾರವಾಗಿ ಸನ್ಮಾನ್ಯ ಕಾರ್ಯದರ್ಶಿಗಳು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸಾಮಾಜಿಕರ ವಿವರವನ್ನು ಸಭೆಗೆ ಬಿನ್ನವಿಸಿದರು. ಮ॥ ಕರ್ಪೂರ್ ಶ್ರೀನಿವಾಸರಾಯರೂ ರೂ. ೫೦೦ನ್ನು ಉಚಿತ ಧನವಾಗಿಕೊಟ್ಟು ಆಶ್ರಯದಾತರಾಗಿರುವರೆಂತಲೂ, ೪೧ ಮಂದಿ ಆಜೀವ ಸಾಮಾಜಿಕರಾಗಿರುವರೆಂತಲೂ, ೪೨ ಮಂದಿ ಪ್ರಥಮ ವರ್ಗ ಸಾಮಾನ್ಯ ಸಾಮಾಜಿಕರಾಗಿರುವರೆಂತಲೂ, ೨೦ ಮಂದಿ ದ್ವಿತೀಯ ವರ್ಗದ ಸಾಮಾನ್ಯ ಸಾಮಾಜಿಕರಾಗಿರುವರೆಂತಲೂ, ವಾಗ್ದಾನವಾಗಿರುವ ಉಚಿತ ಧನದ ಮೊತ್ತವು ರೂ. ೨,೦೦೦ ಆಗುವುದೆಂತಲೂ ವಾರ್ಷಿಕ ಚಂದಾ ಹಣದ ಮೊತ್ತವು ರೂ. ೬೨೪ ಆಗುವುದೆಂತಲೂ ಶ್ರುತಪಡಿಸಿದರು.

೧೯೧೫ರ ನಿಬಂಧನೆಗಳಿಗೆ ತಿದ್ದುಪಡಿಗಳು

೧೯೧೫ರಲ್ಲಿ ರಚಿತವಾದ ನಿಬಂಧನೆಗಳು ಮೊದಲನೇ ವರ್ಷದ ವಾರ್ಷಿಕ ಸಭೆಯಲ್ಲಿ (೧೯೧೬) ತಿದ್ದುಪಡಿಗಳಿಗೆ ಒಳಗಾದವು. ಅವುಗಳ ವಿವರ ಹೀಗಿವೆ:

ಮೊದಲನೇ ದಿನದ ಸಭೆ (೬-೫-೧೯೧೬)

I. ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆಯು ೧೯೧೬ನೆಯ ಇಸವಿಯ ಮೇ ತಿಂಗಳ ೬ನೆಯ ಮತ್ತು ೭ನೆಯ ತಾರೀಖುಗಳಲ್ಲಿ ಪ್ರಾತಃಕಾಲ ೮ ಗಂಟೆಗೆ ಸರಿಯಾಗಿ ಬೆಂಗಳೂರಿನ ಕೋಟೆಯಲ್ಲಿರುವ ಗೌರ್ನಮೆಂಟ್ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ನಡೆಯಿತು."

II. ಪರಿಷತ್ತಿನ ಉಪಾಧ್ಯಕ್ಷರಾದ ರಾವ್‌ಬಹದ್ದೂರ್ ಮ॥ ಎಂ. ಶಾಮರಾವ್, ಎಂ.ಎ.ಯವರು ಅಗ್ರಾಸನವನ್ನು ಅಲಂಕರಿಸಿದರು.

III.ಮುಂದೆ ವಿವರಿಸಿರುವ ಕೆಲಸವು ನಡೆಯಿತು.

(೧) ಈಗಿರುವ IV ನೆಯ ನಿಬಂಧನೆಯಲ್ಲಿ ಮುಂದೆ ವಿವರಿಸುವ ತಿದ್ದುಪಾಟುಗಳು ಆವಶ್ಯಕಗಳಾಗಿವೆ ಎಂದು ಮ॥ ಬಿ. ರಾಮರಾವ್, ಎಂ.ಎ. ಎಲ್.ಎಲ್.ಬಿ. ಯವರು ಸಕಾರಣವಾಗಿ ತೋರಿಸಲು, ಮ॥ ಬಾಪು ಸುಬ್ಬರಾವ್, ಬಿ.ಎ. ಅವರು ಅವುಗಳನ್ನು ಅನುಮೋದಿಸಿದರು. ಅವುಗಳು ಸಭೆಯವರಿಂದ ಅಂಗೀಕರಿಸಲ್ಪಟ್ಟವು.

ಇವು ಯಾವುವೆಂದರೆ

(ಎ) "ಪೋಷಕರು", "ಉಪಪೋಷಕರು" ಎಂಬ ಪದಗಳಿಗೆ ಪ್ರತಿಯಾಗಿ "ಮಹಾ ಪೋಷಕರು", "ಪೋಷಕರು" ಎಂಬ ಪದಗಳು ಉಪಯೋಗಿಸಲ್ಪಡಬೇಕು.

(ಬಿ) "ಪ್ರದಾತೃಗಳು"ಎಂಬ ಪದಕ್ಕೆ ಬದಲಾಗಿ "ಉದ್ಧಾರಕರು"ಎಂಬ ಪದವು ಇರಬೇಕು.

(ಸಿ) "ಪ್ರದಾತೃಗಳು" ಎಂಬ ಹೆಸರನ್ನು ೫೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ಧನಸಹಾಯವನ್ನು ಮಾಡುವವರಿಗೇ ಇಡಬೇಕು.

(ಡಿ) ೨೫೦ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಧನಸಹಾಯವನ್ನು ಮಾಡುವ ಮೆಂಬರುಗಳ ಹೊಸ ತರಗತಿಯೊಂದನ್ನು ಏರ್ಪಡಿಸಿ, ಆ ತರಗತಿಯವರಿಗೆ "ಆಶ್ರಯದಾತರು" ಎಂಬ ಹೆಸರನ್ನು ಇಡಬೇಕು.

೨. ಈಗಿರುವ iv ನೆಯ ನಿಬಂಧನೆಗೆ ಹೊಸ ತರಗತಿಯೊಂದನ್ನು ಸೇರಿಸಿ, ಅದನ್ನು ಕೆಳಗೆ ತೋರಿಸುವಂತೆ

ಬದಲಾಯಿಸುವುದು ಉಚಿತವೆಂದು ಮ॥ ಬಿ.ವಿ. ರಾಮರಾವ್ ಎಂ.ಎ. ಎಲ್.ಎಲ್.ಬಿ. ಯವರು ತೋರಿಸಲು ಮ॥ ಬಿ. ರಾಮರಾವ್ ಬಿ.ಎ.ಯವರು ಅದನ್ನು ಅನುಮೋದಿಸಿದರು.

ಯಾವುವೆಂದರೆ:

(ಎ) ಆಜೀವ ಸದಸ್ಯರುಗಳಲ್ಲಿ ಎರಡು ತರಗತಿಗಳಿರಬೇಕು. ಮೊದಲನೆಯ ತರಗತಿಯವರು ೧೦೦ ರೂಪಾಯಿಗಳನ್ನು, ಎರಡನೆಯ ತರಗತಿಯವರು ೫೦ ರೂಪಾಯಿಗಳನ್ನು ಕೊಡಬೇಕು.

ಈ ಸಲಹೆಯ ವಿಷಯದಲ್ಲಿ ಚರ್ಚೆಯು ವಿಶೇಷವಾಗಿ ನಡೆಯಿತು. ಮ॥ ರಾ॥ ಲಕ್ಷ್ಮೀನರಸಿಂಹರಾಯರು ಆಜೀವಸದಸ್ಯರುಗಳಲ್ಲಿ ಎರಡು ತರಗತಿಗಳನ್ನು ಏರ್ಪಡಿಸುವುದು ಉಚಿತವಾಗಿ ತೋರುವುದಿಲ್ಲವೆಂದು ವಾದಿಸಿದರು. ಹೀಗೆಯೇ ಚರ್ಚೆಯು ಇನ್ನೂ ನಡೆದ ಬಳಿಕ, ೧೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ಧನಸಹಾಯವನ್ನು ಮಾಡುವವರಿಗೆ "ಸಹಾಯಕರು" ಎಂಬ ಹೆಸರನ್ನು, ೫೦ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ಧನಸಹಾಯವನ್ನು ಮಾಡುವವರಿಗೆ ಈಗಿನಂತೆ ಮುಂದೆಯೂ "ಆಜೀವ ಸದಸ್ಯರು" ಎಂಬ ಹೆಸರನ್ನು ಇಡತಕ್ಕುದು ಎಂದು ತೀರ್ಮಾನವಾಯಿತು.

(ಬಿ) ಈಗ ಪ್ರಥಮ ದ್ವಿತೀಯ ವರ್ಗಗಳ ಸಾಧಾರಣ ಸದಸ್ಯರು ಕೊಡಬೇಕಾಗಿರುವ ೧೨ ಮತ್ತು ೪ ರೂಪಾಯಿಗಳ ವಾರ್ಷಿಕ ಚಂದಾ ಮೊಬಲಗುಗಳನ್ನು ೬ ಮತ್ತು ೩ ರೂಪಾಯಿಗಳಿಗೆ ಇಳಿಸಬೇಕು.

ಸ್ವಲ್ಪ ಚರ್ಚೆಯು ನಡೆದ ಮೇಲೆ ಈ ಸಲಹೆಯನ್ನು ಸಲಹೆದಾರರು ಹಿಂದಕ್ಕೆ ತೆಗೆದುಕೊಂಡರು.

(ಸಿ) ೧೯೧೫ನೆಯ ಇಸವಿಯ ಮೇ ತಾರೀಖು ೩ರಲ್ಲಿ ಪ್ರಾರಂಭವಾದ ಪರಿಷತ್ತಿನ ಪ್ರಥಮ ವರ್ಷದೊಳಗೆ ಪರಿಷತ್ತಿಗೆ ಸೇರಿದ ಪ್ರಥಮ ದ್ವಿತೀಯ ವರ್ಗಗಳ ಸಾಧಾರಣ ಸದಸ್ಯರು ಆಜೀವ ಸದಸ್ಯರಾಗಲು ಇಷ್ಟಪಡುವುದಾದರೆ, ಅಂತಹವರು ತಾವು ತಮ್ಮ ಇಷ್ಟವನ್ನು ಪ್ರದರ್ಶಿಸುವವರೆಗೂ ಕೊಟ್ಟಿರುವ ಚಂದಾ ಮೊಬಲಗನ್ನು ಕಳೆದು ಉಳಿಯುವ ಮೊಬಲಗನ್ನು ಈ ನಿಬಂಧನೆಯು ಜಾರಿಗೆ ಬಂದ ತಾರೀಖಿನ ಲಾಗಾಯಿತು ಒಂದು ವರ್ಷದೊಳಗಾಗಿ ಕೊಟ್ಟು ಆಜೀವ ಸದಸ್ಯರಾಗಲು ಅವಕಾಶವನ್ನು ಕೊಡಬೇಕು.

ಇದೂ ಅಂಗೀಕೃತವಾಯಿತು.

(ಡಿ) ಕನ್ನಡವಲ್ಲದ ಬೇರೆ ಭಾಷೆಯಲ್ಲಿ ಪಾಂಡಿತ್ಯವನ್ನು ಪಡೆದಿರುವ ಮತ್ತು ಕನ್ನಡದೇಳಿಗೆಯಲ್ಲಿ ಆಸಕ್ತರಾಗಿರುವ ಮಹನೀಯರಿಗೋಸ್ಕರ ಯಾವ ವಿಧವಾದ ಚಂದಾ ಮೊಬಲಗನ್ನೂ ಕೊಡಬೇಕಾಗಿಲ್ಲದ ಹೊಸ ತರಗತಿಯೊಂದನ್ನು ಏರ್ಪಡಿಸಿ, ಆ ತರಗತಿಯವರಿಗೆ ವಿಶಿಷ್ಟ ಸದಸ್ಯರು ಎಂಬ ಹೆಸರನ್ನು ಕೊಡತಕ್ಕದ್ದು.

ಇದೂ ಅಂಗೀಕೃತವಾಯಿತು.

ಈ ಸಮಯದಲ್ಲಿ ಪರಿಷತ್ತಿನ ಅಧ್ಯಕ್ಷರು ಬಂದು ಅಗ್ರಾಸನವನ್ನಲಂಕರಿಸಿದರು.

(೩) ಈಗಿರುವ iv ನೆಯ ಮತ್ತು v ನೆಯ ನಿಬಂಧನೆಗಳಲ್ಲಿ ಮುಂದೆ ವಿವರಿಸುವ ತಿದ್ದುಪಾಟುಗಳು ಸಭೆಯ ಆಲೋಚನೆಗೆ ತರಲ್ಪಟ್ಟುವು....

(ಎ) ಎರಡನೆಯ ವರ್ಗದ ಸಾಧಾರಣ ಸದಸ್ಯರಿಗೆ ಪರಿಷತ್ತಿನ ಸಾಧಾರಣ ಸಭೆಗಳಲ್ಲಿ ತಮ್ಮ ಅಭಿಮತಗಳನ್ನು ಸೂಚಿಸುವ ಅಧಿಕಾರವನ್ನು ಕೊಡತಕ್ಕುದು.

ಈ ವಿಷಯದಲ್ಲಿ ಕೆಲವು ನಿರ್ಬಂಧಗಳಿರುವುದು ಉತ್ತಮವೆಂದು ಮ॥ ಕರಣೀಕ ಕೃಷ್ಣಮೂರ್ತಿಗಳು ಅಭಿಪ್ರಾಯಪಟ್ಟರು. ಮೂರುವರ್ಷಗಳವರೆಗೂ ದ್ವಿತೀಯ ವರ್ಗದಲ್ಲಿ ಸಾಧಾರಣ ಸದಸ್ಯರಾಗಿದ್ದ ಮೇಲೆ ಈ ಅಧಿಕಾರವು ಬರುವಂತೆ ವಿಧಿಸುವುದು ಉಚಿತವೆಂದು ಮ॥ ಆರ್. ಎ. ಜಹಗೀದ್ದಾರರವರು ಅಭಿಪ್ರಾಯಪಟ್ಟರು.

ಹೀಗೆಯೇ ಚರ್ಚೆಯು ಕೆಲವು ಕಾಲಗಳವರೆಗೆ ನಡೆದ ಮೇಲೆ v ನೆಯ ನಿಬಂಧನೆಯನ್ನು ಈ ಕೆಳಗೆ

ವಿವರಿಸುವಂತೆ ಬದಲಾಯಿಸುವುದು ಉಚಿತವೆಂದು ತೀರ್ಮಾನಿಸಲಾಯಿತು. ಎಂತೆಂದರೆ–

"ಪರಿಷತ್ತಿನ ಎಲ್ಲ ಸಭೆಗಳಲ್ಲಿಯೂ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೂ ತಂತಮ್ಮ ಅಭಿಮತವನ್ನು ಸೂಚಿಸುವ ಅಧಿಕಾರವಿರತಕ್ಕುದು: ಪರಂತು ದ್ವಿತೀಯವರ್ಗದ ಸಾಧಾರಣ ಸದಸ್ಯರುಗಳಿಗೆ ಈ ಅಧಿಕಾರವು ಅವರು ಪರಿಷತ್ತಿಗೆ ಸೇರಿದ ತಾರೀಖು ಲಾಗಾಯಿತು ಒಂದು ವರ್ಷವಾದ ಹೊರತು ಇರಕೂಡದು."

(ಬಿ) ಈಗಿರುವ iv ನೆಯ ನಿಬಂಧನೆಯನ್ನು ಈ ಕೆಳಗೆ ವಿವರಿಸುವಂತೆ ಬದಲಾಯಿಸಬೇಕೆಂಬ ಸಲಹೆ ಪರ್ಯಾಲೋಚನೆಗೆ ಬಂತು. ಎಂತೆಂದರೆ– "ಪರಿಷತ್ತಿನ ಸದಸ್ಯರುಗಳೆಲ್ಲರೂ ಪರಿಷತ್ಪತ್ರಿಕೆಯ ಒಂದೊಂದು ಪ್ರತಿಯನ್ನು ಉಚಿತವಾಗಿ ಹೊಂದುವ ಹಕ್ಕನ್ನು ಪಡೆದಿರಬೇಕು. ಪರಿಷತ್ತಿನಿಂದ ಪ್ರಕಟವಾಗುವ ಇತರ ಪುಸ್ತಕಗಳ ವಿಷಯದಲ್ಲಿ ಕಾರ್ಯನಿರ್ವಾಹಕ ಮಂಡಲಿಯು ಕಾಲಕಾಲಕ್ಕೆ ನಿರ್ಣಯಿಸುವ ದರಗಳ ಪ್ರಕಾರವಾಗಿಯೋ, ಉಚಿತವಾಗಿಯೋ ಸದಸ್ಯರುಗಳು ಒಂದೊಂದು ಪ್ರತಿಯನ್ನು ಹೊಂದುವ ಹಕ್ಕುಳ್ಳವರಾಗಿರಬೇಕು.

ಇದು ಅಂಗೀಕೃತವಾಯಿತು.

(೪) ಪರಿಷತ್ತಿನ ಗೌರವ ಕಾರ್ಯದರ್ಶಿಗಳ ಜತೆಗೆ ಗೌರವ ಸಹಾಯಕ ಕಾರ್ಯದರ್ಶಿಗಳೊಬ್ಬರು ಇರಬೇಕು. ಮತ್ತು ಬೆಂಗಳೂರಲ್ಲದ ಇತರ ಸ್ಥಳಗಳ ಕಾರ್ಯನಿರ್ವಾಹಕರಾಗಿ ಒಬ್ಬರೋ ಅಥವಾ ಒಬ್ಬರಿಗಿಂತ ಹೆಚ್ಚಾಗಿಯೋ ವ್ಯವಹಾರದ ಗೌರವ ಕಾರ್ಯದರ್ಶಿಗಳು ನಿಯಮಿಸಲ್ಪಡಬೇಕು"ಎಂಬ ಸಲಹೆಯು ಸಭೆಯ ಪರ್ಯಾಲೋಚನೆಗೆ ತರಲ್ಪಟ್ಟಿತು.

ಮ॥ ಕರಣೀಕ ಕೃಷ್ಣಮೂರ್ತಿಗಳು ಗೌರವಕಾರ್ಯದರ್ಶಿಗಳ ಜತೆಗೆ ಗೌರವ ಸಹಾಯಕ ಕಾರ್ಯದರ್ಶಿಗಳೊಬ್ಬರು ಇರುವುದಕ್ಕೆ ಬದಲಾಗಿ ಇಬ್ಬರು ಜಂಟಿ ಗೌರವ ಕಾರ್ಯದರ್ಶಿ ಗಳಿರುವುದೇ ಮೇಲು ಎಂಬ ತಿದ್ದುಪಾಟನ್ನು ಸಭೆಯ ಮುಂದಕ್ಕೆ ತಂದರು ; ಇದನ್ನು ಮ॥ ಎಚ್. ಚೆನ್ನ ಕೇಶವಯ್ಯಂಗಾರ್ಯರು ಅನುಮೋದಿಸಿದರು.

ಈ ತಿದ್ದುಪಾಟು ಅಂಗೀಕೃತವಾಯಿತು.

ಪತ್ರವ್ಯವಹಾರದ ಕಾರ್ಯದರ್ಶಿಗಳ ವಿಷಯದಲ್ಲಿ ಮದರಾಸು ಪ್ರಾಂತ್ಯಕ್ಕೊಬ್ಬರು ಮುಂಬಯಿ ಪ್ರಾಂತ್ಯಕ್ಕೊಬ್ಬರು ಇದ್ದರೆ ಸಾಕೆಂತಲೂ, ಈ ಕಾರ್ಯದರ್ಶಿಗಳನ್ನು ಮದರಾಸು ಮುಂಬಯಿ ಪ್ರಾಂತದವರೇ ಬೇರೆ ಬೇರೆಯಾಗಿ ತಮತಮಗೆ ಬೇಕಾದವರನ್ನು ಚುನಾಯಿಸಿಸಿ ಅವರ ಹೆಸರುಗಳನ್ನು ಪರಿಷತ್ತಿನ ಕಾರ್ಯದರ್ಶಿಗಳಿಗೆ ತಿಳಿಯಪಡಿಸುವುದೇ ಉತ್ತಮವೆಂತಲೂ ಸಭೆಯವರಲ್ಲಿ ಅನೇಕರು ಅಭಿಪ್ರಾಯಪಟ್ಟರು.

ತಿದ್ದುಪಾಟು ಆದಮೇಲೆ viii ನೆಯ ನಿಬಂಧನೆಯು ಈ ಕೆಳಗೆ ವಿವರಿಸಿರುವಂತೆ ನಿಂತಿತು. ಎಂತೆಂದರೆ –"ಕಾರ್ಯ ನಿರ್ವಾಹಕ ಮಂಡಲಿಯಲ್ಲಿ ಮೂವತ್ತು ಮಂದಿ ಮೆಂಬರುಗಳ ಜತೆಗೆ ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು ಇಬ್ಬರು ಜಂಟಿ ಗೌರವ ಕಾರ್ಯದರ್ಶಿಗಳು, ಒಬ್ಬರು ಗೌರವ ಕೋಶಾಧ್ಯಕ್ಷರು ಇರತಕ್ಕುದು. ಈ ಮೇಲ್ಕಂಡವರೆಲ್ಲರೂ ಬ್ಯಾಲಟ್ ಮೂಲಕವಾಗಿಯೇ ಚುನಾಯಿಸಲ್ಪಡಬೇಕು. "

ಈಗಿನ ನಿಬಂಧನೆಗಳಲ್ಲಿ ಉಪಯೋಗಿಸಿರುವ "ಗೌರವ ಕಾರ್ಯದರ್ಶಿ" ಎಂಬುದಕ್ಕೆ ಬದಲಾಗಿ "ಜಂಟಿ ಗೌರವ ಕಾರ್ಯದರ್ಶಿಗಳು" ಎಂಬುದನ್ನು ಅವಶ್ಯವಾದೆಡೆಯಲ್ಲೆಲ್ಲ ಉಪಯೋಗಿಸತಕ್ಕುದು ಎಂದು ತೀರ್ಮಾನವಾಯಿತು.

(೫) ಈ ಕೆಳಗೆ ಕೊಟ್ಟಿರುವ ವಾಕ್ಯವು ix ನೆಯ ನಿಬಂಧನೆಯ ಜತೆಗೆ ಸೇರಬೇಕೆಂದು ತೀರ್ಮಾನಿಸಲಾಯಿತು. ಅವುದೆಂದರೆ – "ಕಾರ್ಯನಿರ್ವಾಹಕ ಮಂಡಲಿಯವರು ವರ್ಷದವರೆಗೋ ಅಥವಾ ಹೊಸ ಮೆಂಬರುಗಳು ನಿಯಮಿತರಾಗುವ ವರೆಗೂ ಅಧಿಕಾರದಲ್ಲಿರತಕ್ಕುದು.

(೬) ಈಗಿರುವ xi ನೆಯ ನಿಬಂಧನೆಯು ವಜಾಮಾಡಲ್ಪಡಬೇಕೆಂದು ತೀರ್ಮಾನವಾಯಿತು.

ಮೊದಲನೆಯ ದಿನದ ಸಭೆಯು ಇಲ್ಲಿಗೆ ನಿಂತಿತು.

ಎರಡನೆಯ ದಿವಸದ ಸಭೆ (೭-೫-೧೯೧೬) ನಿಬಂಧನೆಯ ತಿದ್ದುಪಡಿಗಳು

IV. ಮೊದಲನೆಯ ದಿನದ ಸಭೆಗೆ ಬಂದಿದ್ದ ಸದಸ್ಯರುಗಳು ಸ್ವಲ್ಪ ಹೆಚ್ಚು ಕಡಿಮೆಯಾಗಿ ಎಲ್ಲರೂ ಈ ದಿನದ ಸಭೆಗೂ ದಯಮಾಡಿಸಿದ್ದರು.

V. ಮುಂದೆ ವಿವರಿಸುವ ಸಲಹೆಗಳು ಸಭೆಯ ಪರ್ಯಾಲೋಚನೆಗೆ ಬಂದು ಅಲ್ಲಲ್ಲಿ ಕೆಳಗೆ ತೋರಿಸಿರುವಂತೆ ವ್ಯವಸ್ಥೆ ಮಾಡಲ್ಪಟ್ಟುವು.

(೧) ಕಾರ್ಯನಿರ್ವಾಹಕ ಮಂಡಲಿಯವರಿಗೆ ಉಚಿತವೆಂದು ತೋರುವಂತೆ ಪ್ರಸಿದ್ಧರಾದ ಪಂಡಿತರನ್ನು ಐದು ಮಂದಿಗೆ ಮೀರದ ಹಾಗೆ ಕಾರ್ಯನಿರ್ವಾಹಕ ಮಂಡಲಿಗೆ ಸೇರಿಸಿಕೊಳ್ಳುವುದಕ್ಕೆ ಅಧಿಕಾರವಿರಬೇಕು ; ಹೀಗೆ ಸೇರಿಸಲ್ಪಟ್ಟ ಪಂಡಿತ ಸದಸ್ಯರುಗಳಿಂದ ಚಂದಾ ಮೊಬಲಗು ಯಾವುದನ್ನೂ ವಸೂಲು ಮಾಡಲವಶ್ಯವಿಲ್ಲ, ಮತ್ತು ಈ ಪಂಡಿತ ಸದಸ್ಯರುಗಳು ಮತ್ತೊಂದು ವಾರ್ಷಿಕ ಸಭೆಯಲ್ಲಿ ಬೇರೊಂದು ಕಾರ್ಯನಿರ್ವಾಹಕ ಮಂಡಲಿಯು ಚುನಾಯಿಸಲ್ಪಡುವವರೆಗೂ ಮೆಂಬರುಗಳಾಗಿರತಕ್ಕುದು."

ಈ ಮೇಲಣ ಸಲಹೆಯನ್ನು ಮ॥ ಬಿ. ರಾಮರಾಯರವರು ಪರ್ಯಾಲೋಚನೆಗೆ ತರಲು, ಮ॥ ಎಸ್. ಎಸ್. ಸೆಟ್ಲೂರವರು ಅನುಮೋದಿಸಿದರು. ಮತ್ತು ಮ॥ ಕರ್ಪೂರ ಶ್ರೀನಿವಾಸರಾಯರು ಸಮರ್ಥಿಸಿದರು.

ಇದು ಅಂಗೀಕೃತವಾಯಿತು.

(೨) ೧೯೧೩-೧೯೧೬ನೆಯ XII ನೆಯ ನಿಬಂಧನೆಗೆ ಮುಂದೆ ಕೊಡುವ ವಾಕ್ಯವನ್ನು ಸೇರಿಸತಕ್ಕದ್ದು. ಯಾವುದೆಂದರೆ –

"ವರ್ಷದ ಮಧ್ಯದ ಕಾರ್ಯನಿರ್ವಾಹಕ ಮಂಡಲಿಯ ಸೇರಣೆಯು (Meeting) ಸಾಧ್ಯವಾಗುವ ಮಟ್ಟಿಗೂ ದಸರಾ ರಜದಲ್ಲಿ ನಡೆಯಬೇಕು.

ಅಂಗೀಕೃತವಾಯಿತು.

(೩) ಕಾರ್ಯನಿರ್ವಾಹಕ ಮಂಡಲಿಯ ವರ್ಷ ಮಧ್ಯದ ಸಭೆಯಲ್ಲದ ಇತರ ಸಭೆಗಳ ಕಾರ್ಯವಿವರದ ಪಟ್ಟಿಯಲ್ಲಿ (Agenda paper) ಕಾಣಬರುವ ವಿಷಯಗಳಲ್ಲಿ ಯಾವುದನ್ನಾದರೂ ವರ್ಷಮಧ್ಯದ ಸಭೆಯ ಪರ್ಯಾಲೋಚನೆಗೆ ಮೆಂಬರುಗಳು ಇಡಿಸಿಕೊಳ್ಳಬಹುದು. ಆದರೆ ಹಾಗೆ ಮಾಡಬೇಕೆಂದು ಕೇಳುವವರ ಸಂಖ್ಯೆಯು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳ ಒಟ್ಟು ಸಂಖ್ಯೆಯಲ್ಲಿ ಕಾಲುಪಾಲಿಗಿಂತ ಕಡಿಮೆಯಾಗಿರಕೂಡದು." ಈ ಸಲಹೆಯನ್ನು ಮ॥ ಬಿ. ಸುಬ್ಬರಾಯರು ಅನುಮೋದಿಸಿದರು. ಮತ್ತು ಮ॥ ಆಲೂರವರು ಸಮರ್ಥಿಸಿದರು.

ಅಂಗೀಕೃತವಾಯಿತು.

(೪) "ಬ್ಯಾಂಕಿನಿಂದ ಹಣವನ್ನು ತೆಗೆಯುವಾಗ ಮಾತ್ರ ಗೌರವ ಕೋಶಾಧ್ಯಕ್ಷರೂ ಜಂಟಿ ಗೌರವ ಕಾರ್ಯದರ್ಶಿಗಳಿಬ್ಬರಲ್ಲಿ ಒಬ್ಬರೂ ರುಜುಹಾಕಬೇಕೆಂತಲೂ, ಇತರ ಸಂದರ್ಭಗಳಲ್ಲಿ ಮೂವರಲ್ಲಿ ಯಾರಾದರೂ ಒಬ್ಬರು ರುಜು ಹಾಕಿದರೆ ಸಾಕು ಎಂತಲೂ ಅರ್ಥ ಬರುವ ಹಾಗೆ ಈಗಿರುವ XxIv ನೆಯ ನಿಬಂಧನೆಯನ್ನು ಬದಲಾಯಿಸತಕ್ಕುದು."

ಅಂಗೀಕೃತವಾಯಿತು

(೫) "ಈಗಿರುವ XxvII ನೆಯ ನಿಬಂಧನೆಯಲ್ಲಿ "ಒಂದು ತಿಂಗಳು" ಎಂದಿರುವುದನ್ನು "ಮೂರು ತಿಂಗಳು" ಎಂದು ಬದಲಾಯಿಸತಕ್ಕುದು."

ಅಂಗೀಕೃತವಾಯಿತು.

(೫) "ಕರ್ಣಾಟ ಭಾಷೆಯ ಏಳಿಗೆಗಾಗಿ ಹುಟ್ಟಿರುವ ಇತರ ಸಂಘಗಳನ್ನು ಈ ಕರ್ಣಾಟಕ ಸಾಹಿತ್ಯ ಪರಿಷತ್ತು ತನ್ನ ಜತೆಗೆ ಕಾರ್ಯನಿರ್ವಾಹಕ್ಕಾಗಿ ಸೇರಿಸಿಕೊಳ್ಳುವುದಕ್ಕೆ ಅವಶ್ಯವಾಗಿರುವ ನಿಬಂಧನೆಗಳನ್ನು ನಿರ್ಣಯಿಸಿ ರಿಪೋರ್ಟ್ ಮಾಡುವುದಕ್ಕಾಗಿ ಧಾರವಾಡದ ಮ॥ ಆರ್. ಎಚ್. ದೇಶಪಾಂಡೆಯವರೂ, ಬಿಜಾಪುರದ ರಾವ್‌ಸಾಹೇಬ್ ಮ॥ ರಾಘವೇಂದ್ರರಾವ್ ಕೆಂಭಾವಿಯವರೂ, ಮುಂಬಯಿಯ ಮ॥ ಎಸ್ ಸೆಟ್ಲೂರವರೂ, ಮದರಾಸಿನ ಮ॥ ಬಿ. ರಾಮರಾಯರೂ, ಮಂಗಳೂರಿನ ಮ॥ ಎ. ವೆಂಕಟರಾಯರವರೂ, ಬೆಂಗಳೂರಿನ ಮ॥ ಕರ್ಪೂರ ಶ್ರೀನಿವಾಸರಾಯರೂ, ಮ॥ ಎಂ. ಎಸ್. ಪುಟ್ಟಣ್ಣನವರೂ, ಮ॥ ಟಿ. ಲಕ್ಷ್ಮೀನರಸಿಂಹರಾಯರವರೂ ಸೇರಿದ ಉಪಸಂಘವೊಂದು ಏರ್ಪಡಿಸಲ್ಪಡಬೇಕು."

ಮೇಲಣ ಸಲಹೆಯನ್ನು ಮ॥ ಬಿ. ರಾಮರಾಯರವರು ಪರ್ಯಾಲೋಚನೆಗೆ ತರಲು, ಮ॥ ಟಿ. ಲಕ್ಷ್ಮೀನರಸಿಂಹರಾಯರು ಅನುಮೋದಿಸಿದರು. ಮತ್ತು ಮ॥ ಎ. ವೆಂಕಟರಾಯರವರು ಸಮರ್ಥಿಸಿದರು.
ಅಂಗೀಕೃತವಾಯಿತು.

(೭) "ಪರಿಷತ್ತಿಗೆ ಪ್ರತಿನಿಧಿಗಳನ್ನು ಕಳುಹಿಸದೆ ಇರುವ ಕನ್ನಡ ನಾಡುಗಳಲ್ಲಿ – ಮುಖ್ಯವಾಗಿ ಹೈದರಾಬಾದಿನ ಪಶ್ಚಿಮ ಪ್ರಾಂತಗಳಲ್ಲಿ ಮತ್ತು ದಕ್ಷಿಣ ಮಹಾರಾಷ್ಟ್ರದ ನಾಡುಗಳಲ್ಲಿ – ಸಂಚಾರಮಾಡಿ (ಎ) ಪರಿಷತ್ತಿಗೆ ಹೊಸ ಸದಸ್ಯರುಗಳನ್ನು ಸೇರಿಸುವುದಕ್ಕೂ , (ಬಿ) ಪ್ರಾದೇಶಿಕ ಸರ್ಕಾರಗಳ ಸಹಾನುಭೂತಿಯನ್ನೂ ಸಹಾಯವನ್ನೂ ಸಂಪಾದಿಸುವುದಕ್ಕೂ (ಸಿ) ಉಚಿತವಾದ ಇತರ ವಿಧಗಳಲ್ಲಿ ಪರಿಷತ್ತಿನ ಉದ್ದೇಶಗಳನ್ನು ನೆರವೇರಿಸುವುದಕ್ಕೂ ಪರಿಷತ್ತಿನ ಸದಸ್ಯರುಗಳಲ್ಲಿ ಇಬ್ಬರನ್ನು ಚುನಾಯಿಸಿ ಕಳುಹಿಸತಕ್ಕುದು ಮತ್ತು ಆವಶ್ಯವಾಗಿದ್ದಲ್ಲಿ ಅವರ ವೆಚ್ಚಗಳನ್ನು ಪರಿಷತ್ತಿನ ಧನದಿಂದ ಕೊಡತಕ್ಕುದು."

ಮೇಲಣ ಸಲಹೆಯನ್ನು ಮ॥ ಆರ್.ಎಚ್. ದೇಶಪಾಂಡೆಯವರು, ಸಭೆಯ ಮುಂದೆ ತರಲು, ಮ॥ ಎಂ. ಎಸ್. ಪುಟ್ಟಣ್ಣನವರು ಅನುಮೋದಿಸಿದರು. ಮತ್ತು ಬಾಪು ಸುಬ್ಬರಾಯರು ಸಮರ್ಥಿಸಿದರು. ಅಂಗೀಕೃತವಾಯಿತು.

ಮ॥ ಆರ್. ಎಚ್. ದೇಶಪಾಂಡೆಯವರ ಜತೆಗೆ ಕಾರ್ಯನಿರ್ವಾಹಕ ಮಂಡಲಿಯವರು ಚುನಾಯಿಸುವ ಸದಸ್ಯರೊಬ್ಬರನ್ನು ಸೇರಿಸಿ,. ಈ ಇಬ್ಬರು ಸದಸ್ಯರನ್ನೂ, ಅವಶ್ಯಕವಾದಲ್ಲಿ ಅವರ ವೆಚ್ಚಗಳನ್ನು ಪರಿಷತ್ತಿನವರೇ ಕೊಟ್ಟು, ಮೇಲ್ಕಂಡ ನಾಡುಗಳಿಗೆ ಕಳುಹಿಸತಕ್ಕುದೆಂದೂ ತೀರ್ಮಾನವಾಯಿತು.

vi. ಡಾಕ್ಟರ್ ಪಿ.ಎಸ್. ಅಚ್ಯುತರಾಯರೂ ಮ॥ ಬಿ. ದಾಸಪ್ಪನವರೂ ಪರಿಷತ್ತಿನ ಚಾಲತಿ ವರ್ಷದ ಲೆಕ್ಕಗಳನ್ನು ಪರೀಕ್ಷಿಸಲಿಕ್ಕೆ ಆಯವ್ಯಯ ಶೋಧಕರಾಗಿ (Auditors) ನಿಯಮಿಸಲ್ಪಟ್ಟರು.

vii. ಸಭೆಯಲ್ಲಿದ್ದ ಸದಸ್ಯರುಗಳಿಗೆಲ್ಲಾ ಅಭಿಮತ ಪ್ರದರ್ಶನಾರ್ಥವಾಗಿ ಅಭಿಮತ ನಿದರ್ಶಕ ಪತ್ರಗಳನ್ನು (Voting Paper) ಕೊಟ್ಟು, ಅವುಗಳನ್ನು ಅವರಿಂದ ತೆಗೆದುಕೊಂಡ ಮೇಲೆ ಮ॥ ಬಿ. ರಾಮರಾಯರೂ ಮ॥ ಆರ್. ಎ. ಜಹಗೀರ್ದಾರವರೂ ಅಭಿಮತಗಳ ಎಣಿಕೆಗಾಗಿ ನಿಯಮಿಸಲ್ಪಟ್ಟರು. ಅಭಿಮತ ಪ್ರದರ್ಶನದ ಫಲಿತಾಂಶವು ಹೇಗಿತ್ತೆಂದರೆ

ಪರಿಷತ್ತಿನ ಕಾರ್ಯಕಾರಿ ಸಮಿತಿ (೧೯೧೬)

ಅಧ್ಯಕ್ಷರು

ರಾಜಮಂತ್ರ ಪ್ರವೀಣ ಮ॥ ರಾ॥ ಎಚ್.ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್.ಸಿ.,ಐ.ಇ.ಯವರು.

ಉಪಾಧ್ಯಕ್ಷರು

ರಾವ್ ಬಹದ್ದೂರ್ ಮ॥ ರಾ॥ ಎಂ. ಶಾಮರಾವ್ ಎಂ.ಎ. ಯವರು

ಜಂಟಿ ಗೌರವ ಕಾರ್ಯದರ್ಶಿಗಳು

ಮ॥ ರಾ॥ ಗಳಾದ ಬಿ. ಕೃಷ್ಣಪ್ಪ ಎಂ.ಎ, ಬಿ. ವೆಂಕಟನಾರಣಪ್ಪ ಎಂ.ಎ,

ಗೌರವ ಕೋಶಾಧ್ಯಕ್ಷರು

ಮ॥ ರಾ॥ ಟಿ. ಲಕ್ಷ್ಮೀನರಸಿಂಹ್ಮರಾಯರು ಬಿ.ಎ. ಬಿ.ಎಲ್.

ಕಾರ್ಯನಿರ್ವಾಹಕ ಮಂಡಲಿಯ ಮೈಸೂರು ಸಂಸ್ಥಾನದ ೧೨ ಮಂದಿ

ಸದಸ್ಯರುಗಳು

೧. ಸರದಾರ್ ಮ॥ ರಾ॥ ಎ. ಕಾಂತರಾಜೇ ಅರಸಿವರು, ಬಿ.ಎ. ಸಿ.ಎಸ್.ಐ.

೨. ರಾಜಸಭಾಭೂಷಣ, ಮ॥ ರಾ॥ ಕರ್ಪೂರ್ ಶ್ರೀನಿವಾಸರಾವ್, ಬಿ.ಎಸ್.ಸಿ. ಎಲ್.ಸಿ.ಇ.

೩. ರಾವ್ ಬಹದ್ದೂರ್ ಮ॥ ರಾ॥ ಕೆ. ಕೃಷ್ಣಯ್ಯಂಗಾರ್ಯರು, ಬಿ.ಎ., ಎಲ್.ಸಿ.ಇ.

೪. ಮ॥ ರಾ॥ ಸಿ. ಕೃಷ್ಣರಾಯರು, ಬಿ.ಎ.

೫. " ಎ. ವೆಂಕಟಕೃಷ್ಣಯ್ಯನವರು

೬ ರಾವ್ ಬಹದ್ದೂರ್ ಮ॥ ರಾ॥ ಪ್ರಾಕ್ತನ ವಿಮರ್ಶ ವಿಚಕ್ಷಣ ಆರ್. ನರಸಿಂಹಾಚಾರ್ಯ ಎಂ.ಎ.

೭ ಮ॥ ರಾ॥ ಎಂ.ಎಸ್. ಪುಟ್ಟಣ್ಣನವರು, ಬಿ.ಎ,

೮. " ಬಾಪು ಸುಬ್ಬರಾಯರು ಬಿ.ಎ.

೯. " ಆರ್. ರಘುನಾಥರಾಯರು, ಬಿ.ಎ.

೧೦. " ಎಂ. ಕರಣೀಕ ಕೃಷ್ಣಮೂರ್ತಿಯವರು

೧೧. " ಕವಿತಿಲಕ ಪಂಡಿತ ಅಯ್ಯಾಶಾಸ್ತ್ರಿಗಳು

೧೨. " ಎಚ್. ಚೆನ್ನಕೇಶವಯ್ಯಂಗಾರ್ಯರು

ಮುಂಬಯಿ ಅಧಿಪತ್ಯದ ೮ ಮಂದಿ ಕಾ.ನಿ. ಮಂ. ಸದಸ್ಯರುಗಳು

೧.	ರಾವ್ ಬಹದ್ದೂರ್ ಮ॥ ರಾ॥ ವಿ.ಬಿ. ಜೋಶಿ ಬಿ.ಎ. ರವರು	ಧಾರ್ವಾಡ
೨.	ಮ॥ ರಾ॥ ರಾ.ಹ. ದೇಶಪಾಂಡೆ ಎಂ.ಎ.ಯವರು	
೩.	" ನಾರಾಯಣ ಗುರುನಾಥ ಕರಗುದರಿ ಬಿ.ಎ. ಎಲ್.ಎಲ್. ಬಿ.	"
೪.	" ವಿ.ಬಿ. ಆಲೂರ್, ಬಿ.ಎ. ಎಲ್.ಎಲ್.ಬಿ.ಯವರು	"
೫.	" ಎಸ್.ಎಸ್. ಸೆಟ್ಲೂರ್ ಬಿ.ಎ. ಎಲ್.ಎಲ್.ಬಿ.ಯವರು	ಮುಂಬಯಿ
೬	" ಆರ್.ಎ. ಜಹಗೀರ್‌ದಾರ್ ಎಂ.ಎ.	"
೭	" ಆರ್. ಬಿ. ಪೋಟದಾರ್	ಬೆಳಗಾಮು

೮.	”	ಪಿ.ಜಿ. ಹಳಕಟ್ಟಿ, ಬಿ.ಎ. ಎಲ್.ಎಲ್.ಬಿ.ಯವರು	”

ಮದರಾಸು ಅಧಿಪತ್ಯದ ೫ ಮಂದಿ ಕಾ.ನಿ.ಮಂ. ಸದಸ್ಯರುಗಳು

೧.	ಮ॥ ರಾ॥	ಬಿ. ರಾಮರಾವ್, ಎಂ.ಎ. ಎಲ್.ಎಲ್.ಬಿ.	ಮದರಾಸು
೨.	”	ಆರ್. ತಾತ, ಎ.ಎ. ಎಲ್.ಟಿ.	”
೩.	”	ಎನ್. ರಾಜಗೋಪಾಲಕೃಷ್ಣರಾವ್	ಉಡುಪಿ
೪.	”	ಪಿ. ಮಂಗೇಶರಾವ್, ಬಿ.ಎ. ಎಲ್.ಟಿ.	ಮಂಗಳೂರು
೫.	”	ಎ. ವೆಂಕಟೇಶರಾವ್, ಬಿ.ಎ. ಎಲ್.ಟಿ.	”

ಷರಾ – ಹೈದರಾಬಾದು, ದಕ್ಷಿಣ ಮಹಾರಾಷ್ಟ್ರದ ಸಂಸ್ಥಾನಗಳು,ಕೊಡಗು– ಈ ಪ್ರಾಂತಗಳಿಗಾಗಿ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಈ ವರ್ಷವೂ ಹಿಂದಿನ ವರ್ಷದವರೇ ಸದಸ್ಯರಾಗಿರುವರು. (ನಿಬಂಧನೆ IX)

VIII. ಅಗ್ರಾಸನಾಧಿಪತಿಗಳಿಗೆ ವಂದನೆಗಳನ್ನು ಸಮರ್ಪಿಸಿದ ತರುವಾಯ ಸಭೆಯು ಬರಖಾಸ್ತಾಯಿತು.

ಪರಿಷತ್ತಿನ ಪ್ರಾರಂಭದ ವರ್ಷಗಳಲ್ಲಿ ಸಮ್ಮೇಳನಗಳು ನಡೆಯುವಾಗಲೇ ವಾರ್ಷಿಕಸಭೆ ನಡೆದು ವರದಿ ಮತ್ತು ಲೆಕ್ಕಪತ್ರಗಳು ಮಂಡನೆ ಆಗುತ್ತಿದ್ದವು ಮತ್ತು ಕಾರ್ಯಕಾರಿಸಮಿತಿಗೆ ಸದಸ್ಯರು ಆಯ್ಕೆಯಾಗುತ್ತಿದ್ದರು. ಪ್ರತಿವರ್ಷವೂ ಚುನಾವಣೆ ಇರುತ್ತಿತ್ತು. ಸಮ್ಮೇಳನಕ್ಕೆ ಬಂದ ಗಣ್ಯರು ಸಕಲ ಸದಸ್ಯರ ಸಭೆಗೂ ಬಂದಿರುತ್ತಿದ್ದರು. ಈ ಬಗ್ಗೆ ಕೃಷ್ಣಸೂಕ್ತಿಪತ್ರಿಕೆಯ ಕಡೇಕಾರು ರಾಜಗೋಪಾಲಕೃಷ್ಣರಾಯರು ಆಕ್ಷೇಪಣೆ ಎತ್ತಿದರು. ಸದಸ್ಯರಲ್ಲದವರು ಸಕಲ ಸದಸ್ಯರ ಸಭೆಗೆ ಬರತಕ್ಕದ್ದಲ್ಲವೆಂದು ಪ್ರತಿಪಾದಿಸಿದರು. (ಶ್ರೀಕೃಷ್ಣಸೂಕ್ತಿ ಜುಲೈ ೧೯೧೭) ಅನಂತರದಲ್ಲಿ ಕಾಲಕಾಲಕ್ಕೆ ನಿಬಂಧನೆಗಳು ತಿದ್ದುಪಡಿಗಳನ್ನು ಹೊಂದಿವೆ. ಈಗ ಸಮ್ಮೇಳನ ಮತ್ತು ಸಕಲ ಸದಸ್ಯರ ಸಭೆಗಳು ಪ್ರತ್ಯೇಕವಾಗಿ ಬೇರೆಬೇರೆ ಸ್ಥಳಗಳಲ್ಲಿ ಬೇರೆಬೇರೆ ಕಾಲಗಳಲ್ಲಿ ನಡೆಯುತ್ತವೆ.

೧೯೯೮ರಿಂದ ಈಗ ಚಾಲ್ತಿಯಲ್ಲಿರುವ ನಿಬಂಧನೆಗಳು

(ಮೈಸೂರು ಸಂಸ್ಥಾನದ ಸಾರ್ವಜನಿಕ ಸಂಘಗಳ ಸಂಬಂಧವಾದ ಕಾನೂನಿನ ಮೇರೆಗೆ ಸರ್ಕಾರದಲ್ಲಿ ರಿಜಿಸ್ಟರಾಗಿದೆ. ರಿ. ನಂಬರು ೩೨೮/೧೯೧೫-೧೬ : ದಿನಾಂಕ ೧೨.೧೧.೧೯೧೫)
(ಪರಿಷತ್ತಿನ ಸ್ಥಾಪನೆ ದಿನಾಂಕ : ೫-೫-೧೯೧೫)

[ದಿನಾಂಕ ೨೫-೧೧-೧೯೭೩, ೯-೭-೧೯೮೩, ೧೫-೫-೧೯೮೮ ಹಾಗೂ ೩೦-೯-೧೯೯೦ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಕ್ರಮವಾಗಿ ಸಂಖ್ಯೆ ಸಿ. ನಂ.ಎ.ಎಂ.ಆರ್ ೨೩೫-೭೩-೭೪, ದಿನಾಂಕ ೮-೩-೧೯೭೪ ಎಂ.ಎಂ.ಆರ್. ೮೫, ೮೩-೮೪ ದಿನಾಂಕ ೨೧-೧೧-೧೯೮೩ ಹಾಗೂ ಎ.ಎಂ.ಆರ್. ೮೩, ೮೮-೮೯ ದಿನಾಂಕ ೩೦-೬-೧೯೮೮ ಹಾಗೂ ಎ.ಎಂ.ಆರ್. ೧೩೦/೯೧-೯೨ ದಿನಾಂಕ ೨೬-೧೧-೧೯೯೧ ಹಾಗೂ ದಿನಾಂಕ ೨೮-೯-೧೯೯೭ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ, ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಸಂಖ್ಯೆ ಎ.ಎಂ.ಆರ್ ೭೯/೯೭-೯೮ರ ದಿನಾಂಕ ೧೫-೪-೧೯೯೮ರ ಪ್ರಕಾರ ಒಪ್ಪಿಗೆ ಪಡೆದಿದೆ.]

ನಿಬಂಧನೆಗಳು

ಹೆಸರು

೧. (ಎ) ಈ ಸಂಸ್ಥೆಯ ಹೆಸರು ಕನ್ನಡ ಸಾಹಿತ್ಯ ಪರಿಷತ್ತು ಎಂದು ಇರತಕ್ಕದ್ದು.

(ಆ) ಈ ನಿಬಂಧನೆಗಳಲ್ಲಿ ಮುಂದೆ ಇದನ್ನು 'ಪರಿಷತ್ತು' ಎಂದು ಕರೆಯಲಾಗುವುದು.

ವ್ಯಾಪ್ತಿ

೨. ಪರಿಷತ್ತಿನ ಕಾರ್ಯವ್ಯಾಪ್ತಿ ಕರ್ನಾಟಕ ಮತ್ತು ಕನ್ನಡ ಭಾಷೆ ಬಳಕೆಯಲ್ಲಿ ಇರುವ ಎಲ್ಲಾ ಪ್ರದೇಶಗಳನ್ನೂ ಒಳಗೊಂಡಿರಬೇಕು.

ಕಾರ್ಯಾಲಯ

೩. ಪರಿಷತ್ತಿನ ಕೇಂದ್ರ ಕಾರ್ಯಾಲಯವು ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮ರಲ್ಲಿ ಇರತಕ್ಕದ್ದು.

ಉದ್ದೇಶ

೪. ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಇವುಗಳ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿ ಆಗಿರತಕ್ಕದ್ದು.

ಕಾರ್ಯಸಾಧನೆ

೫. (ಎ) ನಾಲ್ಕನೆಯ ನಿಬಂಧನೆಯಲ್ಲಿ ನಿರೂಪಿತವಾದ ಪರಿಷತ್ತಿನ ಉದ್ದೇಶ ಸಾಧನೆಗೆ ಈ ಕೆಳಗೆ ಕಾಣಿಸಿರುವ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

(ಆ) ಸಮ್ಮೇಳನ, ಸಾಹಿತ್ಯೋತ್ಸವ, ನಾಡಹಬ್ಬ ಮುಂತಾದ ಉತ್ಸವಗಳು, ಉಪನ್ಯಾಸಗಳು, ಸ್ಪರ್ಧೆಗಳು , ಕಲಾ ಪ್ರದರ್ಶನಗಳು ಹಾಗೂ ವಿಚಾರ ಸಂಕಿರಣಗಳು, ಗೋಷ್ಠಿಗಳು, ಕಮ್ಮಟ, ಕಾರ್ಯಾಗಾರಗಳು, ಕನ್ನಡ ಶಾಲೆಗಳ ಸ್ಥಾಪನೆ , ಅವುಗಳಿಗೂ ಮತ್ತು ಸಾಕ್ಷರತಾ ಪ್ರಚಾರಕ್ಕೂ ಪ್ರೋತ್ಸಾಹ.

(ಇ) ಓಲೆ ಪ್ರತಿಗಳ ಸಂಗ್ರಹ, ಹಳೆಯ ಗ್ರಂಥಗಳ ಪ್ರಕಟಣೆ, ತಾಮ್ರಪಟ, ಶಿಲಾಶಾಸನಪ್ರತಿಗಳು, ಐತಿಹಾಸಿಕ ಕಾಗದಪತ್ರಗಳು, ನಾಣ್ಯಗಳು, ಇತ್ಯಾದಿ ಪ್ರಾಚ್ಯವಸ್ತುಗಳ ಸಂಗ್ರಹ.

(ಈ) ಸಂಶೋಧನಾ ಶಾಖೆಯ ಏರ್ಪಾಡು, ಸಾಹಿತ್ಯ, ಕಲೆ, ಇತಿಹಾಸ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ವ್ಯವಸ್ಥೆ ಸಂಶೋಧಕರಿಗೆ ಸೌಕರ್ಯ.

(ಉ) ವ್ಯಾಕರಣ, ನಿಘಂಟು, ಚರಿತ್ರೆ, ವಿಜ್ಞಾನ, ಸಮಾಜವಿಜ್ಞಾನ, ಮಾನವಿಕ, ಪರಿಶೋಧನೆ, ತತ್ವವಿಚಾರ, ಪಾರಿಭಾಷಿಕಕೋಶ, ಸಾಹಿತ್ಯ, ಕಲೆ, ಧರ್ಮ, ದರ್ಶನ ಇತ್ಯಾದಿ ವಿಷಯಗಳನ್ನು ಕುರಿತು ಗ್ರಂಥ ಪ್ರಕಟಣೆಗೆ ಸಹಾಯ ಪ್ರಚಾರ ಮತ್ತು ಮಾರಾಟ.

(ಊ) ವಿವಿಧ ವಿಷಯಗಳ ಉತ್ತಮ ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ ಉತ್ತಮ ಕನ್ನಡಗ್ರಂಥಗಳನ್ನು ಇತರ ಭಾಷೆಗಳಿಗೆ ಭಾಷಾಂತರ ಮಾಡಿಸುವುದು, ಪ್ರಕಟಿಸುವುದು, ಪ್ರಚಾರ ಮತ್ತು ಮಾರಾಟ ಮಾಡುವುದು.

(ಋ) ಸಾಹಿತ್ಯ, ಶಾಸನಶಾಸ್ತ್ರ, ಪತ್ರಿಕೋದ್ಯಮ, ಗಮಕ, ಸಂಗೀತ, ಜಾನಪದ ತರಗತಿಗಳು ಮತ್ತು ಪರೀಕ್ಷೆಗಳು, ಸ್ಪರ್ಧೆಗಳ ಏರ್ಪಾಟು.

(ೠ) ಪರಿಷತ್ತಿನ ಕಾರ್ಯಕಲಾಪಗಳ ಪ್ರಸಾರಕ್ಕೆ ಮತ್ತು ಸಾಹಿತ್ಯ ಕಲೆಗಳ ಉತ್ಕರ್ಷಕ್ಕೆ 'ಕನ್ನಡ ನುಡಿ'

(ಮಾಸಿಕ) ಮತ್ತು 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' (ಷಾಣ್ಮಾಸಿಕ) ಮೊದಲಾದ ನಿಯತಕಾಲಿಕೆಗಳನ್ನು ಪ್ರಕಟಿಸತಕ್ಕದ್ದು.

(ಎ) ಕರ್ನಾಟಕ ಗಡಿನಾಡು ಹೊರನಾಡು ಪ್ರದೇಶಗಳ ಅಭಿವೃದ್ಧಿಗೆ ಶ್ರಮಿಸಬೇಕು.

(ಏ) ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ಸರಕಾರ ಮತ್ತು ಇತರ ಸಂಸ್ಥೆಗಳು ಕೈಗೊಳ್ಳುವ ಕಾರ್ಯದಲ್ಲಿ ಸಹಕರಿಸುವುದು ಮತ್ತು ಸಲಹೆ ಸೂಚನೆಗಳನ್ನು ಕೊಡುವುದು.

೬. ಪಾಂಡಿತ್ಯ ಪೋಷಣೆ

(ಅ) ಭಾಷೆ, ಸಾಹಿತ್ಯ ಇತಿಹಾಸ, ಕಲೆ ಶಾಸ್ತ್ರ, ದರ್ಶನ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನಾನುಭವವುಳ್ಳ ಹಿರಿಯ ವಿದ್ವಾಂಸರನ್ನೂ ಸಾಹಿತಿಗಳನ್ನೂ ಆಗಾಗ ಒಂದೊಂದು ಕಡೆ ಸೇರಿಸಿ ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸುವುದು.

(ಆ) ಪ್ರೌಢ ಗ್ರಂಥಗಳ ನಿರ್ಮಾಪಕರಿಗೆ ಪ್ರೋತ್ಸಾಹ ಮತ್ತು ಧನಸಹಾಯ ನೀಡುವುದು.

(ಇ) ಕನ್ನಡದ ಹಿರಿಯ ವಿದ್ವಾಂಸರಿಗೂ ಸಾಹಿತಿಗಳಿಗೂ ಸನ್ಮಾನ, ಪ್ರಶಸ್ತಿ, ಬಹುಮಾನ, ಗೌರವ ಸದಸ್ಯತ್ವ (ಫೆಲೋಷಿಫ್) ನೀಡುವುದು

(ಈ) ಉದಯೋನ್ಮುಖ ಲೇಖಕರಿಗೆ ಪ್ರೋತ್ಸಾಹ ನೀಡುವುದು. ಇವುಗಳಲ್ಲದೆ ಮೂಲ ಉದ್ದೇಶಗಳನ್ವಯ ಇಂಥ ಇತರ ಕಾರ್ಯಗಳನ್ನೂ ಪರಿಷತ್ತು ಕೈಗೊಳ್ಳತಕ್ಕದ್ದು.

೭. ಅಂಗರಚನೆ

ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗುವ ಕನ್ನಡ ಸಂಸ್ಥೆಗಳು ಮತ್ತು ೧೮ ವರ್ಷಗಳ ಮೇಲ್ಪಟ್ಟ ವಯಸ್ಸಿನ ಕನ್ನಡ ಓದು ಬರಹ ಬಲ್ಲ ಎಲ್ಲ ವ್ಯಕ್ತಿಗಳೂ ಸದಸ್ಯತ್ವವನ್ನು ಪಡೆಯಬಹುದು.

ಸದಸ್ಯರಲ್ಲಿ ಈ ಕೆಳಕಂಡಂತೆ ವರ್ಗಗಳಿರತಕ್ಕದ್ದು

ಅ) ಪೋಷಕರು	ರೂ. ೧೦,೦೦೦
ಆ) ದಾತೃಗಳು	ರೂ. ೫,೦೦೦
ಇ) ಆಜೀವ ಸದಸ್ಯರು	ರೂ. ೨೫೦
ಈ) ವಾರ್ಷಿಕ ಸದಸ್ಯರು	ರೂ. ೫೦
ಉ) ಪೋಷಕ ಸಂಸ್ಥೆಗಳು	ರೂ. ೨೫,೦೦೦
ಊ) ದಾತೃಸಂಸ್ಥೆಗಳು	ರೂ. ೧೦,೦೦೦
ಋ) ಆಜೀವ ಸಂಸ್ಥೆಗಳು	ರೂ. ೨,೫೦೦
ೠ) ವಾರ್ಷಿಕ ಸದಸ್ಯ ಸಂಸ್ಥೆಗಳು	ರೂ. ೨೫೦

ಎ) ಸದಸ್ಯರಾಗುವವರು ಸದಸ್ಯತ್ವದ ಶುಲ್ಕದ ಜೊತೆಗೆ (ಹತ್ತು) ರೂ. ೧೦– ಪ್ರವೇಶ ಶುಲ್ಕವನ್ನು ಕೊಡತ್ತಕದ್ದು

ಏ) ಸದಸ್ಯತ್ವವನ್ನು ಮುಂದುವರಿಸಿಕೊಳ್ಳದಿರುವ ವ್ಯಕ್ತಿಯು ಮತ್ತು ಸಂಸ್ಥೆಯು ಮರು ಪ್ರವೇಶಕ್ಕೆ ಹತ್ತು ರೂಪಾಯಿ ಪ್ರವೇಶ ಧನವನ್ನು ಕೊಡತಕ್ಕದ್ದು.

ಐ) ವಾರ್ಷಿಕ ಸದಸ್ಯರ ಶುಲ್ಕ ಹಾಗೂ ವಾರ್ಷಿಕ ಸದಸ್ಯ ಸಂಸ್ಥೆಗಳ ಶುಲ್ಕವನ್ನು ಹೊರತುಪಡಿಸಿ ಉಳಿದ ಎಲ್ಲ ವರ್ಗದ ಸದಸ್ಯತ್ವದ ಶುಲ್ಕವನ್ನು ಸ್ಥಾಯಿನಿಧಿಗೆ ಸೇರಿಸತಕ್ಕದ್ದು. ಸ್ಥಾಯಿನಿಧಿಯ ಹಣವನ್ನು ಯಾವ ಕಾರಣದಿಂದಲೂ ಸರ್ವಸದಸ್ಯರ ಸಭೆಯ ಅನುಮತಿ ಇಲ್ಲದೇ ಬಳಸತಕ್ಕದ್ದಲ್ಲ. ಈ ನಿಧಿಯಿಂದ ಬರುವ ಬಡ್ಡಿಯನ್ನು ಮಾತ್ರ ಪರಿಷತ್ತಿನ ಚಟುವಟಿಕೆಗಳಿಗೆ ಬಳಸತಕ್ಕದ್ದು.

೮. ಸದಸ್ಯರಾಗಿ ಸೇರಲು ಬಯಸುವ ವ್ಯಕ್ತಿ ಅಥವಾ ಸಂಸ್ಥೆಯು ಪರಿಷತ್ತಿನಿಂದ ಪಡೆದ ಅಧಿಕೃತ ಅಪೇಕ್ಷಾ ಪತ್ರದಲ್ಲಿ (ಅರ್ಜಿಯಲ್ಲಿ) ವಿವರವಾಗಿ ೭ನೆಯ ನಿಬಂಧನೆಯಲ್ಲಿ ಕಾಣಿಸಿರುವ ಆಯಾವರ್ಗದ ಸದಸ್ಯತ್ವಕ್ಕಾಗಿ ಕೊಡತಕ್ಕ ಸದಸ್ಯತ್ವಶುಲ್ಕ ಮತ್ತು ಪ್ರವೇಶ ಶುಲ್ಕಗಳೊಡನೆ ಪರಿಷತ್ತಿಗೆ ಸಲ್ಲಿಸತಕ್ಕದ್ದು. ಅಂತಹವರನ್ನು ಆಯಾ ವರ್ಗದ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು. ಸಕಾರಣವಾಗಿ ಅಪೇಕ್ಷಾಪತ್ರವನ್ನು ತಿರಸ್ಕರಿಸಿದರೆ ಸದಸ್ಯತ್ವದ ಶುಲ್ಕವನ್ನು ಹಿಂದಿರುಗಿಸತಕ್ಕದ್ದು.

ಆ) ಪರಿಷತ್ತಿನ ವಾರ್ಷಿಕ ಸದಸ್ಯತ್ವದ ಅವಧಿ ಏಪ್ರಿಲ್ ೨ರಿಂದ ಮಾರ್ಚ್ ೩೧ರವರೆಗೆ ಇರತಕ್ಕದ್ದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಆ ವರ್ಷಕ್ಕೆ ಸದಸ್ಯತ್ವ ಮತ್ತು ಸದಸ್ಯತ್ವದ ಹಕ್ಕುಬಾಧ್ಯತೆಗಳು ಸಲ್ಲತಕ್ಕದ್ದು.

ಇ) ವಾರ್ಷಿಕ ಸದಸ್ಯರು ಮತ್ತು ಸಂಘ ಸಂಸ್ಥೆಗಳು ಸದಸ್ಯತ್ವದ ಶುಲ್ಕವನ್ನು ಪ್ರವೇಶ ಧನವಿಲ್ಲದೆ ಆ ವರ್ಷದ ಏಪ್ರಿಲ್ ತಿಂಗಳ ಅಂತ್ಯದೊಳಗಾಗಿ ಸಲ್ಲಿಸಿ ಸದಸ್ಯತ್ವವನ್ನು ಮುಂದುವರಿಸಿಕೊಳ್ಳಬಹುದು. ಹಾಗೆ ಮುಂದುವರಿಸಿಕೊಳ್ಳದಿದ್ದರೆ ಸದಸ್ಯತ್ವವು ರದ್ದಾಗುತ್ತದೆ.

ಈ) ಎಲ್ಲ ವರ್ಗಗಳ ಸದಸ್ಯರು ತಮ್ಮ ಸದಸ್ಯತ್ವದ ಶುಲ್ಕವನ್ನು ಒಂದೇ ಕಂತಿನಲ್ಲಿ ಸಲ್ಲಿಸಬೇಕು.

ಉ) ಸದಸ್ಯರು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪಡೆದಿರಬೇಕು. ಗುರುತಿನ ಚೀಟಿ ಇಲ್ಲದ ಸದಸ್ಯರಿಗೆ ಮತದಾನದಲ್ಲಾಗಲೀ ಸಕಲ ಸದಸ್ಯರ ಸಭೆಯಲ್ಲಾಗಲೀ ಭಾಗವಹಿಸುವ ಅವಕಾಶವಿರುವುದಿಲ್ಲ.

ಊ) ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವರ್ತನೆಯು ಪರಿಷತ್ತಿನ ಘನತೆ ಗೌರವಗಳಿಗೆ ಹಾಗೂ ಧ್ಯೇಯೋದ್ದೇಶಗಳಿಗೆ ವಿರೋಧವೆಂದು ಕಂಡು ಬಂದರೆ ಅಂತಹ ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವಿವರಣೆಯನ್ನು ಪಡೆದು ಪರಿಶೀಲನೆ ಮಾಡಿ ಸದಸ್ಯತ್ವವನ್ನು ಮೂರು ವರ್ಷಗಳ ಕಾಲ ಅಮಾನತ್ತು ಮಾಡುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕುದ್ದು. ಇಂತಹ ನಿರ್ಣಯವನ್ನು ಮುಂಬರುವ ವಾರ್ಷಿಕಾಧಿವೇಶನಕ್ಕೆ ತಿಳಿಸತಕ್ಕುದು.

ಋ) ಒಮ್ಮೆ ಅಂಗೀಕೃತವಾದ ಸದಸ್ಯತ್ವದ ಹಣವನ್ನು ಯಾವುದೇ ಕಾರಣದಿಂದ ಹಿಂದಿರುಗಿಸತಕ್ಕದ್ದಲ್ಲ.

ೠ) ಸದಸ್ಯ, ಸದಸ್ಯ ಸಂಸ್ಥೆಯು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಲ್ಲಿ ಅದನ್ನು ಅಂಗೀಕರಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.

೯. ಸದಸ್ಯ ಮತ್ತು ಸಂಸ್ಥೆಯ ಹಕ್ಕುಬಾಧ್ಯತೆಗಳು

ಅ) ಸದಸ್ಯತ್ವ ಅಂಗೀಕಾರವಾದ ದಿನದಿಂದ ಸದಸ್ಯತ್ವದ ಎಲ್ಲಾ ಹಕ್ಕುಗಳು ೩೨ನೆಯ ನಿಬಂಧನೆಗೆ ಒಳಪಟ್ಟು ಅವರಿಗೆ ಬರತಕ್ಕದ್ದು.

ಆ) ಪರಿಷತ್ತಿನ ಉತ್ಸವ, ಉಪನ್ಯಾಸ ಗೋಷ್ಠಿ, ಸಮ್ಮೇಳನ ಇತ್ಯಾದಿ ಕಾರ್ಯಗಳಲ್ಲಿ ನಿಯಮಾನುಸಾರ ಭಾಗವಹಿಸುವ ಅಧಿಕಾರವಿರತಕ್ಕದ್ದು.

ಇ) ಪುಸ್ತಕಭಂಡಾರ, ವಾಚನಾಲಯ ಮೊದಲಾದ ಸೌಕರ್ಯಗಳನ್ನು ನಿಯಮಾನುಸಾರ ಪಡೆಯಲು ಅಧಿಕಾರವಿರತಕ್ಕದ್ದು

ಈ) ಸದಸ್ಯರು ಪರಿಷತ್ತಿನ ಪ್ರಕಟಣೆಗಳ ಪ್ರತಿ ಶೀರ್ಷಿಕೆಯ ಒಂದೊಂದು ಪ್ರತಿಯನ್ನು ಮುಕ್ಕಾಲು ಬೆಲೆಗೆ ಪಡೆಯಲು ಹಕ್ಕುದಾರರಾಗಿರತಕ್ಕದ್ದು, ಸರ್ಕಾರದ ಸಹಾಯಧನ ಪಡೆದು ಕಡಿಮೆ ಬೆಲೆ ನಿಗದಿಗೊಳಿಸಿದ

ಪ್ರಕಟಣೆಗಳು ಹಾಗೂ ಪರಿಷತ್ತು ನಡೆಸುವ ಪರೀಕ್ಷೆಗಳ ಪಠ್ಯಪುಸ್ತಕಗಳು ಹಾಗೂ ಪರಿಷತ್ಪತ್ರಿಕೆಗೆ ಮೇಲಿನ ನಿಯಮ ಅನ್ವಯಿಸುವುದಿಲ್ಲ.

ಉ) 'ಕನ್ನಡ ನುಡಿ' ಪತ್ರಿಕೆಯನ್ನು ಉಚಿತವಾಗಿ ಪಡೆಯತಕ್ಕದ್ದು.

ಊ) ವಾರ್ಷಿಕ ಸಭೆಗಳಲ್ಲೂ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆಯಲ್ಲಿಯೂ ಸಕಲ ಸದಸ್ಯರ ಸಾಮಾನ್ಯ ಅಥವಾ ವಿಶೇಷ ಸಭೆಯ ಕಾರ್ಯಕಲಾಪಗಳ ನಿರ್ಣಯಗಳ ಬಗ್ಗೆಯೂ ೩೨ನೆಯ ನಿಬಂಧನೆಗೆ ಒಳಪಟ್ಟು ಮತಕೊಡುವ ಅಧಿಕಾರವಿರತಕ್ಕದ್ದು.

೧೦. ಸಕಲ ಸದಸ್ಯರ ಸಭೆಗಳಲ್ಲಿ ಭಾಗವಹಿಸುವುದಕ್ಕಾಗಿಯೂ ಮತದಾನ ಮಾಡುವುದಕ್ಕಾಗಿಯೂ ಪ್ರತಿಯೊಂದು ಸದಸ್ಯ ಸಂಸ್ಥೆಯು ಒಬ್ಬ ಕನ್ನಡ ಓದು ಬರಹ ಬಲ್ಲ ಪ್ರತಿನಿಧಿಯನ್ನು ಕಳಿಸಬಹುದು. ಸದಸ್ಯ ಸಂಸ್ಥೆಯ ಅಧಿಕಾರಿಗಳು ಅಂಥ ಪ್ರತಿನಿಧಿಯ ಹೆಸರು ಸಭೆಯು ನಡೆಯುವ ೧೫ ದಿನಗಳ ಮುಂಚಿತವಾಗಿ ಪರಿಷತ್ತಿಗೆ ಲಿಖಿತ ರೂಪದಲ್ಲಿ ತಿಳಿಸಿರಬೇಕು. ಅಂಥ ಪ್ರತಿನಿಧಿಗೆ ಚುನಾವಣೆಗಳಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅವಕಾಶವಿರುವುದಿಲ್ಲ. ಆದರೆ ಅಂಥ ಪ್ರತಿನಿಧಿಯು ಪರಿಷತ್ತಿನ ಸದಸ್ಯನಾಗಿದ್ದರೆ ಆ ಕಾರಣದಿಂದ ಅಭ್ಯರ್ಥಿಯಾಗಿ ನಿಲ್ಲಬಹುದು. ಮತ ನೀಡುವ ಸಂದರ್ಭದಲ್ಲಿ ಪರಿಷತ್ತಿನ ಸ್ವತಃ ಸದಸ್ಯನಾಗಿದ್ದರೆ ಅದರ ಒಂದು ಮತವನ್ನೂ ಹಾಗೆಯೇ ಸದಸ್ಯ ಸಂಸ್ಥೆಯ ಪರವಾಗಿ ಆಗಮಿಸಿದ್ದರೆ ಅದರ ಪರವಾಗಿ ಇನ್ನೊಂದು ಮತವನ್ನೂ ನೀಡುವ ಅಧಿಕಾರವಿರತಕ್ಕದ್ದು.

೧೧. ಕಾರ್ಯಕಾರಿ ಸಮಿತಿ

ಪರಿಷತ್ತಿನ ಆಡಳಿತಗಳನ್ನೆಲ್ಲಾ ಈ ಮುಂದಿನಂತೆ ಉಚಿತವಾಗಿ ಕಾರ್ಯಕಾರಿ ಸಮಿತಿ ನಡೆಸತಕ್ಕದ್ದು. ಅಧ್ಯಕ್ಷರು ಅದರ ಪ್ರತಿನಿಧಿಯಾಗಿ ಕಾರ್ಯಗಳನ್ನು ನಡೆಸತಕ್ಕದ್ದು. ಕಾರ್ಯಕಾರಿ ಸಮಿತಿಯಲ್ಲಿ ಈ ಕೆಳಗಿನಂತೆ ಸದಸ್ಯರಿರತಕ್ಕದ್ದು.

ಅ) ಅಧ್ಯಕ್ಷರು	೧
ಆ) ಗೌರವ ಕಾರ್ಯದರ್ಶಿಗಳು	೨
ಇ) ಗೌರವ ಕೋಶಾಧ್ಯಕ್ಷರು	೧
ಈ) ಜಿಲ್ಲಾಘಟಕಗಳ ಚುನಾಯಿತ ಅಧ್ಯಕ್ಷರು	೨೭
ಉ) ಗಡಿನಾಡ ಘಟಕಗಳ ಚುನಾಯಿತ ಅಧ್ಯಕ್ಷರು	೫
(ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ ಮತ್ತು ಗೋವಾ)	
ಊ) ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು	೧
ಋ) ನಿಕಟಪೂರ್ವ ಸಮ್ಮೇಳನಾಧ್ಯಕ್ಷರು	೧
ೠ) ಕನ್ನಡ ಅಧ್ಯಯನ ವ್ಯವಸ್ಥೆಯುಳ್ಳ ವಿಶ್ವವಿದ್ಯಾನಿಲಯದ ಪ್ರತಿನಿಧಿ	
(ಕನ್ನಡ ಅಕ್ಷರಾನುಕ್ರಮಣಿಕೆಯಲ್ಲಿ)	೨
ಎ) ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು	೧
ಏ) ಮಹಿಳಾ ಸಾಹಿತಿ	೧
ಐ) ಪರಿಶಿಷ್ಟ ಜಾತಿ ಪ್ರತಿನಿಧಿ	೧
ಒ) ಸಂಘ ಸಂಸ್ಥೆಗಳ ಪ್ರತಿನಿಧಿ	೧
ಒಟ್ಟು	೪೪

೧೨. ಅ) ಮೇಲಿನ ಆ,ಇ, ಗಳನ್ನು ಅಧ್ಯಕ್ಷರು ನಾಮಕರಣ ಮಾಡಿಕೊಳ್ಳತಕ್ಕದ್ದು. ಏ, ಐ, ಒ, ಗಳನ್ನು ಕಾರ್ಯಕಾರಿ ಸಮಿತಿಯು ಆರಿಸಬೇಕು.

ಅ) ಮೊದಲನೆಯ ಕಾರ್ಯಕಾರಿ ಸಮಿತಿಯು ಅಸ್ತಿತ್ವಕ್ಕೆ ಬರಬೇಕಾದರೆ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯ ಸಂಖ್ಯೆಯ ಮೂರನೇ ಒಂದು ಭಾಗದಷ್ಟಾದರೂ ಇರಬೇಕು

೧೩. ಅ) ಪರಿಷತ್ತಿನ ಅಧ್ಯಕ್ಷರು, ಜಿಲ್ಲಾ ಘಟಕದ ಅಧ್ಯಕ್ಷರು ನೇರ ಮತದಾನದ ಮೂಲಕ ಆಯ್ಕೆಯಾಗತಕ್ಕದ್ದು. ಚುನಾವಣಾ ಉಪಬಂಧನೆಗಳಿಗನುಗುಣವಾಗಿ ಕರ್ನಾಟಕ ರಾಜ್ಯದಲ್ಲಿರುವ ಪರಿಷತ್ತಿನ ಸದಸ್ಯರು ನೇರ ಮತದಾನದ ಮೂಲಕ ಮತ ಚಲಾಯಿಸತಕ್ಕದ್ದು. ಗಡಿನಾಡ ಘಟಕಗಳಿರುವ ರಾಜ್ಯಗಳ ಸದಸ್ಯರೂ ಸೇರಿದಂತೆ ಕರ್ನಾಟಕದ ಹೊರಗಡೆ ಇರುವ ಸದಸ್ಯರು ಅಂಚೆ ಮೂಲಕ ಮತಚಲಾಯಿಸತಕ್ಕದ್ದು. ಈ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳು ಗಡಿನಾಡ ಘಟಕಗಳು ರಚಿತವಾಗಿ ಪರಿಷತ್ತು ಸೂಚಿಸುವ ಕೆಲಸ ಕಾರ್ಯಗಳನ್ನು ನಡೆಸತಕ್ಕದ್ದು. ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಗಡಿನಾಡ ಘಟಕದ ಅಧ್ಯಕ್ಷರು ಅಧಿಕಾರ ಪ್ರಯುಕ್ತ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರತಕ್ಕದ್ದು.

ಆ) ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅವಧಿ ಮೂರು ವರ್ಷಗಳು ಇರತಕ್ಕದ್ದು.

೧೪. ಜಿಲ್ಲಾ ಘಟಕಗಳು

ಅ) ಕರ್ನಾಟಕ ಕಂದಾಯ ಜಿಲ್ಲೆಗಳಲ್ಲಿ ತಲಾ ಒಂದು ಜಿಲ್ಲಾ ಘಟಕವನ್ನು ರಚಿಸತಕ್ಕದ್ದು. ಕಂದಾಯ ಜಿಲ್ಲೆಗಳಿಗೆ ತಾಲ್ಲೂಕುಗಳಿಗಿರುವಂತೆ ಬೆಂಗಳೂರು ನಗರ ಜಿಲ್ಲೆಗೆ ವಿಧಾನಸಭಾ ಕ್ಷೇತ್ರವನ್ನು ಒಂದು ತಾಲ್ಲೂಕಾಗಿ ಪರಿಗಣಿಸತಕ್ಕದ್ದು, ವಿಧಾನಸಭಾ ಕ್ಷೇತ್ರದ ಪ್ರತಿನಿಧಿಗಳನ್ನು 'ಕ್ಷೇತ್ರ ಪ್ರತಿನಿಧಿ'ಗಳೆಂದು ಕರೆಯತಕ್ಕದ್ದು.

ಆ) ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿಯ ಸ್ವರೂಪ ಈ ಕೆಳಕಂಡಂತೆ ಇರತಕ್ಕದ್ದು

೧) ಅಧ್ಯಕ್ಷರು	೧
೨) ಗೌರವ ಕಾರ್ಯದರ್ಶಿಗಳು	೨
೩) ಗೌರವ ಕೋಶಾಧ್ಯಕ್ಷರು	೧
೪) ತಾಲ್ಲೂಕು ಅಧ್ಯಕ್ಷರುಗಳು / ಕ್ಷೇತ್ರದ ಅಧ್ಯಕ್ಷರು ಆಯಾ ಜಿಲ್ಲೆಯಲ್ಲಿರುವಂತೆ	
೫) ಮಹಿಳಾ ಪ್ರತಿನಿಧಿ	೧
೬) ಪರಿಶಿಷ್ಟ ಜಾತಿ ಪ್ರತಿನಿಧಿ	೧
೭) ಸಂಘ ಸಂಸ್ಥೆಗಳ ಪ್ರತಿನಿಧಿ	೧
೮) ಜಿಲ್ಲಾ ವಾರ್ತಾಧಿಕಾರಿ	೧
೯) ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು	೧
೧೦) ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷರು	೧

(ಇ) ಪರಿಷತ್ತಿನ ಜಿಲ್ಲಾ ಘಟಕಗಳ ಚಟುವಟಿಕೆಗಳಿಗೆ ನೆರವಾಗುವ ಆ ಜಿಲ್ಲೆಯ ಗಣ್ಯರನ್ನು ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿಗೆ, 'ವಿಶೇಷ ಆಹ್ವಾನಿತ'ರನ್ನಾಗಿ ಕರೆಯಲು ಅವಕಾಶವಿರತಕ್ಕದ್ದು.

೪. ಗಡಿ ಜಿಲ್ಲಾ ಘಟಕಗಳಿಗೆ ಗಡಿ ಪ್ರದೇಶದ ಇಬ್ಬರು ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಯಬಹುದು.

(ಈ) ಮೇಲಿನಂತೆ ಘಟಕಗಳನ್ನು ರಚಿಸಿ ಅದಕ್ಕೆ ಕೇಂದ್ರ ಅಧ್ಯಕ್ಷರ ಅನುಮತಿ ಪಡೆದು ಅನಂತರ ಪ್ರಕಟಿಸತಕ್ಕದ್ದು, ಯಾವುದೇ ಬದಲಾವಣೆಗೆ ಕೇಂದ್ರ ಅಧ್ಯಕ್ಷರ ಪೂರ್ವಭಾವಿ ಒಪ್ಪಿಗೆ ಪಡೆಯತಕ್ಕದ್ದು.

(ಉ) ಯಾವುದೇ ಕಾರಣಕ್ಕೆ ಅವರ ಪರಿಷತ್ ಸದಸ್ಯತ್ವ ರದ್ದಾದರೆ ಜಿಲ್ಲಾ ಘಟಕದ ಸದಸ್ಯತ್ವವೂ ರದ್ದಾಗುತ್ತದೆ. ಜಿಲ್ಲಾ ಘಟಕಗಳಿಗೆ ನೇಮಕವಾಗಿರುವ ಕಾಲದಲ್ಲಿ ಹಾಗೆ ನೇಮಕವಾಗುವವರು ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

(ಊ) ಜಿಲ್ಲಾ ಸಮಿತಿಯ ಕಾರ್ಯಸ್ಥಳವು ಸಾಧ್ಯವಾದಷ್ಟೂ ಜಿಲ್ಲಾ ಕೇಂದ್ರವೇ ಆಗಿರತಕ್ಕದ್ದು

(ಋ) ಜಿಲ್ಲಾ ಘಟಕಗಳು- ಹಣಕಾಸು, ಆಸ್ತಿ, ಠೇವಣಿ, ಕಾರ್ಯಕ್ರಮಗಳು ಮೊದಲಾದ ವಿಷಯಗಳಲ್ಲಿ ಪರಿಷತ್ತಿನ ನೀತಿ ನಿರ್ದೇಶನಕ್ಕೆ ಒಳಪಟ್ಟಿರಬೇಕು.

(ೠ) ಜಿಲ್ಲಾ ಘಟಕಗಳು ಅವುಗಳ ವ್ಯಾಪ್ತಿಯಲ್ಲಿ ನಡೆಸಲಾಗುವ ಕಾರ್ಯಕ್ರಮಗಳ ವರದಿಯನ್ನು ಪರಿಷತ್ತಿನ ಕೇಂದ್ರ ಕಛೇರಿಗೆ ಕ್ರಮವಾಗಿ ಕಳುಹಿಸತಕ್ಕದ್ದು. ಲೆಕ್ಕಪತ್ರಗಳ ವಿವರಗಳನ್ನು ಮೂರು ತಿಂಗಳಿಗೊಂದಾವರ್ತಿ ಕಳುಹಿಸುವುದಲ್ಲದೆ ಮಾರ್ಚ್ ತಿಂಗಳಾದ ಮೇಲೆ ಚಾರ್ಟರ್ಡ್ ಅಕೌಂಟೆಂಟ್‌ರಿಂದ ಆಡಿಟ್ ಮಾಡಿಸಿ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರ ಸಭೆ ಕರೆದು, ಆ ಸಮಿತಿಯಿಂದ ಲೆಕ್ಕಪತ್ರಗಳಿಗೆ ಒಪ್ಪಿಗೆ ಪಡೆದು ಆಡಿಟ್ ರಿಪೋರ್ಟ್ ಮತ್ತು ಓಚರುಗಳ ಸಹಿತವಾದ ವರ್ಷದ ಲೆಕ್ಕಗಳನ್ನು ಆಯಾ ವರ್ಷದ ಮೇ ತಿಂಗಳ ಕೊನೆಯೊಳಗಾಗಿ ಪರಿಷತ್ತಿಗೆ ಕಳುಹಿಸಬೇಕು.

೧೫. ತಾಲ್ಲೂಕು / ಕ್ಷೇತ್ರ ಘಟಕಗಳು

(ಅ) ಜಿಲ್ಲಾ ಘಟಕದ ಅಧ್ಯಕ್ಷರು ಪ್ರತಿ ತಾಲ್ಲೂಕುಗಳಲ್ಲಿ / ಕ್ಷೇತ್ರಗಳಲ್ಲಿ ಆಯಾ ತಾಲ್ಲೂಕಿನ ಸದಸ್ಯರೊಡನೆ ಸಮಾಲೋಚಿಸಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಘಟಕವನ್ನು ರಚಿಸತಕ್ಕದ್ದು. ಘಟಕದ ಕಾರ್ಯಕಾರಿ ಸಮಿತಿ ಈ ಕೆಳಕಂಡಂತಿರತಕ್ಕದ್ದು.

(ಆ) ಅಧ್ಯಕ್ಷರು	೧
ಗೌರವ ಕಾರ್ಯದರ್ಶಿಗಳು	೨
ಗೌರವ ಕೋಶಾಧ್ಯಕ್ಷರು	೧
ಪರಿಶಿಷ್ಟ ಜಾತಿ ಪ್ರತಿನಿಧಿ	೧
ಮಹಿಳಾ ಪ್ರತಿನಿಧಿ	೧
ಸಂಘ ಸಂಸ್ಥೆಗಳ ಪ್ರತಿನಿಧಿ	೧
ತಾಲ್ಲೂಕು ಶಿಕ್ಷಣಾಧಿಕಾರಿಗಳು	೧
ನಿಕಟಪೂರ್ವ ಅಧ್ಯಕ್ಷರು	೧
ಇತರ ಸದಸ್ಯರು	೬

(ಇ) ಇತರ ಸದಸ್ಯರನ್ನು ನಾಮಕರಣ ಮಾಡಿಕೊಳ್ಳುವಾಗ ಸಾಹಿತ್ಯ ಸಾಂಸ್ಕೃತಿಕಕ್ಷೇತ್ರಕ್ಕೆ ಹಾಗೂ ಪ್ರಾದೇಶಿಕ ಗಡಿ ಪ್ರದೇಶಕ್ಕೆ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಳ್ಳಬೇಕು.

(ಈ) ಕಾರ್ಯಕಾರಿ ಸಮಿತಿಯ ಸದಸ್ಯರು ಪರಿಷತ್ತಿನ ಸದಸ್ಯರಾಗಿರಬೇಕು.

(ಉ) ಲೆಕ್ಕಪತ್ರ, ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ತಾಲ್ಲೂಕು ಘಟಕಗಳಿಗೂ ಅನ್ವಯಿಸುತ್ತವೆ.

೧೬. ಗಡಿನಾಡ ಘಟಕಗಳು

(ಅ) ಗಡಿನಾಡ ಘಟಕಗಳಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ ಈ ರಾಜ್ಯಗಳಲ್ಲಿ ಕನಿಷ್ಠ ೧೦೦ (ಒಂದು ನೂರು) ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಅಲ್ಲಿ ಗಡಿನಾಡ ಘಟಕಗಳನ್ನು ರಚಿಸತಕ್ಕದ್ದು. ಇಂತಹ ಗಡಿನಾಡ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು. ಗಡಿನಾಡ ಘಟಕದ ಅಧ್ಯಕ್ಷರನ್ನು ಆಯಾ ಘಟಕದ ಸದಸ್ಯರು ಅಂಚೆ ಮೂಲಕ ಮತ ಚಲಾಯಿಸಿ ಆಯ್ಕೆ ಮಾಡತಕ್ಕದ್ದು. ಲೆಕ್ಕಪತ್ರ ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ಇದಕ್ಕೂ ಅನ್ವಯಿಸುತ್ತವೆ. ಉಳಿದಂತೆ ಗಡಿನಾಡ ಘಟಕಗಳ ಉಪ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

(ಆ) ಭಾರತದ ಇತರ ರಾಜ್ಯಗಳಲ್ಲಿ ೫೦೦ ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಆಯಾ ರಾಜ್ಯಗಳಲ್ಲಿ ಹೊರನಾಡ ವಿಶೇಷ ಘಟಕ ತೆರೆಯಬಹುದು. ಇಂತಹ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು.

೧೭. ಜಿಲ್ಲಾ ಘಟಕ, ತಾಲ್ಲೂಕು ಘಟಕ ಹಾಗೂ ಗಡಿನಾಡ ಘಟಕಕ್ಷೇತ್ರ ಘಟಕಗಳ ಕಾರ್ಯಕಾರಿ ಸಮಿತಿ ಸಭೆಗಳು ವರ್ಷದಲ್ಲಿ ಕನಿಷ್ಠ ಮೂರು ಸಲ ಸೇರಬೇಕು.

೧೮. ಕಾರ್ಯಕಾರಿ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರ ಆಯ್ಕೆ

(ಅ) ಪರಿಷತ್ತಿನ ಅಧ್ಯಕ್ಷರನ್ನು ಪರಿಷತ್ತಿನ ಮತದಾರರ ಪಟ್ಟಿಯಲ್ಲಿರುವ ಎಲ್ಲ ಸದಸ್ಯರೂ ಚುನಾಯಿಸತಕ್ಕದ್ದು. ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಲ್ಲುವವರು ಕನ್ನಡ ಬಲ್ಲವರಾಗಿದ್ದು, ಚುನಾವಣಾ ತಾರೀಖಿಗೆ ಹತ್ತು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. ಅಧ್ಯಕ್ಷತೆಗೆ ನಿಲ್ಲುವವರು ಕನ್ನಡ ಭಾಷೆ ಸಾಹಿತ್ಯ, ಸಂಸ್ಕೃತಿಗಳಲ್ಲಿ ಸಾಕಷ್ಟು ಸೇವೆ ಮಾಡಿರುವವರಾಗಿರತಕ್ಕದ್ದು.

(ಆ) ಪರಿಷತ್ತಿನ ಅಧ್ಯಕ್ಷರ ಅಧಿಕಾರವಧಿ ಮೂರು ವರ್ಷ ಮಾತ್ರ ಇರತಕ್ಕದ್ದು. ಒಂದು ಸಾರಿ ಅಧ್ಯಕ್ಷರಾಗಿ ಚುನಾಯಿತರಾದವರು ಮುಂದಿನ ಅವಧಿಯ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ ಮುಂದಿನ ಅವಧಿ ಕಳೆದ ನಂತರ ಮತ್ತೆ ಅವರು ಸ್ಪರ್ಧಿಸುವುದಕ್ಕೆ ಅವಕಾಶವಿರತಕ್ಕದ್ದು . (ಒಂದು ಅವಧಿಯಲ್ಲಿ ಯಾವುದೇ ಕಾರಣದಿಂದ ಅಧ್ಯಕ್ಷ ಸ್ಥಾನ ತೆರವಾದರೂ ಅದು ಅವರ ಪೂರ್ಣ ಅವಧಿಯೆಂದೇ ಅರ್ಥ) ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಕೋಶಾಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿಯೇ ವಾಸಿಸಬೇಕು.

(ಇ) ಯಾವ ಕಾರಣದಿಂದಲಾದರೂ ಕಾರ್ಯಕಾರಿಸಮಿತಿ ಚುನಾವಣೆ ತಡವಾದರೆ ಮುಂದೆ ಚುನಾವಣೆ ನಡೆಯುವವರೆಗೆ ಹಿಂದಿನ ಕಾರ್ಯಕಾರಿ ಸಮಿತಿಯೇ ಪರಿಷತ್ತಿನ ಕಾರ್ಯವನ್ನು ನಿರ್ವಹಿಸತಕ್ಕದ್ದು. ಈ ರೀತಿ ಮುಂದುವರಿದ ಅವಧಿ ಆರುತಿಂಗಳುಗಳಿಗೆ ಮೀರತಕ್ಕದ್ದಲ್ಲ.

(ಈ) ಯಾವ ಕಾರಣದಿಂದಲಾದರೂ ಅಧ್ಯಕ್ಷ ಸ್ಥಾನ ತೆರವಾದಾಗ ಇನ್ನುಳಿದ ಅವಧಿಯವರೆಗೆ ಪರಿಷತ್ತಿನ ಕಾರ್ಯಕಾರಿ ಸಮಿತಿ, ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರಲ್ಲಿ ಯಾರನ್ನಾದರೂ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು.

(ಉ) ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದರ ಮೂಲಕ ತಾತ್ಕಾಲಿಕವಾಗಿ (ಆರು ತಿಂಗಳಿಗೆ ಕಡಿಮೆಯಿಲ್ಲದೆ ಒಂದು ವರ್ಷಕ್ಕೆ ಹೆಚ್ಚಾಗದ ಅವಧಿಯಲ್ಲಿ) ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ಆ ಕಾಲ ಪರ್ಯಂತ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರಿಗೆ ಆ ಅಧಿಕಾರವನ್ನು ವಹಿಸಿಕೊಡಲು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ.

(ಊ) ಒಂದು ವರ್ಷಕ್ಕೆ ಮೀರಿ ಅಧ್ಯಕ್ಷರು ಗೈರು ಹಾಜರಾಗುವುದಾದರೆ ಆ ಸ್ಥಾನ ತೆರಪಾಗಿದೆ ಎಂದೇ ಪರಿಗಣಿಸತಕ್ಕದ್ದು.

೧೯. ಕಾರ್ಯದರ್ಶಿಗಳ ಮತ್ತು ಕೋಶಾಧ್ಯಕ್ಷರ ಆಯ್ಕೆ

(ಅ) ಇಬ್ಬರು ಕಾರ್ಯದರ್ಶಿಗಳನ್ನೂ, ಒಬ್ಬರು ಕೋಶಾಧ್ಯಕ್ಷರನ್ನೂ ಆರಿಸಿಕೊಳ್ಳುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು. ಅವರು ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

(ಆ) **ಕಾರ್ಯಕಾರಿ ಸಮಿತಿಯ ಸಭೆ** : ಕಾರ್ಯಕಾರಿ ಸಮಿತಿಯ ಸಭೆ ವರ್ಷಕ್ಕೆ ಕನಿಷ್ಠಪಕ್ಷ ನಾಲ್ಕು ಸಲ ಸೇರತಕ್ಕದ್ದು.

(ಇ) ಪರಿಷತ್ತಿನ ಅಧ್ಯಕ್ಷರೇ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅವರು ಹಾಜರಿಲ್ಲದಿರುವಾಗ ಕಾರ್ಯಕಾರಿ ಸಮಿತಿಯಲ್ಲಿ ಹಾಜರಿರುವ ಸದಸ್ಯರೊಬ್ಬರನ್ನು ಆ ಸಭೆಗೆ ಅಧ್ಯಕ್ಷರನ್ನಾಗಿ ಆರಿಸಿ ಸಭೆಯನ್ನು ನಡೆಸತಕ್ಕದ್ದು.

(ಈ) ಚುನಾವಣೆಯಾದ ಮೇಲೆ ಹೊಸ ಕಾರ್ಯಕಾರಿ ಸಮಿತಿಯು, ಫಲಿತಾಂಶ ಪ್ರಕಟಿಸಿದ ಒಂದು ತಿಂಗಳೊಳಗಾಗಿ ಬೆಂಗಳೂರಿನಲ್ಲಿ ಸೇರತಕ್ಕದ್ದು.

೨೦. ತಿಳಿವಳಿಕೆ

(ಅ) ಕಾರ್ಯಕಾರಿ ಸಮಿತಿಯ ಸಾಮಾನ್ಯ ಸಭೆಗಳನ್ನು ಕುರಿತು ತಿಳಿವಳಿಕೆ ಪತ್ರಗಳನ್ನು ಹದಿನೈದು ದಿನಗಳಿಗೆ ಮುಂಚೆ ಸದಸ್ಯರಿಗೆ ಕಳುಹಿಸಿಕೊಡತಕ್ಕದ್ದು.

(ಆ) ಜರೂರು ಸಂದರ್ಭದಲ್ಲಿ ಕಾರ್‍ಯಕಾರಿ ಸಮಿತಿ ಸೇರುವ ಸಮಯವನ್ನು ಇಷ್ಟುಮಟ್ಟಿಗೆ ಪೂರ್ವಭಾವಿಯಾಗಿ ಸದಸ್ಯರಿಗೆ ತಿಳಿಯಪಡಿಸಬೇಕೆಂಬ ಕಾಲ ವ್ಯವಧಾನದ ನಿರ್ಬಂಧವಿಲ್ಲ. ಜರೂರು ಸಂದರ್ಭವನ್ನು ನಿರ್ಧರಿಸುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

೨೧. ಅವಶ್ಯ ಸಂಖ್ಯೆ

(ಅ) ಕಾರ್ಯಕಾರಿ ಸಮಿತಿಯ ಸಭೆಗೆ ಕಾರ್ಯನಿರ್ವಹಣಾಧಿಕಾರವಿರುವುದಕ್ಕೆ ಒಟ್ಟು ಮೂರನೇ ಒಂದು ಭಾಗದಷ್ಟು ಸದಸ್ಯರಾದರೂ ಬಂದಿರಬೇಕು.

(ಆ) ಈ ಆವಶ್ಯಕ ಸಂಖ್ಯೆಯಷ್ಟು ಮಂದಿ ಸದಸ್ಯರು ಬರದೆ ಇದ್ದರೆ ಕಾರ್ಯಕಾರಿ ಸಮಿತಿಯ ಸಭೆಯನ್ನು ಒಂದು ಗಂಟೆಯ ಕಾಲ ಮುಂದೂಡಿ ಆಗ ಆವಶ್ಯ ಸಂಖ್ಯೆ ಇರಲಿ, ಇಲ್ಲದಿರಲಿ, ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯವಿವರಗಳನ್ನು ಪರ್ಯಾಲೋಚಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು. ಆದರೆ ಇತರ ವಿಷಯಗಳು ಪರಿಶೀಲನೆಗೆ ಬರುವ ಹಾಗಿಲ್ಲ.

೨೨. ಸದಸ್ಯ ಸ್ಥಾನದ ತೆರವು

(ಅ) ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರ ಸ್ಥಾನಗಳಲ್ಲಿ ಯಾವುದಾದರೂ ತೆರಪಾದರೆ ಆ ಸ್ಥಾನಕ್ಕೆ ಕಾರ್ಯಕಾರಿ ಸಮಿತಿ ಮತ್ತೊಬ್ಬ ಸದಸ್ಯರನ್ನು ಉಳಿದ ಕಾಲಾವಧಿಯವರೆಗೆ ನಾಮಕರಣ ಮಾಡಿಕೊಳ್ಳತಕ್ಕದ್ದು. ನಾಮಕರಣ ಸದಸ್ಯರು ಕನಿಷ್ಠ ೫ ವರ್ಷ ಹಿಂದಿನಿಂದಲೂ ಸತತವಾಗಿ ಸದಸ್ಯರಾಗಿರತಕ್ಕದ್ದು.

(ಆ) ಯಾವ ಕಾಲದಲ್ಲಾಗಲೀ ಕಾರ್ಯಕಾರಿ ಸಮಿತಿಯ ಯಾವ ಅಧಿಕಾರ ಸ್ಥಾನವಾಗಲೀ ತೆರಪಾಗಿ ನಿಂತಿದೆ ಎಂಬ ಕಾರಣದಿಂದ ಆ ಕಾಲದಲ್ಲಿ ಆ ಸಮಿತಿ ನಡೆಸುವ ಕಾರ್ಯಗಳು ಅಕ್ರಮಗಳೆನಿಸಲಾರವು.

೨೩. ಉಪಸಮಿತಿಗಳು

ಪರಿಷತ್ತಿನ ವಿವಿಧ ಕಾರ್ಯಕಲಾಪಗಳನ್ನು ನಿರ್ವಹಿಸುವುದಕ್ಕೆ ಕಾರ್ಯಕಾರಿ ಸಮಿತಿ ಇತರ ಉಪಸಮಿತಿಗಳನ್ನು ನಿಯಮಿಸಿ ಕಾರ್ಯಭಾಗವನ್ನು ಆ ಉಪಸಮಿತಿಗಳಿಗೆ ವಹಿಸಬಹುದು, ಎಲ್ಲಾ ಉಪಸಮಿತಿಗಳ ನಡವಳಿಕೆಗಳನ್ನೂ ಸ್ಥಿರೀಕರಣಕ್ಕಾಗಿ ಕಾರ್ಯಕಾರಿ ಸಮಿತಿಯ ಮುಂದೆ ಇಡತಕ್ಕದ್ದು.

೨೪. ಸೇವಾ ಸಿಬ್ಬಂದಿ

ಪರಿಷತ್ತಿನ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಬೇಕಾಗುವ ನೌಕರನನ್ನು ನೇಮಿಸುವುದಕ್ಕೂ ದಂಡಿಸುವುದಕ್ಕೂ ತೆಗೆದು ಹಾಕುವುದಕ್ಕೂ ಅವರ ಸಂಬಳಗಳನ್ನೂ ಬಹುಮಾನಗಳನ್ನು ಗೊತ್ತುಮಾಡುವುದಕ್ಕೂ ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು.

೨೫. ಪರಿಷತ್ತಿನ ಲೆಕ್ಕಪತ್ರಗಳ ಉಸ್ತುವಾರಿಯನ್ನು ನಿರ್ವಹಿಸಲು ಕರ್ನಾಟಕ ಸರ್ಕಾರದ ಲೆಕ್ಕಪತ್ರ ಇಲಾಖೆಯ ಒಬ್ಬರು ಲೆಕ್ಕಪತ್ರ ಅಧೀಕ್ಷಕರನ್ನು ಪ್ರತಿನಿಯೋಜನೆಯ ಮೇರೆಗೆ ನಿಯಮಿಸಿಕೊಳ್ಳತಕ್ಕದ್ದು.

೨೬. ಉಪ ನಿಬಂಧನೆಗಳು

ಅ) ಈ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಅವಶ್ಯವಿದ್ದಾಗ ಉಪ ನಿಬಂಧನೆಗಳನ್ನು ಮಾಡಿಕೊಳ್ಳುವ ಅಥವಾ ಬದಲಾಯಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. ಹೀಗೆ ಮಾರ್ಪಾಟಾದ ಉಪನಿಬಂಧನೆಗಳ ವಿವರಗಳನ್ನು ಮುಂದಿನ 'ಕನ್ನಡ ನುಡಿ'ಯಲ್ಲಿ ಪ್ರಕಟಿಸತಕ್ಕದ್ದು. ಮತ್ತು ಮುಂದಿನ ಸಕಲ ಸದಸ್ಯರ ಅಧಿವೇಶನದಲ್ಲಿ ಸಭೆಯ ಗಮನಕ್ಕೆ ತರತಕ್ಕದ್ದು.

ಆ) ಈ ನಿಬಂಧನೆ ಅಥವಾ ಉಪನಿಬಂಧನೆಗಳಲ್ಲಿ ಯಾವುದಾದರೂ ತಿದ್ದುಪಡಿ ಅಥವಾ ಬದಲಾವಣೆ ಆದರೆ ತತ್ಪೂರ್ವ ನಡೆದ ಕಾರ್ಯಕ್ರಮಗಳು ಅಕ್ರಮಗಳೆನಿಸಲಾರವು.

೨೭. ಹಣಕಾಸು ಸಮಿತಿ

ಅ) ಪರಿಷತ್ತಿನ ಹಣಕಾಸು ನಿರ್ವಹಣೆ ಹಣಕಾಸು ಸಮಿತಿಗೆ ಸೇರಿದ್ದು. ಹಣಕಾಸು ಸಮಿತಿಯ ರಚನೆ, ಕಾರ್ಯವ್ಯಾಪ್ತಿ ಈ ಸಂಬಂಧವಾದ ಉಪನಿಬಂಧನೆಗಳಿಗೆ ಅನುಗುಣವಾಗಿ ಇರತಕ್ಕದ್ದು. ಕಾರ್ಯವ್ಯಾಪ್ತಿ ಈ ಕೆಳಕಂಡಂತಿರತಕ್ಕದ್ದು.

ಆ) ಹಣಕಾಸು ಸಮಿತಿಗೆ ಪರಿಷತ್ತಿನ ಅಧ್ಯಕ್ಷರೇ ಅಧ್ಯಕ್ಷರಾಗಿರತಕ್ಕದ್ದು. ಪರಿಷತ್ತಿನ ಉಳಿದ ಪದಾಧಿಕಾರಿಗಳು, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಅಥವಾ ಅವರ ಪ್ರತಿನಿಧಿ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ, ಪರಿಷತ್ತಿನ ಕಾರ್ಯಕಾರಿ ಸಮಿತಿ ಆರಿಸಿದ ಕಾರ್ಯಕಾರಿ ಸಮಿತಿಯ ಇಬ್ಬರು ಸದಸ್ಯರು ಮತ್ತು ಕರ್ನಾಟಕ ಸರ್ಕಾರದ ಲೆಕ್ಕಪತ್ರ ಇಲಾಖೆಯಿಂದ ಪ್ರತಿನಿಯೋಜನೆ ಮೇಲೆ ನಿಯಮಿಸಿಕೊಂಡಿರುವ ಲೆಕ್ಕಪತ್ರ ಅಧೀಕ್ಷಕರು ಇವರುಗಳು ಈ ಸಮಿತಿಯ ಸದಸ್ಯರಾಗಿರತಕ್ಕದ್ದು.

ಇ) ಪರಿಷತ್ತಿನ ಕೋಶಾಧ್ಯಕ್ಷರು ಈ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಈ) ಹಣಕಾಸು ಸಮಿತಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಅನುಮೋದಿಸಿ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡತಕ್ಕದ್ದು.

ಉ) ಕಟ್ಟಡಗಳು, ಪ್ರಕಟಣೆಗಳು, ಕಾರ್ಯಕ್ರಮಗಳು, ಹೊಸ ಹುದ್ದೆಗಳ ಸೃಷ್ಟಿ ಹಾಗೂ ಇನ್ನಿತರ ಹಣಕಾಸಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತೀರ್ಮಾನ ಕೈಗೊಂಡು ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡಬೇಕು.

ಊ) ಪರಿಷತ್ತಿನ ಪ್ರತಿ ತಿಂಗಳ ಆದಾಯ ವೆಚ್ಚವನ್ನು ಪರಿಶೀಲಿಸತಕ್ಕದ್ದು.

ಋ) ಹಣಕಾಸು ಸಮಿತಿಯ ಸಭೆಗೆ ಐದು ಮಂದಿ ಸದಸ್ಯರ ಹಾಜರಾತಿ ಆವಶ್ಯಕ.

೨೮. ಪ್ರಕಟಣಾ ಸಮಿತಿ

ಅ) ಪರಿಷತ್ತಿನ ಗ್ರಂಥ ಪ್ರಕಟಣಾಕಾರ್ಯ, ಪ್ರಕಟಣಾ ಸಮಿತಿಗೆ ಸೇರಿದ್ದು. ಪ್ರಕಟಣಾ ಸಮಿತಿಯ ರಚನೆ ಮತ್ತು ಕಾರ್ಯವ್ಯಾಪ್ತಿ ಈ ಸಂಬಂಧವಾದ ಉಪ ನಿಬಂಧನೆಗಳಿಗೆ ಅನುಗುಣವಾಗಿ ಇರತಕ್ಕದ್ದು.

ಆ) ಗ್ರಂಥ ಪ್ರಕಟಣಾ ಸಮಿತಿಗೆ ಪರಿಷತ್ತಿನ ಅಧ್ಯಕ್ಷರೇ ಅಧ್ಯಕ್ಷರಾಗಿರತಕ್ಕದ್ದು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅಥವಾ ಅವರ ಪ್ರತಿನಿಧಿ, ಪರಿಷತ್ತಿನ ಇತರ ಪದಾಧಿಕಾರಿಗಳು, ಸಮ್ಮೇಳನಾಧ್ಯಕ್ಷರು, ಕಾರ್ಯಕಾರಿ ಸಮಿತಿ ಆರಿಸುವ ಇಬ್ಬರು ಸಾಹಿತಿಗಳು, ಕಾರ್ಯಕಾರಿ ಸಮಿತಿ ಸಭೆಯ ಚುನಾಯಿತ ಸದಸ್ಯರಲ್ಲಿ ಒಬ್ಬರು- ಇವರು ಈ ಸಮಿತಿಯ ಸದಸ್ಯರಾಗಿರತಕ್ಕದ್ದು.

ಇ) ಅಧ್ಯಕ್ಷರು ಸೂಚಿಸುವ ಕಾರ್ಯದರ್ಶಿಗಳಲ್ಲಿ ಒಬ್ಬರು ಈ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸತಕ್ಕದ್ದು.

ಈ) ಪ್ರಕಟಣಾ ಸಮಿತಿ ಸಭೆಗೆ ಐದು ಮಂದಿ ಹಾಜರಾತಿ ಆವಶ್ಯಕ.

ಉ) ಪ್ರಕಟಣಾ ಸಮಿತಿ ಪರಿಷತ್ತಿನಿಂದ ಪ್ರಕಟಿಸಬಹುದಾದ ಪುಸ್ತಕಗಳನ್ನು ಆರಿಸಿ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡುವುದು.

ಊ) ಪ್ರಕಟಣೆಗೆ ಬಂದ ಹಸ್ತಪ್ರತಿಗಳನ್ನು ತಜ್ಞರ ಪರಿಶೀಲನೆಗೆ ಒಪ್ಪಿಸಿ, ಅವರ ಅಭಿಪ್ರಾಯವನ್ನು ತರಿಸಿಕೊಂಡು ಪರಿಶೀಲಿಸುವುದು

೨೯. ವಾರ್ಷಿಕ ಸಭೆ, ಕಾಲ, ಸ್ಥಾನ

ಅ) ವಾರ್ಷಿಕ ಸಭೆ ಸೆಪ್ಟೆಂಬರ್ ತಿಂಗಳೊಳಗಾಗಿ ಸಾಮಾನ್ಯವಾಗಿ ಬೆಂಗಳೂರಿನಲ್ಲಿ ನಡೆಯತಕ್ಕದ್ದು. ಬೇರೆ ಊರುಗಳಲ್ಲಿಯೂ ವಾರ್ಷಿಕ ಸಭೆ ನಡೆಯಬಹುದು. ವಾರ್ಷಿಕ ಸಭೆ ಮತ್ತು ಇತರ ಸಭೆಗಳಲ್ಲಿ ಪರಿಷತ್ ಅಧ್ಯಕ್ಷರೇ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಪರಿಷದಧ್ಯಕ್ಷರ ಗೈರು ಹಾಜರಿಯಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರಲ್ಲಿ ಒಬ್ಬರನ್ನು ಸಭಾಧ್ಯಕ್ಷತೆಗೆ ಚುನಾಯಿಸಿ ಕಾರ್ಯಕಲಾಪವನ್ನು ನಡೆಸತಕ್ಕದ್ದು.

ಆ) ತಿಳುವಳಿಕೆ

ವಾರ್ಷಿಕ ಸಭೆಯ ತಿಳಿವಳಿಕೆ ಪತ್ರವನ್ನು ಅಂಥ ಸಭೆ ಸೇರುವುದಕ್ಕೆ ನಾಲ್ಕು ವಾರ ಮುಂಚಿತವಾಗಿ ಸದಸ್ಯರಿಗೆ ಕಳಿಸತಕ್ಕದ್ದು.

ಇ) ಸದಸ್ಯರ ಸೂಚನೆಗೆ ಕಾಲ

ಪರಿಷತ್ತಿನ ಕಾರ್ಯಕಲಾಪಗಳ ಬಗ್ಗೆ ಸೂಚನೆಗಳನ್ನು ಸೂಚಿಸುವ ಸದಸ್ಯರು ವಾರ್ಷಿಕ ಸಭೆಗೆ ಗೊತ್ತಾಗಿರುವ ದಿವಸಕ್ಕೆ ಕನಿಷ್ಠ ಪಕ್ಷ ಎರಡು ವಾರಗಳಿಗೆ ಕಡಿಮೆಯಿಲ್ಲದಷ್ಟು ಮುಂಚಿತವಾಗಿ ಪರಿಷತ್ತಿನ ಕಚೇರಿಗೆ ಮುಟ್ಟುವಂತೆ ಕಳುಹಿಸತಕ್ಕದ್ದು.

೩೦. ಕಾರ್ಯಸೂಚಿ

ವಾರ್ಷಿಕ ಸಕಲ ಸದಸ್ಯರ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳು

ಅ) ಕಾರ್ಯಕಾರಿ ಸಮಿತಿ ಒಪ್ಪಿಸುವ ವಾರ್ಷಿಕ ವರದಿಯನ್ನೂ, ಅಧಿಕೃತ ಲೆಕ್ಕಪರಿಶೋಧಕರಿಂದ ಪರಿಶೀಲಿಸಿದ ಆಯವ್ಯಯ ಲೆಕ್ಕದ ಪಟ್ಟಿಗಳನ್ನೂ ಅಂಗೀಕರಿಸುವುದು.

ಆ) ಮುಂದಿನ ಒಂದು ವರ್ಷದ ಆಯವ್ಯಯ ಅಂದಾಜು ಪಟ್ಟಿಯ ಅಂಗೀಕಾರ.

ಇ) ಮುಂದಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ.

ಈ) ಕಾರ್ಯಕಾರಿ ಸಮಿತಿಯ ಸೂಚನೆಗಳು.

ಉ) ಸದಸ್ಯರು ನಿಯಮಾನುಸಾರ ಕಳಿಸುವ ಸೂಚನೆಗಳು.

೩೧. ಸಕಲ ಸದಸ್ಯರ ಸಭೆಯ ನಿರ್ದಿಷ್ಟ ಸಂಖ್ಯೆ.

ಪ್ರತಿಯೊಂದು ಸಕಲ ಸದಸ್ಯರ ಸಭೆಯಲ್ಲಿಯೂ ೧೦೦ ಮಂದಿ ಕಡಿಮೆ ಇಲ್ಲದಂತೆ, ಸದಸ್ಯರು ಹಾಜರಿರಬೇಕು. ಯಾವ ಸಭೆಯಲ್ಲೇ ಆಗಲಿ ಕ್ಲುಪ್ತ ಕಾಲಾನಂತರ ಅರ್ಧ ಗಂಟೆಯೊಳಗಾಗಿ ಈ ಅವಶ್ಯಕ ಸಂಖ್ಯೆಯಷ್ಟು ಸದಸ್ಯರು ಸೇರದಿದ್ದರೆ ಆ ಸಭೆಯನ್ನು ಅರ್ಧ ಗಂಟೆಯ ಕಾಲ ಮುಂದೆಹಾಕಿ ಸಭೆಯನ್ನು ನಡೆಸತಕ್ಕದ್ದು. ಅಂತಹ ಮುಂದೂಡಿದ ಸಭೆಗೆ ಅವಶ್ಯ ಸಂಖ್ಯೆಯ ಅಗತ್ಯ ಇರುವುದಿಲ್ಲ. ಆದರೆ ಈ ಸಭೆಯಲ್ಲಿ ಹೊಸ ವಿಷಯ ಯಾವುದನ್ನೂ ಚರ್ಚೆಗೆ ತರತಕ್ಕದ್ದಲ್ಲ.

೩೨. ಸದಸ್ಯರ ಅಧಿಕಾರ

ಅ) ಸಕಲ ಸದಸ್ಯರು ವಾರ್ಷಿಕ ಸಭೆಯಲ್ಲಿ ಭಾಗವಹಿಸುವ ಅಧಿಕಾರವು ತಮ್ಮ ಸದಸ್ಯತ್ವದ ಚಂದಾಹಣವನ್ನು ಸಭೆ ನಡೆಯುವ ತೊಂಬತ್ತು ದಿನಗಳ ಮುಂಚೆ ಪೂರ್ತಿಯಾಗಿ ಸಲ್ಲಿಸಿದವರಿಗೆ ಮಾತ್ರ ಇರತಕ್ಕದ್ದು.

ಆ) ಎಲ್ಲಾ ತೀರ್ಮಾನಗಳೂ ಸಭೆಯಲ್ಲಿರುವ ಸದಸ್ಯರ ಬಹುಮತದಿಂದ ಆಗತಕ್ಕದ್ದು. ಆದರೆ ಅಂಗರಚನೆಯ ತಿದ್ದುಪಡಿಗಳನ್ನು ಮಾಡುವ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದವರಲ್ಲಿ ನಾಲ್ಕರಲ್ಲಿ ಮೂರು ಭಾಗಕ್ಕೆ ಕಡಿಮೆ ಇಲ್ಲದಷ್ಟು ಬಹುಮತವಿರಬೇಕು.

೩೩. ವಿಶೇಷ ಸಭೆ

ಅ) ಕಾರ್ಯಕಾರಿ ಸಮಿತಿಗೆ ಆವಶ್ಯಕವೆಂದು ಕಂಡು ಬಂದಾಗ ಅಥವಾ ಸದಸ್ಯರ ಸಂಖ್ಯೆಯ ಹತ್ತನೇ ಒಂದರಷ್ಟು ಮಂದಿ ಸದಸ್ಯರು ಬರಹದ ಮೂಲಕ ಅಪೇಕ್ಷಿಸಿದಾಗ ಸಕಲ ಸದಸ್ಯರ ವಿಶೇಷ ಸಭೆಯನ್ನು ೪೦ (ನಲವತ್ತು) ದಿವಸಗಳೊಳಗಾಗಿ ಕರೆಯತಕ್ಕದ್ದು.

ಆ) ವಿಶೇಷ ಸಭೆಯಲ್ಲಿ ಮಂಡಿಸಬಯಸುವ ವಿಷಯ ಲಿಖಿತ ನಿರ್ಣಯ ರೂಪದಲ್ಲಿರಬೇಕು. ಆ ನಿರ್ಣಯದ ಸೂಚಕರಿರಲಿ ಹಾಗೂ ಅನುಮೋದಕರಿರಲಿ ತಮ್ಮ ಹೆಸರು ಮತ್ತು ಸ್ಪಷ್ಟ ವಿಳಾಸದೊಡನೆ ಸಹಿ ಮಾಡಿಕೊಡತಕ್ಕದ್ದು. ಅಂತಹ ನಿರ್ಣಯ ಪರಿಷತ್ತಿನ ಮೂಲ ಉದ್ದೇಶಗಳಿಗೆ ವಿರೋಧವಾಗಿರತಕ್ಕದ್ದಲ್ಲ

ಇ) ವಿಶೇಷ ಸಭೆಯ ತಿಳಿವಳಿಕೆ ಪತ್ರವನ್ನು ೧೫ (ಹದಿನೈದು) ದಿನಗಳ ಮುಂಚೆ ಸದಸ್ಯರಿಗೆ ಕಳುಹಿಸತಕ್ಕದ್ದು.

೩೪. ಸಾಹಿತ್ಯ ಸಮ್ಮೇಳನ

ಅ) ಸಾಮಾನ್ಯವಾಗಿ ಪ್ರತಿವರ್ಷ ಅಖಿಲ ಭಾರತ ಕನ್ನಡಸಾಹಿತ್ಯ ಸಮ್ಮೇಳನ ನಡೆಯತಕ್ಕದ್ದು.

ಆ) ಯಾವುದೇ ಒಂದು ಸ್ಥಳದಲ್ಲಿ ಸಮ್ಮೇಳನ ನಡೆಯಬೇಕಾದಾಗ ಪರಿಷತ್ತು ತನ್ನ ಜಿಲ್ಲಾ ಘಟಕಗಳ / ಗಡಿನಾಡ ಘಟಕಗಳ ಮೂಲಕ ಸಮ್ಮೇಳನ ನಡೆಸತಕ್ಕದ್ದು. ಅಂತಹ ಘಟಕಗಳಿಲ್ಲದೆಡೆಯಲ್ಲಿ ಪರಿಷತ್ತು ನೇರವಾಗಿ ಸಮ್ಮೇಳನವನ್ನು ನಡೆಸುವ ಏರ್ಪಾಟು ಮಾಡತಕ್ಕದ್ದು.

ಇ) ಸಮ್ಮೇಳನ ನಡೆಯುವ ಸ್ಥಳದಲ್ಲಿ ಸ್ವಾಗತ ಸಮಿತಿ ರಚನೆ ಆಗತಕ್ಕದ್ದು. ಆ ಜಿಲ್ಲೆಯ / ಗಡಿನಾಡ

ಘಟಕವಿರುವ ರಾಜ್ಯದ ಸ್ಥಳೀಯ ಪ್ರಮುಖರೊಬ್ಬರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು. ಪರಿಷತ್ತಿನ ಸಂಬಂಧಪಟ್ಟ ಘಟಕ ಅಧ್ಯಕ್ಷರು ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಆ ಘಟಕದ ಉಳಿದ ಸದಸ್ಯರು ಸ್ವಾಗತ ಸಮಿತಿಯ ಸದಸ್ಯರಾಗಿರತಕ್ಕದ್ದು.

ಈ) ಪರಿಷತ್ತಿನ ಕಾರ್ಯಕಾರಿ ಸಮಿತಿಯು ಆಯಾ ವರ್ಷದ ಸಮೇಳನಾಧ್ಯಕ್ಷರನ್ನು ಆರಿಸುವ ಅಧಿಕಾರ ಪಡೆದಿರತಕ್ಕದ್ದು. ಅಂತಹವರು ಪರಿಷತ್ತಿನ ಸದಸ್ಯರಾಗಿರಬೇಕು.

ಉ) ಕಾರ್ಯಕಾರಿ ಸಮಿತಿಯ ವಿಶೇಷಾಧಿಕಾರ

ಯಾವ ಸಂದರ್ಭದಲ್ಲಾಗಲೀ ಯಾವ ಕಾರಣದಿಂದಾಗಲೀ ಅಂಗೀಕರಿಸಿದ ಸ್ಥಳದಲ್ಲಿ ಸಮ್ಮೇಳನವನ್ನು ನಡೆಸಲಾಗದಿದ್ದರೆ ಅಥವಾ ಅಧ್ಯಕ್ಷರು ಬರಲು ಆಗದಿದ್ದರೆ ಅಥವಾ ಇತರ ಅನಿವಾರ್ಯಗಳು ಯಾವುದಾದರೂ ಸಂಭವಿಸಿದರೆ ಅಂಥ ವಿಶೇಷ ಸನ್ನಿವೇಶಗಳಲ್ಲಿ ಬೇರೆ ಏರ್ಪಾಟುಗಳನ್ನು ಮಾಡಿ ಸಮ್ಮೇಳನವನ್ನು ನೆರವೇರಿಸುವುದಕ್ಕೂ ಅಥವಾ ಮುಂದೆ ಹಾಕುವುದಕ್ಕೂ ಕಾರ್ಯಕಾರಿ ಸಮಿತಿಗೆ ಅಧಿಕಾರವಿರುತ್ತದೆ.

೩೫. ವಿಷಯ ನಿರ್ಧಾರಕ ಮಂಡಲಿ

ಸಮ್ಮೇಳನದಲ್ಲಿ ಮಂಡಿಸುವ ನಿರ್ಣಯಗಳ ಬಗ್ಗೆ ನಿರ್ಧಾರ ಮಾಡುವುದಕ್ಕಾಗಿ ಪರಿಷತ್ತಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ವಿಷಯ ನಿರ್ಧಾರಕ ಮಂಡಲಿಯನ್ನು ನೇಮಿಸತಕ್ಕದ್ದು. ಆ ಮಂಡಲಿಯಲ್ಲಿ ಈ ಕೆಳಕಂಡವರು ಇರತಕ್ಕದ್ದು.

ಅ) ಸಮ್ಮೇಳನಕ್ಕೆ ಬಂದಿರುವ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು.

ಆ) ಸಮ್ಮೇಳನದ ಅಧ್ಯಕ್ಷರು.

ಇ) ಸಮ್ಮೇಳನಕ್ಕೆ ಬಂದಿರುವ ಹಿಂದಿನ ಸಮ್ಮೇಳನದ ಅಧ್ಯಕ್ಷರು.

ಈ) ಸ್ವಾಗತ ಸಮಿತಿಯ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು.

ಉ) ಪರಿಷತ್ತಿನ ಅಧ್ಯಕ್ಷರು ನಿಯಮಿಸುವ ಸಮ್ಮೇಳನಕ್ಕೆ ಆಗಮಿಸಿರುವ ಪರಿಷತ್ತಿನ ಇಬ್ಬರು ಸದಸ್ಯರು.

ಊ) ಪರಿಷತ್ತಿನ ಅಧ್ಯಕ್ಷರು ನಿಯಮಿಸುವ ಸಮ್ಮೇಳನದ ಇಬ್ಬರು ಪ್ರತಿನಿಧಿಗಳು.

೩೬. ಆದಾಯ ಭಾಗ

ಅ) ಸಮ್ಮೇಳನದ ಪ್ರತಿನಿಧಿ ಶುಲ್ಕ ಪರಿಷತ್ತಿಗೆ ಸಲ್ಲತಕ್ಕದ್ದು.

ಆ) ಸಮ್ಮೇಳನದ ಹಣಕಾಸಿನ ವ್ಯವಹಾರವನ್ನು ಒಂದು ಷೆಡ್ಯೂಲ್ ಬ್ಯಾಂಕಿನಲ್ಲಿ ಖಾತೆ ತೆರೆದು ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ಸ್ವಾಗತ ಸಮಿತಿಯ ಕೋಶಾಧ್ಯಕ್ಷರು ಹಾಗೂ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ಜಂಟಿಯಾಗಿ ವ್ಯವಹರಿಸತಕ್ಕದ್ದು ಚೆಕ್ಕುಗಳಿಗೆ ಇವರಲ್ಲಿ ಯಾರಾದರೂ ಇಬ್ಬರು ಸಹಿ ಮಾಡಿ ಬ್ಯಾಂಕಿನೊಡನೆ ವ್ಯವಹರಿಸಬೇಕು. ಚೆಕ್ಕಿನಲ್ಲಿ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ (ಜಿಲ್ಲಾಘಟಕದ ಅಧ್ಯಕ್ಷ) ಸಹಿ ಕಡ್ಡಾಯವಾಗಿರತಕ್ಕದ್ದು.

ಇ) ಸ್ವಾಗತ ಸಮಿತಿ, ಸಮ್ಮೇಳನದ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ ಉಳಿದ ಮೊಬಲಗನ್ನು ಪರಿಷತ್ತಿನ ಕಚೇರಿಗೆ ಸಲ್ಲಿಸತಕ್ಕದ್ದು. ಹಾಗೆ ಸಂದಾಯವಾದ ಹಣವನ್ನು ಪರಿಷತ್ತು ಈ ಜಿಲ್ಲೆಯಲ್ಲಿ ಶಾಶ್ವತವಾದ, ಪರಿಷತ್ತಿನ ಸ್ಥಿರ ಆಸ್ತಿಗಾಗಿ ವೆಚ್ಚ ಮಾಡತಕ್ಕದ್ದು.

ಈ) ಪರಿಷತ್ತು ನೇರವಾಗಿ ನಡೆಸಿದ ಸಮ್ಮೇಳನದ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ ಉಳಿದ ಪೂರ್ಣ ಮೊಬಲಗನ್ನು ಪರಿಷತ್ತಿನ ಕಚೇರಿಗೆ ಸಲ್ಲಿಸತಕ್ಕದ್ದು.

೩೭. ಆಡಳಿತ ವರ್ಷ

ಅ) ಪರಿಷತ್ತಿನ ಆಡಳಿತ ವರ್ಷ ಏಪ್ರಿಲ್ ಒಂದರಿಂದ ಮಾರ್ಚ್ ಮೂವತ್ತೊಂದರವರೆಗೆ ಇರತಕ್ಕದ್ದು.

ಆ) ಪರಿಷತ್ತಿನ ಲೆಕ್ಕಗಳ ಬಗ್ಗೆ ವಿವರಣೆಯನ್ನು ಪರಿಷತ್ತಿನ ಸದಸ್ಯರಲ್ಲಿ ಯಾರೇ ಆಗಲಿ ಅಧ್ಯಕ್ಷರ ಅಥವಾ ಕಾರ್ಯದರ್ಶಿಗಳಿಂದ ಲಿಖಿತ ಮೂಲಕ ಪಡೆಯತಕ್ಕದ್ದು.

ಇ) ಪರಿಷತ್ತಿನ ಹಣಕಾಸು ವ್ಯವಹಾರಗಳನ್ನೊಳಗೊಂಡ ಲೆಕ್ಕಪತ್ರಗಳನ್ನು ಪ್ರತಿವರ್ಷ ಕರ್ನಾಟಕ ಸರ್ಕಾರದ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಆಡಿಟ್ ಮಾಡಿಸಿ ಅವರ ವರದಿಯೊಂದಿಗೆ ಅದನ್ನು ವಾರ್ಷಿಕ ಸಭೆಯ ಅಂಗೀಕಾರಕ್ಕೆ ಮಂಡಿಸಬೇಕು.

ಈ) ಲೆಕ್ಕಪತ್ರಗಳನ್ನು ವಾಣಿಜ್ಯ ರೂಪದಲ್ಲಿ ಇರಿಸತಕ್ಕದ್ದು.

೩೮. ವ್ಯವಹಾರ

ಅ) ಪರಿಷತ್ತಿನ ಆಸ್ತಿಯನ್ನು ಕೂಡಿಸುವ, ರೂಢಿಸುವ, ವಿಲೇವಾರಿ ಮಾಡುವ ಅಧಿಕಾರ ಸಕಲ ಸದಸ್ಯರ ಸಭೆಗೆ ಇರತಕ್ಕದ್ದು.

ಆ) ಪರಿಷತ್ತಿನ ಆಸ್ತಿಯನ್ನು ಅಡವು ಇಡುವ, ವಿಲೇವಾರಿ ಮಾಡುವ ಹಾಗೂ ಪರಿಷತ್ತಿಗೆ ಆಸ್ತಿಯನ್ನು ಕೊಳ್ಳುವ, ಮಾರುವ ಇತ್ಯಾದಿ ಅಧಿಕಾರ ಸಕಲ ಸದಸ್ಯರ ಸಭೆಗೆ ಇರತಕ್ಕದ್ದು.

ಇ) ಪರಿಷತ್ತಿನ ಆಸ್ತಿಯನ್ನು ಬಾಡಿಗೆಗೆ ಕೊಡುವ ಮತ್ತು ಬಾಡಿಗೆ ಪಡೆಯುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು

ಈ) ಪರಿಷತ್ತಿನ ಆಡಳಿತವೆಲ್ಲ ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿ ನಡೆಯತಕ್ಕದ್ದು.

ಉ) ಬ್ಯಾಂಕು, ಸರಕಾರ, ಎಲ್.ಐ.ಸಿ. ಇತ್ಯಾದಿ ಸಂಸ್ಥೆಗಳಿಂದ ಪರಿಷತ್ತು ಪಡೆಯುವ ಸಾಲಪತ್ರಗಳಿಗೆ ಮತ್ತು ಪರಿಷತ್ತಿನ ಆಸ್ತಿಗಳ ಕ್ರಯ, ವಿಕ್ರಯ, ಭೋಗ್ಯ, ಅಡವು, ಬಾಡಿಗೆ ಈ ಸಂಬಂಧವಾದ ವ್ಯವಹಾರ ಪತ್ರಗಳಿಗೆ ಮತ್ತು ಪತ್ರಗಳನ್ನು ರಿಜಿಸ್ಟರ್ ಮಾಡಿಸುವುದಕ್ಕೆ ಪರಿಷತ್ತಿನ ಅಧ್ಯಕ್ಷರು ಅಥವಾ ಅಧ್ಯಕ್ಷರಿಂದ ಅಧಿಕಾರ ಪಡೆದ ಒಬ್ಬ ಕಾರ್ಯದರ್ಶಿ ಪರಿಷತ್ತಿನ ಪರವಾಗಿ ರುಜುವನ್ನು ಹಾಕಿ ಮುದ್ರೆಯನ್ನೊತ್ತಿ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಊ) ಅಧ್ಯಕ್ಷರ ಜೊತೆಗೆ ಕೋಶಾಧ್ಯಕ್ಷರು ರುಜು ಹಾಕಿ ಬ್ಯಾಂಕುಗಳೊಡನೆ ವ್ಯವಹರಿಸತಕ್ಕದ್ದು. ಅಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷರಿಂದ ಅಧಿಕಾರ ಪಡೆದ ಕಾರ್ಯದರ್ಶಿಗಳಲ್ಲಿ ಒಬ್ಬರು ಮತ್ತು ಕೋಶಾಧ್ಯಕ್ಷರು ಚೆಕ್ಕುಗಳಿಗೆ ರುಜುಹಾಕಿ ಬ್ಯಾಂಕುಗಳೊಡನೆ ವ್ಯವಹರಿಸತಕ್ಕದ್ದು. ಕೋಶಾಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷರಿಂದ ಅಧಿಕಾರ ಪಡೆದ ಕಾರ್ಯದರ್ಶಿ ಅಧ್ಯಕ್ಷರೊಂದಿಗೆ ಚೆಕ್ಕುಗಳಿಗೆ ರುಜುಹಾಕಿ ಬ್ಯಾಂಕುಗಳೊಡನೆ ವ್ಯವಹರಿಸತಕ್ಕದ್ದು.

ಋ) ಸಂಸ್ಥೆಯ ನಿಯಮಾವಳಿ ತಿದ್ದುಪಡಿ ಸಂದರ್ಭದಲ್ಲಿ ವರಮಾನ ತೆರಿಗೆ ನಿಯಮಗಳಿಗೆ ವಿರೋಧವಾಗಿದ್ದಲ್ಲಿ ಅಂತಹ ತಿದ್ದುಪಡಿಗಳು ಸಿಂಧುವಾಗುವುದಿಲ್ಲ. ಅಲ್ಲದೇ ಪೂರ್ವಭಾವಿಯಾಗಿ ವರಮಾನ ತೆರಿಗೆ ಆಯುಕ್ತರ ಅನುಮತಿ ಪಡೆಯದೆ ಅಂತಹ ನಿಯಮಗಳನ್ನು ತಿದ್ದುಪಡಿ ಮಾಡುವಂತಿಲ್ಲ.

ೠ) ಸಂಸ್ಥೆಯ ವಿಘಟನೆಯ ಸಂದರ್ಭದಲ್ಲಿ ಇರುವ ಆಸ್ತಿಯನ್ನು ಯಾವುದೇ ಸಂದರ್ಭದಲ್ಲಿ ಧರ್ಮದರ್ಶಿ, ಕಾರ್ಯಕಾರಿ ಸಮಿತಿ ಸದಸ್ಯ, ಆಡಳಿತ ವರ್ಗದವರಿಗೆ ಹಂಚುವಂತಿಲ್ಲ. ಬದಲಿಗೆ ೧೯೬೧ರ ವರಮಾನ ತೆರಿಗೆ ಅಧಿನಿಯಮ ೮೦ಜಿ ಪ್ರಕಾರ ಅಂಗೀಕಾರ ಪಡೆದ ಸಂಸ್ಥೆಯ ಉದ್ದೇಶಗಳನ್ನು ಹೋಲುವ ಇತರ ಸಂಘಸಂಸ್ಥೆಗಳಿಗೆ ವರ್ಗಾಯಿಸತಕ್ಕದ್ದು.

ಎ) ಸಂಸ್ಥೆಯು ಜಾತಿ ಮತಗಳ ತಾರತಮ್ಯವಿಲ್ಲದೆ ಎಲ್ಲರಿಗೂ ತೆರೆದಿರಬೇಕು.

ಏ) **ಸ್ಥಾಯಿನಿಧಿ :** ಪರಿಷತ್ತು ಸ್ಥಾಯಿನಿಧಿಯೊಂದನ್ನು ಸ್ಥಾಪಿಸಬೇಕು. ಆ ನಿಧಿಗೆ ಸಾಧ್ಯವಾದಷ್ಟೂ ಹಣವನ್ನು

ಸಂಗ್ರಹಿಸಬೇಕು. ಈ ಹಣದಿಂದ ಬರುವ ಬಡ್ಡಿಯನ್ನು ಕಾರ್ಯಕ್ರಮಗಳಿಗೆ ಉಪಯೋಗಿಸಬೇಕು. ಸಂಸ್ಥೆಯ ಸ್ಥಾಯಿನಿಧಿಯ ಬಡ್ಡಿ ಹಾಗೂ ಇತರೇ ವರಮಾನವನ್ನು ಪರಿಷತ್ತಿನ ಉದ್ದೇಶ ಸಾಧನೆಗಾಗಿ ಮಾತ್ರ ಬಳಸತಕ್ಕದ್ದು. ಅಲ್ಲದೆ ಆ ವರಮಾನವನ್ನು ಬಡ್ಡಿ ಸಾಭಾಂಶ ಮೊದಲಾದ ರೂಪದಲ್ಲಿ ಸದಸ್ಯರಿಗೆ ನೀಡುವಂತಿಲ್ಲ.

ಐ) ಪರಿಷತ್ತಿನ ಸ್ಥಾಯಿನಿಧಿಯನ್ನು ರೂಢಿಸುವ ಸಂದರ್ಭದಲ್ಲಿ ವರಮಾನ ತೆರಿಗೆ ನಿಯಮಗಳನ್ನು ಅನುಸರಿಸತಕ್ಕದ್ದು.

೩೯. ಚುನಾವಣಾ ಉಪಬಂಧನೆಗಳು

ಅ) ಅಸ್ತಿತ್ವದಲ್ಲಿರುವ ಕಾರ್ಯಕಾರಿ ಸಮಿತಿಯ ನಿರ್ದಿಷ್ಟ ಅವಧಿಯು ಮುಗಿಯುವುದಕ್ಕೆ ಮೂರು ತಿಂಗಳು ಮುಂಚಿತವಾಗಿ ಮುಂದಿನ ಕಾರ್ಯಕಾರಿ ಸಮಿತಿಯ ಚುನಾವಣೆಗೆ ಏರ್ಪಾಟುಗಳನ್ನು ನಡೆಸತಕ್ಕದ್ದು.

ಬಿ) ಚುನಾವಣೆಗೆ ಮೂರು ತಿಂಗಳ ಮೊದಲೇ ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ ಕಡಿಮೆ ಅಲ್ಲದ ಅಧಿಕಾರಿಯನ್ನು ಚುನಾವಣಾಧಿಕಾರಿಯಾಗಿ ನೇಮಿಸುವಂತೆ ಸರ್ಕಾರವನ್ನು ವಿನಂತಿಸಿಕೊಳ್ಳತಕ್ಕದ್ದು. ಅವರು ಕಾನೂನು ಬಲ್ಲವರಾಗಿರಬೇಕು. ಹಾಗೂ ಅವರು ನಡೆಸುವ ಪರಿಷತ್ತಿನ ಚುನಾವಣೆಯ ಯಾವ ಅಧಿಕಾರ ಸ್ಥಾನಗಳಿಗೂ ಅಭ್ಯರ್ಥಿಯಾಗಿ ನಿಲ್ಲತಕ್ಕದ್ದಲ್ಲ. ಸದಸ್ಯರಾಗಿದ್ದರೆ ಮತದಾನ ಮಾಡಬಹುದು.

ಇ) ಚುನಾವಣಾಧಿಕಾರಿಯು ಈ ಕೆಳಗಿನ ನಿಯಮವನ್ನನುಸರಿಸಿ ಚುನಾವಣಾ ಕಾರ್ಯಗಳನ್ನು ನಡೆಸಬೇಕು.

ಈ) ಚುನಾವಣಾ ದಿನಾಂಕ ನಿಗದಿಗೊಳಿಸಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಬೇಕು. ಚುನಾವಣೆ ನಡೆಯುವ ೭೫ ದಿನಗಳ ಮೊದಲು ಸದಸ್ಯರ ಪಟ್ಟಿಯನ್ನು ಜಿಲ್ಲಾ ವಿಭಾಗಗಳಾಗಿ ವಿಂಗಡಿಸಿ ಕೇಂದ್ರ ಪರಿಷತ್ತಿನ ಕಚೇರಿಯಲ್ಲಿಯೂ, ಜಿಲ್ಲಾ / ಗಡಿನಾಡ ಘಟಕಗಳಲ್ಲಿಯೂ ಪ್ರಕಟಿಸತಕ್ಕದ್ದು.

ಉ) ಚುನಾವಣಾ ಮತದಾರರ ಪಟ್ಟಿಯ ಬಗ್ಗೆ ಯಾರದಾದರೂ ಆಕ್ಷೇಪಣೆ ಇದ್ದರೆ ಅಂಥವುಗಳನ್ನು ಎರಡು ವಾರ ಅವಕಾಶಕೊಟ್ಟು ಸ್ವೀಕರಿಸಿ ೪೫ ದಿನಗಳ ಮೊದಲು ಮತದಾರರ ಅಂತಿಮ ಪಟ್ಟಿಯನ್ನು ಪರಿಷತ್ತಿನಲ್ಲಿ ಪ್ರಕಟಿಸತಕ್ಕದ್ದು.

ಊ) ನಾಮಪತ್ರಗಳ ಸ್ವೀಕಾರದ ಕೊನೆಯ ದಿವಸವನ್ನು ಪ್ರಕಟಿಸಬೇಕು.

ಋ) ನಾಮಪತ್ರಗಳ ಸ್ವೀಕಾರದ ದಿವಸಕ್ಕೂ ಚುನಾವಣೆ ನಡೆಯುವ ದಿನಕ್ಕೂ ಕನಿಷ್ಠ ೩೦ ದಿವಸಗಳ ಅಂತರವಾದರೂ ಇರಬೇಕು.

ೠ) ನಾಮಪತ್ರಗಳ ಸ್ವೀಕಾರದ ಕೊನೆಯ ದಿನದಿಂದ ಮೂರು ದಿವಸಗಳೊಳಗಾಗಿ ಅವುಗಳ ಪರಿಶೀಲನೆ ನಡೆಯಬೇಕು.

ಎ) ನಾಮಪತ್ರಗಳ ಪರಿಶೀಲನೆಯಾದ ನಂತರ ನಾಮಪತ್ರವನ್ನು ಹಿಂತೆಗೆದುಕೊಳ್ಳುವುದಕ್ಕೆ ಮೂರು ದಿವಸಗಳ ಅವಧಿಯ ಅವಕಾಶವಿರಬೇಕು.

ಏ) ಪರಿಶೀಲಿಸಿ ಉಳಿದಿರುವ ಅಂತಿಮ ಸ್ಪರ್ಧಿಗಳ ಹೆಸರನ್ನು ಕನ್ನಡ ವರ್ಣಮಾಲೆಯ 'ಅ'ಕಾರಾನುಕ್ರಮವಾಗಿ ಪ್ರಕಟಿಸಬೇಕು.

ಐ) ಅಗತ್ಯವಾದಷ್ಟೇ 'ನಾಮಪತ್ರಗಳು' ಬಂದರೆ ಅವರು ಅವಿರೋಧವಾಗಿ ಆಯ್ಕೆಯಾದರೆಂದು ಘೋಷಿಸಬೇಕು.

ಒ) ಹೊರನಾಡ ಮತದಾರರಿಗೆ ಚುನಾವಣೆ ದಿನಕ್ಕಿಂತ ೧೫ ದಿವಸ ಮುಂಚಿತವಾಗಿ ಮತಪತ್ರಗಳನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ರವಾನಿಸಬೇಕು.

ಓ) ಹೊರನಾಡ ಮತದಾರರು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳಿಸುವ ಮತಪತ್ರಗಳನ್ನು ಅಧ್ಯಕ್ಷರ ಚುನಾವಣಾ

ಫಲಿತಾಂಶ ಪ್ರಕಟಿಸುವ ಒಂದು ದಿನಕ್ಕೆ ಮುಂಚಿತವಾಗಿ ಚುನಾವಣಾಧಿಕಾರಿಗಳಿಗೆ ತಲುಪುವಂತೆ ಕಳಿಸತಕ್ಕದ್ದು.

೪೦. **ಅ) ಸದಸ್ಯರ ಪಟ್ಟಿಯನ್ನೂ ಉಮೇದುವಾರಿಕೆಯ ಅಪೇಕ್ಷಾ ಪತ್ರಗಳನ್ನೂ ನಿಗದಿತ ಬೆಲೆಗೆ ಮಾರತಕ್ಕದ್ದು.**

ಆ) ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ೧೦೦ ಜನ ಮತದಾರರಿರುವ ತಾಲ್ಲೂಕು ಕೇಂದ್ರಗಳಲ್ಲಿಯೂ ಮತದಾನ ಕೇಂದ್ರವಿರತಕ್ಕದ್ದು. ಕಡಿಮೆ ಮತದಾರರಿದ್ದಲ್ಲಿ ಹೆಚ್ಚಿರುವ ಪಕ್ಕದ ತಾಲ್ಲೂಕಿನ ಮತದಾರರ ಪಟ್ಟಿಗೆ ಅವರ ಹೆಸರುಗಳನ್ನು ಸೇರಿಸಿ ಅವರಿಗೆ ಅಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸತಕ್ಕದ್ದು. ಹೀಗೆ ಸೇರಿಸಲಾದ ಮತದಾರರ ಒಟ್ಟು ಸಂಖ್ಯೆ ೧೦೦ ಅಥವಾ ಅದಕ್ಕಿಂತ ಹೆಚ್ಚಿರಬೇಕು.

ಇ) ಚುನಾವಣೆ ನಡೆದ ದಿನವೇ ಆಯಾ ಸ್ಥಳದಲ್ಲಿ ಮತಗಳ ಎಣಿಕೆ ನಡೆಯತಕ್ಕದ್ದು. ಜಿಲ್ಲಾ ಘಟಕಗಳ ಅಧ್ಯಕ್ಷರುಗಳ ಚುನಾವಣಾ ಫಲಿತಾಂಶವನ್ನು ಸ್ಥಳದಲ್ಲಿಯೇ ಪ್ರಕಟಿಸತಕ್ಕದ್ದು. ಪರಿಷತ್ತಿನ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಮತಪತ್ರಗಳ ಎಣಿಕೆ ಮಾಡಿ ಅಭ್ಯರ್ಥಿಗಳ ಕ್ರಮವಾಗಿ ಪಡೆದ ಮತಗಳ ಸಂಖ್ಯೆಯನ್ನು ಅಧಿಕೃತ ಪತ್ರದಲ್ಲಿ ನಮೂದಿಸಿ ಆ ಪತ್ರವನ್ನೂ ಮತ್ತು ಎಣಿಕೆಯಾದ ಮತಪತ್ರಗಳನ್ನೂ ಪರಿಷತ್ತಿಗೆ ತಂದು ಚುನಾವಣಾಧಿಕಾರಿಗೆ ತಲುಪಿಸತಕ್ಕದ್ದು. ಚುನಾವಣಾ ತಾರೀಖಿನಿಂದ ಮೂರನೇ ದಿವಸದಂದು ಎಲ್ಲ ಜಿಲ್ಲೆಗಳಿಂದ ತಂದ, ಅಭ್ಯರ್ಥಿಗಳು ಪಡೆದ ಮತಗಳನ್ನೂ ಅಂಚೆಯ ಮೂಲಕ ಬಂದ ಮತಗಳನ್ನೂ ಒಟ್ಟು ಎಣಿಕೆಮಾಡಿ ಅಧ್ಯಕ್ಷರ ಫಲಿತಾಂಶವನ್ನು ಪ್ರಕಟಿಸತಕ್ಕದ್ದು.

ಈ) ಯಾವುದಾದರೂ ಕಾರಣಕ್ಕಾಗಿ ಯಾವುದೇ ಸ್ಥಳದಲ್ಲಿ ಚುನಾವಣೆ ನಡೆಯದೆ ಹೋದರೆ ಅಂತಹ ಸ್ಥಳಗಳ ಚುನಾವಣೆಯನ್ನು ಬಿಟ್ಟು ಉಳಿದ ಸ್ಥಳಗಳ ಮತಗಳ ಎಣಿಕೆ ನಡೆಸಿ ಸ್ಪರ್ಧಿಗಳು ಪಡೆದ ಮತಗಳನ್ನು ಪ್ರಕಟಿಸತಕ್ಕದ್ದು. ಆದರೆ ಅಧ್ಯಕ್ಷರ ಆಯ್ಕೆಯ ಘೋಷಣೆಯನ್ನು ನಿಂತ ಸ್ಥಳದ ಚುನಾವಣೆ ನಡೆಯುವವರೆಗೆ ತಡೆಹಿಡಿಯತಕ್ಕದ್ದು.

ಉ) ಚುನಾವಣೆ ನಿಂತ ಸ್ಥಳದಲ್ಲಿ ಮತ್ತೆ ಹತ್ತು ದಿನಗಳೊಳಗಾಗಿ ಚುನಾವಣೆ ನಡೆತಕ್ಕದ್ದು.

ಊ) ಚುನಾವಣೆ ನಿಂತ ಸ್ಥಳದಲ್ಲಿ ಮರು ಚುನಾವಣೆ ನಡೆದ ಮೂರು ದಿನಗಳಲ್ಲಿ ಪರಿಷತ್ತಿನ ಅಧ್ಯಕ್ಷರ ಫಲಿತಾಂಶವನ್ನು ಘೋಷಿಸತಕ್ಕದ್ದು.

ಋ) ಪರಿಷತ್ತಿನ ಚುನಾಯಿತ ಸ್ಥಾನಕ್ಕೆ ಮತ ನೀಡುವವರು ಚುನಾವಣಾ ತಾರೀಖಿಗೆ ಮೂರು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

ೠ) ಪರಿಷತ್ತಿನ ಜಿಲ್ಲಾ ಘಟಕಗಳ ಗಡಿನಾಡ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು ಐದುವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು

ಎ) ಪರಿಷತ್ತಿನ ಬಾಕಿ ಉಳಿಸಿಕೊಂಡಿರುವವರು ಹಾಗೂ ಕೋರ್ಟಿನಿಂದ ಶಿಕ್ಷೆಗೆ ಒಳಗಾದವರು ಚುನಾವಣೆಗೆ ನಿಲ್ಲಲು ಅರ್ಹಹಾಗಿರುವುದಿಲ್ಲ.

೪೧. ಅ) ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸುವವರು ೧೦೦೦ (ಒಂದು ಸಾವಿರ) ರೂಪಾಯಿ ಠೇವಣಿಯನ್ನೂ, ಜಿಲ್ಲಾ ಗಡಿನಾಡ ಘಟಕಗಳಿಗೆ ಸ್ಪರ್ಧಿಸುವವರು ೫೦೦ (ಐದು ನೂರು) ರೂಪಾಯಿಗಳ ಠೇವಣಿಯನ್ನೂ ಪರಿಷತ್ತಿಗೆ ಸಲ್ಲಿಸತಕ್ಕದ್ದು. ಚುನಾವಣೆಯಲ್ಲಿ ಚಲಾಯಿಸಲಾದ ಒಟ್ಟು ಕ್ರಮಬದ್ಧ ಮತಗಳಲ್ಲಿ (೧/೬) ಆರನೆಯ ಒಂದು ಭಾಗದಷ್ಟು ಮತಗಳನ್ನು ಪಡೆದವರಿಗೆ ಠೇವಣಿಯನ್ನು ಹಿಂದಿರುಗಿಸಲಾಗುವುದು.

ಆ) ಜಿಲ್ಲಾ ಕೇಂದ್ರಗಳಲ್ಲಿ ಒಂದೇ ದಿನ ಚುನಾವಣೆ ನಡೆಸಲು ಸೂಕ್ತ ಉಪಚುನಾವಣಾಧಿಕಾರಿಗಳನ್ನು ಸಹಾಯಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಚುನಾವಣಾಧಿಕಾರಿಗೆ ಅಧಿಕಾರವಿರತಕ್ಕದ್ದು.

ಇ) ಪರಿಷತ್ತಿನ ಸಿಬ್ಬಂದಿಯವರು ಚುನಾವಣೆಗೆ ಸ್ಪರ್ಧಿಸುವಂತಿಲ್ಲ.

ಈ) ನಿಬಂಧನೆಗಳಿಗಾಗಿ ವಿರೋಧವಿಲ್ಲದಂತೆ ಪರಿಷತ್ತಿನ ಚುನಾವಣೆಗಳನ್ನು ಜನತಾ ಪ್ರಾತಿನಿಧಿಕ ಕಾಯ್ದೆಯ ನಿಯಮಗಳಿಗನುಗುಣವಾಗಿ ನಡೆಸತಕ್ಕದ್ದು. ಮತ್ತು ಚುನಾವಣಾ ತಕರಾರು ಅರ್ಜಿಯನ್ನು ಜನತಾ ಪ್ರಾತಿನಿಧಿಕ ಕಾಯ್ದೆಯ ನಿಯಮಗಳಿಗೆ ಅನುಗುಣವಾಗಿ ತೀರ್ಮಾನಿಸತಕ್ಕದ್ದು. ಚುನಾವಣೆ ಫಲಿತಾಂಶ ಘೋಷಣೆ ಆದ ಮೂವತ್ತು ದಿನಗಳೊಳಗಾಗಿ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಲ್ಲಿ ಚುನಾವಣಾ ತಕರಾರು ಅರ್ಜಿಗಳನ್ನು ಸಲ್ಲಿಸಬಹುದು.

ಸಾಹಿತ್ಯ ಪರಿಷತ್ತಿನ ಹೆಸರು

ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾದಾಗ **'ಕರ್ಣಾಟಕ ಸಾಹಿತ್ಯ ಪರಿಷತ್'** ಎಂದು ಇತ್ತು. ಹೀಗೆ ಹೆಸರಿಡಲು ವಿವರಣೆಯನ್ನು ಕರ್ಪೂರ ಶ್ರೀನಿವಾಸರಾವ್ ಅವರು ೧೯೧೯ರಲ್ಲಿ ಹಾಸನದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಪರಿಷತ್ಪತ್ರಿಕೆ ಜೂನ್ ೧೯೧೯ ಪುಟ ೧೨) ಹೀಗೆ ವಿವರಿಸಿದ್ದಾರೆ.

ಕರ್ಣಾಟಕ ಸಾಹಿತ್ಯ ಪರಿಷತ್ ಎಂಬ ಹೆಸರಿನ ಅರ್ಥವೇನು?

'ಕರ್ಣಾಟಕ ಸಾಹಿತ್ಯ ಪರಿಷತ್' ಎಂದರೆ ಕನ್ನಡ ಭಾಷಣ ಗ್ರಂಥಗಳಲ್ಲಿ ಪ್ರಾಚೀನವಾದುವನ್ನು ಪರಿಷ್ಕರಣ ಮಾಡಿ ಪ್ರಕಟಿಸುವುದೂ ಆಧುನಿಕ ಗ್ರಂಥಗಳನ್ನು ಸಂಗ್ರಹಿಸಿ ಉತ್ತಮವಾದುವುಗಳಿಗೆ ಪ್ರೋತ್ಸಾಹವನ್ನು ಕೊಡುವುದೂ ಮತ್ತು ಎಲ್ಲಾ ಕರ್ಣಾಟಕ ದೇಶಭಾಗಗಳಲ್ಲಿಯೂ ಪ್ರಚಾರದಲ್ಲಿರುವ ಈ ಭಾಷೆಯ ವೃದ್ಧಿಯ ವಿಷಯದಲ್ಲಿ ಸಮಯವರಿತು ತಕ್ಕ ಏರ್ಪಾಡುಗಳನ್ನು ಮಾಡಿ ಆಚರಣೆಗೆ ತರುವುದೂ – ಇದೇ ಮೊದಲಾದ ಕಾರ್ಯಗಳನ್ನು ಕೈಗೊಂಡು ನೆರವೇರಿಸಲು ಏರ್ಪಟ್ಟ ವಿದ್ವಾಂಸರ ಸಭೆ ಎಂದು ನಿಷ್ಕೃಷ್ಟಾರ್ಥವು.

೧೯೧೪ರ ನಿಬಂಧನೆಯಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದಿದ್ದರೂ ಮೈಸೂರು ಪ್ರಾಂತದಲ್ಲಿ ಕರ್ಣಾಟಕ ಎಂಬ ಪದವನ್ನು ಬೊಂಬಾಯಿ ಪ್ರಾಂತ್ಯದಲ್ಲಿ ಕರ್ನಾಟಕವೆಂತಲೂ ಬರೆಯುವ ಉಚ್ಚರಿಸುವ ರೂಢಿ ಇತ್ತು. ಪರಿಷತ್ ಪತ್ರಿಕೆ 'ಕರ್ನಾಟಕ' ಎಂಬ ಬಳಸುತ್ತಿತ್ತು. ೧೯೩೮ನೇ ಏಪ್ರಿಲ್ (ಸಂಪುಟ ೨೩ ಸಂಚಿಕೆ ೧) ಸಂಚಿಕೆಯಿಂದ ಬಿ. ಎಂ. ಶ್ರೀ. ಅವರ ಅನುಮತಿಯಂತೆ 'ಕರ್ನಾಟಕ ಸಾಹಿತ್ಯ ಪರಿಷತ್' ಎಂದು ಪತ್ರಿಕೆ ಪ್ರಕಟವಾಗುತ್ತಿತ್ತು.

ಆದರೆ ಬಿ. ಎಂ. ಶ್ರೀ ಕಾಲದಲ್ಲಿ ವಿಸೀ ಹೇಳುವ ಹಾಗೆ, ರಜತಮಹೋತ್ಸವ ಕಾಲದಲ್ಲಿ ಪರಿಷತ್ತಿನ ಹೆಸರನ್ನು ನಿಯಾನ್ಸ್ ಲೈಟಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ ಎಂದು ಹೇಳಲು ಹೊರಟಾಗ, ಕರ್ಣಾಟಕ ಬದಲಾವಣೆ ಬಗ್ಗೆ ನ – ಣ ಚರ್ಚೆ ಪ್ರಾರಂಭವಾಯಿತು. ಜಿ. ಪಿ. ರಾಜರತ್ನಂ ಆದಿಯಾಗಿ ಹತ್ತಾರು ಜನ ವಿದ್ವಾಂಸರು ಈ ಚರ್ಚೆಯಲ್ಲಿ ಪಾಲ್ಗೊಂಡರು.

೧೯೩೮ರ ಡಿಸೆಂಬರ್ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ **ಕನ್ನಡ ಸಾಹಿತ್ಯ ಪರಿಷತ್ತು** ಎಂದು ಹೆಸರಿಸಲು ನಿರ್ಧರಿಸಲಾಯಿತು. ಪರಿಷತ್ತಿನ ಪತ್ರಿಕೆ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಆಯಿತು.

ಪರಿಷತ್ತಿನ ಕಾರ್ಯಕಾರಿ ಸಮಿತಿ

ಯಾವುದೇ ಒಂದು ಸಂಸ್ಥೆ ಯಶಸ್ವಿಯಾಗಿ ನಿರಂತರವಾಗಿ ಕಾರ್ಯನಿರ್ವಹಿಸಬೇಕಾದರೆ ಅದರ ಕಾರ್ಯಕಾರಿ ಸಮಿತಿ ಸಮರ್ಥ, ದಕ್ಷ ಪ್ರಾಮಾಣಿಕ ಪದಾಧಿಕಾರಿಗಳನ್ನು ಒಳಗೊಂಡಿರಬೇಕು. ಕನ್ನಡ ಸಾಹಿತ್ಯ ಪರಿಷತ್ತು ಮೊದಲಿನಿಂದಲೂ ನಾಡಿಗೆ ಸೇವೆ ಸಲ್ಲಿಸಿದ ಸಾಹಿತಿ, ವಿದ್ವಾಂಸರು, ಸಾರ್ವಜನಿಕ ಗಣ್ಯರಿಂದ ಕೂಡಿದೆ. ಕಾರ್ಯಕಾರಿ ಸಮಿತಿಯಲ್ಲಿ ಮೊದಲಿಗೆ ಕೇವಲ ಸಾಹಿತಿ ವಿದ್ವಾಂಸರೇ ಹೆಚ್ಚಾಗಿದ್ದರು. ಈಚೆಗೆ ರಾಜ್ಯಾಧ್ಯಕ್ಷರು, ಪದಾಧಿಕಾರಿಗಳು ಜಿಲ್ಲಾ ಅಧ್ಯಕ್ಷರು, ನಾಮಕರಣ ಸದಸ್ಯರು, ಪ್ರತಿನಿಧಿಗಳು ಕೇವಲ ವಿದ್ವಾಂಸರು, ಸಾಹಿತಿಗಳಷ್ಟೇ ಅಲ್ಲದೆ ವಿವಿಧ ಸಾರ್ವಜನಿಕ ರಂಗಗಳಿಂದ ಬಂದ ಸದಸ್ಯರಿದ್ದು ನಾಡಿದ ಪ್ರಾತಿನಿಧಿಕ ಸಂಸ್ಥೆ ಆಗಿದೆ ಪರಿಷತ್ತು. ಇದಕ್ಕೆ ನಿದರ್ಶನವಾಗಿ ೧೯೧೫ರಲ್ಲಿ ಪರಿಷತ್ತಿನ ಸ್ಥಾಪನೆ ಸಂದರ್ಭದಲ್ಲಿ ಇದ್ದ ಕಾರ್ಯಕಾರಿ ಸಮಿತಿಯ ಸ್ವರೂಪವನ್ನು ಪ್ರಸಕ್ತ ಇರುವ ಕಾರ್ಯಕಾರಿ ಸಮಿತಿಯನ್ನು ಗಮನಿಸಬಹುದು.

೧೯೧೫-೧೬ರಲ್ಲಿದ್ದ ಕಾರ್ಯಸಮಿತಿಯ ರಚನಾ ಸ್ವರೂಪ

೧. ಮಹಾಪೋಷಕರು

೨. ಪೋಷಕರು

೩. ಉದ್ಧಾರಕರು

೪. ಪ್ರದಾತೃಗಳು

೫. ಆಶ್ರಯದಾತರು

೬. ಸಹಾಯಕರು

೭. ಆಜೀವಸದಸ್ಯರು

೮. ಸಾಧಾರಣ ಸದಸ್ಯರು

೯. ಗೌರವ ಸದಸ್ಯರು

೧೦. ವಿಶಿಷ್ಟ ಸದಸ್ಯರು

(ಸಮಿತಿಪಟ್ಟಿ ಹಿಂದೆ ಕೊಟ್ಟಿದೆ)

ಈಗ ೨೦೧೫ರಲ್ಲಿ (ಪರಿಷತ್ತಿಗೆ ನೂರು ವರ್ಷ ತುಂಬಿದ ವರ್ಷ) ನಿಬಂಧನೆಯ ಪ್ರಕಾರ ಕಾರ್ಯಕಾರಿ ಸಮಿತಿಯ ರಚನಾ ಸ್ವರೂಪ ಹೀಗೆ ಇದೆ :

೧. ಅಧ್ಯಕ್ಷರು	೧
೨. ಗೌರವ ಕಾರ್ಯದರ್ಶಿಗಳು	೨
೩. ಗೌರವ ಕೋಶಾಧ್ಯಕ್ಷರು	೧

(ಇವರು ಪದಾಧಿಕಾರಿಗಳು ಆಗಿರುತ್ತಾರೆ)

ಸದಸ್ಯರು

೪. ಜಿಲ್ಲಾ ಘಟಕಗಳ ಚುನಾಯಿತ ಅಧ್ಯಕ್ಷರು	೨೭
೫. ಗಡಿನಾಡು ಘಟಕಗಳ ಚುನಾಯಿತ ಅಧ್ಯಕ್ಷರು	೫

(ತಮಿಳುನಾಡು–ಆಂಧ್ರ–ಕೇರಳ–ಮಹಾರಾಷ್ಟ್ರ–ಗೋವಾ)

೬. ಪರಿಷತ್ತಿನ ನಿಕಟಪೂರ್ವ ಸಮ್ಮೇಳನಾಧ್ಯಕ್ಷರು ೧

೭. ಪರಿಷತ್ತಿನ ನಿಕಟಪೂರ್ವ ಸಮ್ಮೇಳನಾಧ್ಯಕ್ಷರು ೧

೮. ಕನ್ನಡ ಅಧ್ಯಯನ ವ್ಯವಸ್ಥೆಯುಳ್ಳ ವಿಶ್ವವಿದ್ಯಾನಿಲಯದ ಪ್ರತಿನಿಧಿ (ಕನ್ನಡ ಅಕ್ಷರಾನುಕ್ರಮಣಿಕೆಯಲ್ಲಿ) ೨

೯. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ೧

೧೦. ಮಹಿಳಾ ಸಾಹಿತಿ ೧

೧೧. ಪರಿಶಿಷ್ಟ ಜಾತಿ ಪ್ರತಿನಿಧಿ ೧

೧೨. ಸಂಘ ಸಂಸ್ಥೆಗಳ ಪ್ರತಿನಿಧಿ ೧

ಒಟ್ಟು ೪೪

[ಸದಸ್ಯರ ಮತ್ತು ಪದಾಧಿಕಾರಿಗಳ ಆಯ್ಕೆಯ ವಿಧಾನಗಳು ಚಾಲ್ತಿಯಲ್ಲಿರುವ ೧೯೯೮ರ ನಿಬಂಧನೆಗಳ ಪ್ರಕಾರ ಜಾರಿಯಲ್ಲಿದೆ. ನಿಬಂಧನೆಗಳನ್ನು ಈ ಗ್ರಂಥದ ಬೇರೆ ಭಾಗದಲ್ಲಿ ಕೊಟ್ಟಿದೆ ನೋಡಿ.]

ಈ ಶತಮಾನೋತ್ಸವ ವರ್ಷದಲ್ಲಿ ಪರಿಷತ್ತಿನ ಕಾರ್ಯಕಾರಿ ಸಮಿತಿ ಹೀಗಿದೆ :

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಪದಾಧಿಕಾರಿಗಳು

ಶ್ರೀ ಸಿ.ಕೆ. ರಾಮೇಗೌಡ, ಗೌರವ ಕಾರ್ಯದರ್ಶಿ

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

ಸದಸ್ಯರು

ಶ್ರೀ ಟಿ. ತಿಮ್ಮೇಶ್, ಬೆಂಗಳೂರು ನಗರ

ಶ್ರೀ ಹುಲಿಕಲ್ ನಟರಾಜ್, ಬೆಂಗಳೂರು ಗ್ರಾಮಾಂತರ

ಶ್ರೀ ಬಿ.ಟಿ. ನಾಗೇಶ್, ರಾಮನಗರ

ಶ್ರೀ ಜಿ.ಜಿ. ನಾಗರಾಜ, ಕೋಲಾರ

ಶ್ರೀ ವೈ.ಎಲ್. ಹನುಮಂತರಾವ್, ಚಿಕ್ಕಬಳ್ಳಾಪುರ

ಡಾ. ಸೋ.ಮು. ಭಾಸ್ಕರಾಚಾರ್ಯ, ತುಮಕೂರು

ಶ್ರೀ ಆರ್. ಮಲ್ಲಿಕಾರ್ಜುನಯ್ಯ, ಚಿತ್ರದುರ್ಗ

ಶ್ರೀ ಎ.ಆರ್. ಉಜ್ಜನಪ್ಪ, ದಾವಣಗೆರೆ

ಶ್ರೀ ಡಿ.ಮಂಜುನಾಥ್, ಶಿವಮೊಗ್ಗ

ಶ್ರೀ ಎಂ. ಚಂದ್ರಶೇಖರ್, ಮೈಸೂರು

ಶ್ರೀ ಸೋಮಶೇಖರ ಬಿಸಲ್ವಾಡಿ, ಚಾಮರಾಜನಗರ

ಶ್ರೀಮತಿ ಮೀರಾ ಶಿವಲಿಂಗಯ್ಯ, ಮಂಡ್ಯ
ಡಾ. ಎಚ್.ಎಲ್. ಜನಾರ್ಧನ, ಹಾಸನ
ಶ್ರೀ ಟಿ.ಪಿ.ರಮೇಶ್, ಕೊಡಗು
ಶ್ರೀ ಎನ್.ಎಸ್. ಶಿವಸ್ವಾಮಿ, ಚಿಕ್ಕಮಗಳೂರು
ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ
ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯ.ರು. ಪಾಟೀಲ, ಬೆಳಗಾವಿ
ಶ್ರೀ ಮಲ್ಲಿಕಾರ್ಜುನ ಯಂಡಿಗೇರಿ, ವಿಜಾಪುರ
ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟೆ
ಡಾ. ಲಿಂಗರಾಜ ರು. ಅಂಗಡಿ, ಧಾರವಾಡ
ಶ್ರೀ ಗುರುಶಾಂತಪ್ಪ ಬಿ. ಮಾಸಣಗಿ, ಹಾವೇರಿ
ಶ್ರೀ ಶಿವಪ್ಪ ಮರಿಬಸಪ್ಪ ಕುರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರ ಕನ್ನಡ
ಶ್ರೀ ಮಹಿಪಾಲರೆಡ್ಡಿ ಮುನ್ನೂರ, ಗುಲ್ಬರ್ಗ
ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ, ಬೀದರ್
ಶ್ರೀ ಮಹಾಂತೇಶ ಮಸ್ಕಿ, ರಾಯಚೂರು
ಶ್ರೀ ವೀರಪ್ಪ ಮ. ನಿಂಗೋಜಿ, ಕೊಪ್ಪಳ
ಶ್ರೀ ಸಿರಿಗೇರಿ ಯರಿಸ್ವಾಮಿ, ಬಳ್ಳಾರಿ
ಶ್ರೀ ಎಚ್.ಬಿ.ಎಲ್.ರಾವ್, ಮಹಾರಾಷ್ಟ್ರ
ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ
ಶ್ರೀ ಕೆ.ಪಿ.ಆಚಾರ್ಯ, ತಮಿಳುನಾಡು
ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ
ಡಾ. ನಾ. ಡಿಸೋಜ, ನಿಕಟಪೂರ್ವ ಸಮ್ಮೇಳನಾಧ್ಯಕ್ಷರು
ಡಾ. ನಲ್ಲೂರು ಪ್ರಸಾದ್ ಆರ್.ಕೆ., ನಿಕಟಪೂರ್ವ ಅಧ್ಯಕ್ಷರು
ಡಾ. ವಿಜಯದೇವಿ ಎಸ್.ಎಸ್., ಮಹಿಳಾ ವಿ.ವಿ. ಪ್ರತಿನಿಧಿ
ಡಾ. ವಿಜಯ ಪೂಣಚ್ಚ ತಂಬಂಡ, ಕನ್ನಡ ವಿ.ವಿ.ಪ್ರತಿನಿಧಿ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಶ್ರೀಮತಿ ಬಿ.ಟಿ. ಲಲಿತಾ ನಾಯಕ್, ಮಹಿಳಾ ಪ್ರತಿನಿಧಿ
ಡಾ. ಕಾ.ವೆಂ. ಶ್ರೀನಿವಾಸಮೂರ್ತಿ, ಪರಿಶಿಷ್ಟ ಜಾತಿ ಪ್ರತಿನಿಧಿ
ಶ್ರೀ ಬಿ.ಎಚ್. ಸತೀಶಗೌಡ, ಸಂಘಸಂಸ್ಥೆಗಳ ಪ್ರತಿನಿಧಿ

ಪರಿಷತ್ತಿನ ಸದಸ್ಯವರ್ಗ ಮತ್ತು ಸದಸ್ಯತ್ವದ ಶುಲ್ಕಗಳು

ಪರಿಷತ್ತಿನ ಸದಸ್ಯರಾಗುವವರಿಗೆ ಗೊತ್ತಾದ ಚಂದಾದಾರ ವಿವಿಧ ವರ್ಗಗಳಿಗೆ ನಿಬಂಧನೆಗಳಲ್ಲಿ ನಿರ್ದಿಷ್ಟವಾಗಿತ್ತು. ನಿಬಂಧನೆಗಳಲ್ಲಿ ತಿದ್ದುಪಾಟುಗಳಾದಂತೆ ಸದಸ್ಯರಾದವರಿಗೆ ಚಂದಾಶುಲ್ಕ, ಸದಸ್ಯ ಅರ್ಹತೆ, ಸದಸ್ಯರ ಹಕ್ಕುಗಳು ಈ ೩

ವಿಷಯಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಕೆಲವು ನಿದರ್ಶನಗಳನ್ನು ಕಾಣಬಹುದು.

ಸದಸ್ಯತ್ವ ಶುಲ್ಕಗಳು (ರೂ.ಗಳಲ್ಲಿ)

ಸದಸ್ಯ ವರ್ಗ	೧೯೧೫	೧೯೩೫	೧೯೪೦	೧೯೪೭	೧೯೫೪	೧೯೫೭	೧೯೬೧
೧. ಮಹಾಪೋಷಕರು	–	–	–	–	–	–	–
೨. ಪೋಷಕರು	–	–	–	–	–	–	–
೩. ಉದ್ಧಾರಕರು	೧೦೦೦	೧೦೦೦	೧೦೦೦	೧೦೦೦	೧೦೦೦	೧೦೦೦	೩೦೦೦
೪. ಪ್ರದಾತೃಗಳು	೫೦೦	೫೦೦	೫೦೦	೫೦೦	೫೦೦	೫೦೦	೧೦೦೦
೫. ಆಶ್ರಯದಾತರು	೨೫೦	೨೫೦	೨೫೦	೨೫೦	೨೫೦	೨೫೦	೫೦೦
೬. ಸಹಾಯಕರು	೧೦೦	೧೦೦	೧೦೦	೧೦೦	–	–	–
೭. ಆಜೀವ ಸದಸ್ಯರು	೫೦	೫೦	೫೦	೫೦	೧೦೦	೧೦೦	೧೦೦
೮. ಸಾಧಾರಣ ಸದಸ್ಯರು	೬	೩	೪	೪	೬	೬	೬
೯. ಗೌರವ ಸದಸ್ಯರು	–	–	–	–	–	–	–
೧೦. ವಿಶಿಷ್ಟ ಸದಸ್ಯರು	–	–	–	–	–	–	–
೧೧. ಅಂಗಸಂಸ್ಥೆಗಳು (ಅ) ಆಜೀವ ೧೯೩೫ರಿಂದ ಈವರೆಗೆ ಬಂದಿದೆ		–	೫೦	೫೦	೧೫೦	–	೧೫೦
(ಆ) ಸಾಮಾನ್ಯ ವಾರ್ಷಿಕ		–	೬	೭	೧೨	–	೧೨
೧೨. ಅಭಿಮಾನಿಗಳು (ಮಹಿಳೆಯರು ಮತ್ತು ವಿದ್ಯಾರ್ಥಿಗಳು) (೧೯೪೦ರಿಂದ ಈವರೆಗೆ ಬಂದಿದೆ		–	೮ಆಣೆ	೧ರೂ	–	–	–
ಅಂಗ ಸಂಸ್ಥೆ ಪೋಷಕಸಂಸ್ಥೆ ದಾತೃಸಂಸ್ಥೆ	–	–	–	೫೦೦೦	೫೦೦೦	೫೦೦೦	೫೦೦೦

	೧೯೭೩	೧೯೭೮	೧೯೮೩	೧೯೮೮	೧೯೮೮	೧೯೮೮	
೧. ಮಹಾಪೋಷಕರು	–	–	೧೦೦೦	೫೦೦೦	೫೦೦೦	೧೦೦೦೦	
೨. ಪೋಷಕರು	–	–	೨೦೦೦	೨೦೦೦	೨೦೦೦	೫೦೦೦	
೩. ಉದ್ಧಾರಕರು	೩೦೦೦	೩೦೦೦	೧೦೦	೧೦೦೦	೧೦೦೦೦	–	
೪. ಪ್ರದಾತೃಗಳು	೧೦೦೦	೨೦೦೦	೧೫೦	೧೫೦	೧೫೦	೨೫೦	
೫. ಆಶ್ರಯದಾತರು	೫೦೦	೧೦೦	೧೫	೧೫	೧೫	೫೦	
೬. ಸಹಾಯಕರು	–	–	–	–	–	–	
೭. ಆಜೀವ ಸದಸ್ಯರು		೧೫೦	–	–	–	–	–

೮. ಸಾಧಾರಣ ಸದಸ್ಯರು	೧೦	೧೦	೫೦೦	೫೦೦	೫೦೦	೨೫೦೦	
೯. ಗೌರವ ಸದಸ್ಯರು	–	–	೫೦	೫೦	೫೦	೫೦	
೧೦. ವಿಶಿಷ್ಟ ಸದಸ್ಯರು	–	–		–	–	–	–
೧೧.ಅಂಗಸಂಸ್ಥೆಗಳು	೨೫೦	೨೫೦					
(ಅ) ಆಜೀವ							
೧೯೩೫ರಿಂದ ಈವರೆಗೆ ಬಂದಿದೆ							
(ಆ) ಸಾಮಾನ್ಯ ವಾರ್ಷಿಕ	೨೫	೫೦					
೧೨. ಅಭಿಮಾನಿಗಳು			–	–	–	–	
(ಮಹಿಳೆಯರು ಮತ್ತು ವಿದ್ಯಾರ್ಥಿಗಳು)	–	–					
(೧೯೪೦ರಿಂದ ಈವರೆಗೆ ಬಂದಿದೆ							
ಅಂಗ ಸಂಸ್ಥೆ ಪೋಷಕಸಂಸ್ಥೆ	೫೦೦೦	೫೦೦	೫೦೦	೫೦೦	೫೦೦	೨೫೦೦	
ದಾತೃಸಂಸ್ಥೆ	–	–	–	೧೦೦೦			

ಮೇಲಿನ ಪಟ್ಟಿಯನ್ನು ಗಮನಿಸಿದರೆ ೧೯೧೫ರಿಂದ ೧೯೯೮ರವರೆಗಿನ ಪರಿಷತ್ತಿನ ನಿಬಂಧನೆಗಳನ್ನು ಪರಿಶೀಲಿಸಿದರೆ ಈ ಕೆಳಕಂಡ ಬದಲಾವಣೆಗಳನ್ನು ಗುರುತಿಸಬಹುದು.

೧. ಮಹಾಪೋಷಕರು ಮತ್ತು ಪೋಷಕರು ೧೯೧೩-೧೯೧೭ವರೆಗಿತ್ತು. ಈ ವರ್ಗದವರು ರಾಜ್ಯಾಧಿಪತಿಗಳು, ಶ್ರೀಮಂತರು, ಉನ್ನತಪದವಿಯಲ್ಲಿರುವವರು ಮಾತ್ರ ಆಗಬಹುದು ಎಂದಿತ್ತು. ಆ ಪ್ರಕಾರ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರು ಮಹಾಪೋಷಕರಾಗಿದ್ದರು.

ಮಹಾಪೋಷಕರು ಮತ್ತು ಪೋಷಕರು ಚಂದಾ ಕೊಡಬೇಕಿರಲಿಲ್ಲ. ೧೯೬೭ರಿಂದ ಉದ್ಧಾರಕರು ಬದಲಾಗಿ ಪೋಷಕರು ಎಂದು ಕರೆಯಲಾಯಿತು. ಹಿಂದಿನ ಮಹಾಪೋಷಕ ವರ್ಗವನ್ನು ಕೈಬಿಡಲಾಯಿತು. ಉದ್ಧಾರಕರು ಎಂಬ ಹೆಸರನ್ನು ಕೈ ಬಿಡಲಾಯಿತು.

೨. ಪ್ರಾರಂಭದಿಂದಲೂ ಇದ್ದ ಗೌರವ ಸದಸ್ಯರು ಮತ್ತು ವಿಶಿಷ್ಟ ಸದಸ್ಯರ ವರ್ಗಗಳನ್ನು ೧೯೪೦ರ ವೇಳೆಗೆ ಕೈಬಿಡಲಾಯಿತು.

೩. ೧೯೪೦ರಿಂದ ಅಂಗಸಂಸ್ಥೆಗಳು (ಅ) ಆಜೀವ (೫೦ರೂ) (ಆ) ಸಾಮಾನ್ಯ(೬ರೂ) ಅಭಿಮಾನಿಗಳು (ಮಹಿಳೆಯರು ಮತ್ತು ವಿದ್ಯಾರ್ಥಿಗಳು) (೮ಆಣೆ) ಎಂಬ ವರ್ಗಗಳನ್ನು ಸೃಷ್ಟಿಸಲಾಯಿತು.

೪. ೧೯೫೪ ನಿಬಂಧನೆಗಳಲ್ಲಿ ಅಭಿಮಾನಿಗಳು ವರ್ಗವನ್ನು ತೆಗೆದುಹಾಕಲಾಯಿತು.

೫. ೧೯೫೭ರಲ್ಲಿ ೧. ಉದ್ಧಾರಕರು, ೨. ಪ್ರದಾತೃಗಳು , ೩. ಆಶ್ರಯದಾತರು, ೪. ಆಜೀವ ಸದಸ್ಯರು, ೫. ವಾರ್ಷಿಕ ಸದಸ್ಯರು, ೬. ಗೌರವಸದಸ್ಯರು- ಎಂದು ೬ ವರ್ಗಗಳನ್ನು ಮಾಡಲಾಯಿತು.

೬ ೧೯೬೮ರ ನಿಬಂಧನೆಗಳಲ್ಲಿ ಸದಸ್ಯವರ್ಗವನ್ನು ಪೋಷಕರು (೩೦೦೦) ಉದ್ಧಾರಕರು (೧೦೦೦) ಪ್ರದಾತೃಗಳು(೫೦೦), ಆಜೀವ ಸದಸ್ಯರು (೧೦೦) ಸಾಮಾನ್ಯ ಸದಸ್ಯರು (ವಾರ್ಷಿಕ) ೬ ರೂ. ಎಂದು ನಿರ್ಧರಿಸಲಾಯಿತು.

ಸದಸ್ಯ ಸಂಸ್ಥೆಗಳು ಶೀರ್ಷಿಕೆಯಲ್ಲಿ

ಪೋಷಕ ಸಂಸ್ಥೆಗಳು (೫೦೦೦) ಆಜೀವಸಂಸ್ಥೆಗಳು (೧೫೦) ವಾರ್ಷಿಕ ಸಂಸ್ಥೆಗಳು (೧೨) ಎಂದು ನಿರ್ಧರಿಸಲಾಗಿತ್ತು. ಪ್ರವೇಶಧನ ೧ ರೂ ಎಂದು ಗೊತ್ತುಮಾಡಲಾಯಿತು.

೭. ೧೯೭೩ರಲ್ಲಿ ಸಾಮಾನ್ಯ ಸದಸ್ಯತ್ವವನ್ನು ೧೦ ರೂ ಆಜೀವ ಸಂಸ್ಥೆ ಸದಸ್ಯತ್ವವನ್ನು ೨೫೦ಕ್ಕೆ ಸಾಮಾನ್ಯ ಸಂಸ್ಥೆ ಸದಸ್ಯತ್ವವನ್ನು ೨೫ರೂಗೆ ಏರಿಸಲಾಯಿತು.

೮. ೧೯೮೩ರಲ್ಲಿ ಸದಸ್ಯತ್ವದ ಚಂದಾ ಹೆಚ್ಚಿಸಲಾಯಿತು. ಪೋಷಕರು ೫೦೦೦ ಪ್ರದಾತೃ ೨೦೦೦ ದಾತೃ ೧೦೦೦ ಸಾಮಾನ್ಯ ಸದಸ್ಯತ್ವ ೧೫ ಸಾಮಾನ್ಯ ಸಂಸ್ಥೆ ೫೦ಕ್ಕೆ ಏರಿಸಲಾಯಿತು.

೯. ೧೯೮೮ರಲ್ಲಿ ಮತ್ತೆ ಅಧಿಕವಾಗಿ ಸದಸ್ಯ ವರ್ಗದ ಚಂದಾ ದರವನ್ನು ಹೆಚ್ಚಿಸಲಾಯಿತು.

ಪೋಷಕರು (೫೦೦೦) ಪ್ರದಾತೃ ೨೦೦೦ ದಾತೃ (೧೦೦೦) ಆಜೀವ ಸದಸ್ಯರು ೧೫೦ ಸಾಮಾನ್ಯ ಸದಸ್ಯರು (ವಾರ್ಷಿಕ) ೧೫ ರೂ ಸದಸ್ಯಸಂಸ್ಥೆ ಪೋಷಕ ಸಂಸ್ಥೆ (೫೦೦೦) ಆಜೀವ ಸಂಸ್ಥೆ ೫೦೦ ಸಾಮಾನ್ಯ ಸಂಸ್ಥೆ ವರ್ಷಕ್ಕೆ ೫೦ ರೂಗೆ ಏರಿಸಲಾಯಿತು. ಪ್ರವೇಶ ಧನವನ್ನು ೨ ರೂಗೆ ಹೆಚ್ಚಿಸಲಾಯಿತು.

೧೦. ೧೯೯೮ರಲ್ಲಿ ಪೋಷಕರು ೧೦೦೦೦ ದಾತೃ ೫೦೦೦ ಆಜೀವನ ಸದಸ್ಯರು(೨೫೦) (೫೦೦ ರಿಂದ ೨೫೦ಕ್ಕೆ ಇಳಿಸಿದೆ) ವಾರ್ಷಿಕ ಸದಸ್ಯರು ೫೦ ರೂ. ಪೋಷಕ ಸಂಸ್ಥೆ ೨೫೦೦೦ ದಾತೃಸಂಸ್ಥೆ ೧೦೦೦೦ ಆಜೀವ ಸಂಸ್ಥೆ ೨೫೦೦೦ ವಾರ್ಷಿಕ ಸದಸ್ಯ ಸಂಸ್ಥೆ ೨೫೦. ಸದಸ್ಯತ್ವ ಶುಲ್ಕ ೧೦ ರೂ. ಇದೇ ದರಗಳು ಶತಮಾನೋತ್ಸವ ವರ್ಷದಲ್ಲಿ (೨೦೧೫ರಲ್ಲಿ) ಜಾರಿಯಲ್ಲಿದೆ.

ಪರಿಷತ್ತಿನ ಸದಸ್ಯವರ್ಗಗಳಲ್ಲಿ ಹೆಸರುಗಳನ್ನು ಬದಲಿಸುವುದರ ಜತೆಗೆ ಸದಸ್ಯತ್ವದ ಚಂದಾವನ್ನು ಹೆಚ್ಚಿಸಲಾಗಿದೆ. ವಿಶೇಷ ಮತ್ತು ಗೌರವ ಸದಸ್ಯವರ್ಗಗಳು ಬಿಟ್ಟು ಹೋದುದನ್ನು ಗಮನಿಸಿ ಹಂಪನಾ ಅವರು ಗೌರವ ಸದಸ್ಯತ್ವವನ್ನು ಹೊಸರೂಪದಲ್ಲಿ ಅಸ್ತಿತ್ವಕ್ಕೆ ತಂದರು.

ಇಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಪರಿಷತ್ತಿನ ಸದಸ್ಯವರ್ಗಗಳಿಗೆ ಸದಸ್ಯ ಶುಲ್ಕವನ್ನು ಗೊತ್ತು ಮಾಡಿತೇ ಹೊರತು ಯಾವ ಕಾಲದಲ್ಲೂ ಅರ್ಹತೆಯನ್ನು ಗೊತ್ತುಮಾಡಿಲ್ಲ. ವಯೋಮಿತಿ ವಿನಾ ಮತ್ತಾವ ಅರ್ಹತೆಗಳೂ ಈಗಿಲ್ಲ

ಇಂದು ೨ ಲಕ್ಷಕ್ಕೂ ಮೀರಿ ಸದಸ್ಯರಿರುವುದರಿಂದ ಒಂದು ಕನ್ನಡ ನುಡಿ ಸಂಚಿಕೆಯನ್ನು ಕಳಿಸಬೇಕಾದರೆ ಸದಸ್ಯರಿಗೆ ಲಕ್ಷಾಂತರ ರೂ ಖರ್ಚಾಗುತ್ತಿದೆ. ಚುನಾವಣೆ ವೆಚ್ಚವಂತೂ ಹೇಳತೀರದಾಗಿದೆ. ಸಾಮಾನ್ಯರು ಯಾರೂ ಆಯ್ಕೆಯಾಗಿ ಬರುವ ಸಂದರ್ಭವೇ ಅಸಾಧ್ಯವಾಗಿದೆ. ಅನೇಕ ಸಾಹಿತಿಗಳು ವಿದ್ವಾಂಸರು ಪರಿಷತ್ತಿಗೆ ಸದಸ್ಯರಾಗಿಲ್ಲ. ಈಗಿನ ಪರಿಸ್ಥಿತಿಯನ್ನು ತೀವ್ರವಾಗಿ ಗಮನಿಸುವ ಕಾಲ ಬಂದಿದೆ.

ನಿಬಂಧನೆಗಳ ಕುರಿತು ಬದಲಾವಣೆ ಮಾಡಲು ಸಮಿತಿಯೊಂದು ರಚಿತವಾಗಿದ್ದರೂ ಕಾರಣಾಂತರಗಳಿಂದ ಅದು ಕಾರ್ಯ ಮಾಡದಂತಾಗಿದೆ.

ಕನ್ನಡ ನಾಡಿನ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಆದ್ದರಿಂದ ಲಕ್ಷಗಟ್ಟಲೆ ಕನ್ನಡಿಗರು ಸದಸ್ಯರಾಗಬೇಕೆಂಬುದು ಹಲವರ ವಾದ. ಈಗಾಗಿರುವ ಸದಸ್ಯ ಸಂಖ್ಯೆ ಸಾಲದು ಎನ್ನುವವರೂ ಇದ್ದಾರೆ. ಅತ್ಯಧಿಕ ಸಂಖ್ಯೆಯಲ್ಲಿ ಪರಿಷತ್ತಿನ ಸದಸ್ಯರಾಗಲು ಯಾರೂ ಬೇಡವೆನ್ನುವುದಿಲ್ಲ. ಆದರೆ ಸದಸ್ಯರಲ್ಲಿ ಜಿಲ್ಲಾ, ತಾಲ್ಲೂಕು ಸಮಿತಿಗಳಿಗೆ, ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಿಲ್ಲುವವರಿಗೆ ಈಗಿರುವ ನಿಯಮಗಳ ಜತೆಗೆ ಮತ್ತೆ ಕೆಲವನ್ನು ನಿಬಂಧನೆಗಳನ್ನು ಪರಿಷತ್ತಿನ ಹಿತದೃಷ್ಟಿಯಿಂದ ಮಾಡಬೇಕಾಗಿದೆ. ಚುನಾವಣಾ ವಿಧಾನದಲ್ಲೂ ಮಾರ್ಪಾಟಾಗಬೇಕಾಗಿದೆ. ಈಗಿರುವ ನಿಬಂಧನೆಗಳು ಅತಿ ಸಂಕ್ಷಿಪ್ತವಾಗಿದ್ದು ಸಾಕಷ್ಟು ವಿಷಯಗಳನ್ನೊಳಗೊಂಡ ನಿಬಂಧನೆಗಳು ಜಾರಿಗೆ ಬರಬೇಕಾಗಿದೆ.

ಪರಿಷತ್ತನ್ನು ಕುರಿತು ಪರಿಸ್ಥಿತಿಗೆ ತಕ್ಕಂತೆ ಕಾಲಕಾಲಕ್ಕೆ ಸಂಸ್ಥೆಯ ನಿಬಂಧನೆಗಳನ್ನು ಕಾನೂನು ತಜ್ಞರು, ಸಾಹಿತಿಗಳು, ವಿದ್ವಾಂಸರು, ಅನುಭವಿಗಳು, ಸಂಘಟಕರು ಚರ್ಚಿಸಿ ರೂಪಿಸಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ.

ಪರಿಷತ್ತಿನ ಗೌರವ ಸದಸ್ಯತ್ವ (ಫೆಲೋಷಿಪ್)

ಇದನ್ನು ಪರಿಷತ್ತಿನ ಅಧ್ಯಕ್ಷರಾಗಿದ್ದ ಹಂಪನಾ ಅವರ ಕಾಲದಲ್ಲಿ ಪ್ರಾರಂಭಿಸಲಾಯಿತು. ದೇಶದ ಪ್ರತಿಷ್ಠಿತ ಸಾಹಿತ್ಯಕ ಸಂಸ್ಥೆಗಳಲ್ಲಿ ನಾನಾಬಗೆಯ ಸದಸ್ಯತ್ವಗಳಿರುತ್ತವೆ. ಸಾಮಾನ್ಯ ಸದಸ್ಯತ್ವ, ಆಜೀವ ಸದಸ್ಯತ್ವ, ಪೋಷಕರು, ಮಹಾಪೋಷಕರು ಇತ್ಯಾದಿ ಹಲವು ಬಗೆಯ ಸದಸ್ಯತ್ವಗಳನ್ನು ಆಯಾ ಸಂಸ್ಥೆಗಳ ಅಂಗರಚನೆಯ ನಿಯಮಾವಳಿ ಅನುಸಾರ ಇರುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯ ವರ್ಗ (೧೯೨೫ರಿಂದ ೧೯೪೦ರವರೆಗೆ) ನಿಬಂಧನೆಗಳ ಪ್ರಕಾರ ಹೀಗಿತ್ತು

೧. ಮಹಾಪೋಷಕರು	(Grand Patrons)	
೨. ಪೋಷಕರು	(Patrons)	
೩. ಉದ್ಧಾರಕರು	(Benefactors)	ಕನಿಷ್ಠ ೧೦೦೦ ರೂ.
೪. ಪ್ರದಾತೃಗಳು	(Donors)	ಕನಿಷ್ಠ ೫೦೦ ರೂ.
೫. ಆಶ್ರಯದಾತರು	(Supporters)	ಕನಿಷ್ಠ ೨೫೦ ರೂ.
೬. ಸಹಾಯಕರು	(Promoters)	ಕನಿಷ್ಠ ೧೦೦ ರೂ.
೭. ಆಜೀವ ಸದಸ್ಯರು	(Life members)	ಕನಿಷ್ಠ ೫೦ ರೂ.
೮. ಸಾಧಾರಣ ಸದಸ್ಯರು	(Ordinary members)	ಕನಿಷ್ಠ ೬ ರೂ.
೯. ಗೌರವ ಸದಸ್ಯರು	(Honorable members)	
೧೦. ವಿಶಿಷ್ಟ ಸದಸ್ಯರು	(Special members)	

೧. ಪರಿಷತ್ತಿಗೆ ಗೌರವ ಸದಸ್ಯರನ್ನಾಗಿ ಆಯ್ಕೆ ಮಾಡಬೇಕಾದರೆ ಅವರು "ಯೋಗ್ಯರೆಂದೂ ಸಮರ್ಥರೆಂದೂ ಹೆಸರು ಪಡೆದು ಕನ್ನಡ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿರುವ ವಿದ್ವಾಂಸರನ್ನು ಪರಿಷತ್ತಿನ ಗೌರವ ಸದಸ್ಯರನ್ನಾಗಿ ಚುನಾಯಿಸಬಹುದು."

೨. ಪರಿಷತ್ತಿನ ವಿಶಿಷ್ಟ ಸದಸ್ಯರನ್ನಾಗಿ ಆಯ್ಕೆ ಮಾಡಬೇಕಾದರೆ "ಇತರ ಭಾಷೆಗಳಲ್ಲಿ ವಿಶೇಷ ಪಾಂಡಿತ್ಯವನ್ನು ಪಡೆದು ಕನ್ನಡದ ಅಭಿವೃದ್ಧಿಯಲ್ಲಿ ಆಸಕ್ತರಾಗಿರುವ ವಿದ್ವಾಂಸರನ್ನು ವಿಶಿಷ್ಟ ಸದಸ್ಯರನ್ನಾಗಿ ಚುನಾಯಿಸಬಹುದು."

೩. ಈ ಎರಡೂ ತರಗತಿಯ ಸದಸ್ಯರು ಚಂದಾ ಕೊಡಬೇಕಾದುದಿಲ್ಲ.

೪. ಈ ವರ್ಗಗಳಲ್ಲಿ ೯ ಮತ್ತು ೧೦ನೇ ವರ್ಗದ ಗೌರವಿಸಲ್ಪಟ್ಟ ಮತ್ತು ವಿಶಿಷ್ಟ ಸದಸ್ಯರು ವರ್ಗದವರು ಚಂದಾ ನೀಡಬೇಕಾಗಿಲ್ಲ. ಆದರೆ "ಪರಿಷತ್ತಿನ ಸಾಧಾರಣ ಅಧಿವೇಶನಕ್ಕೆ ಬಂದಿರುವವರೆಲ್ಲ ಮುಕ್ಕಾಲು ಸಾಲಿನಷ್ಟು ಸದಸ್ಯರು ಅನುಮತಿಸದ ಹೊರತು ಯಾರನ್ನೂ ಗೌರವ ಸದಸ್ಯರನ್ನಾಗಿಯಾಗಲಿ" ವಿಶಿಷ್ಟ ಸದಸ್ಯರನ್ನಾಗಿಯಾಗಲಿ ಪರಿಷತ್ತಿಗೆ ಸೇರಿಸಿಕೊಳ್ಳಲಾಗದು.

ಈ ಎರಡು ವಿಶೇಷ ವರ್ಗಗಳಲ್ಲಿ ೧೯೩೫ರ ನಿಬಂಧನೆಗಳಲ್ಲಿ ಗೌರವ ಸದಸ್ಯರನ್ನು ಆಜೀವ ಗೌರವ ಉಪಾಧ್ಯಕ್ಷರು ಅಥವಾ ಆಜೀವ ಗೌರವ ಸದಸ್ಯರು ಎಂದು ಕರೆಯಲಾಯಿತು. (ಪುಟ ೩)

೧೯೪೦ರ ನಿಬಂಧನೆಗಳಲ್ಲಿ ೯, ೧೦ನೇ ವರ್ಗದ ಈ ಎರಡು ವರ್ಗಗಳನ್ನು (ಗೌರವ ಸದಸ್ಯರು, ವಿಶಿಷ್ಟ ಸದಸ್ಯರು) ತೆಗೆದುಹಾಕಿ ಆ ಸ್ಥಾನದಲ್ಲಿ (೯) ಅಂಗಸಂಸ್ಥೆಗಳು (೧೦) ವರ್ಗಗಳನ್ನು ಸೇರಿಸಲಾಯಿತು. ನಿಬಂಧನೆಗಳ .... ಕೈಬಿಟ್ಟ ಈ ವರ್ಗ ಹೊಸ ರೂಪವನ್ನು ತಾಳಿ ಹಂಪ ನಾಗರಾಜಯ್ಯನವರ ಕಾಲದಲ್ಲಿ ೧೯೮೫ರಿಂದ ಜಾರಿಗೆ ಬಂದಿತು.

ಈ ಗೌರವ ಸದಸ್ಯತ್ವವನ್ನು ಪರಿಷತ್ತಿನ ಶ್ರೇಷ್ಠ ಸಾಹಿತ್ಯ ಪುರಸ್ಕಾರ ಎಂದು ಪರಿಗಣಿಸಲಾಯಿತು. ಇದು ಒಬ್ಬ ಲೇಖಕನಿಗೆ ಸಲ್ಲಬಹುದಾದ ಅತ್ಯಂತ ಪ್ರತಿಷ್ಠಿತ ಗೌರವವಾಗಿದೆ. ಹಣದ ಯಾವ ಸೋಂಕೂ ಇಲ್ಲದೆ ಆದರೆ ಉಳಿದೆಲ್ಲ ರೀತಿಯ ಮರ್ಯಾದೆಯಿಂದ ಕೂಡಿದ ಇಂಥ ವಿಶಿಷ್ಟ ಪುರಸ್ಕಾರ ವಿಧಾನ ಬಹುಶಃ ಭಾರತೀಯ ಭಾಷೆಗಳಲ್ಲಿಯೇ ಅಪರೂಪವಾದ ಸಂಗತಿಯಾಗಿದೆ.

ಭಾರತೀಯ ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸಾಹಿತ್ಯ ಅಕಾಡೆಮಿ, ಮೂರ್ತಿದೇವಿ ಭಾರತೀಯ ಭಾಷಾ ಪರಿಷತ್, ಕುಮಾರನ್ ಆಶಾ ಸಾಹಿತ್ಯ ಪುರಸ್ಕಾರ, ವಿಶ್ವವಿದ್ಯಾನಿಲಯಗಳು ನೀಡುವ ಗೌರವ ಡಾಕ್ಟರೇಟ್, ಹಂಪಿ ವಿಶ್ವವಿದ್ಯಾನಿಲಯದ ನಾಡೋಜ ಪ್ರಶಸ್ತಿ ಇತ್ಯಾದಿ ಭಾರತದ ವಿಶಿಷ್ಟ ಸಾಲಿಗೆ ಈ ಗೌರವ ಸದಸ್ಯತ್ವ ಪ್ರಶಸ್ತಿಯೂ ಸೇರುತ್ತದೆ ಎಂದು ಹೇಳಬಹುದು.

ಗೌರವ ಸದಸ್ಯತ್ವ ನೀಡುವ ವಿಧಾನ

೧. ಗೌರವ ಸದಸ್ಯತ್ವದ ಫಲಕವನ್ನು ನೀಡಲಾಗುವುದು.

ಈ ಫಲಕವು ೨ ಅಡಿ ಉದ್ದ ಮತ್ತು ಮೂರು ಅಡಿ ಅಗಲವಾದ ಅತ್ಯುತ್ತಮವಾದ ತಾಮ್ರದ ಫಲಕದಲ್ಲಿ ಕೆಳಕಂಡಂತೆ ಪ್ರಶಸ್ತಿ ವಾಕ್ಯಗಳನ್ನು ಕೆತ್ತಿ ನೀಡಲಾಗುವುದು.

೨. ಈ ರೀತಿ ಗೌರವ ಸದಸ್ಯತ್ವವನ್ನು ಗರಿಷ್ಠ ೫ ಜನ ಸಾಹಿತಿಗಳಿಗೆ ಮಾತ್ರ ನೀಡಲು ಅವಕಾಶವಿದೆ.

೩. ೫ ಜನ ಗೌರವ ಸದಸ್ಯರು ಇರಲೇಬೇಕೆಂದು ಖಾಲಿಯಾದ ಸ್ಥಾನಗಳಿಗೆ ಭರ್ತಿಮಾಡಬೇಕೆಂಬ ನಿಯಮವಿಲ್ಲ.

೪. ಒಂದು ಸರಳ ಸುಂದರ ಸಮಾರಂಭದಲ್ಲಿ ಗೌರವ ಸದಸ್ಯತ್ವವನ್ನು ನೀಡಲಾಗುವುದು.

೫. ಅದೇ ದಿನ ಬೆಳಗಿನಿಂದ ಸಂಜೆಯವರೆಗೆ ಎರಡು ವಿಚಾರಗೋಷ್ಠಿಗಳಲ್ಲಿ ಮನ್ನಣೆ ಪಡೆದ ಸಾಹಿತಿಯ ಕೃತಿಗಳನ್ನು ಕುರಿತು ವಿವೇಚಿಸಲಾಗುವುದು.

೬ ಮನ್ನಣೆ ಪಡೆದ ಸಾಹಿತಿಯ ಎಲ್ಲ ಕೃತಿಗಳನ್ನು ಪ್ರದರ್ಶಿಸಲಾಗುವುದು.

೭ ಮನ್ನಣೆ ಪಡೆದ ಸಾಹಿತಿ ಕವಿಯಾಗಿದ್ದರೆ, ಆತನ ಕಾವ್ಯಗಳ ವಾಚನವನ್ನು (ಅಥವಾ ಗಾಯನವನ್ನು) ನಾಟಕಕಾರರಾಗಿದ್ದರೆ ಅವರ ಒಂದು ನಾಟಕದ ಪ್ರದರ್ಶನವನ್ನು ಏರ್ಪಡಿಸಲಾಗುವುದು.

೮. ಸಮಾರಂಭದಲ್ಲಿ ಆ ಸಾಹಿತಿಯ ಭಾವಚಿತ್ರವನ್ನು ಅನಾವರಣ ಮಾಡಿ ಸಾಹಿತ್ಯ ಪರಿಷತ್ತಿಗೆ ಒಪ್ಪಿಸಲಾಗುವದು.

೯. ಈ ಗೌರವಕ್ಕೆ ಅರ್ಹರಾದವರನ್ನು ಆಯ್ಕೆ ಮಾಡುವ ಸಂಪೂರ್ಣ ಅಧಿಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಇರುತ್ತದೆ.

೧೦. ಈ ರೀತಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವಕ್ಕೆ ಪಾತ್ರರಾದ ಸಾಹಿತಿಯ ಬಗ್ಗೆ ಒಂದು ಸಾಕ್ಷ್ಯಚಿತ್ರವನ್ನು

ಸಿದ್ಧಪಡಿಸಲು ಸರ್ಕಾರಕ್ಕೆ ತಿಳಿಸಲಾಗುವುದು.

೧೧. ಆ ಸಾಕ್ಷ್ಯಚಿತ್ರವನ್ನು ಕನ್ನಡ ನಾಡಿನ ಎಲ್ಲ ಚಿತ್ರಮಂದಿರಗಳಲ್ಲೂ ಒಂದು ವಾರ ಕಾಲವಾದರೂ ಕಡ್ಡಾಯವಾಗಿ ಪ್ರದರ್ಶಿಸುವಂತೆ ಸರ್ಕಾರದ ವಾರ್ತಾ ಇಲಾಖೆಯಿಂದ ಏರ್ಪಾಟು ಮಾಡಲಾಗುವುದು.

೧೨. ಈ ಪುರಸ್ಕಾರವನ್ನು ಪಡೆದ ಸಾಹಿತಿಯ ಯಾವುದಾದರೊಂದು ಪ್ರಾತಿನಿಧಿಕ ಕೃತಿಯನ್ನು ಆಯ್ಕೆ ಮಾಡಿ ಅದರ ಐದು ಸಾವಿರ ಪ್ರತಿಗಳನ್ನು ಮುದ್ರಿಸಿ ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು.

೧೩. ಪುರಸ್ಕಾರ ನೀಡಲಾದ ವರ್ಷದಲ್ಲಿ ಪುರಸ್ಕೃತರಾದ ಸಾಹಿತಿಗಳನ್ನು ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಕರೆದುಕೊಂಡುಹೋಗಿ ಉಪನ್ಯಾಸ ಕಾರ್ಯಕ್ರಮಗಳನ್ನು ಪರಿಷತ್ತು ಏರ್ಪಾಡು ಮಾಡುತ್ತದೆ.

೧೪. ಗೌರವ ಸದಸ್ಯತ್ವ ಪುರಸ್ಕೃತ ಸಾಹಿತಿಗಳಿಗೆ ನೀಡುವ ತಾಮ್ರಫಲಕದ ಮಾದರಿ ಹೀಗಿರುತ್ತದೆ

ಮನುಷ್ಯ ಜಾತಿ ತಾನೊಂದೆ ವಲಂ

– ಪಂಪ

ಗೌರವ ಸದಸ್ಯತ್ವ

ಕನ್ನಡ ನಾಡು ನುಡಿಗಳಿಗೆ ....ಅವರು ದೀರ್ಘಕಾಲ ಸಲ್ಲಿಸಿರುವ ಶ್ರೇಷ್ಠ ಸೇವೆಯನ್ನು ಮನಗಂಡು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಅತ್ಯುಚ್ಚ ಮನ್ನಣೆಯಾದ ಗೌರವ ಸದಸ್ಯತ್ವವನ್ನು ನೀಡಿ ಪುರಸ್ಕರಿಸಿದೆ.

ದಿನಾಂಕ

....

ಅಧ್ಯಕ್ಷರು

ಕಾರ್ಯಕಾರಿ ಸಮಿತಿ ಸದಸ್ಯರು

ಗೌರವ ಸದಸ್ಯತ್ವ ಪಡೆದವರು

೧. ಡಾ. ಕೆ.ವಿ. ಪುಟ್ಟಪ್ಪ ೧೯೮೫
(ವಾಚಿಕೆ : ವಿಚಾರ ಕ್ರಾಂತಿಗೆ ಆಹ್ವಾನ)

೨. ಡಾ. ಕೆ.ಎಸ್. ನಿರಂಜನ ೧೯೮೫
(ವಾಚಿಕೆ : ಪ್ರತಿಧ್ವನಿ)

೩. ಡಾ.ಕೆ.ಎಸ್. ನರಸಿಂಹಾಸ್ವಾಮಿ ೧೯೮೫
(ವಾಚಿಕೆ : ಮೈಸೂರ ಮಲ್ಲಿಗೆ)

೪. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ೧೯೮೬
(ವಾಚಿಕೆ : ಯಶೋಧರಾ)

೫. ಡಾ. ಸಿಂಪಿ ಲಿಂಗಣ್ಣ ೧೯೯೦
(ವಾಚಿಕೆ : ಸಾಗರ ಸಿಂಪಿ)

೬. ಡಾ. ಪು.ತಿ. ನರಸಿಂಹಾಚಾರ್ ೧೯೯೩
(ವಾಚಿಕೆ : ನವಿಲುಗರಿ)

೭ ಡಾ. ವಿ.ಕೃ. ಗೋಕಾಕ್ ೧೯೯೩
(ವಾಚಿಕೆ : ಸಿಂಧುಶ್ರೀ)

೮. ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರೀ ೧೯೯೩
(ವಾಚಿಕೆ : ವ್ಯಾಕರಣತೀರ್ಥ)

೯. ಶ್ರೀಮತಿ ಶಾಂತಾದೇವಿ ಮಾಳವಾಡ ೧೯೯೪
(ವಾಚಿಕೆ : ಶಾಂತಕಿರಣ)

೧೦. ಪ್ರೊ. ಎಸ್.ವಿ.ಪರಮೇಶ್ವರ ಭಟ್ಟ ೧೯೯೫
(ವಾಚಿಕೆ : ಪ್ರಕಟಿಸಿಲ್ಲ)

೧೧. ಶಾಂತರಸ ೧೯೯೭
(ವಾಚಿಕೆ : ಶಾಂತಶ್ರೀ)

೧೨. ಪ್ರೊ. ಎ.ಎನ್. ಮೂರ್ತಿರಾವ್ ೧೯೯೯
(ವಾಚಿಕೆ : ಪ್ರಕಟವಾಗಿಲ್ಲ)

೧೩. ಪಾಟೀಲ ಪುಟ್ಟಪ್ಪ
(ವಾಚಿಕೆ : ಪ್ರಕಟವಾಗಿಲ್ಲ)

೧೪. ಡಾ. ಎಸ್.ಕೆ. ಕರೀಂಖಾನ್ ೨೦೦೪
(ವಾಚಿಕೆ : ಪ್ರಕಟವಾಗಿಲ್ಲ)

೧೫. ಡಾ. ಎನ್.ಕೆ. ಕುಲಕರ್ಣಿ ೨೦೦೪

೧೬. ಡಾ. ಎಂ.ಎಂ. ಅಕ್ಬರ್ ಅಲಿ ೨೦೧೧
(ವಾಚಿಕೆ : ಪ್ರಕಟವಾಗಿಲ್ಲ)

೧೭. ಕಯ್ಯಾರ ಕಿಞ್ಞಣ್ಣ ರೈ ೨೦೦೯
(ವಾಚಿಕೆ : ಪ್ರಕಟವಾಗಿಲ್ಲ)

❖❖

೩

ಅಧ್ಯಾಯ – ೩

ಪರಿಷತ್ತಿನ ಕಟ್ಟಡಗಳು

ಯಾವುದೇ ಸಂಸ್ಥೆ ದೀರ್ಘಕಾಲ ಬಾಳಬೇಕಾದರೆ ಸ್ವತಂತ್ರವಾಗಿ ನಿರಂತರವಾಗಿ ಚಟುವಟಿಕೆಗಳನ್ನು ನಡೆಸಬೇಕಾದರೆ ಆ ಸಂಸ್ಥೆಗೆ ತನ್ನದೇ ಆದ ಕಟ್ಟಡ ಇರಬೇಕು. ಕಡೇಪಕ್ಷ ಬಾಡಿಗೆ ಕಟ್ಟಡವಾದರೂ ಇರಬೇಕು. ಇಲ್ಲದಿದ್ದಲ್ಲಿ ಸಂಸ್ಥೆ ಬಹುಕಾಲ ಉಳಿಯಲಾರದು. ಪ್ರತ್ಯೇಕ ಕಟ್ಟಡ ಇಲ್ಲದೆ ಪರಾಶ್ರಯದಲ್ಲಿ ನಡೆಯುವ ಸಂಸ್ಥೆ ಸ್ಥಳದ ಆಶ್ರಯ ತಪ್ಪಿದ ಕೂಡಲೇ ಸ್ಥಗಿತಗೊಳ್ಳುತ್ತದೆ. ಇದು ಅನೇಕ ಸಂಸ್ಥೆಗಳ ಇತಿಹಾಸ.

ಆದರೆ ಕನ್ನಡ ಸಾಹಿತ್ಯ ಪರಿಷತ್ತು ಅದೃಷ್ಟವಂತ ಸಂಸ್ಥೆ. ಪ್ರಾರಂಭದಲ್ಲಿಯೇ ಬಾಡಿಗೆ ಕಟ್ಟಡವಾದರೂ ಬೆಂಗಳೂರಿನ ನಗರ ಪ್ರದೇಶದ ಕೇಂದ್ರ ಭಾಗದಲ್ಲಿ ಅನುಕೂಲಕರವಾದ ವಿಶಾಲ ಕಟ್ಟಡವನ್ನು ಬಾಡಿಗೆಗೆ ಹೊಂದಿತ್ತು. ಒಂದೆರಡು ದಶಕಗಳಲ್ಲಿಯೇ ಸ್ವತಂತ್ರ ಕಟ್ಟಡವನ್ನು ಶ್ರೀ ಕೃಷ್ಣರಾಜ ಪರಿಷನ್ಮಂದಿರವನ್ನು ಹೊಂದಿತು. ಅನಂತರ ಸ್ವರ್ಣಮಹೋತ್ಸವ ಭವನ, ವಜ್ರಮಹೋತ್ಸವ ಭವನಗಳಿಗೆ ಕಟ್ಟಡ ವಿಸ್ತರಿಸಿತು. ಇದೀಗ ಶತಮಾನೋತ್ಸವ ಭವನಕ್ಕೆ ಈಗಿನ ಅಧ್ಯಕ್ಷರಾದ ಪುಂಡಲೀಕ ಹಾಲಂಬಿ ಅವರ ನೇತೃತ್ತ್ವದಲ್ಲಿ ಶಂಕುಸ್ಥಾಪನೆ ಆಗಿದೆ. ಇದಲ್ಲದೆ ಹಲವಾರು ಜಿಲ್ಲೆಗಳಲ್ಲಿ ಪರಿಷತ್ತಿನ ಜಿಲ್ಲಾ ಸಮಿತಿಗಳು ಪರಿಷತ್ತಿನ ಭವನಗಳನ್ನು, ಹೊಂದಿವೆ. ಹೀಗೆ ಹಲವಾರು ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ಹೊಂದಿರುವ ಸಾಹಿತ್ಯ ಸಂಸ್ಥೆ ನಮ್ಮ ನಾಡಿನಲ್ಲಿ ಇನ್ನೊಂದಿಲ್ಲವೆಂದರೆ ತಪ್ಪಾಗದು.

ಈಗ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ೩ ಭವನಗಳು ಇವೆ.

೧. ಶ್ರೀ ಕೃಷ್ಣರಾಜಪರಿಷನ್ಮಂದಿರ

೨. ಸುವರ್ಣಮಹೋತ್ಸವ ಭವನ

೩. ವಜ್ರಮಹೋತ್ಸವ ಭವನ

೪. ಶತಮಾನೋತ್ಸವ ಭವನ (ನಿರ್ಮಾಣವಾಗಲಿದೆ) ಶಂಕು ಸ್ಥಾಪನೆ ಆಗಿದೆ,

ಈ ಮೊದಲು ನಾನಾರಾಯರ ಮನೆ, ಸೂರಪ್ಪನವರ ಮನೆಗಳಲ್ಲಿ ಬಾಡಿಗೆ ಕೊಟ್ಟು ಪರಿಷತ್ತು ಕಚೇರಿ ಇತ್ತು.

ಈ ಮೂರು ಭವನಗಳಲ್ಲಿ ಬೃಹದಾಕಾರವಾಗಿ ಬೆಳೆದ ಪರಿಷತ್ತಿನ ಚಟುವಟಿಕೆಗಳು ಇಂದು ನಡೆಯುತ್ತಿವೆ. ಸದ್ಯದಲ್ಲಿ ಶತಮಾನದ ವರ್ಷದಲ್ಲಿ ಅಚ್ಚುಕೂಟ, ಪುಸ್ತಕಭಂಡಾರ, ಮಾರಾಟಮಳಿಗೆ, ಪರಿಷತ್ತಿನ ಕಛೇರಿ, ಪದಾಧಿಕಾರಿಗಳ ಕೊಠಡಿ, ಸಮಿತಿಸಭೆಗಳ ಕೊಠಡಿ, ಕಾರ್ಯಕ್ರಮಗಳಿಗಾಗಿ ನವೀಕೃತಗೊಂಡ ಶ್ರೀಕೃಷ್ಣರಾಜ ಪರಿಷನ್ಮಂದಿರ, ಕುವೆಂಪು ಸಭಾಂಗಣ, ಸಾರ್ವಜನಿಕ ಪುಸ್ತಕ ಭಂಡಾರ, ಪುಸ್ತಕಗಳ ದಾಸ್ತಾನು ಮಳಿಗೆಗಳು, ಸಂಶೋಧನಾ ವಿಭಾಗ ಇತ್ಯಾದಿ ಇವೆ.

ಈ ಕಟ್ಟಡಗಳಿಗೆ ಸಂಬಂಧಿಸಿದಂತೆ ಮೊದಲಬಾರಿಗೆ ಪ್ರಾರಂಭದಲ್ಲಿ (೧೯೧೮ ವರೆಗೆ) ಪರಿಷತ್ತು ಇದ್ದ ಕಟ್ಟಡದ

ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅನಂತರದ ಶಂಕರಪುರದ ಕಟ್ಟದದ ಬಗ್ಗೆ ಬಿ.ಜಿ.ಎಲ್‌ಸ್ವಾಮಿ ಅವರು ತಾವು ವಿದ್ಯಾರ್ಥಿಯಾಗಿ ಸೇವೆ ಸಲ್ಲಿಸಿದ ಪರಿಷತ್ತಿನ ಆ ಶಂಕರಪುರದ ಕಟ್ಟಡದ ಬಗ್ಗೆ ಬಹು ಮೌಲ್ಯವಿರುವ ಲೇಖನವನ್ನು ೧೯೭೭ರಲ್ಲಿ ನನ್ನ ಒತ್ತಾಯದ ಮೇರೆಗೆ ಬರೆದು ಕೊಟ್ಟರು. ಇನ್ನು ಪರಿಷನ್ಮಂದಿರದ ಬಗ್ಗೆ ಡಿವಿಜಿಯವರು, ಇತರರು ವಿವರಿಸಿದ್ದಾರೆ. ಸುವರ್ಣ ಮಹೋತ್ಸವದ ಕಟ್ಟಡಗಳ ಬಗ್ಗೆ ಕನ್ನಡ ನುಡಿಯಲ್ಲಿ ವಿವರಗಳಿವೆ. ಹಳೆಯ ಕಟ್ಟಡಗಳ ವಿವರಗಳನ್ನು ಒಳಗೊಂಡ, ಬಿ.ಜಿ.ಎಲ್. ಸ್ವಾಮಿ ಲೇಖನ, ಅ.ನಾ.ಜಿ ಲೇಖನ, ವಿಸೀ ಲೇಖನಗಳನ್ನು ಇಲ್ಲಿ ಪ್ರಕಟಿಸಿದೆ. ಇತರ ಉಲ್ಲೇಖಗಳನ್ನು ಗಮನಿಸಿದೆ. ಎಲ್ಲ ಕಟ್ಟಡಗಳ ಭಾವಚಿತ್ರಗಳನ್ನು ಕೊಡಲಾಗಿದೆ.

ಪರಿಷತ್ತಿನ ಕಾರ್ಯಚಟುವಟಿಕೆಗಳ ಜೊತೆಗೆ ಕಟ್ಟಡದ ಭಾಗಗಳಲ್ಲೂ ಬದಲಾವಣೆಗಳಾಗಿವೆ. ಉದಾಹರಣೆಗೆ ಪರಿಷತ್ತಿನ ಅಚ್ಚುಕೂಟದ ಕಟ್ಟಡ ಈಗಿಲ್ಲ. ಆ ಜಾಗದಲ್ಲಿ ಶತಮಾನೋತ್ಸವದ ಕಟ್ಟಡ ಬರಲಿದೆ. ಅಲ್ಲಿ ಮಹಡಿ ಮೇಲಿದ್ದ ನಿಘಂಟು ಕಚೇರಿ ಈಗಿಲ್ಲ. ಪರಿಷನ್ಮಂದಿರದಲ್ಲಿ ಅಧ್ಯಕ್ಷರ ಕೊಠಡಿ, ಪುಸ್ತಕ ಭಂಡಾರ ಮತ್ತು ನಿಘಂಟು ಕಚೇರಿ, ವಾಚನಾಲಯ ಒಂದು ಕಾಲದಲ್ಲಿ ಇತ್ತು. ಅವು ಈಗಿಲ್ಲ. ಅಲ್ಲಿ ಪರಿಷತ್ತಿನ ಪ್ರಕಟಣೆಗಳ ಮಾರಾಟಮಳಿಗೆ ಇದೆ. ಹೀಗೆ ಕಟ್ಟಡ ಭವನಗಳಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿವೆ. ಶತಮಾನೋತ್ಸವಭವನ ನಿರ್ಮಾಣದ ಮೇಲೆ ಕಾರ್ಯಚಟುವಟಿಕೆಗಳ ವಿಭಾಗಗಳು ವ್ಯತ್ಯಾಸಗೊಳ್ಳಲಿವೆ. ಹೀಗೆ ಕಾಲಕಾಲಕ್ಕೆ ಆವಶ್ಯಕತೆಗಳಿಗೆ ಅನುಕೂಲಗಳಿಗೆ ತಕ್ಕಂತೆ ಪರಿಷತ್ತಿನ ಕಟ್ಟಡಗಳು ಬಳಕೆ ಆಗುತ್ತಿವೆ. ಒಟ್ಟಿನಲ್ಲಿ ಹೇಳುವುದಾರೆ ಇಷ್ಟು ವಿಶಾಲವಾದ ಕಟ್ಟಡಗಳು ನಮ್ಮ ನಾಡಿನಲ್ಲಿ ಯಾವ ಸಾಹಿತ್ಯ ಸಂಸ್ಥೆಗೂ ಇಲ್ಲವೆಂದರೆ ತಪ್ಪಿಲ್ಲ; ಈ ಭಾಗ್ಯ ಹೆಮ್ಮೆಯ ಸಂಗತಿಯಾಗಿದೆ.

ಒಂದು ಕಾಲದಲ್ಲಿ ಗಾಂಧೀಮೈದಾನವಾಗಿದ್ದ ಜಾಗದಲ್ಲಿ ನಮ್ಮ ನಾಡಿನ ಕನ್ನಡಿಗರ ಸಾಹಿತ್ಯಿಕ ಸಾಂಸ್ಕೃತಿಕ ಪ್ರಾತಿನಿಧಿಕ ಸಂಸ್ಥೆ ಕಂಗೊಳಿಸಿ ಈಗ ಶತಮಾನೋತ್ಸವ ಆಚರಿಸುತ್ತಿರುವುದು ನಾಡಿನ ಇತಿಹಾಸದಲ್ಲೇ ಅಪೂರ್ವ ಸಂಗತಿಯಾಗಿದೆ.

ನಾನಾರಾಯರ ಮನೆಯಲ್ಲಿ ಪರಿಷತ್ತು

" ಕರ್ನಾಟಕ ಸಾಹಿತ್ಯ ಪರಿಷತ್ತಿನ ಆಫೀಸಿಗೋಸ್ಕರ ಬೇಕಾದ ಒಂದು ಕಟ್ಟಡದ ಬಾಡಿಗೆಗಾಗಿ ೩೦ ರೂಗಳನ್ನು ತಿಂಗಳೊಂದಕ್ಕೆ ದಯಪಾಲಿಸಬೇಕೆಂದು ಸಂಪದಭ್ಯುದಯ ಸಮಾಜದ ಮೂಲಕ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳಲಾಯಿತು.(ಪುಟ ೧೭ ಪರಿಷತ್ಪತ್ರಿಕೆ ಜುಲೈ ೧೯೧೬) ಅದಕ್ಕೆ ಅನುಗುಣವಾಗಿ ಪರಿಷತ್ತಿನ ಆಫೀಸಿಗೆ ಅನುಕೂಲವಾಗಿ ಕಟ್ಟಡವೊಂದನ್ನು ಶಂಕರಪುರದಲ್ಲಿ ತಿಂಗಳೊಂದಕ್ಕೆ ೩೫ ರೂಪಾಯಿಗಳಂತೆ ಬಾಡಿಗೆ ನಿಷ್ಕರ್ಷೆ ಮಾಡಿ ಕಳೆದ ಫೆಬ್ರವರಿ ೧೯೧೬ರಿಂದ ತೆಗೆದುಕೊಂಡಿದ್ದಾಗಿದೆ. ಆಫೀಸಿನ ಕೆಲಸಕ್ಕಾಗಿ ಒಬ್ಬ ಆಳನ್ನೂ ಮಾರ್ಚಿ ೧೩ನೇ ತಾರೀಖಿನಿಂದ ಒಬ್ಬ ಗುಮಾಸ್ತೆಯನ್ನು ನೇಮಿಸಿಕೊಳ್ಳಲಾಗಿದೆ."

ಇಲ್ಲಿರುವ ಲೇಖನಗಳಲ್ಲಿ ವಿಸೀ ಮತ್ತು ಇತರರು "ನಾನಾರಾಯರ ಬಂಗಲೆಯ ಸಣ್ಣ ಕೊಠಡಿಯಲ್ಲಿ ಅದರ ಕೆಲಸ ನಡೆಯುತ್ತಿತ್ತು" ಎಂದು ಬರೆದಿದ್ದಾರೆ "ಈಗಲೂ ಅದು ಅಂದಿನಂತೆಯೇ ಇದೆ" ಎಂದಿದ್ದಾರೆ. ೧೯೬೦ರ ವರೆಗೆ ಆ ಬಂಗಲೆ ಹಾಗೆಯೇ ಇತ್ತು. ಅಲ್ಲಿಂದ ಅವರ ಮೊಮ್ಮಕ್ಕಳು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡಿದ್ದಾರೆ.

ಆ ಬಂಗಲೆಯಲ್ಲಿ ನಾನಾರಾಯರು ವಾಸಮಾಡುತ್ತಿದ್ದ ಮನೆಯನ್ನೇ ಪರಿಷತ್ತಿಗೆ ೨೫ ರೂ ಬಾಡಿಗೆಗೆ ಕೊಟ್ಟಿದ್ದರು. ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್ ಆ ಮನೆಗೆ ಬಂದಾಗ ಪರಿಷತ್ತು ಶಂಕರಪುರದ ಮನೆಗೆ ಹೋಯಿತು. ಇಲ್ಲಿ ಕೊಟ್ಟಿರುವ ನಕ್ಷೆ ಪ್ರಕಾರ (ಮೊಮ್ಮಗ ನೀಡಿದ ಸ್ಥೂಲ ನಕ್ಷೆ) ಎಡಗಡೆ ೩ ಕೊಠಡಿ, ವಿಶಾಲವಾದ ಹಾಲು ಇತ್ಯಾದಿ ಇದ್ದ ಇಡೀ ಕಟ್ಟಡದಲ್ಲಿ ಪರಿಷತ್ತು ಕೆಲಸ ಮಾಡುತ್ತಿತ್ತು. ಬಹುಶಃ ಪರಿಷತ್ತಿನ ಕಛೇರಿ ಕೊಠಡಿ ಮುಂದುಗಡೆ ಒಂದು ಕೊಠಡಿಯಿತ್ತು. ಅದನ್ನು ಗಮನಿಸಿ ವಿಸೀ ಹಾಗೇ ಹೇಳಿರಬೇಕು. ಆದರೆ ಪುಸ್ತಕಭಂಡಾರ, ಅತಿಥಿ ಕೋಣೆ, (ಕಾಫಿಕೋಣೆ) ಅಧ್ಯಕ್ಷರ ಕೊಠಡಿ ಮುಂತಾದವೆಲ್ಲ ಕಟ್ಟಡದ ಇತರ ಭಾಗಗಳಲ್ಲಿದ್ದವು. ಹೀಗಾಗಿ ಪರಿಷತ್ತು ಪ್ರಾರಂಭದಲ್ಲಿ

ವಿಶಾಲ ಭವನದಲ್ಲಿ ಇತ್ತು. ಕೃಷ್ಣರಾಜ ಪರಿಷನ್ಮಂದಿರ ನಿರ್ಮಾಣದ ಕಥೆಯನ್ನು ಡಿವಿಜಿಯವರು ವಿವರಿಸಿದ್ದಾರೆ. ಕರ್ಪೂರ ಶ್ರೀನಿವಾಸರಾಯರು, ಬೆಳ್ಳಾವೆ ವೆಂಕಟನಾರಣಪ್ಪನವರು, ಅಹರ್ನಿಶಿ ಹೇಗೆ ದುಡಿದರು ಎಂಬುದನ್ನು ವಿವರಿಸಿದ್ದಾರೆ.

ನಾನಾರಾಯರ ಮನೆಮಾತು ತೆಲುಗು ಆಗಿ, ಕಲಿತಭಾಷೆ ಮರಾಠಿ ಆಗಿ, ಬಳಕೆ ಭಾಷೆ ಕನ್ನಡವಾಗಿ ಉದ್ಯೋಗಭಾಷೆ ಇಂಗ್ಲಿಷ್ ಆಗಿ, ಕನ್ನಡ ತೆಲುಗು, ಮರಾಠಿ, ಇಂಗ್ಲಿಷ್ ನಾಲ್ಕು ಭಾಷೆಗಳಲ್ಲಿ ಪರಿಣಿತರಾಗಿದ್ದರು. ಮುಂಬೈ ಕರ್ನಾಟಕದಲ್ಲಿ ಕೆಲಸ ಮಾಡಿದ ಪ್ರಯುಕ್ತ ಮರಾಠಿಯನ್ನು ಚೆನ್ನಾಗಿ ಕಲಿತಿದ್ದರು. ಎಚ್.ವಿ. ನಂಜುಂಡಯ್ಯನವರು ರಚಿಸಿದ ವ್ಯವಹಾರ ದೀಪಿಕೆ ಗ್ರಂಥವನ್ನು ಮರಾಠಿಗೆ ಅನುವಾದಿಸಿದ್ದರು. ಕನ್ನಡ, ಇಂಗ್ಲಿಷ್ ಮೊದಲಾದ ಭಾಷೆಗಳ ಅಪೂರ್ವ ಗ್ರಂಥ ಸಂಗ್ರಹ ಹೊಂದಿದ್ದರು.

ಸರ್ವೇ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ ನಾನಾರಾಯರು ಸಾರ್ವಜನಿಕ ರಂಗದಲ್ಲಿ ಗಣ್ಯಸೇವೆ ಸಲ್ಲಿಸಿದ್ದರು. ಬರಗಾಲದಲ್ಲಿ ಚಿತ್ರದುರ್ಗದಲ್ಲಿ ಡೆಪ್ಯುಟಿ ಕಮೀಷನರ್ ಆಗಿದ್ದಾಗ, ತಮ್ಮ ಒಡವೆಗಳನ್ನು ಮಾರಿ ಗಂಜಿ ಕೇಂದ್ರವನ್ನು ತೆರೆದರು. ವಾಣಿ ವಿಲಾಸ ಸಾಗರ ನಿರ್ಮಾಣದ'ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ತುಂಗಾನದಿಯ ನೀರನ್ನು ಶಿವಮೊಗಕ್ಕೆ ತರುವಲ್ಲಿ, ಶಿವಮೊಗ್ಗೆಯ ಟೌನ್‌ಹಾಲ್ ನಿರ್ಮಾಣದಲ್ಲಿ ನೆರವಾದರು. ಶಿವಮೊಗ್ಗದ ಅರ್ಕೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದರು.

ಹೀಗೆ ನಾನಾ ಸಾರ್ವಜನಿಕ, ಧಾರ್ಮಿಕ ಕಾರ್ಯಗಳಿಂದ ಜನಪ್ರಿಯರಾಗಿದ್ದ ಡೆಪ್ಯುಟಿ ಕಮೀಷನರ್ ನಾನಾರಾಯರು ನಿವೃತ್ತರಾಗುವ ಮುಂಚೆ ಬೆಂಗಳೂರಿಗೆ ವರ್ಗವಾದರು. ಆಗ ಸ್ವಲ್ಪಕಾಲ ತುಳಸೀತೋಟದ ಬಳಿ ಮನೆ ಮಾಡಿದರು. ಅನಂತರ ಚಾಮರಾಜಪೇಟೆಯ ೪ನೆ ಮುಖ್ಯರಸ್ತೆಯ ಮನೆಯನ್ನು ಕೊಂಡು ಅಲ್ಲಿ ವಾಸಿಸಲಾರಂಭಿಸಿದರು. ಈಗ ಆ ಮನೆಯಲ್ಲಿ ಅವರ ವಂಶಸ್ಥರು ವಾಸಿಸುತ್ತಿದ್ದಾರೆ.

ನಿವೃತ್ತರಾದ ಮೇಲೂ ಸಾರ್ವಜನಿಕ - ಧಾರ್ಮಿಕ ಜೀವನದಿಂದ ನಾನಾರಾಯರು ದೂರವಾಗಲಿಲ್ಲ. ಬೆಂಗಳೂರು ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕಿನ ಸ್ಥಾಪಕರಲ್ಲಿ ಒಬ್ಬರಾಗಿ ಬೆನ್ನೆಲುಬಾಗಿ ದುಡಿದರು. ಬೆಂಗಳೂರಿನ ಶಂಕರಮಠ ಶೃಂಗೇರಿ ಜಗದ್ಗುರುಗಳಿಂದ ಸ್ಥಾಪನೆ ಆದಾಗ ಮೊದಲಿಗೆ ಅಲ್ಲಿ ಶಂಕರರ ಮೂರ್ತಿಯ ಪ್ರತಿಷ್ಠಾಪನೆ ಆಯಿತು. ಆಗ ಪ್ರಾರಂಭದಲ್ಲಿ ಅರ್ಚಕರಿರಲಿಲ್ಲ. ನಾನಾರಾಯರೇ ಸ್ವಯಂಪ್ರೇರಿತರಾಗಿ ದಿನವೂ ಬೆಳಿಗ್ಗೆ ಹೋಗಿ ಅರ್ಚಕರಾಗಿ ಸೇವೆ ಸಲ್ಲಿಸಿದರು.

ಈ ಅವಧಿಯಲ್ಲಿ ೧೯೧೫ರಲ್ಲಿ ಪರಿಷತ್ತು ಸ್ಥಾಪನೆಯಾಗಲು ಪೂರ್ವಭಾವಿಯಾಗಿ ಪರಿಷತ್ತಿನ ನಿರ್ಮಾಣದ ಬಗ್ಗೆ ಹಲವಾರು ಯೋಜನೆಗಳನ್ನು ಕಾರ್ಯಕ್ರಮಗಳನ್ನು ನಾಡಿನ ವಿದ್ವಾಂಸರು, ಗಣ್ಯರು ರೂಪುಗೊಳಿಸಿದ್ದು ನಾನಾರಾಯರ ಮನೆಯಲ್ಲಿ ಎಂಬುದು ಗಮನಾರ್ಹ ಸಂಗತಿ ಆಗಿದೆ. ಪರಿಷತ್ತು ಸ್ಥಾಪನೆ ಆದಾಗ ನಾನಾರಾಯರು ವಿಶಾಲವಾದ ತಮ್ಮ ಮನೆಯನ್ನು ಪರಿಷತ್ತಿಗೆ ೨೫ರೂ. ಬಾಡಿಗೆಗೆ ನೀಡಿ ತಮ್ಮದೇ ಆದ ಮನೆಯಲ್ಲಿ ವಾಸಿಸತೊಡಗಿದರು. ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು.

ನಾನಾರಾಯರ ಮನೆಯಲ್ಲಿ ೧೯೧೫ರಿಂದ ಶಂಕರಪುರದ ಮನೆಗೆ ಹೋಗುವವರೆಗೆ ಪರಿಷತ್ತಿನ ಕಚೇರಿ ಅಧ್ಯಕ್ಷರ ಕೋಣೆ, ಕಚೇರಿ ಕೋಣೆ, ಪುಸ್ತಕಭಂಡಾರದ ಕೋಣೆ. ಉಪನ್ಯಾಸಕರ ಸಭಾಂಗಣ, ಅತಿಥಿಗಳ ಕೋಣೆ ಮುಂತಾದವು ಕಟ್ಟಡದಲ್ಲಿ ಇದ್ದವು.

ಮನೆಯ ಮುಂದೆ ಮೆಟ್ಟಿಲು ಮುಂಚಾಚು ಇದ್ದ ವರಾಂಡ ಎಡಭಾಗ - ಬಲಭಾಗಗಳಲ್ಲಿ ಮೂರು ಮೂರು ಕೊಠಡಿಗಳು ಒಳಭಾಗದಲ್ಲಿ ವಿಶಾಲವಾದ ಹಜಾರ, ಅದರ ಆಜುಬಾಜು ಕೊಠಡಿಗಳು, ಹಿಂಭಾಗದಲ್ಲಿ ಕೊಠಡಿಗಳು ಹೀಗೆ ವಿಶಾಲವಾದ ಕಟ್ಟಡದಲ್ಲಿ ಪರಿಷತ್ತಿನ ಕಾರ್ಯಾಲಯ ಇತ್ತು. ಹಲವರು ಬರೆದಂತೆ ಒಂದೇ ಕೊಠಡಿಯಲ್ಲಿ ಪರಿಷತ್ತು ಇರಲಿಲ್ಲ.

ಪರಿಷತ್ತಿನ ಚಟುವಟಿಕೆಗಳು ಜೇನುಗೂಡಿನಂತೆ ನಾನಾರಾಯರ ಮನೆಯಲ್ಲಿ ನಡೆಯುತ್ತಿತ್ತು. ಕರ್ಪೂರ ಶ್ರೀನಿವಾಸರಾಯರು, ಬೆಳ್ಳಾವೆ ವೆಂಕಟನಾರಣಪ್ಪ, ನಾಗಪುರದ ವೆಂಕಟೇಶ ಐಯ್ಯಂಗಾರ್, ಷಫಿದಾರಾಷಾ ಅವರ ತಂದೆ ದಾರಾಷಾ, ಹೆಚ್.ವಿ. ನಂಜುಂಡಯ್ಯ, ಅಪ್ಪೂರಾವ್ ಮೊದಲಾದ ಸಾಹಿತಿ, ವಿದ್ವಾಂಸ ಗಣ್ಯರೆಲ್ಲರೂ ಪ್ರತಿದಿನವೂ ಸಮಾವೇಶಗೊಳ್ಳುತ್ತಿದ್ದರು.

ನಾನಾರಾಯರ ಹಿರಿಯರು ಆಂಧ್ರದಿಂದ ಬಂದು ಉದ್ಯೋಗ ನಿಮಿತ್ತ ಮುಂಬೈ ಕರ್ನಾಟಕದಲ್ಲಿ ಧಾರವಾಡದಲ್ಲಿ ನೆಲೆಸಿದರು. ತೆಲುಗು ಮುಲಕನಾಡು ವಂಶದವರಾದ ವೆಂಕಟರಾವ್ ಅವರು ರೆವಿನ್ಯೂ ಇಲಾಖೆಯಲ್ಲಿ ತಹಸೀಲ್ದಾರರಾಗಿದ್ದರು. ದೇವನಹಳ್ಳಿಯ ಭಾಗೀರಥಮ್ಮನವರನ್ನು ವಿವಾಹವಾದರು. ವೆಂಕಟರಾವ್ ಭಾಗೀರಥಮ್ಮ ದಂಪತಿಗಳಿಗೆ ಮೂರನೇ ಮಗನಾಗಿ ನಾನಾರಾವ್ ಜನಿಸಿದರು. ಆಗ ಆಡಳಿತ ಭಾಷೆ ಮರಾಠಿ. ಸ್ಥಳೀಯ ಭಾಷೆ ಕನ್ನಡ ಆಗಿದ್ದು ಎರಡೂ ಭಾಷೆಗಳಲ್ಲಿ ನಾನಾರಾಯರು ಶಿಕ್ಷಣ ಪಡೆದರು.

ಮುಂಬೈ ಪ್ರಾಂತ್ಯದಲ್ಲಿ ಸರ್ವೇಕಾರ್ಯಮಾಡಿದ ಕರ್ನಲ್ ಗ್ರಾಂಟ್ ಅವರು ಮೈಸೂರು ರಾಜ್ಯಕ್ಕೆ ಸರ್ವೇ ಕಾರ್ಯಕ್ಕೆ ಬಂದಾಗ ಅವರೊಡನೆ ನಾನಾರಾಯರು ಬಂದು ಮೈಸೂರು ರಾಜ್ಯದ ಹಲವಾರು ಕಡೆ ಸೇವೆ ಸಲ್ಲಿಸಿ ಡೆಪ್ಯುಟಿ ಕಮೀಷನರ್ ಆಗಿ ನಿವೃತ್ತರಾಗುವ ಮುನ್ನ ಬೆಂಗಳೂರಿನಲ್ಲಿ ನೆಲೆಸಿದರು.

ಅನಂತರ ಪರಿಷತ್ತಿನ ಸಾಹಿತ್ಯ ಚಟುವಟಿಕೆಗಳಲ್ಲಿ ನಿರತರಾದ ನಾನಾರಾಯರು ಪರಿಷತ್ತಿನ ಚಟುವಟಿಕೆಗಳಿಗೆ ಮೊದಲು ಜಾಗಕೊಟ್ಟು ಸಾಹಿತಿಗಳೆಲ್ಲ ಒಗ್ಗೂಡಲು ನೆರವಾಗುವುದರ ಮೂಲಕ ಪರಿಷತ್ತಿನ ಸ್ಥಾಪಕವರ್ಗದವರಲ್ಲಿ ಒಬ್ಬರಾಗಿದ್ದಾರೆ.

ಟಿಪ್ಪಣಿ : ವಿಸೀ ಅವರು "ಪರಿಷತ್ತಿನ ಕಟ್ಟಡ ಕಾರ್ಯಕಲಾಪ ಬೆಳೆದುಬಂದ ಬಗೆ" (ಕನ್ನಡನುಡಿ ಜನವರಿ,೧೯೭೪) ಲೇಖನದಲ್ಲಿ "ಚಾಮರಾಜಪೇಟೆ ೪ನೇ ರಸ್ತೆಯಲ್ಲಿ ಈಗಿನ ಜ್ಯೂಬಿಲಿನರ್ಸಿಂಗ್ ಹೋಂನ ಎದುರಿಗಿರುವ ನಾನಾರಾಯರ ಬಂಗಲೆಯ ಒಂದು ಸಣ್ಣ ಕೊಠಡಿಯಲ್ಲಿ ಅದರ ಕೆಲಸ ನಡೆಯುತ್ತಿತ್ತು. ಅದು ಈಗಲೂ ಅದರಂತೆಯೇ ಇದೆ" ಎಂದಿದ್ದಾರೆ. ಆದರೆ ನಾನಾರಾಯರ ಮೊಮ್ಮಗ ತಿಳಿಸಿದಂತೆ ಕಟ್ಟಡ ೧೮೮೦ರಲ್ಲಿ ಬದಲಾಗಿದೆ. ಇಡೀ ಕಟ್ಟಡವನ್ನು ೨೫ ರೂ.ಗೆ ಬಾಡಿಗೆಗೆ ಕೊಟ್ಟಿತ್ತು. ವಿಸೀ ಅವರು ಹೇಳಿದ ಕೊಠಡಿ ಪರಿಷತ್ತಿನ ಕಚೇರಿಯ ಒಂದು ಭಾಗದ ಕೊಠಡಿ ಆಗಿರಬೇಕು. ಮೇಲಿನ ಲೇಖನವನ್ನು ಗಮನಿಸಬಹುದು.

೧೯೧೫ರಿಂದ ೧೯೧೯ರವರೆಗೆ ಪರಿಷತ್ತಿನ ಕಾರ್ಯಾಲಯವಾಗಿದ್ದ ಭವನ (ಚಾಮರಾಜಪೇಟೆಯ ೪ನೇ ಮುಖ್ಯರಸ್ತೆಯ ಮನೆಯ ಸಂಖ್ಯೆ ೭ (ಈಗ ೩) ರಲ್ಲಿದ್ದುದು)

– ಅನಾಜಿ

ನಾನಾರಾವ್ ಅವರ ಮೊಮ್ಮಕ್ಕಳಾದ ನಾರಾಯಣರಾವ್, ಮಾಧವರಾವ್, ಭಾಗೀರಥಮ್ಮ, ಭೀಮಸೇನರಾವ್ ಅವರು ಪರಿಷತ್ತು ಇದ್ದ ಭವನದ ಚಿತ್ರ ಹಾಗೂ ನಾನಾರಾವ್ ಭಾವಚಿತ್ರಗಳನ್ನು, ಮಾಹಿತಿಗಳನ್ನು ನೀಡಿದ್ದಾರೆ. ಅದಕ್ಕಾಗಿ ಎಲ್ಲರಿಗೂ ಲೇಖಕ ಕೃತಜ್ಞನಾಗಿದ್ದಾನೆ



೧೯೧೫ರಲ್ಲಿ ಪರಿಷತ್ತಿನ ಕಚೇರಿ ಇದ್ದ ನಾನಾರಾಯರ ಮನೆ



ಶೇಷಮ್ಮ – ನಾನಾರಾವ್ ದಂಪತಿಗಳು

(ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿ ಇದ್ದ ಮನೆಯ ಒಡೆಯರು)


ಪರಿಷತ್ತು ಇದ್ದ ಶಂಕರಪುರದ ವಾಜಪೇಯಂ ಸೂರಪ್ಪನವರ ಮನೆ

ಬಿ. ಜಿ. ಎಲ್. ಸ್ವಾಮಿ ಅವರು ಈ ಮನೆಯ ಬಗ್ಗೆ ಕನ್ನಡ ನುಡಿಯಲ್ಲಿ ಆ ಕಾಲದ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂಬ ಲೇಖನದಲ್ಲಿ ಹೀಗೆ ವಿವರಿಸಿದ್ದಾರೆ.

ಶಂಕರಪುರದ ಐದನೆಯ ಅಡ್ಡರಸ್ತೆಯ ಮೂಲೆಮನೆ ನನ್ನದು, ನಾಲ್ಕನೆಯ ಅಡ್ಡರಸ್ತೆಯಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು. ಎರಡನೆಯ ಅಡ್ಡರಸ್ತೆಯಲ್ಲಿ ದಿ॥ ಟಿ.ಎಸ್. ವೆಂಕಣ್ಣಯ್ಯನವರ ಮನೆ.

ಆಗ ವಿಕ್ರಮಾರ್ಜುನ ವಿಜಯದ ಹಸ್ತಪ್ರತಿಯ ಅಚ್ಚು ಸಿದ್ಧವಾಗುತ್ತಿದ್ದ ಕಾಲ. ವೆಂಕಣ್ಣಯ್ಯನವರೂ ನನ್ನ ತಂದೆಯವರೂ ಅದರ ವಿಷಯವಾಗಿ ಚರ್ಚೆ ಮಾಡುತ್ತಿದ್ದರು. ಯಜಮಾನರು (ದಿ॥ ಬೆಳ್ಳಾವೆ ವೆಂಕಟನಾಣಪ್ಪನವರು, ಹ್ರಸ್ವ, : ಬೆ.ವೆಂ) ಬೆಳಿಗ್ಗೆ ಪರಿಷತ್ತಿಗೆ ಹೋಗುವಾಗ ('ಪಂಚಕಲಶ ಗೋಪುರ' ನೋಡಿ) ನನ್ನ ಮನೆಗೆ ಬಂದು ತಂದೆಯವರ ಬಳಿ ಹಸ್ತಪ್ರತಿಯ ವಿಷಯವನ್ನೋ ಅಚ್ಚಿನ ವಿಷಯವನ್ನೋ ಮಾತನಾಡಿಕೊಂಡು ಆಗಾಗ "ನಿಮ್ಮ ಚಿರಂಜೀವಿಯ ಕೈಲಿ ಕಳುಹಿಸಿಬಿಡಿ" ಎಂದು ಹೇಳಿ ಹೋಗುತ್ತಿದ್ದರು. ನನ್ನ ತಂದೆಯವರು ಯಜಮಾನರ ಆಜ್ಞೆಯನ್ನು ಇನ್ನಷ್ಟು ವಿಸ್ತರಿಸಿಕೊಂಡು "ಮೊದಲು ವೆಂಕಣ್ಣಯ್ಯನವರಿಗೆ ಇದನ್ನು ತೋರಿಸಿ, ಆಮೇಲೆ ಪರಿಷತ್ತಿನಲ್ಲಿ ಕೊಟ್ಟು ಬಾ" ಎಂದು ಯಾವುದಾದರೊಂದು ಕಾಗದವನ್ನೋ ಟಿಪ್ಪಣಿಯನ್ನೋ ಪ್ರೂಫನ್ನೋ ಕೊಡುತ್ತಿದ್ದರು. ಪರಿಷತ್ತಿಗೆ ಹೋದಾಗ ಯಜಮಾನರು "ಇದನ್ನು ನಿಮ್ಮ ಅಪ್ಪನಿಗೆ ತೋರಿಸಿ ವೆಂಕಣ್ಣನವರಿಗೆ ಕೊಟ್ಟುಬಿಡು" ಎಂದು ಇನ್ನೇನಾದರೂ ಕಾಗದವನ್ನೋ ಪ್ರೂಫನ್ನೋ ಕೊಡುತ್ತಿದ್ದರು. ಹೀಗಾಗಿ ಪರಿಷತ್ತು ವೆಂಕಣ್ಣಯ್ಯನವರು ನನ್ನ ತಂದೆ., ಇವರಿಗೆ ನಾನು ಸರ್ವಸಮನಾದ ಮಾಣಿಯಾಗಿ ಓಡಿಯಾಡುವ ಸಂದರ್ಭ ನನಗೆ ಸಾಧಾರಣವಾಗಿ ಅಂಟಿಕೊಳ್ಳುತ್ತಿದ್ದಿತು.

ಆಗಿನ ಪರಿಷತ್ತು ಮೂರೇ ಕೋಣೆಗಳದು. ಸ್ವತಂತ್ರವಾದ ಕಟ್ಟಡ ಇಲ್ಲ. ಶ್ರೀಮಾನ್ (ಈಗ ದಿವಂಗತರು) ಸೂರಪ್ಪ ಎಂಬುವರ ಮನೆಯ ಮುಂಭಾಗದ ಮೂರು ಕೋಣೆಗಳನ್ನು ಬಾಡಿಗೆಗೆ ಗೊತ್ತುಮಾಡಿಕೊಳ್ಳಲಾಗಿದ್ದಿತು. ದಕ್ಷಿಣ ದಿಕ್ಕಿಗೆ ಎದುರಾದ ಮನೆ. ಈಗ ಆ ಸೈಟು ಇದೆ. ಹಿಂದಿನ ಗುರುತೇ ಸಿಗದಂತೆ ಬೇರೊಂದು ಕಟ್ಟಡ ಎದ್ದಿದೆ. ನನ್ನ ಜ್ಞಾಪಕದಲ್ಲಿರುವಂತೆ ಆ ಕಾಲದ ಪರಿಷತ್ತಿನ ಚಿತ್ರವನ್ನು ಕೊಟ್ಟಿದ್ದೇನೆ



ಚಿತ್ರದ ಬಲ ಮೂಲೆಯ ಕೋಣೆಯೇ ಯಜಮಾನರ ಕಾರ್ಯಾಲಯ (ಬೆ.ವೆಂ.) ಕೋಣೆಯ ವಾಯುವ್ಯ ಮೂಲೆಯಲ್ಲಿ ಮೇಜು ಕುರ್ಚಿ, ಯಜಮಾನರ ಓದು ಬರಹ ...ಇಲ್ಲಿ. 'ಪಂಪ ರಾಮಾಯಣ' 'ಕನ್ನಡ ಐದನೆಯ ಪುಸ್ತಕ', 'ಸೋಮೇಶ್ವರ ಶತಕ' ಮೊದಲಾದ ಪುಸ್ತಕಗಳು ಸಿದ್ಧವಾದದ್ದು. ಮೇಜಿನ ಅಕ್ಕಪಕ್ಕಗಳಲ್ಲಿ ಮರದ ಬೀರುಗಳು; ಬೀರುಗಳಲ್ಲಿ ಪುಸ್ತಕಗಳು, ಕಾಗದ ಪತ್ರಗಳು.

'ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ' ಪ್ರಕಟವಾಗಿ ಬಂದಾಗೆಲ್ಲ ಕಟ್ಟುಗಳಿಗೆ ಯಜಮಾನರ ಕೋಣೆಯಲ್ಲಿಯೇ ಸ್ಥಾನ. ಅಂತ ಸಂದರ್ಭಗಳಲ್ಲಿ ನನಗೂ, ವೆಂಕಣ್ಣಯ್ಯನವರ ಮಕ್ಕಳಿಗೂ ಯಜಮಾನರಿಂದ ಆಹ್ವಾನ. ಪತ್ರಿಕೆಗಳಿಗೆ ರ್‍ಯಾಪರ್ ಸುತ್ತಿ ಅಂಟಿಸುವುದು, ಸ್ಟಾಂಪ್ ಹಚ್ಚುವುದು ನಮ್ಮ ಕೆಲಸ. ಯಜಮಾನರು ಅಲ್ಲಿಯೇ ನಿಂತುಕೊಂಡು ನಮ್ಮನ್ನು ಹತೋಟಿಯಲ್ಲಿಡುತ್ತಿದ್ದರು. ನಗಕೂಡದು, ಮಾತನಾಡಕೂಡದು, ಅತ್ತಿತ್ತ ನೋಡಕೂಡದು. ಕುಳಿತಿದ್ದ ಜಾಗದಿಂದ ಎದ್ದುಹೋಗಕೂಡದು, ಕಾಲಹರಣ ಮಾಡಕೂಡದು. ಶ್ರದ್ಧೆಯಿಂದ ಕೆಲಸಮಾಡಬೇಕು – ಇವು ಯಜಮಾನರು ನಮಗೆ ವಿಧಿಸಿದ್ದ ಕಾಯಿದೆ. ಅವರಿಗೆ ತೃಪ್ತಿ ಬರುವಂತೆ ನಡೆದುಕೊಂಡರೆ (ನಡೆದುಕೊಳ್ಳದಿದ್ದರೆ ಒಂದರೆಡು ಸಲ ಸಿಡುಕಿ) ದಿನಕ್ಕೆ ಒಬ್ಬೊಬ್ಬರಿಗೆ ಮೂರು ಕಾಸು ಇನಾಮು! ಎರಡು ಮೂರು ದಿನದ ಕೆಲಸ ಇದು.

ಇನಾಮನ್ನು ತೆಗೆದುಕೊಂಡು ಅಂಗಡಿಗೆ ಹೋಗಕೂಡದೆಂದೂ, ಮನೆಯಲ್ಲಿ ಹಿರಿಯರ ಕೈಯಲ್ಲಿಡಬೇಕೆಂದೂ ಇನ್ನೊಂದು ಕಾಯಿದೆ. ಒಂದು ಸಲ ನನ್ನ ತಾತನವರ ಬಳಿ (ಪಂಚಕಲಶ ಗೋಪುರ' ನೋಡಿ) "ಮೊನ್ನೆ ನಿಮ್ಮ ಮೊಮ್ಮಗ ಎಷ್ಟು ದುಡ್ಡು ಕೊಟ್ಟ?"ಎಂದ ವಿಚಾರಿಸಿಕೊಂಡದ್ದು ನನ್ನ ಕಿವಿಗೆ ಬಿದ್ದಿತು.

ಯಜಮಾನರ ಕೋಣೆಯ ಉತ್ತರ ದಿಕ್ಕಿನಲ್ಲಿದ್ದ ಕೋಣೆಯಲ್ಲಿ ಪರಿಷತ್ತಿನ ಪ್ರಕಟನೆಗಳನ್ನು ಇಡಲಾಗಿದ್ದಿತು. ಇದರ ಪೂರ್ವ ದಿಕ್ಕಿಗಿದ್ದ ಕೋಣೆಯೇ 'ಹಾಲ್'. ದಕ್ಷಿಣ ಮುಖದ ಬಾಗಿಲಿನಿಂದ ಒಳಹೊಕ್ಕು ಮೊಗಸಾಲೆಯನ್ನು ದಾಟಿ ಇವನ್ನು ಸೇರಬೇಕಾಗಿದ್ದಿತ್ತು. ಇಲ್ಲಿ ನಾಲ್ಕೈದು ಕುರ್ಚಿಮೇಜುಗಳು. ಪರಿಷತ್ತಿನ ಪಂಡಿತರು, ಸಿಬ್ಬಂದಿ ಕೆಲಸ ಮಾಡುತ್ತಿದ್ದ ಜಾಗ. ಕಡಬದ ನಂಜುಂಡ ಶಾಸ್ತ್ರಿಗಳೂ (ಇನ್ನೊಂದಿಬ್ಬರೂ – ಹೆಸರು ತಿಳಿಯದು) ತಾಳೆಯೋಲೆ ಪ್ರತಿಗಳಲ್ಲಿ ಮಗ್ನರಾಗಿರುತ್ತಿದ್ದರು ಇಲ್ಲಿ. ಕಡಬದ ನಂಜುಂಡಶಾಸ್ತ್ರಿಗಳಿಗೆ ನಶ್ಯದ ಚಟ. ಯಜಮಾನರ ದೃಷ್ಟಿಯಲ್ಲಿ ಇದು ಶ್ವಪಚವಿದ್ಯೆ. ಯಜಮಾನರು ಕರೆದಾಗ ಶಾಸ್ತ್ರಿಗಳು ದಡಬಡಲಾಗುತ್ತಿದ್ದರು. ಚಿಟಿಕೆಯಲ್ಲಿದ್ದ ನಶ್ಯವನ್ನು ಮೂಗಿಗೆ ಏರಿಸುವ ಹಾಗಿಲ್ಲ. ಕುರ್ಚಿಗೋ ಮೇಜಿಗೋ ಒರೆಸುವಹಾಗಿಲ್ಲ. ಈ ತಿಕ್ಕಾಟದಲ್ಲಿದ್ದಾಗ ಯಜಮಾನರ ಇನ್ನೊಂದು ಕೂಗು. ಶಾಸ್ತ್ರಿಗಳು ಎದ್ದು ಹೊರಗೆ ಹೋಗಿ ಮೂಗು ಸೀದಿ ಬಾಯಿ ಮುಕ್ಕಳಿಸಿ ಕೈತೊಳೆದುಕೊಂಡು ಹೋಗುತ್ತಿದ್ದರು. ವಾಪಸು ಬಂದೊಡನೆಯೇ ನಶ್ಯ ಸೇವನೆಯಾದ ಹೊರತು ತಾಳೆಯೋಲೆಯಲ್ಲಿ ಅವರಿಗೆ ಏನೊಂದೂ ಕಾಣುತ್ತಿರಲಿಲ್ಲ.

ಒಂದು ಸಲ ಬಾರಿ ಮಳೆಗಾಳಿಗಳಿಂದ ಹೆಂಚುಗಳು ಸಾಲನ್ನು ಬಿಟ್ಟು ಅಸ್ತವ್ಯಸ್ತವಾಗಿ ಚಾವಣಿಯಲ್ಲಿ ಬಿರುಕು ಬಿಟ್ಟಿತ್ತು. ನೀರು ಒಳಕ್ಕೆ ಹರಿದು ಕಾಗದ ಪತ್ರಗಳಿಗೂ ಸ್ವಲ್ಪ ಹಾನಿ ತಂದಿತು. ಯಜಮಾನರು ಸೂರಪ್ಪನವರನ್ನು ಕರೆದುಕೊಂಡು ಬಂದು ಸ್ಥಿತಿಯನ್ನು ತೋರಿಸಿದರು. ಸೂರಪ್ಪನವರೇನೋ ಕೆಲಸಗಾರರನ್ನು ಕರೆದುಕೊಂಡು ಬಂದು ರಿಪೇರಿ ಮಾಡಿಸುವುದಕ್ಕೆ ತಯಾರಾಗಿದ್ದರು. ಯಜಮಾನರಿಗೆ ಇದು ಸರಿಯಾಗಿ ತೋರಲಿಲ್ಲ. "ಸೂರಪ್ಪನವರೇ, ನಾವು ಬೇಕೆಂದಾಗ ಕೂಲಿಯಾಳು ಸಿದ್ಧವಾಗಿರುತ್ತಾನೆಯೇ, ಅಥವಾ ಮಳೆ ನಮಗಾಗಿ ಕಾದುಕೊಂಡಿರುತ್ತದೆಯೆ? ಹೊಸ ಹೆಂಚುಗಳನ್ನೇನೂ ಹಾಕಬೇಕಾಗಿಲ್ಲವಲ್ಲ! ಇರುವ ಹೆಂಚುಗಳನ್ನೇ ಪುನಃ ಕ್ರಮದಲ್ಲಿ ಜೋಡಿಸಿದರಾಯಿತು. ನಾಳೆ ಭಾನುವಾರ, ನಿಮಗೆ ಕಚೇರಿ ಇಲ್ಲ, ಬೆಳಿಗ್ಗೆ ಬಂದಬಿಡಿ" ಎಂದರಂತೆ. ಅಂದು ಮನೆಗೆ ಹಿಂತಿರುಗುವಾಗ ಯಜಮಾನರು ನನ್ನ ಮನೆಗೆ ಬಂದು "ಸ್ವಾಮಿ, ನಾಳೆ ಸ್ಕೂಲಿಗೆ ರಜೆ ತಾನೆ? ನಿನ್ನ ಸೈನ್ಯವನ್ನು ಕರೆದುಕೊಂಡು

ಬಂದುಬಿಡಪ್ಪ. ಬೆಳಿಗ್ಗೆ ಎಂಟು ಗಂಟೆಗೆಲ್ಲ ಅಲ್ಲಿದ್ದು ಬಿಡಿ" ಎಂದರು. ನನ್ನ ಸೈನ್ಯ ಎಂದರೆ ವೆಂಕಣ್ಣಯ್ಯನವರ ಮಕ್ಕಳು.

ಮಾರನೆಯ ಬೆಳಿಗ್ಗೆ ನಾವು ಅಲ್ಲಿಗೆ ಹೋದಾಗ ಯಜಮಾನರು, ಸೂರಪ್ಪನವರು, ಶಾಸ್ತ್ರಿದ್ವಯರು ಮೇಲುಡುಗೆಯನ್ನು ಕಳಚಿ, ಕಚ್ಚೆಯನ್ನು ಎತ್ತಿ ಸೊಂಟಕ್ಕೆ ಸಿಕ್ಕಿಸಿ ಕಾಮಗಾರಿಯಲ್ಲಿ ತೊಡಗಿದ್ದರು. ನಮ್ಮನ್ನು ಕಂಡೊಡನೆಯೆ ಯಜಮಾನರು "ಓಹೋ ಬಂದೇ ಬಿಟ್ಟಿತಪ್ಪ ವಾನರ ಸೈನ್ಯ ! ಸರ್ವನಾಶವಾಗಿಬಿಟ್ಟಿತು!" ಎಂದು ಕೀರಲು ದನಿಯ ಉದ್ಗಾರ ಮಾಡಿ, ನಮ್ಮನ್ನು ದೂರದಲ್ಲಿ ನಿಲ್ಲುವಂತೆ ಆಜ್ಞಾಪಿಸಿದರು.

ಒಂದು ಗಂಗಾಳದಲ್ಲಿ ನೀರನ್ನು ತಂದಿಟ್ಟು, ಚಿಂದಿ ಬಟ್ಟೆಯ ತುಂಡುಗಳನ್ನು ನಮ್ಮ ಕೈಗೆ ಕೊಟ್ಟು, "ಮಾತು, ನಗು, ಚೇಷ್ಟೆ, ಜಗಳ ಕೂಡದು. ಒಂದೊಂದು ಹೆಂಚನ್ನೂ ತೊಡೆಯ ಮೇಲಿಟ್ಟುಕೊಂಡು ಒದ್ದೆ ಬಟ್ಟೆಯಿಂದ ಎರಡು ಕಡೆಯೂ ಒರಸಿ ಜೋಪಾನವಾಗಿ ಒಂದರ ಪಕ್ಕದಲ್ಲೊಂದನ್ನು ಸಾಲಾಗಿ ಇಡಬೇಕು"ಎಂದು ಕಟ್ಟಪ್ಪಣೆ ಮಡಿದರು ; ಒಂದೆರಡು ಹೆಂಚುಗಳನ್ನು ತಾವೇ ಒರಸಿ ತೋರಿಸಿದರು. ನಮ್ಮ ಕೈಲಿ ಮಾಡಿಸಿ ನೋಡಿ ಮುಸಿ ನಗುತ್ತ ಶಾಸ್ತ್ರಿದ್ವಯರ ಬಳಿಗೆ ಹೋದರು.

ಈ ಮೂರು ಕೋಣೆ ಪರಿಷತ್ತಿನ ಹಿಂಭಾಗದಲ್ಲಿ ಮಹಡಿಯಿದ್ದಿತು. ಅದರ ರೂಮೊಂದನ್ನು ನನ್ನ ತಂದೆಯವರು ಬಾಡಿಗೆಗೆ ಗೊತ್ತುಮಾಡಿಕೊಂಡು ಆ 'ಉಗ್ರಾಣ'ದಲ್ಲಿ ಆಗಿನ ಕರ್ಣಾಟಕ ಪ್ರಕಟನಾಲಯದ ಪ್ರಕಟನೆಗಳನ್ನೂ , ಸದ್ಯಕ್ಕೆ ಬೇಡವಾದ ಪುಸ್ತಕಗಳನ್ನೂ ಇರಿಸಿದ್ದರು. ಮಹಡಿಯ ಕೀಳ್ಮೆಟ್ಟಲಿನ ಬಳಿ ದೊಡ್ಡ ಸೀಬೆಮರವೊಂದಿದ್ದಿತು. ನಮ್ಮ ಎಳೆಗಣ್ಣುಗಳಿಗೆ ಅದು ಕಲ್ಪವೃಕ್ಷ. ಸರ್ವ ಋತುಗಳಲ್ಲಿಯೂ ಕಾಯಿ ಬಿಡುತ್ತದೆ ಎಂಬ ಭ್ರಮೆ. ಮಾಣಿಯ ಕೆಲಸಕ್ಕಾಗಲಿ, 'ಉಗ್ರಾಣ'ದಿಂದ ಪುಸ್ತಕಗಳನ್ನು ತರುವಾಗಲಾಗಲಿ ಪರಷತ್ತಿಗೆ ಹೋದಾಗಲೆಲ್ಲ ಸೀಬೆ ಮರವನ್ನು ಹತ್ತಿ ಕಾಯಿಗಾಗಿ ಹುಡುಕಿ, ಅದಿಲ್ಲದಿದ್ದರೆ ನಾಳೆ ಸಿಗುತ್ತದೆಯೆಂಬ ನಿರೀಕ್ಷೆಯಿಂದ ಕೆಳಗಿಳಿದು ಮನೆಗೆ ತೆರಳುವುದು ನನ್ನ ಪದ್ಧತಿ. ಒಂದು ಸಲ ನನ್ನ ಸೈನ್ಯದೊಡನೆ ಮರದ ಮೇಲಿದ್ದಾಗ ಯಜಮಾನರ ಕಣ್ಣು ಬಿದ್ದಿತು. ಮರದ ಬಳಿ ಬಂದು ನಿಂತರು. ಒಬ್ಬೊಬ್ಬರನ್ನೂ ಕೆಳಗಿಳಿದುಬರುವಂತೆ ಆಜ್ಞೆ ಹಾಕಿದರು. ಆ ಹೆದರಿಕೆಯಿಂದ ಕಾಲು ಜಾರದೆ ಇಳಿಯುವುದು ಯಾರಿಗೂ ಸಾಧ್ಯವಾಗಲಿಲ್ಲ. ಪೆಟ್ಟುಬಿದ್ದ ಜಾಗವನ್ನು ಸವರಿಕೊಳ್ಳುತ್ತಿದ್ದಾಗ ಯಜಮಾನರಿಂದ ಶ್ವೇತಚ್ಛತ್ರಿ ಸೇವೆ ಆಯಿತು ('ಪಂಚಕಲಶ ಗೋಪರ' ನೋಡಿ). ನಾವು ನಾಲ್ಕೈದು ಮಂದಿಯನ್ನು ತರುಮಿಕೊಂಡು ಬಂದು ಮೊಗಸಾಲೆಯಲ್ಲಿ ಸಾಲಾಗಿ ಕುಳ್ಳಿರಿಸಿದರು. ಒಳಗೆಹೋಗಿ 'ಸೋಮೇಶ್ವರಶತಕ'ದ ಗ್ಯಾಲಿ ಪ್ರೂಫಿನಿಂದ ಹರಿದಿದ್ದ ಚೀಟಿಗಳನ್ನು ತಂದು ನಮ್ಮ ಕೈಲಿಟ್ಟು "ಈ ಚೀಟಿಯಲ್ಲಿರುವ ಪದ್ಯವನ್ನು ಕಂಠಪಾಠ ಮಾಡಿ ನಾಳೆ ಬೆಳಗ್ಗೆ ಬಂದು ನನಗೆ ಒಪ್ಪಿಸಬೇಕು! ಈಗ ನೇರವಾಗಿ ಮನೆ ಸೇರಿಕೊಳ್ಳಿ!" ಎಂದು ಆಜ್ಞೆ ಹಾಕಿದರು.

ಆಗಿನ ಪರಿಷತ್ತು ನನ್ನ ನೆನಪಿನಲ್ಲಿ ಉಳಿದಿರುವುದಕ್ಕೆ ಇನ್ನೊಂದು ಪ್ರಬಲವಾದ ಕಾರಣ ಇದೆ. ನಾನೂ ನನ್ನ ಸೈನ್ಯದ ನಾಲ್ಕೈದು ಹುಡುಗರೂ ಲೋಯರ್ ಸೆಕೆಂಡರಿ ಪರೀಕ್ಷೆಗೆ ಹವಣುಮಾಡಿಕೊಳ್ಳುತ್ತಿದ್ದ ಸಮಯ. ನನ್ನ ಮನೆಯ ಎದುರು ಮೂಲೆಯಲ್ಲಿದ್ದ ಕಲ್ಲುಕಟ್ಟೆಯ ಮೇಲೆ ಕುಳಿತುಕೊಂಡು ಓದಿಕೊಳ್ಳುತ್ತಿದ್ದೆವು, – ಎಂದರೆ ತೆರೆದ ಪುಸ್ತಗಳನ್ನು ಕೈಯಲ್ಲಿಟ್ಟುಕೊಂಡು ಅದಕ್ಕೆ ಸಂಬಂಧಪಡದ ಮಾತುಕತೆಗಳಲ್ಲಿ ತೊಡಗುತ್ತಿದ್ದೆವು. ಯಜಮಾನರು ಹೋಗುಬರುವುಗಳಿಗೆ ಅದೇ ದಾರಿ. ಅದೇನು ಮಾತಾನಾಡುತ್ತಿದ್ದೆವೋ, ಅವರು ಅದೇನನ್ನು ಕೇಳಿಸಿಕೊಂಡರೋ! ಮನೆಯೊಳಕ್ಕೆ ಹೋಗಿ ನನ್ನ ತಂದೆಯವರೊಂದಿಗೆ ಏನೋ ಮಾತನಾಡಿಕೊಂಡು ಹಿಂತಿರುಗುತ್ತಿದ್ದಾಗ ನಮ್ಮ ಬಳಿ ಬಂದು "ನಾಳೆ ಸಂಜೆ ಆರು ಗಂಟೆಗೆ ನೀವೆಲ್ಲ ಪರಿಷತ್ತಿಗೆ ಬರತಕ್ಕದ್ದು! ನಿಮ್ಮ ಪಾಠ ಪುಸ್ತಕ, ನೋಟ್ ಪುಸ್ತಕ, ಪೆನ್ಸಿಲ್‌ಗಳನ್ನು ಮರೆಯದೆ ತರತಕ್ಕದ್ದು" ಎಂದು ಆಜ್ಞಾಪಿಸಿದರು.

ಆಜ್ಞೆಗನುಸಾರವಾಗಿ ಪರಿಷತ್ತಿನ ಮೊಗಸಾಲೆಯಲ್ಲಿ ಸೇರಿದೆವು. ಯಜಮಾನರು ನಮ್ಮನ್ನು ಸಾಲಾಗಿ ಕುಳ್ಳಿರಿಸಿ ಇನ್ನೊಬ್ಬಾತನನ್ನು ಕರೆದು ನಮ್ಮನ್ನು ತೋರಿಸುತ್ತ "ನೋಡಿ ಸ್ವಾಮಿ, ಇವರೇ ಪಟಿಂಗರು! ನಿಮ್ಮ ಜವಾಬ್ದಾರಿಗೆ ತೆಗೆದುಕೊಳ್ಳಿ"ಎಂದು ಹೇಳಿ, ನಮ್ಮಲ್ಲಿದ್ದ ಒಬ್ಬೊಬ್ಬರ ಮುಖದಲ್ಲಿಯೂ ಬಗ್ಗಿ "ಇವತ್ತಿನಿಂದ ಪ್ರತಿ ಸಂಜೆ ನಿನಗೆ ಇಲ್ಲಿಯೇ ಪಾಠ ತಿಳಿಯಿತೇ?" ಎಂದು ಬೆದರಿಕೆ ಹಾಕಿದರು. ಇದು ಸಾಲದೆಂಬಂತೆ ಒಳಗಿನಿಂದ ಬೆತ್ತವೊಂದನ್ನು ತಂದು ನಮಗೆಲ್ಲ ತೋರಿಸಿ, ಮೂಲೆಯಲ್ಲಿಟ್ಟರು. ಆ ಇನ್ನೊಬ್ಬಾತ (ಹೆಸರು ಮರೆತುಹೋಗಿದೆ) ಉಪಾಧ್ಯಾಯನಾಗಿದ್ದು ನಿವೃತ್ತಿಯಾಗಿದ್ದವ. ಶಿಸ್ತಿನಿಂದಲೂ ಶ್ರದ್ಧೆಯಿಂದಲೂ ಪಾಠ ಹೇಳಿಕೊಟ್ಟರು. ಅವರ ಶ್ರಮ ಸಾರ್ಥಕವಾಯಿತು, ನಮ್ಮ ಮಾನ ಉಳಿಯಿತು ಪರಿಷತ್ತಿನ ಮುದ್ರೆ ನಮ್ಮ ಸ್ಮೃತಿಯಲ್ಲಿ ಅಚ್ಚೊತ್ತಿತು.

(ಕನ್ನಡ ನುಡಿ ಸಂಪುಟದ ೪೩, ಸಂಚಿಕೆ ೧, ಪು. ೧೧. ೧೨, ೧೩ ಜನವರಿ, ೧೯೭೯)

ಟಿಪ್ಪಣಿ : ಇತ್ತೀಚೆಗೆ (೬-೧೦-೨೦೧೫) ಸೂರಪ್ಪನವರ ಮನೆಗೆ ಹೋದಾಗ ಅಲ್ಲಿ ಸೂರಪ್ಪನವರ ದೊಡ್ಡ ಮಗ ಶ್ರೀನಿವಾಸಮೂರ್ತಿ ಅವರು ಮತ್ತು ಅವರ ತಮ್ಮ ಸತ್ಯನಾರಾಯಣರ ಮಗ ವೆಂಕಟೇಶ್ ಅವರು ೧೯೧೫ರಲ್ಲಿ ಕಟ್ಟಿದ ಮನೆಯ ಚಿತ್ರಗಳನ್ನು ಕೊಟ್ಟು ವಿವರ ನೀಡಿದರು. ಅವರು ಹೇಳಿದಂತೆ ಚಿತ್ರದಲ್ಲಿ ತೋರಿಸಿದ ಪ್ರಕಾರ ಕಾಪೌಂಡು ಗೇಟು ವಿಶಾಲವಾಗಿತ್ತು. ಗೇಟಿನ ಒಂದು ಭಾಗದಲ್ಲಿ ಕಲ್ಲುಗುಂಡು ಕೂಡಿಸಿದ ಕಲ್ಲಿನ ಗೇಟಿನ ಇನ್ನೊಂದು ಭಾಗದಲ್ಲಿ ಚಿಕ್ಕಗೇಟು ಒಂದು ಇತ್ತು. ದೊಡ್ಡ ಗೇಟಿನ ಮೇಲ್ಭಾಗದಲ್ಲಿ ಕಂಬಕ್ಕೆ ಸೇರಿದ್ದ ಕಬ್ಬಿಣ ಗೇಟಿನ ಮೇಲೆ ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬ ಅರ್ಧ ಕಮಾನಿನ ಆಕಾರದಲ್ಲಿ (ಈಗ ಪರಿಷತ್ತಿನ ಪ್ರವೇಶದ್ವಾರದಲ್ಲಿ ಇರುವ ಹಾಗೆ) ಇತ್ತು. ಗೇಟಿನ ಒಳಕ್ಕೆ ಹೋಗಿ ಎಡಕ್ಕೆ ತಿರುಗಿದರೆ ಮಹಡಿ ಕಟ್ಟಡದ ಮೂಲೆಭಾಗದಲ್ಲಿ ಪರಿಷತ್ತಿನ ಕಚೇರಿಗೆ ಹೋಗುವ ಬಾಗಿಲು ಇತ್ತು. ಬಾಗಿಲ ಒಳಗೆ ಪಡಸಾಲೆಗೆ ಹೋದರೆ ಅಲ್ಲಿ ಬಲಗಡೆ ಮಹಡಿ ನೆಲಕ್ಕೆ ಹೋಗಲು ಸುರುಳಿ ಆಕಾರದ ಮೆಟ್ಟಿಲು ಇತ್ತು. ಮಹಡಿ ಭಾಗವನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟಿತ್ತು. ಕೆಳಭಾಗ ಪರಿಷತ್ತಿಗೆ ಕೊಡಲಾಗಿತ್ತು. ಒಳಕ್ಕೆ ಹೋದರೆ ದೊಡ್ಡ ಹಜಾರ ಆ ಕಡೆ ಈ ಕಡೆ ಕೊಠಡಿಗಳು ಇದ್ದವು. ಇದರ ವಿವರವನ್ನು ಬಿಜಿಎಲ್ ಸ್ವಾಮಿ ಕೊಟ್ಟಿದ್ದಾರೆ. ಕಟ್ಟಡದ ಮಾಲೀಕರಾದ ಸೂರಪ್ಪನವರು ಹಿಂಭಾಗದಲ್ಲಿದ್ದ ಕಟ್ಟಡದಲ್ಲಿ ವಾಸಿಸುತ್ತಿದ್ದರು. ಆ ಭಾಗದಲ್ಲಿ ಈಗ ಮೊಮ್ಮಗ ವೆಂಕಟೇಶ್ ವಾಸಿಸುತ್ತಿದ್ದಾರೆ. (ಸ್ವಲ್ಪ ಭಾಗ ಬಿಟ್ಟು ಉಳಿದ ಭಾಗ ನವೀಕೃತವಾಗಿದೆ) ಮೂಲಭಾಗದ ನವೀಕೃತ ಕಟ್ಟಡದಲ್ಲಿ ಸೂರಪ್ಪನವರ ಹಿರಿಯಮಗ ಶ್ರೀನಿವಾಸಮೂರ್ತಿ ಅವರು ವಾಸಿಸುತ್ತಿದ್ದಾರೆ. ದಿನಾ ಸಂಜೆ ರಾತ್ರಿ ೭-೮ರ ವೇಳೆಗೆ ಬೆಳ್ಳಾವೆ, ಡಿವಿಜಿ, ವೆಂಕಣ್ಣಯ್ಯ ಮೊದಲಾದವರು ಬರುತ್ತಿದ್ದರು. ೧೦-೧೧ರ ವರೆಗೆ ಪರಿಷತ್ತಿನ ಕೆಲಸಗಳಲ್ಲಿ ಕಾರ್ಯಮಗ್ನರಾಗುತ್ತಿದ್ದರಂತೆ.

(ಮನೆಯ ೨ ಭಾವಚಿತ್ರ ಕೊಟ್ಟಿದೆ - ಅನಾಜಿ)



ವಾಜಪೇಯಂ ಸೂರಪ್ಪನವರ ಮನೆ – ಶಂಕರಪುರ
ಮುಂಭಾಗದ ಚಿತ್ರ
(ನಂ.೧೯, ೪ನೇ ಕ್ರಾಸ್, ಶಂಕರಪುರಂ, ಬೆಂಗಳೂರು)



ವಾಜಪೇಯಂ ಸೂರಪ್ಪನವರ ಮನೆ
ಪರಿಷತ್ತಿನ ಕಚೇರಿಯ ಪ್ರವೇಶದ್ವಾರದ ಕಟ್ಟಡ ಭಾಗ
(ಪ್ರವೇಶ ದ್ವಾರದ ಗೋಡೆಮೇಲೆ ಬಳ್ಳಿ ಹಬ್ಬಿದೆ)

ಶ್ರೀಕೃಷ್ಣರಾಜ ಪರಿಷನ್ಮಂದಿರಕ್ಕೆ ನಿವೇಶನ ದೊರೆತ ಬಗೆ

ವಿಸೀ ಅವರು ಪರಿಷತ್ತಿನ ಕಟ್ಟಡ ಕಾರ್ಯಕಲಾಪ ಬೆಳೆದುಬಂದ ಬಗ್ಗೆ ಲೇಖನದಲ್ಲಿ ಶ್ರೀ ಕೃಷ್ಣರಾಜಪರಿಷನ್ಮಂದಿರ ನಿರ್ಮಾಣಕ್ಕೆ ಸ್ಥಳ ದಿವಾನ್ ಮಿರ್ಜಾ ಅವರಿಂದ ದೊರೆತ ಬಗೆಯನ್ನು ಹೀಗೆ ವಿವರಿಸಿದ್ದಾರೆ.

"ಭಾರತೀಯ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ಸಿನ ಚಳವಳಿ ಇಲ್ಲಿಗೂ ಹಬ್ಬಿ ಬಂದಾಗ ಸಭೆಗಳು ಭಾಷಣಗಳು .... ಸುಲ್ತಾನರ ಅರಮನೆಯ ಮುಂದೆ ಕೆಲಕಾಲ ನಡೆಯುತ್ತಿದುದ್ದು ಅದನ್ನು ಮೈಸೂರು ಸರ್ಕಾರಕ್ಕೆ ತಡೆಯಬೇಕಾಗಿ ಬಂದಿತು. ಅಂತಹ ಸಭೆಗಳಿಗೆ ಭಾಷಣಗಳಿಗೆ ಅಡ್ಡಿಬಂದ ಮೇಲೆ ಆ ಭಾಷಣಗಳನ್ನು ನಿರ್ವಹಿಸಿದ ಸಂಸ್ಥೆಗಳು ಈಗ ಪರಿಷತ್ತಿರುವ ಖಾಲಿ ನಿವೇಶನದಲ್ಲಿ ಅವನ್ನು ನಡೆಸುತ್ತಿದ್ದರು. ಈಗ ಶ್ರೀಕಂಠಯ್ಯ ಅಚ್ಚುಕೂಟವಿರುವ ಕಡೆ ಮೊನ್ನೆ ಮೊನ್ನೆಯವರೆಗೂ ಒಂದು ಹೊಂಗೆಯ ಮರವಿತ್ತು. ಅದರ ಕೆಳಗೆ ಸರದಾರ ವಲ್ಲಭಬಾಯಿ ಪಟೇಲರಂಥವರು, ಮುದವೀಡು ಕೃಷ್ಣರಾಯರು, ಕಡಪಾ ರಾಘವೇಂದ್ರರಾಯರು ಭಾಷಣ ಮಾಡುತ್ತಿದ್ದುದನ್ನು ಕೇಳಿದ್ದೇನೆ. ಇದನ್ನು ತಪ್ಪಿಸಲು ಸರ್ಕಾರದಲ್ಲಿ ಬಹುಶಃ ಬ್ರಿಟಿಷ್ ರೆಸಿಡೆಂಟ್ ಒತ್ತಾಯದಿಂದಲೂ ಪ್ರಯತ್ನಗಳು ನಡೆಯುತ್ತಿದ್ದುದರಿಂದ ಮಿರ್ಜಾ ಸಾಹೇಬರು ಆಲೋಚನೆ ಮಾಡಿದರು ಎಂದುಕಾಣುತ್ತದೆ. ಶಂಕರಪುರದಲ್ಲಿ ಕೊಟ್ಟಿದ್ದ ಖಾಲಿ ನಿವೇಶನಕ್ಕೆ ಬದಲಾಗಿ ಇನ್ನೂ ಮೇಲಾದ ಈ ಸೈಟನ್ನು ಪರಿಷನ್ಮಂದಿರಕ್ಕೆ ಕೊಡುತ್ತೇನೆಂದು ಪರಿಷತ್ತಿನ ಪ್ರಮುಖರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪ ಕರ್ಪೂರ ಶ್ರೀನಿವಾಸರಾವ್, ನಂಗಪುರಂ ವೆಂಕಟೇಶಯ್ಯಂಗಾರ್ ಮುಂತಾದವರಿಗೆ ತಿಳಿಸಿದರು. ಶ್ರೀ ಡಿ.ವಿ. ಗುಂಡಪ್ಪನವರೂ ಅದನ್ನು ಸ್ವೀಕರಿಸುವಲ್ಲಿ ಪರಿಷತ್ತಿಗೆ ನೆರವಾದರು. ಎಲ್ಲ ರೀತಿಯಿಂದಲೂ ಈ ಪ್ರದೇಶ ಹೆಚ್ಚು ಪ್ರಶಸ್ತವಾಗಿತ್ತು" (ವಿಸೀ – ಕ. ನು. ಜನವರಿ ೧೯೭೪)

ಪರಿಷನ್ಮಂದಿರ ನಿರ್ಮಾಣ

"ಕರ್ಪೂರ ಶ್ರೀನಿವಾಸರಾಯರಿಗೂ, ವೆಂಕಟನಾರಣಪ್ಪನವರಿಗೂ ಮಂದಿರವನ್ನು ಕಟ್ಟಲು ತುಂಬಾ ಉತ್ಸಾಹವಿದ್ದಿತು. ಮಂದಿರದ ನಕ್ಷೆಯನ್ನು ಹಾಕಿ ಅದಕ್ಕೆ ಬೇಕಾದ ಹಣವನ್ನು ಸಿದ್ಧಗೊಳಿಸಲು ಎಲ್ಲರೂ ಪ್ರಯತ್ನಪಟ್ಟರು. ಮೈಸೂರು ಅರಮನೆಯ ಕಡೆಯಿಂದ ಅದಕ್ಕೆ ದ್ರವ್ಯದ ನೆರವೂ ಬಂದಿತೆಂದುಕೊಂಡಿದ್ದೇನೆ. ಪ್ರತಿದಿನ ಕಟ್ಟಡವನ್ನು ಕಟ್ಟುವಾಗ ಚಾಮರಾಜಪೇಟೆ ಮೊದಲನೇ ರಸ್ತೆಯಲ್ಲಿ ವಾಸವಾಗಿದ್ದ ಕರ್ಪೂರ ಶ್ರೀನಿವಾಸರಾಯರು, ಮೂರನೇ ರಸ್ತೆಯಲ್ಲಿಯೇ ಇದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರೂ ದಿನಾ ಇಲ್ಲಿಗೆ ಬಂದು ಹೋಗುತ್ತಿದ್ದರು. ಯಾರು ಬರಲಿ, ಬಾರದಿರಲಿ, ಪರಿಷತ್ತಿನ ಸಮಸ್ತ ಕಾರ್ಯಕಲಾಪಗಳನ್ನೂ ತಾಯಂತೆ, ಬಂಟನಂತೆ, ನಡೆಸಿಕೊಂಡುಹೋಗುತ್ತಿದ್ದ ಬೆಳ್ಳಾವೆ ವೆಂಕಟನಾರಣಪ್ಪ ಅವರು ಬಸವನಗುಡಿಯಲ್ಲಿದ್ದ ತಮ್ಮ ಮನೆಯಿಂದ ತಪ್ಪದೆ ಎಂಟು ಗಂಟೆಗೊ ಎಂಟೂವರೆ ಗಂಟೆಗೊ ಬಂದು ಕಟ್ಟಡ ಏಳುವುದನ್ನು ನೋಡಿಕೊಂಡು ಕಟ್ಟಡಕ್ಕೆ ಬೇಕಾದ ಕಲ್ಲು, ಇಟ್ಟಿಗೆ, ಗಾರೆ, ಇತ್ಯಾದಿ ಪ್ರತಿಯೊಂದನ್ನೂ ನಿರೀಕ್ಷಿಸುತ್ತಿದ್ದರು.

ಗಾರೆ ಅರೆಯುವುದಕ್ಕೆ ಮುಂಚೆ ಮರಳೆಷ್ಟು ಸುಣ್ಣವೆಷ್ಟು ಹಾಕಬೇಕು, ಎಷ್ಟು ನುಣ್ಣಗೆ ಅರೆಯಬೇಕು, ಎಂಬುದನ್ನು, ಪ್ರತಿಮಜಲಿನಲ್ಲಿಯೂ ಪರೀಕ್ಷೆ ಮಾಡಿ ಆ ಕಟ್ಟಡ ನೂರು ವರ್ಷಗಳ ಕಾಲ ಗಟ್ಟಿಯಾಗಿರುವಂತೆ ಮಾಡಲು ಸರ್ಪದಂತೆ ಕಾದು ನೋಡಿಕೊಂಡರು. ಅದರ ರಚನೆಗೆ ಅವರು ತುಂಬ ಕಷ್ಟಪಡಬೇಕಾಯಿತು. ಇನ್ನಾರು ಮೇಲ್ಪಡಿಸಲೋ ಕೀಳ್ಪಡಿಸಲೋ ಆಗದಂತೆ ಕಟ್ಟಿದ್ದು ಅದನ್ನು ಮಾರ್ಪಡಿಸಲು ಇತರರ ಸಲಹೆಗಳೊಡನೆ ಅವಕಾಶ ಕೊಡಲಾಗದಷ್ಟು ಭದ್ರವಾದದ್ದು ಆ ಮಂದಿರ (ಡಿವಿಜಿ).

"ಈ ಭವನ ನಿರ್ಮಾಣದ ಮೇಲ್ವಿಚಾರಣೆಯನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಎ. ತಾಂಡೋಣಿರಾಯರ ಸೇವೆಯು ಸ್ಮರಣೀಯ" (ಹೇಮಾದ್ರಿ – ಪುಟ ೧೭)

ಗಾಂಧಿಮೈದಾನ

ಕಟ್ಟಡ ನಿರ್ಮಾಣಕ್ಕೆ ಮುಂಚೆ ಮಿರ್ಜಾ ಇಸ್ಮಾಯಿಲ್ ಅವರು ನೀಡಿದ ನಿವೇಶನ ಹೇಗಿತ್ತು ಎಂದು ಹೇಮಾದ್ರಿ ಅವರು ಹೀಗೆ ತಿಳಿಸಿದ್ದಾರೆ.

"ಪರಿಷತ್ತಿನ ಈಗಿನ ಕಟ್ಟಡವಿರುವ ಸ್ಥಳ ಆಗ ಒಂದು ಬಯಲುಪ್ರದೇಶ. ಎದುರುಗಡೆ ಹಾರ್ಡಿಂಜ್ ರಸ್ತೆ. (ಈಗ ಪಂಪಮಹಾಕವಿರಸ್ತೆಯಾಗಿದೆ) ಅಕ್ಕಪಕ್ಕ ೨ ಹಾಗೂ ೩ನೇ ಮುಖ್ಯರಸ್ತೆ. ಹಿಂಭಾಗದಲ್ಲಿ ಎರಡು ಖಾಸಗಿ ಮನೆಗಳು. ಈ ಬಯಲಿನ ಅಂಚಿನಲ್ಲಿ ಆ ಎರಡೂ ಮನೆಗಳ ನಡುಭಾಗದಲ್ಲಿ ಮೂರು ದೊಡ್ಡ ಹೊಂಗೆಮರಗಳು. ಸಂಜೆಯ ಸೂರ್ಯನ ಬಿಸಿಲನ್ನು ತಡೆದು ಬಯಲಿಗೆ ನೆರಳೀಯುತ್ತಿದ್ದವು. ಭಾರತ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಎಲ್ಲ ಸಭೆಗಳೂ ಈ ಬಯಲಿನಲ್ಲಿ ನಡೆಯುತ್ತಿದ್ದವು. ಜನರು ಅದನ್ನು ಗಾಂಧೀಮೈದಾನ ಎಂದು ಕರೆಯುತ್ತಿದ್ದರು."

ಕಾಂಗ್ರೆಸ್ ಪ್ರಚಾರಕ್ಕಾಗಿ ಉತ್ತರ ಕರ್ನಾಟಕದಿಂದ ಗಂಗಾಧರರಾವ್ ದೇಶಪಾಂಡೆ, ಕೌಜಲಗಿ ಶ್ರೀನಿವಾಸರಾವ್, ಮುದವೀಡು ಕೃಷ್ಣರಾವ್, ಕಡಪಾ ರಾಘವೇಂದ್ರರಾವ್, ಮೇಲಿಂದ ಮೇಲೆ ಬೆಂಗಳೂರಿಗೆ ಬರುತ್ತಿದ್ದರು. ಅವರ ಭಾಷಣಗಳೆಲ್ಲಾ ಹೆಚ್ಚಾಗಿ "ಗಾಂಧಿ ಮೈದಾನ"ದಲ್ಲಿ (ಈಗಿನ ಕನ್ನಡ ಸಾಹಿತ್ಯ ಪರಿಷತ್ ಇರುವ ಜಾಗದಲ್ಲಿ) ಆಗುತ್ತಿತ್ತು.

ದೇಶಪಾಂಡೆ, ಮುದವೀಡು, ಕೌಜಲಗಿ ಅವರ ಭಾಷೆ ಮೊದಲು ಬೆಂಗಳೂರಿನ ಜನಕ್ಕೆ ಅರ್ಥವಾಗುತ್ತಿರಲಿಲ್ಲ. ಆದರೆ ಮುದವೀಡು ಅವರು ತಮ್ಮ ಪ್ರಚಂಡ ವಾಗ್ಮೀಯತೆಯಿಂದ ಜನರನ್ನು ಸೆರೆ ಹಿಡಿಯುತ್ತಿದ್ದರು. ಉತ್ತರ ಕರ್ನಾಟಕದ ಕಾಂಗ್ರೆಸ್ ನಾಯಕರ ಭಾಷಣಗಳು, ರಾಷ್ಟ್ರದ ಜಾಗ್ರತಿಯ ದೃಷ್ಟಿಯಿಂದ ಉಪಯುಕ್ತವಾಗಿರುತ್ತಿತ್ತು ಪಂಡಿತ ತಾರಾನಾಥರಿಂದ ಗೀತೆಯ ಮೇಲೆ ೧೦ ಭಾಷಣಗಳು ಗಾಂಧಿ ಮೈದಾನದಲ್ಲಿ ವ್ಯವಸ್ಥೆಯಾಯಿತು. ಅವರ ವಾಗ್ಮೀಯತೆ, ಬಹುಶ್ರುತಪಾಂಡಿತ್ಯ ಆಕರ್ಷಕ ವ್ಯಕ್ತಿತ್ವ ಬೆಂಗಳೂರು ಜನರನ್ನು ದಂಗು ಬಡಿಸಿತು.

ತಾರಾನಾಥರು ಗೀತೆಗೆ ಕೊಡುತ್ತಿದ್ದ ರಾಜಕೀಯ ವ್ಯಾಖ್ಯಾನವೂ ನವೀನವೂ ಮಾರ್ಮಿಕವೂ ಆಗಿರುತ್ತಿತ್ತು. ಹೀಗಾಗಿ ಗಾಂಧೀಮೈದಾನದ ಭಾಷಣಗಳನ್ನು ಕೇಳಲು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು ವಿದ್ವಜ್ಜನರು ಸಾಮಾನ್ಯವಾಗಿ ಬರುತ್ತಿರಲಿಲ್ಲ. ಅವರಿಗೆ ಸಿ.ಐ.ಡಿ.ಗಳ ಭಯ. ಪಂಡಿತರೂ, ದಾರ್ಶನಿಕ ಆದ ಕೆಲವರು ತಾರಾನಾಥರ ಭಾಷಣಗಳಿಗೆ ಬರುತ್ತಿದ್ದರು. ಹೊಸಕೆರೆ ಚಿದಂಬರಯ್ಯನವರು, (ಈಗ ಹೊಳೆನರಸೀಪುರದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು) ಆಗ ವೈ. ಸುಬ್ಬರಾಯರೆಂದು ನಾಮಾಂಕಿತರಾಗಿದ್ದರು. ಕೆ. ಎ. ಕೃಷ್ಣಸ್ವಾಮಿ ಅಯ್ಯರ್ ಅವರು ಸರ್ಕಾರಿ ಉದ್ಯೋಗಿಗಳಾದರೂ ಬರುತ್ತಿದ್ದರು. ಅನಕೃ ತಪ್ಪದೆ ಈ ತಾರಾನಾಥರ ಭಾಷಣಗಳಿಗೆ ಇವರ ಜತೆ ಹಾಜರಾಗುತ್ತಿದ್ದರು.

ಈ ರೀತಿ ರಾಷ್ಟ್ರಧುರೀಣ ಭಾಷಣಗಳು ಬ್ರಿಟಿಷರ ವಿರುದ್ಧ ಉಪನ್ಯಾಸಗಳು ಗಾಂಧಿಮೈದಾನದಲ್ಲಿ ಮಿರ್ಜಾ ಇಸ್ಮಾಯಿಲ್ಲರ ಕಾಲದಲ್ಲಿ ನಡೆಯುತ್ತಿತ್ತು." (ಅನಕೃ : ಬರಹಗಾರನ ಬದುಕು)

ಕಟ್ಟಡ ನಿರ್ಮಾಣಕ್ಕೆ ಧನಸಹಾಯ

ಕಟ್ಟಡ ನಿರ್ಮಾಣಕ್ಕೆ ನಿವೇಶನವೇನೋ ಮಿರ್ಜಾ ಅವರಿಂದ ದೊರಕಿತು. ಆದರೆ ಕಟ್ಟಡ ಕಟ್ಟಲು ಹಣಬೇಕಿಲ್ಲ. ಅದಕ್ಕೆ "ಕಟ್ಟಡದ ನಿಧಿಗಾಗಿ ಕೃಷ್ಣರಾಜ ಒಡೆಯರ್ ಅವನರು ೫,೦೦೦ರೂ.ಗಳನ್ನು ಶ್ರೀ ಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರು ೩೦೦೦ ರೂ.ಗಳನ್ನು ಅಂದಿನ ಪರಿಷತ್ತಿನ ಅಧ್ಯಕ್ಷರಾಗಿದ್ದ ರಾಜಬಂಧು, ರಾಜಸೇವಾ ಧುರೀಣ, ಎಂ. ಕಾಂತರಾಜ ಅರಸು ಅವರು ೫೦೦೦ರೂ.ಗಳನ್ನು ಉದಾರವಾಗಿ ದಾನಮಾಡಿದರು. ಪರಿಷತ್ತು ಸುಮಾರು ೭೫೦೦ ರೂ.ಗಳನ್ನು ಸಂಗ್ರಹಿಸಿತು. ಮಿರ್ಜಾ ಅವರು ಸರ್ಕಾರದಿಂದ ೧೫,೭೪೮ರೂ.ಗಳನ್ನು ಮಂಜೂರು

ಮಾಡಿದರು. ಇತರೆ ಮೂಲಗಳಿಂದಲೂ ಧನವನ್ನು ಸಂಗ್ರಹಿಸಲಾಯಿತು.

ಈಗಿನ ಪರಿಷತ್ತಿನ ಸಭಾಮಂದಿರ ನಿರ್ಮಾಣವಾದ ಕತೆ

೧೯೩೨–೩೩ರ ಸುಮಾರಿನಲ್ಲಿ, ಪರಿಷತ್ತು ಈಗಿನ ಕಟ್ಟಡಕ್ಕೆ ಆಗತಾನೆ ಪ್ರವೇಶ ಮಾಡಿದ್ದ ಸಮಯದಲ್ಲಿ, ಒಂದು ದಿನ ಬೆಳಿಗ್ಗೆ ದಿವಾನ್ ಮಿರ್ಜಾ ಸಾಹೇಬರು ಮಾಮೂಲಿನಂತೆ ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಪರಿಷತ್ತಿನ ಕಡೆಗೆ ಬಂದರು. ಅವರ ಜೊತೆಯಲ್ಲಿ ಮಿತಪರಿಹಾರವೂ ಇತ್ತು. ಮಿರ್ಜಾರವರು ತಮ್ಮ ಬಳಿ ಇದ್ದವರಿಗೆ "I must pay my respects to my revered teacher." (ನನ್ನ ಪೂಜ್ಯ ಗುರುಗಳಿಗೆ ನಾನು ನಮಸ್ಕಾರ ಸಲ್ಲಿಸಬೇಕು) – ಎಂದು ಹೇಳುತ್ತಾ ಕುದುರೆಯಿಂದಿಳಿದು ಕಟ್ಟಡದೊಳಕ್ಕೆ ಪ್ರವೇಶಿಸಿದರು. ವೆಂಕಟನಾರಣಪ್ಪನವರು ಒಂದು ಕೊಠಡಿಯಲ್ಲಿ ಕುಳಿತು ಯಾವುದೋ ಬರವಣಿಗೆ ಕೆಲಸ ಮಾಡುತ್ತಿದ್ದರು. ಶಿಷ್ಯರನ್ನು ನೋಡಿದ ಕೂಡಲೆ ಎದ್ದು ನಿಂತರು. ಕುಶಲಪ್ರಶ್ನೆಗಳಾದ ಮೇಲೆ ಮಿರ್ಜಾರವರು ಕೇಳಿದರು :

ಮಿ : "ನಿಮ್ಮ ಲೆಕ್ಚರ್ ಹಾಲ್ ಯಾವುದು?"

ವೆಂ: "ಇದೇ ನಮ್ಮ ಹಾಲ್."

ಮಿ : "ಇದೇ ನಮ್ಮ ಸಭಾಮಂಟಪ.?"

ವೆಂ : "ಇದು ಭರ್ತಿಯಾಗುವಷ್ಟು ಜನ ಬಂದರೆ ನಮಗೆ ಸಾಕು! ಕನ್ನಡ ಕೇಳುವುದಕ್ಕೆ ಯಾರು ಬರುತ್ತಾರೆ?"

ಮಿ : "My master has always been a pessimist. (ನಮ್ಮ ಉಪಾಧ್ಯಾಯರು ಯಾವಾಗಲೂ ಎಲ್ಲದರಲ್ಲಿಯೂ ನಿರಾಶಾವಂತರು.) Mr. Tandoni Rao, knock down those two walls, That will make this proper hall. (ಎಕ್ಸಿಕ್ಯೂಟಿವ್ ಇಂಜಿನಿಯರ್ ತಾಂಡೋಣಿರಾಯರೆ, ಈ ಎರಡು ಗೋಡೆಗಳನ್ನು ನೆಲಸಮಮಾಡಿಸಿರಿ; ಆಗ ಇದು ಒಂದು ಸಭಾಮಂದಿರವಾಗುತ್ತದೆ,) ನಾನು ಈಗ ತಲಘಟ್ಟಪುರದ ಕಡೆಗೆ ಹೊರಟಿದ್ದೇನೆ. ಸುಮಾರು ಹನ್ನೆರಡು ಘಂಟೆಯ ಹೊತ್ತಿಗೆ ವಾಪಸು ಬಂದೇನು. ಆಗ ಪುನಃ ಇಲ್ಲಿಗೆ ಬರುತ್ತೇನೆ. ಆ ವೇಳೆಗೆ ಸಭಾಮಂದಿರದ ಸ್ವರೂಪ ಕಣ್ಣಿಗೆ ಕೊಂಚ ಕಾಣಿಸೀತಲ್ಲವೆ?"

ತಾಂಡೋಣೀ ರಾಯರು : "ಮಾಡಿಸಿರುತ್ತೇನೆ."

ಅದೇ ಮಧ್ಯಾಹ್ನ ಸುಮಾರು ಹನ್ನೆರಡು ಘಂಟೆಯ ವೇಳೆಗೆ ಮಿರ್ಜಾ ಸಾಹೇಬರು ಮತ್ತೆ ಬಂದು ಆಗಿದ್ದ ಕೆಲಸವನ್ನು ಒಪ್ಪಿದರು.

ಹಾಗೆ ತಯಾರಾದದ್ದು ಈಗಿನ ಪರಿಷತ್ತಿನ ಸಭಾಭವನ. (ಡಿ.ವಿ.ಜಿ. : ಜ್ಞಾಪಕಚಿತ್ರ ಶಾಲೆ–೩)

ಮೈಸೂರು ಅರಮನೆಯ ಸಹಾಯ

ಮೈಸೂರಿನ ಶ್ರೀಮನ್ ಮಹಾರಾಜರು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಟ್ಟಡಕ್ಕಾಗಿ ೫,೦೦೦ ರೂಪಾಯಿಗಳನ್ನು ಅನುಗ್ರಹಿಸಿದ ಸಂದರ್ಭದಲ್ಲಿ ಆಗ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ರಾಜಸಭಾಭೂಷಣ ಶ್ರೀಮಾನ್ ಕರ್ಪೂರ ಶ್ರೀನಿವಾಸರಾಯರಿಗೆ ಮಹಾಸ್ವಾಮಿಯವರ ಹುಜೂರ್ ಸೆಕ್ರೆಟರಿಯವರಿಂದ ಬರೆದುಬಂದ ಕಾಗದ : –

No. 58

The palace,
Mysore
14th September 1926

Dear Mr. Shrinivas Rao,

With reference to your letter of the 23rd August 1926, I am directed to say that a donation of Rs. 5,000 will be paid for the construction of Sri Krishnarajendra Karnataka Sahitya Parishat mandira in Bangalore subject to the following conditions:

1. that the donation will be payable only after the Parishat collects from other sources the blance of the estimated cost of Rs. 30,000 and is in a position to start building work, and
2. that a strong and representative Committee of Management is appointed, and
3. that one of the Professors of the Mysore University to be nominated by the Palace is included on the Committee.

Yours sincerely,

(Sd.) T. Thamboo Chetty

ಪರಿಷತ್ತಿನ ಕಟ್ಟಡ ಪ್ರಾರಂಭ

ಪರಿಷತ್ತಿನ ಹಳೆಯ ಕಟ್ಟಡ ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಶಂಕುಸ್ಥಾಪನೆಯು ಹೇಗೆ ನೆರವೇರಿತು ಎಂಬುದನ್ನು ಡಿವಿಜಿ ಅವರು (ಜ್ಞಾಪಕಚಿತ್ರಶಾಲೆ – ೩ ಪುಟ ೭೦) ಮತ್ತು ಮಾಸ್ತಿ (ಭಾವ ೩ ಪುಟ ೨೪–೨೬) ಹೀಗೆ ತಿಳಿಸಿದ್ದಾರೆ:

"ಶ್ರೀನಿವಾಸರಾಯರ ಕಡೆಯ ದಿನಗಳನ್ನು ನೆನೆದರೆ ಕೊಂಚ ಸಂಕಟವಾಗುತ್ತದೆ. ಪಾರ್ಶ್ವವಾಯುವಿನಿಂದ ಅವರು ನಿಶ್ಚೇಷ್ಟರಾಗಿದ್ದರು. ಪರಿಷತ್ತಿನ ಕಟ್ಟಡಕ್ಕೆ ಅವರ ಕೈಯಿಂದಲೇ ವಾಸ್ತುಶಿಲೆಯನ್ನು ನಡೆಸಬೇಕೆಂದು ವೆಂಕಟನಾರಣಪ್ಪನವರ ಸಂಕಲ್ಪ. ಆದರೆ ರಾಯರ ದೇಹಸ್ಥಿತಿ ಅನುಕೂಲವಾಗಿರಲಿಲ್ಲ. ಆದ್ದರಿಂದ ರಾಯರನ್ನು ಮೋಟಾರುಕಾರಿನಲ್ಲಿ ಆ ಜಾಗಕ್ಕೆ ಕರೆತಂದು ಕಾರನ್ನು ರಸ್ತೆಯಲ್ಲಿ ನಿಲ್ಲಿಸಿ ರಾಯರ ಕೈಗೆ ಸೂತ್ರದ ಒಂದು ಕೊನೆಯನ್ನು ಕಟ್ಟಿ ಸೂತ್ರದ ಇನ್ನೊಂದು ಕೊನೆಗೆ ಗಾರೆಯ ಕರಣೆಯನ್ನು ಕಟ್ಟಿ ವೆಂಕಟನಾರಣಪ್ಪನವರು ಅಸ್ತಿಭಾರ ಹಾಕಿದರು. ಹೀಗೆ ಸೂತ್ರದ ಮೂಲಕ ರಾಯರ ಕೈಯಿಂದಲೇ ಕೆಲಸ ನಡೆಯಿತೆಂದು ಸಂಕೇತ. ಈ ಸಂಕೇತದಿಂದ ವೆಂಕಟನಾರಣಪ್ಪನವರ ಮನಸ್ಸಿಗೆ ತೃಪ್ತಿ. ನಮಗೆಲ್ಲ ವೆಂಕಟನಾರಣಪ್ಪನವರು ತೃಪ್ತರಾದರೆಂದು ತೃಪ್ತಿ.

ಶ್ರೀಕೃಷ್ಣರಾಜ ಪರಿಷನ್ಮಂದಿರ ನಿರ್ಮಾಣವನ್ನು ಎ. ಸೀ. ಅವರು ವರ್ಣಿಸಿರುವುದು ಹೀಗೆ

ಈ ಮಧ್ಯೆ ನಮ್ಮ ಕನ್ನಡದ ಕೆಲಸ ಅಲ್ಪಸ್ವಲ್ಪವಾಗಿ ಸಾಗುತ್ತಿತ್ತು. ಬೆಂಗಳೂರಿನಲ್ಲಿ ಇದ್ದದ್ದರಿಂದ ನಾನು ಪರಿಷತ್ತಿಗೆ ಹೋಗುತ್ತ ಬರುತ್ತ ಅದರ ಕೆಲಸದಲ್ಲಿ ನನ್ನಿಂದ ಆದ ಸೇವೆಯನ್ನು ಸಲ್ಲಿಸುತ್ತ ಇದ್ದೆನು. ಆಗ ಶ್ರೀ ಕರ್ಪೂರ ಶ್ರೀನಿವಾಸರಾಯರು ಪರಿಷತ್ತಿನ ಉಪಾಧ್ಯಕ್ಷ 'ಕಾರ್ಯಾಧ್ಯಕ್ಷ'ರಾಗಿದ್ದರು. ಶ್ರೀನಿವಾಸರಾಯರು ವಿಶ್ವೇಶ್ವರಯ್ಯರಂತೆ ಅರವತ್ತು ವರ್ಷದ ಹಿಂದೆ ಪೂನಾ ಇಂಜಿನಿಯರಿಂಗ್ ಕಾಲೇಜಿನಿಂದ ಇಂಜಿನಿಯರ್ ಡಿಗ್ರಿ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಮುಂಬೈ ಪ್ರಾಂತದಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರಾಗಿದ್ದು ವಿಶ್ರಾಂತಿ ಹೊಂದಿ, ಮೈಸೂರಿಗೆ ಬಂದು ಚೀಫ್ ಇಂಜಿನಿಯರಾಗಿ ಹಲವು ವರ್ಷ ಸೇವೆ ಸಲ್ಲಿಸಿ ಇಲ್ಲಿಯೂ ವಿಶ್ರಾಂತಿ ಪಡೆದಿದ್ದರು. ಅವರು ಸಂಸ್ಕೃತದಲ್ಲಿ ಪಂಡಿತರೊಡನೆ ಪರಿಚಿತರಾಗಿ ಮಾತನಾಡಬಲ್ಲ ವಿದ್ವಾಂಸರಾಗಿದ್ದರು. ಕನ್ನಡದಲ್ಲಿ ತುಂಬ ಅಭಿಮಾನ. ಎಂ. ಶಾಮರಾಯರ ಅನಂತರ ಪರಿಷತ್ತಿನ ಉಪಾಧ್ಯಕ್ಷರಾಗಿ ಬಂದಿದ್ದರು. ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರು, ಶ್ರೀ ನಂಗಪುರಂ ವೆಂಕಟೇಶ ಅಯ್ಯಂಗಾರ್‌ರವರು ಪರಿಷತ್ತಿನ ಕಾರ್ಯದರ್ಶಿ, ಕೋಶಾಧಿಕಾರಿ, ಆಗಿ ಅದರ ಕೆಲಸವನ್ನು ನಿರ್ವಹಿಸುತ್ತಾ ಉಪಾಧ್ಯಕ್ಷರ ನೇತೃತ್ವದಲ್ಲಿ ಅದನ್ನು ನಡೆಸಿಕೊಂಡು ಬರುತ್ತಿದ್ದರು. ಸಂಸ್ಥೆಗೆ ಸ್ವಂತ ಕಟ್ಟಡವೊಂದು ಇಲ್ಲದ್ದು ದೊಡ್ಡ ಕೊರತೆಯಾಗಿತ್ತು. ಶ್ರೀ ಶ್ರೀನಿವಾಸರಾಯರು ಈ ಕೊರತೆಯನ್ನು ನಿವಾರಿಸಲು ನಿಶ್ಚಯಿಸಿಕೊಂಡರು. ಸಂಸ್ಥೆಯ ಪೋಷಕರಾಗಿ ಮೊದಲಿಂದ ಅದರಲ್ಲಿ ಅನುಗ್ರಹ ತೋರಿದ್ದ ಪ್ರಭು ನಾಲ್ವಡಿ ಕೃಷ್ಣರಾಜರ ಬಳಿ ಹೋಗಿ ಈ ಕೆಲಸಕ್ಕೆ ಧನಸಹಾಯವನ್ನು ಬೇಡಿದರು . ಅವರಿಂದ ೫೦೦೦ ರೂಪಾಯಿ ಪಡೆದು,ಸಂಸ್ಥೆಯ ಗೌರವರೂಪ ಅಧ್ಯಕ್ಷರಾದ ಶ್ರೀ ಯುವರಾಜ ಕಂಠೀರವ ನರಸಿಂಹರಾಜರಲ್ಲಿ ಸಹಾಯ ಬೇಡಿ ೩೦೦೦ ರೂಪಾಯಿಗಳನ್ನು ಪಡೆದು, ಅನಂತರ ಈ ಸೋದರರ ಸೋದರಮಾವ ಶ್ರೀ ಕಾಂತರಾಜ ಅರಸರವರನ್ನು ಕಂಡು ಅವರಿಂದ ೫೦೦೦ ರೂಪಾಯಿಯ ವಾಗ್ದಾನ ಪಡೆದರು. ಇಷ್ಟು ಹಣ ಒದಗಿದ ಮೇಲೆ ದಿವಾನ್ ಮಿರ್ಜಾ ಸಾಹೇಬರನ್ನು ಕಂಡು ಸರ್ಕಾರದಿಂದ ಇದಕ್ಕೆ ಸಮನಾಗಿ ಸಹಾಯ ದೊರೆಯುತ್ತದೆ ಎಂಬ ಆಶ್ವಾಸನ ಪಡೆದರು. ಸಂಸ್ಕೃತ ಕಾಲೇಜಿನ ಎದುರಿಗೆ ಒಂದು ನಿವೇಶನವನ್ನು ಪಡೆದು ಅದರಲ್ಲಿ ಕಟ್ಟಡ ಕಟ್ಟುವ ಕೆಲಸವನ್ನು ಅರಂಭಿಸಿದರು.

೧೯೩೨ನೇ ಏಪ್ರಿಲ್ ೧೨ನೇ ತಾರೀಖು ಶುಭ ಮುಹೂರ್ತದಲ್ಲಿ ಕಟ್ಟಡದ ಶಂಕುಸ್ಥಾಪನೆಯ ಕೆಲಸವನ್ನು ಶ್ರೀ ವೆಂಕಟನಾರಣಪ್ಪನವರು ರಾಯರಿಂದಲೇ ಮಾಡಿಸಿದರು. ಈ ಸಂದರ್ಭದಲ್ಲಿ ಮಾಸ್ತಿ ಹೇಳಿದ್ದು ಹೀಗೆ : "ಪರಿಷತ್ತು ಆಗ್ಗೆ ಜನರ ಗಮನಕ್ಕೆ ಬಂದ ಅಥವಾ ಒಲವನ್ನು ಗಳಿಸಿದ ಸಂಸ್ಥೆ ಆಗಿರಲಿಲ್ಲ. ಶಂಕುಸ್ಥಾಪನೆಯ ಈ ಮಂಗಲ ಕಾರ್ಯಕ್ಕೆ ಒಂದು ಹತ್ತು ಜನಕ್ಕೆ ಹೆಚ್ಚಾಗಿ ಜನ ಸೇರಲಿಲ್ಲ. ರಾಯರಿಗೆ ಆವೇಳೆಗೆ ದೇಹದಲ್ಲಿ ಅನಾರೋಗ್ಯ. ತಾವು ಹೇಳಲಪೇಕ್ಷಿಸಿದ ಮಾತನ್ನು ನನಗೆ ಕಿವಿಯಲ್ಲಿ ಹೇಳಿ ಅವರು ತಮ್ಮ ಪರವಾಗಿ ಅದನ್ನು ಸಭೆಗೆ ಅರಿಕೆ ಮಾಡಿ ಎಂದರು. ಅದರ ಮುಖ್ಯಭಾಗ ಪ್ರಭುವಿಗೆ, ಅವರ ಸೋದರರಿಗೆ, ಕಾಂತರಾಜ ಅರಸರಿಗೆ, ವಂದನೆ ಸಲ್ಲಿಸುವುದು, ಸಹಾಯದ ಆಶ್ವಾಸನೆ ನೀಡಿದ್ದ ಸರ್ಕಾರದ ಔದಾರ್ಯವನ್ನು ನೆನೆಯುವುದು. ಇದನ್ನು ಹೇಳಿ ನಾನು ರಾಯರ ಅಪ್ಪಣೆ ಪಡೆದು ಅವರ ಸೇವೆಯನ್ನು ಪ್ರಶಂಸಿಸಿ ಎರಡು ಮಾತನ್ನಾಡಿದೆನು. ರಾಯರು ಅಂದು ಶಂಕುಸ್ಥಾಪನೆ ಮಾಡಿದ ಕಟ್ಟಡ ಶೀಘ್ರದಲ್ಲೇ ಬೆಳೆಯಿತು. ಮಿರ್ಜಾ ಸಾಹೇಬರು ಅವರ ವಾಡಿಕೆಯ ಶ್ರದ್ಧೆಯಿಂದ ಈ ಕೆಲಸವನ್ನು ಆಗಾಗ ನೋಡಿ ಪ್ರೋತ್ಸಾಹಿಸಿದರು. ಸರಕಾರ ಹದಿಮೂರು ಸಾವಿರ ಅಲ್ಲ, ಹದಿನೇಳು ಸಾವಿರಕ್ಕೆ ಮೇಲೆ ಹಣ ಒದಗಿಸಬೇಕಾಯಿತು. ಅಷ್ಟನ್ನೂ ಅವರು ಸರಕಾರದಿಂದ ಒದಗಿಸಿದರು.

"ಅದಕ್ಕೆ ಸಂಬಂಧಿಸಿದ ಸಮಸ್ತ ಏರ್ಪಾಟುಗಳನ್ನು ವಹಿಸಿ ಅಂಕದ ಪರದೆ ಸ್ವತಂತ್ರವಾಗಿ ಆಡಿ ತೆರೆದು ಎರಡೂ ಕಡೆ ಸರಿಯುವಂತೆ ಮಾಡಲು ಬೇಡಿಕೊಂಡವು. ಅವರು ಪೂರ್ತಿ ಒಂದು ದಿನ ಇದಕ್ಕಾಗಿ ದುಡಿದು ಅದು ಲಕ್ಷಣವಾಗುವಂತೆ ಮಾಡಿಕೊಟ್ಟರು. ಪರಿಷತ್ತಿನ ಕೈಲಿ ಹಣವಿಲ್ಲದ ಕಾಲ ರಜತ ಹಬ್ಬದ ಸಂಭ್ರಮಕ್ಕೆ ಅಗತ್ಯವಾದ ಉಪಪತ್ತಿಯೆಲ್ಲಾ ಕೂಡಿದರೂ ಹೆಚ್ಚಿನದೇನಲ್ಲ. ಅಂಥ ಸಂದರ್ಭದಲ್ಲಿ ೨೦೦-೩೦೦ ರೂಪಾಯಿ ವೆಚ್ಚ ಹಿಡಿಯಿತು. ಈ ಕೆಲಸವನ್ನು ಸುಮಾರು ಶ್ರೀ ಅವರ ಕಣ್ಣು ತಪ್ಪಿಸಿ ಎಂಬಂತೆ ಮಾಡಿದ್ದು ಎಲ್ಲರಿಗೂ ಪೂರ್ಣ ತೃಪ್ತಿ ತರಲಿಲ್ಲ. ಇದನ್ನು

ಬಾಡಿಗೆಗೆ ಕೊಟ್ಟರೆ ಒಂದು ವರ್ಷದಲ್ಲಿ ನಾವು ಖರ್ಚು ಮಾಡಿದ ಹಣ ನಮಗೆ ಹಿಂದಕ್ಕೆ ಬರುತ್ತದೆ ಎಂದು ಹೇಳಿ ಹಿರಿಯರನ್ನು ಹೇಗೋ ಸಮಾಧಾನ ಮಾಡಿದೆವು. ಅವರಿಗೆ ನಮ್ಮ ಮೇಲೆ ಇದ್ದ ಪ್ರೀತಿಯಿಂದ ಅದನ್ನು ಒಪ್ಪಿಕೊಂಡರು."

ಇತರ ಸಭಾಂಗಣದ ಸಜ್ಜಿಕೆಗಳು

"ಅಲ್ಲಿಂದೀಚೆಗೆ ಬಂದ ಪರಿಷದ್ ಅಧ್ಯಕ್ಷರು ಕೆಲವರು ರಂಗಸ್ಥಳಗಳನ್ನು ಉತ್ತಮ ಪಡಿಸಲು ಕೆಲವು ಕಾರ್ಯಗಳನ್ನು ಕೈಗೊಂಡರು. ತೂಬುಗೆರೆ ನಂಜಪ್ಪನವರು, ಇನ್ನೊಬ್ಬರಿಬ್ಬರು ಸಭಾಮಂದಿರಕ್ಕೆ ಬೇಕಾದ ಜಮಖಾನೆಗಳನ್ನು ಒದಗಿಸಿದರು." ಶಿವಮೂರ್ತಿ ಶಾಸ್ತ್ರಿಗಳ ಕಾಲದಲ್ಲಿ ಕಾಲದಲ್ಲಿ ಮೇಯರ್ ಸೀತಾರಾಂ ಕೋಶಾಧಿಕಾರಿಗಳಾದ ಶ್ರೀ ವರದರಾಜರೂ ಮುಂತಾದವರು ಇನ್ನಷ್ಟು ಸಜ್ಜುಗೊಳಿಸಿದರು.

ರಜತವರ್ಷದ ವೇಳೆಗೆ ಶ್ರೀ ಕೃಷ್ಣರಾಜಪರಿಷನ್ಮಂದಿರ ಸಜ್ಜುಗೊಂಡಿತು.

ಮುಂದೆ ೧೯೩೮ರಿಂದ ಬಿ.ಎಂ.ಶ್ರೀ. ಅವರ ಉಪಾಧ್ಯಕ್ಷತೆಯ ಕಾಲದಲ್ಲಿ ಒಂದು ಅಚ್ಚುಕೂಟವನ್ನು ಏರ್ಪಡಿಸಿದಾಗ ಆ ಭಾಗ ೧೯೩೯ ಪೂರ್ತಿಯಾಗಿ ಅಚ್ಚಿನಮನೆಯಾಯಿತು." ಮೊದಲಿದ್ದ ಕೊಠಡಿಗಳು ಇಲ್ಲವಾದವು.

ಉತ್ತರಕಾಲದಲ್ಲಿ ಇತರರ ಆಧಿಪತ್ಯದಲ್ಲಿ ಅದು ವಿಸ್ತಾರಗೊಂಡಿತು. ನಿಘಂಟಿನ ಕಾರ್ಯ ಬೆಳೆದಂತೆ ಅದಕ್ಕೆ ಒಂದು ಉಪ್ಪರಿಗೆಯೂ ಇತರ ವಿಶೇಷ ಸಜ್ಜೂ ಅಲಂಕಾರಗಳೂ ಉಂಟಾದವು.

ಪರಿಷತ್ತಿನ ಮಂದಿರದಲ್ಲಿ ವೇದಿಕೆ ನಿರ್ಮಾಣ

"ಪರಿಷತ್ತಿನ ಬೆಳ್ಳಿಯ ಹಬ್ಬದ ಸಮಾರಂಭದ ಸಮಯದಲ್ಲಿ ಪರಿಷತ್ತಿನ ಸಭಾಮಂದಿರದಲ್ಲಿ ವೇದಿಕೆಯನ್ನು ಒಂದು ಸಣ್ಣ ಮಂಟಪವನ್ನಾಗಿ ಮಾರ್ಪಡಿಸಬೇಕೆಂದು ಹಿಂದಿನ ಹಿರಿಯರು ಒಪ್ಪದಿದ್ದರೂ ಆಗ ಕಾರ್ಯದರ್ಶಿಗಳಾಗಿದ್ದ ಬಿ. ವೆಂಕೋಬರಾಯರು ನಾನೂ (ವಿಸೀ) ಸದ್ದುಮಾಡದೆ ಸ್ಟೀಲ್ ಕನ್‌ಸ್ಟ್ರಕ್ಷನ್ ಕಂಪನಿಯ ಶ್ರೀ ಸೀತಾರಾಂ ಅವರನ್ನು ಪ್ರಾರ್ಥಿಸಿ ಚೌಕಟ್ಟುಗಳನ್ನು ಹಿಡಿಗೊತ್ತುಗಳನ್ನು (clamps) ಪರದೆಗಳಿಗೆ ಗೊತ್ತು ಏರ್ಪಾಡುಗಳನ್ನು ಕಟ್ಟಿಸಿದ್ದೆವು. ಸೀತಾರಾಂ ಅವರು ಅದನ್ನು ಉಚಿತವಾಗಿ ಮಾಡಿಕೊಟ್ಟರೆಂದು ನನ್ನ (ವಿಸೀ) ನೆನಪು.

ರಂಗ ಪರದೆಗಳ ನಿರ್ಮಾಣ

"ಎರಡು ಸಾಲಿನ ಒಳಪರದೆಗಳಿಗಾದರೂ ಅವಕಾಶಗೊಂಡಂತೆ ಒಳ ಮಾಳಿಗೆಯಲ್ಲಿ ಏರ್ಪಡಿಸಿರುವಂತೆ ಬಣ್ಣದ ಬಟ್ಟೆಗಳನ್ನು ಹೊಲಿಸಿ ಸಜ್ಜು ಮಾಡಿದೆವು. ಅಂಕದ ಪರದೆ, ಒಂದೊಂದು ಇಕ್ಕಡೆಯ ಪಕ್ಕಕ್ಕೆ ಅಂಕದ ಪರದೆಯ ರಚನೆಗೆ ಪ್ರೊ. ಕೆ.ವಿ. ಅಯ್ಯರ್ ಅವರನ್ನು ಪ್ರಾರ್ಥಿಸಿದೆವು.

ಪರಿಷತ್ತಿನ ಸಭಾಂಗಣದ ನಿರ್ಮಾಣ

ಕೃಷ್ಣರಾಜಪರಿಷನ್ಮಂದಿರ ನಿರ್ಮಾಣವಾದಾಗ ಈಗಿನ ಸಭಾ ಮಂದಿರಕ್ಕೆ ಬದಲಾಗಿ ಎರಡು ಕೋಟೆಗಳನ್ನು ಕಟ್ಟಿರುವುದನ್ನು ಕಟ್ಟಡ ಏಳುವಾಗ ಆಗಾಗ ಬಂದು ನೋಡುತ್ತಿದ್ದ ಮಿರ್ಜಾ ಸಾಹೇಬರು ತಮ್ಮ ಗುರುಗಳಾದ ವೆಂಕಟನಾರಣಪ್ಪ ಅವರನ್ನು ಕಂಡು "ನಿಮಗೆ ಸಭೆ ಸಮಾರಂಭಗಳಿಗಾಗಿ ಒಂದು ಹಾಲ್ ಬೇಡವೇ? ಈ ಭಾಗವನ್ನು ಎರಡು ರೂಮುಗಳಾಗಿ ಒಡೆಯಬೇಡಿ. ಒಂದು ಹಾಲ್ ಮಾಡಿಕೊಳ್ಳಿ ಎಂದು ಬೋಧನೆ ಮಾಡಿ ಹಾಲ್ ವ್ಯವಸ್ಥೆ ಮಾಡಿದರು."

ಬೆಳ್ಳಾವೆ ಅವರು ಹಾಲ್ ವ್ಯವಸ್ಥೆ ಮಾಡದಿರಲು ಕಾರಣವಿತ್ತು. "ಆಗ ಹೆಚ್ಚು ಜನ ಪರಿಷತ್ತಿಗೆ ಸದಸ್ಯರಾಗಿರಲಿಲ್ಲ. ಆಗ ಅಲ್ಲಿ ಉಪನ್ಯಾಸಾದಿಗಳು ಹೆಚ್ಚಾಗಿ ಆಗುತ್ತಿರಲಿಲ್ಲ. ಪರಿಷತ್ತಿನ ಕಾರ್ಯವ್ಯಾಪ್ತಿಯೇ ಮಿತವಾಗಿದ್ದು ಗ್ರಂಥ ಪ್ರಕಟನೆ,

ಪರಿಷತ್ ಪತ್ರಿಕೆ ಪ್ರಕಟನೆ, ಆಗ ಈಗ ಹೊರಗಿನಿಂದ ಬಂದ ಕರ್ನಾಟಕ ವಿದ್ವಾಂಸರ ಭೇಟಿ ಇವಿಷ್ಟು ಮಾತ್ರ ಅಲ್ಲಿನ ಕೆಲಸವಾಗಿತ್ತು."

ಅಚ್ಚುಕೂಟ ಕಟ್ಟಡ ನಿರ್ಮಾಣ

ಡಿವಿಜಿ ಅವರು ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ ಪರಿಷತ್ತಿನ ಕಾರ್ಯ ವಿಸ್ತಾರಗೊಂಡಿತು. ಬಂದವರಿಗೆ ಜಲಮಲಗಳಿಗೆ ಮರೆಯಾಗಿ ಅವಕಾಶವಿರುವಂತೆ ಹೊರಗೆ ಹಿತ್ತಲು ಬಚ್ಚಲು ಅಗುಂತೆ ಎರಡು ಸಣ್ಣ ವಿಸ್ತರಣಗಳನ್ನು ಮುಂದೆ ಹೊಂಗೆಯ ಮರವಿದ್ದ ಕಡೆ ಕಟ್ಟಿದರು. ಸ್ಥಳ ಇಕ್ಕಟ್ಟೆನ್ನಲು ತಾವೇ ಹೋಗಿ ಕುಳಿತು ಸಾಕಾದೀತು ಎಂದು ಹೇಳಿ ಗುಂಡಪ್ಪನವರೇ ಇದ್ದುದರಲ್ಲಿ ಮುಗಿಸಿದರು.

ಪರಿಷತ್ತಿನ ಅತಿಥಿಗಳು ಉಳಿಯಲು ಅವಕಾಶವಾಗಲೆಂದು ಅವರಿಗೆ ಅಡಿಗೆ ಸ್ನಾನಗಳಿಗೆ ಅವಕಾಶ ಪಡೆದುಕೊಳ್ಳುವಂತೆ ಈಗ ಅಚ್ಚುಕೂಟವಿರುವಲ್ಲಿ ಏರ್ಪಾಡಾಯಿತು.

ಈ ಸಂದರ್ಭದಲ್ಲಿ ವಿಸೀ ಅವರು ತಮ್ಮ ಲೇಖನದಲ್ಲಿ ಹೇಳುವ ೨ ಪ್ರಸಂಗಗಳು ಪರಿಷನ್ಮಂದಿರ ಕಟ್ಟಡ ಸಜ್ಜಿಗೆ ಸಂಬಂಧಿಸಿದಂತೆ ಗಮನಿಸುವಂತಾಗಿವೆ.

ಪರಿಷತ್ತಿನ ನಿವೇಶನದ ಕೋಚುಭಾಗ

"ಮೊದಮೊದಲು ನಾಲ್ಕನೇ ರಸ್ತೆಯ ಕಡೆಯ ಯಾವುದೇ ಸೈಟಿನ ಒಂದು ಸ್ಥಳ ಸಂಕೋಚವನ್ನು ಸರಿಪಡಿಸಿಕೊಳ್ಳುವುದು ಕಷ್ಟವಾಗಿತ್ತು. ನೆರಮನೆಯ ಒಡೆಯರಿಗೆ ಹೇಳಿ ಅದನ್ನು ಸರಿಪಡಿಸಿ ಕೊಳ್ಳಲಾಯಿತು.ಇಲ್ಲವಾದರೆ ಅಲ್ಲೊಂದು ಕೋಚುಭಾಗ ಮತ್ತೊಬ್ಬರದಾಗಿಯೋ, ಮುನಿಸಿಪಲ್ ಹಿತ್ತಲ ರಸ್ತೆಯಾಗಿಯೋ ಉಳಿದುಕೊಂಡು, ಉದ್ದ ಒಂದು ಸೀಳುಭೂಮಿಗೆ ಕೋರ್ಟು ಕಚೇರಿ ಹತ್ತಬೇಕಾದ ಅಗತ್ಯ ತಪ್ಪಿತು. God Himself in many ways ಎನ್ನುತ್ತಾರಲ್ಲವೆ ! ಅವನ ಕ್ರಿಯಾ ವಿಲಾಸ ದೊಡ್ಡದು. ಹಳೆಯಕಟ್ಟಡದ ಹಿಂಭಾಗದಲ್ಲಿದ್ದ ೪ನೆಯ ರಸ್ತೆಯ ಕಡೆಗೆ ನೇರ ನಡುವಿದ್ದ ಒಂದು ದೊಡ್ಡ ಬೇವಿನ ಮರ ಅನೇಕ ಜನಾರ್ದನ ಕಚೇರಿಗಳಿಗೆ ಆಶ್ರಯವಾಗಿದ್ದು The good is the enemy of the better ಎನ್ನುತ್ತಾರೆ. ಹೊಸ ಕಟ್ಟಡದ ಹುಟ್ಟಿಗೆ ಅದು ಆತ್ಮಾರ್ಪಣ ಮಾಡಿತು."


(ವಿ. ಸೀ. ಕನ್ನಡ ನುಡಿ, ಜನವರಿ ೧೯೭೪)


ಕನ್ನಡ ಸಾಹಿತ್ಯ ಪರಿಷತ್ತು ಆದದ್ದು

"ಬಿಎಂಶ್ರೀ ಅವರ ಅಧಿಕಾರಾವಧಿಯಲ್ಲಿ ಬೆಳ್ಳಿಯ ಹಬ್ಬ ಬಂದಾಗ, ಪರಿಷತ್ತಿನ ಕಟ್ಟಡದ ಮೇಲೆ ಒಂದು ನಿಯಾನ್ ಸೈನ್ ದೀಪ ವ್ಯವಸ್ಥೆಯ ಸಂದರ್ಭದಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು ವಿದ್ಯುತ್ ಗಾಜಿನ ಕೊಳವೆಗಳ ಮೂಲಕ ನಿರ್ಮಿಸುವಾಗ ಕರ್ಣಾಟಕ ಪದದ ಣಾ ಅಕ್ಷರವನ್ನು ಕೂಡಿಸುವುದು ಕಷ್ಟವೆಂದು ನಾ ಅಕ್ಷರಕ್ಕೆ ದೀಪವ್ಯವಸ್ಥೆ ನಿರ್ಮಿಸಲ್ಪಟ್ಟು ಕಟ್ಟಡದ ಮೇಲೆ ಕರ್ನಾಟಕ ಸಾಹಿತ್ಯ ಪರಿಷತ್ತು ಎಂದು ದೀಪ ಬೆಳಗಿತು. ಆಗ ಕೆಲವರು ಪರಿಷತ್ತಿನ ಹೆಸರಿನಲ್ಲಿ ಕರ್ಣಾಟಕ ಎಂದಿದೆ ಇಲ್ಲಿ ಕರ್ನಾಟಕವಾಗಿದೆ.ಇದು ತಪ್ಪು ಎಂದರು. ಆಗ ಶುರುವಾಯಿತು. ಕರ್ಣಾಟಕ ದಲ್ಲಿ 'ಣಾ' ಇರಬೇಕೇ ನಾ ಇರಬೇಕೆ ಎಂಬ ಕೋಲಾಹಲ. ಈ ನ,ಣ ಜಗಳ ಸಾಕಷ್ಟು ವ್ಯಾಪಕವಾಗಿ ವಿದ್ವಾಂಸರಲ್ಲಿ ಚರ್ಚೆ ಮೂಲಕ, ಬರಹಗಳ ಮೂಲಕ ವಾದಗಳ ಮೂಲಕ ನಡೆಯಿತು. ಕೊನೆಗೆ ಕರ್ಣಾಟಕ, ಕರ್ನಾಟಕ ಎರಡೂ ಬೇಡವೆಂದು ಕನ್ನಡ ಪದ ಅಂಗೀಕಾರವಾಗಿ ಕರ್ಣಾಟಕ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ತು ಆಯಿತು.



ಶ್ರೀಕೃಷ್ಣರಾಜ ಪರಿಷನ್ಮಂದಿರ (ಹಳೆಯ ಕಟ್ಟಡ)





ನವೀಕೃತ ಶ್ರೀಕೃಷ್ಣರಾಜ
ಪರಿಷನ್ಮಂದಿರದ
ಉದ್ಘಾಟನಾ ಫಲಕ

ಸುವರ್ಣ ಮಹೋತ್ಸವ ಕಟ್ಟಡ (೧೯೭೩)

ಪರಿಷತ್ತಿನ ಚಟುವಟಿಕೆಗಳು ಹೆಚ್ಚಿ ಕೃಷ್ಣರಾಜ ಪರಿಷನ್ಮಂದಿರ ಕಟ್ಟಡವು ಸಾಲದಾಗಿ ಜಿ. ನಾರಾಯಣರ ಕಾಲದಲ್ಲಿ ತ್ರೈವಾರ್ಷಿಕ ಯೋಜನೆಯ ಅಡಿಯಲ್ಲಿ ಎರಡಂತಸ್ತಿನ ಕಟ್ಟಡಕ್ಕೆ ೧೯೭೦ರಲ್ಲಿ ಶಂಕುಸ್ಥಾಪನೆ ಆಯಿತು. ೨೯-೧೨-೧೯೭೩ರಲ್ಲಿ ಕಟ್ಟಡದ ಉದ್ಘಾಟನೆ ಆಯಿತು. ಪರಿಷತ್ತಿನ ಅಭಿಮಾನಿಗಳಾದ ಶ್ರೀ ಬಿ.ವಿ. ರಾಘವೇಂದ್ರರಾಯರು ಕಟ್ಟಡದ ಕಂಟ್ರಾಕ್ಟರ್ ಆಗಿ ಶ್ರೀ ದಿವಾಕರ್ ಅವರು ವಿನ್ಯಾಸಕಾರರಾಗಿ ಕಟ್ಟಡ ನಿರ್ಮಾಣಕ್ಕೆ ಶ್ರಮಿಸಿದರು. ಸುಮಾರು ೬ ಲಕ್ಷದಲ್ಲಿ ನಿರ್ಮಿತವಾದ ಈ ಕಟ್ಟಡದ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ೧ ಲಕ್ಷ, ಬೆಂಗಳೂರು ನಗರ ಕಾರ್ಪೊರೇಷನ್‌ನಿಂದ ೧ ಲಕ್ಷ ರೂ. ಬಂದವು. ಪರಿಷತ್ತಿನ ಕಟ್ಟಡವನ್ನು ರಾಷ್ಟ್ರಪತಿ ಗಿರಿ ಅವರು ಉದ್ಘಾಟಿಸಿದರು. ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಸುವರ್ಣ ಮಹೋತ್ಸವ ಕಟ್ಟಡ ಕನ್ನಡಮ್ಮನ ಪವಿತ್ರ ಗುಡಿ ಆಗಲಿ ಎಂದು ಶುಭ ಹಾರೈಸಿದರು.

ಸುವರ್ಣ ಕಟ್ಟಡ ನಿರ್ಮಾಣವಾದ ಮೇಲೆ ಈ ಹೊಸಕಟ್ಟಡದಲ್ಲಿ

೧. ದಾಸ್ತಾನುಮಳಿಗೆ

೨. ಪುಸ್ತಕ ಮಾರಾಟ ವಿಭಾಗ

೩. ಪರಿಷತ್ತಿನ ಕಚೇರಿ

೪. ಕಾರ್ಯದರ್ಶಿ, ಕೋಶಾಧಿಕಾರಿಗಳ ಕೊಠಡಿ

೫. ಪರೀಕ್ಷಾ ವಿಭಾಗ

೬. ಕನ್ನಡ ಬೆರಳಚ್ಚು ತರಗತಿಗಳು

೭. ಕನ್ನಡ ಶೀಘ್ರಲಿಪಿ ತರಗತಿ (೧೯೭೩ರಲ್ಲಿ ಪ್ರಾರಂಭ)

೮. ವಾಚನಾಲಯ ಮತ್ತು ಪುಸ್ತಕ ಭಂಡಾರ

೯. ಸಂಶೋಧನಾ ವಿಭಾಗ

೧೦. ಧ್ವನಿ ಮುದ್ರಣ ಭಂಡಾರ


೧೧. ಸ್ಥಿರಪುಸ್ತಕದ ಪ್ರದರ್ಶನ

೧೨.ವಸ್ತುಪ್ರದರ್ಶನ

ಹಳೆಯ ಕಟ್ಟಡ ಶ್ರೀಕೃಷ್ಣರಾಜ ಪರಿಷನ್ಮಂದಿರ'ದಲ್ಲಿ

೧. ರಂಗಮಂಟಪ, ಸಭಾಮಂದಿರ ೨. ಸ್ವಾಗತಾಲಯ ೩. ಪ್ರಕಟನ ವಿಭಾಗ

೪. ಅಧ್ಯಕ್ಷ ಕೊಠಡಿ ೫. ಅಚ್ಚುಕೂಟ ೬. ನಿಘಂಟು ಕಛೇರಿಗಳ ವ್ಯವಸ್ಥೆಯಾದವು.



ಸುವರ್ಣ ಮಹೋತ್ಸವ ಭವನದ ಶಂಕುಸ್ಥಾಪನಾ ಫಲಕ



ಸುವರ್ಣ ಮಹೋತ್ಸವದ ಭವನ



ಸುವರ್ಣ ಮಹೋತ್ಸವ ಭವನದ ಉದ್ಘಾಟನಾ ಫಲಕ

ವಜ್ರಮಹೋತ್ಸವ ಕಟ್ಟಡ


೧೯೧೫ರಲ್ಲಿ ಸ್ಥಾಪನೆಯಾದ ಪರಿಷತ್ತಿಗೆ ೧೯೬೫ರಲ್ಲಿ ಸುವರ್ಣಮಹೋತ್ಸವದ ವರ್ಷ ಆಗಿತ್ತು. ೧೯೭೫ ಪರಿಷತ್ತಿನ ವಜ್ರಮಹೋತ್ಸವ ವರ್ಷ ಆಗಿತ್ತು. ಆದರೆ ಈ ಎರಡೂ ಸಮಾರಂಭಗಳು ಸಕಾಲದಲ್ಲಿ ಕಾರಣಾಂತರಗಳಿಂದ ನಡೆಯಲಿಲ್ಲ. ತಡವಾಗಿ ಆಚರಿಸಲಾಯಿತು. ಜಿ. ನಾರಾಯಣರ ಕಾಲದಲ್ಲಿ ಸುವರ್ಣ ಮಹೋತ್ಸವವನ್ನು ೧೯೭೦ರಲ್ಲಿ ಆಚರಿಸಲಾಯಿತು. ವಜ್ರಮಹೋತ್ಸವವನ್ನು ೧೯೭೭ರಲ್ಲಿ ಆಚರಿಸಲಾಯಿತು. ೧೯೭೭ ಏಪ್ರಿಲ್‌ನಲ್ಲಿ ನಡೆದ ೬ ದಿನಗಳ ಕಾಲದ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ವಜ್ರ ಮಹೋತ್ಸವದ ಕಟ್ಟಡದ ಶಂಕುಸ್ಥಾಪನೆ ಆಯಿತು. ಹಂಪನಾರವರ ಕಾಲದಲ್ಲಿ ನಾಲ್ಕು ಅಂತಸ್ತುಗಳ ವಜ್ರ ಮಹೋತ್ಸವ ಕಟ್ಟಡದ ನಿರ್ಮಾಣ ಕಾರ್ಯವು ಮುಕ್ತಾಯಗೊಂಡು ೩-೯-೧೯೮೧ರಂದು ಅಂದಿನ ರಾಜ್ಯಪಾಲರಾದ ಗೋವಿಂದನಾರಾಯಣರಿಂದ ಉದ್ಘಾಟನೆ ಆಯಿತು. ಮುಖ್ಯಮಂತ್ರಿ ಆರ್. ಗುಂಡೂರಾಯರು ಅಧ್ಯಕ್ಷತೆ ವಹಿಸಿದ್ದರು.



ವಜ್ರಮಹೋತ್ಸವ ಕಟ್ಟಡದ ಶಂಕುಸ್ಥಾಪನಾ ಫಲಕ



ವಜ್ರಮಹೋತ್ಸವ ಭವನ



ವಜ್ರಮಹೋತ್ಸವ ಭವನದ ಉದ್ಘಾಟನಾ ಫಲಕ

ಶತಮಾನೋತ್ಸವ ಭವನ

ಒಂದು ಸಂಸ್ಥೆ ಅದರಲ್ಲೂ ಸಾಹಿತ್ಯ ಸಂಸ್ಥೆ ೧೦೦ ವರ್ಷ ಬದುಕಿಬಾಳುತ್ತಿರುವುದು ಕನ್ನಡ ನಾಡಿನ ಇತಿಹಾಸದಲ್ಲಿ ಸ್ಮರಣೀಯ ಸಂಗತಿಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಪ್ರಾತಿನಿಧಿಕ ಸಂಸ್ಥೆಯಾಗಿ ೧೯೧೫ರಲ್ಲಿ ಸ್ಥಾಪನೆಗೊಂಡು ೫ ಮೇ ೨೦೧೫ಕ್ಕೆ ೧೦೦ ವರ್ಷಗಳ ಗಡಿ ಮುಟ್ಟಿತ್ತು. ಶತಮಾನೋತ್ಸವ ವರ್ಷದ ಅವಧಿಯಲ್ಲಿ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿ ಅವರು ಅನೇಕ ರಾಜ್ಯಮಟ್ಟದ ಸಮ್ಮೇಳನಗಳನ್ನು ಇತರ ವಿಶೇಷ ಕಾರ್ಯಕ್ರಮಗಳನ್ನು ನಡೆಸುವುದರ ಜೊತೆಗೆ ಶತಮಾನೋತ್ಸವ ಭವನ ನಿರ್ಮಾಣ ಯೋಜನೆ ಹಾಕಿಕೊಂಡಿದ್ದಾರೆ. ಶತಮಾನದ ಭವನವನ್ನು ಶ್ರೀ ಕೃಷ್ಣರಾಜಪರಿಷನ್ಮಂದಿರ (ಹಳೆಕಟ್ಟಡದ ಪಕ್ಕದಲ್ಲಿದ್ದ ಜಿಎಂಶ್ರೀ ಅಚ್ಚುಕೂಟ ಇದ್ದ ಜಾಗದಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ) ಆ ಬಗ್ಗೆ ಯೋಜನೆಯೆಲ್ಲವೂ ಸಿದ್ಧವಿದ್ದು ೧೭, ೧೮, ಆಗಸ್ಟ್ ೨೦೧೪ರಂದು ಧಾರವಾಡದಲ್ಲಿ ಶತಮಾನೋತ್ಸವ ಉದ್ಘಾಟನಾ ಸಮಾರಂಭವನ್ನು ನಡೆಸಲಾಯಿತು.

ಕಟ್ಟಡದ ಶಂಕುಸ್ಥಾಪನಾ ಸಮಾರಂಭವನ್ನು ಪರಿಷತ್ತಿನ ಅಂಗಳದಲ್ಲಿ ೧೭–೦೬–೨೦೧೪ರಂದು ನೆರವೇರಿಸಲಾಯಿತು.





ಶತಮಾನೋತ್ಸವ ಭವನದ ಶಂಕುಸ್ಥಾಪನಾ ಫಲಕಗಳು

ಅಮೃತ ಮಹೋತ್ಸವ ಭವನ ನಿರ್ಮಾಣದ ಪ್ರಸ್ತಾಪ

ಪರಿಷತ್ತಿಗೆ ೧೯೮೫ರಲ್ಲಿ ೭೦ ವರ್ಷಗಳು ತುಂಬಿದಾಗ ಅಮೃತಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಹಂಪನಾ ಅವರ ಕಾಲದಲ್ಲಿ ಶ್ರೀಕೃಷ್ಣರಾಜ ಪರಿಷನ್ಮಂದಿರ ಕೆಡವಿ ನವೀನ ಭವನವನ್ನು ಅಮೃತಮಹೋತ್ಸವದ ನೆನಪಿಗೆ ಕಟ್ಟಬೇಕೆಂದು ಯೋಜನೆ ತಯಾರಿಸಿ ಸರ್ಕಾರದ ಒಪ್ಪಿಗೆ ಪಡೆಯಲಾಯಿತು. ಆದರೆ ಐತಿಹಾಸಿಕ ಮಹತ್ವ ಮತ್ತು ಭಾವನಾತ್ಮಕ ಸಂಬಂಧಗಳನ್ನು ಹೊಂದಿದ್ದ ಪರಿಷತ್ತಿನ ಅನೇಕ ಅಭಿಮಾನಿಗಳು, ಸದಸ್ಯರು, ಗಣ್ಯರು, ಸಾರ್ವಜನಿಕರು, "ಇದನ್ನು ಕೆಡವಿದರೆ ಅದಕ್ಕೆ ಶ್ರಮಿಸಿದ ಎಲ್ಲ ಮಹನೀಯರ ಹೆಸರುಗಳನ್ನು ಅಳಿಸಿ ಹಾಕಿದಂತಾಗುತ್ತದೆ. ಆದ್ದರಿಂದ ಕೆಡವಿ ಆ ಜಾಗದಲ್ಲಿ ಬೇರೊಂದು ಕಟ್ಟಡ ಕಟ್ಟುವ ಯೋಜನೆಯನ್ನು ಕೈ ಬಿಡಬೇಕೆಂದು ತಿಳಿಸಿದರು. ನಾಡಿನ ಪ್ರಮುಖ ಸಾಹಿತಿಗಳು ಅಂದಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ ಅವರಿಗೆ ಮನವಿ ಅರ್ಪಿಸಿದರು. ಆಗ ಸರ್ಕಾರದ ಸೂಚನೆ ಮೇರೆಗೆ ಕಟ್ಟಡ ನಿರ್ಮಾಣ ಯೋಜನೆ ರದ್ದಾಯಿತು. (ಹೇಮಾದ್ರಿ ೮೪, ೯೮)

ಪರಿಷತ್ತಿನ ಜಿಲ್ಲಾಭವನಗಳು

ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಲ್ಲಿ ಜಿಲ್ಲಾ ಪರಿಷತ್ತು, ತಾಲ್ಲೂಕು ಪರಿಷತ್ತುಗಳನ್ನು ರಚಿಸಲು ಅವಕಾಶ ನೀಡಿದ ಮೇಲೆ ಹಲವಾರು ಜಿಲ್ಲೆಗಳಲ್ಲಿ ಜಿಲ್ಲಾ ಭವನಗಳನ್ನು ನಿರ್ಮಿಸುವ ಪ್ರಯತ್ನ ನಡೆದು ಸ್ಥಳೀಯರ ಸರ್ಕಾರದ ಹಾಗೂ ಸಾರ್ವಜನಿಕರ ನೆರವಿನ ಮೂಲಕ ಜಿಲ್ಲಾ ಭವನಗಳು ಕೆಲವು ನಿರ್ಮಾಣವಾಗಿದ್ದರೆ ಕೆಲವು ಮತ್ತೆ ನಿರ್ಮಾಣ ಹಂತದಲ್ಲಿ, ಕೆಲವು ಪ್ರಯತ್ನದ ಹಂತದಲ್ಲಿ ಇವೆ.

ಅಂದು – ಇಂದು ಕಟ್ಟಡಗಳು ಮತ್ತು ಕಾರ್ಯವಿಭಾಗಗಳು

೩೦ ರೂ. ಬಾಡಿಗೆಯ ಶಂಕರಪುರದ ಕಟ್ಟಡದಲ್ಲಿ ಬಿಜಿಎಲ್ ಸ್ವಾಮಿ ಹೇಳುವಂತೆ ಪರಿಷತ್ತು ಮೂರೇ ಕೋಣೆಗಳದು. ಸ್ವತಂತ್ರವಾದ ಕಟ್ಟಡ ಇಲ್ಲ. ಬಲಮೂಲೆಯಲ್ಲಿ ಪರಿಷತ್ತಿನ ಯಜಮಾನರ ಕಾರ್ಯಾಲಯ. ಈ ಕೋಣೆಯ ಉತ್ತರ ದಿಕ್ಕಿನ ಕೋಣೆಯಲ್ಲಿ ಪ್ರಕಟಣೆಗಳನ್ನಿಡಲಾಗಿತ್ತು. ಪೂರ್ವದಿಕ್ಕಿನ ಕೊನೆಯೇ ಹಾಲ್. ಈ ಹಾಲ್‌ನಲ್ಲಿ ನಾಲ್ಕೈದು ಕುರ್ಚಿಮೇಜುಗಳು ಇದ್ದು ಅದೇ ಪರಿಷತ್ತಿನ ಪಂಡಿತರು ಸಿಬ್ಬಂದಿ ಕೆಲಸ ಮಾಡುತ್ತಿದ್ದ ಜಾಗ.

ಇಂಥ ಜಾಗದಲ್ಲಿ ಪಂಪಭಾರತ ಪಂಪ ರಾಮಾಯಣ, ಶಬ್ದಮಣಿದರ್ಪಣ ಮೊದಲಾದ ಉದ್ಗ್ರಂಥಗಳು ಸಂಪಾದಿತವಾಗಿವೆ.

ಶಿವಮೂರ್ತಿ ಶಾಸ್ತ್ರಿಗಳವರ ಕಾಲಕ್ಕೆ ಪರಿಷತ್ತಿನ ಹಳೇಕಟ್ಟಡದಲ್ಲಿ ಈಗಿನ ಮಾರಾಟ ವಿಭಾಗದ ಹಾಲ್‌ಲ್ಲಿ ಪರಿಷತ್ತಿನ ಪುಸ್ತಕ ಭಂಡಾರವಿತ್ತು ಬಲಗಡೆಯಲ್ಲಿ ನಿಘಂಟು ಕಚೇರಿ, ಎಡಗಡೆ ಓಣಿಯಲ್ಲಿ ವಾಚನಾಲಯ, ಕೆಳಗಡೆ ಮೊದಲ ಕೋಣೆಯಲ್ಲಿ ಪರಿಷತ್ತಿನ ಸಿಬ್ಬಂದಿ ಕಚೇರಿ, ಅದರ ಒಳಗಿನ ಕೊಠಡಿ ಅಧ್ಯಕ್ಷರ ಕೊಠಡಿ. ಲೈಬ್ರರಿಯಿಂದ ಪರಿಷತ್ತಿನ ಸಭಾಂಗಣಕ್ಕೆ ಪ್ರವೇಶದ ಬಾಗಿಲು. ಹೊರಗಿನವರಿಗೆ ಬೇರೆ ಬಾಗಿಲುಗಳು ಇದ್ದವು ಎಂದರೆ ಎಷ್ಟು ಇಕ್ಕಟ್ಟಿನ ಜಾಗದಲ್ಲಿ ಪರಿಷತ್ತಿನ ಕೆಲಸ ಒಂದು ಕಾಲದಲ್ಲಿ ನಡೆಯುತ್ತಿದ್ದವು ಎಂಬುದನ್ನು ಗಮನಿಸಬೇಕು.

ಇಂಥ ಸನ್ನಿವೇಶದಲ್ಲೂ ಪರಿಷತ್ತು ಅಪಾರ ಸಾಧನೆ ಮಾಡಿದೆ. ಇಂದು ನೂರರ ಹೊಸ್ತಿಲಲ್ಲಿ ಇರುವ ಪರಿಷತ್ತಿಗೆ ೩ ಕಟ್ಟಡಗಳಿವೆ. ನಾಲ್ಕನೆಯದು ಸಿದ್ಧವಾಗಲಿದೆ. ಎರಡು ಕಟ್ಟಡಗಳಲ್ಲಿ ಮಹಡಿಗಳಿಗೆ ಲಿಫ್ಟ್‌ಗಳಿವೆ. ಪ್ರತಿ ವಿಭಾಗದಲ್ಲೂ ಪ್ರತ್ಯೇಕ ಜಾಗದ ಜೊತೆಗೆ ಬೆಂಗಳೂರು ನಗರ ಜಿಲ್ಲಾ ಪರಿಷತ್ತಿಗೆ ಎಡೆ ನೀಡಲಾಗಿದೆ. ಕಾರ್ಯಕ್ರಮಗಳನ್ನು ನಡೆಸಲು ೨ ಸಭಾಂಗಣಗಳಿವೆ. ಅಚ್ಚುಕೂಟ, ಪುಸ್ತಕದಾಸ್ತಾನು ನೆಲಮಾಳಿಗೆಗಳಿವೆ.

ಪರಿಷತ್ತಿನ ಕಟ್ಟಡಗಳಲ್ಲಿ ಇರುವ ಸ್ಥಿರ ಚರ ಸಾಮಗ್ರಿಗಳು

(೨೦೧೪-೧೫ ವರದಿಯಲ್ಲಿ ಇದ್ದಂತೆ)

ಒಂದು ಸಂಸ್ಥೆಗೆ ಖಾಲಿ ನಿವೇಶನ ಅಥವಾ ಖಾಲಿ ಕಟ್ಟಡ ಇದ್ದರೆ ಸಾಲದು. ಆಡಳಿತ ವ್ಯವಸ್ಥೆಗೆ ತಕ್ಕಂತೆ ಸ್ಥಿರಚರ ಸಾಮಗ್ರಿಗಳು ಆವಶ್ಯಕ. ಪೀಠೋಪಕರಣಗಳು, ಆಸನಗಳು, ಕಪಾಟುಗಳು, ಯಂತ್ರಗಳು, ಲೇಖನಸಾಮಗ್ರಿಗಳು. ಬಳಕೆ ಫ್ಯಾನುಗಳು, ವಸ್ತುಗಳು, ದೀಪಗಳು, ಲಿಫ್ಟ್‌ಗಳು, ವಾಹನಗಳು, ವಿಗ್ರಹಗಳು, ಭಾವಚಿತ್ರಗಳು, ನಕ್ಷೆ ಲಾಂಛನಗಳು ಇತ್ಯಾದಿ ನಾನಾ ಬಗೆಯ ಸಾಧನ ಸಲಕರಣೆಗಳಿಂದ ಕಟ್ಟಡ ಸಂಪದ್ಯುಕ್ತವಾಗಿರಬೇಕು.

ಒಂದು ಕಾಲದಲ್ಲಿ ಪರಿಷತ್ತಿನಲ್ಲಿ ಕೂಡಲು ಕುರ್ಚಿ ಅಭಾವ, ಬಳಸಲು ಸಾಮಗ್ರಿ ಅಭಾವ, ಪರಿಷತ್ತಿನ ಪದಾರ್ಥಗಳನ್ನಿಡಲು ಜಾಗದ ಅಭಾವ, ಬಂದವರನ್ನು ಆದರಿಸಲು ಸ್ಥಳಾಭಾವ, ಇತ್ಯಾದಿ ಕೊರತೆಗಳಿಂದ ಕೂಡಿತ್ತು.

ಎಂ.ಆರ್.ಶ್ರೀ ಕಾಲದಲ್ಲಿ ಗೋಕುಲನಿರ್ಗಮನ ಕಾವ್ಯವಾಚನ ಮಾಲೆ ಹಲವಾರು ವಾರಗಳು ನಡೆದಾಗ ಪರಿಷತ್ತಿನ ಸಭಾಂಗಣದಲ್ಲಿ ಜಂಖಾನಾ ಹಾಸಿ ನಡುವೆ ೧ ೧/೨ ಅಡಿ ಎತ್ತರದ ಕಟಕಟೆ ಅಡ್ಡ ಇಟ್ಟು ಅತ್ತ ಮಹಿಳೆಯರು, ಇತ್ತ ಪುರುಷರು, ನೆಲದ ಮೇಲೆ ಕೂತಿರುತ್ತಿದ್ದರು.

ಕಾರ್ಯಕ್ರಮಗಳಿಗೆ ಸಾಕಷ್ಟು ಜನ ಬಂದರೆ ನಿಲ್ಲುವುದಕ್ಕೂ ಜಾಗ ಇಲ್ಲದ ಪರಿಸ್ಥಿತಿ ಉಂಟಾಗುತ್ತಿತ್ತು. ಇಂಥ ಸನ್ನಿವೇಶದಲ್ಲೂ ಉನ್ನತಮಟ್ಟದ ಉಪಯುಕ್ತ ಸಾಹಿತ್ಯಿಕ ಕಾರ್ಯಕ್ರಮಗಳು ಪ್ರದರ್ಶನಗಳು ಸಮಾರಂಭಗಳು ನಡೆದಿವೆ. ಸ್ಥಳಾಭಾವದಿಂದ ಪರಿಷತ್ತಿನ ಎದುರಿನ ಸಂಸ್ಕೃತ ಕಾಲೇಜಿನ ಆವರಣದಲ್ಲಿ ಅನೇಕಬಾರಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಪರಿಷತ್ತಿನ ಕಟ್ಟಡದ ಒಳಭಾಗಗಳಲ್ಲಿ ಇರುವ ಸಾಮಗ್ರಿಗಳ ವಿವರ ಹೀಗಿದೆ- ಆಡಳಿತ ನಿರ್ವಹಣೆಗೆ ಕಟ್ಟಡಗಳಲ್ಲಿರುವ ಸೌಕರ್ಯಗಳು ಏನೇನು ಎಂಬುದನ್ನು ಈ ಸ್ಥಿರಚರ ಆಸ್ತಿ ಪಟ್ಟಿ ತಿಳಿಸುತ್ತವೆ.

೨೦೧೪-೧೫ ವರದಿಯಲ್ಲಿರುವ ಸ್ಥಿರ-ಚರ ಆಸ್ತಿ ಪಟ್ಟಿ

ಕ್ರಸಂ.	ಸಾಮಗ್ರಿ ಹೆಸರು	ಒಟ್ಟು
೧	ಆಫ್‌ಸೆಟ್ ಯಂತ್ರ	೨
೨	ಪ್ರೆಸ್ಸಿಂಗ್ ಯಂತ್ರ	೧
೩	ಕಟ್ಟಿಂಗ್ ಯಂತ್ರ	೧
೪	ಪಿನ್ನಿಂಗ್ ಯಂತ್ರ	೧
೫	ಬುಕ್ ಸೆಕ್ಷನ್ ಯಂತ್ರ	೧
೬	ಪರ್‌ಫರೇಶನ್ ಯಂತ್ರ	೧
೭	ಪ್ಲೇಟ್ ಮೇಕಿಂಗ್ ಯಂತ್ರ	೧
೮	ಎನ್ ಬಿ ಜಿ ಸ್ಟಾರ್-೩೦ ವೆಬ್ ಆಫ್‌ಸೆಟ್ (ರೋಲ್‌ಫೀಡ್)	೧
೯	ಎಲೆಕ್ಟ್ರಾನಿಕ್ ಪ್ರಾಕಿಂಗ್ ಯಂತ್ರ	೧
೧೦	ಯು ಪಿ ಎಸ್ (ಮೂರು ಬ್ಯಾಟರಿ)	೨
೧೧	ಜನರೇಟರ್	೧
೧೨	ಸೌಂಡ್ ಬಾಕ್ಸ್ ಸ್ಪೀಕರ್	೮
೧೩	ಮೈಕು	೪
೧೪	ಮೈಕ್ ಸ್ಟ್ಯಾಂಡ್ ಚಿಕ್ಕದು	೨
೧೫	ಮೈಕ್ ಸ್ಟ್ಯಾಂಡ್ ದೊಡ್ಡದು	೨
೧೬	ಆ್ಯಂಪ್ಲಿಫೈಯರ್	೨

೧೭	ಮರದ ಟೇಬಲ್	೫೧
೧೮	ಮರದ ಬೀರು	೩೪
೧೯	ಮರದ ಚೇರು	೩೦
೨೦	ಮರದ ಬೆಂಚು	೧೧
೨೧	ಮರದ ಬೆಂಚು – ಉದ್ದದು	೧೫
೨೨	ಮರದ ಡೆಸ್ಕು	೧೯
೨೩	ಓಲೆಗರಿ ಕಪಾಟು	೨
೨೪	ದಿವಾನ್ ಕಾಟ್	೨
೨೫	ಭಾಷಣದ ಸ್ಟ್ಯಾಂಡ್ (ಕೃಷ್ಣರಾಜ ಪರಿಷನ್ಮಂದಿರ)	೧
೨೬	ವೇದಿಕೆ ಕೌಂಟರ್ (ಕುವೆಂಪು ಸಭಾಂಗಣ)	೧
೨೭	ವೇದಿಕೆ ಸ್ಕ್ರೀನ್	೩
೨೮	ಸೀಲಿಂಗ್ ಫ್ಯಾನು	೬೫
೨೯	ಗೋಡೆ ಫ್ಯಾನು	೮
೩೦	ಪ್ಲೇಟ್‌ವಾಷಿಂಗ್ ಟೇಬಲ್	೧
೩೧	ಕಟ್ಟಿಂಗ್ ಬ್ಲೇಡ್	೪
೩೨	ನಂಬರಿಂಗ್ ಮೆಷಿನ್	೨
೩೩	ಪರ್‌ಫೆಕ್ಟ್ ಯಂತ್ರ	೧
೩೪	ಕಂಪ್ಯೂಟರ್	೧೩
೩೫	ಕಂಪ್ಯೂಟರ್ ಪ್ರಿಂಟರ್	೩
೩೬	ಕಂಪ್ಯೂಟರ್ ಟೇಬಲ್	೧೨
೩೭	ಝೆರಾಕ್ಸ್ ಮೆಷಿನ್	೨
೩೮	ಪುಸ್ತಕ ಮಾರಾಟ ಕೌಂಟರ್ ಬೆಂಚು	೨
೩೯	ಸ್ವಚ್ಛಗೊಳಿಸುವ ಯಂತ್ರ	೨
೪೦	ನಿಘಂಟು ಕ್ಯಾಟ್‌ಲಾಗ್ ಬಾಕ್ಸ್ (ಸ್ಟೀಲ್)	೨೮
೪೧	ಲೈಬ್ರರಿ ಕ್ಯಾಟ್‌ಲಾಗ್ ಬಾಕ್ಸ್ (ಸ್ಟೀಲ್)	೨೫
೪೨	ಮರದ ಕ್ಯಾಟ್‌ಲಾಗ್ ಬಾಕ್ಸ್	೬
೪೩	ಅಧ್ಯಕ್ಷರ ಕೊಠಡಿ ಟಿ.ವಿ.	೧
೪೪	ಫ್ಯಾಕ್ಸ್ ಯಂತ್ರ	೧
೪೫	ಅಧ್ಯಕ್ಷರ ರೌಂಡ್ ಚೇರು	೨
೪೬	ಪುಸ್ತಕ ಪ್ರದರ್ಶನ ರ್‍ಯಾಕ್	೨
೪೭	ಸ್ಥಿರಪುಸ್ತಕ ಪ್ರದರ್ಶನ ಕಪಾಟು	೧೦
೪೮	ಅತಿಥಿಗಳು ಕೂರುವ ಚೇರು	೧೦
೪೯	ಇನ್ನೋವ ಕಾರು	೧
೫೦	ಸ್ಪೈಸಿಂಗ್ ಯಂತ್ರ	೧
೫೧	ಗಡಿಯಾರ	೧೧
೫೨	ಕಬ್ಬಿಣದ ರ್‍ಯಾಕ್ (ದೊಡ್ಡದು)	೧೦೬

೫೩	ಕಬ್ಬಿಣದ ಬೀರು (ಗಾಡ್ರೇಜ್)	೩೪
೫೪	ಕಬ್ಬಿಣದ ಚೇರ್	೭
೫೫	ವೈರ್ ಚೇರ್	೫೨
೫೬	ಪ್ಲಾಸ್ಟಿಕ್ ಚೇರ್	೩೦೮
೫೭	ಫೋನು	೨೨
೫೮	ಕಬ್ಬಿಣದ ಚಿಕ್ಕ ರ್ಯಾಕ್	೧೦
೫೯	ಟೀಪಾಯಿ	೨
೬೦	ನೀರಿನ ಮೋಟಾರು	೨
೬೧	ಬೋರ್ಡ್	೪
೬೨	ಜಮಖಾನ	೨
೬೩	ಮೀಟಿಂಗ್ ಹಾಲ್ ಲೈಟ್ (ಎಲ್.ಇ.ಡಿ)	೩೧
೬೪	ಗ್ರಂಥಾಲಯ ಲೈಟ್ (ಎಲ್.ಇ.ಡಿ)	೩೬
೬೫	ಗ್ರಂಥಾಲಯದ ಹೊಸ ಟೇಬಲ್	೨೨
೬೬	ನಿಯತಕಾಲಿಕೆ ರ್ಯಾಕ್	೨
೬೭	ಕುಷನ್‌ಚೇರು (ಗ್ರಂಥಾಲಯ)	೩೦
೬೮	ಮರದ ಬೀರು	೧
೬೯	ಪುಸ್ತಕ ಇರಿಸುವ ಓಪನ್ ರ್ಯಾಕ್ (ಮರದ)	೧೩೨
೭೦	ಪದಾಧಿಕಾರಿಗಳ ಈಜಿ ಚೇರು	೪
೭೧	ಸೀಲಿಂಗ್ ಫ್ಯಾನು (ಗ್ರಂಥಾಲಯ)	೧೦
೭೨	ಅಧ್ಯಕ್ಷರ – ಫೋನ್	೧
೭೩	ಸ್ಕ್ಯಾನರ್	೧
೭೪	ಕಬ್ಬಿಣದ ಬೆಂಚು	೨
೭೫	ಪುಸ್ತಕ ಜೋಡಣೆ ಬೀರು	೧
೭೬	ಮೀಟಿಂಗ್ ಹಾಲ್ ಟೇಬಲ್	೧
೭೭	ನೋಟಿಸ್ ಬೋರ್ಡ್	೧
೭೮	ನಾಲ್ವಡಿ ಕೃಷ್ಣರಾಜ ಒಡೆಯರ ವಿಗ್ರಹ	೧
೭೯	ಮರದ ಬೀರು (ಅಧ್ಯಕ್ಷರ ಕೊಠಡಿ)	೧
೮೦	ಪ್ಲಾಸ್ಟಿಕ್ ಚೇರ್ (ಸಭಾಂಗಣ)	೧೫೦
೮೧	ಧ್ವನಿವರ್ಧಕ ಸ್ಪೀಕರ್	೬
೮೨	ಆ್ಯಂಪ್ಲಿಫೈಯರ್	೧
೮೩	ಕಾರ್ಡ್‌ಲೆಸ್ ಫೋನ್	೧
೮೪	ಕಾರ್ಡ್‌ಲೆಸ್ ಮೈಕ್	೧
೮೫	ಪರಿಷತ್ತಿನ ಕಛೇರಿಯ ಅಲ್ಯುಮಿನಿಯಂ ಪಾರ್ಟಿಷನ್	೩ ವಿಭಾಗದಲ್ಲಿ
೮೬	ಕಛೇರಿಯ ನಾಮಫಲಕ	೫
೮೭	ಲ್ಯಾಮಿನೇಷನ್ ಯಂತ್ರ (ಹೊಸ ಯಂತ್ರ ಖರೀದಿಸಿದೆ)	೧

೮೮	ಆಂತರಿಕ ದೂರವಾಣಿ ಇಪಿಬಿಎಕ್ಸ್ ಬಾಕ್ಸ್	೨
೮೯	ಜಾಹೀರಾತು ಫಲಕ	೪
೯೦	ಲಿಫ್ಟ್	೨
೯೧	ಹಣ ಎಣಿಸುವ ಯಂತ್ರ	೧

ಕನ್ನಡ ಸಾಹಿತ್ಯ ಪರಿಷತ್ತಿನ ಹಳೆಯ ಕಟ್ಟಡ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಇತ್ತೀಚಿನವರೆಗೂ (ಹೊಸಕಟ್ಟಡಗಳ ನಿರ್ಮಾಣವಾಗುವವರೆಗೆ ಕನ್ನಡ ನಾಡುನುಡಿಗೆ ಪರಿಷತ್ತಿಗೆ ದುಡಿದವರ ಭಾವಚಿತ್ರಗಳನ್ನು ಪರಿಷನ್ಮಂದಿರದ ಸಭಾಂಗಣದಲ್ಲಿ ಓರಣವಾಗಿ ಗೋಡೆಯ ಮೇಲೆ ತೂಗು ಹಾಕಲಾಗಿತ್ತು. ಈ ಭಾವಚಿತ್ರಗಳು "ಕನ್ನಡ ಸಾಹಿತ್ಯಕ್ಕೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸೇವೆ ಸಲ್ಲಿಸಿದ (ಈಗ ಪರಲೋಕ ಪ್ರಾಪ್ತವಾಗಿರುವ) ಮಹನೀಯರ ಹಾಗೂ ಮಹಿಳೆಯರ ಪ್ರತಿಕೃತಿಗಳು. ಅವರನ್ನು ಕಣ್ಣಾರೆ ಕಾಣದಿದ್ದ ಕಿರಿಯರಿಗೆ ಅವರ ಸ್ವರೂಪದರ್ಶನ ಮಾಡಲು ಇದು ಅನುಕೂಲವಾಗಿ ಒದಗುತ್ತದೆ." ಎಂದು ಜಿ.ಪಿ. ರಾಜರತ್ನಂ ಅವರು ಹೇಳುತ್ತಾ ಇನ್ನೊಂದು ಮಾತು ಹೇಳಿದ್ದಾರೆ.

"ಗತಿಪಿ ಹೋಗಿರುವ ಕನ್ನಡ ಸೇವಾಕರ್ತರ ಎಲ್ಲ ಪ್ರತಿಕೃತಿಗಳು ಈ ಚಿತ್ರಶಾಲೆಯಲ್ಲಿ ಇಲ್ಲ. ಈಗ ಅಲ್ಲಿ ಇರುವವವರಾರೂ (ಭಾವಚಿತ್ರರೂಪದಲ್ಲಿ) ಕನ್ನಡಕ್ಕಾಗಿ, ಪರಿಷತ್ತಿಗಾಗಿ ಏನೇನು ಮಾಡಿದರು ಎಂಬುದನ್ನು ಮುಂದೆ ಯಾರಾದರೂ ವಿವರವಾಗಿ ಬರೆಯಬೇಕು" ಎಂಬ ಅವರ ಆಸೆಯನ್ನು ನೆರವೇರಿಸಬೇಕಾಗಿದೆ.

ಜಿ. ಪಿ. ರಾಜರತ್ನಂ ಅವರು ಭಾವಚಿತ್ರಗಳ ಸಭಾಂಗಣವನ್ನು "ಕನ್ನಡ ಸಾಹಿತ್ಯ ಪರಿಷತ್ತಿನ ಚಿತ್ರಶಾಲೆ ಪ್ರತಿಮಾಗೃಹ" ಎಂದು ಕನ್ನಡ ಸೇತುವೆ ಎಂಬ ಪುಟಾಣಿ ಪುಸ್ತಕದಲ್ಲಿ ಕರೆದಿದ್ದಾರೆ (ಪುಟ ೪೫)

ಈಗ ಹಳೆಯ ಭಾವಚಿತ್ರಗಳನ್ನು ತೆಗೆದುಹಾಕಿ ಹೊಸ ಭಾವಚಿತ್ರಗಳನ್ನು ಏಕರೂಪದಲ್ಲಿ ಬಿಳಿಕಪ್ಪು ಬಣ್ಣಗಳಲ್ಲಿ ಒಂದೇ ಆಕಾರದ ಚೌಕಟ್ಟಿಗೆ ಅಳವಡಿಸಿ ಕುವೆಂಪು ಸಭಾಂಗಣದಲ್ಲಿ ಅಲಂಕರಿಸಲಾಗಿದೆ. ಹಳೆಯ ಭಾವಚಿತ್ರಗಳಿಗೆ ಒಂದು ಇತಿಹಾಸವಿತ್ತು. ಆ ಭಾವಚಿತ್ರಗಳಲ್ಲಿ ಸಾಕಷ್ಟು ಸಂಖ್ಯೆಯ ವರ್ಣಚಿತ್ರಗಳಿದ್ದವು. ಪರಿಷತ್ತಿನಲ್ಲಿ ಅನಾವರಣ ಮಹೋತ್ಸವ ನಡೆದು ಆ ಭಾವಚಿತ್ರವನ್ನು ಪರಿಷತ್ತಿಗೆ ಸಮರ್ಪಿಸಲಾಗಿತ್ತು. ಆ ಸಂದರ್ಭದಲ್ಲಿ ಆ ವ್ಯಕ್ತಿಗಳ ಸೇವೆ ಸಾಧನೆಗಳ ಗುಣಗಾನ ಮಾಡಲಾಗಿತ್ತು. ಕನ್ನಡ ನುಡಿ ಪತ್ರಿಕೆಯಲ್ಲಿ ಈ ಬಗೆಗೆ ಕೆಲವು ವರದಿಗಳಿವೆ. ಐತಿಹಾಸಿಕ ಮೌಲ್ಯವಿರುವ ಆ ಹಳೆಯ ಭಾವಚಿತ್ರಗಳು ಪರಿಷತ್ತಿನ ಅಪೂರ್ವ ಆಸ್ತಿಗಳಲ್ಲಿ ಒಂದು. ಅದನ್ನು ಸಂರಕ್ಷಿಸಬೇಕಾದ ಅಗತ್ಯವಿದೆ. ಕೆಲವು ಸಾಹಿತಿಗಳ ಭಾವಚಿತ್ರವಂತೂ ಬೇರೆಡೆ ಸಿಗದಿರುವುದೂ ಉಂಟು. ಒಂದು ನಿದರ್ಶನ ಹೇಳಬಹುದು. ಮೈಸೂರು ಇತಿಹಾಸಕ್ಕೆ ಸಂಬಂಧಿಸಿದಂತೆ ನಾಟಕಗಳನ್ನು ರಚಿಸಿ ಪ್ರಸಿದ್ಧರಾದ 'ಸಂಸ'ರ ಕೇವಲ ೨ ಭಾವಚಿತ್ರಗಳಿದ್ದು, ಒಂದು ಸಂಸರು ಓದಿದ ಕೊಳ್ಳೇಗಾಲದ ಹೈಸ್ಕೂಲಿನಲ್ಲಿ, ಇನ್ನೊಂದು ಪರಿಷತ್ತಿನಲ್ಲಿತ್ತು. ಕೊಳ್ಳೇಗಾಲದಲ್ಲಿ ಸಂಸರನ್ನು ಕುರಿತು ವಿಚಾರ ಸಂಕಿರಣ ನಡೆದಾಗ ಅವರ ಫೋಟೋ ಎಲ್ಲೂ ಸಿಗದೆ ಪರಿಷತ್ತಿನ ಭಾವಚಿತ್ರದ ಪ್ರತಿಕೃತಿ ತೆಗೆದು ಅಲ್ಲಿ ಅನಾವರಣ ಮಾಡಲಾಯಿತು. ವಿಚಾರಸಂಕಿರಣದ ನಂತರ ಅವರ ಬಂಧುಗಳೊಬ್ಬರಿಗೆ ಸಮರ್ಪಿಸಲಾಯಿತು. ಕೊಳ್ಳೇಗಾಲದ ಹೈಸ್ಕೂಲ್‌ನಲ್ಲಿ ಇದ್ದ ಭಾವಚಿತ್ರವನ್ನು ಯಾರೋ ತೆಗೆದುಕೊಂಡು ಹೋಗಿ ಹಿಂದಿರುಗಿಸಲಿಲ್ಲ. ಹೀಗೆ ಪರಿಷತ್ತಿನ ಭಾವಚಿತ್ರಗಳ ಹಿಂದೆ ಅನೇಕ ಸ್ಮರಣೀಯ ಸಂಗತಿಗಳಿವೆ.

ಪರಿಷತ್ತಿನ ಸಭಾಂಗಣದ ಸಾಹಿತಿಗಳ ಭಾವಚಿತ್ರಗಳು

ಈ ಭಾವಚಿತ್ರಗಳ ಸಭಾಂಗಣವನ್ನು ನೋಡಿ ಇದು ಕರ್ನಾಟಕದ ವೆಸ್ಟ್ ಮಿನಿಸ್ಟರ್ ಅಬೆ ಎಂದು ಒಬ್ಬ ವಿದ್ವಾಂಸರು ಕರೆದಿದ್ದರು. ಒಂದು ಮಾತಂತೂ ನಿಜ. ಸಭಾಂಗಣದ ಭಾವಚಿತ್ರಗಳು ಅನೇಕರಿಗೆ ವಿಶೇಷವಾಗಿ ಯುವಜನಾಂಗಕ್ಕೆ ಸ್ಫೂರ್ತಿ ನೀಡುತ್ತಿತ್ತು. ಪರಿಷತ್ತಿನ ಹಳೆಯ ಸಭಾಂಗಣದಲ್ಲಿ ಇದ್ದುದರಿಂದ ಎಲ್ಲರಿಗೂ ನೋಡಲು ಸಿಗುತ್ತಿತ್ತು. ಈಗ ಮಹಡಿ ಮೇಲಿನ ಸಭಾಂಗಣದಲ್ಲಿ ಇರುವುದು ಎಷ್ಟೋ ಜನಕ್ಕೆ ಗೊತ್ತೇ ಇಲ್ಲ.

ಹಳೆಯ ಸಭಾಂಗಣದಲ್ಲಿ ಕುವೆಂಪು ಅವರಿಗೆ ರಾಮಾಯಣ ದರ್ಶನಕ್ಕೆ ಪ್ರಶಸ್ತಿ ಬಂದ ಸಂದರ್ಭದಲ್ಲಿ ಪರಿಷತ್ತಿನಿಂದ ಸನ್ಮಾನ ನೀಡಿದಾಗ ಕುವೆಂಪು ಅವರು ತಮ್ಮ ಭಾಷಣ ಪ್ರಾರಂಭಿಸುವ ಮುಂಚೆ ಸುತ್ತಲೂ ಸಭಾಂಗಣದಲ್ಲಿದ್ದ ಭಾವಚಿತ್ರಗಳ ಸುತ್ತ ಕಣ್ಣು ಹಾಯಿಸುತ್ತಾ ಭಾವಾವೇಶದಿಂದ 'ಕನ್ನಡ ಸಾಹಿತ್ಯ ಲೋಕದ ದಿವ್ಯ ಚೇತನಗಳಿರಾ' ಎಂದು ಸಂಬೋಧಿಸಿದ್ದರು.

ಕನ್ನಡ ನಾಡಿನಲ್ಲಿ ಸಾಹಿತಿಗಳ ವಿದ್ವಾಂಸರ ಭಾವಚಿತ್ರಗಳ ಸಂಗ್ರಹವನ್ನು, ಆಯ್ದಸಾಹಿತಿಗಳ ಭಾವಚಿತ್ರಗಳ ಪಟಗಳನ್ನು ಪ್ರಕಟಿಸುವ ಪ್ರಯತ್ನಗಳು ನಡೆದಿವೆ. ಪರಿಷತ್ತಿನಲ್ಲೇ ಪ್ರಸಿದ್ಧ ಸಾಹಿತಿಗಳ ಜ್ಞಾನಪೀಠ ಪುರಸ್ಕಾರ ಹಾಗೂ ಇತರ ಭಾವಚಿತ್ರಗಳು ಮಾರಾಟಕ್ಕೆ ಇಡಲಾಗಿದೆ. ಆದರೆ ಸಮಗ್ರವಾಗಿ ಸಾಹಿತಿಗಳ ಭಾವಚಿತ್ರಗಳನ್ನು ವಿವರಗಳೊಂದಿಗೆ ಪ್ರಕಟವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಪರಿಷತ್ತು ಈ ಬಗೆಯ ಪ್ರಕಟನೆಯನ್ನು ತರಲು ಪ್ರಯತ್ನಿಸಬಹುದಾಗಿದೆ. ಈ ಶತಮಾನೋತ್ಸವ ಸಮಯದಲ್ಲಾದರೂ ಈ ಬಗೆಗೆ ಚಿಂತಿಸಬಹುದಾಗಿದೆ.

ಸಾಹಿತ್ಯ ಪರಿಷತ್ತಿನಲ್ಲಿರುವ ಭಾವಚಿತ್ರಗಳ ವಿವರವನ್ನು ಪರಿಷತ್ಪತ್ರಿಕೆಯಲ್ಲಿ ಹೀಗೆ ಕೊಡಲಾಗಿದೆ.

ಸಭಾಂಗಣದಲ್ಲಿರುವ ಭಾವಚಿತ್ರಗಳು

೧. ಹೆಚ್.ವಿ. ನಂಜುಂಡಯ್ಯ, ೨. ಬೆಳ್ಳಾವೆ ವೆಂಕಟನಾರಣಪ್ಪ, ೩. ಆರ್. ನರಸಿಂಹಾಚಾರ್, ೪. ಬಿ.ಎಂ. ಶ್ರೀಕಂಠಯ್ಯ, ೫. ಆಲೂರು ವೆಂಕಟರಾವ್, ೬. ಚ. ವಾಸುದೇವಯ್ಯ, ೭. ಬೆನಗಲ್‌ರಾಮರಾವ್, ೮. ವಿ.ಆರ್. ಕರಿಬಸವಶಾಸ್ತ್ರಿ ೯. ಬಿ. ಮಲ್ಲಪ್ಪ, ೧೦. ರೆವರೆಂಡ್ ಎಫ್. ಕಿಟ್ಟೆಲ್, ೧೧. ಬಿ.ಎಲ್. ರೈಸ್, ೧೨. ಪಂಜೆ ಮಂಗೇಶರಾವ್, ೧೩. ಎಂ.ಆರ್. ಶ್ರೀನಿವಾಸಮೂರ್ತಿ, ೧೪. ಟಿ.ಎಸ್. ವೆಂಕಣ್ಣಯ್ಯ, ೧೫. ಎ.ಆರ್. ಕೃಷ್ಣಶಾಸ್ತ್ರಿ, ೧೬. ಎಂ.ಎ. ರಾಮಾನುಜಂ ಅಯ್ಯಂಗಾರ್, ೧೭. ಎಂ. ಶ್ಯಾಮರಾವ್, ೧೮. ನಂಗಂಪುರಂ ವೆಂಕಟೇಶ ಅಯ್ಯಂಗಾರ್, ೧೯. ಹುಲ್ಲೂರು ಶ್ರೀನಿವಾಸ ಜೋಯಿಸ, ೨೦. ತೀ.ನಂ. ಶ್ರೀಕಂಠಯ್ಯ, ೨೧. ದ.ರಾ. ಬೇಂದ್ರೆ, ೨೨. ಬಸಪ್ಪಶಾಸ್ತ್ರಿ, ೨೩. ಬಿ. ವೆಂಕಟಾಚಾರ್, ೨೪. ಬಿ. ಶಿವಮೂರ್ತಿ ಶಾಸ್ತ್ರೀ, ೨೫. ರವೀಂದ್ರನಾಥ ಠಾಗೂರ್, ೨೬. ಮುಮ್ಮಡಿ ಕೃಷ್ಣರಾಜ ಒಡೆಯರ್, ೨೭. ಚಾಮರಾಜ ಒಡೆಯರ್, ೨೮. ನಾಲ್ವಡಿ ಕೃಷ್ಣರಾಜ ಒಡೆಯರ್, ೨೯. ಸಿದ್ಧವನಹಳ್ಳಿ ಕೃಷ್ಣ ಶರ್ಮ, ೩೦. ಅ.ನ.ಕೃ, ೩೧. ಸಿ.ಕೆ. ವೆಂಕಟರಾಮಯ್ಯ, ೩೨. ಬಿ. ಕೃಷ್ಣಪ್ಪ, ೩೩. ಡಾ॥ ಭಾರದ್ವಾಜ್, ೩೪. ಬಿ. ವೆಂಕೋಬರಾವ್, ೨೫. ಎಸ್.ಎಸ್. ಬಸವನಾಳ, ೩೬. ಬೆಳ್ಳಾವೆ ನರಹರಿಶಾಸ್ತ್ರಿ, ೩೭. ಆರ್. ವ್ಯಾಸರಾವ್, ೩೮. ಫ.ಗು.ಹಳಕಟ್ಟಿ, ೩೯.ನವರತ್ನ ರಾಮರಾವ್, ೪೦. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ, ೪೧. ದೇವುಡು ನರಸಿಂಹಶಾಸ್ತ್ರಿ, ೪೨. ಲಕ್ಷ್ಮಣ್‌ರಾವ್ ಹೊಯ್ಸಳ, ೪೩. ಉತ್ತಂಗಿ ಚೆನ್ನಪ್ಪ, ೪೪. ಟಿ.ಪಿ. ಕೈಲಾಸಂ, ೪೫. ಕೆರೂರು ವಾಸುದೇವಾಚಾರ್ಯ, ೪೬. ರಾಮಶೇಷ ಶಾಸ್ತ್ರಿ, ೪೭. ಎಂ.ಎಸ್. ಕಾಮತ್, ೪೮. ಎಂ.ಎಸ್. ಪುಟ್ಟಣ್ಣ, ೪೯. 'ಸಂಸ' ವೆಂಕಟಾದ್ರಿ ಅಯ್ಯರ್, ೫೦. ಎಂ.ಎಸ್. ಬಸವಲಿಂಗಯ್ಯ, ೫೧. ನಂದಳಿಕೆ ಲಕ್ಷ್ಮೀನಾರಾಯಣಪ್ಪ, ೫೨. ಸೋಸಲೆ ಅಯ್ಯಾಶಾಸ್ತ್ರಿ, ೫೩. ಶಾಂತಯ್ಯಾ, ೫೪. ಆರ್. ಕಲ್ಯಾಣಮ್ಮ, ೫೫. ಬೆಳಗೆರೆ ಜಾನಕಮ್ಮ, ೫೬. ಸರ್. ಮಿರ್ಜಾ ಇಸ್ಮಾಯಿಲ್, ೫೭. ಸರ್.ಎಂ. ವಿಶ್ವೇಶ್ವರಯ್ಯ, ೫೮. ಕರ್ಪೂರ ಶ್ರೀನಿವಾಸರಾವ್, ೫೯. ಶಾಂತರಾಜೇ ಅರಸ್, ೬೦. ಕಂಠೀರವ ನರಸರಾಜ ಒಡೆಯರ್.

ಸಂಶೋಧನಾ ವಿಭಾಗದಲ್ಲಿರುವ ಭಾವಚಿತ್ರಗಳು

೧. ಸುವರ್ಣ ಮಹೋತ್ಸವದ ಸಮಾರಂಭ : ಧರ್ಮವೀರರು ಹಾಗೂ ಇತರರು, (ಎರಡು ಭಾವಚಿತ್ರಗಳು) ೨. ಸುವರ್ಣ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ : ವೀರೇಂದ್ರ ಪಾಟೀಲ್ ಹಾಗೂ ಇತರರು, ೩. ರಾಜ್ಯಮಟ್ಟದ ಜನಪದ ಕಲಾ ಮಹೋತ್ಸವ ಉದ್ಘಾಟನೆ : ಡಿ. ದೇವರಾಜ ಅರಸ್ ಹಾಗೂ ಇತರರು, ೪. ಸುವರ್ಣ ಮಹೋತ್ಸವದ ಉದ್ಘಾಟನೆ : ವಿ.ವಿ. ಗಿರಿ ಹಾಗೂ ಇತರರು, (ಎರಡು ಭಾವಚಿತ್ರಗಳು) ೫. ವಜ್ರ ಮಹೋತ್ಸವದ ಶಂಕುಸ್ಥಾಪನೆ : ಸಮೂಹ ಭಾವಚಿತ್ರ ೬. ವಜ್ರಮಹೋತ್ಸವದ ಉದ್ಘಾಟನೆ : ಉಮಾಶಂಕರ ದೀಕ್ಷಿತ್ ಹಾಗೂ ಇತರರು, ೭. ೫೦ನೇ ಕನ್ನಡ

ಸಾಹಿತ್ಯ ಸಮ್ಮೇಳನ (ದೆಹಲಿ) ಉದ್ಘಾಟನೆ : ಮೊರಾರ್ಜಿ ದೇಸಾಯಿ ಹಾಗೂ ಇತರರು, (ಎರಡು ಭಾವಚಿತ್ರಗಳು) ೮. ಡಾ. ಬಿ.ಎ. ಸಾಲೆತ್ತೂರ್, ೯. ರಾವ್ ಬಹದ್ದೂರ್ ಹೆಚ್. ಕೃಷ್ಣಶಾಸ್ತ್ರಿ, ೧೦. ಡಾ॥ ಎಸ್. ಶ್ರೀಕಂಠಶಾಸ್ತ್ರಿ, ೧೧. ಆರ್. ನರಸಿಂಹಾಚಾರ್, ೧೨.ಡಾ॥ ಎಂ. ಶೇಷಾದ್ರಿ, ೧೩. ಬಿ.ಎಲ್. ರೈಸ್, ೧೪. ಡಾ॥ ಎ. ವೆಂಕಟಸುಬ್ಬಯ್ಯ, ೧೫. ಡಾ॥ ಇ. ಹುಲ್ಷ್, ೧೬. ಡಾ॥ ಆರ್. ಶಾಮಶಾಸ್ತ್ರಿ , ೧೭. ವಲ್ಲಭಭಾಯ್ ಪಟೇಲ್, ೧೮. ಕುವೆಂಪು, ೧೯. ಜಯಚಾಮರಾಜೇಂದ್ರ ಒಡೆಯರ್, ೨೦. ಶಿವರಾಮ ಕಾರಂತ, (ಎರಡು ಭಾವಚಿತ್ರಗಳು) ೨೧. ಎಂ.ಎಲ್. ಶ್ರೀಕಂಠೇಗೌಡ, ೨೨. ವಜ್ರಮಹೋತ್ಸವ (ಕ.ಸಾ.ಪ), ೨೩. ಆ. ನೇ. ಉಪಾಧ್ಯೆ, ೨೪.ಸ್ವಾಮಿ ವಿವೇಕಾನಂದ, ೨೫. ಜಿ. ನಾರಾಯಣ ೨೬. ಸ್ಥಿರಪುಸ್ತಕ ಭಂಡಾರ ಉದ್ಘಾಟನಾ ಚಿತ್ರ, ೨೭.ಕರ್ನಾಟಕ ಜನಪದ ಕಲಾ ಮಹೋತ್ಸವ ಉದ್ಘಾಟನೆ : ಡಿ. ದೇವರಾಜ ಅರಸು ಹಾಗೂ ಇತರರು, ೨೮.ಡಾ॥ ಜೆ.ಎಸ್. ಫ್ಲೀಟ್, ೨೯. ಡಾ॥ ಪಿ.ಬಿ. ದೇಸಾಯಿ, ೩೦. ಕರ್ನಾಟಕ ರಾಜರಾಜೇಶ್ವರಿ, ೩೧.ಕೆಂಗಲ್ ಹನುಮಂತಯ್ಯ , ೩೨. ವಾಸುದೇವರಾವ್, ೩೩.ಲಾಲ್‌ಬಹದ್ದೂರ್ ಶಾಸ್ತ್ರಿ, ೩೪. ನಾಲ್ವಡಿ ಕೃಷ್ಣರಾಜ ಒಡೆಯರ್, ೩೫. ವೀರರಾಣಿ ಕಿತ್ತೂರು ಚೆನ್ನಮ್ಮ, ೩೬. ಮಹಾತ್ಮಗಾಂಧಿ, ೨೭. ಡಾ॥ ರಾಜೇಂದ್ರ ಪ್ರಸಾದ್, ೩೮. ಜವಹರಲಾಲ್ ನೆಹರು, ೩೯. ಡಾ॥ ರಾಧಾಕೃಷ್ಣನ್, ೪೦ ಡಾ॥ ಆರ್. ಆರ್. ದಿವಾಕರ್, ೪೧.ಕೆ. ಶಂಕರೇಗೌಡ, ೪೨. ರಾಮಕೃಷ್ಣ ಹೆಗಡೆ.

ಸಂಶೋಧನಾ ವಿಭಾಗದಲ್ಲಿರುವ ಪ್ರತಿಮೆಗಳು

೧. ಶ್ರೀರಂಗ, ೨. ಕುವೆಂಪು, ೩. ಟಿ.ಪಿ. ಕೈಲಾಸಂ, ೪. ನಾಲ್ವಡಿ ಕೃಷ್ಣರಾಜ ಒಡೆಯರ್, ೫. ಸರ್.ಎಂ. ವಿಶ್ವೇಶ್ವರಯ್ಯ, ೬. ತೀನಂ.ಶ್ರೀ.

ನಿಘಂಟು ಕಛೇರಿಯಲ್ಲಿರುವ ಭಾವಚಿತ್ರಗಳು

೧. ಗದುಗಿನ ವೀರನಾರಾಯಣ, ೨. ರೆವರೆಂಡ್ ಎಫ್. ಕಿಟ್ಟಲ್, ೩. ಎ. ಆರ್. ಕೃಷ್ಣಶಾಸ್ತ್ರಿ ,೪. ತೀ.ನಂ.ಶ್ರೀಕಂಠಯ್ಯ, ೫. ಡಿ.ಎಲ್. ನರಸಿಂಹಾಚಾರ್.

ಬಿ.ಎಂ.ಶ್ರೀ ಅಚ್ಚುಕೂಟದಲ್ಲಿರುವ ಭಾವಚಿತ್ರಗಳು

೧. ನಾಲ್ವಡಿ ಕೃಷ್ಣರಾಜ ಒಡೆಯರ್, ೨. ಬಿ.ಎಂ.ಶ್ರೀಕಂಠಯ್ಯ, ೩. ಮಹಾತ್ಮಾಗಾಂಧಿ.

ಹಳೆಯ ಕಟ್ಟಡದ ಮಾರಾಟ ವಿಭಾಗದಲ್ಲಿರುವ ಭಾವಚಿತ್ರಗಳು

೧. ಡಿ.ವಿ. ಗುಂಡಪ್ಪ, ೨. ಜಿ.ಪಿ. ರಾಜರತ್ನಂ, ೩. ಡಾ॥ ಟಿ.ಎಂ. ಪೈ, ೪. ಜಯಚಾಮರಾಜೇಂದ್ರ ಒಡೆಯರ್.

ಬೆರಳಚ್ಚು ಕೊಠಡಿಯಲ್ಲಿರುವ ಭಾವಚಿತ್ರಗಳು

೧. ಶ್ರೀ ಬಿ. ಶಿವಮೂರ್ತಿಶಾಸ್ತ್ರಿಅವರ ಕಾಲದ ಹದಿನಾರು ಸಣ್ಣ ಚಿತ್ರಗಳ ಸಮೂಹ ಭಾವಚಿತ್ರ (ಡಾ॥ ಎಸ್. ರಾಧಾಕೃಷ್ಣನ್‌ರವರು ಮತ್ತು ಇತರರು.)

ಪುಸ್ತಕ ಭಂಡಾರದಲ್ಲಿರುವ ಭಾವಚಿತ್ರ

ಸರಸ್ವತೀ

ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದ ಭಾವ ಚಿತ್ರಗಳನ್ನು ಜಿ.ಪಿ.ರಾಜರತ್ನಂ ಅವರು ಹೀಗೆ ವರ್ಗೀಕರಿಸಿದ್ದಾರೆ (ಕನ್ನಡ ಸೇತುವೆ ಪುಟ ೪೫)

೧. ಕನ್ನಡ ಸಾಹಿತ್ಯಕ್ಕೆ ಪೋಷಕರಾದ ಅರಸರು

೧. ಮುಮ್ಮಡಿ ಕೃಷ್ಣರಾಜ ಒಡೆಯರು

೨. ಚಾಮರಾಜ ಒಡೆಯರು

೩. ನಾಲ್ವಡಿ ಕೃಷ್ಣರಾಜ ಒಡೆಯರು

೪. ಕಂಠೀರವ ನರಸಿಂಹರಾಜ ಒಡೆಯರು

೨. ಕರ್ನಾಟಕ ಸಾಹಿತ್ಯ ಪರಿಷತ್ತಿನ ನಿರ್ಮಾಣಕ್ಕೆ ಸಹಾಯ ಮಾಡಿದ ಮಂತ್ರಿವರ್ಯರು

೧. ಕಾಂತರಾಜ ಅರಸರು

೨. ಸರ್. ಎಂ. ವಿಶ್ವೇಶ್ವರಯ್ಯ

೩. ಸರ್ ಮಿರ್ಜಾ ಇಸ್ಮಾಯಿಲ್

೩. ಪರಿಷತ್ತನ್ನು ಕಟ್ಟಿ ಬೆಳೆಸಿದ ಆದ್ಯರು

೧. ಕರ್ಪೂರ ಶ್ರೀನಿವಾಸರಾವ್

೨. ಎಚ್.ವಿ. ನಂಜುಂಡಯ್ಯ

೩. ಎಂ. ಶಾಮರಾವ್

೪. ಬೆಳ್ಳಾವೆ ವಂಕಟನಾರಣಪ್ಪ

೫. ನಂಗಪುರಂ ವೆಂಕಟೇಶ ಅಯ್ಯಂಗಾರ್

೬. ಬಿ. ಕೃಷ್ಣಪ್ಪ

(ಇವರಲ್ಲಿ ಕೆಲವು ಗ್ರಂಥಕಾರರೂ ಹೌದು)

೪. ಪ್ರಾಚೀನ ಸಂಪ್ರದಾಯದ ಘನವಿದ್ವಾಂಸರು

೧. ಪಿ.ಆರ್. ಕರಿಬಸವಶಾಸ್ತ್ರಿ

೨. ಬಿ. ಮಲ್ಲಪ್ಪ

೩. ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿ

೪. ಸೋಸಲೆ ಅಯ್ಯಾಶಾಸ್ತ್ರೀ

೫. ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ

೬. ಗರಣಿ ಕೃಷ್ಣಾಚಾರ್ಯ

೭. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ

೮. ಹೊಸಕೆರೆ ಚಿದಂಬರಯ್ಯ

೮. ಕಾನಕಾನಹಳ್ಳಿ ವರದಾಚಾರ್ಯ

೯. ಸಂತೇಕಲ್ಲಹಳ್ಳಿ ಲಕ್ಷ್ಮೀನರಸಿಂಹ ಶಾಸ್ತ್ರಿ

(ಇವರಲ್ಲಿ ಕೆಲವರು ಕವಿಗಳೂ ಹೌದು.)

೫. ಕನ್ನಡದ ಕೆಲಸಗಳಿಗೆ ಅನುಕೂಲಮಾಡಿಕೊಟ್ಟವರು

೧. ಹಸೂಡಿ ವೆಂಕಟಶಾಸ್ತ್ರಿ

೨. ಎನ್. ಎಸ್. ಸುಬ್ಬರಾವ್

೩. ಮಂಜಯ್ಯ ಹೆಗ್ಗಡೆ

೪. ಹನುಮಾನ್ ದಾಸ್

೫. ಬಿ. ಪುಟ್ಟಯ್ಯ

೬. ಚಿಕ್ಕೋಡಿ ತಮ್ಮಣಪ್ಪ

೭. ಬಿ. ಎನ್. ದಾತಾರ್

೮. ಎಸ್. ಆರ್. ಕಂಠಿ

(ಇವರಲ್ಲಿ ನಾಲ್ಕನೆಯವರು 'ಮಧುರವಾಣಿ' ಸಂಪಾದಕರು)

ಅನುಬಂಧ -೧

೬. ಈ ಶತಮಾನದ ಸಂಶೋಧಕರು, ಗ್ರಂಥಸಂಪಾದಕರು

೧. ರೆವರೆಂಡ್ ಎಫ್. ಕಿಟಲ್

೨. ಬಿ.ಎಲ್. ರೈಸ್

೩. ಆರ್ ನರಸಿಂಹಾಚಾರ್ಯ

೪. ಎಂ.ಎ. ರಾಮಾನುಜಯ್ಯಂಗಾರ್

೫. ಫ.ಗು. ಹಳಕಟ್ಟಿ

೬. ರೆವರೆಂಡ್ ಚನ್ನಪ್ಪ ಉತ್ತಂಗಿ

೭. ಹುಟ್ಲೂರು ಶ್ರೀನಿವಾಸ ಜೋಯಿಸ್

೮. ಕರ್ಲಮಂಗಲಂ ಶ್ರೀಕಂಠಯ್ಯ

೯. ಎಸ್.ಎಸ್. ಬಸವನಾಳ

೧೦. ಎಂ.ಎಸ್. ಬಸವಲಿಂಗಯ್ಯ

೭. ಈ ಶತಮಾನದ ಕೃತಿಕಾರರು

೧. ನಂದಳಿಕೆ ಲಕ್ಷ್ಮೀನಾರಣಪ್ಪ

೨. ಶಾಂತಕವಿ

೩. ಚ. ವಾಸುದೇವಯ್ಯ

೪. ಎಂ.ಎಸ್. ಪುಟ್ಟಣ್ಣ

೫. ಬಿ. ವೆಂಕಟಾಚಾರ್

೬. ಕೆರೂರು ವಾಸುದೇವಾಚಾರ್ಯ

೭. ಎಂ. ವೆಂಕಟಕೃಷ್ಣಯ್ಯ

೮. ಆಲೂರು ವೆಂಕಟರಾವ್

೯. ಪಂಜೆ ಮಂಗೇಶರಾವ್

೧೦. ಬಿ.ಎಂ. ಶ್ರೀಕಂಠಯ್ಯ

೧೧. ಟಿ.ಎಸ್. ವೆಂಕಣ್ಣಯ್ಯ

೧೨. ಎ.ಆರ್. ಕೃಷ್ಣಶಾಸ್ತ್ರೀ

೧೩. ಬೆನಗಲ್ ರಾಮರಾವ್

೧೪. ಎಂ.ಆರ್. ಶ್ರೀನಿವಾಸಮೂರ್ತಿ

೧೫. ಬಿ. ವೆಂಕೋಬರಾವ್

೧೬. ದೇವುಡು ನರಸಿಂಹಶಾಸ್ತ್ರಿ

೧೭. ದ.ಕೃ. ಭಾರದ್ವಾಜ್

೧೮. ಆರ್. ವ್ಯಾಸರಾವ್

೧೯. ಎಂ.ಎನ್. ಕಾಮತ್

೨೦. ನವರತ್ನ ರಾಮರಾವ್

೨೧. ಲಕ್ಷ್ಮಣರಾವ್ (ಹೊಯಿಸಳ)

೨೨. ಆರ್. ಕಲ್ಯಾಣಮ್ಮ

೨೩. ತೀ.ನಂ. ಶ್ರೀಕಂಠಯ್ಯ

೨೪. ಇ.ಎ. ಭಾಸ್ಕರರಾವ್

೨೫. ಬೆಳಗೆರೆ ಜಾನಕಮ್ಮ

೨೬. ಕೆ. ಗೋಪಾಲಕೃಷ್ಣರಾವ್

೮. ಮೂವರು ನಾಟಕಕಾರರು, ಇಬ್ಬರು ನಟರು, ಒಬ್ಬ ಗಮಕಿ

೧. ಬೆಳ್ಳಾವೆ ನರಹರಿಶಾಸ್ತ್ರಿ

೨. ಟಿ.ಪಿ. ಕೈಲಾಸಂ

೩. ಸಂಸ

೪. ಎ.ವಿ. ವರದಾಚಾರ್ಯ

೫. ಎಂ.ವಿ. ಸುಬ್ಬಯ್ಯ ನಾಯಿಡು

೬. ಕಳಲೆ ಸಂಪತ್ಕುಮಾರಾಚಾರ್ಯ

೯. ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿರುವ ಇಬ್ಬರು ವಂಗೀಯರು

೧. ಬಂಕೀಮಚಂದ್ರ ಚಟ್ಟೋಪಾಧ್ಯಾಯ

೨. ರವೀಂದ್ರನಥ ಠಾಕೂರ

❖❖

೪

ಅಧ್ಯಾಯ – ೪

ಪರಿಷತ್ತಿನ ದತ್ತಿನಿಧಿಗಳು ಮತ್ತು ಶಾಶ್ವತನಿಧಿಗಳು

(೧೯೧೫–೨೦೧೫)

ಒಂದು ಸಂಸ್ಥೆ ನಿರಂತರವಾಗಿ ಪ್ರತಿವರ್ಷವೂ ತಪ್ಪದೆ ಕಾರ್ಯಕ್ರಮಗಳನ್ನು ನಡೆಸಬೇಕಾದರೆ ಆ ಸಂಸ್ಥೆಯಲ್ಲಿ ಸಾಕಷ್ಟು ದತ್ತಿನಿಧಿಗಳಿರಬೇಕು. ದತ್ತಿನಿಧಿಗಳು ಕಾರ್ಯಕ್ರಮಗಳನ್ನು ನಡೆಸಲು ಜೀವಾಧಾರ.

ದತ್ತಿನಿಧಿ ಎಂದರೆ "ತಮ್ಮ ಹಿರಿಯರ ನೆನಪಿಗೆ ಅಥವಾ ತಮಗೆ ಉಪಕಾರ ಮಾಡಿದವರ ವಾರ್ಷಿಕ ಸ್ಮರಣೆಗೆ ಅಥವಾ ನಾಡು – ನುಡಿಗಳ ಬಗ್ಗೆ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಬೇಕೆಂಬ ತಮ್ಮ ಆಶಯವಿದ್ದಂತೆ, ಪರಿಷತ್ತಿನ ಸದಸ್ಯರು, ಹಿತೈಷಿಗಳು, ಸಾರ್ವಜನಿಕ ಗಣ್ಯರು, ಸಂಸ್ಥೆಗಳು ಶಾಶ್ವತ ಠೇವಣಿಯನ್ನು ಇಟ್ಟು ತಾವು ತಿಳಿಸಿದ ಪ್ರಕಾರ ಕಾರ್ಯಕ್ರಮಗಳನ್ನು ನಡೆಸಲು ವ್ಯವಸ್ಥೆ ಮಾಡುವುದು." ಹೀಗೆ ಪ್ರತಿವರ್ಷ ದತ್ತಿದಾನಿಗಳ ಆಶಯದಂತೆ ಕಾರ್ಯಕ್ರಮಗಳನ್ನು ನಡೆಸುವುದು ಒಂದು ಬಗೆ.

ದತ್ತಿನಿಧಿ ಕಾರ್ಯಕ್ರಮಗಳಲ್ಲದೆ ಪ್ರತಿವರ್ಷ ತಪ್ಪದೆ ನಡೆಸಬೇಕಾದ ವಾರ್ಷಿಕಾಧಿವೇಶನ, ಸಾಹಿತ್ಯ ಸಮ್ಮೇಳನ, ಕಾವ – ಜಾಣ – ರನ್ನ ಗಮಕ ಮುಂತಾದ ಪರೀಕ್ಷೆಗಳು ಇವೂ ಸಹ ಪ್ರತಿವರ್ಷದ ಖಾಯಂ ಕಾರ್ಯಕ್ರಮಗಳಾಗಿರುತ್ತವೆ.

ಸಾಂದರ್ಭಿಕ ಕಾರ್ಯಕ್ರಮಗಳು : ಕನ್ನಡ ಸಾಹಿತ್ಯ ಪರಿಷತ್ತು ಕಾಲಕಾಲಕ್ಕೆ ಅನೇಕ ಸಕಾಲಿಕ ಕಾರ್ಯಕ್ರಮಗಳನ್ನು ನಡೆಸುತ್ತದೆ. ಉದಾಹರಣೆಗೆ, ಸಂತಾಪ ಸೂಚಕ ಸಭೆಗಳು, ರಾಷ್ಟ್ರೀಯ ಪ್ರಶಸ್ತಿ ಪಡೆದವರಿಗೆ ಸನ್ಮಾನಗಳು, ರಜತೋತ್ಸವ, ಸುವರ್ಣೋತ್ಸವ, ವಜ್ರಮಹೋತ್ಸವ, ಅಮೃತಮಹೋತ್ಸವ, ಶತಮಾನೋತ್ಸವ ಇತ್ಯಾದಿ ಸಕಾಲಿಕ ಕಾರ್ಯಕ್ರಮಗಳು ಅಂತಾರಾಷ್ಟ್ರೀಯ ದಿನಗಳ ಕಾರ್ಯಕ್ರಮಗಳು ಇವೆಲ್ಲಾ **ಸಾಂದರ್ಭಿಕ ಕಾರ್ಯಕ್ರಮಗಳೆನಿಸುತ್ತವೆ.** ಈ ಬಗೆಯ ಕಾರ್ಯಕ್ರಮಗಳನ್ನು ಇತರ ಸಂಘ ಸಂಸ್ಥೆಗಳ ಸಂಯೋಜನೆಯೊಂದಿಗೆ ಅಥವಾ ಸಂಬಂಧಪಟ್ಟ ದಾನಿಗಳು ನೀಡುವ ಹಣದಿಂದ ಇಲ್ಲವೇ ಪರಿಷತ್ತಿನ ಅನುದಾನ ಅಥವಾ ಶಾಶ್ವತನಿಧಿಗಳಿಂದ ನಡೆಸಲಾಗುತ್ತದೆ.

ದತ್ತಿನಿಧಿಗಳು

ಹಿಂದೆ ಹೇಳಿದ ಹಾಗೆ ಪರಿಷತ್ತಿನ ಖಾಯಂ ವಾರ್ಷಿಕ ಕಾರ್ಯಕ್ರಮಗಳಿಗೆ ಮೂಲಾಧಾರವೆಂದರೆ ದತ್ತಿನಿಧಿಗಳು. ಸಾಹಿತ್ಯ ಪರಿಷತ್ತು ಪ್ರಾರಂಭವಾದಾಗ ದತ್ತಿನಿಧಿ ಯೋಜನೆ ಇರಲಿಲ್ಲ. ಕೇವಲ ದಾನಿಗಳಿಂದ ದೇಣಿಗೆ ಸಂಗ್ರಹ ಮತ್ತು ವಿವಿಧವರ್ಗಗಳ ಸದಸ್ಯರಿಂದ ಚಂದಾ ವಸೂಲಿ ಆಧಾರದ ಮೇಲೆ ಕಾರ್ಯಕ್ರಮಗಳನ್ನು ನಡೆಯುತ್ತಿದ್ದವು.

ದತ್ತಿನಿಧಿಯೋಜನೆ ಮೊದಲು ಕಾರ್ಯರೂಪಕ್ಕೆ ಬಂದದ್ದು ೧೯೩೫ರಲ್ಲಿ ಪರಿಷತ್ತಿನ ಅಧ್ಯಕ್ಷರಲ್ಲಿ ಒಬ್ಬರಾದ ಬಿ. ಎಂ. ಶ್ರೀ. ಅವರಿಂದ. ಮೊದಲ ದತ್ತಿ ಬಂದದ್ದು ಅವರಿಂದಲೆ. ಅದಾವುದೆಂದರೆ "೨೩–೭–೧೯೩೫ನೆಯ ತಾರೀಖಿನಲ್ಲಿ ಬಿ ಎಂ. ಶ್ರೀಕಂಠಯ್ಯನವರು ೧೦೦೦ ರೂಪಾಯಿಗಳನ್ನು ಗಮಕ ಕಲಾಭಿವೃದ್ಧಿಗಾಗಿ ಪರಿಷತ್ತಿನ ಮೂಲನಿಧಿಗೆ ದಾನಮಾಡಿರುತ್ತಾರೆ" ಅನಂತರ ಕೋಲಾರದ ಕೋಟೆಯಲ್ಲಿರುವ ರಿಟೈರ್ಡ್ ಕನ್ನಡ ಪಂಡಿತ ಹೆಸರಘಟ್ಟದ ಹನುಮಂತರಾವ್

ಅವರು ಪರಿಷತ್ತು ಪ್ರಾರಂಭವಾದಾಗಿನಿಂದ ಸದಸ್ಯರಾಗಿದ್ದು "ಕನ್ನಡ ನಾಡೂ ನುಡಿಯೂ ಏಳ್ಗೆಪಡೆಯಬೇಕೆಂಬ ಆಸೆ ಮಾತ್ರ ಹೆಚ್ಚಾಗಿದೆ. ತಮ್ಮಂತಹ ಮಹನೀಯರೆಲ್ಲ ಸೇರಿಮಾಡುತ್ತಿರುವ ಮಹತ್ಕಾರ್ಯಕ್ಕೆ ಅಳಿಲಭಕ್ತಿ ಮಳಲಸೇವೆ ಎಂಬಂತೆ ಏನಾದರೂ ಸೇವೆಮಾಡಬೇಕೆಂಬ ಅಂತಃಪ್ರೇರಣೆಯಿಂದ ೧೦೦ ರೂ ಕೊಡುವವನಾಗಿದ್ದೇನೆ" ಎಂದು ಬಿ.ಎಂ. ಶ್ರೀ ಅವರಲ್ಲಿ ಬಿನ್ನಹಮಾಡಿಕೊಂಡರು. ಪರಿಷತ್ತಿನ ಗಮಕ ಶಿಕ್ಷಣನಿಧಿಗೆ ಸೇರಿಸಿಕೊಂಡು ನನ್ನನ್ನು ಕೃತಕಾರ್ಯನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ ಎಂದು ತಮ್ಮ ೨೮-೬-೧೯೪೦ರ ಪತ್ರದಲ್ಲಿ ತಿಳಿಸಿದ್ದಾರೆ.

ಅನಂತರ ೩ನೆಯ ದತ್ತಿನಿಧಿ ಎಂದರೆ ಗಮಕ ಕಲಾ ಶಿಕ್ಷಣದ ತರಗತಿಗಳನ್ನು ಏರ್ಪಡಿಸಲು "ದಿವಂಗತ ಸೌ॥ ಲಕ್ಷ್ಮೀಬಾಯಿ ಅನಂತರಾವ್ ಅಸುಂಡಿ ಅವರ ಸ್ಮಾರಕನಿಧಿ"ಯಾಗಿ ಅನಂತರಾವ್ ಕೃಷ್ಣರಾವ್ ಅಸುಂಡಿ (ರಿಟೈರ್ಡ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್) ಅವರು ೧೦೦೦ರೂ ನೀಡಿದ್ದಾರೆ. "ಈ ೧೦೦೦ರೂನ ಬಡ್ಡಿಯಲ್ಲಿ ಕಲಾ ಶಿಕ್ಷಣದದ ತರಗತಿಗಳಲ್ಲಿ ಉತ್ತೀರ್ಣರಾಗಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿನಿ ಅಥವಾ ವಿದ್ಯಾರ್ಥಿಗೆ ೧೦ರೂಗಳಿಗೆ ಮೀರದಂತೆ ಒಂದು ಪಾರಿತೋಷಕವನ್ನು ಕೊಡಲು ಮತ್ತು ಶಿಕ್ಷಕರ ಸಂಭಾವನೆ ವೆಚ್ಚಕ್ಕಾಗಿ ಬಳಸಬೇಕೆಂದು" ತಿಳಿಸಿದ್ದಾರೆ. ಇವರ ಜತೆಗೆ "ಕನ್ನಡದ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಸಿದ್ಧಾಂತ ಮತ್ತು ವಿಚಾರಗಳಿಗೆ ಸಮರ್ಥಿಸಿದ ಪ್ರಕಟನೆಗೆ ಅಥವಾ ನ್ಯಾಸಬರೆಸಲು ದ್ರವ್ಯ ಬಹುಮಾನ ನೀಡಲು ೧೫೦೦ ರೂ ಮೂಲನಿಧಿ"ಯನ್ನು "ಅಸುಂಡಿ ಹುದ್ದಾರ ಕೃಷ್ಣರಾವ ಇದರ ಸ್ಮಾರಕನಿಧಿ" ಹೆಸರಿನಲ್ಲಿ ನೀಡಿದ್ದಾರೆ.

ಈ ನಿಧಿಯ ಬಡ್ಡಿಯನ್ನು ಉತ್ತಮ ರೀತಿಯಲ್ಲಿ ದತ್ತಿಯ ಉದ್ದೇಶವನ್ನು ಸಫಲಗೊಳಿಸಲು, ೪ ಜನರ ಒಂದು ಸಮಿತಿ ರಚಿಸಬೇಕೆಂದು ತಿಳಿಸಿದ್ದಾರೆ. ಅದರಲ್ಲಿ ನಿಧಿದಾನಿಗಳು, ಪರಿಷತ್ತಿನ ಅಧ್ಯಕ್ಷರು, ಹರಿದಾಸ ಸಾಹಿತ್ಯ ಮತ್ತು ಸಿದ್ಧಾಂತದಲ್ಲಿ ಪಾಂಡಿತ್ಯವನ್ನು ಪಡೆದವರು. ಪರಿಷತ್ತಿನ ಕಾರ್ಯದರ್ಶಿಯವರು ಇರಬೇಕೆಂದು ದಾನಿಗಳು ತಿಳಿಸಿದ್ದಾರೆ.

ಇದರಂತೆಯೇ ಪರಿಷತ್ತಿನ ಮೊದಲ ಮಹಿಳಾ ಕಾರ್ಯದರ್ಶಿನಿ ಆದ ಡಿ. ಚಂಪಾಬಾಯಿ ಅವರು ಮೊದಲ ಮಹಿಳಾ ದತ್ತಿ ನೀಡಿದ್ದಾರೆ. ಅವರು ಗಮಕ ಕಲೆಯ ಶಾಶ್ವತನಿಧಿಗೆ ೩೦೦ ರೂಗಳನ್ನು ಕೊಟ್ಟ ಬಗ್ಗೆ ಅವರು ಬರೆದುಕೊಟ್ಟ ದತ್ತಿದಾನ ಪತ್ರ ಹೀಗಿದೆ:

"ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಉಪಾಧ್ಯಕ್ಷರ ಸನ್ನಿಧಿಯಲ್ಲಿ – ನಮಸ್ಕಾರ ವಿಜ್ಞಾಪನೆಗಳು:

ಮಹಾಶಯರೆ,

ಕನ್ನಡ ಸಾಹಿತ್ಯ ಪರಿಷತ್ತಿನ "ಬೆಳ್ಳಿಯ ಹಬ್ಬ"ದ ಸಂದರ್ಭದಲ್ಲಿ, ಪರಿಷತ್ತು ವರ್ಷವರ್ಷವೂ ಏರ್ಪಡಿಸಿ ಬಹುವಾಗಿ ಪ್ರೋತ್ಸಾಹಿಸುತ್ತಿರುವ ಗಮಕ ಕಲೆಯ ಶಾಶ್ವತನಿಧಿಗೆಂದು ಕಿರಿಯ ಕಾಣಿಕೆಯಾದ ರೂ. ೩೦೦ ಕೊಡುವೆನೆಂದು ವ್ಯಕ್ತಪಡಿಸಲಾಯಿತಷ್ಟೆ; ಆ ಮೊಬಲಗಿನ ವಿಚಾರವಾಗಿ ಕೆಲವು ಅಂಶಗಳನ್ನು ವಿವರಿಸಲು ತಮ್ಮಲ್ಲಿ ಅವಕಾಶ ಬೇಡುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಕೇಂದ್ರದಲ್ಲಿ ಸಲಸಲವೂ ಏರ್ಪಡಿಸುವ ಗಮಕ ಕಲಾಭ್ಯಾಸದ ತರಗತಿಗೆ ಬಹುಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಸೇರುತ್ತಲಿದ್ದಾರೆ; ಗಮಕ ಕಲೆಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಪ್ರಶಸ್ತಿಪತ್ರಗಳನ್ನು ಹೊಂದುತ್ತಲಿದ್ದಾರೆ. ನಾನು ಭಕ್ತಿಗೌರವದಿಂದ ಕನ್ನಡದ ಸೇವೆಗೆಂದು ಪರಿಷತ್ತಿಗೆ ತಲುಪಿಸಲಿರುವ ಮೇಲೆ ಸೂಚಿಸಿದ ಮೊಬಲಗಿನ ಬಡ್ಡಿಯ ಹಣವನ್ನು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಕೇಂದ್ರದಲ್ಲಿ ಏರ್ಪಡಿಸುವ ಗಮಕ ಕಲೆಗಾಗಿ ವಿನಿಯೋಗವಾಗಬೇಕೆಂದು ಪ್ರಾರ್ಥಿಸುತ್ತೇನೆ. ತಾವು ಉದಾರ ಹೃದಯದಿಂದ ನನ್ನ ಬಿನ್ನಹವನ್ನು ನಡಸಿಕೊಡುವಿರೆಂದು ನಂಬಿದ್ದೇನೆ.

ಶಂಕರಪುರ, ಬೆಂಗಳೂರು — ಇಂತಿ ನಮಸ್ಕಾರ ವಿಜ್ಞಾಪನೆಗಳು

೯-೭-೧೯೪೦ — ಡಿ. ಚಂಪಾಬಾಯಿ

ಗಮಕ ಕಲಾ ಮತ್ತು ಹರಿದಾಸ ಸಾಹಿತ್ಯ ನಿಧಿಗಳಿಗೆ ಸಂಬಂಧಪಟ್ಟ ದಾನಪತ್ರಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ

ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು, ಎಂ. ಎ., ಬಿ. ಎಲ್.

ಅವರ ಸನ್ನಿಧಿಯಲ್ಲಿ–

ಕೋಲಾರದ ಕೋಟೆಯಲ್ಲಿರುವ ರಾ॥ ಕನ್ನಡ ಪಂಡಿತ ಹೆಸರಘಟ್ಟದ ಹನುಮಂತರಾವ್ ಮಾಡುವ ಬಿನ್ನಹಗಳು:

ಸ್ವಾಮಿ,

ನಾನು ಈಗ್ಗೆ ಇಪ್ಪತ್ತೈದು ವರುಷಗಳಿಂದ ಪರಿಷತ್ತಿನ ಸದಸ್ಯನಾಗಿಯೂ ಪರಿಷತ್ಪತ್ರಿಕೆಗೆ ಚಂದಾದಾರನಾಗಿಯೂ ಇರುವಷ್ಟು ಮಾತ್ರವಲ್ಲದೆ ಮತ್ತೆ ಯಾವ ವಿಧವಾದ ಭಾಷಾಸೇವೆಯನ್ನೂ ಮಾಡಿದವನಲ್ಲ. ಮಾಡುವುದಕ್ಕೂ ಅಸಮರ್ಥ.

ಕನ್ನಡ ನಾಡೂ ನುಡಿಯೂ ಏಳ್ಗೆ ಪಡೆಯಬೇಕೆಂಬ ಆಸೆ ಮಾತ್ರ ಹೆಚ್ಚಾಗಿದೆ. ತಮ್ಮಂತಹ ಮಹನೀಯರೆಲ್ಲ ಸೇರಿ ಮಾಡುತ್ತಿರುವ ಮಹತ್ಕಾರ್ಯಕ್ಕೆ "ಅಳಿಲ ಭಕ್ತಿ ಮಳಲಸೇವೆ" ಎಂಬಂತೆ ಏನಾದರೂ ಸೇವೆ ಮಾಡಬೇಕೆಂಬ ಅಂತಃಪ್ರೇರಣೆಯಿಂದ ಒಂದು ನೂರು ರೂಪಾಯಿ ಕೊಡುವವನಾಗಿದ್ದೇನೆ. ದಯೆಯಿಟ್ಟು ಸ್ವೀಕರಿಸಿ ಪರಿಷತ್ತಿನ ಗಮಕ ಶಿಕ್ಷಣ ನಿಧಿಗೆ ಸೇರಿಸಿಕೊಂಡು ನನ್ನನ್ನು ಕೃತಕಾರ್ಯನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ತಮ್ಮ ವಿಧೇಯ

ಬೆಂಗಳೂರು — ಎಚ್. (ಹೆಸರಘಟ್ಟದ) ಹನುಮಂತರಾವ್

೨೮-೬-೧೯೪೦ — ಪರಿಷತ್ತಿನ ಸಾಮಾನ್ಯ ಸದಸ್ಯ

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ

ರಾಜಸೇವಾಸಕ್ತ ಶ್ರೀ ॥ ಬಿ. ಎಂ. ಶ್ರೀಕಂಠಯ್ಯನವರ ಸಮಕ್ಷಮಕ್ಕೆ

ಗದಗಿನ ಅನಂತರಾವ್ ಕೃಷ್ಣರಾವ್ ಅಸುಂಡಿಯ ವಿಜ್ಞಾಪನೆಗಳು :

ಮಹಾಶಯರೆ,

ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ ನನ್ನ ಕೈಲಾದ ಸೇವೆಯನ್ನು ಮಾಡಬೇಕೆಂಬ ಬಯಕೆಯಿಂದ ಭಾನುವಾರ (೩೦-೬-೧೯೪೦) ಸಂಜೆ ನಡೆದ ಸಭೆಯಲ್ಲಿ ವಾಗ್ದಾನಮಾಡಿದಂತೆ ನನ್ನ ಅಲ್ಪ ಕಾಣಿಕೆಯಾದ ೩,೦೦೦ ರೂಪಾಯಿಗಳನ್ನು (ಮೂರು ಸಾವಿರ ರೂಪಾಯಿಗಳನ್ನು) ಪರಿಷತ್ತಿಗೆ ಸಮರ್ಪಿಸಲು ಇಚ್ಛಿಸುತ್ತೇನೆ. ಈ ಹಣವನ್ನು ಈ ಕೆಳಗಿನಂತೆ ಉಪಯೋಗಿಸತಕ್ಕದ್ದು: –

೧. ನನ್ನ ಪ್ರದಾತೃ ವರ್ಗದ ಸದಸ್ಯತ್ವ ಚಂದಾ — ರೂ. ೫೦೦

೨. ಕನ್ನಡದ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಸಿದ್ಧಾಂತ ಮತ್ತು ವಿಚಾರಗಳು – ಈ ಸಾಹಿತ್ಯವನ್ನು ಮೂಲರೂಪದಲ್ಲಿಯೇ ಉಳಿಯುವಂತೆ ಅಚ್ಚುಕಟ್ಟಾಗಿ ಸಂಗ್ರಹಿಸಿ ಅಚ್ಚುಹಾಕಿಸಿ ಪ್ರಕಟಿಸುವುದಕ್ಕೂ ಇದರ ಮೇಲೆ ನ್ಯಾಸಗಳನ್ನು ಬರೆಯಿಸುವುದಕ್ಕೂ ಪ್ರತಿವರ್ಷವೂ ದ್ರವ್ಯ ಬಹುಮಾನಕ್ಕಾಗಿ ಮೂಲಧನ – ಒಂದು ಸಾವಿರದ ಐದು ನೂರು ರೂಪಾಯಿಗಳು (೧,೫೦೦ ರೂಪಾಯಿ). ಇದಕ್ಕೆ **"ಅಸುಂಡಿ ಹುದ್ದಾರ ಕೃಷ್ಣರಾವ ಇವರ ಸ್ಮಾರಕ ನಿಧಿ"** ಎಂದು ಹೆಸರಿಡತಕ್ಕದ್ದು.

ರೂ. ೧೫೦೦

ಈ ಉದ್ದೇಶವನ್ನು ಉತ್ತಮರೀತಿಯಲ್ಲಿ ಸಫಲಗೊಳಿಸುವುದಕ್ಕಾಗಿ ಈ ಕೆಳಗೆ ಕಂಡ ಸದಸ್ಯರನ್ನೊಳಗೊಂಡ ಒಂದು ಸಮಿತಿ ಏರ್ಪಡತಕ್ಕದ್ದು–

(೧) ಶ್ರೀ॥ ಅನಂತರಾವ್ ಅಸುಂಡಿಯವರು.

(೨) ಪರಿಷತ್ತಿನ ಉಪಾಧ್ಯಕ್ಷರು.

(೩) ಹರಿದಾಸ ಸಾಹಿತ್ಯ ಮತ್ತು ಸಿದ್ಧಾಂತದಲ್ಲಿ ಪಾಂಡಿತ್ಯವನ್ನು ಪಡೆದ ಮಹನೀಯರೊಬ್ಬರು.

(೪) ಪರಿಷತ್ತಿನ ಕಾರ್ಯದರ್ಶಿಯವರು.

೩. ಧಾರವಾಡದಲ್ಲಿ ಗಮಕಕಲಾಶಿಕ್ಷಣದ ತರಗತಿಗಳನ್ನು ವರ್ಷಕ್ಕೊಮ್ಮೆ ಏರ್ಪಡಿಸಿ ಅದರಲ್ಲಿ ಉತ್ತೀರ್ಣರಾದವರಲ್ಲಿ ಎಲ್ಲಕ್ಕೂ ಹೆಚ್ಚಿನ ಗುಣಗಳನ್ನು ಪಡೆದ ವಿದ್ಯಾರ್ಥಿನಿಗೆ, ಅಂಥವರಿಲ್ಲದ ಪಕ್ಷದಲ್ಲಿ ಹಾಗೆ ಗುಣಗಳನ್ನು ಪಡೆದ ವಿದ್ಯಾರ್ಥಿಗೆ, ಹತ್ತು ರೂಪಾಯಿಗಳಿಗೆ ಮೀರದಂತೆ ಒಂದು ಪಾರಿತೋಷಕವನ್ನು ಕೊಡುವುದಕ್ಕೂ ಮತ್ತು ಶಿಕ್ಷಕರ ಸಂಭಾವನೆ ವೆಚ್ಚಕ್ಕಾಗಿಯೂ ಮೂಲಧನ – ಒಂದು ಸಾವಿರ ರೂಪಾಯಿಗಳು (೧,೦೦೦ ರೂಪಾಯಿ). ಈ ನಿಧಿಗೆ **"ದಿವಂಗತ ಸೌ॥ ಲಕ್ಷ್ಮೀ ಬಾಯಿ ಅನಂತರಾವ ಅಸುಂಡಿ ಇವರ ಸ್ಮಾರಕ ನಿಧಿ"** ಎಂದು ಕರೆಯತಕ್ಕದ್ದು.

ರೂ. ೧,೦೦೦

ಮೇಲಿನ ಷರತ್ತುಗಳಿಗೆ ಒಳಪಟ್ಟು ದಯಮಾಡಿ ಈ ಹಣವನ್ನು ಸ್ವೀಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ಕ್ಯಾಂಪ್) ಬೆಂಗಳೂರು — ಇಂತೀ ತಮ್ಮ

ತಾ॥ ೪–೭–೧೯೪೦ — ಅನಂತರಾವ್ ಕೃಷ್ಣರಾವ್ ಅಸುಂಡಿ

ರಿ॥ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್

೧೨–೪–೧೯೩೭ರಲ್ಲಿ ಎ. ಶೇಷಮ್ಮ ಅವರು ನೀಡಿದ ಎ. ವಿ. ಭಾಸ್ಕರರಾಯರ ಜ್ಞಾಪಕನಿಧಿ ದಾನಪತ್ರ ಹೀಗಿದೆ: ಪರಿಷತ್ತಿಗೆ ಬಂದ ಮೊದಲ ದತ್ತಿಗಳಲ್ಲಿ ಇದೊಂದು ಮಹತ್ವದ ದತ್ತಿ. ಈ ಪತ್ರದ ದಾನಪತ್ರ (ಮೂಲರೂಪ) ಹೀಗಿದೆ:

ಗಮಕ ಕಲೆಯ ಅಭಿವೃದ್ಧಿಗಾಗಿ ದಾನ

೨೩–೭–೧೯೩೫ನೆಯ ತಾರೀಖಿನಲ್ಲಿ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ೧,೦೦೦ ರೂಪಾಯಿಗಳನ್ನು ಗಮಕ ಕಲಾಭಿವೃದ್ಧಿಗಾಗಿ ಪರಿಷತ್ತಿನ ಮೂಲನಿಧಿಗೆ ದಾನಮಾಡಿರುತ್ತಾರೆ.

ಇ.ಎ. ಭಾಸ್ಕರರಾಯರ ಜ್ಞಾಪಕ ನಿಧಿ

ದಾನಪತ್ರ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಉತ್ತಮ ತೆರದ ವಿದ್ಯಾರ್ಥಿಯಾಗಿದ್ದು, ೧೯೨೯ನೆಯ ಇಸವಿಯಲ್ಲಿ ಬಿ. ಎ. ಪದವಿಯನ್ನು ಪಡೆದು, ಭಾಷಾವಿಜ್ಞಾನದಲ್ಲಿ ಪ್ರೌಢಪಾಂಡಿತ್ಯವನ್ನು ಸಂಪಾದಿಸುವುದಕ್ಕಾಗಿ ಜರ್ಮನಿ ದೇಶಕ್ಕೆ ತೆರಳಿ ಅಲ್ಲಿ ತಾ॥ ೫–೧–೧೯೩೪ರಲ್ಲಿ ತಮ್ಮ ೨೭ನೆಯ ವರ್ಷದಲ್ಲಿ ಅಕಾಲಮೃತ್ಯುವಿಗೆ ತುತ್ತಾದ ಶ್ರೀಮಾನ್ ಇ.ಎ. ಭಾಸ್ಕರರಾಯರು

ಚಿಕ್ಕಂದಿನಿಂದಲೂ ತಮ್ಮ ತಾಯ್ನುಡಿಯಾದ ಕನ್ನಡದಲ್ಲಿ ಮಮತೆ ಇಟ್ಟುಕೊಂಡು ಅದರ ಏಳಿಗೆಗಾಗಿ ದುಡಿಯುತ್ತಿದ್ದು ತೋರಿಸಿದ ಸ್ವಭಾಷಾ ಪ್ರೇಮದ ಜ್ಞಾಪಕಾರ್ಥವಾಗಿ, ಅವರ ತಾಯಿ ಶ್ರೀಮತಿ ಎ. ಶೇಷಮ್ಮನವರು ಬೆಂಗಳೂರಿನಲ್ಲಿರುವ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಸಾಹಿತ್ಯ ಸೇವೆಯ ಏರ್ಪಾಟನ್ನು ನಡಸಬೇಕೆಂದು ಸಂಕಲ್ಪ ಮಾಡಿ, ಆ ಬಗ್ಗೆ ತಮ್ಮ ಮೈಸೂರು ಸರ್ಕಾರದ ತಾ॥ ೨೧-೨-೧೯೨೩ರ ೩೧೩೦೪ನೆಯ ನಂಬರುಳ್ಳ ಮತ್ತು ೧,೦೭೮ ರೂಪಾಯಿಗಳ ಬೆಲೆಯುಳ್ಳ ವಿಮಾದಾಯ ಪತ್ರವನ್ನು (Mysore State Life Insurance Policy No. 31304 dated the 21st of Febuary of 1923 for Rs. 1,078) ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ದಾನವಾಗಿ ಕೊಟ್ಟಿರುತ್ತಾರೆ.

೨. ಈ ವಿಮಾದಾಯ ಪತ್ರವು ೧೯೪೬ನೆಯ ಇಸವಿ ಜನವರಿ ತಿಂಗಳ ಕಡೆಯಲ್ಲಿ (ಅಥವಾ ಆ ಪತ್ರದಲ್ಲಿ ಹೇಳಿರುವಂತೆ ಆ ತಾರೀಖಿಗಿಂತ ಮುಂಚಿತವಾಗಿ) ಪರಿಪಕ್ವವಾಗುವುದಾಗಿರುತ್ತದೆ. ಅದುವರೆಗೂ ಆ ಬಗ್ಗೆ ಸಲ್ಲಬೇಕಾದ ಕಂತುಗಳನ್ನು ಶ್ರೀಮತಿ ಶೇಷಮ್ಮನವರು ತಾವೇ ಮೈಸೂರು ಸರ್ಕಾರದ ಜೀವವಿಮಾ ಕಾರ್ಯದರ್ಶಿಯವರಿಗೆ ಸಲ್ಲಿಸುವಂತೆ ಒಪ್ಪಿಕೊಂಡಿರುತ್ತಾರೆ.

೩. ಈ ವಿಮಾ ಪತ್ರದಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ದೊರೆಯುವ ೧, ೦೭೮ ರೂಪಾಯಿಗಳ ಮತ್ತು ಅದಕ್ಕೆ ಸಂಬಂಧಪಟ್ಟಂತೆ ದೊರೆಯುವ ಬೋನಸ್ಸು ಮೊದಲಾದ ಹಣಗಳ ಮೊಬಲಗನ್ನು ಕ॥ ಸಾ॥ ಪರಿಷತ್ತು "ಶ್ರೀ ॥ ಇ. ಎ. ಭಾಸ್ಕರರಾಯ ಜ್ಞಾಪಕ ನಿಧಿ" ಎಂಬ ಹೆಸರಿನಿಂದ ಒಂದು ಶಾಶ್ವತ ನಿಧಿಯಾಗಿರಿಸಕೊಂಡು, ಅದರ ಮೇಲೆ ಬರುವ ಬಡ್ಡಿ ಮೊದಲಾದ ಮೇಲು ವರಮಾನವನ್ನು ಮಾತ್ರ ಈ ಮುಂದೆ ಹೇಳಿರುವಂತೆ ವಿನಿಯೋಗಿಸತಕ್ಕದ್ದು.

೪. ಈ ಜ್ಞಾಪಕ ನಿಧಿಯ ಉದ್ದೇಶಗಳನ್ನು ಕ॥ ಸಾ॥ ಪರಿಷತ್ತು ಈ ಕೂಡಲೆ ಕೈಕೊಂಡು ನಡೆಸಲು ಅನುಕೂಲಿಸುವಂತೆ, ಶ್ರೀಮತಿ ಶೇಷಮ್ಮನವರು ಈಗಿನಿಂದ ಮೇಲ್ಕಂಡ ವಿಮಾ ಪತ್ರದ ಹಣ ಪರಿಷತ್ತಿನ ಕೈ ಸೇರುವವರೆಗೂ ಪ್ರತಿವರ್ಷವೂ ಪರಿಷತ್ತಿಗೆ ಇಪ್ಪತ್ತು ರೂಪಾಯಿಗಳನ್ನಾಗಲಿ ಅಥವಾ ಒಂದು ಪದಕವನ್ನಾಗಲಿ ಕೊಡಲೊಪ್ಪಿರುತ್ತಾರೆ.

೫. (i) ಹೀಗೆ ಶ್ರೀ ॥ ಎ. ಶೇಷಮ್ಮನವರು ವರ್ಷೇ ವರ್ಷೇ ಸಲ್ಲಿಸುವ ಹಣವನ್ನು (ಅಥವಾ ಪದಕವನ್ನು) ಮತ್ತು ಆ ಬಳಿಕ ಅವರ ವಿಮಾ ಪತ್ರದ ಹಣದಿಂದ (ಶ್ರೀ ಇ. ಎ. ಭಾಸ್ಕರರಾಯ ಜ್ಞಾಪಕ ನಿಧಿಯಿಂದ) ಬರುವ ಬಡ್ಡಿ ಮೊದಲಾದ ಮೇಲಾದಾಯವನ್ನು, ಕರ್ನಾಟಕ ಸಾಹಿತ್ಯ ವಿಚಾರದ ಪ್ರಬಂಧ (Esssay) ರೂಪವಾದ ಅಥವಾ ಸಣ್ಣ ಕಥೆಯ ರೂಪವಾದ ಲೇಖನಗಳಲ್ಲಿ ಅತ್ಯುತ್ತಮವೆಂದು ನಿಶ್ಚಿತವಾಗುವ ಲೇಖನಗಳೆರಡರ (ಅಥವಾ ಒಂದರ) ಲೇಖಕರಿಗೆ ಪಾರಿತೋಷಿಕವಾಗಿ ಕೊಡಲು ವಿನಿಯೋಗಿಸತಕ್ಕದ್ದು. (ii) ಈ ಎರಡು ಪಾರಿತೋಷಿಕಗಳಲ್ಲಿ ಮೊದಲನೆಯದು ಪದಕರೂಪದಲ್ಲಿಯೂ ಎರಡನೆಯದು ಪುಸ್ತಕರೂಪದಲ್ಲಿಯೂ ಇರತಕ್ಕದ್ದು. (iii) ಈ ಪಾರಿತೋಷಕ ವಿನಿಯೋಗದ ಕ್ರಮವು ಕೂಡಿದಮಟ್ಟಿಗೂ ಶ್ರೀಮತಿ ಎ. ಶೇಷಮ್ಮನವರು ತಮ್ಮ ತಾ॥ ೧೦-೪-೧೯೩೭ರ ಕಾಗದದಲ್ಲಿ ತಿಳಿಸಿರುವ ರೀತಿಯನ್ನು ಅನುಸರಿಸತಕ್ಕದ್ದು. (iv) ಆ ಕಾಗದದಲ್ಲಿ ಹೇಳಿರುವಂತೆ ಲೇಖನಗಳ ಯೋಗ್ಯತೆ ನಿರ್ಣಯಮಾಡುವ ಸಮಿತಿಯಲ್ಲಿ, ಪರಿಷತ್ತಿನ ಕಾ॥ ನಿ॥ ಮಂಡಲಿ ನಿಯಮಿಸುವ ನಿರ್ಣಾಯಕರ ಜೊತೆಗೆ ಶ್ರೀಮತಿ ಎ. ಶೇಷಮ್ಮನವರ ತಂಗಿಯರ ಹೆಣ್ಣುಮಕ್ಕಳು ಶ್ರೀಮತಿ ಎ. ಶಾರದಮ್ಮ ಆರ್. ಡೇನಿಯಲ್, ಬಿ. ಎಸ್‌ಸಿ., ಬಿ.ಟಿ. ಅವರನ್ನಾಗಲಿ ಅಥವಾ ಅವರ ತಂಗಿಯರಲ್ಲೊಬ್ಬರನ್ನಾಗಲಿ ಸೇರಿಸಿಕೊಳ್ಳಬಹುದು. (v) ಈ ಪಾರಿತೋಷಿಕ ವಿಚಾರಕ್ಕೆ ಸಂಬಂಧಪಟ್ಟ ಉಪನಿಬಂಧನೆಗಳನ್ನು ಕಾ॥ ನಿ॥ ಮಂಡಲಿ ಮಾಡಿಕೊಳ್ಳತಕ್ಕದ್ದು. (vi)ಪದಕ ಪಡೆಯಲು ಅರ್ಹವಾದ ಲೇಖನವಾವುದೂ ನಿರ್ಣಾಯಕ ಸಮಿತಿಗೆ ಕಂಡುಬಾರದೆ ಇರುವ ಪಕ್ಷದಲಿ, ಆ ಸಲದ ಲೇಖನಗಳಲ್ಲಿ ಯಾವುದಕ್ಕಾದರೂ ಇತರ ಬಹುಮಾನಗಳನ್ನು ಕೊಡುವಂತೆ ಸಮಿತಿ ಶಿಫಾರಸು ಮಾಡಬಹುದು.

೬. ಹೀಗೆ ಕೊಡಲಾಗುವ ಪದಕವನ್ನು, ಪಾರಿತೋಷಿಕವನ್ನು ಅಥವಾ ಇತರ ಬಹುಮಾನವನ್ನು ಪರಿಷತ್ತು ನಡಸುವ ವಿಶೇಷ ಸಾಹಿತ್ಯೋತ್ಸವದ ಸಂದರ್ಭದಲ್ಲಾಗಲಿ ಅಥವಾ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಾಗಲಿ ಸಾರ್ವಜನಿಕ ಸಭೆಯಲ್ಲಿ ಕೊಡತಕ್ಕದ್ದು.

೭. ಹಾಗೆ ಕೊಡುವ ಪದಕ ಪಾರಿತೋಷಿಕ ಮೊದಲಾದವುಗಳಲ್ಲಿ ಶ್ರೀ ॥ ಇ. ಎ. ಭಾಸ್ಕರರಾಯರವರ ಹೆಸರನ್ನು ಕಾಣಿಸತಕ್ಕದ್ದು.

೮. ಶ್ರೀ ॥ ಇ. ಎ. ಭಾಸ್ಕರರಾಯರವರ ಭಾವಚಿತ್ರವನ್ನು ಪರಿಷನ್ಮಂದಿರದಲ್ಲಿ ಪ್ರಕಾಶವಾಗಿ ಇರಿಸತಕ್ಕದ್ದು.

೯. ಯಾವ ವರ್ಷದಲ್ಲಾದರೂ ಯಾವ ಕಾರಣದಿಂದಲಾದರೂ ಮೇಲೆ ಹೇಳಿದಂತೆ ಪದಕ ಪಾರಿತೋಷಿಕ ಮೊದಲಾದುವನ್ನು ಕೊಡದಿದ್ದರೆ ಅದಕ್ಕೆ ಸಂಬಂಧಪಟ್ಟ ವೆಚ್ಚದ ಹಣವನ್ನು ನಿಧಿಯ ಮೂಲದ್ರವ್ಯಕ್ಕೆ ಸೇರಿಸತಕ್ಕದ್ದು.

೧೦. ಶ್ರೀ ॥ ಭಾಸ್ಕರರಾಯರ ಜ್ಞಾಪಕ ನಿಧಿಯ ಮೂಲದ್ರವ್ಯವನ್ನು ಪರಿಷತ್ತು ಇತರ ಯಾವ ವೆಚ್ಚಕ್ಕಾಗಿಯೂ ಮುಟ್ಟತಕ್ಕದ್ದಲ್ಲ.

೧೧. ಶ್ರೀ ॥ ಭಾಸ್ಕರರಾಯ ಜ್ಞಾಪಕ ನಿಧಿಯ ಲೆಕ್ಕದ ವಿವರಗಳನ್ನು ಪರಿಷತ್ತು ತನ್ನ ವಾರ್ಷಿಕ ವರದಿಯಲ್ಲಿ ತೋರಿಸತಕ್ಕದ್ದು; ಮತ್ತು ಆ ವಿವರಗಳನ್ನೂ ಈ ನಿಧಿಯ ಆಡಳಿತಕ್ಕೆ ಸಂಬಂಧಪಟ್ಟ ಇತರ ಅಂಶಗಳನ್ನೂ ಶ್ರೀಮತಿ ಎ. ಶೇಷಮ್ಮನವರಿಗೆ ತಿಳಿಯಪಡಿಸತಕ್ಕದ್ದು.

೧೨. ಈ ಜ್ಞಾಪಕ ನಿಧಿಯ ಆಡಳಿತದ ನಿಯಮಗಳಲ್ಲಿ ಬದಲಾವಣೆಗಳೇನಾದರೂ ಆಗಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಾ ॥ ನಿ॥ ಮಂಡಲಿಗೆ ತೋರಿದರೆ, ಅಂಥಾ ಬದಲಾವಣೆಗಳನ್ನು ಮಾಡಿಕೊಳ್ಳಲು ಕಾರ್ಯನಿರ್ವಾಹಕ ಮಂಡಲಿಗೆ ಅಧಿಕಾರವಿರುತ್ತದೆ. ಆದರೆ ಹೀಗೆ ಬದಲಾವಣೆ ಮಾಡುವ ಸಂದರ್ಭದಲ್ಲಿ ಕಾ॥ ನಿ॥ ಮಂಡಲಿ ಕೂಡಿದಮಟ್ಟಿಗೂ ಶ್ರೀಮತಿ ಎ. ಶೇಷಮ್ಮನವರ ಅಭಿಪ್ರಾಯವನ್ನು ತಿಳಿದುಕೊಂಡು ಅದನ್ನು ಪರ್ಯಾಲೋಚಿಸಿದಲ್ಲದೆ ತೀರ್ಮಾನ ಮಾಡಲಾಗುವುದು.

೧೨-೪-೧೯೩೭ (ರುಜು) **ಎ. ಶೇಷಮ್ಮ**

(ಈ ಮೂರು ದಾನಪತ್ರಗಳು ೧೯೪೦ರ ನಿಬಂಧನೆಗಳ ಪುಸ್ತಕದಲ್ಲಿ ಅಚ್ಚಾಗಿದೆ)

ದತ್ತಿನಿಧಿಗಳ ಇಂದಿನ ಸ್ಥಿತಿ

೧೯೭೦ರಲ್ಲಿ ತಿರುಮಲೆ ರಾಜಮ್ಮನವರು ಇಟ್ಟ ದಿ॥ ಜಯಲಕ್ಷ್ಮಿ ಸ್ಮಾರಕದತ್ತಿನಿಧಿ ೫೦೦ರೂ. ಪಂಕಜಮ್ಮ ಮಾಸ್ತಿ ವೆಂಕಟೇಶ ಅಯ್ಯಂಗಾರ್ ದತ್ತಿನಿಧಿ ೩೦೦ ರೂ. ಭಾಗೀರಥಮ್ಮ ದತ್ತಿನಿಧಿ ೨೫೦ರೂ ಡಿ. ಚಂಪಾಬಾಯಿ ದತ್ತಿನಿಧಿ ೩೦೦ ಇತ್ಯಾದಿ. ಈ ಹಲವು ನೂರುಗಳ ದತ್ತಿನಿಧಿಗಳಲ್ಲಿ ಇಂದು ಯಾವ ಬಗೆಯ ಕಾರ್ಯಕ್ರಮವನ್ನು ನಡೆಸಲು ಸಾಧ್ಯವಿಲ್ಲ. ದತ್ತಿನಿಧಿಗಳ ಆಶಯದಂತೆ ಕಾರ್ಯಕ್ರಮ ಮಾಡಲೂ ಆಗುವುದಿಲ್ಲ.

ಅದಕ್ಕಾಗಿ ಅಲ್ಪಮೊತ್ತದ ಸಮಾನಾಶಯದ ದತ್ತಿನಿಧಿಗಳನ್ನು ಗುಂಪುಮಾಡಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಉದಾಹರಣೆಗೆ ಹರಿದಾಸನಿಧಿಗಳನ್ನು ಹಲವನ್ನು ಒಂದುಮಾಡಿ ಒಂದು ಕಾರ್ಯಕ್ರಮ ಇತ್ಯಾದಿ.

ಇನ್ನು ದತ್ತಿನಿಧಿ ಕಾರ್ಯಕ್ರಮ ಯಾವ ವರ್ಷನಡೆಯುವುದಿಲ್ಲವೋ ಆ ವರ್ಷದ ದತ್ತಿನಿಧಿ ಬಡ್ಡಿಯನ್ನು ಮೂಲದತ್ತಿನಿಧಿ ಹಣಕ್ಕೆ ಸೇರಿಸಲಾಗುತ್ತದೆ. ಹೀಗಾಗಿ ಮೂಲದತ್ತಿನಿಧಿ ಹಣ ಹೆಚ್ಚಿದ್ದರೂ ಅದು ಅಲ್ಪಮೊತ್ತವಾದ ಕಾರಣ ಎಷ್ಟೋ ದತ್ತಿನಿಧಿಗಳ ಕಾರ್ಯಕ್ರಮಗಳನ್ನು ಪ್ರತ್ಯೇಕವಾಗಿ ಮಾಡಲು ಸಾಧ್ಯವಾಗುತ್ತಿಲ್ಲ.

ದತ್ತಿದಾನಿಗಳಿಗೆ ದತ್ತಿಮೊತ್ತ ಹೆಚ್ಚಿಸಲು ಪತ್ರಗಳನ್ನು ಬರೆದರೆ ಕೆಲವರನ್ನು ಬಿಟ್ಟರೆ ಬಹಳಷ್ಟು ಜನ ಸ್ಪಂದಿಸಿಲ್ಲ. ಹೀಗೆ ದತ್ತಿನಿಧಿಗಳ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಷತ್ತಿನ ಅಧ್ಯಕ್ಷರಾಗಿದ್ದು ಗೊ.ರು. ಚನ್ನಬಸಪ್ಪನವರು ಪರಿಷತ್ತಿನ ಸಿಬ್ಬಂದಿಯಲ್ಲಿದ್ದ ದಿ॥ ಕೆ. ಶಿವರಾಮಯ್ಯನವರ ಮೂಲಕ **ಕನ್ನಡ ಸಾಹಿತ್ಯ ಪರಿಷತ್ತು – ಸಾಹಿತ್ಯ ದತ್ತಿಗಳು** ಎಂಬ

ಪುಸ್ತಕವನ್ನು ೧೯೬೫ರಲ್ಲಿ ಹೊರತಂದು ಇದರಲ್ಲಿ ತಮಗೆ ದಾನಿಗಳು ತೋಚಿದಂತೆ ಪತ್ರಬರೆದು ಅಗತ್ಯವಾದ ವಿವರಗಳನ್ನು ನೀಡದಿರುವುದನ್ನು ತಪ್ಪಿಸಲು ಮಾದರಿ ದತ್ತಿನಿಧಿದಾನ ಪತ್ರವನ್ನು ಸಿದ್ಧಪಡಿಸಿದರು. ಅದಕ್ಕೆ ಸಂಬಂಧಿಸಿದಂತೆ ದತ್ತಿನಿರ್ವಹಣಾ ನಿಯಮಗಳ್ನು ದತ್ತಿನಿಯಮಗಳನ್ನು ರೂಪಿಸಿದರು. ಅವುಗಳ ಜತೆಗೆ ತಮ್ಮ ಕಾಲದವರೆಗೆ ಬಂದಿರುವ ದತ್ತಿಗಳನ್ನೆಲ್ಲಾ ಜಿಲ್ಲಾವಾರು ಹಂಚಿಕೆ ಮಾಡಿ ಪ್ರಕಟಿಸಿದರು. ಪ್ರತಿ ದತ್ತಿಯ ಬಗ್ಗೆ (೧) ಕ್ರಮಸಂಖ್ಯೆ, (೨) ದತ್ತಿ ದಾಖಲೆ ಪುಸ್ತಕದಲ್ಲಿ ಇರುವಂತೆ ದತ್ತಿ ಸಂಖ್ಯೆ (೩) ದತ್ತಿ ಹೆಸರು (೪) ದಾನಿಗಳ ಹೆಸರು ವಿಳಾಸ (೫) ದತ್ತಿಮೊತ್ತ (೬) ದತ್ತಿನೀಡಿದ ದಿನಾಂಕ (೭) ದಾನಿಗಳ ಆಶಯ (ಯಾವ ಬಗೆ ಕಾರ್ಯಕ್ರಮ ನಡೆಸಬೇಕು) (೮) ವಿಶೇಷಸೂಚನೆಗಳು ನಿರ್ದಿಷ್ಟವಾಗಿ ದಾನಿಗಳು ಸೂಚಿಸಿದ ಷರತ್ತುಗಳು ಈ ಕಾಲಂಗಳಲ್ಲಿ ಸಮಾನ ದತ್ತಿ ವಿವರಗಳನ್ನು ಮೊದಲಬಾರಿಗೆ ಪುಸ್ತಕರೂಪದಲ್ಲಿ ಪ್ರಕಟಿಸಿದರು.

ಈ ದತ್ತಿಪಟ್ಟಿಯನ್ನು ೩೧-೩-೨೦೧೫ರವರೆಗೆ ಪರಿಷತ್ತಿಗೆ ಬಂದಿರುವ ದತ್ತಿಗಳ ಸಮಗ್ರ ಪಟ್ಟಿಯನ್ನು ದತ್ತಿನಿಧಿ ನಿಯಾಮವಳಿಯನ್ನು ದತ್ತಿನಿರ್ವಹಣಾ ರೀತಿಯನ್ನು ಕೆಲವು ದಾನಪತ್ರಗಳ ಮಾದರಿಗಳನ್ನು ಈ ಮುಂದೆ ಕೊಟ್ಟಿದೆ. ಈ ಸಂದರ್ಭದಲ್ಲಿ ದತ್ತಿನಿರ್ವಹಣೆ ಬಗ್ಗೆ ನಿಯಾಮಾವಳಿ ರೂಪಿಸಲಾಗಿದೆ.

ದತ್ತಿ ನಿರ್ವಹಣಾ ನಿಯಮಗಳು

೧. ದಾನಿಗಳಿಂದ ಬರುವ ದತ್ತಿ ಹಣವನ್ನು ಅಧಿಕೃತ ಬ್ಯಾಂಕ್ ಅಥವಾ ಹೆಚ್ಚಿನ ಬಡ್ಡಿ ದೊರೆಯುವ ಸಂದರ್ಭವಿದ್ದಲ್ಲಿ ಸರ್ಕಾರದಿಂದ ರಚಿತಗೊಂಡ ನಿಗಮಗಳಲ್ಲಿ ಶಾಶ್ವತ ಠೇವಣಿಯಲ್ಲಿ ತೊಡಗಿಸಬೇಕು.

೨. ದತ್ತಿ ಠೇವಣಿಯಿಂದ ಬರುವ ವಾರ್ಷಿಕ ಬಡ್ಡಿಯನ್ನು ಮಾತ್ರ ದಾನಿಗಳ ಆಶಯದ ಸಾಹಿತ್ಯ ಕಾರ್ಯಕ್ರಮಕ್ಕೆ ಬಳಸಬೇಕು, ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

೩. ದಾನದ ಮೂಲನಿಧಿಯನ್ನು ಯಾವ ಕಾರಣದಿಂದಲೂ ಬಳಸತಕ್ಕದ್ದಲ್ಲ.

೪. ಅನಿವಾರ್ಯ ಕಾರಣಗಳಿಂದ ಒಂದು ವರ್ಷ ದತ್ತಿ ಕಾರ್ಯಕ್ರಮ ನಡೆಯದಿದ್ದಲ್ಲಿ ಆ ಬಡ್ಡಿ ಹಣವನ್ನು ಸಂಬಂಧಪಟ್ಟ ದತ್ತಿಯ ಮೂಲನಿಧಿಗೇ ಸೇರಿಸಬೇಕು. ಇಲ್ಲವೇ ಮಾರನೆಯ ವರ್ಷ ಎರಡೂ ವರ್ಷದ ಬಡ್ಡಿ ಸೇರಿಸಿ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ನಡೆಸಬೇಕು.

೫. ದತ್ತಿ ಕಾರ್ಯಕ್ರಮಗಳನ್ನು ದಾನಿಗಳು ತಮ್ಮ ದಾನ ಪತ್ರದಲ್ಲಿ ತಿಳಿಸುವಂತೆಯೇ ನಡೆಸತಕ್ಕದ್ದು. ತೀರ ಅನಿವಾರ್ಯ ಸಂದರ್ಭಗಳಿದ್ದಲ್ಲಿ ದಾನಿಗಳಿಗೆ ತಿಳಿಸಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

೬ ಕಾರ್ಯಕ್ರಮ ಎಲ್ಲೇ ನಡೆಯಲಿ, ಯಾವಾಗಲೆ ನಡೆಯಲಿ, ಸಂಬಂಧಪಟ್ಟ ದಾನಿಗಳಿಗೆ ಕನಿಷ್ಠ ೧೦ ಕರೆಯೋಲೆಗಳು ಹೋಗಬೇಕು; ಕರೆಯೋಲೆಯನ್ನು ಕಡ್ಡಾಯವಾಗಿ ಮುದ್ರಿಸಬೇಕು.

೭ ದತ್ತಿ ಕಾರ್ಯಕ್ರಮ ನಡೆಯುವಾಗ ಕಾರ್ಯನಿರ್ವಾಹಕರು ದತ್ತಿ ದಾನಿಗಳ ಪರಿಚಯ, ದತ್ತಿಯ ಆಶಯ ಮೊದಲಾದವನ್ನು ಸಭೆಗೆ ತಿಳಿಸಬೇಕು.

೮. ಕಾರ್ಯಕ್ರಮ ನಂತರ ಪರಿಷತ್ತಿಗೆ ಒಂದು ಸಂಕ್ಷಿಪ್ತ ವರದಿಯನ್ನು, ಅದರ ಒಂದು ಪ್ರತಿಯನ್ನು ದಾನಿಗಳಿಗೂ ಕಳುಹಿಸಬೇಕು.

೯. ಆಯಾ ವರ್ಷ ನಡೆದ ದತ್ತಿ ಕಾರ್ಯಕ್ರಮಗಳ ವಿವರಗಳನ್ನು (ದತ್ತಿ ಹೆಸರು, ಕಾರ್ಯಕ್ರಮ ನಡೆದ ಸ್ಥಳ ಹಾಗೂ ದಿನಾಂಕ, ಉಪನ್ಯಾಸ ವಿಷಯ, ಉಪನ್ಯಾಸಕರ ಹೆಸರು ಇತ್ಯಾದಿ) ಪರಿಷತ್ತಿನ ವಾರ್ಷಿಕ ವರದಿಯಲ್ಲಿ ತಪ್ಪದೆ ಪ್ರಕಟಿಸತಕ್ಕದ್ದು.

೧೦. ದಾನಿಗಳು ನಿರ್ದಿಷ್ಟ ವಿಷಯ, ಸ್ಥಳ, ದಿನಾಂಕಗಳನ್ನು ತಿಳಿಸಿದ ಸಂದರ್ಭದಲ್ಲಿ ವಿನಾ ಉಳಿದಂತೆ ದತ್ತಿ ಕಾರ್ಯಕ್ರಮಗಳನ್ನು ರಾಜ್ಯದ ಬೇರೆಬೇರೆ ಕಡೆ ನಡೆಸುವುದು.

೧೧. ಪ್ರತಿಯೊಂದು ತಾಲ್ಲೂಕಿನಲ್ಲಿ ಸಂಗ್ರಹವಾದ ದತ್ತಿಗಳ ಸಂಖ್ಯೆಯಷ್ಟು ಕಾರ್ಯಕ್ರಮಗಳನ್ನು ಆ ತಾಲೂಕಿಗೇ ನೀಡಬೇಕು. ಆ ತಾಲ್ಲೂಕಿಗಾಗಿ ಬೇರೆ ಕಡೆಯಿಂದ ಬಂದ ದತ್ತಿಗಳನ್ನು ಆ ತಾಲ್ಲೂಕಿನ ಲೆಕ್ಕಕ್ಕೇ ಸೇರಿಸಬೇಕು.

೧೨. ವರ್ಷಾರಂಭದಲ್ಲೇ ಪರಿಷತ್ತಿನ ಪದಾಧಿಕಾರಿಗಳು ತಜ್ಞರ ಸಮಿತಿ ಸಲಹೆಯಂತೆ ದತ್ತಿ ಕಾರ್ಯಕ್ರಮಗಳ ಒಂದು ವೇಳಾಪಟ್ಟಿ ತಯಾರಿಸಿ ಜಿಲ್ಲಾ ಘಟಕಗಳಿಗೆ ನೀಡಬೇಕು.

೧೩. ಜಿಲ್ಲಾ ಘಟಕದ ಅಧ್ಯಕ್ಷರುಗಳು ಆ ವೇಳಾಪಟ್ಟಿಗೆ ಅನುಗುಣವಾಗಿ ತಮ್ಮ ವ್ಯಾಪ್ತಿಯ ತಾಲ್ಲೂಕು ಘಟಕಗಳ ಮೂಲಕ ಅಥವಾ ನೇರವಾಗಿ ದತ್ತಿ ಕಾರ್ಯಕ್ರಮ ನಡೆಸಬೇಕು.

೧೪. ದತ್ತಿ ಉಪನ್ಯಾಸಗಳಿಗೆ ಸಂಬಂಧಪಟ್ಟ ವಿಷಯತಜ್ಞರನ್ನು ಆಯಾ ಜಿಲ್ಲಾ ಅಧ್ಯಕ್ಷರೇ ಆರಿಸಿಕೊಳ್ಳಬೇಕು.

೧೫. ದತ್ತಿನಿಧಿಯಲ್ಲಿ ಸ್ಪರ್ಧೆಗಳನ್ನು ನಡೆಸಬೇಕಿದ್ದಲ್ಲಿ ಅವನ್ನು ಕೇಂದ್ರ ಪರಿಷತ್ತೇ ನೇರವಾಗಿ ಅಥವಾ ಯಾವುದಾದರೂ ಜಿಲ್ಲಾ ಘಟಕಗಳ ಮೂಲಕ ನಡೆಸುತ್ತದೆ.

೧೬. ಹಣಕಾಸಿನ ಅನುಕೂಲವಿದ್ದಲ್ಲಿ ಜಿಲ್ಲೆಯಲ್ಲಿ ನಡೆಯುವ ಎಲ್ಲ ದತ್ತಿ ಉಪನ್ಯಾಸಗಳ ಸಂಗ್ರಹವನ್ನು ಒಂದು ಪುಸ್ತಕರೂಪದಲ್ಲಿ ಆಯಾ ಜಿಲ್ಲಾ ಘಟಕಗಳೇ ಹೊರತರಬಹುದು.

೧೭. ದತ್ತಿ ಕಾರ್ಯಕ್ರಮದ ಬಗ್ಗೆ ಸರಿಯಾದ ಪ್ರಚಾರ ನೀಡಿ ಸಾಧ್ಯವಾದಷ್ಟು ಹೆಚ್ಚು ಜನ ಕಾರ್ಯಕ್ರಮದ ಲಾಭ ಪಡೆಯುವಂತಾಗಬೇಕು. ಮತ್ತು ನಡೆದ ಕಾರ್ಯಕ್ರಮದ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ದೊರಕಿಸಬೇಕು.

೧೮. ನಿರ್ಧಾರಿತ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ನಡೆಸಬೇಕೆಂದು ದಾನಿಗಳು ಅಪೇಕ್ಷೆಪಟ್ಟಲ್ಲಿ ಅದಕ್ಕಾಗಿ ಆಗುವ ಹೆಚ್ಚಿನ ವೆಚ್ಚವನ್ನು ದಾನಿಗಳಿಂದಲೇ ಪಡೆಯಬೇಕು.

೧೯. ದತ್ತಿನಿಧಿ ಸಂಗ್ರಹದ ಬಗ್ಗೆ ಕೇಂದ್ರ ಕಾರ್ಯಾಲಯದಲ್ಲಿ ಪ್ರತಿಯೊಂದು ಜಿಲ್ಲೆಗೂ ಪ್ರತ್ಯೇಕ ದಾಖಲೆ ಪುಸ್ತಕವಿರುತ್ತದೆ. ಆ ಪುಸ್ತಕದಲ್ಲಿ ದತ್ತಿಯ ಕ್ರಮಸಂಖ್ಯೆ, ದಾನಿಗಳ ಹೆಸರು ಮತ್ತು ವಿಳಾಸ, ದಾನದ ಮೊತ್ತ, ಅದರಿಂದ ಬರುವ ಬಡ್ಡಿ, ದಾನಿಗಳ ಆಶಯ, ಕಾರ್ಯಕ್ರಮ ನಡೆಯಬೇಕಾದ ಸಂದರ್ಭ – ಇತ್ಯಾದಿ ವಿವರಗಳಿರುತ್ತವೆ.

೨೦. ದತ್ತಿನಿಧಿ ನಿಯಮಾವಳಿಯ ಒಂದೊಂದು ಪ್ರತಿಯನ್ನು ದಾನಿಗಳಿಗೆ ಮತ್ತು ಸಂಬಂಧಪಟ್ಟ ಜಿಲ್ಲಾ ಘಟಕಕ್ಕೆ ಒದಗಿಸಲಾಗುತ್ತದೆ.

೨೧. ದಾನಿಗಳ ಅನುಮತಿಯಿಲ್ಲದೆ ಯಾವ ಕಾರಣದಿಂದಲೂ ದತ್ತಿ ಉಪನ್ಯಾಸ ವಿಷಯವನ್ನು ಬದಲಾಯಿಸತಕ್ಕದ್ದಲ್ಲ.

೨೨. ದತ್ತಿ ಕಾರ್ಯಕ್ರಮಗಳನ್ನು ಬೇರೆ ಕಾರ್ಯಕ್ರಮಗಳೊಂದಿಗೆ ಸೇರಿಸಬಾರದು; ಪ್ರತ್ಯೇಕವಾಗಿ ಏರ್ಪಾಟಾಗಬೇಕು.

೨೩. ದತ್ತಿ ದಾನಿಗಳ ಆಶಯದ ದಿನ ಹಾಗೂ ಸ್ಥಳದಲ್ಲಿ ಕಾರ್ಯಕ್ರಮ ನಡೆಸಲು ಅನನುಕೂಲವಿದ್ದಲ್ಲಿ ಅದನ್ನು ದಾನಿಗಳ ಗಮನಕ್ಕೆ ತಂದು ಮತ್ತೊಂದು ದಿನ ಅಥವಾ ಸ್ಥಳ ಆಯ್ಕೆ ಮಾಡಿ ಕಾರ್ಯಕ್ರಮ ನಡೆಸಬೇಕು.

೨೪. ಪರಿಷತ್ತಿನ ಅಧ್ಯಕ್ಷರು ನೇಮಿಸುವ ಮೂರು ಜನ ತಜ್ಞರುಳ್ಳ ಒಂದು ಸಮಿತಿ ದತ್ತಿ ಕಾರ್ಯಕ್ರಮಗಳನ್ನು ಮೇಲ್ಕಂಡ ನಿಯಮಗಳಿಗೆ ಅನುಸಾರ ವಿವಿಧ ಜಿಲ್ಲಾ ಘಟಕಗಳಿಗೆ ಹಂಚುತ್ತದೆ. ಪರಿಷತ್ತಿನ ಅಧ್ಯಕ್ಷರೇ ಈ ಉಪಸಮಿತಿಯ ಅಧ್ಯಕ್ಷರಾಗಿರುತ್ತಾರೆ.

೨೫. ದತ್ತಿ ನಿಯಮಗಳಿಗೆ ಅನುಗುಣವಾಗಿ ಕಾರ್ಯಕ್ರಮ ನಡೆಯದಿದ್ದರೆ ಸಂಬಂಧಪಟ್ಟ ದಾನಿಗಳಾಗಲೀ, ಪರಿಷತ್ತಿನ ಯಾರೇ ಸದಸ್ಯರಾಗಲೀ ಪ್ರಶ್ನಿಸಬಹುದು. ಅಂತಹ ಸಂದರ್ಭಗಳಲ್ಲಿ ಪರಿಷತ್ತಿನ ಪದಾಧಿಕಾರಿಗಳು ಕಾರ್ಯಕ್ರಮ ನಡೆಸಲು ಬದ್ಧರಾಗಿರತಕ್ಕದ್ದು.

ದತ್ತಿನಿಧಿ ನೀಡಲು
ದಾನಿಗಳ ದಾನಪತ್ರದ ಮಾದರಿ

೧. ದಾನಿಗಳ ಹೆಸರು		
೨. ದಾನಿಗಳ ಪೂರ್ಣ ಅಂಚೆ ವಿಳಾಸ ದೂರವಾಣಿ ಸಂಖ್ಯೆ		
೩. ದತ್ತಿಯ ಪೂರ್ಣ ಹೆಸರು		
೪. ದತ್ತಿಯ ಮೊತ್ತ		ರೂ. (ಅಕ್ಷರದಲ್ಲಿ)
೫. ದಾನಿಗಳ ಆಶಯ	೧.	
	೨.	
	೩.	
	೪.	
೬ ದತ್ತಿ ನಿಧಿ ನೀಡಿದ ದಿನಾಂಕ		
೭ ದತ್ತಿನಿಧಿ ನೀಡಿಕೆ ನಗದು / ಡ್ರಾಫ್ಟ್ / ಚಕ್ ನಂ. ಮತ್ತು ದಿನಾಂಕ		
೮. ಇತರ ವಿಷಯಗಳು		

ಸ್ಥಳ :

ದಿನಾಂಕ: ದಾನಿಗಳ ಸಹಿ

ಪರಿಷತ್ತಿನ ಕಚೇರಿ ಬಳಕೆಗೆ

ದಾನಿಗಳ ಆಶಯವನ್ನು ಒಪ್ಪಿಕೊಂಡು ದಿನಾಂಕ..... ರಂದು ಮೇಲ್ಕಂಡ ದತ್ತಿಯನ್ನು ಅಂಗೀಕರಿಸಲಾಗಿದೆ.

ದತ್ತಿ ಪುಸ್ತಕದ ದಾಖಲೆ ಪುಟ :

ರಸೀದಿ ಸಂಖ್ಯೆ :

ದಿನಾಂಕ : ಅಧ್ಯಕ್ಷ

ದಾನಿಗಳಿಗೆ ದತ್ತಿ ನಿಯಮಗಳು

೧. ದಾನಿಗಳು ತಮ್ಮ ಅಥವಾ ತಮಗೆ ಇಷ್ಟವೆನಿಸುವವರ ಹೆಸರಿನಲ್ಲಿ ದತ್ತಿ ಇಡಬಹುದು.

೨. ದತ್ತಿಯ ಮೊಬಲಗು ಕನಿಷ್ಠ ೧೦,೦೦೦ ರೂ. ಅದಕ್ಕಿಂತ ಹೆಚ್ಚಾಗಿ ಎಷ್ಟಾದರೂ ಇಡಬಹುದು.

೩. ದತ್ತಿಗೆ ನೀಡಿದ ಹಣಕ್ಕೆ ಪರಿಷತ್ತಿನ ಅಧಿಕೃತ ರಸೀತಿ ಕೊಡಲಾಗುವುದು.

೪. ದತ್ತಿ ಸ್ವೀಕಾರವಾದುದಕ್ಕೆ ಅಧಿಕೃತ ಅಂಗೀಕಾರ ಪತ್ರ ನೀಡಲಾಗುವುದು.

೫. ದಾನಿಗಳು ನೀಡಿದ ದತ್ತಿ ಹಣವನ್ನು ಪರಿಷತ್ತಿನ ಹೆಸರಿನಲ್ಲಿ ಅಧಿಕೃತ ಬ್ಯಾಂಕಿನಲ್ಲಿ ಶಾಶ್ವತ ಠೇವಣಿಯಲ್ಲಿಡಲಾಗುವುದು.

೬. ದತ್ತಿ ಮೊತ್ತದಿಂದ ಬರುವ ಬಡ್ಡಿಯ ಹಣದಿಂದ ದಾನಿಗಳ ಆಶಯದಂತೆ ಪ್ರತಿವರ್ಷ ಸಾಹಿತ್ಯ ಕಾರ್ಯಕ್ರಮ ನಡೆಸಿಕೊಂಡು ಬರಲಾಗುವುದು.

೭. ದತ್ತಿ ಕಾರ್ಯಕ್ರಮಗಳನ್ನು ರಾಜ್ಯದ ಮತ್ತು ಹೊರನಾಡುಗಳ ಬೇರೆಬೇರೆ ಸ್ಥಳಗಳಲ್ಲಿ ಪರಿಷತ್ತು ಏರ್ಪಡಿಸುವುದು.

೮. ದತ್ತಿ ಕಾರ್ಯಕ್ರಮದ ಕರೆಯೋಲೆಗಳನ್ನು ದಾನಿಗಳಿಗೆ ಕಳುಹಿಸಲಾಗುವುದು.

೯. ದತ್ತಿ ಕಾರ್ಯಕ್ರಮದ ಸಂದರ್ಭದಲ್ಲಿ ದಾನಿಗಳ ಪರಿಚಯದೊಂದಿಗೆ ಅವರ ಆಶಯವನ್ನು ಸಭೆಯಲ್ಲಿ ತಿಳಿಸಲಾಗುವುದು.

೧೦. ದಾನಿಗಳೊಡನೆ ಸಮಾಲೋಚಿಸಿ ಅನಿವಾರ್ಯ ಸಂದರ್ಭಗಳಲ್ಲಿ ದತ್ತಿಯ ಕಾರ್ಯಕ್ರಮಗಳಲ್ಲಿ ಅಗತ್ಯವೆನಿಸುವ ಬದಲಾವಣೆ ಮಾಡಿಕೊಳ್ಳಲು ಪದಾಧಿಕಾರಿಗಳಿಗೆ ಅವಕಾಶವಿರುತ್ತದೆ.

೧೧. ದಾನಿಗಳು ತಮ್ಮ ದಾನ ಪತ್ರದಲ್ಲಿ ತಿಳಿಸುವ ಆಶಯಗಳನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

೧೨. ಉದ್ದೇಶಿತ ಕಾರ್ಯಕ್ರಮಕ್ಕೆ ದತ್ತಿ ಮೊತ್ತದ ಬಡ್ಡಿ ಹಣ ಸಾಲದಾಗುವ ಸಂದರ್ಭಗಳಲ್ಲಿ ಎರಡು ಮೂರು ದತ್ತಿಗಳನ್ನು ಸೇರಿಸಿ ಕಾರ್ಯಕ್ರಮ ನಡೆಸಲಾಗುತ್ತದೆ.

ವಿಶೇಷ ಸೂಚನೆ :

೧೩. ಕರ್ನಾಟಕ ಸರ್ಕಾರದ ಆದಾಯ ತೆರಿಗೆ ಅಧಿನಿಯಮ ೧೯೬೧-೮೦ ಜಿ. ಪ್ರಕಾರ ಪರಿಷತ್ತಿಗೆ ನೀಡುವ ವಂತಿಕೆಗೆ ಆದಾಯ ತೆರಿಗೆ ವಿನಾಯಿತಿ ಇದೆ.

ಆದೇಶ ಸಂಖ್ಯೆ : No. Accts. 718 / 57/ 86/ CIT - II ದಿನಾಂಕ : ೨-೧೧-೧೯೯೨

ಉಪನ್ಯಾಸ ದತ್ತಿಗಳ ವಿಷಯ ವೈವಿಧ್ಯ

ವಸ್ತು ವಿಷಯ ವೈವಿಧ್ಯದಿಂದ ಪರಿಷತ್ತಿನ ದತ್ತಿಗಳನ್ನು ಗಮನಿಸಿದಾಗ ಬೆರಗಾಗುತ್ತೇವೆ. ಇಷ್ಟು ವೈವಿಧ್ಯಮಯ ದತ್ತಿಗಳು ದೇಶದಲ್ಲಿ ಯಾವ ಭಾಷೆಯಲ್ಲೂ ಇಲ್ಲವೆನ್ನಬಹುದು. ಉದಾಹರಣೆಗೆ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. (ಕೇವಲ ಒಂದೆರಡು ದತ್ತಿಗಳನ್ನು ಉದಾಹರಣೆಗಳಾಗಿ ಕೊಟ್ಟಿದೆ) ಉಳಿದವಕ್ಕೆ ಪಟ್ಟಿನೋಡಿ.

೧. **ಸಿಹಿ ಹಂಚಿಕೆ :** ಎಸ್. ಕೃಷ್ಣಮೂರ್ತಿ ಮತ್ತು ಮಕ್ಕಳದತ್ತಿ (೨೦೧೪)

ಆಶಯ: ಮಕ್ಕಳಿಗೆ ಸಿಹಿಹಂಚಿಕೆ, ಸಣ್ಣಪ್ಪನವರ ಭಾವಚಿತ್ರಕ್ಕೆ ಮಾಲಾರ್ಪಣೆ.

೨. **ದೇಶಪ್ರೇಮ :** ಕೆ. ಎಸ್. ರಾಮಕೃಷ್ಣಭಟ್ ಸಹೋದರರ ದತ್ತಿ (೨೦೦೯)

ಆಶಯ : ಗಾಂಧೀ ಜೀವನಾದರ್ಶಗಳ ಬಗ್ಗೆ ಯುವಜನತೆಗೆ ಉಪನ್ಯಾಸ ನೇತಾಜಿ ಸುಭಾಷ್ ಚಂದ್ರಬೋಸರ ಬಗ್ಗೆ – ಟಿ. ಎಲ್. ಗಂಗಣ್ಣ ಮತ್ತು ಯಾಕೂಬ್ ದೈಹಿಕ ಶಿಕ್ಷಣ ದತ್ತಿ

೩. **ಸ್ಥಳ ಪ್ರೇಮ :** ಜಿ.ಪಿ. ರಾಜರತ್ನಂ ಸಂಸ್ಕರಣ ದತ್ತಿ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನಲ್ಲಿ ಕಾರ್ಯಕ್ರಮ ನಡೆಸಲು ೯ಕ್ಕೂ ಹೆಚ್ಚು ದತ್ತಿಗಳಿವೆ.

೪. **ಗಮಕಸಾಹಿತ್ಯ :** ಬಿ. ಎಂ. ಶ್ರೀ. ದತ್ತಿ (ಮೈಸೂರು ಜಿಲ್ಲೆ) ಸಮೇತನಹಳ್ಳಿ ಪಂಕಜಮ್ಮ ರಾಮರಾವ್ ಸ್ಮಾರಕ ದತ್ತಿ

೫. **ಜೈನಸಾಹಿತ್ಯ :** ಚಾವುಂಡರಾಯ ಪ್ರಶಸ್ತಿ ದತ್ತಿ

೬. **ಕ್ರೈಸ್ತಸಾಹಿತ್ಯ :** ಎ.ಆರ್. ಡಿಸೋಜಾ ದತ್ತಿ (ಬೆಂಗಳೂರು)

೭. **ಜಾನಪದ ಸಾಹಿತ್ಯ :** ಹನುಮೇಗೌಡ ಪುರುಷೋತ್ತಮ ಸ್ಮಾರಕ ದತ್ತಿ

೮. **ಯಕ್ಷಗಾನ ಕಲೆ :** ದಿ || ಕುರಂಜೆ ಮಹಾಲಿಂಗ ಮಾಸ್ತರ ಸ್ಮಾರಕ ದತ್ತಿ

೯. **ವೀರಶೈವ ಸಾಹಿತ್ಯ :** ಪಟೇಲ್ ನಂಜಪ್ಪ ಪಾರ್ವತಮ್ಮ ಮಾದಯ್ಯ ಹಾಗೂ ಪಾರ್ವತಮ್ಮಣ್ಣಿ ದತ್ತಿ

೧೦. **ದಾಸಸಾಹಿತ್ಯ :** ಅಡಗೂಡು ಹುಚ್ಚೇಗೌಡ ರಾವಮ್ಮ ದತ್ತಿ

೧೧. **ಸರಸ್ವತಿ ಪೂಜಾ :** ಡಾ. ಎ. ಆರ್. ಕೃಷ್ಣಶಾಸ್ತ್ರಿ ದತ್ತಿ (ಮೈಸೂರು)

೧೨. **ಗ್ರಂಥಪರಿಚಯ :** ಶೀಮತಿ ಗೌರಮ್ಮ ಮತ್ತು ಮೋತಿ ಪಿ. ರಾಮರಾವ್ ದತ್ತಿ (ಚಿತ್ರದುರ್ಗ)

೧೩. **ವಚನಸಾಹಿತ್ಯ :** ಪೂಜ್ಯ ಶಿವಕುಮಾರ ಮಹಾಸ್ವಾಮಿಗಳ ವಚನಸಾಹಿತ್ಯ ದತ್ತಿ

೧೪. **ವೈದ್ಯಸಾಹಿತ್ಯ :** ಸಾಂಗ್ಲಿ ನಾರಾಯಣರಾವ್ ದತ್ತಿ

೧೫. **ಸಾಹಿತಿಗಳ ಸಮಗ್ರ ಕೃತಿಗಳು :** ಗುತ್ತಿ ಎಡೆಹಳ್ಳಿ, ಸೂರಪ್ಪ ಗೌಡರ ದತ್ತಿ (ಡಿವಿಜಿ ಸಾಹಿತ್ಯ)
ಡಿ. ಆರ್. ರತ್ನಾಕರ ದತ್ತಿ (ಕುವೆಂಪು ಸಾಹಿತ್ಯ)

೧೬. **ಸಂಗೀತ –ಗಾಯನ** ಪದ್ಮಚರಣ್ ಸನ್ಮಾನ ಸಮಿತಿ ದತ್ತಿ

೧೭. **ಕನ್ನಡ ಶೀಘ್ರಲಿಪಿ :** ಬೆರಳಚ್ಚು ವಿದ್ಯಾರ್ಥಿಗಳಿಗೆ ಎಸ್. ಆರ್. ಸಿದ್ಧರಾಜು ದತ್ತಿ

೧೮. **ಎಂ. ಎ. ವಿದ್ಯಾರ್ಥಿಗಳಿಗೆ :** ಉಪನ್ಯಾಸ ವ್ಯವಸ್ಥೆ . ಜಗದಂಬ ಸ್ಮಾರಕ ದತ್ತಿ

೧೯. **ವೈದ್ಯಶಾಸ್ತ್ರ** : ಡಾ. ಲೀಲಾವಾತಿ ದೇವದಾಸ್ ದತ್ತಿ

೨೦. **ವಿಜ್ಞಾನಸಾಹಿತ್ಯ:** ಎಂ. ಎಸ್. ರಾಮಯ್ಯ ದತ್ತಿ

೨೧. **ಹಾಸ್ಯಸಾಹಿತ್ಯ :** ಎಂ. ಶಿವರಾಂ ಅವರ ಕೊರವಂಜಿ ಬಳಗದ ದತ್ತಿ

೨೨. ಪತ್ರಿಕೋದ್ಯಮ: ಜನ್ಮಭೂಮಿ ಟ್ರಸ್ಟ್‌ನ ಬಿ. ಎನ್. ಗುಪ್ತ ಉಪನ್ಯಾಸದತ್ತಿ

೨೩. ಭಾವಚಿತ್ರಗಳಿಗೆ ಹಾರ : ದಿ ॥ ಕೆ. ಬಿ. ತಾಯಮ್ಮ ಮತ್ತು ದಿ ॥ ಕೆ.ಬಿ. ಬಾಲಕೃಷ್ಣಯ್ಯ, ಸ್ಮಾರಕ ದತ್ತಿ

೨೪. ಕುಮಾರವ್ಯಾಸ ಜಯಂತಿ : ಗಮಕಿ ಕೆ. ವೆಂಕಟಸುಬ್ಬಯ್ಯ ದತ್ತಿ

೨೫. ಧಾರ್ಮಿಕ ಸಾಹಿತ್ಯ : ಬಸವೇಶ್ವರ ವಿದ್ಯಾವರ್ಧಕ ಸಂಘ ದತ್ತಿ

೨೬. ವಾಸ್ತುಶಿಲ್ಪಶಾಸನ : ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆ ದತ್ತಿ

೨೭. ರಂಗಕಲಾವಿದರಿಗೆ ಧನಸಹಾಯ : ಭೀಮಪ್ಪ ರಂಗಪ್ಪ ಅರಿಷಿಣಗೂಡಿ ದತ್ತಿ

೨೮. ಗ್ರಂಥಾಲಯ ವಿಜ್ಞಾನ : ಕೋಡಿಹಳ್ಳಿ ಟಿ. ಮಹಾಲಿಂಗ ದತ್ತಿ

೨೯. ಖಾದಿ ಗ್ರಾಮೋದ್ಯೋಗ : ಎಂ. ವಿ. ಪಾಟೀಲ ದತ್ತಿ

೩೦. ಸಮಾಜ ಕಾರ್ಯ : ಶಾಂತ ವೀರಮ್ಮ ಮರುಳಸಿದ್ಧಯ್ಯ ದತ್ತಿ

೩೧. ಚಿತ್ರಕಲೆ : ಕೆ. ಎಂ. ಈಶ್ವರಯ್ಯ ದತ್ತಿ

೩೨. ಮಕ್ಕಳಸಾಹಿತ್ಯ : ಮುಳ್ಳೂರು ಮಲ್ಲಯ್ಯ ಶೆಟ್ಟಿ ದತ್ತಿ

೩೩. ಕೃಷಿ : ಬಿ. ಆರ್. ಗೌರಮ್ಮ ಗುರುಭೀಮನಗೌಡ ದತ್ತಿ

೩೪. ಅವಿಭಕ್ತ ಕುಟುಂಬ : ಗೌಡೇಕೋಟೆ ಕರಿಬಸಯ್ಯ ಶ್ರೀಮತಿ ಚಂದ್ರಮ್ಮ ದತ್ತಿ

೩೫. ಚುಟುಕಸಾಹಿತ್ಯ : ಉಜ್ಜಪ್ಪನಹಳ್ಳಿ ಸಿದ್ಧರಾಮಪ್ಪ, ಶ್ರೀಮತಿ ಯು. ಎಸ್. ಮಾಯಮ್ಮ ದತ್ತಿ

೩೬. ಸಹಕಾರ ತತ್ವ : ಲಕ್ಷ್ಮೀಸಹಕಾರ ನಿಯಮಿತ ಗುಳೇದಗುಡ್ಡ ದತ್ತಿ

೩೭. ಇಳಕಲ್ಲಿನ ಉದ್ಯಮಗಳು : ಇಳಕಲ್ಲು ಸಹಕಾರ ಬ್ಯಾಂಕ್ ದತ್ತಿ

೩೮. ನಾಟಕಸಾಹಿತ್ಯ : ದಿ ॥ ಶ್ರೀಮತಿ ಅಡಿವೆಮ್ಮ ಚನ್ನಮಲ್ಲಪ್ಪ ಪುಟ್ಟದ ದತ್ತಿ

೩೯. ಭಾಷಾಸಾಹಿತ್ಯ : ದಿ ॥ ಕೆ. ಸುಬ್ಬರಾಮಪ್ಪ ದತ್ತಿ

೪೦. ಸ್ವಾತಂತ್ರ್ಯ ಯೋಧರು : ಸರಗೂರು ಕರಿಯಪ್ಪ ಸ್ಮರಣಾರ್ಥ ದತ್ತಿ

ಹೀಗೆ ನೂರಾರು ವಿಷಯ ವೈವಿಧ್ಯಗಳನ್ನು ಪರಿಷತ್ತಿನ ದತ್ತಿಗಳಲ್ಲಿ ಕಾಣಬಹುದು.

ತಜ್ಞರ ಸಮಿತಿ ಆಯ್ಕೆ ಮಾಡಿ ವ್ಯಕ್ತಿಗಳಿಗೆ ನೀಡುವ ಪ್ರಶಸ್ತಿ ದತ್ತಿಗಳು

೧. ಚಾವುಂಡರಾಯ ಪ್ರಶಸ್ತಿ (ಮೂಲನಿಧಿ೨ ಲಕ್ಷ, ಪ್ರಶಸ್ತಿ ಮೊತ್ತ ೨೦೦೦ ಸಮಗ್ರ ಸಾಹಿತ್ಯ ಕೃತಿಗೆ

೨. ಪದ್ಮಭೂಷಣ ಬಿ. ಸರೋಜಾದೇವಿ ಸಾಹಿತ್ಯ ಪ್ರಶಸ್ತಿ (ಮೂಲನಿಧಿ ೨ ಲಕ್ಷ, ಪ್ರಶಸ್ತಿ ಮೊತ್ತ ೧೦೦೦೦ರೂ)

೩. ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ ಪ್ರಶಸ್ತಿ (ಮೂಲನಿಧಿ ೧ ೧/೨ ಲಕ್ಷ, ಪ್ರಶಸ್ತಿ ಮೊತ್ತ ೧೦,೦೦೦ರೂ)

೪. ನಾಲ್ವಡಿ ಕೃಷ್ಣರಾಜ ಒಡೆಯರ ದತ್ತಿ ಪ್ರಶಸ್ತಿ (ಸ್ವತಂತ್ರ ಹೋರಾಟಮಾಡುವ ವ್ಯಕ್ತಿಗೆ) (ಮೂಲನಿಧಿ ೪ ಲಕ್ಷ, ಪ್ರಶಸ್ತಿ ಮೊತ್ತ ೨೫೦೦೦)

೫. ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ (ರಾಜ್ಯಮಟ್ಟದಲ್ಲಿ ಕನ್ನಡ ನಾಡು ನುಡಿಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುತ್ತಿರುವ ವ್ಯಕ್ತಿಗೆ) (ಮೂಲ ನಿಧಿ ೪ ಲಕ್ಷ ಪ್ರಶಸ್ತಿ ಮೊತ್ತ ೨೫೦೦೦)

೬. ಜ್ಯೋತಿ ಪುರಸ್ಕಾರ ದತ್ತಿ ಪ್ರಶಸ್ತಿ (೩೫ ವರ್ಷದೊಳಗಿರುವ ಯುವ ಸಾಹಿತಿಗೆ ನೀಡುವ ಪ್ರಶಸ್ತಿ) (ದತ್ತಿ ನಿಧಿ ೧ ಲಕ್ಷ, ಪ್ರಶಸ್ತಿ ಮೊತ್ತ ೫,೦೦೦ ರೂ.)

೭ **ಪಂಕಜ ಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ** (೩೫ ವರ್ಷಕ್ಕೆ ಮೇಲ್ಪಟ್ಟ ಮಹಿಳಾ ಲೇಖಕಿಗೆ ಪ್ರಶಸ್ತಿ) (ಮೂಲ ನಿಧಿ ೨ ಲಕ್ಷ, ಪ್ರಶಸ್ತಿ ಮೊತ್ತ ೧೦,೦೦೦)

೮. **ಡಾ. ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ** (ಸಿನಿಮಾ ಕ್ಷೇತ್ರದ ಕಲಾವಿದರು, ನಿರ್ಮಾಪಕರು, ತಂತ್ರಜ್ಞರು ಹಾಗೂ ಚಲನಚಿತ್ರ ಸಾಹಿತಿಗಳಿಗೆ ಪ್ರಶಸ್ತಿ) (ಮೂಲನಿಧಿ ೪ ಲಕ್ಷ ರೂ, ಪ್ರಶಸ್ತಿ ಮೊತ್ತ ೩೫೦೦೦ ರೂ)

೯. **ಅತ್ತಿಮಬ್ಬೆ ಪ್ರತಿಷ್ಠಾನ ಮನುಶ್ರೀ ರಾಷ್ಟ್ರೀಯ ದತ್ತಿ ಪ್ರಶಸ್ತಿ.** (ವಿವಿಧ ಭಾಷೆಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಹಿತಿಗೆ ಪ್ರಶಸ್ತಿ) (ಮೂಲನಿಧಿ ೨ ಲಕ್ಷರೂ, ಪ್ರಶಸ್ತಿ ಮೊತ್ತ ೧೦೦೦೦ರೂ)

೧೦. **ಬಸವಭಾಗ್ಯ ದತ್ತಿ ಪ್ರಶಸ್ತಿ** (ಓರ್ವ ಪ್ರತಿಭಾವಂತ ಮಹಿಳೆಗೆ) (ಮೂಲನಿಧಿ ೧ ಲಕ್ಷ ರೂ. ಪ್ರಶಸ್ತಿ ಮೊತ್ತ ೫,೦೦೦ ರೂ.)

೧೧. **ಶ್ರೀಮತಿ ಲಕ್ಷ್ಮೀದೇವಿ ಮತ್ತು ಎಸ್. ರಾಮಚಂದ್ರ ಬಾಯರ್ ದತ್ತಿಪ್ರಶಸ್ತಿ** (ಖ್ಯಾತ ಉದ್ಯಮಿಗೆ ಪ್ರಶಸ್ತಿ) (ಮೂಲನಿಧಿ ೧ ಲಕ್ಷ ರೂ. ಪ್ರಶಸ್ತಿ ಮೊತ್ತ ೫,೦೦೦ ರೂ.)

೧೨. **ಶ್ರೀಮತಿ ಕರಡ್ಲೂರು ಗಿರಿಜಮ್ಮ ಮತ್ತು ನರಸಿಂಹ ಜೋಗಿ ದತ್ತಿ ಪ್ರಶಸ್ತಿ** (ನಾಟಕಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಪ್ರಶಸ್ತಿ) (ಮೂಲ ನಿಧಿ ೧ ಲಕ್ಷ ರೂ. ಪ್ರಶಸ್ತಿ ಮೊತ್ತ ೫,೦೦೦ ರೂ.)

೧೩. **ಅಭಿನವ ಭಾರ್ಗವ ಡಾ. ವಿಷ್ಣುವರ್ಧನ** ದತ್ತಿ ಪ್ರಶಸ್ತಿ (ಓರ್ವ ಪ್ರತಿಭಾವಂತ ಕಲಾವಿದರಿಗೆ ಪ್ರಶಸ್ತಿ) (ಮೂಲನಿಧಿ ೨ ಲಕ್ಷ, ಪ್ರಶಸ್ತಿ ಮೊತ್ತ ೧೦,೦೦೦ರೂ)

೧೪. **ಅಂಕಿತ ಪುಸ್ತಕ ಪುರಸ್ಕಾರ ದತ್ತಿ ಪ್ರಶಸ್ತಿ** (ವರ್ಷದ ಅತ್ಯುತ್ತಮ ಪ್ರಕಾಶನ ಸಂಸ್ಥೆಗೆ ಪ್ರಶಸ್ತಿ) (ಮೂಲನಿಧಿ ೫ ಲಕ್ಷ, ಪ್ರಶಸ್ತಿ ಮೊತ್ತ ೩೫೦೦೦ ರೂ)

೧೫. **ಪ್ರಕಾಶಕ ಆರ್. ಎನ್. ಹಬ್ಬು ದತ್ತಿ ಪ್ರಶಸ್ತಿ** (ಶ್ರೇಷ್ಠಕೃತಿ ಪುಸ್ತಕ ಪ್ರಕಾಶನ ಸಂಸ್ಥೆಗೆ ಮೂಲನಿಧಿ ೧ ಲಕ್ಷ ರೂ, ಪ್ರಶಸ್ತಿ, ಮೊತ್ತ ೫೦೦೦)

೧೬. ಶ್ರೀಮತಿ ತಾಯಮ್ಮ ಎಸ್. ಸಿ. ಮಲ್ಲಯ್ಯ ದತ್ತಿ ಪ್ರಶಸ್ತಿ (೫ ಜನ ಜನಪದ ಕಲಾವಿದರಿಗೆ ಮೂಲನಿಧಿ ೩ ಲಕ್ಷ ರೂ, ಪ್ರಶಸ್ತಿ ಮೊತ್ತ ೩೦೦೦ರೂ)

ಟಿಪ್ಪಣಿ : ಪ್ರಶಸ್ತಿದತ್ತಿಗಳನ್ನು ವಿಶೇಷ ಸಮಾರಂಭ ಏರ್ಪಡಿಸಿ ಕೊಡಲಾಗುವುದು. ಪ್ರಶಸ್ತಿ ಮೊತ್ತದೊಂದಿಗೆ ಪ್ರಶಸ್ತಿ ಫಲಕ / ಪತ್ರ, ಶಾಲು, ಹಣ್ಣು, ಹಾರ ಇತ್ಯಾದಿ ನೀಡಿ ಗೌರವಿಸಲಾಗುವುದು. ಆಯ್ಕೆ ಸಮಿತಿ ಸೂಕ್ತ ವ್ಯಕ್ತಿಗಳನ್ನು ಅಥವಾ ಸಂಸ್ಥೆಗಳನ್ನು ಆಯ್ಕೆ ಮಾಡುತ್ತದೆ. ಇದುವರೆಗೆ ಈ ಪ್ರಶಸ್ತಿಗಳು ಎಷ್ಟು ಮಂದಿಗೆ / ಸಂಸ್ಥೆಗೆ ದೊರೆತಿದೆ ಎಂಬುದು ಆಯಾ ವರ್ಷದ ವಾರ್ಷಿಕಾಧಿವೇಶನದ ವರದಿಗಳಲ್ಲಿ ಮತ್ತು ಪರಿಷತ್ತಿನ ಪತ್ರಿಕೆಯಾದ ಕನ್ನಡ ನುಡಿಯಲ್ಲಿ ಸಮಾರಂಭಗಳ ವಿವರ ಸಮೇತ ಸಿಗುತ್ತದೆ.

ಪ್ರಶಸ್ತಿದತ್ತಿಗಳನ್ನು ಇದುವರೆಗೆ ಯಾರುಯಾರು ಪಡೆದಿದ್ದಾರೆ ಎಂಬುದನ್ನು ಜಗನ್ನಾಥ ಹೇಮಾದ್ರಿ ಅವರು ಕನ್ನಡ ಸಾಹಿತ್ಯ ಪರಿಷತ್ತನ್ನು ಕುರಿತು ರಚಿಸಿದ ಪರಿಷ್ಕೃತ ಮುದ್ರಣ ಗ್ರಂಥದಲ್ಲಿ ಪಟ್ಟಿಕೊಟ್ಟಿದ್ದಾರೆ. ಪರಿಷತ್ತನ್ನು ಕುರಿತ ಸಮಗ್ರ ಸಂಕ್ಷಿಪ್ತ ನೋಟವನ್ನು ನೀಡಿದ ಮೊದಲಗ್ರಂಥ ಇದಾಗಿದೆ.

ನಾಡಿನ ಪತ್ರಿಕೆಗಳು ಈ ಬಗ್ಗೆ ಚಿತ್ರ ಮತ್ತು ವಿವರಗಳನ್ನು ಪ್ರಶಸ್ತಿ ಪಡೆದ ಸಂಸ್ಥೆ / ವ್ಯಕ್ತಿ ಪರಿಚಯವನ್ನು ನೀಡುತ್ತವೆ. ಬಹುತೇಕ ಪ್ರಶಸ್ತಿ ಸಮಾರಂಭಗಳನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸುತ್ತದೆ.

ಈ ರೀತಿ ನಾನಾ ಕ್ಷೇತ್ರಗಳಲ್ಲಿ ಕೆಲಸಮಾಡಿದ ಸಾಧಕರಿಗೆ / ಸಂಸ್ಥೆಗಳಿಗೆ ಇಷ್ಟೊಂದು ಪ್ರಮಾಣದಲ್ಲಿ ಪ್ರಶಸ್ತಿಗಳನ್ನು ನೀಡುತ್ತಿರುವ ಸಾಹಿತ್ಯ ಸಂಸ್ಥೆ ಇನ್ನೊಂದಿಲ್ಲ.

ವಿಶಿಷ್ಟ ದತ್ತಿಗಳು

ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ, ತರಗತಿಗಳನ್ನು ನಡೆಸಲು ಮತ್ತು ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕಗಳಿಸಿದ ವಿಜೇತರಾದವರಿಗೆ, ಶ್ರೇಷ್ಠಕೃತಿಗಳಿಗೆ, ಉಪನ್ಯಾಸಗಳಿಗೆ ನಗದು ಬಹುಮಾನ ನೀಡಲು ನೂರಾರು ಬಹುಮಾನಗಳಿವೆ. ಇವೆಲ್ಲಕ್ಕಿಂತ ವಿಭಿನ್ನವಾಗಿ ಕೆಲವು ದತ್ತಿನಿಧಿಗಳಿವೆ. ಅವುಗಳ ಆಶಯ ತೀರಾ ವಿನೂತನವಾಗಿವೆ. ಅಂಥ ಕೆಲವು ದತ್ತಿಗಳು ಪರಿಷತ್ತಿನಲ್ಲಿವೆ. ಉದಾಹರಣೆಗೆ ೨ ದತ್ತಿನಿಧಿಗಳನ್ನು ಇಲ್ಲಿ ಉದಾಹರಿಸಿದೆ.

೧) ದಿ ॥ ಕೆ.ಬಿ. ಚಂದ್ರು ಅವರು ಸ್ಥಾಪಿಸಿರುವ **ಮೀನಾಕ್ಷಿ ಗಿಳಿ ಸ್ಮರಣಾರ್ಥ ದತ್ತಿನಿಧಿ** (ಸಕಲ ಸದಸ್ಯರು ಸಭೆಗೆ ಸಿಹಿಹಂಚಲು ಏರ್ಪಡಿಸಿದ ದತ್ತಿ).

೨) ದಿ. ಕೆ. ಬಿ. ಚಂದ್ರು ಅವರು ತಮ್ಮ ಹಿರಿಯರ ಹೆಸರಿನಲ್ಲಿ ಸ್ಥಾಪಿಸಿರುವ ಕೆ. ಬಿ. ತಾಯಮ್ಮ ಮತ್ತು ಕೆ.ಬಿ. ಬಾಲಕೃಷ್ಣಯ್ಯ ದತ್ತಿ (ಕೃಷ್ಣರಾಜ ಪರಿಷನ್ಮಂದಿರದ **ಭಾವಚಿತ್ರಗಳಿಗೆ ಹೂಹಾರಹಾಕಲು ಏರ್ಪಡಿಸಿದ** ದತ್ತಿ).

ಶ್ರೀ ಕೃಷ್ಣರಾಜ ಪರಿಷನ್ಮಂದಿರವನ್ನು ನವೀಕರಿಸಿದ ಸಂದರ್ಭದಲ್ಲಿ ಅಲ್ಲಿದ್ದ ಭಾವಚಿತ್ರಗಳನ್ನು ತೆಗೆದಿಡಲಾಯಿತು. ಮತ್ತೆ ಹಾಕಲಿಲ್ಲ ಅಲ್ಲಿ ಯಾರಯಾರ ಭಾವಚಿತ್ರಗಳು ಎಷ್ಟು ವೈವಿಧ್ಯಮಯವಾಗಿದ್ದವು ಎಂಬುದನ್ನು ಜಿ. ಪಿ. ರಾಜರತ್ನಂ ಅವರು ಪರಿಷತ್ತನ್ನು ಕುರಿತು ಬರೆದಿರುವ **"ಕನ್ನಡದ ಸೇತುವೆ"** ಗ್ರಂಥದಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತಿನ ಚಿತ್ರಶಾಲೆ' ಎಂಬ ಲೇಖನದಲ್ಲಿ ಭಾವಚಿತ್ರ ಪಟ್ಟಿಕೊಟ್ಟಿದ್ದಾರೆ. ಇದು ಪರಿಷತ್ ಪತ್ರಿಕೆಯಲ್ಲೂ ಪ್ರಕಟವಾಗಿದೆ.

ಮೂಲಭಾವಚಿತ್ರಗಳು ಉಗ್ರಾಣದಲ್ಲಿದ್ದು ಏಕರೂಪವಾಗಿ ಬೇರೆ ಚಿತ್ರ ತೆಗೆಸಿ ಕಪ್ಪುಬಿಳುಪು ಬಣ್ಣದಲ್ಲಿ ನಿರ್ದಿಷ್ಟ ಗಾತ್ರದ ಚೌಕಟ್ಟಿನಲ್ಲಿ ಇತರ ಸಾಹಿತಿಗಳ ಚಿತ್ರಗಳನ್ನು ಸೇರಿಸಿ ವಜ್ರಮಹೋತ್ಸವದ ಕಟ್ಟಡದ ಕುವೆಂಪು ಸಭಾಂಗಣದಲ್ಲಿ ಹಾಕಿದ್ದಾರೆ. ಹೂಹಾರಗಳನ್ನು ಈ ಚಿತ್ರಗಳಿಗೆ ಹಾಕಲಾಗುತ್ತಿದೆ. (ಭಾವಚಿತ್ರಗಳ ಪಟ್ಟಿಯನ್ನು ಬೇರೆಕಡೆ ಕೊಟ್ಟಿದೆ)

ಪರಿಷತ್ತಿನ ಪುಸ್ತಕ ಪ್ರಕಟನೆ ದತ್ತಿನಿಧಿಗಳು

ವ್ಯಕ್ತಿ, ಸಂಸ್ಥೆಗಳಿಗೆ ನಗದು ಬಹುಮಾನ ಪ್ರಶಸ್ತಿಗಳನ್ನು ನೀಡಲು, ಉಪನ್ಯಾಸಗಳನ್ನು ಏರ್ಪಡಿಸಲು ವಿಶೇಷ ಗೌರವ ಸನ್ಮಾನ ನೀಡಲು ಅನೇಕ ದತ್ತಿಗಳಿವೆ. ನಿಜ, ಆದರೆ ಕನ್ನಡ ಸಾಹಿತ್ಯ ಪರಿಷತ್ತು ಮೊದಲಿನಿಂದಲೂ ಮುಖ್ಯವಾಗಿ ಗ್ರಂಥಪ್ರಕಟನೆಗೆ ವಿಶೇಷ ಒತ್ತು ನೀಡಿದೆ. ೧೯೧೫ರಿಂದ ನಿರಂತರವಾಗಿ ಪುಸ್ತಕಗಳನ್ನು ಪ್ರಕಟಿಸುತ್ತಾ ೧೫೦೦ಕ್ಕೂ ಮಿಗಿಲಾಗಿ ಗ್ರಂಥಗಳನ್ನು ಪ್ರಕಟಿಸಿದೆ. ಆದರೆ ಇಂದು ಅಪ್ರಕಟಿತ ಗ್ರಂಥಗಳನ್ನು, ಕನ್ನಡ ಸಾಹಿತ್ಯದ ಇತರರು ಸಾಮಾನ್ಯವಾಗಿ ಪ್ರಕಟಿಸಲು ಇಚ್ಛಿಸದ ಅಲಂಕಾರ, ವ್ಯಾಕರಣ, ಛಂದಸ್ಸು, ಕೋಶ, ಭಾಷಾಶಾಸ್ತ್ರ, ಹಳಗನ್ನಡ ಸಾಹಿತ್ಯ, ಶಾಸನಸಾಹಿತ್ಯ ಮೊದಲಾದ ವಿಷಯಗಳ ಗ್ರಂಥಗಳನ್ನು ಪ್ರಕಟಿಸಲು ಪರಿಷತ್ತು ಮುಂದೆ ಬಂದಿದೆ. ಆದರೆ ಇದು ಸಾಲದು. ಪಾಂಡಿತ್ಯ ಪೋಷಣೆ ಪರಿಷತ್ತಿನ ಧ್ಯೇಯಗಳಲ್ಲಿ ಒಂದಾಗಿದೆ. ಎಂದು ನಿಬಂಧನೆಯಲ್ಲಿ ಹೇಳಿದೆ.

ಆದರೆ ಪರಿಷತ್ತಲ್ಲಿ ಎಲ್ಲಾ ಪುಸ್ತಕಗಳನ್ನು ಪ್ರಕಟಿಸಲು ಅದರ ಆರ್ಥಿಕ ಹಿನ್ನೆಲೆಯಲ್ಲಿ ಸಾಧ್ಯವಿಲ್ಲ. ಒಂದು ಕಾಲದಲ್ಲಿ ಎಷ್ಟೇ ಉತ್ತಮ ಗ್ರಂಥವನ್ನು ಪ್ರಕಟಿಸಬೇಕೆಂದು ಪ್ರಯತ್ನಿಸಿದರೂ ಪರಿಷತ್ತಿಗೆ ಸಾಧ್ಯವಾಗುತ್ತಿರಲಿಲ್ಲ. ಉದಾಹರಣೆಗೆ ಒಂದು ಪ್ರಸಂಗವನ್ನು ಉಲ್ಲೇಖಿಸಬಹುದು. ಅಪ್ರಕಟಿತ ಬೊಬ್ಬೂರು ರಂಗನ ಪರಶುರಾಮ ರಾಮಾಯಣ ಕಾವ್ಯ ಹಸ್ತಪ್ರತಿಯನ್ನು ಹೊಸಕೆರೆ ಚಿದಂಬರಯ್ಯನವರು ೧೯೨೦ರ ಸುಮಾರಿನಲ್ಲಿ ಪರಿಷತ್ತಿನಿಂದ ಪ್ರಕಟಿಸಬೇಕೆಂದು ಬೆಳ್ಳಾವೆ ವೆಂಕಟನಾರಣಪ್ಪನವರಲ್ಲಿ ಕೇಳಿಕೊಂಡರು. ಅದಕ್ಕೆ ಅವರು ಕೊಟ್ಟ ಉತ್ತರ ಸ್ವಾರಸ್ಯಕರವಾಗಿದೆ. "ಕಾವ್ಯಕನ್ಯೆ ಸಾಲಂಕೃತಳಾಗಿ ವಿವಾಹಯೋಗ್ಯಳಾಗಿದ್ದಾಳೆ. ವಿವಾಹ ಮಾಡಲು ಶಕ್ತಿಸಾಮರ್ಥ್ಯ ಪರಿಷತ್ತಿಗೆ ಇಲ್ಲವಾಗಿದೆ ಕ್ಷಮಿಸಿ" ಎಂದರು.

ಇಂಥ ಪರಿಸ್ಥಿತಿಯಲ್ಲೂ ಹತ್ತಾರು ಕನ್ನಡದ ಮೇರುಕೃತಿಗಳನ್ನು ಪರಿಷತ್ತು ಪ್ರಕಟಿಸಿದೆ. ಇಂದಿನ ಸನ್ನಿವೇಶದಲ್ಲಿ ಬೃಹತ್ ಮೊತ್ತದ ಪುಸ್ತಕ ಪ್ರಕಟನ ದತ್ತಿಯನ್ನು ಪರಿಷತ್ತು ಸಂಗ್ರಹಿಸಲು ಮುಂದಾಗಬೇಕಾಗಿದೆ.

ಪರಿಷತ್ತಿನಲ್ಲಿ ಪುಸ್ತಕದತ್ತಿನಿಧಿಗಳು ಹೆಚ್ಚಾಗಬೇಕಾಗಿದೆ. ಈಗ ನಿಗದಿತ ವಿಷಯ ಕುರಿತು ಪ್ರತಿವರ್ಷ ಪುಸ್ತಕ ಮುದ್ರಿಸುವ ಸಲುವಾಗಿ ಇರುವ ಪುಸ್ತಕ ಪ್ರಕಟಣಾದತ್ತಿಗಳು ಕೆಲವು ಹೀಗಿವೆ.

೧. ಕರ್ನಾಟಕ ಸಹಕಾರಿ ಅಪೆಕ್ಸ್ ಪ್ಲಾಟಿನಂ ಜೂಬಿಲಿ ದತ್ತಿ, ಬೆಂಗಳೂರು ಸಹಕಾರಿ ಕ್ಷೇತ್ರ, ಅಥವಾ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಉತ್ತಮ ಗ್ರಂಥ ಪ್ರಕಟನೆಗೆ (ಮೂಲನಿಧಿ ೧ ಲಕ್ಷ)

೨. ಡಾ. ಶಿವಮೂರ್ತಿ, ಶಿವಾಚಾರ್ಯ ಸ್ವಾಮಿಗಳ ವಚನಸಾಹಿತ್ಯ ಪ್ರಕಟನ ದತ್ತಿ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ.

೩. ಬಿ. ಟಿ. ಲಕ್ಷ್ಮಣ ಪುಸ್ತಕ ಪ್ರಕಟನ ದತ್ತಿ, ಬೆಂಗಳೂರು

೪. ಕಾವೇರಿ ಕನ್ನಡ ಸಾಂಸ್ಕೃತಿಕ ಸಂಘ ದತ್ತಿ, ಅಮೆರಿಕಾ ಪುಸ್ತಕ ಪ್ರಕಟನೆ ದತ್ತಿ, ಉತ್ತಮ ಕನ್ನಡ ಸಾಹಿತ್ಯ ಕೃತಿ ಪ್ರಕಟಣೆಗೆ (ಮೂಲನಿಧಿ ೨ ಲಕ್ಷ)

೫. ಪಿ. ಇ. ಎಸ್. ಶಿಕ್ಷಣ ಸಂಸ್ಥೆ ಪುಸ್ತಕ ಪ್ರಕಟನೆ ದತ್ತಿ, ಬೆಂಗಳೂರು, ವಿಜ್ಞಾನದ ವಿಷಯದ ಪುಸ್ತಕ ಪ್ರಕಟನೆ (ಮೂಲನಿಧಿ ೧ ಲಕ್ಷ).

೬ ಶ್ರೀಮತಿ ಲಲಿತಾ ಅಶ್ವತ್ಥರ ಪ್ರಕಟಣ ದತ್ತಿ, ಬೆಂಗಳೂರು (ಮೂಲನಿಧಿ ೧ ಲಕ್ಷ. ಕೆನರಾ ಬ್ಯಾಂಕ್ ನೇತೃತ್ವದ ಟ್ರಸ್ಟ್‌ನಲ್ಲಿದೆ)

೭ ಯೇನಪೋಯ ಮೊಹಿದ್ದೀನ್ ಕುಂಞ ಪುಸ್ತಕ ಪ್ರಕಟಣ ದತ್ತಿ.

೮. ಇನ್ಫೋಸಿಸ್ ಫೌಂಡೇಷನ್ ಪುಸ್ತಕ ಪ್ರಕಟನೆ ದತ್ತಿ, ಬೆಂಗಳೂರು (ವಿಜ್ಞಾನಕ್ಕೆ ಸಂಬಂಧಿಸಿದ ಕೃತಿ ಪ್ರಕಟನೆಗೆ) ಮೂಲನಿಧಿ ೧ ಲಕ್ಷ ಇತ್ಯಾದಿ.

ಶಾಶ್ವತ ನಿಧಿಗಳ ಸ್ಥಾಪನೆ ಅನಿವಾರ್ಯ

ಪರಿಷತ್ತಿನ ಆರ್ಥಿಕ ಸ್ಥಿತಿಗತಿಗಳು ನೂರುವರ್ಷಗಳಲ್ಲಿ ಗಮನಿಸುವಂಥದ್ದು. ಉದಾಹರಣೆಗೆ ಕರ್ಣಾಟಕ ಸಾಹಿತ್ಯ ಪರಿಷತ್ತು – ಪ್ರಥಮ ವರ್ಷದ ಆಯವ್ಯಯದ ಪಟ್ಟಿಯನ್ನು ಗಮನಿಸಬಹುದು.

ಅಂದಿನ ೧೯೧೫-೧೯೧೬ರ ಆಯವ್ಯಯಪಟ್ಟಿ

ಆಯ		ವ್ಯಯ	
ಚಂದಾಮೂಲಕವಾಗಿ ಬಂದ ದ್ರವ್ಯ:-			
	ರೂ. ಆ. ಪೈ		ರೂ. ಆ. ಪೈ
ಆಜೀವನ ಸದಸ್ಯರುಗಳಿಂದ	೪೬೮-೯-೫	ಮನೆಯ ಬಾಡಿಗೆಗೋಸ್ಕರ	೩೫-೦-೦
ಪ್ರಥಮವರ್ಗದ ಸಾಧಾರಣ ಸದಸ್ಯರಿಂದ	೧೨೬=೦-೦	ಆಫೀಸು ಸಿಬ್ಬಂದಿಗೋಸ್ಕರ	೬-೮-೩
		ಟಪಾಲ್ ಖರ್ಚು	೧೩-೦-೩
		ಸಾದಿಲ್ವಾರು ಖರ್ಚು	೧೬-೬-೨
ದ್ವಿತೀಯವರ್ಗದ ಸಾಧಾರಣ ಸದಸ್ಯರುಗಳಿಂದ	೬೯-೦-೦	ಮುದ್ರಣದ ಖರ್ಚು	೯-೮-೦
		ದೀಪದ ಖರ್ಚು	೨-೧೨-೦
ಒಟ್ಟು	೬೬೩-೯-೫	ರಿಜಸ್ಟ್ರೇಷರ್ ಫೀಜು ಮೊದಲಾದ ಚಿಲ್ಲರೆ ಖರ್ಚು	೨೩-೯-೦
		ಒಟ್ಟು ಖರ್ಚು	೧೦೬-೧೧-೮
		ಶಿಲ್ಕು	೫೫೬-೧೩-೦
		ಒಟ್ಟು	೬೬೩-೯-೫

ಆಡಿಟರುಗಳು.

ಶಿಲ್ಕು ಪೈಕಿ ಮೈಸೂರು ಬ್ಯಾಂಕಿನಲ್ಲಿ	೫೪೨-೮-೫
ಕಾರ್ಯದರ್ಶಿಗಳಲ್ಲಿ	೧೪-೫-೪
ಒಟ್ಟು	೫೫೬-೧೩-೯

(೧) ಕೆ. ಕೃಷ್ಣಯ್ಯಂಗಾರ್,
(೨) ಲಕ್ಷ್ಮೀನರಸಿಂಹರಾವ್,

ಬಿ. ಕೃಷ್ಣಪ್ಪ,
ಕಾರ್ಯದರ್ಶಿ.

ಪರಿಷತ್ತು ಅಂದಿನಿಂದ (೧೯೧೫) ಇಂದಿನವರೆಗೆ (೨೦೧೫)ರವರೆಗೆ ಎಷ್ಟು ಬೆಳೆದಿದೆ ಎಂಬುದಕ್ಕೆ ಶತಮಾನದ ವರ್ಷದಲ್ಲಿ ಮಂಡಿಸಿದ (೨೦೧೪-೨೦೧೫) ೯೯ನೇ ವಾರ್ಷಿಕಾಧಿವೇಶನದ ಒಟ್ಟು ಆಯವ್ಯಯಗಳು ಹೀಗಿದೆ:

ಒಟ್ಟು ಜಮಾ	೬೭೦೮೦೪೬೬
ಒಟ್ಟು ವೆಚ್ಚ	೬೨೯೩೨೫೨೮
ಉಳಿತಾಯ	೪೧. ೪೭೯೩೮

ಪರಿಷತ್ತಿನ ಸಂಪನ್ಮೂಲ ಮತ್ತು ಸರ್ಕಾರದ ಅನುದಾನ ಸೇರಿದಂತೆ

ಒಟ್ಟು ಅಂದಾಜು ಆದಾಯ ೧೬,೭೭,೪೫೯೦೧ = ೦೦

ಒಟ್ಟು ಅಂದಾಜು ವೆಚ್ಚ ೧೪ ೯೯,೪೦೧೭೪=೦೦

ಉಳಿಕೆ ೧, ೭೮, ೦೫೭೨೭=೦೦

ಹಣಕಾಸಿನ ವಿಚಾರದಲ್ಲಿ ಪರಿಷತ್ತು ಹೇಗಿತ್ತು, ಹೇಗಾಗಿದೆ ಎಂಬುದನ್ನು ಮೇಲಿನ ೨ ಪಟ್ಟಿಗಳನ್ನು ತಿಳಿಸುತ್ತದೆ

೧೯೧೫-೧೬ ಮತ್ತು ೨೦೧೪-೨೦೧೫ರ ಆಯವ್ಯಯಪಟ್ಟಿಯನ್ನು ಹೋಲಿಸಿದರೆ ಪರಿಷತ್ತಿನ ಹಣಕಾಸು ವ್ಯವಹಾರ ಅಗಾಧವಾಗಿ ಬೆಳೆದಿದೆ ಎಂಬುದು ತಿಳಿಯುತ್ತದೆ.

ಇಷ್ಟಾದರೂ ಎಷ್ಟೋ ವಿಷಯಗಳಲ್ಲಿ ಸರ್ಕಾರದ ಅನುದಾನವನ್ನು ಪರಿಷತ್ತು ಅವಲಂಬಿಸಬೇಕಾಗಿದೆ. ಉದಾಹರಣೆಗೆ ಸಿಬ್ಬಂದಿಯ ಸಂಬಳ ಸಾರಿಗೆಗಳು ಸರ್ಕಾರದಿಂದ ಬರುತ್ತಿವೆಯಾದರೂ ಜಿಲ್ಲಾ – ತಾಲ್ಲೂಕು ಸಮ್ಮೇಳನಗಳಿಗೆ, ಶತಮಾನೋತ್ಸವ ಕಾರ್ಯಕ್ರಮಗಳಿಗೆ ಸರ್ಕಾರದ ಸಹಾಯವನ್ನು ಅವಲಂಬಿಸಲಾಗಿದೆ.

೨೦೧೪-೨೦೧೫ರಲ್ಲಿ ಸರ್ಕಾರ ನಾನಾ ಚಟುವಟಿಕೆಗಳಿಗಾಗಿ ೩, ೯೧, ೯೫,೭೯ರೂ. ಕೊಟ್ಟಿದೆ. ಆದರೆ ೪, ೨೫, ೧೪೭೩೯ ಖರ್ಚಾಗಿದೆ. ಹೀಗೆ ಸರ್ಕಾರದಿಂದ ಸಾಕಷ್ಟು ಉದಾರ ಸಹಾಯ ದೊರೆತರೂ ಪರಿಷತ್ತಿನ ವೆಚ್ಚಗಳನ್ನು ಸರಿದೂಗಿಸಲು ಸಾಕಷ್ಟು ಸಂಪನ್ಮೂಲಗಳು ಬೇಕಾಗಿವೆ.

ಈ ಹಿನ್ನೆಲೆಯಲ್ಲಿ ಪರಿಷತ್ತು ತನ್ನದೇ ಆದ ಆದಾಯ ಮೂಲವನ್ನು ಹೊಂದಿರಬೇಕು. ತನ್ನೆಲ್ಲ ವೆಚ್ಚಗಳನ್ನು ನಿಶ್ಚಿಂತೆಯಾಗಿ, ಸ್ವತಂತ್ರವಾಗಿ ನಿರ್ವಹಿಸುವಂತಿರಬೇಕು ಎಂದು ಮೊದಲಿನಿಂದಲೂ ಹಿಂದಿನ ಅಧ್ಯಕ್ಷರುಗಳು ಯೋಚಿಸಿ ಪ್ರಯತ್ನ ಮಾಡಿದ್ದಾರೆ. ನಿಬಂಧನೆಗಳಲ್ಲಿ ಇದಕ್ಕೆ ಅವಕಾಶಮಾಡಿದೆ. ಹೀಗಾಗಿ ಹಲವಾರು ಶಾಶ್ವತನಿಧಿಗಳ್ನು ಸ್ಥಾಪಿಸಲಾಗಿದೆ.

ಇವುಗಳಲ್ಲಿ ಆಜೀವ ಸದಸ್ಯತ್ವ ಚಂದಾ, ಆಜೀವ ಅಂಗಸಂಸ್ಥೆ ಚಂದಾ, ಪೋಷಕವರ್ಗ, ದಾತೃವರ್ಗ ಸದಸ್ಯತ್ವ ಚಂದಾ ಪ್ರತಿವರ್ಷ ಭಿನ್ನ ಪ್ರಮಾಣದಲ್ಲಿ ಸೇರ್ಪಡೆ ಆಗುತ್ತವೆ.

ದತ್ತಿನಿಧಿ, ಕನ್ನಡ ನಿಧಿ, ಅಮೃತನಿಧಿ ಪ್ರಕಟಣಾ ನಿಧಿ, ಕಟ್ಟಡನಿಧಿ, ಸಾಹಿತ್ಯ ಪರೀಕ್ಷಾನಿಧಿ, ಶತಮಾನೋತ್ಸವ ಶಾಶ್ವತನಿಧಿ, ರಾಜ್ಯೋತ್ಸವ ಪ್ರಶಸ್ತಿನಿಧಿ ಸೇವಾಂತ್ಯ ನಿಧಿಗಳಲ್ಲಿ ಕೆಲವು ಪರಿಷತ್ ಅಧ್ಯಕ್ಷರ ಪ್ರಯತ್ನದಿಂದ ಸ್ಥಾಪಿತವಾಗಿವೆ. ಇಷ್ಟಾದರೂ ಪರಿಷತ್ತು ತನ್ನೆಲ್ಲ ಖರ್ಚುಗಳನ್ನು ತಾನೇ ನಿಭಾಯಿಸುವಷ್ಟು ಬಡ್ಡಿ ಆದಾಯ ಬರುವ ಪ್ರಮಾಣದಲ್ಲಿ ಶಾಶ್ವತನಿಧಿಗಳನ್ನು ಹೊಂದಿಲ್ಲ. ಆಕಡೆ ಇನ್ನೂ ವಿಶೇಷ ಗಮನನೀಡಬೇಕು.

ಪರಿಷತ್ತು ಕರ್ನಾಟಕದ ಏಕೈಕ ಪ್ರಾತಿನಿಧಿಕ ಸಂಸ್ಥೆ ಆಗಿದೆ. ಸಂಪೂರ್ಣ ಸ್ವಾವಲಂಬನೆ ಹಿನ್ನೆಲೆಯಲ್ಲಿ ಭಾರಿ ಮೊತ್ತದ ಶಾಶ್ವತನಿಧಿಗಳು ಹೆಚ್ಚಬೇಕು.

ಕೇವಲ ನೂರು ಸಾವಿರಗಳ ಸದಸ್ಯತ್ವ ಇದ್ದುದ್ದು ೨ ಲಕ್ಷಮೀರಿ ಹೆಚ್ಚಿರುವುದು ಸಂತಸದ ಸಂಗತಿ ಆದರೂ ಅನೇಕ ಸಮಸ್ಯೆಗಳನ್ನು ತಂದೊಡ್ಡಿದೆ. ಇಂದು ಉದಾಹರಣೆಗೆ ಕನ್ನಡಿನುಡಿಯನ್ನು ಉಚಿತವಾಗಿ ಎಲ್ಲ ಸದಸ್ಯರಿಗೆ ಕಳಿಸಲು, ಆಹ್ವಾನಪತ್ರವನ್ನು ಎಲ್ಲರಿಗೂ ಕಳಿಸಲು ೨ ಲಕ್ಷಕ್ಕೂ ಹೆಚ್ಚಿನ ಸದಸ್ಯರಿರುವ ಪರಿಷತ್ತಿಗೆ ಲಕ್ಷಗಟ್ಟಲೆ ಹಣ ಖರ್ಚಾಗುತ್ತದೆ.

ಈ ಹಿನ್ನೆಲೆಯಲ್ಲಿ ನಿಬಂಧನೆಗಳಲ್ಲಿ ಸೂಕ್ತ ಬದಲಾವಣೆಗಳಾಗಬೇಕು. ಸದಸ್ಯತ್ವದ ಅರ್ಹತೆ ನಿಗದಿ, ದತ್ತಿನಿಧಿಗಳಿಗೆ ಕನಿಷ್ಠ ಮೊತ್ತ ಹೆಚ್ಚಿಸುವುದು ಪುಸ್ತಕ ಮಾರಾಟ ಹೆಚ್ಚಿಸುವುದು. ಅಂಚೆವೆಚ್ಚ ಕಡಿಮೆಗೊಳಿಸುವ ರೀತಿ, ಭಾರಿ ಮೊತ್ತದ ದತ್ತಿನಿಧಿ ಸಂಗ್ರಹ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇಕು.

ಈ ದಿಸೆಯಲ್ಲಿ ಕೆಲವು ಶಾಶ್ವತ ನಿಧಿಸ್ಥಾಪನೆ ಪ್ರಯತ್ನಗಳು ನಡೆದಿವೆ. ಉದಾಹರಣೆಗೆ ಪರಿಷತ್ತಿನ ನಿರ್ವಹಣೆ ಹಾಗೂ

ಇನ್ನಿತರ ಖರ್ಚುಗಳಿಗಾಗಿ ಹಣಕಾಸಿನ ಅಡಚಣೆ ಉಂಟಾಗಬಾರದೆಂಬ ಉದ್ದೇಶದಿಂದ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಿ **ಅಮೃತನಿಧಿ** ಎಂಬ ಸ್ಥಾಯಿನಿಧಿಯನ್ನು ಗೊ.ರು. ಚನ್ನಬಸಪ್ಪನವರು ಸ್ಥಾಪಿಸಿದರು. ಡಾ. ನಲ್ಲೂರು ಪ್ರಸಾದ್ ಆರ್.ಕೆ. ಅವರು **ಕನ್ನಡ ನಿಧಿ** ಎಂಬ ಸ್ಥಾಯಿನಿಧಿಯನ್ನು ಸ್ಥಾಪಿಸಿದರು.

ಶತಮಾನೋತ್ಸವ ವರ್ಷದಲ್ಲಿ ಅಧ್ಯಕ್ಷರಾಗಿರುವ ಶ್ರೀ ಪುಂಡಲೀಕ ಹಾಲಂಬಿ ಅವರು **ಶತಮಾನೋತ್ಸವ ಶಾಶ್ವತ ನಿಧಿ** ಸ್ಥಾಪಿಸಿದ್ದಾರೆ.

ಈ ರೀತಿಯ ಶಾಶ್ವತನಿಧಿ ಸ್ಥಾಪನೆ ಪ್ರಯತ್ನಗಳು ಹೆಚ್ಚಾಗಬೇಕು. ಈ ಹಿನ್ನೆಲೆಯಲ್ಲಿ ದತ್ತಿನಿಧಿಗಳು ಮಹತ್ವದ ಪಾತ್ರವಹಿಸಿವೆ. ದತ್ತಿನಿಧಿಗಳೂ ಕಾರ್ಯಕ್ರಮಕ್ಕೆ ಸಂಬಂಧಿಸಿದರೆ ಶಾಶ್ವತನಿಧಿಯಾದರೆ ಸಂಸ್ಥೆಯ ಶಾಶ್ವತನಿಧಿಗಳು ಅದರ ನಿರ್ವಹಣೆಗೆ ಉಪಯುಕ್ತವಾಗಿರುತ್ತದೆ.

ದತ್ತಿನಿಧಿ ಮೂಲಪತ್ರಗಳ ಸಂಗ್ರಹ

ದತ್ತಿನಿಧಿ ಮೂಲಪತ್ರಗಳನ್ನು ಅಚ್ಚುಮಾಡುವ ಪರಿಪಾಠ ಹಿಂದೆ ಇತ್ತು. ಡಿ. ಚಂಪಾಬಾಯಿ ಅವರು ಮಹಿಳಾ ಕಾರ್ಯದರ್ಶಿಗಳಾದಾಗ ಪರಿಷತ್ತಿನ ದತ್ತಿನಿಧಿಗಳು ಎಂದು ತಮ್ಮ ಕಾಲದಲ್ಲಿ ಪರಿಷತ್ತಿನಲ್ಲಿದ್ದ ದತ್ತಿನಿಧಿ ಪತ್ರಗಳ ಪುಸ್ತಕವನ್ನು ಪ್ರಕಟಿಸಿದ್ದರು. ದತ್ತಿನಿಧಿ ಮೂಲಪ್ರತಿಗಳ ಪ್ರತಿಯೊಂದನ್ನು ದಾನಿಗಳಿಗೆ ದಾಖಲೆಗಾಗಿ ಹಿಂದೆ ಕೊಡಲಾಗುತ್ತಿತ್ತು. ಆಯಾ ವರ್ಷದ ವಾರ್ಷಿಕವರದಿಗಳಲ್ಲಿ ನಿಬಂಧನೆಗಳಲ್ಲಿ ನುಡಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದುಂಟು. ದಾನಿಗಳಲ್ಲಿ ಕೆಲವರು ಜೋಪಾನವಾಗಿಟ್ಟುಕೊಂಡಿರುತ್ತಾರೆ. ಅಂಥವರಿಂದ ಪರಿಷತ್ತಿನಲ್ಲಿ ಇಲ್ಲದ ಮೂಲಪತ್ರಗಳನ್ನು ನಕಲು ಮಾಡಿಕೊಂಡು ಇಟ್ಟುಕೊಳ್ಳಬೇಕು. ೧೯೭೭ರಲ್ಲಿ ಪರಿಷತ್ತಿನಿಂದ ಒಂದು ಬಿನ್ನಹ ಕಳಿಸಲಾಗಿತ್ತು. ಮೂಲನಿಧಿಯನ್ನು ದಾನಿಗಳು ಹೆಚ್ಚಿಸಬೇಕು. ಹಳೆಯ ನಿಧಿಯ ಬಡ್ಡಿಯಿಂದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿಲ್ಲ. ಆಗ ತೂಬುಗೆರೆ ನಂಜಪ್ಪನವರು ನೀಡಿದ ದತ್ತಿಗೆ ಸಂಬಂಧಿಸಿದ ಪರಿಷತ್ತಿನ ದಾಖಲೆಗಳ ಕಡತವೊಂದನ್ನು ಅವರ ಕಡೆಯವರು ಪರಿಷತ್ತಿಗೆ ತಂದಿದ್ದರು. ಅದರಲ್ಲಿ ಮೂಲದ್ರವ್ಯ, ದತ್ತಿನಿಧಿ ಕಾರ್ಯಕ್ರಮಗಳ ನೋಟೀಸುಗಳು ಪತ್ರಿಕೆಯಲ್ಲಿ ಬಂದ ವರದಿಗಳು ಪರಿಷತ್ತು ಬರೆದ ಪತ್ರಗಳು ಇತ್ಯಾದಿ ಎಲ್ಲವನ್ನೂ ಅಚ್ಚುಕಟ್ಟಾಗಿ ಕ್ರಮಬದ್ಧವಾಗಿ ಜೋಡಿಸಲಾಗಿತ್ತು. ಆ ಕಡತದಿಂದ ಪರಿಷತ್ತಿನಲ್ಲಿ ಕಳೆದು ಹೋದ ಮೂಲಪ್ರತಿಯ ನಕಲನ್ನು ಪಡೆದುಕೊಳ್ಳಲಾಯಿತು.

ನಿಮ್ಮ ದತ್ತಿನಿಧಿಯಿಂದ ಮೊದಲಿನ ಹಾಗೆ, ಚರಪು ಹಂಚಿಕೆ ಮಾಡುತ್ತಿಲ್ಲ ದೇವರನಾಮ ಸ್ಪರ್ಧೆ ಕಾಲದಲ್ಲಿ ನಿಧಿಮೊತ್ತ ಹೆಚ್ಚಿಸಿ ಎಂಬ ಕೇಳಲು ನಾನು ನಮ್ಮ ಮಿತ್ರರು (ನಾವೆಲ್ಲಾ ಆಗ ವಿದ್ಯಾರ್ಥಿಗಳು ಸ್ಪರ್ಧೆಗೆ ಚರಪಿನ ಆಸೆಗೆ ಹೋಗುತ್ತಿದ್ದೆವು) ಎ. ಆರ್. ಕೃ ಅವರ ಮನೆಗೆ ಹೋಗಿ ಕೇಳಿದಾಗ "ದೊಡ್ಡವರ ವಿಷಯ ನಿಮಗ್ಯಾಕೆ ನನಗೆ ಗೊತ್ತಿದೆ ಏನು ಮಾಡಬೇಕು ಅಂತ" ಹೇಳಿ, ಡ್ರಾಯರ್ ತೆಗೆದು ಪೆಪ್ಪರ್‌ಮೆಂಟ್ ಚಾಕಲೇಟ್ ಕೊಟ್ಟು ಕಳಿಸಿದರು. ಆಗ ಅವರು ಎನ್. ಆರ್. ಕಾಲೋನಿಯ ಮನೆಯಲ್ಲಿದ್ದರು. ಪರಿಷತ್ತಿನ ಕೋರಿಕೆ ಮೇರೆಗೆ ಹಲವರು ಮೂಲನಿಧಿಯನ್ನು ಹೆಚ್ಚಿಸಿದ್ದಾರೆ. ಮತ್ತು ಕಾರ್ಯಕ್ರಮಗಳು ನಡೆಯದ ವರ್ಷಗಳಲ್ಲಿ ಆ ವರ್ಷದ ಬಡ್ಡಿ ಹಣವನ್ನು ಮೂಲನಿಧಿಗೆ ಸೇರಿಸುವುದರಿಂದ ಸ್ವಲ್ಪಮಟ್ಟಿಗೆ ಬಡ್ಡಿ ಮೊತ್ತ ಅಲ್ಪಪ್ರಮಾಣದಲ್ಲಿ ಹೆಚ್ಚಿದೆ.

ದತ್ತಿನಿಧಿಗಳ ಎಲ್ಲಾ ಮೂಲಪತ್ರಗಳು ಈಗ ಪರಿಷತ್ತಿನಲ್ಲಿ ಲಭ್ಯವಿಲ್ಲ. ಸಂಗ್ರಹ ಆಗಬೇಕು. ಅವುಗಳ ವಿವರ, ಭಾಷೆ, ಮೊತ್ತ, ಆಶಯಗಳ ಅಧ್ಯಯನ ಮಾಡಿದರೆ ಒಂದು ಎಮ್‌ಫಿಲ್ ಗ್ರಂಥ ರಚಿಸಬಹುದು. ಮತ್ತು ಮೂಲಪತ್ರಗಳಲ್ಲಿ ಅನೇಕ ಉಪಯುಕ್ತ ಮಾತುಗಳಿವೆ. ಅವುಗಳು ಈಗಿನ ದತ್ತಿನಿಧಿ ಪಟ್ಟಿಯಲ್ಲಿ ಕಾಣುವುದಿಲ್ಲ.

ದತ್ತನಿಧಿ ಸ್ಥಾಪನೆಗೆ ಸಾಮಾನ್ಯವಾಗಿ ನಗದು ಅಥವಾ ಚೆಕ್ ರೂಪದಲ್ಲಿ ಹಣಕೊಡಲಾಗುತ್ತದೆ. ಆದರೆ ಉಯಿಲಿನ ಮಾದರಿ ಮೂಲಕ ದತ್ತಿನಿಧಿ ಕೊಟ್ಟ ವಿಶಿಷ್ಟ ನಿದರ್ಶನವನ್ನು ನೋಡಬಹುದು ಅದರ ವಿವರ ಇಲ್ಲಿದೆ.

ಉಯಿಲು

"ಕಥೆಗಾರ ಶ್ರೀ ಅಶ್ವತ್ಥ ಹಾಗೂ ಶ್ರೀಮತಿ ಲಲಿತಾ ಅಶ್ವತ್ಥ ಪ್ರಕಟಣಾ ನಿಧಿ"

ದಿ : 'ಕೆ. ಅಶ್ವತ್ಥನಾರಾಯಣರಾವ್, ಮೈಸೂರು, ಅವರ ಉಯಿಲಿನಲ್ಲಿ ಉಲ್ಲೇಖವಾಗಿರುವ, ಪ್ರಕಟಣೆಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆಯ ಬಗೆಗೆ ಉಯಿಲಿನ ಕಾರ್ಯನಿರ್ವಾಹಕರಾಗಿರುವ ಕೆನರಾ ಬ್ಯಾಂಕಿನ ಇ. ಟಿ. ಟಿ. ಶಾಖೆಯ ಸೀನಿಯರ್ ಮ್ಯಾನೇಜರ್ (ಹಿರಿಯ ವ್ಯವಸ್ಥಾಪಕ) ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಮಧ್ಯೆ ಆಗಿರುವ ಒಪ್ಪಂದದ ಕರಾರು ಪತ್ರ,

೧. ಉಯಿಲಿನ ಕ್ರಮಸಂಖ್ಯೆ ೧೦ 'ಸಿ'(೧)ರಲ್ಲಿ ಉಲ್ಲೇಖವಾಗಿರುವ ಒಂದು ಲಕ್ಷ ರೂ. ಗಳ ಬಡ್ಡಿಯನ್ನು ಕೆನರಾ ಬ್ಯಾಂಕ್ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಬೇಕು. ಇದಕ್ಕೆ ಬ್ಯಾಂಕು ಒಂದು ಸ್ಥಾಯೀ ಆದೇಶ ಹೊರಡಿಸಬೇಕು.

೨. ಈ ಮೊಬಲಿಗಿನಿಂದ ಪರಿಷತ್ತು, ಶ್ರೀ ಅಶ್ವತ್ಥ ಅವರ ಪುಸ್ತಕಗಳನ್ನು ಹಣದ ಅವಕಾಶ ನೋಡಿಕೊಂಡು ಮುದ್ರಿಸಿ ಮಾರಾಟ ಮಾಡಬೇಕು. ಮುದ್ರಿಸಬೇಕಾದ ಪುಸ್ತಕಗಳ ಶೀರ್ಷಿಕೆಯ ಆಯ್ಕೆ, ಬೆಲೆ ಹಾಗೂ ಪ್ರತಿಗಳ ಸಂಖ್ಯೆ ಇತ್ಯಾದಿಗಳನ್ನು ಪರಿಷತ್ತು ನಿರ್ಧರಿಸುತ್ತದೆ. ಬ್ಯಾಂಕಿನಿಂದ ಬರುವ ಹಣ ಹಾಗೂ ಪುಸ್ತಕ ಮುದ್ರಣಕ್ಕೆ ಬೇಕಾಗುವ ಹಣ ಇವುಗಳನ್ನು ಲೆಕ್ಕ ಹಾಕಿ, ಪುಸ್ತಕ ಪ್ರಕಟಣೆಗೆ ಒಂದು ವರ್ಷದ ಬಡ್ಡಿ ಸಾಲದೆ ಬಂದರೆ ೨-೩ ವರ್ಷಗಳ ಬಡ್ಡಿ ಹಣ ಕೂಡಿಸಿಕೊಂಡು ಪುಸ್ತಕ ಪ್ರಕಟಿಬಹುದು. ಪ್ರಕಟವಾದ ಪುಸ್ತಕದ ಒಂದು ಪ್ರತಿಯನ್ನು ಕೆನರಾ ಬ್ಯಾಂಕ್‌ನ ಇ. ಟಿ.ಟಿ. ಶಾಖೆಗೆ ಕಳುಹಿಸಬೇಕು.

೩. ಈ ರೀತಿ ಪ್ರಕಟಿಸಿ ಮಾರಾಟದ ಪುಸ್ತಕಗಳಿಂದ ಬಂದ ಹಣವನ್ನು **'ಲಲಿತಾ ಅಶ್ವತ್ಥ ಪ್ರಕಟಣಾ ನಿಧಿ'** ಎಂಬ ಹೆಸರಿನಲ್ಲಿ ಪ್ರತ್ಯೇಕವಾಗಿಟ್ಟು ಪರಿಷತ್ತು ಆ ಹಣವನ್ನು ಉದಯೋನ್ಮುಖ ಅರ್ಹ ಬರಹಗಾರರ ಕೃತಿಗಳ ಪ್ರಕಟಣೆಗಾಗಿ ಬಳಸತಕ್ಕದ್ದು.

೪. ಪ್ರಸ್ತಾಪಿತ ನಿಧಿಯ ಬಳಕೆಯಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳಿಗೆ ಪರಿಷತ್ತಿನ ಅಧ್ಯಕ್ಷರು ಕೆನರಾ ಬ್ಯಾಂಕಿನ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಪರಿಹರಿಸಿಕೊಳ್ಳಲು ಅವಕಾಶವಿರುತ್ತದೆ.

ದತ್ತಿನಿಧಿ ಮೇಲುಸ್ತುವಾರಿ ಸಮಿತಿ ಬೇಕು

ಪರಿಷತ್ತಿನ ದತ್ತಿನಿಧಿಗಳನ್ನು ಕೇಂದ್ರಕ್ಕೆ ಮತ್ತು ಇತರ ಎಲ್ಲಾ ಜಿಲ್ಲೆಗಳಿಗೆ ತಾಲ್ಲೂಕುಗಳಿಗೆ ಕಾರ್ಯಕ್ರಮ ನಡೆಸಲು ಹಂಚಲಾಗಿದೆ. ಆದರೆ ಎಷ್ಟರಮಟ್ಟಿಗೆ ಈ ದತ್ತಿನಿಧಿ ಕಾರ್ಯಕ್ರಮಗಳು ಸಾರ್ಥಕ ರೀತಿಯಲ್ಲಿ ಸಮರ್ಪಕವಾಗಿ ನಡೆಯುತ್ತವೆ ಎಂಬುದನ್ನು ಪರಿಶೀಲಿಸಲು ಆಯಾ ಜಿಲ್ಲಾ ಸಮಿತಿ ಅಧ್ಯಕ್ಷರಿಗೆ ಬಿಡಲಾಗಿದೆ. ಎಷ್ಟೋ ಕಡೆ ದತ್ತಿನಿಧಿ ಕಾರ್ಯಕ್ರಮಗಳು ಅದ್ದೂರಿಯಾಗಿ ನಡೆದಿವೆ, ಕೆಲವೆಡೆ ಸಾಧಾರಣವಾಗಿ ನಡೆದಿವೆ. ಕೆಲವು ಕಡೆ ನಡೆದಿಲ್ಲ. ಇವೆಲ್ಲದರ ಮೇಲುಸ್ತುವಾರಿಗೆ ಒಂದು ಸಮಿತಿ ಇರಬೇಕಾದದ್ದು ಅತ್ಯಗತ್ಯವಾಗಿದೆ. ಇದಕ್ಕಾಗಿ ಉಪನಿಯಮಾವಳಿ ರಚನೆ ಆಗಬೇಕು.

ಗ್ರಂಥ ಭಂಡಾರ ದತ್ತಿನಿಧಿಗಳು

ಪಟ್ಟಿ – ೧

ಪರಿಷತ್ತಿನ ಗ್ರಂಥಭಂಡಾರಕ್ಕೆ ೨೦೧೪–೧೫ರಲ್ಲಿ ಸೇರ್ಪಡೆ ಆದ ನೂತನ ಪುಸ್ತಕಗಳ ವಿವರ

೨೦೧೪ನೆಯ ಸಾಲಿನಲ್ಲಿ ಇದ್ದ ಗ್ರಂಥ ಸಂಖ್ಯೆ	೯೯೭೮೬
೨೦೧೫ರ ಕೊನೆಗೆ ಇದ್ದ ಗ್ರಂಥಗಳ ಸಂಖ್ಯೆ	೧೦೩೪೨೭

೨೦೧೪-೨೦೧೫ ಸಾಲಿನಲ್ಲಿ ಸೇರ್ಪಡೆ ಆದ ಸಂಖ್ಯೆ ೩೬೪೧

ಇವುಗಳಲ್ಲಿ ಉಚಿತವಾಗಿ (ವಿಮರ್ಶೆಗೆ, ಸ್ವೀಕಾರಕ್ಕೆ) ಬಂದವು ೩೬೪೧

ಗ್ರಂಥಭಂಡಾರಕ್ಕೆ ಕೊಂಡಿರುವ ಪುಸ್ತಕಗಳು ಒಂದೂ ಇಲ್ಲ.

ಶ್ರೀ ಎಸ್. ಕಂಠೀರವ ಸ್ವಾಮಿ ದತ್ತಿ (೫೦ರೂ)

ವೆಂ. ವೆಂಕಟಸುಬ್ಬಯ್ಯ ದತ್ತಿ (೨೦೦)ರೂ

ಈ ೨ ದತ್ತಿಗಳ ಬಡ್ಡಿಯಿಂದ ಕೊಂಡ ಪುಸ್ತಕಗಳು.

೨೦೧೪-೧೫ನೇ ಸಾಲಿನ ಒಟ್ಟು ಆದಾಯ ೬,೭೦,೮೦,೪೬೬ರೂ

ಒಟ್ಟು ವೆಚ್ಚ ೬,೨೯,೩೨,೫೨೮ ರೂ

(ಆಕರ: ಅನುಬಂಧ ೧೦, ೨೦೧೪-೧೫ ವಾರ್ಷಿಕ ವರದಿ)

ಉಳಿತಾಯ ೪೧,೯೪,೯೨೮ರೂ ನಲವತ್ತೊಂದು ಲಕ್ಷ ತೊಂಬತ್ತು ಸಾವಿರದ ಒಂಬೈನೂರ ಇಪ್ಪತ್ತೆಂಟು ರೂ.

ಪಟ್ಟಿ – ೨

ಪರಿಷತ್ತಿನ ೪ನೇ ವರ್ಷದ ೧೯೧೮-೧೯೧೯ನೇ ಸಾಲಿನ ಆಯವ್ಯಯ ಪಟ್ಟಿ

ಪ್ರಕಾರ	ರೂ.	ಆ.		ಪೈ
ಒಟ್ಟು ಆದಾಯ	೫೬೬೩ –	೧೧	–	೪
		ರೂ.	ಆ.	ಪೈ
ಇದರಲ್ಲಿ ಭಂಡಾರಕ್ಕೆ ತರಿಸಿದ ಪುಸ್ತಕಗಳ ಖರ್ಚು		೩೬೦ –	೧೧	– ೦
ಮಾಸಪತ್ರಿಕೆಗಳ ಚಂದಾ		೧೩೦ –	೧೪	– ೦

ಈ ಎರಡು ಗ್ರಂಥಭಂಡಾರದ ಪಟ್ಟಿಗಳನ್ನು ಕಂಡಾಗ ಆಶ್ಚರ್ಯ ವಿಷಾದಗಳೆರಡೂ ಆಗುತ್ತವೆ. ೬ ಕೋಟಿ ೭೦ ಲಕ್ಷಕ್ಕೂ ಮಿಕ್ಕ ಆದಾಯವಿದ್ದು ೪೧ ಲಕ್ಷಕ್ಕೂ ಮಿಕ್ಕ ಹಣ ಉಳಿತಾಯವಾಗಿದ್ದರೂ ಪುಸ್ತಕ ಭಂಡಾರಕ್ಕೆ ಒಂದು ಪುಸ್ತಕವನ್ನೂ ಕೊಳ್ಳದಿರುವುದು ತೀರಾ ವಿಷಾದಕರ ಸಂಗತಿ. ೯೬ ವರ್ಷಗಳ ಹಿಂದೆ ಪರಿಷತ್ತಿನ ಆದಾಯ ೫೬೬೩ ರೂ ೧೧ ಆಣೆ ೭ ಪೈಸೆ ಇದ್ದಾಗ ೧೩೦ ರೂ ೧೪ ಆಣೆ ಪತ್ರಿಕೆಗಳನ್ನು ೩೬೦ ರೂ ೧೧ ಆಣೆ ರೂಗಳನ್ನು ಪುಸ್ತಕ ಕೊಂಡಿದ್ದನ್ನು ಕಂಡಾಗ ಈಚಿನ ಅಧ್ಯಕ್ಷರ ಕಾರ್ಯಸಮಿತಿಯ ಗ್ರಂಥ ಪ್ರೇಮ ಎದ್ದು ಕಾಣುತ್ತದೆ.

ಹಂಪನಾ ಅವರ ಕಾಲದಲ್ಲಿ ಪುಸ್ತಕ ಕೊಳ್ಳುವ ವಿಷಯದಲ್ಲಿ ಒಂದು ನಿಯಮ ಮಾಡಿತ್ತು. ಯಾವ ಲೇಖಕನೇ ಆಗಲಿ, ಸಂಪಾದಕನೇ ಆಗಲಿ ಅನುವಾದಕಾರನೇ ಆಗಲಿ, ಪುಸ್ತಕ ಸಂಸ್ಥೆ ಆಗಲಿ ಪ್ರಕಟಿತ ಪುಸ್ತಕ ತಂದಾಗ ರಿಯಾಯಿತಿ ದರದಲ್ಲಿ ಪುಸ್ತಕ ಭಂಡಾರಕ್ಕೆ ಕೊಳ್ಳಬೇಕು. ಭಂಡಾರದಲ್ಲಿ ಇಲ್ಲದ ಪುಸ್ತಕವಾದರೆ ಕನಿಷ್ಠ ೨ ಪ್ರತಿಗಳು ನಿಘಂಟು ಕಚೇರಿ, ಖಾಯಂ ಪುಸ್ತಕ ಪ್ರದರ್ಶನ ಇತ್ಯಾದಿಗಳಿಗೆ ಬೇಕಾದಾಗ ಅಧಿಕ ಪ್ರತಿಗಳನ್ನು ಸ್ಥಳದಲ್ಲೇ ಕೊಂಡು ನಗದು ಕೊಡಬೇಕು. ಹೀಗಾಗಿ ಸಾವಿರಕ್ಕೂ ಮಿಕ್ಕ ಪುಸ್ತಕ ಭಂಡಾರ ಸೇರಿತು. ಆಮೇಲೆ ಆ ವ್ಯವಸ್ಥೆ ಮುಂದುವರೆಯಲಿಲ್ಲ. ಇಂದು ಪ್ರಕಟವಾಗುತ್ತಿರುವ ಪುಸ್ತಕಗಳಲ್ಲಿ ಅಮೂಲ್ಯ ಆಕರಗ್ರಂಥಗಳು ಪರಿಷತ್ತಿನ ಪುಸ್ತಕ ಭಂಡಾರದಲ್ಲಿ ಇಲ್ಲ. ಏಕೆಂದರೆ ಪುಸ್ತಕ ಕೊಳ್ಳಲು ಹಣವನ್ನೇ ಮೀಸಲಿಟ್ಟಿಲ್ಲ. ಇದು ವಿಷಾದದ ಸಂಗತಿ.

ಈ ಹಿನ್ನೆಲೆಯಲ್ಲಿ ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಪುಸ್ತಕ ಕೊಳ್ಳಲು ದತ್ತಿನಿಧಿಗಳು ಹೆಚ್ಚಾಗಬೇಕಾಗಿದೆ.

ಪರಿಷತ್ತಿನ ಪುಸ್ತಕ ಭಂಡಾರದಲ್ಲಿ ೨ ವಿಭಾಗಗಳಿವೆ. ಒಂದು ಸದಸ್ಯರಿಗೆ ಗ್ರಂಥಗಳನ್ನು ಮನೆಗೆ ಕೊಡುವ ವಿಭಾಗ,

ಇನ್ನೊಂದು ಪರಿಷತ್ತಿನಲ್ಲೇ ಪರಾಮರ್ಶೆಗಾಗಿ ಇರುವ ಸಂಶೋಧನ ವಿಭಾಗ. ಈ ಎರಡೂ ವಿಭಾಗಗಳಿಗೂ ಮತ್ತು ನಿಘಂಟು ಕಚೇರಿಗೆ ಬೇಕಾದ ಪುಸ್ತಕಗಳನ್ನು ಖಾಯಂ ಆಗಿ ಕೊಳ್ಳಲು ಪರಿಷತ್ತಿನ ಶತಮಾನದ ವರ್ಷದಲ್ಲಾದರೂ ವ್ಯವಸ್ಥೆ ಆಗಬೇಕಾಗಿದೆ. ಪರಿಷತ್ತಿನ ಅಂದಾಜು ಆಯವ್ಯಪಟ್ಟಿಯಲ್ಲಿ ಗ್ರಂಥಭಂಡಾರದ ವೆಚ್ಚ ಮತ್ತು ಪುಸ್ತಕಕೊಳ್ಳಲು ಹಣದ ಮೊತ್ತ ನಿಗದಿಮಾಡಬೇಕು.

ಈ ಸಂದರ್ಭದಲ್ಲಿ ಮಾಸ್ತಿ ಅವರೊಡನೆ ನಡೆದ ಪ್ರಸಂಗವೊಂದನ್ನು ಇಲ್ಲಿ ಹೇಳಬೇಕು.

೧೯೭೭ರಲ್ಲಿ ನಾನು ಪರಿಷತ್ತಿನ ಗೌರವ ಕಾರ್ಯದರ್ಶಿ ಆಗಿದ್ದಾಗ ಪರಿಷತ್ತಿಗೆ ಮಾಸ್ತಿ ಅವರು ಸಮಿತಿಯ ಸಭೆಯೊಂದಿಗೆ ಮಾರ್ಗದರ್ಶಕರಾಗಿ ಸಲಹೆ ನೀಡಲು ಆಹ್ವಾನಿಸಲಾಗಿತ್ತು. ಅದರಂತೆಯೇ ಬಂದರು ಅವರು. ಆಗ ಪರಿಷತ್ತಿನ ನಿಯಮಾವಳಿಯಂತೆ ಪರಿಷತ್ತಿನ ಸಮಿತಿಯ ಸಭೆಗಳಿಗೆ ಬಂದವರಿಗೆ ಪ್ರಯಾಣ ವೆಚ್ಚವಾಗಿ ಆಟೋ ಚಾರ್ಜನ್ನು ನಗರದಲ್ಲಿರುವವರಿಗೆ ಕೊಡಲಾಗುತ್ತಿತ್ತು. ಆ ಪ್ರಕಾರ ಮಾಸ್ತಿ ಅವರಿಗೆ ಕೊಡಲು ಬಂದಾಗ, 'ಹುಚ್ಚುಹುಡುಗ ನೀನು' ಎಂದು ಎಂದು ಮಾಸ್ತಿ ನಕ್ಕರು. ಈ ಸಂಸ್ಥೆಗೆ ನಾವು ನಮ್ಮ ಕೈಲಾದಷ್ಟು ಧನಸಹಾಯ ಮಾಡಬೇಕಾದ್ದು ಕರ್ತವ್ಯ ಅಂತಹದ್ದರಲ್ಲಿ ಪರಿಷತ್ತಿನಿಂದ ಯಾವ ರೂಪದಲ್ಲಿ ಆಗಲಿ ಹಣ ಪಡೆಯುವುದಲ್ಲ ಎಂದರು. ನಾನು ಪರಿಷತ್ತು ನಿಯಮಾನುಸಾರ ನಡೆಯುವ ಸಂಸ್ಥೆ. ನೀವು ಅಧ್ಯಕ್ಷರಾಗಿ ಪರಿಷತ್ತನ್ನು ನಿಯಮಾನುಸಾರ ನಡೆಸಿದ್ದೀರಿ ಆದ್ದರಿಂದ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದೆ ಅದಕ್ಕವರು ನಿಯಮಕ್ಕಿಂತ ಆದರ್ಶ ಧ್ಯೇಯ ಪರಿಷತ್ತಿನ ಹಿತ ಮುಖ್ಯ. ತೆಗೆದುಕೊಳ್ಳಲ್ಲ' ಎಂದರು. ಆಗ ಒಂದು ಕೆಲಸ ಮಾಡಿ ಪುಸ್ತಕ ಭಂಡಾರಕ್ಕೆ ಪುಸ್ತಕದಾನ ಮಾಡುತ್ತೇನೆ ನಿಮ್ಮ ಹೆಸರಿನಲ್ಲಿ. ವೋಚರಿಗೆ ಸಹಿ ಮಾಡಿ ಎಂದಾಗ "ಪರಿಷತ್ತಿನ ಪುಸ್ತಕ ಭಂಡಾರವನ್ನು ನಾಡಿನ ಎಲ್ಲ ಜನರೂ ಬೆಳೆಸಬೇಕು. ಹಾಗೇ ಮಾಡು. ಪರಿಷತ್ತಿನಲ್ಲಿ ಕನ್ನಡದಲ್ಲಿ ಪ್ರಕಟವಾದ ಎಲ್ಲ ಪುಸ್ತಕಗಳು ಇರಲೇಬೇಕು. ಅಲ್ಲಿ ಇಲ್ಲದ ಪುಸ್ತಕ ಹಾಕು" ಎಂದು ಸಹಿ ಮಾಡಿದರು.

ಜೈನರಲ್ಲಿ ಶಾಸ್ತ್ರದಾನ ಎಂಬುದಿದೆ. ಅಂಥ ದಾನ ಮಾಡುವವರೆಲ್ಲ ಪರಿಷತ್ತಿಗೆ ಗ್ರಂಥದಾನ ಮಾಡಿದರೆ ಕನ್ನಡ ಗ್ರಂಥ ಭಂಡಾರ ಬೆಳೆಯುತ್ತದೆ. ನಮ್ಮ ನಾಡಿನ ಇತರ ಜನರೂ ಪುಸ್ತಕದಾನವನ್ನು ಮನಸ್ಸು ಮಾಡಿದರೆ ಮಾಡಲು ಶಕ್ಯ. ಒಟ್ಟಿನಲ್ಲಿ ಕನ್ನಡ ಭಾಷೆಯ ಎಲ್ಲ ಪುಸ್ತಕಗಳೂ ಪರಿಷತ್ತಿನಲ್ಲಿ ದೊರೆಯಬೇಕು.

ಅನುಬಂಧ

ಪರಿಷತ್ತಿನ ದತ್ತಿನಿಧಿಗಳ ಪಟ್ಟಿ

೧೯೩೫ರಿಂದ ೨೦೧೫ವರೆಗೆ ದತ್ತಿನಿಧಿಗಳ ಪಟ್ಟಿಯನ್ನು ಗ್ರಂಥದ ಕೊನೆಯಲ್ಲಿ ಅನುಬಂಧ-೧ರಲ್ಲಿ ಕೊಡಲಾಗಿದೆ. ಹೀಗೆ ವಿವರ ಕೊಡುತ್ತಿರುವುದರಲ್ಲಿ ಕೆಲವು ವಿಚಾರಗಳಿವೆ.

೧. ದತ್ತಿದಾನಿಗಳಿಗೆ ಇಲ್ಲಿಯ ದತ್ತಿಗಳನ್ನು ನೋಡಿ ನಾವೂ ಕೊಡಬೇಕು ಎಂಬ ಪ್ರೇರಣೆ ಬರಬೇಕು.

೨. ಹೊಸ ವಿಷಯಗಳ ಮೇಲೆ ದತ್ತಿ ನೀಡಲು ಈಗ ಇರುವ ವಿಷಯಗಳು ತಿಳಿಯಬೇಕು.

೩. ಈಗಾಗಲೇ ದತ್ತಿನಿಧಿ ಕೊಟ್ಟವರು ತಮ್ಮ ದತ್ತಿನಿಧಿ ಮೊತ್ತವನ್ನು ಹೆಚ್ಚಿಸಲು ಸ್ಫೂರ್ತಿಸಿಗಬೇಕು.

೪. ಆಯಾ ಜಿಲ್ಲಾ ಜನರು ತಮ್ಮ ಜಿಲ್ಲಾ ದತ್ತಿಗಳನ್ನು ಇತರ ಜಿಲ್ಲಾ ದತ್ತಿಗಳಿಗೆ ಹೋಲಿಸಿ ದತ್ತಿನಿಧಿಗಳನ್ನು ಹೆಚ್ಚಿಸಿಕೊಳ್ಳಲು ಪ್ರೇರಣೆಸಿಗಬೇಕು.

೫. ಸಾರ್ವಜನಿಕರಿಗೆ, ಸದಸ್ಯರಿಗೆ ಇರುವ ದತ್ತಿಗಳ ವಿವರ ತಿಳಿಯಬೇಕು.

೫

ಅಧ್ಯಾಯ – ೫

ಸಮ್ಮೇಳನಾಧ್ಯಕ್ಷರ ಭಾಷಣಗಳಲ್ಲಿ ಪರಿಷತ್ತು

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು

೧.ಬೆಂಗಳೂರು	ಎಚ್.ವಿ. ನಂಜುಂಡಯ್ಯ	೧೯೧೫ ಮೇ ೩, ೪, ೫, ೬
೨. ಬೆಂಗಳೂರು	ಎಚ್.ವಿ. ನಂಜುಂಡಯ್ಯ	೧೯೧೬ ಮೇ ೬, ೭, ೮
೩. ಮೈಸೂರು	ಎಚ್.ವಿ. ನಂಜುಂಡಯ್ಯ	೧೯೧೭ ಜೂನ್ ೮, ೯,೧೦
೪. ಧಾರವಾಡ	ಆರ್. ನರಸಿಂಹಚಾರ್	೧೯೧೮ ಮೇ ೧೧,೧೨, ೧೩
೫. ಹಾಸನ	ಕರ್ಪೂರ ಶ್ರೀನಿವಾಸರಾವ್	೧೯೧೯ ಮೇ ೬, ೭, ೮
೬. ಹೊಸಪೇಟೆ	ರೊದ್ದ ಶ್ರೀನಿವಾಸರಾವ್	೧೯೨೦ ಜೂನ್ ೨೦, ೨೧
೭. ಚಿಕ್ಕಮಗಳೂರು	ಕೆ.ಪಿ. ಪುಟ್ಟಣ್ಣಶೆಟ್ಟಿ	೧೯೨೧ ಮೇ ೧೯,೨೦,೨೧
೮. ದಾವಣಗೆರೆ	ಎಂ. ವೆಂಕಟಕೃಷ್ಣಯ್ಯ	೧೯೨೨ ಮೇ ೧೨, ೧೩
೯. ಬಿಜಾಪುರ	ಸಿದ್ಧಾಂತಿ ಶಿವಶಂಕರಶಾಸ್ತ್ರಿ	೧೯೨೩ ಮೇ ೨೧,೨೨,೨೩
೧೦. ಕೋಲಾರ	ಹೊಸಕೋಟೆ ಕೃಷ್ಣಶಾಸ್ತ್ರಿ	೧೯೨೪ ಮೇ ೧೬,೧೭,೧೮
೧೧ ಬೆಳಗಾವಿ	ಬೆನಗಲ್ ರಾಮರಾವ್	೧೯೨೫ ಮೇ ೯,೧೦,೧೧
೧೨. ಬಳ್ಳಾರಿ	ಫ.ಗು. ಹಳಕಟ್ಟಿ	೧೯೨೬ ಮೇ ೨೨,೨೩,೨೪
೧೩. ಮಂಗಳೂರು	ಆರ್. ತಾತಾ	೧೯೨೭ ಮೇ ೧೯,೨೦,೨೧
೧೪. ಕಲಬುರ್ಗಿ	ಬಿ.ಎಂ. ಶ್ರೀಕಂಠಯ್ಯ	೧೯೨೮ ಜೂನ್ ೧,೨,೩
೧೫. ಬೆಳಗಾವಿ	ಮಾಸ್ತಿ ವೆಂಕಟೇಶ ಅಯ್ಯಂಗಾರ್	೧೯೨೯ ಮೇ ೧೨,೧೩,೧೪
೧೬. ಮೈಸೂರು	ಆಲೂರು ವೆಂಕಟರಾವ್	೧೯೩೦ ಅಕ್ಟೋಬರ್ ೫,೬,೭
೧೭. ಕಾರವಾರ	ಮುಳಿಯ ತಿಮ್ಮಪ್ಪಯ್ಯ	೧೯೩೧ ಡಿಸೆಂಬರ್ ೨೮,೨೯,೩೦
೧೮. ಮಡಿಕೇರಿ	ಡಿ.ವಿ. ಗುಂಡಪ್ಪ	೧೯೩೨ ಡಿಸೆಂಬರ್ ೨೮,೨೯,೩೦
೧೯. ಹುಬ್ಬಳ್ಳಿ	ವೈ. ನಾಗೇಶ ಶಾಸ್ತ್ರಿ	೧೯೩೩ ಡಿಸೆಂಬರ್ ೨೯, ೩೦, ೩೧
೨೦. ರಾಯಚೂರು	ಪಂಜೆ ಮಂಗೇಶರಾವ್	೧೯೩೪ ಡಿಸೆಂಬರ್ ೨೮, ೨೯, ೩೦
೨೧. ಮುಂಬಯಿ	ಎನ್.ಎಸ್. ಸುಬ್ಬರಾವ್	೧೯೩೫ ಡಿಸೆಂಬರ್ ೨೬, ೨೭, ೨೮
೨೨. ಜಮಖಂಡಿ	ಬೆಳ್ಳಾವೆ ವೆಂಕಟನಾರಣಪ್ಪ	೧೯೩೭ ಡಿಸೆಂಬರ್ ೨೯, ೩೦, ೩೧
೨೩. ಬಳ್ಳಾರಿ	ರಂ. ರಾ. ದಿವಾಕರ	೧೯೩೮ ಡಿಸೆಂಬರ್ ೨೯, ೩೦, ೩೧
೨೪. ಬೆಳಗಾವಿ	ಮುದವೀಡು ಕೃಷ್ಣರಾಯರು	೧೯೩೯ ಡಿಸೆಂಬರ್ ೨೫, ೨೬, ೨೭, ೨೮

೨೫. ಧಾರವಾಡ	ವೈ. ಚಂದ್ರಶೇಖರಶಾಸ್ತ್ರಿ	೧೯೪೦ ಡಿಸೆಂಬರ್ ೨೭, ೨೮, ೨೯
೨೬. ಹೈದರಾಬಾದ್	ಎ.ಆರ್. ಕೃಷ್ಣಶಾಸ್ತ್ರಿ	೧೯೪೧ ಡಿಸೆಂಬರ್ ೨೭, ೨೮, ೨೯
೨೭. ಶಿವಮೊಗ್ಗ	ದ.ರಾ. ಬೇಂದ್ರೆ	೧೯೪೩ ಡಿಸೆಂಬರ್ ೨೬, ೨೭, ೨೮
೨೮. ರಬಕವಿ	ಎಸ್.ಎಸ್. ಬಸವನಾಳ	೧೯೪೪ ಡಿಸೆಂಬರ್ ೨೮, ೨೯, ೩೦
೨೯. ಮದರಾಸು	ಟಿ.ಪಿ. ಕೈಲಾಸಂ	೧೯೪೫ ಡಿಸೆಂಬರ್ ೨೭, ೨೮
೩೦. ಹರಪನಹಳ್ಳಿ	ಸಿ.ಕೆ. ವೆಂಕಟರಾಮಯ್ಯ	೧೯೪೭ ಮೇ ೭, ೮, ೯
೩೧. ಕಾಸರಗೋಡು	ತಿರುಮಲೆ ತಾತಾಚಾರ್ಯ ಶರ್ಮ	೧೯೪೮ ಡಿಸೆಂಬರ್ ೨೯, ೩೦, ೩೧
೩೨. ಕಲಬುರ್ಗಿ	ಉತ್ತಂಗಿ ಚನ್ನಪ್ಪ	೧೯೪೯ ಮಾರ್ಚ್ ೫, ೬, ೭
೩೩. ಸೊಲ್ಲಾಪುರ	ಎಂ. ಆರ್. ಶ್ರೀನಿವಾಸಮೂರ್ತಿ	೧೯೫೦ ಮೇ ೨೪, ೨೫, ೨೬
೩೪. ಮುಂಬಯಿ	ಎಂ. ಗೋವಿಂದ ಪೈ	೧೯೫೧ ಡಿಸೆಂಬರ್ ೨೬, ೨೭, ೨೮
೨೫. ಬೇಲೂರು	ಎಸ್.ಸಿ. ನಂದೀಮಠ	೧೯೫೨ ಮೇ ೧೬, ೧೭, ೧೮
೩೬. ಕುಮಟಾ	ವಿ. ಸೀತಾರಾಮಯ್ಯ	೧೯೫೩ ಡಿಸೆಂಬರ್ ೨೬, ೨೭, ೨೮
೩೭. ಮೈಸೂರು	ಶಿವರಾಮ ಕಾರಂತ	೧೯೫೫ ಜೂನ್ ೧೦, ೧೧, ೧೨
೩೮. ರಾಯಚೂರು	ಆದ್ಯ ರಂಗಾಚಾರ್ಯ	೧೯೫೫ ಡಿಸೆಂಬರ್ ೨೫, ೨೬, ೨೭
೩೯. ಧಾರವಾಡ	ಕೆ.ವಿ. ಪುಟ್ಟಪ್ಪ	೧೯೫೭ ಮೇ ೭, ೮, ೯
೪೦. ಬಳ್ಳಾರಿ	ವಿ.ಕೃ. ಗೋಕಾಕ್	೧೯೫೮ ಜನವರಿ ೧೮, ೧೯, ೨೦
೪೧. ಬೀದರ್	ಡಿ.ಎಲ್. ನರಸಿಂಹಾಚಾರ್	೧೯೬೦ ಫೆಬ್ರವರಿ ೧೧, ೧೨, ೧೩
೪೨. ಮಣಿಪಾಲ	ಅ.ನ. ಕೃಷ್ಣರಾಯ	೧೯೬೦ ಡಿಸೆಂಬರ್ ೨೭, ೨೮, ೨೯
೪೩. ಗದಗ	ಕೆ.ಜಿ. ಕುಂದಣಗಾರ	೧೯೬೧ ಡಿಸೆಂಬರ್ ೨೭, ೨೮, ೨೯
೪೪. ಸಿದ್ಧಗಂಗಾ	ರಂ. ಶ್ರೀ ಮುಗಳಿ	೧೯೬೩ ಡಿಸೆಂಬರ್ ೨೮, ೨೯, ೩೦
೪೫. ಕಾರವಾರ	ಕಡೆಂಗೋಡ್ಲು ಶಂಕರಭಟ್ಟ	೧೯೬೫ ಮೇ ೧೦, ೧೧, ೧೨
೪೬. ಶ್ರವಣಬೆಳಗೊಳ	ಆ. ನೇ. ಉಪಾಧ್ಯೆ	೧೯೬೭ ಮೇ ೨೬, ೨೭, ೨೮
೪೭. ಬೆಂಗಳೂರು	ದೇ. ಜವರೇಗೌಡ	೧೯೭೦ ಡಿಸೆಂಬರ್ ೨೭, ೨೮, ೨೯
೪೮. ಮಂಡ್ಯ	ಜಯದೇವಿತಾಯಿ ಲಿಗಾಡೆ	೧೯೭೪ ಮೇ ೩೧, ಜೂನ್ ೧, ೨
೪೯. ಶಿವಮೊಗ್ಗ	ಎಸ್.ವಿ. ರಂಗಣ್ಣ	೧೯೭೬ ಡಿಸೆಂಬರ್ ೧೧, ೧೨, ೧೩
೫೦. ನವದೆಹಲಿ	ಜಿ.ಪಿ. ರಾಜರತ್ನಂ	೧೯೭೮ ಏಪ್ರಿಲ್ ೨೩, ೨೪, ೨೫
೫೧. ಧರ್ಮಸ್ಥಳ	ಎಂ. ಗೋಪಾಲಕೃಷ್ಣ ಅಡಿಗ	೧೯೭೯ ಮಾರ್ಚ್ ೯, ೧೦, ೧೧
೫೨. ಬೆಳಗಾವಿ	ಬಸವರಾಜ ಕಟ್ಟೀಮನಿ	೧೯೮೦ ಫೆಬ್ರವರಿ ೭, ೮, ೯, ೧೦
೫೩. ಚಿಕ್ಕಮಗಳೂರು	ಪು. ತಿ. ನರಸಿಂಹಾಚಾರ್	೧೯೮೧ ಮಾರ್ಚ್ ೧೩, ೧೪, ೧೫
೫೪. ಮಡಿಕೇರಿ	ಶಂಬಾ ಜೋಶಿ	೧೯೮೧ ನವೆಂಬರ್ ೨೭, ೨೮, ೨೯, ೩೦
೫೫. ಶಿರಸಿ	ಗೊರೂರು ರಾಮಸ್ವಾಮಿಅಯ್ಯಂಗಾರ್	೧೯೮೨ ಡಿಸೆಂಬರ್೨೩, ೨೪, ೨೫, ೨೬
೫೬. ಕೈವಾರ	ಎ. ಎನ್. ಮೂರ್ತಿರಾವ್	೧೯೮೪ ಮಾರ್ಚ್ ೨೩, ೨೪, ೨೫
೫೭. ಬೀದರ್	ಹಾ. ಮಾ. ನಾಯಕ	೧೯೮೫ ಏಪ್ರಿಲ್ ೫, ೬, ೭

೫೮. ಕಲಬುರ್ಗಿ	ಸಿದ್ದಯ್ಯ ಪುರಾಣಿಕ	೧೯೮೭ ಅಕ್ಟೋಬರ್ ೨೯, ೩೦, ೩೧ ನವೆಂಬರ್ ೧
೫೯. ಹುಬ್ಬಳ್ಳಿ	ಆರ್.ಸಿ. ಹಿರೇಮಠ	೧೯೯೦ ಫೆಬ್ರವರಿ ೧೬, ೧೭, ೧೮
೬೦. ಮೈಸೂರು	ಕೆ.ಎಸ್. ನರಸಿಂಹಸ್ವಾಮಿ	೧೯೯೦ ಡಿಸೆಂಬರ್ ೨೮, ೨೯, ೩೦
೬೧. ದಾವಣಗೆರೆ	ಜಿ.ಎಸ್. ಶಿವರುದ್ರಪ್ಪ	೧೯೯೨ ಜನವರಿ ೯, ೧೦, ೧೧, ೧೨
೬೨. ಕೊಪ್ಪಳ	ಸಿಂಪಿ ಲಿಂಗಣ್ಣ	೧೯೯೩ ಫೆಬ್ರವರಿ ೫, ೬, ೭
೬೩. ಮಂಡ್ಯ	ಚದುರಂಗ	೧೯೯೪ ಫೆಬ್ರವರಿ ೧೧, ೧೨, ೧೩
೬೪. ಮುಧೋಳ	ಎಚ್.ಎಲ್. ನಾಗೇಗೌಡ	೧೯೯೫ ಜೂನ್ ೩, ೪, ೫
೬೫. ಹಾಸನ	ಚೆನ್ನವೀರ ಕಣವಿ	೧೯೯೬ ಡಿಸೆಂಬರ್ ೨೧, ೨೨, ೨೩, ೨೪
೬೬. ಮಂಗಳೂರು	ಕಯ್ಯಾರ ಕಿಞ್ಞಣ್ಣರೈ	೧೯೯೭ ಡಿಸೆಂಬರ್ ೧೧, ೧೨, ೧೩, ೧೪
೬೭. ಕನಕಪುರ	ಎಸ್. ಎಲ್. ಭೈರಪ್ಪ	೧೯೯೯ ಫೆಬ್ರವರಿ ೨೬, ೨೭, ೨೮
೬೮. ಬಾಗಲಕೋಟೆ	ಶಾಂತಾದೇವಿ ಮಾಳವಾಡ	೨೦೦೦ ಜೂನ್ ೨೪, ೨೫, ೨೬
೬೯. ತುಮಕೂರು	ಯು.ಆರ್. ಅನಂತಮೂರ್ತಿ	೨೦೦೨ ಫೆಬ್ರವರಿ ೧೫, ೧೭
೭೦. ಬೆಳಗಾವಿ	ಪಾಟೀಲ ಪುಟ್ಟಪ್ಪ	೨೦೦೩ ಮಾರ್ಚ್ ೭, ೮, ೯
೭೧. ಮೂಡುಬಿದಿರೆ	ಕಮಲಾ ಹಂಪನಾ	೨೦೦೩ ಡಿಸೆಂಬರ್ ೧೮, ೧೯, ೨೦, ೨೧
೭೨. ಬೀದರ್	ಶಾಂತರಸ ಹೆಂಬೇರಾಳು	೨೦೦೬ ಜನವರಿ ೨೭, ೨೮, ೨೯
೭೩. ಶಿವಮೊಗ್ಗ	ಕೆ.ಎಸ್. ನಿಸಾರ್ ಅಹಮದ್	೨೦೦೬ ಡಿಸೆಂಬರ್ ೨೦, ೨೧, ೨೨, ೨೩
೭೪. ಉಡುಪಿ	ಎಲ್.ಎಸ್. ಶೇಷಗಿರಿರಾವ್	೨೦೦೭ ಡಿಸೆಂಬರ್ ೧೨, ೧೩, ೧೪, ೧೫
೭೫. ಚಿತ್ರದುರ್ಗ	ಎಲ್. ಬಸವರಾಜು	೨೦೦೯ ಫೆಬ್ರವರಿ ೪, ೫, ೬ ಮತ್ತು ೭
೭೬. ಗದಗ	ಗೀತಾ ನಾಗಭೂಷಣ	೨೦೧೦ ಫೆಬ್ರವರಿ ೧೯, ೨೦, ೨೧
೭೭ ಬೆಂಗಳೂರು	ಪ್ರೊ. ಜಿ. ವೆಂಕಟಸುಬ್ಬಯ್ಯ	೨೦೧೧ ಫೆಬ್ರವರಿ ೪, ೫, ೬
೭೮. ಗಂಗಾವತಿ	ಸಿ.ಪಿ. ಕೃಷ್ಣಕುಮಾರ್	೨೦೧೧ ಡಿಸೆಂಬರ್ ೯, ೧೦, ೧೧
೭೯. ವಿಜಾಪುರ	ಕೋ. ಚೆನ್ನಬಸಪ್ಪ	೨೦೧೩ ಫೆಬ್ರವರಿ ೯, ೧೦, ೧೧
೮೦. ಮಡಿಕೇರಿ	ನಾ. ಡಿಸೋಜಾ	೨೦೧೪ ಜನವರಿ ೭, ೮, ೯
೮೧. ಶ್ರವಣಬೆಳಗೊಳ	ಡಾ. ಸಿದ್ಧಲಿಂಗಯ್ಯ	೨೦೧೫ ಜನವರಿ ೩೧, ಫೆಬ್ರವರಿ ೧, ೨, ೩

❖❖

೧, ೨, ೩ನೇ ಸಮ್ಮೇಳನಾಧ್ಯಕ್ಷರು
ಹೆಚ್.ವಿ. ನಂಜುಂಡಯ್ಯ



ಆಂಧ್ರದಿಂದ ಕರ್ನಾಟಕಕ್ಕೆ ವಲಸೆಬಂದ ಸಾಮಾನ್ಯ ಬಡ ಕುಟುಂಬದಲ್ಲಿ ಸುಬ್ಬಯ್ಯ ಮತ್ತು ಅನ್ನಪೂರ್ಣಮ್ಮ ದಂಪತಿಗಳಿಗೆ ೨ನೇ ಮಗನಾಗಿ ಹೆಚ್.ವಿ. ನಂಜುಂಡಯ್ಯನವರು (ಹೆಬ್ಬಳಲು ವೇಲ್ಪನೂರು ನಂಜುಂಡಯ್ಯ) ೧೩-೧೦-೧೮೬೦ರಲ್ಲಿ ಜನ್ಮ ತಾಳಿದರು. ಮೈಸೂರು ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದು ೧೮೮೬ರಲ್ಲಿ ಬಿಎಲ್ ಪರೀಕ್ಷೆಯಲ್ಲಿ ೧೮೮೫ರಲ್ಲಿ ಎಂಎ ಪದವಿಯನ್ನು ಪಡೆದರು. ೧೮೯೫ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯ ಫೆಲೋಷಿಪ್ ನೀಡಿ ಗೌರವಿಸಿತು.

೧೮೮೫ರಲ್ಲಿ ಮೈಸೂರು ಸರ್ಕಾರದಲ್ಲಿ ಉದ್ಯೋಗಕ್ಕೆ ಸೇರಿ ಮುನ್ಸೀಫರಾದರು. ೧೮೮೬ರಲ್ಲಿ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಷನರ್ ಅನಂತರ ಅಂಡರ್ ಸೆಕ್ರೆಟರಿ, ಸಬ್ ಜಡ್ಜ್ ಆಗಿ ಸೇವೆ ಸಲ್ಲಿಸಿದ ನಂತರ ಚೀಫ್ ಜಡ್ಜ್ ಆಗಿ ಸೇವೆ ಸಲ್ಲಿಸಿ ೧೯೧೬ರಲ್ಲಿ ನಿವೃತ್ತರಾದರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಥಮ ಉಪಕುಲಪತಿಗಳಾಗಿ ನೇಮಕಗೊಂಡು ೪ ವರ್ಷಗಳ ಕಾಲ ಅದರ ಪ್ರಗತಿಗೆ ದುಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಶ್ರಮಿಸಿದವರಲ್ಲಿ ಇವರೂ ಒಬ್ಬರು ಮತ್ತು ೧೯೧೫ರಿಂದ ೩ ಸಮ್ಮೇಳನಗಳಿಗೆ ಅಧ್ಯಕ್ಷರಾದ ಇವರು ಸಮ್ಮೇಳನಗಳ ಇತಿಹಾಸದಲ್ಲೇ ವಿಕ್ರಮ ಸಾಧಿಸಿದ್ದಾರೆ. ಬೇರಾವ ಅಧ್ಯಕ್ಷರೂ ಒಂದಕ್ಕಿಂತ ಹೆಚ್ಚು ಬಾರಿ ಸಮ್ಮೇಳನಾಧ್ಯಕ್ಷರಾಗಿಲ್ಲ.

ಬ್ರಿಟಿಷ್ ಸರ್ಕಾರ ೧೯೧೪ರಲ್ಲಿ ಸಿ.ಐ.ಇ. (ಕಂಪಾನಿಯನ್ ಆಫ್ ದಿ ಇಂಡಿಯನ್ ಎಂಪೈರ್) ಬಿರುದು ನೀಡಿತು. ಮೈಸೂರು ಮಹಾರಾಜರು ರಾಜಮಂತ್ರಪ್ರವೀಣ ಬಿರುದನ್ನು ನೀಡಿದರು.

ಕನ್ನಡ ನವೋದಯ ಕಾಲದ ಪ್ರಾರಂಭಘಟ್ಟದಲ್ಲಿ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದವರಲ್ಲಿ ಹೆಚ್.ವಿ. ನಂಜುಂಡಯ್ಯನವರೂ ಒಬ್ಬರು. ಇವರು ರಚಿಸಿದ ಪ್ರಮುಖ ಕೃತಿಗಳು ಹೀಗಿವೆ.

೧. ವ್ಯವಹಾರದೀಪಿಕೆ (ನ್ಯಾಯಶಾಸ್ತ್ರ) - ೧೮೯೦
೨. ಅರ್ಥಶಾಸ್ತ್ರ - ೧೯೦೧
೩. ಲೇಖ್ಯಬೋಧಿನಿ
೪. ರಿಲಿಜನ್ ಅಂಡ್ ಮಾರೆಲ್ ಎಜುಕೇಷನ್ (ಇಂಗ್ಲಿಷ್)
೫. ಆಂಗ್ಲೋ ಇಂಡಿಯನ್ ಎಂಪೈರ್ (ಇಂಗ್ಲಿಷ್)
೬. ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್ (ಸಂಪಾದನೆ)
೭. ವ್ಯವಹಾರ ಧರ್ಮಶಾಸ್ತ್ರ
೮. ವಿಕ್ಟರ್ ಹ್ಯೂಗೋವಿನ ಫ್ರೆಂಚ್ ಕವಿತೆಗಳ ಅನುವಾದ

ಶ್ರೀಯುತರು ದಿನಾಂಕ ೨-೫-೧೯೨೦ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೧
ಅಧ್ಯಕ್ಷರು, ಎಚ್.ವಿ. ನಂಜುಂಡಯ್ಯ
ದಿನಾಂಕ ೩, ೪, ೫, ೬ ಮೇ ೧೯೧೫,
ಸ್ಥಳ : ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೆಂಗಳೂರು

ದೇಶಭಾಷೆಗೆ ಮಹಾರಾಜರ ಪ್ರೋತ್ಸಾಹ

ಈ ಸಂಸ್ಥಾನದಲ್ಲಿ ಕನ್ನಡಭಾಷೆಯ ಪ್ರಚಾರಕ್ಕಾಗಿ ಸರ್ಕಾರದವರೂ ಪ್ರಜೆಗಳೂ ವಿಶೇಷವಾದ ಆದರದಿಂದ ಪ್ರೋತ್ಸಾಹವನ್ನು ಕೊಡುತ್ತಿರಬೇಕಾದುದು ಸಹಜವಾಗಿಯೇ ಇದೆ. ಇಲ್ಲಿಯ ಪಾಠಶಾಲೆಗಳಲ್ಲಿ ಸ್ವಲ್ಪ ದೂರದವರೆಗೆ ಕನ್ನಡವನ್ನು ಕಲಿಸುತ್ತಿರುವವರು ; ಪಾಠಶಾಲೆಗಳಲ್ಲಿ ಉಪಯೋಗಿಸುವ ಪುಸ್ತಕಗಳ ಮೂಲಕವೂ ಕರ್ಣಾಟಕ ಭಾಷಾಭಿವೃದ್ಧಿಯು ತಕ್ಕಮಟ್ಟಿಗೆ ಆಗುತ್ತಿರುವುದು; ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯೂ, ಇತರ ಇಲಾಖೆಗಳೂ, ಅಕ್ಷರಜ್ಞರಾದ ಜನಗಳೂ ಕೊಡುತ್ತಿರುವ ಪ್ರೋತ್ಸಾಹದಿಂದ, ಕರ್ಣಾಟಕ ಭಾಷಾಪಾಂಡಿತ್ಯಕ್ಕೆ ಸ್ವಲ್ಪಮಟ್ಟಿಗೆ ಸಹಾಯವು ದೊರೆಯುತ್ತಿರುವುದು. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಶ್ರೀಮನ್ ಮಹಾರಾಜರವರೂ ಅವರ ಪೂರ್ವಿಕರೂ, ಸಹಜವಾದ ರಾಜಧರ್ಮಾನುಗುಣವಾಗಿ ಕಲಾಸಾಹಿತ್ಯಗಳ ವಿಷಯದಲ್ಲಿ ಸಮರ್ಥರಾದವರನ್ನು ವಿಮರ್ಶೆಯಿಂದ ಸತ್ಕರಿಸಿ, ಅವರವರ ಯೋಗ್ಯತೆಗೆ ತಕ್ಕಂತೆ ಅವರನ್ನು ಸಂಭಾವಿಸುವುದರಲ್ಲಿ ಬದ್ಧರಾಗಿದ್ದುದರಿಂದ ದೇಶಭಾಷೆಯು ಬಹಳವಾಗಿ ಅಭಿವೃದ್ಧಿ ಹೊಂದಿರುವುದು.

ಕನ್ನಡಭಾಷೆಯು ಮೈಸೂರು ಸಂಸ್ಥಾನದವರಿಗೆ ಮಾತ್ರವೇ ಸೇರಿರುವುದಾಗಿಲ್ಲ. ಕನ್ನಡವನ್ನು ಮಾತನಾಡುವವರಲ್ಲಿ ಅರ್ಧಸಾಲಿಗಿಂತಲೂ ಹೆಚ್ಚುಮಂದಿ ಸಂಸ್ಥಾನದ ಸುತ್ತಮುತ್ತಲೂ ಇರುವ ಬ್ರಿಟಿಷ್ ಇಂಡಿಯಾದಲ್ಲಿಯೂ ಹೈದರಾಬಾದ್ ಸಂಸ್ಥಾನದಲ್ಲಿಯೂ ವಾಸಿಸುತ್ತಿರುವರು. ರಾಜಕೀಯ ವಿಷಯಗಳಲ್ಲಿ ಮೂರು ನಾಲ್ಕು ಸರ್ಕಾರದವರಿಗೆ ಅಧೀನವಾಗಿದ್ದರೂ, ಬೇರೆ ಬೇರೆಯಾಗಿ ಕಾಣುವ ಕನ್ನಡ ನಾಡುಗಳಲ್ಲಿಯೂ, ಕನ್ನಡ ಮಾತನಾಡುವವರಲ್ಲಿಯೂ, ಕೆಲವು ಸಾಮಾನ್ಯ ಲಕ್ಷಣಗಳು ಕಾಣಬರುತ್ತವೆ. ಆದುದರಿಂದ ಭಾಷಾಭಿವೃದ್ಧಿ, ಗ್ರಂಥರಚನೆ ಇವುಗಳ ವಿಷಯದಲ್ಲಿ ಕನ್ನಡಿಗರೆಲ್ಲರನ್ನೂ ಒಟ್ಟುಗೂಡಿಸಲಾದರೆ, ವಿಶೇಷ ಪ್ರಯೋಜನವುಂಟು. ಈ ಉದ್ದೇಶದಿಂದಲೇ, ಕನ್ನಡ ಭಾಷಾಭಿವೃದ್ಧಿಯಲ್ಲಿ ಆಸಕ್ತರಾಗಿಯೂ, ಸಮರ್ಥರಾಗಿಯೂ, ಕಾರ್ಯಭಾರವನ್ನು ವಹಿಸಲು ತಕ್ಕವರಾಗಿಯೂ ಇರುವ ಜನಗಳು ಸೇರಿ, ಅನ್ಯೋನ್ಯ ಸಹಾಯದಿಂದ ಒಟ್ಟುಗೂಡಿ ಕೆಲಸಮಾಡತಕ್ಕ ಒಂದು ಸಭೆಯನ್ನು ಸರ್ಕಾರದ ಸಂಬಂಧವಿಲ್ಲದೆ ನಿರ್ಮಿಸಬೇಕೆಂದು ಈ ಸಮ್ಮೇಳನವನ್ನು ಏರ್ಪಾಡು ಮಾಡಲಾಗಿದೆ.

ಮೈಸೂರು ಕನ್ನಡಕ್ಕೆ ಪ್ರಾಶಸ್ತ್ಯ ಕೊಡಿ

ಅನೇಕ ಮಹನೀಯರು ಹೊರಗಿನಿಂದ ದಯಮಾಡಿ ಸೇರಿರುವ ಈ ಸಭೆಯಲ್ಲಿ ಮೈಸೂರು ದೇಶದಲ್ಲಿ ವಾಡಿಕೆಯಾಗಿರುವ ಕನ್ನಡವೇ ಈ ಸ್ಥಾನಕ್ಕೆ ಯೋಗ್ಯವಾದುದೆಂದು ಹೇಳಲು ಸ್ವಲ್ಪ ಸಂಕೋಚಪಡಬೇಕಾಗಿದೆ. ಆದರೂ ನಾನು ಹೀಗೆ ನಂಬಿರುವೆನೆಂದು ಹೇಳುವ ಮಾತು ಕೇವಲ ಸ್ವದೇಶ ಪಕ್ಷವಾದ ದುರಭಿಮಾನದಿಂದ ನಾನು ಹೇಳಿದಂತೆ ಭಾವಿಸಕೂಡದು.

ಬುದ್ಧಿ ಕೌಶಲ್ಯದ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿರುವ ಜನರಿಗೆ ನಮಗಿಂತಲೂ ಹೆಚ್ಚು ಅನುಕೂಲ್ಯಗಳಿವೆ. ಇಲ್ಲಿಯವರಿಗಿಂತಲೂ ಆ ಜನರಿಗೆ ಉದಾರಾಶ್ರಯರಾದ ಪಂಡಿತರ ಸಹವಾಸವು ದೊರೆಯುವುದು ಹೆಚ್ಚು. ಒಟ್ಟು ಚಕ್ರಾಧಿಪತ್ಯಕ್ಕೆ ಸಂಬಂಧಪಟ್ಟ ರಾಜಕೀಯ ವಿಷಯ ವಿಚಾರದಲ್ಲಿಯೂ ಜಿಜ್ಞಾಸೆಯಲ್ಲಿಯೂ ಇಲ್ಲಿಯವರಿಗಿಂತ ಅವರಿಗೆ ಪ್ರವೇಶ ಹೆಚ್ಚು. ಇಲ್ಲಿಯವರಾದ ನಮಗಾದರೋ, ದೇಶದಲ್ಲಿ ನೆಲೆಗೊಂಡಿರುವ ಶಾಂತಿ ತೃಪ್ತಿಗಳಿಂದ ಸುಲಭ ಜೀವನವು ಅಭ್ಯಾಸವಾಗಿ, ಎಲ್ಲಾ ಕೆಲಸಗಳನ್ನೂ ಪಿತೃವಾತ್ಸಲ್ಯದಿಂದ ಕಾಪಾಡುವ ನಮ್ಮ ಸರಕಾರದವರಿಗೆ ಒಪ್ಪಿಸಿಬಿಡುವುದರಲ್ಲಿಯೇ ಬದ್ಧರಾಗಿದ್ದೇವೆ. ಆದುದರಿಂದ ಒಂದು ಭಾಗಕ್ಕೆ ಹೊರಗಿನವರಿಗಿರುವ ಅನುಕೂಲ್ಯಗಳಲ್ಲಿ ಕೆಲವನ್ನು ನಾವೂ ಸಂಪಾದಿಸಿಕೊಳ್ಳುವ ಉದ್ದೇಶದಿಂದ ಭಾಷಾವಿಷಯದಲ್ಲಿ ಅವರೊಡನೆ ಸಮೀಪ ಸಂಬಂಧವನ್ನು ಬೆಳೆಯಿಸುವುದಕ್ಕೆ ಅಪೇಕ್ಷಿಸಬೇಕಾಗಿದೆ. ಆದರೆ ಈ ವಿಷಯದಲ್ಲಿ, ಅವರು ಉಪಯೋಗಿಸುತ್ತಿರುವ ಭಾಷೆಯಲ್ಲಿ ಕಾಣಬರುವ ವೈಲಕ್ಷಣ್ಯಗಳು ನಮಗೆ ಪ್ರತಿಬಂಧಕವಾಗಿವೆ.

ದಕ್ಷಿಣ ಕನ್ನಡ, ಅಥವಾ ಧಾರವಾಡ ಬೆಳಗಾಂ ಪ್ರಾಂತಗಳಲ್ಲಿ ಈಗಲೂ ಕೆಲವು ಶಬ್ದಗಳೂ ಪ್ರಯೋಗಗಳೂ ಪೂರ್ವದಲ್ಲಿದ್ದಂತೆ ಶುದ್ಧರೂಪದಲ್ಲಿ ಉಳಿದುಕೊಂಡಿರಬಹುದು; ಅವುಗಳನ್ನು ಇಲ್ಲಿ ನಾವು ನಿಷ್ಕಾರಣವಾಗಿ ಬಿಟ್ಟುಬಿಟ್ಟಿರಬಹುದು ; ಇಲ್ಲವೆ ಆ ರೂಪಗಳನ್ನು ಕೆಡಿಸಿರಬಹುದು. ಅಂತಹ ಸಂದರ್ಭಗಳು ಸರಿಯಾಗಿ ಸಿದ್ಧಾಂತಪಟ್ಟರೆ, ನಾವು ಅವರನ್ನೇ ಅನುಸರಿಸಲಿಚ್ಛಿಸುವೆವು. ವ್ಯಾಕರಣ ನಿಯಮಗಳಿಗೂ ಔಚಿತ್ಯ ನ್ಯಾಯಕ್ಕೂ ವಿರುದ್ಧವಾದ ಪ್ರಯೋಗಗಳು ಎಲ್ಲಿದ್ದರೂ ಅವುಗಳನ್ನು ತಿದ್ದಲೇಬೇಕು. ಆದರೆ ಯಾವುದಾದರೂ ಭಾಷಾರೂಢಿಯ ಅಥವಾ ಭಾಷಾವೈಪರೀತ್ಯದ ಪ್ರಯೋಗವು ಸಾಧುವೇ ಅಲ್ಲವೇ ಎಂದು ಚರ್ಚೆ ಹುಟ್ಟಿದಾಗ ಮೈಸೂರು ಕನ್ನಡಕ್ಕೆ ಪ್ರಾಶಸ್ತ್ಯವನ್ನು ತೋರಿಸುವುದು ಉಚಿತವಾಗಿರುತ್ತದೆ.

ಮೈಸೂರು ದೇಶದಲ್ಲಾದರೋ ಕನ್ನಡವೇ ಎಲ್ಲೆಲ್ಲಿಯೂ ಹರಡಿಕೊಂಡಿದೆ. ಇಂಗ್ಲಿಷ್ ಒಂದನ್ನು ಬಿಟ್ಟರೆ, ಕನ್ನಡವನ್ನು ಮರೆಯಿಸಿ ತಲೆಯೆತ್ತಬಲ್ಲ ಭಾಷೆ ಮತ್ತೊಂದು ಕಾಣುವುದಿಲ್ಲ. ಶ್ರೀಮಾನ್ ಮಹಾರಾಜರವರ ಆಸ್ಥಾನದಲ್ಲಿಯೂ, ಸರಕಾರದ ಅನೇಕ ಕಚೇರಿಗಳಲ್ಲಿಯೂ ನಡೆಯುವ ವ್ಯವಹಾರಗಳಲ್ಲೆಲ್ಲಾ ಕನ್ನಡವನ್ನೇ ಪೂರ್ವಕಾಲದಿಂದಲೂ ಉಪಯೋಗಿಸುತ್ತಿರುವರು. ಬಹುಕಾಲದಿಂದ ಮೈಸೂರಿನಲ್ಲಿ ಮುಖ್ಯವಾಗಿ ಜೈನಪಂಡಿತರೂ ಲಿಂಗಾಯುತ ವಿದ್ವಾಂಸರೂ ಪಾರಂಪರ್ಯವಾಗಿ ಕನ್ನಡವನ್ನೇ ವ್ಯಾಸಂಗ ಮಾಡುತ್ತ ಬಂದಿರುವರು. ಈಚೆಗೆ ಶ್ರೀಮಾನ್ ಮಹಾರಾಜರವರು ಮತ್ತು ಮಹಾಸ್ವಾಮಿಯವರ ಕೃಪಾಪೋಷಣೆಯಿಂದ ಕನ್ನಡಕ್ಕೆ ಮತ್ತಷ್ಟು ಪ್ರಾಶಸ್ತ್ಯವುಂಟಾಗಿದೆ. ನಮ್ಮ ಶ್ರೀಮಾನ್ ಮಹಾರಾಜರವರ ಪಿತಾಮಹರು ಇತರ ಭಾಷೆಗಳ ಜೊತೆಯಲ್ಲಿ ಕನ್ನಡ ಭಾಷೆಗೂ ಉದಾರಾಶ್ರಯವನ್ನು ಕೊಟ್ಟಿರುವರಲ್ಲದೆ, ಸ್ವಯಂ ಅನೇಕ ಉದ್ಗ್ರಂಥಗಳನ್ನು ರಚಿಸಿರುವರು,

ತಮ್ಮಂತಹ ಮಹನೀಯರು ಸೇರಿ ಉದಾರವಾದ ಆಶ್ರಯವುಳ್ಳುದಾಗಿಯೂ ಶಾಶ್ವತವಾಗಿಯೂ ನಡೆದು ಬರತಕ್ಕ ಒಂದು ಸಂಘವನ್ನು ಸ್ಥಾಪಿಸಿದುದೇ ಆದರೆ ಸ್ವಭಾಷೆಯನ್ನು ಸಂಸ್ಕರಿಸಿ ಗ್ರಂಥಾಭಿವೃದ್ಧಿಯನ್ನು ಮಾಡುವ ಘನವಾದ ಕಾರ್ಯವನ್ನು ನಡೆಯಿಸಲು ಬಹು ವಿಧದಲ್ಲಿ ಅನುಕೂಲವಾಗುವುದು.

ಮುಖ್ಯವಾಗಿ ಇಂತಹ ಸಂಘದಿಂದ ಗ್ರಂಥಗಳ ಗುಣದೋಷ ವಿಮರ್ಶೆ ಮಾಡುವ ಸಾಮರ್ಥ್ಯಕ್ಕೆ ಪ್ರಬಲವಾದ ಸಾಧನವಿದ್ದಂತಾಗುವುದು. ಈ ಕೆಲಸಕ್ಕಾಗಿ ಧಾರಾಳವಾದ ಮನಸ್ಸನ್ನೂ,ಅಲ್ಪಧಿಷಣಗಳನ್ನು ಲೆಕ್ಕಿಸದೆ ಗುಣಗ್ರಹಣ ಮಾಡುವ ತಾಳ್ಮೆಯನ್ನೂ ಪಡೆದ ಪಂಡಿತರ ಉಪಸಭೆಯೊಂದನ್ನು ನಿರ್ಮಿಸಿದುದೇ ಆದರೆ ಈ ಮಹಾಕಾರ್ಯವು ಬಹು ಸಮರ್ಪಕವಾಗಿ ನಡೆಯುವುದು ; ಹಾಗಲ್ಲದೆ ತಮ್ಮ ತಮ್ಮ ಗ್ರಂಥಗಳಿಗೇ ಪ್ರಶಸ್ತಿಯನ್ನುಂಟುಮಾಡಿಕೊಳ್ಳುತ್ತಲೂ, ತಮ್ಮ ತಮ್ಮೊಳಗೆ ಒಬ್ಬರಿಗೊಬ್ಬರು ದಾಕ್ಷಿಣ್ಯದಿಂದ ಸಹಾಯಮಾಡುತ್ತಲೂ ಇರುವವವರ ಕೈಗೆ ಈ ಕೆಲಸವು ಸಿಕ್ಕಿಹೋಯಿತೆಂದರೆ, ಉಪಕಾರವಾಗುವುದಕ್ಕೆ ಪ್ರತಿಯಾಗಿ ಅಪಾರವಾದ ಅನರ್ಥವುಂಟಾಗುವುದು. ಇದಲ್ಲದೆ ಇಂತಹ ಸಂಘವು ಗ್ರಂಥಕಾರರಿಗೆ ಆಶ್ರಯವನ್ನು ಕೊಟ್ಟು ಪ್ರೋತ್ಸಾಹಿಸಬಹುದು. ಆದರೆ ಈ ಭಾಗದಲ್ಲಿ ಸಂಘದಿಂದ ಆಗತಕ್ಕ ಸಹಾಯವು, ಅದಕ್ಕೆ ಸರ್ಕಾರದಿಂದಲೂ, ಪರೋಪಕಾರ ಬುದ್ಧಿಯುಳ್ಳ ಜನರಿಂದಲೂ ದೊರೆಯುವ ದ್ರವ್ಯಸಹಾಯಕ್ಕೆ ತಕ್ಕಂತೆ ಇರುವುದು. ಸರ್ಕಾರದವರು ತೋರಿಸಬಹುದಾದ ಸಹಾಯವನ್ನೂ, ಐಶ್ವರ್ಯವಂತರು ತಾವು ಕೊಡುವುದು ಸಾರ್ಥಕವಾಗುವುದೆಂದು ನಂಬಿ ಕೊಡಬಹುದಾದ ಸಹಾಯ ದ್ರವ್ಯವನ್ನೂ ಪಡೆದುಕೊಳ್ಳಲು ಈ ಸಂಘವು ಸರಿಯಾದ ಪಾತ್ರವೇ ಸರಿ. ಆದರೆ ಬೇಕಾದಷ್ಟು ಪ್ರಪಂಚಕ್ಕೆ ಶುಭ ಪರಿಣಾಮವೆ ಉಂಟಾಗುವುದೆಂಬ ಭಾವನೆಯನ್ನು ಹುಟ್ಟಿಸತಕ್ಕ ಲಘುಕಾವ್ಯಗಳು ನಮ್ಮಲ್ಲಿ ಇಲ್ಲವೇ ಇಲ್ಲವೆಂದು ಹೇಳಬೇಕಾಗಿದೆ. ನಮ್ಮ ದೇಶದ ಮತ್ತು ನಮ್ಮ ಜನಸಮುದಾಯದ ಆಚಾರ ವಿಚಾರಗಳನ್ನು ಪರಿಶೀಲಿಸಿ ತಿಳಿಯುವುದಕ್ಕೆ ತಕ್ಕ ಅವಕಾಶವಿಲ್ಲದ ಕಾರಣ ಈ ಲಘುಕಾವ್ಯರಚನೆಯ ಪ್ರಯತ್ನವು ಅಷ್ಟಾಗಿ ಸಫಲವಾಗದೆ ಇರಬಹುದು. ಆದರೂ ಲೇಖಕರಿಗೂ ವಾಚಕರಿಗೂ ಈ ವಿಧವಾದ ಗ್ರಂಥ ಲೇಖನದಲ್ಲಿಯೂ ಗ್ರಂಥಾವಲೋಕನದಲ್ಲಿಯೂ, ಅಭಿರುಚಿಯನ್ನು ಹುಟ್ಟಿಸುವುದಕ್ಕೆ ಪ್ರಯತ್ನಿಸುವುದರಿಂದ ಬಹಳ ಪ್ರಯೋಜನವಿದೆ.

ಇಂಗ್ಲಿಷ್ ಬಲ್ಲವರು ಮಾಡಬೇಕು ಅವುಗಳನ್ನು ಇಲ್ಲಿ ನಾವು ನಿಷ್ಕಾರಣವಾಗಿ ಬಿಟ್ಟುಬಿಟ್ಟಿರಬಹುದಾದ ಕೆಲಸ

ಇಷ್ಟಾಗಿ,ಈ ಕಾಲಕ್ಕೆ ತಕ್ಕ ಕನ್ನಡ ಗ್ರಂಥಗಳು ಅಭಿವೃದ್ಧಿಯಾಗದಿರುವುದಕ್ಕೆ, ಸಂಘಗಳೂ ಪೋಷಕರೂ ಇಲ್ಲದೆ ಇರುವುದು ಮುಖ್ಯ ಕಾರಣವಲ್ಲ; ಅದಕ್ಕೆ ಉತ್ಸಾಹಶೀಲರಾಗಿಯೂ ಅಲ್ಪ ಲಾಭದಿಂದಲೇ ತೃಪ್ತಿಪಡತಕ್ಕವರಾಗಿಯೂ ಇರುವ ಗ್ರಂಥಕಾರರು ಹೇರಳವಾಗಿ ಇಲ್ಲದಿರುವುದೇ ಕಾರಣವು. ಅಲ್ಲದೆ ನಮ್ಮವರೊಳಗೆ ಪಾಶ್ಚಾತ್ಯವಿದ್ಯೆಯಲ್ಲಿ

ಪಾರಂಗತರಾದವರು ದೇಶ ಭಾಷೆಯನ್ನು ದೇಶ ಭಾಷಾಗ್ರಂಥಗಳನ್ನೂ ವ್ಯಾಸಂಗಮಾಡತಕ್ಕ ವಿಷಯದಲ್ಲಿ ಉದಾಸೀನರಾಗಿಯೂ ಇದ್ದಾರೆ. ದಿನಪತ್ರಿಕೆಗಳಲ್ಲಿರುವ ಕ್ಷಣಿಕ ವೃತ್ತಾಂತಗಳನ್ನೂ ತಾತ್ಕಾಲಿಕ ಗ್ರಂಥಗಳೆನ್ನಿಸಿಕೊಂಡು ಅತಿಸಾಮಾನ್ಯವಾದ ಕಲ್ಪಿತಕಥೆಗಳ ರೂಪದಲ್ಲಿ ಅಪರಿಮಿತವಾಗಿ ಪ್ರಕಟವಾಗುತ್ತಿರುವ ಅಲ್ಪವಿಷಯಗಳನ್ನೂ ಓದುವುದರಿಂದ ಎಷ್ಟು ಆನಂದವುಂಟಾಗುವುದೋ, ಅಷ್ಟೇ ಆನಂದವನ್ನೇ ನಮ್ಮ ಸ್ವಭಾಷೆಯಲ್ಲಿ ಬರೆದಿರುವ ಪ್ರಾಚೀನ ಗ್ರಂಥಗಳ ವ್ಯಾಸಂಗದಿಂದ, ಮತ್ತೊಂದು ರೀತಿಯಿಂದಲಾದರೂ ಅನುಭವಿಸಬಹುದೆಂಬುದನ್ನು ಈ ಜನರು ಅರಿಯಲಾರದವರಾಗಿದ್ದಾರೆ. ಆದುದರಿಂದ ಅಂತಹವರು ತಮ್ಮ ಭಾಷೆಯಲ್ಲಿಯೇ ದೊರೆಯುವ ಉತ್ಕೃಷ್ಟವಾದ ಗ್ರಂಥಗಳನ್ನು ಮನಃಪೂರ್ವಕವಾಗಿ ವ್ಯಾಸಂಗಮಾಡಿ, ಆ ಮೂಲಕ ತಾನಾಗಿ ಹುಟ್ಟುವ ದೇಶ ಭಾಷಾವಾತ್ಸಲ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ವಿನಯಪೂರ್ವಕವಾಗಿ ವಿಜ್ಞಾಪಿಸುತ್ತೇನೆ. ಹೀಗೆ ಮಾಡಿದುದೇ ಆದರೆ, ಇಂಗ್ಲಿಷ್ ಮೊದಲಾದ ಪಾಶ್ಚಾತ್ಯ ವಿದ್ಯೆಯಿಂದಲೂ, ಶಿಕ್ಷಣಕ್ರಮದಿಂದಲೂ ಉಂಟಾಗುವ ವಿಸ್ತಾರವಾದ ಜ್ಞಾನಭಂಡಾರಗಳ ಸಹಾಯದಿಂದ ಸ್ವಭಾಷೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಏನಾದರೂ ಯತ್ನಮಾಡಬೇಕೆಂಬ ಪ್ರೇರಣೆಯು ಅವರಿಗೇ ಹುಟ್ಟುವುದು.

ಕನ್ನಡ ಪುರೋಭಿವೃದ್ಧಿಗೆ ಮಹಾರಾಜರು ಸಿದ್ಧ

ಹಿಂದೆ ಬಹುಕಾಲದವರೆಗೆ ಉತ್ಕೃಷ್ಟದಶೆಯಲ್ಲಿದ್ದುದಾಗಿಯೂ, ಮುಂದೆಯೂ ಮಹಾಮಹಿಮರಾದ ಪಾಶ್ಚಾತ್ಯರ ನವೀನ ವಿದ್ಯಾಪಾಂಡಿತ್ಯದೊಡನೆಯೂ ನವೀನ ಶಿಕ್ಷಣಕ್ರಮದೊಡನೆಯೂ ತಕ್ಕ ಮಟ್ಟಿಗೆ ಸೇರಿ ಉತ್ತರೋತ್ತರಾಭಿವೃದ್ಧಿಗೆ ಬರಬಹುದಾಗಿಯೂ ಇರುವ ಈ ಕನ್ನಡ ಭಾಷೆಯನ್ನು ಪುರೋಭಿವೃದ್ಧಿಗೆ ತಂದು ಊರ್ಜಿತಪಡಿಸುವುದಕ್ಕೆ ನಮ್ಮ ಶ್ರೀಮನ್ಮಹಾರಾಜರವರು ತಮ್ಮ ದಿವ್ಯಚಿತ್ತದಲ್ಲಿ ನಿಜವಾದ ಅಭಿಮಾನವನ್ನೂ ಆದರಾತಿಶಯವನ್ನೂ ಧರಿಸಿದವರಾಗಿ ತಾವೂ ತಮ್ಮ ಸರ್ಕಾರದವರೂ ಸಾಧ್ಯವಾದ ಸಕಲ ಸಹಾಯಗಳನ್ನೂ ಕಲ್ಪಿಸಿಕೊಡಲು ಸಿದ್ಧರಾಗಿರುವರೆಂದು ನಾನು ದೃಢವಾಗಿ ಹೇಳುತ್ತೇನೆ.

❖❖

ಕನ್ನಡ ಸಾಹಿತ್ಯ ಸಮ್ಮೇಳನ-೨
ಅಧ್ಯಕ್ಷರು, ಎಚ್.ವಿ. ನಂಜುಂಡಯ್ಯ
ದಿನಾಂಕ ೬,೭,೮ ಮೇ ೧೯೧೬,
ಸ್ಥಳ : ಕೋಟೆ ಹೈಸ್ಕೂಲ್, ಬೆಂಗಳೂರು

ಅಗ್ರಾಸನಾಧಿಪತಿಗಳಾದ ರಾಜಮಂತ್ರಪ್ರವೀಣ ಎಚ್.ವಿ. ನಂಜುಂಡಯ್ಯನವರು ಬೆಳಗಾಂ, ಬಿಜಾಪುರ, ಮುಂಬಯಿ, ಧಾರವಾಡ, ಮದರಾಸು ಮುಂತಾದ ದೂರ ದೂರ ಪ್ರದೇಶಗಳಿಂದ ದಯಮಾಡಿಸಿದ್ದ ಮಹನೀಯರುಗಳಿಗೂ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ಸ್ವಾಗತವನ್ನು ನುಡಿಯುತ್ತಾ, ಕಾರ್ಯನಿರ್ವಾಹಾರಂಭದ ತಮ್ಮ ಪ್ರೌಢವಾದ ಸಂಭಾಷಣವನ್ನು ಪ್ರಾರಂಭಿಸಿದರು. ಇಂಡಿಯಾ ಗೌವರ್ನಮೆಂಟಿನವರು ಮೈಸೂರಲ್ಲಿ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸುವುದಕ್ಕೆ ಅನುಮತಿಯನ್ನಿತ್ತ ಸಂಗತಿಯನ್ನು ಪ್ರಸ್ತಾಪಿಸಿ, ಕನ್ನಡವು ಮೈಸೂರು ಸಂಸ್ಥಾನದ ಪ್ರಧಾನ ಭಾಷೆಯಾಗಿರುವುದು, ಮೈಸೂರಿನ ವಿಶ್ವವಿದ್ಯಾನಿಲಯದಲ್ಲಿ ಇದಕ್ಕೆ ಯಾವ ಬಗೆಯ ಮತ್ತು ಎಷ್ಟರಮಟ್ಟಿನ ಪ್ರಾಶಸ್ತ್ಯವನ್ನು ಕೊಡತಕ್ಕುದು? ಮೈಸೂರಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೆಲ್ಲರೂ ಕಡ್ಡಾಯವಾಗಿ ಕನ್ನಡವನ್ನು ಕಲಿಯಲೇಬೇಕೆಂದು ಏರ್ಪಾಡು ಮಾಡಬೇಕೆ ಅಥವಾ ತಮಿಳು, ತೆಲುಗು, ಸಂಸ್ಕೃತಗಳೊಡನೆ ಕನ್ನಡವನ್ನೂ ಐಚ್ಛಿಕ ಭಾಷೆಯನ್ನಾಗಿ ಸೇರಿಸಬೇಕೆ? ಎಂಬ ವಿಷಯಗಳು ವಿಶ್ವವಿದ್ಯಾನಿಲಯದ ಏರ್ಪಾಡಿನ ಮಸೂದೆಯನ್ನು ತಯಾರು ಮಾಡುವವರ ಮನಸ್ಸನ್ನು ಕೋಟಲೆಗೊಳಿಸುತ್ತಿವೆ? ಈ ವಿಷಯದಲ್ಲಿ ಈ ಸಮ್ಮೇಳನವು ತನ್ನ ಅಭಿಪ್ರಾಯವನ್ನು ತಿಳಿಸುವುದಾದರೆ ಸರ್ಕಾರದವರಿಗೆ ಅನುಕೂಲವನ್ನುಂಟುಮಾಡಿಕೊಟ್ಟಂತಾಗುವುದು ಎಂದು ಅಪ್ಪಣೆಕೊಟ್ಟರು.

ಪಠ್ಯಗ್ರಂಥಗಳ ಪರಿಷ್ಕರಣ ಕಾರ್ಯವನ್ನು ಪರಿಷತ್ತಿಗೆ ವಹಿಸಿ

ಕನ್ನಡನಾಡುಗಳಲ್ಲಿ ಕಾಣಬರುವ ಕನ್ನಡದ ಪ್ರಭೇದಗಳನ್ನು ಕುರಿತು ಮಾತನಾಡತೊಡಗಿ, ಗ್ರಾಂಥಿಕ ಪ್ರಯೋಗಗಳಲ್ಲಿ ಏಕರೂಪತೆಯನ್ನು ಸ್ಥಾಪಿಸುವುದು ಆವಶ್ಯಕವಾಗಿರುವುದೆಂದೂ, ಕನ್ನಡನಾಡುಗಳಲ್ಲಿರುವ ಪಾಠಶಾಲೆಗಳಲ್ಲಿ ಪಾಠ್ಯ ಪುಸ್ತಕಗಳನ್ನು ಕೆಲವು ವರ್ಷಗಳಮಟ್ಟಿಗೆ ಒಂದೇ ಆಗಿರುವಂತೆ ಮಾಡುವುದರಿಂದ ಈ ಉದ್ದೇಶವು ಕೈಗೂಡುವುದೆಂದೂ, ಅಂತಹ ಪಾಠ್ಯಪುಸ್ತಕಗಳನ್ನು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪರಿಷ್ಕರಣಕ್ಕೆ ಕೊಟ್ಟು, ಅಲ್ಲಿ ಪರಿಷ್ಕೃತಗಳಾದ ಪುಸ್ತಕಗಳನ್ನೇ ಕೆಲವು ವರ್ಷಗಳವರೆಗೆ ಉಪಯೋಗಿಸ ಬಹುದೆಂದೂ ನುಡಿದರು. ಮೈಸೂರು ಸಂಸ್ಥಾನದಲ್ಲಿ ಅನ್ಯಭಾಷಾಪ್ರಾಬಲ್ಯವು ಇತರೆಡೆ ಗಳಲ್ಲಿರುವುದಕ್ಕಿಂತ ಕಡಿಮೆಯಾಗಿರುವುದರಿಂದಲೂ, ಕನ್ನಡವನ್ನಾಡುವ ಜನರೇ ಹೇರಳವಾಗಿರುವುದರಿಂದಲೂ, ಮೈಸೂರಿನ ಗ್ರಾಂಥಿಕ ಪ್ರಯೋಗಗಳನ್ನೇ ಸಾಧ್ಯವಾಗುವ ಮಟ್ಟಿಗೆ ಆದರ್ಶವಾಗಿಟ್ಟುಕೊಳ್ಳಬಹುದೆಂದು ಅಭಿಪ್ರಾಯಪಟ್ಟರು. ಬೇರೆಬೇರೆ ಕನ್ನಡನಾಡುಗಳ ಪಾಠ್ಯಪುಸ್ತಕಗಳನ್ನು ಈ ಪರಿಷತ್ತಿನ ಪರಿಷ್ಕರಣಕ್ಕೆ ಕೊಡುವಂತೆ ಆಯಾ ಸರ್ಕಾರಗಳನ್ನು ಈ ಪರಿಷತ್ತು ಪ್ರೇರಿಸುವುದಕ್ಕೆ ಸಾಧ್ಯವಾದರೆ ಈ ಪರಿಷತ್ತಿಗೆ ಮಹಾಯಶಸ್ಸುಂಟಾಗುವುದೆಂದು ಬಿನ್ನವಿಸಿದರು.

ಹೀಗೆ ಕನ್ನಡದ ವಿಷಯವನ್ನು ನಾನಾ ಬಗೆಯ ವಿಚಾರಗಳಿಂದ ವಿಶದಗೊಳಿಸಿ, ಮೈಸೂರಿನ ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕಿರಬೇಕಾದ ಸ್ಥಾನವನ್ನು ಸಭೆಯಲ್ಲಿ ನೆರೆದಿರುವ ಮಹನೀಯರು ಸಮ್ಮೇಳನವು ಮುಗಿಯುವುದರೊಳಗಾಗಿ ಚರ್ಚಿಸಿ, ನಿರ್ಣೀತವಾದ ತೀರ್ಮಾನವನ್ನು ಮೈಸೂರು ಸರ್ಕಾರಕ್ಕೆ ಶ್ರುತಪಡಿಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡರು.

ಲೇಖಕರೇ ಪರಿಷತ್ತಿಗೆ ಹಸ್ತಪ್ರತಿ ಕಳಿಸಿ ಅನಂತರ ಪ್ರಕಟಿಸಿ

ಬೇರೆ ಬೇರೆ ಕನ್ನಡ ನಾಡುಗಳ ಗ್ರಂಥಕರ್ತರುಗಳು ತಂತಮ್ಮ ಗ್ರಂಥಗಳನ್ನು ಮುದ್ರಿಸುವುದಕ್ಕೆ ಮೊದಲೇ ಅವುಗಳನ್ನು ಪರಿಷತ್ತಿನ ಪರಾಮರ್ಶಕ್ಕೆ ಕಳುಹಿಸಿ, ಪರಿಷತ್ತಿನವರು ಕೊಡುವ ಸೂಚನೆಗಳನ್ನು ಪರ್ಯಾಲೋಚಿಸಿ, ಅನಂತರದಲ್ಲಿ ತಂತಮ್ಮ ಗ್ರಂಥಗಳನ್ನು ಮುದ್ರಿಸುವುದಾದರೆ, ಕಾಲಕ್ರಮದಲ್ಲಿ ಗ್ರಾಂಥಿಕ ಭಾಷೆಗೆ ಏಕರೂಪತೆ ಬರುವುದಲ್ಲದೆ ಗ್ರಂಥಾವಳಿಯೂ ವೃದ್ಧಿಯನ್ನೈದುತ್ತ ಬರುವುದು ಎಂದು ಶ್ರುತಪಡಿಸಿದರು.

❖❖

ಕನ್ನಡ ಸಾಹಿತ್ಯ ಸಮ್ಮೇಳನ-೩
ಅಧ್ಯಕ್ಷರು, ಎಚ್.ವಿ. ನಂಜುಂಡಯ್ಯ
ದಿನಾಂಕ ೮,೯,೧೦ ಜೂನ್ ೧೯೧೭
ಸ್ಥಳ : ಮೈಸೂರು

ಪರಿಷತ್ತಿನ ಸ್ಥಾಪನೆಗೆ ಸರ್ಕಾರದ ಸಹಾಯ

ಕನ್ನಡ ಭಾಷೆಯನ್ನೂ ಸಾಹಿತ್ಯವನ್ನೂ ಪುಷ್ಟಿಗೊಳಿಸಿ ಅಭಿವೃದ್ಧಿಗೆ ತಂದು ಕನ್ನಡ ನಾಡಿನ ಜನರೆಲ್ಲರನ್ನೂ ಒಟ್ಟುಗೂಡಿಸಿ ಅವರಲ್ಲಿ ಭಾಷಾ ವಿಷಯದಲ್ಲಿ ಪರಸ್ಪರ ಐಕಮತ್ಯವೂ ಸೌಹಾರ್ದವೂ ದಿನದಿನಕ್ಕೆ ಹೆಚ್ಚುವಂತೆ ಮಾಡುವುದೇ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶವಾಗಿದೆ. ಈ ಮಹಾಕಾರ್ಯಕ್ಕೆ ದೇಶಾಭಿವೃದ್ದಿಯಲ್ಲಿ ಆಸಕ್ತರಾದ ಸರ್ವರೂ ಒಮ್ಮನದಿಂದ ಸಹಾಯ ಮಾಡಬೇಕು.

ಪರಿಷತ್ತಿಗೆ ಶ್ರೀಮನ್ ಮಹಾರಾಜರ ಪ್ರೋತ್ಸಾಹ

ಈಗ ನಮ್ಮ ಶ್ರೀಮನ್ ಮಹಾರಾಜರವರು ಭಾಷಾ ಪರಿಷ್ಕರಣ ವಿಷಯದಲ್ಲಿ, ಪೂರ್ವಕಾಲದ ರಾಜಾಧಿರಾಜರಂತೆ ತಮ್ಮ ವಂಶದವರಾದ ಚಿಕ್ಕ ದೇವರಾಜವೊಡೆಯರವರ ಕಾಲದಿಂದ ಪಾರಂಪರ್ಯವಾಗಿ ಬಂದ ಕ್ರಮವನ್ನು ಅನುಸರಿಸಿ, ಸಂಪದಭಿವೃದ್ಧಿ ವಿಷಯಗಳಿಗೆ ಪ್ರೋತ್ಸಾಹಗಳನ್ನುಂಟು ಮಾಡುವಂತೆಯೇ, ವಿದ್ಯಾಭಿವೃದ್ಧಿಗೂ ಪ್ರೋತ್ಸಾಹವನ್ನು ಕೊಡಬೇಕೆಂಬ ಅಭಿಪ್ರಾಯವುಳ್ಳವರಾಗಿರುತ್ತಾರೆ. ಕನ್ನಡ ಮಾತನ್ನಾಡುವ ಜನರು ಈ ಮೈಸೂರು ರಾಜ್ಯದ ಹೊರಗಣ ಪ್ರಾಂತಗಳಲ್ಲಿ ಅನೇಕ ಲಕ್ಷ ಮಂದಿ ಇರುವರು. ಇವರೊಡನೆ ನಮ್ಮ ಜನರೂ ಸೌಹಾರ್ದದಿಂದ ಸೇರಿ ಒಮ್ಮನದಿಂದ ಕಾರ್ಯನಿರ್ವಹಣೆ ಮಾಡುತ್ತಾ ಬರಬೇಕು. ಹೀಗಾಗುವ ಪಕ್ಷಕ್ಕೆ ಕನ್ನಡ ನಾಡುಗಳ ಜನರನ್ನೆಲ್ಲ ಜ್ಞಾನಾಭಿವೃದ್ಧಿಯ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು. ಇದಕ್ಕಾಗಿ ಮೇಲ್ವಿಚಾರಣೆಗೆ ಸೇರದ ಮತ್ತು ಯಾವ ವಿಧವಾದ ರಾಜಕೀಯ ಉದ್ದೇಶಗಳನ್ನೂ ಇಟ್ಟುಕೊಳ್ಳದ ಕರ್ಣಾಟಕ ಭಾಷಾಭಿಮಾನಿಗಳ ಒಂದು ಸಂಘವು ಏರ್ಪಾಡಾಗಬೇಕೆಂದು ಗೊತ್ತಾಯಿತು. ಈ ಪರಿಷತ್ತು ಶ್ರೀಮನ್ ಮಹಾರಾಜಾ ಸರ್ಕಾರದವರ ಉದಾರವಾದ ಸಹಾಯದಿಂದ ಸ್ಥಾಪಿತವಾಯಿತು.

ಕರ್ಣಾಟಕ ಸಾಹಿತ್ಯಾಭಿವೃದ್ಧಿಯ ವಿಷಯದಲ್ಲಿ ಮೊದಲೆರಡನೆಯ ಸಮ್ಮೇಳನಗಳು ಬೆಂಗಳೂರಲ್ಲಿ ನಡೆದುವು. ಈ ಮೂರನೆಯ ಸಮ್ಮೇಳನವು, ಎಂದರೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾದ ಮೇಲೆ ನಡೆಯುವ ಈ ಎರಡನೆಯ ಸಮ್ಮೇಳನವು, ನಮ್ಮ ಶ್ರೀಮನ್ ಮಹಾರಾಜರವರ ೩೪ನೆಯ ವರ್ಧಂತ್ಯುತ್ಸವದ ಶುಭ ಕಾಲದಲ್ಲಿ ಈ ಮೈಸೂರು ರಾಜಧಾನಿಯಲ್ಲಿ ಕೂಡಿದೆ. ಶ್ರೀಮದ್ಯುವರಾಜರಾದ ತಾವು ಇಲ್ಲಿಗೆ ದಯಮಾಡಿಸಿ ಈ ಸಮ್ಮೇಳನದ ಪ್ರಾರಂಭೋತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಿ ಈ ಸಭೆಗೆ ಅಸಾಧಾರಣವಾದ ಗೌರವವನ್ನು ದಯಪಾಲಿಸಿದುದಕ್ಕಾಗಿ ನಾವೆಲ್ಲರೂ ಹರ್ಷಿಸುತ್ತಿರುವೆವು.

ಮೊದಲು ಬೆಂಗಳೂರಿನಲ್ಲಿ ಸಮ್ಮೇಳನವು ನಡೆದಾಗ ಪರಿಷತ್ತಿನ ಉದ್ದೇಶಗಳೇನು ? ಯಾವ ಯಾವ ವಿಧವಾದ ಕೆಲಸಗಳು ನಡೆಯಬೇಕು ?ಯಾವ ಯಾವ ಮಾರ್ಗಗಳಿಂದ ಉದ್ದೇಶಗಳನ್ನು ಸಾಧಿಸಬೇಕು ? ಎಂಬ ವಿಷಯಗಳನ್ನು ಕುರಿತು ವಿವರವಾಗಿ ಭಾಷಣಮಾಡಿದೆನು.

ಅವುಗಳನ್ನು ಇಲ್ಲಿ ಪುನಃ ಹೇಳುವ ಆವಶ್ಯಕತೆಯಿಲ್ಲ. ಈ ಪರಿಷತ್ತಿನ ಕೆಲಸವು ಕೊಂಚಮಟ್ಟಿಗಾದರೂ ಸಮರ್ಪಕವಾಗಿ ನಡೆಯಬೇಕಾದರೆ, ದ್ರವ್ಯ ಸಹಾಯವು ಒದಗಬೇಕಾದುದು ಮಾತ್ರವೇ ಅಲ್ಲದೆ, ಸಮರ್ಥರ ಮತ್ತು ಪಂಡಿತರ ಉದಾರಾಶ್ರಯವೂ ಅವಿಚ್ಛಿನ್ನವಾಗಿ ದೊರೆಯುತ್ತಿರಬೇಕು. ಸಭೆಗಳನ್ನೂ ಸಮ್ಮೇಳನಗಳನ್ನೂ ಏರ್ಪಾಡು ಮಾಡಿ ನಿಬಂಧನೆಗಳನ್ನು ಮಾಡುವುದು ತಿದ್ದುವುದು ಇವುಗಳಿಂದಲೇ ಸಂಪೂರ್ಣವಾದ ಫಲವು ಕೈಗೂಡುವುದಿಲ್ಲ. ಇನ್ನೂ ಇತರ ಅನೇಕ ಕಾರ್ಯಗಳು ನಡೆಯಬೇಕು. ಶ್ರೀಮದ್ಯುವರಾಜರಾದ ತಾವು ಇಲ್ಲಿಗೆ ಬಿಜಯಮಾಡಿ ತಮ್ಮ ಉದಾರಾಶ್ರಯವನ್ನಿತ್ತು, ಸಭಾ ಸಮಾರಂಭಕಾರ್ಯವನ್ನು ಹರ್ಷೋನ್ಮುಖದಿಂದ ನಡೆಯಿಸುವುದನ್ನು ನೋಡಿದರೆ, ಶಾಶ್ವತವಾಗಿ ನಿಲ್ಲುವ ಕೆಲಸಗಳನ್ನು ಮಾಡಲು ಸಮರ್ಥರಾದವರ ಸಹಾಯವನ್ನು ಸಂಪಾದಿಸುವುದಕ್ಕೂ ಶ್ರೀಮಂತರ ಉದಾರಾಶ್ರಯವನ್ನು ಸಂಪಾದಿಸುವುದಕ್ಕೂ ಬಹಳವಾಗಿ ಅನುಕೂಲವಾಗುವುದರಲ್ಲಿ ಸಂಶಯವಿಲ್ಲ. ಶ್ರೀಮದ್ಯುವರಾಜರವರ ಘನಸಾನಿಧ್ಯದಿಂದ ಪರಿಷತ್ತಿನ ಸದಸ್ಯರುಗಳಿಗೆ ವಿಶೇಷವಾದ

ಪ್ರೋತ್ಸಾಹವಾಗಿರುವುದಲ್ಲದೆ ಅವರು ಮತ್ತಷ್ಟು ಶ್ರದ್ಧೆಯಿಂದ ಕೆಲಸವನ್ನು ಮಾಡಲು ಉತ್ಸಾಹಭರಿತರಾಗಿರುವರು. ಸರ್ಕಾರದವರು ಮಾಡಿರುವ ಉದಾರವಾದ ಸಹಾಯವನ್ನು ನೋಡುವಲ್ಲಿ ಶ್ರೀಮನ್ಮಹಾರಾಜಾರವರಿಗೆ ಪರಿಷತ್ತಿನ ಶ್ರೇಯೋಭಿವೃದ್ಧಿಯಲ್ಲಿ ಎಷ್ಟರಮಟ್ಟಿಗೆ ಪ್ರೀತಿವಿಶ್ವಾಸಗಳಿರುವುವೋ ಅವು ನಿರ್ಧಾರವಾಗಿ ವ್ಯಕ್ತಪಡುತ್ತಿರುವುವು. ಸರ್ಕಾರದವರ ಸಹಾಯವು ಮುಂದಕ್ಕೂ ನಡೆಯುವುದಲ್ಲದೆ ಇನ್ನೂ ಹೆಚ್ಚುತ್ತ ಬರುವುದೆಂದು ನಂಬಿದ್ದೇವೆ. ಶ್ರೀಮದ್ಯುವರಾಜರವರು ಈ ಸಭಾಸಮಾರಂಭದ ಅಧ್ಯಕ್ಷಸ್ಥಾನವನ್ನು ಕೃಪಾಪರಿಪೂರ್ಣತೆಯಿಂದ ಅಂಗೀಕರಿಸಿರುವುದನ್ನು ನೋಡಿದರೆ, ಪರಿಷತ್ತಿನ ಸದುದ್ದೇಶಗಳು ಶ್ರೀಮದ್ಯುವರಾಜರವರ ಮೆಚ್ಚಿಗೆಯನ್ನು ಪಡೆದಿರುವುದೆಂಬ ಸಂಗತಿಯೂ ಶ್ರೀಮನ್ಮಹಾರಾಜರವರಿಗೂ ವಿಶೇಷವಾದ ಆದರಾಸಕ್ತಿಗಳು ಉಂಟೆಂಬ ಸಂಗತಿಯೂ ಕನ್ನಡ ಭಾಷಾ ಸಾಹಿತ್ಯಗಳ ಏಳಿಗೆಗೆ ಬಲವಾದ ರಾಜಾಶ್ರಯವು ದೊರೆತಿರುವುದೆಂಬ ಸಂಗತಿಯೂ ದೃಢಪಡುತ್ತಿರುವುವು ಎಂದು ಸಂತುಷ್ಟರಾಗಿದ್ದೇವೆ. ಮಹಾಸ್ವಾಮಿ".

❖ ❖

೪ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಆರ್. ನರಸಿಂಹಾಚಾರ್



ಶಾಸನಗಳ ಸಂಶೋಧನಾ ತಜ್ಞರು ಮತ್ತು ಕರ್ನಾಟಕ ಕವಿಚರಿತೆ ರಚಕರು, ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾದ ಆರ್. ನರಸಿಂಹಾಚಾರ್ಯ ಮಂಡ್ಯದ ಕೊಪ್ಪಲು ಗ್ರಾಮದಲ್ಲಿ ತಿರುನಾರಾಯಣ ಪೆರುಮಾಳ್ ಮತ್ತು ಶಿಂಗಮ್ಮಾಳ್ ದಂಪತಿಗಳಿಗೆ ೯-೪-೧೮೬೦ರಲ್ಲಿ ಜನಿಸಿದರು. ಕೂಲಿಮಠದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಇವರು ಮದರಾಸಿನಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದು ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ೧೮೮೨ರಲ್ಲಿ ಬಿಎ ಪದವಿಯನ್ನು ೧೮೮೩ರಲ್ಲಿ ಮದರಾಸ್ ವಿಶ್ವವಿದ್ಯಾನಿಲಯದಿಂದ ಎಂ.ಎ ಪದವಿ ಗಳಿಸಿದರು. ಆ ವಿಶ್ವವಿದ್ಯಾನಿಲಯದಿಂದ ಮೊಟ್ಟಮೊದಲನೆಯ ಕನ್ನಡ ಎಂ.ಎ. ಪದವಿ ಪಡೆದ ಹಿರಿಮೆ ಇವರದು.

ವಿದ್ಯಾಭ್ಯಾಸದ ಕಾಲದಲ್ಲಿಯೇ ಪ್ರೌಢಶಾಲೆ, ಕಾಲೇಜುಗಳಲ್ಲಿ ಅಧ್ಯಾಪಕ ವೃತ್ತಿ ಮಾಡಿದ ಇವರು ಎಂ.ಎ. ಪದವಿ ಪಡೆದ ಮೇಲೆ ೧೮೯೪ರಲ್ಲಿ ಶಿಕ್ಷಣ ಇಲಾಖೆಯಲ್ಲಿ ಕನ್ನಡ ಭಾಷಾಂತರಕಾರರಾಗಿ ೫ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ೧೮೯೯ರಲ್ಲಿ ಪ್ರಾಚ್ಯವಿದ್ಯಾ ಇಲಾಖೆಯಲ್ಲಿ ಲೂಯಿರೈಸರಿಗೆ ಸಹಾಯಾಧಿಕಾರಿಯಾಗಿ ನೇಮಕಗೊಂಡು, ಪಂಪ ಭಾರತದ ಪರಿಷ್ಕರಣ ಕಾರ್ಯದಲ್ಲಿ ನೆರವಾದರು.೧೯೦೬ರಿಂದ ೧೯೨೨ರವರೆಗೆ ಶಾಸನ ಇಲಾಖೆಯಲ್ಲಿಯೇ ಮುಖ್ಯಾಧಿಕಾರಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ರಾಯಲ್ ಏಷ್ಯಾಟಿಕ್ ಸೊಸೈಟಿಯ ಸದಸ್ಯರಾಗಿದ್ದ ಇವರು ಎಸ್.ಜಿ. ನರಸಿಂಹಾಚಾರ್ಯರೊಂದಿಗೆ ಕವಿಚರಿತೆಯ ಮೊದಲನೇ ಸಂಪುಟವನ್ನೂ ಉಳಿದೆರಡು ಸಂಪುಟಗಳನ್ನು ತಾವೇ ಸಂಪಾದಿಸಿದರು. ೫೦೦೦ ಹೊಸ ಶಾಸನಗಳನ್ನು ಶೋಧಿಸಿದರು; ೧೦೦೦ ಪ್ರಾಚ್ಯ ಕಟ್ಟಡಗಳನ್ನು ಪರಿಶೀಲಿಸಿದರು. ೧೦೦ ನಾಣ್ಯ ಸಂಶೋಧನೆ, ನಕ್ಷೆಗಳ ತಯಾರಿ ಮಾಡಿದ ಇವರು ಶಿಲ್ಪಕಲೆಯಲ್ಲಿ ಹೊಯ್ಸಳ ಶೈಲಿಯನ್ನು ಗುರುತಿಸಿದರು. ಉಭಯವೇದಾಂತ ಪ್ರದರ್ಶನ ಸಭೆಗೆ ೩೫ ವರ್ಷಗಳ ಕಾಲ ಮಾರ್ಗದರ್ಶಕರಾಗಿದ್ದರು. ಪರಿಷತ್ತಿನ ಸ್ಥಾಪನೆಗೆ ಮಾರ್ಗದರ್ಶನ ಪ್ರೇರಣೆ ನೀಡಿದ ಆರ್. ನರಸಿಂಹಾಚಾರ್ಯರು ಆ ಕಾಲದಲ್ಲಿ ಎಲ್ಲರಿಗೂ ಪೂಜ್ಯರಾಗಿದ್ದರು.

ನಾಡು, ನುಡಿಗಳಿಗೆ, ಶಾಸನ ಸಾಹಿತ್ಯ ಸಂಶೋಧನೆಗಳಿಗೆ ಅಪಾರ ಸೇವೆ ಸಲ್ಲಿಸಿದ ಆರ್. ನರಸಿಂಹಾಚಾರ್ಯರಿಗೆ ಅನೇಕ ಪ್ರಶಸ್ತಿಗಳು ಲಭ್ಯವಾಗಿವೆ. ಕಲ್ಕತ್ತಾದ ಅಖಿಲ ಭಾರತ ಸಾಹಿತ್ಯ ಸಂಘ 'ಪ್ರಾಚ್ಯವಿದ್ಯಾವೈಭವ' ಬಿರುದನ್ನು ೧೯೨೨ರಲ್ಲಿ ನೀಡಿತು. ಮಹಾರಾಜರು ಪ್ರಾಕ್ತನ ವಿಮರ್ಶೆ ವಿಚಕ್ಷಣ ಪ್ರಶಸ್ತಿ (೧೯೧೩) ಪ್ರದಾನ ಮಾಡಿದರು. ಕೇಂದ್ರ ಸರ್ಕಾರ ೧೯೩೪ರಲ್ಲಿ "ಮಹಾಮಹೋಪಾಧ್ಯಾಯ ಪ್ರಶಸ್ತಿ' ನೀಡಿತು. ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಇವರು ೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠ ಅಲಂಕರಿಸಿದರು.

ಶಾಸನ, ಸಾಹಿತ್ಯ ಚರಿತ್ರೆ ಗ್ರಂಥಸಂಪಾದನೆ ಅನುವಾದ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಇವರ ಕೆಲವು ಕೃತಿಗಳು ಹೀಗಿವೆ.

೧. ನೀತಿಮಂಜರಿ (ತಮಿಳಿನ ಕುರುಳ್ ಅನುವಾದ)
೨. ನಗೆಗಡಲು (ಹಾಸ್ಯಪ್ರಸಂಗಗಳ ಸಂಕಲನ)
೩. ಕಾವ್ಯಾವಲೋಕನ (ಸಂಪಾದನೆ)
೪. ಶಬ್ದಾನುಶಾಸನ (ಸಂಪಾದನೆ)
೫. ಭಾಷಾಭೂಷಣ (ಸಂಪಾದನೆ)
೬. ಕರ್ಣಾಟಕ ಕವಿಚರಿತೆ (೩ ಭಾಗಗಳು)
೭. ಹಿಸ್ಟರಿ ಆಫ್ ಕನ್ನಡ ಲಿಟರೇಚರ್ (ಇಂಗ್ಲಿಷ್)
೮. ಹಿಸ್ಟರಿ ಆಫ್ ಕನ್ನಡ ಲ್ಯಾಂಗ್ವೇಜ್ (ಇಂಗ್ಲಿಷ್)
೯. ಶಾಸನ ಪದ್ಯಮಂಜರಿ ಇತ್ಯಾದಿ

ನೂರಾರು ಸಂಶೋಧನ ಲೇಖನಗಳು (ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟ)

ಶ್ರೀಯುತರು ದಿನಾಂಕ ೬-೧೨-೧೯೩೬ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪
ಅಧ್ಯಕ್ಷರು, ಆರ್. ನರಸಿಂಹಾಚಾರ್
ದಿನಾಂಕ ೧೧, ೧೨, ೧೩ ಮೇ ೧೯೧೮
ಸ್ಥಳ : ಧಾರವಾಡ

ಕನ್ನಡನುಡಿಯ ಈಗಿನ ಸ್ಥಿತಿ

ಈಗಲಾದರೋ ಕನ್ನಡನುಡಿ ನಾವು ಪೂರ್ವದಲ್ಲಿ ಭಾಷೋನ್ನತಿಗಾಗಿ ಉತ್ಕಟೇಚ್ಛೆಯಿಂದ ಕೃಷಿ ಮಾಡಿದ ಕನ್ನಡಿಗರ ಸಂತತಿಯವರೋ ಅಲ್ಲವೋ ಎಂದು ಸಂದೇಹಪಡಬಹುದಾದಷ್ಟು ಹೀನಸ್ಥಿತಿಗೆ ಬಂದಿದೆ. ಈ ಹೀನಸ್ಥಿತಿಯನ್ನು ನೋಡಿ ಯಾವ ನಿಜವಾದ ಕನ್ನಡಿಗನ ಹೃದಯ ತಾನೇ ಶೋಕಪೂರಿತವಾಗದು? ಯಾವ ದೇಶಬಾಂಧವನಾದ ಕನ್ನಡಿಗನ ಮುಖವು ತಾನೇ ಕಂದದು? ಯಾವ ಭಾಷಾಭಿಮಾನಿಯಾದ ಕನ್ನಡಿಗನ ಕಣ್ಣು ತಾನೇ ನೀರಿನಿಂದ ತುಂಬದು? ಈ ಹೀನಸ್ಥಿತಿಯನ್ನು ನಿವಾರಣ ಮಾಡಲಿಕ್ಕಾಗಿ ಬದ್ಧಕಂಕಣರಾಗಿ ಸರ್ವಪ್ರಯತ್ನವನ್ನು ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ಹೀನಸ್ಥಿತಿಗೆ ಹಲವು ಕಾರಣಗಳುಂಟು. ಅವುಗಳಲ್ಲಿ ಕೆಲವನ್ನು ತಿಳಿಸುತ್ತೇನೆ. ಕನ್ನಡಿಗರಿಗೆ ತಮ್ಮ ಭಾಷೆಯಲ್ಲಿರಬೇಕಾದ ಆದರಾತಿಶಯಕ್ಕೆ ಪ್ರತಿಯಾಗಿ ಅಸಡ್ಡೆ ನೆಲೆಗೊಂಡಿರುವುದು ಪ್ರಬಲ ಕಾರಣವೆಂದು ಹೇಳಬಹುದು. ಅನೇಕರು ಕನ್ನಡ ಭಾಷೆಯಲ್ಲಿ ಮಾತನಾಡುವುದನ್ನು, ಪತ್ರಗಳನ್ನು ಬರೆಯುವುದನ್ನು ಅವಮಾನಕರವೆಂದು ಭಾವಿಸಿದ್ದಾರೆ. ಇದಕ್ಕಿಂತಲೂ ಶೋಚನೀಯವಾದ ವಿಷಯವುಂಟೆ? ಈಗಿನ ಶಿಕ್ಷಣ ಪದ್ಧತಿಯೂ ಈ ಅಸಡ್ಡೆಗೆ ಸಹಕಾರಿಯಾಗಿದೆ. ಪಾಠಶಾಲೆಗಳಲ್ಲಿ ಎಲ್ಲಾ ವಿಷಯಗಳನ್ನೂ ಇಂಗ್ಲಿಷ್ ಭಾಷೆಯಲ್ಲಿಯೇ ಕಲಿಸುತ್ತಾರೆ. ಬ್ರಿಟಿಷ್ ಕರ್ಣಾಟಕದ ಪ್ರಾಂತಗಳಲ್ಲಿ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿ ದೊರೆಯುವುದಿಲ್ಲ. ಭಾಷೆಗೂ ಸಾಹಿತ್ಯಕ್ಕೂ ಪೂರ್ವದಂತೆ ರಾಜರ ಪ್ರೋತ್ಸಾಹವಿಲ್ಲ. ನಮ್ಮಲ್ಲಿಯೂ ಇಂಗ್ಲಿಷ್ ಬಲ್ಲವರೇ ಬುದ್ಧಿವಂತರು, ದೇಶ ಭಾಷಾಪಂಡಿತರು ಅಪ್ರಯೋಜಕರು ಎಂಬ ನಿಷ್ಕಾರಣವಾದ ಭಾವನೆ ಹುಟ್ಟಿದೆ. ಸರಕಾರದ ಕಾಗದಪತ್ರಗಳೆಲ್ಲಾ ಇಂಗ್ಲಿಷ್ ಭಾಷೆಯಲ್ಲಿಯೇ ಇವೆ. ಮುಂಬಯಿ, ಮದರಾಸು, ಕೊಡಗು ಎಂಬ ಬ್ರಿಟಿಷ್ ಕರ್ಣಾಟಕದ ದೇಶವಿಭಾಗವು ಭಾಷೆಯ ಅನವಸ್ಥೆಗೂ ಭಿನ್ನರೂಪತೆಗೂ ಕಾರಣವಾಗಿದೆ. ಮೇಲೆ ಹೇಳಿದ ಕಾರಣಗಳಲ್ಲಿ ಕೆಲವು ಪ್ರಕೃತಸ್ಥಿತಿಯಲ್ಲಿ ಅಪರಿಹಾರ್ಯವೆಂದು ತೋರಿದರೂ ನಮ್ಮಲ್ಲಿ ನೆಲೆಗೊಂಡಿರುವ ಅಸಡ್ಡೆಯೆಂಬ ಪಿಶಾಚವನ್ನು ದೇಶಾಭಿಮಾನ ಭಾಷಾಭಿಮಾನಗಳೆಂಬ ಮಂತ್ರಗಳ ಬಲದಿಂದ ಉಚ್ಚಾಟನ ಮಾಡಿದರೆ ಭಾಷೋನ್ನತಿಯ ಕೆಲಸವು ಕೂಡಿದ ಮಟ್ಟಿಗೆ ಫಲಕಾರಿಯಾಗಬಹುದು.

ಕನ್ನಡನುಡಿಯ ಏಳಿಗೆಗೆ ಉಪಾಯಗಳು

ಪೂರ್ವದಂತೆ ಉದ್ದಾಮಕವಿಗಳು ಹುಟ್ಟಬೇಕೆಂದಾಗಲಿ ಪೂರ್ವದಂತೆ ರಾಜರೂ ಮಂಡಲಿಕರೂ ಅಧಿಕಾರಿಗಳೂ ಪ್ರೋತ್ಸಾಹಕರಾಗಬೇಕೆಂದಾಗಲಿ ಹಾರೈಸುವುದರಿಂದ ಫಲವಿಲ್ಲ. ಪ್ರಕೃತ ಕಾಲಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಅಸಡ್ಡೆಯನ್ನು ತೊಲಗಿಸಿ ಭಾಷಾಸೇವೆಯಲ್ಲಿ ನಿರತರಾಗಬೇಕು. ಪಂಡಿತರನ್ನು ಗೌರವಿಸಬೇಕು. ಕನ್ನಡನುಡಿಗಾಗಿ ಶ್ರಮಪಡುವವರಿಗೆ ಮರ್ಯಾದೆಯನ್ನು ಮಾಡಬೇಕು. ಸಾಹಿತ್ಯವನ್ನು ವೃದ್ಧಿಗೊಳಿಸುವುದಕ್ಕಾಗಿ ಶಾಸ್ತ್ರೀಯ ಗ್ರಂಥಗಳೇ ಮೊದಲಾದುವನ್ನು ಅನ್ಯಭಾಷೆಗಳಿಂದ ಪರಿವರ್ತಿಸಬೇಕು. ಕೋಶಗಳನ್ನೂ ಸಾಂಕೇತಿಕ ಶಬ್ದಗಳ ಪಟ್ಟಿಯನ್ನೂ ಏರ್ಪಡಿಸಬೇಕು. ಗ್ರಂಥಸ್ಥಭಾಷೆಗೆ ಏಕರೂಪತೆಯನ್ನು ಉಂಟುಮಾಡಬೇಕು. ವಿದ್ಯಾವಂತನಾದ ಪ್ರತಿಯೊಬ್ಬ ಕನ್ನಡಿಗನೂ ತನಗಿಂತ ವಿದ್ಯೆಯಲ್ಲಿ ಕಡಿಮೆಯಾದ ಕನ್ನಡಿಗರ ಉಪಯೋಗಾರ್ಥವಾಗಿ ಗ್ರಂಥ ನಿರ್ಮಾಣವನ್ನು ಮಾಡುವುದು ತನ್ನ ಕರ್ತವ್ಯವೆಂದು ತಿಳಿಯಬೇಕು. ಜ್ಞಾನವೃದ್ಧಿಕರವಾದ ಪತ್ರಿಕೆಗಳನ್ನು ಹೊರಡಿಸಬೇಕು. ಭಾಷೆಯ ಏಕೀಭಾವ, ಪರಸ್ಪರ ಮೈತ್ರಿ, ಮುದ್ರಣ ಸೌಕರ್ಯ, ಗ್ರಂಥ ಪ್ರಚಾರಕ್ಕೆ ಅನುಕೂಲ ಇವುಗಳನ್ನು ಉಂಟು ಮಾಡುವುದಕ್ಕಾಗಿ ಗ್ರಂಥಕರ್ತರ ಮತ್ತು ಪತ್ರಿಕಾಸಂಪಾದಕರ ಒಂದು ಸಂಘವನ್ನು ಏರ್ಪಡಿಸಬಹುದು. ಎಲ್ಲಾ ಕರ್ಣಾಟಕ ಭಾಗಗಳ ವಿದ್ವಾಂಸರನ್ನು ಸೇರಿಸಿ ಒಂದು ಗ್ರಂಥಪರಿಶೀಲಕ ಮಂಡಲಿಯನ್ನೂ ಏರ್ಪಡಿಸಬಹುದು.

ಬೃಹತ್ ಕೋಶದ ರಚನೆಯ ಅಗತ್ಯ

ಸರಿಯಾದ ಬೃಹತ್ಕೋಶವಿಲ್ಲದುದರಿಂದ ಉಂಟಾಗಿರುವ ಅನರ್ಥಕ್ಕೆ ಒಂದು ಉದಾಹರಣವನ್ನು ಕೊಡುತ್ತೇನೆ:-

ಕ್ರಿಸ್ತಶಕ ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ಹುಟ್ಟಿದ ಒಂದು ಶಾಸನದಲ್ಲಿ "ಬಿಸುಗೆಯೆ ಕಳನಾಗೆ ಬೂತುಗಂ ರಾಜಾದಿತ್ಯನಂ ಕೊಂದಂ" ಎಂಬ ವಾಕ್ಯವಿದೆ. ಇದಕ್ಕೆ ಆಂಗ್ಲೇಯ ಪಂಡಿತರು "ರೇಗಿಸಲು ಕಳ್ಳನಾಗಿ ಬೂತುಗನು ರಾಜಾದಿತ್ಯವನ್ನು ಕೊಂದನು" ಎಂದು ಅಪಾರ್ಥವನ್ನು ಮಾಡಿ ಗಂಗರಾಜನಾದ ಬೂತಗನ ಮೇಲೆ ಇಲ್ಲದ ಕಳಂಕವನ್ನು ಆರೋಪಿಸಿದರು. ಈ ಅಪಾರ್ಥವೇ ಇಂಪೀರಿಯಲ್ ಗೆಜೆಟಿಯರಲ್ಲಿಯೂ ಪ್ರಕಟವಾಗಿದೆ. ನಮ್ಮ ಕನ್ನಡನಾಡಿನ ಪೂರ್ವರಾಜನಾದ ಬೂತುಗನ ಮೇಲೆ ಅಜ್ಞಾನದಿಂದ ಆರೋಪಿತವಾದ ಈ ಅಪವಾದವನ್ನು ನೋಡಿ ಮನಮರುಗಿ ನಾನು ಶೋಧನೆಮಾಡಿ ಈ ವಾಕ್ಯದ ನಿಜವಾದ ಅರ್ಥವನ್ನು ನಿರ್ಧರಿಸಿ ಈ ವಿಚಾರವನ್ನು ರಾಯಲ್ ಏಷಿಯಾಟಿಕ್ ಸೊಸೈಟಿ ಜರ್ನಲಿನಲ್ಲಿ ಪ್ರಕಟಮಾಡಿದ ಬಳಿಕ ಯೂರೋಪಿನಲ್ಲಿ ಅನೇಕ ಪಂಡಿತರು ಬೂತುಗನಿಗೆ ಅನ್ಯಾಯವಾಗಿ ಉಂಟಾಗಿದ್ದ ಅಪಯಶಸ್ಸನ್ನು ಹೋಗಲಾಡಿಸಿದುದಕ್ಕಾಗಿ ನನಗೆ ಶ್ಲಾಘಾಪತ್ರಗಳನ್ನು ಬರೆದರು. 'ಬಿಸುಗೆ' ಯೆಂದರೆ ಆನೆಯ ಮೇಲಣ ಅಂಬಾರಿ. 'ಕಳ' ಎಂದರೆ ಯುದ್ಧರಂಗ. ಅಂಬಾರಿಯೇ ಯುದ್ಧರಂಗವಾಗಲು ಬೂತಗನು ರಾಜಾದಿತ್ಯವನ್ನು ಕೊಂದನು-ಎಂಬುದು ಆ ವಾಕ್ಯದ ನಿಜವಾದ ಅರ್ಥ. ಆದುದರಿಂದ ಶುದ್ಧವಾದ ಬೃಹತ್ ಕೋಶವನ್ನು ಏರ್ಪಡಿಸಿದರೆ ಇಂತಹ ಅನರ್ಥಗಳಿಗೆ ಅವಕಾಶವಿಲ್ಲದಂತಾಗವುದು.

ಸ್ವಾಗತಮಂಡಳಿ ವ್ಯವಸ್ಥೆ

ಸ್ವಾಗತಮಂಡಲಿಯವರು ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳ ಮಾನಸಿಕ ಸುಖ ಮತ್ತು ಶಾರೀರಿಕ ಸುಖ ಇವುಗಳಿಗಾಗಿ ಮಾಡಿದ ಏರ್ಪಾಡುಗಳು ಬಹಳ ಶ್ಲಾಘನೀಯವಾಗಿವೆ. ನಾಟಕ, ಸಂಗೀತ, ಹರಿಕಥೆ, ಪಾಂಡಿತ್ಯಸೂಚಕವಾದ ನಿಬಂಧಗಳು, ನಾನಾ ಪ್ರಾಂತಗಳ ಕನ್ನಡಿಗರ ಪರಸ್ಪರದರ್ಶನ ಸಲ್ಲಾಪಾದಿಗಳಿಗೆ ಅವಕಾಶ-ಇವೆಲ್ಲವೂ ಮನಸ್ಸಿಗೆ ಹೇರಳವಾಗಿ ಆನಂದವನ್ನುಂಟುಮಾಡಿವೆ. ಇನ್ನು ಶರೀರಸೌಖ್ಯಕ್ಕೆ ಮಾಡಿದ ಆನುಕೂಲ್ಯವಾದರೋ ವರ್ಣನಾತೀತವಾಗಿದೆ.

❖❖

೫ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಕರ್ಪೂರ ಶ್ರೀನಿವಾಸರಾವ್



ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯ ಕಾರ್ಯದಲ್ಲಿ ಸಕ್ರಿಯವಾಗಿ ದುಡಿದವರಲ್ಲಿ ಕರ್ಪೂರ ಶ್ರೀನಿವಾಸರಾಯರು ಪ್ರಮುಖರಾಗಿದ್ದಾರೆ. ಪರಿಷತ್ತಿಗೆ ಸ್ವಂತ ಕಟ್ಟಡವನ್ನು ದೊರಕಿಸುವಲ್ಲಿ ಅವರ ಪಾತ್ರ ಅಮೋಘವಾದುದು.

ಕರ್ಪೂರ ಸುಬ್ಬರಾಯರ ದ್ವಿತೀಯ ಪುತ್ರರಾದ ಕರ್ಪೂರ ಶ್ರೀನಿವಾಸರಾಯರು ೧೮೬೩ರಲ್ಲಿ ಜನಿಸಿದರು. ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಹೋಗುವಾಗ ಇವರ ಮನೆತನದ ಹಿರಿಯರು ಬೆಟ್ಟದಡಿಯಿಂದ ಬೆಟ್ಟದ ತುದಿಯವರೆಗೆ ಕರ್ಪೂರ ಉರಿಸಿದ್ದರಿಂದ ಇವರ ಮನೆತನಕ್ಕೆ ಕರ್ಪೂರದವರು ಎಂದು ಹೆಸರಾಯಿತು.

ಬಡತನದ ಕುಟುಂಬದಲ್ಲಿ ಜನಿಸಿದ ಇವರು ನೌಕರಿಗಾಗಿ ಪೂನಾದಲ್ಲಿ ಪ್ರಯತ್ನಿಸುತ್ತಿದ್ದಾಗ ವಕೀಲರೊಬ್ಬರು ಕೊಡಿಸಿದ ವಿದ್ಯಾರ್ಥಿ ವೇತನದಿಂದ ವಿದ್ಯಾಭ್ಯಾಸ ಮುಂದುವರೆಸಿದರು. ಬಿ.ಎಸ್.ಸಿ ಮತ್ತು ಎಲ್.ಸಿ.ಇ. ಪದವಿಗಳನ್ನು ಗಳಿಸಿದ ಇವರು ಬೊಂಬಾಯಿಯಲ್ಲಿ ಇಂಜಿನಿಯರ್ ಆಗಿ ನೇಮಕಗೊಂಡ ಇವರು ರಿಲೀಫ್ ಇಂಜಿನಿಯರ್ ಆಗಿ ನಿವೃತ್ತರಾದರು. ಅನಂತರ ಮೈಸೂರು ಸರ್ಕಾರದ ಪ್ರಧಾನ ಇಂಜಿನಿಯರ್ ಆಗಿ ನೇಮಕಗೊಂಡರು.

೧೯೧೫ರಲ್ಲಿ ಪರಿಷತ್ತು ಪ್ರಾರಂಭವಾದಾಗ ೫೦೦ ರೂ. ಕೊಟ್ಟ ಪ್ರಥಮ ಪೋಷಕರು ಶ್ರೀನಿವಾಸರಾಯರು, ೧೩ ವರ್ಷಗಳ ಕಾಲ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿಯೇ ಶ್ರೀ ಕೃಷ್ಣರಾಜ ಪರಿಷನ್ಮಂದಿರ ಶಂಕುಸ್ಥಾಪನೆ ಆದುದು. ಇವರೇ ನಿರ್ಮಾಣದ ಉಸ್ತುವಾರಿಯನ್ನೂ ವಹಿಸಿಕೊಂಡಿದ್ದರು. ೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಇವರು ಕೃಷ್ಣರಾಜ ಜಲಾಶಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಕರ್ಪೂರ ಶ್ರೀನಿವಾಸರ ಸೇವೆಯನ್ನು ಪರಿಗಣಿಸಿ ಮಹಾರಾಜರು ರಾಜಸಭಾಭೂಷಣ ಎಂಬ ಬಿರುದನ್ನು ಇತ್ತರು. ಮೈಸೂರು ಸಂಸ್ಥಾನದ ಪ್ರಥಮ ಕಾರ್ಯಕಾರಿ ಮಂಡಲಿಯ ಚುನಾಯಿತ ಸದಸ್ಯರಾಗಿದ್ದರು.

ಶ್ರೀನಿವಾಸರಾಯರು ಬರೆದ ಕೃತಿಗಳು ಹಲವಾರು:

೧. ಸಾಹಿತ್ಯ ಶಾಸ್ತ್ರ (ಲೇಖನಗಳು)
೨. ವಿದ್ಯಾರ್ಥಿ ಕರಭೂಷಣ
೩. ಧನಾರ್ಜನೆಯ ಕ್ರಮ
೪. ಅರ್ಥಸಾಧನೆ
೫. ಹರಿಶ್ಚಂದ್ರ ಚರಿತ್ರೆ
೬. ದೇಶಾಭಿಮಾನ
೭. ಸಾಧನೆ ಪ್ರಕಾಶಿಕೆ ಇತ್ಯಾದಿ

ಇಂಗ್ಲಿಷ್, ಕನ್ನಡ ಮರಾಠಿ ಭಾಷೆಗಳಲ್ಲಿ ಪರಿಶ್ರಮ ಹೊಂದಿದ ಇವರು ಸುಭೋಧ ರಾಮರಾಯರ ಗ್ರಂಥಮಾಲೆಗೆ ವಿಶೇಷ ಪ್ರೋತ್ಸಾಹವಿತ್ತರು. ೮-೧೧-೧೯೩೩ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫
ಅಧ್ಯಕ್ಷರು, ಕರ್ಪೂರ ಶ್ರೀನಿವಾಸರಾಯರು
ದಿನಾಂಕ ೬, ೭, ೮ ಮೇ ೧೯೧೯
ಸ್ಥಳ : ಹಾಸನ

'ಈ ಸಮ್ಮೇಳನದ ಸ್ವಾಗತ ಮಂಡಲಿಯ ಅಧ್ಯಕ್ಷರಾದ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮ॥ ರಾ॥ ಸಿ. ವೆಂಕಟರಾಯರವರ ಪರವಾಗಿ ಮ॥ ರಾ॥ ಅಡ್ವೋಕೇಟ್ ರಾಮಸ್ವಾಮಯ್ಯನವರು ತಮ್ಮನ್ನು ಸ್ವಾಗತಾಭಿನಂದನಗಳಿಂದ ಈ ನಗರಕ್ಕೆ ಬರಮಾಡಿಕೊಂಡು ಈಗ ತಾನೆ ಈ ಡಿಸ್ಟ್ರಿಕ್ಟಿನ ವಿಶೇಷಾಂಶಗಳನ್ನು ವಿವರಿಸಿದುದನ್ನು ತಾವುಗಳೆಲ್ಲರೂ ಕೇಳಿ ಐಕಮತ್ಯದಿಂದ ನನ್ನನ್ನು ಸಮ್ಮೇಳನದ ಅಧ್ಯಕ್ಷನಾಗಿರುವಂತೆ ನಿಯಮಿಸಿರುವುದರಿಂದ ತಮ್ಮ ಆಜ್ಞಾನುಸಾರವಾಗಿ ಇಲ್ಲಿನ ಕಾರ್ಯಗಳನ್ನು ನನ್ನ ಶಕ್ತ್ಯನುಸಾರ ನಡೆಯಿಸುವುದು ನನ್ನ ಕರ್ತವ್ಯವಾಗಿದೆ. ಮುಖ್ಯವಾಗಿ ಇಂತಹ ದೊಡ್ಡ ಕಾರ್ಯವು ಸರಿಯಾಗಿ ನೆರವೇರಬೇಕಾದರೆ ತಮ್ಮೆಲ್ಲರ ಸಹಾಯವು ಅತ್ಯಾವಶ್ಯಕವಾಗಿರುವುದು.

ಈ ಸಂಘವನ್ನು "ಕರ್ಣಾಟಕ ಸಾಹಿತ್ಯ ಪರಿಷತ್ತು" ಎಂದು ಕರೆಯುವೆನಷ್ಟೆ! ಈ ನಾಮಧೇಯದಿಂದಲೇ ಈ ಸಂಘದವರ ಕರ್ತವ್ಯವು ಇಂತಹದೆಂದು ನಿಶ್ಚಯಿಸಬಹುದು. ಈ ಹೆಸರಿನಲ್ಲಿ "ಕರ್ಣಾಟಕ ಸಾಹಿತ್ಯ ಪರಿಷತ್ತು" ಎಂಬ ಮೂರು ಶಬ್ದಗಳು ಇರುತ್ತವೆ; ಇವುಗಳಲ್ಲೊಂದಾದ 'ಸಾಹಿತ್ಯ' ಎಂಬ ಶಬ್ದದ ಅರ್ಥವನ್ನು ಮೊದಲು ವಿಚಾರಮಾಡಬೇಕಾಗಿದೆ.

ಸಾಹಿತ್ಯ ಎಂದರೆ, "ಯಾವುದಾದರೊಂದು ಕಾರ್ಯವನ್ನು ನೆರವೇರಿಸಬೇಕಾದರೆ ಒಂದನ್ನೊಂದವಲಂಬಿಸಿಕೊಂಡಿರುವ ಸಮಾನ ಧರ್ಮಗಳುಳ್ಳ ಅನೇಕ ಪದಾರ್ಥಗಳು, ಅಥವಾ ಜನರು, ಒಂದೇ ಕಾರ್ಯದಲ್ಲಿ ಸಮವಾಗಿ ಸಂಬಂಧಿಸಿ ಸೇರತಕ್ಕದ್ದು" ಎಂದರ್ಥವಾಗುತ್ತದೆ. ಇದರಿಂದ ಸಾಹಿತ್ಯ ಶಬ್ದಾರ್ಥವನ್ನು ವಿಶಾಲವಾಗಿ ಮಾಡಿದಂತಾಗುತ್ತದೆ; ಆದರೆ ಪ್ರಕೃತಕ್ಕೆ ತಕ್ಕಂತೆ ಅದನ್ನು ಸಂಕೋಚಮಾಡಿ ಮನುಷ್ಯಕೃತ ಗ್ರಂಥ ವಿಶೇಷಗಳಿಗೆ ಮಾತ್ರ ನಿಯಮ ಮಾಡಿಕೊಂಡರೆ ಸಂಸ್ಕೃತದಲ್ಲಿ ರಘುವಂಶ, ಮಾಘ, ಭಾರವಿ, ಭಟ್ಟ, ಮೇಘದೂತ, ಕಾದಂಬರಿ, ಹರ್ಷಚರಿತ, ಭೋಜಚಮ್ಪು, ಶಾಕುಂತಲ, ಮುದ್ರಾರಾಕ್ಷಸ, ರತ್ನಾವಳಿ, ಉತ್ತರರಾಮಚರಿತ- ಇವೇ ಮೊದಲಾದ ಗ್ರಂಥಗಳ ಸಮುದಾಯವೆಂದು ತಾತ್ಪರ್ಯವಾಗುತ್ತದೆ.

ಇದರಂತೆಯೇ ಕನ್ನಡದಲ್ಲಿಯೂ ಅರ್ಥವಾಗಲೆಂದು ಕರ್ಣಾಟಕ ಸಾಹಿತ್ಯವೆಂದಿಟ್ಟಿದೆ. ಇದರಿಂದ ಕವಿರಾಜಮಾರ್ಗ, ಪಂಪಭಾರತ, ಪಂಪರಾಮಾಯಣ, ಲೀಲಾವತಿ, ಗದಾಯುದ್ಧ, ರಾಮಾಶ್ವಮೇಧ ಮಿತ್ರವಿಂದಾಗೋವಿಂದ- ಮೊದಲಾದ ಕನ್ನಡದ ಗ್ರಂಥಗಳ ಸಮುದಾಯವೆಂಬರ್ಥವನ್ನು ಕೊಡುತ್ತದೆ.

"ಪರಿಷತ್" ಎಂದರೆ ಸಭೆಯೆಂದರ್ಥವು-ಇತ್ಥಂಚ "ಕರ್ಣಾಟಕ ಸಾಹಿತ್ಯ ಪರಿಷತ್" ಎಂದರೆ ಕನ್ನಡ ಭಾಷಾಗ್ರಂಥಗಳಲ್ಲಿ ಪ್ರಾಚೀನವಾದುವನ್ನು ಪರಿಷ್ಕರಣಮಾಡಿ ಪ್ರಕಟಿಸುವುದೂ, ಆಧುನಿಕ ಗ್ರಂಥಗಳನ್ನು ಸಂಗ್ರಹಿಸಿ ಉತ್ತಮವಾದವುಗಳಿಗೆ ಪ್ರೋತ್ಸಾಹವನ್ನು ಕೊಡುವುದೂ, ಉತ್ತಮವಾದ ಭಾಷಾಗ್ರಂಥಗಳನ್ನು ರಚಿಸಲು ಉತ್ತೇಜನ ಕೊಡುವುದೂ ಮತ್ತು ಎಲ್ಲಾ ಕರ್ಣಾಟಕ ದೇಶ ಭಾಗಗಳಲ್ಲಿಯೂ ಪ್ರಚಾರದಲ್ಲಿರುವ ಈ ಭಾಷೆಯ ವೃದ್ಧಿಯ ವಿಷಯದಲ್ಲಿರುವ ಸಮಯವರಿತು ತಕ್ಕ ಏರ್ಪಾಟುಗಳನ್ನು ಮಾಡಿ ಆಚರಣೆಗೆ ತರುವುದೂ-ಇದೇ ಮೊದಲಾದ ಕಾರ್ಯಗಳನ್ನು ಕೈಕೊಂಡು ನೆರವೇರಿಸಲು ಏರ್ಪಟ್ಟ ವಿದ್ವಾಂಸರ ಸಭೆ-ಎಂದು ನಿಷ್ಕೃಷ್ಟಾರ್ಥವು.

ಈ ಪರಿಷತ್ತಿನಲ್ಲಿ ಎಂತೆಂತಹ ಗ್ರಂಥಗಳು ಅಂಗೀಕಾರವನ್ನು ಹೊಂದಿರುತ್ತವೆ ಎಂದು ವಿಚಾರ ಮಾಡಬೇಕಾಗಿದೆ.

ಮಿತ್ರ ಸಮ್ಮಿತಗಳು

ಮಿತ್ರರು ಪರಸ್ಪರ ವಿಚಾರಮಾಡಿ ಸನ್ಮಾರ್ಗವನ್ನವಲಂಬಿಸುವುದಕ್ಕೂ ದುರ್ಮಾರ್ಗವನ್ನು ತ್ಯಜಿಸುವುದಕ್ಕೂ ಹೇಗೆ ಅವಕಾಶವಿರುತ್ತದೆಯೋ ಹಾಗೆಯೇ ಪುರಾಣೇತಿಹಾಸಗಳು ವಿಚಾರಕ್ಕೆ ಅವಕಾಶವನ್ನು ಕೊಟ್ಟು ವಿಹಿತ ಕರ್ಮದಲ್ಲಿ ಪ್ರವೃತ್ತಿಯನ್ನೂ ನಿಷಿದ್ಧ ಕರ್ಮದಲ್ಲಿ ನಿವೃತ್ತಿಯನ್ನೂ ಬೋಧಿಸುತ್ತವೆ.

ಇಂತಹ ಪುರಾಣೇತಿಹಾಸಗಳಲ್ಲಿರುವ ಉಪಾಖ್ಯಾನಗಳನ್ನು ಕನ್ನಡದಲ್ಲಿ ಬೇರೆ ಬೇರೆ ಮುದ್ರಿಸಿ ಲೋಕೋಪಕಾರವನ್ನು ಮಾಡಬೇಕೆಂಬುದೂ ಈ ಪರಿಷತ್ತಿನ ಉದ್ದೇಶವಾಗಿರುತ್ತದೆ.

ಕಾಂತಾಸಮ್ಮಿತಗಳು

ಕಾವ್ಯಾನಾಟಕಾದಿಗಳಲ್ಲಿ ಮನುಷ್ಯನಿಗೆ ಕರ್ತವ್ಯಾಕರ್ತವ್ಯಗಳಲ್ಲಿ ಪ್ರವೃತ್ತಿ ನಿವೃತ್ತ್ಯುಪದೇಶವನ್ನು ಸರಸವಾಗಿ ಬೋಧಿಸುವುದರಿಂದ ಇವುಗಳನ್ನು ಓದಿದ ಮನುಷ್ಯನು ಮಾಡಬೇಕಾದುದನ್ನು ಮಾಡುವುದೂ, ಬಿಡಬೇಕಾದುದನ್ನು ಬಿಡುವುದೂ, ಕಂಡುಬರುತ್ತದೆ.

ರಾಮಾಯಣವನ್ನು ಓದಿದವನು,"ಶ್ರೀರಾಮನಂತೆಯೇ ನಾನಿರಬೇಕು. ರಾವಣನಂತಿರಬಾರದು" ಎಂಬ ವಿಷಯವನ್ನು ಮನಸ್ಸಿಗೆ ತಂದುಕೊಂಡು ಕೂಡಿದ ಮಟ್ಟಿಗೆ ಇದನ್ನು ಆಚರಣೆಯಲ್ಲಿ ತರುತ್ತಾನೆ. ಆದಕಾರಣ ಕಾವ್ಯಗಳಿಂದ ಸಾಮಾನ್ಯ ಜನರಿಗೆ ತಿಳಿವಳಿಕೆಯೂ ಉಪಕಾರವೂ ಆಗುವಷ್ಟು ವೇದಶಾಸ್ತ್ರಗಳಿಂದಾಗಲಾರದು. ಆದುದರಿಂದಲೇ ಈ ಪರಿಷತ್ತಿನಲ್ಲಿ ಮುಖ್ಯವಾಗಿ ಕರ್ಣಾಟಕ ಕಾವ್ಯಗಳನ್ನು ಪ್ರಕಟಿಸಿ ಕನ್ನಡಿಗರಿಗೆ ಉಪಕಾರಮಾಡಬೇಕೆಂಬ ಉದ್ದೇಶವಿರುತ್ತದೆ.

ಹಿಂದೆ ಒಂದೇ ರಾಜ್ಯವಾಗಿದ್ದ 'ಕರ್ಣಾಟಕವು ಈಗ ತುಂಡು ತುಂಡುಗಳಾಗಿ ಬೇರೆ ಬೇರೆ ಆಧಿಪತ್ಯಗಳಿಗೆ ಸೇರಲು ಅನೇಕ ರಾಜಕೀಯ ಮತ್ತು ಸಾಮಾಜಿಕ ಕಾರಣಗಳುಂಟು. ಅವುಗಳನ್ನು ಈ ಸಮ್ಮೇಳನದಲ್ಲಿ ಚರ್ಚಿಸುವುದು ಯುಕ್ತವಲ್ಲ; ಕಳೆದುಹೋದುದನ್ನು ಕುರಿತು ಪ್ರಸಂಗಮಾಡುವುದು ಅಷ್ಟು ಪ್ರಯೋಜನಕಾರಿಯೂ ಅಲ್ಲ. ಕರ್ಣಾಟಕದ ಈಗಿನ ಸ್ಥಿತಿಯು ಸಕಲ ವಿಧಗಳಲ್ಲಿಯೂ ಮೇಲಾಗಬೇಕು. ಹೀಗಾಗಲು ಬಗೆಬಗೆಯ ಪ್ರಯತ್ನಗಳು ಆವಶ್ಯಕಗಳು. ಆದರೆ ಅವುಗಳಲ್ಲಿ ಒಂದನ್ನು ಮಾತ್ರವೇ ನಮ್ಮ ಪರಿಷತ್ತು ಕೈಕೊಳ್ಳುವುದಕ್ಕೆ ಸಾಧ್ಯವು. ಅದೇನೆಂದರೆ- ಭಾಷಾ ಸೇವೆ, ಎಂದರೆ ಕರ್ಣಾಟಕ ಸಾಹಿತ್ಯ ಸಂಪತ್ತನ್ನು ಹೆಚ್ಚಿಸುವುದು. ಇದಕ್ಕಾಗಿ ನಾವು ಮಾಡತಕ್ಕುದೇನು! ಕರ್ಣಾಟಕ ಸಾಹಿತ್ಯ ಸಂಪತ್ತಿನ ಈಗಿನ ಸ್ಥಿತಿಯನ್ನು ಅದರ ಪೂರ್ವಸ್ಥಿತಿಯೊಡನೆ ಹೋಲಿಸುವುದಲ್ಲದೆ, ಇತರ ದೇಶಗಳ ಸಾಹಿತ್ಯ ಸಂಪತ್ತಿಗಳ ಅಭಿವೃದ್ಧಿಗೆ ಕಾರಣಗಳನ್ನು ತಿಳಿದು, ನಮ್ಮದೂ ಅವುಗಳಂತೆ ಏಳಿಗೆಯನ್ನು ಹೊಂದಬೇಕಾದರೆ ಆವಶ್ಯಕಗಳಾದ ಪ್ರಯತ್ನಗಳಾವುವೋ ಅವುಗಳನ್ನು ಕುರಿತು ವಿಚಾರಮಾಡುವುದು.

ಯಾವ ಕಾರ್ಯಸಿದ್ಧಿಗೂ ತತ್ಸಂಬಂಧವಾದ ಜ್ಞಾನ, ಇಚ್ಛಾ, ಕೃತಿ ಎಂಬ ಮೂರು ಘಟ್ಟಗಳುಂಟು. ಅವುಗಳಲ್ಲಿ ಮೊದಲನೆಯದು ಯಾವುದೆಂದರೆ, ಕಾರ್ಯ ವಿಷಯವಾಗಿ ಜ್ಞಾನಸಂಪಾದನೆ. ಮುಂದೆ, ಕಾರ್ಯದಲ್ಲಿ ಇಚ್ಛೆ ಹುಟ್ಟುವುದೇ ಎರಡನೆಯ ಸೋಪಾನ. ಕಾರ್ಯವು ಒಳ್ಳೆಯದೆಂದು ತಿಳಿದುಬಂದರೆ ಅದರಲ್ಲಿ ಉಪಾದೇಯಬುದ್ಧಿಯೂ, ಕೆಟ್ಟದೆಂದು ಕಂಡುಬಂದರೆ ಅದರಲ್ಲಿ ಹೇಯಬುದ್ಧಿಯೂ ಜನಿಸುತ್ತದೆ. ಮೂರನೆಯ ಮೆಟ್ಟಲು ಕೃತಿ. ಇಚ್ಛೆಯು ಉತ್ಕಟವಾದಂತೆ ತತ್ಸಂಬಂಧವಾದ ಕೃತಿಯೂ ಬಲವಾಗುತ್ತದೆ. ಉತ್ಕಟೇಚ್ಛೆಗೆ ಪೂರ್ಣಜ್ಞಾನವೇ ಮೂಲ. ಆದುದರಿಂದ ನಮ್ಮ ಕರ್ಣಾಟಕ ವಾಙ್ಮಯ ವಿಷಯವಾಗಿ ನಾವು ಮೊದಲು ಸರಿಯಾದ ಜ್ಞಾನವನ್ನು ಸಂಪಾದಿಸುವುದೇ ನಮ್ಮ ಪ್ರಥಮ ಕರ್ತವ್ಯವು. ಈ ಜ್ಞಾನಸಂಪಾದನೆಗೆ ನಾನು ಈಗತಾನೇ ಹೇಳಿದಂತೆ ಕರ್ಣಾಟಕ ಸಾಹಿತ್ಯ ಸಂಪತ್ತಿನ ಪೂರ್ವ ಮತ್ತು ಆಧುನಿಕ ಸ್ಥಿತಿಗಳನ್ನು ಒಂದರೊಡನೆ ಒಂದನ್ನು ಹೋಲಿಸುವುದು ಅತ್ಯಾವಶ್ಯಕವು.

ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯವರೂ, ಕರ್ಣಾಟಕ ಗ್ರಂಥಮಾಲಾ ಸಂಪಾದಕರೂ ಸ್ವಲ್ಪಮಟ್ಟಿಗೆ, ಕನ್ನಡಭಾಷೆಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರೂ, ಜನರಲ್ಲಿ ಭಾಷಾವಿಷಯವಾಗಿ ನಿಜವಾದ ಜಾಗ್ರತೆಯು ಇತರ ಕಡೆಗಳಲ್ಲಿರುವಂತೆ ಇನ್ನೂ ಹುಟ್ಟಿಲ್ಲ. ಈ ನ್ಯೂನತೆಯ ನಿವಾರಣಾರ್ಥವಾಗಿ ಈಚೆಗೆ ಪ್ರಯತ್ನಗಳು ನಡೆಯುತ್ತಲಿವೆ. ಅವುಗಳಲ್ಲಿ ಮುಖ್ಯವಾದುವುಗಳನ್ನು ಇಲ್ಲಿ ಸೂಚಿಸುತ್ತೇನೆ.

ಪ್ರಜೆಗಳು ತಮ್ಮ ಕ್ಷೇಮ ಮತ್ತು ಏಳಿಗೆಯ ಚಿಂತನೆಯನ್ನು ತಾವೇ ಸಂತತವೂ ಪರಾವಲಂಬನವಿಲ್ಲದೆ ಮಾಡಿಕೊಳ್ಳುವುದಕ್ಕೆ ಪ್ರವರ್ತಿಸಬೇಕೆಂಬ ದೂರದೃಷ್ಟಿಯೊಡನೆ ನಮ್ಮ ಶ್ರೀಮನ್ಮಹರಾಜರು ಉದಾರ ಮನಸ್ಸಿನಿಂದ ಈಗ್ಗೆ ೮ ವರುಷಗಳ ಹಿಂದೆ ಸಂಸದಭ್ಯುದಯ ಸಂಘವೊಂದನ್ನು ಸ್ಥಾಪಿಸಿ ದೇಶೋನ್ನತಿಗೆ ಅವಕಾಶವನ್ನು ಕಲ್ಪಿಸಿದ್ದಾರೆ.

ಪರಿಷತ್ತಿಗೆ ದ್ರವ್ಯ ಸಹಾಯಮಾಡಿ

ಕರ್ಣಾಟಕ ಭಾಷಾಸೇವೆಗಾಗಿ ಈ ಕರ್ಣಾಟಕ ಸಾಹಿತ್ಯ ಪರಿಷತ್ತು ನಾಲ್ಕು ವರುಷಗಳ ಹಿಂದೆ ಸ್ಥಾಪಿಸಲ್ಪಟ್ಟಿತೆಂಬ ವಿಷಯವು ತಮ್ಮೆಲ್ಲರಿಗೂ ತಿಳಿದ ವಿಷಯವೇ. ಪರಿಷತ್ತಿನ ಕಾರ್ಯಗಳು ಕರ್ಣಾಟಕರೆಂದು ಯಾರುಯಾರು

ಹೇಳಿಸಿಕೊಳ್ಳುತ್ತಾರೋ ಅವರೆಲ್ಲರ ಸಹಾಯದಿಂದಲೂ ಸಾಧ್ಯವಾದ ಮಟ್ಟಿಗೆ ನಡೆಯುತ್ತಲಿದೆ. ಇಂತಹ ಸಹಾಯವು ಮುಂದೆ ಇನ್ನೂ ಹೆಚ್ಚಾಗಬೇಕು. ಪ್ರಥಮತಃ ಅನೇಕ ವಿಷಯಗಳಲ್ಲಿ ಸರಿಯಾದ ಏರ್ಪಾಟುಗಳನ್ನು ಮಾಡಿ ಅವುಗಳನ್ನು ನಡೆಯಿಸುವುದೇ ಪರಿಷತ್ತಿಗೆ ಸಾಕಾದಷ್ಟು ಕೆಲಸವಾಗಿದ್ದೀತು. ಆದುದರಿಂದ ಪರಿಷತ್ತಿನ ಮುಖ್ಯೋದ್ದೇಶಗಳ ಸಿದ್ಧಿಗಾಗಿ ತಕ್ಕ ಪ್ರಯತ್ನಗಳು ಜರುಗಲಿಲ್ಲವೆಂದು ಅಪಾತತಃ ತೋರಬಹುದು. ಆದರೆ ಈ ವಿಷಯದಲ್ಲಿ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಪರ್ಯಾಲೋಚಿಸುವುದು ಯುಕ್ತವಾಗಿ ತೋರುತ್ತದೆ. ಈಗ ಮೈಸೂರು ಸಂಸ್ಥಾನದಿಂದ ಪ್ರತಿಮಾಸವೂ ಸಲ್ಲುವ ೧೫೦ ರೂಪಾಯಿಗಳ ಸಹಾಯದ್ರವ್ಯವು ಪರಿಷ್ಮನಂದಿರದ ಬಾಡಿಗೆಗೂ ಇತರ ಅವಶ್ಯಕವಾದ ಸಿಬ್ಬಂದಿ ಖರ್ಚಿಗೂ ಸಾಕಾದರೂ ಪರಿಷತ್ತಿನ ಉದ್ದೇಶಗಳನ್ನೆಲ್ಲಾ ಸಫಲಗೊಳಿಸಲು ಅಧಿಕ ದ್ರವ್ಯವು ಅತ್ಯಂತ ಆವಶ್ಯಕ. ಹೊಸ ಪುಸ್ತಕಗಳನ್ನು ಬರೆಯಿಸಿ, ಗ್ರಂಥಕರ್ತರಿಗೆ ಬಹುಮಾನಗಳನ್ನು ನೀಡುವುದಕ್ಕೆ ಸರ್ಕಾರದಿಂದ ಸಲ್ಲುವ ದ್ರವ್ಯವು ಸಾಲದೆಂದು ನಾನು ಹೇಳಬೇಕಾದುದಿಲ್ಲ. ಇಂತಹ ಕಾರ್ಯಗಳೆಲ್ಲವೂ ಸರ್ಕಾರದಿಂದಲೇ ಆಗಬೇಕೆಂದು ನಾವು ನಿರೀಕ್ಷಿಸುವುದು ನಮಗೆ ಭೂಷಣಕರವಾಗಿಲ್ಲ. ಇತರ ಪ್ರಾಂತಗಳಲ್ಲಿ ಸರ್ಕಾರದಿಂದ ಇಷ್ಟು ಮಟ್ಟಿಗೆ ಕೂಡ ಸಹಾಯ ದೊರೆಯುವುದಿಲ್ಲ. ಆದುದರಿಂದ ನಮ್ಮ ಪರಿಷತ್ತಿನ ಉದ್ದೇಶಗಳೆಲ್ಲವೂ ಸಮರ್ಪಕವಾಗಿ ನೇರವೇರುವುದಕ್ಕೆ ಕರ್ಣಾಟಕರೆಲ್ಲರೂ ಏಕಮನಸ್ಸಿನಿಂದ ತಮ್ಮ ಶಕ್ತ್ಯನುಸಾರ ದ್ರವ್ಯಸಹಾಯವನ್ನು ಮಾಡಬೇಕೆಂಬುದು ನನ್ನ ಪ್ರಾರ್ಥನೆ.

ಪರಿಷತ್ತಿನ ಕರ್ತವ್ಯಗಳು

ಪರಿಷತ್ತಿನ ಕರ್ತವ್ಯಗಳ ವಿಷಯದಲ್ಲಿ ನಾವು ಪ್ರಕೃತ ಕೈಕೊಳ್ಳತಕ್ಕ ಪ್ರಯತ್ನಗಳನ್ನು ನಿರೂಪಿಸಿದುದಾಯಿತು. ಈಗ ಸಾಹಿತ್ಯ ಪರಿಷತ್ತು ಯಾವ ಯಾವ ಭಾಗಗಳಲ್ಲಿ ಏಳಿಗೆ ಹೊಂದುವಂತೆ ಮಾಡಬೇಕೆಂಬುದನ್ನು ನಾವು ಪರ್ಯಾಲೋಚನೆ ಮಾಡಬಹುದು. ಇದಕ್ಕಾಗಿ ಬಂಗಾಳ, ಮಹಾರಾಷ್ಟ್ರ, ಗುಜರಾತಿ, ಆಂಧ್ರ ಮುಂತಾದ ಭಾಷೆಗಳ ಅಭಿವೃದ್ಧಿಗಾಗಿ ಆಯಾ ಪ್ರಾಂತದ ಭಾಷಾಭಿಮಾನಿಗಳು ಸ್ಥಾಪಿಸಿರುವ ಸಾಹಿತ್ಯ ಪರಿಷತ್ತುಗಳ ಕಡೆ ನಮ್ಮ ದೃಷ್ಟಿಯನ್ನಿಡಬೇಕು. ಆಯಾ ದೇಶದ ಭಾಷೆಯನ್ನೇ ಸರಿಯಾಗಿ ವ್ಯಾಸಂಗ ಮಾಡಿ ಆ ಭಾಷೆಯಲ್ಲಿಯೇ ಪುಸ್ತಕ ಭಾಂಡಾಗಾರವನ್ನು ಹೆಚ್ಚಿಸಿ, ತನ್ಮೂಲಕ ಜನಸಾಮಾನ್ಯರಲ್ಲಿ ಜ್ಞಾನವನ್ನು ಹರಡಬೇಕೆಂಬ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಲಿವೆ. ಇದಕ್ಕಾಗಿ ಪಾಶ್ಚಾತ್ಯರಲ್ಲಿ ಪ್ರಚಾರಗೊಂಡಿರುವ ನಾನಾ ಆಧುನಿಕ ಶಾಸ್ತ್ರವಿಷಯವಾದ ಪುಸ್ತಕಗಳನ್ನು ದೇಶ ಭಾಷೆಯಲ್ಲಿ ಸಾಧ್ಯವಾದಮಟ್ಟಿಗೆ ಬರೆಯಿಸಿ, ಅವುಗಳನ್ನು ಪ್ರಚಾರಕ್ಕೆ ತರುವುದರಲ್ಲಿ ಜನರು ಉದ್ಯುಕ್ತರಾಗಿದ್ದಾರೆ. ಇದಲ್ಲದೆ, ನಮ್ಮ ಪ್ರಾಚೀನ ಸಾಹಿತ್ಯ ಸಂಪತ್ತಿನ ಪ್ರಚಾರಕ್ಕೂ ತಕ್ಕ ಏರ್ಪಾಡುಗಳು ನಡೆಯುತ್ತಲಿದೆ ಮತ್ತು ನಮ್ಮ ಪ್ರಾಚೀನ ತರ್ಕ, ವೇದಾಂತ, ಧರ್ಮಶಾಸ್ತ್ರ, ಸ್ಮೃತಿ ಮುಂತಾದ ಗ್ರಂಥಗಳಲ್ಲಿಯ ವಿಷಯಗಳನ್ನುಳ್ಳ ಪುಸ್ತಕಗಳು ಸಾಮಾನ್ಯರ ತಿಳಿವಳಿಕೆಗೋಸ್ಕರ ದೇಶಭಾಷೆಗಳಲ್ಲಿ ಹೊರಡುತ್ತಲಿವೆ. ಈ ಕಾರ್ಯಗಳೆಲ್ಲವನ್ನೂ ಕರ್ಣಾಟಕ ಭಾಷೆಯಲ್ಲಿ ನಾವೂ ಕೈಕೊಳ್ಳುವುದು ನಮ್ಮ ಕರ್ತವ್ಯವು.

ಈಗ ಸಾಹಿತ್ಯ ಪರಿಷತ್ ಸಮ್ಮೇಳನದ ಕಾರ್ಯವು ಮುಗಿದಂತಾಯಿತು. ಮುಖ್ಯವಾಗಿ, ಈ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರ್ ಸಾಹೇಬರೂ, ಇಲ್ಲಿಯ ನಿವಾಸಿಗಳಲ್ಲಿ ಪ್ರಮುಖರಾದ ಮ॥ ರಾ॥ ಅಡ್ವೋಕೇಟ್ ವೆಂಕಟೇಶಯ್ಯನವರೂ, ಮ॥ ರಾ॥ ಅಡ್ವೋಕೇಟ್ ರಾಮಸ್ವಾಮಯ್ಯನವರೂ, ವಾಲಂಟಿಯರುಗಳೂ, ಇನ್ನೂ ಇತರರೂ ಬಹಳವಾಗಿ ಶ್ರಮಪಟ್ಟು, ದೂರದೇಶಗಳಿಂದ ಬಂದಿರುವ ನಮ್ಮೆಲ್ಲರನ್ನೂ ಸತ್ಕರಿಸಿ, ಸಮ್ಮೇಳನದ ಕಾರ್ಯವು ನಿರ್ವಿಘ್ನವಾಗಿ ನಡೆಯುವಂತೆ ಮಾಡಿಕೊಟ್ಟುದಕ್ಕಾಗಿ ಇಲ್ಲಿ ನೆರೆದಿರುವ ನಮ್ಮೆಲ್ಲರ ಕೃತಜ್ಞತೆಯನ್ನು ಪ್ರಕಟಪಡಿಸುವುದು ನನ್ನ ಪ್ರಥಮ ಕರ್ತವ್ಯವಾಗಿವೆ. ಇದನ್ನು ನೀವೆಲ್ಲರೂ ಏಕಕಂಠ್ಯದಿಂದ ಅನುಮೋದಿಸಿ ಈ ವಿಷಯದಲ್ಲಿ ನಿಮಗಿರುವ ಸಮಾಧಾನವನ್ನು ಕರತಾಡನ ಧ್ವನಿಯಿಂದ ತೋರ್ಪಡಿಸಬೇಕೆಂಬುದು ನನ್ನ ಕೋರಿಕೆಯಾಗಿದೆ.

ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧಗಳು

ಇನ್ನು, ಈ ಮೂರುದಿವಸಗಳು ನಡೆದ ಕಾರ್ಯಗಳನ್ನು ಸಂಕ್ಷೇಪವಾಗಿ ಸೂಚಿಸಬೇಕಾಗಿದೆ. ಪರಿಷತ್ತಿನ ಪಂಡಿತರಾದ ಮ॥ ರಾ॥ ಎನ್. ನಂಜುಂಡಶಾಸ್ತ್ರಿಗಳು ನಮ್ಮ ದೇಶದಲ್ಲಿ ಲಿಪಿಯು ಮೊದಲು ಹುಟ್ಟಿದುದು ಹೇಗೆ, ಅದು ಕ್ರಮೇಣ ಹೇಗೆ ವಿಕಾರವನ್ನು ಹೊಂದುತ್ತ ಬಂದಿರುವುದು–ಈ ಮುಂತಾದ ವಿಷಯಗಳನ್ನು ಬಹು ಶ್ರಮಪಟ್ಟು ಎಲ್ಲರಿಗೂ ಸುಲಭವಾಗಿ ಬೋಧಕವಾಗುವಂತೆ ಉಪನ್ಯಾಸ ಮಾಡಿದರು. ಈ ವಿಷಯದಲ್ಲಿ ನಾನು ಅಲ್ಪಸ್ವಲ್ಪ ವಿಚಾರಮಾಡಿದ್ದೇನೆ. ಬಾಲಬೋಧ ಲಿಪಿಯು ಮೊದಲು ಉತ್ತರದಲ್ಲಿ ಹುಟ್ಟಿತು. ನಮ್ಮ ದಕ್ಷಿಣ ದೇಶದ ಲಿಪಿಗಳು ಅದರಿಂದ ಅಪಾತತಃ ಭಿನ್ನವಾದುವುಗಳಂತೆ ತೋರಿದರೂ ಮೂಲವಾದ ಬಾಳಬೋಧೆ ಲಿಪಿಯನ್ನೇ ಅನುಸರಿಸಿ ಕ್ರಮೇಣ ಈಗ ರೂಢಿಯಲ್ಲಿರುವ ಕನ್ನಡ, ತೆಲುಗು, ತಮಿಳು ಲಿಪಿಗಳೂ ಹುಟ್ಟಿವೆ ಎಂದು ನಂಬುವುದಕ್ಕೆ ಅನೇಕ ಪ್ರಮಾಣಗಳಿವೆ. ಈ ವಿಷಯಗಳನ್ನೆಲ್ಲಾ ಇಲ್ಲಿ ಚರ್ಚಿಸಲು

ಕಾಲ ಸಾಲದುದರಿಂದ ಒಂದು ಸಂಗತಿಯನ್ನು ಮಾತ್ರ ಹೇಳುತ್ತೇನೆ. ಕನ್ನಡ ಮತ್ತು ತೆಲುಗು ಪ್ರತಿ ಅಕ್ಷರದ ಮೇಲೆ ಕೊಡುವ ತಲೆಕಟ್ಟೂ ಬಾಳಬೋಧೆ ಲಿಪಿಯಲ್ಲಿರುವ ಪ್ರತಿ ಅಕ್ಷರದ ಮೇಲಣ ಸರಳ ರೇಖೆಯೂ ಎರಡೂ ಒಂದೇ ಎಂದು ತಿಳಿಯಬಹುದು. ಈ ಉಪನ್ಯಾಸವು ಪರಿಷತ್ಪತ್ರಿಕೆಯಲ್ಲಿ ವಿಸ್ತಾರವಾಗಿ ಮುದ್ರಿತವಾಗಿವುದರಿಂದ ಅದನ್ನು ಸರ್ವರು ಓದಿ ಸಂತೋಷಪಡಬಹುದು.

ಪರಿಷತ್ತಿನ ಪಂಡಿತರಾದ ಮ॥ ರಾ॥ ಕಡಬದ ನಂಜುಂಡಶಾಸ್ತ್ರಿಗಳು 'ಕುಸುಮಾವಳಿ' ಎಂಬ ಗ್ರಂಥದ ಉತ್ಕೃಷ್ಟವಾದ ಕೆಲವು ಭಾಗಗಳನ್ನು ಆರಿಸಿ ಓದಿದರಲ್ಲದೆ, ಗ್ರಂಥವನ್ನು ರಚಿಸಿದ ಕವಿಯ ವಿಷಯವಾಗಿ ಅನೇಕ ಸಂಗತಿಗಳನ್ನು ನಿರೂಪಣೆ ಮಾಡಿದರು. ಈ ಉಪನ್ಯಾಸವು ಪರಿಷತ್ಪತ್ರಿಕೆಯಲ್ಲಿ ಮುಂದೆ ಪ್ರಕಟವಾಗುತ್ತದೆ.

ಮ॥ ರಾ॥ ರಾಜಪುರೋಹಿತರು ಅತ್ಯಂತ ಶ್ರಮಪಟ್ಟು ವಿಷಯ ಸಂಗ್ರಹವನ್ನು ಮಾಡಿ ಕರ್ಣಾಟಕದಲ್ಲಿ ಈಗ ಪ್ರಚಾರದಲ್ಲಿರುವ ಕನ್ನಡ ಮಾಸಪತ್ರಿಕೆಗಳನ್ನು ಕುರಿತು ಸ್ವಾರಸ್ಯವಾದೊಂದು ಉಪನ್ಯಾಸವನ್ನು ಓದಿದರು. ಮುಖ್ಯವಾಗಿ, ಇವುಗಳಲ್ಲಿ 'ವಿಜ್ಞಾನ' ವೆಂಬುದು ಮ॥ ರಾ॥ ವೆಂಕಟೇಶಯ್ಯಂಗಾರ್ಯರು ಮತ್ತು ಮ॥ ರಾ॥ ವೆಂಕಟನಾರಣಪ್ಪನವರಿಂದ ಪ್ರಕಟವಾಗಿ ಈಗಿನ ಪದ್ಧತಿಯನ್ನನುಸರಿಸಿ ಪಾಶ್ಚಾತ್ಯರ ಆಧುನಿಕ ಶಾಸ್ತ್ರಗಳನ್ನು ಸಾಮಾನ್ಯರಿಗೆ ಸುಲಭವಾಗಿ ತಿಳಿಯುವುದರಿಂದ ನಮ್ಮೆಲ್ಲರ ಅವಲೋಕನೆಗೆ ಅರ್ಹವಾಗಿದೆ. ಅಲ್ಲದೆ, ಧಾರವಾಡದ ವಾಗ್ಭೂಷಣ, ಮೈಸೂರಿನ ಕರ್ಣಾಟಕ ಗ್ರಂಥಮಾಲೆ, ಉಡುಪಿಯ ಕೃಷ್ಣಸೂಕ್ತಿ–ಇವೇ ಮುಂತಾದವು ವಾಚನಾರ್ಹವಾಗಿದೆ.

ಮ॥ ರಾ॥ ತೋರಣಗಲ್ ರಾಜಾರಾಯರು, ಕರ್ಣಾಟಕದಲ್ಲಿ ಪ್ರಚಾರಗೊಂಡಿರುವ ನಾಟಕಗಳ ವಿಷಯವಾಗಿ ಸ್ವಾರಸ್ಯವಾದದೊಂದು ಭಾಷಣವನ್ನು ಮಾಡಿದರು. ಕನ್ನಡ ಭಾಷೆಯಲ್ಲಿ ಅತಿ ಪ್ರಾಚೀನವಾದ ನಾಟಕವು ಕ್ರಿ.ಶ. ೧೫ನೆಯ ಶತಮಾನದಲ್ಲಿ ರಚಿತವಾಯಿತೆಂದೂ, ಈಚೆಗೆ ಅನೇಕ ನಾಟಕಗಳು ಹುಟ್ಟಿರುವುವೆಂದೂ, ಇವರು ಸೂಚಿಸಿದರು.

ನಮ್ಮ ಪರಿಷತ್ತಿಗೆ ವಯಸ್ಸು ತುಂಬಿ ಅದಕ್ಕೆ ಪ್ರಾಶಸ್ತ್ಯ ಬಂದಿದ್ದ ಪಕ್ಷದಲ್ಲಿ ನಮ್ಮ ಪಂಡಿತ ಲಿಂಗರಾಜ ಅರಸಿನವರಿಗೆ ಒಂದು ಬಂಗಾರದ ಪದಕವನ್ನು ಭೂಷಣವಾಗಿಯೂ ಬಿರುದಾಗಿಯೂ ಕೊಡಬಹುದಾಗಿತ್ತು. ಮುಂದೆ ಈ ಪರಿಷತ್ತು ಇಂಥ ಪಂಡಿತರಿಗೆ ತಕ್ಕ ಬಹುಮಾನ ಕೊಡುವ ಸ್ಥಿತಿಗೆ ಬರಬೇಕೆಂದು ನಾವು ಪ್ರಾರ್ಥಿಸಬೇಕಲ್ಲದೆ, ಆ ಸ್ಥಿತಿಗೆ ತರತಕ್ಕ ಪ್ರಯತ್ನಗಳನ್ನು ನಾವು ಕೈಗೊಳ್ಳಬೇಕು.

❖❖

೬ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ರೊದ್ದ ಶ್ರೀನಿವಾಸರಾಯರು



ಕರ್ನಾಟಕದ ಪಿತಾಮಹರೆನಿಸಿದ, ಪರೋಪಕಾರಿ ರೊದ್ದ ಶ್ರೀನಿವಾಸರಾಯರು ಧಾರವಾಡದ ಮರಿಹಾಳದಲ್ಲಿ ೧೭-೯-೧೮೫೦ರಲ್ಲಿ ಜನಿಸಿದರು. ತಂದೆ ಕೋನೇರಿರಾಯ, ತಾಯಿ ಸುಬ್ಬಮ್ಮ. ಮುದಿಹಾಳ, ಹುಬ್ಬಳ್ಳಿ, ಬೆಳಗಾವಿ, ಪುಣೆಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ ಇವರು ಕಷ್ಟಪಟ್ಟು ಓದಿದರು.

೧೮೭೨ರಲ್ಲಿ ಕಾರವಾರದಲ್ಲಿ ಪ್ರೌಢಶಾಲೆ ಶಿಕ್ಷಕರಾಗಿ, ನಂತರ ಧಾರವಾಡದಲ್ಲಿ ಶಿಕ್ಷಣಾಧಿಕಾರಿಯಾಗಿ ಕೊನೆಗೆ ಧಾರವಾಡದ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿ ಸೇವೆಗೈದು ೧೯೦೮ರಲ್ಲಿ ನಿವೃತ್ತರಾದರು.

ಬಡವಿದ್ಯಾರ್ಥಿಗಳ ಹಿತೈಷಿಗಳಾದ ಇವರು ವಿದ್ಯಾರ್ಥಿಗಳ ಸಲುವಾಗಿ ನಾನಾ ಬಗೆಯ ಫಂಡುಗಳನ್ನು ವ್ಯವಸ್ಥೆ ಮಾಡಿದರು. ಧಾರವಾಡದ ಹೆಣ್ಣುಮಕ್ಕಳ ಶಿಕ್ಷಣ ವಿದ್ಯಾಲಯ, ಕರ್ನಾಟಕ ಹೈಸ್ಕೂಲ್ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿದರು. ೧೯೧೯ರಲ್ಲಿ ಕರ್ನಾಟಕ ಎಜುಕೇಷನ್ ಬೋರ್ಡ್ ಸ್ಥಾಪಿಸಿದರು. ಮುಂಬಯಿ ಲೆಜಿಸ್ಲಿಟಿವ್ ಕೌನ್ಸಿಲ್ ಸದಸ್ಯರಾಗಿದ್ದು ಇವರು ಧಾರವಾಡದ ನಗರಸಭೆಯ ಅಧ್ಯಕ್ಷರೂ ಆಗಿದ್ದರು.

ರೊದ್ದ ಅವರು ಸಮಾಜಕ್ಕಾಗಿ ಶಿಕ್ಷಣಕ್ಕಾಗಿ ಮಾಡಿದ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ ೧೯೦೯ರಲ್ಲಿ ರಾವ್ ಬಹದ್ದೂರ್ ಬಿರುದನ್ನು, ಸಾರ್ವಜನಿಕ ಸೇವೆಗಾಗಿ ೧೯೨೩ರಲ್ಲಿ ದಿವಾನ್ ಬಹದ್ದೂರ್ ಬಿರುದನ್ನು ನೀಡಿತು. ೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಇವರು ಕರ್ಣಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾಗಿದ್ದರು.

೧. ನಂದಿನಿ (ಬುದ್ಧನ ಚರಿತ್ರೆ) ೨. ಸ್ತ್ರೀ ಶಿಕ್ಷಣದ ಆವಶ್ಯಕತೆ
ಪರಿಷತ್ತಿನ ಆರಂಭಕಾಲದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಇವರು ೪-೮-೧೯೨೯ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೬,
ಅಧ್ಯಕ್ಷರು, ರೊದ್ದ ಶ್ರೀನಿವಾಸರಾಯರು
ದಿನಾಂಕ ೨೦, ೨೧ ಜೂನ್ ೧೯೨೦
ಸ್ಥಳ : ಹೊಸಪೇಟೆ

ಪರಿಷತ್ತಿನ ಸ್ಥಾಪನೆಗೆ ಕಾರಣ

ಧಾರವಾಡದಲ್ಲಿ ಕರ್ಣಾಟಕ ವಿದ್ಯಾವರ್ಧಕ ಸಂಘವು ಸ್ಥಾಪಿತವಾಗಿ ಪ್ರಾಚೀನ ಕನ್ನಡ ವಾಙ್ಮಯದ ಅಭ್ಯಾಸಕ್ಕೂ ನೂತನ ವಾಙ್ಮಯದ ನಿರ್ಮಾಣಕ್ಕೂ ಅವಸರ ದೊರೆಯಲು ಮಾರ್ಗವಾಯಿತು. ಮೈಸೂರು ಶ್ರೀಮನ್ಮಹಾರಾಜರವರ ಸರಕಾರದವರೂ ಇತ್ತ ಮುಂಬಯಿ ಸರಕಾರದವರೂ ನಮ್ಮ ಸಂಘದ ಮಾಹಿತಿಯನ್ನು ಕೃಪಾಪೂರ್ವಕ ಒಪ್ಪಿಕೊಂಡು ಅದಕ್ಕೆ ಪ್ರತಿಯೊಂದು ಬಗೆಯ ಸಹಾಯವನ್ನೂ ಮಾಡಲು ಸಿದ್ಧರಾದರು. ಮೈಸೂರು ಸರಕಾರದ ವಿಶೇಷಾನುಗ್ರಹದಿಂದ ಅಲ್ಲಿಯ ಕನ್ನಡ ವಾಙ್ಮಯ ಪಂಡಿತರಿಬ್ಬರು ವಿದ್ಯಾವರ್ಧಕ ಸಂಘದ ವಾರ್ಷಿಕ ಪರೀಕ್ಷೆ ಹಾಗೂ ಇನಾಮಿನ ಸಮಾರಂಭಗಳಿಗಾಗಿ ಪ್ರತಿವರ್ಷ ಬರಹತ್ತಿದ್ದೇ ಮೈಸೂರು ಮತ್ತು ಮುಂಬಯಿ ಕರ್ಣಾಟಕಗಳನ್ನು ಭಾಷೆಯ ದೃಷ್ಟಿಯಿಂದ ಒಂದುಗೂಡಿಸುವ ಪ್ರಚಂಡ ಕಾರ್ಯದ ಮಂಗಳಾಚರಣರೂಪವಾದ ಮಂಗಳಮೂರ್ತಿಯ ಪೂಜನವೆಂದು ಹೇಳಲು ಅಡ್ಡಿಯಿಲ್ಲ. ಮೈಸೂರು, ಮುಂಬಯಿ, ಕರ್ಣಾಟಕಗಳ ಈ ಸಂಘಟನವು ವಿಶೇಷ ದೃಢಮೂಲವಾಗುವಂತೆ ಪರಸ್ಪರ ಬಳಕೆಯೂ ಪರಿಚಯವೂ ಬೆಳೆಯಲು ಅನುಕೂಲವಾಗಬೇಕೆಂದು ಕರ್ಣಾಟಕ ವಿದ್ಯಾವರ್ಧಕ ಸಂಘದ ಪರೀಕ್ಷೆಗಳ ಜತೆಗೆ ಕನ್ನಡ ಗ್ರಂಥಕಾರರ ಸಮ್ಮೇಳನವೆಂಬ ಕೂಟವೊಂದು ೧೯೦೭ನೇ ವರ್ಷ ಉಪಕ್ರಮವಾಯಿತು. ಕರ್ಣಾಟಕ ವಾಙ್ಮಯದ ನಿಸ್ಸೀಮ ಭಕ್ತರೂ ಪ್ರಖ್ಯಾತ ಪಂಡಿತರೂ ಆದ ಗತಿಸಿದ ಶ್ರೀಮಾನ್ ಎಸ್.ಜಿ. ನರಸಿಂಹಾಚಾರ್ಯರವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನವು ಎರಡು ವರ್ಷಕೂಡಿತ್ತು. ಮುಂದೆ ಇದೇ ಕಾರ್ಯವು ಕರ್ಣಾಟಕದ ಎಲ್ಲ ಭಾಗಗಳ ಜನರ ಸಂಯುಕ್ತ ಪ್ರಯತ್ನದಿಂದ ಸುಸಂಘಟಿತವಾಗಿ ಸಾಗುವಂತಾಗಬೇಕೆಂದು ೧೯೧೫ರಲ್ಲಿ ಬೆಂಗಳೂರಿನಲ್ಲಿ ಮೊದಲನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನವು ಕೂಡಿ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಯಿತು. ಅಂದಿನಿಂದ ಇಂದಿನವರೆಗೆ ಪ್ರಾಚೀನ ಮತ್ತು ಅರ್ವಾಚೀನ ಕನ್ನಡ ವಾಙ್ಮಯದ ಅಭಿವೃದ್ಧಿಗಾಗಿ ನಡೆದಿರುವ ಪ್ರಯತ್ನಗಳೆಲ್ಲ ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದು.

❖❖

೭ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಕೆ.ಪಿ. ಪುಟ್ಟಣ್ಣಶೆಟ್ಟಿ



ಬೆಂಗಳೂರಿನ ಸುಧಾರಕರಲ್ಲಿ ಒಬ್ಬರಾಗಿ ಸಮಾಜಸೇವಕರಾದ ಕೆ.ಪಿ. ಪುಟ್ಟಣ್ಣ ಶೆಟ್ಟಿ ಅವರು ೨೯-೪-೧೮೫೬ರಲ್ಲಿ ಬೆಂಗಳೂರಿನ ಕೃಷ್ಣರಾಜಪುರದಲ್ಲಿ ಜನಿಸಿದರು. ಎಲ್ಲರಂತೆ ಸಾಮಾನ್ಯ ಶಿಕ್ಷಣ ಪಡೆದವರು ಶ್ರಮಜೀವಿಗಳಾಗಿ ಜ್ಞಾನದಾಹಿಗಳಾಗಿ ಶಿಕ್ಷಣ ಪೂರೈಸಿದರು.

೧೮೭೬ರಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ ಮೈಸೂರು ಸರ್ಕಾರದಲ್ಲಿ ಉದ್ಯೋಗಾರಂಭ ಮಾಡಿದ ಇವರು ೧೮೯೮ರಲ್ಲಿ ಡೆಪ್ಯುಟಿ ಕಮೀಷನರ್ ಆದರು. ೧೯೧೧ರಲ್ಲಿ ಕೌನ್ಸಿಲರ ಪ್ರಥಮ ಸದಸ್ಯರಾದರು.

೧೯೧೨ರಲ್ಲಿ ನಿವೃತ್ತರಾದ ಮೇಲೆ ಮೈಸೂರು ಬ್ಯಾಂಕಿನ ಅಧ್ಯಕ್ಷರಾದರು. ೧೯೧೫ರಿಂದ ೧೯೨೨ರವರೆಗೆ ಬೆಂಗಳೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷಗಿರಿ ಹೊಂದಿದ ಇವರು ೧೯೨೭ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದರು. ಬೆಂಗಳೂರು ವೀರಶೈವ ವಿದ್ಯಾರ್ಥಿನಿಲಯವನ್ನು ೧೯೩೮ರಲ್ಲಿ ಸ್ಥಾಪಿಸಿದರು. ಅನೇಕ ಧರ್ಮಸಂಸ್ಥೆಗಳಿಗೆ ನ್ಯಾಯಪಾಲಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಧನಸಹಾಯ ಮಾಡಿದ ಇವರು ೧೯೩೬ರಲ್ಲಿ ಪರಿಷತ್ತಿನ ಸಾಹಿತ್ಯ ಸಮ್ಮೇಳನದ ಉದ್ಘಾಟಕರಾಗಿದ್ದರು. ಪರಿಷತ್ತಿನ ಸ್ಥಾಪನೆ ಕಾರ್ಯದಲ್ಲಿ ಭಾಗವಹಿಸಿದರು. ೧೯೩೬ರಲ್ಲಿ ವಿಜಯನಗರ ಸ್ಮಾರಕೋತ್ಸವದ ಅಧ್ಯಕ್ಷತೆ ವಹಿಸಿದ್ದರು. ೧೯೧೫ರ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು.

ಮೈಸೂರು ಮಹಾರಾಜರಿಂದ ೧೯೧೧ರಲ್ಲಿ ರಾಜಸಭಾಭೂಷಣ, ಭಾರತ ಸರ್ಕಾರದಿಂದ ದಿವಾನ್, ರಾವ್ ಬಹಾದೂರ್ ಪ್ರಶಸ್ತಿಯೂ ದೊರಕಿತು. ೧೯೨೫ರಲ್ಲಿ ಸಿ.ಐ.ಇ. ಸನ್ಮಾನ, ೧೯೨೫ರಲ್ಲಿ ಸರ್ ಪ್ರಶಸ್ತಿ, ೧೯೧೪ರಲ್ಲಿ ಕೈಸರ್-ಇ-ಹಿಂದ್ ಪದಕವು ಇವರಿಗೆ ಲಭ್ಯವಾಯಿತು.

ಚಿಕ್ಕಮಗಳೂರಿನ ೭ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದ ಇವರು ೨೩-೭-೧೯೩೮ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೭,
ಅಧ್ಯಕ್ಷರು, ಕೆ.ಪಿ. ಪುಟ್ಟಣ್ಣಶೆಟ್ಟರು
ದಿನಾಂಕ ೧೯,೨೦,೨೧ ಮೇ ೧೯೨೧,
ಸ್ಥಳ : ಚಿಕ್ಕಮಗಳೂರು


ಈ ಸಂಬಂಧದಲ್ಲಿ ಮತ್ತೊಂದು ವಿಷಯವನ್ನು ಅರಿಕೆ ಮಾಡುವೆನು. ಕನ್ನಡ ನಾಡಿನ ಚರಿತ್ರೆಯು ಪತ್ರಿಕೆಗಳಲ್ಲಿಯೂ ಸರ್ಕಾರದ ಶಾಸನ ಇಲಾಖೆಯಿಂದ ಹೊರಡುವ ವಾರ್ಷಿಕ ವರದಿಗಳಲ್ಲಿಯೂ ಇಲ್ಲಷ್ಟು ಅಲ್ಲಷ್ಟು ತುಂಡುತುಂಡಾಗಿ ಇಂಗ್ಲಿಷು ಭಾಷೆಯಲ್ಲಿ ದೊರೆಯುವುದೇ ವಿನಾ ಮೊದಲಿನಿಂದ ಈಗಿನವರಿಗೆ ಪಾಙ್ಕ್ತವಾಗಿಯೂ ಜೋಡಣೆಯಾಗಿಯೂ ಬರೆದಿರುವ ಪುಸ್ತಕವೇ ಇಲ್ಲವೆಂದು ಹೇಳಬಹುದು. ಚರಿತ್ರೆಯನ್ನು ಬರೆಯುವುದಕ್ಕೆ ಈಚೆಗೆ ಬೇಕಾದಷ್ಟು ಸಾಮಗ್ರಿಗಳು ದೊರೆತಿವೆ. ಅವುಗಳನ್ನು ಸರಿಯಾಗಿ ಉಪಯೋಗಿಸಿ ವಿಷಯಕ್ಕನುರೂಪವಾದ ಶೈಲಿಯಲ್ಲಿ ನೂಲುವ ಐತಿಹಾಸಿಕರು ಬೇಕು. ಅಂತಹ ಪುಸ್ತಕಗಳು ವಿದ್ಯಾರ್ಥಿಗಳಿಗೂ ಇತರರಿಗೂ ಉಪಯೋಗವಾಗಿ ಅವರ ಕಣ್ಣುಗಳನ್ನು ತೆರೆಯಿಸುವುದರಲ್ಲಿ ಯಾವ ಸಂಶಯವೂ ಇರಲಾರದು. ಅನೇಕ ಐತಿಹಾಸಿಕ ನಾಟಕಗಳ ಕಥಾ ಶರೀರಕ್ಕೆ ಉಪಯೋಗವಾಗುವ ವಿಷಯಗಳು ನಮ್ಮ ದೇಶದ ಚರಿತ್ರೆಯಲ್ಲಿ ದೊರೆಯುವುದೆಂಬುದು ನನ್ನ ನಂಬಿಕೆಯು. ಕರ್ಣಾಟಕ ಸಾಹಿತ್ಯ ಪರಿಷತ್ತು ಇಂತಹ ಕರ್ಣಾಟ ದೇಶದ ಚರಿತ್ರೆಯನ್ನು ಬರೆಯಿಸಿದರೆ ಒಟ್ಟು ಕನ್ನಡ ನಾಡಿಗೇ ಮಹೋಪಕಾರವನ್ನು ಮಾಡಿದಂತಾಗುವುದು.

ಜನರಲ್ಲಿ ಭಾಷಾವಿಷಯವಾಗಿ ಜಾಗ್ರತೆಯನ್ನುಂಟುಮಾಡುವ ಪರಿ ಏನು ? ಕನ್ನಡ ನುಡಿಯನ್ನೂ ಕರ್ಣಾಟಕ ವಾಙ್ಮಯವನ್ನೂ ವೃದ್ಧಿಗೊಳಿಸುವುದಕ್ಕಾಗಲ್ಲವೆ ಕರ್ಣಾಟಕ ಸಾಹಿತ್ಯ ಪರಿಷತ್ತು ಕೆಲವು ವರ್ಷಗಳ ಹಿಂದೆ ಸ್ಥಾಪಿತವಾದುದು! ಕನ್ನಡಿಗರು ಇನ್ನೂ ಚೆನ್ನಾಗಿ ಕಣ್ಣು ತೆರೆದಿಲ್ಲವೆಂಬುದಕ್ಕೆ ಈ ಪರಿಷತ್ತಿನ ಸದಸ್ಯರುಗಳ ಪಟ್ಟಿಯೇ ದೃಷ್ಟಾಂತವು. ನಾವು ಬೆಳೆಯಿಸಿದ ಗಿಡಕ್ಕೆ ನಾವೇ ನೀರೆರೆಯದೆ ಗಿಡ ಬಾಡಿದರೆ ತಪ್ಪು ಯಾರದು? ನಮ್ಮದೋ ಗಿಡದ್ದೋ ? ಪರಿಷತ್ತಿನ ಉದ್ದೇಶವು ನೆರವೇರಬೇಕಾದರೆ ಅದರ ಸದಸ್ಯರ ಪಟ್ಟಿಯು ಬೆಳೆಯುತ ಬರಬೇಕು.

ಒಂದೊಂದು ಊರಿನಲ್ಲಿಯೂ ಕರ್ಣಾಟಕ ಭಾಷಾ ಸೇವಾಸಂಘಗಳು ಏರ್ಪಡಬೇಕು ; ಅವೆಲ್ಲವೂ ಈ ಸಂಸ್ಥೆಗೆ ಶಾಖೆಗಳಾಗಬೇಕು. ಸಾಮಾನ್ಯವಾಗಿ ಪ್ರತಿಯೊಂದು ಊರಿನಲ್ಲಿಯೂ ಒಂದು ಪಾಠಶಾಲೆ ಇರುವುದಷ್ಟೇ. ಅದಕ್ಕೆ ಸೇರಿದ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕೂಡಿ ಇಂತಹ ಸಂಘಗಳನ್ನು ಸ್ಥಾಪಿಸಬಹುದು. ಈ ಸಂದರ್ಭದಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು "ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ" ವೆಂಬ ನಾಮಧೇಯವುಳ್ಳ ಒಂದು ಸಂಘವನ್ನು ಏರ್ಪಡಿಸಿ ಒಂದು ಕನ್ನಡ ಪತ್ರಿಕೆಯನ್ನು ಹೊರಡಿಸುತ್ತಿರುವುದು ಕನ್ನಡ ನುಡಿಯ ಏಳಿಗೆಗೆ ಶುಭ ಸೂಚಕವಾಗಿರುವುದೆಂದು ತಮಗೆ ತಿಳಿಸಲು ನನಗೆ ಬಹಳ ಸಂತೋಷವು. ಇಂತಹ ಸಂಘವೊಂದು ಪ್ರತಿಯೊಂದು ಹೈಸ್ಕೂಲಿಗೂ ಬೇಕು. ಅದನ್ನು ಏರ್ಪಡಿಸುವುದು ಸುಲಭವೆಂದು ನನ್ನ ಬುದ್ಧಿಗೆ ತೋರುತ್ತದೆ. ಈ ಸಂಘಗಳ ಸದಸ್ಯರುಗಳು ಆಗಾಗ ಸೇರಿ ದೇಶಭಾಷಾಭಿವೃದ್ಧಿಯ ಮತ್ತು ದೇಶೋನ್ನತಿಯ ಸಾಧನಗಳ ವಿಷಯವಾಗಿ ಕನ್ನಡದಲ್ಲಿ ಚರ್ಚಿಸಬೇಕು. ಈ ಚರ್ಚೆಗಳನ್ನು ನೋಡುವುದಕ್ಕೂ ಅವುಗಳಲ್ಲಿ ಭಾಗಿಗಳಾಗುವುದಕ್ಕೂ ಸದಸ್ಯರಲ್ಲದ ಇತರರನ್ನು ಕರೆಯಬೇಕು. ನಾಲ್ಕೈದು ಸಂವತ್ಸರಗಳು ಈ ರೀತಿ ನಡೆಯುವುದರೊಳಗೆ ಫಲವು ವ್ಯಕ್ತವಾಗುವುದಕ್ಕೆ ಪ್ರಾರಂಭವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

❖❖

೮ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಎಂ. ವೆಂಕಟಕೃಷ್ಣಯ್ಯ



ತಾತಯ್ಯ ಎಂದು ಪ್ರಸಿದ್ಧರಾದ ಎಂ. ವೆಂಕಟಕೃಷ್ಣಯ್ಯ ಅವರು ಹೆಗ್ಗಡೆದೇವನಕೋಟೆ ತಾಲ್ಲೂಕಿನ ಮೊಗ್ಗೆ ಗ್ರಾಮದಲ್ಲಿ ೨೦–೮–೧೮೪೪ ರಲ್ಲಿ ಸುಬ್ಬಯ್ಯ–ಭಾಗೀರಥಮ್ಮ ದಂಪತಿಗಳಿಗೆ ಪುತ್ರರಾಗಿ ಜನಿಸಿದರು.

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಆದರು. ಅನಂತರ ಮೈಸೂರಿನಲ್ಲಿ ಮರಿಮಲ್ಲಪ್ಪ ಶಾಲೆಗಳಲ್ಲಿ ಉಪಾಧ್ಯಾಯರಾದರು. ಅನಂತರ ಹಲವಾರು ಶಾಲೆಗಳಲ್ಲಿ ಉಪಾಧ್ಯಾಯರಾಗಿ ಸುಮಾರು ೫೦ ವರುಷಗಳವರೆಗೆ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಅಧ್ಯಾಪಕ ವೃತ್ತಿ ಜತೆಗೆ ಪತ್ರಿಕಾಸೇವೆ ಸಲ್ಲಿಸಿದ ಹಿರಿಮೆ ವೆಂಕಟಕೃಷ್ಣಯ್ಯನವರದು. ಕನ್ನಡದಲ್ಲಿ ಸ್ವತಂತ್ರ ಪತ್ರಿಕೆ 'ಸಾಧ್ವಿ'ಯನ್ನು ಪ್ರಾರಂಭಿಸಿದ ಇವರು ವೆಲ್ತ್ ಆಫ್ ಮೈಸೂರು, ಮೈಸೂರು ಪೇಟ್ರಿಯಟ್, ನೇಚರ್‌ಕ್ಯೂರ್, ದಿ ಸಿವಿಕ್ ಅಂಡ್ ಸೋಷಿಯಲ್ ಜರ್ನಲ್ ಮುಂತಾದ ಪತ್ರಿಕೆಗಳನ್ನು ನಡೆಸಿದರು. ಪತ್ರಿಕಾ ಪ್ರಪಂಚದ ಭೀಷ್ಮರೆಂದೆನಿಸಿದರು. ಮೈಸೂರು ಪ್ರಜಾಪ್ರತಿನಿಧಿ ಸರ್ಕಾರದ ಪ್ರತಿನಿಧಿಯಾಗಿಯೂ, ನ್ಯಾಯವಿಧಾಯಕಸಭೆ, ಸಂಪದಭ್ಯುದಯ ಸಭೆ, ಜಿಲ್ಲಾಮಂಡಳಿ, ಪೌರ ಪರಿಷತ್ತು, ಲಿಟರರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮೈಸೂರು ಅನಾಥಾಲಯದ ಸ್ಥಾಪಕರಲ್ಲಿ ಒಬ್ಬರಾಗಿದ್ದರು.

೧೯೨೨ರಲ್ಲಿ ದಾವಣಗೆರೆಯಲ್ಲಿ ನಡೆದ ೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ ಅಧ್ಯಕ್ಷಪೀಠದಲ್ಲಿ ಶ್ರೀಮನ್ಮಹಾರಾಜರ ಭಾವಚಿತ್ರವಿಟ್ಟು ಅಧ್ಯಕ್ಷ ಕಾರ್ಯನಿರ್ವಹಿಸಿದರು. ಇದು ಅವರ ರಾಜನಿಷ್ಠೆ. ಪರಿಷತ್ತಿನ ಸ್ಥಾಪನೆಯಲ್ಲಿ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ಜನ ಇವರ ಸೇವೆಯನ್ನು ಕಂಡು ತಾತಯ್ಯ, ದಯಾಸಾಗರ, ಪತ್ರಿಕಾ ಪಿತಾಮಹ, ಭೀಷ್ಮಾಚಾರ್ಯ ಎಂದೆಲ್ಲಾ ಪ್ರೀತಿಯಿಂದ ಕರೆದು ಗೌರವಿಸಿದರು.

ಚೋರಗ್ರಹಣತಂತ್ರ (ಕಾದಂಬರಿ)
ಪರಂತಪವಿಜಯ (ಕಾದಂಬರಿ)
ವಿದ್ಯಾರ್ಥಿಕರಭೂಷಣ
ಧನಾರ್ಜನೆಯ ಕ್ರಮ
ಅರ್ಥಸಾಧನ
ಹರಿಶ್ಚಂದ್ರ ಚರಿತೆ
ಆರೋಗ್ಯ ಸಾಧನ ಪ್ರಕಾಶಿಕೆ
ಬೂಕರ್ ಇ ವಾಷಿಂಗ್‌ಟನ್ ಚರಿತ್ರೆ ಇತ್ಯಾದಿ

ಸಾಹಿತಿಗಳೂ, ಪತ್ರಿಕಾಕರ್ತರೂ, ಸಾಮಾಜಿಕ ಸೇವಾ ಧುರಂಧರರೂ ಆದ ವೆಂಕಟಕೃಷ್ಣಯ್ಯನವರು ೮–೧೧–೧೯೩೩ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೮,
ಅಧ್ಯಕ್ಷರು, ಎಂ. ವೆಂಕಟಕೃಷ್ಣಯ್ಯ
ದಿನಾಂಕ ೧೨,೧೩. ಮೇ ೧೯೨೨
ಸ್ಥಳ : ದಾವಣಗೆರೆ

ಪರಿಷತ್ತಿನ ಸ್ಥಾಪನೆಯ ಹಿನ್ನೆಲೆ

ದಿವಾನ್ ರಂಗಾಚಾರ್ಯ ಅವರು ವಿದ್ಯಾಶಾಲೆಗಳನ್ನು ಹೆಚ್ಚಿಸಿ, ವಿದ್ಯಾರ್ಥಿವೇತನಗಳನ್ನು ಕಲ್ಪಿಸಿ, ವಿದ್ಯಾಭ್ಯಾಸದ ಇಲಾಖೆಯನ್ನು ಕ್ರಮಪಡಿಸಿದರು; ಶ್ರೀಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯನ್ನು ಏರ್ಪಡಿಸಿ, ಅಲ್ಲಿಯ ವಿದ್ಯಾರ್ಥಿಗಳಿಗೂ ಪಂಡಿತರಿಗೂ ಪಾರಿತೋಷಕಗಳನ್ನು ಹಂಚುವ ವಾರ್ಷಿಕೋತ್ಸವಕ್ಕೆ ಸ್ವಯಂ ಶ್ರೀಮನ್ಮಹಾರಾಜರವರೇ ಬರುವಂತೆ ಮಾಡಿದರು. ಇದೇ ಸಮಯದಲ್ಲಿ ಕರ್ಣಾಟಕ ಭಾಷೋಜ್ಜೀವಿನೀ ಸಭೆಯು ಪ್ರಾರಂಭವಾಗಿ ಕರ್ಣಾಟಕ ಪ್ರೌಢವಿದ್ಯಾಶಾಲೆಯೆಂದು ಏರ್ಪಾಡಾಯಿತು. ಅದಕ್ಕೆ ರಾಜಕಾರ್ಯ ಪ್ರಸಕ್ತ ರಾವ್‌ಬಹದ್ದೂರ್ ಎಂ. ಶ್ಯಾಮರಾಯರು ಕಾರ್ಯದರ್ಶಿಯಾಗಿದ್ದರು. ಆ ಸಂಸ್ಥೆಯು ಕನ್ನಡ ಲೇಖಕರಿಗೆ ಪ್ರಾಶಸ್ತ್ಯವನ್ನುಂಟುಮಾಡಿಕೊಟ್ಟಿತು. ಗರಳಪುರಿ ಶಾಸ್ತ್ರಿಗಳು, ಬಸಪ್ಪಶಾಸ್ತ್ರಿಗಳು, ಸಿದ್ಧಲಿಂಗಪ್ಪನವರು, ಕರಿಬಸಪ್ಪ ಶಾಸ್ತ್ರಿಗಳು, ಮಲ್ಲಪ್ಪನವರು, ಜಯರಾಯಾಚಾರ್ಯರು- ಈ ಮೊದಲಾದವರು ಉತ್ತಮಗಳಾದ ಕಾವ್ಯ ನಾಟಕಗಳನ್ನು ಬರೆದು ಪ್ರಸಿದ್ಧರಾದರು. ಇವರೆಲ್ಲರೂ ಅಳಿಯ ಲಿಂಗರಾಜ ಅರಸಿನವರಿಂದ ಪ್ರೋತ್ಸಾಹ ಪಡೆಯುತ್ತಿದ್ದರು.


ಈ ರೀತಿಯಲ್ಲಿ ಶ್ರೀಚಾಮರಾಜೇಂದ್ರ ಒಡೆಯರವರು ಕರ್ಣಾಟಕ ಭಾಷೆಗೆ ಕೊಟ್ಟ ಪೋಷಣೆಯು ಈಗ ನಮ್ಮನಾಳುತ್ತಿರುವ ಶ್ರೀಮನ್ಮಹಾರಾಜರು ನಾಲ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಪ್ರಭುತ್ವದಲ್ಲಿ ವೃದ್ಧಿಹೊಂದಿದೆ. ಅವರ ಪ್ರೇರಣೆಯಂತೆ ಏರ್ಪಟ್ಟ 'ಎಕನಾಮಿಕ್ಸ್ ಕಾನ್ಫರೆನ್ಸ್' (Economic Conference) ಎಂಬ ಸಂಪದಭಿವೃದ್ಧಿ ಸಮಾಜದಿಂದ ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರು ಈ ನಮ್ಮ ಕರ್ಣಾಟಕ ಸಾಹಿತ್ಯ ಪರಿಷತ್ತನ್ನು ಏರ್ಪಾಡು ಮಾಡಿಸಿದರು. ಇದಕ್ಕೆ ಶ್ರೀಮನ್ಮಹಾರಾಜರವರ ಸರಕಾರದವರು ಸಾವಿರಾರು ರೂಪಾಯಿಗಳ ಸಹಾಯ ದ್ರವ್ಯವನ್ನು ವರ್ಷವರ್ಷವೂ ಕೊಡುತ್ತಬಂದಿರುವುದಲ್ಲದೆ ಇತರ ವಿಧದಲ್ಲಿಯೂ ಬಹುವಾಗಿ ಸಹಾಯ ಮಾಡಿರುವರು. ಇದಕ್ಕಾಗಿ ಸಮಸ್ತ ಕರ್ಣಾಟಕಾಭಿಮಾನಿಗಳೂ ಶ್ರೀಮನ್ಮಹಾರಾಜರವರಿಗೂ ಅವರ ಸರಕಾರಕ್ಕೂ ಬಹಳ ಕೃತಜ್ಞರಾಗಿರುವರು.

ಪ್ರತಿ ಗ್ರಾಮದಲ್ಲಿಯೂ ಪರಿಷತ್ತಿನ ಶಾಖೆ ಇರಲಿ

ದೇಶಭಾಷೆಯನ್ನು ಪ್ರಬಲಗೊಳಿಸಬೇಕೆಂಬ ಆಸೆಯು ನಮ್ಮ ಮಹಾರಾಜರವರಿಗೆ ಸಂಪೂರ್ಣವಾಗಿರುವುದು. ಅದು ಅವರ ಹುಕುಮುಗಳಲ್ಲಿಯೂ ಅವರ ಕಾರ್ಯಗಳಲ್ಲಿಯೂ ಚೆನ್ನಾಗಿ ಕಾಣಬರುತ್ತದೆ. 'ಆದರೆ ಪ್ರಜೆಗಳ ಸಹಾಯವಿಲ್ಲದೆ ಅವರು ಯಾವ ಕೆಲಸ ಮಾಡುವುದಕ್ಕೂ ಸಾಧ್ಯವಿಲ್ಲ. ಈ ಭಾಷೋಜ್ಜೀವನ ಕಾರ್ಯಕ್ಕೆ ಪ್ರಜಾಸಹಾಯ ಅತ್ಯಂತಾವಶ್ಯಕವು. ಆದಕಾರಣ ಪ್ರತಿಯೊಬ್ಬ ಕನ್ನಡಿಗನೂ ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಸದಸ್ಯನಾಗಿ ಸೇರಬೇಕು. ಅದು ಸಾಧ್ಯವಾಗದಿದ್ದರೆ ಪರಿಷತ್ಪತ್ರಿಕೆಗೆ ಚಂದಾದಾರನಾದರೂ ಆಗಬೇಕು. ಐದು ಸಾವಿರ ಮಂದಿ ಚಂದಾದಾರರು ದೊರೆತರೆ ಎಷ್ಟೋ ಕೆಲಸ ಮಾಡಬಹುದು. ಪ್ರತಿಯೊಂದು ಗ್ರಾಮದಲ್ಲಿಯೂ ನಮ್ಮ ಪರಿಷತ್ತಿನ ಶಾಖೆಯೊಂದಿರಬೇಕು. ಅದಕ್ಕೆ ನಮ್ಮ ಮ॥ ರಾ॥ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರಂತಹ ಉತ್ಸಾಹ ಶಾಲಿಗಳೂ ಕರ್ತವ್ಯನಿಷ್ಠರೂ ಆದ ಕಾರ್ಯದರ್ಶಿಯೊಬ್ಬರಿರಬೇಕು. ಹೀಗಾದರೆ ಭಾಷಾಕಾರ್ಯವು ದೇಶದಲ್ಲೆಲ್ಲ ಸಾಂಗವಾಗಿ ನಡೆದು ನಮ್ಮ ಉದ್ದೇಶಗಳು ಬೇಗ ನೆರವೇರುವುವು.

❖❖

೯ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಸಿದ್ಧಾಂತಿ ಶಿವಶಂಕರ ಶಾಸ್ತ್ರಿ



ಸಿದ್ಧಾಂತಿ ಶಿವಶಂಕರಶಾಸ್ತ್ರಿ ಅವರು ೧೮೬೪ರಲ್ಲಿ ಜನಿಸಿದರು. ತಂದೆ ಸುಬ್ರಹ್ಮಣ್ಯಶಾಸ್ತ್ರಿಗಳು ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಅದ್ವಿತೀಯ ಪಂಡಿತರು. ತಂದೆಯಿಂದಲೇ ಪ್ರಾಥಮಿಕ ಶಿಕ್ಷಣ ಪಡೆದು ಅವರಂತೆಯೇ ವಿದ್ವಾಂಸರಾದರು.

ಮದರಾಸಿನ ಕ್ರಿಶ್ಚಿಯನ್ ಕಾಲೇಜು ಮತ್ತು ಪ್ರೆಸಿಡೆನ್ಸಿ ಕಾಲೇಜಿನಲ್ಲೂ ೩೦ ವರ್ಷಗಳ ಕಾಲ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದರು. ೧೯೨೧ರಲ್ಲಿ ನಿವೃತ್ತರಾದ ಮೇಲೆ ಬೆಂಗಳೂರಿಗೆ ಬಂದು ನೆಲೆಸಿದರು.

ಶಿವಶಂಕರ ಶಾಸ್ತ್ರಿಗಳು ತಮ್ಮ ಪಾಂಡಿತ್ಯದಿಂದ ವಿದ್ವಜ್ಜನರ ಮನಸೆಳೆದಿದ್ದರು. ಬೆಂಗಳೂರು ಬಸವನಗುಡಿಯ ನರಹರಿರಾಯನ ಗುಡ್ಡದಲ್ಲಿ ಆನಂದಗಿರಿಯ ದೇವಾಲಯದಲ್ಲಿ ಧರ್ಮಸೇವೆಗೆ ತೊಡಗಿದರು.

ಮೈಸೂರು, ಶೃಂಗೇರಿ ಮುಂತಾದ ಕಡೆಗಳಲ್ಲಿ ಶಾಸ್ತ್ರಿಗಳಿಗೆ ಬಿರುದು-ಬಹುಮಾನಗಳನ್ನು ಕೊಟ್ಟು ಸನ್ಮಾನಿಸಿದ್ದಾರೆ. ಭಾರತ ಸರ್ಕಾರದವರು ಮಹಾ ಮುಖ್ಯೋಪಾಧ್ಯಾಯ ಬಿರುದನ್ನು ನೀಡಿತು: ಮೈಸೂರು ಮಹಾರಾಜರು ೧೯೩೮ರಲ್ಲಿ ವಿದ್ಯಾನಿಧಿ ಬಿರುದನ್ನು ನೀಡಿ ಸನ್ಮಾನಿಸಿದರು. ೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಇವರು ಪರಿಷತ್ತಿನ ಸ್ಥಾಪನೆಗೆ ಮುನ್ನ ಅನೇಕ ಸಲಹೆಗಳನ್ನು ನೀಡಿದ್ದರು.

ಪಾಂಡಿತ್ಯಪೂರ್ಣ ಕೃತಿಗಳನ್ನು ರಚಿಸಿರುವುದು ಇವರ ಹೆಗ್ಗಳಿಕೆ:

ಕರ್ಣಾಟಕ ನಳೋಪಾಖ್ಯಾನ
ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗ
ಶ್ರೀ ಶಂಕರಕಥಾಮೃತಂ
ಪ್ರಶ್ನೋತ್ತರ ಮಾಲಿಕೆ
ಶ್ರೀ ಕಾವೇರಿ ಮಹಾತ್ಮೆ ಇತ್ಯಾದಿ

ಜ್ಯೋತಿಷ್ಯಶಾಸ್ತ್ರದ ಪಂಡಿತರಾದ ಇವರು ೧೯೪೨ರಲ್ಲಿ ಸ್ವರ್ಗಸ್ಥರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೯,
ಅಧ್ಯಕ್ಷರು : ಸಿದ್ಧಾಂತಿ ಶಿವಶಂಕರಶಾಸ್ತ್ರಿ
ದಿನಾಂಕ ೨೧, ೨೨, ೨೩ ಮೇ ೧೯೨೩
ಸ್ಥಳ : ಬಿಜಾಪುರ

ಹಿಂದಿನ ೮ ಸಮ್ಮೇಳನಗಳ ಸಿಂಹಾವಲೋಕನ

ಇದು ನಮ್ಮ ಕರ್ಣಾಟ ಸಾಹಿತ್ಯ ಸಮ್ಮೇಳನ ಮಹಾಸಭೆ. ಈವರೆಗೆ ಎಂಟು ಮಹಾಸಮ್ಮೇಳನಗಳು ನಡೆದು ಒಂದೊಂದರಲ್ಲಿ ಓರ್ವರು ಅಧ್ಯಕ್ಷ ಪದಾರೂಢರಾಗಿ ಅಷ್ಟದಿಗ್ಗಜಂಗಳಂತೆ ನಮ್ಮ ಈ ಕರ್ಣಾಟಕ ಭಾಷಾ ಭೂಮಿಯನ್ನು ಉದ್ಧರಿಸಿರುವಲ್ಲಿ, "ನವಮೀ ಸಂಖ್ಯೈವ ಸಜ್ಜನ ಪ್ರಕೃತಿಃ" ಎಂಬಂತೆ ಆ ಮಹಾಶಯರಾದ ವಿದ್ವತ್ಸುಗುಣಾಲಂಕೃತದ ಸೂಕ್ತಿಸಂಗ್ರಹವನ್ನು ಸ್ಮಾರಕಕ್ಕೆ ತರುವುದು ನನ್ನ ಕೃತಜ್ಞತೆಯಾಗಿದೆ.

೧. ರಾಕ್ಷಸ ಸಂ॥–"ಸಾಕ್ಷರಾ ವಿಪರೀತಾಶ್ಚೇದ್ರಾಕ್ಷಸಾ ಏವ ಕೇವಲಂ" ಎಂಬಂತೆ ಸಾಕ್ಷರಾರು? ಆಂಗ್ಲಭಾಷ ಪಂಡಿತರವರೇ? ಎಂಬಲ್ಲಿ ನಮ್ಮ ಕನ್ನಡಕ್ಕೆ ಎಲ್ಲರೂ ರಾಕ್ಷಸರೇ (ಹಿಂಸಕರು) ಸರಿ ಎಂಬುದು ವಿಪರೀತವಾಗಿ ಅಂತಹ ಆಂಗ್ಲಭಾಷಾಪಟ್ಟ ಪದಾಂಚಿತರೂ ದೈವಯೋಗದಿಂದಲೂ ಕಾಲ ಬಲಾನುಕೂಲದಿಂದಲೂ ಸಾಕ್ಷರರಾರು? ಕರ್ಣಾಟಕಗೀರ್ವಾಣಾದಿ ಭಾಷಾಪರಿಶ್ರಮಗೊಂಡವರೂ ಕೂಡ ಎಂಬ ಸೌಜನ್ಯವು ಹುಟ್ಟಿ ಮುನ್ನಿನ 'ಸ್ವಾತಿರಿಕ್ತರು ಏನು ತಿಳಿಯುವರು, ನಮ್ಮ ಗ್ರಂಥಗಳಲ್ಲಿ ಏನೂ ರಸವಿಲ್ಲ' ಇತ್ಯಾದಿ ಭಾವನೆ ಬಿಡತೊಡಗಿ ವಿಪರೀತರಾಗಲು, ಕೇವಲಂ=ಮುಖ್ಯವಾಗಿ, ರಾಕ್ಷಸಾ ಏವ=ಸಮರ್ಥರೇ ಆಗಿರುವರು, ಆವುದಕ್ಕೆ? ಸ್ವಕರ್ಣಾಟ ಭಾಷಾಭಿವೃದ್ಧಿಗೆ ಎಂಬಂತೊಪ್ಪಿದ ಉಪಸಂಘವೊಂದೆದ್ದು ಐದು ವಿಷಯಗಳನ್ನು ಗುರಿಯಲ್ಲಿಟ್ಟುಕೊಂಡು ವಿದ್ವತ್ಪ್ರಾರ್ಥನೆಯನ್ನು ಮಾಡಿತು. ಅದನ್ನೇ ಸದುದ್ದೇಶ ಪಂಚಕವನ್ನಾಗಿ ಗ್ರಹಿಸಿ ತನ್ನಾಮ ಮುಖಾಂಕಿತವಾದ ಉಪನ್ಯಾಸವನ್ನು (೧೦-೪-೧೯೧೫ರಲ್ಲಿ) ಬರೆದಿತ್ತೆನು. ಬಳಿಕ ಪ್ರಥಮ ಕರ್ಣಾಟಕ ಸಾಹಿತ್ಯ ಸಮ್ಮೇಳನ ಮಹಾಸಭೆಗೆ ಬೆಂಗಳೂರಲ್ಲಿ ಮೇ ತಿಂಗಳ, ೩,೪, ೫ನೆಯ ದಿನತ್ರಯವೂ ಕೀರ್ತಿಶೇಷರಾದ ರಾಜಮಂತ್ರ ಪ್ರವೀಣ ಎಚ್.ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್., ಸಿ.ಐ.ಇ., ಅವರೂ, ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್, ಬಿ.ಎಸ್.ಸಿ., ಎಲ್.ಸಿ.ಇ., ಅವರೂ ಅಧ್ಯಕ್ಷತೆಗೊಂಡು ಬಹು ವಿಷಯವಿಚಾರ ವಿಮರ್ಶೆಯಿಂದ ಕರ್ಣಾಟಕ ಭಾಷೋಜ್ಜೀವನ ಪ್ರೋತ್ಸಾಹಕ್ಕೆ ಪ್ರಾಥಮಿಕಾಧ್ಯಕ್ಷತೆಯಿಂದ ಪ್ರಶಂಸನೀಯರಾದರು. ಇದರಿಂದ ರಾಕ್ಷಸ ಸಂವತ್ಸರವು ಹಿಂಸಕವೆನಿಸದೆ ಪ್ರಶಂಸಕವೆನಿಸಲು ಯುಕ್ತವೆಂದು ಸಮರ್ಥನಂಗೊಳಿಸಿದಂತಾಯ್ತು.

೨. ನಳ ಸಂ॥– ಈ ವರುಷದ ಮೇ ತಿಂಗಳ ೬-೭-೮ ಮೂರು ದಿನಗಳು ದ್ವಿತೀಯ ಕರ್ಣಾಟಕ ಸಾಹಿತ್ಯ ಸಮ್ಮೇಳನ ಮಹಾಸಭೆ ಕೀರ್ತಿಶೇಷರಾದ ಎಚ್.ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರಲ್ಲಿ ಮೇ ಊರ್ಜಿತ ಸ್ಥಿತಿಗೊಂಡುದು. ಇವರ ಸಮಾದರಣವಲ್ಲವೇ ಈ ನಮ್ಮ ಕರ್ಣಾಟ ಭಾಷೋಜ್ಜೀವನ ಕೃತ್ಯಂಗಳು ರಾಜ್ಯಾಂಗ ಜನಾಂಗ ಜನಪದಾಂಗಗಳಲ್ಲಿ ಹರಡಿಕೊಂಡು ವ್ಯವಸಾಯವು ನಡೆಯಲು ಸಹಾಯಕವಾಯಿತು. ಇದರಿಂದ ನಳ ಸಂವತ್ಸರವು ನಮ್ಮೆಲ್ಲರಿಗೂ ಸ್ವದೇಶಭಾಷಾವಿಹಾರದಲ್ಲಿ ನಳನಳಿಸುವಂತೆ ಮಾಡಿತೆಂದು ಸಂತಪಿಸಬೇಕಾಗಿರುವುದು.

೩. ಪಿಂಗಳ ಸಂ॥– ಮೈಸೂರಲ್ಲಿ ಜೂನ್ ೮-೯-೧೦ರಲ್ಲಿ ತೃತೀಯ ಕರ್ಣಾಟಕ ಸಾಹಿತ್ಯ ಸಂಮೇಳನ ಮಹಾಸಭೆಯಾಯಿತು. ಪ್ರಥಮ ದಿನದಲ್ಲಿ ಅಧ್ಯಕ್ಷಪದವಿಗೆ ಶ್ರೀಮದ್ಯುವರಾಜರು ಶ್ರೀಕಂಠೀರವ ನರಸಿಂಹರಾಜವೊಡೆಯರ್, ಜಿ.ಸಿ.ಐ.ಇ.ಯವರು ಅಗ್ರಾಸನವನ್ನಲಂಕರಿಸಲು, ಕೀರ್ತಿಶೇಷ ನಂಜುಂಡಯ್ಯನವರೇ ನಿಜ ವಕ್ತೃತೆಯಿಂದ ಸಕಲ ಜನಾನಂದವನಿತ್ತು ಕರ್ಣಾಟಕ ಪರಿಷತ್ಕಾರ್ಯೋತ್ತೇಜನವು ಶ್ರೀಮದ್ಯುವರಾಜ ಸಮಾದೃತವನ್ನಾಗಿಸಲು, ದ್ವಿತೀಯ ದಿನದಲ್ಲಿ ಮ॥ ರಾ॥ ಬಿ. ವೆಂಕಟಾಚಾರ್, ಬಿ.ಎ., ಯವರೂ, ಮೂರನೆಯ ದಿನದಲ್ಲಿ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರವರೂ ಅಗ್ರಾಸನಾಲಂಕೃತರಾಗಿ ಸಭೋದ್ದೇಶಗಳನ್ನು ಸರಳವಾಗಿ ನಡೆಯಿಸಿ ಭಾಷಾಕಾರ್ಯನಿರ್ವಾಹಕ ಪ್ರೋತ್ಸಾಹಕರಾದರು. ಇಂತು ಪಿಂಗಳ ವರ್ಷವೂ ಮಂಗಳಾವಹವಾಗಿ ನಮ್ಮ ಭಾಷಾರಕ್ಷಣೆಗೆಯ್ದುದು ಭಾಗ್ಯವಲ್ಲವೆ!

೪. ಕಾಳಯುಕ್ತಿ ಸಂ॥- ಧಾರವಾಡದಲ್ಲಿ ಚತುರ್ಥ ಕರ್ಣಾಟಕ ಸಾಹಿತ್ಯ ಸಂಮೇಳನ ಮಹಾ ಸಭೆ ನಡೆಯಿತು. ಪ್ರಾಕ್ತನವಿಮರ್ಶ ವಿಚಕ್ಷಣ ಆರ್. ನರಸಿಂಹಾಚಾರ್ಯ ಎಂ.ಎ., ಎಂ.ಆರ್.ಎ.ಸ್., ಅವರು ಅಧ್ಯಕ್ಷ ಪದವಿಯಲ್ಲಿ ಮೂರು ದಿನವೂ ಇದ್ದು, ರಸಯುಕ್ತವಾಗಿಯೂ ರಮ್ಯವಾಗಿಯೂ ಸಾಹಿತ್ಯೋಪಯೋಗಿಯಾಗಿಯೂ ಸಾರಾಂಶವಾಗಿಯೂ ಉಪನ್ಯಾಸವಿತ್ತು ಸಭಾಕಾರ್ಯವಂ ನಿರ್ವಹಿಸಿ ಸಭಿಕ ಜನಾನಂದಕರರಾಗಿರಲು, ನಮ್ಮಗಳಿಗೆ ಮಹೋಪಕಾರಿಗಳೆಂದು ಕೊಂಡಾಡುತ್ತೆ ಕಾಲಯುಕ್ತಿ ವತ್ಸರವೂ ಕಾಲೋಚಿತವಾದ ಭಾಷೋಜ್ಜೀವಕ ಯುಕ್ತಿ ಪ್ರದರ್ಶಕವಾಗಿ ಇದರಿಂದ ಸಾರ್ಥಕ ನಾಮವಾಂತುದೆಂದು ಸಂಶ್ಲಾಘಿಸಲ್ಪಡುತ್ತಿರುವುದು.

೫. ಸಿದ್ಧಾರ್ಥಿ ಸಂ॥- ಹಾಸನದಲ್ಲಿ ವೈಶಾಖ ಶು॥ ೭-೮-೯ಬುಧ, ಗುರು, ಶುಕ್ರವಾರಗಳಲ್ಲಿ ಪಂಚಮ ಕರ್ಣಾಟಕ ಸಾಹಿತ್ಯಸಂಮೇಳನ ಮಹಾಸಭೆ ನಡೆಯಲು ಮೂರು ದಿನಗಳಲ್ಲಿಯೂ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರವರೇ ಅಧ್ಯಕ್ಷತೆಗೆ ಅಲಂಕಾರವಿತ್ತು ಉಪಕ್ರಮೋಪಸಂಹಾರಗಳಲ್ಲಿ ತಮ್ಮ ಅಮೂಲ್ಯವಾದ ವಾಗ್ವೈಖರಿಯಿಂದ ಬಹುವಿಷಯ ಚರ್ಚೆಗೆಯ್ದು ಸರಸ ಹೃದಯಾನಂದಕರಾರೆಂದೆಂದು, ಸಿದ್ಧರಾದ, ಅರ್ಥ=ಯಾಚಕರು, ಉಳ್ಳುದು :ಯಾವುದಕ್ಕೆ? ಭಾಷಾಭಿವೃದ್ಧಿಗೆ' ಎಂಬ ಅರ್ಥ ಸ್ವಾರಸ್ಯಮನಂಗೀಕರಿಸುವಲ್ಲಿ, ನಮಗೆ ಸಿದ್ಧಾರ್ಥಿಯೇ ಸಿದ್ಧಾರ್ಥವಾಗಿ ಪರಿಣಮಿಸಿತೆಂದರೆ ಸಿದ್ಧವಾದ ಪ್ರಯೋಜನಂಗಳುಳ್ಳುದೆನಿಸಿ ಸಂತಸವನ್ನಿತ್ತುದು.

೬. ರೌದ್ರಿ ಸ॥- ಹೊಸಪೇಟೆಯಲ್ಲಿ ಜ್ಯೇಷ್ಠ ಶುದ್ಧ ಪಾಡ್ಯ ಮೊದಲ್ಗೊಂಡು ಮೂರು ದಿನಗಳು ಷಷ್ಠ ಕರ್ಣಾಟಕ ಸಾಹಿತ್ಯ ಸಂಮೇಳನ ಮಹಾಸಭೆ ನಡೆಯಿತು. ರಾವ್‌ಬಹದ್ದೂರ್ ರೊದ್ದ ಕೋನೇರರಾವ್ ಶ್ರೀನಿವಾಸರಾಯರು ಅಧ್ಯಕ್ಷ ಪದವಿಯನ್ನು ವಹಿಸಿದ್ದರು. ಇವರ ಉಪನ್ಯಾಸವೂ ಕಾರ್ಯನಿರ್ವಹಣವೂ ಕನ್ನಡ ನಾಡಿಗರಿಗೆ ರೌದ್ರ ರಸೋದಯಕರವಾಗಿಯೇ ದೇಶಭಾಷಾಭಿಮಾನ ಪ್ರೋತ್ಸಾಹಕವೆನಿಸಿ ವಿಷಯ ವಿಚಾರದಿಂದ ವಿಪುಲಾನಂದಕರವಾಯಿತೆಂದು ವಿಶೇಷವಾಗಿ ಸಂಶ್ಲಾಘಿಸುತೆ ನಾಡಿಗರು ಕೃತಜ್ಞರಾಗಿರಬೇಕಲ್ಲವೆ!

೭. ದುರ್ಮತಿ ಸಂ॥- ಚಿಕ್ಕಮಗಳೂರಿನಲ್ಲಿ ಮೇ ೧೯-೨೦-೨೧ ರಲ್ಲಿ ಸಪ್ತಮ ಕರ್ಣಾಟಕ ಸಾಹಿತ್ಯ ಸಂಮೇಳನ ಮಹಾಸಭೆ ರಾಜಸಭಾಭೂಷಣ ಕೆ.ಪಿ. ಪುಟ್ಟಣಶೆಟ್ಟಿರವರು, ಸಿ.ಐ.ಇ. ಅವರು ಅಲಂಕರಿಸಿದ ಅಧ್ಯಕ್ಷತೆಯಿಂದ ಕಾಲೋಚಿತ ಕರ್ತವ್ಯತಾನಿರೂಪಣವು ಅವರ ವಾಗ್ವೈಖರಿಯಲ್ಲಿ ಸರಸ ಸಮುಚಿತ ಗಂಭೀರ ಪದರಚನೆಯೊಡನೆ ನಡೆದುದೂ, ಉಪನ್ಯಾಸಾಂತ್ಯದ ಸ್ವಾಪ್ನಿಕ ವೈಖರಿಯೂ ಎಲ್ಲರಿಗೂ ಚಿರಕಾಲ ಸ್ಮರಣೀಯವಾಗಿರಬೇಕೆಂದು ಸಂಶ್ಲಾಘಿಸುವೆನು. ಸುಯೋಧನನು ದುರ್ಯೋಧನನಾಗಿ ದುಷ್ಟನೆನಿಸಿದನು. ನಮ್ಮ ಕನ್ನಡಿಗರಿಗೆ ಇವರಿಂದ ದುರ್ಮತಿಯೆಂಬುದು ಸುಮತಿಯಾಗಿ ಪರಿಣಮಿಸಲು ಸುಖಾವಹವಾಯಿತೆಂದೂ ಸೂಚಿಸುವೆನು. ಸ್ವಾಪ್ನಿಕ ಫಲಾನುಭವವು ಪ್ರಾತ್ಯಕ್ಷಿಕವಾಗಿ ದೇವರ ದಯೆಯಿಂದಲ್ಲದೆ ಬರುವುದೆ!

೮. ದುಂದುಭಿ ಸಂ- ಚಿತ್ರದುರ್ಗದ ಡಿ॥ ದಾವಣಗೆರೆಯಲ್ಲಿ ಅಷ್ಟಮ ಕರ್ಣಾಟಕ ಸಾಹಿತ್ಯ ಸಂಮೇಳನ ಮಹಾಸಭೆ ಮೇ೧೨-೧೩-೧೪ ತಾ॥ ಗಳಲ್ಲಿ ನಡೆಯಿತು. ಆದ್ಯಂತವಾಗಿ ಅಧ್ಯಕ್ಷಪದವನೇರಿದ ಮ॥ ರಾ॥ ಸುಪ್ರಸಿದ್ಧರಾದ ಎಂ. ವೆಂಕಟಕೃಷ್ಣಯ್ಯನವರು ಉಪನ್ಯಸಿಸಿದ ವಿಷಯ ವಿಚಾರವು ರಮಣೀಯವೂ ರಸಭರಿತವೂ ಅದುದೊಂದೇ ಅಲ್ಲದೆ ಜಾತಿ ಕುಲ ಮತಾಭಿನಿವೇಶಂಗಳು ಭಾಷಾಸೇವೆಗೆ ದೂರವೆಂಬುದನ್ನು ಒತ್ತಿಹೇಳಿದ ಅವರ ವಾಗ್ದುದುಂಭಿ ನಾದದಿಂದ ಎಲ್ಲರೂ ಕರ್ಣಾನಂದವನ್ನು ಹೊಂದದೆ ಇರಬಾರದು ; ಏಕೆಂದರೆ, ಜಾತಿ ಮತ ಕುಲಂಗಳು ವಿಶೇಷ ವ್ಯವಸ್ಥೆಗೊಂಡುದು, ಸ್ವದೇಶ ಭಾಷೆಯೆಂಬುದು ಸಾಮಾನ್ಯ ವ್ಯವಸ್ಥೆಗೊಂಡುದು. ಅದರಿಂದ ಎಲ್ಲರೂ ಭಾಷಾವಿಷಯದಲ್ಲಿ ಐಕಮತ್ಯದಿಂ ಮದಮಾತ್ಸರ್ಯಂಗಳಿಗೊಳಗಾಗದೆ ಸೌಜನ್ಯದಿಂದ ವರ್ತಿಸಬೇಕೆಂದು ಹಾರೈಸುವೆನು.

ಇದರಿಂದ ದುಂದುಭಿ ವತ್ಸರವು ದುಂದುಭಿಯಾಗಿಯೇ ಘೋಷಿಸುತ ಸಾರ್ಥಕವಾಗಿ ನಮ್ಮ ಸ್ವದೇಶ ಭಾಷೋಜ್ಜೀವವೆಂದು ಸಂಶ್ಲಾಘಿಸುವೆನು.

೯. ರುಧಿರೋದ್ಗಾರಿ ಸಂ॥- ಕರ್ಣಾಟಕ ಸಾಹಿತ್ಯ ಸಮ್ಮೇಳನ ಮಹಾಸಭೆ (ಬಿಜಾಪುರ)

ಪರಿಷತ್ತಿಗೆ ತಿಂಗಳಿಗೊಮ್ಮೆ ತಲೆಗೊಂದು ಕಾಸು ಕೊಡಿ

ಇನ್ನು, ನಮ್ಮ ಈ ಕನ್ನಡನಾಡಿಗರೆಲ್ಲರೂ ತಿಂಗಳಿಗೊಮ್ಮೆ ತಲೆಗೊಂದು ಕಾಸು ಕನ್ನಡಕ್ಕೆ ಎಂದು ಪ್ರತಿ ಕುಟುಂಬದಿಂದಲೂ ದ್ರವ್ಯಸಹಾಯವನ್ನು ಪಡೆದವರಾಗಿ, ಅದನ್ನು ಕರ್ಣಾಟ ಪರಿಷತ್ತಿಗೆ ಮೂಲಧನವಾಗಿ ಬೆಳೆಯಿಸಿಕೊಂಡು ಸದುದ್ದೇಶ ಪಂಚಕವೆಂಬ ಮುಖ ನಾಮಾಂಕಿತವಾಗಿ ಕರ್ಣಾಟ ಪರಿಷತ್ತಿನ ಪ್ರಥಮ ಸಂಪುಟದ ಪ್ರಥಮ ಭಾಗದಲ್ಲಿ ಮುದ್ರಿತವಾಗಿರುವ ನನ್ನ ಪ್ರಾರ್ಥನೋಪನ್ಯಾಸದಂತೆ ಸತ್ಕೃತಿ ಪ್ರಚಾರದಲ್ಲಿ ವಿನಿಯೋಗಿಸುತ್ತ ಬಂದಲ್ಲಿ ಕರ್ಣಾಟ ಭಾಷಾವಿಚಕ್ಷಣರು ಉದಯಿಸಿಬಾರರೇ !

ಉಪಸಂಹಾರ ಭಾಷಣ

ಸರಸಿಗಳಾದ ಸಭ್ಯರೇ ! ನಲ್ನುಡಿಗಳನಾದರಿಸುವರಾದ ನಾಡಿಗರೇ ! ನಿಮ್ಮೆಲ್ಲರ ಸಮಾವೇಶದ ಬಲದಿಂದ ಕರ್ಣಾಟಕ ಸಾಹಿತ್ಯ ಸಮ್ಮೇಳನ ಮಹಾಸಭಾ ಕೃತ್ಯಂಗಳು ಈ ಮೂರುಂ ದಿನಂಗಳಿಂದ ಸುಲಲಿತವಾಗಿ ಸಾಗಿತು. ಚರ್ಚಿಸುವ ವಿಷಯಂಗಳು ಚರಿತಾರ್ಥಂಗಳಾದುವು. ಈ ಮೂರು ದಿನಗಳ ಸಮ್ಮೇಳನವೆಂಬುದೇ ಕರ್ಣಾಟ ಲೋಕದೌತಣದ ಅಡಿಗೆ. ಇದರ ಒಗ್ಗರಣೆಯಂತೆ ನನ್ನ ಸಭಾಸಮುಪ ಸಂಹಾರದ ಸೂಕ್ತಿಗಳನಾಲಿಸಿಯೆಲ್ಲರಾನಂದಿಸಬೇಕು. ವರುಷಕ್ಕೊಂದಡಿಗೆಯಟ್ಟು ಕನ್ನಡನಾಡುಗಳಲ್ಲಿರುವ ಅಕ್ಷರಾಸ್ಯರೆಲ್ಲರೂ ಆನಂದಿಸುತ್ತ ಕರ್ಣಾಟ ಸರಸ್ವತಿ ಸರಸಾಲಂಕೃತೆಯಾಗಿ ಸಂತತವೂ ತಾಂಡವವಾಡುತ್ತ ನಮ್ಮ ಕುಟುಂಬಗಳನ್ನು ಸಲಹುತ್ತಿರಬೇಕೆಂಬುದೇ ನಮ್ಮ ಸುದ್ದೇಶವಾಗಿರುವುದು. ಇದರಲ್ಲಿ ಸ್ವಾರ್ಥಪರತೆಯನ್ನು ತೊರೆದು ಪರೋಪಕಾರಪರತೆಯನ್ನೂ, ಲೋಭತ್ವವನ್ನು ಬಿಟ್ಟು ಉದಾರತೆಯನ್ನೂ, ಮೈಗಳ್ಳತನವನೊದೆದು ಶ್ರಮಸಹನವನ್ನೂ, ಡಾಂಭಿಕತ್ವವನ್ನು ತ್ಯಜಿಸಿ ಯಥಾಯೋಗ್ಯವರ್ತನವನ್ನೂ, ದೋಷಗ್ರಹಣವನ್ನು ಧಿಕ್ಕರಿಸಿ ಗುಣಗ್ರಹಣತೆಯನ್ನೂ ಕ್ರಮವಾಗಿ ನಮ್ಮ ಅಭ್ಯಾಸದಲ್ಲಿ ತಂದುಕೊಳ್ಳಬೇಕು. ಕಡೆಗೆ ನಾವೆಲ್ಲರೂ, 'ನಮ್ಮಲ್ಲಿ ಲೋಪವೆಂಬುದೇನು?' ಎಂಬುದನ್ನೇ ಲಕ್ಷ್ಯವಿಟ್ಟು ತಿದ್ದಿಕೊಳ್ಳುವ ಸರಳ ಬುದ್ಧಿ ವಿವೇಕದಿಂದಲೇ ನಮ್ಮಲ್ಲಿ ಐಕಮತ್ಯವೂ ಅದರಿಂದ ಭಾಷಾಭಿವೃದ್ಧಿಯೂ ಅದರಿಂದ ದೇಶೋನ್ನತಿಯೂ ನೆಲೆಗೊಳ್ಳುವುದು.

೯ನೇ ಸಮ್ಮೇಳನದಲ್ಲಿ ಮಂಡಿಸಿದ ಉಪನ್ಯಾಸಗಳು:-

ಈ ಮೂರು ದಿನಗಳಲ್ಲಿ ವರ್ಧಿಷ್ಣುಗಳಾಗಿ ವ್ಯಾಸಂಗಳನ್ನು ಬರೆದು ತಂದೋದಿದ ಧೀಮಂತರನ್ನು ಉತ್ಸಾಹವಂತರನ್ನಾಗಿಸಲು ಕೆಳಗಣ ಪದ್ಯಂಗಳಿಂದ ಇಂತು ಸಂಶ್ಲಾಘಿಸುವೆನು:-

ಕಂ॥ ಲಕ್ಷ್ಮೀಶ ಕವಿಯ ಕಾಲಿಕ ॥
ಸೂಕ್ಷ್ಮಾಂಶ ವಿಚಾರ ವರ್ಣನಂ ಸರಸಮೆನಲ್ ॥
ಪಕ್ಷಂ ಬಿಟ್ಟುದು ಕನ್ನಡ ॥
ಲಕ್ಷ್ಮೀಮಣಿಯಲ್ತೆ ರಾಜಸುಪುರೋಹಿತರಿಂ ॥ ॥೧॥
ಕನ್ನಡ ನಾಡಿನ ಜನರಿಗೆ ॥
ಬಿನ್ನಾಣಂ ಕಲ್ಪದೆಡೆಗೆ ಬಗೆಯೇರಿಸಲೇಂ ॥
ಚೆನ್ನನೆ ಹಾರನಹಳ್ಳಿಯ ॥
ಬಿನ್ನಪದ ವಿಲೇಖನಾರ್ಥನೊಪ್ಪುತ್ತಿರ್ಕುಂ ॥ ॥೨॥

ಪ್ರತಿಭಾಂಕಿತಮೀ ವ್ಯಾಸಂ ॥
ಪ್ರತಿಬಿಂಬಿಸುಗುಂ ಬುಧಾಂತರಂಗಂಗಳೊಳೆಂ ॥
ದತಿ ಮಮತೆಯಿನೊರವುದುಮೇ ॥
ನತಿಶಯಮೇ ರಾಮಚಂದ್ರ ಬೆಳಗಾಂ ಶ್ಲಾಘ್ಯಂ ॥ ॥೩॥

ನಮಗಾವಶ್ಯಕ ಕಾವ್ಯಾಂ ॥
ಕಮೊಂದಿ ಬಂದಿರ್ಪ ನೂತನೀಪನ್ಯಾಸಂ ॥
ಸುಮನೋಹರಮೆಂಬುದರಿಂ ॥
ದಮಿತಾನಂದಪ್ರದಂ ವಿಜಯಪುರಮೆಂಬೆಂ ॥ ॥೪॥

ದತ್ತಾತ್ರೇಯಾ ಬೇಂದ್ರೇ ॥
ಚಿತ್ತಾಕರ್ಷಣಮನೆಲ್ಲರೊಳ್ಮಾಡಿರ್ಪಂ ॥
ದುತ್ತೇಜಕಮಿೂ ಕನ್ನಡ ॥
ಕೆತ್ತಾನುಂ ಕುಡದೆ ಗುಣಮೆ ಸಂಗ್ರಹಣೀಯಂ ॥ ॥೫॥

ಹಳ್ಳಿಯ ಹಾಡುಗಳೆಂಬುದು ॥
ನೊಳ್ಳಿತುಪನ್ಯಾಸಮಾಯ್ತು ಜನ ರಂಜನೆಯಿಂ ॥
ಬಳ್ಳಿವೊಲೆತ್ತಂ ಪರ್ಬುಗು ॥
ಮುಳ್ಳ ತಿರುಳ್ ಚೆನ್ನಮಲ್ಲಪಯ್ಯಾ ಗಲಗಲ್ ॥ ॥೬॥

ಇನಿವಾತುಗಳಿಂ ಪ್ರಹ್ಲಾ ॥
ದನಿರೂಪಿತಮಿೂ ವಿಲೇಖನೋಪನ್ಯಾಸಂ ॥
ಜನಮನಮನೆಳೆಯದಿಳುಮೆ ॥
ತನಗದಲಿಂಕಾರ ವಿಷಯವೆಂಬುದದೆತ್ತು ॥ ॥೭॥

ಗೆಳೆಯರ ಸಂಘಂ ಕನ್ನಡ
ಹಳಬಟ್ಟೆಯನುಳಿದು ಪೊಸತು ಹಾದಿಗೆ ಬರ್ಪು ॥
ಜ್ಜ್ವಳ ಸರ್ವಜ್ಞನ ಬನ್ನಣೆ ॥
ತಿಳಿಯಲ್ ಸಂಗೀತದಂತೆ ಹೃದಯಮಣಿಯಂ ॥ ॥೮॥

❖❖

೧೦ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಹೊಸಕೋಟೆ ಕೃಷ್ಣಶಾಸ್ತ್ರಿ



ಕನ್ನಡ ನಾಡಿನ ಉತ್ತಮ ಶಾಸನತಜ್ಞರು ಕರ್ನಾಟಕ ಇತಿಹಾಸದ ಮೇಲೆ ಹೊಸಬೆಳಕನ್ನು ಬೀರಿದ ಸಂಶೋಧಕರಾದ ಹೆಚ್. ಕೃಷ್ಣಶಾಸ್ತ್ರಿಗಳು ಬೆಂಗಳೂರು ಜಿಲ್ಲೆಯ ಹೊಸಕೋಟೆಯಲ್ಲಿ ಜನಿಸಿದರು.

ಬಿ.ಎ. ನಂತರ ಭಾರತದ ಸರ್ಕಾರದ ಶಾಸನ ಇಲಾಖೆಯಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ಇವರು ಸೇವಾಕಾಲದಲ್ಲಿ ೩೫ ವರ್ಷಗಳಿಗೂ ಹೆಚ್ಚು ಕಾಲ ಕಾರ್ಯ ನಿಮಿತ್ತ ವಿದೇಶಗಳಿಗೂ ಹೋಗಿ ಬಂದಿದ್ದಾರೆ. ೧೯೨೫ರಲ್ಲಿ ಸರ್ಕಾರದ ಸೇವೆಯಿಂದ ನಿವೃತ್ತರಾದರು.

ಇವರು ೩೫ ವರ್ಷಗಳ ಕಾಲ ಕರ್ನಾಟಕದಾಚೆ ಇದ್ದರು. ಪರಿಷತ್ತಿನ ಬಗ್ಗೆ ಅಭಿಮಾನವಿರಿಸಿಕೊಂಡಿದ್ದರು. ಮಹಾರಾಷ್ಟ್ರದಲ್ಲಿನ ಚಾಳುಕ್ಯ, ರಾಷ್ಟ್ರಕೂಟರ ಶಾಸನಗಳು ಮರಾಠಿಯಲ್ಲಿಲ್ಲ, ಕನ್ನಡದಲ್ಲಿದೆ ಎಂಬುದನ್ನು ಶೋಧಿಸಿದ್ದಾರೆ. ಕರ್ನಾಟಕದ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲಿದ್ದಾರೆ.

ಕೇಂದ್ರ ಸರ್ಕಾರ ಇವರ ಸೇವೆಯನ್ನು ಪುರಸ್ಕರಿಸಿ ೧೯೧೨ರಲ್ಲಿ ರಾವ್ ಸಾಹೇಬ್ ಮತ್ತು ೧೯೨೦ರಲ್ಲಿ ರಾವ್ ಬಹಾದ್ದೂರ್ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿದ್ದಾರೆ. ೧೯೨೪ರಲ್ಲಿ ಕೋಲಾರದಲ್ಲಿ ನಡೆದ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿಯನ್ನು ಇವರಿಗೆ ನೀಡಲಾಗಿದೆ.

ದಕ್ಷಿಣ ಭಾರತದ ಪ್ರತಿಮೆಗಳು (೧೯೬೬)
ದಕ್ಷಿಣ ಭಾರತದ ಸಂಪುಟ (ಸಂ.೫, ೨ನೇ ಭಾಗ)
ಮಸ್ಕಿಯ ಅಶೋಕನ ಶಾಸನ (ಲೇಖನ)
೫ ಪಲ್ಲವ ಶಾಸನಗಳು (ಲೇಖನ)
ಮಹಾಬಲಿಪುರದ ೨ ವಿಗ್ರಹಗಳು (ಲೇಖನ)
ಎಫಿಗ್ರಾಫಿಯಾ ಇಂಡಿಕಾದಲ್ಲಿ ಹಲವು ಪ್ರಬಂಧಗಳು

ಶಾಸನಪ್ರಕಾರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ ಇವರು ೧೯೨೮ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೧೦
ಅಧ್ಯಕ್ಷರು: ಹೊಸಕೋಟೆ ಕೃಷ್ಣಶಾಸ್ತ್ರಿ
ದಿನಾಂಕ ೧೬, ೧೭, ೧೮ ಮೇ ೧೯೨೪
ಸ್ಥಳ : ಕೋಲಾರ

ಪರಿಷತ್ತಿಗೆ ಬೇಕಾಗಿದ್ದುದು ಧನಶಕ್ತಿ

ಪ್ರಕೃತೋದ್ದೇಶವು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಹತ್ತನೆಯ ವಾರ್ಷಿಕೋತ್ಸವ. ಈ ಉತ್ಸವವು ಸಕಲೋಪಕರಣಗಳಿಂದ ಶೋಭಾಯಮಾನವಾಗಿ ನಡೆಯಲುಳ್ಳದ್ದಾಗಿದೆ. ಯಾವ ಸಲಕರಣೆಗಳು ಹೇಗಿದ್ದರೂ ಪರಿಷದಭಿವೃದ್ಧಿಗೂ ಅದರಿಂದುಂಟಾಗಬೇಕಾದ ಜಾತೀಯ ಸಾಂಗತ್ಯಕ್ಕೂ ತಕ್ಕ ಪ್ರಯತ್ನಗಳಾವಶ್ಯಕಗಳೆಂಬುದರಲ್ಲಿ ಎಲ್ಲರ ಮತವೂ ಒಂದಾಗಿರುತ್ತದೆ. ಪರಿಷದಭಿವೃದ್ಧಿಗೆ ಮೊದಲು ಬೇಕಾದದ್ದು ರಾಜಾನುಗ್ರಹ ; ಎರಡನೆಯದು ಧನಸಂಪತ್ತಿ ; ಇದರ ಮೇಲೆ ಕಾರ್ಯಾನುರಕ್ತಿ, ಜಾತೀಯ ಸಂಘಶಕ್ತಿ ಮುಂತಾದವುಗಳು. ಇವುಗಳನ್ನು ಸಂಪಾದಿಸುವುದರಲ್ಲಿ ಸರ್ವಥಾ ನಮ್ಮ ಪರಿಷದಧ್ಯಕ್ಷರೂ ಉಪಾಧ್ಯಕ್ಷರೂ ಗೌರವ ಕಾರ್ಯದರ್ಶಿಗಳೂ ಇನ್ನೂ ಇತರ ಪರಿಷತ್ಪ್ರಮುಖರೂ ಯಾವಚ್ಛಕ್ತಿ ಪ್ರಯತ್ನ ಪಡುತ್ತಲೇ ಇರುವರೆಂದು ಈ ಒಂಬತ್ತು ವರ್ಷಗಳ ವರದಿಗಳಿಂದಲೇ ವೇದ್ಯವಾಗುತ್ತಿದೆ.

ಪರಿಷತ್ಪತ್ರಿಕೆ ಹಿರಿಮೆ

ಪ್ರಥಮ ಸಾಧನವಾದ ಪರಿಷತ್ಪತ್ರಿಕೆಯೆಂತೂ "ಪ್ರತಿವರ್ಷ ರಸೋದಯ" ವೆಂಬಂತೆ ಸಂಚಿಕೆ ಸಂಚಿಕೆಗೂ ಶ್ಲಾಘ್ಯತರವಾದ ವ್ಯಾಸಗಳಿಂದಲೂ ಉದಾರವಾದ ವಿಮರ್ಶನೆಗಳಿಂದಲೂ ಆದರಣೀಯಗಳಾದ ಧರ್ಮಪ್ರವಚನಗಳಿಂದಲೂ ತುಂಬಿದೆ. ಅಲ್ಲವೆ, ಪುರಾತನಾಧುನಿಕ ಗ್ರಂಥಗಳೂ ಪರಿಷ್ಕೃತಗಳಾಗಿ ಗ್ರಂಥಮಾಲೇತ್ಯಾದಿ ಮಾಸಪುಸ್ತಕಗಳಲ್ಲಿ ಮುದ್ರಿತಗಳಾಗುತ್ತಿವೆ. ದಿನಪತ್ರಿಕೆಗಳೂ ವಾರಪತ್ರಿಕೆಗಳೂ ಎಲ್ಲೆಲ್ಲಿಯೂ ಕರ್ಣಾಟಕ ದಿಗಂತವ್ಯಾಪಿಗಳಾಗಿ ಕರ್ಣಾಟ ಭಾಷಾಪ್ರಾಬಲ್ಯವನ್ನು ನೆಲೆಗೊಳಿಸುತ್ತಿವೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಜನರಲ್ಲಿ ಹೊರಟಿರುವ ಭಾಷೋಪನ್ಯಾಸಗಳೂ ಕಥಾಪ್ರಸಂಗಗಳೂ ಪುರಾಣಕಥನಗಳೂ ಭಾಷಾಭಿವೃದ್ಧಿಗೆ ಸಹಾಯಪಡುತ್ತಲಿವೆ.

ಪರಿಷತ್ತು ಮಾಡಬೇಕಾದ ಕೆಲಸಗಳು-

ಪರಿಷತ್ಕಾರ್ಯನೇಕಗಳಿರುವುವು. ಕರ್ಣಾಟಕ ಜನಸಾಮಾನ್ಯದಲ್ಲಿ ದೇಶ ಭಾಷಾರುಚಿಯನ್ನುಂಟು ಮಾಡುವುದು, ವಿದ್ವಜ್ಜನರಲ್ಲಿ ಸ್ವಾರ್ಥಪರಾಯಣತೆಯನ್ನು ಬಿಡಿಸಿ ಪಾರಮಾರ್ಥಿಕವೂ ಪರಮೋತ್ಕೃಷ್ಟವೂ ಆದ ದೇಶಭಾಷಾ ಸೇವೆಯಲ್ಲಿ ಅಮರತ್ವವನ್ನು ಕಲ್ಪಿಸುವುದು, ಇವಕ್ಕೆ ಸಾಧನಗಳಾಗಿ ಸರ್ಕಾರದ ಸಹಾಯವನ್ನು ಬೇಡುವುದು, ವಿದ್ಯಾಶಿಕ್ಷಣದಲ್ಲಿ ಬದಲಾವಣೆಗಳನ್ನು ಸೂಚಿಸುವುದು, ಕರ್ಣಾಟಕ ಪ್ರಾಂತಗಳೆಲ್ಲೆಡೆಯಲ್ಲಿಯೂ ಪಾಠಶಾಲೆಗಳ ಪುಸ್ತಕ ಭಂಡಾರಗಳ, ವಾಚಕ ಸಂಘಗಳ ಸ್ಥಾಪನೆಯನ್ನು ಮಾಡುವುದು, ಇಂಗ್ಲಿಷ್ ವಿಜ್ಞಾನ ಗ್ರಂಥ ಪರಿವರ್ತನೆ, ಕಾವ್ಯನಾಟಕಾಲಂಕಾರ ಗ್ರಂಥಗಳ ನವೀನ ನಿರ್ಮಾಣ, ಪ್ರಾಂತಕರ್ಣಾಟಕ ಭಾಷಾ ಸಾಂಪ್ರದಾಯಗಳನ್ನು ಮೈಸೂರು ಕನ್ನಡದೊಡನೆ ಏಕೀಭವಿಸಲು ಪ್ರಯತ್ನಗಳು, ಪೂರ್ವಕಾವ್ಯ ವಿಮರ್ಶೆ-ಇವನ್ನು ಮಾಡುವುದು, ಕವಿಚರಿತ್ರೆ, ದೇಶಚರಿತ್ರೆ, ಭಾಷಾಚರಿತ್ರೆ, ಕಾದಂಬರೀ ಗ್ರಂಥಗಳು-ಇವನ್ನು ನಿರ್ಮಾಣ ಮಾಡುವುದು, ಪುರಾಣಪಠನ, ಕಥಾಪ್ರಸಂಗ, ನಾಟಕ ಪ್ರದರ್ಶನ, ಸಂಗೀತ ಸಮಾಜ-ಇವನ್ನೇರ್ಪಡಿಸುವುದು ; ಇತ್ಯಾದ್ಯನೇಕಗಳು ಸಾಹಿತ್ಯ ಪರಿಷತ್ತಿನ ಪ್ರಯತ್ನಗಳಲ್ಲಿ ಮೊದಲಿನಿಂದಲೂ ಮುಖ್ಯವಾದುವುಗಳಾಗಿ ಏರ್ಪಟ್ಟಿವೆ. ಇದರ ಮೇಲೆ ವಿದ್ವನ್ಮಣಿಗಳಾದ ಅಧ್ಯಕ್ಷರ ಪ್ರೌಢೋಪನ್ಯಾಸಗಳಿಂದ ಮೇಲ್ಕಂಡ ಪ್ರಯತ್ನಗಳ ಸಾಧ್ಯಾಸಾಧ್ಯತೆಗಳ ವಿಚಾರ ನಡೆದು ಮುಂದಿನ ಮಾರ್ಗವು ನಿರರ್ಗಳವಾಗಿ ತೋರಲ್ಪಟ್ಟಿದೆ.

ಹಿಂದಿನ ಸಮ್ಮೇಳನಗಳ ಸಿಂಹಾವಲೋಕನ

ಕೀರ್ತಿಶೇಷರಾದ ರಾಜಮಂತ್ರಪ್ರವೀಣ ಶ್ರೀಮಾನ್ ಹೆಚ್.ವಿ. ನಂಜುಂಡಯ್ಯನವರ ಪ್ರಪ್ರಥಮೋಪನ್ಯಾಸವು ಮುಖ್ಯಾಂಶಗಳನ್ನೆಲ್ಲ ಬಹಳ ಸ್ಪಷ್ಟವಾಗಿ ಪ್ರಕಟಪಡಿಸಿ, ತಕ್ಕವಿದ್ಯಾವಂತರ ಸಹಾಯದಿಂದಲೂ ಜನರ ಅನ್ಯೋನ್ಯ ಸದ್ಭಾವದಿಂದಲೂ ನವೀನವಾದೀ ಕರ್ಣಾಟಕ ಭಾಷಾಪ್ರಚಾರವು ಪ್ರಸ್ತುತ ಕರ್ಣಾಟ ದೇಶೀಯರಲ್ಲಿ ಉತ್ಸಾಹೋದ್ಬೋಧವನ್ನು

ಮಾಡಿ, ಅವರ ಜಾತೀಯ ಜೀವಿತವು ಮೂರ್ತೀಭವಿಸುವಂತೆಯೂ ಅವರ ಸುಖದುಃಖಗಳು ಪ್ರತಿಫಲಿಸುವಂತೆಯೂ ಮಾಡುತ್ತ, ಪೂರ್ವಗ್ರಂಥಾವಳಿಗಳಂತೆ ಮಾಡಿದ ವರ್ಣನೆಗಳನ್ನೇ ಮಾಡುತ್ತ, ಹೇಳಿದ ಕಥೆಗಳನ್ನೇ ಹೇಳುತ್ತ ಮನಸ್ಸಿಗುಲ್ಲಾಸಕರವಾಗಿದ್ದರೇನು? ಮನಸ್ಸಿನ ಉತ್ಸಾಹಕ್ಕೆ ಮಾತ್ರ ಕಾರಣವಾಗದೆ ಇರಬಾರದೆಂತಲೂ, ಆಧುನಿಕ ಕಾರ್ಯಾಸಕ್ತಿಯನ್ನೂ ಸಂಘಸಂಸ್ಕರಣವನ್ನೂ ದೇಶಾಭಿಮಾನವನ್ನೂ ಸೂರೆ ಗೊಳ್ಳುವಂತಿರಬೇಕೆಂತಲೂ ಆಶೀರ್ವದಿಸಿತು. ಜನರಲ್ಲಿ ಸಾಮಾನ್ಯವಾಗಿ ಮನಸ್ಸಿಗುತ್ಸಾಹ ವನ್ನುಂಟುಮಾಡಬೇಕಾಗಿದ್ದರೆ ಗ್ರಂಥರಚನೆಯು ಹೊಸಹೊಸ ವಿವಿಧ ವಿಷಯಗಳನ್ನು ಕುರಿತದ್ದಾಗಿರಬೇಕೆಂದೂ, ಮುದ್ದಾದ ಮಾತುಗಳಿಂದಲೂ, ಭಾಷಾ ಸಂಪ್ರದಾಯಗಳಿಂದಲೂ, ಉತ್ಸಾಹಕರವಾದ ಮಹನೀಯ ದೇಶೋದ್ಧಾರಕರ ಕಥೆಗಳಿಂದಲೂ, ಅಪೂರ್ವವಾದ ಶಾಸ್ತ್ರ ವಿಮರ್ಶೆಗಳಿಂದಲೂ, ಪ್ರಕೃತೋಪಯೋಗಿಗಳೂ ಸರ್ವಜನಸಮ್ಮತಗಳೂ ಆದ ನೈತಿಕಾರ್ಥಿಕ ರಾಜಕೀಯ ಬೋಧೆಗಳಿಂದಲೂ ತುಂಬಿ ತುಳುಕಾಡುತ್ತಿರಬೇಕೆಂದೂ ರಾಜಮಂತ್ರಪ್ರವೀಣರ ಪ್ರವಚನದಿಂದ ಸಿದ್ಧವಾಯಿತು. ಆ ಸಮಯದಲ್ಲಿ ಮಹಾಮಹೋಪಾಧ್ಯಾಯರಾದ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು ಭಾಷೋಜ್ಜೀವನ ಪ್ರಯತ್ನಗಳಲ್ಲಿ ಜಾತಿ ಕುಲ ಮತಾಭಿನಿವೇಶಗಳು ಬಾಹ್ಯಗಳೆಂದು ಪರಾಮರ್ಶಿಸಿದರು. ದೇಶಭಕ್ತಾಗ್ರಗಣ್ಯರಾದ ವೆಂಕಟಕೃಷ್ಣಯ್ಯನವರು ಸಾಂಘಿಕ ಅಖಂಡಶಕ್ತಿಗೆ ಕೂಡ ದೈವಸಹಾಯವು ಕೂಡಿ ಬರಬೇಕೆಂದು ಹೇಳಿದರು. ಬೊಂಬಾಯಿಯ ವಿದ್ವದ್ವರ್ಯರಾದ ಜಹಗೀರ್‌ದಾರರು ತಮ್ಮ ಉತ್ಕೃಷ್ಟವಾದ ಉಪನ್ಯಾಸದಲ್ಲಿ ಪರಿಷತ್ಪ್ರಚಾರ ಸಾಧನಗಳನ್ನು ಸಂಗ್ರಹಿಸುತ್ತ ವಿದ್ವನ್ಮಂಡಲಿಗಳಲ್ಲಿ ಸ್ನೇಹಾಭಿವೃದ್ಧಿಯೂ ಆಚಾರ ವ್ಯವಹಾರಗಳಲ್ಲಿ ಐಕ್ಯತೆಯೂ, ಕನ್ನಡಿಗರಲ್ಲೆಲ್ಲಿಯೂ ತನು ಧನ ಮನಂಗಳಿಂದ ಸಹಾಯಮಾಡಬೇಕೆಂಬ ವಾಂಛೆಯೂ, ಗಣನೆಗೆ ಬರುವ ಪ್ರತಿಪಟ್ಟಣದಲ್ಲಿ ವಿದ್ಯಾರ್ಥಿಗಳು, ಉದ್ಯೋಗಸ್ಥರು, ವರ್ತಕರು ಮೊದಲಾದ ಸಮಸ್ತರೂ ಕಲೆತು ಮೆಲತು ಸೇರಲುಳ್ಳ ಸಭೆಗಳ ನಿರ್ಮಾಣವೂ ಇರಬೇಕೆಂದು ವ್ಯಕ್ತಪಡಿಸಿದರು. ಕೀರ್ತಿಶೇಷವಿದ್ವನ್ಮಣಿಗಳಾದ ರಘುನಾಥರಾಯರು ಭಾಷೆಯ ಅಭಿವೃದ್ಧಿಯನ್ನು ತೋರಿ ಸರ್ಕಾರದವರ ಪ್ರೋತ್ಸಾಹವನ್ನೂ, ಸಂಸ್ಕರಣ ವಿಷಯದಲ್ಲಿ ಶಾಸ್ತ್ರೀಯ ಮಾರ್ಗಾಪೇಕ್ಷೆಯನ್ನೂ, ಕೃತಿ ನಿರ್ಮಾಣದಲ್ಲಿ ದೇಶೀಯ ಭಾಷಾಭೇದಗಳಿದ್ದೂ ಗ್ರಾಂಥಿಕ ರೂಪವನ್ನೇ ಪ್ರಾಜ್ಞರಾದವರು ಉಪಯೋಗಿಸಬೇಕೆಂಬುದನ್ನೂ ತಿಳಿಯಪಡಿಸಿ ಇದಕ್ಕಾಗಿಯೆಂದು ದೊಡ್ಡ ವ್ಯಾಕರಣವನ್ನೂ ನಿಘಂಟುವನ್ನೂ ಬರೆಯತಕ್ಕುದೆಂಭಿಪ್ರಾಯಪಟ್ಟರು. ಹಾಗೆಯೇ ಮ॥ ರಾ॥ ನಾರಾಯಣರಾವ್ ಕರಿಗುದರಿಯವರು ಲೋಕಜ್ಞಾನವು ಮಾತೃಭಾಷೆಯ ಮೂಲಕವೇ ಹರಡಬೇಕೆಂಬ ಸಿದ್ಧಪ್ರತೀತಿಯನ್ನು ತೋರ್ಪಡಿಸಿ ಗ್ರಂಥ ವಿಷಯಗಳನ್ನು ಚಿತ್ರಗಳ ಮೂಲಕ, ನಿದರ್ಶನಗಳ ಮೂಲಕ, ಕಾದಂಬರಿ ಕಥೆಗಳಾಗಿ ಸಂಭಾಷಣ ಶೈಲಿಯಲ್ಲಿ ಬರೆಯಬೇಕೆಂದು ಸೂಚಿಸಿದರು. ಆಂಗ್ಲಭಾಷಾ ಪ್ರಾಚುರ್ಯವು ಸಾರ್ವಜನೀಕ ಸಂಪತ್ತಿಗೆ ಆವಶ್ಯಕವಾದದ್ದಾದರೂ ಕನ್ನಡಿಗರ ಜ್ಞಾನೋದಯಕ್ಕೆ ಕನ್ನಡವೇ ಬೇಕೆಂದು ಪರಮಸ್ವಾಮಿಗಳೂ ಕರ್ಣಾಟವಂಶಭೂಷಣರೂ ಆದ ನಮ್ಮ ಯುವರಾಜರು ಅಪ್ಪಣೆಕೊಡಿಸಿದರು; ಮುಖ್ಯವಾಗಿ, ಕರ್ಣಾಟ ಜನಾಂಗಗಳ ನಡೆನುಡಿಗಳಭಿವೃದ್ಧಿಯನ್ನು ತೋರ್ಪಡಿಸುವ ಸದ್ಗ್ರಂಥಗಳು ವೃದ್ಧಾಚಾರಗಳಲ್ಲಿ ವಿಶ್ವಾಸವುಳ್ಳ ವಿದ್ವಾಂಸರಿಂದಲೇ ಬರೆಯಲ್ಪಡಬೇಕೆಂತಲೂ ಅಭಿಪ್ರಾಯಪಟ್ಟರು. ಮ॥ ರಾ॥ ಎಸ್.ಎನ್.ನರಸಿಂಹಯ್ಯನವರು, "ಗ್ರಾಂಥಿಕರೂಪಗಳ ಏಕೀಕರಣ"ವೆಂಬ ಒಂದು ಉತ್ತಮವಾದ ಉಪನ್ಯಾಸದಲ್ಲಿ ವ್ಯಾಕರಣ ನಿಘಂಟುಗಳ ರಚನೆಯಿಂದ ಮಾತ್ರ ಭಾಷಾಭೇದಗಳು ಲೋಪಿಸಲಾರವೆಂದೂ ಆಯಾ ರಾಷ್ಟ್ರೀಯ ಹಾಸ್ಯ ವಿನೋದ ಕುಹಕಗಳು ಆಯಾ ರಾಷ್ಟ್ರೀಯ ಭಾಷಾಭೇದಗಳನ್ನುಸರಿಸಿಯೇ ಇರಬೇಕೆಂತಲೂ ದೃಶ್ಯ ಕಾವ್ಯಗಳಲ್ಲಿ, ಎಂದರೆ ಗ್ರಂಥಗಳನ್ನು ಬರೆಯುವಾಗ ಸಂಸ್ಕೃತ ಶಬ್ದಗಳನ್ನು ತತ್ಸಮಾರ್ಥದಲ್ಲಿಯೇ ಪ್ರಯೋಗಿಸಬೇಕೆಂತಲೂ, ಶೀಘ್ರ ಪ್ರಚಾರಕ್ಕೆ ಪ್ರೋತ್ಸಾಹಕರಗಳಾದ ಪುಸ್ತಕಗಳನ್ನು ಸುಲಭ ಶೈಲಿಯಲ್ಲಿ ಬರೆದು ಕನ್ನಡಿಗರ ಮನೆಮನೆಗಳ ಬಾಗಿಲುಗಳಲ್ಲಿ ಬಿಕರಿಮಾಡಬೇಕೆಂತಲೂ ಸೂಚಿಸಿದರು, ರಾವ್‌ಬಹಾದ್ದೂರ್ ನರಸಿಂಹಾಚಾರ್ಯರವರು ಕರ್ಣಾಟ ಭಾಷಾ ಮಹೋನ್ನತಿಯನ್ನು ಪೂರ್ವಾದಾರಾಭ್ಯ ಚಾರಿತ್ರ ವಿಮರ್ಶನದಿಂದ ದೇಸಾಯಿಗಳು ಹೇಳಿದಂತೆ ಕನ್ನಡಕ್ಕೆ ಬಂದ ದೀನಸ್ಥಿತಿಗೆ ವಿದ್ವಾಂಸರಾಗಿಯೂ ಸಮರ್ಥರಾಗಿಯೂ ಇರುವ ಕನ್ನಡಿಗರ ಪರಾಙ್ಮುಖತೆಯೂ ಪ್ರೌಢಶಾಲೆಗಳ ಅನಾದರಣೆಯೂ ಇತರ ಪ್ರಾಂತಭಾಷೆಗಳ ಹೆಚ್ಚಿದ ಪ್ರಚಾರವೂ ಮುಖ್ಯ ಕಾರಣಗಳೆಂಬರ್ಥವನ್ನನುಮೋದಿಸಿ, ಅಭಿವೃದ್ಧಿ ಮಾರ್ಗಗಳಲ್ಲೆಲ್ಲ ಹೆಚ್ಚಿದ್ದು ಮಾಧ್ಯಮಿಕ (Secondary) ಶಾಲೆಗಳಲ್ಲಿ ಕನ್ನಡ ಭಾಷೆಯ ಪ್ರಾಮುಖ್ಯತೆಯೇ ಎಂದು ಹೇಳಿದರು. ಆ ಮಹನೀಯರ ಉಪಸಂಹಾರ ವಾಕ್ಯಗಳ ಚಮತ್ಕೃತಿಯನ್ನೂ ರಸವತ್ತತೆಯನ್ನೂ ಸರ್ವರೂ ಅನುಭವಿಸಿಯೇ ಇರುವಿರಿ.


ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸರಾಯರು ಶಾಸ್ತ್ರ ಸಂಪ್ರದಾಯವಾದ ವಾಗ್ಧೋರಣೆಯಿಂದ ಮುಂದು ನಮ್ಮ ವಾಙ್ಮಯಕ್ಕೆ ಪರಿಚಲನ ಉಂಟಾಗಬೇಕಾಗಿದ್ದರೆ ಕಾಂತಾಸಮ್ಮಿತವಾದ ಕಾವ್ಯ ನಾಟಕ ರೂಪವಾಗಿಯೇ

ಆಗಬೇಕೆಂದು ಹೇಳಿ ಕರ್ಣಾಟಕರಾದ ಸರ್ವರಲ್ಲಿಯೂ ಜ್ಞಾನೇಚ್ಛಾಕ್ರಿಯಾಶಕ್ತಿಗಳೆಂಬ ಮುಖ್ಯ ಸಾಧನೆಗಳು ಅಭಿವೃದ್ಧಿಗೆ ಬರಬೇಕೆಂದು ದೇವರನ್ನು ಪ್ರಾರ್ಥಿಸಿದರು. ಪ್ರಸಿದ್ಧರಾದ ರೊದ್ದದ ರಾಯರವರು, ತೆಲುಗು, ಉರ್ದು, ಮರಾಠಿ ಭಾಷೆಗಳ ಮಧ್ಯೆ ಸಿಕ್ಕಿ ತಿಣಕಲಾಡುತ್ತಿರುವ ಪ್ರಾಂತಕರ್ಣಾಟಕದ ದುರವಸ್ಥೆಯನ್ನು ವರ್ಣಿಸಿ ಇಂತಹ ಕ್ಲಿಷ್ಟ ಪರಿಣಾಮಕ್ಕೆ ಆಯಾ ರಾಜ್ಯಾಂಗ ಪ್ರಭುತ್ವ ಸಭ್ಯರಲ್ಲಿಯೂ ಅಲ್ಲಿಯ ವಿದ್ಯಾಧಿಕಾರಿಗಳಲ್ಲಿಯೂ ಕರ್ಣಾಟಕರ ನ್ಯೂನತೆಯೇ ಮುಖ್ಯ ಕಾರಣವೆಂದು ಸೂಚಿಸಿದರು. ಅಲ್ಲದೆ ಕರ್ಣಾಟ ಪ್ರಾಂತಗಳು ಆಯಾ ದೇಶದ ಬಹು ದೂರದಲ್ಲಿರುವ ಕಾರಣ ಯಾವುದೊಂದು ಸುಧಾರಣೆಯಾಗಲಿ ಅವುಗಳನ್ನು ಮುಟ್ಟಲು ಬಹುಕಾಲವಾಗುತ್ತದೆ ಎಂಬೀಯೆರಡು ಕುಂದಕಗಳಿಂದ ಪ್ರಾಂತ ಕರ್ಣಾಟದ ರಾಜಕೀಯ, ಸಾಮಾಜಿಕ ವಾಙ್ಮಯಾಭಿವೃದ್ಧಿಗಳ ದೈನ್ಯತೆ ಪ್ರಾಪ್ತವಾಯಿತೇ ಹೊರತು ಜ್ಞಾನೇಚ್ಛಾಕಿಯಾ ಶಕ್ತಿಗಳ ಮಾಂದ್ಯದಿಂದಲ್ಲವೆಂದು ತೋರಿಸಿದರು. ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ.ಪಿ. ಪುಟ್ಟಣ್ಣಶೆಟ್ಟರವರು ಪೂರ್ವದಲ್ಲಿದ್ದ ವಾಙ್ಮಯ ವ್ಯಾಪ್ತಿಗೂ ಈಗಿನ ಅಸಡ್ಡೆಗೂ ಸಮಗ್ರ ಕಾರಣಗಳನ್ನು, ತಿಳಿಸಿ ಪೂರ್ವದಂತೆ ಪುರಾಣ ಶ್ರವಣಾದಿಗಳು ವೃದ್ಧಿಗೆ ಬರಬೇಕೆಂಬುದನ್ನೂ, ಹಳೇ ಓಲೆಯ ಗ್ರಂಥಗಳನ್ನು ಭದ್ರಪಡಿಸಿ ಕ್ರಮೇಣ ಮುದ್ರಿಸಬೇಕೆಂಬುದನ್ನೂ, ದೇಶೀಯ ಐತಿಹಾಸಿಕ ಚರಿತ್ರೆಗಳನ್ನು ಬರೆಯಿಸಬೇಕೆಂಬುದನ್ನೂ, ಇಂಗ್ಲಿಷು ಭಾಷೆಯಲ್ಲಿ ಹೆಚ್ಚಾದ ವ್ಯಾಮೋಹವನ್ನು ತಗ್ಗಿಸಬೇಕೆಂಬುದನ್ನೂ ಕಾರ್ಯಕ್ರಮದಲ್ಲಿ ಕಾದಂಬರೀ ಗ್ರಂಥಗಳನ್ನು ರಸವತ್ತಾಗಿಯೂ ಭಾವಗರ್ಭಿತವಾಗಿಯೂ ಬರೆಯಿರಿ. ಸಭಾವಾಗ್ಮಿಗಳು ಸಮ್ಮಾನಿಸಿ, ವಿಜ್ಞಾನ ವಿಷಯಗ್ರಂಥಗಳನ್ನು(Scientfic Works) ಆಂಗ್ಲಭಾಷೆಯಿಂದ ಪರಿವರ್ತನ ದ್ವಾರಾ ವೃದ್ಧಿಪಡಿಸಿ, ನಮ್ಮ ಕರ್ಣಾಟಕ ಪರಿಷತ್ಸದಸ್ಯರ ಸಂಖ್ಯೆಯು ಶತಶಃ, ಸಹಸ್ರಶಃ, ಬೆಳೆಯುವಂತೆ ಮಾಡಬೇಕೆಂಬುದೇ ನಮ್ಮ ಮುಖ್ಯೋದ್ದೇಶವಾಗಿರಬೇಕೆಂದು ಪರಾಮರ್ಶಿಸಿದರು. ಮ॥ ರಾ॥ ವೆಂಕಟಕೃಷ್ಣಯ್ಯನವರು ಎಂಟನೆಯ ಸಮ್ಮೇಳನದ ಅಗ್ರಾಸನಾಧಿಪತ್ಯವನ್ನು ವಹಿಸಿ, ಸೂಕ್ಷ್ಮವಾಗಿ ಮೈಸೂರು ದೇಶದಲ್ಲಿ ಆಳಿದ ಮಹಾಸ್ವಾಮಿ ಮುಮ್ಮಡಿ ಕೃಷ್ಣರಾಜ ಒಡೆಯರವರ ಮಹೋತ್ಕೃಷ್ಟವಾದ ಭಾಷಾಸೇವೆಯನ್ನು ಪ್ರಾರಂಭಿಸಿ ದಿವಾನ್ ಸರ್. ಎಂ. ವಿಶ್ವೇಶ್ವರಯ್ಯನವರ ದೇಶಾಭಿಮಾನಭರಿತವಾದ ಸುದ್ದೇಶಗಳಲ್ಲೊಂದಾದ ಕರ್ಣಾಟಕ ಸಾಹಿತ್ಯ ಪರಿಷತ್ಸ್ಥಾಪನದವರೆಗೂ, ನಡೆದ ಭಾಷಾಪರಂಪರಾಭಿವೃದ್ಧಿ ಯನ್ನು ತಿಳಿಸಿ, ಪಾಶ್ಚಾತ್ಯ ಗ್ರಂಥಗಳು ಲೋಕಜ್ಞಾನಕ್ಕವಶ್ಯವಾದುವುಗಳೆಂತಲೂ, ಜಪಾನಿನ ಅಭಿವೃದ್ಧಿಗೆ ಇದೇ ಕಾರಣವೆಂತಲೂ, ಆದದ್ದರಿಂದ ಸರ್ವಥಾ ಜೇನುದುಂಬಿಗಳಂತೆ ಎಲ್ಲಾ ಭಾಷಾಕುಸುಮಗಳಲ್ಲಿರತಕ್ಕ ಗ್ರಂಥಸಾರವೆಂಬ ಜೇನನ್ನು ಕುಡಿದು ತಂದು ಕರ್ಣಾಟಕ ಭಾಷಾಭಿಮಾನಿಗಳೆಂಬ ಜೇನುಹುಳುಗಳು ಈ ದೇಶೀಯರಿಗುಣಿಸಿ ಪರಮೋಪಕಾರಿಗಳಾಗಿರುವುದರಿಂದ ಐಕಮತ್ಯದೊಡನೆ ಜಾತಿದ್ವೇಷ ಮತದ್ವೇಷಗಳನ್ನು ಬಿಟ್ಟು ತಂಡೋಪತಂಡವಾಗಿ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿರಬೇಕೆಂದೂ ಗಂಭೀರೋಪನ್ಯಾಸವನ್ನು ಮಾಡಿದರು. ಕಳೆದ ವರ್ಷದಲ್ಲಿ ಮಹಾಮಹೋಪಾಧ್ಯಾಯ ವಿದ್ವನ್ಮಣಿಗಳಾದ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು ತಾವು ಪರಿಷತ್ಪ್ರಾರಂಭದ ದಶೆಯಲ್ಲಿಯೇ ಬರೆದ ಸದುದ್ದೇಶ ಪಂಚಕವೆಂಬ ವ್ಯಾಸದಭಿಪ್ರಾಯಗಳನ್ನೇ ದೃಢೀಕರಿಸಿ ಭಾಷಾಭಿವೃದ್ಧಿ ಪ್ರಯತ್ನಗಳಿಗೆಲ್ಲ ಶ್ರೇಯಸ್ಸುಂಟಾಗಲೆಂದು ಆಶೀರ್ವದಿಸಿದರು.

ಹೀಗೆ ಅಧ್ಯಕ್ಷ ಸ್ಥಾನದಿಂದಲೂ ವಿದ್ವದ್ವರ್ಯರ ವಿಮರ್ಶೆಗಳಿಂದಲೂ ಸಭಾಸದರ ಸಮಸ್ಯೆಗಳಿಂದಲೂ ಪೂರ್ವಪಕ್ಷ ಸಮಾಧಾನಗಳಿಂದಲೂ ಇನ್ನೂ ಬಗೆಬಗೆಯಾಗಿ ಪರಿಷತ್ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟು ತೋರ್ಪಡಿಸುವ ಉತ್ತಮ ವ್ಯಾಸಗಳಿಂದಲೂ, ನಮ್ಮೊ ಪರಿಷತ್ತಿನ ಉದ್ದೇಶಗಳು ಸಂಪೂರ್ಣ ಫಲವನ್ನು ಹೇಗೆ ಹೊಂದತಕ್ಕದ್ದೆಂದು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವಾಗ ಅವುಗಳನ್ನೇ ಮತ್ತೆ ಹೇಳುವುದು ಪಿಷ್ಟಪೇಷಣ ನ್ಯಾಯವಾಗಿರುತ್ತದೆ.

❖❖

೧೧ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಬೆನಗಲ್ ರಾಮರಾವ್



ಕವಿ, ನಾಟಕಕಾರ, ಕೋಶರಚಕ, ಇತಿಹಾಸ ಕೃತಿ ಸಂಪಾದಕರಾದ ಬೆನಗಲ್ ರಾಮರಾಯರು 'ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ' ಎಂಬ ಕವಿತೆಯೊಂದಿಗೆ ನಾಡಿನಾದ್ಯಂತ ಮನೆಮಾತಾದವರು. ಮಂಜುನಾಥಯ್ಯ–ರಮಾಬಾಯಿ ದಂಪತಿಗಳಿಗೆ ಜನಿಸಿದ ಇವರು. ಮುಲ್ಕಿ, ಮಂಗಳೂರು, ಪುತ್ತೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಜೀವವಿಜ್ಞಾನ, ಭೂಗರ್ಭಶಾಸ್ತ್ರ ಮತ್ತು ಕನ್ನಡ ವಿಷಯಗಳಲ್ಲಿ ಬಿಎ ಪದವಿ ಗಳಿಸಿದರು. ೧೯೦೦ರಲ್ಲಿ ಮದರಾಸು ವಿಶ್ವವಿದ್ಯಾಲಯಗಳಲ್ಲಿ ಎಂ.ಎ. ಪದವಿ ಗಳಿಸಿದರು. ಮುಂಬಯಿ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಬಿ ಪದವಿ ಪಡೆದರು.

ಸುವಾಸಿನಿ ಪತ್ರಿಕೆಯ ಸಂಪಾದಕರಾಗಿ ವೃತ್ತಿ ಜೀವನಕ್ಕೆ ಬಂದವರು ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಕನ್ನಡ ಅಧ್ಯಾಪಕರಾಗಿ ೧೯೦೨ರಲ್ಲಿ ಮುಂಬಯಿ ಸರಕಾರದಲ್ಲಿ ಭಾಷಾಂತರಕಾರರಾಗಿ ಸೇರಿದರು. ೧೯೧೭ರಿಂದ ಮದರಾಸು ಸರ್ಕಾರದಲ್ಲಿ ಭಾಷಾಂತರಕಾರರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಸೇವೆ: ಮದರಾಸು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾಗಿದ್ದರು. ಪತ್ರಿಕೋದ್ಯಮದಲ್ಲಿ ಆಸಕ್ತಿ ಹೊಂದಿದ ಇವರು ಸುವಾಸಿನಿ, ವಾಗ್ಭೂಷಣ ಪತ್ರಿಕೆಗಳ ಸಂಪಾದಕರಾಗಿದ್ದರು. ಸುಗುಣವಿಲಾಸ ನಾಟಕಸಭೆಯ ಕನ್ನಡ ವಿಭಾಗದ ಕಾರ್ಯದರ್ಶಿ ಆಗಿದ್ದರೂ ಅಭಿನಯದಲ್ಲೂ ಭಾಗವಹಿಸುತ್ತಿದ್ದರು. ಕರ್ನಾಟಕದ ನಕ್ಷೆಯನ್ನು ರೂಪಿಸಿದರು.

೧೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ೧೯೨೫ರಲ್ಲಿ ಆಯ್ಕೆಯಾದರು. ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾದ ಇವರು ಕನ್ನಡಿಗರ ಏಕೀಕರಣಕ್ಕೆ ಶ್ರಮಿಸಿದರು.

ಪುರಾಣನಾಮ ಚೂಡಾಮಣಿ
ಕೈಫಿಯತ್ತುಗಳ ಸಂಪಾದನೆ
ಇರಾವತಿ
ರಮಾಮಾಧವ (ಕಾದಂಬರಿ)
ಸತ್ಯರಾಜ ಪೂರ್ವದೇಶ ಚರಿತ್ರೆ (ತೆಲುಗಿನಿಂದ)
ಅವಿಮಾರಕ (ಸಂಸ್ಕೃತದಿಂದ)
ಸುಭದ್ರಾವಿಜಯ (ಮರಾಠಿಯಿಂದ)
ಕಲಹಪ್ರಿಯಾ (ಬಂಗಾಳಿಯಿಂದ) ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ಬೆನಗಲ್ ರಾಮರಾಯರು ೮–೫–೧೯೪೫ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೧೧,
ಅಧ್ಯಕ್ಷರು : ಬೆನಗಲ್ ರಾಮರಾವ್
ದಿನಾಂಕ ೯, ೧೦, ೧೧ ಮೇ ೧೯೨೫
ಸ್ಥಳ : ಬೆಳಗಾವಿ

ಪರಿಷತ್ತಿನ ಸ್ಥಾಪನೆ ವಿಚಾರ

ಮಿತ್ರರೇ! ಭಾಷಾಪೋಷಕರಲ್ಲಿಯೂ ಕಲಾಭಿಮಾನಿಗಳಲ್ಲಿಯೂ ಅಗ್ರಗಣ್ಯರೆನಿಸಿದ ಮೈಸೂರು ಸಂಸ್ಥಾನದ ಮಹಾಪ್ರಭುಗಳಾದ **ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್**, ಜಿ.ಸಿ.ಎಸ್.ಐ. ಮಹಾಸ್ವಾಮಿಗಳವರು ಮತ್ತು ಹಿಂದೆ ದಿವಾನಗಿರಿಯನ್ನು ವಹಿಸಿದ್ದ ದೇಶಾಭಿಮಾನಿಗಳೂ ರೂಪದರ್ಶಿಗಳೂ ರಾಜನೀತಿ ಪ್ರವೀಣರೂ ಪ್ರತಿಭಾಸಂಪನ್ನರೂ ಎನಿಸಿದ **ಸರ್ ಎಂ. ವಿಶ್ವೇಶ್ವರಯ್ಯನವರ** ಔದಾರ್ಯ ಪುರಸ್ಕೃತವಾದ ಒತ್ತಾಸೆಯಿಂದ ಅಭ್ಯುದಯಾಕಾಂಕ್ಷಿಯಾದ ಈ ಸಂಸ್ಥೆಯು ಹತ್ತು ವರ್ಷಗಳ ಹಿಂದೆ ಬೆಂಗಳೂರು ಪಟ್ಟಣದಲ್ಲಿ ಸ್ಥಾಪಿತವಾದುದೆಂಬುದು ತಮಗೆ ಹೊಸ ವಿಷಯವಲ್ಲ. ೧೯೧೫ನೆಯ ವರ್ಷದ ಮೇ ತಿಂಗಳಲ್ಲಿ ಬೆಂಗಳೂರು ಪಟ್ಟಣದಲ್ಲಿ ನಡೆದ ಪ್ರಥಮ ಸಮಾರಂಭ ಮಹೋತ್ಸವವನ್ನು ಅನುಭವಿಸುವ ಭಾಗ್ಯವನ್ನು ಪಡೆದಿದ್ದ ನಾವು ಆ ಸುದಿನವನ್ನು ಪೂಜನೀಯವಾದ ನಮ್ಮ ಮಾತೃಭೂಮಿಯ ಮತ್ತು ಅದರ ಪುರಾತನವಾದ ಸಾಹಿತ್ಯದ ಇತಿಹಾಸದಲ್ಲಿ ಚಿರಸ್ಮರಣೀಯವಾದ ದೊಡ್ಡ ಹಬ್ಬದ ದಿನವೆಂದು ಭಾವಿಸದಿರಲಾರೆವು. ಅಂದಿನ ಮಹೋತ್ಸವ ವೈಭವವೂ, ಕರ್ಣಾಟಕ ನಾನಾ ಭಾಗಗಳಿಂದ ಬಿಜಯಮಾಡಿಸಿ ಆ ಕಾಲದಲ್ಲಿ ಶ್ರೀಮನ್ಮಹಾರಾಜರವರ ಸರಕಾರದಿಂದ ಆತಿಥ್ಯವನ್ನು ಕೈಕೊಂಡ ಅನೇಕಾನೇಕ ಪಂಡಿತೋತ್ತಮರ ಮತ್ತು ಸಮಾಜ ನಾಯಕರ ದೊಡ್ಡ ಸಮೂಹವೂ, ಮೈಸೂರು ಸಂಸ್ಥಾನದ ಮಹೋನ್ನತಾಧಿಕಾರಿವರ್ಗವೂ ಇತರ ನಾಗರಿಕ ಮಹಾಶಯರೂ ಏಕೀಭವಿಸಿ ಅಲ್ಲಿ ನೆರೆದಿದ್ದವರೆಲ್ಲರನ್ನೂ ನಿರ್ವಿಶೇಷವಾಗಿ ಗೌರವಿಸಿ ನಡೆಯಿಸಿದ ಆದರಾತಿಥ್ಯವೂ, ಅಂದಿನ ಸಭಾಧ್ಯಕ್ಷರ ವಿದ್ವತ್ತಾ ಪ್ರಚಾರವೂ ಗಂಭೀರವೂ ಎನಿಸಿದ ಪ್ರಾರಂಭೋಪನ್ಯಾಸವೂ, ಭಿನ್ನ ಭಿನ್ನ ಪ್ರಾಂತದ ಕರ್ಣಾಟಕಾಭಿಮಾನಿಗಳ ಪ್ರೌಢಿಮೆಯನ್ನೊಳಗೊಂಡ ಉಪನ್ಯಾಸಗಳೂ ಲೇಖನಗಳೂ ಸಮ್ಮೇಳನದ ಉಪಕ್ರಮದಿಂದ ಉಪಸಂಹಾರ ಪರ್ಯಂತ ಏಕರೂಪವಾಗಿ ತುಂಬಿ ತುಳುಕುತ್ತಿದ್ದ ಉತ್ಸಾಹ ರಸವೂ, ಉಪಸಂಹಾರ ಕಾಲದಲ್ಲಿ ನಮ್ಮ ನಮ್ಮ ಸಾಮಾಜಿಕ ವ್ಯಾವಹಾರಿಕ ಮತ್ತು ಮತಸಂಬಂಧಿಗಳಾದ ವೈಷಮ್ಯಗಳು ಎಷ್ಟೇ ಇದ್ದರೂ,

> "ಕರ್ಣಾಟಕವು ಅವಿಭಕ್ತವಾದ ಒಂದೇ ಪ್ರಾಂತವಾಗಿರುವುದರಿಂದ ಮಾತೃ
> ಭಾಷೆಯ ಮತ್ತು (ಸಾಹಿತ್ಯವು ಆ ಆ ರಾಷ್ಟ್ರದ ಅಥವಾ ಜನಪದದ ಶ್ರೇಷ್ಠತೆಯ
> ಪ್ರತಿಬಿಂಬವಾಗಿರುವುದರಿಂದ) ಯಶಸ್ವಿನಿಯಾದ ನಮ್ಮ ಮಾತೃಭೂಮಿಯ
> ಉನ್ನತಿಗಾಗಿ ಕೆಲಸಮಾಡುವ ಸಂದರ್ಭದಲ್ಲಿ ಮನಃಪೂರ್ವಕವಾಗಿ ಒಬ್ಬರಿ
> ಗೊಬ್ಬರು ನಿರ್ವಂಚನೆಯಾಗಿ ಸಹಾಯಮಾಡುವುದು ನಮ್ಮ ಮುಖ್ಯ ಕರ್ತವ್ಯ"

ವೆಂಬ ಧೃಢ ಭಾವನೆಯು ಮನಸ್ಸಿನಲ್ಲಿ ಮೂರ್ತಿಭವಿಸಿ, **'ಪ್ರತಿ ವರ್ಷವೂ ಇದೇ ಉದ್ದೇಶದಿಂದಲೇ ಬಾರಿಬಾರಿಗೂ ನಾವೆಲ್ಲರೂ ಸೇರಬೇಕು'** ಎಂಬ ಆಶಯವನ್ನಿಟ್ಟುಕೊಂಡು ಚಿರಕಾಲಾವಸ್ಥಾಯಿಯೂ ಪ್ರೇಮಭರಿತವೂ ಎನಿಸಿದ ಸದಭಿಸಂಧಿಯಿಂದ ಆತಿಥೇಯರನ್ನು ಬೀಳ್ಕೊಟ್ಟು ತೆರಳಿದುದೂ- ಇವೆಲ್ಲವೂ ಈಗಲೂ ನಮ್ಮ ಕಣ್ಣೆದಿರಿಗೆ ನಡೆಯುವಂತಿರುವುದು.

ಹತ್ತು ವರುಷಗಳ ಸಾಧನೆ

ಮೇಲೆ ಹೇಳಿದಂತೆ ಪರಿಷತ್ತು ಸ್ಥಾಪಿತವಾಗಿ ಇಂದಿಗೆ ಹತ್ತು ವರುಷಗಳಾದುವು. ಆದುದರಿಂದ ಪರಿಷತ್ತು ಇದುವರೆಗೆ ಎಷ್ಟರಮಟ್ಟಿಗೆ ಕೆಲಸಮಾಡಿದೆ? ಅದರ ಆಶೋತ್ತರಗಳಾವುವು? ಅವು ಎಷ್ಟರಮಟ್ಟಿಗೆ ನೆರವೇರಿವೆ? ಆಡಚಣೆಗಳು ಒದಗಿರುವ ಪಕ್ಷದಲ್ಲಿ, ಅವು ಏತರ ಮೂಲಕ ಸಂಭವಿಸಿದುವು? ಎಂಬುದನ್ನು- ಸಂಗ್ರಹವಾಗಿ ಹೇಳುವುದಾದರೆ. ಪರಿಷತ್ತು ಈಗ ಯಾವ ಸ್ಥಿತಿಯಲ್ಲಿದೆ? ಎಂಬುದನ್ನು- ಕಂಡುಹಿಡಿದು ಆತಂಕಗಳನ್ನು ಪರಿಹರಿಸುವುದಕ್ಕೂ ಕಾರ್ಯಗಳು

ಮತ್ತಷ್ಟು ಶೀಘ್ರವಾಗಿ ನೇರವೇರುವುದಕ್ಕೂ ಯಾವ ಉಪಾಯಗಳನ್ನು ಕೈಕೊಳ್ಳತಕ್ಕುದೆಂದು ತಿಳಿಯಲು ನಮ್ಮಲ್ಲಿ ಕೆಲವರಿಗೆ ಕುತೂಹಲವಿರುವುದು ಸಹಜ. ಈ ವಿಷಯವನ್ನು ತಿಳಿಯಬೇಕಾದರೆ ಪ್ರಥಮ ಸಮ್ಮೇಳನ ಕಾಲದಲ್ಲಿ ಅಧ್ಯಕ್ಷರಾಗಿದ್ದ ದೇಶ ಭಾಷಾಭಿಮಾನಿಗಳಾದ ರಾಜಮಂತ್ರ ಪ್ರವೀಣ ದಿವಂಗತ ಶ್ರೀಮಾನ್ ಎಚ್.ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್., ಸಿ.ಐ.ಇ. ಅವು ಮಾಡಿದ ಉಪನ್ಯಾಸವನ್ನೂ ಅವರು ನಮಗೆ ತಿಳಿಯಹೇಳಿದ ಉದ್ದೇಶಗಳನ್ನೂ **"ಕರ್ನಾಟಕ ಸಾಹಿತ್ಯ ಪರಿಷತ್ತು"** ಎಂಬ ಶಾಶ್ವತವಾದ ಸಂಘವನ್ನು ಏರ್ಪಡಿಸುವಲ್ಲಿ ಗೊತ್ತುಪಡಿಸಲಾದ ನಿಬಂಧನೆಗಳನ್ನೂ ಪರ್ಯಾಲೋಚಿಸತಕ್ಕದ್ದು ಆವಶ್ಯಕವಾಗಿರುವುದು. ಪ್ರಥಮ ಸಮ್ಮೇಳನದ ಕಾಲದಲ್ಲಿ ನಂಜುಂಡಯ್ಯನವರು ಉದಾತ್ತವಾದ ತಮ್ಮ ಉಪನ್ಯಾಸದಲ್ಲಿ,

"ಕರ್ನಾಟಕ ದೇಶವು ರಾಜಕೀಯ ವಿಷಯಗಳಲ್ಲಿ ಮೂರು ನಾಲ್ಕು ಸರಕಾರದವರಿಗೆ ಅಧೀನವಾಗಿದ್ದರೂ ಬೇರೆ ಬೇರೆಯಾಗಿ ಕಾಣುವ ಕನ್ನಡ ನಾಡುಗಳಲ್ಲಿಯೂ ಕನ್ನಡ ಮಾತನಾಡುವವರಲ್ಲಿಯೂ ಕೆಲವು ಸಾಮಾನ್ಯ ಲಕ್ಷಣಗಳು ಕಾಣಬರುತ್ತವೆ; ಆದುದರಿಂದ ಭಾಷಾಭಿವೃದ್ಧಿ, ಗ್ರಂಥರಚನೆ– ಇವುಗಳ ವಿಷಯದಲ್ಲಿ ಕನ್ನಡಿಗರೆಲ್ಲರನ್ನೂ ಒಟ್ಟುಗೂಡಿಸಲಾದರೆ ವಿಶೇಷ ಪ್ರಯೋಜನವುಂಟು. ಈ ಉದ್ದೇಶದಿಂದಲೇ ಕನ್ನಡ ಭಾಷಾಭಿವೃದ್ಧಿಯಲ್ಲಿ ಆಸಕ್ತರಾಗಿಯೂ ಸಮರ್ಥರಾಗಿಯೂ ರಾಯಭಾರವನ್ನು ವಹಿಸಲು ತಕ್ಕವರಾಗಿಯೂ ಇರುವ ಜನಗಳು ಸೇರಿ ಅನ್ಯೋನ್ಯ ಸಹಾಯದಿಂದ ಒಟ್ಟುಗೂಡಿ ಕೆಲಸಮಾಡತಕ್ಕ ಒಂದು ಸಮ್ಮೇಳನವನ್ನು ಏರ್ಪಾಡು ಮಾಡಲಾಗಿದೆ"

ಎಂಬುದಾಗಿ ಅಪ್ಪಣೆ ಕೊಡಿಸಿದರು. ಬಳಿಕ, ಅವರು ಆ ಉದ್ದೇಶವನ್ನು ನೇರವೇರಿಸುವುದಕ್ಕಾಗಿ ಯಾವ ರೀತಿಯಿಂದ ನಾವು ವರ್ತಿಸತಕ್ಕುದೆಂಬ ಬಗ್ಗೆ ಹಲವು ಸೂಚನೆಗಳನ್ನು ಕೊಟ್ಟು ಹೃದಯಂಗಮವಾದ ತಮ್ಮ ಉಪನ್ಯಾಸವನ್ನು ಮುಗಿಸುವಲ್ಲಿ.

"ಈ ಕನ್ನಡ ಭಾಷೆಯನ್ನು ಪುರೋಭಿವೃದ್ಧಿಗೆ ತಂದು ಊರ್ಜಿತಪಡಿಸುವುದಕ್ಕೆ ನಮ್ಮ ಶ್ರೀಮನ್ಮಹಾರಾಜರವರು ತಮ್ಮ ದಿವ್ಯಚಿತ್ತದಲ್ಲಿ ನಿಜವಾದ ಅಭಿಮಾನವನ್ನೂ ಆದರಾತಿಶಯವನ್ನೂ ಧರಿಸಿದವರಾಗಿ ತಾವೂ ತಮ್ಮ ಸರ್ಕಾರದವರೂ ಸಾಧ್ಯವಾದ ಕೆಲವು ಸಹಾಯಗಳನ್ನು ಕಲ್ಪಿಸಿಕೊಡಲು ಸಿದ್ಧರಾಗಿರುವರೆಂದು ನಾನು ದೃಢವಾಗಿ ಹೇಳುತ್ತೇನೆ." ಎಂಬುದಾಗಿ ಭರವಸೆಕೊಟ್ಟರು. ಅವರು ಮಾಡಿದ ಹಲವು ಸೂಚನೆಗಳು ಸಾಹಿತ್ಯ ಪರಿಷತ್ತಿನ ನಿಬಂಧನೆಗಳಲ್ಲಿ ಗರ್ಭೀಕೃತವಾಗಿಯೇ ಇವೆಯಾದುದರಿಂದ ಅವುಗಳನ್ನು ಕುರಿತು ನಾನು ಇಲ್ಲಿ ಪುನಃ ವಿವರಿಸಲು ಅಪೇಕ್ಷಿಸುವುದಿಲ್ಲ. ತಥಾಪಿ, ಇಂತಹ ಸಮ್ಮೇಳನಗಳ ಫಲಿತಾಂಶ ರೂಪವಾಗಿ ಅವರು ವ್ಯಕ್ತಪಡಿಸಿದ ಆಶೋತ್ತರಗಳು ಬಹಳ ಮಟ್ಟಿಗೆ ಸಫಲವಾಗಿರುವುವೆಂಬ ನನ್ನ ಅಭಿಪ್ರಾಯವನ್ನು ಮಾತ್ರ ಇಲ್ಲಿ ಹೇಳದಿರಲಾರೆನು. ಹತ್ತು ವರ್ಷಗಳ ಹಿಂದೆ ಬೆಂಗಳೂರಲ್ಲಿ ನಾವು ಮೊದಲನೆಯ ಬಾರಿ ಕಲೆತಿದ್ದಾಗ ನಮ್ಮನಮ್ಮೊಳಗೆ ಇರುತ್ತಿದ್ದ ಪ್ರೀತಿ ವಿಶ್ವಾಸಗಳು ಅಂದಿನಿಂದೀಚೆಗೆ ಶತಾಧಿಕವಾಗಿ ಬೆಳೆದಿರುವುವು; ಹಾಗೆಯೇ, ನಮಗೆ ನಮ್ಮ ಪರಸ್ಪರ ಭಾವನೆಗಳಲ್ಲಿ ಗೌರವವುಂಟಾಗಿರುವುದು ಮಾತ್ರವೇ ಅಲ್ಲದೆ ಒಬ್ಬರು ಮತ್ತೊಬ್ಬರ ಲೋಪಗಳನ್ನು ಅಷ್ಟಾಗಿ ಗಮನಿಸದಿರಲು ಕೂಡ ಕಲಿತಿರುವೆವೆಂದು ಹೇಳಬಲ್ಲೆನು. ಮತ್ತು ನಾವೆಲ್ಲರೂ ಒಂದೇ ಜನಾಂಗದವರೂ ಒಂದೇ ಉದ್ದೇಶವುಳ್ಳವರೂ ಆಗಿರುವೆವೆಂಬ ಭಾವನೆಯು ಕೂಡ ಸ್ಥಿರಪಟ್ಟಿರುವುದು, ಇಂತಹ ಭಾವನೆಯು ಹಿಂದೆ ಯಾವಾಗಲೂ ನಮ್ಮಲ್ಲಿ ಇರಲೇ ಇಲ್ಲ. ಹೀಗಾದುದರಿಂದ ಇದುವರೆಗೆ ಇದರಲ್ಲಿ ನಮಗೆ ದೊರೆತ ಯಶಸ್ಸು ಅಲ್ಪವಾದುದು ಅಥವಾ ಕ್ಷಣಿಕವಾದುದೆಂದು ಪುರೋಭಾಗಿಯಾದ ಯಾವ ವಿಮರ್ಶಕನೂ ಹೇಳಲು ಧೈರ್ಯಗೊಳ್ಳಲಾರನೆಂದು ನನಗೆ ದೃಢವಾದ ನಂಬುಗೆಯಿದೆ. ಇನ್ನು, ಶ್ರೀಮನ್ಮಹಾರಾಜರವರ ಅಭಿಮಾನವನ್ನೂ ಆದರಾತಿಶಯವನ್ನೂ ವಿಚಾರಿಸುವಲ್ಲಿ, ಶ್ರೀ ನಂಜುಂಡಯ್ಯನವರು ನಮಗೆ ಹೇಳಿದ ಭರವಸೆಗಳಿಗೆ ನಿದರ್ಶನಗಳು ಹೇರಳವಾಗಿ ದೊರೆತಿವೆ. ವಾಸ್ತವವಾಗಿ ಹೇಳುವುದಾದರೆ, ಈ ಸಂಸ್ಥೆಯು ಸ್ಥಾಪಿತವಾದಂದಿನಿಂದ ಇಂದಿನವರೆಗೂ ಶ್ರೀಮನ್ಮಹಾರಾಜರವರ ಸರಕಾರದ ಉದಾರವಾದ ದ್ರವ್ಯ ಸಹಾಯದಿಂದಲೇ ನಡೆಯುತ್ತಿರುವುದಲ್ಲದೆ ಅಷ್ಟಾಗಿ ಮಹಾಜನರ ದ್ರವ್ಯ ಸಹಾಯದಿಂದಲ್ಲ. ಪರಿಷತ್ತಿನ ಯಾವನೊಬ್ಬ ಸದಸ್ಯವಾಗಲಿ ಶ್ರೀಮನ್ಮಹಾರಾರವರ ಸರಕಾರದ ಈ ಆದರಾತಿಶಯವನ್ನು ಎಂದಿಗೂ ಮರೆಯಲಾರೆನು; ಮತ್ತು ಇದನ್ನು ಕುರಿತು ಕನ್ನಡಿಗರ ಅಂತರಂಗಗಳಲ್ಲಿ ತುಂಬಿ ತುಳುಕುತಿರುವ ಕೃತಜ್ಞತೆಯನ್ನು ಬಾಯಿಮಾತಿನಿಂದ ಸ್ಮರಿಸುವುದರ ಮೂಲಕ ಉಚಿತ ರೀತಿಯಿಂದ ವ್ಯಕ್ತಪಡಿಸಲು ಸಾಧ್ಯವಲ್ಲ.

ಸಹೋದರರೇ! ಆ ಕಾಲದಲ್ಲಿ ಏರ್ಪಟ್ಟ ನಿಬಂಧನೆಗಳನ್ನು ಪರ್ಯಾಲೋಚಿಸಲಾಗಿ, ಪರಷತ್ತಿನವರು ನೆರವೇರಿಸಬೇಕೆಂದು ಕೈಕೊಂಡ ಉದ್ದೇಶಗಳು ಹದಿಮೂರು ಆಗಿದ್ದುವೆಂದು ಕಂಡುಬರುತ್ತದೆ. ಆ ಬಳಿಕ ಇವುಗಳಲ್ಲಿ ಮುಖ್ಯವಾದ ಯಾವ ಬದಲಾವಣೆಗಳೂ ಇಂದಿನವರೆಗೆ ಆಗಿಲ್ಲವೆಂದು ನಾನು ನಂಬುತ್ತೇನೆ. ಇವುಗಳೊಳಗೆ ಹದಿಮೂರನೆಯದು ಉಳಿದುದನ್ನೇ ಸಂಗ್ರಹಿಸಿ ಹೇಳತಕ್ಕುದಾಗಿರುವುದರಿಂದ ಅದನ್ನು ಬಿಟ್ಟುಬಿಟ್ಟರೆ ಸ್ಪಷ್ಟವಾಗಿ ವಿವರಿಸಲಾದ ಹನ್ನೆರಡು ಮಾತ್ರವೇ ಉಳಿಯುವುವು.

ಇವುಗಳ ವಿಷಯದಲ್ಲಿ ಕೂಲಂಕಷವಾಗಿ ಮಾತನಾಡಲು ನಾನು ಅಪೇಕ್ಷಿಸುವುದಲ್ಲ; ಆ ವಿಷಯದಲ್ಲಿ ವಿಸ್ತಾರವಾಗಿ ಭಾಷಣ ಮಾಡುವುದಕ್ಕೆ ಬೇಕಾದಷ್ಟು ವರದಿಗಳನ್ನೂ ಪ್ರಕಟನೆಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸುವುದಕ್ಕೆ ಸಾಕಾದಷ್ಟು ಸಮಯವೂ ನನಗೆ ದೊರೆಯಲಿಲ್ಲ. ಆದುದರಿಂದ ಅವುಗಳನ್ನು ಆಮೂಲಾಗ್ರವಾಗಿ ಪರಾಮರ್ಶಿಸಲು ಬೇಕಾದಷ್ಟು ವಿರಾಮವುಳ್ಳವರಿಗೆ ಆ ವಿಷಯಗಳನ್ನು ಪರಿಶೋಧನೆ ಮಾಡಿ ತಮ್ಮ ಅಭಿಪ್ರಾಯಗಳನ್ನು ಅಧಾರಪುರಸ್ಸರವಾಗಿ ನಿರೂಪಿಸುವ ಸಲುವಾಗಿ ಬಿಟ್ಟು, ಒಂದೊಂದು ಉದ್ದೇಶವನ್ನೂ ಕುರಿತು ಸಂಗ್ರಹವಾಗಿ ಕೆಲವು ಮಾತುಗಳನ್ನು ಹೇಳುವೆನು :-

೧. **"ಕರ್ಣಾಟಕ ವ್ಯಾಕರಣ, ಕರ್ಣಾಟಕ ಭಾಷಾ ಚಾರಿತ್ರ, ಕರ್ಣಾಟಕ ನಿಘಂಟುಗಳು ಇವುಗಳನ್ನು ಪ್ರೌಢಮಾರ್ಗದಲ್ಲಿ ಬರೆಯಿಸುವುದು ಅಥವಾ, ಹಾಗೆ ಬರೆಯುವವರಿಗೆ ಸಹಾಯ ಮಾಡುವುದು"** ಎಂಬ ಮೊದಲನೆಯ ಉದ್ದೇಶವು. ಶ್ಲಾಘ್ಯ ರೀತಿಯಿಂದ ಪರಿಷ್ಕೃತವಾಗಿ ಪ್ರಕಟಗೊಂಡಿರುವ ಶಬ್ದಮಣಿದರ್ಪಣ ಮತ್ತು ಪರಿಷತ್ಪತ್ರಿಕೆಯಲ್ಲಿ ಬಂದಿರುವ ಬುಕ್ಕರಾಯ ಚರಿತ್ರೆ (ಹಂಡೇ ಅನಂತಪುರದ ಚರಿತ್ರೆ). ಕರ್ಣಾಟಕ ರಾಜ್ಯ ವೃತ್ತಾಂತ, ಆರ್ಕಾಟು ಸಂಸ್ಥಾನದ ಕೈಫಿಯತ್ತು, ಮಹಮ್ಮದ್ ಗವಾನನ ಜೀವನಚರಿತ್ರೆ- ಇವುಗಳನ್ನು ಬಿಟ್ಟರೆ, ಇದಕ್ಕೂ ಹೆಚ್ಚಾಗಿ ಬೇರೆ ಯಾವುದಾದರೂ ಕೆಲಸವು ನಡೆದಿರುವುದೆಂದು ಹೇಳಲು ಸಾಧ್ಯವಿಲ್ಲ.

೨. **"ನವೀನಶಾಸ್ತ್ರ ವಿಷಯಕವಾದ ಕರ್ಣಾಟಕ ಗ್ರಂಥಗಳಲ್ಲಿ ಪ್ರಯೋಗಿಸುವುದಕ್ಕೆ ಯೋಗ್ಯವಾದ ಪಾರಿಭಾಷಿಕ ಶಬ್ದಗಳ ನಿಘಂಟುವೊಂದನ್ನು ಪ್ರಕಟಗೊಳಿಸುವಿಕೆ"ಯೇ ಎರಡನೆಯ ಉದ್ದೇಶವು.** ಈ ವಿಷಯದಲ್ಲಿ ಕೆಲವು ಕಾಲ ಪರ್ಯಂತ ಪರಿಷತ್ತಿನೊಡನೆ ಸಾಕ್ಷಾತ್ಸಂಬಂಧವುಳ್ಳವರಾಗಿದ್ದ ಶ್ರೀಮಾನ್ ರಾಜಗೋಪಾಲ ಚಕ್ರವರ್ತಿಯವರಿಂದ ರಚಿತವಾಗಿ ಮೈಸೂರು ಸರಕಾರದವರ ಮೂಲಕ ಪ್ರಚುರಗೊಂಡಿರುವ ಕೋಶದ ಹೊರತು ನಾವು ಮಾಡಿದ ಕೆಲಸವೆಂದು ಹೆಮ್ಮೆಗೊಳ್ಳತಕ್ಕ ಮತ್ತಾವುದೂ ಆಗಿರುವುದಿಲ್ಲ,

೩. **"ತತ್ತ್ವವಿಚಾರ, ಭೌತಿಕಶಾಸ್ತ್ರ ಚರಿತ್ರೆ ಸಾಹಿತ್ಯ ಇದೇ ಮೊದಲಾದ ವಿಷಯಗಳನ್ನು ಕುರಿತ ಗ್ರಂಥಗಳನ್ನು ಬರೆಯುವುದಕ್ಕೆ ಪ್ರೋತ್ಸಾಹವನ್ನುಂಟು ಮಾಡುವುದು ಮತ್ತು ಅವುಗಳನ್ನು ಪ್ರಕಟಿಸುವುದು"** ಈ ಮೂರನೆಯ ಉದ್ದೇಶವು ಸ್ವಲ್ಪ ಮಟ್ಟಿಗೆ ನೆರವೇರಿರುವುದು. ಪರಿಷತ್ತಿನಿಂದ ಪ್ರಕಟಿತವಾದ 'ಜೇಮ್ಸ್ ಗಾರ್‌ಫೀಲ್ಡರವರ ಜೀವಿತ ಚರಿತ್ರೆ'ಯು ವಾಸ್ತವವಾಗಿಯೂ ಹೃದಯಂಗಮವೂ ಶ್ಲಾಘ್ಯವೂ ಆಗಿರುವುದು. ತತ್ತ್ವಶಾಸ್ತ್ರ ಭೌತಿಕ ಶಾಸ್ತ್ರಗಳ ವಿಷಯವಾಗಿ ಯಾವ ಗ್ರಂಥಗಳೂ ಪ್ರಕಟವಾದಂತೆ ನನಗೆ ತೋರಲಿಲ್ಲ. ಆದರೆ 'ಕರ್ಣಾಟಕ ವರ್ಣಮಾಲೆಯ ಉತ್ಪತ್ತಿ ಮತ್ತು ಚರಿತ್ರೆ' ಗಳನ್ನು ಕುರಿತು ಬರೆದ ಎರಡು ಲೇಖನಗಳು ನನ್ನ ದೃಷ್ಟಿಗೆ ಬಿದ್ದಿವೆ. ಇನ್ನು, ಪುಸ್ತಕ ರೂಪದಲ್ಲಿ ಪ್ರಚುರಗೊಳ್ಳದಿದ್ದರೂ ಪತ್ರಿಕೆಯಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಮತ್ತು ಕವಿಗಳು" ಮುಂತಾದ ವಿಷಯಕವಾದ ಲೇಖನಗಳು ಕೇವಲ ಹೃದಯಂಗಮವಾಗಿರುವುದೆಂದು ನಾನು ಹೇಳದಿರಲಾರೆನು.

೪. **"ಕರ್ಣಾಟಕ ಭಾಷೆಗೂ ಕರ್ಣಾಟಕ ಗ್ರಂಥಗಳಿಗೂ ಸಂಬಂಧಪಟ್ಟ ವಿವಿಧ ಚರ್ಚ್ಯಾಂಶಗಳನ್ನು ವಿಚಾರ ಪೂರ್ವಕವಾಗಿ ವ್ಯವಸ್ಥೆ ಮಾಡುವುದು"** ಎಂಬುದು ನಾಲ್ಕನೆಯ ಉದ್ದೇಶವು. ಇದಕ್ಕನುಗುಣವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯದ ವಿಷಯವಾಗಿ ಅನೇಕ ಚರ್ಚೆಗಳೂ ಸಿದ್ಧಾಂತಗಳೂ ಆಗಾಗ ಪರಿಷತ್ಪತ್ರಿಕೆಯಲ್ಲಿ ಮುದ್ರಿತವಾಗುತ್ತಲಿರುವುದು ಶುಭ ಪ್ರಾರಂಭವೇ ಸರಿ. ಈ ವಿಷಯದಲ್ಲಿ ನೃಪತುಂಗ, ಲಕ್ಷ್ಮೀಶ ಮುಂತಾದ ಸುಪ್ರಸಿದ್ಧ ಗ್ರಂಥಕರ್ತರ ಮತ್ತು ಅವರ ಗ್ರಂಥಗಳ ವಿಷಯವಾದ ಪ್ರೌಢಲೇಖನಗಳೇ ನಿದರ್ಶನವಾಗಿರುವುವು.

೫. **"ಇತರ ಭಾಷೆಯಲ್ಲಿರುವ ಉತ್ತಮ ಗ್ರಂಥಗಳನ್ನು ಕನ್ನಡಿಸಿ ಪ್ರಕಟಿಸುವುದು"** ಎಂಬ ಐದನೆಯ ಉದ್ದೇಶವು ಭಾಸ ಮಹಾಕವಿಯ "ದೂತವಾಕ್ಯ"ವೆಂಬ ಏಕಾಂಕ-ನಾಟಕವನ್ನು ಕನ್ನಡಿಸಿ ಪ್ರಚುರಗೊಳಿಸಿರುವುದರ ಮೂಲಕ ನಿರ್ವರ್ತಿತವಾದಂತೆ ಭಾವಿಸಬೇಕಾಗಿರುವುದು.

೬. **"ಉತ್ಕೃಷ್ಟವಾದ ಪ್ರಾಚೀನ ಕಾವ್ಯಗಳನ್ನೂ ಕನ್ನಡ ಸಂಸ್ಥಾನಗಳ ಚರಿತ್ರೆಗಳನ್ನೊಳಕೊಂಡಿರುವ ಗ್ರಂಥಗಳನ್ನೂ ಕ್ರೋಢೀಕರಿಸಿ ಅವುಗಳನ್ನು ಪರಿಷ್ಕರಿಸಿ ಪ್ರಕಟಿಸುವುದು ; ಮತ್ತು ಕನ್ನಡ ನಾಡುಗಳ ಪೂರ್ವಸ್ಥಿತಿಯನ್ನು ವಿಶದಗೊಳಿಸುವ ವಸ್ತುಗಳನ್ನು ಸಂಗ್ರಹಿಸಿ, ಅವುಗಳನ್ನಿಡುವುದಕ್ಕಾಗಿ ವಸ್ತು ಸಂಗ್ರಹಾಲಯವೊಂದನ್ನು ಏರ್ಪಡಿಸುವುದು"-** ಇದು ಆರನೆಯ ಉದ್ದೇಶವು. ಈ ಉದ್ದೇಶವು ಪುರಾತನ ಚರಿತ್ರೆಗಳ ದೊಡ್ಡದಾದ ಪಟ್ಟಿಯೊಂದನ್ನು ಪರಿಷತ್ಪತ್ರಿಕೆಯಲ್ಲಿ ಪ್ರಕಟಗೊಳಿಸುವಿಕೆ ಮತ್ತು ಪಂಪ ರಾಮಾಯಣವನ್ನು ಶ್ಲಾಘ್ಯ ರೀತಿಯಿಂದ ಪರಿಷ್ಕರಿಸಿ ಟಿಪ್ಪಣದೊಂದಿಗೆ ಪ್ರಕಟಗೊಳಿಸುವಿಕೆಗಳಿಂದ ಮಾತ್ರವೇ ನೆರವೇರಿದಂತೆ

ಭಾವಿಸಬೇಕಾಗಿರುವುದು. ಇದಲ್ಲದೆ, 'ಬುಕ್ಕರಾಯ ಚರಿತ್ರೆ' ಮತ್ತು 'ಕರ್ಣಾಟಕ ರಾಜ್ಯ ವೃತ್ತಾಂತಗಳೆಂಬ ವಿಜಯನಗರ ಸಾಮ್ರಾಜ್ಯದ ಅಂತ್ಯಕಾಲದ ಅಸಮಗ್ರ ಚರಿತ್ರೆಗಳ ವಿಷಯವನ್ನು ನಾನು ಹಿಂದೆಯೇ ಸೂಚಿಸಿರುವೆನು. ಇನ್ನು ಯಾವ ವಸ್ತು ಪ್ರದರ್ಶನ ಶಾಲೆಯೂ ಇದುವರೆಗೆ ಸ್ಥಾಪಿತವಾದಂತೆ ನನಗೆ ತೋರಲಿಲ್ಲ; ಅದು ಅಷ್ಟೊಂದು ಸುಲಭ ಸಾಧ್ಯವೂ ಅಲ್ಲ.

೭. **"ಕರ್ಣಾಟಕ ಭಾಷಾಸಂಸ್ಕರಣ ಕರ್ಣಾಟಕ ಗ್ರಂಥಾಭಿವೃದ್ಧಿಗಳನ್ನು ಕುರಿತು ಪಂಡಿತರಿಂದ ರಚಿತವಾದ ಉಪನ್ಯಾಸಗಳನ್ನೊಳಗೊಂಡ ಪತ್ರಿಕೆಯನ್ನು ಪ್ರಕಟಿಸುವುದು" ಎಂಬುದು ಏಳನೆಯ ಉದ್ದೇಶವು.** ಈ ಕಾರ್ಯವು ಸಮರ್ಪಕವಾಗಿ ನೆರವೇರಿರುವುದು ಮಾತ್ರವಲ್ಲದೆ **ಪರಿಷತ್ಪತ್ರಿಕೆಯು** ಸಾಹಿತ್ಯ ವಿಷಯಕವಾದ ಉತ್ತಮ ಲೇಖನಗಳ ವಿಷಯದಲ್ಲಿಯೂ ಅಂದವಾದ ಮುದ್ರಣದ ವಿಷಯದಲ್ಲಿಯೂ ಇತರ ಪತ್ರಿಕಾಧಿಪತಿಗಳಿಗೆ ಕೇವಲ ಆದರ್ಶಪ್ರಾಯವಾಗಿರುವುದೆಂದು ಕೂಡ ನಾನು ಅಭಿಮಾನಪುರಸ್ಸರವಾಗಿ ಹೇಳುವೆನು. ಮತ್ತು ಪರಿಷತ್ಪತ್ರಿಕೆಯು ಆಚಂದ್ರಾರ್ಕವಾಗಿ ಪುರೋಭಿವೃದ್ಧಿಯನ್ನು ಪಡೆದು ಜಯಶೀಲವಾಗಿ ಮೆರೆಯಲೆಂದು ಹಾರೈಸುವೆನು.

೮. **"ಸ್ವಂತ ವೆಚ್ಚದಿಂದ ಶ್ರೇಷ್ಠವಾದ ಸ್ವವಿರಚಿತ ಗ್ರಂಥಗಳನ್ನು ಮುದ್ರಣಗೊಳಿಸುವ ಗ್ರಂಥಕರ್ತರಿಗೆ ಸಂಭಾವನೆಗಳನ್ನೂ ಬಿರುದುಗಳನ್ನೂ ಪರಿಷತ್ತಿನಿಂದ ಕೊಡುವಿಕೆ"ಯೇ ಎಂಟನೆಯ ಉದ್ದೇಶವು.** ಈ ಉದ್ದೇಶವು ಪರಿಷತ್ತಿಗೂ ಗ್ರಂಥಕಾರರಿಗೂ ನಿಕಟವಾದ ಸಂಬಂಧವನ್ನು ಕಲ್ಪಿಸತಕ್ಕದಾಗಿರುವ ಕಾರಣ ಇದೊಂದು ಶ್ಲಾಘ್ಯವೂ ಮುಖ್ಯವೂ ಎನಿಸಿದ ವಿಷಯವಾಗಿರುವುದು. ದ್ರವ್ಯಾನುಕೂಲತೆಗೆ ತಕ್ಕಂತೆ ಸಾಧ್ಯವಾದ ಮಟ್ಟಿಗೂ ಪರಿಷತ್ತಿನವರು ಈ ಕಾರ್ಯವನ್ನು ಚೆನ್ನಾಗಿಯೇ ನೆರವೇರಿಸುತ್ತಲಿರುವರು. ಆದರ ಭಾಷಾವಿಶಾರದರು, ನಾಟಕ ಪ್ರಣೇತರು, ಚಿತ್ರಗಾರರು, ನಟರು, ಗೀತ ಕಲಾವಿಶಾರದರು ಮುಂತಾದ ವಿವಿಧ ಕಲಾವಿಶಾರದರಿಗೆ ಅವರವರ ಯೋಗ್ಯತಾನುಸಾರ ಉಚಿತವಾದ ಬಿರುದನ್ನೋ ಪ್ರಶಸ್ತಿ ಪತ್ರಿಕೆಯನ್ನೋ ಕೊಡುವ ವಿಷಯದಲ್ಲಿ ಇದುವರೆಗೆ ಯಾವ ವಿಧವಾದ ಪ್ರಯತ್ನವನ್ನೂ ಕೈಕೊಂಡಂತಿಲ್ಲ. ನಮ್ಮ ಸಂಸ್ಥೆಯು ಈಗ ಉಜ್ಜೀವಿತವಾಗಿ ಸರ್ವತೋಮುಖವಾದ ಅಭಿವೃದ್ಧಿಯನ್ನೈದಿರುವ ಕಾರಣ ಈ ವಿಷಯದಲ್ಲಿ ನಾವು ಇತಃ ಮುಂದುವರಿಯಬಹುದೆಂದು ಊಹಿಸುತ್ತೇನೆ. ವಾಸ್ತವಿಕವಾದ ಅಥವಾ, ಆರೋಪಿತವಾದ ತಮ್ಮ ಯೋಗ್ಯತೆಯ ಅಭಿನಂದನಾರ್ಥವಾಗಿ ನಮ್ಮ ಕನ್ನಡಿಗರು ಬಂಗಾಳ ಅಥವಾ ಪಂಜಾಬು ದೇಶಗಳ ಕಡೆಗೆ ನೋಡಬೇಕಾದ ಪ್ರಮೇಯವು ನನಗೆ ತೋರಲಿಲ್ಲ. ಭಾಷಾಗಂಧವನ್ನೇ ಅರಿಯದ ವಿದೇಶೀಯ ಸಂಸ್ಥೆಗಳಲ್ಲಿ ಪಡೆಯಬಹುದಾದ ಪ್ರಶಸ್ತಿಗಳಿಗಿಂತಲೂ ಪರಿಷತ್ತಿನಿಂದ ದೊರೆಯುವ ಪ್ರಶಸ್ತಿಗಳಲ್ಲಿ ಲೋಕಕ್ಕೆ ಅಧಿಕವಾಗಿ ಭರವಸೆಯು ಇರುವುದೆಂದು ನಾನು ನಂಬುಗೆಯಾಗಿ ಹೇಳಬಲ್ಲೆನು. ಆದರೆ ಈ ಏರ್ಪಾಡು ಯಾವುದೋ ಒಂದು ಮೂಲೆಯ ನಾಲ್ಕಾರು ಮಂದಿಯ ಕೈಯಲ್ಲಿ ಮಾತ್ರವೇ ಇರದೆ ಸಮಗ್ರ ಕರ್ಣಾಟಕ ದೇಶದ ಜನರ ವಿಶ್ವಾಸಕ್ಕೂ ಗೌರವಕ್ಕೂ ಪಾತ್ರವಾಗುವಂತಿರಬೇಕು. ಇದೇ ಅಧಿವೇಶನದಲ್ಲಿಯೇ ಸಾಧ್ಯವಲ್ಲದಿದ್ದರೂ ಸಮ್ಮೇಳನದ ಉಪಸಂಹಾರಾನಂತರದಲ್ಲಿ ನಡೆಯುವ ವಾರ್ಷಿಕ ಸಭೆಯಲ್ಲಿಯಾದರೂ ಚೆನ್ನಾಗಿ ಚರ್ಚಿಸಿ ಈ ವಿಷಯದಲ್ಲಿ ಒಂದು ವಿಧವಾದ ಸಿದ್ಧಾಂತವನ್ನು ಸ್ಥಿರಪಡಿಸಬೇಕೆಂದು ಸೂಚಿಸುವೆನು.

೯. **"ಕರ್ಣಾಟಕ ಭಾಷೆಗೂ ಸಾಹಿತ್ಯಕ್ಕೂ ಸಂಬಂಧಪಟ್ಟ ಅಪೂರ್ವ ವಿಷಯಗಳನ್ನು ಪರಿಶೋಧಿಸುವಲ್ಲಿ ನಿರತವಾಗುವ ವಿದ್ವಾಂಸರಿಗೆ ಪಂಡಿತ ವೇತನಗಳನ್ನು ಕೊಡುವಿಕೆ ಎಂಬೀ ಒಂಬತ್ತನೆಯ ಉದ್ದೇಶವು, ವಿಶೇಷ ದ್ರವ್ಯ ಸಾಧ್ಯವಾದ ಪ್ರಯುಕ್ತ, ಇನ್ನೂ ಕೆಲವು ವರ್ಷಗಳವರೆಗೆ ಕೈಕೊಳ್ಳಲು ಬರುವಂತಿಲ್ಲ.**

೧೦. **"ಕರ್ಣಾಟಕ ಭಾಷೋನ್ನತಿಗೂ ಕರ್ಣಾಟಕ ಗ್ರಂಥಾಭಿವೃದ್ಧಿಗೂ ಸಂಬಂಧಪಡುವ ವಿಷಯಗಳನ್ನು ಆ ಆ ಸರ್ಕಾರದವರ ಪರಾಮರ್ಶಕ್ಕೆ ತಂದು ಅವನ್ನು ತೃಪ್ತಿಕರವಾಗಿ ವ್ಯವಸ್ಥೆ ಪಡಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು"- ಇದು ಹತ್ತನೆಯ ಉದ್ದೇಶವು.** ಪರಿಷತ್ತಿನವರು ಈ ಕಾರ್ಯವನ್ನು ಕೈಕೊಂಡಿರುವುದು ಮಾತ್ರವಲ್ಲದೆ ನಿರೀಕ್ಷಣೆಗಿಂತಲೂ ಅತಿಶಯವಾಗಿಯೇ ಇದನ್ನು ಕುರಿತು ಕೆಲಸಮಾಡಿ, ಕರ್ಣಾಟಕ ಶಿಕ್ಷಣದ ವಿಷಯದಲ್ಲಿಯೂ ಕನ್ನಡಿಗರ ಆಡಚಣೆಗಳನ್ನು ಹೋಗಲಾಡಿಸುವ ವಿಷಯದಲ್ಲಿಯೂ ದೇಶೀಯ ಸಂಸ್ಥಾನಗಳಲ್ಲಿ ಮಾತ್ರವಲ್ಲದೆ ಬ್ರಿಟಿಷ್ ಇಂಡಿಯಾದಲ್ಲಿಯೂ ತಕ್ಕ ಅಧಿಕಾರಿಗಳಲ್ಲಿ ಅರಿಕೆಮಾಡಿ ಕೊಂಡಿರುವರು. ಇಷ್ಟೊಂದನ್ನು ಮಾಡಿಯೂ ಫಲ ಪರಿಣಾಮವು ಏಕರೂಪವಾಗಿರದಿದ್ದರೆ, ಅದು ಪರಿಷತ್ತಿನ ಲೋಪವೆನ್ನುವಂತಿಲ್ಲ. ಇಷ್ಟು ಮಾತ್ರದಿಂದಲೇ ನಾವು ಎದೆಗುಂದಿ ಹಿಂಜರಿಯಬಾರದು. ಪರಿಷತ್ತಿನ ಮುಖ್ಯಾಧಿಕಾರಿಗಳು ಈ ಉದ್ದೇಶವು ನೆರವೇರುವವರೆಗೂ ಚೆನ್ನಾಗಿ ಪರಿಶ್ರಮವನ್ನು ವಹಿಸಿ ಅದನ್ನು ನಡೆಯಿಸದಿರಲಾರರೆಂಬ ಭರವಸೆಯು ನನಗೆ ದೃಢವಾಗಿರುವುದು. ಮೈಸೂರು ಶ್ರೀಮನ್ಮಹಾರಾಜಾ ಸರಕಾರದವರು ಕೆಲವು ಅಂತಸ್ತಿನವರೆಗೆ

ಕನ್ನಡವನ್ನೇ ವ್ಯಾವಹಾರಿಕ ಮತ್ತು ರಾಜಕೀಯ ಭಾಷೆಯಾಗಿ ಉಪಯೋಗಿಸುವಂತೆ ಇತ್ತಲಾಗೆ ಅಪ್ಪಣೆ ಕೊಡಿಸಿರುತ್ತಾರೆ, ಈ ವಿಷಯದಲ್ಲಿ ನಮ್ಮೆಲ್ಲರ ಮನಃಪೂರ್ವಕವಾದ ಕೃತಜ್ಞತೆಯು ಆ ಸರಕಾರದವರಿಗೆ ಸಲ್ಲತಕ್ಕುದಾಗಿದೆ.

೧೧ ಮತ್ತು ೧೨. **"ಕರ್ಣಾಟಕದ ಸಕಲ ಪ್ರಾಂತಗಳಲ್ಲಿಯೂ ವಾಚನಾಲಯಗಳನ್ನೂ ಪುಸ್ತಕಭಂಡಾರಗಳನ್ನೂ ಸ್ಥಾಪಿಸುವಿಕೆ"** ಮತ್ತು **"ಕನ್ನಡನಾಡುಗಳ ಪ್ರಮುಖರುಗಳು ಸಮ್ಮೇಳನಗಳನ್ನು ಆಗಾಗ ಏರ್ಪಡಿಸುವುದು ಮತ್ತು ಸಮರ್ಥರಾದ ವಿದ್ವಾಂಸರಿಂದ ಉಪನ್ಯಾಸಗಳನ್ನು ಕೊಡಿಸುವಿಕೆ"** ಎಂಬಿವು ಹನ್ನೊಂದನೆಯ ಮತ್ತು ಹನ್ನೆರಡನೆಯ ಉದ್ದೇಶಗಳಾಗಿವೆ. ಈ ವಿಷಯಗಳಲ್ಲಿ ಪರಿಷತ್ತಿನವರು ಇದುವರೆಗೂ ವಿಶೇಷವಾಗಿ ತಕ್ಕಷ್ಟು ಪ್ರಯತ್ನಗಳನ್ನು ನಡೆಯಿಸಿದಂತೆಯೇ ತೋರಲಿಲ್ಲ. ಈ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಕೂಡಲೆ ತಕ್ಕ ಪ್ರಯತ್ನಗಳನ್ನು ಕೈಕೊಂಡು ಪರಿಷತ್ಪತ್ರಿಕೆಯ ಪ್ರತಿಯೊಂದು ಸಂಚಿಕೆಯಲ್ಲಿಯೂ ಅದರ ಫಲಿತಾಂಶವನ್ನು ಕನ್ನಡಿಗರಿಗೆ ತಿಳಿಯಪಡಿಸಬೇಕೆಂದು ನಾನು ಒತ್ತಿ ಒತ್ತಿ ಹೇಳುವೆನು.

ಸಮ್ಮೇಳನದ ನಿರ್ಣಯಗಳು ಏನಾದವು ?

ಈಗಲಿನ್ನು, ಹಿಂದೆ ಹತ್ತು ವರ್ಷಗಳಿಂದ ನಡೆದ ಸಮ್ಮೇಳನಗಳಲ್ಲಿ ನಿರ್ಣೀತವಾದ ನಿಂಬಧನೆಗಳಲ್ಲಿ ಯಾವ ಯಾವುವು ಎಷ್ಟರಮಟ್ಟಿಗೆ ನೆರವೇರಿರುವುವು ಎಂಬುದನ್ನು ನನಗೆ ತಿಳಿದಮಟ್ಟಿಗೆ ತಿಳಿಸಬೇಕೆಂದು ಅಪೇಕ್ಷಿಸುವೆನು. ಆದರೆ ಅವುಗಳಲ್ಲಿ ಮುಖ್ಯ ಮುಖ್ಯವಾದ ವಿಷಯಗಳನ್ನು ಮಾತ್ರವೇ ಸಂಗ್ರಹವಾಗಿ ವಿವರಿಸುವೆನು. "ಆಧುನಿಕ ಕವಿಗಳು, ಗ್ರಂಥಕಾರರು ಮತ್ತು ಗ್ರಂಥಪ್ರಚಾರಕರಲ್ಲಿ ಪ್ರಮುಖರಾದವರ ಜೀವನ ಚರಿತ್ರೆಗಳನ್ನು ಸಂಗ್ರಹಿಸಿ ಪುನರ್‌ಮುದ್ರಣ ಮಾಡಿಸುವಿಕೆ" ಎಂಬ ವಿಷಯವು ಬಿಜಾಪುರದಲ್ಲಿ ನಡೆದ (ಕಳೆದ ಒಂಬತ್ತನೆಯ) ಸಮ್ಮೇಳನದಲ್ಲಿ ನಿರ್ಣೀತವಾಯಿತು. (ಸಾಧ್ಯವಾದರೆ ಅವರವರ ಭಾವಚಿತ್ರಗಳೊಂದಿಗೆ ಪ್ರಕಟಗೊಳಿಸುವುದು ಮಾತ್ರವಲ್ಲದೆ ಬೇರೆ ಯಾವ ವಿಧವಾದ ಕಾರ್ಯವೂ ನಡೆದಂತೆ ತೋರಲಿಲ್ಲ. ಅದಕ್ಕಿಂತಲೂ ಮುಂಚಿತವಾಗಿ ದಾವಣಗೆರೆಯಲ್ಲಿ ನಡೆದ (೮ನೆಯ) ಸಮ್ಮೇಳನದಲ್ಲಿ "ಕನ್ನಡಿಗರಲ್ಲಿ ಐಕಮತ್ಯವು ಹೆಚ್ಚುವ ಸಲುವಾಗಿ ಕರ್ಣಾಟಕದ ಮಹಾಪುರುಷರ ಗೌರವಾರ್ಥವಾದ ಉತ್ಸವಗಳನ್ನು ಕರ್ಣಾಟಕದ ಸಮಸ್ತ ಭಾಗಗಳಲ್ಲಿಯೂ ಪ್ರತಿವರ್ಷವೂ ನಡೆಯಿಸಬೇಕು" ಎಂಬುದಾಗಿ ನಿರ್ಣೀತವಾಗಿದ್ದಿತು. "ಈ ತೀರ್ಮಾನವು ಪರಿಷತ್ಪತ್ರಿಕೆಯಲ್ಲಿಯೂ ಇನ್ನು ಕೆಲವು ವರ್ತಮಾನ ಪತ್ರಿಕೆಗಳಲ್ಲಿಯೂ ಪ್ರಕಟಗೊಳಿಸಲಾಗಿದೆ" ಎಂದು ಮಾತ್ರವೇ ದುಂದುಭಿ ಸಂವತ್ಸರ ವಾರ್ಷಿಕ ವರದಿಯಲ್ಲಿ ಹೇಳಿದೆ. ಈ ವಿಷಯದಲ್ಲಿ ಪರಿಷತ್ತಿನವರು ನಡೆಯಿಸಿದ ಪ್ರಯತ್ನಕ್ಕಿಂತಲೂ ಅವರು ತೋರಿದ ಔದಾಸೀನ್ಯವೇ ಅಧಿಕವಾಗಿರುವುದೆಂದೂ, ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೆ ಇದು ಗೌರವಾರ್ಹವಲ್ಲವೆಂದೂ ನನಗೆ ತೋರುವುದು. ಪರಿಷತ್ತು ಇಂತಹ ಸೂಚನೆಗಳನ್ನು ಮಾತ್ರ ಮಾಡಬಲ್ಲುದೇ ವಿನಾ ಅದಕ್ಕೆ ಕನ್ನಡ ಮಹಾಜನರ ಮೇಲೆ ಅಧಿಕಾರವಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುವೆನು. ಆದರೆ ಪರಿಷತ್ತಿನ ಆಶ್ರಯದಲ್ಲಿಯೇ ಸಾರ್ವಜನಿಕವಾಗಿ ಇಂತಹ ಉತ್ಸವಗಳನ್ನು ನಡೆಯಿಸಬಾರದಾಗಿದ್ದಿತೇ? ನೂರಾರು ಪತ್ರಿಕೆಗಳಲ್ಲಿ ನೂರಾರು ಪ್ರಕಟಣೆಗಳನ್ನು ಹಾಕಿಸುವುದಕ್ಕಿಂತಲೂ ಈ ಉತ್ಸವಗಳನ್ನು ಇವರೇ ನಡೆಯಿಸಿದ್ದ ಪಕ್ಷದಲ್ಲಿ ಅವು ಜನರ ಲಕ್ಷ್ಯವನ್ನು ಮತ್ತಷ್ಟು ಹೆಚ್ಚಾಗಿ ಆಕರ್ಷಿಸುತ್ತಿರಲಿಲ್ಲವೇ ? ಈ ಲೋಪವನ್ನು ಪರಿಷತ್ ಅಧಿಕಾರಿಗಳು ಕೂಡಲೇ ಸವರಿಸುವರೆಂದೂ, ಇತಃಪರ ಇಂತಹ ಉತ್ಸವಗಳಲ್ಲಿ ಭಾಗಿಗಳಾಗುವ ಭಾಗ್ಯವು ನಮ್ಮೆಲ್ಲರಿಗೂ ದೊರೆಯುವುದೆಂದೂ ನಾನು ನಂಬುತ್ತೇನೆ. ಇನ್ನು, "ವಿಜಯನಗರ ಸಾಮ್ರಾಜ್ಯಕ್ಕೆ ರಾಜಧಾನಿಯಾಗಿದ್ದ ಪಂಪಾಕ್ಷೇತ್ರದ ಜೀರ್ಣೋದ್ಧಾರ" ವಿಷಯವೂ ಆ ಸಮ್ಮೇಳನದಲ್ಲಿಯೇ ನಿರ್ಣಯವಾಗಿದ್ದಿತು. ಆದರೆ ದ್ರವ್ಯಾನುಕೂಲತೆಯಿಲ್ಲದ ಕಾರಣ ಈ ಕಾರ್ಯವು ನೆರವೇರಲಿಲ್ಲವೆಂಬುದು ಪರಿಷತ್ತಿನ ವಾರ್ಷಿಕ ವರದಿಯಿಂದ ತಿಳಿಯೆ ಬರುವುದು. ಕ್ಷೇತ್ರದ ಮಹಿಮೆಯನ್ನೂ ನಡೆಯಬೇಕಾದ 'ಕಾಮಗಾರಿ'ಗಳ ವಿವರವನ್ನೂ ಬರೆಯುವ ಸಲುವಾಗಿ ಪರಿಮಿತವಾದ ಸದಸ್ಯರನ್ನೊಳಗೊಂಡ ಒಂದು ಉಪಸಭೆಯನ್ನು ಏರ್ಪಡಿಸಿ ಆ ಉಪಸಭೆಗೆ ಈ ಕಾರ್ಯವನ್ನು ವಹಿಸಿದ್ದ ಪಕ್ಷದಲ್ಲಿ ಸ್ವಲ್ಪಮಟ್ಟಿಗಾದರೂ ಈ ಕಾರ್ಯವು ನೆರವೇರದೆ ಇರುತ್ತಿರಲಿಲ್ಲ. ಪರಿಷತ್ಪತ್ರಿಕೆಯಲ್ಲಿಯೇ ಆಗಲಿ ಅಥವಾ ಇತರ ವಾರ್ತಾಪತ್ರಿಕೆಗಳಲ್ಲಿಯೇ ಆಗಲಿ ಪ್ರಕಟಿಸುವ ಮೂಲಕ ಸ್ವಲ್ಪಮಟ್ಟಿಗಾದರೂ ಹಣವು ಸಂಗ್ರಹವಾಗದಿದ್ದ ಬಳಿಕ ಕಾರ್ಯಸಾಧನೆಗೆ ಸಾಕಾಗುವಷ್ಟು ದ್ರವ್ಯವನ್ನು ಸಂಗ್ರಹಿಸುವ ಭರವಸೆಯ ತಾನೇ ಎತ್ತಣದು ?

ಬಂಡವಾಳ ಸಂಗ್ರಹಿಸುವ ಯೋಜನೆ

ಇನ್ನು ಇತರ ಚಿಲ್ಲರೆ ವಿಷಯಗಳನ್ನೂ ಕನ್ನಡದಲ್ಲಿ ವಿಶ್ವಕೋಶವನ್ನು ಬರೆಯಿಸುವಿಕೆಯೇ ಮಂತಾದ, ಪ್ರಕೃತದಲ್ಲಿ ನಮ್ಮ ಶಕ್ತಿಗೆ ಸಾಧ್ಯವಲ್ಲದ ಒಂದೆರಡು ವಿಷಯಗಳನ್ನೂ ಬಿಟ್ಟು, ಕನ್ನಡ ಗ್ರಂಥಗಳನ್ನು ಮುದ್ರಿಸುವ ಸೌಕರ್ಯಾರ್ಥವಾಗಿ ಸುಮಾರು ಐವತ್ತು ಸಾವಿರ ರೂಪಾಯಿಗಳ ಬಂಡವಾಳದಿಂದ ದೊಡ್ಡದಾದ ಒಂದು **"ಜಾಯಿಂಟ್ ಸ್ಟಾಕ್ ಕಂಪನಿ"**

ಯನ್ನು ಸ್ಥಾಪಿಸಬೇಕೆಂದಿದ್ದ ಪರಿಷತ್ತಿನ ಮತ್ತೊಂದು ಉದ್ದೇಶವು ನಾವೆಲ್ಲರೂ ಆವಶ್ಯಕವಾಗಿ ಗಮನಿಸತಕ್ಕುದಾಗಿರುವುದು. 'ಈ ವಿಷಯದಲ್ಲಿ ಮಹಾಜನರ ಮೂಲಕ ಸಾಕಾದಷ್ಟು ಪ್ರೋತ್ಸಾಹವು ದೊರೆಯದ ಕಾರಣ ಪ್ರಕೃತದಲ್ಲಿ ಈ ವಿಷಯವನ್ನು ಮಾನಸಿಕ ಮಾಡಲಾಯಿತು' ಎಂಬುದಾಗಿ ವಾರ್ಷಿಕ ವರದಿಯಿಂದ ತಿಳಿದುಬರುವುದು. ಆದರೆ ಮಹಾಜನರ ಸಹಾಯವನ್ನು ಪಡೆಯುವ ಸಲುವಾಗಿ ಈ ವಿಷಯದಲ್ಲಿ ನಡೆಯಿಸಿದ ಪ್ರಯತ್ನಗಳಾದರೂ ಯಾವುವು? ಎಂಬುದೇ ನನ್ನ ಪ್ರಶ್ನೆ. ಸಹಕಾರ ಸಂಘಗಳ ನಿಬಂಧನೆಗಳನ್ನನುಸರಿಸಿ ಕೆಲವು ಮಂದಿ ಚಂದಾದಾರರನ್ನು ಕೂಡಿಸಿ ಪರಿಷತ್ತಿನ ಹೆಸರಿನಲ್ಲಿ ಒಂದು ಚಿಕ್ಕ ಮುದ್ರಣಾಲಯದಲ್ಲಿ ಮುದ್ರಿಸುವುದಾದರೆ ಅವರಿಗೆ ವಿಶೇಷವಾದ 'ರಿಯಾಯಿತಿ'ಯನ್ನು ತೋರುವುದಾಗಿಯೂ ಸೂಚಿಸಿದರಾದರೆ ಈ ಉದ್ದೇಶವು ಕೈಗೂಡದಿರರೆಂದು ನನ್ನ ಭಾವನೆ. ಆದುದರಿಂದ ಈ ವಿಷಯವನ್ನೂ ಮರಳಿ ವಿಮರ್ಶಿಸಬೇಕೆಂದು ಸೂಚಿಸುವೆನು.

ಪರಿಷತ್ತಿನ ಪದಾಧಿಕಾರಿಗಳನ್ನು ಗಮನಿಸಿ

ಮಹಾಶಯರೇ! ಹೀಗೆ ಈ ಪರಿಷತ್ತು ಸ್ಥಾಪಿತವಾದ ಮೊದಲ್ಗೊಂಡು ಹತ್ತು ವರ್ಷಗಳಿಂದಲೂ ಸಮರ್ಪಕವಾಗಿ ಕೆಲಸ ಮಾಡಿರುವುದು ; ಮತ್ತು ಪರಿಷತ್ತಿನ ಉಪಾಧ್ಯಕ್ಷರೂ ಕಾರ್ಯದರ್ಶಿಗಳೂ ಇತರ ಗೌರವಾಧಿಕಾರಿಗಳೂ ಅನೇಕವೇಳೆ ಹಲವು ವಿಧವಾದ ಕ್ಲೇಶಗಳಿಗೆ ಗುರಿಯಾಗಿದ್ದರೂ ಅವುಗಳನ್ನು ಲೆಕ್ಕಿಸದೆ ಎಷ್ಟೋ ಸಲ, ಮಾಡುವ ಕೆಲಸದ ಸುಳಿವು ಕೂಡ ಹೊರಗಿನವರಿಗೆ ತಿಳಿಯದಂತೆ ಸಭೆಯ ಮೇಲ್ಮೆಗಾಗಿ ವಿಶೇಷವಾದ ಪರಿಶ್ರಮವನ್ನು ವಹಿಸುವುದಕ್ಕಾಗಿ ನಾವೆಲ್ಲರೂ ಅಂತಃಕರಣಪೂರ್ವಕವಾದ ನಮ್ಮ ಕೃತಜ್ಞತೆಯನ್ನು ಅವರಿಗೆ ಅರ್ಪಿಸಬೇಕಾಗಿರುವುದು. ಪುರೋಭಾಗಿಗಳಾದ ಕೆಲವರು. "ಇನ್ನೂ ಸಮರ್ಪಕವಾದ ರೀತಿಯಿಂದ ಕೆಲಸಮಾಡಲು ಸಾಧ್ಯವಾಗಿರಲಿಲ್ಲವೆ?"- ಎಂದು ಕೇಳಬಹುದು. ಆದರೆ, ಇಂತಹ ಮಹತ್ತರವಾದ ರಾಷ್ಟ್ರೀಯ ಕಾರ್ಯಗಳಲ್ಲಿ ಮುಂದೆ ಬಂದು ಕೆಲಸ ಮಾಡುವವರ ವಿಷಯದಲ್ಲಿ ದೋಷಗಳನ್ನು ಕಂಡುಹಿಡಿಯುವುದು ಸುಲಭ; ಶ್ರಮವನ್ನು ವಹಿಸಿ ಕೆಲಸಮಾಡುವುದು ಕಷ್ಟ. ಅದಕ್ಕೆ ಮೊದಲೂ ಏನೊಂದೂ ಇಲ್ಲದಿರುತ್ತ, ಕಳೆದ ಹತ್ತು ವರ್ಷಗಳಲ್ಲಿ ಸಾವಿರಾರು ಗ್ರಂಥಗಳನ್ನೊಳಗೊಂಡ ಒಂದು ಭಂಡಾರವನ್ನು ಸ್ಥಾಪಿಸಿ, ಅತ್ಯುತ್ತಮ ವರ್ಗಕ್ಕೆ ಸೇರಿದ ಒಂದು ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಗೊಳಿಸುತ್ತ, ಕೆಲವು ಪ್ರೌಢ ಗ್ರಂಥಗಳನ್ನು ಪರಿಷ್ಕರಿಸಿ, ಪ್ರಕಾಶಮಾಡಿ, ಪ್ರತಿವರ್ಷವೂ ಕನ್ನಡ ಪ್ರಾಂತದ ಬೇರೆಬೇರೆ ಕಡೆಗಳಲ್ಲಿ ಉತ್ಸಾಹಭರಿತರೂ ಭಾಷಾಭಿಮಾನಿಗಳೂ ಆದ ಸಾವಿರಾರುಮಂದಿ ಕನ್ನಡಿಗರನ್ನು ಒಟ್ಟುಗೂಡಿಸಿ ಪರಿಷತ್ ಅಧಿಕಾರಿಗಳು ಸಮ್ಮೇಳನಗಳನ್ನು ನಡೆಯಿಸುತ್ತಿರುವರು.

ಸಹೋದರರೇ! ತಮ್ಮನ್ನೇ ಪ್ರಶ್ನೆಮಾಡುವೆನು:- ಬೇರೆ ಬೇರೆ ಭಾಗಗಳಿಗೆ ಸೇರಿದವರಾದರೂ ಕನ್ನಡಿಗರೆಲ್ಲರೂ ಒಂದೇ ಪಂಗಡದವರು. ಅವರ ಅಭಿಸಂಧಿಗಳೂ ಅನ್ಯೋನ್ಯಾಶ್ರಿತಗಳಾಗಿವೆ" ಎಂಬ ಅಭಿಪ್ರಾಯವನ್ನು ಮೊತ್ತಮೊದಲು ನಮ್ಮ ಗಮನಕ್ಕೆ ತಂದವರು ಯಾರು? ಕನ್ನಡ ಪ್ರಾಂತಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾಮಂದಿರವು ಆವಶ್ಯಕವೆಂಬುದನ್ನು ನಾವು ಕಂಡುಹಿಡಿದುದಾದರೂ ಯಾರ ಮೂಲಕ? ನಮ್ಮ ಮಾತೃಭೂಮಿಯ ದೂರದೂರವಾದ ಮೂಲೆಗಳಲ್ಲಿ ವಾಸಮಾಡುವ ಕನ್ನಡ ಜನರು ಬಗೆಬಗೆಯ ಕಷ್ಟಗಳಿಗೆ ಈಡಾಗಿರುವರೆಂಬುದನ್ನೂ ಅವರಿಗೆ ನೆರವಾಗುವುದು ನಮ್ಮ ಕರ್ತವ್ಯವೆಂಬುದನ್ನೂ ನಾವು ಯಾರಿಂದ ತಾನೇ ತಿಳಿದುಕೊಂಡೆವು? ಕೆಲವು ವರ್ಷಗಳ ಹಿಂದೆ ನಮಗೂ ಇತರ ಪ್ರಾಂತಗಳಲ್ಲಿರುವ ಕನ್ನಡಿಗರಿಗೂ ಇದ್ದ ಪ್ರೀತಿ ವಿಶ್ವಾಸಗಳಿಗೂ ಇಂದಿನ ಪ್ರೀತಿ ವಿಶ್ವಾಸಗಳಿಗೂ ಎಷ್ಟೋ ತಾರತಮ್ಯವಿರುವುದೆಂಬುದನ್ನು ನಾವು ನಿಷ್ಪಕ್ಷಪಾತವಾಗಿ ಒಪ್ಪಿಕೊಳ್ಳಬೇಕಾಗಿರುವುದಲ್ಲವೆ? ಗ್ರಂಥಗಳಲ್ಲಿ ಗ್ರಾಮ್ಯ ಶಬ್ದಗಳನ್ನು ಉಪಯೋಗಿಸುವ ವಿಷಯದಲ್ಲಿಯೂ ಶೈಲಿಯ ವಿಷಯದಲ್ಲಿಯೂ ಏಕರೂಪತೆಯನ್ನು ಅನುಸರಿಸುವ ವಿಷಯದಲ್ಲಿ ಕನ್ನಡನಾಡಿನವರೆಲ್ಲರೂ ಅನ್ಯೋನ್ಯಭಾವದಿಂದ ಸರ್ವಸಾಮಾನ್ಯವಾದ ಒಂದು ಕಟ್ಟುಪಾಡಿಗೆ ಒಳಪಡಬೇಕೆಂಬುದು ನಮ್ಮ ಗ್ರಂಥಕಾರರಲ್ಲಿ ಇತ್ತೀಚೆಗೆ ಒಂದು ವಿಧವಾದ ಭಾವವು ಅಂಕುರಿತವಾಗಿರುವುದನ್ನು ನೀವು ಗಮನಿಸಲಿಲ್ಲವೇ? ಇವುಗಳಿಗೆಲ್ಲಾ ಸಾಕ್ಷಾತ್ತಾಗಿಯಾಗಲಿ, ಪರಂಪರೆಯಿಂದಾಗಲಿ ಕಾರಣಭೂತರಾದವರು ಯಾರು? ಎಷ್ಟೋ ದೂರದಲ್ಲಿರುವ ಅರ್ರಾ(Arrah) ಎಂಬ ಪಟ್ಟಣದಿಂದ **ಪಂಪ ಭಾರತ** ದ ಅಮೂಲ್ಯವಾದ ಪುರಾತನ ಹಸ್ತಪ್ರತಿಯು ಯಾರ ಸಾಹಸದಿಂದ ನಮಗೆ ದೊರೆಯಿತು? ಇದಲ್ಲದೆ ರಾಷ್ಟೀಯ ವಿಚಾರಗಳನ್ನು ಸಕಲ ಕರ್ಣಾಟಕಕ್ಕೂ ಸಮರ್ಪಕವಾಗುವಂತೆಯೂ ಪ್ರಯೋಜನಕಾರಿಯಾಗುವಂತೆಯೂ ನಾವು ವಿಚಾರಮಾಡತೊಡಗಿದುದು ಯಾವ ಕಾಲದಲ್ಲಿ? ಕರ್ಣಾಟಕ ದೇಶವು ಭಿನ್ನಭಿನ್ನವಾಗಿರುವ ಕಾರಣ ಕನ್ನಡಿಗರೆಲ್ಲ... ಶೋಚನೀಯವಾದ ದುರ್ಬಲ ಸ್ಥಿತಿಯಲ್ಲಿರುವರೆಂಬ ವಿಷಯವು ನಮ್ಮ ಅಂತರಂಗದಲ್ಲಿ ಯಾರ ಪ್ರೇರಣೆಯಿಂದ

ಮೂಡಿತು ? ಕಳೆದ ಸಮ್ಮೇಳನದಲ್ಲಿ, ಆಂಗ್ಲೇಯರ ಆಡಳಿತದಲ್ಲಿರುವ ಕರ್ಣಾಟಕಕ್ಕೆ ಪ್ರತ್ಯೇಕವಾದ ಒಂದು ಅಧಿಪತ್ಯವನ್ನು ಏರ್ಪಡಿಸುವುದು ಆವಶ್ಯಕವೆಂದು ಕನ್ನಡಿಗರೆಲ್ಲರೂ ಬಯಸುವ ಮಟ್ಟಿಗಾದರೂ ಮುಂದುವರಿದುದು ಏತರಿಂದ?

ಪರಿಷತ್ತಿನ ಸಾಧನೆಗಳ ಪುಸ್ತಕಗಳು ಪ್ರಕಟವಾಗಲಿ

'ಪರಿಷತ್ತಿನ ಅಧಿಕಾರ ಸೂತ್ರಗಳು ಬಹಳಮಟ್ಟಿಗೆ ಬೆಂಗಳೂರಿನವರ ಕೈಯಲ್ಲಿಯೇ ಇರುವುವು' ಎಂಬುದಾಗಿ ಅಲ್ಲಲ್ಲಿ ದೂರು ಕೇಳಿಸುತ್ತಲಿದೆ. ಇದೊಂದು ಕುಂದೆಂದು ಭಾವಿಸುವ ಪಕ್ಷದಲ್ಲಿ, ಇಂತಹ ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯಲ್ಲಿಯೂ ಅಪರಿಹಾರ್ಯಗಳಾದ ಈ ಬಗೆಯ ಕುಂದುಗಳಿರುವುದು ಸಹಜವಾದ ಕಾರಣ. ಅದಕ್ಕೆ ಪ್ರತೀಕಾರ ಮಾಡಲು ಸಾಧ್ಯವಿಲ್ಲ. ಆದರೆ ನಾವು ಅದರ ಕಾರ್ಯನಿರ್ವಾಹಕರಲ್ಲಿ ದೋಷಗಳನ್ನು ಆರೋಪಿಸುವುದಕ್ಕಿಂತಲೂ, ಅವರ ಧ್ಯೇಯದಲ್ಲಿ ದೃಷ್ಟಿಯನ್ನಿರಿಸಿ ಪರಿಷತ್ತಿನಿಂದ ಎಷ್ಟರಮಟ್ಟಿನ ಕೆಲಸವು ನಡೆದಿದೆ ಎಂಬುದನ್ನು ಗಮನಿಸಿ ಅದರ ಗುಣಾವಗುಣಗಳನ್ನು ನಿರ್ಧರಿಸವುದು ಯುಕ್ತವು. ಹೀಗೆ ಮಾಡಿದಲ್ಲಿ ಪರಿಷತ್ತು ನಮ್ಮ ನಿರೀಕ್ಷೆಗಿಂತಲೂ ಹೆಚ್ಚಾಗಿಯೇ ಮಹತ್ತರವಾದ ಎಷ್ಟೋ ಕಾರ್ಯಗಳನ್ನು ನೆರವೇರಿಸುವುದೆಂಬ ಅಭಿಪ್ರಾಯವು ಖಂಡಿತವಾಗಿ ನಮ್ಮೆಲ್ಲರಿಗೂ ಉಂಟಾಗದಿರದು. ಪರಿಷತ್ತಿನ ಕಾರ್ಯನಿರ್ವಹಣಕ್ಕೆ ಸಾಕಾದಷ್ಟು "ಸಿಬ್ಬಂದಿ"ಯು ಇಲ್ಲವೆಂದು ನನ್ನ ತಿಳಿವಳಿಕೆ. ಗೌರವಾಧಿಕಾರಿಗಳು ಎಷ್ಟೋ ಶ್ರಮಪಟ್ಟು ಕೆಲಸಮಾಡುತ್ತಿರುವರಾದರೂ, ವಾಡಿಕೆಯ ಕೆಲಸಗಳನ್ನು ನಿರಾತಂಕವಾಗಿ ನೆರವೇರಿಸುವ ಸಲುವಾಗಿ ಇನ್ನೂ ಕೆಲವು ಮಂದಿ ಸಂಬಳದ ನೌಕರರನ್ನು ಇಟ್ಟುಕೊಳ್ಳುವುದು ಆವಶ್ಯಕವೆಂದು ನಾನು ಭಾವಿಸುತ್ತೇನೆ. ಪರಿಷತ್ತಿನಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ಏತದಧಿಕಾರಿಗಳು ಪತ್ರಿಕೆಗಳ ಮೂಲಕವಾಗಿ ಆಗಾಗ ತಕ್ಕಂತೆ ತಿಳಿಯಪಡಿಸದಿರುವಿಕೆಯಿಂದಲೂ, ಸ್ವಲ್ಪಮಟ್ಟಿಗೆ ನಿಂದಕರು ದುಡುಕಿ ದೋಷಾರೋಪಣೆಗಳನ್ನು ಮಾಡುತ್ತಿರುವುದರ ಮೂಲಕವೂ, ಪರಿಷತ್ತಿನ ವಿಷಯದಲ್ಲಿ ಮಹಾಜನರು ತುಂಬ ಅಸಮಾಧಾನಪಟ್ಟಿರುವರೆಂದು ನನಗೆ ತೋರುವುದು. ಆದುದರಿಂದ ಪರಿಷತ್ತು ಪ್ರಾರಂಭವಾದುದು ಮೊದಲು ಇಂದಿನವರೆಗೆ, ಎಂದರೆ ಕಳೆದ ಹತ್ತು ವರ್ಷಗಳಲ್ಲಿ ನಡೆದ ಕಾರ್ಯಕಲಾಪ, ಪರಿಷತ್ತಿನ ಉದ್ದೇಶ, ವಾರ್ಷಿಕ ಸಮ್ಮೇಳನಗಳಲ್ಲಿ ಪರಿಷತ್ತಿನವರು ನೆರವೇರಿಸಬೇಕೆಂದು ಮಾಡಲಾದ ಹಲವು ನಿರ್ಣಯಗಳು, ಅವುಗಳನ್ನು ನೆರವೇರಿಸುವಲ್ಲಿ ಪ್ರಾಪ್ತವಾದ ಜಯಾಪಜಯಗಳು, ಮಹಾಜನರ ಮೂಲಕ ದೊರೆತ ಒತ್ತಾಸೆ, ಬೇರೆ ಬೇರೆ ಕಾಲಗಳಲ್ಲಿ ಸೇರಿದ ಅಥವಾ ಬಿಟ್ಟ ಸದಸ್ಯರುಗಳ ಪಟ್ಟಿ, ಆರ್ಥಿಕ ಪರಿಸ್ಥಿತಿ-ಇವೇ ಮುಂತಾದುವುಗಳನ್ನೆಲ್ಲ ಕ್ರೋಢೀಕರಿಸಿ ಸಣ್ಣ ಪುಸ್ತಕ ರೂಪವಾಗಿ ಮುದ್ರಿಸಬೇಕೆಂದು ಪರಿಷತ್ತಿನ ಅಧಿಕಾರಿಗಳನ್ನು ನಾನು ಕೇಳಿಕೊಳ್ಳುವೆನು. ಹೀಗೆ ಮಾಡಿದರಾದರೆ ಇಷ್ಟು ವರ್ಷಗಳಿಂದಲೂ ಪರಿಷತ್ತಿನಲ್ಲಿ ನಡೆಯುತ್ತಿರುವ ಕೆಲಸವು ಜನರಿಗೆ ವ್ಯಕ್ತವಾಗಿ ತಿಳಿದುಬಂದು ತಪ್ಪು ತಿಳವಳಿಕೆಗೆ ಕಾರಣವು ಕಡಿಮೆಯಾಗುವುದಲ್ಲದೆ ಪರಿಷತ್ತಿನ ವಾಸ್ತವಸ್ಥಿತಿಯು ಪ್ರಕಟವಾಗುವ ಮೂಲಕ ನಮ್ಮ ಸಂಸ್ಥೆಯು ಅತಿಶಯವಾಗಿ ಅಥವಾ ಇತ್ಯೋಪ್ಯತಿಶಯವಾಗಿ ಜನಗಳ ಮೆಚ್ಚಿಕೆಗೆ ಪಾತ್ರವಾಗದಿರದೆಂದು ಭಾವಿಸುವೆನು.

ಆಗಾಗ ಸಭೆ ಸೇರಿ ನಡೆಯಿಸಿದ ನಡೆವಳಿಕೆಗಳನ್ನು ಓದಿ ನಾನು ಗ್ರಹಿಸಿದಮಟ್ಟಿಗೆ ಪರಿಷತ್ತಿನಿಂದ ಕಳೆದ ಹತ್ತುವರ್ಷಗಳಲ್ಲಿ ಎಷ್ಟರಮಟ್ಟಿನ ಕೆಲಸವು ನಡೆದಿರುವುದೆಂಬ ಅಂಶವನ್ನು ತಮಗೆ ಈ ರೀತಿ ವಿಜ್ಞಾಪಿಸುವೆನು. ಮತ್ತು ಅವರು ನಡೆಯಿಸಿದ ಕೆಲಸಗಳನ್ನು ನಮ್ಮ ರಾಷ್ಟ್ರ ಜಾಗ್ರತಿಗಾಗಿ ಸಾಹಿತ್ಯಾಭಿವೃದ್ಧಿಗೂ ಎಷ್ಟರಮಟ್ಟಿಗೆ ಪ್ರಯೋಜಕಾರಿಗಳಾಗಿವೆ ಎಂಬ ವಿಷಯದಲ್ಲಿಯೂ ಮುಂದೆ ಯಾವ ಯಾವ ಮಾರ್ಗಗಳನ್ನು ಕೈಗೊಂಡ ಕೆಲಸಗಳನ್ನು ನಡೆಯಿಸಬೇಕಾಗಿದೆ ಎಂಬ ವಿಷಯದಲ್ಲಿಯೂ ನನ್ನ ಸ್ವಾಭಿಪ್ರಾಯಗಳನ್ನು ತಿಳಿಸಿದಂತಾಯಿತು.

ಏಕರೂಪ ಶಿಕ್ಷಣ ವಿಚಾರ

ನಮ್ಮ ದೇಶದ ವಿದ್ಯಾ ವಿಷಯವಾದ ಸಮಸ್ಯೆಗಳನ್ನು ಕುರಿತು ಮಾಡನಾಡುವಲ್ಲಿ ಒಂದು ಆಲೋಚನೆಯು ನಮ್ಮ ಮನಸ್ಸಿನಲ್ಲಿ ಅಂಕುರಿತವಾಗುವುದು. ಅದೇನೆಂದರೆ- ಮೈಸೂರು, ಮದ್ರಾಸ್, ಬೊಂಬಾಯಿ ಮತ್ತು ಹೈದ್ರಾಬಾದ್ ಯೂನಿವರ್ಸಿಟಿ ಮೆಂಬುರುಗಳನ್ನೂ, ಇತರ ವಿದ್ಯಾಭಿಮಾನಿಗಳನ್ನೂ ಒಳಗೊಂಡ ಒಂದು ಉಪಸಭೆಯನ್ನು ಈ ಸಮ್ಮೇಳನದವರಾಗಲಿ, ಸಾಹಿತ್ಯ ಪರಿಷತ್ತಿನವರಾಗಲಿ ನೇಮಿಸುವುದು ಉತ್ತಮ. ಇಂತಹ ಉಪಸಭೆಯವರು ಒಂದು ಕಡೆ ಸೇರಿ ಬೇರೆ ಬೇರೆ ಭಾಗಗಳಲ್ಲಿಯು ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯದ ಅಭ್ಯಾಸಕ್ರಮಗಳಲ್ಲಿ ಕನ್ನಡವು ಯಾವ ಸ್ಥಾನದಲ್ಲಿದೆಯೆಂಬುದನ್ನು ಪರಸ್ಪರ ಚರ್ಚೆಯಿಂದ ಪರ್ಯಾಲೋಚಿಸಿದ್ದಲ್ಲಿ ಕನ್ನಡದ ಅಭಿವೃದ್ಧಿಪಥದಲ್ಲಿರುವ ಕಂಟಕಗಳನ್ನು ತೆಗೆದುಹಾಕುವುದಕ್ಕೂ ಕರ್ನಾಟಕ ದೇಶದ ಸಮಸ್ತಭಾಗಗಲ್ಲಿಯೂ ಕನ್ನಡದ ಅಭ್ಯಾಸವು ಇತ್ಯೋದ್ಯತಿಶಯವಾಗಿ ಏಕರೂಪತೆಯನ್ನು ಪಡೆಯುವುದಕ್ಕೂ

ಜನಪ್ರಿಯವಾಗುವುದಕ್ಕೂ ವಿಸ್ತಾರವಾದ ಪ್ರಮಾಣದಲ್ಲಿ ಬೆಳೆಯುವುದಕ್ಕೂ ಉಪಾಯಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು.

ಜಾಯಿಂಟ್ ಸ್ಟಾಕ್ ಕಂಪನಿ ಸ್ಥಾಪನೆ ವಿಚಾರ


ನಮ್ಮ ಜನರು – ಖಾಸಗೀ ಜನರಿಂದ ಅಲ್ಲ–ಸಾಹಿತ್ಯ ಪರಿಷತ್ತಿನವರಿಂದಲೇ ಹೊರಡಬೇಕೆಂದಿದ್ದ 'ಜಾಯಿಂಟ್ ಸ್ಟಾಕ್' ಕಂಪನಿಯಲ್ಲಿ ಬರಿಯ ಐದೈದು ರೂಪಾಯಿಗಳ ಪಾಲುಗಳನ್ನು ಸಹ ಕೊಂಡುಕೊಳ್ಳುವುದಕ್ಕೆ ಮುಂದೆ ಬಾರದೆ ಹೋದರು. ನಮ್ಮ ಜನರ ಈ ಔದಾಸೀನ್ಯವೂ ಅಶ್ರದ್ಧೆಯೂ ಅವರ ಪರಂಪರಾ ಪ್ರಾಪ್ತವಾದ ಹೆಸರುವಾಸಿಗೆ ತಕ್ಕುದೆಂದು ಹೇಳಬರುವಂತಿದೆಯೇ ? ಎಂದೂ ಇಲ್ಲ. ಈ ನನ್ನ ವಿನಯಪುರಸ್ಸರವೂ ಆಂತರಂಗಿಕವೂ ಆದ ಪ್ರಾರ್ಥನೆಯನ್ನು ನಮ್ಮ ಜನರು ಉದಾಸೀನಭಾವದಿಂದ ಕಾಣಲಿಲ್ಲವೆಂದು ತಿಳಿಯುವ ಭಾಗ್ಯವು ನನಗೆ ಪ್ರಾಪ್ತವಾಗದಿರದೆಂದು ನಾನು ನಂಬಿರುತ್ತೇನೆ.

ಬೇರೆ ಬೇರೆ ಪಂಗಡಗಳ ಪ್ರತಿನಿಧಿಗಳೂ ಉಚ್ಚಪದದಲ್ಲಿರುವವರೂ ಅದೆ ಪರಿಷತ್ತಿನ ಪ್ರಮುಖ ಸದಸ್ಯರು ಮೂರು ಮಂದಿಯಾದರೂ ಇರುವ ಬಲವತ್ತರವಾದ ಮಂಡಲಿಯೊಂದನ್ನು ಏರ್ಪಡಿಸಬೇಕು. ಈ ಮಂಡಲಿಯವರು ಕರ್ಣಾಟಕ ರಾಷ್ಟ್ರದೊಳಗಣ ಮುಖ್ಯವಾದ ಪ್ರತಿಯೊಂದು ಪಟ್ಟಣಕ್ಕೂ ಹೋಗಿ, ಅಲ್ಲಲ್ಲಿಯ ದೇಶಾಭಿಮಾನಿಗಳೂ ಗೌರವಾರ್ಹರೂ ಆದ ಜನಗಳಿಂದ ಸಹಾಯಪಡೆದು ಅಲ್ಲಲ್ಲಿಯ ಸ್ಥಳೀಯ ವಿದ್ಯಮಾನಗಳನ್ನು ಗಮನಿಸಿ, ಉಪನ್ಯಾಸಗಳನ್ನು ಮಾಡುತ್ತಲೂ, ಖಾಸಗಿಯಾಗಿ ಮಾತನಾಡುತ್ತಲೂ, ಅಮುದ್ರಿತವಾದ ಗ್ರಂಥಗಳ, ಶಾಸನಗಳ ಮತ್ತು ಚರಿತ್ರ ಸಂಬಂಧವಾದ ವಸ್ತುಗಳ ಸಮಾಚಾರಗಳನ್ನು ಸಂಗ್ರಹಿಸುತ್ತಲೂ, ಪರಿಷತ್ತಿಗೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳುತ್ತಲೂ, ಕರ್ಣಾಟಕ ಸಭೆಗಳನ್ನೂ ಭಾಷಾಪೋಷಕ ಸಂಘಗಳನ್ನೂ ವಾಚನಾಲಯಗಳನ್ನೂ ಪುಸ್ತಕ ಭಂಡಾರಗಳನ್ನೂ ನಾಟಕ ಸಭೆಗಳನ್ನೂ ಏರ್ಪಡಿಸುತ್ತಲೂ, ಕನ್ನಡ ಕೀರ್ತನೆಗಳನ್ನೂ ಗಾಯನ ಸಮಾಜಗಳನ್ನೂ ಪುರಾಣಶ್ರವಣ ಮಂಡಲಿಗಳನ್ನೂ ಏರ್ಪಾಡು ಮಾಡುತ್ತಲೂ, ಕೊನೆಗೆ ಆವಶ್ಯಕವಾದ ಸ್ಥಳಗಳಲ್ಲಿ ವಿದ್ಯಾರ್ಥಿಗಳ ಕನ್ನಡ ಶಿಕ್ಷಣಕ್ಕಾಗಿ ಕನ್ನಡ ಶಾಲೆಗಳನ್ನೂ ಕನ್ನಡ ಸಾಹಿತ್ಯದ ಪ್ರೌಢಾಭ್ಯಾಸಕ್ಕಾಗಿ ಕೂಟಗಳನ್ನೂ ಸ್ಥಾಪಿಸುತ್ತಲೂ ಸಂಚರಿಸುತ್ತಿರಬೇಕು. ಜನರಲ್ಲಿ ಜಾಗೃತಿಯನ್ನುಂಟುಮಾಡತಕ್ಕುದೇ ನಮಗೆ ಪ್ರಕೃತದಲ್ಲಿ ಆವಶ್ಯಕವಾದ ವಿಷಯವಾಗಿದೆ. ಇದನ್ನು ಚಟುವಟಿಕೆಯಿಂದಲೂ ಅವಿರತವಾಗಿಯೂ ಹಲವು ವಿಧದಿಂದ ನಡೆಯಿಸುತ್ತಿರಬೇಕು. ನಮ್ಮ ಕನ್ನಡಿಗರಿಗೆ ಅವರ ಪೂರ್ವದ ಸೌಭಾಗ್ಯವನ್ನು ಜ್ಞಾಪಕಕ್ಕೆ ತಂದುಕೊಡಬೇಕು. ಮತ್ತು ಇಂದಿನ ದುಸ್ಸ್ಥಿತಿಯಲ್ಲಿಯೂ ಕನ್ನಡಿಗರಿಂದ ಪ್ರಪಂಚದ ಉನ್ನತಿಗಾಗಿ ಮಹತ್ತರವಾದ ಸೇವೆಯು ನಡೆಯತಕ್ಕುದಾಗಿದೆಯೆಂಬುದನ್ನು ಮನಮುಟ್ಟುವಂತೆ ತಿಳಿಯ ಹೇಳಬೇಕು.

ಪೂಜನೀಯರೂ ನಮ್ಮ ಪರಿಷತ್ತಿನ ಉಪಾಧ್ಯಕ್ಷರೂ ಆದ **ರಾಜಸಭಾಭೂಷಣ** ಶ್ರೀಮಾನ್ ಕರ್ಪೂರ ಶ್ರೀನಿವಾಸರಾಯರವರು ನನಗೆ ಬರೆದ ಪತ್ರದಲ್ಲಿ ಅಂತಹ ಒಂದು ಮಂಡಲಿಯನ್ನೂ ಶೀಘ್ರದಲ್ಲಿಯೇ ಹೊರಡಿಸಬೇಕೆಂಬುದಿಷ್ಟೇ ಅಲ್ಲದೆ ಅನುಕೂಲವಾದಲ್ಲಿ ಅದನ್ನು ತಾವೇ ಹಿರಿಯರಾಗಿ ಮುಂದು ನಿಂತು ಕರೆದುಕೊಂಡು ಹೊರಡುವಂತೆ ಕೂಡ ತಮ್ಮ ಉದ್ದೇಶವಿರುವುದೆಂದು ನನಗೆ ತಿಳಿಸಿರುವರು. ಇದಕ್ಕಾಗಿ ಅವರನ್ನು ಎಷ್ಟು ಹೊಗಳಿದರೂ ಸಾಲದು. ಈ ಮಂಡಲಿಯವರು ಸುಕ್ಷೇಮದಿಂದ ತುಂಬಿದ ಚೀಲಗಳೊಂದಿಗೆ ಪ್ರಸ್ಥಾನಕ್ಕೆ ಹಿಂದಿರುಗಿ ಬರಲೆಂದು ನಾವೆಲ್ಲರೂ ಅನವರತವೂ ಪ್ರಾರ್ಥಿಸೋಣ.

❖❖

೧೨ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಫ.ಗು. ಹಳಕಟ್ಟಿ



'ವಚನ ಪಿತಾಮಹ'ರೆಂದು ಪ್ರಸಿದ್ಧರಾದ ಫ.ಗು. ಹಳಕಟ್ಟಿ ಅವರು ದಿನಾಂಕ ೨-೭-೧೮೮೦ರಲ್ಲಿ ಗುರುಬಸಪ್ಪ ಹಳಕಟ್ಟಿ - ದಾನಾದೇವಿ ದಂಪತಿಗಳಿಗೆ ಜನಿಸಿದರು. ಇವರು ೧೮೯೬ರಲ್ಲಿ ಧಾರವಾಡದಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ ಮುಂಬೈಯಲ್ಲಿ ಶಿಕ್ಷಣವನ್ನು ಮುಂದುವರೆಸಿದರು. ೧೯೦೪ರಲ್ಲಿ ಎಲ್.ಎಲ್.ಬಿ. ಮುಗಿಸಿ ೧೯೦೭ ವಕೀಲಿ ವೃತ್ತಿ ಪ್ರಾರಂಭಿಸಿದರು.

ಬಿಜಾಪುರದಲ್ಲಿ ೧೯೨೩ರಲ್ಲಿ ಸರ್ಕಾರಿ ವಕೀಲರಾಗಿ ನೇಮಕಗೊಂಡರು. ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯಾಗಿ ಮುಂಬಯಿ ವಿಧಾನಸಭಾ ಸದಸ್ಯರೂ ಕಾರ್ಯನಿರ್ವಹಿಸಿದರು. ಜಿಲ್ಲಾ ಗ್ರಾಮಾಂತರ ಅಭಿವೃದ್ಧಿ ಮಂಡಳಿಯು ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು.

ಬಿಜಾಪುರದಲ್ಲಿ ಕನ್ನಡ ಶಾಲೆಗಳ ಪ್ರಗತಿಗಾಗಿ ಶ್ರಮಿಸಿದರು. ಶಿವಾನುಭವ ಪತ್ರಿಕೆಯನ್ನು, ೧೯೨೬ರಲ್ಲಿ ಪ್ರಾರಂಭಿಸಿದರು. ೧೯೨೮ರಲ್ಲಿ ಕರ್ನಾಟಕ ವಾರಪತ್ರಿಕೆ ಪ್ರಾರಂಭಿಸಿದರು. ವೀರಶೈವ ಶಿಕ್ಷಣ ಫಂಡ್ ವೀರಶೈವ ವಿದ್ಯಾವರ್ಧಕ ಸಂಘ, ಸಿದ್ಧೇಶ್ವರ ಬ್ಯಾಂಕ್ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿದರು.

ಪರಿಷತ್ತಿನ ಸ್ಥಾಪಕವರ್ಗದಲ್ಲಿ ಒಬ್ಬರಾದ ಇವರು ಪರಿಷತ್ತಿನ ಆಜೀವಸದಸ್ಯರಾಗಿ ಜೀವನ ಪರ್ಯಂತ ಶ್ರಮಿಸಿದರು. ಬ್ರಿಟಿಷ್ ಸರ್ಕಾರ ಇವರಿಗೆ ರಾವ್ ಬಹದ್ದೂರ್, ರಾವ್ ಸಾಹೇಬ್ ಪ್ರಶಸ್ತಿಗಳನ್ನು ನೀಡಿದರು. ೧೯೨೮ರಲ್ಲಿ ಪರಿಷತ್ತಿನ ಪರವಾಗಿ ಮರಾಠಿ ಪ್ರಭಾವದ ಜಾಗಗಳಲ್ಲಿ ಕನ್ನಡ ಪ್ರಾಥಮಿಕ ಶಾಲಾ ಸ್ಥಾಪನೆಗೆ ಶ್ರಮಿಸಿದರು. ಇವರನ್ನು ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನಿಸಿತು. ಕರ್ನಾಟಕ ವಿಶ್ವವಿದ್ಯಾಲಯ ೧೯೫೬ರಲ್ಲಿ ಗೌರವ ಡಾಕ್ಟರೇಟ್ ನೀಡಿತು. ಬಳ್ಳಾರಿಯಲ್ಲಿ ೧೯೨೬ರಲ್ಲಿ ೧೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೩೩ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದರು.

ಇವರು ಸಂಪಾದಿಸಿದ ಮತ್ತು ರಚಿಸಿದ ಕೃತಿಗಳು :

ವಚನಶಾಸ್ತ್ರಸಾರ (೩ ಭಾಗಗಳು)
೭೭೦ ಅಮರ ಗಣಾಧೀಶ್ವರ ಚರಿತ್ರೆಗಳು
ಶಿವಶರಣ ಕೃತಿಗಳು
ಬಸವೇಶ್ವರ ವಚನಗಳು ಮೊದಲಾದ ಶಿವಶರಣರ ವಚನಸಂಗ್ರಹಗಳು
ಶಿವಾನುಭವ ಶಬ್ದಕೋಶ
ಶೂನ್ಯ ಸಂಪಾದನೆ
ದೇವರ ದಾಸಿಮಯ್ಯ ವಚನ ಮೊದಲಾದ ೬೦ ಗ್ರಂಥಗಳು
ಕೆಳದಿ ಸಂಸ್ಥಾನದ ರಾಯರ ವಂಶಾವಳಿ
ಕೊಡಗು ಸಂಸ್ಥಾನದ ರಾಜೇಂದ್ರನಾಮೆ

೨೭-೦೬-೧೯೬೪ರಲ್ಲಿ ಇವರು ನಿಧನರಾದುದರಿಂದ ವಚನ ಸಾಹಿತ್ಯದ ಮೇರು ವ್ಯಕ್ತಿ ಮರೆಯಾದಂತಾಯಿತು.

ಕನ್ನಡ ಸಾಹಿತ್ಯ ಸಮ್ಮೇಳನ-೧೨,
ಅಧ್ಯಕ್ಷರು: ಫ.ಗು. ಹಳಕಟ್ಟಿ
ದಿನಾಂಕ ೨೨, ೨೩, ೨೪ ಮೇ ೧೯೨೬
ಸ್ಥಳ : ಬಳ್ಳಾರಿ

---

(೧) ಯೋಗ್ಯ ಶಿಕ್ಷಣ ಕ್ರಮ

ನಮ್ಮ ಕರ್ನಾಟಕಸ್ಥರಲ್ಲಿ ಕರ್ನಾಟಕತ್ವದ ಅಂಕುರವನ್ನು ಬೇರೂರಿಸಬೇಕಾದರೆ, ನಮ್ಮ ವಿದ್ಯಾಸಂಸ್ಥೆಗಳ ಶಿಕ್ಷಣಕ್ರಮದಲ್ಲಿ ಯೋಗ್ಯ ಬದಲಾವಣೆಗಳು ಆಗುವುದು ಅವಶ್ಯವಿರುತ್ತದೆ. ಯೋಗ್ಯ ಶಿಕ್ಷಣಕ್ರಮವಿಲ್ಲದೆ ಹೋದರೆ, ಯಾವ ದೇಶವೂ ಮುಂದುವರಿಯಲಾರದು. ಸಾಮಾನ್ಯವಾಗಿ ಹಿಂದುಸ್ಥಾನವು, ಅವರಲ್ಲಿ ವಿಶೇಷವಾಗಿ ಕರ್ನಾಟಕ ದೇಶವು ಚೈತನ್ಯಶೂನ್ಯವಾದುದಕ್ಕೆ ಅದರಲ್ಲಿ ಯೋಗ್ಯ ಶಿಕ್ಷಣಕ್ರಮವಿಲ್ಲದ್ದೇ ಮುಖ್ಯ ಕಾರಣವೆಂದು ನನಗೆ ತೋರುತ್ತದೆ. ಅಕ್ಷರಜ್ಞರ ಸಂಖ್ಯೆಯು ಈಗಿನ ಕಾಲಕ್ಕೆ ಮೊದಲಿಗಿಂತಲೂ ಹೆಚ್ಚಾಗಿರಬಹುದು. ಆದರೆ ಅವರಲ್ಲಿ ತಮ್ಮ ದೇಶದ ಬಗ್ಗೆ ಜಾಜ್ವಲ್ಯ ಪ್ರೀತಿಯೂ ತಮ್ಮ ಸಂಸ್ಕೃತಿಯ ಜ್ಞಾನವೂ ಇರದೆ ಹೋದರೆ, ಆ ವಿದ್ಯೆಯ ಪ್ರಯೋಜನವೇನು? ಆದ್ದರಿಂದ ಸಾಹಿತ್ಯ ಪರಿಷತ್ತಿನವರು ಕೈಕೊಳ್ಳಬಹುದಾದ ಅನೇಕ ಕಾರ್ಯಗಳಲ್ಲಿ ಯೋಗ್ಯ ಪಠ್ಯ ಪುಸ್ತಕಗಳನ್ನು ನಿರ್ಮಿಸುವ ಕಾರ್ಯಕ್ಕೆ ನಾನು ಅಗ್ರಸ್ಥಾನವನ್ನು ಕೊಡುತ್ತೇನೆ. ನಮ್ಮ ಶಿಕ್ಷಣಕ್ರಮದಲ್ಲಿ ಪ್ರಾಥಮಿಕ ಶಿಕ್ಷಣ, ಹೈಸ್ಕೂಲು ಶಿಕ್ಷಣ, ಕಾಲೇಜು ಶಿಕ್ಷಣ ಅಥವಾ ಉಚ್ಚಶಿಕ್ಷಣ ಎಂಬ ಮೂರು ಭಾಗಗಳು ಇವೆ. ಈ ಮೂರು ಶಿಕ್ಷಣಕ್ರಮದಲ್ಲಿಯೂ ಮೇಲ್ಕಂಡ ದೋಷಗಳು ಇರುತ್ತವೆ. ಇವುಗಳನ್ನು ನಾವು ತೀವ್ರವಾಗಿ ತೆಗೆದು ಹಾಕಲಿಕ್ಕೆ ಯತ್ನಿಸಬೇಕು.

ಪಠ್ಯನಿರ್ಮಾಣ ಪರಷತ್ತಿನದಾಗಬೇಕು

ಪ್ರಾಥಮಿಕ ಶಾಲೆಗಳಲ್ಲಿ ತಕ್ಕ ಪಠ್ಯಪುಸ್ತಕಗಳನ್ನು ನಿರ್ಮಿಸುವ ಕಾರ್ಯವನ್ನು ಮುಂಬಯಿ ಕರ್ನಾಟಕದಲ್ಲಿಯ ಲೋಕಲ್ ಬೋರ್ಡ, ಮುನಿಸಿಪಾಲಿಟಿಯವರು ಈಗ ತೀವ್ರವಾಗಿ ಅಂಗೀಕರಿಸಬೇಕೆಂದು ನನ್ನ ಒತ್ತಾಯದ ಸೂಚನೆ ಇದೆ. ಮುಂಬಯಿ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯು ಲೋಕಲ್ ಬೋರ್ಡ್ ಮುನಿಸಿಪಾಲಿಟಿಗಳಿಗೆ ಒಪ್ಪಿಸಲ್ಪಟ್ಟಿದ್ದು ಒತ್ತಾಯದ ಶಿಕ್ಷಣವು ಇಲ್ಲಿ ಕೂಡಲೆ ಪ್ರಚಾರದಲ್ಲಿ ಬರತಕ್ಕದ್ದಾಗಿರುತ್ತವೆ. ಈ ಕಾಯಿದೆಯ ಪ್ರಕಾರ ಕ್ರಮಿಕ ಪುಸ್ತಕಗಳನ್ನು ಸಿದ್ಧಗೊಳಿಸುವ ಅಧಿಕಾರವೂ ಈ ಸಂಸ್ಥೆಗಳಿಗೆ ಕೊಡಲ್ಪಟ್ಟಿರುತ್ತದೆ. ಈ ಅಧಿಕಾರದ ಉಪಯೋಗವನ್ನು ಕರ್ನಾಟಕದಲ್ಲಿಯ ಲೋಕಲ್ ಬೋರ್ಡ್ ಮುನಿಸಿಪಾಲಿಟಿಯವರು ತೀವ್ರವಾಗಿ ಮಾಡಬೇಕೆಂದು ನನ್ನ ಸೂಚನೆ ಇದೆ. ಈ ಬೋರ್ಡಿನವರು ಸಾಹಿತ್ಯ ಪರಿಷತ್ತಿನ ಮತ್ತು ಮಂಗಳೂರು, ಬಳ್ಳಾರಿ ಪ್ರಾಂತಗಳ ಮಹನೀಯರ ಸಲಹೆ ಮತ್ತು ಸಹಾನುಭೂತಿಯನ್ನು ತೆಗೆದುಕೊಂಡು ಈ ಪಠ್ಯಪುಸ್ತಕಗಳನ್ನು ನಿರ್ಮಿಸತಕ್ಕದ್ದು. ಹೀಗೆ ನಿರ್ಮಿಸಿದ ಪುಸ್ತಕಗಳು ಎಲ್ಲ ಪ್ರಾಂತಗಳ ಕನ್ನಡ ಶಾಲೆಗಳಲ್ಲಿ ಉಪಯೋಗಿಸಲ್ಪಡಲು ಪ್ರಯತ್ನಿಸತಕ್ಕದ್ದು. ಹೀಗೆ ನಾವು ಈ ಪ್ರಯತ್ನದಲ್ಲಿ ಯಶಸ್ಸನ್ನು ಸಂಪಾದಿಸಿದರೆ, ಒಂದೇ ಮಾದರಿಯ ಪಠ್ಯಪುಸ್ತಕಗಳು ಎಲ್ಲ ಕಡೆಗೆ ಪ್ರಚಾರಕ್ಕೆ ಬಂದು, ಇದರಿಂದ ಕರ್ನಾಟಕದ ಅರಿವು ನಮ್ಮ ಜನರಿಗೆ ಆಗುವುದಲ್ಲದೆ, ಕರ್ನಾಟಕದ ಭಾಷೆಯಲ್ಲಿ ಈಗ ತೋರುವ ಭಿನ್ನತೆಗಳೂ ಕಡಿಮೆಯಾಗುತ್ತ ಹೋಗುವವು. ಈ ಪ್ರಯತ್ನದಲ್ಲಿ ನಾವು ಜಯಶೀಲರಾದರೆ ಒಂದು ಮಹತ್ವದ ಕಾರ್ಯವನ್ನು ಮಾಡಿದಂತೆ ಆಗುವದು.

ಶಾಖಾಸಂಘಗಳು ಬೇಕು

ದೇಶದಲೆಲ್ಲ ಜಾಗೃತಿಯನ್ನುಂಟುಮಾಡಲಿಕ್ಕೆ ಒಂದೇ ಒಂದು ಮಧ್ಯವರ್ತಿ ಸಾಹಿತ್ಯಪರಿಷತ್ತಿಗೆ ಸಾಧ್ಯವಾಗಲಾರದು? ಅವರ ಸಹಾಯಕ್ಕೋಸ್ಕರ ಎಲ್ಲ ಕಡೆಗೆ ಶಾಖಾಸಂಘಸಂಸ್ಥೆಗಳು ಆಗುವುದು ಅವಶ್ಯವಿದೆ. ಈ ತೆರದ ಜಾಗೃತಿಯನ್ನು ಹುಟ್ಟಿಸಲಿಕ್ಕೆ ಸಾಹಿತ್ಯ ಪರಿಷತ್ತಿನವರು ವಿಶೇಷ ಕ್ರಮವನ್ನು ವಹಿಸಲಿಕ್ಕೆ ಬೇಕು. ಸಾಹಿತ್ಯ ಸಮ್ಮೇಳನವನ್ನು ಒಂದು ವರ್ಷ ಎಲ್ಲಾದರೂ ಕೂಡಿಸಿದರೆ ನಾವು ಇಚ್ಛಿಸಿದ ಕಾರ್ಯಗಳು ನೆರವೇರಲಾರವು. ಪ್ರತಿಯೊಂದು ಜಿಲ್ಲೆಯ ಕನ್ನಡ ಭಾಷಾಪ್ರೇಮಿಗಳು ತಮ್ಮ ಜಿಲ್ಲೆಯಲ್ಲಿಯೂ ಅದರಂತೆಯೇ ತಮ್ಮ ಹಿಂದೆ ಬಿದ್ದ ನೆರೆಜಿಲ್ಲೆಗಳಲ್ಲಿಯೂ ಕರ್ನಾಟಕತ್ವದ ಭಾವನೆಯನ್ನು ಜಾಗ್ರತೆಪಡಿಸಲಿಕ್ಕೆ ಸದಾ ಪ್ರಯತ್ನಿಸುತ್ತಿರಬೇಕು. ಅವರು ಕರ್ನಾಟಕ ವಾಙ್ಮಯ ಮತ್ತು ಇತಿಹಾಸವನ್ನು ವಿಶೇಷ

ಅಭ್ಯಾಸಮಾಡಿದವರನ್ನು ತಮ್ಮಲ್ಲಿಗೆ ಆಗಿಂದಾಗ್ಗೆ ಬರಮಾಡಿಕೊಂಡು ಅವರ ಜ್ಞಾನದ ಲಾಭವನ್ನು ಜನರಿಗೆ ಮಾಡಿಕೊಡುತ್ತಿರಬೇಕು.

ಉಪಸಂಹಾರ

ಸಭ್ಯಗೃಹಸ್ಥರೇ, ಈ ಮೇರೆಗೆ ನಾವು ಮಾಡತಕ್ಕ ಪ್ರಯತ್ನಗಳನ್ನು ಸ್ಥೂಲಮಾನದಿಂದ ಇಲ್ಲಿ ನಿರ್ದೇಶಿಸಿದ್ದೇನೆ. ಈ ಸಂಗತಿಗಳ ಬಗ್ಗೆ ನನಗೆ ಪರಿಷತ್ತುಗಳಲ್ಲಿ ಅನೇಕ ನಿರ್ಣಯಗಳು ಆಗಿರುತ್ತವೆ. ಆದರೆ, ಈ ಬಗ್ಗೆ ಪ್ರಯತ್ನಗಳು ಮಾತ್ರ ಬಲವಾಗಿಯೂ ವ್ಯವಸ್ಥೆಯಿಂದಲೂ ನಮ್ಮಲ್ಲಿ ನಡೆದಿರುವದಿಲ್ಲೆಂಬುದು ಬಹು ವಿಷಾದಕರವಾದದ್ದು. ವಾಙ್ಮಯಾಭಿವೃದ್ಧಿಯು ಒದಗಬೇಕಾದರೆ ವಿದ್ವಜ್ಜನರು ಒಂದೇ ಸಮನೇ ಪ್ರಯತ್ನಿಸುವದು ಅವಶ್ಯವಿದೆ. ಈ ಅಭಿವೃದ್ಧಿಯು ಪರಿಷತ್ತಿನಲ್ಲಿ ಮಾಡುವ ನಿರ್ಣಯಗಳನ್ನೇ ಅವಲಂಬಿಸಿಲ್ಲ. ಈ ಕಾರ್ಯಭಾರವನ್ನು ನಮ್ಮಲ್ಲಿಯ ಸುಶಿಕ್ಷಿತರು ವಿಶೇಷವಾಗಿ ಕೈಕೊಳ್ಳತಕ್ಕದ್ದು.

❖❖

೧೩ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಆರ್. ತಾತಾಚಾರ್ಯ (ಆರ್. ತಾತಾ)



ಕನ್ನಡ ನಾಡಿನಲ್ಲಿ ಇರದೆ ಆಚೆ ಇರುವ ಕನ್ನಡಿಗರಲ್ಲಿ ಅನೇಕರು ಕನ್ನಡಕ್ಕೆ ಸಾಕಷ್ಟು ದುಡಿದಿದ್ದಾರೆ. ಅವರಲ್ಲಿ ನಿಷ್ಠಾವಂತ ಕನ್ನಡ ಭಕ್ತ ಆರ್. ತಾತಾಚಾರ್ಯರೂ ಒಬ್ಬರು. ಕನ್ನಡ ಭಾಷಾ ಏಕೀಕರಣಕ್ಕೆ ಶ್ರಮಿಸಿದ ಇವರು ೧೮೭೭ರಲ್ಲಿ ಜನಿಸಿದರು. ತಂದೆ ರಾಜಕವಿ ತಿರುಮಲೆ ವೆಂಕಟಾಚಾರ್ಯರು ಘನ ವಿದ್ವಾಂಸರು. ಪ್ರಸಿದ್ಧ ನಟ ವರದಾಚಾರ್ಯರಿಗೆ ನಾಟಕಗಳನ್ನು ರಚಿಸಿಕೊಡುತ್ತಿದ್ದರು. ಮದ್ರಾಸ್ ವಿಶ್ವವಿದ್ಯಾಲಯದಿಂದ ಎಂ.ಎ., ಎಲ್.ಟಿ ಪದವಿಗಳನ್ನು ಪಡೆದರು.

ಮದ್ರಾಸಿನ ವಿದ್ಯಾ ಇಲಾಖೆಗೆ ಸೇರಿ ರಾಜಮಹೇಂದ್ರಿ ಟ್ರೈನಿಂಗ್ ಸರ್ಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಮದರಾಸಿನ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ೧೯೨೦ರಲ್ಲಿ ವಿದ್ಯಾಧಿಕಾರಿಯಾದರು.

ಆರ್. ತಾತಾ ಎಂದು ಇವರು ಕನ್ನಡ ಪಂಡಿತ ವರ್ಗದಲ್ಲಿ ಪ್ರಸಿದ್ಧರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ೧೯೨೭ರಲ್ಲಿ ಇವರ ಕನ್ನಡ ಸೇವೆಯನ್ನು ಗುರುತಿಸಿ ಸಮ್ಮೇಳನಾಧ್ಯಕ್ಷರನ್ನಾಗಿ ಆರಿಸಿತು.

ಜೈನ ಮತ್ತು ವೀರಶೈವ ಶಾಸ್ತ್ರಗಳಲ್ಲಿ ಘನ ಪಂಡಿತರಾದ ಇವರು ರಚಿಸಿದ ಕೆಲವು ಕೃತಿಗಳು ಹೀಗಿವೆ.

೧. ಮರುನ್ನಂದನ ಶತಕ
೨. ಗಿರಿಮಲ್ಲಿಕಾರ್ಜುನ ಶತಕಂ
೩. ಗುರುದತ್ತರಾಯನ ಚರಿತ್ರೆ
೪. ಕಿತ್ತೀಳೆಯೂ ಕನ್ನಡವೂ (ವಿಮರ್ಶಾ ಲೇಖನ)
೫. ಕನ್ನಡ ಶಬ್ದದ ವ್ಯುತ್ಪತ್ತಿ (ವಿಮರ್ಶಾ ಲೇಖನ)

ವಿನಯಶಾಲಿ, ಸ್ಪಷ್ಟವಾದಿಗಳು ಆಗಿದ್ದ ಇವರು ೩೦-೧೨-೧೯೩೨ರಲ್ಲಿ ಮರಣಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನ-೧೩
ಅಧ್ಯಕ್ಷರು: ಆರ್. ತಾತಾಚಾರ್ಯ
ದಿನಾಂಕ ೧೯, ೨೦, ೨೧ ಮೇ ೧೯೨೭
ಸ್ಥಳ : ಮಂಗಳೂರು

ಮಲ್ಲಪ್ಪನವರ ವ್ಯಾಕರಣ ಸಾಕು

ಕನ್ನಡ ಭಾಷೆಯಲ್ಲಿ ಈಗಿನ ಕಾಲಕ್ಕೆ ತಕ್ಕ ವ್ಯಾಕರಣವೊಂದು ಆಗಬೇಕೆಂದು ಪರಿಷತ್ಪತ್ರಿಕೆಯಲ್ಲಿ ಒಂದೆಡೆಯಲ್ಲಿ ಸೂಚನೆ ಹೊರಟಿದೆ. ಈ ಕೆಲಸವು ಪರಿಷತ್ತಿನ ಸಂಬಂಧವಾಗಿದ್ದರೆ ಅದನ್ನು ಪರಿಷತ್ತಿನವರು ಕೈಕೊಳ್ಳಬಹುದಾದರೂ ಮಲ್ಲಪ್ಪನವರ ಶಬ್ದಾದರ್ಶವು ಸಾಕೆಂದು ತೋರುವುದು. ಅದು ಸಾಲದಿದ್ದಲ್ಲಿ ಮತ್ತೊಮ್ಮೆ ಪುನರಾವೃತ್ತಿ ಆದರೆ ಸಾಕು.

ಪ್ರಾಚೀನ ಗ್ರಂಥಗಳ ಪ್ರಕಟನೆ ಮುಖ್ಯ

ಮಹಾಶಯರೇ! ಈ ಪ್ರಾಚೀನ ಗ್ರಂಥಗಳ ವಿಷಯದಲ್ಲಿ ಎಷ್ಟು ಹೇಳಿದರೂ ಸಮಯವು ಸಾಲದು. ಸುಮ್ಮನೆ ಚಿಂತಿಸುವುದರಿಂದ ಈ ಕರ್ತವ್ಯವೇನೂ ಆದಂತೆ ಕಾಣುವುದಿಲ್ಲ. ಈ ವಿಷಯದಲ್ಲಿ ಪರಿಷತ್ತಿನವರ ಸಂಪಾದಕ ಮಂಡಲಿ ಎಷ್ಟು ವಿಶಾಲವಾದರೂ ಸಾಲದು. ಹಣದ ವಿಷಯದಲ್ಲಿ ಪ್ರತಿಫಲವನ್ನುದ್ದೇಶಿಸಿ ಮಾಡುವ ಖರ್ಚಲ್ಲವೆಂದು ನಿಷ್ಕರ್ಷೆಯಿಂದ ದಾನವೆಂದೇ ಎಣಿಸಿ ಉದಾರ ರಾಜಪೋಷಕರಾದ ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ತಮ್ಮ ನಿಸರ್ಗವಾದ ಉದಾರತೆಯಿಂದ ಇದಕ್ಕೆ ನೆರವಾಗುವಂತೆ ಪ್ರಾರ್ಥಿಸುವುದೇ ನಮ್ಮ ಕರ್ತವ್ಯವು.

ಪರಿಷತ್ತಿನ ಕೆಲಸಗಳಿಗೆ ನೆರವಾಗೋಣ

ಪರಿಷತ್ತಿನ ಮೇಲೆಯೇ ಭಾರವೆಲ್ಲವನ್ನೂ ಹೊರಿಸಿ ನಮ್ಮಲ್ಲಿ ಕೆಲವರು ತೆಪ್ಪನೆ ಕುಳಿತಿರುವರು. ತಪ್ಪು ಕಂಡುಬಂದಾಗ ಬುಸುಗುಟ್ಟುವುದಾಗಲಿ ಗೊಣಗುಟ್ಟುವುದಾಗಲಿ ಎಂತಹ ನ್ಯಾಯ? ಪರಿಷದ್ವರ್ತಮಾನಗಳು ಸರ್ವಜನಸಮ್ಮತವವಾಗಿರಲಾರವಾದರೂ ಅವರು ಮಾಡಿರುವ ಕೆಲಸಗಳನ್ನು ಚೆನ್ನಾಗಿ ಪರಿಶೀಲಿಸಿದಲ್ಲಿ ಹನ್ನೆರಡು ವರುಷಗಳೊಳಗೆ ಇಷ್ಟೊಂದು ಕೆಲಸವಾದುದು ಆಶ್ಚರ್ಯವೇ ಸರಿ. ಮತ್ತಿನವರ ನೆರವಷ್ಟಿಲ್ಲದೆ ತಮ್ಮಲ್ಲಿ ತಾವೇ ಶ್ರಮಪಟ್ಟು ಗ್ರಂಥಗಳನ್ನು ರಚಿಯಿಸಿ ಮುದ್ರಿಸಿ ಪ್ರಚರಿಸಿದುದೂ ಅಲ್ಲದೆ ವಿಶೇಷ ವಿಷಯಗಳನ್ನೊಳಗೊಂಡ ಪರಿಷತ್ಪತ್ರಿಕೆಯನ್ನು ತಕ್ಕಷ್ಟು ಗೌರವದಿಂದ ನಡೆಯಿಸುತ್ತಿರುವುದನ್ನು ನೋಡಿದರೆ ಪರಿಷಜ್ಜನರಿಗೆ ನಾವು ಅಂಜಲಿಬದ್ಧರಾಗಿ ಧನ್ಯವಾದಗಳನ್ನು ಹೇಳಲೇಬೇಕು. ತಪ್ಪು ಕಂಡು ಹಿಡಿವುದೇ ಮುಖ್ಯೋದ್ದೇಶವೆಂದಿರುವ ಮೇಲಿಟ್ಟಿರುವ ಮಹಾಶಯರಿಗೆ ಸ್ವಲ್ಪವಾದರೂ ಗುಣವು ಕಣ್ಣಿಗೆ ಬೀಳುವುದಿಲ್ಲ. ಪರಿಷತ್ತಿಗೆ ಇರುವ ಅಧಿಕ ಕಾರ್ಯವನ್ನು ಲಘುವಾಗಿ ಮಾಡಿಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿರುವುದು. ವಾಙ್ಮಯ ರಾಜ್ಯದಲ್ಲಿ ಪರಿಷಜ್ಜನರೇ ರಾಜ್ಯಭಾರವನ್ನು ಮಾಡುತ್ತಿರಲಿ; ಭಯವಿಲ್ಲ; ಅನ್ಯಾಯವಾದೀತೆಂಬ ಹೆದರಿಕೆಯೂ ಬೇಡ. ನಮ್ಮ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಉಪಾಧ್ಯಕ್ಷರುಗಳ ಹೆಸರುಗಳೇ ಅಂತಹ ದುಶ್ಯಬ್ದಕ್ಕೂ ದುರ್ಗಂಧಕ್ಕೂ ಎಡೆಗೊಡದೆ ರಕ್ಷಿಸುವ ರಕ್ಷಾಮಣಿಗಳು. ಪರಿಷತ್ತಿಗೆ ರಾಜ್ಯಭಾರವಾಗಲಿ ರಾಜಕಾರ್ಯವಾಗಲಿ ರಾಜತಂತ್ರವೇ ಇರಲಿ ನಮಗೇಕದರ ಗೊಡವೆ? ಸಾಹಿತ್ಯದಲ್ಲಿ ನಡೆಯಬೇಕಾಗಿರುವ ಊಳಿಗವನ್ನು ಮಾತ್ರ ನಾವೆಲ್ಲರೂ ಕೂಡಿ ಈವರೆಗೆ ಅಶ್ರದ್ಧೆಯೋ ಸಮಯ ವಿರೋಧವೋ ವ್ಯಕ್ತಿವೈರವೋ ದೇಶಾಂತರ ವಿವಾದವೋ ವಿಷಯಾಂತರಾಳವೋ ಮತವಿರೋಧವೋ ಏನಿದ್ದರೂ ತೊರೆದು ಮರೆತು ನಮ್ಮ ಸಜ್ಜನಿಕೆಯನ್ನೂ ಕಾರ್ಯದಕ್ಷತೆಯನ್ನೂ ನೈಪುಣ್ಯವನ್ನೂ ಸಾಹಿತ್ಯವನ್ನೂ ಮೆರೆಯಲು ನಾವೆಲ್ಲರೂ ನೆರೆಯಬೇಕೆಂಬುದು ನನ್ನ ಸವಿನಯ ಪ್ರಾರ್ಥನೆ.

❖❖

೧೪ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಬಿ.ಎಂ. ಶ್ರೀಕಂಠಯ್ಯ



ಹೊಸಗನ್ನಡ ಆಚಾರ್ಯ ಪುರುಷರೆನಿಸಿದ 'ಶ್ರೀ' ಕಾವ್ಯನಾಮದ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು, ಬಿಎಂಶ್ರೀ ಎಂದೇ ಪ್ರಖ್ಯಾತರಾದವರು. ಮೈಲಾರಯ್ಯ-ಭಾಗೀರಥಮ್ಮ ದಂಪತಿಗಳಿಗೆ ೩-೧-೧೮೮೪ರಲ್ಲಿ ಜನಿಸಿದರು. ಮೈಸೂರಿನಲ್ಲಿ ಪ್ರೌಢ ಶಿಕ್ಷಣ ಪಡೆದ ನಂತರ ಸೆಂಟ್ರಲ್ ಕಾಲೇಜಿನಲ್ಲಿ ೧೯೦೩ರಲ್ಲಿ ಬಿ.ಎ. ಪದವಿಯನ್ನು, ೧೯೦೬ರಲ್ಲಿ ಮದರಾಸಿನಲ್ಲಿ ಬಿ.ಎಲ್ ಪದವಿಯನ್ನು ಪಡೆದರು. ೧೯೦೭ರಲ್ಲಿ ಎಂ.ಎ. ಪದವಿಯನ್ನೂ ಗಳಿಸಿದರು.

೧೯೧೧ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾಗಿ ನೇಮಕಗೊಂಡು ೩೦ ವರ್ಷಗಳವರೆಗೆ ದುಡಿದರು. ೧೯೨೬ ರಿಂದ ೧೯೩೦ರವರೆಗೆ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ೧೯೨೭ರಿಂದ ಗೌರವ ಕನ್ನಡ ಪ್ರಾಧ್ಯಾಪಕರಾಗಿ ಅನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ೧೯೪೨ರಲ್ಲಿ ನಿವೃತ್ತರಾದ ಮೇಲೆ ಧಾರವಾಡದ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕಗೊಂಡ ಇವರು ೫-೧-೧೯೪೬ರಲ್ಲಿ ನಿಧನರಾದರು.

ಇವರು ೬೦೦೦ ರೂಪಾಯಿಗಳ ದೇಣಿಗೆ ನೀಡಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಚ್ಚುಕೂಟವನ್ನು ಸ್ಥಾಪಿಸಿದರು. ೧೯೩೧ರಲ್ಲಿ ವಿಶ್ವವಿಖ್ಯಾತ ಕನ್ನಡ ಪುಸ್ತಕ ಮಾಲೆ ಪ್ರಾರಂಭಿಸಿದರು. ೧೪ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದರು. ಪರಿಷತ್ತಿನಲ್ಲಿ ಕನ್ನಡನುಡಿ ಪತ್ರಿಕೆ, ಮಹಿಳಾಶಾಖೆ ಪ್ರಾರಂಭಿಸಿದರು.

೧೯೩೮ರಲ್ಲಿ ರಾಜಸೇವಾಸಕ್ತ ಎಂಬ ಬಿರುದನ್ನು ಮಹಾರಾಜರಿಂದ ಪಡೆದರು. ೧೯೩೮ರಿಂದ ೧೯೪೩ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು.

ನವೋದಯ ಸಾಹಿತ್ಯದಲ್ಲಿ ಮೈಲಿಗಲ್ಲುಗಳಂಥ ಕೃತಿಗಳನ್ನು ರಚಿಸಿದ್ದಾರೆ.

ಇಂಗ್ಲಿಷ್ ಗೀತಗಳು
ಅಶ್ವತ್ಥಾಮನ್ (ನಾಟಕ)
ಪಾರಸೀಕರು (ಗ್ರೀಕ್ ಅನುವಾದಿತ ನಾಟಕ)
ಹೊಂಗನಸುಗಳು (ಕವಿತೆಗಳು)
ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ
ಕನ್ನಡ ಸಾಹಿತ್ಯ ಚರಿತ್ರೆ ಇತ್ಯಾದಿ

ಕನ್ನಡ ಸಾಹಿತ್ಯ ಸಮ್ಮೇಳನ-೧೪
ಅಧ್ಯಕ್ಷರು: ಬಿ.ಎಂ. ಶ್ರೀಕಂಠಯ್ಯ
ದಿನಾಂಕ ೧, ೨, ೩ ಜೂನ್ ೧೯೨೮
ಸ್ಥಳ : ಕಲ್ಬುರ್ಗಿ

ಪರಿಷತ್ತಿನ ಕೆಲಸ ಸಾಹಿತ್ಯದ ಕೆಲಸ

ಮಹಾಶಯರೇ ಒಂದು ದೇಶದ ಶ್ರೇಯೋಭಿವೃದ್ಧಿಗೆ ಅವಶ್ಯವಾದ ಅನೇಕ ಮುಖ್ಯವಾದ ಸಾಧನೆಗಳಲ್ಲಿ ಸಾಹಿತ್ಯಕೃಷಿ ಒಂದಾಗಿರುತ್ತದೆ. ಈ ಸಾಹಿತ್ಯ ಪರಿಷತ್ತಿನಲ್ಲಿ ಮುಖ್ಯವಾಗಿ ನಾವು ವಿಚಾರಮಾಡತಕ್ಕದ್ದು ಸಾಹಿತ್ಯದ ವಿಷಯವೇ ಆಗಿರುತ್ತದೆ. ಒಳ್ಳೆಯ ಸಾಹಿತ್ಯವನ್ನು ಪಡೆದ ಜನಾಂಗದ ಹೃದಯದಲ್ಲಿ ಜ್ಞಾನವೂ ನಿಷ್ಕಲ್ಮಷವಾದ ಆನಂದವೂ ಸತ್ಪ್ರೇರಣೆಯೂ ಸಮಾಜದ ಪ್ರಚಾರ ನಿರ್ಮಾಣ ಕಾರ್ಯದಲ್ಲಿ ಐಕಮತ್ಯವಾಗಿ ಬಲವಾಗಿ ಬೇರೂರಿರುತ್ತದೆ.

"ಮಿತ್ರರಿರಾ, ಬೆಳೆಯೇನೂ ಬೇಕಾದ ಹಾಗಿದೆ; ಕುಯಿಲುಗಾರರು ಕಡಿಮೆ." ಬನ್ನಿ, ಜನ್ಮವನ್ನು ತಮ್ಮ ಜನರ ಬೋಧೆಗಾಗಿ ಸಮರ್ಪಣಮಾಡಿದ ಹೊಸಬಗೆಯ ದೀಕ್ಷಿತರಾಗಿ. ಪೂರ್ಣವಿದ್ಯರಾಗಿ. ಸ್ವತಂತ್ರಪ್ರಿಯರಾಗಿ (ಸ್ವತಂತ್ರವೆಂದರೆ ಸ್ವೇಚ್ಛೆಯಲ್ಲ). ಧರ್ಮಕಾಮರಾಗಿ. ಆತ್ಮಸಾಧಕರಾಗಿ. ಕಲಾಪುತ್ರರಾಗಿ-ಉದ್ದೇಶ, ವಿಷಯ, ರೀತಿ, ಶೈಲಿ, ಭಾವ, ಛಂದಸ್ಸು- ಹೊಸದು ಬೇಕಾದರೆ ಹೊಸದು, ಹಳದು ಸಾಕಾದರೆ ಹಳದು- ನಮ್ಮ ಸಿಂಗರವಾದ, ಮಂಗಳಮಯವಾದ ಕನ್ನಡ ನಾಡಿನಲ್ಲಿ ಬದುಕಾಗತಕ್ಕುದೇನಿದ್ದರೂ ಎಲ್ಲವನ್ನೂ ಬಳಸಿಕೊಂಡು ಹೊಸ ಜೀವವನ್ನು ಎಲ್ಲೆಲ್ಲಿಯೂ ತುಂಬಿ! ಆಗ್ಗೆ, ವಿಶ್ವವಿದ್ಯಾನಿಲಯಗಳೂ, ಪರಿಷತ್ತುಗಳೂ, ಪಂಡಿತವರ್ಯರೂ, ಗ್ರಂಥಕರ್ತರೂ, ದೇಶಬಾಂಧವರೂ ಜನ್ಮವೆತ್ತಿರುವುದಕ್ಕೆ ಸಾರ್ಥಕತೆ ತೋರುವುದು. ಆಗ್ಗೆ ಕನ್ನಡಕ್ಕೆ ಹಿಂದಿನ ಸಾಹಿತ್ಯದ ಸೌಭಾಗ್ಯಕ್ಕಿಂತಲೂ ಮುಂದಿನ ಸಾಹಿತ್ಯದ ಶಕ್ತಿ ಹೆಮ್ಮೆಯ ವಿಷಯವಾಗುವುದು.

ಕನ್ನಡಿಗರೇ, ಏಳಿ, ಎಚ್ಚರಗೊಳ್ಳಿ, ಆರಂಭಮಾಡಿ. ಪೂರ್ಣಚರಿತ್ರೆಯು, ವಿಶ್ವವಿದ್ಯಾನಿಲಯದ, ಸಾಹಿತ್ಯ ಪರಿಷತ್ತಿನ, ನೂತನ ಸಾಹಿತ್ಯಕಾರರ, ಉತ್ಸಾಹಪೂರಿತವಾಗಿ ಸೇವಾತುರದಾರರಾದ ಯುವಕ ದೇಶವತ್ಸಲರ, ಕರ್ಣಾಟಕ ಭಾಷೋಜ್ಜೀವನವನ್ನು ಸದಾಕಾಲದಲ್ಲಿಯೂ ತಮ್ಮ ಘನವಾದ ದಿವ್ಯಚಿತ್ತದಲ್ಲಿ ಪರ್ಯಾಲೋಚಿಸುತ್ತಿರುವ ನಮ್ಮ ಮೈಸೂರು ಶ್ರೀಮನ್ಮಹಾರಾಜರವರ, ಸಾಹಿತ್ಯ ಸಂಸ್ಕೃತಿಗಳ ಕಟ್ಟಿನಿಂದ ಏಕಜನತೆಯನ್ನು ಬಯಸುತ್ತಿರುವ ಸಕಲ ಕರ್ಣಾಟಕರ, ಮಹತ್ಪ್ರೇರಣೆಯಿಂದ, ಮಹತ್ಪ್ರಯತ್ನದಿಂದ ಸಾಧ್ಯವಾಗದ ಕಾರ್ಯವು ಯಾವುದು? ಏಳಿ, ಎಚ್ಚರಗೊಳ್ಳಿ, ಆರಂಭಮಾಡಿ. ಹಿಂದೆ ಯೂರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ, ಒಬ್ಬ ಮಹಾಪಂಡಿತನು-"ನಾವು ಸತ್ತವರನು ಎಬ್ಬಿಸುವುದಕ್ಕೆ ಹೋಗುತ್ತೇವೆ" ಎಂದು ಘೋಷಿಸಿದನು. ನಾವು ಕನ್ನಡಿಗರು ಇಂದು, ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ ಮಾಡುವುದಕ್ಕೆ ಅಲ್ಲ; ಹೊಸ ಉತ್ತಮ ಸಾಹಿತ್ಯವೊಂದನ್ನು ಸೃಷ್ಟಿಮಾಡುವುದಕ್ಕೆ ಹೊರಟಿರುವೆವು. ಹೊರಟವರು ವಿಲಾಸವತಿಯ ಕೊರಳಿನ ಪುಷ್ಪಮಾಲಿಕೆಯೇ ಅಲ್ಲ. ಸಾಹಿತ್ಯ, ಮಾನವಜೀವನದ ಪುನರ್ನಿರ್ಮಾಣದ ಕಾರ್ಯದಲ್ಲಿ ಬದ್ಧಕಂಕಣನಾಗಿರುವ ವೀರನ ಖಡ್ಗವೂ ಅಹುದೆಂದು ತಿಳಿದಿರುವೆವು.


ಸಮ್ಮೇಳನವನ್ನು ಒಂದು ವರ್ಷ ಎಲ್ಲಾದರೂ ಕೂಡಿಸಿದರೆ ನಾವು ಇಚ್ಛಿಸಿದ ಕಾರ್ಯಗಳು ನೆರವೇರಲಾರವು. ಪ್ರತಿಯೊಂದು ಜಿಲ್ಲೆಯ ಕನ್ನಡ ಭಾಷಾಪ್ರೇಮಿಗಳು ತಮ್ಮ ಜಿಲ್ಲೆಯಲ್ಲಿಯೂ ಅದರಂತೆಯೇ ತಮ್ಮ ಹಿಂದೆ ಬಿದ್ದ ನೆರೆಜಿಲ್ಲೆಗಳಲ್ಲಿಯೂ ಕರ್ಣಾಟಕತ್ವದ ಭಾವನೆಯನ್ನು ಜಾಗ್ರತೆಪಡಿಸಲಿಕ್ಕೆ ಸದಾ ಪ್ರಯತ್ನಿಸುತ್ತಿರಬೇಕು. ಅವರು ಕರ್ನಾಟಕ ವಾಙ್ಮಯ ಮತ್ತು ಇತಿಹಾಸವನ್ನು ವಿಶೇಷ ಅಭ್ಯಾಸಮಾಡಿದವರನ್ನು ತಮ್ಮಲ್ಲಿಗೆ ಆಗಿಂದಾಗ್ಗೆ ಬರಮಾಡಿಕೊಂಡು ಅವರ ಜ್ಞಾನದ ಲಾಭವನ್ನು ಜನರಿಗೆ ಮಾಡಿಕೊಡುತ್ತಿರಬೇಕು.

ಉಪಸಂಹಾರ

ಸಭ್ಯಗೃಹಸ್ಥರೇ, ಈ ಮೇರೆಗೆ ನಾವು ಮಾಡತಕ್ಕ ಪ್ರಯತ್ನಗಳನ್ನು ಸ್ಥೂಲಮಾನದಿಂದ ಇಲ್ಲಿ ನಿರ್ದೇಶಿಸಿದ್ದೇನೆ. ಈ ಸಂಗತಿಗಳ ಬಗ್ಗೆ ಪರಿಷತ್ತುಗಳಲ್ಲಿ ಅನೇಕ ನಿರ್ಣಯಗಳು ಆಗಿರುತ್ತವೆ. ಆದರೆ, ಈ ಬಗ್ಗೆ ಪ್ರಯತ್ನಗಳು ಮಾತ್ರ ಬಲವಾಗಿಯೂ ವ್ಯವಸ್ಥೆಯಿಂದಲೂ ನಮ್ಮಲ್ಲಿ ನಡೆದಿರುವದಿಲ್ಲೆಂಬುದು ಬಹು ವಿಷಾದಕರವಾದದ್ದು. ವಾಙ್ಮಯಾಭಿವೃದ್ಧಿಯು ಒದಗಬೇಕಾದರೆ ವಿದ್ವಜ್ಜನರು ಒಂದೇ ಸಮನೇ ಪ್ರಯತ್ನಿಸುವದು ಅವಶ್ಯವಿದೆ. ಈ ಅಭಿವೃದ್ಧಿಯು ಪರಿಷತ್ತಿನಲ್ಲಿ ಮಾಡುವ ನಿರ್ಣಯಗಳನ್ನೇ ಅವಲಂಬಿಸಿಲ್ಲ. ಈ ಕಾರ್ಯಭಾರವನ್ನು ನಮ್ಮಲ್ಲಿಯ ಸುಶಿಕ್ಷಿತರು ವಿಶೇಷವಾಗಿ ಕೈಕೊಳ್ಳತಕ್ಕದ್ದು.

❖ ❖

೧೫ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಮಾಸ್ತಿ ವೆಂಕಟೇಶ ಅಯ್ಯಂಗಾರ್



'ಕನ್ನಡದ ಆಸ್ತಿ' ಎಂದೇ ಪರಿಗಣಿತರಾದ 'ಶ್ರೀನಿವಾಸ' ಕಾವ್ಯನಾಮದ ಮಾಸ್ತಿ ಅವರು ಕೋಲಾರದ ಮಾಲೂರಿನ ಮಾಸ್ತಿ ಗ್ರಾಮದಲ್ಲಿ ರಾಮಸ್ವಾಮಿ ಅಯ್ಯಂಗಾರ್ - ತಿರುಮಲ್ಲಮ್ಮ ದಂಪತಿಗಳಿಗೆ ೮-೬-೧೮೯೧ರಲ್ಲಿ ಜನಿಸಿದರು. ಪ್ರೌಢವಿದ್ಯಾಭ್ಯಾಸವನ್ನು ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲೂ, ಎಫ್.ಎ. ಅನ್ನು ಮಹಾರಾಜ ಕಾಲೇಜಿನಲ್ಲೂ ಮುಗಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿಎ ಮುಗಿಸಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಎಂಎ ಪದವಿಯನ್ನು ೧೯೧೪ರಲ್ಲಿ ಪಡೆದರು.

ಇವರು ೧೯೧೪ರಲ್ಲಿ ಮೈಸೂರು ಸರ್ಕಾರದ ಅಸಿಸ್ಟೆಂಟ್ ಕಮೀಷನರ್ ಆಗಿ ಕೆಲಸಕ್ಕೆ ಸೇರಿದರು. ಸರ್ ಎಂ. ವಿಶ್ವೇಶ್ವರಯ್ಯನವರ ಕೈಕೆಳಗೆ ಕೆಲಸ ಮಾಡಿದ ಮಾಸ್ತಿ ಅವರು ಸಬ್ ಡಿವಿಜನ್ ಆಫೀಸರ್ (೧೯೨೭) ಮ್ಯಾಜಿಸ್ಟ್ರೇಟ್ ಮತ್ತು ಕಂಟ್ರೋಲರ್ (೧೯೩೦) ಡೆಪ್ಯುಟಿ ಕಮೀಷನರ್ (೧೯೩೪) ಎಕ್ಸೈಜ್ ಕಮೀಷನರ್ (೧೯೪೦) ಮೊದಲಾದ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ೧೯೪೩ ಸ್ವಇಚ್ಛೆಯಿಂದ ಸರ್ಕಾರಿ ಸೇವೆಯಿಂದ ನಿವೃತ್ತರಾದರು.

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ (೧೯೪೩-೪೮) ಅಧ್ಯಕ್ಷರಾಗಿ (೧೯೫೦-೬೪) ಸೇವೆ ಸಲ್ಲಿಸಿರುವ ಇವರು ಜೀವನ ಮಾಸಪತ್ರಿಕೆಯನ್ನು ೨೫ ವರ್ಷ ಪ್ರಕಟಿಸಿದರು. ಕನ್ನಡ ಏಕೀಕರಣಕ್ಕೆ ಶ್ರಮಿಸಿದರು. ಕನ್ನಡ ಲೇಖಕರನ್ನು ಬೆಳಕಿಗೆ ತಂದರು. ಸಹಾಯನಿಧಿ ಮೂಲಕ. ಪಿಇಎನ್ ಸಂಸ್ಥೆಯ ಉಪಾಧ್ಯಕ್ಷರಾಗಿ (೧೯೬೪) ಆಯ್ಕೆಯಾಗಿದ್ದರು. ೧೯೪೨ರಲ್ಲಿ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಕನ್ನಡ ವಿಭಾಗದ ಅಧ್ಯಕ್ಷರಾಗಿದ್ದರು. ಅನೇಕ ಅಖಿಲ ಭಾರತ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ.

ಮೈಸೂರು ಮಹಾರಾಜರು ರಾಜಸೇವಾ ಪ್ರಸಕ್ತ ಬಿರುದನ್ನು ೧೯೪೨ರಲ್ಲಿ ನೀಡಿದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್(೧೯೫೬), ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ(೧೯೬೮), ವರ್ಧಮಾನ ಪ್ರಶಸ್ತಿ (೧೯೮೩), ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್(೧೯೭೭) ಭಾರತೀಯ ಜ್ಞಾನಪೀಠ ಪ್ರಶಸ್ತಿ (೧೯೮೩) ಕರ್ನಾಟಕ ಸರ್ಕಾರದ ಸನ್ಮಾನ (೧೯೮೪) ನಾಡಿನ ನಾನಾ ಸಂಘಸಂಸ್ಥೆಗಳಿಂದ ನೂರಾರು ಸನ್ಮಾನ ಪ್ರಶಸ್ತಿ ಗೌರವಗಳು ಮಾಸ್ತಿ ಅವರಿಗೆ ಸಂದಿವೆ.

ಕನ್ನಡ ಸಣ್ಣಕತೆಗಳ ಜನಕರೆಂದೇ ಖ್ಯಾತಿ ಹೊಂದಿದ ಮಾಸ್ತಿ ಅವರು ನೂರಕ್ಕೂ ಮೀರಿ ಕೃತಿಗಳನ್ನು ವಿವಿಧ ವಿಷಯಗಳ ಮೇಲೆ ರಚಿಸಿ ಕನ್ನಡವನ್ನು ಬೆಳೆಸಿದವರಲ್ಲಿ ಒಬ್ಬರಾಗಿದ್ದಾರೆ. ಇಲ್ಲಿ ಅವರ ಕೆಲವು ಕೃತಿಗಳನ್ನು ಉದಾಹರಿಸಿದೆ.

ಸಣ್ಣಕಥೆಗಳು(೧೦ ಭಾಗಗಳು), ನವರಾತ್ರಿ(ಕಥನ ಕವನಗಳು), ಚಿಕವೀರರಾಜೇಂದ್ರ(ಕಾದಂಬರಿ), ಕೃಷ್ಣಕರ್ಣಾಮೃತ (ಸಂಸ್ಕೃತ ಕಾವ್ಯಾನಂದ), ನಮ್ಮ ನುಡಿ(ಭಾಷಾಶಾಸ್ತ್ರ), ಷೇಕ್ಸ್‌ಪಿಯರನ ನಾಟಕಗಳು(ಗದ್ಯಾನುವಾದ), ಜನಪದ ಸಾಹಿತ್ಯ(ಪ್ರಬಂಧ), ಪುರಂದರದಾಸ, ಕನಕಣ್ಣ(ನಾಟಕಗಳು), ಪ್ರಸಂಗ(೪ ಭಾಗಗಳು), ಸಂಪಾದಕೀಯ(೫ ಭಾಗಗಳು), ಶ್ರೀರಾಮಪಟ್ಟಾಭಿಷೇಕ (ಕಥನಕಾವ್ಯ), ಸರ್ ಎಂ. ವಿಶ್ವೇಶ್ವರಯ್ಯ(ಸಂಪಾದನೆ) ಇತ್ಯಾದಿ.

ಹಲವು ಕೃತಿಗಳನ್ನು ಇಂಗ್ಲಿಷಿಗೆ ಮಾಸ್ತಿ ಮತ್ತು ಇತರರು ಅನುವಾದಿಸಿದ್ದಾರೆ.

ಕನ್ನಡದ ಅತಿ ಮುಖ್ಯ ಸಾಹಿತಿಗಳಲ್ಲಿ ಒಬ್ಬರಾದ ಮಾಸ್ತಿ ಅವರು ೭-೬-೧೯೮೬ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೧೫,
ಅಧ್ಯಕ್ಷರು, ಮಾಸ್ತಿ ವೆಂಕಟೇಶ ಅಯ್ಯಂಗಾರ್
ದಿನಾಂಕ ೧೨,೧೩,೧೪ ಮೇ ೧೯೨೯
ಸ್ಥಳ : ಬೆಳಗಾವಿ

ನಮ್ಮ ಪರಿಷತ್ತು

ನಮ್ಮ ಕರ್ಣಾಟಕ ಸಾಹಿತ್ಯ ಪರಿಷತ್ತು ಏರ್ಪಾಡಾಗಿ ಈಗ್ಗೆ ಹದಿನಾಲ್ಕು ವರ್ಷಗಳು ಕಳೆದಿವೆ. ಕನ್ನಡದ ಸ್ಥಿತಿಯು ಈ ಹದಿನಾಲ್ಕು ವರುಷಗಳಲ್ಲಿ ಬಹಳ ವ್ಯತ್ಯಾಸ ಹೊಂದಿದೆ. 'ಪರಿಷತ್ತು ಮಾಡಿರುವ ಕಾರ್ಯವನ್ನು ನಾನು ಈ ಸಂದರ್ಭದಲ್ಲಿ ಪರಿಶೀಲಿಸುವುದಕ್ಕೆ ತೊಡಗುವುದಿಲ್ಲ. ಈಗ ನಾಲ್ಕು ವರ್ಷಗಳ ಹಿಂದೆ ಶ್ರೀಮಾನ್ ಬೆನಗಲ್ ರಾಮರಾಯರು ತಮ್ಮ ಭಾಷಣದಲ್ಲಿ ಪರಿಷತ್ತು, ಅದುವರೆಗೆ ಮಾಡಿದ ಕೆಲಸವನ್ನೆಲ್ಲ ವಿವರಿಸಿ ಅದು ತೃಪ್ತಿಕರವಾಗಿ ನಡೆದಿದೆಯೆಂದು ತಿಳಿಸಿದರು. ಅವರು ಅಷ್ಟು ವಿಚಕ್ಷಣತೆಯಿಂದ ಮಾಡಿದ ಕೆಲಸವನ್ನು ನಾನು ಮತ್ತೆ ಮಾಡುವ ಆವಶ್ಯಕತೆಯಿಲ್ಲ. ಅಲ್ಲದೆ, ಪರಿಷತ್ತು ಈ ಕೆಲಸವನ್ನು ಮಾಡಿತು. ಆ ಕೆಲಸವನ್ನು ಮಾಡಲಿಲ್ಲ ಎಂದು ನಾವು ಯಾರೂ ಯಾರನ್ನೂ ಹೇಳುವಂತಿಲ್ಲ. ನಾವು ಮಾಡಿದುದನ್ನು ಪರಿಷತ್ತು ಮಾಡುತ್ತದೆ, ನಾವು ಮಾಡದೆ ಇದ್ದುದನ್ನು ಪರಿಷತ್ತು ಮಾಡಲಾರದು. ಪರಿಷತ್ತೇ ನಾವು ಮಾಡಿದುದು. ಒಟ್ಟಿನಲ್ಲಿ, ಪರಿಷತ್ತು ಕನ್ನಡಕ್ಕೆ ಈಗ ಮಾಡಿರುವುದಕ್ಕಿಂತ ಹೆಚ್ಚಾದ ಕೆಲಸವನ್ನು ಮಾಡದೆ ಇರುವುದಕ್ಕೆ ವಿದ್ಯಾವಂತರಾದ ಕನ್ನಡಿಗರ ಔದಾಸೀನ್ಯವೇ ಮುಖ್ಯಕಾರಣ. ಈ ವಿಷಯವನ್ನು ಹೇಳಲು ನನಗೆ ವ್ಯಸನವಾಗುತ್ತದೆ. ಮಹನೀಯರೇ, ಕನ್ನಡನಾಡಿನ ಇಷ್ಟು ಸಾವಿರಮಂದಿ ಸುಶಿಕ್ಷಿತರಾದವರಲ್ಲಿ ಹತ್ತರಲ್ಲಿ ಒಂದರ ಸಂಖ್ಯೆಯಷ್ಟು ಜನ ಪರಿಷತ್ತಿಗೆ ಸದಸ್ಯರಾಗಿಲ್ಲವೇಕೆ ? 'ಪರಿಷತ್ತು ಚೆನ್ನಾಗಿ ಕೆಲಸಮಾಡಲಿ, ಆಮೇಲೆ ನಾನು ಬಂದು ಅದಕ್ಕೆ ಸದಸ್ಯನಾಗುತ್ತೇನೆ' ಎಂದು ಅನೇಕರು ಹೇಳುವರು. ಮೈಚೆನ್ನಾಗಿ ಕೆಲಸ ಮಾಡಲಿ, ಆಮೇಲೆ ನಾನು ಅದಕ್ಕೆ ನೆರವಾಗುತ್ತೇನೆ ಎಂದು ಹೇಳಿ ಕೈಯ್ಯೋ ಕಣ್ಣೋ ಕೆಲಸಮಾಡದೆ ನಿಂತರೆ ಅದನ್ನು ಏನೆಂದು ವರ್ಣಿಸಬಹುದು ? ಪರಿಷತ್ತು ಮಾಡಬಹುದಾದ ಕೆಲಸ ನೂರು ಇದೆ. ಜನರು ಬಂದು ಸದಸ್ಯರಾಗಿ ಹಣವನ್ನು ಕೊಟ್ಟು ಇತರ ಸಹಾಯಮಾಡಿ ಅದಕ್ಕಾಗಿ ದುಡಿದರೆ ಆ ಕೆಲಸ ನಡೆಯಬಹುದು ; ಇಲ್ಲದಿದ್ದರೆ ಅದು ನಡೆಯುವ ಸಂಭವವೇ ಇಲ್ಲ.

ಪರಿಷತ್ಪತ್ರಿಕೆ

ಇದಕ್ಕೆ ಉದಾಹರಣೆಯಾಗಿ ನಮ್ಮ ಪರಿಷತ್ಪತ್ರಿಕೆಯ ಕೆಲಸವನ್ನು ಕುರಿತು ಆಲೋಚಿಸಿರಿ. ವರ್ಷಕ್ಕೆ ನಾಲ್ಕು ಸಲ ಹೊರಡಬೇಕಾದ ಈ ಪತ್ರಿಕೆಗೆ ಸಲಸಲಕ್ಕೂ ಲೇಖನಗಳನ್ನು ಹವಣಿಸುವ ಕೆಲಸ ಬಹಳ ದುಸ್ತರವಾಗಿ ಕುಳಿತಿದೆ. ಈಗ ಹಲವು ಸಂಚಿಕೆಗಳು ಹಿಂದೆ ಬಿದ್ದಿವೆ. ವರ್ಷದಲ್ಲಿ ನಾನೂರು ಪುಟಗಳಷ್ಟು ಬರೆವಣಿಗೆ ನಮ್ಮ ಸೀಮೆಯಲ್ಲಿ ಸಿಕ್ಕದೆ ಹೋದರೆ ಪರಿಷತ್ಪತ್ರಿಕೆಯ ಗತಿ ಏನು ? ಈ ಪತ್ರಿಕೆಯನ್ನು ನಡೆಯಿಸಲಾರದ ನಮ್ಮ ಶಕ್ತಿ ಇನ್ನೆಷ್ಟರದು ? ನಮ್ಮ ಸಾಹಿತ್ಯ ಇತರ ಸಾಹಿತ್ಯಗಳು, ನಮ್ಮ ಸೀಮೆಯ ಇತಿಹಾಸ, ಸಂಸ್ಕೃತಿ, ಇವುಗಳಲ್ಲಿ ಆಸಕ್ತಿಯುಳ್ಳವರು ನಮ್ಮಲ್ಲಿ ಅನೇಕರಿದ್ದೇವೆ. ಇಪ್ಪತ್ತು ಜನ ವರ್ಷಕ್ಕೆ ಒಂದು ಲೇಖನದಂತೆ ಕೊಟ್ಟರೆ ಪತ್ರಿಕೆ ಸಕಾಲದಲ್ಲಿ ಹೊರಡಬಹುದು. ನಾವು ಇಷ್ಟನ್ನು ಮಾಡಲಾರವೆ ? ಪತ್ರಿಕೆ ಹೊರಡುವದಿಲ್ಲ ಎಂದು ಎಲ್ಲರೂ ಅಸಮಾಧಾನವನ್ನು ಮಾತ್ರ ಸೂಚಿಸಿದರೆ ಏನು ಮಾಡಿದ ಹಾಗಾಯಿತು ? ಈಚೆಗೆ ಪತ್ರಿಕೆಯ ಕೆಲಸಕ್ಕೆ ಸ್ವಲ್ಪ ಹೆಚ್ಚಿನ ಏರ್ಪಾಡುಗಳನ್ನು ಮಾಡಿಕೊಂಡಿರುವುದರಿಂದ ಇನ್ನು ಮೇಲೆ ಅದು ಸಕಾಲದಲ್ಲಿ ಬರಬಹುದೆಂದು ಭರವಸೆ ಇದೆ. ಮುಖ್ಯ, ನಾನು ಅರಿಕೆಮಾಡುವುದು ಇಷ್ಟೇ ; ನಮ್ಮಲ್ಲಿ ವಿದ್ಯಾವಂತರೆಲ್ಲ ಪರಿಷತ್ತನ್ನು ತಾವು ನಮ್ಮ ಜನರ ಸೇವೆಗಾಗಿ ಮಾಡಿಕೊಂಡಿರುವ ಸಂಸ್ಥೆಯೆಂದು ಭಾವಿಸಿ ಸಾಧ್ಯವಾದಷ್ಟು ಜನರನ್ನು ಅದಕ್ಕೆ ಸದಸ್ಯರನ್ನಾಗಿ ಮಾಡಿ ಅದು ಈಗ ಮಾಡುತ್ತಿರುವ ಕೆಲಸವೂ ಇನ್ನೂ ಮಾಡಬಹುದಾದ ಕೆಲಸವೂ ಚೆನ್ನಾಗಿ ನಡೆಯುವಂತೆ ನೆರವಾಗಬೇಕು. ಇದನ್ನು ಮಾಡುವ ಹೊಣೆ ನಮ್ಮದು. ಇದನ್ನು ಮಾಡದೆ ಇದ್ದರೆ ತಪ್ಪೂ ನಮ್ಮದು ; ಪರಿಷತ್ತಿನದಲ್ಲ.

❖❖

೧೬ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಆಲೂರು ವೆಂಕಟರಾಯರು



ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣಕರ್ತರಲ್ಲಿ ಒಬ್ಬರು ಮತ್ತು ಪರಿಷತ್ತಿಗೆ ಪ್ರಾರಂಭದಲ್ಲಿ ದುಡಿದವರು ಎಂದರೆ ಆಲೂರರು. ಭೀಮರಾಯ–ಭಾಗೀರಥಿ ದಂಪತಿಗಳಿಗೆ ೧೨–೭–೧೮೮೦ರಲ್ಲಿ ಜನಿಸಿದರು. ಶಾಲಾ ಶಿಕ್ಷಣವನ್ನು ಧಾರವಾಡದಲ್ಲಿ ಪೂರೈಸಿ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ೧೯೦೩ರಲ್ಲಿ ಬಿಎ ಪದವಿಯನ್ನು ೧೯೦೫ರಲ್ಲಿ ಎಲ್.ಎಲ್.ಬಿ. ಪದವಿಯನ್ನು ಗಳಿಸಿದರು.

ಧಾರವಾಡದಲ್ಲಿ ವಕೀಲಿ ವೃತ್ತಿ ಕೈಗೊಂಡ ಆಲೂರರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ ವಕೀಲಿವೃತ್ತಿಯನ್ನು ದೂರ ಮಾಡಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಸೂತ್ರಧಾರರಲ್ಲಿ ಒಬ್ಬರಾದರು. ಕನ್ನಡ ಗ್ರಂಥಕರ್ತರ ಸಮ್ಮೇಳನಗಳನ್ನು ನಡೆಸಿದರು. ಕರ್ನಾಟಕ, ವಾಗ್ಭೂಷಣ ಪತ್ರಿಕೆಗಳನ್ನು ಆರಂಭಿಸಿ ನಡೆಸಿದರು.

ಕರ್ನಾಟಕ ಏಕೀಕಕರಣಕ್ಕೆ ದುಡಿದು ಕರ್ನಾಟಕ ಕುಲ ಪುರೋಹಿತರು ಎನಿಸಿದರು. ಕರ್ನಾಟಕವನ್ನೆಲ್ಲ ಸುತ್ತಿ ಇತಿಹಾಸದ ಮಹತ್ವದ ಸಂಗತಿಗಳನ್ನು ಕನ್ನಡಿಗರಿಗೆ ತಿಳಿಸಿ ಕರ್ನಾಟಕ ಗತ ವೈಭವ ಕೃತಿಯ ಮೂಲಕ ಕನ್ನಡ ಜಾಗೃತಿಯನ್ನು ಉಂಟುಮಾಡಿದರು. ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲಿಯನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಮೂರನೇ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ಏರ್ಪಡಿಸಲು ಪ್ರಯತ್ನ ನಡೆಸಿ, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ ಆಗಲು ಪ್ರೇರಣಕರ್ತರಾದರು. ಸ್ಥಾಪನೆಯ ಕಾರ್ಯದಲ್ಲಿ ಪಾಲ್ಗೊಂಡರು. ೧೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು.

೧೯೪೧ರಲ್ಲಿ ಕರ್ನಾಟಕಕ್ಕೆ ಇವರು ಸಲ್ಲಿಸಿದ ಸೇವೆಗಾಗಿ ಹೈದ್ರಾಬಾದ್ ಕನ್ನಡಿಗರು ಕರ್ನಾಟಕ ಕುಲ ಪುರೋಹಿತರೆಂಬ ಬಿರುದನ್ನಿತ್ತರು. ೧೯೬೧ರಲ್ಲಿ ಸಾಹಿತ್ಯ ಪರಿಷತ್ತು ಸನ್ಮಾನಿಸಿತು. ೧೯೫೬ರಲ್ಲಿ ಕನ್ನಡ ರಾಜ್ಯೋದಯದಲ್ಲಿ ಭುವನೇಶ್ವರಿಯ ಉತ್ಸವವನ್ನು ಹಂಪೆಯಲ್ಲಿ ನಡೆಸಿ ಅದರ ನೇತೃತ್ವ ವಹಿಸಿದ್ದರು.

ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡುವ ಕೃತಿಗಳನ್ನು ರಚಿಸಿದ ಹಿರಿಮೆಯ ಆಲೂರರು ಕನ್ನಡದ ಹತ್ತಾರು ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ. ಕೆಲವು ಹೀಗಿವೆ:

ಕರ್ನಾಟಕ ಗತವೈಭವ
ಶಿಕ್ಷಣ ಮೀಮಾಂಸೆ
ಸಂಸಾರ ಸುಖ
ಕರ್ನಾಟಕ ವೀರರತ್ನಗಳು
ಕರ್ನಾಟಕತ್ವದ ವಿಕಾಸ
ಗೀತಾ ರಹಸ್ಯ (ಅನುವಾದ)
ನನ್ನ ಜೀವನ ಸ್ಮೃತಿಗಳು (ಆತ್ಮಕಥೆ)
ಮಧ್ವ ಸಿದ್ಧಾಂತ ಪ್ರಕಾಶಿಕೆ
ಗೀತಾಪರಿಮಳ
ಗೀತಾ ಪ್ರಕಾಶ ಇತ್ಯಾದಿ

ಕನ್ನಡ ಸಾಹಿತ್ಯ ಸಮ್ಮೇಳನ-೧೬,
ಅಧ್ಯಕ್ಷರು, ಆಲೂರು ವೆಂಕಟರಾಯ
ದಿನಾಂಕ ೫, ೬, ೭ ಅಕ್ಟೋಬರ್ ೧೯೩೦
ಸ್ಥಳ : ಮೈಸೂರು

"ನಾಹಂ ಕರ್ತಾ ಹರಃ ಕರ್ತಾ ತತ್ಪೂಜಾ ಕರ್ಮ ಚಾಖಿಲಂ"

ಸ್ವಸ್ತಿ ಶ್ರೀ ಮತ್ಕರ್ನಾಟಕ ವಾಙ್ಮಯ ದೇವತಾಪೂಜೆಗೆ ಸನ್ನದ್ಧರಾದ ಮಹಾಜನಗಳ ಚರಣ ಸನ್ನಿಧಿಯಲ್ಲಿ- ಸರಸ್ವತಿಯ ಪಾದಪದ್ಮಾರಾಧಕನಾದ ನಾನು ತಮ್ಮೆಲ್ಲರಿಗೆ ಸಹಸ್ರ ವಂದನೆಗಳನ್ನು ಸಮರ್ಪಿಸಿ ಅರಿಕೆಮಾಡಿಕೊಳ್ಳುವುದೇನೆಂದರೆ:-

ನಾನು ಮಾತೃಭಾಷಾ ಪುತ್ರರಲ್ಲೊಬ್ಬನೆಂಬ ಪ್ರೇಮದಿಂದ ತಾವೆಲ್ಲರೂ ನನ್ನನ್ನು ಈ ಸಮ್ಮೇಳನದ ಪ್ರಾಣ ಪ್ರತಿಷ್ಠಾಚಾರ್ಯನಾಗಲು ಆಜ್ಞಾಪಿಸಿರುವಿರಿ. ಆ ಮಹಾಪದವಿಗೆ ನಾನು ತೀರ ಆಯೋಗ್ಯ ನಿರುವೆನೆಂಬುದು ನನಗೆ ಗೊತ್ತಿದ್ದರೂ, ತಮ್ಮ ಅಪ್ಪಣೆಯನ್ನು ಮೀರಲು ಮನಸ್ಸಿಲ್ಲದ್ದರಿಂದ ಅದನ್ನು ಅಂಗೀಕರಿಸಿರುವೆನು. ಹಿಂದಕ್ಕೆ ಈ ಪೀಠವನ್ನಲಂಕರಿಸಿದವರು ಅನೇಕ ವಿಧವಾಗಿ ಆಕೆಯ ಪೂಜೆಯನ್ನು ಕಟ್ಟಿರುತ್ತಾರೆ ; ಕೆಲವರು ಜ್ಞಾನದೀಪದಿಂದ ಆಕೆಗೆ ಆರತಿಯನ್ನೆತ್ತಿರುತ್ತಾರೆ ; ಕೆಲವರು ಅನನ್ಯವಾದ ಭಕ್ತಿಯಿಂದ ಆಕೆಯ ಗುಣಗಳನ್ನು ಗಾನಮಾಡಿ ಆಕೆಯ ಪ್ರಸಾದವನ್ನು ಪಡೆದಿರುತ್ತಾರೆ ; ಕೆಲವರು ತಮ್ಮ ಸ್ನಿಗ್ಧ ಮಧುರ ಕಾವ್ಯಮಯವಾಣಿಯಿಂದ ಆಕೆಗೆ ಪಂಚಾಮೃತಾಭಿಷೇಕ ಮಾಡಿರುತ್ತಾರೆ ; ಕೆಲವರು ಸಂಶೋಧನದ ನಂದಾದೀಪಗಳನ್ನಿಟ್ಟು ಆಕೆಯ ಮೂರ್ತಿಯನ್ನು ಪ್ರಕಾಶಮಾನವಾಗಿ ಮಾಡಿರುತ್ತಾರೆ ; ಮತ್ತೆ ಕೆಲವರು, ಶ್ರೀಮನ್ಮಹಾರಾಜರವರ ಕೃಪಾಜಲಪೋಷಿತವಾದ ಸುಂದರವಾದ ಉದ್ಯಾನಗಳಿಂದ ಸುಂಗಧಪುಷ್ಪಗಳನ್ನು ತೆಗೆದುಕೊಂಡು ಆಕೆಯನ್ನು ಪೂಜಿಸಿರುತ್ತಾರೆ. ನಾನಾದರೋ, ಇವುಗಳಲ್ಲೊಂದನ್ನೂ ಮಾಡಲಾರೆ. ಗಾನದಿಂದ ಹೃದಯವನ್ನು ಸೆಳೆಯಲರಿಯೆ, ಜ್ಞಾನದಿಂದ ಬಗೆಯನ್ನರಳಿಸಲರಿಯೆ, ಸಂಶೋಧನ ದೀಪದಿಂದ ಬೆಳಗಲರಿಯೆ; ಕರ್ನಾಟಕ ಸಾಹಿತ್ಯಸಾಗರದಲ್ಲಿ ಸ್ನಾನಮಾಡಿ ಶುಚಿರ್ಭೂತನಾದವನೂ ನಾನಲ್ಲ. ಆದಕಾರಣ, ಪಾವನತರವಾದ ಆಕೆಯ ಮೂರ್ತಿಯನ್ನು ಮುಟ್ಟಿ, ಆಕೆಯನ್ನು ಭ್ರಷ್ಟಗೊಳಿಸಲಿಚ್ಛಿಸುವುದಿಲ್ಲ. ಸುಗಂಧ ಪುಷ್ಪಗಳನ್ನಾದರೂ ಏರಿಸಬೇಕೆಂದರೆ ಸಹಾನುಭೂತಿಯ ದ್ರವವು ಕೂಡ ಇಲ್ಲದ ಮರುಭೂಮಿಯಲ್ಲಿ ಹುಟ್ಟಿದ ನನ್ನ ಬಳಿಯಲ್ಲಿ ಹೂವುಗಳೆಲ್ಲಿಂದ ಬರಬೇಕು ? ಆದರೆ, ನಾನದರ ಪೂಜೆ ಮಾಡಲಿಕ್ಕೆ ಬೇರೊಂದು ಬಗೆಯ ಅಧಿಕಾರವಿದೆ : ನಾನು ಆರ್ತಭಕ್ತನು ; ಆದುದರಿಂದ ಆರ್ತಧ್ವನಿಯಿಂದ ಕೂಗಿಕೊಂಡು, ದೂರದಿಂದಲೇ ನಾಲ್ಕು ದೂರ್ವಾಪತ್ರಗಳನ್ನೇರಿಸಿ ಪೂಜೆ ಮಾಡುವೆನು.

ವಾಙ್ಮಯವನ್ನು ಬೆಳೆಯಿಸುವುದೆಂದರೆ ಉತ್ಕೃಷ್ಟವಾದ ಗ್ರಂಥಗಳನ್ನು ಬರೆದರೆ ತೀರಿತೆಂದು ಕೆಲವರ ತಿಳಿವಳಿಕೆ ; ಇದು ತಪ್ಪು. ಪೂಜಾರಿಯು ಪರಿವಾರ ಸಮೇತನಾಗಿಯೇ ಪೂಜೆಯನ್ನು ಸಾಂಗಗೊಳಿಸುವಂತೆ ನಾವು ನಮ್ಮ ಪರಿವಾರ ಸಮೇತರಾಗಿಯೇ ವಾಗ್ದೇವತೆಯ ಪೂಜೆಯನ್ನು ಸಾಂಗಗೊಳಿಸಬೇಕಾಗುತ್ತದೆ. ಮುದ್ರಕರು, ಪುಸ್ತಕ ಮಾರುವವರು, ಇವರೇ ಮುಂತಾದವರು ನಮ್ಮ ಪರಿವಾರ. ಲಘು ಪುಸ್ತಕಮಾಲೆ, ಮಧ್ಯಮ ಪುಸ್ತಕಮಾಲೆ, ಉದಾತ್ತ ಗ್ರಂಥಮಾಲೆ ಮುಂತಾದವುಗಳನ್ನು ಹೊರಡಿಸಿ ನಾವು ವಾಙ್ಮಯದ ಪ್ರಕಾಶವನ್ನು ಮಾಡಬೇಕು. ಕರ್ನಾಟಕವನ್ನೆಲ್ಲ ವಾಚನಾಲಯಗಳ ಜಾಳಿಗೆಯಿಂದ ತುಂಬಿಬಿಡಬೇಕು. ವಾಚನಾಲಯಗಳೆಂದರೆ ಕರ್ನಾಟಕತ್ವದ ವಿದ್ಯುಚ್ಛಕ್ತಿಯನ್ನೊಯ್ಯುವ ತಂತಿಗಂಬಗಳು, ಆದರೆ ಇವೆಲ್ಲ ಕಾರ್ಯಗಳು ಜರುಗಬೇಕಾದರೆ, ನಾವು ಮುಂದೆ ಅಭಿಮಾನವನ್ನು ಜಾಗ್ರತಪಡಿಸಬೇಕು. ಅದಕ್ಕೋಸ್ಕರ ಪ್ರಚಾರಕರು ಸತತವಾಗಿ ಕರ್ನಾಟಕವನ್ನು ಸುತ್ತುತ್ತಿರಬೇಕು.

ಅನುಬಂಧ

'ನನ್ನ ಜೀವನಸ್ಮೃತಿಗಳು' ಪುಸ್ತಕದಲ್ಲಿ ಆಲೂರರು ಪರಿಷತ್ತಿನ ಸ್ಥಾಪನೆ ಮತ್ತು ಅದರ ಬಗ್ಗೆ ನೀತಿಗಳನ್ನು ಹೇಳಿದ್ದಾರೆ. ಅದನ್ನಿಲ್ಲಿ ಕೊಟ್ಟಿದೆ.

ಕನ್ನಡ ಗ್ರಂಥಕರ್ತರ ಸಮ್ಮೇಳನ

ನಾನು ಸಾರ್ವಜನಿಕ ಜೀವನವನ್ನು ಕೈಕೊಂಡಾಗ ವಾಙ್ಮಯ, ಇತಿಹಾಸ, ರಾಜಕಾರಣ ಮುಂತಾದ ಅನೇಕ ತರಹದ ಚಟುವಟಿಕೆಗಳನ್ನು ಏಕಸಮಯಾವಚ್ಛೇದದಿಂದ ಕೈಕೊಂಡೆನೆಂದು ಹಿಂದೆ ಹೇಳಿದೆನಷ್ಟೆ. ಅದರಲ್ಲಿ ಬಂದ

ಅನುಭವದಿಂದ ನಾನು ಭಿನ್ನಭಿನ್ನ ಕ್ಷೇತ್ರಗಳಲ್ಲಿ ಭಿನ್ನಭಿನ್ನ ಸಂಸ್ಥೆಗಳನ್ನು ಕಟ್ಟಿದೆನು. ನಾನು ವಾಙ್ಮಯ ಕ್ಷೇತ್ರದಲ್ಲಿ ಕಾಲಿಟ್ಟ ಕೂಡಲೆ ನನಗೆ ಬಂದ ಮೊದಲನೆಯ ಅನುಭವವೆಂದರೆ-ಉತ್ತರಕರ್ನಾಟಕ, ಮೈಸೂರು, ಮಂಗಳೂರು ಮುಂತಾದ ಭಾಗಗಳಲ್ಲಿರುವ ಕನ್ನಡದಲ್ಲಿ ಏಕರೂಪತೆ ಇಲ್ಲದಿರುವುದು. ಆಗ ನನಗೆ ತೀರ ಹೊಸದೊಂದು ವಿಚಾರ ಜಗ್ಗನೆ ಹೊಳೆಯಿತು. ಅದೇನೆಂದರೆ, ಕರ್ನಾಟಕದ ಎಲ್ಲ ಭಾಗಗಳ ಭಾಷೆಯಲ್ಲಿ ಏಕರೂಪತೆ ಉಂಟಾಗದೆ, ಕನ್ನಡದ ಉದ್ಧಾರವಾಗದೆಂಬ ಮಾತು. ತಟ್ಟನೆ ೧೯೦೭ರಲ್ಲಿ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಹೂಡಿದೆ. ಕರ್ನಾಟಕತ್ವದ ಕಲ್ಪನೆಯಲ್ಲಿ ನನ್ನ ಜೊತೆಗೆ ನಿಂತು ಕೆಲಸ ಮಾಡಿದವರು ಎಂದರೆ ನರಗುಂದಕರ ರಾಮರಾಯರು. ಎಸ್.ಜಿ. ನರಸಿಂಹಾಚಾರ್ಯರು ಮೊದಲನೆಯ ಸಮ್ಮೇಳನಕ್ಕೆ ಅಧ್ಯಕ್ಷರು. ಮರುವರ್ಷ ೧೯೦೮ ರಲ್ಲಿ ನಾನೂ ರಾಮರಾಯರೂ ಕೂಡಿ ಮತ್ತೆ ಇದೇ ಊರಲ್ಲಿ ಅದನ್ನೂ ಕೂಡಿಸಿದೆವು. ಅಂತ ಸಮ್ಮೇಳನಗಳು ವಿವಿಧ ಭಾಗಗಳಲ್ಲಿ ಆಗಬೇಕೆಂದು ನಮ್ಮ ಇಚ್ಛೆ. ಆದರೆ ಆಗ ಅದು ನೆರವೇರಲಿಲ್ಲ; ಮುಂದೆ ನೆರವೇರಿತು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಂಸ್ಥಾಪನೆ

ನಾನು ನನ್ನ ವಾಙ್ಮಯ ಚಟುವಟಿಕೆಗಳನ್ನು ನನ್ನ ಸ್ವಂತ ಹಣದಿಂದ, ಆದರೆ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಮಹತ್ವವನ್ನು ಕೊಟ್ಟು ಅದರ ಹೆಸರಿನಿಂದಲೇ ನಡಿಸಿದ್ದೆನು. ಹಾಗೇ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಧಾರವಾಡದಲ್ಲಿ ಎರಡು ಸಲ ಕೂಡಿಸಿ ಮೂರನೆಯದನ್ನು ಬೆಂಗಳೂರಿನಲ್ಲಿ ಕೂಡಿಸಲಿಕ್ಕೆ ಬಹಳ ಸಾಹಸಪಟ್ಟೆ, ನಾಲ್ಕೈದು ಸಲ ಇದೇ ಉದ್ದೇಶದಿಂದ ಬೆಂಗಳೂರು ಮೈಸೂರುಗಳಿಗೆ ಹೋಗಿಬಂದರೂ ಇಷ್ಟಕಾರ್ಯವು ಕೈಗೂಡಲಿಲ್ಲ. ಸ್ವಂತ ಕೈಯಿಂದ ಹಣ ಎಷ್ಟೆಂದು ಖರ್ಚು ಮಾಡುವುದು ? ಆಗ ಬೆಂಗಳೂರಿನಲ್ಲಿ ವಾಙ್ಮಯ ವಿಷಯಕ ಒಂದು ಸಂಸ್ಥೆಯೂ ಇರಲಿಲ್ಲ. ಆಗ ಬಾಪೂ ಸುಬ್ಬರಾಯರೆಂಬುವರು ಮೈಸೂರು ಪ್ರಾಂತದ ವಿಷಯದಲ್ಲಿ ಹೇಳಿದ ಮಾತು ನಿಜವೆಂದು ಮನವರಿಕೆಯಾಯಿತು. ಅದೇನೆಂದರೆ ಮೈಸೂರಿನವರಿಗೆ ತಾಯಿಯ ತೊಡೆಯ ಮೇಲೆ ಮಲಗಿ ಗುಟುಕು ಹಾಕಿಸಿಕೊಂಡೇ ಗೊತ್ತೆಂಬುದು. ಈಗಲೂ ಅದೇ ಅನುಭವ ಕೊನೆಗೆ ಅಲ್ಲಿಯ ಡಾಯರೆಕ್ಟರವರನ್ನು ಭೆಟ್ಟಿಯಾದೆ. ಅವರು ಸಹಾನುಭೂತಿ ತೋರಿಸಿದರು. ಆದರೆ ಅಷ್ಟರಲ್ಲಿ ಅವರು ಸತ್ತುಹೋದರು. ೧೯೧೪ನೆಯ ಮಾರ್ಚ್ ತಿಂಗಳಲ್ಲಿ "ಸಂಘ"ವನ್ನು ಸಂದರ್ಶಿಸುವುದಕ್ಕೆ ರಾವಬಹದ್ದೂರ್ ಶ್ಯಾಮರಾಯರು ಬಂದಿದ್ದರು. ಅವರಿಂದ ಬೆಂಗಳೂರಿನಲ್ಲಿ ಸಮ್ಮೇಳನ ಕೂಡಿಸುವ ಅಭಿವಚನ ತಕ್ಕೊಂಡೆ. ನಾನು ಅದೇ ವರ್ಷ ತಿರುಪತಿಗೆ ಹೋದಾಗ ಕರ್ಪೂರ ಶ್ರೀನಿವಾಸರಾಯರನ್ನು ಕಂಡೆ. ಅವರು ಸಂಪೂರ್ಣವಾಗಿ ಸಹಾಯ ಮಾಡಿದರು ಮತ್ತು ಅವರಿಬ್ಬರ ಸಹಾಯದಿಂದಲೂ ನಂಜುಂಡಯ್ಯನವರ ಸಹಾನುಭೂತಿಯಿಂದಲೂ ವಿಶ್ವೇಶ್ವರಯ್ಯನವರ ಹೆಸರಿನ ಬಲದಿಂದಲೂ ೧೯೧೫ರಲ್ಲಿ 'ಅಖಿಲ ಕರ್ನಾಟಕ ಸಮ್ಮೇಳನವು' ಬೆಂಗಳೂರಿನಲ್ಲಿ ಕೂಡಿ. ಈಗಿನ "ಕರ್ನಾಟಕ ಸಾಹಿತ್ಯ ಪರಿಷತ್ತು" ಸ್ಥಾಪಿತವಾಯಿತು. ಬಿ.ಕೃಷ್ಣಪ್ಪನವರು ಅದಕ್ಕೆ ಮೊದಲನೆಯ ಕಾರ್ಯದರ್ಶಿಗಳು. ಆದರೆ ಆ ಮೊದಲನೆಯ ಸಮ್ಮೇಳನದ ಮುಖ್ಯ ಕಾರ್ಯವನ್ನೆಲ್ಲ ನಾನು ಈ ಊರಿನಿಂದಲೇ ಅವರ ಹೆಸರಿನಲ್ಲಿ ನಡಿಸಿದೆ. ನನಗೆ ಹಣದ ಅಡಚಣೆ ಅತಿಶಯವಿದ್ದಾಗ್ಯೂ ಅಂದಿನಿಂದ ಬಹುಶಃ ಪ್ರತಿವರ್ಷ ಸಮ್ಮೇಳನಗಳಿಗೆ ಹೋದೆ.

ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ನನ್ನ ರಾಜೀನಾಮೆ

ಪರಿಷತ್ತಿನ ಆಜೀವ-ಸಭಾಸದನಾಗಿ ಅದರ ಕಾರ್ಯನಿರ್ವಾಹಕ ಮಂಡಲದಲ್ಲಿ ಸತತವಾಗಿ ಕಾರ್ಯಮಾಡುತ್ತ ಬಂದ ನನಗೆ ಕೆಲವು ವರ್ಷಗಳ ಹಿಂದೆ ಅದರ ಕಾರ್ಯನಿರ್ವಾಹಕ ಮಂಡಲಕ್ಕೆ ರಾಜೀನಾಮೆ ಕೊಡುವ ಪ್ರಸಂಗ ಬಂದಿತು. ಅದರ ಕಾರಣವನ್ನು ಇಷ್ಟು ದಿವಸಗಳವರೆಗೆ ಬಹಿರಂಗಪಡಿಸಿದ್ದಿಲ್ಲ. ಈಗ ಬಹಿರಂಗಪಡಿಸುವೆ. ಮತ್ತು ನ್ಯಾಯನ್ಯಾಯಗಳ ವಿಚಾರವನ್ನು ವಾಚಕರಿಗೇ ಬಿಟ್ಟುಕೊಡುವೆ. ಸ್ವಲ್ಪದರಲ್ಲಿ ಹೇಳುವುದಾದಲ್ಲಿ, ನಾನು ಪರಿಷತ್ತಿನ ಹಿತಕ್ಕಾಗಿ ಮಾಡಿದ ಯಾವ ಮಹತ್ವದ ಸೂಚನೆಯನ್ನೂ "ಬೆಂಗಳೂರಿನವರು" ಸ್ವೀಕರಿಸದೆ ಇದ್ದದ್ದು ಮತ್ತು ಯಾವತ್ತೂ ಅಧಿಕಾರವನ್ನು ತಮ್ಮ ಕೈಯಲ್ಲಿ ಕೇಂದ್ರೀಕರಿಸಿಕೊಂಡದ್ದು ನನ್ನ ರಾಜೀನಾಮೆಗೆ ಮುಖ್ಯವಾದ ಕಾರಣ. ಇಂಥ ಸ್ಥಿತಿಯಲ್ಲಿ ಯತ್ಕಿಂಚಿತ್ತಾದರೂ ಆತ್ಮಗೌರವವುಳ್ಳ ಯಾವ ಮನುಷ್ಯನಿಗೂ ಪರಿಷತ್ತಿನಲ್ಲಿ ಇರುವುದು ತಕ್ಕವಿದ್ದಿಲ್ಲ. "ಬೆಂಗಳೂರಿನವರು" ಎಂದೆನ್ನುವ ಕಾರಣವೆಂದರೆ ಬೆಂಗಳೂರಿನ ಹೊರಗಿನವರು ಆಗ ಹೆಸರಿಗೆ ಮಾತ್ರ ಕಾರ್ಯನಿವಾಹಕ ಮಂಡಲದ ಸದಸ್ಯರಾಗಿದ್ದರಲ್ಲದೆ ಅವರಿಗೆ ನಿಜವಾದ ಯಾವ ಕಾರ್ಯವನ್ನೂ ಮಾಡಲು ಅಸ್ಪದವಿದ್ದಿಲ್ಲ.

"You know that since the very beginning of the Sahitya Parishat, I am trying to bring about a unity of feelings between Mysore and other parts of Karnatak. Many of my proposals in the Managing Commitee concentrate mainly on two points. (I) The question of extending the franchise to outside members of the Managing Committee. (2) The propaganda work that is to be carried on, in border and backward parts of Karnatak. You know for the last 15 years the outside members of the Managing Committee are co-operating with members of the Managing Committee residing in the Bangalore, though they have no scope to take actual part in the discussions of the Managing Committee. It is too much to expect under the present circumstances of the Karnatak, that outsiders should attend the meetings at Bangalore. I brought many proposals, but failed... All this shows that there is no desire on the part of the members then to get real co-operation from the members outside. They want to conduct the association themselves, but in the name of Karnatak... If the members there do really desire the real co-operation of the outside members, let them themselves make any proposal to meet the above objects.

೧೨-೧೦-೧೯೩೪ನೆಯ ಇಸ್ವಿಯ ದಿವಸ ನಾನು ಪರಿಷತ್ತಿಗೆ ಬರೆದ ಪತ್ರದೊಳಗಿನ ಅವತರಣಿಕೆ :

"ಒಂದೆರಡು ವರ್ಷಗಳಿಂದ, ಕೆಲವು ಕಾರಣಗಳ ಮೂಲಕ ಪರಿಷತ್ತಿನ ಕಾರ್ಯದಲ್ಲಿ ವಿಶೇಷ ಮನಸ್ಸು ಹಾಕಿರುವುದಿಲ್ಲ. (ಕಾಯದೆ ಭಂಗದಲ್ಲಿ ನಾನು ಆಗ ಬಂಧಿಸಲ್ಪಟ್ಟಿದ್ದೆ. ವೆ.ಆ.) ಆದರೆ ಈಗ ಉಂಟಾಗಿರುವ ತಪ್ಪು ತಿಳುವಳಿಕೆಯನ್ನು ದೂರಮಾಡುವ ಮಟ್ಟಿಗಾದರೂ ಮನಸ್ಸು ಹಾಕಲೇಬೇಕಾಗಿದೆ... ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲವು ಹೆಸರಿಗೆ ಮಾತ್ರವೇ ಪ್ರಾತಿನಿಧಿಕವಾಗಿದೆಯಲ್ಲದೆ ನಿಜವಾಗಿ ಅದು ಪ್ರಾತಿನಿಧಿಕವಾಗಿಲ್ಲವೆಂದು ನನ್ನ ಅಭಿಪ್ರಾಯ. ಅದನ್ನು ನಿಜವಾಗಿ ಪ್ರಾತಿನಿಧಿಕವಾಗಿ ಮಾಡುವುದಕ್ಕೆ ನಾನು ಮೊದಲಿನಿಂದಲೂ ಅನೇಕ ವಿಧವಾದ ಸೂಚನೆಗಳನ್ನು ತಂದಿರುವೆನೆಂಬುದು ನಿಮಗೆ ಗೊತ್ತಿದ್ದ ಮಾತು. ನಿಮಗೆಲ್ಲರಿಗೂ ಈಗಿನ ಕಾರ್ಯನಿರ್ವಾಹಕ ಮಂಡಲವು ಸಾಕಷ್ಟು ಪ್ರಾತಿನಿಧಿಕವಾಗಿಲ್ಲವೆಂದು ಅನಿಸುತ್ತಿದೆ ಮತ್ತು ಆ ದಿಶೆಯಿಂದ ಪ್ರಯತ್ನಮಾಡುವುದು ಕರ್ತವ್ಯವೆಂದು ಅನಿಸುತ್ತಿದ್ದರೆ ನೀವು ಸೂಚನೆಯನ್ನು ಮಾನ್ಯಮಾಡಿಯಾಗಲಿ, ಅಥವಾ ಅದೇ ಉದ್ದೇಶವನ್ನು ಸಾಧಿಸುವಂಥ ಮಿಕ್ಕ ಯಾವುದಾದರೂ ಯೋಜನೆಯನ್ನು ಕೈಕೊಂಡಾಗಲಿ, ಕಾರ್ಯವನ್ನು ಸಾಗಿಸಬೇಕು. ಇಲ್ಲದಿದ್ದರೆ ಬಿಡಬಹುದು. ನನಗೇನೋ ನಿಜವಾಗಿಯೇ ಆ ದಿಶೆಯಲ್ಲಿ ಪ್ರಯತ್ನಪಡತಕ್ಕದ್ದು, ಹೀಗಿದ್ದು ಒಂದಿಲ್ಲೊಂದು ನೆವದಿಂದ ಅದನ್ನು ಮುಂದೂಡುವುದು ಅನುಚಿತವೆಂದು ತೋರುತ್ತದೆಂಬುದನ್ನು ಹೇಳದೆ ಇರಲಾರೆನು.

"ಆದರೆ ಅದು ಹೇಗಿದ್ದರೂ ಒಂದು ಮಾತು ಮಾತ್ರ ಖಂಡಿತ ಅದೇನೆಂದರೆ, ನಿಮ್ಮೆಲ್ಲರ ಮನಸ್ಸಿಗೆ ಬಾರದಿದ್ದ ಯಾವ ಸೂಚನೆಯನ್ನೂ ಬಹುಮತದಿಂದ ನಿಮ್ಮ ಮೇಲೆ ಹೇರಲು ಇಚ್ಛಿಸುವುದಿಲ್ಲ. ಮತ್ತು ವೃತ್ತಪತ್ರಿಕೆಗಳಲ್ಲಿ ಚಳುವಳಿಯನ್ನು ಆದಷ್ಟು ಮಟ್ಟಿಗೆ ಎಬ್ಬಿಸಬಾರದೆಂದು ನನ್ನ ಮತ. ಆ ದಿವಸಗಳು 'ಇನ್ನೂ ಬಂದಿಲ್ಲ. ಹಿಂದಕ್ಕೆ ನಾನು ಹಾಗೆ ಮಾಡಿಲ್ಲ. ಮುಂದೆಯೂ ಮಾಡಲು ಇಚ್ಛಿಸುವುದಿಲ್ಲ. ಆದಕಾರಣ ನಾನು ಈ ಉಪಸಮಿತಿಗೆ ರಾಜೀನಾಮೆ ಕೊಟ್ಟಿರುವೆನು... ಹೇಗಿದ್ದರೂ.... ಕಾರ್ಯನಿರ್ವಾಹಕ ಮಂಡಲದವ, ವಿಶೇಷತಃ ಮೈಸೂರು ಪ್ರಾಂತದ ಸದಸ್ಯರ ಮನಸ್ಸಿಗೆ ಬಾರದಿದ್ದ ಯಾವ ಸೂಚನೆಯನ್ನೂ ಸಾಮಾನ್ಯ ಸಭೆಯಲ್ಲಿ ಮಂಜೂರು ಮಾಡಿಕೊಂಡು. ಅದರ ಮೇಲೆ ಹೇರಲಿಚ್ಛಿಸುವುದಿಲ್ಲ. ಆದಕಾರಣ, ನನ್ನ ಮಟ್ಟಿಗಂತೂ ನಾನು ಹಿಂದೆ ಸರಿದು ನಿಲ್ಲುತ್ತೇನೆ.

"ಇಲ್ಲಿಯ ಕೆಲವು ತರುಣರಿಗೆ ಭಾಷಾಸೇವೆಯ ಕ್ಷೇತ್ರವನ್ನು ಬೆಳಿಸಬೇಕೆಂಬ ಇಚ್ಛೆ ಹುಟ್ಟಿ ಒಂದು ಸಂಘವನ್ನು ಸ್ಥಾಪಿಸುವುದಕ್ಕೆ ಯೋಚಿಸಿದ್ದರು. ಅದು ನನಗೆ ತಿಳಿದಾಗ, ಬೇರೆ ಸಂಘವನ್ನು ಸ್ಥಾಪಿಸುವ ಬದಲು, ಪರಿಷತ್ತಿನ ಅಧೀನವಾಗಿಯೇ ಆ ಸಂಘವನ್ನು ಸ್ಥಾಪಿಸಬೇಕೆಂದು ಸೂಚಿಸಿದೆನು. ಅದಕ್ಕೆ ಅವರೂ ಒಪ್ಪಿದರು. ಅದರ ಫಲವೇ ಶಾಖಾ ಸ್ಥಾಪನೆಯ ಈ ನನ್ನ ಸೂಚನೆಯು."

೧-೨-೧೯೩೮ನೆಯ ದಿವಸ ನಾನು ಸಾಹಿತ್ಯ ಪರಿಷತ್ತಿಗೆ ಬರೆದು ಕಳಿಸಿದ ರಾಜೀನಾಮೆ ಪತ್ರ.

"ನನ್ನನ್ನು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯನನ್ನಾಗಿ ಆರಿಸಿದ ಸಂಗತಿ ತಿಳಿಯಿತು. ಆದರೆ ಆ ಪ್ರಕಾರದ ಸದಸ್ಯತ್ವವನ್ನು ಸ್ವೀಕರಿಸುವುದು ನನಗೆ ಸಾಧ್ಯವಿಲ್ಲವೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ. ನನ್ನಿಂದ ಪರಿಷತ್ತಿಗೆ ಯಾವ ವಿಧವಾದ ಸಹಾಯವಾಗುವುದೂ ತಕ್ಕವಿಲ್ಲವೆಂದು ತೋರುತ್ತದೆ. ನಾನು ಹಿಂದಕ್ಕೆ ಈ ವಿಷಯವಾಗಿ ೧೨-೧೦-೩೪ನೇ ದಿವಸ ಬರೆದ ಪತ್ರದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಿಯೇ ಇರುವೆನು".

೨೭-೬-೩೮ಕ್ಕೆ ಕೊನೆಯ ರಾಜೀನಾಮೆ ಪತ್ರ

"...ನನ್ನ ಕೆಲವು ಮಿತ್ರರ ಆಗ್ರಹದ ಮೇರೆಗೆ ನಾನು ಕೊಟ್ಟ ರಾಜೀನಾಮೆಯನ್ನು ಮೂರು ತಿಂಗಳ ಮಟ್ಟಿಗೆ ನಿಲ್ಲಿಸಿದ್ದೆನು. ಮೂರು ತಿಂಗಳು ಆಗಿ ಬಹಳ ದಿವಸಗಳಾದ್ದರಿಂದ ದಯವಿಟ್ಟು ಅದನ್ನು ಸ್ವಿಕರಿಸಿ ನನ್ನನ್ನು ಮುಕ್ತನನ್ನಾಗಿ ಮಾಡಬೇಕೆಂದು ವಿಜ್ಞಾಪನೆ.

"ನಾನು ಮೂರು ತಿಂಗಳ ಮಟ್ಟಿಗೆ ಮಾತ್ರವೇ ನನ್ನ ರಾಜೀನಾಮೆಯನ್ನು ಪೂರ್ಣವಾಗಿಯೇ ಹಿಂದಕ್ಕೆ ತೆಗೆದುಕೊಂಡಿರುವೆನೆಂದು ಭಾಸವಾಗುವಂತೆ ನೀವು ತಿಳಿಸಿದುದೂ ಸರಳತನವಲ್ಲ. ಮತ್ತು ಆ ವಿಷಯದ ವಿಚಾರವನ್ನು ಇಡೀ ಒಂದು ವರ್ಷ ಮುಂದುಡೂವುದಾದರೆ, ಅದರ ವಿಚಾರವನ್ನು ನೀವು ಮಾಡಲಿಕ್ಕೇ ಸಿದ್ಧರಿಲ್ಲ ಎಂದಂತೆ, ಇರಲಿ, ಅದನ್ನು ತೆಗೆದುಕೊಂಡು ನನಗೆ ಮಾಡುವುದೇನು ? ಬೆಂಗಳೂರಿನ 'ಒಬ್ಬರಾಕ್ಷಸಿ' ಯವರು ಈ ವಿಷಯದಲ್ಲಿ ಇತ್ತೀಚೆಗೆ ಹಟಕ್ಕೆ ಬಿದ್ದಿರುವರೆಂಬುದು ಸ್ಪಷ್ಟವಿದೆ. ಆದಕಾರಣ ಈ ವಿಷಯವನ್ನು ಇಲ್ಲಿಗೇ ನಿಲ್ಲಿಸುವುದು ಒಳ್ಳೆಯದು. ಇನ್ನು ನಾನು ಅಲ್ಲಿ ಇಲ್ಲದಿರುವುದೇ ನನಗೂ ಅವರಿಗೂ ಅದರಂತೆ ಮಿಕ್ಕವರಿಗೂ ಮುಂದಿನವರಿಗೂ ಕೂಡಿಯೇ ವಿಹಿತ.

ನಾನು ಸರಿದು ನಿಂತು ಬಿಡುತ್ತೇನೆ" ಎಂದು ತಿಳಿಸಿದೆ. ಮತ್ತು ಮತ್ತೆ ಅದು ಬೇರೆ ಬೇರೆ ಸೂಚನೆಗಳನ್ನು ಅವರ ಮುಂದೆ ಇಟ್ಟೆ. ಡಿಸೆಂಬರದಲ್ಲಿ ರಾಯಚೂರ ಸಮ್ಮೇಳನದ ಕಾಲಕ್ಕೆ ಪರಿಷತ್ತಿನ ಅಧಿವೇಶನದಲ್ಲಿ ಈ ಪ್ರಶ್ನೆ ಹೊರಟಿತು. ನಾನು ಎದ್ದು "ಹೆಸರಿಗೆ ಮಾತ್ರ ಹೊರಗಿನವರು ಪ್ರತಿನಿಧಿಗಳಾಗಿರುವರು. ಅದನ್ನು ಹೇಗಾದರೂ ತಪ್ಪಿಸಿರಿ" ಎಂದು ಅಂದೆ. ಕೂಡಲೆ ಬಿ.ಎಂ.ಶ್ರೀಕಂಠಯ್ಯನವರು ಏಕೋ ಏನೋ ಅಧ್ಯಕ್ಷರಾದ ಡಿ.ವ್ಹಿ. ಗುಂಡಪ್ಪನವರು ತಡೆದು ಹಿಡಿದರೂ ಕೇಳದೆ, ಭರದಿಂದ ಹೊರಟುಹೋದರು, ಮುಂದೆ ಕೆಲವು ಹೊತ್ತಿನ ಮೇಲೆ ಸಭೆ ವಿಸರ್ಜನೆಯಾಯಿತು. ಯಾವ ವಿಷಯಗಳ ವಿಚಾರವೂ ಆಗಲಿಲ್ಲ. ಮುಂದೆ ಬೆಂಗಳೂರಿನಲ್ಲಿಯೇ ಮೇ ೨ನೆಯ ತಾರೀಖಿಗೆ ವಿಶೇಷ ಅಧಿವೇಶನವನ್ನು ಇಟ್ಟರು. ನನ್ನ ಸೂಚನೆಗಳ ಹಣೆಬರಹವು ಅಲ್ಲಿ ಏನಾಗುವುದೆಂಬುದು ಬೆಂಗಳೂರಿನವರ ರಾಯಚೂರಿನಲ್ಲಿಯ ಧೋರಣದಿಂದ ನನಗೆ ತಿಳಿದೇ ಇದ್ದುದರಿಂದ 'ಆ ಫಾರ್ಸು ಮಾಡುವುದು ನನಗೆ ಬೇಡ, ನಿಮ್ಮ ಇಚ್ಛೆ ಇದ್ದರೆ ಆಸ್ಪದ ಕೊಡಿರಿ. ಇಲ್ಲದಿದ್ದರೆ ಬಿಡಿರಿ, ನಾನು ಪರಿಷತ್ತಿನ ಸಂಬಂಧ ಕಡಿದುಕೊಂಡು ಬಿಟ್ಟಿರುವೆ' ಎಂದು ತಿಳಿಸಿದೆ. ಇಲ್ಲಿಗೆ ಒಂದನೆಯ ಅಂಕವು ಸಮಾಪ್ತವಾಯಿತು. ಮುಂದೆ ಮುಂಬಯಿ, ಜಮಖಂಡಿ ಸಮ್ಮೇಳನಗಳಿಗೆ ನಾನು ಹೋಗಲಿಲ್ಲ; ನಾನು ಏಕೆ ಬರಲಿಲ್ಲವೆಂದು ಅವರೂ ಕೇಳಲಿಲ್ಲ. ಜಮಖಂಡಿಯಲ್ಲಿ ಈ ಒಳ ಸಂಗತಿಗಳು ಗೊತ್ತಿಲ್ಲದ ಮೂಲಕ, ಪುನಃ ನಾನೂ ಕಾರ್ಯನಿರ್ವಾಹಕ ಮಂಡಲದಲ್ಲಿ ಆರಿಸಲ್ಪಟ್ಟೆ. ಆಗ ನಾನು ೧-೨-೧೯೩೮ನೆಯ ದಿವಸ ಪರಿಷತ್ತಿಗೆ ಪತ್ರ ಬರೆದು, ನನ್ನಿಂದ ಪರಿಷತ್ತಿಗೆ ಯಾವ ವಿಧವಾದ ಸಹಾಯವಾಗುವದೂ ಶಕ್ಯ ತೋರುವುದಿಲ್ಲವಾದ್ದರಿಂದ ಸದಸ್ಯತ್ವವನ್ನು ಸ್ವೀಕರಿಸುವುದಿಲ್ಲವೆಂದು ತಿಳಿಸಿದೆ. ಆಗ ಶ್ರೀ ಬಸವಲಿಂಗ ದೇಶಿಕರು ಪ್ರೊ. ಮಾಳವಾಡ ಮುಂತಾದ ಐದಾರು ಜನರು ನನ್ನ ರಾಜೀನಾಮೆಯನ್ನು ಸ್ವೀಕರಿಸಬಾರದೆಂದೂ ಪರಿಷತ್ತಿನವರು ನನ್ನನ್ನು ಇಟ್ಟುಕೊಳ್ಳಲೇಬೇಕೆಂದೂ ಸಲಹೆ ಕೊಟ್ಟರು. ಬೆಂಗಳೂರಿನವರು ತಾವು ಆ ಪ್ರಕಾರ ಮಾಡದೆ, ಹಾಗೆ ಸಲಹೆ ಕೊಟ್ಟವರು ತಾವೇ ಆಲೂರವರನ್ನು ಕರೆದುಕೊಂಡು ಬರಬೇಕೆಂದು ಅವರಿಗೆ ತಿಳಿಸಿದರು. ಅದರಿಂದ ನನಗೆ 'ರಾಜೀನಾಮೆ ಏಕೆ ಕೊಟ್ಟಿರಿ, ಕೊಡಬೇಡಿರಿ' ಎಂಬ ಬಗ್ಗೆ ಪತ್ರ ಬಂದವು. ಅವರಿಗೆ ಹಿಂದಿನ ಸಂಗತಿ ಗೊತ್ತಿರಲಿಲ್ಲ. ಅವರೆದುರಿಗೆ ನಾನು ಹಿಂದಿನ ಪುರಾಣವನ್ನು ಬಿಚ್ಚಿಡಬೇಕಾಯಿತು. ಇಟ್ಟೆ ಮತ್ತು ಇಂಥ ಸ್ಥಿತಿಯಲ್ಲಿ ನಾನು ಇರುವುದು ಒಳಿತೋ ಹೇಗೆ ನೀವೇ ಹೇಳಿರಿ ಎಂದು ಕೇಳಿದೆ. ಪ್ರೊ. ಮಾಳವಾಡರ ಆಗ್ರಹದ ಸಲುವಾಗಿ ಮೂರು ತಿಂಗಳ ಮಟ್ಟಿಗೆ ರಾಜೀನಾಮೆ ನಿಲ್ಲಿಸಿದೆ. ಅವರು ಪರಿಷತ್ತಿಗೆ ಸೂಚನೆ ಕಳಿಸಿ ಪ್ರಯತ್ನಪಟ್ಟರು. ಆದರೂ ಬೆಂಗಳೂರಿನವರು ಕೇಳಲಿಲ್ಲ. ನನಗೆ ಇರಲಿಕ್ಕೆ ಹೇಳಲಿಕ್ಕೆ ಪ್ರೊ. ಮಾಳವಾಡರಿಗೂ ಆಗ ಬಾಯಿ ಇಲ್ಲವಾಯಿತು. ಇಷ್ಟೇ ಅಲ್ಲ, ಮೂರು ತಿಂಗಳ ಮಟ್ಟಿಗೆ ಮಾತ್ರ ನಾನು ರಾಜೀನಾಮೆ ನಿಲ್ಲಿಸಿದ್ದೆನೆಂಬ ಮಾತು ತಿಳಿಸದೆ, ನಾನು ನನ್ನ ರಾಜೀನಾಮೆಯನ್ನು ಒತ್ತಾಯ ಪಡಿಸುವುದಿಲ್ಲವೆಂದು ತಿಳಿಸಿರುವೆನೆಂದು ಪರಿಷತ್ತಿನವರು ಕಾರ್ಯನಿರ್ವಾಹಕ ಮಂಡಳಿಯವರಿಗೆ ತಿಳಿಸಿದರು. ಆಗ ಅರ್ಥಾತ್ ನಾನು ರಾಜೀನಾಮೆ ಕೊಡಲಿಲ್ಲವೆಂದು ಹೊರಗಿನವರು ತಿಳಕೊಂಡು ಸುಮ್ಮನೆ ಕೂತುಬಿಟ್ಟರು. ಈ ಮಾತು ನನಗೆ ಹಿಂದಿನಿಂದ ತಿಳಿಯಿತು. ಕೊನೆಗೆ ೨೭-೬-೧೯೩೮ನೆಯ ದಿವಸ ನನ್ನ ರಾಜೀನಾಮೆ ಮಂಜೂರು ಮಾಡಲು ನಾನು ತಿಳಿಸಿದೆ. ಬೆಂಗಳೂರಿನವರು ಮಂಜೂರು ಮಾಡಿದರು.

❖❖

೧೭ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಮುಳಿಯ ತಿಮ್ಮಪ್ಪಯ್ಯ



ಶ್ರೇಷ್ಠ ಅಧ್ಯಾಪಕರಾಗಿ ಪ್ರಸಿದ್ಧ ಸಾಹಿತಿಗಳಾಗಿ ಕನ್ನಡದಲ್ಲಿ ಪ್ರಸಿದ್ಧರಾದ ಮುಳಿಯ ತಿಮ್ಮಪ್ಪಯ್ಯನವರು ದಕ್ಷಿಣ ಕನ್ನಡ ಜಿಲ್ಲೆಯ ಮುಳಿಯ ಗ್ರಾಮದಲ್ಲಿ ೩-೩-೧೮೮೮ರಲ್ಲಿ ಕೇಶವಭಟ್ಟ-ಮೂಕಾಂಬಿಕಾ ದಂಪತಿಗಳ ಸುಪುತ್ರರಾಗಿ ಜನಿಸಿದರು. ಸ್ಥಳೀಯ ವಿದ್ವಾಂಸರಿಂದ ಸಂಸ್ಕೃತ ಕಲಿತ ಅವರು ಜ್ಞಾನತೃಷೆಯಿಂದ ತಿರುವಾಂಕೂರಿಗೆ ೧೯೦೬ರಲ್ಲಿ ಹೋಗಿ ಅನಂತರ ಅಲ್ಲಿಂದ ಬಂದು ಮೈಸೂರಿನಲ್ಲಿ ಸಂಸ್ಕೃತ ಕಾಲೇಜಿನಲ್ಲಿ ವಿದ್ವಾನ್ ವಾಸುದೇವಾಚಾರ್ಯರಿಂದ ಸಂಗೀತ ಕಲಿತರು. ಮಂಗಳೂರಿನಲ್ಲಿ ವಿದ್ವಾನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ೧೯೧೧ರಲ್ಲಿ ಮಂಗಳೂರಿನ ಕೆನರಾ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾಗಿ ಉದ್ಯೋಗಕ್ಕೆ ಸೇರಿದರು.

ಏಳು ವರ್ಷಗಳ ನಂತರ ಕೆನರಾ ಪ್ರೌಢಶಾಲೆ ಬಿಟ್ಟು ಸೈಂಟ್ ಅಲೋಷಿಯೆಸ್ ಕಾಲೇಜಿಗೆ ಪಂಡಿತರಾಗಿ ಸೇರಿ ಸುಮಾರು ೩೦ ವರ್ಷ ಸೇವೆ ಸಲ್ಲಿಸಿ ೧೯೪೮ರಲ್ಲಿ ನಿವೃತ್ತರಾದರು. ೧೯೧೪-೧೯ರವರೆಗೆ ಕನ್ನಡ ಕೋಗಿಲೆ ಮಾಸಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು.

೧೯೨೭ರಲ್ಲಿ ಮಂಗಳೂರಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಂಡಯ್ಯನೂ ಕನ್ನಡಮೆನಿಪ್ಪಾ ನಾಡೂ ಎಂಬ ವಿದ್ವತ್ಪೂರ್ಣ ಪ್ರಬಂಧವನ್ನು ಮಂಡಿಸಿದರು. ೧೯೪೧ರಲ್ಲಿ ಲಕ್ಷ್ಮೇಶ್ವರದ ಪಂಪೋತ್ಸವ ಸಮಿತಿಯ ಅಧ್ಯಕ್ಷರಾಗಿದ್ದರು.

೧೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಇವರನ್ನು ಆಯ್ಕೆ ಮಾಡಿದರು.

ಮುಳಿಯ ಅವರ ಸಮಗ್ರ ಕೃತಿಗಳು ಈಚೆಗೆ ಪ್ರಕಟವಾಗಿದೆ. ಇವರ ಕೆಲವು ಮುಖ್ಯ ಕೃತಿಗಳು ಹೀಗಿವೆ:

೧. ವೀರಬಂಕೆಯ (ಕಾದಂಬರಿ)
೨. ಚಂದ್ರಾವಳಿವಿಳಾಸ (ಕಾದಂಬರಿ)
೩. ನವನೀತ ರಾಮಾಯಣ (ಕಾವ್ಯ)
೪. ಸೊಬಗಿನಬಳ್ಳಿ (ಕಾವ್ಯ)
೫. ನಾಡೋಜ ಪಂಪ (ವಿಮರ್ಶೆ)
೬. ನಡತೆಯ ಹಾಡು (ನಾಟಕ)
೭. ಹಗಲಿರುಳು (ನಾಟಕ)
೮. ಕವಿರಾಜಮಾರ್ಗ ವಿವೇಕ
೯. ಪಾರ್ತಿಸುಬ್ಬ ಇತ್ಯಾದಿ

ಮುಳಿಯ ತಿಮ್ಮಪ್ಪಯ್ಯ ೧೬-೧-೧೯೫೦ರಲ್ಲಿ ವಿಧಿವಶರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೧೭,
ಅಧ್ಯಕ್ಷರು: ಮುಳಿಯ ತಿಮ್ಮಪ್ಪಯ್ಯ
ದಿನಾಂಕ ೨೮, ೨೯, ೩೦ ಡಿಸೆಂಬರ್ ೧೯೩೧
ಸ್ಥಳ : ಕಾರವಾರ

ಕಾರ್ಯಜಾರಿಗೆ ತರುವ ಮಂಡಳಿ ಇರಲಿ

ಈ ಸಾಹಿತ್ಯ ಸಮ್ಮೇಳನವೆಂಬುದು ವರ್ಷಕ್ಕೊಮ್ಮೆ ಜರುಗುವುದು. ಸಾಹಿತ್ಯೋದ್ಧಾರಕ್ಕಾಗಿ ಕೆಲಕೆಲವು ನಿರ್ಣಯಗಳನ್ನು ಮಾಡುವುದು ; ಮೇಲೆ ಒಟ್ಟುಗೂಡಿ ವಿಚಾರಿಸುವುದೆಂದರೆ ಆ ಮೇಲಿನ ವರ್ಷದಲ್ಲಿ. ಅದರಿಂದಾಗಿ ಈವರೆಗೆ ನಿರ್ಣಯಿಸಲ್ಪಟ್ಟ ಉದ್ದೇಶಗಳು ಬಹಳಮಟ್ಟಿಗೆ ಕಾರ್ಯರೂಪವಾಗಿ ತಲೆದೋರಲಿಲ್ಲವೆಂದು ತೋರುತ್ತದೆ. ಆ ಉದ್ದೇಶಗಳನ್ನು ಪೂರ್ತಿಗೊಳಿಸಲಿಕ್ಕೂ ಇತರ ಸಾಹಿತ್ಯ ಸುಧಾರಣೆಗಳನ್ನು ಒದಗಿಸಲಿಕ್ಕೂ ಸಮರ್ಥರಾದ ಒಂದು 'ಕಾರ್ಯಕಾರಿ ಮಂಡಲಿ' ನಮಗೆ ಅವಶ್ಯವೆಂದು ನನ್ನ ಭಾವನೆ. ಅಖಂಡ ಕರ್ನಾಟಕದ ನುರಿತ ವಿದ್ವಾಂಸರೇ ಅದರಲ್ಲಿ ಸದಸ್ಯರಾಗಿರಬೇಕು. ಸದಸ್ಯರಾದರೂ ಬಹಳ ಹೆಚ್ಚಾಗಿ ಕಾರ್ಯಸಾಧನೆಗೆ ತೊಡಕಾಗುವಂತಿರಬಾರದು. ಆ ಮಂಡಲಿ ನಮ್ಮ ಸಾಹಿತ್ಯ ಪರಿಷತ್ತಿಗೆ ಸಂಪೂರ್ಣವಾಗಿ ಅಧೀನವಾಗಿರಬೇಕೆಂದು ನನ್ನೆಣಿಕೆಯಲ್ಲ ; ಅದಕ್ಕೂ ಕೆಲವು ಸ್ವಾತಂತ್ರ್ಯವಿರತಕ್ಕದ್ದು. ಯಾವಯಾವ ನಿಯಮಗಳಿರತಕ್ಕುದೆಂಬುದನ್ನು ಅರಿತ ವಿದ್ವಾಂಸರೇ ಅಲೋಚಿಸಿ ನಿರ್ಣಯಿಸತಕ್ಕುದು. ಆ ಮೂಲಕವಾಗಿ ಆಯಾ ಪ್ರಾಂತಗಳ ಮುಖ್ಯ ಪಟ್ಟಣಗಳಲ್ಲಿ ಮಾತ್ರವಲ್ಲ ಹಳ್ಳಿಹಳ್ಳಿಗಳಲ್ಲಿಯೂ ಪುಸ್ತಕಾಲಯಗಳನ್ನು ನೆಲೆಗೊಳಿಸಬಹುದು. ಪಟ್ಟಣಗಳಿಂದಲೂ ಹೆಚ್ಚಾಗಿ ಹಳ್ಳಿಯವರಲ್ಲಿ ಸಾಹಿತ್ಯದ ಪ್ರಸಾರವಾದೀತು ; ಏಕೆ ? ಆಗುತ್ತದೆ. ನೋಡಿರಿ : ನಮ್ಮ ಸಾಹಿತ್ಯ ಪರಿಷತ್ತು ನೆಲೆವಡೆದು ಹದಿನೇಳು ವರ್ಷಗಳಾದರೂ, ಸಾಹಿತ್ಯ ಪರಿಷತ್ತೆಂದರೇನು? ಎಂದು ಪ್ರಶ್ನಿಸುವ ಕನ್ನಡಿಗರು ಈಗಲೂ ಹಳ್ಳಿಗಳಲ್ಲಿದ್ದಾರೆ. ಅವರಿಗೂ ಈಗಿನ ಸಾಹಿತ್ಯದ ಸವಿ ಗೊತ್ತಿದೆ ; ಸಾಹಿತ್ಯ ಪರಿಷತ್ತಿನ ಹೊಲವೇ ಗೊತ್ತಿಲ್ಲ. ನಮ್ಮ ಸಾಹಿತ್ಯವು ಸಾರ್ವಜನಿಕವಾಗಬೇಕಲ್ಲವೆ ? ಅದರಿಂದ ನುರಿತ ಸಾಹಿತ್ಯಭಕ್ತರ ಸಂಘವೊಂದನ್ನು ಸ್ಥಾಪಿಸಿ ಆ ಮೂಲಕವಾಗಿ ಉದ್ಯೋಗಿಸಬೇಕೆಂದು ನನ್ನ ಸೂಚನೆ.

ಪರಿಷತ್ತು ಏಕರೂಪತೆಗೆ ಶ್ರಮಿಸಬೇಕು

ನಮ್ಮ ಕರ್ನಾಟಕದ ಆದಿಯ ರಾಜವಂಶಜರಾದ ಕದಂಬಾದಿಗಳೆಲ್ಲರೂ ಕನ್ನಡದೇಳ್ಗೆಗಾಗಿ ಯತ್ನಿಸಿ ಕೃತಾರ್ಥರಾಗಿದ್ದಾರೆ. ಆದರೂ ಪ್ರಾಂತಭೇದದಿಂದಾಗಿ ಕನ್ನಡ ಸಾಹಿತ್ಯಕ್ಕೆ ಒದಗಿದ ನಾನಾತ್ವವನ್ನು ನಿವಾರಿಸಿ ಏಕರೂಪತೆಯನ್ನು ಒದಗಿಸಿದ ರಾಜನೆಂದರೆ ನೃಪತುಂಗನು. ಅವನು "ಸಭಾಸದ"ರಾದ ವಿದ್ವಾಂಸರ ಮೂಲಕವಾಗಿ ಆ ಪುಣ್ಯಕಾರ್ಯವನ್ನು ಮಾಡಿಸಿದನೆಂದು ತಿಳಿದುಬರುತ್ತದೆ. ಅದರಂತೆ ಈಗಿನ ಕನ್ನಡ ಸಾಹಿತ್ಯದ ಕವಲುಗಳನ್ನು ಹೋಗಲಾಡಿಸಿ ಅದನ್ನು ವೃದ್ಧಿಗೊಳಿಸುತ್ತಿರುವ ನಮ್ಮ ಸಾಹಿತ್ಯ ಪರಿಷತ್ಪೋಷಕರು ಕರ್ನಾಟಕ ರಾಜರೂ ಆಗಿರುವ ಮೈಸೂರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರಿಗೆ ಆಯುರಾರೋಗ್ಯಾದಿಗಳು ಒದಗಲಿ ಎಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

❖❖

೧೮ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಡಿ.ವಿ. ಗುಂಡಪ್ಪ



ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರಾಗಿ ಮಂಕುತಿಮ್ಮನ ಕಗ್ಗದಿಂದ ಲೋಕವಿಖ್ಯಾತರಾದ ಡಿವಿಜಿ ಅವರು (ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ) ವೆಂಕಟರಮಣಯ್ಯ-ಅಲಮೇಲಮ್ಮ ದಂಪತಿಗಳಿಗೆ ಮಗನಾಗಿ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ೧೭-೩-೧೮೮೭ರಂದು ಜನಿಸಿದರು. ಶಾಲಾ ವಿದ್ಯಾಭ್ಯಾಸವನ್ನು ಮುಳುಬಾಗಿಲಿನಲ್ಲಿ, ಪ್ರೌಢಶಾಲಾ ಶಿಕ್ಷಣವನ್ನು ಮೈಸೂರು ಮಹಾರಾಜ ಪ್ರೌಢಶಾಲೆಯಲ್ಲಿ ಮುಗಿಸಿದರು. ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೂ ಸ್ವಂತ ಅಧ್ಯಯನದಿಂದ ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರಾಗಿದ್ದರು.

ಮುಳುಬಾಗಿಲಿನ ಒಂದು ಶಾಲೆಯಲ್ಲಿ ಕೆಲವು ಕಾಲ ಬದಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಅನಂತರ ಕೋಲಾರದ ಸೋಡಾ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡಿ ಬೇಸತ್ತು ಬೆಂಗಳೂರಿನಲ್ಲಿ ಜಟಕಾಬಂಡಿಗೆ ಬಣ್ಣ ಬಳಿಯುವ ಕಾರ್ಖಾನೆಯಲ್ಲಿ ಕೆಲ ಕಾಲ ಕೆಲಸ ಮಾಡಿದರು.

ಅನಂತರ ಪತ್ರಿಕಾರಂಗ ಪ್ರವೇಶಿಸಿ ಸೂರ್ಯೋದಯ ಪ್ರಕಾಶಿಕಾ, ಭಾರತ ದಿನಪತ್ರಿಕೆ, ಕರ್ನಾಟಕ, ಮೈಸೂರು ಟೈಂಸ್‌ನ ಮೊದಲಾದ ಪತ್ರಿಕೆಗಳ ಸಂಪಾದನಾ ಕಾರ್ಯ ಮಾಡಿದರು.. ೧೬ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದರು. ಮೈಸೂರು ಪತ್ರಿಕೋದ್ಯಮ ಸಂಘದ ಸ್ಥಾಪನೆ ಮಾಡಿದರು. ಬೆಂಗಳೂರು ಪುರಸಭೆ ಸದಸ್ಯರು, ರಾಜ್ಯಾಂಗ ಸುಧಾರಣಾ ಸಮಿತಿ ಸದಸ್ಯರು, ಪ್ರಜಾಜನ ಪರಿಷತ್ತು ದೇಶೀಯ ಸಂಸ್ಥಾನಗಳ ಪರಿಷತ್ತು ಮೊದಲಾದ ಹತ್ತಾರು ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿದ್ದರು. ಇಂಗ್ಲಿಷ್ ಕನ್ನಡ ನಿಘಂಟಿನ ಸಂಪಾದಕ ಸಮಿತಿಯಲ್ಲಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ೧೯೪೫ರಲ್ಲಿ ಸ್ಥಾಪಿಸಿದರು. ೧೯೧೫ರಲ್ಲಿ ಪರಿಷತ್ತಿನ ಸ್ಥಾಪಕವರ್ಗದಲ್ಲಿದ್ದವರೂ ಆಗಿದ್ದ ಇವರು ೧೯೩೩-೩೭ರಲ್ಲಿ ಪರಿಷತ್ತಿನ ಉಪಾಧ್ಯಾಕ್ಷರಾಗಿದ್ದರು.

ಡಿವಿಜಿ ಅವರಿಗೆ ೧೯೬೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಡಿಲಿಟ್ ನೀಡಿತು. ೧೯೬೭ರಲ್ಲಿ ಶ್ರೀಮದ್ಭಗವದ್ಗೀತಾ ತಾತ್ಪರ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. ೧೯೩೨ರಲ್ಲಿ ಮಡಿಕೇರಿಯಲ್ಲಿ ನಡೆದ ೧೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟ ಸಿಕ್ಕಿತು. ೧೯೨೮ರಲ್ಲಿ ಬಾಗಲಕೋಟೆಯಲ್ಲಿ ನಡೆದ ಅಖಿಲ ಭಾರತ ಕರ್ನಾಟಕ ವೃತ್ತ ಪತ್ರಕರ್ತರ ಪ್ರಥಮ ಸಮ್ಮೇಳನದ ಅಧ್ಯಕ್ಷರಾದರು. ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು. ಬೆಂಗಳೂರು ನಾಗರಿಕರು ಸಾರ್ವಜನಿಕ ಸಮಾರಂಭದಲ್ಲಿ ಸನ್ಮಾನಿಸಿ ೧ ಲಕ್ಷ ಗೌರವನಿಧಿ ನೀಡಿದರು. ಅದನ್ನು ಗೋಖಲೆ ಸಾರ್ವಜನಿಕ ಸಂಸ್ಥೆಗೆ ನೀಡಿದರು.

ಡಿವಿಜಿ ಅವರ ಸಮಗ್ರ ಕೃತಿಗಳನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿದೆ. ಅವರ ಕೆಲವು ಮುಖ್ಯಕೃತಿಗಳು ಹೀಗಿವೆ.

ಜೀವನ ಸೌಂದರ್ಯ ಮತ್ತು ಸಾಹಿತ್ಯ	ಮಂಕುತಿಮ್ಮನ ಕಗ್ಗ
ಬಾಳಿಗೊಂದು ನಂಬಿಕೆ	ಅಂತಃಪುರಗೀತೆ
ಸಂಸ್ಕೃತಿ	ಉಮರನ ಒಸಗೆ
ದಿವಾನ್ ರಂಗಾಚಾರ್ಲು	ಕೃಷ್ಣ ಪರೀಕ್ಷಣ
ಗೋಪಾಲಕೃಷ್ಣ ಗೋಖಲೆ	ಗೀತಾ ಶಕುಂತಳ
ರಾಜ್ಯಶಾಸ್ತ್ರ	ಜ್ಞಾಪಕ ಚಿತ್ರಶಾಲೆ
ವಸಂತಕುಸುಮಾಂಜಲಿ	(೮ ಸಂಪುಟಗಳು)

ಕನ್ನಡ ಸಾಹಿತ್ಯ ಸಮ್ಮೇಳನ-೧೮,

ಅಧ್ಯಕ್ಷರು: ಡಿ.ವಿ. ಗುಂಡಪ್ಪ

ದಿನಾಂಕ ೨೮, ೨೯, ೩೦ ಡಿಸೆಂಬರ್ ೧೯೩೨

ಸ್ಥಳ : ಮಡಿಕೇರಿ

ಈಗಿನ ಸಾಹಿತ್ಯ

ಅನ್ಯ ಸಾಹಿತ್ಯ ಸಂಪರ್ಕದಿಂದ ಕನ್ನಡಕ್ಕ ಪ್ರಯೋಜವುಂಟೆಂಬುದು ಈಗ ಎಲ್ಲರಿಗೂ ಪ್ರತ್ಯಕ್ಷವಾಗಿದೆ. ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯವು ಒಂದು ನವೀನ ಕಾಂತಿಯನ್ನೂ ಶಕ್ತಿಯನ್ನೂ ಸಂಪಾದಿಸಿಕೊಳ್ಳುತ್ತ ಬಂದಿದೆ. ಅದರಲ್ಲಿಯೂ ಈಗ ೧೫-೨೦ ವರ್ಷಗಳಲ್ಲಿ-ಕರ್ಣಾಟಕ ಸಾಹಿತ್ಯ ಪರಿಷತ್ತು, ಧಾರವಾಡದ ವಿದ್ಯಾವರ್ಧಕ ಸಂಘ, ಬೆಂಗಳೂರಿನ ಕರ್ಣಾಟಕ ಸಂಘ, ಧಾರವಾಡದ ಗೆಳೆಯರ ಗುಂಪು ಮಂಗಳೂರಿನಲ್ಲಿ ಬಾಲಸಾಹಿತ್ಯಮಂಡಲ, ಮೈಸೂರು ಕರ್ಣಾಟಕ ಸಂಘ ಮೊದಲಾದ ಸಂಸ್ಥೆಗಳ ಸ್ಥಾಪನೆಯಾದ ಮೇಲೆ- ಈ ಸಂಸ್ಥೆಗಳ ಮೂಲಕವೂ, ಅವುಗಳ ಪ್ರಭಾವದಿಂದುಂಟಾದ ವಾತಾವರಣದ ಪ್ರೇರಣೆಯಿಂದಲೂ ಹೊಸ ಜಾತಿಯ ಗ್ರಂಥ ರಾಶಿಯು ದೇಶದ ಗಮನವನ್ನಾಕರ್ಷಿಸಿಕೊಳ್ಳುವಷ್ಟರಮಟ್ಟಿಗೆ ಬೆಳದಿದೆ. ಈ ಗ್ರಂಥಗಳಲ್ಲಿ ಕೆಲವುಗಳ ವಿಷಯ ಹೊಸದು, ಕೆಲವುಗಳ ರೀತಿ ಹೊಸದು. ವಾತಾವರಣದ ಲಕ್ಷಣಗಳನ್ನು ನೋಡಿದರೆ ಈಗ ಇನ್ನೂ ವಸಂತಾರಂಭದಂತೆ ತೋರುತ್ತದೆ. ಸಾಹಿತ್ಯೋಪಾಸನೆಯ ಉತ್ಸಾಹವು ನೂರಾರು ಎಳೆಯ ಕಣ್ಣುಗಳಲ್ಲಿ ಹೊಳೆಯುತ್ತಿದೆ.

ಇಂತಹ ಸಮಯದಲ್ಲಿ ತರುಣನಲ್ಲದೆ ಪರಿಣತನಾಗದೆ ಇರುವ ನನ್ನಂಥವನು ನೂತನ ಸಾಹಿತ್ಯವನ್ನು ಕುರಿತು ಒಂದೆರಡು ಮಾತನ್ನಾಡಿದರೆ ಅದು ಕಿರಿಯರ ಗಮನಕ್ಕೆ ತಕ್ಕುದಾಗಿರಬಹುದಲ್ಲವೆ? ಅದು ನಾನು ಗ್ರಂಥ ಲೇಖಕನಾಗಿಯಾದಂದಿನಿಂದ ಅದಕ್ಕೆ ಆಧಾರಸ್ತಂಭಪ್ರಾಯರೂ ಆಗಿದ್ದ ರಾಜಸಭಾಭೂಷಣ ಶ್ರೀಮನ್ ಕರ್ಪೂರ ಶ್ರೀನಿವಾಸರಾಯರು ಕಾಲವಶರಾದುದು ನಮಗೆ ಎಣಿಸಲಾಗದಷ್ಟು ದೊಡ್ಡನಷ್ಟವಾಗಿದೆ. ಅವರಂತಹ ವಿದ್ವತ್ಪಕ್ಷಪಾತಿಗಳೂ ಸಾಹಿತ್ಯಪ್ರೇಮಿಗಳೂ ಸಹಾಯಕರ್ತರೂ ದೊರಕುವುದು ಸುಲಭವಲ್ಲ.

ಪರಿಷ್ಮನಂದಿರ

ಮತ್ತೊಂದು ಲಾಭ : ಕರ್ಣಾಟಕ ಸಾಹಿತ್ಯ ಪರಿಷತ್ತು ಈ ೧೮ ವರ್ಷವೂ ಬಾಡಿಗೆಯ ಮನೆಗಳಲ್ಲಿ ವಾಸಮಾಡಿಕೊಂಡಿರಬೇಕಾಗಿತ್ತು. ಈಗ ಮೈಸೂರಿನ ಶ್ರೀಮನ್ಮಹಾರಾಜರವರ, ಅವರ ಸರಕಾರದವರ ಮತ್ತು ಇತರ ಪರಿಷದಭಿಮಾನಿಗಳ ಔದಾರ್ಯದಿಂದ, "ಶ್ರೀಕೃಷ್ಣರಾಜೇಂದ್ರ ಕರ್ಣಾಟಕ ಸಾಹಿತ್ಯ ಪರಿಷನ್ಮಂದಿರ"ವು ಬೆಂಗಳೂರಿನಲ್ಲಿ ನಿರ್ಮಿತವಾಗಿ, ಆವಾಸಕ್ಕೆ ಸಿದ್ಧವಾಗಿದೆ. ಶುಭದಿನ, ಶುಭಹಸ್ತದಿಂದ ಅವರ ಕವಾಟಪಾಟನೋತ್ಸವವನ್ನು ಮಾಡಿಸಿದ ಬಳಿಕ, ಪರಿಷತ್ತಿನ ಮುಂದಿನ ಕಾರ್ಯಸಮಾರಂಭಗಳು ಸಾಂಗವಾಗಿ ನಡೆಯಲು ಅಲ್ಲಿ ಬೇಕಾದ ಅನುಕೂಲಗಳಿರುವುವು. ಪುಸ್ತಕ ಭಾಂಡಾಗಾರಕ್ಕೂ, ಪತ್ರಿಕಾವಾಚಕರಿಗೂ, ಉಪನ್ಯಾಸ ಚರ್ಚೆಗಳಾಗಿ ಸೇರುವ ಪಂಡಿತ ಪರಿಶೋಧಕ ಸಭೆಗಳಿಗೂ ಅಲ್ಲಿ ತಕ್ಕ ಸ್ಥಳಾನುಕೂಲವನ್ನು ಕಲ್ಪಿಸಿದೆ. ಅಲ್ಲಿ ನೆಲಸಿದ ಬಳಿಕ, ಪರಿಷತ್ತಿನ ಕಾರ್ಯಗಳು ಹತ್ತರಷ್ಟಿಪ್ಪತ್ತರಷ್ಟಾಗಿ ಬೆಳೆದು ನಡೆದಾವೆಂದು ನನ್ನ ಭರವಸೆ. ಆ ಮುಂದಿರವು ಮೈಸೂರಿನವರದು ಮಾತ್ರ ಅಲ್ಲ. ಎಲ್ಲ ಕನ್ನಡಿಗರಿಗೂ ಸೇರಿದ್ದು. ಕರ್ಣಾಟಕ ಸಾರಸ್ವತ ಪ್ರಪಂಚಕ್ಕೆ ಅದು ಕೇಂದ್ರಸ್ಥಾನವಾಗಬೇಕು. ಎಲ್ಲ ಸಾಹಿತ್ಯ ಸೇವಕರೂ ಅದನ್ನು ನಮ್ಮ ಕುಲದೈವ ಕ್ಷೇತ್ರವೆಂದು ತಿಳಿಯಬೇಕು. ಹೀಗಾಗಲೂ ತಮ್ಮೆಲ್ಲರ ವಿಶ್ವಾಸವು ಸಹಕಾರವು ಬೇಕೆಂದು ಪ್ರಾರ್ಥಿಸುತ್ತೇನೆ.

ಸದ್ಯಕ್ಕೆ ನಮ್ಮ ಪರಿಷತ್ತನ್ನು ನಾವು ಬಲಪಡಿಸಿದರೆ ಅದರ ಮೂಲಕ, ಮೈಸೂರಿನ ಮತ್ತು ಇತರ ಪ್ರಾಂತಗಳ ವಿದ್ಯಾಪ್ರಚಾರದ ಇಲಾಖೆಗಳ ಸಹಕಾರದಿಂದ, ಕನ್ನಡ ಸಾಹಿತ್ಯ ಪಾಂಡಿತ್ಯಕ್ಕೊಂದು ಪ್ರೋತ್ಸಾಹನಕ್ರಮವು ಏರ್ಪಡಬಹುದೆಂದು ತೋರುತ್ತದೆ. ಈಗ ಮೈಸೂರಿನಲ್ಲಿ ನಡೆಯುತ್ತಿರುವ ಅಪ್ಪರ್‌ಸೆಕೆಂಡರಿ ಮತ್ತು ಪಂಡಿತ ಪರೀಕ್ಷೆಗಳನ್ನು ಪರಿಷ್ಕಾರಗೊಳಿಸಿ, ಆ ಪ್ರಶಸ್ತಿಗಳನ್ನು ಬೊಂಬಾಯಿ, ಮದ್ರಾಸು, ಕೊಡಗು, ಹೈದರಾಬಾದುಗಳ ಸರಕಾರಗಳು ಗೌರವಿಸುವಂತೆ ಮಾಡಿದರೆ ನಾನಾಭಾಗಗಳ ಕನ್ನಡ ವಿದ್ಯಾರ್ಥಿಗಳೂ ಒಂದು ಗೋಷ್ಠಿಯಲ್ಲಿ ಸೇರುವಂತಾಗಿ ಆ ಮೂಲಕ ಕನ್ನಡದ ವಾತಾವರಣವು ಹಬ್ಬಿಕೊಂಡೀತೆಂದು ತೊರುತ್ತದೆ.

ಕನ್ನಡ ಪಾಠಕ್ರಮ

ನಮ್ಮ ಪರಿಷತ್ತಿನ ಕನ್ನಡ ಪಠ್ಯಪುಸ್ತಕಗಳ ಕಡೆಗೂ ಪಾಠಕ್ರಮಗಳ ಕಡೆಗೂ ಹೆಚ್ಚು ಗಮನಕೊಡಬೇಕೆಂದು ತೋರುತ್ತದೆ. ಈ ಸಂಗತಿ ಹೊರಗಡೆ ಹೇಗಿದೆಯೋ ನನಗೆ ತಿಳಿಯದು; ಮೈಸೂರಿನಲ್ಲಿ ಮಾತ್ರ ಪರಿಷ್ಕಾರಕ್ಕೆಡೆ ಬಿಟ್ಟಿದೆ. ಪಾಠಪುಸ್ತಕಗಳನ್ನಾರಿಸುವುದರಲ್ಲಿ ವಿಷಯ ಗೌರವ, ಭಾವಪುಷ್ಟಿ, ಶೈಲಿಯ ಶುದ್ಧತೆ- ಈ ಮೂರಂಶಗಳನ್ನು ಮಾತ್ರವೇ ಗಣನೆಗೆ ತೆಗೆದುಕೊಳ್ಳಬೇಕು. ನೀರಸವಾದ ಗ್ರಂಥಗಳಿಂದ ವಿದ್ಯಾರ್ಥಿಗಳಿಗೆ ಬೇಸರಹುಟ್ಟಿ, ಅಮೇಲೆ ಅವರಿಗೆ ಕನ್ನಡವೆಂದರೆ ಸಾಕೆನಿಸುವುದು.

ಪರಿಷತ್ತು ಕಾವ್ಯೋತ್ಸಾಹ ಹುಟ್ಟಿಸಬೇಕು

ಪಾಠಕರ ಶಿಕ್ಷಣವೂ ಉತ್ತಮಪಡಬೇಕಾಗಿದೆ. ಹಿಂದೆ ಕಾವ್ಯಪಾಠ ಮಾಡಿಸುತ್ತಿದ್ದವರು ಅಷ್ಟಿಷ್ಟಾದರೂ ಸಾಹಿತಿಗಳಾಗಿದ್ದವರು. ಅವರಿಗೆ ವ್ಯಾಕರಣದ ಮೇಲೆಯೂ ಭಾವಾರ್ಥದ ಮೇಲೆಯೂ ದೃಷ್ಟಿಯಿರುತ್ತಿತ್ತು; ಅವರಿಗೆ ಪುರಾಣ ಪೂರ್ವಕಥೆಗಳ ಜ್ಞಾನವಿತ್ತು. ಈಗಿನವರಿಗೆ ಪೂರ್ವಸಾಹಿತ್ಯದ ಪರಿಚಯ ಅಷ್ಟಿಲ್ಲ; ಇಂಗ್ಲಿಷ್ ಸಾಹಿತ್ಯದ ಸೊಬಗನ್ನೂ ಅವರು ಅರಿತವರಲ್ಲ. ಸಾಹಿತ್ಯಸ್ವರೂಪವನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಂಡಿರದವರು, ಶಿಷ್ಯರಿಗೆ ಭಾಷಾಮರ್ಯಾದೆಯನ್ನು ವಿವರಿಸುವುದೂ, ಅವರಿಗೆ ಕವಿಹೃದಯವನ್ನು ಬಿಚ್ಚಿತೋರಿಸುವುದೂ, ಅವರಲ್ಲಿ ಕಾವ್ಯೋತ್ಸಾಹವನ್ನು ಹುಟ್ಟಿಸುವುದೂ ಹೇಗಾದೀತು? ಇಂಗ್ಲೆಂಡಿನಲ್ಲಿ ಇಂಥಾ ಪ್ರಶ್ನೆಗಳು "ಇಂಗ್ಲಿಷ್ ಅಸೋಸಿಯೇಷನ್" ಎಂಬ ಆಂಗ್ಲ ಸಾಹಿತ್ಯ ಪರಿಷತ್ತಿನ ಪರಿಶೀಲನೆಗೆ ಬಂದು, ಸಂಸ್ಕಾರ ಪ್ರಯತ್ನಗಳು ನಡೆದಿವೆ. ನಮ್ಮ ಪರಿಷತ್ತು ಆ ಮೇಲ್ಪಂಕ್ತಿಯನ್ನನುಸರಿಸಿ ಕೆಲಸ ನಡೆಸಬೇಕು.

ಕಛೇರಿಯ ಕನ್ನಡ

ಸರಕಾರದ ನಾನಾ ಇಲಾಖೆಗಳವರು ದೇಶಭಾಷೆಗೆ ಸಹಾಯಮಾಡಲು ಬಹುವಿಧವಾಗಿ ಅವಕಾಶವುಂಟು. ಮುಖ್ಯವಾಗಿ, ಅವುಗಳ ಲೆಕ್ಕಪತ್ರಗಳನ್ನು ಕೂಡಿದಮಟ್ಟಿಗೂ ಕನ್ನಡದಲ್ಲಿಯೇ ಬರೆಯಿಸಿಡಬೇಕು. ಅವುಗಳ ನಾನಾ ಪಟ್ಟಿಕೆಗಳೂ ವರದಿಗಳೂ ಸಾಮಾನ್ಯ ಜನರನ್ನು ಮುಟ್ಟುತ್ತವೆ. ಅವುಗಳಲ್ಲಿ ಒಳ್ಳೆಯ ಭಾಷೆಯಿದ್ದರೆ ಎಲ್ಲರಿಗೂ ಒಳ್ಳೆಯದೆ. ಈ ಶೈಲಿಯನ್ನು ನೋಡಿರಿ :-

"ಈ ಹುಕುಂಮಿಗೆ ಲಗತ್ತಿರುವ ತಃಖ್ತೆಯ ಕಲಂಗಳಲ್ಲಿ ಸವಾಲಿಗೆ ಜವಾಬನ್ನು ಹುಷ್ಯಾರೀಯಿಂದ ನಮೂದಿಸತಕ್ಕದ್ದಿದೆ."

" ಈ ಕೊಳದಲ್ಲಿ ಗಲೀಜುವಗೈರೆ ಮಾಡುವವರನ್ನು ಪ್ರಾಸಿಕ್ಯೂಷನ್ ಮಾಡಲ್ಪಡುತ್ತದೆ."

ಇದು ಯಾವ ಸೀಮೆಯ ಕನ್ನಡ? ಈ ಉದಾಹರಣೆಗಳು ನನ್ನ ಕಲ್ಪನೆಯಲ್ಲ. ಇಂಥಾ ಅಪಸ್ಮಾರಗಳನ್ನು ತಪ್ಪಿಸುವುದು ಸರಕಾರದ ಅಧಿಕಾರಿಗಳ ಕೈಯಲ್ಲಿದೆ.

ಈ ಸಂಧರ್ಭದಲ್ಲಿ ಬೊಂಬಾಯಿ, ಮದ್ರಾಸು ಪ್ರಾಂತಗಳ ಅಂಚೆಯ ಇಲಾಖೆಗಳವರು ತಮ್ಮ ಕೆಲವು ನಿಬಂಧನೆಗಳ ಮತ್ತು ಪತ್ರಿಕೆಗಳ ಕನ್ನಡ ಪ್ರತಿಯನ್ನು ತಿದ್ದಿ ಸರಿಪಡಿಸುವ ಕಾರ್ಯವನ್ನು ಪರಿಷತ್ತಿನ ಕಾರ್ಯದರ್ಶಿಗಳವರಿಗೆ ಒಪ್ಪಿಸುವರೆಂದು ಕೇಳಲು ಸಂತೋಷವಾಗಿದೆ.

ಹೊಸ ವ್ಯಾಕರಣ

ಎಲ್ಲಕ್ಕಿಂತ ದೊಡ್ಡದಾದ ವಿಚಾರವನ್ನು ಕಡೆಗೆ ಉಳಿಸಿಕೊಂಡಿದ್ದೇನೆ; ಅದು ನಮ್ಮ ಪರಿಷತ್ತನ್ನು ಬಲಪಡಿಸುವ ವಿಚಾರ. ಪರಿಷತ್ತಿನಿಂದ ಆಗಬೇಕಾಗಿ, ಆಗಬಹುದಾಗಿ, ಇರುವ ಕೆಲಸಗಳು ಎಣಿಸಲಾಗದಷ್ಟಿವೆ. ಅವುಗಳಲ್ಲಿ ಕೆಲವನ್ನು ತಮ್ಮ ನೆನಪಿಗೆ ತರುತ್ತೇನೆ.

ನಿಘಂಟುವಿನ ಪ್ರಸ್ತಾಪ ಮೊದಲೇ ಆಗಿದೆ. ಪರಿಷತ್ತು ಈ ದೊಡ್ಡ ಕೆಲಸದಲ್ಲಿ ಭಾಗಿಯಾಗಲೇಬೇಕು. ಕನ್ನಡಕ್ಕೆ ಒಂದು ಹೊಸ ವ್ಯಾಕರಣವು ಅತ್ಯಂತ ಅವಶ್ಯವಾಗಿದೆ. ಶಬ್ದಮಣಿದರ್ಪಣ, ಶಬ್ದಾನುಶಾಸನಗಳ ಕಾಲದಿಂದ ಈಚೆಗೆ

ಭಾಷೆಯಲ್ಲಿ ಎಷ್ಟೋ ವತ್ಯಾಸಗಳಾಗಿವೆ. ಆದರೆ ಈ ವ್ಯತ್ಯಾಸಗಳನ್ನು ಪರೀಕ್ಷಿಸಿ, ಅವುಗಳಲ್ಲಿ ಅನುಕೂಲವೂ ಅನಿವಾರ್ಯವೂ ಆಗಿರುವ ವ್ಯತ್ಯಾಸಗಳನ್ನು ನಿರಾಕ್ಷೇಪಣೀಯಗಳೆಂದು ಸ್ಪಷ್ಟವಾಗಿ ಹೇಳುವ ವ್ಯಾಕರಣವು ಇನ್ನೂ ಹುಟ್ಟಬೇಕಾಗಿದೆ. ಇನ್ನು ಮುಂದೆ ಭಾಷೆಯು ಹಿಂದಿಗಿಂತ ಹೆಚ್ಚಾದ ಅವಸರ ಆತುರಗಳಿಂದ ಬೆಳೆಯತಕ್ಕದ್ದಾಗಿದೆ. ಇಂಥಾ ಸಂಧಿ ಸಮಯದಲ್ಲಿ ಭಾಷೆಗೆ ಅಸಹನೀಯವೆಂದು ತೋರಿ ಬಂದಿರುವ ಕಟ್ಟುಗಳನ್ನು ಸಡಲಿಸಿ, ಅದರ ಅಂಗಾಂಗಳ ಸ್ವತಂತ್ರ ಚಲನೆಗೆ ಅವಕಾಶ ಕೊಡಿಸುವ ವ್ಯಾಕರಣವು ಮಹೋಪಕಾರಕವಾಗುತ್ತದೆ.

ಪರಿಷತ್ತಪತ್ರಿಕೆ

ಪರಿಷತ್ಪತ್ರಿಕೆಯನ್ನು ಇನ್ನೂ ಫಲದಾಯಕವಾಗುವಂತೆ ಮಾಡುವುದಿನ್ನೊಂದು ಕೆಲಸ. ಅದು ಎಂದಿಗಾದರೂ ಪ್ರಜಾಸಾಮಾನ್ಯದ ಪತ್ರಿಕೆಯಾಗುವುದೆಂದು ನಾನು ನಂಬಿಕೊಂಡಿಲ್ಲ. ಅದು ವಿದ್ವತ್ಕಾರ್ಯಕ್ಕೆ ಸಾಧನವಾಗಿರಬೇಕಾದ ಪತ್ರಿಕೆ. ಅದರಿಂದ ಕಾವ್ಯತತ್ತ್ವ ಜಿಜ್ಞಾಸೆಯೂ, ಪೂರ್ವೇತಿಹಾಸಾನ್ವೇಷಣೆಯೂ, ಪ್ರಾಚೀನಗ್ರಂಥ ಯೋಗ್ಯತಾ ನಿರ್ಣಯವೂ, ಭಾಷಾಶಾಸ್ತ್ರ ವ್ಯವಸಾಯವೂ ಆಗುವುದು ಸಾಧುವಾಗಿದೆ. ಇದಕ್ಕೆ ಬೇಕಾದುದು ಶೋಧನಪಟುಗಳಾದ ಪಂಡಿತರ ಸಹಕಾರ.

ಸಾರಸ್ವತ ಸನ್ನಿಧಿ

ಪರಿಷನ್ಮಂದಿರದ ಗ್ರಂಥ ಭಾಂಡಾಗಾರವನ್ನು ಸಮೃದ್ಧಿಗೊಳಿಸುವುದಿನ್ನೊಂದು ಕೆಲಸ. ಇದುವರೆಗೆ ಅಚ್ಚಾಗಿರುವ ಪ್ರತಿಯೊಂದು ಕನ್ನಡ ಪುಸ್ತಕದ ಒಂದು ಪ್ರತಿಯಾದರೂ ಅಲ್ಲಿರಬೇಕು. ತಾಳೆಯೋಲೆಗಳ ಸಂಗ್ರಹವೂ ಇರಬೇಕು. ಇಂಥಾ ಗ್ರಂಥ ಸಮುಚ್ಚಯವು ಒಂದು ಕಡೆ ಕೈಗೆ ಸಿದ್ಧವಾಗಿ ದೊರೆಯದಿದ್ದರೆ ಶೋಧನ ಕಾರ್ಯ ನಡೆಯಲಾರದು.

ಸಂಸ್ಥಾ ಸಂಯೋಜನೆ

ಕನ್ನಡಕ್ಕಾಗಿ ಕೆಲಸಮಾಡಬೇಕೆಂಬ ಸಂಸ್ಥೆಗಳು ಕರ್ಣಾಟಕದೊಳಗೆ ಅನೇಕ ಸ್ಥಳಗಳಲ್ಲಿವೆ ; ಹೊರಗೂ ಕೆಲವು ಕಡೆ ಇವೆ. ಅವುಗಳ ವಿವರಗಳನ್ನೆಲ್ಲ ಆಗಾಗ ತರಿಸಿ, ಅವುಗಳ ಕಾರ್ಯಕ್ರಮಗಳನ್ನು ಒಂದು ಸಂಯೋಜನ ವ್ಯವಸ್ಥೆಗೆ ತಂದು, ಅವಕ್ಕೆ ಬೆಂಬಲಕೊಟ್ಟು ಅವುಗಳಿಂದ ಪ್ರಯೋಜನ ಪಡೆದುಕೊಳ್ಳುವ ಏರ್ಪಾಟೂ ಪರಿಷತ್ತಿನಿಂದ ನಡೆಯಬೇಕಾಗಿದೆ.

ಪರಿಷತ್ತಿನ ಸ್ಥಿತಿ

ಪರಿಷತ್ತಿನ ಕೆಲಸಗಳಿನ್ನೆಷ್ಟೋ ಇವೆ. ಆದರೆ ಜನವೆಲ್ಲಿ? ಹಣವೆಲ್ಲಿ? ಈಗಿನ ಸದಸ್ಯರ ಒಟ್ಟು ಸಂಖ್ಯೆ ೧೨೫. ಅದರ ವರ್ಷದ ಸಾಧಾರಣ ವರಮಾನ ಸುಮಾರು ೨,೨೦೦ ರೂಪಾಯಿಗಳು ; ವೆಚ್ಚ ಅದಕ್ಕಿಂತ ಸ್ವಲ್ಪ ಹೆಚ್ಚು. ಈ ವರಮಾನದಲ್ಲಿ ಸರಕಾರದ ಸಹಾಯದ್ರವ್ಯ ೧,೮೦೦ ರೂಪಾಯಿಗಳು. ಹಣದ ಮುಗ್ಗಟ್ಟಿನ ಕಾರಣದಿಂದ ಅದಕ್ಕೂ ಊನ ತಟ್ಟಬಹುದು. ಹೀಗಿದ್ದರೆ, ಪರಿಷತ್ತಿನಿಂದ ವೆಂಕಟನಾರಾಯಣಪ್ಪನವರ ಬೆನ್ನೆಲುಬು ಬಗ್ಗಿಸುವ ಒಂದು ಕೆಲಸಮಾತ್ರ ಸಾಧಿಸಲಾಗುತ್ತದೆ. ಪರಿಷತ್ತಿಗೆ ಪರಿಚಯದವರು ಬೇಕು. ಇನ್ನು ಮುಂದೆ ಯಾರು ಪರಿಷತ್ತಿಗೆ ಹೆಚ್ಚುಮಂದಿ ಸದಸ್ಯರನ್ನು ಸೇರಿಸುತ್ತಾರೆಯೋ ಅವರಿಗೆ ಇಂಥಾ ಸಮ್ಮೇಳನದ ಅಧ್ಯಕ್ಷಪಟ್ಟವನ್ನು ಕಟ್ಟುವುದು ಯುಕ್ತವೆಂದು ನನಗೆ ತೋರುತ್ತದೆ. ಏಕೆಂದರೆ, ಅವರ ಕೆಲಸವು ಭಾಷಾಪ್ರಸಾರದ ತಳಹದಿಯನ್ನು ಭದ್ರಪಡಿಸತಕ್ಕುದು. ಭಾಷಾಪ್ರೇಮಿಗಳ ಕೃತಜ್ಞತೆ ಗೌರವ ವಿಶ್ವಾಸಗಳು ಮೊದಲು ಅವರಿಗೆ ಸಲ್ಲುವುದು ನ್ಯಾಯ.

ಕೊಡಗಿನ ಪರಿಷತ್ತಿನ ಪ್ರೇಮ

ಕೊಡಗಿನ ಮಹಾಜನರೇ, ನಿಮ್ಮ ದೇಶವು ಸೃಷ್ಟಿಯ ಸೌಂದರ್ಯದಿಂದಲೂ ನಿಮ್ಮ ಸರಳತೆ ಉದಾರತೆಗಳಿಂದಲೂ ಕನ್ನಡಿಗರಿಗೆಲ್ಲ ಅತ್ಯಂತ ಪ್ರಿಯವಾಗಿದೆ. ಕರ್ಣಾಟಕ ಮಹಾಸಮಾರಂಭದಲ್ಲಿ ಈ ನಾಡು ತಕ್ಕಷ್ಟು ಮುಂದೆ ಬಂದು ಸೇರಿಲ್ಲವಲ್ಲಾ ಎಂಬ ಕಳವಳವು ಕೆಲವರಿಗೆ ಇದುವರೆಗೂ ಇದ್ದಿತು. ಅಂಥಾ ಕೊರತೆಗೆ ಕಾರಣವಿಲ್ಲವೆಂಬುದು ಈಗ ಸ್ಪಷ್ಟವಾಗಿದೆ. ತಾವು ಭ್ರಾತೃವಾತ್ಸಲ್ಯದಿಂದ ಹೊರಗಿನ ಕನ್ನಡಿಗರನ್ನು ಬರಮಾಡಿಕೊಂಡು, ಕರ್ಣಾಟಕ ಸಾಹಿತ್ಯ ಪರಿಷತ್ತು ನಮಗೂ ಸೇರಿದ್ದೆಂದು ಭಾವಿಸಿ, ಅದನ್ನು ಇಲ್ಲಿಗೆ ಕರೆದು ಅದರಿಸುವುದಕ್ಕಾಗಿ ಎಲ್ಲ ಕನ್ನಡಿಗರ ಪರವಾಗಿ ನಾನು ತಮ್ಮನ್ನು ಅಭಿವಂದಿಸುತ್ತೇನೆ. ನಿಮ್ಮ ನಮ್ಮ ಸೋದರಭಾವವೂ, ನಮ್ಮೆಲ್ಲರ ನುಡಿಯೂ ನಾಡೂ ಏಳಿಗೆ ಪಡೆಯಲಿ.

❖❖

೧೯ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ವೈ. ನಾಗೇಶಶಾಸ್ತ್ರಿ



ಸಂಸ್ಕೃತ-ಕನ್ನಡ ವಿದ್ವಾಂಸರಾದ ವೈ. ನಾಗೇಶಶಾಸ್ತ್ರಿಗಳು ಬಳ್ಳಾರಿ ಜಿಲ್ಲೆಯ ಏಳುಬೆಂಚಿಯಲ್ಲಿ ೧೮೮೩ರಲ್ಲಿ ವೀರಶೈವ ಗುರುಸ್ಥಲಮಠದ ನೀಲಾಂಬಿಕೆ-ನಮನಸ್ವಾಮಿಗಳ ಪುತ್ರರಾಗಿ ಜನಿಸಿದರು. ನಿಜಾಮ ಕರ್ನಾಟಕದ ಕೊಪ್ಪಳ ಗವಿಮಠದ ಕೊಂಗೋಡು ವೀರಭದ್ರಶಾಸ್ತ್ರಿಗಳಲ್ಲಿ ೩ ವರ್ಷ ಸಂಸ್ಕೃತ ಸಾಹಿತ್ಯ ಅಭ್ಯಾಸ ಮಾಡಿ ಪಂಡಿತರಾದರು. ಕನ್ನಡ, ಸಂಸ್ಕೃತ, ತೆಲುಗು, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರಾದ ಇವರು ೧೯೧೪ರಿಂದ ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾದರು. ಅನಂತರ ಮದನಪಲ್ಲಿಯ ಥಿಯಾಸಫಿಕಲ್ ಕಾಲೇಜಿನಲ್ಲಿ, ಬೆಳಗಾಂನ ಲಿಂಗರಾಜ ಕಾಲೇಜಿನಲ್ಲಿ ಮತ್ತು ಬಳ್ಳಾರಿ ವೀರಶೈವ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಇವರ ಅಗಾಧ ಪಾಂಡಿತ್ಯವನ್ನು ಮೆಚ್ಚಿ ೧೯೨೫ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದವರು 'ಸರ್ವದರ್ಶನತೀರ್ಥ' ಎಂದೂ ತಮಿಳುನಾಡಿನ ವಿಶ್ವವಿದ್ಯಾಲಯ 'ಕನ್ನಡ-ಸಂಸ್ಕೃತ ವಿದ್ವಾನ್' ಎಂದೂ ಪ್ರಶಸ್ತಿ ನೀಡಿದವು. ೧೯೩೨ರಲ್ಲಿ ಮೈಸೂರು ಮಹಾರಾಜರೂ, ಆಸ್ಥಾನ ವಿದ್ವಾಂಸರನ್ನಾಗಿ ಪರಿಗಣಿಸಿದರು. ಸೊಂಡೂರು ಮಹಾರಾಜರು ಇವರನ್ನು ಸನ್ಮಾನಿಸಿದ್ದಾರೆ.

೨೪-೪-೧೯೫೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ೨೦ನೆಯ ಶತಮಾನದ ಮಹಾಕವಿ ಎಂದು ಹೊಗಳಿ ಸನ್ಮಾನಿಸಿತು. ೧೯೩೩ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ೧೯ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರನ್ನು ಪರಿಷತ್ತು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಿತು. ೧೯೩೮ರಲ್ಲಿ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

೧೯೨೫ರಲ್ಲಿ ಬಳ್ಳಾರಿಯಿಂದ ಕರ್ನಾಟಕ ಬಂಧು ವಾರಪತ್ರಿಕೆಗೆ ಹೊರಡಿಸಿ ಪತ್ರಿಕಾಕ್ಷೇತ್ರದಲ್ಲೂ ದುಡಿದ ಇವರು ಅನೇಕ ಸಾಹಿತ್ಯ ಪೂರ್ಣಗ್ರಂಥಗಳನ್ನು ರಚಿಸಿದ್ದಾರೆ.

'ಗವಿಸಿದ್ಧೇಶ್ವರ ಪುರಾಣ', 'ಮರಿಯೋಗೀಶ್ವರ ಪುರಾಣ' (ಪುರಾಣ ಕಾವ್ಯ) ಕಾಳಿದಾಸನ ರಘುವಂಶ, ಕುಮಾರಸಂಭವ ಕಾವ್ಯಗಳು (ಅನುವಾದ), ಮೊಗ್ಗೆಯ ಮಾಯಿದೇವನ ಅನುಭವಸೂತ್ರ (ಕನ್ನಡ ಭಾಷಾಂತರ), ಅಭಿನವ ಸೀತೆ, ವಿದ್ಯಾವಿನೋದಿನಿ (ಕಾದಂಬರಿಗಳು) ವಜ್ರಾಂಗುಳೀಯ, ವಿಜಯನಗರಾಭ್ಯುದಯ (ನಾಟಕಗಳು) – ಇವುಗಳು ಇವರು ರಚಿಸಿದ ಕೃತಿಗಳಲ್ಲಿ ಮುಖ್ಯವಾಗಿವೆ.

ಇವರು ೧೯೭೪ನೆಯ ಇಸವಿಯಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೧೯
ಅಧ್ಯಕ್ಷರು: ವೈ. ನಾಗೇಶಶಾಸ್ತ್ರಿ
ದಿನಾಂಕ ೨೯, ೩೦, ೩೧ ಡಿಸೆಂಬರ್ ೧೯೩೩
ಸ್ಥಳ : ಹುಬ್ಬಳ್ಳಿ

ಸಾಹಿತ್ಯ ಪರಿಷತ್ತಿನ ಪ್ರಯೋಜನ

ಪೂರ್ವದಲ್ಲಿ ರಾಜರೂ ಮಂತ್ರಿಗಳೂ ಸಾಹಿತ್ಯ ಪಾರಂಗತರಾದಂತೆ ಅವರು ಬರೆದ ಗ್ರಂಥಗಳಿಂದಲೂ ಚರಿತ್ರಾಂಶಗಳಿಂದಲೂ ತಿಳಿದುಬರುವುದು. ಅವರು ತಮ್ಮ ರಾಜನೀತಿಯನ್ನು ಅಧಿಕಾರದ ಭಯ ದರ್ಪಗಳಿಂದ ಪ್ರಜೆಗಳಲ್ಲಿ ಪ್ರಸರಿಸಲು ಪ್ರಯತ್ನಿಸಲಿಲ್ಲ. ಅವರ ಪ್ರಯತ್ನವು ಸಾಹಿತ್ಯಮುಖದಿಂದ ಸಫಲವಾಗುವಷ್ಟು ಭಯದರ್ಪಗಳಿಂದಾಗುತ್ತಿರಲಿಲ್ಲ. ಅವರ ರಾಜನೀತಿಯೆಲ್ಲವೂ ಸಾಹಿತ್ಯಮಯವಾಗಿತ್ತು. ಜನರು ಉತ್ತಮ ಕಾವ್ಯಗಳನ್ನು ಓದುತ್ತ ಸುಲಭವಾಗಿ ರಾಜನೀತಿಗೊಳಪಟ್ಟು ರಾಜಭಕ್ತಿಯನ್ನು ಪ್ರಕಟಿಸತಕ್ಕವರಾಗುತ್ತಿದ್ದರು, ಸಾಹಿತ್ಯದಲ್ಲಿ ಅಂತಹ ಶಕ್ತಿಯೊಂದಿದೆ. ರಾಜಕೀಯ, ಸಾಮಾಜಿಕ, ಧಾರ್ಮಿಕಾದಿ ವಿಷಯಗಳು ಯಾವ ತರಹದ ಸಮಸ್ಯೆಯನ್ನಾದರೂ ಸರಳವಾಗಿ ಬಿಡಿಸುವ ಶಕ್ತಿಯು ಅದರಲ್ಲಿದೆ. ರಾಜಕೀಯ ಸಾಮಾಜಿಕಾದಿ ಸುಸಂಸ್ಕೃತಿಯನ್ನು ಜನಜೀವನದಲ್ಲಿ ನೆಲೆಗೊಳಿಸಿ ಜನತೆಯನ್ನು ಹುರುಪುಗೊಳಿಸಿ ಕಾರ್ಯವಮಾಡಿಸುವ ಮುಂದಾಳಿನಂತಿರುವುದು ಈ ಶಕ್ತಿಯು. ಅಂತಹ ಶಕ್ತಿಯಿಂದ, ಪರಿಸ್ಥಿತಿಗನುಸರಿಸಿ ಜನತೆಯಲ್ಲಿ ಸುಸಂಸ್ಕೃತಿಯನ್ನು ಸ್ಥಾಪಿಸುವುದಕ್ಕಾಗಿಯೇ ಸಾಹಿತ್ಯ ಪರಿಷತ್ತಿನ ಉದಯವೆಂದರೆ ತಪ್ಪಾಗದು.

ಆಗಿರುವ ಪ್ರಯೋಜನಗಳು

ಈ ಪರಿಷತ್ತಿನಿಂದ ಆಗಿರುವ ಪ್ರಯೋಜನಗಳಲ್ಲಿ ಮುಖ್ಯವಾದುದೆಂದರೆ ಸಮ್ಮೇಳನಗಳನ್ನು ನಡೆಸುವುದು. ಈ ಕಾರ್ಯವು ಅತಿಮಹತ್ತ್ವದೆಂದು ನನ್ನ ಭಾವನೆ. ಪಂಡಿತರೂ ಕವಿಗಳೂ ಮೊದಲಾದ ಸಾಹಿತ್ಯಜ್ಞರು ಒಬ್ಬರಿಗೊಬ್ಬರು ಕೂಡಿ ಮೈತ್ರಿಯಿಂದ ಮಾತನಾಡುವುದೇ ಅಪೂರ್ವ. ಒಬ್ಬರಿಗೊಬ್ಬರು ಮತ್ಸರಗೊಳ್ಳುವುದು ಅವರ ಸ್ವಭಾವ. ಈ ಮತ್ಸರದಿಂದ, ಆಗಬಾರದ ಕೆಲಸವಾಗಿ ಜನತೆಯ ಬಾಳೇ ಹಾಳಾಗುತ್ತಿರುವುದು ನಮ್ಮೆಲ್ಲರ ಅನುಭವ. ಸಮ್ಮೇಳನಗಳು ಇಂತಹ ದೋಷಗಳನ್ನು ಕಳೆದು ಗೆಳೆತನವನ್ನು ಬಳೆಯಿಸುವುವು. ಸಾಹಿತ್ಯಜ್ಞರಲ್ಲಿ ಗೆಳೆತನವುಂಟಾದರೆ ಜಗತ್ತಿಗೆ ಮಹೋಪಕಾರವಾಯಿತೆಂದೇ ಹೇಳಬಹುದು. ನಮ್ಮೆಲ್ಲರನ್ನೂ ಅಂತಹ ಸ್ನೇಹರಜ್ಜುವಿನಿಂದ ಬಂಧಿಸಿ ಒಕ್ಕಟ್ಟಿನಲ್ಲಿರಿಸಿ ಹುರಿದುಂಬಿಸಿ ಭಾಷಾಸೇವೆಯನ್ನೂ ತನ್ಮೂಲಕ ದೇಶಸೇವೆಯನ್ನೂ ಮಾಡಲು ಮುಂದುವರಿಸುವುದಕ್ಕಾಗಿಯೇ ಇಂತಹ ಸಮ್ಮೇಳನಗಳು ನಡೆಯುವುವು. ಪರಿಷತ್ತಿನಿಂದ ಪ್ರಯೋಜನಗಳಲ್ಲಿ ಇದು ಮುಖ್ಯವಲ್ಲವೇ ? ಈ ಸಮ್ಮೇಳನವು ಕವಿಗಳ, ಪತ್ರಿಕಾಕರ್ತರ, ನಾಯಕರ, ವಾಗ್ಮಿಗಳ, ಇನ್ನು ಸಾಹಿತ್ಯಾಂಗಗಳಾದ ಇತರ ಕಲೆಗಳನ್ನು ಬಲ್ಲವರ ಸಮ್ಮೇಳನಗಳನ್ನು ಈಗ ನಡೆಸುವುದಕ್ಕಿಂತಲೂ ಹೆಚ್ಚಾಗಿ ನಡೆಯಿಸಿ ಪ್ರೋತ್ಸಾಹವನ್ನುಂಟುಮಾಡಿದರೆ ಕನ್ನಡ ಸಾಹಿತ್ಯದೇವಿಯು ಸರ್ವಾಂಗಸುಂದರಳಾಗಿ ರಾಜಿಸುವುದರಲ್ಲಿ ಸಂಶಯವಿಲ್ಲ

ಈ ಪರಿಷತ್ತು ಸ್ಥಾಪಿತವಾದಂದಿನಿಂದ ವಿಶ್ವವಿದ್ಯಾಪೀಠಗಳಿಗೂ, ರಾಜ್ಯಾಧಿಕಾರಿಗಳಿಗೂ ಸ್ಥಾನಿಕ ಸಂಸ್ಥೆಗಳ ಅಧಿಕಾರಿಗಳಿಗೂ, ಭಾಷಾಸೇವೆಯ ಸಂಸ್ಥೆಗಳಿಗೂ ಕಾಲಕಾಲಕ್ಕೆ ತಕ್ಕ ಸೂಚನೆಗಳನ್ನು ಸಮ್ಮೇಳನದಲ್ಲಾಗುವ ಗೊತ್ತುವಳಿಗಳ ಮೂಲಕವಾಗಿ ತಿಳಿಸುತ್ತ ಕನ್ನಡ ಭಾಷೆಯನ್ನೂ ಸಾಹಿತ್ಯವನ್ನೂ ಉತ್ತಮಗೊಳಿಸಿ ಅಭಿವೃದ್ಧಿಪಡಿಸುತ್ತಿರುವುದು ಮುಖ್ಯ ಪ್ರಯೋಜನವಲ್ಲವೆ ? ಇದರಂತೆ ಗ್ರಂಥಗಳನ್ನು ಶೋಧಿಸಿ ಪ್ರಕಟಿಸುವುದೂ, ಉತ್ತಮ ರೀತಿಯ ಪರಿಷತ್ಪತ್ರಿಕೆಯೊಂದನ್ನು ಪ್ರಕಟಿಸುತ್ತಿರುವುದೂ, ಗ್ರಂಥಕರ್ತರಿಗೆ ಪ್ರೋತ್ಸಾಹವನ್ನೀಯುವುದೂ-ಇವೇ ಮೊದಲಾದ ಪ್ರಯೋಜನಗಳಾಗಿರುವುದು ತಮಗೆ ತಿಳಿದ ವಿಷಯವಾಗಿದೆ.

ಆಗಬೇಕಾದ ಪ್ರಯೋಜನಗಳು

ಪರಿಷತ್ತಿನಿಂದ ಆಗಬೇಕಾದ ಪ್ರಯೋಜನಗಳು ಅನೇಕವಾಗಿರುವುವು ; ಅವೆಲ್ಲಕ್ಕೂ ಜನಸಹಾಯವೂ ಧನಸಹಾಯವೂ ಅವಶ್ಯವೆಂಬುದು ವಿಧಿತವೇ. ಸದ್ಯದಲ್ಲಿರುವ ಪರಿಷತ್ತಿನ ಸದಸ್ಯರ ಸಂಖ್ಯೆಯು ಕನ್ನಡಿಗರ ಭಾಷಾಭಿಮಾನ ಶ್ಯೂನ್ಯತೆಯನ್ನು ಸೂಚಿಸುತ್ತಿರುವುದು. ಸದಸ್ಯರ ಸಂಖ್ಯೆಯನ್ನು ವೃದ್ಧಿಪಡಿಸುವುದು ನಮ್ಮ ಆದ್ಯಕರ್ತವ್ಯವು. ಇದಲ್ಲದೆ, ಜನತೆಯಲ್ಲಿ

ವಾಚನಾಭಿರುಚಿಯನ್ನು ವೃದ್ಧಿಪಡಿಸಲಿಕ್ಕೆ ಅನುಕೂಲವಾದ ಕಾರ್ಯಗಳನ್ನು ಪರಿಷತ್ತಿನವರು ಹೆಚ್ಚಾಗಿ ಕೈಕೊಳ್ಳಬೇಕಾಗಿದೆ. ವಾಚನಾಭಿರುಚಿಯುಂಟಾದೊಡನೆ ಜನತೆಯು ಸಾಹಿತ್ಯಾಭಿಮುಖವಾಗುವುದು. ಆಗ ಪರಿಷತ್ತಿಗೆ ಜನಸಹಾಯವು ಅಧಿಕವಾಗಿ ದೊರೆಯಬಹುದು. ಸದ್ಯದಲ್ಲಿ ಪರಿಷತ್ತಿಗೆ ಮೈಸೂರಿನ ಮಹಾರಾಜರೂ ಅವರ ಸರ್ಕಾರದವರೂ ಧನ ಸಹಾಯವನ್ನೂ ಮಾಡಿಯೂ ಮಾಡುತ್ತಲೂ ಇರುವುದು ಅಭಿನಂದನೀಯವೂ ಸ್ತುತ್ಯವೂ ಆಗಿರುವುದು. ಈ ಪರಿಷತ್ತು ಮೈಸೂರು ಬೆಂಗಳೂರಿನವರಿಗೆ ಮಾತ್ರ ಸಂಬಂಧಿಸುದುದಲ್ಲ; ಸರ್ವಪ್ರಾಂತಗಳ ಕನ್ನಡಿಗರೂ ಸಂಬಂಧಿಸಿರುವುದು. ಕನ್ನಡಿಗರ ಸಾಹಿತ್ಯವನ್ನು ವೃದ್ಧಿಗೊಳಿಸುವುದರಲ್ಲಿ ಅಭಿಮಾನವುಳ್ಳ ಎಲ್ಲಾ ಭಾಗದ ಪ್ರಾಂತಿಕ ಸರಕಾರದವರೂ, ಲೋಕಲ್ ಬೋರ್ಡಿನವರೂ, ಶ್ರೀಮಂತರೂ, ಇನ್ನುಳಿದವರೂ ಈ ಪರಿಷತ್ತಿಗೆ ಧನಸಹಾಯ ಮಾಡುವಂತೆ ಬೇಡುವ ಹಕ್ಕು ಕನ್ನಡಿಗರೆಲ್ಲರಿಗೂ ಇರುವುದು. ಪರಿಷತ್ತಿಗೆ ಜನಧನ ಸಹಾಯವಾದಂತೆ ಅದರಿಂದ ಅನೇಕ ಪ್ರಯೋಜನಗಳು ನಮಗುಂಟಾಗುವುದರಲ್ಲಿ ತೊಡಕಿಲ್ಲ.

ಇನ್ನು ಮುಂದೆ ಬ್ರಿಟಿಷರ ಸರಕಾರದಲ್ಲಿಯೂ ದೇಶೀಯ ಸಂಸ್ಥಾನಗಳಲ್ಲಿಯೂ ಹೊಸ ಸುಧಾರಣೆಗಳಾಗಿ ರಾಜ್ಯಭಾರಕ್ರಮಗಳು ಮಾರ್ಪಡುತ್ತಿರುವುವೆಂಬುದು ನಮಗೆ ತಿಳಿದ ವಿಷಯ. ಹೊಸ ಸುಧಾರಣೆಯ ರಾಜ್ಯಭಾರದಲ್ಲಿ ಇತರ ಪ್ರಾಂತಗಳಿಗೂ ಅವುಗಳ ಭಾಷೆಗಳಿಗೂ ಸಲ್ಲುವ ಅನುಕೂಲಗಳು ನಮಗೂ ನಮ್ಮ ಭಾಷೆಗೂ ಸಲ್ಲಲು ಅವಕಾಶವಿರುವುದೆ ? ಅಂತಹ ಅನುಕೂಲಗಳನ್ನು ಪಡೆಯಲಿಕ್ಕೆ ಈಗ ನಾವು ಮಾಡಿಕೊಳ್ಳತಕ್ಕ ಪೂರ್ವಸಿದ್ಧತೆಯೇನು ? ಈ ಪ್ರಶ್ನೆಯೇ ಸದ್ಯದಲ್ಲಿ ನಮ್ಮ ಮುಂದಿರುವುದು. ಕರ್ಣಾಟಕ ಪ್ರಾಂತರಚನೆಯಾಗಿ ಕನ್ನಡಿಗರಿಗೊಂದು ಸ್ವತಂತ್ರ ವಿಶ್ವವಿದ್ಯಾಲಯವಾದರೆ ಸಾಕೆಂದು ಹಲವರ ಅಭಿಪ್ರಾಯ. ಇದು ಶೀಘ್ರದಲ್ಲಿ ಸಫಲವಾಗಲಾರದೆಂಬುದೂ ಈಗಿನ ಪರಿಸ್ಥಿತಿಯ ಮೂಲಕ ನಮಗೆ ಗೊತ್ತಾಗುತ್ತಿರುವುದು. ಹೀಗೆಂದು ನಾವು ನಿರಾಶೆಯಿಂದ ಸುಮ್ಮನೆ ಕುಳಿತುಕೊಳ್ಳಲಿಕ್ಕೂ ಇರುವಂತಿಲ್ಲ. ನಮಗೆ ಅನುಕೂಲವನ್ನುಂಟುಮಾಡುವ ಕಾರ್ಯಗಳಲ್ಲಿ ಮುಂದುವರಿಯಬೇಕಾಗಿದೆ. ಪರಿಷತ್ತು ಸಮ್ಮೇಳನಗಳಲ್ಲಿಯೂ ತನ್ನ ವಾರ್ಷಿಕಾಧಿವೇಶನಗಳಲ್ಲಿಯೂ ನಿರ್ಣಯಿಸಿದ ಗೊತ್ತುವಳಿಗಳನ್ನೆಲ್ಲ ಕಾರ್ಯರೂಪದಲ್ಲಿ ತರುವುದೇನೋ ವಿಹಿತವೆ. ಆದರೆ ಹಾಗೆ ಮಾಡಬೇಕಾದರೆ ಮೇಲೆ ಹೇಳಿದಂತೆ ಜನಧನ ಸಹಾಯವು ಸಾಕಾದಷ್ಟಿರಬೇಕು. ಪರಿಷತ್ತು ಈಗ ತನಗಿರುವ ಜನಧನ ಸಹಾಯಕ್ಕೆ ತಕ್ಕಂತೆ, ಸದ್ಯದ ಪರಿಸ್ಥಿತಿಗೆ ಯಾವುದು ಮುಖ್ಯವೋ ಅಂತಹ ಒಂದೆರಡು ವಿಷಯಗಳನ್ನು ಕಾರ್ಯರೂಪದಲ್ಲಿ ತರುವುದಕ್ಕಾಗಿ ವರ್ಷಾವಧಿ ದುಡಿಯುವುದೇ ಮುಖ್ಯ ಪ್ರಯೋಜನವೆಂದು ನನ್ನ ಭಾವನೆ. ಅಂತಹ ಕಾರ್ಯಗಳು ಯಾವುವೆಂಬುದನ್ನು ನಿರ್ಣಯಿಸುವುದು ತಮ್ಮೆಲ್ಲರ, ವಿಚಾರಕ್ಕೊಳಪಟ್ಟಿರುವುದು.

ಪರಿಷತ್ತಿನ ಇತರ ಪ್ರಯೋಜನಗಳು

ಪರಿಷತ್ತಿನಿಂದ ನಮಗೆ ಬೇಕಾದ ಇತರ ಪ್ರಯೋಜನಗಳಲ್ಲಿ, ನನಗೆ ತಿಳಿದವುಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸುವೆನು:-

ಈಚೆಗೆ ಭಾಷೆಯಲ್ಲಿ ಎಷ್ಟೋ ವ್ಯತ್ಯಾಸಗಳಾಗಿರುವುವು. ಈ ವ್ಯತ್ಯಾಸಗಳನ್ನು ಪರೀಕ್ಷಿಸಿ, ಅವುಗಳಲ್ಲಿ ಅವಶ್ಯವೂ ಅನಿವಾರ್ಯವೂ ಆಗಿರುವ ವ್ಯತ್ಯಾಸಗಳು ಆಕ್ಷೇಪರಹಿತಗಳೆಂದು ಹೇಳುವ ಹೊಸ ವ್ಯಾಕರಣ ಗ್ರಂಥವೊಂದು ಪರಿಷತ್ತಿನ ಪಂಡಿತ ಮಂಡಲದಿಂದ ರಚಿತವಾಗುವುದು ಅವಶ್ಯ. ಕನ್ನಡ ಭಾಷಾಶಾಸ್ತ್ರವೂ, ಶಾಸ್ತ್ರೀಯ ತತ್ತ್ವಗಳನ್ನು ವಿವರಿಸುವ ಗ್ರಂಥಗಳೂ, ಗ್ರಾಮ ಸುಧಾರಣೆಗೆ ಬೇಕಾದ ಸಣ್ಣಸಣ್ಣ ಪುಸ್ತಕಗಳೂ ನಮ್ಮ ಸಾಹಿತ್ಯಕ್ಕೆ ಬೇಕಾಗಿವೆ. ಇವುಗಳನ್ನು ಬರೆಯಿಸುವುದೂ ಬರೆಯುವವರಿಗೆ ಪ್ರೋತ್ಸಾಹ ವನ್ನುಂಟುಮಾಡುವುದೂ ಪರಿಷತ್ತಿಗೆ ಅವಶ್ಯ.

ಕನ್ನಡದಲ್ಲಿ ಮುದ್ರಿತವಾದ ಪ್ರತಿಯೊಂದು ಗ್ರಂಥವೂ ಸಾಹಿತ್ಯ ಪರಿಷತ್ತಿನ ಪುಸ್ತಕ ಭಾಂಡಾರದಲ್ಲಿ ಸಿಕ್ಕುವಂತೆ ಅದನ್ನು ವೃದ್ಧಿಪಡಿಸಬೇಕು. ಬೇಕಾದ ಗ್ರಂಥವು ಕನ್ನಡಿಗರಿಗೆ ಸಮಯಕ್ಕೆ ಸರಿಯಾಗಿ ಸಿಕ್ಕದೆ ಎಷ್ಟೋ ತೊಂದರೆಯಾಗುತ್ತಿರುವುದು. ಈ ತೊಂದರೆಯನ್ನು ಪರಿಷತ್ತು ಪರಿಹರಿಸಬೇಕು. ಮುದ್ರಿತವಾಗದ ಪುಸ್ತಕಗಳನ್ನು ಸಾಧ್ಯವಾದಮಟ್ಟಿಗೆ ಸಂಗ್ರಹಿಸಬೇಕು.

❖❖

೨೦ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಪಂಜೆ ಮಂಗೇಶರಾಯರು



ಮಕ್ಕಳ ಸಾಹಿತಿಯಾಗಿ, ಶಿಕ್ಷಣಾಧಿಕಾರಿಗಳಾಗಿ, ಹೆಸರು ಮಾಡಿದ್ದ ಪಂಜೆ ಮಂಗೇಶರಾಯರು ಸಾರಸ್ವತ ಬ್ರಾಹ್ಮಣ ಮನೆತನದ ರಾಮಪ್ಪಯ್ಯ- ಶಾಂತದುರ್ಗ ದಂಪತಿಗಳ ಎರಡನೇ ಮಗನಾಗಿ ೨೨-೨-೧೮೭೪ರಲ್ಲಿ ದಕ್ಷಿಣಕನ್ನಡದ ಬಂಟವಾಳದಲ್ಲಿ ಜನಿಸಿದರು.

ಪಂಜೆಯವರು ೧೮೯೬ರಲ್ಲಿ ಬಿ.ಎ. ಇಂಗ್ಲಿಷ್ ಕನ್ನಡ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ೧೯೦೦ರಲ್ಲಿ ಐಚ್ಛಿಕ ವಿಷಯಗಳನ್ನು ಮುಗಿಸಿದರು. ೧೯೦೪ರಲ್ಲಿ ಎಲ್.ಬಿ. ಪದವಿ ಗಳಿಸಿದರು. ಅನಂತರ ೧೮೯೭ರಲ್ಲಿ ಬಿ.ಎ. ಮುಗಿಸಿ, ಮಂಗಳೂರು ಗೌರ್ನಮೆಂಟ್ ಕಾಲೇಜಿನಲ್ಲಿ ಜೂನಿಯರ್ ಕನ್ನಡ ಪಂಡಿತರಾಗಿ ಕಾರ್ಯ ನಿರ್ವಹಿಸಿದರು. ೧೯೧೬ರಲ್ಲಿ ಮಂಗಳೂರು ಗೌರ್ನಮೆಂಟ್ ಹೈಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾದರು. ೧೯೨೧ರಲ್ಲಿ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿಗೆ ಮುಖ್ಯೋಪಾಧ್ಯಾಯರಾಗಿ ವರ್ಗವಾದರು. ೧೯೨೯ರಲ್ಲಿ ವೃತ್ತಿಯಿಂದ ನಿವೃತ್ತಿ ಹೊಂದಿದರು. ಇವರು ೧೯೩೪ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ೧೯೩೬ರಲ್ಲಿ ಹೈದ್ರಾಬಾದ್ ನಾಡಹಬ್ಬದಲ್ಲಿ ಬಾಲಸಾಹಿತ್ಯದ ಬಗ್ಗೆ ಉಪನ್ಯಾಸ ನೀಡಿದರು. ೩೮ಕ್ಕೂ ಹೆಚ್ಚು ಮಕ್ಕಳ ಕಥೆಗಳ ಪುಸ್ತಕ ಬರೆದ ಇವರು ಮಹಾಯುದ್ಧದ ಕಥೆಯನ್ನು ಅನುವಾದಿಸಿದ್ದಾರೆ. ವಿದ್ಯಾರ್ಥಿಗಳಿಗಾಗಿ ಕನ್ನಡ ಮೊದಲನೇ, ಎರಡನೇ, ಮೂರನೇ ಪಠ್ಯಗ್ರಂಥಗಳನ್ನು ಸಂಪಾದಿಸಿದ್ದಾರೆ. ಕವಿಶಿಷ್ಯ ಹೆಸರಿನಲ್ಲಿ ಮಕ್ಕಳಿಗಾಗಿ ಶಿಶುಗೀತೆಗಳನ್ನು ರಚಿಸಿದ್ದಾರೆ. ಐತಿಹಾಸಿಕ ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ಆ ಪೈಕಿ ಕೋಟಚೆನ್ನಯ, ಚೂಡಿಕಾರ ರಹಸ್ಯ ಸಮಾಜ, ಪತ್ತೇದಾರಿ ಕಾದಂಬರಿ ಹೆಸರುಗಳಿಸಿವೆ.

ಶಬ್ದಮಣಿದರ್ಪಣಂ (೧೯೨೦), ಲಘುಕೋಶ(೧೯೨೩) ಇವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. ಹಲ್ಲಿ, ಬಂದಣಿಕೆ, ಭಾರತ ಶ್ರವಣ, ಕಮಲಾಪುರದ ಹೋಟ್ಲಿನಲ್ಲಿ, ಹಳೆಯ ಸಬ್ ಅಸಿಸ್ಟೆಂಟಿನ ಸುಳ್ಳು ಡೈರಿಯಿಂದ ಮೊದಲಾದ ಪ್ರಬಂಧಗಳನ್ನು ಬರೆದಿದ್ದಾರೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಸುವಾಸಿನಿ ಪತ್ರಿಕೆಯಲ್ಲಿ ಹತ್ತಾರು ಲೇಖನಗಳನ್ನು ಬರೆದಿದ್ದಾರೆ. ಶಿಲಾಶಾಸನಗಳ ಬಗ್ಗೆ ಅಭ್ಯಾಸ ಮಾಡಿದ್ದಾರೆ. ಪ್ರಾಣಿಗಳೂ, ಪ್ರದೇಶಗಳೂ (೧೯೩೩) ಭೂಗೋಲಶಾಸ್ತ್ರ ಪ್ರಸಿದ್ಧ ಗ್ರಂಥವಾಗಿದೆ. ಹೀಗೆ ವೈವಿಧ್ಯಮಯ ಗ್ರಂಥಗಳನ್ನು ರಚಿಸಿರುವ ಪಂಜೆಯವರು ಹೈದ್ರಾಬಾದಿನಲ್ಲಿ ೨೪-೧೦-೧೯೩೭ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೨೦,
ಅಧ್ಯಕ್ಷರು, ಪಂಜೆ ಮಂಗೇಶರಾಯ
ದಿನಾಂಕ ೨೮,೨೯,೩೦ ಡಿಸೆಂಬರ್ ೧೯೩೪
ಸ್ಥಳ : ರಾಯಚೂರು

ಸಮ್ಮೇಳನದ ಸಾಧನೆಗೆ ಉಪಾಧ್ಯಾಯರ ಪಾತ್ರ

ನಮ್ಮ ಹಳ್ಳಿಯ ಶಾಲೆಗಳನ್ನೂ ಹಳ್ಳಿಯ ಉಪಾಧ್ಯಾಯರನ್ನು ನಾವು ಸಾಹಿತ್ಯ ಸಮ್ಮೇಳನದ ಕಾರ್ಯಸಾಧನೆಗಾಗಿ ಎಳಕೊಳ್ಳಲೇಬೇಕು. ಸಾಹಿತ್ಯರಚನೆ, ಭಾಷಾಭಿವೃದ್ಧಿ, ಗ್ರಾಮಾರೋಗ್ಯ, ದೇಶಾಭ್ಯುದಯದ ಯಾವ ಸತ್ಕಾರ್ಯವಾದರೂ ಈ ಅಧ್ಯಾಪಕರ ಕೈಯಲ್ಲಿದೆ. ಸಮ್ಮೇಳನದ ಉದ್ದೇಶಗಳನ್ನೂ ಹಳ್ಳಿಯ ಉಪಾಧ್ಯಾಯರಿಗೆ ಮೊಟ್ಟಮೊದಲು ತಿಳಿಯಹೇಳಿ ಅವರ ಸಂಗತಿಯಲ್ಲಿ ಬೇಕಾದರೆ ವರಮಾನವನ್ನು ತಗ್ಗಿಸಿ, ಅವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಅಧ್ಯಾಪಕರು ತಮ್ಮ ಕೈದೀವಟಿಗೆಗಳನ್ನು ಸಾಹಿತ್ಯಾಗ್ನಿಯಿಂದ ಹೊತ್ತಿಸಿಬಿಟ್ಟರೆ, ಪ್ರತಿಯೊಂದು ಗ್ರಾಮಶಾಲೆ ಒಂದು ಪರಿಷನ್ಮಂದಿರ! ಅಲ್ಲಿಯ ಮಕ್ಕಳಕೂಟ ಚಿಕ್ಕ ಸಾಹಿತ್ಯ ಸಭೆ! ಹೀಗಾಗುವುದರಲ್ಲಿ ಸಂಶಯವಿಲ್ಲ. ಕನ್ನಡ ಭಾಷೆಯ ವ್ಯಾಪನೆಗೂ, ಜನಜೀವನದ ಸಂಸ್ಥಾನಕ್ಕೂ, ಸಾಹಿತ್ಯರಚನೆಗೂ ಹಳ್ಳಿಯ ಶಿಕ್ಷಣವೇ ಸ್ಥಿರವಾದ ತಳಹದಿ. ಈ ತಳಹದಿಯನ್ನು ಕಟ್ಟತಕ್ಕ ಶಿಲ್ಪಿಗಳು ನನ್ನ ಗೆಳೆಯರಾದ ಹಳ್ಳಿಯ ಯುವಕ ಉಪಾಧ್ಯಾಯರು.

ಪರಿಷತ್ತಿನ ಉತ್ತರಾಧಿಕಾರಿಗಳು ಹೇಗಿರಬೇಕು

ಇನ್ನು ಮುಂದೆ ಯಾರು ಪರಿಷತ್ತಿಗೆ ಹೆಚ್ಚುಮಂದಿ ಸದಸ್ಯರನ್ನು ಸೇರಿಸುತ್ತಾರೆಯೋ ಅವರಿಗೆ ಇಂತಹ ಸಮ್ಮೇಳನದ ಅಧ್ಯಕ್ಷಪಟ್ಟವನ್ನು ಕಟ್ಟುವುದು ಯುಕ್ತವೆಂದು 'ಶ್ರೀಮಾನ್ ಡಿ.ವಿ. ಗುಂಡಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಒಮ್ಮೆ ವಿನೋದಪರವಾಗಿ ಮಾಡಿದ ಸೂಚನೆಯಲ್ಲಿ ನಾನು ಎರಡೇ ಮಾತುಗಳನ್ನು ಕೂಡಿಸಬೇಕಾಗಿದೆ-'ವಯಸ್ಸಾದವರಿಗೆ ಪಟ್ಟಕಟ್ಟಬಾರದು.' ನಿಜವಾಗಿಯೂ ಸಾಹಿತ್ಯ ಸಮ್ಮೇಳನಕ್ಕೆ ಮುಪ್ಪಿನ ಮುದುಕರು ಅಷ್ಟೊಂದು ಬೇಕಾಗಿಲ್ಲ; ಅದಕ್ಕೆ ಬೇಕಾದವರು ಶಕ್ತಿವಂತರಾದ ಉತ್ಸಾಹಶಾಲಿಗಳಾದ ಯುವಕರು! ಕರ್ನಾಟಕದ ಏಕೀಕರಣ ಮೊದಲಾದ ಜಟಿಲ ರಾಜಕೀಯ ವಿಷಯಗಳನ್ನು ವಾದಿಸಿ, ದೇಶಹಿತವನ್ನು ಸಾಧಿಸಬಲ್ಲ ಪತ್ರಿಕಾಕರ್ತರು! ಸರಕಾರದ ಮನ್ನಣೆಗೂ ಕನ್ನಡಿಗರ ವಿಶ್ವಾಸಕ್ಕೂ ಪಾತ್ರರಾದ ದೇಶಭಕ್ತರು! ಸಮ್ಮೇಳನದ ಕಾರ್ಯಕಲಾಪಗಳು ಇಂಥವರ ಪ್ರೇಮ, ಅಭಿಮಾನ, ಮನೋಭಾವಗಳಿಗೆ ಅನುರೂಪವಾದವಗಳು. ಪಂಪಾದಿ ಕವಿಗಳೂ ಪೊನ್ನಮ್ಮಾದಿ ಕವಯತ್ರಿಯರೂ ರಚಿಸಿದ ಪುರಾತನ ಸಾಹಿತ್ಯ ಮತ್ತು ಅದರಿಂದ ಜನಿಸಿದ ಆಧುನಿಕ ಸಾಹಿತ್ಯ ಹೀಗೆ ಸಕಲ ಕನ್ನಡ ಸಾಹಿತ್ಯಕ್ಕೆ- ಹಲವು ತಲೆಮಾರು ಕಳೆದು ನಮ್ಮ ಕೈಗೆ ಬಂದ ಇಷ್ಟು ವಿಸ್ತಾರವಾದ ಈ ಆಸ್ತಿಗೆ ಕನ್ನಡಿಗರು, ಮುಸಲ್ಮಾನರು, ಕ್ರೈಸ್ತರು, ಹಿಂದೂಗಳು, ಬೃಹತ್ ಕರ್ನಾಟಕದವರೆಲ್ಲರೂ ಹಕ್ಕುದಾರರು. ಕನ್ನಡ ಸಾಹಿತ್ಯದ ಮುಂದಿನ ಕೃಷಿಕಾರ್ಯವು ನಡೆಯಬೇಕು. ನಮ್ಮ ಯುವಕರಿಂದ; ಭಾಷಾಭಕ್ತರೂ, ಸಾಹಿತ್ಯಪ್ರೇಮಿಗಳೂ, ಉತ್ತಮ ಚರಿತರೂ ಉದ್ಯೋಗಶೀಲರೂ ಆಗಿರುವ ವೀರ ಯುವಕರಿಂದ, ಅಂಥವರ ಕೈಗಳಿಗೆ ಹಿರಿಯರ ಹೆಗಲಮೇಲಿನ ನೇಗಿಲು ಬರಲಿಕ್ಕಿದೆ.

ಇಂಗ್ಲಿಷ್ ವಿದ್ಯಾಭ್ಯಾಸವು ಬಂದು ಹಿಂದೂಸ್ಥಾನವನ್ನು ಕೈಹಿಡಿದು ಎಬ್ಬಿಸುವವರೆಗೆ ಕನ್ನಡವು ಚೇತರಿಸಿಕೊಳ್ಳುವಷ್ಟು ಸಮರ್ಥವಾಗಿರಲಿಲ್ಲ. ದೂರದ ದಿಗಂತದಲ್ಲಿಯ ಹೊಸ ಪ್ರಪಂಚವನ್ನು ಕನ್ನಡಿಗನ ಮುಂದೆ ತೋರಿ, 'ನೋಡಲ್ಲಿ ಮುಂಬೆಳಗು ಮೂಡುತಿದೆ ಹೊಂಬಿಸಿಲು' ಎಂಬ ಸೊಲ್ಲನ್ನು ಕನ್ನಡಿಗನ ಕಿವಿಯಲ್ಲಿ ಹಾಡಿದುದು ಇಂಗ್ಲಿಷ್ ಐತಿಹಾಸ! ಭಾಷಾಪ್ರೇಮ, ದೇಶವಾತ್ಸಲ್ಯ, ಐಕ್ಯಸಾಧನೆ, ಸ್ವಾತಂತ್ರ್ಯ ಸಿದ್ಧಿ ಎಂಬೀ ಉದಾತ್ತ ವಿಚಾರಗಳನ್ನು ಅವನ ಮನಸ್ಸಿನಲ್ಲಿ ಒತ್ತಿದುದು ಇಂಗ್ಲಿಷ್ ವಾಙ್ಮಯ! ಈ ವಿಚಾರಗಳ ಪ್ರೇರಣೆಯ ಫಲವೇ ಈ ಸಾಹಿತ್ಯ ಸಮ್ಮೇಳನ.

ಹಿಂದಿನವರ ಧ್ಯೇಯಕ್ಕಿಂತ ಈ ಸಾಹಿತ್ಯ ಸಮ್ಮೇಳನದ ಉದ್ದೇಶಗಳು ಇನ್ನೂ ಅಧಿಕವಾಗಿವೆ. ಅವುಗಳ ಕಾರ್ಯಕ್ಷೇತ್ರ ವಿಸ್ತಾರವಾಗಿದೆ. ಸಮ್ಮೇಳನವು ಕನ್ನಡಿಗರಲ್ಲಿ ಪರಸ್ಪರ ಪರಿಚಯಕ್ಕೆ ಅವಕಾಶವನ್ನು ಒದಗಿಸುತ್ತದೆ. ಯೋಗ್ಯ ಸಾಹಿತ್ಯ ರಚನೆಗೆ ಅನುಕೂಲವನ್ನು ಕಲ್ಪಿಸುತ್ತದೆ. ಗ್ರಂಥಕರ್ತರಿಗೆ ಬರಬಹುದಾದ ಸಮಸ್ಯೆಗಳನ್ನು ವಿಚಾರಿಸುತ್ತದೆ. ಕರ್ನಾಟಕತ್ವ ಸಿದ್ಧಿಗಾಗಿ ಕನ್ನಡ ಪ್ರಾಂತದಲ್ಲಿ ಜಾಗೃತಿಯುಂಟು ಮಾಡುತ್ತದೆ.

ಈ ಘನೋದ್ದೇಶಗಳನ್ನು ಮುಂದಿಟ್ಟು ಸಮ್ಮೇಳನವು ಅನೇಕ ಕಾರ್ಯಗಳನ್ನು ಮಾಡಿದೆ, ಮಾಡುತ್ತಿದೆ. ಶಬ್ದಮಣಿದರ್ಪಣ, ಚಾವುಂಡರಾಯಪುರಾಣ, ಪಂಪಭಾರತ ಮೊದಲಾದ ಪ್ರಸಿದ್ಧ ಕೃತಿಗಳನ್ನು ಪರಿಷ್ಕರಿಸಿ ಮುದ್ರಿಸಿದೆ. ಒಬ್ಬರ ಮುಖ ಒಬ್ಬರು ನೋಡದೆ, 'ಬೆಕ್ಕಿನ ಬಿಡಾರ ಬೇರೆ'ಯೆಂದು ನೆನಸಿ, ಪ್ರತ್ಯೇಕವಾಗಿದ್ದವರು ಇಂದು ಕನ್ನಡಕ್ಕಾಗಿ ದುಡಿಯಲು ಸಮೀಪವರ್ತಿಗಳು; ಕರೆದಲ್ಲಿ ಹೋಗಿ ಕಂಡ ತಿಳಿವನ್ನು ಮನವಾರೆ ತಿಳಿಸುವ ಸ್ನೇಹಿತರು. ಇಂಥವರ ಪರಿಚಯದಿಂದ, ಮಾತಾಳಿಕೆಯಿಂದ, ಹುರುಪಿನಿಂದ ಕನ್ನಡವು ತಲೆಯೆತ್ತಿದೆ. ಇದಕ್ಕೆ ಅಲ್ಲಲ್ಲಿ ಸ್ಥಾಪಿತವಾದ ಕರ್ಣಾಟಕಸಂಘ, ಮಂಡಳ, ಗುಂಪು ಇವೇ ಸಾಕ್ಷ್ಯಗಳು. ಜನಸಾಮಾನ್ಯಕ್ಕೆ ಕನ್ನಡದಮೇಲೆ ಅಭಿಮಾನ ಹುಟ್ಟಿಸುವಂಥ ಸಾಹಿತ್ಯ ಸಮಾರಂಭ, ಕವಿಗಳ ಜನ್ಮ ದಿನಾಚರಣ, ಧರ್ಮೋಪದೇಶಕರ ವರ್ಧಂತ್ಯುತ್ಸವ, ಪುಸ್ತಕ ಪ್ರದರ್ಶನ, ಇವು ಸಮ್ಮೇಳನವು ಪರಿಷತ್ಪತ್ರಿಕೆಯ ಮೂಲಕ ಮಾಡುತ್ತಲಿರುವ ಪ್ರಯತ್ನಫಲಗಳು. ಸಮ್ಮೇಳನದ ಕಾರ್ಯಗಳನ್ನು ಕುರಿತು ನಾನು ಹೇಳುವುದಕ್ಕಿಂತ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರು ಕಳೆದ ಮೇ ತಿಂಗಳಲ್ಲಿ ಕೊಟ್ಟ ಅಮೂಲ್ಯ ಭಾಷಣದೊಳಗಣ ನಾಲ್ಕು ವಾಕ್ಯಗಳು ಎಷ್ಟು ಸ್ಫುಟವಾಗಿ ಹೇಳುತ್ತವೆ!

ಮುಖ್ಯವಾಗಿ, ಕರ್ಣಾಟಕ ಸಾಹಿತ್ಯ ಪರಿಷತ್ತು ಸ್ಥಾಪಿತವಾದ ಕಾಲದಿಂದಲಂತು ವರ್ಷವರ್ಷವೂ ಪುಸ್ತಕ ಪ್ರಕಟನೆಯು ಹೆಚ್ಚುತ್ತ ಬಂದಿದೆ. ಪುಸ್ತಕಗಳ ಸಂಖ್ಯೆಯು ಹೆಚ್ಚಿರುವುದು ಮಾತ್ರವೇ ಅಲ್ಲದೆ ಪುಸ್ತಕಗಳನ್ನು ಬರೆದಿರುವ ನಾನಾ ವಿಷಯಗಳ ಸಂಖ್ಯೆಯೂ ಹೆಚ್ಚು, ಪುಸ್ತಕಗಳ ಬಾಹ್ಯರೂಪವೂ ಹೆಚ್ಚು ಹೆಚ್ಚಾಗಿ ಅಂದವಾಗುತ್ತ ಬಂದಿವೆ. ದೇಶದಲ್ಲಿ ಗ್ರಂಥರಚನೆಯ ಕಾರ್ಯವು ಈ ರೀತಿ ಶ್ರೇಷ್ಠ ರೀತಿಯಲ್ಲಿ ನಡೆದುದಕ್ಕೆ ಚೋದಕವಾಗಿ ಪ್ರೇರಣೆಗೊಳಿಸಿದ ಖ್ಯಾತಿಯು ಪರಿಷತ್ತಿಗೆ ಸಲ್ಲತಕ್ಕುದಾಗಿದೆ.'

❖❖

೨೧ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎನ್.ಎಸ್. ಸುಬ್ಬರಾವ್



ದಿಟ್ಟ ನಿಲುವು, ಸ್ಪಷ್ಟನಡೆ ಅಸಾಮಾನ್ಯ ಸ್ಮೃತಿಶಕ್ತಿಯ ಶಿಕ್ಷಣ ತಜ್ಞ ಎನ್.ಎಸ್. ಸುಬ್ಬರಾಯರು (ನಂಜನಗೂಡು ಸುಬ್ಬಣ್ಣರಾಯರ ಮಗ ಸುಬ್ಬರಾವ್) ಶ್ರೀಮಂತ ಕುಟುಂಬದಲ್ಲಿ ೧೮೮೫ರಲ್ಲಿ ಹುಟ್ಟಿ ಬೆಳೆದವರು. ಬೆಂಗಳೂರು, ಮದರಾಸುಗಳಲ್ಲಿ ಶಿಕ್ಷಣ ಪಡೆದು ಎಂ.ಎ. ಮತ್ತು ಬಾರ್ ಅಟ್‌ಲಾ ಪದವಿಗಳನ್ನು ಕೇಂಬ್ರಿಜ್ ವಿಶ್ವವಿದ್ಯಾನಿಲಯದಿಂದ ಗಳಿಸಿದ ಪ್ರತಿಭಾನ್ವಿತರು. ಕನ್ನಡ ಇಂಗ್ಲಿಷ್, ಫ್ರೆಂಚ್, ಜರ್ಮನ್ ಭಾಷೆಗಳಲ್ಲಿ ಪರಿಣತಿ ಹೊಂದಿದ ಇವರು ನಡೆ ನುಡಿ ಉಡಿಗೆ ತೊಡಿಗೆಗಳಲ್ಲಿ ಶಿಸ್ತಿನ ಸಿಪಾಯಿ ಆಗಿದ್ದರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಪ್ರಾಚಾರ್ಯರಾಗಿ ಅನಂತರ ವಿದ್ಯಾಇಲಾಖೆಯ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದರು. ನಿವೃತ್ತಿಯ ನಂತರ ಅಲಹಾಬಾದ್ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರದ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಮೊದಲ ದುಂಡುಮೇಜಿನ ಪರಿಷತ್ತಿಗೆ ಮೈಸೂರಿನ ಪರವಾಗಿ ಹೋದ ಮಿರ್ಜಾ ಇಸ್ಮಾಯಿಲರ ಕಾರ್ಯದರ್ಶಿ ಆಗಿದ್ದರು. ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ನಿರ್ಮೂಲನಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಚಾರ ಪುಸ್ತಕಮಾಲೆ ಯೋಜನೆ ಜಾರಿಗೆ ತಂದರು. ತಾರಿಫ್ ಬೋರ್ಡ್ ಸದಸ್ಯರಾಗಿ ಬೊಂಬಾಯಿ ಸಮ್ಮೇಳನಕ್ಕೆ ಹೋಗಿದ್ದರು. ಆಲ್ ಇಂಡಿಯಾ ಎಕನಾಮಿಕಲ್ ಕಾನ್ಫರೆನ್ಸಿನ ಅಧ್ಯಕ್ಷರಾಗಿದ್ದು, ೧೯೩೫ರಲ್ಲಿ ೨೧ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ಶಿಕ್ಷಣ ಇಲಾಖೆಯಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿದರು.

ಸುಬ್ಬರಾಯರ ಸೇವೆಯನ್ನು ಮೆಚ್ಚಿ ಮಹಾರಾಜರು ರಾಜಕಾರ್ಯಪ್ರವೀಣ ಬಿರುದನ್ನಿತ್ತರು.

ಅಪಾರ ಪಾಂಡಿತ್ಯವಿದ್ದರೂ ತಮ್ಮ ಬರವಣಿಗೆಯ ಕಡೆಗೆ ಸುಬ್ಬರಾವ್ ಅವರು ಲಕ್ಷ್ಯ ನೀಡಲಿಲ್ಲ. ೧೯೩೩-೩೪ರ ಸುಮಾರಿನಲ್ಲಿ 'ಸಂ ಆಸ್ಪೆಕ್ಟ್ಸ್ ಆಫ್ ಎಕನಾಮಿಕ್ ಪ್ಲಾನಿಂಗ್' ಕುರಿತು ಮಾಡಿದ ಭಾಷಣಗಳು ಪುಸ್ತಿಕೆಯ ರೂಪದಲ್ಲಿ ಪ್ರಕಟವಾಗಿವೆ.

ಶ್ರೀ ಸುಬ್ಬರಾಯರು ೨೯-೬-೧೯೪೩ರಂದು ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೨೧,
ಅಧ್ಯಕ್ಷರು, ಎನ್.ಎಸ್. ಸುಬ್ಬರಾವ್
ದಿನಾಂಕ ೨೬,೨೭,೨೮ ಡಿಸೆಂಬರ್ ೧೯೩೫
ಸ್ಥಳ : ಮುಂಬಯಿ

ಬೊಂಬಾಯಿ ಸಮ್ಮೇಳನ ಸೇರಿದ ಔಚಿತ್ಯ

ಅನುಗ್ರಹಿಯಾದ ಒಂದು ಕನ್ನಡ ಪತ್ರಿಕೆಯು ಈ ಅಧ್ಯಕ್ಷತೆಯಲ್ಲಿ ಕುರಿತು ಬರೆದ ಕೆಲವು ಚತುರೋಕ್ತಿಗಳು ನನ್ನ ನೆನಪಿಗೆ ಬರುತ್ತಿವೆ. ಆ ವಾಕ್ಯಗಳು ನನ್ನ ಅಧ್ಯಕ್ಷತೆಯನ್ನು ಹೀಗೆ ಸಲುವಳಿಸಿವೆ :- ಬೊಂಬಾಯಿಯು ಕರ್ನಾಟಕದ ಭಾಗವಲ್ಲ ಎಂಬುದು ನಿಶ್ಚಯ. ಅಲ್ಲಿ ಈ ಪರಿಷತ್ತನ್ನು ಮಾಡುವುದು. ಅವಧಿಯೇ ಸರಿ. ಆದರೆ ಅಧ್ಯಕ್ಷರೂ ಕನ್ನಡ ಸಾಹಿತ್ಯದಲ್ಲಿ ಅಷ್ಟೇನೂ ಪಾಂಡಿತ್ಯ ಉಳ್ಳವರಲ್ಲ. ಈ ಭಾಷೆಯಲ್ಲಿ ಯಾವೊಂದು ಸಾಹಿತ್ಯ ಸೃಷ್ಟಿಯನ್ನು ಮಾಡಿಸಿದವರಲ್ಲ. ಆದುದರಿಂದ ಕನ್ನಡಕ್ಕೆ ವಿದೇಶಿಯವಾದ ಬೊಂಬಾಯಿಗೆ ಈ ಅಧ್ಯಕ್ಷರೇ ಯೋಗ್ಯರು. ಚೆನ್ನಾಯಿತು ತೀರ್ಮಾನ ವಾಕ್ಯರಚನೆಯಲ್ಲ ಎರಡು ಅಲ್ಲಗಳ ಹೊಂದಿಕೆಯಿಂದ ಇಂದು ಅಹುದು ಎಂಬುವನ್ನೇ ಧೃಢಿಕರಿಸಿದಂತಾಯಿತಲ್ಲವೇ ಇದು! ಇರಲಿ.

ಈ ಬೊಂಬಾಯಿಯು ನಿಶ್ಚಯವಾಗಿ ಕರ್ನಾಟಕದ ಅಂಗವಲ್ಲ; ಅದಕ್ಕಾಗಿ ನಾವು ವಿಷಾದಿಸಬೇಕಾಗಿಯೂ ಇಲ್ಲ. ಹಾಗೆಯೇ ಈ ನಗರವು ಮಹಾರಾಷ್ಟ್ರ, ಗುಜರಾತ್‌ಗಳಿಗೆ ಬೇರೆಯಾಗಿ ಸೇರಿದ್ದೂ ಅಲ್ಲ. ಕೆಲವು ವರ್ಷಗಳ ಹಿಂದೆ ಇದಕ್ಕೆ "ಪೂರ್ವದ ಅಲೆಗ್ಸಾಂಡ್ರಿಯ" ಎಂದು ಜಗತ್ತು ಕರೆಯಿತು. ಮತ್ತೀ ವಿಶ್ವವ್ಯಾಪ್ತ ಬಿರುದು ಇದಕ್ಕಿಂದಿಗೂ ಇದೆ. ಇದರ ಜಾತಿಯು ಇವರದೇ. ಯಾವ ಜಾತಿ ಮತ ವರ್ಣ ಸಂಪತ್ತಿಗಳ ದುರಭಿಮಾನಕ್ಕೂ ಸಿಲುಕದ್ದು, ನಿಲುಕದ್ದು. ಯೋಗ್ಯತೆಗೆ ಮುಕ್ತದ್ವಾರ. ಕುಶಲತೆಯ ಕರ್ಮರಂಗ. ನಮ್ಮ ಪರಿಷತ್ತನ್ನು ಇಲ್ಲಿ ಮೆರೆಸಿರುವುದು ನಮ್ಮ ಗ್ರಾಮೀಣಾನುರಾಗವನ್ನು ಮೆರೆಸಲಿಕ್ಕಲ್ಲ, ನಮ್ಮ ಪ್ರಾಂತದೊಳಗಣ ಭೇದ ಭಿನ್ನತ್ವ ಕಲಹಗಳ ಕೊಳೆಯನ್ನು ತೊಳಿಯಲಿಕ್ಕಲ್ಲ. ತಂಡ ಪಂಗಡಗಳ ಅಭಿಮಾನ ಗೀತೆಯು ಇಂಥ ಜಗನ್ಮಿತ್ರ ನಗರದಲ್ಲಿ ಅಭಾಸವನ್ನುಂಟುಮಾಡದಿರದು.

ಇಲ್ಲಿ ನಾವು ನಮ್ಮ ವಿಚಾರೋಪಾಯಗಳ ನಿರ್ದೋಷತೆ ನಿರ್ವಹಣತ್ವಗಳನ್ನು ತೋರಿಸಿಕೊಡಬೇಕು. ಇಲ್ಲಿ ನಮ್ಮ ಆಕಾಂಕ್ಷೆಗಳ ಔಚಿತ್ಯ ಯಥಾರ್ಥತೆಗಳನ್ನು ನಾವು ಸಾಧಿಸಬೇಕು : ಅಂದರೆ, ನಮ್ಮ ಪ್ರಾಂತದೊಳಗೆಲ್ಲೆಲ್ಲಿಯೂ ನಮ್ಮ ಧ್ಯೇಯಶಕ್ತಿಯು ಹರಡುವದು : ಅಷ್ಟೇ ಅಲ್ಲ, ಈ ಬೊಂಬಾಯಿಯು ಇಂದು ಜಗತ್ತಿನ ಒಂದು ಮುಖವೂ ಆಗಿರೋದರಿಂದ, ತನ್ಮೂಲಕ ವಿಶಾಲ ವಿಶ್ವಕ್ಕೂ ನಮ್ಮ ಆದರ್ಶ ಪಥವನ್ನು ಸ್ಥಾಪಿಸಿ ತೋರಿಸಿದಂತಾಗುವದು. ಈ ವರ್ಷದ ಪರಿಷತ್ತನ್ನು ಇಲ್ಲಿ ಕೂಡಿಸಿದುದರ ಮಹತ್ವವು ಹೀಗಿದೆಯೆಂದು ನನಗೆ ತೋರುತ್ತದೆ. ಈಗ ಈ ಸ್ಥಾನಕ್ಕೆ ತಕ್ಕಂತೆ ಕಾರ್ಯಮಾನವೂ ಭರದಿಂದ ನಡೆದರೇನೇ ಇದೆಲ್ಲವೂ ಸಾರ್ಥಕ.

ಪರಿಷತ್ತು ಹಳ್ಳಿಗಳಲ್ಲಿ ಕೈಗೊಳ್ಳಬೇಕಾದ ಕಾರ್ಯ

ಹಳ್ಳಿಗಳಲ್ಲಿ ಜ್ಞಾನ ಮತ್ತು ಸಂಸ್ಕೃತಿ ಪ್ರಸಾರಣೆ ಮಾಡಲು ಕರ್ನಾಟಕ ಸಾಹಿತ್ಯ ಪರಿಷತ್ತು ಈಚೆಗೊಂದು ವ್ಯಾಪಕ ಕಾರ್ಯಕ್ರಮವನ್ನು ಯೋಚಿಸಿರುವುದು. ಅದಕ್ಕೆ ಮೈಸೂರು ಸರಕಾರದ ಒಪ್ಪಿಗೆಯೂ ಬೆಂಬಲವೂ ದೊರೆತಿದೆ. ಆ ಯೋಜನೆಯ ಪ್ರಕಾರ ಪರಿಷತ್ತು ಆಗಾಗ್ಗೆ ಮಾತ್ರ ಭಾಷಣ ಮಾಡದೆ. ಸತತೋದ್ಯೋಗವನ್ನು ಮಾಡಬೇಕೆಂದಿರುವದು. ಮತ್ತೆ ಹಳ್ಳಿಗಳಲ್ಲಿ ಕೆಲಸ ಮಾಡುವದಕ್ಕಾಗಿ ತರುಣರನ್ನು ತರಬೇತು ಮಾಡುವ ಏರ್ಪಾಟುಗಳನ್ನೂ ಅದು ಕೈಕೊಳ್ಳುವದಾಗಿದೆ. ಈ ಸಂದರ್ಭದಲ್ಲಿ ನಾನು ಇನ್ನೊಂದು ಸಾಧ್ಯವಾಗಬಹುದಾದ ಕಾರ್ಯಕ್ರಮವನ್ನು ಸೂಚಿಸುವೆನು : ಇಂಗ್ಲೆಂಡಿನಲ್ಲಿ "ಯೂನಿವರ್ಸಿಟಿ ಸೆಟ್ಲ್‌ಮೆಂಟ್ಸ್" ಎಂಬ ಸಂಸ್ಥೆಗಳಿವೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯವೂ, ಅದರ ಆಶ್ರಯದಲ್ಲಿರುವ ಹಲವು ಕಾಲೇಜುಗಳೂ, ಲಂಡನ್, ಮತ್ತು ಲಿವರ್‌ಪೂಲ್‌ನಂಥಾ ಶಹರುಗಳಲ್ಲಿ, ಬಡಜನರ ವಸತಿಗಳ ಮಧ್ಯೆ ವಾಸಸ್ಥಾನಗಳನ್ನು ಕಾಯಂ ಆಗಿ ಸ್ಥಾಪಿಸಿಕೊಂಡಿವೆ. ಅಲ್ಲಿ ಆ ವಿದ್ಯಾಲಯಗಳ ಅಧಿಕಾರಿಗಳೂ ಪದವಿ ಪರೀಕ್ಷೆಗಳ ಉಮೇದುವಾರರೂ

ಹೋಗಿ, ಕೆಲಕಾಲ ಅಲ್ಲಿಯೆ ವಾಸಿಸಿ, ತಮ್ಮ ನೆರೆಹೊರೆಯವರಿಗೆ ಆಮೋದ ಪ್ರಮೋದಗಳಿಂದ ಶಿಕ್ಷಣ ಕೊಡಲೆತ್ನಿಸವರು. ನಮ್ಮ ದೇಶದಲ್ಲಿಯೂ ಅಂಥಾ ಕೆಲಸವು ಆಗಬೇಕಾಗಿದೆ. ಆದರೆ ತರಬೇತಾದ ಕೆಲಸಗಾರರ ಅಧೀನದಲ್ಲಿ "ಗ್ರಾಮ ವಸಾಹತು"ಗಳನ್ನು ಸ್ಥಾಪಿಸಿ, ಅವುಗಳ ಮೂಲಕ ನಮ್ಮ ಕಾಲೇಜಿನ ತರುಣರು ಹಳ್ಳಿಗಳಿಗೆ ಹೋಗಿ ಹಳ್ಳಿಗರ ಹಿತ ಮತ್ತು ಬೋಧನೆಗಾಗಿ ಕೆಲಸ ಮಾಡುವಂತಾಗಬೇಕು. ಈ ಕಾರ್ಯಕ್ಷೇತ್ರವು ಬಹು ವಿಶಾಲವಾಗಿದೆ. ಇಲ್ಲಿ ವಿಶ್ವವಿದ್ಯಾನಿಲಯಗಳನ್ನೂ ವಿದ್ಯಾಭ್ಯಾಸ ಇಲಾಖೆ, ಆರೋಗ್ಯ ಇಲಾಖೆ- ಇವೇ ಮೊದಲಾದ ಸರಕಾರಿ ಸಂಸ್ಥೆಗಳೂ ಪರಿಷತ್ತು ಮತ್ತು ಕರ್ನಾಟಕ ಸಂಘಗಳಂಥಾ ಭಾಷೆ ಮತ್ತು ಸಂಸ್ಕೃತಿಗಾಗಿ ದುಡಿಯುವ ಸಂಸ್ಥೆಗಳೂ ಒಟ್ಟಾಗಿ ಸೇರಿಸಿ ತ್ರಿವೇಣಿ ಸಂಗಮವಾಗಿ ವಿಶಾಲವಾಗಿ ಗ್ರಾಮಕ್ಕೆ ಪುನರ್ಘಟನಾ ಕಾರ್ಯವನ್ನು ಕೈಗೊಳ್ಳಬಹುದಾಗಿದೆ.

❖ ❖

೨೨ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಬೆಳ್ಳಾವೆ ವೆಂಕಟನಾರಣಪ್ಪ



ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ವಿಜ್ಞಾನರಂಗದಲ್ಲಿ ಮತ್ತು ಸಾರ್ವಜನಿಕರಂಗದಲ್ಲಿ ಅವಿಶ್ರಾಂತವಾಗಿ ದುಡಿದ ಮಹನೀಯರು ಬೆಳ್ಳಾವೆ ವೆಂಕಟನಾರಣಪ್ಪ ಅವರು ವೆಂಕಟಕೃಷ್ಣಯ್ಯ- ಲಕ್ಷ್ಮೀದೇವಿ ಅವರ ಪುತ್ರರಾಗಿ ೨-೧೦-೧೮೭೨ರಲ್ಲಿ ಜನಿಸಿದರು. ತುಮಕೂರಿನಲ್ಲಿ ಪ್ರೌಢಶಾಲಾಶಿಕ್ಷಣ ಮುಗಿಸಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ೧೮೯೨ ರಲ್ಲಿ ಬಿ.ಎ. ಪದವಿ ಪಡೆದು ಮದ್ರಾಸ್ ವಿಶ್ವವಿದ್ಯಾನಿಲಯದಿಂದ ೧೯೦೩ರಲ್ಲಿ ಎಂ.ಎ. ಪದವಿ ಗಳಿಸಿದರು.

೧೮೯೨ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿ ೧೪ ವರ್ಷಗಳ ಕಾಲ ಎಫ್.ಎ. ತರಗತಿಗಳಿಗೆ ಮಾನವ ಶರೀರ ಶಾಸ್ತ್ರ ಬೋಧಿಸಿದರು. ೩೦ ವರ್ಷಗಳ ಸೇವೆಯ ನಂತರ ಸ್ವಇಚ್ಛೆಯಿಂದ ೧೯೨೩ರಲ್ಲಿ ನಿವೃತ್ತರಾದರು.

ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾಗಿ ಆಧಾರಸ್ತಂಭದಂತೆ ದುಡಿದು ಕೃಷ್ಣರಾಜ ಪರಿಷನ್ಮಂದಿರ ಕಟ್ಟಡದ ನಿರ್ಮಾಣಕ್ಕಾಗಿ ಹಗಲಿರುಳು ಶ್ರಮಿಸಿದರು. ಪರಿಷತ್ತಿನ ಕಾರ್ಯದರ್ಶಿಗಳಾಗಿ (೧೯೧೬, ೧೯೨೨-೨೬ರಲ್ಲಿ) ದುಡಿದಿದರು. ೧೯೨೦-೧೯೨೧, ೧೯೨೭-೧೯೩೩ವರೆಗೆ ಕೋಶಾಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ೧೯೧೯-೧೯೩೬ರವರೆಗೆ ಪರಿಷತ್ಪತ್ರಿಕೆ ಸಂಪಾದಕ ಮಂಡಳಿ ಸದಸ್ಯರಾಗಿದ್ದರು. ಬಸವನಗುಡಿ ಸಹಕಾರಿ ಸಂಘಗಳ ಸ್ಥಾಪಕ ಸದಸ್ಯರಾಗಿ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಸಂಸ್ಥೆಯ ಸ್ಥಾಪಕರಾಗಿ, ಬೆಂಗಳೂರು ಸಿಟಿ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿ, ಮಾಗಡಿ ವೈದಿಕ ಧರ್ಮಶಾಲೆಯ ನಿರ್ದೇಶಕರಾಗಿ, ಮುಲಕನಾಡು ಸಭೆಯ ಅಧ್ಯಕ್ಷರಾಗಿ- ಇನ್ನೂ ಅನೇಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದರು. ಬಸವನಗುಡಿಯ ಮಲ್ಲಿಕಾರ್ಜುನ ಗುಡಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ.

ಶ್ರೀಮನ್ಮಹಾರಾಜರು ಇವರ ಸಾರ್ವಜನಿಕ ಸೇವೆಗೆ ಮೆಚ್ಚಿ ರಾಜಸೇವಾಸಕ್ತ ಬಿರುದನ್ನು ದಯಪಾಲಿಸಿದರು. ೧೯೩೭ರಲ್ಲಿ ಜಮಖಂಡಿಯಲ್ಲಿ ನಡೆದ ೨೨ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆ ನೀಡಿ ಗೌರವಿಸಿದರು. ೧-೧೧-೧೯೪೧ರಲ್ಲಿ ಬೆಂಗಳೂರಿನ ನಾಗರಿಕರು ಮಾನಪತ್ರ ನೀಡಿ ಗೌರವಿಸಿದರು.

ನಿಘಂಟು, ವಿಜ್ಞಾನ, ಪಠ್ಯಗ್ರಂಥಗಳನ್ನು ರಚಿಸಿರುವ ಬೆಳ್ಳಾವೆ ವೆಂಕಟರಮಣಯ್ಯನವರ ಮುಖ್ಯ ಕೃತಿಗಳು ಹೀಗಿವೆ:

ಜೀವವಿಜ್ಞಾನ (೧೯೩೯)	ಗುಣಸಾಗರ (ಅನುವಾದಿತ ಕಾದಂಬರಿ)
ಕನ್ನಡ ಐದನೆಯ ಪುಸ್ತಕ (ಪಠ್ಯ)	ವಿಕ್ರಮಾರ್ಜುನ ವಿಜಯ (ಸಂಪಾದಿತ)
ಸೋಮೇಶ್ವರ ಶತಕ (ಸಂಪಾದಿತ)	ಶಬ್ದಮಣಿದರ್ಪಣ (ಸಂಪಾದಿತ)
ಇಂಗ್ಲಿಷ್-ಕನ್ನಡ ನಿಘಂಟು (ಸಂಪಾದಕತ್ವ)	ವಿಜ್ಞಾನ ಮಾಸಪತ್ರಿಕೆ (ಸಂಪಾದನೆ)
ಪಂಪರಾಮಾಯಣ (ಸಂಪಾದಿತ) ಇತ್ಯಾದಿ	

೩-೮-೧೯೪೩ರಲ್ಲಿ ಬೆಂಗಳೂರಿನಲ್ಲಿ ಬೆಳ್ಳಾವೆ ವೆಂಕಟನಾರಣಪ್ಪನವರು ವಿಧಿವಶರಾದರು.

ಕನ್ನಡ ಸಾಹಿತ್ಯ ಸಮ್ಮೇಳನ–೨೨, ಅಧ್ಯಕ್ಷರು, ಬೆಳ್ಳಾವೆ ವೆಂಕಟನಾರಾಯಣಪ್ಪ
ದಿನಾಂಕ ೨೯,೩೦,೩೧ ಡಿಸೆಂಬರ್ ೧೯೩೭ ಸ್ಥಳ : ಜಮಖಂಡಿ
(ಟಿಪ್ಪಣಿ: ೧೯೩೬ರಲ್ಲಿ ಸಮ್ಮೇಳನ ನಡೆದಿಲ್ಲ)

ಪರಿಷತ್ತಿನ ಸ್ಥಾಪನೆ ವಿಚಾರ

ಇನ್ನು ಕಾರ್ಯರಂಗಕ್ಕೆ ಇಳಿಯೋಣ. ಮೊದಲನೆಯ ಪ್ರಸ್ತಾಪವು ಕರ್ಣಾಟಕ ಸಾಹಿತ್ಯ ಪರಿಷತ್ತಿನದು. ಈ ಸಂಸ್ಥೆಯು ಈಗ ೨೨ ವರ್ಷಗಳ ಹಿಂದೆ ಮೈಸೂರು ಶ್ರೀಮನ್ಮಹಾರಾಜರ ಉದಾರಾಶ್ರಯದಲ್ಲಿ ದೇಶವತ್ಸಲರಾದ ಸರ್. ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಂದ ಸ್ಥಾಪಿತವಾಯಿತು. ಇದನ್ನು ಆದಿಯಿಂದಲೂ ಅಖಿಲ ಕರ್ಣಾಟಕ ಸಂಸ್ಥೆಯೆಂದೇ ಮೈಸೂರಿನವರು ಭಾವಿಸಿಕೊಂಡಿರುತ್ತಾರೆ. ಇಷ್ಟು ಕಾಲ ಈ ಸಂಸ್ಥೆಯು ಒಂದೇ ಸಮನಾಗಿ ಕೆಲಸ ಮಾಡುತ್ತಿರುವುದು, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದ ಉದಾರಾಶ್ರಯದಿಂದ, ಇದುವರೆಗೆ ಅರ್ಧ ಲಕ್ಷ ರೂಪಾಯಿಗಳ ಮೇಲೆ ಆ ಸರ್ಕಾರದ ಸಹಾಯ ದೊರೆತಿರಬಹುದು. ಇನ್ನು ಮುಂದೆಯೂ ಈ ಸಹಾಯ ದೊರೆಯಬೇಕಾದರೆ ಎಲ್ಲ ಪ್ರಾಂತಗಳ ಕನ್ನಡಿಗರೂ ಒಗ್ಗಟ್ಟಿನಿಂದ ಕೆಲಸ ಮಾಡಿದ ಹೊರತು ಸಾಗುವಂತಿಲ್ಲ. ಈ ೨೨ ವರ್ಷಗಳಲ್ಲಿ ಪರಿಷತ್ತು ಕನ್ನಡಕ್ಕೆ ಎಷ್ಟು ಅಮೂಲ್ಯವಾದ ಪ್ರೋತ್ಸಾಹವಿತ್ತಿದೆಯೆಂಬುದನ್ನು ಆದಿಯಿಂದಲೂ ಪ್ರಕಟವಾಗುತ್ತಿರುವ "ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ"ಯ ಸಂಚಿಕೆಗಳನ್ನು ಓದುವುದರಿಂದಲೂ ಪರಿಷತ್ತಿನ "ಹನ್ನೆರಡು ವರ್ಷದ ಕಾರ್ಯಕಲಾಪ"ದ ವರದಿಯಿಂದಲೂ ತಿಳಿಯಬಹುದು. ಕನ್ನಡ ನಾಡಿನ ನಾನಾ ಭಾಷೆಗಳ ಕನ್ನಡ ಭಾಷಾಭಿಮಾನಗಳನ್ನು ಒಟ್ಟುಗೂಡಿಸಿ ಅವರಲ್ಲಿ ಭ್ರಾತೃಭಾವವನ್ನು ಹುಟ್ಟಿಸಿ ಕನ್ನಡ ಸಾಹಿತ್ಯವನ್ನು ಇಷ್ಟರಮಟ್ಟಿಗೆ ಮುಂದುವರಿಸಿದ ಕೀರ್ತಿಯು ಪರಿಷತ್ತಿಗೆ ಸಲ್ಲುವುದು. ೧೯೧೫ನೆಯ ಇಸವಿಯಲ್ಲಿ ಬೆಂಗಳೂರಲ್ಲಿ ನೆರೆದ ಮೊದಲನೆಯ ಪರಿಷತ್ ಸಮ್ಮೇಳನದ ವೈಭವವನ್ನು ನೋಡಿದವರು ಈ ಸಭೆಯಲ್ಲಿ ಕೆಲವರಿರುವರು. ಅಂದಿನ ಕನ್ನಡದ ಕಡುಗಲಿಗಳಲ್ಲಿ ಅನೇಕರು ಈಗ ಅದೃಶ್ಯರಾಗಿರುವರು; ಕೆಲವರು ಕನ್ನಡಕ್ಕಾಗಿ ಇನ್ನೂ ದುಡಿಯುತ್ತಿರುವರು. ಆದರೆ ಇಷ್ಟು ದೀರ್ಘಕಾಲ ಕಳೆದರೂ ಪರಿಷತ್ತಿನ ಉದ್ದೇಶಗಳು, ಇನ್ನೂ ನೆರವೇರದೆ ಇರುವುದು ನಮ್ಮ ದುರ್ದೈವವೆಂದೇ ಹೇಳಬೇಕು. ಮಹಾರಾಷ್ಟ್ರದಂತೆ ಕನ್ನಡಿಗರಲ್ಲಿ ಒಗ್ಗಟ್ಟಿಲ್ಲ: ನಮ್ಮ ಮಾತೆಯ ಹೆಸರನ್ನು 'ಕರ್ಣಾಟಕ' ಎಂದು ಕೆಲವರೂ, 'ಕರ್ನಾಟಕ' ಎಂದು ಮತ್ತೆ ಕೆಲವರೂ ಹಠ ಹಿಡಿದು ಬರೆಯಲು ಸಾಧಿಸುತ್ತ ಬಂದು, ಒಂದು ಶಬ್ದಕ್ಕೆ ಏಕರೂಪತೆ ಕೊಡಲು ಕೂಡ ಒಪ್ಪದ ನಾವು ಒಗ್ಗಟ್ಟಾಗುವುದು ಹೇಗೆ?

ಪರಿಷತ್ತು ಮಾಡಬೇಕಾದ ಕಾರ್ಯಗಳು

ಕರ್ಣಾಟಕ ಸಾಹಿತ್ಯ ಪರಿಷತ್ತು ಮಾಡಬೇಕಾದ ಮುಖ್ಯ ಕಾರ್ಯಗಳು ಯಾವುವೆಂದೂ, ಅವು ಕಾರ್ಯರೂಪಕ್ಕೆ ಬರಬೇಕಾದರೆ ಏನು ಮಾಡಬೇಕೆಂದೂ ೧೯೧೪ನೆಯ ಇಸವಿಯಲ್ಲಿ ಮೈಸೂರು ಅರ್ಥಸಾಧಕ ಸಮಾಜದ ಉಪಸಂಘದವರು ಆಲೋಚಿಸಿ ಒಂದು ತೀರ್ಮಾನಕ್ಕೆ ಬಂದು ಆ ವಿಷಯಗಳನ್ನು ಕುರಿತು ಸಲಹೆಗಳನ್ನು ಬರೆದು ಕಳುಹಿಸುವಂತೆ ಕರ್ಣಾಟಕದ ಎಲ್ಲ ಪ್ರಾಂತಗಳವರಿಗೂ ಆಹ್ವಾನವಿತ್ತರು. ಎಲ್ಲ ಪ್ರಾಂತಗಳಿಂದಲೂ ಸಲಹೆಗಳೇನೋ ಬಂದುವು; ಆದರೆ ಕಾರ್ಯ! ಇಗೋ ನೋಡಿರಿ, ಆ ವಿಷಯಗಳು:–

೧. ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿರುವ ಭಾಷಾಭಿಜ್ಞರಲ್ಲಿ ಐಕಮತ್ಯವನ್ನೂ ಪರಸ್ಪರ ಸೌಹಾರ್ದವನ್ನೂ ಹೆಚ್ಚಿಸುವುದಕ್ಕಾಗಿ ಉತ್ತಮೋತ್ತಮೋಪಾಯಗಳನ್ನು ನಿರ್ಧರಿಸುವುದು;

೨. ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಪ್ರಚಾರದಲ್ಲಿರುವ ಗ್ರಾಂಥಿಕ ಭಾಷೆಯನ್ನು ಒಂದೇ ರೂಪಕ್ಕೆ ತರಲು ತಕ್ಕ ಮಾರ್ಗವನ್ನು ನಿಶ್ಚಯಿಸುವುದು;

೩. ಕನ್ನಡವನ್ನೋದುವ ವಿದ್ಯಾರ್ಥಿಗಳಿಗೆ ಎಲ್ಲ ವಿದ್ಯಾ ಶಾಲೆಗಳಲ್ಲಿಯೂ ಪಾಠದ ಪುಸ್ತಕಗಳು ಒಂದೇ ಆಗಿರುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡುವುದು;

೪. ಕನ್ನಡವನ್ನಾಡುವ ಜನಸಾಮಾನ್ಯರಲ್ಲಿ ಲೋಕ ವ್ಯವಹಾರ ಜ್ಞಾನವು ಸುಲಭವಾಗಿ ಹರಡುವಂತೆ ತಕ್ಕ ಪುಸ್ತಕಗಳನ್ನು ಬರೆಯಿಸಿ ಪ್ರಚಾರ ಮಾಡುವುದಕ್ಕೆ ಸಾಧಕವಾದ ಉತ್ತಮೋಪಾಯಗಳನ್ನು ನಿರ್ಣಯಿಸುವುದು;

೫. ಕನ್ನಡದಲ್ಲಿ ಬರೆಯುವ ಭೌತಿಕಾದಿ ನಾನಾ ಶಾಸ್ತ್ರಗಳಲ್ಲಿ ಪ್ರಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಿಸುವುದಕ್ಕೆ ತಕ್ಕ ಉತ್ತಮೋಪಾಯಗಳನ್ನು ಪರಿಶೀಲಿಸುವುದು.

ಇವನ್ನು "ಸದ್ದೇಶ ಪಂಚಕ" ಎಂದು ಒಬ್ಬ ಪಂಡಿತರು ಹೇಳಿರುತ್ತಾರೆ. ಈ ಉಪದೇಶಗಳಲ್ಲಿ ಒಂದಾದರೂ ಅವಶ್ಯಕವಲ್ಲದುದು ಉಂಟೆ? ಈ ೨೨ ವರ್ಷಗಳಲ್ಲಿ ಈ ಉದ್ದೇಶಗಳು ತಕ್ಕಮಟ್ಟಿಗಾದರೂ ಫಲವಾಗುವಂತೆ ನಾವೇನು ಮಾಡಿರುವೆವು?

ಪರಿಷತ್ತಿನ ನಿರ್ಣಯಗಳು

ಪ್ರತಿ ಸಾಹಿತ್ಯ ಸಮ್ಮೇಳನದಲ್ಲಿಯೂ ಅನೇಕ ಠರಾವುಗಳನ್ನು ಏಕಕಂಠತೆಯಿಂದ ಹೊರಡಿಸುವೆವು. ಆದರೆ ಅವುಗಳ ವಿಷಯವಾಗಿ ನಮ್ಮ ಮೇಲಿರುವ ಜವಾಬ್ದಾರಿಯನ್ನು ಎಷ್ಟು ಮಟ್ಟಿಗೆ ಲಕ್ಷ್ಯಕ್ಕೆ ತಂದುಕೊಂಡಿರುವೆವು? ಉದಾಹರಣೆಗಾಗಿ, ಕೆಲವು ಗೊತ್ತುವಳಿಗಳನ್ನು ತೆಗೆದುಕೊಳ್ಳೋಣ :-

೬/೧೪) ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಪ್ರಕಟ ಮಾಡುವವರು ಒಂದು ಪ್ರತಿಯನ್ನು ಪರಿಷತ್ತಿಗೆ ಉಚಿತವಾಗಿ ಕೊಡಬೇಕು.

ಇದನ್ನು ಎಷ್ಟು ಮಂದಿ ಬರೆಹಗಾರರು ಲಕ್ಷ್ಯಕ್ಕೆ ತಂದುಕೊಂಡಿರುವರು?

೭/೨, ೧೨/೩, ೧೭/೮, ೧೯/೭,೨೪, ಕರ್ಣಾಟಕ ಕ್ರಮಿಕ ಪುಸ್ತಕಗಳನ್ನು ಏಕರೂಪತೆಗೆ ತರುವುದು.

ಈ ಕಾರ್ಯವನ್ನು ನಡೆಸಲು ದೊಡ್ಡ ದೊಡ್ಡ ಭಾಷಾ ಪ್ರೇಮಿಗಳ ಮಂಡಲಿಗಳು ಏರ್ಪಟ್ಟುವು; ಆದರೆ ಕಾರ್ಯವೇನೂ ನಡೆಯಲಿಲ್ಲ.

೭/೧೨, ೮/೧೬, ೧೮/೧೭ ಕನ್ನಡದಲ್ಲಿ ವಿಶ್ವಕೋಶ ರಚನೆ.

ಇಷ್ಟು ಭಾರಿ ಕೆಲಸವು ಹಣವಿಲ್ಲದೆ ನಡೆಯುವ ಬಗೆ ಹೇಗೆ?

೮/೮, ಪಂಪಾ ಕ್ಷೇತ್ರ ಜೀರ್ಣೋದ್ಧಾರಕ ಸಭೆ.

೮/೧೧ "ಶ್ರೀ ಕೃಷ್ಣರಾಜ ವಾಣಿವಿಲಾಸ" ಭಾರತದ ಪುನರ್ಮುದ್ರಣ.

೮/೧೩ ಕನ್ನಡ ಭಾಷೆಯ ಪ್ರಸಾರಕ್ಕೆ ದೊಡ್ಡದೊಂದು ಗ್ರಂಥ ಪ್ರಕಾಶಮಂಡಲಿ ಇರುವುದು ಅವಶ್ಯ. ಪುಸ್ತಕ ಪ್ರಕಟನೆಯೇ ಮುಖ್ಯೋದ್ದೇಶವುಳ್ಳ "ಜಾಯಿಂಟ್ ಸ್ಟಾಕ್ ಕಂಪನಿ" ಏರ್ಪಾಡಾಗಬೇಕು.

೯/೭, ೧, ೨, ೩ನೆಯ ಇಯತ್ತೆಯ ಬಾಲಕರಿಗಾಗಿ ಅಧಿಕಪಾಠಗಳ ಪುಸ್ತಕಗಳನ್ನು ತೃಪ್ತಿಕರವಾಗಿ ಬರೆಯಿಸಬೇಕು.

೧೪/೨೦ ಕರ್ಣಾಟಕಕ್ಕೆಲ್ಲ ಒಂದೇ ಬಾಲಬೋಧೆಯಾಗಬೇಕು.

ಬಾಲಬೋಧೆಯ ವಿಷಯವಾಗಿ ನನ್ನದೊಂದು ವಿಜ್ಞಾಪನೆ :ಆಡುವ ಭಾಷೆಯಲ್ಲಿ ಪ್ರಾಂತ ಪ್ರಾಂತಕ್ಕೂ ವ್ಯತ್ಯಾಸವಿರುವುದು ಸಹಜ. ಇದು ಎಲ್ಲ ದೇಶಗಳಲ್ಲೂ ಉಂಟು. ಬಾಲಕರು ಓದುವ ಪುಸ್ತಕಗಳಲ್ಲಿ ಅವರು ಮನೆಯಲ್ಲಾಡುವ ಮಾತುಗಳಿದ್ದರೆಯೇ ವಿಷಯ ಅವರ ಮನಸ್ಸಿಗೆ ಹತ್ತುವುದು. ಆದಕಾರಣ, ಮೊದಲೆ ಬಾಲಬೋಧೆಗೆ ಕೈ ಹಾಕದೆ ಭಾಷೆಯನ್ನು ಏಕರೂಪತೆಗೆ ತರುವ ಕಾರ್ಯವನ್ನು ಮೇಲಿನ ತರಗತಿಯ ಪುಸ್ತಕಗಳ ಮೇಲೆ ಮೊದಲು ನಡೆಸಬೇಕು. ಹೀಗೆ ಮಾಡಿದಲ್ಲಿ ಕನ್ನಡ ಭಾಷೆಯು ಎಂದಿಗಾದರೂ ಏಕರೂಪಕ್ಕೆ ಬಂದು ಕನ್ನಡಿಗರನ್ನು ಒಗ್ಗೂಡಿಸಲು ಸಾಧ್ಯವಾಗಬಹುದು.

ಭಾಷಾ ಏಕರೂಪತೆ ವಿಚಾರ

ಧಾರವಾಡ ಪ್ರಾಂತದ ಕೆಲವು ಗ್ರಂಥಗಳ ಭಾಷೆಯು "ಮೈಸೂರಿನ ಭಾಷೆಗೆ ಹತ್ತಿರಹತ್ತಿರವಾಗಿ ಬರುತ್ತಿರುವುದು ನಮಗೆ ಸಂತೋಷಕರವಾದ ವಿಷಯ" ಎಂದು ಪರಿಷತ್ತಿನ ಗ್ರಂಥ ವಿಮರ್ಶಕಾರರು ಬರೆದರು. ಅದಕ್ಕೆ "ಕರ್ಮವೀರ"ದ ಸಂಪಾದಕರು ರೇಗಿ ಬಿದ್ದು, ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಮೈಸೂರು ಪ್ರಾಂತಿಕ ಅಭಿಮಾನವು ಪ್ರಮಾಣ ಮೀರಿರುತ್ತದೆಂಬುದು ನಮ್ಮ ಮೊದಲನೆಯ ಆಕ್ಷೇಪ. ಕರ್ಣಾಟಕದ ಎಲ್ಲ ಭಾಗದೊಳಗಿನ ಕನ್ನಡಕ್ಕಿಂತಲೂ ಮೈಸೂರ ಕನ್ನಡವೇ ಶ್ರೇಷ್ಠತರದ್ದೆಂದು ಇದರ ಸಂಪಾದಕರ ಕಲ್ಪನೆಯಿದ್ದಂತೆ ತೋರುತ್ತದೆ. ಇದು ಕನ್ನಡ ಭಾಷೆಯು ಅಭಿವೃದ್ಧಿ ದೃಷ್ಟಿಯಿಂದ ಎಳ್ಳಷ್ಟೂ ಹಿತಕರವಲ್ಲವೆಂದು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇವೆ" ಎಂದು ಬರೆದಿರುತ್ತಾರೆ.

೧೦/೩ ಕನ್ನಡನಾಡಿನ ಚರಿತ್ರೆ ಬರೆಯಿಸಬೇಕು.

೧೩/೯, ೧೪/೨೩, ೧೬/೧೦ ಅಖಿಲ ಕರ್ಣಾಟಕಕ್ಕೆ ಒಂದು ವಿಶ್ವವಿದ್ಯಾನಿಲಯವಾಗಬೇಕು.

೧೫/೧೦, ೧೮/೧೭ ಹೊಸಗನ್ನಡ ವ್ಯಾಕರಣ ರಚನೆ.

೧೬/೭, ಮುದ್ರಿತವಾದ ಪ್ರಾಚೀನ ಅರ್ವಾಚೀನ ಕನ್ನಡ ಪುಸ್ತಕಗಳೆಲ್ಲವೂ ಒಂದು ಕಡೆ ಇರುವಂತೆ ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಒಂದು ದೊಡ್ಡ ಪುಸ್ತಕಾಲಯವನ್ನು ಏರ್ಪಡಿಸಬೇಕು.

ಈ ವಿಷಯವನ್ನು ಇಷ್ಟು ವಿಸ್ತರಿಸಿ ಹೇಳುವುದಕ್ಕೆ ಕಾರಣ ತಿಳಿಯಬೇಕಾಗಿಲ್ಲ. ನಾನು ಪರದೂಷಣೆಗಾಗಿ ಇದನ್ನು ಹೇಳಿದೆನೆಂದು ತಿಳಿಯಲಾಗದು. ಮೇಲೆ ಹೇಳಿದ ಕೆಲಸಗಳನ್ನು ಮಾಡುವ ಜವಾಬ್ದಾರಿ ಹೊತ್ತ ಕೆಲವು ಮಂಡಲಿಗಳಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಒಪ್ಪಿಕೊಂಡ ಕೆಲಸವನ್ನು ಮಾಡದೆ ನಿರ್ಲಕ್ಷ್ಯದಿಂದಿದ್ದರೆ ನಾವು ದೋಷಿಗಳಾಗುವುದಿಲ್ಲವೆ? ಅಖಿಲ ಕರ್ಣಾಟಕಕ್ಕೆ ಒಂದು ವಿಶ್ವವಿದ್ಯಾನಿಲಯವು ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಾಗಲಾರದೆಂದು ತೋರುತ್ತದೆ.

ಅಂಚೆ ಇಲಾಖೆಗೆ ಕನ್ನಡಾನುವಾದಗಳು

ಈ ಸಂದರ್ಭದಲ್ಲಿ ತಮಗೆ ಸಂತೋಷವನ್ನುಂಟು ಮಾಡುವ ಒಂದು ಸಂಗತಿಯನ್ನು ಬಿನ್ನಯಿಸುತ್ತೇನೆ. ಪೋಸ್ಟಲ್ ಇಲಾಖೆಯ ಮೇಲಧಿಕಾರಿಗಳು ಪೋಸ್ಟ್ ಆಫೀಸಿನ ಮನಿಆರ್ಡರ್ ನಮೂನೆ ಮೊದಲಾದ ಅನೇಕ ವಿಕೃತ ಕನ್ನಡ ಭಾಷೆಯ ನಮೂನೆಗಳನ್ನು ತಿದ್ದಿ ಸರಿಪಡಿಸುವುದಕ್ಕಾಗಿ ಪರಿಷತ್ತಿಗೆ ಕಳುಹಿಸಿದರು. ಈ ಕೆಲಸವನ್ನು ಪರಿಷತ್ತು ಒಪ್ಪಿಕೊಂಡು ಮಾಡಿ ಕಳುಹಿಸಿತು. ಹಾಗೆ ತಿದ್ದಿದ ಕನ್ನಡದ ನಮೂನೆಗಳನ್ನು ಪೋಸ್ಟ್ ಆಫೀಸಿನ ಅಧಿಕಾರಿಗಳು ಮುದ್ರಿಸಿದ್ದಾರೆ. ಇವು ಮುಂಬಯಿ ಮತ್ತು ಮದ್ರಾಸು ಪ್ರಾಂತಗಳಲ್ಲಿ ಚಲಾವಣೆಯಲ್ಲಿರಬಹುದು. ಅಲ್ಲಿಂದೀಚೆಗೆ ಬಂದ ಪೋಸ್ಟ್ ಆಫೀಸಿನ ಸೇವಿಂಗ್ಸ್ ಬ್ಯಾಂಕ್ ನಿಬಂಧನೆಗಳ ಇಂಗ್ಲಿಷ್ ಪುಸ್ತಕವನ್ನು ಪರಿಷತ್ತಿನಲ್ಲಿ ಸುಲಭವಾದ ಬಳಕೆಯ ಕನ್ನಡಕ್ಕೆ ಪರಿವರ್ತನೆ ಮಾಡಿ ಹಿಂದಕ್ಕೆ ಕಳುಹಿಸಲಾಯಿತು. ಇದು ಮದ್ರಾಸಿನಲ್ಲಿ ಮುದ್ರಣವಾಗಿದೆ. ಪ್ರತಿಗಳು ಕನ್ನಡನಾಡಿನ ಪೋಸ್ಟ್ ಆಫೀಸುಗಳಲ್ಲಿ ದೊರೆಯಬಹುದು.

ಕರ್ಣಾಟಕ ಸಾಹಿತ್ಯ ಪರಿಷತ್ತು ಏನೂ ಕೆಲಸ ಮಾಡಲಿಲ್ಲವೆಂದು ಆಗಾಗ್ಗೆ ದೂರು ಕೇಳುತ್ತೇವೆ. ನಾವೆಲ್ಲರೂ ಸೇರಿದುದೇ ಅಲ್ಲವೆ ಪರಿಷತ್ತು! ಕೆಲಸ ಮಾಡದೆ ನಮ್ಮನ್ನು ನಾವೇ ದೂರಿಕೊಂಡಲ್ಲಿ ಸಾರ್ಥಕವೇನು? ಯಾವ ಕೆಲಸಕ್ಕೂ ಹಣ ಬೇಕು. ಪರಿಷತ್ತು ಇಷ್ಟುಮಟ್ಟಿಗೆ ಕೆಲಸ ಮಾಡುತ್ತಿರುವುದು ಮೈಸೂರು ಶ್ರೀಮನ್ಮಹಾರಾಜರ ಉದಾರಾಶ್ರಯದಿಂದ. ನಾವೆಲ್ಲರೂ ನಮ್ಮ ಯೋಗ್ಯತೆಗೆ ತಕ್ಕಂತೆ ಕಾಣಿಕೆ ಸಲ್ಲಿಸದಿದ್ದರೆ ಪರಿಷತ್ತಿನ ಕೆಲಸಗಳು ನಡೆಯುವುದೆಂತು? ಪರಿಷತ್ತಿನ ಸದಸ್ಯರ ಪಟ್ಟಿಯನ್ನು ನೋಡಿರಿ, ಎಷ್ಟು ಪುಟ್ಟದ್ದಾಗಿದೆ!

ಕನ್ನಡಿಗರಿಗೆ ತಮ್ಮ ಭಾಷೆಯಲ್ಲಿ ಅಭಿಮಾನ ಹುಟ್ಟಿಸಿ ಭಾಷಾಭಿವೃದ್ಧಿ ಮಾಡಲು ಪರಿಷತ್ತು ಹೊಸ ಮಾರ್ಗಗಳನ್ನು ಹುಡುಕುತ್ತಿದೆ; ಈಗ ನಾಲ್ಕು ವರ್ಷಗಳಿಂದಲೂ ಬಹಳ ವಿಜೃಂಭಣೆಯಿಂದ ನಡೆಯುತ್ತಿರುವ ವಿಶೇಷ ಸಾಹಿತ್ಯೋತ್ಸವಗಳಿಂದ, ಕನ್ನಡ ಭಾಷಣ ಮಾಡಲು ಬಾರದೆಂದು ಇಂಗ್ಲಿಷಿನಲ್ಲೇ ಭಾಷಣ ಮಾಡುತ್ತಿದ್ದ ಅನೇಕ ಮಂದಿ ಪ್ರಮುಖ ಕನ್ನಡಿಗರನ್ನು ಕನ್ನಡದಲ್ಲಿ ಮಾತನಾಡುವಂತೆ ತಯಾರಿಸಿದೆ. ವಿಜ್ಞಾನ ವಿಷಯಗಳನ್ನೂ ಇತರ ಆಧುನಿಕ ವಿಚಾರಗಳನ್ನೂ ಆಯಾ ಭಾಗದಲ್ಲಿ ಇಂಗ್ಲಿಷ್ ಶಿಕ್ಷಣ ಹೊಂದಿ ಪಾಂಡಿತ್ಯ ಪಡೆದ ಕನ್ನಡಿಗರು ಜನಸಾಮಾನ್ಯಕ್ಕೆ ಅರ್ಥವಾಗುವಂತೆ ಕನ್ನಡದಲ್ಲಿಯೇ ಹೇಳುತ್ತಿರುವರು. ಇದೇನೂ ಆಶ್ಚರ್ಯವಲ್ಲ; ಏಕೆಂದರೆ, ಈ ಕೆಲಸಕ್ಕಾಗಿಯೇ ಟೊಂಕ ಕಟ್ಟಿ ನಿಂತಿರುವ ಇಬ್ಬರು ಮುಖಂಡರಿರುತ್ತಾರೆ. ಅಂಥವರು ಹಠ ಹಿಡಿದಲ್ಲಿ ಯಾವುದು ತಾನೆ ಅಸಾಧ್ಯವಾದೀತು?

ಗ್ರಂಥ ರಚನೆ ಮತ್ತು ಪತ್ರಿಕಾ ಪ್ರಕಟನೆ:– ಕನ್ನಡನಾಡಿನಲ್ಲಿ ಗ್ರಂಥರಚನೆಯ ಕಾರ್ಯವು ಹೆಚ್ಚುಹೆಚ್ಚಾಗಿ ನಡೆಯುತ್ತಿದೆ. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರದರ್ಶನಕ್ಕಾಗಿ ಎಲ್ಲ ಕನ್ನಡ ಪ್ರಾಂತಗಳಿಂದಲೂ ಬಂದ ಪುಸ್ತಕಗಳಲ್ಲಿ, ೧೯೧೫ನೆಯ ಇಸವಿಯಿಂದ ೧೯೩೪ನೆಯ ಇಸವಿಯ ವರೆಗಿನ ೧೯ ವರ್ಷಗಳಲ್ಲಿ, ೨,೩೮೭ ಗ್ರಂಥಗಳಾದರೂ ಪ್ರಕಟವಾಗಿರುವಂತೆ ತಿಳಿದುಬರುತ್ತದೆ. ಪ್ರದರ್ಶನಕ್ಕೆ ಬಾರದಿರುವ ಅನೇಕ ಪುಸ್ತಕಗಳಿರಬಹುದು. ೧೯೩೫ನೆಯ ವರ್ಷದ ಲೆಕ್ಕದಿಂದ, ೧೫ ತಿಂಗಳಲ್ಲಿ ಪ್ರಕಟವಾದ ೧೭೫ ಗ್ರಂಥಗಳು ಪ್ರದರ್ಶನಕ್ಕೆ ಬಂದಿವೆ. ಇವುಗಳಲ್ಲಿ ಎಷ್ಟು ಗ್ರಂಥಗಳು ಜಳ್ಳೊ ಎಷ್ಟು ಗಟ್ಟಿಯೊ ಎಂಬ ವಿಚಾರ ಬೇರೆ. ಇವುಗಳಲ್ಲಿ ಅನೇಕ ಗ್ರಂಥಗಳ ವೇಷಭೂಷಣಗಳು ನಮ್ಮ ದರಿದ್ರಾವಸ್ಥೆಯನ್ನು ಬಿಚ್ಚಿ ತೋರಿಸುತ್ತಿವೆ.

ಇದನ್ನು ಪರಿಹರಿಸಿ ನಾವೂ ನಮ್ಮ ದೇಶದ ಇತರ ಭಾಷಾ ಬಂಧುಗಳೊಡನೆ ಹೆಮ್ಮೆಯಿಂದ ನಡೆಯುವುದಕ್ಕೆ ತಕ್ಕಷ್ಟು ಪ್ರಯತ್ನ ಮಾಡಬೇಡವೆ ?

ದಿವಾನ್ ಬಹಾದ್ದೂರ್ ಶ್ರೀಮಾನ್ ಎಸ್.ಟಿ. ಕಂಬಳಿಯವರು ಮುಂಬಯಿ ಸಮ್ಮೇಳನದ ತಮ್ಮ ಭಾಷಣದಲ್ಲಿ ಕೊಟ್ಟಿರುವ ಲೆಕ್ಕದಿಂದ, ಮುಂಬಯಿ ಇಲಾಖೆಯಲ್ಲಿಯೇ ೧೯೩೨ರಿಂದ ೧೯೩೪ರವರೆಗೆ ಒಟ್ಟು ೩೭೫ ಕನ್ನಡ ಗ್ರಂಥಗಳು ಪ್ರಕಟವಾದಂತೆ ತಿಳಿಯಬರುತ್ತದೆ. ಇದೇ ಕಾಲದಲ್ಲಿ, ಗುಜರಾತಿ ಭಾಷೆಯಲ್ಲಿ ೧,೮೩೦ ಗ್ರಂಥಗಳೂ, ಮರಾಟಿಯಲ್ಲಿ ೧,೯೬೩ ಗ್ರಂಥಗಳೂ ಪ್ರಕಟವಾಗಿವೆಯಂತೆ! ಮುಂಬಯಿ ಇಲಾಖೆಯಲ್ಲಿ ಕನ್ನಡ ದೈನಂದಿನ ಪತ್ರಿಕೆಗಳು ೪, ವಾರ ಮತ್ತು ಪಕ್ಷ ಪತ್ರಿಕೆಗಳು ೧೬, ಮಾಸ ಪತ್ರಿಕೆಗಳು ೨೦ ಇರುವಂತೆ, ಗುಜರಾತಿಯಲ್ಲಿ ಈ ಸಂಖ್ಯೆಗಳು ೧೯, ೯೬, ೧೯೫; ಮರಾಟಿಯಲ್ಲಿ ೨೩, ೮೪, ೧೩೦, ಈ ಅಂಕಿಗಳಿಂದ ಗುಜರಾತಿ ಮರಾಟಿ ಭಾಷೆಗಳು ಕನ್ನಡದ ಆರರಷ್ಟಾದರೂ ಮುಂದುವರಿದಿರುವಂತೆ ತೋರುವುದಿಲ್ಲವೆ!

ಪರಿಷತ್ತಿನ ಗ್ರಂಥ ಪ್ರದರ್ಶನಕ್ಕೆ ೧೯೩೫ರಲ್ಲಿ ಬಂದ ೧೭೩ ಪುಸ್ತಕಗಳಲ್ಲಿ

ಪದ್ಯ ಕಾವ್ಯಗಳು	೨೪	ಕಾದಂಬರಿ	೧೪
ಮತಾಚಾರಧರ್ಮ	೨೩	ಸಮಾಜ ವಿಜ್ಞಾನ	೧೪
ಜೀವನ ಚರಿತ್ರೆ	೧೭	ಸಣ್ಣ ಕಥೆ	೧೦
ಸಾಹಿತ್ಯ ಪ್ರಬಂಧ, ವಿಮರ್ಶೆ	೧೫	ಶಾಲಾ ಪುಸ್ತಕ	೮
ನಾಟಕ	೧೪	ಪ್ರಕೃತಿ ವಿಜ್ಞಾನ	೬

ಪದ್ಯ ಕಾವ್ಯಗಳು ಹೆಚ್ಚಾಗಿ ಬರಬೇಕಾದುದು ನಮಗೆ ತುಂಬಿರುವಾಗ, ಹಸಿದಿರುವಾಗಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಪ್ರವೇಶವಿಲ್ಲದವರೂ ಕವನಕಟ್ಟಲು ಹೊರಟಿದ್ದಾರೆ. ಬಹುಶಃ ಇದನ್ನು ಅರಿತೇ ನಮ್ಮ ಪೂರ್ವಿಕರು, ಸಾಹಿತ್ಯದ ಈ ಪ್ರದೇಶಕ್ಕೆ ಸಾಮಾನ್ಯರು ಹಾರಲಾಗದ ಬೇಲಿ ಹಾಕಿದ್ದು.

ಉಪ ಸಂಹಾರ:–

ಮಹನೀಯರೆ. ಪರಿಷತ್ತಿನ ಅಧಿಕಾರಿಗಳು ನನ್ನನ್ನು "ಘನ ವಿದ್ವಾಂಸ" ನೆಂದು ಹೊಗಳಿರುವುದಕ್ಕಾಗಿ ಮನಸ್ಸಿಗೆ ನೋವಾಗುತ್ತದೆ. ನಮ್ಮಲ್ಲಿ ಹೊಗಳು ಭಟ್ಟತನವು ಮೊದಲಿಂದಲೂ ಸಹಜಗುಣವಾಗಿರುವುದು. ಇನ್ನು ಮೇಲಾದರೂ ಈ ಕುಟ್ಟು ಹುಳುವನ್ನು ನಿರ್ಮೂಲ ಮಾಡಿ ಯಥಾರ್ಥವಾದಿತ್ವವನ್ನು ಅಭ್ಯಾಸಮಾಡದಿದ್ದರೆ ನಮಗೆ ಕೇಡು ತಪ್ಪದು. ನಾಣ್ನುಡಿಯಂತೆ, ಯಾವ ಸಂದರ್ಭದಲ್ಲಿ ಎಷ್ಟು ಮಟ್ಟಿಗೆ ಹೇಳಬೇಕೊ ಅಷ್ಟು ಮಾತ್ರ ಹೇಳಿ ಅನ್ಯರ ಮನಸ್ಸನ್ನು ನೋಯಿಸದೆಯೂ, ತಾನು ನೋಯದೆಯೂ ತಪ್ಪಿಸಿಕೊಂಡು ತಿರುಗುವವನೇ ಧನ್ಯ! ಕನ್ನಡಿಗರ ಪಾಂಡಿತ್ಯವನ್ನೂ ಹಿರಿಮೆಯನ್ನೂ ತಿಳಿಯಬೇಕಾದರೆ ನನ್ನ ಹಿಂದೆ ಈ ಪವಿತ್ರ ಪೀಠವನ್ನಲಂಕರಿಸಿದ್ದ ಮಹನೀಯರ ಭಾಷಣಗಳನ್ನೋದಿರಿ. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅಧಿಕಾರಿಗಳು ಈ ಭಾಷಣಗಳನ್ನು ಪ್ರತ್ಯೇಕವಾಗಿ ಮುದ್ರಿಸಿ ಕನ್ನಡಿಗರೆಲ್ಲರಿಗೂ ಸುಲಭವಾಗಿ ದೊರೆಯುವಂತೆ ಮಾಡಬೇಕೆಂಬುದೇ ನನ್ನ ಬೇಡಿಕೆ. ಬಾಂಧವರೆ! ಸ್ವಾತಂತ್ರ್ಯಬೇಕೆಂದು ಸುಮ್ಮನೆ ಗಲಭೆ ಮಾಡುವುದರಿಂದ ಪ್ರಯೋಜನವಿಲ್ಲ. ಅದಕ್ಕೆ ತಕ್ಕ ಯೋಗ್ಯತೆಯನ್ನು ಮೊದಲು ಸಂಪಾದಿಸಿಕೊಳ್ಳಬೇಕು. ದೇಶಭಕ್ತಿ, ರಾಜಭಕ್ತಿ, ಆತ್ಮಭಕ್ತಿ ಮೊದಲಾದ ಸದ್ಗುಣಗಳನ್ನು ಜಪಾನಿನವರಿಂದ ಕಲಿಯಲು ಯತ್ನಿಸೋಣ. ಕನ್ನಡಿಗರೊಳಗೆ ಎಷ್ಟೋ ಒಳ್ಳೆಯ ಮುತ್ತುಗಳಿರುವುವು. ಕೆಲವು ಆಣಿಮುತ್ತುಗಳು ಆದರೆ ಅವೆಲ್ಲವೂ ಒಟ್ಟುಗೂಡದೆ ಬಿಡಬಿಡಿಯಾಗಿರುವುದು. ಅದಕ್ಕೆ ರಂಧ್ರ ಕೊರೆದು ಅದನ್ನು ಚಿನ್ನದ ಸರಿಗೆಯಿಂದ ಕೊಯ್ದು ಆ ಸರವನ್ನು ನಮ್ಮ ಕನ್ನಡ ಮಾತೆಯ ಕೊರಳಿಗೆ ಹಾಕಿ ಆಕೆಯ ಸಿರಿ ಸಹಜವಾದುದೆಂದು ತೋರಿಸೋಣ. ಸರ್ವೇಶ್ವರನು ಕನ್ನಡಿಗರಲ್ಲಿಯೂ ಏಕೀಭಾವವನ್ನು ಬೆಳೆಯಿಸಿ ಕನ್ನಡದೇಶವು ಹಿಂದಿನ ಉಚ್ಛ್ರಾಯ ಸ್ಥಿತಿಗೇರುವಂತೆ ಅನುಗ್ರಹಿಸಲಿ.

❖❖

೩೭ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಿವಾಕರ ರಂಗರಾಯರು



ಕರ್ನಾಟಕ ಏಕೀಕರಣದ ನೇತಾರರೂ, ದಕ್ಷ ಆಡಳಿತಗಾರರೂ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರೂ ಆದ ರಂಗರಾವ್ ರಾಮಚಂದ್ರ ದಿವಾಕರ (ಆರ್.ಆರ್. ದಿವಾಕರ್) ಅವರು ರಾಮಚಂದ್ರರಾವ್-ಸೀತಮ್ಮ ದಂಪತಿಗಳಿಗೆ ೩೦-೯-೧೮೯೪ರಲ್ಲಿ ಧಾರವಾಡದಲ್ಲಿ ಜನಿಸಿದರು. ಧಾರವಾಡ, ಬೆಳಗಾವಿ, ಪುಣೆ, ಹುಬ್ಬಳ್ಳಿ, ಮುಂಬಯಿಗಳಲ್ಲಿ ವ್ಯಾಸಂಗ ಮಾಡಿ ಪದವಿ ಪಡೆದ ನಂತರ ೧೯೧೯ರಲ್ಲಿ ಎಲ್‌ಎಲ್‌ಬಿ ಪದವೀಧರರಾದರು. ೧೯೨೦ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು.

೧೯೨೧ರಲ್ಲಿ ಕರ್ಮವೀರ ವಾರಪತ್ರಿಕೆ ಪ್ರಾರಂಭಿಸಿದರು. ಅನಂತರ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಪ್ರಾರಂಭಿಸಿದರು.

ಭಾರತದ ಸಂವಿಧಾನ ರಚನೆಯಲ್ಲಿ ಘಟನಾ ಸಮಿತಿಯ ಸದಸ್ಯರಾಗಿದ್ದರು. ೧೯೪೮ರಿಂದ ೧೯೫೨ರವರೆಗೆ ಕೇಂದ್ರ ಸರ್ಕಾರದಲ್ಲಿ ವಾರ್ತಾ ಇಲಾಖೆ ಸಚಿವರಾದರು. ೧೯೫೨ರಿಂದ ೧೯೫೭ರವರೆಗೆ ಬಿಹಾರದ ರಾಜ್ಯಪಾಲರಾಗಿದ್ದರು. ೧೯೬೨ರಿಂದ ೧೯೬೮ರವರೆಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಕರನಿರಾಕರಣ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಕರ್ನಾಟಕ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿತ್ತು. ಕನ್ನಡ ಸಾಹಿತ್ಯ ಪರಿಷತ್ತು ೧೯೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ೩೭ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿತು.

ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿರುವ ದಿವಾಕರರು ನಾನಾ ವಿಷಯಗಳಲ್ಲಿ ಗ್ರಂಥರಚನೆ ಮಾಡಿದ್ದಾರೆ. ದಿವಾಕರರ ಕೆಲವು ಮುಖ್ಯ ಕೃತಿಗಳು ಹೀಗಿವೆ:

- ಉಪನಿಷತ್‌ಪ್ರಕಾಶ ಭಾಗ ೧-೨
- ಉಪನಿಷತ್ತಿನ ಕಥಾವಲಿ
- ಗೀತೆಯ ಗುಟ್ಟು
- ಕರ್ಮಯೋಗ
- ವಚನಶಾಸ್ತ್ರ ರಹಸ್ಯವು
- ಹರಿಭಕ್ತಿಸುಧೆ
- ಮಹಾತ್ಮರ ಮನೋರಂಗ
- ಎಂಆರ್‌ಶ್ರೀ ಅವರ ನಾಗರಿಕ (ಹಿಂದಿಗೆ ಅನುವಾದ)
- ಮಹಾಯೋಗಿ (ಇಂಗ್ಲಿಷ್)
- ಬಿಹಾರ್ ಥ್ರೂ ದಿ ಏಜಸ್ (ಇಂಗ್ಲಿಷ್)
- ಕರ್ನಾಟಕ ಥ್ರೂ ದಿ ಏಜಸ್ (ಇಂಗ್ಲಿಷ್)

ಆರ್.ಆರ್. ದಿವಾಕರ್ ಅವರು ೧೫-೧-೧೯೯೦ರಂದು ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೨೩,
ಅಧ್ಯಕ್ಷರು, ರಂಗನಾಥ ರಾಮಚಂದ್ರ ದಿವಾಕರ
ದಿನಾಂಕ ೨೯,೩೦,೩೧ ಡಿಸೆಂಬರ್ ೧೯೩೮
ಸ್ಥಳ : ಬಳ್ಳಾರಿ

ಪರಿಷತ್ತಿನ ಕಾರ್ಯಕ್ರಮ

ಭಾಷಾನುಗುಣ ಪ್ರಾಂತ ರಚನೆಯ ತತ್ತ್ವಕ್ಕೆ ಒಪ್ಪಿ, ಮುಂಬಯಿ, ಮದ್ರಾಸು ಸರಕಾರದವರು ಕರ್ನಾಟಕ ಪ್ರಾಂತೀಕರಣದ ಗೊತ್ತುವಳಿಗಳನ್ನು ಸ್ವೀಕರಿಸಿದ್ದು ನಮ್ಮ ಧ್ಯೇಯ ಸಾಧನೆಗೆ ಅನುಕೂಲವಾದ್ದರಿಂದ ನಾವು ಆಯಾ ಸರಕಾರದವರನ್ನು ಅಭಿನಂದಿಸುವದು ನಮ್ಮ ಕರ್ತವ್ಯ.

ಸಾಹಿತ್ಯ ಪರಿಷತ್ ಸಂಸ್ಥೆಯನ್ನು ಸದಸ್ಯ ಸಂಖ್ಯೆ, ಧನ, ಕಾರ್ಯಕರ್ತರು ಇವುಗಳಿಂದ ಹೆಚ್ಚು ಬಲವುಳ್ಳದನ್ನಾಗಿ ಮಾಡಲಿಕ್ಕೇಬೇಕು. ನಮ್ಮ ಸಾಹಿತ್ಯ ಪರಿಷತ್ತಿನ ಉದ್ದೇಶನೂಲಿಕೆಯನ್ನು ನೋಡಿದರೆ ಸಾಹಿತ್ಯದ ಬಗ್ಗೆ ಇದಕ್ಕೂ ಹೆಚ್ಚಿನದೇನಾದರೂ ಆಗಬೇಕು ಎಂದು ಹೇಳುವಂತೆ ಏನೂ ಉಳಿದಿಲ್ಲ. ಆ ಉದ್ದೇಶಗಳಲ್ಲಿಯೂ ಹಲವನ್ನೆತ್ತಿ ಸಾಧಿಸಲು ಯತ್ನಿಸುವದು ಅವಶ್ಯ ಎಂದು ಹೇಳಬಹುದು.

ಕನ್ನಡದಲ್ಲಿ ಅತ್ಯುಚ್ಚ ಸಾಹಿತ್ಯವು ನಿರ್ಮಾಣವಾಗಬೇಕೆಂದು ನಾವು ಬಯಸುವಂತೆ ಕರ್ನಾಟಕದಲ್ಲಿಯ ಪ್ರತಿಯೊಬ್ಬನಿಗೂ ಕನ್ನಡ ಓದು ಬರಹ ಬರುವಂತೆ ಮತ್ತು ಸರ್ವೇಸಾಮಾನ್ಯ ಜ್ಞಾನವೆಲ್ಲ ಅವನಿಗೆ ಕನ್ನಡದಲ್ಲಿ ದೊರಕುವಂತೆ ವ್ಯವಸ್ಥೆ ಮಾಡುವದು ನಮ್ಮ ಕರ್ತವ್ಯವೆಂದು ನಾವು ತಿಳಿದು ಸಾಗಲಿಕ್ಕೇಬೇಕು. ಈ ವಿಷಯದತ್ತ ನಾವು ಇನ್ನೂ ಅಷ್ಟು ಲಕ್ಷ್ಯ ಕೊಟ್ಟಿಲ್ಲ. ಕೊನೆಗೆ ಸರಕಾರದವರೇ ಇಂಥ ಕೆಲಸಗಳನ್ನು ಕೈಕೊಳ್ಳಬೇಕಾಗುತ್ತದೆ ಎಂಬ ಮಾತು ನಿಜ. ಆದರೆ ಸರಕಾರ ಈ ಕೆಲಸವನ್ನು ಕೈಕೊಳ್ಳುವಂತೆ ಮಾಡುವುದು ನಮ್ಮ ದೀರ್ಘಪ್ರಯತ್ನದಿಂದಲೇ ಐಕ್ಯವು. ಇದೇ ನಾಲ್ಕು ಒಳ್ಳೆ ಕಾವ್ಯಪುಸ್ತಕಗಳು ಹೊರಟರೆ ಅದರಿಂದ ನಮ್ಮ ಉದ್ಧಾರವಾಗುವುದಿಲ್ಲ. ಜನಸಾಮಾನ್ಯರ ಕಾಲವಿದು. ಆದುದರಿಂದ ಎಲ್ಲರಿಗೂ ನುಡಿಯ ಜ್ಞಾನವಾದಾಗಲೇ ಮುಂದೆ ಆ ತಳಹದಿಯ ಮೇಲೆ ನಮ್ಮ ಸಾಹಿತ್ಯಮಂದಿರವನ್ನು ಸುವ್ಯವಸ್ಥಿತವಾಗಿ ಕಟ್ಟಲು ಅಸ್ಪದವಿರುವದು.

ಕನ್ನಡದಲ್ಲಿ ಸುಧಾರಣೆಗಳು

ಕನ್ನಡ ಮೊಳೆಗಳ ಜೋಡಣೆಯಲ್ಲಿ ಸುಧಾರಣೆಯಾಗುವದು ಆವಶ್ಯವೆಂದು ಎಲ್ಲರಿಗೂ ಎನಿಸುತ್ತ ಬಂದಿದೆ. ಈಗ ಹೊಸ ಮೊಳೆಗಳನ್ನು ತಯಾರಿಸದೆ, ಇದ್ದುದರಲ್ಲಿ ಯಾವ ಸುಧಾರಣೆ ಮಾಡಬಹುದೆಂಬುದನ್ನು ಪರಿಷತ್ತಿನವರು 'ಕನ್ನಡ ಬಾವುಟ'ದಲ್ಲಿ ತೋರಿಸಿರುವರು. ಅದರಲ್ಲಿಯ ಅನೇಕ ಸೂಚನೆಗಳು ಗ್ರಹಿಸಲು ಯೋಗ್ಯವಾಗಿವೆ. ದಿನಪತ್ರಿಕೆ ಹಾಗೂ ಇತರ ಪತ್ರಿಕೆಯವರು ಅವುಗಳಲ್ಲಿಯ ಹಲವನ್ನಾದರೂ ಸ್ವೀಕರಿಸಿದರೆ ಅದು ಸುಧಾರಣೆಯ ಮೊದಲನೆಯ ಹೆಜ್ಜೆಯಾಗಬಹುದು.

ಕನ್ನಡದಲ್ಲಿ ಲಘುಲಿಪಿ ಹಾಗೂ ಟೈಪ್‌ರೈಟರ್ ಇವುಗಳ ಅತ್ಯಂತ ಆವಶ್ಯಕತೆ ಇದೆ. ಆಗುವವರೆಗೆ ನಮ್ಮ ಪತ್ರವ್ಯವಹಾರವನ್ನೂ, ಪರಿಪ್ಪತ್ರಗಳನ್ನು ಕನ್ನಡದಲ್ಲಿ ಬರೆಯುವುದು ಅವಶ್ಯಕವೇ ಆಗಿದೆ. ಆದ್ದರಿಂದ ಇತ್ತ ನಾವೆಲ್ಲರೂ ಗಮನಕೊಡಬೇಕು. ಗ್ರಾಮೋಫೋನ್, ರೇಡಿಯೋ, ಸಿನಿಮಾ ಮುಂತಾದ ಕ್ಷೇತ್ರಗಳಲ್ಲಿಯೂ ಕನ್ನಡಿಗರು ತಮ್ಮ ಹಕ್ಕುಬಾಧ್ಯತೆಗಳನ್ನು ಸ್ಥಾಪಿಸಲಿಕ್ಕೇ ಬೇಕು. ಹಾಗೂ ಆ ರೀತಿ ಮಾಡುವವರಿಗೆ ನಾವು ಬಲಕೊಡಬೇಕು.

ನಾಡಿನ ಮುನ್ನಡೆಯನ್ನು ನಿಷ್ಕರ್ಷಿಸಿ ಅದನ್ನು ನೀಗಿಸಿಕೊಂಡು ಹೋಗಲು ಸಮರ್ಥರಾದ ಯೋಗ್ಯತಾಸಂಪನ್ನ ಪ್ರೌಢರನ್ನೇ ಮಹಾಸಭೆ ಸಮ್ಮೇಳನಗಳ ಅಧ್ಯಕ್ಷ ಸ್ಥಾನಕ್ಕೆ ಆರಿಸಬೇಕಲ್ಲದೆ, ದಿನಹೋಗಿ ದುರ್ಬಲರಾಗಿ, ವಿಚಾರಶಕ್ತಿ ಕುಂಠಿತವಾಗಿ, ಕಾರ್ಯಾಸಕ್ತಿ ನಶಿಸಿ ಹೋದವರನ್ನು ಆರಿಸತಕ್ಕದ್ದಲ್ಲವೆಂದು ಹಿಂದಿನ ಸಮ್ಮೇಳನದ ಕೊನೆಯಲ್ಲಿಯೇ ನಾನು ಎಚ್ಚರಿಸಿದೆನು. ಆದರೂ ನನಗೆ ಈ ಅಪತ್ತಿಯು ಬಿಡಲಿಲ್ಲ. ಕೊನೆಗೆ ಇದೊಂದು ಇಷ್ಟಾಸಕ್ತಿಯೆಂದೇ ನಾನು ಭಾವಿಸಿಕೊಳ್ಳಬೇಕಾಯಿತು. ಕನ್ನಡ ತಾಯಿಯ ಸೇವೆಗೆಂದು ಬಂದ ಯಾವ ಕರೆಯನ್ನೂ ನನ್ನೀ ಆಯುಷ್ಯದಲ್ಲಿ ಎಂದೂ ನಿರಾಕರಿಸಿದ ನಾನು ಇಡಿಯ ನಾಡಿನ ಒಪ್ಪಿತದ ಬೆಂಬಲದಿಂದ ನನಗೆ ಬಂದ ಬೆಳಗಾವಿಯವರ ಕರೆಯನ್ನು ಯಾವ ಮೋರೆಯಿಂದ ಅನಾದರಿಸಲೆಂಬ ನಾಚಿಕೆಯು ನನ್ನ ಅಂತರಂಗದಲ್ಲಿ ಪ್ರಬಲವಾಗಿ ನನ್ನನ್ನು ಇಂದು ತಮ್ಮೆಲ್ಲರ ನಡುವೆ ತಂದು ಇಲ್ಲಿ ನಿಲ್ಲಿಸಿದೆ.

❖❖

೨೪ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಮುದವೀಡು ಕೃಷ್ಣರಾಯ



ಮುದದ ಬೀಡಾಗಿದ್ದ ಮುದವೀಡು ಕೃಷ್ಣರಾಯರು ಕನ್ನಡಿಗರನ್ನು ಅಭಿಮಾನಧನರನ್ನಾಗಿಸಿದವರಲ್ಲಿ ಅಗ್ರಗಣ್ಯರು. ಹನುಮಂತರಾಯ ಗಂಗಾಬಾಯಿ ದಂಪತಿಗಳಿಗೆ ೨೪-೨-೧೮೭೭ರಲ್ಲಿ ಸುಪುತ್ರರಾಗಿ ಜನಿಸಿದ ಇವರು ಬಾಲ್ಯದಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡಿದ್ದರಿಂದ ಚಿಕ್ಕಮ್ಮನ ಮನೆಯಲ್ಲಿ ಬೆಳೆದರು. ಪ್ರಾಥಮಿಕ ಶಿಕ್ಷಣ ಕಾರವಾರದಲ್ಲಿ ಮರಾಠಿ ಭಾಷೆಯಲ್ಲಿ ಆಗಿ ಧಾರವಾಡದಲ್ಲಿ ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಣ ಪಡೆದರು. ಲೋಕಮಾನ್ಯ ತಿಲಕರ ಪ್ರಭಾವಕ್ಕೆ ಒಳಗಾಗಿ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತರು.

೧೯೧೦ರ ಸುಮಾರಿನಲ್ಲಿ ಕರ್ನಾಟಕ ವೃತ್ತ ಪತ್ರಿಕೆಯ ಸಂಪಾದಕರಾಗಿ ೧೮ ವರ್ಷಗಳ ಕಾಲ ಸಮರ್ಥವಾಗಿ ನಡೆಸಿದರು. ಸ್ವಲ್ಪಕಾಲ ಧನಂಜಯ ಪತ್ರಿಕೆ ನಡೆಸಿದರು. ಬಾಳಿನುದ್ದಕ್ಕೂ ನಿಶ್ಚಿತ ಗಳಿಕೆಯಿಲ್ಲದೆ ಬಾಳನ್ನು ಸಾಗಿಸಿದರು.

೧೯೨೪ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡರು. ಗಾಂಧೀಜಿ ಅವರ ಪಾನನಿರೋಧ ಚಳವಳಿಯಲ್ಲಿ ಭಾಗವಹಿಸಿ ೨ ವರ್ಷ ಜೈಲುವಾಸ ಅನುಭವಿಸಿದರು. ಪ್ರಭಾವಶಾಲಿ ಭಾಷಣಕಾರರಾಗಿದ್ದರು. ಗುಡುಗಿನ ಮೊಳಗಿನಂತೆ ಭಾಷಣ ಮಾಡುತ್ತಿದ್ದರಿಂದ ಕರ್ನಾಟಕ ಗಂಡುಗಲಿ ಎಂದು ಹೆಸರಾದರು. ಸಮಾರಂಭಗಳಲ್ಲಿ ತಕ್ಷಣದಲ್ಲಿ ಅನುವಾದ ಮಾಡುವುದರಲ್ಲಿ ಸಿದ್ಧಹಸ್ತರಾಗಿದ್ದರು. ಭಾರತ ಕಲೋತ್ತೇಜಕ ಸಮಾಜವೆಂಬ ಅಮೆಚೂರ್ ನಾಟಕ ಸಂಘವನ್ನು ಕಟ್ಟಿದರು. ಚಿರಂಜೀವಿ ಚಲನಚಿತ್ರ ತಯಾರಿಸಿ ನಷ್ಟಕ್ಕೆ ಒಳಗಾದರು.

ಕನ್ನಡದ ಕೆಚ್ಚೆದೆಯ ಸಿಂಹವಾಣಿಯ ಈ ಅಪೂರ್ವ ವ್ಯಕ್ತಿಯನ್ನು ೧೯೩೯ರಲ್ಲಿ ಬೆಳಗಾವಿಯಲ್ಲಿ ನಡೆದ ೨೪ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು.

ಚಿತ್ತೂರು ಮುತ್ತಿಗೆ (ಕಾದಂಬರಿ)
ವಿಕ್ರಮ (ನಾಟಕ ಅನುವಾದಿತ)
ಶಶಿಕಲಾ (ನಾಟಕ ಅನುವಾದಿತ)
ಸುಭದ್ರಾ (ನಾಟಕ ಅನುವಾದಿತ)
ರಾಮರಾಜವಿಯೋಗ (ನಾಟಕ ಅನುವಾದಿತ)
ಪ್ರೇಮಭಂಗ (ಸ್ವತಂತ್ರ ನಾಟಕ) – ಇವರ ಕೃತಿಗಳು

ದಿನಾಂಕ ೨-೯-೧೯೪೭ರಲ್ಲಿ ಮುದವೀಡರು ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ–೨೪
ಅಧ್ಯಕ್ಷರು, ಮುದವೀಡು ಕೃಷ್ಣರಾಯ
ದಿನಾಂಕ ೨೫, ೨೬, ೨೭, ೨೮ ಡಿಸೆಂಬರ್ ೧೯೩೯
ಸ್ಥಳ : ಬೆಳಗಾವಿ

ಸಮ್ಮೇಳನದ ಅಧ್ಯಕ್ಷರು ಎಂತವರಿರಬೇಕು ?

ನಾಡಿನ ಮುನ್ನಡೆಯನ್ನು ನಿಷ್ಕರ್ಷಿಸಿ ಅದನ್ನು ನೀಗಿಸಿ ಕೊಂಡು ಹೋಗಲು ಸಮರ್ಥರಾದ ಯೋಗ್ಯತಾ ಸಂಪನ್ನ ಪ್ರೌಢರನ್ನೇ ಮಹಾಸಭೆ ಸಮ್ಮೇಳನಗಳ ಅಧ್ಯಕ್ಷ ಸ್ಥಾನಕ್ಕೆ ಆರಿಸಬೇಕಲ್ಲದೆ, ದಿನ ಹೋಗಿ ದುರ್ಬಲರಾಗಿ, ವಿಚಾರಶಕ್ತಿ ಕುಂಠಿತವಾಗಿ, ಕಾರ್ಯಶಕ್ತಿ ನಶಿಸಿ ಹೋದವರನ್ನು ಅರಿಸತಕ್ಕದ್ದಲ್ಲವೆಂದು ಹಿಂದಿನ ಸಮ್ಮೇಳನದ ಕೊನೆಯಲ್ಲಿಯೇ ನಾನು ಎಚ್ಚರಿಸಿದೆನು. ಆದರೆ ನನಗೆ ಈ ಆಸಕ್ತಿಯು ಬಿಡಲಿಲ್ಲ. ಕೊನೆಗೆ ಇದೊಂದು ಇಷ್ಟಾಪತ್ತಿಯೆಂದೇ ನಾನು ಭಾವಿಸಿಕೊಳ್ಳಬೇಕಾಯಿತು. ಕನ್ನಡ ತಾಯಿಯ ಸೇವೆಗೆಂದು ಬಂದ ಯಾವ ಕರೆಯನ್ನೂ ನನ್ನೀ ಆಯುಷ್ಯದಲ್ಲಿ ಎಂದೂ ನಿರಾಕರಿಸದ ನಾನು ಇಡಿಯ ನಾಡಿನ ಒಪ್ಪಿತದ ಬಲದಿಂದ ನನಗೆ ಬಂದ ಬೆಳಗಾವಿಯವರ ಕರೆಯನ್ನು ಯಾವ ಮೋರೆಯಿಂದ ಅನಾದರಿಸಲೆಂಬ ನಾಚಿಕೆಯು ನನ್ನ ಅಂತರಂಗದಲ್ಲಿ ಪ್ರಬಲವಾಗಿ ನನ್ನನ್ನು ಇಂದು ತಮ್ಮೆಲ್ಲರ ನಡುವೆ ತಂದು ನಿಲ್ಲಿಸಿದೆ.

ಪರಿಷತ್ತನ್ನು ಕಟ್ಟಿದ ಕೀರ್ತಿಶೇಷರಾದ ಕನ್ನಡಿಗರು

ಮಹನೀಯರೇ, ಹೋದ ಸಲ ನಾವು ಬಳ್ಳಾರಿಯಲ್ಲಿ ಕೂಡಿದಾಗಿನಿಂದಿತ್ತ ಕಡೆಗೆ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಹೆಸರಾಂತ ಮಹನೀಯರು ಕೆಲವರು ನಮ್ಮನ್ನು ಅಗಲಿ ನಮಗೆ ಕಣ್ಮರೆಯಾಗಿರುವುದು ಅತ್ಯಂತ ವಿಷಾದಕರವಾಗಿದೆ. ಅಂತಹರೊಳಗೆ ಶ್ರೀಮಾನ್ ಮಹಿಷಿ ಶಾಮರಾಯರ ನಾಮನಿರ್ದೇಶನವನ್ನು ನಾನು ಮೊದಲು ಮಾಡಬೇಕಾಗಿದೆ. ಮೈಸೂರು ಸಂಸ್ಥಾನದ ಶಿಕ್ಷಣಶಾಖೆಯ ವರಿಷ್ಠಾಧಿಕಾರಿಗಳಾಗಿ ಕನ್ನಡಕ್ಕೆ ವಿಶೇಷವಾದ ಸೇವೆಯನ್ನು ಇವರು ಸಲ್ಲಿಸಿದುದುಂಟು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯು ವಿಷಯದಲ್ಲಿಯೂ ಈ ಮಹನೀಯರು ಹೆಚ್ಚಿನ ಆಸ್ಥೆಯಿಂದ ಕಾರ್ಯಮಾಡಿದರು. ಎರಡನೆಯದಾಗಿ ಮೈಸೂರು ಮಹಾರಾಜರ ಕಾಲೇಜಿನಲ್ಲಿ ಕನ್ನಡದ ಪ್ರೊಫೆಸರರಾಗಿದ್ದ ನನ್ನ ಜೀವದ ಗೆಳೆಯರು ಶ್ರೀಮಾನ್ ತಳುಕಿನ ವೆಂಕಣ್ಣಯ್ಯನವರು. ಇವರನ್ನು ಅರಿಯದ ಕನ್ನಡಿಗರೇ ವಿರಳವೆಂದು ಹೇಳಬಹುದು. ಇವರು ಕನ್ನಡ ನಾಡಿಗೂ ಸಾಹಿತ್ಯಕ್ಕೂ ಮಾಡಿದ ಸೇವೆಯನ್ನು ಬಣ್ಣಿಸುವುದು ನನ್ನ ಯೋಗ್ಯತೆಗೆ ಮೀರಿದ ಮಾತು. ಮೂರನೆಯವರು ಕೊಡಗಿನ ಶ್ರೀಮತಿ ಸೌಭಾಗ್ಯವತಿ ಗೌರಮ್ಮನವರು : ಕನ್ನಡ ಸಣ್ಣಕತೆಗಳ ಹೆಸರಾದ ಬರಹಗಾರ್ತಿಯರು. ಬಿ.ಟಿ.ಜಿ. ಕೃಷ್ಣ ಎಂಬ ಹೆಸರಿನಿಂದ ಕನ್ನಡ ಸಾಹಿತ್ಯ ಪ್ರಪಂಚಕ್ಕೆಲ್ಲ ಇವರು ಚೆನ್ನಾಗಿಯೇ ಪರಿಚಿತರಾಗಿದ್ದಾರೆ.

ಕೊಡಗಿನಿಂದ ಒಬ್ಬರೇ ಹೊರಟು ಅತಿ ದೂರದ ತಾಪದಾಯಕ ಪ್ರವಾಸವನ್ನು ಧೈರ್ಯದಿಂದ ಕೈಕೊಂಡು ಅನೇಕ ಬಗೆಯ ದೈಹಿಕ ಕಷ್ಟ ತಾಪಗಳನ್ನು ಆನಂದದಿಂದ ಸಹಿಸಿ, ಇತ್ತ ಕಡೆಯ ಕನ್ನಡ ಬಂಧು–ಭಗನಿಯರ ಜೊತೆಯಲ್ಲಿ ನಾಲ್ಕೆಂಟು ದಿನಗಳನ್ನು ಕಳೆಯಬೇಕೆಂಬ ಉತ್ಕಂಠೆಯಿಂದ ೧೯೩೭ರ ಜಮಖಂಡಿಯ ಸಾಹಿತ್ಯ ಸಮ್ಮೇಳನಕ್ಕೆ ಕೊಡಗಿನ ಕರ್ನಾಟಕ ಸಂಘದ ಪ್ರತಿನಿಧಿಗಳಾಗಿ ಅವರು ಬಂದದ್ದೇ ಅವರ ಅಂತರಂಗದೊಳಗಿನ ಕನ್ನಡದ ಭಕ್ತಿಯನ್ನು ಚೆನ್ನಾಗಿ ತೋರಿಸಿಕೊಡುತ್ತಿದೆ. ನಮ್ಮ ಮಿಕ್ಕ ಕನ್ನಡ ಭಗಿನಿಯರ ಮಾತು ಹಾಗಿರಲಿ– ಬಂಧುಗಳಾದರೂ ಸೌಭಾಗ್ಯವತಿ ಗೌರಮ್ಮನವರ ಕನ್ನಡಭಕ್ತಿಯನ್ನು ಅನುಕರಿಸಿದರೆ ಕನ್ನಡನಾಡಿನ ಉನ್ನತಿಗೆ ತಡವಾಗಲಾರದು.

ಪರಿಷತ್ತಿನ ಸ್ಥಾಪನೆಗೆ ಆಲೂರರ ಸಾಹಸ

ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲೆಲ್ಲ ತಾವು ಕನ್ನಡಮ್ಮನ ಮಕ್ಕಳು, ತಮ್ಮ ತಾಯಿಯ ನುಡಿ ಕನ್ನಡ, ಅದನ್ನುಳಿದ ಬೇರೆ ಭಾಷೆಗಳು ತಮ್ಮ ಮೇಲೆ ನಡೆಸುವುದು ದಬ್ಬಾಳಿಕೆ ಎಂಬ 'ಸ್ವ'ತ್ವದ ಅಂಕುರವೂ ಸ್ವಸಂರಕ್ಷಣೆಯ ವಿಚಾರವೂ ಮೊಳೆದೋರಿ ಬೆಳೆಯುವಂತ ಕನ್ನಡನಾಡಿನ ಏಕೀಕರಣದ ಕಾರ್ಯವನ್ನು ಕೈಗೊಳ್ಳದೆ ಗತಿಯಿಲ್ಲ, ವಿಧಿಯಿಲ್ಲ ಎಂಬ ಮಾತು ವಿಚಾರವಂತ ಕನ್ನಡಿಗರಿಗೆಲ್ಲ ತಟ್ಟನೆ ಮನದಟ್ಟಾಯಿತು. ಆ ಮಾರ್ಗದಿಂದ ಪ್ರಯತ್ನ ನಡೆಯಿತು. ಶ್ರೀಮಾನ್ ಆಲೂರ ವೆಂಕಟರಾಯರು ಈ ಸತ್ಕಾರ್ಯದ ಪುರಸ್ಕಾರವನ್ನು ಕೈಗೊಂಡರು. ೧೯೧೭ರಲ್ಲಿ ಮೊದಲನೆಯ "ಕನ್ನಡ

ಗ್ರಂಥಕಾರರ ಸಮ್ಮೇಳನ" ವನ್ನು ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವದ ಜೊತೆಯಲ್ಲಿಯೇ ಕೂಡಿಸಲಾಯಿತು. ಮೈಸೂರಿನ ದಿವಂಗತ ಶ್ರೀಮಾನ್ ಎಸ್.ಜಿ. ನರಸಿಂಹಾಚಾರ್ಯ, ಎಂ.ಎ. ಅವರು ಅದಕ್ಕೆ ಅಧ್ಯಕ್ಷರಾಗಿದ್ದರು. ಎರಡನೆಯ ಸಮ್ಮೇಳನವೂ ಧಾರವಾಡದಲ್ಲಿಯೇ ನಡೆಯಿತು. ಒಂದೇ ಸ್ಥಳದಲ್ಲಿ ಕೆಲವರೇ ಕೂಡಿ ನಡೆಸುವ ಸಮ್ಮೇಳನಗಳು ಫಲಕಾರಿಯಾಗಲಾರವೆಂಬ ಅನುಭವ ಬಂತು.

ಕನ್ನಡನಾಡು ಒಂದಾಗ ಬೇಕಾದರೆ ಇಂಥ ಸಮ್ಮೇಳನಗಳು ಎಲ್ಲ ಕಡೆಗೆ ಆಗಬೇಕೆಂಬ ಆಲೋಚನೆ ಹೊರಟಿತು. ಎಷ್ಟಾದರೂ ಮೈಸೂರು ಸೀಮೆ ಕನ್ನಡಕ್ಕೆ ತವರೂರು; ಗತಕಾಲದ ಕನ್ನಡ ವೈಭವಾವಶೇಷದ ಕುರುಹು; ವಿದ್ಯಮಾನ ಕಾಲದಲ್ಲಿ ಕನ್ನಡಕ್ಕೆ ಉಳಿದಿರುವ ಒಂದೆ ಒಂದು ಆಶ್ರಯಸ್ಥಾನ. ಇವೇ ಮೊದಲಾದ ವಿಚಾರಗಳಿಂದ ಮೈಸೂರಿನಲ್ಲಿಯೇ ಎಲ್ಲಿಯಾದರೂ ಮುಂದಿನ ಸಮ್ಮೇಳನದ ಯೋಜನೆ ಮಾಡಬೇಕೆಂದು ಶ್ರೀ ಆಲೂರ ವೆಂಕಟರಾಯರು ಯತ್ನಿಸಿದರು. ಅಲ್ಲಿಯ ವರಿಷ್ಠಾಧಿಕಾರಿಗಳನ್ನು ಕಂಡರು ಪ್ರತಿಷ್ಠಿತ ಕನ್ನಡ ಪ್ರೇಮಿಗಳಿಗೆ ಭೆಟ್ಟಿಯಾದರು. ಕೊನೆಗೆ ನಾಲ್ಕಾರು ವರುಷಗಳ ಸತತ ಪ್ರಯತ್ನದಿಂದ ೧೯೧೫ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಗಿ ಅಲ್ಲಿಂದ ಮುಂದೆ ಕನ್ನಡದ ಚಳವಳಿಗೆ ಒಂದು ಬಗೆಯ ಕಸುವು ಬರತೊಡಗಿತು. ಅಂದಿನಿಂದಲೇ ಕನ್ನಡದ ಪುನರುದ್ಧಾರ ಕಾರ್ಯಕ್ಕೆ ಅಂದರೆ ಕರ್ನಾಟಕದ ಏಕೀಕರಣ ಕಾರ್ಯಕ್ಕೆ ನಿಜವಾಗಿಯೂ ಪ್ರಾರಂಭವಾಯಿತೆಂದು ಹೇಳಬಹುದು.

ಪರಿಷತ್ತಿನ ಸಂಘಟನೆಯ ಪ್ರೇರಕಶಕ್ತಿ


ವಿಭಕ್ತವಾದ, ಸಂಘಟಿತವಾದ, ವಿಸ್ಖಲಿತವಾದ ಕನ್ನಡ ಜನಾಂಗವು ಸುಸಂಘಟಿತವಾಗುವಂತೆ ಅವ್ಯಾಹತವಾಗಿ ಪ್ರಯತ್ನಪಟ್ಟು ಬಲುಮಟ್ಟಿಗೆ ಶ್ರೇಯಸ್ಸು ಪಡೆದ ಇಡಿಯ ಕನ್ನಡನಾಡಿನ ನಾಲ್ಕಾರು ಸಂಸ್ಥೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಲ್ಲೇಖನವನ್ನು ನಾನಿಲ್ಲಿ ಮೊದಲು ಮಾಡಬೇಕಾಗಿದೆ. ಅದುವೇ ಎಲ್ಲವುಗಳಿಗೂ ಹಿರಿದಾದ ಸಂಸ್ಥೆ. ಕಳೆದ ೨೫ ವರ್ಷಗಳಲ್ಲಿ ಕನ್ನಡ ಜನಾಂಗದಲ್ಲಿ ಉಂಟಾಗಿರುವ ಅಭಿನವ ಜಾಗೃತಿಯ ಶ್ರೇಯಸ್ಸಿನ ಬಹುಭಾಗವು ಪರಿಷತ್ತಿನದೇ ಎಂದು ಹೇಳಲು ಯಾವ ಅನುಮಾನವು ಇಲ್ಲ. ಹುಟ್ಟಿದ ನಾಲ್ಕನೆಯ ವರುಷದಿಂದಲೇ ಅದು ತನ್ನ ಅಖಿಲ ಕರ್ನಾಟಕದ ದೃಷ್ಟಿಯನ್ನು ನಾಲ್ಕು ಕಡೆಗಳಲ್ಲಿಯೂ ಹರಡಿ, ನಾಲ್ಕೂ ನಿಟ್ಟುಗಳ ಕನ್ನಡಿಗರನ್ನು ತನ್ನ ಕ್ಷೇತ್ರದೊಳಗೆ ಆಕರ್ಷಿಸಿಕೊಂಡು, ಕನ್ನಡ ನುಡಿಯ ವಿಷಯವಾಗಿ ಎಲ್ಲೆಲ್ಲಿಯೂ ಅಭಿಮಾನವನ್ನು ಜಾಗ್ರತಗೊಳಿಸಿ, ಎಲ್ಲ ಕಡೆಗಳ ಸುಶಿಕ್ಷಿತ ಸುಸಂಸ್ಕೃತ ಜನಸಮೂಹದಲ್ಲಿ ಕನ್ನಡಿಗರೆಲ್ಲರೂ ಒಂದೆಂಬ ಭಾವನೆಯನ್ನು ಬೇರೂರಿಸಿತು. ನಾನು ಬಲ್ಲಮಟ್ಟಿಗೆ ಕೀರ್ತಿಶೇಷ ಕರ್ಪೂರ ಶ್ರೀನಿವಾಸರಾಯರೂ ಹಾಗೆಯೇ ವಿದ್ಯಮಾನ ಶ್ರೀ ಡಿ.ವಿ. ಗುಂಡಪ್ಪನವರೂ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಮಾಡಿದ ಕಾರ್ಯಕಲಾಪಗಳಲ್ಲಿ ಅಖಂಡ ಕರ್ನಾಟಕದ ದೃಷ್ಟಿಯೇ ಪ್ರಭಾವಶಾಲಿಯಾಗಿವಂತೆ ಮೊದಲಿನಿಂದಲೂ ಪ್ರಯತ್ನಿಸಿದುದು ಕಂಡುಬರುತ್ತದೆ. ಪ್ರಕೃತದಲ್ಲಿ ಉಪಾಧ್ಯಕ್ಷರಾಗಿರುವ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ಪರಿಷತ್ತಿನಲ್ಲಿ ಅದೇ ಅಖಂಡ ಕರ್ನಾಟಕ ದೃಷ್ಟಿಯನ್ನು ಇನ್ನೂ ಹೆಚ್ಚಾಗಿ ಬಳೆಯಿಸುತ್ತಿರುವುದು ಎರಡು ವರ್ಷಗಳಲ್ಲಿ ಅನುಭವಕ್ಕೆ ಬಂದಿದೆ. ಪಂಡಿತ ಸಾಹಿತ್ಯ ಪ್ರಕಟನೆಯ "ಪರಿಷತ್ಪತ್ರಿಕೆ'ಯ ಜೊತೆಯಲ್ಲಿ 'ಕನ್ನಡ ನುಡಿ'ಯು ಸಾಮಾನ್ಯ ಜನತೆಯಲ್ಲಿ ಕನ್ನಡ ಭಾಷೆ, ಸಾಹಿತ್ಯಗಳ ಅಭಿಮಾನವನ್ನು ಹೆಚ್ಚಿಸುತ್ತ, ಕನ್ನಡನಾಡಿನ ನಾಲ್ಕೂ ನಿಟ್ಟುಗಳ ಕನ್ನಡ ಚಟುವಟಿಕೆಗಳನ್ನು ತಿಳಿಸುತ್ತ ಇಡಿಯ ಕನ್ನಡ ಜನಾಂಗವನ್ನೊಂದುಗೂಡಿಸಿದ ಕಟ್ಟನ್ನು ಹೆಚ್ಚಾಗಿ ಬಿಗಿಯಲಾರಂಭಿಸಿದೆ. ವಾರ್ಷಿಕ ಸಮ್ಮೇಳನಗಳಲ್ಲದೆ ನಾಲ್ಕು ಕಡೆಗಳಲ್ಲಿಯೂ ವಸಂತೋತ್ಸವಗಳೂ, ಸಾಹಿತ್ಯಗೋಷ್ಠಿಗಳೂ ನಡೆಯಲಾರಂಭಿಸಿದುದರಿಂದ ಎಲ್ಲೆಲ್ಲಿಯೂ ಕನ್ನಡ ನುಡಿಯು ಭರದಿಂದ ಮುಂದೆ ಸಾಗಲನುವಾಗಿದೆ. ಪರಿಷತ್ತಿನಲ್ಲಿ ಮಹಿಳೆಯರಿಗಾಗಿ ಸ್ವತಂತ್ರ ಶಾಲೆಯೊಂದು ಏರ್ಪಟ್ಟಿದೆ. ಮಹಿಳಾ ಸಮ್ಮೇಳನಗಳನ್ನೂ, ಸಂತೋಷಕೂಟಗಳನ್ನೂ ನಡೆಯಿಸಿ ಕನ್ನಡದ ಬಗೆಗೆ ಅವರಲ್ಲಿ ಭಕ್ತಿ ಆದರಗಳನ್ನು ಹುಟ್ಟಿಸಿ ಹಬ್ಬಿಸುವ ಉಪಕ್ರಮವನ್ನು ಕೈಗೊಳ್ಳಲಾಗಿದೆ. ಕನ್ನಡ ಕಾವ್ಯಗಳನ್ನು ಗಮಕಪದ್ಧತಿಯಿಂದ ಹಾಡಿ ಜನತೆಯಲ್ಲಿ ಅವುಗಳ ವಿಷಯವಾಗಿ ಅಭಿರುಚಿಯನ್ನು ಹುಟ್ಟಿಸಲೆಂದು ಕನ್ನಡ ಯುವಕ ಯುವತಿಯರಿಗೆ ಗಮಕ ಕಲೆಯನ್ನು ಕಲಿಸುವುದನ್ನು ಏರ್ಪಡಿಸಲಾಗಿದೆ. ಕನ್ನಡ ಸಾಹಿತ್ಯ ಪರೀಕ್ಷೆಗಳ ತರಗತಿಗಳು ನಿಷ್ಕರ್ಷಿಸಲ್ಪಟ್ಟು, ಅವುಗಳಲ್ಲಿ ಅಭ್ಯಾಸಮಾಡಿ ತೇರ್ಗಡೆ ಹೊಂದಿದವರಿಗೆ ಬಿರುದುಗಳನ್ನು ಕೊಡುವ ವ್ಯವಸ್ಥೆಮಾಡಿ, ಹಳಗನ್ನಡ ಸಾಹಿತ್ಯದ ಅಭ್ಯಾಸಮಾಡಿ ಪ್ರೋತ್ಸಾಹಿಸುವ ನೂತನ ಉಪಕ್ರಮವನ್ನು ಆರಂಭಿಸಲಾಗಿದೆ. ಎಂದರೆ, ಸಾಮಾನ್ಯವಾಗಿ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಈಗೀಗ ನಿಜವಾಗಿಯೂ ಕನ್ನಡ ವಿದ್ಯಾಪೀಠವಾಗುವ ಪೂರ್ವ ರೂಪವನ್ನು ಅಳವಡಿಸಿಕೊಳ್ಳಲು ಅನುವಾಗಿದೆಯೆಂದು ಹೇಳಬಹುದು. ಪರಿಷತ್ತು ಉದ್ದೇಶವಾಗಿಟ್ಟುಕೊಂಡಿರುವ ಕಾರ್ಯಗಳು ಕನ್ನಡನಾಡಿನ ಎಲ್ಲ ಭಾಗಗಳಲ್ಲಿಯೂ ಒಂದೇ ಬಗೆಯಾಗಿ

ಸರಾಗವಾಗಿ ಸಾಗಲನುವಾಗುವಂತೆ ನಾಲ್ಕುಕಡೆಗಳಲ್ಲಿಯೂ ಪ್ರಾಂತ ಸಮಿತಿಗಳನ್ನು ನಿರ್ಮಿಸಿ. ಆಯಾ ಕ್ಷೇತ್ರಗಳಲ್ಲಿ ಕನ್ನಡದ ಬೆಳವಣಿಗೆಗೆ ಹೆಚ್ಚು ಅವಕಾಶ ದೊರೆಯುವಂತೆ ಹೆಚ್ಚಾಗಿ ಕಾರ್ಯ ಜರುಗಲು ಅನುಕೂಲತೆ ಕಲ್ಪಿಸಲಾಗಿದೆ. ಈ ಬಗೆಯಾಗಿ ಆಖಂಡ ಕರ್ನಾಟಕದಲ್ಲಿ ಕನ್ನಡಭಾಷೆ, ಸಾಹಿತ್ಯ, ವಾಙ್ಮಯ, ಸಂಸ್ಕೃತಿಗಳ ಸಂಗೋಪನ, ಸಂವರ್ಧನ ಕಾರ್ಯವು ಒಮ್ಮುಖವಾಗಿ ಶೀಘ್ರಗತಿಯಿಂದ ನಡೆಯಲು ಅನುಕೂಲವಾಗುವಂತೆ ನಮ್ಮ ಪರಿಷತ್ತಿನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಈ ಕಾರ್ಯಸಾಧನೆಗಾಗಿ ಹಗಲಿರುಳೂ ಹೆಣಗುತ್ತಿರುವ ಶ್ರೀಮಾನ್ ಶ್ರೀಕಂಠಯ್ಯನವರಿಗೆ ಕನ್ನಡಿಗರೆಲ್ಲರೂ ಕೃತಜ್ಞರಾಗಿರಬೇಕಾಗಿದೆ.

ಶ್ರೀಯುತರ ಆಗಾಧವಾದ ವಿದ್ವತ್ತು, ಕವಿತ್ವಪ್ರತಿಭೆ, ಇಂಗ್ಲಿಷ್ ವಾಙ್ಮಯದ ಮೇಲೆ ಅವರಿಗಿರುವ ಪ್ರಭುತ್ವ– ಇವು ಅಸಾಮಾನ್ಯವಾಗಿದ್ದರೂ ಕನ್ನಡಕ್ಕಾಗಿ ಅವರಲ್ಲಿರುವ ಅಪಾರವಾದ ಪ್ರೇಮಾದರ ಭಕ್ತಿಗಳು, ಕನ್ನಡನಾಡು ಎಲ್ಲ ಬಗೆಯಿಂದಲೂ ಸ್ವತಂತ್ರವಾಗಿ ಏಕಸೂತ್ರನಿಬದ್ಧವಾಗಿ ಅದರ ಸಾಹಿತ್ಯವು ಸರ್ವಾಂಗ ಸುಂದರವಾಗಿ ವಿಪುಲವಾಗಿ ಸರ್ವಾದರಣೀಯವಾಗಿ ಬೆಳೆದು ಭಾರತದಲ್ಲಿಯೂ, ಜಗತ್ತಿನಲ್ಲಿಯೂ ಅದು ತನ್ನ ಯಶಸ್ಸನ್ನು ಮೆರೆಯಿಸಬೇಕೆಂಬ ಮಹದಾಕಾಂಕ್ಷೆಯಿಂದ ಅವರು ನಡೆಯಿಸಿರುವ ಜನಜಾಗೃತಿಯ ಕಾರ್ಯಗಳು ಹಾಗೆಯೇ ಕನ್ನಡಕ್ಕಾಗಿ ಅವರು ಮಾಡಿರುವ, ಮಾಡುತ್ತಿರುವ, ಅನನ್ಯ ಸಾಧಾರಣವಾದ ತ್ಯಾಗವು–ಇವೆಲ್ಲವುಗಳ ಮೂಲಕವಾಗಿ ಶ್ರೀಮನ್ಮಹಾರಾಜರವರಿಂದ “ರಾಜಸೇವಾಸಕ್ತ”ರೆಂಬ ಬಹುಮಾನದ ಬಿರುದಿಗೆ ಪಾತ್ರರಾಗಿರುವ ಅವರು ನಿಜವಾಗಿಯೂ **‘ಕನ್ನಡ ಕುಲ ರನ್ನ’** ರಾಗಿರುವರೆಂದು ನಾನಿಲ್ಲಿ ನಿರ್ದೇಶಿಸದಿರಲಾರೆನು. ಇಂತಹ ಮಹನೀಯರ ನೇತೃತ್ವದಲ್ಲಿ ನಮ್ಮ ಸಾಹಿತ್ಯ ಪರಿಷತ್ತು ಯಾವ ಅಕುಂಚಿತ ದೃಷ್ಟಿಗೂ, ಸಂಕುಚಿತ ಬುದ್ಧಿಗೂ ಎಷ್ಟೂ ಎಡೆಗೊಡದಂತೆ, ವಿಶಾಲವಾದ ನಮ್ಮ ಕನ್ನಡ ಜನಾಂಗದ ಸರ್ವವಿಧದ ಅಭ್ಯುದಯ, ಸಾಧನಕ್ಕೆ ಹೆಚ್ಚುಹೆಚ್ಚಾಗಿ ತತ್ಪರವಾಗಿ ಪ್ರಯತ್ನಿಸುವಂತೆ ನಾವೆಲ್ಲರೂ ಅವರಿಗೆ ಅಂತಃಕರಣಪೂರ್ವಕವಾಗಿ ನೆರವನ್ನು ನೀಡಿ ನಮ್ಮೆಲ್ಲರ ಸಾಮಾನ್ಯಗುರಿಯನ್ನು ಬೇಗನೆ ಸಾಧಿಸಲು ಸಾಹಸಪಡೋಣ.

❖❖

೨೫ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿ



ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿ ಹಿರೇಮಠರು ವೀರಶೈವ ಸಾಹಿತ್ಯದಲ್ಲಿ ಪ್ರಕಾಂಡ ಪಂಡಿತರು. ಬಳ್ಳಾರಿ ಜಿಲ್ಲೆಯ ಹೊಳಲು ಗ್ರಾಮದಲ್ಲಿ ೩-೧-೧೮೯೨ರಲ್ಲಿ ಪಟ್ಟದಯ್ಯ ಮತ್ತು ಬಸವಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸವನ್ನು ಬ್ಯಾಡಗಿ ಹಾವೇರಿ ಗದಗುಗಳಲ್ಲಿ ಮುಗಿಸಿ ಕಾಶಿ, ಕಲ್ಕತ್ತ ಸಂಸ್ಕೃತ ಕೇಂದ್ರಗಳಿಗೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿದರು. ೧೯೨೪ರಲ್ಲಿ ವ್ಯಾಕರಣ ತೀರ್ಥ ಪದವಿಯನ್ನು ಸಾಹಿತ್ಯಾಚಾರ್ಯ ಪದವಿಯನ್ನು ಪಡೆದು ಕರ್ನಾಟಕಕ್ಕೆ ಹಿಂದಿರುಗಿದರು.

ಕರ್ನಾಟಕಕ್ಕೆ ಹಿಂದಿರುಗಿದ ಮೇಲೆ ಯಾದಗಿರಿಯಲ್ಲಿ ಶಂಕರ ಸಂಸ್ಕೃತ ಕಾಲೇಜು ಸ್ಥಾಪಿಸಿ ೧೯೨೪ರಿಂದ ಅದರ ಪ್ರಿನ್ಸಿಪಾಲರಾದರು. ಹುಬ್ಬಳ್ಳಿಯ ಜಗದ್ಗುರು ಗಂಗಾಧರ ಸಂಸ್ಕೃತ ಕಾಲೇಜನ್ನು ಸ್ಥಾಪಿಸಿದರು. ೧೯೩೧ರಿಂದ ೧೯೩೮ರವರೆಗೆ ಸಂಸ್ಕೃತ ಮುಖ್ಯಾಧ್ಯಾಪಕರಾಗಿ ದುಡಿದರು.

೧೯೩೩ರಲ್ಲಿ ಹುಬ್ಬಳ್ಳಿಯಲ್ಲಿ ಸಮಾವೇಶಗೊಂಡಿದ್ದ ೧೯ನೇ ಸಾಹಿತ್ಯ ಸಮ್ಮೇಳನದ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಅನೇಕ ಗ್ರಂಥಗಳನ್ನು ಪರಿಶೋಧಿಸಿ ಪರಿಷ್ಕರಿಸಿ ಪ್ರಕಟಿಸಿದರು. ಹಂಪೆಯಲ್ಲಿ ನಡೆದ ವಿಜಯನಗರ ಸಾಮ್ರಾಜ್ಯದ ೬ನೇ ಶತಮಾನೋತ್ಸವ ಕಾರ್ಯಕ್ರಮದ ಸಮಿತಿಯ ಕಾರ್ಯದರ್ಶಿಯಾಗಿ ಶ್ರಮಿಸಿದ್ದಾರೆ. ೨೫ಕ್ಕೂ ಹೆಚ್ಚಿನ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ದಾಖಲೆ ಸ್ಥಾಪಿಸಿದ್ದಾರೆ.

ಕಾಶಿಯಲ್ಲಿ ವ್ಯಾಸಂಗದ ಕಾಲದಲ್ಲಿ ಸಾಹಿತ್ಯಾಚಾರ್ಯರಾಗಿ ವಿದ್ಯಾಲಂಕಾರ, ವಿದ್ಯಾವಾಗೀಶ ಬಿರುದನ್ನು ಗಳಿಸಿದ್ದಾರೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವದ ಜತೆಯಲ್ಲೇ ೧೯೪೦ರಲ್ಲಿ ನಡೆದ ೨೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಸವತತ್ತ್ವ ರತ್ನಾಕರ ಗ್ರಂಥಕ್ಕೆ ದೊರೆತಿದೆ. ೧೯೮೩ರಲ್ಲಿ ಸರ್ಕಾರದ ರಾಜ್ಯ ಪ್ರಶಸ್ತಿ, ೧೯೯೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಪ್ರಶಸ್ತಿ ದೊರೆತಿದೆ. ಶಾಸ್ತ್ರಿಗಳು ಶತಾಯುಷಿಗಳಾದಾಗ ಹಡಗಲಿ ಸಂಘರ್ಷ ಸಮಿತಿ ಚಂದ್ರಚೇತನ ಗ್ರಂಥವನ್ನೂ, ಕನ್ನಡ ಸಾಹಿತ್ಯ ಪರಿಷತ್ತು ವ್ಯಾಕರಣ ತೀರ್ಥ ಸಂಭಾವನಾ ಗ್ರಂಥವನ್ನೂ ಸಮರ್ಪಿಸಿದೆ.

ಸಂಸ್ಕೃತ, ಕನ್ನಡ, ಇಂಗ್ಲಿಷ್, ಮರಾಠಿ, ಉರ್ದು ಭಾಷೆಗಳನ್ನು ಬಲ್ಲ ಇವರು ಅನೇಕ ಧಾರ್ಮಿಕ ಗ್ರಂಥಗಳನ್ನು ರಚಿಸಿದ್ದಾರೆ.

ಬಸವತತ್ತ್ವ ರತ್ನಾಕರ	ಚಾಣಕ್ಯ ನೀತಿ ದರ್ಪಣ
ರೇಣುಕ ವಿಜಯ	ಮೃತ್ಯುಂಜಯ ಶಿವಯೋಗಿಗಳ ಚರಿತ್ರೆ
ಸಿದ್ಧಲಿಂಗ ವಚನ	ಕಾಡು ಸಿದ್ದೇಶ್ವರ ವಚನ ಇತ್ಯಾದಿ ರಚಿಸಿದ್ದಾರೆ.

ಶಾಸ್ತ್ರಿಗಳು ದಿನಾಂಕ ೨೪-೧೦-೧೯೭೭ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೨೫
ಅಧ್ಯಕ್ಷರು : ವೈ ಚಂದ್ರಶೇಖರಶಾಸ್ತ್ರಿ
ದಿನಾಂಕ ೨೭,೨೮,೨೯ ಡಿಸೆಂಬರ್ ೧೯೪೦
ಸ್ಥಳ : ಧಾರವಾಡ

ಪರಿಷತ್ತಿನ ಅಧ್ಯಕ್ಷರ ಮತ್ತು ಮಹಾಪೋಷಕರ ಮರಣ

ಕಳೆದ ೧೫ ವರ್ಷಗಳಿಂದ ಪರಿಷತ್ತಿಗೆ ಅಧ್ಯಕ್ಷರಾಗಿದ್ದ ಮೈಸೂರು ಸಂಸ್ಥಾನದ ಯುವರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ಜಿ.ಸಿ.ಐ.ಇ. ಅವರು ಇದೇ ವರ್ಷದ ಮಾರ್ಚಿ ತಿಂಗಳ ೧೧ನೆಯ ತಾರೀಖಿನಲ್ಲಿ ದಿವಂಗತರಾದ ವಿಷಯ ಪರಿಷತ್ತಿಗೆ ಪರಿತಾಪಕರವಾದುದು. ಅನೇಕ ರೀತಿಯಿಂದ ಪರಿಷತ್ತಿಗೆ ಬೆಂಬಲಿಗರಾಗಿದ್ದುದಲ್ಲದೆ 'ಕನ್ನಡ ನಾಡಿನ ಚರಿತ್ರೆ' ಯನ್ನು ಅಚ್ಚುಮಾಡಿಸುವುದಕ್ಕೆ ಉದಾರವಾದ ದ್ರವ್ಯ ಸಹಾಯಮಾಡಿದ್ದ ಇಂತಹ ಮಹನೀಯರು ದಿವಂಗತರಾದುದು ಪರಿಷತ್ತಿನ ದೌರ್ಭಾಗ್ಯವೇ ಸರಿ.

ಈ ಸಂಬಂಧವಾದ ದುಃಖ ಆರುವುದರೊಳಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದಾಗಿನಿಂದ ಅದರ ಮಹಾಪೋಷಕರಾಗಿದ್ದು ಕನ್ನಡನಾಡು ನುಡಿಗಳ ಏಳಿಗೆಗಾಗಿ ಅನೇಕ ವಿಧವಾಗಿ ಸಹಾಯ ಸಂಪತ್ತುಗಳನ್ನು ಅನುಗ್ರಹಿಸುತ್ತಲಿದ್ದ ಮೈಸೂರು ಸಂಸ್ಥಾನದ ಮಹಾರಾಜರವರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ. ಅವರು ಕಳೆದ ಆಗಸ್ಟ್ ತಿಂಗಳ ೩ನೆಯ ತಾರೀಖಿನಲ್ಲಿ ಹೃದಯ ವೇದನೆಯಿಂದ ದಿವಂಗತರಾದುದು ಕನ್ನಡಿಗರೆಲ್ಲರಿಗೆ ಸಿಡಿಲು ಬಡಿದಂತಾಗಿದೆ. ಅವರು ವಿಧಿವಶರಾಗುವುದಕ್ಕೆ ಒಂದು ತಿಂಗಳು ಹಿಂದೆ ನಮ್ಮ ಪರಿಷತ್ತಿನ ಬೆಳ್ಳಿಯ ಹಬ್ಬದ ಪ್ರಾರಂಭೋತ್ಸವವನ್ನು ನೆರವೇರಿಸಿದಾಗ ಪರಿಷತ್ತನ್ನು ನಾನಾ ವಿಧವಾಗಿ ಪ್ರಶಂಶಿಸಿ ಕನ್ನಡ ನುಡಿಯ ಉತ್ಕರ್ಷದ ಬಗ್ಗೆ ಅಮೋಘವಾದ ಸಲಹೆಗಳನ್ನು ಅಪ್ಪಣೆಕೊಡಿಸಿದ್ದಲ್ಲದೆ ಆ ಕಾಲಕ್ಕೆ **ಸಿರಿಗನ್ನಡಂ ಗೆಲ್ಗೆ** ಎಂಬ ಕನ್ನಡಿಗರ ಮೂಲಮಂತ್ರವನ್ನು ತಮ್ಮ ಪವಿತ್ರ ವಾಣಿಯಿಂದ ಉದ್ಘೋಷಿಸಿ ಸಮಸ್ತ ಕನ್ನಡಿಗರಲ್ಲಿಯೂ ನೂತನ ಚೈತನ್ಯವನ್ನುಂಟುಮಾಡಿದ್ದರು. ಇವರು ತಮ್ಮ ೩೮ ವರ್ಷಗಳ ಆಳಿಕೆಯಲ್ಲಿ ಮೈಸೂರು ಸಂಸ್ಥಾನವನ್ನು ಮಾದರಿಯ ಸಂಸ್ಥಾನವನ್ನಾಗಿ ಮಾಡಿ, ತಮ್ಮ ಪ್ರಜಾವಾತ್ಸಲ್ಯ, ಭೂತದಯೆ, ದೈವಭಕ್ತಿ, ಗಾಂಭೀರ್ಯ, ಸದಾಚಾರವರ್ತನೆ, ಪೂರ್ವಸಂಪ್ರದಾಯ ವಿಶ್ವಾಸ ಮೊದಲಾದ ಗುಣಗಳಿಂದ ರಾಜರ್ಷಿಗಳೆನ್ನಿಸಿಕೊಂಡಿದ್ದರು. ಇವರ ದೈವಭಕ್ತಿ ಅಸಾಧಾರಣವಾದುದೆಂಬುದನ್ನು ನಾನು ಕಾಶಿಯಲ್ಲಿ ಕಂಡಿದ್ದೇನೆ. ಇವರು ಕಾಶಿಯ ಹಿಂದೂವಿಶ್ವವಿದ್ಯಾನಿಲಯದ ಅಧ್ಯಕ್ಷ ಪದವಿಯನ್ನಲಂಕರಿಸಿದ್ದಾಗ ವರ್ಷಕ್ಕೆ ೨-೩ ಸಾರೆ ಕಾಶಿಗೆ ದಯಮಾಡಿಸುತ್ತಿದ್ದರು. ಆ ಕಾಲಕ್ಕೆ ಗಂಗಾಸ್ನಾನವನ್ನು ಮಾಡಿ ೨-೩ ಘಂಟೆಗಳವರೆಗೆ ಅಲ್ಲಿಯ ಹನುಮಾನ್‌ಘಾಟಿನಲ್ಲಿ ಅನುಷ್ಠಾನವನ್ನು ಮಾಡಲಿಕ್ಕೆ ಕುಳ್ಳಿರುತ್ತಿದ್ದರು. ಒಂದು ಸಾರೆ ಕಾಶಿಯಲ್ಲಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠದ ಜಂಗಮವಾಡಿಯ ಮಠಕ್ಕೆ ದಯಮಾಡಿಸಿದಾಗ ಪ್ರಭುಗಳ ಅಸಾಧಾರಣ ದೈವಭಕ್ತಿ ತೋರಿಬಂದಿತು. ಬೆಂಗಳೂರು ನಗರದಲ್ಲಿ ಪ್ರತಿಷ್ಠಿತವಾಗಿರುವ ನಮ್ಮ ಪರಿಷ್ಮಂದಿರವು ದಿವಂಗತ ಮಹಾರಾಜರವರ ಸಹಾಯದಿಂದಲೇ ಪ್ರಾರಂಭವಾಯಿತೆಂಬುದು ಕನ್ನಡಿಗರೆಲ್ಲರಿಗೆ ತಿಳಿದೇ ಇರುತ್ತದೆ. ಇಂತಹ ಜಗದ್ವಿಖ್ಯಾತರಾದ ಪ್ರಭುಗಳನ್ನು ಕಳೆದುಕೊಂಡುದು ನಮ್ಮ ಪರಿಷತ್ತಿನ ದೌರ್ಭಾಗ್ಯವೆಂದೇ ನಾನು ತಿಳಿಯುತ್ತೇನೆ. ಶ್ರೀಮನ್ಮಹಾರಾಜರವರ ಮತ್ತು ಯುವರಾಜರವರ ಆತ್ಮಗಳಿಗೆ ಭಗವಂತನು ಚಿರಶಾಂತಿಯನ್ನೀಯಲಿ.

ಆನಂದದ ಸಂಗತಿ

ಸುಖದ ಮೇಲೆ ದುಃಖವೂ, ದುಃಖದ ತರುವಾಯ ಸುಖವೂ ಮನುಷ್ಯನಿಗೆ ಬರುವುದು ಸ್ವಾಭಾವಿಕವಾಗಿರುತ್ತದಷ್ಟೆ. ಅಂತೆಯೇ ಕೃಷ್ಣಭೂಪಾಲರು ದಿವಂಗತರಾದ ವ್ಯಸನವಿರುವಾಗಲೇ ಶ್ರೀ ಜಯಚಾಮರಾಜೇಂದ್ರ ಒಡೆಯರವರಿಗೆ ಮೈಸೂರು ಸಿಂಹಾಸನದ ಪಟ್ಟಾಭಿಷೇಕವಾದುದು ಕನ್ನಡಿಗರೆಲ್ಲರಿಗೂ ಮಹದಾನಂದ ಸಂಗತಿ. ೧೯೩೯ರಲ್ಲಿ ವಸಂತ ಸಾಹಿತ್ಯೋತ್ಸವಕ್ಕೆ ದಯಮಾಡಿ ಕೆಲಕಾಲ ನಮ್ಮ ಪರಿಷತ್ತಿನ ಅಧ್ಯಕ್ಷರಾಗಿದ್ದು ಈಚೆಗೆ ಮಹಾಪೋಷಕರಾಗಿರುವ ತರುಣ ಮಹಾರಾಜರ ಆಳಿಕೆಯಲ್ಲಿ ಮೈಸೂರು ಸಂಸ್ಥಾನ ಹೆಚ್ಚು ದೇದೀಪ್ಯಮಾನವಾಗಲೆಂದೂ, ಕನ್ನಡ ನಾಡಿನ ಮತ್ತು ನುಡಿಯ ಉತ್ಕರ್ಷಕ್ಕೆ ಇತೋಪ್ಯತಿಶಯವಾದ ಸಹಾಯಸಂಪತ್ತಿಗಳು ಲಭಿಸುವಂತಾಗಲೆಂದೂ ಹಾರೈಸುತ್ತೇನೆ.

೩. ಕನ್ನಡ ಸಾಹಿತ್ಯ ಪರಿಷತ್ತು:- ಕನ್ನಡ ನಾಡು ಸರ್ವಾಂಗಸುಂದರವಾಗಬೇಕಾದರೆ ಆ ನಾಡಿನ ಆರ್ಥಿಕ ರಾಜಕೀಯ, ಐತಿಹಾಸಿಕ, ಸಾಹಿತ್ಯ ಭಾಷೆಗಳಲ್ಲಿ ಉತ್ಕರ್ಷ ಉಂಟಾಗಬೇಕಾಗಿರುತ್ತದೆ. ಆದುದರಿಂದಲೇ ಕನ್ನಡ ನಾಡಿನ ಅಭಿವೃದ್ಧಿಗೆ ಬೇಕಾದ ಕೆಲವು ಸಂಸ್ಥೆಗಳ ವಿಷಯವನ್ನು ಸಂಕ್ಷೇಪವಾಗಿ ನಾನು ಇಲ್ಲಿ ಹೇಳಿರುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತು ಇಪ್ಪತ್ತೈದು ವರ್ಷಗಳ ಕೆಳಗೆ ಕನ್ನಡ ಮಾತೆಯ ಪುತ್ರರಲ್ಲಿ ಹಿರಿಯರೂ, ಕೀರ್ತಿ ವಿದ್ಯಾಬುದ್ಧಿಗಳಲ್ಲಿ ಜಗದ್ವಿಖ್ಯಾತರೂ ಆಗಿರುವ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದಾಗ ಸ್ಥಾಪಿತವಾಯಿತು. ಇದರ ಬೆಳ್ಳಿಯ ಹಬ್ಬವೂ ಕೂಡ ಕಳೆದ ಜೂನ್ ತಿಂಗಳಿನಲ್ಲಿ ರಾಜವೈಭವದಿಂದ ನಡೆದದ್ದು ತಮಗೆಲ್ಲ ಗೊತ್ತೇ ಇರುತ್ತದೆ. ಈ ಸಂಸ್ಥೆಯು ಕಳೆದ ಇಪ್ಪತ್ತೈದು ವರ್ಷಗಳಿಂದ ಅವಿಚ್ಛಿನ್ನವಾಗಿ ಕನ್ನಡ ಸೇವೆಯನ್ನು ಮಾಡುತ್ತ ಬಂದಿರುತ್ತದೆ. ಬೇರೆ ಬೇರೆ ಸ್ಥಳಗಳಲ್ಲಿ ಸಾಹಿತ್ಯ ಸಮ್ಮೇಳಗಳನ್ನು ಕೂಡಿಸಿ ಕನ್ನಡಿಗರಲ್ಲಿ ವಿಶೇಷ ಜಾಗೃತಿಯನ್ನು ಹುಟ್ಟಿಸುತ್ತಲಿದೆ. ಇತ್ತೀಚೆಗೆ ವಸಂತ ಸಾಹಿತ್ಯೋತ್ಸವ, ಕಂಠಪಾಠ ಸ್ಪರ್ಧೆ, ಗಮಕ ಶಿಕ್ಷಣ, ಅಕ್ಷರ ಪ್ರಚಾರ, ಕನ್ನಡ ಸಾಹಿತ್ಯ ತರಗತಿಗಳು ಮತ್ತು ಪರೀಕ್ಷೆಗಳು ಮೊದಲಾದ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಪರಿಷತ್ತಿಗೆ ಆರ್ಥಿಕ ಸಹಾಯ

ಕರ್ನಾಟಕದಲ್ಲಿ ಕ್ರಮಬದ್ಧವಾಗಿ ನಡೆಯತಕ್ಕ ಸಂಸ್ಥೆಗಳಲ್ಲಿ ಇದು ಮಿಗಿಲಾಗಿರುತ್ತದೆ. ಇದಕ್ಕೆ ಮೈಸೂರಿನ ಶ್ರೀಮನ್ಮಹಾಜರವರು ಮಹಾಪೋಷಕರು. ಮೈಸೂರ ಅರಮನೆಯ ಮತ್ತು ಸರಕಾರದ ಸಹಾಯದಿಂದಲೂ ಇತರ ಕನ್ನಡದ ಅಭಿಮಾನಿಗಳ ಸಹಾಯದಿಂದಲೂ ೩೫.೦೦೦ ರೂ. ಗಳನ್ನು ಖರ್ಚುಮಾಡಿ ಕಟ್ಟಿಸಿದ ಸುಂದರವಾದ ಒಂದು ಮಂದಿರ ಬೆಂಗಳೂರಿನಲ್ಲಿ ಇದಕ್ಕೆ ಇರುತ್ತದೆ. ಈ ಸಂಸ್ಥೆಗೆ ಮೈಸೂರು ಸರಕಾರದವರು ಪ್ರತಿವರ್ಷವೂ ೩,೦೦೦ ರೂ.ಗಳ ಸಹಾಯ ದ್ರವ್ಯವನ್ನು ದಯಪಾಲಿಸುತ್ತಿದ್ದಾರೆ. ಇದರ ಬಗ್ಗೆ ಪ್ರಖ್ಯಾತ ಮಂತ್ರಿವರ್ಯರಾದ ಸರ್. ಮಿರ್ಜಾ ಇಸ್ಮಾಯಿಲ್ ಅವರಿಗೂ ಮೈಸೂರ ಸರ್ಕಾರಕ್ಕೂ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಅಲ್ಪವೇ ಸರಿ.

ಕಳೆದ ಕಾಲು ಶತಮಾನದಿಂದ ಅನೇಕ ಕನ್ನಡ ನಾಡಿನ ಹಿರಿಯರು ಅವಿಚ್ಛಿನ್ನವಾಗಿ ದುಡಿದು ಈ ಸಂಸ್ಥೆಯನ್ನು ಇಷ್ಟರಮಟ್ಟಿಗೆ ಉನ್ನತಸ್ಥಿತಿಗೆ ತಂದಿರುತ್ತಾರೆ. ಆದರೆ ನಮ್ಮ ಪರಿಷತ್ತಿನ ಕಾರ್ಯ ಇಷ್ಟಕ್ಕೆ ಮುಗಿದಿರುವುದಿಲ್ಲ. ಇನ್ನೂ ಅನಂತ ವಿಧಾಯಕ ಕಾರ್ಯಗಳು ಅದರ ಮುಂದಿರುತ್ತವೆ. ಅದರ ಗುರಿಯನ್ನು ಅದು ಮುಟ್ಟಬೇಕಾದರೆ ಪರಿಷತ್ತಿಗೆ ಪ್ರಚಂಡವಾದ ಜನ ಧನ ಬೆಂಬಲ ಬೇಕು ; ಅಖಿಲ ಕನ್ನಡ ನಾಡಿನ ಮಹಾಜನಗಳೆಲ್ಲ ಪರಿಷತ್ತಿಗೆ ಸಭಾಸದರಾಗಿಯೂ ಪೋಷಕರಾಗಿಯೂ ಸೇರಿ ಸಹಾಯಮಾಡುತ್ತಾ ಬಂದರೆ ಪರಿಷತ್ತಿನ ಶಕ್ತಿ ಬೆಳೆಯುವುದು. ೧ ಕೋಟಿ ಕನ್ನಡಿಗರಿರುವ ಕನ್ನಡ ಪ್ರಾಂತದಲ್ಲಿ ಪರಿಷತ್ತಿಗೆ ಸುಮಾರು ಅದು ನೂರು ಸದಸ್ಯರು ಇರುವುದು ಕನ್ನಡಿಗರಿಗೆ ಲಜ್ಜಾಸ್ಪದವಾದುದೇ ಸರಿ. ಪರಿಷತ್ತಿನ ಸಭಾಸದರ ಸಂಖ್ಯೆ ಕನಿಷ್ಠ ಪಕ್ಷ ಸಾವಿರ ಆದರೆ ಹೆಚ್ಚಿನ ಕಾರ್ಯಗಳು ಸಹಜವಾಗಿ ಆಗುವುದರಲ್ಲಿ ಸಂದೇಹವಿಲ್ಲ. ಕೇವಲ ಮೈಸೂರು ಸರ್ಕಾರದವರ ಸಹಾಯವನ್ನು ಅವಲಂಬಿಸಿ ಕುಳಿತಿರುವುದು ಭೂಷಣವಲ್ಲ. ಅಖಿಲ ಕರ್ನಾಟಕ ಪ್ರಾತಿನಿಧ್ಯದಿಂದ ಕೂಡಿದ ಪರಿಷತ್ತಿಗೆ ಜಿಲ್ಲಾ ಮತ್ತು ತಾಲ್ಲೂಕು ಸಂಘಗಳಿರುವುದು ಭೂಷಣ. ನಮ್ಮ ದೇಶದ ಹಳ್ಳಿಹಳ್ಳಿಗಳಲ್ಲಿಯೂ ಪರಿಷತ್ತಿನ ಪ್ರಚಾರವಾಗಬೇಕು. ಸಾಹಿತ್ಯ ಪರಿಷತ್ತು ಎಂದರೆ ಏನೆಂಬುದು ಇನ್ನೂ ಅನೇಕರಿಗೆ ಗೊತ್ತಿರಲಾರದು.

ಈ ವರ್ಷ ಮಾತ್ರ ಪರಿಷತ್ತಿಗೆ ಕೆಲವರು ಮಹನೀಯರು ಮುಕ್ತಹಸ್ತದಿಂದ ದಾನವನ್ನು ಮಾಡಿರುತ್ತಾರೆ. ಅವರ ಹೆಸರುಗಳನ್ನು ಹೇಳಲಿಕ್ಕೆ ನನಗೆ ಅತ್ಯಂತ ಸಂತೋಷವಾಗುತ್ತಲಿದೆ. ಅನೇಕ ಸಾರ್ವಜನಿಕ ಕಾರ್ಯಗಳಿಗೆ ೧೦-೧೫ ಲಕ್ಷ ರೂ.ಗಳನ್ನು ದಾನ ಮಾಡಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘ ರಾಜೇಂದ್ರ ಸ್ವಾಮಿಗಳವರಿಂದ ೫೦೧ ರೂ.ಗಳನ್ನೂ, ಗದುಗಿನ ನಿವೃತ್ತ ಸೆಷನ್ಸ್ ಜಡ್ಜಿಗಳಾದ ಶ್ರೀಮಾನ್ ಆನಂತರಾವ್ ಕೃಷ್ಣರಾವ್ ಆಸುಂಡಿ ಅವರ ಗಮಕಲೆಯ ಶಿಕ್ಷಣ, ಹರಿದಾಸ ವಾಙ್ಮಯದ ಕಾರ್ಯಗಳಿಗೆ ೩ ಸಾವಿರ ರೂ. ಗಳನ್ನೂ ಪರಿಷತ್ತಿಗೆ ಕೊಟ್ಟಿರುತ್ತಾರೆ. ಕನ್ನಡ ನಾಡಿನ ಕೊಡುಗೈ ದೊರೆಗಳಲ್ಲಿ ಮೇಲಾದವರೂ, ಅನೇಕ ಸಂಸ್ಥೆಗಳಿಗೆ ಲಕ್ಷಾಂತರ ರೂಪಾಯಿಗಳನ್ನು ದಾನಮಾಡಿ ಕೀರ್ತಿಯನ್ನು ಪಡೆದಿರುವವರೂ ಆದ ದಾನವೀರ ಶ್ರೀಮಾನ್ ಒಂಟಮುರಿಯ ಯಜಮಾನರಾದ ರಾಜಾ ಲಖಮಗೌಡಾ ಸರದೇಸಾಯಿ ಇವರು ೫೦೦ ರೂಪಾಯಿಗಳನ್ನು ಕೊಟ್ಟಿರುವರಲ್ಲದೆ ಪ್ರತಿವರ್ಷ ತಮ್ಮ ಸಂಸ್ಥಾನದಿಂದ ಪರಿಷತ್ತಿಗೆ ೨೦ ರೂ. ವರ್ಗಣಿಯನ್ನು ಕೊಡಲು ಒಪ್ಪಿರುತ್ತಾರೆ. ಈ ಮೂರು ಜನ ಮಹನೀಯರನ್ನು ಹೃತ್ಪೂರ್ವಕ ಅಭಿನಂದಿಸುತ್ತೇನೆ. ಉಳಿದ ಕನ್ನಡ ನಾಡಿನ ಬಂಧುಗಳೂ ಇವರ ಅನುಕರಣವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ನಮ್ಮ ಬಡವೆಯಾದ ತಾಯಿಗೆ ಎಲ್ಲರೂ ಕಾಣಿಕೆಯನ್ನು ಆರ್ಪಿಸಬೇಕು.

ಬಿ.ಎಂ.ಶ್ರೀ ಅವರ ಸೇವೆ

ಪರಿಷತ್ತಿನ ಈಗಿನ ಉಪಾಧ್ಯಕ್ಷರಾಗಿರುವ ರಾಜಸೇವಾಸಕ್ತ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ. ಬಿ.ಎಲ್. ಅವರು ಉಪಾಧ್ಯಕ್ಷರಾದ ಅಂದಿನಿಂದ ಪರಿಷತ್ತಿನ ಕಾರ್ಯಗಳನ್ನು ಬಹುಮಟ್ಟಿಗೆ ಮುಂದುವರಿಸುತ್ತಿರುವರು. ಈ ಮಹನೀಯರು ಗಮಕಕಲೆಗಾಗಿ ೧೦೦೦ ರೂ.ಗಳನ್ನೂ, ಪರಿಷತ್ತಿನ ಅಚ್ಚುಕೂಟಕ್ಕಾಗಿ ಹೋದ ವರ್ಷವೇ ೫ ಸಾವಿರ ರೂ.ಗಳನ್ನೂ, ಈ ವರ್ಷ ೧ ಸಾವಿರವನ್ನೂ ಕೊಟ್ಟಿರುತ್ತಾರೆ. ದುಡ್ಡು ಕೊಟ್ಟವರು ಕಾರ್ಯಮಾಡುವುದು ಕಡಿಮೆ. ಕಾರ್ಯ ಮಾಡತಕ್ಕವರಲ್ಲಿ ದುಡ್ಡು ಕೊಡುವವರು ವಿರಳ. ಆದರೆ ಈ ಮಹನೀಯರಿಗೆ ಈ ಎರಡೂ ಗುಣಗಳು ಸಾಧಿಸಿರುವುದರಿಂದ ಕನ್ನಡ ನಾಡೇ ಇವರಿಗೆ ಋಣಿಯಾಗಿ ಇರುತ್ತದೆ. ಇವರ ಪಾಂಡಿತ್ಯವನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ. ಇಂತಹ ಮಹನಿಯರು ನಮ್ಮ ಪರಿಷತ್ತಿಗೆ ಉಪಾಧ್ಯಕ್ಷರಾಗಿ ದೊರೆತದ್ದು ಪರಿಷತ್ತಿನ ಮಹಾಭಾಗ್ಯವೆಂದು ನಾನು ತಿಳಿಯುತ್ತೇನೆ. 'ಶ್ರೀ'ಯವರಿಗೆ ಆಯುರಾರೋಗ್ಯಗಳು ಲಭಿಸಿ ಅವರಿಂದ ಇನ್ನೂ ಹೆಚ್ಚಿನ ಸೇವೆ ನಡೆಯುವಂತೆ ಅನುಗ್ರಹಿಸಿಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. 'ಶ್ರೀ'ಯವರು ನಮ್ಮ ಕನ್ನಡ ನಾಡಿನ ಸ್ವತ್ತಾಗಿರುತ್ತಾರೆ. ಕನ್ನಡಿಗರು ಆ ಸ್ವತ್ತನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲೆಂದು ಹಾರೈಸುತ್ತೇನೆ.

ಶಿಸ್ತು ಸಂಘಟನೆ

ಸಾಹಿತ್ಯ ಪರಿಷತ್ತಿನ ವಿಧೇಯಕ ಕಾರ್ಯಕ್ರಮಗಳನ್ನು ಮಾಡಬೇಕಾದರೆ ಪರಿಷತ್ತಿನ ಸದಸ್ಯರಲ್ಲಿ ಶಿಸ್ತು ಮತ್ತು ಸಂಘಟನೆ ಅತ್ಯಾವಶ್ಯಕವಾದುದು. ಹಾಗಾದರೇನೇ ಅದರ ಕಾರ್ಯಗಳು ಯಶಸ್ವಿಯಾಗಿ ನಡೆಯುವುವು. ಪ್ರತಿಯೊಂದು ಸಂಸ್ಥೆಗೂ ಶಿಸ್ತಿನ ಆವಶ್ಯಕತೆ ಬೇಕು. ಭರತಖಂಡದ ರಾಷ್ಟ್ರೀಯ ಮಹಾಸಭೆ ಶಿಸ್ತು ಮತ್ತು ಸಂಘಟನೆಗಳಿಂದ ೫೩ ವರ್ಷಗಳವರೆಗೆ ನಡೆದುಕೊಂಡು ಬಂದುದರಿಂದಲೇ ಅದರ ಕೀರ್ತಿ ಜಗತ್ತಿನಲ್ಲಿ ಹಬ್ಬಿ ತಲೆಯೆತ್ತಿ ಮೆರೆಯುತ್ತಲಿರುವುದು. ಆ ಸಂಸ್ಥೆಯಲ್ಲಿ ಶಿಸ್ತು ಭಂಗಮಾಡಿದಂತಹ ಮಹಾನ್ ಮಹಾನ್ ಪ್ರಭೃತಿಗಳು ಆ ಸಂಸ್ಥೆಯಿಂದ ದೂರ ಸರಿಯಬೇಕಾಯಿತು. ಶಿಸ್ತಿನ ಸಲುವಾಗಿಯೇ ಮಹಾತ್ಮಾಜಿಯವರು ಅದ್ಭುತ ಪ್ರಯತ್ನವನ್ನು ಮಾಡುತ್ತಿರುವರು. ಸಾಹಿತ್ಯ ಪರಿಷತ್ತಿನಲ್ಲಿಯೂ ಶಿಸ್ತು ಸಂಘಟನೆಗಳಿದ್ದರೆ ಅದರ ಗೌರವ ಕರ್ನಾಟಕದ ತುಂಬ ಬೆಳೆಯುವುದು. ಸದಸ್ಯರೆಲ್ಲರೂ ಸುಸಜ್ಜಿತವಾದ ಕನ್ನಡದ ಪಡೆಯಾಗಬೇಕಾಗಿದೆ. ನಾಯಕರಿಗೆ ಗೌರವ ಕೊಡಬೇಕಾಗಿದೆ.

ಕನ್ನಡ ಭಾಷೆಯ ಏಕೀಕರಣ

ಅನೇಕ ಸಲ ಸಾಮ್ರಾಜ್ಯಗಳನ್ನು ಕಟ್ಟಿ ಭಾರತದಲ್ಲಿ ಬಹುದಿನಗಳವರೆಗೆ ತಲೆಯೆತ್ತಿ ಮೆರೆದ ಕನ್ನಡ ನಾಡು ರಾಜಕೀಯ ವಿಪತ್ತಿಗೆ ಗುರಿಯಾಗಿ ಮದ್ರಾಸಿನ ಗೌರ್ವನರಾಗಿದ್ದ ಸರ್. ಥಾಮಸ್ ಮನ್ರೋವಿನ ಕಾಲಕ್ಕೆ ಹರಿದು ಹಂಚಿಹೋಗಿ ಅನೇಕ ಸರಕಾರಗಳಲ್ಲಿ ಕೂಡಿತು. ಇದೇ ಕರ್ನಾಟಕದ ಅವನತಿಗೆ ಮೂಲ. ಅಂದಿನಿಂದಲೇ ನಮ್ಮ ಭಾಷೆ ಕೆಟ್ಟಿತು. ಇಂದಿಗೂ ಆ ಹಾನಿ ತುಂಬದಾಗಿರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ಭಾಷೆಯ ಏಕೀಕರಣದ ಸಲುವಾಗಿ ಬಹಳ ಪ್ರಯತ್ನ ಮಾಡುತ್ತಿದ್ದರೂ ಸಾಕಷ್ಟು ಕಾರ್ಯವಾಗಿರುವುದಿಲ್ಲ. ವರ್ತಮಾನ ಪತ್ರಗಳ ಸ್ಥಿತಿ ಪೂರಾ ಕೆಟ್ಟುಹೋಗಿರುವುದು. ಗ್ರಂಥಕಾರರ ಅವಸ್ಥೆಯಾದರೂ ಹಾಗೆಯೇ ಆಗಿರುತ್ತದೆ.

❖❖

೨೬ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎ.ಆರ್. ಕೃಷ್ಣಶಾಸ್ತ್ರಿ



ಕನ್ನಡದ ಸೇನಾನಿ ಎನಿಸಿ ಹೊಸಗನ್ನಡದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾಗಿ, ಪ್ರಬುದ್ಧ ಕರ್ನಾಟಕದ ಸ್ಥಾಪಕರಾಗಿ, ಪತ್ರಿಕಾ ಇತಿಹಾಸದಲ್ಲಿ ವಿಕ್ರಮ ಸಾಧಿಸಿದ ಎ.ಆರ್. ಕೃಷ್ಣಶಾಸ್ತ್ರಿಗಳು ೧೨-೦೨-೧೮೯೦ ಮೈಸೂರಿನಲ್ಲಿ ಅಂಬಳೆ ರಾಮಕೃಷ್ಣಶಾಸ್ತ್ರಿ-ವೆಂಕಮ್ಮ ದಂಪತಿಗಳಿಗೆ ಜನಿಸಿದರು. ತಂದೆಯಿಂದಲೇ ಬಾಲ್ಯದಲ್ಲಿ ಸಂಸ್ಕೃತ ವ್ಯಾಸಂಗ ಮಾಡಿದ ಶಾಸ್ತ್ರಿಗಳು ವೆಸ್ಲಿಯನ್ ಪ್ರೌಢಶಾಲೆಯಲ್ಲಿ ಶಿಕ್ಷಣ ಮುಗಿದ ಮೇಲೆ ೧೯೧೩ರಲ್ಲಿ ಬಿ.ಎ. ಪದವಿ ಗಳಿಸಿ ೧೯೧೫ರಲ್ಲಿ ಮದರಾಸಿನಲ್ಲಿ ಕನ್ನಡ ಎಂ.ಎ. ಮಾಡಿದರು.

ಪ್ರಾರಂಭದಲ್ಲಿ ಡೆಪ್ಯೂಟಿ ಕಮೀಷನರ್ ಆಫೀಸಿನಲ್ಲಿ ಅನಂತರ ಓರಿಯಂಟಲ್ ಲೈಬ್ರರಿಯಲ್ಲಿ ಕೆಲಸ ಮಾಡಿದ ಮೆಲೆ ೧೯೧೬ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ೧೯೩೯ರಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ೧೯೪೬ರಲ್ಲಿ ನಿವೃತ್ತರಾದರು. ಅನಂತರ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪರಿಷತ್ಪತ್ರಿಕೆ ಮತ್ತು ನಿಘಂಟು ಸಂಪಾದಕರೂ, ಅಧ್ಯಕ್ಷರಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ. ಪರಿಷತ್ತಿನಲ್ಲಿ ತಮ್ಮ ತಾಯಿಯ ಹೆಸರಿನಲ್ಲಿ ದತ್ತಿನಿಧಿ ಇಟ್ಟಿದ್ದಾರೆ. ೧೯೧೮ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಸಂಘ ಸ್ಥಾಪಿಸಿದರು. ಪ್ರಬುದ್ಧ ಕರ್ನಾಟಕ ಸಂಪಾದಕರಾದರು. ೧೯೪೨-೧೯೪೫ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಪ್ರಕಾಶನ ಸಮಿತಿ ಅಧ್ಯಕ್ಷರಾಗಿ ದುಡಿದರು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಸಮಿತಿಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದರು.

ಎ.ಆರ್. ಕೃಷ್ಣಶಾಸ್ತ್ರಿಗಳು ನಿಷ್ಕಾಮ ಕನ್ನಡ ಸೇವೆ ಮಾಡಿದ ಮಹನೀಯರು. ಯಾವ ಪ್ರಶಸ್ತಿ ಅಧಿಕಾರ ಸ್ಥಾನವನ್ನು ಎಂದೂ ನಿರೀಕ್ಷಿಸಲಿಲ್ಲ. ಆದರೂ ಕೆಲವು ಪ್ರಶಸ್ತಿ, ಗೌರವಗಳು ಇವರಿಗೆ ಸಂದಿವೆ. ೧೯೬೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ದೊರೆತಿದೆ. ಇವರ ಬಂಕಿಂಚಂದ್ರ ಕೃತಿಗೆ ೧೯೬೧ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ೧೯೪೧ರಲ್ಲಿ ಹೈದರಾಬಾದಿನಲ್ಲಿ ನಡೆದ ೨೬ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಜನತೆ ಆರಿಸಿತು. ೧೯೫೬ರಲ್ಲಿ ಅವರ ಸೇವೆಗೆ ಕೃತಜ್ಞತೆಯ ಕುರುಹಾಗಿ ಅಭಿವಂದನಾ ಗ್ರಂಥ ಸಮರ್ಪಣೆ ಮಾಡಿದರು.

ವಚನ ಭಾರತದಂಥ ಸರ್ವಜನಪ್ರಿಯ ಗ್ರಂಥ ಬರೆದ ಎ.ಆರ್. ಕೃ. ಬರೆದ ಗ್ರಂಥಗಳು ಕೆಲವೇ ಆದರೂ ಅವೆಲ್ಲಾ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ. ಆ ಪೈಕಿ ಕೆಲವು ಗ್ರಂಥಗಳು:

ಹರಿಶ್ಚಂದ್ರಕಾವ್ಯ ಸಂಗ್ರಹ	ವಚನ ಭಾರತ
ನಾಗಮಹಾಶಯ (ಅನುವಾದ)	ನಿಬಂಧಮಾಲಾ (ಅನುವಾದ)
ಭಾಷಣಗಳು ಮತ್ತು ಲೇಖನಗಳು (ಬಿಡಿವಿಚಾರಗಳು)	ಬಂಕಿಮಚಂದ್ರ
ಶ್ರೀ ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ	ಕನ್ನಡ ಕೈಪಿಡಿ (ಭಾಗ-೧)
ನಯಸೇನನ ಧರ್ಮಾಮೃತ ಇತ್ಯಾದಿ	

ಶಾಸ್ತ್ರಿಗಳು ದಿನಾಂಕ ೧-೨-೧೯೬೮ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ–೨೬
ಅಧ್ಯಕ್ಷರು, ಎ.ಆರ್. ಕೃಷ್ಣಶಾಸ್ತ್ರಿ
ದಿನಾಂಕ ೨೭, ೨೮, ೨೯ ಡಿಸೆಂಬರ್ ೧೯೪೧
ಸ್ಥಳ : ಹೈದರಾಬಾದ್

ಹೈದರಬಾದ್ ಹಿರಿಮೆ

ಹೈದರಾಬಾದು ಪ್ರಾಂತ ಕನ್ನಡಿಗರಿಗೆ ಹೆಮ್ಮೆಯ ಪ್ರಾಂತ; ಕನ್ನಡ ಸಾಹಿತ್ಯ ಗಂಗೆಯ ಗಂಗೋತ್ರಿ; ತಿರುಳ್ಗನ್ನಡದ ಕನ್ನಡಿ; ಕಲಾರತ್ನಗಳ ಖನಿ; ಭಕ್ತ ಶಿರೋಮಣಿಗಳ ತವರುಮನೆ. ಈ ಪ್ರಾಂತದ ರಾಜಧಾನಿಯಾದ ಭಾಗ್ಯನಗರದಲ್ಲಿ ಸಮ್ಮೇಳನ ಸೇರಿರುವುದು ಕನ್ನಡಿಗರ ಅಪೂರ್ವಭಾಗ್ಯವೆಂದು ನಾನು ಎಣಿಸುತ್ತೇನೆ. ಈ ಭಾಗ್ಯವು ಸಾಧ್ಯವಾಗಿ ಹೈದರಾಬಾದಿನ ಕರ್ಣಾಟಕದವರೂ ಮೈಸೂರಿನ ಕರ್ಣಾಟಕದವರೂ ಅಣ್ಣತಮ್ಮಂದಿರು ಅಕ್ಕತಂಗಿಯರು ಎಂಬ ಭಾವನೆ ಬರುವುದಕ್ಕೆ ಕಾರಣ ಕನ್ನಡ ಸಾಹಿತ್ಯ ಪರಿಷತ್ತು.

ಕನ್ನಡ ಪ್ರಾಂತಾಭಿಮಾನ

ಕನ್ನಡಿಗರಲ್ಲಿ ಎಷ್ಟು ಒಗ್ಗಟ್ಟೂ, ಒಂದೆಂಬ ಭಾವನೆ, ಇರಬೇಕೋ ಅಷ್ಟೂ ಇಂದು ಇಲ್ಲದಿದ್ದರೂ ಅದು ಇರುವಷ್ಟು ಮಟ್ಟಿಗಾದರೂ ಹುಟ್ಟು ಬೆಳೆದಿರುವುದು ಸಾಹಿತ್ಯ ಪರಿಷತ್ತಿನಿಂದ; ಅದನ್ನು ಕರೆದು ಹೀಗೆ ಸಮ್ಮೇಳನಗಳನ್ನು ಕೂಡಿಸಲು ಸಾಧ್ಯವಾಗಿರುವುದು ಕನ್ನಡದ ಅಭಿಮಾನಿಗಳಿಂದ. ಮೈಸೂರಿನವರು, ಧಾರವಾಡದವರು, ಮಂಗಳೂರಿನವರು, ಹೈದರಾಬಾದಿನವರು, ಕೊಡಗಿನರು ಎನ್ನುವುದಕ್ಕಿಂತ 'ಕನ್ನಡಿಗರು' ಎನ್ನುವುದು ಶ್ರೇಯಸ್ಸು. ಕನ್ನಡಿಗರು, ಮರಾಠಿಗರು, ತೆಲುಗರು, ತಮಿಳರು ಎನ್ನುವುದಕ್ಕಿಂತ ಭಾರತೀಯರು ಎನ್ನುವುದು ಮತ್ತೂ ಶ್ರೇಯಸ್ಸು, ಭಾರತೀಯರು, ಇಂಗ್ಲಿಷರು, ಅಮೇರಿಕನರು, ಆಫ್ರಿಕನರು ಎನ್ನುವುದಕ್ಕಿಂತ ನಾವೆಲ್ಲ ಈ ಭೂಮಿ ತಾಯಿಯ ಮಕ್ಕಳು ಎನ್ನುವುದು–ವಿಶ್ವಭಾವನೆಯು–ಸರ್ವೋತ್ತಮ. ಹೀಗೆಂದು ಪ್ರತಿಯೊಬ್ಬ ವ್ಯಕ್ತಿಯೂ ವಿಶ್ವಪ್ರಜೆಯಾಗಿ ಕೆಲಸ ಮಾಡುವುದಕ್ಕಾಗುತ್ತದೆಯೇ ? ಪ್ರಪಂಚವನ್ನೇ ಉದ್ಧಾರಮಾಡುತ್ತೇನೆಂದು ಹೊರಡುವುದಕ್ಕಿಂತ ಹೆಚ್ಚಿನ ಅವಿವೇಕ ಇನ್ನೊಂದಿಲ್ಲ. "ತಾನುಂಟೋ ಮೂರು ಲೋಕವುಂಟೋ!"ಎನ್ನುವುದು ಒಂದು ವಿಧದಲ್ಲಿ ನಿಜ. ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳಬೇಕು; ಆ ಮೇಲೆ ತನ್ನವರು, ತನ್ನ ನಾಡು, ತನ್ನ ಲೋಕ. ಉದ್ಧಾರ ಕಾರ್ಯವು ದಾನದಂತೆ ತನ್ನಿಂದಲೇ ಆರಂಭವಾಗಬೇಕು; ಆದರೆ ತನ್ನಲ್ಲಿಯೇ ನಿಲ್ಲಬಾರದು, ಮುಗಿಯಬಾರದು. ತಾನು ವಿದ್ಯಾವಂತನಾದರೆ, ಐಶ್ವರ್ಯವಂತನಾದರೆ, ಮತ್ತೊಬ್ಬನಿಗೆ ಹೇಳಿಕೊಡಬಹುದು. ಹಣಕೊಡಬಹುದು. ಅಂಥ ವ್ಯಕ್ತಿಗಳು ಒಂದು ಸಾವಿರ ಜನವಾದರೆ ದೇಶ ತಾನೇ ಮೇಲಕ್ಕೆ ಏಳುತ್ತದೆ, ಮುಂದಕ್ಕೆ ಬರುತ್ತದೆ ಹಾಗಲ್ಲದೆ ದೇಶವನ್ನು ಉದ್ಧಾರಮಾಡುತ್ತೇನೆಂದು ಯಾರಾದರೂ ತನ್ನನ್ನೂ ತನ್ನ ತಾಯಿ ತಂದೆ ಹೆಂಡತಿ ಮಕ್ಕಳನ್ನೂ ಅಲಕ್ಷ್ಯಮಾಡಿದರೆ ಅದು ದೇಶೋದ್ಧಾರವಲ್ಲ; ಕ್ಷೇಮವೇ. ಹೀಗೆ ಕನ್ನಡಿಗರಾಗಲಿ, ಆಂಧ್ರರಾಗಲಿ, ತಮಿಳರಾಗಲಿ, ತನ್ನ ನಾಡಿನ ಅಭಿಮಾನದಿಂದ ಅದನ್ನು ಪುಷ್ಟಿಗೊಳಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟರೆ ಅದು ಸ್ವಾಭಾವಿಕವೂ ನ್ಯಾಯವೂ ಆಗಿರುವುದಲ್ಲದೆ, ಒಟ್ಟು ದೇಶಕ್ಕೂ ಕ್ಷೇಮವೇ.

ಭಾಷಾವಾರು ಪ್ರಾಂತ ವಿಭಾಗವಾಗಲಿ

ಮುಂದೆ ಭರತಖಂಡವನ್ನು ಪ್ರಗತಿದೃಷ್ಟಿಯಿಂದ ಸಂಘಟನೆಗೊಳಿಸುವಾಗ ವಿಭಾಗಗಳು ಹೇಗಿರಬೇಕೆಂದು ರಾಜತಂತ್ರಜ್ಞರು ಯೋಚಿಸುತ್ತಿದ್ದಾರೆ. ಅದನ್ನು ಚರ್ಚಿಸುವುದು ಸಾಹಿತ್ಯ ಸಮ್ಮೇಳನದ ಅಥವಾ ಅದರ ಅಧ್ಯಕ್ಷನ ಕೆಲಸವಲ್ಲ. ಆದರೆ ನಮಗೆಲ್ಲ ಪ್ರಕೃತವಾದ ಅಂಶವೇನೆಂದರೆ, ಈ ವಿಭಾಗ ಕ್ರಮದಲ್ಲಿ ಬಹುತರವಾದ ಒಪ್ಪಿಗೆಯನ್ನು ಪಡೆದಿರುವುದು ಭಾಷಾನುಸಾರಿಯಾದ ಪ್ರಾಂತವಿಭಾಗ. ಇದನ್ನು ಸಾಧಿಸಲು ದಕ್ಷಿಣ ದೇಶದಲ್ಲಿ ನಮ್ಮ ಸೋದರರಾದ ಆಂಧ್ರರು ಮುನ್ನುಗ್ಗಿದರು. ಅವರ ಕೂಗು ಕಡಲನ್ನೂ ದಾಟಿ ಹೋಗಿ ಇನ್ನೇನು ಕೈಗೂಡಿತೆನ್ನುವಂತಾಯಿತು. ಅವರ ನೆರೆಯಲ್ಲಿ ನಾವು ಅವರಂತೆ ಒಂದು ಕನ್ನಡ ನಾಡನ್ನು ಕಟ್ಟಿಕೊಳ್ಳಬಹುದೆಂದು ಯೋಚಿಸಿದೆವು. ಕನ್ನಡ ಸಾಹಿತ್ಯ ಪರಿಷತ್ತು ಈ ಕನಸನ್ನು ತನ್ನ ಧ್ವಜ ಚಿನ್ನೆಯಾಗಿ ಮಾಡಿ ಎತ್ತಿ ಹಿಡಿಯಿತು. ಆದರೆ ಅಷ್ಟರಲ್ಲಿ ವಿಶ್ವಗ್ರಾಸಿಯಾದ ಎರಡನೆಯ ಮಹಾಸಂಗ್ರಾಮವು ಆರಂಭವಾಗಿ

ಎಲ್ಲಿಯದು ಅಲ್ಲಿಯೇ ಉಳಿಯಿತು. ಈ ಯುದ್ಧವು ಬೇಗ ಮುಗಿದು, ಬ್ರಿಟಿಷರಿಗೆ ಜಯವಾಗಿ, ನಮ್ಮ ನಾಡು ನನ್ನ ಆಶೆಯನ್ನು ನೆರವೇರಿಸಿಕೊಳ್ಳುವ ಕಾಲ ಬರಲಿ!

ತಾಯಿನುಡಿಯ ಅಭಿಮಾನ

ಸಾಹಿತ್ಯ ಪರಿಷತ್ತು ಈ ಭಾವನೆಯನ್ನು ನಮ್ಮಲ್ಲಿ ಉಂಟುಮಾಡಲು ಬಹುವಾಗಿ ಕೆಲಸಮಾಡಿದೆ ಎಂದು ಆಗಲೆ ಹೇಳಿದೆ. ಅದರ ಸ್ಥಾಪಕರ ಉದ್ದೇಶವೇ ಇದಾಗಿತ್ತು. ಆದರೆ ಕನ್ನಡಿಗರಲ್ಲಿ ಕಾವು ಏರದು; ಅವರು ಕದಳೀಗರ್ಭ-ಶ್ಯಾಮರೂ ಹೌದು,-ಶೀತರೂ ಹೌದು. ಈ ಸಂದರ್ಭದಲ್ಲಿ ನನಗೆ ಪದೇ ಪದೇ ಒಂದು ಸಂಗತಿ ನೆನಪಿಗೆ ಬರುತ್ತದೆ. ಅದೇನೆಂದರೆ: ಪರಿಷತ್ತು ಸ್ಥಾಪಿತವಾದ ವರ್ಷ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀಮಾನ್ ಎಚ್.ವಿ. ನಂಜುಂಡಯ್ಯನವರು ಸಮ್ಮೇಳನ ಮುಗಿದಮೇಲೆ ಅಲ್ಲಿ ಸೇರಿದ್ದ ಸದಸ್ಯರನ್ನು ಕುರಿತು "ನಿಮಗೆ ಕನ್ನಡ ಬೇಕೆ ಸಂಸ್ಕೃತ ಬೇಕೆ?" ಎಂದು ಕೇಳಿದರು. ಆಗ ಪ್ರತಿಯೊಬ್ಬರೂ ಸಂಸ್ಕೃತಬೇಕೆಂದರು ಇಲ್ಲವೆ, ಎರಡೂ ಬೇಕೆಂದರು; ಕನ್ನಡ ಬೇಕು ಎಂದು ಯಾರೂ ನಿಷ್ಕೃಷ್ಟವಾಗಿ ಮತನಾಡಲಿಲ್ಲ. ಇದನ್ನೆಲ್ಲಾ ಶಾಂತವಾಗಿ ಕೇಳುತ್ತಿದ್ದು ಅಧ್ಯಕ್ಷರು ಕೊನೆಗೆ ಎದ್ದುನಿಂತು "ಇದು ಕರ್ಣಾಟಕ ಸಾಹಿತ್ಯ ಪರಿಷತ್ತು; ನೀವೆಲ್ಲಾ ಅದರ ಸದಸ್ಯರು ಆದರೆ ಯಾರೊಬ್ಬರೂ ಕನ್ನಡ ಬೇಕೆಂದು ಧಾರಾಳವಾಗಿ ಹೇಳಲಿಲ್ಲ. ಇದು ಆಶ್ಚರ್ಯ!" ಎಂದರು. ಆ ಮಾತನ್ನು ಕೇಳಿ ಅನೇಕರು ತಲೆತಗ್ಗಿಸಿಕೊಂಡರು. ಆದರೂ ಅವರಲ್ಲಿ ಸಂಸ್ಕೃತದ ಅಭಿಮಾನ ಎಷ್ಟುಮಟ್ಟಿಗಿತ್ತೆಂದರೆ, ತಗ್ಗಿದ ತಲೆ. "ಮುಟ್ಟಿದರೆ ಮುನಿಯ" ಗಿಡದಂತೆ ಬಹು ಬೇಗ ಎದ್ದಿತು; ಶೂಲದಂತೆ ಇರಿಯ ಬೇಕಾದ ಮಾತು ಮರೆತುಹೋಯಿತು. ಇಂದು ಅದನ್ನು ಯಾರಾದರೂ ಜ್ಞಾಪಕದಲ್ಲಿಟ್ಟಿದ್ದಾರೆಯೋ ಏನೋ ತಿಳಿಯದು. ಆದರೆ ಪರಿಸ್ಥಿತಿಯು ಆಗಿಗಿಂತ ಈಗ ಅಷ್ಟೇನೂ ಹೆಚ್ಚು ಬದಲಾಯಿಸಿಲ್ಲ; ಆಗ ಒಂದು ಭಾಷೆಯ ಮೇಲೆ ಹಿಂದಿನಿಂದ ಬಂದ ಅಭಿಮಾನವಿದ್ದರೆ; ಈಗ ಮತ್ತೊಂದು ಭಾಷೆಯ ಮೇಲೆ ಇಂದು ತಾನೇ ಬಂದ ಅಭಿಮಾನವುಂಟಾಯಿತು. ಮೊದಲು ಹುಟ್ಟಿದ ಕಿವಿಗಿಂತ ಆ ಮೇಲೆ ಹುಟ್ಟುವ ಕೋಡೇ ಮುಂದಾಯಿತು; ಅದು ತಿವಿಯುವುದಕ್ಕೂ ಮೊದಲಾಯಿತು. ಕನ್ನಡದ ಅಭಿಮಾನವೆಂಬ ಮಗು ತಪ್ಪು ಹೆಜ್ಜೆ ಹಾಕಿಕೊಂಡು ಮುಂದೆ ಮುಂದೆ ಬರುತ್ತಿದ್ದುದು ಹಿಂದಕ್ಕೆ ಸರಿಯಿತು.

ಎಂಥ ಸಮ್ಮೇಳನ?

ನಾವು ಐಶ್ವರ್ಯವಂತರಾಗುವುದು ಹೇಗೆ ಎಂಬುದನ್ನು ನಾನು ಹೇಳಲರಿಯೆ; ಅದನ್ನು ನನಗಿಂತ ದೊಡ್ಡವರು ಯೋಚಿಸುತ್ತಿದ್ದಾರೆ, ಹೇಳುತ್ತಿದ್ದಾರೆ, ಮಾಡಿ ತೋರಿಸುತ್ತಿದ್ದಾರೆ; ಅದರ ಪ್ರಸ್ತಾಪ ಇಲ್ಲಿ ಬೇಕಿಲ್ಲ; ಇದು ಸಾಹಿತ್ಯ ಸಮ್ಮೇಳನ, ಆರ್ಥಿಕ ಸಮ್ಮೇಳನವಲ್ಲ, ರಾಜಕೀಯ ಸಮ್ಮೇಳನವಲ್ಲ.

ಸಂಶೋಧನ ಕಾರ್ಯ ಮತ್ತು ಕನ್ನಡ

ಸಂಶೋಧನೆಯು ಭೂಮಿ ಅಗೆದು ಚಿನ್ನ ತೆಗೆಯುವ ಹಾಗೆ; ಅದಕ್ಕೆ ಬುದ್ಧಿ ಬೇಕು, ಆಯುಧ ಬೇಕು, ಯಂತ್ರ ಸಾಮಗ್ರಿ ಬೇಕು; ಹಲವು ಕೆಲಸಗಾರರ, ಶಾಸ್ತ್ರಜ್ಞರ ಸಹಕಾರ ಬೇಕು. ಅಗೆಯುತ್ತ ಅಗೆಯುತ್ತ ಶ್ರಮವು ಹೆಚ್ಚಾಗುತ್ತದೆ, ಹೊನ್ನು ಕಡಿಮೆಯಾಗುತ್ತದೆ. ನಮ್ಮಲ್ಲಿ ಇವೆಲ್ಲಕ್ಕೂ ಅಭಾವ. ಪಾಶ್ಚಾತ್ಯರು, ನಮ್ಮ ಚಿನ್ನದ ಗಣಿಗಳಲ್ಲಿ ಕೆಲಸಮಾಡಿರುವಂತೆ ಈ ಕ್ಷೇತ್ರದಲ್ಲಿಯೂ ಕೆಲಸಮಾಡಿದ್ದಾರೆ. ಅವರೊಡನೆ ಈಗ ಪೈಪೋಟಿ ನಡೆಸಿ ಸೈಯೆನ್ನಿಸಿಕೊಳ್ಳುವುದು ಕಷ್ಟ. ವೈಜ್ಞಾನಿಕ ಸಂಶೋಧನ ಕಾರ್ಯದಲ್ಲಿ ಪ್ರಪಂಚವೇ ಒಂದು. ವಿಶ್ವಕಿರಣಗಳು ಒಬ್ಬರಿಗೆ ಒಂದು ಮತ್ತೊಬ್ಬರಿಗೆ ಇನ್ನೊಂದು ಅಲ್ಲ. ಅವರಿಗೆ ದೊರೆಯುವ ಅಕರಾದಿ ಅನುಕ್ರಮಣಿಕೆಗಳು ಕೂಡ ನಮಗೆ ದೊರೆಯುವುದಿಲ್ಲ. ಕ್ಷೇತ್ರವೋ ವಿಸ್ತಾರವಾದದ್ದು; ನಾನಾ ದ್ರಾವಿಡ ಸಂಸ್ಕೃತ ಪ್ರಾಕೃತ ಭಾಷೆಗಳು, ಪಾಶ್ಚಾತ್ಯ ಭಾಷೆಗಳು, ಪ್ರಾಕ್ತನ ಶಾಸ್ತ್ರಗಳು, ಸಾಹಿತ್ಯ ಚರಿತ್ರೆ ಇವುಗಳನ್ನು ಎಷ್ಟು ಓದಿದರೂ ಇದೆ; ಅವುಗಳ ಮೇಲೆ ಪತ್ರಿಕಾ ಲೇಖನಗಳೂ ಗ್ರಂಥಗಳಿಗೂ ಕೊನೆ ಮೊದಲಿಲ್ಲ. ಇವುಗಳಲ್ಲಿ ಒಂದಕ್ಕೊಂದಕ್ಕೆ ಸಂಬಂಧವಿರುತ್ತದೆ; ಯಾವುದೋ ಒಂದು ಸಣ್ಣ ಅಂಶವನ್ನು ಹಿಡಿದುಕೊಂಡು ಹೋದರೂ ಅದು ಎಲ್ಲಿಗೋ ತೆಗೆದುಕೊಂಡು ಹೋಗುತ್ತದೆ; ಸಂದೇಹವು ಸಿದ್ಧಾಂತವಾಗುವುದೇ ಕಷ್ಟವಾಗುತ್ತದೆ. ಅದಕ್ಕೇ ಅಭಿರುಚಿ ಇರುವವರು ಕೆಲವರು; ಅವರಿಗೆ ನಡೆದೀತು. ಈ ಕ್ಷೇತ್ರದಲ್ಲಿ ನಮಗೆ ಸಂಬಂಧಪಡುವಂತೆ ಏನು ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿಯಾದರೂ ಪರಿಚಯ ಮಾಡಿಕೊಡಬೇಕೆಂದು 'ಪ್ರಾಚ್ಯ ಲೇಖನಾವಳಿ' ಎಂಬ ಭಾಗವನ್ನು 'ಪರಿಷತ್ ಪತ್ರಿಕೆ'ಯಲ್ಲಿಯೂ 'ಪ್ರಬುದ್ಧ ಕರ್ಣಾಟಕ' ದಲ್ಲಿಯೂ ಇಟ್ಟುಕೊಂಡಿರುವುದಾಗಿದೆ. ಆದರೆ ನಮಗೆ ಇರುವ ಉಪಪತ್ತಿ ಸಹಕಾರ, ಸೌಕರ್ಯ ಇವಕ್ಕೆ ಏನೇನೂ ಸಾಲದು. ಇವೊತ್ತು ಪಂಪನ ಅಥವಾ ಬಸವಣ್ಣನವರ ಮೇಲೇ

ಏನೇನು ಲೇಖನಗಳು ಬಂದಿವೆ ಎಂದು ಒಂದು ಕಡೆ ನೋಡಬೇಕೆಂದರೆ ಎಲ್ಲಿಯೂ ಆ ವಿಷಯ ಸಮಗ್ರವಾಗಿ ಸಿಕ್ಕುವುದಿಲ್ಲ. ಹೊಸ ಸಾಮಗ್ರಿಯಂತೂ ದೊರಕುವುದೇ ಇಲ್ಲ. ಪರಿಷತ್ಪತ್ರಿಕೆಯಲ್ಲಿ ಈಗ ಇಪ್ಪತ್ತೈದು ವರ್ಷಗಳಿಂದ ಬಂದ ಲೇಖನಗಳಿಗೆ ಅಕಾರಾದಿ ಮಾಡಿಕೊಡಬೇಕೆಂದು ಪರಿಷತ್ತು ಯೋಚಿಸಿತು. ಅದೂ ನಡೆದಿಲ್ಲ; ಇಂಗ್ಲಿಷಿನಲ್ಲಿ 'ರಾಯಲ್ ಏಷಿಯಾಟಿಕ್ ಸೊಸೈಟಿ'ಯ ಪತ್ರಿಕೆ 'ಇಂಡಿಯನ್ ಆಂಟಿಕ್ವೆರಿ' ಯಂಥ ಪತ್ರಿಕೆಗಳಿಗೆ ಈ ಸೌಕರ್ಯವಿದೆ.


ಸಾಹಿತ್ಯ ಪರಿಷತ್ತು ಮತ್ತು ಕನ್ನಡ

ಪರಿಷತ್ತು ಅದು ಮಾಡಲಿಲ್ಲ, ಇದು ಮಾಡಲಿಲ್ಲ; ಅದು ಮಾಡಬೇಕಾಗಿತ್ತು. ಇದು ಮಾಡಬೇಕಾಗಿತ್ತು ಎಂದು ಸೂಚಿಸುವವರು ಅದು ಹುಟ್ಟಿದಂದಿನಿಂದ ಇದ್ದಾರೆ. ಅದರಲ್ಲಿ ಕೆಲಸಮಾಡುವವರೆಲ್ಲರೂ ಅಕ್ಷರಶಃ ತನು ಮನ ಧನಗಳನ್ನು ಅದಕ್ಕೆ ಸೇರಿಸಿ ಕೆಲಸಮಾಡಿಯೂ ಇದ್ದಾರೆ. ಅದರಲ್ಲೇನೂ ಕಡಿಮೆಯಿಲ್ಲ. ಆದರೆ ಪರಿಷತ್ತೆಂದರೆ ಯಾರು? ಅದರ ನಾಲ್ಕಾರು ಜನ ಅಧಿಕಾರಿವರ್ಗದವರೇ? ಪರಿಷತ್ತು ಒಂದೂವರೆ ಕೋಟಿ ಪ್ರಜೆಯ ಪ್ರತಿನಿಧಿ ಎಂದರೆ, ನಾಲ್ಕಾರು ಜನ ಸಾಕೇ? ಅವರು ಗೌರವಾರ್ಥವಾಗಿ ಕೆಲಸ ಮಾಡುವವರು; ಎಷ್ಟು ಕಾಲವನ್ನು, ಎಷ್ಟು ಶಕ್ತಿಯನ್ನು, ಎಷ್ಟು ಭಕ್ತಿಯನ್ನು, ಎಷ್ಟು ಭುಕ್ತಿಯನ್ನು ಕೊಡಬಲ್ಲರು? ಅದಕ್ಕಿರುವ ಅಡ್ಡಿ ಅನುಪಪತ್ತಿಗಳನ್ನು ನೋಡಿದರೆ ಈಗ ನಡೆದಿರುವ ಕೆಲಸ ತೋರಿಸುವುದಕ್ಕಾಗುವುದಿಲ್ಲ. ಕನ್ನಡಿಗರು ತಮ್ಮ ಅಭಿಮಾನದ ಕಣ್ಣಿನಿಂದ ನೋಡಿದರೆ ಆಗ ಇದು ಕಾಣುತ್ತೆ. ಇನ್ನೂ ಉಳಿದಿರುವ ಕಾರ್ಯಕ್ಕೆ ಹೋಲಿಸಿದರೆ ಅದು ಅತ್ಯಲ್ಪ, ನಿಜ. ಆದರೆ ಯಾವ ಕೆಲಸಕ್ಕೂ ಬೇಕಾದದ್ದು ಧನ, ಜನ, ಅಭಿಮಾನ; ಧನವಿದ್ದರೆ ಮಿಕ್ಕೆರಡೂ ಒದಗುತ್ತವೆ. ಪರಿಷತ್ತಿಗೆ ವರ್ಷಕ್ಕೆ ಹತ್ತು ಹದಿನೈದು ಲಕ್ಷ ರೂಪಾಯಿನ ವರಮಾನವಿದ್ದರೆ ಒಂದು ವಿಶ್ವವಿದ್ಯಾನಿಲಯದ ಕೆಲಸವನ್ನೇ ಕೈಕೊಂಡು ಮಾಡಬಹುದು. ಆದರೆ ಅದರ ದಾರಿದ್ರ್ಯ ಲೋಕವಿದಿತವಾಗಿದೆ; ಅದರ ಅಧಿಕಾರಿಗಳು ದಿನಕ್ಕೆ ನಾಲ್ಕು ಸಲ ಕಚೇರಿಗೆ ಬಂದು ಹೋಗಿ ದುಡಿದರೆ, ಅವರಿಗೆ ಗಾಡಿಬಾಡಿಗೆಯೆಂದು ನಾಲ್ಕು ಆಣೆ ಕೊಡುವುದಕ್ಕೆ ಅದಕ್ಕೆ ಚೈತನ್ಯವಿಲ್ಲ. ಅವರು ಪುಣ್ಯವಂತರಾದರೆ, ತಾವೇ ಸಾವಿರಾರು ರೂಪಾಯಿ ದಾನಮಾಡುತ್ತಾರೆ. ಇಲ್ಲದಿದ್ದರೆ ಸಾಲ ಮಾಡಿಕೊಳ್ಳಬೇಕೇ? ಮಾಡಿದರೆ ತೀರಿಸುವವರು ಯಾರು? ಮಿಕ್ಕ ಭಾಷೆಗಳಿಗಾಗಿ ದುಡಿಯುತ್ತಿರುವವರಿಗೆ ಇರುವ ಸಂಪಾದನೆಯಲ್ಲಿ ಒಂದು ಭಾಗವನ್ನಾದರೂ ಕೊಡಬಲ್ಲೆವಾದರೆ, ಅವರು ಸಂತೋಷದಿಂದ ಕನ್ನಡಕ್ಕೆ ದುಡಿದಾರು. ಆದರೆ ಕೊಡಲು ಪರಿಷತ್ತಿಗೆ ಹಣವೆಲ್ಲಿದೆ? ಅದರ ಸದಸ್ಯ ಸಂಪತ್ತು ಸುಮಾರು ಏಳುನೂರಾಗಿದೆ. ಇವರಲ್ಲಿ ಅನೇಕರು ಆಜೀವ ಸದಸ್ಯರು; ಅವರ ಹಣವನ್ನು ನಿಧಿಯಾಗಿ ಬ್ಯಾಂಕಿನಲ್ಲಿಟ್ಟಿದೆ; ಅದಕ್ಕೆ ಬರುವುದು ವರ್ಷಕ್ಕೆ ಒಂದು ಎರಡು ರೂಪಾಯಿ ಬಡ್ಡಿ; ಹಲವರು ಹೆಸರು ಮಾತ್ರದವರು; ಅವರಿಂದ ಹಣವೇ ಬರುವುದಿಲ್ಲ. ಚಂದಾ ನಾಲ್ಕಾಣೆ ಮಾಡಿದರೆ ಬಹು ಜನ ಸೇರುವರೆಂದು ಒಂದು ಸಲಹೆ ಬಂತು; ಒಂದು ಲಕ್ಷ ಜನವಾದರೂ ಸದಸ್ಯರಾದರೆ ಈ ಸಲಹೆಯಿಂದ ಪ್ರಯೋಜನ; ಅಂಥ ಕನಸನ್ನು ಕಾಣುವುದು ಸಾಧ್ಯವೇ? ಸರಕಾರದವರು, ಮಠಗಳು, ಮಾನ್ಯ ಮಹನೀಯರು ಈಚೆಗೆ ಉದಾರಹಸ್ತದಿಂದ ಸಾವಿರಾರು ರೂಪಾಯಿಗಳನ್ನು ಕೊಟ್ಟಿರುವುದರಿಂದ, ಮುಖ್ಯವಾಗಿ ಮೈಸೂರು ಸರ್ಕಾರವು ಪರಿಷತ್ತಿನ ಕೆಲಸ ಹೆಚ್ಚಾಗುತ್ತ ಬಂದಂತೆಲ್ಲ ಧನಸಹಾಯವನ್ನು ಹೆಚ್ಚು ಮಾಡಿಕೊಟ್ಟು ಅದರ ಅಭ್ಯುದಯದಲ್ಲಿ ಆಸಕ್ತವಾಗಿರುವುದರಿಂದ, ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರು, ಕಂಠೀರವ ನರಸಿಂಹರಾಜ ಒಡೆಯರವರು, ಶ್ರೀ ಜಯಚಾಮರಾಜ ಒಡೆಯರವರು ಅದನ್ನು ಮಮತೆಯಿಂದ ತಮ್ಮ ಕೃಪಾಛತ್ರದ ನೆರಳಿನಲ್ಲಿ ಪೋಷಿಸಿಕೊಂಡು ಬಂದದ್ದರಿಂದ, ಇದೊಂದು ಸಂಸ್ಥೆಯು ನಿಂತಿದೆ. ಅದು ಬೆಳೆಯಬೇಕಾದರೆ ಮಿಕ್ಕಾದ ಸಂಸ್ಥಾನಾಧಿಪತಿಗಳೂ, ಸಾಹುಕಾರರೂ ಅದಕ್ಕೆ ಸಾಂಪತ್ತಿಕ ಮತ್ತು ನೈತಿಕ ಬೆಂಬಲಗಳನ್ನು ಕೊಡಬೇಕು; ಜನರು ಅದರಲ್ಲಿ ಅಭಿಮಾನವಿಟ್ಟು ಸಹಕರಿಸಬೇಕು. ಕನ್ನಡ ವಾತಾವರಣವನ್ನು ಹಬ್ಬಿಸಿ ಕನ್ನಡವನ್ನು ಬಲಪಡಿಸಿಕೊಳ್ಳಬೇಕು. ಪರಿಷತ್ತು ಶಾರದೆಯ ದೇವಸ್ಥಾನ; ಅದಕ್ಕೆ ಗುಡಿ ಗೋಪುರಗಳನ್ನು ಕಟ್ಟಿಸುವುದೂ ಸೇವಾಕಾರ್ಯಕ್ಕೆಂದು ದತ್ತಿ ಬಿಡುವುದೂ ಅದರ ಭಕ್ತಾದಿಗಳ ಕೆಲಸ. ಏನೇ ಆದರೂ, ಇದು ಸರ್ಕಾರದ ಇಲಾಖೆಯಂತೆ ಅಧಿಕಾರ ಬಲದಿಂದ ಕೆಲಸ ನಡೆಸಲಾರದು. ಇಂಗ್ಲೆಂಡಿನ ರಾಯಲ್ ಏಷಿಯಾಟಿಕ್ ಸೊಸೈಟಿಯಂಥವುಗಳಿಗೂ ಇದು ಸಾಧ್ಯವಾಗಿಲ್ಲ. ಇಲ್ಲಿ ಕೆಲಸ ಮಾಡುವುದು ಸತ್ವಕ್ಕಿಂತಲೂ ಹೆಚ್ಚಾಗಿ ಸ್ನೇಹ.

❖❖

೨೭ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದ.ರಾ. ಬೇಂದ್ರೆ



ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ರಾಮಚಂದ್ರ ಬೇಂದ್ರೆ-ಅಂಬವ್ವನವರ ಪುತ್ರರಾಗಿ ೩೧-೧-೧೮೯೬ರಲ್ಲಿ ಧಾರವಾಡದಲ್ಲಿ ಜನಿಸಿದರು. ಧಾರವಾಡದಲ್ಲಿ ೧೯೧೩ರಲ್ಲಿ ಮೆಟ್ರಿಕ್ ಮುಗಿಸಿದ ಮೇಲೆ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೯೧೮ರಲ್ಲಿ ಬಿ.ಎ. ಮಾಡಿದರು. ಕೆಲವು ಕಾಲ ಅಧ್ಯಾಪಕ ವೃತ್ತಿ ಮಾಡಿದ ಮೇಲೆ ೧೯೩೫ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಗಳಿಸಿದರು.

ಗದುಗಿನ ವಿದ್ಯಾದಾನ ಸಮಿತಿ ಪ್ರೌಢಶಾಲೆಯಲ್ಲಿ ಹೆಡ್ ಮಾಸ್ಟರ್ ಆಗಿ ಆಮೇಲೆ ೧೯೪೨ರಲ್ಲಿ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಒಪ್ಪೊತ್ತಿನ ಶಿಕ್ಷಕರಾದರು. ೧೯೪೪ರಲ್ಲಿ ಸೊಲ್ಲಾಪುರದ ಡಿಎವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ೧೯೪೪ರಲ್ಲಿ ನೇಮಕಗೊಂಡರು. ೧೯೫೬ರಲ್ಲಿ ನಿವೃತ್ತರಾದ ಮೇಲೆ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದರು.

ಮುಂಬಯಿಯಲ್ಲಿ ನಡೆದ ೨೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಅಧ್ಯಕ್ಷರಾಗಿದ್ದರು. ೧೯೩೦ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕ ಗೋಷ್ಠಿಯನ್ನು ನಿರ್ವಹಿಸಿದರು. ಕೆಲವು ಕಾಲ ಜೀವನ ಮಾಸಪತ್ರಿಕೆ ಮತ್ತು ಜಯಕರ್ನಾಟಕ ಪತ್ರಿಕೆ ಸಂಪಾದಕರಾಗಿ ಸೇವೆ ಸಲ್ಲಿಸಿದರು.

ಬೇಂದ್ರೆ ಅವರಿಗೆ ೧೯೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ನೀಡಿತು. ೧೯೭೬ರಲ್ಲಿ ಕಾಶಿಯ ವಿದ್ಯಾಪೀಠವೂ ಗೌರವ ಡಾಕ್ಟರೇಟ್ ನೀಡಿತು. ಕೇಂದ್ರ ಸರ್ಕಾರ ೧೯೬೮ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿತು. ಕೇಂದ್ರದ ಸಾಹಿತ್ಯ ಅಕಾಡೆಮಿ ಫೆಲೋ ಗೌರವ ಇವರಿಗೆ ಸಂದಿದೆ. ಅದಮಾರು ಮಠದವರು ಕರ್ನಾಟಕ ಕವಿಕುಲತಿಲಕ ಬಿರುದನ್ನು ೧೯೭೨ರಲ್ಲಿ ನೀಡಿದರು. ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟ ಇವರಿಗೆ ನೀಡಲಾಯಿತು. ೧೯೫೬ರಲ್ಲಿ ಅರಳು ಮರಳು ಕವನಸಂಗ್ರಹಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ದೊರೆತರೆ ೧೯೭೪ರಲ್ಲಿ ನಾಕುತಂತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿತು. ೧೯೬೭ರಿಂದ ರಾಜ್ಯ ಸರ್ಕಾರ ಗೌರವ ಮಾಶಾಶನ ನೀಡಿತು.

ಪ್ರತಿಭಾವಂತ ದ.ರಾ. ಬೇಂದ್ರೆಯವರ ಕವನಗಳು ಕನ್ನಡ ಜನತೆಯನ್ನು ಮುಗ್ಧಗೊಳಿಸಿದೆ. ಗಾಯಕರು ಹಾಡಿ ತಣಿದಿದ್ದಾರೆ. ಜನತೆ ಪದೇ ಪದೇ ಕೇಳಿ ಆನಂದಿಸುತ್ತಿದೆ. ಇಂಥ ಬೇಂದ್ರೆಯವರ ಕೃತಿಗಳಲ್ಲಿ ಕೆಲವು ಹೀಗಿವೆ.

ಕೃಷ್ಣಕುಮಾರಿ, ಸಖೀಗೀತ, ಉಯ್ಯಾಲೆ, ಗರಿ, ನಾದಲೀಲೆ, ಅರುಳುಮರುಳು ಇತ್ಯಾದಿ ೨೫ ಕವನ ಸಂಕಲನಗಳು. ಸಾಹಿತ್ಯ ಮತ್ತು ವಿಮರ್ಶೆ, ಕಾವ್ಯೋದ್ಯೋಗ, ಸಾಹಿತ್ಯ ವಿರಾಟ ಸ್ವರೂಪ, ನಾಕುತಂತಿ, ನಿರಾಭರಣ ಸುಂದರಿ, ಶಾಂತಲಾ (ಅನುವಾದ) ಇತ್ಯಾದಿ.

ಅಂಬಿಕಾತನಯದತ್ತ ಕಾವ್ಯನಾಮದ ದ.ರಾ. ಬೇಂದ್ರೆಯವರು ೨೬-೧೦-೧೯೮೧ರಲ್ಲಿ ಮುಂಬಯಿಯಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ–೨೭

ಅಧ್ಯಕ್ಷರು, ದ.ರಾ. ಬೇಂದ್ರೆ

ದಿನಾಂಕ ೨೬,೨೭,೨೮ ಜನವರಿ ೧೯೪೩

ಸ್ಥಳ : ಶಿವಮೊಗ್ಗ

ಸಾಹಿತ್ಯ ಸಮ್ಮೇಳನವು ಸಂಜಿವಿನಿ

ನನ್ನನ್ನು ಪರಿಷತ್ತಿನ ಸದಸ್ಯರು ಪ್ರೇಮದಿಂದ ಈ ಅಧ್ಯಕ್ಷಪೀಠದಲ್ಲಿರಿಸಿದ್ದಾರೆ. ಅವರಿಗೆ ನನ್ನ ನಮಸ್ಕಾರ. ನನ್ನನ್ನು ಅನೇಕ ಹಿರಿಯರು, ಕಿರಿಯರು, ಸಂಘದವರು, ಸಮಾಜದವರು, ಪತ್ರ ಪತ್ರಿಕೆಗಳವರು ಇದಕ್ಕಾಗಿ ಅಭಿನಂದಿಸಿದರು; ಅವರಿಗೆ ಅಭಿವಂದಿಸುತ್ತೇನೆ. ಈಗ ಕೂಡಿದ ಸಭೆ ನನ್ನನ್ನು ಸ್ನೇಹದಿಂದ ತಮ್ಮವನೆಂದು ಇದಿರುಗೊಳ್ಳುತ್ತಿದೆ, ಅದಕ್ಕೆ ಅನೇಕ ಸಲ ನಮಸ್ಕರಿಸುತ್ತೇನೆ.

ಹದಿಮೂರು ವರ್ಷಗಳ ಪೂರ್ವದಲ್ಲಿ, ಮೈಸೂರಿನಲ್ಲಿ, ಮೈಸೂರು ಸಾಹಿತ್ಯ ಸಮ್ಮೇಳನವು ನನ್ನನ್ನು ಲೇಖಕರ ಗೋಷ್ಠಿಯ ಅಧ್ಯಕ್ಷನನ್ನಾಗಿ ಮಾಡಿತು. ಇಷ್ಟು ವರ್ಷಗಳ ಅನಂತರ ಮತ್ತೊಮ್ಮೆ ಸಾಹಿತ್ಯ ಸಮ್ಮೇಳನವು ಮೈಸೂರು ರಾಜ್ಯವನ್ನು ಸೇರುತ್ತಿದೆ ; ಶಿವಮೊಗ್ಗ ನನ್ನನ್ನು ಸಾಹಿತ್ಯ ಸಮ್ಮೇಳನಕ್ಕೇ ಅಧ್ಯಕ್ಷನೆಂದು ಬರಮಾಡಿಕೊಳ್ಳುತ್ತಿದೆ. ಆ ನಾಡಿನ ಅಧಿದೈವತಕ್ಕೆ ನಾನು ಎಷ್ಟು ಬಾಗಿದರೂ ಸಾಲದು. ಅಣ್ಣ ಮಾಸ್ತಿಯವರೊಡನೆ ೧೯೩೦ರಲ್ಲಿ ಇಲ್ಲಿಗೆ ಬಂದಾಗಲೇ ಸ್ಥಾಪಿತವಾದ ಇಲ್ಲಿಯ ಕರ್ನಾಟಕ ಸಂಘ, ಅಣ್ಣ ಮಾಸ್ತಿಯವರೇ ಪರಿಷತ್ತಿನ ಉಪಾಧ್ಯಕ್ಷರಿರುವಾಗ, ತಾನು ಕಟ್ಟಿಸಿಕೊಂಡ ಕನ್ನಡದ ಗುಡಿಯಲ್ಲಿ, ಸರಸ್ವತಿಯ ಮಹಾಪೂಜೆಯ ಕಾಲಕ್ಕೆ, ನನ್ನನ್ನು ಪೂಜಾರಿಯೆಂದು ಸಾಹಿತ್ಯದ ಮಂತ್ರಗಳನ್ನು ಉಚ್ಚರಿಸಲು ಕರೆಸಿಕೊಂಡಿದೆ. ಈ ಘಟನೆ ಇಲ್ಲಿಯ ಹಿರಿಯರ ಗೆಳೆಯರ ನಿರಂತರ ಸ್ನೇಹದ ಪರಿಪಾಕವೇ ಆಗಿದೆ. ಅದಕ್ಕೆ ನನ್ನ ಸ್ನೇಹವನ್ನೇ ಅರ್ಪಿಸದೆ– ನನ್ನ ಹತ್ತಿರ ಬೇರೆ ಏನಿದೆ? ಇಲ್ಲಿಯ ಕಾರ್ಯಕರ್ತರು ಕನ್ನಡ ನಾಡಿನ ಅನೇಕ ಕಾರ್ಯಕರ್ತರಂತೆ ಪಂಚಾಗ್ನಿಯ ಸಾಧನೆ ಮಾಡಿ, ಈ ಸಾರಸ್ವತ ಯಜ್ಞ ಹೂಡಿದ್ದೀರಿ. ಇದು ಬರಿಯ ಉತ್ಸಾಹದ ಉತ್ಸವವಲ್ಲ; ನಾವೆಲ್ಲರೂ ಬಲ್ಲೆವು. ಆದರೂ"ಯುದ್ಧ, ಬರಗಾಲ, ಪಿಡುಗು, ಒಳಜಗಳ ಮಧ್ಯೆ ಸಾಹಿತ್ಯ ಸಮ್ಮೇಳನವೇನು ನೆರೆದಿದೆ" ಎಂದು ಈಗಿನ ಕಾಲಕ್ಕೆ ಒಂದು ಪ್ರಶ್ನೆ ಮನದಲ್ಲಿ ಹುಟ್ಟಿದರೆ ಅಸಹಜವಲ್ಲ. "ಹೊರಗಿನ ಬೇಜಾರು ತಪ್ಪಿಸಿಕೊಳ್ಳಲು ನಾವಿಲ್ಲಿ ನೆರೆದಿದ್ದೇವೆ" ಎಂದು ತಿಳಿದುಕೊಳ್ಳಲಾಗದು. ಒಂದು ಕಡೆಗೆ ಹಸಿವೆಯ ಕಾಡುಗಿಚ್ಚು, ಇನ್ನೊಂದು ಕಡೆಗೆ ಯುದ್ಧದ ಮದ್ದಾನೆ, ಮತ್ತೊಂದು ಕಡೆಗೆ ಪಿಡುಗಿನ ಹೆಬ್ಬುಲಿ– ಇವುಗಳಿಂದ ತಪ್ಪಿಸಿಕೊಳ್ಳಲು ಓಡಿದರೆ, ಅನಾಯಕ ಸಮಾಜದ ಹಾಳುಬಾವಿಯಲ್ಲಿ ನಾವು ಬೀಳಲಿರಲು, ಪಕ್ಷಪಂಗಡಗಳ, ಘಟಸರ್ಪ ನಮಗೆ ಅಲ್ಲಿಯೂ ಕಾದಿದೆಯಲ್ಲಾ ಎಂದು ಕಕ್ಕಾಬಿಕ್ಕಿಯಾಗಿ ಸಮ್ಮೇಳನದ ಹರಕು ಬಳ್ಳಿಗಳಿಗೆ ಜೋತುಬಿದ್ದಿರುವಾಗ ಸಾಹಿತಿಗಳ ಜೇನು ಹುಟ್ಟಿನ ಒಂದು ತೊಟ್ಟಾದರೂ ಮೂಗಿಗೆ ತಗುಲಿದರೆ ಸಾಕು, ಮೂಗಿಗೆ ಹತ್ತಿದ ಆ ಹನಿತುಪ್ಪವನ್ನು ನಿಲುಕದ ನಾಲಗೆಯನ್ನಾದರೂ ಚಾಚಿ ರುಚಿ ನೋಡೋಣವೆಂಬ ನಗೆಗೇಡು ಪ್ರಯತ್ನ ಮಾಡಲು ತಾವು ನೆರೆದಿದ್ದೀರೆಂದು ತಿಳಿಯಬೇಡಿ. ಸಾಹಿತ್ಯವು ಸಂಜೀವನ ವಿದ್ಯೆ. ಆ ಸಂಜೀವಿನಿಗೆ ನಾವು ತಾವೆಲ್ಲರೂ ಶರಣಾಗತರಾಗಿದ್ದೇವೆ.

❖❖

೨೮ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಶಿ. ಶಿ. ಬಸವನಾಳ



ನವಕರ್ನಾಟಕದ ನಿರ್ಮಾಪಕರಲ್ಲಿ ಒಬ್ಬರಾಗಿ ವೀರಶೈವ ಧರ್ಮ ಸಾಹಿತ್ಯಕ್ಕೆ ಶ್ರಮಿಸಿದ ವಿದ್ವಾಂಸ ಶಿ. ಶಿ. ಬಸವನಾಳರು (ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ) ಶಿವಯೋಗಪ್ಪ ಮತ್ತು ಸಿದ್ದಮ್ಮನವರ ಪುತ್ರರಾಗಿ ೭-೧೧-೧೮೯೩ರಲ್ಲಿ ಜನಿಸಿದರು. ಮೆಟ್ರಿಕ್ ಪರೀಕ್ಷೆಯನ್ನು ೧೯೧೦ರಲ್ಲಿ ಮುಗಿಸಿ ೧೯೧೫ರಲ್ಲಿ ಡೆಕ್ಕನ್ ಕಾಲೇಜಿನಲ್ಲಿ ಎಂ. ಎ. ಪದವಿಗಳಿಸಿದರು.

ಸರ್ಕಾರಿ ಕೆಲಸಕ್ಕೆ ಹೋಗದೆ ಸಾರ್ವಜನಿಕ ಸೇವೆಗೆ ಟೊಂಕಕಟ್ಟಿ ನಿಂತರು. ಧಾರವಾಡದಲ್ಲಿ ಕೆಎಲ್‌ಇ ಸೊಸೈಟಿಯನ್ನು ಸ್ಥಾಪಿಸಿದರು. ಕೆಲವು ಕಾಲ ಧಾರವಾಡದ ಆರ್. ಎಲ್. ಎಸ್. ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿ, ಲಿಂಗರಾಜ ಕಾಲೇಜಿನಲ್ಲಿ ವೈಸ್‌ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. ಕೆಎಲ್‌ಇ ಸೊಸೈಟಿಯ ಕಾರ್ಯದರ್ಶಿಯಾಗಿ ದುಡಿದರು.

ಪ್ರಬೋಧ ಮಾಸಪತ್ರಿಕೆ, ಜಯಕರ್ನಾಟಕದ ಮಾಸಪತ್ರಿಕೆಗಳ ಸಂಪಾದಕರಾಗಿ, ಸಾಹಿತ್ಯ ಸಮಿತಿ, ಪತ್ರಿಕೆ ಸ್ಥಾಪಕರಾಗಿ ಶ್ರಮಿಸಿದ್ದಾರೆ. ಬೆಳಗಾಂವಿ ಜಿ. ಐ. ಹೈಸ್ಕೂಲ್, ಧಾರವಾಡದ ಲಿಂಗರಾಜು ಕಾಲೇಜು, ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆಯ ಕಾರ್ಯಗಳಲ್ಲಿ ಇವರ ಕೊಡುಗೆ ಅಪಾರ. ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಕರಾಗಿ ಹಲವು ಕಾರ್ಯ ಮಾಡಿದ್ದರು.

೧೯೪೪ರಲ್ಲಿ ರಬಕವಿಯಲ್ಲಿ ನಡೆದ ೨೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದರು. ಹುಬ್ಬಳ್ಳಿಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ೧೩ನೇ ಅಧಿವೇಶನದ ಅಧ್ಯಕ್ಷರಾದರು. ೧೯೨೬ರಲ್ಲಿ ಸಿದ್ಧಗಂಗಾದಲ್ಲಿ ನಡೆದ ವೀರಶೈವ ತರುಣ ಸಂಘಗಳ ಸಮ್ಮೇಳನ ಸಭಾಧ್ಯಕ್ಷರಾದರು.

ವಚನ ಸಾಹಿತ್ಯ ಮತ್ತು ವೀರಶೈವ ಸಾಹಿತ್ಯಕ್ಕೆ ಅನುಪಮ ಕೊಡುಗೆಗಳನ್ನಿತ್ತ ಶಿ ಶಿ. ಬಸವನಾಳರ ಪ್ರಸಿದ್ಧ ಕೃತಿಗಳು ಹಲವು ಹೀಗಿವೆ:

ಚೆನ್ನಬಸವಪುರಾಣ, ಪ್ರಭುಲಿಂಗಲೀಲೆ, ಶಬರಶಂಕರ ವಿಳಾಸ, ಗಿರಿಜಾ ಕಲ್ಯಾಣ ಮೊದಲಾದ ವೀರಶೈವ ಕಾವ್ಯಗಳ ಸಂಪಾದನೆ. ಕಾವ್ಯಾವಲೋಕನ, ಬಸವಣ್ಣನವರ ಷಟ್ಸ್ಥಲ ವಚನಗಳು, ಸಂಶೋಧನೆ ಸಂಪಾದನೆ, ವೀರಶೈವ ತತ್ವಪ್ರಕಾಶ (ಪಂಡಿತ ಬರಹಗಳ ಸಂಕಲನ), ಮ್ಯೂಸಿಂಗ್ಸ್ ಆಫ್ ಬಸವ (ಬಸವಣ್ಣನವರ ವಚನಗಳ ಆಂಗ್ಲಾನುವಾದ).

ಸಮರ್ಥ ಆಡಳಿತಗಾರ ಪರಿಣತ ಗ್ರಂಥ ಸಂಪಾದನಕಾರರಾಗಿದ್ದ ಶಿ. ಶಿ. ಬಸವನಾಳರು ೨೨-೨-೧೯೫೧ರಲ್ಲಿ ಕೈಲಾಸವಾಸಿಗಳಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೨೮
ಅಧ್ಯಕ್ಷರು, ಶಿ.ಶಿ. ಬಸವನಾಳ
ದಿನಾಂಕ ೨೮,೨೯,೩೦ ಡಿಸೆಂಬರ್ ೧೯೪೪
ಸ್ಥಳ : ರಬಕವಿ

ಸಮ್ಮೇಳನದ ಇದುವರೆಗಿನ ಕಾರ್ಯ

ಈಗ ಮೂವತ್ತು ವರ್ಷಗಳಿಂದ ತಿರುಳ್ಗನ್ನಡದ ಗಂಡುಮೆಟ್ಟಿನ ಸ್ಥಾನಗಳಲ್ಲಿಯೂ ಗಡಿನಾಡಿನ ಇಕ್ಕಟ್ಟಿನ ಆದರೂ ಆಯಕಟ್ಟಿನ ಸ್ಥಳಗಳಲ್ಲಿಯೂ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಚೋದನೆಯಿಂದ, ಅದರ ಕಾರ್ಯಕ್ರಮದ ಒಂದು ಅಂಗವಾಗಿ ನಡೆಯುತ್ತಿರುವುದಷ್ಟೆ. ಇದರಿಂದಾಗಿ ಕನ್ನಡ ಜನತೆಯಲ್ಲಿ ಸಾರ್ವತ್ರಿಕವಾದ ಜಾಗೃತಿಯುಂಟಾಗಿ ತಮ್ಮ ನಾಡು ನುಡಿಗಳ ವಿಷಯವಾಗಿ ಅಭಿಮಾನವು ಬೆಳೆದಿದೆ ಎನ್ನಬಹುದು. ಕನ್ನಡ ಸಾಹಿತ್ಯದ ಬಗೆಗೆ ಕೆಲಮಟ್ಟಿನ ತಿಳವಳಿಕೆಯೂ ಬಹುಮಟ್ಟಿನ ಆದರವೂ ಕನ್ನಡಿಗರಲೆಲ್ಲಾ ತಲೆದೋರಲು ಅನುವಾಗಿದೆ ಎಂಬಲ್ಲಿ ಸಂದೇಹವಿಲ್ಲ. ಸಮ್ಮೇಳನದ ಅಂಗವಾಗಿ ಅಲ್ಲಲ್ಲಿ ಆಗಾಗ ಜರುಗುತ್ತಿರುವ ಕವಿಗೋಷ್ಠಿ, ಸಾಹಿತ್ಯ ಗೋಷ್ಠಿ, ಮಹಿಳಾಗೋಷ್ಠಿ ಇವುಗಳ ಮೂಲಕ ಸುಪ್ರಸಿದ್ಧರಾದ ಸಾಹಿತಿಗಳ ಪ್ರತ್ಯಕ್ಷ ಪರಿಚಯವಾಗಲು ಇಂಬಾಗಿರುವುದಲ್ಲದೆ ನೂತನ ತರುಣ ಬರೆಹಗಾರರನ್ನು ಬೆಳಕಿಗೆ ತರಲೂ ಮಾರ್ಗವಾಗಿದೆಯೆನ್ನಬಹುದು. ಕನ್ನಡದ ಮುಖ್ಯ ಸಮಸ್ಯೆಗಳ ಚರ್ಚೆಗಳು ಮೇಲಿಂದ ಮೇಲೆ ನಡೆವುದರ ಮೂಲಕ ಅವುಗಳ ವಿಸ್ತಾರ ಮತ್ತು ಆಳದ ಯಥಾರ್ಥ ಕಲ್ಪನೆಯುಂಟಾಗಲು ಅನುಕೂಲವಾಗಿರುವುದಲ್ಲದೆ, ಅವುಗಳನ್ನು ಬಿಡಿಸುವುದರಲ್ಲಿ ಬರಬಹುದಾದ ತೊಡಕುಗಳ, ಮಾಡಬೇಕಾದ ಪ್ರಯತ್ನಗಳ ಅರಿವು ಕೆಲಮಟ್ಟಿಗಾದರೂ ಉಂಟಾಗಿದೆ ಎನ್ನಬಹುದು. ಪರಿಷತ್ತಿನ ಅಧಿಕಾರಿಗಳ, ಅದರಲ್ಲಿಯೂ ಮುಖ್ಯವಾಗಿ ಆ ಆ ಕಾಲದ ಉಪಾಧ್ಯಕ್ಷರ, ಪ್ರಚಾರ ಸಂಚಾರಗಳ ಪರಿಣಾಮವಾಗಿ, ಸತತ ಪ್ರಯತ್ನದ ಫಲವಾಗಿ ಅಲ್ಲಲ್ಲಿ ಕರ್ನಾಟಕ ಸಂಘಗಳು ಏರ್ಪಟ್ಟು, ಸದಸ್ಯರ ಸಂಖ್ಯೆ ಬೆಳೆದು, ಪರಿಷತ್ತಿನ ಉದ್ದೇಶ ಕಾರ್ಯಕ್ರಮಗಳ ಸಾಕಷ್ಟು ತಿಳಿವಳಿಕೆ ಕನ್ನಡಿಗರಲ್ಲಿ ಹರಡಿರುವುದಲ್ಲದೆ, ಆ ಸಂಸ್ಥೆಗೆ ಜನಬಲ ಧನಬಲಗಳೂ ಧಾರಾಳವಾಗಿ ದೊರೆಯುತ್ತಿವೆ ಎಂಬುದು ಸಂತೋಷದ ಮಾತಾಗಿದೆ. ಒಟ್ಟಿನಲ್ಲಿ ಈ ಬಗೆಯ ಪ್ರಚಾರಕಾರ್ಯ ಸಮಾಧಾನಕರವಾಗಿ ಸಾಗಿದೆ, ಸಾಗುತ್ತಲಿದೆ, ಇನ್ನು ಮುಂದೆಯೂ ಸಾಗುವುದೆಂಬ ಭರವಸೆ ಇದೆ.

ಸಮ್ಮೇಳನದ ಇನ್ನು ಮುಂದಿನ ಕಾರ್ಯ

ಸಾಮಾನ್ಯವಾದ ಈ ಬಗೆಯ ಕನ್ನಡದ ಪ್ರಚಾರ ಹಿಂದಿನಂತೆ ಮುಂದೆಯೂ ಸಾಗುವುದು ಹಿತಕರವಾಗಿರುವುದಾದರೂ ಇನ್ನು ಮುಂದಿನ ಪ್ರಚಾರ ಕಾರ್ಯಕ್ರಮದಲ್ಲಿ ಸದ್ಯಕ್ಕೆ ಅತಿ ಮಹತ್ತ್ವದುದೆನಿಸಿದ ಹಲವು ಸಮಸ್ಯೆಗಳ ಸೇರ್ಪಡೆಯಾಗಬೇಕಾಗಿದೆ. ಈ ಪ್ರಚಾರಕಾರ್ಯ ಕೆಲವು ದಿಸೆಗಳಲ್ಲಿ ಸತತವಾಗಿ ನಡೆಯುವುದು ಅತ್ಯಗತ್ಯವಿದೆ. ಅಲ್ಲದೆ ಪ್ರಚಾರದ ಕ್ಷೇತ್ರವು ಬರಿಯ ಕರ್ನಾಟಕಕ್ಕಷ್ಟೆ ನಿರ್ಬಂಧಿತವಾಗಿರದೆ ಇನ್ನೂ ವಿಸ್ತಾರಗೊಳ್ಳಬೇಕಾಗಿದೆ. ಮೂಡ ಪಡುವಣ ಗಡಿನಾಡುಗಳಲ್ಲಿ ನೆರೆಯ ಪ್ರಬಲ ಭಾಷೆಗಳ ದವಡೆಯೊಳಗಿಂದ ಕನ್ನಡವನ್ನು ಉಳಿಸಿ ಕಾಪಾಡುವ ಹೊಣೆ ಕನ್ನಡಿಗರಾದ ನಮ್ಮೆಲ್ಲರ ಮೇಲೆಯೂ ಇದೆ. ಆಯಾ ವಿಭಾಗಗಳಲ್ಲಿಯ ಕನ್ನಡ ಜನ ಸಾಮಾನ್ಯರಲ್ಲೆಲ್ಲ ಜಾಗೃತಿಯನ್ನುಂಟುಮಾಡಿ ಅದು ಸದಾ ಪ್ರಜ್ವಲಿಸುವಂತೆ ನೋಡಿಕೊಳ್ಳುವ ಭಾರವೂ ನಮ್ಮದಾಗಿದೆ. ಅದಕ್ಕಾಗಿ ಸತತ ಪ್ರಚಾರಕ್ಕೆಂದು ವೇತನದ ಪ್ರಚಾರಕರನ್ನು ನಿಯಮಿಸುವುದು ಅಗತ್ಯವೆನಿಸುತ್ತದೆ. ಸ್ಥಳೀಯ ಪ್ರಮುಖರು ಮಾಡಬಹುದಾದ ಪ್ರಯತ್ನಗಳಿಗೆ ಅಖಿಲ ಕರ್ನಾಟಕದ ಪರವಾಗಿ ಬೆಂಬಲವನ್ನೂ ಸರಕಾರವನ್ನು ನೀಡಬೇಕಾಗುತ್ತದೆ. ಗಡಿನಾಡ ಸಮಸ್ಯೆ ಬೇರೆ ಬೇರೆ ಕಡೆಗೆ ಪರಿಸ್ಥಿತಿಗನುಸಾರವಾಗಿ ಬೇರೆಬೇರೆಯಾಗಿ ತೋರಬಹುದಾದುದರಿಂದ ಅವನ್ನೆಲ್ಲ ಚೆನ್ನಾಗಿ ಅಭ್ಯಾಸ ಮಾಡಿ ಸರಿಯಾದ ಉಪಾಯಗಳನ್ನು ಕೈಕೊಳ್ಳುವುದೂ ಅವಶ್ಯವೆನಿಸುವುದು. ಇದಕ್ಕೆಲ್ಲ ಸ್ವತಂತ್ರವಾದ ಕಾರ್ಯಾಲಯವೂ ಧನನಿಧಿಯೂ ಬೇಕೆಂಬುದರಲ್ಲಿ ಸಂದೇಹವಿಲ್ಲ. ಈ ಕೊರತೆಯನ್ನು ಪೂರೈಸುವ ಹೊಣೆಯನ್ನು ಅಖಿಲ ಕರ್ನಾಟಕ ಸಂಸ್ಥೆಯೆನಿಸಿಕೊಳ್ಳುವ ಕನ್ನಡ ಸಾಹಿತ್ಯ ಪರಿಷತ್ತೇ ಹೊರಬೇಕಾಗುವುದು. ಇದಕ್ಕಾಗಿ ಪರಿಷತ್ತು ಬೇರೊಂದು ಕಾರ್ಯಶಾಖೆ (Department) ಯನ್ನು ಏರ್ಪಡಿಸಿಕೊಳ್ಳುವುದು ಒಳ್ಳೆಯದು. ಸಾಧ್ಯವಾದರೆ ಅಖಿಲ ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಟ್ಟುಕೊಂಡಂತಹ (ಕ.ವಿ.ವ. ಸಂಘದಂತಹ) ಇತರ ಸಂಸ್ಥೆಗಳ ನೆರವನ್ನು ದೊರಕಿಸಿಕೊಳ್ಳತಕ್ಕದ್ದು.

ಈಗ ಕೆಲವರ್ಷಗಳಿಂದ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಈ ಬಗೆಗೆ ಗೊತ್ತುವಳಿಗಳನ್ನು ಅಂಗೀಕರಿಸುತ್ತಿದ್ದರೂ ಅದರಿಂದ ಯಾವ ಪರಿಣಾಮವೂ ಆಗಲಿಲ್ಲವಾದುದರಿಂದ ಇದಕ್ಕೂ ತೀವ್ರತರವಾದ ಉಪಾಯಗಳನ್ನು ಕೈಕೊಳ್ಳುವುದು ಅತ್ಯಾವಶ್ಯಕವೆಂದು ನನ್ನ ಮತಿಗೆ ತೋರುತ್ತಿದೆ.

ಪರಿಷತ್ತಿನ ಕರ್ತವ್ಯ

ನೆರೆಯ ಪ್ರಾಂತಗಳ ಆಕ್ರಮಣ ಪ್ರವೃತ್ತಿಯನ್ನು ಪ್ರತಿಭಟಿಸುವುದೂ ಕರ್ನಾಟಕದ ಏಕೀಕರಣವನ್ನು ಹೆಚ್ಚು ಬಲವತ್ತರವಾಗಿ ಪ್ರಯತ್ನಪಟ್ಟು ಸಾಧಿಸುವುದೂ ಕರ್ನಾಟಕ ವಿಶ್ವವಿದ್ಯಾನಿಲಯದ ಯೋಜನೆಯನ್ನು ಮುಂದುವರಿಸುವುದೂ- ಈ ಮೂರು ವಿಧದ ಪ್ರಯತ್ನಗಳು-ಒಂದೊಂದು ಪ್ರತ್ಯೇಕ ಸಂಸ್ಥೆಯ ಮುಖಾಂತರವಾಗಲಿ, ಇಲ್ಲವೆ ಈ ಮೂರು ಪ್ರಯತ್ನಗಳು ಮುಪ್ಪುರಿಗೊಂಡು ಒಂದೇ ಸಂಸ್ಥೆಯ ಮುಖಾಂತರವಾಗಲಿ- ಸತತವಾಗಿ ನಡೆಯುತ್ತಿರಬೇಕು; ಅಲ್ಲದೆ, ಉಳಿದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳೂ ವ್ಯಕ್ತಿಗಳೂ, ಈ ಪ್ರಯತ್ನಗಳಿಗೆ ಸದಾ ಬೆಂಬಲ ಸಹಕಾರ ನೀಡಲು ಸಿದ್ಧರಿರಬೇಕು. ಇದಕ್ಕೆಲ್ಲ ಅವಶ್ಯಕವಾಗಿ ಬೇಕಾಗುವ ಅನುಕೂಲ ಪರಿಸ್ಥಿತಿಯನ್ನು ಸಾಹಿತ್ಯ ಸಮ್ಮೇಳನ ಹಾಗೂ ಪರಿಷತ್ತು ಉಂಟುಮಾಡಿ ಕೊಡತಕ್ಕದ್ದೆಂದು ನನ್ನ ತಿಳಿವಳಿಕೆ.

ಪರಿಷತ್ತು-ಸಮ್ಮೇಳನಗಳ ಧ್ಯೇಯ-ಧೋರಣೆ

ಸಮ್ಮೇಳನವಾಗಲಿ ಪರಿಷತ್ತಾಗಲಿ ಅಸ್ತಿತ್ವದಲ್ಲಿ ಬಂದುದೂ ಬದುಕಿರುವುದೂ ಕನ್ನಡ ಸಾಹಿತ್ಯದ ಏಳ್ಗೆ-ಹೆಚ್ಚಳ ಇವುಗಳಿಗಾಗಿ ಎನ್ನುವುದನ್ನು ಮತ್ತೆ ಬೇರೆಯಾಗಿ ಹೇಳಬೇಕಾಗಿಲ್ಲ; ಅವುಗಳ ಹೆಸರುಗಳೇ ಸಾಕ್ಷಿ. ಆದುದರಿಂದ ಕನ್ನಡ ಸಾಹಿತ್ಯಕ್ಕೆ ಅವುಗಳ ಮುಖಾಂತರ ಯಾವ ಬಗೆಯ ಸೇವೆಯನ್ನು ಬಯಸಬೇಕೆಂಬುದನ್ನು ನಾವು ವಿವೇಚಿಸಿದರೆ ಅಪ್ರಸ್ತುತವಾಗಲಾರದು. ಈ ದೃಷ್ಟಿಯಿಂದ ನೋಡಿದರೆ ಆ ಸಂಸ್ಥೆಗಳ- ಅದರಲ್ಲಿಯೂ ಮುಖ್ಯವಾಗಿ ಪರಿಷತ್ತಿನ- ಕಾರ್ಯಕ್ಷೇತ್ರವನ್ನು ಎರಡು ತೆರನಾಗಿ ವಿಭಾಗಿಸಬಹುದು; (೧) ಹಳೆಯ ಸಾಹಿತ್ಯವನ್ನು ಸಂರಕ್ಷಿಸುವುದು ಹಾಗೂ ಅದರ ಅಭ್ಯಾಸಕ್ಕೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡುವುದು. (೨) ಹೊಸ ಸಾಹಿತ್ಯದ ನಿರ್ಮಾಣಕ್ಕೆ ಅವಶ್ಯವಾದ ಚಲನೆ ಪ್ರೋತ್ಸಾಹಗಳನ್ನು ಕೊಡುವುದು. ಆದರೆ ಇದು ಬಹು ವಿಶಾಲವಾದ ಕ್ಷೇತ್ರ, ಬಹು ಉನ್ನತವಾದ ಧ್ಯೇಯ. ಆದುದರಿಂದ ಇಲ್ಲಿ ನಾವು ನಿರ್ಧಾರವಾದ ದೀರ್ಘಾವಧಿಯ ಕಾರ್ಯಕ್ರಮವನ್ನು ಇಟ್ಟುಕೊಳ್ಳದೆ ಸುಮ್ಮನೆ ಕಾರ್ಯಪ್ರವೃತ್ತರಾದರೆ, ವೆಚ್ಚಮಾಡಿದ ವೇಳೆ ಹಾಗೂ ಧನಕ್ಕೆ ಸರಿಯಾದ, ಪಟ್ಟ ಪ್ರಯತ್ನಕ್ಕೆ ತಕ್ಕುದಾದ ಫಲ ದೊರೆಯದೆ ಹೋಗುವ ಸಂಭವವಿದೆ. ಅಲ್ಲದೆ ಕಾಗದದಲ್ಲಿಯೇ ಉಳಿಯಬಹುದಾದ ಗೊತ್ತುವಳಿಗಳಿಂದಾಗಲಿ, ಪ್ರಕಟನೆಯ ಕ್ಷೇತ್ರವನ್ನು ದಾಟದಿರುವ ಧ್ಯೇಯಗಳಿಂದಾಗಲಿ ಪರಿಷತ್ತಿನ (ಅಥವಾ ಸಮ್ಮೇಳನದ) ಬೆಲೆಯನ್ನು ಯಾರೂ ಅಳೆಯುವುದಿಲ್ಲ. ಆದರೆ ಕಣ್ಣಿಗೆ ಕಾಣುವಂತೆ, ಅಳತೆಗೆ ತೂಕಕ್ಕೆ ಎಣಿಕೆಗೆ ಅಳವಡುವಂತೆ, ಗೈದ ಕಾರ್ಯದಿಂದಲೆ ಅಳೆಯುವರೆಂಬುದನ್ನು ನೆನಪಿನಲ್ಲಿಡತಕ್ಕದು.

ವಿಮರ್ಶೆಗೆ ಪರಿಷತ್ತಿನ ನೆರವು

ಹಿಂದಣವರು ಕೊಟ್ಟ ಕೋಡಿನ ಫಲವಾದ ಭಾಷೆಯ ಅಗ್ಗಳತೆಗಾಗಿಯೂ ಸಾಹಿತ್ಯದ ವಿಫುಲತೆಗಾಗಿಯೂ ನಾವು ಅಭಿಮಾನ ತಳೆಯುವುದು ಅರಿದಲ್ಲ. ಈ ಅಭಿಮಾನದೊಡನೆ ಭಾಷೆ ಮತ್ತು ಸಾಹಿತ್ಯಗಳ ಆಳವಾದ ಪರಿಚಯ, ಕೂಲಂಕಷವಾದ ತಿಳಿವಳಿಕೆ, ಸಹೃದಯಾತ್ಮಕ ವಿಮರ್ಶೆ- ಇವುಗಳೂ ನಮಗೆ ಹೆಚ್ಚಾಗಿ ಬೇಕಾಗಿವೆ. ಇಂತಹ ಫಲಕಾರಿಯಾದ ಅಭ್ಯಾಸಕ್ಕೆ ಅನುಕೂಲವಾದ ಸಲಕರಣೆಗಳೆಲ್ಲವನ್ನೂ ಒದಗಿಸಿಕೊಡುವುದು ಪರಿಷತ್ತಿನ ಕರ್ತವ್ಯವಾಗಿದೆ. ಅದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸಿಕೊಡುವುದು ಸಮ್ಮೇಳನದ ಉದ್ದೇಶವಾಗಿರಬೇಕು.

ಪರಿಷತ್ತಿನ ನಿಘಂಟು

ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಆಳವಾದ ಅಭ್ಯಾಸದ ಸಾಧನಗಳಲ್ಲಿ ನಮಗೆ ಈಗ ಅತ್ಯಗತ್ಯದ ಕೊರತೆಯೆಂದರೆ ಉತ್ತಮವಾದ ಕನ್ನಡ ನಿಘಂಟು ಎಂಬಲ್ಲಿ ಯಾವ ಸಂದೇಹವೂ ಇಲ್ಲ. ಕಿಟ್ಟೆಲ್ ಅವರ ಬಹು ಅಮೂಲ್ಯವಾದ ಡಿಕ್ಷನರಿಯು ಈಗ ಹಳತಾಗಿರುವುದಲ್ಲದೆ ಬರಿಯ ಕನ್ನಡ ಬಲ್ಲವರಿಗೆ ಅಷ್ಟು ಪ್ರಯೋಜನಕಾರಿಯಾಗಿಲ್ಲ. ಮೇಲಾಗಿ ಅದರ ಪ್ರತಿಗಳೂ ಈ ದುರ್ಮಿಳವಾಗಿವೆ. ಈಗಿನ ಪರಿಸ್ಥಿತಿಗೆ ತಕ್ಕ ನಿಘಂಟುವೊಂದನ್ನು ಸಿದ್ಧಪಡಿಸುವ ವಿಷಯದಲ್ಲಿ ನಮ್ಮ ಸಾಹಿತ್ಯ ಪರಿಷತ್ತು ಕೆಲಮಟ್ಟಿಗೆ ಪ್ರಯತ್ನಪಟ್ಟಿದ್ದರೂ ಅದು ಫಲಕಾರಿಯಾಗಿಲ್ಲ. ಷಟ್ಪದಿ ಕಾವ್ಯಗಳ ಅಭ್ಯಾಸಕ್ಕಾಗಿಯೆ ಒಂದು ನಿಘಂಟನ್ನು ಪ್ರಕಟಿಸಬೇಕೆಂಬ ಪರಿಷತ್ತಿನ (೧೯೧೯)ರ ಗೊತ್ತುವಳಿ ಕಾರ್ಯರೂಪಕ್ಕೆ ಇಳಿಯಲಿಲ್ಲ. "ಪದವೈಚಿತ್ರ್ಯ, ಪ್ರಯೋಗ ವೈಚಿತ್ರ್ಯ, ಅನ್ಯಭಾಷಾ ಶಬ್ದಗಳ" ಕೋಶವೊಂದನ್ನು ಸಿದ್ಧಪಡಿಸಬೇಕೆಂಬ (೧೯೨೧)ರ ನಿರ್ಧಾರ ಮುಂದುವರಿಯಲಿಲ್ಲ.

ಇತ್ತೀಚೆಗೆ ಕನ್ನಡ ನಿಘಂಟುವನ್ನು ಸಿದ್ಧಪಡಿಸುವ ಮೂರನೆಯ ಪ್ರಯತ್ನ ಆರಂಭವಾಗಿದೆ. ಆದರೆ ಅದಕ್ಕೆ ಹಣದ ಯೋಜನೆ ಅಷ್ಟು ತೃಪ್ತಿಕರವಾಗಿಲ್ಲವೆಂಬ ಸೊಲ್ಲು ಈಗಾಗಲೆ ಅಲ್ಲಲ್ಲಿ ಕೇಳಿಸುತ್ತದೆ. ಅದು ಏನೇ ಇರಲಿ, ಆಂಗ್ಲ ಭಾಷೆಗಾಗಿಯೇ ಪ್ರಕಟವಾಗಿರುವ "ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ" (Oxford English Dictionary) ಯ ರೀತಿಯಲ್ಲಿ-ನಿಘಂಟುಗಳಲ್ಲಿ ಅವಶ್ಯವಾಗಿ ಇರಬೇಕಾದ ಶಬ್ದೋತ್ಪತ್ತಿ, ಮೂಲರೂಪಿ, ವಿವಿಧರೂಪ ನಾನಾರ್ಥ ಈ ಸಂಗತಿಗಳಲ್ಲದೆ ಪ್ರತಿಯೊಂದು ಶಬ್ದದ ಬಳಕೆಯ, ಹಾಗೂ ಅರ್ಥ ವ್ಯತ್ಯಾಸದ, ಸಾಹಿತ್ಯದಲ್ಲಿ ಅದು ಮೊದಲು ಬಳಕೆಗೆ ಬಂದ ಕಾಲ ಹಾಗೂ ಗ್ರಂಥ, ಅದರ ಅರ್ಥದಲ್ಲಿ ಯಾವ ಯಾವ ಕಾಲದಲ್ಲಿ ಯಾವ ಗ್ರಂಥಕರ್ತನ ಬಳಕೆಯು ಪರಿಣಾಮವಾಗಿ ಮಾರ್ಪಾಟು ಆಗಿದೆ.- ಈ ಮುಂತಾದವುಗಳ ಇತಿಹಾಸವನ್ನು ಸೂಚಿಸುವ ನಿಘಂಟುವೆ ನಮಗೆ ಈಗ ಅತ್ಯಾವಶ್ಯಕ. ಈ ಮಹತ್ ಕಾರ್ಯಕ್ಕೆ ಬಹುಜನ ವಿದ್ವಾಂಸರ, ಬಹುಭಾಷಾ ಪಂಡಿತರ ಸಹಕಾರವು ಅತ್ಯಂತಾವಶ್ಯಕ.

ಸಂಶೋಧನೆ ಪತ್ರಿಕೆ ಪರಿಷತ್ತಿನ ಗುರಿ ಆಗಲಿ

ಅಧಿಕೃತ ಸಂಶೋಧನೆ ಅಖಿಲ ಕರ್ನಾಟಕ ಸಂಸ್ಥೆಯಾದ ಪರಿಷತ್ತಿನ ಪರವಾಗಿ ನಡೆಯುವುದು ಬಹು ಇಷ್ಟವಾದುದು. ಆದಕಾರಣ ಪರಿಷತ್ತು ಈ ವಿಷಯದಲ್ಲಿ ಸಂಶೋಧನದ ಬೇರೆಬೇರೆ ಶಾಖೆಗಳಲ್ಲಿ ನಿಷ್ಣಾತರಾದ ವಿದ್ವಾಂಸರನ್ನೊಳಗೊಂಡು, ಒಳ್ಳೆಯ ಪ್ರಾತಿನಿಧಿಕವಾದ ಸಂಪಾದಕ ಮಂಡಲವನ್ನು ನಿಯಮಿಸಿ, ಅವರಿಂದ ಒಪ್ಪಿಗೆಯನ್ನು ಪಡೆದಂತಹ ಸಂಶೋಧನ ಲೇಖನಗಳಿಗೆ ಮಾತ್ರ ಪರಿಷತ್ತಿನ ಪರವಾಗಿ ಪ್ರಕಟನೆ ದೊರೆಯಬೇಕು. ಇದಕ್ಕಾಗಿ ಪರಿಷತ್ತು ಒಂದು ಪತ್ರಿಕೆಯನ್ನು ಪ್ರತ್ಯೇಕವಾಗಿಯೆ ನಡೆಸಬಹುದು. ಪ್ರತಿಯೊಂದು ಲೇಖನಕ್ಕೂ ತಳಹದಿಯಾದ ಆಧಾರಗಳ ಸಮಗ್ರಪಟ್ಟಿಯನ್ನು ಆಯಾ ಲೇಖನದೊಡನೆ ಸಂಪಾದಕ ಮಂಡಳವು ತರಿಸಿಕೊಳ್ಳಬೇಕು. ಪ್ರಯೋಜನಕಾರಿಯಾದ ಸಂಶೋಧನ ಹೆಚ್ಚಾಗಿ ನಡೆಯುವಂತೆ ಪ್ರೋತ್ಸಾಹವನ್ನು ಕೊಡಬೇಕು.

ಇದೇ ರೀತಿ ಪರಿಷತ್ತು ಹಳಗನ್ನಡದ ಕಾವ್ಯ ಮೊದಲಾದ ಗ್ರಂಥಗಳನ್ನು ಪ್ರಚುರಪಡಿಸಲಿಕ್ಕೂ ಹಳಗನ್ನಡದ ಅಭ್ಯಾಸವನ್ನು ಮುಂದುವರಿಸಲಿಕ್ಕೂ ಬೇರೊಂದು ಪತ್ರಿಕೆಯನ್ನು, ಬೇರೆ ಬೇರೆ ಶಾಖೆಗಳಲ್ಲಿ ತಜ್ಞರಾದ ವಿದ್ವಜ್ಜನರ ಮಂಡಳದ ಅಧೀನತೆಯಲ್ಲಿ ಹೊರಡಿಸುವುದು ಆವಶ್ಯಕ. ಮೇಲ್ಕಂಡ ಎರಡೂ ಉದ್ದೇಶಗಳನ್ನು ಎಂದರೆ ಸಂಶೋಧನ ಹಾಗೂ ಹಳಗನ್ನಡ ಸಾಹಿತ್ಯ ಪ್ರಕಟನೆ ಒಂದೇ ದ್ವಾರ ಸಾಧಿಸಬಹುದು. ಆದರೆ ಆಗ ಪತ್ರಿಕೆಯ ಗಾತ್ರ ಸಾಕಷ್ಟು ದೊಡ್ಡದಾಗಿರುವುದು ಆವಶ್ಯಕ.

ಪರಿಷತ್ತಿನ ಗ್ರಂಥಾಲಯ ಹೇಗಿರಬೇಕು ?

ಸಂಶೋಧನಕ್ಕೂ ಅಭ್ಯಾಸಕ್ಕೂ ಅನುಕೂಲವಾಗುವಂತಹ ಉತ್ತಮ ಪುಸ್ತಕಾಲಯವನ್ನು ಸ್ಥಾಪಿಸುವುದು ಅತ್ಯಂತಾವಶ್ಯಕ. ಇಂತಹ ಪುಸ್ತಕಾಲಯದಲ್ಲಿ ಕನ್ನಡದಲ್ಲಿ ಮುದ್ರಿತವಾದ ಎಲ್ಲ ಪುಸ್ತಕಗಳೂ, ವೃತ್ತಪತ್ರಗಳ, ನಿಯತಕಾಲಿಕ ಪತ್ರಿಕೆಗಳ ಪ್ರತಿವರ್ಷದ ಕಟ್ಟುಗಳೂ ಸಂಶೋಧಕರಿಗೂ ಅಭ್ಯಾಸಿಗಳಿಗೂ ದೊರೆಯಬೇಕಲ್ಲದೆ ಬೇರೆಬೇರೆ ಭಾಷೆಗಳ ನಿಘಂಟು, ಕೋಶ ಇನ್ನಿತರ (Reference) ಉಪಯುಕ್ತ ಗ್ರಂಥಗಳೂ ಶಿಲಾಶಾಸನ ಮೊದಲಾದವುಗಳ ಪ್ರತಿಕೃತಿಗಳೂ ಬೇಕಾದಾಗ ಕೈಗೆ ಸಿಕ್ಕುವಂತಿರಬೇಕು. ಅಲ್ಲದೆ ಹಳೆಯತಾಳೆವೋಲೆಯ ಕೈಬರಹದ ಪ್ರತಿಗಳನ್ನು ಸಂಗ್ರಹಿಸಿ ಸುವ್ಯವಸ್ಥಿತವಾಗಿ ಇಡುವ ಏರ್ಪಾಟು ಇಂತಹ ಪುಸ್ತಕಾಲಯದಲ್ಲಿರಬೇಕು. ಈ ಬಗೆಯ ಪುಸ್ತಕಾಲಯವೊಂದು ಪರಿಷತ್ತಿನ ಮುಖ್ಯ ಕಾರ್ಯಾಲಯದಲ್ಲಿರಬೇಕಲ್ಲದೆ ಕಾಲಾನುಕ್ರಮದಲ್ಲಿ ಕರ್ನಾಟಕದ ಬೇರೆ ಬೇರೆ ಕೇಂದ್ರಗಳಲ್ಲಿಯೂ ಸ್ಥಾಪಿತವಾಗುವ ಗುರಿಯನ್ನು ಇಟ್ಟುಕೊಂಡಿರುವುದು ಒಳ್ಳೆಯದು. ಪರಿಷತ್ತು ಈ ದಿಸೆಯಲ್ಲಿ ಕಾರ್ಯಾರಂಭವನ್ನು ತೀವ್ರವೇ ಮಾಡುವುದು ಯಥಾಯೋಗ್ಯವೆಂಬುದನ್ನು ಇಲ್ಲಿ ನಾನು ಸೂಚಿಸುತ್ತೇನೆ.

ವಿಶ್ವವಿದ್ಯಾಲಯಗಳೊಡನೆ ಸಂಬಂಧ

ಕರ್ನಾಟಕದ ಮತ್ತು ಅದರ ಸುತ್ತಮುತ್ತಲು ಸ್ಥಾಪಿತವಾಗಿರುವ ವಿಶ್ವವಿದ್ಯಾನಿಲಯಗಳೊಡನೆ ಪರಿಷತ್ತು ಆದಷ್ಟು ನಿಕಟವಾದ ಸಂಬಂಧವನ್ನು ಇಟ್ಟುಕೊಳ್ಳುವುದು ಹಿತಕರ. ಇದರಿಂದ ಆಯಾ ಸಂಸ್ಥೆಗಳಲ್ಲಿ ಕನ್ನಡ ಹಾಗೂ ದ್ರಾವಿಡ ಭಾಷೆಗಳನ್ನು ಕುರಿತು ನಡೆಯುತ್ತಿರುವ ಅಭ್ಯಾಸ, ಸಂಶೋಧನ ಇವುಗಳ ಲಾಭವನ್ನು ಪಡೆದುಕೊಳ್ಳಬಹುದಲ್ಲದೆ ಅಲ್ಲಲ್ಲಿ ಗೋಚರವಾಗಬಹುದಾದ ಕೊರತೆಗಳನ್ನು ಪೂರೈಸಲು ಸಾಧ್ಯವಾಗಬಹುದು. ಇದೇ ರೀತಿ ಇನ್ನಿತರ ಪ್ರಾಂತೀಯ ಪರಿಷತ್ತುಗಳೊಡನೆ ಪರಸ್ಪರ ಸಂಬಂಧವನ್ನು ಬೆಳೆಸಿಕೊಳ್ಳುವುದು ಪರಿಷತ್ತಿಗೆ ಲಾಭಕರವಾಗುವುದರಲ್ಲಿ ಸಂದೇಹವಿಲ್ಲ.

ಸಮ್ಮೇಳನದ ಕಾರ್ಯಕ್ರಮಗಳು ಹೇಗಿರಬೇಕು

ಇದುವರೆಗೆ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳೆಲ್ಲ ಒಂದು ಸಂಪ್ರದಾಯಾನುಸಾರವಾಗಿ ಜರುಗಿದೆ. ಮೂರು ದಿನಗಳ ಒಂದು ಅವಧಿಯಲ್ಲಿ ಮುಖ್ಯ ಸಮ್ಮೇಳನಕ್ಕಾಗಿ ಕೆಲಕಾಲ, ಸಮ್ಮೇಳನದ ಅಂಶಗಳೆಂದು ಸಾಹಿತ್ಯ ಮಹಿಳಾ ಮುಂತಾದ ಗೋಷ್ಠಿಗಳಿಗಾಗಿ ಕೆಲಕಾಲ, ಆ ಬಳಿಕ ಮನರಂಜನೆ ಜನರಂಜನೆಗಳ ಕಾರ್ಯಕ್ರಮಕ್ಕಾಗಿ ಉಳಿದಕಾಲ-ಹೀಗೆ ವಿನಿಯೋಗವಾಗುತ್ತಿರುವುದು ಸಾಮಾನ್ಯವಾಗಿದೆ. ಸಮ್ಮೇಳನದ ಅಂಗವೆಂದು ಜರುಗುವ ಗೋಷ್ಠಿ ಯಾವುವು ಹಾಗೂ ಎಷ್ಟು ಎಂಬುದು ಸಮ್ಮೇಳನವನ್ನು ಜರುಗಿಸುವ ಸ್ವಾಗತ ಸಮಿತಿಯವರ ಅನುಕೂಲತೆಯನ್ನೇ ಅವಲಂಬಿಸುತ್ತಿದೆ. ಅಲ್ಲದೆ, ಒಮ್ಮೆ ಕವಿಗೋಷ್ಠಿ ಜರುಗಿದರೆ ಇನ್ನೊಮ್ಮೆ ಅದಕ್ಕೂ ವಿಸ್ತಾರವಾದ ಸಾಹಿತ್ಯಗೋಷ್ಠಿ ಜರುಗುವುದುಂಟು. ಒಮ್ಮೆ ನಾಟಕ ಗೋಷ್ಠಿ ಪ್ರತ್ಯೇಕವಾಗಿ ಜರುಗಿದ್ದರೆ ಮುಂದೆ ಕೆಲವರ್ಷ ಆ ಗೋಷ್ಠಿಯ ಸ್ಮರಣೆ ಸಹ ಇಲ್ಲದಂತಾಗುವುದೂ ಉಂಟು. ಹೀಗೆ ವರ್ಷದಿಂದ ವರ್ಷಕ್ಕೆ ಗೋಷ್ಠಿಗಳ ಸ್ವರೂಪ, ಕ್ಷೇತ್ರ, ಸಂಖ್ಯೆಗಳಲ್ಲಿ ಹೆಚ್ಚು ಕಡಮೆ ಇರುವುದರಿಂದ ಒಟ್ಟಿನಲ್ಲಿ ಅನಿಶ್ಚಿತತೆಯುಂಟಾಗುವುದಲ್ಲದೆ, ಒಂದು ಸಲದ ಗೋಷ್ಠಿಯಿಂದ ಮುಂದಿನ ಸಲದ ಅದೇ ಗೋಷ್ಠಿಗೆ ಇರಬೇಕಾದ ಏಕಸೂತ್ರತೆಯಾಗಲಿ ಕಾರ್ಯಕಲಾಪದಲ್ಲಿ ತೋರಬೇಕಾದ ಪ್ರಗತಿಯಾಗಲಿ ಇಲ್ಲದಂತಾಗುವುದು ಸಹಜವಿದೆ. ಇದೂ ಅಲ್ಲದೆ, ಇಡಿಯ ಸಮ್ಮೇಳನ ಕಾರ್ಯಕ್ರಮವನ್ನು ವಿವೇಚಿಸಿದರೆ ಅದೊಂದು ಮೂರು ದಿನದ ಜಾತ್ರೆಯಂತೆ ತೋರುವುದೇ ಹೆಚ್ಚು ಸಂಭವವಲ್ಲದೆ ಶಾಶ್ವತವಾದ ಕಾರ್ಯಕ್ರಮವಾಗುವುದು ಅಪರೂಪವೆಂದೇ ಹೇಳಬೇಕಾಗುವುದು. ಪ್ರಚಾರ ದೃಷ್ಟಿಯಿಂದ ಈಗಿನ ಒಟ್ಟಿನಲ್ಲಿಯ ಕಾರ್ಯಕ್ರಮ ಯಥಾರ್ಥವಾದುದೇ ಆದರೆ ಸಮ್ಮೇಳನವು ಜನ್ಮತಾಳಿ ಮೂವತ್ತು ವರ್ಷವಾದುದರಿಂದ, ಇನ್ನು ಮುಂದೆ ಕಾರ್ಯಭಾಗವನ್ನು ಕೊಂಚ ಹೆಚ್ಚು ಮಾಡುವುದು ವಿಹಿತವೆನಿಸಬಹುದು. ಈಗಿನಂತೆ ಮುಂದೆಯೂ ಮನರಂಜನೆಯ ಕಾರ್ಯಕ್ರಮಗಳನ್ನು ಸಾಯಂಕಾಲದ ಮೇಲೆ ಪ್ರತಿದಿನವೂ ಇಟ್ಟುಕೊಳ್ಳಲು ಸಾಧ್ಯವಿದೆ. ಆದರೆ ಸಾಹಿತ್ಯ ಮೊದಲಾದ ಗೋಷ್ಠಿಗಳನ್ನು ಸಮ್ಮೇಳನದ ಅಂಗಗಳೆಂದು ಪ್ರತ್ಯೇಕವಾಗಿ ಇಟ್ಟುಕೊಳ್ಳದೆ ಸಮ್ಮೇಳನವನ್ನೇ ಆಯಾ ಶಾಖೆಗಳಿಗಾಗಿ-ಪ್ರಾಚ್ಯ ಸಮ್ಮೇಳನದಂತೆ- ಒಡೆಯುವುದು ಹೆಚ್ಚು ಫಲಕಾರಿಯಾಗಬಹುದಾಗಿದೆ. ಲೇಖಕರ ಗೋಷ್ಠಿ, ವೃತ್ತಪತ್ರಿಕಾ ಗೋಷ್ಠಿ, ನಾಟ್ಯ ಗೋಷ್ಠಿ, ಮಹಿಳಾ ಗೋಷ್ಠಿ, ಸಂಶೋಧನ ವಿಭಾಗ, ಭಾಷಾಶಾಸ್ತ್ರ ವಿಭಾಗ, ಪಾರಿಭಾಷಿಕ ಶಬ್ದರಚನೆಗಾಗಿ ಒಂದು ವಿಭಾಗ-ಈ ರೀತಿಯಾಗಿ ಸಾಹಿತ್ಯದ ಯಾವ ಮಹತ್ತ್ವದ ಶಾಖೆಗೆ ಬೇರೆ ಸಂಸ್ಥೆಗಳಿಲ್ಲವೋ ಅವುಗಳಿಗೆಲ್ಲ ಇಲ್ಲಿ ಎಡೆ ಇಡಬೇಕು. ಈ ಎಲ್ಲ ವಿಭಾಗಗಳು ಮೊದಲೆ ನಿಯೋಜಿತರಾದ ಶಾಖಾಧ್ಯಕ್ಷರ ಅಧೀನದಲ್ಲಿ ನಡೆಯಬೇಕು. ಈ ದೃಷ್ಟಿಯಿಂದ ಸಮ್ಮೇಳನವನ್ನು ಯಾವ ಯಾವ ಶಾಖೆಯಾಗಿ ವಿಭಾಗಿಸಬೇಕೆಂಬುದನ್ನು ತಜ್ಞ ಉಪಮಂಡಲದ ಸಲಹೆಯ ಮೇಲೆ ನಿರ್ಣಯಿಸಬೇಕು. ವರ್ಷ ವರ್ಷವೂ ಅದೇ ಶಾಖೆಗಳು ಜರುಗುತ್ತಿರಬೇಕು; ಕಾರಣವಿಲ್ಲದೆ ಬದಲಿಸಬಾರದು. ಈ ಎಲ್ಲ ವಿಭಾಗಗಳ ವಿಚಾರದ ಫಲವಾಗಿ, ಅಲ್ಲದೆ ಪ್ರತ್ಯೇಕವಾಗಿಯೂ, ಅವಶ್ಯವೆನಿಸುವ ನಿರ್ಣಯಗಳು ಸಮ್ಮೇಳನದ ಸಮಗ್ರ ಅಧಿವೇಶನದಲ್ಲಿ ಕೊನೆಗೆ ಅಂಗೀಕೃತವಾಗತಕ್ಕದ್ದು. ಪ್ರತಿ ವರ್ಷ ಈ ಶಾಖೆಗಳಲ್ಲಿ ಜರುಗುವ ಕಾರ್ಯಕಲಾಪದ ಸಂಪೂರ್ಣ ವರದಿಯೊಂದಿಗೆ ಅವುಗಳಲ್ಲಿ ಸ್ವೀಕೃತವಾಗುವ ಪಂಡಿತರ, ಸಂಶೋಧಕರ, ತಜ್ಞರ ವಿದ್ವತ್‌ಪೂರ್ಣವಾದ ಲೇಖನಗಳೊಂದಿಗೆ ಇಡಿಯ ಸಮ್ಮೇಳನದ ಸಂಪೂರ್ಣ ವರದಿ ಮುದ್ರಿತವಾಗತಕ್ಕದ್ದು. ಈ ಬಗೆಯ ನೂತನ ಸಂಪ್ರದಾಯ ಬಹು ಫಲಕಾರಿಯಾಗಬಹುದೆಂದು ತೋರುತ್ತದೆ. ಹೀಗೆ ನಿಶ್ಚಿತವಾದ ಕಾರ್ಯಕ್ರಮವಲ್ಲದೆ ಅವಶ್ಯಕಂಡಾಗ ಬೇರೆ ತಾತ್ಪೂರ್ತಿಕ ಗೋಷ್ಠಿಗಳನ್ನು ಸಮ್ಮೇಳನದ ಅಂಗವಾಗಿ ಜರುಗಿಸಬಹುದು. ಈ ಸಂದರ್ಭದಲ್ಲಿ "ಹಿಂದೀ" ಸಾಹಿತ್ಯ ಸಮ್ಮೇಳನದವರು ವಿಜ್ಞಾನ ಗೋಷ್ಠಿ, ಸಮಾಜಶಾಸ್ತ್ರ ಗೋಷ್ಠಿಗಳನ್ನು ನೆಡೆಸುತ್ತಿರುವುದು ಅನುಕರಣೀಯವಾಗಿದೆಯೆಂದು ಹೇಳಬಹುದು. ಈ ಸಲ ಅವರು ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡುವುದಕ್ಕೆಂದು ಒಂದು ಸ್ವತಂತ್ರ ಗೋಷ್ಠಿಯನ್ನೇ ಶ್ರೀ ಕೆ.ಎಂ. ಮುನಿಷಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದುದು ತಮ್ಮೆಲ್ಲರಿಗೆ ಗೊತ್ತಿರಬಹುದು.

ಸಂಗೀತ ಗೋಷ್ಠಿ ಮತ್ತು ಪರಿಷತ್ತು

ನಮ್ಮ ದೇಶದಲ್ಲಿ ಸಂಗೀತ ಗೋಷ್ಠಿಗಳು ಪ್ರತ್ಯೇಕವಾಗಿ ನಡೆಯುತ್ತಿಲ್ಲವಾದುದರಿಂದ ಇನ್ನು ಮುಂದೆ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಂಗೀತಗೋಷ್ಠಿ ಜರುಗುವುದು ವಿಹಿತವೆನಿಸುತ್ತಿದೆ. ಇಂತಹ ಗೋಷ್ಠಿಗಳಲ್ಲಿ ಸಂಗೀತಕ್ಕೂ

ಸಾಹಿತ್ಯಕ್ಕೂ ಇರಬೇಕಾದ ಸಂಬಂಧವನ್ನು ತಾತ್ತ್ವಿಕವಾಗಿ ಶಾಸ್ತ್ರೀಯವಾಗಿ ಚರ್ಚಿಸಲು ಅನುಕೂಲವಾಗುವುದಲ್ಲದೆ, ಉತ್ತರ ಹಾಗೂ ದಕ್ಷಿಣದ ಸಂಗೀತ ರೀತಿಗಳ ಸಂಬಂಧ, ಸಮನ್ವಯ ಮುಂತಾದವುಗಳನ್ನು ಅಭ್ಯಾಸಿಸಲೂ ಅನುಕೂಲವಾಗಬಹುದು. ಕೀರ್ತನ ಕಲೆಗೂ ಯೋಗ್ಯ ಪ್ರೋತ್ಸಾಹ ದೊರೆಯುವುದಕ್ಕೆ ಇದು ಸಹಾಯಕವಾಗಬಹುದು. ಮೇಲಾಗಿ ಪ್ರತ್ಯಕ್ಷ ಸಂಗೀತ ಸುಧೆಯನ್ನೀಂಟುವ ಸುಸಂಧಿಯು ಇದರಿಂದ ಉಂಟಾಗುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

❖❖

೨೯ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಟಿ. ಪಿ. ಕೈಲಾಸಂ



ಕನ್ನಡ ನಾಟಕರಂಗದಲ್ಲಿ ಹೊಸಶಕೆಯನ್ನು ಆರಂಭಿಸಿದ ಟಿ ಪಿ. ಕೈಲಾಸಂ ಅವರು ಬೆಂಗಳೂರಿನಲ್ಲಿ ೨೯-೭-೧೮೮೪ರಲ್ಲಿ ತ್ಯಾಗರಾಜ ಪರಮಶಿವ ಅಯ್ಯರ್ - ಕಲಮಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಬೆಂಗಳೂರು, ಹಾಸನ, ಮೈಸೂರುಗಳಲ್ಲಿ ಶಾಲಾ ಶಿಕ್ಷಣ ಮುಗಿಸಿ ೧೯೦೮ರಲ್ಲಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿ ಬಿ ಎ ಪದವಿಗಳಿಸಿದರು. ಪ್ರೌಢವ್ಯಾಸಂಗಕ್ಕೆ ಲಂಡನ್ನಿಗೆ ತೆರಳಿ ೬ ವರ್ಷಗಳ ಕಾಲ ಭೂಗರ್ಭಶಾಸ್ತ್ರ ಅಭ್ಯಸಿಸಿ ೧೯೧೫ಕ್ಕೆ ಬೆಂಗಳೂರಿಗೆ ಹಿಂತಿರುಗಿದರು.

ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ಭೂಶೋಧಕರಾಗಿ ಸೇರಿ ೫ ವರ್ಷ ಉದ್ಯೋಗ ಮಾಡಿದರು. ಅನಂತರ ರಾಜೀನಾಮೆ ನೀಡಿ ರಂಗಭೂಮಿಯ ಚಟುವಟಿಕೆಗಳಲ್ಲಿ ನಿರತರಾದರು.

ವ್ಯಾಯಾಮಕ್ಕೆ ಹೆಚ್ಚು ಒತ್ತು ಕೊಟ್ಟಿದ್ದ ಕೈಲಾಸಂ ಕನ್ನಡ ನಾಟಕಕಾರರಾಗಿ ರಂಗ ನಾಟಕರಂಗಕ್ಕೆ ವಿಶೇಷ ಕೊಡುಗೆಗಳನ್ನಿತ್ತರು. ಅನೇಕರಿಗೆ ಹಾಸ್ಯ ಸಾಹಿತ್ಯ ನಾಟಕಗಳ ಮೂಲಕ ಜನಜಾಗೃತಿ ಮಾಡಿದರು.

೧೯೪೫ರಲ್ಲಿ ಮದರಾಸಿನಲ್ಲಿ ನಡೆದ ೨೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು.

ಕೈಲಾಸಂ ಬರೆದುದಕ್ಕಿಂತ ಹೆಚ್ಚಾಗಿ ಹೇಳಿ ಬರೆಸಿದ ಇತರರು ಬರೆದುಕೊಂಡ ನಾಟಕಗಳೇ ಹೆಚ್ಚು.

ಟೊಳ್ಳುಗಟ್ಟಿ, ಬಹಿಷ್ಕಾರ, ಗಂಡಸ್ಕತ್ರಿ, ಪೋಲಿಕಿಟ್ಟಿ, ಸೂಳೆ, ನಂತರ ಕನ್ನಡ ಸಾಮಾಜಿಕ ನಾಟಕಗಳನ್ನೂ ತಾವರೆಕೆರೆ (ಕಥಾಸಂಗ್ರಹ), ಕೋಳಿಕೇರಂಗ (ಹಾಡುಗಳು), ಕರ್ಣ, ಕೀಚಕ (ಇಂಗ್ಲಿಷ್ ನಾಟಕಗಳು).

ಕರ್ನಾಟಕ ಪ್ರಹಸನ ಪಿತಾಮಹ ಎನಿಸಿದ್ದ ಕೈಲಾಸಂ ೨೩-೧೧-೧೯೪೬ರಲ್ಲಿ ಕೈಲಾಸವಾಸಿಗಳಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೨೯

ಅಧ್ಯಕ್ಷರು, ಟಿ.ಪಿ. ಕೈಲಾಸಂ

ದಿನಾಂಕ ೨೬, ೨೭, ೨೮ ಡಿಸೆಂಬರ್ ೧೯೪೫

ಸ್ಥಳ : ಮದರಾಸು

ಈ ಕನ್ನಡ ಪ್ರಾಂತವನ್ನು ಕಟ್ಟಬೇಕೆನ್ನುವುದೇತಕ್ಕೆ? ಇದರಂತೆ ತಮಿಳು, ತೆಲುಗು, ಕೇರಳ, ಮಹಾರಾಷ್ಟ್ರ ಪ್ರಾಂತಗಳೂ ಆಗಲಿ ಎಂದಲ್ಲವೆ? ದಕ್ಷಿಣ ದೇಶದ ನಾಲ್ಕು ಪ್ರಾಂತಗಳೂ ನಾಲ್ಕು ಭುಜದಂತೆ, ಚತುರಂಗ ಬಲದಂತೆ, ಏಕವಾಗಿ ಐಕಮತ್ಯದಿಂದ ವರ್ತಿಸಬೇಕೆಂದಲ್ಲವೆ? ಇಲ್ಲ ಪರಸ್ಪರ ವೈಷಮ್ಯಕ್ಕಾಗಿಯೇ? ತಮಿಳೇನು ತೆಲುಗೇನು ಮಲಯಾಳವೇನು? ಕನ್ನಡಕ್ಕೆ ಅಣ್ಣ ತಮ್ಮ ಎಲ್ಲವೂ ದ್ರಾವಿಡ ಭಾಷೆಯೇ. ಒಂದು ಅಕ್ಷರ ಬದಲಾದರೆ ಕನ್ನಡ ಶಬ್ದ ತೆಲುಗು ಶಬ್ದವಾಯಿತು. ಇನ್ನೊಂದು ಅಕ್ಷರ ಬದಲಾದರೆ ತಮಿಳಾಯಿತು. ಕನ್ನಡ-ತೆಲುಗುಗಳಿಗೆ ಬೇರೆ ಬೇರೆ ಲಿಪಿ ಇಲ್ಲ; ಎರಡೂ ಒಂದೇ. ಕೇರಳ ವರ್ಣಮಾಲೆ ಕನ್ನಡ ಗೀರ್ವಾಣಕ್ಕೆ ಸಮೀಪವಾಗಿದೆ. ಇನ್ನು ಆಚಾರ ವ್ಯವಹಾರ, ಧರ್ಮ ದೈವ ಋಣಾನುಬಂಧ- ಎಲ್ಲರಲ್ಲೂ ಈ ದಾಕ್ಷಿಣಾತ್ಯರಲ್ಲಿ ಅಂಥ ಪ್ರಖರ ಭೇದವಿಲ್ಲ. ನಾವು ಕರ್ನಾಟಕರು ಎಲ್ಲ ದ್ರಾವಿಡ ಸಂಪ್ರದಾಯಕ್ಕೂ ಒಕ್ಕಲು. ಎಲ್ಲ ದ್ರಾವಿಡ ಭಾಷೆಗೂ ಆಶ್ರಯದಾತರು. ತೆಲುಗು, ತಮಿಳು, ಕೇರಳ ಪ್ರಾಂತಗಳಲ್ಲಿ ಕಾಣದ ಭಾಷಾತೀತವಾದ ಕರ್ನಾಟಕತ್ವ ನಮ್ಮಲ್ಲಿ ಹಿಂದಿನಿಂದಲೂ ಬೆಳೆದುಬಂದಿದೆ. ಅದು ಕರ್ನಾಟಕದ ವೈಶಿಷ್ಟ್ಯ. ಈಗಿನ ಪ್ರಾಂತೀಕರಣದ ರಭಸದಲ್ಲಿ ಈ ವೈಶಿಷ್ಟ್ಯವನ್ನು ಅಲ್ಲಗೆಳೆಯಬಾರದು. ಈ ಭಾಷಾವಾರು ಭೇದ ಭಾವನೆ ನಮ್ಮ ರಾಜಕೀಯದ ದುಷ್ಫಲ. ಅಖಂಡ ಭಾರತದ ನಿರ್ಮಾಣಕ್ಕೆ ಮುಂಚೆ ನಮ್ಮ ನಮ್ಮ ಪ್ರಾಂತೀಯ ದ್ವೇಷ ದಮನವಾಗಬೇಕು. ಒಳಗೂ ಹೊರಗೂ ಎಲ್ಲರೊಡನೆ ಸಮರಸವಾಗಿ ನಡೆದು ನಾವು ಕರ್ನಾಟಕರು ಉಳಿದ ದಾಕ್ಷಿಣಾತ್ಯರಿಗೆ ಮೇಲುಪಂಕ್ತಿಯಾಗಿರೋಣ. ದಾಕ್ಷಿಣಾತ್ಯರೆಲ್ಲ ಒಂದಾಗಿ ಉತ್ತರಾದಿಯವರಿಗೆ ಮೇಲುಪಂಕ್ತಿಯಾಗೋಣ. ನಮ್ಮ ನೆರೆಯವರನ್ನು ಬಿಟ್ಟು ನಮಗೆ ಪ್ರಾಂತ ಬಂದರೆ ಕಣ್ಣುರಿ, ನಮಗೆ ಇಲ್ಲದೆ ಅವರಿಗೆ ಬಂದರೂ ಕಣ್ಣುರಿ. ಎಲ್ಲರಿಗೂ ಒಂದೇ ಮೋಕ್ಷ. ಇದು ಸಮಷ್ಟಿ ರಾಜಕೀಯ.

ಸಮ್ಮೇಳನ ಮತ್ತು ಏಕೀಕರಣ

ಈ ಸಮ್ಮೇಳನದಿಂದ ಕರ್ನಾಟಕದ ಏಕೀಕರಣಕ್ಕೆ ಸಹಾಯವಾಗಿದೆ. ಏಕೀಕರಣಕ್ಕಿಂತ ಮುಖ್ಯವಾದ್ದು ನಮ್ಮ ಜನತೆಯ ಏಕೀಭಾವ. ಆ ಏಕೀಭಾವವೇ ಕರ್ನಾಟಕದ ನಿಜವಾದ ಆಸ್ತಿಭಾರ. ಈ ಮನೋಭಾವವಿಲ್ಲದೆ ರಾಜಕೀಯ ಏಕೀಕರಣ ಫಲಕಾರಿಯಲ್ಲ. ಆ ಏಕೀಭಾವಕ್ಕೆ ಕನ್ನಡ ಸಾಹಿತ್ಯ ಸಮ್ಮೇಳನ ದ್ರೋಹವೆಸಗುತ್ತದೆ. ಕಲಾವಿದರ ಮನಸ್ಸು ನಿರ್ಮತ್ಸರವಾಗಿ ನಿಷ್ಪಕ್ಷವಾಗಿ ಅಭೇದವಾಗಿ ಐಕಮತ್ಯದ ಪರಿಮಳವನ್ನು ಸೂಸಿದರೆ ಕರ್ನಾಟಕ. ಅವರ ಕಣ್ಣಿಗೇ ಕಾಣದೆ ಅವರ ಮನಸ್ಸಿಗೇ ಸಿಕ್ಕದೆ ಇದ್ದರೆ ಸಾಮಾನ್ಯ ಜನಕ್ಕೆ ಕರ್ನಾಟಕ ಗಗನ ಕುಸುಮ.

ಪರಿಷತ್ತಿನ ಗುರಿ

ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದಾಗಲೇ ಅಖಂಡ ಕರ್ನಾಟಕವನ್ನು ತನ್ನ ಕಣ್ಣಿನ ಮುಂದೆ ಇರಿಸಿಕೊಂಡಿತ್ತು. ಪರಿಷತ್ತು ಸದ್ದಿಲ್ಲದೆ ವ್ಯಕ್ತಾವ್ಯಕ್ತವಾಗಿ ಕರ್ನಾಟಕವನ್ನು ಒಂದು ಮಾಡುತ್ತಿದೆ. ಪರಿಷತ್ತನ್ನು ಮೊದಲು ಮಾಡಿದ ಶ್ರೀ ನಂಜುಂಡಯ್ಯನವರಿಂದ ಪ್ರಾರಂಭಮಾಡಿ ಈಗ ಅದರ ಭಾರ ಹೊತ್ತು ನಡೆಸುತ್ತಿರುವ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರೆಗೂ ಪರಿಷತ್ತನ್ನು ರಚಿಸಿದ ಎಲ್ಲರೂ ಕರ್ನಾಟಕ ನಿರ್ಮಾಣದಲ್ಲೇ ತಮ್ಮ ಆಯುಷ್ಯವನ್ನು ಕಳೆದಿದ್ದಾರೆ.

❖❖

೩೦ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಸಿ. ಕೆ. ವೆಂಕಟರಾಮಯ್ಯ



ಪ್ರಸಿದ್ಧ ವಾಗ್ಮಿಗಳು, ಗ್ರಂಥಕರ್ತರೂ ಆದ ಸಿ. ಕೆ. ವೆಂಕಟರಾಮಯ್ಯನವರು ಕೃಷ್ಣಪ್ಪ-ನಂಜಮ್ಮನವರಿಗೆ ಪುತ್ರರಾಗಿ ೧೦-೧೨-೧೮೯೬ರಲ್ಲಿ ಜನಿಸಿದರು. ಸೋಲೂರು, ಕುಂದೂರು ಮಾಗಡಿ, ಚೆನ್ನಪಟ್ಟಣಗಳಲ್ಲಿ ಶಾಲಾ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೇರಿ ಬಿ.ಎ. ಪದವಿ ಗಳಿಸಿದರು. ಮುಂಬೈಗೆ ಹೋಗಿ ಎಂ.ಎ. ಮತ್ತು ಎಲ್.ಎಲ್.ಬಿ. ಪದವಿಪಡೆದರು.

ಶ್ರೀರಂಗಪಟ್ಟಣದಲ್ಲಿ ವಕೀಲಿ ನಡೆಸಿದರು. ೧೯೨೪ರಲ್ಲಿ ಮೈಸೂರು ಸರ್ಕಾರದಲ್ಲಿ ಭಾಷಾಂತರಕಾರರಾಗಿ ಸೇರಿ ೩೦ ವರ್ಷಗಳ ಕಾಲ ನಿಸ್ಪೃಹಸೇವೆ ಸಲ್ಲಿಸಿ ನಿವೃತ್ತರಾದರು.

ಇವರು ಮಾತಿನಲ್ಲಿ ಮೋಡಿ ಮಾಡಬಲ್ಲ ವಾಗ್ಮಿಗಳಾಗಿದ್ದರು. ಬರಹದಲ್ಲಿ ಸರಳವಾಗಿ ಜನಮೆಚ್ಚುಗೆ ಪಡೆಯುವ ಗ್ರಂಥಗಳನ್ನು ರಚಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಸಿಕೆವೆಂ ೧೯೩೬-೧೯೩೭ ಮತ್ತು ೧೯೩೮-೧೯೪೦ರ ಅವಧಿಗಳಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದರು. ೫ ವರ್ಷಗಳ ಕಾಲ ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾಗಿದ್ದರು.

ಇವರ ನಿಸ್ಪೃಹ ಸೇವೆಯನ್ನು ಗೌರವಿಸಿ ಮೈಸೂರು ಮಹಾರಾಜರು ರಾಜಸೇವಾಸಕ್ತ ಬಿರುದನ್ನು ಇತ್ತಿದ್ದರು. ಭಾರತ ಸರ್ಕಾರ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿತು. ರಾಜ್ಯ ಸಾಹಿತ್ಯ ಅಕಾಡೆಮಿ ೧೯೭೦ರಲ್ಲಿ ಇವರಿಗೆ ಗೌರವ ಪ್ರಶಸ್ತಿ ಸಲ್ಲಿಸಿತು. ೧೯೪೭ರಲ್ಲಿ ಹರಪನಹಳ್ಳಿಯಲ್ಲಿ ೩೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೭೧ರಲ್ಲಿ ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಆಯ್ಕೆಯಾಗಿದ್ದರು.

ಭಾಷಣಗಳಿಂದ ಪ್ರಖ್ಯಾತರಾದ ಸಿ. ಕೆ. ವೆಂಕಟರಾಮಯ್ಯನವರು ಶ್ರೇಷ್ಠ ಬರಹಗಾರರು ಆಗಿದ್ದರು. ಅವರು ನಾಟಕ, ಸಣ್ಣಕತೆ, ಜೀವನಚರಿತ್ರೆಗಳಲ್ಲಿ ಸಿದ್ಧಹಸ್ತರಾಗಿದ್ದರು. ಅವರು ಬರೆದ ಕೃತಿಗಳು ಹೀಗಿವೆ:

ಹಳ್ಳಿಯ ಕಥೆಗಳು, ಮಂಡೋದರಿ (ನಾಟಕ)

ತುರಾಯಿ (ಕಥೆಗಳು), ನಚಿಕೇತ (ನಾಟಕ)

ಬುದ್ಧ (ಜೀವನಚರಿತ್ರೆ), ಆಳಿದ ಮಹಾಸ್ವಾಮಿಯವರು (ಜೀವನ ಚರಿತ್ರೆ)

ಪೈಗಂಬರ್ (ಜೀವನ ಚರಿತ್ರೆ), ಹರ್ಷವರ್ಧನ (ಜೀವನಚರಿತ್ರೆ) ಇತ್ಯಾದಿ

ಜನಪ್ರಿಯ ಸಾಹಿತಿಗಳೂ ವಿದ್ವಾಂಸರೂ ಆಗಿದ್ದ ಸಿ. ಕೆ. ವೆಂಕಟರಾಮಯ್ಯನವರು ೩-೪-೧೯೭೫ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೦

ಅಧ್ಯಕ್ಷರು, ಸಿ.ಕೆ. ವೆಂಕಟರಾಮಯ್ಯ

ದಿನಾಂಕ ೭, ೮, ೯ ಮೇ ೧೯೪೭

ಸ್ಥಳ : ಹರಪನಹಳ್ಳಿ, ಬಳ್ಳಾರಿ

ಪರಿಷತ್ತಿನಿಂದ ನಡೆಯಬೇಕಾದ ಕಾರ್ಯಗಳು

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾದುದೇ ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಗೊಳಿಸಿ, ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಹೆಚ್ಚಿಸುವ ಉದ್ದೇಶದಿಂದ ಅದು ಸ್ಥಾಪಿತವಾದಾಗಿನಿಂದ ಇದುವರೆಗೂ ಆ ಉದ್ದೇಶಸಾಧನೆಗಾಗಿ ಅದರಿಂದ ಯಥಾಶಕ್ತಿಯಾಗಿ ಸೇವೆ ಸಲ್ಲುತ್ತಾ ಬಂದಿದೆ. ಪರಿಷತ್ತಿನ ಸಂಬಂಧವಾಗಿ ಅನೇಕ ಮಂದಿ ಸಾಹಿತ್ಯ ಪ್ರೇಮಿಗಳು ಶ್ರದ್ಧಾಸಕ್ತಿಗಳಿಂದ ಕೆಲಸ ಮಾಡಿಯೂ ಕೆಲಸ ಮಾಡುತ್ತಲೂ ಬಂದಿದ್ದಾರೆ. ಕನ್ನಡಿಗರ ಹೃದಯದಲ್ಲಿ ಇಂದು ಕನ್ನಡದ ಮೇಲೆ ಮಮತೆಯೇನಾದರೂ ಹುಟ್ಟಿದ್ದರೆ, ಅದಕ್ಕೆ ಮೂಲ ಕಾರಣಗಳಿಂದ ಪ್ರೇರಣೆಗಳಲ್ಲಿ ಪರಿಷತ್ತಿನ ಸೇವೆಯೂ ಮುಖ್ಯವಾದವುಗಳಲ್ಲೊಂದೆಂದು ಧಾರಾಳವಾಗಿ ಹೇಳಬಹುದಾಗಿದೆ.

ನಾಡಿನ ಜನರೆಲ್ಲಾ ಸದಸ್ಯರಾಗಬೇಕು

ಪರಿಷತ್ತಿಗೆ ಮಹಾಜನರಿಂದ ಎಷ್ಟರಮಟ್ಟಿಗೆ ಪ್ರೋತ್ಸಾಹವೂ ಸಹಾಯವೂ ದೊರೆಯುವುದು ಆವಶ್ಯಕವೋ ಅಷ್ಟರಮಟ್ಟಿಗೆ ಅವು ದೊರೆತಿಲ್ಲ. ಅದರ ಸದಸ್ಯ ಸಂಪತ್ತು ಇನ್ನೂ ೨,೫೦೦ಕ್ಕಿಂತ ಹೆಚ್ಚಾಗಿಲ್ಲದಿರುವುದು ನಿಜವಾಗಿಯೂ ಶೋಚನೀಯವಾಗಿದೆ. ಈ ಅಲ್ಪಸಂಖ್ಯೆಯ ಸದಸ್ಯರಲ್ಲಿ ತಾವು ಕೊಡಬೇಕಾದ ಹಣವನ್ನು ಪೂರ್ತಿಯಾಗಿ ಸಲ್ಲಿಸಿರತಕ್ಕವರ ಸಂಖ್ಯೆಯು ತೀರ ಕಡಿಮೆ. ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರ ಸರ್ಕಾರದವರ ಉದಾರಾಶ್ರಯವೂ ಸಹಾಯವೂ ಇಲ್ಲದೆ ಹೋಗಿದ್ದರೆ ಪರಿಷತ್ತಿನಿಂದ ಈಗ ನಡೆಯುತ್ತಿರುವಷ್ಟು ಭಾಷಾಸೇವೆಯು ನಡೆಯುವುದಕ್ಕೂ ಅವಕಾಶವಿರುತ್ತಿರಲಿಲ್ಲ. ಒಟ್ಟು ಒಂದೂವರೆ ಕೋಟಿಗಿಂತಲೂ ಹೆಚ್ಚು ಮಂದಿ ಕನ್ನಡಿಗರಿರುವ ನಾಡಿನಲ್ಲಿ ಪರಿಷತ್ತಿನ ಸದಸ್ಯರ ಸಂಖ್ಯೆ ೨,೨೫೫ ಕ್ಕಿಂತ ಹೆಚ್ಚಾಗಿಲ್ಲದಿರುವುದು ವಿಷಾದಕರವಾಗಿದೆ. ಒಂದು ಲಕ್ಷಮಂದಿಗಳಾದರೂ ಪರಿಷತ್ತಿನ ಸದಸ್ಯರಾಗಕೂಡದೆ ?

ಹಳ್ಳಿಗಳತ್ತ ಪರಿಷತ್ತು ಸಾಗಬೇಕು

ಭರತಖಂಡದಲ್ಲಿ ಸ್ವಾತಂತ್ರ್ಯದ ಸುವರ್ಣಯುಗವು ಮುಂದಿನ ವರ್ಷದಿಂದ ಪ್ರಾರಂಭವಾಗುತ್ತದೆ. ಪ್ರಪಂಚದ ನಾನಾ ಜನಾಂಗಗಳ ಜೊತೆಯಲ್ಲಿ ಭಾರತೀಯರೂ ಸಮಾನಸ್ಕಂಧರಾಗಿ ತಲೆಯೆತ್ತಿ ನಿಂತು ಒಟ್ಟು ಮಾನವ ವರ್ಗದ ಶ್ರೇಯಸ್ಸಿಗೇ ಸಾಧಕವಾಗುವಂತೆ ಅಮೂಲ್ಯವಾದ ಸೇವೆಯನ್ನು ಸಲ್ಲಿಸಬೇಕಾಗಿದೆ. ಅದಕ್ಕೆ ಸಹಾಯವಾಗುವಂತೆ ಕನ್ನಡಿಗರೂ ತಮ್ಮ ಪಾಲಿನ ಕೆಲಸವನ್ನು ನಿರ್ವಹಿಸಬೇಕು. ಅದು ಕೇವಲ ಚಪ್ಪಾಳೆಗಳಿಂದಾಗಲಿ ಜಯಕಾರಗಳಿಂದಾಗಲಿ ಸಾಗುವಂತಿಲ್ಲ; ಕಲಹಗಳಿಂದಲಂತೂ ಅದು ಸುತರಾಂ ಸಾಗಲಾರದು ಅದು ಸಮರ್ಪಕವಾಗಿ ಸಾಗಬೇಕಾದರೆ ಅಪಾರವಾದ ಶಕ್ತಿ ಸಾಮರ್ಥ್ಯಗಳು ವೃದ್ಧಿಯಾಗಿ ಅವುಗಳೆಲ್ಲ ಒಮ್ಮುಖವಾಗಿ ರಚನಾತ್ಮಕವಾದ ಕ್ರಿಯಾ ಮಾಧುರ್ಯದ ಕಡೆಗೆ ತಿರುಗಬೇಕು. ಹಾಗಾಗುವುದಕ್ಕೆ ಜ್ಞಾನಾಭಿವೃದ್ಧಿಯೇ ಮೂಲಾಧಾರ. ಅಜ್ಞಾನದ ಅಂಧಕಾರದಲ್ಲಿ ತತ್ತರಿಸುತ್ತಿರುವ ಹಳ್ಳಿಹಳ್ಳಿಗೂ ಊರೂರಿಗೂ, ಸುಜ್ಞಾನದ ರತ್ನದೀಪಗಳನ್ನೊದಗಿಸುವ ದೊಡ್ಡ ಸಂಸ್ಥೆಯೊಂದು ಸಿದ್ಧವಾಗಬೇಕು. ನಮ್ಮ ಪರಿಷತ್ತು ಆ ದೊಡ್ಡ ಸಂಸ್ಥೆಯಾಗಿ ಪರಿಣಮಿಸಬೇಕೆಂಬುದು ನನ್ನ ಹಿರಿಯ ಬಯಕೆ. ನಮ್ಮ ಪರಿಷತ್ತು ಜನತೆಯ ವಿಶ್ವವಿದ್ಯಾನಿಲಯವಾಗಬೇಕೆಂಬುದು ನನ್ನ ತೀವ್ರಾಭಿಲಾಷೆ.

ಪುಸ್ತಕ ಪ್ರಕಟನೆ ಕೆಲಸ

ಮೊದಲನೆಯದಾಗಿ ಪುಸ್ತಕ ಪ್ರಕಟನೆಯ ಕೆಲಸ: ಪರಿಷತ್ತಿನಿಂದ ಪ್ರೌಢವಾದ ಗ್ರಂಥಗಳೂ ಪ್ರಕಟವಾಗಬೇಕು; ಅಲ್ಲದೆ ನಾನಾ ವಿಚಾರಗಳಲ್ಲಿ ತಿಳಿವಳಿಕೆಯನ್ನು ಹೆಚ್ಚಿಸುವಂತೆ ತಿಳಿಗನ್ನಡದಲ್ಲಿ ಬರೆದ ಸುಲಭಬೆಲೆಯ ಚಿಕ್ಕ ಚಿಕ್ಕ ಪುಸ್ತಕಗಳೂ ಪ್ರಕಟವಾಗಬೇಕು. ಸಾಧ್ಯವಾದಲ್ಲಿ ಓಲೆಯಗರಿ ಪುಸ್ತಕಗಳನ್ನು ಸಂಗ್ರಹಿಸುವ ಕೆಲಸವೂ ಮತ್ತು ಸಂಶೋಧನೆಯ ಕೆಲಸವೂ ನಡೆಯಬೇಕು. ವಿಶ್ವವಿದ್ಯಾನಿಲಯವೇ ಮುಂತಾದ ಸಂಸ್ಥೆಗಳಿಂದಲೂ, ಅನೇಕ ಗ್ರಂಥಮಾಲೆಗಳು ಮತ್ತು ಪ್ರಕಟನಮಂದಿರಗಳಿಂದಲೂ ಈ ಕೆಲಸವು ಈಗ ನಡೆಯುತ್ತಿರುವುದು ನಿಜ; ಅದು ಅಭಿನಂದನಯೋಗ್ಯವೂ ಹೌದು.

ಆದಾಗ್ಯೂ, ಈಗ ನಡೆದಿರುವ ಕೆಲಸವು ಸಾಸಿವೆಯಷ್ಟು ಮಾತ್ರ; ನಡೆಯಬೇಕಾಗಿರುವ ಕೆಲಸವು ಬೆಟ್ಟದಷ್ಟಿದೆ. ಪ್ರೌಢವಾದ ಗ್ರಂಥರಚನೆ ಮಾಡಲು ಬಹುಮಾನಗಳನ್ನು ಸಲ್ಲಿಸಬೇಕು. ಬಹುಮಾನದ ಮೊತ್ತವು ಸಾವಿರ ರೂಪಾಯಿಗಳಿಗೆ ಕಡಮೆಯಾಗಿರಬಾರದು; ದ್ರವ್ಯಾನುಕೂಲತೆಗೆ ತಕ್ಕಂತೆ ಬಹುಮಾನದ ಮೊಬಲಗೂ, ಬಹುಮಾನಗಳ ಸಂಖ್ಯೆಯೂ ಇರಬಹುದು. ಬಹುಮಾನದ ಮೊಬಲಗು ಎಷ್ಟು ಹೆಚ್ಚಾಗಿದ್ದರೆ ಅಷ್ಟು ಉತ್ತಮ. ಸ್ಪರ್ಧೆಗೆ ಬಂದ ಗ್ರಂಥಗಳಲ್ಲಿ ಉತ್ತಮವಾದವುಗಳಿಗೆ ಬಹುಮಾನಗಳನ್ನು ಕೊಡುತ್ತಾ ಬಂದಷ್ಟೂ ಶ್ರೇಷ್ಠವಾದ ಗ್ರಂಥಗಳು ಹೊರಬೀಳಲು ಅನುಕೂಲಿಸುತ್ತವೆ. ಪ್ರಕಟವಾದ ಗ್ರಂಥಗಳಲ್ಲಿ ಉತ್ತಮವಾದವುಗಳಿಗೆ ಈಗ ಬಹುಮಾನಗಳನ್ನು ಕೊಡುತ್ತಿರುವುದು ಸರಿಯಷ್ಟೆ. ಅದರ ಜೊತೆಗೆ ಈ ಸ್ಪರ್ಧೆಯು ಪ್ರೌಢಗ್ರಂಥಗಳ ಸಲುವಾಗಿ ಮಾತ್ರವೇ ನಡೆಯುತ್ತ ಬರಬೇಕೆಂಬುದು ನನ್ನ ಸಲಹೆ. ಉಪಯುಕ್ತವಾದ ವಿಚಾರಗಳನ್ನು ಕುರಿತು ಬರೆದ ಸಣ್ಣಸಣ್ಣಪುಸ್ತಕಗಳನ್ನು ಪ್ರಕಟಿಸುವ ಕೆಲಸವೂ ಅತ್ಯಾವಶ್ಯಕವಾಗಿದೆ; ಮುಖ್ಯವಾಗಿ ವಿಜ್ಞಾನ ವಿಚಾರಗಳಿಗೂ ಜನಜೀವನಕ್ಕೆ ಸಂಬಂಧಪಟ್ಟ ಇತರ ವಿಚಾರಗಳಿಗೂ ಗಮನಕೊಟ್ಟು ಆ ಬಗೆಯ ಪುಸ್ತಕಗಳನ್ನೂ ಪ್ರಕಟಿಸಬೇಕು. ಹಾಗೆ ಪ್ರಕಟಿಸುವ ಪುಸ್ತಕಗಳಿಂದ ಜನತೆಗೆ ಬಹಳ ಪ್ರಯೋಜನವಾಗುತ್ತದೆ. ಕನ್ನಡದಲ್ಲಿ ಈಚಿನ ವರ್ಷಗಳಲ್ಲಿ ಶ್ರೇಷ್ಠವಾದ ಅನೇಕ ಸಾಹಿತ್ಯ ಕೃತಿಗಳು ಹೊರಬಿದ್ದಿವೆಯೆಂಬುದನ್ನೂ ಸೊಗಸಾದ ಕವಿತೆಗಳೂ, ಕಥೆಗಳೂ, ನಾಟಕಗಳೂ, ಹಾಸ್ಯ ಪ್ರಬಂಧಗಳೂ, ಹರಟೆಗಳೂ, ಕಾದಂಬರಿಗಳೂ ಪ್ರಕಟವಾಗಿರುವುದನ್ನೂ ನಾನು ಸಂತೋಷದಿಂದ ಒಪ್ಪುತ್ತೇನೆ. ಆದರೂ, ಸೊಬಗಿನ ಸಾಹಿತ್ಯವು ವೃದ್ಧಿಯಾಗಿರುವ ಮಟ್ಟಿಗೆ ಸಂಗತಿಗಳನ್ನು ತಿಳಿಸುವ ಸಾಹಿತ್ಯವು ವೃದ್ಧಿಯಾಗಿಲ್ಲ. ಅಡಿಗೆಯ ಸಾಮಾನುಗಳಾದ ಅಕ್ಕಿ ಬೇಳೆ ಮುಂತಾದ ಸಾಮಗ್ರಿಗಳನ್ನು ತೀರ ಅಲ್ಪಸ್ವಲ್ಪವಾಗಿ ಸಂಗ್ರಹಿಸಿ, ಲೆಕ್ಕವಿಲ್ಲದಷ್ಟು ಬೆಳ್ಳಿಯ ತಟ್ಟೆಗಳಲ್ಲಿ ಚಿಗುರು ವೀಳೆಯಗಳನ್ನು ಸಿದ್ಧಪಡಿಸಿದ ಮದುವೆ ಮನೆಯಂತಿದೆ, ನಮ್ಮ ಕನ್ನಡ ಸಾಹಿತ್ಯದ ಇಂದಿನ ಸ್ಥಿತಿ. ಇದು ತಪ್ಪುವಂತೆ ಸ್ವತಂತ್ರವಾದ ಗ್ರಂಥಗಳೂ, ಇತರ ಭಾಷೆಗಳಿಂದ ಅನುವಾದ ಮಾಡಿದ ಗ್ರಂಥಗಳೂ ಪ್ರಕಟವಾಗುವ ಕೆಲಸ ನಡೆಯಬೇಕು.

ಕಲಾ ಸಾಹಿತ್ಯ ಪ್ರಚಾರ ಕಾರ್ಯ

ಎರಡನೆಯದಾಗಿ, ಪ್ರಚಾರ ಕಾರ್ಯ ವಿಚಾರ. ಪರಿಷತ್ತಿನ ಆಶ್ರಯದಲ್ಲಿ ಕನ್ನಡ ನಾಡಿನ ಎಲ್ಲ ಪ್ರದೇಶಗಳಿಗೂ ಉಪನ್ಯಾಸಕರೂ, ಗಮಕಿಗಳೂ ಸಾಧ್ಯವಾದಲ್ಲಿ ಸಂಗೀತಗಾರರೂ ಮತ್ತು ಕೀರ್ತನಕಾರರೂ ಹೋಗಿ ಸೇವೆ ಸಲ್ಲಿಸುವಂತಾಗಬೇಕು. ಪರಿಷತ್ತಿನಲ್ಲಿ ವರ್ಷದಲ್ಲಿ ನಡೆಯಬೇಕಾದ ಉಪನ್ಯಾಸಗಳೇ ಮುಂತಾದ ಕಾರ್ಯಕಲಾಪಗಳ ಮತ್ತು ವ್ಯಾಸಂಗಗೋಷ್ಠಿ ಮುಂತಾದ ವಿಶೇಷ ಕಾರ್ಯಗಳ ಪಂಚಾಂಗವನ್ನು ಮೊದಲೇ ಸಿದ್ಧಗೊಳಿಸಬೇಕು. ಕಾವ್ಯವಾಚನಗಳು, ನಾಟಕ ಪ್ರದರ್ಶನಗಳು, ಸಂಗೀತಗಳು ಮುಂತಾದವುಗಳು ಈಗ ನಡೆಯುತ್ತಿರುವುದಕ್ಕಿಂತ ಹೆಚ್ಚಾಗಿ ನಡೆಯುಬೇಕು. ಪಂಪ ಜಯಂತಿ, ರನ್ನ ಜಯಂತಿ, ತ್ಯಾಗರಾಜ ಜಯಂತಿ, ಶಂಕರ ಜಯಂತಿ, ರಾಮಾನುಜ ಜಯಂತಿ, ಬಸವ ಜಯಂತಿ, ಮಧ್ವ ಜಯಂತಿ, ವಿದ್ಯಾರಣ್ಯ ಜಯಂತಿ, ಮುಂತಾದವುಗಳು ನಡೆಯಬೇಕು. ವಸಂತ ಸಾಹಿತ್ಯೋತ್ಸವ, ನಾಡಹಬ್ಬ ಮುಂತಾದವುಗಳೂ ನಡೆಯಬೇಕು. ಕನ್ನಡ ನಾಡಿನ ನಾನಾ ಸಂಸ್ಥೆಗಳೂ ಪರಿಷತ್ತಿನ ಅಂಗಸಂಸ್ಥೆಗಳಾಗಿ ಸೇರಿ ಸಹಕರಿಸಿ ತಮ್ಮ ತಮ್ಮ ಊರುಗಳಲ್ಲಿಯೂ ಇವುಗಳೆಲ್ಲ ನಡೆದು ಜ್ಞಾನಪ್ರಚಾರವಾಗುವಂತೆ ಮಾಡಬೇಕು. ಈ ಬಗೆಯ ಉತ್ಸವ ಕಾಲಗಳಲ್ಲಿ ನಡೆದ ಭಾಷಣಗಳೆಲ್ಲ ಗಾಳಿಗೆ ಹೋಗದಂತೆ ಅವುಗಳನ್ನು ಆ ಆ ಸಂಸ್ಥೆಗಳು ಪ್ರಕಟಿಸುವ ಕೆಲಸವೂ ನಡೆಯಬೇಕು. ಸರ್ಕಾರದವರ ಸಹಾಯದಿಂದಲೂ, ಸ್ಥಳೀಯ ಸಂಸ್ಥೆಗಳ (ಎಂದರೆ ಪೌರಸಭೆಗಳು, ಗ್ರಾಮಪಂಚಾಯಿತಿಗಳು ಮುಂತಾದವುಗಳ) ಸಹಾಯದಿಂದಲೂ, ಸ್ಥಳಪರಸ್ಥಳಗಳ ಮಹಾಜನರ ಸಹಾಯದಿಂದಲೂ ಗ್ರಾಮ ಗ್ರಾಮದಲ್ಲಿಯೂ ಒಂದೊಂದು ಪುಟ್ಟ ಪುಸ್ತಕ ಭಂಡಾರವನ್ನೇರ್ಪಡಿಸುವಂತೆ ಮಾಡಲು ಪರಿಷತ್ತಿನಿಂದ ಪ್ರೇರಣೆಯೂ ಪ್ರಯತ್ನವೂ ನಡೆಯಬೇಕು. ಅಲ್ಲದೆ ಪರಿಷತ್ತಿನ ಪುಸ್ತಕ ಭಂಡಾರವು ಇನ್ನೂ ದೊಡ್ಡದಾಗಬೇಕು.

ಇಂದು ಜನಜೀವನ ಬರಡು

ಮೂರನೆಯದಾಗಿ ಅಭಿರುಚಿಯನ್ನು ರೂಪಿಸುವ ಕೆಲಸದ ಮಾತು. ಇದನ್ನು ನೊಂದ ಮನಸ್ಸಿನಿಂದ ನುಡಿಯುತ್ತಿದ್ದೇನೆ. ಓದುಬರಹಗಳ ಗಂಧವಿಲ್ಲದ ಹಳ್ಳಿಗಳಲ್ಲಿ ಬಡತನದ ಬಾಧೆಯಿಂದಲೂ ಕಾರ್ಪಣ್ಯದಿಂದಲೂ ಕಂದಿಹೋಗಿರುವ ನಮ್ಮ ದೇಶಬಾಂಧವರ ಅಭಿರುಚಿಯಂತೂ ವೃದ್ಧಿಯಾಗಿಲ್ಲ. ಆದರೆ, ವಿದ್ಯಾವಂತರೆನಿಸಿ ಧನಿಕರಾಗಿರುವ ಪಟ್ಟಣಿಗರಿಗೆ ಕೂಡ ಸಂಗೀತ, ಸಾಹಿತ್ಯ ಮಂತಾದವುಗಳಲ್ಲಿ ಅಭಿರುಚಿಯಿಲ್ಲದಿರುವುದು ನಾವು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡುತ್ತದೆ. ಅದರಲ್ಲಿ ಕೆಲವರಿಗಂತೂ, ತಮಗೆ ಅವುಗಳಲ್ಲಿ ಅಭಿರುಚಿಯಿಲ್ಲದಿರುವುದೇ ಒಂದು ಹೆಮ್ಮೆ; ನಮ್ಮ ಅರಸಿಕತೆಯೇ

ತಮಗೊಂದು ಭೂಷಣವೆಂಬ ಭಾವನೆ. ಇದರ ಪರಿಣಾಮವಾಗಿ ನಮ್ಮ ನಾಡಿನ ಲಲಿತ ಕಲೆಗಳು ಸೊರಗುತ್ತಿವೆ. ಸಂಗೀತಗಾರರೂ, ಗ್ರಂಥಕರ್ತರೂ, ಪತ್ರಿಕೋದ್ಯೋಗಿಗಳೂ ಬಹುಮಂದಿ ಕಾರ್ಪಣ್ಯದ ಸುಳಿಗೆ ಸಿಕ್ಕಿ ತಾವು ಎಷ್ಟು ವಿದ್ವತ್ತನ್ನು ಗಳಿಸಿ ಫಲವೇನೆಂದು ಕೊರಗುತ್ತಿದ್ದಾರೆ. ಸಂಗೀತದ ಮೇಲಿನ ಅಭಿರುಚಿಯಂತೂ ಪಾತಾಳಕ್ಕಿಳಿದು ಹೋಗಿ ಸಿನಿಮಾ ಹಾಡುಗಳ ಹುಚ್ಚು ಹಿಡಿದುಹೋಗಿದೆ. ನಮ್ಮ ನಾಡಿನ ನಿಜವಾದ ಚರಿತ್ರೆಯೇ ನಮಗೆ ತಿಳಿಯದು. ನಮ್ಮ ನಾಡಿನ ವಿಭೂತಿ ಪುರುಷರನ್ನು ಹೊರಗಿನವರೆಲ್ಲ ಹೊಗಳುತ್ತಿದ್ದರೂ ಅವರಲ್ಲಿ ನಮಗೆ ತಾತ್ಸಾರ. ವಿದ್ಯಾವಂತರೆನಿಸಿಕೊಂಡಿರುವವರಲ್ಲೇ ಬಹು ಮಂದಿಗಳಿಗೆ ಸಹೃದಯತೆ ರಸಿಕತೆಗಳ ಗಂಧವೇ ಗೊತ್ತಿಲ್ಲ ; ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಕೊಳ್ಳುವ ಅಭ್ಯಾಸವೇ ಇಲ್ಲ ; ಉಚಿತವಾಗಿ ಅವುಗಳನ್ನು ಕೊಟ್ಟರೂ ಓದಲು ಮನಸ್ಸಿಲ್ಲ ; ಸಂಗೀತ ಗೋಷ್ಠಿಗಳಿಗೂ ನಾಟಕ ಮುಂತಾದವುಗಳಿಗೂ ಆಗಾಗ್ಗೆ ಒಂದೊಂದು ಸಲವಾದರೂ ಹೋಗಿ ಪ್ರೋತ್ಸಾಹಿಸುವುದಂತೂ ಜಾಯಮಾನಕ್ಕೆ ಅಂಟಿಬಂದಿಲ್ಲ. ಕೆಲವರಿಗಂತೂ ತಮಗಿಂತ ಅಲ್ಪಸ್ವಲ್ಪ ಆದಾಯ ಕಡಮೆಯಾಗಿರುವವರೊಡನೆ ಸ್ನೇಹವಾಗಿ ಮಾತನಾಡುವಷ್ಟು ಸೌಜನ್ಯವೂ ಇಲ್ಲ, ಒಗ್ಗಟ್ಟಂತೂ ಕನಸಿನ ಮಾತು. ಈ ಬಗೆಯ ಬರಡು ಜೀವನವು ನಮ್ಮದು.

ಬರಡು ಜೀವನ ಬದಲಾಗಲು ದಾರಿ

ಈ ನ್ಯೂನ್ಯತೆಯು ಪರಿಹಾರವಾಗಬೇಕಾದರೆ ಧನಿಕರಿಗೆ ಗೌರವ ಕೊಡುವುದಕ್ಕಿಂತಲೂ ವಿದ್ಯಾವಂತರಿಗೆ ಗೌರವ ಕೊಡುವುದು ಹೆಚ್ಚಬೇಕು. ಹಳ್ಳಿಹಳ್ಳಿಗೂ ನಮ್ಮ ಯುವಕರು ಹೋಗಬೇಕು ; ಕಾವ್ಯವಾಚನ, ಸಂಗೀತ, ಭಾಷಣಗಳು ಮುಂತಾದವುಗಳಿಂದ ಜನಗಳ ಅಭಿರುಚಿಯನ್ನು ತಿದ್ದಿ ರೂಪಿಸಬೇಕು. ಈ ಕೆಲಸವೂ ಪರಿಷತ್ತಿನ ಆಶ್ರಯದಲ್ಲಿ ನಡೆಯಬೇಕು ; ಸ್ಥಳೀಯ ಸಂಸ್ಥೆಗಳೇ ಮುಂತಾದವುಗಳ ಸಹಾಯದಿಂದ ಈ ಕೆಲಸವು ನಡೆಯಬೇಕು. ಬೇಸಗೆ ರಜಾ, ನವರಾತ್ರಿ ರಜಾ, ಮುಂತಾದ ಬಿಡುವಿನ ಕಾಲಗಳಲ್ಲಿ ವಿದ್ಯಾರ್ಥಿಗಳಾದ ತರುಣರು ನಾನಾ ಕೇಂದ್ರಗಳನ್ನು ಗೊತ್ತುಮಾಡಿಕೊಂಡು ಈ ಕೆಲಸಕ್ಕೆ ಗಮನ ಕೊಡಬಹುದು. ನಾನು ವಿದ್ಯಾರ್ಥಿಯಾಗಿದ್ದಾಗ್ಗೆ ಕುಮಾರವ್ಯಾಸ ಭಾರತ, ರಾಮಾಯಣ ಮುಂತಾದವುಗಳನ್ನು ಓದಿ ಹೇಳಿದ್ದೇನೆ ; ಆಗ ಹಳ್ಳಿಯವರಿಗೆ ಉಂಟಾದ ಆನಂದವನ್ನು ಕಂಡು ಹರ್ಷಿಸಿದ್ದೇನೆ. ಕಾಲೇಜು ವಿದ್ಯಾರ್ಥಿಗಳೆ ಮುಂತಾದವರು ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ ಉಪಾಧ್ಯಾಯರುಗಳಿಗಾಗಿ ರಜಾದ ದಿನಗಳಲ್ಲಿ ಅಲ್ಲಲ್ಲಿ ಸಾಹಿತ್ಯ ವಿಜ್ಞಾನ, ಕಲೆಗಳು ಮುಂತಾದ ಸಂಸ್ಕೃತಿವರ್ಧಕವಾದ ವಿಚಾರಗಳಲ್ಲಿ ಉಪನ್ಯಾಸ ಗೋಷ್ಠಿಗಳನ್ನು ಏರ್ಪಡಿಸಬಹುದು ; ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಇದೇ ಉದ್ದೇಶದಿಂದ ವಸಂತಸಾಹಿತ್ಯೋತ್ಸವ ಕಾಲದಲ್ಲಿ ಹಿಂದೆ ನಡೆಯುತ್ತಿದ್ದಂತೆ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಬಹುದು ; ಅದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿರುವಂತೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಚೇರಿಗಳಲ್ಲಿ ಬೇಸಿಗೆ ರಜಾದ ಅವಧಿಯಲ್ಲಿ ತರುಣರಿಂದಲೂ ಇತರರಿಂದಲೂ ಉಪನ್ಯಾಸಮಾಲೆಗಳನ್ನೇರ್ಪಡಿಸಬಹುದಾಗಿದೆ. (ಆಹಾರ ಪರಿಸ್ಥಿತಿಯು ಬಿಕ್ಕಟ್ಟಾಗಿರುವ ಅವಧಿಯಲ್ಲಿ ಇದು ನಡೆಯುವುದು ಬಹುಶಃ ಹೆಚ್ಚಾಗಿ ಸಾಗಲಾರದು). ಹೀಗೆ ಉಪಾಧ್ಯಾಯರ ಅಭಿರುಚಿಯನ್ನು ವೃದ್ಧಿಮಾಡಿ ಅವರ ತಿಳಿವಳಿಕೆಯನ್ನು ಹೆಚ್ಚಿಸಿದರೆ ಅವರಲ್ಲಿ ವ್ಯಾಸಂಗ ಮಾಡುವವರಿಗೆಲ್ಲ ಬಹಳ ಪ್ರಯೋಜನವಾಗುವುದು.

ಯುವಕರ ಪಾತ್ರ

ಇವಕ್ಕೆಲ್ಲ ಅಗತ್ಯವಾದ ಜನಬಲವೂ ಧನಬಲವೂ ಒದಗುವ ಬಗೆ ಹೇಗೆಂಬ ಪ್ರಶ್ನೆಯು ಹುಟ್ಟುವುದು ಸಹಜವಾಗಿಯೆ ಇದೆ. ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಒಟ್ಟಿನ ಮೇಲೆ ಪರಿಷತ್ತಿನ ಉದ್ದೇಶಗಳಿಗೆ ವಿರೋಧ ಬಾರದಂತೆ ಯುವಜನ ಶಾಖೆ ವಿದ್ಯಾರ್ಥಿಗಳೇ ಮೊದಲಾದ ಯುವಕರ ಸಹಾಯ ಸಹಾನುಭೂತಿಯನ್ನು ಪಡೆಯುವುದರಿಂದಲೂ, ಕರ್ಣಾಟಕ ಸಂಘಗಳು, ಸ್ಥಳೀಯ ಸಂಸ್ಥೆಗಳು ಮುಂತಾದವುಗಳ ಮತ್ತು ಪರಿಷತ್ತಿನ ಸದಸ್ಯರುಗಳ ಸಹಕಾರವನ್ನು ಪಡೆಯುವುದರಿಂದಲೂ, ತಕ್ಕಷ್ಟು ಜನಬಲವು ಒದಗಬಹುದು. ಪರಿಷತ್ತಿನ ಅಂಗಶಾಖೆಯಾಗಿ "ಯುವಜನ ಶಾಖೆ"ಯೊಂದು ಇರಬೇಕೆಂಬ ಒಂದು ನಿರ್ಣಯವೂ ಈ ಸಾರಿ ಚರ್ಚೆಗೆ ಬರುವುದಾಗಿದೆ. ನಾಡಿನ ಯುವಜನರೇ ಅದರ ಕ್ರಿಯಾಶಕ್ತಿಯ ಪ್ರತೀಕ. ಸುಶಿಕ್ಷಿತವಾದ ಯುವಕರ ಉತ್ಸಾಹವೂ ಸಹೃದಯರಾದ ವೃದ್ಧರ ಅನುಭವವೂ ಒಟ್ಟುಗೂಡಿದರೆ ದೇಶೋನ್ನತಿ ಸಾಧನೆಯು ಕಟ್ಟಿಟ್ಟ ಬುತ್ತಿ.

ಶಾಖೆಗೆ ಸೇರಿದ ನಮ್ಮ ಪರಿಷತ್ತಿನ ಮಹಿಳಾ ಸೋದರಿಯರೂ, ಇತರರೂ, ಗಂಡಸರನ್ನು ಹಾಗೆ ಸ್ಫೂರ್ತಿಗೊಳಿಸಿ ಹುರಿದುಂಬಿಸಬೇಕು. ಇತರ ದೇಶಗಳ ಯುವಕರನ್ನು ಮೀರಿಸಿ-ಅಥವಾ ಕನಿಷ್ಠ ಪಕ್ಷ ಅವರಷ್ಟು ಮಟ್ಟಿಗಾದರೂ-ನಮ್ಮ ದೇಶದ ಯುವ ಜನರೂ ಕೆಲಸ ಮಾಡಿ ನಾನಾ ರೀತಿಗಳಲ್ಲಿ ದೇಶೋನ್ನತಿ ಸಾಧನೆ ಮಾಡಲಾರರೆ? ಅವರ

ಕ್ರಿಯಾಸಾಮರ್ಥ್ಯದಲ್ಲಿ ನನಗೆ ಪೂರ್ಣ ಭರವಸೆಯಿದೆ. ಯಾವ ನಾಡಿನವರಾದರೂ ಹೆಮ್ಮೆಪಡಬಹುದಾದಷ್ಟು ಮೇಧಾವಿಗಳೂ, ಉದ್ಯೋಗಶೀಲರೂ, ವಿದ್ಯಾ ವಿನಯಸಂಪನ್ನರೂ, ಉಜ್ವಲ ದೇಶಾಭಿಮಾನಿಗಳೂ ಆದ ಯುವಜನರು ನಮ್ಮ ನಾಡಿನಲ್ಲಿದ್ದಾರೆ. ಅವರೊಡನೆ ಮಾತನಾಡುವುದೇ ಒಂದು ಸಂತೋಷ; ಅದನ್ನು ನಾನು ಯಥೇಷ್ಟವಾಗಿ ಅನುಭವಿಸಿದ್ದೇನೆ. ಪರಿಷತ್ತಿನ ಅಂಗಸಂಸ್ಥೆಯಾಗಿ ಒಂದು ಯುವಜನ ಶಾಖೆಯು ಸ್ಥಾಪಿತವಾಗಿ ಒಟ್ಟು ಕನ್ನಡನಾಡಿನ ಹಿತಸಾಧನೆಯ ದೃಷ್ಟಿಯಿಂದ ಕೆಲಸ ನಡೆದರೆ ಪರಿಷತ್ತಿನಿಂದ ನಡೆಯಬೇಕೆಂದು ನಾನು ಸೂಚಿಸಿರುವ ಕೆಲಸಗಳಿಗೆಲ್ಲ ಜನಬಲವು ಲಭಿಸಲು ಅನುಕೂಲವಾಗುತ್ತದೆ.

ಧನಸಂಗ್ರಹಕ್ಕೆ ದಾರಿ

ಪರಿಷತ್ತಿನ ಕಾರ್ಯ ನಿರ್ವಾಹಕ ಮಂಡಲಿಯ ಸದಸ್ಯರೂ, ಪ್ರಾದೇಶಿಕ ಸಮಿತಿಯ ಸದಸ್ಯರೂ ತಮ್ಮ ತಮ್ಮ ಸ್ಥಳಗಳಲ್ಲಿ ಮಹಾಜನರಿಂದ ಪರಿಷತ್ತಿಗಾಗಿ ಹಣವನ್ನೆತ್ತುವ ಕೆಲಸವನ್ನು ಮಾಡಬೇಕು. ಈ ಕೆಲಸದಲ್ಲಿ ಸ್ವಯಂಸೇವಕರಾಗಿ ಆಸ್ಥೆಯಿಂದ ಸಹಾಯ ಮಾಡುವುದಕ್ಕೂ ಯುವಜನ ಶಾಖೆಯ ಸದಸ್ಯರೂ ವಿದ್ಯಾರ್ಥಿಗಳೂ ಮುಂದೆ ಬರಬೇಕು. ಹಿಂದೆ "ಪೈಸಾ ಫಂಡ್" ಎಂಬ ನಿಧಿಯನ್ನು ಕೂಡಿಸಿದ ಮಾದರಿಯಲ್ಲಿ ಮನೆಮನೆಯಿಂದಲೂ ಯುಗಾದಿ ದೀಪಾವಳಿಗಳಲ್ಲಿ ಹಣವನ್ನೆತ್ತಿದರೆ, ಹನಿಗೂಡಿ ಹಳ್ಳವಾಗುತ್ತದೆ. ಕನ್ನಡ ನಾಡಿನ ನಾನಾ ಸರ್ಕಾರಗಳಿಂದಲೂ ಸ್ಥಳೀಯ ಸಂಸ್ಥೆಗಳಿಂದಲೂ, ಧನಿಕರಿಂದಲೂ ಹೆಚ್ಚು ಹೆಚ್ಚಾಗಿ ಸಹಾಯದ್ರವ್ಯಗಳನ್ನು ಪರಿಷತ್ತಿಗೆ ದೊರೆಯಿಸುವ ಕೆಲಸವೂ ಸಂತತವಾಗಿ ನಡೆಯಬೇಕು. ಪರಿಷತ್ತಿನ ಸದಸ್ಯಸಂಪತ್ತನ್ನು ಹೆಚ್ಚಿಸುವ ಪ್ರಯತ್ನವೂ ಅವಿಚ್ಛಿನ್ನವಾಗಿ ನಡೆಯಬೇಕು. ಈ ವಿಷಯದಲ್ಲಿ ಏಕೆಂದರೆ ಮಹಿಳೆಯರು ಮುನಿದರೆ ಹೊತ್ತಿಗೆ ಸರಿಯಾಗಿ ಊಟವೆಲ್ಲಿ ದೊರೆಯದೆ ಹೋಗುವುದೋ-ಎಂಬ ಕಳವಳದಿಂದಲಾದರೂ ಗಂಡಸರು ಪರಿಷತ್ತಿನ ಸದಸ್ಯರಾಗುವುದಕ್ಕೂ, ಪರಿಷತ್ತಿಗೆ ದತ್ತಿಗಳನ್ನು ಕೊಡುವುದಕ್ಕೂ, ಕನ್ನಡ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಕೊಳ್ಳುವುದಕ್ಕೂ ಸಿದ್ಧವಾಗುತ್ತಾರೆ. ಕನ್ನಡದಲ್ಲಿ ನಡೆಯುವ ಪ್ರತಿಯೊಂದು ವಿವಾಹ ಕಾಲದಲ್ಲಿಯೂ ಪರಿಷತ್ತಿನ ಕಾಣಿಕೆಯನ್ನು ಸಲ್ಲಿಸುವ, ಸಂಪಾದನೆಯು ಪ್ರಾರಂಭವಾದಾಗ ಅಥವಾ ಸಂಪಾದನೆಯು ಹೆಚ್ಚಾದಾಗ, ಮೊದಲನೆಯ ಸಾರಿ ಕೈಸೇರಿದ ಹಣದಲ್ಲಿ ಒಂದು ಭಾಗವನ್ನು ಕನ್ನಡ ತಾಯಿಗೆ ಕಾಣಿಕೆಯಾಗಿ ಸಲ್ಲಿಸುವ ಸತ್ಸಂಪ್ರದಾಯಗಳೂ ಪ್ರಾರಂಭವಾಗಬೇಕು. ಪುಸ್ತಕಗಳ ಮಾರಾಟದಿಂದಲೂ ಪರಿಷತ್ತಿಗೆ ಧನಸಂಗ್ರಹವಾಗಬೇಕು. ಉಪನಯನ ಕಾಲದಲ್ಲಿ ವಟುವಿಗೂ ವಿವಾಹ ಕಾಲದಲ್ಲಿ ವಧೂವರರಿಗೂ ಬೆಳ್ಳಿಯ ಪಾತ್ರೆಗಳಿಗೆ ಪ್ರತಿಯಾಗಿ ಅಥವಾ ಅವುಗಳ ಜೊತೆಗೆ ಕನ್ನಡ ಪುಸ್ತಕಗಳನ್ನೂ, ಕನ್ನಡ ಪತ್ರಿಕೆಗಳ ವಿಶೇಷ ಸಂಚಿಕೆಗಳನ್ನೂ ಮೆಚ್ಚಾಗಿ ಕೊಡುವ ಒಳ್ಳೆಯ ಸಂಪ್ರದಾಯವೂ ಪ್ರಾರಂಭವಾಗಬೇಕು. ಜನಬಲವೂ ಧನಬಲವೂ ಯಥೇಷ್ಟವಾಗಿ ಒದಗಿದಲ್ಲಿ ಮಾತ್ರವೇ, ಮೇಲೆ ಸೂಚಿತವಾಗಿರುವ ಕೆಲಸಗಳೆಲ್ಲ ಪರಿಷತ್ತಿನಿಂದ ನಡೆಯುವುದಕ್ಕೆ ಅನುಕೂಲವಾದೀತು.

ದಿವಂಗತ ಸಾಹಿತಿಗಳ ಕುಟುಂಬಕ್ಕೆ ನೆರವುನಿಧಿ

ಸಾಹಿತ್ಯ ಸೇವೆ ಮಾಡಿ ಸಂಪಾದನೆಗೆ ಹೆಚ್ಚು ಅವಕಾಶವಿಲ್ಲದೆ ಮೃತಪಡುವ ದುರದೃಷ್ಟಶಾಲಿಗಳಾದ ಗ್ರಂಥಕರ್ತರೇ ಮುಂತಾದ ಕಲೋಪಾಸಕರ ಕುಟುಂಬಗಳವರ ಸಹಾಯಕ್ಕಾಗಿ ಪರಿಷತ್ತಿನಲ್ಲಿ ಒಂದು ನಿಧಿಯನ್ನು ಏರ್ಪಡಿಸಬಹುದಾಗಿದೆ. ಗ್ರಂಥಕರ್ತರೇ ಮುಂತಾದವರು ಆ ನಿಧಿಗಾಗಿ ವರ್ಷಕ್ಕೆ ತಲೆಯೊಂದಕ್ಕೆ ಒಂದು ರೂಪಾಯಿ ಅಥವಾ ಎರಡು ರೂಪಾಯಿಗಳಿಗೆ ಕಡಿಮೆಯಿಲ್ಲದೆ ಹಣವನ್ನು ಸಲ್ಲಿಸಬೇಕು. ಹಾಗೆ ಹಣವನ್ನು ಸಲ್ಲಿಸುತ್ತಿರುವವರಲ್ಲಿ ಯಾರಾದರೂ ಮೃತಪಟ್ಟು, ಅವರ ಕುಟುಂಬದವರು ಸಹಾಯವನ್ನಪೇಕ್ಷಿಸುವ ಸ್ಥಿತಿಯಲ್ಲಿದ್ದರೆ ನಿಧಿಯಿಂದ ಸಹಾಯಮಾಡಬೇಕು. ಸಹಾಯದ ಮೊಬಲಗಿನ ಪರಮಾವಧಿಯನ್ನೂ ಗೊತ್ತು ಮಾಡಬಹುದು. ಗ್ರಂಥಕರ್ತರೆಲ್ಲರೂ ಸೇರಿ ಪ್ರತಿಫಲಾಪೇಕ್ಷೆಯಿಲ್ಲದೆ ಈ ಕೆಲಸವನ್ನು ನಡೆಯಿಸಬೇಕು. ಮೃತರ ಕುಟುಂಬಕ್ಕೆ ಅದರಿಂದ ಸಹಾಯಕ; ಜೀವಂತರಾಗಿ ಉಳಿದಿರುವ ಗ್ರಂಥಕರ್ತರಿಗೆ ಅದರಿಂದ ಪುಣ್ಯ.

ಪರಿಷತ್ತು ಶಕ್ತಿಕೇಂದ್ರವಾಗಬೇಕು

ಮೇಲೆ ಹೇಳಿದ ಕೆಲಸಗಳೆಲ್ಲ ಸಾಂಗವಾಗಿ ನಡೆಯಬೇಕಾದರೆ-ಮುಂದಿನ ಬೃಹತ್ತರವಾದ ಮತ್ತು ಭವ್ಯತರವಾದ ಕನ್ನಡ ನಾಡು ನಿರ್ಮಿತವಾಗಲು ಸಾಹಿತ್ಯ ಸಂಸ್ಕೃತಿಗಳ ಪುರೋಭಿವೃದ್ಧಿ ಸಾಧನೆಯ ಮೂಲಕವಾಗಿ ಸಹಾಯವಾಗಬೇಕಾದರೆ -ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡಿನ ಶಕ್ತಿ ಕೇಂದ್ರವಾದ ಶಿವನಸಮುದ್ರವಾಗಬೇಕು. ನಮ್ಮ ಕನ್ನಡ ನಾಡಿನ ಕರ್ಣಾಟಕ ಸಂಘಗಳೇ ಮುಂತಾದ ಸಂಸ್ಥೆಗಳು ಆ ಶಿವನಸಮುದ್ರದಲ್ಲಿ ಉತ್ಪತ್ತಿಯಾಗಿ ತಮ್ಮಲ್ಲಿಗೆ ಬಂದ ವಿದ್ಯುಚ್ಛಕ್ತಿಯನ್ನು

ಒಟ್ಟು ಕನ್ನಡ ನಾಡಿನ ಮೂಲೆ ಮೂಲೆಗೂ ಹಂಚಿ, ಅದರಿಂದ ಬೆಳಗುವ ಜ್ಞಾನದೀಪಗಳ ತಂಡಗಳನ್ನು ನೋಡಿ ನೋಡಿ ನಲಿಯಬೇಕು. ಆ ಜ್ಞಾನದೀಪಗಳ ತಂಡಗಳಿಂದ ಕನ್ನಡ ನಾಡಿನ ಅಜ್ಞಾನಾಂಧಕಾರವು ತೊಲಗಿ, ಕನ್ನಡ ತಾಯಿಯ ಪವಿತ್ರ ದೇವಾಲಯದಲ್ಲಿ ನಿತ್ಯದೀಪಾವಳಿಯ ಉತ್ಸವವು ನಡೆಯಬೇಕು. ಅದು ನಡೆದಂದು ಶುಭತಾರೆ; ಅದು ನಡೆದಂದು ದೇಶಮಾತೆಯ ವರ್ಧಂತ್ಯುತ್ಸವ; ಅದು ನಡೆಯುವವರೆಗೂ ನಾವೆಲ್ಲರೂ ಮನುಷ್ಯರ ಛಾಯೆಗಳೇ ಹೊರತು ಮನುಷ್ಯರೆಂಬ ಹೆಸರಿಗೆ ಅರ್ಹರಲ್ಲ.

❖❖

೩೧ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ತಿರುಮಲೆ ತಾತಾಚಾರ್ಯಶರ್ಮ



ಮೊನೆಚಾದ ಬರಹ ಸಿಡಿಲಿನಂಥ ಮಾತಿಗೆ ಪ್ರಸಿದ್ಧರಾಗಿ ವಿಶ್ವಕರ್ನಾಟಕ ಪತ್ರಿಕೆಯ ಮೂಲಕ ಇತಿಹಾಸವನ್ನೇ ನಿರ್ಮಿಸಿದ ಕನ್ನಡ ಭೀಷ್ಮರು ಎಂದರೆ ತಿರುಮಲೆ ತಾತಾಚಾರ್ಯಶರ್ಮರು. ಇವರು ಶ್ರೀನಿವಾಸ ತಾತಾಚಾರ್ಯ-ಜಾನಕಿ ಅವರ ಪುತ್ರರಾಗಿ ೨೭-೪-೧೮೯೫ರಲ್ಲಿ ಚಿಕ್ಕಬಳ್ಳಾಪುರದಲ್ಲಿ ರಾಜಮನೆತನದಲ್ಲಿ ಜನಿಸಿದರು.

ಗುರುಕುಲಪದ್ಧತಿಯ ಶಿಕ್ಷಣ ಮನೆಯಲ್ಲಿ ಸಿಕ್ಕಿತು. ಶಾಲಾ ವಿದ್ಯಾಭ್ಯಾಸ ಚಿಕ್ಕಬಳ್ಳಾಪುರ, ಬೆಂಗಳೂರು ಹಾಸನಗಳಲ್ಲಿ ನಡೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿಗೆ ಸೇರಿದರೂ ಧನಾಭಾವದಿಂದ ವಿದ್ಯಾಭ್ಯಾಸ ಮುಂದಕ್ಕೆ ಸಾಗಲಿಲ್ಲ.

೧೯೧೯ರಲ್ಲಿ ಶಾಸನ ಇಲಾಖೆಯಲ್ಲಿ ತೆಲುಗು - ಕನ್ನಡ ಸಹಾಯಕ ಅಧಿಕಾರಿಯಾಗಿ ೫ ವರ್ಷ ಸೇವೆ ಸಲ್ಲಿಸಿದ ಮೇಲೆ ಗಾಂಧೀಜಿಯವರ ಅಸಹಕಾರ ಚಳುವಳಿಗೆ ಧುಮುಕಿ ಕೆಲಸಕ್ಕೆ ರಾಜೀನಾಮೆಯಿತ್ತರು. ಗಾಂಧೀಜಿಯವರನ್ನು ಭೇಟಿ ಆಗಿ ಅವರ ಆಣತಿಯಂತೆ ವಿಶ್ವಕರ್ನಾಟಕ ಪತ್ರಿಕೆಯನ್ನು ಪ್ರಾರಂಭಿಸಿದತು. ೨೭ ವರ್ಷಗಳ ಕಾಲ ಅವರು ಆ ಪತ್ರಿಕೆಯನ್ನು ನಡೆಸಿದರು.

೧೯೪೩ರಲ್ಲಿ ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದರು, ೧೯೪೪-೫೦ರಲ್ಲಿ ಬೆಂಗಳೂರು ಮುನಿಸಿಪಲ್ ಕೌನ್ಸಿಲ್‌ರಾದರು. ಬೆಂಗಳೂರಿನ ಅಮೆಚೂರ್ ನಾಟಕ ಮಂಡಳಿ ಮೂಲಕ ಟೊಳ್ಳುಗಟ್ಟಿ ನಾಟಕವನ್ನು ಬೆಳಕಿಗೆ ತಂದರು. ಬೆಂಗಳೂರು ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

೧೯೪೭ರಲ್ಲಿ ಕಾಸರಗೋಡಿನಲ್ಲಿ ನಡೆದ ೩೧ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶರ್ಮರನ್ನು ಅಧ್ಯಕ್ಷರನ್ನಾಗಿ ಆರಿಸಿ ಸನ್ಮಾಸಿದರು. ೧೯೭೦ರಲ್ಲಿ ಮಂಡ್ಯ ಜಿಲ್ಲಾಪರಿಷತ್ತಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ೧೯೪೭ರಿಂದ ೧೯೪೯ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಆಯ್ಕೆಗೊಂಡರು.

ಸ್ವಾತಂತ್ರ್ಯ ಹೋರಾಟಗಾರರೂ, ಬರಹಗಾರರೂ, ಪತ್ರಿಕಾಕರ್ತರೂ ಸರಳ ಜೀವಿಗಳು ವಾಗ್ಮಿಗಳೂ ಗಾಂಧಿ ಭಕ್ತರೂ ಹಾಸ್ಯಪ್ರಿಯರೂ ಆಗಿದ್ದ ತಿ. ತಾ. ಶರ್ಮರ ಲೇಖನಿಯಿಂದ ಹತ್ತಾರು ಗ್ರಂಥಗಳು ಬಂದಿವೆ. ಅವರ ಕೆಲವು ಗ್ರಂಥಗಳು ಹೀಗಿವೆ :

ಕನ್ನಡ ಕವಿಗಳು (ಜೀವನ ಚರಿತ್ರೆ), ಮೋಕ್ಷಗುಂಡಂ ವಿಶ್ವೇಶ್ವರಯ್ಯ (ಜೀವನ ಚರಿತ್ರೆ), ಕರ್ಮಫಲ (ಕಥಾಸಂಗ್ರಹ), ವಿಕ್ರಾಂತ ಭಾರತ (ಇತಿಹಾಸ), ಜಗತ್ಕಥಾವಲ್ಲರಿ (ಅನುವಾದ), ಕರ್ಣಾಟಕ ಕೈಪಿಡಿ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಮಾಸ್ತಿಯವರ ಮನೋಧರ್ಮ ವಿಚಾರ ಕರ್ನಾಟಕ, ಕರ್ಣಾಟಕ ಕೈಪಿಡಿ - ಇತ್ಯಾದಿ.

ಇವರು ೧-೯-೧೯೭೩ರಂದು ದಿವಂಗತರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೧
ಅಧ್ಯಕ್ಷರು, ತಿ.ತಾ. ಶರ್ಮ
ದಿನಾಂಕ ೨೯, ೩೦, ೩೧ ಡಿಸೆಂಬರ್ ೧೯೪೮
ಸ್ಥಳ : ಕಾಸರಗೋಡು

ಜನರ ಅಭಿಲಾಷೆ

"ಸಂಪ್ರದಾಯದ ನಾನಾ ಸಿಕ್ಕುಗಳಲ್ಲಿ ವಿಲಿವಿಲಿ ಒದ್ದಾಡುತ್ತಿರುವ ಪರಿಷತ್ತಿನಲ್ಲಿ ನೀವು ಕೆಲವು ಪ್ರಗತಿಪರ ಮಾರ್ಪಾಡುಗಳನ್ನು ಅನುಷ್ಠಾನದಲ್ಲಿ ತರುವಿರೆಂದು ಆಶಿಸುತ್ತೇನೆ."

"ಕರ್ನಾಟಕದ ಜಟಿಲ ಪ್ರಶ್ನೆ ಸಮ್ಮೇಳನಾಧ್ಯಕ್ಷರಾದ ನಿಮ್ಮ ಮೇಲೆ ಬಿದ್ದಿದೆ."

"ತಾವು ಸಮ್ಮೇಳನಾಧ್ಯಕ್ಷರಾಗಿ, ಪ್ರಗತಿಯ ದಾರಿಯಲ್ಲಿ ನಡೆಯುವ ಸಾವಿರಾರು ಯುವಕರಿಗೆ ಬೆಂಬಲವಾಗಿ ನಿಂತು, ಕನ್ನಡ ಸಾಹಿತ್ಯದ ಪ್ರತಿಗಾಮಿ ಧೋರಣೆಯನ್ನು ವಿರೋಧಿಸಿ, ಪ್ರಗತಿ ಪಥದಲ್ಲಿ ಇನ್ನಷ್ಟು ವೇಗವಾಗಿ ಮುಂದುವರಿಯುವಂತೆ ಶ್ರಮಿಸುವಿರಾಗಿ ಹಾರೈಸುತ್ತೇನೆ."

"ಕ್ರಾಂತಿಯ ಒಳ್ಳೆಯ ಸಮಯದಲ್ಲಿ ತಾವು ಅಧ್ಯಕ್ಷರಾದುದು ಸಂತೋಷ. ಸಮಸ್ತ ಕನ್ನಡ ದೇಶಕ್ಕೆ ಬೇಕಾದುದು ತಮಗೇ ವಿಧಿತ."

ಈ ಅಭಿನಂದನ ವಚನಗಳಲೆಲ್ಲ ಕನ್ನಡ ನಾಡಿನ ನಾಡಿಯ ಹೊಡೆತ ಹೇಗಿದೆಯೆಂಬುದು ಕಾಣಬರುತ್ತದೆ. ಕನ್ನಡಿಗರೆಲ್ಲರ ಆಶೆ ಆದರ್ಶವೇನು. ಅವರ ಆತುರ ಕಾತರಗಳೇನೆಂಬುದು ಸ್ಪಷ್ಟವಾಗುತ್ತದೆ. ಕ್ರಾಂತಿ ಬೇಕು! ಕನ್ನಡ ನಾಡೆಲ್ಲ ಒಂದಾಗಬೇಕು! ನನ್ನ ಅಧ್ಯಕ್ಷ ಪದವಿಯ ಅವಧಿಯಲ್ಲೇ ಆ ಕಾರ್ಯಸಿದ್ಧಿ ಆಗಿಬಿಡಬೇಕು!!

ಸಮ್ಮೇಳನಾಧ್ಯಕ್ಷರ ಹೊಣೆ

"ಸ್ವತಂತ್ರ-ಏಕೀಕೃತ-ಕನ್ನಡನಾಡನ್ನು ಕಟ್ಟಲು ಹೆಣಗಬೇಕು. ಈ ಬಾರಿಯ ಸಮ್ಮೇಳನಾಧ್ಯಕ್ಷರಾಗಿ ಆರಸಿ ಬಂದವರ ಹೊಣೆ ದೊಡ್ಡದಿದೆ. ಆರಿಸಿ ಬಂದವರು ಹಿಂದಿನ ಸಮ್ಮೇಳನಾಧ್ಯಕ್ಷರಂತೆ ಮೂರೋ ನಾಲ್ಕೋ ದಿನಗಳ ಸಮ್ಮೇಳನದ ಕಾರ್ಯಕಲಾಪಗಳನ್ನು ಮುಗಿಸಿ ಮನೆ ಸೇರಬಾರದು. ಈ ವರ್ಷ ಇಡೀ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗಾಗಿ ಹೆಣಗಬೇಕು. ಸಮ್ಮೇಳನದಲ್ಲಿ ಬಹುಮತ ದೊರಕಿಸಿಕೊಂಡ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು. ಕಾಂಗ್ರೆಸ್ ಅಧ್ಯಕ್ಷರಂತೆ ನಾಡಿನಲ್ಲೆಲ್ಲಾ ಪ್ರವಾಸ ಕೈಕೊಂಡು ಪ್ರಚಾರ ನಡೆಸಿ, ಕನ್ನಡಿಗರಲ್ಲಿ ಕನ್ನಡದ ಕುರಿತು ಜಾಗೃತಿ ಹುಟ್ಟಿಸಬೇಕು. ಕರ್ತವ್ಯೋನ್ಮುಖರಾಗುವಂತೆ ಹುರಿದುಂಬಿಸಬೇಕು. ಹಾಗಾದಲ್ಲಿ ಮಾತ್ರ ಅಧ್ಯಕ್ಷರಾಗಿ ಆರಿಸಿ ಬಂದವರ ಕರ್ತವ್ಯ ಸಾರ್ಥಕತೆಯನ್ನು ಪಡೆಯುತ್ತದೆ."

ಇದು ಉಡುಪಿಯ "ಪ್ರಕಾಶ"ವಾಣಿ. ಈ ಅಧ್ಯಕ್ಷ ಪದವಿಯ ಜವಾಬ್ದಾರಿ ಎಷ್ಟೆಂಬುದು ಸ್ಪಷ್ಟವಾಗುತ್ತದೆ. "ಕನ್ನಡ ನಾಡನ್ನು ಕಟ್ಟಲು ಹೆಣಗಾಡಬೇಕು"-ಈ ವಾಕ್ಯವಿಂದರಲ್ಲಿ ಸಮ್ಮೇಳನದ-ಪರಿಷತ್ತಿನ-ಕರ್ತವ್ಯ ಏನೆಂಬುದು ಸೂಚಿತವಾಗಿದೆ. ಅಧ್ಯಕ್ಷನೆಂದರೆ ಕೇವಲ ಒಬ್ಬ ವ್ಯಕ್ತಿಯಲ್ಲ. ಈ ಸಮ್ಮೇಳನದ ಮುಖ-ಪರಿಷತ್ತಿನ ಮುಖ-ಕನ್ನಡ ಜನಪದದ ಮಹಾಮುಖ. ಕನ್ನಡ ನಾಡಿನ ಜನರು "ನಾಡನ್ನು ಕಟ್ಟಬೇಕು" ಎಂದು ಸಂಕಲ್ಪ ಮಾಡಿ ಅನೇಕ ವರ್ಷಗಳಾದುವು. ಈ ಸಂಕಲ್ಪ ಸಾಧನೆಯ ಸಿದ್ಧಿಯ ಕಾಲ ಸಮೀಪಿಸುತ್ತಿರುವ ಹಾಗಿದೆ. "ಇಗೋ ಸಿದ್ಧಿಸಿತು" ಎಂದು ಕಾಸರಗೋಡಿನ ವೇದಿಕೆಯಿಂದ ಕನ್ನಡಿಗರೆಲ್ಲ ಉಚ್ಚಕಂಠದಿಂದ ಸಾಗರಘೋಷವನ್ನು ಮೀರಿಸಿ ಘೋಷಿಸಿದ್ದಾದರೆ ಸಿದ್ಧಿಸಿತು! ಇಚ್ಛಾಶಕ್ತಿಯನ್ನು ಮೀರಿಸಿದ ಶಕ್ತಿ ಮತ್ತೊಂದಿಲ್ಲ.

ಪರಿಷತ್ತಿನ ಬಗ್ಗೆ ಉಷ್ಣೋದ್ರೇಕ ವಚನಗಳು

"ಪರಿಷತ್ತು-ಸಾಹಿತ್ಯ ಪರಿಷತ್ತು-ಎಂದಿನವರೆಗೆ ರಾಜಕಾರಣದಿಂದ ಲಿಪ್ತವಾಗದೆ ಇರುವುದೋ ಅಂದಿನವರೆಗೆ ಅದು ಭದ್ರವಾಗಿರುವುದು; ಬೆಳೆದು ಬೆಳಗುತ್ತ ಹೋಗುವುದು. ಅದು ಎಂದು ರಾಜಕೀಯ ಕ್ರೀಡಾಕ್ಷೇತ್ರವಾಗುವುದೋ, ರಾಜಕಾರಣದಲ್ಲಿ ಓಡಾಡುವವರ ಕೈಗೆ ಪರಿಷತ್ತಿನ ಆಡಳಿತ ಸೂತ್ರಗಳು ಬರುವುವೋ ಅಂದೇ ಆಯಿತು ಪರಿಷತ್ತಿನ ಕೆಲಸ."

ಈ ಬಗೆಯ ಉಷ್ಣೋದ್ರೇಕ ವಚನಗಳು ಅಲ್ಲಿ ಇಲ್ಲಿ ಕೇಳಿ ಬರದೆ ಇಲ್ಲ. ಇಂತಹ ವಚನಗಳ ರಚನೆಯಾಗಿರುವುದೇ ಆಕ್ಷೇಪಣೆಗೆ ಸಮಾಧಾನ ಸಾಕ್ಷಿಗಳಾಗಿವೆ. ಕೋಪದಿಂದ, ಅಸಮಾಧಾನದಿಂದ, 'ಹಾಳಾಗಿ ಹೋಯಿತಲ್ಲಾ' ಎಂಬ ಭಂಗಿತ ಭಾವದಿಂದ ಅಂದ ಮಾತು ಗದ್ಯರಚನೆಗೊಂದು ಉತ್ತಮ ಮಾದರಿಯಾಯಿತು.

ಪರಿಷತ್ ಏನಾಗಬೇಕು ?

'ಜೀವನ ಪಥನಿರ್ಣಯ, ನಿತ್ಯಜೀವನ-ಈ ಕರ್ತವ್ಯವನ್ನು ಮೇಲ್ಮಟ್ಟದಲ್ಲಿ ನಿರ್ವಹಿಸಬಲ್ಲವರು ಸಾಹಿತಿಗಳು, ಕಲಾವಿದರು, ಸಂಸ್ಕೃತಿ ಪೋಷಕರು. ಇಂತಹ ರಾಷ್ಟ್ರಜೀವ ನಿರ್ಮಾಣ ನಿರ್ವಾಹಕಶಕ್ತಿಯನ್ನು ಉತ್ಪತ್ತಿ ಮಾಡಬಲ್ಲ, ಮಹಾಶಿಲ್ಪಿಗಳನ್ನೂ

ಸಾಹಿತಿಗಳನ್ನೂ, ಚಿತ್ರಕರ್ಮಿಗಳನ್ನೂ, ರೂಪಕಾರಿಗಳನ್ನೂ, ಗಾಯಕವಾದಕರನ್ನೂ ಸೃಷ್ಟಿಸಬಲ್ಲ ಮೂಲಸ್ಥಾನವೆನಿಸಬೇಕು ಪರಿಷತ್.

ಪರಿಷತ್ತು ಶಕ್ತಿಯ ಉತ್ಪತ್ತಿಸ್ಥಾನ ಆಗಬೇಕು

ಕಲಾವಿದ ಸಾಹಿತಿ ಅವರಿಬ್ಬರೂ ರಾಷ್ಟ್ರ ಸೃಷ್ಟಿಸ್ಥಿತಿ ಕಾರ್ಯಕರ್ತರು ಅಂದ ಮೇಲೆ ಅವರ ಸ್ಥಾನವು ಜನಪದದಲ್ಲಿ ಎಷ್ಟು ಶ್ರೇಷ್ಠವೆಂಬುದನ್ನು ಪ್ರತಿಯೊಬ್ಬರೂ ಗ್ರಹಿಸಬಲ್ಲರು. ಸಾಹಿತಿಗಳೇನು ಸೃಷ್ಟಿಮಾಡುವರು, ಕಲಾವಿದರೇನು ನಿರ್ಮಾಣ ಮಾಡುವರು. ಅದು ಇಂದಿನ ಜನಜೀವನದ ಪ್ರತಿಬಿಂಬವಾಗಿರಬೇಕು. ನಾಳೆಯ ಭವ್ಯಜೀವನದ ಆದರ್ಶಚಿತ್ರಗಳನ್ನು ಸಾಹಿತಿಗಳು, ಕಲಾವಿದರು ನಿರ್ಮಾಣಮಾಡುವರು. ಒಂದು ಕಡೆ ಇರುವ ನಡೆಯುವ, ಪ್ರಸಕ್ತ ಜೀವನದ ಸತ್ಯಚಿತ್ರಗಳನ್ನಿತ್ತ ತೋರಿಸುವುದು ಇನ್ನೊಂದು ಕಡೆ ಇರಬೇಕಾದ ಸಾಧಿಸಬೇಕಾದ ಆದರ್ಶ ಜೀವನಚಿತ್ರಗಳನ್ನು ನಿರ್ಮಿಸುವುದು- ಇವೆರಡೂ ಕೆಲಸಗಳು ಮುಂದುವರಿಯಬೇಕು. ಈ ಕೆಲಸಗಳಿಗೆ ಬೇಕಾದ ಶಕ್ತಿಯನ್ನು ರಾಷ್ಟ್ರದಲ್ಲಿ ಉತ್ಪತ್ತಿ ಮಾಡಬೇಕು. ಅಂತಹ ಶಕ್ತಿಯ ಉತ್ಪತ್ತಿಸ್ಥಾನವೆನಿಸಬೇಕು ಸಾಹಿತ್ಯ ಪರಿಷತ್ತು.

ಪರಿಷತ್ತು ಮತ್ತು ಕನ್ನಡ ನಾಡಿನ ಕನಸು

ಕನ್ನಡ ನಾಡು ದೀರ್ಘಕಾಲದಿಂದ ಸವಿಕನಸೊಂದನ್ನು ಕಾಣುತ್ತಿದೆ. ಈ ಕನಸೇನೆಂಬುದನ್ನು ನಾಡಿನವರೆಲ್ಲ ಚೆನ್ನಾಗಿ ಬಲ್ಲರು. ಆ ಕನಸು ನನಸಾಗುವ, ಅಮೃತಘಳಿಗೆ ಬಂದಿದೆ. ಕರ್ಣಾಟಕ ಮಹಾರಾಷ್ಟ್ರವನ್ನು-ವಿಶ್ವಕರ್ಣಾಟಕವನ್ನು-ನಿರ್ಮಿಸಬೇಕೆಂದು ಎಲ್ಲ ಜನರೂ, ಲಿಂಗ, ವಯಸ್ಸು, ಸ್ಥಾನ ಗೌರವ, ವೃತ್ತಿ, ಪಕ್ಷ, ಕುಲ ಯಾವುದನ್ನೂ ಲೆಕ್ಕಿಸದೆ ಏಕೈಕ ಧ್ಯೇಯದಿಂದ, ಒಂದಲ್ಲ ಒಂದು ಪ್ರಮಾಣದಲ್ಲಿ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಕೆಲಸಮಾಡುತ್ತಿದ್ದಾರೆ. ಮೂವತ್ತು ವರ್ಷಗಳ ಹಿಂದೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಯಿತು. ಅದಕ್ಕೆ ಕೊಂಚಕಾಲದ ಹಿಂದೆಯೇ ಧಾರವಾಡದ ವಿದ್ಯಾವರ್ಧಕ ಸಂಘವೇ ಮುಂತಾದ ಒಂದೆರಡು ಸಂಸ್ಥೆಗಳು ಹುಟ್ಟಿದ್ದವು. ಕರ್ಣಾಟಕ ಸಾಹಿತ್ಯ ಪರಿಷತ್ತು ಬೆಳೆದಂತೆಲ್ಲ ನಾಡಿನಲ್ಲಿ ನಾನಾ ಕನ್ನಡ ಸಂಘಗಳು ಸಾಹಿತ್ಯ ಸಮಿತಿಗಳು ಗೆಳೆಯರ ಗುಂಪುಗಳು, ತುಂಟರ ತಂಡಗಳು, ಬಳಗಗಳು, ಸಮಿತಿಗಳು ಅವತಾರ ಮಾಡಿದವು. ಅವುಗಳಲ್ಲನೇಕ ಸಂಸ್ಥೆಗಳು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಅಂಗಸಂಸ್ಥೆಗಳಾದವು. ಜೊತೆ ಜೊತೆಯಲ್ಲೇ ಕರ್ಣಾಟಕದ ಏಕೀಕರಣ ಸಂಘದ ಸ್ಥಾಪನೆಯಾಗಿ ಆ ಸಂಸ್ಥೆಯೂ ತನ್ನದೇ ಆದ ವಿಶಿಷ್ಟ ರೂಪದಲ್ಲಿ ಕರ್ಣಾಟಕವನ್ನೆಲ್ಲ ಒಂದುಗೂಡಿಸುವ ಧ್ಯೇಯಸಾಧನೆಗಾಗಿ ಕೆಲಸ ಮಾಡುತ್ತಾ ಬಂದಿದೆ.

ಸುಧಾರಣೆಗಳಾಗಬೇಕು

ರಾಷ್ಟ್ರ ನಿರ್ಮಾಣಶಕ್ತಿಯ ಉತ್ಪತ್ತಿ ಸ್ಥಾನವೆನಿಸಬೇಕು. ಈ ಕನ್ನಡ ಸಾಹಿತ್ಯ ಪರಿಷತ್-ಎನಿಸಬೇಕೆನು ಆಗಬೇಕೆಂದು ಹೇಳಿದ್ದಾಯಿತು. ರಾಷ್ಟ್ರ ಮತ್ತು ವ್ಯಕ್ತಿಗೆ ಸಂಬಂಧಪಟ್ಟಂತೆ ಮಹಾಜೀವನಪಥ ತೋರಿಸಲು ಸಮರ್ಥರಾದ ರಾಜಶಿಲ್ಪಿಗಳನ್ನೂ, ಸಾಹಿತಿಗಳನ್ನೂ, ಚಿತ್ರಕರ್ಮಿಗಳನ್ನೂ, ಗಾಯಕ ವಾದಕರನ್ನೂ ವಾಗ್ಮಿಗಳನ್ನೂ ಈ ಪರಿಷತ್ತು ನಿರ್ಮಿಸಬೇಕು. ಇಂತಹ ರಾಷ್ಟ್ರಶಿಲ್ಪಿಗಳ ಪ್ರವಾಹ ಅವಿಚ್ಛಿನ್ನವಾಗಿ ನಾಡಿನೊಳಗೆ ಹರಿಯಬೇಕು ; ಶಾಖೋಪಶಾಖೆಗಳಾಗಿ ಹರಿಯಬೇಕು ; ನಾಡಿನ ನಾಡಿನಾಡಿಗಳಲ್ಲಿ ಹೊಸಶಕ್ತಿ ಹರಿಸಬೇಕು. ಹೊಸ ಚೈತನ್ಯವಿತ್ತು ನಾಡನ್ನೆಲ್ಲ ಬೆಳೆಸಿ, ಬೆಳಗಿಸಬೇಕು.

ಅಂದಮೇಲೆ ಇಷ್ಟು ಮಾತ್ರ ಸ್ಥಿರವಾಯಿತು. ಪರಿಷತ್ತಿನ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳಾಗಬೇಕು. ಕಾರ್ಯಕ್ಷೇತ್ರ ವಿಸ್ತಾರವಾಗಬೇಕು. ಒಂದೊಂದು ಕ್ಷೇತ್ರದಲ್ಲೂ ಸುವ್ಯವಸ್ಥೆಯಿಂದ, ಭರದಿಂದ ಕೆಲಸ ನಡೆಯಬೇಕು. ಹೀಗೆ ಕೆಲಸ ನಡೆಯಲು ನಾಡಿನ ಉತ್ಸಾಹ, ತಾರುಣ್ಯ, ಅನುಭವ, ನೈಪುಣ್ಯ, ಸಾಹಸ, ಜನ, ಧನ, ಅಭಿಮಾನ, ಎಲ್ಲವನ್ನೂ ಉಪಯೋಗ ಮಾಡಿಕೊಳ್ಳಬೇಕು. ಎಲ್ಲವನ್ನೂ ಕಟ್ಟಿಕೊಳ್ಳಬೇಕು. ಎಲ್ಲರನ್ನೂ ಕಟ್ಟಿಕೊಳ್ಳಬೇಕು. ಆಗ ಮಾತ್ರ ನಾವು ರಾಷ್ಟ್ರವನ್ನು ಕಟ್ಟಲು ಸಮರ್ಥರಾಗುವೆವು.

ಪರಿಷತ್ತಿನ ರಚನೆ ಆಡಳಿತ ವ್ಯವಸ್ಥೆಯಲ್ಲಿ ತಕ್ಕ ಬದಲಾವಣೆಗಳಾಗಬೇಕೆಂಬ ಅಪೇಕ್ಷೆಯನ್ನು ನಾಡಿನ ಹಿತೈಷಿಗಳೆಲ್ಲ ವ್ಯಕ್ತಪಡಿಸುತ್ತಿದ್ದಾರೆ. ಕನ್ನಡ ನಾಡಿನ ಎಲ್ಲ ಭಾಗಗಳಲ್ಲೂ 'ಪರಿಷತ್ತಿನಲ್ಲಿ ಸುಧಾರಣೆಗಳಾಗಬೇಕು' ಎಂಬ ಕೂಗು ಕೇಳಿಬರುತ್ತಿದೆ. ಏನಾಗಬೇಕು, ಹೇಗಾಗಬೇಕೆಂಬ ನಿರ್ಣಯ ಮಾಡುವ ಸ್ಥಳವಿದಲ್ಲ. ಆದರೆ ಜನತೆಯ ಹೃದಯದಲ್ಲಿ ಈ ಬಗೆಯ ಅಪೇಕ್ಷೆಯೊಂದಿದೆಯೆಂಬುದನ್ನು ಒತ್ತಿ ಹೇಳಬೇಕಾಗಿದೆ. ಸ್ವಾಗತಿಸಬೇಕಾಗಿದೆ. ಅಲ್ಲದೆ ಪರಿಷತ್ತಿನ ಆಗುಹೋಗುಗಳ ಹೊಣೆಗಾರಿಕೆ ಹೊತ್ತವರ ಲಕ್ಷ್ಯವನ್ನಿತ್ತ ಕಡೆ ಎಳೆಯುವುದು ಆವಶ್ಯಕವೆಂದು ಕಂಡುಬರುತ್ತದೆ.

ಬಿಜಾಪುರದ ರಾವ್ ಬಹದ್ದೂರ್ ಶ್ರೀ ಪಿ.ಜಿ. ಹಳಕಟ್ಟಿಯವರು ನನಗೆ ಇತ್ತೀಚೆಗೆ ಬರೆದ ಪತ್ರಗಳೊಂದರಲ್ಲಿ ಹೀಗೆ ಹೇಳಿದ್ದಾರೆ. ಇದನ್ನು ನಾನು ಎತ್ತಿ ಕೊಡುವುದರಲ್ಲಿ ಯಾವ ಔಚಿತ್ಯಕ್ಕೂ ಲೋಪವನ್ನುಂಟುಮಾಡುತ್ತಿಲ್ಲ.

ಹೊಸ ಪರಿಸ್ಥಿತಿನುಸರಿಸಿ ಪರಿಷತ್ತಿನ ನಿಬಂಧನೆಗಳಲ್ಲಿ ಮಾರ್ಪಾಡುಗಳಾಗುವುದು ಅತ್ಯಾವಶ್ಯಕವಾಗಿದೆ. ಮನ್ನಣೆಗಾಗಿ ಆರಿಸಿದ ಅಧ್ಯಕ್ಷ, ಉಪಾಧ್ಯಕ್ಷರಿರಕೂಡದು. ಹೀಗೆ ನಡೆದುಬಂದುದನ್ನು ಇನ್ನು ಮುಂದೆ ನಿಲ್ಲಿಸಬೇಕು. ಪರಿಷತ್ತಿನ ಅಧಿವೇಶನದ ಅಧ್ಯಕ್ಷರೇ ವರ್ಷಾದ್ಯಂತದವರೆಗೆ ಅಧ್ಯಕ್ಷರಾಗಿ ಉಳಿಯತಕ್ಕದ್ದು. ಅವರು ತಮ್ಮ ಸಹಾಯಕ್ಕೋಸ್ಕರ ಉಪಾಧ್ಯಕ್ಷಸ್ಥಾನಕ್ಕೆ ನಾಲ್ಕಾರು ಜನರನ್ನು ಸೂಚಿಸಿ ಅವರನ್ನು ಪರಿಷತ್ತಿನ 'ಜನರಲ್ ಕಮಿಟಿ'ಯವರು ಆರಿಸತಕ್ಕದ್ದು.

ಕಾರ್ಯಕ್ಷೇತ್ರ ವಿಸ್ತಾರ

ಈ ಪರಿಷತ್ತಿನ-ರಾಷ್ಟ್ರ ಪರಿಷತ್ತಿನ ಕಾರ್ಯಕ್ಷೇತ್ರ ವಿಸ್ತಾರವಾಗಬೇಕೆಂಬುದನ್ನು ಗ್ರಹಿಸಿದ್ದಾಯಿತು. ಆ ಕ್ಷೇತ್ರ ವಿಸ್ತಾರ ವಿವರಗಳನ್ನಿಲ್ಲೀಗ ಕೊಡಲು ಸಾಧ್ಯವಿಲ್ಲವಾದರೂ ಸಂಗ್ರಹವಾಗಿ ಸೂಚನೆ ಮಾಡಬಹುದು. ಎಲ್ಲ ಕೆಲಸಗಳನ್ನೂ, ಕಾರ್ಯವಿಧಾನಗಳನ್ನೂ "ಇನ್ನೇನೂ ಉಳಿದಿಲ್ಲ" ಅನ್ನುವ ಹಾಗೆ ಮಾಡುವುದು ಸಾಧ್ಯವೂ ಅಲ್ಲ; ಹಾಗೆ ಮಾಡಲೆತ್ನಿಸುವುದು ಸಂಸ್ಥೆಯ ಸಹಜ ಬೆಳವಣಿಗೆಯಲ್ಲಿ ವಿಶ್ವಾಸವುಳ್ಳವರಿಗೆ ನ್ಯಾಯವೆಂದೂ ಕಾಣುವುದಿಲ್ಲ. ಯಾವ ಸಂಸ್ಥೆಯ ಕಾರ್ಯಕ್ಷೇತ್ರವಾದರೂ, ಕಾರ್ಯಸಾಧನ ವಿಧಾನವಾದರೂ ಕಾಲಧರ್ಮ ಮತ್ತು ಜನತೆಯ ಆಶಯದಂತೆ ಸಹಜ ಪರಿವರ್ತನ ಮತ್ತು ಅನುಗೊಳ್ಳುವ ಸ್ವಭಾವದಿಂದ ಕೂಡಿರಬೇಕು. ಚೌಕಟ್ಟೇಕೆ ಉಕ್ಕಿನದಾಗಿರಬೇಕು?

ಭಾಷೆ ಸಾಹಿತ್ಯ

೧. ಭಾಷಾಸಾಹಿತ್ಯ ಸಂಶೋಧನ, ವ್ಯವಸಾಯ ಮತ್ತು ಪ್ರಚಾರ.

೨. ಪ್ರಾಚೀನ ಗ್ರಂಥಗಳ ಸಂಗ್ರಹ, ಸಂರಕ್ಷಣೆ ಮತ್ತು ಪ್ರಕಟನೆ.

೩. ವಿಶ್ವಕೋಶ, ನಿಘಂಟುಗಳ ನಿರ್ಮಾಣ.

೪. ಶಬ್ದ ಸಂಪತ್ತು ಲಿಪಿ.

೫. ಪ್ರಮಾಣ ವಿಶಿಷ್ಟ(Standardised) ಪಠ್ಯಪುಸ್ತಕಗಳ ಪ್ರಕಟನೆ.

೬. ಗ್ರಂಥಕರ್ತರಿಗೆ ಪ್ರೋತ್ಸಾಹ.

೭ ವಯೋನುಪೂರ್ವ ಸಾಹಿತ್ಯ ಮತ್ತು ಶಿಶುಸಾಹಿತ್ಯ.

೮. ಗದ್ಯ ಸಾಹಿತ್ಯ ಪ್ರಾಧಾನ್ಯ.

ಸಾಂಸ್ಕೃತಿಕ ಸಂಶೋಧನೆ

೧. ಇತಿಹಾಸ, ಗತವೈಭವಾವಶೇಷಗಳ, ಅಧ್ಯಯನ .

೨. ಶಿಲಾಶಾಸನಾನ್ವೇಷಣ.

೩. ಪ್ರಾಚೀನ ವಸ್ತು, ವಾಸ್ತುಶಿಲ್ಪ ಪರೀಕ್ಷೆ.

೪. ಸಂಶೋಧನ ಕಾರ್ಯಕ್ಕಾಗಿ ಪುದುವಟ್ಟುಗಳ ಏರ್ಪಾಟು.

೫. ಚಿತ್ರಕರ್ಮ, ಚಿತ್ರಕೂಟ ವ್ಯವಸ್ಥೆ.

೬. ನಾನಾ ಪ್ರಾಚೀನ ಲಿಪ್ಯನ್ವೇಷಣ ಶಾಖೆಗಳು, ಸಂಶೋಧ ಸಂಸ್ಥೆಗಳೊಂದಿಗೆ ಸಂಬಂಧ

೭. ಸಂಸ್ಕೃತಿಗೆ ಸಂಬಂಧಪಟ್ಟಂತೆ ಅನುಸಂಧೇಯ, ನಿದರ್ಶನ (Reference) ಗ್ರಂಥಗಳ ರಚನೆ ಪ್ರಕಟನೆ.

ಪ್ರಚಾರ-ಪ್ರಕಟನೆ

೧. ಪ್ರಭುತ್ವ ಕಾರ್ಯಗಳೆಲ್ಲ ಕನ್ನಡದ ಮೂಲಕವೇ ಆಗುವಂತೆ ಮಾಡಬೇಕು.

೨. ನ್ಯಾಯಸ್ಥಾನಗಳ ಕೆಲಸವೆಲ್ಲ ಕನ್ನಡದಲ್ಲೇ ಆಗಬೇಕು.

೩. ಮಕ್ಕಳ ಶಿಕ್ಷಣವು ಕಲಾವಸ್ಥೆಗಳಲ್ಲೂ ಕನ್ನಡದ ಮೂಲಕವಾಗಿಯೇ ನಡೆಯಬೇಕು.

೪. ವಿಶ್ವವಿದ್ಯಾನಿಲಯಗಳ ಶಿಕ್ಷಣವೂ ಕನ್ನಡದ ಮೂಲಕವಾಗಿಯೇ ನಡೆಯಬೇಕು.

೫. ಸಂಚಾರೋಪನ್ಯಾಸಗಳು, ನಾಟಕ ಪ್ರದರ್ಶನಗಳು, ಯಕ್ಷಗಾನಗಳು, ಹರಿಕಥೆಗಳ ವ್ಯವಸ್ಥೆ.

೬. ಪ್ರದರ್ಶನಗಳ ಏರ್ಪಾಟು; ಚಲನಚಿತ್ರಗಳ ನಿರ್ಮಾಣ ಮತ್ತು ಪ್ರದರ್ಶನ ವ್ಯವಸ್ಥೆ.

೭. ಸುವ್ಯವಸ್ಥಿತ ಸರ್ವಾಂಗ ಪರಿಪೂರ್ಣ ಮುದ್ರಣಾಲಯ; ಗ್ರಂಥಪ್ರಕಟನೆ ಮತ್ತು ಮಾರಾಟದ ವ್ಯವಸ್ಥೆ.

೮. ಕನ್ನಡ ನಾಡಿನ ಸಂಸ್ಕೃತಿ, ಅಭಿಮಾನ ಪ್ರಚಾರ ಮಾಡಲು ನೈಪುಣ್ಯ ಪಡೆದ ಶ್ರದ್ಧಾಳುಗಳನ್ನು ಉತ್ಸಾಹಿಗಳನ್ನು ಸಿದ್ಧಗೊಳಿಸುವ ಶಿಕ್ಷಣ ಕೇಂದ್ರವಾಗಬೇಕು.

ವಸಂತ ಸಾಹಿತ್ಯೋತ್ಸವ

ಈಗ ಸಮ್ಮೇಳನಗಳು ನಡೆಯುವಾಗಲೂ ಮತ್ತು ಅಲ್ಲಲ್ಲಿ ವಸಂತ ಸಾಹಿತ್ಯೋತ್ಸವಗಳು ನಡೆಯುವಾಗಲೂ ಅವುಗಳ ಅಂಗವಾಗಿ ಪ್ರದರ್ಶನಗಳು ನಡೆಯುತ್ತಿವೆ. ಆದರೆ ಈಗ ನಡೆಯುತ್ತಿರುವಂತೆ ಅವು ಸಾಕಾದಷ್ಟು ಬೋಧಪ್ರದವಾಗಿಯೂ ಇಲ್ಲ; ಜ್ಞಾನಪ್ರಚಾರ ದೃಷ್ಟಿಯಿಂದ ಪರಿಣಾಮಕಾರಿಯಾಗಿಯೂ ಇಲ್ಲ. ಗ್ರಂಥಪ್ರದರ್ಶನ ಕಲಾಪ್ರದರ್ಶನ ವೃತ್ತಪತ್ರಿಕಾ ಪ್ರದರ್ಶನ ಹೀಗೆ ಅನೇಕ ಸಾಂಸ್ಕೃತಿಕ ಮತ್ತು ಇತರ ಪ್ರಾಚೀನ ಮತ್ತು ಅರ್ವಾಚೀನ ವಸ್ತುಸಂಗ್ರಹ ಮತ್ತು ಪ್ರದರ್ಶನಗಳನ್ನು ಸುವ್ಯವಸ್ಥೆಯಿಂದ ಏರ್ಪಡಿಸುವುದೇ ಒಂದು ಮುಖ್ಯ ಕರ್ತವ್ಯವೆಂದು ಭಾವಿಸಿ ಅದನ್ನು ತೃಪ್ತಿಕರವಾಗಿ ಪೂರೈಸಬೇಕು.

ಪರಿಷತ್ತಿನ ಮುದ್ರಣಾಲಯ

ಕೀರ್ತಿಶೇಷ ಶ್ರೀ ಬಿ.ಎಂ.ಶ್ರೀಕಂಠಯ್ಯನವರ ಅಪಾರ ದೇಶಭಕ್ತಿ ಮತ್ತು ಔದಾರ್ಯದ ಫಲವಾಗಿ ಒಂದು ಮುದ್ರಣಾಲಯವು ಪರಿಷತ್ತಿನ ಆಸ್ತಿಯಾಗಿದೆ. ಅದರ ಪ್ರಯೋಜನವಷ್ಟಿಷ್ಟೆಂದು ಹೇಳಲಾಗದು. ಅನುಭವದಿಂದ ಈಗಿನ ಯಂತ್ರೋಪಕರಣಗಳೂ ಮತ್ತು ಇತರ ಸಲಕರಣೆಗಳು ಸಾಕಾದಷ್ಟು ಇಲ್ಲ. ಮುದ್ರಣಾಲಯವನ್ನು ಸರ್ವಾಂಗ ಪರಿಪೂರ್ಣವಾಗಿ ಮಾಡಬೇಕಾಗಿದೆ. ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಬೇಕಾಗಿದೆ. ಹಿಂದಿನ "ಕಾವ್ಯಕಲಾನಿಧಿ" ಪ್ರಾರಂಭಿಸಿದ ಕೆಲಸವನ್ನು ಮತ್ತಷ್ಟು ವಿತರಣೆಯಿಂದ ಮುಂದುವರಿಸಬೇಕಾಗಿದೆ. ಇಷ್ಟು ಮಾತ್ರವೇ ಅಲ್ಲ. ಇಂದಿನ ನೂರಾರು ಲೇಖಕರು ತಾವು ಬರೆದ ಗ್ರಂಥಗಳನ್ನು ಮುದ್ರಣ ಮಾಡಿಸಿ ಪ್ರಕಟಿಸಲು ಸಾಧ್ಯವಿಲ್ಲದೆ ನಿರಾಶರಾಗಿ ಕೂತಿದ್ದಾರೆ. ಸಾಹಸಿಗಳಾದ ಒಬ್ಬಿಬ್ಬರು ಸಾಲಸೋಲಗಳನ್ನು ಮಾಡಿ ಮುದ್ರಣ ಮಾಡಿಸುವ ಮಟ್ಟಿಗೆ ತಮ್ಮ ಚಾಪಲ್ಯವನ್ನು ತೀರಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಕೇವಲ ಲಾಭದೃಷ್ಟಿಯಿಂದ ಮಾತ್ರ ವ್ಯಾಪಾರ ಮಾಡುವ ಪುಸ್ತಕ ಪ್ರಚಾರಕರ ಕೈಗೆ ಸಿಕ್ಕಿ ಗೋಳಾಡುತ್ತಿದ್ದಾರೆ. ಈ ದುಃಖದಿಂದ ಈ ಗುಂಪಿನ ಸಾಹಿತ್ಯ ಸೇವಕರನ್ನು ಪಾರುಮಾಡಲು ಪರಿಷತ್ತು ಒಂದು ಆಲೋಚನೆಯನ್ನು ಮಾಡಬೇಕು. ಗ್ರಂಥಗಳನ್ನು ಪ್ರಕಟಿಸುವ ಮತ್ತು ಮಾರಾಟದ ಏರ್ಪಾಟನ್ನು ಮಾಡುವುದರ ಕಡೆಗೆ ಗಮನವನ್ನು ಕೊಡಬೇಕು.

ಭಾಷಾಭ್ಯಾಸ

ಕನ್ನಡ ಭಾಷೆಯ ಚರಿತ್ರೆಯನ್ನು ಸಂಪೂರ್ಣವಾಗಿ ಶಾಸ್ತ್ರೀಯವಾಗಿ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಳ್ಳಲು ಸಾಕಾದಷ್ಟು ಸಾಹಿತ್ಯಬೇಕು. ಅಂತಹ ನಿದರ್ಶನ (ರೆಫರೆನ್ಸ್) ಸಾಹಿತ್ಯ ಗ್ರಂಥಗಳು ನಮ್ಮಲ್ಲಿ ಇಲ್ಲವೇ ಇಲ್ಲ. ಅವುಗಳು ಇನ್ನಮೇಲೆ ನಿರ್ಮಾಣ ಆಗಬೇಕಾಗಿವೆ. ಈ ಭಾಗದಲ್ಲಿ ರೆ॥ ಕಿಟ್ಟೆಲ್, ಲೂಯಿ ರೈಸ್, ಆರ್. ನರಸಿಂಹಾಚಾರ್ಯ ಮೊದಲಾದ ನಿಪುಣರು ಅತ್ಯಪೂರ್ವ ಮತ್ತು ಆಶ್ಚರ್ಯಕರವಾದಂಥ ಆರಂಭ ಕಾರ್ಯವನ್ನು ಮಾಡಿದ್ದಾರೆ. ಆ ಕಾರ್ಯವನ್ನು ಮುಂದುವರಿಸುವುದರ ಕಡೆಗೆ ಸಾಕಾದಷ್ಟು ಗಮನ ಹೋಗಿಲ್ಲ. ಇಂತಹ ಕೆಲಸವನ್ನು ಒಬ್ಬಿಬ್ಬರು ವಿದ್ವಾಂಸರು ಮಾತ್ರ ಅಥವಾ ಸಂಶೋಧಕರು ಮಾತ್ರ ಮಾಡುವುದು ಸಾಧ್ಯವಿಲ್ಲ. ಪರಿಷತ್ತಿನಂತಹ ಮಹಾಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಪ್ರಭುತ್ವಗಳು ಇವುಗಳಿಂದ ಮಾತ್ರ ಸಾಧ್ಯ. ನಿಘಂಟುಗಳು, ವಿಶ್ವಕೋಶದ ನಿರ್ಮಾಣದ ಕತೆಗಳನ್ನು ನಾವು ತಿಳಿದುಕೊಳ್ಳಲು ಪ್ರಯತ್ನಪಟ್ಟಾಗ ಮೇಲಿನ ಮಾತಿನ ಸತ್ಯ ವಿಸ್ತಾರಪಡುತ್ತದೆ,

ಅಂತು ಕನ್ನಡ ಬಾಷೆಯ ಪ್ರಾಚೀನತೆ ಕುರಿತು ಅದರ ಮೂಲ ಸ್ವರೂಪ ಮತ್ತು ಕ್ರಮವಾದ ಬೆಳವಣಿಗೆ ಕುರಿತು ನಿಕರವಾದ ಜ್ಞಾನ ಸಂಪಾದನೆಗೆ ಈಗ ಸಾಕಾದಷ್ಟು ಅವಕಾಶವಿಲ್ಲವಾಗಿದೆ. ಭಾಷಾಶಾಸ್ತ್ರದಲ್ಲಿ ಆಸಕ್ತರಾದ ವಿದ್ಯಾರ್ಥಿಗಳು ಏನನ್ನು ನೋಡಬೇಕು, ಹೇಗೆ ಮುಂದುವರಿಯಬೇಕು ಎಂಬುದನ್ನರಿಯದೆ ಬಹಳ ಭಾಷೆಯ ಸ್ವರೂಪದ ವಿಮರ್ಶಾಕಾರ್ಯ ಪರೀಕ್ಷಾ ಕಾರ್ಯ ಶಾಸ್ತ್ರೋಕ್ತವಾಗಿ ನಡೆಯಬೇಕಾಗಿದೆ.

ಪರಿಷತ್ತಿನ ಪುಸ್ತಕ ಭಂಡಾರ

ಭರತಖಂಡದ, ಪ್ರಮುಖ ಸರಸ್ವತೀ ಭಂಡಾರಗಳನ್ನೆಲ್ಲಾ ನೋಡಿ ಅವುಗಳಲ್ಲಿ ಎಲ್ಲಾದರೂ ಕನ್ನಡ ಗ್ರಂಥಗಳಿದ್ದರೆ ಅಥವಾ ಕನ್ನಡ ನಾಡಿನ ಸಂಸ್ಕೃತಿ ಇತಿಹಾಸ ಮೊದಲಾದವುಗಳಿಗೆ ಸಂಬಂಧಪಟ್ಟ ಯಾವುದಾದರೂ ಗ್ರಂಥವಿದ್ದರೆ ಅಂತಹ ಗ್ರಂಥಗಳ ಪ್ರತಿಗಳನ್ನು ಮಾಡಿಸಿ ಅವುಗಳನ್ನು ಪರಿಷತ್ತಿನಲ್ಲಿ ಭದ್ರಪಡಿಸಬೇಕಾಗಿದೆ. ಮೊದಲು ಈ ಗ್ರಂಥಸಂಗ್ರಹ ಮತ್ತು ಸಂರಕ್ಷಣೆ ಅಗತ್ಯವಾಗಿ ಆಗಬೇಕು. ಪ್ರಕಟಣೆ ಕಾರ್ಯವಂತೂ ಆಗಲೇಬೇಕು. ಭಾಷೆ, ಸಾಹಿತ್ಯ, ಸಂಸ್ಕೃತಿ, ಈ ಕ್ಷೇತ್ರಗಳಲ್ಲಿ ಪರಿಶೋಧನೆಗಳನ್ನು ನಡೆಸಬೇಕೆಂದು ಆಸಕ್ತಿಯಿರುವ ವಿದ್ಯಾರ್ಥಿಗಳಿಗೆ ಇಂತಹ ಗ್ರಂಥಸಂಗ್ರಹಸ್ಥಾನವು ಎಂತಹ ಕ್ಷೇತ್ರ ಎಂಬುದನ್ನು ವರ್ಣಿಸಬೇಕಾಗಿಲ್ಲ. ಪರಿಷತ್ತು ಅಂತಹ ಜ್ಞಾನತೀರ್ಥವೆನಿಸಬೇಕು.

ಪರಿಷತ್ತು-ಪಠ್ಯಗಳು

ಭಾಷೆಯಲ್ಲಿ ಐಕ್ಯತೆಯನ್ನು ಉಂಟುಮಾಡಬೇಕೆಂದು ಸಾಹಿತ್ಯ ಪರಿಷತ್ತು ಹುಟ್ಟಿದಂದಿನಿಂದ ಪ್ರಯತ್ನಗಳಾಗುತ್ತಿವೆ. ಇಂದಿನವರೆಗೆ ಈ ಕನ್ನಡ ಏಕೀಕರಣವಾಗಿಲ್ಲ ಏಕಾಗಿಲ್ಲವೆಂಬ ಪ್ರಶ್ನೆಯನ್ನೀಗ ಎತ್ತಬೇಕಾಗಿಲ್ಲ. ಈ ಕೆಲಸ ಸಾಧ್ಯವಾಗಬೇಕಾದರೆ ಪ್ರಾಥಮಿಕ ಶಾಲೆಗಳಿಂದ ಪ್ರಾರಂಭವಾಗಿ ಪ್ರೌಢವಿದ್ಯಾ ಪೀಠಗಳಿಂದ ಬಾಲಕ ಬಾಲಕಿಯರು ಹೊರಬೀಳುವವರೆಗೆ ಅವರ ಪಠ್ಯಪುಸ್ತಕಗಳು ಒಂದೇ ರೂಪದಿಂದ ಕೂಡಿರುವಂತಾಗಬೇಕು. ಪ್ರಮಾಣವಿಶಿಷ್ಟವಾದ-ಸ್ಟ್ಯಾಂಡ್‌ಡ್ರೈಸ್ಡ್- ಪಠ್ಯಪುಸ್ತಕಗಳ ನಿರ್ಮಾಣವಾಗಬೇಕು. ಆ ಪುಸ್ತಕಗಳಿಗೆ ನಾನಾ ಪ್ರಭುತ್ವಗಳ ಅಂಗೀಕಾರ ಮುದ್ರೆ ಬೀಳಬೇಕು. ಆಗ ಮಾತ್ರ ಭಾಷೆಯ ಏಕೀಕರಣ ಮಾರ್ಗದಲ್ಲಿ ಕಾಲಿಟ್ಟಂತಾಗುತ್ತದೆ. ಈ ಕಾರ್ಯಸಾಧನೆಯಲ್ಲಿ ಪರಿಷತ್ತಿನ ಕರ್ತವ್ಯ ಅಷ್ಟಿಷ್ಟೆಂದು ಹೇಳಲಾಗದು.

ವಯೋನುಪೂರ್ವ ಸಾಹಿತ್ಯ

ಪಾಶ್ಚಾತ್ಯ ದೇಶಗಳಲ್ಲಿ ನಾನಾ ಬಗೆಯ ಸಾಹಿತ್ಯವನ್ನು ಸೃಷ್ಟಿಸುತ್ತಾರೆ. ಈ ಕೆಲಸದಲ್ಲಿ ಅವರು ವಯೋನುಗುಣವಾಗಿ ಎಲ್ಲ ಗ್ರಂಥಗಳನ್ನೂ ಬರೆಸಿ ಕ್ರಮವಾಗಿ ಪ್ರಕಟಿಸುತ್ತಾ ಹೋಗುತ್ತಾರೆ. ಷೇಕ್ಸ್‌ಪಿಯರಿನ ಕೃತಿಗಳ ಮಾತನ್ನು ಎತ್ತಿಕೋಳೋಣ. ಮಗುವಿಗೆ ಷೇಕ್ಸ್‌ಪಿಯರಿನ ಪರಿಚಯ ಮಾಡಿಕೊಡಬೇಕೆಂಬುದು ಪ್ರಕಾಶಕರ ಆಶೆ. ಆದಕಾರಣ ಆರೇಳು ವರ್ಷದ ಕೂಸನ್ನು ಲಕ್ಷ್ಯದಲ್ಲಿಟ್ಟುಕೊಂಡು ಷೇಕ್ಸ್‌ಪಿಯರಿನ ಕೃತಿಗಳಲ್ಲಿ ಕೆಲವು ಚಿತ್ತಾಕರ್ಷಕ ಸಂದರ್ಭಗಳನ್ನು ಆರಿಸಿ ಒಳ್ಳೆಯ ಚಿತ್ರಗಾರನಿಂದ ಸಂದರ್ಭೋಚಿತ ಚಿತ್ರಗಳನ್ನು ಬರೆಸಿ, ಆ ಚಿತ್ರಗಳ ಕೆಳಗೆ ಒಂದೆರಡು ವಾಕ್ಯಗಳನ್ನು ಬರೆದು ಮುದ್ದಾಗಿ ಅಚ್ಚುಮಾಡಿ ಮಕ್ಕಳ ಕೈಯಲ್ಲಿಡುತ್ತಾರೆ. ಹತ್ತು ಹನ್ನೆರಡು ವಯಸ್ಸಿನ ಬಾಲಕ ಬಾಲಕಿಯರಿಗಾಗಿ ಇದೇ ವಸ್ತುವುಳ್ಳ ಸಾಹಿತ್ಯವನ್ನು ಮತ್ತಷ್ಟು ವಿಸ್ತಾರ ಮಾಡಿಕೊಡುತ್ತಾರೆ. ಮತ್ತು ಭಾಷೆಯ ಮಟ್ಟವನ್ನು ತಕ್ಕಮಟ್ಟಿಗೆ ಹೆಚ್ಚಿಸುತ್ತಾರೆ. ಹನ್ನೆರಡರಿಂದ ಇಪ್ಪತ್ತು ವಯಸ್ಸಿನ ವಿದ್ಯಾರ್ಥಿಗಳಿಗೆಂದು ಮಹಾಮಹಾ ಗ್ರಂಥಗಳೆಂದು ಹೆಸರಿಟ್ಟು ಮೂಲಕ್ಕೆ ಲೇಶವೂ ಕುಂದುಬಾರದಂತೆ, ಸಿದ್ಧಗೊಳಿಸಿ ಪ್ರಕಟಿಸುವ ಸಂಪ್ರದಾಯವನ್ನು ರೂಢಿಗೆ ತಂದಿದ್ದಾರೆ. ಈ ಸಂಪ್ರದಾಯವನ್ನು ನಾವು ಅನುಸರಿಸಿ ಅದರ ಪೂರ್ಣಲಾಭವನ್ನು ನಮ್ಮವರಿಗೆ ಗಳಿಸಿ ಕೊಡಬೇಕು. ಒಬ್ಬ ಕಾಳಿದಾಸ, ಒಬ್ಬ ರವೀಂದ್ರನಾಥ ಠಾಕೂರ್, ಒಬ್ಬ ಪಂಪ, ಒಬ್ಬ ಬೇಂದ್ರೆ, ಒಬ್ಬ ಪುಟ್ಟಪ್ಪ, ಒಬ್ಬ ಮಾಸ್ತಿ, ಒಬ್ಬ ಶ್ರೀ, ಒಬ್ಬ ಪಂಜೆ, ಒಬ್ಬ ನಂದಳಿಕೆ, ಒಬ್ಬ ರೂಪಕಾರಿ ವೆಂಕಟಪ್ಪ, ವೈಣಿಕ ಶೇಷಣ್ಣ, ಗಾಯಕ ಕೃಷ್ಣಪ್ಪ ಇವರ ಪರಿಚಯವನ್ನು ಆರು ವರ್ಷದ ಕೂಸಿಗೆ, ಹತ್ತು ವರ್ಷದ ಮಗುವಿಗೆ, ಇಪ್ಪತ್ತು ವಯಸ್ಸಿನ ತರುಣ ತರುಣಿಯರಿಗೆ, ಪ್ರಾಪ್ತ ವಯಸ್ಕರಿಗೆ, ಪ್ರೌಢ ವಿದ್ಯಾರ್ಥಿಗಳಿಗೆ ಮತ್ತು ಜ್ಞಾನ ವೃದ್ಧರಿಗೆ ಇವರೆಲ್ಲರಿಗೂ ಬೇಕೆನಿಸುವಂತಹ ರೀತಿಯಲ್ಲಿ ಗ್ರಂಥಗಳನ್ನು ಬರೆಸಿ ಪ್ರಕಟಿಸುವ ಕೆಲಸವಾರಂಭವಾಗಬೇಕು. ಇಂತಹ ಕೆಲಸವನ್ನು ಪರಿಷತ್ತಿನಂತಹ ಸಂಸ್ಥೆಗಳು ಮತ್ತು ಸುವ್ಯವಸ್ಥಿತ ಪುಸ್ತಕ ವ್ಯಾಪಾರಿಗಳು ಮಾತ್ರ ಮಾಡಲು ಸಾಧ್ಯ. ಮನಸ್ಸು ಮಾಡಿದರೆ ಪ್ರಭುತ್ವದ ಶಿಕ್ಷಣಶಾಖೆಯವರೂ ಸಹ ಈ ಕೆಲಸವನ್ನು ಸಮರ್ಪಕವಾಗಿ ನೆರವೇರಿಸಲು ಸಾಧ್ಯ.

ಮಕ್ಕಳ ಸಾಹಿತ್ಯ ನಿರ್ಮಾಣ

ಜಪಾನರ ಕಾರ್ಯೋತ್ಸಾಹ ಮತ್ತು ಕಾರ್ಯ ವಿಧಾನಗಳು ನಮ್ಮನ್ನು ಪ್ರೇರೇಪಿಸಬೇಕು. ಕನ್ನಡ ನಾಡಿನಲ್ಲಿ ಇತ್ತೀಚೆಗೆ ಕೆಲವರು ಮಕ್ಕಳಿಗಾಗಿಯೇ ಪುಟ್ಟ ಪುಸ್ತಕಗಳನ್ನು ಬರೆದು ಪ್ರಕಟಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಂಗಳೂರಿನ ಬಾಲಸಾಹಿತ್ಯ ಮಂಡಲವು ನನ್ನ ನೆನಪಿಗೆ ಬರುತ್ತದೆ. ಸ್ವರ್ಗವಾಸಿ ಪಂಜೆ ಮಂಗೇಶರಾಯರು ಶಿಶುಸಾಹಿತ್ಯ ನಿರ್ಮಾಣವಾಗಬೇಕೆಂದು ವಿಶೇಷ ಶ್ರದ್ಧೋತ್ಸಾಹಗಳನ್ನು ತೋರಿಸುತ್ತಿದ್ದರು. ಧಾರವಾಡ ಸೀಮೆಯಲ್ಲೂ ಮೈಸೂರು

ಸೀಮೆಯಲ್ಲೂ ತರುಣ ಲೇಖಕರನೇಕರು ಮಕ್ಕಳಿಗಾಗಿಯೇ ಪುಟ್ಟ ಪುಸ್ತಕಗಳನ್ನು ಬರೆದು ಪ್ರಕಟಿಸುತ್ತಿದ್ದಾರೆ. ಶ್ರೀ ಜಿ.ಪಿ. ರಾಜರತ್ನಂ ಅವರು ಮಾಡಿರುವ ಕೆಲಸ ಅಭಿನಂದನೀಯವಾದುದು. ವಯೋನುಪೂರ್ವ ಸಾಹಿತ್ಯದಂತೆಯೇ ಶಿಶುಸಾಹಿತ್ಯ ನಿರ್ಮಾಣ ಮತ್ತು ಪ್ರಕಟನ ಕಾರ್ಯದಲ್ಲಿ ಪರಿಷತ್ತು, ನಾನಾ ಪ್ರಭುತ್ವಗಳು ಮುಂದೆ ಬಂದು ಒಂದು ಕಾರ್ಯವಿಧಾನವನ್ನು ಹಾಕಿಕೊಂಡು ನಾನಾ ಲೇಖಕರ ಸಹಕಾರವನ್ನು ಒದಗಿಸಿಕೊಂಡು ಶಿಶುಸಾಹಿತ್ಯ ಗ್ರಂಥಮಾಲೆಯನ್ನು ಪ್ರಕಟಿಸಬೇಕು. ಕನ್ನಡ ನಾಡಿನಲ್ಲಿ ಈ ವಾಙ್ಮಯದ ಕೊರತೆ ಅಸಾಧ್ಯವಾಗಿದೆ. ಇದನ್ನು ನಿವಾರಿಸುವುದರ ಕಡೆಗೆ ಪ್ರತಿಯೊಬ್ಬರೂ ಗಮನ ಕೊಡಬೇಕು.

ಸಂಶೋಧನೆ ಮತ್ತು ಪರಿಷತ್ತು

ಪರಿಷತ್ತಿನಲ್ಲಿ ಭಾಷಾಸಾಹಿತ್ಯ ಇತಿಹಾಸ ಸಂಸ್ಕೃತಿಗಳ ಕುರಿತು ಶಾಸ್ತ್ರೀಯವಾದ ಸಂಶೋಧನಾ ಕಾರ್ಯ ನಡೆಯುವಂತಾಗಬೇಕು. ಪರಿಷತ್ತಿನಂತೆಯೇ ಇತರ ಇಂತಹ ಸಂಸ್ಥೆಗಳ ಮೂಲಕವಾಗಿಯೂ ಈ ಕಾರ್ಯ ನಡೆಯಬೇಕು. ಕನ್ನಡ ನಾಡಿನಲ್ಲಿ ಈಗಾಗಲೇ ಸಾವಿರಾರು ಶಿಲಾಶಾಸನಗಳೂ, ತಾಮ್ರಶಾಸನಗಳೂ ಹೊರಕ್ಕೆ ಬಂದಿವೆ. ಭಾರತ ಮೈಸೂರು ಪ್ರಾಚೀನ ಲಿಪ್ಯನ್ವೇಷಣ ಶಾಖೆಗಳವರೂ ಅನೇಕ ಶಾಸನಗಳನ್ನು ಪ್ರಕಟಿಸಿದ್ದಾರೆ. ಎಪಿಗ್ರಾಫಿಯಾ ಕರ್ಣಾಟಕ ಎಂಬ ಗ್ರಂಥಮಾಲೆಯು ಪ್ರಕಟನವಾಗಿ ಹತ್ತಾರು ವರ್ಷಗಳಾದವು. ಅನೇಕರಿಗೆ ಅದರ ಹೆಸರೇ ಗೊತ್ತಿಲ್ಲ. ಅನೇಕ ಪಾಶ್ಚಾತ್ಯ ವಿದ್ವಾಂಸರು ಕನ್ನಡ ನಾಡಿನ ಕನ್ನಡ ಶಾಸನಗಳನ್ನು ಇಂಡಿಯನ್ ಆಂಟಿಕ್ವೇರಿ ಎಫಿಗ್ರಾಫಿಯಾ ಇಂಡಿಕ ಮೊದಲಾದ ಪ್ರೌಢ ಮಾಸಪತ್ರಿಕೆಗಳಲ್ಲಿ ಮತ್ತು ತ್ರೈಮಾಸಿಕಗಳಲ್ಲಿ ಪ್ರಕಾಶಗೊಳಿಸಿದ್ದಾರೆ. ಈಗಲೂ ಪ್ರಕಟಿಸುತ್ತಿದ್ದಾರೆ ; ಕನ್ನಡ ನಾಡಿನ ವಾಸ್ತು ಶಿಲ್ಪ, ರೂಪಕರ್ಮ ಕುರಿತ ಅವಶೇಷಗಳು ರಾಶಿರಾಶಿಯಾಗಿ ಬಿದ್ದಿವೆ.

"ಇವೆಲ್ಲವನ್ನೂ ಕ್ರೋಡೀಕರಿಸಿ ದೇಶಭಾಷಾ ಚರಿತ್ರಗಳನ್ನೇ ಮುಖ್ಯೋದ್ದೇಶಗಳನ್ನಾಗಿ ಮುಂದಿಟ್ಟುಕೊಂಡು ಜಾಣತನದಿಂದಲೂ, ವಾಕ್ಪ್ರಭವದಿಂದಲೂ ಚಾಚೂ ಬಿಡದೆ ಬರೆಯಿಸುವ ಭಾರವು ಮುಂದಾದರೂ ಸಾಹಿತ್ಯ ಪರಿಷತ್ತಿನದಾಗಿಯೇ ಇರಬೇಕಾಗುತ್ತದೆ."

ಹೀಗೆಂದು ಸಾಹಿತ್ಯ ಸಮ್ಮೇಳನದ ಹತ್ತನೆಯ ೧೯೨೪ ಅಧಿವೇಶನಾಧ್ಯಕ್ಷತೆ ವಹಿಸಿದ್ದ ಕೈಲಾಸವಾಸಿ ರಾವ್ ಬಹದ್ದೂರ್ ಹೊಸಕೋಟೆ ಕೃಷ್ಣಶಾಸ್ತ್ರಿಗಳವರು ಅಪ್ಪಣೆ ಕೊಡಿಸಿದರು. ಅದೇ ಸಂದರ್ಭದಲ್ಲೇ ಅವರು ಮೈಸೂರು ಹೊರಗಿನ ಕರ್ಣಾಟಕ ಶಾಸನಶಾಖೆಯಲ್ಲಿ ಮಾಡಿರುವ ಕೆಲಸವನ್ನು ಸಂಗ್ರಹವಾಗಿ ನಿರ್ದೇಶಿಸಿದ್ದಾರೆ. ಹೆಚ್ಚು ವಿವರಗಳಿಗೆ ಈಗ ಹೋಗಬೇಕಾಗಿಲ್ಲ.

ಸಂಶೋಧನೆಗೆ ದತ್ತಿನಿಧಿ ವ್ಯವಸ್ಥೆ

ಕನ್ನಡ ನಾಡಿನ ಚರಿತ್ರೆ ಸಂಸ್ಕೃತಿ ವಾಸ್ತುಶಿಲ್ಪ ಇವುಗಳಿಗೆ ಸಂಬಂಧಪಟ್ಟಂತೆ ಸಂಶೋಧನ ಅಧ್ಯಯನ ಕಾರ್ಯ, ಸುವ್ಯವಸ್ಥೆಯಿಂದ ನಡೆಯಬೇಕು. ಶಿಲಾಶಾಸನಗಳ ಅನ್ವೇಷಣ ಮತ್ತು ಅಧ್ಯಯನವಾಗಬೇಕು. ಇದಕ್ಕಾಗಿ ಪರಿಷತ್ತಿನಲ್ಲಿ ಪ್ರತ್ಯೇಕವಾಗಿ ಒಂದು ಸಂಶೋಧನ ಶಾಖೆಯು ಏರ್ಪಾಟಾಗಬೇಕು. ಈ ಶಾಖೆಯಲ್ಲಿ ಕೆಲಸವನ್ನು ನಡೆಸಲು ಮತ್ತು ಈ ಕೆಲಸವನ್ನು ಕಲಿಸಲು ವಿದ್ಯಾನಿಪುಣರ ಸಹಾಯ ಪಡೆಯಬೇಕು. ವಿದ್ಯಾರ್ಥಿಗಳನ್ನು ಆಕರ್ಷಿಸಬೇಕು. ಅವರಿಗೆ ವೇತನಗಳನ್ನು ಕೊಡುವುದಕ್ಕೆ ಪುದುವಟ್ಟುಗಳನ್ನಿಡಿಸುವ ಅಥವಾ ದತ್ತಿಗಳನ್ನು ಬಿಡಿಸುವ ಕೆಲಸವನ್ನು ಕೈಗೊಳ್ಳಬೇಕು. ಕನ್ನಡನಾಡಿನಲ್ಲಿ ಭೂಶೋಧನ ಕಾರ್ಯವು ಸಮರ್ಪಕವಾಗಿ ನಡೆದಿಲ್ಲ. ಚಿತ್ರದುರ್ಗದ ಚಂದವಳ್ಳಿ ಕೆಲಸವೇ ಅರೆಬರೆಯಾಗಿ ಸಾಗಿದೆ.

ನಾಡಿನ ದೌರ್ಭಾಗ್ಯದಿಂದ ಪ್ರಭುತ್ವಗಳ ಔದಾಸೀನ್ಯದಿಂದ ನಾಡಿನ ಈ ಸಂಪತ್ತು ಕ್ಷಣಕ್ಷಣಕ್ಕೂ ನಾಶವಾಗುತ್ತಿದೆ. ಇನ್ನು ಮೇಲೂ ನಾವು ಉದಾಸೀನವಾಗಿ ಕುಳಿತುಕೊಳ್ಳಲಾಗದು. ಪರಿಷತ್ತು ಮತ್ತು ಅದರ ಅಂಗಸಂಸ್ಥೆಗಳು ನಾನಾ ಪ್ರಾಚೀನ ಲಿಪ್ಯನ್ವೇಷಣ ಶಾಖೆಗಳೊಂದಿಗೂ ಸಂಶೋಧನ ಸಂಸ್ಥೆಗಳೊಂದಿಗೂ ಸಹಕಾರಮಾಡಿ ಇವುಗಳ ಸಂರಕ್ಷಣ ಕಾರ್ಯದಲ್ಲಿ ಉದ್ಯುಕ್ತವಾಗಬೇಕು.

ಈ ಸಂದರ್ಭದಲ್ಲಿ "ಮ್ಯೂಸಿಯಂ"ಗಳ ವ್ಯವಸ್ಥೆಯನ್ನೂ ಸಹ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಪ್ರಾಚೀನ ಶಾಸನ, ನಾಣ್ಯ, ಚಿತ್ರಕರ್ಮ, ವಾಸ್ತುಶಿಲ್ಪ, ಗ್ರಂಥ ಮತ್ತು ಸಾಮಾನ್ಯ ಸಂಸ್ಕೃತಿಗೆ ಸಂಬಂಧಪಟ್ಟ ಅನೇಕ ವಸ್ತುಗಳು ನಾಡಿನಲ್ಲೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದು, ಅಜ್ಞಾನದಿಂದ ಜನರು ಅವುಗಳನ್ನು ಕೆಡಿಸುತ್ತಿದ್ದಾರೆ, ಇವುಗಳನ್ನೆಲ್ಲಾ ನಿಲ್ಲಿಸಬೇಕು. ಅಲ್ಲದೆ ಜನರಿಗೆ ಇವುಗಳಲ್ಲಿ ಅಭಿಮಾನ ಹುಟ್ಟಿಸಬೇಕು. ಮೇಲಿಂದ ಮೇಲೆ ಅವುಗಳನ್ನು ನೋಡಲು ಜನರಿಗೆ ಅವಕಾಶಗಳನ್ನು

ಕಲ್ಪಿಸಬೇಕು. ಇವುಗಳಿಂದಲೇ ನಗರಗಳಲ್ಲಿ ಮ್ಯೂಸಿಯಂಗಳನ್ನು ಸ್ಥಾಪಿಸಿರುವುದು. ಈ ಮ್ಯೂಸಿಯಂಗಳು ಭರತಖಂಡದ ನಾನಾ ನಗರಗಳಲ್ಲಿವೆ. ಅವುಗಳಲ್ಲೊಂದೊಂದೂ ಸಂಶೋಧನ ಕಾರ್ಯದ ಒಂದೊಂದು ವಿಶಿಷ್ಟ ಕ್ಷೇತ್ರಗಳೆನಿಸಿವೆ. ಅಂತಹ ಮ್ಯೂಸಿಯಂ ಒಂದು ಬೆಂಗಳೂರಿನಲ್ಲಿದೆ. ಬೆಂಗಳೂರಿನಂತಹ ಕರ್ನಾಟಕದ ಮಹಾನಗರಕ್ಕೆ ಒಂದು ಮ್ಯೂಸಿಯಂ ಸಾಲದು. ಈಗಿರುವಂತೆ ಆ ಮ್ಯೂಸಿಯಂ ವ್ಯವಸ್ಥೆಯೂ ಸಹ ಸಮರ್ಪಕವಾಗಿಲ್ಲ. ಸಂಶೋಧನೆಗೆ ಯಾವ ಏರ್ಪಾಡನ್ನೂ ಮಾಡಿಲ್ಲ. ಸಾಂಸ್ಕೃತಿಕ ವಸ್ತುಸಂಗ್ರಹ ಕಾರ್ಯವಂತೂ ಇಲ್ಲವೆ ಎಲ್ಲ. ಇನ್ನು ಮೇಲಾದರೂ ಈ ಕಾರ್ಯದ ಕಡೆಗೆ ಮೈಸೂರು ಸರಕಾರವು ಲಕ್ಷ್ಯ ಕೊಡಬೇಕೆಂದು ನಾನು ಸೂಚನೆ ಮಾಡುತ್ತಿದ್ದೇನೆ. ಅಷ್ಟು ಮಾತ್ರವಲ್ಲದೆ ಕನ್ನಡ ನಾಡಿನ ಬೇರೆ ಬೇರೆ ಕಡೆಗಳಲ್ಲಿ ಇಂತಹ ಸಾಂಸ್ಕೃತಿಕ ವಿಶಿಷ್ಟವೆನಿಸಿದ ಮತ್ತು ಸಂಶೋಧನ ಕಾರ್ಯೋತ್ಸುಕರಾದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಮ್ಯೂಸಿಯಂಗಳನ್ನು ಏರ್ಪಡಿಸುವ ಪ್ರಯತ್ನವಾಗಬೇಕು. ಪರಿಷತ್ತಿನಲ್ಲೂ ಸಹ ಅಂತಹ ಒಂದು ಆದರ್ಶದ ಮ್ಯೂಸಿಯಂ ಏರ್ಪಾಟಾಗುವುದಾದರೆ ಯಾರಿಗೆ ತಾನೆ ಸಂತೋಷವಾಗುವುದಿಲ್ಲ. ಹಾಗೆಯೇ ಪರಿಷತ್ತಿನಲ್ಲಿ ಒಂದು ಚಿತ್ರಕೂಟ (ಪಿಕ್ಚರ್ ಗ್ಯಾಲರಿ)ವೂ ಏರ್ಪಾಟಾಗಬೇಕೆಂಬ ಆಶೆಯ ನನ್ನಲ್ಲಿ ಅಪಾರವಾಗಿದೆ. ಈ ಚಿತ್ರಕೂಟದಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಕಲಾವಿದರ ಕೆಲಸ ಅಲ್ಲಿ ಕಂಡುಬರುವಂತಾಗಬೇಕು.

ರೆಫರೆನ್ಸ್ ಗ್ರಂಥ ನಿರ್ಮಾಣ

ಪಾಶ್ಚಾತ್ಯ ದೇಶಗಳಲ್ಲಿ ರೆಫರೆನ್ಸ್ ಬುಕ್ಸ್ ಎಂಬ ಸಾಹಿತ್ಯರಾಶಿಗೆ ವಿಶೇಷ ಬೆಲೆಯುಂಟು. ಪಂಡಿತರೂ ನಿಪುಣರೂ ಇಂತಹ ಗ್ರಂಥಗಳ ರಚನೆಯಲ್ಲಿ ವಿಶೇಷ ಸಾಹಸ ತೋರಿಸುತ್ತಾರೆ. ಪ್ರಭುತ್ವಗಳು, ಪಂಡಿತ ಸಂಸ್ಥೆಗಳು, ಈ ಬಗೆಯ ಗ್ರಂಥರಚನೆಗೂ ಪ್ರಕಟನೆಗೂ ಬೇಕಾದ ಜನಧನ ಸಹಾಯವನ್ನು ಒದಗಿಸಿಕೊಂಡು ಆಶ್ಚರ್ಯಕರವಾದ ಪ್ರಮಾಣ ನಿದರ್ಶನ ಗ್ರಂಥರಾಶಿಯ ನಿರ್ಮಾಣವಾಗಬೇಕು. ಪರಿಷತ್ತು ಮಾಡಬೇಕಾದ ಅನೇಕ ಕೆಲಸಗಳಲ್ಲಿ ಇದೂ ಒಂದು.

ಸಹಾಯಕ ಸೀಮಾನಿಶ್ಚಯ ವಿಚಾರ ಸಮಿತಿ

ಕರ್ನಾಟಕದ ಸುತ್ತ ಮೇರೆಗಲ್ಲುಗಳನ್ನು ಗುರುತು ಮಾಡಿ ಆಯಾ ಸ್ಥಳಗಳಲ್ಲಿ ಉಭಯಭಾಷಾವರ್ಯರಿಗೂ ಸಮ್ಮತವಾಗುವಂತೆ ನಿಲ್ಲಿಸಬೇಕು. ಡೊಮಿನಿಯನ್ನರ ಸರ್ಕಾರದವರು ಸೀಮಾ ನಿಶ್ಚಯ ಸಮಿತಿಯನ್ನು ಕೂಡಲೆ ನಿರ್ಮಿಸಲಿದ್ದಾರೆ. ಮಹಾರಾಷ್ಟ್ರ, ತಮಿಳುನಾಡು, ಆಂಧ್ರ, ಕೇರಳ ನಾಲ್ಕುಕಡೆಗಳಲ್ಲಿ ಕರ್ನಾಟಕ ಸೀಮಾರೇಖೆ ನಿಶ್ಚಯವಾಗಬೇಕು. ಕನ್ನಡನಾಡಿನವರೆಲ್ಲ ಶಾಸನಬದ್ಧವಾದ **ಚೌಂಚರಿ ಕಮೀಷನ್** ಮುಂದೆ ಅಂಕಿ, ಅಂಶ, ನಕ್ಷೆಗಳನ್ನಿಟ್ಟು ಅದಕ್ಕೆ ಕರ್ನಾಟಕವಾದದ ನ್ಯಾಯವನ್ನು ಮನಗಾಣಿಸಬೇಕಾಗಿದೆ. ಈ ಭಾಗದಲ್ಲಿ ಏಕೀಕರಣ ಮಹಾಸಭೆ ಮಾಡುವ ಕೆಲಸ ಅದು ಮಾಡಿಯೇ ಮಾಡುತ್ತದೆ, ಈ ಪರಿಷತ್ತು ಸಹ ಒಂದು **ಸಹಾಯಕ ಸೀಮಾ ನಿಶ್ಚಯವಿಚಾರ ಸಮಿತಿಯೊಂದನ್ನು ನೇಮಕಮಾಡಿ** ಆ ಮೂಲಕ ಪೂರ್ವಭಾವಿ ಕೆಲಸಗಳನ್ನೆಲ್ಲ ಪೂರೈಸಬೇಕಾಗಿದೆ.

❖❖

೩೨ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ರೆವರೆಂಡ್ ಉತ್ತಂಗಿಚೆನ್ನಪ್ಪ



ಅಭಿನವ ಸರ್ವಜ್ಞ ಕವಿ ಎಂದೇ ಬಿರುದಾಂಕಿತರಾದ ರೆವರೆಂಡ್ ಉತ್ತಂಗಿ ಚೆನ್ನಪ್ಪನವರು ದಾನಿಯೇಲಪ್ಪ - ಸುಭದ್ರವ್ವ ದಂಪತಿಗಳಿಗೆ ೨೮-೧೦-೧೮೮೧ರಂದು ಹಿರಿಯ ಮಗನಾಗಿ ಧಾರವಾಡದಲ್ಲಿ ಜನಿಸಿದರು. ಪೂರ್ವಜರು ಮೂಲದಲ್ಲಿ ವೀರಶೈವರಾಗಿ ಊರು ಪಾರುಪತ್ತೇಗಾರಿಕೆ ನಡೆಸುತ್ತಿದ್ದರು. ಇವರ ಶಾಲಾ ಶಿಕ್ಷಣವು ಧಾರವಾಡ, ಗದಗ, ಬೆಟಗೇರಿಗಳಲ್ಲಿ ನಡೆಯಿತು. ೧೯೩೦ರಲ್ಲಿ ಮೆಟ್ರಿಕ್ ಪರೀಕ್ಷೆ ಫೇಲಾದರು. ಅನಂತರ ೧೯೦೮ರಲ್ಲಿ ತಾಯಿಯ ಅಪೇಕ್ಷೆಯಂತೆ ಬಾಸೆಲ್ ಮಿಷನ್ ಸಂಸ್ಥೆಯಲ್ಲಿ ಧರ್ಮೋಪದೇಶಕರಾಗಿ ಸೇರಿದರು.

ಧರ್ಮೋಪದೇಶಕರಾಗಿ ೧೯೦೮ರಿಂದ ೧೯೪೨ರವರೆಗೆ ನಿಸ್ಪೃಹರಾಗಿ ಸೇವೆ ಸಲ್ಲಿಸಿದರು. ಧಾರವಾಡ, ಮುಂಡರಗಿ, ಹಾವೇರಿ, ಹುಬ್ಬಳ್ಳಿಗಳಲ್ಲಿ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಕೈಂಕರ್ಯನಡೆಸಿದರು. ೩೩ ವರ್ಷಗಳ ಸೇವೆಯ ನಂತರ ನಿವೃತ್ತರಾದರು.

ಕನ್ನಡ ಭಾಷೆಯ ಬೈಬಲ್ ಪರಿಷ್ಕರಣ ಮಂಡಳಿಯ ಅಧ್ಯಕ್ಷರಾಗಿ ಇವರು ರಾಷ್ಟ್ರೀಯ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು, ಖಾದಿ ಧರಿಸಿದರು. ಕ್ರೈಸ್ತ ಮತಾವಲಂಬಿ ಆಗಿದ್ದರೂ ವೀರಶೈವ ಸಿದ್ಧಾಂತ ಅಧ್ಯಯನ ಪ್ರಸಾರದಲ್ಲಿ ತೊಡಗಿದ್ದರು. ಕನ್ನಡ ಭಾಷೆಯ ಕಟ್ಟಾಭಿಮಾನಿಗಳಾದ ಇವರು ಬಾಸಲ್ ಸುವಾರ್ತಿಕ ಸಂಘದ ಹೆಸರನ್ನು ಕನ್ನಡ ಸುವಾರ್ತಿಕ ಸಂಘವೆಂದು ಪರಿವರ್ತಿಸಿದರು.

ಗ್ರೀಕ್ ಮತ್ತು ಹೀಬ್ರೂ ಭಾಷೆಯ ಮೂಲಪಾಠದೊಂದಿಗೆ ಕನ್ನಡ ಬೈಬಲ್‌ಗೆ ಹೋಲಿಸಿ ಪರಿಷ್ಕರಿಸಿದರು. ರೆವರೆಂಡ್ ಪ್ರಶಸ್ತಿಗೆ ಪಾತ್ರರಾದರು. ೧೯೪೪ರಲ್ಲಿ ರಬಕವಿಯಲ್ಲಿ ನಡೆದ ೨೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಜನಪದ ಸಾಹಿತ್ಯ ಗೋಷ್ಠಿಯಲ್ಲಿ ಭಾಗವಹಿಸಲು ಕರೆ ನೀಡಲಾಗಿತ್ತು. ೧೯೪೯ರಲ್ಲಿ ಕಲಬುರ್ಗಿಯಲ್ಲಿ ನಡೆದ ೩೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ೧೯೫೭-೫೮ರಲ್ಲಿ ಇವರು ರಚಿಸಿದ 'ಸಿದ್ಧರಾಮ ಸಾಹಿತ್ಯ ಸಂಗ್ರಹ' ಗ್ರಂಥಕ್ಕೆ ದೇವರಾಜ ಬಹಾದ್ದೂರ್ ಬಹುಮಾನ ಬಂದಿತು. ೬-೩-೧೯೪೯ರಿಂದ ೧೬-೨-೧೯೫೦ರವರೆಗೆ ಪರಿಷತ್ತಿನ ಗೌರವಾಧ್ಯಕ್ಷರಾಗಿದ್ದರು.

ಉತ್ತಂಗಿ ಅವರ ಬದುಕಿನ ಸಾಧನೆ ಎಂದರೆ ಅಜ್ಞಾತ ಕವಿಯಾಗಿದ್ದ ಸರ್ವಜ್ಞ ಕವಿಯನ್ನು ಬೆಳಕಿಗೆ ತಂದಿದ್ದು : 'ಸರ್ವಜ್ಞ ವಚನಗಳು' ಗ್ರಂಥ ಇವರ ದೀರ್ಘಕಾಲದ ಸಂಶೋಧನೆಯ ಫಲ. ಇದಲ್ಲದೆ ಸುಮಾರು ೧೪ ಕೃತಿಗಳನ್ನು ಬರೆದಿದ್ದಾರೆ:

ಬನಾರಸಕ್ಕೆ ಬೆತ್ಲಹೇಮನ ವಿನಂತಿ (೧೯೨೧), ಮೃತ್ಯುಂಜಯ, ಹಿಂದೂ ಸಮಾಜ ಚಿಂತಕ, ನಾರಾಯಣ ವಾಮನ ತಿಲಕರ ಜೀವನಚರಿತ್ರೆ, ಬಸವೇಶ್ವರರೂ ಅಸ್ಪೃಶ್ಯರ ಉದ್ಧಾರವೂ, ಮಕ್ಕಳ ಶಿಕ್ಷಣ ಪಟ, ಸಿದ್ಧರಾಮ ಸಾಹಿತ್ಯ ಸಂಗ್ರಹ, ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು, ಆದಯ್ಯನ ವಚನಗಳು ಇತ್ಯಾದಿ.

ಸರ್ವಜ್ಞ ವಚನ ಸಂಶೋಧನೆಯಲ್ಲಿಯೇ ದೃಷ್ಟಿ ಕಳೆದುಕೊಂಡ ಇವರು ೨೮-೮-೧೯೬೨ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೨
ಅಧ್ಯಕ್ಷರು, ಉತ್ತಂಗಿ ಚೆನ್ನಪ್ಪ
ದಿನಾಂಕ ೫, ೬, ೭ ಮಾರ್ಚ್ ೧೯೪೯
ಸ್ಥಳ : ಕಲಬುರ್ಗಿ

ಲಿಪಿ ಸಂಸ್ಕರಣ ಮತ್ತು ಪರಿಷತ್ತು

ಇಂದಿನ ಕನ್ನಡ ಲಿಪಿ ಬಲು ಚೆಲುವಾದುದು. ಇದು ಹಲವು ವಿದ್ವಾಂಸರು ತಿಳಿದಿರುವಂತೆ ಬ್ರಾಹ್ಮೀ ಲಿಪಿಯಿಂದ ಹುಟ್ಟಿದಂತಿಲ್ಲ. ಮೊಹೆಂಜೊದಾರೋದ ಚಿತ್ರಲಿಪಿ ಇದಕ್ಕೆ ಮೂಲವಿದ್ದಂತೆ ಅನಿಸುತ್ತದೆ. ನಡುವೆ ಎಂದೋ ಈ ಲಿಪಿ ಸೊನ್ನೆಗೆ ತಿರುಗಿಕೊಂಡು ಹಲವು ಶತಮಾನಗಳ ನಂತರ ಈಗಿನ ಆಕಾರವನ್ನು ತಳೆದಿರಬೇಕು. ಈಗಿನ ನಮ್ಮ ಲಿಪಿ-ಸೌಂದರ್ಯವು ಹಲವು ಶತಮಾನಗಳ ಮಾರ್ಪಾಟಿನ ಫಲವಾಗಿರುವುದರಿಂದ ಅದರ ಅಂದವು ಕೆಡದಂತೆ ನೋಡಿಕೊಳ್ಳುವುದು ನಮ್ಮ ಪ್ರಥಮ ಕರ್ತವ್ಯ. ಇನ್ನೊಂದು ಮಾತು ;

ನಮ್ಮ ಲಿಪಿಗೆ ದ್ರಾವಿಡರ ಚಿತ್ರಲಿಪಿಯೆ ಮೂಲವಾಗಿದ್ದರೂ ಅದರ ಮೇಲೆ ಸಂಸ್ಕೃತ ವರ್ಣಮಾಲೆಯ ಪ್ರಭಾವವೂ ಉಂಟಾಗಿದೆ. ದೀರ್ಘ, ಮಹಾಪ್ರಾಣ, ಒತ್ತಕ್ಷರ, ಕಾಗುಣಿತ, ಇವಕ್ಕೆ ಕೆಲವು ತಿದ್ದುಪಾಟುಗಳು ಈಗ ಅಗತ್ಯವೆಂದು ಕಾಣುತ್ತದೆ. ಈ ತಿದ್ದುಪಾಟುಗಳು ಲಿಪಿ ತತ್ವಗಳಿಗನುಸಾರವಾಗಿ ಯಂತ್ರಸೌಕರ್ಯಗಳಿಗೆ ಅನುಗುಣವಾಗಿ ಸೂಚಿಸಲ್ಪಡಬೇಕು. ಇಂದಿನ ನಮ್ಮ ಲಿಪಿ ಹಲವು ನ್ಯೂನ್ಯತೆಗಳಿಂದ ಕೂಡಿದ್ದಾಗಿ ಚಿಕ್ಕಮಕ್ಕಳಿಗೆ ಹಾಗೂ ನಿರಕ್ಷರಿಗಳಾದ ವಯಸ್ಕರಿಗೆ ಕಲಿಯಲು ಬಹು ತೊಡಕಾಗಿದೆ. ಈ ದೋಷಗಳ ನಿವಾರಣೆಯಾಗಲೇಬೇಕು. ಆದರೆ ಯಂತ್ರ ಸೌಕರ್ಯಕ್ಕಾಗಿ ಈಗಿನ ಲಿಪಿಯನ್ನು ತೀರ ವಿಕೃತಗೊಳಿಸುವುದೂ ತಪ್ಪಾದೀತು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯ ಲಿಪಿತಜ್ಞರೆಲ್ಲ ಒಂದೆಡೆಗೆ ಸೇರುವಂತೆ ಲಿಪಿ-ಸಮ್ಮೇಳನವೊಂದನ್ನು ಕರೆದು ಅದರಲ್ಲಿ ನಿರ್ಣಯವಾಗುವ ತಿದ್ದುಪಾಟುಗಳನ್ನು ಸ್ವೀಕರಿಸುವುದು ಹೆಚ್ಚು ವಿಹಿತ. ಲಿಪಿ-ಸಂಸ್ಕರಣದ ಬಗೆಗೆ ಆಗಾಗ ಕೆಲವು ಪ್ರಯತ್ನಗಳೇನೋ ನಡೆದಂತೆ ತೋರಿದರೂ ಈ ವಿಚಾರದಲ್ಲಿ ಇರಬೇಕಾದ ಆಸ್ಥೆ ಕನ್ನಡ ಜನತೆಯಲ್ಲಿ ಇನ್ನೂ ಹುಟ್ಟಿಲ್ಲವೆಂದೇ ಹೇಳಬೇಕು. ಕನ್ನಡ ಸಾಹಿತ್ಯ ಪರಿಷತ್ತು ಈ ಕಾರ್ಯವನ್ನು ಮೊದಲು ಆರಂಭ ಮಾಡಿತು. ಅದೇ ಈ ಕಾರ್ಯವನ್ನು ಪೂರ್ತಿಗೊಳಿಸಬಲ್ಲ ಸಂಸ್ಥೆ. ಕನ್ನಡ ವಿದ್ವಾಂಸರೂ ಸಂಘ-ಸಂಸ್ಥೆಗಳೂ ಈ ಕಾರ್ಯದಲ್ಲಿ ನೆರವಿತ್ತು ಸಹಕರಿಸಿ ನಾಡಿನ ಪ್ರಗತಿಗೆ ಕೈದೀವಿಗೆಯಾಗಬೇಕು.

❖❖

೩೩ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎಂ.ಆರ್. ಶ್ರೀನಿವಾಸಮೂರ್ತಿ



ಕನ್ನಡ ಶ್ರೀರತ್ನತ್ರಯರಲ್ಲಿ ಒಬ್ಬರಾದ (ಬಿಎಂಶ್ರೀ, ಎಂಆರ್‌ಶ್ರೀ, ತೀನಂಶ್ರೀ) ಎಂ. ಆರ್. ಶ್ರೀನಿವಾಸಮೂರ್ತಿ ಅವರು ಹಾಸನದಲ್ಲಿ ರಾಮಚಂದ್ರಯ್ಯ ಸಾವಿತ್ರಮ್ಮ ದಂಪತಿಗಳಿಗೆ ೨೮-೮-೧೮೯೨ರಲ್ಲಿ ಜನಿಸಿದರು. ಮೈಸೂರು, ಬೆಂಗಳೂರಿನಲ್ಲಿ ಶಾಲಾ ವಿದ್ಯಾಭ್ಯಾಸ ಪೂರೈಸಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು (೧೯೧೫) ಪಡೆದರು.

ವಿದ್ಯಾ ಇಲಾಖೆಯಲ್ಲಿ ಕೆಲಸಕ್ಕೇ ಸೇರಿ ಹಂತಹಂತವಾಗಿ ಮೇಲಧಿಕಾರ ಸ್ವೀಕರಿಸುತ್ತಾ ಡಿಪಿಐ ಕಚೇರಿಯಲ್ಲಿ, ನಾರ್ಮಲ್ ಸ್ಕೂಲಿನಲ್ಲಿ, ರೇಂಜ್ ಹಾಗೂ ಶಿಕ್ಷಣಾಧಿಕಾರಿಗಳಾಗಿ ೧೯೪೭ರಲ್ಲಿ ನಿವೃತ್ತರಾದರು.

ಪರಿಷತ್ತಿಗೆ ವಿಶೇಷ ಸೇವೆ ಸಲ್ಲಿಸಿದವರಲ್ಲಿ ಎಂಆರ್‌ಶ್ರೀ ಒಬ್ಬರು. ೧೯೨೦ರಿಂದ ೨೦ ವರ್ಷಗಳವರೆಗೆ ಪರಿಷತ್ತಿನ ಕಾರ್ಯಸಮಿತಿ ಸದಸ್ಯರು, ೧೯೩೪ರಲ್ಲಿ ವಿಶೇಷ ಸಾಹಿತ್ಯೋತ್ಸವದ ಕಾರ್ಯದರ್ಶಿಗಳೂ ಆಗಿದ್ದು ೧೯೫೦-೫೩ರವರೆಗೆ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ನಾಟಕ, ಕನ್ನಡ ನುಡಿ, ಮೈಸೂರು ಸ್ಕೌಟ್ ಸಂಘದ ಪತ್ರಿಕೆಗಳಿಗೆ ಸಂಪಾದಕರಾಗಿ ಒಳ್ಳೆಯ ಕೆಲಸ ಮಾಡಿದರು. ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್ - ಕನ್ನಡ ನಿಘಂಟಿಗೆ ಅಮೋಘ ಸೇವೆ ಸಲ್ಲಿಸಿದರು. (೧೯೨೯-೧೯೪೩).

ಸೊಲ್ಲಾಪುರದಲ್ಲಿ ನಡೆದ ೩೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಪರಿಷತ್ತು ನೀಡಿ ಪುರಸ್ಕರಿಸಿತು.

ಬಾದಾಮಿ ಶಿವಯೋಗ ಮಂದಿರವು ೧೯೪೦ರಲ್ಲಿ ವಚನವಾಙ್ಮಯ ವಿಶಾರದ ಎಂಬ ಪ್ರಶಸ್ತಿಯನ್ನು ಇವರಿಗೆ ನೀಡಿತು.

ಶ್ರೇಷ್ಠ ಶಿಕ್ಷಕರಾಗಿ, ಸಂಶೋಧಕರಾಗಿ ಸಾಹಿತಿಗಳಾಗಿ ಎಂಆರ್‌ಶ್ರೀ ರಚಿಸಿದ ಕೆಲವು ಮುಖ್ಯ ಕೃತಿಗಳು ಹೀಗಿವೆ:

ಭಕ್ತಿಭಂಡಾರಿ ಬಸವಣ್ಣನವರು, ವಚನಧರ್ಮಸಾರ, ಪ್ರಭುಲಿಂಗಲೀಲೆಯ ಸಂಗ್ರಹ, ಕವಿಯ ಸೋಲು (ಕವನ ಸಂಗ್ರಹ), ನಾಗರಿಕ (ನಾಟಕ), ಧರ್ಮದೂತ (ನಾಟಕ), ಆಯಸ್ಕಾಂತತೆ ಮತ್ತು ವಿದ್ಯುಚ್ಛಕ್ತಿ, ಸಾವಿತ್ರಿ, ರಂಗಣ್ಣನ ಕನಸಿನ ದಿನಗಳು.

ದಕ್ಷ ಆಡಳಿತಗಾರರೂ, ವಿದ್ವಾಂಸರೂ ಆಗಿದ್ದ ಎಂ. ಆರ್. ಶ್ರೀ. ಅವರು ಬೆಂಗಳೂರಿನಲ್ಲಿ ೧೬-೯-೧೯೫೩ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೩
ಅಧ್ಯಕ್ಷರು, ಎಂ.ಆರ್. ಶ್ರೀನಿವಾಸಮೂರ್ತಿ
ದಿನಾಂಕ ೨೪, ೨೫, ೨೬ ಮೇ ೧೯೫೦
ಸ್ಥಳ : ಸೊಲ್ಲಾಪುರ

ಪರಿಷತ್ತಿನ ಸಾಧನೆ

ಕನ್ನಡ ಸಾಹಿತ್ಯ ಪರಿಷತ್ತು ಮುವ್ವತ್ತುಮೂರು ವರುಷಗಳಿಂದ ಕನ್ನಡಿಗರಲ್ಲಿ ಒಕ್ಕೂಟವನ್ನು ಬೆಳಸುವುದಕ್ಕಾಗಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಶ್ರಮಿಸಿದೆ. ಆಡಳಿತ ದೃಷ್ಟಿಯಿಂದ ಒಕ್ಕೂಟವಾಗದಿದ್ದರೂ ಸೌಹಾರ್ದವನ್ನೂ ಸೌಭ್ರಾತ್ರವನ್ನೂ ಬೆಳಸಿ ಕುಟುಂಬದ ಒಕ್ಕೂಟವನ್ನು ಸಾಧಿಸಿದೆ. ಕನ್ನಡ ಸಾಹಿತ್ಯದ ಹಳಮೆಯನ್ನೂ ಹಿರಿಮೆಯನ್ನೂ ಉದಾಸೀನರಾಗಿದ್ದ ಕನ್ನಡಿಗರಿಗೆ ಪರಿಚಯ ಮಾಡಿಸಿ ಸಾಹಿತ್ಯ ಪ್ರೇಮವನ್ನು ಅವರಲ್ಲಿ ತುಂಬಿದೆ. ಕನ್ನಡ ನಾಡಿನ ಮುಖ್ಯಮುಖ್ಯ ಪಟ್ಟಣಗಳಲ್ಲಿ-ಅವು ಯಾರ ಆಡಳಿತಕ್ಕೆ ಒಳಪಟ್ಟಿದ್ದರೂ-ಕನ್ನಡಿಗರ ನೆಲೆವೀಡೆಂದು ಭಾವಿಸಿ ಸಮ್ಮೇಳನಗಳನ್ನು ನಡೆಸಿ ತನ್ನ ಧ್ವಜವನ್ನು ಸ್ಥಾಪಿಸಿದೆ. ಈ ಪಟ್ಟಣಗಳ ಸ್ಥಾನಗಳನ್ನು ತಾವು ಗಮನಿಸಿದರೆ ಹೆಚ್ಚು ಕಡಮೆಯಾಗಿ ಕನ್ನಡ ನಾಡಿನ-ಇಂದಿನ ಕನ್ನಡ ನಾಡಿನ-ಸೀಮಾರೇಖೆ ಕಣ್ಣಮುಂದೆ ನಿಲ್ಲದೆ ಹೋಗುವುದಿಲ್ಲ. 'ಕಾವೇರಿಯಿಂದ ಗೋದಾವರಿವರೆಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' ಎಂಬ ನೃಪತುಂಗನ ಭೌಗೋಳಿಕ ಸೂತ್ರ ಈಗ ಸಿದ್ಧಿಸದೇ ಹೋದರೂ ಕೃಷ್ಣಾನದಿಯನ್ನು ದಾಟಿ ಗೋದಾವರಿಯ ಹತ್ತಿರದಲ್ಲಿ ನಾವು ನಿಂತಿರುವುದೇ ಒಂದು ಸೌಭಾಗ್ಯ! ಇಷ್ಟೇ ಅಲ್ಲದೆ ಬೊಂಬಾಯಿ, ಹೈದರಾಬಾದ್ ಮತ್ತು ಮದ್ರಾಸ್ ಎಂಬ ಮಿಶ್ರ ಜನತೆಗಳಿರುವ ಪಟ್ಟಣಗಳಲ್ಲಿ ಕನ್ನಡಿಗರ ಸಂಖ್ಯೆಯು ಅಲಕ್ಷ್ಯ ಮಾಡತಕ್ಕದ್ದಲ್ಲವೆಂದೂ ಅಲ್ಲಿಯೂ ಸಮ್ಮೇಳನ ನಡೆಸುವ ಹಕ್ಕು ನಮಗಿರುವುದೆಂದೂ ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿದ್ದೇವೆ.

ಕನ್ನಡವನ್ನು ಮಾತನಾಡುವವರು, ಕನ್ನಡದ ಅಭಿಮಾನಿಗಳು, ಕನ್ನಡದ ಸೇವೆ ಮಾಡುವವರು-ಎಲ್ಲರೂ ಕನ್ನಡಿಗರೇ ; ಅವರು ಎಲ್ಲಿದ್ದರೂ ಅದು ಕನ್ನಡ ನಾಡೇ ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಹೀಗೆ ಪರಿಷತ್ತು ಕನ್ನಡಿಗರ ಮತ್ತು ಕನ್ನಡ ಭಾಷೆಯ ಅಭ್ಯುದಯಕ್ಕಾಗಿ ಶ್ರಮಿಸುತ್ತ ಬಂದಿದೆ ; ನ್ಯಾಯಕ್ಕಾಗಿ ಹಲವು ಸರ್ಕಾರಗಳೊಡನೆ ಹೋರಾಡಿಯೂ ಇದೆ.

ಪರಿಷತ್ತಿನ ಬಗ್ಗೆ ಔದಾಸೀನ್ಯ

ಹಿಂದೆ ಮದರಾಸ್, ಬೊಂಬಾಯಿ, ಹೈದರಾಬಾದಿನ ಸರ್ಕಾರಗಳೂ, ಜಮಖಂಡಿ, ಸಾಂಗ್ಲಿ ಮೊದಲಾದ ಸಣ್ಣಪುಟ್ಟ ಸಂಸ್ಥಾನಗಳ ಸರ್ಕಾರಗಳೂ ಪರಿಷತ್ತಿನ ವಿಚಾರದಲ್ಲಿ ಮತ್ತು ಕನ್ನಡಿಗರ ವಿಚಾರದಲ್ಲಿ ತೋರಿಸಿದ ಅಕ್ಷಮ್ಯವಾದ ಔದಾಸೀನ್ಯ ಮಾತ್ರವಲ್ಲ, ಪ್ರತ್ಯಕ್ಷ ವಿರೋಧವನ್ನು ನೆನೆಸಿಕೊಂಡರೆ ತಾಳ್ಮೆಯಿಂದಿರುವುದು ಕಷ್ಟ. ಪರಿಷತ್ತಿನ ಕಚೇರಿಯ ನಿಕಟ ಸಂಬಂಧವನ್ನು ಹಲವು ವರ್ಷಗಳಿಂದ ಪಡೆದು ಈ ಪತ್ರ ವ್ಯವಹಾರಗಳನ್ನೆಲ್ಲ ತಿಳಿದವನಾಗಿ ಈ ಮಾತನ್ನು ತಮಗೆ ಹೇಳುತ್ತಿದ್ದೇನೆ. ಆ ಪತ್ರವ್ಯವಹಾರಗಳಲ್ಲಿ ಬಹುಭಾಗ ಶ್ರೀ ಡಿ.ವಿ. ಗುಂಡಪ್ಪನವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ನಡೆದದ್ದು ಎಂಬುದನ್ನು ತಮ್ಮೆಲ್ಲರ ಸ್ಮರಣೆಗೆ ತರಲು ಬಯಸುತ್ತೇನೆ. ನಾವು ಈಗ ಬಹುಮಟ್ಟಿಗೆ ಎಲ್ಲ ತೊಡಕುಗಳನ್ನು ದಾಟಿಕೊಂಡು ಒಂದಾಗುವ ಸಮುಹೂರ್ತದಲ್ಲಿದ್ದೇವೆ. ಸ್ವಲ್ಪ ತಡವಾದರೂ ಕರ್ಣಾಟಕ ಪ್ರಾಂತ ಬಡವಾಗುವುದಿಲ್ಲ.

ಪರಸ್ಪರ ಸಾಹಿತ್ಯ ವಿನಿಮಯ ಆಗಲಿ

ಕನ್ನಡ ನಾಡು ಪ್ರತಿವರ್ಷವೂ ಆಂಧ್ರ ಪ್ರಾಂತ, ತಮಿಳುನಾಡು, ಮಹಾರಾಷ್ಟ್ರ- ಮೊದಲಾದ ಪ್ರಾಂತಗಳ ಪಟ್ಟಣಗಳಿಗೆ ನಮ್ಮ ಸಾಹಿತಿಗಳನ್ನೂ ವಿದ್ವಜ್ಜರನ್ನೂ ಸಾಹಿತ್ಯ ನಿಯೋಗಿಗಳನ್ನಾಗಿ ಕಳಿಸಿಕೊಟ್ಟು ಆಯಾ ಪ್ರಾಂತದವರಿಗೆ ಆಯಾ ಪ್ರಾಂತ ಭಾಷೆಯಲ್ಲಿಯೇ ನಮ್ಮ ಸಾಹಿತ್ಯದ ವಿಷಯದಲ್ಲಿ ಭಾಷಣ ಗಳನ್ನೇರ್ಪಡಿಸಬೇಕು. ಹಾಗೆಯೇ ನೆರೆಯ ಪ್ರಾಂತಗಳಿಂದಲೂ ನಿಯೋಗಗಳನ್ನು ಕನ್ನಡನಾಡಿಗೆ ಬರಮಾಡಿಕೊಳ್ಳಬೇಕು. ಈ ಕೆಲಸವನ್ನು ನಮ್ಮ ವಿಶ್ವವಿದ್ಯಾನಿಲಯಗಳೂ ಕನ್ನಡ ಸಾಹಿತ್ಯ ಪರಿಷತ್ತೂ ಕರ್ನಾಟಕ ವಿದ್ಯಾವರ್ಧಕ ಸಂಘವೂ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಒಂದು ಗೊತ್ತಾದ ಕಾರ್ಯಕ್ರಮದಂತೆ ನೆರವೇರಿಸುವುದು ಮೇಲು.

ಪರಿಷತ್ತು ಮತ್ತು ವಿದೇಶಿ ಕರ್ನಾಟಕ ಸಂಘಗಳು

ಈ ಸಂದರ್ಭದಲ್ಲಿ ಅನ್ಯಪ್ರಾಂತಗಳಲ್ಲಿರುವ ಕರ್ನಾಟಕ ಸಂಘಗಳ ಪಾತ್ರವನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ದೆಹಲಿ, ಕಾಶಿ, ಕಲ್ಕತ್ತ ಮೊದಲಾದ ಮುಖ್ಯ ಪಟ್ಟಣಗಳಲ್ಲಿಯೂ ಈ ಸಂಘಗಳು ಸ್ಥಾಪಿತವಾಗಿರುವುದು ಸಂತೋಷ. ಹೀಗೆಯೇ ಪ್ರಪಂಚದ ಮುಖ್ಯ ಪಟ್ಟಣಗಳಾದ ಲಂಡನ್, ನ್ಯೂಯಾರ್ಕ್, ಪ್ಯಾರಿಸ್, ಬರ್ಲಿನ್, ಮಾಸ್ಕೋ ಮೊದಲಾದವುಗಳಲ್ಲಿಯೂ ಕರ್ನಾಟಕ ಸಂಘಗಳು ಸ್ಥಾಪಿತವಾಗುವ ಸುಯೋಗ ಕನ್ನಡಕ್ಕೆ ದೊರೆಯಲೆಂದು ಹಾರೈಸುತ್ತೇನೆ. ಆದರೆ ಕರ್ನಾಟಕ ಸಂಘಗಳು ಈಗ ಇರುವಂತೆ ಅಲ್ಲಿಯ ಕನ್ನಡಿಗರನ್ನು ಒಟ್ಟುಗೂಡಿಸುವುದಕ್ಕೆ ಮಾತ್ರ, ಅವರ ಭಾಷಾಜ್ಞಾನವನ್ನು ಮತ್ತು ಭಾಷಾ ಪ್ರೇಮವನ್ನು ಜೀವಂತವಾಗಿಡುವುದಕ್ಕೆ ಮಾತ್ರ ಉಪಯೋಗವಾಗುತ್ತಿದ್ದರೆ ನನಗೆ ತೃಪ್ತಿಯಿಲ್ಲ. ಅವು ಕನ್ನಡಿಗರ ಸಾಹಿತ್ಯ ಸಂಸ್ಕೃತಿಗಳ ಪ್ರಚಾರ ಕೇಂದ್ರಗಳಾಗಿ ಪರಿವರ್ತನೆ ಹೊಂದಬೇಕೆಂಬುದು ನನ್ನ ಉತ್ಕಟೇಚ್ಛೆ. ಆ ಪಟ್ಟಣಗಳಲ್ಲಿ ನೆಲೆಸಿರುವ ಕನ್ನಡಿಗರು ಆಯಾ ಪ್ರಾಂತ ಭಾಷೆಗಳನ್ನು ಚೆನ್ನಾಗಿ ಕಲಿಯಬೇಕು. ಆಯಾ ಪ್ರಾಂತ ಸಾಹಿತ್ಯ ಹೇಗೆ ಮುಂದುವರಿಯುತ್ತದೆ ಎಂಬುದನ್ನು ನಮಗೆ ತಿಳಿಸಬೇಕು ; ಕನ್ನಡ ಭಾಷೆಯನ್ನು ಅಲ್ಲಿಯ ಜನಗಳಿಗೆ ಕಲಿಸಿ ಕನ್ನಡ ಗ್ರಂಥಗಳನ್ನು ಅವರು ಓದುವಂತೆ ಮಾಡಬೇಕು.

ಎರಡನೆಯದಾಗಿ, ಆ ಸಂಘಗಳಿಗೆ ಆಯಾ ಪ್ರಾಂತದ ಜನರು ಸದಸ್ಯರಾಗುವಂತೆಯೂ ಪ್ರೋತ್ಸಾಹಿಸಬೇಕು ; ಉಭಯ ಸಾಹಿತ್ಯಗಳ ಮೇಲೆ ಉಭಯ ಭಾಷೆಗಳಲ್ಲಿ ಉಪನ್ಯಾಸಗಳಾಗುವಂತೆ ಏರ್ಪಾಡು ಮಾಡಬೇಕು ; ದ್ವಿಭಾಷೆಗಳಲ್ಲಿ–ಕನ್ನಡ ಮತ್ತು ಆ ಪ್ರಾಂತಭಾಷೆಗಳಲ್ಲಿ–ಲೇಖನಗಳುಳ್ಳ ಮಾಸಪತ್ರಿಕೆಗಳನ್ನು ಪ್ರಕಟಿಸಬೇಕು. ಇಂತಹ ಸಾಹಿತ್ಯ ಕಾರ್ಯಗಳಲ್ಲಿ ಈ ಸಂಘಗಳು ನಿರತವಾದರೆ ಮತ್ತು ಕೇಂದ್ರ ಸಂಸ್ಥೆಯಾದ ಸಾಹಿತ್ಯ ಪರಿಷತ್ತಿನ ನಿಕಟ ಸಂಬಂಧವನ್ನು ಬೆಳಸಿಕೊಂಡು ಬಂದರೆ ಕನ್ನಡಿಗರ ಪ್ರಭಾವ ಚೆನ್ನಾಗಿ ಹರಡುತ್ತದೆ.

ಪರಿಷತ್ತು ಮತ್ತು ಸ್ವದೇಶಿ ಕರ್ನಾಟಕ ಸಂಘಗಳು

ಕರ್ನಾಟಕ ಸಂಘಗಳನ್ನು ಗ್ರಾಮ ಪಂಚಾಯಿತಿಗಳಂತೆ ಪ್ರತಿಯೊಂದು ಹಳ್ಳಿಯಲ್ಲಿಯೂ ಸ್ಥಾಪಿಸಬೇಕು. ಹೀಗೆ ಹಳ್ಳಿಗಳಲ್ಲಿ ಸ್ಥಾಪಿಸುವ ಮತ್ತು ಬೆಳೆಸುವ ಜವಾಬ್ದಾರಿಯುಳ್ಳ ತಾಲ್ಲೂಕು ಕರ್ನಾಟಕ ಸಂಘಗಳು ಪ್ರತಿಯೊಂದು ತಾಲ್ಲೂಕು ಸ್ಥಳದಲ್ಲಿಯೂ ಇರಬೇಕು. ಜಿಲ್ಲಾ ಕೇಂದ್ರಗಳಲ್ಲಿ ಕರ್ನಾಟಕ ಸಂಘಗಳು ಪ್ರತಿಯೊಂದು ತಾಲ್ಲೂಕು ಸ್ಥಳದಲ್ಲಿಯೂ ಇರಬೇಕು. ಜಿಲ್ಲಾ ಕೇಂದ್ರಗಳಲ್ಲಿ ಕರ್ನಾಟಕ ಸಂಘಗಳು ಸ್ಥಾಪಿತವಾಗಿ ತಾಲ್ಲೂಕು ಸಂಘಗಳ ಸಂಬಂಧವನ್ನು ಬೆಳಸಿಕೊಂಡು ಬರಬೇಕು. ಈ ಎಲ್ಲ ಸಂಘಗಳೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಂಗಸಂಸ್ಥೆಗಳಾಗಿರಬೇಕು. ಇದೊಂದು ಕನಸಿನ ಮಾತು! ಆದರೂ ನನಸಾಗಬಹುದೋ ಏನೋ ಎಂಬ ಒಂದು ಆಶೆಯಿಂದ ಹೇಳುತ್ತಿದ್ದೇನೆ.

ವಯಸ್ಕರ ಶಿಕ್ಷಣ, ಗ್ರಾಮ ಪುಸ್ತಕ ಭಂಡಾರಗಳ ಸ್ಥಾಪನೆ, ಮತ್ತು ಗ್ರಾಮ, ಕರ್ನಾಟಕ–ಸಂಘಗಳ ಪಾಲನೆ–ಇವು ಮೂರು ಗ್ರಾಮ ಪಂಚಾಯಿತಿಗಳ ಕಡ್ಡಾಯವಾಗದ ಸಾಹಿತ್ಯ ಕಾರ್ಯಗಳಾಗಿ ಎಂದು ಆಚರಣೆಗೆ ಬರುತ್ತವೆಯೋ ಅಂದು ದೇಶ ಉದ್ಧಾರವಾಗುತ್ತದೆ, ಭಾಷೆ ಉದ್ಧಾರವಾಗುತ್ತದೆ, ಜನತೆ ಉದ್ಧಾರವಾಗುತ್ತದೆ.

ಪರಿಷತ್ತಿನ ಪತ್ರಿಕೆ ಹೇಗಿರಬೇಕು?

ಕರ್ನಾಟಕ ಸಂಘಗಳು ಸಾಹಿತ್ಯ ವಿಚಾರದಲ್ಲಿ ಜನಾಭಿಪ್ರಾಯವನ್ನು ರೂಪಿಸಬೇಕೆಂದು ಹಿಂದೆ ಹೇಳಿದೆನಷ್ಟೆ. ಅದಕ್ಕೆ ಸಹಾಯಕವಾಗಿ ನಾಡಿನಲ್ಲಿ ಪ್ರಕಟವಾಗುತ್ತಿರುವ ಗ್ರಂಥಗಳ ವಿವರಗಳನ್ನೂ ವಿಷಯಗಳನ್ನೂ ಸ್ಥೂಲವಾಗಿ ತಿಳಿಸುವ ತ್ರೈಮಾಸಿಕವೊಂದನ್ನು ನಾವು ಹೊರಡಿಸಬೇಕಾಗಿದೆ.

ಆದರೆ ನಾನು ಉದ್ದೇಶಿಸಿರುವ ತ್ರೈಮಾಸಿಕ ಸಮಗ್ರರೂಪದಲ್ಲಿ ಗ್ರಂಥ ವಿವರಗಳನ್ನು ಕೊಡತಕ್ಕ ನಿಯತಕಾಲಿಕ ಪತ್ರಿಕೆ. ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆ ಇಂತಹ ಪತ್ರಿಕೆಯನ್ನು ಪರಿಷತ್ಪತ್ರಿಕೆಗೆ ಅನುಬಂಧವಾಗಿ ಕೊಡಬಹುದಾಗಿದೆ. ಲೇಖಕರು, ಗ್ರಂಥ ಪ್ರಕಾಶಕರು, ಕರ್ನಾಟಕ ಸಂಘಗಳು ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಈ ಮೂಲಕ ಚೆನ್ನಾಗಿ ಸಂಬಂಧ ಬೆಳೆಸಲು ಅನುಕೂಲವಾಗುತ್ತದೆ. ಪುಸ್ತಕ ಭಂಡಾರಗಳಿಗೆ ಗ್ರಂಥಗಳನ್ನು ಆರಿಸಿಕೊಳ್ಳುವವರಿಗೆ ಇಂತಹ ಪತ್ರಿಕೆಯಿಂದ ಲಾಭವು ಉಂಟು.

ನಿಮ್ಮ ಧೂಮಪಾನ ಅಂಗರಾಗ ಕೇಶಪ್ರಸಾದನಗಳಿಗೆ ವ್ಯಯಮಾಡುವ ಹಣದಲ್ಲಿ ಕಾಲುಭಾಗ, ಕಡೆಗೆ ಹತ್ತರಲ್ಲೊಂದು ಭಾಗವನ್ನು ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ವಿನಿಯೋಗಿಸಿ ; ನಿಮ್ಮ ಕಾಫಿ ಕ್ಲಬ್ಬು ಸಿನಿಮಾ ವ್ಯಾಮೋಹಗಳಿಗಾಗಿಯೂ ನಟಿನಟಿಯರು ಭಾವಚಿತ್ರ ಸಂಗ್ರಹಣಕ್ಕಾಗಿಯೂ ವ್ಯಯಮಾಡುವ ಹಣದಲ್ಲಿ ಸ್ವಲ್ಪಭಾಗವನ್ನು ಕನ್ನಡದ ಪುಸ್ತಕಗಳಿಗಾಗಿ ವಿನಿಯೋಗಿಸಿ ; ವಿವಾಹ ಕಾಲದಲ್ಲಿ ಮಾವನವರಿಂದ ಹಲವು ಉಡುಗೊರೆಗಳನ್ನು ತೆಗೆದುಕೊಳ್ಳುವಾಗ ಒಂದು ನೂರು ರೂಪಾಯಿಗಳ ಬೆಲೆಯ ಕನ್ನಡ ಪುಸ್ತಕಗಳನ್ನು ರಿಸ್ಟ್‌ವಾಚಿಗೆ ಬದಲಾಗಿ ಸ್ವೀಕರಿಸುವ ಸಂಕಲ್ಪವನ್ನು ಮಾಡಿಕೊಳ್ಳಿ; ನಿಮ್ಮ ಮೆಚ್ಚಿನ ಸ್ನೇಹಿತರಿಗೆ ಉಡುಗೊರೆಗಳನ್ನು ಕೊಡಬೇಕಾದರೆ ಕನ್ನಡ ಪುಸ್ತಕಗಳನ್ನು ಮೆಚ್ಚುಗಳಾಗಿ ಕೊಡಿರಿ ; ಸ್ನೇಹಿತರ ಮನೆಗಳಿಗೆ ಹೋಗುವಾಗ ಒಂದು ಕನ್ನಡ ಪುಸ್ತಕ ಕಣ್ಣಿಗೆ ಬಿದ್ದರೆ ಎರವಲು ಕೇಳಿ ಆತ್ಮಗೌರವವನ್ನು ಕೆಡಿಸಿಕೊಳ್ಳದೆ ಪೇಟೆಯಲ್ಲಿ ಸ್ವಂತಕ್ಕೆ ಕೊಂಡು ಆತ್ಮಗೌರವವನ್ನುಳಿಸಿಕೊಂಡು ಬೆಳಸುತ್ತ ಹೋಗಿ. ಆಗ ತಾನಾಗಿಯೇ ಕನ್ನಡ ಗ್ರಂಥಗಳಿಗೆ ವಾಚಕಲೋಕ ವಿಸ್ತಾರವಾಗುತ್ತದೆ ; ಪಠ್ಯಪುಸ್ತಕಗಳಾಗಿ ಇಡದಿದ್ದರೂ ಗ್ರಂಥಗಳ ಮಾರಾಟ ಕೊಂಚವಾದರೂ ತೃಪ್ತಿಕರವಾಗಿ ನಡೆಯುತ್ತದೆ ; ಕನ್ನಡದ ಕೋಟೆ ಬಲಪಡುತ್ತದೆ ; ಕನ್ನಡದ ಕೀರ್ತಿಧ್ವಜ ಉನ್ನತವಾಗಿ ಹಾರಾಡುತ್ತದೆ.

ಪರಿಷತ್ತಿನ ಆರ್ಥಿಕ ಸುಧಾರಣೆ ಹೇಗೆ?

ಕೊನೆಯದಾಗಿ, ಪರಿಷತ್ ಸಂಸ್ಥೆಯ ವಿಚಾರದಲ್ಲಿ ಎರಡು ಮಾತನ್ನು ಹೇಳಿ ಈ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಪರಿಷತ್ತು ಈಗ ಸುಮಾರು ಮುವ್ವತ್ತುನಾಲ್ಕು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುವ ಸಂಸ್ಥೆ. ಈ ದೀರ್ಘಾವಧಿಯಲ್ಲಿ ಅದರ ಶಕ್ತಿ, ಸಂಪತ್ತು ಮತ್ತು ಪ್ರಭಾವ ಎಷ್ಟರಮಟ್ಟಿಗೆ ಬೆಳೆಯಬೇಕೆಂದು ಆಶಿಸಿದ್ದೇವೋ ಅಷ್ಟೊಂದು ಬೆಳೆದಿಲ್ಲ. ಮೊದಲಿಂದಲೂ ಅದಕ್ಕೆ ಧನಬಲ ಮತ್ತು ಜನಬಲಗಳ ಕೊರತೆ ಇದ್ದೇ ಇದೆ. ಮೊದಲಿನಿಂದಲೂ ಆಕ್ಷೇಪಕರು ಇದ್ದೇ ಇದ್ದಾರೆ ; ಅದನ್ನು ಟೀಕಿಸುತ್ತಲೇ ಬಂದಿದ್ದಾರೆ. ನಮಗೂ ಪರಿಷತ್ತಿನ ಬಗ್ಗೆ ಅಸಂತುಷ್ಟಿಯಿದೆ. 'ಅಸಂತೋಷಃ ಶ್ರಿಯೋ ಮೂಲಂ', 'ಬೈದವರೆನ್ನ ಬಂಧುಗಳೆಂಬೆ' ಎಂದು ಸಮಾಧಾನ ತಂದುಕೊಳ್ಳುತ್ತೇವೆ. ಆದರೆ ಸದಸ್ಯರ ಸಂಖ್ಯೆಗಿಂತ ಆಕ್ಷೇಪಕರ ಸಂಖ್ಯೆ ಹೆಚ್ಚಾಗಿದ್ದರೆ ಫಲವೇನು ? ಪರಿಷತ್ತು ಮಾಡಬೇಕಾದ ಕೆಲಸಗಳು ಬಹಳವಾಗಿವೆ ನಿಜ. ಕನ್ನಡ ನಾಡಿನ ಮೂಲೆಮೂಲೆಗಳಿಂದ ಕನ್ನಡದ ಮುಂದಾಳುಗಳು ಬೆಂಗಳೂರಿನಲ್ಲಿ ಸೇರಿ ಪರಿಷತ್ತನ್ನು ಸ್ಥಾಪಿಸಿದರು. ಅದರ ಸದಸ್ಯರು ನಾಡಿನ ಎಲ್ಲ ಕಡೆಗಳಲ್ಲೂ ಇದ್ದಾರೆ. ಅದರ ಆಡಳಿತದಲ್ಲಿ ಎಲ್ಲ ಭಾಗಗಳ ಪ್ರತಿನಿಧಿಗಳೂ ಸೇರಿದ್ದಾರೆ. ಈ ದೃಷ್ಟಿಯಿಂದ ಅದು ಕರ್ಣಾಟಕದ ಏಕೈಕ ಪ್ರತಿನಿಧಿ ಸಂಸ್ಥೆ. ಆದರೆ ಪರಿಷತ್ತಿನ ಕಟ್ಟಡ ಮತ್ತು ಕಚೇರಿ ಇರುವುದು ಬೆಂಗಳೂರಿನಲ್ಲಿ! ಆ ಕಟ್ಟಡಕ್ಕಾಗಿ ಸುಮಾರು ಇಪ್ಪತ್ತು ಸಾವಿರ ರೂಪಾಯಿಗಳ ಸಹಾಯ ದ್ರವ್ಯವನ್ನು ಮೈಸೂರು ಸರ್ಕಾರದವರು ಹಿಂದೆ ಕೊಟ್ಟ ಪಾಪಕ್ಕಾಗಿ ಪ್ರತಿವರ್ಷವೂ ಅದರ ಬಡ್ಡಿಯೆನ್ನುವಂತೆ ಮೂರು ಸಾವಿರ ರೂಪಾಯಿಗಳ ವರ್ಷಾಶನವನ್ನು-ಬೇಕಾದ ಸಹಾಯ ದ್ರವ್ಯವೆಂದು ಕರೆಯೋಣ-ತೆರುತ್ತ ಆ ಸಂಸ್ಥೆಯನ್ನು ಜೀವಂತವಾಗಿ ಉಳಿಸಿದ್ದಾರೆ. ಅವರು ಏನಾದರೂ ನೆಪ ಹೇಳಿ ಈ ದಿನ ಆ ಸಹಾಯವನ್ನು ನಿಲ್ಲಿಸಿದರೆ ನಾಳೆಯೇ ಪರಿಷತ್ತು ಸಾಯುತ್ತದೆ. ಪರಿಷತ್ತು ಎಲ್ಲ ಪ್ರಾಂತಗಳಲ್ಲಿರುವ ಕನ್ನಡಿಗರಿಗೂ ಸೇರಿದ್ದು ;ಅದರ ಪೋಷಣೆ ರಕ್ಷಣೆ ಎಲ್ಲ ಕನ್ನಡಿಗರಿಗೂ ಸೇರಿದ್ದು-ಎಂದು ಜಾಗಟೆಯನ್ನು ಬಾರಿಸಿ ಬಾರಿಸಿ ಹೇಳುತ್ತಿದ್ದೇವೆ.

ಎರಡನೆಯದಾಗಿ, ಪರಿಷತ್ತಿನ ಸದಸ್ಯರಾಗಿರಲು ಆತ್ಮಸಂತೋಷದಿಮದಲೀ ಪರಪ್ರೇರಣೆಯಿಂದಲೋ ಒಪ್ಪಿಕೊಂಡು ಅದಕ್ಕೆ ಸೇರಿದವರಲ್ಲಿ ಹಲವರು ತಮ್ಮ ಚಂದಾ ಬಾಕಿಗಳನ್ನು ಸಲ್ಲಿಸುವುದಿಲ್ಲ. ಅವರು ನಿಲ್ಲಿಸಿಕೊಂಡಿರುವ ಸುಮಾರು ಐದು ಸಾವಿರ ರೂಪಾಯಿಗಳಷ್ಟು ಬಾಕಿಯನ್ನು ಶೀಘ್ರದಲ್ಲಿಯೇ ಸಲ್ಲಿಸಿಬಿಟ್ಟರೆ ಹತ್ತುಸಾವಿರ ರೂಪಾಯಿಗಳಷ್ಟು ಕೆಲಸ ಮಾಡಬಹುದು.

ಪರಿಷತ್ತಿನ ಪ್ರಕಟಣೆಗಳು ಮತ್ತು ಧನಸಹಾಯ

ಪರಿಷತ್ತು ಮಾಡಬೇಕಾದ ಕೆಲಸಗಳಲ್ಲಿ ಕೆಲವು ತಾತ್ಕಾಲಿಕ ಪ್ರಯೋಜನಕಾರಿಗಳು ; ಇಂಥವು ಸಾಮಾನ್ಯವಾಗಿ ಜನಪ್ರಿಯವಾಗಿರುತ್ತವೆ ; ಇವುಗಳಿಂದ ಪರಿಷತ್ತಿನ ಹೆಸರು ಹರಡುತ್ತದೆ. ಆಗ, ಎಲ್ಲರೂ ಪರಿಷತ್ತನ್ನು ಪ್ರಶಂಸೆ ಮಾಡುತ್ತಾರೆ. ಸಾಹಿತ್ಯೋತ್ಸವಗಳು, ಉಪನ್ಯಾಸ ಮಾಲೆಗಳು, ಸ್ಪರ್ಧೆಗಳು ಮೊದಲಾದುವೆಲ್ಲ ಈ ಜಾತಿಗೆ ಸೇರಿದುವು. ಇನ್ನು ಕೆಲವು ಕೆಲಸಗಳು ಶಾಶ್ವತ ಪ್ರಯೋಜನಕಾರಿಗಳು ; ಇಂತಹ ಜನಪ್ರಿಯವಾಗಿರುವುದಿಲ್ಲ ; ಕೆಲಸ ನಡೆಯುತ್ತಿರುವಾಗ ಜನರ ಕಣ್ಣಿಗೆ ಗೋಚರವಾಗುವುದಿಲ್ಲ. ಆದ್ದರಿಂದ ಪರಿಷತ್ತಿಗೆ ಪ್ರಶಂಸೆ ಸದ್ಯದಲ್ಲಿ ದೊರೆಯುವುದಿಲ್ಲ. ಪೂರ್ವ ಗ್ರಂಥಗಳ ಶಾಸ್ತ್ರೀಯ ಸಂಪಾದನೆ, ಕನ್ನಡ-ಕನ್ನಡ ಕೋಶ ನಿರ್ಮಾಣ, ವಿಶ್ವಕೋಶದ ಪ್ರಯತ್ನ- ಮೊದಲಾದುವೆಲ್ಲ ಈ ಜಾತಿಗೆ ಸೇರಿದುವು.

ಪರಿಷತ್ತು ಹಿಂದೆ ಪಂಪ ರಾಮಾಯಣ, ಪಂಪ ಭಾರತ ಮತ್ತು ಕುಸುಮಾವಳೀ ಕಾವ್ಯಗಳನ್ನು ಸಂಪಾದನೆ ಮಾಡಿ ಪ್ರಕಟಿಸಿತು. ಪಂಪ ರಾಮಾಯಣ ಪಂಪ ಭಾರತಗಳ ಪ್ರತಿಗಳು ಮುಗಿದು ಹೋಗಿರುವುದರಿಂದ ಅವುಗಳನ್ನು ಪರಿಷ್ಕರಿಸಿ ಮುದ್ರಣ ಮಾಡಬೇಕಾಗಿದೆ. ಕನ್ನಡ-ಕನ್ನಡ ಕೋಶದ ಕಾರ್ಯ ಕಷ್ಟತರವಾದುದು. ಅದಕ್ಕೆ ಸುಮಾರು ಒಂದು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಹತ್ತಾರು ಜನ ಪಂಡಿತರ ಪೂರ್ಣಕಾಲದ ಪೂರ್ಣ ಸಹಾಯ ಅದಕ್ಕೆ ಅತ್ಯಾವಶ್ಯಕ. ಆ ಕೋಶದ ಸಲುವಾಗಿ ಪ್ರತ್ಯೇಕವಾದ ಕಚೇರಿಯೊಂದನ್ನು ಸ್ಥಾಪಿಸಿ ಪಂಡಿತರುಗಳನ್ನು ವೇತನಗಳನ್ನು ಕೊಟ್ಟು ನೇಮಿಸಿಕೊಳ್ಳಬೇಕಾಗಿದೆ.

ಹಣ ಕೊಡುವ ಪುಣ್ಯಾತ್ಮರು ಯಾರು ? ಮೈಸೂರು ಸರ್ಕಾರದವರು ವರ್ಷಕ್ಕೆ ಎರಡು ಸಾವಿರ ರೂಪಾಯಿಗಳಂತೆ ಐದು ವರ್ಷಗಳಿಗೆ ಧನಸಹಾಯ ನೀಡಿದ್ದಾರೆ. ಈ ಅಲ್ಪ ಸಹಾಯದಲ್ಲಿ ಏನು ಕೆಲಸ ಮುಂದುವರೆದೀತು ? ಏನು ಪ್ರಕಾಶಕ್ಕೆ ಬಂದೀತು ? ನಾಡಿನಲ್ಲಿರುವ ಶ್ರೀಮಂತರೂ ಇತರ ಸರ್ಕಾರಗಳೂ ನೀಡಿದರೆ ಐದು ವರ್ಷಗಳಲ್ಲಿ ನಿಘಂಟಿನ ಕೆಲಸ ಮುಗಿದೀತು. ಕನ್ನಡದಲ್ಲಿ ಒಂದು ವಿಶ್ವಕೋಶವನ್ನು ಸಿದ್ಧಗೊಳಿಸಬೇಕೆಂಬ ಯೋಜನೆಯೂ ಯೋಚನೆಯೂ ಇವೆ. ಈ ಕೆಲಸಕ್ಕೆ ಹತ್ತು ಹನ್ನೆರಡು ಲಕ್ಷ ರೂಪಾಯಿಗಳೂ ಬೇಕು. ಪ್ರಚಾರೋಪನ್ಯಾಸಗಳ ಏರ್ಪಾಟನ್ನು ಕೈಕೊಂಡು ಚಲನಚಿತ್ರಗಳ ಸಹಾಯದಿಂದ ಜ್ಞಾನ ಪ್ರಚಾರ ಮಾಡಬೇಕೆಂಬ ಹಿರಿಯ ಯೋಜನೆಯೊಂದನ್ನು ಶ್ರೀ ಡಿ.ವಿ. ಗುಂಡಪ್ಪನವರು ತಮ್ಮ ಉಪಾಧ್ಯಕ್ಷ ಅಧಿಕಾರಾವಧಿಯಲ್ಲಿ ಸಿದ್ಧಗೊಳಿಸಿದರು ; ಸಹಾಯಕ್ಕಾಗಿ ಪರಿಷತ್ತು ಯಾಚನೆ ಮಾಡಿತು. 'ದೇಹಿ' ಎಂದು ಹೊರಟರೆ 'ನಾಸ್ತಿ' ಎಂದು ಎಲ್ಲರೂ ಹೇಳುವರೇ !

ಪರಿಷತ್ತು -ಪಾಂಡಿತ್ಯದ ಅಭಾವ

ಪರಿಷತ್ತನ್ನು ಆಕ್ಷೇಪಿಸಲಿ ; ಬೇಡವೆನ್ನುವುದಿಲ್ಲ ಅಲ್ಲಿ ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವ ಜನ ತಿದ್ದಿಕೊಳ್ಳುತ್ತಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಲು ನಿಂತವರಿಗೆ ಕೊರಳಿಗೆ ಹೂವಿನ ಹಾರಗಳು ತಲೆಗೆ ಕಲ್ಲಿನೇಟುಗಳು ಬೀಳುತ್ತವೆ. ಕಲ್ಲು ಬೀರುವವರಲ್ಲಿ ಎಷ್ಟು ಮಂದಿ ಪರಿಷತ್ತಿಗೆ ಧನಸಹಾಯ ಮಾಡುತ್ತಾರೆ ; ಅದರ ಕಾರ್ಯಗಳಲ್ಲಿ ನೆರವಾಗುವ ಚೈತನ್ಯವನ್ನು ಪಡೆದಿರುತ್ತಾರೆ? ಹಿಂದಿನ ಕಾಲದಲ್ಲಿ ಪ್ರಸಿದ್ಧರಾದ ಪಂಡಿತರು ದಕ್ಷರಾದ ಕನ್ನಡಿಗರು ನಮ್ಮಲ್ಲಿದ್ದರು. ಪಂಪ ಭಾರತವನ್ನೋ ಶಬ್ದಮಣಿದರ್ಪಣವನ್ನೋ ಕಾವ್ಯಾವಲೋಕನವನ್ನೋ ವಾಚೋವಿಧೇಯವಾಗಿ ಹೇಳಬಲ್ಲ. ಪದಪ್ರಯೋಗಗಳನ್ನು ಹಲವಾರು ಗ್ರಂಥಗಳಿಂದ ನಿಂತಲ್ಲಿಯೇ ಕುಳಿತಲ್ಲಿಯೇ ಉದಾಹರಿಸಬಲ್ಲ ದೊಡ್ಡ ದೊಡ್ಡ ಪಂಡಿತರು ನಮ್ಮಲ್ಲಿದ್ದರು. ಅವರ ಕಾಲವಾಯಿತು. ಅವರ ಅನಂತರದ ತಲೆಮೊರೆಯುವರಲ್ಲಿ ಕೆಲವರು ಉದ್ದಾಮ ಪಂಡಿತರಿದ್ದಾರೆ. ನಮಗೆ ನೆರವಾಗತಕ್ಕ ಚೈತನ್ಯವಿರುವವರು ಕನ್ನಡನಾಡಿನಲ್ಲೆಲ್ಲಾ ಹತ್ತು ಹದಿನೈದು ಮಂದಿ ದೊರೆಯಬಹುದು. ಅವರಿಗೆಲ್ಲ ಈಗಾಗಲೇ ನಲವತ್ತು ವರ್ಷ ವಯಸ್ಸು ಆಗಿದೆ. ಭಗವಂತನು ಅವರಿಗೆ ದೀರ್ಘಾಯಸ್ಸನ್ನು ಕೊಟ್ಟಿರಲೆಂದು ಪ್ರಾರ್ಥಿಸುತ್ತೇನೆ. ಅವರ ಕೆಳಗಿನ ಪೀಳಿಗೆಯವರನ್ನು ನೋಡಿದರೆ ಕನ್ನಡದ ಬಗ್ಗೆ ನನಗೆ ಬಹಳ ಅಧೈರ್ಯವೂ ಮಹತ್ತರವಾದ ದುಃಖವೂ ಉಂಟಾಗುತ್ತವೆ. ಬಹುಮಟ್ಟಿಗೆ ಏಕಾಂಕ ನಾಟಕದವರು, ಸಣ್ಣಕಥೆಗಳವರು, ಜುಜುಬಿ ಭಾವಗೀತೆಗಳವರು, ಸಣ್ಣಪುಟ್ಟ ಕಾದಂಬರೀಕಾರರು, ಪಠ್ಯಪುಸ್ತಕವಾಗಬೇಕೆಂಬ ಹಂಬಲಿನ ಲೇಖಕರು, ಎಂ.ಎ. ಪ್ರಶಸ್ತಿ ಪತ್ರಧಾರಕರಾದರೂ ಘನವಾದ ಪಾಂಡಿತ್ಯವಿಲ್ಲದವರು. ಭರತಖಂಡದ ವಿವಿಧ ಭಾಷೆಗಳ ಪರಿಷತ್ತು ಸೇರಿ ವಿವಿಧ ಪ್ರಾಂತಗಳ ಪಂಡಿತ ದಿಗ್ಗಜಗಳು ಅಲ್ಲಿ ನೆರೆದರೆ ನಮ್ಮ ಈ ಪೀಳಿಗೆಯವರಲ್ಲಿ ಯಾರನ್ನು ಕನ್ನಡದ ಧ್ವಜದೊಂದಿಗೆ ಕಳಿಸಬಹುದೆಂದು ಕಣ್ಣಲ್ಲಿ ಕಣ್ಣಿಟ್ಟು ನೋಡಿದರೂ ನಾಲ್ಕು ಜನ ನನ್ನ ಕಣ್ಣಿಗೆ ಬೀಳುವುದಿಲ್ಲ.

ಟೀಕೆಗೆ ಮುಂದಾಗದೆ ನೆರವಿಗೆ ಬನ್ನಿ

ಇಂತಹ ದುಃಸ್ಥಿತಿ ನಮ್ಮನ್ನು ಆವರಿಸಿಕೊಂಡಿದೆ. ನಮ್ಮನ್ನು ಟೀಕಿಸುವವರಲ್ಲಿ ಬಹುಮಂದಿ ರಾಜಕೀಯದ ಗಾಳಿಗೆ ಸಿಕ್ಕಿರುವ ಉತ್ಸಾಹಶಾಲಿಗಳಾದ ಅನನುಭವಿಗಳಾದ ಪಾಂಡಿತ್ಯ ಪ್ರತಿಭೆಗಳಿಲ್ಲದ ತರುಣರು. ಕೆಲಸ ಮಾಡುವುದಕ್ಕೆ ಇಷ್ಟವುಳ್ಳವರು ನೆರವಾಗುವುದಕ್ಕೆ ತವಕ ಪಡುತ್ತಿರುವವರು ಅಗತ್ಯವಾಗಿ ಪರಿಷತ್ತಿಗೆ ಬರಲಿ. ಪರಿಷತ್ತಿನ ಕೆಲಸಗಳಲ್ಲಿ ಭಾಗವಹಿಸಲಿ, ಕೀರ್ತಿಯನ್ನು ಗಳಿಸಲಿ. ಪರಿಷತ್ತು ಮಾಡಬಹುದಾದ ಕೆಲಸಗಳಿಗೆ ಹಲವು ಕಾರಣಗಳಿಂದ ಒಂದು ಮಿತಿಯುಂಟು ಈ ಮಿತಿಯನ್ನು ಮೀರಿ ಅದು ಕೆಲಸ ಮಾಡಲಾರದು. ಪ್ರತ್ಯಕ್ಷವಾಗಿ ರಾಜಕೀಯದಲ್ಲಿ ಅದು ಕೈಹಾಕಲಾರದು. ಅದರ ಉಪಕಾರಿಗಳನ್ನು ಕೃತಜ್ಞತೆಯಿಂದ ಸ್ಮರಿಸದೆ ಕೈಬಿಡಲಾರದು. ಆದ್ದರಿಂದ ಪರಿಷತ್ತಿನಿಂದ ಏನನ್ನು ನಿರೀಕ್ಷಿಸಬಹುದು

ಎಂಬುದನ್ನು ತಿಳಿದುಕೊಂಡು ಟೀಕಿಸುವುದು ಮೇಲು; ಪರಿಷತ್ತಿನ ಹಲವು ಕಾರ್ಯಕ್ಷೇತ್ರಗಳಲ್ಲಿ ಪ್ರತ್ಯಕ್ಷವಾಗಿ ನೆರವಾಗುವುದು ಮತ್ತೂ ಮೇಲು. ಪರಿಷತ್ತು ಬೇರೆಯಲ್ಲ ಕನ್ನಡ ಜನ ಬೇರೆಯಲ್ಲ. ಪರಿಷತ್ತು ಕನ್ನಡಿಗರ, ಅವರ ಸಾಹಿತ್ಯ ಸಂಸ್ಕೃತಿಗಳ, ಅವರ ಬದುಕಿನ ಬಾಳಿನ ಪ್ರತೀಕ; ಕನ್ನಡಿಗರ ಆರಾಧನ ಮಂದಿರ. ಕನ್ನಡ ಮಾತೆ ತನ್ನ ಮಕ್ಕಳನ್ನು ಪ್ರೇಮದೃಷ್ಟಿಯಿಂದ ಆದರಿಸುತ್ತಿದ್ದಾಳೆ, ಅವರ ಆಭ್ಯುದಯವನ್ನೇ ಹಾರೈಸುತ್ತಿದ್ದಾಳೆ, ಅವರ ಒಕ್ಕೂಟವನ್ನೇ ಬಯಸುತ್ತಿದ್ದಾಳೆ. ಮಕ್ಕಳು ಕಣ್ಣು ಬಿಟ್ಟು ನೋಡಲಿ! ಆಕೆಯ ಆಶೀರ್ವಾದಕ್ಕೆ ಪಾತ್ರರಾಗಲಿ!

❖❖

೩೪ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎಂ. ಗೋವಿಂದ ಪೈ



ಕನ್ನಡದ ಪ್ರಥಮ ರಾಷ್ಟ್ರಕವಿ ಎಂಬ ಪ್ರಶಸ್ತಿಗೆ ಪಾತ್ರರಾದವರು ಎಂ. ಗೋವಿಂದ ಪೈ. ಹಳಗನ್ನಡ ವಿದ್ವಾಂಸರೂ ಕವಿಗಳೂ ಆದ ಇವರು ಸಾಹುಕಾರ ತಿಮ್ಮಪ್ಪ - ದೇವಕಿಯಮ್ಮ ದಂಪತಿಗಳ ಪುತ್ರರಾಗಿ ೨೩-೩-೧೮೮೩ರಲ್ಲಿ ಮಂಜೇಶ್ವರದಲ್ಲಿ ಜನಿಸಿದರು.

ಮಂಗಳೂರಿನಲ್ಲಿ ಶಾಲಾ ವಿದ್ಯಾಭ್ಯಾಸ ಮಾಡಿ ಮದರಾಸ್ ವಿಶ್ವವಿದ್ಯಾಲಯದಲ್ಲಿ ಮಾಡುತ್ತಿದ್ದ ಬಿ.ಎ. ವ್ಯಾಸಂಗವನ್ನು ತಂದೆಯ ನಿಧನದ ದೆಸೆಯಿಂದ ನಿಲ್ಲಿಸಿದರು. ಸ್ವಂತ ವ್ಯಾಸಂಗದಲ್ಲೇ ಕನ್ನಡ, ಇಂಗ್ಲಿಷ್, ಗ್ರೀಕ್, ಫ್ರೆಂಚ್, ಸಂಸ್ಕೃತ, ಜರ್ಮನ್, ಪ್ರಾಕೃತ ಮೊದಲಾದ ದೇಶ - ವಿದೇಶಗಳ ಭಾಷೆಗಳನ್ನು ಕಲಿತರು. ಸಾಹಿತ್ಯ ರಚನೆ - ಸಂಶೋಧನೆಯಲ್ಲಿ ತೊಡಗಿದರು. ಎಲ್ಲೂ ಉದ್ಯೋಗಕ್ಕೆ ಸೇರಲಿಲ್ಲ.

ಪೈಗಳ ಅಗಾಧ ಪಾಂಡಿತ್ಯವನ್ನು ಪರಿಗಣಿಸಿ ಮದರಾಸ್ ಸರ್ಕಾರ ಅವರಿಗೆ **'ರಾಷ್ಟ್ರಕವಿ'** ಪ್ರಶಸ್ತಿ ನೀಡಿತು. ಪೈಯವರನ್ನು ೧೯೪೯ರಲ್ಲಿ ಧರ್ಮಸ್ಥಳದ ಜಿನರಾಜ ಹೆಗ್ಗಡೆಯವರು ಧರ್ಮಸ್ಥಳದಲ್ಲಿ ಸನ್ಮಾನಿಸಿದರು.

ಅವರಿಗೆ ಸಾಹಿತ್ಯ ಪರಿಷತ್ತು ೧೯೫೧ರಲ್ಲಿ ಬೊಂಬಾಯಿಯಲ್ಲಿ ನಡೆದ ೩೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ನೀಡಿ ಪುರಸ್ಕರಿಸಿತು.

ಸಾಹಿತ್ಯ ಸೇವೆ : ಗೊಮ್ಮಟ ಜಿನಸ್ತುತಿ, ನಂದಾದೀಪ, ಗಿಳಿವಿಂಡು, ಗೊಲ್ಗೊಥಾ ವೈಶಾಖಿ, ಹೆಬ್ಬೆರಳು, ಶ್ರೀಕೃಷ್ಣ ಚರಿತ್ರೆ, ಬರಹಗಾರನ ಹಣೆಬರಹ, ಪಾರ್ಶ್ವನಾಥ ತೀರ್ಥಂಕರ ಚರಿತೆ ಇತ್ಯಾದಿ ಇವರ ಪ್ರಮುಖ ಕೃತಿಗಳು.

ಗೋವಿಂದ ಪೈ ಅವರು ಮಂಜೇಶ್ವರದಲ್ಲಿ ೬-೯-೧೯೬೩ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೪
ಅಧ್ಯಕ್ಷರು, ಎಂ. ಗೋವಿಂದ ಪೈ
ದಿನಾಂಕ ೨೬,೨೭,೨೮ ಡಿಸೆಂಬರ್ ೧೯೫೧
ಸ್ಥಳ : ಮುಂಬಯಿ

ಪರಿಷತ್ತು ಕೋಶ ನಿರ್ಮಾಣಕ್ಕೆ ಹಣ ಬೇಡ ಬೇಕು

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ-ಕನ್ನಡ ಕೋಶವನ್ನು ನಿರ್ಮಿಸತೊಡಗಿದೆ. ವಿಶ್ವಕೋಶವನ್ನು ನಿರ್ಮಿಸಬೇಕೆಂಬ ಯೋಜನೆಯನ್ನು ತನ್ನ ಗುರಿಯಾಗಿ ಇಟ್ಟುಕೊಂಡಿದೆ. ಇವೆರಡೂ ಕೆಲಸಗಳಿಗೆ ಲಕ್ಷಗಟ್ಟಲೆಯ ಹಣಬೇಕು. ಇದು ಎಲ್ಲಿಂದ ಬರಬೇಕು ? ಕಣ್ಣು ಕೈಗಳನ್ನು ಎತ್ತಿ ಆಕಾಶಕ್ಕೆ ತೋರಿಸುವುದಲ್ಲದೆ ಬೇರೆ ಉತ್ತರವಿಲ್ಲ. ಕೊಡಲಾಗುವವರು ಹೇರಳವಿದ್ದಾರೆ. ಅವರಲ್ಲಿ ಕೊಡುವವರು ಎಷ್ಟು ? ಕೊಡುವ ಮನಸ್ಸಿದ್ದರೆ, ಕೊಡುವವರು ಕೊಟ್ಟರೆ, ಹಲವು ಬಲ್ಲವರ ಒಡಗೂಟದಿಂದ ತಾನೆ ನೆರವೇರಬೇಕಾದ ಈ ಕೆಲಸಗಳು ಆ ಒಗ್ಗಟ್ಟನ್ನು ಪೂರ್ಣವಾಗಿ ಸಂಪಾದಿಸುವ ತನಕ ಕೊಂಚ ದುಸ್ಸಾಧ್ಯವೆನಿಸಬಹುದಾದರೂ, ಅವು ಸರ್ವಥಾ ಅಸಾಧ್ಯವಲ್ಲ.

ಕನ್ನಡಕ್ಕೆ ಒಂದು ಅರಸ್ಥಾನವಿದೆ. ಮೂರು ವಿಶ್ವವಿದ್ಯಾಲಯಗಳಿವೆ ಮಾತ್ರವಲ್ಲ, ಕನ್ನಡ ನಾಡಿನಲ್ಲಿ ಎಷ್ಟೋ ಲಕ್ಷಪತಿಗಳೂ ಇದ್ದಾರೆ. ಅವರೆಲ್ಲ ಮನಸ್ಸು ಮಾಡಿದರೆ, ಈ ಕೋಶಗಳ ನಿರ್ಮಾಣವೆಂದರೆ ಕೇವಲ ಎಡಗೆಯ್ಯಾಟ ತಾನೆ. ಅವರನ್ನು ಬೇಡಬೇಕು ಒಮ್ಮೆ ಬೇಡಿ ಅವರು ಯದೃಚ್ಛಯಾ ನೀಡದಿದ್ದರೆ, ಇಮ್ಮೆ, ಮೂಮೆ, ಕೊನೆಗೆ ಹಲಮೆ. 'ಭವಾನ್ ಭಿಕ್ಷಾಂ ದದಾತು' ಎಂಬ ಸಪ್ತಾಕ್ಷರಿಯನ್ನು ಜಪಿಸುತ್ತ ಮನೆ ಮನೆ ತಿರಿವಾತನ ಗೋಪಾಲಬುಟ್ಟಿಯಲ್ಲಿ ಅಲ್ಲಲ್ಲಿ ಏನಿಕೆ ಹಣಕಾಸು ಬೀಳದೆ ಇದ್ದೀತೆ? ಎಂಬ ಆಶೆಯ ಊರುಗೋಲನ್ನು ಹಿಡಿದು ಮುಂದೆ ಸಾಗಬೇಕು.

ಸಮ್ಮೇಳನಗಳು ಮತ್ತು ವಿಜ್ಞಾನಗಳು

ವರ್ಷೇವರ್ಷೇ ಅಲ್ಲಲ್ಲಿ ನಡೆಯತಕ್ಕ ಸಾಹಿತ್ಯ ಸಮ್ಮೇಳನದ ಜತೆಯಲ್ಲಿ ಕನ್ನಡ ನಾಡಿನ ವೈಜ್ಞಾನಿಕ ಸಮ್ಮೇಳನವನ್ನು ಕರೆಯುತ್ತಿರಬೇಕು. ಇದು ಮುಂದಣ ಪ್ರತಿ ವಾರ್ಷಿಕ ಸಾಹಿತ್ಯ ಸಮ್ಮೇಳನವನ್ನು ಕರೆಯಿಸುವ ಆಯಾ ಸ್ಥಳವಂದಿಗರಿಗೆ ಮಾಡುವ ಸೂಚನೆ, ಅವರಲ್ಲಿ ಮಾಡುವ ವಿಜ್ಞಾಪನೆ ಅಷ್ಟೆ. ಇಂದಿನ ಯುಗವೆಂದರೆ ಯಂತ್ರದ ಯುಗ, ವಿಜ್ಞಾನದ (Science) ಯುಗ, ವಿವಿಧ ಬಾಂಬುಗಳ (bombs) ಯುಗ. ಈ ಯುಗದಲ್ಲಿ ನಾವು ಹತ್ತು ಮಂದಿಯ ಜತೆಯಲ್ಲಿ ಇರಬೇಕಲ್ಲದೆ, ಬೆಕ್ಕಿನ ಬಿಡಾರ ಬೇರೆಯಂತೆ ಲೋಕದಿಂದ ಪೃಥಕ್ಕಾಗಿ ವಿಂಗಡವಾಗಿ ಇದ್ದಿರಲಾರೆವು. ಹಾಗೂ ಈ ಹತ್ತು ಮಂದಿ ವಿಜ್ಞಾನದಲ್ಲಿ ವಿಚಕ್ಷಣರಾಗಿದ್ದು ಅವರ ನಡುವೆ ನಾವು ಅವರಂತೆಯೇ ಸ್ವತಂತ್ರವಾಗಿ ತಲೆಯನ್ನು ಮೇಲೆತ್ತಿ ಬಾಳ ಬೇಕಾದರೆ ನಮಗೆ ಸಾಹಿತ್ಯ ನೆರವಾಗದು, ವಿಜ್ಞಾನ ಬೇಕು. ವಿಜ್ಞಾನವಲ್ಲದೆ ಅನ್ಯಗತಿಯಿಲ್ಲ. ಈ ಕಾರಣ ನಮ್ಮಲ್ಲಿ ಸಾಹಿತ್ಯ ಹತ್ತುವವರು ಸಾಹಿತ್ಯವನ್ನು ಹೇಗೋ ಹಾಗೆ ವಿಜ್ಞಾನ ಹತ್ತುವವರು ವಿಜ್ಞಾನವನ್ನು ಆಶ್ರಯಿಸಬೇಕು. ಹಾಗೆ ಎರಡೂ ದಾರಿಗಳಿಂದ ನಮ್ಮ ಜನ ಮುಂದುವರಿಸಬೇಕು.


ಸರ್ಕಾರಗಳ ಕರ್ತವ್ಯ

ರಾಜಕೀಯ ದೃಷ್ಟಿಯಿಂದ ಹೇಳುವುದಾದರೆ, ಸಾಹಿತ್ಯ ಸಮ್ಮೇಳನಗಳನ್ನು ಸರಕಾರದವರು ಜರುಗಿಸಲಿ, ಜರುಗಿಸದಿರಲಿ, ವೈಜ್ಞಾನಿಕ ಸಮ್ಮೇಳನಗಳನ್ನಾದರೂ ಕೇಂದ್ರ ಸರಕಾರದವರಾಗಲಿ, ಆಯಾ ಪ್ರಾಂತಿಕ ಸರಕಾರದವರಾಗಲಿ ಕರೆಯಿಸುತ್ತಿರಬೇಕು.

❖❖

೩೫ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಶಿ.ಚ. ನಂದೀಮಠ



ಸಂಸ್ಕೃತ, ಕನ್ನಡಗಳಲ್ಲಿ ಪಾಂಡಿತ್ಯ ಪಡೆದ ಎಸ್. ಸಿ. ನಂದೀಮಠರು (ಶಿವಲಿಂಗಯ್ಯ ಚನ್ನಬಸವಯ್ಯ ನಂದೀಮಠ) ೧೨-೧೨-೧೯೦೦ರಲ್ಲಿ ಗೋಕಾಕ ತಾಲ್ಲೂಕಿನ ನಂದೀಗ್ರಾಮದಲ್ಲಿ ಜನಿಸಿದರು. ಗೋಕಾಕ ಮತ್ತು ಬೆಳಗಾವಿಗಳಲ್ಲಿ ಆರಂಭದ ವಿದ್ಯಾಭ್ಯಾಸ ಮಾಡಿದ ಇವರು ಧಾರವಾಡದಲ್ಲಿ ಬಿ.ಎ. ಪದವಿಯನ್ನೂ, ೧೯೨೬ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಯನ್ನೂ ಗಳಿಸಿದರು. ಲಂಡನ್ನಿಗೆ ತೆರಳಿ ವೀರಶೈವ ಧರ್ಮ ಹಾಗೂ ತತ್ತ್ವಜ್ಞಾನಗಳ ಕೈಪಿಡಿ ವಿಷಯವಾಗಿ ಪಿಎಚ್.ಡಿ. ಪದವಿ ಪಡೆದರು.

ಸ್ವದೇಶಕ್ಕೆ ಮರಳಿದ ನಂದೀಮಠರು ಕೆಲಕಾಲ ಕೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಬೆಳಗಾವಿಯಲ್ಲಿ ಗಿಲಗಂಜಿ ಅರಟಾಳ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಅನಂತರ ಧಾರವಾಡದ ಲಿಂಗರಾಜ ಕಾಲೇಜಿನಲ್ಲಿ ೧೧ ವರ್ಷ ಪ್ರಿನ್ಸಿಪಾಲರಾಗಿದ್ದರು. ಬಾಗಿಲಕೋಟೆ ಬಸವೇಶ್ವರ ಕಾಲೇಜಿನಲ್ಲೂ ಸ್ವಲ್ಪ ಕಾಲ ಸೇವೆ ಸಲ್ಲಿಸಿದ ಇವರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ, ಕುಲಸಚಿವರಾಗಿ, ಕುಲಪತಿಗಳಾಗಿ ಕೂಡ ಸೇವೆ ಸಲ್ಲಿಸಿದರು.

೧೯೪೦ರಲ್ಲಿ ಧಾರವಾಡದ ೪ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ೧೯೫೨ರಲ್ಲಿ ಬೇಲೂರಿನಲ್ಲಿ ಸಮಾವೇಶಗೊಂಡಿದ್ದ ೩೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಇವರನ್ನು ಆಯ್ಕೆ ಮಾಡಲಾಯಿತು. ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ೧೯೭೫ರಲ್ಲಿ ಗೌರವ ಡಿ.ಲಿಟ್. ಪದವಿಯನ್ನು ನೀಡಿ ಗೌರವಿಸಿತು.

ಕನ್ನಡ, ಸಂಸ್ಕೃತ, ಪಾಲಿ ಪ್ರಾಕೃತ ಇಂಗ್ಲಿಷ್ ಭಾಷೆಗಳಲ್ಲಿ ಪರಿಶ್ರಮ ಹೊಂದಿದ್ದ ನಂದೀಮಠರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕ ಧರ್ಮಗಳು, ಗಿರಿಜಾಕಲ್ಯಾಣ, ಹರಿಹರ ಕವಿ ಪ್ರಶಸ್ತಿ, ಹ್ಯಾಂಡ್ ಬುಕ್ ಆಫ್ ವೀರಶೈವಿಸಂ, ಕನ್ನಡ ಕುವಲಯಾನಂದ, ವೀರಶೈವತತ್ತ್ವಪ್ರಕಾಶನ, ಇತ್ಯಾದಿ.

ನಂದೀಮಠರು ೨೧-೧೧-೧೯೭೫ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೫

ಅಧ್ಯಕ್ಷರು, ಶಿ.ಚ. ನಂದೀಮಠ

ದಿನಾಂಕ ೧೬,೧೭,೧೮ ಮೇ ೧೯೫೨

ಸ್ಥಳ : ಬೇಲೂರು

ಪ್ರಾಚೀನ ಗ್ರಂಥಗಳ ಪ್ರಕಟಣೆ

ಕಳೆದ ಅರ್ಧ ಶತಮಾನದ ಅವಧಿಯಲ್ಲಿ ಮೈಸೂರು ಮದ್ರಾಸ್ ಸರ್ಕಾರಗಳು, ಧಾರವಾಡದ ವಿದ್ಯಾವರ್ಧಕ ಸಂಘ ಹಾಗೂ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕಾವ್ಯ ಕಲಾನಿಧಿಮಾಲೆ ಇವೇ ಮೊದಲಾದವು ಅನೇಕ ಗ್ರಂಥಗಳನ್ನು ಪ್ರಕಟಿಸಿ ಮಹದುಪಕಾರ ಮಾಡಿವೆ. ಆದರೆ ಈಗ ಅವುಗಳಲ್ಲಿ ಅನೇಕ ಗ್ರಂಥಗಳು ದೊರೆಯದಾಗಿವೆ, ಮೇಲಾಗಿ, ಈ ಗ್ರಂಥಗಳನ್ನು ಸಶಾಸ್ತ್ರೀಯವಾಗಿ ಶುದ್ಧವಾದ ಮೂಲ, ಮಹತ್ವದ ಪಾಠಾಂತರ, ಟಿಪ್ಪಣಿಗಳು ಉಪಯುಕ್ತವಾದ ಪ್ರಸ್ತಾವನೆ ಮೊದಲಾದವುಗಳೊಂದಿಗೆ ಅಂದವಾಗಿ ಮುದ್ರಿಸಲು ಆವಶ್ಯಕತೆ ಬಹಳವಾಗಿದೆ. ಈ ಕಾರ್ಯವನ್ನು ವಿಶ್ವವಿದ್ಯಾನಿಲಯದವರೂ ಪರಿಷತ್ತಿನವರೂ ಸಮರ್ಥವಾದ ಮತ್ತಿತರ ಸಂಸ್ಥೆಗಳೂ ಕೈಕೊಳ್ಳಬೇಕು.

ಕನ್ನಡ ನಿಘಂಟು

ಕನ್ನಡ ಸಾಹಿತ್ಯ ಪರಿಷತ್ತಿನವರು ಕನ್ನಡ-ಕನ್ನಡ-ನಿಘಂಟುವಿನ ರಚನೆಯನ್ನು ಕೈಗೊಂಡಿರುವುದು ಎಲ್ಲರಿಗೂ ವಿದಿತವಿದೆ. ಕಳೆದ ೮-೯ ವರ್ಷಗಳಿಂದ ಈ ಕಾರ್ಯ ನಡೆಯುತ್ತಲಿದೆ. ಇದು ಬಹಳ ದೊಡ್ಡ ಕೆಲಸ. ಇದಕ್ಕೆ ಪಂಡಿತರ ಹಾಗೂ ಹಣದ ಸಹಾಯ ಬಹಳ ಬೇಕಾಗುವುದು. ಕರ್ನಾಟಕದ ಮಹಾ ಜನಗಳು ಪರಿಷತ್ತಿಗೆ ಈ ಕಾರ್ಯದಲ್ಲಿ ಸರ್ವವಿಧದಿಂದಲೂ ನೆರವು ನೀಡಿ ಕೋಶವು ಆದಷ್ಟು ತೀವ್ರ ಸಿದ್ಧವಾಗುವಂತೆ ಪ್ರೋತ್ಸಾಹಿಸಬೇಕು.

ಕನ್ನಡ ಭಾಷಾ ನಿರ್ಮಾಣ ಹೇಗೆ?

ಸಂಸ್ಕೃತದಲ್ಲಿ ಎಷ್ಟೋ ಕೋಶಗಳಿದ್ದರೂ ಹೊಸ ಕೋಶವೊಂದನ್ನು ನಿರ್ಮಿಸಲು ಡೆಕ್ಕನ್ ಕಾಲೇಜು ಸಂಶೋಧನ ಸಂಸ್ಥೆಯವರು ದೇಶವಿದೇಶಗಳಿಂದ ಧನಸಹಾಯ, ಪ್ರೋತ್ಸಾಹಗಳನ್ನು ಪಡೆದು ಮುಂದೆ ಬಂದಿರುವುದು ಸ್ತುತ್ಯ. ಉತ್ತಮವಾದ ಕೋಶ ನಿರ್ಮಾಣವು ಎಷ್ಟು ಬಿಕ್ಕಟ್ಟಿದು, ಎಷ್ಟು ವೆಚ್ಚದ್ದು ಎಂಬುದನ್ನು ತೋರಿಸಲು ಈ ಉದಾಹರಣೆಯನ್ನು ಕೊಟ್ಟುದಾಗಿದೆ.

ಈ ಕನ್ನಡ ಕೋಶಕ್ಕೆ ಕನ್ನಡ ವಿಷಯವನ್ನು ಕಲಿಸುತ್ತಿರುವ ನಮ್ಮ ಸುತ್ತು ಮುತ್ತಲಿನ ವಿಶ್ವವಿದ್ಯಾನಿಲಯಗಳೂ ಆಯಾ ಪ್ರಾದೇಶಿಕ ಸರ್ಕಾರದವರೂ ಸಹಾಯ ಮಾಡಿದರೆ ಈ ಕಾರ್ಯವು ಸುಗಮವಾಗುವುದು. ಪರಿಷತ್ತಿನವರು ಈ ದಿಶೆಯಲ್ಲಿ ಕಾರ್ಯಮಾಡಬೇಕೆಂದು ನಮ್ಮ ಸೂಚನೆ.

ಚಿಕ್ಕಮಕ್ಕಳಿಗಾಗಿ ಬರೆದ ಪಠ್ಯಪುಸ್ತಕಗಳು ಅಂದವಾದ ಮುದ್ರಣ, ಚೆಂದಚೆಂದದ ಚಿತ್ರಗಳಿಂದ ಚಿತ್ತಾಕರ್ಷಕವಾಗಿರಬೇಕು. ಇದು ಮಕ್ಕಳ ಪಠ್ಯಪುಸ್ತಕಗಳ ಮಾತಾಯಿತು. ಇದರಂತೆ ಮಾಧ್ಯಮಿಕ ಮತ್ತು ಉಚ್ಚಶಿಕ್ಷಣ ಕ್ರಮದಲ್ಲಿಯೂ ಸರಿಯಾದ ಪಠ್ಯಪುಸ್ತಕಗಳಿರುವುದು ಅತ್ಯವಶ್ಯ. ಪ್ರತಿಯೊಂದು ವಿಷಯವನ್ನೂ ಬೇರೆ ಬೇರೆ ವರ್ಗಗಳಲ್ಲಿ ಕನ್ನಡದಲ್ಲಿ ಬೋಧಿಸಲು ಅನುಕೂಲವಾಗುವಂತಹ ಪಠ್ಯಪುಸ್ತಕಗಳಿರುವುದು ಕನ್ನಡ ಬೋಧ ಭಾಷೆಯಾಗಬೇಕೆನ್ನುವ ಈ ಕಾಲದಲ್ಲಿ ತೀರ ಅವಶ್ಯ. ಈ ದಿಶೆಯಲ್ಲಿ ವಿದ್ಯಾಖಾತೆಯವರೂ ವಿಶ್ವವಿದ್ಯಾನಿಲಯದವರೂ ಪರಿಷತ್ತಿನಂತಹ ಪ್ರಾತಿನಿಧಿಕ ಸಂಸ್ಥೆಗಳವರೂ ಮುಂದೆ ಬಂದು ಕಾರ್ಯ ಮಾಡಬೇಕಾಗಿದೆ. ಇದರಿಂದ ನಮ್ಮ ನಾಡಿನಲ್ಲಿ ಸರಿಯಾದ ಶಿಕ್ಷಣ ಪ್ರಸಾರವಾಗಿ ಸಾಹಿತ್ಯಕ್ಕೂ ಪ್ರೋತ್ಸಾಹ ದೊರೆಯುವುದು.

❖❖

೩೬ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ವಿ. ಸೀತಾರಾಮಯ್ಯ



ಕನ್ನಡದ ಕವಿ, ವಿದ್ವಾಂಸ, ವಿಮರ್ಶಕ, ಸದಭಿರುಚಿಯ ಕಲಾರಾಧಕರಾಗಿದ್ದ ವಿ. ಸೀತಾರಾಮಯ್ಯನವರ ತಂದೆ ವೆಂಕಟರಾಮಯ್ಯ ಮತ್ತು ತಾಯಿ ದೊಡ್ಡ ವೆಂಕಮ್ಮ. ದೇವನಹಳ್ಳಿ ತಾಲ್ಲೂಕಿನ ಬೂದಿಗೆರೆಯಲ್ಲಿ ೨-೧೦-೧೮೯೯ರಲ್ಲಿ ಜನನ. ಬೆಂಗಳೂರಿನಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ ಮೈಸೂರಿನಲ್ಲಿ ೧೯೨೦ರಲ್ಲಿ ಬಿ. ಎ. ೧೯೨೨ರಲ್ಲಿ ಎಂ. ಎ. ಪದವಿ ಪಡೆದರು. ಮುಂಬಯಿಗೆ ತೆರಳಿ ಎಲ್. ಎಲ್.ಬಿ. ಪದವಿ ಗಳಿಸಿ ಮೈಸೂರಿಗೆ ಹಿಂತಿರುಗಿದರು.

೧೯೨೩ರಲ್ಲಿ ಶಾರದಾ ವಿಲಾಸ ಕಾಲೇಜಿನಲ್ಲಿ ಉಪಾಧ್ಯಾಯರಾದರು. ೧೯೨೮-೧೯೫೮ರವರೆಗೆ ಬೆಂಗಳೂರಿನ ಇಂಟರ್ ಮೀಡಿಯೇಟ್ ಕಾಲೇಜು, ಸೆಂಟ್ರಲ್ ಕಾಲೇಜು, ಮೈಸೂರು ಮಹಾರಾಜ ಕಾಲೇಜು, ಚಿಕ್ಕಮಗಳೂರಿನ ಇಂಟರ್ ಮೀಡಿಯೇಟ್ ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಅನಂತರ ಒಂದೆರಡು ವರ್ಷ ಆಕಾಶವಾಣಿಯಲ್ಲಿ ಭಾಷಣ ವಿಭಾಗದ ಮುಖ್ಯಸ್ಥರಾಗಿ ಅನಂತರ ಹೊನ್ನಾವರದ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ೪ ವರ್ಷ ಕಾರ್ಯನಿರ್ವಹಿಸಿದರು.

೧೯೪೩ರಿಂದ ೧೯೪೮ರವರೆಗೆ ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿ ೧೯೩೬ರಿಂದ ೧೯೪೨ರವರೆಗೆ ಕನ್ನಡ ನುಡಿ, ೧೯೫೫-೫೬ರಲ್ಲಿ ಪರಿಷತ್ಪತ್ರಿಕೆ ಮತ್ತು ಕನ್ನಡ ನುಡಿಗಳ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ೧೯೭೧ರಲ್ಲಿ 'ಕವಿಕಾವ್ಯ ಪರಂಪರೆ' ಕಾವ್ಯ ಮಾಲೆಗೆ ಸಂಪಾದಕರಾಗಿದ್ದರು. ೧೯೩೪ರಿಂದ ೧೯೩೯ರವರೆಗೆ ಪರಿಷತ್ತಿನ ಕೋಶಾಧಿಕಾರಿಗಳಾಗಿದ್ದರು.

೧೯೫೩ರಲ್ಲಿ ೩೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಇವರಿಗೆ ಪ್ರಾಪ್ತವಾಗಿತ್ತು. ೧೯೫೪ರಲ್ಲಿ ಮುಂಬಯಿ ಪ್ರಾಂತ ಭಾಷಾ ಸಮ್ಮೇಳನಕ್ಕೆ ಅಧ್ಯಕ್ಷರಾದರು. ೧೯೭೦ರಲ್ಲಿ ಮಹನೀಯರು ಕೃತಿಗೆ ಪ್ರಶಸ್ತಿ ಲಭ್ಯವಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, 'ಅರಲು ಬರಲು' ಕವನ ಸಂಕಲನಕ್ಕೆ ದೊರಕಿತು. ಇವರಿಗೆ ೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿತು. ೧೯೭೮ರಲ್ಲಿ ಕೃಷ್ಣಚಾರಿತ್ರ ಕೃತಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು.

ಗೀತಗಳು, ದೀಪಗಳು, ನೆಳಲು ಬೆಳಕು, ಅರಲು-ಬರಲು ಮೊದಲಾದ ಕವನಸಂಗ್ರಹಗಳನ್ನೂ, ಪಂಪಾಯಾತ್ರೆ, ಹಣ ಪ್ರಪಂಚ, ಶ್ರೀಶೈಲಶಿಖರ, ವಾಲ್ಮೀಕಿ ರಾಮಾಯಣ, ಹಿರಿಯರು ಗೆಳೆಯರು, ಸಂವಿಧಾನ ಕಾನೂನು ಮೊದಲಾದ ಗದ್ಯಕೃತಿಗಳನ್ನೂ, ಪಂಜೆ ಮಂಗೇಶರಾವ್, ತ್ಯಾಗರಾಜ, ಬಂಗಾಳಿ ಸಾಹಿತ್ಯ ಚರಿತ್ರೆ, ಪುರಂದರದಾಸ, ಪಿಗ್ಮೇಲಿಯನ್ ಮೊದಲಾದ ಕೃತಿಗಳ ಅನುವಾದಗಳನ್ನು ಮಾಡಿರುವ ವಿ.ಸೀ. ಅವರು ಡಿ.ವಿ. ಗುಂಡಪ್ಪ, ಪಂಜೆ, ಕೆ. ವೆಂಟಕಪ್ಪ ಮೊದಲಾದವರ ಕೃತಿಗಳನ್ನು ಇಂಗ್ಲಿಷಿಗೆ ಪರಿವರ್ತಿಸಿದ್ದರು. ಅಂಕಣಕಾರರಾಗಿ ಕನ್ನಡ, ಇಂಗ್ಲಿಷಿನಲ್ಲಿ ನಿಯತಕಾಲಿಕೆಗಳಿಗೆ ಬರೆಯುತ್ತಿದ್ದ ವಿ.ಸೀ. ಅವರು ೧೯೮೩ ಸೆಪ್ಟಂಬರ್ ೪ರಂದು ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೬,

ಅಧ್ಯಕ್ಷರು: ವಿ. ಸೀತಾರಾಮಯ್ಯ

ದಿನಾಂಕ ೨೬, ೨೭, ೨೮ ಡಿಸೆಂಬರ್ ೧೯೫೩

ಸ್ಥಳ : ಕುಮಟಾ

ಪರಿಷತ್ತಿನ ಹುಟ್ಟಿಗೆ ಕಾರಣ

ಕನ್ನಡ ನಾಡು ನುಡಿ ಸಂಸ್ಕೃತಿಗಳ ಬಗೆಗೆ ದೊಡ್ಡ ಸೇವೆಯನ್ನು ಸಲ್ಲಿಸಬೇಕು ಈ ನಾಡಿನ ಮಕ್ಕಳು ಒಂದಾಗಬೇಕು. ಈ ಜನ ಸೌಹಾರ್ದದಿಂದ ಬೆಳೆದು ಆಡಳಿತದಲ್ಲಿ ಒಟ್ಟು ಒಂದು ರಾಜ್ಯವಾಗಬೇಕು ; ಸಾಹಿತ್ಯ, ಕಲೆ, ಶಾಸ್ತ್ರಜ್ಞಾನ, ಧರ್ಮ, ಬದುಕಿನ ನಯಗಳಲ್ಲಿ ಈ ಮುಂಚೆ ಈ ಜನ ಏನೇನು ಸಾಧಿಸಿ ಗಣ್ಯತೆ ಪಡೆಯಿತೋ ಅದರ ಸಮಗ್ರ ಪರಿಚಯವನ್ನು ಒಳಗೂ ಹೊರಗೂ ಮಾಡಿಕೊಟ್ಟು, ಈ ಕಾಲದಲ್ಲಿಯೂ ಅವೇ ರಂಗಗಳಲ್ಲಿ ಉತ್ಸಾಹವನ್ನೂ ಸಾಧನಸಂಪನ್ನತೆಯನ್ನೂ ಬೆಳಸಬೇಕು ; ಇಂದು ಸಲ್ಲಿಸುವ ಕಾಣಿಕೆ, ಶಕ್ಯವಾದರೆ, ಹಿಂದಿನದಕ್ಕಿಂತ ಉತ್ತಮವಾಗಬೇಕು; ಮಾನ್ಯರಾದ ಸಾಹಿತಿಗಳಿಗೆ ಪ್ರೋತ್ಸಾಹವನ್ನೂ ಪ್ರತಿಫಲವನ್ನೂ ಸಲ್ಲಿಸಿ ವಿಶ್ವಾಸ ತೋರಿಸಬೇಕು ; ಹಳೆ ಹೊಸ ಗ್ರಂಥಗಳ ಪ್ರಕಟನೆಯನ್ನು ಕೈಕೊಳ್ಳಬೇಕು-ಎಂದು ಕನ್ನಡ ಸಾಹಿತ್ಯ ಪರಿಷತ್ತು ಬಯಸಿತು. ಹುಟ್ಟಿ, ಈಗ್ಗೆ ಮೂವತ್ತೆಂಟು ವರ್ಷಗಳಾದರೂ ಮಾಡಬಹುದಾಗಿದ್ದಷ್ಟು ಸೇವೆಯನ್ನು ಸಲ್ಲಿಸಲು ಅದಕ್ಕೆ ಸಾಧ್ಯವಾಗಿಲ್ಲ. ಅದು ಸಂಸ್ಥೆಯ ಮೇಲೆ ಮಾತ್ರ ಹೊಂದಿದ್ದಲ್ಲ; ಜನಬಲ, ಧನಬಲ, ರಾಜ್ಯಶಕ್ತಿಯ ಬಲ ಸಾಕಷ್ಟು ಇಲ್ಲವಾದರೆ ಇಂತಹ ಕಾರ್ಯ ನೆರವೇರದು. ಅಲ್ಲದೆ ಅಖಿಲ ಕರ್ನಾಟಕ ಸಂಸ್ಥೆಯೆಂದು ಹೆಸರಿಟ್ಟುಕೊಂಡ ಕಾರಣದಿಂದ ಅನುಕೂಲ ಪ್ರತಿಕೂಲ ಎರಡೂ ಉಂಟಾದವು. ಇದರ ಕಾರ್ಯರಂಗ, ಹೊಣೆಗಾರಿಕೆ ಹರಡಿದವು; ಉಪಪತ್ತಿ ಆ ಪ್ರಮಾಣಕ್ಕೆ ಏರದಾಯಿತು. ಸ್ವಂತ ಶಕ್ತಿಯೂ ಅಭಿಲಾಷೆಯೂ ಸಿದ್ಧಿಯೂ ಹೇಗೇ ಇರಲಿ ಸಮಸ್ತ ಕರ್ನಾಟಕ ವ್ಯಾಪ್ತಿ ಉಳ್ಳ ಸಂಸ್ಥೆ ಇದೊಂದೇ, ಇದರ ಕ್ರಿಯಾಶಕ್ತಿಯನ್ನು ಜನರು ಎಷ್ಟು ಹೆಚ್ಚಿಸಿದರೆ ಇದು ಅಷ್ಟು ದೊಡ್ಡ ದಾಗಲುಳ್ಳದ್ದು. ಎಲ್ಲ ಕನ್ನಡಿಗರ ಸಾಂಸ್ಕೃತಿಕ ಆಶೋತ್ತರಗಳನ್ನೂ ರೂಪಿಸಿ, ಅವರ ವಾಣಿಯಾಗಬೇಕೆಂಬ ಆಸೆಯಿಂದ ನಡೆಯುತ್ತಿರುವ ಈ ಸಂಸ್ಥೆಯ ಮಹೋತ್ಸವವೊಂದರಲ್ಲಿ ನಾವು ಈ ಪುನಃ ನಿಯೋಜಿತರಾಗಿದ್ದೇವೆ.

ಸಮ್ಮೇಳನ ಹೇಗೆ ನಡೆಯಬೇಕು ?

ಇಂಥ ವಾರ್ಷಿಕ ಸಮ್ಮೇಳನಗಳ ಕಾರ್ಯವಿವರ ಈ ೩೮ ವರ್ಷಗಳಲ್ಲಿ ಬಗೆ ಬಗೆಯಾಗಿ ವಿರಚಿತವಾಗಿದೆ. ಮೊದಲು ಒಂದೇ ಪ್ರಧಾನ ಸಮ್ಮೇಳನವಾಗಿ ಇರುತ್ತಿದ್ದದ್ದು ಕಾಲಕ್ರಮದಲ್ಲಿ ಇತರ ಗೋಷ್ಠಿಗಳನ್ನು ಒಳಗೊಳ್ಳತೊಡಗಿತು. ಆದರೆ ಎಲ್ಲ ಸಮ್ಮೇಳನಗಳಿಗೂ ಸಾಧಾರಣವಾದ ಒಂದು ಗೋಷ್ಠಿ ವ್ಯವಸ್ಥೆ ಏರ್ಪಡಲು ಆದ ಹಾಗೆ ಕಾಣಲಿಲ್ಲ. ಆದರೂ ಸಮ್ಮೇಳನಕ್ಕೆ ಗೋಷ್ಠಿಗಳ ವಿಶೇಷ ಉತ್ಸಾಹವೂ ಸೇರುವಂತಾದುದು ಒಂದು ದೊಡ್ಡ ಗಳಿಕೆ ; ಸಂತೋಷ. ಹಿಂದಿನ ಒಬ್ಬ ಅಧ್ಯಕ್ಷರು ಹೇಳಿದಂತೆ, ಆ ಎಲ್ಲಾ ಒಂದು ಸಾಧಾರಣ ವ್ಯವಸ್ಥೆಗೆ ಒಂದು ಆಲ್ ಇಂಡಿಯಾ ಓರಿಯೆಂಟಲ್ ಕಾನ್‌ಫರೆನ್ಸ್, ಸೈನ್ಸ್ ಕಾಂಗ್ರೆಸ್, ಫಿಲೊಸಾಫಿಕಲ್ ಕಾನ್‌ಫರೆನ್ಸ್ ಮುಂತಾದವುಗಳಲ್ಲಿನಂತೆ ಶಾಖೆಗಳಾಗಿ, ಉಪಾಂಗಗಳಾಗಿ ಏರ್ಪಟ್ಟು ಒಂದು ಕ್ರಮ, ಸಂಪ್ರದಾಯಗಳ ನಿರಂತರ ಸಂತತಿಯಂತೆ ನಡೆದರೆ ಮಾತ್ರ ಸಮ್ಮೇಳನದ ಕಾರ್ಯ ಇನ್ನಷ್ಟು ಫಲಕಾರಿಯಾಗಬಲ್ಲದು. ಉತ್ಸವ, ಆರಾಧನೆ, ಮರ್ಯಾದೆಗಳ ಜೊತೆಗೆ ನಾಲ್ಕಾರು ಶಾಖೆಗಳಲ್ಲಿ ಕೆಲಸಮಾಡುವ ಸಾಹಿತಿಗಳೂ ವಿದ್ವಾಂಸರೂ ಸೇರಿ ವರ್ಷ ವರ್ಷವೂ ಮುಖ್ಯವಾದ ತತ್ವಗಳನ್ನೂ ವಾದಗಳನ್ನೂ ಪ್ರಯೋಗಗಳನ್ನೂ ಮಂಡಿಸಿ ವಿದ್ವಜ್ಜನರಲ್ಲಿ ಒಂದು ವಿದ್ಯಾಸಂಭ್ರಮವನ್ನು ಕಲ್ಪಿಸುವುದು ಅಂತಹ ಸಮ್ಮೇಳನ ಮಹಾಕಾರ್ಯ. ಆದರೆ ಈ ಸಮ್ಮೇಳನ ಅವುಗಳಂತೆ ಕೇವಲ ವಿದ್ವಜ್ಜನರ ಸಭೆಯಲ್ಲ. ತಿಂಗಳು ಎರಡು ತಿಂಗಳ ಮುಂಚೆಯೇ ಸಮ್ಮೇಳನದ ಸದಸ್ಯತ್ವದ ಚಂದಾ ಸಲ್ಲಿಸಿ, ಲೇಖನಗಳನ್ನು ಬರೆದು ಕಳಿಸಿ, ನಾವು ಈ ವಿಭಾಗಗಳಲ್ಲಿ ಭಾಗವಹಿಸಲುಳ್ಳವರೆಂದು ಹೊಣೆಗಾರಿಕೆ ಹೊತ್ತು ಬರುವ ವಿದ್ವಾಂಸವರ್ಗ ಮಾತ್ರವೇ ಅಲ್ಲ, ಇಲ್ಲಿ ಸೇರುವುದು. ಆದರೆ ಸ್ವಂತ ಖರ್ಚಿನಿಂದ ಎಲ್ಲ ದೊಡ್ಡ ವಿದ್ವಾಂಸರೂ ಸಮ್ಮೇಳನಕ್ಕೆ ಬರುವ ವಾಡಿಕೆಯನ್ನು ನಮ್ಮಲ್ಲಿ ಏರ್ಪಡಿಸುವುದು ಹೇಗೆ? ವಿದ್ವಾಂಸರು ತಮ್ಮ ವಿಷಯ ಭಾಗವನ್ನು ಕುರಿತು ಭಾಷಣ ಮಾಡುವಾಗ ಸಭೆಯಲ್ಲಿ ೨೦ ಜನರಾದರೂ ಕುಳಿತಿರುವಂತೆ ನಂಬಿಕೆ ಕೊಡಬಲ್ಲವರು ಯಾರು? ಹಿಂದೆ ಇಂಥ ಅನುಭವಗಳು ಸಾಕಷ್ಟು ಉಂಟಾಗಿವೆ.

ನಾನಾ ಭಾಗಗಳಿಂದ ಬರುವ ಸಾಹಿತಿಗಳಿಂದಲೂ ವಿದ್ವಾಂಸರಿಂದಲೂ ಜನಸಾಮಾನ್ಯರ ಪ್ರಯೋಜನಕ್ಕಾಗಿ ಸಂಜೆ ಉಪನ್ಯಾಸಗಳನ್ನೇರ್ಪಡಿಸಿ ಜನದ ಜ್ಞಾನಾಭಿವೃದ್ಧಿಗೂ, ಮನರಂಜನೆಯ ಸಂತೋಷಕ್ಕೂ ಈಗಿನಂತೆ ಅವಕಾಶ ಕಲ್ಪಿಸಬಹುದು. ಆಯಾ ಸಮ್ಮೇಳನದ ಅಧ್ಯಕ್ಷರು ಸಾಹಿತ್ಯದ ಯಾವ ಶಾಖೆಯ ವಿದ್ವಾಂಸರಿಗೂ ಆ ಶಾಖೆಯನ್ನು ಬೇಕೆನಿಸಿದರೆ ಬಿಟ್ಟು, ಉಳಿದ ಶಾಖೆಗಳನ್ನು ನಡೆಸುವುದು ಮೇಲು. ಇದು ಸ್ವಾಗತ ಸಮಿತಿಗಳ ಅನುಕೂಲಕ್ಕೆ ಹೊಂದಿಕೊಳ್ಳುವುದರಿಂದ ಪರಿಷತ್ತು ನೇರವಾಗಿ ಏನನ್ನಾದರೂ ಮಾಡಲಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸಮ್ಮೇಳನಗಳಲ್ಲಿ ಬಹುಮಟ್ಟಿಗೆ ಎಲ್ಲರಂತೆ ಸಾಹಿತ್ಯ ಪರಿಷತ್ತೂ ಅತಿಥಿ. ಅತಿಥಿಗಳಾದವರು ಆತಿಥ್ಯ ಮಾಡುವವರನ್ನು ಕ್ಲೇಶಗೊಳಿಸಲಾಗದೆಂಬುದನ್ನು ಮರೆಯಬಾರದು. ಸ್ವಾಗತ ಸಮಿತಿಯವರು ಶಕ್ತಿಮೀರಿ ಸೌಕರ್ಯಗಳನ್ನು ಕಲ್ಪಿಸುವವರಾದರೂ ಸಮ್ಮೇಳನಕ್ಕೆ ಬಂದವರೆಲ್ಲರಿಗೂ ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸುವ ಅವಕಾಶ ದೊರೆಯದಿರುವುದು ಶಕ್ಯ. ಸಮ್ಮೇಳನಕ್ಕೆ ಯಾವ ಯಾವ ವಿದ್ವಾಂಸರು ಬರುವರೆಂದು ಮುಂಚಿತವಾಗಿ ಗೊತ್ತಾದರೆ, ನಮ್ಮ ಇನ್ನು ಕೆಲವರನ್ನೂ, ವಿಶೇಷವಾಗಿ ಒಬ್ಬಿಬ್ಬರು ನೆರೆಯ ಭಾಷೆಗಳ ಪ್ರತಿನಿಧಿಗಳನ್ನೂ ಈ ಸಮಾರಂಭಕ್ಕೆ ಕರೆಸಿಕೊಳ್ಳುವಂತಾದರೆ, ಈ ಕೆಲಸ ಇನ್ನೂ ಯಶಸ್ವಿಯಾದೀತು. ಇಂಥ ಸಮ್ಮೇಳನದಲ್ಲಿ ಮರಾಠಿ, ತೆಲುಗು, ತಮಿಳು, ಮಲೆಯಾಳದ ವಿದ್ವಾಂಸರು ಆಹೂತರಾಗಿ ಬರುವುದೂ ತಮ್ಮ ಭಾಗದಲ್ಲಿ ಏನು ಕೆಲಸ ಹೇಗೆ ನಡೆಯುತ್ತಿದೆ ಎಂದು ತಿಳಿಸುವುದೂ ಅದನ್ನು ಸಾವಧಾನವಾಗಿ ಕೇಳಿ ನಾವು ಆದರಿಸವುದೂ ಒಂದು ಸಂಪ್ರದಾಯವಾದರೆ ಬಹು ಚೆನ್ನ. ಇಲ್ಲಿಗೆ ದಯಾಮಾಡಿಸಿರಬಹುದಾದ ಅಂತಹ ಮಾನ್ಯರಿಗೆ ಸ್ವಾಗತವಿದೆ. ಬಂದ ಕನ್ನಡ ವಿದ್ವಾಂಸರು ಯಾರೆಂದು ತಿಳಿಯದೆ ಅವರಲ್ಲಿ ಮುಖ್ಯರಿಂದ ಕೂಡ ಪ್ರಯೋಜನ ಪಡೆಮುಕೊಳ್ಳಲಾಗದೆಯೇ ಸಮ್ಮೇಳನಗಳು ಮುಗಿದು ಹೋಗಿರುವುದುಂಟು. ಈ ಸಂಬಂಧದಲ್ಲಿ ಯಾರನ್ನು ಹೊಣೆಮಾಡುವುದು ?

ಸಮ್ಮೇಳನ ಭಾಷಣಗಳ ಸಂಪುಟ ಪ್ರಕಟವಾಗಲಿ

ಈವರೆಗಿನ ಅಧ್ಯಕ್ಷರು ತಮ್ಮ ವಿಶೇಷ ಪರಿಶ್ರಮದಿಂದ ಯಾವ ಯಾವ ವಿಷಯಗಳಲ್ಲಿ ನಿಷ್ಣಾತರೊ ಆ ವಿಷಯಗಳನ್ನು ಪ್ರತಿಪಾದನೆಮಾಡಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಪುನರುಕ್ತಿಗಳನ್ನು ಬಿಟ್ಟು ಉಳಿದ ಭಾಗಗಳನ್ನು ಸೇರಿಸಿ ನಾಲ್ಕಾರು ಸಂಪುಟಗಳಲ್ಲಿ ಆ ಎಲ್ಲ ಭಾಷಣಗಳನ್ನೂ ಪ್ರಕಟಿಸಿದರೆ ನಾಡಿಗೆ ವಿಶೇಷ ತಿಳಿವಳಿಕೆ ದೊರೆವುದು. ಆ ಹಿಂದಿನವರ ಪಾಂಡಿತ್ಯವಾಗಲಿ ಅನುಭವವಾಗಲಿ ಸ್ಫೂರ್ತಿ, ದಕ್ಷತೆ ಆಗಲಿ ನನಗಿಲ್ಲ. ಜೀವನದ ಹಲವಾರು ರಂಗಗಳಲ್ಲಿ ತಮ್ಮ ಕೀರ್ತಿಯನ್ನು, ಕಾರ್ಯಶಕ್ತಿಯನ್ನು ಸ್ಥಾಪಿಸಿ ನಾಡಿನ ತಲೆಮಣಿಗಳಂತಿದ್ದ ನನ್ನ ಗುರುಹಿರಿಯರು ಈ ಸ್ಥಾನವನ್ನಲಂಕರಿಸಿ ಬೆಳಗಿದರು. ಅವರಂತೆ ಅಧಿಕಾರದಿಂದ ನುಡಿವ ಶಕ್ತಿ ನನಗಿಲ್ಲ. ಕನ್ನಡ ಭಾಷಾಸಾಹಿತ್ಯಗಳ ಪ್ರಾಚೀನತೆಯನ್ನಾಗಲಿ, ಶಾಸ್ತ್ರ, ಕಲೆ ಇತಿಹಾಸ ಪರಿಶೋಧನೆಗಳನ್ನು ಕುರಿತಾಗಲಿ, ವಿವರಗಳನ್ನು ಹೇಳಲೂ ಇದು ಸಮಯವಲ್ಲ. ನನಗಿಂತ ವಿದ್ವಾಂಸರಾದವರು ಅವನ್ನು ಹಿಂದಿನ ಭಾಷಣಗಳಲ್ಲಿ ಹಲವರೂ ಬೇರೆ ರೀತಿಯಲ್ಲಿ ಕೆಲವರೂ ಹೇಳಿದ್ದಾರೆ.

ಪರಿಷತ್ತಿನ ಹುಟ್ಟು

ಮೊನ್ನೆ ಮೊನ್ನೆಯವರೆಗೂ ಮೈಸೂರಿನಲ್ಲಿ ಕನ್ನಡಕ್ಕೆ, ಪ್ರಧಾನ ಗೌರವ ಹೋಗಲಿ, ಸಾಮಾನ್ಯ ಪ್ರಭಾವ ಕೂಡ ಇರಲಿಲ್ಲ. ಇಂದೂ ಎಷ್ಟಿದೆಯೋ ಕಾಣೆ. ಮಾತಿನಲ್ಲಿ ಕೆಲವರು ಸಹಾನುಭೂತಿ ತೋರಿಸಿ ಪ್ರೋತ್ಸಾಹವನ್ನೂ ಅಲ್ಪ ಸ್ವಲ್ಪ ನೆರವನ್ನೂ ಕೊಟ್ಟುದುಂಟು. ಸರ್. ಎಂ.ವಿಶ್ವೇಶ್ವರಯ್ಯನವರ ಮತ್ತು ಎಚ್.ವಿ. ನಂಜುಂಡಯ್ಯನವರ ದೂರದರ್ಶನದಿಂದ ಪರಿಷತ್ತಿನಂತಹ ಸಂಸ್ಥೆ ಹುಟ್ಟಿತು. ಮೈಸೂರು ಮಹಾರಾಜರು ಕನ್ನಡಿಗರ ಆದರ್ಶಕ್ಕೂ ಏಳಿಗೆಗೂ ಪ್ರೋತ್ಸಾಹ ಕೊಟ್ಟರು. ಕನ್ನಡದ ಅಭಿವೃದ್ಧಿಯಾಗಬೇಕೆಂಬ ಅಭಿಮಾನದಿಂದ ವಿಶ್ವವಿದ್ಯಾನಿಲಯದಲ್ಲಿ ಕೂಡ ಪ್ರಚಾರ ಕಾರ್ಯ ನಡೆಯಬೇಕೆಂದು ನಿರ್ದೇಶನ ಮಾಡಿದರು. ಆಗಾಗ ಎಲ್ಲೋ ಕೆಲವು ದೊಡ್ಡ ಅಧಿಕಾರಿಗಳೂ ನೆರವು ಪ್ರೋತ್ಸಾಹಗಳನ್ನು ಕೊಟ್ಟುದುಂಟು. ಆದರೆ ಮೈಸೂರಿನ ಜನ ಇಂಗ್ಲಿಷಿಗೂ ಅಖಿಲ ಭಾರತ ಪ್ರಯೋಜನವೆಂಬ ಮತ್ತು ಅಂತರ್‌ರಾಷ್ಟ್ರೀಯವೆಂಬ ಮಾತುಗಳಿಗೂ ಹೆಚ್ಚು ಒಲೆದು, ಇದು ತಪ್ಪಲ್ಲ, ಆದರೆ–ಪ್ರಾಂತಭಾಷೆಯನ್ನು ಉಪೇಕ್ಷೆಮಾಡಿದರು. ಸ್ವಾಭಿಮಾನವಿಲ್ಲದ ಜನಕ್ಕೆ ಇನ್ನಾವ ಮಾನ ದೊರಕೀತು ? ಅವರು ಇನ್ನೊಬ್ಬರಿಗೆ ದುಡಿವ ಜನವಾದರು. ಗಳಿಸಿದ ನಮ್ಮದನ್ನು ಇನ್ನೊಬ್ಬರಿಗೆ ಕೊಟ್ಟರೆ ಇನ್ನೊಬ್ಬರಿಂದ ನಾವು ಬೆಲೆಯನ್ನು ಕೊಳ್ಳಬಹುದು. ಇಲ್ಲವಾದರೆ ಅವರ ಕೈಂಕರ್ಯವೇ ನಮಗೆ ಸಿದ್ಧಿ. ಇಂದಿಗೂ ತಿಳಿದವರೆಂಬ ಇಲ್ಲಿನ ಹಲವರ ಮಾತಿನಲ್ಲಿ ಬಹುಮಟ್ಟಿಗೆ ಆ ಮನಸ್ಸೇ ಉಳಿದು ಕನ್ನಡಕ್ಕೆ ಇನ್ನೂ ಕೀಳ್ಮೆಯೇ ಇದೆ.

ಪರಿಷತ್ತು ಮತ್ತು ಏಕೀಕರಣ

ಈಗ ಒಂದು ವರ್ಷದಿಂದೀಚೆಗೆ ನಮ್ಮ ಆಡಳಿತದ ಮುಖಂಡರ ಧೀರವಾದ ಮುನ್ನುಗ್ಗಿನಿಂದ ಕನ್ನಡದ ಕೆಲಸಕ್ಕೆ ಚಮಕೂ ಜೀವಕಳೆಯೂ ಬಂದಿವೆ. ಕನ್ನಡದ ಒಕ್ಕೂಟ ವಿಷಯದಲ್ಲಿ ಒಂದು ಮುಖವಿಲ್ಲ; ಒಂದು ಕೊರಲಿಲ್ಲ. ಪರಿಷತ್ತೂ ಇತರ ಅನೇಕ ಸಂಸ್ಥೆ ಸಮ್ಮೇಳನಗಳೂ ಏಕೀಕರಣದ ಅಗತ್ಯವನ್ನು ಒತ್ತಿ ಹೇಳಿವೆ. ನಾಡಿಗೆ ಬಿಡುಗಡೆ ಬರುವ ಮುಂಚೆ ಕಾಂಗ್ರೆಸಿನವರೇ ಭಾಷಾ ಪ್ರಾಂತ ತತ್ವವನ್ನು ಒಪ್ಪಿದರು. ಆಮೇಲೆ ಇದ್ದಕ್ಕಿದ್ದಂತೆ ಪಕ್ಷದ ಕರ್ನಾಟಕ ಪ್ರಾಂತ ಸಮಿತಿಯನ್ನೇ ಒಡೆದು ಎರಡು ಹೋಳು ಮಾಡಿಬಿಟ್ಟರು. ಈಚೆಗೆ ಕಾಂಗ್ರೆಸಿಗೆ ವಿರೋಧ ಪಂಥಗಳವರು ಏಕೀಕರಣ ವಾದವನ್ನು ಹಿಡಿದು ಕನ್ನಡದ ಕೂಗನ್ನು ಬಲಪಡಿಸಿದ್ದಾರೆ. ಆಳುವ ಪಕ್ಷಕ್ಕೆ ಮನಸ್ಸು ಪ್ರಾಂತಗಳಲ್ಲಾಗಲಿ, ಕೇಂದ್ರದಲ್ಲಾಗಲಿ ಸುಮಾರು ಸೆಡದೇ ಇದೆ. ಆದರೆ ಶಾಸನ ಸಭೆಗಳಿಗೆ ನಾಳೆಯ ಹೊಸ ಚುನಾವಣೆ ಆಗುವಾಗ ಬೇರೆ ಪಕ್ಷದವರ ಕೈ ಈ ಕಾರಣದಿಂದ ಮೇಲಾಗದಂತೆ ಎಚ್ಚರದಿಂದಿರಲು ಇದನ್ನು ಹಾಗೆ ಹೀಗೆ ಒಪ್ಪುತ್ತೇವೆಂದಾದರೂ ಆಡುತ್ತಿರಬೇಕಾಗಿದೆ. ಅದೂ ನಮಗೆ ಒಂದು ಮೇಲೇ.


ಪರಿಷತ್ತಿನ ಸ್ಥಾನ ನೆರವಿನ ವಿಚಾರ

ಈ ಎಲ್ಲ ಸಂಬಂಧಗಳಲ್ಲಿಯೂ ಪರಿಷತ್ತನ್ನು ಬಳಸಿಕೊಳ್ಳುವ ಉಪಕಾರ ಲೇಖಕರದು, ಸಮಾಜದ್ದು, ಸರ್ಕಾರದ್ದು, ಹೊರಗೆ ನಿಂತು ಟೀಕೆ ಮಾಡುವುದಕ್ಕಿಂತ ಒಳಗೆ ಬಂದು ಈ ಎಲ್ಲ ಕೆಲಸಗಳನ್ನೂ ನಿರ್ವಹಿಸಲು ನೆರವು ಕೊಟ್ಟರೆ ಪರಮೋಪಕಾರವಾದೀತು. ಸಾರ್ವಜನಿಕ ಸಂಸ್ಥೆಗಳ ಕೆಲಸ ಶಕಾರರ ಕಾಟಕ್ಕಿಡಾದ ವಸಂತಸೇನೆಯರ ನಾಡಿನದು. ತಮ್ಮ ಕಾಲವನ್ನೂ–ಕೆಲವೇಳೆ ಹಣವನ್ನೂ– ವೆಚ್ಚಮಾಡಿಕೊಂಡು ಕಾರ್ಯದರ್ಶಿಗಳೂ ಅಧ್ಯಕ್ಷರೂ ಆ ಹೊಣೆಯನ್ನು ಒಪ್ಪಿದ ತಪ್ಪಿಗಾಗಿ, ಅವರನ್ನು ಹಿಂದಿನ ಸಂಜೆ'ಸರ್ವಾನುಮತ'ದಿಂದ ಬೇಡಿ ಒಪ್ಪಿಸಿದ ಜನ ಮರುದಿನದಿಂದ ಎಲ್ಲರೂ ತಮ್ಮ ಬಾಣಗಳಿಗೆ ಗುರಿಮಾಡುವುದು ಸಭ್ಯವೋ ಕಾರ್ಯಸಾಧಕವೊ ನಾನು ಕಾಣೆ. ಕೆಲವು ಸಲ ಸಂಸ್ಥೆಯ ಮೇಲೂ ಅಂಥವರ ಮೇಲೂ ಬರುವ ಕಿರು ಕುಚೋದ್ಯಗಳಿಗಂತೂ ಲಂಗಿಲ್ಲ ಲಗಾಮಿಲ್ಲ. ಎಲ್ಲರೂ ಸೇರಿ ವಿಶ್ವಾಸದಿಂದ ನಡೆಸಿದರೆ ಯಾವುದೂ ಒಂದು ಸಂಸ್ಥೆ. ಇಲ್ಲಿಗೆ ಎಲ್ಲ ಬಗೆಯವರೂ ಸದಸ್ಯರಾಗಬಹುದು ; ಎಲ್ಲ ವರ್ಗದವರ ಮನಸ್ಸನ್ನೂ ಸಂಸ್ಥೆ ಒಲಿಸಿಕೊಳ್ಳಬೇಕಾಗುತ್ತದೆ. ಹೀಗಿರುವಾಗ ಬೇರೆ ಬಗೆಯ, ಆವೇಶದ, ಅಭಿನಿವೇಶದ ಸಾಹಿತಿಗಳೂ ಲೇಖಕರೂ ಇದಕ್ಕೆ ವಿಮುಖರಾದರೆ, ದುರಧರಾಧ್ಯರಾದರೆ ಸಾರ್ವಜನಿಕವಾದ ಸಂಸ್ಥೆ ಪರಸ್ಪರ ವಿರೋಧ ಧರ್ಮವುಳ್ಳ ಎಲ್ಲರಿಗೂ ಹೇಗೆ ಉತ್ತರಕೊಟ್ಟೀತು ? ಹೊಂದಲಾದೀತು ? ಹತ್ತಾರು ಜನರ ತೃಪ್ತಿಯನ್ನು ಸಾಧಿಸುವ ಕಷ್ಟ ಅಲ್ಲಿ ಕೆಲಸಮಾಡಿದವರಿಗೆ ಮಾತ್ರ ಗೊತ್ತು. ಸಾವಿರಾರು ಮಂದಿ ಸದಸ್ಯರಾಗಿ, ಸಭೆ ಸೇರಿ ಬೇಕಾದ ಕೆಲಸಗಳನ್ನು ಬೇಕಾದ ವಿಚಕ್ಷಣೆಯಿಂದ ಮಾಡಿಸಿಕೊಳ್ಳಲಿ. ಹಳಗನ್ನಡ ಕೃತಿಗಳನ್ನು ತಿದ್ದಿ ಅಚ್ಚುಮಾಡಿಸಲು ಹಣಬೇಕು, ಕಾಲ ಬೇಕು, ಸಿಬ್ಬಂದಿ ಬೇಕು, ಸ್ಥಳ ಬೇಕು. ಸಂಪಾದಕ ವರ್ಗ, ಸಲಹೆಗಾರರ ವಿದ್ವಜ್ಜನ ವರ್ಗಬೇಕು. ಹೊಸಕೃತಿಗಳನ್ನು ತಾನೇ ನೇರವಾಗಿ ಆಯುವುದು ಪರಿಷತ್ತಿಗೆ ಕಷ್ಟ ; ಪಕ್ಷಪಾತಗಳ ಆರೋಪಣೆ ಸುಲಭ. ಜೊತೆಗೆ ಎದುರಿಗೆ ಸುತ್ತಲೂ ಇರುವ ಜೀವಂತ ಕೃತಿಕಾರರಲ್ಲಿ ಯಾರದನ್ನು ಪ್ರಕಟಿಸುವುದು ? ಯಾರನ್ನು ಬಿಡುವುದು ? ಎಲ್ಲರ ಎಲ್ಲವನ್ನೂ ಪ್ರಕಟಿಸುವುದು ಯಾರಿಗೂ ಅಶಕ್ಯ. ಇನ್ನು ಪ್ರೋತ್ಸಾಹ, ಪ್ರಶಸ್ತಿಕೊಡುವ ರೀತಿ : ಅದಕ್ಕೆ ಪುನಃ ದ್ರವ್ಯೋಪಪತ್ತಿಬೇಕು. ಇಂಥ ಸಮಾರಂಭಗಳು ನಡೆಯುವಾಗ ಬಹುಮಾನ ಹಂಚಲಾಗುವಂತೆ ದತ್ತಿಗಳೂ, ಇತರ ಖಚಿತವಾದ ನಿಧಿಗಳೂ, ಸಹಾಯ ದ್ರವ್ಯಗಳೂ ಏರ್ಪಡುವಂತಾದರೆ ಹೊಸಕಾಲದ ಒಂದೊಂದು ಗ್ರಂಥಕ್ಕೂ ಬೇಕೆನ್ನುವಷ್ಟು ಬಹುಮಾನಗಳನ್ನು ಕೊಡಬಹುದು. ಕೊಡುವ ಬಹುಮಾನ ರೂ. ೫೦೦–೧೦೦೦ಕ್ಕೆ ಕಡಮೆಯಿಲ್ಲದಿರಲಿ. ಇಂಥ ಪ್ರೋತ್ಸಾಹಕ್ಕೆ ಮಿತಿಯೆಲ್ಲಿ ? ಯೋಗ್ಯತಾ ನಿರ್ಣಯಕ್ಕೆ ಬೇಕಾದರೆ ಪರಿಷತ್ತನ್ನು ನಿಯಮಿಸಿ : ಇಲ್ಲವಾದರೆ, ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳು, ವಿದ್ಯಾಇಲಾಖೆಯವರು, ಪರಿಷತ್ತಿನ ಪ್ರತಿನಿಧಿಗಳು ದಾತೃಮಂಡಲದ ಒಬ್ಬ ಪ್ರತಿನಿಧಿ ಸಲಹೆಗಾರರಾಗಲಿ. ಸ್ವಾಗತ ಸಮಿತಿಗಳವರ ದ್ರವ್ಯಾನುಕೂಲ ಧಾರಾಳವಾದಾಗ ತಮ್ಮ ಮಸೂಲಿಯ ಹತ್ತರಲ್ಲಿ ಒಂದಂಶವನ್ನು ಇಂಥ ಪುರಸ್ಕಾರಕ್ಕೆ ಮುಡಿಪು ಮಾಡಿದರೆ ಅವರವರ ಊರಲ್ಲಿ ವರ್ಷದ ಒಂದು ಉತ್ತಮ ಕೃತಿಗೆ ಪುರಸ್ಕಾರ ಮಾಡಿದ ಕೀರ್ತಿ ಬರುವುದು. ಈ ನಾನಾ ಬಗೆಯ ಆಶ್ರಯ ನೆರವುಗಳನ್ನು ಕಲ್ಪಿಸುವ ಪುಣ್ಯವನ್ನು ಕಟ್ಟಿಕೊಳ್ಳುವುದು ಎಲ್ಲ ಹಣವಂತ ಶ್ರದ್ಧಾಳುಗಳಿಗೂ ಬರಬಲ್ಲದು. ಕನ್ನಡ–ಕನ್ನಡಕೋಶಕ್ಕಾಗಿ ಒಂದು ಲಕ್ಷ ರೂಪಾಯಿ ದಾನವನ್ನು ಪರಿಷತ್ತಿಗೆ ಒದಗಿಸಿದ ಮೈಸೂರು ಮುಖ್ಯಮಂತ್ರಿಗಳ ಧಾರಾಳ ಇಂಥದಕ್ಕೆ ಮೊದಲಾಗಲಿ.

❖❖

೩೭ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಕೋಟ ಶಿವರಾಮಕಾರಂತ



ಬಹುಮುಖ ಪ್ರತಿಭೆಯಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೋಟ ಶಿವರಾಮ ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಷ ಕಾರಂತ-ಲಕ್ಷ್ಮಮ್ಮ ದಂಪತಿಗಳಿಗೆ ೧೦-೧೦-೧೯೦೨ರಲ್ಲಿ ಜನಿಸಿದರು. ಕುಂದಾಪುರದಲ್ಲಿ ಪ್ರೌಢಶಾಲಾ ವ್ಯಾಸಂಗವನ್ನು ಮುಗಿಸಿ ಮಂಗಳೂರಿನ ಸರ್ಕಾರಿ ಕಾಲೇಜನ್ನು ಸೇರಿದಾಗಲೆ ಗಾಂಧೀಜಿಯವರ ಅಸಹಕಾರ ಚಳುವಳಿಗೆ ಧುಮುಕಿ ಓದಿಗೆ ಮಂಗಳ ಹಾಡಿದರು.

ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಕಾರಂತರು ಪ್ರವೇಶಿಸದ ಕ್ಷೇತ್ರವಿಲ್ಲ. ಅವರು ಸರ್ಕಾರದಲ್ಲಿ ಅಥವಾ ಇತರರ ಆಶ್ರಯದಲ್ಲಿ ದುಡಿಯಲಿಲ್ಲ. ಒಂಟಿಸಲಗದಂತೆ ನಡೆದರು, ವ್ಯಾಪಾರ ಮಾಡಿದರು, ವಸಂತ, ವಿಚಾರವಾಣಿ ಪತ್ರಿಕೆ ನಡೆಸಿದರು. ಬಾಲವನ ಸ್ಥಾಪಿಸಿದರು. ಚಲನಚಿತ್ರ ಮಾಡಿದರು, ಯಕ್ಷಗಾನ ಪ್ರಯೋಗಗಳನ್ನು ನಡೆಸಿದರು, ಹೀಗೆ ನಾನಾ ಕ್ಷೇತ್ರಗಳಲ್ಲಿ ದುಡಿದರು.

ಹರಿಜನೋದ್ಧಾರಕ, ಅಸಹಕಾರ ಚಳವಳಿಯಲ್ಲಿ ಪಾಲ್ಗೊಳ್ಳುವಿಕೆ, ಸ್ವಾತಂತ್ರ್ಯ ಚಳವಳಿಗಳಲ್ಲಿ, ನೃತ್ಯ ಸಂಗೀತ ರಂಗಗಳಲ್ಲಿ ನಾನಾರೀತಿ ಸೇವೆ ಮಾಡಿದ ಇವರು ಬಾಲವನವನ್ನು ಮಕ್ಕಳಿಗಾಗಿ ನಡೆಸಿದರು. ಬಿಎಂಶ್ರೀ ಸ್ಮಾರಕ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದ ಸಂಸ್ಥೆಗಳನ್ನು ಪ್ರೋತ್ಸಾಹಿಸಿದರು, ಅನೇಕ ಸಂಸ್ಥೆಗಳಲ್ಲಿ ಸದಸ್ಯರಾಗಿ ಸಕ್ರಿಯವಾಗಿ ಸೇವೆ ಸಲ್ಲಿಸಿದರು.

೧೯೫೮ರಲ್ಲಿ ಇವರ ಯಕ್ಷಗಾನ ಬಯಲಾಟಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಸ್ವೀಡನ್ ಪ್ರಶಸ್ತಿ ಬಂದಿತು. ಮೂಕಜ್ಜಿಯ ಕನಸುಗಳು ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿತು. ಕರ್ನಾಟಕ ವಿಶ್ವವಿದ್ಯಾನಿಲಯ ೧೯೬೩ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ನೀಡಿದರೆ, ೧೯೬೮ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಬಿರುದಿತ್ತು ಗೌರವಿಸಿತು. ೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ೩೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ನೀಡಿ ಪರಿಷತ್ತು ಸನ್ಮಾನಿಸಿತು. ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿತು.

ಕಾರಂತರ ಹಾಗೆ ವೈವಿಧ್ಯಮಯ ಕೃತಿಗಳನ್ನು ರಚಿಸಿದವರು ಕನ್ನಡದಲ್ಲಿ ವಿರಳ. ೪೪ ಕಾದಂಬರಿ, ೧೪ ನಾಟಕ, ೩ ಕಥಾಸಂಕಲನ, ೬ ಪ್ರಬಂಧಗಳು, ೯ ಕಲಾ ಗ್ರಂಥಗಳು, ೫ ಆತ್ಮಕಥೆ-ಜೀವನ ಚರಿತ್ರೆಗಳು, ಮಕ್ಕಳ ಸಾಹಿತ್ಯ-೨೫, ಇತ್ಯಾದಿ ೧೫೦ಕ್ಕೂ ಮಿಗಿಲಾದ ಕೃತಿಗಳನ್ನು ರಚಿಸಿರುವ ಕಾರಂತರು ಕನ್ನಡದ ಹಿರಿಮೆ ಸಾರುವ ಹತ್ತಾರು ಗ್ರಂಥಗಳನ್ನು ರಚಿಸಿದ್ದಾರೆ. ವಿಜ್ಞಾನ ಪ್ರಪಂಚ, ಬಾಲ ಪ್ರಪಂಚ, ಚಿತ್ರಮಯಿ ದಕ್ಷಿಣ ಕನ್ನಡ, ಯಕ್ಷಗಾನ ಬಯಲಾಟ, ಸಿರಿಗನ್ನಡ ಅರ್ಥಕೋಶ, ಕಿಸಾಗೌತಮಿ, ಹುಚ್ಚುಮನಸ್ಸಿನ ಹತ್ತು ಮುಖಗಳು, ಮೂಕಜ್ಜಿ ಕನಸುಗಳು ಮೊದಲಾದ ಕೃತಿಗಳು ಕನ್ನಡ ಸಾಹಿತ್ಯದ ಪ್ರಪಂಚದಲ್ಲೇ ಮೈಲಿಗಲ್ಲಿನ ಕೃತಿಗಳಾಗಿವೆ.

ತಮ್ಮ ಪ್ರತಿಭೆ ಪ್ರದರ್ಶನ, ಸಾಹಿತ್ಯದ ಕೊಡುಗೆ, ಆದರ್ಶ ವ್ಯಕ್ತಿತ್ವಗಳಿಂದ ಕನ್ನಡದ ಅಪೂರ್ವ ಸಾಹಿತಿಯಾಗಿದ್ದ ಶಿವರಾಮ ಕಾರಂತರು ೯-೧೨-೧೯೯೭ರಲ್ಲಿ ಮಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೭,
ಅಧ್ಯಕ್ಷರು: ಶಿವರಾಮ ಕಾರಂತ
ದಿನಾಂಕ ೧೦, ೧೧, ೧೨ ಜೂನ್ ೧೯೫೫
ಸ್ಥಳ : ಮೈಸೂರು

ಸಾಹಿತಿಗಳ ಸವಿಗನಸು ಕನ್ನಡ ನಾಡು ಒಂದಾಗಬೇಕು

ಕನ್ನಡದೇಶದ ಇತಿಹಾಸ ವಿಸ್ತಾರವಾದ ಜೀವನದಲ್ಲಿ, ಒಂದೇ ನಾಡಿನವರಾಗಿ ಶತಮಾನ, ಶತಮಾನಗಳ ಕಾಲ ಬಾಳಿ ಬದುಕಿದ ಕನ್ನಡ ಜನರು, ಇಂದು ಭಿನ್ನ ಭಿನ್ನ ರಾಜಕೀಯ ಪ್ರಾಂತಗಳಲ್ಲಿ ಉಳಿದುಕೊಂಡು, ತಮ್ಮ ಆರ್ಥಿಕ, ಸಾಂಸ್ಕೃತಿಕ, ಇಲ್ಲವೆ ಸಾಮಾಜಿಕವಾದ ಯಾವ ಆಶೋತ್ತರಗಳನ್ನೂ ಕಾಲಕ್ಕೆ ತಕ್ಕಂತೆ ಬೆಳೆಯಿಸಿಕೊಳ್ಳಲಾರದೆ ನರಳುತ್ತಿರುವ ಈ ಕಾಲದಲ್ಲಿ, ಈ ಕನ್ನಡ ಸಾಹಿತ್ಯಪರಿಷತ್ತಿನಂತಹ ಒಂದು ಸಂಸ್ಥೆ ರಾಜಕೀಯ ಅಡಚಣೆ ಮತ್ತು ಮೇರೆಗಳನ್ನು ಮುರಿದು, ಹರಿದು ಹಂಚಿಹೋದ ಕರ್ಣಾಟಕವನ್ನು ಒಂದುಗೂಡಿಸಿ ನಾಡಿನ ಮಕ್ಕಳ ದನಿಗಳಲ್ಲಿ ಒಂದೇ ಶ್ರುತಿ ಹುಟ್ಟಿ ಬರುವಂತೆ, ಶ್ರಮಿಸುತ್ತಿರುವ ಸಂಸ್ಥೆಯಾಗಿದೆ. ಜೀವನದ ಇತರ ರಂಗಗಳಲ್ಲಿ, ತಾವು ಬೇರೆ ಬೇರೆಯ 'ಗುಂಪು,' 'ಬಣ' ಎಂದು ತಿಳಿದು, ಕಲಹ ಸೆಣಸಾಟಗಳು ನಡೆಯುತ್ತಿದ್ದರೂ, ಈ ಸಾಹಿತ್ಯ ಕ್ಷೇತ್ರದಲ್ಲಿ, ಈ ಸಮ್ಮೇಳನದ ಆಸರೆಯಲ್ಲಿ 'ಕನ್ನಡಿಗರು' ಹಲರಲ್ಲ; ಕನ್ನಡದ ಕುಲ ಒಂದು; ಜನ ಒಂದು; 'ನುಡಿ ಒಂದು,' ಎಂದು ನಮ್ಮ ಸಾಹಿತಿಗಳು ಹಿಂದಿನಿಂದಲೂ ಹೇಳುತ್ತ ಬಂದಿದ್ದಾರೆ. ಯಾರು ಎಷ್ಟೇ ಮೂದಲಿಸಿದರೂ, ರಾಜಕಾರಣಿಗಳು ಎಂತಹ ವಾದ ಮಂಡಿಸಿದರೂ, ನಮ್ಮ ಕನ್ನಡ ಸಾಹಿತಿಗಳು ಮಾತ್ರ 'ಕನ್ನಡ ನಾಡು ಒಂದುಗೂಡಬೇಕು' ಎಂಬ ಹಂಬಲವನ್ನು ಇರಿಸಿಕೊಂಡೇ ಬಂದಿದ್ದಾರೆ. ಅದಕ್ಕಾಗಿ ನಾಡಿನಲ್ಲಿ ತೊಳಲಾಡಿದ್ದಾರೆ. ಅವರು ಎಂದೂ ಆ ಸವಿಗನಸನ್ನು ಬಿಟ್ಟುಕೊಟ್ಟವರಲ್ಲ ; ಕೊಡುವವರೂ ಅಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ದುಡಿಯುವ ಜನಗಳಿಗೆ ರಾಜಕೀಯದ ಜಾಣ್ಮೆ, ಚಾತುರ್ಯ, ತಂತ್ರ ಹೆಚ್ಚಾಗಿ ತಿಳಿಯದು. ಕನ್ನಡದ ವಿವಿಧ ಭಾಗಗಳನ್ನು ಅವರು ಚೆನ್ನಾಗಿ ಬಲ್ಲರು. ಸ್ವಲಾಭ ಸ್ವಕಾರ್ಯ ಸಾಧನೆಗಳ ಆಸೆಯಿಲ್ಲದೆ, ಕನ್ನಡ ಜನಗಳ ಶ್ರೇಯಸ್ಸು, ಎಲ್ಲಿದೆ ಎಂಬುದನ್ನವರು ಊಹಿಸಬಲ್ಲರು. ಅಂತಹವರಲ್ಲಿ ಸದಾಸಂಚಾರಿಯಾದ ನಾನೂ ಒಬ್ಬನೆಂದು ಧೈರ್ಯವಾಗಿ ಹೇಳುತ್ತೇನೆ.

ಸಮ್ಮೇಳನದ ಗುರಿ

ಕಳೆದ ಬಾರಿ ಕುಮಟೆಯಲ್ಲಿ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ಕೇಂದ್ರ ಸರಕಾರದ ಉಪಮಂತ್ರಿ ಮಾನ್ಯ ದ.ಪ. ಕರಮರ್‌ಕರ್ ಅವರು ಆಶಾವಾದಿಗಳಾಗಿ, 'ಮುಂದಿನ ಸಾಹಿತ್ಯ ಸಮ್ಮೇಳನವು ಸ್ವತಂತ್ರ ಕರ್ನಾಟಕದ ರಾಜಧಾನಿಯಲ್ಲಾಗಲಿ'-ಎಂದು ಹರಿಸಿದ್ದರು. ಆ ಕನಸು ಇಷ್ಟರಲ್ಲೇ ಕೈಗೂಡದಿದ್ದರೂ ಕೈಗೂಡುವುದೆಂಬ ಪೂರ್ವಸೂಚನೆಯಾಗಿಯೇ ಈ ಸಮ್ಮೇಳನವು ಏಕೀಕೃತ ಕರ್ನಾಟಕದ ರಾಜಧಾನಿ ಯಂತಿರುವ ಮೈಸೂರಿನಲ್ಲಿ ನಡೆಯುತ್ತಿದೆ. ಕನ್ನಡಿಗರ ಈ ಸಹಜವಾದ ಆಕಾಂಕ್ಷೆಗೆ ಯಾರಿಂದಲೂ ವಿಘ್ನ ಬರಲಾರದು. ಬರಬಹುದಾದ ವಿಘ್ನಗಳನ್ನು ತೊಡೆದುಕೊಳ್ಳುವ ಶಕ್ತಿ ಕನ್ನಡ ಜನಕ್ಕೆ ಬರಲಿ-ಎಂದು ಹೇಳಿ ಮುಂದುವರಿಯುತ್ತೇನೆ.

ಪರಿಷತ್ತಿನ ಭಾಷಾ ಹೊಣೆ

ಇನ್ನು ಕನ್ನಡ ಭಾಷೆಯ ಮೂಲಕ ನಾವು ಜನಕ್ಕೆ ಸಲ್ಲಿಸಬಹುದಾದ- ಇತರ ಸೇವೆಗಳನ್ನು ಕುರಿತು ನಾಲ್ಕು ಮಾತು ಹೇಳುತ್ತೇನೆ. ಅದಕ್ಕಿಂತ ಮುಂಚಿತವಾಗಿ ನಮ್ಮ ಕನ್ನಡ ಜನಗಳನ್ನು, ನಾವು ಗುರುತಿಸಬೇಕಾಗಿದೆ. ಅವರ ಆಡುಭಾಷೆ ಒಂದೊಂದು ಒಂದು ತೆರನಾಗಿದೆ. ಪ್ರಪಂಚದ ಎಲ್ಲ ದೊಡ್ಡ ಭಾಷೆಗಳ ಗತಿಯೂ ಹೀಗೇನೆ. ಆದರೆ, ನಾವು ಬರೆಯುವುದು ಜನಕ್ಕೆ ತಿಳಿಯಬೇಕಾದಲ್ಲಿ-ನಾವು ಭಾಷೆಯ ಏಕರೂಪತೆಗೆ ಗಮನ ಕೊಡಬೇಕಾಗುತ್ತದೆ. ಇಂದು ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ-ಎಂದು ಹೇಳುವ ಸಂಪ್ರದಾಯ ನಮ್ಮ ಬರವಣಿಗೆಯಿಂದಾಗಿ ಬಂದುಬಿಟ್ಟಿದೆ. ನಮ್ಮದು ಅಷ್ಟೊಂದು ದೊಡ್ಡ ದೇಶವಲ್ಲ ; ಆದರೂ ಒಂದು ಕಡೆಯ ಜನ, ಇನ್ನೊಂದು ಕಡೆಯವರು ಬರೆದ ಪುಸ್ತಕಗಳನ್ನು, ಪತ್ರಿಕೆಗಳನ್ನು ಓದಿ ತಿಳಿಯುವುದಕ್ಕೆ ಕಷ್ಟವಾಗಿ ಬಂದಲ್ಲಿ, ಆಗ ಬರಹಗಾರರಾದ ನಾವೇ ನಮ್ಮ ಮಾತಿನ ವಿಸ್ತಾರಕ್ಕೆ,

ಆಡಚಣೆ ತಂದುಕೊಳ್ಳುತ್ತೇವೆ. ಅಲ್ಲಲ್ಲಿನ ಸ್ಥಳಿಕ ಗ್ರಾಮ್ಯಪದಗಳನ್ನು ಹಟದಿಂದ, ಪುಸ್ತಕಗಳಲ್ಲಿ ತುಂಬಿಸುವ ಪ್ರಯತ್ನದಿಂದ, ಯಾವ ದೇವರಿಗೆ ಪ್ರೀತಿಯೋ ನಾನು ಕಾಣೆ. ಬ್ರಿಟಿಷರಿಂದ ಬಂದ ಪ್ರಾಂತದ ಅಡ್ಡಗೋಡೆಗಳನ್ನು ಮುರಿಯಬೇಕೆನ್ನುತ್ತಿರುವ ನಾವು, ಇನ್ನೊಂದು ದಾರಿಯಿಂದ ಅದನ್ನು ಏರಿಸುತ್ತ ಹೋದರೆ ಹೇಗೆ? ಯಾವೊಂದು ವಿಷಯದಲ್ಲೂ ನಮ್ಮಲ್ಲಿ-ಗ್ರಂಥ, ಪುಸ್ತಕ, ಲೇಖನ, ಪತ್ರಿಕೆಗಳ ಬಾಹುಳ್ಯವಿಲ್ಲ. ಇರುವುದನ್ನು ಎಲ್ಲ ಭಾಗದ ಕನ್ನಡಿಗರಿಗೂ ಅರ್ಥವಾಗುವ ರೀತಿಯಲ್ಲಿ ಸಾಮಾನ್ಯವಾದ ಒಂದು ಭಾಷೆಯ ರೂಪ ಬೆಳೆಯುವಂತೆ ನಾವು ಮಾಡಬೇಡವೆ? ಪರಿಷತ್ತಿನಂತಹ ಒಂದು-ಸಂಸ್ಥೆ- ಇಂಥ ವಿಷಯದಲ್ಲಿ ಹೊಣೆಯನ್ನು ಹೊತ್ತು ಮುಂದೆ ಬರಬೇಕಾಗಿದೆ.

ನಿಘಂಟು ನಿರ್ಮಾಣದಲ್ಲಿ ಪರಿಷತ್ತಿಗೆ ಸಲಹೆ

ವಿಶ್ವಕೋಶದ ಮಾತಿನಿಂದ, ಕನ್ನಡ ನಿಘಂಟಿನ ವಿಷಯಕ್ಕೆ ಬರುತ್ತೇನೆ. ನಾನು, ನನ್ನ ಕೆಲವು ಮಿತ್ರರ ಸಹಾಯದಿಂದ, ವಿದ್ಯಾರ್ಥಿಗಳಿಗಾಗಿ ಸಾಮಾನ್ಯವಾದೊಂದು ಶಬ್ದಕೋಶ ನಿರ್ಮಾಣ ಮಾಡಿದವನು. ಅದನ್ನು ಮಾಡುಮಾಡುತ್ತ ಕನ್ನಡ ಕಲಿಯತೊಡಗಿದವನು. ಹಾಗೆ ಕಲಿಯುವಾಗ- ತಿಳಿದುಕೊಂಡ ಕೆಲವು ಸಂಗತಿಗಳನ್ನು ನಿಮ್ಮ ಮುಂದಿರುಸುತ್ತೇನೆ. ಈ ಕಾರ್ಯದಲ್ಲಿ ನಿರತವಾದ ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿಗೆ, ಅದು ಕೆಲವು ಸಲಹೆಗಳನ್ನು ಕೊಡಬಹುದು.

ನಿಘಂಟಿನಲ್ಲಿ, ಶಬ್ದಗಳನ್ನು ಬರೆದು, ಅವುಗಳ ಮುಂದೆ ಸಮಾನ ಪದಗಳನ್ನು ನಾವು ಬರೆಯುತ್ತೇವಷ್ಟೆ. 'ಗಡಿಗೆ' ಎಂದು ಬರೆದರೆ ಅದರ ಮುಂದೆ ಸಮಾನ ಪದಗಳು 'ಮಡಕೆ', 'ಕುಡಿಕೆ' ಎಂದು ಬರೆಯಬಹುದು. ಈ ಅರ್ಥಗಳು ಎಂಥ ಶುಂಠನಿಗೂ ತಿಳಿಯುತ್ತದೆ- ಎಂದು ನಮ್ಮ ದೃಢವಾದ ನಂಬಿಕೆ. 'ಮಡಕೆ' ಎಂದರೆ ಮಣ್ಣಿನ ಪಾತ್ರೆಯೆಂದು ತಿಳಿಯಬೇಡವೆ ಜನ? ನಾವು ಹಾವೇರಿಗೋ, ಲಕ್ಷ್ಮೇಶ್ವರಕ್ಕೋ ಹೋಗಿ, ಅಲ್ಲಿನ ಜನಗಳನ್ನು 'ಮಡಕೆ' ಏನೆಂದು ಕೇಳಿದರೆ ಅವರಿಗೆ, ಅದು ಅಲಸಂಡೆಯ ಜಾತಿಯ ಒಂದು ಕಾಳು ಎಂದು ಬೋಧೆಯಾಗುತ್ತದೆ. ನಿತ್ಯೋಪಯೋಗಿಯಾದ ಅನೇಕ ವಸ್ತುಗಳಿಗೆ, ಕನ್ನಡದ ಬೇರೆ ಬೇರೆ ಮೂಲೆಗಳಲ್ಲಿ ಬೇರೆ ಬೇರೆ ಅರ್ಥಗಳಿವೆ. ನಾವು ಕೊಡುವ ಸಮಾನ ಪದಗಳಿಗೆ, ನಮಗೇ ಬೆರಗು ಹುಟ್ಟಿಸಬಹುದಾದಷ್ಟು ವಿಚಿತ್ರ ಅರ್ಥ ಬರಬಹುದು, ಎಂಬುದನ್ನು ನಾವು ಇಳಿದಿರಬೇಕು. ಗಿಡ, ಮರ, ಪಶು, ಪ್ರಾಣಿ, ವಸ್ತು, ಒಡವೆ, ರೀತಿ ನೀತಿ-ಎಲ್ಲವನ್ನೂ ಹೇಳುವ ಪದಗಳಿಗೆ ಕನ್ನಡನಾಡಿನ ಒಂದೊಂದು ಮೂಲೆಯಲ್ಲಿ ಒಂದೊಂದು ಅರ್ಥ ಬರುವುದು ಸಾಧ್ಯ. ಬೆಂಗಳೂರು, ಮೈಸೂರುಗಳ ಒಂದು ಮೂಲೆಯಲ್ಲಿ ಕುಳಿತು, ಈ ಕೆಲಸ ಮಾಡುತ್ತ ಕುಳಿತರೆ ಆಯಿತು, ಅದನ್ನು ಜನ ಅರ್ಥಮಾಡಿಕೊಳ್ಳಲೇ ಬೇಕು- ಎಂದು ತಿಳಿಯುವಂತಿಲ್ಲ. ಇಲ್ಲವೆ 'ನಾವು ಮೊದಲು ಈ ಕೆಲಸ ಮಾಡುತ್ತೇವೆ; ಅಮೇಲೆ ಬೇಕಾದರೆ ಮೈಸೂರೇತರ ಜನಗಳ ಅಭಿಪ್ರಾಯ ಕೇಳುತ್ತೇವೆ' ಎಂದು ಯಾರಾದರೂ ನನಗೆ ಸಮಾಧಾನ ಹೇಳಿದರೆ, 'ತಮ್ಮ ಈ ಹಾದಿ ತಪ್ಪು' ಎಂದು ನಿರ್ಭೀತಿಯಿಂದ ಹೇಳಬೇಕಾಗುತ್ತದೆ.

ಪರಿಷತ್ತಿನ ನಿಘಂಟಿನ ಸ್ವರೂಪ

ಇನ್ನು ಒಂದು ಮಾತು. ನಾವು ಮಾಡುತ್ತಿರುವುದು ಕನ್ನಡ-ಕನ್ನಡ-ನಿಘಂಟನ್ನು, ಇದಕ್ಕೆ ಆಧಾರ, ಶಬ್ದಗಳ ಆಯ್ಕೆಗೆ ಆಧಾರ, ಹಳಗನ್ನಡ, ಹೊಸಗನ್ನಡ ಗ್ರಂಥಗಳು, ಇಷ್ಟೇ ನಮ್ಮ ಶಬ್ದಕೋಶದ ಮಿತಿಯಾದರೆ, ಅದು ತುಂಬ ಖೇದದ ಸಂಗತಿಯೇ ಸರಿ. ಕನ್ನಡ ಬದುಕಿರುವುದು ಗ್ರಂಥಗಳಲ್ಲಿ ಮಾತ್ರವಲ್ಲ, ಕವಿಗಳಲ್ಲಿ, ಕಾವ್ಯಗಳಲ್ಲಿ ಮಾತ್ರವಲ್ಲ. ಅದು ಸಮುದಾಯದ ಭಾಷೆ. ಅಲ್ಲಿ ಅದು ನಿತ್ಯ ನಿತ್ಯ ಬದುಕಿದೆ. ನಾನು ಮಾಡಬೇಕಾದುದು ಮಾತೃಭಾಷೆಯ ನಿಘಂಟನ್ನಲ್ಲ, ಜೀವಂತ ಭಾಷೆಯ ನಿಘಂಟನ್ನು, ಜೀವಂತ ಭಾಷೆಯು ಜನಜೀವನದಲ್ಲಿ ಬದಲಾಗುತ್ತಲೇ ಇರುತ್ತದೆ. ಗ್ರಂಥಗಳಿರುವ ಹತ್ತು ಪಾಲು ಹೆಚ್ಚಿನ ಮನ್ನಣೆ, ಜನಜೀವನ ಕನ್ನಡಕ್ಕೆ ಸಲ್ಲಬೇಕು. 'ಆಕ್ಸ್‌ಫರ್ಡ್ ಡಿಕ್ಷನರಿ' ಮೊದಲಾದ ಮಾದರಿಯ ನಿಘಂಟುಗಳನ್ನು ಸಂಪಾದಿಸಿದ ಮಹಾನುಭಾವರು, ಶಬ್ದಸಂಗ್ರಹಕ್ಕೂ, ನುಡಿಕಟ್ಟುಗಳ ಸಂಗ್ರಹಕ್ಕೂ, ಅರ್ಥ ಅರ್ಥಛಾಯೆಗಳ ಸಂಗ್ರಹಕ್ಕೂ-ಇಂಗ್ಲಿಷ್ ಮಾತೃಭಾಷೆಯಾಗಿರುವ ಜನಗಳ ಎಡೆಯಲ್ಲಿ ಹೋಗಿ ದುಡಿದರು. ಇಂಗ್ಲೆಂಡ್, ಕೆನಡಾ, ಯುನೈಟೆಡ್ ಸ್ಟೇಟ್ಸುಗಳ ವಿವಿಧ ಭಾಗಗಳಲ್ಲಿ ಸಂಚರಿಸಿ, ಕಾಗದ ಪೆನ್ಸಿಲ್ ಹಿಡಿದುಕೊಂಡು, ಕಿವಿಗೆ ಬಿದ್ದದ್ದನ್ನೆಲ್ಲಾ ಬರೆದುಕೊಂಡರು. 'ಕಿಂಗ್ಸ್ ಇಂಗ್ಲಿಷ್' ಯಾಕೀ ಜನಗಳ ಕೈಯಲ್ಲಿ ಹೇಗೆ ಸಂಕಟಕ್ಕೊಳಗಾಯಿತೆಂದೂ ಕಂಡುಕೊಂಡರು. ಅದರ ಮೇಲೆ ಅಪಾದನೆ ಹೊರಿಸದೆ, ಅವರ ಬಳಕೆಯ ಅರ್ಥಗಳನ್ನು ಒಪ್ಪಿಕೊಂಡು, ತಮ್ಮ ಶಬ್ದಕೋಶದಲ್ಲಿ ಅವುಗಳನ್ನೆಲ್ಲ ಸೇರಿಸಿದರು. ನಾವು ಈ ವಿಚಾರದಲ್ಲಿ ಕುರುಡರಾಗಬಾರದು. ನಾಲ್ಕೆಂಟು ಮಂದಿ ಪಂಡಿತರು ವಾರಕ್ಕೊಮ್ಮೆಯೋ ದಿನಕ್ಕೊಮ್ಮೆಯೋ ಗ್ರಂಥಗಳಿಂದಾಯ್ದ ಶಬ್ದಗಳನ್ನು ನಮ್ಮ ಮುಂದಿರಿಸಿಕೊಂಡು 'ಇದು ಸಾಧು, ಇದು ಅಸಾಧು' ಎಂದು ತೀರ್ಮಾನಿಸುತ್ತಾ ಕುಳಿತರೆ, ಈ ಕೋಶ ನಮ್ಮ ಕೋಶವಾಗುತ್ತದೆಯೇ ಹೊರತು, ಕನ್ನಡದ ಕೋಶವಾಗಲಾರದು. ನಾವು ಗ್ರಾಮ್ಯ ರೂಪಗಳನ್ನು

ಬಿಡಬಹುದೇ ಹೊರತು, ಜನಜೀವನದಲ್ಲಿ ಪ್ರಚಾರದಲ್ಲಿರುವ ಅರ್ಥ, ಪ್ರಯೋಗ, ಛಾಯೆ- ಇವುಗಳನ್ನೆಂದೂ ಮರೆಯಕೂಡದು. ನಿಜಕ್ಕೂ ಇಂಥ ವಿಸ್ತಾರವಾದ ಕೆಲಸವನ್ನು ನಾವು ಮಾಡಿದ್ದಾದರೆ, ಹಳಗನ್ನಡ ಭಾಷೆಯು ಹೊಸಗನ್ನಡಕ್ಕಿಂತ ಗಾವುದ, ಗಾವುದ ದೂರ ನಿಂತಿರಲಾರದೆಂದು ನನಗನ್ನಿಸುತ್ತದೆ.


ಜನಭಾಷಾ ನಿಘಂಟು ನಿರ್ಮಾಣವಾಗಲಿ

ಸಾಹಿತಿಗಳಾದ ನಾವೇ ಇಂದು ಕೃತಕ ಪುಸ್ತಕ ಭಾಷೆಯೊಂದನ್ನು ಕಲ್ಪಿಸುತಿದ್ದೇವೆ. ಜೀವಂತ ಭಾಷೆಯಲ್ಲಿ ಪ್ರಚಾರದಲ್ಲಿರುವ ಶಬ್ದಸಂಪತ್ತು, ಅರ್ಥಸಂಪತ್ತುಗಳನ್ನು ಮರೆಯುತ್ತಲಿದ್ದೇವೆ. ಇದು ಕನ್ನಡಕ್ಕೆ ಮಾಡುವ ಅಪಚಾರ ಹೊರತು ಉಪಚಾರವಲ್ಲ. ನಮ್ಮ ಜನಜೀವನದಲ್ಲಿನ ನೂರಾರು ವೃತ್ತಿ, ವಿಚಾರ ಸರಣಿ, ನಂಬಿಕೆಗಳಿಂದ ಹುಟ್ಟಿ ಪ್ರಚಾರದಲ್ಲಿರುವ ಶಬ್ದಸಂಪತ್ತನ್ನು ಭಾಷಾಸೌಂದರ್ಯವನ್ನು ಕಾಯ್ದುಕೊಳ್ಳುವ ಹೊಣೆ ನಮ್ಮದು. ಅದಕ್ಕೆ ನಿಘಂಟಿನಲ್ಲಿ ಸ್ಥಾನ ಕಲ್ಪಿಸುವ ಹೊಣೆಯೂ ನಮ್ಮದು. ನಾವು ಹಳ್ಳಿ ಹಳ್ಳಿಗಳಲ್ಲಿ ಸಂಶೋಧಕರನ್ನು ಬಿಟ್ಟು, ಜನರು ಬಳಸುವ ನಿತ್ಯೋಪಯೋಗಿ ಶಬ್ದಗಳನ್ನೂ, ಹೆಸರುಗಳನ್ನೂ, ಪ್ರಯೋಗಗಳನ್ನೂ ಸಂಗ್ರಹಿಸುವಲ್ಲಿ-ನಮ್ಮ ಶಬ್ದಸಂಗ್ರಹ ಇಮ್ಮಡಿಸೀತು ; ಮುಮ್ಮಡಿಸೀತು. ಅದರಿಂದ ಅನೇಕ ಹೊಸ ಶಬ್ದಗಳ ನಿರ್ಮಾಣ ಅನಾವಶ್ಯಕವಾದೀತು. ಹಾಗೆ ಮಾಡದೆ ಹೋದರೆ ಜನಗಳ ಭಾಷಾ ಪ್ರವಾಹವು ತನ್ನ ದಾರಿಯನ್ನು ಹಿಡಿದು ತಾನಾಗಿ ಮುಂದುವರಿಯುತ್ತದೆ. ಅದನ್ನಾರೂ ತಡೆಯಲಾರರು. ಹಾಗೆ ಮಾಡುತ್ತ ಅದು- ಕನ್ನಡವನ್ನು ಮುಖ್ಯ ವಿಷಯವನ್ನಾಗಿ ಕಲಿಯುವವರ ಸಂಖ್ಯೆ ಕಡಿಮೆಯಾಗಿದೆ. ನಮ್ಮ ಘನಪುಸ್ತಕ ಪಂಡಿತರನ್ನು ದಂಡೆಯಲ್ಲಿಟ್ಟು ಹರಿಯುತ್ತದೆ. ಮುಳುಗಿತು ಕನ್ನಡ ಎಂಬ ಅವರ ಕೂಗು ಅರಣ್ಯರೋದನ ಆಗುತ್ತದೆ.

❖❖

೩೮ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಆದ್ಯ ರಂಗಾಚಾರ್ಯ



ಶ್ರೀರಂಗರೆಂದೇ ಖ್ಯಾತರಾಗಿರುವ ಆದ್ಯರಂಗಾಚಾರ್ಯರು ವಾಸುದೇವಾಚಾರ್ಯ ಜಾಗೀರದಾರ್ ಮತ್ತು ರಮಾಬಾಯಿ ಅವರ ಪುತ್ರರಾಗಿ ೨೬-೯-೧೯೦೪ರಲ್ಲಿ ವಿಜಾಪುರದ ಇಂಡಿ ತಾಲ್ಲೂಕಿನ ಅಗರ ಖೇಡದಲ್ಲಿ ಜನಿಸಿದರು. ವಿಜಾಪುರದಲ್ಲಿ ಶಾಲಾ ಶಿಕ್ಷಣ ಪೂರೈಸಿ, ೧೯೨೧ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿಗೆ ಸೇರಿ ೧೯೨೫ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೨೫ರಲ್ಲಿ ಇಂಗ್ಲೆಂಡಿಗೆ ತೆರಳಿದ ಶ್ರೀರಂಗರು ಲಂಡನ್ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದಲ್ಲಿ ಎಂ. ಎ. ಪದವಿ ಪಡೆದು ೧೯೨೮ರಲ್ಲಿ ಭಾರತಕ್ಕೆ ಮರಳಿದರು.

ಕೆಲವು ಕಾಲ ಹಾಫ್‌ಕಿನ್ ಸಂಸ್ಥೆಯಲ್ಲಿ ನೌಕರಿಯಲ್ಲಿದ್ದು ೧೯೩೦ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ೧೮ ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ಅನಂತರ ಆ ಕೆಲಸಕ್ಕೆ ರಾಜೀನಾಮೆಯಿತ್ತು, ಭಾರತ ವಾರ್ತಾಶಾಖೆಯಲ್ಲಿ ನಾಟಕ ವಿಭಾಗದ ನಿರ್ದೇಶಕರಾಗಿ ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿದರು.

ಶ್ರೀರಂಗರು ವಿಶೇಷವಾಗಿ ರಂಗಭೂಮಿಗೆ ತಮ್ಮ ಹೊಸ ಪ್ರಯೋಗಗಳಿಂದ ಕೊಡುಗೆಗಳನ್ನು ನೀಡಿದರು. ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಶ್ರೀರಂಗರು ಪರಿಷತ್ತಿಗೆ ಉತ್ತರ ಕರ್ನಾಟಕ ಪ್ರಾಂತ ಸಮಿತಿಯ ಅಧ್ಯಕ್ಷರಾಗಿದ್ದರು. ೧೦೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ ಶ್ರೀರಂಗರು ಮೂರು ವರ್ಷಗಳ ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದರು. 'ಜಯಂತಿ', 'ಪ್ರೇಮ' ಪತ್ರಿಕೆಗಳಿಗಾಗಿ ಶ್ರಮಿಸಿದರು.

ಇವರು ಕನ್ನಡ ನಾಟ್ಯ ವಿಲಾಸಿ ಸಂಸ್ಥೆಯನ್ನು ೧೯೩೩ರಲ್ಲಿ ಆರಂಭಿಸಿದರು. ಇವರಿಗೆ ೧೯೬೮ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಫೆಲೋಷಿಪ್ ಗೌರವ ದೊರಕಿತು, ೧೯೭೨ರಲ್ಲಿ ಭಾರತ ಸರ್ಕಾರದವರು ಪದ್ಮಭೂಷಣ ಪ್ರಶಸ್ತಿ ದಯಪಾಲಿಸಿದರು. ಇವರ ಕಾಳಿದಾಸ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಯಿತು.

ರಾಯಚೂರಿನಲ್ಲಿ ನಡೆದ ೧೯೫೪ರ ೩೮ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನಾಟಕರಂಗದಲ್ಲಿ ಕೇವಲ ಕೃತಿರಚನೆಗಳಿಂದಷ್ಟೇ ಅಲ್ಲದೆ ರಂಗ ಪ್ರಯೋಗಗಳಲ್ಲಿ ನೂತನತೆ ತಂದವರು ಶ್ರೀರಂಗರು. ಅವರು ಶೋಕಚಕ್ರ, ಹರಿಜನ್ವಾರ, ಕೇಳು ಜನಮೇಜಯ, ರಂಗಭಾರತ, ಕತ್ತಲು-ಬೆಳಕು, ಉದರ ವೈರಾಗ್ಯ ಮೊದಲಾದ ಪ್ರಸಿದ್ಧ ನಾಟಕಗಳನ್ನು ರಚಿಸಿದ್ದಾರೆ. ವಿಶ್ವಾಮಿತ್ರ, ಪುರುಷಾರ್ಥ ಮೊದಲಾದ ಕಾದಂಬರಿಗಳನ್ನೂ ಶಾರದೆಯ ಸಂಸಾರ (ಭಾಷಾಶಾಸ್ತ್ರ), ಗೀತಾ ಗಾಂಭೀರ್ಯ, ನಗೆ, ಸಾಹಿತಿಯ ಆತ್ಮಜಿಜ್ಞಾಸೆ, ಕೆಮಾಲ್ ಪಾಷಾ, ಕಿಟ್ಟಣ್ಣನ ಕ್ಲಬ್ಬು, ಭಗವಾನ್ ಬುದ್ಧ (ಅನುವಾದ), ನಮ್ಮ ನೆಚ್ಚಿನ ನೆಹರೂ ಮೊದಲಾದ ಆತ್ಮಕಥೆ, ಜೀವನ ಚರಿತ್ರೆ, ವಿಡಂಬನೆ ಕಥಾಸಂಕಲನ, ಭಾಷಾಶಾಸ್ತ್ರ ಗೀತೆ, ರಂಗ ಮೀಮಾಂಸೆಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದರು. ಆದರೆ ಅವರು ನಾಟಕಕಾರರೆಂದೇ ಹೆಸರಾಗಿದ್ದಾರೆ. ಕನ್ನಡಕ್ಕೆ ಬಹುಮುಖ ಕೊಡುಗೆಗಳನ್ನಿತ್ತ ಶ್ರೀರಂಗರು ೧೭-೧೦-೧೯೮೪ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೮,
ಅಧ್ಯಕ್ಷರು: ಆದ್ಯ ರಂಗಾಚಾರ್ಯ
ದಿನಾಂಕ ೨೫, ೨೬, ೨೭ ಡಿಸೆಂಬರ್ ೧೯೫೫
ಸ್ಥಳ : ರಾಯಚೂರು

ಹಿಂದೀ ಭಾಷೆಯನ್ನಾಡುವವರ ಸಂಖ್ಯೆ ತೀರ ದೊಡ್ಡದಿದ್ದರೆ ಮಲಯಾಳಿಗರ ಸಂಖ್ಯೆ ಕಡಿಮೆ ಇದೆ. ಹಿಂದೀ ಸಾಹಿತ್ಯಕ್ಕೆ-ಜೊತೆಗೆ ಆಡಳಿತದ ಭಾಷೆ ಎನಿಸುವುದರಿಂದೆ-ಇನ್ನಿಷ್ಟು ಹೆಚ್ಚು ಓದುಗರು ದೊರೆತರೆ-ಮೈಸೂರು ಧಾರವಾಡ ಎಂಬ ವಾದದಲ್ಲಿ ಕನ್ನಡ ಸಾಹಿತ್ಯಕ್ಕೆ ಇನ್ನಿಷ್ಟು ಕಡಿಮೆ ಓದುಗರು ದೊರೆಯಬಹುದು. ಓದುಗರು ಕಡಿಮೆಯಾದ ಮಟ್ಟಿಗೆ ಉತ್ತಮ ಸಾಹಿತ್ಯ ನಿರ್ಮಾಣಕ್ಕೆ ಉತ್ತೇಜನವೂ ಕಡಿಮೆಯಾಗಬಹುದು. ಈ ಪರಿಸ್ಥಿತಿಯನ್ನು ಯೋಚಿಸುವುದು ಯೋಗ್ಯ ಸಾಹಿತ್ಯವನ್ನು ನಿರ್ಮಿಸಬಲ್ಲ ಸಾಹಿತಿಗಳ ಕೈಯಲ್ಲಿದೆಯಲ್ಲದೆ ಕಾಯಿದೆಗಳನ್ನು ಗೊತ್ತುಮಾಡುವ ಸರಕಾರಗಳ ಕೆಲಸವಿದಲ್ಲ. ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಈ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಹೆಚ್ಚು ಸಹಾಯಕವಾಗಬಲ್ಲವು. ಮೊದಲನೆಯದಾಗಿ, ಆಯಾ ಭಾಷೆಯ ಕೇಂದ್ರ ಸಾಹಿತ್ಯ ಸಂಸ್ಥೆಗಳು ಪ್ರತಿವರ್ಷ ದೇಶದ ಬೇರೆ ಬೇರೆ ಸಾಹಿತ್ಯಗಳಿಂದ ಒಂದೊಂದು ಉತ್ತಮ ಕೃತಿಯನ್ನು ತಮ್ಮ ಭಾಷೆಗೆ, ತಮ್ಮ ಕೆಲವು ಉತ್ತಮ ಕೃತಿಗಳನ್ನು ಬೇರೆ ಬೇರೆ ಭಾಷೆಗಳಿಗೆ ಪರಿವರ್ತಿಸುವಂತಹ ತಜ್ಞರ ಸಮಿತಿಗಳನ್ನು ಏರ್ಪಡಿಸಬೇಕು. ಪ್ರತಿವರ್ಷವೂ ಕೇಂದ್ರ ಮತ್ತು ಸಂಬಂಧಿಸಿದ ರಾಜ್ಯ ಸರಕಾರಗಳು ಮೇಲಿನ ಕೃತಿಗೆ ಕೊಡುವಂತೆ ಉತ್ತಮ ಬಾಷಾಂತರಿತ ಕೃತಿಗಳಿಗೂ ಪಾರಿತೋಷಕಗಳನ್ನು ಕೊಡಬೇಕು. ಹೀಗಾದಲ್ಲಿ ಪ್ರತಿಯೊಂದು ಸಾಹಿತ್ಯವೂ ಪರಸ್ಪರ ಪೋಷಕತೆಯಿಂದ ಬಲಗೊಳ್ಳುವದಲ್ಲದೆ ಪೇಶದ ಯಾವುದೇ ಭಾಷೆಯ ಉತ್ತಮ ಸಾಹಿತಿಯ ಪರಿಚಯವು ಇಡಿಯ ದೇಶಕ್ಕಾಗುವುದು.

ಹೊರನಾಡ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಿ

ಇದೇ ಸಂದರ್ಭದಲ್ಲಿ ಒಂದು ವಿಷಯದ ಕಡೆ ತಮ್ಮ ಲಕ್ಷ್ಯವನ್ನು ಸೆಳೆಯಬಯಸುತ್ತೇನೆ. ಕಳೆದ ಎರಡು ವರ್ಷಗಳ ಸ್ವಂತ ಅನುಭವಕ್ಕಾಗಿಯೂ - ಇದನ್ನು ತುಸು ಹಟದಿಂದ ಹೇಳಬಯಸುತ್ತೇನೆ. ದೇಶದ ಮಿಕ್ಕ ಸಾಹಿತ್ಯಗಳೊಡನೆ ಸಂಪರ್ಕ ಬೆಳೆಯಬೇಕೆಂದು ಹೇಳಿದೆನಲ್ಲವೆ ? ಈಗಾಗಲೆ ಈ ಕೆಲಸ ನಡೆದಿದೆ. ಕಳೆದ ಹತ್ತು-ಹನ್ನೆರಡು ವರ್ಷಗಳಿಂದ ಹೊರನಾಡ ಕನ್ನಡಿಗರ ಸಂಸ್ಥೆ ಎಂಬ ಹೆಸರಿನಿಂದ ನಮ್ಮ ಕನ್ನಡ ಗೆಳೆಯರು ದೇಶದ ಅನೇಕ ಕಡೆಗಳಲ್ಲಿ ಕರ್ನಾಟಕ ಸಂಘಗಳನ್ನು ರಚಿಸಿಕೊಂಡು, ವರ್ಷಕ್ಕೊಮ್ಮೆ ಸಮ್ಮೇಳನವನ್ನು ನಡೆಯಿಸಿದ್ದಾರೆ. ಆದರೂ ಅವರ ಕನ್ನಡನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗಳ ಪರಿಚಯ ಕಾರ್ಯಕ್ಕೆ ಸಾಕಷ್ಟು ಬಲ ಬಂದಿಲ್ಲ, ನಮ್ಮೆಲ್ಲರ ಪ್ರೋತ್ಸಾಹ-ಆಶ್ರಯಗಳಿಲ್ಲದೆ ಅದು ಬರುವಂತಿಲ್ಲ. ಹೊರನಾಡ ಕನ್ನಡಿಗರ ಚಟುವಟಿಕೆಗಳ ಬಗ್ಗೆಯ ಪರಿಣಾಮಗಳನ್ನು ನೋಡಿದರೆ ಈ ಪ್ರೋತ್ಸಾಹ-ಆಶ್ರಯಗಳು ಅಗತ್ಯ, ಅರ್ಹ ಎಂದು ಖಂಡಿತವಾಗಿ ಕಂಡುಬರುವುದು. ಕನಿಷ್ಠ ಪಕ್ಷಕ್ಕೆ ನಾವು-**ಪರಿಷತ್ತಿನ ವತಿಯಿಂದ** ಕೆಲವು ವಿದ್ವಾಂಸ ಉಪನ್ಯಾಸಕರನ್ನು, ಆಗಾಗ ನಾಟಕ-ನೃತ್ಯ ಕಲೆಗಾರರನ್ನು ಮತ್ತು ಕರ್ನಾಟಕದ ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅಂಕಿ-ಸಂಖ್ಯೆ-ನಕ್ಷೆ-ಸಮಾಚಾರಗಳನ್ನು ಒದಗಿಸುತ್ತ ಹೋದರೂ ಹೊರನಾಡ ಕನ್ನಡ ಕಾರ್ಯಕರ್ತರಿಗೆ ಹೆಚ್ಚಿನ ಉತ್ಸಾಹ ಬರುವುದು. ಅದರಂತೆ ಅಲ್ಲಲ್ಲಿಯ ಬೇರೆ ದೇಶೀಯ ಸಾಹಿತ್ಯಗಳ ಪರಿಚಯವನ್ನು ಮಾಡಿಕೊಡಲು ಹೊರನಾಡ ಸಂಘಗಳು ಸಹಾಯಕವು.

ಸಮ್ಮೇಳನಾಧ್ಯಕ್ಷರ ಭಾಷಣ ಹೇಗಿರಬೇಕು

ರಸಿಕ ಮಹಾನುಭಾವರೆ, ಇಂತಹ ಭಾಷಣದಲ್ಲಿ ಸಾಮಾನ್ಯವಾಗಿ ಅಪೇಕ್ಷಿಸಲಾದ ಕೆಲವು ಸಂದರ್ಭಗಳು ಇಲ್ಲ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಕನ್ನಡ ಸಾಹಿತ್ಯದ ಬೆಳವಣಿಗೆಯ ಹಿನ್ನೆಲೆಯಲ್ಲಿ, ಪ್ರಕಟವಾಗುತ್ತಿರುವ ಸಾಹಿತ್ಯ ಕೃತಿಗಳ ಸಮಾಲೋಚನೆ, ಅವುಗಳನ್ನು ಬರೆದವರ ಹೆಸರುಗಳ ಪಟ್ಟಿ, ಔಪಚಾರಿಕವಾದ ವಿಮರ್ಶಾತ್ಮಕ ಮಾತುಗಳು-ಇದೆಲ್ಲ ಇಲ್ಲಿ ಇರಬೇಕೆಂದು ತಾವು ಬಯಸುವುದು. ಸಂಪ್ರದಾಯದ ದೃಷ್ಟಿಯಿಂದ ಸಹಜ. ಆದರೆ ನನ್ನ ಅಭಿಪ್ರಾಯ ಬೇರೆಯಾಗಿದೆ. ಸಮ್ಮೇಳನದ ಅಧ್ಯಕ್ಷನಾಗುವವನು ಆಯಾ ವರ್ಷಾವಧಿಯ ಪ್ರತಿಯೊಂದು ಪ್ರಕಟನೆಯನ್ನು ಅರಿತಿಕೊಂಡು ಅಭ್ಯಾಸಿಸಿಕೊಂಡು ಸಜ್ಜಾಗಿರಬೇಕೆಂದು ಬಯಸುವುದು ಒಂದು ವ್ಯಕ್ತಿಗೆ ಅನ್ಯಾಯ, ಒಂದು ಮಹತ್ತ್ವದ ಕೆಲಸ ವಿರಸ.

ಸಾಹಿತ್ಯದ ಸಮಾಲೋಚನೆಯನ್ನು ನಿಧಾನವಾಗಿ ಮಾಡುವುದು ಉಚಿತ; ಅಲ್ಪಾವಧಿಯಲ್ಲಿ ಅಧ್ಯಕ್ಷ ಭಾಷಣವನ್ನು ಬರೆಯುವಾಗ ಮಾಡಬಾರದಂತಹ ಮಹತ್ವದ ಕೆಲಸವದು. ಇದಲ್ಲದೆ ಸಾಹಿತ್ಯದ ಬೆಳವಣಿಗೆ ಕೃತಿಗಳ ಯೋಗ್ಯತೆಯನ್ನು ಅವಲಂಬಿಸಿರುವುದು, ಅವನ್ನು ಬರೆದವರ ಹೆಸರುಗಳನ್ನಲ್ಲ. ಹೀಗೆ ಹೇಳಿ ಈ ಕೆಲಸ ಅನಾವಶ್ಯಕ ಎಂದು ನಾನು ಹೇಳಬಯಸುವುದಿಲ್ಲ.

ವಾರ್ಷಿಕ ಸಾಹಿತ್ಯ ಸಮಾಲೋಚನೆ ಗ್ರಂಥರಚನೆ

ವರ್ಷ ವರ್ಷಕ್ಕೆ ಈ ಸಾಹಿತ್ಯ ಸಮಾಲೋಚನೆ ಎಷ್ಟು ಅಗತ್ಯದ್ದೊ ಅಷ್ಟೆ ಮಹತ್ವದ್ದೂ ಆಗಿದೆ. ಈ ಬಗ್ಗೆ ನನ್ನದೊಂದು ಸೂಚನೆ ಇದೆ. ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯು ಈ ಕೆಲಸವನ್ನು ಮಾಡುವುದು ಯೋಗ್ಯ. ಪ್ರತಿ ವರ್ಷ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಪರಿಷತ್ತು ಈ ವರ್ಷದ ಸಾಹಿತ್ಯ ಸಮಾಲೋಚನೆಯನ್ನು ತನ್ನ ವಾರ್ಷಿಕ ವರದಿಯ ಅಂಗವಾಗಿ ಪ್ರಕಟಿಸಬಹುದಲ್ಲ? ಪರಿಷತ್ತಿನಂತಹ ಸಂಸ್ಥೆ ಒಂದೇ ಒಂದಾಗಿ ಈ ಕಾರ್ಯವನ್ನು ಮಾಡಲು ಶಕ್ಯವಿಲ್ಲ ಎಂಬುದನ್ನು ಬಲ್ಲೆ. ಇದಕ್ಕೆ ಪ್ರಕಾಶಕರು, ಗ್ರಂಥಕರ್ತರು ಪೂರ್ತಿಯಾಗಿ ಸಹಕಾರವನ್ನು ನೀಡಬೇಕು. ಪುಸ್ತಕದ ಪ್ರತಿಯನ್ನು ಕಳಿಸುವುದು ಬೇಡ: ಕನಿಷ್ಠ ಪಕ್ಷಕ್ಕೆ ಒಂದು ಗ್ರಂಥ ಪ್ರಕಟವಾದೊಡನೆ ಅದರ ಹೆಸರು, ಗ್ರಂಥಕರ್ತ, ಪ್ರಕಾಶಕ, ಪುಟ ಸಂಖ್ಯೆ, ಆಕಾರ, ಬೆಲೆ, ಪ್ರಕಟನೆಯ ತಿಂಗಳೂ ಇಲ್ಲವೆ ತಾರೀಖು-ಇಷ್ಟನ್ನಾದರೂ ಪ್ರಕಾಶಕನಾಗಲಿ ಗ್ರಂಥಕರ್ತನಾಗಲಿ ಪರಿಷತ್ತಿನ ಕಚೇರಿಗೆ ತಿಳಿಸಬಹುದಲ್ಲ? ಅದರಂತೆಯೇ ಶಕ್ಯವಾದರೆ, ಆಯಾ ಸಾಹಿತ್ಯ ಮಾದರಿಯ ಆ ವರ್ಷದ ವೈಶಿಷ್ಟ್ಯಗಳ, ಸ್ಥೂಲರೂಪದಲ್ಲಿ ಮಾತ್ರವೇ ಆಗಲಿ ವಿಮರ್ಶಿಸುವ ಯೋಚನೆಯನ್ನು ಪರಿಷತ್ತು ಮಾಡಬಹುದು. ಇಂದು ನಾವು ಮುಂದುವರಿಯುತ್ತಿರುವೆವೆ ಇಲ್ಲವೆ ಎಂಬುದನ್ನು ತಿಳಿದುಕೊಳ್ಳಲು ಈ ತರಹದ ಆತ್ಮವಿಮರ್ಶೆ ಅಗತ್ಯವಾಗಿದೆ.

ಸಾಮಾಜಿಕ ಹೊಣೆ: ಇಂದಿನವರೆಗೆ, ಈ ಪೀಠವನ್ನು ಅಲಂಕರಿಸಿದವರು ನನಗಿಂತ ಹಿರಿಯರು, ವಿದ್ವಾಂಸರು, ಕನ್ನಡ ಸಾಹಿತ್ಯಕ್ಕೆ ಪ್ರತಿಭಾನ್ವಿತ ಕಾಣಿಕೆಗಳನ್ನು ಸಲ್ಲಿಸಿದವರು. ತಮ್ಮ ಅಧಿಕಾರವಾಣಿಯಿಂದ ಅವರು ಸಾಹಿತ್ಯ ಮತ್ತು ಸಾಹಿತಿಯ ಕುರಿತು ಕೂಲಂಕುಷವಾಗಿ ವಿವೇಚನೆಯನ್ನು ಮಾಡಿದ್ದಾರೆ. ಪುನರುಕ್ತಿ ಬೇಡವೆಂದೊ ಇಲ್ಲವೆ ಆ ಯೋಗ್ಯತೆ ಇಲ್ಲವೆಂದೊ ನಾನು ಬೇರೊಂದು ದಾರಿಯನ್ನು ಹಿಡಿದಿದ್ದೇನೆ. ನನ್ನ ಕಿರಿದಾದ ಅನುಭವದಲ್ಲಿ ತೋಚಿದ ನಾಲ್ಕಾರು ಮಾತುಗಳನ್ನು ಹೇಳುತ್ತಲಿದ್ದೇನೆ. ಒಂದು ವೇಳೆ ನಾನು ಪಂಡಿತನೆನ್ನಿಸಲಿಕ್ಕಿಲ್ಲ, ಆದರೆ ಪೂರ್ತಿಯಾದ ಪ್ರಾಮಾಣಿಕತೆಯಿಂದ ಹೇಳುತ್ತಲಿದ್ದೇನೆ ಎಂಬುದನ್ನು ತಾವು ದಯವಿಟ್ಟು ಮನ್ನಿಸಬೇಕು. ಸಾಹಿತ್ಯವೇ ನನ್ನ ಜೀವನದ ಉಸಿರಾಗಿದೆ. ಉಚ್ಚ ಅಧಿಕಾರ ಸ್ಥಾನದಲ್ಲಿ ಸುಖದಿಂದ ಇರುವುದಕ್ಕಿಂತ ಉಪವಾಸದಿಂದಿದ್ದರೂ ಸಾಹಿತಿಯಾಗಿರುವುದು ನನಗೆ ಮೆಚ್ಚುಗೆಯಾಗಿದೆ.


ಸಮ್ಮೇಳನಾಧ್ಯಕ್ಷರ ಸಲಹೆ

ಸಾಹಿತ್ಯಾಭಿಮಾನಿಗಳಾದ ಸಭಿಕಮಹಾಶಯರೆ, ಇನ್ನೂ ಅನೇಕ ಮಾತುಗಳನ್ನು ನಾನು ಹೇಳಬಹುದಾಗಿತ್ತು. ಆದರೆ ವರ್ಷವರ್ಷಕ್ಕೆ ಸೇರುವ ಈ ಸಮ್ಮೇಳನದಲ್ಲಿ ಇಡಿಯ ಭವಿಷ್ಯತ್ಕಾಲಕ್ಕಾಗಿ ಮಾತನಾಡುವಷ್ಟು ಆಶೆಬುರುಕನಾಗುವುದು ಅಷ್ಟೊಂದು ಯೋಗ್ಯವಾಗಲಿಕ್ಕಿಲ್ಲ. ಈ ಕ್ಷಣ ನಮ್ಮೆದುರಿಗಿದ್ದ ಕೆಲವು ಸಮಸ್ಯೆಗಳು, ಅವುಗಳನ್ನು ಬಿಡಿಸಲು ಒಂದು ವರ್ಷದ ಅವಧಿಯಲ್ಲಿ ಮಾಡಬಹುದಾದ ಉಪಾಯಗಳು, ಇವಕ್ಕೆ ಹಿನ್ನೆಲೆಯಾದ ಪರಿಸ್ಥಿತಿ ಇಷ್ಟನ್ನು ಹೇಳಿದರೆ ನನ್ನ ಕೆಲಸ ಮುಗಿಯಿತು ಎಂದು ನಾನು ತಿಳಿಯುತ್ತೇನೆ. ಸಾಹಿತಿಯ ಸಮಸ್ಯೆ ಬಹುಮುಖವಾದ ಸಮಸ್ಯೆ. ಉಪಜೀವನ ಪ್ರಶ್ನೆ ಅವನ ವೈಯಕ್ತಿಕ ಸಮಸ್ಯೆ ಎನ್ನಿಸಿದರೆ, ಅವನು ಅನ್ಯೋಪಜೀವಿಯಾಗುವುದು ಸಾಮಾಜಿಕ ಸಮಸ್ಯೆ ಎನ್ನಿಸುವುದು. ಅನ್ಯೋಪಜೀವಿಯಾದ ಸಾಹಿತಿ ಸಮಾಜಕ್ಕೆ ಕಂಟಕನಾಗಬಹುದಾಗಿದೆ. ಸಾಹಿತಿಯನ್ನು ಅನ್ಯೋಪ ಜೀವಿಯನ್ನಾಗಿ ಮಾಡುವ ಅನೇಕ ಶಕ್ತಿಗಳು ನಮ್ಮ ಸಮಾಜ ರಚನೆಯಲ್ಲಿವೆ. ಧನಿಕ ಒಡೆಯನಿಗಾದ ಅಗ್ರಲೇಖನಗಳನ್ನು ಬರೆಯುವ ಸಂಪಾದಕರು, ದೇಶದ ಸರಕಾರಕ್ಕಾಗಿ ಸ್ತುತಿಪಾಠವನ್ನು ಬರೆಯುವ ಸಾಹಿತಿಗಳು, ಪ್ರೊಪಾಯಿಟರ್ ಇಲ್ಲವೆ ಅವನ ಸೂಳೆಗಾಗಿ ನಾಟಕಗಳನ್ನು ಬರೆಯುವ ನಾಟಕಕಾರರು, ಬರೆದುದಕ್ಕೆ ಚಿತ್ರನಿರ್ಮಾಪಕನ ಹೆಸರನ್ನು ಕೊಡುವ ಕತೆಗಾರರು-ಇಂತಹ ವ್ಯಕ್ತಿಗಳು ದೊರೆಕಿಯೇ ದೊರಕುತ್ತಾರೆ, ಅವರಲ್ಲಿ ಯೋಗ್ಯತೆ ಇದ್ದರೆ ಆ ಮಟ್ಟಿಗೆ ಸಮಾಜಕ್ಕೆ ಹಾನಿ, ಯೋಗ್ಯತೆ ಇಲ್ಲದಿದ್ದರೆ ಆ ಮಟ್ಟಿಗೆ ಸಮಾಜದಲ್ಲಿ ಅನ್ಯಾಯ.

❖❖

೩೯ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಕೆ.ವಿ. ಪುಟ್ಟಪ್ಪ



ಕನ್ನಡದ ಮಹಾಕವಿ ಕುವೆಂಪು (ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ) ವೆಂಕಟಪ್ಪಗೌಡ-ಸೀತಮ್ಮ ದಂಪತಿಗಳಿಗೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ೨೯-೧೨-೧೯೦೪ರಲ್ಲಿ ಜನಿಸಿದರು. ೧೯೧೬ರಲ್ಲಿ ಮನೆಯಲ್ಲೇ ಖಾಸಗಿ ಮೇಷ್ಟರ ಮೂಲಕ ಪ್ರಾರಂಭಿಕ ವಿದ್ಯಾಭ್ಯಾಸದ ನಂತರ ತೀರ್ಥಹಳ್ಳಿಯಲ್ಲಿ ವಿದ್ಯಾಭ್ಯಾಸ ಮುಗಿಸಿ ಮೈಸೂರಿನಲ್ಲಿ ವೆಸ್ಲಿಯನ್ ಮಿಷನ್ ಹೈಸ್ಕೂಲ್, ಮಹಾರಾಜ ಕಾಲೇಜುಗಳಲ್ಲಿ ಓದಿ ೧೯೨೯ರಲ್ಲಿ ಎಂ.ಎ. ಪದವಿ ಗಳಿಸಿದರು.

೧೯೨೯ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಅನಂತರ ಕ್ರಮೇಣ ಉಪಪ್ರಾಧ್ಯಾಪಕ, ಪ್ರಿನ್ಸಿಪಾಲರಾಗಿ ೧೯೫೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿ ೧೯೬೦ರಲ್ಲಿ ನಿವೃತ್ತರಾದರು.

ಕುವೆಂಪು ಬಾಲ್ಯದಿಂದಲೂ ಸಾಹಿತ್ಯ ರಚನೆಯಲ್ಲಿ ನಿರತರಾಗಿದ್ದರು. ಅವರು ಕನ್ನಡಕ್ಕೆ ನೀಡಿದ ಕೊಡುಗೆಗಳಿಗಾಗಿ ಕನ್ನಡದ ಸಾಹಿತ್ಯಗಳನ್ನು ರಚಿಸಿದ್ದಕ್ಕಾಗಿ ಅವರಿಗೆ ಅನೇಕ ಮನ್ನಣೆ ಪ್ರಶಸ್ತಿಗಳು ದೊರೆತವು. ಮೈಸೂರಿನಲ್ಲಿ ನಡೆದ ೩೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾದರು. ಧಾರವಾಡದಲ್ಲಿ ೧೯೫೭ರಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ರಾಷ್ಟ್ರಪತಿಗಳಿಂದ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು. ರಾಜ್ಯಸರ್ಕಾರದಿಂದ ರಾಷ್ಟ್ರಕವಿ ಪ್ರಶಸ್ತಿಯನ್ನೂ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನೂ ಪಡೆದರು.

ಬೆಂಗಳೂರು ವಿಶ್ವವಿದ್ಯಾನಿಲದಿಂದ ೧೯೬೯ರಲ್ಲಿ ಗೌರವ ಡಿ.ಲಿಟ್. ಲಭಿಸಿತು. ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿಗಳು ಕುವೆಂಪು ಅವರ ದೈತ್ಯಸಾಹಿತ್ಯ ಪ್ರತಿಭೆಗೆ ಸಿಕ್ಕ ಪುರಸ್ಕಾರಗಳಾಗಿವೆ.

೧೯೬೮ರಲ್ಲಿ ಶ್ರೀರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಇದು ಕನ್ನಡದಲ್ಲಿ ಮೊದಲ ಜ್ಞಾನಪೀಠ ಪ್ರಶಸ್ತಿ ಆಗಿದೆ. ೧೯೯೫ರಲ್ಲಿ ನಾಡೋಜ ಪ್ರಶಸ್ತಿಯನ್ನು ಅವರಿಗೆ ಮರಣೋತ್ತರ ನೀಡಲಾಯಿತು. ೧೯೮೫ರಲ್ಲಿ ಮೈಸೂರಿನಲ್ಲಿ ನಡೆದ ಮೊದಲನೇ ವಿಶ್ವಕನ್ನಡ ಸಮ್ಮೇಳನವನ್ನು ಉದ್ಘಾಟಿಸಿದರು.

ಅಪಾರ ಅನುಪಮ ಸಾಹಿತ್ಯ ರಚನೆ ಮಾಡಿದ್ದ ಕುವೆಂಪು ಅವರು, ಕವನ ಸಂಕಲನ, ಖಂಡಕಾವ್ಯ, ಮಹಾಕಾವ್ಯಗಳನ್ನು ರಚಿಸಿದರು. ಅನುವಾದಿತ ಮತ್ತು ಸ್ವತಂತ್ರ ನಾಟಕಗಳನ್ನು ಬರೆದರು. ಕಾದಂಬರಿ, ಕಥೆ, ಗದ್ಯಚಿತ್ರ, ಆತ್ಮಚರಿತ್ರೆ, ಭಾಷಾಂತರ ಗ್ರಂಥಗಳನ್ನು ರಚಿಸಿದರು. ಮಾಸ್ತಿ ಜತೆ ಕರ್ನಾಟಕ ಭಾರತ ಕಥಾಮಂಜರಿಯನ್ನು ಸಂಪಾದಿಸಿದ್ದಾರೆ.

ಅವರ ಕೆಲವು ಪ್ರಸಿದ್ಧ ಕೃತಿಗಳು ಇವು:

ಶ್ರೀರಾಮಯಣ ದರ್ಶನಂ, ಕಬ್ಬಿಗನ ಕೈಬುಟ್ಟಿ, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ, ವಿಚಾರ ಕ್ರಾಂತಿಗೆ ಆಹ್ವಾನ, ಬೆರಳ್ಗೆ ಕೊರಳ್, ಶೂದ್ರತಪಸ್ವಿ, ಸ್ವಾಮಿ ವಿವೇಕಾನಂದ, ಚಿತ್ರಾಂಗದಾ, ಪಾಂಚಜನ್ಯ, ಬೊಮ್ಮನಹಳ್ಳಿ ಕಿಂದರಿಜೋಗಿ, ಕೊಳಲು ಇತ್ಯಾದಿ.

ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾಗಿದ್ದ ಕುವೆಂಪು ಅವರು ೧೧-೧೧-೧೯೯೪ರಲ್ಲಿ ಮೈಸೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೩೯,
ಅಧ್ಯಕ್ಷರು: ಕೆ.ವಿ. ಪುಟ್ಟಪ್ಪ
ದಿನಾಂಕ: ೭, ೮, ೯ ಮೇ ೧೯೫೭
ಸ್ಥಳ : ಧಾರವಾಡ

ಪರಿಷತ್ತಿಗೂ ಪ್ರಾಂತರಚನೆಗೂ ಏನು ಸಂಬಂಧ?

ನಾವಿಂದು ಇಲ್ಲಿ ಏಕೀಕೃತ ಅಖಂಡ ಕರ್ಣಾಟಕದ ಸಾಹಿತ್ಯ ಪರಿಷತ್ತಿನ ಪ್ರಪ್ರಥಮ ವಾರ್ಷಿಕ ಸಮ್ಮೇಳನೋತ್ಸವದಲ್ಲಿ ಭಾಗಿಗಳಾಗಲು ಬಂದಿದ್ದೇವೆ. ನಾವು ನಿಜವಾಗಿಯೂ ಭಾಗ್ಯಶಾಲಿಗಳಲ್ಲವೆ? ಧನ್ಯರಲ್ಲವೆ?

ಹೌದು, ಅದರೆ ಏಕೆ ಧನ್ಯರು? ಏನು ಧನ್ಯತೆ? ಶಾಶ್ವತ ಪ್ರಯೋಜನರೂಪವಾದ ಯಾವ ಪುರುಷಾರ್ಥ ದೊರೆಕೊಂಡಿದೆ? ಅಥವಾ ಅಂತಹ ಪುರುಷಾರ್ಥ ಸಾಧನೆಗೆ ಹಾದಿಯಾದರೂ ಸಿದ್ಧವಾಗಿದೆಯೆ?

ಸಂಸ್ಕೃತಿ ಸಾಹಿತ್ಯ ಮತ್ತು ಕಲೆಯ ಭೂಮಿಕೆಯಲ್ಲಿ ವ್ಯವಹರಿಸುವ ಸಾಹಿತ್ಯ ಪರಿಷತ್ತಿಗೂ ಈ ಪ್ರಾಂತರಚನೆಯ ರಾಜಕೀಯಕ್ಕೂ ಏನು ಸಂಬಂಧ? ಕನ್ನಡ ಜನತೆಯ ಸಹೃದಯದಲ್ಲಿ ಅಂತರ್ಗತವಾಗಿದ್ದ ಯಾವ ಮೂಕ ಆಶಯವನ್ನು ವಾಙ್ಮಯವನ್ನಾಗಿ ಮಾಡಲು ಪ್ರಯತ್ನಿಸಿ ಸಾಹಿತ್ಯ ಪರಿಷತ್ತು ಕಳೆದ ಮೂವತ್ತೆಂಟು ವರ್ಷಗಳಿಂದ ವರುಷ ವರುಷವೂ ನಾಡಿನ ಕೇಂದ್ರದಲ್ಲಿ ನೇಮಿಯಲ್ಲಿ ಗಡಿಮೂಲೆಗಳಲ್ಲಿ ವಾರ್ಷಿಕ ಸಮ್ಮೇಳನೋತ್ಸವವನ್ನು ನೆರಪಿ ಜನಚೇತನಕ್ಕೆ ನವೋತ್ಸಾಹವನ್ನು ತುಂಬಿ, ನಾಡಿನ ಮಕ್ಕಳನ್ನು ಮತ್ತೆ ಮತ್ತೆ ಎಚ್ಚರಿಸಿ ದೀಕ್ಷಾಬದ್ಧರನ್ನಾಗಿ ಮಾಡುತ್ತಿತ್ತೊ ಆ ಮೂಕ ಆಶಯವೆ ಕಳೆದ ಮೂವತ್ತು ನಾಲ್ವತ್ತು ವರ್ಷಗಳಿಂದಲೂ ನಮ್ಮ ನಾಡಿನ ಕವಿಗಳಲ್ಲಿ, ಲೇಖಕರಲ್ಲಿ ವಿದ್ವಾಂಸರಲ್ಲಿ, ಸಾರ್ವಜನಿಕ ಮುಂದಾಳುಗಳಲ್ಲಿ, ರಾಜಕೀಯ ಆಂದೋಲನಕಾರರಲ್ಲಿ, ವಿದ್ಯಾರ್ಥಿಗಳಲ್ಲಿ, ಅಧ್ಯಾಪಕರಲ್ಲಿ, ಕರ್ಣಾಟಕ ಸಂಘಗಳಂತಹ ಸಂಸ್ಥೆಗಳಲ್ಲಿ, ದೇಶಭಾಷೆಯ ಪತ್ರಿಕೆಗಳಲ್ಲಿ ನಾನಾರೂಪಗಳಿಂದ ಅನೇಕ ಮುಖವಾಗಿ ಅಭಿವ್ಯಕ್ತವಾಗಿ ಸ್ವಯಂ ಕ್ರಿಯಾಸಮರ್ಥವಾದ ಕತ್ರುಶಕ್ತಿಯಾಗಿ ಏಕೀಕೃತ ಅಖಂಡ ಕರ್ಣಾಟಕವಾಗಿ ಪರಿಣಮಿಸಿತು. ವಾಸ್ತವವಾಗಿ ಈ ಏಕೀಕರಣ ಮತ್ತು **ಅಖಂಡತೆ** ಹೊಚ್ಚಹೊಸದಾಗಿ ಸೃಷ್ಟಿಯಾದುದೇನೂ ಅಲ್ಲ. ಸಾಂಸ್ಕೃತಿಕವಾಗಿ ದೇಶದ ಮನೋಮಂಡಲದಲ್ಲಿ ಯಾವುದು ಅನೇಕ ಶತಮಾನಗಳಿಂದಲೂ ಅಚ್ಯುತವಾದ ಭಾವಸತ್ಯವಾಗಿದ್ದಿತೊ ಅದು ಈಗ ಭೌಗೋಲಿಕವಾಗಿಯೂ ಸಿದ್ಧವಾಯಿತೆಷ್ಟೋ ಅಷ್ಟೆ.

ಸಮ್ಮೇಳನೋಚಿತ ವಿಚಾರಗಳು

ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಈ ವಿಷಯವಾಗಿ ಇಷ್ಟು ದೀರ್ಘವಾಗಿ ಸಮಾಲೋಚನೆ ಮಾಡಿದುದರ ಅರ್ಥವೇನು? ಉದ್ದೇಶವೇನು? ಸಾಹಿತ್ಯದ ವಿಚಾರವಾಗಿಯೊ ಕವಿಕಾವ್ಯವನ್ನು ಕುರಿತೊ, ಪ್ರತಿಭೆರಸಾಸ್ವಾದಾದಿ ಅಲೌಕಿಕಾನುಭವಗಳನ್ನೊ ಸಾಹಿತ್ಯ ವಿಮರ್ಶೆಯ ಅಥವಾ ಕಾವ್ಯ ಮೀಮಾಂಸೆಯ ತತ್ತ್ವಗಳನ್ನೊ ಸ್ವಾರಸ್ಯವಾಗಿ ಪ್ರಸ್ತಾವಿಸುತ್ತಾ ಹೋಗದೆ ಭಾಷೆ, ಶಿಕ್ಷಣ ಮಾಧ್ಯಮ, ಪಾರಿಭಾಷಿಕ ಪದಸಮಸ್ಯೆ ಇತ್ಯಾದಿ ಶಿಕ್ಷಣಶಾಸ್ತ್ರ ಸಮ್ಮೇಳನೋಚಿತ ಎನಿಸಬಹುದಾದ ವಿಷಯಗಳ ಪ್ರವೇಶಕ್ಕೆ ಇಲ್ಲಿ ಅಗತ್ಯವೇನಿತ್ತು?

ಯಾರ ಮನಸ್ಸಿನಲ್ಲಾದರೂ ಅಂತಹ ಪ್ರಶ್ನಾರ್ಥಕ ಚಿಹ್ನೆ ಹೆಡೆಯೆತ್ತಿದ್ದರೆ ಅಥವಾ ಆಶ್ಚರ್ಯ ಚಿಹ್ನೆ ನಿಮಿರಿ ನಿಂತಿದ್ದರೆ ಅದಕ್ಕೆ ಉತ್ತರ ಇಷ್ಟೆ! ಕೇರಳದಲ್ಲಿ ಮಲೆಯಾಳಿಯಂತೆ ಆಂಧ್ರದಲ್ಲಿ ತೆಲುಗಿನಂತೆ ತಮಿಳು ನಾಡಿನಲ್ಲಿ ತಮಿಳಿನಂತೆ ಕರ್ಣಾಟಕದಲ್ಲಿ ಕನ್ನಡ ಪ್ರಥಮಭಾಷೆಯಾಗದಿದ್ದರೆ ಕನ್ನಡವೆ ಶಿಕ್ಷಣ ಮಾಧ್ಯಮವಾಗಿದ್ದರೆ ಕನ್ನಡಿಗರ ಬಾಳು ಕುಂಠಿತವಾಗುತ್ತದೆ; ನಮ್ಮ ತಾಯಿಗೆ ನಮ್ಮ ಮನೆಯಲ್ಲಿಯ ವರಾಂಡದಲ್ಲಿ ಮಲಗಿಕೊಳ್ಳಲು ತಾಣವೂ ಅಲ್ಲ, ನಿಲ್ದಾಣ ಕೊಡಬೇಕಾಗುತ್ತದೆ; ನಮ್ಮ ಜನಸಾಮಾನ್ಯರ ಸರ್ವಾಂಗೀಣವಾದ ನ್ಯಾಯಬದ್ಧವಾದ ವಿಕಾಸಕ್ಕೆ ಅಡಚಣೆ ಒದಗುತ್ತದೆ; ನಮ್ಮ ಸಾಹಿತ್ಯವೂ ಸಮೃದ್ಧವಾಗಿ ಪುಷ್ಟವಾಗಿ ಬಹುಮುಖವಾಗಿ ಸರ್ವತೋಮುಖವಾಗಿ ಬದುಕಿನ ಮತ್ತು ವಿದ್ಯೆಯ ಸರ್ವಶಾಖೆಗಳಲ್ಲಿಯೂ ಚೈತನ್ಯಮಯವಾದ ಜನಜೀವನದ ನೆಲದಿಂದ ಹೊಮ್ಮದೆ ಪ್ರದರ್ಶನಕ್ಕಾಗಿ ತೂಗುಹಾಕಿರುವ ಕುಂಡಗಳಲ್ಲಿ ಬೆಳೆಯುವ ಲಘುಮನೋರಂಜನೆಯ ವಸ್ತುವಾಗುತ್ತದೆ. ಅಂತಹ ದುಃಖದ ಅಮಂಗಳದ ದುರಂತದ ಪರಿಸ್ಥಿತಿಗೆ ಕಾರಣವಾಗುವವರೆಲ್ಲರೂ, ವ್ಯಕ್ತಿಗಳಾಗಲಿ ಸಂಸ್ಥೆಗಳಾಗಲಿ, ಚಿರಂತನವಾಗಿ ಶಾಪಗ್ರಸ್ತರಾಗುತ್ತಾರೆ; ಕವಿ ಪ್ರವಾದಿಯೂ ಆಗುತ್ತಾನೆ.

ಆದರೆ ಹಾಗಾಗುವುದಿಲ್ಲ. ನಮ್ಮ ಜನ ಹಾಗೆ ಆಗಗೊಡಲು ಬಿಡುವುದಿಲ್ಲ. ಒಂದು ವೇಳೆ ಕನ್ನಡಿಗರ ದೌರ್ಬಲ್ಯೋಪಮವಾದ ಅತ್ಯೌದಾರ್ಯದಿಂದಲೋ ಅತಿ ದಾಕ್ಷಿಣ್ಯದಿಂದಲೋ ಅವರು ಔದಾಸೀನ್ಯವನ್ನಲಂಬಿಸಿದರೆ ತೆಲುಗು ತಮಿಳು ಮಲೆಯಾಳಿ ಮರಾಠಿ ಬಂಗಾಳಿ ಮೊದಲಾದ ಭಾರತೀಯ ಭಾಷೆಗಳ ನಮ್ಮ ನೆರೆಯ ಸಹೋದರರು ತಮ್ಮ ತಮ್ಮ ಭಾಷೆಗಳಿಗೆ ತಮ್ಮ ತಮ್ಮ ನಾಡುಗಳಲ್ಲಿ ಸರಿಯಾದ ಸ್ಥಾನಮಾನಗಳನ್ನು ಕಲ್ಪಿಸುವುದರಿಂದಲೆ ನಮ್ಮನ್ನು ಸರಿಯಾದ ದಾರಿಗೆ ಅನಿವಾರ್ಯವಾಗಿಯೆ ತಳ್ಳುವುದರಲ್ಲಿ ಸಂದೇಹವಿಲ್ಲ, ಆದ್ದರಿಂದಲೆ ನಾನು ಸಂಪೂರ್ಣ ಆಶಾವಾದಿಯಾಗಿದ್ದೇನೆ.

ಪರಿಷತ್ತಿನ ಮುಂದಿನ ಗುರಿ

ಕನ್ನಡ ಜನರ ಆಶೋತ್ತರ ಮತ್ತು ಕರ್ಣಾಟಕ ಸಂಸ್ಕೃತಿಯ ಪ್ರತಿನಿಧಿಯಾದ ಕನ್ನಡ ಸಾಹಿತ್ಯ ಪರಿಷತ್ತು ಸದ್ಯಕ್ಕೆ ನಮ್ಮ ಅಭ್ಯುದಯಕ್ಕೆ ಆವಶ್ಯಕವಾದ ಭೌಗೋಲಿಕ ಚೌಕಟ್ಟನ್ನು ಸಾಧಿಸಿದೆ. ನವಮೈಸೂರು ರಾಜ್ಯದ ಆ ಚೌಕಟ್ಟಿನ ಮೇಲೆ ನಮ್ಮ ಸಂಸ್ಕೃತಿಯ ಆದರ್ಶದ 'ಕರ್ಣಾಟಕ'ವನ್ನು ಕಟ್ಟಬೇಕಾಗಿದೆ. ಇದುವರೆಗೆ ಪರಿಷತ್ತಿನ ವಾರ್ಷಿಕ ಸಮ್ಮೇಳನ ಸ್ವಲ್ಪ ಹೆಚ್ಚು ಕಡಮೆ ಉತ್ಸವರೂಪದ ಪ್ರಚ್ಛನ್ನ ರಾಜಕೀಯ ಚಳುವಳಿಯಾಗಿಯೆ ಸಾಗುತ್ತಿತ್ತು. ಇನ್ನು ಮೇಲೆ ಈ ವಾರ್ಷಿಕ ಸಮ್ಮೇಳನ ಮಾತ್ರವಾಗಿ ಪರ್ಯವಸಾನ ಹೊಂದುವುದರಲ್ಲಿ ಔಚಿತ್ಯವಿಲ್ಲ, ಇದು ಸಾಹಿತ್ಯಕ್ಷೇತ್ರದ ಶ್ರಮಜೀವಿಗಳ ಮತ್ತು ಕಲಾಸಾಧಕರ ವಾರ್ಷಿಕ ಸಾಹಸಸಿದ್ಧಿಗಳ ಪರೀಕ್ಷೆಯ ನಿಕಷವೇದಿಕೆಯಾಗಿ ಪರಿಣಮಿಸಬೇಕು. ನಮ್ಮ ನೆರೆಯ ಸೋದರ ಭಾಷಾಸಾಹಿತ್ಯಗಳೊಡನೆ ಹೆಚ್ಚು ಹೆಚ್ಚು ಸಂಪರ್ಕ ಬೆಳೆಯಲು ಪರಸ್ಪರ ಹೃದಯ ಪರಿಚಯದ ಮೈತ್ರಿ ಸಾಧನೆಯ ರಂಗವಾಗಿ ಪರಿವರ್ತಿತವಾಗಬೇಕು. ಅಖಿಲ ಭಾರತೀಯವಾದ ಯಾವ ಮಹೋದ್ದೇಶದಿಂದ ಸಾಹಿತ್ಯ ಅಕಾಡೆಮಿ ಪ್ರೇರಿತವಾಗಿ ವಿವಿಧ ಕಾರ್ಯಗಳಲ್ಲಿ ಪ್ರವೃತ್ತವಾಗಿದೆಯೊ ಅದರ ಪ್ರಾದೇಶಿಕ ಪ್ರತಿನಿಧಿಯಾಗಬೇಕು. ಕರ್ಣಾಟಕದ ವಿವಿಧ ಸಂಸ್ಥೆಗಳಲ್ಲಿ ವಿವಿಧ ಸಂಘಗಳಲ್ಲಿ ವಿವಿಧ ವ್ಯಕ್ತಿಗಳಲ್ಲಿ ರೂಪುಗೊಳ್ಳುತ್ತಿರುವ ಮತ್ತು ಅಭಿವ್ಯಕ್ತವಾಗುತ್ತಿರುವ ಪುರೋಗಾಮಿಗಳಾದ ಹೃದಯದ ಮತ್ತು ಬುದ್ಧಿಯ ಶಕ್ತಿಗಳನ್ನೆಲ್ಲ ಕ್ರೋಢೀಕರಿಸಿ, ಅವುಗಳನ್ನು ತಾತ್ಕಾಲಿಕತೆಯ, ವಿಫಲತೆಯ, ಅಲ್ಪ ಮನೋರಂಜನೆಯ, ವಿಕೃತ ಕಲ್ಪನೆಯ, ಶೀಘ್ರಕೀರ್ತಿಯ, ಅಲ್ಪಪ್ರಯೋಜನದ ವ್ಯರ್ಥಸಾಹಸೋದ್ಯಮದಿಂದ ವಿಮುಖವನ್ನಾಗಿ ಮಾಡಿ, ರಕ್ಷಿಸಿ, ಮಹೋದ್ದೇಶದ ಹಾಗೂ ಚಿರಂತನ ಪ್ರಯೋಜನದ ಕಡೆಗೆ ತಿರುಗಿ ಶಿಷ್ಟಸಂಕಲ್ಪನಿಷ್ಠವನ್ನಾಗಿ ಮಾಡಬೇಕು.


ಪರಿಷತ್ತಿನ ಸಾಧನೆ ಏನು

ಈ ಮೂವತ್ತು ನಲ್ವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯ ಸಾಧಿಸಿರುವ ಸಂಪತ್ತು, ಪರಿಷತ್ತು ಸಕಾರಣವಾಗಿ ನಿಸ್ಸಂಕೋಚವಾಗಿ ಹೆಮ್ಮೆಪಟ್ಟುಕೊಳ್ಳುವಷ್ಟು ವೈಭವಪೂರ್ಣವಾಗಿದೆ, ವೈವಿಧ್ಯಪೂರ್ಣವಾಗಿದೆ, ಶ್ರೀಮಂತವಾಗಿದೆ. ಲೋಕ ಸಾಹಿತ್ಯದ ವಿಚಾರವಾಗಿ ಹಿಂದೆ ಹೇಳಿದುದಕ್ಕಿಂತಲೂ ನೂರುಮಡಿ ಹೆಚ್ಚಾಗಿ ಹೇಳಬಹುದು. ಭಾಷಾಸಾಹಿತ್ಯದ ವಿಚಾರವಾಗಿ. ಉದ್ಧಾರಕ್ಕೆ ಎಲ್ಲೆ ಇದೆಯೆ ? ಮಹಚ್ಚೇತನದ ಅಭೀಪ್ಸೆ ನಿಖರವಾದುದಲ್ಲವೆ ? "ಉತ್ಸರ್ಪಿಣೀ ಖಲು ಮಹಾತಾಂ ಪ್ರಾರ್ಥನಾ !" ಉದ್ಧಾರದ ಕೊನೆ ಮುಟ್ಟಿದೆವು ಎಂದುಕೊಳ್ಳುವುದೆ ಪತನಕ್ಕೆ ಮೊದಲ ಹೆಜ್ಜೆಯಾದೀತು ! ಆದ್ದರಿಂದ ನಮ್ಮ ಉದ್ಧಾರದ ವಿಷಯದಲ್ಲಿ ಸ್ವಲ್ಪ ಅತೃಪ್ತಿಯಿರಬೇಕಾದ್ದು ಪ್ರಗತಿಗೆ ಆವಶ್ಯಕ. ಆದರೆ, ಆ ಅತೃಪ್ತಿ ಆತ್ಮಧಿಕ್ಕಾರದ ಮಟ್ಟಕ್ಕೇರಿ, ಸಾಧಿಸಿರುವ ಕಾರ್ಯದ ಅವಹೇಳನದ ರೂಪಕ್ಕೂ ತಿರುಗಿ ದೋಷೈಕದೃಷ್ಟಿಯಾಗಿ ಉತ್ತಮಾಂಶವನ್ನೆಲ್ಲಾ ಅಸೂಯಾಜನ್ಯವಾದ ನಿಂದಾಗ್ನಿಯಲ್ಲಿ ಹೋಮಮಾಡುವಂತಾದರೆ ಅಂತಹ ಅತೃಪ್ತಿಯನ್ನು ಮನೋವಿಕಾಸ ಸಂಭೂತವಾದ ಒಂದು ರೋಗವನ್ನಾಗಿ ಭಾವಿಸಬೇಕಾಗುತ್ತದೆ. ಅಂತಹ ರೋಗದಿಂದ ವಿಮುಕ್ತರಾಗಿ ಪೂರ್ವಗ್ರಹದೂರವಾದ ಅಧಿಕಾರ ಬುದ್ಧಿಯಿಂದಲೂ ಅನೇಕ ಸಾಹಿತ್ಯಾಧ್ಯಯನದಿಂದ ಸಿದ್ಧವಾದ ನಿಷ್ಪಕ್ಷಪಾತ ವಿಮರ್ಶೆಯ ದೃಷ್ಟಿಯಿಂದ ಸಮೀಕ್ಷಿಸಿದರೆ ಕನ್ನಡ ಸಾಹಿತ್ಯ ಈ ಮೂವತ್ತು ನಾಲ್ವತ್ತು ವರ್ಷಗಳಲ್ಲಿ ಅದ್ಭುತವನ್ನ ಸಾಧಿಸಿದೆ ಎಂದು ಹೇಳಬೇಕಾಗುತ್ತದೆ.

❖❖

೪೦ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ವಿ.ಕೃ. ಗೋಕಾಕ್



ಕನ್ನಡದಲ್ಲಿ ನವ್ಯಕಾವ್ಯ ಪ್ರವರ್ತಕರಾಗಿ 'ವಿನಾಯಕ' ಕಾವ್ಯನಾಮದಿಂದ ಕೃತಿಗಳ ರಚನೆ ಮಾಡಿರುವ ವಿನಾಯಕ ಕೃಷ್ಣ ಗೋಕಾಕರು ಕೃಷ್ಣರಾಯ-ಸುಂದರಮ್ಮ ದಂಪತಿಗಳಿಗೆ ೯-೮-೧೯೦೯ರಲ್ಲಿ ಜನಿಸಿದರು. ಸವಣೂರಿನಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ ಧಾರವಾಡದಲ್ಲಿ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು. ೧೯೩೧ರಲ್ಲಿ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಅನಂತರ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿ ಗಳಿಸಿದರು.

ಉನ್ನತ ಶಿಕ್ಷಣ ಪಡೆದು ವಿದೇಶದಿಂದ ಬಂದ ಮೇಲೆ ಸಾಂಗ್ಲಿಯ ವಿಲ್ಲಿಂಗ್‌ಟನ್ ಕಾಲೇಜಿನಲ್ಲಿ, ಅನಂತರ ಕೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ (೧೯೫೨) ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸಿದರು. ೧೯೬೬ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದರು. ೧೯೭೦ರಲ್ಲಿ ಸಿಮ್ಲಾದ ಇನ್ಸ್ಟಿಟ್ಯೂಟ್ ಆಫ್ ಸ್ಟಡೀಸ್ ನಿರ್ದೇಶಕರಾದರು.

ಆಂಧ್ರದ ಪುಟ್ಟಪರ್ತಿಯ ಸತ್ಯಸಾಯಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಗೋಕಾಕರು, ಪಿ. ಇ. ಎನ್. ಅಧಿವೇಶನಕ್ಕೆ ೧೯೫೭ರಲ್ಲಿ ಜಪಾನಿಗೆ ತೆರಳಿದರು. ಬೆಲ್ಜಿಯಂನಲ್ಲಿ ಕವಿ ಸಮ್ಮೇಳನದಲ್ಲಿ ಭಾಗವಹಿಸಿದರು, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದರು.

ಗೋಕಾಕರಿಗೆ ಹಲವಾರು ಪ್ರಶಸ್ತಿ ಗೌರವಗಳು ಸಂದಿವೆ. ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ (೧೯೫೮), ಅಮೆರಿಕಾದ ಫೆಸಿಫಿಕ್ ವಿಶ್ವವಿದ್ಯಾಲಯ, ಕರ್ನಾಟಕ, ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಗಳನ್ನು ನೀಡಿವೆ. ಪರಿಷತ್ತು ೧೯೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ೪೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಗೆ ಆಯ್ಕೆ ಮಾಡಿ ಗೌರವಿಸಿದೆ. ದ್ಯಾವಾ ಪೃಥಿವಿ ಖಂಡಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿದೆ.

ತಮ್ಮ ಭಾರತ ಸಿಂಧುರಶ್ಮಿ ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಗೋಕಾಕರು ಕನ್ನಡಕ್ಕೆ ಉತ್ತಮ ಕೃತಿಗಳನ್ನು ನೀಡಿದ್ದಾರೆ. ಸಮರಸವೇ ಜೀವನ (ಇಜ್ಜೋಡು) ಬೃಹತ್ ಕಾದಂಬರಿ ಇವರಿಗೆ ಹೆಸರನ್ನು ತಂದುಕೊಟ್ಟಿದೆ. ಇವರು ಭಾಷಾ ಆಯೋಗದ ಅಧ್ಯಕ್ಷರಾಗಿ ಸಲ್ಲಿಸಿದ ಗೋಕಾಕವರದಿ ಇತಿಹಾಸವನ್ನೇ ಸೃಷ್ಟಿಸಿತು.

ನವ್ಯತೆ ಹಾಗೂ ಕಾವ್ಯ ಜೀವನ, ವಿಶ್ವಮಾನವ ದೃಷ್ಟಿ, ಸೌಂದರ್ಯಮೀಮಾಂಸೆ, ಆಂಗ್ಲ ಸಾಹಿತ್ಯಕ್ಕೆ ನೀಡಿದ ಸ್ಫೂರ್ತಿ ಇತ್ಯಾದಿ ವಿಮರ್ಶಾಗ್ರಂಥಗಳು, ಜನನಾಯಕ, ವಿಮರ್ಶಕ ವೈದ್ಯ, ಯುಗಾಂತರ, ಮುಂತಾದ ನಾಟಕಗಳು ಇವರಿಂದ ರಚಿತವಾಗಿವೆ. ಇಂಗ್ಲಿಷಿನಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಅರವಿಂದಭಕ್ತರೂ, ಬೇಂದ್ರೆ ಆರಾಧಕರೂ ಆಗಿದ್ದ ಗೋಕಾಕರು ೨೮-೪-೧೯೯೨ರಲ್ಲಿ ಮುಂಬಯಿಯಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೦,
ಅಧ್ಯಕ್ಷರು: ವಿನಾಯಕ ಕೃಷ್ಣ ಗೋಕಾಕ್
ದಿನಾಂಕ ೧೮, ೧೯, ೨೦ ಜನವರಿ ೧೯೫೮
ಸ್ಥಳ : ಬಳ್ಳಾರಿ

ಪೆನ್ ಕಾಂಗ್ರೆಸ್ ಸಮ್ಮೇಳನದ ಹಿರಿಮೆ

ಅಕಸ್ಮಾತ್ತಾಗಿ ಈ ಸಲ ಪ್ರಪ್ರಥಮವಾಗಿ ಏಷ್ಯ ಖಂಡದಲ್ಲಿ ನೆರೆದ ಜಾಗತಿಕ ಲೇಖಕರ ಸಮ್ಮೇಳನವಾದ ಪೆನ್ ಕಾಂಗ್ರೆಸ್ಸಿನಲ್ಲಿ ಭಾರತದ ಪ್ರತಿನಿಧಿಗಳಲ್ಲಿ ಒಬ್ಬನಾಗಿ ಭಾಗವಹಿಸುವ ಸುಸಂಧರ್ಭವು ನನಗೆ ಬಂದಿತ್ತು. ಇಷ್ಟು ವರ್ಷ ಭಾರತೀಯ ಪ್ರತಿನಿಧಿಗಳು ಇಂತಹ ಸಮ್ಮೇಳನದಲ್ಲಿರದೆ ಎಂತಹ ಅನುಭವವನ್ನು ನಾವು ಕಳೆದುಕೊಂಡವು ಎಂದೆನಿಸುವಂತಾಯಿತು. ಆಅವಶ್ಯಕತೆಯನ್ನು ವಿವರಿಸುವ ಕಾರಣವಿಲ್ಲ. ಸಾಹಿತ್ಯದ ಪ್ರಗತಿಯಲ್ಲಿ ಅವು ಮೈಲುಗಲ್ಲುಗಳಾಗಿ ನಿಲ್ಲಬಹುದು. ಆಯಾ ವರ್ಷದ ಸಾಹಿತ್ಯಿಕ ಪ್ರಶ್ನೆಗಳ ಮೇಲೆ ನಿಚ್ಚಳವಾದ ಪ್ರಕಾಶವನ್ನು ಕೆಡವಬಹುದು. ಆದರೆ ಈ ಎಲ್ಲ ಭಾರವನ್ನು ಹೊರುವ ಸ್ವಾಗತ ಸಮಿತಿ ಎಲ್ಲಿದೆ? ಯೋಜಕರೇ ಇಲ್ಲಿ ದುರ್ಬಲರಾಗಿದ್ದಾರೆ.

ಪುಸ್ತಕ ಭಂಡಾರಗಳ ಬಗ್ಗೆ ಪರಿಷತ್ತು ಯೋಚಿಸಲಿ

ಪ್ರಾತಿನಿಧಿಕ ಪುಸ್ತಕ ಭಂಡಾರಗಳೆಷ್ಟು ಕರ್ನಾಟಕದಲ್ಲಿವೆಯೆಂದು ಕೇಳುವ ಹಾಗಿದೆ. ದೊಡ್ಡ ಊರಿನ ವಿದ್ಯಾಸಂಸ್ಥೆಗಳು ಇದನ್ನು ಕೈಕೊಳ್ಳಬೇಕು. ಕನ್ನಡ ನಾಡಿನ ಎಲ್ಲಾ ಭಾಗಗಳಲ್ಲಿ ಅಚ್ಚಾದ ಕನ್ನಡ ಪುಸ್ತಕಗಳನ್ನು ವಿಷಯ ಯಾವುದೇ ಇರಲಿ ಒಂದೆಡೆಗೆ ಕಲೆಹಾಕಿ ನಾಡಿನ ದೊಡ್ಡ ದೊಡ್ಡ ಪಟ್ಟಣಗಳಲ್ಲಾದರೂ ಜನತೆಯ ಕಣ್ಣೆದುರಿಗಿರುವ ಪುಣ್ಯಾತ್ಮರು ಇಂದು ಬೇಕಾಗಿದ್ದಾರೆ. ಧಾರವಾಡದಲ್ಲಿ ಬೆಂಗಳೂರ ಪುಸ್ತಕಗಳಿಲ್ಲ, ಬೆಂಗಳೂರಲ್ಲಿ ಧಾರವಾಡದ ಪುಸ್ತಕಗಳಿಲ್ಲ. ಗುಲಬರ್ಗಾದಲ್ಲಿ ಬಹುಶಃ ಅವೂ ಇಲ್ಲ. ಇವು ಇರಲಾರವು. ಮಂಗಳೂರಿನಲ್ಲಿಯೂ ಹಾಗೆಯೇ. ಮಡಿಕೇರಿ ಅದಕ್ಕೂ ದೂರ. ಇಂಥ ಒಂದು ಪುಸ್ತಕ ಭಂಡಾರವಾದರೂ ಅಸ್ತಿತ್ವದಲ್ಲಿದೆಯೇನೆಂದು ಕೇಳುವ ಹಾಗಿದೆ. ಇದ್ದರೆ ಅದಕ್ಕೆ ಸಾರ್ವಜನಿಕ ಸಭೆಯಲ್ಲಿ ಮನ್ನಣೆ ಸಿಕ್ಕಬೇಕು. ಇದ್ದ ಪುಸ್ತಕ ಭಂಡಾರಗಳಲ್ಲಿ ಪ್ರಕಾಶಕ ಮಂಡಲಗಳೂ ಆಗಿರುವ ಭಂಡಾರಗಳೇ ಹೆಚ್ಚು. ಅಲ್ಲಿ ಹೆಚ್ಚಾಗಿ ಬೆಳಕಿಗೆ ಬರುವ ಪುಸ್ತಕಗಳೆಂದರೆ ಆಯಾ ಭಂಡಾರವೇ ಪ್ರಕಾಶಿಸಿದ ಹೊತ್ತಿಗೆಗಳು. ಹೀಗಾಗಿ ಮೊದಲು ನಮ್ಮ ಪುಸ್ತಕ ಭಂಡಾರಗಳಲ್ಲಿ ಕನ್ನಡ ಪುಸ್ತಕಗಳ ಏಕೀಕರಣ ಆಗಬೇಕಾಗಿದೆ. ಊರೂರಿಗೆ ಇಂತಹ ಏಕೀಕರಣ ಕೇಂದ್ರಗಳು ಬೇಕು. ಪರಿಷತ್ತಿನ ಸಮಿತಿಯವರು ಈ ವಿಷಯವನ್ನು ಕುರಿತು ಪರ್ಯಾಲೋಚಿಸುವ ಹಾಗಿದೆ.

ಲೇಖಕರಿಗೆ ಸೂಕ್ತ ಸಂಭಾವನೆ ಸಿಗಲಿ

ಒಳ್ಳೆಯ ಅಜ್ಞಾತ ಕೃತಿಗಳ ಪ್ರಕಾಶನ, ಇತ್ತೀಚೆಗೆ ಸದರ್ನ್‌ಬುಕ್ ಟ್ರಸ್ಟ್‌ದಿಂದ ಕನ್ನಡದಲ್ಲಿ ಉಳಿದ ದಕ್ಷಿಣ ಭಾಷೆಗಳ ಉತ್ತಮ ಕೃತಿಗಳ ಅನುವಾದಗಳು ಬರಹತ್ತಿವೆ. ಟ್ರಸ್ಟಿನಿಂದ ಹಾಗೂ ದಿಲ್ಲಿಯ ಅಕಾಡೆಮಿಯಿಂದ ಕನ್ನಡ ಕೃತಿಗಳ ಅನುವಾದಗಳು ಉಳಿದ ಭಾಷೆಗಳಲ್ಲಿ ಬೆಳಕು ಕಾಣಹತ್ತಿವೆ. ಜನಸಾಮಾನ್ಯರಲ್ಲಿ ಜ್ಞಾನಪ್ರಸಾರಕ್ಕಾಗಿ ಲಿಟರರಿ ಕೋ-ಅಪರೇಟಿವ್ ಸೊಸೈಟಿಯೊಂದು ಧಾರವಾಡದಲ್ಲಿ ಸ್ಥಾಪಿತವಾಗಿ ಈಗಾಗಲೆ ಆರೇಳು ಕೃತಿಗಳನ್ನು ಪ್ರಕಟಿಸಿದೆ ; ಲೇಖಕರಿಗೆ ಉಚಿತ ಸಂಭಾವನೆಯನ್ನು ಸಲ್ಲಿಸುತ್ತಿದೆ. ಆದರೆ ಕಾವ್ಯಕ್ಕೆ ಇಂತಹ ಪ್ರಕಟನೆಗಳಲ್ಲಿ ಸ್ವಾಭಾವಿಕವಾಗಿಯೇ ಹೆಚ್ಚಿನ ಸ್ಥಾನವಿರಲಾರದು. ಯೋಗ್ಯ ಪ್ರಥಮ ಕೃತಿಗಳ ಪ್ರಕಾಶನ ಸಂಸ್ಥೆಯೊಂದು ರೂಪಿತವಾಗಬೇಕಾಗಿದೆ. ಲೇಖಕರಿಗೆ ಸಲ್ಲಬೇಕಾದ ಸಂಭಾವನೆಯನ್ನು ಸಲ್ಲಿಸಿ ಅವರ ಕೃತಿಗಳ ಪ್ರಕಾಶನವನ್ನು ಕೈಕೊಳ್ಳುವ ಏರ್ಪಾಟು ಆಗಬೇಕಾಗಿದೆ. ಕೇರಳದಂತಹ ಚಿಕ್ಕ ಪ್ರಾಂತದಲ್ಲಿ ಇಂತಹ ಯೋಜನೆಯು ಊರ್ಜಿತಾವಸ್ಥೆಯಲ್ಲಿದ್ದು ನಮ್ಮಲ್ಲಿ ಇನ್ನೂ ಅದು ತಲೆದೋರದಿರುವುದು ವಿಚಾರಾಸ್ಪದವಾಗಿದೆ.

ಹೊರನಾಡುಗಳಲ್ಲಿ ಕನ್ನಡ ಮಂದಿರಗಳಿರಲಿ

ಹೊರನಾಡ ಕನ್ನಡಿಗರ ವಿಚಾರ. ಭಾರತದ ಪ್ರಮುಖ ನಗರಗಳಲ್ಲಿ ಭಾರತದ ಮುಖ್ಯ ಭಾಷೆಗಳೆಲ್ಲ ತಮ್ಮ ಸಭಾಮಂದಿರಗಳನ್ನು ಕಟ್ಟಿಸಿ ಕೊಂಡಿವೆ; ಅತಿಥಿಭವನಗಳನ್ನು ನಿಲ್ಲಿಸಿವೆ; ಪ್ರಾಥಮಿಕ ಶಾಲೆಗಳನ್ನು ಭಾಷೆಗಳ ಈ ಸಹೋದರರು ಹೋದಲ್ಲೆಲ್ಲ ತಮ್ಮ ಭಾಷಾ-ಸಂಸ್ಕೃತಿಗಳ ಜೀವಂತ ಸಂಪರ್ಕವನ್ನಿಟ್ಟುಕೊಳ್ಳುವುದು ಸಾಧ್ಯವಾಗಿದೆ. ಕನ್ನಡಕ್ಕೆ ಇನ್ನೂ ಈ ಸೌಭಾಗ್ಯ ದೊರೆಯದಿರುವದು ವಿಷಾದಕರ. ನಾವೇ ಹೊರಗಿರುವ ನಮ್ಮ ನಾಡವರನ್ನು ಈ ರೀತಿ ಉಪೇಕ್ಷಿಸಿರುವಾಗ ಅವರು ನಮ್ಮ ಬಗ್ಗೆ ಏನೆಂದು ಅಭಿಮಾನಪಡಬೇಕು ? ಪರಿಷತ್ತು ಈ ದಾರಿಯಲ್ಲಿ ಪರಿಕ್ರಮಿಸಿ ರಾಜ್ಯ ಸರಕಾರದ ಹಾಗೂ ಉಳಿದ ಸಂಸ್ಥೆಗಳ ಸಹಕಾರವನ್ನು ಪಡೆದು ಮೊದಲು ದಿಲ್ಲಿಯಲ್ಲಿಯೂ ಭಾಷಾ ರಾಜ್ಯಗಳಲ್ಲಿಯೂ ಕೇಂದ್ರ ನಗರಗಳಲ್ಲಿಯೂ ಈ ಸೌಕರ್ಯಗಳನ್ನು ಒದಗಿಸಿಕೊಡುವದು ಅತ್ಯಗತ್ಯವಾಗಿದೆ. ಇದರಲ್ಲಿ ವಿಳಂಬವಾದಷ್ಟು ನಮಗೇ ಹಾನಿ. ಹೊರನಾಡ ಕನ್ನಡಿಗರ ಸಂಸ್ಥೆಯು ಈ ಕೆಲಸದಲ್ಲಿ ಎಲ್ಲ ಸಹಾಯವನ್ನು ಒದಗಿಸುವುದರಲ್ಲಿ ಸಂಶಯವಿಲ್ಲ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹುಟ್ಟಿದಾಗ ಅದು ಎಣಿಸಿದ ಗುರಿಗಳೆಲ್ಲ ಬಹುಶಃ ಇಂದು ಸಾಧಿಸಿವೆ. ಹೊರನಾಡ ಕನ್ನಡಿಗರ ಜೀವನಕ್ಕೆ ಒಂದು ವ್ಯವಸ್ಥೆಯನ್ನು ತಂದೊದಗಿಸುವ ಕಾರ್ಯವನ್ನು ಸಂಘವು ಸಹ ನೀಗಿಸುವುದು ಸಾಧ್ಯ.

ಕನ್ನಡದ ಸ್ಥಾನಮಾನದ ಚಿಂತನೆ

ಹಿಂದೆ ಉಲ್ಲೇಖಿಸಿದಂತೆ ಅನ್ಯ ಪ್ರಾಂತಗಳಲ್ಲಿ ಸೇರ್ಪಡೆಯಾದ ಕನ್ನಡ ಭಾಗಗಳಲ್ಲಿ ಆಗಬೇಕಾದ ಸಾಂಸ್ಕೃತಿಕ ಕಾರ್ಯವನ್ನೂ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಕನ್ನಡಕ್ಕೆ ದೊರೆಯಬೇಕಾದ ಸ್ಥಾನಮಾನಗಳನ್ನೂ ಇಲ್ಲಿ ನೆನೆಯಬಹುದು.

ಕೆಲವೊಂದು ಕೊರತೆಗಳು

ಕೆಲವೊಂದು ಕೊರತೆಗಳನ್ನು ಇಲ್ಲಿ ಎತ್ತಿ ತೋರಿಸಿದೆ. ಸರ್ವಸಂಗ್ರಹದಂಥ ಪಟ್ಟಿಯನ್ನು ಇಲ್ಲಿ ಮಾಡುವ ಕಾರಣವಿಲ್ಲ. ಉದಾಹರಣೆಗಾಗಿ, ಕನ್ನಡ ಟೈಪ್‌ರೈಟರ್ ಹಾಗೂ ಶಾರ್ಟ್ ಹ್ಯಾಂಡ್, ಕನ್ನಡ ರಾಜ್ಯದ ಸರಕಾರಕ್ಕೆ ಇದು ಮಹತ್ವದ ಪ್ರಶ್ನೆಯಾಗಿರುವುದರಿಂದ ಇಂದಿಲ್ಲ ನಾಳೆ ಅವು ಬಳಕೆಯಲ್ಲಿ ಬಂದೆ ಬರುತ್ತವೆ. ಕನ್ನಡ ಜ್ಞಾನಕೋಶ ಸರಕಾರದ ಸಾಂಸ್ಕೃತಿಕ ಶಾಖೆಯಲ್ಲಿ ತೀವ್ರವಾಗಿ ರೂಪುಗೊಳ್ಳುತ್ತಲಿದೆ. ಕನ್ನಡ-ಕನ್ನಡ ಶಬ್ದಕೋಶವನ್ನು ಪರಿಷತ್ತು ತಯಾರಿಸುತ್ತಿದೆ. ಕನ್ನಡ ಸಾಹಿತ್ಯದ ಬೃಹತ್ ಚರಿತ್ರೆಯ ಹೊಣೆಯನ್ನು ಕರ್ನಾಟಕ ವಿಶ್ವವಿದ್ಯಾನಿಲಯವು ಹೊತ್ತುಕೊಂಡಿದೆ. ವಿಮರ್ಶಾತ್ಮಕ ಉಪನ್ಯಾಸ ಮಾಲೆಯೊಂದನ್ನೂ ವೈಜ್ಞಾನಿಕ ವಾಙ್ಮಯದ ನಿರ್ಮಾಣವನ್ನೂ ಮೈಸೂರು ವಿಶ್ವವಿದ್ಯಾಲಯವು ತ್ವರೆಯಿಂದ ನಡೆಯಿಸಿಕೊಂಡು ಬಂದಿದೆ. ಅಂತೂ ಕನ್ನಡದ ಭಾಗ್ಯ ತೆರೆಯುವ ಸಮಯ ಬಂದಿದೆ. ಇಂತಹ ಸಮಯದಲ್ಲಿ ಅನೇಕ ಗ್ರಹಣಗಳು ತಾವಾಗಿಯೇ ಬಿಡುತ್ತವೆ.

❖❖

೪೧ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್



ಕನ್ನಡದ ಪ್ರಕಾಂಡ ಪಂಡಿತ, ಸಹೃದಯರು ಸಂಶೋಧಕ ಶ್ರೇಷ್ಠ ಸಂಶೋಧಕ ಆಚಾರ್ಯ ದೊಡ್ಡ ಬೆಲೆ ಲಕ್ಷ್ಮೀನರಸಿಂಹಾಚಾರ್ಯ ಅವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಶ್ಯಾಮಯ್ಯಂಗಾರ್ – ಲಕ್ಷ್ಮಮ್ಮನವರ ಸುಪುತ್ರರಾಗಿ ೨೭-೧೦-೧೯೦೬ರಂದು ಜನಿಸಿದರು. ಬಾಲ್ಯದ ವಿದ್ಯಾಭ್ಯಾಸವನ್ನು ಪಾವಗಡ, ಸಿರಾ ತುಮಕೂರುಗಳಲ್ಲಿ ಮುಗಿಸಿ ೧೯೨೭ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದು, ನಂತರ ೧೯೨೯ರಲ್ಲಿ ಎಂ.ಎ. ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪಡೆದರು.

೧೯೩೦ರಲ್ಲಿ ಮೈಸೂರು ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ರೆಸಿಡೆಂಟ್ ಕನ್ನಡ ಪಂಡಿತರಾಗಿ ನೇಮಕವಾದರು. ೧೯೩೯ರಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿ, ೧೯೫೬ರಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೩೧-೩-೧೯೬೨ರಲ್ಲಿ ನಿವೃತ್ತರಾದರು. ಅನಂತರ ಕೆಲವು ಕಾಲ ಯುಜಿಸಿ ಅಧ್ಯಾಪಕರಾಗಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಸದಸ್ಯ, ಉಪಾಧ್ಯಾಕ್ಷ, ಅಧ್ಯಕ್ಷ, ಸಂಪಾದಕರಾಗಿ ವಿಧಿವಶರಾಗುವವರೆಗೂ (೮-೫-೧೯೭೧ವರೆಗೆ) ಶಕ್ತಿ ಮೀರಿ ದುಡಿದರು.

ಅವರು ೧೯೪೯ರಿಂದ ೧೯೬೨ ಪ್ರಬುದ್ಧ ಕರ್ನಾಟಕದ ಪ್ರಧಾನ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು.

೧೯೬೮ರಲ್ಲಿ ಡಿಎಲ್‌ಎನ್ ಅಭಿಮಾನಿಗಳು ಉಪಾಯನವೆಂಬ ವಿದ್ವತ್ ಗ್ರಂಥ ಅರ್ಪಿಸಿ ಸನ್ಮಾನ ಮಾಡಿದರು. ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತು. ಮೈಸೂರು ವಿಶ್ವವಿದ್ಯಾನಿಲಯ ೧೯೭೦ರಲ್ಲಿ ಡಿ.ಎಲ್.ಎನ್. ಅವರಿಗೆ ಗೌರವ ಡಾಕ್ಟರೇಟ್ ನೀಡಿತು. ೧೯೬೦ರಲ್ಲಿ ಬೀದರ್‌ನಲ್ಲಿ ನಡೆದ ೪೧ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು.

ಚಲಿಸುವ ವಿಶ್ವಕೋಶವೆಂದು ಹೆಸರುಗಳಿಸಿದ್ದ, ಹಳಗನ್ನಡದ ಪ್ರಕಾಂಡ ಪಂಡಿತರಾಗಿದ್ದ, ಅಪಾರ ನೆನಪಿನ ಶಕ್ತಿಯ ದೊಡ್ಡಬೆಲೆ ನರಸಿಂಹಾಚಾರ್ (ಡಿಎಲ್‌ಎನ್) ಅವರ ಕೃತಿಗಳು ಪಾಂಡಿತ್ಯಪೂರ್ಣವಾದವು; ದೀರ್ಘ ಪರಿಶ್ರಮದಿಂದ ಸಂಪಾದಿತವಾದವು.

ವಡ್ಡಾರಾಧನೆ, ಭೀಷ್ಮಪರ್ವ, ಪಂಪಭಾರತ ದೀಪಿಕೆ, ಶಬ್ದಮಣಿ ದರ್ಪಣಂ, ಸಿದ್ಧರಾಮ ಚಾರಿತ್ರ ಸಂಗ್ರಹ, ಸುಕುಮಾರ ಚರಿತಂ, ಕನ್ನಡ ಗ್ರಂಥಸಂಪಾದನೆ, ಪಂಪರಾಮಾಯಣ ಸಂಗ್ರಹ, ಗೋವಿನ ಹಾಡು, ಇತ್ಯಾದಿ ಇವರ ಕೃತಿಗಳು.

ಪೀಠಿಕೆಗಳು ಮತ್ತು ಲೇಖನಗಳು ಅವರ ಸಂಶೋಧನ ಬರಹಗಳ ಸಂಕಲನವಾಗಿದೆ.

ಕನ್ನಡ ಸಾಹಿತ್ಯದಲ್ಲಿ ವಿದ್ವತ್ತಿನ ಮೇರು ಶಿಖರವಾಗಿದ್ದ ಡಿಎಲ್‌ಎನ್ ಅವರು ೮-೫-೧೯೭೧ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೧
ಅಧ್ಯಕ್ಷರು: ಡಿ.ಎಲ್. ನರಸಿಂಹಾಚಾರ್ಯ
ದಿನಾಂಕ ೧೧, ೧೨, ೧೩ ಫೆಬ್ರವರಿ ೧೯೬೦
ಸ್ಥಳ : ಬೀದರ್

ಸಮ್ಮೇಳನಾಧ್ಯಕ್ಷರುಗಳ ಭಾಷಣಗಳ ಸಾರ

ಈಗ ಇಲ್ಲಿ ನಡೆಯುತ್ತಿರುವ ಸಮಾರಂಭ ನಲ್ವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನವಾಗಿದೆಯಷ್ಟೆ? ಹಿಂದೆ ಅಧ್ಯಕ್ಷರ ಪದವಿಯನ್ನು ಬೆಳಗಿದ ಮಹಾನುಭಾವರನ್ನೂ ಅವರ ವಾಗಮೃತವನ್ನೂ ಸ್ಮರಿಸಿಕೊಂಡರೆ ಎಂತವನಿಗಾದರೂ ರೋಮಾಂಚನವಾಗುತ್ತದೆ. ಅವರ ನಡೆ ನುಡಿಗಳ ಭಕ್ತಿ, ಅವರು ಸಲ್ಲಿಸಿರುವ ತ್ಯಾಗಮುಖವಾದ ಸೇವೆ, ಅವರು ನಿರ್ಮಿಸಿರುವ ಕೃತಿಗಳು, ಅವರು ಕೈಗೊಂಡ ಯೋಜನೆಗಳು, ಅವರು ಕಂಡ ಕನಸುಗಳು ಇವೆಲ್ಲಾ ಇಂದಿಗೂ ಕನ್ನಡದ ಕೆಲಸಗಾರರಿಗೆ ಸ್ಫೂರ್ತಿಯನ್ನು ಕೊಡತಕ್ಕವು. ಕನ್ನಡ ನಾಡಿನ ಏಕೀಕರಣ, ಏಕರೂಪವಾದ ಆಡಳಿತದ ವ್ಯವಸ್ಥೆ, ಬೇರೆ ಬೇರೆ ಪ್ರದೇಶಗಳ ಕನ್ನಡಿಗರಲ್ಲಿ ಪರಸ್ಪರ ಸೌಹಾರ್ದಸಾಧನೆ, ಎಲ್ಲ ಪ್ರದೇಶಗಳಿಗೂ ಸಮಾನವಾದ ಗ್ರಾಂಥಿಕ ವ್ಯವಹಾರಿಕ ಭಾಷೆಯ ನಿರ್ಮಾಣ, ಕನ್ನಡದ ಸ್ಥಾನಮಾನ ವಿಚಾರ, ಕನ್ನಡ ನಾಡಿನ ಭಾಷಾಸಮಸ್ಯೆಗಳು, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸುವುದು, ಹಳೆಯ ಸಾಹಿತ್ಯದ ರಕ್ಷಣೆ ಉದ್ಧಾರ ಪ್ರಚಾರಗಳು, ಹೊಸ ಸಾಹಿತ್ಯಕ್ಕೆ ಪ್ರೋತ್ಸಾಹ, ಪಾಂಡಿತ್ಯ ರಸಿಕತೆಗಳ ಬೆಳವಣಿಗೆ, ಸಾಹಿತಿಗಳಿಗೆ ಸನ್ಮಾನ ಸತ್ಕಾರಗಳು, ಕನ್ನಡಿಗರ ರಾಜಕೀಯ ಸಾಮಾಜಿಕ ಧಾರ್ಮಿಕ ಇತಿಹಾಸದ ರಚನೆ ಮತ್ತು ಅದಕ್ಕಾಗಿ ನಡೆಯಬೇಕಾದ ಸಂಶೋಧನೆ, ಸುಪುಷ್ಟವೂ ಸಶಾಸ್ತ್ರೀಯವೂ ಆಗಿರುವ ಕನ್ನಡ ಬೃಹತ್ಕೋಶದ ನಿರ್ಮಾಣ, ವಿಶ್ವಕೋಶದ ರಚನೆ, ವೈಜ್ಞಾನಿಕ ಸಾಮಾಜಿಕ ಶಾಸ್ತ್ರೀಯ ಗ್ರಂಥಗಳ ರಚನೆ-ಹೀಗೆ ಒಂದೇ ಎರಡೇ ಅವರು ತಮ್ಮೆದುರಿಗೆ ಕಟ್ಟಿಕೊಂಡಿದ್ದ ಸ್ವಪ್ನಮಂದಿರಗಳು! ಇವೆಲ್ಲ ಹಿನ್ನೆಲೆಯಾಗಿ ಭಾರತದ ಸ್ವಾತಂತ್ರ್ಯ ಸಾಧನೆಯ ಮಹಾಕಾರ್ಯದಲ್ಲಿ ಹಿಮಾಚಲದೃಶರಾದ ಮಹಾತ್ಮ ಗಾಂಧೀಜಿಯವರು ಹರಿಯಬಿಟ್ಟಿದ್ದ ಶಕ್ತಿವಾಹಿನಿಯ ಅದಮ್ಯ ನಿರ್ಘೋಷ!

❖❖

೪೨ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಅ.ನ. ಕೃಷ್ಣರಾಯರು



ಕಾದಂಬರಿ ಸಾರ್ವಭೌಮರೆನಿಸಿದ್ದ ಕನ್ನಡದ ಜನಪ್ರಿಯ ಕಾದಂಬರಿಕಾರ ಅನಕೃ ಅವರು (ಅರಕಲಗೂಡು ನರಸಿಂಗರಾವ್ ಕೃಷ್ಣರಾವ್) ನರಸಿಂಗರಾವ್-ಅನ್ನಪೂರ್ಣಮ್ಮ ದಂಪತಿಗಳಿಗೆ ೯-೫-೧೯೦೮ರಲ್ಲಿ ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಕೋಲಾರದಲ್ಲಿ ಮುಗಿಸಿ, ಬೆಂಗಳೂರಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ದೇಶೀಯ ವಿದ್ಯಾಶಾಲೆಯಲ್ಲಿ ಪಡೆದರು. ಮೆಟ್ರಿಕ್ ಓದುತ್ತಿದ್ದಾಗ ಶಾಂತಿನಿಕೇತನಕ್ಕೆ ಹೋಗಿ ಬಂದರು.

ಬರಹ ಮಾಡಿಯೇ ಬದುಕುವ ಛಲದ ಅನಕೃ ಅವರು ಪತ್ರಿಕಾಕ್ಷೇತ್ರಕ್ಕೆ ಪ್ರವೇಶಿಸಿ ಕಥಾಂಜಲಿ, ಬಾಂಬೆ ಕ್ರಾನಿಕಲ್, ವಿಶ್ವವಾಣಿ ಪತ್ರಿಕೆಗಳನ್ನು ನಡೆಸಿದರು. ೧೯೪೩-೪೪ರಲ್ಲಿ ಪ್ರಗತಿಶೀಲ ಸಾಹಿತ್ಯದ ಚಳವಳಿಯಲ್ಲಿ ನಿರತರಾದರು. ಬಿಎಂಶ್ರೀ ಅವರ ಕಾಲದಲ್ಲಿ ಕನ್ನಡ ನುಡಿ ಸಂಪಾದಕರಾಗಿ ದಿವಾಕರರ ಹಿಂದಿ ಪ್ರತಿಪಾದನೆಯನ್ನು ವಿರೋಧಿಸಿ ಪತ್ರಿಕೆಯನ್ನು ತೊರೆದರು.

ಕನ್ನಡ ಚಳವಳಿ ನೇತಾರರಾಗಿ ರಾಮಮೂರ್ತಿ ಅವರೊಡನೆ ಸೇರಿ ಕನ್ನಡಿಗರಲ್ಲಿ ಜನಜಾಗೃತಿ ಮೂಡಿಸಿ ಕನ್ನಡಾಭಿಮಾನ ಬೆಳೆಸಿದರು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಮೊದಲ ಅಧ್ಯಕ್ಷರಾದರು. ತಮ್ಮ ಅದ್ಭುತ ವಾಗ್ವೈಖರಿಯಿಂದ ನಾಡಿನಲ್ಲೆಲ್ಲಾ ಜನಪ್ರಿಯರಾದರು. ಗೃಹಲಕ್ಷ್ಮೀ ಕಾದಂಬರಿಯಿಂದ ಮೊದಲ್ಗೊಂಡು ಸುಲಭ ಕೈ ಹೊತ್ತಿಗೆಗಳ ಮೂಲಕ ಕನ್ನಡ ಓದುಗರನ್ನು ಹೆಚ್ಚಿಸಿದ್ದು ಇವರ ಅಗ್ಗಳಿಕೆ ಆಗಿದೆ.

ಮೈಸೂರು ವಿಶ್ವವಿದ್ಯಾಲಯ ೧೯೭೦ರಲ್ಲಿ ಗೌರವ ಡಾಕ್ಟರೇಟ್ ಅನ್ನು ಅನಕೃಗೆ ನೀಡಿ ಸನ್ಮಾನಿಸಿತು. ಸಾಹಿತ್ಯ ಪರಿಷತ್ತು ೧೯೬೦ರಲ್ಲಿ ಮಣಿಪಾಲದಲ್ಲಿ ನಡೆದ ೪೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆಮಾಡಿತು.

ಸಾಹಿತ್ಯ, ಸಂಗೀತ, ಚಿತ್ರಕಲೆ, ನಾಟ್ಯ, ನಾಟಕ ಕಲೆಗಳಲ್ಲಿ ಅಪಾರ ಒಲವು, ವಿಮರ್ಶಾ ಶಕ್ತಿ ಇದ್ದ ಅನಕೃ ಅವರು ಅವೆಲ್ಲ ವಿಷಯಗಳ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. ೧೦೦ಕ್ಕೂ ಹೆಚ್ಚಿನ ಕಾದಂಬರಿಗಳನ್ನು ರಚಿಸಿ ಕಾದಂಬರಿ ಸಾರ್ವಭೌಮರೆನಿಸಿದವರು ಅನಕೃ ಅವರು. ನಟಸಾರ್ವಭೌಮವೆಂಬ ಬೃಹತ್ಕಾದಂಬರಿಯನ್ನು, ಸಾಹಿತ್ಯ ಮತ್ತು ಕಾಮಪ್ರಚೋದನೆಯೆಂಬ ವಿಮರ್ಶಾ ಕೃತಿಯನ್ನು ಬರೆದಿದ್ದಾರೆ. ಕನ್ನಡ ಕುಲರಸಿಕರು(ಜೀವನ ಚರಿತ್ರೆ) ಬರಹಗಾರನ ಬದುಕು (ಆತ್ಮಕಥೆ) ಬಣ್ಣದ ಬೀಸಣಿಗೆ, ಮದುವೆಯೋ ಮನೆಹಾಳೋ (ನಾಟಕಗಳು) ಗಾರ್ಕಿಯ ಕಥೆಗಳು, ಸ್ಟೋರಿ ಆಫ್ ಇಂಡಿಯಾ (ಅನುವಾದಗಳು) ಕರ್ನಾಟಕ ಕಲಾವಿದರು ಮುಂತಾದ ೨೦೦ಕ್ಕೂ ಮೀರಿ ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಉಜ್ವಲನಕ್ಷತ್ರವೆನಿಸಿದ್ದ ಅನಕೃ ಅವರು ೪-೭-೧೯೭೧ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೨
ಅಧ್ಯಕ್ಷರು: ಅ.ನ.ಕೃಷ್ಣರಾಯ
ದಿನಾಂಕ ೨೭, ೨೮, ೨೯ ಡಿಸೆಂಬರ್ ೧೯೬೦
ಸ್ಥಳ : ಮಣಿಪಾಲ

ಸಮ್ಮೇಳಾನಧ್ಯಕ್ಷರ ಅಧಿಕಾರ

ಸಾಹಿತ್ಯ ಸಮ್ಮೇಳನದ ಸ್ಥಾನಬಲದಿಂದ ನಾನು ಕನ್ನಡನಾಡಿನ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದೆಂದೂ, ಕನ್ನಡ ಸಾಹಿತ್ಯ ಪರಿಷತ್ತನ್ನು ಪುನರುಜ್ಜೀವನಗೊಳಿಸಬಹುದೆಂದೂ ತಾವು ದೃಢವಾಗಿ ನಂಬಿದ್ದೀರಿ. ಸಮ್ಮೇಳನಾಧ್ಯಕ್ಷರ ಸ್ಥಾನ ಅಲಂಕಾರಸ್ಥಾನವಾಗಿದೆ. ಪರಿಷತ್ತಿನ ಘಟನೆಯಂತೆ ಸಮ್ಮೇಳನಾಧ್ಯಕ್ಷರಿಗೆ ಯಾವ ಅಧಿಕಾರವೂ ಇಲ್ಲ. ಸಮ್ಮೇಳಾನಧ್ಯಕರಿಂದ ಯಾವುದಾದರೂ ಕೆಲಸವಾಗಬೇಕಾದಲ್ಲಿ ಪರಿಷತ್ತಿನ ಘಟನೆಯನ್ನು ಮಾರ್ಪಡಿಸುವುದು ಅಗತ್ಯ. ಸ್ಥಾನಬಲದಿಂದಲ್ಲದಿದ್ದರೂ ವ್ಯಕ್ತಿಬಲದಿಂದ ನಾನು ಕನ್ನಡ ನಾಡು ನುಡಿಗಳಿಗೆ ಸಲ್ಲಿಸುತ್ತ ಬಂದಿರುವ ಸೇವೆಯನ್ನು ಇನ್ನು ಮುಂದೆಯೂ ಸಲ್ಲಿಸುತ್ತೇನೆ.

ಕನ್ನಡ ನಿಘಂಟು ಕೆಲಸ ಆರಂಭವಾಗಿದ್ದು ೨೭-೧-೧೯೪೪ರಲ್ಲಿ

ಈಗ್ಗೆ ಹದಿನಾರು ವರ್ಷಗಳ ಕೆಳಗೆ: ಸಂಪಾದಕ, ಮಂಡಳಿ ೧೬ ವರ್ಷಗಳಲ್ಲಿ ೧೫೩ ಪುಟಗಳನ್ನು ಹಸ್ತಪ್ರತಿಸಿದ್ಧಗೊಳಿಸಿದೆ. ಸುಮಾರು ಐದು ಸಾವಿರ ಪುಟಗಳಾಗುವ ಈ ನಿಘಂಟಿಗೆ ಹದಿನೈದು ಲಕ್ಷ ರೂಪಾಯಿಗಳು ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ. ಸರ್ಕಾರ ಈಗಾಗಲೇ ರೂ. ೧,೨೪,೭೫೦ ವ್ಯಯ ಮಾಡಿದೆ. 'ಆವಶ್ಯಕವಾದ ಧನಸಹಾಯ ತಕ್ಕ ಪ್ರಮಾಣದಲ್ಲಿ ಇನ್ನೂ ಒದಗದಿರುವುದೇ ಕೆಲಸ ನಿಧಾನವಾಗಿರುವುದಕ್ಕೆ ಕಾರಣ'ವೆಂದು ಕನ್ನಡ ಕೋಶದ ಸಂಪಾದಕರು ಅಭಿಪ್ರಾಯಪಡುತ್ತಾರೆ.

ಕನ್ನಡ ಶಬ್ದಕೋಶಕ್ಕಾಗಿ ಅನೇಕ ವರ್ಷಗಳು ಶ್ರಮಿಸಿದ ಪಂಡಿತರು ಸಂಪಾದಕ ಮಂಡಳಿಯಲ್ಲಿಲ್ಲ. ಸಂಪಾದಕ ಮಂಡಳಿಯಲ್ಲಿರುವ ಕೆಲವು ಸದಸ್ಯರು ಒಂದೇ ಒಂದು ಸಭೆಗೂ ಬರುವ ಕೃಪೆ ತೋರಿಲ್ಲ. ಸರ್ಕಾರದ ಘನ ಯೋಜನೆಗಳು ಶ್ರದ್ಧೆ, ದಕ್ಷತೆಯ ಅಭಾವದಿಂದ ವಿರೂಪಗೊಳ್ಳುತ್ತಿರುವುದು ಶೋಚನೀಯ.

ನಿಘಂಟಿನ ಸಂಪಾದಕ ಮಂಡಳಿಯೂ ಪುನರ್ವ್ಯವಸ್ಥೆಗೊಳ್ಳಬೇಕು. ಈ ಕೆಲಸ ತೀವ್ರವಾಗಿ ಮುಗಿದು, ಕನ್ನಡ ನಿಘಂಟು ಬೇಗ ಕನ್ನಡಿಗರ ಕೈಸೇರುವಂತಾಗಲು ಸರ್ಕಾರ ಹಣವನ್ನೊದಗಿಸಬೇಕು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ

ಸಾಹಿತ್ಯ ಪರಿಷತ್ತು ಕನ್ನಡನಾಡಿನ ಪ್ರಪ್ರಥಮ ಸಾಹಿತ್ಯ ಸಂಸ್ಕೃತಿ ಸಂವರ್ಧಕ ಸಂಸ್ಥೆ ಎಂಬ ವಾದವನ್ನಾರಂಭಿಸಿದ ಮಹನೀಯರು ಇಲ್ಲಸಲ್ಲದ ಗೊಂದಲಕ್ಕೆ ಎಡೆಮಾಡಿಕೊಟ್ಟರು. ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾದುದು ೧೯೧೫ರಲ್ಲಿ ; ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹುಟ್ಟಿದುದು ೧೮೯೦ರಲ್ಲಿ ಪರಿಷತ್ತಿಗಿಂತ ವಿದ್ಯಾವರ್ಧಕ ಸಂಸ್ಥೆ ಕಾಲು ಶತಮಾನ ಹಳೆಯದೆನ್ನುವುದು ಐತಿಹಾಸಿಕ ಸತ್ಯ.

'ಉತ್ತರ ಕರ್ನಾಟಕದಲ್ಲಿ ಶಾಂತಕವಿಗಳು, ಚುರುಮುರಿ ಮೊದಲಾದ ಮಹನೀಯರೂ, ಮಂಗಳೂರು ಪ್ರಾಂತ್ಯದಲ್ಲಿ ಪಂಜೆ ಮಂಗೇಶರಾಯರೂ, ರಾಜಗೋಪಾಲಕೃಷ್ಣರಾಯರೂ ಮೊದಲಾದ ಮಹನೀಯರೂ ತಮ್ಮ ಕೃತಿಗಳಿಂದ ಜಾಗೃತಿಯನ್ನುಂಟುಮಾಡಿದರು. ಹೀಗೆ ಕನ್ನಡನಾಡಿನಲ್ಲೆಲ್ಲ ಒಂದು ಹೊಸ ಚೈತನ್ಯ ಸ್ಫೂರ್ತಿಯೂ ಉಂಟಾದುವು. **ಮೊದಲು ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಹುಟ್ಟಿತು.** ಶ್ರೀ ಜಯಚಾಮರಾಜೇಂದ್ರ ಒಡೆಯರು ಸಂಘದ ಕಟ್ಟಡಕ್ಕೆ ಉದಾರವಾಗಿ ಧನಸಹಾಯಮಾಡಿ, ಅದರ ಆಸ್ತಿಭಾರವನ್ನು ಹಾಕಿ ನಾಡುನುಡಿಗಳ ಏಕೀಕರಣಕ್ಕೆ ಕನ್ನಡಿಗರ ಹೃದಯ ಹೇಗೆ ಮಿಡಿಯುತ್ತಿರುವುದೆಂಬುದನ್ನು ಪ್ರತ್ಯಕ್ಷವಾಗಿ ತೋರಿದರು.'

೧೯೧೫ರಲ್ಲಿ ಪರಿಷತ್ತಿನ ಧ್ಯೇಯೋದ್ದೇಶಗಳು

೧೯೧೫ನೆಯ ಮೇ ತಿಂಗಳು ೩ನೆಯ ತಾರೀಖಿನ ದಿನ ಮೊದಲ ಸಮ್ಮೇಳನ ನಡೆದು ಪರಿಷತ್ತು ಸ್ಥಾಪಿತವಾಯಿತು. ಈ ರೀತಿ ಸ್ಥಾಪಿತವಾದ ಪರಿಷತ್ತಿನ ಉದ್ದೇಶಗಳು ಯಾವುದೆಂದರೆ:

೧. ಕನ್ನಡ ಭಾಷೆಯಲ್ಲಿ ಪಂಡಿತ ಯೋಗ್ಯವಾದ ವ್ಯಾಕರಣ, ಚರಿತ್ರೆ ನಿಘಂಟು ಈ ಮೂರನ್ನೂ ಬರೆಯಿಸುವುದು, ಅಥವಾ ಬರೆಯುವುದಕ್ಕೆ ಸಹಾಯ ಮಾಡುವುದು.

೨. ನವೀನ ಶಾಸ್ತ್ರಗಳಿಗೆ ಸಂಬಂಧಪಟ್ಟ ಕನ್ನಡ ಗ್ರಂಥಗಳಲ್ಲಿ ಪ್ರಯೋಗಿಸಲು ಯೋಗ್ಯವಾದ ಪಾರಿಭಾಷಿಕ ಶಬ್ದಗಳ ಕೋಶವನ್ನು ಪ್ರಕಟಿಸುವುದು.

೩. ತತ್ವಶಾಸ್ತ್ರ ಪ್ರಕೃತಿ ವಿಜ್ಞಾನ, ಚರಿತ್ರೆ, ಸಾಹಿತ್ಯ ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಡುವ ಗ್ರಂಥಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ಪ್ರೋತ್ಸಾಹಕೊಟ್ಟು ಅವುಗಳನ್ನು ಪ್ರಚುರಪಡಿಸುವುದು.

೪. ಕನ್ನಡ ಭಾಷೆಗೂ ಕನ್ನಡ ಗ್ರಂಥಗಳಿಗೂ ಸಂಬಂಧಪಟ್ಟ ಎಲ್ಲಾ ಚರ್ಚಾಂತರಗಳನ್ನೂ ವಿಚಾರಮಾಡಿ ನಿರ್ಣಯಿಸುವುದು.

೫. ಕನ್ನಡವನ್ನುಳಿದು ಇತರ ಭಾಷೆಗಳಲ್ಲಿರುವ ಉತ್ತಮ ಗ್ರಂಥಗಳನ್ನು ಕನ್ನಡಿಸಿ ಪ್ರಕಟಿಸುವುದು.

೬. ಉತ್ಕೃಷ್ಟವಾದ ಪ್ರಾಚೀನ ಗ್ರಂಥಗಳನ್ನೂ, ಕನ್ನಡ ದೇಶಗಳ ಚರಿತ್ರೆಯನ್ನೊಳಗೊಂಡ ಗ್ರಂಥಗಳನ್ನೂ, ಸಂಗ್ರಹಿಸಿ, ಅವನ್ನು ಪರಿಷ್ಕರಿಸಿ ಪ್ರಕಟಿಸುವುದೂ ಅಲ್ಲದೆ ಕನ್ನಡ ನಾಡಿನ ಪೂರ್ವಸ್ಥಿತಿಯನ್ನು ವಿಶದಗೊಳಿಸುವ ವಸ್ತುಗಳನ್ನು ಕೂಡಿಟ್ಟು ಅವುಗಳನ್ನು ಕಾಪಾಡುವುದಕ್ಕಾಗಿ ಪ್ರಾಚೀನ ವಸ್ತುಸಂಗ್ರಹಾಲಯವನ್ನೇರ್ಪಡಿಸುವುದು.

೭. ಕರ್ನಾಟಕ ಭಾಷಾ ಸಂಸ್ಕರಣ, ಕರ್ನಾಟಕ ಗ್ರಂಥಾಭಿವೃದ್ಧಿಗಳನ್ನು ಕುರಿತು ಪಂಡಿತ ಯೋಗ್ಯವಾದ ಲೇಖನಗಳನ್ನೊಳಗೊಂಡು ಕನ್ನಡದ ಪತ್ರಿಕೆಗಳನ್ನು ಪ್ರಕಟಿಸುವುದು.

೮. ಕರ್ನಾಟಕ ಗ್ರಂಥಕರ್ತರು ಬರೆದಿರುವ ಪುಸ್ತಕಗಳನ್ನು ಕೊಂಡು ಕೊಳ್ಳುವುದರಿಂದಾಗಲಿ, ಅವರು ಬರೆದಿರುವ ಪುಸ್ತಕಗಳನ್ನು ಅಚ್ಚುಹಾಕಿಸಿಕೊಳ್ಳುವುದಕ್ಕೆ ಮುಂಗಡವಾಗಿ ಹಣವನ್ನು ಕೊಡುವುದರಿಂದಾಗಲಿ ಅದರ ಗ್ರಂಥಗಳ ಮುದ್ರಣಾಧಿಕಾರವನ್ನೂ (Copyright) ಹಣಕೊಟ್ಟು ತೆಗೆದುಕೊಳ್ಳುವುದರಿಂದಾಗಲಿ ಅವರಿಗೆ ಪ್ರೋತ್ಸಾಹಕೊಟ್ಟು, ಸ್ವತಂತ್ರ ಗ್ರಂಥಗಳನ್ನು ಬರೆದು ತಾವೇ ಹಣ ವೆಚ್ಚಮಾಡಿ ಪ್ರಕಟಿಸುವ ಗ್ರಂಥಕರ್ತರಿಗೆ ಬಿರುದನ್ನಾಗಲಿ, ಸಂಭಾವನೆಯನ್ನಾಗಲಿ ಕೊಡುವುದು.

೯. ಕರ್ನಾಟಕ ಭಾಷೆಗೂ ಸಾಹಿತ್ಯಕ್ಕೂ ಸಂಬಂಧಿಸಿದ ಅಪೂರ್ವ ಪರಿಶೋಧಕ ಕಾರ್ಯದಲ್ಲಿ ನಿರತರಾಗಿರುವ ಕನ್ನಡ ಅಥವಾ ಸಂಸ್ಕೃತ ವಿದ್ವಾಂಸರಿಗೆ ಪಂಡಿತ ವೇತನಗಳನ್ನು ಕೊಡುವುದು.

೧೦. ಕರ್ನಾಟಕ ಭಾಷೋನ್ನತಿಗೂ, ಗ್ರಂಥಾಭಿವೃದ್ಧಿಗೂ ಸಂಬಂಧಪಡುವ ಸಮಸ್ತ ವಿಷಯಗಳನ್ನೂ ಆಯಾ ಸರ್ಕಾರದ ಪರಾಮರ್ಶಕ್ಕೆ ತಂದು ಅವನ್ನು ತೃಪ್ತಿಕರವಾಗಿ ವ್ಯವಸ್ಥೆ ಮಾಡಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು.

೧೧. ಕನ್ನಡ ಮಾತನ್ನಾಡುವ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಸ್ಥಳಗಳಲ್ಲಿ ಕನ್ನಡದ ವಾಚನಾಲಯಗಳನ್ನೂ ಪುಸ್ತಕ ಭಂಡಾರಗಳನ್ನೂ ಸ್ಥಾಪಿಸುವುದು.

೧೨. ಕನ್ನಡ ನಾಡುಗಳ ಪ್ರಮುಖರನ್ನು ಸೇರಿಸಿ ಆಗಾಗ ಸಭೆಗಳನ್ನೇರ್ಪಡಿಸುವುದು ಮತ್ತು ಸಮರ್ಥರಾದ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸುವುದು.

ಕನ್ನಡ ಸಾಹಿತ್ಯ ಪರಿಷತ್ತಿಗೆ ಭದ್ರವಾದ ಬುನಾದಿ ಹಾಕಿ, ಈಗಿರುವ ಕಟ್ಟಡ ನಿರ್ಮಾಣಕ್ಕೆ ಕಾರಣರಾದವರು ಬೆಳ್ಳಾವೆ ವೆಂಕಟನಾರಾಯಣಪ್ಪನವರು. ತರುವಾಯ ಡಿ.ವಿ.ಗುಂಡಪ್ಪನವರು, ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ, ಪರಿಷತ್ತಿನ ಕಾರ್ಯಕ್ರಮಗಳಿಗೆ ಅಚ್ಚುಕಟ್ಟುತನವನ್ನು ತಂದುಕೊಟ್ಟರು.

ಬಿ.ಎಂ.ಶ್ರೀಕಂಠಯ್ಯನವರು ಕೊಡುಗೈಯೊಡೆಯರಾಗಿ ಪರಿಷತ್ತಿನ ಹಲವು ಚಟುವಟಿಕೆಗಳಿಗೆ ಉದಾರವಾಗಿ ಹಣ ಸಹಾಯ ಮಾಡುತ್ತಿದ್ದುದಲ್ಲದೆ, ಗಮಕ ಶಿಕ್ಷಣ ಆರಂಭಿಸುವುದಕ್ಕೂ ಅಚ್ಚುಕೂಟ ಸ್ಥಾಪಿಸುವುದಕ್ಕೂ ಕಾರಣರಾದರು. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಪರಿಷತ್ತಿನ ಸದಸ್ಯಸಂಪತ್ತಿಯನ್ನು ಬೆಳೆಸುವುದಕ್ಕೆ ಶ್ರಮಿಸಿದರು.

ಪರಿಷತ್ತಿನ ಸದಸ್ಯ ಸಂಪತ್ತಿಯನ್ನು ತಿಳಿಯಲು ಈ ೧೩ ವರ್ಷಗಳ ಇತಿಹಾಸವನ್ನು ಗಮನಿಸಬಹುದು:

ಪರಿಷತ್ತಿನ ಸದಸ್ಯರು

ವರ್ಷ	ಸಾಮಾನ್ಯ ಸದಸ್ಯರು	ಅಜೀವ ಸದಸ್ಯರು
೧೯೪೭-೪೮	೯೭೧	೪೪೮
೧೯೪೮-೪೯	೯೫೪	೪೪೮
೧೯೪೯-೫೦	೩೭೫	೪೪೦
೧೯೫೦-೫೧	೩೩೪	೪೨೮
೧೯೫೧-೫೨	೪೭೭	೪೧೨
೧೯೫೨-೫೩	೪೫೭	೪೧೨
೧೯೫೩-೫೪	೪೫೭	೪೧೨
೧೯೫೪-೫೫	೧೬೦	೪೧೨
೧೯೫೫-೫೬	೧೯೪	೪೧೨
೧೯೫೬-೫೭	೪೩೫	೪೪೯
೧೯೫೭-೫೮	೨೩೮	೪೪೦
೧೯೫೮-೫೯	೨೭೨	೪೪೨
೧೯೫೯-೬೦	೨೭೨	೪೪೨

೧೯೬೧ನೆಯ ಇಸವಿಯ ಪರಿಷತ್ತಿನ ಅಂದಾಜು ವರಮಾನ-ವೆಚ್ಚದ ಕೆಲವು ಮುಖ್ಯಾಂಶಗಳನ್ನು ಗಮನಿಸಬೇಕು.

ವರಮಾನ

ಮೈಸೂರು ಸರ್ಕಾರದ ಸಹಾಯ ದ್ರವ್ಯ	ರೂ. ೫,೫೦೦
ಕಾರ್ಪೋರೇಷನ್ ಸಹಾಯ ದ್ರವ್ಯ	ರೂ. ೨,೦೦೦
ಸಂಗೀತ ನಾಟಕ ಅಕಾಡೆಮಿಯಿಂದ	ರೂ. ೨,೦೦೦
ಸದಸ್ಯತ್ವ ಚಂದಾ	ರೂ. ೨,೦೦೦
ಪ್ರಕಟನೆಗಳ ಮಾರಾಟ	ರೂ. ೪,೦೦೦
ಇತರ	ರೂ.೧೭,೪೮೦
	ರೂ. ೪೨,೯೮೦

ವೆಚ್ಚ

ಕಛೇರಿ ಸಿಬ್ಬಂದಿಯ ಸಂಬಳ	ರೂ. ೬,೯೦೦
ಕನ್ನಡನುಡಿ ಮತ್ತು ಪರಿಷತ್ಪತ್ರಿಕೆ	ರೂ. ೪,೫೦೦
ಸಮ್ಮೇಳನಗಳು	ರೂ. ೨,೦೦೦
ಪುಸ್ತಕ ಭಂಡಾರ	ರೂ. ೨೦೦
ಸತ್ಕಾರ ಸಮಾರಂಭಗಳು	ರೂ. ೮೦೦
ನಿಯೋಗಗಳು	ರೂ. ೩೦೦

ತೇಮಾನ	ರೂ. ೨,೫೦೦
ಕಾರ್ಯಸಮಿತಿಯ ವೆಚ್ಚ	ರೂ. ೨,೦೦೦
ಇತರ	ರೂ. ೧೫,೪೦೦
	ರೂ. ೩೪,೬೦೦

ಪರಿಷತ್ತಿನ ಹಣ ಕನ್ನಡ ನಾಡು ನುಡಿಗಳ ಉತ್ಕರ್ಷಕ್ಕೆ ಎಷ್ಟರಮಟ್ಟಿಗೆ ನೆರವಾಗಿದೆಯೆನ್ನುವುದಕ್ಕೆ ಮೇಲ್ಕಾಣಿಸಿರುವ ಅಂಕಿ ಅಂಶಗಳೇ ಸಾಕ್ಷಿ.

ಜಯಚಾಮರಾಜೇಂದ್ರ ಒಡೆಯರು

ಕನ್ನಡ ಸಾಹಿತ್ಯ ಪರಿಷತ್ತು ೧೨-೧೨-೫೬ರಲ್ಲಿ ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರವರಿಗೆ ಅರ್ಪಿಸಿದ ವಿಜ್ಞಾಪನಾ ಪತ್ರಿಕೆಗೆ ರಾಜ್ಯಪಾಲರು ಉತ್ತರವಾಗಿ ದಯೆಪಾಲಿಸಿದ ಭಾಷಣದ ಕೆಲವು ಅಂಶಗಳು ಗಮನಾರ್ಹವಾಗಿವೆ:

'ಇನ್ನು ಮುಂದೆ ಪರಿಷತ್ತಿನ ಕಾರ್ಯದಲ್ಲಿ ಸ್ವಲ್ಪ ಬದಲಾವಣೆಯಾಗಬೇಕೆಂದು ನನಗೆ ತೋರುತ್ತದೆ; ಬಹುಶಃ ತಮಗೂ ಹಾಗೆಯೇ ತೋರಬೇಕು. ಒಂದಾನೊಂದು ಕಾಲದಲ್ಲಿ ಕನ್ನಡದ ಸ್ಥಾನಮಾನಗಳಾಗಿ ಯುದ್ಧ ಹೂಡಬೇಕಾಗಿತ್ತು. ಜನರನ್ನು ಎಚ್ಚರಿಸಿ ಹುರಿದುಂಬಿಸುವುದಕ್ಕಾಗಿ ಪ್ರಚಾರ, ಭಾಷಣಗಳು, ಉತ್ಸವಗಳು, ಭಾವೋದ್ರೇಕ ಇವೆಲ್ಲಾ ಆವಶ್ಯಕವಾಗಿದ್ದವು. ಈಗ ಕನ್ನಡ ಗೆದ್ದಿದೆ. ಸುಮಾರು ಅರ್ಧ ಶತಮಾನದ ಉಳಿಮೆ ಸ್ವಾದುವಾದ ಫಲ ಕೊಟ್ಟಿದೆ... ಇನ್ನು ಕನ್ನಡದ ಪರವಾಗಿ ಪ್ರಚಾರಮಾಡಬೇಕಾದ ಆವಶ್ಯಕತೆಯಿಲ್ಲ; ಕನ್ನಡ ಬಾವುಟದ ಮೆರವಣಿಗೆ ಆವಶ್ಯಕವಿಲ್ಲ... ಆ ಬಾವುಟ ಭವನದ ಮೇಲೆ ಗೆಲುವಾಗಿ ಹಾರುತ್ತಿದೆ.

ಅಂದ ಮೇಲೆ ಇನ್ನು ಮುಂದೆ ಭವನದೊಳಗೆ ಕ್ರಮವ್ಯವಸ್ಥೆಗಳನ್ನು ಅನುಗೊಳಿಸುವ ಪ್ರಯತ್ನ ನಡೆಯಬೇಕು. ಆತ್ಮವಿಶ್ವಾಸವನ್ನು ಪಡೆಯುವುದಕ್ಕಾಗಿ ನಮ್ಮ ಹೆಚ್ಚಳವನ್ನು ಉತ್ಪ್ರೇಕ್ಷೆಮಾಡಿಕೊಂಡದ್ದು ಸ್ವಾಭಾವಿಕವೇ. ಆದರೆ ಇನ್ನು ಮುಂದೆ ನಿಷ್ಪಕ್ಷಪಾತವಾಗಿ ಆತ್ಮಪರೀಕ್ಷೆ ಮಾಡಿಕೊಳ್ಳಬೇಕು. ದಿವಂಗತ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಒಂದು ಬಾರಿ ಹೇಳಿದಂತೆ **'ಕೊನೆಗೆ ನಿಲ್ಲುವುದು ಅಭಿಮಾನವಲ್ಲ ಸತ್ಯ'**. ಈ ಸತ್ಯವನ್ನು ಎದುರಿಸುವುದಕ್ಕೆ ನಾವು ಹೆದರಬೇಕಾದ್ದೇನೂ ಇಲ್ಲ. ಕನ್ನಡ ಭಾಷೆಯ ಸ್ವರೂಪ, ವ್ಯಾಕರಣ, ಅದಕ್ಕೂ ಇತರ ಭಾಷೆಗಳಿಗೂ ಇರುವ ಸಂಬಂಧ, ಕನ್ನಡ ಛಂದಸ್ಸು, ಲಯ, ಕನ್ನಡ ಸಾಹಿತ್ಯದ ಹಿನ್ನೆಲೆಯಾಗಿರುವ ಮತ್ತು ಕಾಲಕ್ಕೆ ತಕ್ಕಂತೆ ಬದಲಾವಣೆಯಾಗುತ್ತಿರುವ ರಾಜಕೀಯ, ಸಾಮಾಜಿಕ, ಮತೀಯ ಪರಿಸ್ಥಿತಿ-ಇವೆಲ್ಲದರ ವಿಷಯದಲ್ಲೂ ನಿಷ್ಕೃಷ್ಟವಾದ ಪಾಂಡಿತ್ಯವನ್ನು ಪಡೆಯಬೇಕು. ಇನ್ನು ಮುಂದೆ ಪರಿಷತ್ತಿನ ಕೆಲಸ ಇದೇ ಎಂದು ನನ್ನ ಭಾವನೆ. **ಪರಿಷತ್ತು ಸಾಹಿತ್ಯವನ್ನು ಸೃಷ್ಟಿ ಮಾಡಲಾರದು. ಯಾವುದೊಂದು ಸಂಸ್ಥೆಯೂ ಆ ಕೆಲಸ ಮಾಡಲಾರದು**. ದೈವದತ್ತವಾದ ಪ್ರತಿಭೆಯುಳ್ಳವರಿಗೆ ಆ ಕೆಲಸವನ್ನು ಬಿಡೋಣ. ಪರಿಷತ್ತಿನ ಕೆಲಸವೆಂದರೆ ಆ ಸಾಹಿತ್ಯದ ಬೆಲೆಯನ್ನು ಅಧಿಕಾರಯುತವಾಗಿ ನಿರ್ಣಯಿಸುವುದು ಕೂಡಾ ಅಲ್ಲ. ಉದ್ವೇಗರಹಿತವಾದ ಮತ್ತು ಪೂರ್ವಗ್ರಹಗಳಿಗೆ ಸಿಲುಕದ ಸ್ವಚ್ಛವಾದ ವಿಮರ್ಶನ ದೃಷ್ಟಿಯನ್ನು ಬೆಳಸುವುದು, ಹತ್ತಾರು ಕಡೆಗಳಿಂದ ಅಭಿಪ್ರಾಯ ಬೆಳೆದುಬಂದು ಅವುಗಳ ಘರ್ಷಣೆಯಿಂದ ಸತ್ಯ ಮೂಡಿಬರುವಂತೆ ಸೌಕರ್ಯಗಳನ್ನು ಕಲ್ಪಿಸುವುದು, ನಿಘಂಟು, ವಿಶ್ವಕೋಶ ಮುಂತಾದ್ದನ್ನು ಸಿದ್ಧಗೊಳಿಸುವುದು, ಇತರ ಪ್ರಕಾಶಕರು ಪ್ರಕಟಿಸಲು ಹೆದರುವ ವಿಮರ್ಶೆ, ಶಾಸ್ತ್ರಗ್ರಂಥ ಮುಂತಾದ್ದನ್ನು ಪ್ರಕಟಿಸುವುದು, ಸಂಶೋಧನೆ ನಡೆಸುವುದು- ಇತ್ಯಾದಿ ಕಾರ್ಯಕ್ರಮಗಳಿಗೆ ಪರಿಷತ್ತು ಮೀಸಲಾಗಬೇಕು. ಇದೆಲ್ಲಾ ಮೈಬಗ್ಗಿ ಕುಳಿತು ಮಾಡಬೇಕಾದ ಕೆಲಸ. ಇದರಿಂದ ಸುಲಭದ ಮನೋರಂಜನೆ ಸಾಧ್ಯವಿಲ್ಲ; ಕ್ಷಣಕ್ಷಣಕ್ಕೂ ಜನರಿಂದ ಕರತಾಡನಗಳು ಬರುವುದಿಲ್ಲ. **ಕರತಾಡನದ ಆಸೆ, ಅದಕ್ಕೆ ಬೇಕಾದ ಆಡಂಬರ- ಇದನ್ನೆಲ್ಲಾ ಪರಿಷತ್ತು ಬಿಟ್ಟುಕೊಡಬೇಕು.** ಸಾಮಾನ್ಯ ಉಪನ್ಯಾಸಗಳಿಗೆ, ಮನೋರಂಜನೆಯ ಕಾರ್ಯಕ್ರಮಗಳಿಗೆ, ನಾಡಿನಲ್ಲಿ ಬೇಕಾದಷ್ಟು ಕರ್ನಾಟಕ ಸಂಘಗಳಿವೆ; ಅವು ಈ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತಿವೆ. ಕನ್ನಡ ಜನತೆಯೂ ಈ ಬಗೆಯ ಕೆಲಸವನ್ನು ಪರಿಷತ್ತು ಮಾಡಬೇಕೆಂದು ಬಯಸಬಾರದು;

ಅದರ ಆವರಣದಿಂದ ಕೊಂಬು ಕಹಳೆ ತುತ್ತೂರಿಗಳ ಘೋಷ ಕೇಳಿ ಬರಲಿಲ್ಲವಲ್ಲ ಎಂದು ಆತಂಕಪಡಬಾರದು. **ಪರಿಷತ್ತಿನ ಕೆಲಸ ಸದ್ಯದಲ್ಲಿ ಜನರು ಕಣ್ಣು ಕೋರೈಸುವಂಥದಲ್ಲವಾದರೂ ನೂರುಕಾಲ ಬಾಳುವಂಥಾದ್ದಾಗಬೇಕು**; ಪರಿಷತ್ತು ಕನ್ನಡ ನಾಡಿನ ಚಿತ್ರಕಲೆ, ನೃತ್ಯ ಸಂಗೀತ ಮೊದಲಾದುದೆಲ್ಲದರ ಅಭ್ಯುದಯಕ್ಕೆ ಪ್ರಯತ್ನಿಸಬೇಕೆಂಬ ಮಾತು ಆಗಾಗ್ಗೆ ಕೇಳಿಬಂದಿದೆ. ಇವು ಒಂದೊಂದೂ ಜೀವಮಾನವನ್ನೆಲ್ಲಾ ಬೇಡುವಂಥ ಕಲೆಗಳು. ಇವೆಲ್ಲದರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೇನೆಂದು ಹೊರಟರೆ ಪರಿಷತ್ತು ಇಂಗ್ಲಿಷಿನಲ್ಲಿ ಹೇಳುವಂತೆ ಡಿಲಿಟ್ಯಾಂಟಿ (Dilettante) ಸಂಸ್ಥೆಯಾದೀತೆಂಬ ಭಯವಿದೆ. ಇದನ್ನೆಲ್ಲಾ ಸಂಗೀತ ನಾಟಕ ಅಕಾಡೆಮಿಗಳಂತಹ ಸಂಸ್ಥೆಗಳಿಗೆ ಬಿಟ್ಟು ತನ್ನ ಗಮನವನ್ನು ಸಾಹಿತ್ಯದ ಮೇಲೆ ಕೇಂದ್ರೀಕರಿಸುವುದು ಉತ್ತಮವೆಂದು ತೋರುತ್ತದೆ."

ಪರಿಷತ್ತು ಮಾಡಿದ್ದೇನು?

ಇಂದು ಪರಿಷತ್ತಿನಲ್ಲಿ ಸಾಹಿತಿಗೆ, ಕನ್ನಡದ ಸೇವೆ ಮಾಡಿ ಧನ್ಯನಾಗಲು ಬಯಸುವವನಿಗೆ ಎಡೆಯಿಲ್ಲ. ಅಧಿಕಾರಿ ವರ್ಗದವರ ಹಾಗೂ ರಾಜಕೀಯ ಮುಂದಾಳುಗಳ ಮೆರವಣಿಗೆ, ಸನ್ಮಾನೋತ್ಸವ, ಉಪಹಾರ ಮೇಳ, ಸತ್ಕಾರ ಸಮಾರಂಭಗಳಿಗೆ ಪರಿಷತ್ತು ಸರ್ಕಾರದ ದಾನದ್ರವ್ಯವನ್ನು ನಿವೇದಿಸಿದೆ.

ಪರಿಷತ್ತು ಏನು ಮಾಡಿಲ್ಲ?

೧. ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ 'ಚನ್ನಬಸವನನಾಯಕ' ೧೯೪೯ರಲ್ಲಿ ಪ್ರಕಟವಾಯಿತು. ೧೯೪೯ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ, ಭಾರತೀಯ ಭಾಷೆಗಳಿಗೆ ಅನುವಾದಿಸಲು ಈ ಗ್ರಂಥವನ್ನು ಅರಿಸಿತು. ಸಾಹಿತ್ಯ ಅಕಾಡೆಮಿಯ ಆಯ್ಕೆಯಾದ ತರುವಾಯ ಆ ಗ್ರಂಥದ ಮೇಲೆ ಜಾತಿದ್ವೇಷದ ಅಪಾದನೆ ಹೊರಿಸಿ ಹಲವು ಹೇಳಿಕೆಗಳು, ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದವು. 'ಚನ್ನಬಸವನಾಯಕ' ಗ್ರಂಥವನ್ನೇ ವ್ಯಾಜ್ಯಮಾಡಿಕೊಂಡು ಉತ್ತರ ಕರ್ನಾಟಕದಲ್ಲಿ ಹಲವು ಅಗ್ನಿಭಕ್ಷಕರು, ಜಾತ್ಯಂಧರು ಉಪನ್ಯಾಸ ಸತ್ಯಾಗ್ರಹ ನಡೆಸಿದರು. ಈ ಬಗ್ಗೆ ಪರಿಷತ್ತಿಗೆ ಯಾವ ಹೊಣೆಗಾರಿಕೆಯೂ ಇರಲಿಲ್ಲವೇ? ಪರಿಷತ್ತಿನ ತಜ್ಞಮಂಡಲಿಯೊಂದು ಡಾ॥ ಮಾಸ್ತಿಯವರ ಪುಸ್ತಕ, ಅದರ ಮೇಲೆ ಬಂದ ಅಪಾದನೆಗಳನ್ನು ಪರೀಕ್ಷಿಸಿ, ನಿಷ್ಪಕ್ಷ ಅಭಿಪ್ರಾಯ ವ್ಯಕ್ತಗೊಳಿಸಿ ಈ ರಾಷ್ಟ್ರವಿಘಾತಕ ಚಳುವಳಿಯನ್ನು ನಿಲ್ಲಿಸಲು ಸಾಧ್ಯವಿರಲಿಲ್ಲವೇ?

೨. ಪರಿಷತ್ತು ಪ್ರತಿವರ್ಷ ರೂ.೨,೦೦೦ ವೆಚ್ಚಮಾಡಿ ನಡೆಸುತ್ತಿರುವ ಪರಿಕ್ಷೆಗಳಿಗೆ ಬಂದೊದಗಿರುವ ದುರವಸ್ಥೆ ಪರಿಷತ್ತಿನ ಅಧಿಕಾರಿಗಳ ಗಮನಕ್ಕೆ ಬಂದಿದೆಯೇ? ಪರೀಕ್ಷಾ ಕೇಂದ್ರಗಳಿಗೆ ಸಕಾಲಕ್ಕೆ ಪ್ರಶ್ನೆಪತ್ರಿಕೆಗಳು ಮುಟ್ಟದಿರುವುದು, ವಿದ್ಯಾರ್ಥಿಗಳೇ ಇಲ್ಲದಿರುವೆಡೆಗಳು ಪರೀಕ್ಷಾ ಕೇಂದ್ರಗಳಾಗಿರುವುದು, ಕೆಲವು ಕೇಂದ್ರಗಳಲ್ಲಿ ಪುಸ್ತಕಗಳನ್ನು ಮುಂದಿಟ್ಟುಕೊಂಡು ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಗಳಿಗೆ ಉತ್ತರ ಬರೆಯುತ್ತಿರುವುದು ಪರಿಷತ್ತಿನ ಅಧಿಕಾರ ವರ್ಗದವರಿಗೆ ಗೊತ್ತಿದೆಯೇ?

೩. ಪರಿಷತ್ತಿನ ಸಭಾಮಂದಿರವನ್ನು ಜಾತಿ ಸಂಸ್ಥೆಗಳಿಗೂ, ರಾಜಕೀಯ ಸಂಸ್ಥೆಗಳಿಗೂ ಬಾಡಿಗೆಗೆ ಕೊಡುತ್ತಿರುವುದೇಕೆ? ಇದು ಪರಿಷತ್ತಿನ ಮೂಲ ಉದ್ದೇಶಕ್ಕೇ ವಿಘಾತಕವಲ್ಲವೇ?

೪. ಸತ್ಕಾರಕೂಟ, ಭೋಜನ ಕೂಟಗಳು ನಡೆಸಬೇಕಾದ ಸಂದರ್ಭವೊದಗಿದಾಗ ಹಿಂದಿದ್ದ ಅಧಿಕಾರಿವರ್ಗದವರು ಚಂದಾ ವಸೂಲ್ಮಾಡಿ ವ್ಯಯ ಮಾಡುತ್ತಿದ್ದುದು ಇಂದಿನ ಅಧಿಕಾರಿ ವರ್ಗದವರಿಗೆ ತಿಳಿದಿದೆಯೇ? ಇವುಗಳಿಗೆ ಪರಿಷತ್ತಿನ ಹಣವನ್ನು ವ್ಯಯಮಾಡುವುದು ಶುದ್ಧ ಅನ್ಯಾಯವಲ್ಲವೇ?

೫. ಸರ್ವಶ್ರೀ ಡಿ.ವಿ. ಗುಂಡಪ್ಪನವರು, ಬಿ.ಎಂ.ಶ್ರೀಕಂಠಯ್ಯನವರು ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ ಪರಿಷತ್ತಿನ ವರ್ಷದ ಕಾರ್ಯಕ್ರಮವನ್ನು ಪೂರ್ವಭಾವಿಯಾಗಿ ಗೊತ್ತುಮಾಡಿ, ನಾಡಿನ ಎಲ್ಲ ಭಾಗಗಳ ವಿದ್ವಾಂಸರ ಪಾಂಡಿತ್ಯಪೂರ್ಣ ಭಾಷಣವನ್ನೇರ್ಪಡಿಸುತ್ತಿದ್ದುದು ಇಂದಿನ ಅಧಿಕಾರಿವರ್ಗದವರಿಗೆ ತಿಳಿದಿದೆಯೇ?

೬. ಸಾಹಿತ್ಯ ವಿಕಾಸ, ಸಾಹಿತಿಗಳ ಉದ್ಧಾರದ ಸಲುವಾಗಿ ಜನ್ಮತಳೆದಿರುವ ಪರಿಷತ್ತು ಬಡಲೇಖಕರ ಕಷ್ಟ-ಸುಖಗಳನ್ನು ವಿಚಾರಿಸಲು ಪ್ರಯತ್ನಿಸಿದೆಯೇ? ನಿರ್ಗತಿಕಾವಸ್ಥೆಯಲ್ಲಿ ಪ್ರಾಣ ಒಪ್ಪಿಸಿದ ಬಡಲೇಖಕರಿಗಾಗಲಿ, ಅವರ ಸಂಸಾರಕ್ಕಾಗಲಿ ಪರಿಷತ್ತು ಸಹಾಯ ಮಾಡಿದೆಯೇ?

೭. ಪರಿಷತ್ತಿನ ಪುಸ್ತಕಭಂಡಾರ, ಪರಿಷತ್ತಿನ ಸ್ಥಾನಮಾನಗಳಿಗೆ ಅನುಗುಣ ವಾಗಿದೆಯೇ? ದಿನೇ ದಿನೇ ಕ್ಷೀಣವಾಗುತ್ತಿರುವ ಈ ಭಂಡಾರವನ್ನು ವ್ಯವಸ್ಥೆಗೊಳಿಸಲು ಪರಿಷತ್ತು ಯಾವ ಕ್ರಮಕೈಗೊಂಡಿದೆ? ಇನ್ನಿದುವರೆಗೆ ಭಂಡಾರದ 'ಪುಸ್ತಕಗಳ ಪಟ್ಟಿ' ಯೊಂದನ್ನು ಪರಿಷತ್ತು ಏಕೆ ಪ್ರಕಟಿಸಿಲ್ಲ?

೮. ಪರಿಷತ್ತಿನ ಪ್ರಾತಿನಿಧ್ಯ ಅಪೇಕ್ಷಿಸುವ ಸಂಸ್ಥೆಗಳಿಗೆ, ಸಮಿತಿಗಳಿಗೆ ಸಮ್ಮೇಳನಕ್ಕೆ ಪರಿಷತ್ತಿನ ಅಧಿಕಾರಿ ವರ್ಗದವರೇ ಪ್ರತಿನಿಧಿಗಳಾಗಿ ಹೋಗಬೇಕೆಂಬ ನಿಯಮವಿದೆಯೇ?

೯. ಪರಿಷತ್ತಿನ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳನ್ನು ನಿಯಮಿಸುವಾಗ, ಪರೀಕ್ಷಕರನ್ನು ಗೊತ್ತುಮಾಡುವಾಗ ಪ್ರಾತಿನಿಧ್ಯ ಆವಶ್ಯಕತೆಯಿಲ್ಲವೆ? ಅವು ಸದ್ಯಕ್ಕೆ ಪರಿಷತ್ತಿನ ಅಧಿಕಾರಿಗಳು, ಅವರ ಕೆಲವು ಮಿತ್ರರಿಗೇ ಮೀಸಲಾಗಿಲ್ಲವೇ?

೧೦. ರಾಯಚೂರಿನಲ್ಲಿ ಅಧ್ಯಾಪಕರಾಗಿದ್ದ ಶ್ರೀ ಬಿ.ವಿ. ಶ್ರೀನಿವಾಸರಾಯರು, 'ಆಂಧ್ರ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿ ಜರ್ನಲ್' ಪತ್ರಿಕೆಗೆ ಒಂದು ಲೇಖನ ಬರೆದು ಮೈಸೂರು ಪ್ರಾಂತ್ಯದ ಬೆಂಗಳೂರು, ತುಮಕೂರು, ಚಿತ್ರದುರ್ಗ, ಕೋಲಾರ ಜಿಲ್ಲೆಗಳು ಆಂಧ್ರಕ್ಕೆ ಸೇರಬೇಕೆಂಬ ವಾದ ಹೂಡಿದರು. ಈ ದುರಾಕ್ರಮಣವನ್ನು ಕನ್ನಡ ಪತ್ರಿಕೆಗಳು ಖಂಡಿಸಿದವು. ಇಂತ ಮುಖ್ಯ ವಿಷಯದ ಬಗ್ಗೆಯೂ ಪರಿಷತ್ತು ಔದಾಸೀನ್ಯ ತೋರಿದುದೇಕೆ?

ಪರಿಷತ್ತು ಏನು ಮಾಡಬೇಕು ?

ಮಂತ್ರಿಗಳನ್ನೂ, ರಾಜಕಾರಣಿಗಳನ್ನೂ ಮಠಾಧಿಪತಿಗಳನ್ನೇ ಪರಿಷತ್ತಿಗೆ ಬರಮಾಡಿಕೊಂಡು ಅವರಿಗೆ ಬಿನ್ನವತ್ತಳೆ ಅರ್ಪಿಸಿ, ಅಳತೆ ಮೀರಿ ಹೊಗಳುವುದನ್ನು ಬಿಟ್ಟುಬಿಡಬೇಕು. **ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರಾಧಾನ್ಯವಿರಬೇಕಾದುದು ಸಾಹಿತಿಗಳಿಗೇ ವಿನಾ ರಾಜಕಾರಣಿಗಳಿಗಲ್ಲ.**

೨. ಪರಿಷತ್ತಿನ ಹಣವ್ಯಯಮಾಡುವಾಗ ಅಧಿಕಾರಿ ವರ್ಗದವರು ಅತ್ಯಂತ ಎಚ್ಚರವಹಿಸಬೇಕು. ಸಾರ್ವಜನಿಕ ಹಣ ವಿಷಪ್ರಾಯವಾದುದೆಂಬುದನ್ನು ಪರಿಷತ್ತಿನ ಅಧಿಕಾರಿ ವರ್ಗದವರು ಮರೆಯದಿರಬೇಕು.

೩. ಪರಿಷತ್ತು ವಿದ್ವತ್ಪೂರ್ಣ ಭಾಷಣಗಳ ವೇದಿಕೆಯಾಗಬೇಕು. ಈ ಭಾಷಣಗಳನ್ನು ಸಂಗ್ರಹಿಸಿ ಕಿರು ಹೊತ್ತಿಗೆಗಳಾಗಿ ಪ್ರಕಟಿಸಬೇಕು.

ವಯೋನ್ಮುಖ ಸಾಹಿತಿಗಳ ರಕ್ಷಣೆ ಪೋಷಣೆಗೆ ಪರಿಷತ್ತು ಪ್ರಥಮಸ್ಥಾನ ಕೊಡಬೇಕು.

ಅ. ನವ್ಯಸಾಹಿತಿಗಳ ಕೃತಿಗಳನ್ನು ಬರಮಾಡಿಕೊಂಡು ಅವುಗಳನ್ನು ಓದಿ, ಸೂಕ್ತ ಸಲಹೆಗಳನ್ನೀಯಬಲ್ಲ ತಜ್ಞರ ಮಂಡಳಿಯ ನಿಯಾಮಕ.

ಆ. ನವ್ಯಸಾಹಿತಿಗಳಿಗೆ ಸಾಹಿತ್ಯದ ವಿವಿಧ ಪ್ರಕಾರಗಳ ತಂತ್ರ ತಿಳಿಸಿ ಕೊಡುವ ಗ್ರಂಥಗಳ ಪ್ರಕಟನೆ.

ಇ. ಕಾಲಕಾಲಕ್ಕೆ ಒಂದೊಂದು ಸಾಹಿತ್ಯ ಕುರಿತ ಭಾಷಣಮಾಲೆ.

ಈ. ಕಿರಿಯ ಸಾಹಿತಿಗಳ ಅಭ್ಯಾಸಕ್ಕೆ ಅವಶ್ಯಕವಾದ ಗ್ರಂಥಗಳ ಸಂಗ್ರಹಣೆ.

ಉ. ಕಿರಿಯ ಸಾಹಿತಿಗಳು ಹಿರಿಯ ಸಾಹಿತಿಗಳನ್ನು ಕಂಡು ವಿಚಾರವಿನಿಮಯ ಮಾಡಿಕೊಳ್ಳಲವಕಾಶ.

೫. ಬಡ ಲೇಖಕರ ಕಷ್ಟ ನಿವಾರಣೆಗಾಗಿ ಮಾಸಾಶನ ಅಥವಾ ಮೊತ್ತವಾಗಿ ಧನಸಹಾಯ, ಸಹಾಯಶೂನ್ಯರಾದ ಲೇಖಕರ ಸಂಸಾರಕ್ಕೆ ಸಹಾಯ-ಲೇಖಕರ ಮಕ್ಕಳಿಗೆ ವಿದ್ಯಾದಾನ. ಅದಕ್ಕಾಗಿ ಒಂದು ಮೀಸಲು ನಿಧಿಸಂಗ್ರಹವಾಗಬೇಕು.

೬. ಪ್ರಾಚೀನ, ಅರ್ವಾಚೀನ ಕಾವ್ಯ ಪರಿಚಯ ಮಾಡಿಕೊಡುವ ವ್ಯಾಸಂಗ ಗೋಷ್ಠಿಗಳು.

೭. ಸೋದರ ಭಾಷೆಗಳಾದ ತಮಿಳು, ತೆಲುಗು, ಹಿಂದಿ, ಬಂಗಾಳಿ ಭಾಷೆಗಳ ಮತ್ತು ಪರಭಾಷೆಗಳಾದ ಗ್ರೀಕ್, ಫ್ರೆಂಚ್, ಜರ್ಮನ್, ರಷ್ಯನ್ ಭಾಷೆಗಳ ಅಭ್ಯಾಸಕ್ಕೆ ಅನುಕೂಲಿಸುವಂತೆ ತರಗತಿಗಳನ್ನು ಏರ್ಪಡಿಸುವುದು.

೮. ಸೋದರ ಭಾಷೆಗಳ ಹಾಗೂ ಪರಭಾಷೆಗಳ ಸಾಹಿತ್ಯ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡುವುದು.

೯. ಪರಿಷತ್ತಿನ ಪ್ರಕಟನಾ ಶಾಖೆಯನ್ನಭಿವೃದ್ಧಿಪಡಿಸಿ, ಉಪಲಬ್ಧವಿಲ್ಲದ ಪ್ರಾಚೀನ ಕಾವ್ಯಗಳು, ಪ್ರಕಟವಾಗದಿರುವ ಕಾವ್ಯಗಳನ್ನು ಪ್ರಕಟಿಸುವುದು, ಮಹಾಕವಿ ಪ್ರಶಸ್ತಿ ಗ್ರಂಥಗಳನ್ನು ಪ್ರಕಟಿಸುವುದು.

೧೦. ಪರಿಷತ್ತಿನ ಕಟ್ಟಡವನ್ನು ವಿಸ್ತರಿಸಿ, ಪುಸ್ತಕ ಭಂಡಾರಕ್ಕಾಗಿಯೇ ಪ್ರತ್ಯೇಕ ಹಜಾರವನ್ನೇರ್ಪಡಿಸುವುದು.

೧೧. ಪರಿಷತ್ತಿನ ಮುದ್ರಣಾಲಯವನ್ನು ಸುಧಾರಿಸಿ, ಆಧುನಿಕ ಯಂತ್ರೋಪಕರಣ ಗಳನ್ನು ತೆಗೆದುಕೊಳ್ಳುವುದು.

೧೨. ಕನ್ನಡ ಪುಸ್ತಕ ಪ್ರಕಾಶಕರು, ಪುಸ್ತಕ ವ್ಯಾಪಾರಿಗಳನ್ನು ಸಂಘಟಿಸಿ ಕನ್ನಡ ಪ್ರಕಟನೆಗಳ ವ್ಯಾಪಕ ಪ್ರಸಾರಕ್ಕವಶ್ಯಕವಾದ ಮಾರ್ಗಗಳನ್ನು ನಿರ್ದೇಶಿಸುವುದು.

೧೩. ಅಂಗಸಂಸ್ಥೆಗಳೊಂದಿಗೆ ನಿಕಟ ಸಂಬಂಧವಿಟ್ಟುಕೊಂಡು, ಅವುಗಳ ಸಹಾಯದಿಂದ ನಾಡಿನ ಎಲ್ಲ ಭಾಗಗಳಲ್ಲಿಯೂ ಸಾಹಿತ್ಯ ಪ್ರಚಾರ ಕೈಗೊಳ್ಳುವುದು.

೧೪. ಕೇಂದ್ರ ಸರ್ಕಾರಕ್ಕೂ, ಸಾಹಿತ್ಯ ಅಕಾಡೆಮಿ ಸಂಸ್ಥೆಗೂ ಪರಿಷತ್ತಿನ ಕಾರ್ಯವ್ಯಾಪ್ತಿಯ ಪರಿಚಯ ಮಾಡಿಕೊಟ್ಟು, ಅದರಿಂದ ಧನಸಹಾಯ ಪಡೆಯುವುದು.

೧೫. ಪರಿಷತ್ತಿನ ಸದಸ್ಯರ ಸಂಖ್ಯೆ ಹೆಚ್ಚಿಸುವುದು, ಕಾರ್ಯಕಾರಿ ಸಮಿತಿಯ ಸದಸ್ಯರು ಪರಿಷತ್ತಿನ ಅಧಿಕಾರಿ ವರ್ಗದವರು ವರ್ಷಕ್ಕೆ ನೂರು ಸದಸ್ಯರನ್ನಾದರೂ ಕೂಡಿಸಿ, ಕೊಡಬೇಕೆಂದು ಒತ್ತಾಯಪಡಿಸತಕ್ಕದ್ದು.

೧೬. ಗಡಿನಾಡುಗಳಲ್ಲಿಯೂ ಪರಪ್ರಾಂತೀಯರ ಧಾಳಿಗೆ ಸಿಕ್ಕಿರುವ ಕೋಲಾರದ ಚಿನ್ನದ ಗಣಿ, ಬೆಂಗಳೂರು, ಸೊಲ್ಲಾಪುರ, ಬೆಳಗಾವಿ, ಕಾರವಾರದಲ್ಲಿ ಕನ್ನಡ ಚಳುವಳಿಯನ್ನು ಬಲಗೊಳಿಸುವುದು.

ಪರಿಷತ್ತಿನ ಪ್ರಕಟಣೆಗಳು

ಪ್ರತಿವರ್ಷ ಕನ್ನಡದಲ್ಲಿ ಪ್ರಕಟವಾಗುವ ಎಲ್ಲಾ ಪುಸ್ತಕಗಳು, ಪತ್ರಿಕೆಗಳ ಒಂದು ಪಟ್ಟಿಯನ್ನು ಪರಿಷತ್ತು ಕ್ರಮವಾಗಿ ಪ್ರಕಟಿಸುತ್ತಾ ಬರಬೇಕು.

ಸುಮಾರು ೨೩ ವರ್ಷಗಳಿಂದ ಪರಿಷತ್ತು 'ಕನ್ನಡ ಸಾಹಿತ್ಯ ಪತ್ರಿಕೆ' ತ್ರೈಮಾಸಿಕವನ್ನು ಪ್ರಕಟಿಸುತ್ತಿದೆ. ೧೯೩೮ರಲ್ಲಿ ಶ್ರೀ ಬಿ.ಎಂ. ಶ್ರೀಕಂಠಯ್ಯನವರು ನನ್ನ ಸಂಪಾದಕತ್ವದಲ್ಲಿ, ಕನ್ನಡ ಪ್ರಸಾರದ ಸಲುವಾಗಿ 'ಕನ್ನಡ ನುಡಿ' ಮಾಸ ಪತ್ರಿಕೆಯಾಗಿ ಮಾರ್ಪಟ್ಟಿತು.

ಈ ಎರಡು ಪತ್ರಿಕೆಗಳಿಗೆ ಪರಿಷತ್ತು ಪ್ರತಿ ವರ್ಷ ರೂ. ೪,೫೦೦ ಗಳನ್ನು ಖರ್ಚು ಮಾಡುತ್ತಿವೆ. ಇಂದು ಪ್ರಸಾರದ ಸಲುವಾಗಿ ನಾವು 'ಕನ್ನಡ ನುಡಿ' ನಡೆಸಿಕೊಂಡು ಹೋಗುವ ಅಗತ್ಯವಿಲ್ಲ. ಕನ್ನಡ ದೈನಂದಿನ, ಸಾಪ್ತಾಹಿಕ, ಮಾಸಪತ್ರಿಕೆಗಳು ಈ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿವೆ.

ಪರಿಷತ್ತಿನ ಅಧಿಕಾರಿವರ್ಗದ 'ಪಂಗಡ' ವಾಗಿರುವ 'ಕನ್ನಡ ನುಡಿ' ಯಿಂದ ಯಾವ ಪ್ರಯೋಜನವೂ ಇಲ್ಲ. 'ಪರಿಷತ್ಪತ್ರಿಕೆ' ಮತ್ತು 'ನುಡಿ ; ಕೂಡಿಸಿ, ಪರಿಷತ್ಪತ್ರಿಕೆಯನ್ನೇ ಬಲಗೊಳಿಸಿ, ವರ್ಷಕ್ಕೆ ಆರು ಸಂಚಿಕೆಗಳನ್ನು ತರಬಹುದು. ಒಂದೊಂದು ಸಂಚಿಕೆ ೧೫೦ ರಿಂದ ೨೦೦ ಪುಟಗಳವರೆಗಿರಬಹುದು. ಈ ಆರು ಸಂಚಿಕೆಗಳಲ್ಲಿ ೧) ಪ್ರಾಚೀನ ಕನ್ನಡ ಸಾಹಿತ್ಯ ಸಂಶೋಧನೆಗಳಿಗೂ, ೨) ಕರ್ನಾಟಕದ ಜಾನಪದ ಸಾಹಿತ್ಯಕ್ಕೂ, ೩). ಆಧುನಿಕ ಕನ್ನಡ ಸಾಹಿತ್ಯದ ಪ್ರಗತಿಯನ್ನು ಅನುಲಕ್ಷಿಸುವುದಕ್ಕೂ, ೪). ವಿಮರ್ಶಾ ಶಾಸ್ತ್ರವನ್ನು ಪರಿಚಯ ಮಾಡಿಕೊಡುವುದಕ್ಕೂ ೫) ಕರ್ನಾಟಕ ಲಲಿತಕಲೆಗಳಿಗೂ, ೬)

ಕನ್ನಡಿಗರಿಗೆ ವಿವಿಧ ವಿಜ್ಞಾನ ಶಾಸ್ತ್ರಗಳ ಪರಿಚಯಮಾಡಿ ಕೊಡುವುದಕ್ಕೂ ಮಿಸಲಾಗಿರಬಹುದು. ಈ ಒಂದೊಂದು ವಿಭಾಗಕ್ಕೂ ದಕ್ಷವಿದ್ವಾಂಸರ ಸಂಪಾದಕ ಮಂಡಲಿ ಇರತಕ್ಕದ್ದು.

ಪರಿಷತ್ತು ಯಾವ ವ್ಯಕ್ತಿಯ ಸೊತ್ತೂ ಅಲ್ಲ; ಅದು ಎರಡು ಕೋಟಿ ಕನ್ನಡಿಗರ ಹೃದಯ ಕನ್ನಡಿ. ಪರಿಷತ್ತಿನ ಧವಳಕೀರ್ತಿಗೆ ಕಳಂಕಬಾರದಂತೆ, ಅವರ ಘನತೆಯನ್ನು ಕಾಪಾಡುವುದು ಪ್ರತಿಯೊಬ್ಬ ಕನ್ನಡಿಗಧ ಕರ್ತವ್ಯವಾಗಿದೆ.

ಈ ಪ್ರಕಾರದ ಪರಿಷತ್ತಿಗೆ ದುಡಿದ ಮಹನೀಯರ ಸೇವೆ ಯಾವ ವ್ಯಕ್ತಿಯ. ಗುಂಪಿನಿಂದಾಗಲಿ ಅಳಿಸಿಹೋಗಲು ನಾವು ಅವಕಾಶ ಕೊಡಬಾರದು.

ಹೊರನಾಡಿನಲ್ಲಿ ಕನ್ನಡಿಗ

ಹೊರನಾಡಿನ ಕನ್ನಡಿಗರು ಎಚ್ಚತ್ತು ಊಂಡು ಅಲ್ಲಲ್ಲಿ ಸಂಘ, ಸಂಸ್ಥೆಗಳನ್ನು ಸ್ಥಾಪಿಸಿ, ಕನ್ನಡದ ಹಿತಕ್ಕೆ ದುಡಿಯುತ್ತಿರುವುದು ಆಶಾದಾಯಕವಾಗಿದೆ. ಭಾರತದ ವಿವಿಧ ಭಾಗಗಳಲ್ಲಿ ಹೊರನಾಡಿನ ಕನ್ನಡಿಗರ ಕೆಲವು ಸಮ್ಮೇಳನಗಳೂ ನಡೆದವು. ಮುಂಬಯಿ ಕನ್ನಡಿಗರ ಒಂದು ಡೈರೆಕ್ಟರಿ ಪ್ರಕಟಿಸುವ ಕೆಲಸವು ಮುಂಬಯಿಯಲ್ಲಿ ನಡೆಯುತ್ತಿದೆ. ಹೊರನಾಡುಗಳಲ್ಲಿ ಮುಖ್ಯವಾಗಿ ಆಗಬೇಕಾದುದು ಕನ್ನಡ ಶಾಲೆಗಳ ಸ್ಥಾಪನೆ. ಹೊರನಾಡುಗಳಲ್ಲಿರುವ ಕನ್ನಡ ಮಕ್ಕಳು ಮನೆಯಲ್ಲಿ ಕನ್ನಡ ಮಾತನಾಡುತ್ತಿದ್ದರೂ ಅವರಿಗೆ ಬರೆಯುವುದಕ್ಕೆ ಓದುವುದಕ್ಕೆ ಬಾರದು. ಪರಿಸ್ಥಿತಿ ಹೀಗೇ ಮುಂದುವರಿದರೆ ಮುಂದಿನ ಪೀಳಿಗೆಗೆ ಕನ್ನಡದ ಸಂಪರ್ಕವೇ ಇಲ್ಲವಾಗುತ್ತದೆ. ರಾಜ್ಯಸರ್ಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇಂಥ ಸಂಘ ಸಂಸ್ಥೆಗಳ ನಿಕಟ ಸಂಬಂಧವನ್ನಿಟ್ಟುಕೊಂಡು, ಅವರಿಗೆ ಕಾಲೋಚಿತ ಸಲಹೆ, ಸಹಾಯಗಳನ್ನು ನೀಡಬೇಕು.

❖❖

೪೩ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಕೆ.ಜಿ. ಕುಂದಣಗಾರ



ಕನ್ನಡ ಸಂಶೋಧನೆ, ಜೈನ ಸಾಹಿತ್ಯ, ವೀರಶೈವ ಸಾಹಿತ್ಯಗಳಲ್ಲಿ ಅದ್ವಿತೀಯ ಪಂಡಿತರಾಗಿದ್ದ ಕೆ. ಜಿ. ಕುಂದಣಗಾರರು ಗೋಕಾಕ ತಾಲ್ಲೂಕಿನ ಕೌಜಲಗಿ ಗ್ರಾಮದಲ್ಲಿ ಗಿರಿಮಲ್ಲಪ್ಪ-ಶಾಕಾಂಬರಿ ದಂಪತಿಗಳಿಗೆ ಮೂರನೇ ಮಗನಾಗಿ ೧೪-೮-೧೮೮೫ರಲ್ಲಿ ಜನಿಸಿದರು. ಬೆಳಗಾವಿ ಧಾರವಾಡಗಳಲ್ಲಿ ಶಾಲಾ ಶಿಕ್ಷಣ ಪೂರೈಸಿದರು. ೧೯೦೯ರಲ್ಲಿ ಮೆಟ್ರಿಕ್ ಮುಗಿಸಿದರು. ೧೯೧೯ರಲ್ಲಿ ಬಿ.ಎ. ಪದವಿಧರರಾದ ಮೇಲೆ ೧೯೨೫ರಲ್ಲಿ ಎಂ.ಎ. ಪದವೀಧರರಾದರು.

ಗಳಿಕೆಯೊಂದಿಗೆ ಕಲಿಕೆ ಎಂಬಂತೆ ಶಿಕ್ಷಕರಾಗಿದ್ದುಕೊಂಡೇ ಬಿ.ಎ. ಮುಗಿಸಿದ ಅವರು ಎಂ.ಎ. ಮಾಡಿದ ನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿ ೧೯೨೭ರಲ್ಲಿ ಕೆಲಸದಿಂದ ಬಿಡುಗಡೆ ಹೊಂದಿದರು. ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಪ್ರಾಚ್ಯವಸ್ತು ವಿಭಾಗದಲ್ಲಿದ್ದುಕೊಂಡೇ ಸಂಶೋಧನೆ, ಕನ್ನಡ ವಿಭಾಗ ಬೆಳೆಸುವ ಕಾರ್ಯ ಮಾಡಿದರು. ೧೯೪೮ರಲ್ಲಿ ನಿವೃತ್ತರಾದರು.

ಮುಂಬೈ, ಕರ್ನಾಟಕ ವಿಶ್ವವಿದ್ಯಾಲಯಗಳ ಸೆನೆಟ್ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಿಎಚ್. ಡಿ. ಮಾರ್ಗದರ್ಶಕರಾಗಿದ್ದರು. ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯ ಸ್ಥಾಪನೆಗೆ ಶ್ರಮಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪಾದಕ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಕೊಲ್ಲಾಪುರದಲ್ಲಿ ಕರ್ನಾಟಕ ಸಂಘ ಸ್ಥಾಪಿಸಿದರು. ಬ್ರಹ್ಮಪುರಿ ಪಂಚಗಂಗಾ ತೀರಗಳಲ್ಲಿ ಉತ್ಖನನ ಕೈಗೊಂಡಿದ್ದರು. ನಾಣ್ಯಶಾಸ್ತ್ರದ ವಿಚಾರಗೋಷ್ಠಿಗಳಲ್ಲಿ ಅಪೂರ್ವ ಪ್ರಬಂಧಗಳನ್ನು ಮಂಡಿಸಿದ್ದರು.

೧೯೬೨ರಲ್ಲಿ ಗದುಗಿನಲ್ಲಿ ನಡೆದ ೪೩ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಇವರು ಅಲಂಕರಿಸಿದ್ದರು. ಮುಂಬೈಯಲ್ಲಿ ೧೯೪೬ರಲ್ಲಿ ನಡೆದ ಅಖಿಲ ಭಾರತ ಓರಿಯಂಟಲ್ ಕಾನ್ಫರೆನ್ಸ್‌ನಲ್ಲಿ ಕನ್ನಡ – ದ್ರಾವಿಡ ವಿಭಾಗದ ಗೋಷ್ಠಿಯ ಅಧ್ಯಕ್ಷರಾಗಿದ್ದರು.

ಸಂಶೋಧನಾತ್ಮಕ, ಐತಿಹಾಸಿಕ, ಪ್ರಾಚೀನ ಕೃತಿಗಳ ಸಂಪಾದನೆಯಲ್ಲಿ ಎತ್ತಿದ ಕೈ ಕುಂದಣಗಾರರದು. ಅವರ ಹತ್ತಾರು ಕೃತಿಗಳು ಅನುಪಲಬ್ಧ. ಉಪಲಬ್ಧ ಕೃತಿಗಳಲ್ಲಿ ಕೆಲವು ಹೀಗಿವೆ :

ಪಂಪನ ಆದಿಪುರಾಣ (೧೯೫೩ ಸಂಪಾದನೆ), ಪೂರ್ವಪುರಾಣಂ (೧೯೪೩), ಕುಮುದೇಂದು ರಾಮಾಯಣ (೧೯೩೬), ಲೀಲಾವತಿ ಪ್ರಬಂಧಂ (೧೯೪೬), ಹರಿಹರದೇವ ಪ್ರಶಸ್ತಿ(೧೯೩೭), ಮಹಾದೇವಿಯಕ್ಕ (ಚರಿತ್ರೆ) ೧೯೩೭, ಗದ್ಯಮಂಜರಿ (ಪಠ್ಯ ೧೯೫೪), ಚಿನ್ಮಯಿ ಚಿಂತಾಮಣಿ (೧೯೩೦).

ಕುಂದಣಗಾರರು ೨೨-೮-೧೯೬೫ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೩
ಅಧ್ಯಕ್ಷರು: ಕೆ.ಜಿ. ಕುಂದಣಗಾರ
ದಿನಾಂಕ ೨೭,೨೮,೨೯ ಡಿಸೆಂಬರ್ ೧೯೬೧
ಸ್ಥಳ : ಗದಗ

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಗೆ ಮೈವೆತ್ತ ಸಂಸ್ಥೆಗಳಲ್ಲಿ ಹಿರಿಯ ಸಂಸ್ಥೆ. ಅದು ತನ್ನ ಪಾಲಿನ ಕರ್ತವ್ಯವನ್ನು ಕಾಲಕಾಲಕ್ಕೆ ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುತ್ತ ಬಂದಿದೆ. ಏಕೈಕ ಕರ್ನಾಟಕ ಅಸಾಧ್ಯವೆಂದು ಅನೇಕರ ಮನದಲ್ಲಿದ್ದಾಗ, ಪರಿಷತ್ತು ಅದರ ಕನಸು ಕಂಡು, ಕೊನೆಗೆ ಅದು ನಿರ್ಮಾಣಗೊಂಡುದನ್ನೂ ಕಂಡಿತು! ನಾಡಿನ ಪುಣ್ಯದ ಪೂರ್ವದಿಂಗತದಲ್ಲಿ ನವರಾಜ್ಯಭಾನು ಉದಯವಾದನು. ರಾಜ್ಯೋದಯವಾದ ಮೇಲೆ ಪರಿಷತ್ತು ತನ್ನ ಕರ್ತವ್ಯವನ್ನು ಇನ್ನೂ ಹೆಚ್ಚು ದಕ್ಷತೆಯಿಂದ ನೆರವೇರಿಸುತ್ತಿದೆ ಎಂಬುದಕ್ಕೆ ಅದು ಕೈಕೊಂಡು ಕೆಳಗಿನ ಯೋಜನೆಗಳೇ ಸಾಕ್ಷಿ.

ಕನ್ನಡ-ಕನ್ನಡ ಕೋಶ

ಕನ್ನಡ ವಾಙ್ಮಯದ ಅಭ್ಯಾಸಕ್ಕೆ ಒಂದು ಸಮರ್ಪಕ ಕೋಶದ ಅವಶ್ಯಕತೆ ವಿಶೇಷವಾಗಿದೆಯೆಂದು ಪಂಡಿತರೆಲ್ಲರ ನಿದರ್ಶನಕ್ಕೆ ಬಂದ ಮಾತು. ರೆ. ಕಿಟಲ್ ಅವರ ಕನ್ನಡ-ಇಂಗ್ಲಿಷ್ ಕೋಶ, ಭಾರತೀಯ ಭಾಷೆಗಳಲ್ಲಿದ್ದ ಕೋಶಗಳಲ್ಲಿಯೇ ಅತ್ಯಂತ ಗಣನೀಯವಾದುದಾಗಿದ್ದರೂ ಅದು ಇನ್ನೂ ಅಸಮರ್ಪಕವಾಗಿದೆ. ಕಿಟೆಲ್ಲರ ಕಾಲಕ್ಕೆ ಅನೇಕ ಕನ್ನಡ ಗ್ರಂಥಗಳನ್ನು ಪ್ರಕಟವಾಗಿರಲಿಲ್ಲ. ಉದಾಹರಣೆಗಾಗಿ, ಪಂಪಭಾರತ, ವಚನ ವಾಙ್ಮಯದಂತಹ ಸಾಹಿತ್ಯ ಕೃತಿಗಳನ್ನು ಅಳವಡಿಸಿಕೊಳ್ಳುವ ಯೋಗ ಆ ಕಾಲಕ್ಕೆ ಬಂದಿರಲಿಲ್ಲ. ಕಳೆದ ೭೫ ವರುಷಗಳ ಅವಧಿಯಲ್ಲಿ ಅನೇಕ ಕನ್ನಡದ ಉದ್ಗ್ರಂಥಗಳು ಬೆಳಕುಕಂಡಿವೆ; ಭಾಷಾಶಾಸ್ತ್ರದ ಪ್ರಗತಿಯಾಗಿದೆ. ಆದುದರಿಂದ ಆಧುನಿಕ ತತ್ತ್ವಗಳನ್ನು ಅಳವಡಿಸಿಕೊಂಡು ಶಬ್ದಗಳ ನಿಷ್ಪತ್ತಿ, ಅರ್ಥವಿಶೇಷ, ಪ್ರಯೋಗ ಮೊದಲಾದವುಗಳನ್ನು ಒಳಗೊಂಡ ಒಂದು ಕೋಶವನ್ನು ನಿರ್ಮಿಸಬೇಕೆಂಬ ಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಎರಡು ದಶಕಗಳ ಹಿಂದೆಯೇ ಕೈಕೊಂಡಿತು. ಆ ಯೋಜನೆ ಮೊನ್ನೆ ಮೊನ್ನೆಯವರೆಗೆ ಬಹು ಮಂದಗತಿಯಿಂದ ಸಾಗಿದ್ದಿತು. ಪರಿಷತ್ತು ವಿಶ್ವ ಪ್ರಯತ್ನ ಮಾಡಿ ಈ ಕೋಶದ ಮಹತ್ವವನ್ನು ಸರಕಾರದ ಅವಗಾಹನೆಗೆ ತಂದುಕೊಟ್ಟು, ಅದರಿಂದ ೧೫ ಲಕ್ಷರೂಪಾಯಿಗಳ ಸಹಾಧನವನ್ನು ಪಡೆದಿದೆ. ಕೋಶದ ಕೆಲಸ ಈಗ ಬಹುವೇಗದಿಂದ ನಡೆದಿದೆ. ನಾಡಿನ ನಾನಾ ಭಾಗದ ಗಣ್ಯವಿದ್ವಾಂಸರನ್ನು ಕೋಶದ ಸಂಪಾದಕ-ಮಂಡಲಿಯಲ್ಲಿ ಸೇರಿಸಿಕೊಂಡು, ಕೋಶದ ಕಾರ್ಯಕ್ರಮವನ್ನು ಶಾಸ್ತ್ರೀಯವಾಗಿಯೂ ತೀವ್ರವಾಗಿಯೂ ಮುಂದುವರೆಸಿರುವುದು. ೫ ಲಕ್ಷದಷ್ಟು ಪಟ್ಟಿಕೆಗಳು ಈಗಾಗಲೇ ಸಿದ್ಧವಾಗಿವೆ. ಪ್ರಕಟವಾಗಿರುವ ಪ್ರತಿಯೊಂದು ಹಳಗನ್ನಡ ಗ್ರಂಥವನ್ನೂ ಅಚ್ಚಾಗದೆ ಇರುವ ಅನೇಕ ತಾಳೆಯೋಲೆಯ ಗ್ರಂಥಗಳನ್ನೂ ಸಹಸ್ರಾರು ಶಾಸನಗಳನ್ನೂ ಇದಕ್ಕಾಗಿಯೇ ಉಪಯೋಗಿಸಿಕೊಂಡಿರುವದು ಈ ಕೋಶದ ವೈಶಿಷ್ಟ್ಯ. ಈ ಕೋಶಕ್ಕಾಗಿಯೇ ಹೊಸ ಅಚ್ಚುಕೂಟವೊಂದನ್ನು ಪರಿಷತ್ತು ಕೊಂಡಿದೆ. ಮೊದಲಿನ ೯೬ ಪುಟಗಳು ಈ ಮಾರ್ಚದೊಳಗಾಗಿಯೇ ತಪ್ಪದೆ ಅಚ್ಚಾಗಲಿವೆ. ಮುಂದಿನ ಕಾರ್ಯ ಭರದಿಂದ ನಡೆದು ೫೦೦೦ ಪುಟಗಳ ನಾಲ್ಕು ಸಂಪುಟಗಳು ಬಹುಬೇಗನೆ ಪ್ರಕಟವಾಗಲಿರುವುವು. ಇದಕ್ಕಾಗಿ ವಿದ್ಯಾಸಚಿವರಾದ ಶ್ರೀ ಗಣಮುಖಿ ಅಣ್ಣಾರಾಯರನ್ನು ಪರಿಷತ್ತಿನ ಅಧ್ಯಕ್ಷರಾದ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳನ್ನು, ಕೋಶ ಸಮಿತಿಯ ಸಂಪಾದಕ ಮಂಡಲಿಯನ್ನು, ಪರಿಷತ್ತಿನ ಕಾರ್ಯಕಾರಿ ಮಂಡಳಿಯನ್ನು, ಇದಕ್ಕೆ ಸಂಬಂಧಪಟ್ಟ ಇನ್ನಿತರ ಸರಕಾರಿ ಅಧಿಕಾರಿಗಳನ್ನೂ, ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಗ್ರಂಥ ಪ್ರಕಟನೆ

ಕರ್ನಾಟಕ ಕವಿಚರಿತೆಗಳು ನಮ್ಮ ಸಾಹಿತ್ಯದ ಅಮೌಲ್ಯ ಕೃತಿಗಳು. ಕಳೆದ ಅನೇಕ ವರ್ಷಗಳಿಂದ ಅವು ದೊರೆಯದಾಗಿದ್ದುವು. ಅದರಿಂದ ಸಾಹಿತ್ಯಾಭ್ಯಾಸಿಗಳಿಗೂ ಸಂಶೋಧಕರಿಗೂ ವಿಶೇಷ ತೊಂದರೆಯಾಗಿದ್ದಿತು. ಪರಿಷತ್ತು ಈ ಕೊರತೆಯನ್ನು ಪೂರೈಸಲು ಮುಂದೆ ಬಂದು ಕರ್ನಾಟಕ ಕವಿಚರಿತೆಗಳನ್ನು ಪ್ರಕಟಿಸುವ ಯೋಜನೆಗೆ ಅಣಿಯಾಗಿದೆ. ಈಗಾಗಲೇ ಕವಿಚರಿತೆಯ ಪ್ರಥಮ ಸಂಪುಟ ಪ್ರಕಟವಾಗಿದೆ. ಅದು ಮೊದಲಿನ ಕವಿಚರಿತೆಯ ವಿಷಯದೊಡನೆ

ಈಚೆಗೆ ಬಂದ ಹೊಸ ವಿಷಯಗಳನ್ನು ಒಳಗೊಂಡಿದೆ. ದ್ವಿತೀಯ ಸಂಪುಟವೂ ಅಚ್ಚಿನಲ್ಲಿದೆ. ಇದಲ್ಲದೆ ಪರಿಷತ್ತು ವಿವೇಕಚಿಂತಾಮಣಿ, ಸೂಕ್ತಿಸುಧಾವರ್ಣದಂತಹ ಉದ್ಗ್ರಂಥಗಳನ್ನು ಪ್ರಕಟಿಸುವ ಒಂದು ಯೋಜನೆಯನ್ನಿಟ್ಟು ಕೊಂಡಿರುವುದು ಸ್ತುತ್ಯವಾಗಿದೆ. ಈ ಕಾರ್ಯವನ್ನು ಅದು ತೀವ್ರಗೊಳಿಸಲಿ.


ಸಾಹಿತ್ಯ ಸಮ್ಮೇಳನಗಳು

ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ನಾನಾ ಭಾಗಗಳಲ್ಲಿ ೪೨ನೇ ಸಾಹಿತ್ಯ ಸಮ್ಮೇಳನಗಳನ್ನು ಜರುಗಿಸಿ ಈಗ ೪೩ನೆಯ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧವಾಗಿ ನಿಂತಿದೆ. ಹಿಂದೆ ಕನ್ನಡಿಗರು ಇನ್ನೂ ಜಾಗೃತವಾಗಿರದ ಕಾಲದಲ್ಲಿ ಅವರನ್ನು ಬಡಿದೆಬ್ಬಿಸುವ ಮಹತ್ಕಾರ್ಯವನ್ನು ಸಮ್ಮೇಳನಗಳು ಮಾಡುತ್ತಿದ್ದವು ಉತ್ಸಾಹಿ ಯುಗದಲ್ಲಿ, ಸಂಭ್ರಮ, ಸನ್ಮಾನ, ಮೆರವಣಿಗೆ ಮುಂತಾದುವೆಲ್ಲ ನಡೆದುವು. ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ಮಹನೀಯರನ್ನು ಗೌರವಿಸಿ ಅವರನ್ನು ಸತ್ಕರಿಸಿದುದೂ ಆಯಿತು. ಸಮ್ಮೇಳನಗಳನ್ನು ನೆರವೇರಿಸುವುದು ಒಂದು ದೃಷ್ಟಿಯಿಂದ ನೋಡಿದರೆ ಬಹು ಸುಲಭವಾದ ಕಾರ್ಯವಲ್ಲ. ಅದಕ್ಕಾಗಿ ಸಹಸ್ರಾರು ರೂಪಾಯಿಗಳನ್ನು ವ್ಯಯಮಾಡಬೇಕಾಗುತ್ತದೆ ; ಕಾರ್ಯಕರ್ತರಲ್ಲಿ ಸಂಘಟನೆ ಮೂಡಬೇಕಾಗುತ್ತದೆ. ಪರಿಷತ್ತು ಹಾಗೂ ಸ್ವಾಗತ ಸಮಿತಿಗಳೂ ೪-೬ ತಿಂಗಳೂ ಇದೇ ಕಾರ್ಯವನ್ನು ಮಾಡಬೇಕಾಗುತ್ತದೆಯೆಂದರೂ ಸಲ್ಲುವುದು. ಸಂಭ್ರಮ ಸನ್ಮಾನಗಳ ಹೊರತಾಗಿ ಇದರ ಫಲಶೃತಿ ಏನು ಎಂಬುದನ್ನು ವಿಚಾರಿಸುವ ಕಾಲ ಈಗ ಸಂಪ್ರಾಪ್ತವಾಗಿದೆ. ಇದು ಬುದ್ಧಿಮತ್ತೆಯ ಯುಗ. ಭಾವನಾಪ್ರಧಾನವಾದ ಉತ್ಸವ ಯುಗ ನಿಂತುಹೋಗಿದೆ. ಇನ್ನು ಮುಂದೆ ನಮ್ಮ ಸಮ್ಮೇಳನಗಳ ಬೌದ್ಧಿಕಮಟ್ಟ ಮೇಲಕ್ಕೇರಬೇಕು. ನಮ್ಮ ನಾಡಿನಲ್ಲಿ ಸಂಶೋಧನೆ, ಲಲಿತವಾಙ್ಮಯ ಇವು ಯಾವ ಯಾವ ದಿಸೆಯಲ್ಲಿ ನಡೆದಿವೆಯೆಂಬುದರ ಮಾಪನವಾಗಿ, ಅವುಗಳಿಗೆ ಸರಿಯಾದ ಮಾರ್ಗದರ್ಶನವನ್ನು ಮಾಡುವ ಯೋಜನೆ ಸಮ್ಮೇಳನಗಳ ಕಾಲದಲ್ಲಿ ನಡೆಯಬೇಕು. ಸಂಶೋಧಕರು, ಬರೆಹಗಾರರು ಸುಸಂಘಟಿತವಾಗಿ ನಮ್ಮ ಜ್ಞಾನದ ಪ್ರತಿಯೊಂದು ಕ್ಷೇತ್ರದ ಸಮೀಕ್ಷೆಯನ್ನು ಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ೨ ವರ್ಷಕ್ಕೊಮ್ಮೆ ನಡೆಯುತ್ತಿರುವ ಅಖಿಲ ಭಾರತ ಪ್ರಾಚ್ಯ ಸಮ್ಮೇಳನವನ್ನು ನೆನಪಿಗೆ ತಂದುಕೊಳ್ಳಬಹುದು ಎರಡು ವರ್ಷಗಳ ಪೂರ್ವದಲ್ಲಿಯೇ ಮುಂದಿನ ಸಮ್ಮೇಳನದ ಸ್ಥಳ ಅಧ್ಯಕ್ಷರ ಆಯ್ಕೆ ಯಾವ ಗಲಭೆಯಿಲ್ಲದೆ ಆಗಿಹೋಗುತ್ತದೆ. ಸಮ್ಮೇಳನದ ಅಂಗವಾಗಿ ನಡೆದು. ಇಂಥ ಶಾಖೆಗಳನ್ನು ಅವುಗಳ ಅಧ್ಯಕ್ಷರನ್ನೂ ಭಾಷಣಕಾರರನ್ನೂ ಮೊದಲೇ ಗೊತ್ತುಮಾಡಿರುತ್ತಾರೆ. ಎರಡು ವರ್ಷಗಳ ಅಭ್ಯಾಸ ಸಮೀಕ್ಷಣಗಳ ಬಲದಿಂದ ಆ ಸಮ್ಮೇಳನವು ಕೆಲಮಟ್ಟಿಗೆ ಶಾಶ್ವತವಾದ ಫಲಗಳನ್ನು ಒದಗಿಸಿಕೊಡುತ್ತದೆ. ನಮ್ಮ ಸಾಹಿತ್ಯ ಸಮ್ಮೇಳನಗಳೂ ಹೀಗೆ ನೆರವೇರಬಹುದೇ? ಸಂಬಂಧಪಟ್ಟವರು ಸಮಾಲೋಚನೆ ಮಾಡಿ ಸೂಕ್ತ ಕ್ರಮಗಳನ್ನು ಕೈಕೊಂಡರೆ ಈಗ ಅನವಶ್ಯ ಏಳುತ್ತಿರುವ ಯಾವ ಗಲಭೆಗಳಿಗೂ ಮುಂದೆ ಅಸ್ಪದವಾಗಲಿಕ್ಕಿಲ್ಲ ವೆನಿಸುತ್ತದೆ.

❖❖

೪೪ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ರಂಗನಾಥ ಶ್ರೀನಿವಾಸ ಮುಗಳಿ



ಕರ್ನಾಟಕದ ಗಡಿನಾಡಿನ ಕನ್ನಡ ದೀಪ, ಕನ್ನಡದ ಪಾರಿಜಾತ ಇತ್ಯಾದಿ ಬಿರಾದಾಂಕಿತರಾದ ರಂ.ಶ್ರೀ. ಮುಗಳಿ (ರಂಗನಾಥ ಶ್ರೀನಿವಾಸ ಮುಗಳಿ) ಶ್ರೀನಿವಾಸರಾವ್-ಕಮಲಕ್ಕನವರ ಪುತ್ರರಾಗಿ ೧೫-೭-೧೯೦೬ರಲ್ಲಿ ಜನಿಸಿದರು. ಬಾಗಲಕೋಟೆ, ಬಿಜಾಪುರಗಳಲ್ಲಿ ಶಾಲಾ ಶಿಕ್ಷಣ ಮುಗಿಸಿ ಕರ್ನಾಟಕ ಕಾಲೇಜಿನಲ್ಲಿ ೧೯೨೮ರಲ್ಲಿ ಬಿ.ಎ. ೧೯೩೦ರಲ್ಲಿ ಎಂ.ಎ. ಮಾಡಿದರು. ೧೯೩೨ರಲ್ಲಿ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಶಿಕ್ಷಕರಾಗಿ ಸೇರಿದರು. ೧೯೩೩ರಲ್ಲಿ ಸಾಂಗ್ಲಿಯ ವಿಲ್ಲಿಂಗ್ಟನ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವಿಲ್ಲಿಂಗ್ಟನ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿ ೧೯೬೬ರಲ್ಲಿ ನಿವೃತ್ತರಾದರು. ಕೆಲವು ಕಾಲ ಸರಕಾರದ ಸಾಹಿತ್ಯ ಸಂಸ್ಕೃತಿ ಇಲಾಖೆಯಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಅನಂತರ ಬೆಂಗಳೂರಿನಲ್ಲಿ ೧೯೬೭-೧೯೭೦ರ ಅವಧಿಯಲ್ಲಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು.

ಮುಗಳಿಯವರು ೧೯೪೦-೪೩ರಲ್ಲಿ ಜೀವನ ಪತ್ರಿಕೆಯ ಸಂಪಾದಕರಾಗಿ ಸೇವೆಸಲ್ಲಿಸಿದರು.

೧೯೫೬ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಇವರ ಕನ್ನಡ ಸಾಹಿತ್ಯ ಚರಿತ್ರೆ ಗ್ರಂಥಕ್ಕೆ ದೊರೆಯಿತು. ೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಮರ್ಶಾ ಗೋಷ್ಠಿಯ ಅಧ್ಯಕ್ಷತೆ, ೧೯೫೭ರಲ್ಲಿ ಧಾರವಾಡದಲ್ಲಿ ೧೯ನೇ ಶತಮಾನದ ಸಾಹಿತ್ಯ ವಿಮರ್ಶೆಯ ಗೋಷ್ಠಿಯ ಅಧ್ಯಕ್ಷತೆಗಳನ್ನು ವಹಿಸಿದ್ದರು. ೧೯೬೩ರಲ್ಲಿ ತುಮಕೂರು ಸಿದ್ಧಗಂಗಾ **ಕ್ಷೇತ್ರ**ದಲ್ಲಿ ನಡೆದ ೪೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಮುಗಳಿ ಅವರು ಬರೆದಿರುವ ಪ್ರಮುಖ ಕೃತಿಗಳಲ್ಲಿ ಕೆಲವು:

ಕನ್ನಡ ಸಾಹಿತ್ಯ ಚರಿತ್ರೆ
ಹೆರಿಟೇಜ್ ಆಫ್ ಕರ್ನಾಟಕ (ಇಂಗ್ಲಿಷ್)
ಕನ್ನಡ ಕೃತಿರತ್ನ
ಕನ್ನಡ ಕಾವ್ಯ ಸಂಚಯ
ಅನ್ನ (ಕಾದಂಬರಿ)
ಸಾಹಿತ್ಯ ವಿಮರ್ಶೆಯ ಮಾರ್ಗದರ್ಶನ ಸೂತ್ರಗಳು (ವಿಮರ್ಶೆ)

ರಂ.ಶ್ರೀ ಮುಗಳಿ ಅವರು ೨೦-೨-೧೯೯೩ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೪

ಅಧ್ಯಕ್ಷರು, ರಂ.ಶ್ರೀ.ಮುಗಳಿ

ದಿನಾಂಕ ೨೮,೨೯,೩೦ ಡಿಸೆಂಬರ್ ೧೯೬೩

ಸ್ಥಳ : ತುಮಕೂರು

ಪರಿಷತ್ತು ಸಮ್ಮೇಳನಗಳ ವಿಚಾರಕ್ಷೇತ್ರ-ಕಾರ್ಯಕ್ಷೇತ್ರ

ಎಲ್ಲಕ್ಕೆ ಮೊದಲು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸಾಹಿತ್ಯ ಸಮ್ಮೇಳನ ಇವುಗಳ ವಿಚಾರಕ್ಷೇತ್ರ ಮತ್ತು ಈ ವಿಷಯದಲ್ಲಿ ಸ್ಪಷ್ಟವಾದ ತಿಳಿವಳಿಕೆ ಇಂದು ತೀರ ಆವಶ್ಯಕವೆಂದು ನನಗೆ ತೋರುತ್ತದೆ. ಸಾಹಿತ್ಯದ ಎಲ್ಲ ಶಾಖೆಗಳಲ್ಲಿ ಆಗಿರುವ ಪ್ರಗತಿ, ಆಗಬೇಕಾದ ಕಾರ್ಯ, ಸಾಹಿತ್ಯ ಸಂವರ್ಧನೆಗೆ ಆವಶ್ಯಕವಾದ ವಿಮರ್ಶೆಯ ಸ್ಥಿತಿಗತಿ, ಸಾಹಿತ್ಯ ಸೇವಕರ ಮತ್ತು ಪ್ರಕಾಶಕರ ಪರಿಸ್ಥಿತಿ, ಈ ಮುಂತಾದ ಸಾಹಿತ್ಯ ಸಂಬಂಧಿಯಾದ ವಿಷಯಗಳಿಗೆ ಸಾಹಿತ್ಯ ಪರಿಷತ್ತು ಮತ್ತು ಸಾಹಿತ್ಯ ಸಮ್ಮೇಳನಗಳು ತಮ್ಮ ಮುಖ್ಯವಾದ ಗಮನವನ್ನೀಯಬೇಕು ; ಉದಾತ್ತ ಧ್ಯೇಯದಿಂದ, ವಿಧಾಯಕ ಕಾರ್ಯದಿಂದ, ವರುಷದಿಂದ ವರುಷಕ್ಕೆ ಮುನ್ನಡೆಯುತ್ತ ಸಾರ್ಥಕತೆಯನ್ನು ಗಳಿಸಬೇಕು. ಸಾಹಿತ್ಯದ ಮಂದಿರಕ್ಕೆ ಮೂಲ ಆಧಾರ ಭಾಷೆ, ಅದರ ಶಿಖರ ಸಂಸ್ಕೃತಿ. ಭಾಷೆ, ಸಾಹಿತ್ಯ, ಸಂಸ್ಕೃತಿ ಈ ಮುಪ್ಪುರಿಯ ಮುನ್ನಡೆ, ಪರಿಷತ್ತು-ಸಮ್ಮೇಳನಗಳ ಹಿರಿಯ ಗುರಿಯಾಗಿರಬೇಕು. ಅಷ್ಟರಮಟ್ಟಿಗೆ ಅವುಗಳ ವಿಚಾರಕ್ಷೇತ್ರ, ಕಾರ್ಯಕ್ಷೇತ್ರಗಳು ವಿಸ್ತಾರಗೊಳ್ಳುತ್ತವೆ. ಆದರೆ ಅವು ಇನ್ನೂ ಹಿಗ್ಗುತ್ತ ಹೋಗಿ ರಾಜಕೀಯದ ರಣರಂಗವಾಗುವುದಾದರೆ ಅದಕ್ಕಿಂತ ಬೇರೆ ಅನಿಷ್ಟವಿಲ್ಲ. ಸಾಹಿತ್ಯ ಸೇವಕರಿಗೆ ಭಾಷಿಕ ರಾಜಕಾರಣ, ದೇಶದ ರಾಜಕಾರಣ ಮುಂತಾದ ಅನೇಕ ವಿಷಯಗಳಲ್ಲಿ ಆಸ್ಥೆಯಿರಬಹುದು. ಆ ಬಗ್ಗೆ ಅವರ ಸ್ವಂತ ಅಭಿಪ್ರಾಯಗಳೂ ಇರಬಹುದು. ಆದರೆ ಅವನ್ನು ವ್ಯಕ್ತಗೊಳಿಸಲು ಸಾಹಿತ್ಯದ ವೇದಿಕೆಯನ್ನು ಅವರು ಬಳಸಬಾರದು. ಅವಕ್ಕೆ ಸಂಬಂಧಪಟ್ಟ ವೇದಿಕೆಗಳಲ್ಲಿ ಹೋಗಿ ನಿಲ್ಲಬೇಕು. ಈ ಸೂಕ್ಷ್ಮಸಂಯಮ ಇಂದು ನಮ್ಮ ಜನಕ್ಕೆ ಅತ್ಯಂತ ಅವಶ್ಯವಾಗಿದೆ. ಯಾರೂ ಬೇಕಾದವರು ಯಾವಲ್ಲಿಯೂ ನುಗ್ಗಬಹುದು, ಏನನ್ನೂ ಹೇಳಬಹುದು ಎಂಬುದು ಕೇಡಿಗೆ ತೋಡಿಕೊಟ್ಟ ದಾರಿಯಾಗುವುದು ಖಂಡಿತ. ಭಾಷೆ-ಭಾಷೆಗಳ ಅನ್ಯೋನ್ಯ ಸಂಬಂಧ, ಭಾಷಾನುಗುಣ ಪ್ರಾಂತರಚನೆಯಿಂದ ತಲೆಯೆತ್ತಿದ ಸಮಸ್ಯೆಗಳು, ಇವನ್ನು ಸಾಹಿತ್ಯ ಪರಿಷತ್ತು ಹಾಗೂ ಸಮ್ಮೇಳನಗಳು ತಾತ್ವಿಕವಾಗಿ ಪರಿಶೀಲಿಸಬೇಕು-ಆಂದೋಲನ ದೃಷ್ಟಿಯಿಂದಲ್ಲ. ಆಂದೋಲನ್ನಕೆ ಬೇರೆ ಸಮ್ಮುಖಗಳಿರುತ್ತವೆ. ಭಾಷಿಕ ರಾಜಕಾರಣದ ಅತಿರೇಕಗಳಿಂದ ಭಾರತೀಯ ಐಕ್ಯಕ್ಕೆ ಬಾಧೆ ತರುವ ಮತ್ತು ಸರಸ್ವತಿಯ ಪವಿತ್ರ ಪೀಠವನ್ನು ಮಲಿನಗೊಳಿಸುವ ಪ್ರವೃತ್ತಿಯನ್ನು ಯಾವ ಭಾಷೆಯವರೇ ತೋರಲಿ ಅದು ಅವರಿಗೂ ನಾಡಿಗೂ ಅಪಶಕುನವೆಂದು ತಿಳಿಯಬೇಕು.

ಸಾಹಿತಿಗಳು ಭಾರತ ಸಂಚಾರ ಮಾಡಬೇಕು ?

ಪ್ರಾಂತಪ್ರಾಂತದ ಜನರಲ್ಲಿ ಅನ್ಯೋನ್ಯ ಸ್ನೇಹ ಬೆಳೆಯಲೆಂದೂ ಅವರವರ ಸಾಹಿತ್ಯ ಪರಿಚಯವಾಗಲೆಂದೂ, ಪಿ.ಇ.ಎನ್., ಅಂತರಭಾರತಿ ಸಾಹಿತ್ಯ ಅಕಾಡೆಮಿ ಮುಂತಾದ ಸಂಸ್ಥೆಗಳು ತಂತಮ್ಮ ರೀತಿಯಲ್ಲಿ ಬೆಲೆಯುಳ್ಳ ಕಾರ್ಯ ಮಾಡುತ್ತ ಬಂದಿರುತ್ತವೆ. ಭಾರತೀಯ ಭಾವೈಕ್ಯದ ಮಹತ್ವವನ್ನರಿತ ವಿಚಾರವಂತರು ಮತ್ತು ಕಾರ್ಯಕರ್ತರು ಇಂಥ ಸಂಸ್ಥೆಗಳ ಉತ್ಕರ್ಷಕ್ಕಾಗಿ ಹೆಚ್ಚು ಗಮನ ಕೊಡಬೇಕು. ಇವುಗಳಿಂದ ಪ್ರಕಾಶಿತವಾಗುವ ಪತ್ರಿಕೆ ಪುಸ್ತಕಗಳ ಪ್ರಸಾರವು ಜನರಲ್ಲಿ ಹೆಚ್ಚುವಂತೆ ಪ್ರಯತ್ನಿಸಬೇಕು. ಸಾಹಿತಿಗಳು ಮತ್ತು ಸಾಹಿತ್ಯ ಪ್ರೇಮಿಗಳು, ಇಷ್ಟೇಕೆ ಸಾಧ್ಯವಿದ್ದಷ್ಟು ಭಾರತೀಯರೂ ಭಾರತದ ಎಲ್ಲ ಪ್ರಾಂತಗಳಲ್ಲಿ ಸಂಚಾರ ಮಾಡಿ ಅಲ್ಲಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ಕಂಡು ಜನರೊಡನೆ ಸಂಪರ್ಕ ಬೆಳೆಯಿಸಿ ಪ್ರತ್ಯಕ್ಷವಾಗಿ ಭಾರತದರ್ಶನವನ್ನು ಪಡೆಯಬೇಕು. ಹೊಸ ಬಂಧುತ್ವದ ಪರಂಪರೆಯನ್ನು ನಿರ್ಮಿಸಬೇಕು. **ತಂತಮ್ಮ ಸರಕಾರಗಳ ನೆರವಿನಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಘ ಸಂಸ್ಥೆಗಳು ಇತರ ಪ್ರಾಂತಗಳಲ್ಲಿ ತಮ್ಮಲ್ಲಿಯ ಸಾಹಿತಿಗಳ ಸಂಚಾರವನ್ನು ಏರ್ಪಡಿಸಬೇಕು, ಅಲ್ಲಲ್ಲಿಯ ಸಾಹಿತಿಗಳ ಸಂಪರ್ಕವುಂಟಾಗುವಂಥ ಕಾರ್ಯಕ್ರಮಗಳನ್ನು ಯೋಜಿಸಬೇಕು.**

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ

ಕರ್ನಾಟಕ ವಿದ್ಯಾವರ್ಧಕ ಸಂಘ, ತರುವಾಯ ಕನ್ನಡ ಸಾಹಿತ್ಯ ಪರಿಷತ್ತು ಈ ಸಂಸ್ಥೆಗಳು ಅತ್ಯಂತ ಪ್ರತಿಕೂಲವಾದ ಪರಿಸ್ಥಿತಿಯಲ್ಲಿ ಕನ್ನಡಿಗರನ್ನು ಒಂದುಗೂಡಿಸಲು ಮತ್ತು ಅವರ ಆಶೋತ್ತರಗಳನ್ನು ಮೂರ್ತಗೊಳಿಸಲು ಪ್ರಯತ್ನಮಾಡಿದವು. ಕರ್ನಾಟಕ ಪ್ರಾಂತವಾಗಬೇಕೆಂಬುದು ಅವು ಕಂಡ ಹಿರಿಗನಸುಗಳಲ್ಲಿ ಹಿರಿಯದಾಗಿತ್ತು. ಆ ಕನಸು ನನಸಾಗಿ ಕನ್ನಡ ನಾಡು ಒಂದಾಗಿರುವ ಸಂದರ್ಭದಲ್ಲಿ ಈ ಸಂಸ್ಥೆಗಳನ್ನೂ ಇವನ್ನು ಕಟ್ಟಲೆಸಗಿದ ಹಿರಿಯರನ್ನೂ,ಇಂದಿಗೂ ಮನಃಪೂರ್ವಕವಾಗಿ ಸೇವೆ ಸಲ್ಲಿಸುತ್ತಿರುವ ಕಾರ್ಯಕರ್ತರನ್ನೂ ನಾವು ಅತ್ಯಂತ ಕೃತಜ್ಞತೆಯಿಂದ ವಂದಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತು ಎಲ್ಲ ಭಾಗದ ಕನ್ನಡಿಗರ ಮತ್ತು ಸಾಹಿತ್ಯ ಪ್ರೇಮಿಗಳ ಪ್ರಾತಿನಿಧಿಕ ಸಂಸ್ಥೆಯಾಗಿ ಸುಮಾರು ಐವತ್ತು ವರ್ಷಗಳವರೆಗೆ ಅವ್ಯಾಹತವಾಗಿ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿ ಕಾರ್ಯವನ್ನು ಮಾಡುತ್ತ ಬಂದಿದೆ. ಅದು ಕೈಗೊಂಡಿರುವ ಅನೇಕ ಕಾರ್ಯಗಳಲ್ಲಿ ಕನ್ನಡ-ಕನ್ನಡ-ನಿಘಂಟು ಚಿರಸ್ಮರಣೀಯವಾದ ಕಾರ್ಯ. ಶಾಸ್ತ್ರಶುದ್ಧವಾದ ತಳಹದಿಯ ಮೇಲೆ ಅದರ ಯೋಜನೆಯನ್ನು ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಸರ್ವಸಂಗ್ರಹವೂ ನಿರ್ದಿಷ್ಟವೂ ಆಗುವಂತೆ ಅದನ್ನು ರಚಿಸಲಾಗುತ್ತಿದೆ. ಅದರ ಮೊದಲನೆಯ ಸಂಚಿಕೆ ಬೇಗನೆ ಪ್ರಕಟವಾಗಲಿದೆಯೆಂಬ ನಿರೀಕ್ಷೆಯಿದೆ. ಕನ್ನಡದ ಮೇಲಿನ ಅಕ್ಕರೆಯಿಂದ ಅದಕ್ಕಾಗಿ ಶ್ರಮಿಸುತ್ತಿರುವ ವಿದ್ವಾಂಸರಿಗೂ ಅದರ ಪ್ರಕಟನೆಗಾಗಿ ಧನಸಹಾಯವನ್ನು ಪೂರ್ತಿಯಾಗಿ ನೀಡಿರುವ ಮೈಸೂರು ಸರಕಾರಕ್ಕೂ ಕನ್ನಡಿಗರು ಕೃತಜ್ಞರಾಗಿರಬೇಕು. ತುರ್ತು ಪರಿಸ್ಥಿತಿಯ ಝಳವು ಅದಕ್ಕೆ ತಾಕದಂತೆ, ಎಲ್ಲ ಸಂಚಿಕೆಗಳು ಬೇಗನೆ ಪ್ರಕಟವಾಗುವಂತೆ ಸರಕಾರವು ಎಲ್ಲ ಬಗೆಯ ಸೌಕರ್ಯಗಳನ್ನು ನಿಯತವಾಗಿ ಒದಗಿಸುವುದೆಂದು ನಾವು ಹಾರೈಸೋಣ. ಸಾಹಿತ್ಯ ಪರಿಷತ್ತು ಘಟನಾಬದ್ಧವಾದ, ಅನೇಕ ಹಿರಿಯರ ತ್ಯಾಗಸೇವೆಗಳಿಂದ ಪರಿಪೂತವಾದ, ಕನ್ನಡಿಗರ ಆಶಾಸ್ಥಾನವಾದ ಸಂಸ್ಥೆ. ಅದರ ಉದಾತ್ತವಾದ ಪರಂಪರೆಯನ್ನು ಸಾಗಿಸಿಕೊಂಡು ಹೋಗುವ ಹೊಣೆ ಎಲ್ಲ ಸಾಹಿತ್ಯ ಪ್ರೇಮಿಗಳ ಮೇಲಿದೆ. ಅದರಲ್ಲಿ ನಡೆಯುವ ಯಾವ ಚಟುವಟಿಕೆಯೂ ಉನ್ನತ ಮಟ್ಟದಲ್ಲಿ ನಡೆಯುವುದು ಅವಶ್ಯ. ಅದರ ಲೋಪದೋಷಗಳ ವಿಮರ್ಶೆ ಇರಲಿ, ಘಟನೆಗೆ ಸಂಬಂಧವಾದ ಚರ್ಚೆಯಿರಲಿ ಎಲ್ಲವೂ ಒಂದು ಮಾದರಿಯ ತೂಕದಿಂದ ನಡೆಯಬೇಕು. ಕೊನೆಗೆ ನಿಯಮಾನುಸಾರವಾಗಿ ಕೈಕೊಂಡ ನಿರ್ಣಯಗಳನ್ನು ನಾವೆಲ್ಲರೂ ಅನುಸರಿಸಬೇಕು. ಲೋಕಕ್ಕೆಲ್ಲ ವಿವೇಕವನ್ನು ಹೇಳ ಹೊರಟ ಸಾಹಿತ್ಯಪ್ರೇಮಿಗಳಾದ ನಾವು ಅದಕ್ಕೆ ವಿರುದ್ಧವಾಗಿ ನಡೆದರೆ ಗತಿಯೇನು? ಪರಿಷತ್ತಿನ ಆರ್ಥಿಕಸ್ಥಿತಿ ಎಷ್ಟೂ ಸಮಾಧಾನಕರವಾಗಿಲ್ಲ. ಎರಡು ಕೋಟಿಗೂ ಹೆಚ್ಚಾಗಿರುವ ಕನ್ನಡಿಗರನ್ನು ಪ್ರತಿನಿಧಿಸುವ ಸಾಹಿತ್ಯ ಪರಿಷತ್ತಿಗೆ ಸಾವಿರ ಜನ ಕೂಡ ಸದಸ್ಯರಿಲ್ಲವೆಂದರೆ ಏನು? ಹತ್ತು ಸಾವಿರ ಜನರಾದರೂ ಸದಸ್ಯರಾಗುವಂತೆ ನಾವು ನೀವೆಲ್ಲ ಯತ್ನಿಸಬೇಕು, ಐವತ್ತು ಸಾವಿರವಾದರೂ ವಾರ್ಷಿಕ ಸಹಾಯ ದ್ರವ್ಯ ನೀಡುವಂತೆ ಸರಕಾರವನ್ನು ಪ್ರಾರ್ಥಿಸಬೇಕು.

ಎಲ್ಲ ಪುಸ್ತಕಗಳ ಪಟ್ಟ ಪ್ರಕಟನೆ ಆಗಬೇಕು

ಗ್ರಂಥರಚನೆಗೆ ಪೂರ್ವಸಿದ್ಧತೆಯಾಯಿತು, ಅದಕ್ಕೆ ಸಂಸ್ಕಾರವಾಗಿ ಅದು ಪ್ರಕಾಶಿತವೂ ಆಯಿತು ಎಂದು ಇಟ್ಟು ಕೊಳ್ಳೋಣ. ಅದನ್ನು ಬೆಲೆಕೊಟ್ಟು ಕೊಳ್ಳುವುದೆಲ್ಲಿ? ಓದುವರೆಷ್ಟು ಜನ? ಓದಿದ ಮೇಲೆ ಮೆಚ್ಚಿಗೆಯನ್ನೊ ವಿಮರ್ಶೆಯನ್ನೊ ತಿಳಿಸುವವರು ಎಲ್ಲಿದ್ದಾರೆ? ಹಿಂದಿಗಿಂತ ಇಂದು ವಾಚನಾಭಿರುಚಿ ಹೆಚ್ಚಿದೆ. ಗ್ರಂಥಕಾರರಿಗೆ ಕೆಲಮಟ್ಟಿಗೆ ಪ್ರತಿಫಲ ದೊರೆಯುತ್ತದೆ. ಇದನ್ನೆಲ್ಲ ಒಪ್ಪಿಯೂ ಕನ್ನಡಿಗರ ಜನಸಂಖ್ಯೆ, ಓದಬಲ್ಲ ಓದುಗರ ಸಂಖ್ಯೆ ಈ ಮಾನದಿಂದ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳಲಿಕ್ಕೆ ಬಾರದು. ಕೆಲವೊಂದು ಸಲ ಯಾವೊಂದು ಪುಸ್ತಕವನ್ನು ಕೊಳ್ಳುವವರು ಕಡಿಮೆ, ಓದುವವರು ಹೆಚ್ಚು, ರಸಜ್ಞರಂತೂ ಶೂನ್ಯ ಎಂಬ ಪರಿಸ್ಥಿತಿಯಿರುತ್ತದೆ. ಅದೂ ಕತೆ, ಕಾದಂಬರಿಯಿದ್ದರೆ ಮಾತ್ರ. ಕವಿತೆಯಿದ್ದರೆ, ಎಲ್ಲಕ್ಕೂ


ಶೂನ್ಯವೇ ದೊರೆಯುವ ಪ್ರತಿಫಲ! ನಾಟಕ ಪ್ರಬಂಧಾದಿಗಳು ಇವೆರಡರ ಮಧ್ಯದಲ್ಲಿ ಬಹುಶಃ ಇರುತ್ತವೆ. ಒಟ್ಟಿನಲ್ಲಿ ಬೆಲೆಕೊಟ್ಟು ಪುಸ್ತಕಗಳನ್ನು ಸ್ವಂತಕ್ಕೆ ಸಂಗ್ರಹಿಸುವ ಮತ್ತು ಓದುವ ವಾಚಕವರ್ಗದ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಗಳು ನಡೆಯಬೇಕು. ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಒಂದು ಯೋಜನೆಯನ್ನು ಮಾಡಬಹುದು. ಪ್ರತಿ ಮೂರು ತಿಂಗಳಿಗೊಮ್ಮೆ ಸಾಹಿತ್ಯ ರೂಪದ ಪ್ರಕಾರ ವಿಂಗಡಿಸಿ ಆಯಾ ವರ್ಷದಲ್ಲಿ ಪ್ರಕಟವಾಗಿರುವ ಎಲ್ಲ ಪುಸ್ತಕಗಳ ಪಟ್ಟಿಯನ್ನು ಸಂಕ್ಷಿಪ್ತ ಪರಿಚಯದೊಡನೆ 'ಕನ್ನಡ ನುಡಿ'ಯಲ್ಲಿ ಪ್ರಕಟಿಸಬೇಕು. ಜೊತೆಗೆ ಒಮ್ಮೆ ಕಾವ್ಯ ಇನ್ನೊಮ್ಮೆ ಕತೆ ಕಾದಂಬರಿ, ಮುಂದೆ ನಾಟಕ, ಕೊನೆಗೆ ಪ್ರಬಂಧಾದಿ ವಾಙ್ಮಯ ಹೀಗೆ ಪ್ರತ್ಯೇಕ ಸಾಹಿತ್ಯ ರೂಪದಲ್ಲಿ ಹಿಂದಿನ ವರುಷದಲ್ಲಿ ಆಗಿರುವ ಪ್ರಗತಿಯನ್ನು, ಎತ್ತಿತೋರಿಸಬೇಕಾದ ಕೃತಿಪರಿಚಯದೊಡನೆ ವಿಮರ್ಶಕರಿಂದ ಬರೆಯಿಸಿ ಪ್ರಕಟಿಸಬೇಕು. ಬೇರೆ ಭಾಷೆಗಳಲ್ಲಿ ಇಂಥ ಕಾರ್ಯ ನಡೆದಿರುತ್ತವೆ. ಇದರಿಂದ ವಾಚನಾಭಿರುಚಿಯಿದ್ದವರು ತಮ್ಮ ವೇದಿಕೆಯ ಪುಸ್ತಕಗಳನ್ನಾಯ್ದುಕೊಂಡು ತಂತಮ್ಮ ಯೋಗ್ಯತಾನುಸಾರವಾಗಿ ಬೆಲೆಕೊಟ್ಟು ಕೊಂಡು ಓದಬಹುದು. ಮನೆಮನೆಯ ವಾಚನಾಲಯಗಳನ್ನು ಸಮೃದ್ಧಗೊಳಿಸಬಹುದು. ಶಾಲೆ ಕಾಲೇಜುಗಳ ಮತ್ತು ಇತರ ಸಂಸ್ಥೆಗಳ ಗ್ರಂಥಾಲಯಗಳಿಗೂ ಇಂಥ ಪರಿಚಯ ಪಟ್ಟಿಗಳಿಂದ ಪ್ರಯೋಜನವಾಗುವುದು. ಸಾಹಿತ್ಯ ಪರಿಷತ್ತಲ್ಲದೆ ಇಂಥ ಸೇವೆಯ ಅಭಿರುಚಿ ಮತ್ತು ಹವ್ಯಾಸವುಳ್ಳ ವ್ಯಕ್ತಿಗಳೂ ಇದನ್ನು ಕೈಕೊಳ್ಳಬಹುದು. ಭಿನ್ನ ಭಿನ್ನ ಪರಿಚಯ ಪಟ್ಟಿಗಳಿಂದ ಆಯ್ಕೆಗೆ ಇನ್ನೂ ಹೆಚ್ಚು ಅವಕಾಶವಿರುತ್ತದೆ.

ಸಮ್ಮೇಳನಗಳು ಮತ್ತು ಗೋಷ್ಠಿಗಳು

ಸಾಹಿತ್ಯ ಸಮ್ಮೇಳನದಲ್ಲಿ ಪ್ರತಿವರ್ಷವೂ ಒಂದೆರಡು ಸಾಹಿತ್ಯ ರೂಪಗಳನ್ನು ಕುರಿತು ಗೋಷ್ಠಿಗಳು ಏರ್ಪಡಬೇಕೆಂಬ ಮನೀಷೆ ಬಹುಕಾಲದಿಂದ ವ್ಯಕ್ತವಾಗಿದೆ. ಆದರೆ ಇದಕ್ಕೆ ೨-೩ ತಿಂಗಳ ಸಿದ್ಧತೆ ಸಾಲದು, ಹನ್ನೆರಡು ತಿಂಗಳಾದರೂ ಬೇಕು. ಯಾವೊಂದು ಸಮ್ಮೇಳನದ ಕಾಲಕ್ಕೆ ಲೇಖಕರೂ ವಿಮರ್ಶಕರೂ ಸೇರಿ ಮುಂಬರುವ ವರ್ಷದ ಗೋಷ್ಠಿಯ ರೂಪರೇಖೆಯನ್ನು ಗೊತ್ತುಪಡಿಸಿ ಅದರ ಚಾಲಕರನ್ನು ನಿರ್ಧರಿಸಿ ಕಾರ್ಯ ಪ್ರಾರಂಭ ಮಾಡಬೇಕು. ಸಮ್ಮೇಳನದ ಕಾಲಕ್ಕೆ ಎಲ್ಲ ಕನ್ನಡಿಗರಿಗೆ ಮುಕ್ತದ್ವಾರವಿದ್ದ ಕಾರ್ಯಕ್ರಮಗಳು ಎರಡು ದಿನ ನಡೆದು ಮುಗಿದ ಮೇಲೆ ಒಂದು ಸಂಪೂರ್ಣ ದಿನವಾದರೂ ಆಯಾ ಗೋಷ್ಠಿಗೆ ಮೀಸಲಾಗಿರಬೇಕು. ಗೋಷ್ಠಿಯ ನಿಯೋಜಿತ ಅಧ್ಯಕ್ಷರು ಆ ಸಾಹಿತ್ಯರೂಪದಲ್ಲಿ ಅಲ್ಲಿಯವರೆಗಾದ ನಿರ್ಮಿತಿಯ ಅವಲೋಕನ ಮಾಡಬೇಕು, ಕೆಲವರು ಬರೆದು ತಂದ ಪ್ರಬಂಧಗಳನ್ನು ಓದಬೇಕು, ಅವುಗಳ ಮೇಲೆ ಚರ್ಚೆ ನಡೆಯಬೇಕು. ಪ್ರಬಂಧ ವಿಷಯಗಳನ್ನು ಪೂರ್ವಭಾವಿಯಾಗಿ ಸರ್ವಂಕಷವಾಗುವಂತೆ ಪುನರುಕ್ತಿಯಾಗದಂತೆ ಆರಿಸಿ ಸಾಕಷ್ಟು ಮುಂಚಿತವಾಗಿ ಲೇಖಕರಿಗೆ ತಿಳಿಸಿರಬೇಕು. ಗೋಷ್ಠಿಯ ಫಲಶ್ರುತಿಯೆಂದು ಅಧ್ಯಕ್ಷರ ಅವಲೋಕನದೊಂದಿಗೆ ಎಲ್ಲ ಪ್ರಬಂಧಗಳನ್ನಾಗಲಿ ಅವುಗಳ ಸಾರವನ್ನಾಗಲಿ ಪುಸ್ತಕರೂಪದಲ್ಲಿ ಪ್ರಕಟಿಸಬೇಕು. ಸಾಹಿತ್ಯ ಸಮ್ಮೇಳನಗಳು ಇಂತ ಗೋಷ್ಠಿಯೊಡನೆ ಜರಗುವುದಾದರೆ ಸಾಹಿತಿಗಳೂ ಸಹೃದಯರೂ ಸಮ್ಮೇಳನಗಳಿಗೆ ಹೆಚ್ಚು ಹೆಚ್ಚಾಗಿ ಪ್ರೇಮದಿಂದಲೂ ಆಸಕ್ತಿಯಿಂದಲೂ ಬರುವರೆಂದು ನೀರಿಕ್ಷಿಸಲು ಆಸ್ಪದವುಂಟಾಗುತ್ತದೆ.

❖❖

೪೫ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಕಡೆಂಗೋಡ್ಲು ಶಂಕರಭಟ್ಟ



ಕನ್ನಡದ ಪ್ರಸಿದ್ಧ ನವೋದಯ ಕವಿಗಳಲ್ಲಿ ಒಬ್ಬರಾದ ಕಡೆಂಗೋಡ್ಲು ಶಂಕರಭಟ್ಟ ಅವರು ಈಶ್ವರಭಟ್ಟ-ಗೌರಮ್ಮನವರ ಪುತ್ರರಾಗಿ ೯-೮-೧೯೦೪ರಲ್ಲಿ ಜನಿಸಿದರು. ಪ್ರಾರಂಭದ ವಿದ್ಯಾಭ್ಯಾಸ ಮುಳಿಯ ತಿಮ್ಮಪ್ಪಯ್ಯನವರ ಮನೆಯಲ್ಲಿ ಮಂಗಳೂರಿನಲ್ಲಿ ನಡೆಯಿತು. ಮದರಾಸಿನ ವಿಶ್ವವಿದ್ಯಾನಿಲಯದಲ್ಲಿ ವಿದ್ವಾನ್ ಪದವಿ ಗಳಿಸಿದರು.

೧೯೨೭ರಲ್ಲಿ ಮಂಗಳೂರಿನ ಸೆಂಟ್ ಅಗ್ನೆಸ್ ಕಾನ್ವೆಂಟಿನಲ್ಲಿ ಕನ್ನಡ ಅಧ್ಯಾಪಕರಾಗಿ ೧೯೬೪ವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು. ೧೯೫೩ರಿಂದ ೧೯೬೮ರವರೆಗೆ ಸಂಪಾದಕರಾಗಿ ರಾಷ್ಟ್ರಬಂಧು ಪತ್ರಿಕೆಯನ್ನು ನಡೆಸಿದರು. ೧೯೨೭ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ 'ಪಂಚಕಜ್ಜಾಯ' ನೆನಪಿನ ಸಂಚಿಕೆಗೆ ಶ್ರಮಿಸಿದರು. ನವಯುಗ, ರಾಷ್ಟ್ರಮತ ವಾರಪತ್ರಿಕೆಗಳಿಗೂ ಸ್ವಲ್ಪ ಕಾಲ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ೧೯೩೨ರಲ್ಲಿ ಮಡಿಕೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರು ಆಗಿದ್ದರು. ೧೯೩೬ರಲ್ಲಿ ಜರುಗಿದ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ೧೯೬೫ರಲ್ಲಿ ಕಾರವಾರದಲ್ಲಿ ನಡೆದ ೪೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಇವರಿಗೆ ಪ್ರಾಪ್ತವಾಯಿತು.

ಕಡೆಂಗೋಡ್ಲು ಶಂಕರಭಟ್ಟರ ಮುಖ್ಯ ಕೃತಿಗಳು :

ಘೋಷಯಾತ್ರೆ (ಕಾವ್ಯ), ಪತ್ರಪುಷ್ಪ, ನಲ್ಮೆ, ಗಾಂಧಿ ಸಂದೇಶ(ಕವನ ಸಂಕಲನಗಳು), ದೇವತಾಮನುಷ್ಯ, ಧೂಮಕೇತು, ಹೊನ್ನಿಯ ಮದುವೆ (ಕಾದಂಬರಿಗಳು), ಗಾಜಿನ ಬಳೆ, ದುಡಿಯುವ ಮಕ್ಕಳು (ಕಥಾ ಸಂಕಲನಗಳು), ಸ್ವರಾಜ್ಯ ಯುದ್ಧ (ಅನುವಾದ), ವಿರಾಮ (ಏಕಾಂಕ ನಾಟಕ)

ಕೃಷಿಕುಟುಂಬದ ಹವ್ಯಕ ಸಮಾಜದ ಕವಿ, ಪತ್ರಿಕಾಕರ್ತರಾದ ಕಡೆಂಗೋಡ್ಲು ಶಂಕರಭಟ್ಟ ಅವರು ೧೭-೫-೧೯೬೮ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೫

ಅಧ್ಯಕ್ಷರು: ಕಡೆಂಗೋಡ್ಲು ಶಂಕರಭಟ್ಟ

ದಿನಾಂಕ ೧೦,೧೧,೧೨ ಮೇ ೧೯೬೫

ಸ್ಥಳ : ಕಾರವಾರ

ಮುನ್ನೋಟ

ಇದುವರೆಗೆ ಕನ್ನಡ ಸಾಹಿತ್ಯದ ಕೆಲವು ಪ್ರಾಪ್ತಿಗಳನ್ನು ಅಖ್ಯಾನಿಸಿದುದಾಯಿತು. ಈಗ 'ಪ್ರಾಪ್ತವ್ಯ'ಗಳನ್ನು ಉಲ್ಲೇಖಿಸಬೇಕಾಗಿದೆ. ಇವುಗಳ ಸಾಧನೆಯಲ್ಲಿ ಶುದ್ಧ ಸಾಹಿತ್ಯಕರೊಂದಿಗೆ ಭಿನ್ನ ಭಿನ್ನ ಅಧಿಕರಣ ಪ್ರತಿಷ್ಠಿತರೂ ಸಹಕರಿಸಬೇಕಾಗಿದೆ.

(೧) ವಿದ್ವಾಂಗದಲ್ಲಿ ಆಮೂಲಾಗ್ರವಾಗಿ, ಕನ್ನಡವೆ ಬೋಧಭಾಷೆಯಾಗಬೇಕು. ಭಾರತದ ಒಳಗಣ ಸಂಪರ್ಕ ಭಾಷೆಯೊಂದಿಗೆ ವಿಶ್ವಸಂಪರ್ಕ ಭಾಷೆಯಾದ ಆಂಗ್ಲಭಾಷೆಗೆ ಗಣನೀಯ ಸ್ಥಾನ ಇರಬೇಕು. ಸಾಂಸ್ಕೃತಿಕ ದೃಷ್ಟಿಯಿಂದ ಅದರ ಅಧ್ಯಾಪನ-ಅಧ್ಯಯನಗಳು ನಡೆಯಬೇಕು ; ಶುಕ ಪಾಠಕ್ರಮದಿಂದಲ್ಲ.

(೨) ಆಧುನಿಕ ವಿಚಾರ-ವಿಜ್ಞಾನ-ಶಾಸ್ತ್ರ ಸಂಬಂಧವಾದ ಉತ್ತಮ ಗ್ರಂಥಗಳು ಯಾವ ಭಾಷೆಯಲ್ಲಿದ್ದರೂ ಅವುಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಬೇಕು.

(೩) ಪ್ರಾಚೀನ ಕವಿಗಳ ಉತ್ತಮ ಕೃತಿಗಳೆಲ್ಲ ಸಂಗ್ರಹ ರೂಪದಲ್ಲಿ ಆದರೂ ಹದಬೆಲೆಗೆ ದೊರೆಯುವಂತಾಗಬೇಕು.

(೪) ಪ್ರಕಾಶಕರಿಗೆ ಅಥವಾ ಗ್ರಂಥಕರ್ತರಿಗೆ, ಪ್ರೋತ್ಸಾಹ ಕೊಡಬೇಕೆಂಬ ಒಂದೇ ಒಂದು ದೃಷ್ಟಿಯಿಂದ, ನೀರಸ ಗ್ರಂಥಗಳನ್ನು ಪಠ್ಯಪುಸ್ತಕಗಳನ್ನಾಗಿ ನಿಯಮಿಸುವ ಕ್ರಮ ನಿಲ್ಲಬೇಕು.

(೫) ಮಾಧ್ಯಮಿಕ ಶಿಕ್ಷಣ ಹೊಂದುವ ಮಕ್ಕಳಿಗೆ ನಮ್ಮ ಕವಿಶ್ರೇಷ್ಠರ ಲಘು ಪರಿಚಯವಾದರೂ ಆಗುವಂತೆ ಕೆಳಗಣ ವರ್ಗದಿಂದಲೆ, ಸುಲಲಿತವಾದ ಪ್ರಾಚೀನ ಗದ್ಯ ಪದ್ಯಗಳ ಉತ್ತಮ ಭಾಗಗಳಲ್ಲಿ ಸ್ವಲ್ಪವನ್ನಾದರೂ ಪಠ್ಯಗ್ರಂಥಗಳಲ್ಲಿ ಸೇರಿಸಬೇಕು.

(೬) ಸಾಹಿತ್ಯದ ಸೊಗಸನ್ನು ತಿಳಿದು ಅನುಭವಿಸುವುದಕ್ಕೆ ಅನುಕೂಲವಾಗುವಂತೆ. ಭಾಷಾಪಾಠ ಕ್ರಮವನ್ನು ಸಿದ್ಧಗೊಳಿಸಬೇಕು.

(೭) ಭಾಷೆಯಲ್ಲಿ ಅವತರಿಸುತ್ತಿರುವ ಅಶುದ್ಧ ಪ್ರಯೋಗಗಳನ್ನು ಪರಿಷತ್ತಿನ ಮುಖಪತ್ರಿಕೆಗಳಲ್ಲಿ ಚರ್ಚಿಸಿ ಶುದ್ಧಾಶುದ್ಧ ನಿರ್ಣಯವನ್ನು ಕೊಡುವ ವ್ಯವಸ್ಥೆಯಾಗುವುದು ವಿಹಿತ. ಪರಿಷತ್ತು ವಿದ್ವಾಂಸರ ಸಹಾಯದಿಂದ ಈ ಕೆಲಸವನ್ನು ಕೈಗೂಡಿಸಬೇಕು.

(೮) ಗ್ರಂಥಕರ್ತರೂ ಸಂಪಾದಕರೂ ತಮ್ಮ ಕೃತಿಗಳನ್ನೂ ವೃತ್ತಪತ್ರಿಕೆಗಳನ್ನೂ ಪರಿಷತ್ತಿಗೆ ಕಳುಹಿಸಿಕೊಟ್ಟು ಈ ಕಾರ್ಯದಲ್ಲಿ ನೆರವಾಗಬಹುದು.

(೯) ಲಿಪಿ ಸಂಸ್ಕರಣವು ಆಗಬೇಕಾದೀತು. ತೆಲುಗು ಕನ್ನಡಗಳಲ್ಲಿ ಸಮಾನ ಲಿಪಿಯನ್ನು ಬಳಕೆಗೆ ತರುವುದು ಸುಲಭ. ಈ ವಿಷಯದಲ್ಲಿ ಆಂಧ್ರ ಮೈಸೂರು ರಾಜ್ಯಗಳೊಳಗೆ ಆದ ಸಮತಟ್ಟನ್ನು ಕಾರ್ಯಗತಗೊಳಿಸಬಹುದು.

(೧೦) ಕನ್ನಡದ ಗ್ರಾಮ್ಯ ಭಾಷಾರೂಪಗಳಲ್ಲಿಯೂ, ನಾಡಿನಲ್ಲಿರುವ ಸೋದರ ಭಾಷೆಗಳಲ್ಲಿಯೂ ಇದ್ದು, ಗ್ರಂಥಸ್ಥ ಪ್ರಯೋಗದಲ್ಲಿರುವ ಉಚಿತ ಶಬ್ದಗಳನ್ನು ಸಂಗ್ರಹಿಸುವ ಕಾರ್ಯವು ಪರಿಷತ್ತಿನ ಮೂಲಕ ನಡೆಯಬೇಕು.

(೧೧) ಆಧುನಿಕ ವಿಷಯಗಳಲ್ಲಿ ಉತ್ತಮಗ್ರಂಥ ನಿರ್ಮಾಣವಾಗಬೇಕು. ಪ್ರತಿವರ್ಷ ಕೆಲವು ಗ್ರಂಥಗಳನ್ನು ಪ್ರಕಟಪಡಿಸುವ ಯೋಜನಾಬದ್ಧ ವ್ಯವಸ್ಥೆ ಅವಶ್ಯವಾಗಿದೆ.

ಏಕೀಕರಣ ಮತ್ತು ಸಮ್ಮೇಳನ

ಬೇಕಾದುದರ ಪಟ್ಟಿಯನ್ನು ಇನ್ನೂ ಉದ್ದಕ್ಕೆ ಎಳೆಯಬಹುದು. ಆದರೆ ಸಾಹಿತ್ಯ ಸಮ್ಮೇಳನವು, ಸಾಹಿತ್ಯ ಸಮಾರಾಧನೆಯು ಸಮಾರಂಭವಾಗಿರಬೇಕಲ್ಲದೆ ಕೇವಲ ತಾಪತ್ರಯ ನಿವೇದನೆಯ ತಳವಾಗಬಾರದು-ಎನ್ನುವ ದೃಷ್ಟಿಯಿಂದ ವಾಂಛಿತಗಳ ಸಂಖ್ಯೆಯನ್ನು ಹೆಚ್ಚಿಸಲಿಲ್ಲ. ಇದರಿಂದ ಕನ್ನಡಿಗರು ಸುದೈವಿಗಳು. "ಬೇಡಲು ಕನ್ನಡ ದಾಸಯ್ಯ ಬಂದಿಹ" ಎನ್ನುತ್ತಾ ಬೇರೆ ಬೇರೆ ಆಡಳಿತದ ಮನೆಮನೆಗೆ ಭಿಕ್ಷಾರ್ಥಿಗಳಾಗಿ ಹೋಗಬೇ ಆವಶ್ಯಕತೆ ಉಂಟಾಗಿದೆ. ಆಣ್ಮರು-ಆಳುಗಳು, ಎನ್ನುವ ಭೇದ ತೊಡೆದುಹೋಗಿದೆ. ನಮ್ಮ ವಿಧಾನ ಪರಿಷತ್ತುಗಳಲ್ಲಿ, ಸಚಿವಾಲಯಗಳಲ್ಲಿ, ವಿವಿಧಾಧಿಕರಣಗಳಲ್ಲಿ ಕನ್ನಡದ ನಾಡಿ ಬಡಿಯುತ್ತಿದೆ. ಒಮ್ಮೊಮ್ಮೆ ಅದರ ಸ್ಪಂದನದ ಗತಿಯಲ್ಲಿ ಹೆಚ್ಚು ಕಡಿಮೆ ಕಾಣಿಸಬಹುದು. ಹೆಚ್ಚಾಗಲಿ, ಕಡಿಮೆಯಾಗಲಿ, ಬಡಿಯುವ ನಾಡಿಯು ಕನ್ನಡದ್ದೆ ಆಗಿದೆ ಎನ್ನುವ ಸಮಾಧಾನದಿಂದ ರಾಜಕೀಯದ ಹೊಲೆ ತಾಗಬಹುದಾದ ಕೆಲವು ಪ್ರಶ್ನೆಗಳನ್ನು ದೂರದಲ್ಲಿಯೇ ಇರಿಸಬೇಕಾಗಿದೆ.

ಪರಿಷತ್ತಿನ ಸ್ಥಾನ ಮಾನ

ಸಾಹಿತ್ಯ ಪರಿಷತ್ತಿನಂತಹ ಸಂಸ್ಕೃತಿ ಸೇವಾ ಸಂಸ್ಥೆಗೂ ಜನ ಪ್ರತಿನಿಧಿ ರಾಜ್ಯಭಾರಕ್ಕೂ ಇರಬೇಕಾದ ಆದರ್ಶಸಂಬಂಧವನ್ನಿಲ್ಲಿ ಪ್ರಸ್ತಾವಿಸದಿದ್ದರೆ ಅದೊಂದು ದೊಡ್ಡ ಲೋಪವಾಗಬಹುದು. ಹಿಂದಿನ ಕಾಲದಲ್ಲಿ ಕವಿಗಳಿಗೂ ವಿದ್ವಾಂಸರಿಗೂ ರಾಜಾಶ್ರಯ ದೊರೆಯುತ್ತಿತ್ತು. ಇದಕ್ಕೆ ಪ್ರತಿಯಾಗಿ ಕೆಲವೇಳೆ ಕವಿಗಳು ರಾಜರಿಗೆ ಕಾವ್ಯಾಶ್ರಯವನ್ನು ಕೊಡುವ ಕ್ರಮವೂ ಇತ್ತು. ಕಾಲಪರಿಸ್ಥಿತಿಗಳು ವ್ಯತ್ಯಾಸಹೊಂದಿವೆ. ಇಂದು ಈ ರೀತಿಯ ಆಶ್ರಯವನ್ನು ಕೊಡುವ ಕೊಳ್ಳುವ ಪ್ರಶ್ನೆ ಇಲ್ಲ. ಲೆಕ್ಕಣಿಕೆಗಳನ್ನು ಒತ್ತೆಯಿಡಬಲ್ಲ ಗಣ್ಯ ಸಾಹಿತ್ಯ ವ್ಯವಸಾಯಿಗಳು ದುರ್ಬಲರು; ಸ್ತುತಿಪಾಠವನ್ನಪೇಕ್ಷಿಸುವ ರಾಜ್ಯಧುರಂಧರರೂ ದುರ್ಲಭರೆ. ಸರ್ಕಾರವು ರಾಜಕೀಯ ಪ್ರಾತಿನಿಧ್ಯವನ್ನು ಪಡೆದಿದ್ದರೆ, ಪರಿಷತ್ತು ಸಾಂಸ್ಕೃತಿಕ ಪ್ರಾತಿನಿಧ್ಯವನ್ನು ಪಡೆದಿದೆ. ಸರಕಾರದ ಸತ್ತೆಯೂ ಅಧಿಕಾರವೂ ರಾಜ್ಯದ ಸರ್ವಾಂಗಗಳಲ್ಲಿ ವ್ಯಾಪಿಸಿಕೊಂಡಿದೆ. ಪರಿಷತ್ತಿನ ನೈತಿಕ ಬಾಧ್ಯತೆಯು ಸಾಹಿತ್ಯ ಸಂಸ್ಕೃತಿ ಕ್ಷೇತ್ರದಲ್ಲಿ ಸರ್ವತೋಮುಖವಾಗಿ ಇರತಕ್ಕುದ್ದಾಗಿದೆ. ಸ್ವಯಃಪ್ರಬುದ್ಧ ಪ್ರಜೆಗಳ ಮತವನ್ನು ಸಂಪಾದಿಸಿ ಬೆಳೆದ ಸಂಸ್ಥೆ ಅಲ್ಲವಾದರೂ ವಿದ್ಯಾ ಸಂಸ್ಕೃತಿ ಪುರಸ್ಕೃತರ ಸದಾಶಯದ ಆಧಾರಬಲವನ್ನು ಹೊಂದಿರುವ ಅದರ ಸ್ಥಾನಮಾನಗಳನ್ನು ಲಕ್ಷಿಸಿ, ವಿದ್ಯಾಸಂಸ್ಕೃತಿ ವಿಭಾಗದಲ್ಲಿ ತಾನು ನಿರ್ವಹಿಸುತ್ತಿರುವ ಕಾರ್ಯಭಾರಗಳಲ್ಲಿ ಕೆಲವನ್ನು, ಸರಕಾರವು ಈ ಸಂಸ್ಥೆಗೆ ಬಿಟ್ಟುಕೊಡಬಹುದು; ಅದಕ್ಕೆ ಸರಕಾರದ ನೆರವನ್ನು ನಿರೀಕ್ಷಿಸಬಹುದು; ತನ್ನ ಆರ್ಥಿಕ ಸಹಕಾರದ ಆಶ್ವಾಸನೆಯನ್ನು ನೀಡಬಹುದು."ದಮ್ಮಯ್ಯ"ಗಳನ್ನು ಅಪೇಕ್ಷಿಸದೆ, ವಿಚಾರಸ್ವಾತಂತ್ರ್ಯಕ್ಕೆ ತಡೆಹಾಕದೆ, ಗ್ರಂಥಕಾರನ ವಿದ್ವತ್ಸಂಭಾವನೆ, ಇತ್ಯಾದಿ ಕಾರ್ಯಗಳಲ್ಲಿ ವಿನಿಯೋಗ ಹೊಂದುವುದಕ್ಕೆ ಬೇಕಾದ ಧನಾನುಕೂಲತೆಯನ್ನು ಸರಕಾರವು ಒದಗಿಸಿಕೊಡುವುದು ಜನಹಿತದೃಷ್ಟಿಗೆ ಮೆಚ್ಚದ ಕೆಲಸವಲ್ಲ. ಅನಾವಶ್ಯಕವಾದ ಕಟ್ಟುನಿಟ್ಟುಗಳಿಂದಲೂ, ದೀರ್ಘಸೂತ್ರಗಳಿಂದಲೂ, ಉದ್ದಿಷ್ಟಕಾರ್ಯ ಸಾಧನೆಗೆ ಆತಂಕವಾಗದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಪಾಲಿಸಬೇಕಾದ ಕರ್ತವ್ಯ ಸರಕಾರದ್ದು ಮಾತ್ರವಲ್ಲ; ಸಂಸ್ಥೆಯದಾದರೂ ಇದೆ. ಮಾಂಸಗ್ರಂಥಿಯಂತಲ್ಲ, ಪರಿಶುದ್ಧರಕ್ತದಂತೆ ಅದು ಸಮಾಜ ಶರೀರದಲ್ಲಿ ತನ್ನ ಚಟುವಟಿಕೆಗಳನ್ನು ಕಾಣಿಸಬೇಕು. ಇಂತಹ ನೀತಿಪ್ರಜ್ಞೆಯಿಲ್ಲದೆ ಯಾವ ಸಂಸ್ಥೆಯೂ ಜನಾದರವನ್ನು ಪಡೆಯಲಾರದು.

❖❖

೪೬ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಆ.ನೇ. ಉಪಾಧ್ಯೆ



ಪಾಂಡಿತ್ಯಕ್ಕೆ ಮತ್ತು ವಿನಯಕ್ಕೆ ಇನ್ನೊಂದು ಹೆಸರಾಗಿದ್ದ ಆ.ನೇ. ಉಪಾಧ್ಯೆ ಅವರು ಬೆಳಗಾಂ ಜಿಲ್ಲೆಯ ಸದಲಗಾ ಎಂಬ ಹಳ್ಳಿಯಲ್ಲಿ ನೇಮಿನಾಥ ಉಪಾಧ್ಯೆ ಮತ್ತು ಚಂದ್ರಾಬಾಯಿ ದಂಪತಿಗಳಿಗೆ ೬-೨-೧೯೦೬ರಲ್ಲಿ ಮಗನಾಗಿ ಜನಿಸಿದರು. ಉಪಾಧ್ಯೆ ಅವರು ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಪ್ರೌಢಶಾಲೆಯಲ್ಲಿನ ಶಿಕ್ಷಣಕ್ಕಾಗಿ ಬೆಳಗಾವಿಗೆ ಬಂದರು. ೧೯೨೩ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಮುಗಿಸಿ ೧೯೨೮ರಲ್ಲಿ ಬಿ.ಎ. ಪದವೀಧರರಾಗಿ ೧೯೩೦ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಗಳಿಸಿದರು. ಈ ಸಮಯದಲ್ಲಿ ಅರ್ಧಮಾಗಧಿ, ಅಪಭ್ರಂಶ, ಸಂಸ್ಕೃತ, ಗುಜರಾತಿ, ಹಿಂದಿ, ಮರಾಠಿ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಪ್ರಭುತ್ವ ಸಾಧಿಸಿದರು. ೧೯೩೯ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದಿಂದ ಡಿಲಿಟ್ ಪದವಿ ಪಡೆದರು.

೧೯೩೦ರಲ್ಲಿಯೇ ಕೊಲ್ಲಾಪುರದ ರಾಜಾರಾಂ ಕಾಲೇಜಿನಲ್ಲಿ ಅರ್ಧಮಾಗಧಿ ಪ್ರಾಕೃತ ಭಾಷಾ ಅಧ್ಯಾಪಕರಾಗಿ ಸೇರಿ ೩೨ವರ್ಷಗಳ ಕಾಲ ಸೇವೆ ಸಲ್ಲಿಸಿ ಪ್ರಾಧ್ಯಾಪಕರಾಗಿ ೧೯೬೨ರಲ್ಲಿ ನಿವೃತ್ತರಾದರು. ೧೯೭೧ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗಕ್ಕೆ ಸಂಸ್ಥಾಪಕ ಪ್ರಾಧ್ಯಾಪಕರಾಗಿ ಕಾರ್ಯಪ್ರವೃತ್ತರಾದರು. ೧೯೭೫ರಲ್ಲಿ ಅಲ್ಲಿಂದ ನಿವೃತ್ತರಾಗಿ ಕೊಲ್ಲಾಪುರಕ್ಕೆ ಮರಳಿದರು.

೧೯೬೩ರಲ್ಲಿ ಬಿಹಾರದ ಪ್ರಾಚ್ಯ ವಿದ್ಯಾಸಂಸ್ಥೆಯು ತನ್ನ ವಜ್ರ ಮಹೋತ್ಸವ ಸಂದರ್ಭದಲ್ಲಿ ಉಪಾಧ್ಯೆಯವರಿಗೆ ಸಿದ್ಧಾಂತಾಚಾರ್ಯ ಪ್ರಶಸ್ತಿ ನೀಡಿತು. ೧೯೭೫ರಲ್ಲಿ ನ್ಯಾಯಾವತಾರ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಪಾರಿತೋಷಕ ಲಭಿಸಿತು. ಕೇಂದ್ರ ಸರ್ಕಾರದ ಸಂಸ್ಕೃತ ರಾಷ್ಟ್ರೀಯ ಪಂಡಿತ ಪ್ರಶಸ್ತಿ ರಾಷ್ಟ್ರಪತಿಗಳಿಂದ ೧೯೭೫ರಲ್ಲಿ ಲಭ್ಯವಾಯಿತು. ೧೯೬೬ರಲ್ಲಿ ಆಲಿಘರ್‌ನಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ವಿದ್ಯಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ೧೯೬೭ರಲ್ಲಿ ಶ್ರವಣಬೆಳಗೊಳದಲ್ಲಿ ನಡೆದ ೪೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಭಾರತೀಯ ಜ್ಞಾನಪೀಠ ನಿರ್ವಹಿಸುತ್ತಿದ್ದ ಮೂರ್ತಿದೇವಿ ಗ್ರಂಥಮಾಲೆಯ ಗೌರವ ಪ್ರಧಾನ ಸಂಪಾದಕರಾಗಿದ್ದರು. ೨೯ನೇ ವಿಶ್ವಪ್ರಾಚ್ಯ ವಿದ್ವಾಂಸ ಮಹಾಸಭೆಗೆ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಮಂಡಲಿಯ ಸದಸ್ಯರಾಗಿ ಕೂಡ ಕಾರ್ಯ ನಿರ್ವಹಿಸಿದ್ದರು.

ಗ್ರಂಥ ಸಂಪಾದನಾ ಕಾರ್ಯದಲ್ಲಿ ನಿಷ್ಣಾತರಾದ ಆ.ನೇ. ಉಪಾಧ್ಯೆಯವರು ಸುಮಾರು ೨೫ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಸುಮಾರು ಇನ್ನೂರು ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳನ್ನು ವಿದೇಶಗಳ ಗಣ್ಯ ವಿದ್ವತ್ ಪತ್ರಿಕೆಗಳಲ್ಲಿ ಪ್ರಶಂಸೆಗೆ ಒಳಗಾಗಿದೆ. ಅವರು ಸಂಪಾದಿಸಿದ ಕೆಲವು ಗಣ್ಯ ಗ್ರಂಥಗಳು ಹೀಗಿವೆ:

ಪ್ರವಚನಸಾರ, ಪರಮಾತ್ಮ ಪ್ರಕಾಶ, ಪಂಪಸುತ್ತಂ ವರಾಂಗಚರಿತ, ಬೃಹತ್ ಕಥಾಕೋಶ, ಶೃಂಗಾರಮಂಜರಿ, ಕಥಾಕೋಶ, ಗೀತವೀತರಾಗ, ತಿಲೋಯಿ ಪಣ್ಣತ್ತಿ, ಧರ್ಮರತ್ನಾಕರ, ಕಂಸವಹೋ ಇತ್ಯಾದಿ.

ಡಾ. ಉಪಾಧ್ಯೆಯವರು ಕೊಲ್ಲಾಪುರದಲ್ಲಿ ೮-೧೦-೧೯೭೫ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೬

ಅಧ್ಯಕ್ಷರು: ಆ.ನೇ ಉಪಾಧ್ಯೆ

ದಿನಾಂಕ ೨೬,೨೭,೨೮ ಮೇ ೧೯೬೭

ಸ್ಥಳ : ಶ್ರವಣಬೆಳಗೊಳ

ಸಮ್ಮೇಳನಾಧ್ಯಕ್ಷರ ವಿಚಾರಧಾರೆ

ಈಗ ಇಲ್ಲಿ ನಡೆಯುತ್ತಿರುವುದು ೪೬ನೇ ಸಾಹಿತ್ಯ ಸಮ್ಮೇಳನವಾಗಿದೆ. ಈ ಹಿಂದಿನ ನಲವತ್ತೈದು ಸಮ್ಮೇಳನಗಳ ಅಧ್ಯಕ್ಷಪದವಿಯನ್ನು ಬೆಳಗಿದ ಮಹಾನುಭಾವರ ಸಾಹಿತ್ಯಭ್ಯಾಸ, ಸಿದ್ಧಿಗಳನ್ನು ಸ್ಮರಿಸಿಕೊಂಡರೆ ಯಾರಿಗಾದರೂ ರೋಮಾಂಚನವಾಗದೆ ಇರದು. ಅವರ ನಾಡು, ನುಡಿಗಳ ಭಕ್ತಿ, ಅವರು ಸಲ್ಲಿಸಿದ ಸೇವೆ, ಅವರು ನಿರ್ಮಿಸಿದ ಕೃತಿಗಳು, ಅವರು ಕಂಡ ಕನಸುಗಳು, ಕೈಕೊಂಡ ಯೋಜನೆಗಳು, ಇವೆಲ್ಲ ಇಂದಿಗೂ ಕನ್ನಡ ಕಾರ್ಯಕರ್ತರಿಗೆ ಸ್ಫೂರ್ತಿಯನ್ನೀಯುವಂಥವಾಗಿವೆ. ಕನ್ನಡ ನಾಡಿನ ಏಕೀಕರಣ, ವಿಶಾಲ ಕರ್ನಾಟಕದ ನಿರ್ಮಾಣ, ಬೇರೆ ಬೇರೆ ಪ್ರದೇಶಗಳ ಕನ್ನಡಿಗರಲ್ಲಿ ಪರಸ್ಪರ ಸೌಹಾರ್ದಭಾವನೆ, ಎಲ್ಲ ಸೀಮೆಗಳಿಗೂ ಸಮಾನವಾದ ಗ್ರಾಂಥಿಕ ವ್ಯಾವಹಾರಿಕ ಭಾಷೆಯ ನಿರ್ಮಾಣ, ಕನ್ನಡದ ಸ್ಥಾನಮಾನ ವಿಚಾರ, ಹಳೆಯ ಸಾಹಿತ್ಯದ ಸಂರಕ್ಷಣ, ಪ್ರಕಟಣೆ-ಪ್ರಸಾರಗಳು ಜನತೆಗೆ ಒಳ್ಳೆಯ ಸಾಹಿತ್ಯವನ್ನು ನೀಡುವಿಕೆ, ಹೊಸ ಸಾಹಿತ್ಯಕ್ಕೆ ಪ್ರೋತ್ಸಾಹ, ಕನ್ನಡ ಭಾಷಾಭ್ಯಾಸದ ಬೆಳವಣಿಗೆ, ಭಾಷಾ ಶಾಸ್ತ್ರದ ತೌಲನಿಕ ಅಭ್ಯಾಸ, ಪ್ರಬುದ್ಧ ಪಾಂಡಿತ್ಯದ ಸಮೃದ್ಧಿ, ಕನ್ನಡ ನಾಡಿನ ರಾಜಕೀಯ-ಸಾಮಾಜಿಕ ಧಾರ್ಮಿಕ ಇತಿಹಾಸಗಳ ಬಗೆಗಿನ ಲೇಖನ, ಅದಕ್ಕಾಗಿ ನಡೆಯಬೇಕಾದ ಸಂಶೋಧನೆ, ವಿಶ್ವಕೋಶದ ರಚನೆ, ಸಮೃದ್ಧವೂ ಸಂಪುಷ್ಟವೂ ಆದ ಸಂಪನ್ನ ಶಬ್ದಕೋಶದ ನಿರ್ಮಾಣ, ವೈಜ್ಞಾನಿಕ ಗ್ರಂಥಗಳ ರಚನೆಗೆ ಪ್ರೋತ್ಸಾಹ, ಸಾಹಿತಿಗಳಿಗೆ ಸನ್ಮಾನ ಗೌರವಗಳು ಸಮಾಜದಲ್ಲಿ ರಸಿಕತೆ, ಸಾಹಿತ್ಯಪ್ರೇಮಗಳ ಬೆಳವಣಿಗೆ- ಹೀಗೆ ಹಲವಾರು ವಿಚಾರಗಳನ್ನು ಹಮ್ಮಿಕೊಂಡಿದ್ದಾರೆ. ಅವೆಲ್ಲವುಗಳ ಹಿಂದೆ ಭಾರತೀಯ ರಾಷ್ಟ್ರೀಯ ದೃಷ್ಟಿಯ ಕಾಣ್ಕೆಯಿದೆ.

ಬೆಂಗಳೂರಿನಲ್ಲಿ ಪರಿಷತ್ತಿನ ಕಾರ್ಯಕ್ರಮಗಳು

ಇದೀಗ ರೂಪುಗೊಳ್ಳುತ್ತಿರುವ ಬೆಂಗಳೂರು ವಿಶ್ವವಿದ್ಯಾನಿಲಯವೂ ತನ್ನ ರೀತಿಯಲ್ಲಿ ಪ್ರಗತಿಯ ಹೆಜ್ಜೆಗಳನ್ನು ಇಡುವುದರಲ್ಲಿ ಸಂಶಯವಿಲ್ಲ. ಇಲ್ಲಿ ರಾಜಾಜಿನಗರದ ಸಾಹಿತ್ಯಾಭ್ಯಾಸಿಗಳು ಕನ್ನಡಿಗರ ಕೂಟದವರು, ಗಾಂಧೀ ಸಾಹಿತ್ಯ ಸಂಘದವರು ಪರಿಷತ್ತಿನ ಸಹಾಕಾರದಿಂದ ವಿವಿಧ ಸಾಹಿತಿಗಳ ಸಮಗ್ರ ಕೃತಿಗಳ ಪರಿಚಯಾತ್ಮಕ ಭಾಷಣಗಳನ್ನು ಏರ್ಪಡಿಸುತ್ತಿರುವುದನ್ನೂ ನೆನೆಯಬೇಕು.


ಅಧಿಕ ಜನ ಸದಸ್ಯರಾಗಲಿ

ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಪ್ರೊ. ಜಿ. ವೆಂಕಟಸುಬ್ಬಯ್ಯನವರ ದಕ್ಷ ನೇತೃತ್ವದಲ್ಲಿ ನಮ್ಮ ಈ ಹಿರಿಯ ಸಂಸ್ಥೆ ಧನಬಲವನ್ನೇ ಗಳಿಸುತ್ತ ಕಿರಿಯ ಚೈತನ್ಯಗಳನ್ನು ಬೆಳಸುತ್ತ ವಿಶಾಲ ಭಾವನೆಯನ್ನು ದೂರದೃಷ್ಟಿಯನ್ನೂ ಕೈಗೂಡಿಸಿಕೊಳ್ಳುತ್ತ ಮುಂದುವರಿದಿದೆ. ಇಂಥ ಸಂಸ್ಥೆಗೆ ಬಹು ಸಂಖ್ಯೆಯಲ್ಲಿ ಜನ ಬೆಂಬಲವಾಗಿ ನಿಂತರೆ ಕನ್ನಡದ ಮುನ್ನಡೆ ಬೇಗ ಸಾಧಿತವಾಗಿತ್ತದೆ. ನಮ್ಮ ಜನ ಈ ಕಡೆ ಗಮನವಿಡಲಿ.

❖❖

೪೭ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದೇ. ಜವರೇಗೌಡ



ಕನ್ನಡಕ್ಕಾಗಿ ಹೋರಾಟ ಮಾಡಿದ ಕುವೆಂಪು ಅವರ ಪರಮಶಿಷ್ಯರಾದ ದೇ.ಜ.ಗೌ(ದೇವೇಗೌಡ ಜವರೇಗೌಡ) ಕೃಷಿಕ ಕುಟುಂಬದಿಂದ ಬಂದವರು. ದೇವೇಗೌಡ- ಚೆನ್ನಮ್ಮ ದಂಪತಿಗಳಿಗೆ ಚನ್ನಪಟ್ಟಣ ತಾಲ್ಲೂಕಿನ ಮೂಡಿಗೆರೆಯಲ್ಲಿ ೬-೭-೧೯೧೮ರಲ್ಲಿ ಜನಿಸಿದರು. ಚಕ್ಕೆರೆ, ಚನ್ನಪಟ್ಟಣಗಳಲ್ಲಿ ಶಾಲಾ ಶಿಕ್ಷಣ ಮುಗಿಸಿ ಬೆಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ಮಾಡಿ ಬಿ.ಎ ಪದವಿ ಗಳಿಸಿ ಕೆಲವು ಕಾಲ ಗುಮಾಸ್ತರಾಗಿ ಕೆಲಸ ಮಾಡಿ ಅನಂತರ ಮೈಸೂರಿಗೆ ಹೋಗಿ ೧೯೪೩ರಲ್ಲಿ ಕುವೆಂಪು ಅವರ ಶಿಷ್ಯರಾಗಿ ಎಂ.ಎ. ಪದವಿ ಗಳಿಸಿದರು.

೧೯೪೪ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ಅನಂತರ ಉಪಾಧ್ಯಾಪಕ, ಪರೀಕ್ಷಾಧಿಕಾರಿ, ಪ್ರಾಂಶುಪಾಲರು, ಇಲಾಖಾಮುಖ್ಯರು, ನಿರ್ದೇಶಕರು, ಕೊನೆಗೆ ಮೈಸೂರು ವಿಶ್ವವಿದ್ಯಾಲಯದ ಗೌರವಾನ್ವಿತ ಉಪಕುಲಪತಿ ಸ್ಥಾನವನ್ನು ೧೯೭೦ರಲ್ಲಿ ಅಲಂಕರಿಸಿದರು.

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ದೇಜಗೌ ಟ್ರಸ್ಟ್‌ಗಳನ್ನು ಸ್ಥಾಪಿಸಿದ ಇವರು ಜನಪದವಸ್ತು ಸಂಗ್ರಹಾಲಯ, ಜನಪದ ಭಾಷಾಂತರ ಡಿಪ್ಲೋಮಾ ತರಗತಿಗಳನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿ ಸದಸ್ಯರಾಗಿ ೧೯೬೭ರಲ್ಲಿ ಶ್ರವಣಬೆಳಗೊಳದಲ್ಲಿ ಸಾಹಿತ್ಯಗೋಷ್ಠಿ ಅಧ್ಯಕ್ಷರೂ ಆಗಿದ್ದರು. ಕರ್ನಾಟಕ ಜಾನಪದ ಪರಿಷತ್ತು, ರಾಜ್ಯ ಕೇಂದ್ರ ಸಾಹಿತ್ಯ ಅಕಾಡೆಮಿಗಳು ವಯಸ್ಕರ ಶಿಕ್ಷಣ ಸಮಿತಿ, ಮೊದಲಾದ ಸಂಸ್ಥೆಗಳಲ್ಲಿ ಸಕ್ರಿಯರಾಗಿ ಕಾರ್ಯನಿರ್ವಹಿಸಿದ್ದಾರೆ. ೧೯೭೦ರಲ್ಲಿ ೪೭ನೇ ಕನ್ನಡ ಸಾಹಿತ್ಯ ಸಮ್ಮೇಳನ ಬೆಂಗಳೂರಿನಲ್ಲಿ ನಡೆದಾಗ ಅದರ ಅಧ್ಯಕ್ಷ ಪಟ್ಟದ ಗೌರವ ಇವರದಾಗಿತ್ತು.

ಟಾಲ್‌ಸ್ಟಾಯ್ ಅವರ ಕಾದಂಬರಿ ಅನುವಾದ ಪುನರುತ್ಥಾನಕ್ಕೆ ಸೋವಿಯಟ್‌ಲ್ಯಾಂಡ್ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್, ತಿರುವಾಂಕೂರಿನ ದ್ರಾವಿಡಭಾಷಾ ವಿಜ್ಞಾನ ಸಂಸ್ಥೆಯಿಂದ ಫೆಲೋಷಿಪ್, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಸಂದಾಯವಾಗಿವೆ. ಪ್ರತಿಷ್ಠಿತ ನೃಪತುಂಗ ಪ್ರಶಸ್ತಿಯನ್ನು ೨೦೦೮ರಲ್ಲಿ ಪರಿಷತ್ತು ಇವರಿಗೆ ನೀಡಿತು.

೧೨೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ದೇಜಗೌ ಅವರ ಕೆಲವು ಮುಖ್ಯ ಕೃತಿಗಳಿವು:

ಕಬ್ಬಿಗರ ಕಾವಂ(ಸಂಪಾದನೆ), ಲೀಲಾವತಿ ಪ್ರಬಂಧ(ಸಂಪಾದನೆ), ಶ್ರೀರಾಮಾಯಣ ದರ್ಶನಂ ವಚನ ಚಂದ್ರಿಕೆ, ನಂಜುಂಡ ಕವಿ (ವಿಮರ್ಶೆ), ಕಡುಗಲಿ ಕುಮಾರರಾಮ, ವಿದೇಶದಲ್ಲಿ ನಾಲ್ಕು ವಾರ(ಪ್ರವಾಸ), ಧರ್ಮಾಮೃತ ಸಂಗ್ರಹ (ಜೈನಶಾಸ್ತ್ರ), ಹೋರಾಟದ ಬದುಕು (ಆತ್ಮಕಥೆ) ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ–೪೭

ಅಧ್ಯಕ್ಷರು: ದೇ.ಜವರೇಗೌಡ

ದಿನಾಂಕ ೨೭,೨೮,೨೯ ಡಿಸೆಂಬರ್ ೧೯೭೦

ಸ್ಥಳ : ಬೆಂಗಳೂರು

ಸಮ್ಮೇಳನಗಳ ಮೂಲ

ವಾಸ್ತವವಾಗಿ ಈ ಸಾಹಿತ್ಯ ಸಮ್ಮೇಳನಗಳ ಮೂಲವನ್ನು ಎಂದಿನ ಕಾಲದ ರಾಜಸ್ಥಾನಗಳಲ್ಲಿ ಗುರುತಿಸಬಹುದಾಗಿದೆ; ಪ್ರಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ನೃಪತುಂಗ; ಪ್ರಜಾಕೋಟಿ ಪ್ರಾರಂಭಿಸಿದ ಪ್ರಪಥಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

ಶ್ರೀ ಎಚ್.ವಿ. ನಂಜುಂಡಯ್ಯನವರು. ಕಳೆದ ಐವತ್ತೈದು ವರ್ಷಗಳಲ್ಲಿ ಈ ಮಹಾಸಮ್ಮೇಳನದ ಅಧ್ಯಕ್ಷ ಸ್ಥಾನಮಾನವನ್ನು ಕನ್ನಡ ನಾಡುನುಡಿಗಳಿಗೆ ನಿಷ್ಠೆಯಿಂದ ನಾನಾರೀತಿಯಿಂದ ಸಲ್ಲಿಸಿರುವ ಸೇವೆಯನ್ನು ಸಾಹಿತಿಗಳು ಹಾಗೂ ಅಧಿಕಾರಿಗಳು ತುಂಬಿದ್ದಾರೆ. ಆ ಹೆಸರುಗಳಲ್ಲಿ ಒಂದೊಂದೂ ಶಕ್ತಿಯ ಪುಟಕ್ಕೆ ಚೈತನ್ಯದಾಯಿ ಪುಳಕಹುಟ್ಟಿಸುವಂಥದು.

ಪರಿಷತ್ತು ಮತ್ತು ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯಕ್ಕೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಅತಿಶಯವಾದ ಆತ್ಮೀಯ ಸಂಬಂಧವಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಪರಿಷತ್ತಿನ ಸಂಸ್ಥಾಪಕರಲ್ಲೊಬ್ಬರಾಗಿ, ಪ್ರಥಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಹೆಚ್.ವಿ. ನಂಜುಂಡಯ್ಯನವರು ಧರ್ಮ ಕರ್ಮ ಸಂಯೋಗದಿಂದ ಕನ್ನಡ ನಾಡಿನಲ್ಲಿ ಪ್ರಪ್ರಥಮವಾದುದಾಗಿದ್ದು ಭರತಖಂಡದ ಪ್ರಾಚೀನ ಮಹಾವಿದ್ಯಾಲಯಗಳಲ್ಲಿ ಒಂದಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಪ್ರಥಮ ಕುಲಪತಿಯಾದದ್ದು ಮಹತ್ವಪೂರ್ಣವೂ ಧ್ವನಿಯುಕ್ತವೂ ಆದ ಮಹಾಘಟನೆಯೆಂದೇ ಹೇಳಬಹುದು. ಒಂದು ದೃಷ್ಟಿಯಲ್ಲಿ ಈ ಎರಡು ಮಹಾಸಂಸ್ಥೆಗಳು ಅವರ ಮಾನಸಶಿಶುಗಳು. ಆ ಪುಣ್ಯಪುರುಷನ ತಪಶ್ಶಕ್ತಿಯಿಂದ ಈ ಎರಡು ಮಹಾಸಂಸ್ಥೆಗಳು ಕನ್ನಡ ನಾಡುನುಡಿಗಳಿಗೆ ಶಂಕರ ಶಕ್ತಿಯಾಗಿ, ಕನ್ನಡಿಗರ ಆಶೋತ್ತರಗಳಿಗೆ ಕಲ್ಪವೃಕ್ಷವಾಗಿ, ಭರತಖಂಡವಷ್ಟೆ ಅಲ್ಲ, ಜಗತ್ತಿನ ಸಂಸ್ತುತಿಗೆ ಪಾತ್ರವಾಗಿ ಗಗನೋಪಮವಾಗಿ ಭವ್ಯವಾಗಿ ಬೆಳೆದು ನಿಂತಿವೆ. ಅಂದಿನಿಂದ ಇಂದಿನತನಕ ಈ ಎರಡು ಮಹಾಸಂಸ್ಥೆಗಳ ನಂಟು ದಿನದಿನಕ್ಕೆ ವರ್ಧಿಸುತ್ತ, ಅದು ಅದ್ವೈತಸಿದ್ಧಿಮುಖವಾಗಿರುವಂತೆ ತೋರುತ್ತದೆ. ಹದಿನೆಂಟು ವರ್ಷದನಂತರ ಪ್ರೌಢಶಾಲೆಯ ಹಂತದಲ್ಲಿ ಕನ್ನಡ ಮಾಧ್ಯಮ ಯೋಜನೆಯನ್ನು ಜಾರಿಗೆ ತಂದು ನುಡಿಗೆ ಅಚ್ಚುಮೆಚ್ಚುಗಳನ್ನು ತುಂಬಿದ ಧೀಮಂತ ಶಿಕ್ಷಣತಜ್ಞ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಎನ್.ಎಸ್. ಸುಬ್ಬರಾಯರು ಇಪ್ಪತ್ತೊಂದನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದದ್ದು ಈ ಮಾತಿನ ಸತ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಅಲ್ಲಿಂದ ಹದಿನೆಂಟು ವರ್ಷಗಳ ನಂತರ ಕನ್ನಡವನ್ನು ನಾನಾ ಆಯಾಮಗಳಲ್ಲಿ ಬೆಳೆಸಿದ ರಾಷ್ಟ್ರಕವಿ ಕುಲಪತಿ ಕುವೆಂಪು ಅವರು ಮೂವತ್ತೊಂಬತ್ತನೆಯ ಸಮ್ಮೇಳನದ ಅಧ್ಯಕ್ಷರಾಗಿ, ಆ ಬಾಂಧವ್ಯವನ್ನು ಸ್ಥಿರಗೊಳಿಸಿದರು. ಈ ಮಧ್ಯೆ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರೂ ಬೆಳ್ಳಾವೆ ವೆಂಕಟನಾರಣಪ್ಪನವರೂ ಕನ್ನಡದ ಇಬ್ಬರು ಮೂವರು ಪ್ರಾಧ್ಯಾಪಕರೂ ಅಧ್ಯಕ್ಷರಾದದ್ದು ಮೈಸೂರು ವಿಶ್ವವಿದ್ಯಾನಿಲಯದ ಕೀರ್ತಿಗೆ ಕಲಶವಿಟ್ಟಂತಾಗಿದೆ. ಈಗ ನಾನು ಕೇವಲ ನಿಮಿತ್ತವಾಗಿ ಸಂದಿರುವ ಈ ಅಧ್ಯಕ್ಷಪದವಿಯ ಗೌರವವನ್ನು ಈ ಮಹಾಮಾತೆ ವಿಶ್ವವಿದ್ಯಾನಿಲಯ ಭಗವತಿಯ ಸಿರಿನುಡಿಗಳಿಗೆ ಸಮರ್ಪಿಸುತ್ತೇನೆ.

ಪರಿಷತ್ತು ಮಾತೃಶಕ್ತಿ ಸಂಸ್ಥೆ

ಮಹಾರಕ್ಷೆಯಾಗಿ ಜನತೆಯ ಆಶೋತ್ತರಗಳಿಗೆ ನಾಲಗೆಯಾಗಿ ದಿನಕಳೆದಂತೆಲ್ಲ ಚೈತನ್ಯದಾಯಿಯಾಗಿ ನಿರ್ಗುಣಶಕ್ತಿಯಾಗಿ ಬೆಳೆಯುತ್ತಿದೆ. ಬೆಳ್ಳಾವೆ ವೆಂಕಟನಾರಣಪ್ಪ, ಬಿ.ಎಂ. ಶ್ರೀಕಂಠಯ್ಯ, ಡಿ.ವಿ.ಜಿ., ಮಾಸ್ತಿ, ಶಿವಮೂರ್ತಿ ಶಾಸ್ತ್ರಿ, ಅನಕೃ ಮೊದಲಾದ ಮಹಾನುಭಾವರು ತಮ್ಮ ತನುಮನಧನಗಳನ್ನು ಧಾರೆಯೆರೆದು ಈ ಮಹಾಸಂಸ್ಥೆಯನ್ನು

ದೊಡ್ಡದು ಮಾಡಿದ್ದಾರೆ. ಭಾಷಾಸಾಹಿತ್ಯ ಸಂಬಂಧವಾದ ಎಲ್ಲ ಚಟುವಟಿಕೆಗಳಿಗೆ ಅದು ಪರೋಕ್ಷವಾಗಿಯೊ ಪ್ರತ್ಯಕ್ಷವಾಗಿಯೊ ಪ್ರೋತ್ಸಾಹ ನೀಡುತ್ತ ಬಂದಿದೆ. ಅದಕ್ಕೆ ಭವ್ಯವಾದ ಕಟ್ಟಡಗಳಿಲ್ಲ, ಬೃಹತ್ತಾದ ಗ್ರಂಥಾಲಯವಿಲ್ಲ, ಲಕ್ಷಗಟ್ಟಲೆ ನಿಧಿಯಿಲ್ಲ, ಸಿಬ್ಬಂದಿವರ್ಗ ದೊಡ್ಡದಿಲ್ಲ; ಒಟ್ಟಿನಲ್ಲಿ ಅದು ಮೇಲುನೋಟಕ್ಕೆ ಎದ್ದು ಕಾಣುವಂಥದಲ್ಲ. ಆದರೆ ಅದರ ಇತಿಹಾಸದ ಕಡೆಗೆ ಕಣ್ಣುಹಾಯಿಸಿದಾಗ, ಅದರ ಅಭ್ಯುದಯಕ್ಕಾಗಿ ದುಡಿದಿರುವ ಮಹನೀಯರ ಹೆಸರುಗಳನ್ನು ಸ್ಮರಿಸಿಕೊಂಡಾಗ, ಪರಿಷತ್ತೆಂದರೆ ಕಲ್ಲು ಇಟ್ಟಿಗೆ ಗಾರೆಗಳ ಬರಿಯ ಕಟ್ಟಡವಲ್ಲ, ಕನ್ನಡನಾಡಿನ ಏಕೀಕರಣವನ್ನು ಸಾಧಿಸಿ, ಕನ್ನಡ ಜನಮನವನ್ನೊಂದು ಮಾಡಿ ಕರ್ನಾಟಕ ಸಂಸ್ಕೃತಿಯ ಮಹಾಜ್ಯೋತಿಯಾಗಿ ಕ್ಷೇಮಂಕರಿಯಾಗಿ ಕನ್ನಡ ಏರುವೆಡೆಯಲ್ಲೆಲ್ಲಾ ರಾರಾಜಿಸುವ ಮಹಾಶಕ್ತಿಯೆಂದು ವೇದ್ಯವಾಗದಿರದು. ಅದು ಕನ್ನಡ ಜನತೆಯ ಏಕೈಕ ಪ್ರಾತಿನಿಧಿಕ ಸಂಸ್ಥೆ. ಅದು ಆಗ ಮತ್ತು ಈಗ ತನ್ನ ಮುಂದಿರಿಸಿಕೊಂಡಿರುವ ಧ್ಯೇಯೋದ್ದೇಶಗಳು ಹಲವು; ಅದಕ್ಕೆ ಅವುಗಳನ್ನೆಲ್ಲ ತಾನೇ ಏಕಾಂಗಿಯಾಗಿ ಕಾರ್ಯಗತ ಗೊಳಿಸಬೇಕೆಂಬ ದೃಷ್ಟಿಯಿರಲಾರದು. ನಾಡುನುಡಿಗಳ ಏಳ್ಗೆಗಾಗಿ ದುಡಿಯುತ್ತಿರುವ ನಾನಾ ಸಂಘಸಂಸ್ಥೆಗಳಿಗೆ ಮಹಾವಿದ್ಯಾಲಯಗಳಿಗೆ ಸಂಪರ್ಕಶಕ್ತಿಯಾಗಿ ಸ್ಫೂರ್ತಿಶಕ್ತಿಯಾಗಿ, ಆ ಮೂಲಕ ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುತ್ತ ಮಾತೃಶಕ್ತಿಯಾಗಿ ಮೆರೆಯಬೇಕಾಗಿದೆ.

ಪರಿಷತ್ತಿನ ಸುವರ್ಣಮಹೋತ್ಸವ

ಕಾಲ ಕೂಡಿಬಂದಾಗ ಜಡದಲ್ಲಿ ಚೇತನ ಸಂಚಾರವಾಗುತ್ತದೆ. ತೃಣ ಪರ್ವತವಾಗುತ್ತದೆ, ಮಣ್ಣು ಬಂಗಾರವಾಗುತ್ತದೆ; ಅನುಕೂಲ ವಾತಾವರಣ ತಾನಾಗಿಯೇ ಸೃಷ್ಟಿಯಾಗುತ್ತದೆ, ನಿಮಿತ್ತ ಶಕ್ತಿಗಳನ್ನು ಸೃಷ್ಟಿಸಿಕೊಳ್ಳುತ್ತದೆ; ಆಗ ಎಂಥ ವಿರೋಧಿಶಕ್ತಿಗಳೂ ಸ್ತಬ್ಧವಾಗುತ್ತವೆ, ಅಡ್ಡ ಬಂದ ಪರ್ವತವೇ ಚೂರ್ಣೀಕೃತವಾಗುತ್ತದೆ; ಪ್ರತಿಗಾಮಿ ಶಕ್ತಿಗಳು ನೆರೆಯೊಡನೆ ತೇಲಿದರೆ ಬಚಾವು, ಅದಕ್ಕಭಿಮುಖವಾದರೆ ಸಾವು, ಕನ್ನಡದ ಬೆಳವಣಿಗೆಗೆ ಸಂಬಂಧಿಸಿದ ಪೂರ್ವ ಸಿದ್ಧತೆಗಳೆಲ್ಲ ಮುಗಿದು, ಸಾಧನೆ ಸಿದ್ಧಿಯಾಗಿ ಪರಿಣಮಿಸುವ ಸುವರ್ಣ ಸಮಯದಲ್ಲಿದ್ದೇವೆ. ಈ ಪರಿಸ್ಥಿತಿಗೆ ಬಹುಮಟ್ಟಿಗೆ ಕಾರಣವಾಗಿ, ಐವತ್ತು ವರ್ಷ ಸಾರ್ಥಕವಾದ ಬದುಕು ನಡೆಸಿ ಸಿದ್ಧಿಯ ಮುಂಬೆಳಗು ಗೋಚರಿಸುವ ಪುಣ್ಯ ಸಂದರ್ಭದಲ್ಲಿ ಪರಿಷತ್ತು ಸುವರ್ಣ ಮಹೋತ್ಸವವನ್ನು ಆಚರಿಸಿ, ಸಮಸ್ತ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿ, ಏಕಕಾಲದಲ್ಲಿ ಕನ್ನಡ ನಾಡನ್ನೆಲ್ಲ ದಿಟ್ಟಿಸುವಂತೆ, ಕನ್ನಡಿಗರ ಮೇಲೆಲ್ಲಾ ಕೃಪಾದೃಷ್ಟಿಯನ್ನು ಹರಿಸುವಂತೆ ಕೊರಳೆತ್ತಿ ಹೆಮ್ಮೆಯಿಂದ ನಿಂತಿದೆ. ವಾಸ್ತವವಾಗಿ ಇದು ಕನ್ನಡನಾಡಿನ ಕನ್ನಡಿಗನೂ ಆಚರಿಸಬೇಕಾದ ಹಬ್ಬ; ಕನ್ನಡನಾಡಿನ ಪ್ರತಿಯೊಂದು ಸಂಸ್ಥೆಯೂ ಇದಕ್ಕೆ ವಂದನೆಯನ್ನು ಸಲ್ಲಿಸಬೇಕಾದ ಪುಣ್ಯದಿನವಿದು. ಸಿದ್ಧಿಯ ಅರುಣದೋಯಕ್ಕಾಗಿ ಕಾಯುತ್ತಿರುವಾಗಲೇ ಅದನ್ನು ಪ್ರಳಯ ಮೇಘ ಮುಸುಕದ ಹಾಗೆ ಕನ್ನಡಿಗರೆಲ್ಲ ಸದಾ ಜಾಗೃತರಾಗಿ ನೋಡಿಕೊಳ್ಳಬೇಕಾಗಿದೆ; ಪರಿಷತ್ತು ನಿದ್ರಾವಶವಾಗದೆ ಎಚ್ಚರದಿಂದಿರಬೇಕಾಗಿದೆ.

ಪರಿಷತ್ತಿನ ತ್ರೈವಾರ್ಷಿಕ ಯೋಜನೆ

ಕತೆ ಕವಿತೆ ಕಾದಂಬರಿಗಳನ್ನು ಬರೆಯುವುದೇ ಸಾಹಿತಿಯ ಅಳತೆಗೋಲೆಂದರೆ ಶ್ರೀನಾರಾಯಣ ಸಾಹಿತಿಗಳಲ್ಲ. ನಿರಕ್ಷತೆಯೊಡನೆ ಹೋರಾಟ ಪ್ರಾರಂಭಿಸಿ ಪತ್ರಿಕಾ ಸಂಪಾದಕನ ಹಂತವನ್ನು ದಾಟಿ, ಕನ್ನಡ ಪುಸ್ತಕಗಳನ್ನು ಹೊತ್ತು ಮನೆಮನೆಗೆ ಹೋಗಿ ಮಾರಿ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನಲಂಕರಿಸಿದ ನಂತರವೂ ಅವರು ಸಾಹಿತಿ ಅಹುದೋ ಅಲ್ಲವೋ ಎಂಬ ಪ್ರಶ್ನೆ ಎತ್ತುವುದಾದರೆ ಅದಕ್ಕಿಂತ ಅಸಂಬದ್ಧತೆ ಇನ್ನೊಂದಿಲ್ಲ ಎನ್ನಬೇಕಾದೀತು. ಈ ಮಾತು ಸತ್ಯಸ್ಯ ಸತ್ಯ. ಕ್ರಮಬದ್ಧತೆ ಹಾಗೂ ವ್ಯವಸ್ಥೆ ಅವರ ಪ್ರತಿಯೊಂದು ವ್ಯವಹಾರದಲ್ಲಿಯೂ ಎದ್ದು ಕಾಣುವ ಲಕ್ಷಣ; ಅದರ ಯಶಸ್ಸಿಗೆ ಅದೇ ಕಾರಣ. ಇದಕ್ಕೆ ಅವರ ತ್ರೈವಾರ್ಷಿಕ ಯೋಜನೆಯೇ ಸಾಕ್ಷಿ. ಅದು ಅವರ ಮಾನಸಶಿಶು.

ಈ ಯೋಜನೆ ಕೇವಲ ಪತ್ರರೂಪದಲ್ಲಿಯೇ ಉಳಿದಿಲ್ಲ, ಅದರ ಕಾರ್ಯಕ್ರಮಗಳಲ್ಲಿ ಹಲವು ಈಗಾಗಲೇ ಕಾರ್ಯಗತಗೊಂಡಿವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಶಾಖೆಗಳನ್ನು ತೆರೆದು ಪರಿಷತ್ತು ಸಮಗ್ರ ಕನ್ನಡ ನಾಡಿನ ಏಕೈಕ

ಪ್ರಾತಿನಿಧಿಕ ಸಂಸ್ಥೆಯೆನ್ನುವುದನ್ನು ಸ್ಥಿರಪಡಿಸಿದ್ದಾರೆ, ಎಂದೋ ನಡೆಯಬೇಕಾಗಿದ್ದ ಸುವರ್ಣಮಹೋತ್ಸವವನ್ನು ಕನ್ನಡಿಗರಿಗೆಲ್ಲ ತೃಪ್ತಿಯಾಗುವಂತೆ ವಿಜೃಂಭಣೆಯಿಂದ ನಡೆಸಿದ್ದಾರೆ. ರಂಗಮಂದಿರ ಕಟ್ಟಡಕ್ಕೆ ಆಸ್ತಿಭಾರ ಹಾಕಿಸಿದ್ದಾರೆ. ಮೂರು ವರ್ಷಗಳ ಅವಧಿಯಲ್ಲಿ ನೂರು ಪುಸ್ತಕಗಳನ್ನಾದರೂ ಹೊರತರಬೇಕೆಂದು ಸಂಕಲ್ಪಿಸಿ, ಈಗಾಗಲೇ ೨೫ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕನ್ನಡ ನಿಘಂಟಿನ ಕೆಲಸವನ್ನು ತ್ವರಿತಗೊಳಿಸದ್ದಾರೆ. ಉಳಿದ ಕಾರ್ಯಕ್ರಮಗಳೂ ಬೇಗನೆ ಕೈಗೂಡುತ್ತವೆನ್ನುವುದಕ್ಕೆ ಇವಿಷ್ಟು ಸಾಕ್ಷಿ.

ಪರಿಷತ್ತಿನ ಪ್ರಗತಿ ಮಂದಗತಿ

ಕನ್ನಡಕ್ಕೆ ಮನ್ನಣೆಯನ್ನು ದೊರಕಿಸುವ ವಿಷಯದಲ್ಲಿ ಈ ತನಕ ಪರಿಷತ್ತು ಮಂದಗತಿಯಿಂದಲೇ ಸಾಗುತ್ತಿತ್ತೆನ್ನಬಹುದು. ಈ ದಿಶೆಯಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಢಿಸಿ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಗಳ ಮೇಲೆ ಒತ್ತಾಯ ತರಲು ಪರಿಷತ್ತು ಶ್ರಮಿಸಬೇಕಾಗಿದೆ. ಇಂಥ ಒತ್ತಾಯಕ್ಕೆ ಇದು ಸಕಾಲ. ಕನ್ನಡನಾಡಿನಲ್ಲೆಲ್ಲಾ ಕನ್ನಡ ಪ್ರಜ್ಞೆ ಮೂಡಿದೆ. ಈ ಕೂಡಲೆ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರುವಂತೆ ಸರ್ಕಾರವನ್ನು ಪ್ರೇರಿಸಬೇಕು. ಈಗ ತಾನೆ ಪಿಯುಸಿ ಮಂಡಲಿ ರಚನೆಯಾಗಿದೆ. ಕನ್ನಡವೇ ಪ್ರಧಾನ ಮಾಧ್ಯಮವಾಗಿರಬೇಕೆಂದು ಪಠ್ಯಕ್ರಮ ನಿಯೋಜನೆಗಾಗಿ ರಚನೆಗೊಂಡಿದ್ದ ಪರಿಣಿತಮಂಡಲಿ ನಿರ್ಧರಿಸಿದೆ. ಆ ನಿರ್ಧಾರದ ವಿರುದ್ಧವಾಗಿ ಅಲ್ಲೊಂದು ಇಲ್ಲೊಂದು ಒಡಕುದನಿ ಕೇಳಿಸುತ್ತಿದೆ. ಆ ನಿರ್ಧಾರ ಯಶಸ್ವಿಯಾಗಿ ಕಾವ್ಯರೂಪಕ್ಕೆ ಬರುವಂತೆ ಪರಿಷತ್ತು ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಬೇಕಾಗಿದೆ. ಕನ್ನಡ ನುಡಿಯ ಹಾಗೂ ಕನ್ನಡನಾಡಿನ ಉಳಿವಳಿವಿನ ಪ್ರಶ್ನೆ ಇದರ ಜಯಾಪಜಯಗಳನ್ನವಲಂಬಿಸಿದೆ. ಪರಿಷತ್ತು ಪಿಯುಸಿ ಮಂಡಲಿಯ ಹಿಂದೆ ಬಲವಾಗಿ ನಿಂತಲ್ಲಿ ಅದು ಖಂಡಿತ ಯಶಸ್ವಿಯಾಗುತ್ತದೆಂದು ಧೈರ್ಯವಾಗಿ ಹೇಳಬಲ್ಲೆ.

ಪರಿಷತ್ತು ಕನ್ನಡದ ಅಭಿಮಾನವನ್ನು ಬೆಳೆಸಬೇಕು

ಪರಿಷತ್ತಿನ ಯೋಜನೆಗಳಲ್ಲೊಂದು ರಾಜಧಾನಿಯಲ್ಲಿ ಕನ್ನಡದ ಅಭಿಮಾನವನ್ನು ಬೆಳೆಸುವುದು ಈ ಹಿಂದೆ ಶ್ರೀ ಅ.ನ.ಕೃಷ್ಣರಾಯರೂ ಅವರ ಬೆಂಬಲಿಗರೂ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡು ಮಾರ್ಗದರ್ಶನ ನೀಡಿದ್ದಾರೆ. ಕನ್ನಡಪಕ್ಷ ಮತ್ತು ಕನ್ನಡ ಚಳುವಳಿಗಾರರು ಈ ದಿಶೆಯಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ. ಕನ್ನಡನಾಡಿನ ಹೃದಯ ಅದರ ರಾಜಧಾನಿ ; ಹೃದಯವೇ ರೋಗಪಿಡಿತವಾದರೆ ದೇಹದ ಗತಿಯೇನು ? ಈ ದೇಹಕ್ಷೇಮದ ದೃಷ್ಟಿಯಿಂದ ಹೃದಯಕ್ಕೆ ಚಿಕಿತ್ಸೆ ಈ ಕೂಡಲೆ ನಡೆಯಬೇಕಾಗಿದೆ.

ಉತ್ತಮ ಸಾಹಿತ್ಯಸೃಷ್ಟಿಗನುಕೂಲವಾದ ವಾತಾವರಣವನ್ನು ಸೃಷ್ಟಿಸಬೇಕಾದದ್ದು ಪರಿಷತ್ತಿನ ಧರ್ಮ, ಕನ್ನಡ ಲೇಖಕರ ಆರ್ಥಿಕ ಪರಿಸ್ಥಿತಿ ನೆಟ್ಟಗಿಲ್ಲವೆನ್ನುವುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯ. ಲೇಖನ ವ್ಯವಸಾಯವೇ ಪ್ರಧಾನ ವೃತ್ತಿಯಾದವರ ಜೀವನಯಾಪನೆ ಸಲೀಸಾಗಿ ನಡೆಯುವಂತೆ ದ್ರವ್ಯಸಹಾಯ ನೀಡಲು ಒಂದು ನಿಧಿಯನ್ನು ಸ್ಥಾಪಿಸಿಸುವುದೊಳ್ಳೆಯದು. ಲೇಖಕರ ದುಡ್ಡಿಗಾಗಿ ಪ್ರಕಾಶಕರ ಮನೆಗಳಿಗೆ ಅಲೆದಾಡುವಂತಾಗಬಾರದು ; ಪಠ್ಯಪುಸ್ತಕ ಸಮಿತಿಯ ಕೃಪಾಭಿಕ್ಷೆಗಾಗಿ ತೊಳಲಾಡುವಂತಾಗಬಾರದು.

ಗಡಿರಕ್ಷಣೆ ಮತ್ತು ಪರಿಷತ್ತು

ಕನ್ನಡನಾಡಿನ ಗಡಿಯ ರಕ್ಷಣೆ ಪರಿಷತ್ತಿನ ಮತ್ತೊಂದು ಮಹತ್ತರ ಕರ್ತವ್ಯ, ಬೆಳಗಾಂ ಎಲ್ಲಿದ್ದರೇನು ? ಕಾಸರಗೋಡು ಎಲ್ಲಿದ್ದರೇನು ? ತಾಳವಾಡಿ ಎಲ್ಲಿದ್ದರೇನು ? ಎಂತಿದ್ದರೂ ಅವು ಭರತಖಂಡದ ಭಾಗ ತಾನೆ ? ಎಂದು ಪ್ರಶ್ನಿಸುವ ಲಾಂಗೂಲಚಾಲನ ಪ್ರವೃತ್ತಿಯ ಜನ ನಮ್ಮಲ್ಲಿ ಇಲ್ಲದಿಲ್ಲ, ಹಣ ಎಲ್ಲಿದ್ದರೇನಂತೆ ? ನಿನ್ನ ಜೇಬಿನಲ್ಲಿದ್ದರೇನು ? ಎಂದು ಕೇಳಿದರೆ ಅವರೇನು ಉತ್ತರ ಹೇಳಿಯಾರೋ ಕಾಣೆ. ಹೊನ್ನಿಗೆ ಅನ್ವಯಿಸುವ ಹೋಲಿಕೆಯನ್ನು ಹೀಗೆಯೇ ಮುಂದುವರಿಸಿದ್ದಾದರೆ ಅಂಥವರು ಬಾಯಿಮುಚ್ಚಿಕೊಂಡಾರು. ಉಭಯ ಪಕ್ಷಗಳ ಸಮ್ಮತಿಯಿಂದ ರಚನೆಗೊಂಡ ಮಹಾಜನ ಆಯೋಗದ ವರದಿಯನ್ನು ಜಾರಿಗೆ ತರದಿರುವುದು ಸರ್ಕಾರದ ದೌರ್ಬಲ್ಯಕ್ಕೆ ಸಾಕ್ಷಿಯಾಗಿದೆ ; ಕನ್ನಡಿಗರ ಮುಖಕ್ಕೆಸೆದ

ಸವಾಲಾಗಿದೆ. ಪಂಜಾಬ್, ಹರಿಯಾಣ ಪ್ರಾಂತ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ದಿಟ್ಟತನದಿಂದ ಪರಿಹರಿಸಿದ ಪ್ರಧಾನಿಯವರು ಈ ವಿಷಯದಲ್ಲಿ ಹಿಂಜರಿದದ್ದು ವಿಸ್ಮಯವೇ ಸರಿ. ಕನ್ನಡಿಗರು ತಂತಮ್ಮ ಭಿನ್ನತೆಗಳನ್ನು ತೊರೆದು, ಸ್ವಾರ್ಥವನ್ನು ಮರೆತು, ಒಟ್ಟುಗೂಡಿ, ಧೈರ್ಯದಿಂದ ವರ್ತಿಸದಿದ್ದರೆ ಬೆಳಗಾಂ ಕಳಚಿಹೋದೀತು. ಅದರ ಹಿಂದೆ ಒಂದಾದ ಮೇಲೊಂದು ಜಿಲ್ಲೆಗಳು ನಗರಗಳು ಕೈಬಿಟ್ಟಾವು; ಈ ಮಹತ್ಕಾರ್ಯ ಸಾಧನೆಯಲ್ಲಿ ಪರಿಷತ್ತಿನ ಪಾತ್ರ ಮಹತ್ತರವಾದುದಾಗಬೇಕಾಗಿದೆ.

ಪರಿಷತ್ತಿಗೆ ಸರಕಾರದ ಪ್ರೋತ್ಸಾಹ

ಈ ಸಂದರ್ಭದಲ್ಲಿ ಕನ್ನಡನುಡಿಗೆ ಹಾಗೂ ಕರ್ನಾಟಕದ ಕಲೆಗಳಿಗೆ ಇಂದಿನ ಮೈಸೂರು ಸರ್ಕಾರ ನೀಡುತ್ತಿರುವ ಪ್ರೋತ್ಸಾಹವನ್ನು ನೆನೆಯದಿದ್ದರೆ ಕರ್ತವ್ಯ ಚ್ಯುತಿಯ ಆರೋಪಕ್ಕೆ ಗುರಿಯಾಗಬೇಕಾದೀತು. ಶ್ರೀ ವೀರೇಂದ್ರ ಪಾಟೀಲರ ಸಂಪುಟದ ಅರ್ಥಸಚಿವರೂ ವಿದ್ಯಾಸಚಿವರೂ ಸ್ವಯಂ ಕಲಾಭಿಜ್ಞರೂ ಆದದ್ದರಿಂದ, ಕನ್ನಡ ನುಡಿಯ ಮಹತ್ತನ್ನು ಬಲ್ಲವರಾದ್ದರಿಂದ ಕನ್ನಡ ಭಾಷಾಸಾಹಿತ್ಯ ಸಂಬಂಧವಾದ ಯೋಜನೆಗಳಿಗೆ ಕೈಕೊಕ್ಕರಿಸದೆ ಉದಾರವಾಗಿ ದ್ರವ್ಯಸಹಾಯ ನೀಡುತ್ತಿದ್ದಾರೆ. ಇಂತಹ ಯೋಜನೆಗಳಿಗೆ ಅವರೆಂದೂ ಇಲ್ಲ ಎಂದವರಲ್ಲ. ಒಂದೂಕಾಲುಕೋಟಿ ರೂಪಾಯಿ ವೆಚ್ಚತಗಲುವ ಕನ್ನಡ ವಿಶ್ವಕೋಶದ ಬೃಹದ್ಯೋಜನೆ ಹಾಗೂ ಇಪ್ಪತ್ತೈದು ಲಕ್ಷ ವೆಚ್ಚದ ಜ್ಞಾನ ಗಂಗೋತ್ರಿಗೆ ಮಂಜೂರಾತಿ ನೀಡಿದ್ದಾರೆ. ದುಡ್ಡಿನ ಅಭಾವದಿಂದಾಗಿ ವಿಶ್ವವಿದ್ಯಾನಿಲಯಗಳ ಪ್ರಕಟಣಾ ಕಾರ್ಯ ಕುಂಠಿತವಾಗಿಲ್ಲ. ಸಂಗೀತ ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದ ಸಾಂಸ್ಕೃತಿಕ ಸಂಸ್ಥೆಗಳಿಗೆ ಯಾವ ಕೊಕ್ಕೆಯೂ ಇಲ್ಲದೆ ಧನಸಹಾಯವನ್ನು ಸರಕಾರವು ನೀಡುತ್ತಿದೆ. ಮೇಲಾಗಿ, ಅನೇಕ ಸಾಹಿತಿಗಳಿಗೆ ಹಾಗೂ ಕಲಾವಿದರಿಗೆ ಜೀವಾವಧಿ ವೇತನವನ್ನು ನೀಡುತ್ತಿದೆ. ಈ ಜೀವನಾಂಶ ಯೋಜನೆ ಇನ್ನೂ ವಿಸ್ತೃತವಾಗುವ ಭರವಸೆಯಿದೆ. ಪರಿಷತ್ತಿಗೆ ನೀಡುವ ಸಾಲಿಯಾನ ಸಹಾಯದ್ರವ್ಯ ಐದು ಲಕ್ಷಕ್ಕಾದರೂ ಹೆಚ್ಚಾಗಬೇಕಾದದ್ದು ನ್ಯಾಯ. ಕನ್ನಡ ಶಿಕ್ಷಣ ಹಾಗೂ ಆಡಳಿತ ಮಾಧ್ಯಮವಾಗಬೇಕೆಂಬುದು ಈ ಸರ್ಕಾರದ ಸಂಕಲ್ಪವಾಗಿದೆ; ಪ್ರತಿಗಾಮಿ ಶಕ್ತಿಗಳ ಕಾರಣವಾಗಿ ಆ ಸಂಕಲ್ಪ ಇನ್ನೂ ಈಡೇರದಿರುವುದು ನಾಡಿನ ದುರ್ದೈವ.

❖❖

೪೮ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಜಯದೇವಿತಾಯಿ ಲಿಗಾಡೆ



ಕರ್ನಾಟಕದ ಏಕೀಕರಣಕ್ಕೆ ಗಡಿನಾಡ ಕನ್ನಡಿಗರ ರಕ್ಷಣೆಗೆ ಟೊಂಕ ಕಟ್ಟಿ ನಿಂತ ಕವಯಿತ್ರಿ ಜಯದೇವಿತಾಯಿ ಲಿಗಾಡೆ ಅವರು ಚೆನ್ನಬಸಪ್ಪ ಮಡಕಿ-ಸಂಗವ್ವ ಮಡಕಿ ದಂಪತಿಗಳ ಪುತ್ರಿಯಾಗಿ ೨೩-೬-೧೯೧೨ರಲ್ಲಿ ಸೊಲ್ಲಾಪುರದಲ್ಲಿ ಜನಿಸಿದರು. ಸೊಲ್ಲಾಪುರದಲ್ಲಿ ಮರಾಠಿ ಶಾಲೆಯಲ್ಲಿ ಇವರ ಶಿಕ್ಷಣ ಆರಂಭವಾಯಿತು. ೧೪ನೇ ವಯಸ್ಸಿನಲ್ಲಿ ವಿವಾಹವಾದ ನಂತರ ಇವರು ಕನ್ನಡ ಕಲಿತು ಕನ್ನಡಿಗರ ಜಾಗೃತಿಗಾಗಿ ಶ್ರಮಿಸತೊಡಗಿದರು.

ಅಖಿಲ ಭಾರತ ವೀರಶೈವ ಮಹಿಳಾ ಪರಿಷತ್ತಿನ ಅಧ್ಯಕ್ಷತೆ ವಹಿಸಿದ ಹೆಗ್ಗಳಿಕೆ ಇವರದು. ೧೯೫೨ರಲ್ಲಿ ಬೇಲೂರಿನಲ್ಲಿ ನಡೆದ ೩೫ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ದಿಟ್ಟತನದಿಂದ ಮಾತಾಡಿದರು. ೧೯೫೦ರಲ್ಲಿ ಮುಂಬಯಿಯಲ್ಲಿ ನಡೆದ ೩೨ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾಗೋಷ್ಠಿಯ ಅಧ್ಯಕ್ಷೆ ಆಗಿದ್ದರು. ಮಂಡ್ಯದಲ್ಲಿ ನಡೆದ ೪೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದರು. ಪರಿಷತ್ತಿನ ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಮಹಿಳಾ ಅಧ್ಯಕ್ಷಿಣಿ ಎಂಬುದು ಈಕೆಯ ಹೆಗ್ಗಳಿಕೆಯಾಗಿದೆ.

ಜಯದೇವಿತಾಯಿ ಲಿಗಾಡೆ ಅವರ ಸಿದ್ಧರಾಮೇಶ್ವರ ಪುರಾಣ ಕಾವ್ಯಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ದೇವರಾಜ ಬಹಾದ್ದೂರ್ ಬಹುಮಾನ ಬಂದಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಸ್ತ್ರೀ ಹೃದಯದ ರಸಾನುಭವದ ಸಂಪತ್ತಿನ ಅಭಿವ್ಯಕ್ತಿಯಾಗಿ ಇವರು ರಚಿಸಿರುವ ಕಾವ್ಯ ಕವಿತೆಗಳು ಜಾನಪದದ ಸೊಗಡಿನಿಂದ ಕೂಡಿವೆ.

ಜಯಗೀತ, ತಾಯಿಯ ಪದಗಳು, ತಾರಕ ತಂಬೂರಿ, ಸಿದ್ಧರಾಮೇಶ್ವರ ಪುರಾಣ (ಕನ್ನಡದ ಮಹಾಕಾವ್ಯಗಳಲ್ಲಿ ಒಂದಾಗಿದೆ) ಇವು ಇವರ ಕೆಲವು ಕನ್ನಡ ಕೃತಿಗಳಾಗಿವೆ. ಸಿದ್ಧರಾಮ, ಸಿದ್ಧವಾಣಿ, ಬಸವದರ್ಶನ, ಮಹಾಯೋಗಿನಿ, ಸಮೃದ್ಧ ಕರ್ನಾಟ ಶಾರದೆ, ಬಸವವಚನಾಮೃತ ಮುಂತಾದವು ಇವರ ಮರಾಠಿ ಕೃತಿಗಳಾಗಿವೆ.

ಜಯದೇವಿತಾಯಿ ಅವರು ೨೪-೭-೧೯೮೬ರಲ್ಲಿ ಕೈಲಾಸವಾಸಿಗಳಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೮,
ಅಧ್ಯಕ್ಷರು, ಜಯದೇವಿತಾಯಿ ಲಿಗಾಡೆ
ದಿನಾಂಕ ಮೇ ೩೧, ಜೂನ್ ೧,೨, ೧೯೭೪
ಸ್ಥಳ : ಮಂಡ್ಯ
[ಟಿಪ್ಪಣಿ ೧೯೭೧, ೧೯೭೨, ೧೯೭೩ ಸಮ್ಮೇಳನ ನಡೆಯಲಿಲ್ಲ)

ನೀವು ರೂಪಿಸಿರುವ ಈ ಸಾಹಿತ್ಯ ಸಮ್ಮೇಳನದ ವೇದಿಕೆಯು ಕನ್ನಡದ "ನಾನಾ" ಸಮಸ್ಯೆಗಳನ್ನು ಬಿಚ್ಚು ಮನಸ್ಸಿನಿಂದ ಚರ್ಚಿಸಿ, ನಮ್ಮಲ್ಲಿ ಕನ್ನಡದ ಪ್ರಜ್ಞೆಯನ್ನು ಒಡಮೂಡಿಸಿ, ಮತ್ತಷ್ಟು ಬಲಗೊಳಿಸಲು ನೆರವಾಗುವುದೆಂದು ನಂಬಿದ್ದೇನೆ. ಇದಕ್ಕೆ ಒಂದು ಸದಾವಕಾಶವನ್ನು ನೀವು ಒದಗಿಸಿಕೊಟ್ಟಿದ್ದೀರಿ. ಇದು ನಿಮ್ಮ ವಾತ್ಸಲ್ಯ, ನಿಮ್ಮ ಪ್ರೀತಿ.

ಪರಿಷತ್ ಅಧ್ಯಕ್ಷ ಜಿ. ನಾರಾಯಣರ ಸೇವೆ

ಕನ್ನಡದ ಸರ್ವತೋಮುಖವಾದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಲವನ್ನು ತಂದುಕೊಟ್ಟು ಕನ್ನಡ ಸಾಹಿತ್ಯ ಪರಿಷತ್ತನ್ನು ಒಂದು ಭದ್ರ ನೆಲೆಗಟ್ಟಿನ ಮೇಲೆ ನಿಲ್ಲಿಸಿ; ಕನ್ನಡ ಸಾಹಿತ್ಯವನ್ನು ಮನೆಮನೆಗೂ ಮುಟ್ಟಿಸುವ ಧೀರ ಸಂಕಲ್ಪವನ್ನು ತಾಳಿ, ಅವಿರತವಾಗಿ ದುಡಿಯುತ್ತಿರುವ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸೋದರ ಜಿ. ನಾರಾಯಣ ಅವರು ಇದೇ ಜಿಲ್ಲೆಯವರು ಎನ್ನುವುದು ಹೆಮ್ಮೆಯ ಮಾತು. ಅವರ ಸೇವೆ ಇನ್ನೂ ಕನ್ನಡಕ್ಕೆ ಲಭಿಸುವಂತಾಗಲಿ.

ನಿಷ್ಕ್ರಿಯವಾಗಿದ್ದ ಪರಿಷತ್ತು

ಅಖಂಡ ಕರ್ನಾಟಕದ ದಿವ್ಯ ಸ್ವಪ್ನವನ್ನು ಹೃದಯದಲ್ಲಿ ಹೊತ್ತುಕೊಂಡು ಜನತೆ ಮುನ್ನಡೆದಾಗ, ಅಂದು ಸಾಹಿತ್ಯ ಪರಿಷತ್ತು ಕೂಡ ರಾಜಕೀಯ ದೌರ್ಬಲ್ಯ ಮತ್ತು ಒತ್ತಡಕ್ಕೆ ಒಳಗಾಗಿತ್ತು. ೧೯೫೨ರ ಬೇಲೂರಿನ ಸಾಹಿತ್ಯ ಸಮ್ಮೇಳನದಲ್ಲಿ ಅಖಂಡ ಕರ್ನಾಟಕದ ಒಂದು ಗೊತ್ತುವಳಿಯನ್ನು ಕೂಡ ಮಂಡಿಸಿ, ಅದನ್ನು ನಿರ್ಣಯಿಸಲಾಗದಷ್ಟು ಅದು ನಿಷ್ಕ್ರಿಯವಾಗಿತ್ತು. ಅಂಥ ಮಬ್ಬು ಮಸುಕಿದ ಕಾಲದಲ್ಲಿ ಕಣ್ಣೀರಿನಿಂದ ಬೇಲೂರಿನ ಚೆನ್ನಕೇಶವನ ಪಾದ ತೊಳೆದು, ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅಖಂಡ ಕರ್ನಾಟಕದ ಗೊತ್ತುವಳಿಯನ್ನು ಮಂಡಿಸಿ, 'ಗಂಡುಸಾದರೆ ನಿನ್ನ ಬಲಿ ಕೊಡುವಿಯೇನು?' ಎಂದ ಕನ್ನಡ ಕವಿಯ ಸವಾಲಿಗೆ 'ಗಂಡುಸಾದರೆ ನನ್ನ ಬಲಿ ತೆಗೆದುಕೊಳ್ಳುವಿರಾ?' ಎಂದು ನಾನು ಮೊರೆಯಿಸಬೇಕಾಯಿತು. ಅದೇ ಸಮಯದಲ್ಲಿ ಮುಂದುವರೆದು ಮಾತನಾಡುತ್ತಾ, ಅಖಂಡ ಕರ್ನಾಟಕದ ಈ ಹೋರಾಟವನ್ನು ಯಾವುದೇ ಆಶೆಗಳನ್ನಿಟ್ಟುಕೊಂಡು ನಾವು ಕೈಗೆತ್ತಿಕೊಂಡಿಲ್ಲ. ಇದಕ್ಕೆ ಸೊನ್ನಲಿಗೆಯ ಸಿದ್ಧರಾಮನೇ ಸಾಕ್ಷಿ. ಪಂಪಾಪತಿ ವಿರೂಪಾಕ್ಷ, ಬೇಲೂರಿನ ಚೆನ್ನಕೇಶವ, ಶ್ರವಣಬೆಳಗೊಳದ ಗೊಮ್ಮಟೇಶ್ವರರೇ ಸಾಕ್ಷಿ. ಕರ್ನಾಟಕ ಒಂದುಗೂಡುವುದು ನಿಶ್ಚಿತ. ಇದು ಅಂತಃಕರಣದ ಬಯಕೆ, ಇದು ಆಗಲೇಬೇಕು" ಎಂದು ಬಿನ್ನವಿಸಿದೆ. ನನ್ನ ಕೇಳಿಕೆ ಅಂದಿನ ನನ್ನ ಅಣ್ಣಂದಿರ, ಸೋದರಿಯರ ಮನಮುಟ್ಟಿತು. ಉದ್ರಿಕ್ತ ವಾತಾವರಣ ತಿಳಿಯಾಗಿ ಅಖಂಡ ಕರ್ನಾಟಕದ ಗೊತ್ತುವಳಿ ಅವಿರೋಧವಾಗಿ ಪಾಸಾಯಿತು".

ಪರಿಷತ್ತು ಮತ್ತು ಭಾಷಾ ಸಾಮರಸ್ಯ

ಜೀವಮಾನದುದ್ದಕ್ಕೂ ಹಗಲಿರುಳು ಹಂಬಲಿಸಿ, ನೂರು ಯಾತನೆಗಳನ್ನು ನುಂಗಿ, ಭಾಷಾವಾರು ಪ್ರಾಂತ ರಚನೆಗೆ ಹಲುಬಿದೆವು; ವಿಧವಿಧದ ಪರಿಶ್ರಮ ಹೋರಾಟಗಳನ್ನು ನಡೆಸಿದೆವು. "ನೊಂದ ನೋವ ನೋಯದವರೆತ್ತ ಬಲ್ಲರು?" ಎಂದು ಕನ್ನಡ ತಾಯಿ ಇಂದು ಮಿಡುಕುವಂತಾಗಿದೆ. ಒಮ್ಮೊಮ್ಮೆ ಈ ಭಾಷಾವಾರು ಪ್ರಾಂತ ರಚನೆಯಾದದ್ದು ತಪ್ಪಾಯಿತೇನೋ ಎನ್ನುವ ವಿಚಾರ ನನ್ನಲ್ಲಿಯೂ ಸುಳಿದು ಹೋಗುತ್ತದೆ. ದೇಶದಲ್ಲಿ ಇಂಥ ಒಂದು ಪರಿಸ್ಥಿತಿಯುಂಟಾಗಲು ಮೂಲ ಕಾರಣ ಭಾಷಾ ದುರಭಿಮಾನ; ಮತ್ತು ರಾಷ್ಟ್ರೀಯ ಮನೋಭಾವದ ಕೊರತೆ. ಈ ಭಾಷಾ ಪ್ರಾಂತಗಳ ರಥವನ್ನು ಸರಿಯಾದ ದಾರಿಗೆ ತಿರುಗಿಸಿ ಮುನ್ನಡೆಸಬೇಕಾಗಿದೆ. ಮರಾಠಿಯ ನನ್ನ ಬಂಧುಗಳಿಗೂ ಅನೇಕ ಸಲ ಈ ಮಾತನ್ನು ಭಾಷಣ ಬರಹಗಳ ಮೂಲಕ ತಿಳಿಸಿ ಹೇಳಿದ್ದೇನೆ. ಮರಾಠಿ ಸಾಹಿತ್ಯ ಪರಿಷತ್ತಿನ ಮಂದಿರದಲ್ಲಿ ನಾನು ಮಾತನಾಡಿ ಈ ವಿಷಯಗಳನ್ನು ವಿವರಿಸಿದಾಗ, "ನೀವು ಕನ್ನಡದಲ್ಲಿ ಮಾತಾಡಿ, ನಾವು ಕೇಳಲು ಸಿದ್ಧರು" ಎಂದು ಕೂಗಿದ್ದುಂಟು. ಪುಣೆಯಲ್ಲಿ, ಮರಾಠಿ ಸಾಹಿತ್ಯ ಪರಿಷತ್ತಿನಲ್ಲಿ ಈ ಪ್ರತಿಕ್ರಿಯೆಯನ್ನು ನಾನು ಕಂಡಿದ್ದೇನೆ. ಮರಾಠಿ ಸಾಹಿತಿಯೊಬ್ಬನು

ಒಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಾತನಾಡಿದಾಗ, "ಮರಾಠಿಯಲ್ಲಿ ಮಾತನಾಡಬಹುದು" ಎನ್ನುವ ಮಾತನ್ನು ನಾನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಕೇಳಬಯಸುತ್ತೇನೆ ಎಂದು ಅವರಿಗೆ ಹೇಳಿದೆನು. ಭಾಷೆಯು ಪಟ್ಟಭದ್ರ ರಾಜಕೀಯ ಜನರ ಕೈಗೆ ಸಿಕ್ಕಾಗ, ಒಂದು ಮಾರಕ ಅಸ್ತ್ರವಾಗಿ ಪರಿಣಮಿಸುತ್ತದೆ. ಆದರೆ ಅದೇ ಭಾಷೆ, ಸಾಹಿತಿಗಳ ಸೃಜನಶೀಲತೆಯಿಂದ ಜನ-ಜನರನ್ನು ಒಂದುಗೂಡಿಸುವ, ಹೃದಯ-ಹೃದಯಗಳಲ್ಲಿ ಬೆಸೆಯುವ ಭಾವಸೇತುವೆಯಾಗುತ್ತದೆ.

ಪರಿಷತ್ತು ದಾರಿ ತೋರಬೇಕು

ಈ ಒಂದು ಸೌಹಾರ್ದ ಮೈತ್ರಿಗಳು ಬೌದ್ಧಿಕ ಮಟ್ಟದಲ್ಲಿ, ಸಾಹಿತ್ಯದ ಮಟ್ಟದಲ್ಲಿ ಬೆಳೆಯಲು ಸಾಧ್ಯವಿದೆ ಎನ್ನುವ ಭಾವನೆಯಿಂದ ಈ ವಿಷಯಗಳನ್ನು ವಿವರಿಸುತ್ತಿದ್ದೇನೆ. ಒಂದು ವೇಳೆ ರಾಜ್ಯದ ಸೂತ್ರಗಳು ಸರಿಯಾದ ಮಾರ್ಗದಲ್ಲಿ ರಾಷ್ಟ್ರಹಿತ ದೃಷ್ಟಿಯಲ್ಲಿ ಮುನ್ನಡೆಯದಿದ್ದರೆ ಸಾಹಿತಿಗಳು, ಸಾಹಿತ್ಯ ಪರಿಷತ್ತಿನಂತಹ ಸಾಂಸ್ಕೃತಿಕ ಸಂಸ್ಥೆಗಳು ಅವುಗಳನ್ನು ಸರಿಯಾದ ಹಾದಿಗೆ ತರಲು ಯತ್ನಿಸಬೇಕು. ಹಾಗೂ ಸರಕಾರವು ಕೂಡ ಇಂಥ ಜನದಿಂದ; ಸಂಸ್ಥೆ ಸಂಘಟನೆಗಳಿಂದ ನಿರ್ದೇಶನ ಸೂತ್ರಗಳನ್ನು ಪಡೆಯಬೇಕಾಗುತ್ತದೆ. ಇದನ್ನು ಸರಕಾರಕ್ಕೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಬೇಕಾಗುತ್ತದೆ.

ಪರಿಷತ್ತು ಅಂದಿನಿಂದ ಇಂದಿನವರೆಗೆ

೧೯೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಲ್ಪಟ್ಟಿತು. ಆಗ ಕನ್ನಡ ಮಾತನಾಡುವ ಜನರು ಆಂಗ್ಲ ಮತ್ತು ದೇಶೀಯ ಆಳರಸರ ಇಪ್ಪತ್ತೆರಡು ಆಡಳಿತಕ್ಕೆ ಒಳಪಟ್ಟಿದ್ದರು. ಅಲ್ಲದೆ ಅವರಿಗೆ ಕಡ್ಡಾಯವಾಗಿ ಇಂಗ್ಲೀಷ್, ಮರಾಠಿ, ಉರ್ದು, ತಮಿಳು, ತೆಲುಗು, ಮಲೆಯಾಳ ಇತ್ಯಾದಿ ಭಾಷೆಗಳನ್ನು ಕಲಿಯಬೇಕಾಗುತ್ತಿತ್ತು. ಮತ್ತೆ ಅವರಿಗೆ ಪ್ರಾದೇಶಿಕ ಉಡುಗೆ ತೊಡಿಗೆ, ರೀತಿ ನೀತಿಗಳೊಡನೆ ಹೊಂದಿಕೊಂಡು ಹೋಗಬೇಕಾಗುತ್ತಿತ್ತು. ಈ ಪ್ರದೇಶಗಳಲ್ಲಿ ವಾಸಿಸುವ ಕನ್ನಡಿಗರಿಗೆ ಕನ್ನಡದ ಲಿಪಿಯ ಪರಿಚಯ ಸಹಾ ಇರಲಿಲ್ಲ. ಆದರೆ ಅವರೆಲ್ಲರಿಗೂ ಸಾಮಾನ್ಯವಾದ ಒಂದು ಸಂಪರ್ಕಭಾಷೆ ಕನ್ನಡವೇ ಆಗಿತ್ತು. ಇವರೆಲ್ಲರನ್ನೂ ಒಂದುಗೂಡಿಸಿ, ಒಂದೇ ಆಡಳಿತದ ಸೂತ್ರಕ್ಕೆ ಒಳಪಡಿಸಿ, ಕನ್ನಡವನ್ನು ಉಳಿಸಿ, ಬೆಳೆಸಿ ನಾವೆಲ್ಲರೂ ಕನ್ನಡಿಗರು ಎಂಬ ಭಾವೈಕ್ಯವನ್ನು ಸಾಧಿಸುವ ಮಹೋದ್ದೇಶವೇ ಕನ್ನಡ ಸಾಹಿತ್ಯ ಪರಿಷತ್ತಿನ ಗುರಿಯಾಯಿತು. ಅಂದಿನಿಂದ ಪರಿಷತ್ತಿನ ಕನ್ನಡದ ಹಿರಿಯರು ಮುಂದಾಲೋಚನೆಯಿಂದ ಪರಿಷತ್ತನ್ನು ಪರಿಣಾಮಕಾರಿಯಾಗಿ ಸಂಘಟಿಸುವಲ್ಲಿ ತನು-ಮನ-ಧನಗಳನ್ನು ಸವೆಯಿಸಿದರು. ಕನ್ನಡ ಜನರನ್ನು ಒಂದುಗೂಡಿಸಲು ಏಕಮೇವ ಸಂಸ್ಥೆಯು ಕನ್ನಡ ಸಾಹಿತ್ಯ ಪರಿಷತ್ತು ಎಂಬುದು ಕನ್ನಡ ಜನರಿಗೆ ಅರಿವಾಯಿತು. ಅಂದಿನಿಂದ ಕನ್ನಡ ನಾಡನ್ನು ಒಂದುಗೂಡಿಸುವ ಹೋರಾಟದಲ್ಲಿ ತನ್ನ ನಿಲುವನ್ನು ಬದಲಿಸದೆ, ಕನ್ನಡ ಸಾಹಿತ್ಯ ಪರಿಷತ್ತು ದುಡಿಯುತ್ತಾ ಬಂದಿದೆ. ಕನ್ನಡ ಸಾಹಿತ್ಯವನ್ನು ಬೆಳೆಸಿ, ಕನ್ನಡದ ಪ್ರಜ್ಞೆಯನ್ನು ಕನ್ನಡದ ಜನಾಂಗಕ್ಕೆ ನೀಡಿದ ಆ ಪರಿಷತ್ತಿನ ಹಿಂದಿನ ಅಧ್ಯಕ್ಷರುಗಳ ಹಾಗೂ ಅಭಿಮಾನಿಗಳ ಸೇವೆಯನ್ನು ನಾವಿಂದು ಸ್ಮರಿಸಬೇಕು. ಎಚ್.ವಿ. ನಂಜುಂಡಯ್ಯ, ಕರ್ಪೂರ ಶ್ರೀನಿವಾಸರಾಯರು, ಅವರೇ ಆದಿಯಾಗಿ ಜಿ. ನಾರಾಯಣ ಅವರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಅನೇಕ ಮುಖವಾಗಿ ಬೆಳೆಯುತ್ತ ಬಂದಿದೆ. ಈಗ ಕನ್ನಡ ಸಾಹಿತ್ಯ ಪರಿಷತ್ತು ತ್ರೈವಾರ್ಷಿಕ ಯೋಜನೆಯನ್ನು ಪೂರ್ತಿಗೊಳಿಸಿ, ಕನ್ನಡ-ಕನ್ನಡ ನಿಘಂಟಿನ ಕಾರ್ಯವನ್ನು ಮುಂದುವರಿಸಿ, ಸುವರ್ಣ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಿ, ಅದರ ಸ್ಮರಣಾರ್ಥವಾಗಿ ಭವ್ಯ ಕಟ್ಟಡವನ್ನು ಕಟ್ಟಿಸಿ ಕರ್ನಾಟಕಕ್ಕೆ ಗೌರವವನ್ನು ತಂದಿದೆ. ಈಗ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸಿ, ಪ್ರಾಚೀನ ಹಳೆಗನ್ನಡ ಕಾವ್ಯವನ್ನೆಲ್ಲಾ ಹೊಸಗನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸುವ ಕಾರ್ಯ ಕೈಗೊಂಡಿದೆ. ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಕನ್ನಡ-ಕನ್ನಡ ಶಬ್ದಕೋಶವನ್ನು ಪರಿಷತ್ತು ಸಿದ್ಧಗೊಳಿಸುತ್ತಿರುವುದು ಸಂತೋಷದ ಸಂಗತಿ. ಮತ್ತು ಪ್ರಾಚೀನ ತಾಳೆಯೋಲೆ ಗ್ರಂಥಗಳನ್ನು, ತಾಮ್ರ ಶಾಸನಗಳ ಮತ್ತು ಶಿಲಾಶಾಸನಗಳ ಪ್ರತಿಗಳನ್ನು ಸಂಗ್ರಹಿಸುವ ಕಾರ್ಯವನ್ನು ಪರಿಷತ್ತು ಕೈಗೊಂಡಿರುವುದು ಕನ್ನಡ ಸಂಸ್ಕೃತಿಯ ರಕ್ಷಣೆಯ ದೃಷ್ಟಿಯಿಂದ ಮಹತ್ವದ್ದಾಗಿದೆ.

ಕನ್ನಡ ನಾಡಿನ ಜನ ಒಂದುಗೂಡಬೇಕು, ಮುನ್ನಡೆಯಬೇಕೆಂಬ ದೃಷ್ಟಿಯಿಂದ ಕರ್ನಾಟಕವಾಗಲು ಕಾರಣವಾಯಿತು. ವಿಭಿನ್ನ ಪ್ರದೇಶಗಳ ಜನರು ಒಂದೇ ಆಡಳಿತ ಸೂತ್ರಕ್ಕೆ ಒಳಪಟ್ಟರು. ಇವರಲ್ಲಿ ಭಾವೈಕ್ಯವನ್ನು ಒಡಮೂಡಿಸುವ ಹೊಣೆ ಸರಕಾರ ಮತ್ತು ಸಾಹಿತಿಗಳ ಮೇಲೆ ಇದೆ. ಆದರೆ ಕೆಲವು ಪ್ರದೇಶದ ಸಾಹಿತಿಗಳಲ್ಲಿ ತಮ್ಮನ್ನು ಕಡೆಗಣಿಸಲಾಗುತ್ತದೆ ಎನ್ನುವ ಧ್ವನಿ ಕೇಳಿಬರುತ್ತಿದೆ. ನಾಡಿನ ಭದ್ರತೆಯ ದೃಷ್ಟಿಯಿಂದ ಸರಕಾರ, ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತುಗಳು ಇದನ್ನು ಗಮನಿಸಬೇಕು.

ಪರಿಷತ್ತು ಮಾಡಬೇಕಾದ ಚಳವಳಿ

ನಾವು ಜನತೆಗೆ ಮೊದಲು ಅನ್ನ, ಅರಿವೆ, ಆಸರೆ, ಅಕ್ಷರ, ಔಷಧ ಈ ಐದು ಆವಶ್ಯಕತೆಗಳನ್ನು ಪೂರೈಸುವುದರಲ್ಲಿ ಸಮರ್ಥರಾಗದೆ ದೊಡ್ಡ ದೊಡ್ಡ ಮಾತುಗಳನ್ನು ಆಡಿ ಕೇವಲ ಸಾಹಿತ್ಯಕ ಸಮಸ್ಯೆಗಳನ್ನು ಎದುರಿಸುವುದು ಸಾಧ್ಯವಿಲ್ಲ. ಸಾಹಿತಿಯಾದವರಿಗೆ ಸಾಮಾಜಿಕ ಪ್ರಜ್ಞೆ ಇರಬೇಕು. ನಮ್ಮ ಕವಿತೆಗಳ ಹಿಂದೆ ಸಂವೇದನೆಗಳಿರುವಂತೆ ಹಸಿದವನ ಹೊಟ್ಟೆಯಲ್ಲಿ ವೇದನೆ ಇದೆ. ಆ ವೇದನೆಯನ್ನು ಅವನು ಹೊರಗೆಡವಲು ನಾಲ್ಕು ಜನಗಳ ಮುಂದೆ ಹೇಳುವಂತೆ ಆಗಲು ಅಕ್ಷರದ ಅಸ್ತ್ರ ಅವರಿಗೆ ಬೇಕು. ಈ ಸಮಸ್ಯೆಯನ್ನು ಕುರಿತು ಬಹಳಷ್ಟು ಆಲೋಚನೆ ಮಾಡಿದಾಗಲೆಲ್ಲ ನನಗೆ ಈ ಅನ್ನ ಅಕ್ಷರ ಇತ್ಯಾದಿಗಳನ್ನು ಕುರಿತು ಅವುಗಳ ನಿವಾರಣೆಯಲ್ಲಿ ನಮ್ಮ ಸಾಹಿತ್ಯವು ಎಷ್ಟರ ಮಟ್ಟಿಗೆ ಮೂಡುತ್ತದೆ. ನಮ್ಮ ದೇಶದಲ್ಲಿ ಇಂದು ಹಸಿರು ಕ್ರಾಂತಿಯಾಗಬೇಕು ಎಂಬ ಆಂದೋಲನವನ್ನು ಪ್ರಾರಂಭಿಸಿದಂತೆ ಅಕ್ಷರ ಕ್ರಾಂತಿಯ ಆಂದೋಲನವನ್ನು ಪ್ರಾರಂಭಿಸಬೇಕು. ಸಾಹಿತಿಗಳ, ಕವಿಗಳ, ಸಾಹಿತ್ಯ ಪರಿಷತ್ತುಗಳ, ಸಾಂಸ್ಕೃತಿಕ ಸಂಘ ಸಂಸ್ಥೆಗಳ, ಧಾರ್ಮಿಕ ಮಠಮಾನ್ಯಗಳ ಹೊಣೆಯು ದೊಡ್ಡದಾಗಿದೆ. ಸರ್ಕಾರವು ಸಾಧಿಸಲಾರದ್ದನ್ನು ಸಾಹಿತಿಗಳು ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿ ಕೈಗೆತ್ತಿಕೊಂಡು ಮುನ್ನಡೆದು, ಸರ್ಕಾರವನ್ನು ಜೊತೆಯಲ್ಲಿ ಕೊಂಡೊಯ್ದು, ಒಂದು ಸಾಂಸ್ಕೃತಿಕ ಹಾಗೂ ಬೌದ್ಧಿಕ ಆಂದೋಲನವನ್ನು ಹಮ್ಮಿಕೊಳ್ಳಬೇಕು ಎಂಬುದಾಗಿ ನಾನು ನಿಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರಲ್ಲಿ ಸಾಹಿತ್ಯದ ಸತ್ವ-ಪುಸ್ತಕಗಳ ಪ್ರಚಾರ-ಪತ್ರಿಕೆಗಳ ಪ್ರಸಾರ ಇವು ಅಡಕವಾಗಿವೆಯೆಂದೇ ಇಷ್ಟೆಲ್ಲ ವಿವರಣೆ.

❖❖

೪೯ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎಸ್.ವಿ. ರಂಗಣ್ಣ



ಕನ್ನಡ ಮತ್ತು ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದಲ್ಲಿ ಪ್ರಾವೀಣ್ಯ ಪಡೆದಿದ್ದ ಎಸ್.ವಿ. ರಂಗಣ್ಣನವರು ಹಾಸನ ಜಿಲ್ಲೆಯ ಸಾಲಗಾಮೆಯಲ್ಲಿ ವೆಂಕಟಸುಬ್ಬಯ್ಯ-ವೆಂಕಟಲಕ್ಷ್ಮಮ್ಮನವರ ಮಗನಾಗಿ ೨೪-೧೨-೧೮೯೮ರಲ್ಲಿ ಜನಿಸಿದರು.

ಇವರ ವಿದ್ಯಾಭ್ಯಾಸ ಚಿಕ್ಕಮಗಳೂರು, ಬೆಂಗಳೂರು, ಮೈಸೂರುಗಳಲ್ಲಿ ನಡೆಯಿತು. ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿಯನ್ನೂ, ೧೯೨೧ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಗಳಿಸಿದರು.

೧೯೨೩ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ನೇಮಕಗೊಂಡರು. ೧೯೨೮-೩೩ರವರೆಗೆ ತುಮಕೂರಿನಲ್ಲಿ, ೧೯೩೩ರಿಂದ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ೧೯೫೪ರಲ್ಲಿ ನಿವೃತ್ತರಾದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿ.ಎಂ.ಶ್ರೀ. ಅವರು ಉಪಾಧ್ಯಕ್ಷರಾಗಿದ್ದಾಗ ಕಾರ್ಯದರ್ಶಿಯಾಗಿಯೂ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟಿನ ಪರಿಷ್ಕರಣ ಸಮಿತಿಯ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಮೈಸೂರಿನ ಸಹಕಾರ ಸಂಘ, ಪದವೀಧರರ ಸಹಕಾರ ಸಂಘ, ಅನಾಥಾಲಯ ಇವುಗಳ ಅಧ್ಯಕ್ಷರಾಗಿಯೂ, ಶಾರದಾವಿಲಾಸ ವಿದ್ಯಾ ಸಂಸ್ಥೆಗಳ ಗೌರವ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

೧೯೬೫ರಲ್ಲಿ ಇವರ ರಂಗಬಿನ್ನಪ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಿದೆ. ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಿ.ಲಿಟ್. ಪದವಿಯನ್ನೂ ನೀಡಿತು.

೧೯೩೩ರಿಂದ ೧೯೩೮ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದರು. ೧೯೭೬ರಲ್ಲಿ ಶಿವಮೊಗ್ಗೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಸ್ಕೌಟ್ ಚಳುವಳಿಯಲ್ಲಿ ಸದಾ ನಿರತರಾಗಿದ್ದು ರಜತಗಜ ಪ್ರಶಸ್ತಿಗೆ ಪಾತ್ರರಾಗಿದ್ದರು.

ಇವರು ರಚಿಸಿದ ಕನ್ನಡ ಕೃತಿಗಳೆಂದರೆ: ಕುಮಾರವ್ಯಾಸನ ವಾಣಿ, ಕಾಳಿದಾಸನ ನಾಟಕಗಳ ವಿಮರ್ಶೆ, ರಂಗಬಿನ್ನಪ, ಮರುಬಿನ್ನಪ, ಕವಿಕಥಾಮೃತ, ನಾಟುನುಡಿ, ಹರಿಶ್ಚಂದ್ರಕಾವ್ಯ(ನಾಟಕ), ಉತ್ತರಕುಮಾರ(ನಾಟಕ), ಪಾಶ್ಚಾತ್ಯ ಗಂಭೀರ ನಾಟಕಗಳು(ಬೃಹದ್ಗ್ರಂಥ), ಶೈಲಿ ಇತ್ಯಾದಿ.

ಇಂಗ್ಲಿಷಿನಲ್ಲಿ ಪರಿಣತಿ ಹೊಂದಿದ್ದ ಇವರು ಹಲವಾರು ಇಂಗ್ಲಿಷ್ ಕೃತಿಗಳನ್ನು ರಚಿಸಿದ್ದಾರೆ. ದಿ ಲೇಡಿ ಅಂಡ್ ರಿಂಗ್, ಓಲ್ಡ್ ಟೇಲ್ಸ್ ರಿ ಟೋಲ್ಡ್, ಆನ್ ದಿ ಸೆಲ್ಫ್, ಬಿಎಂಶ್ರೀ(ಬಯೋಗ್ರಾಫಿ) ಇತ್ಯಾದಿ.

ರಂಗಣ್ಣನವರು ೧೭-೨-೧೯೮೭ರಂದು ಇಹಲೋಕವನ್ನು ತ್ಯಜಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನ-೪೯,
ಅಧ್ಯಕ್ಷರು, ಎಸ್.ವಿ. ರಂಗಣ್ಣ
ದಿನಾಂಕ ೧೧, ೧೨, ೧೩ ಡಿಸೆಂಬರ್ ೧೯೭೬,
ಸ್ಥಳ : ಶಿವಮೊಗ್ಗ
[ಟಿಪ್ಪಣಿ : ೧೯೭೫ರಲ್ಲಿ ಸಮ್ಮೇಳನ ನಡೆಯಲಿಲ್ಲ]

ಹಿಂದಿನ ಸಮ್ಮೇಳನಾಧ್ಯಕ್ಷರುಗಳ ಭಾಷಣಗಳ ಮೂರು ಸಂಪುಟಗಳನ್ನು ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಯಂತೆ ವ್ಯಾಸಂಗ ಮಾಡಿದೆ, ಆಸಕ್ತಿಯಿಂದ ಆಹ್ಲಾದಪಡುತ್ತ ವ್ಯಾಸಂಗ ಮಾಡಿದೆ. ಉಜ್ವಲ ದಾರಿದೀಪ ದೊರಕಿದುವು ನನಗೆ. ಅಲ್ಲದೆ ಹಲವು ಕುತೂಹಲ ಕೆರಳಿಸುವ ಸಂಗತಿಗಳೂ ಅನೇಕ ಉಪಯುಕ್ತ ಮಾಹಿತಿಗಳೂ ಕೈವಶವಾಗಿ ತೃಪ್ತಿಯನ್ನು ತಂದುಕೊಟ್ಟುವು. ಒಂದೆರಡನ್ನು ನಿರೂಪಿಸಲು ನಿಮ್ಮ ಅನುಮತಿ ಬೇಡುತ್ತೇನೆ. ೪೬ ಅಧ್ಯಕ್ಷರುಗಳಲ್ಲಿ ೩೪ ಮಂದಿಗೆ ೫೦ರ ಮೇಲೆ, ೯ ಮಂದಿಗೆ ೬೦ರ ಮೇಲೆ, ಮೂವರಲ್ಲಿ ಇಬ್ಬರಿಗೆ ೭೦, ಇನ್ನೊಬ್ಬರಿಗೆ ೭೮. ೭೮ ವರ್ಷದವರಾರೆಂದರೆ ಎಂ. ವೆಂಕಟಕೃಷ್ಣಯ್ಯನವರು, ಉರುಫ್ ತಾತಯ್ಯ. ಅವರ ನಾಮಧೇಯವನ್ನು ಏಕೆ ಉಚ್ಚರಿಸುತ್ತಿದ್ದೇನೆ ಎಂದರೆ ಕಾಕತಾಳೀಯ ನ್ಯಾಯದಿಂದ ನನಗೂ ೭೮! ನನ್ನನ್ನು 'ಜ್ಞಾನವೃದ್ಧ' 'ವಯೋವೃದ್ಧ' ಎಂದು ಸಂಬೋಧಿಸುವುದು ಪರಿಚಯ ಭಾಷಣಕಾರರ ವಾಡಿಕೆಯಾಗಿದೆ. ಮೊದಲನೆಯದನ್ನು ನಾನು ಸುತರಾಂ ಒಪ್ಪುವುದಿಲ್ಲ; ಎರಡನೆಯದರಲ್ಲಿ 'ವೃದ್ಧ' ಎಂಬುದನ್ನು ಕಿತ್ತುಹಾಕಿದರೆ 'ವಯೋ' ಎಂಬುದಕ್ಕೆ ನನ್ನ ಸಮ್ಮತಿ, ಹಾಗೂ "ಮನುಷ್ಯನ ಮನಸ್ಸಿನಂತೆ ಅವನ ವಯಸ್ಸು" ಎಂಬ ನಿಜಾಂಶದ ಕಡೆಗೆ ನಿಮ್ಮ ಲಕ್ಷ್ಯವನ್ನು ಎಳೆಯುವುದು ನನ್ನ ನಿರ್ಧಾರ, ಕಿರಿಯ ವಯಸ್ಸಿನ ಅಧ್ಯಕ್ಷರೂ ಉಂಟು ಪಟ್ಟಿಯಲ್ಲಿ; ೧೯೨೯ರಂದು ಬೆಳಗಾವಿಯಲ್ಲಿ ಕೂಡಿದ್ದ ಸಮ್ಮೇಳನಕ್ಕೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಅಧ್ಯಕ್ಷರಾದಾಗ ಅವರಿಗೆ ಮೂವತ್ತೆಂಟೇ ವರ್ಷ! ಹಿಂದೊಮ್ಮೆ ಬ್ರಿಟಿಷ್ ಪಾರ್ಲಿಮೆಂಟಿಗೆ ೪೫ ವರ್ಷದವನೊಬ್ಬ ಚುನಾಯಿತನಾಗಿ ಬಂದಾಗ ಹಳೆಯ ಸದಸ್ಯರಲ್ಲಿ ಹಲವರು "ಇದೇನು ನಮ್ಮ ಸಂಸತ್ತು ತರುಣರ ಪಾಲಾಗುತ್ತಿದೆ!" ಎಂದು ಗೊಣಗುಟ್ಟಿದರಂತೆ, ನಮ್ಮ ಕರ್ನಾಟಕದ ಜನತೆ ಮೇಲು ಎಂದು ನಾವು ಹೆಮ್ಮೆಗೊಳ್ಳಬಹುದು.

ವಯಸ್ಸಾದ ಮೇಲೆ ವಿಸ್ತೀರ್ಣ, ಎಂದರೆ ಅಧ್ಯಕ್ಷರುಗಳ ದೇಹಾಕೃತಿಯ ಉದ್ದ ಅಗಲವಲ್ಲ ನನ್ನ ಅರ್ಥ; ಅವರ ವಚೋವಿಲಾಸದ ವಿಸ್ತೀರ್ಣ. ಅದರಲ್ಲಿ ಇನ್ನೂ ಹೆಚ್ಚಿನ ವೈವಿಧ್ಯ ಗೋಚರವಾಗುತ್ತದೆ. ಎಂ. ವೆಂಕಟಕೃಷ್ಣಯ್ಯನವರ ಭಾಷಣ ಅಚ್ಚಿನಲ್ಲಿ ಕೇವಲ ೬ ಪುಟಗಳು, ಟಿ.ಪಿ. ಕೈಲಾಸಂ ಅವರದ್ದು ೭ ಪುಟ; ರೊದ್ದ ಶ್ರೀನಿವಾಸರಾಯರದ್ದು ೭ ೧/೨ ಪುಟ. ಇನ್ನೊಂದು ಕೊನೆಯಲ್ಲಿ ಸಿ.ಕೆ. ವೆಂಕಟರಾಮಯ್ಯನವರ ಭಾಷಣ ೬೪ ೧/೬ ಪುಟ, ಟಿ.ಟಿ. ಶರ್ಮರದ್ದು ೬೪ ೧/೨ ಪುಟ. ಮಹಾಶಯರಿಬ್ಬರು ತಮ್ಮ ಆಯುರ್ದಾದಷ್ಟೇ ಸಂಖ್ಯೆಯ ಪುಟಗಳ ಭಾಷಣ ಕೊಟ್ಟಿದ್ದಾರೆ; ವಿ. ಸೀತಾರಾಮಯ್ಯನವರು, ೫೩; ಅ.ನ. ಕೃಷ್ಣರಾಯರು ೫೩! ಅದು ದಿಟವಾಗಿ ಅನುದ್ದಿಷ್ಟ ಹೊಂದಾವಣೆ; ಬಹುಶಃ ವೈಚಿತ್ರ್ಯವನ್ನು ಅರಸುವ ನನ್ನ ವೈಯಕ್ತಿಕ "ರೊಮ್ಯಾಂಟಿಕ್" ಲೋಚನ ಮಾತ್ರ ಕಂಡುಹಿಡಿದ ಆಕಸ್ಮಿಕ ಹೊಂದಾವಣೆ.

ಸಮ್ಮೇಳನ ಅಧ್ಯಕ್ಷರ ಭಾಷಣ ವೈಖರಿ

ವೈಚಿತ್ರ್ಯ ಎಂದೆನಷ್ಟೆ. ಇನ್ನೂ ಬೇಕಾದಷ್ಟನ್ನು ವಿವರಿಸಬಲ್ಲೆ ಒಂದನ್ನು ಕುರಿತು ಕೊಂಚ ಹೇಳಿ ಈ ಪ್ರಸ್ತಾಪವನ್ನು ಮುಕ್ತಾಯಗೊಳಿಸುತ್ತೇನೆ. ಅದು ಅಧ್ಯಕ್ಷ ಭಾಷಣಗಳಲ್ಲಿ ಪಲ್ಲವಿಯೋಪಾದಿ ಪುನಃ ಪುನಃ ಕೇಳಿಬರುವ "ಅಲ್ಪಮತಿ ನಾನು, ಹೊರಿಸಿರುವ ಜವಾಬ್ದಾರಿ ಗುರುಭಾರ, ಅನರ್ಹನನ್ನು ಒಲುಮೆಯಿಂದ ಮನ್ನಿಸಿ!" ಎಂಬ ಶಬ್ದಗುಚ್ಛಕ್ಕೆ ಸಂಬಂಧಿಸಿದುದು. ೧೯೨೨ರ ದಾವಣಗೆರೆ ಸಮ್ಮೇಳನದಲ್ಲಿ ಎಂ. ವೆಂಕಟಕೃಷ್ಣಯ್ಯನವರು "ಇಂತಹ ಸನ್ಮಾನಕ್ಕೆ ನಾನು ಅರ್ಹನಲ್ಲ" ಎಂದು ಖಂಡಿತವಾಗಿ ನುಡಿದು, ಅಧ್ಯಕ್ಷ ಪೀಠದಲ್ಲಿ ಮಹಾರಾಜರ ಚಿತ್ರವನ್ನು ಇಟ್ಟು, ಮಗ್ಗುಲಲ್ಲಿ ನಿಂತುಕೊಂಡು ತಮ್ಮ ಪುಟ್ಟ ಭಾಷಣವನ್ನು ಮಾಡಿದವರಂತೆ, ೧೯೨೭ರ ಮಂಗಳೂರಿನ ಕೂಟದಲ್ಲಿ ರಾಜಕವಿ ತಾತಾಚಾರ್ಯರು "ನನ್ನ ಭಾಷಣ" 'ನ ಭೂತೋ ನ ಭವಿಷ್ಯತಿ' ಎನ್ನುವಂತೆ ಹಿಂದಿನ ಭಾಷಣಗಳಂತೆ ಇಲ್ಲವೇ ಇಲ್ಲ; ಇನ್ನು ಮುಂದೆ ಬರಲಿಕ್ಕಿರುವ ಭಾಷಣಗಳಂತೆಯೂ ಇರಲಾರದು" ಎಂದು ಘೋಷಿಸಿ, ತಕ್ಷಣವೇ ನಾಟುನುಡಿಯಂಥ ವ್ಯಾಖ್ಯಾನವನ್ನು ತಾವೇ ಮಾಡಿದರು : "ಗುಣವೂ ಇಲ್ಲ, ಹಿತಸೂಚನೆಯೂ ಇಲ್ಲ, ವಾಗ್ಧಾಟಿಯೂ ಇಲ್ಲ ನನ್ನಲ್ಲಿ." ೧೯೩೫ ರಂದು ಬೆಳಗಾವಿ ಸಮ್ಮೇಳನದಲ್ಲಿ

ಮುದವೀಡು ಕೃಷ್ಣರಾಯರು ತಮ್ಮದೇ ಆದ ಗಂಡುದನಿಯಲ್ಲಿ ಹೀಗೆಂದರು : "ನೀವೆಲ್ಲ ಹಿಡಿದು ತಂದು ಈ ಪೀಠಕ್ಕೆ ಬಿಗಿದು ಕಟ್ಟಿದಿರಿ. ತಮ್ಮ ಈ ಕೃತಿಯು ಅನುಚಿತವೆಂದು ಹೇಳುವೆನೆ? ತಮ್ಮೆಲ್ಲರ ಸಾರಾಸಾರ ವಿವೇಚಕ ವಿಮರ್ಶಾಬುದ್ಧಿಗೆ ಕುಂದನ್ನಿಟ್ಟು ಮಾತನಾಡುವ ಎದೆಗಾರಿಕೆಯನ್ನು ಮಾಡಿದಂತಾಗುವುದು. ಅಂತಹ ಮಹಾಪರಾಧವನ್ನು ನಾನೆಂದಿಗೂ ಮಾಡಲಾರೆನು." ಅವರ ಹೆಜ್ಜೆಯನ್ನು ಹಿಂಬಾಲಿಸಬೇಕೆಂಬುದು ನನ್ನ ಆಂತರ್ಯದ ಚಪಲ; ಆದರೆ ಅವರು "ಬಿರುಗಾಳಿ", ನಾನು ಕಿರುಗಾಳಿಯೂ ಅಲ್ಲ. ನನ್ನ ವಚನಗಳಲ್ಲಿ ಆಗಾಗ "ಸ್ವರ್ಗವೆಲ್ಲಿಹುದಯ್ಯ ಸ್ವರ್ಗವೆಲ್ಲಿಲ್ಲವಯ್ಯ" "ಶಿಲಾಬಾಲಿಕೆಯ ನೋಡದವ ಕಲ್ಲು ನೋಡಿದವ ನೂಲ್ಲು" ಇತ್ಯಾದಿ ವಿರುದ್ಧ ದ್ವಂದ್ವ ತಾನಾಗಿ ಬರುತ್ತದೆ. ನನ್ನ ಪೂರ್ವಾರ್ಜಿತ ಪುಣ್ಯ, ಪ್ರಾಮಾಣಿಕ ಸಾಹಿತ್ಯಕ ಪ್ರಯತ್ನ, ನಿಮ್ಮೆಲ್ಲರ ಪ್ರೀತಿ–ಔದಾರ್ಯ ಮೂರೂ ಒಟ್ಟಾಗಿ ನನಗೆ ಈ ಹೆಗ್ಗೌರವವನ್ನು ತಂದುಕೊಟ್ಟಿವೆ. ನಿಮಗೆ ನನ್ನ ಅಳತೆಮೀರಿದ ಅಪಾರ ಧನ್ಯವಾದ.

ಸಾಹಿತ್ಯ ಪರಿಷತ್ತು

೧೯೧೫ರ ಏಪ್ರಿಲಿನಲ್ಲಿ ರೂಪುಗೊಂಡ "ಕರ್ನಾಟಕ ಸಾಹಿತ್ಯ ಪರಿಷತ್ತು" ಮೇ ತಿಂಗಳಿನಲ್ಲಿಯೇ ಪ್ರಥಮ ಸಮ್ಮೇಳನ ನಡೆಸಿ, ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು ಒದಗಿಸಿಕೊಟ್ಟ "ಸದುದ್ದೇಶ ಪಂಚಕ"ವನ್ನು ತನ್ನ ಪ್ರಣಾಳಿಕೆಯನ್ನಾಗಿ ಒಪ್ಪಿಕೊಂಡಿತು. ೧) ಪಾರಿಭಾಷಿಕ ಶಬ್ದಗಳ ರಚನೆ ೨) ಪ್ರಾದೇಶಿಕ ಭಾಷಾಭೇದಗಳ ನಿವಾರಣೆ ೩) ಹೊಸಗನ್ನಡ ವ್ಯಾಕರಣ ನಿರ್ಮಾಣ ೪) ನಾಡಿಗೆಲ್ಲ ಸಮಾನವಾದ ಪಠ್ಯಪುಸ್ತಕ ತಯಾರಿಕೆ ೫) ಕನ್ನಡತನದ ಪ್ರಚಾರ. ಭಾಷಾಶುದ್ಧತೆಯ ವಿಚಾರವಾಗಿ ಇಷ್ಟೊಂದು ಶ್ರದ್ಧೆ ಪರಿಷತ್ತಿಗೆ ಇದ್ದುದನ್ನು ನೋಡಿದರೆ ಅದು "ಫ್ರೆಂಚ್ ಅಕಾಡೆಮಿ"ಯಿಂದ ಪ್ರಭಾವಿತವಾಗಿತ್ತೆಂದು ಊಹಿಸಬಹುದು. ಅದು ಕೇವಲ ಅಗ್ರ ವಿದ್ವನ್ಮಂಡಲಿ; ಅದರ ಸದಸ್ಯರು ನಲವತ್ತೇ ಮಂದಿ; ಒಬ್ಬನ ಜಾಗ ತೆರವಾಗುವವರೆಗೂ ಚುನಾವಣೆಯಿಲ್ಲ. ಕಟ್ಟುಗ್ರ ಮಡಿವಂತಿಕೆ ಅದರ ಮುಖ್ಯ ಲಕ್ಷಣ. ೧೬೩೪ ರಂದು ಹುಟ್ಟಿಬಂದ ಆ ಉತ್ತಮ ಸಂಸ್ಥೆಯ ಬಿಗಿದರ್ಪ ಎಷ್ಟೆಂದರೆ ೧೯೩೩ರಲ್ಲೂ ತನ್ನ ಪರಿಷ್ಕೃತ ನಿಘಂಟುವಿನಲ್ಲಿ ಯೂರೋಪಿನ ಸಮಸ್ತ ರಾಷ್ಟ್ರಗಳೂ ಒಪ್ಪಿಕೊಂಡು ಬಳಸುತ್ತಿರುವ "ಕ್ಲಾಸಿಸಿಸ್ಮ್" (.., ಶಿಷ್ಟತೆ) ಎಂಬ ಪದವನ್ನು "ನವೀನತೆ" (..)ಯೆಂದು ನಿರ್ಣಯಿಸಿ ಹೊರದೂಡಿದೆ! ಅಂಥ ಕಠೋರ ನೇಮ ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಇದ್ದಂತೆ ತೋರುವುದಿಲ್ಲ. ಇದ್ದಿದ್ದರೂ ಅದರ ಆಶಯ ಬರಿ ಪುಸ್ತಕದ ಬದನೆಯಕಾಯಿಯೇ ಆಗಿ ಮೂಲೆಹಿಡಿಯಬೇಕಾಗುತ್ತಿತ್ತು; ಏತಕ್ಕೆಂದರೆ ಕನ್ನಡ ಸಾಹಿತ್ಯದ ಹೊಸ ಹುಟ್ಟು (..) ಸುಮಾರು ೧೯೨೦ರಿಂದಲೇ ತಲೆಯೆತ್ತಿತ್ತಲ್ಲವೆ? ಪರಿಷತ್ತಿನ ಮೂಲ ಧ್ಯೇಯಗಳಲ್ಲಿ ಒಂದಾದ "ಕನ್ನಡತನದ ಪ್ರಚಾರ"ದತ್ತ ನಿಮ್ಮ ಗಮನ ಸೆಳೆಯುವುದು ನನ್ನ ಕರ್ತವ್ಯ. ಮೊದಮೊದಲು ಪರಿಷತ್ತಿನ ಕಾರ್ಯಕ್ಷೇತ್ರ ಸಂಕುಚಿತವಾಗಿದ್ದರೂ ಅದರ ಒಂದು ಸಾಧನೆ ಮಹತ್ತರವಾದದ್ದೆ: ಅದೇನೆಂದರೆ "ಸಾಕ್ಷರರನ್ನು ರಾಕ್ಷಸರನ್ನಾಗಿಸಿದುದು"! ವಾಕ್ಯದ ವ್ಯಂಗ್ಯಾರ್ಥವನ್ನು ಪಂಡಿತವರ್ಯರಿಂದ ನಾನು ಕಲಿತೆ: ಸಾಕ್ಷರರು=ಪರಭಾಷೆಗಳಲ್ಲಿ ಪರಿಶ್ರಮ ಹೊಂದಿದವರು; ರಾಕ್ಷಸರು=ಅನ್ಯಭಾಷೆಗಳ ವ್ಯಾಮೋಹಾತಿರೇಕವನ್ನು ಕಿತ್ತೊಗೆದ ಪ್ರಚಂಡರು ಅಥವಾ ದೈತ್ಯರು!

ಪರಿಷತ್ತಿಗೆ ಬಿ.ಎಂ.ಶ್ರೀ. ಅವರ ಸೇವೆ

ಸುಮಾರು ೧೯೩೪ ರಿಂದ ಕನ್ನಡದ ಬಗೆಗೆ ಆವೇಶವೂ ಎಂಬಂಥ ಉಲ್ಲಾಸೋತ್ಸಾಹ ಹೆಚ್ಚು ಹೆಚ್ಚು ಜನರಲ್ಲೂ ಹೆಚ್ಚು ಹೆಚ್ಚು ಊರುಗಳಲ್ಲೂ ಮೂಡಲಾರಂಭಿಸಿತು. ಆ ಉತ್ಸಾಹ ಸುಭದ್ರವಾದ ನಾಲೆಗಳ ಮೂಲಕ ಪ್ರಯೋಜನಕರವಾಗಿ ಹರಿಯುವುದಕ್ಕೆ ಮಾರ್ಗದರ್ಶನವಾಗಲೆಂದು ಪರಿಷತ್ತು ತನ್ನ ಸ್ವಂತ ಮಂದಿರದಲ್ಲಿ ಗ್ರಂಥ ಪ್ರದರ್ಶನ, ಸಾಹಿತ್ಯೋತ್ಸವ, ಉಪನ್ಯಾಸಮಾಲೆ, ಕಾವ್ಯವಾಚನ, ಮಹಿಳೆಯರ ಗೋಷ್ಠಿಗಳನ್ನು ಅಚ್ಚುಕಟ್ಟಾಗಿ ನಡೆಯಿಸಿತು. ಆಗ ದಿವಂಗತ ಡಿ.ವಿ. ಗುಂಡಪ್ಪನವರು ಉಪಾಧ್ಯಕ್ಷರಾಗಿದ್ದರು. ಅವರ ತರುವಾಯ ಆಡಳಿತ ಸೂತ್ರಗಳನ್ನು ಕೈಗೆ ತೆಗೆದುಕೊಂಡ ದಿವಂಗತ ಬಿ.ಎಂ. ಶ್ರೀಕಂಠಯ್ಯನವರು ಪರಿಷತ್ತಿನ ನಿಯತ ಕಾರ್ಯಕ್ರಮಕ್ಕೆ ಹೊಸ ಅಂಶಗಳನ್ನು ಸೇರಿಸಿದರು: ವ್ಯಾಸಂಗ ಗೋಷ್ಠಿ, ಸಾಹಿತ್ಯ ಪರೀಕ್ಷೆ, ಸಂಶೋಧನೆ, ನಾಟಕಾಭಿನಯ, ಬಾಲಕ ಬಾಲಕಿಯರ ಸ್ಪರ್ಧೆ, ಸಂತೋಷ ಭೋಜನ–ಇತ್ಯಾದಿ. "ಶ್ರೀ"ಯವರು ತಮ್ಮ ಪ್ರಾಧ್ಯಾಪಕ ಅವಧಿ ಇನ್ನೂ ಒಂದು ವರ್ಷ ಅಧಿಕವಾದ್ದರಿಂದ ಸಂಬಳದ ಅರ್ಧಭಾಗವನ್ನು, ಎಂದರೆ ೬೦೦೦ ರೂಪಾಯನ್ನು ಪರಿಷತ್ತಿಗೆ ದಾನಮಾಡಿ ಅಚ್ಚುಕೂಟವನ್ನು ಒದಗಿಸಿಕೊಟ್ಟರು. ಅವರ ಇನ್ನೊಂದು ವಿಶಿಷ್ಟ ಕೊಡುಗೆ : "ಕನ್ನಡ ಬಾವುಟ". ಅದು ಪ್ರಕಟವಾಗುವುದಕ್ಕೆ ಮುನ್ನ ಜರುಗಿದ ನಾಟಕೀಯ ಪ್ರಸಂಗ ಪ್ರಾಯಶಃ ಅನೇಕರಿಗೆ ಗೊತ್ತಿಲ್ಲ. ನವರಾತ್ರಿಯ ಸಮಯ; ಕಾರ್ಯಕಾರಿ ಸಮಿತಿ ಕೂಡಿದ್ದಾಗ ಇದ್ದಕ್ಕಿದ್ದಂತೆ "ಶ್ರೀ"ಯವರು "ನಮ್ಮ ಕನ್ನಡ ಬಾವುಟವನ್ನು ಹಾರಿಸೋಣ!" ಎಂದರು. ಸಮಿತಿಯ ಸದಸ್ಯರಿಗೆ ಭೀತಿ ಉಂಟಾಯ್ತು; ಏತಕ್ಕೆಂದರೆ ಆಗ ಕೆಂಪಾಂಬುಧಿ

ಕೆರೆಯ ಅಂಗಳದಲ್ಲಿ "ಕಾಂಗ್ರೆಸ್ ಧ್ವಜ"ವನ್ನು ಹಾರಿಸಲು ಸ್ವಾತಂತ್ರ್ಯ ಹೋರಾಟದವರು ಪ್ರಯತ್ನಿಸಿದಾಗ ಗಲಭೆ, ಲಾಟಿ ಪ್ರಯೋಗ, ೧೪೪ನೇ ವಿಧಿಯ ಜಾರಿ ಆಗಿ ವಾತಾವರಣ ಕದಡಿಹೋಗಿತ್ತು. ಆದರೆ ಸಮಿತಿಯ ಸದಸ್ಯರಾರೂ ಮಾತನಾಡಲಿಲ್ಲ. ನಾನು ಎದೆಗಾರಿಕೆಯಿಂದ-ಎಂದರೆ ಕಾರ್ಯದರ್ಶಿ ಆಗಿದ್ದುದರಿಂದ "ಈಗ ಆ ಪ್ರಯತ್ನ ಬೇಡಿ, ಸ್ವಾಮಿ; ಮುಂದೊಂದು ದಿವಸ ಪರಿಸ್ಥಿತಿ ಶಾಂತವಾದಾಗ ಏರಿಸೋಣ" ಎಂದು ಪ್ರತಿಭಟಿಸಿದೆ. ಆಮೇಲಾದ ಚರ್ಚೆಯಲ್ಲಿ ಸದಸ್ಯರೆಲ್ಲ ನನ್ನನ್ನು ಅನುಮೋದಿಸಿದರು; ನನ್ನ ಗುರುಗಳು ತಮ್ಮ ಪ್ರಬಲೇಚ್ಛೆಯನ್ನು ಒಳಕ್ಕೇ ಅದುಮಬೇಕಾಯ್ತು. ಕವಿಶ್ರೇಷ್ಠರಾದ್ದರಿಂದ ಬೇರೊಂದು ಸ್ಫೂರ್ತಿ ಅವರ ಚಿತ್ತದಲ್ಲಿ ಮಿಂಚಿತು. ೧೫೦೦ ಸಂವತ್ಸರಗಳ ಕನ್ನಡ ಕಾವ್ಯ 'ಬೆಳೆ'ಯಲ್ಲಿ ಉತ್ಕೃಷ್ಟ 'ತೆನೆ'ಗಳನ್ನು ಆರಿಸಿಕೊಂಡು ಸಂಪಾದಿಸಿ ಏತಕ್ಕೆ ಪ್ರಕಟಿಸಬಾರದು? ಅಗತ್ಯವಾಗಿ ಆ ಕೆಲಸ ಮಾಡೋಣ ಎಂಬ ಸಮ್ಮತಿ ನೀಡಿದವರಲ್ಲಿ ಬಹುಶಃ ನಾನೇ ಮೊದಲಿಗ! ಸಮಿತಿಯ ಕಾರ್ಯಕಲಾಪ ಮುಗಿದು ನಾವಿಬ್ಬರೇ ಇದ್ದಾಗ "ಶ್ರೀ"ಯವರು ಮಾಡಿದ ಚಿಕ್ಕ ಗುಣಕಥನ ಇನ್ನೂ ನೆನಪಿನಿಂದ ಅಳಿಸಿಹೋಗಿಲ್ಲ; ಏನಪ್ಪಾ, ನೀವು ಬಹಳ ಹಠ ಹಿಡಿಯುತ್ತೀರಿ". ಇನ್ನೊಂದು ನೋವು-ನಲಿವಿನ ಪ್ರಕರಣ. ನಿಯಾನ್ ವಿದ್ಯುದ್ದೀಪ ಆಗತಾನೆ ಪ್ರಸಾರಗೊಳ್ಳುತ್ತಿತ್ತು. ಅದರಿಂದ ಕಟ್ಟಡವನ್ನು ಅಲಂಕರಿಸುವ ಅಭಿಲಾಷೆ "ಶ್ರೀ"ಯವರಲ್ಲಿ ಎದ್ದುಬಂತು. "ಕರ್ನಾಟಕ ಸಾಹಿತ್ಯ ಪರಿಷತ್ತು" ಎಂದು ಕೂಗುವ ತಿಳಿಹಸಿರು ದೀಪನಾಮ ಭವನದ ಫಾಲದಿಂದ ಜಾಜ್ವಲಿಸತೊಡಗಿತು; ಅನೇಕರಿಗೆ ಸಂತಸ ಉಂಟಾಯ್ತು. ೧೯೧೮ ರಿಂದ ೧೯೩೦ರ ವರೆಗೆ ಕಾರ್ಯದರ್ಶಿ ಅಥವಾ ಕೋಶಾಧಿಕಾರಿಯಾಗಿ ಪರಿಷತ್ತಿನ ಭಾರವನ್ನು ಹೊತ್ತು ನಿವೃತ್ತರಾಗಿ, ಇಂಗ್ಲಿಷು ನಿಘಂಟುವನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಸಮಿತಿಗೆ ಮುಖ್ಯಸ್ಥರಾಗಿ ಪರಿಷನ್ಮಂದಿರ ಒಂದು ಕೋಣೆಯಲ್ಲೇ 'ಕಛೇರಿ' ಕೆಲಸವನ್ನು ಕೈಗೊಂಡಿದ್ದ ಅತಿ ಶಿಸ್ತಿನ ಬೆಳ್ಳಾವೆ ವೆಂಕಟನಾರಣಪ್ಪನವರಿಗಾದರೂ ಆಗ್ರಹ ಉಲ್ಬಣವಾಯ್ತು: "ಕರ್ಣಾಟಕ" ಎಂಬುದಾಗಿ ರೂಪಾಂತರಗೊಳಿಸಿದ್ದೇತಕ್ಕೆ? ಮಾರ್ಪಾಟನ್ನು ಸಕಲ ಸದಸ್ಯರ ಅಧಿವೇಶನದಲ್ಲಿ ಚರ್ಚೆಗೆ ತಂದು ಒಪ್ಪಿಗೆ ಪಡೆಯಲಾಯ್ತೆ? ಎನ್ನುತ್ತ ಬಲವಾದ ವಿರೋಧ ಹೂಡಿದರು. ಅದು ಸರಿ ಇದು ಸರಿ ಎನ್ನುವ ಪಕ್ಷಗಳು ಜನಿಸಿದುವು, ತೀವ್ರ ವಿವಾದವೂ ಹಗರಣವೂ ಸೌಹಾರ್ದವನ್ನು ಕಲಕಿಬಿಟ್ಟುವು. ಅಧ್ಯಕ್ಷರಾಗಿದ್ದ ಯುವರಾಜರ ವರೆಗೂ ದೂರು ತಟ್ಟಿತು. ಕೊನೆಗೆ ಎರಡನ್ನೂ ಬಿಟ್ಟುಕೊಟ್ಟು "ಕನ್ನಡ ಸಾಹಿತ್ಯ ಪರಿಷತ್ತು" ಎಂಬ ಮುದ್ದಾದ ಹೆಸರನ್ನು ಇರಿಸಿಕೊಳ್ಳಲು ಸರ್ವಾನುಮತದಿಂದ ತೀರ್ಮಾನವಾಯ್ತು. ಹದಿರು ಮಾತಿನ ಪ್ರೇಮಿಗಳು 'ನೋಣ'ದ ವ್ಯಾಜ್ಯ ಫೈಸಲಾಯ್ತು!" ಎನ್ನುತ್ತ ಗಹಗಹಿಸಿದರು! ಅಂತ ಅನಿರೀಕ್ಷಿತ ಘಟನೆಗಳಿಂದ ತಮಗೆ ಎಷ್ಟು ಯಾತನೆ ಉಂಟಾದರೂ ಅದನ್ನು ಈಶದಪಿ ತೋರಗೊಡದೆ "ಶ್ರೀ"ಯವರು ಕನ್ನಡ ಮಮತೆಯನ್ನು ಬೇರೂರಿಸುವ ಕೈಂಕರ್ಯದಲ್ಲಿ ದಣಿವಿಲ್ಲದೆ ದುಡಿಯುತ್ತಿದ್ದರು. ಕನ್ನಡ ನಾಡಿನ ಭೂಪಟವನ್ನು ಬಿಳಿಯ ಕರವಸ್ತ್ರದ ಮೇಲೆ ಕಸೂತಿ ಹಾಕಿಸಿಕೊಂಡು ಎಲ್ಲ ಕಡೆಯಲ್ಲೂ ಶ್ರೋತೃಗಳಿಗೆ ಪ್ರದರ್ಶಿಸುವುದು ಅವರ ವಾಡಿಕೆ. ನಾವು ಕೆಲವರು ಅವರನ್ನು ಅನುಸರಿಸಿದೆವು. ನನ್ನ ಧರ್ಮಪತ್ನಿ ರೇಸಿಮೆ ಕರವಸ್ತ್ರದ ಮೇಲೆ ಕಸೂತಿ ಹಾಕಿರುವ ಭೂಪಟ ನನ್ನ ಬಳಿ ಈಗಲೂ ಇದೆ. "ಕನ್ನಡ ನುಡಿ" ವಾರಪತ್ರಿಕೆಯಾಗಿ ಆರಂಭವಾದದ್ದು "ಶ್ರೀ"ಯವರ ಸಂಕಲ್ಪದಿಂದಲೇ, ಆ ಚಾರಿತ್ರಿಕ ಬಾವುಟ ಪ್ರಸಂಗದ ಸಮಿತಿ ಸಭೆಯಲ್ಲಿಯೇ!

ಪರಿಷತ್ತಿನ ಸದಸ್ಯರು

೧೯೩೭ರಲ್ಲಿ ಪರಿಷತ್ತಿನ ಸದಸ್ಯರ ಸಂಖ್ಯೆ ೪೩೨: 'ಆಜೀವ' ೧೩೧, 'ಸಾಮಾನ್ಯ' ೩೦೨; ಆದಾಯ ರೂ.೪೫೪೭, ವೆಚ್ಚ ೪೯೦೦! ಪರಿಷತ್ತು ಜನ್ಮ ತಾಳಿದಂದು ಸದಸ್ಯರ ಸಂಖ್ಯೆ ೧೩೭, ವರಮಾನವಾಗಿ ಸರಕಾರದ ಮಾಸಾಶನ ೧೩೦. ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಉದ್ಯಮವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ವ್ರತವನ್ನಾಗಿ ತಮ್ಮ ಉಪಾಧ್ಯಕ್ಷತೆಯಲ್ಲಿ ಆಚರಿಸಿದರು. ಆದರೂ ಲಭಿಸಿದ್ದು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ಯಾರನ್ನು ಸಂಧಿಸಿದರೂ ಅವರು "ಹೇಗಿದ್ದೀರಿ?" ಎಂಬ ಕುಶಲ ಪ್ರಶ್ನೆಗೆ ಬದಲಾಗಿ, "ನೀವು ಪರಿಷತ್ತಿಗೆ ಸದಸ್ಯರಾಗಿದ್ದೀರಾ?" "ಆಗಿದ್ದರೆ ಈಗಲೇ ಆಜೀವ ಸದಸ್ಯರಾಗಿ" ಎಂದು ಕೇಳುತ್ತಿದ್ದರು. ಆದರೇನು? ೧೯೫೭ರಲ್ಲಿ ಸದಸ್ಯರ ಸಂಖ್ಯೆ ೯೧೦, ೧೯೬೭ರಲ್ಲಿ ೮೭೩: ಅದೇತಕ್ಕೆ ಈ ಇಳಿತಾಯ, ಇಂಥ ಅನ್ಯಾಯ? ಪರಿಷತ್ತಿನ ಸದಸ್ಯತ್ವ ಕನ್ನಡತನದ ಒಂದು ಗುರುತಲ್ಲವೆ? ೧೯೭೫ರ ಹೊತ್ತಿಗೆ ೨೩೬೪ಕ್ಕೆ ಏರಿದ್ದು ಸಮಾಧಾನಕರ.

ಪರಿಷತ್ತಿನ ವರಮಾನದ ಹೆಚ್ಚಳ ವಿಧಾನ

ವರಮಾನ ೧೯೬೭ರಲ್ಲಿ ೭೫,೫೪೧ ರೂಪಾಯಿ ಇದ್ದದ್ದು ೧೯೭೫ರಲ್ಲಿ ೧೧,೦೭,೮೫೧ಕ್ಕೆ ಉಬ್ಬಿರುವುದು ನಿಜವಾಗಿ ಸಂತೋಷಕರ; ಆದರೆ ಕೃತಜ್ಞತೆ ಸಲ್ಲಬೇಕಾದದ್ದು ಮುಖ್ಯವಾಗಿ ನಮ್ಮ ಘನ ಸರ್ಕಾರಕ್ಕೆ! ಪರಿಷತ್ತು ವಹಿಸಿಕೊಂಡಿರುವ ಪಂಚವಾರ್ಷಿಕ ಯೋಜನೆಗೆ ಸುಮಾರು ೫೦ ಲಕ್ಷ ರೂಪಾಯಿನ ಅಂದಾಜಿದೆ. ಮುಕ್ತಹಸ್ತದ ದಾನಿಗಳಿಗೆ ಉತ್ಕೃಷ್ಟ

ಅವಕಾಶ. ವರಮಾನದ ವಿಚಾರವನ್ನು ಆಲೋಚಿಸುವಾಗ ಕೆಲವು ಸಂಗತಿ ಜ್ಞಾಪಕಕ್ಕೆ ಬರುತ್ತವೆ. ಪ್ರಾರಂಭದ ದಿವಸಗಳಲ್ಲಿ ಒಮ್ಮೆ ಐದು ರೂಪಾಯಿನ 'ಷೇರುಗಳ ಜಾಯಿಂಟ್‌ಸ್ಟಾಕ್ ಕಂಪೆನಿ'ಯನ್ನು ತೆರೆಯುವ ಯೋಜನೆ ಎದ್ದುಬಂದು ಬಲುಬೇಗ ಸದ್ದಿಲ್ಲದಂತಾಯ್ತು. ೧೯೨೩ ರಂದು ಬಿಜಾಪುರದಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷರಾದ ಶಿವಶಂಕರ ಶಾಸ್ತ್ರಿಗಳು "ನಮ್ಮ ಈ ಕನ್ನಡ ನಾಡಿಗರೆಲ್ಲರೂ ತಿಂಗಳಿಗೊಮ್ಮೆ ತಲೆಗೊಂದು ಕಾಸು ಕನ್ನಡಕ್ಕೆ ಎಂದು ಪ್ರತಿ ಕುಟುಂಬವೂ ದ್ರವ್ಯಸಹಾಯ" ನೀಡಿ ಪರಿಷತ್ತಿನ ಮೂಲಧನವನ್ನು ಬೆಳೆಸಬೇಕೆಂದು ಹೇಳಿ, ಕಂದಪದ್ಯದ ಮೂಲಕ ತಮ್ಮ ಅಭಿಪ್ರಾಯಕ್ಕೆ ಮೆರುಗುಕೊಟ್ಟರು:

"ಬಡಗನ್ನಡ ನುಡಿವೆಣ್ಣಂ
ಬಡತನದಿಂ ಬಿಡಿಸಿ ನಾಡೆ ಸಿರಿವೆಣ್ಣಂ ಮಾ।
ಳ್ಪೊಡೆ ಮನೆಮನೆಗಂ ನಾಡಿಗ
ರಿಡಲಕ್ಕುಂ ಮಾಸಮಾಸಕೆನಸುಂ ಪಣಮಂ ॥

ಹನಿಗೂಡಿದರೆ ಬರಿ ಹಳ್ಳವಲ್ಲ ವಿಶಾಲ ಸರೋವರ ಆಗುವುದು ನಿಸ್ಸಂದೇಹ. ಪ್ರಪಂಚದ ಸ್ಕೌಟುಗಳೆಲ್ಲ ತಲೆಗೆ ಒಂದಾಣೆಯಂತೆ ನಿಧಿ ಕೂಡಿಸಿ ೧೯೨೯ರಂದು ಸ್ಕೌಟು ಪದ್ಧತಿಯ ಜನಕನಾದ ಲಾರ್ಡ್ ಬೇಡನ್‌ಪೊವೆಲನಿಗೆ ರೋಲ್ಸ್‌ರಾಯ್ಸ್ ಕಾರು ಮತ್ತು ಕ್ಯಾರವಾನ್, ಪ್ರಖ್ಯಾತ ಚಿತ್ರಕಲಾವಿದ ಜೀಗರ್ ನಿರ್ಮಿಸಿದ ತೈಲ ಭಾವಚಿತ್ರಗಳನ್ನು ಮುಖ್ಯ ಕಾಣಿಕೆಯಾಗಿ ಅರ್ಪಿಸಿದರು! ಈಚಿನ ಆರೇಳು ವರ್ಷಗಳಲ್ಲಿ ನಮ್ಮ ಪರಿಷತ್ತು ಪುಷ್ಟಿಗೊಳ್ಳುತ್ತ ಆಕರ್ಷಕ ಲವಲವಿಕೆಯನ್ನು ಮೆರೆಯಿಸುತ್ತಿದೆ; ಅಧ್ಯಕ್ಷ ಜಿ. ನಾರಾಯಣ ಅವರನ್ನು ಕುರಿತು ೧೯೭೦ರಲ್ಲಿ ಪ್ರೊ. ದೇ. ಜವರೇಗೌಡರು ಆಡಿದ ಮಾತುಗಳನ್ನು ತಮ್ಮ ಅವಗಾಹನೆಗೆ ತರುತ್ತೇನೆ: "ಶ್ರೀ ನಾರಾಯಣ ಅವರು ಬರಿಯ ಭಾವುಕರಲ್ಲ, ಕನಸುಗಾರರಲ್ಲ, ವಾಸ್ತವವಾದಿಗಳು ಕ್ರಿಯಾಶೀಲರು ಎಂಬುದನ್ನು ನಾ ಬಲ್ಲೆ. ಬಹು ಶೀಘ್ರವಾಗಿ ಅವರ ಯೋಜನೆಗಳೆಲ್ಲ ಕಾರ್ಯರೂಪಕ್ಕಿಳಿಯಲಿ, ಅವರ ಕಾಲದಲ್ಲಿ ಪರಿಷತ್ತಿನ ಕೀರ್ತಿ ದಿಗ್ದಿಗಂತ ವ್ಯಾಪಿಯಾಗಲಿ ಎಂದು ಹಾರೈಸುತ್ತೇನೆ". ನಮ್ರನಾದ ನನ್ನದೂ ಅದೇ ಹಾರೈಕೆ.

ಪರಿಷತ್ತಿನ ಕರ್ತವ್ಯ

ಪರಿಷತ್ತು ಇಂದು ಜಿಲ್ಲಾ ಅಂಗ ಸಂಸ್ಥೆಗಳ ಮೂಲಕವೂ ತಾನೇ ಖುದ್ದಾಗಿಯೂ ಮಹೋತ್ಸವಗಳನ್ನು ಏರ್ಪಡಿಸಿ ವಿದ್ಯಾವಂತರಿಗೂ ಇತರರಿಗೂ ಮಧ್ಯೆ ಇರುವ ಮತ್ತು ಇರಬಹುದಾದ ತೆರೆಗಳನ್ನೂ ಭಯಗಳನ್ನೂ ತೆಗೆದು ಹಾಕುತ್ತಿದೆ, ಅಥವಾ ತೆಗೆದುಹಾಕಲು ಹವಣಿಸುತ್ತಿದೆ. ಅದು ಅತ್ಯಗತ್ಯವಾದ ಸಂಘಟನಾಕಾರ್ಯವೆಂದೇ ನನ್ನ ಅಭಿಮತ. ಸುಮಾರು ಇಪ್ಪತ್ತು ಸಂವತ್ಸರದ ಹಿಂದೆ ಮಹನೀಯರೊಬ್ಬರು "ಕರತಾಡನದ ಆಸೆ, ಅದಕ್ಕೆ ಬೇಕಾದ ಆಡಂಬರ-ಇದನ್ನೆಲ್ಲ ಪರಿಷತ್ತು ಬಿಟ್ಟುಕೊಡಬೇಕು ... ಪರಿಷತ್ತಿನ ಕೆಲಸ ನೂರು ಕಾಲ ಬಾಳುವಂಥದ್ದಾಗಿರಬೇಕು ಎಂದರಂತೆ. ನಾನಾದರೊ ಪರಿಷತ್ತು ಈಗ ಹಿಡಿದು ನೆರವೇರಿಸುತ್ತಿರುವ ಕಾರ್ಯಕ್ರಮಗಳಲ್ಲಿ ಒಂದನ್ನೂ ಬಿಟ್ಟುಕೊಡದೆ, ಸಮಯ ಸಂದರ್ಭಕ್ಕೆ ಅನುಗುಣವಾಗಿ ಹೊಸವನ್ನೂ ಸೇರಿಸಿಕೊಳ್ಳುತ್ತ ಮುಂದೆ ಸಾಗಲಿ, ಪ್ರತಿಷ್ಠಾವಂತ ಆತ್ಮತೇಜಸ್ಸಿನ ಪೂರ್ಣ ಕನ್ನಡಿಗತ್ವ ಕನ್ನಡಿಗರೆಲ್ಲರಿಗೂ ಮೈಗೂಡುವತನಕ ಎಂದು ಸಾರುತ್ತೇನೆ. ಪ್ರಚಾರ, ರಾಗೋತ್ಕರ್ಷ, ನಿಶಾನಿಯ ಮೆರವಣಿಗೆ, ಜೈಕಾರ-ಯಾವುದೂ ಬೇಡ ಎನ್ನಲಾಗದು; ಕನ್ನಡ ಗೆಲ್ಲುತ್ತಿದೆ, ಇನ್ನೂ ಪೂರ್ತಿ ಗೆದ್ದಿಲ್ಲ!

ತ್ರೈವಾರ್ಷಿಕ ಯೋಜನೆ

ಹೊಸಹುಟ್ಟಿನ ಬಲಿಷ್ಠ ಪ್ರಚೋದನೆಯಿಂದ ಪರಿಷತ್ತು ೧೯೭೦ರಂದು ತ್ರೈವಾರ್ಷಿಕ ಯೋಜನೆಯನ್ನು ತಯಾರಿಸಿಕೊಂಡು ಅದರ ಬಹು ಅಂಶಗಳನ್ನು ೧೯೭೩ರ ಅಂತ್ಯದೊಳಗೆ ಕಾರ್ಯರೂಪಕ್ಕೆ ತಂದಿತು. ೧೯೭೪ರ ಜನವರಿಯಿಂದ ೨೭ ಅಂಶಗಳ "ಪಂಚವಾರ್ಷಿಕ" ಯೋಜನೆ ಜಾರಿಗೆ ಬಂದಿದೆ. ಅದರ ವಿವರಗಳನ್ನು ಪರಿಶೀಲಿಸಿದಾಗ, ಕನ್ನಡ ನಾಡು ನುಡಿ ಸಂಸ್ಕೃತಿಗಳ ಸುಧಾರಣೆಗೂ ಪುರೋಭಿವೃದ್ಧಿಗೂ ಆಸರೆಯಾಗಬಲ್ಲ ಮತ್ತಾವ ಕಾರ್ಯಕ್ರಮವುಂಟು ಎಂಬ ಪ್ರಶ್ನೆಗೆ ಯಾವುದೂ ಇಲ್ಲ ಎಂದೇ ನನ್ನ ಬುದ್ಧಿಗೆ ತೋರುತ್ತದೆ. ಮೇಧಾವಿಗಳ ಮತಿಗೆ ಇದೆ ಎಂದು ಕಂಡುಬಂದಲ್ಲಿ ಅದನ್ನು ಗಮನಕ್ಕೆ ತಂದುಕೊಳ್ಳುವುದರಲ್ಲಿ ಪರಿಷತ್ತು ಆಸಕ್ತಿ ವಹಿಸಿಯೇ ವಹಿಸುತ್ತದೆ ಎಂಬುದು ಖಂಡಿತ. ಯೋಜನೆ ೧೯೭೮ ಮುಗಿಯುವ ಮುನ್ನ ಸಂಪೂರ್ಣವಾಗಿ ಕಾರ್ಯಗತವಾಗಲಿ ಎಂದು ನಿರೀಕ್ಷಿಸೋಣ, ದುಡಿಯೋಣ.

ಅಧ್ಯಕ್ಷರು ಮುದುಕರಲ್ಲ


ದಿವಂಗತ ಡಿ.ವಿ. ಗುಂಡಪ್ಪನವರು ೧೯೩೨ರಂದೇ "ಈ ಅಧ್ಯಕ್ಷ ಪದವಿಯ ಕರ್ತವ್ಯಭಾರಗಳಲ್ಲಿ ಹೆಚ್ಚಿನದು ಉಪನ್ಯಾಸ ರಚನೆಯದು" ಎಂದು ಗಂಭೀರವಾಕ್ಯ ಘೋಷಿಸಿದರು.ಅದು ಎಷ್ಟೊಂದು ಭಾರ ಎಂಬುದನ್ನು ನಿಷ್ಕರ್ಷಿಸುವುದಕ್ಕೆ ನನ್ನ

ಬಳಿ ತೂಕದ ಬಟ್ಟುಗಳೇ ಇಲ್ಲ. ನಾನು ಪ್ರಸ್ತಾಪಿಸಬೇಕೆಂದು ನಾನೂ ಮಹಾಜನರೂ ನಿರೀಕ್ಷಿಸಿದ್ದರಲ್ಲಿ ಕಿಂಚಿತ್ತು ಪಾಲಾದರೂ ವಿವರಣೆಗೊಂಡಿದ್ದರೆ ನಾನು ಧನ್ಯ. ದಿವಂಗತ ಪಂಜೆ ಮಂಗೇಶರಾಯರು ೧೯೩೪ರಲ್ಲಿ "ವಯಸ್ಸಾದವರಿಗೆ ಪಟ್ಟ ಕಟ್ಟಬಾರದು" ಎಂಬ ಸ್ವಾರಸ್ಯೋಕ್ತಿಯ ಮಂತ್ರವನ್ನು ಉಚ್ಚರಿಸಿದರು. ನನ್ನ ಬಗೆಗೆ ಒಂದು ಅಂಶವನ್ನು ಬಿನ್ನಯಿಸಲು ನಿಮ್ಮ ಅಪ್ಪಣೆ ಬೇಡುತ್ತೇನೆ. "ವಯಸ್ಸಾದವರು" ಎಂದರೆ "ಮುದುಕರು" ಎಂದು ಅರ್ಥ ಮಾಡಿದರೆ, ನನಗೆ ವಯಸ್ಸಾಗಿದ್ದರೂ "ಮುದುಕ"ನಲ್ಲ ಎಂದು ಧೈರ್ಯವಾಗಿ ಹೇಳಬಲ್ಲೆ.

❖❖

೫೦ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಜಿ.ಪಿ. ರಾಜರತ್ನಂ



ಕನ್ನಡದಲ್ಲಿ ರತ್ನನ ಪದಗಳಿಂದ ಜನಪ್ರಿಯರಾಗಿದ್ದ ಮಕ್ಕಳ ಸಾಹಿತ್ಯದಿಂದ ಹೆಸರುಗಳಿಸಿರುವ ಜಿ.ಪಿ.ರಾಜರತ್ನಂ ಅವರು ಮೈಸೂರಿನಲ್ಲಿ ಜೆ.ಪಿ. ಗೋಪಾಲಕೃಷ್ಣಯ್ಯಂಗಾರ್ ಅವರ ಪುತ್ರರಾಗಿ ೮-೧೨-೧೯೦೮ರಲ್ಲಿ ಬೆಂಗಳೂರು ಜಿಲ್ಲೆಯ ರಾಮನಗರದಲ್ಲಿ (ಕ್ಲೋಸ್‌ಪೇಟೆ) ಜನಿಸಿದರು.

ರಾಜರತ್ನಂ ಮೈಸೂರಿನಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿ, ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ., ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಂ.ಎ. ಗಳಿಸಿದರು. ಅನಂತರ ಮೈಸೂರು, ತುಮಕೂರು, ಶಿವಮೊಗ್ಗ, ಬೆಂಗಳೂರು ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ೧೯೬೪ರಲ್ಲಿ ನಿವೃತ್ತರಾದ ಮೇಲೆ ಯುಜಿಸಿ ಉಪಾಧ್ಯಾಯರಾಗಿ ಕೆಲವು ಕಾಲ ಸೇವೆ ಸಲ್ಲಿಸಿದರು.

ಕವಿ, ನಾಟಕಕಾರ, ಮಕ್ಕಳ ಸಾಹಿತ್ಯರಚಕರಾಗಿ ಕನ್ನಡ ಸಾಹಿತ್ಯದ ಪರಿಚಾರಿಕೆ ಮಾಡಿದ ಜಿ.ಪಿ.ರಾಜರತ್ನಂ ಅವರು ರಚಿಸಿದ ರತ್ನನ ಪದಗಳು, ಬುದ್ಧವಚನ ಪರಿಚಯ ಕೃತಿಗಳಿಗೆ ದೇವರಾಜ ಬಹಾದ್ದೂರ್ ಪ್ರಶಸ್ತಿ ದೊರಕಿತು. ೧೯೬೯ರಲ್ಲಿ ರಾಜ್ಯಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಯನ್ನು ನೀಡಿದೆ. ೧೯೭೦ರಲ್ಲಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿತು. ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಿಲಿಟ್ ಪದವಿ ನೀಡಿತು. ೧೯೭೮ರಲ್ಲಿ ದೆಹಲಿಯಲ್ಲಿ ನಡೆದ ೫೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಗೌರವ ಇವರಿಗೆ ಲಭ್ಯವಾಯಿತು.

ಪರಿಷತ್ತಿನ ನಿಕಟವರ್ತಿಗಳಾದ ರಾಜರತ್ನಂ ಅವರು ಪರಿಷತ್ತಿನ ಗೌರವ ಕೋಶಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘವನ್ನು ಪುನಶ್ಚೇತನಗೊಳಿಸಿದರು. ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿ (೧೯೩೮), ರಬಕವಿಯಲ್ಲಿ ನಡೆದ ೨೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿ(೧೯೪೪), ಕಾರ್ಕಳದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲೆ ಸಾಹಿತ್ಯ ಸಮ್ಮೇಳನ(೧೯೭೨), ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಮಕ್ಕಳ ಗೋಷ್ಠಿ(೧೯೭೯), ಮೊದಲಾದ ಗೋಷ್ಠಿಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಜಿ.ಪಿ. ರಾಜರತ್ನಂ ಅವರು ಮಕ್ಕಳಿಗಾಗಿ ಚಿಕ್ಕ ಹೊತ್ತಿಗೆಗಳನ್ನು ದೊಡ್ಡವರಿಗಾಗಿ ದೊಡ್ಡ ಹೊತ್ತಿಗೆಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ಬುದ್ಧ ಸಾಹಿತ್ಯ ಜೈನ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಚೀನಾದೇಶದ ಬೌದ್ಧಯಾತ್ರಿಕರು ಮೊದಲಾದ ೨೦ ಬೌದ್ಧ ಸಾಹಿತ್ಯ ಕೃತಿಗಳು, ರತ್ನನ ಪದಗಳು, ಶಾಂತಿ, ನಾಗನ ಪದಗಳು, ಪುರುಷ ಸರಸ್ವತಿ(ಕಾವ್ಯ) ಗಂಡುಗೊಡಲಿ(ನಾಟಕ) ಹೊಸಗನ್ನಡ ಯಶೋಧರ ಚರಿತ್ರೆ ಕೈಗನ್ನಡಿ, ಶ್ರೀಕವಿಪಂಪ, ತುತ್ತೂರಿ ಚುಟುಕ ಕಡಲೇಪುರಿ, ಗುಲಗಂಜಿ ಇತ್ಯಾದಿ ಮಕ್ಕಳ ಸಾಹಿತ್ಯ. ಜೈನಸಾಹಿತ್ಯಕ್ಕೆ ಸಂಬಂಧಿಸಿದ ಶ್ರೀ ಗೊಮ್ಮಟೇಶ್ವರ ಭಗವಾನ್ ಮಹಾವೀರ, ಅಲ್ಲದೆ ವಿಚಾರರಶ್ಮಿ, ನಿರ್ಭಯಾಗ್ರಫಿ ಇತ್ಯಾದಿ ಇವರ ವಿಮರ್ಶಾ ಕೃತಿಗಳು.

ಜಿ.ಪಿ.ರಾಜರತ್ನಂ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದಿಂದ ಹಿಂದಿರುಗಿದ ಒಂದೆರಡು ದಿನಗಳಲ್ಲೇ ಅಂದರೆ ದಿನಾಂಕ ೧೩-೩-೧೯೭೯ರಂದು ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫೦
ಅಧ್ಯಕ್ಷರು, ಜಿ.ಪಿ. ರಾಜರತ್ನಂ
ದಿನಾಂಕ ೨೩, ೨೪, ೨೫ ಏಪ್ರಿಲ್ ೧೯೭೮,
ಸ್ಥಳ : ನವದೆಹಲಿ
[ಟಿಪ್ಪಣಿ : ೧೯೭೭ರಲ್ಲಿ ಸಮ್ಮೇಳನ ನಡೆಯಲಿಲ್ಲ]

ಕನ್ನಡ ಸಾಹಿತ್ಯ ಪರಿಷತ್ತೂ ನಾನೂ

ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿಗೆ ನಾನು ಹೊರಗಿನವನಲ್ಲ. ೧೯೩೦ರಲ್ಲಿ ನಾನು ಮೊದಲನೇ ಎಂ.ಎ., ತರಗತಿಯಲ್ಲಿ ಓದುತ್ತಿದ್ದಾಗ ಪರಿಷತ್ತು ನಡೆಸಿದ ೧೬ನೇ ಸಾಹಿತ್ಯ ಸಮ್ಮೇಳನದಲ್ಲಿ ನನಗೂ ನಾಲ್ಕಾರು ರೀತಿಯ ಪರಿಚಾರಿಕೆಗಳನ್ನು ಮಾಡುವುದಕ್ಕೆ ಅವಕಾಶ ಲಭಿಸಿತ್ತು. ಅಂದಿನಿಂದ ಪರಿಷತ್ತಿಗೂ ನನಗೂ ಅವಿಚ್ಛಿನ್ನವಾದ ಅಂಟು, ಗಂಟು, ನಂಟು. ನಾನೂ ಹತ್ತಾರು ವರ್ಷ ಪರಿಷತ್ತಿನ ಒಳಗೆ ಇದ್ದು, ಅಲ್ಲಿ ನನ್ನ ಪಾಲಿಗೆ ಹಿರಿಯರು ವಹಿಸಿದ ಭಾರಗಳನ್ನು ನನ್ನ ಕೈಲಾದಷ್ಟು ನಿರ್ವಹಿಸಿದ್ದೇನೆ. ಮುಂದೆ ಇತರ ಕಾರ್ಯಗೌರವಗಳ ಒತ್ತಡದಿಂದ ಪರಿಷತ್ತಿಗೆ ಬಂದುಹೋಗಲು ನನಗೆ ಬಿಡುವು ಆಗದಿದ್ದರೂ ನಾನು ಇಂದಿನವರೆಗೂ ಪರಿಷತ್ತಿನೊಂದಿಗೇ ಇದ್ದೇನೆ. ನಮ್ಮ ನಾಡಿನ ಜನರ ಏಳಿಗೆಗಾಗಿ ಪರಿಷತ್ತು ಏನೇನು ಮಾಡುತ್ತಿದೆಯೋ ಅದಕ್ಕೆ ಪೂರಕವಾಗುವ ಹಾಗೆ ನಾನು ನನ್ನ ಕೈಲಾದಷ್ಟು ಪರಿಚಾರಿಕೆ ಮಾಡುತ್ತಿದ್ದೇನೆ. ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿಗೆ ೫೦ ವರ್ಷ ತುಂಬಿದಾಗ ನಾನು ಬರೆದು ಪ್ರಕಟಿಸಿದ 'ಕನ್ನಡ ಸೇತುವೆ' ಎಂಬ ಸಣ್ಣ ಹೊತ್ತಿಗೆಯಲ್ಲಿ ಪರಿಷತ್ತಿಗೂ ನನಗೂ ಬೆಸೆದು ಬಂದಿರುವ ಬಾಂಧವ್ಯವನ್ನು ಸೂಚಿಸಿದ್ದೇನೆ.

ಪರಿಷತ್ತಿನ ಗುರಿ

೬೪ ವರ್ಷಗಳ ಹಿಂದೆ ನಮ್ಮ ನಾಡಿನ ಹಿರಿಯರು ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದಾಗ ತಮ್ಮ ಮುಂದೆ ಎರಡು ಗುರಿಗಳನ್ನು ಇಟ್ಟುಕೊಂಡಿದ್ದರು: ೧. ಕನ್ನಡ ನುಡಿ ಬೆಳೆಯಬೇಕು, ಕನ್ನಡ ಸಾಹಿತ್ಯ ಬೆಳೆಯಬೇಕು, ಕನ್ನಡ ನಾಡು ಒಂದಾಗಬೇಕು, ಕನ್ನಡ ಜನ ಮುಂದುವರಿಯಬೇಕು; ೨. ಭಾರತವು ಸ್ವತಂತ್ರವಾಗಬೇಕು. ಭಾರತವು ಸ್ವತಂತ್ರವಾದ ಹೊರತು ಕರ್ನಾಟಕ ಏಕೀಕರಣ ಸಾಧ್ಯವಾಗದು ಎಂಬುದನ್ನು ಅಂದಿನ ಹಿರಿಯರು ತಿಳಿದಿದ್ದರು. ಆ ಸ್ವಾತಂತ್ರ್ಯ ಬರುವವರೆಗೂ ಏಕೀಕರಣದ ಪ್ರಯತ್ನಗಳನ್ನು ಮಾಡುತ್ತಲೇ ಇರಬೇಕೆಂದು, ಕನ್ನಡದ ಮೂಲಕವಾಗಿ ಎರಡನ್ನೂ ಏಕಕಾಲದಲ್ಲಿ ನಡೆಸಿಕೊಂಡು ಹೋದರು. ಅವರ ತಪಸ್ಸಿನ ಫಲವಾಗಿ, ಅವರಿಗೆ ವಿಧೇಯರಾಗಿ ನಡೆದವರ ಪ್ರಯತ್ನಗಳ ಪರಿಣಾಮವಾಗಿ, ೧೯೪೭ರಲ್ಲಿ ಭಾರತ ಸ್ವತಂತ್ರವಾಯಿತು, ಅದರ ತರುವಾಯ ಕರ್ನಾಟಕ ಒಂದಾಯಿತು. ಆದರೆ, ದೇಶ ಸ್ವತಂತ್ರವಾದ್ದರಿಂದ ದೇಶದ ಜನರಿಗೆ ಏನು ಬಂತು? ಕನ್ನಡ ನಾಡು ಒಂದಾದ್ದರಿಂದ ಕನ್ನಡಿಗರಿಗೆ ಏನು ಬಂತು? ಇದು ನಾನು ಕೇಳುತ್ತಿರುವ ಪ್ರಶ್ನೆಯಲ್ಲ. ದೇಶಕ್ಕೆ ದೇಶವೇ ನಾಡಿಗೆ ನಾಡೇ ಈ ಪ್ರಶ್ನೆಯನ್ನು ಕೇಳುತ್ತಿದೆ. ಇದಕ್ಕೆ ಉತ್ತರವನ್ನು, ಅದಕ್ಕೆ ಪರಿಹಾರವನ್ನು ಹುಡುಕಬೇಕಾದ್ದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಅದರಲ್ಲೂ ಮಾತಿನ ಶಕ್ತಿಯನ್ನು ಬಲ್ಲವನಾದ ಸಾಹಿತಿಯ ಹೊಣೆಗಾರಿಕೆ ಈ ಸಂದರ್ಭದಲ್ಲಿ ಮಿಕ್ಕವರಿಗಿಂತ ಹೆಚ್ಚಾಗಿರುತ್ತದೆ.

ಕರ್ತವ್ಯಪರರಾಗಿರಬೇಕು

ಒಳಗೆ ಅಡಿಗೆ ಮಾಡುವವರು ಹದಿನೈದು ಮಂದಿ. ಊಟಕ್ಕೆ ಕುಳಿತವರು ಸಾವಿರಾರು. ಬಡಿಸುವವರು ತಕ್ಕಷ್ಟು ಸಂಖ್ಯೆಯಲ್ಲಿ ಇಲ್ಲದೆ ಹೋದರೆ, ಮಾಡಿದ ಅಡುಗೆ ವ್ಯರ್ಥ, ಊಟಕ್ಕೆ ಕುಳಿತವರಿಗೆ ಅರೆಹೊಟ್ಟೆ.

ಕನ್ನಡ ಸಾಹಿತ್ಯ ಪರಿಷತ್ತನ್ನು ಆರಂಭ ಮಾಡಿದ ಕಾಲಕ್ಕೆ ನಮ್ಮ ಹಿರಿಯರು ಯಾವ ಎರಡು ಘನವಾದ ಉದ್ದೇಶಗಳನ್ನು ತಮ್ಮ ಮುಂದೆ ಇರಿಸಿಕೊಂಡು ತೊಡಗಿದರೋ ಅದು ಇನ್ನೂ ಸಮರ್ಪಕವಾಗಿ ಈಡೇರಿಲ್ಲ. ಅದು ನೆರವೇರುವವರೆಗೂ ನಾವು ಅಪ್ರಮತ್ತರಾಗಿ ಕರ್ತವ್ಯಪರರಾಗಿರಲೇಬೇಕು.

ಸಮ್ಮೇಳನದ ಚರ್ಚೆಗಳು


'ಶಬ್ದಪಾರಮಾರ್ಗಮಶಕ್ಯಂ' ಎಂದು ಕೇಶಿರಾಜ ಹೇಳಿದ ಹಾಗೆ, ಎಲ್ಲರೂ ಎಲ್ಲಾ ಭಾಷೆಗಳನ್ನೂ ಕಲಿಯಬೇಕಾದ್ದಿಲ್ಲ. ಕಲಿತ ಕೆಲವರು ಪುಣ್ಯವಂತರು ತಾವು ಕಲಿತದ್ದನ್ನು ನಮಗೆ ಕನ್ನಡದಲ್ಲಿ ತಂದು ತಿಳಿಸಿದರೆ ನಾವು ಧನ್ಯರು.

ಈ ಕೆಲಸ ಸಾವಿರ ವರ್ಷಗಳ ಉದ್ದಕ್ಕೂ ನಮ್ಮಲ್ಲಿ ನಡೆಯುತ್ತಲೇ ಇದೆ. ಆದರೆ ಎಷ್ಟು ಮುಂದುವರಿದಿದ್ದೇವೆಯೋ ಅಷ್ಟೇ ಊರ್ಧ್ವಮುಖಿಗಳಾಗುತ್ತಿದ್ದೇವೆಯೆ ಎಂಬುದು ವಿಚಾರ ಮಾಡಬೇಕಾದ ವಿಷಯ. ಅದಕ್ಕೋಸ್ಕರವಾಗಿಯೇ ಸಮ್ಮೇಳನದ ಮೂರು ದಿವಸಗಳಲ್ಲಿ ಬೇರೆ ಬೇರೆ ಗೋಷ್ಠಿಗಳು ಸೇರಿ ಚರ್ಚೆ ಮಾಡುವುದರಿಂದ ಅದನ್ನು ಕುರಿತು ಮಾತನಾಡಲು ನನಗೆ ಇದು ಸ್ಥಳವೂ ಅಲ್ಲ, ನನಗೆ ಇಲ್ಲಿ ಸಮಯವೂ ಇಲ್ಲ.

❖❖

೫೧ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎಂ. ಗೋಪಾಲಕೃಷ್ಣ ಅಡಿಗ



ಪ್ರಸಿದ್ಧ ನವ್ಯಕಾವ್ಯದ ಕವಿಗಳೂ, ವಿಮರ್ಶಕರೂ ಆಗಿದ್ದ ಮೊಗೇರಿ ಗೋಪಾಲಕೃಷ್ಣ ಅಡಿಗ ಅವರು ರಾಮಪ್ಪ ಮತ್ತು ಗೌರಮ್ಮನವರ ಪುತ್ರರಾಗಿ ೧೮-೨-೧೯೧೮ರಲ್ಲಿ ಜನಿಸಿದರು.

ಶಾಲಾ ಶಿಕ್ಷಣ ಬೈಂದೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ಮೈಸೂರಿನಲ್ಲಿ ಆಯಿತು. ೧೯೪೨ರಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಗಳಿಸಿದರು. ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಪ್ರೌಢಶಾಲೆಗಳಲ್ಲಿ ಅಧ್ಯಾಪಕರಾಗಿ ಕೆಲಸಮಾಡಿದ ಮೇಲೆ ೧೯೪೭ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಓದಿ ಎಂ.ಎ. ಪದವಿ ಗಳಿಸಿದರು. ೧೯೪೮ ರಿಂದ ೧೯೫೨ರವರೆಗೆ ಮೈಸೂರಿನ ಶಾರದಾವಿಲಾಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ೧೯೫೨ ರಿಂದ ೫೪ರವರೆಗೆ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ ೧೯೬೪-೬೮ವರೆಗೆ ಸಾಗರದ ಎಲ್.ಬಿ. ಕಾಲೇಜಿನಲ್ಲಿ ಮತ್ತು ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ಇವರು ಕಾರ್ಯನಿರ್ವಹಿಸಿದರು. ಅನಂತರ ೧೯೭೧ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟಿನ ನಿರ್ದೇಶಕರಾದರು. ಇದಾದ ನಂತರ ೧೯೭೧ರಲ್ಲಿ ಜನಸಂಘದ ಅಭ್ಯರ್ಥಿಯಾಗಿ ಸಂಸತ್ತಿನ ಚುನಾವಣೆಗೆ ಸ್ಪರ್ಧಿಸಿದ್ದರು. ಸಿಮ್ಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್‌ನಲ್ಲಿ ರಿಸರ್ಚ್ ಫೆಲೋ ಆಗಿ ಕೆಲಸಮಾಡಿದರು.

ಸಾಕ್ಷಿ ಎಂಬ ತ್ರೈಮಾಸಿಕವನ್ನು ಕೆಲಕಾಲ ನಡೆಸಿದ ಇವರು ಕನ್ನಡದಲ್ಲಿ ಶ್ರೇಷ್ಠ ಕವನಗಳನ್ನೂ, ವಿಮರ್ಶಾಕೃತಿಗಳನ್ನೂ ಬರೆದಿದ್ದಾರೆ.ಇವರ ಸೇವೆಗೆ ಮೆಚ್ಚಿ ಹಲವಾರು ಪ್ರಶಸ್ತಿಗಳು ಬಂದಿವೆ. ೧೯೭೩ರ ರಾಜ್ಯ ಸರಕಾರ 'ವರ್ಧಮಾನ' ಕವನ ಸಂಕಲನಕ್ಕೆ ಪ್ರಶಸ್ತಿ, ೧೯೭೪ರಲ್ಲಿ ಕೇಂದ್ರ ಸರಕಾರದ ಪ್ರಶಸ್ತಿ, ೧೯೮೬ರಲ್ಲಿ ಕರ್ನಾಟಕ ಸರಕಾರ ಪಂಪ ಪ್ರಶಸ್ತಿ. ಮಧ್ಯಪ್ರದೇಶ ಸರಕಾರದ ಕಬೀರ್ ಸನ್ಮಾನ ಪ್ರಶಸ್ತಿ ಇವರಿಗೆ ಲಭಿಸಿತ್ತು. ೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆದ ೫೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಇವರಿಗೆ ಪರಿಷತ್ತು ನೀಡಿತ್ತು.

ಅಡಿಗರು ರಚಿಸಿದ ಕೆಲವು ಮುಖ್ಯ ಕೃತಿಗಳು ಇವು: ಭಾವತರಂಗ, ಕಟ್ಟುವೆವು ನಾವು, ನಡೆದುಬಂದ ದಾರಿ, ಭೂಮಿಗೀತ, ಚಂಡಮದ್ದಲೆ, ವರ್ಧಮಾನ ಇತ್ಯಾದಿ ಕವನಸಂಕಲಗಳು. ಅನಾಥೆ, ಆಕಾಶದೀಪ (ಕಾದಂಬರಿಗಳು), ಮಣ್ಣಿನ ವಾಸನೆ, ವಿಚಾರಪಥ, ಕನ್ನಡದ ಅಭಿಮಾನ (ಗದ್ಯ ಲೇಖನಗಳು), ಹುಲ್ಲಿನ ದಳಗಳು, ಭೂಗರ್ಭಯಾತ್ರೆ, ಇತಿಹಾಸಚಿತ್ರ (ಅನುವಾದಗಳು).

ಗೋಪಾಲಕೃಷ್ಣ ಅಡಿಗರು ಬೆಂಗಳೂರಿನಲ್ಲಿ ೧೪-೧೧-೧೯೯೨ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫೧,
ಅಧ್ಯಕ್ಷರು, ಎಂ. ಗೋಪಾಲಕೃಷ್ಣ ಅಡಿಗ
ದಿನಾಂಕ ೦೯, ೧೦, ೧೧ ಮಾರ್ಚ್ ೧೯೭೯,
ಸ್ಥಳ : ಧರ್ಮಸ್ಥಳ

ಸಮಾನತೆಯ ದುಷ್ಪರಿಣಾಮ

ಶಕ್ತಿಗಳಲ್ಲಿ ಅಸಮಾನತೆಯಿದ್ದರೂ ವ್ಯಕ್ತಿಗಳಾಗಿ ಎಲ್ಲರೂ ಸಮಾನ ಗೌರವಕ್ಕೆ ಪಾತ್ರರು ಎಂಬುದೇ ಪ್ರಜಾಪ್ರಭುತ್ವದ ಮೂಲ ಸೂತ್ರ. ಆದರೆ ಸಮಾನತೆಯ ರಾಜಕೀಯ ಸಾಮಾಜಿಕ ವಾತಾವರಣ ಸೃಷ್ಟಿಯಾಗುತ್ತ ಬಂದ ಹಾಗೆ ಶಕ್ತಿ ವಿಶೇಷಗಳ ಬಗ್ಗೆ ಅಪೂರ್ವ ಸಿದ್ಧಿಗಳ ಬಗ್ಗೆ ಒಟ್ಟಿನಲ್ಲಿ ಶ್ರೇಷ್ಠತೆಯೆಂಬ ಮೌಲ್ಯದ ಬಗ್ಗೆ ಇರಬೇಕಾದ ಎಚ್ಚರ ಮಾಯವಾಗಿ ಬರೆದಿರುವುದೆಲ್ಲ ಸಾಹಿತ್ಯ ಎಂಬ ಭಾವನೆ, ಸರಾಸರಿಯೇ ದೊಡ್ಡ ಸಂಖ್ಯೆಗಿಂತ ಹೆಚ್ಚಿಗೆ ಎಂಬ ಅಜ್ಞಾನ ಹುಟ್ಟುತ್ತದೆ. ಶ್ರೇಷ್ಠವಾದದ್ದರ ಕಲ್ಪನೆಯನ್ನೇ ಅಳಿಸಿಹಾಕಬಲ್ಲ ಈ ಅಪಾಯವನ್ನೆದುರಿಸುವುದೇ ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾನಿಲಯ ಮುಂತಾದ ಸಾಂಸ್ಕೃತಿಕ ಸಂಸ್ಥೆಗಳ ಮೂಲಭೂತ ಕೆಲಸ ಎನ್ನುವುದನ್ನು ನಾವು ಮರೆಯಲಾಗದು. ನಿರ್ದಿಷ್ಟವಾದ ತಾರತಮ್ಯಜ್ಞಾನವನ್ನು ಕೊಡುವ ವಿಮರ್ಶೆಯ ವಿವೇಕ ಕುದುರಿಸುವ ಕೆಲಸವೊಂದೇ ಈ ಯುಗದಲ್ಲಿ ನಾವು ಸಾಹಿತಿಗಳೂ ವಿದ್ಯಾವಂತರೂ ಅತ್ಯಗತ್ಯವಾಗಿ ಮಾಡಬೇಕಾದ ಕೆಲಸ. ಪಂಪ ದೊಡ್ಡ ಕವಿಯೋ ಪೊನ್ನನೋ? ಪಂಪ ಕುಮಾರವ್ಯಾಸರಲ್ಲಿ ಯಾರ ಸಾಧನೆ ಹೆಚ್ಚಿನದು. ಏಕೆ ಎಂಬ ಪ್ರಶ್ನೆ ಜಾತೀಯ ಪ್ರಶ್ನೆ ಅಲ್ಲ. ಸಿದ್ಧಿಯ ತಾರತಮ್ಯಗಳನ್ನು ಅಳೆಯುವ ಪ್ರಶ್ನೆ. ಈಗ ಸಾಹಿತ್ಯ ಪರಿಷತ್ತು ಮಾಡಬೇಕಾದ ಕೆಲಸವೂ ಇದೇ. ಆಡಂಬರ, ಜಾತ್ರೆ, ಮೇಳ ಇವುಗಳಿಂದ ನೋಡಿದವರ ಕಣ್ಣು ಸೆಳೆಯುವ ಕೆಲಸವಲ್ಲ, ಮನೋರಂಜನೆ ಒದಗಿಸುವ ವಿವಿಧ ವಿನೋದಾವಳಿಯಲ್ಲ, ಸಾಹಿತ್ಯ ಕೃತಿಗಳ ಅಧ್ಯಯನಕ್ಕೂ ಅವುಗಳನ್ನು ತೂಗಿ ನೋಡುವ ಕೆಲಸಕ್ಕೂ ತಕ್ಕ ಮಾನಸಿಕ ಸಲಕರಣೆಗಳನ್ನು ನಮ್ಮ ಜನಕ್ಕೆ, ತಮ್ಮ ಜನರಲ್ಲಿ ಸಾಹಿತ್ಯ ಪ್ರಿಯರಾದವರಿಗೆ ಒದಗಿಸಿಕೊಡುವ ಕೆಲಸ. ಸಾಹಿತ್ಯಕ್ಕೆ ಸಂಬಂಧಪಟ್ಟ ಒಂದು ಸಂಸ್ಥೆ ಕನ್ನಡದ ಅಭಿಮಾನವನ್ನು ಭಾಷಣಗಳ ಮೂಲಕ ಪ್ರದರ್ಶನಗಳ ಮೂಲಕ ಮೆರವಣಿಗೆಗಳ ಮೂಲಕ ಪ್ರದರ್ಶಿಸುವುದಲ್ಲ, ಕನ್ನಡ ಕೃತಿಗಳ ಆಳವಾದ ಅಭ್ಯಾಸಕ್ಕೆ ವಿಮರ್ಶೆಗೆ ತಕ್ಕ ವಾತಾವರಣವನ್ನು ಸೃಷ್ಟಿಸುವುದು, ಕನ್ನಡ ಜನಕ್ಕೆ ಆಧುನಿಕ ಜ್ಞಾನವನ್ನು, ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಃಶಾಸ್ತ್ರ ಮುಂತಾದ ಸಾಹಿತ್ಯಕ್ಕೆ ಹತ್ತಿರವಾದ ಆಧುನಿಕ ಶಾಸ್ತ್ರಗಳಲ್ಲಿ ನಡೆದ ಸಂಶೋಧನೆಗಳ ಸಾರವನ್ನು ಬಹುಜನಕ್ಕೆ ಮುಟ್ಟಿಸಿ ಆ ಮೂಲಕವೇ ಈ ಯುಗಧರ್ಮಕ್ಕೆ ತಕ್ಕ ಕೆಲಸವನ್ನು ಮಾಡುವುದು. ಇದು ಮಾತ್ರ ಸಲ್ಲುವ ಕೆಲಸ, ಉಳಿದದ್ದೆಲ್ಲ ವ್ಯರ್ಥ.

ಸಾರ್ವಜನಿಕ ಶಿಕ್ಷಣದ ಪ್ರಶ್ನೆ.

ಒಂದು ಭಾಷೆಯ ಯೋಗ್ಯತೆಯನ್ನು ಅಳೆಯುವುದು ಅದರಲ್ಲಿ ಎಷ್ಟು ಪುಸ್ತಕಗಳು ಪ್ರಕಟವಾಗಿವೆ ಎಂಬುದರ ಮೇಲಲ್ಲ; ಅದು ನಮ್ಮ ಮನಸ್ಸಿನ ಸೂಕ್ಷ್ಮವಾದ ಕೆಲಸಗಳಿಗೆ ಎಷ್ಟರಮಟ್ಟಿಗೆ ಸಮರ್ಥವಾಗಿದೆ ಎನ್ನುವುದರ ಮೇಲೆ; ನಮ್ಮ ಅಭಿಪ್ರಾಯಗಳನ್ನೂ ಆಧುನಿಕ ವಿಚಾರಗಳನ್ನೂ ಯಥಾವತ್ತಾಗಿ ಮೂಡಿಸುವುದಕ್ಕೆ ನಾವು ಕಂಡ ಹೊಸ ಸತ್ಯಗಳನ್ನು ಮಾಡುವ ಹೊಸ ಸಂಶೋಧನೆಗಳನ್ನೂ ಎಷ್ಟು ಕರಾರುವಾಕ್ಕಾಗಿ, ನಿಃಸಂದಿಗ್ಧವಾಗಿ, ಸಂಕ್ಷೇಪವಾಗಿ ಆದರೂ ಸ್ಪಷ್ಟವಾಗಿ ಹೇಳಲು ಸಮರ್ಥವಾಗಿದೆ ಎನ್ನುವುದರ ಮೇಲೆ. ನಮ್ಮ ಮನಸ್ಸುಗಳು ಬೆಳೆಯದೆ ನಮ್ಮ ಭಾಷೆಯೂ ಬೆಳೆಯುವುದಿಲ್ಲ. ಆದಕಾರಣ ಇದು ಮುಖ್ಯವಾಗಿ ಶಿಕ್ಷಣದ ಪ್ರಶ್ನೆ, ಸಾಹಿತ್ಯ ಪರಿಷತ್ತಿನ ದೃಷ್ಟಿಯಿಂದ ಇದು ಸಾರ್ವಜನಿಕ ಶಿಕ್ಷಣದ ಪ್ರಶ್ನೆ.

ಸಮ್ಮೇಳನದ ಅಧ್ಯಕ್ಷರ ಅಧಿಕಾರ ಏನು?

ಸಾಹಿತ್ಯ ಪರಿಷತ್ತಿನ ಈಗಿನ ನಿಯಮಗಳಿಗನುಸಾರವಾಗಿ ಅದರ ವಾರ್ಷಿಕ ಸಮ್ಮೇಳನದ ಅಧ್ಯಕ್ಷನಿಗೆ ಯಾವ ಅಧಿಕಾರವೂ ಇಲ್ಲ, ಅವನು ಕೇವಲ ಒಂದು ಉತ್ಸವ ಮೂರ್ತಿ.ಆದ ಕಾರಣ ಸಮ್ಮೇಳನಾಧ್ಯಕ್ಷನಾಗಿ ನಾನು ಸಾಧಿಸಲು ಸಾಧ್ಯವಾಗಬಹುದಾದ ಕೆಲಸಕ್ಕೆ ಅವಕಾಶ ಬಹಳ ಕಡಿಮೆಯೇ. ಅಲ್ಲದೆ ಸಾಹಿತ್ಯ ಪರಿಷತ್ತೂ ಪ್ರಜಾತಂತ್ರಾತ್ಮಕವಾದ ಚುನಾವಣೆಯ ಪದ್ಧತಿಯಿಂದ ರೂಪುಗೊಂಡದ್ದು. ಅದನ್ನು ಯಾವನೇ ಒಬ್ಬ ವ್ಯಕ್ತಿ ತನ್ನ ಇಷ್ಟದಂತೆ ನಡೆಸಿಕೊಳ್ಳುವುದು ಸಾಧ್ಯವಿಲ್ಲ. ಬಹುಮತದಂತೆಯೇ ಅದು ನಡೆಯಬೇಕು. ಸಾಹಿತ್ಯ ಕಲೆಗಳಂಥ ಮನುಷ್ಯನ ವಿಶೇಷ ಸಾಧನೆಗಳಿಗೆ ಈ ಬಹುಮತ ವ್ಯವಸ್ಥೆ ಸರಿಯೇ ಎಂದು

ನಾವೆಲ್ಲರೂ ಯೋಚಿಸಬೇಕು. ಒಂದು ಕಾವ್ಯದ ಯೋಗ್ಯತೆಯನ್ನು ಓಟಿಗೆ ಹಾಕಿ ನಿರ್ಧರಿಸಬಹುದೇ? ಇಲ್ಲವಾದರೆ ಏನು ಮಾಡಬೇಕು? ಅದರ ನಿರ್ಧಾರವನ್ನು ಕಾಲಕ್ಕೆ ಬಿಡುವುದೇನೋ ಕ್ಷೇಮ. ಇಲ್ಲವಾದರೆ ಆ ವಿಷಯದಲ್ಲಿ ದಕ್ಷರಾದ ನಿಸ್ಪೃಹ ವಿಮರ್ಶಕರು ಪ್ರಜಾತಂತ್ರಾತ್ಮಕವಾಗಿ ಈ ಕೆಲಸ ಮಾಡಲು ಬಿಡಬೇಕು. ಒಂದು ಕಾಲದಲ್ಲಿ ಕನ್ನಡದಲ್ಲಿ ಬರೆಯುವವರಾಗಲೀ ಬರೆದದ್ದನ್ನು ಓದುವವರಾಗಲೀ ತೀರ ವಿರಳವಾಗಿದ್ದಾಗ ಸ್ಥಾಪಿತವಾಗಿರುವುದು ಈ ಪರಿಷತ್ತು. ಆ ಕಾಲದಲ್ಲಿ ಈ ಸಂಸ್ಥೆಯನ್ನು ಕನ್ನಡಿಗರೆಲ್ಲರಿಗೂ ವಯಸ್ಕರಾದ ಎಲ್ಲರಿಗೂ ಮುಕ್ತವಾಗಿಟ್ಟಿದ್ದು ಆ ಕಾಲಕ್ಕೆ ಸರಿ, ಆದರೆ ಈಗ ಅದು ಸರಿಹೋಗುವುದಿಲ್ಲ ಎನ್ನಿಸಿದಾಗ ಏನು ಮಾಡಬೇಕು?

ಪರಿಷತ್ತು ಈ ಕಾಲಕ್ಕೆ ಏನು ಮಾಡಬೇಕು

ನಮ್ಮಲ್ಲಿ ಪ್ರತಿಯೊಂದು ಸಂಸ್ಥೆಯೂ ಬಹು ಬೇಗ ಜಡವಾಗಿ ಹೋಗುವಂತೆ ಈ ಸಂಸ್ಥೆಯೂ ತೀರ ಜಡವಾಗಿ ಯಾಂತ್ರಿಕವಾಗಿ ಈವರೆಗೆ ಮಾಡಿಕೊಂಡು ಬಂದದ್ದನ್ನೇ ಮಾಡುತ್ತ ಹೋಗುತ್ತಿದೆ. ಇದನ್ನು ನಿವಾರಿಸುವ ದಾರಿ ಯಾವುದು ಎಂದು ನಾವೆಲ್ಲರೂ ಯೋಚಿಸಬೇಕು? ಸಾಹಿತ್ಯ ಕೃತಿಗಳಿಗೆ ಸಂಬಂಧಪಟ್ಟ ವಿಮರ್ಶೆ ಮೌಲ್ಯ ನಿರ್ಣಯ ಮುಂತಾದುವುಗಳಿಗಾಗಿಯೇ ಫ್ರೆಂಚ್ ಅಕಾಡೆಮಿಯ ರೀತಿಯ ಅತ್ಯುಚ್ಚ ಧೀಮಂತರ ಒಂದು ವಿಶಿಷ್ಟ ಸಂಸ್ಥೆಯನ್ನು ಸಾಹಿತ್ಯ ಪರಿಷತ್ತು ಸ್ಥಾಪಿಸಿ ಅದನ್ನು ಸ್ವತಂತ್ರವಾದ ಒಂದು ಸಣ್ಣ ಘಟಕವನ್ನಾಗಿ ನಡೆಸಿಕೊಂಡು ಬರುವುದು ಸಾಧ್ಯವಾದೀತೇ ಎಂದು ಪರೀಕ್ಷಿಸಿ ನೋಡಬೇಕು. ಇದು ತೀರ ದೊಡ್ಡ ಸಂಘವಾಗದೆ ಇಡೀ ಕರ್ನಾಟಕದಲ್ಲಿ ಅತ್ಯುತ್ತಮ ಧೀಮಂತರಾದ ಹತ್ತು ಹದಿನೈದು ಮಂದಿ ನಿಷ್ಪಕ್ಷಪಾತ ವಿದ್ವಾಂಸರಿಗೆ ಆ ಕೆಲಸವನ್ನು ಒಪ್ಪಿಸಬಹುದು ಎಂದು ನನ್ನ ಸೂಚನೆ. ಆ ವಿದ್ವಾಂಸ ಮಂಡಳಿಯಲ್ಲಿ ಸಾಹಿತಿಗಳೇ ಇರಬೇಕಾದ ಅಗತ್ಯವಿಲ್ಲ. ಇತರ ಕಲೆಗಳು ಶಾಸ್ತ್ರಗಳ ವಿಜ್ಞಾನಗಳ ಪರಿಣತರೂ ಇರಬಹುದು. ಶ್ರೇಷ್ಠತೆಯ ಪ್ರಶ್ನೆ, ತತ್ವದ ಪ್ರಶ್ನೆ, ಮೌಲ್ಯಮಾಪನದ ಪ್ರಶ್ನೆ ಬಂದಾಗ ಆ ಪ್ರಶ್ನೆಗಳು ಈ ಸ್ವತಂತ್ರ ಧೀಮಂತ ಮಂಡಳಿಗೆ ಒಪ್ಪಿಸಿ ಅದರ ತೀರ್ಮಾನವನ್ನು ಎಲ್ಲರೂ ಗೌರವಿಸಬಹುದು.

ಶ್ರೇಷ್ಠ ಕೃತಿಗಳ ಪ್ರಕಟನೆ

ಪ್ರಜಾತಂತ್ರದ ಸಂದರ್ಭದಲ್ಲಿ ಇಂಥ ಒಂದು ಮಂಡಳಿ ಅತ್ಯಗತ್ಯ ಎಂದು ನನಗೆ ತೋರುತ್ತದೆ. ಆಗ ಪರಿಷತ್ತು ತನ್ನ ಈ ಪ್ರಜಾತಂತ್ರದ ಚೌಕಟ್ಟಿನಲ್ಲೇ ಸಾರ್ವಜನಿಕ ಶಿಕ್ಷಣದ ಕೆಲಸವನ್ನೂ ಇನ್ನೂ ಯಾರೂ ಪ್ರಕಟಿಸಲು ಮುಂದೆ ಬಾರದೆ ಇರಬಹುದಾದ ಆದರೆ ಅತ್ಯಂತ ಶ್ರೇಷ್ಠವಾದ ಕೃತಿಗಳನ್ನು ಪ್ರಕಟಿಸುವುದು, ಸಾಹಿತ್ಯಾಭ್ಯಾಸಕ್ಕೆ ಅಗತ್ಯವಾದ ನಿಘಂಟು ಮುಂತಾದ ಸಹಾಯಕ ಪ್ರೌಢ ಗ್ರಂಥಗಳನ್ನು ಪ್ರಕಟಿಸುವುದು, ಒಂದು ವರ್ಷದಲ್ಲಿ ಪ್ರಕಟವಾದ ಅತ್ಯುತ್ತಮ ಕವನಗಳನ್ನೋ ಕಥೆಗಳನ್ನೋ ಪ್ರಬಂಧಗಳನ್ನೋ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಮುಂತಾದ ಕೆಲಸಗಳನ್ನು ಮಾಡಬಹುದು. ಪ್ರಕಟಿಸುವಾಗ ಅತ್ಯುತ್ತಮವಾದವುಗಳನ್ನೇ ಆರಿಸಲು ತಕ್ಕ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

ಗದ್ಯಾನುವಾದಗಳು ಬೇಡ

ಹಳೆಗನ್ನಡ ಕಾವ್ಯಗಳ ಗದ್ಯಾನುವಾದಗಳನ್ನು ಪ್ರಕಟಿಸುವ ಒಂದು ಯೋಜನೆಯನ್ನು ಪರಿಷತ್ತು ಇನ್ನೂ ನಡೆಸಿಕೊಂಡು ಬರುತ್ತಿರುವುದು ಅತ್ಯಂತ ಶೋಚನೀಯ ಸಂಗತಿ. ಯಾವ ಕಾವ್ಯವನ್ನೇ ಆಗಲಿ ಅದನ್ನು ಕಾವ್ಯರೂಪದಲ್ಲೇ ಓದಬೇಕಲ್ಲದೆ ಅದರ ಗದ್ಯ ರೂಪವನ್ನು ಸಿದ್ಧಪಡಿಸಿದರೆ ಕವಿಗೆ ಭಾರೀ ಅಪಚಾರ ಮಾಡಿದಂತೆ. ನಮ್ಮ ವಿದ್ಯಾರ್ಥಿಗಳನೇಕರು ಕವನವನ್ನು ಓದದೆ ಅವುಗಳ ಸಾರಾಂಶವನ್ನೇ ಗೈಡುಗಳಲ್ಲಿ ಕೊಟ್ಟಿರುವ ಗದ್ಯ ಭಾಷಾಂತರಗಳನ್ನೇ ಓದಿ ಕಾವ್ಯದಿಂದ ಸಿಕ್ಕುವ ಸಂಸ್ಕಾರಕ್ಕೆ ಬಾಹಿರವಾಗುತ್ತ ಬರುತ್ತಿದ್ದಾರೆ. ಈ ರೋಗವನ್ನು ಇನ್ನಷ್ಟು ಸಾರ್ವಜನಿಕವಾಗಿ ಮಾಡುವ ಈ ಪ್ರಯತ್ನ ಅತ್ಯಂತ ಹಾಸ್ಯಾಸ್ಪದವಾದುದಾದರೂ ನಮ್ಮ ಇಂದಿನ ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ ನನಗೆ ಅಳು ಬರುವಂತೆ ಮಾಡುತ್ತಿದೆ. ಕಾವ್ಯದ ಅಭ್ಯಾಸಕ್ಕೆ ಬೇಕಾದ ಕಠಿಣ ಪದಗಳ ಅರ್ಥ, ವಿಶೇಷ ಸಂದರ್ಭಗಳ ವಿವರ, ಟೀಕೆ ಟಿಪ್ಪಣಿ ಇವು ನಮ್ಮ ಕಾವ್ಯಗಳಿಗೆ ಅಗತ್ಯವಾಗಬಹುದು. ಆದರೆ ಗದ್ಯಾನುವಾದ ಖಂಡಿತ ಅಲ್ಲ. ಇಂದೂ ಕೂಡ ನಮ್ಮ ಜನ ಪಂಪನನ್ನು ನಾರಣಪ್ಪನನ್ನೂ ಓದಬೇಕು, ಸರಿಯಾಗಿ ಲಯ ಹಿಡಿದು ಓದುವುದಕ್ಕೆ ಕಲಿಯಬೇಕು ಅದರಿಂದಲೇ ನಮ್ಮ ಜನದಲ್ಲಿ ಕಾವ್ಯಾಭಿರುಚಿ ಹುಟ್ಟುವುದು ಸಾಧ್ಯ. ಆ ಬಗ್ಗೆ ಪರಿಷತ್ತು ತಕ್ಕ ಏರ್ಪಾಟು ಮಾಡಲಿ. ಆದರೆ ನಾನು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ

ಇಂಥ ಗದ್ಯಾನುವಾದಗಳನ್ನು ಸಾಹಿತ್ಯ ಪರಿಷತ್ತು ಖಂಡಿತವಾಗಿ ಪ್ರಕಟಿಸಬಾರದು. ಕಾವ್ಯದ ಅನುಭವದಲ್ಲಿ ಅರ್ಥದಲ್ಲಿ ಕೊನೆಯ ಪಕ್ಷ ಅರ್ಧದಷ್ಟನ್ನಾದರೂ ಅದರ ಲಯವೇ ಪದಸಮ್ಮಿಳನದ ನಾದವೇ ಹುಟ್ಟಿಸುತ್ತದೆ ಎನ್ನುವುದನ್ನು ನಾವು ಮರೆಯಬಾರದು. ಸಾಹಿತ್ಯ ಪರಿಷತ್ತು ಖಂಡಿತವಾಗಿಯೂ ಮರೆಯಬಾರದು.


ಸಮ್ಮೇಳನದ ಗೋಷ್ಠಿಗಳು ಹೇಗಿರಬೇಕು?

ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹಳೆಯ ಹೊಸ ಕವಿಗಳ ಮೇಲೆ ವಿಚಾರ ಗೋಷ್ಠಿಗಳನ್ನು ಸಾಹಿತ್ಯ ಪರಿಷತ್ತು ನಡೆಸಿಕೊಂಡು ಬರುತ್ತಿದೆ. ಕವಿಯ ಪರಿಚಯವೇ ನಮ್ಮ ಜನಕ್ಕೆ ಇಲ್ಲದೆ ಇರುವಾಗ ಇಂಥ ಗೋಷ್ಠಿಗಳು ನಿರರ್ಥಕವಾಗುತ್ತವೆ. ಪಂಡಿತರ ವಾದಸರಣಿಯನ್ನು ಸಭಿಕರಿಗೆ ಅನುಸರಿಸುವುದು ಸಾಧ್ಯವಾಗುವುದಿಲ್ಲ. ಸಭಿಕರ ಮುಂದೆ ತೀರ ಪ್ರೌಢವಾದ ಪ್ರಬಂಧವನ್ನು ಮಂಡಿಸಲು ತಕ್ಕ ವಿಮರ್ಶಕರೂ ಕಡಿಮೆ, ಕೇಳಿ ಮೆಚ್ಚುವವರಿಲ್ಲದೆ ಅವರ ಶ್ರಮ ನಿರರ್ಥಕವೂ ಆಗಬಹುದು. ಆದಕಾರಣ ನಮ್ಮ ನಾಡಿನ ಎಲ್ಲ ಕಡೆಗಳಲ್ಲೂ ಹಳ್ಳಿಗಳಲ್ಲೂ ಕೂಡ ಸಾಹಿತ್ಯ ಪರಿಷತ್ತು ಒಂದು ಸಾಂಸ್ಕೃತಿಕ ಸಂಸ್ಥೆಯಾಗಿ ಕೆಲಸ ಮಾಡುತ್ತ ನಮ್ಮ ಹಳೆಗನ್ನಡದ ನಡುಗನ್ನಡದ ಕವಿ ಸಾಹಿತಿಗಳ ಕೃತಿಗಳ ಪರಿಚಯ ಮಾಡಿಕೊಡುವ ವ್ಯವಸ್ಥೆಯನ್ನು ಕೈಗೊಳ್ಳಬಹುದು. ಕಾವ್ಯವನ್ನು ಹೇಗೆ ಓದಬೇಕು, ಕಾವ್ಯ ಅರ್ಥವನ್ನು ಹೇಗೆ ಸೃಷ್ಟಿಸುತ್ತದೆ ಎನ್ನುವುದನ್ನು ಉದಾಹರಣೆಗಳ ಮೂಲಕ ನಮ್ಮ ಪ್ರಭುಗಳಾದ ಸಾಮಾನ್ಯ ಜನತೆಗೆ ತೋರಿಸಿಕೊಡಬಹುದು. ಇದರಿಂದ ಸಾಹಿತ್ಯದಿಂದ ಬರಬೇಕಾದ ಸಂಸ್ಕಾರ ಅನೇಕ ಜನರಿಗೆ ದೊರೆವಂತಾಗಿ ಸಾಹಿತ್ಯ ಪರಿಷತ್ತಿನ ಕೆಲಸ ನಿಜವಾಗಿಯೂ ಜನೋಪಯೋಗಿ ಆಗುತ್ತದೆ. ಒಟ್ಟಿನಲ್ಲಿ ಸಾಹಿತ್ಯ ಪರಿಷತ್ತು ನಿಜವಾದ ಸಾಹಿತ್ಯ ಪರಿಷತ್ತೇ ಆಗುವಂತೆ ಮಾಡಲು ನಾನೂ ನೀವೂ ಸೇರಿ ಪ್ರಯತ್ನಿಸೋಣ.

❖❖

೫೨ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಬಸವರಾಜ ಕಟ್ಟೀಮನಿ



ಕಾದಂಬರಿಕಾರರೆಂದೇ ಪ್ರಸಿದ್ಧರಾಗಿದ್ದ ಬಸವರಾಜ ಕಟ್ಟೀಮನಿಯವರು ಶಿರೂರಿನ ಅಯ್ಯಣ್ಣ–ಮಲಾಮರಡಿಯ ಬಾಳವ್ವ ದಂಪತಿಗಳ ಪುತ್ರರಾಗಿ ೫–೧೦–೧೯೧೯ ರಲ್ಲಿ ಜನಿಸಿದರು.

ಗೋಕಾಕ, ಸುಲದಾಳ, ಚಿಕ್ಕೋಡಿ, ನಿಪ್ಪಾಣಿ, ಬೆಳಗಾವಿ, ಪುಣೆ ಮುಂತಾದ ಕಡೆಗಳಲ್ಲಿ ಕಟ್ಟೀಮನಿ ಅವರ ಶಾಲಾ ಶಿಕ್ಷಣ ನಡೆಯಿತು. ಅನಂತರ ವಿದ್ಯಾಭ್ಯಾಸ ಮುಂದುವರಿಸಲಾಗದೆ ಪತ್ರಿಕಾರಂಗ ಪ್ರವೇಶಿಸಿದರು.

೧೯೩೬ರಲ್ಲಿ ಬೆಳಗಾವಿಯಿಂದ ಹೊರಡುತ್ತಿದ್ದ ಸಂಯುಕ್ತ ಕರ್ನಾಟಕದಲ್ಲಿ ಕೆಲಸಕ್ಕೆ ಸೇರಿದರು. ಮುಂದೆ 'ತರುಣ ಕರ್ನಾಟಕ' (೧೯೩೭) 'ಸಮಾಜ ಸೇವೆ' 'ಹುಬ್ಬಳ್ಳಿಯ ಲೋಕಮತ', 'ಗದುಗಿನ ಕರ್ನಾಟ ಬಂಧು', 'ಬೆಂಗಳೂರಿನ ಸ್ವತಂತ್ರ ಕರ್ನಾಟಕ', 'ಉಷಾ' ಪತ್ರಿಕೆಗಳ ಉಪಸಂಪಾದಕರಾಗಿ ಸಂಪಾದಕರಾಗಿ ದುಡಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ೧೯೪೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದರು. ೧೯೬೮ ರಿಂದ ೧೯೭೪ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾದರು. ೧೯೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು. ೧೯೮೦ರಲ್ಲಿ ಬೆಳಗಾವಿಯಲ್ಲಿ ಜರುಗಿದ ೫೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು.

ಇವರ ಜ್ವಾಲಾಮುಖಿಯ ಮೇಲೆ ಕಾದಂಬರಿಗೆ ೧೯೬೮ರಲ್ಲಿ ಸೋವಿಯೆಟ್ ಲ್ಯಾಂಡ್ ಪ್ರಶಸ್ತಿ ಸಿಕ್ಕಿದೆ.

ಇವರು ಕಾರವಾನ್, ಸುಂಟರಗಾಳಿ, ಹುಲಿಯಣ್ಣನ ಮಗಳು (ಕಥಾಸಂಕಲನಗಳು), ಸ್ವಾತಂತ್ರದೆಡೆಗೆ, ಮಾಡಿಮಡಿದವರು, ಜ್ವಾಲಾಮುಖಿಯ ಮೇಲೆ, ಮೋಹದ ಬಲೆಯಲ್ಲಿ, ಬಂಗಾರದ ಜಿಂಕೆಹಿಂದೆ (ಕಾದಂಬರಿಗಳು), ಕಾದಂಬರಿಕಾರನ ಕಥೆ (ಆತ್ಮಕಥೆ), ಇನ್ನೂ ಅನೇಕ ಕೃತಿಗಳನ್ನು ಬರೆದಿದ್ದಾರೆ.

ಬಸವರಾಜ ಕಟ್ಟೀಮನಿ ಅವರು ೨೩–೧೦–೧೯೮೯ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫೨,
ಅಧ್ಯಕ್ಷರು, ಬಸವರಾಜ ಕಟ್ಟೀಮನಿ
ದಿನಾಂಕ ೭, ೮, ೯, ೧೦ ಫೆಬ್ರವರಿ ೧೯೮೦,
ಸ್ಥಳ : ಬೆಳಗಾವಿ

ಇದು ಸಾಂಸ್ಕೃತಿಕ ಪರಿಷತ್ತು

೧೯೧೫ರಲ್ಲಿ ಜನಿಸಿದ ಕನ್ನಡ ಸಾಹಿತ್ಯ ಪರಿಷತ್ತು ಈ ೬೫ ವರ್ಷಗಳಲ್ಲಿ ಪ್ರಚಂಡ ಆಲದಮರದಂತೆ ಬೆಳೆದು ಕರ್ನಾಟಕದುದ್ದಕ್ಕೂ ಹರಡಿಕೊಂಡಿದೆ. ಶ್ರೀ ಜಿ. ನಾರಾಯಣರು ಅಧ್ಯಕ್ಷರಾಗಿದ್ದಾಗ ಜಿಲ್ಲಾಸಮಿತಿಗಳ ಸ್ಥಾಪನೆಯಾಯಿತು. ಅವುಗಳ ಮೂಲಕ ಪರಿಷತ್ತಿನ ಕಾರ್ಯಕ್ರಮಗಳು ನಿಯಮಿತವಾಗಿ ವ್ಯವಸ್ಥಿತವಾಗಿ ನಡೆಯುತ್ತಿವೆ. ಸರಕಾರದಿಂದ ಪರಿಷತ್ತಿಗೆ ೫ ಲಕ್ಷ ರೂ.ಗಳ ವಾರ್ಷಿಕ ಅನುದಾನ ಸಲ್ಲುತ್ತಿದೆ. ಅಲ್ಲದೆ ವಜ್ರಮಹೋತ್ಸವ ಕಾಲಕ್ಕೆ ೧೫ ಲಕ್ಷ ೩೧ ಸಾವಿರ ಸಂದಿದೆ. ಪರಿಷತ್ತಿನ ಹಳೆಯ ಕಟ್ಟಡಕ್ಕೆ ಹೊಂದಿಕೊಂಡೇ ಭವ್ಯವಾದ ನೂತನ ಭವನ ಎದ್ದು ನಿಂತಿದೆ. ವಜ್ರಮಹೋತ್ಸವದ ನೆನಪಿಗಾಗಿ ಇನ್ನೊಂದು ಕಟ್ಟಡ ಏಳಲಿದೆ.

ಇದೆಲ್ಲ ಸಂತೋಷದ ವಿಚಾರ. ಆದರೆ, ಇನ್ನು ಮುಂದೆ ಜಿಲ್ಲಾಸಮಿತಿಗಳನ್ನು ಬಲಪಡಿಸುವುದರತ್ತ ಪರಿಷತ್ತು ಗಮನವೀಯಬೇಕು. ಸ್ಥಳಾಭಾವದಿಂದಾಗಿ ಎಷ್ಟೋ ಜಿಲ್ಲೆಗಳಲ್ಲಿ ಜಿಲ್ಲಾಸಮಿತಿಗಳ ಚಟುವಟಿಕೆಗಳು ನಡೆಯದಂತಾಗಿದೆ. ಪ್ರತಿಯೊಂದು ಜಿಲ್ಲಾ ಸ್ಥಳದಲ್ಲೂ ಪರಿಷತ್ತಿನದೇ ಆದ ಒಂದು ಸಣ್ಣ ಕಟ್ಟಡ ನಿರ್ಮಿತವಾಗಬೇಕು. ಅದಕ್ಕೆ ೧ ಲಕ್ಷ ರೂ. ಸಾಕು. ಈ ಯೋಜನೆಗಾಗಿ ೨೦ ಲಕ್ಷ ರೂ. ಕೇಳಿದರೆ ಸರಕಾರ ಕೊಟ್ಟೇ ಕೊಡುತ್ತದೆ. ಶ್ರೀ ಹಂಪ. ನಾಗರಾಜಯ್ಯನವರಂಥ ಹುರುಪಿನ ಅಧ್ಯಕ್ಷರ ಅಧಿಕಾರಾವಧಿಯಲ್ಲಿಯೇ ಈ ಮಹತ್ವದ ಕಾರ್ಯ ನಡೆಯಬೇಕಾಗಿದೆ.

ಪರಿಷತ್ತಿನ ಚಟುವಟಿಕೆಗಳು

ಪರಿಷತ್ತು ಈಗ ಕೇವಲ ಸಾಹಿತ್ಯಕ ಸಂಸ್ಥೆಯಾಗಿ ಉಳಿದಿಲ್ಲ; ಅಖಿಲ ಕರ್ನಾಟಕ ಸ್ವರೂಪದ ಸಾಂಸ್ಕೃತಿಕ ಸಂಸ್ಥೆಯಾಗಿಯೂ ರೂಪುಗೊಳ್ಳುತ್ತಿದೆ. ಸಾಹಿತ್ಯ ಮತ್ತು ಕಲೆಗಳ ಅಭಿವೃದ್ಧಿಗಾಗಿ, ಸಂರಕ್ಷಣೆಗಾಗಿ ಅದು ದುಡಿಯುತ್ತಿದೆ. ಕಳೆದ ೯ ವರ್ಷಗಳಿಂದ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ತರಗತಿಗಳನ್ನೂ ನಡೆಸುತ್ತಿದೆ. ಪರಿಷತ್ತಿನ ಆಶ್ರಯದಲ್ಲಿ ಸಾಕ್ಷರತಾ ತರಗತಿಗಳೂ ನಡೆಯುತ್ತಿವೆಯೆಂದರೆ ಕೆಲವರಿಗೆ ಅಚ್ಚರಿಯೆನಿಸಬಹುದು. ಸಾಹಿತ್ಯಕ ಸಂಸ್ಥೆಗೆ ಈ ಉಪದ್ವ್ಯಾಪವೇಕೆ? ಎಂದು ಪ್ರಶ್ನಿಸುವ ದಡ್ಡರೂ ಇದ್ದಾರೆ. ಓದುವವರೇ ಇರದಿದ್ದರೆ ಇವರ ಸಾಹಿತ್ಯವನ್ನಾರು ಕೇಳುತ್ತಾರೆ? ಎಂದು ಇವರಿಗೆ ಉತ್ತರ ಕೊಡಬೇಕಾಗುತ್ತದೆ. ದತ್ತಿ ಉಪನ್ಯಾಸಗಳು, ಗಮಕ ತರಗತಿಗಳು, ಕನ್ನಡ ಪರೀಕ್ಷೆಗಳು, ಕೀರ್ತನ ಮಹೋತ್ಸವಗಳು, ಸಾಹಿತ್ಯ ಪ್ರದರ್ಶನಗಳು, ಅಂತರರಾಷ್ಟ್ರೀಯ ಪುಸ್ತಕವರ್ಷ, ಮಹಿಳಾ ವರ್ಷಗಳ ಆಚರಣೆ, ಕಳೆದ ಡಿಸೆಂಬರ್‌ನಲ್ಲಿ ನಡೆದ ಅಖಿಲ ಕರ್ನಾಟಕ ಮಕ್ಕಳ ಮೇಳ, ಅದಕ್ಕೂ ಮೊದಲು ನಡೆದ 'ದಲಿತ ಮಕ್ಕಳು' ಎಂಬ ವಿಚಾರ ಸಂಕಿರಣ-ಹೀಗೆ ಸದಾಕಾಲವೂ ಚಟುವಟಿಕೆಗಳಲ್ಲಿ ನಿರತವಾಗಿರುವ ಪರಿಷತ್ತು ಸರಕಾರದ ಸಾಂಸ್ಕೃತಿಕ ವಿಭಾಗದಂತೆಯೇ ಕೆಲಸ ಮಾಡುತ್ತಿದೆಯೆಂದರೆ ಅತಿಶಯೋಕ್ತಿಯಾಗದು. ಸಾಹಿತ್ಯ ಪರಿಷತ್ತು ಇದನ್ನೆಲ್ಲ ಮಾಡಬಾರದೆಂದು ವಾದಿಸುವವರೂ ಇದ್ದಾರೆ. ಅದು ಅವರ ಅಭಿಪ್ರಾಯ. ಕರ್ನಾಟಕದ ಮಟ್ಟದಲ್ಲಿ ವ್ಯಾಪಕವಾದ ರೀತಿಯಲ್ಲಿ ಸಾಹಿತ್ಯಕ, ಸಾಂಸ್ಕೃತಿಕ ಸೇವೆ ಸಲ್ಲಿಸುತ್ತಿರುವ ಪರಿಷತ್ತಿನ ಕಾರ್ಯಕರ್ತರನ್ನು ನಾವು ಮೆಚ್ಚಿಕೊಳ್ಳಲೇಬೇಕಾಗುತ್ತದೆ.

ಫ್ರೆಂಚ್ ಮಾದರಿ

ಕಳೆದ ವರ್ಷ ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷಪೀಠದಿಂದ ಮಾತನಾಡುತ್ತ ಶ್ರೀ ಗೋಪಾಲಕೃಷ್ಣ ಅಡಿಗರು-

"ನಾನಾ ಗ್ರಂಥಗಳು ಪ್ರಕಟವಾಗುತ್ತಿರುವ ಈ ಕಾಲದಲ್ಲಿ ಯಾವುದು ಸಾಹಿತ್ಯ, ಯಾವುದು ಸಾಹಿತ್ಯವಲ್ಲ, ಕೇವಲ ವರದಿ, ಕೇವಲ ಕೃತಕ ಎಂಬುದಾಗಿ ವಿಂಗಡಿಸಲು ಮಾಡುವ ಪ್ರಯತ್ನವೇ ನಾವು ನಮ್ಮ ಭಾಷೆಗೂ ಜನಕ್ಕೂ ಸಲ್ಲಿಸಬೇಕಾದ ಸೇವೆ, ಉಳಿದದ್ದೆಲ್ಲ ದ್ರೋಹ. ಈ ಕೆಲಸ ಸಾಹಿತ್ಯ ಪರಿಷತ್ತಿನಿಂದ ನಿರಂತರವಾಗಿ ನಡೆಯುತ್ತಲೇ ಇರಬೇಕು. ಈ ರೀತಿಯಲ್ಲಿ ಈ ಸಂಸ್ಥೆ ಮಾರ್ಪಾಟಾಗಲು ತಕ್ಕ ಏರ್ಪಾಟು ಆಗಬೇಕೆಂದು ನನ್ನ ಕಳಕಳಿಯ ಪ್ರಾರ್ಥನೆ"-ಎಂದು ಹೇಳಿದ್ದರು.

ಹನ್ನೊಂದು ತಿಂಗಳುಗಳ ಅಲ್ಪಾವಧಿಯಲ್ಲಿ ಇಂಥ ಮಾರ್ಪಾಟಾಗುವುದು ಶಕ್ಯವೇ ಇಲ್ಲವೆನ್ನುವುದು ಸ್ಪಷ್ಟವಿದೆ. ನೂತನವಾಗಿ ಸೃಷ್ಟಿಯಾಗುವ ಸಾಹಿತ್ಯದ ಮೌಲ್ಯಮಾಪನ ಕಾರ್ಯವನ್ನು ಪರಿಷತ್ತು ಮಾಡಬೇಕೆಂಬುದೇ ಶ್ರೀ ಅಡಿಗರ ಸೂಚನೆಯ

ತಿರುಳು. ಪರಿಷತ್ತು ಪಂಡಿತರ, ವಿದ್ವಾಂಸರ, ವಿಮರ್ಶಕರ, ಶ್ರೇಷ್ಠ ಸಾಹಿತಿಗಳ ಅತ್ಯುಚ್ಚ ನ್ಯಾಯಪೀಠವಾಗಲೆಂಬುದು ಅವರ ಆಶಯ.

"ಸಾಹಿತ್ಯ ಕೃತಿಗಳಿಗೆ ಸಂಬಂಧಪಟ್ಟ ವಿಮರ್ಶೆ, ಮೌಲ್ಯನಿರ್ಣಯ ಮುಂತಾದುವುಗಳಿಗಾಗಿಯೇ ಫ್ರೆಂಚ್ ಅಕಾಡೆಮಿಯ ರೀತಿಯ ಅತ್ಯುಚ್ಚ ಧೀಮಂತರ ಒಂದು ವಿಶಿಷ್ಟ ಸಂಸ್ಥೆಯನ್ನು ಸಾಹಿತ್ಯ ಪರಿಷತ್ತು ಸ್ಥಾಪಿಸಿ ಅದನ್ನು ಸ್ವತಂತ್ರವಾದ ಒಂದು ಸಣ್ಣ ಘಟಕವನ್ನಾಗಿ ನಡೆಸಿಕೊಂಡು ಬರುವುದು ಸಾಧ್ಯವಾದೀತೇ ಎಂದು ಪರೀಕ್ಷಿಸಿ ನೋಡಬೇಕು. ಇದು ತೀರ ದೊಡ್ಡ ಸಂಘವಾಗದೆ ಇಡೀ ಕರ್ನಾಟಕದಲ್ಲಿ ೧೦-೧೫ ಮಂದಿ ನಿಷ್ಪಕ್ಷಪಾತ ವಿದ್ವಾಂಸರಿಗೆ ಆ ಕೆಲಸ ಒಪ್ಪಿಸಬಹುದು ಎಂದು ಸೂಚಿಸಿದ್ದರು.

ಗ್ರಂಥಾಲಯ ಇಲಾಖೆ

ಈ ಕನ್ನಡ ಅಧ್ಯಯನ ಪೀಠಗಳ ಕನ್ನಡ ಸಾಹಿತ್ಯ ಪರಿಷತ್ತೂ ಸಾಹಿತ್ಯ ಅಕಾಡೆಮಿಯೂ ಪ್ರಕಟಿಸುವ ಪುಸ್ತಕಗಳ ಮಾರಾಟವೂ ಒಂದು ಸಮಸ್ಯೆಯೇ. ನಮ್ಮಲ್ಲಿ ಕೊಂಡು ಓದುವವರು ಕಡಿಮೆ. ೫೦-೬೦ ರೂ. ಬೆಲೆಯ ಪುಸ್ತಕಗಳನ್ನಂತೂ ಕೇವಲ ಗ್ರಂಥಾಲಯಗಳೇ ಕೊಳ್ಳಬೇಕು. ನಮ್ಮ ಸರಕಾರದ ಗ್ರಂಥಾಲಯ ಇಲಾಖೆ ಕಳೆದ ಹಲವು ವರ್ಷಗಳಿಂದ ಅತ್ಯಂತ ಸಮರ್ಥವಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ.

ಸಮುದಾಯ

"ಸಮುದಾಯ"ದ ಕಲಾವಿದರು ತಮ್ಮ ಕ್ರಾಂತಿಕಾರಕ ನಾಟಕಗಳನ್ನಾಡುತ್ತ ಕರ್ನಾಟಕದಲ್ಲೆಲ್ಲ ಯಾತ್ರೆ ಮಾಡಿದುದು ಇತ್ತೀಚೆಗಿನ ಇತಿಹಾಸದಲ್ಲಿ ಮಹತ್ವದ ಘಟ್ಟ. ಓದುಬರಹ ಅರಿಯದ ನಮ್ಮ ಹಳ್ಳಿಗರನ್ನೂ ಬಡಜನರನ್ನೂ ಜಾಗೃತಗೊಳಿಸಲು "ಸಮುದಾಯ"ದಂಥ ಪ್ರಾಮಾಣಿಕ ಪ್ರಯತ್ನಗಳು ಎಲ್ಲ ಕಡೆಗಳಲ್ಲೂ ನಡೆಯಬೇಕು.

ಮಾನವನ ಭವಿತವ್ಯದ ಬಗೆಗೆ ಪೂರ್ಣ ನಂಬುಗೆಯಿರಿಸಿಕೊಂಡು ನಾವು ಮುಂದುವರಿಯಬೇಕು. ನಮ್ಮಿಂದ ಮಾತ್ರವೇ ಲೋಕದ ಉದ್ಧಾರ-ಎಂಬ ಸಂಕುಚಿತ ಭಾವನೆಯು ಯಾರಿಗೂ ಸಲ್ಲದು. ತಮತಮಗೆ ಸರಿಯೆನಿಸಿದ ರೀತಿಯಲ್ಲಿ ಅನೇಕರು, ಅನೇಕ ಸಂಸ್ಥೆಗಳು ಮಾನವನ ಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ. "ನೂರು ಹೂಗಳು ಅರಳಲಿ" ಎಂಬುದೇ ಸರಿಯಾದ ನಿಲುಮೆ.

ಕನ್ನಡ ಸಾಹಿತ್ಯ ಪರಿಷತ್ತು ಈ ದಿಸೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದೆ. ಇನ್ನಿತರ ಸಂಸ್ಥೆಗಳೂ ತಮ್ಮಿಂದಾಗುವುದನ್ನು ಮಾಡಲಿ. ಆದರೆ, ಪರಿಷತ್ತನ್ನು ವಿರೋಧಿಸುವ ಅಸಹಕಾರದ ನಿಲುಮೆಯನ್ನು ಮಾತ್ರ ಯಾರೂ ತಳೆಯಬಾರದು.

ಆಲೂರವರ ಜನ್ಮಶತಮಾನೋತ್ಸವ

ಮರಾಠೀಮಯವಾಗಿದ್ದ ಉತ್ತರ ಕರ್ನಾಟಕದ ಕನ್ನಡಿಗರನ್ನು ತಮ್ಮ ಲೇಖನಗಳಿಂದಲೂ ಭಾಷಣಗಳಿಂದಲೂ 'ಜಯ ಕರ್ನಾಟಕ' ಪತ್ರಿಕೆಯಿಂದಲೂ ಜಾಗೃತಗೊಳಿಸಿ, ಈ ಶತಮಾನದ ಆದಿಭಾಗದಲ್ಲಿ ಕನ್ನಡ ಚಳವಳಿಯ ಮಹಾ ಮುಖಂಡರಾಗಿ ದುಡಿದು ಅಮರರಾದ ಆಲೂರು ವೆಂಕಟರಾಯರ ಜನ್ಮಶತಮಾನೋತ್ಸವವು ಈ ವರ್ಷದ ಜುಲೈ ತಿಂಗಳಿನಿಂದ ಮುಂದಿನ ವರ್ಷ ಜೂನ್ ತಿಂಗಳಿನವರೆಗೆ ಕರ್ನಾಟಕದಲ್ಲೆಲ್ಲ ವಿಜೃಂಭಣೆಯಿಂದ ಜರುಗಲಿದೆ. ಅದಕ್ಕಾಗಿ ಹಲವಾರು ಸಮಿತಿಗಳು ರಚಿತವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತು ಸಹ ಒಂದು ಕೇಂದ್ರ ಸಮಿತಿ ರಚಿಸಿ ಈ ಬಗೆಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ.


ಹಳಕಟ್ಟಿಯವರ ಜನ್ಮಶತಮಾನೋತ್ಸವ

ದಿ॥ ಫ.ಗು. ಹಳಕಟ್ಟಿಯವರೂ, ದಿ॥ ಆಲೂರವರೂ ಓರಗೆಯವರು; ಒಂದೇ ಸಂವತ್ಸರದಲ್ಲಿ ಜನಿಸಿದವರು. ವಚನ ಸಾಹಿತ್ಯವನ್ನು ಬೆಳಕಿಗೆ ತರುವುದರ ಮೂಲಕ ಹಳಕಟ್ಟಿಯವರು ಕನ್ನಡಕ್ಕೆ ಸಲ್ಲಿಸಿದ ಸೇವೆ ಚಿರಸ್ಮರಣೀಯ. ಮರಾಠೀಮಯವಾಗಿದ್ದ ಪ್ರದೇಶಗಳಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಲೂ ಅವರು ಪ್ರಯತ್ನಪಟ್ಟಿದ್ದರು. ಅವರು ಬದುಕಿ-ಬಾಳಿ ಕೊನೆಯುಸಿರೆಳೆದ ವಿಜಾಪುರದಲ್ಲಿ ಅವರಿಗಾಗಿ ಸ್ಮಾರಕ ರಚಿಸಲು ಸಿದ್ಧತೆ ನಡೆಯುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತೂ ಸಹ ಒಂದು ಕೇಂದ್ರ ಸಮಿತಿ ರಚಿಸಿ ಸಿದ್ಧತೆ ಮಾಡಿಕೊಳ್ಳುತ್ತಿದೆ. ದಿ॥ ಆಲೂರರವರ ಜನ್ಮಶತಮಾನೋತ್ಸವದಂತೆಯೇ ದಿ॥ ಹಳಕಟ್ಟಿಯವರ ಜನ್ಮಶತಮಾನೋತ್ಸವವನ್ನೂ ಸಾಹಿತ್ಯ ಪರಿಷತ್ತು, ಇನ್ನಿತರ ಸಂಸ್ಥೆಗಳು ವಿಶಿಷ್ಟವಾದ ರೀತಿಯಲ್ಲಿ ಜರುಗಿಸಬೇಕು.

❖❖

೫೩ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಪು.ತಿ ನರಸಿಂಹಾಚಾರ್



ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಪುತಿನ ಅವರು (ಪುರೋಹಿತ ತಿರುನಾರಾಯಣ ನರಸಿಂಹಾಚಾರ್) ತಿರುನಾರಾಯಣ ಅಯ್ಯಂಗಾರ್-ಶಾಂತಮ್ಮ ದಂಪತಿಗಳ ಪುತ್ರರಾಗಿ ೧೭-೩-೧೯೦೫ರಲ್ಲಿ ಮೇಲುಕೋಟೆಯಲ್ಲಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸವನ್ನು ಮೇಲುಕೋಟೆ ಮತ್ತು ಮೈಸೂರಿನಲ್ಲಿ ಮುಗಿಸಿದ ನಂತರ ಬಿ.ಎ. ಪದವಿಯನ್ನು ಗಳಿಸಿದ ಮೇಲೆ ಗೋರಕ್ಷಕ ಸಮಿತಿಯಲ್ಲಿ ಗುಮಾಸ್ತರಾಗಿ ಕಾರ್ಯನಿರ್ವಹಿಸಿದರು. ಅನಂತರ ಸೈನ್ಯದ ಮುಖ್ಯಾಧಿಕಾರಿಗಳ ಕಚೇರಿಯಲ್ಲಿ ಕೆಲಸಕ್ಕೆ ಸೇರಿದರು. ಅದೇ ಕಚೇರಿಯಲ್ಲಿ ೧೯೩೮ರಲ್ಲಿ ವ್ಯವಸ್ಥಾಪಕರಾಗಿಯೂ ೧೯೪೫ರಲ್ಲಿ ಅಧೀಕ್ಷಕರಾಗಿಯೂ ಕೆಲಸ ಮಾಡಿದರು. ಅನಂತರ ೧೯೫೭ರಲ್ಲಿ ಶಾಸನ ಸಭಾ ಕಚೇರಿಯ ಸಂಪಾದಕರೂ ಆದರು. ೧೯೬೩ರಿಂದ ೧೯೬೬ವರೆಗೆ ಕನ್ನಡ ವಿಶ್ವಕೋಶದ ಕಚೇರಿಯಲ್ಲಿ ಭಾಷಾಂತರಕಾರರಾಗಿ, ೧೯೬೬ರಿಂದ ೧೯೭೧ವರೆಗೆ ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್-ಕನ್ನಡ ನಿಘಂಟಿನ ಸಂಪಾದಕ ವರ್ಗದಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸಿದರು. ಹೀಗೆ ನಿರಂತರವಾಗಿ ಕಚೇರಿಯಲ್ಲಿ ಉದ್ಯೋಗಿಯಾಗಿದ್ದರೂ, ಕವಿಯಾಗಿ ಅನೇಕ ಕೃತಿಗಳನ್ನು ರಚಿಸುತ್ತಾ ಬಂದು ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರೆನಿಸಿದರು.

ಇವರು ರಚಿಸಿದ 'ಹಂಸದಮಯಂತಿ ಮತ್ತು ಇತರ ರೂಪಕಗಳು' ಎಂಬ ಕೃತಿಗೆ ೧೯೬೫ರಲ್ಲಿ ಕೇಂದ್ರ ಸಾಹಿತ್ಯಾ ಅಕಾಡೆಮಿ ಬಹುಮಾನವೂ, ೧೯೬೬ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನವೂ ಲಭಿಸಿದವು. ೧೯೭೧ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿತು. ೧೯೮೧ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ೫೩ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆ ಆದರು. ೧೯೯೦ರಲ್ಲಿ ಕೇಂದ್ರ ಸರಕಾರ ಪದ್ಮಶ್ರೀ ಪ್ರಶಸ್ತಿ ನೀಡಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್, ೧೯೯೧ರಲ್ಲಿ ಇವರ ಸೃಜನಶೀಲ ಕೃತಿ ಶ್ರೀ ಹರಿಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ ದೊರೆಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯದ ಗೌರವಕ್ಕೂ ಪಾತ್ರರಾಗಿದ್ದಾರೆ.

ಕನ್ನಡ, ತಮಿಳು, ಇಂಗ್ಲಿಷ್, ಸಂಸ್ಕೃತ, ಫ್ರೆಂಚ್ ಭಾಷೆಗಳಲ್ಲಿ ಪರಿಣಿತಿ ಹೊಂದಿದ್ದ ವಿದ್ವಾಂಸರಾದ ಪು.ತಿ.ನ. ಅವರು ಗೇಯಕಾವ್ಯ ನಾಟಕ ಪ್ರಬಂಧ ಕ್ಷೇತ್ರಗಳಲ್ಲಿ ವಿಶಿಷ್ಟ ಕೃತಿಗಳನ್ನು ರಚಿಸಿದ್ದಾರೆ. ಅವರ ಕೆಲವು ಪ್ರಸಿದ್ಧ ಕೃತಿಗಳು ಹೀಗಿವೆ : ಗೋಕುಲ ನಿರ್ಗಮನ, ಸತ್ಯಾಯನ ಹರಿಶ್ಚಂದ್ರ, ಹಂಸದಮಯಂತಿ ಮತ್ತು ಇತರ ರೂಪಕಗಳು, ಅಹಲ್ಯೆ, ಶ್ರೀರಾಮ ಪಟ್ಟಾಭಿಷೇಕ ಮೊದಲಾದ ಗೀತ ರೂಪಕಗಳು, ರಥ ಸಪ್ತಮಿ ಮತ್ತು ಇತರ ಚಿತ್ರಗಳು (೧೯೪೫), ಈಚಲು ಮರದ ಕೆಳಗೆ (೧೯೪೯), ಧೇನುಕ ಪುರಾಣ (೧೯೪೭), ಇತ್ಯಾದಿ ಪ್ರಬಂಧಗಳು, ಕಾವ್ಯಕುತೂಹಲ, ರಸಪ್ರಜ್ಞೆ, ದೀಪರೇಖೆ ಇತ್ಯಾದಿ ವಿಮರ್ಶಾ ಗ್ರಂಥಗಳು, ಹತ್ತಾರು ವರ್ಷಗಳ ಪರಿಶ್ರಮದಿಂದ ರಚಿಸಿದ ಅನುವಾದಗಳು- ಕನ್ನಡ ಭಗವದ್ಗೀತೆ, ಸಮಕಾಲೀನ ಭಾರತೀಯ ಸಾಹಿತ್ಯ.

ಪು.ತಿ.ನ. ಅವರು ಬೆಂಗಳೂರಿನಲ್ಲಿ ೧೩-೧೦-೧೯೯೮ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫೩,
ಅಧ್ಯಕ್ಷರು, ಪು.ತಿ. ನರಸಿಂಹಾಚಾರ್
ದಿನಾಂಕ ೧೩, ೧೪, ೧೫ ಮಾರ್ಚ್ ೧೯೮೧,
ಸ್ಥಳ : ಚಿಕ್ಕಮಗಳೂರು

ಕನ್ನಡ ನಾಡಿನಲ್ಲಿ ಕನ್ನಡದ ಸ್ಥಿತಿಗತಿ

ಅರವತ್ತಾರು ವರ್ಷಗಳ ಹಿಂದೆ ಈ ಪರಿಷತ್ತು ನಾಡುನುಡಿಗಳ ಭಕ್ತಶ್ರೇಷ್ಠರಿಂದ ಸ್ಥಾಪಿತವಾಗಿದ್ದು ಇಂದಿನವರೆಗೂ ವರುಷವರುಷಕ್ಕೆ ಬಲಗೊಂಡು ಬೆಳೆಯುತ್ತಾ ಬರುತ್ತಿದೆ. ನಾಡಿನ ಮತ್ತು ನುಡಿಗಳ ಪ್ರಗತಿಗೆ ಎದುರು ಹಾಯುತ್ತಿದ್ದ ಅಸತ್ ಪ್ರವೃತ್ತಿಗಳನ್ನು ಪ್ರತಿಭಟಿಸುವ ಸಲುವಾಗಿ ಆ ಸತ್‌ಪುರುಷರಿಂದ ಈ ಪರಿಷತ್ತು ನಿರ್ಮಾಣವಾಯಿತು. ಅಂಥವರು ತಮ್ಮ ಸೂಕ್ಷ್ಮ ಸಂವೇದನೆಗಳಿಂದ ಗುರುತಿಸಿದ್ದ ಹಾನಿಕರವಾದ ಓಲುವೆಗಳು ಇಂದಿಗೂ ನಾಶಹೊಂದಿಲ್ಲ. ಅದಕ್ಕೆ ಬದಲು ವರ್ಧಿಸುತ್ತಿರುವಂತೆಯೇ ತೋರುತ್ತಿದೆ. ೧೯೧೫ರಲ್ಲಿ ಪರಿಷತ್ತಿನ ಸಂಸ್ಥಾಪಕರಾದ ಶ್ರೀಮಾನ್ ಎಚ್.ವಿ. ನಂಜುಂಡಯ್ಯನವರು ಆರಂಭದಲ್ಲೇ ಇಂಗ್ಲಿಷಿನ ವ್ಯಾಮೋಹದಿಂದ ಕನ್ನಡಕ್ಕೆ ಉಂಟಾಗಬಹುದಾದ ಕೇಡನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಸಂಸ್ಕೃತದಿಂದ ಕನ್ನಡಕ್ಕೆ ಆಗುವ ಉಪಕಾರವೂ ಅಷ್ಟರಲ್ಲೇ ಇದೆ ಎಂದು ಹೇಳಿ ಸಂಸ್ಕೃತದ ವಿದ್ವಾಂಸರು ಕನ್ನಡದ ವಿಷಯದಲ್ಲಿ ತಳೆದಿದ್ದ ತಾತ್ಸಾರ ಭಾವವನ್ನು ತಿವಿದಿದ್ದಾರೆ.

ಕಾಸರಗೋಡು ಸಮಸ್ಯೆ

ಇನ್ನು ನಮ್ಮ ಪರಿಷತ್ತಿನ ಮತ್ತೊಂದು ಧ್ಯೇಯವಾದ ಕನ್ನಡಿಗರೆಲ್ಲರೂ ಒಂದು ಅಖಂಡ ರಾಜ್ಯದಲ್ಲಿ ಒಂದುಗೂಡುವ ಬಯಕೆ ಪೂರ್ಣವಾಗಿ ನೆರವೇರಿದೆಯೇ ಎಂಬುದನ್ನು ಸ್ವಲ್ಪ ಆಲೋಚಿಸೋಣ. ನಮ್ಮ ಪರಿಷತ್ತು ಆರಂಭದಿಂದಲೇ ನುಡಿಯ ಜೊತೆಗೆ ನಾಡಿನ ವಿಷಯವನ್ನೂ ತಲೆಗೆ ಹಚ್ಚಿಕೊಂಡಿದೆ. ಅನ್ಯರಾಜ್ಯಗಳಲ್ಲಿ ಖಂಡತುಂಡವಾಗಿ ಚೆದರಿಹೋಗಿದ್ದ ಕನ್ನಡಿಗರ ನೆಲೆಗಳನ್ನು ಒಂದೇ ಒಂದು ಆಡಳಿತ ವ್ಯವಸ್ಥೆಗೆ ತರುವ ಹಂಬಲವನ್ನು ಅರವತ್ತಾರು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ತು ತಳೆದಿದೆ. ಈ ಆಸೆ ತೀರಿ ಚೆದರಿದ ಕನ್ನಡ ಭಾಗಗಳು ರಭಸದಿಂದ ಒಂದುಗೂಡುತ್ತಿರುವಾಗ ಕೆಲವು ಚೂರುಗಳು ಕಿತ್ತುಹೋಗಿ ಇದ್ದಲ್ಲೆ ಉಳಿದುಕೊಂಡಿವೆ. ಆ ಗಾಸಿಯ ವೇದನೆಯನ್ನು ಅವು ಹಾಗೂ ಒಟ್ಟು ನಾಡು ಪಡುತ್ತಿವೆ. ತಜ್ಞರ ಪರಿಹಾರ ಸೂತ್ರ ಕಾರ್ಯಗತವಾಗಿಲ್ಲ. ಇದರಲ್ಲಿ ಯಾವ ರಾಜಕೀಯ ರಹಸ್ಯವಡಗಿದೆಯೋ ನಮಗೆ ಗೊತ್ತಿಲ್ಲ ಮೇಲುನೋಟಕ್ಕೆ ಇದು ಸರಳವಾಗಿ ಕಾಣುತ್ತಿದೆ. ಕನ್ನಡ ನೆಲೆಗಳು ಒಂದಾದಾಗಿನಿಂದ ಇದುವರೆಗೂ ಕಾಸರಗೋಡು ಕರ್ನಾಟಕದೊಂದಿಗೆ ಸೇರಿಕೊಳ್ಳಬೇಕೆಂಬ ಹೆಬ್ಬಯಕೆಯನ್ನು ಅನೇಕಬಾರಿ ಇಂಥ ಅನೇಕ ಸಮ್ಮೇಳನಗಳಲ್ಲಿ ತೋಡಿಕೊಂಡಿದೆ. ಯಾವ ಪ್ರಭಾವಕ್ಕೆ ಮರುಳಾಗಿ ಕೇಂದ್ರ ಸರ್ಕಾರ ಕಾಸರಗೋಡನ್ನು ಕೇರಳದಲ್ಲೇ ಪ್ರಾರಂಭದಲ್ಲಿ ಉಳಿಸಿತೋ, ಈಗೇಕೆ ಮಹಾಜನ ವರದಿಯ ತೀರ್ಮಾನವನ್ನು ಸ್ಥಗಿತಗೊಳಿಸಿದೆಯೋ ಕಾಣೆವು. ಈ ಪ್ರಭಾವ ಮೊದಲಿನಷ್ಟೆ ಈಗಲೂ ಶಕ್ತಿಯುತವಾಗಿದೆಯೇ ಆ ಪ್ರಭಾವವನ್ನು ಯಾವ ಪ್ರತಿಪ್ರಭಾವದಿಂದ ದುರ್ಬಲಗೊಳಿಸಿ ಆ ಕೀರ್ತಿವೆತ್ತ ಭಾಗದವರ ಮಹದಾಶಯವನ್ನು ಈಡೇರಿಸಬಹುದು? ಕಾಸರಗೋಡನ್ನು ತುಂಬಿರುವ ಕನ್ನಡ ಜನ ತಾವು ಕೇರಳದಲ್ಲಿ ಬಯಲು ಬಂದೀಖಾನೆಯಲ್ಲಿರುವಂತಿರಬಾರದಷ್ಟೆ. ಸ್ವತಂತ್ರ ಭಾರತಕ್ಕೆ ಇದು ಭೂಷಣವೇ? ನಮ್ಮ ಮುಖ್ಯಮಂತ್ರಿಗಳು ಈ ದಿಶೆಯಲ್ಲಿ ತಟಸ್ಥರಾಗಲಾರರು. ಅವರ ಹೇಳಿಕೆಗಳು ತುಂಬ ಆಶಾದಾಯಕವಾಗಿವೆ. ಪ್ರಭಾವಶಾಲಿಗಳೂ ಚತುರರೂ ಆದ ಇವರು ನ್ಯಾಯವಾಗಿ ನಮಗೆ ಸಂದಿರುವುದನ್ನು ಯಾವ ಸಂಶಯಕ್ಕೂ ಎಡೆಕೊಡದೆ ಉಳಿಸಿಕೊಂಡು ನ್ಯಾಯವಾಗಿ ಬರಬೇಕಾದ ಭಾಗಗಳನ್ನು ಗಳಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ ಬಹುಕಾಲದ ಪೂಣ್ಕೆಯನ್ನು ಸಲ್ಲಿಸುತ್ತಾರೆಂದು ನನಗನ್ನಿಸುತ್ತದೆ. ನ್ಯಾಯದ ವಿಷಯದಲ್ಲಿ ದಿಟ್ಟತನದ ನಿಲುವು, ಜತೆಗೆ ಸ್ನೇಹಹಸ್ತ, ಇಲ್ಲಿದೆ ನಮ್ಮ ರಾಜನೀತಿಯ ನೈಪುಣ್ಯ.

ಕನ್ನಡದಲ್ಲಿ ವೈಜ್ಞಾನಿಕ ಜ್ಞಾನಪ್ರಸರಣ

ವೈಜ್ಞಾನಿಕ ಜ್ಞಾನ ಬೆಳೆದಂತೆಲ್ಲ ಬಾಹ್ಯ ಜಗತ್ತಿಗೂ ಮಾನವ ಜೀವಿತಕ್ಕೂ ಇರುವ ಅನಿವಾರ್ಯ ಸಂಬಂಧಗಳಲ್ಲಿ ಅಂಧಶ್ರದ್ಧೆ ಕಡಿಮೆಯಾಗಿ ಅಂತರಾತ್ಮೋಪಾಸನೆ ಬೆಳೆಯುತ್ತದೆ ನಮ್ಮ ಜನದಲ್ಲಿ. ಈ ವೈಜ್ಞಾನಿಕ ಜ್ಞಾನವನ್ನು ಕನ್ನಡನುಡಿಗೆ ತುಂಬಿ ಜನರ ಇಂಗ್ಲಿಷ್ ವ್ಯಾಮೋಹವನ್ನು ತಪ್ಪಿಸುವಲ್ಲಿ ನಮ್ಮ ವಿದ್ವಾಂಸರು ಪ್ರವೃತ್ತರಾಗಿರುವುದು ತುಂಬ ನೆಮ್ಮದಿಯ ಸಂಗತಿ.

ಕನ್ನಡ ನಾಡಿನ ಮೇಲ್ಮೆಗೆ ದುಡಿಯುತ್ತಿರುವ ಈ ಸಾಹಿತ್ಯ ಪರಿಷತ್ತು ಈ ಕೆಲಸಗಳನ್ನು ತನ್ನ ಗಮನಕ್ಕೆ ತಂದುಕೊಳ್ಳುವುದೂ ಜನರಲ್ಲಿ ಪ್ರಸಾರ ಮಾಡುವುದೂ ಆವಶ್ಯಕ.

ಪರಿಷತ್ತು ಸಂಪರ್ಕ ಮಾಧ್ಯಮ ಆಗಬೇಕು

ಕನ್ನಡವನ್ನು ವಿದ್ಯಾಭ್ಯಾಸದ ಎಲ್ಲ ಸ್ತರಗಳಲ್ಲೂ ಮಾಧ್ಯಮವಾಗಿ ತರಲು ಇವು ತಕ್ಕ ಮಾನಸಿಕ ಪರಿಸರವನ್ನು ಸೃಜಿಸುತ್ತಿವೆ. ಕನ್ನಡ ನಾಡು ಮಿಕ್ಕ ಸ್ವತಂತ್ರ ದೇಶಗಳಂತೆ, ತನ್ನ ಬದುಕಿಗೆ ಬೇಕಾದ ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳನ್ನು ಸ್ವತಂತ್ರ ದೇಶಗಳಂತೆ, ತನ್ನ ಬದುಕಿಗೆ ಬೇಕಾದ ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳನ್ನು ಸ್ವತಂತ್ರವಾಗಿ ತಮ್ಮ ತಾಯಿ ನುಡಿಯಲ್ಲೇ ಚಿಂತಿಸಬಲ್ಲ ವೈಜ್ಞಾನಿಕರನ್ನು ಪಡೆಯಬೇಕು. ತಿಳಿವಳಿಕೆಯ ವಿಷಯದಲ್ಲಿ ಆಮದೂ ರಫ್ತೂ ಸಮವಾದ ಹೊರತು ಕನ್ನಡನಾಡು ಪ್ರೌಢ ದೇಶಗಳ ನಕ್ಷೆಗೆ ಸೇರಲಾರದು. ಈ ದಿಸೆಯಲ್ಲಿ ವಿಜ್ಞಾನಿಗಳು ಸ್ಫೂರ್ತಿಯನ್ನು ಪಡೆಯಬೇಕಾದರೆ ಗ್ರಾಮಸ್ಥರೊಡನೆ ಸರಾಗವಾಗಿ ಮಿಳಿತರಾಗಬೇಕು. ಸಾಹಿತ್ಯ ಪರಿಷತ್ತು ಇಂಥ ಸಂಪರ್ಕ ತರುವಲ್ಲಿ ಹೆಚ್ಚು ಆಸಕ್ತಿ ವಹಿಸಿದರೆ ನಾಡಿಗೆ ತುಂಬ ಉಪಕಾರವಾಗುತ್ತದೆ. ಇದಕ್ಕುಪಾಯ ಆದಷ್ಟು ಮಂದಿ ಪ್ರೌಢವಿಜ್ಞಾನಿಗಳನ್ನು ತನ್ನ ಸದಸ್ಯತ್ವಕ್ಕೆ ಸೇರಿಸಿಕೊಳ್ಳುವುದು.

ಕಸುಬಿನವರ ಪದಕೋಶ

ಸಾಹಿತ್ಯ ಪರಿಷತ್ತು ಈ ದೆಸೆಯಲ್ಲಿ ಮಾಡಬಹುದಾದ ಮತ್ತೊಂದು ಕೆಲಸ ನನಗೆ ಮುಖ್ಯವೆನಿಸುತ್ತದೆ. ಹಿಂದಿನ ನಮ್ಮ ಭಾರತದ ಐಶ್ವರ್ಯವೆಲ್ಲ ಕಸುಬುದಾರರಿಂದ ಸಂಪಾದಿತವಾದದ್ದು. ನಾವು ಈಗ ವಿದೇಶೀಯರಿಗೆ ಮೆರೆಸುತ್ತಿರುವುದೂ ಗುಡಿ ಗೋಪುರ ವಿಗ್ರಹಾದಿಗಳ ಆ ಮಹಾ ಸಂಪತ್ತನ್ನೇ. ಈಗ ಪರಿಷತ್ತು ಗ್ರಂಥಸ್ಥವಾಗಿರುವ ಕನ್ನಡ ಪದಗಳ ಬೃಹತ್‌ಕೋಶವನ್ನು ಸಂಪಾದಿಸಿ ಪ್ರಕಟಿಸುತ್ತಿದೆ. ಇದರ ಜತೆಗೆ ಕಸಬುದಾರರ ಪದಕೋಶವೊಂದನ್ನು–ಅಕ್ಕಸಾಲೆ, ಬಡಗಿ, ಕಂಚುಗಾರ, ಕಮ್ಮಾರ, ಕುಂಬಾರ, ಕೃಷಿಕ, ನೂಲುಗಾರ, ನೇಯ್ಗೆಯವ, ಬಳೆಗಾರ, ದರ್ಜಿ, ಗೌಳಿಗ, ಮೇದರವ, ಕ್ಷೌರಿಕ, ವಾದ್ಯಗಾರ ಮುಂತಾದವರು ಉಪಯೋಗಿಸುವ ವಸ್ತುಗಳ ಕ್ರಿಯೆಗಳ ಬೋಧನಾಕ್ರಮ ಮೊದಲಾದುವುಗಳಲ್ಲಿ ಬಳಸುವ ಮಾತುಗಳ ಹಾಗೂ ಆಧುನಿಕ ಯಂತ್ರಗಳೊಡನೆ ಸರಸವಾಡುವ ಕಾರ್ಮಿಕರು ಉಪಯೋಗಿಸುವ ತದ್ಭವಗಳ ಪಟ್ಟಿಗಳನ್ನು ಅಗತ್ಯ ಸಂಗ್ರಹಿಸಿ ಕೋಶಗಳನ್ನು ತಯಾರಿಸಿದರೆ ಒಂದು ಅಪರಿಚಿತವೂ ಅದ್ಭುತವೂ ಜೀವಪೂರ್ಣವೂ ಆದ ಜಗತ್ತು ನಮಗೆ ಗೋಚರಿಸಿತು. ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆ ವೃತ್ತಿಪದಕೋಶವನ್ನು ರಚಿಸಲು ತೊಡಗಿದೆ ಎಂದು ಕೇಳಿ ಹರ್ಷಿತನಾದೆ. ಪರಿಷತ್ತೂ ಇದರಲ್ಲಿ ಭಾಗಿಯಾದರೆ ಒಳ್ಳೆಯದು. ಜತೆಗೆ ಸಂಗೀತಗಾರರೂ ವೀಣಾ ವೇಣು ಮೃದಂದಗಾದಿ ವಾದ್ಯಪಟುಗಳೂ ತಮ್ಮ ಶಿಷ್ಯರಿಗೆ ಕಲಿಸುವಾಗ ಉಪಯೋಗಿಸುವ ದೇಶೀ ಪಾರಿಭಾಷಿಕ ಶಬ್ದಗಳೂ ಇವುಗಳಲ್ಲಿ ಬರಬಹುದು. ಈ ಕೆಲಸದ ಹರಹು ತುಂಬ ಹೆಚ್ಚು. ಕ್ಷೇತ್ರಗಳನ್ನು ವಿಭಾಗಿಸಿಕೊಂಡು ಪರಿಷತ್ತು ಹಾಗೂ ಅಧ್ಯಯನ ಸಂಸ್ಥೆಗಳು ಈ ಕೆಲಸಕ್ಕೆ ತೊಡಗಬಹುದು. ಇದರಿಂದ ಅವುಗಳ ಕೀರ್ತಿಯೂ ವ್ಯಾಪ್ತಿಯೂ ಹೆಚ್ಚುತ್ತದೆ. ಅಲ್ಲದೆ ಗ್ರಾಮಸ್ಥರೊಡನೆ ವ್ಯವಹರಿಸುವಾಗ ಇಂಗ್ಲಿಷೊಂದನ್ನೇ ಆಶ್ರಯಿಸಿರುವ ಆಧುನಿಕ ವಿಜ್ಞಾನಿಗಳಿಗೆ ತಮ್ಮ ಬೋಧನೆಗೆ ತಕ್ಕ ಪಾರಿಭಾಷಿಕ ಶಬ್ದಗಳೂ ಸಿಕ್ಕುತ್ತವೆ.

ವಿಮರ್ಶಾ ಮಂಡಲಿ

ಈ ವಿಷಯವನ್ನು ಕುರಿತು ಚಿಂತಿಸುವಾಗ ಗೋಪಾಲಕೃಷ್ಣ ಅಡಿಗರ ಒಂದು ಸಲಹೆ ನೆನಪಿಗೆ ಬರುತ್ತದೆ. ಸದ್ಗ್ರಂಥಗಳ ಗುಣ ಮೌಲ್ಯಗಳ ನಿಷ್ಕರ್ಷೆಗಾಗಿ ಒಂದು ವಿದ್ವನ್ಮಂಡಲಿ ಇರಬೇಕೆಂದು ಅವರು ಅಪೇಕ್ಷೆ ಪಡುತ್ತಾರೆ. ಆದರೆ ಕಟ್ಟೀಮನಿಯವರು ಇಂಥ ಹೊಸ ಮಂಡಲಿ ಬೇಡ ಎನ್ನುತ್ತಾರೆ. ನನ್ನ ಅಭಿಪ್ರಾಯವೂ ಕಟ್ಟೀಮನಿಯವರತ್ತ ವಾಲುತ್ತದೆ. ಕವಿಗಳೂ ಕೃತಿಕಾರರೂ ಯಾವ ವಿದ್ವನ್ಮಂಡಲಿಯ ಅಥವಾ ಸಂಘಸಂಸ್ಥೆಗಳ ಪ್ರಭಾವಕ್ಕೂ ಒಳಗಾಗಬಾರದು. ಅವರ ಸ್ವಾತಂತ್ರ್ಯ ಕೆಡುತ್ತದೆ. ಸೃಜನಶಕ್ತಿ ಕುಗ್ಗುತ್ತದೆ. ಪ್ರತಿಭಾಶಾಲಿಗಳು ಎಲ್ಲ ಸಂಘ ಸಂಸ್ಥೆಗಳಿಂದಲೂ ಹೊರಗುಳಿಯುವುದು ಒಳಿತು. ಮಾನವ ಸಹಜವಾಗಿಯೇ ಗುಣ ಪಕ್ಷಪಾತಿ. ಆ ನಂಬಿಕೆಯಲ್ಲಿ ಸಾಹಿತಿಗಳು ನಡೆದರೆ ಅವರಿಗೂ ಕುಶಲ, ನುಡಿಗೂ ಸಿರಿವಂತಿಕೆ.

ಕನ್ನಡದ ಸುಪುತ್ರರಿಬ್ಬರ ಜನ್ಮಶತಾಬ್ದಿ

ಕಳೆದ ವರ್ಷ ಪರಿಷತ್ತು ಮತ್ತು ವಿಶ್ವವಿದ್ಯಾನಿಲಯಗಳ ಅಧ್ಯಯನ ಸಂಸ್ಥೆಗಳೂ ಅಕಾಡೆಮಿಯೂ ಇತರ ಸಂಘಸಂಸ್ಥೆಗಳೂ ಕನ್ನಡನಾಡಿನ ಮಹಾಮಹಿಮರಾದ ಇಬ್ಬರು ಸುಪುತ್ರರ ಜನ್ಮಶತಾಬ್ದಿಯನ್ನು ಸಡಗರದಿಂದ ಆಚರಿಸಿ ಧನ್ಯವಾಯಿತು. ಶ್ರೀ ಆಲೂರು ವೆಂಕಟರಾಯರು ಅಸಾಮಾನ್ಯ ಪುರುಷರು. ಶ್ರೀ ಹಳಕಟ್ಟಿಯವರು ವಚನಗಳ ಪ್ರಕಟನೆಯಲ್ಲಿ ತೋರಿಸಿದ

ತ್ಯಾಗ, ಸಹನೆ, ತಪೋನಿಷ್ಠೆಗಳು ಅಸಾಧಾರಣವಾದವು. ವಚನಗಳ ಸಂಪಾದನೆ ಮತ್ತು ಪ್ರಕಟನೆ ಬಹು ಮಹತ್ವದ ಕೆಲಸ. ಅವುಗಳ ಪ್ರಭಾವದಿಂದ ಎಷ್ಟೊಂದು ಹುಲುಸಾಗಿದೆ ಕನ್ನಡ ಸಾಹಿತ್ಯ! ನವ್ಯಕಾವ್ಯದ ಛಂದಸ್ಸಿಗೆ ಅವು ಮೂಲ ಮಾತೃಕೆಗಳೆನ್ನಬಹುದು.

ಪರಿಷತ್ತಿನ ಪ್ರಾಮುಖ್ಯತೆ

ಕನ್ನಡ ಸಾಹಿತ್ಯವನ್ನೂ ಕಲೆಗಳನ್ನೂ ಸಂಸ್ಕೃತಿಯನ್ನೂ ಬೆಳೆಸಿ ಕಾಪಾಡಲು ವಿಶ್ವವಿದ್ಯಾನಿಲಯಗಳ ಅಧ್ಯಯನ ಸಂಸ್ಥೆಗಳು, ಪ್ರಸಾರಾಂಗಗಳು, ರಾಜ್ಯದ ಸಾಹಿತ್ಯ ಸಂಗೀತಕಲಾ ಅಕಾಡೆಮಿಗಳು ಜಾನಪದ ಅಕಾಡೆಮಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕರ್ನಾಟಕ ನವೋದಯ, ವಿದ್ಯಾವರ್ಧಕ ಸಂಘ, ಕುವೆಂಪು ಟ್ರಸ್ಟ್ ಇನ್ನೂ ಮುಂತಾದ ಅನೇಕ ಸಂಸ್ಥೆಗಳು ತೊಡಗಿವೆ. ಸರ್ಕಾರಿಯಲ್ಲದ ಸಾರ್ವಜನಿಕ ಸಂಸ್ಥೆಗಳಲ್ಲಿ ಪರಿಷತ್ತು ಅತ್ಯಂತ ಪ್ರಭಾವಶಾಲಿ ಸಂಸ್ಥೆಯೆಂದು ನನ್ನೆಣಿಕೆ. ಸರ್ಕಾರದ ಬೆಂಬಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಾರ್ವಜನಿಕರಿಂದ ಸಹಕಾರ ಸಹಾಯಗಳು ಇದಕ್ಕೆ ದೊರೆಯಬೇಕೆಂಬುದು ನನ್ನ ಆಶಯ. ಇದರ ಸದಸ್ಯತ್ವದಲ್ಲಿ ಪ್ರೌಢವಿದ್ವಾಂಸರ ಸಂಖ್ಯೆ ಹೆಚ್ಚಬೇಕು. ಇದರ ವೇದಿಕೆಯ ಮೇಲೆ ಅನೇಕ ವಿಜ್ಞಾನಿಗಳು ಭಾಷಣ ಮಾಡಬೇಕು. ಶ್ರೀ ಜಿ. ನಾರಾಯಣ ಮತ್ತು ಶ್ರೀ ಹಂಪ ನಾಗರಾಜಯ್ಯನವರ ಉತ್ಸಾಹಪೂರ್ಣವಾದ ನೇತೃತ್ವದಲ್ಲಿ ಪರಿಷತ್ತು ಎಂದೂ ಕಾಣದಷ್ಟು ಅಭಿವೃದ್ಧಿ ಹೊಂದಿದೆ, ಪರಿಷತ್ತು ತನ್ನ ಚಟುವಟಿಕೆಗಳನ್ನು ಕುರಿತು ಹೊರಡಿಸಿರುವ ಪುಸ್ತಿಕೆಗಳಲ್ಲಿ ಈ ಬೆಳವಣಿಗೆ ಪ್ರಮಾಣ ಗೋಚರಿಸುತ್ತದೆ. ಇದರ ಮುನ್ನಡೆಯನ್ನು ವಿಷಯ ನಿಯಾಮಕ ಚರ್ಚಿಸಿ ಸೂಕ್ತ ಸಲಹೆಗಳನ್ನು ಸಭೆಯ ಮುಂದಿಡಲಿರುವುದರಿಂದ ಆ ವಿಷಯ ಕುರಿತು ಇಲ್ಲಿ ಹೆಚ್ಚು ಪ್ರಸ್ತಾಪಿಸುವುದಿಲ್ಲ.

ಗಮಕ ಕಲೆ ಮತ್ತು ಪರಿಷತ್ತು

ಪರಿಷತ್ತು ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ರಾಗವಾಗಿ ಹಾಡುವ ಗಮಕ ಕಲೆಗೆ ಸಾಕಷ್ಟು ಪ್ರೋತ್ಸಾಹ ಕೊಡುತ್ತಿದೆ. ಆದರೆ ಗಮಕ ಎಂದರೆ ಇಷ್ಟಕ್ಕೆ ಮುಗಿಯುವುದಿಲ್ಲ. ವಾಚನಕಲೆ ಎಂಬುದೊಂದುಂಟು. ಈ ಕಲೆ ವಾಚನ ಧ್ವನಿಯ ಪರಿಳಿತಗಳನ್ನು ಎಂದರೆ 'ಕಾಕು'ಗಳನ್ನು ಉಚಿತ ಅಂಗಾಭಿನಯವನ್ನೂ ಒಳಗೊಂಡಿದೆ. ಈ ಕಲೆಗೆ ಪರಿಷತ್ತು ಅಗತ್ಯವಾಗಿ ಗಮನಕೊಟ್ಟು ಶಿಕ್ಷಣ ಶಿಬಿರಗಳನ್ನು ಏರ್ಪಡಿಸಬೇಕೆಂಬುದು ನನ್ನ ಸಲಹೆ. ಹರಿಕಥೆಗಳನ್ನು ಪ್ರೋತ್ಸಾಹಿಸಿ ಅವಕ್ಕೆ ಇಂಥ ಸಮ್ಮೇಳನಗಳ ಮನರಂಜನೆಯ ಕಾರ್ಯಕ್ರಮಗಳಲ್ಲಿ ಸ್ಥಳ ಕೊಡಬೇಕೆನಿಸುತ್ತದೆ. ಅದೊಂದು ವಿಶಿಷ್ಟ ಕಲೆ. ದಿ. ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಇದರಲ್ಲಿ ಪರಿಣಿತರಾಗಿದ್ದರು. ಈಗ ಇದು ಖಿಲವಾಗುತ್ತಿದೆ.

ಕನ್ನಡ ಪ್ರಾಚೀನ ಕಾವ್ಯಗಳ ಸರಳಾನುವಾದ

ಪ್ರಾಚೀನ ಕಾವ್ಯಗಳ ಭಾಷೆ ಈಗ ಸಾಮಾನ್ಯವಾಗಿ ಯಾರಿಗೂ ಅರ್ಥವಾಗುವುದು ಕಷ್ಟ. ಆ ಕಾವ್ಯಗಳನ್ನು ಹೊಸಗನ್ನಡದ ಗದ್ಯಕ್ಕೆ ಅನುವಾದಿಸುವ ಯೋಜನೆಯೊಂದನ್ನು ಪರಿಷತ್ತು ಹಾಕಿಕೊಂಡಿರುವಂತಿದೆ. ಶ್ರೀ ಗೋಪಾಲಕೃಷ್ಣ ಅಡಿಗರು ಇದನ್ನು ಕೈಬಿಡಬೇಕೆಂದು ಕೋರಿದ್ದಾರೆ. ಅವರ ಕೋರಿಕೆಗೆ ನಾನೂ ಕೈಜೋಡಿಸುತ್ತೇನೆ. ಇದು ನಿಷ್ಪ್ರಯೋಜಕವಾದ ಕೆಲಸ. ಪಂಪಭಾರತಕ್ಕೆ ಶ್ರೀ ದೊಲನ ಅವರು ಮಾಡಿರುವ ವ್ಯಾಖ್ಯಾನದಂತೆ, ಬೇಕಾದರೆ ಉತ್ಕೃಷ್ಟ ಹಳಗನ್ನಡದ ಕಾವ್ಯಗಳಿಗೆ ವಿದ್ವಾಂಸರು ಪ್ರತಿ ಪದಾರ್ಥದೊಡನೆ ಟೀಕೆಗಳನ್ನು ಬರೆದು ಪರಿಷತ್ತು ಅವನ್ನು ಪ್ರಕಟಿಸುವುದು ಒಳಿತು.

ಭಾಷಾಂತರ ಕಾರ್ಯಕ್ಕೆ ಸೂಚನೆ

ಅನ್ಯಭಾಷೆಗಳ ಉದ್‌ಗ್ರಂಥಗಳನ್ನು, ಮುಖ್ಯವಾಗಿ ಸಂಸ್ಕೃತದ ದರ್ಶನಶಾಸ್ತ್ರಗಳನ್ನೂ ಪಾಶ್ಚಾತ್ಯದರ್ಶನಗಳ ಸಾರವತ್ತಾದ ಗ್ರಂಥಗಳನ್ನೂ ಒಳ್ಳೆಯ ದೇಸೀ ಕನ್ನಡಕ್ಕೆ ಅನುವಾದಿಸುವ ಯತ್ನವನ್ನು ಪರಿಷತ್ತು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ. ಪ್ರಸಾರಾಂಗಗಳು ಮತ್ತು ಅಕಾಡೆಮಿಗಳೊಡನೆ ಸಮಾಲೋಚಿಸಿ ಗ್ರಂಥಗಳನ್ನು ಹಂಚಿಕೊಂಡು ಈ ಕೆಲಸವನ್ನು ನೆರವೇರಿಸಬಹುದು. ಕನ್ನಡದಲ್ಲಿ ಹುರುಳಾದ ಜ್ಞಾನವನ್ನು ತುಂಬಲು ಇದು ತುಂಬ ಸಹಕಾರಿಯಾಗುತ್ತದೆ. ಪ್ರಮುಖ ದಿನಪತ್ರಿಕೆಗಳಲ್ಲಿ ಗೋಚರಿಸುವ ಕನ್ನಡದ ಭಾಷಾಂತರಗಳು ಬಹು ಚೆನ್ನಾಗಿವೆ. ಇಂಥ ಭಾಷಾಂತರಕಾರರು ಪರಿಷತ್ತಿಗೆ ದೊರೆತರೆ ಆ ಸಂಸ್ಥೆಗೆ ತುಂಬ ಲಾಭ ಎನಿಸುತ್ತದೆ.

ಉಪಸಂಹಾರ


ಬಂಧುಗಳೇ, ಕನ್ನಡನಾಡನ್ನೂ ನುಡಿಯನ್ನೂ ಜ್ಞಾನಾನಂದಗಳಿಂದ ಸಂಪನ್ನಗೊಳಿಸುವ ಸುಕಾಲ ಈಗ ನಮಗೆ ದೇವರ ದಯದಿಂದ ಒದಗಿ ಬಂದಿವೆ. ಖ್ಯಾತಿ ಲಾಭ ಪೂಜೆಗಳನ್ನು ಗೌಣವಾಗಿ ಎಣಿಸಿ ಈಗ ಈ ಕೆಲಸದಲ್ಲಿ ನಾವೆಲ್ಲ

ತೊಡಗುವುದೊಳ್ಳಿತು. ಇಂಥ ಕಾಲ ಬೇರೆ ಬಾರದು. ಕನ್ನಡದ ಜನವನ್ನು ಕನ್ನಡದ ನೆಲ ಚೆನ್ನಾಗಿ ಬಾಳಿಸಲಾಗದಿದ್ದರೆ ಅವರನ್ನು ಮತ್ತಾವ ನೆಲ ಭಾವಿಸೀತು, ಬಾಳಿಸೀತು? ನಾವು ಕಳಪೆ ಜನವಾಗಬಾರದು. ಕಳಪೆ ಜನವನ್ನು ಕಳಪೆಯವರು ಆಳುತ್ತಾರೆ, ಘನವಂತರಿಗೆ ಘನವಂತರ ಆಡಳಿತ ದೊರೆಯುತ್ತದೆ ಎಂಬ ಮಿಲ್ ಮಹಾಶಯನ ಉಕ್ತಿಯನ್ನು ಹಿಂದೆ ದಿ. ದೇಶಭಕ್ತ ವೆಂಕಟಕೃಷ್ಣಯ್ಯನವರು ಎತ್ತಿ ಹೇಳಿದ್ದಾರೆ. ಅದನ್ನು ನಾನು ಮರಳಿ ತಮ್ಮ ನೆನಪಿಗೆ ತರುತ್ತಿದ್ದೇನೆ. ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ತಾನು ಹುಟ್ಟಿದಾಗಿನಿಂದ ಕನ್ನಡನಾಡು ನುಡಿಗಳನ್ನು ಕೀಳ್ಮೆಗೊಳಿಸುವ ಎಲ್ಲ ಪ್ರವೃತ್ತಿಗಳನ್ನೂ ಪ್ರತಿಭಟಿಸುತ್ತಿರುವ ಸಂಸ್ಥೆ, ದೇಶ ದಾಸ್ಯದಲ್ಲಿರುವಾಗಲೇ ನಾಡನ್ನು ಎಚ್ಚರಿಸುವ ಕೆಲಸದಲ್ಲಿ ಅದು ತೊಡಗಿತ್ತು.ಈಗ ನಾವು ಸ್ವತಂತ್ರರು. ಆದುದರಿಂದಲೇ ಘನವಂತರು ನಮ್ಮ ಬದುಕಿನ ಎಲ್ಲ ಸ್ತರದಲ್ಲೂ ಈ ಘನವಂತಿಕೆ ಮೆರೆಯಬೇಕು. ಅದು ಗ್ರಾಮಗಳಲ್ಲಿ ಪ್ರಾರಂಭವಾಗಿ ರಾಜಧಾನಿಗಳನ್ನು ವ್ಯಾಪಿಸಬೇಕು. ವಿಜ್ಞಾನದಿಂದ ವಸ್ತು ಸಮೃದ್ಧಿ; ಸಾಹಿತ್ಯಾದಿ ಕಲೆಗಳಿಂದ ಭಾವನಾ ಸಮೃದ್ಧಿ. ನಾಡುನುಡಿಗಳ ಈಗಿನ ಬಡತನಕ್ಕೂ ಜಡತೆಗೂ ಯಾರು ಹೊಣೆ, ನಾವಲ್ಲದೆ ಮತ್ತಾರು? ಇದಕ್ಕೆ ನಾವು ನಾಚಿಕೆಪಡಬೇಕು, ಕಾರ್ಯಪ್ರವೃತ್ತರಾಗಬೇಕು. ವಿಜ್ಞಾನಿಗಳಲ್ಲಿ ಹೃದಯಸಂಪನ್ನತೆಯನ್ನೂ ಸಾಹಿತಿಗಳಲ್ಲಿ ಜ್ಞಾನಾನಂದಸಂಪನ್ನತೆಯನ್ನೂ ನಾಡು ಈಗ ಎಂದಿಗಿಂತ ಹೆಚ್ಚಾಗಿ ಬಯಸುತ್ತದೆ. ಜ್ಞಾನದ ತಳದಲ್ಲಿ ಅರಿಷಡ್ವರ್ಗದ ಸೆಳೆತಗಳ ಗಾಢವಾದ ತಿಳಿವಳಿಕೆಯಿದೆ; ಆನಂದದ ಮೂಲದಲ್ಲಿ ಅನುಕಂಪೆಯ ಸೆಲೆಯಿದೆ. ಆರೋಗ್ಯ ದೃಢಕಾಯರಾದ ಶ್ರೀಮಂತರ ಆಹಾರ ವಿಹಾರ ನಿಯಮಗಳು ಬೇರೆ, ತೇರಿಕೊಳ್ಳುತ್ತಿರುವ ದುರ್ಬಲರ ನಿಯಮಾವಳಿಗಳು ಬೇರೆ. ನಮ್ಮ ಬದುಕನ್ನು ನಮ್ಮ ಭಾಷೆ ಬಿಂಬಿಸುತ್ತದೆ. ಅದಕ್ಕೆ ಪರಭಾಷೆಗಳ ಪೀಡೆ ತಪ್ಪಬೇಕು, ಪುಷ್ಟಿತುಷ್ಟಿಗಳು ದೊರೆಯಬೇಕು. ಗಣರಾಜ್ಯದಲ್ಲಿ ನ್ಯಾಯವೊಂದೇ ಸಾಮ್ರಾಟ್. ನಿರ್ಮಲವಾದ ಗಾಳಿ, ನೀರು, ಪುಷ್ಟಿಕರವಾದ ಅನ್ನ ಇವುಗಳಂತೆ ನ್ಯಾಯ ಎಲ್ಲರಿಗೂ ಲಭಿಸುವಂತಾದ ಹೊರತು ನಾಡು ಚೇತರಿಸಿಕೊಳ್ಳದು, ಅದರಂತೆಯೇ ನುಡಿಯೂ ಸಹ. ಅನ್ಯೋನ್ಯ ಅಬಾಧಾವಿಧಿಯೇ ನ್ಯಾಯ ಎಂಬುದನ್ನು ನಾವು ಮರೆಯಬಾರದು.

❖❖

೫೪ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಶಂ.ಬಾ. ಜೋಶಿ



ಕನ್ನಡ ಭಾಷೆ, ಕರ್ನಾಟಕ ಇತಿಹಾಸ ಹಾಗೂ ಭಾರತೀಯ ಸಂಸ್ಕೃತಿಯ ಸಂಶೋಧಕರಾದ ಶಂ.ಬಾ. ಜೋಶಿ ಅವರು ಬಾಳದೀಕ್ಷಿತ ಜೋಶಿ ಮತ್ತು ಉಮಾಬಾಯಿ ಅವರ ಮಗನಾಗಿ ೪-೧-೧೮೯೬ರಲ್ಲಿ ಗುರ್ಲಹೊಸೂರಿನಲ್ಲಿ ಜನಿಸಿದರು. ಜೋಶಿ ಅವರ ವಿದ್ಯಾಭ್ಯಾಸ ಗುರ್ಲಹೊಸೂರು, ಬೊಮ್ಮನಹಳ್ಳಿ, ಪುಣೆ ಹಾಗೂ ಧಾರವಾಡಗಳಲ್ಲಿ ಆಯಿತು. ೧೯೧೬ರಲ್ಲಿ ಧಾರವಾಡದ ಸರ್ಕಾರಿ ತರಬೇತಿ ಕಾಲೇಜು ಸೇರಿ ಶಿಕ್ಷಣ ತರಬೇತಿ ಪಡೆದರು.

ಚಿಕ್ಕೋಡಿಯಲ್ಲಿ ಶಾಲಾ ಶಿಕ್ಷಕರಾಗಿ ೧೯೨೬-೨೭ರಲ್ಲಿ ಸೇವೆ ಸಲ್ಲಿಸಿದ ಮೇಲೆ ೧೯೨೮ರಲ್ಲಿ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇರಿದರು. ಅಲ್ಲಿ ೧೯೫೬ರ ವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು. ಕರ್ನಾಟಕ ವೃತ್ತ, ಧನಂಜಯ, ಕರ್ಮವೀರ ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದಾರೆ. ೧೯೩೮ರಲ್ಲಿ ಹಾವೇರಿಯಲ್ಲಿ ಜರುಗಿದ ೩ನೇ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ, ೧೯೪೯ರಲ್ಲಿ ಜರುಗಿದ ೨ನೇ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಆಯ್ಕೆಯಾಗಿದ್ದರು. ೧೯೮೧ರಲ್ಲಿ ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು.

ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಎಂಬ ಗ್ರಂಥಕ್ಕೆ ೧೯೭೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. ಮೈಸೂರು ವಿಶ್ವವಿದ್ಯಾನಿಲಯವು ೧೯೭೧ರಲ್ಲಿ ಡಿಲಿಟ್ ನೀಡಿ ಇವರನ್ನು ಗೌರವಿಸಿತು. ೧೯೬೭ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ಸಂಸ್ಕೃತ, ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿಬಲ್ಲ ಶಂ.ಬಾ. ಜೋಶಿ ಅವರು ಮರಾಠಿಯಲ್ಲಿಯೂ ಕೆಲವು ಕೃತಿಗಳನ್ನು ಬರೆದಿದ್ದಾರೆ. ಶಂ.ಬಾ. ಜೋಶಿ ಅವರ ಪ್ರಮುಖ ಕೃತಿಗಳು ಹೀಗಿವೆ :

ಕಣ್ಮರೆಯಾದ ಕನ್ನಡ, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಕನ್ನಡ ನುಡಿಯ ಜೀವಾಳ, ಕನ್ನಡ ಸಾಹಿತ್ಯ ಅಭಿವೃದ್ಧಿ, ಅನ್ನವಿದ್ಯೆ, ಯಕ್ಷಪ್ರಶ್ನೆ, ಹಾಲುಮತದರ್ಶನ, ನಾಗಪ್ರತಿಮಾ ವಿಚಾರ, ಕರ್ಣನ ಮೂರು ಚಿತ್ರಗಳು, ಕಂನಾಡ ಕಥೆ, ಕನ್ನಡದ ನೆಲೆ ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೫೪,
ಅಧ್ಯಕ್ಷರು, ಶಂ.ಬಾ. ಜೋಶಿ
ದಿನಾಂಕ ೨೭, ೨೮, ೨೯, ೩೦ ನವೆಂಬರ್ ೧೯೮೧,
ಸ್ಥಳ : ಮಡಿಕೇರಿ

ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕಾದ ಕೆಲಸ

ಕನ್ನಡ ಸಾಹಿತ್ಯ ಪರಿಷತ್ತು ತನ್ನ ದೀರ್ಘ ಬದುಕಿನಲ್ಲಿ ಕನ್ನಡದ ಸಾಂಸ್ಕೃತಿಕ ಬದುಕಿಗೆ ಮಹತ್ವದ ಕಾಣ್ಕೆ ನೀಡಿದ ಸಂಸ್ಥೆ. ಹಿಂದೊಮ್ಮೆ ಬೀಸಿಹೋದ ಸ್ಪರ್ಧೆಯ ಸುಂಟರಗಾಳಿ ಇಂದು ಮತ್ತೆ ಪರಿಷತ್ತಿನಲ್ಲಿ ಪ್ರವೇಶಿಸುವಂತೆ ಕಾಣುತ್ತಿದೆ. ಪರಿಷತ್ತಿನ ಮೂಲ ಆಶಯಕ್ಕೆ ಭಂಗ ತರುವ ಕಾರ್ಯ ನಡೆಯದಿರಲೆಂದು ಸೂಚಿಸುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ಸಾಹಿತ್ಯ ಪರಿಷತ್ತು ವಿಕೇಂದ್ರೀಕರಣದ ಹಾದಿಯಲ್ಲಿ ಸಾಗಿ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪರಿಷತ್ತಿನ ಘಟಕಗಳನ್ನೇನೊ ರಚಿಸಲಾಗಿದೆ. ಆದರೆ ಅವು ಸ್ವತಂತ್ರವಾಗಿ ಕಾರ್ಯ ಮಾಡಲು ಶಕ್ತವಾಗುವಂತೆ ಜೀವ ತುಂಬುವ ಕಾರ್ಯವನ್ನು ಕೇಂದ್ರ ಪರಿಷತ್ತು ಇನ್ನೂ ಮಾಡಿಲ್ಲ. ವರ್ಷದುದ್ದಕ್ಕೂ ಕಾರ್ಯ-ಚಟುವಟಿಕೆ ನಡೆಯಿಸಿಕೊಂಡು ಹೋಗುವ ಸಲುವಾಗಿ ವರ್ಷದಾದಿಯಲ್ಲೇ ರೂಪ-ರೇಷೆ ತಯಾರಿಸಿ, ಸಾಕಷ್ಟು ಹಣಕಾಸು ಮಂಜೂರ ಮಾಡಿ, ಅವು ಕಾರ್ಯಗತವಾಗುವಂತೆ ಅನಂತರ ಮೇಲ್ನೋಟ ಇಡಬೇಕು.

ಪರಿಷತ್ತಿನ ಸಾಹಿತ್ಯಿಕ ಪ್ರಕಟನೆಗಳು, ಉಪನ್ಯಾಸಗಳು ಮುಂತಾದ ಚಟುವಟಿಕೆಗಳಲ್ಲಿ ಕರ್ನಾಟಕದ ಕಡೆಯ ಗಡಿಯಲ್ಲಿರುವವರೂ ಭಾಗವಹಿಸಲು ಅವಕಾಶ ಕಲ್ಪಿಸಬೇಕು. ಪರಿಷತ್ತು ಬೆಂಗಳೂರಿನವರಿಗಾಗಿ, ಬೆಂಗಳೂರಿನ ಸಮೀಪದವರಿಗಾಗಿ ಇದೆಯೆಂದು ಆರೋಪಿಸುತ್ತಿರುವುದು ತೀರ ಸುಳ್ಳಲ್ಲ. ಅಖಿಲ ಕರ್ನಾಟಕದ ಜಿಜ್ಞಾಸುಗಳನ್ನೆಲ್ಲ ವಿಶ್ವಾಸದಲ್ಲಿ ತೆಗೆದುಕೊಳ್ಳಲು ಪ್ರಯತ್ನಿಸಬೇಕೆಂದು ಹಾರೈಸುವೆ.


ಸಾಹಿತ್ಯ ಸಮ್ಮೇಳನ ಹೇಗಿರಬೇಕು?

ಸಾಹಿತ್ಯ ಸಮ್ಮೇಳನ ಜಾತ್ರೆಯ ಸ್ವರೂಪ ಪಡೆಯುತ್ತಿರುವುದರಿಂದ ಗಂಭೀರ ವಾದ ವಿಚಾರ ವಿನಿಮಯಕ್ಕೆ ಅವಕಾಶವಿಲ್ಲದಾಗಿದೆಯೆಂಬ ಆರೋಪದಿಂದ ಮುಕ್ತವಾಗಲು, ಒಂದು ಸೂಚನೆ ಮಾಡಬಯಸುವೆ. ಕರ್ನಾಟಕದಲ್ಲಿಯ ಎಲ್ಲ ವಿಶ್ವವಿದ್ಯಾಲಯಗಳಲ್ಲಿಯ ಎಲ್ಲ ಜ್ಞಾನಶಾಖೆಗಳ ಪರಿಣತರು ಮತ್ತು ಇನ್ನುಳಿದ ಪ್ರಖ್ಯಾತ ಪ್ರಜ್ಞಾವಂತರನ್ನು ಸಾಹಿತ್ಯ ಪರಿಷತ್ತು ಸಂಘಟಿಸಿ ಉಚ್ಚಮಟ್ಟದ ವಿಚಾರ ವಿನಿಮಯ, ಗಂಭೀರ ಚರ್ಚೆಗಳಿಗೆ ಅನುವು ಮಾಡಿಕೊಡಬೇಕು. ಪ್ರತಿ ಮೂರು ವರ್ಷಗಳಿಗೊಮ್ಮೆ ಇಂಥ ತಜ್ಞರ ಸಮ್ಮೇಲನ ಸೇರಿಸಿ, ಸಾಹಿತ್ಯದೊಂದಿಗೆ ಉಳಿದ ಜ್ಞಾನ ಶಾಖೆಗಳ ಸಂಬಂಧ, ಅವುಗಳಲ್ಲಿಯ ಇತ್ತೀಚೆಗಿನ ಸಂಶೋಧನಗಳ ಉಪಯೋಗವನ್ನು ಸಾಹಿತ್ಯ ಕ್ಷೇತ್ರ ಪಡೆದುಕೊಳ್ಳುವ ಯೋಜನೆ ಇತ್ಯಾದಿಗಳ ಬಗ್ಗೆ ಪ್ರೌಢ ಪ್ರಬಂಧಗಳನ್ನು ಮಂಡಿಸಲು ಏರ್ಪಾಡು ಮಾಡಬೇಕು. ಮತ್ತು ಅಲ್ಲಿ ಮುಕ್ತ ಚರ್ಚೆ ಮಾಡಲು ಅವಕಾಶ ಇರಬೇಕು. ಈ ಉದ್ದೇಶಕ್ಕಾಗಿ ಪರಿಷತ್ತು ಪ್ರಾತಿನಿಧಿಕ ಸ್ವರೂಪದ ಸ್ಥಾಯಿಮಂಡಲಿ ರಚಿಸಿ ಕಾರ್ಯ ಆರಂಭಿಸಬೇಕು.

❖❖

೫೫ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಗೊರೂರು ರಾಮಸ್ವಾಮಿ ಅಯ್ಯಂಗಾರ್



ಗಾಂಧಿವಾದಿ ಮತ್ತು ಸ್ವಾತಂತ್ರ್ಯ ಹೋರಾಟಗಾರರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕನ್ನಡದ ಜನಪ್ರಿಯ ಸಾಹಿತಿಗಳಲ್ಲಿ ಒಬ್ಬರಾಗಿದ್ದರು. ಇವರು ಗೊರೂರು ಗ್ರಾಮದಲ್ಲಿ ೪-೭-೧೯೦೪ರಲ್ಲಿ ಶ್ರೀನಿವಾಸ ಅಯ್ಯಂಗಾರ್-ಲಕ್ಷ್ಮಮ್ಮ ದಂಪತಿಗಳಿಗೆ ಜನಿಸಿದರು. ಗೊರೂರಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಮುಗಿಸಿದ ಮೇಲೆ ಹಾಸನದಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಅನಂತರ ಗುಜರಾತ್ ಗಾಂಧಿ ಆಶ್ರಮದಲ್ಲಿದ್ದ ವಿದ್ಯಾ ಪೀಠದಲ್ಲಿ ಓದು ಮುಂದುವರೆಸಿದರು. ಅನಂತರ ಪತ್ರಿಕಾರಂಗ ಪ್ರವೇಶಿಸಿದರು.

ಮದರಾಸಿನ 'ಲೋಕಮಿತ್ರ' ಆಂಧ್ರ ಪತ್ರಿಕೆ 'ಭಾರತಿ' ಪತ್ರಿಕೆಗಳಲ್ಲಿ ಉಪಸಂಪಾದಕರಾಗಿ, ಸಂಪಾದಕರಾಗಿ ಸೇವೆ ಸಲ್ಲಿಸಿದರು. ಅನಂತರ ಬೆಂಗಳೂರಿಗೆ ಬಂದು ಕೆಂಗೇರಿಯ ಗುರುಕುಲಾಶ್ರಮವನ್ನು ಸೇರಿದರು. ಅಖಿಲ ಭಾರತ ಚರಖಾ ಸಂಘದ ಖಾದಿ ವಸ್ತ್ರಾಲಯದ ಮಳಿಗೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಇದರೊಂದಿಗೆ ಜಿಲ್ಲಾ ಮಂಡಳಿ ಮತ್ತು ಸ್ಥಳೀಯ ವಿದ್ಯಾಸಮಿತಿಗಳಲ್ಲಿ ಸೇವೆ ಸಲ್ಲಿಸಿದರು. ೧೯೫೨ರಲ್ಲಿ ವಿಧಾನಸಭೆಗೆ ನಾಮಕರಣಗೊಂಡರು.

೧೯೪೨ರಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಜೈಲು ಶಿಕ್ಷೆ ಅನುಭವಿಸಿದರು. ೧೯೬೭ರಲ್ಲಿ ತರೀಕೆರೆಯಲ್ಲಿ ನಡೆದ ಮೊದಲನೇ ಅಖಿಲ ಕರ್ನಾಟಕ ಜನಪದ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೬೯ರಲ್ಲಿ ಗೌರವ ಪ್ರಶಸ್ತಿ ನೀಡಿತು. ೧೯೭೧ರಲ್ಲಿ ಹಾಸನಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಮೈಸೂರು ವಿಶ್ವವಿದ್ಯಾಲಯ ೧೯೭೯ರಲ್ಲಿ ಗೌರವ ಡಾಕ್ಟರೇಟ್ ನೀಡಿತು. ಅಮೆರಿಕಾದಲ್ಲಿ ಗೊರೂರು ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು. ೧೯೮೧ರಲ್ಲಿ ಶಿರಸಿಯಲ್ಲಿ ನಡೆದ ೫೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು.

ಕಥೆ, ಕಾದಂಬರಿ, ಲಲಿತಪ್ರಬಂಧ, ಜೀವನಚರಿತ್ರೆಗಳಲ್ಲಿ ಗ್ರಾಮೀಣ ಸಂಸ್ಕೃತಿಯನ್ನು ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ್ದಾರೆ. ೬೦ಕ್ಕೂ ಮೀರಿ ಕೃತಿಗಳನ್ನು ರಚಿಸಿರುವ ಗೊರೂರು ಅವರ ಕೃತಿಗಳು ಜನಪ್ರಿಯವಾಗಿವೆ. ಅವರ ಪ್ರಧಾನ ಕೃತಿಗಳು ಹೀಗಿವೆ :

ಹಳ್ಳಿಯ ಚಿತ್ರಗಳು, ನಮ್ಮ ಊರಿನ ರಸಿಕರು, ಬೈಲಹಳ್ಳಿ ಸರ್ವೆ, ಪುನರ್ಜನ್ಮ, ಮೆರವಣಿಗೆ, ಊರ್ವಶಿ, ಕಥೆಗಳು ಮತ್ತು ಇತರ ಚಿತ್ರಗಳು, ಶಿವರಾತ್ರಿ, ಬೆಸ್ತರ ಕರಿಯ, ಗೋಪುರದ ಬಾಗಿಲು ಇತ್ಯಾದಿ ಗದ್ಯ ಕೃತಿಗಳು. ಹಳ್ಳಿಯ ಹಾಡು, ಹಳ್ಳಿಯ ಬಾಳು, ಜನಪದ ಜೀವನ ಮತ್ತು ದರ್ಶನ ಇತ್ಯಾದಿ ಜಾನಪದ ಕೃತಿಗಳು. ಅಮೆರಿಕಾದಲ್ಲಿ ಗೊರೂರು-ಪ್ರವಾಸ ಗ್ರಂಥ, ಗಾಂಧೀಜಿ ಆತ್ಮಕಥೆ, ಅನುವಾದ.

ಕನ್ನಡ ಸಾಹಿತ್ಯ ಸಮ್ಮೇಳನ-೫೫,
ಅಧ್ಯಕ್ಷರು, ಗೊರೂರು ರಾಮಸ್ವಾಮಿ ಅಯ್ಯಂಗಾರ್
ದಿನಾಂಕ ೨೩, ೨೪, ೨೫, ೨೬ ಡಿಸೆಂಬರ್ ೧೯೮೨,
ಸ್ಥಳ : ಶಿರಸಿ

ಗಮಕಕ್ಕೆ ಪ್ರೋತ್ಸಾಹ

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಗಮಕವು ಹೊಂದಿರುವ ಸ್ಥಾನ ಮುಖ್ಯವಾದುದು. ಕಾವ್ಯವನ್ನು ರಾಗವಾಗಿ ವಾಚಿಸುವುದು ನಮ್ಮ ದೇಶದಲ್ಲಿ ಹಿಂದಲಿಂದ ಬಂದ ಪದ್ಧತಿಯಾಗಿದ್ದಿರಬೇಕು. ರಾಜರಿಗೆ ದಂಡನಾಯಕರಿಗೆ ಕಾವ್ಯಗಳನ್ನು ಅರ್ಪಿಸಿದಾಗ ಆಸ್ಥಾನದಲ್ಲಿಯೇ ಕವಿಯಿಂದಲೋ ಅಥವಾ ಗಮಕಿಗಳಿಂದಲೋ ವಾಚನ ನಡೆಯುತ್ತಿದ್ದಿತು. ಕವಿ, ವಾದಿ, ವಾಗ್ಮಿ ಗಮಕಿಗಳು ಆಸ್ಥಾನಗಳ ಭೂಷಣರೆಂಬ ನುಡಿ ಇದೆ. ಗಮಕಿಗಳು ತಮ್ಮ ಕಾರ್ಯಗಳಿಂದ ಈಚಿನ ದಿನಗಳಲ್ಲಿ ಸಾಹಿತ್ಯಕ್ಕೆ ತುಂಬಾ ಸೇವೆ ಸಲ್ಲಿಸಿದ್ದಾರೆ. ನಮ್ಮ ಪ್ರಾಚೀನ ಕಾವ್ಯಗಳು ಸಾಮಾನ್ಯವಾಗಿಯೇ ಹಾಡಲು ಅನುಕೂಲವಾದ ಛಂದಸ್ಸು ಪದಬಂಧಗಳುಳ್ಳವಾಗಿವೆ. ಅವುಗಳನ್ನು ಸಂಗೀತದ ಮಿತಿಯಲ್ಲಿ ಹಾಡಿದರೆ ಶ್ರೋತೃಗಳಿಗೆ ಹಿತವಾಗುವುದಲ್ಲದೆ ಸಾಹಿತ್ಯದ ಸವಿಯ ಅನುಭವವುಂಟಾಗುವುದು. 'ಕುಮಾರವ್ಯಾಸಭಾರತ', 'ಜೈಮಿನಿ ಭಾರತ', 'ಬಸವ ಪುರಾಣ', 'ಭರತೇಶ ವೈಭವ', 'ಭಾಗವತ' ಇವೆಲ್ಲ ಗಮಕಿಗಳಿಂದಲೇ ಜನತೆಯಲ್ಲಿ ಪ್ರಚಾರವಾಗಿವೆ. ಪರಿಷತ್ತು ಈ ಕಲೆಗೆ ಪ್ರೋತ್ಸಾಹವನ್ನು ಕೊಡುತ್ತಿದೆ. ಪರಿಷತ್ತಿನ ಸಭಾ ಕಾರ್ಯಗಳಲ್ಲಿಯೂ ಸಮ್ಮೇಳನದ ಸಭಾ ಕಾರ್ಯಗಳಲ್ಲಿಯೂ ಗಮಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಸಲಹೆಯನ್ನು ಪರಿಶೀಲಿಸಬಹುದು. ಈಗ ಶ್ರೀಮಾನ್ ಜಿ. ನಾರಾಯಣರು ಗಮಕ ಕಲಾ ಪರಿಷತ್ತನ್ನು ಸ್ಥಾಪಿಸಿ ಅದರ ಅಭಿವೃದ್ಧಿಗೆ ದೊಡ್ಡ ಯೋಜನೆಯನ್ನು ಹಾಕಿಕೊಂಡಿದ್ದಾರೆ.

ನಮ್ಮ ಲೇಖಕಿಯರು

ನಮ್ಮ ಸೋದರಿಯರು ಹೆಚ್ಚು ಹೆಚ್ಚಾಗಿ ಸಾಹಿತ್ಯ ರಚನೆಗೆ ಕೈಹಾಕುತ್ತಿರುವುದು ಸಂತೋಷದ ಸಂಗತಿ. ಮೊದಮೊದಲು ಅವರು ಬರಿಯ ಕಥೆ ಕಾದಂಬರಿಗಳನ್ನು ಮಾತ್ರ ಬರೆಯುತ್ತಿದ್ದರು. ಈಗ ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ- ಕವನಗಳು, ಪ್ರವಾಸ ಕಥನ, ಸರಳ ರಗಳೆಯ ನಾಟಕಗಳು, ವಿಮರ್ಶೆ ಎಲ್ಲವುಗಳನ್ನೂ ಬರೆಯುತ್ತಿದ್ದಾರೆ. ಈಗ ಲೇಖಕಿಯರ ಸಂಖ್ಯೆಯೂ ಹೆಚ್ಚಿದೆ. ಸಾಹಿತ್ಯ ಪರಿಷತ್ತಿನ ಒಂದು ಪಟ್ಟಿಯಂತೆ ಅವರ ಸಂಖ್ಯೆ ಇನ್ನೂರ ಐವತ್ತನ್ನೂ ದಾಟಿದೆ. ಒಬ್ಬರು ನೂರು ಕಾದಂಬರಿಗಳನ್ನು ಬರೆದಿದ್ದಾರೆಂದು ಕೇಳಿದೆ. ಇದೊಂದು ಗಣನೀಯ ಪ್ರಮಾಣ. ಮಹಿಳೆಯರು ಸಾಹಿತ್ಯವನ್ನು ರಚಿಸುವುದರಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಮಹಿಳೆಯರು ಆತ್ಮಾಭಿಮಾನ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಸಾಧಕವಾದ ಸಾಹಿತ್ಯವನ್ನು ರಚಿಸಬೇಕು. ಈಚಿನ ದಿನಗಳಲ್ಲಿ ಅವರು ಸಮಾಜದಲ್ಲಿ ತುಂಬ ಹೊಣೆಗಾರಿಕೆಯ ಕರ್ತವ್ಯಗಳನ್ನೆಲ್ಲ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಅವರು ಯಾವ ಕೆಲಸವನ್ನೂ ಚೆನ್ನಾಗಿ ಮಾಡಬಲ್ಲರು. ಅವರು ಹೆಚ್ಚು ಹೆಚ್ಚಾಗಿ ಶಿಶುಸಾಹಿತ್ಯವನ್ನೂ ರಚಿಸಬೇಕು. ಮೂಢನಂಬಿಕೆಗಳನ್ನು ನಿರ್ಮೂಲ ಮಾಡಬೇಕು. ಅವರಿಗೆ ಸಮಾನ ಅವಕಾಶವನ್ನು ಮೊದಲು ಕೊಟ್ಟವನು ಭಗವಾನ್ ಬುದ್ಧ. ಈಚಿನ ದಿನಗಳಲ್ಲಿ ಗಾಂಧೀಜಿ. ಉತ್ತರ ಕನ್ನಡ ಜಿಲ್ಲೆಯ ಕರನಿರಾಕರಣ ಚಳುವಳಿಯಲ್ಲಿ, ತ್ಯಾಗ ಮತ್ತು ಕಷ್ಟಸಹಿಷ್ಣುತೆಯಲ್ಲಿ ಮಹಿಳೆಯರೇ ಪ್ರಧಾನ ಪಾತ್ರ ವಹಿಸಿದ್ದರು. ರಷ್ಯನ್ ಮಹಿಳೆಯೊಬ್ಬಳು ಗಗನಯಾತ್ರಿಯೂ ಆದಳು.

ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು

ಸಾಹಿತ್ಯ ಪರಿಷತ್ತು, ಸರ್ಕಾರ, ಪ್ರಜೆಗಳು, ಸದಸ್ಯರು ಇವರ ಸಹಾಯದಿಂದ ನಡೆಯುವ ಸಾರ್ವಜನಿಕ ಸಂಸ್ಥೆ. ಇದಕ್ಕೆ ಒಂದು ಸಂವಿಧಾನವೂ ಇದೆ. ಕಾರ್ಯಕಾರಿ ಸಮಿತಿಯೂ ಇದೆ. ಈಚಿನ ದಿನಗಳಲ್ಲಿ ಇದರ ಸದಸ್ಯರ ಸಂಖ್ಯೆಯೂ ಹೆಚ್ಚುತ್ತಿದೆ. ಸದಸ್ಯರ ಸಂಖ್ಯೆ ಸಾಕಷ್ಟು ಇಲ್ಲ ಎಂಬುದೇ ಹಿಂದಲ ಎಲ್ಲ ಅಧ್ಯಕ್ಷರ ಕೊರಗು ಆಗಿತ್ತು. ಡಿ.ವಿ.ಜಿ.ಯವರು ಸದಸ್ಯರನ್ನು ಹೆಚ್ಚಿಸಿದವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳಿದ್ದರು. ಸದಸ್ಯ ಸಂಖ್ಯೆಯನ್ನು ಒಂದು ಲಕ್ಷಕ್ಕೆ ಏರಿಸಬೇಕೆಂದು ಹೇಳಿದ ಒಬ್ಬ ಅಧ್ಯಕ್ಷರೂ ಇದ್ದಾರೆ. ಸರ್ಕಾರದ ಧನಸಹಾಯವೂ ಈಗ ಹೆಚ್ಚಾಗಿ ದೊರೆಯುತ್ತಿದೆ. ಶ್ರೀ

ಜಿ. ನಾರಾಯಣ, ಶ್ರೀ ಹಂಪ. ನಾಗರಾಜಯ್ಯ ಇವರ ಅಧ್ಯಕ್ಷಗಿರಿಯ ಅವಧಿಯಲ್ಲಿ ಪರಿಷತ್ತಿನ ಕೆಲಸ ಕಾರ್ಯಗಳು ಚಟುವಟಿಕೆ ಎಲ್ಲ ದಾಪುಗಾಲಿನಲ್ಲಿ ನಡೆದು ಅನೇಕ ಕೊಂಬೆಗಳು ಒಡೆದ ಆಲದಮರದಂತೆ ವಿಸ್ತರಿಸಿವೆ. ಬೆಳ್ಳಿ ಬಿಟ್ಟ ಬಳ್ಳಿ ಮಾಲೆಯಲ್ಲಿ ಪ್ರಕಟವಾದ ೧೦೧ ಪುಸ್ತಕಗಳು ಕನ್ನಡಿಗರಿಗೆ ಪರಿಷತ್ತಿನ ಬಹುದೊಡ್ಡ ಕೊಡುಗೆಯಾಗಿವೆ.

ಈಚಿನ ದಿನಗಳಲ್ಲಿ ಪರಿಷತ್ತು

ಆದರೆ ಈಚಿನ ದಿನಗಳಲ್ಲಿ ಪರಿಷತ್ತಿನಲ್ಲಿ ವಾತಾವರಣ ಗೊಂದಲಮಯವಾಗಿ ಅಹಿತಕರವೂ ರಾಡಿಯೂ ಆಗಿರುವುದು ಕನ್ನಡಿಗರಿಗೆ ವಿಷಾದದ ವಿಷಯವಾಗಿದೆ. ಸಂವಿಧಾನದಂತೆ ನಡೆದು ಏನನ್ನೂ ಸಾಧಿಸಲು ಎಲ್ಲರಿಗೂ ಅಧಿಕಾರವಿದೆ. ಆದರೆ ಇತರ ವಿಷಯಗಳಲ್ಲಿ ಭಿನ್ನಾಭಿಪ್ರಾಯವುಂಟಾದರೆ, ಸದಸ್ಯರೆಲ್ಲ ಒಟ್ಟಾಗಿ ಸೇರಿ ಚರ್ಚೆಯಿಂದ ಪರಿಹರಿಸಿಕೊಳ್ಳಬೇಕು. ಯಾರೂ ಉದ್ವೇಗಕ್ಕೆ ಒಳಗಾಗಬಾರದು. ಬಹಿರಂಗ ಹೇಳಿಕೆ ಕೊಡಬಾರದು. ನ್ಯಾಯಸ್ಥಾನಗಳಿಗೂ ಹೋಗಬಾರದು. ಯಾವುದೇ ಸಾರ್ವಜನಿಕ ಸಂಸ್ಥೆಗಳಿಗೂ ಇದು ಸಾಮಾನ್ಯ ನಿಯಮ. ಪರಿಷತ್ತಿನಂಥ ಸಾಂಸ್ಕೃತಿಕ ಸಂಸ್ಥೆಯಲ್ಲಿ ಸದಸ್ಯರೆಲ್ಲ ಇದನ್ನು ಅನುಸರಿಸಬೇಕು. ಪರಿಷತ್ತಿನಲ್ಲಿ ಹಿಂದೆಯೂ ಸಹ ಇಂಥ ವಿಷಯ ತಲೆದೋರಿದೆ. ೩೨ ವರುಷಗಳ ಹಿಂದೆಯೇ ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಮೊದಲಿನಿಂದಲೂ ಆಕ್ಷೇಪಕರು ಇದ್ದೇ ಇದ್ದಾರೆ. ನಮಗೂ ಪರಿಷತ್ತಿನ ಬಗ್ಗೆ ಅಸಂತುಷ್ಟಿ ಇದೆ. ಅಸಂತೋಷ : ಶ್ರಿಯೋ ಮೂಲಃ ಬೈದವರನ್ನು ಬಂಧುಗಳೆಂಬೆ" ಎಂದು ಸಮಾಧಾನ ತಂದುಕೊಳ್ಳುತ್ತೇವೆ. ಆದರೆ ಸದಸ್ಯರ ಸಂಖ್ಯೆಗಿಂತ ಆಕ್ಷೇಪಕರ ಸಂಖ್ಯೆಯೇ ಹೆಚ್ಚಾಗಿದ್ದರೆ ಫಲವೇನು....ಪರಿಷತ್ತು ಮಾಡಬೇಕಾದ ಕೆಲಸಗಳು ಬಹಳವಾಗಿವೆ. ಅದರ ಸದಸ್ಯರು ನಾಡಿನ ಎಲ್ಲ ಕಡೆಗಳಲ್ಲಿಯೂ ಇದ್ದಾರೆ ಎಂದು ಹೇಳಿದ್ದರು. ಆದುದರಿಂದ ಪರಿಷತ್ತಿನ ಮೇಲೆ ಈಗಷ್ಟೇ ಆಕ್ಷೇಪಣೆ ಬಂದಿದೆಯೆಂದು ಭಾವಿಸಬಾರದು.


ಪರಿಷತ್ತು ಸರಸ್ವತೀ ದೇವಾಲಯ

ಕನ್ನಡ ಸಾಹಿತ್ಯ ಪರಿಷತ್ತು ಎಲ್ಲ ಅರ್ಥದಲ್ಲಿಯೂ ನಮ್ಮ ಸಾರಸ್ವತ ದೇವಾಲಯ. ಅದನ್ನು ಪ್ರಾತಃಸ್ಮರಣೀಯರಾದ ಅನೇಕ ಮಹಾನುಭಾವರು ತಮ್ಮ ಸರ್ವಸ್ವವನ್ನೂ ಅರ್ಪಿಸಿ ಕಟ್ಟಿದ್ದಾರೆ. ಸರಿಯಾಗಿ ನಡೆಸಿದರೆ ಕನ್ನಡಿಗರ ಹಿತವನ್ನು ರಕ್ಷಿಸಬಲ್ಲ ಸಂಸ್ಥೆ ಅದೊಂದೆ. ಅದು ಹಾಗೆ ಮಾಡುತ್ತಲೂ ಬಂದಿದೆ. ನೆರೆ ಪ್ರಾಂತಗಳಲ್ಲಿ ಪರಪ್ರಾಂತಗಳಲ್ಲಿ ಪರದೇಶಗಳಲ್ಲಿ ಕನ್ನಡಿಗರು ಎಲ್ಲಿಯೇ ಇರಲಿ–ಇವರೆಲ್ಲರನ್ನೂ ಒಂದು ಛತ್ರದ ಕೆಳಗೆ ಕೂಡಿಸುವ ಸಂಸ್ಥೆ ಇದೊಂದೆ. ನಾವು ಯಾವ ರೀತಿಯಿಂದಲೂ ಪರಸ್ಪರ ಕಚ್ಚಾಡಿ ಇಂಥ ಉತ್ತಮ ಸಂಸ್ಥೆಯನ್ನು ಹಾಳುಮಾಡಬಾರದು ಇದಕ್ಕೆ ದೀರ್ಘವಾದ ಸತ್‌ಪರಂಪರೆಯ ಇತಿಹಾಸವಿದೆ. ಹಿರಿಯರು ಬೆಳೆಸಿ ನಮ್ಮ ಕೈಯಲ್ಲಿಟ್ಟಿರುವ ಈ ಸಂಸ್ಥೆಗೆ ನಾವು ವಿಶ್ವಸ್ತರಾಗಿ ಇದನ್ನು ಬೆಳೆಸಿ ಮುಂದಲವರಿಗೆ ವರ್ಗಾಯಿಸಬೇಕು. ಸಂಯಮ ಹೊಂದಾಣಿಕೆ ತ್ಯಾಗ ಇವು ಎಲ್ಲರಲ್ಲಿಯೂ ಇರಬೇಕು. ಪರಸ್ಪರ ಕಾದಾಟ ಆತ್ಮಘಾತುಕವಾಗುವುದು.

❖❖

೫೬ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎ.ಎನ್. ಮೂರ್ತಿರಾವ್



ಕನ್ನಡದಲ್ಲಿ ಶ್ರೇಷ್ಠ ಪ್ರಬಂಧಕಾರರೂ, ವಿಮರ್ಶಕರೂ, ಆಗಿದ್ದು 'ದೇವರು' ಪುಸ್ತಕದ ಮೂಲಕ ಜನಪ್ರಿಯರಾದ ಪ್ರೊ.ಎ.ಎನ್. ಮೂರ್ತಿರಾವ್ ಅವರು ಎಂ.ಸುಬ್ಬರಾವ್ ಮತ್ತು ಪುಟ್ಟಮ್ಮ ದಂಪತಿಗಳ ಪುತ್ರರಾಗಿ (ಅಕ್ಕಿ ಹೆಬ್ಬಾಳು ನರಸಿಂಹಮೂರ್ತಿರಾವ್) ೧೮-೬-೧೯೦೦ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳಿನಲ್ಲಿ ಜನ್ಮ ತಳೆದರು. ಬಾಲ್ಯದ ದಿನಗಳನ್ನು ಮೇಲುಕೋಟೆ, ನಾಗಮಂಗಲಗಳಲ್ಲಿ ಕಳೆದ ಮೇಲೆ ೧೯೧೩ರಲ್ಲಿ ಮೈಸೂರಲ್ಲಿ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಶಾಲಾ ಶಿಕ್ಷಣ ಮುಗಿಸಿ ಮೈಸೂರು ಮಹಾರಾಜ ಕಾಲೇಜನ್ನು ಸೇರಿದರು. ೧೯೨೨ರಲ್ಲಿ ಬಿ.ಎ. ಪದವಿ ಮುಗಿಸಿ ೧೯೨೪ರಲ್ಲಿ ಎಂ.ಎ.ಪದವಿ ಪಡೆದರು.

೧೯೨೪ರಲ್ಲಿ ಮಹಾರಾಜ ಕಾಲೇಜಿನಲ್ಲಿ ಟ್ಯೂಟರ್ ಆಗಿ ೧೯೨೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ೧೯೪೦ರಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಬಡ್ತಿ ಪಡೆದರು. ೧೯೪೦ರಿಂದ ೧೯೪೩ವರೆಗೆ ಶಿವಮೊಗ್ಗ ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದು, ೧೯೪೩ರಲ್ಲಿ ಆಕಾಶವಾಣಿಯ ಸಹಾಯಕ ನಿರ್ದೇಶಕರಾದರು. ೧೯೪೮ರಲ್ಲಿ ಚಿತ್ರದುರ್ಗ ಕಾಲೇಜಿನಲ್ಲಿ ಮುಖ್ಯಸ್ಥರಾಗಿದ್ದು, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ೧೯೫೫ರಲ್ಲಿ ನಿವೃತ್ತಿಗೊಂಡರು.

೧೯೫೫ರಲ್ಲಿ ಸರಕ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದರು. ೧೯೫೪-೫೬ರಲ್ಲಿ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಸದರ್ನ್ ಲಾಂಗ್ವೇಜಸ್ ಬುಕ್ ಟ್ರಸ್ಟ್‌ನ ಕನ್ನಡ ಶಾಖೆಯ ಸಂಚಾಲಕ ಅಧ್ಯಕ್ಷರಾಗಿ ೪ ವರ್ಷಗಳ ಕಾಲ ಆಕಾಶವಾಣಿಯಲ್ಲಿ ಸೆಂಟ್ರಲ್ ಪ್ರೋಗ್ರಾಂ ಅಡ್ವೈಸರಿ ಕಮಿಟಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಎ.ಎನ್. ಮೂರ್ತಿರಾವ್ ಅವರು ಸಾಕಷ್ಟು ವಿದೇಶ ಪ್ರವಾಸ ಮಾಡಿದ್ದರು. ಅವರು ತಮ್ಮ ಲೋಕಾನುಭವದಿಂದ ಬರೆದ ಅಪರ ವಯಸ್ಕನ ಅಮೇರಿಕ ಯಾತ್ರೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ಚಿತ್ರಗಳು ಮತ್ತು ಪತ್ರಗಳು ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ, ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್(೧೯೭೭), ಸಮಗ್ರ ಸಾಹಿತ್ಯಕ್ಕೆ ಮಾಸ್ತಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಗೌರವ, ಡಿ.ಲಿಟ್. ಪ್ರಶಸ್ತಿ, 'ದೇವರು' ಗ್ರಂಥಕ್ಕೆ ಪಂಪ ಪ್ರಶಸ್ತಿ ಮುಂತಾದವು ಇವರಿಗೆ ಸಂದಿವೆ.

೧೯೮೪ರಲ್ಲಿ ಕೈವಾರಗಳಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು.

ಇವರು ರಚಿಸಿರುವ ಕೃತಿಗಳಲ್ಲಿ ಹಗಲುಕನಸುಗಳು, ಅಲೆಯುವ ಮನ, ಮಿನುಗು ಮಿಂಚು(ಪ್ರಬಂಧ ಸಂಕಲನ), ಬಿಎಂಶ್ರೀ, ಪೂರ್ವಸೂರಿಗಳೊಡನೆ, ಶೇಕ್ಸ್‌ಪಿಯರ್, ಮಾಸ್ತಿಯವರ ಕಥೆಗಳು(ವಿಮರ್ಶಾ ಕೃತಿಗಳು), ಆಷಾಢಭೂತಿ, ಮೋಲಿಯೇರನ ೨ ನಾಟಕಗಳು, ಚಂಡಮಾರುತ(ನಾಟಕಗಳು), ಪಾಶ್ಚಾತ್ಯ ಸಣ್ಣ ಕಥೆಗಳು ಇತ್ಯಾದಿ ಕೃತಿಗಳು ಪ್ರಸಿದ್ಧವಾಗಿವೆ.

ಇಂಗ್ಲಿಷಿನಲ್ಲೂ ಹಲವಾರು ಗ್ರಂಥಗಳನ್ನು ಬರೆದಿದ್ದಾರೆ.

ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯನ್ನು 'ದಿ ರಿಟರ್ನ್ ಟು ದಿ ಸಾಯಲ್' ಎಂದು ಅನುವಾದಿಸಿದ್ದಾರೆ.ಎಸ್. ರಾಧಾಕೃಷ್ಣನ್, ಎಂ.ವಿಶ್ವೇಶ್ವರಯ್ಯ, ಬಿ.ಎಂ.ಶ್ರೀಕಂಠಯ್ಯ ಅವರುಗಳನ್ನು ಕುರಿತು ಇಂಗ್ಲಿಷಿನಲ್ಲಿ ಸ್ವತಂತ್ರವಾಗಿ ಬರೆದಿದ್ದಾರೆ.

ಎ.ಎನ್. ಮೂರ್ತಿರಾವ್‌ರು ತಮ್ಮ ೧೦೪ನೇ ವಯಸ್ಸಿನಲ್ಲಿ ೨೩-೮-೨೦೦೩ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ–೫೬,
ಅಧ್ಯಕ್ಷರು, ಎ.ಎನ್.ಮೂರ್ತಿರಾವ್
ದಿನಾಂಕ ೨೩, ೨೪, ೨೫, ಮಾರ್ಚ್ ೧೯೮೪,
ಸ್ಥಳ : ಕೈವಾರ
[ಟಿಪ್ಪಣಿ : ೧೯೮೩ರಲ್ಲಿ ಸಮ್ಮೇಳನ ನಡೆಯಲಿಲ್ಲ]

೫೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕೈವಾರದಲ್ಲಿ ನಡೆಯುತ್ತದೆಂದು ಕೇಳಿದಾಗ ನಾನು ಈ ಅನುಭವವನ್ನು ಜ್ಞಾಪಿಸಿಕೊಂಡೆ. ಇತ್ತ ಕೈವಾರದ ಸ್ವಾಗತ ಸಮಿತಿಯವರು, ಅತ್ತ ಕನ್ನಡ ಸಾಹಿತ್ಯ ಪರಿಷತ್ತಿನವರು–ಇಬ್ಬರೂ ಹೊಸದೊಂದು ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ದೊಡ್ಡ ಪಟ್ಟಣಗಳಲ್ಲಿ ಸಭೆ ಶಿಬಿರ ವಿಚಾರ ಸಂಕಿರಣಗಳು ಹಳಸಲಾಗಿ ಹೋಗಿವೆ. ಇಲ್ಲಾದರೋ–ಈಗ ಶ್ರೀ ಎಂ.ಎಸ್. ರಾಮಯ್ಯನವರ ನೇತೃತ್ವದಲ್ಲಿ ಸ್ವಾಗತ ಸಮಿತಿಯವರು ನಡೆಸಿರುವ ಸಿದ್ಧತೆಯನ್ನು ನೋಡಿದರೇ ಗೊತ್ತಾಗುತ್ತದೆ, ಸಾಹಿತ್ಯ–ಸಂಸ್ಕೃತಿಗಳ ವಿಷಯದಲ್ಲಿ ಜನರಿಗೆ ಎಂಥ ಸಂಭ್ರಮವಿದೆಯೆಂಬುದು. ನಗರಭೂತದ ಮಾರಕ ಅಪ್ಪುಗೆಯಿಂದ ಕಳಚಿಕೊಂಡು ಇಲ್ಲಿಗೆ ಬರುವುದೇ ಒಂದು ಆನಂದ.

ಕೈವಾರ ಸಮ್ಮೇಳನದ ವೈಶಿಷ್ಟ್ಯ

ಆ ಗತಕಾಲದ ವೀರರ, ಮೇಧಾವಿಗಳ, ಪುಣ್ಯಪುರುಷರ ನಾಡಿನಲ್ಲಿ ನಾವು ಹುಟ್ಟಿದೆವೆಂದು ಹೇಳಿಕೊಳ್ಳುವುದು ಸ್ವಾಭಾವಿಕ. ಆದರೆ ಅವರ ಕೀರ್ತಿಯನ್ನು ಮುಂದುವರಿಸುವಂಥ, ಸಾಹಸದ ಎಲ್ಲೆಗಳನ್ನು ತಳ್ಳಿಕೊಂಡು ಮುಂದೆ ಸಾಗುವಂಥ ಬದುಕನ್ನು ಬಾಳುವುದೇ ನಾವು ಪೂರ್ವಿಕರಿಗೆ ಸಲ್ಲಿಸಬೇಕಾದ ಕಾಣಿಕೆ; ಅವರನ್ನು ಅನುಕರಿಸುತ್ತ ಅವರ ಸತ್ವಹೀನ ಪ್ರತಿಕೃತಿಗಳಂತೆ ಬಾಳುವುದಲ್ಲ.

ಈ ಸತ್ಯ ಕನ್ನಡ ಸಾಹಿತ್ಯ ಪ್ರಪಂಚಕ್ಕೂ ಅನ್ವಯಿಸುತ್ತದೆಂಬುದನ್ನು ಮನಗಂಡು ಅದರ ಬೆಳಕಿನಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡವರು–ನನ್ನ ಪೂಜ್ಯ ಗುರುಗಳಾದ ಬಿ.ಎಂ. ಶ್ರೀಕಂಠಯ್ಯನವರು. ಅವರ ಪ್ರಭಾವದಿಂದಾಗಿ, ಅವರ ಸತತ ಪ್ರಚಾರದಿಂದಾಗಿ, ಅವರು ಸ್ವತಃ ನಡೆಸಿದ ಪ್ರಯೋಗಗಳಿಂದಾಗಿ ಕನ್ನಡ ಸಾಹಿತ್ಯದಲ್ಲಿ ಹೊಸ ಯುಗವೊಂದು ಆರಂಭವಾಯಿತು. ಅದು ಹಿಂದಿನ ಯಾವ ಯುಗವೂ ಇಡದಷ್ಟು ದೊಡ್ಡ ದಾಪನ್ನು ಇಟ್ಟು ಅತ್ಯಂತ ಪರಿಣಾಮಕಾರಿಯಾದ ಪ್ರಗತಿಯನ್ನು ಸಾಧಿಸಿದೆ. ಶತಮಾನಗಳ ಕಾಲದಿಂದ ಬಂದ ಸಂಪ್ರದಾಯಗಳ ಪ್ರಯೋಜನವನ್ನು ಬಿಟ್ಟುಕೊಡದೆ, ಆದರೆ ಆ ಸಂಪ್ರದಾಯದ ಎಲ್ಲೆ ಕಟ್ಟುಗಳಲ್ಲೇ ಉಳಿದು 'ಬಂಧನವೇ ಒಂದು ಸೌಖ್ಯ' ಎಂದುಕೊಳ್ಳುವ ಮನೋವೃತ್ತಿಗೆ ಬಲಿಬೀಳದೆ ಹೊಸ ಯೌವನದ ಉತ್ಸಾಹದಿಂದ ಮುನ್ನುಗ್ಗಿದ ಯುಗ, ನಮ್ಮದು ಅದರ ಪ್ರವರ್ತಕರಾದ ಬಿ.ಎಂ.ಶ್ರೀಯವರು ಬದುಕಿದ್ದರೆ ಈ ವರ್ಷದ ಆದಿಯಲ್ಲಿ ಅವರಿಗೆ ನೂರು ವರ್ಷ ತುಂಬುತ್ತಿತ್ತು. ಕನ್ನಡ ನಾಡು ಬಿ.ಎಂ.ಶ್ರೀಯವರ ಶತಮಾನೋತ್ಸವವನ್ನು ಆಚರಿಸುತ್ತಿರುವ ವರ್ಷದಲ್ಲೇ ಇಲ್ಲಿ ಈ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಕೈವಾರದ ವೈಶಿಷ್ಟ್ಯಗಳಲ್ಲಿ ಇದೂ ಒಂದು.

ಪರಿಷತ್ತು ಹೊಣೆ ಅಲ್ಲ

ನಾನು ಅರ್ಧ ಶತಮಾನದ ಹಿಂದೆ ಕೇಳುತ್ತಿದ್ದ ಅರ್ಥಪೂರ್ಣ ತರ್ಕಬದ್ಧ ಭಾಷಣಗಳಿಗೆ ಬದಲಾಗಿ ಹಿಂದಿನ ಭಾಷಣಗಳ ತಿರುಳನ್ನೇ–ಅಂದರೆ ಕನ್ನಡ ಹಾಳಾಗುತ್ತಿದೆ, ಉಳಿಸಬೇಕು ಎಂಬ ತಿರುಳನ್ನೇ–ಉಳ್ಳ, ಆದರೆ ಭಾವಾವೇಶದಿಂದ ಜ್ವಲಿಸುವ, ಜನರಲ್ಲಿ ಅಸಹನೆಯನ್ನೂ ರೋಷವನ್ನೂ ಕೆರಳಿಸುವ ಭಾಷಣ ಘೋಷಣೆಗಳು ಈಗ ಕೇಳಿಬರುತ್ತಿವೆ. ಇದರಿಂದಾಗಿ ಜನಜೀವನ ಕದಡಿಹೋಗಿದೆ; ಇತ್ತ ಬೆದರಿಕೆಯಿಂದಾಗಿ ಭಯ ಕವಿದುಕೊಂಡಿದೆ; ಈ ಪರಿಸ್ಥಿತಿಯ ಬೆಂಕಿ ನಿರಪರಾಧಿಗಳನ್ನು ಸುಟ್ಟಿದೆ; ರಾಜ್ಯ ಎದುರಿಸಲೇಬೇಕಾದ ಮತ್ತು ಇದಕ್ಕಿಂತ ಮುಖ್ಯವಾದ ಸಮಸ್ಯೆಗಳು ಹಿನ್ನೆಲೆಗೆ ಹೋಗಿ ಬಿದ್ದಿವೆ. ಆದ್ದರಿಂದಲೇ ನನ್ನ ಮಾತಿನಲ್ಲಿ ಇದಕ್ಕೆ ಹೆಚ್ಚಿನ ಸ್ಥಾನವನ್ನು ಕೊಟ್ಟಿದ್ದೇನೆ. ಸಂಸ್ಕೃತಕ್ಕೆ ಯಾವ ಮಟ್ಟದಲ್ಲಿ ಯಾವ ಸ್ಥಾನವಿರಬೇಕು; ಯಾವ ಪರೀಕ್ಷಾ ಪತ್ರಕ್ಕೆ ಎಷ್ಟು ಅಂಕಗಳಿರಬೇಕು; ಹುದ್ದೆಯೊಂದಕ್ಕೆ ಅರ್ಜಿದಾರನಾದವನು ಅರ್ಜಿ ಹಾಕುವುದಕ್ಕಿಂತ ಮುಂಚೆಯ ಕನ್ನಡ ಪರೀಕ್ಷೆಯೊಂದನ್ನು ಪ್ಯಾಸು ಮಾಡಬಹುದೆ–ಇತ್ಯಾದಿ ವಿವರಗಳಿಗೆ ನಾನು ಇಲ್ಲಿ ಕೈಹಾಕುವುದಿಲ್ಲ. ನಾನು ತಮ್ಮೊಡನೆ ಪರಿಶೀಲಿಸಬೇಕೆಂದಿರುವುದು ಈ ಚಳವಳಿಯ ಹಿಂದಿರುವ ಮನೋವೃತ್ತಿಯನ್ನು,

ಈಗ ನಾನು ಹೇಳುವುದೆಲ್ಲ ನನ್ನ ಸ್ವಂತ, ವೈಯಕ್ತಿಕ ಅಭಿಪ್ರಾಯ. ಇದರ ಹೊಣೆ ಪರಿಷತ್ತಿನ ಮೇಲಾಗಲಿ ಸಮ್ಮೇಳನದ ಮೇಲಾಗಲಿ ಏನೇನೂ ಇಲ್ಲ. ಇದು ಸ್ಪಷ್ಟವೇ ಆದರೂ ಇಲ್ಲಿ ಅದನ್ನು ಕಾಣಿಸುವುದು ಒಳ್ಳೆಯದು.


ಕರ್ನಾಟಕದ ಉದಾರ ಭಾವ

ಇನ್ನು ನಮ್ಮನ್ನು ಕಾಡುತ್ತಿರುವ ಇತರ ಸಮಸ್ಯೆಗಳ ಕಡೆಗೆ ತಿರುಗೋಣ. ಇಂದು ಚಾಲತಿಯಲ್ಲಿರುವ ರಾಜ್ಯ ವ್ಯವಸ್ಥೆಯಿಂದಾಗಿ ರಾಜ್ಯಭ್ರಷ್ಟರಾಗಿರುವ ನಮ್ಮ ಸೋದರ ಕನ್ನಡಿಗರ ಮಾತು ಬಹುಶಃ ಪ್ರತಿಯೊಂದು ಸಾಹಿತ್ಯ ಸಮ್ಮೇಳನದಲ್ಲೂ ಬಂದಿದೆ. ಅಂಥವರೊಬ್ಬರು ನನಗೆ ಬರೆದ ಪತ್ರದಲ್ಲಿ ತಮ್ಮನ್ನು 'ಅನಾಥರು' ಎಂದು ಕರೆದುಕೊಂಡಿದ್ದರು. ನಾನು ಕೇಳಿರುವ ಮಟ್ಟಿಗೆ ಅವರು ಹಾಗೆಂದು ಕೊಂಡದ್ದು ಸರಿ ಎಂದು ತೋರುತ್ತದೆ. ಅನೇಕ ರಾಜ್ಯಗಳಲ್ಲಿ ಗಡಿಯ ಎರಡು ಕಡೆಗಳಲ್ಲೂ ಭಾಷಾ ಅಲ್ಪಸಂಖ್ಯಾತರಿರುತ್ತಾರೆ. ಇದು ಅನಿವಾರ್ಯ. ಆದರೆ ಅಲ್ಪಸಂಖ್ಯಾತರೆಂಬ ಕಾರಣದಿಂದಾಗಿ ಅವರು ಅನಾಥರಾಗಬೇಕಾದ್ದಿಲ್ಲ. ಅವರು ಯಾವ ರಾಜ್ಯದ ಪ್ರಜೆಗಳಾಗಿದ್ದಾರೋ ಆ ರಾಜ್ಯ ತನ್ನ ಕರ್ತವ್ಯವನ್ನು ಪಾಲಿಸಿದರೆ ಅವರು–ತಮ್ಮ ಭಾಷಾಸೋದರರಿಂದ ದೂರವಾದೆವಲ್ಲ ಎಂಬುದೊಂದನ್ನು ಬಿಟ್ಟು ಸುಖವಾಗಿರಬಹುದು. ನನಗೆ ತಿಳಿದಮಟ್ಟಿಗೆ ಕರ್ನಾಟಕ ಈ ಸಂದರ್ಭದಲ್ಲಿ ಉದಾರವಾಗಿಯೇ ವರ್ತಿಸುತ್ತಿದೆ.

❖❖

೫೭ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಹಾ.ಮಾ. ನಾಯಕ



ಅಂಕಣ ಸಾಹಿತ್ಯದಿಂದ ಕನ್ನಡದಲ್ಲಿ ಪ್ರಸಿದ್ಧರಾದ ಹಾ.ಮಾ. ನಾಯಕರು (ಹಾರೋಗದ್ದೆ ಮಾನಪ್ಪನಾಯಕ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯಲ್ಲಿ ಶ್ರೀನಿವಾಸನಾಯಕ-ರುಕ್ಮಿಣಿಯಮ್ಮ ದಂಪತಿಗಳಿಗೆ ಹಿರಿಯ ಮಗನಾಗಿ ೧೨-೧೧-೧೯೩೧ರಂದು ಜನಿಸಿದರು. ಶಿವಮೊಗ್ಗೆಯಲ್ಲಿ ಶಾಲಾ ವಿದ್ಯಾಭ್ಯಾಸವನ್ನು ಪೂರೈಸಿ ಕಾಲೇಜು ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿಯೂ ಸ್ನಾತಕೋತ್ತರ ಶಿಕ್ಷಣವನ್ನು ಕಲ್ಕತ್ತೆಯಲ್ಲಿಯೂ ಮಾಡಿ ೧೯೫೮ರಲ್ಲಿ ಭಾಷಾವಿಜ್ಞಾನದಲ್ಲಿ ಎಂ.ಎ. ಪದವಿಯನ್ನು ಪಡೆದರು.

೧೯೫೫ರಲ್ಲಿ ತುಮಕೂರಿನಲ್ಲಿ ಕನ್ನಡ ಅಧ್ಯಾಪಕರಾಗುವ ಮೂಲಕ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಅವರು ಅನಂತರ ಪ್ರವಾಚಕ, ಪ್ರಾಧ್ಯಾಪಕ, ನಿರ್ದೇಶಕರಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದರು. ೧೯೮೪ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿ ನೇಮಕಗೊಂಡರು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ೧೯೯೧ರವರೆಗೂ ಸೇವೆಸಲ್ಲಿಸಿ ನಿವೃತ್ತರಾದರು.

ಹಾ.ಮಾ.ನಾ ಅವರಿಗೆ ಬಂದಿರುವ ಪ್ರಶಸ್ತಿಗಳು ಸಾಕಷ್ಟಿವೆ : ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಗಳು ಅವರಿಗೆ ಲಭ್ಯವಾಗಿವೆ.

'ಸಲ್ಲಾಪ' ಗ್ರಂಥಕ್ಕೆ ಮೈ.ವಿ.ವಿ ಸುವರ್ಣ ಮಹೋತ್ಸವ ಪ್ರಶಸ್ತಿ, 'ಸಂಪ್ರತಿ' ಗ್ರಂಥಕ್ಕೆ ಐ.ಬಿ.ಎಚ್. ಎಜುಕೇಷನ್ ಟ್ರಸ್ಟ್ ಪ್ರಶಸ್ತಿ ಲಭಿಸಿವೆ.

ದೇಶವಿದೇಶಗಳಲ್ಲಿ ನಾನಾ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದರು. ಬೀದರ್‌ನಲ್ಲಿ ನಡೆದ ೫೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸುವ ಭಾಗ್ಯ ಇವರದಾಗಿತ್ತು.

ಇವರು ರಚಿಸಿರುವ ಕೆಲವು ಪ್ರಮುಖ ಕೃತಿಗಳು :ಬಾಳ್ನೋಟಗಳು, ನಮ್ಮ ಮನೆಯ ದೀಪ, ಜಾನಪದ ಸ್ವರೂಪ, ಪ್ರಣಯ ವಿದ್ಯಾವಲಿ, ರವೀಂದ್ರನಾಥ್ ಠಾಕೂರ್, ಗೋರೂರು ಗೌರವ ಗ್ರಂಥ, ಎ.ಆರ್.ಕೃ ಜೀವನ ಸಾಧನೆ, ಜಾನಪದ ಗ್ರಂಥಸೂಚಿ, ಬಿಡುಗಡೆಬಳ್ಳಿ, ಗದ್ಯವಿಹಾರ, ಗಳಗನಾಥ, ಮುದ್ದಣ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು ಇವರಿಂದ ಸಂಪಾದಿತವಾಗಿವೆ.

ಸಂಪ್ರತಿ, ಸಂಕೀರ್ಣ, ಸಮಿಕ್ಷೆ, ಸಂದರ್ಭ, ಸಂಗ್ರಹ, ಸಂಚಯ, ಸೃಜನ, ಸಂಪರ್ಕ, ಸಂವಹನ, ಮೊದಲಾದ ಅಂಕಣ ಬರಹಗಳು ಪುಸ್ತಕಗಳಾಗಿ ಹೊರಬಂದಿವೆ.

ಮೈಸೂರಿನಲ್ಲಿ ನೆಲೆಸಿದ್ದ ಹಾ.ಮಾ.ನಾ ಅವರು ೧೦-೧೧-೨೦೦೦ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫೭,
ಅಧ್ಯಕ್ಷರು, ಹಾ.ಮಾ. ನಾಯಕ
ದಿನಾಂಕ ೫, ೬, ೭ ಏಪ್ರಿಲ್ ೧೯೮೫,
ಸ್ಥಳ : ಬೀದರ್

ಹಿಂದಿನ ಸಮ್ಮೇಳನಾಧ್ಯಕ್ಷರ ಕಾರ್ಯ

ಈ ಮೊದಲು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರ ಪಟ್ಟಿಯನ್ನು ನೋಡಿದರೆ ಅವರೆಲ್ಲರನ್ನು ಸ್ಥೂಲವಾಗಿ ಮೂರು ಗುಂಪು ಮಾಡಬಹುದೆಂದು ತೋರುತ್ತದೆ. ಒಂದು ಗುಂಪಿನವರು ಅದ್ಭುತ ಸೃಜನಶೀಲರು (ಕುವೆಂಪು, ಬೇಂದ್ರೆ, ಕಾರಂತ, ಗೋಕಾಕ್ ಮೊ.); ಇನ್ನೊಂದು ಗುಂಪಿನವರು ಮಹಾ ವಿದ್ವಾಂಸರು (ಉಪಾಧ್ಯೆ, ಪೈ, ಹಳಕಟ್ಟಿ, ಡಿ.ಎಲ್.ಎನ್., ನರಸಿಂಹಾಚಾರ್ ಮೊ.); ಮತ್ತೊಂದು ಗುಂಪಿನವರು ಕನ್ನಡದ ಕೆಲಸಗಾರರು; ಸೃಜನಶೀಲವಾದ ಅಥವಾ ವಿದ್ವತ್ತಿನ ಕೆಲಸವನ್ನು ಅವರು ಮಾಡಿರಬಹುದು ಅಥವಾ ಮಾಡದೆಯೂ ಇರಬಹುದು. ಆದರೆ ಅವರ ಕನ್ನಡದ ಕೆಲಸವೇ ದೊಡ್ಡದು (ಬೆಳ್ಳಾವೆ ವೆಂಕಟನಾರಣಪ್ಪ, ಮುದವೀಡು ಕೃಷ್ಣರಾವ್, ಕೆ.ಪಿ. ಪುಟ್ಟಣ್ಣಶೆಟ್ಟಿ, ಬೆನಗಲ್ ರಾಮರಾವ್, ತಿ.ತಾ. ಶರ್ಮ ಮೊ.) ಭಾಷೆ ಸಾಹಿತ್ಯಗಳ ಬೆಳವಣಿಗೆಗೆ ಇವರೆಲ್ಲರೂ ಮುಖ್ಯರಾದವರು. ಆದ್ದರಿಂದಲೇ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಎಲ್ಲ ಬಗೆಯ ಕೆಲಸಗಾರರನ್ನೂ ಒಂದೇ ದೃಷ್ಟಿಯಿಂದ ನೋಡಿಕೊಂಡು ಬಂದಿದೆ. ನಾನು ಕನ್ನಡದ ಕೆಲಸಗಾರರಲ್ಲಿ ಕೊನೆಯವನು, ಕಿರಿಯವನು, ನನಗಿಂತ ಕೊನೆಯವರಿಲ್ಲ, ಕಿರಿಯವರಿಲ್ಲ. ಇದನ್ನು ತುಂಬ ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡು ಈ ಮಹಾಗೌರವವನ್ನು ವಿನೀತನಾಗಿ ಸ್ವೀಕರಿಸಿದ್ದೇನೆ.

ಪರಿಷತ್ತಿನ ಸಾಧನೆ

ನನ್ನ ಭಾಷಣವನ್ನು ಮುಗಿಸುವ ಮುಂಚೆ ಕನ್ನಡ ಸಾಹಿತ್ಯ ಪರಿಷತ್ತಿನ ವಿಷಯವಾಗಿ ಕೆಲವು ಮಾತುಗಳನ್ನು ಆಡಬೇಕಾಗಿದೆ. ಪರಿಷತ್ತು ಕನ್ನಡಿಗರೆಲ್ಲರಿಗೂ ಮಾತೃಸಂಸ್ಥೆ. ಸಾಹಿತ್ಯ ಸಂಸ್ಕೃತಿಗಳ ವಿಷಯದಲ್ಲಿ ಅದು ಪ್ರಾತಿನಿಧಿಕ ಸಂಸ್ಥೆ. ನಮ್ಮ ಹಿರಿಯರು ಅದನ್ನು ತಮ್ಮ ತ್ಯಾಗ ದುಡಿಮೆಗಳಿಂದ ಕಟ್ಟಿದರು. ಅದಕ್ಕೆ ಧನಬಲವಿಲ್ಲದ ದಿನಗಳಲ್ಲಿ ಪದಾಧಿಕಾರಿಗಳಾಗಿದ್ದವರು ತಮ್ಮ ಸ್ವಂತ ಹಣವನ್ನು ಹಾಕಿ ಪರಿಷತ್ತನ್ನು ನಡೆಸಿಕೊಂಡು ಬಂದರು. ಆ ದಿನಗಳಲ್ಲಿ ಅಲ್ಲಿ ಯಾವ ಬಗೆಯ ಪೈಪೋಟಿಗಳೂ ಇರಲಿಲ್ಲ. ಇದ್ದರೂ ಅದು ಕೇವಲ ಪ್ರಜಾಪ್ರಭುತ್ವ ತತ್ವಕ್ಕನುಸಾರವಾದುದಾಗಿತ್ತು. ಸಣ್ಣ ಪ್ರಮಾಣದಲ್ಲಿತ್ತು. ಅಂದಿನ ದಿನಗಳಲ್ಲೂ ಪರಿಷತ್ತನ್ನು ಟೀಕಿಸುವವರಿದ್ದರು. ಸಾರ್ವಜನಿಕ ಸಂಸ್ಥೆಗಳ ಕಾರ್ಯನಿರ್ವಹಣೆ ಟೀಕೆಗಳಿಗೆ ಒಳಗಾಗುವುದು ಸಹಜ. ಕೆಲಸ ಮಾಡದಿದ್ದಾಗ ಮಾತ್ರ ಟೀಕೆಗಳಿರುವುದಿಲ್ಲ. ಟೀಕೆಗಳು ಬರುತ್ತವೆಂದು ಕೆಲಸ ಮಾಡದೆ ಇರಲಾಗುವುದಿಲ್ಲ. ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅದನ್ನು ಬಹ್ವೀಕರಿಸಿದರು. ಕಟ್ಟಡ ವಿಸ್ತಾರವಾಯಿತು. ಸದಸ್ಯಬಲ ಬೆಳೆಯಿತು. ಮುಖ್ಯವಾಗಿ ಸರ್ಕಾರದಿಂದ ಉದಾರವಾದ ಧನಸಹಾಯ ದೊರೆಯಿತು. ಇದರ ಫಲವಾಗಿ ಪರಿಷತ್ತಿನ ಚಟುವಟಿಕೆಗಳೂ ಬೆಳೆದವು. ನಾರಾಯಣರ ನಂತರ ಬಂದ ಹಂಪ. ನಾಗರಾಜಯ್ಯನವರಾದರೂ ಪರಿಷತ್ತಿನ ಚಟುವಟಿಕೆಗಳನ್ನು ಬಹುವಾಗಿ ವಿಸ್ತರಿಸುವ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರು. ಅವರು ಪರಿಷತ್ತಿನ ಅಂಗರಚನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಿದ್ದುಪಡಿ ಮಾಡಿದ್ದು ಒಂದು ಬಹುಮುಖ್ಯವಾದ ಸಾಧನೆ ಎಂದು ನಾನು ಭಾವಿಸುತ್ತೇನೆ.

ಪರಿಷತ್ತಿನ ಬಗ್ಗೆ ಟೀಕೆಗಳು

ಕನ್ನಡ ಸಾಹಿತ್ಯ ಪರಿಷತ್ತು ಸಂಪೂರ್ಣವಾಗಿ ಸರ್ಕಾರದ ಸಹಾಯವನ್ನು ಅವಲಂಬಿಸಿರುವ ಸಂಸ್ಥೆ. ಸರ್ಕಾರದ ಸಹಾಯಧನ ಬರದೆ ಹೋದರೆ ಪರಿಷತ್ತು ಬಾಗಿಲು ಮುಚ್ಚಬೇಕಾಗುತ್ತದೆ. ಇಂಥ ಪರಿಸ್ಥಿತಿಯಿಂದ ಪರಿಷತ್ತನ್ನು ಪಾರುಮಾಡುವ ಯೋಜನೆಯನ್ನು ಸಿದ್ಧಪಡಿಸಬೇಕಾದ ಕಾಲವೀಗ ಬಂದಿದೆ. ಸಾಹಿತ್ಯ ಸಂಸ್ಕೃತಿಗಳ ವಿಷಯದಲ್ಲಿ ಈವರೆಗಿನ ಕರ್ನಾಟಕದ ಮಂತ್ರಿಮಂಡಳಗಳೆಲ್ಲವೂ ಬಹು ಉದಾರವಾಗಿ ನಡೆದುಕೊಂಡಿವೆ ಎಂಬುದನ್ನು ನಾವು ಅಭಿಮಾನದಿಂದ ಸ್ಮರಿಸಬೇಕು. ಅವು ತಾವಾಗಿಯೇ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ಬೆಂಬಲ ನೀಡಿವೆ. ಆದರೂ ಪರಿಷತ್ತು ಸ್ವಾಯತ್ತ ಸಂಸ್ಥೆಯಾಗಿ ತನ್ನ ಕಾಲ ಮೇಲೆ ತಾನು ನಿಲ್ಲುವುದು ಅಗತ್ಯವೆಂದು ನನ್ನ ಅಭಿಪ್ರಾಯ. ಇಂದಲ್ಲ ನಾಳೆ ಯಾವುದೇ ಸರ್ಕಾರ ಅಥವಾ ಒಬ್ಬ ಮಂತ್ರಿ ಪರಿಷತ್ತು ತನ್ನ ತಾಳಕ್ಕೆ ಸರಿಯಾಗಿ ಕುಣಿಯಬೇಕೆಂದು ಅಪೇಕ್ಷಿಸಬಹುದು. ಪರಿಷತ್ತಿನ ಆಡಳಿತದಲ್ಲಿ

ಹಸ್ತಕ್ಷೇಪ ಮಾಡಬಹುದು. ಸಹಾಯಧನವನ್ನು ನಿಲ್ಲಿಸಬಹುದು ಅಥವಾ ಕಡಿಮೆ ಮಾಡಬಹುದು. ಪರಿಷತ್ತು ಸರ್ಕಾರದ ದನಿಯಾಗಬೇಕಾಗಿಲ್ಲ; ಆಗಬಾರದು. ಕನ್ನಡದ ಸರ್ವಾಂಗೀಣ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರ ತಪ್ಪು ಹೆಜ್ಜೆ ಇಡುವ ಸಂದರ್ಭದಲ್ಲಿ ಅದನ್ನು ಎಚ್ಚರಿಸಿ ಮಾರ್ಗದರ್ಶನ ನೀಡುವ ಶಕ್ತಿಯನ್ನು ಗಳಿಸಿಕೊಳ್ಳಬೇಕು. ಕನ್ನಡ ಭಾಷೆ ಸಾಹಿತ್ಯಗಳ ವಿಷಯದಲ್ಲಿ ಪರಿಷತ್ತಿನದೇ ಕೊನೆಯ ಮಾತಾಗಬೇಕು. ಇದು ಸರ್ಕಾರದ ಸಹಾಯಧನವನ್ನು ಅವಲಂಬಿಸಿರುವವರೆಗೂ ಸಾಧ್ಯವಾಗುವುದಿಲ್ಲ.

ಪರಿಷತ್ತಿನ ನಿಧಿ ವಿಚಾರ

ಆದ್ದರಿಂದ ಪರಿಷತ್ತು ತನ್ನದೇ ಒಂದು ನಿಧಿಯನ್ನು ಸ್ಥಾಪಿಸುವ ಯೋಜನೆ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. 'ಒಬ್ಬ ಕನ್ನಡಿಗ ಒಂದು ರೂಪಾಯಿ' ಎಂಬ ಯೋಜನೆ ಹಾಕಿಕೊಂಡು ಒಂದು ಕೋಟಿ ರೂಪಾಯಿಗಳ ನಿಧಿಯೊಂದನ್ನು ಆರಂಭಿಸಬೇಕು. ನಿಧಿ ಸಂಗ್ರಹ ಕಷ್ಟವಾಗಲಾರದೆಂದು ಭಾವಿಸುತ್ತೇನೆ. ಮಾತು ಮಾತಿಗೆ ನಾವು ಮುಕ್ಕೋಟಿ ಕನ್ನಡಿಗರೆಂದು ಹೇಳುತ್ತೇವೆ. ಈ ಮುಕ್ಕೋಟಿಯಲ್ಲಿ ಎರಡು ಕೋಟಿಯನ್ನು ಬಿಟ್ಟರೂ ಮಿಕ್ಕ ಒಂದು ಕೋಟಿ ಜನ ಪರಿಷತ್ತಿಗೆ ಒಂದೊಂದು ರೂಪಾಯಿ ಕೊಡಲು ಮನಸ್ಸು ಮಾಡುತ್ತಾರೆ ಎಂದು ನಂಬಿದ್ದೇನೆ. ಹೆಚ್ಚು ಕೊಡುವವರಿದ್ದರೆ ಬೇಡ ಎನ್ನುವುದಿಲ್ಲ. ಈ ಒಂದು ಕೋಟಿ ರೂಪಾಯಿಗಳ ಬಡ್ಡಿಯಲ್ಲಿಯೇ ಪರಿಷತ್ತು ಸರ್ಕಾರದ ಮರ್ಜಿಯನ್ನು ಕಾಯದೆ ತನ್ನ ಕೆಲಸ ಮಾಡಬಹುದು. ಪರಿಷತ್ತಿನ ಉತ್ಸಾಹೀ ಅಧ್ಯಕ್ಷರಾದ ಹಂ. ಪ. ನಾಗರಾಜಯ್ಯನವರು ತಮ್ಮ ಅಧಿಕಾರಾವಧಿಯಲ್ಲಿಯೇ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಾರೆಂದು ನಿರೀಕ್ಷಿಸುತ್ತೇನೆ. ಅವರು ವಂತಿಗೆಯ ಸಂಗ್ರಹಕ್ಕೆ ಹೊರಟಾಗ ನನ್ನದು ನಮ್ರವಾದ ಐದು ನೂರ ಒಂದು ರೂಪಾಯಿಗಳ ಕಾಣಿಕೆ ಇರುತ್ತದೆಂದು ತಿಳಿದುಕೊಳ್ಳಲಿ.

ಪರಿಷತ್ತಿನ ಕಾರ್ಯದಲ್ಲಿ ಪಾಲ್ಗೊಳ್ಳಿ

ಪರಿಷತ್ತಿನ ಧ್ಯೇಯ ಧೋರಣೆಗಳನ್ನು ಒಪ್ಪದವರಲ್ಲಿ ನನ್ನದೊಂದು ಕಳಕಳಿಯ ಪ್ರಾರ್ಥನೆಯಿದೆ: ಪರಿಷತ್ತನ್ನು ತಿಳಿಯದೆ, ಪರಿಷತ್ತಿನ ಒಳಗೆ ಬರದೆ ಪರಿಷತ್ತನ್ನು ಟೀಕಿಸಬೇಡಿ. ಪರಿಷತ್ತು ನಮ್ಮೆಲ್ಲರಿಗೂ ಸೇರಿದ್ದು. ಮೊದಲು ಪರಿಷತ್ತಿನ ಸದಸ್ಯರಾಗಿ, ಒಳಗೆ ಬನ್ನಿ. ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳಿ. ಪರಿಷತ್ತು ಪ್ರಜಾಸತ್ತಾತ್ಮಕ ಸಂಸ್ಥೆ. ಅದರಲ್ಲಿ ನಿಮ್ಮ ದನಿಗೂ ಮಹತ್ವವಿದೆ. ಬರದೆ ಟೀಕೆಗಾಗಿ ಟೀಕೆ ಮಾಡಬೇಡಿ. ಎಲ್ಲ ಸಂಸ್ಥೆಗಳಿಗೂ ಇರುವಂತೆ ಪರಿಷತ್ತಿಗೂ ಅನೇಕ ಸೀಮಿತಗಳಿವೆ. ಎಲ್ಲರೂ ಅಪೇಕ್ಷಿಸುವ ಎಲ್ಲ ಕೆಲಸಗಳನ್ನೂ ಮಾಡುವುದು ಒಬ್ಬರಿಂದ ಸಾಧ್ಯವಾಗುವುದಿಲ್ಲ. ಆದರೆ ಅದು ಮಾಡುವ ಕೆಲಸ ಕನ್ನಡದ, ಕರ್ನಾಟಕದ ಕಲ್ಯಾಣಕ್ಕಾಗಿ ಎಂಬುದರಲ್ಲಿ ಎರಡು ಅಭಿಪ್ರಾಯಗಳಿಗೆ ಅವಕಾಶವಿಲ್ಲ. ಪರಿಷತ್ತು ಕನ್ನಡಿಗರದ್ದು. ಅದು ಕನ್ನಡಿಗರ ಸಾಂಸ್ಕೃತಿಕ ದೇವಾಲಯ. ಅದರ ಅಭಿವೃದ್ಧಿಯನ್ನು ನಾವು ಹಾರೈಸೋಣ. ಅದಕ್ಕಾಗಿ ಶ್ರಮಿಸೋಣ.

❖ ❖

೫೮ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಸಿದ್ದಯ್ಯ ಪುರಾಣಿಕ



ಪ್ರಸಿದ್ಧ ಕವಿ, ಆಡಳಿತಗಾರ, ಆಧುನಿಕ ವಚನಕಾರ ಸಾಹಿತಿ ಸಿದ್ದಯ್ಯ ಪುರಾಣಿಕರು ಕೊಪ್ಪಳ ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ದ್ಯಾಂಪುರದಲ್ಲಿ ಕಲ್ಲಿನಾಥಶಾಸ್ತ್ರಿ-ದಾನಮ್ಮ ದಂಪತಿಗಳಿಗೆ ೧೮-೮-೧೯೧೮ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ದ್ಯಾಂಪುರ, ಕುಕ್ಕನೂರುಗಳಲ್ಲಿ ಮುಗಿಸಿ, ಇಂಟರ್‌ಮಿಾಡಿಯೇಟ್‌ವರೆಗಿನ ಶಿಕ್ಷಣವನ್ನು ಗುಲ್ಬರ್ಗದಲ್ಲಿ ಪೂರೈಸಿದರು.

ಬಿ.ಎ.,ಎಲ್.ಎಲ್.ಬಿ ಪದವಿಗಳನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಪಡೆದ ಮೇಲೆ ಐ.ಎ.ಎಸ್ ಪರೀಕ್ಷೆಯನ್ನು ಪಾಸು ಮಾಡಿದರು. ಅಸಿಸ್ಟೆಂಟ್ ಕಲೆಕ್ಟರ್ ಆಗಿ ೧೯೪೪ರಲ್ಲಿ ಕೆಲಸಕ್ಕೆ ಸೇರಿ, ಅನಂತರ ಸಹಾಯಕ ಕಂದಾಯ ಕಾರ್ಯದರ್ಶಿ, ಆಡಳಿತ ಸಚಿವರ ಕಾರ್ಯದರ್ಶಿ, ಡೆಪ್ಯೂಟಿ ಕಲೆಕ್ಟರ್ ಮೊದಲಾದ ಸ್ಥಾನಗಳಲ್ಲಿ ಕಾರ್ಯನಿರ್ವಹಣೆ ಮಾಡಿದರು. ಐ.ಎ.ಎಸ್. ಅಧಿಕಾರಿಗಳಾದ ಮೇಲೆ ವಿದ್ಯಾ ಇಲಾಖೆಯ ಉಪಕಾರ್ಯದರ್ಶಿ, ವಾರ್ತಾ ಪ್ರವಾಸೋದ್ಯಮ ನಿರ್ದೇಶಕರಾಗಿ ಅರ್ಥಖಾತೆಯಲ್ಲಿ ಉಪಕಾರ್ಯದರ್ಶಿಗಳಾಗಿ, ಚಿನ್ನ ನಿಯಂತ್ರಣಾಧಿಕಾರಿಯಾಗಿ, ಡೆಪ್ಯುಟಿ ಕಮಿಾಷನರ್ ಆಗಿ, ಸಾರಿಗೆ ಖಾತೆಯ ಆಯುಕ್ತರಾಗಿ, ರಾಜ್ಯದ ಲೇಬರ್ ಕಮಿಾಷನರ್ ಆಗಿ ನಾನಾ ಹುದ್ದೆಗಳಲ್ಲಿ ಸಮರ್ಥ ರೀತಿಯಲ್ಲಿ ಸೇವೆ ಸಲ್ಲಿಸಿ ೧೯೭೬ರಲ್ಲಿ ನಿವೃತ್ತಿ ಹೊಂದಿದರು.

ಇವರ ಆಡಳಿತ ಸೇವೆ, ಸಾಹಿತ್ಯ ಸೇವೆಗಾಗಿ ಅನೇಕ ಪ್ರಶಸ್ತಿ ಗೌರವ ಸನ್ಮಾನಗಳು ಇವರಿಗೆ ಲಭಿಸಿವೆ. ಅವುಗಳಲ್ಲಿ ಮುಖ್ಯವಾದವುವೆಂದರೆ ೧೯೭೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ನೀಡಿದ ಡಾಕ್ಟರೇಟ್, ೧೯೭೮ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ನೀಡಿದ ಪ್ರಶಸ್ತಿ, ೧೯೮೧ರಲ್ಲಿ ಪ್ರದಾನ ಮಾಡಿದ ಸ.ಸ.ಮಾಳನಾಡರ ಪ್ರಶಸ್ತಿ, ವಚನೋದ್ಯಾನ ಗ್ರಂಥಕ್ಕೆ ಭಾರತೀಯ ಭಾಷಾ ಪರಿಷತ್ತು ನೀಡಿದ ಬಿಲ್ವಾ ಪ್ರಶಸ್ತಿ, ಮೊದಲಾದವು. ಉರ್ದು, ಮರಾಠಿ, ಪರ್ಷಿಯನ್, ಸಂಸ್ಕೃತ ಭಾಷೆಗಳನ್ನು ಚೆನ್ನಾಗಿ ಅರಿತಿದ್ದ ಸಿದ್ದಯ್ಯ ಪುರಾಣಿಕರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಕೆಲವು ಕಾಲ ಗುಲ್ಬರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವರು ಗುಲ್ಬರ್ಗದಲ್ಲಿ ಜರುಗಿದ ೫೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

'ಕಾವ್ಯಾನಂದ' ಎಂಬ ಕಾವ್ಯನಾಮದಲ್ಲಿ ಇವರು ೩೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ :ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ವಚನೋದ್ಯಾನ, ಮರುಳ ಸಿದ್ದನ ಕತೆ ಇತ್ಯಾದಿ ಕವನ ಸಂಕಲನಗಳು, ಮೊದಲು ಮಾನವನಾಗು, ಕಲ್ಲೋಲಮಾಲೆ, ಹಾಲ್ದೆನೆ, ಹರ್ಡೇಕರ ಮಂಜಪ್ಪ, ಮಿರ್ಜಾಗಾಲಿಬ್, ಶರಣ ಚರಿತಾಮೃತ, ಮಹಾದೇವಿ ಇತ್ಯಾದಿ ಜೀವನ ಚರಿತ್ರೆಗಳು. ಗಿಲ್‌ಗಿಲ್‌ಗಿಲ್‌ಗಚ್ಚಿ, ತುಪ್ಪರೊಟ್ಟಿ, ಗೇಗೇಗೇ ಎಂಬ ಮಕ್ಕಳ ಕೃತಿಗಳು.

ಕನಕದಾಸ ಪ್ರಶಸ್ತಿ ಮಣಿಹ, ಶರಣರ ಪ್ರಸಾದ ಇವರ ಸಂಪಾದಿತ ಕೃತಿಗಳು. ಕಥಾಮಂಜರಿ, ತುಷಾರಹಾರ ಎಂಬ ಕಥಾಸಂಕಲನಗಳು, ರಜತರೇಖೆ, ನಿರ್ಬಂಧನ, ಆತ್ಮಾರ್ಪಣ, ಗಿರಿಜಾಕಲ್ಯಾಣ-ನಾಟಕಗಳು ಇತ್ಯಾದಿ ಕೃತಿಗಳನ್ನು ಕೂಡ ರಚಿಸಿದ್ದರೂ ಇವರು ಕವಿಗಳೆಂದೇ ಪ್ರಸಿದ್ಧರಾಗಿದ್ದಾರೆ.

ಇವರು ಬೆಂಗಳೂರಿನಲ್ಲಿ ೧೮-೯-೧೯೯೪ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫೮
ಅಧ್ಯಕ್ಷರು, ಸಿದ್ದಯ್ಯ ಪುರಾಣಿಕ
ದಿನಾಂಕ: ೨೯, ೩೦, ೩೧ ಅಕ್ಟೋಬರ್, ೧ ನವೆಂಬರ್ ೧೯೮೭
ಸ್ಥಳ : ಕಲಬುರ್ಗಿ
(ಟಿಪ್ಪಣಿ ೧೯೮೬ರಲ್ಲಿ ಸಮ್ಮೇಳನ ನಡೆಯಲಿಲ್ಲ)

ಕನ್ನಡ ಹಿಂದಕ್ಕೆ ಹೋಗಿದೆ

ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದ ಆರಂಭದಲ್ಲಿಯೇ-೧೯೧೫ರಷ್ಟು ಹಿಂದೆಯೇ-ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರೂ, ಆ ಕಾಲಕ್ಕೇ ಅರ್ಥಶಾಸ್ತ್ರ, ಲೇಖ್ಯಬೋಧಿನಿ, ವ್ಯವಹಾರ ದೀಪಿಕೆಯಂಥ ಉಪಯುಕ್ತ ಗ್ರಂಥಗಳನ್ನು ಕನ್ನಡಿಗರಿಗೆ ಕೊಟ್ಟವರೂ ಆದ ರಾಜಮಂತ್ರ ಪ್ರವೀಣ ಎಚ್.ವಿ. ನಂಜುಂಡಯ್ಯನವರು ಹೇಳಿದುದು ಹೀಗಿದೆ: ಪತ್ರಗಳಲ್ಲಿಯೂ, ವಾಣಿಜ್ಯದಲ್ಲಿಯೂ ಬಳಕೆಯಲ್ಲಿರತಕ್ಕ ಭಾಷೆಯಾಗಿದೆ. ಈ ದೇಶದಲ್ಲಿ ಕನ್ನಡವನ್ನು ಮಾತೃಭಾಷೆಯಾಗಿ ಮನೆಯಲ್ಲಿ ಮಾತನಾಡದಿರುವ ಅನೇಕ ಜನಗಳು ಇರುವುದೂ ನಿಶ್ಚಯವೇ; ಆದರೆ ಅವೆಲ್ಲರೂ ಚಿಕ್ಕಂದಿನಿಂದಲೂ ದೇಶಭಾಷೆಯಾದ ಕನ್ನಡವನ್ನು ಕಲಿಯುವರು. ಪ್ರಾಯಶಃ ಮುಸಲ್ಮಾನರನ್ನು ಬಿಟ್ಟರೆ ಮಿಕ್ಕ ಜನರೆಲ್ಲರೂ ಕನ್ನಡವನ್ನೇ ಮೊದಲು ಕಲಿತು, ತಮ್ಮ ಬಂಧುಗಳಿಗೆ ಕ್ಷೇಮ ಸಮಾಚಾರದ ಕಾಗದಗಳನ್ನು ಬರೆಯುವಾಗಲೂ ತೆಲುಗು, ತಮಿಳುಗಳಿಗೆ ಬದಲಾಗಿ ಕನ್ನಡವನ್ನೇ ಬಳಸುವರು."

೧೯೧೫ರಲ್ಲಿ ಇದ್ದ ಈ ಸುಸ್ಥಿತಿ ಕನ್ನಡಕ್ಕೆ ಈಗ ಇದೆಯೆಂದು-ಸಾಹಿತ್ಯ ಸೃಷ್ಟಿಯ ದೃಷ್ಟಿಯಿಂದಲ್ಲ, ಜನಬಳಕೆಯ ದೃಷ್ಟಿಯಿಂದ ಇದೆಯೆಂದು-ನಮ್ಮ ಸರಕಾರದ ಸೂತ್ರಧಾರಿಗಳು ಎದೆ ತಟ್ಟಿ ಹೇಳಬಲ್ಲರೆ ? ಹೊಸಗನ್ನಡ ಸಾಹಿತ್ಯ ಸೃಷ್ಟಿ ಅದ್ಭುತವಾಗಿ ಆಗಿದೆ. ನಿಜ. ಅದರ ಬಗ್ಗೆ ಮುಂದೆ ಪ್ರಸ್ತಾಪಿಸುವೆನು. ಆದರೆ ಜನಬಳಕೆಯ ದೃಷ್ಟಿಯಿಂದ, ಕನ್ನಡ ರಾಜ್ಯೋದಯವಾಗಿ ಮೂರು ದಶಕಗಳು ಕಳೆದ ಮೇಲೂ, ಕನ್ನಡದ ತೇರು ೧೯೧೫ಕ್ಕೂ ಹಿಂದೇ ಹೋಗಿದೆಯೆಂಬುದು ಎಂತ ಲಜ್ಜಾಸ್ಪದವಾದ ವಿಷಯ.

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ನಾಡು ಚರಗ ಚೆಲ್ಲಿದಂತೆ ಚೆದುರಿ ಚೆಲ್ಲಾಪಿಲ್ಲಿಯಾಗಿದ್ದಾಗಲೂ ಕನ್ನಡಕುಲದ ಗಮನೀಯ ಕಲ್ಪನೆಯನ್ನು ವಿದ್ಯಾವರ್ಧಕ ಸಂಘದೊಡನೆ ಎಲ್ಲ ಭಾಗಗಳ ಕನ್ನಡಿಗರ ಮುಂದೆ ಮನೋಜ್ಞವಾಗಿ ಮಂಡಿಸಿ, ಕನ್ನಡಿಗರ ಸಾಂಸ್ಕೃತಿಕ ಏಕೀಕರಣಕ್ಕೆ ಬುನಾದಿಯನ್ನು ಹಾಕಿ, ಕನ್ನಡ ನುಡಿ ತಲೆ ಎತ್ತಲು, ಹೊಸಗನ್ನಡ ಸಾಹಿತ್ಯ ಹುಲುಸಾಗಿ ಬೆಳೆಯಲು ಕಳೆದ ಏಳು ದಶಕಗಳಿಂದಲೂ ಸಾಕಷ್ಟು ಶ್ರಮಿಸುತ್ತ ಬಂದಿರುವ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಮೂಲೋದ್ದೇಶಗಳಲ್ಲಿ ಕೆಲವು ಈಡೇರಿದ ಸಂತೃಪ್ತಿಯೊಡನೆ, ನಿರಂತರವಾಗಿ ಮುಂದುವರಿಯಬೇಕಾದ ಇನ್ನುಳಿದ ಉದ್ದೇಶಗಳನ್ನು ಮುಂದುವರಿಸಿಕೊಂಡು ನಡೆದಿದೆ, ಧನಬಲ ಜನಬಲಗಳನ್ನು ಗಳಿಸಿಕೊಳ್ಳುತ್ತ ನಡೆದಿದೆ, ಸಂತೋಷ.

ಪರಿಷತ್ತಿನ ಸಾಮರ್ಥ್ಯ ಹೆಚ್ಚಬೇಕು

ಆದರೆ ವ್ಯಕ್ತಿ, ಸಂಘ, ಸಂಸ್ಥೆ, ನಾಡು, ರಾಷ್ಟ್ರಗಳ ಬೆಳವಣಿಗೆ, ಅರ್ಥಪೂರ್ಣ ಅಭಿವೃದ್ಧಿಗೆ ಜನಬಲ ಧನಬಲಗಳಷ್ಟೇ ಸಾಲವು; ಅವುಗಳೊಡನೆ ನೈತಿಕ ಬಲವೂ ಬೇಕೆಂಬುದು ಪರಿಷತ್ತಿನ ಭವಿತವ್ಯದ ಬಗ್ಗೆ ನಿಷ್ಪಕ್ಷಪಾತವಾಗಿ ಚಿಂತಿಸುವವರ ನ್ಯಾಯವಾದ ನಿಲುವಾಗಿದೆ. ಕನ್ನಡ ಸರಸ್ವತಿಯ ಈ ಪವಿತ್ರ ಮಂದಿರ ಪವಿತ್ರವಾಗಿಯೇ ಉಳಿಯಬೇಕೆಂಬುದು ಅವರ ಆಸೆ. ಈ ಆಸೆ ಈಡೇರಬೇಕು. ಪರಿಷತ್ತಿನ ಘನತೆ ಗೌರವಗಳಿಗೆ ಧಕ್ಕೆ ಬರದ ರೀತಿಯಲ್ಲಿ ಈಡೇರಬೇಕು. ಪದಾಧಿಕಾರಿಗಳು, ಪರಿಷತ್ತು ಒಂದೇ ಅಲ್ಲ. ಪದಾಧಿಕಾರಿಗಳು ಬರುತ್ತಾರೆ, ಹೋಗುತ್ತಾರೆ, ಆದರೆ ಪರಿಷತ್ತು ಕೊನೆಯವರೆಗೆ ಉಳಿಯಬೇಕಾದುದು, ಉಳಿಯಬೇಕು. ನೈತಿಕ ನೆಲಗಟ್ಟಿನ ಮೇಲೆ ಪರಿಷತ್ತು ಪ್ರಚಂಡ ಶಕ್ತಿಯಾಗಿ ಬೆಳೆಯುವಂತೆ ಪರಿಷತ್ತಿನ ಪದಾಧಿಕಾರಿಗಳೂ ಸರ್ವಕನ್ನಡಿಗರೂ ಧ್ಯೇಯರತಿಯೊಡನೆ ದುಡಿಯಬೇಕು. ಅದರ ಅಂಗರಚನೆಯಲ್ಲಿ ಇನ್ನೂ ಮಾರ್ಪಾಟುಗಳು ಅಗತ್ಯವೆನಿಸಿದರೆ ಮುಕ್ತ, ಮನಸ್ಸಿನ ಚರ್ಚೆ ನಡೆಸಿ ತೀರ್ಮಾನಿಸಿಕೊಳ್ಳಬೇಕು.ಈ ಮಾರ್ಪಾಟುಗಳಲ್ಲಿ ಪರಿಷತ್ತಿನ ಚುನಾವಣಾಧಿಕಾರಿಗಳನ್ನು

ಸರಕಾರವೇ ನೇಮಿಸಬೇಕೆಂಬುದು ಬಹಳ ಮುಖ್ಯವಾದುದು. ಪರಿಷತ್ತು ಪ್ರಜಾಸತ್ತಾತ್ಮಕ ಸಂಸ್ಥೆಯಾಗಿ ಉಳಿದೂ ಅದಕ್ಕೆ ಹೊರಗುಳಿವ ಹಿರಿಯ ಸಾಹಿತಿಗಳೆಲ್ಲರ ಸಲಹೆ ಸಿಕ್ಕುತ್ತಿರುವಂತೆ ಏರ್ಪಾಟು ಆಗಬೇಕು; ಎಲ್ಲ ಭಾಗಗಳ ಕನ್ನಡ ಸೇವಾಸಕ್ತರ ಸಕ್ರಿಯ ಸಹಕಾರ ಅದಕ್ಕೆ ದೊರೆಯುವ ಹಾಗೆ ವ್ಯವಸ್ಥೆಯಾಗಬೇಕು; ಜಿಲ್ಲಾ ಪರಿಷತ್ತುಗಳ ಶಕ್ತಿ, ಕಾರ್ಯ, ಕ್ಷಮತೆಗಳು ಹೆಚ್ಚಬೇಕು.


ಪರಿಷತ್ತಿಗೆ ನೂರಾರು ಹೊಣೆಗಳು

ಯಾಕೆಂದರೆ ಪರಿಷತ್ತು ಹೊರಬೇಕಾದ ಹೊಣೆಗಳು ಹೆಚ್ಚುತ್ತಿವೆ. 'ಕನ್ನಡಕುಲ' ವೆಂಬುದು ಕೇವಲ ಕವಿಗಳ ಕಲ್ಪನೆ ಮಾತ್ರವಲ್ಲ, ಅದು ನಮ್ಮ ಸಾಂಸ್ಕೃತಿಕ ಸತ್ಯವೆಂಬುದನ್ನು ಪರಿಷತ್ತು ಪ್ರತ್ಯಕ್ಷೀಕರಿಸಿ ತೋರಿಸಬೇಕಾಗಿದೆ; ಕನ್ನಡ ನಾಡಿನ ಗಡಿಮುದ್ದೆಗಳು ಎಚ್ಚತ್ತ ಕೆಚ್ಚೆದೆಯ ಕನ್ನಡಿಗರ ಕೋಟೆಯನ್ನು ಕಟ್ಟಬೇಕಾಗಿದೆ; ಗಡಿಯಾಚೆ ಕನ್ನಡಿಗರು, ಹೊರದೇಶಗಳಲ್ಲಿರುವ ಕನ್ನಡಿಗರು ತಮ್ಮ ಕನ್ನಡತನವನ್ನು ಉಳಿಸಿಕೊಳ್ಳುವುದು ಸಾಧ್ಯವಾಗುವಂತೆ ಅವರಿಗೆ ಶಕ್ಯವಿರುವ ಎಲ್ಲ ನೆರವನ್ನೂ ನೀಡಬೇಕಿದೆ; ಕನ್ನಡನಾಡಿನ ಹೊರಗೆ ಉಳಿದಿರುವ ಕಾಸರಗೋಡಿನಂಥ ಕನ್ನಡ ಭಾಗಗಳನ್ನು ಕನ್ನಡ ನಾಡಿಗೆ ಕೂಡಿಸಲು ಪ್ರಭಾವೀ ಪ್ರಯತ್ನಗಳನ್ನು ಮಾಡಬೇಕಿದೆ: ಬಹಳಷ್ಟು ಭರವಸೆಯನ್ನು ಹುಟ್ಟುಸಿರುವ ಕನ್ನಡ ಲೇಖಕಿಯರಿಗೆ ವಿಶೇಷ ಪ್ರೋತ್ಸಾಹವನ್ನು ನೀಡಬೇಕಿದೆ; ಮಕ್ಕಳ ಸಾಹಿತ್ಯ ಅಕಾಡೆಮಿ, ಮಕ್ಕಳ ಸಾಹಿತ್ಯ ಪರಿಷತ್ತು, ಗಮಕ ಕಲಾ ಪರಿಷತ್ತು, ಕನ್ನಡ ಇತಿಹಾಸ ಅಕಾಡೆಮಿಗಳು ಹುಟ್ಟಿರುವುದು ಹಿಗ್ಗಿನ ಸಂಗತಿ; ಅವುಗಳನ್ನು ಬೆಳೆಸಬೇಕಿದೆ; ಕನ್ನಡ ರಂಗಭೂಮಿಯ ಪುನರುಜ್ಜೀವನ ಪ್ರಯತ್ನ ಪ್ರಾರಂಭವಾಗಬೇಕಿದೆ; ಕನ್ನಡ ಪದವೀಧರರ, ಬೆರಳಚ್ಚುಗಾರರ, ಶೀಘ್ರಲಿಪಿಕಾರರ, ಪಂಡಿತ ವಿದ್ವಾನ್ ಪದವಿಗಳನ್ನು ಪಡೆದವರ, ಕನ್ನಡ ಜಾಣ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಉದ್ಯೋಗಾವಕಾಶಗಳ ವಿಸ್ತರಣೆಗಾಗಿ ಹೋರಾಟ ನಡೆಸಬೇಕಿದೆ. ಕನ್ನಡ ಸಂಗೀತ ಸಭೆಗಳನ್ನು ಜನಪ್ರಿಯಗೊಳಿಸಬೇಕಿದೆ; ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ, ವಿಚಾರ ಸಾಹಿತ್ಯ, ಶಾಸ್ತ್ರ ಸಾಹಿತ್ಯಗಳು ವೆಗ್ಗಳವಾಗಿ ಬೆಳೆಯುವಂತೆ ಉಲುಮೆ ಮಾಡಬೇಕಿದೆ; ಹೊಸಗನ್ನಡ ಸಾಹಿತ್ಯವು ನಮಗೆ ನೀಡಿರುವ ವಿವಿಧ ಪ್ರಕಾರಗಳ ಅತ್ಯುತ್ತಮ ಭಾಗಗಳ ಸಂಕಲನಗಳನ್ನು ಪ್ರಕಟಿಸಿ ಶ್ರೀಸಾಮಾನ್ಯರೂ ಕೊಳ್ಳಬಹುದಾದ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕಿದೆ; ವಾಚನಾಲಯಗಳ ಚಳುವಳಿಯನ್ನು ವ್ಯಾಪಕವಾಗಿ ನಡೆಸಬೇಕಿದೆ; ಮಹಾರಾಷ್ಟ್ರದಲ್ಲಿ ಜನಪ್ರಿಯವೂ ಬಹೂಪಯೋಗಿಯೂ ಆಗಿರುವ 'ಗ್ರಂಥಾಲಿ' ಆಂದೋಲನಕ್ಕೆ ಸಂವಾದಿಯಾದ ಸಾಹಿತ್ಯ ಪ್ರಕಟನ, ಸಾಹಿತ್ಯದಾನ ಅಭಿಯಾನವೊಂದನ್ನು ಪ್ರಾರಂಭಿಸಬೇಕಿದೆ. ಈ ಯಾದಿಯನ್ನು ವಿಸ್ತರಿಸುತ್ತಲೇ ಹೋಗಬಹುದು. ಪರಿಷತ್ತಿನ ಕಾರ್ಯಕ್ಷೇತ್ರ ಎಷ್ಟು ವಿಸ್ತಾರವಾಗುತ್ತ ನಡೆದಿದೆ, ಅದರ ಹೊಣೆಗಳು ಎಷ್ಟು ಹೆಚ್ಚಿವೆ ಎಂಬುದಕ್ಕೆ- ಸಂಕೇತ ಮಾತ್ರ ಈ ಯಾದಿ. ಇದನ್ನು ಅನುಲಕ್ಷಿಸಿ ಪರಿಷತ್ತಿನ ಶಕ್ತಿ ಸಂವರ್ಧನೆಗೆ, ಶೀಲ ಸಂವರ್ಧನೆಗೆ ಅದರ ಪದಾಧಿಕಾರಿಗಳೂ ಪ್ರಯತ್ನಿಸಬೇಕು. ಸರ್ವ ಕನ್ನಡಿಗರೂ ಸಹಕರಿಸಬೇಕು.

❖❖

೫೯ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಆರ್.ಸಿ. ಹಿರೇಮಠ



ಕನ್ನಡದ ಭಾಷಾವಿಜ್ಞಾನಿ, ವಚನಶಾಸ್ತ್ರಕೋವಿದ ಸಂಶೋಧಕ ಆಗಿದ್ದ ಆರ್.ಸಿ. ಹಿರೇಮಠರು ರೋಣ ತಾಲ್ಲೂಕಿನ ಕುರುಡಗಿಯಲ್ಲಿ ಚಂದ್ರಯ್ಯ-ವೀರಮ್ಮ ದಂಪತಿಗಳಿಗೆ ೧೫-೧-೧೯೨೦ರಲ್ಲಿ ಜನಿಸಿದರು. ತಮ್ಮ ವಿದ್ಯಾಭ್ಯಾಸವನ್ನು ಧಾರವಾಡ, ಬೆಳಗಾಂಗಳಲ್ಲಿ ಪೂರೈಸಿದರು. ಮುಂಬೈ ವಿಶ್ವವಿದ್ಯಾಲಯದಿಂದ ೧೯೪೦ರಲ್ಲಿ ಕನ್ನಡ ಎಂ.ಎ.ಪದವಿ ಗಳಿಸಿದರು.

ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದ ಇವರು ೧೯೫೧ರಲ್ಲಿ ಪಿಎಚ್.ಡಿ ಪದವಿ ಗಳಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಮುಖ್ಯಸ್ಥರಾಗಿ ಕೊನೆಗೆ ೧೯೭೫ರಿಂದ ೧೯೮೦ವರೆಗೆ ಕುಲಪತಿಗಳಾಗಿ ವಿಶ್ವವಿದ್ಯಾನಿಲಯದ ಪ್ರಗತಿಗೆ ಶ್ರಮಿಸಿದರು. ಕನ್ನಡ ವಿಭಾಗ ಇವರ ಕಾಲದಲ್ಲಿ ಕನ್ನಡ ಅಧ್ಯಯನ ಪೀಠವಾಯಿತು. ಕುಲಪತಿಗಳಾಗಿ ನಿವೃತ್ತರಾದ ಅನಂತರ ತಿರುವನಂತಪುರದ ಅಂತರರಾಷ್ಟ್ರೀಯ ದ್ರಾವಿಡ ಭಾಷಾವಿಜ್ಞಾನದ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಬಹುಕಾಲದ ನಿಕಟ ಸಂಬಂಧವನ್ನು ಹೊಂದಿದ್ದ ಇವರು ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

೧೯೯೦ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ೫೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಆಧ್ಯಕ್ಷರಾದ ಇವರು ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದರು. ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದರು.

ಭಾಷಾಶಾಸ್ತ್ರ, ವೀರಶೈವ ಸಾಹಿತ್ಯ, ವಚನ ಸಾಹಿತ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ವಿದ್ವತ್ಪೂರ್ಣ ಗ್ರಂಥಗಳನ್ನು ಸಂಪಾದಿಸಿದ ಹೆಗ್ಗಳಿಕೆ ಇವರದು.

ಸುಮನಾಂಜಲಿ, ಮೌನ ಸ್ಪಂದನ, ಸಾಹಿತ್ಯ ಸಂಸ್ಕೃತಿ, ಕವಿ ಪದ್ಮಣಾಂಕ, ತಥಾಗತ ಚಾರಿತ್ರ್ಯ(ಅಪೂರ್ಣ ಕಾವ್ಯ). ಇವು ಇವರು ರಚಿಸಿದ ಕೃತಿಗಳು.

ಬಸವ ಪುರಾಣ, ಪದ್ಮರಾಜಹುರಾನಿ, ರಾಜಶೇಖರ ವಿಳಾಸ, ರಾಮಚಂದ್ರಚರಿತ ಪುರಾಣ, ಅಮೃತ ಬಿಂದುಗಳು ಇತ್ಯಾದಿಗಳು ಇವರು ಸಂಪಾದಿಸಿದ ಕಾವ್ಯ ಗ್ರಂಥಗಳು

ಲಿಂಗ್ವಿಸ್ಟಿಕ್ ಇನ್ವೆಸ್ಟಿಗೇಷನ್ ಆಫ್ ಸಂಪ್ಲಾಬ್ಲಂಸ್ ಆನ್ ದಿ ರಿಲೇಷನ್‌ಷಿಪ್ ಆಫ್ ಇಂಡೋ-ಆರ‍್ಯನ್ ಅಂಡ್ ದ್ರವಿಡಿಯನ್ ಲ್ಯಾಂಗ್ವೇಜಸ್(ಪಿಎಚ್.ಡಿ ಗ್ರಂಥ), ಪ್ಲೇಸ್ ನೇಮ್ಸ್ ಇನ್ ಕರ್ನಾಟಕ, ದಿ ಸ್ಟ್ರಕ್ಚರ್ ಆಫ್ ಕನ್ನಡ, ಕಾಂಪೌಂಡ್‌ವರ್ಡ್ಸ್ ಇನ್ ಕನ್ನಡ ಇತ್ಯಾದಿ ಕೃತಿಗಳು ಇಂಗ್ಲಿಷ್‌ನಲ್ಲಿ ರಚಿತವಾಗಿವೆ.

ಸಿದ್ಧರಾಮೇಶ್ವರ ವಚನಗಳು, ಬಸವಣ್ಣನವರ ವಚನಗಳು, ನೀಲಮ್ಮ ಮತ್ತು ಲಿಂಗಮ್ಮನ ವಚನಗಳು, ಇಪ್ಪತ್ತೇಳು ಶಿವಶರಣೆಯರ ವಚನಗಳು, ಷಟ್‌ಸ್ಥಲ ಜ್ಞಾನಸಾರಾಮೃತ ವೀರಶೈವ ಚಿಂತಾಮಣಿ, ಚೆನ್ನಬಸವಣ್ಣನವರ ವಚನಗಳು ಮೊದಲಾದವು ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಸಂಪಾದಿತ ಕೃತಿಗಳು.

ಆರ್.ಸಿ. ಹಿರೇಮಠರು (ರುದ್ರಯ್ಯ, ಚಂದ್ರಯ್ಯ ಹಿರೇಮಠ) ಅವರು ಧಾರವಾಡದಲ್ಲಿ ೨-೧೧-೧೯೯೮ರಲ್ಲಿ ಕೈಲಾಸವಾಸಿಗಳಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೫೯
ಅಧ್ಯಕ್ಷರು, ಆರ್.ಸಿ. ಹಿರೇಮಠ
ದಿನಾಂಕ ೧೬, ೧೭, ೧೮ ಫೆಬ್ರವರಿ ೧೯೯೦
ಸ್ಥಳ : ಹುಬ್ಬಳ್ಳಿ
(ಟಿಪ್ಪಣಿ ೧೯೮೮,೧೯೮೯ರಲ್ಲಿ ಸಮ್ಮೇಳನ ನಡೆಯಲಿಲ್ಲ)

ಕನ್ನಡ ಸಾಹಿತ್ಯ ಪರಿಷತ್ತು

ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘ, ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು, ಈ ಸಂಸ್ಥೆಗಳು ಕನ್ನಡಿಗರ ತಪಸ್ಸಿನ ಫಲವಾಗಿ ಮೂಡಿ ಬಂದಿವೆ. ಕನ್ನಡಿಗರ ಸರ್ವತೋಮುಖ ಏಳ್ಗೆ ಈ ಸಂಸ್ಥೆಗಳ ಉದ್ದೇಶ. ಘನವಾದ ಈ ಉದ್ದೇಶ ಸಾಧನೆಯತ್ತ ಪರಿಷತ್ತು ನಿರಂತರ ಪ್ರಯತ್ನ ನಡೆಸಿದೆ. ಪರಿಷತ್ತು, ತನ್ನ ಪ್ರಕಟನೆ, ಕಮ್ಮಟ, ಜಾನಪದ ವಸ್ತುಸಂಗ್ರಹ, ಶಾಸನಶಾಸ್ತ್ರ, ಲಿಪಿಶಾಸ್ತ್ರ, ಬೋಧನೆ ಮುಂತಾದ ಕ್ಷೇತ್ರಗಳಲ್ಲಿ ವಿಶ್ವವಿದ್ಯಾಲಯಗಳಿಗೆ ಹೊಯ್‌ಕೆಯ್ ಎನಿಸುವಂತೆ ಕೆಲಸ ಮಾಡುತ್ತಿದ್ದಿತು. ಅದು ಒಂದು ವಿಶ್ವವಿದ್ಯಾಲಯದ ವ್ಯಾಪ್ತಿಯನ್ನು ಪಡೆಯುವ ಹಂತದಲ್ಲಿದ್ದಿತು. ಅಮೃತ ಮಹೋತ್ಸವ ಜೈತ್ರಯಾತ್ರೆ ನಡೆದು ಸಾರ್ವಜನಿಕರಿಂದ ಒಂದು ಕೋಟಿ ರೂಪಾಯಿ ನಿಧಿ ಸಂಗ್ರಹಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದಿತು. ಇಂತಹ ಸಮಯದಲ್ಲಿ ಸರಕಾರ ಹಠಾತ್ತನೆ, ಪೂರ್ವಭಾವಿ ಸೂಚನೆ ಕೊಡದೆ ಪರಿಷತ್ತಿನ ಆಡಳಿತ ಮಂಡಳವನ್ನು ರದ್ದುಪಡಿಸಿ ಹಸ್ತಕ್ಷೇಪ ಮಾಡಿದುದು ಪರಿಷತ್ತಿನ ಬೆಳವಣಿಗೆಗೆ ಅಘಾತವಾದಂತಾಯಿತು. ಅದರಿಂದ ಇನ್ನೂ ಪರಿಷತ್ತು ಚೇತರಿಸಿಕೊಂಡಿಲ್ಲ. ಸುಶಿಕ್ಷಿತರೂ ಸುಸಂಸ್ಕೃತರೂ ಆದ ಪರಿಷತ್ತಿನ ಸದಸ್ಯ ಸಾಹಿತ್ಯಿಕರು ಇದನ್ನು ಗಂಭೀರವಾಗಿ ಸಮಾಲೋಚನೆ ಮಾಡಬೇಕು.


ಕನ್ನಡ-ಕನ್ನಡ-ನಿಘಂಟು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗಂಭೀರವಾದ ಸಾಹಿತ್ಯಿಕ ಕೆಲಸ ಮೊದಲಿನಿಂದಲೂ ನಡೆಯುತ್ತಿದೆ. ಇಂತಹ ಕಾರ್ಯಗಳಲ್ಲಿ ಕನ್ನಡ-ಕನ್ನಡ ನಿಘಂಟಿನ ರಚನೆಯ ಕಾರ್ಯವೊಂದು ಅತ್ಯಂತ ಮಹತ್ವವಾದುದು. ನಿಘಂಟು ರಚನಾ ಶಾಸ್ತ್ರದಲ್ಲಿ ಬಲ್ಲಿದರಾದ ಸಿಬ್ಬಂದಿಯವರು ಈಗ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನಿಘಂಟಿನ ಕಾರ್ಯ ಕನ್ನಡ-ಕನ್ನಡ ನಿಘಂಟನ್ನು ಮುಗಿಸಿದೊಡನೆಯೇ ಮುಗಿಯಲಾರದೆ, ಪುನಃ ಅದರ ಪರಿಷ್ಕರಣ ಕಾರ್ಯ ಮುಂದುವರಿಯಬೇಕು. ಇದು ಮುಗಿದೊಡನೆ ಶಬ್ದಗಳನ್ನು ರೋಮನ್ ಲಿಪಿಯಲ್ಲಿ ಬರೆಯುವುದು, ಅರ್ಥವನ್ನು ಇಂಗ್ಲಿಷಿನಲ್ಲಿ ವಿವರಿಸುವುದು ಅವಶ್ಯವೆನಿಸಿದೆ. ಆದ್ದರಿಂದ ಈ ಕೋಶದ ವ್ಯಾಪ್ತಿ, ಉಪಯುಕ್ತತೆ ಹೆಚ್ಚುತ್ತದೆ. ರೋಮನ್ ಲಿಪಿಗೆ ಪರಿವರ್ತನ, ಆಂಗ್ಲಭಾಷೆಯ ಅರ್ಥವಿವರಣೆ ಕೊಟ್ಟರೆ ಕನ್ನಡ ಬಾರದೆ ಇದ್ದವರೂ ಸಹ ಇದನ್ನು ಉಪಯೋಗಿಸಬಹುದು. ಇದರ ಸಂಕ್ಷಿಪ್ತ ಅವೃತ್ತಿಗಳನ್ನು ತರಬಹುದು. ಜಾನಪದ ಶಬ್ದಕೋಶ ಸಿದ್ಧಪಡಿಸಬಹುದು. ಇನ್ನೂ ಹತ್ತೆಂಟು ಬಗೆಯ ಕೋಶಗಳ ಆವಶ್ಯಕತೆ ಕನ್ನಡಕ್ಕಿದೆ. ಇದನ್ನು ಮನಗೊಂಡು ಕೇರಳ ವಿಶ್ವವಿದ್ಯಾಲಯ ನಿಘಂಟು ವಿಭಾಗವೆಂಬ ಶಾಶ್ವತ ವಿಭಾಗವನ್ನೇ ಪ್ರಾರಂಭಿಸಿ ಮಲಯಾಳಂ ಶಬ್ದಕೋಶವನ್ನು ಸಿದ್ಧಪಡಿಸುತ್ತಿದೆ. ಅಂದರೆ ನಿಘಂಟಿಗಾಗಿ ಒಂದು ಸ್ವತಂತ್ರ ವಿಭಾಗದ ಆವಶ್ಯಕತೆ ಇದೆಯೆಂಬುದರಲ್ಲಿ ಸಂದೇಹವಿಲ್ಲ. ಕಾರಣ ಸರಕಾರವು ಇದನ್ನು ಒಂದು ಶಾಶ್ವತ (ಖಾಯಂ) ವಿಭಾಗವೆಂದು ಪರಿವರ್ತಿಸಿ, ಸಿಬ್ಬಂದಿಯವರಿಗೆ ಸರಕಾರಿ ನೌಕರರ ಸವಲತ್ತುಗಳನ್ನೆಲ್ಲ ಕೊಟ್ಟು ಪರಿಷತ್ತಿನಲ್ಲಿ ಈ ಕಾರ್ಯವನ್ನು ಮುಂದುವರಿಸಬೇಕು.

❖❖

೬೦ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಕೆ.ಎಸ್. ನರಸಿಂಹಸ್ವಾಮಿ



ಮೈಸೂರ ಮಲ್ಲಿಗೆಯ ಕವಿಯೆಂದು ಪ್ರಖ್ಯಾತರಾಗಿ ಮನೆಮಾತಾದ ಕೆ.ಎಸ್. ನರಸಿಂಹಸ್ವಾಮಿ ಅವರು (ಕಿಕ್ಕೇರಿ ಸುಬ್ಬರಾಯ ನರಸಿಂಹಸ್ವಾಮಿ) ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ ಸುಬ್ಬರಾಯ-ನಾಗಮ್ಮ ದಂಪತಿಗಳಿಗೆ ೨೬-೧-೧೯೧೫ರಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಹೈಸ್ಕೂಲು, ಇಂಟರ್ ಮೀಡಿಯೇಟ್ ಕಾಲೇಜ್ ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಿ ಓದಿದ ಅವರು ಆರ್ಥಿಕ ತೊಂದರೆಗಳಿಂದ ಡಿಗ್ರಿ ವ್ಯಾಸಂಗವನ್ನು ಪೂರ್ಣ ಮಾಡಲಾಗಲಿಲ್ಲ, ಪದವೀಧರರಾಗಲಿಲ್ಲ. ಸಂಸಾರ ನಿರ್ವಹಣೆಗಾಗಿ ೨೨ನೇ ವಯಸ್ಸಿನಲ್ಲಿಯೇ ಗುಮಾಸ್ತೆ ಹುದ್ದೆಗೆ ಸೇರಿದರು. ಆ ವೇಳೆಗೆ ತಿಪಟೂರಿನ ವೆಂಕಮ್ಮನವರೊಂದಿಗೆ ವಿವಾಹವಾಗಿತ್ತು. ತಮ್ಮ ವೃತ್ತಿಜೀವನದ ಕಾಲದಲ್ಲಿ ಮೈಸೂರು, ನಂಜನಗೂಡು, ಬೆಂಗಳೂರುಗಳಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಸರಕಾರಿ ನೌಕರರಾಗಿ ದುಡಿದು ೨೬-೧-೧೯೭೦ರಲ್ಲಿ ನಿವೃತ್ತರಾದರು.

ಕೆ.ಎಸ್.ನ ಅವರ ಮೈಸೂರ ಮಲ್ಲಿಗೆ ೧೯೪೨ರಲ್ಲಿ ಪ್ರಕಟವಾದಾಗಿನಿಂದ ೨೫ಕ್ಕೂ ಹೆಚ್ಚು ಮುದ್ರಣ ಕಂಡಿದೆ. ಅನಂತರ ಹತ್ತಾರು ಕವನ ಸಂಕಲನಗಳ ಮೂಲಕ ನವೋದಯ ಮತ್ತು ನವ್ಯಕವಿತೆಗಳನ್ನು ತಮ್ಮದೇ ಆದ ಛಾಪಿನಲ್ಲಿ ಕನ್ನಡಕ್ಕೆ ಕೊಟ್ಟರು. ಕೆ.ಎಸ್.ನ ಅವರ ಮೈಸೂರ ಮಲ್ಲಿಗೆ ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ೧೯೪೩ರಲ್ಲಿ ಬಂದಿತು. ೧೯೫೭ರಲ್ಲಿ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಇಲಾಖೆಯ ಬಹುಮಾನವನ್ನು ಪಡೆದರು. ೧೯೭೭ರಲ್ಲಿ ತೆರೆದ ಬಾಗಿಲು ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ದುಂಡು ಮಲ್ಲಿಗೆ' ಕವನ ಸಂಕಲನಕ್ಕೆ ಪ್ರತಿಷ್ಠಿತ ಪಂಪ ಪ್ರಶಸ್ತಿಯೂ ೧೯೯೬ರಲ್ಲಿ ಬಂದಿತು. ೧೯೮೭ರಲ್ಲಿ ಕೇರಳದ ಕವಿ ಕುಮಾರನ್ ಆಶಾನ್ ಪ್ರಶಸ್ತಿ ಇವರಿಗೆ ಸಂದಿದೆ. ಬೆಂಗಳೂರು ವಿಶ್ವವಿದ್ಯಾಲಯವು ೧೯೯೨ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ನೀಡಿತು. ಇವರ ಸಾಹಿತ್ಯ ಸಾಧನೆಗಾಗಿ ಮಾಸ್ತಿ ಸಾಹಿತ್ಯ ಪ್ರಶಸ್ತಿ ೧೯೯೬ರಲ್ಲಿ ಲಭಿಸಿತು. ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ೬೦ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಈ ಮುಂಚೆ ಕನ್ನಡ ಸಾಹಿತ್ಯ ಪರಿಷತ್ತು ೧೯೮೫ರಲ್ಲಿ ಗೌರವ ಸದಸ್ಯತ್ವ ನೀಡಿರುವುದರ ಜತೆಗೆ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಕೆಎಸ್‌ನ ಅವರನ್ನು ಸನ್ಮಾನಿಸಿದೆ.

ನರಸಿಂಹಸ್ವಾಮಿ ಅವರ ಪ್ರಸಿದ್ಧ ಕವನ ಸಂಕಲನಗಳು: ಮೈಸೂರ ಮಲ್ಲಿಗೆ, ದೀಪದಮಲ್ಲಿ(೧೯೪೭), ಉಂಗುರ(೧೯೪೯), ಇರುವಂತಿಗೆ(೧೯೫೨), ಮನೆಯಿಂದ ಮನೆಗೆ(೧೯೬೦), ತೆರೆದ ಬಾಗಿಲು(೧೯೭೭), ದುಂಡು ಮಲ್ಲಿಗೆ(೧೯೯೩), ನೆಲದನಿ(೧೯೯೯), ಸಂಜೆಹಾಡು(೨೦೦೦) ಇತ್ಯಾದಿ.

ಗದ್ಯಕೃತಿಗಳು :ಮಾದರಿಯ ಕಲ್ಲು(೧೯೪೨), ಉಪವನ(೧೯೫೮), ದಮಯಂತಿ(೧೯೭೦).

ಇಂಗ್ಲಿಷಿನಿಂದ ಅನುವಾದಗಳು :ಯೂರಿಪಿಡೀಸಿನ ಮಿಡಿಯಾ(೧೯೬೬), ಸುಬ್ರಹ್ಮಣ್ಯ ಭಾರತಿ(೧೯೭೧), ಮಾಯಾಶಂಖ ಮತ್ತು ಇತರ ಕಥೆಗಳು(೧೯೭೨), ರಾಣಿಯ ಗಿಳಿ ಮತ್ತು ರಾಜನ ಮಂಗ(೧೯೭೨), ಹಕಲ್‌ಬರಿಫಿನ್ನನ ಸಾಹಸಗಳು(೧೯೭೯) ಇತ್ಯಾದಿ.

ಕೆ.ಎಸ್. ನರಸಿಂಹಸ್ವಾಮಿ ಅವರು ೨೮-೧೨-೨೦೦೩ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೬೦
ಅಧ್ಯಕ್ಷರು, ಕೆ.ಎಸ್. ನರಸಿಂಹಸ್ವಾಮಿ
ದಿನಾಂಕ ೨೮, ೨೯, ೩೦ ನವೆಂಬರ್ ೧೯೯೦
ಸ್ಥಳ : ಮೈಸೂರು

ಪರಿಷತ್ತಿನ ಅಮೃತಮಹೋತ್ಸವ

ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವ ಮತ್ತು ನನ್ನ ಬದುಕಿನ ಅಮೃತೋತ್ಸವಗಳೆರಡೂ ಏಕಕಾಲಕ್ಕೇ ಒದಗಿರುವುದೊಂದು ಹೆಮ್ಮೆ-ಸಂತಸಗಳ ವಿಷಯ. ಅಲ್ಲದೆ ಪರಿಷತ್ತಿನ ಬೆಳವಣಿಗೆಯೊಂದಿಗೇ ನನ್ನ ಕಾವ್ಯಕೃಷಿಯೂ ಬೆಳೆದು ಬಂದಿದೆ.

೧೯೧೫ರಲ್ಲೇ ಅಸ್ತಿತ್ವಕ್ಕೆ ಬಂದ ಕನ್ನಡ ಸಾಹಿತ್ಯ ಪರಿಷತ್ತು ವಿಶ್ವವಿದ್ಯಾನಿಲಯಗಳಿಗಿಂತಲೂ ಮುಂಚೆಯೇ ಅವುಗಳು ಮಾಡಬೇಕಾದ ಕೆಲಸವನ್ನೆಲ್ಲ ಮಾಡುತ್ತ ಬಂದಿದೆ. ಅಲ್ಲಿಂದೀಚೆಗೆ ಆರು ವಿಶ್ವವಿದ್ಯಾನಿಲಯಗಳು ಆಗಿವೆ, ವಿವಿಧ ಅಕಾಡೆಮಿಗಳು ರೂಪುಗೊಂಡಿವೆ, ಕನ್ನಡ-ಸಂಸ್ಕೃತಿ ಇಲಾಖೆ ಇದೆ. ಕನ್ನಡ ಸಾಹಿತ್ಯ ಪರಿಷತ್ತು, ಸರ್ಕಾರ ಮತ್ತು ಜನತೆಯನ್ನು ಕನ್ನಡದ ಬಗೆಗೆ ಸದಾ ಎಚ್ಚರಿಸುತ್ತ ಬಂದಿದೆ. ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಪರಿಷತ್ತು ಮೇಲಿಂದ ಮೇಲೆ ಸರ್ಕಾರದೊಂದಿಗೆ ವ್ಯವಹರಿಸಿರುವುದೂ, ಸದ್ಯ ಈ ಸಂಬಂಧ 'ತನಿಖೆ'ಯ ಹಂತಕ್ಕೆ ತಲುಪಿರುವುದು ಸಂತಸದ ಸಂಗತಿ.

ಪರಿಷತ್ತು ಮತ್ತು ಪತ್ರಿಕೆಗಳು

ಬೆಂಗಳೂರಿಂದ ಪ್ರಕಟವಾಗುತ್ತಿರುವ ಕನ್ನಡ ಪತ್ರಿಕೆಗಳಲ್ಲಿ ಇತ್ತೀಚೆಗೆ ಕನ್ನಡ ಅಂಕಿಗಳ ಬಳಕೆ ನಿಲ್ಲಿಸಾಗಿರುವುದನ್ನು ನನ್ನ ಮಿತ್ರರೊಬ್ಬರು ಗಮನಕ್ಕೆ ತಂದಿದ್ದಾರೆ. ಈ ಕುರಿತು ಪರಿಷತ್ತು ಪತ್ರಿಕೆಗಳಿಗೆ ಬರೆಯುವ ಮೂಲಕ ಒತ್ತಾಯಿಸಬೇಕು.

ಕನ್ನಡ ಸಾಹಿತ್ಯ ಪರಿಷತ್ತು ಸ್ವಂತ ಮುದ್ರಣಾಲಯ ಹೊಂದಿದ್ದು ಪ್ರಕಟನೆಯ ಅನುಭವವಿರುವುದರಿಂದ ಸರ್ಕಾರವು ಆರ್ಥಿಕ ನೆರವು ನೀಡಿ ತನ್ನ ಪ್ರಕಟನೆಗಳನ್ನೂ ಪರಿಷತ್ತಿಗೆ ವಹಿಸಬಹುದಾಗಿದೆ.


ಡಾ॥ ಸರೋಜಿನಿ ಮಹಿಷಿ ವರದಿಯ ಜಾರಿಗೆ ಮಾನ್ಯ ಮುಖ್ಯಮಂತ್ರಿಗಳು ಅಂಗೀಕಾರ ನೀಡಿದ್ದು ಸಂತೋಷದ ಸಂಗತಿ. ಈ ಬಗ್ಗೆ ಸರ್ಕಾರೀ ಆದೇಶ ಹೊರಡಬೇಕಾಗಿದೆ.

ಕನ್ನಡ ಅಭಿವೃದ್ಧಿ ಸಮಿತಿಯು ಕನ್ನಡ ಬೆಳವಣಿಗೆಯ ಸಂಬಂಧವಾದ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಚಾಲಕ ಶಕ್ತಿಯಾಗಿ, ಕಾವಲು ಸಮಿತಿಯಾಗಿ ಕೆಲಸ ಮಾಡಬೇಕೆಂದು ಕೋರುತ್ತೇನೆ.

❖❖

೬೧ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಜಿ.ಎಸ್. ಶಿವರುದ್ರಪ್ಪ



ಕನ್ನಡದ ರಾಷ್ಟ್ರಕವಿಗಳಲ್ಲಿ ಒಬ್ಬರಾಗಿ ವಿಮರ್ಶಕರು ಕವಿಗಳೆಂದು ಪ್ರಸಿದ್ಧರಾದ ಡಾ.ಜಿ.ಎಸ್. ಶಿವರುದ್ರಪ್ಪನವರು ಗುಗ್ಗುರಿ ಶಾಂತವೀರಪ್ಪ ಮತ್ತು ವೀರಮ್ಮನವರ ಪುತ್ರರಾಗಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ೭-೨-೧೯೨೬ರಲ್ಲಿ ಜನಿಸಿದರು. ಶಾಲಾ ಉಪಾಧ್ಯಾಯರ ಮಗನಾದ ಜಿ.ಎಸ್.ಎಸ್(ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ) ಅವರು ಎಸ್.ಎಸ್.ಎಲ್.ಸಿ ಮುಗಿಯುತ್ತಿದ್ದಂತೆಯೇ ಬಡತನದಿಂದಾಗಿ ಸರಕಾರಿ ನೌಕರಿ ಹಿಡಿದು ದುಡಿಯಲಾರಂಭಿಸದರು. ಗುಬ್ಬಿ ತಾಲ್ಲೂಕು ಕಚೇರಿಯಲ್ಲಿ ಗುಮಾಸ್ತರಾಗಿ ಸೇರಿದರು. ಆದರೆ ಓದಲೇಬೇಕೆಂಬ ಅದಮ್ಯ ಆಸೆಯಿಂದ ಕೆಲಸಕ್ಕೆ ವಿದಾಯ ಹೇಳಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಓದನ್ನು ಮುಂದುವರೆಸಿ ೧೯೪೯ರಲ್ಲಿ ಬಿ.ಎ. ಪದವಿಯನ್ನು, ೧೯೫೩ರಲ್ಲಿ ಸ್ವರ್ಣಪದಕದೊಂದಿಗೆ ಎಂ.ಎ.ಪದವಿಯನ್ನು ಪಡೆದರು. ಮೈಸೂರಿನ ಯುವರಾಜ ಕಾಲೇಜು, ಮಹಾರಾಜ ಕಾಲೇಜು, ಮಾನಸ ಗಂಗೋತ್ರಿಯಲ್ಲಿ ಅಧ್ಯಾಪಕರಾಗಿ ೧೯೪೯ರಿಂದ ೧೯೬೩ವರೆಗೆ ಸೇವೆ ಸಲ್ಲಿಸಿದ ಇವರು ಹೈದರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ೧೯೬೩ರಿಂದ ೬೬ವರೆಗೆ ದುಡಿದರು. ೧೯೬೬ರಿಂದ ೧೯೮೬ವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು.

ಇವರ ಸಾಹಿತ್ಯ ಸೇವೆಗೆ ಹತ್ತಾರು ಪುರಸ್ಕಾರ ಪ್ರಶಸ್ತಿಗಳು ದೊರೆತಿವೆ. ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ(೧೯೭೪), ಕರ್ನಾಟಕ ರಾಜ್ಯ ಸರಕಾರದ ಪುರಸ್ಕಾರ(೧೯೮೨), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೧೯೮೪), ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ(೧೯೮೪), ಮದರಾಸ್ ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆ(೧೯೮೬), ೧೯೯೨ರಲ್ಲಿ ದಾವಣಗೆರೆಯಲ್ಲಿ ನಡೆದ ೬೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷತೆ(೧೯೮೭), ಪಂಪ ಪ್ರಶಸ್ತಿ(೧೯೯೮), ೨೦೦೦ರಲ್ಲಿ ರಾಷ್ಟ್ರಕವಿ ಗೌರವ ಕುವೆಂಪು ವಿಶ್ವವಿದ್ಯಾಲಯ(೨೦೦೬) ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್(೨೦೦೩) ದೊರೆಯಿತು.

ಜಿ.ಎಸ್. ಶಿವರುದ್ರಪ್ಪನವರ ಮುಖ್ಯವಾದ ಕೃತಿಗಳು :ಬಹುಮುಖಿ ಪ್ರತಿಭೆಯ ಸಮನ್ವಯ ಕವಿ ಎನಿಸಿದ ಜಿ.ಎಸ್.ಎಸ್ ಅವರು ಶ್ರೇಷ್ಠ ಅಧ್ಯಾಪಕರು, ವಿಮರ್ಶಕರು, ಆಡಳಿತಗಾರರು, ಸಂಘಟಕರು ಆಗಿರುವಂತೆಯೇ ಶ್ರೇಷ್ಠ ಬರಹಗಾರರೂ ಆಗಿದ್ದರು. ಅವರು ಬರೆದ ಕೆಲವು ಕೃತಿಗಳನ್ನು ಇಲ್ಲಿ ಉಲ್ಲೇಖಿಸಿದೆ :

ಸಂಪಾದನೆ : ೧೯೭೧ರಿಂದ ಹೊರಬಂದ ಸಾಹಿತ್ಯ ವಾರ್ಷಿಕಗಳು, ಶಬರವಿಳಾಸ ಸಂಗ್ರಹ(ಬಿ.ಎನ್. ಶಾಸ್ತ್ರಿ ಜತೆ), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ೬ ಸಂಪುಟಗಳು, ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ೧೦ ಸಂಪುಟಗಳು, ಕೆ.ಎಸ್.ನ ಸಂಭಾವನಾ ಗ್ರಂಥ ಚಂದನ.

ವಿಮರ್ಶಾ ಕೃತಿಗಳು : ವಿಮರ್ಶೆಯ ಪೂರ್ವಪಶ್ಚಿಮ(೧೯೬೧), ಸೌಂದರ್ಯ'ತಿಬಿಂಬ(೧೯೬೯), ಕನ್ನಡ ಕವಿಗಳ ಕಾವ್ಯ ಕಲ್ಪನೆ(೧೯೮೯) ಇತ್ಯಾದಿ.

ಪ್ರವಾಸ ಗ್ರಂಥಗಳು :ಮಾಸ್ಕೊದಲ್ಲಿ ೨೨ ದಿನ(೧೯೭೩), ಗಂಗೆಯ ಶಿಖರಗಳಲ್ಲಿ, ಅಮೇರಿಕದಲ್ಲಿ ಕನ್ನಡಿಗ, ಇಂಗ್ಲೆಂಡಿನಲ್ಲಿ ಚತುರ್ಮಾಸ.

ಕವನ ಸಂಗ್ರಹಗಳು : ಸಾಮಗಾನ(೧೯೫೧), ಚೆಲುವು-ಒಲವು(೧೯೫೩), ದೇವಶಿಲ್ಪ(೧೯೫೬), ದೀಪದ ಹೆಜ್ಜೆ(೧೯೫೯), ಕಾರ್ತೀಕ(೧೯೬೧), ತೀರ್ಥವಾಣಿ(೧೯೬೦), ಅನಾವರಣ(೧೯೬೩), ನನ್ನನಿನ್ನ ನಡುವೆ(೧೯೭೩), ವ್ಯಕ್ತ-ಮಧ್ಯ(೧೯೯೯) ಇತ್ಯಾದಿ.

ಜಿ.ಎಸ್. ಶಿವರುದ್ರಪ್ಪನವರು ಬೆಂಗಳೂರಿನಲ್ಲಿ ೨೩-೧೨-೨೦೧೩ರಲ್ಲಿ ದೈವಾಧೀನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೬೧
ಅಧ್ಯಕ್ಷರು, ಜಿ.ಎಸ್. ಶಿವರುದ್ರಪ್ಪ
ದಿನಾಂಕ ೯, ೧೦, ೧೧, ೧೨ ಜನವರಿ ೧೯೯೨
ಸ್ಥಳ : ದಾವಣಗೆರೆ
(ಟಿಪ್ಪಣಿ ೧೯೯೧ರಲ್ಲಿ ಸಮ್ಮೇಳನ ನಡೆಯಲಿಲ್ಲ)

ಪರಿಷತ್ತಿನ ಈಡೇರದ ಆಶೋತ್ತರಗಳು

'ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಬಾರದು' ಎನ್ನುತ್ತಾರೆ ಮಹಾನುಭಾವಿ ಅಲ್ಲಮಪ್ರಭುಗಳು ತಮ್ಮದೊಂದು ವಚನದಲ್ಲಿ. ಅಂದರೆ, ನಾವು ನಿಂತ ಹೆಜ್ಜೆಯನ್ನು ಅಥವಾ ವರ್ತಮಾನವನ್ನು ಅರಿಯಬೇಕಾದರೆ, ಹಿಂದಣ ಹೆಜ್ಜೆಯನ್ನು, ಅಂದರೆ ಪರಂಪರೆಯನ್ನು ಚೆನ್ನಾಗಿ ಅರಿತವರಾಗಬೇಕು. ಅದಕಾರಣ ಹಿಂದಣ ಹೆಜ್ಜೆಯನ್ನು ಅಥವಾ ಪರಂಪರೆಯನ್ನು ಅರಿತಲ್ಲದೆ, ನಾವು ನಿಂದ ಹೆಜ್ಜೆಯನ್ನು ಅಥವಾ ವರ್ತಮಾನವನ್ನು ಅರಿಯಲು ಬರುವುದಿಲ್ಲ. ನಾನು, ಹಿಂದಿನ ಅರವತ್ತು ಸಮ್ಮೇಳನಗಳ ಅಧ್ಯಕ್ಷರು, ಈಗಾಗಲೇ ಇಂಥ ಸಮ್ಮೇಳನಗಳ ಸಂದರ್ಭದಲ್ಲಿ ಏನು ಹೇಳಿದ್ದಾರೆ ಎಂಬುದನ್ನು, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಸಮ್ಮೇಳನಾಧ್ಯಕ್ಷರ ಭಾಷಣಗಳ ಸಂಪುಟಗಳನ್ನು ಓದಿ ನೋಡಿದ್ದೇನೆ, ಅವುಗಳನ್ನು ಓದಿದ ಮೇಲೆ ನಾನು ಹೊಸದಾಗಿ ಹೇಳತಕ್ಕದ್ದೇನೂ ಉಳಿದಿಲ್ಲವೆಂದೇ ನನಗನ್ನಿಸುತ್ತದೆ. ಅದರಲ್ಲಿಯೂ ಕನ್ನಡ ನಾಡು-ನುಡಿ-ಗಡಿ, ಇತ್ಯಾದಿಗಳಿಗೆ ಸಂಬಂಧಪಟ್ಟ ಎಲ್ಲ ಸಮಸ್ಯೆಗಳನ್ನೂ, ಹಿಂದಿನ ಅರವತ್ತೂ ಸಮ್ಮೇಳನಾಧ್ಯಕ್ಷರು ಅತ್ಯಂತ ತಲಸ್ಪರ್ಶಿಯಾಗಿ ವಿವೇಚಿಸಿ, ಈ ಜನ, ಸರ್ಕಾರ ಹಾಗೂ ವಿವಿಧ ಸಾಂಸ್ಕೃತಿಕ ಸಂಸ್ಥೆಗಳು ಕನ್ನಡದ ಸರ್ವಾಂಗೀಣ ಪ್ರಗತಿಗೆ ಕೈಕೊಳ್ಳಬೇಕಾದ ಕರ್ತವ್ಯಗಳೂ, ಕಾರ್ಯಗಳೂ ಏನೆಂಬುದನ್ನು ನಿರ್ದೇಶಿಸಿದ್ದಾರೆ. ಆದರೆ, ಕನ್ನಡದ ಪರವಾಗಿ 'ನಿರಂತರ ಜಪ' ದಂತೆ ಮಂಡಿತವಾದ ಎಷ್ಟೋ ನಿರ್ದೇಶನಗಳೂ, ಆಶೋತ್ತರಗಳೂ ಇನ್ನೂ ಸಮರ್ಪಕವಾಗಿ ಈಡೇರಿಲ್ಲ ಎನ್ನುವುದು ಒಂದು ವಿಪರ್ಯಾಸದ ಸಂಗತಿಯಾಗಿದೆ.

ಸಮಸ್ಯೆಗಳಿಗೆ ಪರಿಹಾರ ಹೇಗೆ ?

ಕನ್ನಡ ನಾಡು-ನುಡಿಗೆ ಒದಗಿರುವ ವಿಪತ್ತನ್ನೂ, ಅದಕ್ಕಾಗಿ ಕನ್ನಡ ಜನ ನಡೆಯಿಸಬೇಕಾದ ಹೋರಾಟದ ಸ್ವರೂಪವನ್ನೂ ಕುರಿತು ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಂದಿನಿಂದಲೂ, ನಮ್ಮ ಪ್ರಮುಖ ಸಾಹಿತಿಗಳೂ, ವಿಚಾರವಂತರೂ ಪ್ರಸ್ತಾಪಿಸುತ್ತಲೇ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಗೋಕಾಕ್ ಚಳುವಳಿಯಂಥ ಮಹತ್ವದ ಆಂದೋಲನದ ನಂತರ ಜನಮನದಲ್ಲಿ ಮೊದಲಿಗಿಂತ ಹೆಚ್ಚು ವ್ಯಾಪಕವಾದ ರೀತಿಯಲ್ಲಿ ಕನ್ನಡದ ಸಮಸ್ಯೆಗಳನ್ನು ಕುರಿತ ಎಚ್ಚರವೊಂದು ಹುಟ್ಟಿಕೊಂಡಿದ್ದುದು ನಿಜವಾದರೂ ಮತ್ತು ಈ ಆಂದೋಲನದ ನಂತರ ರೂಪುಗೊಂಡ ವಿವಿಧ ಕನ್ನಡಪರ ಸಂಘಟನೆಗಳೂ ಅದರಲ್ಲಿಯೂ ಕನ್ನಡ ಪರ ಹೋರಾಟಕ್ಕೆ, ಹೊಸ ಆಯಾಮಗಳನ್ನು ತಂದುಕೊಟ್ಟ ಕನ್ನಡಶಕ್ತಿ ಕೇಂದ್ರದ ಚಟುವಟಿಕೆಗಳೂ ಜನತೆಯಲ್ಲಿ, ಸರ್ಕಾರದಲ್ಲೂ ಈ ಕುರಿತ ಕಾಳಜಿಗಳನ್ನು ಹುಟ್ಟಿಸುವರಲ್ಲಿ ಕ್ರಿಯಾಶೀಲವಾದರೂ ದೃಢವಾದ ಹಾಗೂ ಪ್ರಾಮಾಣಿಕವಾದ ರಾಜಕೀಯ ಸಂಕಲ್ಪವೇ ಕನ್ನಡದ ಸಮಸ್ಯೆಗಳ ಪರಿಹಾರಕ್ಕೆ ಇರುವ ಪ್ರಬಲವಾದ ಸಾಧನ ಎಂಬುದು ನನ್ನ ತಿಳಿವಳಿಕೆಯಾಗಿದೆ.

ಇಂಥ ಪುಸ್ತಕದಂಗಡಿಗಳು ಬೇಕು ?

ಇನ್ನು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳ ಸಂಖ್ಯೆ ಕಡಿಮೆಯೇನಿಲ್ಲ. ಕರ್ನಾಟಕದ ವಿವಿಧ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಹಾಗೂ ಪ್ರಸಾರಂಗಗಳು, ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇನ್ನಿತರ ಪ್ರತಿಷ್ಠತ ಪ್ರಕಾಶನ ಸಂಸ್ಥೆಗಳು ಪ್ರಕಟಿಸುವ ಪುಸ್ತಕಗಳು ಓದಬಲ್ಲವರನ್ನು ತಲುಪುವ ವ್ಯವಸ್ಥೆ ಕ್ರಮಬದ್ಧವಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸಮಾಡುತ್ತಿಲ್ಲ. ಬೆಂಗಳೂರು ಮೈಸೂರಿನಂತಹ ಒಂದೆರಡು ನಗರಗಳನ್ನು ಹೊರತುಪಡಿಸಿದರೆ, ಸರಿಯಾದ ಪುಸ್ತಕದ ಅಂಗಡಿಗಳು ಬೇರೆಯ ಕಡೆ ಇಲ್ಲ.

ರಾಷ್ಟ್ರೀಯ ಗ್ರಂಥಾಲಯಗಳು ಅನೇಕ ಊರುಗಳಲ್ಲಿ ಇದ್ದರೂ, ಅದರೊಳಗೆ ಕೆಲಸ ಮಾಡುವವರ ಅಭಿರುಚಿ ಹಾಗೂ ಆಯ್ಕೆಗೆ ಅನುಗುಣವಾದ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿರಬಹುದೇ ಹೊರತು, ಬೇರೆಯ ಒಳ್ಳೆಯ ಪುಸ್ತಕಗಳು ವಿರಳ. ಹತ್ತಿರಕ್ಕೆ ತೆಗೆದುಕೊಂಡು ಹೋಗುವ ವ್ಯವಸ್ಥೆಗಳು ರೂಪುಗೊಳ್ಳಬೇಕು; ರೈಲು ನಿಲ್ದಾಣಗಳಲ್ಲಿ ಬಸ್ ನಿಲ್ದಾಣಗಳಲ್ಲಿ ಇರುವ ಪುಸ್ತಕದ ಅಂಗಡಿಗಳಲ್ಲಿ, ಜನಕ್ಕೆ ಉತ್ತಮ ಅಭಿರುಚಿ ನಿರ್ಮಾಣ ಮಾಡುವಂಥ ಪುಸ್ತಕಗಳು ಕಣ್ಣಿಗೆ ಬೀಳುವಂತಾಗಬೇಕು. ಕರ್ನಾಟಕದ ವಿವಿಧ ಭಾಗಗಳಲ್ಲಿ ಪುಸ್ತಕಮೇಳಗಳು ಏರ್ಪಾಡಾಗಬೇಕು. ಈ ದಿಕ್ಕಿನಲ್ಲಿ ಕನ್ನಡ-ಸಂಸ್ಕೃತಿ ನಿರ್ದೇಶನಾಲಯವು ಪ್ರಾರಂಭಿಸಿರುವ 'ಜನಪ್ರಿಯ ಪುಸ್ತಕ ಮಾಲೆ'ಯ ಯೋಜನೆ ಅತ್ಯಂತ ಸ್ವಾಗತಾರ್ಹವಾದದ್ದು. ಇನ್ನು ಸರ್ಕಾರವು ಪ್ರಾರಂಭಿಸಲು ಉದ್ದೇಶಿಸಿರುವ ಪುಸ್ತಕ ಪ್ರಾಧಿಕಾರ'ವು ನಾಳಿನ ಪುಸ್ತಕೋದ್ಯಮಕ್ಕೆ ಹೊಸ ಆಯಾಮಗಳನ್ನು ಕೊಡಬಹುದು. ಎಲ್ಲದಕ್ಕಿಂತ ಮುಖ್ಯವಾಗಿ ಗ್ರಾಮಾಂತರ ಪರಿಸರಗಳಲ್ಲಿ ವಾಚನಾಲಯಗಳು, ಗ್ರಂಥಾಲಯಗಳು ಹೆಚ್ಚಾಗಬೇಕು. ದೇವಸ್ಥಾನಗಳನ್ನೂ ಕಲ್ಯಾಣಮಂಟಪಗಳನ್ನೂ ಕಟ್ಟಿಸುವುದರಲ್ಲಿ ನಮ್ಮ ಜನಕ್ಕೆ ಇರುವ ಉತ್ಸಾಹ ಗ್ರಂಥಾಲಯಗಳನ್ನು ನಿರ್ಮಿಸುವುದರಲ್ಲಿ ಇಲ್ಲ. ಗ್ರಂಥಾಲಯಗಳನ್ನು ಸ್ಥಾಪಿಸುವುದು ನಿಜವಾಗಿಯೂ ಪುಣ್ಯದ ಕೆಲಸ ಎಂಬುದನ್ನು ಯಾಕೆ ನಮ್ಮ ಜನ ಅರ್ಥಮಾಡಿಕೊಳ್ಳುವುದಿಲ್ಲ? ದೇವಸ್ಥಾನಗಳಿಗಿಂತ ಗ್ರಂಥಾಲಯಗಳು ಮಹತ್ವವೆಂದು ನಮ್ಮ ಜನಕ್ಕೆ ಅನ್ನಿಸುವುದು ಯಾವಾಗ?

ಆದಾನ ಪ್ರದಾನ ಕಾರ್ಯ ಹೆಚ್ಚಾಗಲಿ

ಇದಕ್ಕಿಂತಲೂ ಮುಖ್ಯವಾದದ್ದೆಂದರೆ, ಕನ್ನಡ ಸಾಹಿತ್ಯದ ಸಾಧನೆಯನ್ನೂ, ವಿಶಿಷ್ಟತೆಯನ್ನೂ, ಉತ್ಕೃಷ್ಟತೆಯನ್ನೂ ಇಂಗ್ಲಿಷ್ ಭಾಷೆಯ ಮೂಲಕ ಭಾರತೀಯ ಹಾಗೂ ಪಾಶ್ಚಿಮಾತ್ಯ ವಲಯಗಳಿಗೆ ಪರಿಚಯ ಮಾಡಿಕೊಡುವ ಕೆಲಸ. ಏಕೆಂದರೆ, ಇತರ ಭಾಷಾ ಸಾಹಿತ್ಯಗಳು ನಮಗೆ ಅನುವಾದಗಳ ಮೂಲಕ ಪರಿಚಯವಾಗಿರುವ ಅಲ್ಪ-ಸ್ವಲ್ಪ ಪ್ರಮಾಣಕ್ಕೆ ಹೋಲಿಸಿ ನೋಡಿದರೂ, ನಮ್ಮ ಸಾಹಿತ್ಯವು ಮುಖ್ಯವಾಗಿ ಇಂಗ್ಲಿಷಿನ ಮೂಲಕ ಕರ್ನಾಟಕದಾಚೆಗೆ ಪರಿಚಯವಾಗಿರುವುದು ತೀರಾ ಕಡಿಮೆಯೆಂದೇ ಹೇಳಬೇಕು. ಈವರೆಗಿನ ಆದಾನ-ಪ್ರದಾನ ಕಾರ್ಯವು, ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಹಾಗೂ ಇನ್ನಿತರ ವೈಯಕ್ತಿಕ ಪರಿಶ್ರಮ ಮತ್ತು ಶ್ರದ್ಧೆಗಳಿಂದ ತಕ್ಕಮಟ್ಟಿಗೆ ನಡೆದಿರುವುದಾದರೂ, ಇದೂ ಏನೇನೂ ಸಾಲದು. ಇದಕ್ಕಾಗಿ ವಿವಿಧ ಭಾಷೆಗಳಲ್ಲಿ ಪರಿಣಿತರಾದವರನ್ನೊಳಗೊಂಡ ಪ್ರತ್ಯೇಕವಾದ ಹಾಗೂ ಸ್ಥಾಯಿಯಾದ ಅನುವಾದ ವಿಭಾಗವೊಂದನ್ನು, ಕನ್ನಡ ಸಾಹಿತ್ಯ ಪರಿಷತ್ತಾಗಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಾಗಲಿ ಅಥವಾ ಇದೀಗ ಪ್ರಾರಂಭವಾಗಿರುವ ಕನ್ನಡ ವಿಶ್ವವಿದ್ಯಾಲಯವಾಗಲಿ ಒಳಕೊಳ್ಳುವುದಾದರೆ ಅದೊಂದು ಮಹತ್ವದ ಹೆಜ್ಜೆಯಾಗುತ್ತದೆ.

ಬಹುಭಾಷಾ ಬಾಂಧವ್ಯ ಬೇಕು

ನಮ್ಮ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ನಮ್ಮ ಗ್ರಾಮೀಣ ಪರಿಸರದ ಬರಹಗಾರರ ಸಮಸ್ಯೆಗಳನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ಹೆಚ್ಚಿನ ಸಾಹಿತ್ಯಿಕ ಚಟುವಟಿಕೆಗಳು, ಪುಸ್ತಕ ಪ್ರಕಾಶನ, ವಿಮರ್ಶೆಯ ಹಾಗೂ ಸಂವಹನದ ಮಾಧ್ಯಮಗಳು, ಬಹುಮಟ್ಟಿಗೆ ನಗರ ಕೇಂದ್ರಿತವಾಗುತ್ತಿರುವ ಸಂದರ್ಭದಲ್ಲಿ, ಗ್ರಾಮೀಣ ಪರಿಸರದ ಬರಹಗಾರರಿಗೆ ಸರಿಯಾದ ಪರಿಗಣನೆಯಾಗಲೀ, ಪ್ರೋತ್ಸಾಹವಾಗಲೀ, ಅವರ ಕೃತಿಗಳ ಬಗ್ಗೆ ಸಮರ್ಪಕವಾದ ವಿಮರ್ಶೆಯಾಗಲೀ ನಡೆಯುತ್ತಿಲ್ಲ ಎಂಬ ಅಭಿಪ್ರಾಯವೊಂದು ಪ್ರಚಲಿತವಾಗಿದೆ. ಎಷ್ಟೋ ವೇಳೆ ನಗರ ಕೇಂದ್ರಗಳಲ್ಲಿ ವಿವಿಧ ಸಮೂಹ ಮಾಧ್ಯಮಗಳಿಗೆ ಸಮೀಪದಲ್ಲಿರುವವರಿಗೆ ದೊರಕುವ 'ಪ್ರಕಾಶನ'ದ ಅನುಕೂಲ ಇವರಿಗೆ ಇಲ್ಲದಿರಬಹುದೆಂಬ ಸಂಗತಿಯನ್ನು ತಳ್ಳಿಹಾಕಲಾಗದಿದ್ದರೂ, ನಿಜವಾದ ಲೇಖಕ ಅವನು ಎಲ್ಲಿಯೇ ಇರಲಿ ಅವನು ಪಡೆಯಬೇಕಾದಷ್ಟು ಪರಿಗಣನೆಯಿಂದ ವಂಚಿತನಾಗಲಾರನೆಂದೇ ನನ್ನ ತಿಳಿವಳಿಕೆ. ಆದರೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳು ನಗರಕೇಂದ್ರಗಳಾಚೆಯ ಪ್ರತಿಭೆಗಳನ್ನು ಹೆಚ್ಚು ಹೆಚ್ಚಾಗಿ ತಮ್ಮ ಕಾರ್ಯಕ್ರಮಗಳೊಳಗೆ ತೊಡಗಿಸಿಕೊಳ್ಳುವುದರ ಮೂಲಕ, ಅವರನ್ನು ಪರಿಗಣನೆಗೆ ತೆಗೆದುಕೊಂಡು ಪ್ರೋತ್ಸಾಹಿಸುವುದು ಅಗತ್ಯವಾಗಿದೆ.

ಬಹುಭಾಷಾ ಬಾಂಧವ್ಯ ಬೇಕು

ಹಾಗೆಯೇ ನಮ್ಮ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು, ಸಾಧ್ಯವಾದ ಮಟ್ಟಿಗೆ ದೊಡ್ಡ ದೊಡ್ಡ ನಗರಗಳಿಗೆ ಸೀಮಿತವಾಗದಂತೆ ಅವುಗಳ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬೇಕಾಗಿದೆ. ಅಚೆಗೂ ಹಮ್ಮಿಕೊಳ್ಳಬೇಕು. ಮತ್ತು ಈ ಬಗೆಯ ಕಾರ್ಯಕ್ರಮಗಳಲ್ಲಿ ಆಯಾ ಗಡಿಗಳಾಚೆಯ ಸೋದರ ಭಾಷಾಸಾಹಿತಿಗಳನ್ನು, ಕಲಾವಿದರನ್ನು ನಮ್ಮವರ ಜೊತೆಗೆ ತೊಡಗಿಸಿಕೊಳ್ಳಬೇಕು. ಬಹುಭಾಷಿಕ ಪರಿಸರದ ನಡುವೆ ಬದುಕುವ ನಾವೆಲ್ಲರೂ ಈ ಬಗೆಯ ಭಾಷಾಬಾಂಧವ್ಯಗಳ ಮೂಲಕವಾಗಿಯೇ ಬೆಳೆಯಬೇಕಾಗುತ್ತದೆ.

೬೨ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಸಿಂಪಿ ಲಿಂಗಣ್ಣ



ಹಿರಿಯ ಜಾನಪದ ದಿಗ್ಗಜ, ಆದರ್ಶ ಶಿಕ್ಷಕ, ಸಾಹಿತಿ ಆಗಿದ್ದ ಸಿಂಪಿ ಲಿಂಗಣ್ಣನವರು ಶಿವಯೋಗಪ್ಪ-ಸಾವಿತ್ರಿ ದಂಪತಿಗಳಿಗೆ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಚಡಚಣದಲ್ಲಿ ೧೦-೨-೧೯೦೫ರಂದು ಜನಿಸಿದರು. ೧೯೨೨ರಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಪಾಸಾದ ಇವರು ೧೯೨೫ರಿಂದ ೧೯೬೦ವರೆಗೆ ೩೫ ವರ್ಷಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ೧೯೬೦ರಲ್ಲಿ ಇವರು ಅತ್ಯುತ್ತಮ ಶಿಕ್ಷಕರೆಂದು ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪಡೆದರು. ೧೯೨೩ರಲ್ಲಿ ವಾಗ್ವಿಲಾಸ ಭವನ ಎಂಬ ವಾಚನಾಲಯವನ್ನು ಚಡಚಣದಲ್ಲಿ ಸ್ಥಾಪಿಸಿದರು. ೧೯೨೫ರಲ್ಲಿ ಬತಗುಣಕಿಯಲ್ಲಿದ್ದಾಗ ಬಸವೇಶ್ವರ ವಾಚನಾಲಯ ಪ್ರಾರಂಭಿಸಿದರು. 'ಮುದ್ದು' ಮತ್ತು 'ಕಮತಿಗ' ಎಂಬ ಕೈಬರಹ ಪತ್ರಿಕೆಗಳನ್ನು ನಾಗಪ್ಪ ಶಿವಯೋಗಪ್ಪ ಸಿಂಪಿ ಅವರು ಸಿಂಪಿ ಲಿಂಗಣ್ಣ ಎಂಬ ಹೆಸರಿನಲ್ಲಿ ಬರಹಕ್ಕೆ ಇಳಿದರು. 'ಭರತ' ಎಂಬ ಕಾವ್ಯನಾಮ ಇವರದು.

ಹಲಸಂಗಿಯ ಮಧುರಚೆನ್ನ, ಕಾಪಸೆ ರೇವಣ್ಣ, ಧೂಲಾಸಾಹೇಬ್ ಅವರುಗಳ ನಡುವಿನ ಒಡನಾಟದಲ್ಲಿ ಕನ್ನಡ ಜಾನಪದ ಗೀತೆಗಳನ್ನು ಸಂಗ್ರಹಿಸಿ, ಗರತಿಯ ಬಾಳು ಕೃತಿಯನ್ನು ಅಧ್ಯಯನ ಮಾಡಿದರು. ಅರವಿಂದರ ಹೆಸರಿನಲ್ಲಿ ಚಡಚಣದಲ್ಲಿ ಗ್ರಂಥಾಲಯವನ್ನು ಸ್ಥಾಪಿಸಿದರು. ಅನೇಕ ಪುಸ್ತಕಗಳನ್ನು ಹೊರತಂದರು.

'ಜನಾಂಗದ ಜೀವಾಳ' ಗ್ರಂಥಕ್ಕೆ ೧೯೬೧ರಲ್ಲಿ, ಶ್ರುತಾಶ್ರುತ ಕವನ ಸಂಕಲನಕ್ಕೆ ೧೯೭೯ರಲ್ಲಿ, 'ನಾಟ್ಯ ಸಾಧನೆ' ಕೃತಿಗೆ ೧೯೭೬ರಲ್ಲಿ ರಾಜ್ಯ ಸರಕಾರ ಬಹುಮಾನ ನೀಡಿದೆ. ಸ್ವರ್ಗದೋಲೆಗಳು ಕೃತಿಗೆ ಮುಂಬಯಿ ಸರಕಾರದ ಬಹುಮಾನ ೧೯೫೬ರಲ್ಲಿ, 'ನೂರುಗಡಿಗೆ ಒಂದು ಬಡಿಗೆ'ಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ೧೯೮೦ರಲ್ಲಿ ಬಂದಿವೆ, ೧೯೮೮ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಪ್ರತಿಷ್ಠಿತ ಜಾನಪದ ತಜ್ಞ ಪ್ರಶಸ್ತಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ೧೯೭೯ರಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, ೧೯೯೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಮುಂತಾದವು ಲಭಿಸಿತ್ತು. ೧೯೭೯ರಲ್ಲಿ ಮಂಗಳೂರಿನಲ್ಲಿ ಜರುಗಿದ ೨ನೇ ಜಾನಪದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೧೯೭೭ರಲ್ಲಿ ಇಳಕಲ್ಲಿನಲ್ಲಿ ನಡೆದ ೯ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಸೊಲ್ಲಾಪುರದಲ್ಲಿ ನಡೆದ ಹೊರನಾಡ ಕನ್ನಡಿಗರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಗೌರವ ಇವರದು.

೧೯೯೩ರಲ್ಲಿ ಕೊಪ್ಪಳದಲ್ಲಿ ನಡೆದ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯನ್ನೂ ಇವರು ವಹಿಸಿದ್ದರು.

ಸಿಂಪಿ ಲಿಂಗಣ್ಣನವರು ರಚಿಸಿರುವ ಕೃತಿಗಳು ನೂರಕ್ಕೂ ಹೆಚ್ಚು ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ.

ಜಾನಪದ ಕೃತಿಗಳು : ಗರತಿಯ ಬಾಳು(೧೯೫೪), ಜನಾಂಗದ ಜೀವಾಳ(೧೯೬೦), ಉತ್ತರ ಕರ್ನಾಟಕದ ಜನಪದ ಕಥೆಗಳು(೧೯೬೨)

ಕಥಾಸಂಕಲನಗಳು: ಬೆಟ್ಟದ ಹೊಳೆ, ಪವಿತ್ರ ಜೀವನ, ದೀಪವರ್ತಿ ದೃಷ್ಟಾಂತ ಕಥೆಗಳು.

ನಾಟಕಗಳು: ಮರೆಮುಚ್ಚಕ, ಜನಜೀವನ, ಭಕ್ತರಹಸ್ಯ, ಚಂಡಾಳ ಚೌಕಡಿ

ಜೀವನ ಚರಿತ್ರೆಗಳು : ಕನ್ನಡಿಗರ ಕುಲಗುರು, ದತ್ತವಾಣಿ ಅರವಿಂದರು

ಕವನಸಂಕಲನಗಳು :ಮುಗಿಲ ಜೇನು, ಮಾತೃವಾಣಿ, ಶ್ರುತಾಶ್ರುತ

ಸಿಂಪಿ ಲಿಂಗಣ್ಣನವರು ೫-೫-೧೯೯೩ರಲ್ಲಿ ದಿವಂಗತರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೬೨
ಅಧ್ಯಕ್ಷರು, ಸಿಂಪಿ ಲಿಂಗಣ್ಣ
ದಿನಾಂಕ ೫, ೬, ೭ ಫೆಬ್ರವರಿ ೧೯೯೩
ಸ್ಥಳ : ಕೊಪ್ಪಳ

ಅಮೃತನಿಧಿ ಯೋಜನೆ

ಈಗಾಗಲೇ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿಯೊಬ್ಬ ಕನ್ನಡಿಗನಿಂದ ಒಂದು ರೂ. ನಂತೆ ಹಣ ಸಂಗ್ರಹಿಸುವ ಅಮೃತ ನಿಧಿಯ ಕನ್ನಡಿಗನಿಂದ ಕೈಗೊಂಡಿದೆ. ಇದೊಂದು ಅತ್ಯಂತ ಯೋಗ್ಯವಾದ ಉಪಕ್ರಮವಾಗಿದೆ. ನಾಲ್ಕು ಕೋಟಿ ಕನ್ನಡಿಗರಿರುವ ಕರ್ನಾಟಕದಲ್ಲಿ ಕನಿಷ್ಠ ಒಂದು ಕೋಟಿ ರೂ. ಹಣ ಕೂಡಿದರೂ ಅದೆಷ್ಟೋ ಕಾರ್ಯ ಸುಗಮವಾಗಿ ಸಾಗುತ್ತದೆ. ಕನ್ನಡ ನಾಡಿನ ಸಾಹಿತ್ಯಕ ಸಾಂಸ್ಕೃತಿಕ ಸಾರ್ವಭೌಮ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಸ್ವಾಯುತ್ತ ಸಂಸ್ಥೆಯಾಗಿ ಬೆಳೆದು ನಿಲ್ಲುವ ಆವಶ್ಯಕತೆ ಇಂದು ಎಂದಿಗಿಂತಲೂ ಹೆಚ್ಚಾಗಿದೆ. ಅದು ಸರ್ಕಾರದ ಬಾಗಿಲಲ್ಲಿ ನಿಂತು ಹಣ ಯಾಚಿಸುವ ಪ್ರಸಂಗ ಬರಬಾರದು. ಯಾವುದೇ ಮುಲಾಜಿಲ್ಲದೆ ಪರಿಷತ್ತು ವರುಷದುದ್ದಕ್ಕೂ ಸಾಹಿತ್ಯಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವಂತಹ ಸ್ಥಿತಿಯಲ್ಲಿರಬೇಕು. ಆದರೆ ಪರಿಷತ್ತಿನಂತಹ ಸಾಂಸ್ಕೃತಿಕ ಹಾಗೂ ಪ್ರಾತಿನಿಧಿಕ ಸಂಸ್ಥೆಗೆ ಉದಾರ ನೆರವು ನೀಡುವುದು ಸರ್ಕಾರದ ಕರ್ತವ್ಯವೂ ಹೌದೆಂಬುದನ್ನು ನಾವು ಮರೆಯುವಂತಿಲ್ಲ. ಆದುದರಿಂದ ಸಕಾರ ಇದಕ್ಕೆ ಒಂದು ಶಾಶ್ವತ ವ್ಯವಸ್ಥೆ ಮಾಡಬೇಕು. ಪ್ರತಿ ವರ್ಷ ಸರ್ಕಾರದ ಮಂಜೂರಾತಿಗಾಗಿಯೇ ಪರಿಷತ್ತು ಕಾಯುವಂತಾಗಬಾರದು. ಅಂತಾದರೆ ಕನ್ನಡದ ಸಂದರ್ಭದಲ್ಲಿ ಅದರ ಕೀರ್ತಿ ಚಿರಸ್ಥಾಯಿಯಾಗುತ್ತದೆ.

ದತ್ತಿನಿಧಿ ಯೋಜನೆ

ವರ್ಷದ ೩೬೫ ದಿನಗಳಲ್ಲಿ ಕರ್ನಾಟಕದ ಎಲ್ಲ ಹಳ್ಳಿ ಪಟ್ಟಣಗಳಲ್ಲಿ ಒಂದಿಲ್ಲೊಂದು ಕಡೆ ಸಾಹಿತ್ಯಕ ಕಾರ್ಯಕ್ರಮ ನಡೆಯುವಂತೆ ದತ್ತಿ ಉಪನ್ಯಾಸಗಳನ್ನು ಇಡುವ ಪರಿಷತ್ತಿನ ಇನ್ನೊಂದು ಯೋಜನೆ ತುಂಬ ಒಳ್ಳೆಯದಾಗಿದೆ. ಪ್ರತಿ ತಾಲ್ಲೂಕಿಗೆ ಎರಡು ದತ್ತಿ ಉಪನ್ಯಾಸಗಳ ಲಾಭವಾಗಲಿದೆ. ಒಂದೊಂದು ದತ್ತಿ ಉಪನ್ಯಾಸಕ್ಕೆ ೧೦,೦೦೦ ರೂ. ಕೊಟ್ಟರೆ ಸಾಕು. ಅದರ ಬಡ್ಡಿ ಬಡ್ಡಿಯ ಮೇಲಿಂದ ಶಾಶ್ವತವಾಗಿ ದತ್ತಿ ಉಪನ್ಯಾಸಗಳನ್ನು ಇಡಬೇಕೆನ್ನುವ ಪರಿಷತ್ತಿನ ಯೋಜನೆ ತುಂಬ ಚೆನ್ನಾಗಿದೆ.

ವಿವಿಧ ವಿಷಯಗಳ ಕುರಿತು ಜನಸಮುದಾಯಕ್ಕೆ ತಿಳುವಳಿಕೆ ಕೊಡುವ ನೂರಾರು ಪುಸ್ತಕಗಳನ್ನು ಪ್ರಕಟಿಸುವ ಪರಿಷತ್ತಿನ ಯೋಜನೆ ತುಂಬ ಸೂಕ್ತವಾಗಿದೆ. ಇಂದು ನಮ್ಮ ಜನರಲ್ಲಿ ಮನೆಮಾಡಿಕೊಂಡಿರುವ ಅಜ್ಞಾನವನ್ನು ಹೋಗಲಾಡಿಸಲು ಇಂಥ ಪುಸ್ತಕ ಪ್ರಕಟನೆಗಳಿಗಿಂತ ಬೇರೆ ಯಾವ ಉಪಾಯವೂ ಇಲ್ಲ.

ಶತಮಾನದ ಸಾಹಿತ್ಯ ಚರಿತ್ರೆ

ಆಧುನಿಕ ಕನ್ನಡ ಸಾಹಿತ್ಯಕ್ಕೆ ಈಗ ಕನಿಷ್ಠ ೧೦೦ ವರ್ಷಗಳಾದವು ಅದಕ್ಕಾಗಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿಯೂ ಸಾಧನೆಯನ್ನು ಬಿಂಬಿಸುವ ಶತಮಾನದ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯಗಳು, ಸಂಯುಕ್ತವಾಗಿ ಪ್ರಕಟಿಸುವ ಯೋಜನೆ ಹಾಕಿಕೊಳ್ಳಬೇಕು.

ವಿಚಾರಸಂಕೀರ್ಣಗಳು

ಕರ್ನಾಟಕದ ರಾಜಧಾನಿ ಬೆಂಗಳೂರು ಹಾಗೂ ಇತರ ಸಾಂಸ್ಕೃತಿಕ ಕೇಂದ್ರಗಳಾದ ಮಂಗಳೂರು, ಧಾರವಾಡ, ಶಿವಮೊಗ್ಗ, ಚಿತ್ರದುರ್ಗಗಳಲ್ಲಿ ಹೊರತು ಪಡಿಸಿ ಉಳಿದ ಕಡೆಗಳಲ್ಲಿ ಸಾಹಿತ್ಯದ ವಿವಿಧ ಮಗ್ಗಲುಗಳ ಬಗ್ಗೆ ವಿಚಾರ ಸಂಕೀರ್ಣಗಳನ್ನು ಸಾಹಿತ್ಯ ಪರಿಷತ್ತು ಏರ್ಪಡಿಸಬೇಕು.

ಸಾಹಿತ್ಯ ವಿಮರ್ಶಾ ಚರಿತ್ರೆ ಗ್ರಂಥ ಬರಲಿ

ಸಾಹಿತ್ಯ ವಿಮರ್ಶೆ ಈಗ ಪ್ರಬುದ್ಧವಾಗಿ ಬೆಳೆದಿದೆ. ವಿಮರ್ಶೆಯ ಪರಿಕರಗಳನ್ನು ಸೂಕ್ಷ್ಮವಾಗಿ ಬಳಸುವ ವಿಮರ್ಶಕರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸಾಹಿತ್ಯ ವಿಮರ್ಶೆಯ ಸಾಧನೆಯ ಕುರಿತು ವಿಸ್ತೃತವಾದ ಚರಿತ್ರೆ ಬರೆಯಿಸಿ ಪ್ರಕಟಿಸುವ ಕಾಲ ಇದೀಗ ಸನ್ನಿಹಿತವಾಗಿದೆ.


ಅನುವಾದ ಸಂಯುಕ್ತ ಯೋಜನೆ

ಕನ್ನಡ ಸಾಹಿತ್ಯದ ಮೇರುಕೃತಿಗಳನ್ನು ಇಂಗ್ಲಿಷಿಗೆ ಹಾಗೂ ಇತರ ಭಾರತೀಯ ಭಾಷೆಗಳಿಗೆ ಅನುವಾದಿಸುವ ಒಂದು ಮಹಾಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಸಾಹಿತ್ಯ ಪರಿಷತ್ತು ಸಂಯುಕ್ತವಾಗಿ ರೂಪಿಸಬೇಕು. ಹಾಗಾದಾಗ ಮಾತ್ರ ಕನ್ನಡ ಸಾಹಿತ್ಯದ ಶ್ರೇಷ್ಠತೆ ಎಲ್ಲ ಕಡೆಗೆ ಹರಡುತ್ತದೆ. ಅದರಂತೆ ವಿವಿಧ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಜ್ಞಾನ ವಿಜ್ಞಾನ ಮಹತ್ವ ಗ್ರಂಥಗಳನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನೂ ಮಾಡಬೇಕು. ವಿಚಾರ ಸಾಹಿತ್ಯದ ಸಂವರ್ಧನೆಗೆ ಹೆಚ್ಚಿನ ಒತ್ತು ಕೊಡಬೇಕು.

❖❖

೬೩ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಚದುರಂಗ



ಕನ್ನಡದ ಸಣ್ಣ ಕಥೆಗಾರ, ಕಾದಂಬರಿಕಾರ, ನಾಟಕಕಾರ ಆದ ಚದುರಂಗರು (ಎಂ. ಸುಬ್ರಹ್ಮಣ್ಯರಾಜೇ ಅರಸ್ ಅವರು) ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ೧-೧-೧೯೧೬ರಂದು ಮುದ್ದುರಾಜೇ ಅರಸ್ ಮತ್ತು ಮರುದೇವಿ ಅರಸ್ ದಂಪತಿಗಳಿಗೆ ಸುಪುತ್ರರಾಗಿ ಜನಿಸಿದರು. ರಾಜಮನೆತನದ ಒಡನಾಟವಿದ್ದ ಇವರ ವಿದ್ಯಾಭ್ಯಾಸ ಮೈಸೂರಿನಲ್ಲಿ ನಡೆಯಿತು. ಮೈಸೂರಿನ ರಾಯಲ್ ಸ್ಕೂಲ್, ಬೆಂಗಳೂರಿನ ಇಂಟರ್‌ಮಿಡಿಯೇಟ್ ಕಾಲೇಜು, ಮೈಸೂರು ಮಹಾರಾಜ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಬಿ.ಎ. ಪದವಿ ಪಡೆದರು. ಕಾನೂನು ಮತ್ತು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಪುಣೆಗೆ ಹೋದರು. ಕಾರಣಾಂತರಗಳಿಂದ ಶಿಕ್ಷಣ ಪೂರ್ಣಗೊಳ್ಳಲಿಲ್ಲ. ಗಾಂಧಿ ಪ್ರಭಾವಕ್ಕೆ ಒಳಗಾದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು, ಖಾದಿವಾರಿಗಳಾದರು. ಹಳ್ಳಿಯ ಉದ್ಧಾರಕ್ಕಾಗಿ ಮೈಸೂರನ್ನು ಬಿಟ್ಟು ಕಲ್ಲಹಳ್ಳಿಗೆ ಹೋಗಿ ಕೃಷಿಕರಾದರು. ಮಾಸ್ತಿ, ಗೊರೂರು, ಅನಕೃ, ತರಾಸು, ಟಾಲ್‌ಸ್ಟಾಯ್, ಗಾರ್ಕಿ ಮೊದಲಾದ ಸಾಹಿತಿಗಳ ಬರಹಗಳಿಂದ ಪ್ರೇರಿತರಾದ ಇವರು ಸಾಹಿತ್ಯ ಕೃಷಿಗೆ ಇಳಿದರು. ಪುಣೆಯಲ್ಲಿದ್ದಾಗ ಸಿನಿಮಾ ತಂತ್ರದ ಬಗ್ಗೆ ಅಧ್ಯಯನ ಮಾಡಿದ ಚದುರಂಗರು ಚಲನಚಿತ್ರರಂಗದಲ್ಲೂ ದುಡಿದರು. ಭಕ್ತ ಕುಂಬಾರ ಚಿತ್ರಕ್ಕೆ ಕಥಾ ಲೇಖಕರಾಗಿದ್ದರು. ಇಂಗ್ಲಿಷಿನ 'ಮಾಯಾ' ಚಿತ್ರದ ಸಹ ನಿರ್ದೇಶಕರಾಗಿದ್ದರು. ಇವರೇ ತಯಾರಿಸಿದ 'ಸರ್ವಮಂಗಳಾ' ಚಿತ್ರಕ್ಕೆ ರಾಜ್ಯ ಚಲನಚಿತ್ರ ಪ್ರಶಸ್ತಿ ದೊರಕಿದೆ.ಉಯ್ಯಾಲೆ ಚಿತ್ರಕ್ಕೆ ಉತ್ತಮ ಚಿತ್ರಕಥಾ ಲೇಖಕ ಪ್ರಶಸ್ತಿ ಬಂದಿದೆ. ರಾಷ್ಟ್ರಕವಿ ಕುವೆಂಪು ಮತ್ತು ನಾಟ್ಯವಿಶಾರದೆ ವೆಂಕಟಲಕ್ಷ್ಮಮ್ಮನವರನ್ನು ಕುರಿತು ಸಾಕ್ಷ್ಯಚಿತ್ರಗಳನ್ನು ಸಿದ್ಧಪಡಿಸಿದ್ದಾರೆ.ಇವರ ವೈಶಾಖ ಕಾದಂಬರಿಗೆ ೧೯೮೨ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

ಇವರ ಸಾಹಿತ್ಯ ಸಾಧನೆಗೆ ಹತ್ತಾರು ಪ್ರಶಸ್ತಿ ಗೌರವ, ಸನ್ಮಾನಗಳು ಲಭಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೬೮ ಮತ್ತು ೧೯೯೪ರಲ್ಲಿ), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೮೨ರಲ್ಲಿ ವೈಶಾಖ ಕಾದಂಬರಿಗೆ), ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್(೧೯೯೩) ಇವರಿಗೆ ದೊರೆತಿದೆ. ೧೯೯೪ರಲ್ಲಿ ಮಂಡ್ಯದಲ್ಲಿ ಜರುಗಿದ ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗುವ ಭಾಗ್ಯ ಇವರದಾಗಿತ್ತು.

ಚದುರಂಗರು ರಚಿಸಿದ ಕೃತಿಗಳು ಕೆಲವು ಹೀಗಿವೆ :

ಕಾದಂಬರಿಗಳು : ಸರ್ವಮಂಗಳಾ(೧೯೪೮), ಉಯ್ಯಾಲೆ(೧೯೬೦), ವೈಶಾಖ (೧೯೮೧), ಹೆಜ್ಜಾಲ(೧೯೯೮)

ಕಥಾಸಂಕಲನಗಳು : ಸ್ವಪ್ನ ಸುಂದರಿ(೧೯೪೪), ಶವದ ಮನೆ(೧೯೪೮), ಇಣುಕು ನೋಟ(೧೯೪೮), ಬಂಗಾರದ ಹೆಜ್ಜೆ(೧೯೪೧), ಮೀನಿನ ಹೆಜ್ಜೆ(೧೯೪೬), ಕ್ವಾಟೆ(೧೯೭೨), ಮೃಗಯಾ(೧೯೯೮) ಇತ್ಯಾದಿ ಕೃತಿಗಳು.

ನಾಟಕಗಳು : ಕುಮಾರರಾಮ(೧೯೬೬), ಇಲಿಬೋನು(೧೯೮೨), ಬಿಂಬ(೧೯೯೦).

ಚದುರಂಗರು ೧೯-೧೦-೧೯೯೮ರಲ್ಲಿ ದಿವಂಗತರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೬೩
ಅಧ್ಯಕ್ಷರು, ಚದುರಂಗ
ದಿನಾಂಕ ೧೧, ೧೨, ೧೩ ಫೆಬ್ರವರಿ ೧೯೯೪
ಸ್ಥಳ : ಮಂಡ್ಯ

ವಿಕೇಂದ್ರೀಕರಣದ ಪರಿಷತ್ತು

೧೯೧೫ರಲ್ಲಿ ಕೆಲವು ಹಿರಿಯ ಚೇತನಗಳು ಒಂದುಗೂಡಿ ಕನ್ನಡದ ಪುರೋಭಿವೃದ್ಧಿಗಾಗಿ ಕಟ್ಟಿ ಬೆಳೆಸಿದ ಕನ್ನಡ ಜನತೆಯ ಏಕೈಕ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಜನಪದ ಇವೆಲ್ಲದರ ಬೆಳವಣಿಗೆ ಇದು ಶ್ರದ್ಧೆಯಿಂದ ನಿರಂತರವಾಗಿ ದುಡಿಯುತ್ತಾ ಬಂದಿದೆ. ಅಷ್ಟೇ ಅಲ್ಲದೆ ಗಡಿ ವಿವಾದದ ಬಗ್ಗೆಯೂ ಇದು ಹೋರಾಡುತ್ತಾ ಬಂದು, ಮಹಾಜನ ವರದಿಯನ್ನು ಒಪ್ಪಿಕೊಳ್ಳುವಂತೆ ಒತ್ತಾಯವನ್ನು ಮೇಲಿಂದ ಮೇಲೆ ತರುತ್ತಲೇ ಇದೆ. ಹೊರನಾಡ ಕನ್ನಡಿಗರ ಬಗ್ಗೆಯೂ ಇದು ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರ ಕೇಂದ್ರ ಬೆಂಗಳೂರಿನಲ್ಲಿದ್ದರೂ, ಕನ್ನಡ ನಾಡಿನ ಎಲ್ಲಾ ಜಿಲ್ಲೆ, ತಾಲ್ಲೂಕುಗಳಲ್ಲೂ ಸಮಿತಿಗಳನ್ನು ರಚಿಸಿ, ಪರಿಷತ್ತಿನ ಕೆಲಸ ನಾಡಿನ ಉದ್ದಗಲಕ್ಕೆ ಹರಡುವಂತೆ ಮಾಡಿದೆ. ಹೀಗೆ ಆಡಳಿತವನ್ನು ವಿಕೇಂದ್ರೀಕರಣ ಮಾಡಿಕೊಂಡು ಸಾಹಿತ್ಯ ಸೇವೆಯನ್ನು ಸಲ್ಲಿಸುತ್ತಿರುವ ಇಂಥ ಸಂಸ್ಥೆ, ಭಾರತದ ಬೇರಾವ ರಾಜ್ಯದಲ್ಲೂ ಬಹುಶಃ ಇಲ್ಲವೆಂದೇ ಹೇಳಬೇಕು.

ಆರ್ಥಿಕ ವಿಚಾರ

ಕನ್ನಡಿಗರ ಈ ಹಿರಿಯ ಸಂಸ್ಥೆ ಪ್ರತಿಯೊಂದಕ್ಕೂ ಸರ್ಕಾರವನ್ನೇ ಕಾಯದೆ ಅದಷ್ಟು ಸ್ವಾವಲಂಬಿಯಾಗಿ ತನ್ನ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದು ತೀರಾ ಅಗತ್ಯ. ಈ ದಿಸೆಯಲ್ಲಿ ರಾಜ್ಯ ಸರ್ಕಾರೀ ನೌಕರರ ಮಹಾ ಮಂಡಲವು ಪರಿಷತ್ತಿನ ಮನವಿಗೆ ಮನ್ನಣೆಕೊಟ್ಟು, ತನ್ನ ಸದಸ್ಯರಿಂದ ತಲಾ ಇಪ್ಪತ್ತು ರೂಪಾಯಿಗಳ ಕೊಡುಗೆ ನೀಡುವ ಬಗ್ಗೆ ಒಂದು ಆಜ್ಞೆ ಹೊರಡಿಸಿ ನೌಕರರ ಸಂಬಳದಲ್ಲಿ ಇಪ್ಪತ್ತು ರೂಪಾಯಿಗಳ ಕೊಡುಗೆಯನ್ನು ಪಡೆದುಕೊಳ್ಳುವ ವ್ಯವಸ್ಥೆ ಮಾಡಿದರೆ ಸುಮಾರು ಐದು ಲಕ್ಷದಷ್ಟಿರುವ ಸರ್ಕಾರಿ ನೌಕರರಿಂದ ಪರಿಷತ್ತಿನ ಅಮೃತ ನಿಧಿಗೆ ಒಂದು ಕೋಟಿ ರೂಪಾಯಿ ನಿಧಿ ಕೂಡಿ ಬರುತ್ತದೆ. ಸರ್ಕಾರ ತುರ್ತಾಗಿ ಈ ವ್ಯವಸ್ಥೆಯನ್ನು ಜಾರಿಗೆ ತಂದಲ್ಲಿ ಪರಿಷತ್ತು ಸ್ವಾವಲಂಬಿಯಾಗುವ ದಿಸೆಯಲ್ಲಿ ದಿಟ್ಟ ಹೆಜ್ಜೆಯಿಟ್ಟಂತಾಗುತ್ತದೆ.

ಪರಿಷತ್ತು ಹೀಗೆ ವ್ಯಾಪಕವಾಗಿ ಕಾರ್ಯಪ್ರವೃತ್ತವಾಗಿದ್ದರೂ, ಕನ್ನಡಕ್ಕಾಗಿ ಮಾಡಬೇಕಾದ ಕೆಲಸಗಳು ಇತ್ತೀಚಿನ ದಿನಗಳಲ್ಲಿ ಬೃಹತ್ ಆಗಿ ಬೆಳೆದಿದೆ. ಆದ್ದರಿಂದ ಸರ್ಕಾರದಿಂದ ಹೊಸದಾಗಿ ನಿಯೋಜಿಸಲ್ಪಟ್ಟ ಅನೇಕ ಸಂಸ್ಥೆಗಳು ಕೆಲಸ ಮಾಡಲಾರಂಭಿಸಿದೆ.

ಸಂಸ್ಥೆಗಳು ಸಾಮೂಹಿಕವಾಗಿ ದುಡಿಯಲಿ

ಕನ್ನಡನುಡಿ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಕನ್ನಡ ಜಾಗೃತಿ ವರ್ಷವೆಂದು ಕರೆಯಲಾದ ಈ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಒಳಗೊಂಡಂತೆ ಎಲ್ಲಾ ಪ್ರಾಧಿಕಾರಗಳು, ವಿಶ್ವವಿದ್ಯಾನಿಲಯಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಹಿತ್ಯ, ಲಲಿತಕಲೆ, ನಾಟಕ, ಜಾನಪದ, ಸಂಗೀತ ಇವುಗಳಿಗೆ ಸಂಬಂಧಪಟ್ಟ ವಿವಿಧ ಅಕಾಡೆಮಿಗಳು ಎಲ್ಲವನ್ನೂ ಒಂದು ಸಮಗ್ರ ನೀಲನಕ್ಷೆಯ ಚೌಕಟ್ಟಿನಲ್ಲಿ ಕೆಲಸಮಾಡುವಂತೆ ನಿಯೋಜಿಸಿದರೆ ಸಂಪನ್ಮೂಲಗಳನ್ನು ಹೆಚ್ಚು ಫಲಪ್ರದವಾಗಿ ಬಳಸುವುದಕ್ಕೆ ಅನುಕೂಲವಾಗುತ್ತದೆ. ಅಂದರೆ ಕನ್ನಡ ಅಭಿವೃದ್ಧಿಗೆ ಸರಕಾರವು ಸಮಗ್ರ ಯೋಜನೆಯನ್ನು ತಯಾರಿಸುವುದು ಅತ್ಯಾವಶ್ಯಕವಾಗಿದೆ. ಈ ಯೋಜನೆಯು ಎಲ್ಲ ಸಂಸ್ಥೆಗಳು ಯಾವುದನ್ನು ಮಾಡಲು ತಮಗೆ ಸಾಧ್ಯವೋ ಅದನ್ನು ಹರಡಿಕೊಂಡು ಕೆಲಸಮಾಡಿದರೆ ಉಪಯುಕ್ತವಾಗುತ್ತದೆ. ಒಬ್ಬರು ಮಾಡಿದ ಕೆಲಸವನ್ನೇ ಉಳಿದವರು ಮಾಡುವುದು ತಪ್ಪುತ್ತದೆ. ಒಂದು ಗೊತ್ತಾದ ಅವಧಿಯಲ್ಲಿ ಕೆಲಸ ಪೂರೈಸಲೂ ಸಾಧ್ಯವಾಗುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ದೃಷ್ಟಿಯಿಂದ ಮಿತವ್ಯಯ ಸಾಧಿತವಾಗಿ ಹಣದ ಸದುಪಯೋಗವೂ ಅದಂತಾಗುತ್ತದೆ. ಈ ಎಲ್ಲ ಸಂಸ್ಥೆಗಳ ಜತೆಗೆ ವಯಸ್ಕರ ಶಿಕ್ಷಣ ಸಮಿತಿ ಸೇರಿದಂತೆ ಉತ್ತಮ ಗ್ರಂಥಗಳನ್ನು ಮುದ್ರಿಸಿ ಕಡಿಮೆ ಬೆಲೆಗೆ ಮಾರಾಟ ಮಾಡಿದರೆ ಜನರು ಆ ಪುಸ್ತಕಗಳನ್ನು ಕೊಳ್ಳಲು ಸಹಾಯವಾಗುತ್ತದೆ.

❖❖

೬೪ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಹೆಚ್. ಎಲ್. ನಾಗೇಗೌಡ



ಜಾನಪದ ವಿದ್ವಾಂಸ, ಕಾದಂಬರಿಕಾರ, ಅನುವಾದಕ, ದಕ್ಷ ಆಡಳಿತಗಾರ ಎನಿಸಿದ ಹೆಚ್.ಎಲ್. ನಾಗೇಗೌಡ ಅವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹೆರಗನ ಹಳ್ಳಿಯಲ್ಲಿ ಲಿಂಗೇಗೌಡ-ಹುಚ್ಚಮ್ಮದೇವಿ ದಂಪತಿಗಳಿಗೆ ೭-೧೨-೧೯೧೫ರಲ್ಲಿ ಜನಿಸಿದರು. ನಾಗತಿಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಚೆನ್ನರಾಯಪಟ್ಟಣದಲ್ಲಿ ಲೋಯರ್ ಸೆಕೆಂಡರಿಯನ್ನು, ಬೆಂಗಳೂರಿನಲ್ಲಿ ಇಂಟರ್ ಮಿಡಿಯೇಟ್ ಪರೀಕ್ಷೆಯನ್ನು ಪಾಸು ಮಾಡಿದ ನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿಯನ್ನೂ, ಪುನಾದಲ್ಲಿ ಎಲ್.ಎಲ್.ಬಿ. ಪದವಿಯನ್ನೂ ಪಡೆದರು.

೧೯೪೦ರಲ್ಲಿ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ೧೯೬೦ರಲ್ಲಿ ಐ.ಎ.ಎಸ್ ಶ್ರೇಣಿಗೆ ಆಯ್ಕೆಯಾದರು. ೧೯೬೧ರಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ, ೧೯೬೩ರಲ್ಲಿ ಚಿಕ್ಕಮಗಳೂರಿನಲ್ಲಿ, ೧೯೬೫ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡೆಪ್ಯೂಟಿ ಕಮಿಷನರ್ ಆಗಿ ಕೆಲಸ ಮಾಡಿದ ಇವರು, ೧೯೬೯ರಲ್ಲಿ ರಾಜ್ಯದ ಲೇಬರ್ ಕಮಿಷನರ್ ಆದರು. ೧೯೭೩ರಲ್ಲಿ ಲೋಕಸೇವಾ ಆಯೋಗದ ಸದಸ್ಯರಾದರು. ೧೯೭೮ರಲ್ಲಿ ನಿವೃತ್ತರಾದರು.

ಇವರು ಬೆಂಗಳೂರು ರಾಮನಗರದ ಬಳಿ ಜಾನಪದ ಲೋಕವೆಂಬ ಜಾನಪದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ್ದಾರೆ. 'ಜಾನಪದ ಜಗತ್ತು' ಎಂಬ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ನೂರಾರು ಜಾನಪದ ಮೇಳಗಳನ್ನು ಸಂಘಟಿಸಿ ನೂರಾರು ಜಾನಪದ ಕಲಾವಿದರಿಗೆ ಮಾಸಾಶನ, ಪ್ರಶಸ್ತಿ, ಗೌರವಧನ, ನೀಡಿದ್ದಾರೆ. ನೂರಾರು ಗಂಟೆಗಳ ಕಾಲ ಕೇಳುವಷ್ಟು ಪ್ರಮಾಣದ ಮೂಲ ಜಾನಪದ ಗಾಯಕರ ಧ್ವನಿಗಳನ್ನು ಮುದ್ರಿಸಿಕೊಂಡಿದ್ದಾರೆ. ಸುಮಾರು ೫೦ ಗಂಟೆಗಳ ಕಾಲದಷ್ಟು ದೃಶ್ಯ ಚಿತ್ರೀಕರಣ(ವೀಡಿಯೋ) ಮಾಡಿದ್ದಾರೆ.

೧೯೯೫ರಲ್ಲಿ ಮುಧೋಳದಲ್ಲಿ ನಡೆದ ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ.

ನಾಗೇಗೌಡ ಜಾನಪದ ಸೇವೆಯನ್ನು, ಸಾಹಿತ್ಯ ಸೇವೆಯನ್ನು, ಪರಿಗಣಿಸಿ ನಾಡಿನ ನಾನಾ ಸಂಘ ಸಂಸ್ಥೆಗಳೂ ಮತ್ತು ಸರಕಾರವೂ ಸನ್ಮಾನ, ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿವೆ. ೧೯೭೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ೧೯೮೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ೧೯೯೦ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್, ೧೯೯೨ರಲ್ಲಿ ಪಂಪ ಪ್ರಶಸ್ತಿ, ೨೦೦೩ರಲ್ಲಿ ನಾಡೋಜ ಗೌರವ ಪ್ರಶಸ್ತಿ ಇವೇ ಮುಂತಾದ ಪ್ರಶಸ್ತಿಗಳು ದೊರಕಿವೆ.

ಇವರ ಅನೇಕ ಗ್ರಂಥಗಳು ಪ್ರಶಸ್ತಿ ಪಡೆದಿವೆ, ನಾಡಿನ ಜನರ ಮನ್ನಣೆಗೆ ಪಾತ್ರವಾಗಿವೆ. ಜಾನಪದತಜ್ಞರಾಗಿ, ಸಾಹಿತಿಗಳಾಗಿ ಇವರು ರಚಿಸಿರುವ ಕೆಲವು ಮುಖ್ಯ ಕೃತಿಗಳು ಹೀಗಿವೆ :

ಜಾನಪದ ಕೃತಿಗಳು : ಪದವವೆ ನಮ್ಮ ಎದೆಯಲ್ಲಿ, ಮೈಲಾರ ಲಿಂಗನ ಕಾವ್ಯ, ಹಾಡಾನ ಬನ್ನಿ ದನಿಯೆತ್ತಿ, ಆನೆ ಬಂತೊಂದಾನೆ, ಗಾದೆಗಳು, ಗ್ರಾಮದೇವತೆ ಮಾರಮ್ಮ, ಸೋಬಾನೆ ಚಿಕ್ಕಮ್ಮನ ಪದಗಳು, ಹೆಳವರು ಮತ್ತು ಅವರ ಕಾವ್ಯಗಳು ಇತ್ಯಾದಿ.

ಕಾದಂಬರಿಗಳು : ದೊಡ್ಡ ಮನೆ, ಸೊನ್ನೆಯಿಂದ ಸೊನ್ನೆಗೆ, ಭೂಮಿಗಿಳಿದು ಬಂದ ಗಂಧರ್ವ, ಕೆನಿಲ್‌ವರ್ತ್

ಪ್ರವಾಸ ಸಾಹಿತ್ಯ :ಪ್ರವಾಸಿ ಕಂಡ ಇಂಡಿಯಾ ಎಂಬ ಹೆಸರಿನಲ್ಲಿ ಹತ್ತು ಸಂಪುಟಗಳಲ್ಲಿ ೨೦೦ಕ್ಕೂ ಹೆಚ್ಚು ವಿದೇಶೀಯರು ಭಾರತದಲ್ಲಿ ಸಂಚರಿಸಿ ಬರೆದಿಟ್ಟ ಬರಹಗಳ ಅನುವಾದ.

ಕವನಸಂಕಲನ :ನಾನಾಗುವೆ ಗೀಜಗನ ಹಕ್ಕಿ, ಕಥೆವ್ಯಥೆ

ಇತರ ಗ್ರಂಥಗಳು : ಸರೋಜಿನಿದೇವಿ(ಜೀವನ ಚರಿತ್ರೆ), ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ(ಅನುವಾದ), ನಾಗಸಿರಿ(ಆತ್ಮ ಕಥೆ), ನನ್ನೂರು, ಬೆಟ್ಟದಿಂದ ಬಟ್ಟಲಿಗೆ.

ಎಚ್.ಎಲ್. ನಾಗೇಗೌಡರು ೨೫-೯-೨೦೦೫ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ–೬೪
ಅಧ್ಯಕ್ಷರು, ಎಚ್.ಎಲ್. ನಾಗೇಗೌಡ
ದಿನಾಂಕ ೩, ೪, ೫ ಜೂನ್ ೧೯೯೫
ಸ್ಥಳ : ಮುಧೋಳ

ಸಮ್ಮೇಳನಾಧ್ಯಕ್ಷರ ವಯೋಮಾನ

ಇಲ್ಲಿ ನಡೆಯುತ್ತಿರುವುದು ೬೪ನೇ ಸಾಹಿತ್ಯ ಸಮ್ಮೇಳನ ಇದಕ್ಕೆ ಮುಂಚೆ ೬೩ ಸಮ್ಮೇಳನಗಳು ಆಗಿಹೋಗಿವೆ. ೬೩ ಮಹಾನುಭಾವರುಗಳು ಹಿಂದಿನ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದಾರೆ. ಅವರಲ್ಲಿ ಕೇವಲ ಸಾಹಿತಿಗಳು, ಘನಪಂಡಿತರಗಳಷ್ಟೇ ಅಲ್ಲ. ನನ್ನಂಥವರೂ ಅಧ್ಯಕ್ಷರಾಗಿದ್ದರು. ೧೯೭೬ರಲ್ಲಿ ಶಿವಮೊಗ್ಗಾದಲ್ಲಿ ನಡೆದ ೪೯ನೆಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀ ಎಸ್.ವಿ. ರಂಗಣ್ಣವರು ತಮ್ಮ ಭಾಷಣದಲ್ಲಿ ಪೀಠಿಕೆಯಾಗಿ ಸಮ್ಮೇಳನದ ಅಧ್ಯಕ್ಷರುಗಳ ವಯಸ್ಸುಗಳ ಮಾಹಿತಿಯನ್ನು ಕೊಟ್ಟಿದ್ದಾರೆ. ೪೬ ಅಧ್ಯಕ್ಷರುಗಳಲ್ಲಿ ೩೪ ಮಂದಿಗೆ ವಯಸ್ಸು ೫೦ರ ಮೇಲೆ, ೯ ಮಂದಿಗೆ ೬೦ರ ಮೇಲೆ, ಮೂವರಲ್ಲಿ ಇಬ್ಬರಿಗೆ ೭೦, ಇನ್ನೊಬ್ಬರಿಗೆ ೭೮, ೭೮ ವರ್ಷದವರೆಂದರೆ ಮೈಸೂರಿನ ಎಂ. ವೆಂಕಟಕೃಷ್ಣಯ್ಯ ಉರುಫ್ ತಾತಯ್ಯನವರು. ರಂಗಣ್ಣನವರಿಗೂ ಅಧ್ಯಕ್ಷರಾದಾಗ ೭೮. ಅಲ್ಲಿಂದೀಚೆಗೆ ಅಧ್ಯಕ್ಷರಾದವರಲ್ಲಿ ೮೦ ಮೀರಿದವರೆಂದರೆ ಡಾ॥ ಶಂಬಾ ಜೋಶಿ ಮತ್ತು ಡಾ॥ ಎ. ಎನ್. ಮೂರ್ತಿರಾವ್ ಈ ಇಬ್ಬರು ಮಹಾನುಭಾವರ ಪಂಕ್ತಿಗೆ ವಯಸ್ಸಿನಲ್ಲಾದರೂ ಸೇರಲಿ ಎಂದು ನನಗೆ ೮೦ ಆಗುವುದಕ್ಕಾಗಿ ಕಾಯುತ್ತಿದ್ದಂತೆ ಕಾಣುತ್ತದೆ. ಅಷ್ಟೇ ಅಲ್ಲ, ಕಾಕತಾಳೀಯ ನ್ಯಾಯವೋ ಎಂಬಂತೆ ಸಾಹಿತ್ಯ ಪರಿಷತ್ತಿಗೆ ೮೦ ಆದ ವರ್ಷ ನಾನು ಸಮ್ಮೇಳನದ ಅಧ್ಯಕ್ಷನಾಗಬೇಕೆ ! ವಾಸ್ತವವಾಗಿ ನಾನು ಸಾಹಿತ್ಯ ಪರಿಷತ್ತಿಗಿಂತ ಮೂರು ತಿಂಗಳು ಹಿರಿಯ.


ಸಮ್ಮೇಳನಾಧ್ಯಕ್ಷರ ನಾಲ್ಕು ಮಾತುಗಳು

ಇನ್ನೊಂದು ವೈಚಿತ್ರವನ್ನು ರಂಗಣ್ಣನವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದೇನೆಂದರೆ ಅಧ್ಯಕ್ಷ ಭಾಷಣಗಳಲ್ಲಿ ಪಲ್ಲವಿಯೋಪಾದಿ ಪುನಃ ಪುನಃ ಕೇಳಿಬರುವ 'ಅಲ್ಪಮತಿ ನಾನು, ಹೊರಿಸಿರುವ ಜವಾಬ್ದಾರಿ ಗುರುಭಾರ. ಅನರ್ಹನನ್ನು ಒಲುಮೆಯಿಂದ ಮನ್ನಿಸಿ' ಎಂಬ ಮಾತುಗಳು.

❖❖

೬೫ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಚೆನ್ನವೀರ ಕಣವಿ



ಪ್ರಸಿದ್ಧ ಕವಿ, ವಿಮರ್ಶಕ ಚೆನ್ನವೀರ ಕಣವಿ ಅವರು ಧಾರವಾಡ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ಸಕ್ರಪ್ಪ-ಪಾರ್ವತವ್ವ ದಂಪತಿಗಳಿಗೆ ೨೮-೬-೧೯೨೮ರಲ್ಲಿ ಜನಿಸಿದರು. ಶಿರುಂಡ, ಗರಗಗಳಲ್ಲಿ ೧೯೪೦-೪೬ರಲ್ಲಿ ಪ್ರಾಥಮಿಕ ಅಭ್ಯಾಸ ಮುಗಿಸಿದ ಮೇಲೆ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ೧೯೫೦ರಲ್ಲಿ ಬಿ.ಎ. ಪದವಿಯನ್ನು, ೧೯೫೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ.ಪದವಿಯನ್ನೂ ಗಳಿಸಿದರು.

೧೯೫೨ರಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯುದ ಪ್ರಸಾರಾಂಗದಲ್ಲಿ ಕಾರ್ಯದರ್ಶಿಯಾಗಿ ಸೇವೆ ಪ್ರಾರಂಭಿಸಿದ ಕಣವಿ ಅವರು ಅನಂತರ ೧೯೫೮ರಲ್ಲಿ ಅದರ ನಿರ್ದೇಶಕರಾದರು.

ಹಲವಾರು ಪ್ರಶಸ್ತಿಗಳು ಕಣವಿ ಅವರ ಸಾಹಿತ್ಯ ಸಾಧನೆಗಾಗಿ ಬಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೧೯೮೧), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೧೯೮೫), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ(೧೯೮೯), ಭಾರತ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಸಂಸ್ಕೃತಿ ವಿಭಾಗದ ಎಮರಿಟಸ್ ಫೆಲೋಷಿಪ್(೧೯೯೬-೯೮), ಪಂಪ ಪ್ರಶಸ್ತಿ(೧೯೯೯), ಇತ್ಯಾದಿ. ೧೯೯೬ರಲ್ಲಿ ೬೫ನೇ ಕನ್ನಡ ಸಾಹಿತ್ಯ ಸಮ್ಮೇಳನ ಹಾಸನದಲ್ಲಿ ಜರುಗಿದಾಗ ಕಣವಿ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು.

ಕಣವಿ ಅವರು ಕವಿತೆ, ವಿಮರ್ಶೆ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಕನ್ನಡ ನಾಡಿನ ಚಳವಳಿಗಳಲ್ಲಿ ಭಾಗವಹಿಸಿದ್ದಾರೆ.

ಕಣವಿ ಅವರ ಕಾವ್ಯಸಂಕಲನಗಳಲ್ಲಿ ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ದೀಪಧಾರಿ, ಮಣ್ಣಿನ ಮೆರವಣಿಗೆ, ಜೀವಧ್ವನಿ, ನಗರದಲ್ಲಿ ನೆರಳು, ಚಿರಂತನದಾಸ ಪ್ರಸಿದ್ಧವಾಗಿವೆ.

ಸಾಹಿತ್ಯ ಚಿಂತನ, ಕಾವ್ಯಾನುಸಂಧಾನ, ಸಮಾಹಿತ, ಸಮತೋಲನ ಇತ್ಯಾದಿ ವಿಮರ್ಶಾ ಗ್ರಂಥಗಳು ಜನಪ್ರಿಯವಾಗಿವೆ.

ಧಾರವಾಡದ ಕಲ್ಯಾಣ ನಗರದ ಚೆಂಬೆಳಕು ನಿವಾಸದಲ್ಲಿ ಕಣವಿ ಅವರು ನಿವೃತ್ತಜೀವನ ನಡೆಸುತ್ತಿದ್ದಾರೆ ಮತ್ತು ಸಾಹಿತ್ಯಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನ-೬೫
ಅಧ್ಯಕ್ಷರು, ಚೆನ್ನವೀರ ಕಣವಿ
ದಿನಾಂಕ ೨೧, ೨೨, ೨೩, ೨೪ ಡಿಸೆಂಬರ್ ೧೯೯೬
ಸ್ಥಳ : ಹಾಸನ

ಸಮ್ಮೇಳನ ನೋಡುವುದೇ ಆನಂದ

ಕವಿ ಪು.ತಿ.ನ ಅವರು ನನಗೆ ಬರೆದ ಅಭಿನಂದನ ಪತ್ರದಲ್ಲಿರುವ ಒಂದು ಮಾತು ಹೀಗಿದೆ; 'ಕನ್ನಡ ನಾಡಿನ ಎಲ್ಲ ಭಾಗಗಳಿಂದಲೂ ಹೊಮ್ಮಿ ಹರಿದು ಬರುವ ಕನ್ನಡಿಗರ ನೆರವಿಯನ್ನು ನೋಡುವುದೇ ಒಂದು ಸಂತೋಷ. ಅದರಲ್ಲೂ ವೇದಿಕೆ ಅಧ್ಯಕ್ಷ ಸ್ಥಾನದಿಂದ ಅವರ ದರ್ಶನ ಇನ್ನೂ ಆನಂದದಾಯವಾದ್ದು'. ಅಂಥ 'ದರ್ಶನ' ದ ಆನಂದವನ್ನು ತಾವೆಲ್ಲರೂ ನನಗೆ ದಯಪಾಲಿಸಿರುವ ಇಂದಿನ ಸಂದರ್ಭದಲ್ಲಿ ೫೨ವರ್ಷಗಳ ಹಿಂದೆ ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ನೋಡಿದ ಮೊಟ್ಟ ಮೊದಲ ಸಾಹಿತ್ಯ ಸಮ್ಮೇಳನದ ನೆನಪಾಗುತ್ತದೆ.

ರಬಕವಿ ಸಮ್ಮೇಳನ

೧೯೪೪ರಲ್ಲಿ ರಬಕವಿಯಲ್ಲಿ ನಡೆದ ಆ (೨೮ನೆಯ) ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದವರು ಧಾರವಾಡದ ಪ್ರೊ. ಶಿ.ಶಿ. ಬಸವನಾಳರು, ಅಂದು ಜೋಳದರಾಶಿ ದೊಡ್ಡನಗೌಡರ ಕಂಚಿನ ಕಂಠದಿಂದ ಹೊಮ್ಮಿದ ಪ್ರಾರ್ಥನೆ ಸುತ್ತಲಿನ ಕಟ್ಟಡಗಳಿಂದ ಪ್ರತಿಧ್ವನಿಗೊಂಡಿತ್ತು, ಒಬ್ಬರು ಮೆಲ್ಲನೆ ಮೇಲೆದ್ದು ಮುಗುಳು ನಗುತ್ತಲೇ ಪ್ರೀತಿ ತುಂಬಿದ ಧ್ವನಿಯಲ್ಲಿ 'ಅಣ್ಣಂದಿರೇ, ತಾಯಂದಿರೆ' ಎಂದು ಸಂಬೋಧಿಸಿ ಕನ್ನಡದ ಬಗ್ಗೆ ಅತ್ಯಂತ ಕಳಕಳಿಯಿಂದ ಮಾತನಾಡಿದ್ದನ್ನು ನಾನು ಮಂತ್ರಮುಗ್ಧನಾಗಿ ಕೇಳಿದೆ. ಅವರೇ ಮಾಸ್ತಿಯವರು ಎಂದು ತಿಳಿದಾಗ ನನಗೆ ನಿಜಕ್ಕೂ ರೋಮಾಂಚನವಾಯಿತು. ಕವಿಗೋಷ್ಠಿಯ ಉದ್ಘಾಟಕರಾಗಿ ಬಿ.ಎಂ.ಶ್ರೀ ಅವರ ಕಾವ್ಯವಾಣಿ ಕಿವಿಗಳನ್ನು ತುಂಬಿತು. ಆಗ ಪ್ರಗತಿಶೀಲ ಸಾಹಿತ್ಯ ಕುರಿತು ಪತ್ರಿಕೆಗಳಲ್ಲಿ ನಡೆಯುತ್ತಿದ್ದ ಮುಖ್ಯವಾಗಿ 'ಉಷಾ ಮಾಸಪತ್ರಿಕೆ' ವಾದ ವಿವಾದವನ್ನು ನಾನು ಗಮನಿಸಿದ್ದನಾದ್ದರಿಂದ ಗೋಕಾಕರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿಶೀಲ ಸಾಹಿತ್ಯಗೋಷ್ಠಿ ಸಹಜವಾಗಿಯೇ ನನ್ನ ಕುತೂಹಲವನ್ನು ಕೆರಳಿಸಿತು. ಆ ಗೋಷ್ಠಿಯಲ್ಲಿ ಅ.ನ.ಕೃ, ತ.ರಾ.ಸು, ಕುಳಕುಂದ ಶಿವರಾಯ (ನಿರಂಜನ) ನಾಡಿಗೇರ ಕೃಷ್ಣರಾಯ, ಅರ್ಚಕ ವೆಂಕಟೇಶ, ಮಾ.ನಾ. ಚೌಡಪ್ಪ ಇವರು ಭಾಗವಹಿಸಿ ಆವೇಶದಿಂದ ಮಾತನಾಡಿದ್ದು ನನಗಿನ್ನೂ ನೆನಪಿದೆ. ಉತ್ತಂಗಿ ಚೆನ್ನಪ್ಪನವರು, ಜಿ.ಪಿ. ರಾಜರತ್ನಂ, ಸಿಂಪಿ ಲಿಂಗಣ್ಣ, ಈಶ್ವರ ಸಣಕಲ್ಲ ಮೊದಲಾದವರು ಬೇರೆ ಬೇರೆ ಗೋಷ್ಠಿಗಳ ಅಧ್ಯಕ್ಷರಾಗಿ, ಉದ್ಘಾಟಕರಾಗಿ ತಮ್ಮ ತಮ್ಮ ವಿಶಿಷ್ಟ ಶೈಲಿಯಲ್ಲಿ ಭಾಷಣ ಮಾಡಿದ್ದನ್ನು ನಾನು ಇಂದಿಗೂ ಮರೆತಿಲ್ಲ. ಮಲ್ಲಿಕಾರ್ಜುನ ಮನಸೂರ ಅವರ ಸಂಗೀತವಂತೂ ರಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು.

ನಾನು ಮೇಲೆ ಹೆಸರಿಸಿದ ಎಲ್ಲಾ ಮಹನೀಯರು, ಇಂದು ಕಣ್ಮರೆಯಾಗಿದ್ದರೂ ತಮ್ಮ ಅಮೂಲ್ಯವಾದ ಸಾಹಿತ್ಯ ಕೃತಿಗಳ ಮೂಲಕ ಜೀವಂತವಾಗಿ ನಮ್ಮಲ್ಲಿ ಉಸಿರಾಡುತ್ತಿದ್ದಾರೆ. ಸ್ಫೂರ್ತಿದಾಯಕವಾದ ಈ ಪ್ರಸಂಗವನ್ನು ಇಲ್ಲಿ ಹೇಳಬೇಕಾಗಿ ಬಂದ ಉದ್ದೇಶವಿಷ್ಟೆ. ಸಾಹಿತ್ಯ ಸಮ್ಮೇಳನ ಬಹಿರಂಗದಲ್ಲಿ, ಸಂಖ್ಯಾ ಬಾಹುಳ್ಯದಿಂದ 'ಜಾತ್ರೆಯ ಸ್ವರೂಪವನ್ನು ಪಡೆದಿದ್ದರೂ ಅಂತರಂಗದಲ್ಲಿ ಸಾಹಿತ್ಯ ಯಾತ್ರೆಯಾಗಿ ಪರಿಣಮಿಸುವುದನ್ನು ಮರೆಯಬಾರದು. ಸಾಹಿತ್ಯ ಪ್ರೇಮಿಗಳ, ವಾಚನಾಸಕ್ತರ ದೊಡ್ಡ ಜನಸಮೂಹ ಸಮ್ಮುಖದಲ್ಲಿಯೂ ಸಾರ್ವಜನಿಕ ಆವೇಶ, ಭಾವಿಕ ಪ್ರತಿಕಿಯೆಗಳನ್ನು ದೂರವಿಟ್ಟು, ಮೌಲಿಕ ಚರ್ಚೆ ನಡೆಸುವುದು ಅಸಾಧ್ಯವೇನೂ ಅಲ್ಲ. ಅಸಾಹಿತ್ಯಕವಾದ ರಾಜಕೀಯ ಒತ್ತಡಗಳಿಗೆ ಮಾತ್ರ ಪರಿಷತ್ತು ಮಣಿಯದಂತಿದ್ದರೆ ಸಾಕು. ಅದರ ಗೌರವ ಹೆಚ್ಚುವುದರಲ್ಲಿ ಸಂದೇಹವಿಲ್ಲ. ನಿಜವಾದ, ಜೀವಂತವಾದ ಸಾಹಿತ್ಯದ ಕೆಲಸಗಳಿಗೂ ಇದರಿಂದ ದಾರಿ ಸುಗಮಗೊಳ್ಳಬಹುದೆಂದು ನಾನು ಆಶಿಸಿದ್ದೇನೆ.

ಪರಿಷತ್ತು ಕನ್ನಡಿಗರ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ನಾಡಿನ ಬಹುದೊಡ್ಡ ಪ್ರಾತಿನಿಧಿಕ ಸಂಸ್ಥೆ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ತರುವಾಯ ಸಮಸ್ತ ಕರ್ನಾಟಕದ ವ್ಯಾಪ್ತಿಯುಳ್ಳ ಸಂಸ್ಥೆಯೆಂದರೆ ಇದೊಂದೇ. ಇದರ ಕಾರ್ಯರಂಗ ಹಾಗೂ

ಹೊಣೆಗಾರಿಕೆ ಹರಡಿಕೊಂಡು ಬಂದಂತೆ, ತಮ್ಮನ್ನು 'ತಾಯ್ನುಡಿಯ ತಮ್ಮಡಿ' ಎಂದು ಕರೆದುಕೊಂಡು ನಾಡಿನ ಹಿರಿಯರು ಕನ್ನಡ ನಾಡು, ನುಡಿ, ದುಡಿ ಸಂಸ್ಕೃತಿಗಳ ಬೆಳವಣಿಗಾಗಿ ಹಿರಿದಾದ ಸೇವೆಯನ್ನು ಸಲ್ಲಿಸಿ, ನುಡಿಯ ಮಕ್ಕಳನ್ನು ಒಂದಾಗಿಸಿ ಸೌಹಾರ್ದದಿಂದ ಬೆಳೆಸಿ, ಕನ್ನಡಿಗರೆಲ್ಲರ ಸಾಂಸ್ಕೃತಿಕ ಆಶೋತ್ತರಗಳನ್ನು ರೂಪಿಸುವಲ್ಲಿ ತಮ್ಮ ಆತ್ಮಶಕ್ತಿಯನ್ನು ಈ ಸಂಸ್ಥೆಗೆ ಧಾರೆಯೆರೆದು ಇದರ ಕ್ರಿಯಾಶಕ್ತಿಯನ್ನು ಹೆಚ್ಚಿಸುತ್ತ ಬಂದಿದ್ದಾರೆ. ಆ ಎಲ್ಲಾ ಹಿರಿಯ ಚೇತನಗಳನ್ನು ಸ್ಮರಿಸಿಕೊಂಡು ಹೊಸ ಕಾಲದ ಅಗತ್ಯಗಳನ್ನು ಅರಿತುಕೊಂಡು ಎಲ್ಲರೂ ಒಂದಾಗಿ ಮುಂದುವರಿಯೋಣ.

ಶತಮಾನೋತ್ಸವ ಮತ್ತು ಪರಿಷತ್ತು

ಕನ್ನಡ ಸಾಹಿತ್ಯದ ವಿವಿಧ ಕ್ಷೇತ್ರಗಳಿಗೆ ಮಹತ್ವದ ಕೊಡುಗೆ ಸಲ್ಲಿಸಿರುವ ಮೂವರು ಮಹನೀಯರ ಶತಮಾನೋತ್ಸವವನ್ನು ಆಚರಿಸುವ ಅವಕಾಶ ಈ ವರ್ಷ ಕನ್ನಡಿಗರಿಗೆ ಒದಗಿದೆ. ಅವರೆಂದರೆ ಕನ್ನಡ ಮತ್ತು ಮರಾಠಿ ಸಂಸ್ಕೃತಿಗಳ ಹಿಂದಿನ ಅವಿಭಕ್ತತತ್ವನ್ನು ಕಂಡು ಹಿಡಿದ ಹಾಗೂ ಪ್ರಜ್ಞಾಪ್ರಕಾಶ ಪಾತಳಿಯ ನೆಲೆಯಲ್ಲಿ ಕಂನಾಡ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಮತ್ತು ಮಾನವ ಸಂಸ್ಕೃತಿಗಳ ಬೆಳವಣಿಗೆಯನ್ನು ವಿವರಿಸಿದ ಶಂಬಾ ಅವರು ಪ್ರಖರವಾದ ಸಂಶೋಧನ ಪ್ರಯತ್ನದಿಂದ ಕನ್ನಡ ಚಿಂತನ ಲೋಕಕ್ಕೆ ಹೊಸ ಬೆಳಕು ನೀಡಿದವರು. ಎರಡನೆಯದಾಗಿ, 'ವಿಶ್ವ ಕರ್ನಾಟಕ'ದ ಮೂಲಕ ಪ್ರಭುತ್ವದ ವಿರುದ್ಧ ತತ್ವಬದ್ಧವಾದ ಪ್ರತಿರೋಧವೊಡ್ಡಿದ. ಇತಿಹಾಸ ಸಂಶೋಧನೆಗಳಲ್ಲಿ ವಿಶೇಷ ಆಸಕ್ತಿ ವಹಿಸಿ ಗಣನೀಯ ಕಾರ್ಯಗೈದ ತಿ.ತಾ. ಶರ್ಮರು ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ ಮಹತ್ವದ ಪಾತ್ರವಹಿಸಿದವರು. ಮೂರನೆಯದಾಗಿ ಬರೆದಷ್ಟು ಕಾದಂಬರಿಗಳನ್ನು ಒಂದೊಂದು ಮಾದರಿಯಾಗಿ ನಿಲ್ಲಿಸಿದ ಸಾಹಿತ್ಯದ ಸತ್ವಕ್ಕೆ ಎರವಾಗದಂತೆ ಬೌದ್ಧಿಕತೆಯನ್ನು ಬಳಸಿ ಪೌರಾಣಿಕ ಕಾದಂಬರಿಗಳ ಮೂಲಕ ತಮ್ಮ ಕಲ್ಪನಾ ಸೃಷ್ಟಿಯ ಮಹತಿಯನ್ನು ಸಾಧಿಸಿದ ದೇವುಡು ಅವರು.

ಈ ಎಲ್ಲಾ ಸಾಹಿತ್ಯ ಶ್ರೇಷ್ಠರ ಜನ್ಮ ಶತಮಾನೋತ್ಸವವನ್ನು ಸಾರ್ಥಕಗೊಳಿಸುವಂತೆ ಆಚರಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಮೊದಲುಗೊಂಡ ಇತರ ಸಂಘ ಸಂಸ್ಥೆಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಮುಖ ಪಾತ್ರವಹಿಸಿ ಈ ಲೇಖಕರ ಅಪ್ರಕಟಿತ ಕೃತಿಗಳ ಹಾಗೂ ಸಮಗ್ರ ಗ್ರಂಥಗಳ ಪ್ರಕಟಣೆಯ ಮುಲಕ ಅದನ್ನು ಸಾರ್ಥಕಗೊಳಿಸಬೇಕು.

ಕನ್ನಡ ನಿಘಂಟು

ಕನ್ನಡ-ಕನ್ನಡ ನಿಘಂಟಿನ ಎಂಟನೆಯ ಸಂಪುಟದೊಂದಿಗೆ ಬಹು ದೊಡ್ಡ ಯೋಜನೆಯೊಂದನ್ನು ಪೂರ್ಣಗೊಳಿಸಿರುವ ಕನ್ನಡ ಸಾಹಿತ್ಯ ಪರಿಷತ್ತು ಈ ದಿಸೆಯಲ್ಲಿ ಹಾಕಿಕೊಂಡಿರುವ ಹೊಸ ಯೋಜನೆಗಳು ತುಂಬ ಆಶಾದಾಯಕವಾಗಿವೆ. ಎಂಟೂ ಸಂಪುಟಗಳ ಪರಿಷ್ಕರಣ ಯೋಜನೆಯನ್ನು ಪರಿಷತ್ತು ಈಗ ಕೈಗೆತ್ತಿಕೊಂಡಿದ್ದು, ಇಂಗ್ಲಿಷ್ ಸಂವಾದಿ ಪದಗಳನ್ನು ಕೊಡುವ ಮೂಲಕ ಕನ್ನಡ-ಇಂಗ್ಲಿಷ್ ನಿಘಂಟನ್ನಾಗಿಸಿ ಇದರ ವ್ಯಾಪ್ತಿಯನ್ನು ವಿಸ್ತಾರಗೊಳಿಸಲಿದೆ. ಇದರೊಂದಿಗೆ ಜಿಜಿ ಶಬ್ದಕೋಶ ಹಾಗೂ ಶಕಟರೇಪ ಶಬ್ದಕೋಶಗಳೆರಡೂ ಪ್ರತ್ಯೇಕವಾಗಿ ಸಿದ್ಧಗೊಂಡಿದ್ದು ಹಳಗನ್ನಡ ಅಭ್ಯಾಸಕ್ಕೆ ಇವು ತುಂಬ ಪ್ರಯೋಜನಕಾರಿಯಾಗಿವೆ.


ಕಾರ್ಯಕರ್ತರ ಪಡೆಬೇಕು?

ಮಾಸ್ತಿಯವರು ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಕನ್ನಡದ ಕೆಲಸವನ್ನು ಕುರಿತು ಮಾತನಾಡುತ್ತ ಒಮ್ಮೆ ಹೀಗೆ ಅಂದಿದ್ದರಂತೆ, 'ನನಗೆ ಒಂದು ನೂರು ಜನ ಒಳ್ಳೇ ಕಾರ್ಯಕರ್ತರನ್ನು ಕೊಡಿ. ಕನ್ನಡದಲ್ಲಿ ಒಂದು ಕ್ರಾಂತಿಯನ್ನೇ ಮಾಡಿ ತೋರಿಸುತ್ತೇನೆ'. ಕನ್ನಡದ ಬಗ್ಗೆ ನಿಜವಾದ ಕಳಕಳಿಯುಳ್ಳ ಅಂಥ ಕಾರ್ಯಕರ್ತರ ಒಂದು ಪಡೆಯನ್ನೇ ನಿರ್ಮಿಸಿಕೊಂಡ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಂಘ ಸಂಸ್ಥೆಗಳು ಒಟ್ಟಾಗಿ ಕಾರ್ಯೋನ್ಮುಖವಾಗುವ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಾಗಿದೆ.

❖ ❖

೬೬ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಕಯ್ಯಾರ ಕಿಞ್ಞಣ್ಣ ರೈ



ಗಡಿನಾಡಿನಲ್ಲಿ ಕನ್ನಡದ ದನಿಯಾಗಿ, ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಸತತವಾಗಿ ಹೋರಾಟ ನಡೆಸಿದ ಶಿಕ್ಷಕ, ಸಾಹಿತಿ, ಸ್ವಾತಂತ್ರ್ಯ ಹೋರಾಟಗಾರ, ಕರ್ನಾಟಕ ಏಕೀಕರಣದ ಮುಂದಾಳು, ಶತಾಯುಷಿ ಕಯ್ಯಾರ ಕಿಞ್ಞಣ್ಣರೈ ಅವರು ಕಾಸರಗೋಡು ತಾಲ್ಲೂಕಿನ ಪೆರಡಾಲದಲ್ಲಿ ದುಗ್ಗಪ್ಪ ರೈ ಮತ್ತು ಶ್ರೀಮತಿ ಕಯ್ಯಾರ ದೈಯ್ಯ ರೈ ದಂಪತಿಗಳ ಮಗನಾಗಿ ೮-೬-೧೯೧೫ರಲ್ಲಿ ಜನಿಸಿದರು. ನೀರ್ಚಾಲಿನ ಮಹಾಜನ ಸಂಸ್ಕೃತ ಕಾಲೇಜಿನ ಪ್ರಾಂತ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪ್ರಾರಂಭಿಸಿದರು. ಅನಂತರ ಕನ್ನಡ ಮತ್ತು ಸಂಸ್ಕೃತಗಳಲ್ಲಿ ವಿದ್ವಾನ್ ಪದವಿ ಗಳಿಸಿದರು. ಪೆರಡಾಲದ ನವಜೀವನ ಪ್ರೌಢಶಾಲೆಯಲ್ಲಿ ೩೨ ವರುಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದರು. ಶಿಕ್ಷಕರಾಗಿದ್ದಾಲೇ ಬಿ.ಎ. ಪದವಿಯನ್ನು, ಅಧ್ಯಾಪಕ ತರಬೇತಿಯನ್ನು ಪಡೆದರು. ಸ್ವಾತಂತ್ರ್ಯ ಸಂಗ್ರಾಮದ ಕಾಲಘಟ್ಟದಲ್ಲಿ ಪತ್ರಿಕೋದ್ಯಮಿಯಾಗಿ ಮಂಗಳೂರಿನ ಪ್ರಸಿದ್ಧ ಪತ್ರಿಕಾ ಕಚೇರಿಯಲ್ಲಿ ಬರವಣಿಗೆಗೆ ತೊಡಗಿದ್ದ ಇವರು ರಾತ್ರಿವೇಳೆ ಸ್ವಾತಂತ್ರ್ಯ ಹೋರಾಟಗಾರರಾಗಿ ಸಾಹಿತ್ಯ ಒದಗಿಸುತ್ತಿದ್ದರು. ಗಾಂಧೀಜಿಯ ಕರೆಗೆ ಓಗೊಟ್ಟು ತಮ್ಮ ಜಮೀನಿನಲ್ಲಿ ಕೃಷಿಕರಾಗಿ ಕಾಯಕ ಮಾಡುತ್ತಿದ್ದರು. ೧೯೮೬-೮೭ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು.

ಕಯ್ಯಾರರ ಸಾಹಿತ್ಯ ಸೇವೆ, ಕೃಷಿ ಕಾಯಕ. ಸ್ವಾತಂತ್ರ್ಯ ಹೋರಾಟ ಸಾಮಾಜಿಕ ಸೇವೆಯನ್ನು ಗೌರವಿಸಿ ಹಲವಾರು ಪ್ರಶಸ್ತಿ ಗೌರವಗಳನ್ನು ಅವರಿಗೆ ಸಂಘ-ಸಂಸ್ಥೆಗಳು, ಸರಕಾರ ನೀಡಿವೆ. ೧೯೬೯ರಲ್ಲಿ ಶ್ರೇಷ್ಠ ಅಧ್ಯಾಪಕ ರಾಷ್ಟ್ರ ಪ್ರಶಸ್ತಿ, ೧೯೬೯-೭೦ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೮೫ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಷನ್ ಫೆಲೋಷಿಪ್, ಬೆಂಗಳೂರಿನ ಕನ್ನಡ ಸಂಘಗಳ ಸನ್ಮಾನ. ಹಂಪಿ ವಿಶ್ವವಿದ್ಯಾಲಯದ ನಾಡೋಜ ಗೌರವ, ಮಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ. ೬೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಂಗಳೂರಿನಲ್ಲಿ ೧೯೯೭ರಲ್ಲಿ ನಡೆದಾಗ ಅದರ ಅಧ್ಯಕ್ಷತೆ, ೧೯೬೯ರಲ್ಲಿ ಅಖಿಲ ಭಾರತ ತುಳು ಸಮ್ಮೇಳನದ ಸನ್ಮಾನ ಇವರಿಗೆ ಲಭಿಸಿದೆ. ೨೦೧೩ರಲ್ಲಿ ಪಂಪ ಪ್ರಶಸ್ತಿಯನ್ನು ಸರಕಾರ ಇವರಿಗೆ ನೀಡಿತು.

ದೇಶಪ್ರೇಮಿ, ಖಾದಿಧಾರಿ, ಕೃಷಿಕ, ಅಧ್ಯಾಪಕ, ಸಾಹಿತಿ, ಹೋರಾಟಗಾರ ಕಯ್ಯಾರ ಕಿಞ್ಞಣ್ಣರೈ ಅವರು ನಾನಾ ಬಗೆಯ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಅವರ ಮುಖ್ಯವಾದ ಕೆಲವು ಕೃತಿಗಳು ಹೀಗಿವೆ :

ಕವನಸಂಕಲನಗಳು :ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಪಂಚಮಿ, ಶತಮಾನದ ಗಾನ, ಪ್ರತಿಭಾ ಪಯಾಸ್ವಿನಿ, ಗಂಧವತೀ ಇತ್ಯಾದಿ.

ತುಳು ಭಾಷೆಯ ಎನ್ನಪ್ಪೆ ತುಳುವಪ್ಪೆ ಕವನಸಂಕಲನ.

ಅನುವಾದಗಳು :ಕುಮಾರನ್ ಆಶಾನ್ ಅವರ ಖಂಡಕಾವ್ಯ ಅನುವಾದ, ಮಲೆಯಾಳಂ ಸಾಹಿತ್ಯ ಚರಿತ್ರೆಯ ಅನುವಾದ.

ಕಥಾಸಂಗ್ರಹಗಳು :ಲಕ್ಷ್ಮೀಶನ ಲಲಿತ ಕಥೆಗಳು, ಅನ್ನದೇವರು ಮತ್ತು ಇತರ ಕತೆಗಳು.

ಜೀವನಚರಿತ್ರೆಗಳು : ಪರಶುರಾಮ, ಎಬಿಶೆಟ್ಟಿ, ಕಾರ್ನಾಡು ಸದಾಶಿವರಾಮ್, ನಾರಾಯಣ ಕಿಲ್ಲೆ ಸಾಹಿತ್ಯ ಸಾಧನೆ.

ಪದ್ಯಗಳು : ಕನ್ನಡಪಾಠ ಮಾಲೆ ೮ ಭಾಗಗಳು, ಮಕ್ಕಳ ಪದ್ಯ ಮಂಜರಿ ಭಾಗ ೧, ವ್ಯಾಕರಣ ಮತ್ತು ಪ್ರಬಂಧ ಕುರಿತು ೪ ಕೃತಿಗಳು.

ಆತ್ಮಕಥನ : ದುಡಿತವೇ ನನ್ನ ದೇವರು, ನಾಟಕ : ವಿರಾಗಿಣಿ ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೬೬
ಅಧ್ಯಕ್ಷರು, ಕಯ್ಯಾರ ಕಿಞ್ಞಣ್ಣ ರೈ
ದಿನಾಂಕ ೧೧, ೧೨, ೧೩, ೧೪ ಡಿಸೆಂಬರ್ ೧೯೯೭
ಸ್ಥಳ : ಮಂಗಳೂರು

ಅಖಿಲ ಭಾರತ ವ್ಯಾಪ್ತಿಯ ಸಮ್ಮೇಳನ

ಜಗತ್ತಿನ ಸಕಲ ಭಾಷೆಗಳ ಉತ್ಪತ್ತಿಯೂ ನಿಸರ್ಗ ಸಹಜ ಸ್ಫೂರ್ತಿಯಿಂದ ಒಂದೇ ತೆರನ ನಿಯಮದಂತೆ, ಭಾವನೆಗಳ ಭಿನ್ನತೆಗೆ ಅನುಗುಣವಾಗಿ ಆಗಿದೆ ಎಂದು ತಿಳಿದುಕೊಂಡಲ್ಲಿ, ವಿಶ್ವಮಾನವ್ಯ ವಿಶಾಲ ಸಂಸ್ಕೃತಿ ನಮ್ಮಲ್ಲಿ ಉಂಟಾಗುವುದು: ವಾಗ್ದೇವಿ 'ಸರ್ವಭಾಷಾಮಯಿದೇವಿ' ಎಂಬ ಕನ್ನಡ ವೈಯಾಕರಣಿಯ ವಾಣಿ ಉತ್ತಮ ಆದರ್ಶ ತೋರುವ ಮಂತ್ರವಾಣಿಯಂತಿದೆ. ಈ ಮಹಾ ಸಮ್ಮೇಳನ, ಅಖಿಲ ಭಾರತ ವ್ಯಾಪ್ತಿಯದ್ದಾಗಿದ್ದು. ದೇಶ ವಿದೇಶಗಳಿಂದಲೂ ಧೀಮಂತರು ಆಗಮಿಸಿದ್ದೀರಿ ಎಂಬುದರಿಂದ ನಿಮ್ಮೆಲ್ಲರ ಉದಾರ ಅವಗಾಹನೆಗಾಗಿ ಪ್ರಾರಂಭದಲ್ಲಿ ಈ ಪ್ರಸ್ತಾವನೆಯನ್ನು ಮಾಡಲಾಗಿದೆ. 'ಮನುಷ್ಯಜಾತಿ ತಾನೊಂದು ವಲಂ' ಎಂಬ ಆದಿಕವಿ ಪಂಪನ ಸೂಕ್ತಿಗೂ ಈ ವಿಚಾರಧಾರೆ ಅನ್ವಯಿಸುತ್ತದೆ.

ಪುಸ್ತಕಕೊಳ್ಳುವ ಸಂಸ್ಕೃತಿ ಬೆಳೆಸೋಣ

ಈ ಸಮಸ್ಯೆಯನ್ನು ಕನ್ನಡ ಹಿತಚಿಂತಕರು ರಚನಾತ್ಮಕ ರೀತಿಯಲ್ಲಿ ಪರಿಹರಿಸಬೇಕು. ಈ ಬಗ್ಗೆ ಒಂದು ಸಲಹೆ ತಮ್ಮೆಲರ ಮುಂದಿಡಲು ಅನುಮತಿ ಯಾಚಿಸುತ್ತೇನೆ.

ಕೇರಳದಲ್ಲಿ ಕಾರ್ಮಿಕರೆಂಬವರೂ ದಿನನಿತ್ಯ ಪತ್ರಿಕೆ ಕೊಂಡು ಓದುತ್ತಾರೆ: ಹೊಸ ಪುಸ್ತಕಗಳು ಪ್ರಕಟವಾದಾಗ ಪಡೆದು ಓದುವುದು ಅವರ ನಿತ್ಯದ ಅಭ್ಯಾಸಗಳಲ್ಲಿ ಒಂದು. ಕನ್ನಡಿಗರೂ ಪತ್ರಿಕೆಗಳನ್ನು ಪುಸ್ತಕಗಳನ್ನೂ ಓದುತ್ತಾರೆ. ವಾಚನಾಲಯಗಳಿಂದಲೋ ಪುಸ್ತಕ ಭಂಡಾರಗಳಿಂದಲೋ ಓದುವವರು ಹೆಚ್ಚು. ಇನ್ನು ಕೆಲವರು, ಸ್ವತಃ ಕೊಂಡು ಓದಲು ಶಕ್ತರಿದ್ದರೂ ಬೇರೆಯವರಿಂದ ಕೇಳಿ ಪಡೆದು ಓದಿ ಮರಳಿಸುತ್ತಾರೆ. ಈ ಪ್ರವೃತ್ತಿ ನಿಲ್ಲಬೇಕು: ಅದಕ್ಕೆ ಒಂದು ಸೂಚನೆಯೆಂದರೆ, ಪ್ರತಿಮನೆಯಲ್ಲೂ ಅವರವರ ಅಭಿರುಚಿಗೆ ತಕ್ಕಂತಹ ವಿಷಯಗಳ ಕನ್ನಡ ಪುಸ್ತಕಗಳನ್ನು ಪಡೆದು ಒಂದೊಂದು ಪುಸ್ತಕಭಂಡಾರ ಪ್ರಾರಂಭಿಸಬೇಕು. ಒಂದೊಂದು ಕನ್ನಡ ದೈನಿಕ, ವಾರಿಕ, ಪಾಕ್ಷಿಕ, ಮಾಸಿಕಗಳನ್ನಾದರೂ ಪ್ರತಿಮನೆಗೂ ತರಿಸಬೇಕು. ಸಾಕಷ್ಟು ಮಂದಿ ಶ್ರೀಮಂತರೂ ಧೀಮಂತರೂ ಇದ್ದಾರೆ. ಈ ರಚನಾತ್ಮಕ ಸಾಹಿತ್ಯಿಕ ಆಂದೋಲನವನ್ನು ಇಂದು ಕೈಗೊಳ್ಳತಕ್ಕದ್ದಿದೆ. ಅದರಿಂದ ಕನ್ನಡಿಗರ ಜ್ಞಾನ ಭಂಡಾರ, ಸಂಸ್ಕೃತಿ ಸಂಪತ್ತು ಹೆಚ್ಚುವುದಲ್ಲದೆ ಇಡೀ ಕುಟುಂಬದ ಸಂಸ್ಕೃತಿ ಸಮುನ್ನತಿಯೂ ಸಾಧಿತವಾಗಿವುದು. ಇಂತಹ ಒಂದು ಜನಾಂದೋಲನ ಈ ಸಮ್ಮೇಳನದ ಸುಮೂಹರ್ತ ಕಾಲದಿಂದಲೆ ಪ್ರಾರಂಭವಾಗಲಿ. ಸಮ್ಮೇಳನ ಸಭಾಮಂಟಪದ ಸುತ್ತು ಶೋಭಿಸುತ್ತಿರುವ ಪುಸ್ತಕ ಮಾರಾಟದ ಮಳಿಗೆಗಳಲ್ಲಿರುವ ಉತ್ತಮ ಗ್ರಂಥಗಳೆಲ್ಲವೂ ಮಾರಾಟವಾಗುವ ಚಾರಿತ್ರಿಕ ದಾಖಲೆ ಇಲ್ಲಿಂದಲೇ ತೊಡಗಲಿ ಎಂದೂ ಅರಿಕೆಮಾಡಿಕೊಳ್ಳುತ್ತೇನೆ. ಇದು ಪರೋಪಕಾರ ತ್ಯಾಗವಲ್ಲ; ಆಶೋದ್ಧಾರ, ಕುಟುಂಬ, ಸಂತಾನದ ಏಳಿಗೆಯ ಮಾರ್ಗ. ಈ ಸಂದರ್ಭದಲ್ಲಿ ಕರ್ನಾಟಕ ಸರಕಾರ ದೊಡನೆಯೂ ನನ್ನ ವಿನಂತಿಯೊಂದಿದೆ; ಕನ್ನಡದಲ್ಲಿ ಪ್ರಕಟವಾಗುವ ಉತ್ತಮ ಸಾಹಿತ್ಯ ಕೃತಿಗಳನ್ನು ರಾಜ್ಯದ ಎಲ್ಲ ಪುಸ್ತಕ ಭಂಡಾರಗಳಿಗೂ ಸರಕಾರ ಒದಗಿಸುವ ವ್ಯವಸ್ಥಿತ ಕಾರ್ಯಕ್ರಮ ಕೈಗೊಳ್ಳಬೇಕು. ನನ್ನ ಸೂಚನೆಗಳು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರತ್ಯಕ್ಷವಾಗಿಯೇ ಸಂಬಂಧಿಸಿದವುಗಳಾದುದರಿಂದ ಸಮಸ್ತರೂ ಸಂಪೂರ್ಣ ಮನಸ್ಸಿನಿಂದ ಸಹಕರಿಸು ವಂತಾಗಲೂ ಒಂದು ನೈತಿಕ ಅಂದೋಲನ ಪ್ರಾರಂಭಿಸತಕ್ಕದಿದೆ. ಅದರ ಯಶಸ್ಸಿಗೆ ಇಂದು ಇಲ್ಲಿಯೇ ಪ್ರತಿಜ್ಞಾಬದ್ಧರಾಗಿ ನಾಡು-ನುಡಿಗಳ ಏಳಿಗೆಯು ಪವಿತ್ರಕಾರ್ಯದಲ್ಲಿ ಪಾಲ್ಗೊಳ್ಳೋಣ ಎಂದು ಪ್ರಾರ್ಥಿಸುತ್ತೇನೆ.

ಕಾಸರಗೋಡು ಸಮ್ಮೇಳನ

ಶತಮಾನಗಳ ತನಕವೂ ದಾಸ್ಯದ ಕೆಸರಲ್ಲಿ ಅದ್ದಿ ಹೋಗಿದ್ದ ನಮ್ಮ ರಾಷ್ಟ್ರ ಗಾಂಧೀಜಿಯಂತಹವರ ನೇತೃತ್ವದಲ್ಲಿ ಸ್ವತಂತ್ರವಾಯಿತು. ಸ್ವಾತಂತ್ರ್ಯ ಸಂಗ್ರಾಮದ ಆ ಸಂದರ್ಭದಲ್ಲಿಯೇ ಭಾಷಾಮೂಲವಾದ ರಾಜ್ಯರಚನೆಯಾಗಬೇಕೆಂಬ

ಸಂಕಲ್ಪದಿಂದ ರಚಿಸಿದ ಸಮಿತಿ ಅನುಕೂಲ ವರದಿಯೊಪ್ಪಿಸಿತು. ಆಡಳಿತಭಾಷೆ, ಕೋರ್ಟು ಕಚೇರಿಗಳ ವ್ಯವಹಾರ, ಸಾಮಾನ್ಯ ಜನತೆಗೂ ಮನದಟ್ಟಾಗುವಂತೆ ಆಗಬೇಕೆಂಬುದು ಆ ಬಗ್ಗೆ ಭಾಷಾ ರಾಜ್ಯವಾಗಬೇಕೆಂದು ದೇಶಧುರೀಣರು ನಿರ್ಧರಿಸಿದರು. ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು, ರಂಗನಾಥ ದಿವಾಕರರು, ಕೋಟ ರಾಮಕೃಷ್ಣ ಕಾರಂತರು, ಜಿನರಾಜ ಹೆಗ್ಗಡೆಯವರು, ನಿಜಲಿಂಗಪ್ಪನವರು ಇಂತಹ ರಾಷ್ಟ್ರನಾಯಕರೇ ಏಕೀಕರಣದ ಮುಂದಾಳುಗಳೂ ಆದರು. ಇಂದಿಗೆ ಐವತ್ತು ವರ್ಷಗಳ ಹಿಂದೆ ದೇಶ ಸ್ವತಂತ್ರವಾಯಿತು. ದೇಶಧುರೀಣರು ಸಮ್ಮತಿಸಿದಂತೆ ಭಾಷಾರಾಜ್ಯ ರಚನೆಯಾಗಲಿಲ್ಲವೆಂದು ಆಂಧ್ರದ ಪೊಟ್ಟಿ ಶ್ರೀರಾಮಲು ಆತ್ಮಬಲಿದಾನವಿತ್ತರು. ಅದರಿಂದಾಗಿ, ಆ ಕೂಡಲೇ ಆಂಧ್ರಪ್ರಾಂತ ನಿರ್ಮಾಣವಾಯಿತು. ಅದೇ ವರ್ಷ ಕಾಸರಗೋಡಿನಲ್ಲೇ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕದ ಹಿರಿಯ ನೇಕಾರರೆಲ್ಲರೂ ಏಕಕಂಠದಿಂದ ಏಕೀಕರಣ ಆಗಲೇಬೇಕೆಂಬ ಘೋಷಣೆ ಮಾಡಿದರು. ಕೇಂದ್ರ ಸರಕಾರ, ಫಜಲಾಲಿ ಆಯೋಗ ನೇಮಿಸಿ, ಅದರ ವರದಿಯಂತೆ ಸಮಸ್ತ ಭಾರತದಲ್ಲಿ ಭಾಷಾ ಮೂಲ ರಾಜ್ಯಗಳ ರಚಿತವಾದವು; ಹತ್ತಾರು ಆಡಳಿತಗಳಲ್ಲಿ ಹರಿದುಹಂಚಿ ಹೋಗಿದ್ದ ಕರ್ನಾಟಕವೂ ಏಕೀಕೃತವಾಗಿ ಜನತೆಯ ಇಚ್ಛೆಗೆ ಮನ್ನಣೆ ದೊರೆತಂತಾಯಿತು.

ಕರ್ನಾಟಕದ ಹೊರಗೆ ಘಟಕಗಳಾಗಲಿ

ಸ್ವಾತಂತ್ರ್ಯವು ದೊರೆತು ಏಕೀಕರಣವಾದ ಈ ಅವಕಾಶದಲ್ಲಿ ಯಾವುದೇ ದೌರ್ಬಲ್ಯವನ್ನು ಕಿತ್ತೊಗೆವ ಸಾಮರ್ಥ್ಯ ಕನ್ನಡಿಗರಲ್ಲಿ ಮೂಡಿಬರಬಹುದು ಎಂದು ನಾನು ಭರವಸೆಯುಳ್ಳವನು. 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ ಬಾಧಿಪ್ಪಕಲಿಗೆ ಕಲಿಯುಗ ವಿಪರಿತನ್' ಎಂಬ ಕನ್ನಡಿಗನ ಕುರಿತಾದ ಪ್ರಾಚೀನ ಶಾಸನ ಉಲ್ಲೇಖದಂತೆ, ಕನ್ನಡಿಗರು ಜನ್ಮತಃ ಕೆಲವೊಂದು ಅರ್ಹತೆಯುಳ್ಳವರು. ಇಂದು ಮುಂಬಯಿ, ಚೆನ್ನೈ, ದೆಹಲಿ ಇಂತಹ ಕೇಂದ್ರ ನಗರಗಳಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಕನ್ನಡದ ಕೀರ್ತಿಯನ್ನು ಎತ್ತಿಹಿಡಿಯುತ್ತಿದ್ದಾರೆ. ಅಲ್ಲಿನ ಅನ್ಯಭಾಷಿಕರೊಂದಿಗೆ ಸಮರಸವಾಗಿ ಬೆರೆತು ಕನ್ನಡತನ ಬೆಳೆಸಿಕೊಳ್ಳುತ್ತಿರುವುದು ಅಭಿನಂದನೀಯ. ಮುಂಬಯಿಗೆ ಹೋದಲ್ಲಿ ನಾವು ಕರ್ನಾಟಕ ರಾಜ್ಯದ ಒಂದು ನಗರಕ್ಕೆ ಹೋದಂತೆಯೂ ನಮಗನ್ನಿಸುತ್ತದೆ. ಅಷ್ಟು ಮಂದಿ ಕನ್ನಡಿಗರು, ಕನ್ನಡ ಸಂಸ್ಥೆಗಳು, ಪತ್ರಿಕೆಗಳೆಲ್ಲವೂ ಅಲ್ಲಿವೆ. ಅಲ್ಲಿ ಕನ್ನಡವನ್ನು ಅಭಿಮಾನದಿಂದ ಅಭ್ಯಸಿಸುತ್ತಿದ್ದಾರೆ. ಕನ್ನಡ ವಿದ್ವಾಂಸರು, ಕವಿಗಳು, ಕತೆಗಾರರು, ಲೇಖಕರು ಬಹುಮಂದಿ ಅಲ್ಲಿರುವರು. ಹೊರರಾಜ್ಯಗಳಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಕನ್ನಡ ಸಂಘ ಸಂಸ್ಥೆಗಳು ಚಟುವಟಿಕೆ ನಡೆಸುತ್ತಿವೆ. ಹೀಗೆ ದೇಶ ವಿದೇಶಗಳಲ್ಲಿ ಕನ್ನಡ ಬಾವುಟವನ್ನು ಎತ್ತಿ ಹಿಡಿದಿರುವ ಕನ್ನಡಿಗರನ್ನು ನಾವು ಮನಸಾ ಅಭಿನಂದಿಸಬೇಕು. ಕರ್ನಾಟಕ ಸರ್ಕಾರವೂ ಅವರನ್ನು ಪ್ರೋತ್ಸಾಹಿಸಬೇಕು. **ಕನ್ನಡ ಸಾಹಿತ್ಯ ಪರಿಷತ್ತು ಅಲ್ಲೆಲ್ಲಾ ಸದಸ್ಯರನ್ನು ನೋಂದಾಯಿಸುವುದಲ್ಲದೆ ವಿಶೇಷ ಘಟಕಗಳನ್ನು ಸ್ಥಾಪಿಸುವ ಮೂಲಕವೂ ಸಂಪರ್ಕ ಸಂವರ್ಧನೆ ಮಾಡತಕ್ಕದ್ದು ಅತ್ಯಗತ್ಯ.**

ಪರಿಷತ್ತಿನ ಬೆಳವಣಿಗೆ

ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಮಹಾರಾಜರ ಕೃಪಾಶ್ರಯದಿಂದ ಪ್ರಾರಂಭವಾಗಿ ಮುಂದೆ ಸಮಸ್ತ ಕನ್ನಡಿಗರ ಮನ್ನಣೆಗೂ ಪಾತ್ರವಾಯಿತೆಂಬುದು ಅಭಿನಂದನೀಯ. ಬೆಂಗಳೂರು ಮಾತ್ರ ಕೇಂದ್ರವಾಗಿ ಸಾಹಿತ್ಯಿಕ ಚಟುವಟಿಕೆಗಳು ಪ್ರಾರಂಭದಲ್ಲಿ ನಡೆಯುತ್ತಿದ್ದರೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ಷೇತ್ರ ಮತ್ತೆ ನಾಡಿನಾದ್ಯಂತ ವಿಸ್ತಾರಗೊಂಡಿತು. ಆ ಕಾಲದಲ್ಲಿಯೇ ಭಿನ್ನ ಭಿನ್ನ ಆಡಳಿತಗಳಿಗೆ ಸೇರಿದ ಕನ್ನಡದ ಜಿಲ್ಲೆ ಜಿಲ್ಲೆಗಳಲ್ಲೂ ಶಾಖೆಗಳನ್ನು ತೆರೆದು ಸಾಹಿತ್ಯ ಕಾರ್ಯಕ್ರಮಗಳನ್ನು ಪರಿಷತ್ತು ವಿಸ್ತರಿಸಿದ್ದಲ್ಲದೆ ಈಚೆಗೆ ತಾಲ್ಲೂಕು ಮಟ್ಟದಲ್ಲಿಯೂ ಶಾಖೋಪಶಾಖೆಗಳನ್ನು ಸ್ಥಾಪಿಸುತ್ತಾ ಬಂದಿರುವುದು ನಿಜವಾಗಿಯೂ ಉತ್ತಮ ಕಾರ್ಯ ಅಖಿಲ ಭಾರತ ಸಮ್ಮೇಳನಗಳನ್ನು ವಿಜೃಂಭಣೆಯಿಂದ ಜರುಗಿಸುತ್ತಿರುವಂತೆ ಜಿಲ್ಲಾ ತಾಲ್ಲೂಕು ಮಟ್ಟಗಳಲ್ಲಿಯೂ ಸಾಹಿತ್ಯ ಸಮ್ಮೇಳನಗಳು ಇಂದು ಜರುಗುತ್ತಿವೆ. ಈ ಸ್ತುತ್ಯಕಾರ್ಯ ಗ್ರಾಮ, ಗ್ರಾಮಗಳಿಗೂ ಪಸರಿಸಬೇಕು. ನಮ್ಮ ದೇಶಭಾಷೆ ಸಾಹಿತ್ಯ ಸಂಸ್ಕೃತಿ ಎಲ್ಲದರ ಭದ್ರವಾದ ತಳಹದಿ ಗ್ರಾಮಗಳಲ್ಲಿಯೂ ವ್ಯವಸ್ಥಿತವಾಗಿ ಸ್ಥಾಪಿತವಾಗುವುದೇ ಸರಿಯಾದ ಸಾಹಿತ್ಯ ಸಂಸ್ಕೃತಿಗಳ ಜನಸಂಪರ್ಕ ಕಾರ್ಯವಾಗಿದೆ. ಈ ಮಹತ್ಕಾರ್ಯ ವ್ಯವಸ್ಥಿತವಾಗಿ ಜರುಗಿ ಹಳ್ಳಿಯಿಂದ ಡಿಲ್ಲಿಯ ತನಕ ವಿಸ್ತರಿಸುತ್ತಾ ಹೋಗಬೇಕೆಂದು ನಾವೆಲ್ಲರೂ ಪ್ರಯತ್ನಿಸೋಣ.

ವಿದ್ಯಾವರ್ಧಕ ಸ್ಥಾಪನೆ ನೆರವು

ಕನ್ನಡ ಸಾಹಿತ್ಯ ಪರಿಷತ್ತಿನ ಈ ಬೆಳವಣಿಗೆಯನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ ಕನ್ನಡನಾಡು ನುಡಿಗಳ ಅಭಿವೃದ್ಧಿಗಾಗಿ ಪರಿಷತ್ತಿಗಿಂತಲೂ ಹಿಂದೆಯೇ ಸ್ಥಾಪಿತವಾಗಿ, ಕನ್ನಡದ ಉತ್ತಮ ಕಾರ್ಯಗಳನ್ನು ಅಂದಿನಿಂದ ಇಂದಿನವರೆಗೂ ಮಾಡುತ್ತ ಬರುತ್ತಿರುವ ಧಾರವಾಡದ ವಿದ್ಯಾವರ್ಧಕ ಸಂಘದ ಸಾಧನೆಗಳನ್ನೂ ಕೊಂಡಾಡಲೇಬೇಕಾಗಿದೆ. ಕನ್ನಡದ ಶ್ರೇಷ್ಠಕವಿ ಸಾಹಿತಿಗಳು, ಏಕೀಕರಣದ ಅಗ್ರಗಣ್ಯ ನೇತಾರರು ಅನೇಕರು ಈ ಮಹಾಸಂಸ್ಥೆಯಲ್ಲಿ ದುಡಿದಿದ್ದಾರೆ. ಇಂದಿಗೂ ಹಲವರು ಧುರೀಣರು ದುಡಿಯುತ್ತ ಇದ್ದು ನಾಡುನುಡಿಗಳ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ. ಧಾರವಾಡದ ವಿದ್ಯಾವರ್ಧಕ ಸಂಘ, ಸಾಹಿತ್ಯ ಪರಿಷತ್ತಿಗಿಂತ ಪ್ರಾಚೀನ ಸಂಸ್ಥೆಯಾದರೂ ತನ್ನ ವೈಯಕ್ತಿಕ ಘನತೆ ಯೋಗ್ಯತೆಗಳನ್ನು ಉಳಿಸಿಕೊಂಡೇ ಸಾಹಿತ್ಯ ಪರಿಷತ್ತಿನ ಬೆಳವಣಿಗೆಗಳಿಗೆ ಸಂಪೂರ್ಣ ಸಹಕರಿಸುತ್ತಾ ಬಂದಿರುವುದು ಅಭಿನಂದನೀಯ. ವಿದ್ಯಾವರ್ಧಕ ಸಂಘದ ಈ ಉತ್ತಮ ಸಹಕಾರವನ್ನು ಕೊಂಡಾಡುವುದೂ ಮಾತ್ರವಲ್ಲ ಆ ಸಂಸ್ಥೆಯು ಇತ್ಯೋಪತಿಶಯ ಸಾಧನೆಗಳನ್ನು ಮಾಡಿ ಕನ್ನಡಿಗರೆಲ್ಲರ ಅಭಿಮಾನದ ಸಂಸ್ಥೆಯಾಗಿ ಚಿರಕಾಲ ಪ್ರಗತಿಪಥದಲ್ಲಿ ಮುನ್ನಡೆಯಲಿ ಎಂದು ಹಾರೈಸುತ್ತೇನೆ.

ಸಮ್ಮೇಳನಗಳ ವಿಷಯಗಳ ವ್ಯಾಪ್ತಿ

ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತ್ಯ ಕಲೆ ಮುಂತಾದ ವಿಷಯಗಳಿಗೆ ಸಂಬಂಧಿಸಿ ವಿವಿಧ ಗೋಷ್ಠಿಗಳು ಏರ್ಪಡಿಸಲಾಗುತ್ತಿದೆ. ಈ ಗೋಷ್ಠಿಗಳಲ್ಲಿ ಅಖಿಲ ಭಾರತ, ಅಖಿಲ ಕರ್ನಾಟಕ ಹಾಗೂ ಸಮ್ಮೇಳನ ಜರಗುವ ಪ್ರದೇಶಗಳಿಗೆ ಸಂಬಂಧಿಸಿದ ವಿಷಯ ವಿಚಾರಗಳಿರಬೇಕು. ಐತಿಹಾಸಿಕ, ಧಾರ್ಮಿಕ, ಸಾಹಿತ್ಯಿಕ ಸಾಮಾಜಿಕ ವಿಷಯಗಳು ಹಿಂದಿನಿಂದ ಇಂದಿನ ತನಕವೂ ಮುಂದಕ್ಕೂ ಹೇಗಿರಬೇಕು. ಚಿಂತನ-ಮಂಥನಗಳು ಗೋಷ್ಠಿಗಳಲ್ಲಿ ನಡೆಯತಕ್ಕದ್ದು. ಅದರಿಂದ ಸಮ್ಮೇಳನದ ಸಭಾಸದರಿಗೆ ತೃಪ್ತಿಕರವಾದ ಜ್ಞಾನದ ಉಣಿಸನ್ನು ಬಡಿಸಿದಂತಾಗುವುದು. ಪರಂಪರೆಯಿಂದ ಇಂದಿನ ಈ ಇಪ್ಪತ್ತನೆಯ ಶತಮಾನದ ತನಕದ ಮತ್ತೆ ಮುಂದಿನ ಶತಮಾನದ ಸಾಹಿತ್ಯ ಇತಿಹಾಸಾದಿಗಳಿಗೂ ಅನ್ವಯಿಸುವ ಪ್ರಗತಿ ಚರ್ಚೆಗಳು ಈ ಗೋಷ್ಠಿಗಳಲ್ಲಿ ನಡೆಯಬೇಕು. ನಿರಂಕುಶಾಃ ಎಂಬ ಸೂಕ್ತಿಯಿದ್ದರೂ, ವ್ಯವಹಾರದಲ್ಲಿ, ಲೇಖಕರಿಗೆ, ಪತ್ರಿಕೆಯವರಿಗೆ ಅವರ ಬರೆಹಗಳ ಕುರಿತು ಟೀಕೆಗಳನ್ನು ಆಗಾಗ ಕೇಳುತ್ತಾ ಇದ್ದೇವೆ. ಇಂತಹ ವಿಚಾರ ಸಮ್ಮೇಳನದ ಗೋಷ್ಠಿಗಳಲ್ಲಿ ಚರ್ಚಿಸಬೇಕಾದ ಒಂದು ಮಹತ್ವದ ವಿಷಯ ಜಗತ್ತಿನಲ್ಲಿ ಹಾಗೂ ಭಾರತದಲ್ಲಿ ಕನ್ನಡದ ಸ್ಥಾನಮಾನ, ಗಡಿನಾಡು ಹೊರನಾಡುಗಳಲ್ಲಿ ವಿದೇಶಗಳಲ್ಲೂ ಕನ್ನಡದ ಉಳಿವು, ಬೆಳವಣಿಗೆ, ಕನ್ನಡಿಗರ ಉದ್ಯೋಗ, ನಾಡಿನ ಪರಿಸರ, ಜಲ ಗಡಿ ಸಮಸ್ಯೆಗಳೂ ಸಮ್ಮೇಳನದಲ್ಲಿ ಚರ್ಚಿತವಾಗತಕ್ಕದ್ದು; ಗೋಷ್ಠಿಗಳ ಚರ್ಚೆಯಿಂದ ಸಾರ್ವಜನಿಕರಿಗೂ ಸರಕಾರಕ್ಕೂ ಸರಿಯಾದ ಮಾರ್ಗದರ್ಶನ ನೀಡಬೇಕು. ದೇಶದ ವಿವಿಧ ಭಾಷೆಗಳ ಕವಿಗೋಷ್ಠಿಗಳು ಸಮ್ಮೇಳನಕ್ಕೆ ಶೋಭೆ ತರುವವು. ಸರ್ವ ಭಾಷೆಗಳ ಸಾಮರಸ್ಯವು ಅದರಿಂದ ಸ್ಥಾಪಿತವಾಗುವುದು.

ಪರಿಷತ್ತಿನ ಪ್ರಕಟಣೆಗಳು ಹೇಗಿರಬೇಕು?

ಇಂದು ಜಿಲ್ಲಾ ತಾಲ್ಲೂಕು ಮಟ್ಟಗಳಲ್ಲಿ ಸಾಹಿತ್ಯ ಪರಿಷತ್ತು ಸ್ಥಾಪಿತವಾಗಿ ಸಾಹಿತ್ಯಿಕ ಕಾರ್ಯಕಲಾಪಗಳನ್ನು ನಡೆಸುತ್ತಿರುವುದು. ಸಮ್ಮೇಳನಗಳನ್ನು ಜರಗಿಸುತ್ತಿರುವುದೂ ಯೋಗ್ಯವೇ; ಆದರೆ ಸಮ್ಮೇಳನವೆಂದಾಗ ಹೆಚ್ಚಾಗಿ ಜಾತ್ರೆಗಳ ರೀತಿಯಲ್ಲಿ ಜನ ಸೇರುವಿಕೆ ಹಬ್ಬಗಳ ಆಚರಣೆಯಂತೆ ಎಲ್ಲರೂ ಒಗ್ಗೂಡಿ ನಡೆಯುವ ಊಟೋಪಚಾರ- ಇದೇ ಮನೋಭಾವನೆಯಿರುತ್ತದೆ. ಅದೂ ಇರಲಿ, ಸಾಹಿತ್ಯ ಸಮ್ಮೇಳನಗಳನ್ನು ಜಿಲ್ಲಾ ತಾಲ್ಲೂಕು ಮಟ್ಟಗಳಲ್ಲಿಯೂ ಜರುಗಿಸುವ ಜೊತೆಗೆ ಪ್ರತಿ ಜಿಲ್ಲೆಯ, ಪ್ರತಿ ತಾಲ್ಲೂಕಿನ ಪ್ರಾತಿನಿಧಿಕ ಕವಿ, ಕತೆಗಾರ, ನಾಟಕಕಾರ, ಲೇಖಕರ ಆಯ್ದ ಕೃತಿಗಳನ್ನು ವರ್ಷಕ್ಕೆ ಒಂದರಂತೆ ಪ್ರಕಟಿಸುವ ಕಾರ್ಯಕ್ರಮವನ್ನೂ ಇಟ್ಟುಕೊಳ್ಳಬಹುದು. ಪರಿಷತ್ತಿನ ಘಟನೆಯಂತೆ, ಪ್ರತಿ ಜಿಲ್ಲಾ ತಾಲ್ಲೂಕು ಪರಿಷತ್ತಿಗಳ ಕಾಲಾವಧಿ ಮೂರು ವರ್ಷವಾಗಿರುವಾಗ, ಒಂದು ವರ್ಷ ಅಲ್ಲಿನ ಕವಿಗಳ ಕವಿತಾ ಸಂಪುಟ, ಇನ್ನೊಂದು ವರ್ಷ ಕಥಾಸಂಗ್ರಹ, ಮುಂದಿನ ವರ್ಷ ಇತರ ಶೈಲಿಯ ಲೇಖನಗಳು- ಹೀಗೆ ವರ್ಷಕ್ಕೆ ಒಂದರಂತೆ ಉತ್ತಮ ಸಾಹಿತ್ಯಕೃತಿ ಸಂಗ್ರಹಗಳು ಪ್ರಕಟವಾಗಬೇಕು. ಆಯಾಯ ಪ್ರದೇಶದ ಸಾಹಿತ್ಯಾಭಿಮಾನಿಗಳ ನೆರವನ್ನು ಸರಿಯಾಗಿ ಪಡೆದುಕೊಳ್ಳತಕ್ಕದ್ದು, ಆ ಸಂಗ್ರಹ ಕೃತಿಯ ಬಿಡುಗಡೆಯ ಸಮಾರಂಭವನ್ನು ಏರ್ಪಡಿಸಬೇಕು. ಬಿಡುಗಡೆಯ ಸಮಾರಂಭದಂದೇ ಆ ಪ್ರಕಟಿತ ಪುಸ್ತಕದ ಮುದ್ರಣ ವೆಚ್ಚವಾದರೂ ಬರುವ ರೀತಿಯಲ್ಲಿ ಮಾರಾಟದ ವ್ಯವಸ್ಥೆ ಮಾಡುವುದು ಅಗತ್ಯ. ಮತ್ತೆ ಇಡೀ ವರ್ಷದಲ್ಲಿ ಉಳಿದ ಪುಸ್ತಕಗಳ ಮಾರಾಟ ಮಾಡಿಕೊಳ್ಳಬಹುದು. ಸಾಹಿತ್ಯ ಭಾವನಾತ್ಮಕವಾಗಿರುವಂತೆ, ವ್ಯಾವಹಾರಿಕವೂ ಆದಲ್ಲಿ ಆ ಕ್ಷೇತ್ರದಲ್ಲಿಯೂ ಪ್ರಗತಿ ಸಾಧಿಸಬಹುದು. ತಾಲ್ಲೂಕು ಮಟ್ಟದ ಈ ತೆರನ ಪ್ರಾತಿನಿಧಿಕ ಲೇಖಕರ ಪುಸ್ತಕ ಪ್ರಕಟಣೆಯ ಆಧಾರದಲ್ಲಿ ಅವುಗಳಿಂದಲೇ ಶ್ರೇಷ್ಠವಾದವುಗಳನ್ನು ಆಯ್ಕೆ ಮಾಡಿ ಕೇಂದ್ರ ಸಾಹಿತ್ಯ ಪರಿಷತ್ ಮಟ್ಟದಲ್ಲಿ

ಹೀಗೆ ಇಡೀ ಕನ್ನಡನಾಡಿನ ಪ್ರಾತಿನಿಧಿಕ ಲೇಖಕರ ಕೃತಿಪರಿಚಯ ಸಮಸ್ತ ಕನ್ನಡಿಗರಿಗೆ ಪ್ರತಿವರ್ಷ ಆಗುವುದು ಯೋಗ್ಯ. ಆ ಮೂಲಕ ಸಾಹಿತ್ಯ ಸಂಸ್ಕೃತಿಯ ಪ್ರಚಾರವೂ ನಡೆಯುತ್ತಾ ಇದ್ದಲ್ಲಿ ಕನ್ನಡ ಭಾಷೆ ಸಾಹಿತ್ಯದ ಸಂವರ್ಧನೆ ಸಮೃದ್ಧವಾದೀತು.

ತಿಂಗಳ ಗೋಷ್ಠಿ ನಡೆಸಿ

೩. ಇಂದು ಗ್ರಾಮ ತಾಲ್ಲೂಕು ಜಿಲ್ಲಾ ಮಟ್ಟಗಳಲ್ಲಿ ಅಲ್ಲಲ್ಲಿ ನಾಡಿನಾದ್ಯಂತ ಕನ್ನಡ ಸಂಘ ಸಂಸ್ಥೆಗಳು ಇರುವುದು ಶುಭ ಚಿಹ್ನೆ. ಆ ಸಂಘ ಸಂಸ್ಥೆಗಳು ಆಯಾಯ ಪ್ರದೇಶಗಳಲ್ಲಿ ಎಂದರೆ ಗ್ರಾಮ ತಾಲ್ಲೂಕು ಜಿಲ್ಲಾ ಮಟ್ಟದ ಒಂದು ಕೇಂದ್ರ ಸ್ಥಳದಲ್ಲಿ ಪ್ರಾತಿನಿಧಿಕವಾಗಿ ಸೇರಿ ಪ್ರತಿ ತಿಂಗಳೂ ಒಂದೊಂದು ಸಾಹಿತ್ಯ ಗೋಷ್ಠಿ ನಡೆಸುವುದು ಸಾಹಿತ್ಯಾಭಿವೃದ್ಧಿಗೆ ಪೋಷಕ. ಈ ಗೋಷ್ಠಿಗಳು ಸಮಕಾಲೀನ ಪ್ರಕಟಿತ ಕೃತಿಗಳ ಕುರಿತು ಇರಬಹುದು. ಪಂಪ, ರನ್ನ, ಕುಮಾರವ್ಯಾಸಾದಿ ಮಹಾಕವಿಗಳ ಹಾಗೂ ಆಧುನಿಕರಾದ ಬಿ.ಎಂ.ಶ್ರೀ, ಪಂಜೆ, ಕುವೆಂಪು, ಬೇಂದ್ರೆ ಇಂತಹವರ ಕೃತಿ ವಿಷಯವಾಗಿಯೂ ನಡೆಸಬಹುದು. ಪತ್ರಿಕೆಗಳಲ್ಲಿ ಆಧುನಿಕ ಲೇಖಕರ ಕೃತಿ ವಿಮರ್ಶೆ ಬರುವವುಗಳಲ್ಲಿ ಯಾವುದನ್ನಾದರೂ ಆರಿಸಿಕೊಂಡು ಗೋಷ್ಠಿ ನಡೆಸುವುದೂ ಸೂಕ್ತ. ಶ್ರೇಷ್ಠ ಗಮಕಿಗಳನ್ನು ಆಹ್ವಾನಿಸಿ ಅದರಿಂದ ಕವನ ಹಾಡಿಸಿ ಆನಂದಪಡಬಹುದು. ಸ್ವರಚಿತ ಕೃತಿಗಳನ್ನೋ ಇತರರ ಕಾವ್ಯಗಳನ್ನೋ ಸ್ವಾರಸ್ಯಕರವಾದ ರೀತಿಯಲ್ಲಿ ಹಾಡಿ, ಹೇಳಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಕವಿಗಳನ್ನೋ ವಿದ್ವಾಂಸರನ್ನೋ ಆಮಂತ್ರಿಸಿ ಗೋಷ್ಠಿಗಳ ವ್ಯವಸ್ಥೆ ಮಾಡುವುದೂ ವಿಹಿತ. ಯಾವುದೇ ರೀತಿಯಲ್ಲಿ ಸಾಹಿತ್ಯ ಗೋಷ್ಠಿ ನಡೆಸಿದರೂ ಅದರಿಂದ ಶ್ರೋತೃಗಳಲ್ಲಿ, ಉತ್ತಮ ಪರಿಣಾಮವಾದೀತು. ಸಾಹಿತ್ಯ ಸಂಸ್ಕೃತಿಗಳ ಪ್ರಚಾರದ ಫಲ ದೊರಕುವುದು. "ಮಾಲೆಗಾರನ ಪೊಸಬಾಸಿಗಂ ಮುಡಿವ ಯೋಗಿಗಳಿಲ್ಲದೆ ಬಾಡಿಪೊಗದೇ" ಎಂದು ಕನ್ನಡದ ಹಿರಿಯ ಕವಿಯೊಬ್ಬನು ಉದ್ಗರಿಸಿದ್ದಾನೆ. ಮಾಲೆಗಳನ್ನು ಕನ್ನಡ ಲೇಖಕರಿಗೆ ನಾಡಿನ ಜನತೆ ನೀಡುವ ಅವಶ್ಯವಿದೆ. ಆದರಿಂದ ರಚನಾತ್ಮಕವಾಗಿ ಸಾಹಿತ್ಯಾಭಿವೃದ್ಧಿ ಕಾರ್ಯ ಆಗುವುದು.

ಸಮ್ಮೇಳನಗಳಿಗೆ ಹಣದ ವ್ಯವಸ್ಥೆ

೪. ಸಾಹಿತ್ಯ ಸಮ್ಮೇಳನಗಳಲ್ಲಿ ಇಂದು ಖರ್ಚು ವೆಚ್ಚಗಳು ಹೆಚ್ಚಾಗುತ್ತಿವೆ; ಸಾಹಿತಿಗಳಿಗಿಂತ ಹೆಚ್ಚು ಸಾಹಿತ್ಯೇತರ ಧುರೀಣರಿಗೆ ಮನ್ನಣೆ ಮಣೆ ನೀಡಲಾಗುತ್ತಿದೆ. ಸಮ್ಮೇಳನಗಳು ಜಾತ್ರೆ ಆಡಂಬರಗಳಾಗದೆ ಕ್ರಿಯಾತ್ಮಕ ಸಾಹಿತ್ಯ ವಿಚಾರಗಳ ವೇದಿಕೆಯಂತಿರಬೇಕು– ಎಂಬಿತ್ಯಾದಿ ಮಾತುಗಳನ್ನು ಕೇಳುತ್ತಿದ್ದೇವೆ. ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನಗಳ ಮಾದರಿಯನ್ನು ಅನುಸರಿಸಬೇಕು. ಹಿತೋಪದೇಶವೂ ಬಂದಿದೆ. ಈ ಉಪದೇಶವೂ ಸ್ವೀಕಾರಾರ್ಹ, ಮನುಷ್ಯರ ಒಂದು ಸಹಜ ಪ್ರವೃತ್ತಿಯೆಂದರೆ ತಮ್ಮ ತಮ್ಮ ಸ್ವಂತ ಮನೆಗಳಲ್ಲಿಯಾದರೂ ಆಗುವ ವಿವಾಹಾದಿ ಸಾಮಾಜಿಕ ಕಾರ್ಯಗಳನ್ನೂ ಆದಷ್ಟು ವಿಜೃಂಭಣೆಯಿಂದ ಸಾಲಮಾಡಿಯಾದರೂ ನೆರವೇರಿಸಬೇಕೆಂಬುದು; ಆಮಂತ್ರಿತರನ್ನು ಸಂತುಷ್ಟಗೊಳಿಸುವ ಉತ್ಸಾಹದಲ್ಲಿ ಕೆಲವೊಮ್ಮೆ ಆಡಂಬರದ ಸಂದರ್ಭವೂ ಬರುತ್ತದೆ. ಅಂತಹ ಪ್ರವೃತ್ತಿಯನ್ನು ಗೃಹಸ್ಥರು ಸಡಿಲುಬಿಡದೆ, ಅಂಕೆಯಲ್ಲಿಟ್ಟುಕೊಂಡು, ಆಹ್ವಾನಿತರನ್ನು ಸಂತೋಷಗೊಳಿಸುವುದರೊಂದಿಗೆ ತಮ್ಮ ಗೃಹ ಪರಿಸ್ಥಿತಿಯನ್ನು ವ್ಯವಸ್ಥಿತವಾಗಿ ಮುನ್ನೆಡೆಸುವ ಮುಂಜಾಗ್ರತೆ ಇಟ್ಟುಕೊಳ್ಳತಕ್ಕದ್ದು ಯೋಗ್ಯವಷ್ಟೆ. ಕರ್ನಾಟಕ ರಾಜ್ಯರಚನೆಯಾದ ನಂತರ ಮಾತ್ರ ಸಾಹಿತ್ಯ ಸಮ್ಮೇಳನಗಳಿಗೆ ರಾಜ್ಯ ಸರಕಾರ ಹಣ ಬಿಡುಗಡೆ ಮಾಡಲು ಪ್ರಾರಂಭಿಸಿದ್ದು ಅದಕ್ಕಿಂತ ಹಿಂದೆಯೇ ಮದ್ರಾಸು, ಬೊಂಬಾಯಿ, ಹೈದರಾಬಾದ್ ಮುಂತಾದ ರಾಜ್ಯಗಳಲ್ಲಿ ಕನ್ನಡ ಹಂಚಿದ್ದಾಗಲೂ ಸರಕಾರದ ಹಣ ಪಡೆಯದೆ ಬೇರೆ ಬೇರೆ ಪ್ರದೇಶಗಳಲ್ಲಿ ಯಶಸ್ವಿಯಾಗಿ ಸಮ್ಮೇಳನಗಳು ಜರುಗಿವೆ. ವಸತಿ ಊಟೋಪಚಾರಗಳೂ ವ್ಯವಸ್ಥಿತವಾಗಿ ಆಗಿವೆ. ಇಂದು ಸರಕಾರ ಧನಸಹಾಯ ಮಾಡುವುದಿದ್ದರೂ, ಅದು ಜನತೆ ನೀಡಿದ ತೆರಿಗೆಗಳು ಆದಾಯದ ಭಾಗವಲ್ಲದೆ, ಬೇರೆಯಲ್ಲ; ಅದೂ ಜನಸಾಮಾನ್ಯರ ಕೊಡುಗೆಯೇ; ಅದನ್ನು ಸ್ವೀಕರಿಸುವುದರಲ್ಲಿ ಅಪರಾಧವಿಲ್ಲ; ಹಣ ನೀಡಿದ ಬಗ್ಗೆ ಸರಕಾರಕ್ಕೆ ಸಂಪೂರ್ಣ ಕೃತಜ್ಞರಾಗಿರಲೇಬೇಕು. ಸಕಾಲದಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಒದಗಿಸತಕ್ಕದ್ದು. ಹಾಗೆಂದು ಹಣ ಪಡೆದದ್ದರಿಂದ ಆತ್ಮಾಭಿಮಾನಶೂನ್ಯವಾಗಬಾರದು. ಅಥವಾ ಧನಸಹಾಯ ಪಡೆದು ಆಡಂಬರ ಮಾಡಕೂಡದು. ಸಾಹಿತ್ಯ ಸಮ್ಮೇಳನಗಳು ನಿರುದ್ದೇಶದ ಜನಜಂಗುಳಿಯ ಜಾತ್ರೆಯಾಗಿ ಸದುದ್ದೇಶದ ಪುಣ್ಯಯಾತ್ರೆಯಂತಿರಬೇಕು' ಈ ಸಲದ ಸಾಹಿತ್ಯ ಸಮ್ಮೇಳನ ಅಂತಹ ಉತ್ತಮ ಆದರ್ಶವನ್ನು ಮುಂದಿಟ್ಟು ಸುವ್ಯವಸ್ಥಿತವಾಗಿ ಜರುಗುತ್ತದೆ. ಜರುಗಲಿ ಎಂಬುದು ನನ್ನ ಹಾರೈಕೆ. ಸಮ್ಮೇಳನಗಳನ್ನು ರಾಜ್ಯ ಜಿಲ್ಲಾ ತಾಲ್ಲೂಕು ಮಟ್ಟಗಳಲ್ಲಿ ಯಶಸ್ವಿಯಾಗಿಸಿದ ಮಹನಿಯರೇ ಇಲ್ಲಿಯೂ ಮುಂದಾಳುತನ ವಹಿಸಿರುವುದು ಅಭಿನಂದನೀಯ. ಮುಂದಿನ ಸಮ್ಮೇಳನಗಳ ಸಮರ್ಥ ಸಂಘಟನೆಗೆ ಈ ಸಮ್ಮೇಳನ ಮಾದರಿಯಾಗಲಿ ಎಂದು ಹಾರೈಸುವುದರೊಂದಿಗೆ, ಆ ಬಗ್ಗೆ ಮುಂದೆಯೂ ಉದಾರಹೃದಯದಿಂದ ಸರ್ವರೂ ಸಹಕರಿಸಬೇಕೆಂದು ವಿನಂತಿಸುತ್ತೇನೆ.


ಸಮ್ಮೇಳನದ ನಿರ್ಣಯಗಳು

೫. ಸಾಹಿತ್ಯ ಸಮ್ಮೇಳನಗಳಲ್ಲಿ ಮಂಜೂರಾಗುವ ನಿರ್ಣಯಗಳು ಜಾರಿಯಾಗುವಂತೆ ಪ್ರಯತ್ನಿಸಬೇಕಾದ ಮಹತ್ವದ ಕರ್ತವ್ಯವಿದೆ. ಪ್ರತಿ ಸಮ್ಮೇಳನದಲ್ಲೂ ಆದ ನಿರ್ಣಯಗಳನ್ನು ಸಂಬಂಧಪಟ್ಟವರಿಗೆ ತಿಳಿಸಿ ಯೋಗ್ಯ ಕಾರ್ಯಕ್ರಮ ಕೈಕೊಳ್ಳುವರ ಕೇಳಿಕೊಂಡು ಪತ್ರವ್ಯವಹಾರ ಮಾಡಿ ಅವರಿಂದ ಸಕಾಲದಲ್ಲಿ ಉತ್ತರ ಬರದಿದ್ದರೆ ಮರಳಿ ನೆನಪಿಸುವ ಪತ್ರವನ್ನೂ ಪರಿಷತ್ತು ಕಳುಹಿಸಬೇಕು. ನಿರ್ಣಯಗಳಲ್ಲಿ ಪ್ರಸ್ತಾಪಿಸಿದ ವಿಷಯದಲ್ಲಿ ಸಂಬಂಧಪಟ್ಟವರು ಅವಶ್ಯವಿರುವ ಕಾರ್ಯಕ್ರಮ ಕೈಗೊಳ್ಳುತ್ತಾರೆ. ಅಥವಾ ಕೈಗೊಳ್ಳುವುದಿಲ್ಲ ಈ ಸಂಗತಿಗಳನ್ನು ಖಚಿತವಾಗಿ ತಿಳಿದುಕೊಳ್ಳುವುದು ತೀರಾ ಅವಶ್ಯ; ಹಾಗಿಲ್ಲವಾದರೆ ಸಹಸ್ರ ಸಹಸ್ರ ಕಂಠಗಳ ಒಮ್ಮತದಿಂದ ಮಾಡಿದ ನಿರ್ಣಯಗಳಿಗೆ ಬೆಲೆಯೇನು? ಯಾರು ಯಾವ ನಿರ್ಣಯ ಮಂಡಿಸಿದ್ದಾರೋ ಅವರಿಗೆ ಅದರ ಪರಿಣಾಮದ ಕುರಿತು ತಿಳಿಸುವುದೂ ಅಗತ್ಯ. ಹಾಗೆ ತಿಳಿಸಿದಲ್ಲಿ ಮಂಡಿತವಾಗಿ ಮಂಜೂರಾದ ನಿರ್ಣಯಗಳು ತಿರಸ್ಕೃತವಾದರೆ ಮುಂದಿನ ಹೆಜ್ಜೆ ಅವರೂ ನಿರ್ಣಯಿಸಬಹುದು. ಸಮ್ಮೇಳನಗಳಲ್ಲಿ ಮಂಜೂರು ಮಾಡತಕ್ಕ ನಿರ್ಣಯಗಳನ್ನು ನಾಡುನುಡಿಗಳಿಗೆ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಪಟ್ಟವುಗಳೇ ಆಗಿರಬೇಕೆಂಬ ಮೂಲತತ್ವವನ್ನು ಎಲ್ಲರೂ ಪರಿಪಾಲಿಸತಕ್ಕದ್ದು, ಹಾಗಾದರೆ ಮಾತ್ರ ನಿರ್ಣಯಗಳಿಗೆ ಬೆಲೆ ಬರುವುದು. ಸಂಬಂಧಪಟ್ಟವರಾದರೂ ಅದನ್ನು ಪರಿಶೀಲಿಸಿ ಯುಕ್ತ ಕಾರ್ಯಕ್ರಮ ಕೈಗೊಂಡರೆ ಅನುಕೂಲವಾಗುವುದು. ಹಾಗಾಗಿ ನಿರ್ಣಯ ಮಂಡನೆ ಕುರಿತೂ, ಗಂಭೀರ ಪರಿಶೀಲನೆ ಅಗತ್ಯ. ಹೀಗೆ ಶ್ರದ್ಧೆಯಿಂದ ಈ ನಿರ್ಣಯ ಮಂಜೂರಾತಿ ಕಾರ್ಯ ನಡೆದಲ್ಲಿ ಕೆಲವು ಕಡೆಗಳಿಂದ ಕೇಳಿಬರುವ ದೂರು ಇಲ್ಲವಾಗಿ ಸಮ್ಮೇಳನದ ಕಾರ್ಯಕಲಾಪಗಳಿಗೆ ಕಳೆಯೇರುವುದು.

❖ ❖

೬೭ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎಸ್.ಎಲ್. ಭೈರಪ್ಪ



ಗಳಗನಾಥರು ಮತ್ತು ಅನಕೃ ಅನಂತರ ಕನ್ನಡದಲ್ಲಿ ಕತೆ ಕಾದಂಬರಿ ಓದುವ ಸಾವಿರಾರು ಓದುಗರನ್ನು ಸೃಷ್ಟಿಸಿದವರೆಂದರೆ ಎಸ್.ಎಲ್. ಭೈರಪ್ಪನವರು. ಕಾದಂಬರಿಕಾರರು, ಮೀಮಾಂಸಕರು ಆಗಿರುವ ಎಸ್.ಎಲ್. ಭೈರಪ್ಪನವರು ಹಾಸನ ಜಿಲ್ಲೆ ಚೆನ್ನರಾಯಪಟ್ಟಣದ ಸಂತೇಶಿವರ ಗ್ರಾಮದಲ್ಲಿ ಲಿಂಗಣ್ಣಯ್ಯ-ಗೌರಮ್ಮ ದಂಪತಿಗಳಿಗೆ ೨೬-೮-೧೯೩೪ರಲ್ಲಿ ಜನಿಸಿದರು. ತಮ್ಮ ಹುಟ್ಟೂರಿನ ಸುತ್ತಮುತ್ತಲ ಶಾಲೆಗಳಲ್ಲಿ ಪ್ರಾಥಮಿಕ ವಿಧ್ಯಾಭ್ಯಾಸ ಮುಗಿಸಿ ಮೈಸೂರಿಗೆ ಬಂದು ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಓದಿ, ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮಾಡಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಗಳಿಸಿದರು. ಅನಂತರ ಹುಬ್ಬಳ್ಳಿಯ ಕಾಡುಸಿದ್ಧೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿ ೧೯೫೮ರಿಂದ ೧೯೬೦ವರೆಗೆ ಕೆಲಸ ಮಾಡಿದರು. ೧೯೬೦ರಿಂದ ೧೯೬೬ವರೆಗೆ ೬ ವರ್ಷಗಳ ಕಾಲ ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದರು. ೧೯೬೭ರಿಂದ ೧೯೭೧ವರೆಗೆ ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಶಿಕ್ಷಣ ಸಂಸ್ಥೆಯಲ್ಲಿ ಉಪಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಮೇಲೆ ಮೈಸೂರಿನಲ್ಲಿರುವ ಪ್ರಾದೇಶಿಕ ಶಕ್ಷಣ ಕಾಲೇಜಿಗೆ ವರ್ಗವಾಗಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ೧೯೯೧ರಲ್ಲಿ ವೃತ್ತಿಯಿಂದ ನಿವೃತ್ತರಾದರು. ಭೈರಪ್ಪನವರ ಸಾಹಿತ್ಯ ಸಾಧನೆಗೆ ಅನೇಕ ಪ್ರಶಸ್ತಿ ಬಂದಿವೆ, ಸನ್ಮಾನಗಳು ಸಂದಿವೆ. ತಂತು ಕಾದಂಬರಿಗೆ ಭಾರತೀಯ ಭಾಷಾ ಪರಿಷತ್ತಿನ ಪ್ರಶಸ್ತಿ ಲಭಿಸಿದೆ.ದಾಟು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ವಂಶವೃಕ್ಷ, ಸಾಕ್ಷಿ, ದಾಟು ಕಾದಂಬರಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ,

೧೯೯೪ರಲ್ಲಿ ಮಾಸ್ತಿ ಪ್ರಶಸ್ತಿ, ೧೯೮೫ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಇವರಿಗೆ ಲಭಿಸಿದೆ. ಕನಕಪುರದಲ್ಲಿ ೧೯೯೯ರಲ್ಲಿ ನಡೆದ ೬೭ನೇ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದ ಗೌರವ ಸಿಕ್ಕಿದೆ. ಸರಸ್ವತೀ ಸಮ್ಮಾನ್ ಪ್ರಶಸ್ತಿಯನ್ನು ಕನ್ನಡದಲ್ಲಿ ಪಡೆದವರಲ್ಲಿ ಮೊದಲಿಗರು ಇವರು. ಬರೆದ ಕಾದಂಬರಿಗಳೆಲ್ಲಾ ಜನಪ್ರಿಯವಾಗಿ ಹತ್ತಾರು ಮರುಮುದ್ರಣಗಳಾಗಿವೆ. ಮರಾಠಿ, ಇಂಗ್ಲಿಷ್, ಹಿಂದಿ ಮೊದಲಾದ ಭಾಷೆಗಳಿಗೆ ಅನುವಾದವಾಗಿವೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಮೊದಲಾದವು ಚಲನಚಿತ್ರಗಳಾಗಿವೆ. ಇವರು ಕಾದಂಬರಿಗಳನ್ನಷ್ಟೆ ಅಲ್ಲದೆ ಸೌಂದರ್ಯಮೀಮಾಂಸೆಯ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಸತ್ಯ ಮತ್ತು ಸೌಂದರ್ಯ ಇವರು ರಚಿಸಿದ ಪಿಎಚ್‌ಡಿ ಗ್ರಂಥವಾಗಿದೆ. ಸಾಹಿತ್ಯ ಮತ್ತು ಪ್ರತೀಕ, ಕಥೆ ಮತ್ತು ಕಥಾವಸ್ತು ಗ್ರಂಥಗಳು ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿವೆ. ನಾನೇಕೆ ಬರೆಯುತ್ತೇನೆ. ಭಿತ್ತಿ ಆತ್ಮವೃತ್ತಾದ ಗ್ರಂಥವಾಗಿದೆ. ಆವರಣ, ಕವಲು ಅವರ ಈಚಿನ ಕಾದಂಬರಿಗಳಾಗಿವೆ. ವಂಶವೃಕ್ಷ, ದಾಟು, ತಂತು, ಅಂಚು, ಪರ್ವ, ಗೃಹಭಂಗ, ಸಾರ್ಥ, ನಾಯಿನೆರಳು, ಧರ್ಮಶ್ರೀ, ದೂರಸರಿದರು ಮತದಾನ ಮುಂತಾದವು ಅವರು ಬರೆದ ಪ್ರಸಿದ್ಧ ಕಾದಂಬರಿಗಳಾಗಿವೆ.

ಕನ್ನಡ ಸಾಹಿತ್ಯ ಸಮ್ಮೇಳನ-೬೭
ಅಧ್ಯಕ್ಷರು, ಎಸ್. ಎಲ್. ಭೈರಪ್ಪ
ದಿನಾಂಕ ೧೧, ೧೨, ೧೩, ೧೪ ಫೆಬ್ರವರಿ ೧೯೯೯
ಸ್ಥಳ : ಕನಕಪುರ

ಕಾರ್ಯಗತಗೊಳಿಸುವ ಶಕ್ತಿ ಇಲ್ಲ

ದೀರ್ಘ ಇತಿಹಾಸವುಳ್ಳ ಈ ಸಮ್ಮೇಳನಗಳ ಹಿಂದಿನ ಅಧ್ಯಕ್ಷರ ಹೆಸರುಗಳನ್ನು ನೋಡಿದಾಗ ಈ ಸ್ಥಾನದಲ್ಲಿ ಕೂರಲು ನನಗೆ ಸಂಕೋಚವಾಗುತ್ತದೆ. ಅವರೆಲ್ಲ ಕನ್ನಡ ನಾಡುನುಡಿಗಳನ್ನು ಕಟ್ಟಿ ಬೆಳೆಸಲು ಶ್ರಮಿಸಿದವರು. ಸದಾ ಆ ಬೆಳವಣಿಗೆಯ ಬಗೆಗೆ ಚಿಂತಿಸಿದವರು. ಕನ್ನಡ ನುಡಿ ಮತ್ತು ನಾಡಿನ ಏಳ್ಗೆಗಾಗಿ ಪ್ರತಿಯೊಬ್ಬ ಸಮ್ಮೇಳನಾಧ್ಯಕ್ಷರೂ ತಮ್ಮ ಒಳನೋಟಗಳಿಂದ ಕುಡಿದ ವಿಶ್ಲೇಷಣೆಗಳನ್ನು ಮುಂದಿಟ್ಟಿದ್ದಾರೆ. ಅವುಗಳಿಗಿಂತ ಹೆಚ್ಚು ಹೇಳುವ ತಿಳವಳಿಕೆ ನನಗಿಲ್ಲ. ಒಳನೋಟ, ವಿಶ್ಲೇಷಣೆ, ಚಿಂತನೆಗಳಿಗೆ ಕರ್ನಾಟಕದಲ್ಲಿ ಯಾವತ್ತೂ ಕೊರತೆ ಇಲ್ಲ. ಕೊರತೆ ಇರುವುದು ಅವುಗಳನ್ನು, ಕಾರ್ಯಗತಗೊಳಿಸಲು ಬೇಕಾದ ರಾಜಕೀಯ ಸಂಕಲ್ಪಶಕ್ತಿಯಲ್ಲಿ, ನಾಡು ನುಡಿಗಳ ಹಿತರಕ್ಷಣೆ ಮತ್ತು ಬೆಳವಣಿಗೆಗಳ ಬಗೆಗೆ ನೆರೆರಾಜ್ಯಗಳ ಜನರಿಗಿರುವಷ್ಟು ಸ್ಪಷ್ಟ ಪ್ರಜ್ಞೆ ಕನ್ನಡಿಗರಿಗಿಲ್ಲ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ.


ಸಾಹಿತ್ಯದ ಮೇಲಿನ ದಾಳಿ

ಇದು ಸಾಹಿತ್ಯ ಸಮ್ಮೇಳನ, ಸಾಹಿತಿಗಳ, ಸಹೃದಯದಿಂದ ಹಾಗೂ ರಾಜ್ಯದ ಸಮ್ಮೇಳನ. ಸಾಹಿತ್ಯದ ಮೂಲಗುಣದ ಬಗೆಗೆ ಸಾಹಿತಿಯೇ ವ್ಯಾಖ್ಯೆ ಮಾಡುವ ಅಗತ್ಯವಿಲ್ಲ. ಅವನ ಕೃತಿಗಳೇ ಅವನ ಸಾಹಿತ್ಯ ಕಲ್ಪನೆಯನ್ನು ಸೂಚಿಸುತ್ತವೆ. ಹಾಗೇ ನೋಡಿದರೆ ತನ್ನ ಸೃಜನಾತ್ಮಕ ಕೃತಿಗಳ ಹೊರಗೆ ಸಾಹಿತಿಯ ಸಾಹಿತ್ಯದ ವ್ಯಾಖ್ಯೆ ಮಾಡುವುದು ಇತ್ತೀಚಿನ ಪರಿಪಾಠ, ತನ್ನ ಕೃತಿ ಮತ್ತು ಸೃಷ್ಟಿಯ ಬಗೆಗೆ ಸಂಗೀತಗಾರ, ವಾಸ್ತುಶಿಲ್ಪಿ, ಚಿತ್ರಕಾರ, ನರ್ತಕ ಮೊದಲಾಗಿ ಯಾರೂ ಹೆಚ್ಚು ಮಾತನಾಡುವುದಿಲ್ಲ, ಸಾಹಿತ್ಯಿಕ ಕೃತಿಗಳನ್ನು ಕುರಿತು ಬರುತ್ತಿರುವಷ್ಟು ಲೇಖನಗಳು, ಪುಸ್ತಕಗಳು ಬೇರಾವ ಕಲಾ ಪ್ರಕಾರಗಳನ್ನು ಕುರಿತೂ ಬರುತ್ತಿಲ್ಲ. ಸಾಹಿತ್ಯದ ಮಾಧ್ಯಮವೇ ಮಾತಾದುದರಿಂದ ಸಾಹಿತ್ಯದ ಬಗೆಗೆ ಅತಿ ಪ್ರಮಾಣದಲ್ಲಿ ಮಾತು ನಡೆಯುತ್ತಿದೆ. ಒಂದು ಸಾಹಿತ್ಯ ಕೃತಿಯ ಮೇಲೆ ಮಾತನಾಡುವುದು ಸುಲಭ. ಏನಿಲ್ಲವೆಂದರೂ ಅದರ ಸನ್ನಿವೇಶವನ್ನೋ ಕಥೆಯನ್ನೋ ಭಾಷ್ಯವನ್ನೋ ಹೇಳಬಹುದು. ಅದರ ಒಳನೋಟಗಳು, ಒಪ್ಪಂದದ ದೃಷ್ಟಿ, ಪಾತ್ರಪಾತ್ರಗಳ ನಡುವೆ ಬರುವ ಚರ್ಚೆಗಳನ್ನು ಕುರಿತು ಬಂದಿರಬಹುದು. ಗಾಯಕನು ಒಂದು ರಾಗವನ್ನು ಹಾಡಿದರೆ, ವಾದಕನು ನುಡಿಸಿದರೆ, ಮಾತಿನಲ್ಲಿ ಏನೆಂದು ಹೇಳಬೇಕು? ಏನೆಂದು ಲಂಬಿಸಬೇಕು. ಅವನು ಸ್ವರಸ್ಥಾನಗಳನ್ನು ಮುಟ್ಟುವ ಕ್ರಮ, ದಾಟುಸ್ವರ ಜಾರುಸ್ವರಗಳನ್ನು ನಿರ್ವಹಿಸುವ ಕೌಶಲ ಮೊದಲಾಗಿ ಏನು ಹೇಳಿದರೂ ಬರಡಾಗುತ್ತದೆ. ಇವನ್ನು ನಾಲ್ಕು ವಾಕ್ಯಗಳಿಗಿಂತ ಹೆಚ್ಚು ಹೇಳಲೂ ಸಾಧ್ಯವಿಲ್ಲ. ಸಂಗೀತವು ಭಾಷೆಯ ಹಿಡಿತಕ್ಕೆ ಸಿಕ್ಕದ, ಭಾಷೆಯ ಸ್ವರವನ್ನು ಮೀರಿದ ಕಲೆ, ನರ್ತನ, ಚಿತ್ರ, ವಾಸ್ತು, ಶಿಲ್ಪ ಮೊದಲಾದುವೆಲ್ಲಾ ನೋಡಿ ಆನಂದಿಸಬೇಕು. ವಿಮರ್ಶೆಯು ಸಹಾಯ ಮಾಡುತ್ತದಾದರೂ ತುಸು ಹೆಚ್ಚಾದರೂ ಬೇಸರವನ್ನುಂಟು ಮಾಡುತ್ತದೆ. ಸಾಹಿತ್ಯ ವಿಮರ್ಶೆಗೂ ಈ ಮಾತು ಅನ್ವಯವಾದರೂ ಇಲ್ಲಿ ಅತಿಮಾತಿಗೆ ಅವಕಾಶವಿದೆ. ಇತರ ಕಲೆಗಳಲ್ಲಿ ಇಲ್ಲ. ಅಲ್ಲಿ ಎಷ್ಟೋ ಕಲಾವಿದರಿಗೆ ಮಾತುಗಾರಿಕೆ ಇಲ್ಲವೇ ಇಲ್ಲ. ಸಭೆಯಲ್ಲಿ ನಿಲ್ಲಿಸಿ ಮಾತನಾಡೆಂದರೆ ಎಷ್ಟೋ ಸಂಗೀತಗಾರರು ತೊದಲುತ್ತಾರೆ. ಆದರೆ ಭಾಷಣ ಮಾಡಲು ಬಾರದ ಸಾಹಿತಿ ಸಾಹಿತಿಯೇ ಅಲ್ಲ ಎಂದು ನಿರ್ಣಯಿಸುವ ಮಟ್ಟಿಗೆ ಸಾಹಿತ್ಯದ ಮೇಲೆ ಮಾತಿನ ದಾಳಿ ನಡೆದಿದೆ.

❖❖

೬೮ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಶಾಂತಾದೇವಿ ಮಾಳವಾಡ



ಉತ್ತರ ಕರ್ನಾಟಕದಲ್ಲಿ ಮಹಿಳಾ ಸಾಹಿತ್ಯ ಪರಂಪರೆಯ ಪ್ರವರ್ತಕರಲ್ಲಿ ಒಬ್ಬರಾದ ಶಾಂತಾದೇವಿ ಮಾಳವಾಡರು ಸಾಹಿತಿಯಾಗಿ ಸಾಮಾಜಿಕ ಕಾರ್ಯಕರ್ತೆಯಾಗಿ ಶ್ರಮಿಸಿದವರು. ಕರ್ಜಗಿ ಮುರಗಪ್ಪ ಶೆಟ್ಟಿ-ಜಯವಂತಿ ದೇವಿ ದಂಪತಿಗಳಿಗೆ ಬೆಳಗಾವಿಯಲ್ಲಿ ೧೦-೧೨-೧೯೨೨ರಲ್ಲಿ ಜನಿಸಿದ ಸುಪುತ್ರಿ ಶಾಂತಾದೇವಿಯವರ ಹುಟ್ಟು ಹೆಸರು ದಾನಮ್ಮ. ಬೆಳಗಾವಿ ವನಿತಾ ವಿದ್ಯಾಲಯದಲ್ಲಿ ಶಾಲಾ. ಶಿಕ್ಷಣ ಪ್ರಾರಂಭಿಸಿದ ಇವರು ಹೈಸ್ಕೂಲ್ ಎರಡನೇ ತರಗತಿಯಲ್ಲಿ ಇರುವಾಗ ಶಾಲೆಯನ್ನು ಬಿಡಬೇಕಾಯಿತು. ಮನೆಯಲ್ಲಿಯೇ ಕುಳಿತು ಇಂಗ್ಲಿಷ್ ಹಿಂದಿ ಭಾಷೆಯನ್ನು ಕಲಿತರು. ಸಾಹಿತ್ಯ ಪರಿಷತ್ತಿನ ಕಾವ್ಯ, ಜಾಣ ಪರೀಕ್ಷೆಗಳಿಗೆ ಕುಳಿತು ಉತ್ತೀರ್ಣರಾದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಸ.ಸ. ಮಾಳವಾಡರ ಧರ್ಮಪತ್ನಿ ಅದಮೇಲೆ ಇವರ ವ್ಯಾಸಂಗಕ್ಕೆ ಅವರಿಂದ ಸ್ಫೂರ್ತಿ ಮಾರ್ಗದರ್ಶನ ಸಿಕ್ಕಿತು. ಮಹಿಳೆಯರ ಉನ್ನತಿಗಾಗಿ ಶ್ರಮಿಸುತ್ತ ಸಾಮಾಜಿಕ ಸೇವೆಯಲ್ಲಿ ನಿರತರಾದ ಶಾಂತಾದೇವಿ ಅವರು ಧಾರವಾಡ ಜಿಲ್ಲಾ ಮಹಿಳಾ ಮಂಡಳಕ್ಕೆ ಹೊಸ ಚೈತನ್ಯ ನೀಡಿದರು. ೧೯೫೮ ರಿಂದ ಧಾರವಾಡ ಜಿಲ್ಲಾ ರಿಮ್ಯಾಂಡ್ ಹೋಂ ಕಾರ್ಯಕಾರಿ ಮಂಡಳದ ಸದಸ್ಯೆಯಾಗಿಯೂ ೧೯೫೯ ರಿಂದ ೧೯೬೪ ವರೆಗೆ ಆನರರಿ ಲೇಡಿ ಮ್ಯಾಜಿಸ್ಟ್ರೇಟ್ ಆಗಿಯೂ ಸೇವೆ ಸಲ್ಲಿಸಿದರು. ರಾಜ್ಯಮಟ್ಟದ ಸಾಮಾಜಿಕ ನೈತಿಕ ಸ್ವಾಸ್ಥ ಸಮಿತಿ ಸದಸ್ಯರಾಗಿ ಕೆಲಸ ಮಾಡಿದರು. ಧಾರವಾಡದ ಗಾಂಧೀ ಶಾಂತಿ ಪ್ರತಿಷ್ಠಾನ ಕೇಂದ್ರದಲ್ಲಿ ಮಹಿಳಾ ವಿಭಾಗಕ್ಕೆ ಕಾರ್ಯಾಧ್ಯಕ್ಷರಾಗಿ, ತೋಟಗಾರಿಕಾ ಸಂಸ್ಥೆಯ ಸದಸ್ಯೆಯಾಗಿ, ಜಿಲ್ಲಾ ಅಭಿವೃದ್ಧಿ ಮಂಡಳದಲ್ಲಿ ಮಹಿಳಾ ಸಾಮಾಜಿಕ ಶಿಕ್ಷಣ ಸಮಿತಿ ಸದಸ್ಯೆಯಾಗಿ ಹೀಗೆ ನಾನಾ ಸಂಸ್ಥೆಗಳಲ್ಲಿ ಮಹಿಳೆಯರ ಉನ್ನತಿಗೆ ಶ್ರಮಿಸಿದರು.

ಶಾಂತಾದೇವಿ ಮಾಳವಾಡರ ಸಾಹಿತ್ಯ ಸೇವೆಗೆ ಮತ್ತು ಮಹಿಳಾ ಉನ್ನತಿಗಾಗಿ ಶ್ರಮಿಸಿದ್ದಕ್ಕೆ ಅನೇಕ ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ. ಪ್ರಶಸ್ತಿ ನೀಡಿವೆ. ೧೯೭೭ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೮೨ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೯೭ರಲ್ಲಿ ಕರ್ನಾಟಕ ಸರ್ಕಾರದ ಅತ್ತಿಮಬ್ಬೆ ಪ್ರಶಸ್ತಿ ಇವರಿಗೆ ದೊರಕಿದೆ. ಬಾಗಲುಕೋಟೆಯಲ್ಲಿ ೨೦೦೦ರಲ್ಲಿ ಜರುಗಿದ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪರಿಷತ್ತಿನ ಸಾಹಿತ್ಯ ಸಮ್ಮೇಳನಗಳಲ್ಲಿ ಮಹಿಳಾ ಅಧ್ಯಕ್ಷಿಣಿಯದರಲ್ಲಿ ಇವರು ೨ನೆಯವರು ಆಗಿದ್ದರು. ೧೯೯೭ರಲ್ಲಿ ಸ್ವರಲಿಪಿ ಪ್ರತಿಷ್ಠಾನದ ಲಿಪಿಪ್ರಾಜ್ಞ ಪ್ರಶಸ್ತಿ, ೧೯೯೬ರಲ್ಲಿ ಚಿತ್ರದುರ್ಗದ ಬೃಹ್ಮಮಠದ ಜಗದ್ಗುರುಗಳಿಂದ ಸಾಹಿತ್ಯರತ್ನ ಪ್ರಶಸ್ತಿ, ೧೯೯೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುನ್ನತ ಪ್ರಶಸ್ತಿಯಾದ ಗೌರವ ಸದಸ್ಯತ್ವ, ೧೯೯೧ರಲ್ಲಿ ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ೧೯೯೫ರಲ್ಲಿ ಅಖಿಲ ಕರ್ನಾಟಕ ಲೇಖಕಿಯರ ಮೂರನೇ ಸಮ್ಮೇಳನದ ಅಧ್ಯಕ್ಷತೆ ಮೊದಲಾದ ಸನ್ಮಾನ ಪ್ರಶಸ್ತಿ ಗೌರವಗಳು ಇವರಿಗೆ ಲಭ್ಯವಾಗಿವೆ.

೪೫ಕ್ಕೂ ಜಾಸ್ತಿ ಕೃತಿಗಳನ್ನು ರಚಿಸಿರುವ ಶಾಂತಾದೇವಿ ಮಾಳವಾಡರು ಕಥೆ, ಕಾದಂಬರಿ, ವೈಚಾರಿಕ ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ. ಅವರ ಕೆಲವು ಮುಖ್ಯ ಕೃತಿಗಳು ಹೀಗಿವೆ.

ಗೃಹೋಪಯೋಗಿ ಕೃತಿಗಳು : ಸೋಗಿನಮನೆ, ಮಹಿಳೆಯರ ಅಲಂಕಾರ, ದಾಂಪತ್ಯಯೋಗ, ವಧುವಿಗೆ ಉಡುಗೊರೆ, ರಸಪಾಕ ಗ್ರಂಥಗಳು.

ಕಥಾಸಂಕಲನಗಳು : ಮೊಗ್ಗೆಯಮಾಲೆ, ಕುಂಕುಮ ಬಲ.

ಕಾದಂಬರಿ : ಬಸವ ಪ್ರಕಾಶ, ಶೂರರಾಣಿ, ಕೆಳದಿಯ ಚೆನ್ನಮ್ಮಾಜಿ.

ಜೀವನಚರಿತ್ರೆಗಳು : ಭಾರತದ ಮಾನಸ ಪುತ್ರಿಯರು, ನೀಲಾಂಬಿಕೆ, ಬೆಳವಾಡಿ ಮಲ್ಲಮ್ಮ, ಗಂಗಾಂಬಿಕೆ, ಕನ್ನಡತಾಯಿ ಇತ್ಯಾದಿ.

ಶಾಂತಾದೇವಿ ಮಾಳವಾಡರು ೭-೮-೨೦೦೫ರಲ್ಲಿ ದೈವಾಧೀನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೬೮
ಅಧ್ಯಕ್ಷರು, ಶಾಂತಾದೇವಿ ಮಾಳವಾಡ
ದಿನಾಂಕ ೨೪, ೨೫, ೨೬ ಜೂನ್ ೨೦೦೦
ಸ್ಥಳ : ಬಾಗಲಕೋಟೆ

ಒಗ್ಗೂಡಲಿ ಎರಡು ಸಂಸ್ಥೆ

ಕನ್ನಡದ ಕಣ್ವರೆನಿಸಿದ್ದ ಬಿ.ಎಂ.ಶ್ರೀ ಅವರು ತಮ್ಮ ಒಂದು ಭಾಷಣದಲ್ಲಿ ಹೀಗೆ ಹೇಳಿದ್ದರು. ಧಾರವಾಡ ಕನ್ನಡ ಗಂಡು ಕನ್ನಡ, ಬೆಂಗಳೂರು ಕನ್ನಡ, ಹೆಣ್ಣು ಕನ್ನಡ, ಈ ಎರಡೂ ಭಾಷೆಯ ನಾಡು ಒಂದಾದರೆ ಒಳಿತು, ನಾಡಿನ ಜನತೆಯಲ್ಲಿ ಭಾವೈಕ್ಯ ಮೂಡಿದರೆ, ಕನ್ನಡದ ಅಭಿಮಾನ ರಕ್ತದ ಕಣಕಣದಲ್ಲಿ ಮಿಡಿದರೆ ನಾಡು ಅಖಂಡ ಕರ್ನಾಟಕ ಆಗುವುದು ಎನ್ನುವ ಅವರ ಮಾತುಗಳೂ ಇಂದಿಗೂ ಪ್ರಸ್ತುತವಾಗಿದೆ. ಶತಮಾನ ಕಂಡ ಉತ್ತರ ಕರ್ನಾಟಕದ ಹಿರಿಯ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘ, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಪರಸ್ಪರ ಕೂಡಿಕೊಂಡು ಒಂದಾಗಿ ಕನ್ನಡದ ಕಾರ್ಯಕ್ಕೆ ಅಣಿಯಾದರೆ ನಾಡು ನುಡಿಯ ಅಭಿಮಾನ ಜನಕೋಟಿಯಲ್ಲಿ ಇನ್ನೂ ಹೆಚ್ಚುಹೆಚ್ಚಾಗಿ ಬೆಳೆಯುತ್ತದೆಂಬ ವಿಜ್ಞಾನ ನನ್ನದಾಗಿದೆ.

ಸಮ್ಮೇಳನಗಳು ಅಭಿಮಾನ ಬೆಳಸಲಿ

ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಇನ್ನೂ ಹಲವಾರು ಪ್ರಶಸ್ತಿಗಳನ್ನು ಪಡೆದ ಪ್ರತಿಭಾವಂತರಿದ್ದಾರೆ. ಇನ್ನೂ ಹಲವಾರು ಪ್ರಶಸ್ತಿಗಳನ್ನು ಪಡೆದ ಪ್ರತಿಭಾವಂತರಿದ್ದಾರೆ. ಇಷ್ಟೆಲ್ಲಾ ಇದ್ದರೂ, ಒಂದೇ ಒಂದು ಕೊರತೆಯಿದೆ. ಅದು ನಾಡು ನುಡಿಯ ಅಭಿಮಾನದ ಕೊರೆತ. ಕನ್ನಡಾಭಿಮಾನ ನಮ್ಮೆಲ್ಲರ ರಕ್ತ ಕಣಕಣದಲ್ಲಿರಬೇಕು. ನರನರಗಳಲ್ಲಿ ಮಿಡಿಯಬೇಕು. ಕನ್ನಡ ಎಂಬ ಮಂತ್ರ ಸದಾ ನಮ್ಮೆಲ್ಲರ ಮನದಲ್ಲಿ ಮಿಡಿಯುತಿರಲಿ. ಕನ್ನಡಿಗರಲ್ಲಿ ನಾಡು-ನುಡಿ-ಸಾಹಿತ್ಯ-ಕಲೆ ಇವುಗಳ ಅಭಿಮಾನವನ್ನು ಬೆಳೆಸುವುದು ಇಂಥ ಕನ್ನಡ ಸಾಹಿತ್ಯ ಸಮ್ಮೇಳನಗಳ ಪ್ರಧಾನ ಗುರಿಯಾಗಿರಬೇಕು.


ಪರಿಷತ್ತಿಗೆ ಸರ್ಕಾರದ ನೆರವು ಎಷ್ಟು ಬೇಕು?

ಕನ್ನಡ ಸಂಸ್ಕೃತಿ ಇಲಾಖೆಯು ಬೇಂದ್ರೆ ಭವನ, ಸಾಹಿತ್ಯ ಭವನ, ಮನಸೂರ ಟ್ರಸ್ಟ್ ಇವೇ ಮೊದಲಾದ ವಿವಿಧ ಟ್ರಸ್ಟ್‌ಗಳಿಗೆ ನೆರವು ನೀಡಿದ್ದು ಅವು ಈಗ ಅನಾಥ ಸ್ಥಿತಿಯಲ್ಲಿವೆ. ಅವುಗಳಲ್ಲಿ ಸಾಹಿತ್ಯ ಸಂಸ್ಕೃತಿ ಕಾರ್ಯಚಟುವಟಿಕೆಗಳು ನಿರಂತರವಾಗಿ ನಡೆಯುವಂತೆ ಕ್ರಮ ಕೈಕೊಳ್ಳಬೇಕು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಾಹಿತ್ಯ ಸಂಸ್ಥೆಯಾಗಿದೆ. ಕನ್ನಡದ ಕಾರ್ಯಗಳನ್ನು ಕ್ರಿಯಾಶೀಲವಾಗಿ ನಡೆಸುವುದಕ್ಕೆ ಪ್ರತಿವರ್ಷ ಕನಿಷ್ಠ ೧ ಕೋಟಿ ರೂಪಾಯಿಗಳ ಆರ್ಥಿಕ ನೆರವನ್ನು ನಿರಂತರವಾಗಿ ನೀಡಬೇಕು.

❖❖

೭೯ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಯು.ಆರ್. ಅನಂತಮೂರ್ತಿ



ಸಮಕಾಲೀನ ಬರಹಗಾರರಲ್ಲಿ ಅದಮ್ಯ ಚೇತನದ, ಬಹುಪ್ರತಿಭೆಯ ಯು.ಆರ್. ಅನಂತಮೂರ್ತಿ ಅವರು. ಉಡುಪಿ ರಾಜಗೋಪಾಲಾಚಾರ್ಯ-ಸತ್ಯಮ್ಮ ದಂಪತಿಗಳ ಹಿರಿಯ ಪುತ್ರರಾಗಿ ೨೧-೧೨-೧೯೩೨ರಲ್ಲಿ ತೀರ್ಥಹಳ್ಳಿಯ ಮೇಳಿಗೆಯಲ್ಲಿ ಮಲೆನಾಡಿಗರಾಗಿ ಜನಿಸಿದರು. ದೂರ್ವಾಸಪುರದಲ್ಲಿ ಸಾಂಪ್ರದಾಯಿಕ ಪದ್ಧತಿಯಲ್ಲಿ ಸಂಸ್ಕೃತ ಕಲಿತು ಶಾಲಾ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಪಡೆದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿ ಗಳಿಸಿದರು. ೧೯೬೬ರಲ್ಲಿ ಬರ್ಮಿಂಗ್ ಹ್ಯಾಂ ವಿಶ್ವವಿದ್ಯಾಲಯದಲ್ಲಿ ಪಿ.ಎಚ್‌ಡಿ ಪದವಿ ಪಡೆದರು.

೧೯೫೬ರಲ್ಲಿ ಹಾಸನದ ಕಾಲೇಜಿನಲ್ಲಿ ಅಧ್ಯಾಪಕರಾದ ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ೧೯೮೭-೯೧ ಕಾರ್ಯನಿರ್ವಹಿಸಿದರು. ೧೯೯೨-೯೩ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ ಅಧ್ಯಕ್ಷರಾಗಿ ದೆಹಲಿಯ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೋಷಿಯಲ್ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು. ೨೦೦೩ರಲ್ಲಿ ಕೇಂದ್ರ ಸರ್ಕಾರದ ಫಿಲಿಂ ಇನ್ಸಿಟ್ಯೂಟ್ ಅಂಡ್ ಟೆಲಿವಿಷನ್ ಪೂನಾದ ಅಧ್ಯಕ್ಷರಾಗಿ ನಿಯುಕ್ತರಾಗಿದ್ದರು.

ಇಂಗ್ಲಿಷಿನಲ್ಲಿ ಎಂ.ಎ. ನಲ್ಲಿ ಸ್ವರ್ಣಪದಕ ಪಡೆದ ಇವರು ೧೯೭೦ರಲ್ಲಿ ಸಂಸ್ಕಾರ ಕಥೆಗೆ ಚಲನಚಿತ್ರ ಪ್ರಶಸ್ತಿ, ೧೯೮೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ೧೯೮೪ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೯೪ರಲ್ಲಿ ಜ್ಞಾನಪೀಠ ಪ್ರಶಸ್ತಿ, ೧೯೯೫ರಲ್ಲಿ ಡಿಲಿಟ್ ಗೌರವ, ೧೯೯೫ರಲ್ಲಿ ಶಿಖರ ಸನ್ಮಾನ್, ೧೯೯೮ರಲ್ಲಿ ಪದ್ಮಭೂಷಣ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದರು.

ಕನ್ನಡದಲ್ಲಿ ನವ್ಯಸಾಹಿತಿಯಾಗಿ, ವಾದವಿವಾದಗಳನ್ನೆಬ್ಬಿಸಿದಂಥ ಸಂಸ್ಕಾರ ಕಾದಂಬರಿಯನ್ನು ಬರೆದ ಅನಂತಮೂರ್ತಿ ಅವರು ಅನೇಕ ಕಥೆ ಕಾದಂಬರಿಗಳನ್ನು ವಿಮರ್ಶ ಗ್ರಂಥಗಳನ್ನು ರಚಿಸಿದ್ದಾರೆ. ಕೆಲವು ಪ್ರಮುಖ ಕೃತಿಗಳಿವು : ಸಂಸ್ಕಾರ, ಭಾರತೀಪುರ, ಘಟಶ್ರಾದ್ಧ, ಅವಸ್ಥೆ, ದಿವ್ಯ (ಕಾದಂಬರಿಗಳು) ಸೂರ್ಯನ ಕುದುರೆ, ಆಕಾಶ ಬೆಕ್ಕು ವಡಾನಿ, ಪ್ರಶ್ನೆ (ಕಥೆಗಳು) ಆವಾಹನೆ (ನಾಟಕ) ಸನ್ನಿವೇಶ, ಸಮಕ್ಷಮ (ವಿಮರ್ಶೆ) ದಾವ್ ದ ಜಿಂಗ್ (ಭಾಷಾಂತರ) ಇತ್ಯಾದಿ.

ಇವರು ದಿನಾಂಕ ೨೧-೧೨-೨೦೧೪ ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೬೯
ಅಧ್ಯಕ್ಷರು, ಯು.ಆರ್. ಅನಂತಮೂರ್ತಿ
ದಿನಾಂಕ ೧೫, ೧೬, ೧೭ ಫೆಬ್ರವರಿ ೨೦೦೨
ಸ್ಥಳ : ತುಮಕೂರು
(೨೦೦೧ರಲ್ಲಿ ಸಮ್ಮೇಳನ ನಡೆಯಲಿಲ್ಲ)

ಪರಿಷತ್ತಿಗೆ ಸಲಹೆ

ಪರಿಷತ್ತಿಗೆ ನನ್ನ ಸಲಹೆಯೇನು? ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ ಕೆಲಸ ಮಾಡುವವ ಕರ್ನಾಟಕದ ಎಲ್ಲೆಲ್ಲೂ ಸದಸ್ಯರನ್ನು ಹೊಂದಿದ ಈ ದೊಡ್ಡ ಸಂಸ್ಥೆಯನ್ನು ಸಾಹಿತ್ಯದಿಂದ ದೂರವಾಗುತ್ತಿದೆಯೆಂದು, ಸೃಜನಶೀಲ ಬರಹಗಾರರನ್ನು ಕಡೆಗಣಿಸುತ್ತಿದೆಯೆಂದು ನಾನು ಈ ಹಿಂದೆ ಟೀಕಿಸಿದ್ದಿದೆ. ಆದರೆ ಅದು ಅವಸರದ ಟೀಕೆ ಎಂದು ನನಗೀಗ ಅನ್ನಿಸುತ್ತಿದೆ. ಕನ್ನಡ ಭಾಷೆಯನ್ನು ಹೊಸ ದೃಷ್ಟಿಕೋನದಿಂದ ನೋಡುವಂತೆ ಮಾಡುತ್ತಿರುವ ಡಾ.ಡಿ.ಎನ್. ಶಂಕರಭಟ್ಟರು, ಪಂಪನನ್ನು ವಚನಕಾರರನ್ನು ಈ ನಮ್ಮ ಕಾಲದ ಅನುಭವಕ್ಕೆ ಲಭ್ಯವಾಗುವಂತೆ ಮಾಡಿರುವ ಡಾ. ಎಲ್. ಬಸವರಾಜರು ಸೃಜನಶೀಲ ಚಿಂತಕರಲ್ಲವೆ? ಆಳವಾದ ಪಾಂಡಿತ್ಯಕ್ಕೆ ಮನ್ನಣೆಯಿಲ್ಲದ ಸೃಜನಶೀಲತೆ ಜರ್ನಲಿಸಮ್ಮಿನ ಸಭ್ಯತನವನ್ನು ಮಾತ್ರ ಪಡೆದಿರುತ್ತದೆ. ಪರಿಷತ್ತನ್ನು ಲೇಖಕರ ದೃಷ್ಟಿಯಿಂದ ಮಾತ್ರ ನೋಡುವುದು ಸಲ್ಲದು.

ಒಂದೊಂದು ಕಾಲದಲ್ಲಿ ಕನ್ನಡದ ಎಲ್ಲ ಕೆಲಸದ ಜವಾಬ್ದಾರಿಯನ್ನು ಪರಿಷತ್ತು ಮಾತ್ರ ಹೊರಬೇಕಾಗಿ ಬಂದಿತ್ತು. ಆದರೆ ಈಗ ಸಾಹಿತ್ಯದ ಕೆಲಸಕ್ಕೆ ಅಕಾಡೆಮಿ ಇದೆ. ಪುಸ್ತಕ ಪ್ರಕಾಶನಕ್ಕೆ ಪುಸ್ತಕ ಪ್ರಾಧಿಕಾರವಿದೆ. ಕನ್ನಡ ಭಾಷೆಯನ್ನು ರಕ್ಷಿಸಲು ಸರ್ಕಾರವೇ ರಚಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರವಿದೆ. ಜ್ಞಾನ ಶಾಖೆಗಳ ಸರ್ವತೋಮುಖ ಅಭಿವೃದ್ಧಿಗೆ ವಿಶ್ವವಿದ್ಯಾಲಯವೇ ಹಂಪಿಯಲ್ಲಿದೆ. ಈ ನಡುವೆ ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸವೇನು?

ಇದಕ್ಕೆ ಉತ್ತರ ಸುಲಭವೂ ಹೌದು ಕಷ್ಟವೂ ಹೌದು ಸುಲಭ ಯಾಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಸದಸ್ಯರನ್ನು ಪಡೆದ, ಪಡೆದಿರದಿದ್ದರೆ ಪಡೆಯಬಹುದಾದ, ಪರಿಷತ್ತು ಉಳಿದ ಎಲ್ಲ ಸಂಸ್ಥೆಗಳ ಕೆಲಸವನ್ನು ಗ್ರಾಮ ಗ್ರಾಮಗಳಿಗೆ ಮುಟ್ಟಿಸಬೇಕೆಂದು ಹೇಳಿದರೆ ಮುಗಿಯಿತು.

ಆದರೆ ಇದು ಕಷ್ಟವು ಹೌದು. ಯಾಕೆಂದರೆ ಇದನ್ನು ಮಾಡಲು ಸಾಕಷ್ಟು ಬಲಬೇಕು. ಕೇರಳದ ಶಾಸ್ತ್ರ ಸಾಹಿತ್ಯ ಪರಿಷತ್ತಿನಲ್ಲಿ ಇರುವಂತಹ ನಿಷ್ಠಾವಂತ ಕಾರ್ಯಕರ್ತರನ್ನು ಪರಿಷತ್ತು ಪಡೆದು ಗುರುತಿಸಬೇಕು. ಇವರು ಗ್ರಾಮ ಗ್ರಾಮಗಳಲ್ಲಿ ಲೈಬ್ರರಿಗಳನ್ನು ತೆರೆಯುವ ಚಳುವಳಿ ಕೈಗೊಳ್ಳಬೇಕು. ಅಕ್ಷರ ಜ್ಞಾನವನ್ನು ಸರ್ವತ್ರಗೊಳಿಸುವ ಕೆಲಸದಲ್ಲಿ ಮುಂದಾಗಬೇಕು. ಸಹಶಿಕ್ಷಕರಿಗೆ ಅಗತ್ಯವಾದ ಪುಸ್ತಕ ಪ್ರಕಟನೆಯ ಕಾರ್ಯವನ್ನು ಎಲ್ಲ ಬರಹಗಾರರ ಸಹಾಯದಿಂದ ನಿರ್ವಹಿಸಬೇಕು. ಕನ್ನಡದ ಬುಡವನ್ನು ಭದ್ರಮಾಡುವ ಈ ಕೆಲಸಗಳು ನಾನು ಕೂಡಲೇ ಗುರುತಿಸಿದ ಸಮಾನತೆಯ ಹಸಿವನ್ನೂ ಆಧುನಿಕತೆಯ ಹಸಿವನ್ನೂ ತಣಿಸುವಂಥದ್ದಾಗಿರುತ್ತದೆ. ಜಾಗತೀಕರಣದಲ್ಲಿ ಕನ್ನಡ ಮೂಲೆಗುಂಪಾಗದಂತೆ ಕನ್ನಡ ಜನಶಕ್ತಿಯನ್ನು ಆಗ ಬೆಳೆಸಿದಂತಾಗುತ್ತದೆ. ಈ ಸಲಹೆಯನ್ನು ಪರಿಷತ್ತಿನ ಸದಸ್ಯರೆದುರು ವಿನಯದಿಂದ ಇಡುತ್ತಿದ್ದೇನೆ.

❖❖

೭೦ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಪಾಟೀಲ ಪುಟ್ಟಪ್ಪ



ಪತ್ರಿಕೋದ್ಯಮ ಮತ್ತು ಸಾಹಿತ್ಯ ರಚನೆ ಮತ್ತು ಕನ್ನಡ ಹೋರಾಟದಲ್ಲಿ ಗಣ್ಯರಾದ ಪಾಟೀಲ ಪುಟ್ಟಪ್ಪನವರು 'ಪಾಪು' ಎಂದೇ ಪ್ರಸಿದ್ಧರಾಗಿದ್ದಾರೆ. ಇವರು ಹಾವೇರಿ ಜಿಲ್ಲೆಯ ಕುರುಬಗೊಂಡ ಗ್ರಾಮದಲ್ಲಿ ಸಿದ್ಧಲಿಂಗಪ್ಪ-ಮಲ್ಲಮ್ಮ ದಂಪತಿಗಳಿಗೆ ೧೪-೧-೧೯೨೨ರಲ್ಲಿ ಜನಿಸಿದರು. ಶಾಲಾ ಶಿಕ್ಷಣವನ್ನು ಹಲಗೇರಿ, ಬ್ಯಾಡಗಿ, ಚಿತ್ರದುರ್ಗ, ಹಾವೇರಿಗಳಲ್ಲಿ ಮುಗಿಸಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಪೂರೈಸಿ ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಎಂ.ಎಂ.ಬಿ. ವ್ಯಾಸಂಗ ಮಾಡಿದರು. ೧೯೪೯ರಲ್ಲಿ ಕ್ಯಾಲಿಪೋರ್ನಿಯಾ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಎಂ.ಎಫ್.ಪಿ ಪದವಿ ಗಳಿಸಿದರು.

ವಿಶಾಲ ಕರ್ನಾಟಕ ಪತ್ರಿಕೆ ಸಂಪಾದಕರಾಗಿ ಕೆಲಸಮಾಡಿದ ಪುಟ್ಟಪ್ಪನವರು ಕ್ಯಾಲಿಫೋರ್ನಿಯಾಗೆ ಹೋಗಿ ಬಂದ ಮೇಲೆ ನವಯುಗ ಮಾಸಪತ್ರಿಕೆ ಸಂಪಾದಕರಾದರು. ಆಮೇಲೆ ೧೯೫೪ರಲ್ಲಿ ಪ್ರಪಂಚ ವಾರಪತ್ರಿಕೆಯನ್ನು ತಾವೇ ಹುಟ್ಟು ಹಾಕಿದರು. ೧೯೫೭ರಲ್ಲಿ ಸಂಗಮ ಎಂಬ ಕನ್ನಡ ಡೈಜೆಸ್ಟ್‌ನ್ನು ಪ್ರಾರಂಭಿಸಿದರು. ೧೯೫೯ರಲ್ಲಿ ವಿಶ್ವವಾಣಿ ದಿನಪತ್ರಿಕೆಯನ್ನೂ ಮನೋರಮಾ ಎಂಬ ಚಲನಚಿತ್ರ ಮಾಸಿಕವನ್ನೂ ಆರಂಭಿಸಿದರು. ಹೀಗೆ ಪತ್ರಿಕೆಗಳನ್ನು ಹುಟ್ಟು ಹಾಕುತ್ತಲೂ ನಡೆಸುತ್ತಲೂ ಪತ್ರಿಕೋದ್ಯಮದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದರು. ಇದರ ಜೊತೆಗೆ ಪ್ರಜಾವಾಣಿ ಪತ್ರಿಕೆಯಲ್ಲಿ, ಅನಂತರ ಕನ್ನಡಪ್ರಭ ಪತ್ರಿಕೆಯಲ್ಲಿ ಅಂಕಣಕಾರರಾಗಿ ಮಿಂಚಿದರು. ಹೀಗೆ ಪತ್ರಿಕಾ ಸಂಪಾದಕರಾಗಿ ನಾಡಿನ ಮನೆಮಾತಾದರು. ಇದಲ್ಲದೆ ಇತರ ಸಂಸ್ಥೆಗಳಲ್ಲಿ ಸಾರ್ವಜನಿಕ ರಂಗಗಳಲ್ಲಿ ದುಡಿದಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರು. ರಾಜ್ಯ ಸಭೆಯ ಸದಸ್ಯರಾಗಿ (೧೯೬೨-೭೧) ಧಾರವಾಡ ಮತ್ತು ಕರ್ನಾಟಕದ ಸಮಸ್ಯೆಗಳಿಗೆ ಧ್ವನಿಯಾದರು. ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ೧೯೬೭ ರಿಂದ ಅಧ್ಯಕ್ಷರಾಗಿದ್ದಾರೆ. ಗೋಕಾಕ ವರದಿ ಜಾರಿಗೆ ಬರಲು ನಡೆದ ಚಳುವಳಿಯ ನೇತೃತ್ವ ವಹಿಸಿದ್ದರು. ಕರ್ನಾಟಕ ಸರಕಾರ ಕನ್ನಡ ಕಾವಲು ಮತ್ತು ಗಡಿಸಲಹಾ ಸಮಿತಿ ರಚಿಸಿ ಇವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದಾಗ ಕನ್ನಡ ಅನುಷ್ಠಾನಕ್ಕೆ ಇವರು ಶ್ರಮಿಸಿದರು. ೧೯೯೨ರಲ್ಲಿ ಅಖಿಲ ಕರ್ನಾಟಕ ಹೋರಾಟ ಸಂಘಗಳ ಒಕ್ಕೂಟದ ಅಧ್ಯಕ್ಷರಾಗಿದ್ದರು. ಹೀಗೆ ನಾನಾ ರಂಗಗಳಲ್ಲಿ ಸೇವೆ ಸಲ್ಲಿಸಿರುವ ಇವರಿಗೆ ಪ್ರಶಸ್ತಿ ಗೌರವಗಳು ಸಾಕಷ್ಟು ಸಂದಿವೆ.

ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ೧೯೯೪ರಲ್ಲಿ ಡಿ'ಲಿಟ್' ಪದವಿ ಕೊಟ್ಟಿದೆ. ಕರ್ನಾಟಕ ಸರಕಾರ ನೀಡುವ ಟಿ.ಎಸ್.ಆರ್.ಪ್ರಶಸ್ತಿ ಇವರಿಗೆ ೧೯೯೪ರಲ್ಲಿ ಲಭಿಸಿದೆ. ೧೯೭೬ರಲ್ಲಿ ರಾಜ್ಯ ಪ್ರಶಸ್ತಿ, ೧೯೯೦ ವಿಶ್ವೇಶ್ವರಯ್ಯ ಭಾರತ ಜ್ಯೋತಿ ಪ್ರಶಸ್ತಿ, ೧೯೯೯ರಲ್ಲಿ ಹುಬ್ಬಳ್ಳಿಯ ತಿಲಕ್ ಮೊಹರೆ ಪ್ರಶಸ್ತಿ, ೧೯೯೬ರಲ್ಲಿ ಹಂಪಿ ವಿಶ್ವವಿದ್ಯಾಲದ ನಾಡೋಜ ಗೌರವ, ೨೦೦೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, ೨೦೦೨ರಲ್ಲಿ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ, ಇತ್ಯಾದಿ ಲಭಿಸಿವೆ. ಬೆಳಗಾವಿಯಲ್ಲಿ ನಡೆದ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ ೨೦೦೩ರಲ್ಲಿ ದೊರೆಕಿತು.

ಪಾಟೀಲ ಪುಟ್ಟಪ್ಪನವರು ಕೇವಲ ಪತ್ರಕರ್ತರಲ್ಲ ಗ್ರಂಥಕರ್ತರೂ ಹೌದು. ಅವರ ಬರೆದ ಗ್ರಂಥಗಳಲ್ಲಿ ಕೆಲವು ಹೀಗಿವೆ: ನನ್ನದು ಈ ಕನ್ನಡ ನಾಡು(೧೯೭೫), ನಮ್ಮದು ಈ ಭರತಭೂಮಿ(೧೯೭೭), ಕರ್ನಾಟಕ ಕಥೆ(೧೯೯೧), ಸೋವಿಯತ್ ದೇಶ ಕಂಡೆ(೧೯೪೪), ಗವಾಕ್ಷಿ ತೆರೆಯಿತು(೧೯೭೪), ಶಿಲಾಬಾಲಿಕೆ ನುಡಿದಳು(೧೯೭೪), ನಮ್ಮ ದೇಶ ನಮ್ಮ ಜನ(೧೯೭೩), ಈಗ ಹೊಸದನ್ನು ಕಟ್ಟೋಣ(೧೯೭೫), ಪಾಪು ಪ್ರಪಂಚ(೨೦೦೦).

ಕನ್ನಡ ಸಾಹಿತ್ಯ ಸಮ್ಮೇಳನ-೭೦
ಅಧ್ಯಕ್ಷರು, ಪಾಟೀಲ ಪುಟ್ಟಪ್ಪ
ದಿನಾಂಕ ೭, ೮, ೯ ಮಾರ್ಚ್ ೨೦೦೩
ಸ್ಥಳ : ಬೆಳಗಾವಿ

ಇಂದೂ ಅದೇ ಸಮೀಕ್ಷೆ

ಪ್ರೊಫೆಸರ್ ಎ.ಆರ್. ಕೃಷ್ಣಶಾಸ್ತ್ರಿಗಳು, ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಭಾಷಣದಲ್ಲಿ ಕನ್ನಡಕ್ಕೋಸುಗ ಕಳವಳಗೊಂಡು, "ನಿಮಗೆ ಕನ್ನಡ ಬೇಡವೋ? ಹಾಗಿದ್ದರೆ ಅದನ್ನು ಅರಬ್ಬೀ ಸಮುದ್ರಕ್ಕೆ ತಳ್ಳಿಬಿಡಿ" ಎಂದು ಮನನೊಂದು ನುಡಿದಿದ್ದರು. ಕನ್ನಡದ ಆಚಾರ್ಯ ಪುರುಷರಾದ ಪ್ರೊ. ಬಿ.ಎಂ. ಶ್ರೀಕಂಠಯ್ಯ ಅವರು ತೊಂಬತ್ತು ವರ್ಷಗಳ ಹಿಂದೆ ೧೯೧೧ ರಲ್ಲಿ ತಮ್ಮ ಮೊದಲ ಸಾರ್ವಜನಿಕ ಭಾಷಣವನ್ನು ಕರ್ನಾಟಕದ ಬಗೆಗೆ ಕನ್ನಡಿಗರನ್ನು ಜಾಗೃತಗೊಳಿಸಿದ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಕೊಟ್ಟರು. ಆಗ ಅವರು ತಮ್ಮ ಭಾಷಣಕ್ಕೆ ಆರಿಸಿಕೊಂಡ ವಿಷಯ "ಕನ್ನಡ ಮಾತು ತಲೆಯೆತ್ತುವ ಬಗೆ". ಅವರು ಆ ಮಾತು ಹೇಳಿ ಒಂದು ಶತಮಾನವೇ ಸಮೀಪಿಸುತ್ತ ಬಂದಿದ್ದರೂ, ಅಂದು ಬಿ.ಎಂ.ಶ್ರೀ ಅವರು ಆಡಿದ ಮಾತನ್ನೇ ಬಿಡಲಾಗದ ಒಂದು ಧಾರ್ಮಿಕ ವಿಧಿಯಂತೆ ಇಂದೂ ಹೇಳುತ್ತಿದ್ದೇವೆ.


ಮಿತವ್ಯಯದ ಕನ್ನಡ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮೊದಲಾದ ಸಂಸ್ಥೆಗಳು, ಸಾಹಿತ್ಯ ಸಂಸ್ಕೃತಿ ಸಂವರ್ಧನೆಯಲ್ಲಿ ಹಲವಾರು ದಶಕಗಳಿಂದ ಬಹು ಉಪಯುಕ್ತ ಕಾರ್ಯವನ್ನು ಮಾಡಿಕೊಂಡು ಬಂದಿವೆ. ಅವುಗಳ ಕಾರ್ಯಚಟುವಟಿಕೆಗಳು ಬೆಳೆದು ಇನ್ನೂ ಹೆಚ್ಚು ಮಾಡಬೇಕಾದ ಆವಶ್ಯಕತೆ ಇದೆಯೆನ್ನುವುದನ್ನು ಸರಕಾರ ಮನವರಿಕೆ ಮಾಡಿಕೊಳ್ಳಬೇಕು. ಸರಕಾರ ಮಾಡುವುದಕ್ಕಿಂತಲೂ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ಕಾರ್ಯವನ್ನು ಈ ಸಂಸ್ಥೆಗಳು ಕಡಿಮೆ ಖರ್ಚಿನಲ್ಲಿ ಮಾಡುತ್ತವೆ.

❖❖

೭೧ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಕಮಲಾ ಹಂಪನಾ



ಲೇಖಕಿಯಾಗಿ ಸಾಹಿತ್ಯ ವಲಯದಲ್ಲಿ ಚಿರಪರಿಚಿತರಾಗಿರುವ ಕಮಲಾ ಹಂಪನಾ ಅವರು, ಬೆಂಗಳೂರು ಜಿಲ್ಲೆ ದೇವನಹಳ್ಳಿಯಲ್ಲಿ ಸಿ. ರಂಗಧಾಮನಾಯಕ್–ಲಕ್ಷಮ್ಮ ದಂಪತಿಗಳ ಪುತ್ರಿಯಾಗಿ ೨೮–೧೦–೧೯೩೫ರಲ್ಲಿ ಜನಿಸಿದರು. ಚಳ್ಳಕೆರೆಯಲ್ಲಿ ಪ್ರಾರಂಭವಾದ ಪ್ರಾಥಮಿಕ ವಿದ್ಯಾಭ್ಯಾಸ ಬೇರೆ ಬೇರೆ ಊರುಗಳಲ್ಲಿ ಮುಂದುವರಿಯಿತು. ತುಮಕೂರಿನಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವಾಗಿ, ೧೯೫೩ರಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿದರು. ಕಾಲೇಜು ವಿದ್ಯಾಭ್ಯಾಸ ಮೈಸೂರಿನಲ್ಲಿ ಮುಂದುವರೆದು ೧೯೫೫–೫೮ರಲ್ಲಿ ಬಿ.ಎ. ಆನರ್ಸ್ ಮಾಡಿದರು. ೧೯೫೯ರಲ್ಲಿ ಕನ್ನಡ ಅಧ್ಯಾಪಕರಾಗಿ ಶಿಕ್ಷಣ ವೃತ್ತಿಗೆ ಪ್ರವೇಶಿಸಿ, ಬೆಂಗಳೂರು ಮತ್ತು ಮೈಸೂರು ಮಹಾರಾಣಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಬೆಂಗಳೂರಿನ ವಿಜಯನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲೆ ಆಗಿ ಕಾರ್ಯ ನಿರ್ವಹಿಸಿದರು. ಸರ್ಕಾರಿ ಸೇವೆಯಿಂದ ನಿವೃತ್ತರಾದ ಮೇಲೆ ಮೈಸೂರು ವಿಶ್ವವಿದ್ಯಾಲಯದ ಜೈನಶಾಸ್ತ್ರ, ಪ್ರಾಕೃತ ಅಧ್ಯಯನದ ಪ್ರಾಧ್ಯಾಪಕರೂ, ಅಧ್ಯಕ್ಷರೂ, ಹಂಪಿ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು.

ಅಧ್ಯಾಪನ, ಲೇಖನ, ಭಾಷಣಗಳ ಮೂಲಕ ಮಾಡಿರುವ ಸಾಹಿತ್ಯ ಸೇವೆಯನ್ನು ಗುರುತಿಸಿ ನಾಡಿನ ನಾನಾ ಸಂಘ ಸಂಸ್ಥೆಗಳಿಂದ ಅನೇಕ ಗೌರವ ಪ್ರಶಸ್ತಿಗಳು ದೊರೆತಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬಾಬಾ ಆಮ್ಟೆ ರಾಷ್ಟ್ರೀಯ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ರನ್ನಕವಿ ಪ್ರಶಸ್ತಿ, ಐಐಟಿ ಮದರಾಸು ಕನ್ನಡ ಸಂಘದ ರಜತೋತ್ಸವ ಪುರಸ್ಕಾರ, ಶ್ರವಣಬೆಳಗೊಳದ ಮಹಾ ಮಸ್ತಕಾಭಿಷೇಕದ ರಾಷ್ಟ್ರೀಯ ಪುರಸ್ಕಾರ, ಶ್ರೀ ಗೋಮಟೇಶ್ವರ ವಿದ್ಯಾಪೀಠ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಇತ್ಯಾದಿ ಪ್ರಶಸ್ತಿಗಳು ದೊರೆತಿವೆ. ೨೦೦೩ರಲ್ಲಿ ಮೂಡಬಿದ್ರೆಯಲ್ಲಿ ನಡೆದ ೭೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಲಭಿಸಿದೆ.

ಮಹಿಳಾ ಸಾಹಿತಿಯಾಗಿ ಕನ್ನಡದಲ್ಲಿ ಹೆಚ್ಚು ಕೃತಿಗಳನ್ನು ರಚಿಸಿದವರಲ್ಲಿ ಕಮಲಾ ಹಂಪನಾ ಅವರೂ ಒಬ್ಬರು. ೪೮ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಜೈನಧರ್ಮ ಹಳಗನ್ನಡ ಗ್ರಂಥ ಸಂಪಾದನೆ, ಜೀವನ ಚರಿತ್ರೆ, ಕಥೆ, ಕವನ, ವ್ಯಕ್ತಿಚಿತ್ರ ಮುಂತಾದ ನಾನಾ ವಿಷಯಗಳಿಗೆ ಸಂಬಂಧಿಸಿದಂತೆ ಇವರು ಕೃತಿರಚನೆ ಮಾಡಿದ್ದಾರೆ. ತುರಂಗ ಭಾರತವನ್ನು ಕುರಿತು ವಿಶೇಷ ಅಧ್ಯಯನಮಾಡಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಅವರು ರಚಿಸಿದ ಕೆಲವು ಮುಖ್ಯಕೃತಿಗಳು ಇವು – ಕಾವ್ಯ : ಬಿಂದಲಿ, ಬುಗುಡಿ. ವ್ಯಕ್ತಿಚಿತ್ರ: ನುಡಿಮಲ್ಲಿಗೆ, ಆ ಮುಖ. ವೈಚಾರಿಕ: ಬಾಸಿಂಗ, ಬಾಂದಳ, ಬಡಬಾಗಿ, ಬಿತ್ತರ, ಬಕುಳ. ನಾಟಕ : ಬೆಳ್ಳಕ್ಕಿ, ಬಾನಾಡಿ, ಗ್ರಂಥಸಂಪಾದನೆ : ಸುಕುಮಾರ ಚರಿತೆಯ ಸಂಗ್ರಹ, ಶ್ರೀ ಪಚ್ಚೆ, ಧರಣೇಂದ್ರಯ್ಯ ಸ್ಮೃತಿಗ್ರಂಥ, ಡಿ.ಎಲ್.ಎನ್. ಆಯ್ದ ಲೇಖನಗಳು, ಹಳೆಯ ಗದ್ಯಸಾಹಿತ್ಯ (ಇತರರೊಡನೆ) ಅನುವಾದ: ಬೀಜಾಕ್ಷರ ಮಾಲೆ.

ಕನ್ನಡ ಸಾಹಿತ್ಯ ಸಮ್ಮೇಳನ-೭೧
ಅಧ್ಯಕ್ಷರು, ಕಮಲಾ ಹಂಪನಾ
ದಿನಾಂಕ ೧೮, ೧೯, ೨೦, ೨೧ ಡಿಸೆಂಬರ್ ೨೦೦೩
ಸ್ಥಳ : ಮೂಡಬಿದರೆ

ಪರಿಷತ್ತಿನ ಎಲ್ಲಾ ಶಾಖೆಗಳಲ್ಲಿ ಪುಸ್ತಕ ಮಳಿಗೆ

ಹೈಟೆಕ್ ಮತ್ತು ತಂತ್ರಜ್ಞಾನದ ಎಲ್ಲ ಕ್ಷೇತ್ರಗಳ ಮೇಲೆ ಸಾಹಿತಿಗಳು, ಕಲಾವಿದರೂ, ಚಲನಚಿತ್ರ ನಿರ್ಮಾಪಕರು, ಪುಸ್ತಕ ಪ್ರಕಾಶಕರೂ ತಟಸ್ಥರಾಗಿರುವುದು ಅಸಾಧ್ಯ. ಪುಸ್ತಕ ಸಂಸ್ಕೃತಿಯ ಅಪಾಯಗಳನ್ನು ನಿವಾರಿಸುವುದಕ್ಕೂ ಸನ್ನದ್ಧವಾಗಿರಬೇಕಾಗುತ್ತದೆ. ನಾಡಿನ ಸಂಸ್ಕೃತಿಯ ಅಂತಸ್ಸತ್ವವನ್ನು ಅರಿಯಲೂ ಪರಿಚಯಿಸಲೂ ಸೂಕ್ತ ಪರಿಸರವನ್ನು ನಿರ್ಮಿಸುವ ಸದುದ್ದೇಶದಿಂದ ಪ್ರೇರಿತರಾಗಿ ಹಿಂದೆ ಕೆಂಗಲ್ ಹನುಮಂತಯ್ಯನವರು ಕನ್ನಡ-ಸಂಸ್ಕೃತಿ ಇಲಾಖೆಯನ್ನು ತೆರೆದರು, ಹಳ್ಳಿಗಳಲ್ಲಿ ಉಪನ್ಯಾಸಗಳಿಗೆ ಎಡೆಮಾಡಿದರು, ಎರಡು ರೂಪಾಯಿಗೆ ಕುಮಾರವ್ಯಾಸ ಭಾರತ ಕಾವ್ಯ ಜನರಿಗೆ ಎಟಕುವಂತೆ ಮಾಡಿದರು. ಇಂದು ಪುಸ್ತಕ ವಿತರಣಾ ನೀತಿ ಸಂಹಿತೆಯನ್ನು ರೂಪಿಸಿ ಗ್ರಂಥ ಉದ್ಯಮವನ್ನು ಸಶಕ್ತವಾಗಿಸಬೇಕಾಗಿದೆ. ವಿಶ್ವವಿದ್ಯಾಲಯಗಳು, ಅನುದಾನಿತ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಸ್ಕೃತಿ ಇಲಾಖೆ, ಪುಸ್ತಕ ಪ್ರಾಧಿಕಾರ- ಇವೆಲ್ಲದರ ಸಹಭಾಗಿತ್ವದಲ್ಲಿ ಈ ಕಾರ್ಯ ನಡೆಯಲಿ. ಓದುಗನಿಗೆ ಒಂದೇ ಸೂರಿನಡಿ ತನಗೆ ಬೇಕಾದ ಪುಸ್ತಕ ಸಿಗುವ ಹಾಗೆ ಅನುಕೂಲ ಕಲ್ಪಿಸುವುದೆಂದರೆ ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಭವನದಲ್ಲಿ ಮಾರಾಟ ಮಳಿಗೆ ತೆರೆಯಲಿ.

ಸಾಹಿತಿಗಳಿಗೆ ವೇದಿಕೆ ಸಲ್ಲಲಿ

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳ ಅನಭಿಷಿಕ್ತ ಸಾರ್ವಭೌಮ ಸಂಸ್ಥೆ. ನಾಡು ನುಡಿ ಕಲೆ ಸಂಸ್ಕೃತಿಗಳ ಸರ್ವಾಂಗೀಣ ಸಂವರ್ಧನೆಗಾಗಿ ಸೇವೆ ಸಲ್ಲಿಸುತ್ತಿರುವ ಹಿರಿಯ ಸಂಸ್ಥೆ ಲೇಖಕರಿಗೂ ಸಾಹಿತ್ಯಾಸಕ್ತರಿಗೂ ಅಂತರ್ಜಾಲವನ್ನು ನೇಯುವ, ಸಾಂಸ್ಕೃತಿಕ ಚೈತನ್ಯವನ್ನು ಉಕ್ಕಿಸುವ ಸಂಸ್ಥೆ. ನಾಡಿನ ಉದ್ದಗಲಗಳಲ್ಲಿ ಇದರ ಕೊಂಬೆ ರೆಂಬೆಗಳು ಪಲ್ಲವಿಸಿವೆ. ಜಿಲ್ಲಾ ಹಾಗೂ ತಾಲ್ಲೂಕು ಸಮ್ಮೇಳನಗಳಲ್ಲದೆ ಇತರ ಚಟುವಟಿಕೆಗಳೂ ಚೆನ್ನಾಗಿ ನಡೆಯುತ್ತಿವೆ. ಆದರೆ ಅಲ್ಲಿಯೂ ಸಾಹಿತಿಗಳಿಗೆ ವೇದಿಕೆಗಳು ಸಲ್ಲುವಂತೆ ನಿಗಾ ವಹಿಸುವುದು ಒಳ್ಳೆಯದು.

ಕನ್ನಡ ಭವನಗಳು ನಿರ್ಮಾಣವಾಗಲಿ


ಸಮ್ಮೇಳನ ಇನ್ನಷ್ಟು ಪ್ರಭಾವಶಾಲಿ ಆಗಲು ಸಾಧ್ಯವಿದೆ. ಗೋಷ್ಠಿಗಳ ವಿನ್ಯಾಸ ಅರ್ಥಪೂರ್ಣ ವಾಗಿಸಬಹುದು. ನಾಲ್ಕೈದು ತಿಂಗಳ ಮುಂಚೆಯೇ ಪತ್ರವ್ಯವಹಾರ ನಡೆಸಿದರೆ ಪ್ರಬಂಧಕಾರರಿಗೆ ಸಿದ್ಧತೆಗೆ ಹೆಚ್ಚು ಸಮಯಾವಕಾಶವಿರುತ್ತದೆ.

ಸಾಹಿತ್ಯ ಪರಿಷತ್ತಿನ ಜಿಲ್ಲೆ ಮತ್ತು ತಾಲ್ಲೂಕು ಘಟಕಗಳ ಪುನಶ್ಚೇತನಕ್ಕೆ ತಕ್ಕ ತಳಪಾಯವೆಂದರೆ ಕನ್ನಡ ಭವನಗಳ ನಿರ್ಮಾಣ, ಬಹುಪಯೋಗಿ ಜಿಲ್ಲಾ ಕನ್ನಡ ಭವನಗಳ ಪರಿಕಲ್ಪನೆಯನ್ನು ೧೯೭೮-೭೯ರಲ್ಲಿ ಆಗಿನ ಪರಿಷದಧ್ಯಕ್ಷರು ಸರಕಾರಕ್ಕೆ ಒಪ್ಪಿಸಿದ್ದರೂ ಇದುವರೆಗೆ ನಾಲ್ಕೈದು ಜಿಲ್ಲಾ ಕನ್ನಡ ಭವನಗಳು ರೂಪುಗೊಂಡಿವೆ. ಇದು ಇನ್ನೂ ಬೇಗ ವ್ಯಾಪಕವಾಗಿ ಎಲ್ಲ ಜಿಲ್ಲೆ- ತಾಲ್ಲೂಕುಗಳಿಗೆ ಹಬ್ಬಿದರೆ ಆಗ ಕನ್ನಡಪರ ಸಾಹಿತ್ಯ ಸಂಸ್ಕೃತಿ ಚಟುವಟಿಕೆಗಳಿಗೆ ಕಾಯಕಲ್ಪವಾಗುತ್ತದೆ. ಕನ್ನಡದ ಪುಸ್ತಕಗಳು, ಪ್ರಕಾಶಕರು, ಯಾರೇ ಇರಲಿ, ಎಲ್ಲ ಲೇಖಕರ ಪುಸ್ತಕಗಳು ಕನ್ನಡ ಭವನದಲ್ಲಿ ದೊರೆಯುವಂತಾಗಲಿ. ಕನ್ನಡ ಕಾರ್ಯಕ್ರಮಗಳಿಗೆ ಅದರಲ್ಲಿ ಸುಸಜ್ಜಿತ, ಅತ್ಯಾಧುನಿಕ ಸಭಾಂಗಣವಿರಲಿ. ಲಾಭ-ನಷ್ಟ ಇರದ ಕಡಿಮೆ ಬಾಡಿಗೆ ದರದಲ್ಲಿ ಆ ಸಭಾಂಗಣ ಎಲ್ಲ ಕನ್ನಡ ಚಟುವಟಿಕೆಗಳಿಗೆ ಸಿಗಬೇಕೆ ವಿನಾ ಅದು ಮದುವೆಗಳಿಗೆ ತೆರೆದ ಇನ್ನೊಂದು ಕಲ್ಯಾಣಮಂಟಪ ಆಗಬಾರದು.

ಪರಿಷತ್ತು ಗದಾ ಪ್ರಹಾರ ತಡೆಯಲಿ

ಹಳ್ಳಿಗಳ ಅಚ್ಚಗನ್ನಡದ ಹಳೆಯ ಹೆಸರುಗಳು ಸಂಸ್ಕೃತಮಯವಾಗಿರುವುದು ತರವಲ್ಲ. ಸಾಂಸ್ಕೃತಿಕ ಇತಿಹಾಸ ಹಿನ್ನೆಲೆ ಇರುವ ಎಮ್ಮೆಯೂರು, ಬೆಳ್ಳೂರುಗಳನ್ನು ಸುರಧೇನುಪುರ, ಶ್ವೇತಪುರ ಎಂದೇಕೆ ಬದಲಾಯಿಸಬೇಕು. ದೊಮ್ಮಲೂರನ್ನು ಭಗತ್‌ಸಿಂಗ್‌ರನ್ನಾಗಿ ಮಾಡುವುದರಲ್ಲಿ ಅರ್ಥವಿಲ್ಲ. ಕನ್ನಡ ಪರಂಪರೆಯ ಮೇಲೆ ಆಗುವ ಈ ಬಗೆಯ ಗದಾಪ್ರಹಾರವನ್ನು ತಡೆಯುವ ಭೀಮಬಲ ಸಾಹಿತ್ಯ ಪರಿಷತ್ತಿನಿಂದ ವ್ಯಕ್ತವಾಗಬೇಕು. ನಮ್ಮ ನಾಡಿನ ಮೂಲೆ ಮುಡುಕಗಳಿಗೆ ಕನ್ನಡವನ್ನು ಬೆಳಗಿಸುವ ನಂದಾದೀಪವಾಗುವುದರ ಜೊತೆಗೆ ಅವಿರತ ಎಚ್ಚರಿಸುವ ದುಂದುಭಿಯೂ ಆಗಿರಬೇಕು.

೭೨ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಶಾಂತರಸ ಹೆಂಬೇರಾಳು



ಕಾವ್ಯ-ಕಥೆ-ಕಾದಂಬರಿ-ಸಂಶೋಧನೆ-ಅನುವಾದ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಶಾಂತಯ್ಯ (ಹೆಂಬೇರಾಳು ಶಾಂತರಸರು) ನಿಜನಾಮ, (ಶಾಂತರಸ ಕಾವ್ಯನಾಮ) ಚೆನ್ನಬಸವಯ್ಯ-ಸಿದ್ಧಲಿಂಗಮ್ಮ ದಂಪತಿಗಳಿಗೆ ೭-೪-೧೯೨೪ರಲ್ಲಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸ ಉರ್ದು ಮಾಧ್ಯಮದಲ್ಲಿ ಸಿರಿವಾರ, ಮುಷ್ಟೂರು, ಗುಲ್ಬರ್ಗ, ರಾಯಚೂರು, ಲಾತೂರುಗಳಲ್ಲಿ ನಡೆಯಿತು. ೧೯೪೨ರಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಶಾಲೆಯಿಂದ ಹೊರದೂಡಿಸಿಕೊಂಡಿದ್ದರು.

ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ(೧೯೮೫), ರಾಜ್ಯ ನಾಟಕ ಅಕಾಡಮಿಯ ಫೆಲೋಷಿಪ್(೧೯೯೩), ವಿದ್ಯಾವರ್ಧಕ ಸಂಘದ ಬಹುಮಾನ(೧೯೮೫), ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ(೧೯೯೭) ಮೊದಲಾದವು ಇವರಿಗೆ ಲಭಿಸಿದೆ.

ಕನ್ನಡ ಗಜಲ್ (ಕಾವ್ಯ) ಬಯಲು ಸೀಮೆಯ ಬಯಲು (ಕಾವ್ಯ) ಸತ್ಯಸ್ನೇಹಿ (ನಾಟಕ) ನಂಜು ನೊರೆವಾಲು (ನಾಟಕ), ಉಮ್ ರಾವ್ ಜಾನ್ ಅದಾ (ಅನುವಾದ), ಬಸವಪೂರ್ವ ಯುಗದ ಶರಣರು (ಸಂಶೋಧನ), ಪುರಾತನರ ಪುರಾಣ, ಮುಸುಕು ತೆರೆ, ಬೆನ್ನ ಹಿಂದಿನ ಬೆಳಕು ಇತ್ಯಾದಿಗಳು ಇವರ ಕೃತಿಗಳು.

ಶಾಂತರಸರು ೧೩-೪-೨೦೦೮ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೭೨
ಅಧ್ಯಕ್ಷರು, ಶಾಂತರಸ ಹೆಂಬೇರಾಳು
ದಿನಾಂಕ ೨೭, ೨೮, ೨೯ ಜನವರಿ ೨೦೦೬
ಸ್ಥಳ : ಬೀದರ

ಸಮ್ಮೇಳನ ಪಟ್ಟ ದಲಿತರಿಗೆ ಸಿಗಲಿ

ಎಪ್ಪತ್ತೊಂದು ಅಖಿಲ ಭಾರತ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಗಳು ಮೇಲು ಜಾತಿಯ ಪ್ರತಿಭೆಗಳಲ್ಲೆ ಹಂಚಿಹೋಗಿವೆ. ಮುಂಬರುವ ಸಮ್ಮೇಳನದಲ್ಲಾದರೂ ದಲಿತ ಪ್ರತಿಭೆಗಳನ್ನು ಗುರುತಿಸಿ ಕನ್ನಡ ನುಡಿ ತಾಯಿಯ ಚೊಚ್ಚಲ ಪಟ್ಟ ನೀಡಲಿ. ತನ್ಮೂಲಕ ನೆಲಪರಂಪರೆ ಉತ್ತರೋತ್ತರವಾಗಿ ಉತ್ತುಂಗಕ್ಕೇರಲಿ ಎಂದು ಆಶಿಸೋಣ.

ಪ್ರಾದೇಶಿಕ ಅಸಮಾನತೆ

ಅಖಂಡ ಕರ್ನಾಟಕದ ಶಿರೋಮಕುಟವೂ, ಹೈದ್ರಾಬಾದ್ ಕರ್ನಾಟಕ ಧರಿಸೀಮೆಯೂ ಎನಿಸಿಕೊಂಡಿರುವ ಈ ಬೀದರಿನಲ್ಲಿ ಈಗಾಗಲೇ ಅಖಿಲ ಭಾರತ ಮಟ್ಟದ ಎರಡು ಸಮ್ಮೇಳನಗಳು ಜರುಗಿಹೋಗಿವೆ. ಇದು ಮೂರನೇ ಸಮ್ಮೇಳನ ಬದುಕಿನುದ್ದಕ್ಕೂ ಈ ಭಾಗವನ್ನು ಕುರಿತು ಧ್ವನಿ ಎತ್ತಿದ ನಾನು ಪ್ರಸ್ತುತ ಸಮ್ಮೇಳನಾಧ್ಯಕ್ಷನಾಗಿರುವ ವಿಶೇಷ ಅವಕಾಶವನ್ನು ಬಳಸಿಕೊಂಡು ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕು. ಹೈದಾಬಾದ್ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ, ಸ್ವಾತಂತ್ರ್ಯೋತ್ತರ ಇತಿಹಾಸ ಮತ್ತು ನನ್ನ ಬದುಕಿನ ಚರಿತ್ರೆ ಅಭಿನ್ನ. ನೈಜಾಂ ಇಲಾಖೆಯ ಹೃದಯಭಾಗವಾಗಿದ್ದ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ ಈ ಜಿಲ್ಲೆಗಳು ಸ್ವಾತಂತ್ರ್ಯಪೂರ್ವಕಾಲದಿಂದಲೂ ಕನ್ನಡವನ್ನು ಉಳಿಸಿ ಬೆಳೆಸಲು ಅವಿರತ ಶ್ರಮಪಟ್ಟಿವೆ. ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರು ಆಳರಸ ನಿಜಾಮರ ಒತ್ತಡದ ನಡುವೆಯೂ ಹೊರಗೆ ಉರ್ದು ಬೋರ್ಡು ಹಾಕಿ ಒಳಗೆ ಕನ್ನಡ ಶಾಲೆಗಳನ್ನು ನಡೆಸಿದ್ದಾರೆ. ನನ್ನಂಥ ಬಡವಿದ್ಯಾರ್ಥಿಗಳಿಗಾಗಿ ಮುಷ್ಟಿ ಫಂಡ್ ಅಂದರೆ ಮನೆಮನೆಗೆ ಭಾರವಾಗದಂತೆ ಒಂದು ಹಿಡಿಹಿಟ್ಟು ಭಿಕ್ಷೆ ಎತ್ತಿ ವಸತಿ ನಿಲಯಗಳನ್ನು ನಡೆಸಿದ್ದಾರೆ. ಅಂದು ಭಾಲ್ಕಿ ಅಪ್ಪನವರು, ಪ್ರಭುರಾವ ಕಂಬಳಿವಾಲಾ ಇಂಥವರು ಆಳರಸರನ್ನು ಎದುರು ಹಾಕಿಕೊಂಡು ಕನ್ನಡ ಶಾಲೆಗಳನ್ನು ನಡೆಸಿರದಿದ್ದರೆ ನಾನು ಕನ್ನಡ ಕವಿಪಟ್ಟ ಹೊತ್ತು ಇವತ್ತು ಈ ವೇದಿಕೆ ಮೇಲೆ ನಿಲ್ಲುವ ಪ್ರಮೇಯವೇ ಬರುತ್ತಿರಲಿಲ್ಲ.

ಸ್ವಾಯುತ್ತ ಸಂಸ್ಥೆಗಳು

ಸರಕಾರವು ರಾಜ್ಯದಲ್ಲಿರುವ ವಿವಿಧ ಅಕಾಡೆಮಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಗ್ರಂಥಾಲಯ ಸಮಿತಿ ಮುಂತಾದ ಸ್ವಾಯುತ್ತ ಸಂಸ್ಥೆಗಳಿಗೆ ಹೆಚ್ಚಿನ ಹಣಕಾಸು ನೆರವು ನೀಡಿ ಅಷ್ಟೇ ಅಲ್ಲ ಅಕಾಡೆಮಿಗಳು ಬೆಂಗಳೂರಿಗೆ ಮಾತ್ರ ಸೀಮಿತವಾಗದೆ ವಿವಿಧ ಜಿಲ್ಲೆಗಳಲ್ಲಿ ವಿಕೇಂದ್ರೀಕರಣಗೊಂಡು ಕಾರ್ಯ ನಿರ್ವಹಿಸುವಂತಾಬೇಕು. ಈ ಸಂಸ್ಥೆಗಳಾದರೂ ರಾಜಧಾನಿ ಕೇಂದ್ರಿತ ಕಾರ್ಯಕ್ರಮಗಳನ್ನು ಮೊಟಕುಗೊಳಿಸಿ ಪ್ರತಿ ಹಳ್ಳಿ, ಪ್ರತಿ ವ್ಯಕ್ತಿಗೂ ಕಾರ್ಯಕ್ರಮಗಳನ್ನು ಮುಟ್ಟಿಸಬೇಕು. ಇಲ್ಲಿ ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಅಲಕ್ಷಿತರು ಹೆಚ್ಚೆಚ್ಚು ತೊಡಗುವಂತೆ ನಿಗಾ ವಹಿಸಬೇಕು. ಈ ಮೇಲಿನ ಎಲ್ಲ ಅಕಾಡೆಮಿಗಳು ಗಡಿಭಾಗಗಳಲ್ಲಿ ವಿಶೇಷ ಮುತುವರ್ಜಿ ವಹಿಸಿ ಕಾರ್ಯಕ್ರಮ ನಡೆಸುವ ಮೂಲಕ ಈ ಜನತೆಯಲ್ಲಿ ನಾಡು-ನುಡಿಯ ಪ್ರೇಮ ಗಟ್ಟಿಗೊಳಿಸುವಂತೆ ಮಾಡಬೇಕು. ಈ ತೆರನ ಸಾಂಸ್ಕೃತಿಕ ಐಡೆಂಟಿಟಿಯನ್ನು ತಾಜಾಗೊಳಿಸುವ ಮೂಲಕವೇ ಅವರಲ್ಲಿ ಅವರಿಸಿಕೊಂಡಿರುವ ಅನಾಥ ಪ್ರಜ್ಞೆ, ಅಭದ್ರತೆಯನ್ನು ಹೋಗಲಾಡಿಸಬೇಕು.

ಸಮ್ಮೇಳನಗಳು ಸಾರ್ಥಕವೆನಿಸಬೇಕು


ಮಹನೀಯರೇ, ನಮ್ಮ ಮುಂದಿನ ಸಮಸ್ಯೆಗಳು, ಸವಾಲುಗಳು ಸಂಖ್ಯಾತೀತವಾಗುತ್ತಿವೆ. ಮಾಡಬೇಕಾದ ಕೆಲಸಗಳು ಬೆಟ್ಟದಷ್ಟಿವೆ. ಕಳೆದ ಅರ್ಧ ಶತಮಾನದಿಂದಲೂ ಈ ನಾಡ ಮನೆಯ ಅಂಗಳದ ಮೂಲೆ ಮೊಡಕುಗಳಲ್ಲಿ ಕಸ ತುಂಬಿಟ್ಟಿದ್ದೇವೆ. ನಮ್ಮ ಮನಸ್ಸುಗಳಲ್ಲಿಯೂ ಸಹಸ್ರಮಾನದ ಮೌಢ್ಯವೆಂಬ ಧೂಳು ತುಂಬಿಬಿಟ್ಟಿದ್ದೇವೆ. ಇದನ್ನು ಹಸನುಗೊಳಿಸಲು ಸಾವಿರ, ಲಕ್ಷ, ಕೋಟಿ ಅಸಂಖ್ಯ ಕೈಗಳು ಮುಂದೆ ಬರಬೇಕು. ದೇಶವನ್ನು ಆಳುತ್ತಿರುವ ಸರಕಾರ, ಪಕ್ಷಗಳು ನಿಜವಾದ ಜನಪರ ಕಾಳಜಿಯೊಂದಿಗೆ ಮುನ್ನುಗ್ಗಬೇಕು. ಧರ್ಮದ ಮುಖಂಡರು ಸ್ವಾರ್ಥ ಸಂಕುಚಿತತೆಯ ಪರದೆ ಹರಿದು ಅಸಲಿ

ಮಾನವೀಯತೆಯ ಹಣತೆ ಹಚ್ಚಬೇಕು. ಅಂದಾಗಲೇ ಇಂಥ ನುಡಿ ಶಬ್ದಗಳಿಗೆ ಅರ್ಥ ಮತ್ತು ಗೌರವ ಬರುತ್ತದೆ. ಇಲ್ಲವಾದರೆ ಸಮ್ಮೇಳನಗಳು ಬರುತ್ತವೆ ಹೋಗುತ್ತವೆ. ಜನರ ಬದುಕು ಮಾತ್ರ ಅದೇ ದುಃಖ ದುಮ್ಮಾನಗಳಲ್ಲಿ ಕೊಳೆಯುತ್ತಿದ್ದರೆ ಇವು ಯಾರಿಗಾಗಿ ಮತ್ತು ಏತಕ್ಕಾಗಿ ಎಂಬ ಪ್ರಶ್ನೆಗಳು ಕಾಡುತ್ತಲೆ ಇರುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಹಂಚಿಕೊಳ್ಳುವ ಹಾದಿಯಲ್ಲಿ ನಾವೂ ನೀವೂ ಹಣತೆಯ ಒಂದೊಂದೇ ಹನಿ ಎಣ್ಣೆಯಾಗಿ ಒಂದಾಗಿ ಜಗವ ಬೆಳೆಸೋಣ.

❖❖

೭೩ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಕೆ.ಎಸ್. ನಿಸಾರ್ ಅಹಮದ್



ನಿತ್ಯೋತ್ಸವ ಕವಿಯಾಗಿ ಪ್ರಸಿದ್ಧರಾದ ಕೆ.ಎಸ್. ನಿಸಾರ್ ಅಹಮದ್ ಅವರು ಮೈಸೂರು ಸರಕಾರದಲ್ಲಿ ರೆವೆನ್ಯೂ ಅಧಿಕಾರಿಯಾಗಿದ್ದ ಕೆ.ಎಸ್. ಹೈದರ್ ಮತ್ತು ಗೃಹ ವಿಜ್ಞಾನ ಪದವೀಧರೆ ಹಮೀದಾ ಬೇಗಂ ದಂಪತಿಗಳ ಪುತ್ರರು. ಇವರು ಜನಿಸಿದ್ದು ೫-೨-೧೯೩೬ರಂದು. ಬೆಂಗಳೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು, ಹೊಸಕೋಟೆಯಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿಗಳಿಸಿದ ಇವರು ಭೂವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿಗಳಿಸಿದರು.

ಮೈಸೂರು ಸರಕಾರ ಭೂವಿಜ್ಞಾನ ಇಲಾಖೆಯಲ್ಲಿ ಒಂದಿಷ್ಟು ಕಾಲ ಸೇವೆ ಸಲ್ಲಿಸಿದರು. ಅನಂತರ ಕಾಲೇಜು ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ೧೯೯೪ರಲ್ಲಿ ನಿವೃತ್ತರಾದರು.

೧೯೭೪-೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದರು. ೧೯೭೮ರಲ್ಲಿ ಕನ್ನಡದ ಪ್ರಥಮ ಧ್ವನಿಸುರುಳಿಯಾಗಿ ಅವರ ನಿತ್ಯೋತ್ಸವ ಬಿಡುಗಡೆ ಆಯಿತು.

ಹಂಪಿ ವಿಶ್ವ ವಿದ್ಯಾಲಯದಿಂದ ನಾಡೋಜ ಪ್ರಶಸ್ತಿ, ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಗೊರೂರು ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಹೆಜ್ಜೆಗುರುತು ಕೃತಿಗೆ ಸೋವಿಯಟ್ ಲ್ಯಾಂಡ್ ಪ್ರಶಸ್ತಿ ಇತ್ಯಾದಿ ಹತ್ತಾರು ಪ್ರಶಸ್ತಿಗಳು ಲಭ್ಯವಾಗಿವೆ.

ಕವಿತೆ, ವಿಮರ್ಶೆ, ಅನುವಾದದ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವ ಇವರ ಮುಖ್ಯಕೃತಿಗಳು ಹೀಗಿವೆ; ಮನಸು ಗಾಂಧಿಬಜಾರು, ನಿತ್ಯೋತ್ಸವ, ನವೋಲ್ಲಾಸ, ಸಮಗ್ರ ಭಾವಗೀತೆಗಳು, ಅಚ್ಚುಮೆಚ್ಚು, ಒಥೆಲೊ, ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ, ಬರೀ ಮರ್ಯಾದಸ್ಥರೇ, ಹಿರಿಯರ ಹರಸಿದ ಹೆದ್ದಾರಿ, ಇದು ಬರಿ ಬೆಡಗಲ್ಲೋ ಅಣ್ಣ ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೭೩
ಅಧ್ಯಕ್ಷರು, ಕೆ.ಎಸ್. ನಿಸಾರ್ ಅಹಮದ್
ದಿನಾಂಕ ೨೦, ೨೧, ೨೨, ೨೩ ಡಿಸೆಂಬರ್ ೨೦೦೬
ಸ್ಥಳ : ಶಿವಮೊಗ್ಗ
(೨೦೦೫ರಲ್ಲಿ ಸಮ್ಮೇಳನ ನಡೆಯಲಿಲ್ಲ)

ಪ್ರಸ್ತುತ ಅಪ್ರಸ್ತುತ ಸಂಗತಿಗಳು

ಕನ್ನಡ ನಾಡು ನುಡಿಗಳ ಹಲವು ದಶಕಗಳ ಸಮಸ್ಯೆಗಳಾಗಲಿ, ಅವುಗಳಿಗೆ ಹಿಂದಿನ ಸಮ್ಮೇಳಾನಧ್ಯಕ್ಷರುಗಳು ಸೂಚಿಸಿರುವ ಕೆಲವೊಂದು ಪರಿಹಾರೋಪಾಯಗಳಾಗಲಿ ಪ್ರಸ್ತುತವೆನ್ನಿಸುವಂತಹವು. ಬಹುಶಃ ಭವಿಷ್ಯದಲ್ಲೂ ಆದೇಯವಾಗುವಂತಹವು. ಅಂದಿನ ಕೆಲವು ಆಶಯ, ಆಶೋತ್ತರಗಳು ನೆರವೇರಿ ಇವೊತ್ತಿಗೆ ಅಗತ್ಯವಲ್ಲ ಎನ್ನಿಸುವ ಬಗೆಯವು. ಉದಾಹರಣೆಗೆ, ಕರ್ನಾಟಕ ಏಕೀಕರಣದ ಚಳವಳಿ ಮತ್ತು ಅದರ ಕೈ ಹಿಡಿದೇ ಸಾಗಿ ಬಂದ ರಾಷ್ಟ್ರ ವಿಮೋಚನೆಯ ಸಂಗ್ರಾಮ. ಹೀಗಿದ್ದರೂ, ಅವುಗಳ ಬಗೆಗಿನ ಆ ಕಾಲದ ಹಿರಿಯರ ಉತ್ಕಟವಾದ ಶ್ರದ್ಧಾಸಕ್ತಿ, ಪ್ರಾಮಾಣಿಕವಾದ ಕಾರ್ಯೋನ್ಮುಖ ನಿಷ್ಠೆ, ಸಾಂಘಿಕ ಸಾಹಸೋತ್ಸಾಹ ಹಾಗೂ ನಿಸ್ವಾರ್ಥಪರ ತ್ಯಾಗ ಜೀವನದ ಕೃತಾರ್ಥತೆ ತಕ್ಕಮಟ್ಟಿಗಾದರೂ ಇಂದಿನವರಿಗೆ ಬೋಧಪ್ರದವಾಗಬೇಕು. ಹುದ್ದೆ, ಮುದ್ದೆ, ನಿದ್ದೆಗಳ ನಿರಂತರ ಸೆಣಸಾಟ ಮಾತ್ರವೇ ಬದುಕಿನ ಉದ್ದೇಶವೆಂದು ಬಗೆದಿರುವ ಅಸಂಖ್ಯ ಸಾಮಾಜಿಕರಿಗೆ ಹಿಂದಿನವರ ಧ್ಯೇಯಾದರ್ಶ, ದೇಶ ಭಾಷೆಗಳ ಬಗೆಗಿನ ಸ್ವಹಿತವಿದೂರವಾದ ಕೃತಜ್ಞತಾಪೂರ್ವಕ ಸೇವಾತ್ಪರತೆ ಮನದಟ್ಟಾಗಬೇಕು.

ಹಿಂದಿನ ಸಮ್ಮೇಳನಗಳ ಮೌಲಿಕ ಸಂಗತಿಗಳು

ಇಂದಿನ ಜೀವನ ಮೌಲ್ಯ ಪೌರರನ್ನು ಸಾವಕಾಶವಾಗಿ ಅಲೋಚಿಸುವುದಕ್ಕಾಗಲಿ, ಸಂಯಮ ಮತ್ತು ಯುಕ್ತಾಯುಕ್ತತೆಯನ್ನು ವಿವೇಚಿಸಿ ಕಾರ್ಯೋನ್ಮುಖವಾಗುವುದಕ್ಕಾಗಲಿ ಇಂಬು ನೀಡುವಂಥದ್ದಲ್ಲ. ಅನವರತ ಧಾವಂತಿಸಿರುವ ನಮ್ಮ ಇವೊತ್ತಿನ ಬಾಳ್ವೆಗೆ ಮೇಲ್ಮೆ, ಮರ್ಯಾದೆಗಳನ್ನು, ಘನತೆ ಕೃತಕೃತ್ಯತೆಗಳನ್ನು ಕೂಡಿಸುವ ಸನ್ಮೌಲ್ಯಗಳ ಬಗೆಗಿನ ತಿಳಿವಳಿಕೆಯನ್ನು ಪಡೆಯಲು ಹಿಂದಿನ ಅಧ್ಯಕ್ಷರ ಕೆಲವೊಂದು ಅಭಿಪ್ರಾಯಗಳು ಸಾಕಾಗದೆನ್ನಿಸಬಹುದು. ಹಾಗೆಂದು ಅವುಗಳನ್ನು ಅವಗಣಿಸುವಂತಿಲ್ಲ. ಚಾರಿತ್ರಿಕ ದಾಖಲೆಗಳಾಗಿ ಅವು ತಮ್ಮ ಮಹತ್ವವನ್ನು ಉಳಿಸಿಕೊಳ್ಳುತ್ತವೆ. ಈ ದೃಷ್ಟಿಯಿಂದ ಹಿಂದಿನ ಸಮ್ಮೇಳನಾಧ್ಯಕ್ಷರ ಸಕಾಲಿಕ ಮತ್ತು ಸಾರ್ವಕಾಲಿಕ ಸಂಗತಿಗಳ ಬಗೆಗಿನ ಕೆಲವು ವಿಚಾರಗಳು ಮನನಯೋಗ್ಯವಾಗಿವೆ. ಕನ್ನಡಿಗನ ಪಾಲಿಗೆ ಉಪಯುಕ್ತವಾಗಿವೆ.


ಸಕಾಲದಲ್ಲಿ ಆಯ್ಕೆ

ನಾಲ್ಕು ವರ್ಷಗಳ ಹಿಂದೆ ನನ್ನನ್ನು ಸಮ್ಮೇಳನಾಧ್ಯಕ್ಷನನ್ನಾಗಿ ಆಯ್ಕೆ ಮಾಡಲು ಸಂಕಲ್ಪಿಸಿದ್ದ ಸಂಬಂಧಪಟ್ಟ ಮಹನೀಯರು ಕೆಲವೊಂದು ಕಾರಣಗಳಿಂದಾಗಿ ಕೊನೆಯ ಗಳಿಗೆಯಲ್ಲಿ ನನ್ನ ಹೆಸರನ್ನು ಕೈಬಿಟ್ಟರಂತೆ. ಆ ಸುಯೋಗ ಈ ವರ್ಷ ನನಗೆ ಒದಗಿದೆ. "ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು" ಎಂಬ ಒಳ್ನುಡಿಯಂತೆ ಈಗ ಆ ಅಗ್ರಾಸನ ಲಭಿಸಿರುವುದು ಹಲವು ರೀತಿಗಳಿಂದ ಗಮನಾರ್ಹವಾಗಿದೆ. ನನಗೆ ಹೆಚ್ಚಿನ ಹಿಗ್ಗು ಮತ್ತು ಸಮಾಧಾನವನ್ನು ಕೊಟ್ಟಿದೆ. ನಾಡಿನ ಹುಟ್ಟುಹಬ್ಬದ ಹೊನ್ನೊಸಗೆಯನ್ನು ನಮ್ಮ ಸರ್ಕಾರ ಮತ್ತು ಕರ್ನಾಟಕದ ವಿವಿಧ ಊರು, ಪಟ್ಟಣಗಳ ಕನ್ನಡ ಸಂಘ ಸಂಸ್ಥೆಗಳು, ಹೊರಗಿರುವ ನಮ್ಮ ಭಾಷಾ ಬಂಧುಗಳು ಸಂಭ್ರಮಯುತವಾಗಿ ಆಚರಿಸುತ್ತಿರುವ ಈ ಅಪೂರ್ವ, ವಿಶಿಷ್ಟ ಸಂವತ್ಸರದಲ್ಲಿ ನನ್ನ ಆಯ್ಕೆಯಾಗಿರುವುದು ಹೆಮ್ಮೆಯನ್ನು ಹೆಚ್ಚಿಸಿದೆ.

❖❖

೭೪ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎಲ್.ಎಸ್. ಶೇಷಗಿರಿರಾವ್



ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಪ್ರಬುದ್ಧ ವಿಮರ್ಶಕರೆನಿಸಿರುವ ಎಲ್.ಎಸ್. ಶೇಷಗಿರಿರಾಯರು ಸ್ವಾಮಿರಾವ್-ಕಮಲಾಬಾಯಿ ದಂಪತಿಗಳ ಸುಪುತ್ರರಾಗಿ ೧೬-೨-೧೯೨೫ರಲ್ಲಿ ಜನಿಸಿದರು. ಬೆಂಗಳೂರು ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಇವರು ನಾಗಪುರ ವಿ.ವಿ.ಯಲ್ಲಿ ಇಂಗ್ಲಿಷ್ ಎಂ.ಎ. ಪದವೀಧರರಾದರು.

ಕಾಲೇಜು ಶಿಕ್ಷಣ ಇಲಾಖೆಗೆ ಸೇರಿ ಕೋಲಾರ, ಮಡಿಕೇರಿ, ಬೆಂಗಳೂರುಗಳಲ್ಲಿ ಕಾಲೇಜು ಅಧ್ಯಾಪಕರಾಗಿ ಕೊನೆಯಲ್ಲಿ ಕೆಲವುಕಾಲ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು.

೧೯೭೭-೫೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಥಮ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ನ್ಯಾಷನಲ್ ಬುಕ್ ಟ್ರಸ್ಟ್ ಮೊದಲಾದ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಇವರ ಇಂಗ್ಲಿಷ್ ಸಾಹಿತ್ಯ ಚರಿತ್ರೆ (೧೯೯೬) ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆಧುನಿಕ ಸಾಹಿತ್ಯ ವಿಮರ್ಶೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಅನಕೃ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ ಮೊದಲಾದವು ಇವರಿಗೆ ಲಭ್ಯವಾಗಿದೆ.

ಇವರ ಕೆಲವು ಸುಪ್ರಸಿದ್ಧ ಕೃತಿಗಳು ಹೀಗಿವೆ : ಕನ್ನಡದ ಅಳಿವು ಉಳಿವು (ಪ್ರಬಂಧ) ಸಿರಿಸಂಪದ (ವ್ಯಕ್ತಿ ಚಿತ್ರ), ಆಕಾಂಕ್ಷೆ ಮತ್ತು ಆಸೆ (ನಾಟಕ), ಹೊಸಗನ್ನಡ ಸಾಹಿತ್ಯ (ವಿಮರ್ಶೆ), ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ (ವಿಮರ್ಶೆ), ವಿಲಿಯಂ ಷೇಕ್ಸ್‌ಪಿಯರ್, ಫ್ರಾನ್ಸ್ ಕಾಫ್ಕ, ಭಾರತೀಯ ಸಾಹಿತ್ಯ ಸಮೀಕ್ಷೆ ಇತ್ಯಾದಿ. ಇವರು ಇಂಗ್ಲಿಷಿನಲ್ಲೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನ-೭೪
ಅಧ್ಯಕ್ಷರು, ಎಲ್.ಎಸ್. ಶೇಷಗಿರಿರಾವ್
ದಿನಾಂಕ ೧೨, ೧೩, ೧೪. ೧೫ ಡಿಸೆಂಬರ್ ೨೦೦೭
ಸ್ಥಳ : ಉಡುಪಿ

ಪ್ರಮಾಣಿಕ ಅಧ್ಯಕ್ಷ

ಈವರೆಗೆ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕಾದಂಬರಿಕಾರರು, ಕವಿಗಳು, ಸಣ್ಣಕಥೆಗಳ ಬರಹಗಾರರು, ನಾಟಕಕಾರರು, ಪ್ರಬಂಧಕಾರರು ಅಲ್ಲದೆ ಮಹಾನ್ ವಿದ್ವಾಂಸರನ್ನು ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರನ್ನಾಗಿ ಆರಿಸಿ, ನಾಡು ಗೌರವಿಸಿದೆ. ಮೊದಲಬಾರಿಗೆ ವಿಮರ್ಶಕನೆಂದೇ ಗುರುತಿಸಲಾಗುವ ಸಾಹಿತಿಯನ್ನು ಈ ಪೀಠಕ್ಕೆ ನಾಡು ಆರಿಸಿದೆ.

ಸಾಹಿತ್ಯ ವಿಮರ್ಶೆಗಳನ್ನು ಕುರಿತು ಕೆಲವು ಅನಿಸಿಕೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಅದಕ್ಕೆ ಮೊದಲು ಒಂದು ಮಾತನ್ನು ನಿವೇದಿಸಬೇಕು. ನಾನು ಸಾಹಿತ್ಯವನ್ನು ಪ್ರವೇಶಿಸಿದ್ದು ಸಣ್ಣಕಥೆಗಳ ಬರಹಗಾರರನಾಗಿ, ೧೯೪೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ಅಖಿಲ ಕರ್ನಾಟಕ ಸಣ್ಣಕಥೆಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದೆ. ನನ್ನ ನಾಲ್ಕು ಕಥೆಗಳ ಸಂಗ್ರಹಗಳು ಪ್ರಕಟವಾಗಿವೆ.

ಕನ್ನಡ ಭಾಷೆ ಬೆಳವಣಿಗೆ

ಕನ್ನಡ ಭಾಷೆಯ ಬೆಳವಣಿಗೆಯ ಕಾರ್ಯ ವ್ಯವಸ್ಥಿತವಾಗಿ ನಡೆಯಬೇಕು. ಮತ್ತು ಈ ಕಾರ್ಯದಲ್ಲಿ ನಿರತವಾದ ಸಂಸ್ಥೆಗಳ ನಡುವೆ ಹೊಂದಾಣಿಕೆಯ ಅಗತ್ಯವಿದೆ. ಕನ್ನಡ ವಿಶ್ವವಿದ್ಯಾನಿಲಯ, ಇತರ ಎಲ್ಲ ವಿಶ್ವವಿದ್ಯಾನಿಲಯಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಈ ಎಲ್ಲ ಸಂಸ್ಥೆಗಳ ಯೋಜನೆಗಳು ಮತ್ತು ಪ್ರಕಟಣೆಗಳ ವಿಷಯದಲ್ಲಿ ಹೊಂದಾಣಿಕೆಗೆ ವ್ಯವಸ್ಥೆಯ ಅಗತ್ಯವಿದೆ.

ವಿದ್ವತ್ ಪೋಷಣೆಮಾಡಿ

ನಾಡಿನಲ್ಲಿ ವಿದ್ವತ್ತಿನ ಅನ್ವೇಷಣೆಗೆ ಪೋಷಕವಾದ ವಾತಾವರಣವನ್ನು ಸೃಷ್ಟಿಸಬೇಕೆಂದು ಸರ್ಕಾರದಲ್ಲಿಯೂ ವಿಶ್ವವಿದ್ಯಾನಿಲಯಗಳಲ್ಲಿಯೂ **ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ** ನನ್ನ ಮನವಿ. ಹಳಗನ್ನಡ, ವ್ಯಾಕರಣ, ಛಂದಸ್ಸು ಮೊದಲಾದವುಗಳ ಅಧ್ಯಯನವು ಮುಂದುವರಿಯಬೇಕಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ನಿಘಂಟಿನ ಕಾರ್ಯ ಮುಂದುವರೆಯಲು ಗ್ರಂಥಾಲಯವನ್ನು ಸಜ್ಜುಗೊಳಿಸಬೇಕು. ಸರ್ಕಾರವು ಹಣ ಸಹಾಯವನ್ನು ನೀಡಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಮಟ್ಟದ ಸಂಶೋಧನೆ ನಡೆಯಬೇಕು. ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವ ಸಾಮಾನ್ಯ ನಿಯಮಗಳೇನೋ ಇವೆ. ಇವು ಆಡಳಿತಕ್ಕೆ ಅನ್ವಯಿಸುವುವು. ವಿದ್ವತ್ತಿನ ಕೆಲಸಕ್ಕೆ ಹೊಂದಾಣಿಕೆಯ ಅಭಾವವಿದೆ.

ಜಗತ್ತಿನ ಇನ್ನೂರು ಅತ್ಯುತ್ತಮ ವಿಶ್ವವಿದ್ಯಾನಿಲಯಗಳ ಪಟ್ಟಿಯಲ್ಲಿ ಭಾರತದ ಒಂದೂ ವಿಶ್ವವಿದ್ಯಾನಿಲಯದ ಹೆಸರಿಲ್ಲ. ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಸುಧಾರಿಸಿ ಕರ್ನಾಟಕದ ವಿಶ್ವವಿದ್ಯಾನಿಲಯಗಳನ್ನು ಜಾಗತಿಕ ಮಟ್ಟಕ್ಕೆ ಏರಿಸುವ ಸಂಕಲ್ಪವನ್ನು ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಮಾಡಬೇಕು, ಉನ್ನತಮಟ್ಟದ ವಿದ್ವತ್ ಪತ್ರಿಕೆಗಳು ಕನ್ನಡದಲ್ಲಿ ಎಷ್ಟಿವೆ ? ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಮೊದಲಾದ ಸಂಸ್ಥೆಗಳಿಗೆ ಶಿಕ್ಷಣ ಕ್ಷೇತ್ರದೊಡನೆ ಸಂಬಂಧವಿರುವವರನ್ನು ಮಾತ್ರ ಆಯ್ಕೆ ಮಾಡಬೇಕು.


ಕನ್ನಡ ಸಾರ್ವಭೌಮ ಸ್ಥಾನ

ಪ್ರಾಥಮಿಕ ತರಗತಿಯಿಂದ ಪದವಿ ತರಗತಿಯವರೆಗೆ ಇಂಗ್ಲಿಷ್ ಬೋಧನೆಯ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಸಮಗ್ರವಾಗಿ ಶಿಫಾರಸು ಮಾಡಲು ಇಂಗ್ಲಿಷ್ ಬೋಧನೆಯ ತಜ್ಞರೂ ಇರುವ ಸಮಿತಿಯೊಂದನ್ನು ಸರ್ಕಾರವಾಗಲಿ ಕನ್ನಡ ಸಾಹಿತ್ಯ ಪರಿಷತ್ತಾಗಲಿ ರಚಿಸುವುದು ಸೂಕ್ತ. ಮುಖ್ಯವಾಗಿ, ಕನ್ನಡ ನಾಡಿನ ಇಡೀ ವ್ಯವಸ್ಥೆಯಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದಕ್ಕಬೇಕು.

❖❖

೭೫ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಎಲ್. ಬಸವರಾಜು



ಕನ್ನಡದಲ್ಲಿ ಶ್ರೇಷ್ಠ ವಿದ್ವಾಂಸರಾಗಿ ಹಳಗನ್ನಡದಲ್ಲಿ ಪ್ರಭುತ್ವ ಪಡೆದಿದ್ದ ಎಲ್. ಬಸವರಾಜು ಅವರು ಕೋಲಾರದ ಇಡಗೂರಿನಲ್ಲಿ ೭-೧೦-೧೯೧೯ರಂದು ಲಿಂಗಪ್ಪ-ಈರಮ್ಮ ದಂಪತಿಗಳಿಗೆ ಸುಪುತ್ರರಾಗಿ ಜನಿಸಿದರು. ಬಾಲ್ಯದಲ್ಲಿ ಬಡತನದ ಬವಣೆಯಿಂದ ಊರಿನ ಭೀಮೇಶ್ವರ ದೇಗುಲದಲ್ಲಿ ಅರ್ಚಕರಾಗಿದ್ದರು. ಸಿದ್ಧಗಂಗೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಕನ್ನಡ ಎಂ.ಎ.(೧೯೫) ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದರು.

ದಾವಣಗೆರೆ ಡಿ.ಆರ್.ಎಂ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ, ಕೆಲಕಾಲಾನಂತರ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು, ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ಅಧ್ಯಾಪಕರಾಗಿ ಅನಂತರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಇವರ ಸಾಹಿತ್ಯ ಕೆಲಸಕ್ಕಾಗಿ ನಾಡಿನ ಅನೇಕ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ, ಗೌರವಿಸಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೧೯೭೭), ಕನ್ನಡ ರಾಜ್ಯೋತ್ಸವ ಪ್ರಶಸ್ತಿ(೧೯೯೪), ಚಿದಾನಂದ ಪ್ರಶಸ್ತಿ(೧೯೯೪), ಪಂಪ ಪ್ರಶಸ್ತಿ(೨೦೦೦), ಚಾವುಂಡರಾಯ ಪ್ರಶಸ್ತಿ(೨೦೦೨), ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೨೦೦೦) ಇತ್ಯಾದಿಗಳು ಇವರಿಗೆ ಸಂದಿವೆ.

ಸಂಶೋಧಕರಾಗಿ, ಗ್ರಂಥ ಸಂಪಾದಕರಾಗಿ ಇವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ ಅಮೋಘವಾದುದು.

ಸರಳ ಪಂಪಭಾರತ(೧೯೯೯), ಪಂಪನ ಆದಿಪುರಾಣ(ಸಂಪಾದನೆ), ರನ್ನನ ಸರಳ ಗದಾಯುದ್ಧ, ಅಲ್ಲಮನ ವಚನ ಚಂದ್ರಿಕೆ(ಸಂಶೋಧನೆ), ಬಸವಣ್ಣನವರ ವಚನಗಳು, ಸರ್ವಜ್ಞನ ವಚನಗಳು, ಕೇಶಿರಾಜನ ಶಬ್ದಮಣಿದರ್ಪಣಂ ಇತ್ಯಾದಿಗಳು ಇವರ ಕೃತಿಗಳು.

ಎಲ್. ಬಸವರಾಜು ಅವರು ೨೯-೧-೨೦೧೨ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಸಮ್ಮೇಳನ-೭೫
ಅಧ್ಯಕ್ಷರು, ಎಲ್. ಬಸವರಾಜು
ದಿನಾಂಕ: ೪,೫,೬,೭ ಜನವರಿ, ೨೦೦೯
ಸ್ಥಳ : ಚಿತ್ರದುರ್ಗ
(ಟಿಪ್ಪಣಿ: ೨೦೦೮ರಲ್ಲಿ ಸಮ್ಮೇಳನ ನಡೆಯಲಿಲ್ಲ)

ಸರ್ಕಾರ ಕಡೆಗಣಿಸುತ್ತಾ ಬಂದ ಸಂಸ್ಥೆ

ಬೆಂಗಳೂರಿನಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘಗಳು ಆಧುನಿಕ ಕನ್ನಡ ನಾಡು-ನುಡಿ-ಸಾಹಿತ್ಯ ಪರಂಪರೆಯ ಎರಡು ಕಣ್ಣುಗಳು. ಇವುಗಳ ಮುಖ್ಯ ದೃಷ್ಟಿ ಕರ್ನಾಟಕದ ಏಕೀಕರಣವೆಂಬುದೂ- ಅದು ಸಾಧಿತವಾಗಿರುವುದೂ ಈಗ ಇತಿಹಾಸ. ಆ ಕಾಲದ ಒತ್ತಾಸೆಯಿಂದ ನಾಡಿನ ಮಹನೀಯರು ಕಟ್ಟಿದ ಮಹತ್ವದ ಸಂಸ್ಥೆಗಳಿವು. ಶತಮಾನದ ಸಂಭ್ರಮದ ಅಂಚಿನಲ್ಲಿರುವ ಈ ಮಹಾನ್ ಸಮಸ್ಯೆಗಳು ಈ ವೇಳೆಗಾಗಲೇ ನಾಡಿನ ಸಾರ್ವಭೌಮ ಸಂಸ್ಥೆಗಳಾಗಿ ಬೆಳೆಯಬೇಕಾಗಿತ್ತು. ಆದರೆ ಜನತೆ- ಮುಖ್ಯವಾಗಿ ಸರಕಾರ ವ್ಯವಸ್ಥಿತವಾಗಿ ಅವನ್ನು ಬೆಳೆಸುವ ಬದಲು ಕಾಲಕ್ರಮೇಣ ಕಡೆಗಣಿಸುತ್ತ ಬಂದದ್ದು ಬಹಳ ಆಶ್ಚರ್ಯಕರವಾದ ಮತ್ತು ದುರದೃಷ್ಟಕರವಾದ ಸಂಗತಿ.

ಹೊಸ ಸಂಸ್ಥೆಗಳ ಉದಯ ಸಾಧನೆ

ಬದಲಾದ ಸನ್ನಿವೇಶಗಳಿಗನುಗುಣವಾಗಿ ಅವನ್ನು ಬಲಪಡಿಸುತ್ತ ಬಂದಿದ್ದರೆ- ಇಂದು ಅವು ಮೂಲೆಗುಂಪಾಗುವ ಸ್ಥಿತಿಗೆ ಬರುತ್ತಿರಲಿಲ್ಲ. ಅಲ್ಲಿ ಕಾರ್ಯಗತಗೊಳಿಸಬಹುದಾಗಿದ್ದ ಯೋಜನೆಗಳನ್ನು ಸರಕಾರ ಒಂದೊಂದಾಗಿ ತನ್ನ ಕಡೆಗೆ ವರ್ಗಾಯಿಸಿಕೊಳ್ಳುತ್ತ ಬಂದಿದ್ದರಿಂದ- ಹೊಸ ಹೊಸ ಹೆಸರಿನ ಸರಕಾರೀ ಸಂಸ್ಥೆಗಳು ಹುಟ್ಟಿಕೊಂಡಂತಾಯಿತೇ ಹೊರತು- ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘಗಳ ವಿಕಾಸ ಸಾಧ್ಯವಾಗಲಿಲ್ಲ. ಅಂದರೆ-ಸರಕಾರ ಹೊಸದಾಗಿ ಹುಟ್ಟುಹಾಕಿದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಮುಂತಾದ ಸಂಸ್ಥೆಗಳಲ್ಲಿ ಚಟುವಟಿಕೆಗಳು ಸರಕಾರೀಕರಣಗೊಂಡು ಜನದೂರವಾಗಿ ಕನ್ನಡ ಸಂಬಂಧವಾದ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯಲಾರದೆ ಹೋದವು. ಕೆಲವೇ ಆಯ್ದ ಲೇಖಕರ ಕೃತಿಗಳ ಪ್ರಕಟಣೆ, ಕೆಲವೇ ಬಗೆಯ ವಿಚಾರ ಸಂಕೀರ್ಣ, ಅಪೂರ್ಣ ಗಡಿವೀಕ್ಷಣೆ, ಕನ್ನಡ ಆಡಳಿತ ಭಾಷಾನೀತಿಯ ಅಸಮರ್ಪಕ ನಿರ್ವಹಣೆ, ಅನಿಯಂತ್ರಿತ ಪ್ರಶಸ್ತಿ- ಪುರಸ್ಕಾರ ಪ್ರದಾನ- ಇವಿಷ್ಟೆ ತಾನೆ ಇಲ್ಲಿ ನಡೆಯುತ್ತಿರುವ ಕೆಲಸಗಳು? ಈ ಯೋಜನೆಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳಿಗೆ ಹಂಚಿಕೊಟ್ಟು ಕನ್ನಡ ಜನತೆಯ ಕೈಗಳನ್ನು ಬಲಪಡಿಸಬಹುದಾಗಿತ್ತು. ಅದರೆ ಹಾಗಾಗಲಿಲ್ಲ. ಈಗಲೂ ಕಾಲ ಮಿಂಚಿಲ್ಲ; ಕನ್ನಡದ ಪರಿಚಾರಿಕೆಯನ್ನು ಕೈಗೊಂಡಿರುವ ಸರಕಾರದ ಸಂಸ್ಥೆಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವ್ಯಾಪ್ತಿಯಲ್ಲಿ ತಂದರೆ ಹೇಗೆ ಎಂಬುದು ಚರ್ಚಾಸ್ಪದವಾಗಿರುವ ಪ್ರಮೇಯವೇ ಇರುವುದಿಲ್ಲ. ಈ ವಿಲೀನ ಪ್ರಕ್ರಿಯೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘಗಳಿಗೆ ತನ್ನ ತಾನೇ ಹೊಸ ಶಕ್ತಿ ಬಂದಂತಾಗುತ್ತದೆ. ಯೋಜನೆಗಳ ನಿರ್ಬಲೀಕರಣವೂ ತಪ್ಪುತ್ತದೆ. ಸಂಘಗಳಂತಹ ಶುದ್ಧ ಜನಪರ ಸಂಸ್ಥೆಗಳು ತಮ್ಮ ಜಾಯಮಾನದಿಂದಲೇ ಈ ಕನ್ನಡದ ಕಾರ್ಯಗಳನ್ನು ಎಷ್ಟು ನವೋನವ ಉತ್ಸಾಹದಿಂದಲೂ ಜನಸಮ್ಮತಿಯಿಂದಲೂ ನಡೆಸಬಹುದಾಗಿತ್ತೋ ಅದಕ್ಕೆ ಬದಲಾಗಿ ಅನಿರೀಕ್ಷಿತ ಬದಲಾವಣೆ ತಾಳಿ ಜನದೂರ ಕಾರ್ಯ ವೈಖರಿಗಳಿಗೆ ಒಳಗಾಗುವ ಅಪಾಯದಿಂದ ಪಾರಾಗಬಹುದಾಗಿತ್ತು.

ಎರಡು ಸಂಸ್ಥೆಗಳ ಹಿರಿಮೆ

ವಾಸ್ತವವಾಗಿ ನಾವು ವಿಷಯಗಳ ಸಂಬಂಧವಾಗಿಯೇ ಖಾಸಗೀಕರಣ ಮತ್ತು ಉದಾರೀಕರಣ ತತ್ವಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಆಗ ಕನ್ನಡಿಗರು ಅಧಿಕೃತವಾಗಿ ತಮ್ಮ ಕನಸಿನ ಸಂಸ್ಥೆಗಳಾದ ಪರಿಷತ್ತು, ವಿದ್ಯಾವರ್ಧಕ

ಸಂಘಗಳ ಮೂಲಕ ತಮ್ಮ ಕನ್ನಡ ನುಡಿ ಮತ್ತು ಕನ್ನಡ ಸಾಹಿತ್ಯದ ಜವಾಬ್ದಾರಿಗಳನ್ನು ತಾವೇ ನೇರವಾಗಿ ನಿರ್ವಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಸರಕಾರ ವ್ಯವಸಾಯ, ಕಂದಾಯ, ಅಬಕಾರಿ, ಲೋಕೋಪಯೋಗಿ ಮತ್ತಿತರ ವ್ಯಾವಹಾರಿಕ- ಆವಶ್ಯಕ ಕರ್ತವ್ಯಗಳಲ್ಲಿ ತೊಡಗಿರಲಿ. ಹೀಗಾದರೆ ಜನರ ಆಶೋತ್ತರಗಳನ್ನು, ಆವೇಶಗಳನ್ನು ಕನಸು ಮನಸುಗಳನ್ನು ನೋಯಿಸದೆ ನೆರವೇರಿಸಲು ಅನುವಾಗುತ್ತದೆ. ಸರಕಾರ ಪ್ರವೇಶ ಮಾಡಬಾರದಂತಹ, ದೂರನಿಂತು, ಗೌರವದಿಂದ ಪ್ರೋತ್ಸಾಹ ನೀಡಬೇಕಾದಂತಹ ರೀತಿ ಇದಾಗುವುದಿಲ್ಲವೆ. ಸಾಹಿತ್ಯವೆನ್ನುವುದು ಸರಕಾರದಿಂದ ನಿರ್ಣಯವಾಗುವಂಥದ್ದಲ್ಲ, ಅದು ತೀರ ಭಾವನಾತ್ಮಕವಾದ ವಿಚಾರ. ಇದನ್ನೆಲ್ಲ ನೇರವಾಗಿ ಜನತೆ ತನ್ನ ಸಂಘಸಂಸ್ಥೆಗಳ ಮೂಲಕ ತಾನೇ ನಿರ್ವಹಿಸಿಕೊಳ್ಳಬೇಕಾದ್ದು ಹಲವು ಧಾರ್ಮಿಕ ವಿಚಾರಗಳಿಗೆ ಇಂದೂ ಕೂಡ ಸರಕಾರ ಪ್ರವೇಶ ಮಾಡುವುದು ಹೇಗೆ ಸಾಧ್ಯವಿಲ್ಲವೋ ಹಾಗೇ ಇಂಥ ಭಾವನಾತ್ಮಕ ಆವೇಶಭರಿತ ವಿಷಯಗಳ ಗೊಡವೆಗೆ ಹೋಗದಿರುವುದು ಜನಕ್ಕೂ ಜನಪರ ಅಭಿವೃದ್ಧಿಗಾಗಿ ನಡೆಯುತ್ತಿರುವ ಸರಕಾರಗಳಿಗೂ ಶೋಭೆ ತರುವಂಥದ್ದು, ಈ ಕೆಲಸ ಅಂದರೆ- ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರ ಮತ್ತು ಸಂಸ್ಕೃತಿ ಇಲಾಖೆ- ಇವನ್ನೆಲ್ಲಾ ಸರಕಾರ **ಸಾಹಿತ್ಯ ಪರಿಷತ್ತು ಮತ್ತು ವಿದ್ಯಾವರ್ಧಕ ಸಂಘಗಳಿಗೆ ವರ್ಗಾಯಿಸುವುದು ಅಗತ್ಯ.** ಈ ಸಂಸ್ಥೆಗಳನ್ನು ಎರಡು ಸ್ವಾಯತ್ತ ವಿಶ್ವವಿದ್ಯಾನಿಲಯಗಳನ್ನಾಗಿ ಪರಿವರ್ತಿಸಲಿ. ಆಗ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಭಿವೃದ್ಧಿ ಇತೋಪ್ಯತಿಶಯವಾಗಿ ನಡೆಯುತ್ತದೆ. ಕಾಲಕ್ರಮದಲ್ಲಿ ಅವು ಸ್ವತಂತ್ರ ಜನತಾ ಸಂಸ್ಥೆಗಳಾಗಿ ಬೆಳೆದು ದೇಶ ವಿದೇಶ, ಇಡಿಯಾಗಿ ವಿಶ್ವದಲ್ಲಿ ಕನ್ನಡ ಭಾಷೆ-ಸಾಹಿತ್ಯ- ಸಂಸ್ಕೃತಿ ಪ್ರಸಾರ ಕಾರ್ಯಗಳನ್ನು ಕೈಗೊಳ್ಳಲು ಸಮರ್ಥವಾಗುತ್ತದೆ.

❖❖

೭೬ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಗೀತಾ ನಾಗಭೂಷಣ



ಕನ್ನಡದ ಹೆಸರಾಂತ ಲೇಖಕಿಯರಲ್ಲಿ ಒಬ್ಬರಾದ ಶ್ರೀಮತಿ ಗೀತಾ ನಾಗಭೂಷಣ ಅವರು ಗುಲ್ಬರ್ಗದ ಬಡ ಕುಟುಂಬದಲ್ಲಿ ಶಾಂತಪ್ಪ-ಶರಣಮ್ಮ ದಂಪತಿಗಳಿಗೆ ಮಗಳಾಗಿ ೨೫-೩-೧೯೪೨ರಲ್ಲಿ ಜನಿಸಿದರು. ಇವರು ಮೆಟ್ರಿಕ್ ಮುಗಿಸಿದ ಮೇಲೆ ಕೆಲವುಕಾಲ ಕಲೆಕ್ಟರ್ ಕಛೇರಿಯಲ್ಲಿ ಉದ್ಯೋಗ ಮಾಡಿ ಬೆಳಗಿನ ಶಾಲೆಯಲ್ಲಿ ಓದಿ ಪದವಿ ಪಡೆದು, ಸಂಜೆ ಕಾಲೇಜಿನಲ್ಲಿ ಓದಿ ಬಿಎಡ್ ಮತ್ತು ಎಂ.ಎ. ಪದವಿ ಗಳಿಸಿದರು.

ಓದುವಾಗಲೇ ಉದ್ಯೋಗ ಮಾಡುತ್ತಿದ್ದ ಇವರು ಎಂ.ಎ. ಪದವಿ ಗಳಿಸಿದ ನಂತರ ಶ್ರೀ ನಗರೇಶ್ವರ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ, ಪ್ರಾಧ್ಯಾಪಕಿಯಾಗಿ, ಪ್ರಾಚಾರ್ಯೆಯಾಗಿ ೩೦ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದರು.

'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಇವರು ದಾನಚಿಂತಾಮಣಿ ಪ್ರಶಸ್ತಿ(೨೦೦೨) ಕರ್ನಾಟಕ ರಾಜ್ಯ ಪ್ರಶಸ್ತಿ(೧೯೯೮), ನಾಡೋಜ ಪ್ರಶಸ್ತಿ(೨೦೦೪), ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಪರಿಷತ್ತಿನಿಂದ ಮಲ್ಲಿಕಾ ಪ್ರಶಸ್ತಿ ಪಡೆದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಹೆಗ್ಗಳಿಕೆ ಇವರದು.

ಇವರು ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ.

ಹಸಿಮಾಂಸ ಮತ್ತು ಹದ್ದುಗಳು (ಕಾದಂಬರಿ), ಬದುಕು (ಕಾದಂಬರಿ), ಅವ್ವ ಮತ್ತು ಇತರ ಕಥೆಗಳು (ಕಥಾಸಂಗ್ರಹ), ಸಪ್ತವರ್ಣದ ಹಾಡು, ದುರಗಮುರಗಿಯವರ ಸಂಸ್ಕೃತಿ (ಸಂಶೋಧನೆ) ಜ್ವಲಂತ (ಕಥಾಸಂಗ್ರಹ) ಜೋಗಿಣಿ (ನಾಟಕ), ನನ್ನ ಚೆಲುವು ನಿನ್ನ ಒಲವು ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೭೬
ಅಧ್ಯಕ್ಷರು, ಗೀತಾ ನಾಗಭೂಷಣ
ದಿನಾಂಕ ೧೯,೨೦,೨೧ ಫೆಬ್ರವರಿ ೨೦೧೧
ಸ್ಥಳ : ಗದಗ

ಕರ್ನಾಟಕದ ಶರಣ ಪರಂಪರೆಯ ಮಠಗಳ ನಡುವೆ ವೈಚಾರಿಕ ಮಠವೆಂದೇ ಕರೆಸಿಕೊಂಡಿರುವ ತೋಂಟದಾರ್ಯರ ಘೌಳಿಯವರೆಗೆ ಮಹಿಳೆಯೊಬ್ಬಳು ಸವೆಸಿದ ಸಾಹಿತ್ಯಿಕ ದಾರಿಯು ಕನ್ನಡ ಸಂಸ್ಕೃತಿಯ ವೈಶಿಷ್ಟ್ಯವೆಂದೇ ನನಗೆ ಅನಿಸಿದೆ. ಏಕೆಂದರೆ ಎರಡು ಸಾವಿರ ವರುಷಕ್ಕೂ ಮಿಕ್ಕ ಪರಂಪರೆ ಹೊಂದಿರುವ ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಯನ್ನು ಎಷ್ಟು ಕೊಂಡಾಡಿದರೂ ಒಟ್ಟು ಸಾಹಿತ್ಯದಲ್ಲಿ ಮಹಿಳೆಯರ ಚಿತ್ರಣ ಮತ್ತು ಸಾಹಿತಿಯಾಗಿ ಮಹಿಳೆಯ ಪಾಲುದಾರಿಕೆ ನಗಣ್ಯವೇ ಸರಿ.

ಹತ್ತೊಂಬತ್ತು ವರ್ಷ ಅಂದರೆ ಹತ್ತಿರ ಹತ್ತಿರವೆಂದರೂ ಒಂದು ಶತಮಾನ ಗತಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್‌ನಂಥಹ ಗೌರವಾನ್ವಿತ ಸಂಸ್ಥೆಯಲ್ಲಿ ಅದು ನಡೆಸಿಕೊಂಡು ಬಂದಿರುವ ಎಪ್ಪತ್ತಾರು ಸಮ್ಮೇಳನಗಳಲ್ಲಿ ಮಹಿಳೆಯರಿಗೆ ಸಂದ ಪಾಲು ಎಷ್ಟು? ಕೇವಲ ಮೂರು ಈ ಹೊತ್ತು ನಾನು ನಾಲ್ಕನೆಯವಳು.


ಸಂಘರ್ಷ ಮತ್ತು ಕನ್ನಡ ಸಾಹಿತ್ಯ

ಈವರೆಗೆ ನಡೆದು ಬಂದ ಬಹುತೇಕ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಲ್ಲಿ ಒಟ್ಟು ಕನ್ನಡ ಸಾಹಿತ್ಯದ ಪರಂಪರೆ ಪ್ರಯೋಗ ಕುರಿತು ಸುದೀರ್ಘವಾಗಿ ಚರ್ಚಿಸಲಾಗಿದೆ. ಕೆಲವೊಮ್ಮೆಯಂತೂ ತೀರ ಚರ್ವಿತ ಚರ್ವಣ ಎನ್ನುವಷ್ಟು ಬಾರಿ ಪ್ರಸ್ತಾಪಿಸಲಾಗಿದೆ. ನಾನಂತೂ ಅಖಂಡ ಕನ್ನಡ ಸಾಹಿತ್ಯವನ್ನು ಆಯಾ ಕಾಲಘಟ್ಟದ ಸೃಜನಶೀಲ ಸಂಘರ್ಷದ ಮೊತ್ತವಾಗಿಯೇ ಗ್ರಹಿಸುತ್ತೇನೆ.

❖❖

೭೭ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಪ್ರೊ. ಜಿ. ವೆಂಕಟಸುಬ್ಬಯ್ಯ



ಶತಾಯುಷಿಯಾದ ಕನ್ನಡ ವಿದ್ವಾಂಸ ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಶ್ರೀರಂಗ ಪಟ್ಟಣದ ಗಂಜಾಂಗ್ರಾಮಕ್ಕೆ ಸೇರಿದವರು. ಶಿಕ್ಷಕರೂ ವಿದ್ವಾಂಸರೂ ಆದ ಗಂಜಾಂ ತಿಮ್ಮಣ್ಣಯ್ಯ ಮತ್ತು ತಾಯಿ ಸುಬ್ಬಮ್ಮ ದಂಪತಿಗಳ ಜ್ಯೇಷ್ಠಪುತ್ರರಾಗಿ ೨೩-೮-೧೯೧೩ರಂದು ಜನಿಸಿದರು. ೧೯೨೭ ರಿಂದ ೧೯೩೦ರ ವರೆಗೆ ಪ್ರೌಢಶಾಲೆ ಶಿಕ್ಷಣವನ್ನು ಮಧುಗಿರಿಯಲ್ಲಿ ಮುಗಿಸಿ ೧೯೩೭ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಯನ್ನೂ ೧೯೩೮ರಲ್ಲಿ ಬಿ.ಟಿ. ಪದವಿಯನ್ನೂ ಪಡೆದರು..

೧೯೩೮ ರಿಂದ ೧೯೭೨ ರವರೆಗೆ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ೧೯೭೩ರಲ್ಲಿ ನಿವೃತ್ತರಾದರು.

ಇವರು ೧೯೫೪-೫೬ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ೧೯೬೪-೬೯ರಲ್ಲಿ ಪರಿಷತ್ತಿನ ಅಧ್ಯಕ್ಷರಾದರು, ೧೯೭೩ ರಿಂದ ೧೯೯೨ವರೆಗೆ ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿ ಶ್ರಮಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ಅಖಿಲ ಭಾರತ ನಿಘಂಟುಕಾರರ ಸಂಘದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗ್ರಂಥ ಪ್ರಶಸ್ತಿ(೧೯೮೭), ಮಾಸ್ತಿ ಪ್ರಶಸ್ತಿ(೨೦೦೫) ಸೇಡಿಯಾಪು ಪ್ರಶಸ್ತಿ(೧೯೯೪), ನಾಡೋಜ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಅಧ್ಯಕ್ಷಗೌರವ, ಗೋಕಾಕ್ ಪ್ರಶಸ್ತಿ, ಅನಕೃ ನಿರ್ಮಾಣ್ ಸ್ವರ್ಣ ಪ್ರಶಸ್ತಿ ಇತ್ಯಾದಿ ಬಂದಿವೆ.

ನಿಘಂಟು ಸಂಪಾದನೆ, ಸಾಹಿತ್ಯ ಚರಿತ್ರೆ ಗ್ರಂಥ ರಚನೆಯಲ್ಲಿ ತಜ್ಞರಾದ ಇವರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ:

ನಯಸೇನ, ಅನುಕಲ್ಪನೆ, ಕಬೀರ್, ಸರ್ವಜ್ಞ, ಕವಿಜನ್ನ, ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ, ಕನ್ನಡವನ್ನು ಉಳಿಸಿ ಬೆಳಸಿದವರು, ಎರವಲು ಶಬ್ದಕೋಶ, ಇಂಗ್ಲಿಷ್-ಕನ್ನಡ ನಿಘಂಟು, ಕ್ಲಿಷ್ಟಪದಕೋಶ, ಇಗೋ ಕನ್ನಡ ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೭೭
ಅಧ್ಯಕ್ಷರು, ಜಿ. ವೆಂಕಟಸುಬ್ಬಯ್ಯ
ದಿನಾಂಕ ೪, ೫, ೬ ಫೆಬ್ರವರಿ ೨೦೧೧
ಸ್ಥಳ : ಬೆಂಗಳೂರು

ಪರಿಷತ್ತು ಎಚ್ಚರಿಕೆ ವಹಿಸಬೇಕಾದ ಸಂಗತಿ

ಕನ್ನಡದಲ್ಲಿ ಸೊಗಸಾದ ಶಬ್ದಗಳಿರುವಾಗ ಅವುಗಳನ್ನೇ ತಳ್ಳಿ ಕನ್ನಡಕ್ಕೆ ಬರಲು ಪ್ರಯತ್ನ ಪಡುತ್ತಿರುವ ಶಬ್ದಗಳು ಉದಾಹರಣೆ: ಚಿಲ್ಲೀಸ್, ರಾಡೀಶ್, ಬೀನ್ಸ್, ಕುಕುಂಬರ್ರು, ಕ್ಯಾಪ್ಸಿಕಮ್, ನೈಫು,ಆಯಿಲ್ಲು, ಬಟರ್ರು, ಪೌಡರು, ಗ್ರೈಂಡರ್ರು ಇತ್ಯಾದಿ ಎಲ್ಲಾ ಅಡಿಗೆ ಮನೆಗೆ ನುಗ್ಗಿಬಿಟ್ಟಿವೆ. ಇದಕ್ಕೆ ಕಾರಣ ದೂರದರ್ಶನದಲ್ಲಿ 'ಹೊಸರುಚಿಯ' ಪ್ರದರ್ಶನ ಮಾಡಲು ಕನ್ನಡ ಮಹಿಳಾ ಮಣಿಗಳು ಸಂಭಾಷಣೆಯ ಪರಿಣಾಮ ಎಫ್.ಎಮ್. ರೇಡಿಯೋ ದೂರದರ್ಶನದ ಅನೇಕ ವಾಹಿನಿಗಳ ಪ್ರಭಾವ ವರ್ತಮಾನ ಪತ್ರಿಕೆಗಳಲ್ಲಿಯೂ ದೂರದರ್ಶನದಲ್ಲಿಯೂ ಆಕಾಶವಾಣಿಯಲ್ಲಿಯೂ ಪ್ರಚಾರವಾಗುವ ಇಂಥ ಪ್ರಯೋಗಗಳನ್ನು ನಿಲ್ಲಿಸಿ ನಮ್ಮಲ್ಲಿ ಪ್ರಚಾರದಲ್ಲಿರುವ ಕನ್ನಡ ಶಬ್ದಗಳನ್ನು ಉಪಯೋಗಿಸುವಂತೆ ಆಯಾ ಕೇಂದ್ರಗಳ ಅಧಿಕಾರಿಗಳು ನಿರ್ದೇಶಿಸಬೇಕು. ಯಾವ ಶಬ್ದ ಬೇಕಾದರೂ ನಿಧಾನವಾಗಿ ತಾನೇ ತಾನಾಗಿ ಬರಲಿ. ಆದರೆ ನಾವೇ ಅವುಗಳನ್ನು ಅನಾವಶ್ಯಕವಾಗಿ ಅನುವು ಮಾಡಿಕೊಳ್ಳಬಾರದು. ಹಾಗೆ ಮಾಡಿದರೆ ನಮ್ಮ ಸ್ವಂತ ಶಬ್ದಸಂಪತ್ತು ಮಾಯವಾಗಿ ಬಿಡುತ್ತದೆ. ನಾವು ಅವುಗಳಿಲ್ಲದೆ ಕನ್ನಡ ಶಬ್ದದರಿದ್ರವಾಗಿಬಿಡುತ್ತವೆ. ಸಾಮಾಜಿಕ ಕಾರ್ಯಕರ್ತರು, ವಾರ್ತಾಪತ್ರಿಕೆಗಳ, ಕನ್ನಡ ಚಳುವಳಿಯ ನಾಯಕರು ಇವರೆಲ್ಲರಿಗೂ ಈ ಬಗ್ಗೆ ತಿಳುವಳಿಕೆಯನ್ನು ನೀಡಿರುವ ಒಂದು ಕನ್ನಡ ಅಂದೋಳನ ನಡೆಯಬೇಕು. ಕನ್ನಡ ಸಾಹಿತ್ಯ ಪರಿಷತ್ತು ಅದರ ಜಿಲ್ಲಾ ಮತ್ತು ತಾಲ್ಲೂಕು ಅಂಗಸಂಸ್ಥೆಗಳು, ಮಹಿಳೆಯರ ಕ್ಲಬ್ಬುಗಳು, ಬೆಳಗ್ಗೆ ವಾಯುವಿಹಾರಕ್ಕೆಂದು ಹೋಗುವ ಹಿರಿಯರ ತಂಡ ಇವರೆಲ್ಲಾ ಈ ಬಗ್ಗೆ ಎಚ್ಚರವಹಿಸಬೇಕು.

ನಿಘಂಟು ವಿಚಾರ

ಎಲ್ಲ ಭಾಷೆಗಳಲ್ಲಿಯೂ ಹಳೆಯ ಶಬ್ದಗಳು ಕೆಲವು ಮಾಯವಾಗುತ್ತವೆ. ಹೊಸ ಶಬ್ದಗಳು ಸೇರಿ ಬಿಡುತ್ತವೆ. ಶಬ್ದಗಳ ಅರ್ಥವೂ ಬೇರೆಯಾಗಿ ಬಿಡುತ್ತವೆ. ಕೆಲವು ಅರ್ಥವಿಸ್ತಾರವನ್ನು ಪಡೆಯುತ್ತವೆ. ಕೆಲವಕ್ಕೆ ಅರ್ಥ ಸಂಕುಚಿತವಾಗುತ್ತವೆ. ಇದನ್ನು ನಿಘಂಟುಕಾರ ಕಣ್ಣಿನಲ್ಲಿ ಕಣ್ಣಿಟ್ಟು ದಾಖಲಿಸುತ್ತ ಹೋಗಬೇಕು. ಅಲ್ಲದೆ ಕನ್ನಡದಲ್ಲಿಯೂ ಭಾರತದ ಇತರ ಭಾಷೆಗಳಲ್ಲಿಯೂ ಆದಾನ ಪ್ರದಾನಕಾರ್ಯಗಳು ಈಗ ನಡೆಯುತ್ತಿವೆ. ಈ ಕೆಲಸ ಮುಂದುವರಿಯಬೇಕಾದರೆ ದ್ವಿಭಾಷಾ ನಿಘಂಟುಗಳು, ತ್ರಿಭಾಷಾ ನಿಘಂಟುಗಳು ನಿರ್ಮಾಣವಾಗಬೇಕು. ಇದಕ್ಕೆ ಇತರ ಭಾಷಾ ಸಾಹಿತ್ಯ ಸಂಸ್ಥೆಗಳೊಡನೆ ಸಂಬಂಧವನ್ನು ಬೆಳೆಸಬೇಕು. ಇದು ಕನ್ನಡ ನಿಘಂಟು ಕಚೇರಿಗೆ ಸುಲಭವಾದ ಕಾರ್ಯ ಇತರ ಭಾಷೆಗಳಲ್ಲಿ ಇಂಥ ಸೌಲಭ್ಯವಿಲ್ಲ. ನಮ್ಮ ಕಚೇರಿಯಲ್ಲಿ ಸಮರ್ಥರಾದ ಕೆಲವರು ಉಪಸಂಪಾದಕರಿದ್ದರು. ಈಗ ಅವರನ್ನೆಲ್ಲ ನಿವೃತ್ತರನ್ನಾಗಿಸಲಾಗಿದೆ. ಮತ್ತೆ ಹೊಸ ಕಾರ್ಯಕರ್ತರ ಪಡೆಯನ್ನು ತಯಾರು ಮಾಡಬೇಕು. ಏನೇ ಆದರೂ ನಿಘಂಟು ಕಚೇರಿಯನ್ನು ಕೆಲಸವನ್ನು ಸಾಹಿತ್ಯ ಪರಿಷತ್ತು ಕೂಡಲೇ ಪುನರಾರಂಭ ಮಾಡಬೇಕು. ಎಂದೂ ಈ ಕಚೇರಿಯನ್ನು ಮುಚ್ಚಬಾರದು.

ಈಗಲೂ ಪರಿಷತ್ತಿನ ಇಂಥ ಕಾರ್ಯವನ್ನು ಪ್ರತಿವರ್ಷವೂ ಮಾಡಿದರೆ ಒಂದು ದಶಕದಲ್ಲಿ ನಮ್ಮಲ್ಲಿಯೇ ಹತ್ತು ಭಾಷೆಗಳ ಪ್ರವೀಣರು ತಯಾರಾಗುತ್ತಾರೆ. ಈಗ ಪರಿಷತ್ತು ಸರಕಾರದ ಸಹಾಯದ ದೆಸೆಯಿಂದಲೇ ಆರ್ಥಿಕವಾಗಿ ಗಟ್ಟಿಯಾಗಿ ಬೆಳೆದಿದೆ. ಆದ್ದರಿಂದ ಅದು ಗಟ್ಟಿಯಾದ ಕಾರ್ಯವನ್ನು ಮಾಡಬೇಕು.

೧. ಪರಿಷತ್ತು ಪ್ರತಿವರ್ಷವೂ ಬೆಂಗಳೂರಿನಲ್ಲಿ ಗಡಿನಾಡ-ಹೊರನಾಡ ಕನ್ನಡಿಗರ ಒಂದು ಸಮಾವೇಶವನ್ನು ನಡೆಸಬೇಕು. ನಮ್ಮ ಗಡಿನಾಡಿನ ದ್ವಿಭಾಷಾ ವಲಯಗಳಲ್ಲಿ ನೆರವೇರುವ ಸಾಹಿತ್ಯ ಕಾರ್ಯಗಳು ಮತ್ತು ಅಲ್ಲಿ ನೆಲೆಸಿರುವ ಕನ್ನಡಿಗರ ಸಮಸ್ಯೆಗಳೇನು ಎಂಬುದನ್ನು ನಾವು ತಿಳಿದುಕೊಳ್ಳುತ್ತಿರಬೇಕು. ಪುಣೆ, ಮುಂಬೈ, ನಾಗಪುರ, ಕೋಲ್ಕತ್ತ, ಚೆನ್ನೈ ಮತ್ತು ತಿರುವನಂತಪುರಗಳಲ್ಲಿ ತುಂಬ ಜನ ಕನ್ನಡಿಗರು ನೆಲೆಸಿದ್ದಾರೆ. ಅವರ ಸಂಪರ್ಕವನ್ನು ನಾವು ಸದಾ ಪಡೆದಿದ್ದರೆ ನೆರೆನಾಡುಗಳ ಎಲ್ಲ ವಿದ್ಯಮಾನಗಳನ್ನೂ ಅರಿಯುತ್ತಿರಬಹುದು. ಆದರಿಂದ ನಮಗೆ ಸಹಾಯಕವಾದ ಅನೇಕ ವಿವರಗಳು ದೊರಕುತ್ತವೆ. ಅಂತಹ ವಿವರಗಳಲ್ಲಿ ಕೆಲವು ನಮಗೆ ಅಪಾಯಕಾರಿಯೂ ಆಗಿರಬಹುದು. ಆಗ ಸೂಕ್ತ ಸಮಯದಲ್ಲಿ ನಾವು ಎಚ್ಚೆತ್ತು ಕ್ರಮ ಜರುಗಿಸಲು ಅನುಕೂಲವಾಗಿರುತ್ತದೆ. ನನ್ನ ಈ ಸೂಚನೆಯನ್ನು ಒಂದು ದೃಷ್ಟಾಂತದಿಂದ ವಿಶದಪಡಿಸುತ್ತೇನೆ.

ಸುಮಾರು ಒಂದು ತಿಂಗಳ ಹಿಂದೆ ಮುಂಬೈ ನಗರದ ಥಾಣೆಯಲ್ಲಿ ಮರಾಠೀ ಸಾಹಿತ್ಯ ಸಮ್ಮೇಳನವು ನೆರವೇರಿತು. ಅದರ ಅಧ್ಯಕ್ಷರಾಗಿ ಉತ್ತಮ ಕಾಂಬ್ಳೆ ಎಂಬ ಲೇಖಕರು ಆಯ್ಕೆಯಾಗಿದ್ದರು. ಮೂಲತಃ ಅವರು ಕನ್ನಡಿಗರು. ಅವರು ಹುಟ್ಟಿದ್ದು, ವಿದ್ಯಾಭ್ಯಾಸವನ್ನು ಪಡೆದಿದ್ದು ಸಿರುಗಪ್ಪೆಯ ಸುತ್ತಮುತ್ತಲಿನಲ್ಲಿ. ಅವರು ಮಾಡಿದ ಅಧ್ಯಕ್ಷ ಭಾಷಣದಲ್ಲಿ ಮಹಾಜನ್ ವರದಿಯನ್ನು ಉಲ್ಲೇಖಿಸಿ ಮಹಾರಾಷ್ಟ್ರಕ್ಕೆ ಮಹಾ ಅನ್ಯಾಯವಾಗಿದೆ ಎಂಬ ಉದ್ಗಾರವನ್ನು ತೆಗೆದರೆಂದು ವಾರ್ತಾಪತ್ರಿಕೆಗಳಿಂದ ತಿಳಿದುಬರುತ್ತದೆ. ಬೆಳಗಾಂ ಜಿಲ್ಲೆಯೂ ನಿಪ್ಪಾಣಿ ತಾಲ್ಲೂಕು ಮತ್ತು ಕಾರವಾರ ಜಿಲ್ಲೆಯ ಅನೇಕ ಭಾಗಗಳೂ ಮಹಾರಾಷ್ಟ್ರಕ್ಕೆ ಸೇರಬೇಕು. ಇದಕ್ಕೆ ಬೇಕಾದ ಘೋರ ಹೋರಾಟವನ್ನು ಮಾಡಿಯೇ ತೀರಬೇಕು ಎಂಬ ಮರಾಠೀ ಜನರಿಗೆ ಕರೆಕೊಟ್ಟರು. ಕನ್ನಡದ ಸರಕಾರವು ಮಹಾರಾಷ್ಟ್ರೀಯರಿಗೆ ಕಿರುಕುಳ ಕೊಡುತ್ತಿದೆ ಎಂದೂ ಮರಾಠೀ ಸಂಸ್ಕೃತಿಯನ್ನೇ ಮಟ್ಟಹಾಕಲು ಸಿನಿಮಾ ಮತ್ತು ನಾಟಕಗಳನ್ನು ಉಪಯೋಗಿಸುತ್ತಿದೆ ಎಂದೂ ಕನ್ನಡ ಲೇಖಕರು ಮರಾಠಿಗರಿಗೆ ಅಗೌರವದಿಂದ ನಡೆದುಕೊಳ್ಳುತ್ತಾರೆ ಎಂದೂ ಕರ್ನಾಟಕ ಸರಕಾರಕ್ಕೂ ಕನ್ನಡ ಜನರಿಗೂ ತಕ್ಕ ಬುದ್ಧಿಯನ್ನು ಕಲಿಸಬೇಕೆಂದು ವಿರಾವೇಶದಿಂದ ಮಾತನಾಡಿದರಂತೆ! ಕನ್ನಡ ದೇಶದಲ್ಲಿರುವ ಮರಾಠಿಗರು ಇಂಥ ಸುಳ್ಳು ಹೇಳಿಕೆಗಳನ್ನು ವಿರೋಧಿಸಬೇಕು. ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಅದನ್ನು ನಮ್ಮ ನಾಡಿಗೆ ಬರುವವರೆಲ್ಲರೂ ಕಲಿಯಬೇಕು. ಇದು ಅನಿವಾರ್ಯವೆಂಬ ಅಂಶವನ್ನು ನಾವು ಅವರ ಅನುಭವಕ್ಕೆ ತರಬೇಕು.

ಪತ್ರಿಕೆ ಕನ್ನಡನಾಡ ವಿಚಾರ

೨. ಪರಿಷತ್ತಿನ ಸದಸ್ಯರ ಸಂಖ್ಯೆ ಈಗ ಒಂದು ಲಕ್ಷದ ಹದಿನೆಂಟು ಸಾವಿರದ ನಾನ್ನೂರನ್ನು ಮುಟ್ಟುತ್ತಿದೆ. ಇನ್ನೂ ಹೆಚ್ಚಬಹುದು. ಈ ಎಲ್ಲ ಸದಸ್ಯರಿಗೂ ಪರಿಷತ್ತಿನಿಂದ ಒಂದೇ ಒಂದು ಪತ್ರವು ಹೋಗಬೇಕಾದರೂ ಸುಮಾರು ಆರು ಲಕ್ಷರೂಪಾಯಿಗಳು ಖರ್ಚಾಗುತ್ತದೆ. ಇಂಥ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ಕಳಿಸಬೇಕಾದರೂ ತೆರೆದ ಅಂಚೆಗಾದರೂ ಐದು ಲಕ್ಷ ರೂಪಾಯಿಗಳು ವ್ಯಯವಾಗುತ್ತದೆ. ಕನ್ನಡನುಡಿ ಪತ್ರಿಕೆಯನ್ನು ಕಳಿಸಬೇಕಾದರೂ ತಿಂಗಳಿಗೆ ಮೂವತ್ತು ಸಾವಿರ ರೂಪಾಯಿಗಳಾಗುತ್ತವೆ. ಈಗ ಸದಸ್ಯತ್ವವನ್ನು ಎರಡು ಭಾಗ ಮಾಡಿ ಒಂದು ತಿಂಗಳ ಕನ್ನಡನುಡಿಯನ್ನು ಮೊದಲ ಭಾಗಕ್ಕೆ ಎರಡನೆಯ ತಿಂಗಳ ಕನ್ನಡನುಡಿಯನ್ನು ಮತ್ತೊಂದು ಭಾಗಕ್ಕೆ ಕಳಿಸಲಾಗುತ್ತಿವೆ ಎಂದು ಸಂಪಾದಕರು ನನಗೆ ತಿಳಿಸಿದರು. ನಿಜವಾಗಿ ಕನ್ನಡನುಡಿ ಪತ್ರಿಕೆಯನ್ನು ಯಾರು ನಿರೀಕ್ಷಿಸುತ್ತಾರೆಯೋ ಅದನ್ನು ಪರಿಷತ್ತಿಗೆ ತಿಳಿಸಬೇಕೆಂದು ಸದಸ್ಯರನ್ನು ಕೇಳಿಕೊಂಡರೆ ಆಗ ಯಾರು ಉತ್ತರ ಕೊಡುವುದಿಲ್ಲವೋ ಅಂಥವರಿಗೆ ಕಳಿಸದೇ ಇರಬಹುದು. ಈ ಬಗ್ಗೆ ಜಿಲ್ಲೆಯ ಪ್ರತಿನಿಧಿಯಾಗಿರುವ ಪರಿಷತ್ತಿನ ಕಾರ್ಯಸಮಿತಿಯ ಸದಸ್ಯರು ತಮ್ಮ ಜಿಲ್ಲೆಗಳಿಂದ ಇಂಥ ಅಂಕಿ ಅಂಶಗಳನ್ನು ಪ್ರಾಮಾಣಿಕವಾಗಿ ಕಂಡುಹಿಡಿದರೆ ಒಂದು ಉತ್ತಮವಾದ ಉಳಿತಾಯದ ಕೆಲಸವಾಗುತ್ತದೆ. ನಮ್ಮ ಎಲ್ಲ ಸದಸ್ಯರೂ ಪರಿಷತ್ತಿನ ಅಭಿಮಾನಿಗಳು ನಿಜ. ಆದರೆ ಅವರ ವೃತ್ತಿಗಳ ಬಾಹುಳ್ಯದಲ್ಲಿ ಅವರಿಗೆ ಕನ್ನಡನುಡಿಯನ್ನು ಓದುವುದಕ್ಕೆ ಅವಕಾಶವೇ ಸಿಗದ ಎಷ್ಟೋ ಜನರಿರುತ್ತಾರೆ ಇದನ್ನು ತಿಳಿದುಕೊಳ್ಳುವುದರಲ್ಲಿ ತಪ್ಪೇನಿಲ್ಲ ಗಣಕಯಂತ್ರದ ಸೌಲಭ್ಯ ಇರುವ ಸದಸ್ಯರಿಗೆ ಇ-ಅಂಕೆಯ ಮೂಲಕ ಕನ್ನಡನುಡಿಯನ್ನು ಕಳುಹಿಸಿ ಅಂಚೆವೆಚ್ಚವನ್ನು ಉಳಿಸಬಹುದು.

ಪರಿಷತ್ತಿನ ಚುನಾವಣೆ

ಪರಿಷತ್ತಿನ ಅಧ್ಯಕ್ಷ ಪದವಿಗೆ ಚುನಾವಣೆಗೆ ನಿಲ್ಲುವವರು ಇನ್ನು ಮುಂದೆ ರಾಜಕೀಯ ಚುನಾವಣೆಗೆ ಖರ್ಚು ಮಾಡುವಂತೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಸಾಹಿತ್ಯದ ಕ್ಷೇತ್ರದಲ್ಲಿ ಇಂಥವರಾದರೂ ಇಲ್ಲವೆಂದು ನನ್ನ ಭಾವನೆ. ಆದ್ದರಿಂದ ಇಂಗ್ಲಿಷಿನಲ್ಲಿ Electroal Collegeಎಂದು ಕರೆಯುವ ಪದ್ಧತಿ ಇದೆ. ಸಂಸ್ಥೆಗಳಿಗೆ ಈ ಬಗೆಯ ಏರ್ಪಾಟು ಮಾದರಿ. ಅದರ ಪ್ರಕಾರ ಎಲ್ಲ ಸದಸ್ಯರು ಎಷ್ಟೇ ಜನರಿರಲಿ ಚುನಾವಣೆಗೆ ನಿಲ್ಲುವ ಮತ್ತು ಮತವನ್ನು ಚಲಾಯಿಸುವ ಒಂದು ಸದಸ್ಯ ವರ್ಗವನ್ನು ರೂಪಿಸಿಕೊಳ್ಳುತ್ತಾರೆ. ಹಾಗೆ ನಮ್ಮಲ್ಲಿ ಸಾಹಿತಿಗಳಾಗಿರುವ ಸದಸ್ಯರನ್ನೆಲ್ಲ ಕೂಡಿಸಿ ಒಂದು ಮತ ಚಲಾಯಿಸುವ ವರ್ಗವನ್ನು ನಿರ್ಮಿಸುವುದು ಸಾಧ್ಯವೇ ಎಂದು ಪರಿಶೀಲನೆ ಮಾಡಬೇಕೆಂದು ಸೂಚಿಸುತ್ತೇನೆ. ಹೀಗೆ ಮಾಡಿದರೆ ಪರಿಷತ್ತಿನ ಸಾಹಿತ್ಯ ಕಾರ್ಯಕ್ಕೆ ಬೆಂಬಲ ಹೆಚ್ಚುತ್ತದೆ. ಈಗಿನಂತೆ ಅಧ್ಯಕ್ಷತೆಗೆ ಅರ್ಹರನ್ನು ಆರಿಸಬಹುದು. ಇಲ್ಲದಿದ್ದರೆ ಮುಂದೆ ಪರಿಷತ್ತು ರಾಜಕೀಯ ಸಂಸ್ಥೆಯಾಗಿ ಬಿಡುತ್ತದೆ. ಸಾಹಿತ್ಯಕ್ಕೆ ಇದು ಅಪಾಯ.

ಪರಿಷತ್ತಿನ ಕಾರ್ಯಕ್ರಮಗಳು

೩. ಪರಿಷತ್ತಿನ ಕಾರ್ಯವ್ಯಾಪ್ತಿ ಹೆಚ್ಚಾಗಿದೆ. ಜಿಲ್ಲೆ ತಾಲ್ಲೂಕುಗಳಲ್ಲಿ ಸಾಹಿತ್ಯಕಾರ್ಯ ನೆರವೇರುತ್ತಿವೆ. ಈ ಬಗೆಯ ಕಾರ್ಯಕ್ರಮಗಳಿಗೆ ಧರ್ಮಸ್ಥಳದಲ್ಲಿ ನಡೆಯುವ **ಧರ್ಮ-ಸಾಹಿತ್ಯ ಸಮ್ಮೇಳನಗಳೂ** ಮೂಡುಬಿದಿರೆಯ **ನುಡಿಸಿರಿ**

ಸಮ್ಮೇಳನಗಳೂ **ವಿರಾಸತ್**ಗಳೂ ಮಾದರಿಯಾಗಬೇಕು. ಕೆಲವು ಮಠಗಳು ನಡೆಸುವ ಸಾಹಿತ್ಯ ಕಾರ್ಯಕ್ರಮಗಳನ್ನೂ ಮಾರ್ಗದರ್ಶಿಗಳಾಗಿ ಇಟ್ಟುಕೊಳ್ಳುವುದು ಒಳ್ಳೆಯದು. ಕೇಂದ್ರ ಪ್ರದೇಶವಾದ ಬೆಂಗಳೂರಿನಲ್ಲಿ ಸಾಹಿತ್ಯ ಕಾರ್ಯ ಕಡಿಮೆಯಾಗಿದೆ. ಈಗ ಕನ್ನಡ ಸಾಹಿತ್ಯದಲ್ಲಿ ವಿಮರ್ಶನ ಕ್ಷೇತ್ರದಲ್ಲಿ ತುಂಬ ಬದಲಾವಣೆ ನಡೆದಿದೆ. ಈಗಿನ ವಿದ್ವಾಂಸರು ನಮ್ಮ ಪ್ರಾಚೀನ ಕವಿಗಳ ಕೃತಿಗಳನ್ನು ಪುನರ್ ವಿಮರ್ಶೆ ಮಾಡುತ್ತಿದ್ದಾರೆ. ಹೊಸ ಅಲೋಚನೆಯಗಳೂ ಹೊರಹೊಮ್ಮುತ್ತಿವೆ. ಈ ದೃಷ್ಟಿಯಿಂದ ಪರಿಷತ್ತು ಬೆಂಗಳೂರಿನಲ್ಲಿ ಪ್ರತಿವರ್ಷ ಒಬ್ಬ ಪ್ರಾಚೀನ ಕವಿಯ ಬಗ್ಗೆ ಈ ಹೊಸ ಅಲೋಚನೆಗಳ ವಿಮರ್ಶೆಯ ಒಂದು ವಿಚಾರ ಸಂಕೀರ್ಣವನ್ನು ನಡೆಯಿಸಿ ಆ ಸಭೆಯ ಉಪನ್ಯಾಸಗಳನ್ನು ಒಂದು ಪುಸ್ತಕವನ್ನಾಗಿ ಪ್ರಕಟಿಸಬೇಕೆಂದು ನನ್ನ ಮತ್ತೊಂದು ಸೂಚನೆಯನ್ನು ಪರಿಷತ್ತಿನ ಮುಂದೆ ಇಡುತ್ತೇನೆ.

ಹೀಗೆಯೇ ಸಣ್ಣ ಪ್ರಮಾಣದಲ್ಲಿ ಪ್ರತಿವರ್ಷವು ಎರಡು ತಿಂಗಳಿಗೊಮ್ಮೆ **ಯುವ ಪ್ರತಿಭೆ, ಮಕ್ಕಳ ಸಾಹಿತ್ಯ, ಮಹಿಳೆಯರ ಕೃತಿಗಳು, ಒಂದು ವರ್ಷದ ಎಲ್ಲ ಪ್ರಕಾರದ ಕೃತಿಗಳ ವಿಮರ್ಶೆ** ಇತ್ಯಾದಿ ಕಾರ್ಯಕ್ರಮವನ್ನು ಇಟ್ಟುಕೊಂಡು ಅಂಥ ಸಭೆಯಲ್ಲಿ ನಡೆಯುವ ಉಪನ್ಯಾಸಗಳನ್ನು ಬರೆಸಿ ಪ್ರಕಟಿಸುವ ಕಾರ್ಯವೂ ಆಗಬೇಕು. ಆಗ ಕೇಂದ್ರದ ಕಾರ್ಯಕ್ರಮಗಳು ಜಿಲ್ಲೆಗಳಿಗೆ ಮಾದರಿಯಾಗುತ್ತವೆ. ವಿಶಿಷ್ಟವಾಗಿ ಈ ವರ್ಷ ನೇಮಿಚಂದ್ರನ ಬಗ್ಗೆ ಒಂದು ವಿಚಾರ ಸಂಕೀರ್ಣವನ್ನು ಏರ್ಪಡಿಸಬೇಕೆಂದು ನನ್ನ ಸೂಚನೆ. ನೇಮಿಚಂದ್ರನು ಅವನ ನೇಮಿಪುರಾಣವನ್ನು ಪೂರೈಸಿದ್ದರೆ ಮಹಾಕವಿಯಾಗಿ ಪರಿಗಣಿತನಾಗುತ್ತಿದ್ದನು. ಆದಾಗದೆ ಅವನು ಮಹಾಕವಿ ಶಬ್ದದಿಂದ ಪರಿಚಿತನಾಗಿದ್ದಾನೆ. ಅವನನ್ನು ಎತ್ತಿ ಹಿಡಿಯುವ ಕಾರ್ಯ ಆಗಬೇಕಾಗಿದೆ. ಹೀಗೆಯೇ **ರುದ್ರಭಟ್ಟನ,** ಷಡಕ್ಷರಿಯ ಕೃತಿಗಳನ್ನು ಪರಿಶೀಲಿಸಬೇಕಾದೀತು.

ಕನ್ನಡ ಕವಿ ಕಾವ್ಯ ವಿಚಾರ

೪. ಕನ್ನಡನಾಡಿನಲ್ಲಿ ಕನಕ, ಪುರಂದರ ಕೃತಿಗಳನ್ನು ಕುರಿತ ಅನುಚಿತವಾದ ಕೆಲವು ಹೇಳಿಕೆಗಳು ಬರುತ್ತಿವೆ. ಇಬ್ಬರೂ ಶ್ರೇಷ್ಠ ಸಂತರು. ಇವರ ಕೃತಿಗಳ ಬಗ್ಗೆ ಸತ್ಯಾಸತ್ಯತೆಯನ್ನು ವಿದ್ವತ್ತೆಯಿಂದ ಪರಿಶೀಲಿಸಿ ಸಮರ್ಥವಾಗಿ ತೀರ್ಮಾನವನ್ನು ಸ್ಥಾಪಿಸುವ ಕಾರ್ಯವಾಗಬೇಕಾಗಿದೆ. ಇದು ಒಂದು ಮುಖ್ಯ ಕಾರ್ಯ.

ನಾಡಗೀತೆ ವಿಚಾರ

೫. ಕನ್ನಡದ ನಾಡಗೀತೆಯೆಂದು ಒಂದು ಗೀತೆಯನ್ನು ಆಯ್ಕೆಮಾಡಲಾಗಿದೆ. ಕಾರ್ಯಕ್ರಮಗಳಲ್ಲಿ ಅದನ್ನು ಹಾಡುವಾಗ ಸಭೆಯ ಎಲ್ಲರೂ ನಿಲ್ಲಬೇಕೆಂದು ಸೂಚನೆಯಿದೆ. ಈ ಗೀತೆಯನ್ನು ಹಾಡುವವರು ಸಾಲುಗಳನ್ನು ಎರಡು ಮೂರು ಸಲ ಹಾಡಿ ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತಾರೆ. ನಾಡಗೀತೆ ಯಾವಾಗಲೂ ಸಂಗ್ರಹವಾಗಿ ೩ ನಿಮಿಷಕ್ಕಿಂತ ಹೆಚ್ಚಿಲ್ಲದೆ ಇರಬೇಕು. ಈ ಬಗ್ಗೆ ಪರಿಷತ್ತು ಪರಿಶೀಲನೆ ನಡೆಸಿ ಸರಕಾರಕ್ಕೆ ಸಲಹೆಯನ್ನು ನೀಡಬೇಕು.

ಶಾಸ್ತ್ರೀಯ ಭಾಷೆ

೬. **'ಶಾಸ್ತ್ರೀಯ ಭಾಷೆ'** ಎಂಬ ಅಬದ್ಧವಾದ ಶಬ್ದವು ಸಿಂಹಾಸನದ ಮೇಲೆ ಕುಳಿತುಬಿಟ್ಟಿವೆ. ಅದನ್ನು ಕೆಳಗಿಳಿಸಿ **ಅಭಿಜಾತ ಭಾಷೆ** ಅಥವಾ **ಸಮೃದ್ಧ ಪ್ರಾಚೀನ ಭಾಷೆ** ಎಂಬ ಶಬ್ದವನ್ನು ಉಪಯೋಗಿಸಬೇಕು. ಕೇಂದ್ರ ಸರಕಾರದಿಂದ ಕನ್ನಡಕ್ಕೆ ಅಭಿಜಾತ ಭಾಷೆಯೆಂಬ ಪಟ್ಟದಕ್ಕಿದೆ. ಆದರೆ ಯಾವ ಧನವೂ ನಮಗೆ ಬಂದಿಲ್ಲ. ಈ ಹಣವು ದೊರಕಿದರೆ ಆ ಹಣವನ್ನು ಹೇಗೆ ಉಪಯೋಗಿಸಬೇಕೆಂಬ ಒಂದು ಸ್ಪಷ್ಟ ಅಲೋಚನೆಯನ್ನು ಪರಿಷತ್ತು ರಚಿಸಬೇಕು. ಅದಕ್ಕಾಗಿ ಒಂದು ವಿದ್ವಾಂಸರ ಸಮಿತಿಯನ್ನು ಸ್ಥಾಪಿಸಬೇಕು. ಇದು ಕೂಡಲೆ ಆಗಬೇಕು. ಯೋಜನೆಯನ್ನು ಕಳಿಸದಿದ್ದರೆ ಅನುದಾನ ಬರುವುದಿಲ್ಲ ಪರಿಷತ್ತು ಈ ವಿಚಾರವಾಗಿ ನಿರ್ಣಾಯಕವಾದ ತೀರ್ಮಾನವನ್ನು ಕೈಗೊಂಡು ತಾನೇ ಮುಂಚೂಣಿಯ ನಾಯಕ ಎಂಬ ಪಟ್ಟ ಮುಟ್ಟಬೇಕು.

ಕನ್ನಡ ಬಾವುಟ ಗ್ರಂಥ

೭. ಬಿ.ಎಂ.ಶ್ರೀಯವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ನವೋದಯದ ನೆನಪಿಗಾಗಿ **'ಕನ್ನಡ ಬಾವುಟ'** ಎಂಬ ಗ್ರಂಥವನ್ನು ಪ್ರಕಟಿಸಿದರು. ಅದು ಸುಮಾರು ಹತ್ತು ಸಲ ಪುನರ್ಮುದ್ರಣವಾಗಿದೆ. ಈಗ ನವೋದಯ ಶತಮಾನದ ನೆನಪಿಗಾಗಿ ಈ ವರ್ಷವೇ ಇಂದಿನ ಅಧ್ಯಕ್ಷರು ಈ ಶತಮಾನದ ಸಾಹಿತ್ಯ ಕೃಷಿಯಲ್ಲಿ ಅತ್ಯುತ್ತಮವೆಂದು ಕಂಡುಬಂದ ನೂರು ಕವನಗಳನ್ನು ಆಯ್ಕೆಮಾಡಿ ಮತ್ತೊಂದು ಕವನ ಸಂಕಲನವನ್ನು ಪ್ರಕಟಿಸಬೇಕು. ಕನ್ನಡ ಭುವನೇಶ್ವರಿಗೆ ಒಂದು ಧ್ವಜ. ಒಂದು ಶ್ವೇತಚ್ಛತ್ರ ಮುಖ್ಯ.. ಕನ್ನಡ ಭಾಷೆಗೆ ಒಂದು ಬಾವುಟವನ್ನು ಬಿ.ಎಂ.ಶ್ರೀ ನೀಡಿದರು. ಇಂದಿನ ಅಧ್ಯಕ್ಷರು ಈಗ ಒಂದು **'ಬೆಳ್ಗೊಡೆ'** ಯನ್ನು ನೀಡಲಿ ಸೂಚಿಸುತ್ತೇನೆ.

ಯಶಸ್ವಿನಿ ಯೋಜನೆ

೮. ನಮ್ಮ ಸರಕಾರವು ರೈತರ ಸಮಾಜದ ಒಳಿತಿಗಾಗಿ 'ಯಶಸ್ವಿನಿ' ಎಂಬ ಒಂದು ಆರೋಗ್ಯ ವಿಮೆಯ ಸಹಾಯ ಯೋಜನೆಯನ್ನು ಸ್ಥಾಪಿಸಿದೆ. ಇದರಿಂದ ಲಕ್ಷಾಂತರ ರೈತರ ಕುಟುಂಬಗಳಿಗೆ ಸಹಾಯವಾಗುತ್ತಿದೆ. ಅನೇಕ ಸಾಹಿತಿಗಳಿಗೂ ಅವರ ಕುಟುಂಬಕ್ಕೂ ಈ ರೀತಿಯ ಆರೋಗ್ಯವಿಮೆಯ ಆವಶ್ಯಕತೆ ಇದೆ. ಅಂಥವರಿಗೆ ಯಶಸ್ವಿನಿ ರೀತಿಯ ಆರೋಗ್ಯ ವಿಮೆಯ ಒಂದು ಯೋಜನೆಯನ್ನು ಸ್ಥಾಪಿಸಿದರೆ ಈ ವರ್ಗಕ್ಕೆ ತುಂಬ ಉಪಕಾರವಾಗುತ್ತದೆ ಎಂದು ತಿಳಿದಿದ್ದೇನೆ. ಸಾಹಿತ್ಯ ಪರಿಷತ್ತು ಈ ಬಗ್ಗೆ ಸರಕಾರಕ್ಕೆ ಒಂದು ಶಿಫಾರಸ್ಸು ಕಳಿಸಬಹುದು.

ವಿಜ್ಞಾನ ಗ್ರಂಥಗಳ ಪ್ರಕಟಣೆ

೯. ನಮ್ಮ ರಾಷ್ಟ್ರದ ಪ್ರಸಿದ್ಧ ವೈಜ್ಞಾನಿಕ ಸಂಸ್ಥೆಗಳಲ್ಲಿ ಒಂದಾದ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗ ಶಾಲೆಗಳು (NAL-CSR) ಎಂಬ ಹೆಸರಿನ ದೊಡ್ಡ ಸಂಸ್ಥೆಯು ಕನ್ನಡದಲ್ಲಿ ವೈಜ್ಞಾನಿಕ ಲೇಖನಗಳ ಬೆಳವಣಿಗೆ ಮಾಡಿರುವಷ್ಟು ಸಹಾಯವನ್ನು ಇತರ ಯಾವ ವೈಜ್ಞಾನಿಕ ಸಂಸ್ಥೆಯೂ ಮಾಡಿಲ್ಲ. ಅದು ಕಳೆದ ಮೂವತ್ತೈದು ವರ್ಷಗಳಿಂದ 'ಕಣಾದ' ಎಂಬ ಹೆಸರಿನ ವಾರ್ಷಿಕ ವಿಜ್ಞಾನ ಪತ್ರಿಕೆಯನ್ನು ಪ್ರಕಟಮಾಡುತ್ತ ಇದೆ. 'ಕಣಾದ' ಎಂಬುದು ನಮ್ಮ ದೇಶದ ಒಬ್ಬ ಪ್ರಾಚೀನವಾದ ಮಹರ್ಷಿಯ ಹೆಸರು. ಅವನು ಅಣುವಿಜ್ಞಾನಕ್ಕೆ ಆದ್ಯಪ್ರವರ್ತಕ. ಸುಮಾರು ಎರಡು ಸಾವಿರ ವರ್ಷಗಳಿಗೂ ಹಿಂದೆ ಅಣುತತ್ವವನ್ನು ಪ್ರತಿಪಾದಿಸಿದನು. ಆತನ ಹೆಸರನ್ನು ಆಶ್ರಯಿಸಿ ಈ ಸಂಸ್ಥೆಯಲ್ಲಿ ನಡೆಯುವ ವಿವಿಧ ಸಂಶೋಧನೆಗಳನ್ನು ಕುರಿತ ಕನ್ನಡ ಭಾಷೆಯ ಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಇದೆ. ಕರ್ನಾಟಕದ ವಿದ್ಯಾರ್ಥಿಗಳಲ್ಲಿ ಮೂಲವಿಜ್ಞಾನ ಮತ್ತು ವೈಮಾನಿಕ ಕ್ಷೇತ್ರ ವಿಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲು ಆಸಕ್ತಿಯನ್ನು ಮೂಡಿಸುತ್ತ ಇದೆ. ಪ್ರತಿವರ್ಷ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ಹಂಚುತ್ತಾ ಇದೆ. ಈ ವರ್ಷದ ಪತ್ರಿಕೆ ೩೬ನೆಯ ಸಂಪುಟವನ್ನು ಓದಿ ನನಗೆ ಸಂತೋಷವಾಯಿತು. ಇದು ಇತರ ವಿಜ್ಞಾನ ಸಂಸ್ಥೆಗಳಿಗೆ ಮಾದರಿಯಾದ ಕಾರ್ಯವಾಗಿದೆ. ಆ ಸಂಸ್ಥೆಗಳು ಕನ್ನಡದ ಪರಂಪರೆಯನ್ನು ಹೀಗೆ ವ್ಯಕ್ತಪಡಿಸಬೇಕು. ಈ ಸಂಸ್ಥೆಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಮಾರ್ಗದರ್ಶನ ಮಾಡಬೇಕು.

ಸಮೂಹ ಮಾಧ್ಯಮಗಳು

೧೦. ಕನ್ನಡ ಬೆಳವಣಿಗೆಯ ದೃಷ್ಟಿಯಲ್ಲಿ ನಮ್ಮ ಸಮೂಹ ಮಾಧ್ಯಮಗಳು ಮಾಡಬಹುದಾದ ಕಾರ್ಯವು ಅಪಾರವಾಗಿದೆ. ದೂರದರ್ಶನದಲ್ಲಿಯೂ ಇತರ ಖಾಸಗಿ ಪ್ರಸಾರ ಸಂಸ್ಥೆಗಳೂ ಅವುಗಳಲ್ಲಿ ಪ್ರಸಾರಗೊಳ್ಳುವ ಧಾರವಾಹಿಗಳಲ್ಲಿಯೂ ವಾರ್ತಾವಾಚನಗಳಲ್ಲಿಯೂ ಕನ್ನಡದ ಶ್ರೀಮಂತಿಕೆಯನ್ನು ಪ್ರಕಟಿಸಬೇಕು. ಇಂಗ್ಲಿಷ್ ಶಬ್ದಗಳನ್ನು ಅನಾವಶ್ಯಕವಾಗಿ ಉಪಯೋಗ ಮಾಡುವುದನ್ನು ತಪ್ಪಿಸಬೇಕು. ಧಾರವಾಹಿಗಳ ನಟನಟಿಯರೂ ಕನ್ನಡದ ನುಡಿಗಟ್ಟುಗಳನ್ನು ಪ್ರಭಾವಯುತವಾಗಿ ಉಪಯೋಗಿಸಿದರೆ ವೀಕ್ಷಕರ ಮನಸ್ಸಿನಲ್ಲಿ ಕನ್ನಡದ ಪ್ರೀತಿ ಮೂಡುತ್ತದೆ. ಅವರೆಲ್ಲ ಈ ಕೆಲಸವನ್ನು ಆವಶ್ಯಕವಾಗಿ ಮಾಡಬೇಕು. ವಾರ್ತಾಪತ್ರಿಕೆಗಳಿಗೆ ಅಗತ್ಯವಾಗುವ ಇಂಗ್ಲಿಷ್ ಮೀಡಿಯಂಗಳಿಗೆ ಸಮಾನವಾದ ಕನ್ನಡ ನುಡಿಗಟ್ಟುಗಳನ್ನು ತಯಾರು ಮಾಡುವ ಒಂದು ವಿಧಾನವಿದೆ. ಇದನ್ನು ಕುರಿತು ಪತ್ರಿಕಾ ಬಳಗದವರು ಸಹಾಯ ಮಾಡಿದರೆ ಒಂದು ಉತ್ತಮ ನುಡಿಗಟ್ಟಿನ ನಿಘಂಟನ್ನು ತಯಾರಿಸಬಹುದು. ವಾರ್ತಾಪತ್ರಿಕೆಗಳಲ್ಲಿ ವಿವಿಧ ಕ್ಷೇತ್ರಗಳ ವರ್ತಮಾನಗಳನ್ನೂ, ವಿಶಿಷ್ಟ ಲೇಖನಗಳನ್ನೂ ಇಂಗ್ಲಿಷಿನಲ್ಲಿ ನಡೆಯುತ್ತವೆ. ಈ ಸಾಮಗ್ರಿಯಲ್ಲಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಇಂಗ್ಲಿಷ್ ಮೀಡಿಯಂಗಳು ಇರುತ್ತವೆ. ಆಯಾ ಭಾಗದ ಉಪಸಂಪಾದಕರು ಒಂದು ತಿಂಗಳ ಕಾಲ ಹಾಗೆ ಕಂಡುಬರುವ ಇಂಗ್ಲಿಷ್ ಮೀಡಿಯಂಗಳನ್ನು ಬೇರೆಯಾಗಿ ದಾಖಲಿಸಿ ಇಟ್ಟರೆ ಒಂದು ದೊಡ್ಡ ಮೀಡಿಯಂ ಭಂಡಾರ ಪ್ರಸಿದ್ಧವಾಗುತ್ತದೆ. ಬಳಿಕ ಈ ಮೀಡಿಯಂಗಳಿಗೆ ಸಮಾನವಾದ ಕನ್ನಡದ ನುಡಿಗಟ್ಟುಗಳನ್ನು ಕಂಡುಹಿಡಿಯಬಹುದು. ಇಲ್ಲದಿದ್ದರೆ ಹೊಸದಾಗಿ ನಿರ್ಮಾಣ ಮಾಡಬಹುದು. ವರ್ತಮಾನ ಪತ್ರಿಕೆಯವರು ಈ ಉಪಾಯವನ್ನು ಪ್ರಯೋಗಿಸಿದರೆ ನಾವು ಕೆಲವು ಭಾಷಾಭ್ಯಾಸಿಗಳು ನಿಮಗೆ ಶಾಶ್ವತವಾದ ಕನ್ನಡ ನುಡಿಗಟ್ಟಿನ ಕೋಶವನ್ನು ತಯಾರಿಸಿ ಹಿಂದಿರುಗಿಸುತ್ತೇವೆ. ಎಲ್ಲ ಪತ್ರಿಕೆಗಳ ಉಪಸಂಪಾದಕರು ಈ ದೃಷ್ಟಿಯನ್ನು ಪರಿಶೀಲಿಸಬೇಕೆಂದು ನನ್ನ ವಿನಂತಿ. ಪರಿಷತ್ತು ಈ ಬಗ್ಗೆ ತೀವ್ರವಾಗಿ ಅಲೋಚಿಸಬೇಕು.

ಪತ್ರಿಕಾ ಪ್ರಪಂಚ


೧೧. ಪತ್ರಿಕಾ ವೃತ್ತಿಯು ಬಹು ಪವಿತ್ರವಾದ ವೃತ್ತಿ. ಕನ್ನಡದ ಪತ್ರಿಕಾಕರ್ತರ ಹಿಂದಿನ ಚರಿತ್ರೆಯನ್ನು ಓದಿದರೆ ಎಂಥ ಶ್ರೀಮಂತ ಮನಸ್ಸಿನ ಮೇಧಾವಿಗಳೂ, ನಿಸ್ವಾರ್ಥ ಪರೋಪಕಾರಿಗಳೂ ವೃತ್ತಿಯಲ್ಲಿ ಪ್ರಾಮಾಣಿಕತೆ, ಧರ್ಮಶ್ರದ್ಧೆ, ಸಾಮಾಜಿಕ ನ್ಯಾಯಪರತೆ ಮತ್ತು ಬಾಳಿನಲ್ಲಿ ಸಂದರ್ಶಕತೆ- ಇವುಗಳನ್ನು ಮೆರೆದಿದ್ದಾರೆ ಎಂಬುದು ಕಣ್ಮುಂದೆ ಕಟ್ಟುತ್ತದೆ.

ಆ ಹಿರಿಯರ ಮಾದರಿ ಈಗಲೂ ಅನುಸರಿಸಲು ಅರ್ಹವಾಗಿದೆ. ಜನರ ತಪ್ಪನ್ನು ಜನರಿಗೆ ತಿಳಿಸಿ ಸರಕಾರದ ತಪ್ಪನ್ನು ಸರಕಾರಕ್ಕೆ ತಿಳಿಸಿ ನವಜೀವನಕ್ಕೆ ಅವರು ಮಾರ್ಗದರ್ಶನ ಮಾಡುತಿದ್ದರು. ಈಗ ನಮ್ಮ ಪತ್ರಿಕಾಕರ್ತರು ಅದೇ ರೀತಿ ಕನ್ನಡ ಭಾಷೆಯ ಬಗ್ಗೆ ದುಡಿಯಬೇಕಾದ ಕಾಲ ಒದಗಿ ಬಂದಿದೆ. ಪರಿಷತ್ತು ಪತ್ರಿಕಾ ಪ್ರಪಂಚದ ಜೊತೆ ತುಂಬು ವಿಶ್ವಾಸದಿಂದ ಭಾಷಾಬಾಂಧವ್ಯವನ್ನು ಬೆಳೆಸಬೇಕು.

೧೨. ನಮ್ಮ ನಾಡಿನ ಮೂಲೆ ಮೂಲೆಗಳಲ್ಲಿ ಅನೇಕ ಚಿಕ್ಕ ಪುಟ್ಟ ಪತ್ರಿಕೆಗಳೂ ನಿಯತಕಾಲಿಕೆಗಳೂ ಪ್ರಕಟವಾಗುತ್ತಾ ಇವೆ. ಇವುಗಳಲ್ಲಿ ಆಯಾ ಪ್ರದೇಶದಲ್ಲಿ ಪ್ರಚಾರದಲ್ಲಿರುವ ಕನ್ನಡ ನುಡಿಗಟ್ಟುಗಳೂ ಪ್ರಯೋಗವಾಗುತ್ತವೆ. ಆಡುಮಾತಿನ ಆ ಪ್ರಯೋಗಗಳೂ ತುಂಬ ಅರ್ಥವತ್ತಾಗಿರುತ್ತದೆ. ನಾನಿದನ್ನು ಗಮನಿಸಿದ್ದೇನೆ. ಆ ನುಡಿಗಟ್ಟುಗಳು, ಕೆಲವು ವಿಶಿಷ್ಟ ಶಬ್ದಗಳು ಇವುಗಳನ್ನು ನಾವು ಸಂಗ್ರಹಿಸಿ ದಾಖಲಿಸಬೇಕು. ಇಂಥ ಸಣ್ಣ ಸಣ್ಣ ಪತ್ರಿಕೆಗಳಿಗೆ ಆರ್ಥಿಕ ಬಲವಿರುವುದಿಲ್ಲ. ಇಂಥ ಸ್ಥಿತಿ ಕನ್ನಡಕ್ಕೆ ಮಾತ್ರ ಸೇರಿದ್ದಲ್ಲ ಭಾರತದ ಎಲ್ಲ ಭಾಷೆಗಳಲ್ಲಿಯೂ ಈ ಸ್ಥಿತಿ ಇದೆ. ಇಂಥ ಸ್ಥಿತಿಯಿಂದ ಈ ಸಣ್ಣ ಪತ್ರಿಕೆಗಳನ್ನು ಮೇಲಕ್ಕೆತ್ತುವ ಒಂದು ಉಪಾಯವಿದೆ. ಅದನ್ನೂ ನಾವು ಗಮನಿಸಬೇಕು. ನಮ್ಮ ದೇಶದಲ್ಲಿರುವ ಬಹುರಾಷ್ಟ್ರೀಯ ಮತ್ತು ಸ್ವದೇಶಿ ವಾಣಿಜ್ಯೋದ್ಯಮಿಗಳು ತಮ್ಮ ಜಾಹೀರಾತುಗಳನ್ನು ಪತ್ರಿಕೆಗಳಿಗೆ ದೂರದರ್ಶನ ವಾಹಿನಿಗಳಿಗೆ ನೀಡುತ್ತಾರೆ. ಇದಕ್ಕೆ ನೀಡುವ ಹಣದ ಗಾತ್ರ ಬೃಹತ್ತಾಗಿ ವರ್ಷಕ್ಕೆ ಹಲವು ಸಾವಿರ ಕೋಟಿ ರೂಪಾಯಿಗಳಷ್ಟಾಗುತ್ತವೆ. ಈ ಗಾತ್ರದ ಹಣದಲ್ಲಿ ಶೇಕಡ ೧೫ರಷ್ಟನ್ನು ಎಲ್ಲ ಭಾಷೆಗಳ ಚಿಕ್ಕ ಪುಟ್ಟ ಪತ್ರಿಕೆಗಳಿಗೆ, ನಿಯತಕಾಲಿಕೆಗಳಿಗೆ ಕೊಡಲೇಬೇಕೆಂಬ ಕಾನೂನನ್ನು ಕೇಂದ್ರ ಸರಕಾರ ಮಾಡಿಬಿಟ್ಟರೆ ಸಾಕು ಈ ಸಣ್ಣ ಪುಟ್ಟ ಪತ್ರಿಕೆಗಳು ಬದುಕಿ ಹೋಗುತ್ತವೆ. ಇದರಿಂದ ಭಾರತದ ಎಲ್ಲ ಭಾಷೆಗಳ ಚಿಕ್ಕಪುಟ್ಟ ಪತ್ರಿಕೆಗಳಿಗೆ ಸಹಾಯವಾಗಿ ಆ ಪತ್ರಿಕೆಗಳು ಬಳಸುವ ಪ್ರಾದೇಶಿಕ ಸೊಗಡು ಉಳಿದು ಆ ಭಾಷೆಗಳು ಬೆಳೆಯಲು ಸಹಾಯವಾಗುತ್ತದೆ. ಎಲ್ಲ ಪ್ರಾಂತದ ಎಲ್ಲ ಲೋಕಸಭೆ, ರಾಜ್ಯಸಭೆಗಳ ಸದಸ್ಯರು, ಎಲ್ಲ ಕೇಂದ್ರ ಮಂತ್ರಿಗಳು ಈ ಕೆಲಸವನ್ನು ಮಾಡಬೇಕು. ಸಣ್ಣ ಪತ್ರಿಕೆಗಳ, ನಿಯತಕಾಲಿಕೆಗಳ ಒಕ್ಕೂಟವು ಇದರ ಬಗ್ಗೆ ಪ್ರಯತ್ನಪಡಬೇಕು ಮತ್ತು ಉದ್ಯಮಗಳಿಗೆ ಇದನ್ನು ಅವರ 'ಸಾಮಾಜಿಕ ಹೊಣೆಗಾರಿಕೆ' ಎಂದು ಪರಿಗಣಿಸುವಂತೆ ಮನವರಿಕೆ ಮಾಡಿಕೊಡಬೇಕು.

❖❖

೭೮ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಸಿ.ಪಿ. ಕೃಷ್ಣಕುಮಾರ್



ಸಿ.ಪಿ.ಕೆ. ಎಂಬ ಮೂರಕ್ಷಗಳಿಂದ ಕನ್ನಡ ಸಾಹಿತ್ಯ ಲೋಕಕ್ಕೆ ಚಿರಪರಿಚಿತರಾಗಿರುವ ಡಾ.ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್ ಅವರು ೮-೪-೧೯೩೯ರಲ್ಲಿ ಮೈಸೂರು ಜಿಲ್ಲೆಯ ಕೃಷ್ಣರಾಜ ನಗರದ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸವನ್ನು ಚಿಕ್ಕನಾಯಕನಹಳ್ಳಿ ಸಾಲಿಗ್ರಾಮದಲ್ಲಿ ಪೂರೈಸಿ ಮೈಸೂರಿನಲ್ಲಿ ಕಾಲೇಜು ಶಿಕ್ಷಣ ಮುಂದುವರಿಸಿ ೧೯೬೧ರಲ್ಲಿ ಎಂ.ಎ. ಪದವಿ ಗಳಿಸಿದರು.

೧೯೬೧ರಿಂದ ೧೯೬೪ರವರೆಗೆ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧನಾ ಸಹಾಯಕರಾಗಿ ಕಾರ್ಯನಿರ್ವಹಿಸಿ ೧೯೬೭ರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ೧೯೯೯ರಲ್ಲಿ ನಿವೃತ್ತರಾದರು.

ನಿವೃತ್ತಿಯ ನಂತರ ಸಂದರ್ಶಕ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ಗ್ರಂಥಪ್ರಕಟನಾ ಅಧ್ಯಕ್ಷರಾಗಿ ಪ್ರಬುದ್ಧ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ ಪಂಪ ಪ್ರಶಸ್ತಿ ಆಯ್ಕೆ ಸಮಿತಿ, ಕನಕಪೀಠ ಸಲಹಾ ಸಮಿತಿ ಮೊದಲಾದ ಸಮಿತಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅನೇಕ ಸಾಹಿತ್ಯ ಸಮ್ಮೇಳನಗಳ ಗೋಷ್ಠಿ ಅಧ್ಯಕ್ಷರಾಗಿ, ಕಾರ್ಯನಿರ್ವಹಿಸಿದ ಇವರು ೨೦೧೧ರಲ್ಲಿ ಗಂಗಾವತಿಯಲ್ಲಿ ನಡೆದ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಅನೇಕ ಪ್ರಶಸ್ತಿಗಳನ್ನು ಇವರು ಪಡೆದಿದ್ದಾರೆ. ಆ ಪೈಕಿ ಕೆಲವು ಹೀಗಿವೆ.:ಬಸವ ಸಾಹಿತ್ಯಶ್ರೀ, ವಿದ್ವತ್ ಶಿರೋಮಣಿ, ಹನಿಗವನ ಹರಿಕಾರ, ಜಾನಪದತಜ್ಞ, ನೃಪತುಂಗ ಸಾಹಿತ್ಯ ಪ್ರಶಸ್ತಿ ಇತ್ಯಾದಿ.

ಮುನ್ನೂರಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆದಿದ್ದಾರೆ. ಚುಟುಕ, ವ್ಯಕ್ತಿಚಿತ್ರ, ಪ್ರಬಂಧ, ಸಂಶೋಧನೆ, ಜಾನಪದ ವಿಮರ್ಶೆ, ಹಾಸ್ಯ ಭಾಷಾಂತರ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಇವರ ಕೆಲವು ಕೃತಿಗಳು: ತಾರಾಸಖ, ಕನ್ನಡ ಚತುರ್ಮುಖ, ಏಳು ಗ್ರೀಕ್ ನಾಟಕಗಳು, ಕನ್ನಡ ಉತ್ತರ ರಾಮಚರಿತೆ, ಗೀತಾಂಜಲಿ, ಅರಣ್ಯ ಪರ್ವ, ಕನ್ನಡ ಛಂದಸ್ಸಿನ ಚರಿತ್ರೆ, ಒಗಟು ಮತ್ತು ಗಾದೆ. ಕನ್ನಡ ಸಂಸ್ಕೃತಿ ಸಂಬಂಧ ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೭೮

ಅಧ್ಯಕ್ಷರು, ಸಿ.ಪಿ. ಕೃಷ್ಣಕುಮಾರ್

ದಿನಾಂಕ ೯, ೧೦, ೧೧ ಡಿಸೆಂಬರ್ ೨೦೧೧

ಸ್ಥಳ : ಗಂಗಾವತಿ

ಸಮ್ಮೇಳನದ ಲಾಭ

ಸಾಹಿತ್ಯ ಸಮ್ಮೇಳನಗಳು ಜಾತ್ರೆಗಳು ಎಂದು ಅನೇಕರು ಟೀಕಿಸುವುದುಂಟು ಟೀಕೆಯನ್ನು ಅಲ್ಲಗಳೆಯಬೇಕಿಲ್ಲ. ಆದರೆ ಜಾತ್ರೆಗಳಿಂದ, ಅಷ್ಟೇ ಅಲ್ಲ, ಸಂತೆಗಳಿಂದ ಕೂಡ ಪ್ರಯೋಜಗಳುಂಟು ಎಂಬುದನ್ನು ಮರೆಯದಿರೋಣ. ಜಾತ್ರೆ ಎಂಬುದು 'ಯಾತ್ರೆ'ಯ, 'ಸಂತೆ' ಎಂಬುದು 'ಸಂಸ್ಥೆ'ಯ ತದ್ಭವಗಳಷ್ಟೆ. ಬದುಕು ಆಸತ್ತಿನಿಂದ ಸತ್ತಿನೆಡೆಗೆ, ಕತ್ತಲೆಯಿಂದ ಬೆಳಕಿನಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ಅನಂತ ಯಾತ್ರೆಯಾಗಬೇಕು. ನಾವು ಪ್ರತಿವರ್ಷ ಒಂದು ಕಡೆ ಸೇರುವುದು. ಒಬ್ಬರ ಮುಖವನ್ನೊಬ್ಬರು ನೋಡವುದು, ಪರಸರ ಮಾತನಾಡುವುದು, ಒಟ್ಟಿಗೆ ಉಣ್ಣುವುದು ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡೂ ಬೆರೆಯುವುದು ಸಾಮಾನ್ಯ ಲಾಭವಲ್ಲ. "ಸಿನಿಕ"ತನ ಬೇಡ; ಸಕರಾತ್ಮಕವಾಗಿ ಆಲೋಚಿಸೋಣ. ಸಾಹಿತ್ಯ ಎನ್ನುವುದು ಜಾತ್ರೆಯ ನಡುವೆ ಹುಟ್ಟುವುದಿಲ್ಲ. ಅದು ಏಕಾಂತ ಸ್ವಗತ ಪ್ರಕ್ರಿಯೆ ಎಂಬುದು ದಿಟ.

ಸಮ್ಮೇಳನದ ನಿರ್ಣಯಗಳು

ನನ್ನ ಈ ಅಧ್ಯಕ್ಷ ಭಾಷಣದಲ್ಲಿ ಹಿಂದಿನವರು ಹೇಳಿರದ ಹೊಸತೇನನ್ನೂ ಬಹುಶಃ ನಾನು ಹೇಳುತ್ತಿಲ್ಲ. ಹೇಳುವುದು ಸಾಧುವೂ ಇಲ್ಲ. ಇದು ಬಹುತೇಕ ಚರ್ವಿತ ಚರ್ವಣವಾಗುವುದು ಅನಿವಾರ್ಯ ಆದರೆ ಅನುಚಿತವೇನಲ್ಲ. ಹಿಂದಿನ ಸಮ್ಮೇಳನಗಳಲ್ಲಿ ಕೈಕೊಂಡ ಅಥವಾ ಬಾಯ್ಗೊಂಡ ನಿರ್ಣಯಗಳೆಲ್ಲ ಅನುಷ್ಠಾನಗೊಂಡಿಲ್ಲ ಎಂಬ ವಿಷಾದನೀಯ ಸತ್ಯವನ್ನು ಸ್ಮರಿಸಬೇಕಾಗಿದೆ. ಹಾಗೆ ಅನುಷ್ಠಾನಗೊಂಡಿದ್ದರೆ ಇಷ್ಟರಲ್ಲಿ ಕರ್ನಾಟಕ ಭೂತಲ ಸ್ವರ್ಗವಾಗಬಹುದಿತ್ತು. ಸಮ್ಮೇಳನಾಧ್ಯಕ್ಷ ಭಾಷಣವೂ ಪರೋಕ್ಷವಾಗಿ ನಿರ್ಣಯಗಳ ಸರಣಿಯೇ ಆಗಿರುತ್ತದಲ್ಲವೆ. ಇದೆಲ್ಲ ಕಾರ್ಯರೂಪಕ್ಕೆ ಬರುತ್ತದೆ ಎಂಬ ಭರವಸೆಯಾಗಲಿ ಆಶಾವಾದವಾಗಲಿ ನನಗಿಲ್ಲ. ಆದರೆ ನಿರಾಶೆಯೂ ಅನಗತ್ಯ. ಆಶೆ, ನಿರಾಶೆಗಳ ಹಾಸುಹೊಕ್ಕು ಬದುಕು!

ಕನ್ನಡ ಸಾಹಿತ್ಯ ಸಮ್ಮೇಳನ ಎನ್ನುವಲ್ಲಿ "ಕನ್ನಡ ಸಾಹಿತ್ಯ" ಎಂಬುದು ಈ ಹೊತ್ತು ಏಕಶಬ್ದವಾಗಿ ಗ್ರಹಿಸದೆ, ಕನ್ನಡ, ಸಾಹಿತ್ಯ ಎಂದು ಬಿಡಿಸಿ ಪರಿಭಾವಿಸುವುದು ಯುಕ್ತವೆನಿಸುತ್ತದೆ. ಇದುವರೆಗೆ 'ಸಾಹಿತ್ಯ'ದ ಮೇಲೆ ಒತ್ತು ಹಾಕುತ್ತ ಬಂದಿದ್ದೇವೆ. ಈಗ 'ಕನ್ನಡ'ದ ಮೇಲೆ ಒತ್ತು ಹಾಕಬೇಕಾಗಿದೆ. ಭಾಷೆಯಿಲ್ಲದೆ ಸಾಹಿತ್ಯವೆಲ್ಲಿ? ಕನ್ನಡವನ್ನು ಗಟ್ಟಿಗೊಳಿಸಿ ಕಟ್ಟುವ, ತನ್ಮೂಲಕ ಸಮಷ್ಟಿ ಜೀವನವನ್ನು ಕಟ್ಟುವ ಕೆಲಸ ಇನ್ನು ಮುಂದೆ ಹಿಂದೆಂದಿಗಿಂತ ಮಿಗಿಲಾಗಿ ನಡೆಯಬೇಕಿದೆ, ಈ ದೃಷ್ಟಿಯಿಂದ 'ಕನ್ನಡ ಸಾಹಿತ್ಯ ಸಮ್ಮೇಳನ'ವನ್ನು 'ಕನ್ನಡ ಸಮ್ಮೇಳನ' ಎಂದಷ್ಟೇ ಕರೆದರೆ ಸಾಕೆನಿಸುತ್ತದೆ!

ಮಹಿಳೆಯರಿಗೆ ಹೆಚ್ಚು ಅವಕಾಶ

ಸಾಹಿತ್ಯ ಸಮ್ಮೇಳನಗಳಲ್ಲಿ ಸ್ತ್ರೀಯರಿಗೆ ಮತ್ತು ದಲಿತರಿಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸುವುದು ಅಗತ್ಯ. 'ನೊಂದವರ ನೋವ ನೋಯದವರೆತ್ತ ಬಲ್ಲರು?' ಎಂದು ಕೇಳಿದಳು, ಅಕ್ಕ "ಕಾವಿನಿಂದ ಕಾವ್ಯ" ಎಂದರು ಎ.ಆರ್.ಕೃ. ಮಹಿಳೆಯರ ಮತ್ತು ದಲಿತರ ನೋವು, ಕಾವುಗಳು ಮುಕ್ತವಾಗಿ ಅಭಿವ್ಯಕ್ತವಾಗಬೇಕು.

ರಾಜಕಾರಣಿಗಳ ಪಾತ್ರ


ಸಾಹಿತ್ಯ ಸಮ್ಮೇಳನಗಳಲ್ಲಿ ರಾಜಕಾರಿಣಿಗಳ ಪಾತ್ರವೇನು ಎಂಬುದೊಂದು ಪ್ರಶ್ನೆ. ಅವರೂ ಕನ್ನಡಿಗರೇ ಸಾಹಿತ್ಯ ಸಂಸ್ಕೃತಿಗಳಲ್ಲಿ ಆಸಕರಾದವರು ಅವರಲ್ಲಿ ಇರಬಾರದೆಂದಿಲ್ಲ. ಅಲ್ಲದೆ, ಸಾಹಿತ್ಯ ಎಲ್ಲರಿಗಾಗಿ. ಆದರೂ ಕನ್ನಡ ಸಾಹಿತ್ಯ ಪರಿಷತ್ತು ಸ್ವಂತ ಸಂಪನ್ಮೂಲಗಳನ್ನು ರೂಢಿಸಿಕೊಂಡು ಸಂಪೂರ್ಣ ಸ್ವಾವಲಂಬಿಯಾದಾಗ, ಸರ್ಕಾರದ ಹಂಗನ್ನು ಹರಿದುಕೊಂಡಾಗ, ರಾಜಕಾರಿಣಿಗಳ ಮೆರೆತವನ್ನು ತಪ್ಪಿಸಬಹುದು. ಮರಾಠಿ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಗಳು ಮಾತ್ರ ವೇದಿಕೆಯನ್ನು ಅಲಂಕರಿಸುತ್ತಾರೆ. ರಾಜಕಾರಣಿಗಳು ಕೆಳಗೆ ಕುಳಿತುಕೊಳ್ಳುತ್ತಾರೆ ಎಂಬುದು ಕುತೂಹಲಕಾರಿ ಸಂಗತಿ.

ಉತ್ಸವಮೂರ್ತಿ

ಸಮ್ಮೇಳನಾಧ್ಯಕ್ಷರು ಕೇವಲ ಉತ್ಸವಮೂರ್ತಿಯಾಗಬೇಕೆ. ಅವರನ್ನು ಮೆರವಣಿಗೆ ಮಾಡಿ ಮನೆಗೆ ಕಳುಹಿಸಬೇಕೆ ಎಂಬುದು ವಿಚಾರಯೋಗ್ಯ. ಅವರಿಗೆ ಕ್ರಿಯಾತ್ಮಕವಾದ ಯಾವುದಾದರೂ ಪಾತ್ರವನ್ನು ಕೊಡುವುದು ಒಳ್ಳೆಯದು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕೆಲವೊಂದು ಕರ್ತವ್ಯಗಳನ್ನು ಅಧಿಕಾರಗಳನ್ನು ಕೂಡ ಸಮ್ಮೇಳನಾಧ್ಯಕ್ಷರಿಗೆ ವಹಿಸಬಾರದೇಕೆ?

❖❖

೭೯ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ಕೋ. ಚೆನ್ನಬಸಪ್ಪ



ನ್ಯಾಯಾಧೀಶರಾಗಿ, ಸಾಹಿತಿಗಳಾಗಿ, ಚಳುವಳಿಕಾರರಾಗಿ ನಾಡುನುಡಿಗೆ ಸೇವೆ ಸಲ್ಲಿಸಿರುವ ಕೋ. ಚೆನ್ನಬಸಪ್ಪ ಅವರು ಬಳ್ಳಾರಿ ಜಿಲ್ಲೆಯವರು. ಇವರು ಬಸಮ್ಮ-ವೀರಣ್ಣ ದಂಪತಿಗಳ ಸುಪುತ್ರರಾಗಿ ೨೭-೨-೧೯೨೨ರಂದು ಜನಿಸಿದರು. ತವರೂರಿನಲ್ಲಿ ಶಾಲಾವಿದ್ಯಾಭ್ಯಾಸ ಮುಗಿಸಿ ಕಾಲೇಜು ಶಿಕ್ಷಣವನ್ನು ಅನಂತಪುರದಲ್ಲಿ ಪಡೆಯುತ್ತಿದ್ದಾಗ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಶಾಲೆಗೆ ತಿಲಾಂಜಲಿಯಿತ್ತರು. ಅನಂತರ ವಿದ್ಯಾಭ್ಯಾಸ ಮುಂದುವರಿಸಿ ಬಿ.ಎ. ಮತ್ತು ಲಾ ಪದವಿಯನ್ನೂ ಹಾಗೂ ಎಂ.ಎ. ಪದವಿಯನ್ನೂ ಗಳಿಸಿದರು.

೧೯೪೬ರಲ್ಲಿ ಬಳ್ಳಾರಿ ಜಿಲ್ಲೆಯ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವಕೀಲರಾಗಿ ವೃತ್ತಿಜೀವನ ಪ್ರಾರಂಭಿಸಿದ ಇವರು ೧೯೬೫ರಲ್ಲಿ ಡಿಸ್ಟ್ರಿಕ್ಟ್ ಸೆಷನ್ ಜಡ್ಜ್ ಆಗಿ ಅಮೂಲ್ಯ ಸೇವೆಸಲ್ಲಿಸಿದರು.

ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ಸಮಾಜಮುಖಿ ಸೇವೆ ಸಲ್ಲಿಸಿದ್ದಾರೆ. ಶ್ರೀ ರಾಮಕೃಷ್ಣ ವಿವೇಕಾನಂದ ಕೇಂದ್ರದ ಸ್ಥಾಪಕ ಕಾರ್ಯದರ್ಶಿಯಾಗಿದ್ದಾರೆ. ಕರ್ನಾಟಕದ ಅರವಿಂದಾಶ್ರಮದ ಶಾಖಾ ಪ್ರಾರಂಭಕ್ಕೆ ಕಾರಣಕರ್ತರಾಗಿದ್ದಾರೆ.ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕದಲ್ಲಿ ಉಳಿಸಲು ಕರ್ನಾಟಕ ಏಕೀಕರಣ ಸಮಿತಿಯ ಸದಸ್ಯರಾಗಿ ದುಡಿದಿದ್ದಾರೆ. ಹಲವಾರು ಕಾರ್ಮಿಕ ಸಂಘಗಳ ಮತ್ತು ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಸೇವೆಯನ್ನು ಮೆಚ್ಚಿ ಆತ್ಮೀಯರೆಲ್ಲರು ಸೇರಿ ೧೯೮೮ರಲ್ಲಿ 'ಕೋಚೆ ಯಾರು ಏನು ಎಂತು?' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಿದ್ದಾರೆ. ಸ.ಸ. ಮಾಳವಾಡ ಪ್ರಶಸ್ತಿ, ಸಂ.ಶಿ. ಭೂಸನೂರಮಠ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದಿಂದ ನಾಡೋಜ ಗೌರವ, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಡಿಲಿಟ್ ಪದವಿ, ಇತ್ಯಾದಿ ಇವರಿಗೆ ದೊರೆತಿವೆ. ೭೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ೨೦೧೩ರಲ್ಲಿ ಆಯ್ಕೆಯಾಗಿದ್ದರು.

ನ್ಯಾಯಾಲಯದ ಸತ್ಯ ಕಥೆಗಳು (ಅಂಕಣಬರಹ), ಹಿಂದಿರುಗಿ ಬರಲಿಲ್ಲ, ರಕ್ತತರ್ಪಣ, ಬೇಡಿ ಕಳಚಿತು ದೇಶ ಒಡೆಯಿತು, ಮೊದಲಾದ ೯ ಕಾದಂಬರಿಗಳನ್ನು ಅರವಿಂದ, ಬಸವಣ್ಣ ಮೊದಲಾದ ೮ ಜೀವನ ಚರಿತ್ರೆಗಳನ್ನು ಪ್ರಾಣಪಕ್ಷಿ, ಜೀವತೀರ್ಥ ಮೊದಲಾದ ೫ ಕವನ ಸಂಕಲನಗಳನ್ನು, ಶ್ರೀ ರಾಮಾಯಣ ದರ್ಶನ ಮಹಾಕಾವ್ಯ ಸಮೀಕ್ಷೆ, ಕುವೆಂಪು ವೈಚಾರಿಕತೆ ಮೊದಲಾದ ವಿಮರ್ಶಾ ಕೃತಿಗಳನ್ನು, ನನ್ನ ಮನಸ್ಸು ನನ್ನ ನಂಬುಗೆ ಎಂಬ ಆತ್ಮಕಥೆಯನ್ನೂ ರಚಿಸಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನ–೭೯
ಅಧ್ಯಕ್ಷರು, ಕೋ. ಚೆನ್ನಬಸಪ್ಪ
ದಿನಾಂಕ ೯, ೧೦, ೧೧ ಫೆಬ್ರವರಿ ೨೦೧೩
ಸ್ಥಳ : ಬಿಜಾಪುರ

ಪರಿಷತ್ತು ಅಧ್ಯಕ್ಷತೆ

ಈ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ ಎಂದರೆ ಕೇವಲ ಪ್ರತಿಮೆ; ಉತ್ಸವ ವಿಗ್ರಹ; ತಾಯಿ ಸರಸ್ವತಿಯನ್ನು ಪ್ರತಿನಿಧಿಸುವ ಒಂದೇ ವಿಗ್ರಹ. ಈ ನಮ್ರತೆಯಿಂದ ಹುಸಿಯಲ್ಲದ ವಿನಯದಿಂದ ಈ ಸ್ಥಾನವನ್ನು ಪ್ರದಾನ ಮಾಡಿದ ಇಲ್ಲಿ ನೆರೆದ ಮಹಾ ಜನತೆಗೆ, ಸಾರಸ್ವತ ಲೋಕದ ಪ್ರತಿನಿಧಿಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ, ಅದರ ಸ್ಥಳೀಯ ಶಾಖಾ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಈ ಸಮ್ಮೇಳನ ಸ್ವಾಗತ ಸಮಿತಿಯ ಪದಾಧಿಕಾರಿಗಳಿಗೆ ಈ ಸ್ಥಾನಕ್ಕೆ ಈ ವ್ಯಕ್ತಿ ಯೋಗ್ಯ ಎಂದು ಪರಿಗಣಿಸಿದ ಸಹೃದಯರಿಗೆ ಶರಣಾರ್ಥಿ.

ಸರಕಾರದ ಕಾರ್ಯಕ್ರಮ

ಈ ಸಮ್ಮೇಳನದ ನಿಮಿತ್ತ ದೂರದರ್ಶನದಲ್ಲಿ ಒಂದು ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ನಾನೂ ಇದ್ದೆ. ಚಂಪಾ, ಡಿ. ವಸುಂಧರಾ ಭೂಪತಿ ಇದ್ದರು. ಕಾರ್ಯಕ್ರಮ ನಡೆಸಿ ಕೊಟ್ಟ ನಿರೂಪಕರು ಚಂಪಾ ಅವರನ್ನು ಕೇಳಿದ ಮೊದಲ ಪ್ರಶ್ನೆ: ಜಾತ್ರೆಯೋಪಾದಿ ಈ ಮೂರು ದಿನದ ಅದ್ದೂರಿ ಆಡಂಬರದ ದುಬಾರಿ "ಸಾಹಿತ್ಯ ಜಾತ್ರೆ" ಎಂಬುದು. ಆದಕ್ಕೆ ಚಂಪಾ ಉತ್ತರ ಕೊಡುತ್ತ ಪರಿಷತ್ತಿನ ಅಧ್ಯಕ್ಷರು ಆಗಲೇ ಹೇಳಿರುವ ಉತ್ತರ "ಇದು ಸರಳವಾಗಿ ಅಡಂಬರವಿಲ್ಲದೆ ಅರ್ಥಪೂರ್ಣ ಸಮಾಲೋಚನಾ (Business Like) ಕೂಟ" ಎಂಬುದಾಗಿ ಹೇಳಿ ಕೊನೆಗೆ ಒಂದು ಮಾತು ಹೇಳಿದರು. "ನಮ್ಮ ಜನ ವರ್ಷವಿಡೀ ದುಡಿದು ದಣಿವಾಗಿ ಹಣ್ಣಾಗಿ ಬೇಸರಗೊಂಡಾಗ ಮೂರು ದಿನ ಇಂಥ ಸಾಹಿತ್ಯ ಸಂತೋಷ ಸಮಾರಂಭದಲ್ಲಿ **ಕುಣಿದು ಕುಪ್ಪಳಿಸಿ** ಸಂತೋಷಪಡುವುದರಲ್ಲಿ ಅಷ್ಟೇನು ತಪ್ಪಿಲ್ಲ...... ಎಂದು ಇಂತಹ ಸಮ್ಮೇಳನದ ಔಚಿತ್ಯವನ್ನು ಸಮರ್ಥಿಸಿದರು.

ಅವರು ಹೇಳಿದ '**ಕುಣಿದು**' ಎಂಬ ಮಾತು ನನಗೆ, "**ಕುಡಿದು**" ಎಂದು ಕೇಳಿದಂತಾಯ್ತು–ಚಂಪಾ ಅವರು ಅಂಥ ಹಾಸ್ಯದ ಮಾತು ಆಡಿದ್ದರೂ ಆಡಿರಬಹುದು ಎಂದು ನಾನು ಮನದಲ್ಲೇ ನಕ್ಕೆ. ನನ್ನನ್ನು ಆ ಪ್ರಶ್ನೆ ಕೇಳುತ್ತಾರೆ; ಅದಕ್ಕೆ ತಕ್ಕ ಉತ್ತರ ಕೊಡಲು ನಾನು ಮಾನಸಿಕವಾಗಿ ಸಿದ್ಧತೆ–ಮಾಡಿಕೊಳ್ಳುತ್ತಿದ್ದೆ. ಅವರು ಹೇಳಿದ್ದೇನು ಎಂದು ನನ್ನ ಎಡಬದಿಗೆ ಕುತಿದ್ದವರನ್ನು ಕೇಳಿದೆ. ನನ್ನನ್ನು ಈ ಪ್ರಶ್ನೆ ಕೇಳಿದ್ದರೆ ನಾನು ತಪ್ಪು ಕೇಳಿಸಿಕೊಂಡಿದ್ದ "**ಕುಡಿದು ಕುಪ್ಪಳಿಸುವ**" ಮಾತನ್ನು ಸಮರ್ಥಿಸುತ್ತಿದ್ದೆ! ಹೇಗೇಂದರೆ; ಚಂಪಾ ಹೇಳಿದ್ದು ಅಷ್ಟೇನೂ ತಪ್ಪಲ್ಲ ಎಂದು ನಾನೂ ದನಿಗೂಡಿಸಿದ್ದರೆ ಪ್ರೇಕ್ಷಕರಿಗೆ ಆಶ್ಚರ್ಯ ಮಾತ್ರವಲ್ಲ ಅಪಾಯಕಾರಿಯಾಗಿ ಭಾಸವಾಗುತ್ತಿತ್ತು ಅಲ್ಲದೆ ಹಾಸ್ಯ ಪ್ರಜ್ಞೆ ಇದ್ದವರು ನಗುತ್ತಿದ್ದರು! 'ರಾಮರಸ' ಪ್ರಿಯರಿಗೆ ಖುಷಿಯಾಗುತ್ತಿತ್ತು.

ಕರ್ನಾಟಕ ಅರಾಷ್ಟ್ರೀಯವಲ್ಲ

ಇಂದು ನಾವಿಲ್ಲಿ ಸೇರಿರುವುದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಇದು ಆರೇಳು ಕೋಟಿ ಜನರ ಪ್ರಾತಿನಿಧಿಕ ಸಮಾವೇಶ. ಕನ್ನಡ ಸಮ್ಮೇಳನದಲ್ಲಿ 'ಅಖಿಲ' ಎಂಬ ಗುಣವಾಚಕ ಭಾರತಕ್ಕೂ ಕರ್ನಾಟಕಕ್ಕೂ ಅನ್ವಯಿಸುತ್ತದೆ. ಇದನ್ನು ಬಿಡಿಸಿ. ಹಿಗ್ಗಿಸಿ ಹೇಳುವುದಾದರೆ ಇದು 'ಅಖಿಲ ಭಾರತ ಮತ್ತು ಅಖಿಲ ಕರ್ನಾಟಕ ಸಮ್ಮೇಳನ' ಎಂದಾಗುತ್ತದೆ. ಈ ಸಮ್ಮೇಳನಾಧ್ಯಕ್ಷ ಅಖಿಲ ಭಾರತವನ್ನು ಕರ್ನಾಟಕವನ್ನು ಕನ್ನಡವನ್ನು– ಸಾಹಿತ್ಯ ಸಂಸ್ಕೃತಿ ಧರ್ಮವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಭಾರತಾಂತರ್ಗತ ಅಖಿಲ ಕರ್ನಾಟಕದ ಹಿತ, ರಕ್ಷಣೆ, ಅಭಿವೃದ್ಧಿ, ಕ್ಷೇಮವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಬೇಕು. ಅಂದರೆ ಅಖಂಡ ಭಾರತದ ಹಿತಕ್ಕೆ ಧಕ್ಕೆ ಆಗದಂತೆ ಅಖಿಲ ಕರ್ನಾಟಕದ ಹಿತರಕ್ಷಣ ಮಾಡಬೇಕು. ಇಂದಿನ ಈ ಮಹಾಧಿವೇಶನದ ಪ್ರಾರಂಭದಲ್ಲಿ ಕುವೆಂಪು ವಿರಚಿತ ನಾಡಗೀತೆಯನ್ನು ನಾವು ಎದ್ದು ನಿಂತು ಉಚ್ಚ ಕಂಠದಿಂದ ಕರ್ನಾಟಕ ಮಾತೆಯ ಮಹಿಮೆಯನ್ನು ಹಾಡಿದೆವು. ಆ ಗೀತೆಯ ಮೊದಲನೆಯ ಸಾಲು

'ಜಯ ಭಾರತ ಜನನಿಯ ತನುಜಾತೆ' ಎಂಬ ಜಯ ಘೋಷ ತರುವಾಯ ಎರಡನೆಯ ಸಾಲು 'ಜಯ ಹೇ ಕರ್ನಾಟಕ ಮಾತೆ' ಎಂಬುದು. ಈ ನಾಡಗೀತೆ ಅರ್ಥ, ಮಹತ್ವ ಇಂಗಿತ ಏನು? ಇದನ್ನು ರಚಿಸಿದ ಕವಿ ಹೀಗೆ ವರ್ಣಿಸಿದ್ದಾರೆ.

'ಈ ನಮ್ಮ ಕರ್ನಾಟಕತ್ವ ಎಂದೆಂದಿಗೂ ಭಾರತೀಯತ್ವಕ್ಕೆ ಅವಿರುದ್ಧವಾಗಿ ನಿಲ್ಲುತ್ತದೆ. ಕರ್ನಾಟಕ ಮಾತೆಗೆ ಜಯಘೋಷ ಮಾಡುವಾಗಲೆಲ್ಲ ಭಾರತಮಾತೆಯ ಪುತ್ರಿಯೆಂದು ಮೊದಲೆ ಘೋಷಿಸುತ್ತೇವೆ."

ರಣಘೋಷ

ಸಮಾಜದ ಗುರುಗಳೂ, ಹಿತರಕ್ಷರೂ ಆದ ಸಾಹಿತಿಗಳು ಈ ಭೂ ಸಮಸ್ಯೆ ನಮ್ಮದಲ್ಲ ಎಂದು ಕರ್ತವ್ಯಚ್ಯುತರಾದರೆ ಅದು ಮಹಾಪರಾಧ. ಮಾಡಬಾರದ ಕೃತ್ಯ ಮಾಡಿದವನು ಅಪರಾಧಿಯಾದರೆ ಮಾಡಬೇಕಾದ ಕರ್ತವ್ಯವನ್ನು ಮಾಡದಿದ್ದರೆ ಅವನೂ ಅಪರಾಧಿಯೇ. ದುಶ್ಯಾಸನ ದ್ರೌಪದಿಯ ವಸ್ತ್ರಾಪಹರಣ ಮಾಡಿದಾಗ ಅದು ತಪ್ಪು ಎಂದು ಹೇಳದ ಅದನ್ನು ತಡೆಯದ ದ್ರೋಣಾಚಾರ್ಯನ ಮೌನ ಅಪರಾಧವೆ, ಶಿಕ್ಷಾರ್ಹವೇ. ಹಾಗೆಯೇ ನಾವು ಸಾಹಿತಿಗಳು ಮಾತನಾಡಲೇ ಬೇಕಾದಾಗ ಮಾತನಾಡದಿದ್ದರೆ ಕರ್ತವ್ಯಲೋಪವೆ. ತನ್ನ ಲೇಖನಿಯೆಂಬ ಖಡ್ಗವನ್ನು ಹಿಡಿದು ಭೂಮಾತೆಯ ಮಾನಸಂರಕ್ಷಣೆಗೆ, ಮುನ್ನುಗ್ಗಬೇಕು.

ಸಾಹಿತ್ಯ ಸಮ್ಮೇಳನವೆಂಬ ಈ ರಥದಲ್ಲಿ ಕುಳಿತು ನಾನು ಕೊಡುವ ದಂಡನಾಯಕನ ಆಜ್ಞೆ ಇದು! ಸಾಹಿತಿಗಳೇ ಈ ಧರ್ಮಯುದ್ಧದಲ್ಲಿ ಜೀವದ ಹಂಗು ತೊರೆದು ಹೋದರೆ ಹೋಗಲಿ ತಲೆಹಾರಿ ಎಂದು ಸಿಂಹನಾದ ಮಾಡುತ್ತ ಮುನ್ನುಗ್ಗಿ 'ಸತ್ತರೆ ಸ್ವರ್ಗ, ಗೆದ್ದು ಬದುಕಿದರೆ ಭೂರಾಜ್ಯದ ಒಡೆತನ"– ನಾವೀಗ ಕಲ್ಕಿಯೂಗಬೇಕೆಂದು ಬೇಡಿಕೊಂಬೆ. 'ಜಯ ಜಯ ಮಹಾದೇವ" ಎಂದು ರಣಘೋಷಮಾಡಿ ಕೃತಕೃತ್ಯರಾಗಿ.


ಸಮ್ಮೇಳನಾಧ್ಯಕ್ಷರ ಪ್ರಾರ್ಥನೆ

ನೀವು ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳನ್ನಾಗಲಿ, ಸರ್ಕಾರದ ಮುಖ್ಯಮಂತ್ರಿಗಳನ್ನಾಗಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನಾಗಲಿ, ನನ್ನನ್ನಾಗಲಿ ಕನ್ನಡಕ್ಕಾಗಿ ನೀವೇನು ಮಾಡಿದ್ದೀರಿ? ಏನು ಮಾಡುತ್ತೀರಿ? ಎಂದು ಕೇಳಬೇಡಿ' ಬದಲು 'ಕನ್ನಡಕ್ಕಾಗಿ ನಾನೇನು ಮಾಡಬೇಕು" ಎಂದು ಕೇಳಿ ಎಂದು ನಾನು ಬಿನ್ನೈಸುತ್ತೇನೆ. ಇದೇ ನನ್ನ ಕೊನೆಯ ಪ್ರಾರ್ಥನೆ. ಸಮಾಧಾನದಿಂದ ಕೇಳಿದ ನಿಮಗೆ ಹೃತ್ಪೂರ್ವಕ ವಂದನೆಗಳು. ಈ ಸ್ಥಾನವನ್ನು ಕೊಟ್ಟು ನನ್ನನ್ನು ಪ್ರೀತಿಸಿದ ಗೌರವಿಸಿ ಎಲ್ಲರಿಗೂ ಮತ್ತೊಮ್ಮೆ ನಮಸ್ಕಾರಗಳು.

❖❖

೮೦ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ನಾ. ಡಿಸೋಜ



ಪರಿಸರದ ನಾಶವಾದರೆ ಮಾನವ ಜನಾಂಗದ ವಿನಾಶ, ಪರಿಸರವನ್ನು ರಕ್ಷಿಸುವುದರಿಂದ ಮಾನವನ ಬಾಳು ಸಂತೋಷವಾಗಲು ಶಕ್ಯ ಎಂಬ ಧ್ಯೇಯದ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿರುವ ನಾ. ಡಿಸೋಜ ಅವರು ಎಫ್.ಪಿ. ಡಿಸೋಜ-ರೂಪಿನಾ ಬಾಯಿ ದಂಪತಿಗಳ ಪುತ್ರರಾಗಿ ೬-೬-೧೯೩೭ರಲ್ಲಿ ಜನಿಸಿದರು. ಬಾಲ್ಯದಿಂದಲೂ ಸಾಹಿತ್ಯಿಕ ವಾತಾವರಣದಲ್ಲಿ ಬೆಳೆದ ಅವರು ಸಾಗರದಲ್ಲಿ ಶಾಲಾ ಶಿಕ್ಷಣವನ್ನು, ಶಿವಮೊಗ್ಗದಲ್ಲಿ ಕಾಲೇಜು ಶಿಕ್ಷಣವನ್ನು ಪಡೆದರು.

ನಂತರ ಅವರು ಲೋಕೋಪಯೋಗಿ ಇಲಾಖೆಯಲ್ಲಿ ವೃತ್ತಿಜೀವನ ಪ್ರಾರಂಭಿಸಿ ಶರಾವತಿ ಯೋಜನೆ, ಕಾರ್ಗಲ್, ಮಾಸ್ತಿಕಟ್ಟೆ, ತೀರ್ಥಹಳ್ಳಿ, ಸಾಗರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು.

ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ (೧೯೯೩-೯೬) ಕೊಂಕಣಿ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ (೧೯೯೬), ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾಗಿ ಅವರು ಕಾರ್ಯ ನಿರ್ವಹಿಸಿದ್ದಾರೆ.

೨೦೦೭ರಲ್ಲಿ ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪಡೆದ ಅವರಿಗೆ ೧೯೯೮ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ೨೦೦೩ರಲ್ಲಿ ನಿರಂಜನ ಸಾಹಿತ್ಯ ಪ್ರಶಸ್ತಿ, ೨೦೦೬ರಲ್ಲಿ ಆಳ್ವಾಸ್ ನುಡಿಸಿರಿ ಅಧ್ಯಕ್ಷ ಗೌರವ, ೨೦೧೦ರಲ್ಲಿ ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ದೊರೆತಿದೆ. ೨೦೧೪ರಲ್ಲಿ ಮಡಿಕೇರಿಯಲ್ಲಿ ನಡೆದ ೮೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ನಾ. ಡಿಸೋಜ ಅವರಿಗೆ ದೊರಕಿತ್ತು.

ಕಥೆ ಕಾದಂಬರಿಕಾರರಾದ ನಾ. ಡಿಸೋಜ ಬರೆದ ಕೃತಿಗಳಲ್ಲಿ ಕೆಲವು ಪಠ್ಯಗಳಾಗಿವೆ, ಹಲವು ಕೃತಿಗಳು, ಚಲನಚಿತ್ರಗಳಾಗಿವೆ. ಅವುಗಳಲ್ಲಿ ಕೆಲವು : ಮುಳುಗಡೆ, ಬಣ್ಣ, ಪಾದರಿಯಾದ ಹುಡುಗ, ಸಿರಿಗಂಧ, ದ್ವೀಪ, ಬಳುವಳಿ, ಏಸುಕ್ರಿಸ್ತ, ನೇತ್ರಾಣಿ ಗುಡ್ಡಕ್ಕೆ ಯಾತ್ರೆ, ಕುಂಜಾಲು ಕಣಿವೆಯ ಕೆಂಪು ಹೂ, ಇಗರ್ಜಿ ಸುತ್ತಲಿನ ಹತ್ತುಮುಖಗಳು ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೮೦
ಅಧ್ಯಕ್ಷರು, ನಾ. ಡಿಸೋಜ
ದಿನಾಂಕ ೭, ೮, ೯ ಜನವರಿ ೨೦೧೪
ಸ್ಥಳ : ಮಡಿಕೇರಿ

ಕಳೆದ ಐವತ್ತು ವರ್ಷಗಳ ನನ್ನ ಕನ್ನಡ ಸೇವೆಯನ್ನು ಗುರುತಿಸಿ ನನಗೆ ೮೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯನ್ನು ದಯಪಾಲಿಸಿ ನನ್ನನ್ನ ಇಲ್ಲಿ ಬರಮಾಡಿಕೊಂಡಿದ್ದಾರೆ.

ಸಾಹಿತ್ಯ ಮತ್ತು ಕಲೆ

ನಮ್ಮ ಜನ ಯಾವತ್ತು ಸಾಹಿತ್ಯಕ್ಕೆ ಹೆಚ್ಚಿನ ಸ್ಥಾನಮಾನವನ್ನು ಕೊಡುತ್ತ ಬಂದಿದ್ದಾರೆ. ಸಾಹಿತ್ಯ ಸಮ್ಮೇಳನ ಅಂದರೆ ಇಡೀ ನಾಡಿನ ಉದ್ದಕ್ಕೂ ಒಂದು ಸಂಚಲನ ಕಾಣಿಸುತ್ತದೆ. ಸಾಹಿತ್ಯ ಸಮ್ಮೇಳನಗಳನ್ನು ಸಂತೆ ಜಾತ್ರೆ ಎಂದು ಕೆಲವರು ಕರೆದರೂ ಅದಕ್ಕೆ ಬರುವ ಜನ ಕಡಿಮೆ ಆಗಿಲ್ಲ. ಸಮ್ಮೇಳನದ ಗೋಷ್ಠಿಗಳಲ್ಲಿ ಜನ ಭಾಗವಹಿಸುತ್ತಾರೆ. ಕವಿಗೋಷ್ಠಿಯನ್ನು ಕೇಳುತ್ತಾರೆ. ಪುಸ್ತಕ ಪ್ರದರ್ಶನದ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ. ಸಮ್ಮೇಳನ ದಿನದಿಂದ ದಿನಕ್ಕೆ ತನ್ನ ಜನಪ್ರಿಯತೆಯನ್ನು ಹೆಚ್ಚು ಮಾಡಿಕೊಳ್ಳುತ್ತದೆ. ಈ ಸಮ್ಮೇಳನವನ್ನು ಬೇರೊಂದು ರೀತಿಯಲ್ಲಿ ನಡೆಸಬೇಕು ಅನ್ನುವ ಮಾತು ಇದೆಯಾದರೂ ಆಗಿಲ್ಲ. ಇದಕ್ಕೆ ಕಾರಣ, ಮೊದಲನೆಯದು ಸಾಹಿತ್ಯ ಬದುಕನ್ನು ಪ್ರತಿಬಿಂಬಿಸುತ್ತದೆ ಅನ್ನುವುದು, ಎರಡನೆಯದು ಅದೊಂದು ಭಾಷೆಯನ್ನು ಅವಲಂಬಿಸಿಕೊಂಡಿದೆ ಅನ್ನುವುದು.

ಸಮ್ಮೇಳನದ ನಿರ್ಣಯಗಳು

ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಕೈಗೊಳ್ಳುವ ನಿರ್ಣಯಗಳ ಬಗ್ಗೆ ಸದಾ ಒಂದು ತಕರಾರಿದೆ. ಈ ಬಾರಿ ಯಾವುದೇ ನಿರ್ಣಯ ಕೈಕೊಳ್ಳಬೇಡಿ. ಅದು ನೆರವೇರುವುದಿಲ್ಲ ಅನ್ನುವ ಸಲಹೆ ನನಗೆ ಬಂದಿದೆ. ಸಮ್ಮೇಳನಗಳಲ್ಲಿ ನಿರ್ಣಯಗಳನ್ನು ಕೈಗೊಳ್ಳುವುದು ಒಂದು ಪದ್ಧತಿ. ಎಷ್ಟೋ ನಿರ್ಣಯಗಳು ಅನುಷ್ಠಾನಗೊಂಡಿವೆ. ಪರಿಷತ್ತು ಕೈಕೊಂಡ ನಿರ್ಣಯಗಳನ್ನು ಯಾವ ಕ್ರಮದಲ್ಲಿ ಸರಕಾರಕ್ಕೆ ಸಲ್ಲಿಸುತ್ತೆ ನನಗೆ ಗೊತ್ತಿಲ್ಲ. ಸರಕಾರದಲ್ಲಿ ವಿವಿಧ ವಿಭಾಗಗಳು ಇರುತ್ತವೆ. ಆ ಆ ವಿಭಾಗಕ್ಕೆ ಪ್ರತ್ಯೇಕವಾಗಿ ನಿರ್ಣಯಗಳು ತಲುಪಬೇಕು. ಆ ಇಲಾಖೆ ಅದನ್ನು ಪರಿಶೀಲಿಸಿ ಕ್ರಮ ಕೈಕೊಳ್ಳಬೇಕು. ಆ ನಿರ್ಣಯ ಸರ್ಕಾರದ ಪಾಲಿಸಿಗಳಿಗೆ ಅನುಗುಣವಾಗಿರಬೇಕು. ಆ ನಿರ್ಣಯಗಳ ಹಿಂದೆ ಬೆನ್ನು ಹತ್ತಿ ಹೋಗುವ ಜನ ಇರಬೇಕು. ಸರಕಾರ ಸಮ್ಮೇಳನಗಳ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಒಂದು ಹೊಣೆಯನ್ನು ಹೊರಬೇಕು. ಸಮ್ಮೇಳನಕ್ಕೆ ಕೋಟಿ ಹಣ ನೀಡುವ ಸರಕಾರ ಅಷ್ಟಕ್ಕೇ ಸುಮ್ಮನಿರಬಾರದು. ತನ್ನ ಓರ್ವ ಅಧಿಕಾರಿಯನ್ನು ನಿಯೋಜಿಸಿ ಸರಕಾರಕ್ಕೆ ಇಡೀ ಸಮ್ಮೇಳನದಲ್ಲಿ ಏನೇನು ಸಲಹೆ ಸೂಚನೆ ಬರುತ್ತೆ ಅನ್ನುವುದನ್ನು ದಾಖಲೆ ಮಾಡುವಂತೆ ಮಾಡಬೇಕು. ಈ ಎಲ್ಲ ವಿಚಾರಗಳು ಜಾರಿ ಆಗುವ ಹಾಗೆ ಆ ಅಧಿಕಾರಿ ಮಾಡಬೇಕು. ಅಲ್ಲದೆ ಕನ್ನಡ ಸಾಹಿತ್ಯ ಸಮ್ಮೇಳನ ಏನೋ ಒಂದು ಜಾತ್ರೆ ಅನ್ನುವ ಅಭಿಪ್ರಾಯ ಸರಕಾರದ್ದಾಗಬಾರದು. ದೇಶ, ಭಾಷೆಯನ್ನು ಜನಜೀವನವನ್ನು ಗಮನದಲ್ಲಿ ಇರಿಸಿಕೊಂಡು ನಡೆಸುವ ಈ ಸಮ್ಮೇಳನಕ್ಕೆ ಸರಕಾರ ಗೌರವ, ಪ್ರಾತಿನಿಧ್ಯವನ್ನು ನೀಡಬೇಕು. ಇಲ್ಲಿ ಕೇಳಿ ಬರುವ ವಿಚಾರಗಳಿಗೆ ಸರಕಾರದ ಮುದ್ರೆ ಬೀಳಬೇಕು.

❖❖

೮೧ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಸಿದ್ಧಲಿಂಗಯ್ಯ



ಕವಿ, ಕನ್ನಡ ಪ್ರಾಧ್ಯಾಪಕ ಡಾ. ಸಿದ್ಧಲಿಂಗಯ್ಯನವರು ಹೋರಾಟಗಾರರೂ ಆಗಿದ್ದಾರೆ.ಇವರು ಮಾಗಡಿಯಲ್ಲಿ ವೆಂಕಮ್ಮ-ದೇವಯ್ಯ ದಂಪತಿಗಳಿಗೆ ೩-೨-೧೯೫೪ರಲ್ಲಿ ಜನಿಸಿದರು. ಬಡತನದಲ್ಲಿಯೇ ಗ್ರಾಮೀಣ ಭಾಗದ ಶಾಲೆಗಳಲ್ಲಿ ತಮ್ಮ ಪ್ರಾರಂಭಿಕ ಶಾಲಾ ವಿದ್ಯಾಭ್ಯಾಸ ಮಾಡಿ ಎಂ.ಎ. ಪದವಿಗಳಿಸಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ, ನಿರ್ದೇಶಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಡಾ. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿದ ನಂತರ ಸಿದ್ಧಲಿಂಗಯ್ಯನವರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ೧೯೩೩ರಲ್ಲಿ ನಡೆದ ಅಖಿಲ ಕರ್ನಾಟಕ ವಿಚಾರವಾದಿ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷರಾಗಿದ್ದ ಇವರು ೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಹುಟ್ಟು ಹಾಕಿದರು. ಎರಡು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸಕ್ರಿಯವಾಗಿ ಪಾತ್ರವಹಿಸಿದ್ದಾರೆ.

ಇವರ ಸೇವೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಅನೇಕ. ಅವುಗಳಲ್ಲಿ ಕೆಲವು ಹೀಗಿವೆ : ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ (೧೯೮೬) ಚಲನಚಿತ್ರ ಗೀತರಚನೆ ಪ್ರಶಸ್ತಿ (೧೯೮೪) ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (೧೯೯೬) ಜಾನಪದ ತಜ್ಞ ಪ್ರಶಸ್ತಿ (೨೦೦೧) ಸಂದೇಶ ಪ್ರಶಸ್ತಿ (೨೦೦೧) ಡಾ. ಅಂಬೇಡ್ಕರ್ ಪ್ರಶಸ್ತಿ (೨೦೦೨) ಸತ್ಯಕಾಮ ಪ್ರತಿಷ್ಠಾನ ಪ್ರಶಸ್ತಿ (೨೦೦೨) ನಾಡೋಜ ಪ್ರಶಸ್ತಿ (೨೦೦೭) ಆಳ್ವಾಸ್ ನುಡಿಸಿರಿ ಪ್ರಶಸ್ತಿ (೨೦೧೨) ಪ್ರೆಸಿಡೆನ್ಸಿ ಇನ್ಸಿಟ್ಯೂಷನ್ ಪ್ರಶಸ್ತಿ (೨೦೧೨) ಇತ್ಯಾದಿ ಪ್ರಶಸ್ತಿಗಳು ಬಂದಿವೆ.

ಕವಿ, ವಿಮರ್ಶಕರಾದ ಸಿದ್ಧಲಿಂಗಯ್ಯನವರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು :

ಗ್ರಾಮದೇವತೆಗಳು (ಸಂಶೋಧನ ಪ್ರಬಂಧ), ಊರುಕೇರಿ (ಆತ್ಮಕಥೆ) ಜನಸಂಸ್ಕೃತಿ, ಉರಿಕಂಡಾಯ, ಹಕ್ಕಿನೋಟ, ಪಂಚಮ ಮತ್ತು ನೆಲಸಮ, ಏಕಲವ್ಯ (ನಾಟಕ), ಸಾವಿರಾರು ನದಿಗಳು (೧೯೭೯), ಕಪ್ಪು ಜನರ ಹಾಡು (೧೯೮೨), ಹೊಲೆಮಾದಿಗರ ಹಾಡು (೧೯೭೫) ಇತ್ಯಾದಿ.

ಕನ್ನಡ ಸಾಹಿತ್ಯ ಸಮ್ಮೇಳನ-೮೧
ಅಧ್ಯಕ್ಷರು, ಡಾ. ಸಿದ್ಧಲಿಂಗಯ್ಯ
ದಿನಾಂಕ ೩೧ ಜನವರಿ, ೧,೨,೩ ಫೆಬ್ರವರಿ ೨೦೧೫
ಸ್ಥಳ : ಶ್ರವಣಬೆಳಗೊಳ

ಕೃತಜ್ಞತೆ ಸಲ್ಲಿಕೆ

೮೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ನನ್ನನ್ನು ಆಯ್ಕೆ ಮಾಡಿರುವುದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿ ಅವರಿಗೆ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಮತ್ತು ಸಮಸ್ತ ಕನ್ನಡಿಗರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವ ಆಚರಣೆಯ ಸಂಭ್ರಮದಲ್ಲಿದೆ. ಪರಿಷತ್ತು ನೂರು ವರ್ಷಗಳ ಕಾಲ ನಿರಂತರವಾಗಿ ಕನ್ನಡದ ಸೇವೆ ಸಲ್ಲಿಸುತ್ತಾ ಬಂದಿದೆ. ಪರಿಷತ್ತಿನ ಸ್ಥಾಪನೆಗೆ ಕಾರಣರಾದ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನರಾಗಿದ್ದ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ನೂರು ವರ್ಷಗಳ ಕಾಲ ಕನ್ನಡದ ಕೈಂಕರ್ಯವನ್ನು ಮಾಡಿದ ಎಲ್ಲ ಹಿರಿಯ ಚೇತನಗಳಿಗೆ ಈ ಮೂಲಕ ಅನಂತ ನಮನಗಳನ್ನು ಸಲ್ಲಿಸುತ್ತೇನೆ.

ಪರಿಷತ್ತಿನ ಅಭಿನಂದನೀಯ ಕೆಲಸ

ಹಳಗನ್ನಡ ಸಾಹಿತ್ಯದ ಓದು ಮತ್ತು ಅಧ್ಯಯನವಂತು ಮರೆತು ಹೋದಂತೆ ಕಾಣುತ್ತಿದೆ. ಈಗಾಗಲೇ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಹಳಗನ್ನಡ ಕಾವ್ಯಗಳ ಗದ್ಯಾನುವಾದದ ನೆರವನ್ನು ಪಡೆದು ಗಮಕಿಗಳ ಮೂಲಕ ಹಾಡಿಸುವ, ವ್ಯಾಖ್ಯಾನಿಸುವ ಪದ್ಧತಿಯನ್ನು ಕೂಡಲೇ ವಿಶ್ವವಿದ್ಯಾಲಯಗಳು ಆರಂಭಿಸಬೇಕು. ಈ ಕ್ರಮದಿಂದ ಹಳಗನ್ನಡ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ದಾಟಿಸಿದಂತಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಶತಮಾನೋತ್ಸವ ಆಚರಣೆಯ ಈ ಸಂದರ್ಭದಲ್ಲಿ ೧೦೦ ಮೌಲಿಕ ಪುಸ್ತಕಗಳನ್ನು ಮತ್ತು ೧೭ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಪ್ರಕಟಿಸುತ್ತಿರುವುದು ಅಭಿನಂದನೀಯ.

ಕನ್ನಡ ವರ್ಷ - ೨೦೧೫ ಆಚರಣೆ

ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾಗಿ ಶತಮಾನ ತುಂಬುತ್ತಿರುವ ಈ ಹೊತ್ತಿನಲ್ಲಿ ಕರ್ನಾಟಕ ಸರ್ಕಾರ ೨೦೧೫ನೇ ವರ್ಷವನ್ನು 'ಕನ್ನಡ ವರ್ಷ-೨೦೧೫' ಎಂದು ಘೋಷಿಸಬೇಕು. ಈ ವರ್ಷದುದ್ದಕ್ಕೂ ವಾರದಲ್ಲಿ ಒಂದು ದಿನವನ್ನು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ಕಚೇರಿಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಕನ್ನಡ ವರ್ಷದ ಆಚರಣೆಗಾಗಿ ಮೀಸಲಿಡಬೇಕು. ಆ ದಿನವನ್ನು ಕನ್ನಡ ದಿನ ಎಂದು ಕರೆಯಬೇಕು. ಆ ದಿನದಂದು ಕನ್ನಡ ಭಾಷೆ, ಸಾಹಿತ್ಯ, ಕಲೆ, ಶಿಕ್ಷಣ ಮುಂತಾದ ಕ್ಷೇತ್ರಗಳ ಸಂಬಂಧವಾಗಿ ಚರ್ಚೆ, ಉಪನ್ಯಾಸ ವಿಚಾರ ಸಂಕಿರಣ ಮುಂತಾದ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಬೇಕು.

'ಕನ್ನಡ ಮಾತಾಡಿ' - ಆಂದೋಲನ ಮಾಡಿ

ಸರ್ಕಾರಿ ಹಾಗೂ ಅರೆಸರ್ಕಾರಿ ಕಚೇರಿಗಳು, ವಿಶ್ವವಿದ್ಯಾಲಯಗಳು ಕಾರ್ಖಾನೆಗಳು, ಬ್ಯಾಂಕುಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ, ಕನ್ನಡ ಮಾತಾಡಲು ಉತ್ತೇಜಿಸುವ ಸಲುವಾಗಿ ಕನ್ನಡ ಮಾತಾಡಿ ಎಂಬ ಚಳುವಳಿಯನ್ನು ಕೂಡಲೇ ಪ್ರಾರಂಭಿಸಬೇಕು. ಈ ಚಳುವಳಿಯಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಯುವಕರು ಹಾಗೂ ಕನ್ನಡಪರ ಸಂಘಟನೆಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು.

❖❖

೬

ಅಧ್ಯಾಯ – ೬

೮೧ ಸಮ್ಮೇಳನಗಳ ನಿರ್ಣಯಗಳಲ್ಲಿ ಪರಿಷತ್ತು

(೧೯೧೫–೨೦೧೫)

ಸಾಹಿತ್ಯ ಸಮ್ಮೇಳನಗಳಲ್ಲಿ ಎಲ್ಲಾ ಕಾರ್ಯಕ್ರಮಗಳ ಪೈಕಿ ಸಮ್ಮೇಳನಾಧ್ಯಕ್ಷರ ಭಾಷಣಕ್ಕೆ ಮತ್ತು ಸಮ್ಮೇಳನದ ಬಹಿರಂಗ ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳಿಗೆ ತುಂಬ ಪ್ರಾಶಸ್ತ್ಯವಿದೆ. ನಾಡಿನ ಮನ್ನಣೆಗೆ ಪಾತ್ರರಾದ ನುಡಿ ನಿಪುಣರಾದ ಹಿರಿಯರಾದ ಸಾಹಿತಿ–ವಿದ್ವಾಂಸರು ಅಧ್ಯಕ್ಷಪೀಠದಿಂದ ಪರಿಷತ್ತಿನ ಸಾಧನೆ, ಹಿನ್ನೆಡೆ, ಕರ್ತವ್ಯ ಮೆಚ್ಚುಗೆಗಳನ್ನು ಕುರಿತು ಹೇಳುವ ಮಾತುಗಳು ಮಹತ್ವಪೂರ್ಣವಾದವು ಮತ್ತು ಮಾರ್ಗದರ್ಶಕ ನುಡಿಗಳಾಗಿವೆ. ಅಂತೆಯೇ ಸಮ್ಮೇಳನದ ನಿರ್ಣಯಗಳು ಬಹು ಮಹತ್ವದ ನಿರ್ಣಯಗಳಾಗಿರುತ್ತವೆ.

ನಾಡು, ನುಡಿ, ಗಡಿ, ಶಿಕ್ಷಣ ಮಾಧ್ಯಮ, ಇತಿಹಾಸ ಭಾಷೆ, ಆಡಳಿತ ಮೊದಲಾದ ನಾನಾ ವಿಷಯಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಮಾಡಬೇಕಾದ ಕೆಲಸಗಳನ್ನು ಪ್ರಾರ್ಥಿಸುತ್ತದೆ, ಸೂಚಿಸುತ್ತದೆ, ಜಾರಿಗೆ ತರತಕ್ಕದ್ದು, ನೀಡಬೇಕು, ತಿಳಿಸಬೇಕು, ನಡೆಯಿಸತಕ್ಕದ್ದು, ಕೇಳಿಕೊಳ್ಳುತ್ತದೆ, ಬಿನ್ನವಿಸಿಕೊಳ್ಳುತ್ತದೆ, ಕೋರುತ್ತದೆ, ಅಭಿಪ್ರಾಯ ಪಡುತ್ತದೆ, ಬೇಡುತ್ತದೆ ಇತ್ಯಾದಿ ಮಾತುಗಳ ಮೂಲಕ ಈ ನಿರ್ಣಯಗಳು ಅನೇಕ ವಿಚಾರಗಳನ್ನು ಸಲಹೆ, ಸೂಚನೆ ಒತ್ತಾಯಗಳ ರೂಪದಲ್ಲಿರಿಸುತ್ತದೆ. ಈ ಅಧಿಕಾರ, ಅವಕಾಶಗಳು ರಾಜ್ಯ ಹಾಗೂ ಕೇಂದ್ರದ ಸರ್ಕಾರಗಳಿಗೆ ಅವುಗಳ ಇಲಾಖೆಗಳಿಗೆ ಇರುತ್ತದೆ. ಪರಿಷತ್ತು ಕೋರಿಕೆ ಮುಂದಿಡುವುದರ ವಿನಾ ಬೇರೇನೂ ಮಾಡುವಂತಿಲ್ಲ.

ಆದರೆ ಪರಿಷತ್ತಿಗೆ ಸಂಬಂಧಿಸಿದಂತೆ ಕೋರಿಕೆ, ಬೇಡಿಕೆಗಳ ನಿರ್ಣಯಗಳನ್ನು ಜಾರಿಗೊಳಿಸುವ ಹೊಣೆಗಾರಿಕೆ ಪರಿಷತ್ತಿನದೇ ಆಗಿರುತ್ತದೆ. ಸಮ್ಮೇಳನಗಳಲ್ಲಿ ಮಂಡಿಸಿದ ನಿರ್ಣಯಗಳು ಪರಿಷತ್ತಿನ ಬಗ್ಗೆ ಕಳಕಳಿ ಇರುವುದರಿಂದ ವಿದ್ವಾಂಸರುಗಳಿಂದ, ಸಾಹಿತಿಗಳಿಂದ, ನಾಡಿನ ಗಣ್ಯರಿಂದ ಮಂಡಿತವಾಗುತ್ತವೆ. ಪರಿಷತ್ತಿನ ಹಿತಾರ್ಥ ಮಂಡಿಸಿರುತ್ತಾರೆ. ಇವುಗಳನ್ನು ಕಡೆಗಣಿಸಲಾಗದು.

ಅನೇಕ ನಿರ್ಣಯಗಳನ್ನು ಮತ್ತೆ ಮತ್ತೆ ಮಂಡಿಸಲಾಗಿದೆ. ಎಷ್ಟೋ ನಿರ್ಣಯಗಳನ್ನು ಜಾರಿ ಮಾಡಲು ಉಪಸಮಿತಿಗಳನ್ನು ರಚಿಸಲಾಗಿದೆ, ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಿ ಚರ್ಚಿಸಿ ಕಾರ್ಯರೂಪಕ್ಕೆ ತರಲಾಗಿದೆ. ಆದರೂ ಎಷ್ಟೋ ನಿರ್ಣಯಗಳನ್ನು ಜಾರಿಗೆ ತಂದಿಲ್ಲ. ಪರಿಷತ್ತು ಸಮ್ಮೇಳನಗಳಲ್ಲಿ ಮಂಡಿಸಿದ ಅನೇಕ ನಿರ್ಣಯಗಳು ಏನೆಂಬುದೇ ಕೆಲವೊಮ್ಮೆ ಮರೆತಿದೆ.

೧೦೦ ವರ್ಷಗಳಲ್ಲಿ ಪರಿಷತ್ತು ಏನು ಮಾಡಬೇಕು, ಏನು ಮಾಡಿದೆ ಎಂಬುದರ ಸ್ಪಷ್ಟ ಚಿತ್ರಣ ಇಲ್ಲಿಯ ಪರಿಷತ್ ಬಗೆಗಿನ ನಿರ್ಣಯಗಳಲ್ಲಿ ಕಂಡುಬರುತ್ತದೆ. ಶತಮಾನದ ಗತಿ ಪ್ರಗತಿಗಳನ್ನು ಅವಲೋಕಿಸುವಲ್ಲಿ ಈ ಪರಿಷತ್ ಕುರಿತ ಸಮ್ಮೇಳನದ ನಿರ್ಣಯಗಳು ಕಣ್ತೆರೆಸಬಲ್ಲವು. ಪರಿಷತ್ತು ಮಾಡಬೇಕಾದ ಕೆಲಸಗಳು, ಅಪೂರ್ಣವಾಗಿ ಮಾಡಿದ ಕಾರ್ಯಗಳಾವುವು ಎಂಬುದು ತಿಳಿಯುತ್ತದೆ.

ನಿರ್ಣಯಗಳ ಅನುಷ್ಠಾನಕ್ಕೆ ಸಮಿತಿಯೊಂದನ್ನು ಖಾಯಂ ಆಗಿ ನೇಮಿಸುವುದು ಮುಖ್ಯ . ಆ ಸಮಿತಿಯಲ್ಲಿ

ಸರ್ಕಾರದ ಮೇಲೆ ಪ್ರಭಾವ ಬೀರುವಂಥ ಗಣ್ಯರು ಇರುವುದು ಅಗತ್ಯ. ಇಲ್ಲದಿದ್ದಲ್ಲಿ ಕೈಗೊಂಡ ನಿರ್ಣಯಗಳಿಗೆ ಬೆಲೆಯೇ ಇರುವುದಿಲ್ಲ. ಸಮ್ಮೇಳನಗಳಲ್ಲಿ ನಿರ್ಣಯಗಳನ್ನು ಸಿದ್ಧಪಡಿಸುವ ಸಮಿತಿಯಲ್ಲಿ ಈ ಅನುಷ್ಠಾನ ಸಮಿತಿಯ ಸದಸ್ಯರು ಇರುವುದು ಒಳ್ಳೆಯದು.

ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ನಾಡಿನ ಪ್ರಾತಿನಿಧಿಕ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆ ಎಂದು ಎಲ್ಲರೂ ಒಪ್ಪಿದ್ದಾರೆ. ಸಂಸ್ಥೆ ಪ್ರಾರಂಭವಾದಾಗಲೇ ಕರ್ನಾಟಕದ ವಿವಿಧ ಭಾಗಗಳ ಪ್ರತಿನಿಧಿಗಳಿಂದ ಕೂಡಿದ ಕಾರ್ಯಕಾರಿ ಸಮಿತಿ ರೂಪುಗೊಂಡಿತು. ಹೀಗೆ ಕರ್ನಾಟದ ಸಮಗ್ರ ದೃಷ್ಟಿಯಲ್ಲಿ ಸ್ಥಾಪಿತವಾದ ಮೊದಲ ಸಂಸ್ಥೆ ಇದು. ಈ ಸಂಸ್ಥೆ ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದರ ಬಗ್ಗೆ ಪರಿಷತ್ತಿನ ಸದಸ್ಯರು, ಸಾರ್ವಜನಿಕರು, ಸಮ್ಮೇಳನಾಧ್ಯಕ್ಷರು ೧೦೦ ವರ್ಷಗಳಲ್ಲಿ ಸತತವಾಗಿ ಸಲಹೆ – ಸೂಚನೆಗಳನ್ನು ನಿರ್ಣಯ ಅಭಿಪ್ರಾಯಗಳ ಮೂಲಕ ನೀಡಿದ್ದಾರೆ. ಪರಿಷತ್ತನ್ನು ಕುರಿತು ನಿರ್ಣಯಗಳ ವಿಷಯ ವ್ಯಾಪ್ತಿ ಅಧ್ಯಕ್ಷರ ಭಾಷಣಗಳಲ್ಲಿ ಕಂಡುಬರುವುದಕ್ಕಿಂತ ವಿಶಾಲವಾಗಿದೆ. ಈ ನಿರ್ಣಯಗಳಲ್ಲಿ ಭಾಷೆ – ಸಾಹಿತ್ಯ – ಕಲೆ– ಸಂಸ್ಕೃತಿ ಜನಜೀವನ, ವ್ಯಾಕರಣ – ನಿಘಂಟು – ಏಕೀಕರಣ ಚಳವಳಿ, ಸಂತಾಪಸೂಚನೆ, ಆಕಾಶವಾಣಿ, ಮಹಿಳಾ ಪ್ರಾತಿನಿಧ್ಯ, ಕನ್ನಡಲಿಪಿ, ಶಿಕ್ಷಣ ಮೊದಲಾದ ನೂರಾರು ವಿಷಯಗಳನ್ನು ಕುರಿತು ವಿಷಯ ಮಂಡನೆ ಆಗಿದೆ.

ಇವುಗಳಲ್ಲಿ ಬಹುಪಾಲು ನಾನಾ ಕಾರಣಗಳಿಂದ ಕಾರ್ಯರೂಪಕ್ಕೆ ಬಂದಿಲ್ಲ. ಹಾಗಂತಲೇ ನಿರ್ಣಯವೂ ಆಗಿದೆ. ಆದರೆ ಈ ನಿರ್ಣಯಗಳು ಕರ್ನಾಟಕ ನಾಡು ನುಡಿಗಳ ವಿಚಾರದಲ್ಲಿ ಬೆಳಕನ್ನು ಚೆಲ್ಲುತ್ತವೆ. ಈ ದೃಷ್ಟಿಯಲ್ಲಿ ಈ ನಿರ್ಣಯಗಳಿಗೆ ಬೆಲೆ ಇದೆ. ಪರಿಷತ್ತು ೧೦೦ ವರ್ಷಗಳಲ್ಲಿ ಮಂಡಿಸಿರುವ ನಿರ್ಣಯಗಳಲ್ಲಿ ನಾಡು ನುಡಿ ಸಂಸ್ಕೃತಿಯನ್ನು ಕುರಿತು ಸಮ್ಮೇಳನಾಧ್ಯಕ್ಷರ ಭಾಷಣಗಳಿಂದ ಹೆಕ್ಕಿ ಪ್ರತ್ಯೇಕವಾಗಿ ಇಲ್ಲಿ ಕೊಟ್ಟಿದೆ. ನಾಡಿನ ಗಣ್ಯರು, ವಿದ್ವಾಂಸರು, ಸಾಹಿತಿಗಳು, ತಮ್ಮ ಅಧ್ಯಕ್ಷ ಭಾಷಣಗಳಲ್ಲಿ ನೀಡಿರುವ ವಿಚಾರಧಾರೆ, ಸಲಹೆ, ಟೀಕೆ, ಸೂಚನೆಗಳು ಅತ್ಯಮೂಲ್ಯವಾಗಿವೆ; ವೈವಿಧ್ಯಮಯವಾಗಿದೆ.

ಪರಿಷತ್ತಿನ ಕಾರ್ಯಕಾರಿ ಸಮಿತಿ, ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳಲ್ಲಿ, ಸದಸ್ಯರು ವಾರ್ಷಿಕಾಧಿವೇಶನಗಳಲ್ಲಿ, ಸಾರ್ವಜನಿಕರು ಬಹಿರಂಗ ಅಧಿವೇಶನಗಳಲ್ಲಿ ಸೂಚಿಸಿರುವ ಸಲಹೆಗಳನ್ನು ಕಾರ್ಯಗತಗೊಳಿಸಲು ಹೆಚ್ಚು ಪ್ರಭಾವಶಾಲಿಗಳಾದವರು ಪ್ರಯತ್ನಿಸಿದರೆ ಪರಿಷತ್ತಿನ ಸರ್ವತೋಭಿವೃದ್ಧಿಯ ಜತೆಗೆ ನಾಡುನುಡಿಗಳ ಅಭಿವೃದ್ಧಿಯೂ ಆಗುತ್ತದೆ.

ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ೧೯೧೫

ಸಮ್ಮೇಳನಾಧ್ಯಕ್ಷರು : ಎಚ್.ವಿ. ನಂಜುಂಡಯ್ಯ

ಪರಿಷತ್ತಿನ ಸ್ಥಾಪನೆಗೆ ನಿರ್ಧಾರ

ನಿರ್ಣಯ ೧ : ಕರ್ನಾಟಕ ಭಾಗ ಸಂಸ್ಕರಣಕ್ಕಾಗಿಯೂ, ಕರ್ನಾಟಕ ಗ್ರಂಥಾಲಯ ಅಭಿವೃದ್ಧಿಗಾಗಿಯೂ ಬೆಂಗಳೂರಿನಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂಬ ಹೆಸರಿನೊಡನೆ ಪ್ರಧಾನ ಸಭೆಯೊಂದು ಸ್ಥಾಪಿತವಾಗಬೇಕು.

ಪರಿಷತ್ತಿನ ಶಾಖೆಗಳ ಸ್ಥಾಪನೆ

ನಿರ್ಣಯ ೨ : ಬೊಂಬಾಯಿ ಮದರಾಸು ಹೈದರಾಬಾದು ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಶಾಖೆಗಳಿರಬೇಕು. ಮತ್ತು ಈ ಪರಿಷತ್ತಿನ ಉದ್ದೇಶಗಳನ್ನೇ ಇಟ್ಟುಕೊಂಡು ಕೆಲಸ ಮಾಡುವ ಇತರ ಸಂಘಗಳನ್ನು ತನ್ನ ಜೊತೆಗೆ ಸೇರಿಸಿಕೊಳ್ಳುವುದಕ್ಕೆ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಅಧಿಕಾರವಿರಬೇಕು.

ನಿಬಂಧನೆ ರಚನಾ ಸಮಿತಿ

ನಿರ್ಣಯ ೩ : ಮ॥ ಎಂ. ವೆಂಕಟಕೃಷ್ಣಯ್ಯನವರೂ, ದೇಶಪಾಂಡೆಯವರೂ, ಸೆಟ್ಲೂರವರೂ, ಲಿಂಗರಾಜ ಅರಸಿನವರೂ, ಕರ್ಗುದರಿಯದವರೂ, ಬಿ. ರಾಮರಾಯರವರೂ ಪಂಡಿತ ರಾಘವೇಂದ್ರಾಚಾರ್ಯರವರೂ ಒಂದು ಉಪಸಂಘವಾಗಿ ಸೇರಿ,

ಕರ್ನಾಟಕ ಸಾಹಿತ್ಯ ಪರಿಷತ್ತಿನ ರಚನಾಕ್ರಮ ಮತ್ತು ನಿಯಮಗಳ ಮಸೂದೆಯನ್ನು ತಯಾರು ಮಾಡಿ ಪರಿಷತ್ತಿಗೆ ಮಾರನೆಯ ದಿವಸವೇ ಒಪ್ಪಿಸಬೇಕು.

ಲೆಕ್ಕಪತ್ರಗಳ ತನಿಖೆ

ನಿರ್ಣಯ ೯ : ಪರಿಷತ್ತಿನ ಪ್ರಥಮ ವರ್ಷದ ಲೆಕ್ಕಗಳ ತನಿಖೆಯನ್ನು ಮಾಡುವುದಕ್ಕಾಗಿ ರಾ.ಬ. ಮ॥ ಕೆ. ಕೃಷ್ಣಯ್ಯಂಗಾರ್ಯರೂ, ಮಾ॥ ಟಿ. ಲಕ್ಷ್ಮೀನರಸಿಂಹರಾಯರೂ ಆಯವ್ಯಯ ಪರೀಕ್ಷಕರಾಗಿ (Auditors) ನಿಯಮಿಸಲ್ಪಡಬೇಕು.

೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೧೬

ಸಮ್ಮೇಳನಾಧ್ಯಕ್ಷರು : ಎಚ್.ವಿ. ನಂಜುಂಡಯ್ಯ

ನಿರ್ಣಯಗಳು ದೊರಕಿಲ್ಲ.

೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೧೭

ಸಮ್ಮೇಳನಾಧ್ಯಕ್ಷರು : ಎಚ್.ವಿ. ನಂಜುಂಡಯ್ಯ

ನಿರ್ಣಯಗಳು ದೊರಕಿಲ್ಲ.

೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೧೮

ಸಮ್ಮೇಳನಾಧ್ಯಕ್ಷರು : ಆರ್. ನರಸಿಂಹಾಚಾರ್

ನಿರ್ಣಯ ೩ : ಕನ್ನಡ ಭಾಷೆ ಬಳಕೆಗೆ ಸಮಿತಿ ನೇಮಕ

ಬ್ರಿಟಿಷ್ ಇಲಾಖೆಗಳಲ್ಲಿಯೂ ಮತ್ತು ಕರ್ನಾಟಕದೊಳಗಿನ ದೇಶೀಯ ಸಂಸ್ಥಾನಗಳಲ್ಲಿಯೂ ಕನ್ನಡ ಭಾಷೆ ಪ್ರಚಾರದಲ್ಲಿದ್ದರೂ ಶಾಲೆಗಳಲ್ಲಿ ಶಿಕ್ಷಣವು ಬೇರೆ ಭಾಷೆಯ ದ್ವಾರದಿಂದ ಕೊಡಲ್ಪಡುತ್ತದೆ. ಇದರಿಂದ ಕನ್ನಡಭಾಷೆಯ ಶಿಕ್ಷಣವು ಸರಿಯಾಗಿ ನಡೆಯುವುದಿಲ್ಲ. ಆದಕಾರಣ ಕನ್ನಡ ಭಾಷೆಯ ಪ್ರಚಾರದಲ್ಲಿರುವ ಈ ಸ್ಥಳಗಳಲ್ಲೆಲ್ಲ ಕನ್ನಡಿಗರ ಉಪಯೋಗಕ್ಕಾಗಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಬೇಕೆಂದು ಈ ಸಮ್ಮೇಳನವು ಆಯಾ ಸರ್ಕಾರದವರಿಗೆ ವಿನಂತಿಯನ್ನು ಮಾಡಿಕೊಳ್ಳಬೇಕು. ರಾಮದುರ್ಗ, ಮುಧೋಳ, ಜಮಖಂಡಿ, ಸೊಂಡೂರು ಮೊದಲಾದ ಸಂಸ್ಥಾನಗಳು ಕೇವಲ ಕನ್ನಡಪ್ರಜೆಗಳದೇ ಇರುವುದರಿಂದ ಅಲ್ಲಿಯ ದರಬಾರಿ ಭಾಷೆಯು ಕನ್ನಡವಿರಬೇಕೆಂದೂ, ಉಳಿದ ಸಂಸ್ಥಾನಗಳಲ್ಲಿ ಕನ್ನಡ ತಾಲ್ಲೂಕುಗಳಲ್ಲಿರುವ ಕನ್ನಡ ಜನರ ಸಲುವಾಗಿ ಕನ್ನಡವೇ ದರ್ಬಾರ್ ಭಾಷೆಯಾಗಿರಬೇಕೆಂದು ಈ ಸಮ್ಮೇಳನದ ಅಭಿಪ್ರಾಯವಾಗಿರುತ್ತದೆ. ಈ ಠರಾವನ್ನು ಅಮಲಿನಲ್ಲಿ ತರುವುದಕ್ಕೆ ಕೆಳಗೆ ಬರೆದ ಜನರ ಕಮಿಟಿಯನ್ನು ನೇಮಿಸಬೇಕು. ೧. ಶ್ರೀ ರಾ.ನರಸಿಂಹಾಚಾರ್ಯರು (ಅಧ್ಯಕ್ಷರು), ೨. ಶ್ರೀ ಎಮ್. ಶಾಮರಾಯರು ೩. ಶ್ರೀ. ಬಿ. ನಾಯಕ ೪. ಶ್ರೀ ರಾ.ಹ. ದೇಶಪಾಂಡೆ, ೫. ಶ್ರೀ ರಾಮರಾವ್ ಮಂಗಸೂಳಿ, ೬. ಶ್ರೀ ತಮ್ಮಪ್ಪ ಚಕ್ಕೋಡಿ, ೭. ಶ್ರೀ ರಾ. ನರಗುಂದಕರ, ೮. ಶ್ರೀ ರಾ. ವೇ. ಭೀ. ಆಲೂರ (ಕಾರ್ಯದರ್ಶಿಗಳು)

ನಿರ್ಣಯ ೬ : ಉತ್ತಮ ಗ್ರಂಥ ಪ್ರಕಟನೆಗೆ ಸಮಿತಿ ನೇಮಕ

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿರುವ ಭಾಷಾ ಕೋವಿದರಿಂದ ಉತ್ತಮವಾದ ಗ್ರಂಥಗಳನ್ನು ಬರೆಯಿಸಿ ಪರಿಶೋಧಿಸಿ ಪ್ರಕಟಗೊಳಿಸುವುದಕ್ಕಾಗಿ ಬೆಂಗಳೂರಿನಲ್ಲಿ "ಕರ್ನಾಟಕ ಗ್ರಂಥ ಪ್ರಚಾರಿಣೀ ಸಮಿತಿ" ಯೆಂಬ ಸಂಘವೊಂದನ್ನು ಏರ್ಪಡಿಸುವುದು. ಆ ಸಮಿತಿಯಲ್ಲಿ ಮುಂದೆ ಹೇಳುವ ವಿದ್ವಾಂಸರು ಮೆಂಬರುಗಳಾಗಿರಬೇಕು.

(ಮದರಾಸಿಗೆ) – ಮ॥ ಆರ್. ತಾತಾಚಾರ್ಯರು, ಮ॥ ಬಿ. ರಾಮರಾಯರು (ಬೊಂಬಾಯಿಗೆ) – ಮ॥ ಆರ್.ವಿ. ಜಹಗೀರ್‌ದಾರ್, ಮ॥ ಕೆರೂರ ವಾಸುದೇವಾಚಾರ್ಯರು, ಮ॥ ವಿ.ಎನ್. ಮಗದಾಳು (ಕಾರ್ಯದರ್ಶಿ) (ಕೊಡಗಿಗೆ), ಮ॥ ಕೃಷ್ಣರಾಯರು (ಮೈಸೂರಿಗೆ), ಪ್ರಾಕ್ತನ ವಿಮರ್ಶವಿಚಕ್ಷಣ ರಾವ್‌ಬಹದೂರ್ ಶ್ರೀಮಾನ್ ರಾ. ನರಸಿಂಹಾಚಾರ್ಯರು, (ಅಧ್ಯಕ್ಷರು), ರಾಜಕಾರ್ಯಪ್ರಸಕ್ತ ರಾವ್ ಬಹದೂರ್ ಎಂ. ಶಾಮರಾಯರು, ಮ॥ ಬಿ. ವೆಂಕಟನಾರಾಯಣಪ್ಪನವರು, ಮ॥ ಆರ್. ರಘುನಾಥರಾಯರು, ಮಾ॥ ಎಚ್. ಚೆನ್ನಕೇಶವಯ್ಯಂಗಾರ್ಯರು (ಕಾರ್ಯದರ್ಶಿ)

****

೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೧೬
ಸಮ್ಮೇಳನಾಧ್ಯಕ್ಷರು : ಕರ್ಪೂರ ಶ್ರೀನಿವಾಸರಾವ್

ನಿರ್ಣಯ ೨ : ಪರಿಷತ್ಪತ್ರಿಕೆಯಲ್ಲಿ ವಿಮರ್ಶಾತ್ಮಕ ಲೇಖನಗಳ ಪ್ರಕಟನೆ

"ಪರಿಷತ್ಪತ್ರಿಕೆಯಲ್ಲಿ ವಿಮರ್ಶೆಗಾಗಿ ಗ್ರಂಥಕರ್ತರು ಕಳುಹಿಸಿ ಕೊಡುವ ಪುಸ್ತಕಗಳ ವಿಷಯದಲ್ಲಿ ಅವರು ಪರಿಷತ್ತಿನ ಅಭಿಪ್ರಾಯವನ್ನು ಕಾಲವಿಳಂಬವಿಲ್ಲದೆ ತಿಳಿದುಕೊಳ್ಳಬೇಕೆಂಬುದು ಸ್ವಭಾವವಾದುದರಿಂದ, ಈಗ ಕೆಲವು ಸಂದರ್ಭಗಳಲ್ಲಿ ಉಂಟಾಗುವ ವಿಳಂಬ ನಿವಾರಣಾರ್ಥವಾಗಿಯೂ, ವಿಮರ್ಶೆಯು ಸಾಧ್ಯವಾದಷ್ಟು ಜಾಗ್ರತೆಯಾಗಿ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗುವುದಕ್ಕಾಗಿಯೂ, ಪರಿಷತ್ತಿನವರು ಒಂದು ವಿಶೇಷ ಉಪಸಭೆಯನ್ನು ನಿಯಮಿಸತಕ್ಕದ್ದು" ಎಂಬ ಸಲಹೆಯು ಮ॥ ರಾ॥ ತೋರಣಗಲ್ ರಾಜಾರಾಯರವರಿಂದ ಸೂಚಿಸಲ್ಪಟ್ಟು ಮ॥ ರಾ॥ ಬಾಲಕೃಷ್ಣರಾಯರಿಂದ ಅನುಮೋದಿಸಲ್ಪಡಲು, ಸರ್ವರಿಂದಲೂ ಅಂಗೀಕೃತವಾಯಿತು.

ನಿರ್ಣಯ ೩ : ಭಾಷಾ ಏಕರೂಪತೆಯ ಬಗ್ಗೆ ಮನವಿ ಸಲ್ಲಿಕೆ

"ಅದೇ ವಿಶೇಷ ಉಪಸಭೆಯ ಗ್ರಂಥ ವಿಮರ್ಶೆಯನ್ನು ಮಾಡುವುದಲ್ಲದೆ ಆಯಾ ಗ್ರಂಥಗಳಲ್ಲಿ ಕಂಡುಬರುವ ಭಾಷಾರೂಢಿಗಳು ಜನರಿಗೆ ತಿಳಿದು ಅದರಿಂದ ಕರ್ನಾಟಕ ಮಂಡಲದಲ್ಲೆಲ್ಲಾ ಗ್ರಂಥಸ್ಥ ಭಾಷೆಯು ಏಕರೂಪತೆಯನ್ನು ಪಡೆಯಬೇಕೆಂಬ ಪರಿಷತ್ತಿನ ಮುಖ್ಯೋದ್ದೇಶವು, ಸಾಧ್ಯವಾದಷ್ಟು ಮಟ್ಟಿಗೆ, ಕೈಗೂಡುವುದಕ್ಕಾಗಿ ಆ ವಿಷಯವಾದ ವರದಿಯೊಂದನ್ನು ಪರಿಷತ್ತಿಗೆ ಒಪ್ಪಿಸತಕ್ಕದ್ದು" ಎಂಬ ಸಲಹೆಯು ಮ॥ ರಾ॥ ತೋರಣಗಲ್ ರಾಜಾರಾಯರವರಿಂದ ಸೂಚಿಸಲ್ಪಟ್ಟು ಮ॥ ರಾ॥ ಬಾಲಕೃಷ್ಣರಾಯರಿಂದ ಅನುಮೋದಿತವಾಗಿ ಸರ್ವರಿಂದಲೂ ಅಂಗೀಕೃತವಾಯಿತು.

ನಿರ್ಣಯ ೫ : ಪರಿಷತ್ತಿಗೆ ದ್ರವ್ಯಸಹಾಯ ಮಾಡಲು ಕೋರಿಕೆ

"ಕರ್ನಾಟಕ ದೇಶದಲ್ಲೆಲ್ಲಾ ಜನರಿಗೆ ಉಪಯೋಗವಾಗುವ ಪುಸ್ತಕಗಳನ್ನು ಬರೆಯುವ ಗ್ರಂಥಕರ್ತೃಗಳಿಗೆ ಬಹುಮಾನಗಳನ್ನು ಕೊಟ್ಟು ತದ್ದ್ವಾರಾ ಗ್ರಂಥ ರಚನೆಗೆ ವಿಶೇಷ ಪ್ರೋತ್ಸಾಹವನ್ನು ಕಲ್ಪಿಸುವುದರಿಂದಲೇ ನಿಜವಾದ ದೇಶೀಯ ಶಿಕ್ಷಣ ಪದ್ಧತಿಯ ಉದ್ದೇಶಗಳು ಮಾತೃಭಾಷಾ ಸೇವೆಯ ಮೂಲಕ, ಸಫಲವಾದಾವು ಎಂಬುದು ಈ ಸಮ್ಮೇಳನದ ಅಭಿಪ್ರಾಯವಾಗಿರುವುದರಿಂದ, ಮೇಲಣ ಉದ್ದೇಶಗಳ ಸಿದ್ಧಿಗಾಗಿ ಪರಿಷತ್ತಿಗೆ ಉದಾರವಾದ ದ್ರವ್ಯಸಹಾಯ ಮಾಡಬೇಕೆಂದು ಮೈಸೂರು, ಮದರಾಸು, ಮುಂಬಯಿ, ಹೈದರಾಬಾದ್-ಈ ಸರಕಾರಗಳಿಗೆ ಪರಿಷತ್ತು ವಿಜ್ಞಾಪನೆ ಮಾಡಿಕೊಳ್ಳತಕ್ಕದ್ದು" ಎಂಬ ಸಲಹೆಯನ್ನು ಮ॥ ರಾ॥ ವಿ.ಬಿ. ಆಲೂರ್ ಅವರು ಸೂಚಿಸಲು, ಅದನ್ನು ಮ॥ ರಾ॥ ನರಗುಂದಕರ್ ಅವರು ಅನುಮೋದಿಸಿದರು. ಇದನ್ನು ಸರ್ವರೂ ಅಂಗೀಕರಿಸಿದರು.

ನಿರ್ಣಯ ೬ : ವಿ ವಿ ಜತೆ ವ್ಯವಹರಿಸಬೇಕು

"ಕರ್ನಾಟಕ ಮಂಡಲದ ವಿದ್ಯಾಭ್ಯಾಸವೆಲ್ಲಾ ಕರ್ನಾಟಕದ ಮಧ್ಯ ರಾಷ್ಟ್ರದಲ್ಲಿ ಸ್ಥಾಪಿತವಾಗಿರುವ ಮೈಸೂರು ವಿಸ್ವವಿದ್ಯಾಲಯದ ಅಧೀನತೆಗೆ ಒಳಪಟ್ಟಿರಬೇಕೆಂಬ ಬಯಕೆಯು ಈ ಸಮ್ಮೇಳನಕ್ಕೆ ಉಚಿತವಾಗಿ ತೋರುವುದರಿಂದ, ಈ ಉದ್ದೇಶವು ಈಡೇರಿ, ಕೊನೆಗೆ ಕರ್ನಾಟಕದಲ್ಲಿಯ ಪಾಠಶಾಲೆಗಳು, ಪ್ರೌಢವಿದ್ಯಾ ಶಾಲೆಗಳು – ಇವೇ ಮುಂತಾದುವೆಲ್ಲಾ

ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಇತರ ಅಂಗವಾಗಿ ಪರಿಣಮಿಸಲು ಕರ್ನಾಟಕ ಸಾಹಿತ್ಯ ಪರಿಷತ್ತು ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಇತರ ಅಧಿಕಾರಿಗಳೊಡನೆ ಪತ್ರವ್ಯವಹಾರವನ್ನು ಬೆಳೆಯಿಸಿ, ಸಾಧ್ಯವಾದ ಪ್ರಯತ್ನಗಳನ್ನು ಕೈಗೊಂಡು, ಈ ಪ್ರಧಾನವಾದ ವಿಷಯದಲ್ಲಿ ನಡೆದ ಕೆಲಸದ ವರದಿಯನ್ನು ಮುಂದಿನ ಪರ್ಯಾಲೋಚನೆಗಾಗಿ, ಬರುವ ವರ್ಷದ ಸಮ್ಮೇಳನದ ಮುಂದೆ ಒಪ್ಪಿಸತಕ್ಕದ್ದು."

ಮೇಲಣ ಸಲಹೆಯನ್ನು ಮ॥ ರಾ॥ ಜಿ.ಆರ್. ಸಿಡಿನೂರ್ ಅವರಿಂದ ಸೂಚಿತವಾಗಿ ಮ॥ ರಾ॥ ಆರ್.ಎಸ್. ನರಗುಂದಕರ್ ಅವರಿಂದ ಅನುಮೋದಿಸಲ್ಪಟ್ಟು ಮ॥ ರಾ॥ ರಾಜಗೋಪಾಲ ಕೃಷ್ಣರಾಯರಿಂದಲೂ ಮ॥ ರಾ॥ ಅಪ್ಪೂರಾಯರಿಂದಲೂ ಅಶ್ರಯವನ್ನು ಹೊಂದಿ ಬಹುಮತ ರೀತಿಯಾಗಿ ಅಂಗೀಕರಿಸಲ್ಪಟ್ಟಿತು.

ನಿರ್ಣಯ ೬ಎ : ಹಸ್ತಪ್ರತಿ ಸಂಗ್ರಹ ಕಾರ್ಯ ಕೈಗೊಳ್ಳಬೇಕು

"ಕರ್ನಾಟಕ ವಾಙ್ಮಯಾಭಿವೃದ್ಧಿಗೆ ಕಾರಣವಾಗಿ ಬಹುಜನರಿಗೆ ಉಪಯೋಗವಾಗುವ ಪ್ರಾಚೀನಗ್ರಂಥಗಳ ಹಸ್ತಪ್ರತಿಗಳ ಅನ್ವೇಷಣೆ (ಸಾಧ್ಯವಾದರೆ ತಕ್ಕ ಬಹುಮಾನಗಳನ್ನು ಕೊಟ್ಟು) ವಿಶೇಷ ಉತ್ತೇಜನವನ್ನು ಕೊಡುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನ ಕಾಲದಲ್ಲಿ ಅಪೂರ್ವವಾದ ಮತ್ತು ಬೆಲೆಯುಳ್ಳ ಪ್ರಾಚೀನ ಹಸ್ತಪ್ರತಿಗಳ ಅನ್ವೇಷಣೆ ಮಾಡಿ (ಸಾಧ್ಯವಾದರೆ ತಕ್ಕ ಬಹುಮಾನಗಳನ್ನು ಕೊಟ್ಟು) ವಿಶೇಷ ಉತ್ತೇಜನವನ್ನು ಕೊಡುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆಯಲ್ಲಿ ವಾರ್ಷಿಕ ಹಸ್ತಪ್ರತಿಗಳ ಪ್ರದರ್ಶನವೊಂದನ್ನು ಏರ್ಪಡಿಸುವುದಕ್ಕಾಗಿ ಪರಿಷತ್ತಿನವರು ಉಚಿತ ತೋರಿದಂತೆ ತಕ್ಕ ಪ್ರಯತ್ನಗಳನ್ನು ಕೈಕೊಳ್ಳತಕ್ಕದ್ದು."

ಈ ಸಲಹೆಯನ್ನು ಮ॥ ರಾ॥ತೋರಣಗಲ್ ರಾಜಾರಾಯರವರಿಂದ ಸೂಚಿತವಾಗಿ ಮ॥ ರಾ॥ ರಾಮಚಂದ್ರ ಹನುಮಂತ ದೇಶಪಾಂಡೆಯವರಿಂದ ಅನುಮೋದಿಸಲ್ಪಟ್ಟು ಸರ್ವರಿಂದಲೂ ಅಂಗೀಕಾರವಾಯಿತು.

ನಿರ್ಣಯ ೭ : ಧನ ಶೇಖರಣೆಗೆ ಸಮಿತಿ

"ಪರಿಷತ್ತಿನ ಉದ್ದೇಶಗಳ ಸಿದ್ಧಿಗಾಗಿ ಕರ್ನಾಟಕ ಮಂಡಲದ ಬೇರೆ ಬೇರೆ ಪ್ರಾಂತಗಳಲ್ಲಿಯ ಜನರಲ್ಲಿ ತಿಳಿವಳಿಕೆಯನ್ನು ಹರಡುವುದಕ್ಕೂ, ಈ ನಿಮಿತ್ತ ಧನವನ್ನು ಶೇಖರಿಸುವುದಕ್ಕೂ, ಅಲ್ಲಲ್ಲೇ ಪರಿಷತ್ತಿನ ಸ್ಥಳೀಯ ಸದಸ್ಯರುಗಳ ಸಹಾಯದಿಂದ, ಉತ್ಸಾಹಭರಿತರಾದ ಮಹನೀಯರನ್ನು ಆರಿಸುವ ಪ್ರಯತ್ನವನ್ನು ಪರಿಷತ್ತು ಕೈಗೊಳ್ಳತಕ್ಕದ್ದು".

ಈ ಸಲಹೆಯನ್ನು ಮ॥ ರಾ॥ ರಾ.ಹ. ದೇಶಪಾಂಡೆಯವರಿಂದ ಸೂಚಿತವಾಗಿ ಮ॥ ರಾ॥ ರಾವ್ ಬಹದ್ದೂರ್ ಸಿ. ಹನುಮಂತ ಗೌಡರವರಿಂದ ಅನುಮೋದಿಸಲ್ಪಟ್ಟು ಮ॥ ರಾ॥ ಅಡ್ವೋಕೇಟ್ ಎಸ್. ವೆಂಕಟೇಶಯ್ಯನವರ ಆಶ್ರಯವನ್ನು ಹೊಂದಿ, ಸರ್ವಸಮ್ಮತವಾಗಿ ಅಂಗೀಕರಿಸಲ್ಪಟ್ಟಿತು.

ನಿರ್ಣಯ ೧೦ : ವಾರ್ಷಿಕಾಧಿವೇಶನದ ಸ್ಥಳದ ವ್ಯವಸ್ಥೆಗೆ ಸಮಿತಿ

"ಕರ್ನಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನವು ಜರುಗಬೇಕಾದರೆ ಸ್ಥಳವನ್ನು ಕುರಿತು ಚರ್ಚೆ ಮಾಡಿ, ಅದನ್ನು ಮೊದಲೇ ಸಕಾಲದಲ್ಲಿ ಗೊತ್ತು ಮಾಡುವುದಕ್ಕಾಗಿಯೂ, ಗೊತ್ತು ಮಾಡಿದ ಸ್ಥಳಗಳ ವಿಷಯದಲ್ಲಿ ಅನಿವಾರ್ಯಗಳಾದ ಅನುಕೂಲಗಳು ಆಕಸ್ಮಾತ್ತಾಗಿ ಒದಗಿದರೆ ಆವಶ್ಯಕಗಳಾದ ಇತರ ಏರ್ಪಾಡುಗಳನ್ನು ಮಾಡುವುದಕ್ಕಾಗಿಯೂ, ಮೈಸೂರು ಸಂಸ್ಥಾನದಿಂದ ಒಬ್ಬ ಸದಸ್ಯರೂ ಮದರಾಸು ಕರ್ನಾಟಕದಿಂದ ಒಬ್ಬರೂ, ಮುಂಬಯಿ ಕರ್ನಾಟಕದಿಂದ ಒಬ್ಬರೂ ಈ ಮೇರೆ ಮೂರುಮಂದಿ ಸದಸ್ಯರುಳ್ಳ ಮತ್ತು ಆವಶ್ಯಕವಿದ್ದಲ್ಲಿ ಹೆಚ್ಚಾದ ಸದಸ್ಯರನ್ನು ಸೇರಿಸಿಕೊಳ್ಳಲು ಅಧಿಕಾರವುಳ್ಳ, ಉಪಸಭೆಯೊಂದನ್ನು ಪರಿಷತ್ತು ನಿಯಮಿಸತಕ್ಕದ್ದು. ಬರುವ ವರ್ಷದ ಸಮ್ಮೇಳನದ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಮ॥ ರಾ॥ ಬೆನಗಲ್ ರಾಮರಾಯರು (ಮದರಾಸು) ಮ॥ ರಾ॥ ರಾ.ಹ. ದೇಶಪಾಂಡೆಯವರು (ಮುಂಬಯಿ) ಮ॥ ರಾ॥ ಬಾಲಕೃಷ್ಣ ರಾಯರು (ಮೈಸೂರು) ಈ ಮೂವರೂ ಉಪಸಭೆಗೆ ಸದಸ್ಯರುಗಳಾಗಿ ಚುನಾಯಿಸಲ್ಪಡತಕ್ಕದ್ದು."

ಈ ಸಲಹೆಯನ್ನು ಮ॥ ರಾ॥ ಹನುಮಾನ್ ಅವರಿಂದ ಸೂಚಿಸಲ್ಪಟ್ಟು ಮ॥ ರಾ॥ ಬಿ.ಎಸ್. ಸಾಹುಕಾರರವರಿಂದ ಅನುಮೋದಿಸಲ್ಪಟ್ಟು ಸರ್ವರಿಂದಲೂ ಅಂಗೀಕಾರವಾಯಿತು.

ನಿರ್ಣಯ ೧೨ : ೧೯೧೮ರ ನಿರ್ಣಯದ ಅಂಗೀಕಾರಕ್ಕೆ ಸೂಚನೆ

"೧೯೧೮ನೆಯ ಸಂವತ್ಸರದಲ್ಲಿ ಜರುಗಿದ ಸಮ್ಮೇಳನದ ಮೂರನೆಯ ತೀರ್ಮಾನಕ್ಕನುಸಾರಾಗಿ ನಿಯಮಿತವಾದ ಉಪಸಭೆಯು ತಾನು ಕೈಗೊಂಡ ಕೆಲಸವನ್ನು ಪೂರೈಸಿ ಅದರ ವರದಿಯನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಪರಿಷತ್ತಿಗೆ ಒಪ್ಪಿಸತಕ್ಕದ್ದು." ಈ ಸಲಹೆಯು ಮ॥ ರಾ॥ ಬಾಲಕೃಷ್ಣರಾಯರವರಿಂದ ಸೂಚಿತವಾಗಿ ಮ॥ ರಾ॥ ವಿ.ಬಿ. ಆಲೂರ್ ಅವರಿಂದ ಅನುಮೋದಿಸಲ್ಪಟ್ಟು ಸರ್ವರಿಂದಲೂ ಅಂಗೀಕಾರವಾಯಿತು.

****

೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೦

ಸಮ್ಮೇಳನಾಧ್ಯಕ್ಷರು : ರೊದ್ದ ಶ್ರೀನಿವಾಸರಾವ್

ನಿರ್ಣಯ ೩ : ಗ್ರಂಥ ವಿಮರ್ಶೆಗೆ ಸಮಿತಿ

ಕನ್ನಡ ಭಾಷೆಯ ಏಕೀಕರಣದ ಉದ್ದೇಶದಿಂದ ಗ್ರಂಥವಿಮರ್ಶೆ ಮಾಡುವುದಕ್ಕಾಗಿ ಈ ಸಮ್ಮೇಳನವು ಮುಂದೆ ಹೇಳುವ ಸದಸ್ಯರಿಂದ ಕೂಡಿದ ವಿಶೇಷ ಸಭೆಯೊಂದನ್ನು ನಿಯಮಿಸುತ್ತದೆ.

(ಮೈಸೂರು ಮದರಾಸು ಪ್ರಾಂತಗಳವರು)

೧. ಮ॥ ರಾ॥ ಎಂ. ವೆಂಕಟೇಶಯ್ಯಂಗಾರ್ಯರು ಬಿ.ಎ. (ಬೆಂಗಳೂರು)

೨. ಮ॥ ರಾ॥ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಎಂ.ಎ. (ಬೆಂಗಳೂರು)

೩. ಮ॥ ರಾ॥ ಟಿ.ಎಸ್. ವೆಂಕಣ್ಣಯ್ಯನವರು ಎಂ.ಎ. (ಬೆಂಗಳೂರು)

೪. ಮ॥ ರಾ॥ ಬಿ. ಕೃಷ್ಣಪ್ಪನವರು ಎಂ.ಎ. (ಮೈಸೂರು)

೫. ಮ॥ ರಾ॥ ಎ.ಆರ್. ಕೃಷ್ಣಶಾಸ್ತ್ರಿಗಳು ಬಿ.ಎ. (ಮೈಸೂರು)

೬. ಮ॥ ರಾ॥ ಕೆ. ಸುಬ್ರಹ್ಮಣ್ಯಶಾಸ್ತ್ರಿಗಳು ಬಿ.ಎ. (ಹೊಸಕೋಟೆ)

(ಮುಂಬಯಿ ಪ್ರಾಂತದವರು)

೧. ಮ॥ ರಾ॥ ರಾವ್ ಬಹದ್ದೂರ್ ವಿ.ಬಿ. ಜೋಶಿ, ಬಿ.ಎ. (ಧಾರವಾಡ)

೨. ಮ॥ ರಾ॥ ರಾವ್ ಆರ್.ಎಂ. ಮಹಿಷಿ, ಬಿ.ಎ. (ಧಾರವಾಡ)

೩. ಮ॥ ರಾ॥ ಪಂಡಿತ ಮಹಾದೇವ ಪ್ರಭಾಕರ ಪೂಜಾರ್ "

೪. ಮ॥ ರಾ॥ ತಮ್ಮಾಜೀ ನಾರಾಯಣ ಅಮೀನಾಭಾವಿ "

೫. ಮ॥ ರಾ॥ ರಾ.ಹ. ದೇಶಪಾಂಡೆ, ಎಂ.ಎ "

೬. ಮ॥ ರಾ॥ ಸಿಗ್ಗಲಿ ಬೆನಕಪ್ಪಶಾಸ್ತ್ರಿಗಳು "

೭. ಮ॥ ರಾ॥ ಎಸ್.ಡಿ. ಪಾವಟೆ, ಬಿ.ಎ., ಎಲ್.ಎಲ್.ಬಿ. (ಹುಬ್ಬಳ್ಳಿ)

೮. ಮ॥ ರಾ॥ ಬಸವನಹಾಳ್, ಎಂ.ಎ. (ಬೆಳಗಾವಿ)

ಅಧ್ಯಕ್ಷರ ಸೂಚನೆಯನ್ನು ಸರ್ವರೂ ಅಂಗೀಕರಿಸಿದರು.

ನಿರ್ಣಯ ೫ : ಲಿಪಿ ಸುಧಾರಣೆಗೆ ಸಮಿತಿ ನೇಮಕ

ಕನ್ನಡ ಮುದ್ರಣ ಮತ್ತು ಬರಹದ ಲಿಪಿಗಳನ್ನು ಸುಧಾರಿಸಿ ಎಲ್ಲ ಕರ್ನಾಟಕಕ್ಕೂ ಒಂದೇ ವಿಧವಾದ ಲಿಪಿಗಳನ್ನು ಗೊತ್ತುಪಡಿಸುವುದಕ್ಕಾಗಿ ಮುಂದೆ ಹೇಳುವ ವಿಶೇಷ ಸಭೆಯನ್ನು ಈ ಸಮ್ಮೇಳನವು ನಿಯಮಿಸುತ್ತದೆ.

೧. ಮ॥ ರಾ॥ ವಿ.ಎನ್. ಮುದವೇಡಕರರು (ಧಾರವಾಡ)

೨. ಮ॥ ರಾ॥ ಕೆ.ಎಚ್. ಮುದವೇಡಕರರು (ಧಾರವಾಡ)

೩. ಮ॥ ರಾ॥ ಆರ್.ಎಸ್. ಕುಲಕರ್ಣಿ (ಧಾರವಾಡ)

೪. ಮ॥ ರಾ॥ ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹದೂರ್, ರಾ. ನರಸಿಂಹಾಚಾರ್ಯರು, ಎಂ.ಎ. (ಬೆಂಗಳೂರು)

೫. ಮ॥ ರಾ॥ ತೋಗೆರೆ ನಂಜುಂಡ ಶಾಸ್ತ್ರಿಗಳು, (ಬೆಂಗಳೂರು)

೬. ಮ॥ ರಾ॥ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಎಂ.ಎ. (ಬೆಂಗಳೂರು)

ಸೂಚಕರು : ಮ॥ ರಾ॥ ನರಸಿಂಹರಾವ್ ಮುದವೇಡಕರರು

ಅನುಮೋದಕರು : ತೋಗೆರೆ ನಂಜುಂಡಶಾಸ್ತ್ರಿಗಳು

ನಿರ್ಣಯ ೭ (೩) : ನಿರ್ಣಯಗಳ ಜಾರಿಗೆ ಪ್ರಯತ್ನ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಲದವರು ಈ ಠರಾವುಗಳ ವಿಷಯದಲ್ಲಿ ಆವಶ್ಯಕವಾದ ಪತ್ರವ್ಯವಹಾರವೆಲ್ಲವನ್ನೂ ನಡೆಸಿ, ಇವುಗಳ ಉದ್ದೇಶ ಪೂರ್ತಿಯಾಗುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಬೇಕೆಂದು ಈ ಸಮ್ಮೇಳನವು ಆಗ್ರಹಪೂರ್ವಕವಾಗಿ ವಿಜ್ಞಾಪಿಸುತ್ತದೆ.

ಸೂಚಕರು : ಶ್ರೀಮಂತ ಗುರಪ್ಪಯ್ಯ ದೇಸಾಯಿ

ಅನುಮೋದಕರು : ಮ॥ ರಾ॥ಗಳಾದ ಚಾಕಲಟ್ಟಿ ರಾಘವೇಂದ್ರರಾಯರು ಮತ್ತು ಕೊಪ್ಪಳದ ಜಯರಾಮಾಚಾರ್ಯರು.

****

೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೧

ಸಮ್ಮೇಳನಾಧ್ಯಕ್ಷರು : ಕೆ.ಪಿ. ಪುಟ್ಟಣ್ಣಶೆಟ್ಟಿ

ನಿರ್ಣಯ ೧ : ಪುಸ್ತಕಗಳಿಗೆ ಬಹುಮಾನ ನೀಡಲು ವ್ಯವಸ್ಥೆ

ಕನ್ನಡದಲ್ಲಿ ಗ್ರಂಥ ರಚನೆಯಾಗುವುದಕ್ಕೆ ಉತ್ತೇಜನ ಕೊಡುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಪರಿಷತ್ತು ಇನ್ನು ಮುಂದಕ್ಕೆ ಪ್ರತಿ ವರ್ಷವೂ ಅಚ್ಚಾಗುವ ಕನ್ನಡ ಪುಸ್ತಕಗಳನ್ನು ಸಾಧ್ಯವಾದ ಮಟ್ಟಿಗೆ ತರಿಸಿಕೊಂಡು ಅವುಗಳಲ್ಲಿ ಅತ್ಯುತ್ತಮವಾದುದಕ್ಕೆ ಒಟ್ಟು ೨೫೦ ರೂಪಾಯಿಗಳಿಗೆ ಮೀರದ ಬಹುಮಾನಗಳನ್ನು ಕೊಡುವಂತೆ ಏರ್ಪಾಡು ಮಾಡಬೇಕು.

ಸೂಚಕರು : ಮ॥ ರಾ॥ ಟಿ.ಎಸ್. ವೆಂಕಣ್ಣಯ್ಯನವರು

ಅನುವಾದಕರು : ರಾವ್ ಬಹಾದ್ದೂರ್ ಸಿ. ಹನುಮಂತೇಗೌಡರು

ನಿರ್ಣಯ ೩ : ಅನ್ಯಭಾಷಾ ಶಬ್ದಕೋಶ ನಿರ್ಮಾಣ

ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಗ್ರಂಥ ಲೇಖನದಲ್ಲಿ ರೂಢಿಯಲ್ಲಿರುವಪದ ವೈಚಿತ್ರ್ಯ ಪ್ರಯೋಗವೈಚಿತ್ರ್ಯಗಳ ಅನ್ಯಭಾಷಾಶಬ್ದಗಳ ಕೋಶವೊಂದನ್ನು ತಯಾರು ಮಾಡಲು ಉಪಸಭೆಯೊಂದು ಏರ್ಪಾಡಾಗತಕ್ಕದ್ದು. ಈ ಉಪಸಭೆಯವರು ಬೇಕಾದ ಬೇರೆ ಬೇರೆ ಪಂಗಡಗಳ ಪಂಡಿತರ ಸಹಾಯವನ್ನು ತೆಗೆದುಕೊಂಡು, ಸಾಧ್ಯವಾದ ಮಟ್ಟಿಗೆ ಪ್ರತಿಯೊಂದು ಪದ ಅಥವಾ ಪ್ರಯೋಗದ ಚರಿತ್ರೆಯನ್ನು ಅದಕ್ಕೆ ಉದಾಹರಣೆಯನ್ನೂ ಅದರ ವಿವಿಧಾರ್ಥಗಳನ್ನೂ ಅದರ ಶುದ್ಧಾಶುದ್ಧ ವಿಚಾರವನ್ನೂ ತಾವು ರಚಿಸಿದ ಕೋಶದಲ್ಲಿ ಸೂಕ್ಷ್ಮವಾಗಿ ತಿಳಿಸತಕ್ಕದ್ದು.

ಸೂಚಕರು : ಮ॥ ರಾ॥ ಎಂ. ನಂಜುಡಯ್ಯನವರು

ಅನುಮೋದಕರು : ಮ॥ ರಾ॥ ಎಂ. ಡಿ.ವಿ. ಗುಂಡಪ್ಪನವರು

ನಿರ್ಣಯ ೪ : ಪ್ರತಿವರ್ಷ ಪ್ರಕಟವಾಗುವ ಗ್ರಂಥಗಳ ಬಗ್ಗೆ ಸಮಿತಿ ನೇಮಕ

ಪ್ರತಿವರ್ಷವೂ ಕನ್ನಡಭಾಷೆಯ ಏಳಿಗೆಯನ್ನು ತಿಳಿದುಕೊಳ್ಳುವುದಕ್ಕೋಸ್ಕರ ಆ ವರ್ಷ ನೂತನವಾಗಿ ರಚಿತವಾದ ಗ್ರಂಥಗಳನ್ನು ಪ್ರಕಟನವಾದ ಪತ್ರಿಕೆಗಳನ್ನೂ ವಂಗ, ಮಹಾರಾಷ್ಟ್ರ, ಗುರ್ಜರ, ಆಂಧ್ರ, ದ್ರಾವಿಡ ಮುಂತಾದ ಭಾರತೀಯ ಭಾಷೆಗಳಲ್ಲಿ ಅದೇ ವರ್ಷ ಪ್ರಸಿದ್ಧವಾದ ಗ್ರಂಥ ಪತ್ರಿಕೆಗಳೊಡನೆ ಹೋಲಿಸಿ ನಮ್ಮ ಕನ್ನಡ ವಾಙ್ಮಯದ ಸದ್ಯಃಸ್ಥಿತಿಯನ್ನು ತಿಳಿಸುವ ವರದಿಯೊಂದನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಮುಂದೆ ಪ್ರತಿ ವರ್ಷವೂ ಇಡತಕ್ಕದ್ದು. ಮತ್ತು ಈ ಉದ್ದೇಶವು ನೆರವೇರುವುದಕ್ಕೋಸ್ಕರ ಒಂದು ಸಭೆಯನ್ನು ಏರ್ಪಡಿಸುವುದು. .

ಸೂಚಕರು : ಮ॥ ರಾ॥ ನಾ. ಶ್ರೀ ರಾಜಪುರೋಹಿತರು

ಅನುಮೋದಕರು : ಮ॥ ರಾ॥ ಕೆ. ಹನುಮಂತರಾಯರು.

ನಿರ್ಣಯ ೧೧ : ಪರಿಷತ್ಪತ್ರಿಕೆ ಚಂದಾದಾರರನ್ನು ಹೆಚ್ಚಿಸುವುದು

ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಪರಿಷತ್ಪತ್ರಿಕೆಯ ಚಂದಾದಾರರ ಸಂಖ್ಯೆಯನ್ನೂ ಹೆಚ್ಚಿಸುವುದಕ್ಕಾಗಿಯೂ, ಪರಿಷತ್ತಿನ ಉದ್ದೇಶವನ್ನು ನೆರವೇರಿಸುವುದಕ್ಕಾಗಿಯೂ, ಪ್ರತಿ ಡಿಸ್ಟ್ರಿಕ್ಟು ಅಥವಾ ಜಿಲ್ಲೆಯಲ್ಲಿ ಕೆಲವು ಮಂದಿ ಪ್ರಮುಖರನ್ನು ಕೇಳಿಕೊಳ್ಳತಕ್ಕದ್ದು.

ಸೂಚಕರು. ರಾವ್ ಬಹದ್ದೂರ್ ಮ॥ ರಾ॥ ಸಿ. ಹನುಮಂತಗೌಡರು

ಅನುಮೋದಕರು. ಮ॥ ರಾ॥ ರಾ.ಹ. ದೇಶಪಾಂಡೆ ಶ್ರೀ ರಾಜಪುರೋಹಿತರು

ನಿರ್ಣಯ ೧೨ : ವಿಶ್ವಕೋಶ ರಚನೆಗೆ ಸಮಿತಿ

ಕನ್ನಡದಲ್ಲಿ 'ಎನ್‌ಸ್ಪೈಕ್ಲೋಪೇಡಿಯಾ' ಎಂಬ ವಿಶ್ವಕೋಶವೊಂದನ್ನು ರಚಿಸುವ ವಿಷಯವಾಗಿ ವಿಚಾರಮಾಡಿ ಆದ ತೀರ್ಮಾನವನ್ನು ಮುಂದಿನ ಸಮ್ಮೇಳನಕ್ಕೆ ಶ್ರುತಪಡಿಸಲು ಒಂದು ಉಪಸಭೆಯನ್ನು ನಿಯಮಿಸತಕ್ಕದ್ದು.

ಸೂಚಕರು : ರಾವ್ ಬಹದ್ದೂರ್ ಮ॥ ರಾ॥ ಸಿ. ಹನುಮಂತಗೌಡರು

ಅನುಮೋದಕರು : ಮ॥ ರಾ॥ ರಾ.ಹ. ದೇಶಪಾಂಡೆ ಎಂ.ಎ.

****

೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೨

ಸಮ್ಮೇಳನಾಧ್ಯಕ್ಷರು : ಎಂ. ವೆಂಕಟಕೃಷ್ಣಯ್ಯ

ನಿರ್ಣಯ ೧ : ವಿಶ್ವಕೋಶ ರಚನೆಯ ಬಗ್ಗೆ ವರದಿ

ಪದವೈಚಿತ್ರ್ಯ, ಪ್ರಯೋಗವೈಚಿತ್ರ್ಯಗಳ ಕೋಶವನ್ನು ಕುರಿತ ವರದಿಯನ್ನು ಮ॥ ರಾ॥ ಡಿ.ವಿ.ಗುಂಡಪ್ಪನವರು ಓದಿದ ಬಳಿಕ ಆ ವಿಷಯವನ್ನು ಮೂರನೆಯ ದಿನ ನಿರ್ಧರಿಸತಕ್ಕದೆಂದು ಗೊತ್ತಾಯಿತು.

ನಿರ್ಣಯ ೨ : ವಿಶ್ವಕೋಶ ರಚನೆ ವಿಚಾರ

ಕನ್ನಡದಲ್ಲಿ ವಿಶ್ವಕೋಶವನ್ನು ರಚಿಸುವ ವಿಷಯವನ್ನು ಕುರಿತು ವರದಿಯನ್ನು ಮ॥ ರಾ॥ ಡಿ.ವಿ. ಗುಂಡಪ್ಪನವರು

ಓದಿ ವಿವರಿಸಿದ ಬಳಿಕ ಆ ವಿಷಯವನ್ನು ಮಾರನೆಯ ದಿನ ನಿರ್ಧರಿಸ ತಕ್ಕದೆಂದು ಗೊತ್ತಾಯಿತು.

ನಿರ್ಣಯ ೩ : ನಾಟಕ ಸಮ್ಮೇಳನ ವಿಚಾರ

ಕರ್ನಾಟಕ ನಾಟಕ ಸಮ್ಮೇಳನದ ವಿಷಯವಾಗಿ ನಾಟಕ ಪ್ರತಿನಿಧಿಗಳು ಸೂಚಿಸಿದ ನಿಬಂಧನೆಗಳನ್ನು ಷರತ್ತಿನ ಕಾರ್ಯನಿರ್ವಾಹಕಮಂಡಲಿಯವರು ಅಂಗೀಕರಿಸಿ ಕೆಲಸ ನಡೆಸಬಹುದು.

ಸೂಚಕರು – ಮ॥ ರಾ॥ ಎನ್. ವೆಂಕಟೇಶಯ್ಯಂಗಾರ್ಯರು ಬಿ.ಎ.

ಅನುಮೋದಕರು – ಮ॥ ರಾ॥ ನಾ. ಕೃ. ಹುಯಿಲಗೋಳ್, ಬಿ.ಎ. ಎಲ್.ಎಲ್.ಬಿ.

ನಿರ್ಣಯ ೪ : ಪರಿಷತ್ತಿನ ಪ್ರಚಾರಕರ ನೇಮಕ

ಕರ್ನಾಟಕ ಯಾವ ಭಾಗಗಳಲ್ಲಿಯೂ, ವಿಶೇಷತಃ ಹೈದರಾಬಾದು, ಕೊಡಗು, ಉತ್ತರ ಕರ್ನಾಟಕ ಸಂಸ್ಥಾನ ಮುಂತಾದ ಹಿಂದುಳಿದ ಭಾಗಗಳಲ್ಲಿಯೂ, ಸೀಮಾಭಾಗಗಳಲ್ಲಿಯೂ ಇತರ ಕರ್ನಾಟಕದ ಭಾಗಗಳಲ್ಲಿಯೂ ಕನ್ನಡ ಭಾಷೆಯ ಬಗ್ಗೆ ಜಾಗೃತಿಯನ್ನು ಹುಟ್ಟಿಸುವುದಕ್ಕೆ ಪರಿಷತ್ತಿನವರು ಪ್ರಚಾರಕನ್ನು ನೇಮಿಸಬೇಕೆಂದೂ, ಆ ಪ್ರಚಾರಕರಿಗೆ ಕನಿಷ್ಠಪಕ್ಷಕ್ಕೆ ಹಾದಿಯ ವೆಚ್ಚವನ್ನು ಕೊಡಬೇಕೆಂದೂ, ಈ ಸಮ್ಮೇಳನವು ಪರಿಷತ್ತಿಗೆ ಆಗ್ರಹಪೂರ್ವಕವಾಗಿ ಸೂಚಿಸುತ್ತದೆ. ಆ ಪ್ರಚಾರಕರು ಇದರಡಿಯಲ್ಲಿ ಬರೆದ ಕಾರ್ಯಗಳನ್ನು ಮಾಡಬೇಕು.

೧. ಉಪನ್ಯಾಸಗಳನ್ನು ಕೊಟ್ಟು ಜನರಲ್ಲಿ ಭಾಷಾಜಾಗೃತಿಯನ್ನುಂಟುಮಾಡುವುದು.

೨. ಪರಿಷತ್ತಿನ ಬೇರೆ ಬೇರೆ ಶಾಖೆಗಳನ್ನು ಸ್ಥಾಪಿಸುವುದು.

೩. ಕನ್ನಡ ವಾಚನಾಲಯಗಳನ್ನೂ, ಪುಸ್ತಕಾಲಯಗಳನ್ನೂ ಸ್ಥಾಪಿಸುವುದು.

೪. ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವುದು.

೫. ಕನ್ನಡ ಭಾಷಾಭಿವೃದ್ಧಿಯನ್ನುಂಟುಮಾಡುವ ಇತರ ಕಾರ್ಯಗಳು.

ಸೂಚಕರು – ಮ॥ ರಾ॥ ಬಿ. ಆಲೂರ್, ಬಿ.ಎ. ಎಲ್.ಎಲ್.ಬಿ.

ಅನುಮೋದಕರು – ಹಾಸನದ ಸೂರ್ಯನಾರಾಯಣರಾಯರು

ಪರಿಪೋಷಕರು – ಮ॥ ರಾ॥ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ.

ನಿರ್ಣಯ ೬ : ತಾಳೆಗರಿಯ ಸಂಗ್ರಹ

ಕನ್ನಡ ಪ್ರಾಚೀನ ಐತಿಹಾಸಿಕ ಗ್ರಂಥಗಳ ತಾಳೆಯೋಲೆಯ ಪ್ರತಿಗಳನ್ನು ಸಂಪಾದಿಸಿ ಪರಿಷತ್ತಿನವರು ಪರಿಷತ್ಪತ್ರಿಕೆಯಲ್ಲಿ ಇದೇ ವರ್ಷ ಮುದ್ರಿಸುವುದಕ್ಕೆ ಪ್ರಾರಂಭಿಸಬೇಕು.

ಸೂಚಕರು : ಮ॥ ರಾ॥ ರಾಜಪುರೋಹಿತರು

ಅನುಮೋದಕರು : ಮ॥ ರಾ॥ ತೋಗೆರೆ ನಂಜುಂಡಶಾಸ್ತ್ರಿಗಳು.

ನಿರ್ಣಯ ೭ : ರಾಷ್ಟ್ರೀಯ ಭೂಗೋಳ ಗ್ರಂಥ ಬರೆಸಬೇಕು

ಅಖಿಲ ಕರ್ನಾಟಕ ಪ್ರಾಕೃತಿಕ, ರಾಜಕೀಯ, ಔದ್ಯೋಗಿಕ, ಐತಿಹಾಸಿಕ ಮುಂತಾದ ವಿಷಯಗಳನ್ನೊಳಗೊಂಡು ಒಂದು ರಾಷ್ಟ್ರೀಯ ಭೂಗೋಳವನ್ನು ಪರಿಷತ್ತಿನವರು ತೀವ್ರವಾಗಿ ಬರೆಯಿಸಬೇಕು.

ಸೂಚಕರು : ಮ॥ ರಾ॥ ಕೆ. ನರಗುಂದಕರ್, ಬಿ.ಎ. ಎಲ್.ಎಲ್.ಬಿ.

ಅನುಮೋದಕರು : ಮ॥ ರಾ॥ ಬಿ.ಎಸ್ ಬೆಟಗೇರಿ

ನಿರ್ಣಯ ೮ : ವಿಜಯನಗರ ಸ್ಮಾರಕಗಳ ಬಗ್ಗೆ ಸಮಿತಿ ರಚನೆ

೧) ವಿಜಯನಗರ ಸಾಮ್ರಾಜ್ಯದ ಮೂಲಸ್ಥಾನವಾದ ಪಂಪಾಕ್ಷೇತ್ರದಲ್ಲಿರುವ ಪುರಾತನ ದೇವಾಲಯ, ರಾಜಾಲಯ ಮೊದಲಾದ ಕಟ್ಟಡಗಳು ನಶಿಸಿ ನಿರ್ನಾಮವಾಗದಂತೆಯೂ ಪ್ರೇಕ್ಷಕರಿಗೆ ಆ ಕ್ಷೇತ್ರವು ಸುಗಮವಾಗುವಂತೆಯೂ ಮಾಡಲು ಬೇಕಾದ ಏರ್ಪಾಟುಗಳಾವುವು ? ಆ ಏರ್ಪಾಟುಗಳು ನೆರವೇರುವ ಬಗೆ ಹೇಗೆ ? ಎಂಬುದನ್ನು ವಿಚಾರ ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಆ ಉದ್ದೇಶ ಸಾಧನೆಗಾಗಿ ಕೆಲಸ ಮಾಡಲು ಈ ಸಮ್ಮೇಳನವು ಈ ಕೆಳಕಂಡಂತೆ ಒಂದು ಸಭೆಯನ್ನು ನಿಯಮಿಸುತ್ತದೆ

ಎ) ಈ ಸಭೆಗೆ ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸರಾಯರವರು ಅಧ್ಯಕ್ಷರಾಗಿಯೂ, ಮ॥ ರಾ॥ ಗಳಾದ ಬೆಳ್ಳಾವೆ ವೆಂಕಟನಾರಾಯಣಪ್ಪನವರು, ಎನ್. ವೆಂಕಟೇಶಯ್ಯಂಗಾರ್ಯರವರು, ಟಿ.ಎಸ್. ವೆಂಕಣ್ಣಯ್ಯನವರು, ಡಿ.ವಿ. ಗುಂಡಪ್ಪನವರು, ರಾವ್ ಬಹದ್ದೂರ್ ಸಿ. ಹನುಮಂತಗೌಡರವರು, ವಿ.ಬಿ. ಆಲೂರ್ ಅವರು ಸದಸ್ಯರಾಗಿಯೂ ಇರತಕ್ಕದ್ದು.

ಬಿ) ಈ ಮೇಲೆ ಹೇಳಿದ ಸಭೆಗೆ, ಬೇಕಾದಷ್ಟು ಮಂದಿ ಇತರರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಅಧಿಕಾರವಿರತಕ್ಕದ್ದು.

ಸಿ) ಮೈಸೂರಿನ ಶ್ರೀ ಮನ್ಮಹಾರಾಜಾ ಸಾಹೇಬರವರು ಈ ಸಭೆಗೆ ಪೋಷಕರಾಗಬೇಕೆಂದು ಕೇಳಿಕೊಳ್ಳುವುದಕ್ಕೂ ಸಮಸ್ತ ಭಾರತೀಯರ, ಅದರಲ್ಲಿಯೂ ವಿಶೇಷವಾಗಿ ಆಂಧ್ರ ಕರ್ನಾಟಕ ಮಹಾಜನರ, ಉದಾರವಾದ ಸಹಾಯವನ್ನು ಪಡೆಯುವುದಕ್ಕಾಗಿ ನಾನಾ ಪ್ರಾಂತಗಳ ದೇಶಾಭಿಮಾನಿಗಳ, ಪಂಡಿತರ ಮತ್ತು ಪ್ರಜಾಪ್ರಮುಖರ ಸಹೋದ್ಯೋಗಿತೆಯನ್ನು ಬಯಸುವುದಕ್ಕೂ ಮೇಲಿನ ಸಭೆಗೆ ಅಧಿಕಾರವಿರತಕ್ಕದ್ದು.

ಡಿ) ಪಂಪಾಕ್ಷೇತ್ರದ ಚರಿತ್ರೆಯನ್ನು ಸಂಕ್ಷೇಪವಾಗಿ ತಿಳಿಸಿ, ಅಲ್ಲಿಯ ಶಿಲ್ಪ ವೈಚಿತ್ರ್ಯಗಳನ್ನು ತೋರಿಸಿ, ಜನರಿಗೆಲ್ಲ ಆ ಸ್ಥಳದಲ್ಲಿ ಅಭಿಮಾನ ಹೆಚ್ಚುವಂತೆ ಮಾಡುವ ಸಣ್ಣ ಸಚಿತ್ರವಾದ ಕ್ಷೇತ್ರ ಮಹಾತ್ಮ್ಯ ಗ್ರಂಥವೊಂದನ್ನು ಮೇಲಿನ ಸಭೆಯವರು ಪ್ರಕಟಿಸತಕ್ಕದ್ದು.

೨) ಈ ಮೇಲಿನ ಕೆಲಸಗಳಿಗೆ ಬೇಕಾಗುವ ಮುದ್ರಣ ಮೊದಲಾದ ವೆಚ್ಚಗಳಿಗೆ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಮುನ್ನೂರು ರೂಪಾಯಿಗಳ ಮೂಲ ಧನವನ್ನು ಪಂಪಾಕ್ಷೇತ್ರ ಜೀರ್ಣೋದ್ಧಾರಕ ಸಭೆಗೆ ದಯಮಾಡಿ ಕೊಟ್ಟು ಸಾಧ್ಯವಾದ ಇತರ ಎಲ್ಲ ವಿಧಗಳಲ್ಲಿಯೂ ಸಹಾಯಮಾಡಬೇಕೆಂದು ಈ ಸಮ್ಮೇಳನ ಕೋರುತ್ತದೆ.

೩) ಪಂಪಾಕ್ಷೇತ್ರ ಜೀರ್ಣೋದ್ಧಾರಕ ಸಭೆಯು ತಾನು ಮಾಡಿದ ಕೆಲಸವನ್ನು ಕುರಿತು ಆಗಾಗ ವರದಿಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಗೊಳಿಸುವುದಲ್ಲದೆ ಮುಂದಿನ ವರ್ಷ ನಡೆಯುವ ಸಮ್ಮೇಳನಕ್ಕೆ ತನ್ನ ಕಾರ್ಯ ಕಲಾಪದ ವಿವರವನ್ನು ತಿಳಿಸತಕ್ಕದ್ದು.

ಸೂಚಕರು – ಮ॥ ರಾ॥ ಡಿ.ವಿ. ಗುಂಡಪ್ಪನವರು ಅನುಮೋದಕರು – ವಿ.ಬಿ. ಆಲೂರ್, ಬಿ.ಎ. ಎಲ್.ಎಲ್.ಬಿ.

ಪರಿಪೋಷಕರು – ಮ॥ ರಾ॥ ಶಂಕರ ನರಸಿಂಹ ಕುಲಕರಣಿ, ಮ॥ರಾ॥ಸಿ.ಕೃಷ್ಣಸ್ವಾಮಿ ರಾಯರವರು ಬಿ.ಎ.

ನಿರ್ಣಯ ೯ : ವ್ಯಾಕರಣ ರಚನೆಗೆ ಸಮಿತಿ ರಚನೆ

೧) ಶಬ್ದಾನುಶಾಸನ, ಶಬ್ದಮಣಿ ದರ್ಪಣಗಳು ಅನೇಕ ಶತಮಾನಗಳ ಹಿಂದಣ ವ್ಯಾಕರಣಗಳಾದುದರಿಂದಲೂ, ಈ ಕಾಲದ ರೂಢಿಗೂ ಸಂದರ್ಭಗಳಿಗೂ ತಕ್ಕಂತಹ ಪ್ರಮಾಣವಾದ ವ್ಯಾಕರಣವಾವುದೂ ಇನ್ನೂ ರಚಿತವಾಗದೇ ಇರುವುದರಿಂದಲೂ, ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಈ ವಿಚಾರವನ್ನು ಪರ್ಯಾಲೋಚಿಸಿ ಹೊಸ ವ್ಯಾಕರಣವೊಂದನ್ನು ಬರೆಯಿಸಲು ತಕ್ಕ ಸಲಹೆಗಳನ್ನು ಕೊಡಲು ಒಂದು ಉಪಸಭೆಯನ್ನು ನಿಯಮಿಸತಕ್ಕದ್ದು.

೨) ಈ ಉಪಸಭೆಯ ಸಲಹೆಗಳನ್ನು ವಿಚಾರಕ್ಕೆ ತೆಗೆದುಕೊಂಡು ಉಚಿತ ತೋರಿದಂತೆ ಗ್ರಂಥವನ್ನು ಬರೆಯಿಸಲು ತಕ್ಕ ಕೆಲಸವನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯ ನಿರ್ವಾಹಕ ಮಂಡಲಿಯವರು ಆದಷ್ಟು ಬೇಗನೆ ಪ್ರಾರಂಭಿಸತಕ್ಕದ್ದು.

ಸೂಚಕರು – ಮ॥ ರಾ॥ ಡಿ.ವಿ. ಗುಂಡಪ್ಪನವರು

ಅನುಮೋದಕರು – ಮ॥ ರಾ॥ ನಾ.ಶ್ರೀ. ರಾಜಪುರೋಹಿತರು

ನಿರ್ಣಯ ೧೦ : ವಾಣೀವಿಲಾಸ ಭಾರತ ಪ್ರಕಟಣೆ ಮಾಡುವುದು

"ಶ್ರೀ ಕೃಷ್ಣರಾಜ ವಾಣೀವಿಲಾಸ" ಎಂಬ ಕನ್ನಡ ಮಹಾಭಾರತವು ಈಗ ಸಮಗ್ರವಾಗಿ ಸುಲಭ ಬೆಲೆಗೆ ದೊರೆಯದೆಂದು ತಿಳಿದುಬಂದಿರುವುದರಿಂದ ಸಕಲ ಕರ್ನಾಟಕಕ್ಕೂ ಅತ್ಯಂತ ಮುಖ್ಯವಾದ ಈ ಗ್ರಂಥವು ಪುನಃ ಸಂಪೂರ್ಣವಾಗಿ ಪ್ರಕಟಗೊಂಡು ಸುಲಭವಾದ ಬೆಲೆಗೆ ದೊರೆಯುವಂತೆ ಮಾಡಲು ಬೇಕಾದ ಏರ್ಪಾಟುಗಳನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಸಾಧ್ಯವಾದಷ್ಟು ಬೇಗನೆ ನಡೆಯಿಸತಕ್ಕದ್ದು.

ಸೂಚಕರು – ಮ॥ ರಾ॥ ಟಿ.ಎಸ್. ವೆಂಕಣ್ಣಯ್ಯನವರು

ಅನುಮೋದಕರು – ಮ॥ ರಾ॥ ಬಿ.ಎಸ್. ಬೆಟಗೇರಿ

ನಿರ್ಣಯ ೧೧ : ಮುದ್ರಣಾಕ್ಷರಗಳ ರಚನೆ ಉತ್ತಮೀಕರಣ

ಈ ಕೆಳಗಿನ ಉಪಸಭೆಯು ಕನ್ನಡದಲ್ಲಿ ಮುದ್ರಣಾಕ್ಷರ ರಚನೆಯನ್ನು ಉತ್ತಮಪಡಿಸುವ ವಿಚಾರವನ್ನು ಚರ್ಚೆಮಾಡಿ, ಅಭಿಪ್ರಾಯವನ್ನು ತಿಳಿಸತಕ್ಕದ್ದು.

ಮ॥ ರಾ॥ ೧. ವೈ.ಬಿ. ಜಠಾರ, ಬಿ.ಎ.ಎಲ್.ಎಲ್.ಬಿ.

" ೨. ಬೆಳ್ಳಾವೆ ವೆಂಕಟನಾರಾಯಣಪ್ಪನವರು (ಉಪಸಭೆಯ ಕಾರ್ಯದರ್ಶಿ)

" ೩. ಹೆಚ್. ಸುಬ್ಬರಾಯರು

" ೪. ವಾಜಪೇಯಂ ವೆಂಕಟೇಶಯ್ಯನವರು

" ೫. ಡಿ.ವಿ. ಗುಂಡಪ್ಪನವರು

" ೬. ಬಿ. ರಾಮರಾಯರವರು. ಎಂ.ಎ. ಎಲ್.ಎಲ್.ಬಿ.

" ೭. ವಿ. ಬಿ. ಆಲೂರ್, ಬಿ.ಎ. ಎಲ್.ಎಲ್.ಬಿ.

ಸೂಚಕರು – ಮ॥ ರಾ॥ ವಿ. ಬಿ. ಆಲೂರ್

ಅನುಮೋದಕರು – ಬಿ. ವೆಂಕಟನಾರಾಯಣಪ್ಪನವರು

ನಿರ್ಣಯ ೧೨ : ಜಾಯಿಂಟ್ ಸ್ಟಾಕ್ ಕಂಪನಿ ರಚನೆ, ಪುಸ್ತಕ ಪ್ರಕಟನೆ

ಕನ್ನಡ ಭಾಷೆಯ ಪ್ರಸಾರವಾಗುವುದಕ್ಕೆ ದೊಡ್ಡದೊಂದು ಗ್ರಂಥ ಪ್ರಕಾಶಕ ಮಂಡಲಿಯಿರುವುದು ಆವಶ್ಯಕವಾಗಿರುವುದರಿಂದ ಪುಸ್ತಕ ಪ್ರಕಟನೆಯೇ ಮುಖ್ಯೋದ್ದೇಶವಾಗುಳ್ಳ 'ಜಾಯಿಂಟ್ ಸ್ಟಾಕ್' ಕಂಪನಿಯೊಂದನ್ನು ಏರ್ಪಡಿಸುವ ವಿಚಾರವನ್ನು ಆಲೋಚಿಸಿ ಸೂಚನೆಕೊಡಲು ಈ ಕೆಳಗೆ ಕಂಡಂತೆ ಒಂದು ಉಪಸಭೆಯು ನಿಯಾಮಕವಾಗತಕ್ಕದ್ದು.

ಮ॥ ರಾ॥ ೧. ಗುರುರಾವ್ ಸಿಡೇನೂರ್, ಬಿ.ಎ.ಎಲ್.ಎಲ್.ಬಿ.

" ೨. ಬಿ.ವಿ. ಧಾರವಾರಕರ್, ಬಿ.ಎ.

" ೩. ಬಾ.ಕೃ. ಹಳೇಪೇಟೆ

" ೪. ಬೆಳ್ಳಾವೆ ವೆಂಕಟನಾರಾಯಣಪ್ಪನವರು, ಎಂ.ಎ.

" ೫. ಡಿ.ವಿ. ಗುಂಡಪ್ಪನವರು

" ೬. ಎನ್. ವಂಕಟೇಶಯ್ಯಂಗಾರ್ಯರು ಬಿ.ಎ. (ಉಪಸಭೆಯ ಕಾರ್ಯದರ್ಶಿ)

" ೭. ಎಚ್. ಸುಬ್ಬರಾಯರು

" ೮. ಶಂಕರರಾವ್ ಜೋಶಿ

ಈ ಉಪಸಭೆಯು ಬೇಕಾದರೆ ಇತರರನ್ನು ಸೇರಿಸಿಕೊಳ್ಳಬಹುದು. ಇದರ ವರದಿಯನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯೇ ಪರ್ಯಾಲೋಚಿಸಿ ತಕ್ಕಂತೆ ಕೆಲಸ ನಡೆಸತಕ್ಕದ್ದು.

ಸೂಚಕರು : ಮ॥ ರಾ॥ ಗುರುರಾವ್ ಸಿಡೇನೂರ್

ಅನುಮೋದಕರು : ಬಿ. ವಿ. ಧಾರವಾಡಕರ್

ಪರಿಪೋಷಕರು : ಮ॥ ರಾ॥ ಬಾ.ಕೃ. ಹಳೇಪೇಟೆ.

ನಿರ್ಣಯ ೧೪ :ವಿಶ್ವಕೋಶ ರಚನೆ ವರದಿ ಮಂಡನೆ

ಕನ್ನಡ ನಾಡಿನ ಬೇರೆ ಬೇರೆ ಭಾಗಗಳ ಪದವೈಚಿತ್ರ್ಯ, ಪ್ರಯೋಗವೈಚಿತ್ರ್ಯಕೋಶವನ್ನು ತಯಾರುಮಾಡಿಸುವ ವಿಚಾರವಾಗಿ ಉಪಸಭೆಯ ವರದಿಯಲ್ಲಿ ಸೂಚಿಸಿರುವಂತೆ ಕೆಲಸ ಮಾಡಲು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಮೂರು ಪ್ರಾಂತಗಳಿಗೂ ಸಂಬಂಧಪಡುವಂತೆ ಮೂರು ಉಪಸಭೆಗಳನ್ನು ನಿಯಾಮಕಮಾಡತಕ್ಕದ್ದು.

ಕನ್ನಡದಲ್ಲಿ ವಿಶ್ವಕೋಶವೊಂದನ್ನು ತಯಾರುಮಾಡಿಸುವ ವಿಚಾರವಾಗಿ ಮ॥ ರಾ॥ ಡಿ.ವಿ. ಗುಂಡಪ್ಪನವರು ಹಿಂದಣ ದಿನ ಒಪ್ಪಿಸಿದ ಉಪಸಭೆಯ ವರದಿಯ ಮೇಲೆ ಚರ್ಚೆನಡೆದು ಈ ಕೆಳಗೆ ಕಂಡಂತೆ ತೀರ್ಮಾನವಾಯಿತು.

ನಿರ್ಣಯ ೧೫ : ಪ್ರಾದೇಶಿಕ ವಿಶ್ವಕೋಶ ರಚನೆ

ಕನ್ನಡದಲ್ಲಿ ವಿಶ್ವಕೋಶವೊಂದನ್ನು ತಯಾರುಮಾಡಿಸುವ ವಿಚಾರವಾಗಿ ಉಪಸಭೆಯ ವರದಿಯನ್ನು ಪರಿಷತ್ಪತ್ರಿಕೆಯಲ್ಲಿ ಪ್ರಕಟಗೊಳಿಸಿ ಮಹಾಜನರ ಅಭಿಪ್ರಾಯಗಳನ್ನು ತರಿಸಿಕೊಳ್ಳತಕ್ಕದ್ದು. ಮತ್ತು ಆ ಉಪಸಭೆಗೆ ವಂಗ, ಮರಾಠಿ, ಆಂಧ್ರ, ಹಿಂದಿ – ಈ ಭಾಷೆಗಳ ವಿಶ್ವಕೋಶಗಳನ್ನು ವಿಷಯಸೂಚೀ ಪುಸ್ತಕಗಳೊಡನೆ ಪರಿಷತ್ತಿನವರು ತರಿಸಿಕೊಟ್ಟು ಅವುಗಳನ್ನು ನೋಡಿದ ಬಳಿಕ ತೋರುವ ಅಭಿಪ್ರಾಯಗಳನ್ನು ಮತ್ತೊಂದು ವರದಿಯಲ್ಲಿ ಸೂಚಿಸಬೇಕೆಂದು ಕೇಳಿಕೊಳ್ಳತಕ್ಕದ್ದು. ಹೀಗೆ ಬಂದ ಅಭಿಪ್ರಾಯಗಳನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಪರ್ಯಾಲೋಚಿಸಿ ಯೋಗ್ಯಕಂಡಂತೆ ಕೆಲಸ ನಡೆಯಿಸತಕ್ಕದ್ದು.

ಸೂಚಕರು – ಮ॥ ರಾ॥ ಡಿ.ವಿ. ಗುಂಡಪ್ಪನವರು ಅನುಮೋದಕರು – ಮ॥ ರಾ॥ ನಾ. ಶ್ರೀ ರಾಜಪುರೋಹಿತರು

****

೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೩

ಸಮ್ಮೇಳನಾಧ್ಯಕ್ಷರು : ಸಿದ್ಧಾಂತಿ ಶಿವಶಂಕರಶಾಸ್ತ್ರಿ

ನಿರ್ಣಯ ೨ : ನಾಡಿನ ಎಲ್ಲ ಭಾಗಗಳಲ್ಲಿ ಸಂಸ್ಥೆ ಸ್ಥಾಪನೆ.

ಕನ್ನಡಿಗರಲ್ಲಿ ಸ್ವಾಭಿಮಾನವು ಹೆಚ್ಚುವಂತೆಯೂ ಕನ್ನಡ ಭಾಷೆಯು ಎಲ್ಲ ವಿಧದಿಂದ ಉನ್ನತಿಯನ್ನು ಹೊಂದುವಂತೆಯೂ ಎಲ್ಲ ವಿಧದ ಪ್ರಯತ್ನಮಾಡುವುದಕ್ಕಾಗಿ ಕರ್ನಾಟಕದ ಎಲ್ಲ ಭಾಗಗಳಲ್ಲಿ ತಕ್ಕ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ಈ ಸಮ್ಮೇಳನವು (ಬೆಂಗಳೂರು) ಕರ್ನಾಟಕ ಸಾಹಿತ್ಯ ಪರಿಷತ್ತಿಗೂ (ಧಾರವಾಡದ) ವಿದ್ಯಾವರ್ಧಕ ಸಂಘಕ್ಕೂ ವಿಜ್ಞಾಪಿಸುತ್ತದೆ.

ಸೂಚಕರು : ಮ॥ ರಾ॥ ಹಾರನಹಳ್ಳಿ ಅ. ಮೂ. ಬಿಜಾಪುರದ ಹೈಸ್ಕೂಲ್

ಅನುಮೋದಕರು : ಕೇಶವಶರ್ಮಾ ಗಲಗಲಿ.

ನಿರ್ಣಯ ೫ : ದಿವಂಗತ ಸಾಹಿತಿಗಳ ಚರಿತ್ರೆಗಳ ಪುನರ್ ಮುದ್ರಣ ಕಾರ್ಯ

ಪರಲೋಕವಾಸಿಗಳಾದ ಆಧುನಿಕ ಕಾಲದ ಸುಪ್ರಸಿದ್ಧ ಕನ್ನಡ ಕವಿಗಳೂ, ಗ್ರಂಥಕಾರರೂ, ಹಾಗೂ ಪತ್ರಿಕೆಗಳ ಸಂಪಾದಕರೂ – ಇವರ ಸಂಕ್ಷಿಪ್ತ ಚರಿತ್ರೆಗಳನ್ನು ಬರೆಯಿಸಿ ಪ್ರಸಿದ್ಧಿ ಮಾಡುವುದೂ ಮತ್ತು ಅವರ ಲೇಖನಗಳನ್ನು ಶೇಖರಿಸಿ ಸಮಗ್ರವಾಗಿ ಅಥವಾ ಸಂಕ್ಷಿಪ್ತವಾಗಿ ಪುನಃ ಮುದ್ರಿಸುವುದೂ ಕರ್ನಾಟಕ ಸಾಹಿತ್ಯ ಪರಿಷತ್ತಿನವರ ಕರ್ತವ್ಯವಾಗಿದೆ.

ಸೂಚಕರು : ಮ॥ ರಾ॥ ನಾ.ಶ್ರೀ. ರಾಜಪುರೋಹಿತರು, ಧಾರವಾಡ

ಅನುಮೋದಕರು : ದ.ರಾ.ಬೇಂದ್ರೆ, ಬಿ.ಎ.

ನಿರ್ಣಯ ೭ : ಪಠ್ಯಪುಸ್ತಕ ರಚನೆ ಪರಿಷತ್ತಿನಿಂದ

ಒಂದನೆಯ, ಎರಡನೆಯ ಮತ್ತು ಮೂರನೆಯ ಇಯತ್ತೆಗಳ ಬಾಲಕರಿಗಾಗಿ ಈಗ ಪ್ರಚಾರದಲ್ಲಿರುವ ಅಧಿಕ ಪಾಠದ ಪುಸ್ತಕಗಳು ಅತೃಪ್ತಿಕರವಾಗಿರುವುದರಿಂದ ತೃಪ್ತಿಕರವಾದ ರೀತಿಯಲ್ಲಿ ಅದನ್ನು ಬರೆಯುವುದಕ್ಕಾಗಿ ಒಂದು ಚಿಕ್ಕ ಸಭೆಯು ಸ್ಥಾಪಿತವಾಗತಕ್ಕದ್ದು. ಇದಕ್ಕೆ ಮ॥ ರಾ॥ ಪಿ.ಜಿ. ಹಳಕಟ್ಟಿ , ಬಿ.ಎ. ಎಲ್.ಎಲ್.ಬಿ. ಬಿಜಾಪುರ, ಮ॥ ರಾ॥ ಮಹದೇವ ಪ್ರಭಾಕರ ಪೂಜಾರ, ಧಾರವಾಡ, ಮ॥ ರಾ॥ ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎ, ಬೆಂಗಳೂರು, ಮ॥ ರಾ॥ ಟಿ.ಎಸ್. ವೆಂಕಣ್ಣಯ್ಯನವರು, ಎಂ.ಎ. ಬೆಂಗಳೂರು – ಇವರು ಸಭಾಸದರಾಗಿರತಕ್ಕದ್ದು. ಇವರು ಅವಶ್ಯ ಕಂಡುಬಂದಲ್ಲಿ ಈ ಸಭೆಗೆ ಇತರರನ್ನು ಸಭಾಸದರನ್ನಾಗಿ ಸೇರಿಸಿಕೊಳ್ಳಲು ಅಧಿಕಾರವುಳ್ಳವರಾಗಿರತಕ್ಕದ್ದು.. ಈ ಸಭೆಯವರು ಮೇಲ್ಕಂಡ ಪುಸ್ತಕಗಳನ್ನು ಸಾಧ್ಯವಾದಷ್ಟು ಬೇಗನೆ ಬರೆದು ಮುದ್ರಣಕ್ಕೆ ಸಿದ್ಧಪಡಿಸತಕ್ಕದ್ದು.

ಸೂಚಕರು : ಮ॥ ರಾ॥ ನಾ.ಶ್ರೀ. ವಿಷ್ಣು ಗೋಪಾಲ ಥೊಬ್ಬಿ, ಬಿಜಾಪುರ

ಅನುಮೋದಕರು : ರಾವ್ ಸಾಹೆಬ್ ಮ॥ ರಾ॥ ಪಿ.ಜಿ. ಹಳಕಟ್ಟಿ ಬಿ.ಎ. ಎಲ್.ಎಲ್.ಬಿ. ಬಿಜಾಪುರ

ನಿರ್ಣಯ ೯ : ಸಮ್ಮೇಳನಾಧ್ಯಕ್ಷರ ಆಯ್ಕೆ ವಿಧಾನ

ಸಮ್ಮೇಳನದ ಅಧ್ಯಕ್ಷರ ಚುನಾವಣೆಯ ವಿಷಯವಾಗಿ ಸ್ಪಷ್ಟವಾಗಿ ನಿಯಮಗಳು ಇಲ್ಲದೆ ತೊಂದರೆಗೆ ಅವಕಾಶವಿರುವುದರಿಂದ ಮುಂದಿನ ವಾರ್ಷಿಕ ಸಭೆಯಲ್ಲಿ ನಿಯಮಗಳು ತಿದ್ದುಪಾಟಾಗುವವರೆಗೂ ಕೆಳಗೆ ಕಾಣಿಸುವ ಮಾರ್ಗವನ್ನನುಸರಿಸಬೇಕೆಂದು ಈ ಸಭೆಯು ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯ ನಿರ್ವಾಹಕ ಮಂಡಲಿಗೆ ಸೂಚಿಸುತ್ತದೆ. ಸ್ವಾಗತ ಮಂಡಲಿಯವರು ಸಮ್ಮೇಳನಕ್ಕೆ ಅಧ್ಯಕ್ಷರಾಗಲು ಅರ್ಹರೆಂದು ತಮಗೆ ತೋರಿದರೆ ಮೈಸೂರು ಮತ್ತು ಮುಂಬಯಿ, ಮದರಾಸು, ನಿಜಾಂ ಕರ್ನಾಟಕದಲ್ಲಿಯ ನಾಲ್ಕೈದು ಮಂದಿಯ ಹೆಸರನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೆ ತಿಳಿಸತಕ್ಕದ್ದು. ಈ ಮಂಡಲಿಯ ಪ್ರತಿಯೊಬ್ಬ ಸದಸ್ಯನಿಂದಲೂ ಪತ್ರಮುಖೇನ ಮತಗಳನ್ನು ತರಿಸಿಕೊಂಡು ಬಹುಮತಾನುಸಾರವಾಗಿ ನಡೆಯತಕ್ಕದ್ದು.

ಸೂಚಕರು – ಮ॥ ರಾ॥ ನಾ.ಶ್ರೀ. ರಾಜಪುರೋಹಿತರು, ಧಾರವಾಡ,

ಅನುಮೋದಕರು –ಟಿ.ಎಸ್. ವೆಂಕಣ್ಣಯ್ಯನವರು, ಎಂ.ಎ. ಬೆಂಗಳೂರು

****

೧೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೪

ಸಮ್ಮೇಳನಾಧ್ಯಕ್ಷರು : ಹೊಸಕೋಟೆ ಕೃಷ್ಣಶಾಸ್ತ್ರಿ

ನಿರ್ಣಯ ೨ : ಪರಿಷತ್ಪತ್ರಿಕೆ ಲೇಖನಗಳು ಹೇಗಿರಬೇಕು

ಕನ್ನಡ ನಾಡಿನ ವಿದ್ಯೆ, ವೈಭವ, ಏಳಿಗೆ ಚರಿತ್ರೆ – ಇವುಗಳಿಗೆ ಸಂಬಂಧಪಟ್ಟ ತಾಮ್ರ ಮತು ಶಿಲಾಶಾಸನಗಳ

ಲೇಖನಗಳನ್ನು ಅನುಕೂಲವಾದ ಕಾಲಗಳಲ್ಲಿ, ಆಯಾ ಶಾಸನ ಇಲಾಖೆಯ ವರದಿಗಳಲ್ಲಿ ಚಿತ್ರಿಸುವಂತೆ, ಪರಿಷತ್ಪತ್ರಿಕೆಯಲ್ಲಿ ಮುದ್ರಿಸಿ ಆ ವಿಷಯಗಳನ್ನು ಸಾಮಾನ್ಯ ಜನರಿಗೆ ವಿಶದವಾಗುವಂತೆ , ಪರಿಷತ್ತಿನವರು ಬರೆಯಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು : ಮ॥ ರಾ॥ ಸೋಸಲೆ ಕೃಷ್ಣಸ್ವಾಮಿ ಶಾಸ್ತ್ರಿಗಳು (ಮೈಸೂರು)

ಅನುಮೋದಕರು : ಎಸ್.ಕೆ. ನರಸಿಂಹಯ್ಯನವರು (ಬೆಂಗಳೂರು)

ನಿರ್ಣಯ ೩ : ಪರಿಷತ್ತಿನಿಂದ ಕನ್ನಡ ನಾಡಿನ ಚರಿತ್ರೆ ರಚನೆ

ಕರ್ನಾಟಕದಲ್ಲಿ ಎಲ್ಲಾ ಭಾಗಗಳಲ್ಲಿಯೂ ವಿದ್ಯಾಶಾಲೆಗಳ ಉಪಯೋಗಕ್ಕೆ ತಕ್ಕಂತೆ ಕನ್ನಡ ನಾಡಿನ ಚರಿತ್ರೆಯೊಂದನ್ನು ಪರಿಷತ್ತಿನ ಮೂಲಕ ಸಿದ್ಧಪಡಿಸಲು ಈ ಕೆಳಗೆ ಹೇಳುವ ಉಪಸಭೆಯನ್ನು ನಿಯಮಿಸಲಾಗಿದೆ. ಈ ಉಪಸಭೆಯವರು ತಮ್ಮ ಕೆಲಸವನ್ನು ಇಂದಿನಿಂದ ಒಂದು ವರ್ಷದೊಳಗಾಗಿ ಮುಗಿಸತಕ್ಕದೆಂದೂ, ಈ ಪುಸ್ತಕವನ್ನು ಅಚ್ಚು ಹಾಕಿಸುವುದಕ್ಕೂ ವಿದ್ಯಾಶಾಲೆಗಳಲ್ಲಿ ಉಪಯೋಗಕ್ಕೆ ತರಿಸುವುದಕ್ಕೂ ತಕ್ಕ ಪ್ರಯತ್ನಗಳನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯವರು ಮಾಡತಕ್ಕದೆಂದೂ ಈ ಸಮ್ಮೇಳನವು ಬಿನ್ನಯಿಸಿಕೊಳ್ಳುತ್ತದೆ.

ಸೂಚಕರು : ಮ॥ ರಾ॥ ಕೆ. ಕೃಷ್ಣಯ್ಯಂಗಾರರು, ಬಿ.ಎ., (ಬೆಂಗಳೂರು)

ಅನುಮೋದಕರು : ತಿರುಮಲೆ ತಾತಾಚಾರ್ಯ ಶರ್ಮರು (ಬೆಂಗಳೂರು)

ಉಪಸಭೆ

೧. ರಾವ್ ಬಹದ್ದೂರ್ ಮ॥ ರಾ॥ ಎಚ್. ಕೃಷ್ಣಶಾಸ್ತ್ರಿಗಳು, ಬಿ.ಎ. (ನೀಲಗಿರಿ) ಅಧ್ಯಕ್ಷರು

೨. ಮ॥ ರಾ॥ ವೆಂಕಟರಾವ್ ಬಿ. ಆಲೂರ್, ಬಿ.ಎ. ಎಲ್‌ಎಲ್‌ಬಿ (ಧಾರವಾಡ)

೩. " ಟಿ.ಎಸ್. ವೆಂಕಣ್ಣಯ್ಯನವರು, ಎಂ.ಎ. (ಬೆಂಗಳೂರು)

೪. " ಶ್ರೀನಿವಾಸರಾವ್ ಮಂಗಳವೇಡಕರ್, (ಬಾಗಲಕೋಟೆ)

೫ " ಕೆ. ಕೃಷ್ಣಯ್ಯಂಗಾರ್ಯರು ಬಿ.ಎ. (ಬೆಂಗಳೂರು)

೬. " ತಿರುಮಲೆ ತಾತಾಚಾರ್ಯ ಶರ್ಮರು (ಬೆಂಗಳೂರು) ಕಾರ್ಯದರ್ಶಿ

ನಿರ್ಣಯ ೪ : ಸಂಕ್ಷಿಪ್ತಾವರ್ತಿ ಕನ್ನಡ ಗ್ರಂಥಗಳ ಪ್ರಕಟನೆ

ಕನ್ನಡ ಭಾಷೆಯಲ್ಲಿರುವ ಅನೇಕ ಪುರಾತನ ಗ್ರಂಥಗಳು ವಿದ್ಯಾರ್ಥಿಗಳಿಗೆ ಸಿಕ್ಕುವುದೇ ದುರ್ಲಭವಾಗಿರುವುದರಿಂದಲೂ, ಸಿಕ್ಕಿದವುಗಳಲ್ಲಿ ಕೆಲವು ಕಠಿಣವಾಗಿರುವುದರಿಂದಲೂ, ಮತ್ತೆ ಕೆಲವು ಬಹಳ ದೊಡ್ಡದಾಗಿರುವುದರಿಂದಲೂ, ಅವನ್ನು ಎಲ್ಲರೂ ಓದಲು ಸಾಧ್ಯವಿಲ್ಲದಿರುವುದರಿಂದ, ಅಂತಹ ಗ್ರಂಥಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಕ್ಲಿಷ್ಟಪದಗಳ ಟಿಪ್ಪಣಿಗಳೊಡನೆ ಅಚ್ಚು ಹಾಕಿಸಿ ಸುಲಭ ಕ್ರಯಕ್ಕೆ ದೊರೆಯುವಂತೆ ಮಾಡಬೇಕೆಂದೂ, ಬಹಳ ದೊಡ್ಡದಾದ ಗ್ರಂಥಗಳಲ್ಲಿ ಮುಖ್ಯವಾದ ಭಾಗಗಳನ್ನು ಆರಿಸಿ ತೆಗೆದು ಸಂಕ್ಷಿಪ್ತಾಕ್ಷರಗಳನ್ನು (Abridged Editions) ಮುದ್ರಿಸಿ ಪ್ರಕಟಿಸಬೇಕೆಂದೂ ಈ ಸಮ್ಮೇಳನವು ಪರಿಷತ್ತನ್ನು ಕೇಳಿಕೊಳ್ಳುತ್ತದೆ.

ಸೂಚಕರು : ಎಸ್. ರಾಮಯ್ಯನವರು (ಬೆಂಗಳೂರು)

ಅನುಮೋದಕರು : ಟಿ. ಮಾದಯ್ಯನವರು, ಕೆ.ಕೆ. ವೆಂಕಟಸ್ವಾಮಿ ಅಯ್ಯರ್ (ತುಮಕೂರು)

ನಿರ್ಣಯ ೭ : ಕೋರ್ಟು ಭಾಷೆ ಕನ್ನಡವಾಗಲು ಸಮಿತಿ ರಚನೆ

ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿ ಕೋರ್ಟು ಭಾಷೆಯನ್ನು ಕನ್ನಡವಾಗಿ ಮಾಡಲಿಕ್ಕೂ ಅಲ್ಲಿಯ ಸರಕಾರೀ

ರೆಕಾರ್ಡುಗಳನ್ನು ಕನ್ನಡದಲ್ಲಿ ಇಡಲಿಕ್ಕೂ ಪ್ರಾಥಮಿಕ ಶಾಲೆಗಳಲ್ಲಿಯೂ ಹೈಸ್ಕೂಲುಗಳಲ್ಲಿಯೂ ಕನ್ನಡ ಭಾಷೆಗೆ ಪ್ರಾಮುಖ್ಯತೆಯನ್ನು ಕೊಡಲಿಕ್ಕೂ ಆಯಾ ಸಂಸ್ಥಾನಾಧಿಪತಿಗಳನ್ನೂ ಇತರ ಅಧಿಕಾರಿಗಳನ್ನೂ ಮುಖತಃ ಸಂಧಿಸಿ ಆ ಬಗ್ಗೆ ಏರ್ಪಾಡು ಮಾಡಲಿಕ್ಕೆ ಈ ಸಮ್ಮೇಳನವು ಕೆಳಗೆ ಕಾಣಿಸುವ ಉಪಸಭೆಯನ್ನು ನೇಮಿಸಿ, ಈ ಉಪಸಭೆಯವರು ತಮ್ಮ ವರದಿಯನ್ನು ೧೯೨೪ನೆಯ ನವೆಂಬರು ತಿಂಗಳೊಳಗಾಗಿ ಪರಿಷತ್ತಿಗೆ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತದೆ.

ಸೂಚಕರು : ಮ॥ ರಾ॥ ವೆಂಕಟರಾವ್ ಬಿ. ಆಲೂರ್ ಬಿ.ಎ. ಎಲ್.ಎಲ್.ಬಿ. (ಧಾರವಾಡ)

ಅನುಮೋದಕರು : ಮ॥ ರಾ॥ ಎನ್. ವೆಂಕಟೇಶ ಅಯ್ಯಂಗಾರ್‍ಯರು ಬಿ.ಎ. (ಬೆಂಗಳೂರು)

ಉಪಸಭೆ

೧. ರಾಜಸಭಾಭೂಷಣ ಮ॥ ರಾ॥ ಕರ್ಪೂರ ಶ್ರೀನಿವಾಸರಾಯರು ಬಿ.ಎಸ್‌ಸಿ. ಎಸ್‌ಸಿ.ಇ (ಬೆಂಗಳೂರು) ಅಧ್ಯಕ್ಷರು

೨. ರಾವ್‌ಬಹಾದ್ದೂರ್ ಮ॥ ರಾ॥ ಕೆಂಭಾವಿ ರಾಘವೇಂದ್ರರಾಯರು (ಬಿಜಾಪುರ)

೩. ರಾವ್ ಸಾಹೆಬ್ ಮ॥ ರಾ॥ ಪಿ.ಜಿ. ಹಳಕಟ್ಟಿ ಬಿ.ಎ. ಎಲ್.ಎಲ್.ಬಿ. (ಬಿಜಾಪುರ)

೪. ರಾವ್‌ಬಹಾದ್ದೂರ್ ಮ॥ ರಾ॥ ಶ್ರೀನಿವಾಸರಾವ್ ರೊದ್ದ

೫ ಮ॥ ರಾ॥ ಕೃಷ್ಣರಾವ್ ಮುದವೇಡಕರ್

೬. " ವಿನಾಯಕ ಬಿ. ಜೋಷಿ. ಬಿ.ಎ.

೭. " ರಾಯಪ್ಪಾ ಚಿಕ್ಕೋಡಿ

೮. " ರಾಮರಾವ್ ಮಂಗಸೂಳಿ (ಶಿರಹಟ್ಟಿ)

೯. " ಅಶ್ವತ್ಥಾಚಾರ್ಯ ಮಹಿಷಿ

೧೦. " ಶ್ರೀನಿವಾಸ ರಾಜೇವಾರ್ ಮಂಗಳವೇಡೆ (ಬಾಗಲಕೋಟೆ) ಕಾರ್ಯದರ್ಶಿ.

ನಿರ್ಣಯ ೯ : ನಾಡಿನಲ್ಲಿ ಭಾಷಾ ಜಾಗೃತಿ ಸಮಿತಿ ರಚನೆ

ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಕನ್ನಡ ಭಾಷಾ ಜಾಗೃತಿಯನ್ನುಂಟುಮಾಡಲಿಕ್ಕೂ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಸದಸ್ಯರು ಮುಂತಾದ ಸಹಾಯವನ್ನು ಸಂಪಾದಿಸಲಿಕ್ಕೂ ಪರಿಷತ್ತಿನವರು ಕೆಲವು ಮಂದಿ ಸದ್ಗೃಹಸ್ಥರನ್ನು ಪ್ರಾರ್ಥಿಸಿಕೊಳ್ಳಬೇಕೆಂದೂ, ಅವಶ್ಯವಿದ್ದಲ್ಲಿ ಅವರಿಗೆ ತಗಲುವ ಪ್ರಯಾಣದ ವೆಚ್ಚವನ್ನು ಪರಿಷತ್ತಿನವರು ಕೊಡಬೇಕೆಂದೂ ಈ ಸಮ್ಮೇಳನ ಪರಿಷತ್ತಿಗೆ ಅತ್ಯಾಸಕ್ತಿಯಿಂದ ಸೂಚಿಸುತ್ತದೆ.

ಸೂಚಕರು : ಮ॥ ರಾ॥ ವೆಂಕಟರಾವ್ , ಬಿ. ಆಲೂರ್, ಬಿ.ಎ. ಎಲ್‌ಎಲ್.ಬಿ (ಧಾರವಾಡ)

ಅನುಮೋದಕರು : ಮ॥ ರಾ॥ ಟಿ. ಅಪ್ಪೂರಾಯರು ಬಿ.ಎ. ಬಿ.ಎಲ್. (ಬೆಂಗಳೂರು)

ನಿರ್ಣಯ ೧೦ :ಇತರ ಭಾಷಾ ಪರಿಚಿತರನ್ನು ಸಮ್ಮೇಳನಕ್ಕೆ ಆಹ್ವಾನಿಸುವುದು.

ಹಿಂದೂಸ್ಥಾನದ ಬೇರೆ ಬೇರೆ ಭಾಷಾ ಪ್ರಾಂತಗಳೊಳಗೆ ಪ್ರೇಮ ಭಾವವು ಅಭಿವೃದ್ಧಿಯಾಗುವ ಉದ್ದೇಶದಿಂದಲೂ ಕರ್ನಾಟಕ ವಾಙ್ಮಯವು ವಿಕಾಸವನ್ನು ಪಡೆಯುವ ಉದ್ದೇಶದಿಂದಲೂ ಪರಿಷತ್ತಿನವರು ಸಮ್ಮೇಳನಗಳಿಗೆ ಇತರ ಭಾಷೆಗಳ ಪಂಡಿತರನ್ನೂ ಬರಮಾಡಿಕೊಳ್ಳಬೇಕೆಂದು, ಅವರಿಂದ ಪ್ರಬಂಧವೇ ಮೊದಲಾದವುಗಳನ್ನು ತರಿಸಿಕೊಳ್ಳಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು : ಮ॥ ರಾ॥ ವೆಂಕಟರಾವ್ , ಬಿ. ಆಲೂರ್, ಬಿ.ಎ. ಎಲ್‌ಎಲ್.ಬಿ (ಧಾರವಾಡ)

ಅನುಮೋದಕರು : ಮ॥ ರಾ॥ ಶಂಕರ ನರಸಿಂಹ ಕುಲಕರಣಿ (ಉಣಕಲ್ಲು, ಹುಬ್ಬಳ್ಳಿ)

ನಿರ್ಣಯ ೧೧ : ಚಾರಿತ್ರಿಕ ಗ್ರಂಥಗಳ ಬಹುಮಾನ ನೀಡಿಕೆ

ಕರ್ನಾಟಕ ದೇಶದ ಚರಿತ್ರಾಂಶಗಳನ್ನು ಅವಲಂಬಿಸಿ ಬರೆಯುವ ಕಾದಂಬರಿ (ನಾವೆಲ್)ಗಳಿಗೂ , ಗದ್ಯನಾಟಕಗಳಿಗೂ ಪರಿಷತ್ತಿನವರು ಯೋಗ್ಯವಾದ ಬಹುಮಾನಗಳನ್ನು ಏರ್ಪಡಿಸಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕಕರು : ಮ॥ ರಾ॥ ಚೆನ್ನಕೇಶವಯ್ಯಂಗಾರರು (ಬೆಂಗಳೂರು)

ಅನುಮೋದಕರು : ಮ॥ ರಾ॥ ಶಂಕರ ನರಸಿಂಹ ಕುಲಕರಣಿ (ಉಣಕಲ್ಲು, ಹುಬ್ಬಳ್ಳಿ)

****

೧೧ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೫

ಸಮ್ಮೇಳನಾಧ್ಯಕ್ಷರು: ಬೆನಗಲ್ ರಾಮರಾವ್

ನಿರ್ಣಯ ೧೭: ವಿಶ್ವಕೋಶ ರಚನೆಗೆ ಸಮಿತಿ ಏರ್ಪಾಟು

(ಕ) ಕರ್ನಾಟಕ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಲ್ಲಿರುವಂತೆ, ಅದರ ಉದ್ದೇಶಗಳ (ಕ) ಮತ್ತು (ಖ) ಭಾಗಗಳಲ್ಲಿ ನಿರ್ದಿಷ್ಟವಾದ ಕಾರ್ಯಗಳಲ್ಲಿ ಕನ್ನಡ ಭಾಷೆಯ ಒಂದು ಉತ್ತಮ ನಿಘಂಟುವನ್ನೂ ಒಂದು ವಿಶ್ವಕೋಶವನ್ನೂ ರಚಿಸುವುದು ಸದ್ಯಕ್ಕೆ ಅತ್ಯವಶ್ಯಕವಾಗಿರುವುದೆಂದು ಈ ಸಮ್ಮೇಳನದ ಅಭಿಪ್ರಾಯವಿರುವುದರಿಂದ ಈ ಕೆಲಸಗಳನ್ನು ಕೂಡಲೆ ಕೈಗೊಂಡು ಪೂರೈಸುವುದಕ್ಕೆ ಕೆಳಗೆ ಕಾಣಿಸಿದ ಏರ್ಪಾಡು ಮಾಡಬೇಕೆಂದು ಈ ಸಮ್ಮೇಳನವು ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಒತ್ತಾಯದಿಂದ ಬಿನ್ನವಿಸುತ್ತದೆ.

೧. ಮೇಲೆ ಕಾಣಿಸಿದ ಗ್ರಂಥಗಳನ್ನು ರಚಿಸಲಿಕ್ಕೆ ೫ ಜನ ಬ್ರಾಹ್ಮಣರೂ, ೫ ಜನ ಲಿಂಗಾಯತರೂ, ೫ ಜನ ಜೈನರೂ-ಹೀಗೆ ೧೫ ಮಂದಿ ಪಂಡಿತರುಳ್ಳ ಸಂಪಾದಕ ಮಂಡಲಿಯೊದನ್ನು ಏರ್ಪಡಿಸಬೇಕು.

೨. ಈ ಗ್ರಂಥಗಳ ಮುದ್ರಣ ಪ್ರಕಾಶನ ಮಾಡುವ ಕೆಲಸಗಳಿಗೆ ಬೇಕಾಗುವ ಹಣವನ್ನು ಯೋಗ್ಯಮಾರ್ಗದಿಂದ ಕೂಡಿಸುವುದಕ್ಕೆ, ಮೇಲೆ ಹೇಳಿದಂತೆ, ೧೫ ಜನಗಳನ್ನುಳ್ಳ ಬೇರೊಂದು ಕಮಿಟಿಯನ್ನೇರ್ಪಡಿಸಬೇಕು.

ನಿರ್ಣಯ ೧೮ : ಸದಾಶಿವರಾವ್ ಗರುಡರಿಗೆ ಪ್ರಶಸ್ತಿ ನೀಡಿಕೆ

ಗದುಗಿನ ದತ್ತಾತ್ರೇಯ ನಾಟಕ ಮಂಡಲಿಯ ಯಜಮಾನರಾದ ಶ್ರೀಮಾನ್ ಸದಾಶಿವರಾವ್ ಗರುಡ ಇವರು ಕರ್ನಾಟಕ ನಾಟಕ ರಂಗವನ್ನು ಬಹಳ ಮಟ್ಟಿಗೆ ಅಭಿವೃದ್ಧಿಪಡಿಸಿ ನಾಟಕ ಶಾಲೆಯನ್ನು ಉನ್ನತ ಸ್ಥಿತಿಗೆ ತಂದು ಕಲೆ, ಭಾಷೆ, ಅಭಿನಯ ಕೌಶಲ ಮುಂತಾದ ವಿಚಾರಗಳಲ್ಲಿ ಅತ್ಯಾಸಕ್ತಿಯನ್ನು ಕನ್ನಡಿಗರಿಗೆ ಹುಟ್ಟಿಸುತ್ತಿರುವುದರಿಂದ, ದಾವಣಗೆರೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ನಿರ್ಣಯವನ್ನನುಸರಿಸಿ, ಅವರಿಗೆ "ಕರ್ನಾಟಕ ನಾಟಕಾಲಂಕಾರ" ಎಂಬ ಬಿರುದನ್ನು ಈ ಸಮ್ಮೇಳನವು ಸಂತೋಷ ಪೂರ್ವಕವಾಗಿ ಕೊಡುತ್ತದೆ. ಈ ಬಿರುದಿಗೆ ಸಂಬಂಧಪಟ್ಟ ಪ್ರಶಸ್ತಿ ಪತ್ರವನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿನ ಗೌ॥ ಕಾರ್ಯದರ್ಶಿಯವರು ಮೇಲೆ ಹೇಳಿದ ಮ॥ ಗರುಡರಿಗೆ ಕೆಲವು ದಿನಗಳೊಳಗಾಗಿ ಕಳುಹಿಸಿ ಕೊಡಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

****

೧೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೬

ಸಮ್ಮೇಳನಾಧ್ಯಕ್ಷರು: ಫ.ಗು.ಹಳಕಟ್ಟಿ

ನಿರ್ಣಯ ೫: ಹೊಸ ಶಬ್ದನಿರ್ಮಾಣಕ್ಕೆ ಸಮಿತಿ ರಚನೆ

ಹೊಸ ಪರಿಸ್ಥಿತಿಗೆ ತಕ್ಕಂತೆ ಹೊಸ ವಿಚಾರಗಳನ್ನು ಹೊರಗೆಡಹುವುದಕ್ಕೆ ಬೇಕಾಗುವ ಹೊಸ ಶಬ್ದಗಳನ್ನು ಸಿದ್ಧಪಡಿಸುವುದು ಆವಶ್ಯಕವಿರುವುದರಿಂದ ಆ ಕಾರ್ಯವನ್ನು ಮಾಡುವುದಕ್ಕಾಗಿ ಕೆಳಗೆ ಕಾಣಿಸಿದ ಸದಸ್ಯರದೊಂದು ಮಂಡಲವು ಏರ್ಪಾಡಾಗಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

೧. ಶ್ರೀಯುತ ಮಾಸ್ತಿ ವೆಂಕಟೇಶಯ್ಯಂಗಾರರು

೨. " ಡಿ.ವಿ. ಗುಂಡಪ್ಪನವರು

೩. " ಎ.ಬಿ. ಆಲೂರವರು

೪. " ರಂ.ರಾ.ದಿವಾಕರರು

೫. " ರಾಜಗೋಪಾಲಕೃಷ್ಣರಾಯರು

೬. " ತಿರಮಲೆ ತಾತಾಚಾರ್ಯಶರ್ಮರು

ನಿರ್ಣಯ ೬: ಪರಿಷತ್ತಿನ ಶಾಖೆಗಳ ಸ್ಥಾಪನೆ

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಪರಿಷತ್ತಿನ ಶಾಖೆಗಳು ಸ್ಥಾಪಿಸಲ್ಪಡತಕ್ಕದ್ದು. ಪ್ರತಿಯೊಂದು ಪರಿಷತ್ತಿನ ಶಾಖೆಯಲ್ಲಿಯೂ ಒಬ್ಬ ಕಾರ್ಯದರ್ಶಿಯೂ ಒಂದು ಕಾರ್ಯನಿರ್ವಾಹಕ ಮಂಡಲಿಯೂ ಇರತಕ್ಕದ್ದು. ವರುಷ ಒಂದಕ್ಕೆ ಒಂದು ರೂಪಾಯಿಗೆ ಕಡಿಮೆಯಿಲ್ಲದಂತೆ ಚಂದಾ ಕೊಡತಕ್ಕವರು ಶಾಖಾ ಪರಿಷತ್ತಿನ ಸದಸ್ಯರಾಗಬಹುದು. ಪರಿಷತ್ತಿನ ಸದಸ್ಯರೆಲ್ಲರೂ ಶಾಖಾ ಪರಿಷತ್ತಿನ ಮೆಂಬರು ಎಂದು ಭಾವಿಸಲ್ಪಡಬೇಕು. ಅವರು ಪರಿಷತ್ತಿಗೆ ಕೊಡುವ ಚಂದಾದಲ್ಲಿ ಒಂದು ರೂಪಾಯಿ ಶಾಖಾ ಪರಿಷತ್ತಿಗೆ ಸಂದಾಯವಾಗತಕ್ಕದ್ದು.

ಶಾಖಾ ಪರಿಷತ್ತಿನವರು ಮುಖ್ಯವಾಗಿ ವಾಚನಾಲಯ ಸ್ಥಾಪನೆ, ಸಾಹಿತ್ಯ ಪ್ರಚಾರ ಕಾರ್ಯ ಇತ್ಯಾದಿ ಕೆಲಸಗಳಲ್ಲಿ ನಿರತರಾಗಿರತಕ್ಕದ್ದು.

ನಿರ್ಣಯ ೮ಎ : ಸರ್ಕಾರದ ಸಹಾಯಕ್ಕೆ ಕೃತಜ್ಞತೆ

ಮೈಸೂರು, ಶ್ರೀ ಮನ್ಮಹಾರಾಜ ಸಾಹೇಬ್ ಬಹಾದ್ದೂರವರು ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಭ್ಯುದಯ ವಿಷಯದಲ್ಲಿ ತೋರ್ಪಡಿಸುವ ಆಸಕ್ತಿಯನ್ನೂ ಮೈಸೂರು ಸರಕಾರದವರು ಪರಿಷತ್ತಿನ ಉದ್ದೇಶ ಧ್ಯೇಯಗಳ ಸಾಧನೆಗಾಗಿ ದಯಪಾಲಿಸಿರುತ್ತಿರುವ ಸಹಾಯವನ್ನೂ ಈ ಸಮ್ಮೇಳನವು ಸ್ಮರಿಸಿ ತನ್ನ ಕೃತಜ್ಞತೆಯನ್ನು ವಿಶದಪಡಿಸುತ್ತದೆ.

ನಿರ್ಣಯ ೯: ನೆರವಿಗೆ ಕೃತಜ್ಞತೆ ಸಮರ್ಪಣೆ

ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರವರು ಪರಿಷತ್ತಿನ ಅಧ್ಯಕ್ಷರಾಗಿರಲು ಕೃಪಾಪೂರ್ವಕವಾಗಿ ಒಪ್ಪಿಕೊಂಡುದಕ್ಕಾಗಿಯೂ ಕನ್ನಡದಲ್ಲಿ ವೈಜ್ಞಾನಿಕ ಪುಸ್ತಕಗಳನ್ನು ಬರೆಸುವುದಕ್ಕೆ ಅತ್ಯಂತ ಔದಾರ್ಯದೊಡನೆ ಈಗ ಪ್ರಾರಂಭದಲ್ಲಿ ರೂ.೨೫೦೦-೦೦ಗಳನ್ನು ದಯಪಾಲಿಸಿರುವುದಕ್ಕಾಗಿಯೂ ಪರಿಷತ್ತಿನ ಉದ್ದೇಶಧ್ಯೇಯಗಳ ಸಾಧನೆಯಲ್ಲಿ ಅವರು ತೋರ್ಪಡಿಸಿರುವ ಆಸಕ್ತಿಗಾಗಿಯೂ ಈ ಸಮ್ಮೇಳನವು ಕೃತಜ್ಞತೆಯನ್ನು ತೋರ್ಪಡಿಸುತ್ತದೆ.

****

೧೩ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೭

ಸಮ್ಮೇಳನಾಧ್ಯಕ್ಷರು: ತಾತಾಚಾರ್ಯ

ನಿರ್ಣಯ ೧: ಭಾಷಾಜಾಗೃತಿಗೆ ಪ್ರಚಾರಕರ ನೇಮಕ

ಮೊಗಲಾಯಿಯ ಕರ್ನಾಟಕದಲ್ಲಿಯೂ, ಬಳ್ಳಾರಿ, ಕೊಯಮುತ್ತೂರು, ಸೇಲಂ ಮೊದಲಾದ ಗಡಿ ನಾಡುಗಳಲ್ಲಿಯೂ ಕನ್ನಡ ಭಾಷೆಯನ್ನು ಕುರಿತು ಜಾಗೃತಿಯನ್ನುಂಟು ಮಾಡುವ ಬಗ್ಗೆ ಪ್ರಚಾರಕರನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಕಳುಹಿಸತಕ್ಕದ್ದು.

ಸೂಚಕರು: ಮ॥ ರಾ॥ ವಿ.ಬಿ.ಆಲೂರರರ ಪರವಾಗಿ ಮ॥ರಾ॥ಎನ್ ವೆಂಕಟೇಶಯ್ಯಂಗಾರ್‍ಯರು.

ಅನುಮೋದಕರು-ಮ॥ ರಾ॥ ಗೋವರ್ಧನರಾಯರು.

ನಿರ್ಣಯ ೨: ವಿಜ್ಞಾನ ಶಬ್ದಕೋಶ ರಚನೆ

ವಿಜ್ಞಾನ ಶಾಸ್ತ್ರಗಳ ಪ್ರಚಾರಕ್ಕೆ ಪಾರಿಭಾಷಿಕ ಶಬ್ದಕೋಶವೊಂದು ಅತ್ಯಾವಶ್ಯಕವಾಗಿರುವುದಾದರೂ ಕೂಡ ಅಂಥ ಜ್ಞಾನ ಪ್ರಸಾರವನ್ನು ಸರ್ವತ್ರ ಹರಡಿಸುವ ಕಾರ್ಯಕ್ಕಿಂತ ಗ್ರಾಮ ಪಾಠಶಾಲೆಗಳ ಮುಖಾಂತರ ಪ್ರಾಥಮಿಕ ವಿಧ್ಯಾಭ್ಯಾಸದಲ್ಲೇ ಪ್ರಾರಂಭಿಸುವುದು ಹೆಚ್ಚಿನ ಗರಜಿನ ಕಾರ್ಯವಾದುದರಿಂದ ಗ್ರಾಮ ವಿದ್ಯಾಭ್ಯಾಸಕ್ರಮದಲ್ಲಿ ಪ್ರಕೃತೋಪಯೋಗಕ್ಕೆ ಯೋಗ್ಯವೂ ಅನುಕೂಲವೂ ಇರುವಂತೆ ಸಾಧ್ಯವಿದ್ದಷ್ಟು ತ್ವರೆಯಿಂದ ಅಂಥ ಸಣ್ಣಕೋಶವೊಂದನ್ನು ತಯಾರಿಸಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸುಲಭ ಕ್ರಯಕ್ಕೆ ಪ್ರಕಟಗೊಳಿಸಬೇಕಾಗಿ ಈ ಸಮ್ಮೇಳನದ ಅಭಿಪ್ರಾಯವಿದೆ, ಇತರರ ಸಹಾಯದಿಂದ ಈ ರೀತಿಯ ಕೋಶವನ್ನು ತಯಾರಿಸಿ ಪರಿಷತ್ತಿಗೆ ಒಪ್ಪಿಸುವುದಕ್ಕೆ ಶ್ರೀಯುತ ಪಂಜೆ ಮಂಗೇಶರಾಯರವರನ್ನು ನೇಮಿಸಲಾಗಿದೆ.

ಸೂಚಕರು : ಮ॥ ರಾ॥ ಆಲಮಾನ್ ವೆಂಕಟರಾಯರು

ಅನುಮೋದಕರು : ಮ॥ ರಾ॥ ಹುರುಳಿ ಭೀಮರಾಯರು.

ನಿರ್ಣಯ ೭: ಪ್ರತಿ ಜಿಲ್ಲೆಯಲ್ಲಿ ಸಾಹಿತ್ಯ ಲೇಖಕರು, ಮುದ್ರಕರು, ಮುಂತಾದವರ ಸೂಚಿ ರಚನೆ

ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿಯೂ ಸಾಧ್ಯವಾದಮಟ್ಟಿಗೂ ಕರ್ನಾಟಕದ ಹೊರಗೂ ಇರುವ ಕನ್ನಡ ಪತ್ರ ಸಂಪಾದಕರು, ಗ್ರಂಥಕರ್ತೃಗಳು, ಮುದ್ರಕರು, ಪ್ರಚಾರಕರು, ನಾಟಕ ಮಂಡಲಿಗಳ ಪ್ರವರ್ತಕರು, ಹರಿದಾಸರು ಮೊದಲಾದ ಸ್ತ್ರೀ ಪುರುಷರ ಒಂದು ಪಟ್ಟಿಯನ್ನು ಕರ್ನಾಟಕ ಸಾಹಿತ್ಯ ಪರಿಷತ್ತು ಬರುವ ಸಮ್ಮೇಳನದೊಳಗಾಗಿ ಪ್ರಯತ್ನಪಟ್ಟು ಸಂಗ್ರಹಿಸಬೇಕೆಂದೂ, ಆಮೇಲೆ ಅವುಗಳಲ್ಲಿ ಅಗತ್ಯವಿರುವ ತಿದ್ದುಪಡಿಗಳನ್ನು ಆಗಾಗ ಮಾಡಿಕೊಳ್ಳುತ್ತಿರತಕ್ಕುದೆಂದೂ ಈ ಸಮ್ಮೇಳನವು ನಿರ್ಧರಿಸುತ್ತದೆ.

ಸೂಚಕರು : ಮ॥ ರಾ॥ ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು.

ಅನುಮೋದಕರು : ಮ॥ ರಾ॥ ಎನ್. ರಾಜಗೋಪಾಲಕೃಷ್ಣರಾಯರು.

****

೧೪ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೮

ಸಮ್ಮೇಳನಾಧ್ಯಕ್ಷರು: ಬಿ.ಎಂ.ಶ್ರೀಕಂಠಯ್ಯ.

ನಿರ್ಣಯ ೧೦ : ಜಮಖಂಡಿಯಲ್ಲಿ ಕನ್ನಡ ಶಾಲೆಗಳನ್ನು ಹೆಚ್ಚಿಸಬೇಕು

ಜಮಖಂಡಿ ಸಂಸ್ಥಾನದ ಅಧಿಪತಿಗಳು ತಮ್ಮ ಸಂಸ್ಥಾನದಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿರುವುದಕ್ಕೋಸ್ಕರ ಈ ಸಮ್ಮೇಳನವು ಆ ಅಧಿಪತಿಗಳನ್ನು ಅಭಿನಂದಿಸುತ್ತದೆ: ಆದರೆ ಈಗಿರುವ ಶಾಲೆಗಳು ಸಾಕಾದಷ್ಟು ಇಲ್ಲದಿರುವುದರಿಂದ ಈ ಶಾಲೆಗಳನ್ನು ಹೆಚ್ಚಿಸಬೇಕೆಂದೂ, ಈ ಸಂಸ್ಥಾನದಲ್ಲಿ ಈಗಿರುವ ಕನ್ನಡ ಶಾಲೆಗಳನ್ನು ಕೂಡ ತೆಗೆದುಹಾಕಬೇಕೆಂಬಾಲೋಚನೆ ನಡೆದು ಅದರಿಂದ ಅಲ್ಲಿಯ ಪ್ರಜೆಗಳಿಗೆ ಅಂಜಿಕೆಯುಂಟಾಗಿರುತ್ತದೆಂದು ತಿಳಿದುಬಂದಿರುವುದರಿಂದ ಆ ಪ್ರಕಾರವಾದ ಆಲೋಚನೆ ನಡೆದಿದ್ದರೆ ಅದನ್ನು ಸರ್ವಥಾ ಬಿಟ್ಟುಕೊಡಬೇಕೆಂದೂ ಮತ್ತು ಆ ಪ್ರಕಾರದ ಆಶ್ವಾಸನವನ್ನು ಕೊಟ್ಟು ಪ್ರಜೆಗಳ ಅಂಜಿಕೆಯನ್ನು ದೂರಮಾಡಬೇಕೆಂದೂ ಈ ಸಮ್ಮೇಳನವು ಅವರನ್ನು ವಿಜ್ಞಾಪಿಸುತ್ತದೆ.

ಸೂಚಕರು : ಮ॥ ರಾ॥ ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ.

ಅನುಮೋದಕರು : ಮ॥ ರಾ॥ ವಾಮನರಾವ್.

ನಿರ್ಣಯ ೧೧ : ಕೋರ್ಟು ಕಛೇರಿ ಭಾಷೆ ಕನ್ನಡ ಆಗಬೇಕು

ಉತ್ತರ ಕರ್ನಾಟಕದಲ್ಲಿರುವ ಕೊಲ್ಹಾಪುರ, ರಾಮದುರ್ಗ, ಮೀರಜ (ಸೀನಿಯರ್ ಮತ್ತು ಜೂನಿಯರ್) ಸಾಂಗಲಿ, ಕುರುಂದವಾಡ (ಜೂನಿಯರ್ ಮತ್ತು ಸೀನಿಯರ್) ಔಂಧ, ಅಕ್ಕಲಕೋಟೆ, ಜತ್ತ, ಮುಧೋಳ, ಜಮಖಂಡಿ ಮುಂತಾದ ಸಂಸ್ಥಾನಗಳಲ್ಲಿಯ ಕನ್ನಡ ಭಾಗಗಳ ಪ್ರಜೆಗಳ ಅನುಕೂಲಕ್ಕೋಸ್ಕರ ಕನ್ನಡ ಶಾಲೆಗಳನ್ನು ಸ್ಥಾಪಿಸಬೇಕೆಂದೂ ಕೋರ್ಟು ಕಛೇರಿಗಳಲ್ಲಿ ಕನ್ನಡ ಭಾಷೆಗೆ ಅವಕಾಶ ಕೊಡಬೇಕೆಂದು ಈ ಸಮ್ಮೇಳನವು ವಿಜ್ಞಾಪಿಸುತ್ತದೆ.

ಸೂಚಕರು–ಅಧ್ಯಕ್ಷರು.

ನಿರ್ಣಯ ೧೨: ಕನ್ನಡ ಶಾಲೆ ತೆರೆಯುವ ಪ್ರಯತ್ನಕ್ಕೆ ಸಮಿತಿ ರಚನೆ

ಮೇಲಣ ೧೦ ಮತ್ತು ೧೧ನೆಯ ನಿರ್ಣಯಗಳ ವಿಷಯವಾಗಿ ಆಯಾ ಸಂಸ್ಥಾನಗಳಿಗೆ ಹೋಗಿ ಪ್ರಯತ್ನಿಸುವುದಕ್ಕೆ ಕೆಳಗೆ ಬರೆದ ಸದ್ಗೃಹಸ್ಥರದೊಂದು ಉಪಮಂಡಲವನ್ನು ಈ ಸಮ್ಮೇಳನವು ನಿಯಮಿಸುತ್ತದೆ.

೧. ದಿವಾನ್ ಬಹಾದ್ದೂರ್ ಮ॥ ರಾ॥ ಶ್ರೀನಿವಾಸರಾವ್ ರೊದ್ದ.

೨. ರಾವ್ ಸಾಹೇಬ್ ಮ॥ ರಾ॥ ಪಿ.ಜಿ. ಹಳಕಟ್ಟಿ.

೩. ಮ॥ ರಾ॥ ಹನುಮಂತರಾವ್ ಕೌಜಲಗಿ.

೪. ಮ॥ ರಾ॥ ಮುದವೇಡಕರ್ ಕೃಷ್ಣರಾಯರು.

೫. ಮ॥ ರಾ॥ ತಮ್ಮಪ್ಪ ಸತ್ಯಪ್ಪ ಚಿಕ್ಕೋಡಿ.

೬ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳು.

ಸೂಚಕರು: ಅಧ್ಯಕ್ಷರು.

ನಿರ್ಣಯ ೧೫: ಪರಿಷತ್ತಿನ ಪ್ರತಿನಿಧಿಗಳ ಕಡೆಗಣನೆಗೆ ವಿಷಾದಮಂಡನೆ

ಗ್ವಾಲಿಯರಲ್ಲಿ ಕೂಡಿದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನದವರು ತಾವಾಗಿಯೇ ಆಮಂತ್ರಣ ಕೊಟ್ಟು ಕರೆಯಿಸಿಕೊಂಡ ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳನ್ನು ಆ ಪ್ರಕಾರ ಪ್ರತಿನಿಧಿಗಳಂತೆ ಗಣಿಸದಿದ್ದುದಕ್ಕೋಸ್ಕರ ಈ ಸಮ್ಮೇಳನಕ್ಕೆ ವಿಷಾದವಾಗುತ್ತದೆ.

ಸೂಚಕರು: ಮ॥ ರಾ॥ ಕೃಷ್ಣರಾವ್ ಕಪಟ್ರಾಳ್

ಅನುಮೋದಕರು : ಮುದವೀಡು ಕೃಷ್ಣರಾವ್

ಪರಿಪೋಷಕರು: ಡಿ.ಆರ್.ಬೇಂದ್ರೆ.

ನಿರ್ಣಯ ೧೯: ಏಕರೂಪ ಕಾರ್ಯನಿರ್ಮಾಣ ಸಮಿತಿ ರಚನೆ

ಮೈಸೂರು, ಮದರಾಸು, ಮುಂಬಯಿ ಸರ್ಕಾರಗಳ ಕನ್ನಡ ಶಾಲೆಗಳಲ್ಲಿ ಈಗ ಬಳಸುತ್ತಿರುವ ಬೇರೆ ಬೇರೆ ಬಾಲಬೋಧೆಗಳನ್ನು ಕ್ರೋಡೀಕರಿಸಿ, ಭಾಷೆ, ವಿಷಯಪ್ರತಿಪಾದನೆ ಮುಂತಾದುವು ಒಂದೇ ರೂಪವಾಗಿರುವಂತೆ ಪರಿಷ್ಕರಿಸಿ ಅಖಿಲ ಕರ್ನಾಟಕದಲ್ಲಿ ಒಂದೇ ರೂಪವಾಗಿರುವಂತೆ ಪರಿಷ್ಕರಿಸಿ ಅಖಿಲ ಕರ್ನಾಟಕದಲ್ಲಿ ಒಂದೇ ಬಾಲಬೋಧೆಯನ್ನು ಪ್ರಚಾರಕ್ಕೆ ತರುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಮುಂದೆ ಹೇಳುವ ಪಂಡಿತ ಮಂಡಲಿಯ ಸಹಾಯವನ್ನು ಪಡೆದು ಮುಂದಿನ ಸಮ್ಮೇಳನದೊಳಗಾಗಿ ಪುಸ್ತಕವನ್ನು ಸಿದ್ಧಪಡಿಸಿ ಆಯಾ ಸರ್ಕಾರಗಳ ಅಪ್ಪಣೆಯನ್ನು ಪಡೆಯುವುದರ ಮೂಲಕ ಈ ಕಾರ್ಯವನ್ನು ಸಫಲಗೊಳಿಸಬೇಕೆಂದು ಈ ಸಮ್ಮೇಳನವು ನಿರ್ಧರಿಸುತ್ತದೆ.

ಮೈಸೂರು ಪ್ರಾಂತಕ್ಕೆ

೧. ಮ॥ ರಾ॥ ಬಿ.ಎಂ. ಶ್ರೀಕಂಠಯ್ಯನವರು,

೨. ಮ॥ ರಾ॥ ಟಿ.ಎಸ್. ವೆಂಕಣ್ಣಯ್ಯನವರು.

೩. ಮ॥ ರಾ॥ ಎ.ಆರ್. ಕೃಷ್ಣಶಾಸ್ತ್ರಿಗಳು,

೪. ಮ॥ ರಾ॥ ಬಿ. ವೆಂಕಟನಾರಾಯಣಪ್ಪನವರು.

ಮದರಾಸು ಪ್ರಾಂತಕ್ಕೆ-

೧. ಮ॥ ರಾ॥ ಬಿ. ರಾಮರಾಯರು,

೨. ಮ॥ ರಾ॥ ಪಂಜೆ ಮಂಗೇಶರಾಯರು,

೩. ಮ॥ ರಾ॥ ಆರ್. ತಾತಾಚಾರ್ಯರು,

೪. ಮ॥ ರಾ॥ ಅರ್ಕಾಟು ಭೀಮಚಾರ್ಯರು.

ಮುಂಬಯಿ ಪ್ರಾಂತಕ್ಕೆ-

೧. ರಾವ್ ಸಾಹೇಬ್ ಮ॥ರಾ॥ ಪಿ.ಜಿ.ಹಳಕಟ್ಟಿ,

೨. ಪಂಡಿತ ಮಹಾದೇವ ಪ್ರಭಾಕರ ಪೂಜಾರ,

೩. ರಂಗನಾಥ ದಿವಾಕರರು,

೪. ಮೊಹರೆ ಹಣಮಂತರಾಯರು,

೫. ಎಚ್. ಚೆನ್ನಕೇಶವಯ್ಯಂಗಾರ್ಯರು.

ನಿಜಾಂ ಕರ್ನಾಟಕಕ್ಕೆ-

೧. ಮ॥ ರಾ ॥ ಎಚ್.ವಿ. ಕೃಷ್ಣಸ್ವಾಮಿಯವರು.

ಕಾರ್ಯ ಪ್ರವರ್ತಕರು : ಕ॥ಸಾ॥ ಪರಿಷತ್ತಿನ ಗೌರವ ಕಾರ್ಯದರ್ಶಿಗಳು.

ಸೂಚಕರು : ಎಚ್.ಚೆನ್ನಕೇಶಯ್ಯಂಗಾರ್ಯರು.

ಅನುಮೋದಕರು : ನಾ.ಶ್ರೀ.ರಾಜಪುರೋಹಿತರು.

****

೧೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೨೯

ಸಮ್ಮೇಳನಾಧ್ಯಕ್ಷರು: ಮಾಸ್ತಿ ವೆಂಕಟೇಶಯ್ಯಂಗಾರ್

ನಿರ್ಣಯ: ೬ ಕರ್ನಾಟಕ ರಾಷ್ಟ್ರಗೀತೆಯನ್ನು ನಿರ್ಧರಿಸುವುದು

ಕರ್ನಾಟಕ ರಾಷ್ಟ್ರಗೀತೆಯೊಂದನ್ನು ನಿರ್ಧರಿಸಿ ಅದನ್ನು ಅಖಿಲ ಕರ್ನಾಟಕದ ಎಲ್ಲ ಪಾಠಶಾಲೆಗಳಲ್ಲಿ ವಾಡಿಕೆಗೆ ತರುವ ಬಗ್ಗೆ ಈ ಸಮ್ಮೇಳನವು ಕೆಳಗೆ ಕಂಡ ಸದಸ್ಯರನ್ನೊಳಗೊಂಡ ಒಂದು ಮಂಡಲವನ್ನು ಏರ್ಪಡಿಸುತ್ತದೆ.

ಮ॥ ರಾ॥ ಬಿ.ಎಂ ಶ್ರೀಕಂಠಯ್ಯನವರು.

" ಮಾಸ್ತಿ ವೆಂಕಟೇಶ ಅಯ್ಯಂಗಾರರು

" ಬೇಂದ್ರೆ ದತ್ತರಾಯರು.

" ವಿ ಸೀತಾರಾಮಯ್ಯನವರು (ಕಾರ್ಯದರ್ಶಿ)

" ಬೆಟಗೇರಿ ಕೃಷ್ಣಶರ್ಮರು.

" ಎಂ.ಎನ್. ಕಾಮತ್

" ಅಥಣಿ ಹನುಮಂತಾಚಾರ್ಯರು.

" ಕಟ್ಟೀಮನಿ.

" ಚಿಕ್ಕೋಡಿ ತಮ್ಮಣ್ಣಪ್ಪನವರು

ಸೂಚಕರು: ಮ॥ ರಾ॥ ಪಾಟೀಲ ವೀರಭದ್ರಪ್ಪನವರು.

ಅನುಮೋದಕರು: ಕುಲಕರ್ಣಿ ಮಲ್ಹಾರರಾಯರು.

ನಿರ್ಣಯ: ೧೦ ಶಾಲಾವಿದ್ಯಾರ್ಥಿಗಳಿಗೆ ಹೊಸಗನ್ನಡ ವ್ಯಾಕರಣ ರಚನೆಮಾಡಲು ಸಮಿತಿ ರಚನೆ

ಕನ್ನಡದ ಗ್ರಾಂಥಿಕ ಭಾಷೆಯ ಏಕೀಕರಣಕ್ಕಾಗಿ ಅಖಿಲ ಕರ್ನಾಟಕದ ಬೇರೆ ಬೇರೆ ಭಾಗಗಳ ಶಿಷ್ಟ ಪ್ರಯೋಗಗಳನ್ನು ಆಧಾರವಾಗಿಟ್ಟುಕೊಂಡು. ಪಾಠಶಾಲೆಯಲ್ಲಿ ಅಭ್ಯಾಸ ಪುಸ್ತಕವಾಗುವಂತೆ ಹೊಸಗನ್ನಡ ವ್ಯಾಕರಣವೊಂದನ್ನು ಶಾಸ್ತ್ರೀಯ ಮಾರ್ಗದಿಂದ ರಚಿಸಬೇಕಾಗಿದೆ. ಅದಕ್ಕಾಗಿ ಈ ಸಮ್ಮೇಳನವು ಕೆಳಗೆ ಕಾಣಿಸಿದ ಉಪಸಭೆಯಯನ್ನು ಏರ್ಪಡಿಸುತ್ತದೆ–

ಮ॥ ರಾ॥ ಟಿ.ಎಸ್ ವೆಂಕಣ್ಣಯ್ಯನವರು.

" ಪಂಡಿತ ಶ್ರೀನಿವಾಸರಾಘವಾಚಾರ್ಯರು.

" ಮುಳಿಯ ತಿಮ್ಮಪ್ಪಯ್ಯನವರು.

" ಕಡೆಂಗೋಡ್ಲು ಶಂಕರಭಟ್ಟರು.

" ರಾಜಪುರೋಹಿತ ನಾರಾಯಣರಾಯರು.

" ಬೇಂದ್ರೆ ದತ್ತರಾಯರು.

" ಉಗ್ರಾಣ ಮಂಗೇಶರಾಯರು.

" ಪೂಜಾರ ಮಹಾದೇವ ಪ್ರಭಾಕರರು.

" ಕಟ್ಟೀಮನಿ.

" ಕೆ.ಜಿ. ಕುಂದಣಗಾರರು.

ಸೂಚಕರು: ಮ॥ ರಾ॥ ನಾರಾಯಣ ಶ್ರೀನಿವಾಸ ರಾಜಪುರೋಹಿತರು.

ಅನುಮೋದಕರು: ಬಿ. ಎಂ. ಶ್ರೀಕಂಠಯ್ಯನವರು.

ನಿರ್ಣಯ: ೨೨ ಕನ್ನಡ ಪ್ರಚಾರಕರ ನೇಮಕ

ಕನ್ನಡ ಗಡಿನಾಡಿನ ಅನೇಕ ಭಾಗಗಳಲ್ಲಿ ಬಹು ಮಂದಿ ಕನ್ನಡಿಗರಿರುವರಾದರೂ ಅವರಲ್ಲನೇಕರಿಗೆ ಕನ್ನಡ ಲಿಪಿಯೂ ವಾಚನವೂ ಗೊತ್ತಿಲ್ಲದೆ ಕನ್ನಡವು ಜೀರ್ಣವಾಗುತ್ತಲಿದೆ. ಇದಕ್ಕಾಗಿ ಈ ಪ್ರಾಂತಗಳಲ್ಲಿ ಕನ್ನಡ ಪ್ರಸಾರಣೆಯ ಬಗ್ಗೆ ಒಬ್ಬ ಪ್ರಚಾರಕರನ್ನು ಸಾಹಿತ್ಯ ಪರಿಷತ್ತು ಕೂಡಲೇ ಗೊತ್ತು ಪಡಿಸತಕ್ಕದ್ದು.

ಸೂಚಕರು: ಮ॥ ರಾ॥ ಅಂಕಲೆಯವರು.

ಅನುಮೋದಕರು: ಮ॥ ರಾ॥ ಗಣೇಶ ರಾಮಯಾಜಿಯವರು.

****

೧೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೦

ಸಮ್ಮೇಳನಾಧ್ಯಕ್ಷರು: ಆಲೂರು ವೆಂಕಟರಾವ್

ನಿರ್ಣಯ: ೨ ವಿವಿಧ ಸಮ್ಮೇಳನಗಳನ್ನು ಏರ್ಪಡಿಬೇಕು

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಆಶ್ರಯದಲ್ಲಿ ನಾಟಕ ಸಮ್ಮೇಳನ, ಕವಿ ಸಮ್ಮೇಳನ, ಕೀರ್ತನ ಸಮ್ಮೇಳನ ಮತ್ತು ಗಾಯಕ ಸಮ್ಮೇಳನ ಮುಂತಾದವು ಮುಂದಿನ ವರ್ಷದಿಂದ ನಡೆಯಲು ತಕ್ಕ ಏರ್ಪಾಡನ್ನು ಮಾಡಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು: ಮ॥ ರಾ॥ ಎನ್.ಎಸ್. ವೆಂಕಟಸುಬ್ಬರಾಯರು.

ಅನುಮೋದಕರು: ಎಂ. ಎ ದೊರೆಸ್ವಾಮಯ್ಯಂಗಾರ್ಯರು. ಎಂ.ಎ.ಬಿ. ಎಲ್ ಮೈಸೂರು

ಪರಿಪೋಷಕರು : ಸದಾಶಿವ ಗರುಡರು. ಬೆಳಗಾವಿ,

ಶಂಕರ ನರಸಿಂಹ ಕುಲಕರ್ಣಿ, ಧಾರವಾಡ.

ನಿರ್ಣಯ: ೪ ಸಮಗ್ರ ಗ್ರಂಥ ಸಂಗ್ರಹದ ಭಂಡಾರ ನಿರ್ಮಾಣ

ಮುದ್ರಿತವಾದ ಪ್ರಾಚೀನ ಅರ್ವಾಚೀನ ಕನ್ನಡ ಪುಸ್ತಕಗಳೆಲ್ಲವೂ ಒಂದು ಕಡೆ ಇರುವಂತೆ ಸಾಹಿತ್ಯ ಪರಿಷತ್ತಿನವರು ಒಂದು ದೊಡ್ಡ ಪುಸ್ತಕಾಲಯವನ್ನೇರ್ಪಡಿಸಬೇಕೆಂದು ಈ ಸಮ್ಮೇಳನವು ಪರಿಷತ್ತಿನವರಿಗೆ ಆಗ್ರಹಪೂರ್ವಕವಾಗಿ ಸೂಚಿಸುತ್ತದೆ.

ಸೂಚಕರು: ಶ್ರೀ ರಾಜಪುರೋಹಿತರು. ಧಾರವಾಡ

ಅನುಮೋದಕರು: ಓಡ್ಲುಮನಿ ಆತ್ಮಾರಾಮ ಶಾಸ್ತ್ರಿಗಳು, ಕೊಡಗು.

ನಿರ್ಣಯ: ೬ ಪರಿಷತ್ಪತ್ರಿಕೆ ವಿದ್ಯಾರ್ಥಿಗಳಿಗೆ ರಿಯಾಯಿತಿ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಾಹಿತ್ಯ ಪರಿಷತ್ಪತ್ರಿಕೆಗಳ ಸಂಚಿಕೆಗಳನ್ನು ಬೆಲೆಯಲ್ಲಿ ಕನಿಷ್ಠ ಪಕ್ಷ ಕಾಲುವಾಸಿಯಾದರೂ ರಿಯಾಯಿತಿ ತೋರಿಸಿಕೊಟ್ಟು ಆ ಮೂಲಕ ವಿದ್ಯಾರ್ಥಿಗಳು ಹೆಚ್ಚು ಮಂದಿ ಚಂದಾದಾರರಾಗುವಂತೆ ಮಾಡಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು: ಮ॥ ರಾ॥ ವೆಂಕಟರಮಣ ಶಾಸ್ತ್ರಿಗಳು, ಚಾಮರಾಜನಗರ.

ಅನುಮೋದಕರು: ಮನ್‌ಸಬ್ದಾರರು. ಹೈದರಾಬಾದು.

ನಿರ್ಣಯ: ೭ ಕರ್ನಾಟಕ ಏಕ ವಿಶ್ವವಿದ್ಯಾಲಯ ರಚನಾಸಮಿತಿ ನಿರ್ಮಾಣ

ಅಖಿಲ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವಾಗುವ ವಿಷಯದಲ್ಲಿ ಪರಿಷತ್ತಿನವರು ಒಂದು ಮಂಡಲವನ್ನೇರ್ಪಡಿಸಿ ತಮ್ಮ ಮುಖಾಂತರವಾಗಿ ಮೈಸೂರು ವಿಶ್ವವಿದ್ಯಾನಿಲಯವೇ ಆ ನಿಲಯವಾಗುವಂತೆ ಮಾಡಲು ಆವಶ್ಯಕವಾದ ಎಲ್ಲ ಪ್ರಯತ್ನಗಳನ್ನೂ ಆದಷ್ಟು ಕ್ಷಿಪ್ರದಲ್ಲಿ ಮಾಡಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ. ಈ ಕಾರ್ಯವನ್ನು ಕೈಗೊಳ್ಳಲು ಕೆಳಗೆ ಕಂಡ ಉಪಮಂಡಲವೊಂದನ್ನು ನಿಯಮಿಸುತ್ತದೆ-

೧. ಮ॥ ರಾ॥ ಬಿ.ಎಂ. ಶ್ರೀಕಂಠಯ್ಯನವರು. ಎಂ.ಎ.ಬಿ.ಎಲ್(ಅಧ್ಯಕ್ಷರು)
೨. " ಆಲೂರ ವೆಂಕಟರಾಯರು. ಎಂ.ಎಲ್.ಎಲ್.ಬಿ. ದಾರವಾಡ
೩. " ಕೆ. ಶಂಕರನಾರಾಯಣರಾಯರು. ಎಂ.ಎ.ಬಿ.ಎಲ್. ಮೈಸೂರು
೪. " ಬೆನಗಲ್ ರಾಮರಾಯರು. ಎಂ.ಎ.ಎಲ್.ಎಲ್.ಬಿ. ಮದರಾಸು.
೫. " ಕೆ. ಸಂಪದ್ಗಿರಿರಾಯರು. ಎಂ.ಎ. ಬೆಂಗಳೂರು
೬. " ಕೆ ಗುರುರಾಜಾರಾಯರು. ಬಿ.ಎ.ಎಲ್.ಎಲ್.ಬಿ. ಬಳ್ಳಾರಿ.

ಸೂಚಕರು: ಮ॥ರಾ॥ ಪೋದ್ದಾರ್ ರಂಗಪ್ಪನವರು. ಬಿ.ಎ. ಕಾರವಾರ.

ಅನುಮೋದಕರು: ಮ॥ ರಾ॥ ನಾ. ಶ್ರೀ. ರಾಜಪುರೋಹಿತರು. ಧಾರವಾಡ

****

೧೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೧
ಸಮ್ಮೇಳನಾಧ್ಯಕ್ಷರು: ಮುಳಿಯ ತಿಮ್ಮಪ್ಪಯ್ಯ

ನಿರ್ಣಯ: ೧೦ ಉತ್ತರ ಕನ್ನಡಜಿಲ್ಲೆಯ ಶಾಸನ ತಾಳೆಗರಿ ಸಂಗ್ರಹ ಮತ್ತು ಪಟ್ಟಿಕೆ ಸಿದ್ಧತೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಮ್ರ ಶಾಸನಗಳೂ ತಾಳೆಯೋಲೆಯಲ್ಲಿ ಬರೆದ ಅನೇಕ ಕನ್ನಡ ಗ್ರಂಥಗಳೂ ಸಿಕ್ಕುವುವು. ಅವುಗಳನ್ನೆಲ್ಲ ಸಂಗ್ರಹ ಮಾಡಿ ಪರಿಷತ್ತಿನವರು ಆದಷ್ಟು ಬೇಗನೆ ವಿವರಣೆ ಪಟ್ಟಿಕೆ (Descriptive Catalogue) ಯನ್ನು ಸಿದ್ಧಪಡಿಸತಕ್ಕುದೆಂದೂ, ಈ ಗ್ರಂಥಸಂಗ್ರಹ ಕಾರ್ಯಕ್ಕಾಗಿ ಪರಿಷತ್ತಿನವರು ಅನುಭವಶಾಲಿಗಳಾದರವರನ್ನು ಈ ಪ್ರಾಂತಕ್ಕೆ ಕಳುಹಿಸುವ ಏರ್ಪಾಡನ್ನು ಮಾಡಬೇಕೆಂದೂ ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು: ಬೆಟಗೇರಿ ಕೃಷ್ಣಶರ್ಮರು.

ಅನುಮೋದಕರು: ಬಿ.ಎಂ ಶ್ರೀಕಂಠಯ್ಯನವರು

ನಿರ್ಣಯ: ೧೩ ಕರ್ನಾಟಕ ಸಂಘಗಳು ಪರಿಷತ್ತಿಗೆ ಸೇರ್ಪಡೆ

ಕನಾಟಕ ಬೇರೆ ಬೇರೆ ಭಾಗಗಳಲ್ಲಿ ಸ್ಥಾಪಿಸಿರುವ ಮತ್ತು ಸ್ಥಾಪಿತವಾಗುವ ಕರ್ನಾಟಕ ಸಾಹಿತ್ಯ ಸಂಘಗಳನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಜೋಡಿಸಲು ಅನುಕೂಲವಾಗುವಂತೆ ಯೋಗ್ಯವಾದ ಉಪ ನಿಯಮಗಳನ್ನು ಕಾರ್ಯನಿರ್ವಾಹಕ ಮಂಡಲಿಯವರು ಏರ್ಪಡಿಸಿ ಪ್ರಕಟಿಸಬೇಕೆಂದು ಈ ಸಮ್ಮೇಳನವು ನಿರ್ಣಯಿಸುತ್ತದೆ.

ಸೂಚಕರು: ಸಿ.ಕೆ. ವೆಂಕಟರಾಮಯ್ಯನವರು.

ಅನುಮೋದಕರು: ದತ್ತಾತ್ರೇಯ ಬೇಂದ್ರೆಯವರು

****

೧೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೨

ಸಮ್ಮೇಳನಾಧ್ಯಕ್ಷರು: ಡಿ.ವಿ ಗುಂಡಪ್ಪ

ನಿರ್ಣಯ: ೧೨ ಸಮ್ಮೇಳನಗಳಲ್ಲಿ ಸಮಿತಿಗಳಿಗೆ ಪ್ರೋತ್ಸಾಹ

ಪ್ರಾಯ ಪ್ರಬುದ್ಧರ ಜ್ಞಾನವಿಕಾಸಕ್ಕೆ ಗಮಕಿಗಳು ಆವಶ್ಯಕವಿರುವುದರಿಂದ, ಪರಿಷತ್ಸಮ್ಮೇಳನ ಕಾಲದಲ್ಲಿ ಆಯಾ ಸ್ಥಳಿಕ ಗಮಕಿಗಳ ಭಾಷಾ ನೈಪುಣ್ಯ ಪ್ರದರ್ಶನವನ್ನು ಏರ್ಪಡಿಸಿ ಬಹುಮಾನಗಳನ್ನು ಕೊಡಲು ಅನುಕೂಲಪಡಿಸಬೇಕೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು: ಮ॥ ರಾ॥ ಡಿ. ಎಂ ಸಿದ್ಧಲಿಂಗಯ್ಯನವರು.

ಅನುಮೋದಕರು: ಮ॥ ರಾ॥ ಆತ್ಮಾರಾಮ ಶಾಸ್ತ್ರಿಗಳು.

ನಿರ್ಣಯ: ೧೫ ಕೊಡಗಿಗೆ ಸಾಹಿತ್ಯ ಪ್ರಚಾರಕರನ್ನು ಕಳಿಸಿ

ಕರ್ನಾಟಕ ಸಾಹಿತ್ಯ ಪರಿಷತ್ತಿನವರು ತಮ್ಮ ಪ್ರಚಾರಕರನ್ನು ಕನ್ನಡ ಸಾಹಿತ್ಯ ಬೆಳವಣಿಗೆಗಾಗಿ ಕರ್ನಾಟಕದ ಎಲ್ಲ ಕಡೆಗಳಿಗೂ – ಅದರಲ್ಲೂ ಕೊಡಗು ದೇಶಕ್ಕೆ ಹೆಚ್ಚಾಗಿಯೂ – ಕಳುಹಿಸುವಂತೆ ಏರ್ಪಾಡು ಮಾಡಬೇಕಾದುದು ಆವಶ್ಯಕವೆಂದು ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.

ಸೂಚಕರು: ಬಿ.ಎನ್. ಕೃಷ್ಣಮೂರ್ತಿಗಳು.

ಅನುಮೋದಕರು: ಸಿದ್ಧಲಿಂಗಯ್ಯನವರು.

ನಿರ್ಣಯ: ೧೭ ಪರಿಷತ್ತಿನ ನಿಘಂಟು, ವಿಶ್ವಕೋಶ, ವ್ಯಾಕರಣದ ರಚನೆ ಮಾಡಲಿ

ಸಮಗ್ರ ಕರ್ನಾಟಕಕ್ಕೆ ಒಂದು ನಿಘಂಟುವನ್ನೂ ವಿಶ್ವಕೋಶವನ್ನೂ ರಚಿಸುವುದಲ್ಲದೆ ಒಂದು ವ್ಯಾಕರಣವನ್ನೂ ರಚಿಸಲು ಏರ್ಪಾಡು ಮಾಡಬೇಕೆಂದು ಈ ಸಭೆಯು ಸಾಹಿತ್ಯ ಪರಿಷತ್ತನ್ನು ಕೇಳಿಕೊಳ್ಳುತ್ತದೆ.

ಸೂಚಕರು : ಬಿ.ಎನ್. ಕೃಷ್ಣಮೂರ್ತಿಗಳು

ಅನುಮೋದಕರು : ಮ॥ ರಾ॥ ಸಿದ್ಧಲಿಂಗಯ್ಯನವರು

****

೧೯ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೩

ಸಮ್ಮೇಳನಾಧ್ಯಕ್ಷರು: ವೈ. ನಾಗೇಶ ಶಾಸ್ತ್ರಿ

ನಿರ್ಣಯ ೪. ಅಪ್ರಕಟಿತ ಹಳಗನ್ನಡ ಗ್ರಂಥಗಳ ಪ್ರಕಟನೆ ಪರಿಷತ್ ಪತ್ರಿಕೆಯಲ್ಲಿ

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಕೆಲವು ಪುಟಗಳನ್ನು ಮೀಸಲಾಗಿಟ್ಟು ಇದುವರೆಗೆ ಅಚ್ಚಾಗದಿರುವ ಹಳಗನ್ನಡ ಗ್ರಂಥಗಳನ್ನು ಪರಿಶೋಧಿಸಿ, ಟಿಪ್ಪಣಿಯೊಡನೆ ಆ ಭಾಗದಲ್ಲಿ ಮುದ್ರಿಸುತ್ತ ಬರಬೇಕು.

ಸೂಚಕರು: ಶ್ರೀಮಾನ್ ಎಚ್. ಹನುಮಂತರಾಯರು.

ಅನುಮೋದಕರು: ಶ್ರೀಮಾನ್ ಪಾವಟೆ ಸಿದ್ಧರಾಮಪ್ಪನವರು.

ಪರಿಪೋಷಕರು : ಶ್ರೀಮಾನ್ ಸಿದ್ಧೇಶ್ವರಸ್ವಾಮಿ, ಕಾಡುದೇವರ ಮಠ.

ನಿರ್ಣಯ ೫: ತೌಲನಿಕ ಕನ್ನಡ ಇತಿಹಾಸ ಗ್ರಂಥವನ್ನು ಪರಿಷತ್ತು ರಚಿಸಲಿ

ಕನ್ನಡ ಭಾಷೆಯ ಉನ್ನತಿಯ ಇಂದಿನವರೆಗೆ ಹೇಗೆ ಹೇಗೆ ಆಗುತ್ತ ಬಂದಿತು? ಕನ್ನಡ ಭಾಷೆಯಲ್ಲಿ ಇಂದಿನವರೆಗೆ ಯಾವ ಯಾವ ಗ್ರಂಥಗಳು ಹುಟ್ಟಿದುವು? ಆಯಾ ಕಾಲದಲ್ಲಿ ಕನ್ನಡಿಗರ ಸಾಮಾಜಿಕ ಸ್ಥಿತಿಯು ಹೇಗೆ ಇದ್ದಿತು? ಮತ್ತು ಈ ಕನ್ನಡ ಗ್ರಂಥಗಳಿಂದ ಆಯಾ ಕಾಲದ ಸಮಾಜದ ಮೇಲೆ ಏನು ಪರಿಣಾಮವಾಯಿತು?-ಇವೆಲ್ಲ ಸಂಗತಿಗಳ ವಿಷಯವಾಗಿ, ಕನ್ನಡ ಭಾಷೆಯನ್ನು ಭಾರತೀಯ ಇತರ ಭಾಷೆಗಳಿಗೆ ಹೋಲಿಸಿ ನೋಡಿ ಅರ್ಥಾತ್, ತುಲನಾತ್ಮಕ ದೃಷ್ಟಿಯಿಂದಲೂ ಐತಿಹಾಸಿಕ ದೃಷ್ಟಿಯಿಂದಲೂ ವಿವೇಚಿಸುವಂತಹ ಉತ್ತಮವಾದ ಇತಿಹಾಸವನ್ನು ಕನ್ನಡದಲ್ಲಿ ಬರೆಯಿಸುವ ಕಾರ್ಯವನ್ನು ಕರ್ನಾಟಕದ ಸಾಹಿತ್ಯ ಪರಿಷತ್ತಿನವರು ಕೈಗೊಳ್ಳಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು: ನಾ. ಶ್ರೀ ರಾಜಪುರೋಹಿತರು.

ಅನುಮೋದಕರು: ಕೌಲಜಗಿ ಶ್ರೀನಿವಾಸರಾಯರು.

ನಿರ್ಣಯ ೭: ಪಠ್ಯಪುಸ್ತಕ ಸುಧಾರಣೆಗೆ ಸಮಿತಿ ನೇಮಕ

ಸದ್ಯದ ಶಿಕ್ಷಣ ಕ್ರಮದಲ್ಲಿ ರೂಢವಾಗಿರುವ ಕನ್ನಡ ಪಠ್ಯಪುಸ್ತಕಗಳು ಅಸಮಾಧಾನಕರವಾಗಿವೆಯೆಂದೂ, ಕನ್ನಡವನ್ನು ಕಲಿಸುವ ಕ್ರಮವು ಕನ್ನಡದ ಏಳ್ಗೆಗಾಗಲಿ ಅಭಿಮಾನಕ್ಕಾಗಲಿ ಅಷ್ಟೊಂದು ಸಹಾಯಕಾರಿಯಾಗಿಲ್ಲವೆಂದೂ ಕಂಡುಬರುವುದರಿಂದ, ಪರಿಷತ್ತಿನವರು ಕೆಲ ಮಂದಿ ಅಧಿಕೃತ ವಿದ್ವಾಂಸರ ಸಮಿತಿಯೊಂದನ್ನು ಗೊತ್ತು ಮಾಡಬೇಕೆಂದೂ, ಆ ಸಮಿತಿಯವರು ಪ್ರಶ್ನೆಮಾಲಿಕೆಯ ಮೂಲಕವಾಗಲಿ, ಪ್ರಶ್ನಾವಳಿಯ ಮೂಲಕವಾಗಲಿ, ಮತ್ತಾವ ರೀತಿಯಿಂದಾಗಲಿ, ಪಠ್ಯಪುಸ್ತಕಗಳು ಮತ್ತು ಶಿಕ್ಷಣ ಕ್ರಮದ ಸ್ಥಿತಿಯನ್ನು ಪರ್ಯಾಲೋಚಿಸಿ ಅವಶ್ಯವಿರುವ ತಿದ್ದುಪಾಟುಗಳನ್ನು ಸೂಚಿಸಬೇಕೆಂದೂ ಈ ಸಮ್ಮೇಳವು ನಿರ್ಧರಿಸುತ್ತದೆ.

ಸೂಚಕರು: ಆರ್.ವಿ.ಜಹಗೀರುದಾರರು.

ಅನುಮೋದಕರು: ಶ್ರೀಮಾನ್.ಬಿ.ಎಸ್.ಪಾಟೀಲರು.

ನಿರ್ಣಯ ೮: ನಿಬಂಧನೆಗಳಲ್ಲಿ ಶಿಕ್ಷಕರ ಬಗ್ಗೆ ಮಾರ್ಪಾಟಿಗೆ ಸೂಚನೆ

ಪರಿಷತ್ತಿನ ಘಟನೆಯಲ್ಲಿ ಕನ್ನಡ ಶಿಕ್ಷಕರ ಮತ್ತು ಪಂಡಿತರ ಸಮಾವೇಶವಾಗುವಂತೆ, ಅವರಿಗೆ ವೈಶೇಷಿಕ ಪ್ರಾತಿನಿಧ್ಯವನ್ನು ಕೊಡಲು ಯೋಗ್ಯ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು ಈ ಸಮ್ಮೇಳನವು ನಿರ್ಧರಿಸುತ್ತದೆ.

ಸೂಚಕರು: ಶ್ರೀಮಾನ್.ವಿ.ಬಿ.ನಾಯಕರು.

ಅನುಮೋದಕರು: ಶ್ರೀಮಾನ್ ವಿ.ಜಿ.ಕುಲಕರಣಿಯವರು.

ನಿರ್ಣಯ ೧೩: ಉತ್ತರ ಕರ್ನಾಟಕದಲ್ಲಿ ಪರಿಷತ್ತಿನ ಶಾಖೆ ಪ್ರಾರಂಭವಾಗಲಿ

ಆಧುನಿಕ ಕರ್ನಾಟಕದ ಸಾಹಿತ್ಯದ ಚಟುವಟಿಕೆಗಳಿಗೂ ಒಲವುಗಳಿಗೂ ಸಂಬಂಧಿಸಿದ ಪ್ರಚಾರ ಕಾರ್ಯವನ್ನು ಕೈಕೊಳ್ಳಲು ಅನುವಾಗುವಂತೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಉತ್ತರ ಕರ್ನಾಟಕದ ಶಾಖೆಯೊಂದನ್ನು ಏರ್ಪಡಿಸಬೇಕೆಂದು ಈ ಸಮ್ಮೇಳನವು ನಿರ್ಧರಿಸುತ್ತದೆ.

ಸೂಚಕರು: ಶ್ರೀಮಾನ್.ಶಂ.ಬಾ. ಜೋಶಿಯವರು.

ಅನುಮೋದಕರು: ಶ್ರೀಮಾನ್.ಎ.ಟಿ.ಸಾಸನೂರು.

ನಿರ್ಣಯ ೧೮: ಕೀರ್ತನಕಾರರನ್ನು ಪರಿಷತ್ತಿನ ಪ್ರಚಾರಕ್ಕೆ ಬಳಸಿಕೊಳ್ಳಬೇಕು

ಕರ್ನಾಟಕದ ವಾಙ್ಮಯ ಸೇವೆಯನ್ನು ಮಾಡುವವರಲ್ಲಿ ಕನ್ನಡ ಕೀರ್ತನಕಾರರೂ ಮುಖ್ಯರಾಗಿರುವುದರಿಂದ, ಕರ್ನಾಟಕದ ಸಾಹಿತ್ಯ ಪರಿಷತ್ತಿನವರು ಇವರ ಬಗ್ಗೆ ಹೆಚ್ಚು ಶ್ರದ್ಧೆಯನ್ನು ತೋರಿಸಿ, ಇವರಿಂದ ಪ್ರಚಾರ ಕಾರ್ಯವನ್ನು ಮಾಡಿಸಿಕೊಂಡು, ಇವರಿಗೆ ತಕ್ಕಷ್ಟು ಪ್ರೋತ್ಸಾಹವನ್ನು ಕೊಡಬೇಕೆಂದು ಈ ಸಮ್ಮೇಳನವು ಶಿಫಾರಸು ಮಾಡುತ್ತದೆ.

ಸೂಚಕರು: ಶ್ರೀಮಾನ್.ಬಿ.ಶಿವಮೂರ್ತಿಶಾಸ್ತ್ರಿಗಳು.

ಅನುಮೋದಕರು: ಶ್ರೀಮಾನ್ ಜಯರಾಮಾಚಾರ್ಯರು.

****

೨೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೪

ಸಮ್ಮೇಳನಾಧ್ಯಕ್ಷರು: ಪಂಜೆ ಮಂಗೇಶರಾವ್

ನಿರ್ಣಯ ೧೯. ಭಾಷಾ ಏಕರೂಪತೆಗೆ ಸಮಿತಿ ರಚನೆ

ಕರ್ನಾಟಕ ದೇಶದ ಭಾಷೆ ಸಾಹಿತ್ಯ ಸಂಸ್ಕೃತಿಗಳಲ್ಲಿ ಇರುವ ಪ್ರಾದೇಶಿಕ ವ್ಯತ್ಯಾಸಗಳನ್ನು ಕಡಿಮೆ ಮಾಡಿ ಅವುಗಳ ಏಕರೂಪತೆಯನ್ನು ಸಾರಸಂಪತ್ತುಗಳನ್ನೂ ಹೆಚ್ಚುಪಡಿಸುವುದಕ್ಕೆ ಕನ್ನಡ ನಾಡಿನಲ್ಲಿರುವ ನಾನಾ ಸರಕಾರಗಳ ಮತ್ತು ವಿದ್ಯಾಧಿಕಾರಿಗಳ ಮನಃಪೂರ್ವಕವಾದ ಅನ್ಯೋನ್ಯ ಸಹಕಾರವು ಅತ್ಯಂತ ಆವಶ್ಯಕವಾಗಿರುವುದರಿಂದ ಇಂಥ ಸಹಕಾರವನ್ನು ಸಂಪಾದಿಸಿ ಸಾರ್ಥಕಗೊಳಿಸುವುದಕ್ಕಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಂಬಂಧದಲ್ಲಿ ಒಂದು ಪ್ರತ್ಯೇಕವಾದ ಸಮಿತಿಯು ಏರ್ಪಾಟಾಗಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ. ಆ ಸಮಿತಿಯಲ್ಲಿ

೧) ಮೈಸೂರು ಸಂಸ್ಥಾನ (೨) ಬೊಂಬಾಯಿ ಅಧಿಪತ್ಯ, (೩) ಮದರಾಸು ಅಧಿಪತ್ಯ, (೪) ಹೈದರಾಬಾದು ಸಂಸ್ಥಾನ (೫) ಕೊಡಗು ಪ್ರಾಂತ (೬) ಉತ್ತರ ಕರ್ನಾಟಕ ಸಂಸ್ಥಾನಗಳು- ಈ ಬೇರೆ ಬೇರೆ ಸರ್ಕಾರಗಳು ನಿಯಮಿಸಿ ಕಳುಹಿಸುವ ಒಬ್ಬೊಬ್ಬ ಪ್ರತಿನಿಧಿಯೂ;

(೧) ಮೈಸೂರು, (೨) ಬೊಂಬಾಯಿ, (೩) ಮದರಾಸು, (೪) ಹೈದರಾಬಾದು-ಈ ವಿಶ್ವವಿದ್ಯಾಲಯಗಳ ಒಬ್ಬೊಬ್ಬ ಪ್ರತಿನಿಧಿಯೂ ಇವರುಗಳ ಜೊತೆಗೆ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ನಿಯಮಿಸುವ ಮೂವರು ಸದಸ್ಯರೂ ಇರತಕ್ಕದ್ದು; ಮತ್ತು ಈ ಸಮಿತಿಗೆ ಉಚಿತ ತೋರಿದ ಮೇರೆಗೆ ಐದು ಮಂದಿಗೆ ಮೀರದಂತೆ ಬೇರೆ ಸದಸ್ಯರನ್ನು ಸೇರಿಸಿಕೊಳ್ಳಲು ಅದಕ್ಕೆ ಅಧಿಕಾರವಿರತಕ್ಕದ್ದು. ಈ ಸಮಿತಿಯು ಈ ಮುಂದೆ ಕಾಣುವ ಪ್ರಶ್ನೆಗಳನ್ನು ವಿಚಾರಕ್ಕೆ ತೆಗೆದುಕೊಳ್ಳತಕ್ಕದ್ದು:-

೧) ಬೇರೆ ಬೇರೆ ಪ್ರಾಂತಗಳಲ್ಲಿರುವ ಪಾಠಶಾಲೆ ವಿಶ್ವವಿದ್ಯಾಲಯಗಳಲ್ಲಿ ನಾನಾ ತರಗತಿಗಳಲ್ಲಿ ಉಪಯೋಗವಾಗುತ್ತಿರುವ ಕನ್ನಡ ಪಠ್ಯಪುಸ್ತಕಗಳ ಶೈಲಿ ಸಾಹಿತ್ಯ ಮೊದಲಾದವುಗಳಲ್ಲಿ ಏಕರೂಪತೆಯನ್ನು ಉಂಟು ಮಾಡಿಸುವುದು ಎಷ್ಟು ಮಟ್ಟಿಗೆ ಸಾಧ್ಯ? ಅದಕ್ಕೆ ಆಗಬೇಕಾದ ಏರ್ಪಾಡುಗಳೇನು?

೨) ಸರ್ಕಾರದ ಕನ್ನಡ ಪ್ರಸಿದ್ಧ ಪತ್ರಿಕೆಗಳು, ಪ್ರಕಟಣೆಗಳು, ವರದಿಗಳು ಮುಂತಾದ ಕಾಗದ ಪತ್ರಗಳಲ್ಲಿ ಒಂದೇ ಬಗೆಯ ಶೈಲಿಯನ್ನೂ ಒಂದೇ ಪರಿಭಾಷೆಯನ್ನೂ ರೂಢಿಗೆ ತರುವುದು ಎಷ್ಟುಮಟ್ಟಿಗೆ ಸಾಧ್ಯ? ಅದಕ್ಕೆ ಆಗಬೇಕಾದ ಏರ್ಪಾಟುಗಳಾವುವು?

೩) ಕನ್ನಡ ದೇಶವೆಲ್ಲಕ್ಕೂ ಸಮಾನ ಪ್ರಮಾಣವಾಗಿರುವಂತೆ ನಿಘಂಟು, ವ್ಯಾಕರಣ, ಕೋಶಗಳನ್ನು ತಯಾರು ಮಾಡಿಸಲು ಸಾಧ್ಯವೆ? ಅದು ಹೇಗೆ?

೪) ಕನ್ನಡ ಪಾಠಶಾಲೆಗಳ ಬೋಧಕರ ಪ್ರಯೋಜನಕ್ಕಾಗಿ ಪಂಡಿತ ಪರೀಕ್ಷೆ ಮೊದಲಾದ ಪರೀಕ್ಷೆಗಳನ್ನು ಕನ್ನಡ ದೇಶದ ಎಲ್ಲ ಸರ್ಕಾರಗಳೂ ಎಲ್ಲ ವಿದ್ಯಾ ಇಲಾಖೆಗಳೂ ಅಂಗೀಕರಿಸುವಂತೆ ಒಂದು ಅಧಿಕಾರ ಸ್ಥಾನದಿಂದ ನಡೆಯಿಸುವುದು ಸಾಧ್ಯವೆ?

ಈ ಪ್ರಶ್ನೆಗಳನ್ನೂ ಮತ್ತು ಇದಕ್ಕೆ ಸಂಬಂಧಪಟ್ಟ ಇತರ ಪ್ರಶ್ನೆಗಳನ್ನೂ ಮೇಲ್ಕಂಡ ಸಮಿತಿಯು ಪರ್ಯಾಲೋಚಿಸಿ, ತನ್ನ ತೀರ್ಮಾನಗಳನ್ನು ಈ ಸಮ್ಮೇಳನಕ್ಕೂ ಕನ್ನಡ ನಾಡಿನ ಸರ್ಕಾರಗಳಿಗೂ ೧೯೩೫ನೆಯ ಇಸವಿಯ ಅಂತ್ಯದೊಳಗಾಗಿ ತಿಳಿಯಪಡಿಸತಕ್ಕದ್ದು.

ಈ ಮೇಲೆ ಕಂಡಂತೆ ಸಮಿತಿಯನ್ನು ನಾನಾ ಸರ್ಕಾರಗಳ ಸಹಾಯದಿಂದ ನಿಯಾಮಕಮಾಡಿಸಿ ಕೆಲಸ ನೆರವೇರಿಸಲು ಅವಶ್ಯವಾದ ಎಲ್ಲ ಪ್ರಯತ್ನಗಳನ್ನೂ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ನಡೆಸತಕ್ಕದ್ದು.

ಸೂಚಕರು: ಶ್ರೀಮಾನ್ ಡಿ.ವಿ. ಗುಂಡಪ್ಪನವರು (ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯ ಪರವಾಗಿ).

ಅನುಮೋದಕರು: ಪ್ರೊಫೆಸರ್ ಬಿ.ಎಂ.ಶ್ರೀಕಂಠಯ್ಯನವರು (ಮೈಸೂರು).

ಪರಿಪೋಷಕರು: ಪ್ರೊಫೆಸರ್ ಎ.ಟಿ.ಸಾಸನೂರ್ ಅವರು (ಬೊಂಬಾಯಿ).
ಪ್ರೊಫೆಸರ್ (ರಾ||)ಟಿ.ಆರ್.ರಾಮರಾಯರು (ಹೈದರಾಬಾದು).
ಪ್ರೊಫೆಸರ್ ಡಿ.ಕೆ. ಭೀಮಸೇನರಾಯರು (ಹೈದರಾಬಾದು).
ಶ್ರೀಮಾನ್ ಟಿ.ಎಂ.ಕಾರಿಯಪ್ಪನವರು (ಕೊಡಗು).
ಶ್ರೀಮಾನ್ ಬೆನಗಲ್ ರಾಮರಾಯರ (ಮದರಾಸು).
ವ್ಯಾಕರಣತೀರ್ಥ ಶ್ರೀಮಾನ್ ಚಂದ್ರಶೇಖರ ಶಾಸ್ತ್ರಿಗಳವರು (ವಿದ್ವಾನ್).

****

೨೧ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೫

ಸಮ್ಮೇಳನಾಧ್ಯಕ್ಷರು: ಎನ್.ಎಸ್.ಸುಬ್ಬರಾವ್

ನಿರ್ಣಯ ೧೧. ಏಕರೂಪಕತೆಗೆ ಸಮಿತಿ ರಚನೆ

ಕನ್ನಡ ಪಠ್ಯ ಪುಸ್ತಕಗಳು, ಪಾರಿಭಾಷಿಕ ಪದಗಳು, ಸರ್ಕಾರಗಳ ಮತ್ತು ಸಾರ್ವಜನಿಕ ಸಂಸ್ಥೆಗಳ ಭಾಷಾ ಪ್ರಯೋಗಗಳು ಇವುಗಳಲ್ಲಿ ಸಮಾನರೂಪತೆಯನ್ನುಂಟು ಮಾಡಿಸುವ ಬಗ್ಗೆ ವಿಚಾರ ನಡೆಸಲು ಕನ್ನಡನಾಡಿನ ನಾನಾ ಸರ್ಕಾರಗಳ ಮತ್ತು ವಿಶ್ವವಿದ್ಯಾನಿಲಯಗಳ ಸಹಕಾರದಿಂದ ಅವರ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ಕರ್ನಾಟಕ ಸಾಹಿತ್ಯ ಪರಿಷತ್ತು ಏರ್ಪಡಿಸಬೇಕೆಂದು ಕಳೆದ (ರಾಯಚೂರು) ಸಮ್ಮೇಳನವು ಮಾಡಿದ ನಿರ್ಣಯವನ್ನು ಈ ಸಮ್ಮೇಳನವು ಪುನಃ ಸ್ಥಿರಪಡಿಸುತ್ತದೆ; ಮತ್ತು ಈ ಉದ್ದೇಶವನ್ನು ನೆರವೇರಿಸಲು ಪರಿಷತ್ತು ತಕ್ಕ ಪ್ರಯತ್ನಗಳನ್ನು ನಡೆಸಬೇಕೆಂದು ಕೋರುತ್ತದೆ; ಮತ್ತು ಕನ್ನಡ ನಾಡಿನ ನಾನಾ ಸರ್ಕಾರಗಳೂ ವಿಶ್ವವಿದ್ಯಾನಿಲಯಗಳೂ ಈ ವಿಷಯದ ಮಹತ್ವವನ್ನು ಗಮನಕ್ಕೆ ತಂದುಕೊಂಡು ಈ ಕೋರಿಕೆಯನ್ನು ಕ್ಷಿಪ್ರವಾಗಿ ನಡೆಸಿಕೊಡಬೇಕೆಂದು ಈ ಸಮ್ಮೇಳನವು ಬೇಡುತ್ತದೆ.

ಸೂಚಕರು: ಸಮ್ಮೇಳನಾಧ್ಯಕ್ಷರು.

ನಿರ್ಣಯ ೧೪: ವಿಶೇಷ ಸಾಹಿತ್ಯೋತ್ಸವ ಎಲ್ಲೆಡೆ ಮಾಡಿ

ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿಯೂ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಸಹಕಾರಿಯಾದ ಒಂದೊಂದು ಅಂಗ ಸಂಸ್ಥೆಯನ್ನು ಸ್ಥಾಪಿಸಬೇಕೆಂದೂ ಪ್ರತಿಯೊಂದು ಜಿಲ್ಲೆಯ ಅಂಗಸಂಸ್ಥೆಯ ಪರವಾಗಿ ಬೇರೆ ಬೇರೆ ಕಾಲದಲ್ಲಿ ವರ್ಷಕ್ಕೊಂದು ಸಲ ವಿಶೇಷ ಸಾಹಿತ್ಯೋತ್ಸವವನ್ನು ಕೈಕೊಳ್ಳಬೇಕೆಂದೂ ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು: ಶ್ರೀಮಾನ್.ವಿ.ಎನ್.ಅಡವಿಯವರು.

ಅನುಮೋದಕರು: ಶ್ರೀಮಾನ್ ಪಂಡಿತ ವೆಂಕಟರಾಯರು.

****

೨೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೭
ಸಮ್ಮೇಳನಾಧ್ಯಕ್ಷರು: ಬೆಳ್ಳಾವೆ ವೆಂಕಟನಾರಾಯಣಪ್ಪ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ.

****

೨೩ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೮
ಸಮ್ಮೇಳನಾಧ್ಯಕ್ಷರು: ಆರ್.ಆರ್.ದಿವಾಕರ.

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ.

****

೨೪ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೩೯
ಸಮ್ಮೇಳನಾಧ್ಯಕ್ಷರು: ಮುದವೀಡು ಕೃಷ್ಣರಾಯ

ನಿರ್ಣಯ ೨೪: ಹರಿದಾಸ ಸಾಹಿತ್ಯ ಪ್ರಕಟನೆಗೆ ಸಮಿತಿ ರಚನೆ ಮಾಡಬೇಕು

ಕನ್ನಡ ಸಾಹಿತ್ಯ ಮುಖ್ಯ ಶಾಖೆಗಳಲ್ಲೊಂದಾದ ಶ್ರೀ ಹರಿದಾಸ ಕೂಟ ವಾಙ್ಮಯ ಪ್ರಕಟನೆಗೆ ನೆರವಾಗಬೇಕೆಂದು ಕನ್ನಡ ಸಾಹಿತ್ಯಾಭಿಮಾನಿಗಳಲ್ಲಿ ಬಿನ್ನಹ–

೧. ಕನ್ನಡ ಸಾಹಿತ್ಯದಲ್ಲಿ ಒಂದು ಕಾಲಕ್ಕೆ ಅತ್ಯಂತ ವೈಭವದಿಂದ ಮೆರೆದು ಜನಜೀವನದಲ್ಲಿ ಪ್ರಾಪಂಚಿಕ, ಪಾರಮಾರ್ಥಿಕ ಎಂಬ ಎರಡು ಬಗೆಯ ಸುಖಸಾಧನಗಳಿಗೆ ಮಾರ್ಗ ಮಾಡಿಕೊಟ್ಟು ಕನ್ನಡ ಜನಾಂಗವನ್ನು ಉದ್ಧಾರ ಮಾರ್ಗಕ್ಕೆ ಹಚ್ಚಿದ ಶ್ರೀ ಹರಿದಾಸ ಕೂಟ ವಾಙ್ಮಯ ಬಹು ವಿಶಾಲವಾಗಿದ್ದರೂ ಸದ್ಯಕ್ಕೆ ಸಾಕಷ್ಟು ಉಪಲಬ್ಧವಿಲ್ಲ. ಆದುದರಿಂದ ಈಗ ಸಂಶೋಧಿತವಾಗಿ ಪ್ರಕಟವಾಗಿರುವ ದಾಸವಾಙ್ಮಯದ ಹೊರ್ತಾಗಿ ಉಳಿದಿರುವ ಸಹಸ್ರಾವಧಿ ಪದಪದ್ಯಾದಿ ಸಾಹಿತ್ಯವನ್ನು ಸಂಗ್ರಹಿಸಿ, ಪರಿಷ್ಕರಿಸಿ, ಮುದ್ರಿಸಿ ಪ್ರಕಟಿಸುವ ಕಾರ್ಯವನ್ನು ಕನ್ನಡ ಸಾಹಿತ್ಯದ ಆ ಶಾಖೆಯಲ್ಲಿ ಅಭಿರುಚಿಯುಳ್ಳವರು ಅತ್ಯಗತ್ಯವಾಗಿ ಕೈಗೊಂಡು ಪೂರೈಸಬೇಕೆಂದು ಈ ಸಮ್ಮೇಳನ ಸರ್ವರಿಗೂ ಅಗ್ರಹಪೂರ್ವಕವಾಗಿ ಬಿನ್ನವಿಸುತ್ತದೆ.

೨. ಈ ಮಹತ್ಕಾರ್ಯವನ್ನು ಕೈಗೊಂಡು ನೆರವೇರಿಸಲು ಮುಂದಾಗಬಹುದಾದವರಿಗೆ ನೆರವಾಗುವುದಕ್ಕೆ ಸಾಹಿತ್ಯ ಪರಿಷತ್ತಿನವರು ತಮಗೆ ಯೋಗ್ಯ ಕಂಡ ಮೇರೆಗೆ ಒಂದು ಉಪಸಮಿತಿಯನ್ನು ನೇಮಿಸಿ, ಅದರಿಂದ ಈ ಕಾರ್ಯವನ್ನು ಮಾಡಿಸುವ ಉಪಕ್ರಮವನ್ನು ಕೈಗೊಳ್ಳಬೇಕಂದು ಪರಿಷತ್ತಿಗೆ ಈ ಸಮ್ಮೇಳನ ಬಿನ್ನವಿಸುತ್ತದೆ.

೩. ಕನ್ನಡ ಸಾಹಿತ್ಯ ಪರಿಷತ್ತು ಕೈಗೊಳ್ಳಬಹುದಾದ ಈ ಮಹತ್ಕಾರ್ಯಕ್ಕೆ ಕನ್ನಡ ನಾಡಿನ ಯಾವತ್ತೂ ಸಾಹಿತ್ಯ ಭಕ್ತರೂ, ದಾಸ ವಾಙ್ಮಯದ ಪುರಸ್ಕೃತರೂ, ಅಭ್ಯಾಸಿಗಳೂ ತಂತಮ್ಮ ಸಲಹೆಸಹಕಾರಗಳನ್ನು ನೀಡಿ ಅಧಿಕ ದ್ರವ್ಯ ಸಹಾಯ ಮಾಡಿ ನೆರವಾಗಬೇಕೆಂದು ಈ ಸಮ್ಮೇಳನ ಎಲ್ಲರನ್ನೂ ಪ್ರಾರ್ಥಿಸುತ್ತದೆ.

ಸೂಚಕರು: ಎನ್.ಬಿ. ಕಮಲದಾನಿ ಅವರು.

ಅನುಮೋದಕರು: ಶೇಷಾಚಾರ್ಯ ಕಟ್ಟಿ ಅವರು.

(ಈ ಠರಾವಿನಲ್ಲಿ ಅಡಕವಾಗಿರುವ ಕೆಲಸವನ್ನು ಕೂಡಲೆ ಕೈಗೊಂಡು ನಡೆಸಲು ಅನುಕೂಲವಾಗಬೇಕೆಂದು ೫೧ ರೂ.ಗಳ ಮೂಲ ಕಾಣಿಕೆಯನ್ನು ಶ್ರೀಮಾನ್ ಕಮಲದಾನಿ ನಾರಾಯಣರಾಯರು ಪರಿಷತ್ತಿಗೆ ಸಲ್ಲಿಸುವುದಾಗಿ ವಾಗ್ದಾನ ಮಾಡಿದ್ದಾರೆ.

ಹಾಗೆಯೇ ತಮ್ಮ ಕಡೆಗೆ ಇರುವ ಅನೇಕ ಸಹಸ್ರ ಕನ್ನಡ ಪದ್ಯಗಳ ಸಂಗ್ರಹವನ್ನೂ, ತಮಗೆ ಆ ವಿಷಯವಾಗಿರುವ ಅಲ್ಪ ಸ್ವಲ್ಪ ಜ್ಞಾನಭಕ್ತಿಗಳನ್ನೂ ಪರಿಷತ್ತಿನ ಮುಖಾಂತರವಾಗಿ ಕನ್ನಡ ಸರಸ್ವತಿಯ ಸೇವೆಗೆ ಸಲ್ಲಿಸುವುದಾಗಿಯೂ ಆಶ್ವಾಸನ ಕೊಟ್ಟಿದ್ದಾರೆ.

ಮುಂದೆಯೂ ಅನುಕೂಲವಾದಂತೆ ಇನ್ನೂ ಹೆಚ್ಚು ಹೆಚ್ಚಾಗಿ ೫೧ ರೂ.ಗಳಂತೆ ಕೈಲಾದ ಮಟ್ಟಿಗೆ ಕಾಣಿಕೆಗಳನ್ನು ಈ ಕಾರ್ಯಕ್ಕಾಗಿ ಸಮರ್ಪಿಸುವ ತಮ್ಮ ನಿಶ್ಚಯವನ್ನು ಪ್ರಕಟಗೊಳಿಸಿದ್ದಾರೆ.)

ನಿರ್ಣಯ ೨೮: ಸಾಕ್ಷರತಾ ಪ್ರಚಾರಕ್ಕೆ ಸಮಿತಿ ರಚನೆ

ಕರ್ನಾಟದಲ್ಲಿ ಪ್ರೌಢ ವಯಸ್ಕರಲ್ಲಿ ಸಾಕ್ಷರತೆ ತೀವ್ರವಾಗಿ ನಡೆಯಲು ಆಯಾ ಪ್ರಾಂತಿಕ ಸರಕಾರದಿಂದಲೂ, ಆಗುತ್ತಿರುವ ಪ್ರಯತ್ನಗಳಿಗೆ ಈ ಸಮ್ಮೇಳನದ ಬೆಂಬಲ ಮತ್ತು ಪ್ರೌಢ ವಯಸ್ಕರಿಗಾಗಿ ವಿವಿಧ ಸಾಹಿತ್ಯ ರಚನೆಗಾಗಿ ಪರಿಷತ್ತಿನ ಆಶ್ರಯದಲ್ಲಿ ಒಂದು ಸಮಿತಿಯ ರಚನೆಗೆ ಬಿನ್ನಹ–

ಕರ್ನಾಟಕದಲ್ಲಿ ಪ್ರೌಢ ವಯಸ್ಕರಲ್ಲಿ ಸಾಕ್ಷರತೆ ತೀವ್ರವಾಗಿ ನಡೆಯಲೆಂಬ ಉದ್ದೇಶದಿಂದ ಆಯಾ ಪ್ರಾಂತಿಕ ಸರ್ಕಾರದಿಂದಲೂ, ಮೈಸೂರು ಸರ್ಕಾರದವರಿಂದಲೂ ಆಗುತ್ತಿರುವ ಪ್ರಯತ್ನಗಳಿಗೆ ಈ ಸಮ್ಮೇಳನ ತನ್ನ ಬೆಂಬಲವನ್ನು ಕೊಡುತ್ತದೆ; ಇಂತಹ ಪ್ರೌಢ ವಯಸ್ಕರಿಗಾಗಿ ವಿವಿಧ ಸಾಹಿತ್ಯವನ್ನು ನಿರ್ಮಿಸುವುದು ಅಗತ್ಯವೆಂದು ಈ ಸಮ್ಮೇಳನದ ಅಭಿಪ್ರಾಯವಿರುವುದು. ಇದಕ್ಕಾಗಿ ಕೆಳಗೆ ಕಾಣಿಸಿದ ಸಂಸ್ಥೆಗಳ ಪ್ರತಿನಿಧಿಗಳ ಒಂದು ಸಮಿತಿಯನ್ನು ಸಾಹಿತ್ಯ ಪರಿಷತ್ತು ಏರ್ಪಡಿಸಬೇಕಾಗಿ ಈ ಸಮ್ಮೇಳನ ಬಿನ್ನವಿಸುತ್ತದೆ–

ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳು ಇಬ್ಬರು

ಕರ್ನಾಟಕ ವಿದ್ಯಾವರ್ಧಕ ಸಂಘದ ಎಜ್ಯುಕೇಷನ್ ಪ್ರತಿನಿಧಿಗಳು: ಇಬ್ಬರು

(ಇದರ ಕಾರ್ಯದರ್ಶಿ, ಡಿವಿಜನಲ್ ಬೋರ್ಡಿನ ಒಬ್ಬ ಪ್ರತಿನಿಧಿ)

ಸೂಚಕರು: ಪ್ರೊ॥ ಎಸ್.ಎಸ್. ಬಸವನಾಳರವರು.

ಅನುಮೋದಕರು: ಪ್ರೊ॥ ಎಸ್.ಎಸ್. ಮಾಳವಾಡ.

ನಿರ್ಣಯ ೩೯: ಕನ್ನಡ ಚಲನಚಿತ್ರ ಅಭಿವೃದ್ಧಿಗೆ ಪರಿಷತ್ತಿನ ಸಮಿತಿ ನೇಮಕ

ಕನ್ನಡದ ಶೈಕ್ಷಣಿಕ ದೃಷ್ಟಿಯಿಂದಲೂ, ಆರ್ಥಿಕ ದೃಷ್ಟಿಯಿಂದಲೂ ಕರ್ನಾಟಕದಲ್ಲಿ ಚಲನಚಿತ್ರಗಳೂ ವಾಕ್ಪಟಗಳು ಹೆಚ್ಚಾಗಿ ಆಗುವುದು ಅತ್ಯಂತ ಅವಶ್ಯವಾಗಿರುವುದರಿಂದ ಅದು ಬೇಗ ಸಫಲವಾಗಲು ಪರಿಷತ್ತಿನವರು ಒಂದು

ಉಪಸಮಿತಿಯನ್ನು ನೇಮಿಸಿ ಅದರ ಮುಖಾಂತರ ಕರ್ನಾಟಕದಲ್ಲಿಯ ಮುಂದಾಳುಗಳ ಮತ್ತು ಸಂಸ್ಥಾನಿಕರ ಬಂಡವಾಳ ಸಹಾಯ ಪಡೆದು ಪ್ರಾತಿನಿಧಿಕವಾದ ಒಂದು ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಬೇಕೆಂದು ಈ ಸಮ್ಮೇಳನ ಬೇಡುತ್ತದೆ.

ಸೂಚಕರು: ವಿ.ಪಿ. ಕಿತ್ತೂರ ಅವರು.

ಅನುಮೋದಕರು: ಅ.ನ.ಸುಬ್ಬರಾಯರು

ಪರಿಪೋಷಕರು: ಶ್ರೀ॥ ಡಿ ಸಿಲ್ವ ಅವರು.

****

೨೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೪೦

ಸಮ್ಮೇಳನಾಧ್ಯಕ್ಷರು: ವ್ಯಾಕರಣತೀರ್ಥ ವೈ.ಚಂದ್ರಶೇಖರ ಶಾಸ್ತ್ರಿ

ನಿರ್ಣಯ ೧೬. ಪ್ರತಿ ವರ್ಷದ ಪುಸ್ತಕಗಳ ಸೂಚಿಯ ಸಿದ್ಧತೆಗೆ ಸಮಿತಿ ರಚನೆ

ಪ್ರತಿವರ್ಷ ಪ್ರಕಟವಾಗುವ ಕನ್ನಡ ಪುಸ್ತಕಗಳ ಬಗ್ಗೆ ಸಮಾಲೋಚನೆ ನಡೆದು ಪರಿಷತ್ತಿನ ಪತ್ರಿಕೆಗಳಲ್ಲಿ ಪ್ರಕಟಿಸುವ ವ್ಯವಸ್ಥೆಗಾಗಿ ಸಲಹೆ –

ಪ್ರತಿವರ್ಷ ಪ್ರಕಟವಾಗುವ ಕನ್ನಡ ಪುಸ್ತಕಗಳ ಸಮಾಲೋಚನೆ (ವರದಿ) ವ್ಯವಸ್ಥಿತವಾಗಿ ಈಗ ಎಲ್ಲೂ ನಡೆಯುತ್ತಿಲ್ಲ. ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಈ ಕಾರ್ಯ ತಪ್ಪದೆ ನಡೆಯುವಂತೆ ಒಂದು ಉಪಸಮಿತಿ ರಚಿತವಾಗಬೇಕು. ಈ ಉಪಸಮಿತಿಯವರು ಪರಿಷತ್ತಿನ ಕಚೇರಿಯ ನೆರವನ್ನು ಪಡೆದು, ಈ ಸಮಾಲೋಚನೆಯನ್ನು ಸಿದ್ಧಪಡಿಸಿ ಪರಿಷತ್ತಿನ ಪತ್ರಿಕೆಗಳಲ್ಲಿ ಪ್ರಕಟಿಸುವ ಏರ್ಪಾಟಾಗಬೇಕೆಂದು ಈ ಸಮ್ಮೇಳನ ನಿರ್ಣಯಿಸುತ್ತದೆ.

ಸೂಚಕರು: ಎಂ.ಪಿ. ವಾಲಿ.

ಅನುಮೋದಕರು: ಅ.ನ.ಸುಬ್ಬರಾಯರು

ಪರಿಪೋಷಕರು: ಚಂ. ಹೊನ್ನಾಪುರಮಠ

ನಿರ್ಣಯ ೨೨. ಶುದ್ಧ ಕನ್ನಡ ಶಬ್ದಗಳ ಸಂಗ್ರಹಕ್ಕೆ ಸಮಿತಿ ನೇಮಕ

ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಬಳಕೆಯಲ್ಲಿರುವ ಶುದ್ಧ ಕನ್ನಡ ಶಬ್ದಗಳ ಸಂಗ್ರಹಕ್ಕಾಗಿ ಒಂದು ಸಮಿತಿಯ ನೇಮಕ.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ ಶುದ್ಧ ಕನ್ನಡ ಶಬ್ದಗಳ ಸಂಗ್ರಹವನ್ನು ಮಾಡುವ ಕಾರ್ಯವನ್ನು ನೆರವೇರಿಸಲು ಶ್ರೀ॥ ಗಳಾದ ದ.ರಾ. ಬೇಂದ್ರೆ ಅವರು, ಸ.ಪ.ಗಾಂವಕರ್ ಅವರು ಶಂ.ಬಾ.ಜೋಶಿ ಅವರು–ಈ ಮಹನೀಯರನ್ನೊಳಗೊಂಡ ಉಪಸಮಿತಿಯನ್ನು ಈ ಸಮ್ಮೇಳನ ನೇಮಿಸುತ್ತದೆ. ಮತ್ತು ಇತರ ೫ ಜನರನ್ನು ತಮ್ಮೊಡನೆ ಸಹಕರಿಸುವಂತೆ ನೇಮಿಸಿಕೊಳ್ಳಲು ಈ ಸಮಿತಿಗೆ ಅಧಿಕಾರವನ್ನು ವಹಿಸುತ್ತದೆ.

ಸೂಚಕರು: ಸ.ಪ.ಗಾಂವಕರ್ ಅವರು

ಅನುಮೋದಕರು: ಕೆ.ಎಫ್.ಪಾಟೀಲ ಅವರು

ನಿರ್ಣಯ ೨೫ : ತೆಲುಗು ಕನ್ನಡ ಲಿಪಿಗಳನ್ನು ಏಕಲಿಪಿ ಮಾಡುವುದು

ತೆಲುಗು ಕನ್ನಡ ಏಕಲಿಪಿ ಮಾಡುವ ವಿಚಾರ: ಕನ್ನಡ, ತೆಲುಗು ಲಿಪಿಗಳನ್ನು ಒಂದಾಗಿ ಮಾಡಲು ತೆಲುಗು

ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳೊಂದಿಗೆ ವಿಚಾರ ವಿನಿಮಯ ಮಾಡಲು ಬೇಡಿಕೆ-

ಕನ್ನಡ ಹಾಗೂ ತೆಲುಗು ಲಿಪಿಗಳು ಪೂರ್ವದಲ್ಲಿ ಒಂದೇ ಇದ್ದು ಈಗ ಕಾಲ ಕಾರಣಾಂತರಗಳಿಂದ ಬೇರೆಯಾಗಿವೆ. ಆದರೆ ಈಗ 'ಮಾನೊಟೈಪ್' 'ಲೈನೋ ಟೈಪ್' ಮುಂತಾದ ಹೆಚ್ಚಿನ ಸುಧಾರಣೆಗಳಾಗುವ ದೃಷ್ಟಿಯಿಂದಲೂ ಮುದ್ರಣ ಸೌಲಭ್ಯವು ಹೆಚ್ಚುವ ದೃಷ್ಟಿಯಿಂದಲೂ ಪುನಃ ಈ ಎರಡು ಲಿಪಿಗಳಾದರೂ ಒಂದಾಗುವುದು ಲಾಭಕರವಿರುವುದು. ಈ ಬಗ್ಗೆ ತೆಲುಗು ಸಾಹಿತ್ಯ ಸಮ್ಮೇಳನ ಮುಂತಾದ ಸಂಸ್ಥೆಗಳೊಡನೆ ವಿಚಾರ ವಿನಿಮಯ ಮಾಡಲು ಹಾಗೂ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಲು ಈ ಸಮ್ಮೇಳನ ಸಾಹಿತ್ಯ ಪರಿಷತ್ತಿಗೆ ಸೂಚಿಸುತ್ತದೆ.

ಸೂಚಕರು: ರಂ.ರಾ. ದಿವಾಕರರು

ಅನುಮೋದಕರು: ಮುದವೀಡು ಕೃಷ್ಣರಾಯರು

ನಿರ್ಣಯ ೨೭. ಗಡಿನಾಡಿನ ಕನ್ನಡಿಗರಿಗೆ ಜನ ಜಾಗೃತಿಗೆ ದ್ರವ್ಯ ಸಹಾಯ

೧೯೩೧ ರ ಜನಗಣತಿಯ ಬಗ್ಗೆ ಕನ್ನಡ ಗಡಿನಾಡಿನಲ್ಲಿ ಪ್ರಚಾರಕಾರ್ಯಕ್ಕಾಗಿ ಪ್ರಾರ್ಥನೆ-

ಈಗ ನಡೆಯುತ್ತಿರುವ ಜನಗಣತಿಯ ವಿಚಾರದಲ್ಲಿ ಗಡಿನಾಡಿನ ಕನ್ನಡಿಗರಲ್ಲಿ ಜಾಗೃತಿಯನ್ನುಂಟುಮಾಡುವುದಕ್ಕಾಗಿ ತೀವ್ರವಾದ ಪ್ರಚಾರಕಾರ್ಯ ಕೈಗೊಳ್ಳುವುದು ಆವಶ್ಯಕವಾಗಿರುವುದರಿಂದ ಆ ಬಗ್ಗೆ ಕರ್ನಾಟಕದ ಎಲ್ಲ ಸಂಸ್ಥೆಗಳೂ ದ್ರವ್ಯಸಹಾಯ ಮಾಡಿ ಪ್ರಚಾರ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಮ್ಮೇಳನ ಪ್ರಾರ್ಥಿಸುತ್ತದೆ. ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಶಕ್ಯವಾದಷ್ಟು ದ್ರವ್ಯಸಹಾಯ ಮಾಡಬೇಕೆಂದು ಸೂಚಿಸುತ್ತದೆ. ಹಾಗೂ ಕನ್ನಡ ನಾಡಿನ ಹಿತಚಿಂತಕರೆಲ್ಲರೂ ಈ ಕಾರ್ಯವು ಯಶಸ್ವಿಯಾಗಿ ಕೊನೆಗಾಣುವಂತೆ ನೆರವಾಗಬೇಕೆಂದು ಕೇಳಿಕೊಳ್ಳುತ್ತದೆ.

ಸೂಚಕರು: ಸಮ್ಮೇಳನಾಧ್ಯಕ್ಷರಿಂದ

****

೨೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೪೧

ಸಮ್ಮೇಳನಾಧ್ಯಕ್ಷರು: ಎ.ಆರ್. ಕೃಷ್ಣಶಾಸ್ತ್ರಿ

ನಿರ್ಣಯಗಳು ಲಭ್ಯವಾಗಿಲ್ಲ.

****

೨೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೪೩

ಸಮ್ಮೇಳನಾಧ್ಯಕ್ಷರು: ದ.ರಾ.ಬೇಂದ್ರೆ

ನಿರ್ಣಯ ೭: ಪರಿಷತ್ತು ಅಕ್ಷರ ಪ್ರಚಾರ ಕೈಗೊಳ್ಳಬೇಕು

ಕನ್ನಡ ನಾಡಿನ ಎಲ್ಲ ಸರಕಾರಗಳ ಮತ್ತು ಜನತೆಯ ಧನ ಜನ ಸಹಾಯಗಳನ್ನು ಪಡೆದು ಪರಿಷತ್ತು ಅಕ್ಷರ ಪ್ರಚಾರ ಕಾರ್ಯವನ್ನು ಕೈಗೊಂಡು ನಡೆಸಬೇಕೆಂದು ಪ್ರಾರ್ಥನೆ-

ಸೂಚಕರು: ಶ್ರೀ.ಬಿ.ಆರ್.ಪುಟ್ಟನಂಜಪ್ಪನರು

ಅನುಮೋದಕರು: ಶ್ರೀ.ಎಸ್.ವಿ. ಪರಮೇಶ್ವರಭಟ್ಟರು

ಕನ್ನಡ ಜನತೆಯಲ್ಲಿರುವ ಅಜ್ಞಾನವು ತೊಲಗಿ ಕನ್ನಡ ನಾಡಿನ ಏಳಿಗೆಯಾಗಬೇಕಾದರೆ ಅಕ್ಷರ ಪ್ರಚಾರ ಕಾರ್ಯವು ತ್ವರಿತವಾಗಿಯೂ ಭರದಿಂದಲೂ ನಡೆಯಬೇಕಾಗಿದೆ. ಕನ್ನಡ ನಾಡಿನ ಎಲ್ಲೆಡೆಗಳಲ್ಲಿಯೂ ಅಂಗಸಂಸ್ಥೆಗಳನ್ನೂ ಸದಸ್ಯರನ್ನೂ ಉಳ್ಳ, ಮತ್ತು ಬೆಳೆಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ಈ ಕಾರ್ಯವನ್ನು ಫಲಕಾರಿಯಾಗಿ ನಡೆಸಲು ಸಾಧ್ಯವಿದೆ. ಆದುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡಿನ ಎಲ್ಲ ಸರಕಾರಗಳ ಮತ್ತು ಜನತೆಯ ಧನ ಜನ ಸಹಾಯಗಳನ್ನು ತೆಗೆದುಕೊಂಡು ಈ ಕಾರ್‍ಯವನ್ನು ಶೀಘ್ರವಾಗಿ ಕೈಕೊಳ್ಳಬೇಕಾಗಿ ಈ ಸಮ್ಮೇಳನವು ತೀರ್ಮಾನಿಸುತ್ತದೆ.

ಸೂಚಕರು: ಶ್ರೀ.ಬಿ.ಆರ್.ಪುಟ್ಟನಂಜಪ್ಪನರು

ಅನುಮೋದಕರು: ಬಿ.ಎಂ. ಶ್ರೀಕಂಠಯ್ಯನವರು.

****

೨೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೪೪

ಸಮ್ಮೇಳನಾಧ್ಯಕ್ಷರು: ಎಸ್.ಎಸ್. ಬಸವನಾಳ

ನಿರ್ಣಯ ೧೪ : ಪರಿಷತ್ತು ರೇಡಿಯೋದಲ್ಲಿ ಕನ್ನಡ ಬಳಸಲು ಪ್ರಯತ್ನ ಮಾಡಬೇಕು

ಆಗಾಗ್ಯೆ ಬರುವ ಕನ್ನಡ ಕಾರ್ಯಕ್ರಮಗಳನ್ನು ಕನ್ನಡಿಗರೂ ರೇಡಿಯೋದಲ್ಲಿ ಕೇಳಿ ಆಯಾ ಅಧಿಕಾರಿಗಳಿಗೆ ತಪ್ಪದೆ ಆಗಾಗ ಕಾಗದ ಬರೆದು ಇಂತಹ ಕಾರ್ಯಕ್ರಮಗಳು ಸಾಕಷ್ಟು ಬರುವಂತೆ ಮೇಲಿಂದ ಮೇಲೆ ಒತ್ತಾಯಪಡಿಸಬೇಕೆಂದೂ ಕನ್ನಡ ಸಾಹಿತ್ಯ ಪರಿಷತ್ತು ಈ ವಿಚಾರದಲ್ಲಿ ಎಲ್ಲಾ ಆಕಾಶವಾಣಿ ಸ್ಟೇಷನ್‌ಗಳ ಅಧಿಕಾರಿಗಳೊಂದಿಗೂ ಘನತೆ ಹೊಂದಿದ ಶ್ರೀ॥ ವೈಸರಾಯವರೊಂದಿಗೂ ಪತ್ರ ವ್ಯವಹಾರ ನಡೆಸಬೇಕೆಂದೂ ಈ ಸಮ್ಮೇಳನ ಸೂಚಿಸುತ್ತದೆ.

ಸೂಚಕರು: ಶ್ರೀ.ವಿಠ್ಠಲ ಕುಲಕರ್ಣಿ

ಅನುಮೋದಕರು: ಶ್ರೀ.ಮಾಸ್ತಿ ವೆಂಕಟೇಶ ಅಯ್ಯಂಗಾರರು

ಹಿಂದಿನ ಸಮ್ಮೇಳನ ನಿರ್ಣಯಗಳನ್ನು ಕಾರ್‍ಯ ರೂಪಕ್ಕೆ ತರಬೇಕು.

ಹಿಂದಿನ ಸಮ್ಮೇಳನಗಳಲ್ಲಿ ಅಂಗೀಕೃತವಾದ ನಿರ್ಣಯಗಳಲ್ಲಿ ಕಾರ್‍ಯರೂಪಕ್ಕೆ ಬರದೇ ಇದ್ದಂಥ ನಿರ್ಣಯಗಳನ್ನು ಕಾರ್‍ಯರೂಪಕ್ಕೆ ತರಲು ಮತ್ತೆ ಪ್ರಯತ್ನ ನಡೆಸತಕ್ಕದ್ದು.

ಸೂಚಕರು: ಸಮ್ಮೇಳನಾಧ್ಯಕ್ಷರು.

****

೨೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೪೫

ಸಮ್ಮೇಳನಾಧ್ಯಕ್ಷರು: ಟಿ.ಪಿ.ಕೈಲಾಸಂ

ಮೈಸೂರು ಮಹಾರಾಜರಾದ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಅವರಿಗೆ ಕೃತಜ್ಞತಾ ಸಮರ್ಪಣೆ ಮತ್ತು ಪ್ರಾರ್ಥನೆ.

"ಮದರಾಸು ನಗರದಲ್ಲಿ ಸೇರಿರುವ ೨೯ನೇ ಕ. ಸಾ. ಸಮ್ಮೇಳನವು ಪರಿಷತ್ತಿನ ಮಹಾ ಪೋಷಕರು ಮೈಸೂರು ಸಂಸ್ಥಾನದ ಶ್ರೀಮಾನ್ ಮಹಾರಾಜರವರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರ ಸನ್ನಿಧಿಯಲ್ಲಿ,

ಮಹಾಸ್ವಾಮಿ ಅವರು ಕನ್ನಡ ಮತ್ತು ಕನ್ನಡಿಗರ ವಿಷಯದಲ್ಲಿ ತೋರುತ್ತಿರುವ ಅನುಗ್ರಹಕ್ಕಾಗಿ ತನ್ನ ಮನಃಪೂರ್ವಕವಾದ ಕೃತಜ್ಞತೆಗಳನ್ನು, ಭಕ್ತಿ, ವಿಶ್ವಾಸಗಳನ್ನು ಸಮರ್ಪಿಸಲು ಅಪ್ಪಣೆ ಬೇಡುತ್ತದೆ. ಮತ್ತು ಮಹಾಸ್ವಾಮಿ ಅವರು ಕನ್ನಡ ಸಾಹಿತ್ಯ ಪರಿಷತ್ತನ್ನು ಮುಂದಕ್ಕೂ ಅಭಿಮಾನದಿಂದ ಪರಿಪೋಷಿಸಿ ಬೆಳಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುತ್ತದೆ.

ಮೈಸೂರು ಸಂಸ್ಥಾನದ ಶ್ರೀ ಮನ್ಮಹಾರಾಜರವರಿಗೆ ಜಿ. ಸಿ. ಎಸ್. ಐ. ಬಿರುದು ಬಂದಿದ್ದಕ್ಕಾಗಿ ಅಭಿನಂದನೆ. ಪರಿಷತ್ತಿನ ಮಹಾಪೋಷಕರಾದ ಮೈಸೂರು ಸಂಸ್ಥಾನದ ಮಹಾರಾಜರು ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರಿಗೆ ಆಂಗ್ಲಸಾರ್ವಭೌಮರು "ಗ್ರ್ಯಾಂಡ್ ಕಮ್ಯಾಂಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯಾ" ಎಂಬ ಬಿರುದನ್ನು ಕೊಟ್ಟಿರುವ ಸಂದರ್ಭದಲ್ಲಿ ಮದರಾಸು ನಗರದಲ್ಲಿ ಸೇರಿರುವ ೨೯ನೇ ಕ. ಸಾ. ಪ ಸಮ್ಮೇಳನವು ತನ್ನ ಭಕ್ತಿಪೂರ್ವಕ ಸವಿನಯ ಅಭಿನಂದನೆಗಳು ಸಮರ್ಪಿಸಲು ಅಪ್ಪಣೆ ಬೇಡುತ್ತದೆ.

****

೩೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೪೭

ಸಮ್ಮೇಳನಾಧ್ಯಕ್ಷರು: ಸಿ.ಕೆ. ವೆಂಕಟರಾಮಯ್ಯ

ನಿರ್ಣಯ : ಭಾಷಾಪ್ರಾಂತರಚನೆಗೆ ಮಾರ್ಗದರ್ಶನ ಮಾಡಲು ಸಮಿತಿ ರಚನೆ

ಭಾರತೀಯ ಘಟನಾ ಸಮಿತಿಯಿಂದ ನಿಯಮಿಸಲ್ಪಡುವ ಭಾಷಾ ಅನುಗುಣ ಪ್ರಾಂತರಚನೆಯ ಸೀಮಾ ನಿರ್ಣಯ ಸಮಿತಿಯ ಮುಂದೆ ಕನ್ನಡಿಗರ ಪರವಾಗಿ ವಿಷಯಗಳನ್ನು ವಿವರಿಸಿ ಸ್ಥಳ ವಿದ್ಯಮಾನಗಳನ್ನು ತಿಳಿಸಿಕೊಟ್ಟು ನ್ಯಾಯವಾದ ತೀರ್ಪನ್ನು ಪಡೆಯುವುದಕ್ಕೆ ಕಾರ್ಯಕ್ರಮ ಕೈಗೊಳ್ಳಲು ಕಾರ್ಯಸಮಿತಿ ಈ ಕೆಳಗಿನ ಸ್ಥಳ ಸಮಿತಿಗಳನ್ನು ನೇಮಿಸುತ್ತದೆ.

೧. ಸೊಲ್ಲಾಪುರ-ಶ್ರೀಗಳಾದ

೧. ಸದಾನಂದ ನಾಯಕರು (ಬಿಜಾಪುರ), ೨. ರೋಹಿಣಕರ್ (ಸಂಚಾಲಕರು),
೩. ಡಾ॥ ಕಲ್ಯಾಣಿಯವರು. ೪. ಬಸಂತರಾವ್ ಕುಂಬಾಲಿಯವರು,
೫. ಒಳಸಂಗದ ಪಟೇಲರು.

೨. ಬಳ್ಳಾರಿ-ಶ್ರೀಗಳಾದ

೧. ಕೆ.ಚೆನ್ನಬಸಪ್ಪನವರು, ೨. ಕುಳಕುಂದ ಶಿವರಾಯರು,
೩. ಬಸವನಗೌಡರು, ೪. ಅಸುಂಡಿ ತಿರುಮಲರಾಯರು,
೫, ಬದನೆಹಾಳು ರಂಗನಗೌಡರು, ೬. ಜಿ. ರಾಚಣ್ಣನವರು (ಆದವಾನಿ)

೩. ಅನಂತಪುರ-ಶ್ರೀಗಳಾದ

೧. ಉರವಕೊಂಡ ಸ್ವಾಮಿಗಳು ಮತ್ತು ಅವರು ಬಯಸಬಹುದಾದ ಕಾರ್ಯಕರ್ತರು.

೪. ಹೊಸೂರು-ಕೊಳ್ಳೇಗಾಲ-ಶ್ರೀಗಳಾದ

೧. ಶಿವಮೂರ್ತಿಶಾಸ್ತ್ರಿಗಳು, ೨. ಕೊಪ್ಪಳದ ರಾಮಸ್ವಾಮಿ ಅಯ್ಯಂಗಾರ್ ಅವರು,
೩. ಕೊಳ್ಳೇಗಾಲದ ಶಿವಶಂಕರಪ್ಪನವರು, ೪. ಕೃಷ್ಣಗಿರಿ ನಂಜುಂಡಶೆಟ್ಟರು,
೫. ಪ್ರಸನ್ನಯ್ಯ, ಧರ್ಮಪುರಿ ಇವರು.

ಈ ಸಮಿತಿಗಳು ತಮ್ಮ ತಮ್ಮ ಪ್ರಾಂತದ ಗಡಿಯನ್ನು ಕುರಿತು ಅವಶ್ಯವಾದ ಅಂಕಿಅಂಶಗಳನ್ನು ಏರ್ಪಡಿಸುವ ಕಾರ್ಯದಲ್ಲಿ ಒಡನೆಯೇ ತೊಡಗಬೇಕಾಗಿದೆ. ಈ ಬಗ್ಗೆ ಕರ್ನಾಟಕದ ಏಕೀಕರಣ ಸಂಘದ ಸಹಾಯವನ್ನು ಪಡೆಯಬಹುದು.

ಉತ್ತರ ಕರ್ನಾಟಕದ ಸಂಸ್ಥಾನಗಳು ಏಕೀಕೃತ ಕರ್ನಾಟಕದಲ್ಲಿ ಅಡಕವಾಗಿ ಬರುವಂತೆ ಆಯಾ ಸಂಸ್ಥಾನಗಳ ಪ್ರಭುಗಳಲ್ಲಿ ತಕ್ಕ ರೀತಿಯಲ್ಲಿ ವಿಜ್ಞಾಪನೆ ಮಾಡಿ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುವ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಏಕೀಕರಣ ಸಂಘದ ಸಹಕಾರದಿಂದ ಒಂದು ಸಮಿತಿಯನ್ನು ಏರ್ಪಡಿಸಬೇಕೆಂದು ಈ ಸಮ್ಮೇಳನ ಸೂಚಿಸುತ್ತದೆ; ಮತ್ತು

ಶ್ರೀಗಳಾದ ೧. ಗು.ರೆ. ಬಾಪುರೆ, ರಬಕವಿ, ೨. ಬಸವನಗೌಡ ಪಾಟೀಲರು, ರಾಯದುರ್ಗ, ೩. ಚ.ಚ. ಅಬಕಾರ ಅವರು, ಬನಹಟ್ಟಿ, ೪. ಬಿ.ಡಿ. ತಟ್ಟಿ, ಲಕ್ಷ್ಮೇಶ್ವರ, ಈ ಮಹನೀಯರನ್ನು ಈ ಸಮಿತಿಯಲ್ಲಿ ಸೇರಿಸಬೇಕೆಂದು ಸಲಹೆ ಮಾಡುತ್ತದೆ.

ಸೂಚಕರು : ಶ್ರೀ.ಎಸ್.ವಿ.ಕೃಷ್ಣಮೂರ್ತಿಗಳು

ಅನುಮೋದಕರು: ಶ್ರೀ. ರಘುನಾಥರಾಯರು.

****

೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೪೮

ಸಮ್ಮೇಳನಾಧ್ಯಕ್ಷರು: ತಿ.ತಾ.ಶರ್ಮ.

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೩೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನಾಧ್ಯಕ್ಷರು: ಉತ್ತಂಗಿ ಚನ್ನಪ್ಪ

ನಿರ್ಣಯ: ಅಂಗೀಕೃತವಾದ ನಿರ್ಣಯಗಳು ಜಾರಿಗೆ ಬರಬೇಕು.

ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ವಾರ್ಷಿಕ ಸಭೆಗೆ ಆಯಾ ವರ್ಷದ ನಿವೃತ್ತರಾಗುತ್ತಿರುವ ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಬೇಕಾದುದು ಸಾಂಪ್ರದಾಯಕ; ವ್ಯಾವಹಾರಿಕ, ಹೊಸದಾಗಿ ಸಮ್ಮೇಳನಾಧ್ಯಕ್ಷರವರು ಹಿಂದಿನ ಕಾರ್‍ಯಕ್ರಮದ ವರದಿ ಮುಂತಾದವುಗಳಿಗೆ ಹೊಣೆಗಾರರಲ್ಲದ್ದರಿಂದ ಅವರು ಈ ವಾರ್ಷಿಕ ಸಭೆಗೆ ಅಧ್ಯಕ್ಷರಾಗಿ ನಡೆಸಬೇಕು. ಅದಕ್ಕಾಗಿ ವಾರ್ಷಿಕ ಸಭೆ ಸಮ್ಮೇಳನಕ್ಕಿಂತ ಪೂರ್ವ ನಡೆಯಬೇಕು. ಒಂದು ವೇಳೆ ಹಾಗೆ ಅನುಕೂಲವಾಗದಿದ್ದರೂ ಅಧ್ಯಕ್ಷತೆ ಸಾಂಪ್ರದಾಯಕವಾಗಿ ಹಳೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿಯೇ ನಡೆಯಬೇಕು. ಇದು ನಿಬಂಧನೆಯಾಗದೆ ಸಂಪ್ರದಾಯವಾಗಿ ಪಾಲಿತವಾಗತಕ್ಕದ್ದು.

ಪರಿಷತ್ತಿನ ನಿಬಂಧನೆಗಳು ಆಮೂಲಾಗ್ರವಾಗಿ ಪರಿಶೀಲಿಸಿ ಸೂಕ್ತ ಸಲಹೆಗಳನ್ನು ವರದಿ ಮಾಡಲಿಕ್ಕೆ ಒಂದು ತಜ್ಞ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಸಮಿತಿಯಲ್ಲಿ ಶ್ರೀಗಳಾದ (೧) ರೆವರೆಂಡ್ ಉತ್ತಂಗಿ ಚೆನ್ನಪ್ಪನವರು (೨) ಸಿದ್ದವನಹಳ್ಳಿ ಕೃಷ್ಣ ಶರ್ಮ (೩) ವ್ಹಿ.ಬಿ.ನಾಯಕ್‌ರವರು (೪) ನಿಟ್ಟೂರ್ ಶ್ರೀನಿವಾಸರಾಯರು (೫) ಬಿ.ಆರ್. ರಘುನಾಥರಾಯರು (೬) ತಾತಾಚಾರ್ಯ ಶರ್ಮರವರು.

ಈ ಸಮಿತಿ ಇಂದಿನಿಂದ ಆರು ತಿಂಗಳೊಳಗೆ ತಮ್ಮ ವರದಿ ಮಾಡಬೇಕಾಗಿ ಪ್ರಾರ್ಥನೆ.

ಈ ವಿಶೇಷ ಅಧಿವೇಶನದ ಮುಂದೆ ಬಂದಿರುವ ಎಲ್ಲ ಸೂಚನೆಗಳನ್ನು ಈ ಸಮಿತಿಯ ಪರಿಶೀಲನೆಗೆ ಒಪ್ಪಿಸತಕ್ಕದ್ದು. ಸಭೆ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿತು.

ಮೇಲಿನ ನಿರ್ಣಯಗಳ ದೃಷ್ಟಿಯಿಂದ ಅಧಿವೇಶನಕ್ಕೆ ಬಂದಿದ್ದ ಉಳಿದ ನಿರ್ಣಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಿಲ್ಲ. ಸಭೆ ಹತ್ತು ಘಂಟೆಗೆ ಮುಗಿಯಿತು.

****

೩೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೫೦
ಸಮೇಳನಾಧ್ಯಕ್ಷರು: ಎಂ. ಆರ್. ಶ್ರೀನಿವಾಸಮೂರ್ತಿ

ನಿರ್ಣಯ ೩ : ಮದರಾಸು ಸರ್ಕಾರದಿಂದ 'ಕನ್ನಡ ಕವಿಶ್ರೇಷ್ಠ' ಎಂಬ (ಪೊಯಿಟ್ ಲಾರೆಟ್) ಗೌರವವನ್ನು ಪಡೆದ ಶ್ರೀ ಮಂಗಳೂರು ಗೋವಿಂದ ಪೈ ಅವರನ್ನು ಈ ಸಮ್ಮೇಳನ ಅಭಿನಂದಿಸುತ್ತದೆ.

ಈ ರೀತಿ ಕನ್ನಡ ಕವಿಲೋಕವನ್ನು ಗೌರವಿಸುವುದಕ್ಕಾಗಿ ಮದರಾಸು ಸರ್ಕಾರವನ್ನು ಅಭಿನಂದಿಸುತ್ತದೆ.

ಸೂಚನೆ : ಸಮ್ಮೇಳನಾಧ್ಯಕ್ಷರು

ನಿರ್ಣಯ ೪ : ಅಪ್ರಕಾಶಿತವಾದ ಕನ್ನಡದಲ್ಲಿಯ ಅನೇಕ ಉದ್‌ಗ್ರಂಥಗಳನ್ನು ಬೆಳಕಿಗೆ ತಂದು ಕನ್ನಡ ಸಾಹಿತ್ಯದ ಹಿರಿಮೆಯನ್ನು ಬೆಳಗಿಸುವುದು ಕನ್ನಡ ಸಾಹಿತ್ಯ ಪರಿಷತ್ತಿನ ಮುಖ್ಯ ಕೆಲಸವಾದುದರಿಂದ ಹಾಗೂ ಈ ಸಲ ಕನ್ನಡ ಸಾಹಿತ್ಯ ಸಮ್ಮೇಳನವು ಸೊಲ್ಲಾಪುರದಲ್ಲಿ ಸೇರಿರುವುದರಿಂದ ಈ ನಗರವನ್ನು ತಮ್ಮ ತಪೋಭೂಮಿಯಾಗಿ ಮಾಡಿಕೊಂಡಿದ್ದ ಶ್ರೀ ಸಿದ್ಧರಾಮೇಶ್ವರರ ವಚನಗಳನ್ನು ಪರಿಷ್ಕರಿಸಿ ಪ್ರಕಾಶಿಸುವುದು ಸಮಯೋಚಿತವೆಂದು ಈ ಸಮ್ಮೇಳನ ಅಭಿಪ್ರಾಯಪಡುತ್ತದೆ. ಮತ್ತು ಇದಕ್ಕಾಗಿ ಒಂದು ತಜ್ಞರ ಸಂಪಾದಕ ಸಮಿತಿಯನ್ನು ನೇಮಿಸಬೇಕೆಂದು ಪರಿಷತ್ತನ್ನು ಸಮ್ಮೇಳನವು ಪ್ರಾರ್ಥಿಸುತ್ತದೆ. ಈ ಕಾರ್ಯವನ್ನು ಯಶಸ್ವಿಯಾಗಿ ಮುನ್ನಡೆಸಲು ಆವಶ್ಯಕ ಧನಸಹಾಯವನ್ನು ನೀಡಬೇಕೆಂದು ಶ್ರೀ ಸಿದ್ಧರಾಮೇಶ್ವರ ದೇವಸ್ಥಾನದ ವಿಶ್ವಸ್ಥ ಮಂಡಳಿಯನ್ನು ಈ ಸಮ್ಮೇಳನ ಬಿನ್ನವಿಸುತ್ತದೆ.

ಸೂಚಕರು : ಕಲ್ಯಾಣ ಶೆಟ್ಟಿ, ಸೊಲ್ಲಾಪುರ

ಅನುಮೋದಕರು : ಚ. ಮ. ವಾರದ, ಸೊಲ್ಲಾಪುರ

ನಿರ್ಣಯ ೫ : ಅಭಿನಂದನೆ ಸಲ್ಲಿಕೆ

ಕನ್ನಡ ಸಾಹಿತ್ಯ ಪರಿಷತ್ತಿಗೆ ಎಂದಿನಂತೆ ಧನಸಹಾಯ ಮಾಡುತ್ತಿರುವ ಮೈಸೂರು ಸರ್ಕಾರವನ್ನು ಈ ಸಮ್ಮೇಳನವು ಅಭಿನಂದಿಸುತ್ತದೆ. ಪರಿಷತ್ತಿನ ಯೋಜನೆಗಳು ಕೈಗೂಡಲು ಇನ್ನೂ ಹೆಚ್ಚಿನ ಧನ ಸಹಾಯ ಅಗತ್ಯವಾದುದರಿಂದ ಮೈಸೂರು ಸರ್ಕಾರ ಎಂದಿಗಿಂತ ಹೆಚ್ಚು ಸಹಾಯವನ್ನು ಪರಿಷತ್ತಿಗೆ ನೀಡಬೇಕೆಂದು ಈ ಸಮ್ಮೇಳನ ಪ್ರಾರ್ಥಿಸುತ್ತದೆ. ಇದೇ ರೀತಿ ಕನ್ನಡಿಗರಿಗೆ ಧನಸಾಹಯ ಮಾಡಬೇಕೆಂದು ಮುಂಬಯಿ, ಮದರಾಸು, ಕೊಡಗು, ಹೈದರಾಬಾದ್ ಸರ್ಕಾರಗಳನ್ನು, ಕರ್ಣಾಟಕದ ಎಲ್ಲಾ ಸ್ಥಳೀಯ ಸಂಸ್ಥೆಗಳನ್ನು ಈ ಸಮ್ಮೇಳನ ಪ್ರಾರ್ಥಿಸುತ್ತದೆ.

ಸೂಚಕರು : ವಿ. ಬಿ. ನಾಯಕ್ ಹುಬ್ಬಳ್ಳಿ

ಅನುವಾದಕರು : ಚಂದ್ರಶೇಖರ ಶಾಸ್ತ್ರಿಗಳು, ಯಾದಗಿರಿ.

****

೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೫೧

ಸಮ್ಮೇಳನಾಧ್ಯಕ್ಷರು : ಎಂ. ಗೋವಿಂದ ಪೈ

ಕನ್ನಡದಲ್ಲಿ ಶಿಕ್ಷಣ

ನಿರ್ಣಯ ೩ : ಭರತಖಂಡದ ಆಯಾ ಪ್ರಾಂತಗಳಲ್ಲಿ ಪ್ರಾಥಮಿಕ ತರಗತಿಯಿಂದ ವಿಶ್ವವಿದ್ಯಾನಿಲಯದ ಮೊದಲಿನ ಪದವಿಯವರೆಗಾದರೂ ಶಿಕ್ಷಣವು ಆಯಾ ಪ್ರಾಂತಭಾಷೆಯ ಮೂಲಕವೇ ಆಗಬೇಕೆಂದು ಈ ಸಮ್ಮೇಳನ ನಿರ್ಣಯಿಸಿ ಕನ್ನಡದ ವಿಷಯದಲ್ಲಿ ಅದನ್ನು ಕಾರ್ಯಗತ ಮಾಡುವುದಕ್ಕೆ ಬೇಕಾದ ಎಲ್ಲ ಕಾರ್ಯಕ್ರಮವನ್ನೂ ಕೈಗೊಳ್ಳುವುದಕ್ಕೆ ಪರಿಷತ್ತಿಗೆ ಅಧಿಕಾರ ಕೊಟ್ಟಿದೆ.

ಸೂಚಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್

ಅನುಮೋದಕರು : ಎಸ್. ಎಂ. ದೇಸಾಯಿ

****

೩೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೫೨

ಸಮ್ಮೇಳನಾಧ್ಯಕ್ಷರು : ಎಸ್. ಸಿ. ನಂದೀಮಠ

ಅಭಿವಂದನೆ

ಕನ್ನಡ ಸಾಹಿತ್ಯ ಪರಿಷತ್ತಿನ ಮಹಾಪೋಷಕರೂ ಮೈಸೂರು ಸಂಸ್ಥಾನದ ರಾಜಪ್ರಮುಖರೂ ಆದ ಶ್ರೀ ಜಯಚಾಮರಾಜೇಂದ್ರ ಬಹದ್ದೂರ್ ಅವರು ಸಂಸ್ಕೃತದಲ್ಲಿರುವ ವೇದ ಉಪನಿಷತ್ತು ಪುರಾಣ ಮೊದಲಾದ ಸುಮಾರು ೨೫೦ ಅಮೂಲ್ಯ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿಸಿ ಕನ್ನಡ ಸಾಹಿತ್ಯವು ಮಾಡಿರುವ ಮಹೋಪಕಾರಕ್ಕಾಗಿ ಈ ಸಮ್ಮೇಳನ ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸೂಚಕರು : ಸಮ್ಮೇಳನಾಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತಿನ ಮಹಾಪೋಷಕರು ಮೈಸೂರು ಸಂಸ್ಥಾನದ ರಾಜ ಪ್ರಮುಖರೂ ಆದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರು ಬೇಲೂರಿನಲ್ಲಿ ಸೇರಿರುವ ೩೫ನೆಯ ಸಾಹಿತ್ಯ ಸಮ್ಮೇಳನಕ್ಕೆ ಉದಾರವಾಗಿ ಸಹಾಯದ್ರವ್ಯವನ್ನು ಅನುಗ್ರಹಿಸಿರುವುದಕ್ಕಾಗಿ ಈ ಸಮ್ಮೇಳನಕ್ಕೆ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸೂಚಕರು : ಸಮ್ಮೇಳನಾಧ್ಯಕ್ಷರು.

ಮೈಸೂರಿನ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರೂ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿಗೆ ತುಂಬ ಸಹಾಯವನ್ನು ಸಲ್ಲಿಸಿದವರು ಆಗಿರುವ ಶ್ರೀಮಾನ್ ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿ ಅವರು ಕೇಂದ್ರ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲ್ಪಟ್ಟ ಬಗ್ಗೆ ಅವರನ್ನು ಈ ಸಮ್ಮೇಳನವು ಆನಂದಪೂರ್ವಕವಾಗಿ ಅಭಿನಂದಿಸುತ್ತದೆ.

ಸೂಚಕರು : ಸಮ್ಮೇಳನಾಧ್ಯಕ್ಷರು.

****

೩೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ
ಸಮ್ಮೇಳನಾಧ್ಯಕ್ಷರು: ವಿ ಸೀತಾರಾಮಯ್ಯ

ಪೂರ್ವ ಕವಿಗಳ ಗ್ರಂಥ ಪ್ರಕಟಣೆ

ಪೂರ್ವಕಾಲದ ಕವಿಗಳ ಗ್ರಂಥಗಳು ಅಚ್ಚಾಗಿದ್ದು ಈಗ ಪ್ರತಿಗಳಿಲ್ಲದಂತಾಗಿವೆ. ಪ್ರಯುಕ್ತ ಪ್ರತಿವರ್ಷವೂ ಕನಿಷ್ಠ ಪಕ್ಷ ಒಬ್ಬೊಬ್ಬ ಕವಿಯ ಗ್ರಂಥಗಳನ್ನಾದರೂ ಪರಿಷತ್ತು ಅಚ್ಚು ಹಾಕಿಸಬೇಕೆಂದು ಸಮ್ಮೇಳನವು ವಿನಂತಿಸುತ್ತದೆ.

ಸೂಚಕರು: ಶ್ರೀ ಬಿ. ವೀರಣ್ಣನವರು – ಹೊಸಪೇಟೆ

ಅನುಮೋದಕರು: ಶ್ರೀ ಜಿ.ಎನ್. ಸಭಾಹಿತ

ಸರಕಾರದ ಸುದ್ದಿ ಶಾಖೆಯು ಕನ್ನಡದಲ್ಲಿ ಇಲ್ಲಿಯವರೆಗಾದರೂ, 'ವಾರ್ತಾಚಲನಚಿತ್ರ'ವನ್ನು ತಯಾರಿಸಿಲ್ಲ. ಇದರ ಬಗ್ಗೆ ಸರಕಾರದವರು ಕನ್ನಡದಲ್ಲಿ 'ವಾರ್ತಾಚಲನ ಚಿತ್ರಗಳನ್ನು' ತಯಾರಿಸಬೇಕೆಂದು ಸಮ್ಮೇಳನವು ತೀವ್ರವಾಗಿ ಒತ್ತಾಯಪಡಿಸುತ್ತದೆ.

ಸೂಚಕರು: ಶ್ರೀ ಬಿ. ವೀರಣ್ಣನವರು– ಹೊಸಪೇಟೆ. ಅನುಮೋದಕರು: ಶ್ರೀ ಗಣೇಶ ಜೋಶಿ

ಕರ್ನಾಟಕ ಸಂಗೀತಗಾರರಿಗೆ ಪ್ರೋತ್ಸಾಹ

ಕನ್ನಡದಲ್ಲಿಯೇ ತುಂಬ ಹಿಂದೆಯೇ ಕೃತಿಗಳನ್ನು ರಚನೆ ಮಾಡಿ ಈ ಸಂಪ್ರದಾಯಕ್ಕೆ ಹಲವು ರೀತಿಗಳಲ್ಲಿ ಮಾರ್ಗದರ್ಶಕರಾದ, ಕನ್ನಡ ಹರಿದಾಸರು, ಶಿವಶರಣರು, ಹಿಂದಿನ ಮತ್ತು ಈಚಿನ ಕವಿಗಳು– ಈ ಮೊದಲಾದವರ ಕೃತಿಗಳ ವಿಷಯದಲ್ಲಿ ಸಂಶೋಧನೆಯನ್ನು ನಡೆಸಿ ಅವುಗಳನ್ನು ಹೆಚ್ಚು ಹೆಚ್ಚಾಗಿ ಹಾಡುವ ಸಂಪ್ರದಾಯವನ್ನು ರೂಢಿಗೆ ತಂದು ಕನ್ನಡಿಗರ ರಸಾಸ್ವಾದವನ್ನು ಹೆಚ್ಚಿಸಬೇಕೆಂದು ಸಂಗೀತಗಾರರನ್ನು ಮತ್ತು ವಿದ್ವಾಂಸರನ್ನೂ ಪ್ರಾರ್ಥಿಸುತ್ತದೆ. ಮತ್ತು ಈ ವಿಷಯದಲ್ಲಿ ಯುಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತನ್ನು ಈ ಸಮ್ಮೇಳನವೂ ಪ್ರಾರ್ಥಿಸುತ್ತದೆ.

ಸೂಚಕರು: ಡಾ॥ ಕಮಲಾಪೂರ ಅವರು

ಅನುಮೋದಕರು: ತೀ. ನಂ. ಶ್ರೀಕಂಠಯ್ಯನವರು

ಸಾಹಿತ್ಯ ಪ್ರಚಾರಕರ ನೇಮಕ

ಕನ್ನಡ ಸಾಹಿತ್ಯ ಅಭಿವೃದ್ಧಿಯ ದೃಷ್ಟಿಯಿಂದ ಕರ್ನಾಟಕದ ಪ್ರತಿಯೊಂದು ತಾಲ್ಲೂಕಿನ ಮುಖ್ಯ ಸ್ಥಳದಲ್ಲಿಯಾದರೂ ಸಾಧ್ಯತೆಯಂತೆ ಸಾಹಿತ್ಯ ಪರಿಷತ್ತಿನ ಪ್ರಚಾರಕರು ಯತ್ನಿಸಿ ನಿಯಮಿತವಾದ ಸಾಹಿತ್ಯ ಸಂಘಗಳನ್ನು ಏರ್ಪಡಿಸಬೇಕು. ಎಂದು ಸಮ್ಮೇಳನವು ಪರಿಷತ್ತಿಗೆ ಕೇಳಿಕೊಳ್ಳುತ್ತದೆ.

****

೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೫೫
ಸಮ್ಮೇಳನಾಧ್ಯಕ್ಷರು: ಶಿವರಾಮ ಕಾರಂತ

ನಿರ್ಣಯ: ೭ ಅಚ್ಚುಕೂಟಕ್ಕೆ ಕಟ್ಟಡ ನಿರ್ಮಾಣ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ ಮತ್ತು ಪರಿಷತ್ತಿಗೆ ಸೇರಿದ ಬಿ.ಎಂ. ಶ್ರೀಕಂಠಯ್ಯ ಅಚ್ಚುಕೂಟದ ಬಡಾವಣೆಯು ಅಗತ್ಯವಾಗಿ ಆಗಬೇಕಾಗಿರುವುದರಿಂದಲೂ ಪರಿಷತ್ತಿನ ಈಗಿನ ಕಟ್ಟಡ

ಸಾಲದೆ ಹೋಗಿರುವುದರಿಂದಲೂ ಆದಷ್ಟು ಜಾಗ್ರತೆ ದೊಡ್ಡ ಕಟ್ಟಡವೊಂದನ್ನು ಕಟ್ಟಿಸಲು ಪ್ರಯತ್ನ ಕೈಗೊಳ್ಳತಕ್ಕದ್ದು. ಅದಕ್ಕೆ ಕೇಂದ್ರ ಮತ್ತು ಕನ್ನಡ ಪ್ರಾಂತಗಳನ್ನೊಳಗೊಂಡ ಇತರ ಪ್ರಾಂತ ಸರ್ಕಾರಗಳ ನೆರವನ್ನೂ ಕನ್ನಡ ಉದಾರಿಗಳ ಸಹಾಯವನ್ನೂ ಪಡೆದು ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿರ್ಮಾನಿಸುವುದು.

ಸೂಚಕರು: ಶ್ರೀ ರೇವಣ ಸಿದ್ಧಯ್ಯ

ಅನುಮೋದಕರು: ಶ್ರೀ ನಿರಂಜನ

ನಿಣರ್ಯ: ೭ ವಿಶ್ವಕೋಶದ ರಚನೆ

ಕನ್ನಡದಲ್ಲಿ ವಿಶ್ವಕೋಶದ ರಚನೆಯ ಕೆಲಸದ ವಿಷಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವಿಶೇಷ ಆಸಕ್ತಿ ವಹಿಸಿ ಆ ಕೆಲಸ ಜಾಗ್ರತೆಯಾಗಿ ಮುಂದುವರಿಯುವುದಕ್ಕೆ ಬೇಕಾದ ಏರ್ಪಾಡುಗಳನ್ನು ಕೈಗೊಳ್ಳಬೇಕೆಂದು ಈ ಸಮ್ಮೇಳನ ಸೂಚಿಸುತ್ತದೆ

ನಿರ್ಣಯ: ೮ ಸಂಶೋಧನಾ ವಿಭಾಗ ಸ್ಥಾಪನೆ

ಸರ್ವತೋಮುಖವಾದ ಸಾಹಿತ್ಯಾಭಿವೃದ್ಧಿಗೆ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು ಪರಿಣತರಿಂದ ಕೂಡಿದ ಪರಿಶೋಧನಾ ವಿಭಾಗವನ್ನು ರೂಪಿಸಲು ಉಪಸಮಿತಿಯನ್ನು ಏರ್ಪಡಿಸಿ, ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಪರಿಷತ್ತಿಗೆ ಕನ್ನಡ ಪ್ರಾದೇಶಿಕ ಸರ್ಕಾರಗಳೂ ಮತ್ತು ಕೇಂದ್ರ ಸರ್ಕಾರವೂ ದ್ರವ್ಯ ಸಹಾಯವನ್ನೂ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೂಲಕ ಕೊಡಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಸೂಚಕರು: ಡಾ॥ ಡಿ. ಶಿವರಾಮಯ್ಯನವು

ಅನುಮೋದಕರು: ಶ್ರೀ ಕೆ.ಎಸ್. ರಾಜಯ್ಯಂಗಾರ್

ಅಭಿವಂದನೆ

ನಿರ್ಣಯ : ೩. ಕೇಂದ್ರ ಸರ್ಕಾರದಿಂದ ಸನ್ಮಾನಿತರಾದ ಶ್ರೀ ಕುವೆಂಪು ಅವರನ್ನು ಮುಂಬಯಿ ಸರ್ಕಾರದಿಂದ ಸನ್ಮಾನಿತರಾದ ಅಂಬಿಕಾತನಯ ದತ್ತರನ್ನೂ ಈ ಸಮ್ಮೇಳನವು ಅಭಿನಂದಿಸುತ್ತದೆ.

ಸೂಚಕರು : ಎನ್. ಅನಂತರಂಗಾಚಾರ್.

ಅನುಮೋದಕರು : ಚಂದ್ರಶೇಖರ ಶಾಸ್ತ್ರಿಗಳು

ಪರಿಪೋಷಕರು : ಮಲ್ಲಾಬಾದಿ ವೀರಭದ್ರಪ್ಪನವರು

****

೩೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೫೫

ಸಮ್ಮೇಳನಾಧ್ಯಕ್ಷರು : ಆದ್ಯ ರಂಗಾಚಾರ್ಯ

ನಿರ್ಣಯ: ೩. ಕನ್ನಡ ಲಿಪಿ ಸುಧಾರಣೆ

ಕನ್ನಡ ಲಿಪಿ ಸುಧಾರಣೆಯ ಸಮಸ್ಯೆಯನ್ನು ಪರಿಷತ್ತು ಕೈಗೆ ತೆಗೆದುಕೊಂಡು ಲೈನೋಟೈಪ್ ತಯಾರಿಕೆಗಾಗಿ ಅತಿ ಆವಶ್ಯಕವಾದ ಮತ್ತು ಅತ್ಯಂತ ಕಡಿಮೆಯಾದ ಸುಧಾರಣೆಗಳೇನೆಂಬುದರ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವಿಗೆ ಒಂದು ಕಾರ್ಯಗತವಾಗುವಂತೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು : ಶ್ರೀ ಮ. ನರಸಿಂಹಮೂರ್ತಿ ಅವರು.

ಅನುಮೋದಕರು : ಶ್ರೀ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು.

ನಿರ್ಣಯ: ೫ ಪ್ರಕಟಿತ ಗ್ರಂಥಗಳ ಪಟ್ಟಿ ಪ್ರಕಟಿಸಬೇಕು

ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ವರುಷವೂ ನಮ್ಮ ನಾಡಿನಲ್ಲಿ ಪ್ರಕಟವಾಗುವ ಗ್ರಂಥಗಳ ಪಟ್ಟಿಯನ್ನು ಪ್ರಕಟಿಸುವ ಕಾರ್ಯವನ್ನು ಕೈಗೊಳ್ಳಬೇಕಾಗಿ ಈ ಸಮ್ಮೇಳನವು ಆಶಿಸುತ್ತದೆ.

ಸೂಚಕರು: ಶ್ರೀ ಅ.ನ. ಸುಬ್ಬರಾವ್ ಅವರು.

ಅನುಮೋದಕರು: ಶ್ರೀ ಮ. ನರಸಿಂಹಮೂರ್ತಿ ಅವರು

****

೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೫೭

ಸಮ್ಮೇಳನಾಧ್ಯಕ್ಷರು: ಕೆ.ವಿ. ಪುಟ್ಟಪ್ಪ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೪೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೫೮

ಸಮ್ಮೇಳನಾಧ್ಯಕ್ಷರು: ವಿ.ಕೃ. ಗೋಕಾಕ್

ಆಂಧ್ರ – ಕರ್ನಾಟಕಕ್ಕೆ ಒಂದೇ ಲಿಪಿ ಮಾಡಲಿ

ನಿರ್ಣಯ ೪ :

ತೆಲುಗು ಲಿಪಿಯಲ್ಲಿಯೂ ಕನ್ನಡ ಲಿಪಿಯಲ್ಲಿಯೂ ಬಹುಮಟ್ಟಿಗೆ ಹೋಲಿಕೆಯಿರುವುದರಿಂದ ಆಂಧ್ರ ಕರ್ನಾಟಕಕ್ಕೆ ಒಂದೇ ಲಿಪಿಯನ್ನು ಸ್ವೀಕರಿಸುವಂತೆ ಕನ್ನಡ ಸಾಹಿತ್ಯ ಪರಿಷತ್ತು ಆಂಧ್ರ ಪರಿಷತ್ತಿನೊಡನೆ ಸಹಕರಿಸಿ ನಿರ್ಣಯಕ್ಕೆ ಬಂದರೆ ಮುದ್ರಣಾದಿ ವ್ಯವಹಾರಗಳಲ್ಲಿ ಇಬ್ಬರಿಗೂ ಹೆಚ್ಚಿನ ಅನುಕೂಲತೆಯುಂಟಾಗು ವುದೆಂದು ಈ ಸಭೆ ಅಭಿಪ್ರಾಯಪಡುತ್ತದೆ. ಇದನ್ನು ಲಕ್ಷೀಕರಿಸಿ ಆಂಧ್ರ ಪರಿಷತ್ತಿನ ಸಹಕಾರದೊಡನೆ ಒಂದು ತಜ್ಞರ ಸಮಿತಿಯನ್ನು ನಿಯಮಿಸಿ ವಿಚಾರವನ್ನು ಮುಂದುವರಿಸಬೇಕೆಂದು ಈ ಸಭೆಯು ಸೂಚಿಸುತ್ತದೆ.

ಸೂಚಕರು : ಕೋ. ಚೆನ್ನಬಸಪ್ಪ ಅನುಮೋದಕರು : ಭೀಮಶೆಟ್ಟರು.

ಸೂಚನೆಯನ್ನು ವಿರೋಧಿಸಿದವರು : ತ. ಸು. ಸುಬ್ರಹ್ಮಣ್ಯ ಅವರು

ಸಮರ್ಥಿಸಿದವರು : ಬೇಂದ್ರೆ ಅವರು, ಸದಾಶಿವಯ್ಯನವರು

ಸೂಚನೆ ಬಹುಮತದಿಂದ ಅಂಗೀಕೃತವಾಯಿತು.

****

೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೬೦

ಸಮ್ಮೇಳನಾಧ್ಯಕ್ಷರು: ಡಿ.ಎಲ್. ನರಸಿಂಹಾಚಾರ್

ನಿರ್ಣಯ: ೧೩ ಬೆಂಗಳೂರಿನಲ್ಲಿ ರಾಷ್ಟ್ರೀಯ ಗ್ರಂಥ ಭಂಡಾರ ಸ್ಥಾಪನೆ

ಭಾರತ ಸರಕಾರವು ಯೋಚಿಸಿರುವ ನಾಲ್ಕು ರಾಷ್ಟ್ರೀಯ ಗ್ರಂಥ ಭಂಡಾರಗಳಲ್ಲಿ ಒಂದನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಬೇಕೆಂದೂ ಈ ಬಗ್ಗೆ ರಾಜ್ಯ ಸರಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಸೂಕ್ತ ಕ್ರಮ ಕೈಗೊಳ್ಳಬೇಕೆಂದೂ ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು: ಶ್ರೀ ಕೆ. ಗೋಪಾಲಕೃಷ್ಣರಾಯರು

ಅನುಮೋದಕರು : ಶ್ರೀಮತಿ ಲೀಲಾದೇವಿ ಪ್ರಸಾದ್,

ಪರಿಪೋಷಕರು : ಶ್ರೀ ತ್ರಿವಿಕ್ರಮ, ಶ್ರೀ ಬಂಡಪ್ಪ ಅಡ್ವೋಕೇಟ್, ಬೀದರ್

****

೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೬೦

ಸಮ್ಮೇಳನಾಧ್ಯಕ್ಷರು: ಅ.ನ. ಕೃಷ್ಣರಾಯ

ನಿರ್ಣಯ: ೧೧ ಪ್ರತಿವರ್ಷದ ಪ್ರಕಟಿತ ಗ್ರಂಥಗಳ ಸೂಚಿ ತಯಾರಿ

ಪ್ರತಿವರ್ಷ ಕನ್ನಡ ಭಾಷೆಯಲ್ಲಿ ಪ್ರಕಟವಾಗುವ ಪುಸ್ತಕಗಳನ್ನು ವಿಷಾಯಾನುಗುಣವಾಗಿ ವಿಂಗಡಿಸಿ ಒಂದು ಸೂಚೀ ಪತ್ರವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಸಬೇಕೆಂದೂ ಸಮಸ್ತ ಲೇಖಕರೂ ಮತ್ತು ಪ್ರಕಾಶಕರೂ ಈ ಸಂಬಂಧದಲ್ಲಿ ಪರಿಷತ್ತಿನೊಡನೆ ಸಹಕರಿಸಬೇಕೆಂದೂ ಈ ಸಭೆಯು ಪ್ರಾರ್ಥಿಸುತ್ತದೆ.

ಸೂಚಕರು: ಶ್ರೀ ಸಿ.ಎಸ್. ಕುಲಕರ್ಣಿ ಅವರು.

ಅನುಮೋದಕರು: ಶ್ರೀ ಜಿ.ಡಿ. ನಾಡಕರ್ಣಿ ಅವರು.

ನಿರ್ಣಯ: ೧೫ ನಿರ್ಬಂಧನೆಗಳ ತಿದ್ದುಪಡಿಗೆ ಸಭೆ ಕರೆಯಿರಿ

ಪರಿಷತ್ತಿನ ಈ ಸಮ್ಮೇಳನವು, ಸಾಹಿತ್ಯ ಪರಿಷತ್ತಿನ ಸುಧಾರಣೆಯ ದೃಷ್ಟಿಯಿಂದ, ಅದರ ಘಟನೆಯ ತಿದ್ದುಪಡಿಗೆ ಸಂಬಂಧಪಟ್ಟ ವರದಿಯ ಮೇಲೆ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಅಧಿವೇಶನವನ್ನು ೧೯೬೧ನೇ ಜೂನ್ ಕೊನೆಯೊಳಗಾಗಿ ಕರೆದು, ಅಖೈರು ತೀರ್ಮಾನವನ್ನು ಕೈಗೊಂಡು ಅದನ್ನು ಸಾರ್ವಜನಿಕರ ಗಮನಕ್ಕೆ ತರಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ.

ಸೂಚಕರು: ಶ್ರೀ ಶಿವರಾಮ ಕಾರಂತರು.

ಅನುಮೋದಕರು: ಶ್ರೀ ರಾಮಪ್ರಸಾದ್ ಅವರು.

****

೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೬೧

ಸಮ್ಮೇಳನಾಧ್ಯಕ್ಷರು: ಕೆ.ಜಿ. ಕುಂದಣಗಾರ

ನಿರ್ಣಯ: ೨೦ ವಿಕೃತ ಪ್ರಕಟಣೆಗಳ ನಿಯಂತ್ರಣ ಪರಿಷತ್ತು ಮಾಡಲಿ

ಇತ್ತೀಚೆಗೆ ಪ್ರಕಟವಾಗುತ್ತಿರುವ ಹಲ ಕೆಲವು ಗ್ರಂಥಗಳಿಂದ ಜನತೆಯ ಮೇಲೆ ವಿಕೃತ ಪರಿಣಾಮವುಂಟಾಗುತ್ತಿರುವುದನ್ನು ಈ ಸಮ್ಮೇಳನವು ವಿಷಾದದಿಂದ ಗಮನಿಸುತ್ತದೆ. ಇಂಥ ಪ್ರಕಟಣೆ ಪ್ರದರ್ಶನಗಳನ್ನು ನಿಯಂತ್ರಣಗೊಳಿಸಲು ಕನ್ನಡ ಸಾಹಿತ್ಯ ಪರಿಷತ್ತಿನವರು, ಸಾಹಿತಿಗಳು, ವಿಮರ್ಶಕರೊಡನೆ ದೀರ್ಘಾಲೋಚನೆ ನಡೆಯಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಸಮ್ಮೇಳನವು ನಿರ್ಣಯಿಸುತ್ತದೆ.

ಸೂಚಕರು: ಕುಮಾರಿ ಪಿ. ಎಮ್. ಜೋಶಿ.

ಅನುಮೋದಕರು: ಶ್ರೀ ಕೆ.ಎಚ್. ಪಾಟೀಲ ಅವರು.

****

೪೪ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೬೭

ಸಮ್ಮೇಳನಾಧ್ಯಕ್ಷರು : ಆ.ನೇ. ಉಪಾಧ್ಯೆ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳು ಇಲ್ಲ

****

೪೫ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೬೭

ಸಮ್ಮೇಳನಾಧ್ಯಕ್ಷರು : ಕಡೆಂಗೋಡ್ಲು ಶಂಕರಭಟ್ಟ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳು ಇಲ್ಲ

****

೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೬೭

ಸಮ್ಮೇಳನಾಧ್ಯಕ್ಷರು: ಅ.ನೇ.ಉಪಾಧ್ಯೆ

ನಿರ್ಣಯ ೯ :

ಪ್ರಕಟವಾಗದಿರುವ ಮೂಲಕನ್ನಡ ಗ್ರಂಥಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟ ಮಾಡಬೇಕು. ಅದು ಅದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸತಕ್ಕದ್ದು. ಬೇಕಾದ ಸಹಾಯವನ್ನು ಕೇಂದ್ರ ಸರ್ಕಾರದಿಂದ ಪಡೆಯತಕ್ಕದ್ದೆಂದು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ನಿರ್ಣಯ ೪ :

ಕನ್ನಡ ಸಾಹಿತ್ಯ ಪರಿಷತ್ತು ಕಳೆದ ೫೦ ವರ್ಷಗಳಿಗೂ ಮಿಕ್ಕಿ ಕನ್ನಡ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಅಭಿವೃದ್ಧಿಗಾಗಿ ದುಡಿಯುತ್ತಿದೆ. ಈ ೫೦ ವರ್ಷಗಳ ಸೇವೆಯ ನೆನಪಿಗಾಗಿ ಸುವರ್ಣ ಮಹೋತ್ಸವವನ್ನು ನಡೆಸುವುದು ಯುಕ್ತವಾಗಿದೆ. ಈ ಉತ್ಸವವನ್ನು ಇದೇ ವರ್ಷದ ಡಿಸೆಂಬರ್ ತಿಂಗಳೊಳಗಾಗಿ ವೈಭವದಿಂದ ಆಚರಿಸಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ. ಈ ಉತ್ಸವಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಸ್ಥಾನಿಕ ಸಂಸ್ಥೆಗಳೂ ಹಾಗೂ ಕರ್ನಾಟಕದ ಮಹಾಜನರೂ ಧನಸಹಾಯ ಮಾಡಬೇಕೆಂದು ಈ ಸಮ್ಮೇಳನ ಕೋರುತ್ತದೆ.

ಸೂಚಕರು: ಡಾ. ಎಸ್. ರಾಮಕೃಷ್ಣ.

ಅನುಮೋದಕರು : ಕಾ.ಸ. ಧರಣೇಂದ್ರಯ್ಯ

ನಿರ್ಣಯ: ೭. ಅಂಗರಚನೆ ತಿದ್ದುಪಡಿ ಮಾಡಬೇಕು

೪೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪರಿಷತ್ತಿನ ಅಧ್ಯಕ್ಷರೂ ಸಂಘಸಂಸ್ಥೆಗಳ ಪ್ರತಿನಿಧಿಗಳೂ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಶಾಖೆಗಳನ್ನು ಏರ್ಪಾಟು ಮಾಡುವುದು, ಕರ್ನಾಟಕ ಸಂಘಗಳೂ ಜಿಲ್ಲಾ ಶಾಖೆ ಮತ್ತು ಕೇಂದ್ರ ಪರಿಷತ್ತುಗಳ ನಡುವೆ ಹೊಂದಾಣಿಕೆಯನ್ನು ಕಲ್ಪಿಸಲು ಅನುಕೂಲವಾದ ವಾತಾವರಣ ಉಂಟು ಮಾಡುವುದು – ಈ ದೃಷ್ಟಿಯಿಂದ ಪರಿಷತ್ತಿನ ಅಂಗರಚನೆಯಲ್ಲಿ ಸೂಕ್ತ ತಿದ್ದುಪಾಟುಗಳನ್ನು ಮಾಡಬೇಕೆಂದು ಈ ಸಮ್ಮೇಳನವು ಪರಿಷತ್ತನ್ನು ಪ್ರಾರ್ಥಿಸುತ್ತದೆ.

ಸೂಚಕರು: ಶ್ರೀ.ಸಿ.ಆರ್. ಶ್ರೀನಿವಾಸ ಅಯ್ಯಂಗಾರ್

ಅನುಮೋದಕರು: ಶ್ರೀ.ಟಿ.ಶಿವಾನಂದ ಸ್ವಾಮಿ

ಸೂಚಕರು:ಶ್ರೀ.ಎನ್.ಎಸ್.ರಾಮಪ್ರಸಾದ್

ಅನುಮೋದಕರು: ಶ್ರೀ.ಆರ್.ಎಚ್.ರಾಜು.

ನಿರ್ಣಯ: ೧೦ ಪ್ರತಿವರ್ಷದ ಕನ್ನಡ ಗ್ರಂಥಗಳ ಸೂಚಿ ಪರಿಷತ್ತು ಪ್ರಕಟಿಸಬೇಕು

ಆಯಾ ವರ್ಷದಲ್ಲಿ ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಗ್ರಂಥಗಳ ಗ್ರಂಥಸೂಚಿಯನ್ನೂ ಪರಿಷತ್ತು ಪ್ರತಿ ವರ್ಷವೂ ಪ್ರಕಟಿಸಬೇಕು.

ಸೂಚಕರು: ಶ್ರೀ ಶ್ರೀನಿವಾಸ ಉಡುಪ

ಅನುಮೋದಕರು: ಶ್ರೀ.ಆರ್.ಎಚ್.ರಾಜು.

****

೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೭೦

ಸಮ್ಮೇಳನಾಧ್ಯಕ್ಷರು: ಡಿ. ಜವರೇಗೌಡ

ನಿರ್ಣಯ ೧೬: ಬೆಂಗಳೂರಿನಲ್ಲಿ ಕನ್ನಡ ವಾತಾವರಣ ನಿರ್ಮಾಣ

ಬೆಂಗಳೂರು ನಗರದಲ್ಲಿ ವಿಶೇಷವಾಗಿ ಕನ್ನಡದ ವಾತಾವರಣವನ್ನು ಉಂಟುಮಾಡಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಈ ಸಭೆ ಸಂಪೂರ್ಣ ಅಧಿಕಾರವನ್ನು ನೀಡುತ್ತದೆ.

ಸೂಚಕರು: ಶ್ರೀ.ಜಿ.ಬಿ. ಶಿವಸ್ವಾಮಿ

ಅನುಮೋದಕರು: ಶ್ರೀ.ಕೋಣಂದೂರು ಲಿಂಗಪ್ಪ

****

೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೭೪

ಸಮ್ಮೇಳನಾಧ್ಯಕ್ಷರು: ಜಯದೇವಿತಾಯಿ ಲಿಗಾಡೆ

ನಿರ್ಣಯ ೧೦: ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿಶ್ವ ಸಾಹಿತ್ಯ ಸಮ್ಮೇಳನವಾಗಿಸಬೇಕು

ಮುಂದೆ ನಡೆಯಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವದ ಸಂದರ್ಭದಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸೇರಿಸಲು ಅವಶ್ಯಕ ಏರ್ಪಾಡುಗಳನ್ನು ಮಾಡಬೇಕೆಂದು ಈ ಸಭೆಯು ತೀರ್ಮಾನಿಸುತ್ತದೆ.

ಸೂಚಕರು: ಜಿ. ವೆಂಕಟಸುಬ್ಬಯ್ಯ

ಅನುಮೋದಕರು:ಎಚ್.ಬಿ.ಜ್ವಾಲನಯ್ಯ

****

೪೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೭೬

ಸಮ್ಮೇಳನಾಧ್ಯಕ್ಷರು: ಎಸ್. ವಿ. ರಂಗಣ್ಣ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೫೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೭೮

ಸಮ್ಮೇಳನಾಧ್ಯಕ್ಷರು : ಜಿ. ಪಿ. ರಾಜರತ್ನಂ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯ ಇಲ್ಲ.

***

೫೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೭೯

ಸಮ್ಮೇಳನಾಧ್ಯಕ್ಷರು : ಎಂ. ಗೋಪಾಲಕೃಷ್ಣ ಅಡಿಗ

ನಿರ್ಣಯ ೧೧ : ಕನ್ನಡ ಲಿಪಿ ಸುಧಾರಣೆ ಬೋಧನೆ

ಮಕ್ಕಳು ಕನ್ನಡವನ್ನು ಸುಲಭದಲ್ಲಿ ಕಲಿಯಲು ಅನುಕೂಲವಾಗುವಂತೆ ಒಂದು ಭಾಷಾ ತಜ್ಞರ ಸಮಿತಿಯನ್ನು ನೇಮಕ ಮಾಡಿ ಕಾರ್ಯೋನ್ಮುಖವಾಗಬೇಕೆಂದು ಈ ಸಮ್ಮೇಳನ ಪರಿಷತ್ತನ್ನು ಪ್ರಾರ್ಥಿಸುತ್ತದೆ,

ಸೂಚಕರು : ಬಳ್ಳೇಕೆರೆ ಹನುಮಂತಪ್ಪ

ಅನುಮೋದಕರು : ಅನಂತ ಸುಬ್ಬರಾಯರು

ನಿರ್ಣಯ ೨೧ ಜಿಲ್ಲಾ ಕೇಂದ್ರಗಳಲ್ಲಿ ಸಾಹಿತ್ಯಭವನಗಳ ನಿರ್ಮಾಣ

ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಸಾಹಿತ್ಯ ಭವನಗಳನ್ನು ನಿರ್ಮಿಸಬೇಕಂದು ಕನ್ನಡ ಸಾಹಿತ್ಯ ಪರಿಷತ್ತು ನಿರ್ಧರಿಸಿದೆ. ಈ ಭವನಗಳ ಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಬೇಕೆಂದೂ ಅದಕ್ಕೆ ಬೇಕಾಗುವ ನಿವೇಶನಗಳನ್ನೂ ಉಚಿತವಾಗಿ ಕೊಡಿಸಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಪ್ರಾರ್ಥಿಸುತ್ತದೆ.

ಸೂಚಕರು : ಕೀಕಾನ ರಾಮಚಂದ್ರ

ಅನುಮೋದಕರು : ಬಿ. ಎಂ. ಇದಿನಬ್ಬ.

****

೫೨ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೮೦
ಸಮ್ಮೇಳನಾಧ್ಯಕ್ಷರು : ಬಸವರಾಜ ಕಟ್ಟೀಮನಿ

ನಿರ್ಣಯ ೧೨ : ಕರ್ನಾಟಕ ರಾಜ್ಯ ಸರ್ಕಾರ, ರಾಜ್ಯ ಸಾರ್ವಜನಿಕ ಗ್ರಂಥಾಲಯ ಇತ್ಯಾದಿ ಇಲಾಖೆಗಳ ಸಗಟು ಖರೀದಿ ಸಮಿತಿಗಳಿಗೆ ಸಾಹಿತ್ಯ ಪರಿಷತ್ತಿಗೆ ಪ್ರಾತಿನಿಧ್ಯವಿರಬೇಕೆಂದು ಸರ್ಕಾರವನ್ನು ಈ ಸಮ್ಮೇಳನ ಕೇಳಿಕೊಳ್ಳುತ್ತದೆ.

ಸೂಚಕರು : ಆರ್. ಎಸ್. ಪಾಟೀಲ

ಅನುಮೋದಕರು : ಡಿ. ಲಿಂಗಯ್ಯ

ನಿರ್ಣಯ ೧೩ : ಜನಪ್ರಿಯವಾದ ಕನ್ನಡದ ಅತ್ಯುತ್ತಮ ಗ್ರಂಥಗಳನ್ನು ಪ್ರಕಟಿಸಿ ಅವುಗಳನ್ನು ಕಡಿಮೆ ಬೆಲೆಗೆ ಪೂರೈಸುವಂತೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರ, ಧನಸಹಾಯ ನೀಡಬೇಕೆಂದು ಈ ಸಮ್ಮೇಳನವು ಕೋರುತ್ತದೆ.

ಸೂಚಕರು : ಶಂ. ಸು. ಬಿರಾದಾರ

ಅನುಮೋದಕರು : ಜಿ. ಗೋವಿಂದರಾಜು

****

೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೮೧
ಪು.ತಿ. ನರಸಿಂಹಾಚಾರ್

ನಿರ್ಣಯ : ಜಿಲ್ಲಾ ಸಾಹಿತ್ಯ ಭವನ

ಕಳೆದ ಮೂರು ವರ್ಷಗಳಿಂದ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಸಾಹಿತ್ಯ ಭವನವನ್ನು ನಿರ್ಮಿಸಬೇಕೆಂದು ಪ್ರಯತ್ನ ನಡೆದಿದ್ದು ಇದು ಬೇಗ ಕಾರ್ಯಗತವಾಗಲು ಸರ್ಕಾರ ಎಲ್ಲ ರೀತಿಯ ನೆರವು ನೀಡಬೇಕೆಂದು ಈ ಸಮ್ಮೇಳನವು ವಿನಂತಿಸುತ್ತದೆ.

ಸೂಚಕರು : ಟಿ. ಗವಿಸಿದ್ದಪ್ಪ

ಅನುಮೋದಕರು : ಡಿ.ಜೆ. ಪದ್ಮನಾಭ

****

೫೪ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೮೧

ಸಮ್ಮೇಳನಾಧ್ಯಕ್ಷರು : ಶಂ. ಬಾ ಜೋಶಿ

ನಿರ್ಣಯ : ಜಿಲ್ಲಾ ಭವನಗಳ ನಿರ್ಮಾಣ

ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಸಾಹಿತ್ಯ ಭವನಗಳನ್ನು ನಿರ್ಮಿಸಲು ನೆರವು ನೀಡಲು ಕರ್ನಾಟಕ ಸರಕಾರವು ತೀರ್ಮಾನ ತೆಗೆದುಕೊಂಡಿದ್ದಕ್ಕೆ ಈ ಸಮ್ಮೇಳನ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತದೆ.

ಸೂಚಕರು : ಟಿ.ಕೆ. ಮಹಮೂದ್

ಅನುಮೋದಕರು : ಎಂ.ಪಿ. ದೇವರಾಜ್

****

೫೫ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೮೨

ಸಮ್ಮೇಳನಾಧ್ಯಕ್ಷರು : ಗೊರೂರು ರಾಮಸ್ವಾಮಿ ಅಯ್ಯಂಗಾರ್

ನಿರ್ಣಯ : ಜಿಲ್ಲಾ ಸಾಹಿತ್ಯ ಭವನ ನಿರ್ಮಾಣ

ಕರ್ನಾಟಕ ಸರ್ಕಾರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಸಾಹಿತ್ಯ ಭವನಗಳನ್ನು ನಿರ್ಮಿಸಲು ಮುಖ್ಯಮಂತ್ರಿಗಳು ಮಡಿಕೇರಿ ಸಾಹಿತ್ಯ ಸಮ್ಮೇಳನದ ಉದ್ಘಾಟನೆ ಮಾಡುತ್ತ ನೆರವು ನೀಡಲು ಆಶ್ವಾಸನೆ ನೀಡಿದ್ದು ಈಗ ಸರ್ಕಾರಕ್ಕೆ ಜಿಲ್ಲಾ ಭವನಗಳನ್ನು ನಿರ್ಮಿಸಲು ವಹಿಸಿಕೊಟ್ಟಿರುವುದರಿಂದ ಈ ಕೆಲಸ ಮಂದಗತಿಯಲ್ಲಿ ಸಾಗಲು ಕಾರಣವಾಗಿದೆ. ಆದುದರಿಂದ ರಾಜ್ಯ ಸರ್ಕಾರ ಕೂಡಲೇ ಕನ್ನಡ ಸಾಹಿತ್ಯ ಪರಿಷತ್ತಿಗೆ ಈ ಕೆಲಸವನ್ನು ವಹಿಸಿಕೊಟ್ಟು ಕನ್ನಡದ ಕೆಲಸ ಸುಗಮವಾಗಿ ನಡೆಯಲು ಅವಕಾಶ ಮಾಡಿಕೊಡಬೇಕೆಂದು ಈ ಸಮ್ಮೇಳನ ಸರ್ಕಾರವನ್ನು ಪ್ರಾರ್ಥಿಸುತ್ತದೆ.

ಸೂಚಕರು : ಎಂ.ಪಿ. ದೇವರಾಜ್

ಅನುಮೋದಕರು : ಜಿ.ವಿ. ಶಿವಸ್ವಾಮಿ

****

೫೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೮೪

ಸಮ್ಮೇಳನಾಧ್ಯಕ್ಷರು: ಎ.ಎನ್.ಮೂರ್ತಿರಾವ್

ನಿರ್ಣಯ ೯ : ಜಿಲ್ಲಾ ಸಾಹಿತ್ಯ ಭವನ ನಿರ್ಮಾಣ

ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಈಗಾಗಲೇ ನಿರ್ಮಿಸಬೇಕೆಂದು ಯೋಜಿಸಿರುವ 'ಸಾಹಿತ್ಯ ಭವನ'ದ ನರ್ಮಾಣ ಕಾರ್ಯವನ್ನು ಸರ್ಕಾರ ತ್ವರಿತವಾಗಿ ಕೈಗೊಳ್ಳಬೇಕೆಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ.

ಸೂಚಕರು : ಟಿ. ಗವಿಸಿದ್ಧಪ್ಪ

ಅನುಮೋದಕರು : ಆರ್. ಆಂಜನೇಯಲು

****

೫೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೮೫

ಸಮ್ಮೇಳನಾಧ್ಯಕ್ಷರು: ಹಾ.ಮಾ.ನಾಯಕ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೫೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೮೭

ಸಮ್ಮೇಳನಾಧ್ಯಕ್ಷರು: ಸಿದ್ದಯ್ಯ ಪುರಾಣಿಕ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯವಿಲ್ಲ

****

೫೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೦

ಸಮ್ಮೇಳನಾಧ್ಯಕ್ಷರು: ಆರ್.ಸಿ.ಹಿರೇಮಠ

ನಿರ್ಣಯ ೧೫ : ಜಿಲ್ಲಾ ಸಾಹಿತ್ಯ ಭವನಕ್ಕೆ ನಿವೇಶನ

ಜಿಲ್ಲಾ ಸಾಹಿತ್ಯ ಪರಿಷತ್ತುಗಳಿಗೆ ಆಯಾ ಜಿಲ್ಲಾ ಕೇಂದ್ರಗಳಲ್ಲಿ ಉಚಿತ ನಿವೇಶನ ದೊರಕಿಸಿ ಕೊಡಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

ಸೂಚಕರು : ಜಯಕುಮಾರ್

ಅನುಮೋದಕರು : ಎನ್.ಎಚ್.ರಾಜು

****

೬೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೦

ಸಮ್ಮೇಳನಾಧ್ಯಕ್ಷರು: ಕೆ.ಎಸ್.ನರಸಿಂಹಸ್ವಾಮಿ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೬೧ನೇ ಸಾ ಸಾಹಿತ್ಯ ಸಮ್ಮೇಳನ ೧೯೯೨

ಸಮ್ಮೇಳನಾಧ್ಯಕ್ಷರು : ಜಿ.ಎಸ್. ಶಿವರುದ್ರಪ್ಪ

ನಿರ್ಣಯ ೨೬ : ದಾವಣಗೆರೆಯಲ್ಲಿ ಗ್ರಂಥ ಭಂಡಾರ ಸ್ಥಾಪನೆ

ದಾವಣಗೆರೆಯಲ್ಲಿ ನಡೆದಿರುವ ಅಖಿಲಭಾರತ ೬೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪು ಸದಾ ಉಳಿಯುವಂತೆ ದಾವಣಗೆರೆಯಲ್ಲಿ ಒಂದು ಸುಸಜ್ಜಿತ ಗ್ರಂಥ ಭಂಡಾರವನ್ನು ಸ್ಥಾಪಿಸಬೇಕೆಂದು ಈ ಸಭೆಯು ಸ್ವಾಗತ ಸಮಿತಿಯನ್ನು ಕೋರುತ್ತದೆ.

ಸೂಚಕರು : ಜೋಗಪ್ಪನವರ ಕೊಟ್ರಬಸಪ್ಪ

ಅನುಮೋದಕರು : ಕೆ. ಬಿ. ನಾಗರಾಜ

****

೬೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೩

ಸಮ್ಮೇಳನಾಧ್ಯಕ್ಷರು: ಸಿಂಪಿ ಲಿಂಗಣ್ಣ

ನಿರ್ಣಯ ೨ : ಪರಿಷತ್ತಿಗೆ ಪ್ರಾತಿನಿಧ್ಯ ನೀಡಿ

ಈಗ ಕನ್ನಡ ವಿಶ್ವವಿದ್ಯಾನಿಲಯದಲ್ಲಿರುವ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳ ಅಧ್ಯಯನ ಮಂಡಳಿಗಳಲ್ಲಿ ಮತ್ತು ರಾಜ್ಯದ ವಿವಿಧ ಅಕಾಡೆಮಿಗಳಲ್ಲಿ ಪರಿಷತ್ತಿನ ಅಧ್ಯಕ್ಷರು ಅಥವಾ ಅವರ ಪ್ರತಿನಿಧಿಗೆ ಪದನಿಮಿತ್ತ ಪ್ರಾತಿನಿಧ್ಯವಿರಬೇಕು.

ಸೂಚಕರು : ಗುರುಮೂರ್ತಿ ಪೆಂಡಕೂರು ಅನುಮೋದಕರು : ಎ. ಪರಮೇಶ್ವರ

ನಿರ್ಣಯ ೨೨ :

ಸಾಹಿತ್ಯ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು ಮತ್ತಿತರ ಸಾಹಿತ್ಯ ಸಂಸ್ಥೆಗಳು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಒತ್ತು ಕೊಡಬೇಕು.

ಸೂಚಕರು : ಎಸ್.ವಿ. ಶ್ರೀನಿವಾಸರಾವ್

ಅನುಮೋದಕರು : ಸಿಸು ಸಂಗಮೇಶ

****

೬೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೪

ಸಮ್ಮೇಳನಾಧ್ಯಕ್ಷರು: ಚದುರಂಗ

ನಿರ್ಣಯ ೧೩ : ಕುವೆಂಪು ಅವರಿಗೆ ಭಾರತರತ್ನ ಪ್ರಶಸ್ತಿ ನೀಡಿ

ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಅನುಪಮ ಕಾಣಿಕೆ ಸಲ್ಲಿಸಿರುವ ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತರತ್ನ ಪ್ರಶಸ್ತಿ ನೀಡಬೇಕೆಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ.

****

೬೪ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೮

ಸಮ್ಮೇಳನಾಧ್ಯಕ್ಷರು: ಹೆಚ್.ಎಲ್. ನಾಗೇಗೌಡ

ನಿರ್ಣಯ : ಹೊರನಾಡು ಕನ್ನಡ ಸಂಘಗಳಿಗೆ ನೆರವು

ನಾಡಿನಾದ್ಯಂತ ಮತ್ತು ಹೊರನಾಡುಗಳಲ್ಲಿರುವ ಕನ್ನಡ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಗಳಿಗೆ ನೆರವು ನೀಡುವ ಸಂಬಂಧ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಮಾನ್ಯ ಆಡಳಿತ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಒಳಗೊಂಡಂತೆ ಒಂದು ಅಧಿಕೃತ ಸಮಿತಿಯನ್ನು ರಚಿಸಬೇಕೆಂದು ಈ ಸಮಿತಿ ವ್ಯವಸ್ಥಿತ ಸಮೀಕ್ಷೆ ನಡೆಸಿ ಸಂಘ ಸಂಸ್ಥೆಗಳಿಗೆ ನೀತಿ ಸಂಹಿತೆಯಂತೆ ನೆರವು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಈ ಸಮ್ಮೇಳನ ಸಲಹೆ ನೀಡುತ್ತದೆ.

ಸೂಚಕರು : ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅನುಮೋದಕರು : ಸದಾಶಿವ ವಿ. ಬಡ್ಡಿಗಣ್ಣನವರ

ನಿರ್ಣಯ : ೧೧ ನಿರ್ಣಯಗಳ ಅನುಷ್ಠಾನ

ಸಮ್ಮೇಳನಗಳಲ್ಲಿ ಕೈಗೊಳ್ಳುವ ನಿರ್ಣಯಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾರ್ಯಾನುಸರಣೆಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಅಧ್ಯಕ್ಷರಾಗಿರುವ ಐದು ಜನರ ಒಂದು ಸಮಿತಿಯನ್ನು ರಚಿಸತಕ್ಕದ್ದೆಂದು ಈ ಸಭೆ ಸಲಹೆ ಮಾಡುತ್ತದೆ.

ಸೂಚಕರು: ಚಂದ್ರಯ್ಯ ನಾಯ್ಡು

ಅನುಮೋದಕರು: ಪೆರ್ಲ ಕೃಷ್ಣಭಟ್ಟ

ನಿರ್ಣಯ: ೪ ರಾಜ್ಯ ಸರ್ಕಾರದಲ್ಲಿ ಪರಿಷತ್ತಿಗೆ ಪ್ರಾತಿನಿಧ್ಯ

ಕನ್ನಡ ಸಾಹಿತ್ಯ ಕಲೆ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ರಾಜ್ಯ ಸರ್ಕಾರ ನೇಮಿಸುವ ಯಾವುದೇ ಉನ್ನತ ಮಟ್ಟದ ಶಾಸನಬದ್ಧ ಅಥವಾ ಸಲಹಾ ಸ್ವರೂಪದ ಸಮಿತಿಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಪ್ರಾತಿನಿಧ್ಯ ನೀಡಬೇಕೆಂದೂ ಈ ಸಮ್ಮೇಳನ ರಾಜ್ಯ ಸರ್ಕಾರಕ್ಕೆ ಸೂಚನೆ ಮಾಡುತ್ತದೆ.

ಸೂಚಕರು: ಶ್ರೀ ಸಿ.ವಿ. ಶಿವಶಂಕರ್

ಅನುಮೋದಕರು: ಶ್ರೀ ಗೋವಿಂದಳ್ಳಿ ದೇವೇಗೌಡ

****

೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೬

ಸಮ್ಮೇಳನಾಧ್ಯಕ್ಷರು: ಚನ್ನವೀರ ಕಣವಿ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೬೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ – ೧೯೯೭

ಸಮ್ಮೇಳನಾಧ್ಯಕ್ಷರು: ಕಯ್ಯಾರ ಕಞ್ಞಣ್ಣರೈ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೬೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೧೯೯೯

ಸಮ್ಮೇಳನಾಧ್ಯಕ್ಷರು: ಎಸ್.ಎಲ್.ಭೈರಪ್ಪ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೦

ಸಮ್ಮೇಳನಾಧ್ಯಕ್ಷರು: ಶಾಂತಾದೇವಿ ಮಾಳವಾಡ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೬೯ನೆ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೨

ಡಾ॥ ಯು. ಆರ್. ಅನಂತಮೂರ್ತಿ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೭೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೩

ಸಮ್ಮೇಳನಾಧ್ಯಕ್ಷರು: ಡಾ. ಪಾಟೀಲ ಪುಟ್ಟಪ್ಪ.

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೭೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೩

ಸಮ್ಮೇಳನಾಧ್ಯಕ್ಷರು: ಡಾ.ಕಮಲಾ ಹಂಪನಾ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೬

ಸಮ್ಮೇಳನಾಧ್ಯಕ್ಷರು: ಶಾಂತರಸ ಹೆಂಬೇರಾಳು

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೭೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೬

ಸಮ್ಮೇಳನಾಧ್ಯಕ್ಷರು : ಪ್ರೊ.ಕೆ.ಎಸ್.ನಿಸಾರ್ ಅಹಮದ್

ನಿರ್ಣಯ ೧೪: ಜಿಲ್ಲಾ ಭವನಗಳಿಗೆ ಉಚಿತ ನಿವೇಶನ.

ಸುವರ್ಣ ಕರ್ನಾಟಕ ಆಚರಣೆಯ ಈ ಸಂದರ್ಭದಲ್ಲಿ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಉಚಿತ ನಿವೇಶನಗಳನ್ನು ನೀಡಿ, ಅಲ್ಲಿ ಕನ್ನಡ ಸಾಹಿತ್ಯ ಭವನಗಳನ್ನು ನಿರ್ಮಿಸಲು ಆರ್ಥಿಕ ನೆರವನ್ನು ಒದಗಿಸಬೇಕೆಂದೂ, ಈಗಾಗಲೇ ಇರುವ ಕನ್ನಡ ಸಾಹಿತ್ಯ ಭವನಗಳಿಗೆ ಕರ ವಿನಾಯಿತಿ ನೀಡಬೇಕೆಂದೂ ಈ ಸಮ್ಮೇಳನವು ಕರ್ನಾಟಕ ಸರ್ಕಾರವನ್ನು ಒತ್ತಾಯಿಸುತ್ತದೆ.

ಸೂಚಕರು: ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ.

ಅನುಮೋದಕರು: ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ

****

೭೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೭

ಸಮ್ಮೇಳನಾಧ್ಯಕ್ಷರು: ಪ್ರೊ.ಎಲ್.ಎಸ್. ಶೇಷಗಿರಿರಾವ್

ನಿರ್ಣಯ ೮: ತಾಲ್ಲೂಕು ಘಟಕಗಳಿಗೆ ೧ ಲಕ್ಷ, ಜಿಲ್ಲಾ ಘಟಕಕ್ಕೆ ೫ ಲಕ್ಷ.

ಕನ್ನಡ ಪರವಾದ ಅನೇಕ ಉಪಯುಕ್ತ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳಿಗೆ ಹಾಗೂ ತಾಲ್ಲೂಕು ಘಟಕಗಳಿಗೆ ಪ್ರತಿ ವರ್ಷ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳ ಮೂಲಕ ಕ್ರಮವಾಗಿ ೫ ಲಕ್ಷ ಹಾಗೂ ೧ ಲಕ್ಷ ರೂ.ಗಳ ಶಾಶ್ವತ ಆರ್ಥಿಕ ನೆರವನ್ನು ಒದಗಿಸಬೇಕೆಂದು ಕರ್ನಾಟಕ ಸರ್ಕಾರವನ್ನು ಈ ಸಮ್ಮೇಳನವು ವಿನಂತಿಸುತ್ತದೆ.

****

೭೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೯

ಸಮ್ಮೇಳನಾಧ್ಯಕ್ಷರು: ಪ್ರೊ.ಎಲ್. ಬಸವರಾಜು

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ.

****

೭೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೧೦

ಸಮ್ಮೇಳನಾಧ್ಯಕ್ಷರು: ಡಾ. ಗೀತಾ ನಾಗಭೂಷಣ

ನಿರ್ಣಯ ೧: ಹಿಂದಿನ ನಿರ್ಣಯಗಳ ಅನುಷ್ಠಾನಕ್ಕೆ ಸರ್ಕಾರಕ್ಕೆ ಮನವಿ.

ಇಲ್ಲಿಯವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ೭೫ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳಲ್ಲಿ ಅನುಷ್ಠಾನಗೊಳ್ಳದ ನಿರ್ಣಯಗಳನ್ನು ಸಂಬಂಧಪಟ್ಟ ಸರ್ಕಾರಗಳು ತಕ್ಷಣದಿಂದ ಅನುಷ್ಠಾನಗೊಳಿಸಬೇಕೆಂದು ಈ ಸಮ್ಮೇಳನವು ಒಕ್ಕೊರಲಿನಿಂದ ಒತ್ತಾಯಿಸುತ್ತದೆ.

ಸೂಚಕರು: ಡಾ. ನಲ್ಲೂರು ಪ್ರಸಾದ್ ಆರ್.ಕೆ. ರಾಜ್ಯಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಅನುಮೋದಕರು: ಪ್ರೊ. ಎ.ಬಿ. ಹಿರೇಮಠ, ಅಧ್ಯಕ್ಷರು, ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.

ನಿರ್ಣಯ ೨: ಅನುಷ್ಠಾನವಾಗದ ನಿರ್ಣಯಗಳ ಅನುಷ್ಠಾನಕ್ಕೆ ಪರಿಷತ್ತಿನ ಸಮಿತಿ ರಚನೆ.

ಅನುಷ್ಠಾನಗೊಳ್ಳದ ಪ್ರಮುಖ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಕನ್ನಡ ಸಾಹಿತ್ಯ ಪರಿಷತ್ತು ಸಮಿತಿಯೊಂದನ್ನು ರಚಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ಸೂಚಕರು : ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ.

****

೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೧೧

ಸಮ್ಮೇಳನಾಧ್ಯಕ್ಷರು: ಪ್ರೊ.ಜಿ. ವೆಂಕಟಸುಬ್ಬಯ್ಯ

ನಿರ್ಣಯ ೧: ಹಿಂದಿನ ನಿರ್ಣಯವನ್ನು ಸರ್ಕಾರ ಗಮನಿಸಿಲ್ಲ

ಇದುವರೆಗೆ ನಡೆದ ೭೬ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳನ್ನು ಕಾರ್ಯಗತಗೊಳಿಸದೇ ಇರುವುದು, ಈ ನಿರ್ಣಯಗಳನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ಉಪಸಮಿತಿ ರಚಿಸಿ ಪದೇ ಪದೇ ಸರ್ಕಾರದ ಮೇಲೆ ಒತ್ತಡ ತಂದರೂ ಆ ನಿರ್ಣಯಗಳು ಅನುಷ್ಠಾನಗೊಳ್ಳುವಲ್ಲಿ ಸರ್ಕಾರ ಕ್ರಿಯಾಶೀಲವಾಗಿ ಸಹಕರಿಸಲಿಲ್ಲ ಎಂಬುದನ್ನು ಈ ಸಮ್ಮೇಳನವು ವಿಷಾದದಿಂದ ಹೇಳುತ್ತದೆ.

ಈಗಲಾದರೂ ಪ್ರಮುಖ ನಿರ್ಣಯಗಳನ್ನು ನಮ್ಮ ಕರ್ನಾಟಕ ಸರ್ಕಾರ ತ್ವರಿತವಾಗಿ ಅನುಷ್ಠಾನ ಗೊಳಿಸಿಕೊಡಬೇಕೆಂದು ಮತ್ತೊಮ್ಮೆ ಅಖಿಲ ಭಾರತ ೭೭ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಆಗ್ರಹಿಸುತ್ತದೆ.

ಸೂಚಕರು: ಶ್ರೀ ಪ್ರದೀಪ್ ಕಲ್ಕೂರ್, ಮಂಗಳೂರು

ಅನುಮೋದಕರು: ಶ್ರೀ. ಸಿ.ಕೆ. ರಾಮೇಗೌಡ, ಬೆಂಗಳೂರು

ನಿರ್ಣಯ ೨: ಜಿಲ್ಲಾ ತಾಲ್ಲೂಕು ಕೇಂದ್ರ ಭಾಗಗಳಿಗೆ ಉಚಿತ ನಿವೇಶನ ನೀಡಲು

ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತುಗಳಿಗೆ ಕರ್ನಾಟಕ ಸರ್ಕಾರ ಆಯಾ ನಗರಗಳ ಕೇಂದ್ರ ಭಾಗದಲ್ಲಿ ಉಚಿತ ನಿವೇಶನ ನೀಡಬೇಕು ಮತ್ತು ಸಾಹಿತ್ಯ ಭವನ ನಿರ್ಮಾಣಗಳಿಗೆ ಯೋಜನೆಗಳ ಅನುಸಾರವಾಗಿ ಸರ್ಕಾರ ಆರ್ಥಿಕ ನೆರವನ್ನು ಮಂಜೂರುಗೊಳಿಸಿಕೊಡಬೇಕಾಗಿ ಈ ಸಮ್ಮೇಳನವು ಸರ್ಕಾರವನ್ನು ಕೋರುತ್ತೇವೆ.

ಸೂಚಕರು: ಶ್ರೀ.ಡಿ. ಮಂಜುನಾಥ, ಶಿವಮೊಗ್ಗ

ಅನುಮೋದಕರು: ಶ್ರೀ. ಟಿ.ಪಿ. ರಮೇಶ್, ಕೊಡಗು

****

೭೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ ೨೦೧೧
ಸಮ್ಮೇಳನಾಧ್ಯಕ್ಷರು: ಡಾ. ಸಿ.ಪಿ. ಕೃಷ್ಣಕುಮಾರ್

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೭೯ನೇ ಕನ್ನಡ ಸಾಹಿತ್ಯ ಸಮ್ಮೇಳನ ೨೦೧೩. ಬಿಜಾಪುರ
ಸಮ್ಮೇಳನಾಧ್ಯಕ್ಷರು : ಕೋ. ಚೆನ್ನಬಸಪ್ಪ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೮೦ನೇ ಕನ್ನಡ ಸಾಹಿತ್ಯ ಸಮ್ಮೇಳನ ೨೦೧೪
ಸಮ್ಮೇಳನಾಧ್ಯಕ್ಷರು : ಡಾ. ನಾ. ಡಿಸೋಜ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳಿಲ್ಲ

****

೮೧ನೇ ಕನ್ನಡ ಸಾಹಿತ್ಯ ಸಮ್ಮೇಳನ ೨೦೧೫ ಶ್ರವಣಬೆಳಗೊಳ
ಸಮ್ಮೇಳನಾಧ್ಯಕ್ಷರು : ಡಾ. ಸಿದ್ಧಲಿಂಗಯ್ಯ

ಪರಿಷತ್ತಿಗೆ ಸಂಬಂಧಿಸಿದ ನಿರ್ಣಯಗಳು ಇಲ್ಲ.

****

❖❖

೭

ಅಧ್ಯಾಯ - ೭

ವಾರ್ಷಿಕಾಧಿವೇಶನದ ವರದಿಗಳಲ್ಲಿ ಪರಿಷತ್ತು

ಯಾವುದೇ ಸಂಸ್ಥೆಯ ಕಾರ್ಯಕಲಾಪಗಳ ಅಧಿಕೃತ ದಾಖಲೆ ಪುಸ್ತಕವೆಂದರೆ ಆ ಸಂಸ್ಥೆಯ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು ಮತ್ತು ಸಕಲ ಸದಸ್ಯರ ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳ ವರದಿ. ಒಂದು ರೀತಿಯಲ್ಲಿ ವಾರ್ಷಿಕ ಅಧಿವೇಶನಗಳ ವರದಿಯನ್ನು ಐತಿಹಾಸಿಕ ದಾಖಲೆ ಎಂದು ಕರೆಯಬಹುದು.

ಸಾಹಿತ್ಯ ಪರಿಷತ್ತಿನ ೯೮ ವರದಿಗಳನ್ನು ಗಮನಿಸಿದರೆ ಅದರ ಐತಿಹಾಸಿಕ ಬೆಳವಣಿಗೆಯನ್ನು ಅಧಿಕೃತವಾಗಿ ಗುರುತಿಸಬಹುದು. ವಾರ್ಷಿಕ ವರದಿಯಲ್ಲಿ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ವರ್ಷವೆಲ್ಲ ಏನೇನು ಕಾರ್ಯಕಲಾಪ ಸಾಧಿಸಿತು, ಯಾವಯಾವ ಕಾರ್ಯಗಳನ್ನು ಮಾಡಲಾಗಲಿಲ್ಲ, ಏಕೆ ಎಂಬ ವಿವರಗಳು ಒಂದು ಭಾಗವಾದರೆ; ಸದಸ್ಯರು ಕಳೆದ ವಾರ್ಷಿಕ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಿದ ನಿರ್ಣಯಗಳೇನು? ಅದಕ್ಕೆ ಕಾರ್ಯಕಾರಿ ಸಮಿತಿ ಏನು ಕ್ರಮ ಕೈಗೊಂಡಿತು ಎಂಬುದು ಇನ್ನೊಂದು.

ಅಂದಾಜುಪಟ್ಟಿ ಪ್ರಕಾರ ಹಣಕಾಸಿನ ವಿಚಾರದಲ್ಲಿ ಆಯವ್ಯಯಗಳೇನಿತ್ತು, ಅದನ್ನು ಕಾರ್ಯಕಾರಿ ಸಮಿತಿ ಹೇಗೆ ನಿಭಾಯಿಸಿತು ಎಂಬುದನ್ನು ಲೆಕ್ಕಪತ್ರಗಳ ವರದಿ ಹೇಳಿದರೆ ಆ ಬಗ್ಗೆ ನಿಯಮಾನುಸಾರ ಕಾರ್ಯ ಸಮಿತಿ ಮಾಡಿದ್ದು ಸರಿಯೇ ಇಲ್ಲದಿದ್ದರೆ ಗಮನಿಸಬೇಕಾದ ಅಂಶಗಳೇನು ಎಂಬುದನ್ನು ಲೆಕ್ಕಪರಿಶೋಧಕರ ವರದಿ ತಿಳಿಸುತ್ತದೆ. ಮತ್ತೊಂದು ಭಾಗ ಈ ರೀತಿ ವಾರ್ಷಿಕ ವರದಿಯಲ್ಲಿ ಕಾರ್ಯದರ್ಶಿಗಳು ಮಂಡಿಸುವ ಕಾರ್ಯಕಲಾಪಗಳ ವರದಿ, ಸದಸ್ಯರು ಮಾಡಿದ ನಿರ್ಣಯಗಳು, ಲೆಕ್ಕ ಪರಿಶೋಧಕರು ಸೂಚಿಸಿದ ಆಕ್ಷೇಪ, ಅದಕ್ಕೆ ಉತ್ತರಗಳು ಹೀಗೆ ೩ ಭಾಗಗಳು ಪ್ರಮುಖವಾಗಿರುತ್ತವೆ.

ಕಳೆದ ವರ್ಷದ ಕಾರ್ಯಕಲಾಪಗಳ ವರದಿ ಆಧಾರದ ಮೇಲೆ ಸದಸ್ಯರು ಬರುವ ವರ್ಷದಲ್ಲಿ ಏನು ಮಾಡಬೇಕು ಎಂಬುದನ್ನು ನಿರ್ಣಯಗಳ ಮೂಲಕ ತಿಳಿಸುತ್ತಾರೆ. ಕಾರ್ಯಕಾರಿ ಸಮಿತಿ ನೀಡಿದ ಲೆಕ್ಕಪತ್ರಗಳು ನಿಯಮಾನುಸಾರ ಮತ್ತು ಅಂದಾಜುಪಟ್ಟಿ ಪ್ರಕಾರ ಎಷ್ಟರಮಟ್ಟಿಗೆ ಸಮರ್ಪಕವಾಗಿದೆ ಎಂಬುದನ್ನು ಲೆಕ್ಕಪರಿಶೋಧಕರ ವರದಿ ತಿಳಿಸುತ್ತದೆ.

ಕಾರ್ಯಸಮಿತಿ ಕೈಗೊಂಡ ತೀರ್ಮಾನಗಳ ವರದಿಯೇ "ಹಿಂದಿನ ಸಕಲ ಸದಸ್ಯರ ಸಭೆಯ ನಡೆವಳಿಕೆಗಳು". ಇದು ನಿಜವಾಗಿ ಸಂಸ್ಥೆಯ ನಡೆದ ಕಾರ್ಯಕಲಾಪಗಳ ದಿಕ್ಸೂಚಿ. ಈ ರೀತಿಯ ಹಿಂದಿನ ಸಭೆಯ ನಡೆವಳಿಕೆಗಳ ವರದಿ ಆ ಸಭೆಯಲ್ಲಿ ಕೈಗೊಂಡ ನಿರ್ಣಯಗಳು ಹೇಗೆ ಜಾರಿಗೆ ತರಲಾಯಿತು ಎಂಬುದರ ಬಗ್ಗೆ ಅಧ್ಯಕ್ಷರ ಉತ್ತರ ಮತ್ತು ಲೆಕ್ಕಪರಿಶೋಧಕರು ಸೂಚಿಸಿದ ಆಕ್ಷೇಪಗಳಿಗೆ, ಸಲಹೆಗಳಿಗೆ ಉತ್ತರಗಳನ್ನು ವರದಿಯಲ್ಲಿ ಕೊಟ್ಟಿರುತ್ತದೆ.

ಈ ರೀತಿ ಕಳೆದ ವಾರ್ಷಿಕ ಸಭೆಯ ನಡೆವಳಿಕೆಗಳ ವರದಿಯನ್ನು ಪ್ರತ್ಯಕ್ಷವಾಗಿ ಪರಿಷತ್ತು ಪ್ರಾರಂಭದಲ್ಲಿ ಕೊಡುತ್ತಿರಲಿಲ್ಲ. ಅನಂತರ ಕೊಡುವ ಪರಿಪಾಠ ಬಂದಿತು. ನಮ್ಮ ನಾಡಿನ ಅನೇಕ ಸಂಸ್ಥೆಗಳ ವರದಿಗಳಲ್ಲಿ ಇದನ್ನು ಕಾಣುವುದಿಲ್ಲ. ಆಯಾ ವರ್ಷಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳ ಹಣಕಾಸು ವೆಚ್ಚದ ಆದಾಯದ ವಿವರಗಳು ಇರುತ್ತೆ. ಇದರಿಂದ ಸದಸ್ಯರು

ಸೂಚಿಸಿದ ಸಲಹೆಗಳು ಯಾವುವು. ಅವು ಹೇಗೆ ಕಾರ್ಯಗತವಾದವು ಅಥವಾ ಆಗಲಿಲ್ಲ ಎಂಬುದರ ಸ್ಪಷ್ಟ ಚಿತ್ರಣ ಕಳೆದ ವರ್ಷದ ಸಭೆಯ ಸದಸ್ಯರ ನಿರ್ಣಯಗಳು ಮತ್ತು ಕಾರ್ಯಗತವಾದದ್ದರ ಬಗ್ಗೆ ಸ್ಪಷ್ಟ ವರದಿ ಕೊಟ್ಟಾಗ ಮಾತ್ರ ತಿಳಿಯುತ್ತದೆ.

ಪರಿಷತ್ತು ಪ್ರಾರಂಭವಾದ ವರ್ಷಗಳಲ್ಲಿ ನಡೆಯುತ್ತಿದ್ದ ಸಾಹಿತ್ಯ ಸಮ್ಮೇಳನಗಳ ಅಂಗವಾಗಿಯೇ ಆ ಸಮ್ಮೇಳನ ನಡೆಯುವ ದಿನಗಳಲ್ಲಿಯೇ ಒಂದು ದಿನ ವಾರ್ಷಿಕ ಸಕಲಸದಸ್ಯರ ಸಭೆ ನಡೆಯುತ್ತಿತ್ತು. ಆ ಸಭೆಯಲ್ಲಿ ಸದಸ್ಯರಲ್ಲದ ಗಣ್ಯರೂ ಸಾಹಿತಿಗಳೂ ವಿದ್ವಾಂಸರೂ ಆಹ್ವಾನಿತರಾಗಿ ಭಾಗವಹಿಸುತ್ತಿದ್ದರು. ಹೀಗಾಗಿ ನಾಡಿನ ಹಿರಿಯರೆಲ್ಲರ ಸಲಹೆ ಸೂಚನೆಗಳೂ ಲಭ್ಯವಾಗುತ್ತಿದ್ದವು. ಆದರೆ ಅನಂತರದಲ್ಲಿ ಸದಸ್ಯರಲ್ಲದವರು ಸಕಲ ಸದಸ್ಯರ ಸಭೆಯಲ್ಲಿ ಭಾಗವಹಿಸುವುದು ನಿಯಮ ವಿರುದ್ಧ ಎಂಬ ವಿಚಾರ ಮಂಡಿತವಾಗಿ ಕೇವಲ ಸಂಸ್ಥೆಯ ಸದಸ್ಯರು ಮಾತ್ರ ಭಾಗವಹಿಸುವಂತಾಯಿತು. ಹೀಗಾಗಿ ಈಗ ಸಂಸ್ಥೆಯ ಸದಸ್ಯರು ಸೂಚಿಸಿದ ನಿರ್ಣಯಗಳನ್ನಷ್ಟೇ ವರದಿಯಲ್ಲಿ ಕಾಣುತ್ತೇವೆ.

ಸಾಹಿತ್ಯ ಪರಿಷತ್ತಿನ ವಾರ್ಷಿಕ ವರದಿಯಲ್ಲಿ ಸದಸ್ಯರು ಕೈಗೊಂಡ ನಿರ್ಣಯಗಳನ್ನು ಅದಕ್ಕೆ ಕಾರ್ಯ ಸಮಿತಿ ಕೈಗೊಂಡ ಕ್ರಮಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿ ಬಗ್ಗೆ ಸಮಿತಿ ಕೈಗೊಂಡ ನಿರ್ಧಾರಗಳನ್ನು ಕೊಟ್ಟಿದೆ.

ಲೆಕ್ಕಪರಿಶೋಧಕರು ಸೂಚಿಸಿದ ಪ್ರಕಾರ ನಿಯಮಗಳನ್ನು ಮತ್ತು ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ ಏನಾಗುತ್ತದೆ ಎಂಬುದಕ್ಕೆ ಪರಿಷತ್ತಿನ ಅಧ್ಯಕ್ಷರ ಸ್ಥಾನದಲ್ಲಿ ಆಡಳಿತಾಧಿಕಾರಿಗಳು ಬಂದದ್ದೇ ನಿದರ್ಶನವಾಗಿದೆ.

ಪರಿಷತ್ತಿನ ಸಕಲ ಸದಸ್ಯರ ಅಧಿಕಾರವೇ ಅಂತಿಮವಾಗಿರುವುದರಿಂದ ಕಾರ್ಯಸಮಿತಿ ಏನೇ ಕೆಲಸಗಳನ್ನು ಮಾಡಿದರೂ ನಿಬಂಧನೆಗಳನ್ನು, ಸಕಲ ಸದಸ್ಯರ ಸಭೆಯ ನಿಯಮಗಳನ್ನು ಉಲ್ಲಂಘಿಸಲಾಗದು.

ಈ ದೃಷ್ಟಿಯಿಂದ ಮಹತ್ವಪೂರ್ಣವಾದ ಮತ್ತು ಪರಿಷತ್ತಿನ ಬೆಳವಣಿಗೆಗೆ ದಿಕ್ಸೂಚಿಯಾದ ಸಕಲ ಸದಸ್ಯರ ಸಭೆಯ ಕಾರ್ಯಕಲಾಪಗಳಿಂದ ಕಳೆದ ಸಕಲ ಸದಸ್ಯರ ಸಭೆಯು ನಡೆವಳಿಕೆಗಳು ಮತ್ತು ಲೆಕ್ಕಪರಿಶೋಧಕರ ವರದಿಗಳಿಂದ ಆಯ್ದಭಾಗಗಳನ್ನು ಉದಾಹರಣೆಗೆ ಪ್ರಸಕ್ತ ಅಧ್ಯಕ್ಷರ ಕಾಲದ ಅವಧಿಯಲ್ಲಿ (೩ ವರ್ಷಗಳಲ್ಲಿ) ನಡೆಯುವ ಪ್ರಸ್ತಾಪವನ್ನು ಇಲ್ಲಿ ಮಾಡಲಾಗಿದೆ.

ಪರಿಷತ್ತಿನ ನೂರು ವರ್ಷಗಳಲ್ಲಿ ನಡೆದ ವಾರ್ಷಿಕ ಸಭೆಗಳ ಕಾರ್ಯಕಲಾಪಗಳ ಅಧ್ಯಯನ ಪ್ರತ್ಯೇಕ ಅಧ್ಯಯನದ ವಿಷಯವಾಗಿದೆ.

ಪರಿಷತ್ತನ್ನು ಕುರಿತ ಸಮ್ಮೇಳನದ ನಿರ್ಣಯಗಳು, ಬಹಿರಂಗಾಧಿವೇಶನಗಳ ನಿರ್ಣಯಗಳಷ್ಟೇ ಮಹತ್ವಪೂರ್ಣವಾದುದು ಸಕಲ ಸದಸ್ಯರ ಸಭೆಯ ನಿರ್ಣಯಗಳು.

ಪರಿಷತ್ತು ಕಾಲಕಾಲಕ್ಕೆ ಯಾವ ದಿಕ್ಕಿಗೆ ಚಲಿಸಿದೆ ಎಂಬುದರ ನೀಲನಕ್ಷೆ ಈ ನಿರ್ಣಯಗಳಿಂದ ಸಿಗುತ್ತದೆ.

ಹಿಂದೆ ಪರಿಷತ್ತಿನ ವಾರ್ಷಿಕಾಧಿವೇಶನಗಳಲ್ಲಿ ನಡೆಯುವ ಕಾರ್ಯಸೂಚಿ ಸಾಮಾನ್ಯವಾಗಿ ಹೀಗಿರುತ್ತಿದ್ದವು.

ಪರಿಷತ್ತು ಸಾಹಿತ್ಯ ಸಮ್ಮೇಳನ ನಡೆಯುವಾಗಲೇ ವಾರ್ಷಿಕಾಧಿವೇಶನವು ನಡೆಯುತ್ತಿತ್ತು. ಮೊದಲನೇ ದಿನ ಸಮ್ಮೇಳನಾಧ್ಯಕ್ಷರ ಭಾಷಣ ಆದಮೇಲೆ ಪ್ರಾರ್ಥನೆ ಆದಮೇಲೆ ಶ್ರೀಮನ್ಮಹಾರಾಜರು ಸಮ್ಮೇಳನಕ್ಕೆ ಶ್ರೇಯಸ್ಸನ್ನು ಕೋರಿದ ಪತ್ರ ವಾಚನದ ನಂತರ ಸಭೆಗೆ ಬರಲಾಗದ ಗಣ್ಯರು ಬರೆದ ಕಾಗದಗಳನ್ನು ಸಭೆಗೆ ಓದಿ ಹೇಳಲಾಗುತ್ತಿತ್ತು. ಅನಂತರ ಅಧ್ಯಕ್ಷರ ಭಾಷಣವಾಗುತ್ತಿತ್ತು.

ಸಮ್ಮೇಳನಾಧ್ಯಕ್ಷರ ಭಾಷಣದ ನಂತರ ಗೌರವ ಕಾರ್ಯದರ್ಶಿಗಳು ವಾರ್ಷಿಕವರದಿಯನ್ನು ಸಭೆಯ ಮುಂದಿಡುತ್ತಿದ್ದರು.

ಪರಿಷತ್ತಿನ ಸದಸ್ಯರ ವಿಚಾರ ಮತ್ತು ಸಭೆಗೆ ಬಂದಿರುವ ಸದಸ್ಯರಲ್ಲದ ಗಣ್ಯರ ವಿವರಗಳನ್ನು ಸಭೆಗೆ ತಿಳಿಸಿದ ಮೇಲೆ ಕಾರ್ಯನಿರ್ವಾಹಕ ಸಭೆಗಳು ಎಷ್ಟುಬಾರಿ ನಡೆಯಿತು ಏನೇನು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಸಭೆಗೆ ತಿಳಿಸಲಾಗುತ್ತಿತ್ತು.

ಪರಿಷತ್ತಿನ ಆಫೀಸು, ಸಿಬ್ಬಂದಿ, ಪುಸ್ತಕಭಂಡಾರ, ವಾಚಕಶಾಲೆ ವಿಷಯಗಳನ್ನು ಮಂಡಿಸಿ ಅನಂತರ ವಾರ್ಷಿಕ ಆಯವ್ಯಯಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಗುತ್ತಿತ್ತು.

ಈಗ ನಡೆಯುತ್ತಿರುವ ವಾರ್ಷಿಕಾಧಿವೇಶನಗಳ ಕಾರ್ಯಸೂಚಿ ಸಾಮಾನ್ಯವಾಗಿ ಹೀಗಿರುತ್ತದೆ.

(ಅ) ಕಾರ್ಯಕಾರಿ ಸಮಿತಿ ಒಪ್ಪಿಸುವ –– ನೇ ಸಾಲಿನ ವರದಿಯನ್ನು ಹಾಗೂ ಆಯವ್ಯಯ ಪಟ್ಟಿಯನ್ನು ಲೆಕ್ಕಪರಿಶೋಧಕರು ಪರಿಶೀಲಿಸಿದ ಲೆಕ್ಕಪಟ್ಟಿಗಳ ವರದಿಯನ್ನು ಪರಿಶೀಲಿಸುವುದು.

(ಆ) ––– ನೇ ಸಾಲಿನ ವಾರ್ಷಿಕ ಆಯವ್ಯಯ ಅಂದಾಜುಪಟ್ಟಿಯನ್ನು ಅಂಗೀಕರಿಸುವುದು.

(ಇ) ಕಾರ್ಯಕಾರಿ ಸಮಿತಿಯ ಸೂಚನೆಗಳು

(ಈ) ಸದಸ್ಯರು ನಿಯಮಾನುಸಾರ ಕಳಿಸಿದ ಇತರ ಸೂಚನೆಗಳು.

ಈ ಕಾರ್ಯಸೂಚಿಗೆ ಅನುಗುಣವಾಗಿ ಕಾರ್ಯಕಾರಿ ಸಮಿತಿ ಸಲ್ಲಿಸುವ ವರದಿಯಲ್ಲಿ ಈ ವಿಚಾರಗಳು ಸಾಮಾನ್ಯವಾಗಿ ಇರುತ್ತವೆ.

೧. ಪ್ರಸಕ್ತ ಕಾರ್ಯಕಾರಿ ಸಮಿತಿ ವರ್ಗ

೨. ಪ್ರಸಕ್ತ ವರ್ಷದಲ್ಲಿ ಇರುವ ಸದಸ್ಯರ ವಿವರ (ಜಿಲ್ಲಾವಾರು)

೩. ಕಾರ್ಯಕಾರಿ ಸಮಿತಿ ನಡೆಸಿದ ಸಭೆಗಳು

೪. ಇತರ ಸಲಹಾ ಸಮಿತಿ, ಉಪಸಮಿತಿಗಳ ನಡೆಸಿದ ಸಭೆಗಳ ವಿವರಗಳು

೫. ಆ ವರ್ಷದಲ್ಲಿ ಜಿಲ್ಲಾವಾರು ನಡೆದ ಸಭೆ ಸಮಾರಂಭಗಳು

೬. ಪರಿಷತ್ತು ನಡೆಸಿದ ಪರೀಕ್ಷೆಗಳು–ತರಗತಿಗಳ ವಿಚಾರ

೭. ಪುಸ್ತಕ ಭಂಡಾರದ ವರದಿ

೮. ಪುಸ್ತಕಗಳ ಪ್ರಕಟನೆಗಳು

೯. ದತ್ತಿನಿಧಿಗಳು – ಶಾಶ್ವತನಿಧಿಗಳು – ಪ್ರಶಸ್ತಿಗಳು

೧೦. ಕಳೆದ ಸಕಲ ಸದಸ್ಯರ ವಾರ್ಷಿಕ ಸಭೆಯ ನಡೆವಳಿಗಳು

೧೧. ಕಾರ್ಯಸಮಿತಿ ಒಪ್ಪಿಸಿದ ಲೆಕ್ಕಪತ್ರಗಳು

೧೨. ಲೆಕ್ಕಪರಿಶೋಧಕರು ತಿಳಿಸಿದ ನ್ಯೂನತೆಗಳು ಮತ್ತು ಆಕ್ಷೇಪಣೆಗಳು.

೧೩. ಸದಸ್ಯರಿಂದ ಅಂದಾಜು ಆಯವ್ಯಯ ಪಟ್ಟಿ ಪರಿಶೀಲನೆ

ಪ್ರತಿವರ್ಷದ ವಾರ್ಷಿಕಾಧಿವೇಶನದ ವರದಿಯನ್ನು ಪರಿಶೀಲಿಸಿದರೆ ಪರಿಷತ್ತಿನ ಆ ವರ್ಷದ ಸಾಧನೆ – ವೇದನೆ – ನಿವೇದನೆಗಳು ತಿಳಿಯುತ್ತವೆ.

ಇದರಲ್ಲಿ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ಸದಸ್ಯರು ಸೂಚಿಸಿದ ಕೆಲಸ ಕಾರ್ಯಗಳು ಪರಿಷತ್ತಿನ ಕಾರ್ಯಕಾರಿ ಸಮಿತಿ ನಿರ್ವಹಿಸಿದ ರೀತಿ ಅಥವಾ ನಿರ್ವಹಿಸಲಾಗದ್ದಕ್ಕೆ ಕಾರಣಗಳನ್ನು ಈ ವರದಿಯ ನಡೆವಳಿಗಳ ಭಾಗದಲ್ಲಿ ಕಾಣುತ್ತವೆ. ಸಂಸ್ಥೆಯ ನಿಜವಾದ ಗತಿ – ಸ್ಥಿತಿ ಚಿತ್ರವನ್ನು ಈ ಭಾಗ ಕೊಡುತ್ತದೆ.

ಲೆಕ್ಕ ಪರಿಶೋಧಕರ ವರದಿ ಅವರ ಆಕ್ಷೇಪಣೆಗಳಿಗೆ ಉತ್ತರ ಸಂಸ್ಥೆಯ ದೃಷ್ಟಿಯಿಂದ ಬಹುಮುಖ್ಯಭಾಗ. ಒಂದು ಸಂಸ್ಥೆ ಪ್ರಾಮಾಣಿಕವಾಗಿ ನಿಸ್ವಾರ್ಥತೆಯಿಂದ ಯಾವುದೇ ಲೋಪವಿಲ್ಲದೆ ಕಾರ್ಯನಿರ್ವಹಿಸಿದೆ ಎಂಬುದಕ್ಕೆ ಲೆಕ್ಕಪರಿಶೋಧಕರ ವರದಿ ಸಾಕ್ಷಿಯಾಗಿರುತ್ತದೆ.

ಈ ದೃಷ್ಟಿಯಿಂದ ಕಳೆದ ಸಭೆಯ ವರದಿಯಲ್ಲಿಯ ನಡೆವಳಿಕೆಗಳು ಮತ್ತು ಲೆಕ್ಕ ಪರಿಶೋಧಕರ ಟೀಕೆ ಟಿಪ್ಪಣಿಗಳು ಮಹತ್ವದ ಭಾಗ ಆಗಿರುತ್ತದೆ. ಇವುಗಳ ಸ್ವರೂಪ ಪರಿಚಯಕ್ಕೆ ಕೆಲವು ನಿದರ್ಶನಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಶತಮಾನೋತ್ಸವ ವರ್ಷದಲ್ಲಿ ಅಧ್ಯಕ್ಷರಾಗಿರುವ ಪುಂಡಲೀಕ ಹಾಲಂಬಿ ಅವರು ೩-೫-೨೦೧೨ರಲ್ಲಿ ಅಧಿಕಾರಕ್ಕೆ ಬಂದರು. ಇವರ ಅಧಿಕಾರಾವಧಿಯ (೨೦೧೨ - ೧೩, ೨೦೧೩- ೧೪, ೨೦೧೪-೧೫) ಸಕಲ ಸದಸ್ಯರ ಸಭೆಯ ವರದಿಗಳಲ್ಲಿ ಕಂಡುಬರುವ ಸಕಲಸದಸ್ಯರು ಕೈಗೊಂಡ ನಿರ್ಣಯಗಳೂ ಅವುಗಳನ್ನು ಕಾರ್ಯಕಾರಿ ಸಮಿತಿ ನೆರವೇರಿಸಿದ ರೀತಿಯನ್ನು ಮತ್ತು ಲೆಕ್ಕ ಪರಿಶೋಧಕರ ವರದಿ ಅದಕ್ಕೆ ಕಾರ್ಯಕಾರಿಸಮಿತಿ ಕೈಕೊಂಡ ಕ್ರಮಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ತಿಳಿಸಿದೆ.

ಪರಿಷತ್ತು ಈಚಿನ ವರ್ಷಗಳಲ್ಲಿ ಹೇಗೆ ಸಾಗಿದೆ ಎಂಬುದರ ಸ್ಥೂಲ ಚಿತ್ರಣ ಇಲ್ಲಿ ಸಿಗುತ್ತದೆ.

೨೦೧೨-೨೦೧೫ರ ವಾರ್ಷಿಕ ವರದಿಗಳಲ್ಲಿ ಸಂತಾಪ ಸೂಚನಾನಿರ್ಣಯ

ಮೊದಲಿಗೆ ಸಾಹಿತ್ಯ ಸಮ್ಮೇಳನಗಳಲ್ಲಿ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಕಳೆದ ವರ್ಷದಲ್ಲಿ ನಿಧನರಾದ ನಾಡುನುಡಿಗಳಿಗೆ ಸೇವೆಸಲ್ಲಿಸಿದ ಗಣ್ಯರಿಗೆ ಮತ್ತು ಪರಿಷತ್ತಿನ ಸದಸ್ಯರಿಗೆ ಸಂತಾಪ ಸೂಚಿಸುತ್ತಿದ್ದರು. ಸಭೆ ಎದ್ದು ನಿಂತುಕೊಂಡು ನಿಮಿಷ ಮೌನ ಆಚರಿಸಿ ಸಂತಾಪವನ್ನು ಶ್ರದ್ಧಾಪೂರ್ವಕ ಸಲ್ಲಿಸುತ್ತಿತ್ತು. ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಾಗುತ್ತಿತ್ತು. ನಿಧನರಾದವರ ಕುಟುಂಬಕ್ಕೆ ಸಂತಾಪಸೂಚನಾ ನಿರ್ಣಯವನ್ನು ತಿಳಿಸಲಾಗುತ್ತಿತ್ತು.

ಈಚಿನ ವರ್ಷಗಳಲ್ಲಿ ಸಾಹಿತ್ಯ ಸಮ್ಮೇಳನಗಳಲ್ಲಿ ಸಂತಾಪ ಸೂಚನಾ ನಿರ್ಣಯಗಳನ್ನು ಮಂಡಿಸುವ ಬದಲಾಗಿ ಸಕಲ ಸದಸ್ಯರ ಸಭೆಗಳಲ್ಲಿ ಮಂಡಿಸಲಾಗುತ್ತಿದೆ.

೯೬ನೇ ವಾರ್ಷಿಕ ಸಭೆಯ ಕಾಲದಲ್ಲಿ ೧೦೪ ಜನರಿಗೆ (೨೦೧೧)

೯೭ ನೇ ವಾರ್ಷಿಕ ಸಭೆಯ ಕಾಲದಲ್ಲಿ ೯೫ ಜನರಿಗೆ (೨೦೧೨)

೯೮ನೇ ವಾರ್ಷಿಕ ಸಭೆಯ ಕಾಲದಲ್ಲಿ ೧೩೧ ಜರಿಗೆ (೨೦೧೩)

ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಸಂತಾಪ ಸೂಚಕ ನಿರ್ಣಯದಲ್ಲಿ ಕೇವಲ ಹೆಸರುಗಳನ್ನಷ್ಟೇ ಹೇಳಲಾಗುತ್ತದೆ. ಇದರ ಜತೆಗೆ ಅವರ ನಿಧನದ ದಿನಾಂಕಗಳನ್ನು ಮತ್ತು ಅವರು ಏನು ಎಂದರೆ ಸಾಹಿತಿ, ವಿದ್ವಾಂಸ, ಸಾರ್ವಜನಿಕ ಸೇವಾ ಧುರೀಣರು, ಸಂಶೋಧಕ, ಕಥೆಗಾರ, ಕಾದಂಬರಿಗಾರ, ಪರಿಷತ್ತಿನ ಸದಸ್ಯ ಇತ್ಯಾದಿಯಾಗಿ ಒಂದು ಮಾತನ್ನು ಹೇಳಿದರೆ ತುಂಬಾ ಉಪಯುಕ್ತ ಮಾಹಿತಿ ಆಗುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಕವಿ, ವಿದ್ವಾಂಸ ಸಾಹಿತಿಗಳ ನಿಧನದ ದಿನಾಂಕಗಳೇ ಇಲ್ಲ. ಸಿಗುತ್ತಿಲ್ಲ. ಅದಕ್ಕೆ ಈ ನಿರ್ಣಯ ನೆರವಾಗುತ್ತದೆ. ಈ ಪದ್ಧತಿಯನ್ನು ಮುಂದಿನ ವರ್ಷಗಳಲ್ಲಾದರೂ ಆಚರಣೆಗೆ ತರುವುದು ಅಗತ್ಯ.

ಸಭೆಯ ಅಧ್ಯಕ್ಷತೆ

ಪರಿಷತ್ತಿನ ಸಕಲ ಸದಸ್ಯರ ಸಭೆ ಸಮ್ಮೇಳನ ನಡೆಯುತ್ತಿದ್ದ ಕಾಲದಲ್ಲಿ ಪರಿಷತ್ತಿನ ಅಧ್ಯಕ್ಷರು ಅಧ್ಯಕ್ಷತೆ ಅಲಂಕರಿಸುತ್ತಿದ್ದರು.

ಒಂದು ಸಕಲ ಸದಸ್ಯರ ಸಭೆಯಲ್ಲಿ ಪರಿಷತ್ತಿನ ಅಧ್ಯಕ್ಷರೇ ವಹಿಸಬೇಕು ಎಂದು ಎಲ್ಲಿದೆ ನಿಯಮ? ಸಭೆಯಲ್ಲಿ ಹಿರಿಯರು ಅನೇಕರು ಇದಾರೆ, ಅವರಲ್ಲಿ ಒಬ್ಬರು ವಹಿಸಲಿ ಎಂಬ ಪ್ರಶ್ನೆ ಉದ್ಭವಿಸಿ ಸಾಕಷ್ಟು ಚರ್ಚೆ ಆಯಿತು. ಆನಂತರ ಪರಿಷತ್ತಿನ ನಿಬಂಧನೆಗಳಲ್ಲಿ ಈ ನಿಯಮವನ್ನು (ನಿಯಮ ೨೦) ಜಾರಿಗೆ ತರಲಾಯಿತು.

ಹಾಲಿನಿಬಂಧನೆಯ ೨೦ನೇ ನಿಯಮ

"ವಾರ್ಷಿಕ ಸಭೆ ಸೆಪ್ಟೆಂಬರ್ ತಿಂಗಳೊಳಗಾಗಿ ಸಾಮಾನ್ಯವಾಗಿ ಬೆಂಗಳೂರಿನಲ್ಲಿ ನಡೆಯತಕ್ಕದ್ದು.

ವಾರ್ಷಿಕ ಸಭೆ ಮತ್ತು ಇತರ ಸಭೆಗಳಲ್ಲಿ ಪರಿಷತ್ ಅಧ್ಯಕ್ಷರೇ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

ಪರಿಷತ್ತು ಅಧ್ಯಕ್ಷರ ಗೈರುಹಾಜರಿಯಲ್ಲಿ ಸಭೆ ಬೇರೆ ಅಧ್ಯಕ್ಷರನ್ನು ಚುನಾಯಿಸಿ ಕಾರ್ಯವನ್ನು ನಡೆಸತಕ್ಕದ್ದು".

ಈ ನಿಯಮಾನುಸಾರ ೨೦೧೩ರಲ್ಲಿ ೯೭ನೇ ವಾರ್ಷಿಕಾಧಿವೇಶನ ಬಾಗಲಕೋಟೆಯಲ್ಲಿ ಪುಂಡಲೀಕ ಹಾಲಂಬಿ ಅವರು ಅನುಪಸ್ಥಿತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರಾದ ಎಸ್. ಪ್ರದೀಪಕುಮಾರ ಕಲ್ಲೂರ ಅವರು ವಹಿಸಿದರು.

೯೮, ೯೯ನೇ ವಾರ್ಷಿಕಾಧಿವೇಶನಗಳನ್ನು ಪರಿಷತ್ ಅಧ್ಯಕ್ಷರಾದ ಪುಂಡಲೀಕ ಹಾಲಂಬಿಯವರೇ ವಹಿಸಿ ಅಧ್ಯಕ್ಷರ ಪೀಠಿಕಾಭಾಷಣ ಮಾಡಿದರು.

ಸಭೆ ಪ್ರಾರಂಭದಲ್ಲಿ ಸಾಂಪ್ರದಾಯಿಕವಾಗಿ ಪ್ರಾರ್ಥನೆ ಆದಮೇಲೆ ಗೌರವ ಕಾರ್ಯದರ್ಶಿಗಳು ಸಭೆಗೆ ಬಂದವರಿಗೆ ಸ್ವಾಗತ ಬಯಸಿದ ಮೇಲೆ, ಸಭೆಯ ಕಾರ್ಯಸೂಚಿಯನ್ನು ಓದಿ ಹೇಳಲಾಗುತ್ತದೆ. ಅನಂತರ ಸಭೆಯಲ್ಲಿ ಕಾರ್ಯದರ್ಶಿಗಳು ವರದಿಯನ್ನು ಕೋಶಾಧಿಕಾರಿಗಳು ಲೆಕ್ಕಪತ್ರಗಳನ್ನು ಮಂಡಿಸುತ್ತಾರೆ. ಆ ಬಗ್ಗೆ ಚರ್ಚೆ ನಿರ್ಣಯಗಳಾಗುತ್ತವೆ. ಈ ಮುಂಚೆ ಸಭೆಗೆ ದಿ. ಕೆ. ಬಿ. ಚಂದ್ರ ಅವರು ಇಟ್ಟ ದತ್ತಿನಿಧಿಯ ನಿಯಮದಂತೆ ಸಕಲ ಸದಸ್ಯರ ಸಭೆಗೆ ಸಿಹಿ ಹಂಚಲಾಗುತ್ತದೆ. ಸಂತಾಪ ಸೂಚಕ ನಿರ್ಣಯ ಮಂಡನೆ ಆದಮೇಲೆ ವರದಿಯನ್ನು ಮಂಡಿಸಲಾಗುತ್ತದೆ.

ನಿರ್ಣಯಗಳು

ಸಭೆಯಲ್ಲಿ ಸದಸ್ಯರು ಮತ್ತು ಸಭೆಗೆ ಬರಲಾಗದ ಸದಸ್ಯರು ನಿಯಮಾನುಸಾರ ಗೊತ್ತಾದ ಅವಧಿಯೊಳಗೆ ಬರೆದು ಕಳಿಸಿದ ನಿರ್ಣಯಗಳನ್ನು ಮಂಡಿಸಿ ಚರ್ಚಿಸಲಾಗುತ್ತದೆ. ೯೯ ವಾರ್ಷಿಕಾಧಿವೇಶನಗಳ ನಿರ್ಣಯಗಳನ್ನು ಅಧ್ಯಯನ ಮಾಡುವ ಆವಶ್ಯಕತೆ ಇದೆ. ಆದರೆ ಇಲ್ಲಿ ೯೭, ೯೮, ೯೯ ವಾರ್ಷಿಕಾಧಿವೇಶನದಲ್ಲಿ ಸದಸ್ಯರು ಮಂಡಿಸಿದ ಅಂಗೀಕಾರವಾದ ನಿರ್ಣಯಗಳು ಕೆಲವನ್ನು ಇಲ್ಲಿ ಮಾದರಿಗಾಗಿ ಸೂಚಿಸಿದೆ.

೯೭ನೇ ಸಭೆಯಲ್ಲಿ ಮಂಡಿಸಿದ ನಿರ್ಣಯಗಳು

ನಿರ್ಣಯಗಳನ್ನು ಅಂಗೀಕಾರಕ್ಕೆ ಕಾರ್ಯಕಾರಿ ಸಮಿತಿ ಸಭೆ ತಾನಾಗಿ ಮುಂದಿಡುವ ಪರಿಪಾಠ ಇದೆ. ಆ ಪ್ರಕಾರ ಕೆಲವು ನಿರ್ಣಯಗಳು.

೧. ಬಾಕಿಮನ್ನಾ

ನಿರ್ಣಯ (೧) ಉತ್ತರ ಕನ್ನಡ ಜಿಲ್ಲೆಯು ೨೦೦೧-೨೦೦೨ನೇ ಸಾಲಿನಲ್ಲಿ ಪರಿಷತ್ತಿನಿಂದ ಕಾರ್ಯಕ್ರಮಗಳಿಗಾಗಿ ಅಂದಿನ ಉತ್ತರ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ಟಿ. ಕೆ. ಮಹಮೂದ್ ಅವರು ಪಡೆದಿರುವ ಹಣ ರೂ. ೭೭೫೦=೦೦ ಲೆಕ್ಕ ಒಪ್ಪಿಸದಿರುವ ಕಾರಣ ಆಕ್ಷೇಪಣೆ ಮುಂದುವರೆಯುತ್ತಾ ಬಂದಿದೆ. ಶ್ರೀಯುತರು ನಿಧನರಾಗಿರುವುದರಿಂದ ಈ ಮೊತ್ತವನ್ನು ಮನ್ನಾ ಮಾಡಲು ಮಹಾಸಭೆ ತೀರ್ಮಾನಿಸಿತು.

ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಬಂದ ಸಹಾಯಧನ ಠೇವಣಿ ವಿಚಾರ

ನಿರ್ಣಯ (೪) ಜಿಲ್ಲಾ ಸಾಹಿತ್ಯ ಸಮ್ಮೇಳನಗಳಿಗೆ ಬಂದ ಸಹಾಯಧನ ಠೇವಣಿ ರೂಪದಲ್ಲಿಟ್ಟರೆ ಬಡ್ಡಿ ಜಾಸ್ತಿ ಬರುವುದರಿಂದ ಮತ್ತು ಈ ಬಡ್ಡಿ ಹಣ ಪರಿಷತ್ತಿನ ಕಾರ್ಯ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಸದುದ್ದೇಶದಿಂದ ಅಲ್ಪಾವಧಿ ಠೇವಣಿರೂಪದಲ್ಲಿ ಇರಿಸಿದ್ದು, ಈ ಮಧ್ಯೆ ಜಿಲ್ಲಾಧ್ಯಕ್ಷರು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಬಿಡುಗಡೆಗೆ ಕೋರಿದ ಹಿನ್ನೆಲೆಯಲ್ಲಿ ಠೇವಣಿ ಹಣ ಪೂರ್ವಫಲಿತ ಮಾಡಿಕೊಂಡು ಬಡ್ಡಿ ನಷ್ಟವಾಗುವುದನ್ನು ತಪ್ಪಿಸಲು ಕನಿಷ್ಠ ಬಡ್ಡಿ ದರದಲ್ಲಿ ಸಾಲಪಡೆದು ಪಾವತಿಸಲಾಗಿರುವುದನ್ನು ಮಹಾಸಭೆ ಅನುಮೋದಿಸಿತು.

ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಸ್ವಾಗತ

ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ೩೭೧ನೇ ಕಲಂನಂತೆ ತಿದ್ದುಪಡಿ ಮಾಡಿ ವಿಶೇಷ ಸ್ಥಾನಮಾನ ನೀಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಈ ಸಭೆ ಸ್ವಾಗತಿಸುತ್ತದೆ.

೯೮ ನೇ ವಾರ್ಷಿಕಾಧಿವೇಶನದಲ್ಲಿ ಸದಸ್ಯರು ಮಂಡಿಸಿದ ನಿರ್ಣಯಗಳು

ನಿರ್ಣಯ (೧) ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಗಮಕ, ಶಾಸ್ತ್ರೀಯ ಸಂಗೀತ, ಹಾಗೂ ಹಳಗನ್ನಡ ತರಗತಿಗಳನ್ನು ನಡೆಸಬೇಕು. ಶಾಲಾ ಕಾಲೇಜುಗಳಲ್ಲಿ ಜಾನಪದ, ಭಾವಗೀತೆ, ಭಕ್ತಿ ಗೀತೆಗಳ ಸ್ಪರ್ಧೆಗಳನ್ನು ಏರ್ಪಡಿಸಬೇಕು. ತಾಲ್ಲೂಕು ಜಿಲ್ಲೆಗಳಲ್ಲಿ ಸಾಹಿತ್ಯ ಕಾರ್ಯಕ್ರಮಗಳನ್ನು ನಡೆಸಬೇಕು.

ನಿರ್ಣಯ (೨) ವಾರ್ಷಿಕ ವರದಿಯನ್ನು ಸದಸ್ಯರಿಗೆ ಈಗ ಕೊಡಲಾಗಿದೆ. ಸಾಕಷ್ಟು ಮುಂಚಿತವಾಗಿ ಕಳುಹಿಸಿದರೆ ಕೂಲಂಕಷವಾಗಿ ಓದಿಕೊಂಡು ಚರ್ಚಿಸಲು ಅನುಕೂಲವಾಗುತ್ತದೆ ಮತ್ತು ಸಲಹೆ, ಸೂಚನೆಗಳನ್ನು ಕಳುಹಿಸಲು ಸಾಧ್ಯವಾಗುತ್ತದೆ.

ನಿರ್ಣಯ ೮ ನಿರಾಶ್ರಿತರಾಗಿರುವ ಕನ್ನಡ ಸಾಹಿತಿಗಳಿಗೆ ಮಾಸಾಶನ ದೊರೆಯುವಂತೆ ಮಾಡಬೇಕು.

ನಿರ್ಣಯ ೧೦ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದವರಿಗೆ ಸರಕಾರದ ಪ್ರಥಮ ಆದ್ಯತೆ ನೀಡಿ ಮೀಸಲಾತಿಯ ಮೂಲಕ ನೌಕರಿ ನೀಡಬೇಕು.

ನಿರ್ಣಯ ೧೩ ಗಡಿನಾಡಿನಲ್ಲಿರುವ ಕನ್ನಡ ಶಾಲೆಗಳನ್ನು ಸುಧಾರಿಸಲು ಕನ್ನಡ ಬೆಳೆಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ನಿರ್ಣಯ ೨೦ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಉತ್ತಮ ಗ್ರಂಥಾಲಯಗಳಿದ್ದು ಅವುಗಳ ಸೌಲಭ್ಯ ನಾಗರಿಕರಿಗೆ ದೊರೆಯುವಂತಾಗಬೇಕು.

ನಿರ್ಣಯ ೨೧ ಮುಂದೆ ನಡೆಯುವ ಸಾಹಿತ್ಯ ಸಮ್ಮೇಳನಗಳಲ್ಲಿ ವೈಭವೋಪೇತ ಊಟೋಪಚಾರ ನೀಡದೆ ಸರಳವಾದ ಉತ್ತಮ ಊಟ ಎಲ್ಲರಿಗೂ ದೊರೆಯುವಂತಾಗಬೇಕು.

ನಿರ್ಣಯ ೨೩ ಪರಿಷತ್ತು ತೆಗೆದುಕೊಳ್ಳುತ್ತಿರುವ ನಿರ್ಣಯಗಳು ರಾಜಕಾರಣಿಗಳ ಆಶ್ವಾಸನೆಗಳಾಗದಂತೆ ಕಾರ್ಯರೂಪಕ್ಕೆ ಬರಲು ಪ್ರತಿ ಜಿಲ್ಲೆಯಲ್ಲೂ ಜಾಗೃತಿ ಸಭೆಗಳನ್ನು ನಡೆಸುವ ಮೂಲಕ ಹೋರಾಟ ಮಾಡಬೇಕು.

ಲೆಕ್ಕಪರಿಶೋಧಕರು ಮಂಡಿಸಿದ ಸೂಚನೆಗಳು ಮತ್ತು ಉತ್ತರಗಳು

ನಿರ್ಣಯ ೨೯ ವಾರ್ಷಿಕ ವರದಿಯಲ್ಲಿ ಜಿಲ್ಲಾ, ತಾಲ್ಲೂಕು ಸಮ್ಮೇಳನಗಳ ವಿವರಗಳಿಲ್ಲ ಅವು ವರದಿಯಾಗಬೇಕು.

ನಿರ್ಣಯ ೩೧ ಅನೇಕ ಜಿಲ್ಲಾ ಸಮಿತಿಗಳಿಂದ ಲೆಕ್ಕಪತ್ರ ವರದಿ ಬಂದಿಲ್ಲ ಎಂಬುದು ನಮೂದಾಗಿದೆ. ಹಾಗಾದರೆ

ಲೆಕ್ಕಪತ್ರ ವರದಿ ಹೇಗೆ ಪೂರ್ಣವಾಗುತ್ತದೆ ತಿಳಿಸಬೇಕು.

ನಿರ್ಣಯ ೩೯ ಪ್ರತಿಜಿಲ್ಲಾ ಕೇಂದ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳಿಗೆ ಸೂಕ್ತವಾದ ಕಚೇರಿ ವ್ಯವಸ್ಥೆಯಾಗಬೇಕಾಗಿದೆ.

ನಿರ್ಣಯ ೫೦ ಅಮೃತನಿಧಿಯ ೧ ರೂ ಚೀಟಿಯನ್ನು ಮತ್ತೆ ಪ್ರಾರಂಭಿಸಬೇಕು.

ಅಧ್ಯಕ್ಷರು ಇವುಗಳಿಗೆ ಸೂಕ್ತ ಉತ್ತರಗಳನ್ನು ನೀಡಿದ್ದಾರೆ, ೯೮ನೇ ವರ್ಷದ ವರದಿ ಪುಟ ೨೭-೨೮ ನೋಡಿ.

೯೯ ನೇ ವಾರ್ಷಿಕಾಧಿವೇಶನದಲ್ಲಿ ಸದಸ್ಯರು ಮಂಡಿಸಿದ ನಿರ್ಣಯಗಳು

ನಿರ್ಣಯ ೮ ಕನ್ನಡ ಪಠ್ಯ ಪುಸ್ತಕಗಳಲ್ಲಿ ಕನ್ನಡ ಅಂಕಿಗಳ ಬಳಕೆ ಇಲ್ಲ. ಈ ಬಗ್ಗೆ ಪರಿಷತ್ತು ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಒತ್ತಡ ತರಬೇಕು.

ನಿರ್ಣಯ ೧೮ ರಾಜ್ಯಾಧ್ಯಕ್ಷರು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳಿಗೆ ಭೇಟಿ ನೀಡಬೇಕು.

ನಿರ್ಣಯ ೨೨ ತಾಲ್ಲೂಕು ಅಧ್ಯಕ್ಷರನ್ನು ಮತದಾನದ ಮೂಲಕ ಆಯ್ಕೆ ಮಾಡಬೇಕು.

ನಿರ್ಣಯ ೨೭ ಕನ್ನಡ ನುಡಿಯನ್ನು ಉಚಿತವಾಗಿ ಸದಸ್ಯರಿಗೆ ಕಳುಹಿಸುವ ಬದಲು ಚಂದಾದಾರರಿಗೆ ಮಾತ್ರ ಕಳಿಸುವ ಬಗ್ಗೆ ಚಿಂತನೆ ಮಾಡಬೇಕು.

ಪರಿಷತ್ತಿನ ಅಧ್ಯಕ್ಷರು ಇವುಗಳಿಗೆ ಸೂಕ್ತ ಉತ್ತರಗಳನ್ನು ನೀಡಿದರು.(೯೯ನೇ ವರ್ಷದ ವರದಿ ನೋಡಿ.)

ಲೆಕ್ಕಪರಿಶೋಧಕರು ಮಂಡಿಸಿದ ಸೂಚನೆಗಳು ಅದಕ್ಕೆ ಕಾರ್ಯಸಮಿತಿ ನೀಡಿದ ಉತ್ತರಗಳು

೯೭ನೇ ಅಧೀವೇಶನ (೨೦೧೨-೧೩ನೇ ಸಾಲಿನಲ್ಲಿ ಮಂಡಿಸಿದ ಲೆಕ್ಕಪತ್ರಗಳ ಆಯ್ದ ಭಾಗಗಳು)

ಆಕ್ಷೇಪಣೆ ೨೬ : ನಿಯತಕಾಲಿಕೆಗಳ ಸರಬರಾಜು ಪಡೆಯಲು ಕೊಟೇಷನ್ ಕರೆದಿಲ್ಲ.

ಉತ್ತರ : ಅಗತ್ಯ ಕ್ರಮ ಕೈಗೊಂಡಿದೆ.

ಆಕ್ಷೇಪಣೆ ೨೭ : ಹಳೇ ದಿನಪತ್ರಿಕೆ ಮತ್ತು ಹಳೇ ಸಾಮಾನು ಮಾರಾಟದ ಬಗ್ಗೆ ನಿರುಪಯುಕ್ತ ದಾಸ್ತಾನು ನಿರ್ವಹಿಸುವ ಬಗ್ಗೆ ಕ್ರಮಕೈಗೊಂಡಿಲ್ಲ.

ಉತ್ತರ : ಗ್ರಂಥ ಭಂಡಾರದಲ್ಲಿ ದಿನಪತ್ರಿಕೆಗಳ ದಾಖಲಾಗಿ ದಾಸ್ತಾನು ವಹಿ ನಿರ್ವಹಿಸಲಾಗಿದೆ. ದಾಸ್ತಾನು ವಿಭಾಗದಲ್ಲಿ ಒಟ್ಟಾರೆ ನಿರುಪಯುಕ್ತ ದಾಸ್ತಾನು ವಹಿಯನ್ನು ನಿರ್ವಹಿಸಿ ಮುಂದಿನ ಲೆಕ್ಕ ತಪಾಸಣೆಯಲ್ಲಿ ಹಾಜರುಪಡಿಸಲಾಗುವುದು.

ಆಕ್ಷೇಪಣೆ ೨೮ : ಸಾಲದ ರೂಪದಲ್ಲಿ ನೀಡಿದ ಪುಸ್ತಕಗಳ ಮೊತ್ತವನ್ನು ವಸೂಲಿ ಮಾಡದಿರುವ ಬಗ್ಗೆ

ಉತ್ತರ : ೩೧.೩.೨೦೧೩ ಅಂತ್ಯಕ್ಕೆ ಬಾಕಿ ಇರುವ ರೂ. ೧೪೭೪೯೬ ರಾಜಾರಾಂ ಮೋಹನರಾಯ ಗ್ರಂಥಾಲಯ ಇಲಾಖೆಯಿಂದ ರೂ. ೯೪೦೦ ದಿನಾಂಕ ೨-೫-೨೦೧೩ರಲ್ಲಿ ವಸೂಲಾತಿ ಆಗಿದೆ. ಉಳಿದಂತೆ ೪೮೩೭೧ ವಸೂಲಾತಿಗೆ ಅನೇಕ ಜ್ಞಾಪನ ಪತ್ರಗಳನ್ನು ಬರೆದಿದ್ದರೂ ಬಾಕಿ ಇರುತ್ತದೆ. ಆದ್ದರಿಂದ ಹಣಕಾಸು ಸಮಿತಿಯಲ್ಲಿ ಇಟ್ಟು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

ಆಕ್ಷೇಪಣೆ ೩೧: ಜಿಲ್ಲಾ ಕನ್ನಡ ಸಾಹಿತ್ಯ ಘಟಕಗಳಿಗೆ ವಾರ್ಷಿಕ ನಿರ್ವಹಣೆಗೆ ಹಾಗೂ ಕಾರ್ಯಕ್ರಮಗಳಿಗೆ ನೀಡಿದ ನಿರ್ವಹಣೆ ಹಾಗೂ ಕಾರ್ಯಕ್ರಮಗಳಿಗೆ ನೀಡಿದ ಹಣಕ್ಕೆ ಹೊಂದಾಣಿಕೆ ಓಚರುಗಳನ್ನು ಹಾಜರುಪಡಿಸದಿರುವುದು.

ಉತ್ತರ : ೪ ಜಿಲ್ಲೆಗಳಿಂದ (ಧಾರವಾಡ, ಕೋಲಾರ, ಶಿವಮೊಗ್ಗ, ಬಿಜಾಪುರ, ಬೆಳಗಾವಿ, ಜಿಲ್ಲೆಗಳೂ ೧೮,

೧೫೨೪೦೪ ರೂ ಬಂದಿದೆ. ಉಳಿದ ಜಿಲ್ಲೆಗಳಿಂದ ಲೆಕ್ಕಪತ್ರ ತರಿಸಿಕೊಂಡು ಮುಂದಿನ ಲೆಕ್ಕ ತಪಾಸಣೆಗೆ ಹಾಜರುಪಡಿಸಲಾಗುವುದು.

೯೮ನೇ ವಾರ್ಷಿಕಾಧಿವೇಶನದ ಲೆಕ್ಕಪತ್ರದ ಆಯ್ದ ಭಾಗಗಳು ಮತ್ತು ಅಧ್ಯಕ್ಷರ ಉತ್ತರಗಳು.

ಆಕ್ಷೇಪಣೆ ೪೪ : ಸ್ಥಿರಾಸ್ತಿ ಮತ್ತು ಚರಾಸ್ತಿ ವಹಿ ಪರಶೀಲನೆ ಕುರಿತು

ಸ್ಥಿರಾಸ್ತಿಗಳನ್ನು ಸಹ ಸಂಬಂಧಪಟ್ಟ ದಾಖಲೆಗಳೊಂದಿಗೆ ಭೌತಿಕವಾಗಿ ಪರಿಶೀಲಿಸಿ ವಿವರಗಳನ್ನು ವರ್ಷಾಂತ್ಯಕ್ಕೆ ದೃಢೀಕರಿಸುವುದು ಅವಶ್ಯವಿರುತ್ತದೆ. (ಅನುಬಂಧ ೧೪, ಅನುಸೂಚಿ ೩ರಲ್ಲಿ ವಿವರಿಸಿದೆ)

ಉತ್ತರ : ಸ್ಥಿರಾಸ್ತಿ ಮತ್ತು ಚರಾಸ್ತಿ ವಹಿಯಲ್ಲಿ ಸತ್ಯಾಪನೆ ವಿವರಗಳನ್ನು ದೃಢೀಕರಿಸಿದ್ದು ಮುಂದಿನ ಲೆಕ್ಕ ಪರಿಶೋಧನೆಯ ಸಮಯದಲ್ಲಿ ಹಾಜರುಪಡಿಸಲಾಗುವುದು.

ಆಕ್ಷೇಪಣೆ ೨೫ : ನಗರ ಪರಿಹಾರ ಭತ್ಯೆ ಹೆಚ್ಚುವರಿ ಪಾವತಿಸಿರುವ ಬಗ್ಗೆ

ವೇತನ ಬಟವಾಡೆ ಪುಸ್ತಕದ ಪ್ರಕಾರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ೩೫೦ ರೂ ದರದ ಬದಲಿ ೪೦೦ ದರದಂತೆ ಹೆಚ್ಚುವರಿ ವರ್ಗ ಪರಿಹಾರ ಭತ್ಯ ಕೊಡಲಾಗಿದೆ. ಇದನ್ನು (೧೫೨೫೦ರೂ) ಸಿಬ್ಬಂದಿಯಿಂದ ವಸೂಲಿ ಮಾಡಲು ತಿಳಿಸಲಾಗಿದೆ.

ಉತ್ತರ : ಎರಡು ಸಮಾನ ಕಂತುಗಳಲ್ಲಿ ನೌಕರರ ವೇತನದಿಂದ ಕಟಾಯಿಸಲು ಕ್ರಮ ವಹಿಸಿದೆ.

೯೯ ನೇ ವಾರ್ಷಿಕಾಧಿವೇಶನದ ಲೆಕ್ಕ ಪರಿಶೋಧಕರು ಮಾಡಿದ ಆಕ್ಷೇಪಣೆಗಳು ಅದಕ್ಕೆ ಉತ್ತರಗಳು (ಆಯ್ದ ಭಾಗಗಳು)

ಆಕ್ಷೇಪಣೆ : ೯೮ನೇ ಸರ್ವಸದಸ್ಯರ ಸಭೆಯಲ್ಲಿ ಅಂಗೀಕಾರವಾದ ಅಂದಾಜು ಪಟ್ಟಿ ವಾಸ್ತವಿಕ ಆಯವ್ಯಯ ಇರುವ ತುಂಬಾ ವ್ಯತ್ಯಾಸವಿದೆ

	ಅಂದಾಜು ಆಯವ್ಯಯ	ವಾಸ್ತವಿಕ ಆಯವ್ಯಯ
ನಿರೀಕ್ಷಿತ ಆದಾಯ	೧೯,೨೩,೯೯,೧೧೯ರೂ	೭,೭೫,೨೩,೮೮೮
ನಿರೀಕ್ಷಿತ ವೆಚ್ಚ	೧೬,೯೫,೨೭,೦೦೦ರೂ	೬,೭೭,೩೬,೪೪೯ರೂ
ಉಳಿತಾಯ	೨,೨೮,೫೦,೧೧೯ರೂ	೯೭,೮೭,೪೩೯ ರೂ

ಅಂದಾಜು ಆಯವ್ಯಯ ಪಟ್ಟಿ ತಯಾರಿಸುವಾಗ ಹಿಂದಿನ ೩ ವರ್ಷಗಳ ವಾಸ್ತವಿಕ ಆದಾಯ ಮತ್ತು ವೆಚ್ಚದ ಅಂಕಿ ಅಂಶಗಳಿಗೆ ಸಮೀಪವಿರುವಂತೆ ಸಿದ್ಧಪಡಿಸಿ ಅನುಮೋದನೆ ಪಡೆದು ಅನುಮೋದಿತ ಆಯವ್ಯಯದ ಮಿತಿಯೊಳಗೆ ವೆಚ್ಚ ಭರಿಸಲು ಸೂಚಿಸಿದೆ.

ಉತ್ತರ : ಸರ್ಕಾರದಿಂದ ನಿರೀಕ್ಷಿತ ಮಟ್ಟದಲ್ಲಿ ಅನುದಾನ ಬಿಡುಗಡೆ ಆಗುತ್ತಿಲ್ಲ. ಪರಿಷತ್ತಿನ ಆರ್ಥಿಕ ಸಂಪನ್ಮೂಲ ಕೊರತೆ ಇರುವುದರಿಂದ ನಿರೀಕ್ಷಿತ ಆದಾಯ ಬಾರದಿರುವುದರಿಂದ ಅಂದಾಜು ಆಯವ್ಯವಕ್ಕೂ ವಾಸ್ತವ ಆಯವ್ಯಯಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಇನ್ನು ಮುಂದೆ ಲೆಕ್ಕಪರಿಶೋಧಕರ ಸಲಹೆಯಂತೆ ಸೂಕ್ತ ಕ್ರಮವಹಿಸಲಾಗುವುದು.

ಆಕ್ಷೇಪಣೆ ೧೪: ಆಜೀವ ಸದಸ್ಯತ್ವ ಬಗ್ಗೆ

೩೧-೩-೨೦೧೫ ಅಂತ್ಯಕ್ಕೆ ಸಂಸ್ಥೆಯು ಹೊಂದಿರುವ ಒಟ್ಟಾರೆ ಆಜೀವ ಸದಸ್ಯರ ಸಂಖ್ಯೆ ಅವುಗಳಲ್ಲಿ ವಿಳಾಸ ಬದಲಾವಣೆ, ಮರಣಹೊಂದಿದವರ ಸಂಖ್ಯೆ ಗುರುತಿಸಲಾಗಿದೆಯೆ? ಇಲ್ಲವಾದಲ್ಲಿ ಅಂಚೆವೆಚ್ಚ, ಮುದ್ರಣವೆಚ್ಚ ಮತ್ತು ಸಿಬ್ಬಂದಿಗಳ ಕಾಲವ್ಯಯ ಇತ್ಯಾದಿಗಳಿಂದ ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆ ಇರುವುದರಿಂದ ಇವುಗಳ ನೈಜ ಮಾಹಿತಿ ನೀಡುವ ಬಗ್ಗೆ ಅಧ್ಯಕ್ಷರ ಗಮನ ಸೆಳೆಯಲಾಗಿತ್ತು.

ಅಧ್ಯಕ್ಷರು ಕೊಟ್ಟ ಉತ್ತರ : ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಟ್ಟಾರೆ ೩೧-೩-೨೦೧೫ರ ಅಂತ್ಯಕ್ಕೆ ೨,೦೪,೪೩೨ ಜನ ಆಜೀವ ಸದಸ್ಯರಿರುತ್ತಾರೆ. ಇದರಲ್ಲಿ ೪೩೧೦ ಜನ ನಿಧನರಾಗಿರುತ್ತಾರೆ. ನಿಧನರಾಗಿದ್ದವರನ್ನು ಗುರುತಿಸಲು ಜಿಲ್ಲಾಧ್ಯಕ್ಷರು ಸೂಚಿಸಿರುವ ಹಾಗೂ ನಿಧನ ಹೊಂದಿದವರ ಸಂಬಂಧಪಟ್ಟವರು ಪತ್ರಮುಖೇನ ಪರಿಷತ್ತಿಗೆ ತಿಳಿಸಿದ ದಾಖಲಾತಿ ಮೇರೆಗೆ ಅಂತಹವರ ಹೆಸರನ್ನು ಪಟ್ಟಿಯಿಂದ ರದ್ದುಗೊಳಿಸಲಾಗುವುದು. ಅಂದಿನಿಂದ ನಿಧನಹೊಂದಿದವರ ವಿಳಾಸಕ್ಕೆ ಕನ್ನಡ ನುಡಿ ಪತ್ರಿಕೆಯನ್ನು ಇತರೆ ಪ್ರಕಟಣೆಗಳನ್ನು ರವಾನಿಸುವುದಿಲ್ಲ.

ಹೀಗೆ ವಾರ್ಷಿಕ ವರದಿಗಳಲ್ಲಿರುವ ಸಲಹೆ, ಸೂಚನೆ ಕಾರ್ಯಸಮಿತಿಯ ಉತ್ತರ, ಪ್ರತಿಕ್ರಿಯೆಗಳನ್ನು ಗಮನಿಸಿ ಪರಿಷತ್ತಿನ ಆಯಾ ವರ್ಷದ ವಿದ್ಯಮಾನಗಳ ವಿವರ ಮತ್ತು ಕಾರ್ಯಸಮಿತಿ ಎಷ್ಟರಮಟ್ಟಿಗೆ ಸಮರ್ಥವಾಗಿ ಕಾರ್ಯನಿರ್ವಹಿಸಿದೆ ಎಂಬುದರ ಪರಿಧಿಯು ಆಗುತ್ತದೆ.

❖❖

೮

ಅಧ್ಯಾಯ – ೮

ಪರಿಷತ್ತಿನ ಪ್ರಕಟನೆಗಳು

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಗ್ರಂಥ ಪ್ರಕಟನೆಗಳ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.

೧೫೦೦ಕ್ಕೂ ಮಿಗಿಲಾದ ಸಂಖ್ಯೆಯಲ್ಲಿ ಗ್ರಂಥಗಳನ್ನು ಪ್ರಕಟಿಸಿರುವ ಪರಿಷತ್ತಿನ ಗ್ರಂಥಗಳಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿಸಲೇಬೇಕಾದ ಗ್ರಂಥಗಳು ಅನೇಕ. ಜನಸಾಮಾನ್ಯರಿಗೆ ಉಪಯುಕ್ತವಾಗಿ ಮಕ್ಕಳಿಗೆ, ಮಹಿಳೆಯರಿಗೆ, ಕನ್ನಡೇತರರಿಗೆ, ವಿದ್ವಾಂಸರಿಗೆ ಬೇಕಾದ ಗ್ರಂಥಗಳನ್ನು ಪ್ರಕಟಿಸಿದೆ.

ಪರಿಷತ್ತಿನ ಗ್ರಂಥಗಳಲ್ಲಿ ಕಂಡುಬರುವ ವಿಷಯ ವೈವಿಧ್ಯಕ್ಕೆ ಸಾಕ್ಷಿಯಾಗಿ ಕೆಲವು ಸಾಹಿತ್ಯ ಪ್ರಕಾರಗಳನ್ನು ಇಲ್ಲಿ ಉಲ್ಲೇಖಿಸಿದೆ.

ಪರಿಷತ್ತಿನ ಉದ್ದೇಶಗಳಲ್ಲಿ ಉಲ್ಲೇಖಿತವಾದ ಪಾಂಡಿತ್ಯ ಪೋಷಣೆಗೆ ಅನುಸಾರವಾದ ನೂರಾರು ಗ್ರಂಥಗಳು ಪ್ರಕಟವಾಗಿವೆ. ಇದಕ್ಕೆ ಅನುಗುಣವಾದ ಕೆಲವು ವಿಷಯಗಳು ಹೀಗಿವೆ:

೧. ಜೈನಸಾಹಿತ್ಯ, ೨. ವೈಷ್ಣವಸಾಹಿತ್ಯ, ೩. ವೀರಶೈವ ಸಾಹಿತ್ಯ, ೪. ವಚನಸಾಹಿತ್ಯ, ೫. ಕೀರ್ತನಸಾಹಿತ್ಯ, ೬. ನಿಘಂಟುಗಳು, ೭. ಅಲಂಕಾರ, ೮. ಛಂದಸ್ಸು, ೯. ವ್ಯಾಕರಣ, ೧೦. ವಿಮರ್ಶೆ, ೧೧. ಸುಭಾಷಿತ, ೧೨. ಪ್ರಬಂಧ, ೧೩. ಗದ್ಯಾನುವಾದ, ೧೪. ಮಕ್ಕಳಸಾಹಿತ್ಯ, ೧೫. ಮಹಿಳಾಸಾಹಿತ್ಯ, ೧೬. ಗೌರವ ಗ್ರಂಥಗಳು, ೧೭. ಕಾವ್ಯ, ೧೯. ಕವಿತೆ ೧೯. ನಾಟಕ. ೨೦. ಶಿಲ್ಪ, ೨೧. ಸಂಗೀತ, ೨೨. ಜೀವನಚರಿತ್ರೆ, ೨೩. ಭಾಷಾಶಾಸ್ತ್ರ, ೨೪. ಪಠ್ಯಗ್ರಂಥಗಳು, ೨೫. ರಾಜ್ಯಶಾಸ್ತ್ರ, ೨೬. ಸಮಾಜಶಾಸ್ತ್ರ, ೨೭. ಆತ್ಮಕಥೆಗಳು, ೨೮. ಕತೆ, ೨೯. ಕಾದಂಬರಿ, ೩೦. ಜಾನಪದ, ೩೧. ವಿಜ್ಞಾನ, ೩೨. ವಿಶೇಷ ಸಂಚಿಕೆಗಳು, ೩೩. ಕಾನೂನು ಮುಂತಾದ ಶಾಸ್ತ್ರ, ೩೪. ಕಲೆ, ಇತ್ಯಾದಿ.

ವಿಶೇಷ ಸಂಚಿಕೆಗಳು

ಪರಿಷತ್ತಿನ ಜಿಲ್ಲಾ, ತಾಲ್ಲೂಕು ಸಮಿತಿಗಳು ಸಮ್ಮೇಳನಗಳನ್ನು, ವಿಶೇಷ ಗೌರವ, ಸನ್ಮಾನ ವಿಚಾರ ಸಂಕಿರಣಗಳನ್ನು ಏರ್ಪಡಿಸಿದ ಸಂದರ್ಭದಲ್ಲಿ ವಿಶೇಷ ಸಂಚಿಕೆಗಳನ್ನು ಪ್ರಕಟಿಸಿವೆ. ಅವುಗಳಲ್ಲಿ ಸ್ಥಳೀಯ ಇತಿಹಾಸದ ಬಗ್ಗೆ ಲೇಖನಗಳಿವೆ. ಪರಿಷತ್ತಿನ ಬಗ್ಗೆ ಬರೆದ ಲೇಖನಗಳಿವೆ. ನಾನಾವಿಷಯಗಳ ಮೇಲೆ ಅಮೂಲ್ಯ ಲೇಖನಗಳಿವೆ. ಸ್ಥಳೀಯವಾಗಿ ಸಾಹಿತ್ಯ, ಕಲೆಗಳ ಕ್ಷೇತ್ರದಲ್ಲಿ ದುಡಿದವರ ಚಿತ್ರ, ಮಾಹಿತಿಗಳಿವೆ.

ಕೇಂದ್ರ ಸಾಹಿತ್ಯ ಪರಿಷತ್ತಿನ ಸರಸ್ವತೀ ಭಂಡಾರದಲ್ಲಿ ಲಭ್ಯವಿರುವ ವಿಶೇಷ ಸಂಚಿಕೆಗಳ ಪಟ್ಟಿಯನ್ನು ಕೊಡಲಾಗಿದೆ.

ಗೌರವ ಸದಸ್ಯರ ವಾಚಿಕೆಗಳು

ಪರಿಷತ್ತು ನೀಡುವ ಅತ್ಯುನ್ನತ ಮನ್ನಣೆಗಳಲ್ಲಿ ಗೌರವ ಸದಸ್ಯತ್ವವೂ ಒಂದು. ಇದಕ್ಕೆ ಹತ್ತಾರು ಮಂದಿ ಹಿರಿಯ ಗಣ್ಯ ಸಾಹಿತಿಗಳು ವಿದ್ವಾಂಸರು ಪಾತ್ರರಾಗಿದ್ದಾರೆ. ಇವರಿಗೆ ಗೌರವ ಸದಸ್ಯತ್ವ ನೀಡಿದ ಸಂದರ್ಭದಲ್ಲಿ ಅವರ ಪ್ರಾತಿನಿಧಿಕ ಕೃತಿಯೊಂದನ್ನು ಪ್ರಕಟಿಸಲಾಗುತ್ತದೆ. ಈ ಪೈಕಿ ಎ. ಎನ್. ಮೂರ್ತಿರಾವ್, ಪಾಟೀಲ ಪುಟ್ಟಪ್ಪ, ಎಸ್. ಕೆ. ಕರೀಂಖಾನ್, ಎನ್ಕೆ ಮೊದಲಾದ ವಾಚಿಕೆಗಳು ಪ್ರಕಟವಾಗಿಲ್ಲ ಪ್ರಕಟವಾಗಿದ್ದಷ್ಟರ ಪಟ್ಟಿ ಕೊಡಲಾಗಿದೆ.

ಮಾಲಿಕೆ ಗ್ರಂಥಗಳು

ಒಬ್ಬೊಬ್ಬ ಅಧ್ಯಕ್ಷರು ತಮ್ಮ ತಮ್ಮ ಕಾಲದಲ್ಲಿ ಯೋಜನೆಗೆ ಅನುಗುಣವಾಗಿ ಗ್ರಂಥಮಾಲಿಕೆಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಪ್ರಸಿದ್ಧವಾದುದು ಜಿ. ನಾರಾಯಣರ ಕಾಲದಲ್ಲಿ ಪ್ರಕಟವಾದ ಕನ್ನಡ ಕಾವ್ಯಗಳ ಗದ್ಯಾನುವಾದಗಳು. ತುಂಬ ಜನಪ್ರಿಯ ಮತ್ತು ಉಪಯುಕ್ತ ಮಾಲಿಕೆ ಇದು. ಅಮೃತೋತ್ಸವ ಮಾಲೆ, ಬೆಳ್ಳಿಬಿಟ್ಟಬಳ್ಳಿ ಮಾಲೆ. ಮಹಿಳಾ ಮಾಲಿಕೆ, ಮಕ್ಕಳ ಪುಸ್ತಕ ಮಾಲೆ, ನವಸಾಕ್ಷರಮಾಲೆ, ಇಂಗ್ಲಿಷಿನಲ್ಲಿ ಗ್ರಂಥಗಳು ಸಮ್ಮೇಳನ ಪ್ರಕಟನೆಗಳು ಇತ್ಯಾದಿ ಪ್ರಕಟನೆಗಳು, ಉಪಸಮಿತಿ ಮಾಡಿ ಆ ಮೂಲಕ ಆಯ್ಕೆ ಮಾಡಿ ಪ್ರಕಟಿಸಿದೆ.

ಸಾಹಿತ್ಯ ಸಮ್ಮೇಳನದ ಪ್ರಕಟನೆಗಳು

ಇವುಗಳಲ್ಲಿ ತುಂಬ ಉಪಯುಕ್ತ ಗ್ರಂಥಗಳು ಪ್ರಕಟವಾಗಿರುವಂತೆಯೇ ನೀರಸಗ್ರಂಥಗಳು – ಆಕರವಲ್ಲದ ಗ್ರಂಥಗಳು ಪ್ರಕಟವಾಗಿವೆ. ಉದಾಹರಣೆಗೆ ಸಮ್ಮೇಳನದ ಸಂಖ್ಯೆಯಷ್ಟು ಪುಸ್ತಕ ಪ್ರಕಟಿಸುವ ಪರಿಪಾಟ ಒಂದು. ಅತ್ಯಲ್ಪಕಾಲದಲ್ಲಿ ಮಾಡುವ ಆಯ್ಕೆ, ಸ್ಥಳೀಯ ವ್ಯಕ್ತಿಗಳ ಪ್ರಭಾವ, ಇತ್ಯಾದಿ ಕಾರಣಗಳಿಂದ ಪರಿಷತ್ತಿನ ಮಟ್ಟಕ್ಕಿಲ್ಲದ ಕೃತಿಗಳು ಪ್ರಕಟವಾಗಿವೆ. ಉದಾಹರಣೆಗೆ ೬೦ನೇ ಸಮ್ಮೇಳನಕ್ಕೆ ೬೦ ಗ್ರಂಥ, ೭೦ನೇ ಸಮ್ಮೇಳನಕ್ಕೆ ೭೦ ಗ್ರಂಥಗಳು, ೭೩ ನೇ ಸಮ್ಮೇಳನಕ್ಕೆ ೭೩ ಗ್ರಂಥಗಳನ್ನು ಪ್ರಕಟಿಸುವ ಪದ್ಧತಿಯನ್ನು ಯಾರು ಹುಟ್ಟು ಹಾಕಿದರೂ ಗೊತ್ತಿಲ್ಲ. ಆದರೆ ಶತಮಾನೋತ್ಸವ ಸಂದರ್ಭದಲ್ಲಿ ಈ ಪದ್ಧತಿಗೆ ಮಂಗಳ ಹಾಡಲಾಯಿತು. ವಿಜಾಪುರದಲ್ಲಿ ನಡೆದ ೭೯ನೇ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಆ ಭಾಗದ ಪ್ರಮುಖ ೨೫ ಲೇಖಕರ ಪುಸ್ತಕಗಳನ್ನು ಪ್ರಕಟಿಸಲಾಯಿತು. ಮಡಿಕೇರಿಯಲ್ಲಿ ನಡೆದ ೮೦ನೇ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಕೇವಲ ೧೧ ಕೊಡಗು ಕುರಿತ ಗ್ರಂಥಗಳನ್ನು ಪ್ರಕಟಿಸಲಾಯಿತು. ಶ್ರವಣಬೆಳಗೊಳದ ೮೧ನೇ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಶತಮಾನೋತ್ಸವ ಪ್ರಕಟಣೆಗಳನ್ನು ಮಾತ್ರ ಬಿಡುಗಡೆಮಾಡಲಾಯಿತು.

ಸಮ್ಮೇಳನಾಧ್ಯಕ್ಷರ ಭಾಷಣಗಳ ಸಂಪುಟಗಳು

ಸಾಹಿತ್ಯ ಸಮ್ಮೇಳನಗಳು ನಡೆದಾಗ ಸಮ್ಮೇಳನಾಧ್ಯಕ್ಷರ, ಸ್ವಾಗತಾಧ್ಯಕ್ಷರ, ಭಾಷಣಗಳನ್ನು ಪ್ರಕಟಿಸುತ್ತಾರೆ. ಇದುವರೆಗೆ ೭೨ ಸಮ್ಮೇಳನಗಳ ಸಮ್ಮೇಳನಾಧ್ಯಕ್ಷರ ಭಾಷಣಗಳು ೬ ಸಂಪುಟಗಳಲ್ಲಿ ಪ್ರಕಟವಾಗಿವೆ. ಈಗ ೭೩ರಿಂದ ೮೧ ಸಮ್ಮೇಳನದವರೆಗೆ ೭ನೇ ಸಂಪುಟ ಪ್ರಕಟವಾಗುತ್ತಿದೆ. ಸಮ್ಮೇಳನಾಧ್ಯಕ್ಷರ ಭಾಷಣಗಳಿಗೆ ವಿಶೇಷ ಸ್ಥಾನವಿದೆ. ಏಕೆಂದರೆ ಈ ಸ್ಥಾನವನ್ನು ಅಲಂಕರಿಸಿರುವವರೆಲ್ಲ ಪ್ರತಿಭಾವಂತ ಸಾಹಿತಿಗಳು, ವಿಮರ್ಶಕರು, ವಿದ್ವಾಂಸರು, ಕವಿಗಳು, ಸಾರ್ವಜನಿಕ ಗಣ್ಯರು ಆಗಿದ್ದಾರೆ. ಇವರ ಭಾಷಣಗಳಲ್ಲಿ ಕನ್ನಡ ಸಾಹಿತ್ಯ ಅವಲೋಕನ, ಗ್ರಂಥವಿಮರ್ಶೆ, ಸಮಕಾಲೀನ ಚಳವಳಿಗಳು, ಮೊದಲಾದ ಸಂಗತಿಗಳ ಬಗ್ಗೆ ಮಹತ್ವಪೂರ್ಣ ವಿವರಗಳಿವೆ.

ಶತಮಾನೋತ್ಸವ ಸಂದರ್ಭದಲ್ಲಿ ಎರಡು ಅಮೂಲ್ಯ ಮಾಲಿಕೆ ಗ್ರಂಥಗಳು ಪ್ರಕಟವಾಗುತ್ತಿವೆ. ವಿಶ್ವವಿದ್ಯಾನಿಲಯದ ಪ್ರಸಾರಾಂಗದಲ್ಲಿ ಕೆಲಸ ಮಾಡಿ ಅನುಭವ ಅರಿವು ಇರುವ ಪರಿಷತ್ತಿನ ಅಧ್ಯಕ್ಷರಾದ ಪುಂಡಲೀಕ ಹಾಲಂಬಿ ಅವರ

ಯೋಜನೆಗಳು ಇವು.

೧. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ೧೭ ಸಂಪುಟಗಳು

೨. ಶತಮಾನೋತ್ಸವ ನೆನಪಿನ ಶ್ರೇಷ್ಠ ೧೦೦ ಗ್ರಂಥಗಳ ಮರು ಮುದ್ರಣ

೩. ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿಯ ಗ್ರಂಥ. ಇವು ಪರಿಷತ್ತಿನ ಗ್ರಂಥ ಪ್ರಕಟನೆಯ ಇತಿಹಾಸದಲ್ಲಿ ಸ್ಮರಣೀಯವಾಗಲಿವೆ.

ಪಠ್ಯಗಳು

ಪರಿಷತ್ತು ಕನ್ನಡಾಸಕ್ತಿ ಕನ್ನಡ ಪರಿಣತಿ ಉಂಟುಮಾಡಲು ಅನೇಕ ಪರೀಕ್ಷೆಗಳನ್ನು, ತರಗತಿಗಳನ್ನು ನಡೆಸುತ್ತಿದೆ. ಇವುಗಳಿಂದಾಗಿ ಹತ್ತಾರು ಪಠ್ಯಗಳನ್ನು ಪ್ರಕಟಿಸಿದೆ. ಪರಿಷತ್ತು ಪ್ರಾರಂಭದಲ್ಲಿ, ಸ್ವಾತಂತ್ರ್ಯ ಪೂರ್ವದಲ್ಲಿ, ಮೈಸೂರು ವಿದ್ಯಾಭ್ಯಾಸ ಇಲಾಖೆಯ ಶಾಲಾ ತರಗತಿಗಳಿಗಾಗಿ ಪಠ್ಯಗಳನ್ನು ಸಿದ್ಧಪಡಿಸಿಕೊಡುತ್ತಿತ್ತು. ಕನ್ನಡ ಐದನೇ ತರಗತಿ ಪಠ್ಯ, ಮಹಾಭಾರತ, ರಾಮಾಯಣ, ಭೀಷ್ಮಪರ್ವ ಸಂಗ್ರಹ, ಅರಣ್ಯಪರ್ವ ಸಂಗ್ರಹ, ಮುಂತಾದ ಹತ್ತಾರು ಪಠ್ಯಗ್ರಂಥಗಳನ್ನು ರಚಿಸಿ ಪ್ರಕಟಿಸಿದೆ.

ಕನ್ನಡ ಸಾಹಿತ್ಯ ಪರೀಕ್ಷೆಗಳು ಕನ್ನಡ ಅಣುಗ, ಕನ್ನಡ ಜಾಣ, ಪರೀಕ್ಷೆಗಳು ಬಿಎಂಶ್ರೀ ಕಾಲದಲ್ಲಿ ೧೯೪೦ನೇ ಜೂನ್‌ನಲ್ಲಿ ಪ್ರಾರಂಭವಾದವು. ೧೯೬೬ರಲ್ಲಿ ಕನ್ನಡ ರತ್ನ ಪರೀಕ್ಷೆ ಪ್ರಾರಂಭವಾಗಿ ಅದಕ್ಕೆ ವಿದ್ಯಾಭ್ಯಾಸ ಇಲಾಖೆ, ಸರ್ಕಾರದ ಮನ್ನಣೆ ದೊರೆತಿರುವುದರಿಂದ ನೂರಾರು ಮಂದಿ ಪ್ರತಿವರ್ಷ ಪರೀಕ್ಷೆಗೆ ಕೂಡುತ್ತಿದ್ದಾರೆ. ಕಾಲಕಾಲಕ್ಕೆ ಬದಲಾವಣೆ ಆದ (ಸಿಲಿಬಸ್) ಪಠ್ಯಕ್ರಮದೊಂದಿಗೆ ಇಂದು ಕಾವ, ಜಾಣ, ರತ್ನ, ಪರೀಕ್ಷೆಗಳು ನಡೆಯುತ್ತಿವೆ. ಹಿಂದೆ ಈ ಪರೀಕ್ಷೆಗಳಿಗೆ ಕೂಡುವವರಿಗೆ ಪರಿಷತ್ತು ತರಗತಿಗಳನ್ನು ನಡೆಸುತ್ತಿತ್ತು. ಈಗ ನಡೆಸುತ್ತಿಲ್ಲ. ಆದರೆ ವರ್ಷೇವರ್ಷೇ ಹೊಸಪಠ್ಯಗಳು ಸಿದ್ಧವಾಗುತ್ತಿವೆ. ಹಳೇ ಪಠ್ಯಗಳೂ ಮುದ್ರಣವಾಗುತ್ತಿವೆ.

ಕನ್ನಡ ಅಣುಗ ಪರೀಕ್ಷೆ ಬಹಳ ಹಿಂದೆಯೇ ರದ್ದಾಯಿತು. ೧೯೨೨ರಲ್ಲಿ ಕನ್ನಡ ಪ್ರವೇಶ ಎಂಬ ಪ್ರಾಥಮಿಕ ಹಂತದ ಪರೀಕ್ಷೆ ಪ್ರಾರಂಭವಾಯಿತು.

ಪಠ್ಯಗ್ರಂಥಗಳ ಜತೆಗೆ ಭಾಷಾ ಕಲಿಕೆ ಗ್ರಂಥಗಳನ್ನೂ ಪರಿಷತ್ತು ಪ್ರಕಟಿಸಿವೆ. ಈ ಮಾಲಿಕೆಯಲ್ಲಿ ಕನ್ನಡೇತರರು ಕನ್ನಡವನ್ನು ಕಲಿಯಲು ತೆಲುಗು, ತಮಿಳು, ಮಲೆಯಾಳಗಳಲ್ಲಿ ಕನ್ನಡ ಕಲಿಯುವ ಸ್ವಂಬೋಧಿನಿಗಳು, ಇಂಗ್ಲಿಷಿನಲ್ಲಿ ಕನ್ನಡ ಕಲಿಯುವ ಮಾತನಾಡುವ ಕನ್ನಡ ಗ್ರಂಥ ಪ್ರಕಟವಾಗಿದೆ. ಈ ಮಾಲಿಕೆಯಲ್ಲಿ ಇಂಥ ಇನ್ನೂ ಹತ್ತಾರು ಭಾಷಾ ಕಲಿಕೆ ಗ್ರಂಥಗಳನ್ನು ಪರಿಷತ್ತು ಪ್ರಕಟಿಸಬೇಕಾಗಿದೆ. ಹಳೆಯ ಸ್ವಯಂಬೋಧಿನಿಗಳನ್ನು, ಇತರ ಭಾರತೀಯ ಭಾಷೆಗಳಲ್ಲಿ ಕನ್ನಡ ಕಲಿಸುವ ಪಠ್ಯಗಳನ್ನು ಪರಿಷತ್ತು ಪ್ರಕಟಿಸಬೇಕಾದ ಜರೂರಿದೆ.

ನಾಡಿನ ಗ್ರಂಥ ಪ್ರಕಟನೆ ಇತಿಹಾಸದಲ್ಲಿ ಪರಿಷತ್ತಿನ ೧೫೦೦ಕ್ಕೂ ಮಿಕ್ಕ ಗ್ರಂಥಗಳಲ್ಲಿ ಹಲವಾರು ಮೈಲಿಗಲ್ಲು ಗ್ರಂಥಗಳಿವೆ.

ಪಿಎಚ್ ಡಿ ಪದವಿ ಗ್ರಂಥಗಳು

ಸಂಶೋಧನೆಗೆ ಸಂಬಂಧಿಸಿದ ಪಿಎಚ್‌ಡಿ ಗಳಿಸಿದ ಗ್ರಂಥಗಳು ಹಂಪನಾ ಹಾಗೂ ಚಂಪಾ ಅವರ ಕಾಲದಲ್ಲಿ ಹಲವಾರು ಪ್ರಕಟವಾಗಿವೆ.

ನಿಘಂಟುಗಳು

ಸಂಶೋಧನೆ, ಭಾಷಾಭ್ಯಾಸಿಗಳಿಗೆ ನೆರವಾಗುವ, ಸಾಮಾನ್ಯರಿಗೆ, ವಿದ್ವಾಂಸರಿಗೆ ಉಪಯುಕ್ತವಾಗುವ ಹತ್ತಾರು ನಿಘಂಟುಗಳನ್ನು ಪರಿಷತ್ತು ಪ್ರಕಟಿಸಿದೆ. ಯಾವ ಸಂಸ್ಥೆಯೂ ಕನ್ನಡ ನಾಡಿನಲ್ಲಿ ಇಷ್ಟೊಂದು ಕೋಶಗಳನ್ನು ಕನ್ನಡದಲ್ಲಿ ಪ್ರಕಟಿಸಿಲ್ಲ. ಇವುಗಳನ್ನು ಪರಿಚಯದೊಂದಿಗೆ ನಿಘಂಟುಗಳ ಅಧ್ಯಾಯದಲ್ಲಿ ತಿಳಿಸಲಾಗಿದೆ. ಪರಿಷತ್ತಿನ ನಿಘಂಟಿನ ಪ್ರಕಟನೆಗಳು– ಮುಖ್ಯವಾಗಿ ಕನ್ನಡ ನಿಘಂಟು ೮ ಸಂಪುಟಗಳು – ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲ ಭಾರತೀಯ ಸಾಹಿತ್ಯ ಕ್ಷೇತ್ರದಲ್ಲೇ ವಿಶಿಷ್ಟವಾಗಿದೆ.

ಪರಿಷತ್ತು ಪ್ರಾರಂಭವಾಗಲು ಮೂಲಕಾರಣಗಳಲ್ಲಿ ಆಲೂರರ ಗ್ರಂಥ ಸಮ್ಮೇಳನಗಳು ಒಂದು ಕಾರಣ. ಪರಿಷತ್ತು ಪ್ರಾರಂಭದಿಂದಲೂ ಬಿಡದೆ ಗಮನವಿತ್ತು ಎಲ್ಲ ಅಧ್ಯಕ್ಷರೂ ಬಿಡದೆ ಮಾಡಿರುವ ಕೆಲಸವೆಂದರೆ ಸಮ್ಮೇಳನದ ಕಾರ್ಯಕ್ರಮಗಳು ಜೊತೆಗೆ ಗ್ರಂಥ ಪ್ರಕಟನೆ. ಈವತ್ತು ಪರಿಷತ್ತು ಪ್ರಕಟಿಸಿದ ಗ್ರಂಥಗಳೆಲ್ಲವೂ ಪರಿಷತ್ತಿನಲ್ಲಿ ಇಲ್ಲ. ಅವುಗಳನ್ನು ಸಂಗ್ರಹಿಸಿ ಖಾಯಂ ಪ್ರದರ್ಶನ ಏರ್ಪಡಿಸಿ, ಜೊತೆಗೆ ಇರುವ ಅಪರೂಪದ ಗ್ರಂಥಗಳನ್ನು ಮರುಮುದ್ರಣ ಮಾಡಬೇಕಾಗಿದೆ ಮತ್ತು ಇದರಿಂದ ಪರಿಷತ್ತು ಎಷ್ಟು ಅಮೋಘ ಸಾಧನೆ ಮಾಡಿದೆ ಎಂಬುದನ್ನು ಜನತೆ ಕಾಣಲು ಸಾಧ್ಯವಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳು

೧. ಜ್ಯೋತಿರ್ವಿನೋದಿನಿ – ನಂಗಪುರಂ, ವೆಂಕಟೇಶ ಅಯ್ಯಂಗಾರ್

೨. ಜೇಮ್ಸ್‌ಏಬ್ರಾಮ್ ಗಾರ್‌ಫೀಲ್ಡನ ಚರಿತ್ರೆ – ವೈ. ಕೆ. ರಾಮಚಂದ್ರರಾವ್

೩. ಪಂಪ ಭಾರತದ ಕತೆ (ವಚನ)

೪. ಪಂಪ ಭಾರತದ ನಿಘಂಟು

೫. ಪಂಪ ರಾಮಾಯಣದ ಕತೆ (ವಚನ)

೬. ಪಂಪ ರಾಮಾಯಣ (೮ನೇ ಆಶ್ವಾಸ)

೭. ಪಂಪ ರಾಮಾಯಣದ ನಿಘಂಟು

೮. ತೊರವೆಯ ರಾಮಾಯಣ (ಬಾಲಕಾಂಡ ಸಂಧಿ-೧೩-೧೬)

೯. ಸೀತಾ ಪರಿತ್ಯಾಗ (ಜೈಮಿನಿ ಭಾರತದಿಂದ)

೧೦. ಶ್ರೀ ಹರಿದಾಸರ ಕೃತಿಗಳು (ಸ್ವರ ಪ್ರಸ್ತಾರ ಸಹಿತ)

೧೧. ಹೂಮಾಲೆ – ಡಿ. ಕೆ. ಭೀಮಸೇನರಾವ್

೧೨. ಹರಿಶ್ಚಂದ್ರನ ರಾಜ್ಯ ಸಮರ್ಪಣ

೧೩. ಶಿವಶರಣರ ಕೃತಿಗಳು – ವೀಣೆ. ಎಲ್. ರಾಜಾರಾವ್

೧೪. ಹರಿದಾಸ ಸಾಹಿತ್ಯ – ಆರ್. ಎಸ್. ಪಂಚಮುಖಿ

೧೫. ವಡ್ಡಾರಾಧನೆ
೧೬. ಅನುಭವ ಮುಕುರಂ – ಸಂ. ಎ. ಆರ್. ಕೃಷ್ಣಶಾಸ್ತ್ರಿ
೧೭. ಪ್ಲೇಟೊವಿನ ಆದರ್ಶ ರಾಜ್ಯ
೧೮. ದೂತವಾಕ್ಯವು (ಭಾಸನ ರೂಪಕದ ಕನ್ನಡ ಪರಿವರ್ತನೆ)
೧೯. ಸೋಮೇಶ್ವರ ಶತಕ – ಸಂ : ಬೆಳ್ಳಾವೆ ವೆಂಕಟನಾರಣಪ್ಪ
೨೦. ಅರುಂಧತಿ – ಸಂ : ಎಲ್. ಗುಂಡಪ್ಪ
೨೧. ಸರ್ವೋದಯ
೨೨. ಕುಮಾರವ್ಯಾಸ ದರ್ಶನ
೨೩. ಸಂಕಲನ
೨೪. ಚಂದ್ರಹಾಸೋಪಾಖ್ಯಾನ
೨೫. ಕನ್ನಡದಲ್ಲಿ ಸುಧಾರಣೆಗಳು
೨೬. ಜೈಮಿನಿ ಭಾರತದ ಕನ್ನಡ ಗದ್ಯಾನುವಾದ (ಅಶ್ವಮೇಧಿಕ ಪರ್ವ)
೨೭. ಹರಿದಾಸ ಕೃತಿ ಮಂಜರಿ
೨೮. ಕಾದಂಬರಿ - ಸಾಮಾನ್ಯ ಮನುಷ್ಯ – ಎಲ್. ಎಲ್. ಶೇಷಗಿರಿರಾವ್
೨೯. ವಚನ ಕಾವ್ಯ ಮಂಜರಿ
೩೦. ಮೂರು ಸ್ಪರ್ಧಾ ನಾಟಕಗಳು
೩೧. ಕವಿ ಹೃದಯ
೩೨. ಕಾಳಿದಾಸನ ದೃಷ್ಟಿ-ಸೃಷ್ಟಿ
೩೩. ಕವಿ ಜಿಹ್ವಾಬಂಧನ
೩೪. ಪಂಪ ಭಾರತದ ಉಪೋದ್ಘಾತ
೩೫. ಚಾವುಂಡರಾಯ ಪುರಾಣ – ಸಂ : ರಾಮಶೇಷಶಾಸ್ತ್ರಿ ಮತ್ತು ಎಂ. ಕೃಷ್ಣಪ್ಪ
೩೬. ಗಾಳಿಯಲ್ಲಿನ ಅಗೋಚರ ಶಕ್ತಿಗಳು
೩೭. ನಕ್ಷತ್ರ ದರ್ಶನ – ಆರ್.ಎಲ್. ನರಸಿಂಹಯ್ಯ
೩೮. ಕನ್ನಡದ ಬಾವುಟ – ಸಂ : ಬಿ.ಎಂ.ಶ್ರೀಕಂಠಯ್ಯ
೩೯. ಶಬ್ದಮಣಿ ದರ್ಪಣ
೪೦. ಕರ್ಣಕರ್ಣಾಮೃತ – ಸಂ : ಜಿ. ವೆಂಕಟಸುಬ್ಬಯ್ಯ

೪೧. ಶಬ್ದಾವರ್ತ ನಿರುಕ್ತ

ಗದ್ಯಾನುವಾದ	ಅನುವಾದಕರು
೪೨. ಶಿವಕೋಟ್ಯಾಚಾರ್ಯನ ವಡ್ಡಾರಾಧನೆ	- ಟಿ. ಕೇಶವಭಟ್ಟ
೪೩. ಪಂಪಕವಿಯ ವಿಕ್ರಮಾರ್ಜುನ ವಿಜಯ	- ಎನ್ ಅನಂತರಂಗಾಚಾರ್
೪೪. ದುರ್ಗಸಿಂಹನ ಕರ್ನಾಟಕ ಪಂಚತಂತ್ರ	- (ಗುಂಡ್ಮಿ) ಚಂದ್ರಶೇಖರ ಐತಾಳ
೪೫. ಹರಿಹರಕವಿಯ ಗಿರಿಜಾಕಲ್ಯಾಣ ಮಹಾಪ್ರಬಂಧಂ	- ಎಂ. ಜಿ. ನಂಜುಂಡಾರಾಧ್ಯ
೪೬. ರುದ್ರಭಟ್ಟನ ಜಗನ್ನಾಥ ವಿಜಯಂ	- ಎಂ. ಆರ್. ವರದಾಚಾರ್ಯ
೪೭. ಷಡಕ್ಷರದೇವನ ರಾಜಶೇಖರ ವಿಳಾಸಂ	- ಚನ್ನಪ್ಪ ಎರೇಸೀಮೆ
೪೮. ಜನ್ನಕವಿಯ ಯಶೋಧರ ಚರಿತೆ	- ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ
೪೯. ಆಂಡಯ್ಯನ ಕಬ್ಬಿಗರ ಕಾವಂ	- ಆರ್. ವಿ. ಕುಲಕರ್ಣಿ
೫೦. ಲಿಂಗಣ್ಣ ಕವಿಯ ಕೆಳದಿ ನೃಪವಿಜಯ	- ಕೆಳದಿ ಗುಂಡಾಜೋಯಿಸ್
೫೧. ರಾಘವಾಂಕ ಕವಿಯ ಸಿದ್ಧರಾಮ ಚಾರಿತ್ರ	- ಆರ್. ಎಸ್. ರಾಮರಾವ್
೫೨. ಚಾಮರಸನ ಪ್ರಭುಲಿಂಗಲೀಲೆ	- ಎಸ್. ವಿದ್ಯಾಶಂಕರ್
೫೩. ಬಸವಪ್ಪಶಾಸ್ತ್ರಿಗಳ ದಮಯಂತೀ ಸ್ವಯಂವರ	- ಕೆ. ಆರ್. ಲಕ್ಷ್ಮೀಕಾಂತಯ್ಯ
೫೪. ಕನಕದಾಸರ ನಳಚರಿತ್ರೆ	- ಹಾತೂರು ಶಂಕರನಾರಾಯಣ ಭಟ್ಟ
೫೫. ನಾಗವರ್ಮ ವಿರಚಿತ ಕರ್ಣಾಟಕ ಕಾದಂಬರಿ	- ಹ. ವೆಂ. ನಾರಾಯಣ ಶಾಸ್ತ್ರೀ
೫೬. ಚೌಂಡರಾಜನ ಅಭಿನವ ದಶಕುಮಾರ ಚರಿತ್ರೆ	- ಜಿ. ಆರ್. ಶ್ರೀನಿವಾಸ ಅಯ್ಯಂಗಾರ್
೫೭. ಕುಮಾರ ವಾಲ್ಮೀಕಿ ವಿರಚಿತ ತೊರವೆ ರಾಮಾಯಣ ಸಂಪುಟ ೧, ೨	- ಕೆ. ಎಸ್. ಕೃಷ್ಣಮೂರ್ತಿ
೫೮. ನಯಸೇನ ವಿರಚಿತ ಧರ್ಮಾಮೃತ	- ಕೆ. ವೆಂಕಟರಾಮಪ್ಪ
೫೯. ಸಂಚಿಯ ಹೊನ್ನಮ್ಮ ವಿರಚಿತ ಹದಿಬದೆಯ ಧರ್ಮ	- ಎನ್.ರಂಗನಾಥಶರ್ಮಾ
೬೦. ಆದಿಪುರಾಣ	- ಕೆ. ಎಲ್. ನರಸಿಂಹಶಾಸ್ತ್ರಿ
೬೧. ಚೆನ್ನಬಸವ ಪುರಾಣ ಸಂಪುಟ ೧, ೨,	- ಎಂ. ಚಂದ್ರಶೇಖರ್
೬೨. ನಳಚಂಪು	- ಡಾ. ಜಿ. ವರದರಾಜರಾವ್
೬೩. ನೇಮಿನಾಥ ಪುರಾಣ- ಸಂಪುಟ ೧-೨	- ಹಂಪ ನಾಗರಾಜಯ್ಯ, ಆರ್. ವಿ. ಕುಲಕರ್ಣಿ
೬೪. ಮಹಾಪುರಾಣ(ಪೂರ್ವ ಪುರಾಣ)ಸಂ.೧-೨	- ಎ. ಶಾಂತಿರಾಜ ಶಾಸ್ತ್ರಿಗಳು

೬೫. ಮಹಾಪುರಾಣ(ಉತ್ತರ ಪುರಾಣ)-ಸಂ.೧-೨ - ಎ. ಶಾಂತಿರಾಜ ಶಾಸ್ತ್ರಿಗಳು

೬೬. ರಾಘವಾಂಕನ ಹರಿಶ್ಚಂದ್ರ ಚರಿತೆ - ಎನ್. ರಂಗನಾಥಶರ್ಮಾ

೬೭. ಭಿಕ್ಷಾಟನ ಚರಿತೆ - ಡಾ. ಬಿ. ವ್ಹಿ. ಶಿರೂರ

೬೮. ತಿರುಮಲಾರ್ಯ ವಿರಚಿತ ಚಿಕ್ಕದೇವರಾಯ ವಂಶಾವಳಿ - ಮ. ಬಾ. ಭೋಯಿ

೬೯. ಬಸವರಾಜ ವಿಜಯಂ - ಭಾಗ : ೧ -೨ - ಪಂಡಿತ ಚನ್ನಪ್ಪ ಎರೇಸೀಮೆ

೭೦. ಶಾಂತಿಪುರಾಣಂ - ಸಂ : ಹಂಪ. ನಾಗರಾಜಯ್ಯ

೭೧. ಶ್ರೀ ಶಾಂತೀಶ್ವರ ಪುರಾಣಂ - ಆರ್. ವಿ. ಕುಲಕರ್ಣಿ

೭೨. ಚಂದ್ರಪ್ರಭ ಪುರಾಣಂ - ಆರ್. ವಿ. ಕುಲಕರ್ಣಿ

೭೩. ಸಾಹಸಭೀಮ ವಿಜಯಂ - ಆರ್. ವಿ. ಕುಲಕರ್ಣಿ

೭೪. ಜೈಮಿನಿ ಭಾರತ - ಕಡಬದ ನಂಜುಂಡ ಶಾಸ್ತ್ರಿಗಳು, ಎನ್. ರಂಗನಾಥಶರ್ಮ

೭೫. ಶಬರ ಶಂಕರ ವಿಳಾಸಂ - ದಿಬ್ಬೂರು ಶ್ರೀನಿವಾಸರಾವ್

೭೫. ಕನಕದಾಸ ವಿರಚಿತ ಮೋಹನ ತರಂಗಿಣಿ - ಎಸ್. ಎಸ್. ಕೋತಿನ

೭೬. ಕನ್ನಡ ನಾಡಿನ ಚರಿತ್ರೆ ಭಾಗ - ೧ - ಡಾ. ಬಿ. ಎ. ಸಾಲೆತ್ತೊರೆ
-ಡಾ. ದೇಸಾಯಿ ಪಾಂಡುರಂಗರಾಯರು

೭೭. ಕನ್ನಡ ನಾಡಿನ ಚರಿತ್ರೆ ಭಾಗ - ೨ - ಡಾ. ಎಸ್. ಸಿ. ನಂದಿಮಠ

೭೮. ಕನ್ನಡ ನಾಡಿನ ಚರಿತ್ರೆ ಭಾಗ - ೩ - ಡಾ. ಎಂ. ಎಚ್. ಕೃಷ್ಣ

೭೯. ಮಾದರಿ ಪತ್ರಗಳು - ಎಸ್. ಆರ್. ಸಿದ್ಧರಾಜು

೮೦. ದೇಶವಿದೇಶಗಳಲ್ಲಿ ಕನ್ನಡ ಸಂಘ ಸಂಸ್ಥೆಗಳು - ವೆಂಕಟೇಶ ಸಾಂಗ್ಲಿ

೮೧. ಕನ್ನಡ ರಂಗಭೂಮಿ ನಡೆದು ಬಂದದಾರಿ - ಶ್ರೀರಂಗ

೮೨. ನಮ್ಮ ಪರಿಷತ್ತು - ವೆಂಕಟೇಶ ಸಾಂಗ್ಲಿ

೮೩. ವಯಸ್ಕರ ಶಿಕ್ಷಣ ಸಾಧನೆ - ಟಿ. ಆರ್. ನಾಗಪ್ಪ

೮೪. ಲಾಭಕರ ಸಾಕಣೆ - ಕೆ. ಎಸ್. ಪ್ರತಾಪಕುಮಾರ್ ಆರ್. ಎಸ್. ಶ್ರೀನಿವಾಸಗೌಡ

೮೫. ಬೇಸಾಯ - ವಿವಿಧ ಲೇಖಕರು

೮೬. ಆಧುನಿಕ ವ್ಯವಸಾಯ - ಗೊದ್ದು ವೀರೇಶ್

೮೭. ಕನ್ನಡದಲ್ಲಿ ಶಿಲ್ಪ ಮತ್ತು ತಾಂತ್ರಿಕ ಸಾಹಿತ್ಯ - ಕ. ರಾ. ಮೋಹನ್

೮೮. ಕನ್ನಡ ಹಸ್ತ ಪ್ರತಿಗಳ ಇತಿಹಾಸ - ಎಚ್. ದೇವೀರಪ್ಪ

೮೯. ಕನ್ನಡದಲ್ಲಿ ಜೈನ ವಾಙ್ಮಯ - ವಿವಿಧ ಲೇಖಕರು

೯೦. ಜನಪ್ರಳಯ - ಬಿ. ನಾರಾಯಣಮ್ಮ

೯೧. ಶಿಕ್ಷಣದಲ್ಲಿ ಪ್ರೇರಣೆ ಮತ್ತು ಕಲಿಕೆ - ಜಯಲಕ್ಷ್ಮೀ

೯೨. ಕನ್ನಡದ ಸರ್ವಾಂಗೀಣ ಪ್ರಗತಿ - ವಿವಿಧ ಲೇಖಕರು

೯೩. ಪಿನೋಕಿಯೋ - ಅನು: ಎನ್. ಪ್ರಹ್ಲಾದರಾವ್

೯೪. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಲೇಖನ ಸೂಚಿ (೧೯೭೧-೮೨) - ಟಿ. ವಿ. ವೆಂಕಟರಮಣಯ್ಯ

ಗೌರವಸದಸ್ಯತ್ವದ ಪುಸ್ತಕಗಳು

೯೫. ವಿಚಾರ ಕ್ರಾಂತಿಗೆ ಆಹ್ವಾನ - ಡಾ. ಕುವೆಂಪು

೯೬. ಮೈಸೂರ ಮಲ್ಲಿಗೆ - ಡಾ. ಕೆ. ಎಸ್. ನರಸಿಂಹಸ್ವಾಮಿ

೯೭. ಪ್ರತಿಧ್ವನಿ - ನಿರಂಜನ

೯೮. ಯಶೋಧರಾ - ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್

೯೯. ಸಾಗರಸಿಂಪಿ - ಸಂ. ಡಾ. ಎಂ. ಜಿ. ಬಿರಾದಾರ

೧೦೦. ವ್ಯಾಕರಣತೀರ್ಥ - ಸಂ. ಡಾ. ಬಸವರಾಜ ಮಲಶೆಟ್ಟಿ

೧೦೧. ಸಿಂಧುಶ್ರೀ - ಸಂ. ಟಿ. ವಿ. ಸುಬ್ರಮಣ್ಯ

೧೦೨. ನವಿಲುಗರಿ - ಸಂ. ಡಾ. ಸುಜನಾ

೧೦೩. ಶಾಂತಕಿರಣ - ಸಂ. ಶ್ರೀಮತಿ ಎಚ್. ಎಂ. ಬೀಳಗಿ

ಅಮೃತೋತ್ಸವ ಮಾಲೆ

೧೦೪. ಕನ್ನಡ ಸಾಂಗತ್ಯ ಸಾಹಿತ್ಯ - ಡಾ. ವೀರಣ್ಣ ರಾಜೂರ

೧೦೫. ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ - ಡಾ. ದೇವೇಂದ್ರಕುಮಾರ ಹಕಾರಿ

೧೦೬. ಅಂಡಯ್ಯ - ಡಾ. ಎಸ್. ಎಸ್. ಕೋತಿನ

೧೦೭. ತುಳು ಜನಪದ ಸಾಹಿತ್ಯ - ಡಾ. ಬಿ. ಎ. ವಿವೇಕ ರೈ

೧೦೮. ಶ್ರೀ ಉತ್ಸವ - ಸಂ. ವಿಶಾಲಾಕ್ಷಿ

೧೦೯. ಧ್ವನ್ಯಾಲೋಕ - ಒಂದು ಅಧ್ಯಯನ - ಡಾ. ಕೆ. ವಿ. ನಾರಾಯಣ

೧೧೦. ಕನ್ನಡ ಸಾಹಿತ್ಯದಲ್ಲಿ ಪುರಾಣಪ್ರಜ್ಞೆ - ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ

೧೧೧. ರಾಘವಾಂಕ-ಒಂದು ಅಧ್ಯಯನ - ಡಾ. ಎಲ್. ಎ.ಸೂರ್ಯನಾರಾಯಣ

೧೧೨. ಡಿ. ವಿ. ಜಿ. ಅವರ ಸಾಹಿತ್ಯ ಕೃತಿಗಳು
ಒಂದು ಅಧ್ಯಯನ - ಡಾ. ಗುಂಡ್ಮಿ ಚಂದ್ರಶೇಖರ ಐತಾಳ

೧೧೩. ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ
ಹಾಗೂ ಚಾರಿತ್ರಿಕ ಪ್ರಜ್ಞೆ - ಡಾ. ಬಸವರಾಜ ಕಲ್ಗುಡಿ

ಇತರ ಪ್ರಕಟಣೆಗಳು

೧೧೪. ಆಕಾಶ ಜಾನಪದ - ಪ್ರೊ. ಹಂಪ. ನಾಗರಾಜಯ್ಯ

೧೧೫. ಉತ್ತರ ಕನ್ನಡ ದರ್ಶನ - ಸಂ. ಟಿ. ಕೆ. ಮಹಮೂದ್

೧೧೬. ಸಮಕಾಲೀನ ಕಥೆ ಕಾದಂಬರಿ ಮತ್ತು ಹೊಸ
ಪ್ರಯೋಗಗಳು - ಡಾ. ಜಿ. ಎಸ್. ಆಮೂರ

೧೧೭. ಹೊಸಗನ್ನಡ ವ್ಯಾಕರಣ - ಎನ್. ರಂಗನಾಥ ಶರ್ಮ

೧೧೮. ಪತ್ರ ಲೇಖನ ಕಲೆ - ಡಿ. ಟಿ. ರಂಗಸ್ವಾಮಿ

೧೧೯. ನಗೆಗೆ ಇರಲಿ ಬಾಳಿಕೆ - ರಾಮಭಟ್ಟ

೧೨೦. ಗುರುಭಕ್ತಾಂಡಾರಿ ಚೌಪದನ - ಅಂದನೂರು ಶೋಭಾ

೧೨೧. ಅತ್ಯುತ್ತಮ ಸಣ್ಣ ಕಥೆಗಳು (೧೨ ಕಥೆಗಳ ಸಂಗ್ರಹ) - ವಿವಿಧ ಲೇಖಕರು

೧೨೨. ಗದ್ಯ ಕುಸುಮಾಂಜಲಿ - ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ ಡಾ. ಸಾ. ಶಿ. ಮರುಳಯ್ಯ,
ಡಿ. ಲಿಂಗಯ್ಯ

೧೨೩. ಹೊಸಗನ್ನಡ ಸಾಹಿತ್ಯ - ಪ್ರೊ. ಎಲ್. ಎಸ್. ಶೇಷಗಿರಿರಾವ್

ಬೆಳ್ಳಿ ಬಿಟ್ಟ ಬಳ್ಳಿ ಮಾಲೆ

೧೨೪. ಬರಕೋ ಪದಾ ಬರಕೋ - ಡಾ. ಶಿವಾನಂದ ಗುಬ್ಬಣ್ಣವರ

೧೨೫. ಗೊಮ್ಮಟೇಶ್ವರ ಚರಿತೆ - ಡಾ. ಎಂ. ವ್ಹಿ. ಶಿರೂರ

೧೨೬. ನಿಂಬ ಸಾಮಂತ ಚರಿತೆ - ಡಾ. ಎಂ. ಎಂ. ಕಲಬುರ್ಗಿ

೧೨೭. ಕುಮುದೇಂದು ರಾಮಾಯಣ - ಡಾ. ಪಿ. ವಿ. ನಾರಾಯಣ

೧೨೮. ಕಂನುಡಿಯ ಹುಟ್ಟು - ಡಾ. ಶಂ. ಬಾ. ಜೋಶಿ

೧೨೯. ಸಾಹಿತ್ಯ ವಿಹಾರ - ಡಾ. ಬೆಟಗೇರಿ ಕೃಷ್ಣವರ್ಮ

೧೩೦. ತೊರವೆ ರಾಮಾಯಣ ಕಥಾವಸ್ತು ವಿವೇಚನೆ - ಡಾ. ಎಸ್. ಎಸ್. ಬ್ಯಾತನಾಳ

೧೩೧. ಕನ್ನಡ ಪ್ರತಿಭಟನೆ ಕಾವ್ಯ - ಡಾ. ಸಿ. ವೀರಣ್ಣ

೧೩೨. ಅಮೆರಿಕದಲ್ಲಿ ಗೊರೂರು	- ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್
೧೩೩. ಮಹಾಭಾರತದ ಭೀಮ	- ಬಿ. ಎಸ್. ಗೋಪಾಲಕೃಷ್ಣ
೧೩೪. ರಂಗಗೀತೆಗಳು	- ಕೆ. ವಿ. ಆಚಾರ್
೧೩೫. ಪಾರಿಜಾತ	- ಎಚ್. ಜಿ. ಸಣ್ಣಗುಡ್ಡಯ್ಯ
೧೩೬. ಜಾನಪದ ಅಧ್ಯಯನ ವಿಚಾರ ಸಂಕಿರಣ	- ಹಂಪ ನಾಗರಾಜಯ್ಯ
೧೩೭. ಚಂದುಳ್ಳ ಮಕ್ಕಳ ಒಂಬತ್ತು ಕೊಡು ಸ್ವಾಮಿ	- ಬಿ. ಸಿದ್ದಗಂಗಯ್ಯ ಕಂಬಾಳು
೧೩೮. ದಾಸಪ್ಪ ಜೋಗಪ್ಪ	- ಹಿ. ಚಿ. ಬೋರಲಿಂಗಯ್ಯ
೧೩೯. ಕತ್ತಾಲ ದಾರಿ ದೂರ	- ಕೃಷ್ಣಮೂರ್ತಿ ಹನೂರು
೧೪೦.ಜಾನಪದ ಜಾಣ್ಮೆ	- ಡಾ. ವೀರಣ್ಣ ರಾಜೂರ, ಬಿ. ವಿ. ಬಿರಾದಾರ
೧೪೧. ಸುವ್ವಿ ಸುವ್ವಮ್ಮ ಲಾಲಿ ಸುವ್ವಲಾಲೆ	- ಸುಶೀಲಾ ಸೊಂಡೂರ್
೧೪೨. ತುಮಕೂರು ಜಿಲ್ಲೆಯ ಜಾನಪದ ನಂಬಿಕೆಗಳು	- ಎನ್. ಎಸ್. ತಿಮ್ಮೇಗೌಡ
೧೪೩. ಮುತ್ತು ಮುತ್ತಿನ ತ್ವಾಟ	- ಡಾ। ಚಂದ್ರಶೇಖರ ಕಂಬಾರ, - ಜಯಪ್ರಕಾಶ ಬರಗೂರು
೧೪೪. ಬಣ್ಣನಾಡು	- ದೇವಂಗಿ ಟಿ. ಚಂದ್ರಶೇಖರ
೧೪೫. ಮೂವತ್ತು ಜನಪದ ಕಥೆಗಳು	- ಡಾ. ಕೆ. ಆರ್. ಸಂಧ್ಯಾರೆಡ್ಡಿ
೧೪೬. ಜಾನಪದ ಅಧ್ಯಯನ ಸಂಕ್ಷಿಪ್ತ ಇತಿಹಾಸ	- ಡಾ. ನಂ. ತಪಸ್ವೀಕುಮಾರ್
೧೪೭. ಉತ್ತರ ಕನ್ನಡದ ಹವ್ಯಕರ ಜನಪದ ಕಥೆಗಳು	- ಡಾ. ಶಾಂತಿ ನಾಯಕ
೧೪೮. ಐವರು ಹೇಳಿದ ಜಾನಪದ ಕಥೆಗಳು	- ತರೀಕೆರೆ ರಹಮತ್
೧೪೯. ಧರ್ಮದೇವತೆ	- ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ
೧೫೦. ಜನಪದ ಬಸವ ಪುರಾಣ	- ಪಿ. ಕೆ. ರಾಜಶೇಖರ
೧೫೧. ಸಾತು ಕ್ಯಾಮಣ್ಣನ ಲಾವಣಿಗಳು	- ನಿಂಗಣ್ಣ ಸಣ್ಣಕ್ಕಿ
೧೫೨. ಬೆಳವಲ ಬೆಳಕು	- ಜಿ. ಬಿ. ಖಾಡೆ
೧೫೩. ವಡ್ಡಗೆರೆ ನಾಗಮ್ಮ	- ವೈಜಯಂತಿಮಾಲ
೧೫೪. ಎರಡು ಕಿನ್ನರಿಜೋಗಿ ಕಾವ್ಯಗಳು	- ಜಿ. ಎಸ್. ವಸಂತಮಾಲ
೧೫೫. ಉತ್ತರ ಕರ್ನಾಟಕದ ಬೈಗುಳಗಳು	- ಮೃತ್ಯುಂಜಯ ಹೊರಕೇರಿ
೧೫೬. ಗ್ರಾಮೀಣ ಗಾದೆಗಳು	- ಬಿ. ಕೃಷ್ಣಪ್ಪ ರೆಡ್ಡಿ
೧೫೭. ಜನಪದ ಶಿಶುಪ್ರಾಸಗಳು	- ಶ್ರೀಕಂಠ ಕೂಡಿಗೆ

೧೫೮. ಗುಲಗಂಜಿ ಮಾದೇವಿ	- ಕುರುವ ಬಸವರಾಜ್
೧೫೯. ಹಸರ ಗಿಡದ ಮ್ಯಾಲ ಮೊಸರ ಚಲ್ಲೇದ	- ಜಂಬುನಾಥ ಕಂಚ್ಯಾಣಿ
೧೬೦. ಸಂಸಾರಿ ಹೆಚ್ಚೋ ಸಂನ್ಯಾಸಿ ಹೆಚ್ಚೋ	- ಡಾ. ಎಂ. ಎ. ಜಯಚಂದ್ರ
೧೬೧. ಜನಪದ ಒಡಪುಗಳು	- ಶಂಕರಾನಂದ ಉತ್ನಾಸರ
೧೬೨. ಹಳ್ಳಿ ಹಬ್ಬಿಸಿದ ಹೂಬಳ್ಳಿ	- ಜಿ. ಬಿ. ಖಾಡೆ
೧೬೩. ಜನಪದದಲ್ಲಿ ಮಳೆರಾಯನ ಮುನಿಸು	- ಬಸವರಾಜ ಆಕಳವಾಡಿ
೧೬೪. ಲಂಬಾಣಿಗರ ಜನಪದ ಗೀತೆಗಳು	- ಬೇನಹಳ್ಳಿ ಜಿ. ನಾಯಕ್
೧೬೫. ಕಥೆ ಕೇಳೇ ಗುಬಲಾಡಿ	- ಜೀನಹಳ್ಳಿ ಸಿದ್ಧಲಿಂಗಪ್ಪ
೧೬೬. ಎಣ್ಣೆಗೆರೆಯ ಜನಪದ ಗೀತೆಗಳು	- ಎಣ್ಣೆಗೆರೆ ಆರ್. ಸಿದ್ಧಹನುಮಯ್ಯ
೧೬೭. ಲಂಬಾಣಿ ಗಾದೆಗಳು	- ಸಣ್ಣರಾಮ
೧೬೮. ನಲ್ಲೂರು ದೊರೆಕಾಳಿ	- ಡಾ. ನಲ್ಲೂರು ಪ್ರಸಾದ್
೧೬೯. ಕನ್ನಡ ನಾಟಕ ಸಂಪುಟ	- ಡಾ। ಚಂದ್ರಶೇಖರ ಕಂಬಾರ
೧೭೦. ಕೋಲಾಟದ ಪದಗಳು	- ಬಸವರಾಜ ಮಲಶೆಟ್ಟಿ
೧೭೧. ಮರಾಠಿ ಲೋಕಸಾಹಿತ್ಯ	- ಡಾ. ಎಸ್. ಎಸ್. ಬ್ಯಾತನಾಳ
೧೭೨. ಜನಪದ ಜೀವನ ತರಂಗಗಳು	- ಪ್ರೊ. ಎಂ. ಎಸ್. ವಾಲಿ
೧೭೩. ಬಂದೀರೆ ನನ್ನ ಜಡೆವೊಳಗೆ	- ಡಾ. ಚಂದ್ರಶೇಖರ ಕಂಬಾರ
	- ಡಾ. ಜಿ. ಆರ್. ತಿಪ್ಪೇಸ್ವಾಮಿ
೧೭೪. ಕರ್ನಾಟಕದ ವೀರಗಲ್ಲುಗಳು	- ಡಾ. ಆರ್. ಶೇಷಶಾಸ್ತ್ರಿ
೧೭೫. ಜನಪದ ಕಲಾವಿದರ ಸೂಚಿ	- ಡಾ. ಹಂಪ. ನಾಗರಾಜಯ್ಯ
೧೭೬. ಕನ್ನಡ ಗಾದೆಗಳ ಮಹಾಕೋಶ ಸಂಪುಟ - ೧	- ಹು.ಮ.ರಾಮಾರಾಧ್ಯ
೧೭೭. ಕನ್ನಡ ಗಾದೆಗಳ ಮಹಾಕೋಶ ಸಂಪುಟ - ೨	- ಹು. ಮ. ರಾಮಾರಾಧ್ಯ
೧೭೮. ಕಾದಂಬರಿಕಾರನ ಕಥೆ	- ಬಸವರಾಜ ಕಟ್ಟೀಮನಿ
೧೭೯. ನಾನು ಯಾರು	- ಜಿ. ವಿ. ಡಿ
೧೮೦. ಜನಪದ ಝೇಂಕಾರ	- ಬಿ. ಎಸ್. ಸ್ವಾಮಿ
೧೮೧. ನಮ್ಮ ಕಣ್ಣು	- ಡಾ. ಎಸ್. ಬಿ. ವಸಂತಕುಮಾರ್
೧೮೨. ರಿವಾಯತ ಪದಗಳು	- ತೇಜಸ್ವಿ ಕಟ್ಟೀಮನಿ

೧೮೩. ಕನ್ನಡ ಜನಪದ ಕಥೆಗಳು - ಡಾ. ಕೆ. ಆರ್. ಸಂಧ್ಯಾರೆಡ್ಡಿ

೧೮೪. ಹಮಾರಿ ಹೆಣ್ಣು ಮತ್ತು ಇತರ ಜನಪದ ಕಥೆಗಳು - ಬಸವರಾಜ ನೆಲ್ಲಿಸರ

೧೮೫. ಕೋಲಾಟಗಳು ಮತ್ತು ಕೋಲಪದಗಳು - ಡಾ. ಎಸ್. ಪಿ. ಪದ್ಮಪ್ರಸಾದ್

೧೮೬. ಮಹಿಳೆಯರ ಕೆಲವು ಮರಾಠಿ ಕಥೆಗಳು - ಅನು : ಎಸ್. ಪಿ. ಪಾಟೀಲ

೧೮೭. ಶಿವಗಂಗೆ ಸುತ್ತಿನ ಜನಪದ ಕಥೆಗಳು - ಸುಧಾಕರ

೧೮೮. ಭಾರತದ ಪ್ರಾಚೀನ ವಿದ್ಯಾಪೀಠಗಳು - ಬಿ. ಪಿ. ಶಿವಾನಂದರಾವ್

೧೮೯. ಕನ್ನಡ ವೃತ್ತಿಗಾಯಕ ಕಾವ್ಯಗಳು - ಡಾ. ಜೀ. ಶಂ. ಪರಮಶಿವಯ್ಯ

೧೯೦. ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ - ವಿವಿಧ ಲೇಖಕಿಯರು

೧೯೧. ನಮ್ಮ ಲೇಖಕಿಯರು - ಸಂ. ಸಂಧ್ಯಾಶರ್ಮ, ಕುಲಶೇಖರಿ

೧೯೨. ರಿವಾಯತಗಳು - ಪ್ರೊ. ಶ್ರೀಮತಿ ಎಚ್. ಎಂ. ಬೀಳಗಿ

೧೯೩. ಕೊಡವ ಕನ್ನಡ ನಿಘಂಟು - ಐ. ಮಾ. ಮುತ್ತಣ್ಣ

೧೯೪. ಚಿನ್ನದ ಕದರ್ಾಂಗೆ ಸಲಹಿನಿ - ಗುಂಡ್ಮಿ ಚಂದ್ರಶೇಖರ ಐತಾಳ

೧೯೫. ನಮ್ಮ ಕರ್ನಾಟಕ - ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಸಂಪಾದಕರಾಗಿದ್ದಾಗ ಅವರು ಬರೆದು ಸಿದ್ಧಪಡಿಸಿದ ನಿಘಂಟಿನ ಭಾಗವನ್ನು ಸಂಪಾದಕ ಮಂಡಳಿ ಚರ್ಚಿಸಿ ಒಪ್ಪಿಗೆ ಕೊಟ್ಟ ಮೇಲೆ ಮೊದಲ ಎಂಟು ಪುಟಗಳನ್ನು ಹೀಗೆ ಪ್ರಕಟಿಸಲಾಗಿದೆ. ಮಾದರಿ ಪುಟಗಳ ಮೇಲೆ ಬಂದ ಹಲವು ವಿಮರ್ಶೆ ಸೂಚನೆಗಳಲ್ಲಿ ಸೂಕ್ತವೆನ್ನಿಸಿದವುಗಳನ್ನೆಲ್ಲಾ ಈಗ ಕಾರ್ಯರೂಪಕ್ಕೆ ತಂದಿದೆ. ಇದರ ಪರಿಷ್ಕರಣ ಮುದ್ರಣಗಳಲ್ಲಿ ನನಗೆ ಶ್ರೀಯುತ ತೀ. ನಂ. ಶ್ರೀಕಂಠಯ್ಯನವರು ನೆರವಾಗಿದ್ದಾರೆ. ಇದನ್ನು **'ಕರಡು ಪ್ರತಿ'** ಎಂದು ಕರೆದಿದೆ. ಆದರೆ **ಇದು ಬಹುಮಟ್ಟಿಗೆ ಮುಂದೆ ಅಚ್ಚಾಗಬಹುದಾದ ನಿಘಂಟನ್ನು ಪ್ರತಿಬಿಂಬಿಸುತ್ತದೆ.** ಎಂದು ಹೇಳಬಹುದು. ಮಹಾಜನರು ಇದನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯ ಸೂಚನೆಗಳನ್ನು ತಿಳಿಸಬೇಕೆಂದು ಪರಿಷತ್ತು ಪ್ರಾರ್ಥಿಸುತ್ತದೆ."

"ಇದು ಕಿಟೆಲ್ ಅವರ ಕನ್ನಡ – ಇಂಗ್ಲಿಷ್ ನಿಘಂಟಿನ ಮಾದರಿಯಲ್ಲಿ ಮತ್ತು ಅದನ್ನು ಅವಲಂಬಿಸಿಕೊಂಡು ರಚಿತವಾಗಿದೆ. ಆದರೆ ಅದರ ಪ್ರತಿಕೃತಿಯಲ್ಲವೆಂದು ಯಾರಿಗಾದರೂ ಸ್ಪಷ್ಟವಾಗುತ್ತದೆ. ಕಿಟೆಲ್ ನಿಘಂಟಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಬೇಕೆಂಬುದು ನಮ್ಮ ಹಿರಿಯಾಸೆ. ಆತನ ಕಾಲದಲ್ಲಿ ದೊರೆಯದಿದ್ದ ಶಾಸನಗಳನ್ನೂ ಗ್ರಂಥಗಳನ್ನೂ ಲೇಖನಗಳನ್ನು ಇಲ್ಲಿ ಹೇರಳವಾಗಿ ಉಪಯೋಗಿಸಿಕೊಂಡಿದೆ. ಅಂದು ತಿಳಿದಿರಲಿಲ್ಲ. ಅಥವಾ ಸಿಕ್ಕುತ್ತಿರಲಿಲ್ಲ. ಆದ್ದರಿಂದ ಲೀಲಾವತಿ, ಕಾವ್ಯಾವಲೋಕನ, ಗಿರಿಜಾಕಲ್ಯಾಣ, ರಾಜಶೇಖರ ವಿಲಾಸ, ಜಗನ್ನಾಥವಿಜಯ, ಪ್ರಭುಲಿಂಗಲೀಲೆ, ಕುಮಾರವ್ಯಾಸಭಾರತ ಮುಂತಾದ ಪ್ರಸಿದ್ಧ ಗ್ರಂಥಗಳಲ್ಲಿಯೂ ಕೆಲವನ್ನು ಆತನು ಪೂರ್ತಿಯಾಗಿ ಬಿಡಬೇಕಾಯಿತು, ಮಿಕ್ಕವುಗಳಲ್ಲಿ ಹಲವಾರು ಶಬ್ದಗಳನ್ನು ಬಿಡಬೇಕಾಯಿತು (ನಿಘಂಟು ಪುಟ V - VI) ಈಗ ಇಂಥ ಹಳಗನ್ನಡ ಗ್ರಂಥಗಳನ್ನೆಲ್ಲಾ – ಅವು ಮುದ್ರಿತವಾಗಿರಲಿ, ಹಸ್ತ ಪ್ರತಿಯ ರೂಪದಲ್ಲಿರಲಿ – ಶೋಧಿಸಿ ಪ್ರಯೋಗಪಟ್ಟಿಕೆಗಳನ್ನು ಮಾಡಿಕೊಂಡಿದೆ. ನೂರಾರು ಹೊಸಗನ್ನಡ ಗದ್ಯಪದ್ಯ ಗ್ರಂಥಗಳನ್ನು ಓದಿ ಅವುಗಳಿಂದ ಪ್ರಯೋಗಗಳನ್ನು ಸಂಗ್ರಹಿಸಿಕೊಡಲಾಗಿದೆ"

೬–೧–೧೯೫೮ರಿಂದ, ತೀ. ನಂ. ಶ್ರೀಕಂಠಯ್ಯನವರು ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾದರು; ಎಲ್. ಗುಂಡಪ್ಪನವರು ೧.೪.೧೯೮೩ರಲ್ಲಿ ನಿವೃತ್ತಿ ಹೊಂದಿದ ಮೇಲೆ, ಎನ್. ಬಸವಾರಾಧ್ಯರು ಸಂಪಾದಕರಾಗಿ ಕಾರ್ಯನಿರ್ವಹಿಸತೊಡಗಿದರು. ಈ ಸಂಪಾದಕೀಯ ವ್ಯವಸ್ಥೆಯಾದ ಮುಂದೆ ಸಂಪುಟದ ಸಂಚಿಕೆಗಳು ಒಂದೊಂದಾಗಿ ಪ್ರಕಟವಾಗತೊಡಗಿದವು. ಸಮಗ್ರವಾಗಿ ಮೊದಲನೆಯ ಸಂಪುಟ ಡಿಸೆಂಬರ್ ೧೯೭೦ರ ವೇಳೆಗೆ ರಟ್ಟುಕಟ್ಟಿ ಪ್ರಕಟವಾದಾಗ, ಅದು ಕನ್ನಡ ನಿಘಂಟು ಜೀವನಗಾಥೆಯ ಪ್ರಥಮಸರ್ಗವಾಗಿ ಪರಿಣಮಿಸಿ ನಿಘಂಟು ಸಿದ್ಧತೆಗಾಗಿ ಶ್ರಮಿಸಿದವರೂ ಸಾರ್ವಜನಿಕರೂ ಸಂತೋಷದಿಂದ ನಲಿಯುವಂತಾಯಿತು. ಈ ಪ್ರಕಟನೆಯ ಆರಂಭದ ಹೊತ್ತಿಗೆ, ನಿಘಂಟಿನ ಚಾಲಕಶಕ್ತಿಯಾಗಿದ್ದ ತೀ.ನಂ.ಶ್ರೀ ಅವರು ಹಠಾತ್ತನೆ ತೀರಿಕೊಂಡರು (೧೯೬೬). ಡಿ. ಎಲ್. ನರಸಿಂಹಾಚಾರ್ಯರು ೧೯೬೬ರಿಂದ ೧೯೭೧ರ ವರೆಗೆ (ಬಳಿಕ ಕ. ವೆಂ. ರಾಘವಾಚಾರ್ಯರು ೧೯೭೧ರಿಂದ ಮುಂದಕ್ಕೆ ಅಧ್ಯಕ್ಷರಾದರು) ನಿಘಂಟುಸಮಿತಿ ಅಧ್ಯಕ್ಷರೂ ಪ್ರಧಾನ ಸಂಪಾದಕರೂ ಆದರು. ನಂತರ ಎನ್. ಬಸವಾರಾಧ್ಯರು ಸಂಪಾದಕರಾಗಿ ಮುಂದುವರಿದರು.

ಮೊದಲ ಸಂಪುಟದ ಪ್ರಕಟನೆಯ ಬಳಿಕ, **ಎರಡನೆಯ ಸಂಪುಟ** ಜುಲೈ ೧೯೭೬ರಲ್ಲಿ (ಅಧ್ಯಕ್ಷರು: ಎಂ. ಮರಿಯಪ್ಪ ಭಟ್ಟರು ಮತ್ತು ಪ್ರಧಾನ ಸಂಪಾದಕರು: ಜಿ. ವೆಂಕಟಸುಬ್ಬಯ್ಯನವರು), **ಮೂರನೆಯ ಸಂಪುಟ** ಪರಿಷತ್ತಿನ ವಜ್ರಮಹೋತ್ಸವ ವರ್ಷವಾದ ಏಪ್ರಿಲ್ ೧೯೭೭ರಲ್ಲಿ (ಹಿಂದಿನ ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು ಮುಂದುವರಿದಿದ್ದಾರೆ), **ನಾಲ್ಕನೆಯ ಸಂಪುಟ** ಅಕ್ಟೋಬರ್ ೧೯೭೯ರಲ್ಲಿ (ಹಿಂದಿನ ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು: ಜಿ. ವೆಂಕಟಸುಬ್ಬಯ್ಯನವರು), **ಆರನೆಯ ಸಂಪುಟ** ಪರಿಷತ್ತಿನ ಅಮೃತಮಹೋತ್ಸವ ವರ್ಷವಾದ ಡಿಸೆಂಬರ್ ೧೯೯೦ರಲ್ಲಿ (ಹಿಂದಿನ ಅಧ್ಯಕ್ಷರು, ಪ್ರಧಾನ ಸಂಪಾದಕರು ಮುಂದುವರಿದಿದ್ದಾರೆ). **ಏಳನೆಯ ಸಂಪುಟ** ನವೆಂಬರ್ ೧೯೯೩ರಲ್ಲಿ (ಅಧ್ಯಕ್ಷರು ಜಿ. ಎಸ್. ಗಾಯಿಯವರು,

ಪ್ರಧಾನ ಸಂಪಾದಕರು ಎನ್. ಬಸವಾರಾಧ್ಯರು) ಕ್ರಮವಾಗಿ ಪ್ರಕಟವಾಗಿವೆ. ಕೊನೆಯದಾದ ಎಂಟನೆಯ ಸಂಪುಟ ಏಪ್ರಿಲ್ – ಮೇ ೧೯೯೫ರಲ್ಲಿ ಪ್ರಕಟವಾಯಿತು. ಒಟ್ಟು ಪುಟಗಳು ೯೦೨೧.

ಭಾರತೀಯ ಭಾಷೆಗಳಲ್ಲಿ ಇಷ್ಟು ದೊಡ್ಡ ನಿಘಂಟು ಬೇರೊಂದು ಬಂದಿರುವಂತೆ ತೋರದು. ಇದು ಕನ್ನಡಿಗರು ಹೆಮ್ಮೆಪಡಬೇಕಾದ ವಿಷಯ.

ಈ ಮಹಾಕೋಶದ ನಿರ್ಮಾಣದಲ್ಲಿ ಕರ್ನಾಟಕದ ಶ್ರೇಷ್ಠವಿದ್ವಾಂಸರು ಹಲವರು, ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಸಂಪಾದಕರು, ಸಂಪಾದಕರು ಮತ್ತು ಸದಸ್ಯರಾಗಿ ಶ್ರಮಿಸಿದ್ದಾರೆ. ಸಮಾಲೋಚನ ಸಮಿತಿಯ ವಿದ್ವಾಂಸರಲ್ಲದೆ, ಅಭಿಮಾನಿಗಳೂ ಆಸಕ್ತರೂ ಆದ ನಾಡಿನ ಎಲ್ಲ ವಿದ್ವಾಂಸರೂ ಸಲಹೆ ಸಹಕಾರ ವಿಮರ್ಶೆಗಳನ್ನು ನೀಡಿದ್ದಾರೆ. ಅಂದಂದಿನ ಪರಿಷದಧ್ಯಕ್ಷರು, ಎಂ. ಆರ್. ಶ್ರೀ., ಮಾಸ್ತಿ, ಎ. ಎನ್. ಮೂರ್ತಿರಾವ್, ಬಿ. ಶಿವಮೂರ್ತಿಶಾಸ್ತ್ರಿ, ಜಿ. ವೆಂಕಟಸುಬ್ಬಯ್ಯ, ಜಿ. ನಾರಾಯಣ, ಹಂಪ. ನಾಗರಾಜಯ್ಯ, ಎಚ್. ಬಿ. ಜ್ವಾಲನಯ್ಯ, ಅ. ರಾ. ಚಂದ್ರಹಾಸಗುಪ್ತ (ಆಡಳಿತಾಧಿಕಾರಿಗಳು), ಜಿ. ಎಸ್. ಸಿದ್ಧಲಿಂಗಯ್ಯ, ಗೊ.ರು. ಚನ್ನಬಸಪ್ಪ ಇವರು, ಪರಿಷತ್ತಿನ ಇತರ ಪದಾಧಿಕಾರಿಗಳು, ನಾನಾ ವಿಧಗಳಲ್ಲಿ ನೆರವನ್ನು ಒದಗಿಸಿದ್ದಾರೆ. ಸರ್ಕಾರದ ಆಡಳಿತ ನಿರ್ವಾಹಕರೂ ಒತ್ತಾಸೆ ನೀಡಿದ್ದಾರೆ. ನಿಘಂಟು ಕಛೇರಿಯ ಪ್ರಧಾನ, ಉಪ ಮತ್ತು ಸಹಾಯ ಸಂಪಾದಕರೂ ಸಿಬ್ಬಂದಿ ವರ್ಗದ ಇತರರೂ ನಿಘಂಟು ನಿರ್ಮಾಣದ ನಾನಾ ಘಟ್ಟಗಳಲ್ಲಿ ತಮ್ಮನ್ನು ನೇರವಾಗಿ ತೊಡಗಿಸಿಕೊಂಡು ಅಗಾಧವಾಗಿ ಬಹುಕಾಲ ಪರಿಶ್ರಮಪಟ್ಟಿದ್ದಾರೆ. ಈ ಉದ್ಧಾಮ ಭಾಷಾಸೇವೆಯಲ್ಲಿ ದುಡಿದ ಕೆಲವರು ಇಂದು ನಮ್ಮೊಂದಿಗಿಲ್ಲ ಎನ್ನುವುದು ದುಃಖದ ಸಂಗತಿ. ಈ ಸೇವೆಯ ಸಂಪೂರ್ತಿಯನ್ನು ಕಣ್ಣಾರೆ ಕಾಣುತ್ತಿರುವವರು ಭಾಗ್ಯಶಾಲಿಗಳು. ಕನ್ನಡ ನಿಘಂಟು ಕಛೇರಿಯ ನಿರ್ವಹಣೆ ಹಾಗೂ ಸಂಪುಟಗಳ ಪ್ರಕಟನೆಗೆ ಕರ್ನಾಟ ಸರ್ಕಾರ ಒದಗಿಸಿದ ಒತ್ತಾಸೆ ದ್ರವ್ಯಸಹಾಯಗಳು ಕನ್ನಡಜನ ಕೃತಜ್ಞತೆಯಿಂದ ಸ್ಮರಿಸಬೇಕಾದವು. ಈ ಸಹಾಯದ ಅಗತ್ಯ ಕಾಲದಿಂದ ಕಾಲಕ್ಕೆ ಹೆಚ್ಚುತ್ತಾ ಹೋಗಿ, ೧೯೫೭ರಲ್ಲಿ ಅಂದಿನ ರಾಜ್ಯಸರ್ಕಾರ ನೀಡಿದ ಒಂದು ಲಕ್ಷರೂಪಾಯಿಗಳ ನೆರವು ಈಗ ೧೯೯೪ರ ಹೊತ್ತಿಗೆ ಒಂದು ಕೋಟಿ ೬೭ ಲಕ್ಷ ರೂಪಾಯಿಗಳ ನೆರವಾಗಿ ಒದಗಿ ಈ ಮಹಾಕಾರ್ಯ ಸಮಾಪ್ತಿಮಂಗಳವನ್ನು ಕಾಣುವಂತಾಗಿದೆ.

ಈ ದ್ರವ್ಯ ಸಹಾಯ ಒದಗಿ ಬರಲು ಅಂದಂದಿನ ಪರಿಷದಧ್ಯಕ್ಷರೂ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರೂ ಪಟ್ಟಿರುವ ಕಷ್ಟ, ವಿನಿಯೋಗಿಸಿದ ಶಕ್ತಿ ಯುಕ್ತಿಗಳು, ಕಛೇರಿಗೆ ಕೈಕೊಂಡ ಯಾತ್ರೆಗಳು ದೊಡ್ಡದೊಂದು ರಾಮಾಯಣವೇ ಸರಿ. ಅವನ್ನು ಇಲ್ಲಿ ನಾನು ತಮ್ಮ ಸ್ಮರಣೆಗೆ ತರಬಹುದಲ್ಲದೆ, ವಿವರಿಸಲು ಶಕ್ತನಲ್ಲ; ಸದ್ಯದಲ್ಲಿ ಅದರ ಅಗತ್ಯವೂ ಇಲ್ಲ.

ಕನ್ನಡ ನಿಘಂಟಿನ ಮೊದಲ ೨ ಸಂಪುಟಗಳು ಪರಿಷತ್ತಿನ ಬಿ. ಎಂ. ಶ್ರೀ. ಅಚ್ಚುಕೂಟದಲ್ಲಿ ಮುದ್ರಿತವಾದವು. ಐದನೆಯದು ಬೆಂಗಳೂರಿನ ಭಗವಾನ್ ಇಂಡಸ್ಟ್ರೀಸ್ ಅವರಿಂದ ಆಯಿತು; ಉಳಿದವು ಬೆಂಗಳೂರಿನ ಸರ್ಕಾರಿ ಮುದ್ರಣಾಲಯದಲ್ಲಿ ಆಗಿವೆ. ಆಯಾ ಮುದ್ರಣಾಲಯದ ಮೇಲ್ವಿಚಾರಕರು, ನಿರ್ದೇಶಕರು ಕಷ್ಟಸಾಧ್ಯವಾದ ಈ ದೊಡ್ಡ ಪ್ರಮಾಣದ ಮುದ್ರಣಕಾರ್ಯವನ್ನು ಸಾಕಷ್ಟು ತೃಪ್ತಿಕರವಾಗಿಯೇ ನಿರ್ವಹಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಎಂಟನೆಯ ಸಂಪುಟದ ಮುದ್ರಣದ ಕಾರ್ಯ, ಆಧುನಿಕ ತಂತ್ರಜ್ಞಾನವನ್ನು ಅವಲಂಬಿಸಿ ಬೆಂಗಳೂರಿನ ಸರ್ಕಾರಿ ಮುದ್ರಣಾಲಯದ ಉಸ್ತುವಾರಿಯಲ್ಲಿ ಮುದ್ರಿತವಾಗಿದೆ.

ಈವರೆಗೆ ನಿಘಂಟಿನ ಈಚೀನ ಒಂದು ಅಂದಾಜಿನಂತೆ ಸು. ಹತ್ತು ಸಾವಿರಕ್ಕೆ ಮೇಲ್ಪಟ್ಟು ಶಾಸನಗಳಿಂದಲೂ ಸು. ಆರು ಸಾವಿರ ಕೃತಿಗಳಿಂದಲೂ ಶಬ್ದಗಳನ್ನು ಸಂಗ್ರಹಿಸಿದೆ. ಸು. ಹತ್ತು ಲಕ್ಷ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಹೀಗೆ ಪಟ್ಟಿಕೆಗಳಲ್ಲಿ ಸಂಗ್ರಹಿಸಿದ ಶಬ್ದಗಳಲ್ಲಿ, ಸು. ಎರಡು ಲಕ್ಷ ಶಬ್ದಗಳು ಸೋಸಿ ನಿಘಂಟಿನಲ್ಲಿ ಅರ್ಥ ಪ್ರಯೋಗಗಳೊಂದಿಗೆ ಸ್ಥಾನಪಡೆಯುತ್ತವೆಯೆಂದು ತಿಳಿಯಲಾಗಿದೆ. ಈ ಅಂದಾಜು ಇನ್ನೂ ಸ್ಪಷ್ಟಪಡಬೇಕಾದದ್ದು. ಇದು ೮ನೆಯ ಸಂಪುಟದ ಪೀಠಿಕೆಯಲ್ಲಿ ನಮೂದಾಗಬೇಕು.

ಮೊದಲ ೨೦-೨೫ ವರ್ಷಗಳ ಕಾಲ ನಿಘಂಟುರಚನೆಯ ವಿಧಿವಿಧಾನಗಳ ಗೊತ್ತುಪಾಡು, ಶಬ್ದಸಂಗ್ರಹ ಮೊದಲಾದ

ಆರಂಭಿಕ ಚಟುವಟಿಕೆಗಳು, ಕಛೇರಿಯ ನಿಘಂಟುಕಾರ್ಯ ಕೂರ್ಮಗತಿಯಲ್ಲಿ ಸಾಗಿದ್ದು ನಿಜವೇ. ಆದರೆ ಕಛೇರಿಯ ಮಟ್ಟದ ಕಾರ್ಯವಿಧಾನ ವ್ಯವಸ್ಥಿತವಾಗಿ ನಡೆಯತೊಡಗಿದ್ದು ೧೯೬೦ರ ಅನಂತರದಲ್ಲಿಯೇ. ಆ ಬಳಿಕ, ಈಗ ಅಚ್ಚಿನಲ್ಲಿದ್ದು ಇನ್ನು ನಾಲ್ಕೈದು ತಿಂಗಳಲ್ಲಿ ಪ್ರಕಟವಾಗಲಿರುವ ಏಳು ಸಂಪುಟಗಳು ಸರಾಸರಿ ಸು. ಮೂರುವರ್ಷ ಆರುತಿಂಗಳಿಗೆ ಒಂದರಂತೆ ಪ್ರಕಟವಾಗಿವೆ. ಸಂಪುಟ ಒಂದು – ಎರಡರ ನಡುವೆ ಐದು ವರ್ಷಗಳ ಅಂತರವಿದೆಯಾದರೂ, 'ಬಳಿಕ ೧೯೭೬, ೭೭, ೭೯ರಲ್ಲಿ, ೧–೨ ವರ್ಷಗಳ ಅವಧಿಯಲ್ಲಿಯೇ ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಸಂಪುಟಗಳು ಹೊರಬಂದಿವೆ. ಆರನೆಯದು ೧೯೯೦ರಲ್ಲಿಯೂ ಏಳನೆಯದು ೧೯೯೩ರಲ್ಲಿಯೂ ಏಳನೆಯದು ೧೯೯೩ರಲ್ಲಿಯೂ ೩–೩ ವರ್ಷಗಳ ಅವಧಿಯಲ್ಲಿ ಬಂದಿವೆ. ಇನ್ನು ಎಂಟನೆಯದು ೧೯೯೫ರ ಏಪ್ರಿಲ್ – ಮೇ ತಿಂಗಳ ಹೊತ್ತಿಗೆ ಹೊರ ಬಂದಿದೆ. ಎರಡು ಸಂದರ್ಭಗಳಲ್ಲಿ ಹೆಚ್ಚಿನ ಅಂತರವಿರುವುದಕ್ಕೆ ಏನೋ ವಿಶೇಷ ಸು. ಹತ್ತುಸಾವಿರ ಪುಟಗಳ ಗ್ರಂಥವೊಂದು ಎಂಟು ಸಂಪುಟಗಳಲ್ಲಿ ಪ್ರಕಟವಾಗಲು ಸು. ೨೫ ವರ್ಷಗಳು ಹಿಡಿದಿವೆ ಎನ್ನುವುದು ನಿಧಾನಗತಿಯೆಂದೇನೂ ತೋರುವುದಿಲ್ಲ.

ಈ ಎಂಟು ಸಂಪುಟಗಳಲ್ಲಿ ಸಿದ್ಧವಾಗಿ ಹೊರಗೆ ಬರಲು ಶ್ರಮಿಸಿದವರು ಹತ್ತಾರುಮಂದಿ ಅಲ್ಲ ನೂರಾರು ಮಂದಿ. ಆ ಪೈಕಿ ಕನ್ನಡ ನಿಘಂಟು ಸಮಿತಿಯ ಅಧ್ಯಕ್ಷರು ಸಂಪಾದಕರು, ಕಾರ್ಯದರ್ಶಿ, ಪ್ರಧಾನ ಸಂಪಾದಕರು ಸದಸ್ಯರು. ನಿಘಂಟು ಪರಿಷ್ಕರಣ ಮಂಡಳಿ ಸದಸ್ಯರು (ಕನ್ನಡ–ಕನ್ನಡ ಸಮಿತಿ ಮತ್ತು ಕನ್ನಡ – ಇಂಗ್ಲಿಷ್ ಸಮಿತಿ) ನಿಘಂಟಿನ ಸಮಾಲೋಚನ ಸಮಿತಿ ಗ್ರಂಥಗಳಿಂದ ಶಬ್ದಗಳನ್ನು ಪ್ರಯೋಗಗಳನ್ನು ಸಂಗ್ರಹಿಸಿಕೊಟ್ಟ ಸಹಾಯಕರು ತಮ್ಮ ಕಡೆಯ ಬಳಕೆಯ ಮಾತುಗಳನ್ನು ಸಂಗ್ರಹಿಸಿ ಕಳುಹಿಸಿಕೊಟ್ಟರು. ಕನ್ನಡ ನಿಘಂಟು ಕಚೇರಿಯ ಸಿಬ್ಬಂದಿ, ಹೀಗೆ ದುಡಿದವರು ಅನೇಕರು. ಇವರೆಲ್ಲರ ಪಟ್ಟಿ ಹೀಗಿದೆ :

ಅನುಬಂಧ

ಕನ್ನಡ ನಿಘಂಟು ಸಂಪಾದಕ ಸಮಿತಿ

ಅಧ್ಯಕ್ಷರು (೧೯೪೩ ರಿಂದ ೧೯೯೫)

ಡಾ. ಎ.ಆರ್. ಕೃಷ್ಣಶಾಸ್ತ್ರೀ, ಎಂ. ಎ. ಡಿ.ಲಿಟ್ (೧೯೪೩–೫೮)

ಪ್ರೊ. ತೀ. ನಂ. ಶ್ರೀಕಂಠಯ್ಯ, ಎಂ. ಎ. (೧೯೫೮–೬೬)

ಡಾ. ಡಿ. ಎಲ್. ನರಸಿಂಹಾಚಾರ್, ಎಂ. ಎ. (೧೯೬೬–೭೧)

ಪ್ರೊ. ಕ. ವೆಂ. ರಾಘವಾಚಾರ್, ಎಂ. ಎ., ಬಿ.ಟಿ. (೧೯೭೧–೭೨)

ಪ್ರೊ. ಎಂ. ಮರಿಯಪ್ಪಭಟ್ಟ, ಎಂ. ಎ., ಡಿ. ಲಿಟ್. (೧೯೭೨–೮೩)

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ. ಎ. ಬಿ. ಟಿ. (೧೯೮೩–೯೧)

ಉಪಾಧ್ಯಕ್ಷರು

ಡಾ. ಡಿ. ಎಲ್. ನರಸಿಂಹಾಚಾರ್, ಎಂ. ಎ. (೧೯೫೮–೬೬)

ಡಾ. ರಂ. ಶ್ರೀ. ಮುಗಳಿ, ಎಂ.ಎ., ಬಿ. ಟಿ., ಡಿ. ಲಿಟ್ (೧೯೬೬–೬೮)

ಪ್ರೊ. ಡಿ. ಜವರೇಗೌಡ (೧೯೬೮–೬೯)

ಪ್ರೊ. ಕ.ವೆಂ. ರಾಘವಾಚಾರ್, ಎಂ. ಎ. ಬಿ. ಟಿ. (೧೯೬೯–೭೧)

ಪ್ರೊ. ಜಿ. ವೆಂಕಟಸುಬ್ಬಯ್ಯ (೧೯೭೩–೮೦)

ಪ್ರೊ. ಸ. ಸ. ಮಾಳವಾಡ ಎಂ. ಎ. (೧೯೭೩-೭೬)

ಕಾರ್ಯದರ್ಶಿ ಮತ್ತು ಪ್ರಧಾನ ಸಂಪಾದಕರು

ಪ್ರೊ. ತೀ. ನಂ. ಶ್ರೀಕಂಠಯ್ಯ, ಎಂ. ಎ. (೧೯೪೩-೫೪)

ಪ್ರೊ. ಡಿ. ಎಲ್. ನರಸಿಂಹಾಚಾರ್, ಎಂ. ಎ. (೧೯೫೪-೭೦)

ಪ್ರೊ. ಕ.ವೆಂ. ರಾಘವಾಚಾರ್, ಎಂ. ಎ. (೧೯೭೧-೭೨)

ಪ್ರೊ. ಎಂ. ಮರಿಯಪ್ಪಭಟ್ಟ, ಎಂ. ಎ., (೧೯೭೨-೭೩)

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ. ಎ. ಬಿ.ಟಿ. (೧೯೭೪-೯೧)

ಸಂಪಾದಕರು

ಡಾ. ಡಿ. ಎಲ್. ನರಸಿಂಹಾಚಾರ್, ಎಂ. ಎ. (೧೯೫೪-೫೬)

ಶ್ರೀ ಎಲ್. ಗುಂಡಪ್ಪ, ಎಂ. ಎ. (೧೯೫೭-೬೩)

ಶ್ರೀ ಎನ್. ಬಸವಾರಾಧ್ಯ, ಎಂ. ಎ. (೧೯೬೩-೭೧)

ಸಮಿತಿಯ ಸದಸ್ಯರು

ತೀ.ನಂ. ಶ್ರೀಕಂಠಯ್ಯ, ಎಂ.ಎ. (೧೯೪೩-೬೬)

ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ (೧೯೪೩-೫೮)

ಡಾ. ರಂ.ಶ್ರೀ. ಮುಗಳಿ (೧೯೪೩-೭೪)

ಡಿ. ಎಲ್. ನರಸಿಂಹಾಚಾರ್, ಎಂ. ಎ., (೧೯೪೩-೭೧)

ಕ. ವೆಂ. ರಾಘವಾಚಾರ್, ಎಂ. ಎ. ಬಿ. ಟಿ. (೧೯೪೩-೭೯)

ರಂ. ಶ್ರೀ.ಮುಗಳಿ, ಎಂ. ಎ. ಬಿ.ಟಿ.ಡಿ., ಲಿಟ್ (೧೯೪೩-೭೨)

ಎನ್. ಲಕ್ಷ್ಮೀನಾರಾಯಣರಾವ್, ಎಂ. ಎ. (೧೯೪೪-೭೯)

ಮುಳಿಯ ತಿಮ್ಮಪ್ಪಯ್ಯ (೧೯೪೪-೫೦)

ಕಾ. ಸ. ಧರಣೇಂದ್ರಯ್ಯ, ಎಂ. ಎ. ಬಿ. ಟಿ. (೧೯೬೧-೭೧)

ಡಿ.ಕೆ. ಭೀಮಸೇನ್ ರಾವ್, ಎಂ. ಎ (೧೯೪೪-೬೯)

ಕೆ. ವಿ. ಪುಟ್ಟಪ್ಪ, ಎಂ.ಎ., (೧೯೪೩-೬೨)

ಕೆ.ಜಿ. ಕುಂದಣಗಾರ್, ಎಂ. ಎ., (೧೯೪೩-೬೫)

ಸ. ಸ. ಮಾಳವಾಡ. ಎಂ. ಎ., (೧೯೪೩ ರಿಂದ)

ಎಂ. ಮರಿಯಪ್ಪ ಭಟ್, ಎಂ. ಎ. ಎಲ್. ಟಿ. ((೧೯೫೬-೮೦)

ಆರ್. ಸಿ. ಹಿರೇಮಠ, ಎಂ. ಎ., ಪಿಎಚ್. ಡಿ.	(೧೯೬೧ ರಿಂದ)
ಡಿ. ಜವರೇಗೌಡ, ಎಂ. ಎ., ಪಿಎಚ್.ಡಿ.	(೧೯೬೩–೬೫)
ಜಿ. ವೆಂಕಟಸುಬ್ಬಯ್ಯ ಎಂ. ಎ., ಬಿ. ಟಿ.	(೧೯೬೪ ರಿಂದ)
ಬಸವರಾಜ ಕಟ್ಟೀಮನಿ, ಎಂ. ಎಲ್. ಸಿ.	(೧೯೬೪–೮೧)
ಜಿ. ಎಸ್. ಗಾಯಿ, ಎಂ.ಎ., ಪಿಎಚ್.ಡಿ.	(೧೯೭೫ ರಿಂದ)
ಹಾ. ಮಾ. ನಾಯಕ, ಎಂ. ಎ., ಪಿಎಚ್. ಡಿ.	(೧೯೭೨–೯೫)
ಜಿ. ಎಸ್. ಶಿವರುದ್ರಪ್ಪ, ಎಂ. ಎ., ಪಿಎಚ್. ಡಿ.	(೧೯೭೨–೯೫)
ಎಂ. ಚಿದಾನಂದಮೂರ್ತಿ, ಎಂ. ಎ., ಪಿಎಚ್. ಡಿ.	(೧೯೭೬–೯೫)
ಟಿ.ವಿ. ವೆಂಕಟಾಚಲಶಾಸ್ತ್ರೀ, ಎಂ.ಎ., ಪಿಎಚ್.ಡಿ.	(೧೯೭೬–೯೫)
ಕೆ. ವಿ. ರಮೇಶ್, ಎಂ. ಎ., ಪಿಎಚ್. ಡಿ.	(೧೯೮೩–೯೫)
ಕೆ. ಕೃಷ್ಣಮೂರ್ತಿ, ಎಂ. ಎ., ಪಿಎಚ್. ಡಿ.	(೧೯೮೩–೯೫)
ಎನ್. ಬಸವಾರಾಧ್ಯ, ಎಂ. ಎ.	(೧೯೮೩–೯೫)
ಡಿ. ಸಿ. ಸುಬ್ಬರಾಯಪ್ಪ ಬಿ.ಎ.,	(೧೯೫೪–೬೬)
ಬಿ. ಶಿವಮೂರ್ತಿ ಶಾಸ್ತ್ರಿಗಳು	(೧೯೫೬–೭೬)
ಸಿದ್ದಯ್ಯ ಪುರಾಣಿಕ, ಐ.ಎ.ಎಸ್.	(೧೯೬೦–೯೫)
ವಿ.ಬಿ. ನಾಯಕ, ಎಂ. ಎ. ಎಲ್.ಎಲ್.ಬಿ.	(೧೯೬೬–೮೨)
ವೆಂಟಕೇಶ ಸಾಂಗಲಿ	(೧೯೬೬–೭೮)
ಎನ್. ವರದರಾಜನ್	(೧೯೬೬–೭೮)
ಜಿ. ನಾರಾಯಣ	(೧೯೬೯–೭೮)
ಡಾ. ಹಂ.ಪ. ನಾಗರಾಜಯ್ಯ	(೧೯೬೬–೭೮ ಮತ್ತು ೧೯೭೮ ರಿಂದ)
ಡಾ. ಆ.ನೇ ಉಪಾಧ್ಯೆ	(೧೯೭೧–೭೫)
ಜಿ.ಕೆ. ಗುಂಡೂರಾವ್	(೧೯೭೪–೭೮)
ಶ್ರೀಮತಿ ಪ್ರಮೀಳಾ	(೧೯೭೭–೭೮)
ಪ್ರೊ. ಜಿ. ಅಶ್ವತ್ಥನಾರಾಯಣ	(೧೯೭೮–೭೯)
ಡಿ. ಲಿಂಗಯ್ಯ	(೧೯೭೮–೮೨)
ಎಂ.ಪಿ. ದೇವರಾಜ್	(೧೯೭೮ ರಿಂದ)

ಲಕ್ಷ್ಮಣ ತೆಲಗಾವಿ (೧೯೭೯ ರಿಂದ)

ಹೊ.ವೆ. ನಾರಾಯಣಸ್ವಾಮಿ (೧೯೮೨ ರಿಂದ)

(ಪರಿಷತ್ತಿನ ಅಂದಂದಿನ ಅಧ್ಯಕ್ಷರು, ಗೌರವ ಕಾರ್ಯದರ್ಶಿಗಳು, ಗೌರವ ಕೋಶಾಧ್ಯಕ್ಷರು ಅಧಿಕಾರ ಪ್ರಯುಕ್ತ ಸದಸ್ಯರಾಗಿದ್ದರು)

ನಿಘಂಟು ಪರಿಷ್ಕರಣ ಸಂಪಾದಕ ಮಂಡಳಿ ೧೯೯೮

ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ ಪ್ರಧಾನ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ ಸದಸ್ಯರು

ಡಾ. ಯು.ಪಿ. ಉಪಾಧ್ಯಾಯ ಸದಸ್ಯರು

ಪ್ರೊ. ಸಂಗಮೇಶ ಸವದತ್ತಿಮಠ ಸದಸ್ಯರು

ಡಾ. ಹಂಪ ನಾಗರಾಜಯ್ಯ ಸದಸ್ಯರು

ಡಾ. ರಾಮಸ್ವಾಮಿ ಸದಸ್ಯರು

ಡಾ. ಬಿ. ಎಸ್. ಕೃಷ್ಣಮೂರ್ತಿ ಸದಸ್ಯರು

ಪ್ರೊ. ಕೆ. ಎಸ್. ಯದುರಾಜನ್ ಸದಸ್ಯರು

ನಿಘಂಟು ಪರಿಷ್ಕರಣ ಸಂಪಾದಕ ಮಂಡಳಿ ೨೦೦೧

ಡಾ. ಪ್ರಭುಶಂಕರ ಪ್ರಧಾನ ಸಂಪಾದಕರು
ಡಾ. ಕೆ.ವಿ. ರಮೇಶ್
ಡಾ. ಬಿ. ಆರ್. ಹಿರೇಮಠ
ಪ್ರೊ. ಅ. ರಾ. ಮಿತ್ರ
ಪ್ರೊ. ಎಂ. ಎಚ್. ಕೃಷ್ಣಯ್ಯ
ಡಾ. ಪ್ರಧಾನ ಗುರುದತ್ತ
ಡಾ. ಎನ್. ಎಸ್. ತಾರಾನಾಥ
ಶ್ರೀ ಬಾ. ವೇ. ಶ್ರೀಧರ
(ಪರಿಷ್ಕೃತ ಒಂದನೇ ಸಂಪುಟ ಮಾತ್ರ ಪ್ರಕಟವಾಗಿದೆ. ಈಗ ಕಾರ್ಯ ಮುಂದುವರಿದಿಲ್ಲ. ನಿಘಂಟು ಕಚೇರಿ ಮುಚ್ಚಿದೆ)

೧. ನಿಘಂಟಿನ ಸಮಾಲೋಚನ ಸಮಿತಿ

೨. ಗ್ರಂಥಗಳಿಂದ ಶಬ್ದಗಳನ್ನು ಪ್ರಯೋಗಗಳನ್ನು ಸಂಗ್ರಹಿಸಿಕೊಟ್ಟ ಸಹಾಯಕರು

೩. ತಮ್ಮ ಕಡೆಯ ಜನಬಳಕೆಯ ಮಾತುಗಳನ್ನು ಸಂಗ್ರಹಿಸಿ ಕಳಿಸಿಕೊಟ್ಟವರು

೪. ಕನ್ನಡ ನಿಘಂಟು ಕಚೇರಿಯ ಸಿಬ್ಬಂದಿ

(ಈ ನಾಲ್ಕು ಪಟ್ಟಿಗಳನ್ನು ಮೊದಲ ಸಂಪುಟದ ಸಂಪಾದಕರ ಅರಿಕೆಯಲ್ಲಿ ಕೊಟ್ಟಿರುವ ಅನುಬಂಧಗಳಲ್ಲಿ ಕಾಣಬಹುದು.)

೧. ನಿಘಂಟು ಕಚೇರಿ

ಶ್ರೀ ಕೃಷ್ಣರಾಜಮಂದಿರದಲ್ಲಿ ಕಟ್ಟಡದ ಪ್ರವೇಶ ಭಾಗದಲ್ಲಿ ಒಂದು ಪಕ್ಕಕ್ಕೆ ಇದ್ದ ವರಾಂಡದಲ್ಲಿ ಇತ್ತು. ಅನಂತರ, ಅಚ್ಚುಕೂಟದ ಮೇಲೆ ಕಟ್ಟಿಸಿದ ಕಟ್ಟಡದಲ್ಲಿತ್ತು. ಈ ಮುಂಚೆ ಶಂಕರಪುರದ ೪ನೇ ರಸ್ತೆಯಲ್ಲಿದ್ದ ಪರಿಷತ್ತಿನ ಕಚೇರಿ ಇದ್ದ ಮನೆಯಲ್ಲಿ ಇತ್ತು. ಅಚ್ಚುಕೂಟದ ಕಟ್ಟಡ ಪ್ರತ್ಯೇಕವಾಗಿ ಮತ್ತು ನಿಘಂಟು ಕಚೇರಿ ಅಚ್ಚುಕೂಟದ ಮೇಲ್ಭಾಗದಲ್ಲಿತ್ತು). ಈಗ ಎರಡೂ ಕಟ್ಟಡಗಳು ನೆಲಸಮವಾಗಿವೆ. ಆ ಜಾಗದಲ್ಲಿ ಪರಿಷತ್ತಿನ ಶತಮಾನೋತ್ಸವ ಭವನ ನಿರ್ಮಾಣವಾಗಲಿದೆ. ಅಚ್ಚುಕೂಟವನ್ನು ಸುವರ್ಣಮಹೋತ್ಸವದ ನೆಲಮಹಡಿಯಲ್ಲಿ ಸ್ಥಾಪಿಸಲಾಗಿದೆ.

೨. ಸಂಕ್ಷಿಪ್ತ ಕನ್ನಡ ನಿಘಂಟು (೧೯೭೫)

ಕನ್ನಡ ಸಾಹಿತ್ಯ ಪರಿಷತ್ತು ಬೃಹತ್ ಕನ್ನಡ ನಿಘಂಟನ್ನು ೮ ಸಂಪುಟಗಳಲ್ಲಿ ಸಿದ್ಧಪಡಿಸಿದಾಗ. ಸಾಮಾನ್ಯ ಸಾಹಿತ್ಯಾಸಕ್ತಿ ಜನರು ವಿದ್ವಾಂಸರ ಬಳಕೆ ದೃಷ್ಟಿಯಿಂದ ಸಮಗ್ರ ಕನ್ನಡ ಭಾಷೆಯನ್ನು ಗಮನದಲ್ಲಿಟ್ಟುಕೊಂಡು ರಚಿಸಿದ ೯೦೦೦ಕ್ಕೂ ಮಿಗಿಲಾದ ಪುಟಗಳುಳ್ಳ ಬೃಹತ್ ನಿಘಂಟನ್ನು ಕೊಳ್ಳುವುದು, ಬಳಸುವುದೂ ಸುಲಭವಿರಲಿಲ್ಲ. ಅದಕ್ಕಾಗಿ ಅಂಥವರಿಗಾಗಿ (ಜನಸಾಮಾನ್ಯರಿಗೆ) ಬಳಸಲು ಎಂ. ಮರಿಯಪ್ಪಭಟ್ಟ ಅವರ ಅಧ್ಯಕ್ಷತೆಯಲ್ಲಿ ಒಂದು ಸಂಪಾದಕ ಸಮಿತಿ ರಚಿತವಾಯಿತು.

ಸಾಮಾನ್ಯ ಓದುಗರು ವಿಶೇಷವಾಗಿ ಅಧ್ಯಾಪಕ ಹಾಗೂ ವಿದ್ಯಾರ್ಥಿಗಳ ದಿನನಿತ್ಯದ ಉಪಯೋಗಕ್ಕಾಗಿ ಒಂದು ಸಂಕ್ಷಿಪ್ತ ನಿಘಂಟನ್ನು ಸಿದ್ಧಪಡಿಸಬೇಕೆಂದು ತೀರ್ಮಾನಿಸಿ ೧೯೭೫ರಲ್ಲಿ ಈ ಸಮಿತಿ ೯೬೪ ಪುಟಗಳ ಗ್ರಂಥವನ್ನು ಪ್ರಕಟಿಸಿತು. ಆ ವೇಳೆಗೆ ಪರಿಷತ್ತಿನ ೮ ಸಂಪುಟಗಳಲ್ಲಿ ೪ ಸಂಪುಟ ಅಚ್ಚಾಗಿದ್ದು ಉಳಿದವು. ಅಚ್ಚಿಗಾಗಿ ಸಿದ್ಧವಾಗುತ್ತಿದ್ದವು. ಅಚ್ಚಾಗದ ಸಂಪುಟಗಳಲ್ಲಿ ಪದ, ಅರ್ಥಪ್ರಯೋಗ ನಿರ್ಣಯಗಳು ಪೂರ್ಣವಾಗಿ ನಿರ್ಧಾರವಾಗಲಿಲ್ಲ. ಹಾಗಾಗಿ ೨೦೦೦ರಲ್ಲಿ ಸಂಕ್ಷಿಪ್ತ ಕನ್ನಡ ನಿಘಂಟು ಪರಿಷ್ಕರಣ ಸಂಪಾದಕ ಸಮಿತಿಯನ್ನು ಎನ್. ಬಸವಾರಾಧ್ಯರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಈ ಸಮಿತಿಯಲ್ಲಿ ಪರಿಷತ್ತಿನ ಪದಾಧಿಕಾರಿಗಳು ಎಂ. ಎಚ್. ಕೃಷ್ಣಯ್ಯ, ಕಿ.ರಂ. ನಾಗರಾಜು, ಟಿ. ಆರ್. ಮಹಾದೇವಯ್ಯ ನಿರ್ದಿಷ್ಟ ಕಾಲಾವಧಿಗಳಲ್ಲಿ ಸದಸ್ಯರಾಗಿದ್ದರು.

೩. ಕನ್ನಡ ರತ್ನಕೋಶ ೧೯೭೭ (ಪುಟ್ಟ ನಿಘಂಟು)

ಪರಿಷತ್ತಿನ ಅಧ್ಯಕ್ಷರಲ್ಲಿ ಒಬ್ಬರಾದ ದೇಶಹಳ್ಳಿ ಜಿ. ನಾರಾಯಣ ಅವರು ಹೊಸಹೊಸ ಯೋಜನೆಯನ್ನು ರೂಪಿಸುವುದರಲ್ಲಿ ಪ್ರಸಿದ್ಧರು. ಕನ್ನಡ ನಿಘಂಟು ಪ್ರಮಾಣಭೂತ ಆಕರ ನಿಘಂಟಾಗಿದ್ದು ಬೃಹತ್ತಾಗಿದ್ದು ಸಾಮಾನ್ಯರು ಬಳಸಲು ಸಾಧ್ಯವಾಗುತ್ತಿರಲಿಲ್ಲ. ಅದರಲ್ಲೂ ಪ್ರೌಢಶಾಲೆಯ ವಿದ್ಯಾರ್ಥಿಗಳ ಮತ್ತು ಆ ಮಟ್ಟದ ಎಲ್ಲ ಅಭ್ಯಾಸಿಗಳ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ಇಂಗ್ಲಿಷಿನಲ್ಲಿ ಜನಪ್ರಿಯವಾಗಿರುವ ಜೆಮ್ ನಿಘಂಟಿನ ಮಾದರಿಯಲ್ಲಿ ಸಣ್ಣ ನಿಘಂಟೊಂದನ್ನು ಪ್ರಕಟಿಸಬೇಕೆಂದು ಪರಿಷತ್ತಿನ ಆಸೆಯಾಗಿತ್ತು. ಈ ಆಸೆ ಪರಿಷತ್ತಿನ ವಜ್ರಮಹೋತ್ಸವ ಸಂದರ್ಭದಲ್ಲಿ ಜಿ. ನಾರಾಯಣರ ಕಾಲದಲ್ಲಿ ನೆರವೇರಿದೆ. ಕೇವಲ ೧೦ ತಿಂಗಳುಗಳಲ್ಲಿ ಸಮಿತಿಯ ಪರಿಶ್ರಮದಿಂದ ರೂಪುಗೊಂಡಿದೆ.

೧೯೭೭, ೧೯೯೪, ೨೦೦೧, ೨೦೦೩, ೨೦೦೭ ಇಸವಿಗಳಲ್ಲಿ ೫ ಮುದ್ರಣಗಳಾಗಿ ಅತ್ಯಂತ ಜನಪ್ರಿಯವಾದ ಈ ಪುಟ್ಟ ನಿಘಂಟನ್ನು ಪರಿಷತ್ತಿಗೆ ಅಧ್ಯಕ್ಷರಾದ ಡಾ. ನಲ್ಲೂರು ಪ್ರಸಾದ್, ಆರ್. ಕೆ. ಅವರು ಪರಿಷ್ಕೃತ ಮುದ್ರಣ (೬ನೆಯದು ೨೦೦೯)ವನ್ನು ಹೊರತರಲು ಕಾರಣರಾದರು. ಕೇಂದ್ರ, ರಾಜ್ಯ ಸರ್ಕಾರಗಳ ಮತ್ತು ಪರಿಷತ್ತಿಗೆ ಸಂಬಂಧಿಸಿದಂತೆ ಕೆಲವೊಂದು ಉಪಯುಕ್ತ ಮಾಹಿತಿಗಳು ಕೊಟ್ಟಿರುವುದು ನಿಘಂಟಿನ ವಿಶೇಷವಾಗಿದೆ.

ಕನ್ನಡ ರತ್ನಕೋಶ ಸಂಪಾದಕ ಸಮಿತಿ (೧೯೭೭)

ಡಾ. ಹಾ. ಮಾ. ನಾಯಕ (ಪ್ರಧಾನ ಸಂಪಾದಕ ಮತ್ತು ಅಧ್ಯಕ್ಷ)

ಪ್ರೊ. ಎಚ್. ಎಂ. ಶಂಕರನಾರಾಯಣರಾವ್ ಸದಸ್ಯರು

ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ — ಸದಸ್ಯರು

ಡಾ. ಜೀ. ಶಂ. ಪರಮಶಿವಯ್ಯ — ಸದಸ್ಯರು

ಡಾ. ಸಿ. ಪಿ. ಕೃಷ್ಣಕುಮಾರ್ — ಸದಸ್ಯರು

ಡಾ. ಪ್ರಧಾನ ಗುರುದತ್ತ — ಸದಸ್ಯರು

(೬ನೇ ಮುದ್ರಣ ೨೦೦೯ ದಿಂದ ಪರಿಷ್ಕೃತಗೊಂಡಿದೆ)

ಕನ್ನಡ ರತ್ನಕೋಶದ ಪರಿಷ್ಕೃತ ಮುದ್ರಣದ ಸಮಿತಿ ೨೦೦೯ ಪರಿಶೀಲಿಸಿದ ಕನ್ನಡ ರತ್ನಕೋಶ ೨೦೦೯ರಲ್ಲಿ ಪ್ರಕಟವಾಯಿತು.

೪. ಜೈನ ಭಾಷಾರತ್ನಕೋಶ (೧೯೮೧)

ತ. ಸು. ಶಾಮರಾವ್ ಮತ್ತು ಪ. ನಾಗರಾಜಯ್ಯನವರ ಸಂಪಾದಕತ್ವದಲ್ಲಿ ಬಂದ ಈ ನಿಘಂಟು ಕನ್ನಡ ಸಾಹಿತ್ಯ ಅಭ್ಯಾಸಿಗಳಿಗೂ ಉಪಯುಕ್ತ ನಿಘಂಟು ಆಗಿದೆ. ಕನ್ನಡದಲ್ಲಿ ಧಾರ್ಮಿಕ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಲು ಮತಸಿದ್ಧಾಂತಗಳ ಪರಿಭಾಷೆಯನ್ನು ತಿಳಿಯಬೇಕಾಗುತ್ತದೆ. ಸಾಮಾನ್ಯ ನಿಘಂಟುಗಳಲ್ಲಿ ಇದು ಸಿಗುವುದಿಲ್ಲ. ಈ ಬಗೆಯ ನಿಘಂಟುಗಳಿಗೆ ಶರಣಾಗದೆ. ಜೈನಸಾಹಿತ್ಯದ ಬಗ್ಗೆ ಇಂಥ ನಿಘಂಟುಗಳು ಕನ್ನಡದಲ್ಲಿ ಒಂದೆರಡು ಬಂದಿವೆ. ಜೈನಸಾಹಿತ್ಯಾಭ್ಯಾಸಿಗಳಿಗೆ, ಧರ್ಮ ಜಿಜ್ಞಾಸುಗಳಿಗೆ ಉಪಯುಕ್ತವಾದ ನಿಘಂಟಾಗಿ ಇದು ಹೊರಬಂದಿದೆ.

೩೨೮ ಪುಟಗಳಿಂದ ಕೂಡಿದ ೧೯೮೧ರಲ್ಲಿ ಹೊರಬಂದ ಈ ನಿಘಂಟು ಪ್ರತಿಗಳು ಬಹುಬೇಗ ಮಾರಾಟವಾಗುತ್ತಿರುವುದು ಇದರ ಜನಪ್ರಿಯತೆಗೆ ಸಾಕ್ಷಿ ಆಗಿದೆ.

೫. ಕೊಡವ ಕನ್ನಡ ನಿಘಂಟು (೧೯೮೩) (ಕೊಡವ ತಕ್ಕ್ ನಿಘಂಟ್)

ಕನ್ನಡದಲ್ಲಿ ಪ್ರಕಟವಾಗಿರುವ ನಿಘಂಟುಗಳೆಲ್ಲಾ ಬಹುಮಟ್ಟಿಗೆ ಕನ್ನಡ ಲಿಪಿಯುಕ್ತ ಭಾಷೆಯ ನಿಘಂಟುಗಳು. ಆದರೆ ದ್ರಾವಿಡ ಅನೇಕ ಉಪಭಾಷೆಗಳಿಗೆ ಲಿಪಿಯಿಲ್ಲ. ಕೆಲವು ಉಪಭಾಷೆಗಳು ಕನ್ನಡ ಲಿಪಿಯನ್ನೇ ತಮ್ಮ ಭಾಷೆಗೆ ಬಳಸುತ್ತವೆ. ಆ ಪೈಕಿ ಕೊಡವ ಭಾಷೆಯೂ ಒಂದು. ಕೊಡವ ಸಂಸ್ಕೃತಿ ವಿಶಿಷ್ಟವಾದ್ದದರೂ ಕೊಡವ ಭಾಷೆಗೂ ಕನ್ನಡಕ್ಕೂ ನಿಕಟಸಂಬಂಧವಿದೆ. ಲಿಪಿಯಿಲ್ಲದ ಕೊಡವ ಭಾಷೆಯ ೩೫೦೦ ಪದಗಳಿಗೆ ಕನ್ನಡದ ಅರ್ಥವನ್ನು ಈ ನಿಘಂಟಿನಲ್ಲಿ ಕೊಟ್ಟಿದೆ. ಜತೆಗೆ ೫೨೦ ಕೊಡವ ಕುಟುಂಬಗಳ ಹೆಸರುಗಳೂ ಇಲ್ಲಿ ಸೇರಿವೆ. ಕನ್ನಡಿಗರ ಸಂಪರ್ಕದಿಂದ ಕೊಡವ ಪದಗಳೊಂದಿಗೆ ಎಷ್ಟೋ ಕನ್ನಡ ಪದಗಳು ಸೇರಿಕೊಂಡು ಅವು ಕೊಡವ ಶಬ್ದಗಳೇ ಎಂಬಷ್ಟರಮಟ್ಟಿಗೆ ಬಳಕೆ ಆಗಿದೆ. ಮೂಲಶಬ್ದಗಳು ಪ್ರಯೋಗಗಳು ಭಾಷಾಬಳಕೆಯಲ್ಲಿ ಕಣ್ಮರೆ ಆದಾಗ ಲಿಪಿ ಇಲ್ಲದ ಭಾಷೆಯಲ್ಲಿ ಕಾಲಾನಂತರದಲ್ಲಿ ಗುರುತಿಸಲು ಆ ಶಬ್ದಗಳ ಅರ್ಥ ಮತ್ತು ಲಿಪೀಕರಣ ಅತ್ಯಗತ್ಯ. ಆ ದೃಷ್ಟಿಯಲ್ಲಿ ಈ ಕೋಶಕ್ಕೆ ವಿಶೇಷ ಮಹತ್ವವಿದೆ. ಪ್ರಸಿದ್ಧ ಸಾಹಿತಿಗಳೂ ವಿದ್ವಾಂಸರೂ ಕೊಡಗು ಭಾಷಾ ತಜ್ಞರು ಆದ ಐ. ಯಂ. ಮುತ್ತಣ್ಣನವರು ಈ ನಿಘಂಟನ್ನು ರಚಿಸಿದ್ದಾರೆ. ೧೯೮೩ರಲ್ಲಿ ಪರಿಷತ್ತಿನಿಂದ ಪ್ರಕಟವಾಗಿರುವ ಈ ನಿಘಂಟು ಉಪಭಾಷೆಗಳ ಕನ್ನಡ ನಿಘಂಟುಗಳ ಇತಿಹಾಸದಲ್ಲಿ ಒಂದು ವಿಶಿಷ್ಟಸ್ಥಾನಗಳಿಸಿದೆ.

೬. ಕನ್ನಡ ಜಾನಪದ ವಿಶ್ವಕೋಶ ಸಂಪುಟ ೧ ಮತ್ತು ೨ (೧೯೮೫)

ಸಂಪಾದಕರು : ಡಾ. ಚಂದ್ರಶೇಖರ ಕಂಬಾರ

ಪ್ರಕಟನೆ ೧೯೮೫ ಭಾಗ – ೧ (೧ ರಿಂದ ೯೩೦ ಪುಟಗಳು)

೧೯೮೫ ಭಾಗ – ೨ (೯೩೧ರಿಂದ ೧೯೦೬)

ಪರಿಷತ್ತಿನ ಕೋಶ ಸಾಹಿತ್ಯದ ಕೃತಿಗಳಲ್ಲಿ ಸಾಮಾನ್ಯ ಶಬ್ದಕೋಶಗಳು ಪಾರಿಭಾಷಿಕ ಕೋಶ ಒಂದು ವರ್ಗವಾದರೆ ವಿಶ್ವಕೋಶಗಳು ಇನ್ನೊಂದು ವರ್ಗ ಕನ್ನಡದಲ್ಲಿ ಮಕ್ಕಳ ವಿಶ್ವಕೋಶ. ವಿಜ್ಞಾನ ವಿಶ್ವಕೋಶ, ಕರ್ನಾಟಕ ವಿಶ್ವಕೋಶ ಮೊದಲಾದ ಹಲವಾರು ವಿಶ್ವಕೋಶಗಳು ಬಂದಿದ್ದರೂ ಬೃಹತ್ ಪ್ರಮಾಣದಲ್ಲಿ ಜಾನಪದ ವಿಶ್ವಕೋಶ ಬಂದಿದ್ದು ಇದೇ ಮೊದಲು. ಈ ಕೋಶ ಹೊರಬೀಳುವ ವೇಳೆಗೆ ೫೦೦ಕ್ಕೂ ಹೆಚ್ಚು ಜಾನಪದ ಕೃತಿಗಳು ಹೊರಬಿದ್ದಿದ್ದು, ಜಾನಪದ ವಿಶೇಷ ವ್ಯಾಸಂಗ ವಿಷಯವಾಗಿತ್ತು ಹಾಗಾಗಿ ಕನ್ನಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ಈ ವಿಶ್ವಕೋಶ ರಚಿತವಾಗಿದೆ. ೧೯ ಜನ ಸಹಾಯಕರೊಂದಿಗೆ ಕಂಬಾರರು ಸಿದ್ಧಪಡಿಸಿರುವ ಕೋಶ ಪರಿಷತ್ತಿನ ಪ್ರಕಟನೆಗಳಲ್ಲಿ ಹೆಮ್ಮೆಯ ಕೃತಿಗಳಲ್ಲಿ ಒಂದಾಗಿದೆ.

೭. ಅವಳಿ ಪಡೆನುಡಿ ಕೋಶ (೧೯೯೮)

ಪ್ರತಿಯೊಂದು ಭಾಷೆಯ ಜೀವಸತ್ತ್ವ ಆ ಭಾಷೆಯ ಪದಸಂಪತ್ತಿನಲ್ಲಿ ಅಡಗಿರುವಂತೆಯೇ ಪಡೆನುಡಿಗಳಲ್ಲೂ ಅಡಗಿರುತ್ತದೆ. ಪಡೆನುಡಿಗಳಿಗೆ ವಾಚ್ಯಾರ್ಥಕ್ಕಿಂತ ಮಿಗಿಲಾಗಿ ಲಾಕ್ಷಣಿಕಾರ್ಥ ಬಳಕೆಯಲ್ಲಿರುತ್ತದೆ. ಭಾಷಾಭ್ಯಾಸಿಗಳಿಗೆ ಮುಖ್ಯ ಆಕರಗಳಲ್ಲಿ ಪಡೆನುಡಿ ಕೋಶವೂ ಒಂದಾಗಿದೆ. ಸಾ. ಶಿ. ಮರುಳಯ್ಯನವರಿಗೆ ಪಡೆನುಡಿಗಳಲ್ಲಿ ಆಸಕ್ತಿ ಹೆಚ್ಚಿದ್ದು. ಅದರ ಸಂಗ್ರಹವೊಂದನ್ನು ಮಾಡಿದ್ದರು. ಅವರು ಪರಿಷತ್ತಿನ ಅಧ್ಯಕ್ಷರಾದಾಗ ತಮ್ಮನ್ನು ಒಳಗೊಂಡು ಶ್ರೀಮತಿ ಉಮಾದೇವಿ ಮತ್ತು ಬಿ. ಆರ್. ಬಸವರಾಜು ಅವರೊಂದಿಗೆ ಸೇರಿ ಅವಳಿ ಪಡೆನುಡಿ ಕೋಶವೊಂದನ್ನು ೧೯೯೮ರಲ್ಲಿ ಪರಿಷತ್ತಿನಿಂದ ಪ್ರಕಟಿಸಿದ್ದಾರೆ. ಸುಮಾರು ೬೦೦ಕ್ಕೂ ಮಿಗಿಲಾದ ಪುಟಗಳನ್ನೊಳಗೊಂಡ ಗ್ರಂಥ ಪ್ರಯೋಗಗಳನ್ನು ಆರಿಸಿಕೊಂಡು ಪಡೆನುಡಿಗಳಿಗೆ ಅರ್ಥ ಮತ್ತು ಉದಾಹರಣೆಗಳನ್ನು ಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ಅಭ್ಯಾಸಿಗಳಿಗೆ ಉಪಯುಕ್ತ ನಿಘಂಟು. ಸಂಪಾದಕರು ಆಶಿಸಿದಂತೆ ಕನ್ನಡ ಭಾಷೆಯ ಸಮಗ್ರವಾದ ಪ್ರಾದೇಶಿಕ ಪ್ರಾತಿನಿಧ್ಯವನ್ನು ಒಳಗೊಂಡ ಕೋಶವನ್ನು ಪರಿಷತ್ತು ರಚಿಸಬೇಕಾಗಿದೆ. ಕನ್ನಡದಲ್ಲಿ ಪ್ರಕಟವಾದ ಪಡೆನುಡಿ ಕೋಶಗಳಿಂದಲೂ ಇತರ ಗ್ರಂಥಗಳಿಂದಲೂ ಪ್ರಯೋಗಗಳನ್ನು ಸಂಗ್ರಹಿಸಿದೆ.

೮. ಱ ೞ ನಿಘಂಟು (೨೦೦೦)

ಹಳಗನ್ನಡ ಅಭ್ಯಾಸಿಗಳಿಗೆ ಅಗತ್ಯವಾಗಿ ಬೇಕಾದ ನಿಘಂಟು ಱೞ ನಿಘಂಟು ಏಕೆಂದರೆ ಹಳಗನ್ನಡ ಱೞ ಸಹಿತ ಶಬ್ದಗಳಿಗೂ ರ ಳ ಸಹಿತವಾದ ಶಬ್ದಗಳಿಗೂ ಅರ್ಥಗಳಲ್ಲಿ ವ್ಯತ್ಯಾಸಗಳಿವೆ. ಇಂಥ ಪದಗಳನ್ನು ಅರ್ಥಮಾಡಿಕೊಳ್ಳಲು ಒಂದು ಕೋಶದ ಆವಶ್ಯಕತೆಯನ್ನು ಮನಗಂಡ ಪರಿಷತ್ತು 'ಱೞ'ನಿಘಂಟನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಪ್ರಕಟಿಸಿದೆ.

"ಈ ನಿಘಂಟಿನಲ್ಲಿ ಶಾಸ್ತ್ರೀಯವಾದ ರೀತಿಯಲ್ಲಿ "ಱ ೞ ಶಬ್ದಗಳನ್ನು ಒಂದೆಡೆ ಕಲೆಹಾಕಿ ಅರ್ಥ ವಿವರಣೆಯನ್ನು ನೀಡಿ ಒಂದೊಂದು ಪ್ರಯೋಗವನ್ನು ಸೂಚಿಸಿ ಒಂದು ಪರಿಪೂರ್ಣ ನಿಘಂಟನ್ನಾಗಿ ಹೊರತರಲಾಗಿದೆ" ಸುಮಾರು ಕ್ರಿ.ಶ. ೧೩೦೦ವರೆಗಿನ ಪ್ರಯೋಗಗಳಲ್ಲಿರುವ ೞಕಾರವನ್ನು, ಸುಮಾರು ೧೭೦೦ವರೆಗಿನ ಪ್ರಯೋಗಗಳಲ್ಲಿ ಱಕಾರವನ್ನು ಉಳಿಸಿಕೊಂಡು ಉಲ್ಲೇಖ ಮತ್ತು ಪ್ರಯೋಗಗಳನ್ನು ಕೊಟ್ಟು ಜ್ಞಾತಿಶಬ್ದಗಳನ್ನು ನಿಷ್ಪತ್ತಿ ಭಾಗದಲ್ಲಿ ಸೂಚಿಸಿದೆ. "ಮುಖ್ಯವಾಗಿ ಪರಿಷತ್ತಿನ ೯೦೨೦ ಪುಟಗಳ ೮ ಸಂಪುಟಗಳಿಂದ ಱ ೞ ಸಂಘಟಿತ ಪದಗಳನ್ನು ಪದರೂಪಗಳನ್ನೂ ಈ ನಿಘಂಟು ಒಳಗೊಂಡಿದೆ.

ಪರಿಷತ್ ಅಧ್ಯಕ್ಷರಾದ ಡಾ. ಸಾ. ಶಿ. ಮರುಳಯ್ಯ ಅವರಿಂದ ಚಾಲನೆಗೊಂಡು ಎನ್. ಬಸವಾರಾಧ್ಯರ ನೇತೃತ್ವದಲ್ಲಿ ನಿಘಂಟು ಪ್ರಕಟವಾಗಿದೆ. ಇದನ್ನು ಸಿದ್ಧಪಡಿಸಲು ರಚನೆಗೊಂಡ ಸಂಪಾದಕವರ್ಗ ಹೀಗಿದೆ:

ಸಂಪಾದಕ ವರ್ಗ

ಪ್ರಧಾನ ಸಂಪಾದಕರು : ಎನ್. ಬಸವಾರಾಧ್ಯ

ಸಂಪಾದಕರು : ಶ್ರೀಮತಿ ಉಮಾದೇವಿ ಎಂ. ಎ.
: ಶ್ರೀಮತಿ ವಿಜಯಲಕ್ಷ್ಮೀ ಎಂ.ಎ.
: ಶ್ರೀಮತಿ ಎಂ. ಎಸ್. ಸುಜಯ ಎಂ. ಎ.
: ಶ್ರೀ ಬಿ. ಆರ್. ಬಸವರಾಜು. ಎಂ. ಎ.

ಸಾಕಷ್ಟು ಅಚ್ಚಿನ ದೋಷಗಳಿದ್ದರೂ ೨೦೦೦ರಲ್ಲಿ ಪ್ರಕಟವಾದ ೪೨೭ ಪುಟಗಳ ಈ ನಿಘಂಟು ಒಂದು ಒಳ್ಳೆಯ ಕೊಡುಗೆ ಎಂಬುದರಲ್ಲಿ ಸಂಶಯವಿಲ್ಲ.

೯. ಕನ್ನಡ – ಕನ್ನಡ – ಇಂಗ್ಲಿಷ್ ನಿಘಂಟು (೨೦೦೨)

(ಪರಿಷ್ಕೃತ ಕನ್ನಡ ನಿಘಂಟು, ಇಂಗ್ಲಿಷ್ ಲಿಪ್ಯಂತರ ಮತ್ತು ಅರ್ಥಗಳೊಂದಿಗೆ)

ಭಾಷೆ ದಿನೇದಿನೇ ಬದಲಾಗುತ್ತಿರುತ್ತದೆ. ಏಕೆಂದರೆ ಜೀವನದಲ್ಲಿ ಬದಲಾವಣೆ ಪ್ರಗತಿ–ವಿಗತಿಗಳು ಸಹಜ. ಹೀಗಾಗಿ ಕಾಲಕಾಲಕ್ಕೆ ನಿಘಂಟುಗಳು ಪರಿಷ್ಕೃತಗೊಳ್ಳಬೇಕಾಗುತ್ತದೆ. ಕನ್ನಡ ಸಾಹಿತ್ಯ ಪರಿಷತ್ತು ಸುಮಾರು ಅರ್ಧ ಶತಮಾನದ ಪರಿಶ್ರಮದಿಂದ ನಾಡಿನ ನಾನಾ ಪ್ರಸಿದ್ಧ ವಿದ್ವಾಂಸರ ಸಹಕಾರದೊಂದಿಗೆ ಪ್ರಕಟವಾದ ೮ ಸಂಪುಟಗಳ ಕನ್ನಡ ನಿಘಂಟು ಯೋಜನೆ ಪೂರೈಸಿದ ಕಾಲಕ್ಕೆ ಪರಿಷ್ಕರಣ ಮಾಡಬೇಕಾದ ಕಾಲ ಸನ್ನಿಹಿತವಾಗಿತ್ತು. ಹೀಗಾಗಿ ಇದಕ್ಕಾಗಿ ೧೯೯೮ರಲ್ಲಿ ಸಾ. ಶಿ. ಮರುಳಯ್ಯ (ಅಧ್ಯಕ್ಷರು) ೨೦೦೧ರಲ್ಲಿ ಎನ್. ಬಸವಾರಾಧ್ಯ (ಅಧ್ಯಕ್ಷರು) ೨೦೦೨ರಲ್ಲಿ ಧರ್ಮದರ್ಶಿ ಹರಿಕೃಷ್ಣ ಪುನರೂರು (ಅಧ್ಯಕ್ಷರು) ಅವರುಗಳ ಮಾರ್ಗದರ್ಶನದಲ್ಲಿ ಕನ್ನಡ – ಕನ್ನಡ– ಇಂಗ್ಲಿಷ್ ಸಮಿತಿ ರೂಪುಗೊಂಡು ೨೦೦೨ರಲ್ಲಿ 'ಅ' ಯಿಂದ 'ಅಬ್ಬು'ವರೆಗೆ ಪ್ರಥಮ ಸಂಪುಟವು ಪ್ರಕಟವಾಯಿತು. ಈ ಪರಿಷ್ಕೃತ ಸಂಪುಟಕ್ಕೆ ೧೯೮೩ ಗ್ರಂಥಗಳನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ.

ಪರಿಷ್ಕೃತ ಸಂಪುಟದಲ್ಲಿ ಕನ್ನಡ ಪದಗಳ ಇಂಗ್ಲಿಷ್ ಲಿಪ್ಯಂತರ ಮತ್ತು ಕನ್ನಡ ಅರ್ಥದ ಜತೆಗೆ ಇಂಗ್ಲಿಷ್‌ನಲ್ಲಿ ಅರ್ಥವನ್ನು ಕೊಟ್ಟಿರುವುದರಿಂದಲೂ ಕನ್ನಡೇತರರು, ಭಾರತದ ಹಾಗೂ ವಿಶ್ವದ ವಿದ್ವಾಂಸರೆಲ್ಲ ಬಳಸುವಂತಾಗಿದೆ. ಇಷ್ಟು ಉಪಯುಕ್ತವಾದ ಪರಿಷ್ಕರಣೆ ಯೋಜನೆ ಮೊದಲ ಸಂಪುಟಕ್ಕೆ ನಿಂತು ಹೋಗಿದ್ದು ವಿಷಾದನೀಯ. ಪರಿಷತ್ತಿನ ಅನುಪಮ ಕೊಡುಗೆಯಾದ ಈ ಕೆಲಸವನ್ನು ಮುಂದೆ ಬರುವ ಅಧ್ಯಕ್ಷರು ಮುಂದುವರೆಸಬೇಕಾಗಿದೆ. ೬೪೪ ಪುಟಗಳ ಈ ಸಂಪುಟದ ಆವೃತ್ತಿಯು ಮಾರಾಟವಾಗಿರುವುದು ಇದರ ಅಗತ್ಯವನ್ನು ತೋರಿಸುತ್ತದೆ.

೧೦. ಸಂಕ್ಷಿಪ್ತ ಕನ್ನಡ – ಇಂಗ್ಲಿಷ್ ನಿಘಂಟು (೨೦೦೩)

ಕನ್ನಡ ಸಾಹಿತ್ಯ ಪರಿಷತ್ತಿನ ಬೃಹತ್ ೮ ಸಂಪುಟಗಳ ಕನ್ನಡ ನಿಘಂಟು ಯೋಜನಾ ಕಾರ್ಯವು ೨೭ ಜನವರಿ ೧೯೪೪ರಂದು ಅಧಿಕೃತವಾಗಿ ಪ್ರಾರಂಭವಾಯಿತು. ಹತ್ತಾರು ವರುಷಗಳ ಪರಿಶ್ರಮದಿಂದ ೮ ಸಂಪುಟಗಳು ಪ್ರಕಟವಾದವು. ಆನಂತರ ಸಂಕ್ಷಿಪ್ತ ಕನ್ನಡ ನಿಘಂಟು (೧೯೭೫), ಕನ್ನಡ ರತ್ನಕೋಶ (೧೯೭೭), ಅವಳಿ ಪಡೆನುಡಿ ಕೋಶ, ಜಟಿ– ನಿಘಂಟು, ಕನ್ನಡ –ಕನ್ನಡ– ಇಂಗ್ಲಿಷ್ ನಿಘಂಟು (೨೦೦೩) ಪ್ರಕಟವಾದವು. ಇವುಗಳಲ್ಲಿ ಕನ್ನಡ – ಇಂಗ್ಲಿಷ್ ನಿಘಂಟು ಕನ್ನಡೇತರರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿದೆ.

ವಿಶೇಷವಾಗಿ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು, ಬೋಧಿಸುತ್ತಿರುವ ಅಧ್ಯಾಪಕರು, ಕನ್ನಡ – ಇಂಗ್ಲಿಷ್ ಭಾಷೆಗಳಲ್ಲಿ ವ್ಯವಹರಿಸುವವರು, ಸಾಹಿತಿಗಳು ಅನುವಾದಕರಿಗೆ ಅನುಕೂಲವಾಗುವ ರೀತಿಯಲ್ಲಿ ಸಿದ್ಧಪಡಿಸಲಾಗಿದೆ. ಈ ದ್ವಿಭಾಷಾ ನಿಘಂಟು ಪರಿಷತ್ತಿನ ಅಧ್ಯಕ್ಷರಾದ ಹರಿಕೃಷ್ಣ ಪುನರೂರು ಕಾಲ ೨೦೦೩ರಲ್ಲಿ ಅಚ್ಚಾದನಂತರ ಜನಪ್ರಿಯವಾಗಿ ೨೦೦೬ರಲ್ಲಿ ಚಂಪಾ ಅಧ್ಯಕ್ಷರಾದಾಗ ಮರುಮುದ್ರಣವಾಗಿದೆ. ಸುಮಾರು ೪೦೦೦ ಪದಗಳನ್ನು ಪ್ರಧಾನ ಉಲ್ಲೇಖಗಳನ್ನಾಗಿ ಇಲ್ಲಿ ಕೊಡಲಾಗಿದೆ. ಕನ್ನಡ ಪದ ಅದರ ಇಂಗ್ಲಿಷ್ ಲಿಪ್ಯಂತರ, ಕನ್ನಡ ಅರ್ಥ, ಅದರ ಇಂಗ್ಲಿಷ್ ಅನುವಾದ ಕೊಟ್ಟಿರುವ

ಈ ನಿಘಂಟಿನಲ್ಲಿ ಆಂಗ್ಲ ಸಮಾನಾರ್ಥಕ ಪದಗಳು ಇಲ್ಲದ ಕಡೆ ಸುಲಭವಾಗಿ ಅರ್ಥವಾಗುವಂತೆ ಇಂಗ್ಲಿಷಿನಲ್ಲಿ ವಿವರಣೆ ಕೊಡಲಾಗಿದೆ. ಪರಿಷತ್ತಿನ ೧೬೪೧ ಪುಟಗಳ ಕನ್ನಡ – ಇಂಗ್ಲಿಷ್ ನಿಘಂಟು ಕಿಟೆಲ್ ನಿಘಂಟಿನ ನಂತರದ ಇಂ – ಕ ನಿಘಂಟುಗಳ ಪೈಕಿ ಮಹತ್ವದ ಪ್ರಕಟನೆ ಆಗಿದೆ.

ಸಂಕ್ಷಿಪ್ತ ಕನ್ನಡ – ಇಂಗ್ಲಿಷ್ ನಿಘಂಟು ಸಂಪಾದಕ ಸಮಿತಿ

ಡಾ. ಎಂ. ಕೆ. ಶ್ರೀಧರ್	(ಪ್ರಧಾನ ಸಂಪಾದಕರು)
ಕೆ. ವಿ. ಸತ್ಯನ್	ಪರಿಶೀಲನಕಾರರು
ಶ್ರೀಮತಿ ಉಮಾದೇವಿ	ಉಪಸಂಪಾದಕರು
ಶ್ರೀಮತಿ ವಿಜಯಲಕ್ಷ್ಮೀ	ಉಪಸಂಪಾದಕರು
ಶ್ರೀಮತಿ ಎಂ. ಎಸ್. ಸುಜಯ	ಉಪಸಂಪಾದಕರು
ಬಿ. ಆರ್. ಬಸವರಾಜು	ಸಹಾಯಕ ಸಂಪಾದಕರು

೧೧. ಹಳಗನ್ನಡ ಪದಸಂಪದ ೨೦೦೭

ಸಂ. ಪಿ. ವಿ. ನಾರಾಯಣ

ಹಳಗನ್ನಡ ಸಾಹಿತ್ಯದ ಬುನಾದಿಯನ್ನು ಚಂಪೂ ಸಾಹಿತ್ಯದಲ್ಲಿ ಕಾಣುತ್ತೇವೆ. ಹಳಗನ್ನಡ ವ್ಯಾಸಂಗ ವಿದ್ವತ್ತಿಗೆ ಸಾಕ್ಷಿಯಾಗಿದೆ. ಹಳೆಯ ಕಾಲದ ಪಂಡಿತರೆಲ್ಲ ಬಹುಮಟ್ಟಿಗೆ ಹಳಗನ್ನಡ ಪಂಡಿತರಾಗಿದ್ದರು. ಶಾಲಾ ಕಾಲೇಜುಗಳಲ್ಲಿ ಚಂಪೂವಿನ ಕೃತಿಗಳಲ್ಲಿ ಒಂದನ್ನು ಭಾಗವನ್ನೋ ಪಠ್ಯವಾಗಿ ಇಡುತ್ತಿದ್ದರು. ಹೀಗಾಗಿ ಹಳಗನ್ನಡ ವ್ಯಾಸಂಗ ಅಧ್ಯಾಪಕರಿಗೆ ವಿದ್ಯಾರ್ಥಿಗಳಿಗೆ ಅನಿವಾರ್ಯವಾಗಿತ್ತು. ಅಂಥವರಿಗೆ ಚಂಪೂ ಕೃತಿಗಳನ್ನೇ ಆಧರಿಸಿ ಸಿದ್ಧಪಡಿಸಿದ ನಿಘಂಟು ಇರಲಿಲ್ಲ. ಪರಿಷತ್ತು ಹಿಂದೆ ಷಟ್ಪದಿ ಕೃತಿಗಳ ನಿಘಂಟನ್ನು ಸಿದ್ಧಪಡಿಸಿತ್ತು. ಆದರೆ ಅದು ಅಚ್ಚಾಗಲಿಲ್ಲ. ಸಾಮಾನ್ಯರನ್ನು ಓದುಗರನ್ನು ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಈ ಕೃತಿಯನ್ನು, ರಚಿಸಿರುವುದರಿಂದ ಸಂಪಾದಕರು. ಹೇಳಿದ ಮಾತು ಗಮನಾರ್ಹವಾಗಿದೆ ಹಳಗನ್ನಡ ಪದಸಂಪದವು ನಿಘಂಟು ಶಾಸ್ತ್ರವು ಸಾರವಾಗಿ ರಚಿಸಿದ ಮತ್ತು ವಿದ್ವಾಂಸರನ್ನು ಉದ್ದೇಶಿಸುವ ಶಬ್ದಕೋಶವಾಗಿರದೆ ಸಾಮಾನ್ಯ ಅಭ್ಯಾಸಿಗಳಿಗೆ ಸಹಾಯಕವಾಗಲೆಂದು ಮಾಡಿದ ಪ್ರಯತ್ನವೆಂಬುದನ್ನು ಸ್ಪಷ್ಟಪಡಿಸಲು ಈ ವಿವರಣೆ."

೩೫೦೦೦ ಉಲ್ಲೇಖಗಳು ಅರ್ಥಸಮೇತ ಈ ಕೋಶದಲ್ಲಿದೆ. ೫೪೪ ಪುಟಗಳ ಈ ಕೋಶದಲ್ಲಿ ಅರ್ಥ ಸಂದಿಗ್ಧತೆಯ ಶಬ್ದಗಳನ್ನು ಅನುಬಂಧದಲ್ಲಿ ಕೊಟ್ಟಿರುವುದು ವಿದ್ವಾಂಸರ ಚಿಂತನೆಗೆ ಸಾಮಗ್ರಿಆಗಿದೆ.

೧೨. ಕುಂಬಾರಿಕೆ ವೃತ್ತಿ ಪದಕೋಶ (೨೦೦೭)

ಭಾಷೆಯಲ್ಲಿ ಪಾರಿಭಾಷಿಕ ಪದಕೋಶಗಳು. ಸಾಮಾನ್ಯ ಶಬ್ದಕೋಶಗಳು ಎಂದು ಸಾಮಾನ್ಯವಾಗಿ ಎರಡು ವಿಧ ಕೋಶಗಳನ್ನು ಕಾಣುತ್ತೇವೆ. ಪಾರಿಭಾಷಿಕ ಪದಕೋಶಗಳಲ್ಲಿ ಕಲೆ, ಸಾಹಿತ್ಯಶಾಸ್ತ್ರ, ವಿಜ್ಞಾನ ವೃತ್ತಿ ಪದಕೋಶಗಳು ಎಂದು ಹಲವು ವಿಧವಾಗಿ ವರ್ಗೀಕರಿಸಬಹುದಾಗಿದೆ. ಕನ್ನಡದಲ್ಲಿ ಎಲ್ಲ ಬಗೆಯ ಪಾರಿಭಾಷಿಕ ಪದಕೋಶಗಳು ಈಚಿನದು ಎನ್ನಬಹುದು. ಕುಂಬಾರಿಕೆ ವೃತ್ತಿಪದಕೋಶ ಆ ಪೈಕಿ ಒಂದು. ೨೦೦೭ರಲ್ಲಿ ಮುದ್ರಣಗೊಂಡ ೧೭೮ಪುಟಗಳ ಈ ಕೋಶದಲ್ಲಿ ಕುಂಬಾರಿಕೆಗೆ ಸಂಬಂಧಿಸಿದಂತೆ ಚಿತ್ರ ವಿವರಣೆ ಸಹಿತ ಪದಗಳನ್ನು ವಿವರಿಸಲಾಗಿದೆ. ಕೇವಲ ಪದಗಳ

ಅರ್ಥವನ್ನಷ್ಟೇ ಕೊಡದೆ ವಿವರಣೆಗಳನ್ನು ನೀಡಿರುವುದು, ಕನ್ನಡ-ಕನ್ನಡ ಕೋಶವಲ್ಲದೆ ಇಂಗ್ಲಿಷ್ - ಇಂಗ್ಲಿಷ್ - ಕನ್ನಡ ಪದಕೋಶವನ್ನು ಇತರ ಭಾಷೆಗಳಲ್ಲಿ (ತುಳು, ತೆಲುಗು, ಮರಾಠಿ) ಇರುವ ಕುಂಬಾರಿಕೆಗೆ ಸಂಬಂಧಿಸಿದ ಪದಗಳನ್ನು ಕೊಟ್ಟಿರುವುದು ಈ ಗ್ರಂಥದ ವೈಶಿಷ್ಟ್ಯ. ಇದಲ್ಲದೆ ಹಲವಾರು ಉಪಯುಕ್ತ ಮಾಹಿತಿಗಳಿಂದ ಕೂಡಿದ ೧೮ ಅನುಬಂಧಗಳಿವೆ. ಈ ಬಗೆಯ ಗ್ರಂಥಗಳು ವಿವಿಧ ವೃತ್ತಿಗಳ ಬಗ್ಗೆ ಬರಲು ಈ ಕೃತಿ ಮಾದರಿ ಆಗಿದೆ. ಇದನ್ನು ರಚಿಸಿದವರು ಬಸವರಾಜ ಕುಂಚೂರು.

೧೩. ವರ್ಗೀಕೃತ ಪದಕೋಶ (೧೯೯೪)

ಕನ್ನಡದಲ್ಲಿ ೧೦ನೇ ಶತಮಾನದಿಂದಲೂ ನಿಘಂಟು ರಚನೆಯನ್ನು ಕಾಣಬಹುದು. ರನ್ನ ಪಂಪರಿಂದ ಮೊದಲ್ಗೊಂಡು ಗಂಗಾಧರ ತುರಮುರಿ ಅವರ ಕನ್ನಡ ಶಬ್ದಕೋಶದವರೆಗೆ ಸುಮಾರು ೩೦ ಶಬ್ದಕೋಶಗಳು ರಚಿತವಾಗಿವೆ. ಇವುಗಳಲ್ಲಿ ಬಹುಪಾಲು ಪ್ರಾಸ - ಛಂದಸ್ಸುಗಳನ್ನು ಅನುಸರಿಸಿ ಕಾವ್ಯ ರಚಿಸಲು ಕವಿಗಳಿಗೆ ಅನುಕೂಲವಾಗುವಂತೆ ಸಮಾನಾರ್ಥ ನಾಮಪದಗಳನ್ನು ವಿಷಯಾನುಕ್ರಮವಾಗಿ ರಚಿಸಿರುವ ಕೋಶಗಳು. ಅಕಾರಾದಿಯಾಗಿ ಪದಗಳನ್ನು ಕೊಡುವ ಕೋಶಗಳಲ್ಲಿ ೧೮ನೇ ಶತಮಾನದ ಶಾಲ್ಯದ ಕೃಷ್ಣರಾಜನ ಪದಕೋಶವೇ ಮೊದಲನೆಯದು. ಅನಂತರ ಅನೇಕ ಕೋಶಗಳು ಅಕಾರಾದಿಯಾಗಿ ರಚಿತವಾಗಿವೆ.

ಇದರಲ್ಲಿ ಸುಮಾರು ೧೫೦೦೦ ಪದಗಳಿವೆ. ಇವೆಲ್ಲ ಪ್ರಚಲಿತ ಕನ್ನಡ ಸಾಹಿತ್ಯದಲ್ಲಿರುವ ಸಾಮಾನ್ಯ ಪದಗಳಾಗಿವೆ. ಇವುಗಳಲ್ಲಿ ನಾಮಪದಗಳು, ಕ್ರಿಯಾಪದಗಳು, ವಿರುದ್ಧಾರ್ಥಕಪದಗಳು ಇವೆ. ಅಷ್ಟೇ ಅಲ್ಲದೆ ಸಮಾನಾರ್ಥ, ಸಮೀಪಾರ್ಥ, ವಿರುದ್ಧಾರ್ಥ, ಮತ್ತು ಸವರ್ಗ ಪದಗಳಿವೆ.

ಭೌತಶಾಸ್ತ್ರ, ಅಂಗಾಂಗಗಳು, ಭಾಷೆ-ಸಾಹಿತ್ಯ, ಪತ್ರಿಕೋದ್ಯಮ ರಾಜ್ಯಾಡಳಿತ, ಪ್ರವಾಸ, ಧರ್ಮ, ಆರೋಗ್ಯ, ಆಹಾರ ಕಾಲ, ಸಂಖ್ಯೆ, ಪ್ರಾಣಿ, ಸಸ್ಯ ಮೊದಲಾದ ೩೧ ವರ್ಗಗಳಲ್ಲಿ ಪದಗಳನ್ನು ವರ್ಗೀಕರಿಸಿ ಗುಂಪು ಮಾಡಲಾಗಿದೆ.

ಉದಾಹರಣೆಗೆ ಪ್ರಾಣಿ - ಪಶುಸಂಗೋಪ ವರ್ಗದಲ್ಲಿ ದನವಿನ ಮನೆಗೆ ಸಮಾನಾರ್ಥಕ / ಸಮೀಪಾರ್ಥಕವಾಗಿ ಕೊಟ್ಟಿರುವ ಅರ್ಥಗಳು ಹೀಗಿವೆ : **ದನವಿನ ಮನೆ :** ಗೋಶಾಲೆ, ಗೋಮಾಳ, ಗೋಚರಾವು, ತರುಹಟ್ಟಿ, ಹಕ್ಕಿ, ತುರುಗಾವಲು ದೊಡ್ಡಿ, ಹಟ್ಟಿ, ಕೊಟ್ಟಿಗೆ, ಗೋದಣಿಗೆ, ಗೋದಲೆ (ಲೆ,ಲು,ಣ).

೯೫ ಪುಟಗಳ ೧೯೯೪ರಲ್ಲಿ ಪ್ರಕಟವಾದ ಈ ಕೋಶದ ಸಂಪಾದಕರು : ಮ. ಪಾರ್ವತಮ್ಮ, ನಿ.ಉಮಾಕಾಂತ, ನಿ. ರಾಜಶೇಖರ.

೧೪. ದ್ರಾವಿಡ ಭಾಷಾ ಜ್ಞಾತಿ ಪದಕೋಶ (೨೦೧೫)

ಪರಿಷತ್ತು ಪ್ರಾರಂಭದಲ್ಲೇ ಏಕಭಾಷಾ (ಕನ್ನಡ) ನಿಘಂಟುಗಳ ಜತೆಗೆ ದ್ವಿಭಾಷಾ ನಿಘಂಟುಗಳ ರಚನೆಯನ್ನು ಮಾಡತೊಡಗಿ ಕನ್ನಡ - ಇಂಗ್ಲಿಷ್ ಪಾರಿಭಾಷಿಕ ಪದಕೋಶಗಳನ್ನು ಸಿದ್ಧಪಡಿಸಲು ನಿರ್ಧರಿಸಿತು. ಸಮಿತಿ ರಚನೆ ಆದದ್ದು ಸದಸ್ಯರು ಆ ಬಗ್ಗೆ ಲೇಖನ ಕಳಿಸಿದರೂ ನಾನಾ ಕಾರಣಗಳಿಂದ ಆ ನಿಘಂಟು ರೂಪುಗೊಳ್ಳಲಿಲ್ಲ. ಅನಂತರ ಕನ್ನಡ ನಿಘಂಟು ಮೊದಲಾದ ಏಕಭಾಷಾ ನಿಘಂಟುಗಳು ನಿರ್ಮಾಣವಾದವು. ಇತರರು ಸಿದ್ಧಪಡಿಸಿದ ದ್ವಿಭಾಷಾ ನಿಘಂಟುಗಳನ್ನು ಪ್ರಕಟಿಸಿತು. ಈ ಮಾಲೆಯಲ್ಲಿ ಬಹುಭಾಷಾ ಪದಗಳ ನಿಘಂಟನ್ನು ಎಂದರೆ ದ್ರಾವಿಡ ಭಾಷಾ ಜ್ಞಾತಿಪದ ಕೋಶವನ್ನು ರಚಿಸಲು ಅಧ್ಯಕ್ಷರಾದ ಡಾ. ನಲ್ಲೂರು ಪ್ರಸಾದ್ ಅವರ ಕಾಲದಲ್ಲಿ ಸಂಪಾದಕರ ಸಮಿತಿಯೊಂದು ರಚಿತವಾಯಿತು. ಶ್ರೀ ಪುಂಡಲೀಕ ಹಾಲಂಬಿ ಅವರ ಕಾಲದಲ್ಲಿ ಪ್ರಕಟಗೊಂಡಿತು.

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ (ಕನ್ನಡ)

ಪ್ರಧಾನ ಸಂಪಾದಕರು

ಡಾ. ಹಂಪ. ನಾಗರಾಜಯ್ಯ (ಕನ್ನಡ)

ಕಾರ್ಯನಿರ್ವಾಹಕ ಸಂಪಾದಕರು

ಪ್ರೊ. ಕೃಷ್ಣ ಪರಮೇಶ್ವರಭಟ್ಟ (ಹವ್ಯಕ)

ಸದಸ್ಯರು

ಪ್ರೊ. ಎ.ವಿ. ನಾವಡ

ಡಾ. ಪದ್ಮನಾಭ ಕೇಕುಣ್ಣಾಯ

ಪ್ರೊ. ಜಿ.ಎಸ್. ಮೋಹನ್

ಡಾ. ಮೋಹನ ಕುಂಟಾರ್

ಡಾ. ಸೆಲ್ವಕುಮಾರಿ

ಡಾ. ಎಂ. ಟಿ. ರತಿ

ಪ್ರಕಟನಾ ಸಮಿತಿ ಸಂಚಾಲಕ

ಶ್ರೀ ಜೆ. ಎನ್. ಶಾಮರಾವ್

ಪರಿಷತ್ತು ಪ್ರಕಟಿಸಿರುವ ಹತ್ತಾರು ನಿಘಂಟುಗಳಲ್ಲಿ ಬೃಹತ್ ೮ ಸಂಪುಟಗಳ ಕನ್ನಡ ನಿಘಂಟನ್ನು ಬಿಟ್ಟರೆ ಪರಿಷತ್ತಿಗೆ ೧೦೦ ವರ್ಷ ತುಂಬುತ್ತಿರುವ ವೇಳೆಯಲ್ಲಿ ಪ್ರಕಟವಾಗುತ್ತಿರುವ ದ್ರಾವಿಡ ಭಾಷಾ ಜ್ಞಾತಿಪದಕೋಶವೇ ಮಹತ್ವದ ಪ್ರಕಟನೆಯಾಗಿದೆ. ಈ ಪ್ರಮಾಣದಲ್ಲಿ ಈ ಬಗೆಯ ಕೋಶ ಕನ್ನಡದಲ್ಲೇ ಮೊದಲನೆಯದಾಗಿದೆ.

ದ್ರಾವಿಡ ಭಾಷಾ ಕೋಶ ಎಂದೊಡನೆ ನೆನಪಾಗುವುದು ಎಮಿನೊ – ಬರೊ ಅವರು ಸಿದ್ಧಪಡಿಸಿ ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಶಬ್ದಕೋಶ. ಅವರ ತೌಲನಿಕ ಅಧ್ಯಯನ ಏನಿದ್ದರೂ ಅದು ದ್ರಾವಿಡ ಭಾಷೆಗಳ ಶಬ್ದಕೋಶಗಳು ಒದಗಿಸುವ ಮಾಹಿತಿಯನ್ನು ಅವಲಂಬಿಸಿದ್ದು ಅದು ಅವರ ಮಿತಿಯೂ ಹೌದು, ಅವರಿಗಿದ್ದ ಅನುಕೂಲವೂ ಹೌದು. ಆದರೆ ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಈ ಜ್ಞಾತಿಪದ ಕೋಶದಲ್ಲಿ ಕನ್ನಡ (ಹಂಪನಾ), ಕೊಡಗು (ಎಂ. ಟಿ. ರತಿ), ತಮಿಳು (ಸೆಲ್ವಕುಮಾರಿ), ಮಲೆಯಾಳ (ಮೋಹನ ಕುಂಟಾರ್), ತೆಲುಗು (ಜಿ.ಎಸ್. ಮೋಹನ್), ತುಳು (ಎ. ವಿ. ನಾವಡ), ಹವ್ಯಕ (ಪದ್ಮನಾಭ ಕೇಕುಣ್ಣಾಯ, ಕೃಷ್ಣ ಪರಮೇಶ್ವರ ಭಟ್ಟ) _ ಹೀಗೆ ತಾಯಿನುಡಿಯುಳ್ಳ ತಜ್ಞರು ಈ ಕೋಶದ ರಚನಾ ಕಾರ್ಯದಲ್ಲಿ ಪಾಲ್ಗೊಂಡಿರುವುದು ವಿಶೇಷ ಸಂಗತಿ. ಇವರೆಲ್ಲ ತಮ್ಮ ಮಾತೃಭಾಷೆ ಜತೆಗೆ ಕನ್ನಡದಲ್ಲೂ ಪರಿಣತಿ ಪಡೆದವರು ಎಂಬುದನ್ನು ಗಮನಿಸಬೇಕು. ಈ ಗ್ರಂಥ ಎಲ್ಲ ದ್ರಾವಿಡ ಭಾಷೆ ಪದಗಳನ್ನು ಒಳಗೊಳ್ಳದೆ ಆರೇಳು ದ್ರಾವಿಡ ಭಾಷೆಗಳಿಗಷ್ಟೇ ಸೀಮಿತಗೊಂಡು ಈ ಕೋಶ ಪ್ರಕಟವಾಗಿದ್ದರೂ. ಎಮಿನೋ – ಬರೋ ಅವರ ಕೋಶಕ್ಕಿಂತ ಒಂದು ಹೆಜ್ಜೆ ಮುಂದಿಟ್ಟಿದೆ ಎಂದರೆ ತಪ್ಪಾಗದು. ಆಯಾ ಭಾಷೆಗಳ ಪದಗಳ ಉಚ್ಚಾರದ ರೀತಿಗೆ ವಿಶೇಷ ಗಮನವಿತ್ತು ಅದನ್ನು ಇಲ್ಲಿ ಬರೆದಿದೆ. ೩೮೦೮ ಪದಗಳ ಅರ್ಥವಿವರಣೆ ಈ ಕೋಶದಲ್ಲಿದೆ.

ಪರಿಷತ್ತಿನ ನಿಬಂಧನೆಗಳಲ್ಲಿ ಪಾಂಡಿತ್ಯಪೋಷಣೆ, ನಿಘಂಟು, ಪಾರಿಭಾಷಿಕ ಪದಗಳ ಕೋಶ ನಿರ್ಮಾಣ ಎಂಬ ಮಾತುಗಳಿವೆ. ಅವುಗಳಿಗೆ ತಕ್ಕಂತೆ ಪರಿಷತ್ತು ವಿವಿಧ ನಿಘಂಟುಗಳನ್ನು ಪ್ರಕಟಿಸಿರುವುದು ಶ್ಲಾಘನೀಯವಾಗಿದೆ. ಆದರೂ

ಸಹ ಒಂದೆರಡು ಕೆಲಸಗಳು ಜರೂರಾಗಿ ಆಗಬೇಕು. ಮೊದಲನೆಯದಾಗಿ ನಿಘಂಟುಗಳ ಪರಿಷ್ಕರಣಕ್ಕೆ, ಮರುಮುದ್ರಣಕ್ಕೆ ಹಾಗೂ ಹೊಸ ನಿಘಂಟುಗಳ ರಚನೆಗಾಗಿ ಖಾಯಂ ನಿಘಂಟು ಸಮಿತಿ ರಚನೆ ಮತ್ತು ಕಚೇರಿ ಸಿಬ್ಬಂದಿ ಹಾಗೂ ನಿಯಮಾವಳಿ ರಚನೆಯಾಗಬೇಕು. ಈಗಾಗಲೇ ಪ್ರಕಟವಾದ ನಿಘಂಟುಗಳ ಪರಿಷ್ಕರಣ ಕಾರ್ಯ ಪ್ರಾರಂಭವಾಗಬೇಕು. ನಿಘಂಟು ಕಾರ್ಯಗಳಿಗೆ ಪ್ರತ್ಯೇಕ ಹಣವನ್ನು ಅಂದಾಜುಪಟ್ಟಿಯಲ್ಲಿ ಗೊತ್ತುಪಡಿಸಬೇಕು. ನಿಘಂಟು ಕೆಲಸ ಪರಿಷತ್ತಿಗೆ ಹೆಮ್ಮೆಯ ಕೆಲಸ, ನಾಡಿಗೆ ಅತ್ಯುತ್ತಮ ಕೊಡುಗೆ.

ಪರಿಷತ್ತಿನ ಪತ್ರಿಕೆಗಳು

ಪರಿಷತ್ಪತ್ರಿಕೆ

ಯಾವುದೇ ಸಂಸ್ಥೆ ಆಗಲಿ ಅದರ ಚಟುವಟಿಕೆ ಮತ್ತು ಕಾರ್ಯಗಳನ್ನೆಲ್ಲ ವಿವರವಾಗಿ ಸಕಾಲಿಕವಾಗಿ ಜನರಿಗೆ ತಿಳಿಸಲು ಮುಖವಾಣಿ ಪತ್ರಿಕೆ ಅಥವಾ ಸುದ್ದಿಪತ್ರಿಕೆ ಬೇಕು ಮತ್ತೆ ತನ್ನ ಧ್ಯೇಯಕ್ಕೆ ಅನುಗುಣವಾಗಿ ವಿಷಯಗಳ ಮೇಲೆ ಲೇಖನಗಳನ್ನು ಪ್ರಕಟಿಸಲು ಒಂದು ನಿಯತಕಾಲಿಕೆ ಬೇಕಾಗುತ್ತದೆ. ದೊಡ್ಡ ಸಂಸ್ಥೆಗಳಿಗೆ ಇದು ಅಗತ್ಯ. ಸಂಶೋಧನಾಸಂಸ್ಥೆಗಳಿಗೆ, ಸಾಹಿತ್ಯ ಸಂಸ್ಥೆಗಳಿಗೆ ಮುಖ್ಯ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾದಾಗಲೇ ಪತ್ರಿಕೆಯನ್ನು ಹೊರಡಿಸುವ ನಿರ್ಧಾರ ಕೈಗೊಂಡು ಪರಿಷತ್ಪತ್ರಿಕೆ ಎಂಬ ವಿದ್ವತ್ ಪತ್ರಿಕೆ (ತ್ರೈಮಾಸಿಕ)ಯನ್ನು ಹೊರಡಿಸಿತು. ಇಂದಿಗೂ ಸಂಶೋಧಕರಿಗೆ ಉಪಯುಕ್ತವಾದ, ಐತಿಹಾಸಿಕ ಮೌಲ್ಯವುಳ್ಳ ಲೇಖನಗಳು ಪ್ರಕಟವಾಗತೊಡಗಿತು. ಆಗ ಪ್ರಕಟವಾಗುತ್ತಿದ್ದ ಪುಸ್ತಕ ವಿಮರ್ಶೆ ಪರಿಚಯ, ಅಪ್ರಕಟಿತ ಕೃತಿಗಳ ಪ್ರಕಟನೆ ಪರಿಚಯ, ಪರಿಷತ್ತಿನ ವಾರ್ಷಿಕಾಧಿವೇಶನ, ಸಮ್ಮೇಳನಗಳ ವರದಿ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಗತೊಡಗಿತು. ಇದಕ್ಕೆ ಪ್ರತ್ಯೇಕ ಉಪಸಮಿತಿ ರಚಿತವಾಗಿತ್ತು. ಇಂದಿಗೂ ಪರಿಷತ್‌ಪತ್ರಿಕೆ ಪ್ರಕಟವಾಗುತ್ತಿದೆ. ಹಲವಾರು ಗ್ರಂಥಗಳು ಭಾಗಶಃ ಹಲವು ಸಂಚಿಕೆಗಳಲ್ಲಿ ಪ್ರಕಟವಾಗಿ ಆಮೇಲೆ ಗ್ರಂಥವಾಗಿ ಪ್ರಕಟವಾಯಿತು. ಮೊದಲಿನ ಪ್ರಮಾಣದಲ್ಲಿ ಸಂಶೋಧನಾತ್ಮಕ ವಿದ್ವತ್ಪೂರ್ಣ ಲೇಖನಗಳು ಪ್ರಕಟವಾಗುತ್ತಿಲ್ಲ.

ಚಾಮುಂಡಿಕಾ ಲಘುನಿಘಂಟು, ಹರಿದಾಸ ಸಾಹಿತ್ಯ, ಮೊದಲಾದ ಗ್ರಂಥಗಳು ಕಂತುಗಳಲ್ಲಿ ಪರಿಷತ್‌ಪತ್ರಿಕೆಯಲ್ಲಿ ಪ್ರಕಟವಾಯಿತು. ಪ್ರಬುದ್ಧ ಕರ್ನಾಟಕದಲ್ಲೂ ಕಂತುಗಳಲ್ಲಿ ಗ್ರಂಥಗಳನ್ನು ಪ್ರಕಟಿಸುವ ಈ ಪದ್ಧತಿಯನ್ನು ಕಾಣುತ್ತೇವೆ. ಪರಿಷತ್ ಪತ್ರಿಕೆಗೆ ಅನೇಕ ವಿದ್ವಾಂಸರು ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಎ.ಆರ್.ಕೃ. ಅವರು ಸಂಪಾದಕರಾದಾಗ ಪರಿಷತ್ ಪತ್ರಿಕೆಯಲ್ಲಿ ಅನ್ಯಭಾಷೆಯ ಜನರಿಗೆ, ವಿದೇಶಿಯರಿಗೆ ಪರಿಷತ್‌ಪತ್ರಿಕೆಯ ವಿದ್ವತ್ಪೂರ್ಣ ಲೇಖನಗಳನ್ನು ಪರಿಚಯ ಮಾಡಿ ಕೊಡಲು Contents in Brief ಎಂಬ ವಿಷಯ ಸಂಗ್ರಹಪತ್ರವನ್ನು ಇಂಗ್ಲಿಷಿನಲ್ಲಿ ಅಚ್ಚುಮಾಡಿ ಪತ್ರಿಕೆಯ ಮುಖಪುಟಕ್ಕೆ ಅಂಟಿಸಿಕಳಿಸುತ್ತಿದ್ದರು. ಹಾಗೆಯೇ ನಮ್ಮವರಿಗೆ ಅನ್ಯಭಾಷಾ ವಿದ್ವಾಂಸರು ಬರೆದ ಕರ್ನಾಟಕಕ್ಕೆ ಕನ್ನಡಕ್ಕೆ ಸಂಬಂಧಿಸಿದ ಮೌಲ್ಯಯುತ ಲೇಖನಗಳ ಪಟ್ಟಿಯನ್ನು ಪ್ರಾಚ್ಯ ಲೇಖನಾವಳಿ ಎಂಬ ಶೀರ್ಷಿಕೆಯಲ್ಲಿ ಕೊಡಲಾಗುತ್ತಿತ್ತು. ಆಗ ಪರಿಷತ್ಪತ್ರಿಕೆ ಲಂಡನ್ ಬರ್ಲಿನ್, ರೋಂ, ಇಂಗ್ಲೆಂಡ್ ಅಮೆರಿಕ ಜರ್ಮನಿಗಳಿಗೆ ಮಿಥಿಕ್ ಸೊಸೈಟಿಯ ಜರ್ನಲ್ (ಇಂಗ್ಲಿಷ್) ಹೋಗುವಂತೆ ಕನ್ನಡ ಪತ್ರಿಕೆ ಹೋಗುತ್ತಿತ್ತು. ಈ ಕೆಲಸ ಎ.ಆರ್. ಕೃಷ್ಣಶಾಸ್ತ್ರಿಗಳು ಸಂಪಾದಕರಾಗಿದ್ದಾಗ ಯಶಸ್ವಿಯಾಗಿ ನಡೆಯಿತು. ಆಮೇಲೆ ಆ ರೀತಿ ಮುಂದುವರೆಯಲಿಲ್ಲ.

ಪರಿಷತ್ಪತ್ರಿಕೆಯ ಹೆಸರು ಮೊದಲಿಗೆ ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ ಎಂದಿತ್ತು ೧೯೩೮ರಲ್ಲಿ ಪರಿಷತ್ತಿನ ಹೆಸರು ಕನ್ನಡ ಸಾಹಿತ್ಯ ಪರಿಷತ್ತು ಎಂದಾಗ ಪತ್ರಿಕೆ ಹೆಸರು ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ ಆಯಿತು.

೧೯೧೬ ಏಪ್ರಿಲ್‌ನಲ್ಲಿ ಮೊದಲ ಸಂಚಿಕೆ ಪ್ರಕಟವಾಯಿತು. ೧೯೪೧ರಲ್ಲಿ ಷಾಣ್ಮಾಸಿಕವಾಗಿ ೧೯೪೨ರಲ್ಲಿ

ತ್ರೈಮಾಸಿಕವಾಯಿತು. ಮತ್ತೆ ೧೯೫೧ರಲ್ಲಿ ಷಾಣ್ಮಾಸಿಕವಾಗಿ ೨೦೦೧ರಿಂದ ತ್ರೈಮಾಸಿಕವಾಗಿ, ಈಗ ಮತ್ತೆ ಷಾಣ್ಮಾಸಿಕವಾಗಿದೆ. ಪರಿಷತ್ ಪತ್ರಿಕೆಯಲ್ಲಿನ ಲೇಖನಗಳ ಸೂಚಿ ಪುಸ್ತಕವನ್ನು ಪರಿಷತ್ ಪ್ರಕಟಿಸಿದೆ.

ಪರಿಷತ್ಪತ್ರಿಕೆ ಸಂಪಾದಕ ಮಂಡಳಿ (೧೯೧೬-೨೦೧೫)

೧೯೧೬ರಲ್ಲಿ ಆರಂಭ ಸಂಪುಟ - ೨೪ರವರೆಗೆ (ಸಂಪಾದಕರ ಮಂಡಲಿ) ಡಿ.ವಿ. ಗುಂಡಪ್ಪ - ಇತ್ಯಾದಿ.

೧. ಡಿ.ಸಿ. ಸುಬ್ಬರಾಯಪ್ಪ

೨. ಡಿ. ಆರ್. ರಾಮಯ್ಯ ಮತ್ತು ಕೆ. ಎಂ. ಕೃಷ್ಣರಾವ್

೩. ಬಿ. ಶಿವಮೂರ್ತಿ ಶಾಸ್ತ್ರಿ

೪. ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಮತ್ತು ಹಂಪ. ನಾಗರಾಜಯ್ಯ

೫. ಟಿ. ಕೇಶವಭಟ್ಟ

೬. ದೊಡ್ಡರಂಗೇಗೌಡ ಮತ್ತು ಲಕ್ಷ್ಮಣ ಕೊಡಸೆ

೭. ಲಕ್ಷ್ಮಣ ಕೊಡಸೆ

೮. ಆರ್. ವಿ. ಕುಲಕರ್ಣಿ ಮತ್ತು ಲಕ್ಷ್ಮಣ್ ತೆಲಗಾವಿ

೯. ಲಕ್ಷ್ಮಣ ತೆಲಗಾವಿ

೧೦. ಗೊ. ರು. ಚನ್ನಬಸಪ್ಪ

೧೧. ಡಾ. ಬಸವರಾಜ ಕಲ್ಗುಡಿ

೧೨. ಪ್ರೊ. ಟಿ. ಕೇಶವಭಟ್ಟ

೧೩. ಪ್ರೊ. ಎಸ್. ಶ್ರೀನಿವಾಸನ್ - ಪ್ರೊ. ಎಂ. ಜಿ. ನಾಗರಾಜ್ - ೨೦೦೦

೧೪. ಡಾ॥ ಚಕ್ಕೆರೆ ಶಿವಶಂಕರ್ - ಪ್ರೊ. ಅಬ್ದುಲ್ ಬಷೀರ್ - ೨೦೦೧- ೦೪

೧೫. ಡಾ॥ ಎಂ. ಎ. ಜಯಚಂದ್ರ - ೨೦೦೪ ರಿಮದ ೨೦೦೮

೧೬. ಡಾ. ಕೆ. ಆರ್. ಗಣೇಶ್ ೨೦೦೯-೨೦೧೨

೧೭. ಜಿ. ಅಬ್ದುಲ್ ಬಷೀರ್ ೨೦೧೨ ರಿಂದ

ಕನ್ನಡ ನುಡಿ

ಪರಿಷತ್ತಿನ ಕಾರ್ಯಕ್ರಮಗಳನ್ನು ಚಟುವಟಿಕೆಗಳನ್ನು ತಿಳಿವಳಿಕೆ ಪತ್ರಗಳನ್ನು ಇತರ ವಿದ್ಯಮಾನಗಳನ್ನು ಸದಸ್ಯರಿಗೆ ತಿಳಿಸಬೇಕು. ಎಲ್ಲವನ್ನೂ ವಿವರವಾಗಿ ವಾರ್ಷಿಕ ವರದಿಯಲ್ಲಿ ತಿಳಿಸಲು ಸಾಧ್ಯವಿಲ್ಲವೆಂದು ತಿಳಿದು ಬಿಎಂಶ್ರೀ ಅವರು ಕನ್ನಡ ನುಡಿ ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ೧೯೩೮ ಅಕ್ಟೋಬರ್ ೪ ವಿಜಯದಶಮಿಯಂದು ಮೊದಲಸಂಚಿಕೆ ಪ್ರಕಟವಾಯಿತು. ಅ.ನ.ಕೃಷ್ಣರಾಯರು ಕನ್ನಡನಾಡಿಗೆ ಸಂಪಾದಕರಾಗಿ ನೇಮಕಗೊಂಡರು. ಈ ಪತ್ರಿಕೆ ಕೇವಲ ಪರಿಷತ್ತಿನ ಸುದ್ದಿ ಪತ್ರಿಕೆ ಅಷ್ಟೇ ಆಗಿರದೆ ಉಪಯುಕ್ತ ಲೇಖನಗಳು ಪರಿಷತ್ತಿನಲ್ಲಿ ನಡೆದ ಕಾರ್ಯಕ್ರಮಗಳಲ್ಲಿಯ ಭಾಷಣಗಳ ಸಾರ. ನಾಡಿನ ಎಲ್ಲೆಡೆ ನಡೆಯುವ ಮತ್ತು ಪರಿಷತ್ತಿನಲ್ಲಿ ನಡೆದ ಕಾರ್ಯಕ್ರಮಗಳ ವರದಿಗಳನ್ನು ಒಳಗೊಂಡಿತ್ತು. ಬದುಕಿರುವ ಸಮಕಾಲೀನ ಸಾಹಿತಿಗಳ ಬಗ್ಗೆ ಬರೆಯುವುದಿಲ್ಲವೆಂದು ಕಂಕಣ ತೊಟ್ಟಿದ್ದ ಕವಿಚರಿತೆಕಾರರ ಧೋರಣೆಗೆ ವಿರುದ್ಧವಾಗಿ ನಾವು ಬದುಕಿದ್ದವರ ಬಗ್ಗೆಯೇ ಬರೆಯುತ್ತೇವೆ ಎಂಬ ಧೋರಣೆಯಲ್ಲಿ ಸಮಕಾಲೀನ ಲೇಖಕರ ಜೀವನ ಕೃತಿಗಳ

ಪರಿಚಯ ಮಾಲೆಯನ್ನು ದ. ಕೃ. ಭಾರದ್ವಾಜರು ಪ್ರಾರಂಭಿಸಿದ್ದು ಕನ್ನಡನುಡಿಯಲ್ಲೇ. ಹೀಗೆ ಅನೇಕ ಮೌಲಿಕ ಲೇಖನಗಳು ಕನ್ನಡ ನುಡಿಯಲ್ಲಿ ಪ್ರಕಟನವಾಗಿವೆ.

ಕನ್ನಡ ನುಡಿ ಪ್ರಕಟವಾಗುವ ಮುಂಚೆ ಸದಸ್ಯರಿಗೆ, ವಾರ್ಷಿಕ ಚಂದಾ ನೀಡುವವರಿಗೆ ಪರಿಷತ್ಪತ್ರಿಕೆಯ ಆಯ್ದುಭಾಗಗಳ ಸಂಗ್ರಹ ಪ್ರತಿಯನ್ನು ೩ ರೂಗೆ ಕೊಡಲಾಗುತ್ತಿತ್ತು. ಡಿವಿಜಿ ಅವರು ಇದನ್ನು ಯೋಜಿಸಿದ್ದರು ಏಕೆಂದರೆ, ಆ ಕಾಲಕ್ಕೆ ಆರ್ಥಿಕ ತೊಂದರೆಯಿಂದ ಇನ್ನೊಂದು ಪ್ರತ್ಯೇಕ ಪತ್ರಿಕೆಯನ್ನು ಪರಿಷತ್ತಿನಿಂದ ಪ್ರಕಟಿಸಲು ಅನುಕೂಲವಿರಲಿಲ್ಲ. ಅದು ನುಡಿಯ ಹಾಗೆ "ಪರಿಷತ್ತಿನ ಸುದ್ದಿಗಳು, ಕಾರ್ಯ ನಿರ್ವಾಹಕ ಸಮಿತಿಯ ನಿರ್ಣಯಗಳು ಸಾಮಾನ್ಯ ದೃಷ್ಟಿಯಿಂದ ಪ್ರಚಾರದ ಹಿನ್ನೆಲೆಯಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹ ಮೊದಲಾದವು ಸಂಗ್ರಹ ಪ್ರತಿಯಲ್ಲಿರುತ್ತಿತ್ತು. ಈಗಲೂ ಕನ್ನಡ ನುಡಿ ಬರುತ್ತಿದೆ. ೨ ಲಕ್ಷಕ್ಕೂ ಮೀರಿದ ಸದಸ್ಯ ವರ್ಗವನ್ನು ಪರಿಷತ್ತು ಈಗ ಹೊಂದಿರುವುದರಿಂದ ಉಚಿತವಾಗಿ ಸದಸ್ಯರಿಗೆ ಕಳಿಸಲು ಆರ್ಥಿಕವಾಗಿ ತೊಂದರೆ ಆಗಿದೆ. ನಿಬಂಧನೆಯಲ್ಲಿ ತಿದ್ದುಪಡಿಮಾಡುವುದರ ಮೂಲಕ ಈ ಸಮಸ್ಯೆಗೆ ಪರಿಹಾರ ಹುಡುಕಬೇಕಾಗಿದೆ.

ಕನ್ನಡ ನುಡಿ ಸಂಪಾದಕರು (೧೯೩೮-೨೦೧೫)

೧. ಅ.ನ. ಕೃಷ್ಣರಾಯರು	೪.೧೦. ೧೯೩೮ ರಿಂದ ೨೧.೭.೧೯೩೯
೨. ಬಿ. ವೆಂಕೋಬರಾವ್	೩೧.೭.೧೯೩೯ ರಿಂದ
೩. ಬಿ.ಎಂ. ಶ್ರೀಕಂಠಯ್ಯ	೧.೨.೧೯೪೧ ರಿಂದ ೨೫.೧೨.೧೯೪೨
೪. ಬಿ. ವೆಂಕೋಬರಾವ್	೧.೧.೧೯೪೩ ರಿಂದ ೪.೧.೧೯೪೬
೫. ಬಿ. ಶಿವಮೂರ್ತಿ ಶಾಸ್ತ್ರೀ	೧೧.೧.೧೯೪೬ ರಿಂದ ೨೩.೫.೧೯೪೭
೬. ಮೋ. ಶಂ. ಸುಬ್ರಹ್ಮಣ್ಯಶಾಸ್ತ್ರಿ	೩೦.೫.೧೯೪೭ ರಿಂದ ೨೬.೩.೧೯೪೮
೭. ಮ. ಗಂ ನಂಜುಂಡಾರಾಧ್ಯ	೨.೪.೧೯೪೮ ರಿಂದ ಆಗಸ್ಟ್ ೧೯೫೩ ರವರೆಗೆ
೮. ಸಿದ್ದವನಹಳ್ಳಿ ಕೃಷ್ಣಶರ್ಮ	ಆಗಸ್ಟ್ ೧೯೫೩
೯. ಎಂ. ಆರ್. ಶ್ರೀನಿವಾಸಮೂರ್ತಿ	ಆಗಸ್ಟ್ ೧೯೫೩
೧೦. ಡಿ.ಸಿ. ಸುಬ್ಬರಾಯಪ್ಪ	ಸೆಪ್ಟೆಂಬರ್ ೧೯೫೩
೧೧. ವಿ. ಸೀತಾರಾಮಯ್ಯ	ಜೂನ್ ೧೯೫೬
೧೨. ಬಿ. ಶಿವಮೂರ್ತಿ ಶಾಸ್ತ್ರಿ	ಜುಲೈ ೧೯೫೬ ರಿಂದ ಜುಲೈ ೧೯೬೦
೧೩. ಸಿ.ಕೆ. ವೆಂಕಟರಾಮಯ್ಯ	ಆಗಸ್ಟ್ ೧೯೬೦ ರಿಂದ ನವೆಂಬರ್ ೧೯೬೦
೧೪. ಅನ್ನದಾನಯ್ಯ ಪುರಾಣಿಕ	ಡಿಸೆಂಬರ್ ೧೯೬೦ ರಿಂದ ೧೯೬೩
೧೫. ಡಿ. ಆರ್. ರಾಮಯ್ಯ	ಸೆಪ್ಟೆಂಬರ್ ೧೯೬೩ ನವೆಂಬರ್ ೧೯೬೪
೧೬. ಜಿ. ವೆಂಕಟಸುಬ್ಬಯ್ಯ	ಜೂನ್ ೧೯೬೫ ಅಕ್ಟೋಬರ್ ೧೯೬೯
೧೭. ಹಿ. ಮ. ನಾಗಯ್ಯ	೧೬.೧೧.೧೯೬೯ ರಿಂದ ೧.೮.೧೯೭೮
೧೮. ಅನಂತಪದ್ಮನಾಭರಾವ್ ಮತ್ತು ರಾಮಣ್ಣ ಕೋಡಿಹೊಸಹಳ್ಳಿ	೧೬.೮.೧೯೭೮ ರಿಂದ ೩೧. ೧೨.೧೯೭೯
೧೯. ರಾಮಣ್ಣ ಕೋಡಿಹೊಸಹಳ್ಳಿ ಮತ್ತು ಬಿ.ಪಿ. ನಾಗರಾಜು	೧೬-೧೧-೧೯೮೦ ರಿಂದ ೧.೭-೧೯೮೧
೨೦. ಸಿ. ಸಿದ್ಧಲಿಂಗಪ್ಪ	೧೬.೭.೧೯೮೧ ರಿಂದ ೧.೩.೧೯೮೬

೨೧. ಚಂದ್ರಕಾಂತ ಪಡೇಸೂರ ಮತ್ತು ಜಿ. ವಿ. ಶಿವಸ್ವಾಮಿ	೧.೪.೧೯೮೬ ರಿಂದ ೨.೧೧.೧೯೮೭
೨೨. ಅ.ರಾ. ಚಂದ್ರಹಾಸಗುಪ್ತ	೨.೧.೧೯೮೭ ರಿಂದ ೩೧.೩.೧೯೮೮
೨೩. ಐ.ಎಂ. ವಿಠ್ಠಲಮೂರ್ತಿ	೧.೪.೧೯೮೮ ರಿಂದ ೨.೨.೧೯೮೯
೨೪. ಸಾ. ಶಿ. ಮರುಳಯ್ಯ	ಫೆಬ್ರವರಿ ೧೯೮೯ ರಿಂದ ಆಗಸ್ಟ್ ೧೯೯೦
೨೫. ವಿಜಯಾ ಸುಬ್ಬರಾಜ್	ಆಗಸ್ಟ್ ೧೯೮೯ ರಿಂದ ಆಗಸ್ಟ್ ೧೯೯೦
೨೬. ನಲ್ಲೂರು ಪ್ರಸಾದ್	ಜನವರಿ ೧೯೯೧ ರಿಂದ ಅಕ್ಟೋಬರ್ ೧೯೯೧
೨೭. ಅಗ್ರಹಾರ ಕೃಷ್ಣಮೂರ್ತಿ ಮತ್ತು ಟಿ. ಸಿ. ಪೂರ್ಣಿಮಾ	ನವೆಂಬರ್ ೧೯೯೧ ಫೆಬ್ರವರಿ ೧೯೯೪
೨೮. ಎಚ್.ಎಸ್. ಪಾರ್ವತಿ	ಮಾರ್ಚ್ ೧೯೯೪ ಫೆಬ್ರವರಿ ೧೯೯೫
೨೯. ಎಚ್. ಎಸ್. ಪಾರ್ವತಿ ಮತ್ತು ಎಚ್.ಎಸ್. ಸಿದ್ಧಗಂಗಪ್ಪ	ಮಾರ್ಚ್ ೧೯೯೫ ರಿಂದ ಜುಲೈ ೧೯೯೫
೩೦. ಸಿ. ಕೆ. ಪರಶುರಾಮಯ್ಯ ಮತ್ತು ಎಚ್.ಪಿ. ಫಿಲೋಮಿನಾ	ಆಗಸ್ಟ್ ೧೯೯೫ ರಿಂದ ಏಪ್ರಿಲ್ ೧೯೯೬
೩೧. ಎಚ್. ಪಿ. ಫಿಲೋಮಿನಾ ಮತ್ತು ವರದಾ ಶ್ರೀನಿವಾಸ್	ಮೇ ೧೯೯೬ ರಿಂದ ೧೯೯೮ ಜೂನ್
೩೨. ವಿಜಯಾಸುಬ್ಬರಾಜ್ ಮತ್ತು ಎಂ.ಜಿ. ಮಂಜುನಾಥ್	೧೯೯೮ ಜನವರಿಯಿಂದ ಡಿಸೆಂಬರ್ ೧೯೯೮
೩೩. ಕೆ. ವಿ. ಚಂದ್ರಣ್ಣಗೌಡ	೧೯೯೮ ಡಿಸೆಂಬರ್‌ನಿಂದ ೧೯೯೯ ನವೆಂಬರ್
೩೪. ಎಂ. ಜಿ. ಮಂಜುನಾಥ್	೧೯೯೯ ಡಿಸೆಂಬರ್‌ನಿಂದ ೨೦೦೧ ಜೂನ್
೩೫. ಮಹದೇವ ಪ್ರಕಾಶ್ ಮತ್ತು ಶ್ರೀನಿವಾಸರಾವ್ ಎಸ್. ವಿ.	ನವೆಂಬರ್ ೨೦೦೧ರಿಂದ ೨೦೦೨ ಡಿಸೆಂಬರ್
೩೬. ಎಸ್. ವಿ. ಶ್ರೀನಿವಾಸರಾವ್	೨೦೦೩ ಜನವರಿಯಿಂದ ೨೦೦೪ ಅಕ್ಟೋಬರ್ ತನಕ
೩೭. ಮಹದೇವಪ್ರಕಾಶ್	೨೦೦೪ ನವೆಂಬರ್‌ನಿಂದ ೨೦೦೬ ಫೆಬ್ರವರಿ
೩೮. ಕೆ. ರಾಜಕುಮಾರ್	೨೦೦೬ ಮಾರ್ಚ್‌ನಿಂದ ಜುಲೈ ೨೦೦೮
೩೯. ಕೋ.ವೆಂ. ರಾಮಕೃಷ್ಣೇಗೌಡ	೨೦೦೮ ಆಗಸ್ಟ್‌ನಿಂದ ಏಪ್ರಿಲ್ ೨೦೧೨
೪೦. ಡಾ. ಕಾಂತರಾಜಪುರ ಸುರೇಶ್ ಮತ್ತು ಪ್ರೊ. ಆರ್. ವಸಂತಕುಮಾರ್	೨೦೧೨ ಮೇ ರಿಂದ

❖❖

೬

ಅಧ್ಯಾಯ – ೬

ಏಕೀಕರಣ – ಚಳುವಳಿ – ಪರಿಷತ್ತು

ಸಮ್ಮೇಳನಗಳು ಮತ್ತು ಏಕೀಕರಣ

ಕನ್ನಡ ಸಾಹಿತ್ಯ ಪರಿಷತ್ತು ೫ ಮೇ ೧೯೧೫ರಲ್ಲಿ ಸ್ಥಾಪನೆ ಆದಾಗ ಅದರ ಧ್ಯೇಯಗಳಲ್ಲಿ ಕರ್ನಾಟಕ ದೇಶದ ಏಕೀಕರಣ ಮತ್ತು ಕನ್ನಡ ಭಾಷಾ ಮಾಧ್ಯಮದ ಬಳಕೆ, ಅಂದರೆ ಭಾಷಾ ಏಕೀಕರಣದ ಅಂಶಗಳು, ಅಂತರ್ಗತವಾಗಿದ್ದವು.

ಮೊದಲನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳಲ್ಲಿನ ದೇಶ–ಭಾಷೆಗಳ ಏಕೀಕರಣಕ್ಕೆ ಸಂಬಂಧಪಟ್ಟ ಬೀಜಪ್ರಾಯದ ನಿರ್ಣಯಗಳು ಹೀಗಿದ್ದವು:

"ಕನ್ನಡ ನಾಡುಗಳಲ್ಲಿರುವ ಸರ್ಕಾರದ ಪಾಠಶಾಲೆಗಳ ಪಾಠದ ಪುಸ್ತಕಗಳಲ್ಲಿನ ಗ್ರಾಂಥಿಕ ಭಾಷೆಯಲ್ಲಿ ಏಕರೂಪತೆ ಇರುವಂತೆ ಉಪಸಂಘಕ್ಕೆ (ಉಪಸಮಿತಿಗೆ) ತಂತಮ್ಮ ಭಾಗದ ಪ್ರತಿನಿಧಿಗಳಾಗಿರುವಂತೆ ವಿದ್ವಾಂಸರುಗಳನ್ನು ನೇಮಿಸುವುದಕ್ಕೆ ಬೇರೆಬೇರೆ ಸರ್ಕಾರಗಳು ಸಮ್ಮತಿಸಬೇಕು ಎಂದು ಅವರುಗಳನ್ನು ಪ್ರಾರ್ಥಿಸಬೇಕು."

ಕರ್ನಾಟಕ ರಾಜಕೀಯವಾಗಿ ೨೨ ಭಾಗಗಳಾಗಿ ಇದ್ದ ಕಾಲದಲ್ಲಿ ಇಡೀ ಕರ್ನಾಟಕವನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಷತ್ತು ಕಾರ್ಯಕಾರಿ ಸಮಿತಿಯನ್ನು ಆರಿಸಿತು. ಮೈಸೂರು ಸಂಸ್ಥಾನ, ಬೊಂಬಾಯಿ ಆಧಿಪತ್ಯ, ಮದರಾಸು ಆಧಿಪತ್ಯ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು, ಹೈದ್ರಾಬಾದ್ ಕರ್ನಾಟಕ, ಕೊಡಗು ಪ್ರಾಂತಗಳಿಂದ ಸದಸ್ಯರನ್ನು ಒಳಗೊಂಡ ಕಾರ್ಯಸಮಿತಿ ರಚಿತವಾಯಿತು.

ಇಂದೂ ಸಹ ರಾಜ್ಯದ ೩೦ ಜಿಲ್ಲೆಗಳ ಪ್ರತಿನಿಧಿಗಳನ್ನು ಇತರ ಪ್ರತಿನಿಧಿಗಳನ್ನು ಪರಿಷತ್ತಿನ ಕಾರ್ಯಕಾರಿಸಮಿತಿ ಒಳಗೊಂಡಿದೆ. ಏಕೀಕರಣದ ಕಲ್ಪನೆಯಾದ ಅಖಂಡ ಕರ್ನಾಟಕವನ್ನು ಪ್ರತಿನಿಧಿಸುವ ರೀತಿಯಲ್ಲೇ ಪರಿಷತ್ತು ರೂಪುಗೊಂಡಿದೆ. ಹಾಗಾಗಿ ಕರ್ನಾಟಕದ ಏಕೈಕ ಪ್ರಾತಿನಿಧಿಕ ಸಂಸ್ಥೆ ಪರಿಷತ್ತಾಗಿದೆ.

ಹೀಗೆ ಭಾಷೆ–ದೇಶಗಳ ಏಕೀಕರಣ ದೃಷ್ಟಿಯುಳ್ಳ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ತು ನಿಬಂಧನೆಯಲ್ಲಿ ಭಾಷೆ. ಸಾಹಿತ್ಯ ಸಂಸ್ಕೃತಿಗಳಿಗೆ ಹೆಚ್ಚು ಒತ್ತುಕೊಟ್ಟಿದ್ದರಿಂದ ವಿದ್ವಾಂಸರ ಮಂಡಳಿಯೇ ಪರಿಷತ್ತಿನ ಮುಂದಾಳತ್ವ ವಹಿಸಿದ್ದರಿಂದ "ಕನ್ನಡ ಸಾಹಿತ್ಯ ಪರಿಷತ್ತು ರಾಜಕೀಯ ಏಕೀಕರಣಕ್ಕಿಂತ ಸಾಮಾಜಿಕ ಮತ್ತು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಏಕೀಕರಣದ ಹಿನ್ನೆಲೆಯಲ್ಲಿ ಭಾಷಾಭಿವೃದ್ಧಿ ಗ್ರಂಥಾಭಿವೃದ್ಧಿ, ಲೇಖಕರ ಹಿತರಕ್ಷಣೆಗೆ ವಿಶೇಷ ಒತ್ತು ನೀಡಿತು."

ಪರಿಷತ್ತು ಸಾಹಿತ್ಯದ ಏಕೀಕರಣಕ್ಕೆ ಪ್ರಾರಂಭದಲ್ಲಿ ಒತ್ತುಕೊಡುತ್ತಿದ್ದಾಗ ಧಾರವಾಡದ ವಿದ್ಯಾವರ್ಧಕ ಸಂಘ ಸ್ಪಷ್ಟವಾಗಿ ೧೯೧೭ರಲ್ಲೇ ರಾಜಕೀಯ ಏಕೀಕರಣಕ್ಕೆ ಗೊತ್ತುವಳಿಯನ್ನು ಸ್ವೀಕರಿಸಿತು.

"ಬ್ರಿಟಿಷ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲ್ಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ

ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರ್ಕಾರಕ್ಕೆ ಬಿನ್ನಹ ಮಾಡಬೇಕು ಉದಾಹರಣಾರ್ಥ ಸೊಲ್ಲಾಪುರ ಜಿಲ್ಲೆಯ ಕೆಲವು ಭಾಗಗಳ ಜಿಲ್ಲೆಗಳು ಕೂಡ ಕನ್ನಡವಿದ್ದು, ಕಡಪಾ, ಕರ್ನೂಲ, ಅನಂತರಪುರ ಮುಂತಾದ ಜಿಲ್ಲೆಗಳ ಎಷ್ಟೋ ಹಳ್ಳಿಗಳನ್ನು ಒಟ್ಟುಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂದು ರಾಜಕೀಯ ವಿಭಾಗ ಮಾಡಿದರೆ ಕನ್ನಡಿಗರ ಐಕ್ಯಕ್ಕೂ ಹಿತಕ್ಕೂ ಬೆಳವಣಿಗೆಗೂ ಅನುಕೂಲವಾಗುವುದು." (ಪುಟ ೫೩ ಕರ್ನಾಟಕ ಏಕೀಕರಣ ಚಳವಳಿ).

ನಿಧಾನವಾಗಿಯಾದರೂ ಮೈಸೂರು ಪ್ರಾಂತದಲ್ಲೂ ಏಕೀಕರಣಕ್ಕೆ ಬೆಂಬಲಿಸುವ ಪ್ರವೃತ್ತಿ ಬೆಳೆಯಿತು. ೧೯೨೦ರಲ್ಲಿ ಕನ್ನಡ-ಕರ್ನಾಟಕಕ್ಕೆ ಸಂಬಂಧಿಸಿದಂತೆ ವಿಷಯಗಳನ್ನು ಚರ್ಚಿಸಲು ಅಖಿಲ ಕರ್ನಾಟಕ ರಾಷ್ಟ್ರೀಯ ಪರಿಷತ್ತು ಸಮ್ಮೇಳನವೊಂದನ್ನು ಏರ್ಪಡಿಸಿತ್ತು. ಸುಮಾರು ೨೦೦ ಜನ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಬಂದಿದ್ದರು. ಮೈಸೂರಿನ ಕಡೆಯಿಂದ ಧಾರವಾಡದಲ್ಲಿ ನಡೆದ ಈ ಸಮ್ಮೇಳನಕ್ಕೆ ದಿವಾನರಾದ ಎ. ಪಿ. ಮಾಧವರಾಯರೇ ಅಧ್ಯಕ್ಷರಾಗಿದ್ದರು. ಏಕೀಕರಣಕ್ಕೆ ಮುಂಬಯಿ ಮತ್ತು ಇತರ ಕರ್ನಾಟಕದವರು ಹಾಗೂ ಮೈಸೂರಿನವರು ಮೊದಲು ಒಂದಾಗಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರು ಸಮ್ಮೇಳನದಲ್ಲಿ ಹೇಳಿದ ಮಾತಿದು :

"ಬೇರೆಬೇರೆ ಭಾಗಗಳಲ್ಲಿ ಎಷ್ಟೇ ಚಿಕ್ಕವಾದರೂ ಸಭೆಗಳನ್ನು ಕರೆದು ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿರಿ. ನಾನು ಬಂದು ಅಖಂಡ ಕರ್ನಾಟಕ ನಿರ್ಮಾಣದ ಗೊತ್ತುವಳಿಯನ್ನು ಅವರಿಂದ ಮಾಡಿಸಿಕೊಡುತ್ತೇನೆ."

ಕನ್ನಡ ಸಾಹಿತ್ಯ ಪರಿಷತ್ತು ನಡೆಸಿರುವ ೮೧ ಸಮ್ಮೇಳನಗಳ ಪೈಕಿ ಹತ್ತಾರು ಸಮ್ಮೇಳನಗಳಲ್ಲಿ ಕೈಗೊಂಡ ನಿರ್ಣಯಗಳಲ್ಲಿ ಏಕೀಕರಣದ ಅಗತ್ಯದ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

ಸಾಹಿತ್ಯ ಪರಿಷತ್ತು ಸಾವಿರಾರು ಜನ ಸೇರುವ ಸಭೆಯಲ್ಲಿ ಬಹಿರಂಗಾಧಿವೇಶನದಲ್ಲಿ ಕೈಗೊಂಡ ನಿರ್ಣಯಗಳನ್ನು ಜನಾಭಿಪ್ರಾಯಗಳೆಂದು ತೀರ್ಮಾನಿಸಲು ಅಡ್ಡಿಯಿಲ್ಲ.

೧೯೪೦ರಲ್ಲಿ ಧಾರವಾಡದ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳೆಯರಿಂದ ಮಂಡಿಸಲ್ಪಟ್ಟ ನಿರ್ಣಯವಾಗಿದ್ದು ಪರಿಷತ್ತು ಏಕೀಕರಣದ ಬಗ್ಗೆ ಮಹಿಳೆಯರು ಕೈಗೊಂಡ ಮೊತ್ತ ಮೊದಲ ನಿರ್ಣಯವಾಗಿದೆ. ಆ ಸಮ್ಮೇಳನದ ಮಹಿಳಾ ಗೋಷ್ಠಿಯಲ್ಲಿ ಕೈಗೊಂಡ ನಿರ್ಣಯ ಹೀಗಿದೆ: "ಹರಿದು ಹಂಚಿ ಹೋದ ಕರ್ನಾಟಕದ ಭಾಗಗಳನ್ನೆಲ್ಲಾ ಒಂದುಗೂಡಿಸಬೇಕೆಂದು ಸರ್ಕಾರಕ್ಕೆ ಒತ್ತಾಯಪಡಿಸಿಬೇಕೆಂದೂ, ಕನ್ನಡ ನಾಡು ಒಂದಾದ ಹೊರತು ಕನ್ನಡಿತಿಯರಿಗೆ ಸಮಾಧಾನವಾಗದೆಂದು ಈ ಗೋಷ್ಠಿ ನಿರ್ಣಯಿಸುತ್ತದೆ."

ಕರ್ನಾಟಕ ಏಕೀಕರಣಕ್ಕೆ ಸಾಹಿತ್ಯ ಪರಿಷತ್ತಿನ ಜತೆಗೆ ಹತ್ತಾರು ಸಂಘಸಂಸ್ಥೆಗಳು ಶ್ರಮಿಸಿವೆ, ಹೋರಾಡಿವೆ. ಅವುಗಳ ಪೈಕಿ ೧೯೩೮ರಲ್ಲಿ ಹುಟ್ಟಿಕೊಂಡ ಏಕೀಕರಣ ಸಂಘವೂ ಒಂದು. ಮೈಸೂರು ಪ್ರಾಂತದಲ್ಲಿ ಹುಟ್ಟಿಕೊಂಡ ಏಕೀಕರಣ ಸಂಘ ಇದು. ಈ ಸಂಘಕ್ಕೆ ಬೆನಗಲ್ ರಾಮರಾಯರು ಅಧ್ಯಕ್ಷರಾಗಿಯೂ, ಬಿ. ಶಿವಮೂರ್ತಿ ಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಇದ್ದರು. ಈ ಸಂಘವು ಗಡಿನಾಡಿನ ಪ್ರದೇಶಗಳಲ್ಲಿ ಹೆಚ್ಚಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರಿಂದ ಹೊಸೂರು, ಮಡಕಶಿರ, ಕೊಳ್ಳೇಗಾಲ, ಕೆಲಮಂಗಲ ನೀಲಗಿರಿ, ಅದವಾನಿ, ತಾಳವಾಡಿ ಫಿರ್ಕಾ ಮೊದಲಾದ ಗಡಿಭಾಗದ ಜನರು ಏಕೀಕರಣಕ್ಕೆ ಸ್ಪಂದಿಸುವಂತಾಯಿತು.

ಸಾಹಿತ್ಯ ಸಮ್ಮೇಳನಗಳಲ್ಲಿ ಏಕೀಕರಣವಾದ ಕರ್ನಾಟಕ ಬರಲು ನಿರ್ಣಯಗಳು ಆದವು. ಸಾಹಿತ್ಯ ಪರಿಷತ್ತು ನೇರವಾಗಿ ಅಲ್ಲದಿದ್ದೂ ಸಮ್ಮೇಳನದ ನಿರ್ಣಯಗಳ ಮೂಲಕ ಏಕೀಕರಣಕ್ಕೆ ಒತ್ತಾಯಿಸಿವೆ.

ಸಮ್ಮೇಳನಗಳಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ಆಗಿರುವ ನಿರ್ಣಯಗಳಲ್ಲಿ ಒಂದನ್ನು ಇಲ್ಲಿ ಉದಾಹರಿಸಿದೆ.

೧೯೫೦ರ ಸೊಲ್ಲಾಪುರ ಸಾಹಿತ್ಯ ಸಮ್ಮೇಳನದಲ್ಲಿ ಏಕೀಕರಣದ ಬಗ್ಗೆ ಆದ ನಿರ್ಣಯ ಹೀಗಿದೆ.

"ಭಾಷಾವಾರು ಪ್ರಾಂತರಚನೆಯ ತತ್ವಕ್ಕೆ ಅನುಗುಣವಾಗಿ ಮೈಸೂರನ್ನು ಒಳಗೊಂಡ ಕರ್ಣಾಟಕ ಪ್ರಾಂತರಚನೆಯನ್ನು ಆದಷ್ಟು ಬೇಗನೆ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಈ ಸಮ್ಮೇಳನ ಪ್ರಾರ್ಥಿಸುತ್ತದೆ."

ಹೀಗೆ ಸ್ಪಷ್ಟವಾಗಿ, ನೇರವಾಗಿ ಹಾಗೂ ಅಧಿಕೃತವಾಗಿ ಪರಿಷತ್ತು ನಿರ್ಣಯ ತೆಗೆದುಕೊಂಡಿದ್ದು ಇದೇ ಮೊದಲು ಎಂಬ ಕಾರಣದಿಂದ ಈ ನಿರ್ಣಯಕ್ಕೆ ಮಹತ್ವವಿದೆ.

ಪರಿಷತ್ತಿನ ಸಂಪರ್ಕವಿದ್ದ ಸಾಹಿತಿಗಳಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಏಕೀಕರಣಕ್ಕೆ ಶ್ರಮಿಸುತ್ತಿದ್ದವರು ಇದ್ದರು. ಬಿ. ಎಂ. ಶ್ರೀ., ಬೆನಗಲ್ ರಾಮರಾವ್, ಮಾಸ್ತಿ, ಶಿವಮೂರ್ತಿ ಶಾಸ್ತ್ರಿ, ದಿವಾಕರ್, ಹಳಕಟ್ಟಿ, ಬಸವನಾಳ, ಪಂಜೆ, ಮುಳಿಯ, ಗೋವಿಂದ ಪೈ ಇತ್ಯಾದಿ ಜನರು ಏಕೀಕರಣಕ್ಕೆ ಶ್ರಮಿಸುತ್ತಿದ್ದರು.

ಪರಿಷತ್ತಿನ ಅಧ್ಯಕ್ಷರು ಮತ್ತು ಏಕೀಕರಣ

ಪ್ರಾರಂಭದಲ್ಲಿ ಪರಿಷತ್ತು ಪಂಡಿತರ ಸ್ವತ್ತಾಗಿದ್ದು ಹಳಗನ್ನಡ ಕೃತಿಗಳ ಸಂಪಾದನೆಯಲ್ಲಿ ಮುಖ್ಯವಾಗಿ ನಿರತವಾಗಿದ್ದು ಕನ್ನಡದ ಪ್ರಾಚೀನ ಕೃತಿಗಳನ್ನು ಪ್ರಕಟಿಸುವುದರಲ್ಲಿ ತಲ್ಲೀನರಾಗಿ ಜನಸಾಮಾನ್ಯರನ್ನು ಅಷ್ಟಾಗಿ ಸ್ಪಂದಿಸುವಂತೆ ಮಾಡಲಿಲ್ಲ. ಆದರೆ (೧೯೩೪–೩೮)ರಲ್ಲಿ ಡಿವಿಜಿ ಅವರು ಪರಿಷತ್ತಿನ ಅಧ್ಯಕ್ಷರಾದಾಗ ಪರಿಷತ್ತು ಮೊದಲಬಾರಿಗೆ ಸಾರ್ವಜನಿಕ ಸ್ವರೂಪ ಪಡೆಯಿತು. ಗಮಕ, ವಸಂತ ಸಾಹಿತ್ಯೋತ್ಸವ, ಗ್ರಂಥ ಪ್ರದರ್ಶನ, ವಿಚಾರೋಪನ್ಯಾಸ, ಸಾಹಿತಿಗಳ ಗ್ರಾಮಸಂಚಾರದಂತಹ ಕ್ರಮಗಳಿಂದ ಜನರಲ್ಲಿ ಸಾಂಸ್ಕೃತಿಕ ಜಾಗೃತಿ ಉಂಟಾಗಿ ಪರಿಷತ್ತು ಕನ್ನಡಿಗರ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರಪಂಚದ ಕೇಂದ್ರವೆನಿಸಿತು.

ಆದ್ದರಿಂದಲೇ ಅನಕೃ ಅವರು ಡಿವಿಜಿ ಬಗ್ಗೆ (ವಿರಕ್ತ ರಾಷ್ಟ್ರಕವಿ ಪು ೧೮೩) ಹೀಗೆ ಹೇಳಿದ್ದಾರೆ :

"ಡಿವಿಜಿ ಅವರ ಕಾಲದಲ್ಲಿ ಪರಿಷತ್ತಿಗೆ ಕರ್ನಾಟಕದ ವ್ಯಾಪ್ತಿ ಬಂದುದಲ್ಲದೆ ಪರಿಷತ್ತಿನ ಕಾರ್ಯಕ್ರಮಗಳಿಗೆ ಅಚ್ಚುಕಟ್ಟುತನ ಬಂದಿತು. ಡಿವಿಜಿ ಅವರ ದಕ್ಷತೆ, ವಿವೇಚನೆ – ಕಾರ್ಯನಿರ್ವಹಣಾ ಸಾಮರ್ಥ್ಯ ಅಸಾಧಾರಣವಾದುದು. ಪರಿಷತ್ತು ಕೇವಲ ಸಾಹಿತ್ಯಕ್ಕೇ ಮೀಸಲಾಗದೆ ಸಾಂಸ್ಕೃತಿಕ ಕೇಂದ್ರವಾಯಿತು." ಪರಿಣಾಮವಾಗಿ ಪರಿಷತ್ತಿನ ಚಟುವಟಿಕೆಗಳಲ್ಲಿ ಏಕೀಕರಣದ ದೃಷ್ಟಿ ಕಾಣಿಸಿಕೊಂಡಿತು.

ಅವರ ಅನಂತರ ಅಧ್ಯಕ್ಷರಾದ ಬಿ. ಎಂ. ಶ್ರೀ. (೧೯೩೮–೪೩) ಅವರ ಕಾಲದಲ್ಲಿ ಕರ್ಣಾಟಕ ಎಂಬ ಹೆಸರು ಕನ್ನಡವಾಗಿ ಪರಿಷತ್ತಿನ ಹೆಸರಿನಲ್ಲಿ ಬದಲಾಯಿತು. ಪರಿಷತ್ತು ಸ್ಥಾಪನೆ ಆಗುವಾಗ ಸಂಸ್ಥೆಯ ಹೆಸರೇನು ಇಡಬೇಕು ಎಂಬುದು ಚರ್ಚೆ ಆದಾಗ ಕರ್ಣಾಟಕ ಸಂಸದ, ಕರ್ನಾಟಕ ಮಹಾಸಭಾ, ಕರ್ಣಾಟಕೀ ಪರಿಷದ, ಕನ್ನಡಕೂಟ, ಕನ್ನಡಿಗರ ಕೋಟೆ ಮೊದಲಾದ ಹೆಸರುಗಳನ್ನು ಬಿಟ್ಟು, ಕರ್ಣಾಟಕ ಸಾಹಿತ್ಯ ಪರಿಷತ್ತು ಎಂಬ ಹೆಸರನ್ನು ಉಳಿಸಿಕೊಂಡಿತ್ತು. (ಜ್ಞಾಪಕ ಚಿತ್ರ ಶಾಲೆ ಪುಟ ೬೧).

ಕರ್ಣಾಟಕ ಪದದಲ್ಲಿ 'ಣ' ಇರಬೇಕೇ 'ನ' ಇರಬೇಕೇ ಎಂಬ ಚರ್ಚೆಯ ಪರಿಣಾಮವಾಗಿ ಬಳ್ಳಾರಿ ಸರ್ವಸದಸ್ಯರ ಸಭೆಯಲ್ಲಿ ಕರ್ಣಾಟಕ / ಕರ್ನಾಟ ಯಾವ ಪದವೂ ಬೇಡ ಕನ್ನಡ ಎಂಬುದಿರಲಿ ಎಂದು ತೀರ್ಮಾನಿಸಿ 'ಕನ್ನಡ ಸಾಹಿತ್ಯ ಪರಿಷತ್ತು' ಎಂದು ನಿರ್ಧಾರವಾದಾಗ ಆ ಬಗ್ಗೆ ಆಲೂರಿಗೆ ಅಸಮಾಧಾನ ಉಂಟಾಯಿತು. ಆದರೆ ೧೯೩೮ರಲ್ಲಿ ಶ್ರೀ ಅವರು ಪ್ರಾರಂಭಿಸಿದ ಕನ್ನಡ ನುಡಿ ಪತ್ರಿಕೆಯಲ್ಲಿ ಏಕೀಕರಣಕ್ಕೆ ಸ್ಫೂರ್ತಿ ನೀಡುವ ಕವನಗಳನ್ನು ಬಿ. ಎಂ. ಶ್ರೀ., ಡಿವಿಜಿ, ಎಂ. ವಿ.ಸೀ, ವಿಸೀ. ಕೆವಿಎಸ್‌ನ, ಬೇಂದ್ರೆ ಮೊದಲಾದವರು ಬರೆದು ಜನರಲ್ಲಿ ಜಾಗೃತಿ ಉಂಟುಮಾಡಿದರು. ನಾಡು, ನುಡಿ, ಕಲೆ, ಸಾಹಿತ್ಯದ ಬಗ್ಗೆ ಉತ್ಸಾಹ ಸ್ಫೂರ್ತಿಯನ್ನುಂಟುಮಾಡುವ ಕನ್ನಡ ಬಾವುಟ, ಕನ್ನಡ ನಾಡಿನ ಚರಿತ್ರೆ (೩ ಭಾಗಗಳಲ್ಲಿ) ಪ್ರಕಟಣೆಗಳು ಹಾಗೂ ಆಲೂರರ ಕರ್ನಾಟಕ ಗತವೈಭವ ಗ್ರಂಥಗಳು ಕನ್ನಡಿಗರ ಪುನರುಜ್ಜೀವನಕ್ಕೆ ಸ್ಫೂರ್ತಿ ನೀಡಿದವು. ಕನ್ನಡಿಗರನ್ನು ಭಾವನಾತ್ಮಕವಾಗಿ ಏಕೀಕರಣದತ್ತ ಒಲಿಯುವಂತೆ ಮಾಡಿದವು.

"ಶ್ರೀ ಅವರು ಉಪಾಧ್ಯಕ್ಷರಾಗಿ ಪರಿಷತ್ತಿನಲ್ಲಿ ನಡೆಸಿದ ಚಟುವಟಿಕೆಗಳು ವಿಭಿನ್ನ ಆಡಳಿತ ಘಟಕಗಳಲ್ಲಿದ್ದ ಕನ್ನಡಿಗರನ್ನು ಮಾನಸಿಕವಾಗಿ ಒಂದಾಗುವಂತೆ ಮಾಡಿದವು. ಅಲ್ಲದೆ ಕರ್ನಾಟಕದ ವಿವಿಧ ವಿಭಾಗಗಳನ್ನು ಪ್ರತಿನಿಧಿಸುವ ಸುಮಾರು ೨೦೦ರಿಂದ ೨೫೦ ಸಂಘ ಸಂಸ್ಥೆಗಳು ಪರಿಷತ್ತಿನ ಸಂಪರ್ಕ – ಸಂಬಂಧ ಹೊಂದಿದವು. (ಮಿಥಿಕ್ ಸೊಸೈಟಿ ತ್ರೈಮಾಸಿಕ ಪುಟ ಸಂ ೩ ಪು–೩೦೪).

ಶ್ರೀ ಅವರು ಮಾಡಿದ ಸಾಹಿತ್ಯ–ಸಾಂಸ್ಕೃತಿಕ ಚಟುವಟಿಕೆಗಳು "ಕರ್ನಾಟಕ ರಾಜಕೀಯ ಏಕೀಕರಣಕ್ಕೆ ಪರಿಷತ್ತಿನ ಸಾಂಸ್ಕೃತಿಕ ಕೆಲಸ ತಳಹದಿಯಾಗಬೇಕು" ಎಂಬ ಧ್ಯೇಯಕ್ಕೆ ಅನುಗುಣವಾಗಿದ್ದವು.

ಬಿ. ಎಂ. ಶ್ರೀ. ನಂತರ ಪರಿಷತ್ತಿನ ಅಧಿಕಾರದ ಗದ್ದುಗೆ ಏರಿದ ಮಾಸ್ತಿ ಅವರ ಕಾಲ (೧೯೪೩–೪೭) ಪ್ರಗತಿಶೀಲ ಸಾಹಿತಿಗಳ ಕಾಲವಾಗಿತ್ತು. '೧೯ನೇ ಕಚೇರಿ' ಮಾಸ್ತಿಮಠ, ಜರತಾರಿ ರುಮಾಲುಗಳ ಗುಂಪು ಎಂಬೆಲ್ಲಾ ಟೀಕೆಗೆ ಪರಿಷತ್ತು ಒಳಗಾಯಿತು. ಆದರೆ ಮಾಸ್ತಿ ಅವುಗಳನ್ನಾವುದನ್ನೂ ಲೆಕ್ಕಿಸದೆ ಕನ್ನಡ ನಾಡಿನ ತುಂಬ ಸುತ್ತಾಡಿ ಜನಜಾಗೃತಿ ಉಂಟು ಮಾಡಿದರು. ಗಡಿನಾಡ ಕನ್ನಡಿಗರೊಂದಿಗೆ ಪರಿಷತ್ತು ಸ್ಪಂದಿಸುವಂತೆ ಮಾಡಿದರು. ಮಾಸ್ತಿ ಅವರು ೨ನೇ ಬಾರಿ (೧೯೫೩–೫೪) ರಲ್ಲಿ ಒಂದು ವರ್ಷ ಎಂ, ಆರ್. ಶ್ರೀ. ಅವರು ಅಕಾಲಿಕವಾಗಿ ತೀರಿಕೊಂಡಿದ್ದರಿಂದ ಅವರ ಅವಧಿ ಮುಗಿಯುವವರೆಗೆ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆಗ. ಕರ್ನಾಟಕ ಏಕೀಕರಣಕ್ಕೆ ಪರ–ವಿರೋಧ ವಾದಗಳು ತಲೆಯೆತ್ತಿದ್ದವು. ಅವುಗಳಲ್ಲಿ ಎರಡು ವಾದಗಳು ಪ್ರಮುಖವಾಗಿದ್ದವು. ಒಂದು ಡಿವಿಜಿ ಅವರು ಎರಡು ಕರ್ನಾಟಕಗಳ ಅಸ್ತಿತ್ವವನ್ನು (ಮೈಸೂರು–ಮೈಸೂರೇತರ ಕರ್ನಾಟಕ) ಬೆಂಬಲಿಸುತ್ತಿರುವವರು ಎಂಬ ಹೇಳಿಕೆ ತೀವ್ರ ಟೀಕೆಗೆ ಒಳಗಾಗಿತ್ತು. ಅದಕ್ಕೆ ಮಾಸ್ತಿ ವಿವರಣೆ ನೀಡುತ್ತಾ "ಹೊಸ ವ್ಯವಸ್ಥೆಯಿಂದ ಅಪಾಯಗಳು ಒದಗಬಹುದು. ಸದ್ಯಕ್ಕೆ ಬೇರೆಬೇರೆಯಾಗಿದ್ದು ನಂತರ ಎರಡೂ ಸೇರುವುದು ಉತ್ತಮ" ಎಂಬುದು ಡಿವಿಜಿ ಅವರ ಹೇಳಿಕೆಯ ಅರ್ಥ ಎಂದು ಸಮಾಜಾಯಿಷಿ ಹೇಳಿದರು. ಹೀಗೆ ಭಿನ್ನಾಭಿಪ್ರಾಯಗಳಿಗೆ ಸಾಮರಸ್ಯದ ಬೆಸುಗೆ ಹಾಕಿದರು. ಹಾಗೆಯೇ ಇನ್ನೊಂದು ವಾದ ಎಂದರೆ ಏಕೀಕರಣಕ್ಕೆ ವೀರಶೈವ–ಒಕ್ಕಲಿಗ ತಕರಾರು ಮತ್ತು ಪರಿಷತ್ತು ಬ್ರಾಹ್ಮಣರ ಹಿಡಿತದಲ್ಲಿದೆ ಎಂಬ ವಾದಗಳನ್ನು ಕುರಿತು ಆಗ ಮಾಸ್ತಿ ಸೊಗಸಾಗಿ ಉತ್ತರಿಸಿದ್ದಾರೆ "ದೇವರ ಸನ್ನಿಧಿಗೆ ಬರುವಾಗ ಕೆರವನ್ನು ಹೊರಗೆ ಬಿಟ್ಟು ಬರುವಂತೆ ನಮ್ಮ ಜನ ಪರಿಷತ್ತಿನ ಕೆಲಸ ಮಾಡುವಾಗ ಈ ಭೇದಭಾವಗಳನ್ನು ಕಳಚಿಟ್ಟು ನಡೆದುಕೊಳ್ಳಬೇಕು" ಎಂದಿದ್ದಾರೆ. (ಪ್ರಸಂಗ : ಮಾಸ್ತಿ ಸಂಪುಟ ೪ ಪುಟ ೮೬).

ಏಕೀಕರಣದ ವಿಚಾರ ಮತ್ತು ಪರಿಷತ್ತಿನಂಥ ಸಂಸ್ಥೆ ಬಗ್ಗೆ ಗಂಭೀರವಾಗಿ, ನ್ಯಾಯವಾಗಿ ವರ್ತಿಸಬೇಕು. ಕ್ಷುಲ್ಲಕ ದೃಷ್ಟಿಯಿಂದ ವರ್ತಿಸಬಾರದು ಎಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ. ಏಕೀಕರಣ ವಿಚಾರ ಮಹತ್ವದ್ದು ಪವಿತ್ರವಾದದ್ದು ಎಂಬ ಮಾಸ್ತಿಯವರ ದೃಷ್ಟಿಯನ್ನು ಮೆಚ್ಚಬೇಕು. ಪರಿಷತ್ತು ಹೇಗೆ ವರ್ತಿಸಬೇಕು ಇಂಥ ವಾದಗಳ ಸಂಬಂಧಗಳಲ್ಲಿ ಎಂಬ ಸೂಕ್ಷ್ಮತೆ ಇಲ್ಲಿ ಅಡಗಿದೆ.

ಪರಿಷತ್ತಿನ ಅಧ್ಯಕ್ಷರಾಗಿದ್ದ ಎ. ಎನ್. ಮೂರ್ತಿರಾಯರು (೧೯೫೪–೫೬) ಕರ್ನಾಟಕ ಏಕೀಕರಣವಾದರೆ ಮೈಸೂರಿಗೆ ನಷ್ಟ ಉಳಿದ ಭಾಗದ ಕನ್ನಡಿಗರಿಗೆ ನಷ್ಟ ಎಂಬ ಭಾವನೆಯನ್ನು ಅಲ್ಲಗಳೆದು ಎರಡೂ ಭಾಗದವರಿಗೆ ಒಳಿತೇ ಉಂಟಾಗುತ್ತದೆ. ಅದು ಏಕೀಕರಣದಿಂದಲೇ ಸಾಧ್ಯ ಎಂದು ಪ್ರತಿಪಾದಿಸಿದರು. ಎಂ. ಆರ್. ಶ್ರೀ. ಅವರು ಈ ಮುಂಚೆ ಮೈಸೂರು ಮತ್ತು ಉತ್ತರ ಕರ್ನಾಟಕದ ಬಗೆಗಿನ ಭೇದಭಾವಗಳನ್ನು ಅಳಿಸಿಹಾಕಲು ಪ್ರಯತ್ನಿಸಿದ್ದರು. ಪರಿಷತ್ತು ಬೆಂಗಳೂರಿನಲ್ಲಿದ್ದ ಮಾತ್ರಕ್ಕೆ ಮಿಕ್ಕೆಲ್ಲಾ ಪ್ರಾಂತದ ಕನ್ನಡಿಗರನ್ನು ಕಡೆಗಾಣಿಸಲಿಲ್ಲ ಎಂದು ಮನಗಾಣಿಸಿದ್ದರು. ಕನ್ನಡ ಕಾರ್ಯಗಳು ಕನ್ನಡಿಗರಿಗೆಲ್ಲಾ ಸಲ್ಲುತ್ತವೆ ಎಂದು ಪ್ರತಿಪಾದಿಸಿದ್ದರು.

ಬಿ. ಶಿವಮೂರ್ತಿ ಶಾಸ್ತ್ರಿಗಳಂತೂ ಮೊದಲಿನಿಂದಲೂ ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರು. ಅವರು ಪರಿಷತ್ತಿಗೆ ಅಧ್ಯಕ್ಷರಾದಾಗ (೧೯೫೬–೬೪) ಕರ್ನಾಟಕ ರಾಜ್ಯೋದಯವಾಗಿತ್ತು. ಪರಿಷತ್ತಿನ ಸಮ್ಮೇಳನಾಧ್ಯಕ್ಷರು ಏಕೀಕರಣವನ್ನು ಭಾಷಣಗಳಲ್ಲಿ ನಿರ್ಣಯಗಳಲ್ಲಿ ಬೆಂಬಲಿಸಿದ್ದರು. ಅದನ್ನು ನೆನೆದು ಅವರೆಲ್ಲರಿಗೂ ಸನ್ಮಾನ ಸಮಾರಂಭವನ್ನು ಶಾಸ್ತ್ರಿಗಳು

ವ್ಯವಸ್ಥೆ ಮಾಡಿದ್ದರು. ಹೀಗೆ ಪರಿಷತ್ತಿನ ಅಧ್ಯಕ್ಷರುಗಳು ಪ್ರಾರಂಭದಿಂದ ರಾಜ್ಯೋದಯದವರೆಗೆ ಕರ್ನಾಟಕ ಏಕೀಕರಣಕ್ಕೆ ನೇರವಾಗಿ ಹೋರಾಡದಿದ್ದರೂ ಸಾಕಷ್ಟು ಬಲವಾಗಿ ಬೆಂಬಲಿಸಿದ್ದರು.

ಸಮ್ಮೇಳನಾಧ್ಯಕ್ಷರು ಮತ್ತು ಏಕೀಕರಣ

ಏಕೀಕರಣ ಚಳವಳಿಯನ್ನು ಪರಿಷತ್ತಿನ ಅಧ್ಯಕ್ಷರು ಸಮರ್ಥಿಸಿದಂತೆಯೇ ಸಮ್ಮೇಳನಾಧ್ಯಕ್ಷರುಗಳೂ ಸಮರ್ಥಿಸಿದ್ದಾರೆ. ಅದರ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆ.

ಪರಿಷತ್ತು ಅನೇಕ ಸಮ್ಮೇಳನಗಳಲ್ಲಿ ಭಾಷಣಗಳಲ್ಲಿ ನಿರ್ಣಯಗಳಲ್ಲಿ ಏಕೀಕರಣವನ್ನು ಸಮರ್ಥಿಸಿದ್ದಾರೆ.

ಪರಿಷತ್ತಿನ ಮುಖ್ಯೋದ್ದೇಶವನ್ನು ಸಾರಿದಂಥ ಎಚ್. ವಿ. ನಂಜುಂಡಯ್ಯ (ಮೂರು ಸಮ್ಮೇಳನಗಳ ಅಧ್ಯಕ್ಷರು) ಹೇಳಿದ ಮಾತಿದು- "ಕನ್ನಡ ಭಾಷೆಯನ್ನೂ ಸಾಹಿತ್ಯವನ್ನೂ ಪುಷ್ಟಿಗೊಳಿಸಿ ಅಭಿವೃದ್ಧಿಗೆ ತಂದು ಕನ್ನಡ ನಾಡುಗಳ ಜನರೆಲ್ಲರನ್ನೂ ಒಟ್ಟುಗೂಡಿಸಿ ಅವರಲ್ಲಿ ಭಾಷಾ ವಿಷಯದಲ್ಲಿ ಪರಸ್ಪರ ಐಕ್ಯಮತವೂ ಸೌಹಾರ್ದವೂ ದಿನದಿನಕ್ಕೆ ಹೆಚ್ಚುವಂತೆ ಮಾಡುವುದೇ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶವಾಗಿದೆ."

ಕನ್ನಡ ಜನರನ್ನು ಒಂದು ಮಾಡುವುದು ಏಕೀಕರಣದ ಅಂಶವೇ ಆಗಿದೆ. ಆ ಹಿನ್ನೆಲೆಯಲ್ಲಿ ನಂಜುಂಡಯ್ಯನವರು ಈ ಮಾತು ಹೇಳಿದ್ದಾರೆ. (ಮುಗಳಿ ಸಾಧನೆ ಪುಟ ೧೩-೧೪).

ಪರಿಷತ್ತಿನ ಹಲವಾರು ಅಧ್ಯಕ್ಷರು ಸರಕಾರಿ ಅಧಿಕಾರಿಗಳಾಗಿದ್ದ ಕಾರಣ, ಏಕೀಕರಣದ ವಿಷಯ ಸಾಮಾಜಿಕ ವಿಷಯವಾಗಿದ್ದಷ್ಟೇ ರಾಜಕೀಯ ವಿಷಯವೂ ಆಗಿದ್ದುದರಿಂದ ಏಕೀಕರಣವನ್ನು ಪರೋಕ್ಷ ರೀತಿಯಲ್ಲಿ ನಿರ್ಣಯಗಳ ಮೂಲಕ ಅಂಗೀಕರಿಸುತ್ತಿದ್ದರು. ದಾವಣಗೆರೆ ಸಮ್ಮೇಳನದ ಅಧ್ಯಕ್ಷರಾದ ಎಂ. ವೆಂಕಟಕೃಷ್ಣಯ್ಯನವರು ಅಂಗೀಕರಿಸಿದ ನಿರ್ಣಯವನ್ನು ಮಾದರಿಗಾಗಿ ಗಮನಿಸಬಹುದು. "ಅಖಿಲ ಕರ್ನಾಟಕದ ಪ್ರಾಕೃತಿಕ, ರಾಜಕೀಯ, ಔದ್ಯೋಗಿಕ ಐತಿಹಾಸಿಕ ಮುಂತಾದ ವಿಷಯಗಳನ್ನೊಳಗೊಂಡ ಒಂದು ರಾಷ್ಟ್ರೀಯ ಭೂಗೋಳವನ್ನು ಪರಿಷತ್ತಿನವರು ಬರೆಯಿಸಬೇಕು."

ಕಾಂಗ್ರೆಸ್ಸಿನಲ್ಲಿ ಭಾಷಾವಾರು ಪ್ರಾಂತರಚನೆ ಹೋರಾಟ ಪ್ರಾರಂಭವಾದಾಗ ಅದು ಸಮ್ಮೇಳನದ ನಿರ್ಣಯಗಳಲ್ಲೂ ಪ್ರತಿಬಿಂಬಿತವಾಗತೊಡಗಿತು. ಉದಾಹರಣೆಗೆ ೧೯೨೩ರ ಬಿಜಾಪುರದ ಸಾಹಿತ್ಯ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯವನ್ನು ಕುರಿತು ಸಾಂಗ್ಲಿ ಅವರು ಹೇಳಿರುವ ಮಾತುಗಳಿವು:- "ಕೇವಲ ಸಾಹಿತ್ಯಕ ಸಂಸ್ಥೆಯಾಗಿದ್ದ ಪರಿಷತ್ತು ಬ್ರಿಟಿಷ್ ಕರ್ನಾಟಕದ ಭಾಗಗಳನ್ನೊಳಗೊಂಡ ಪ್ರತ್ಯೇಕ ಕರ್ಣಾಟಕ ಪ್ರಾಂತರಚನೆಯ ಬೇಡಿಕೆಯನ್ನು ಬಿಜಾಪುರದ ಅಧಿವೇಶನದಲ್ಲಿ ಸ್ವೀಕರಿಸಿದಾಗ ಸಮಸ್ತ ಕನ್ನಡಿಗರ ಪ್ರಶಂಸೆಗೆ ಪಾತ್ರವಾಯಿತು."

೧೯೨೪ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧ್ಯಕ್ಷಸ್ಥಾನದಿಂದ ಗಾಂಧೀಜಿ ಅವರು ಭಾಷಾವಾರು ಪ್ರಾಂತರಚನೆಯನ್ನು ಬೆಂಬಲಿಸಿದ ಮೇಲೆ ಕರ್ನಾಟಕ ಏಕೀಕರಣಕ್ಕಾಗಿ ಪರಿಷತ್ತಿನಂಥ ಸಂಸ್ಥೆಗಳ ಕಾರ್ಯಗಳು ಚುರುಕುಗೊಂಡವು. ಪರಿಷತ್ತಿನ ಸಮ್ಮೇಳನಾಧ್ಯಕ್ಷರು ಸಮ್ಮೇಳನಗಳಲ್ಲಿ (ಬೆನಗಲ್ ರಾಮರಾವ್ ೧೯೨೫- ಬೆಳಗಾವಿ) ಫ. ಗು. ಹಳಕಟ್ಟಿ (೧೯೨೬ ಬಳ್ಳಾರಿ) ಆರ್. ತಾತಾಚಾರ್ಯ (೧೯೨೭ ಮಂಗಳೂರು) ಬಿ. ಎಂ. ಶ್ರೀ (೧೯೨೮ ಕಲಬುರ್ಗಿ) ಆಲೂರು (೧೯೩೦ ಮೈಸೂರು) ಮುಳಿಯ ತಿಮ್ಮಪ್ಪಯ್ಯ (೧೯೩೧- ಕಾರವಾರ) ಪಂಜೆ (೧೯೩೪ ರಾಯಚೂರು) ಮುಂತಾದವರು ಭಾಷಾ ಏಕೀಕರಣದಿಂದಲೇ ರಾಜಕೀಯ ಏಕೀಕರಣ ಸಾಧ್ಯ ಎಂಬಂಥ ನಿರ್ಣಯಗಳನ್ನು ಸ್ಪಷ್ಟವಾಗಿ ಅಂಗೀಕರಿಸಿದ್ದಾರೆ. ಮಾಸ್ತಿ ಅವರು ಮಾತ್ರ (ಬೆಳಗಾಂ ೧೯೨೯) ಸರ್ಕಾರಿ ಅಧಿಕಾರಿಗಳಾಗಿದ್ದರಿಂದ ನೇರವಾಗಿ ಪ್ರತಿಕ್ರಿಯಿಸಲಿಲ್ಲ.

ಕಾಂಗ್ರೆಸ್ಸಿನ ಏಕೀಕರಣದ ಠರಾವುಗಳು ಬ್ರಿಟಿಷ್ ಕನ್ನಡ ಪ್ರಾಂತ್ಯಗಳಿಗೆ ಅನ್ವಯಿಸುತ್ತಿತ್ತು. ದೇಸೀ ರಾಜ್ಯಗಳಿಗೆ ಸಂಬಂಧಿಸಿದಂತೆ ನಿರ್ಣಯಗಳಾಗುತ್ತಿರಲಿಲ್ಲ.

೧೯೪೭ಕ್ಕೆ ಮುಂಚೆ (ಸ್ವಾತಂತ್ರ್ಯಕ್ಕೆ ಮುಂಚೆ) ಕರ್ನಾಟಕಕ್ಕೆ ಸಂಬಂಧಿಸಿದಂತೆ ಏಕೀಕರಣ ಹೋರಾಟ, ಭಾರತಕ್ಕೆ

ಸಂಬಂಧಿಸಿದಂತೆ ಸ್ವಾತಂತ್ರ್ಯ ಹೋರಾಟವೂ ಒಟ್ಟೊಟ್ಟಿಗೆ ನಡೆಯುತ್ತಿತ್ತು. ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತರಚನೆಯ ಹೋರಾಟವೂ, ಭಾಷಾವಾರು ಪ್ರಾಂತ ರಚನೆಯ ನಂತರ ಗಡಿವಿವಾದಗಳಿಗಾಗಿ ಹೋರಾಟವೂ ನಡೆಯುತ್ತಿದೆ.

ಕರ್ನಾಟಕ ನಿರ್ಮಾಣದ ಅಂದರೆ ಏಕೀಕರಣದ ಹೋರಾಟವನ್ನು ಕುರಿತು ಉತ್ತಂಗಿ ಅವರು ೧೯೪೪ರಲ್ಲಿ ಸ್ಪಷ್ಟವಾಗಿ ಹೇಳಿದರು:

"ಕರ್ನಾಟಕ ಏಕೀಕರಣವು ಕನ್ನಡಿಗರ ಜನ್ಮಸಿದ್ಧಹಕ್ಕು. ಏಕತಂತ್ರ ಅಖಂಡ ಕರ್ನಾಟಕವು ನಿರ್ಮಾಣವಾಗಲೇ ಬೇಕು. ನಿರ್ಮಾಣವಾಗುವುದು."

ಎಂ. ಆರ್. ಶ್ರೀ ಮತ್ತೂ ನೇರವಾಗಿ ಹೇಳಿದರು –

"ಭಾಷಾವಾರು ಪ್ರಾಂತರಚನೆಯ ತತ್ವಕ್ಕೆ ಅನುಗುಣವಾಗಿ ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತರಚನೆಯನ್ನು ಆದಷ್ಟು ಬೇಗನೆ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಈ ಸಮ್ಮೇಳನ ಪ್ರಾರ್ಥಿಸುತ್ತದೆ."

ಒಟ್ಟಿನಲ್ಲಿ ಸಮ್ಮೇಳನಗಳಲ್ಲಿ ಆದ ನಿರ್ಣಯಗಳ ಸ್ವರೂಪ ಮತ್ತು ಪರಿಣಾಮಗಳನ್ನು ಕುರಿತು ಸಿ. ಆರ್. ಗೋವಿಂದ ರಾಜು ಅವರು ಹೇಳಿರುವ ಮಾತುಗಳು ಮನನೀಯವಾಗಿದೆ. "ಸಮ್ಮೇಳನಗಳಲ್ಲಿನ ಅಧ್ಯಕ್ಷರುಗಳು ಪ್ರತಿಕ್ರಿಯೆ ಮತ್ತು ಅಂಗೀಕರಿಸಲ್ಪಡುತ್ತಿದ್ದ ನಿರ್ಣಯಗಳು ಭಾವೀ ಕರ್ನಾಟಕದ ಉಗಮಕ್ಕೆ ಚಾಲನೆ ನೀಡಿವೆ. ಇಲ್ಲಿ ಪರಿಷತ್ತು ರಾಜಕೀಯ ಅಥವಾ ಸಾಂಸ್ಕೃತಿಕ ಯಾವ ನೆಲೆಯಲ್ಲಿ ಕಾರ್ಯನಿರ್ವಹಿಸಿದ್ದರೂ ಅದು ಏಕೀಕರಣಕ್ಕಂತೂ ಕನ್ನಡಿಗರನ್ನು ಸಜ್ಜುಗೊಳಿಸಿತು ಎಂಬುದರಲ್ಲಿ ಎರಡು ಮಾತಿಲ್ಲ." (ಕರ್ನಾಟಕ ಏಕೀಕರಣ ಮತ್ತು ಕನ್ನಡ ಸಹಿತ್ಯ ಪರಿಷತ್ತು, ಪುಟ ೩೪).

ಏಕೀಕರಣ ಮತ್ತು ಚಳವಳಿಗಳ ವ್ಯತ್ಯಾಸ

ಪರಿಷತ್ತಿನ ಇತಿಹಾಸದ ದೃಷ್ಟಿಯಿಂದ ನೋಡಿದರೆ ಮೂರು ಘಟ್ಟಗಳನ್ನು ಕಾಣುತ್ತೇವೆ. ಸ್ವಾತಂತ್ರ್ಯ ಸಿಗುವವರೆಗೆ ನಡೆದ ಏಕೀಕರಣದ ಚಳವಳಿ, ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ ರಚನಾ ಚಳವಳಿ, ಕರ್ನಾಟಕ ರಾಜ್ಯೋದಯ ಆದಮೇಲೆ ಕನ್ನಡದ ಸಮಸ್ಯೆಗಳಿಗೆ ನಡೆದ ಹೋರಾಟಗಳು. ಈ ಮೂರು ಹಂತಗಳ ಹಿನ್ನೆಲೆಯಲ್ಲಿ ಕನ್ನಡ ಚಳುವಳಿಗಳಲ್ಲಿ ಪರಿಷತ್ತಿನ ಪಾತ್ರವೇನಿತ್ತು, ಏನಿರಬೇಕಾಗಿತ್ತು ಎಂಬುದನ್ನು ಚಿಂತಿಸಬಹುದು.

ಮೊದಲನೆಯದಾಗಿ ಪರಿಷತ್ತು 'ಸಾಹಿತ್ಯ ಸಂಸ್ಥೆ' ಹೋರಾಟದ ಸಂಸ್ಥೆ ಅಲ್ಲ. ಎಂದರೆ ಹೋರಾಟ ಮಾಡಲು ಬೀದಿಗಿಳಿದು ಮಾಡುವ ಹೋರಾಟವನ್ನೇ ಧ್ಯೇಯವಾಗುಳ್ಳ ಸಂಸ್ಥೆ ಅಲ್ಲ; ಎಂದಷ್ಟೇ ಅರ್ಥ. ಚಳವಳಿಗಳಲ್ಲಿ ನಾನಾ ಬಗೆಗಳಿವೆ. ಇಲ್ಲಿ ಕನ್ನಡ ಚಳವಳಿಯಷ್ಟೇ ಗಮನಿಸಿದೆ.

ಕನ್ನಡ ಚಳುವಳಿ ಎಂದರೆ ಕನ್ನಡ-ಕನ್ನಡಿಗ-ಕರ್ನಾಟಕಕ್ಕೆ ಸಂಬಂಧಿಸಿದಂತೆ. "ಕನ್ನಡದ ಸಂದರ್ಭದಲ್ಲಿ ಭಾಷೆ, ವ್ಯಕ್ತಿ, ಪ್ರದೇಶ ಹಾಗೂ ಸಾಂಸ್ಕೃತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಧಕ್ಕೆ ಒದಗಿಬರುವ ಯಾವುದೇ ಅಡ್ಡಿ – ಆತಂಕಗಳನ್ನು ಪ್ರತಿಭಟಿಸುವ ಪ್ರಕ್ರಿಯೆಗೆ ಕನ್ನಡ ಚಳವಳಿ ಎಂದು ಕರೆಯಬಹುದು ಎನ್ನುತ್ತಾರೆ. ಸಿ. ಆರ್. ಗೋವಿಂದರಾಜು ಏಕೀಕರಣದ ಚಳವಳಿಯೂ ಒಂದು ರೀತಿಯಲ್ಲಿ ಕನ್ನಡ ಚಳುವಳಿಯೇ. ಆದರೆ ಎರಡಕ್ಕೂ ಸ್ವಲ್ಪ ವ್ಯತ್ಯಾಸವಿದೆ." ಏಕೀಕರಣವೆಂದರೆ ರಾಜಕೀಯವಾಗಿ ಕರ್ನಾಟಕವನ್ನು ಒಂದುಗೂಡಿಸುವ ಚಳವಳಿ ಕನ್ನಡ ಚಳವಳಿ ಎಂದರೆ ಕನ್ನಡ ಕನ್ನಡಿಗ-ಕರ್ನಾಟಕಗಳ ಪ್ರಾತಿನಿಧ್ಯ, ಅಭಿವೃದ್ಧಿ, ಅನನ್ಯತೆಗಳಿಗೆ ನಡೆದ ಚಳವಳಿ."

ಕರ್ನಾಟಕ ರೂಪುಗೊಳ್ಳುವ ಮುನ್ನ ನಡೆದ ಚಳವಳಿಗಳಿಗೂ ಕರ್ನಾಟಕ ರೂಪುಗೊಂಡ ನಂತರದ ಚಳವಳಿಗಳಿಗೂ ಬಹಳ ವ್ಯತ್ಯಾಸಗಳಿವೆ. ಏಕೀಕರಣಕ್ಕೆ ಹೋರಾಡಿದ ಕಾಲದ ಚಳವಳಿಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಳವಳಿಗಳೂ ನಡೆಯುತ್ತಿದ್ದವು. ಕೆಲವರು ಎರಡರಲ್ಲೂ ಭಾಗವಹಿಸುತ್ತಿದ್ದರು. ಎರಡೂ ನಾಡಿಗೆ, ದೇಶಕ್ಕೆ ಸಂಬಂಧಿಸಿದ ಹೋರಾಟಗಳಾದರೂ ಒಂದು ಕರ್ನಾಟಕಕ್ಕೆ ಇನ್ನೊಂದು ಭಾರತಕ್ಕೆ ಸಂಬಂಧಿಸಿತ್ತು. ಆದರೆ ಇವೆರಡೂ ಹೋರಾಟಗಳು ಪರಸ್ಪರ ಪೂರಕವಾಗಿದ್ದವು.

ತದ್ವಿರುದ್ಧವಾಗಿರಲಿಲ್ಲ ಈ ಎರಡೂ ಹೋರಾಟಗಳ ವ್ಯಕ್ತಿಗಳೂ ದೇಶಭಕ್ತರೇ. ಆಲೂರು ವೆಂಕಟರಾಯರು ಎರಡೂ ಬಗೆಯ ಹೋರಾಟ ಮಾಡಿದವರೇ. ಅವರು ಹೇಳುತ್ತಿದ್ದ ಮಾತು ಗಮನಾರ್ಹ ಅವರು ಹೋರಾಟದ ಕಾಲದಲ್ಲಿ ಸಭೆಗಳನ್ನು ಉದ್ದೇಶಿಸಿ ಹೇಳುತ್ತಿದ್ದ ಮಾತಿದು: "ಭಾರತಾಂತರ್ಗತ ಕನ್ನಡಿಗರೇ, ಕರ್ಣಾಟಕಾಂತರ್ಗತ ಭಾರತೀಯರೇ".... ನಾಡಿನ ಬಗ್ಗೆ ಜಾಗೃತಿ ಮುಖ್ಯವಾಗಿತ್ತು. ಏಕೀಕರಣದ ಕಾಲದಲ್ಲಿ, ಆಧುನಿಕ ಚಳವಳಿಗಳ ಕಾಲದಲ್ಲಿ ಭಾಷೆ, ಸಂಸ್ಕೃತಿ, ಜಾಗೃತಿ, ಮುಖ್ಯವಾಗಿದೆ.

ಏಕೀಕರಣ ಚಳವಳಿ ಮತ್ತು ಆಧುನಿಕ ಚಳವಳಿ ಎರಡರಲ್ಲೂ ಪ್ರಧಾನ ಪಾತ್ರವಹಿಸಿದ ಸಂಸ್ಥೆಗಳೆಂದರೆ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಉಳಿದ ಅನೇಕ ಸಂಘಸಂಸ್ಥೆಗಳು ಇವುಗಳನ್ನು ಬೆಂಬಲಿಸಿವೆ. ಏಕೀಕರಣ ಚಳವಳಿಗೆ ಜನರನ್ನು ಸಿದ್ಧಗೊಳಿಸುವಲ್ಲಿ ಈ ಎರಡೂ ಸಂಸ್ಥೆಗಳ ಸಾಹಿತಿಗಳ ಮತ್ತು ವಿದ್ವಾಂಸರ ಕಲಾವಿದರ ಪಾತ್ರ ಮುಖ್ಯವಾದುದು.

ಶಾಂತಕವಿ, ಬಿ.ಎಂ.ಶ್ರೀ, ಬೆಟಗೇರಿ, ಹುಯಿಲಗೋಳ ನಾರಾಯಣರಾವ್, ಬೇಂದ್ರೆ, ಕುವೆಂಪು ಕವಿತೆಗಳ ಮೂಲಕ ಆಲೂರು, ಶಂಬಾ ಅಂಥ ಹಿರಿಯರೂ ಬರಹಗಳ ಮೂಲಕ, ಜಯರಾಮಾಚಾರ್ಯ, ಪಿ. ಕಾಳಿಂಗರಾವ್ ಅಂಥ ಕಲಾವಿದರೂ ಗಮಕ, ಸಂಗೀತದ ಮೂಲಕ ಏಕೀಕರಣಕ್ಕೆ ಹಿನ್ನೆಲೆಯಾಗಿ ಸಾಂಸ್ಕೃತಿಕ ಜಾಗೃತಿಯನ್ನು ಉಂಟುಮಾಡಿದರು. ಇದನ್ನು ಸಾಹಿತ್ಯ ಕಲಾಚಳುವಳಿ ಎನ್ನಬಹುದು.

"ಕನ್ನಡ ನಾಡು ನುಡಿಗಳಿಗೆ, ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನೂರಾರು ಚಳವಳಿಗಳು ನಡೆದಿವೆ ನಡೆಯುತ್ತಿವೆ. ಅದರಲ್ಲಿ ಇಲ್ಲಿ ಪರಿಷತ್ತಿಗೆ ಸಂಬಂಧಿಸಿದಂತೆ ಕೆಲವು ಚಳವಳಿಗಳನ್ನಷ್ಟೇ ಪ್ರಸ್ತಾಪಿಸಲಾಗಿದೆ.

ಚಳವಳಿ ಎಂದಾಗ ಅನೇಕ ಬಗೆಯ ಚಳವಳಿಗಳು ಕಣ್ಣೆದುರು ನಿಲ್ಲುತ್ತದೆ. ಎಷ್ಟೋ ಚಳವಳಿಗಳು ರಾಜಕೀಯ ಪ್ರೇರಿತವಾದವೋ, ಹಿಂಸಾತ್ಮಕ ರೂಪ ತಳೆಯುವಂಥವೋ ಆಗಿರುವುದುಂಟು; ಬೀದಿ ಚಳವಳಿಗಳಾಗಿರುವುದೂ ಉಂಟು. ಪರಿಷತ್ತಿನ ಚಳವಳಿಗಳು ಆ ವರ್ಗದ್ದಲ್ಲ. ಪ್ರತಿಭಟನೆ ಸಾತ್ವಿಕ ಹೋರಾಟದ ಸ್ವರೂಪವುಳ್ಳವು ಅಹಿಂಸಾತ್ಮವಾದ ಹೋರಾಟದ ಚಳವಳಿ ಎನ್ನಬಹುದು.

ಪರಿಷತ್ತಿನ ಅಧ್ಯಕ್ಷರಾಗಿದ್ದ ಹಂಪನಾ ಅವರ ಮೇಲೆ ಆರೋಪಗಳು ಬಂದಾಗ ಕ್ರಿಯಾಸಮಿತಿ ರೂಪುಗೊಂಡು ಪ್ರತಿಭಟನೆಗಳು ನಡೆದು ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಶಾಂಸುಂದರ್ ಆಯೋಗ ರಚನೆಯಾಗಿ, ಪರಿಷತ್ತಿಗೆ ಆಡಳಿತಾಧಿಕಾರಿಗಳು ಪ್ರಥಮಬಾರಿಗೆ ನೇಮಕಗೊಂಡರು. ಈ ಪ್ರಸಂಗದಲ್ಲಿ ಪ್ರತಿಭಟನೆಯಲ್ಲಿ ಸಾಹಿತಿಗಳು ಪರಿಷತ್ತಿನ ಸದಸ್ಯರು ಭಾಗವಹಿಸಿದ್ದರು ಎಂಬುದನ್ನು ಗಮನಿಸಬಹುದು. ಇದೊಂದು ಪರಿಷತ್ತಿನ ಆಂತರಿಕ ಜನರ ಚಳವಳಿ ಎನ್ನಬಹುದು. ಧರಣಿ, ಸಹಿಸಂಗ್ರಹ, ಪತ್ರಲೇಖನ, ಹೇಳಿಕೆ, ಸಭೆಗಳು ಎಲ್ಲಾ ನಡೆದವು. ಇದು ಅಹಿಂಸಾತ್ಮಕ ಚಳುವಳಿ ಆಗಿತ್ತು. ಹಿಂದಿಯ ವಿರುದ್ಧ ಅನಕೃ, ಎಆರ್‌ಕೃ ಅವರ ಚಳವಳಿ, ಪರಿಷತ್ತಿನ ರಜತೋತ್ಸವದ ಸಂದರ್ಭದ ದರ್ಬಾರ್ ಡ್ರೆಸ್ ಪ್ರಸಂಗ ಇವೆಲ್ಲವುಗಳನ್ನೂ ಪರಿಷತ್ತಿಗೆ ಸಂಬಂಧಪಟ್ಟ ಚಳವಳಿಗಳು ಎನ್ನಬಹುದು.

ಪರಿಷತ್ತಿನ ಬೆಳ್ಳಿಹಬ್ಬದಲ್ಲಿಯ ಪ್ರಸಂಗ

ಉದಾಹರಣೆಗೆ "ಪರಿಷತ್ತಿನ ಬೆಳ್ಳಿ ಹಬ್ಬದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳ ಬಯಸುವವರೆಲ್ಲರೂ ಮೈಸೂರಿನ ಅರಮನೆ ಮನ್ನಣೆ ಇತ್ತಿರುವ ದರ್ಬಾರ್ ಉಡುಪಿನಲ್ಲಿಯೇ ಬರಬೇಕು ಎಂಬ ಧ್ವನಿ ಮೂಡಿದಾಗ "ದರ್ಬಾರ್ ವೇಷ ದಾಸ್ಯದ ಸಂಕೇತವಲ್ಲವೇ?" ಎಂಬ ಪ್ರತಿಧ್ವನಿ ಮೂಡಿತು. ಆಗ ಅರಮನೆಯ ಕಟ್ಟಲೆ ಆ ಸಂಸ್ಥಾನಿಕರಿಗೆ ಇರುವಲ್ಲದ್ಯಾಕೆ. ನಮಗದು ಅನ್ವಯಿಸುವುದಿಲ್ಲ ಎಂಬ ನಿಲುವನ್ನು ಬೊಂಬಾಯಿ, ಮದರಾಸು ಪ್ರಾಂತದ ಕನ್ನಡಿಗರು ತಳೆದು, ಅಂತ್ಯದಲ್ಲಿ ದರ್ಬಾರ್ ಉಡುಪು ಕಡ್ಡಾಯವಲ್ಲ ಎಂದು ತೀರ್ಮಾನವಾಗಿ ಸಮಸ್ಯೆ ಬಗೆಹರಿಯಿತು. ಕರ್ನಾಟಕದ

ಏಕೀಕರಣಕ್ಕೆ ವಿವಿಧ ಪ್ರಾಂತಗಳ ಮನೋಭಾವಗಳ ತಾಕಲಾಟ ಹೇಗಿತ್ತು ಎಂಬುದರ ಚಿತ್ರಣವನ್ನು ಇಲ್ಲಿ ಕಾಣುತ್ತೇವೆ. ಹಳೇ ಮೈಸೂರು ಮತ್ತು ಇತರ ಭಾಗಗಳ ದೃಷ್ಟಿಕೋನವೂ ಇಲ್ಲಿದೆ. ಕನ್ನಡಿಗರ ಭಿನ್ನಭಿನ್ನ ಮನೋಭಾವಗಳು ಕಾಲಕಾಲಕ್ಕೆ ಅಭಿವ್ಯಕ್ತಗೊಂಡು ಅನಂತರ ಏಕೀಕರಣದ ಹಾದಿಯಲ್ಲಿ ಒಂದಾಗುತ್ತ ಬರುವಂತೆ ಮಾಡಿದ ಅನೇಕ ಪ್ರಸಂಗಗಳು ಪರಿಷತ್ತಿನ ಇತಿಹಾಸದಲ್ಲಿ ಕಂಡುಬರುತ್ತವೆ.

ಕರ್ನಾಟಕದಲ್ಲಿ ಹಿಂದಿ ಪ್ರಚಾರ ಚಳವಳಿ ನಡೆದಾಗ ಅದಕ್ಕೆ ಪರ – ವಿರೋಧ ವಾದಗಳು ಎದ್ದಿದ್ದವು. ಎ. ಆರ್. ಕೃಷ್ಣಶಾಸ್ತ್ರಿಗಳು, ಅ.ನ. ಕೃ. ಮೊದಲಾದವರು ಕನ್ನಡ ಪ್ರಚಾರ ಚಳವಳಿಗೆ ಹೆಚ್ಚು ಒತ್ತನ್ನು ನೀಡಿದರೆ, ಆರ್. ಆರ್. ದಿವಾಕರ್, ದ. ಕೃ. ಭಾರದ್ವಾಜ್ ಮೊದಲಾದವರು ಹಿಂದಿ ಪ್ರಚಾರ ಚಳವಳಿಗೆ ಬೆಂಬಲವಿತ್ತರು. ಸಾಹಿತ್ಯ ಸಮ್ಮೇಳನಗಳಲ್ಲೂ ಈ ಬಗ್ಗೆ ವಾದ–ವಿವಾದಗಳು ಪ್ರಸ್ತಾಪಿತವಾದವು. ೧೯೩೮ರ ಸಮಯದಲ್ಲಿ ಬಳ್ಳಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಆರ್. ಆರ್. ದಿವಾಕರ್ ಅವರು ಹಿಂದಿ ಪ್ರಚಾರಕ್ಕೆ ಹೊರಟಾಗ ಅ. ನ. ಕೃ., "ಇದೇ ವರ್ಷ ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟ ಕಟ್ಟಿಸಿಕೊಂಡ ಶ್ರೀ ದಿವಾಕರರು ತಮ್ಮ ಕರ್ತವ್ಯ ಮರೆತದ್ದು ಶೋಚನೀಯ. ಶ್ರೀಯುತರು ಕನ್ನಡ ಪ್ರಚಾರಕ್ಕೆ ಹೊರಡಬೇಕಿತ್ತು. ಸ್ವಂತ ಮನೆ ಹೊತ್ತು ಉರಿಯುತ್ತಿರುವಾಗ ಪಕ್ಕದ ಮನೆಯಲ್ಲಿ ತೋಟ ಮಾಡುವುದಕ್ಕೆ ಹೋದ ಹಾಗೆ" ಎಂದು ದನಿಯೆತ್ತಿದರು. ಪರಿಷತ್ತಿನ ಕಾರ್ಯಕಾರಿ ಮಂಡಳಿ ದಿವಾಕರರ ಪಕ್ಷವನ್ನು ಎತ್ತಿ ಹಿಡಿದಾಗ, ಅನಕೃ ಅವರು ಪರಿಷತ್ತಿನ ನುಡಿ ಸಂಪಾದಕತ್ವಕ್ಕೆ ರಾಜಿನಾಮೆಯನ್ನು ನೀಡಿದರು.

ಬಂಡಾಯ ಸಾಹಿತ್ಯ ಸಮಾವೇಶ

ಚಳವಳಿಗಳಲ್ಲಿ ಸಾಹಿತ್ಯದ ಮತ್ತು ಸಾಹಿತ್ಯ ಪರಿಷತ್ತಿನ ಪಾತ್ರವನ್ನು ಕುರಿತು ಹೇಳುವ ಮೊದಲು, ಆ ಬಗ್ಗೆ ಡಾ. ಸಿ.ಆರ್. ಗೋವಿಂದರಾಜು ಅವರ ಈ ಮಾತುಗಳು ಗಮನಿಸುವಂಥವು (ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ–ಪುಟ. ೪)

"ಈವರೆಗಿನ ಅಧ್ಯಯನಗಳೆಲ್ಲ (ಕನ್ನಡ ಚಳುವಳಿಗಳು) ರಾಜಕೀಯ ಆರ್ಥಿಕ, ಸಾಮಾಜಿಕ ದೃಷ್ಟಿಕೋನಗಳಿಂದ ಮೂಡಿ ಬಂದವುಗಳಾಗಿವೆ.... ಚಾರಿತ್ರಿಕ ದಾಖಲೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಸಾಹಿತ್ಯಿಕ ಆಕರಗಳನ್ನು ಹೊರತು ಪಡಿಸಿದ ಇತಿಹಾಸವನ್ನು ಬರೆಯಲಾಗಿದೆ. ಮಾಸ್ತಿ, ಆಲೂರು, ಡಿವಿಜಿ, ಅನಕೃ, ದಿವಾಕರ ಮೊದಲಾದ ಸಾಹಿತಿಗಳ ಬರಹಗಳಲ್ಲಿ ಅಡಗಿರುವ ಕನ್ನಡ ಚಳುವಳಿಗಳಿಗೆ ಸಂಬಂಧಿಸಿದ ಅಂಶಗಳನ್ನು ವಿಶೇಷವಾಗಿ ಗಮನಿಸಿರುವವರು ಬಹಳ ಕಡಿಮೆ ಮಂದಿ. ಅಂತೆಯೇ ಸಾಹಿತ್ಯ ಸಮ್ಮೇಳನಗಳು ಪ್ರತಿಭಟನಾ ಸಮ್ಮೇಳನಗಳಲ್ಲದಿದ್ದರೂ, ಪ್ರತಿಭಟನೆಯ ಚರ್ಚೆ ತೀರ್ಮಾನಗಳನ್ನು ಒಳಗೊಂಡಿದ್ದು. ಇವು ತಾತ್ವಿಕವಾಗಿ ಚಳವಳಿಯನ್ನು ರೂಪಿಸಲು ನೆರವಾಗಿವೆ ಎಂಬುದನ್ನು ಮರೆಯಲಾಗದು." ಉದಾಹರಣೆಗೆ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಬಂಡಾಯ ಸಾಹಿತ್ಯದ ಬರಹಗಾರರು ಪರಿಷತ್ತಿನಿಂದ ದೂರವಾಗಿದ್ದಾಗ, "ಆ ಚಳವಳಿಯ ಗೆಳೆಯರನ್ನೆಲ್ಲ ಪರಿಷತ್ತಿನ ತೆಕ್ಕೆಗೆ ತೆಗೆದುಕೊಂಡು ಪರಿಷತ್ತಿನಲ್ಲಿ ದಿನಾಂಕ ೩೦–೬–೯೦ ರಿಂದ ೧–೭–೯೦ವರೆಗೆ ಎರಡು ದಿನಗಳ ಬಂಡಾಯ ಸಾಹಿತ್ಯ ಸಮಾವೇಶವನ್ನು ಪರಿಷತ್ತು ಸಂಘಟಿಸಿತು. ಎಲ್ಲ ಬರಹಗಾರರೂ ಒಟ್ಟಾಗಿ ಸೇರುವ ಸೌಹಾರ್ದ ಸಾಹಿತ್ಯ ವಾತಾವರಣ ನಿರ್ಮಾಣವಾಯಿತು." (ಪುಟ ೯೬ ಕನ್ನಡ ಸಾಹಿತ್ಯ ಪರಿಷತ್ತು – ಜಗನ್ನಾಥ ಹೇಮಾದ್ರಿ). ಪರಿಷತ್ತು ನೇರವಾಗಿ ಚಳವಳಿಗಳಲ್ಲಿ ಭಾಗವಹಿಸದಿದ್ದರೂ ಪರೋಕ್ಷವಾಗಿ ಬೆಂಬಲ, ಪ್ರೇರಣೆ, ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳನ್ನು ನಡೆಸಿತು ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಆಧುನಿಕ ಕಾಲದ ಸ್ವಾತಂತ್ರ್ಯ ನಂತರದ ಕನ್ನಡದ ಚಳವಳಿಗಳಲ್ಲಿ ನೇರವಾಗಿ ಭಾಗವಹಿಸಿಲ್ಲ ಎಂದರೆ ತಪ್ಪಿಲ್ಲ. ಉದಾಹರಣೆಗಳಿಗೆ ಜಿ. ವೆಂಕಟಸುಬ್ಬಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ ರಾಜಾಜಿ ಅವರು ೧೯೬೮ರಲ್ಲಿ ಸ್ವರಾಜ್ಯ ಪತ್ರಿಕೆಯಲ್ಲಿ ಕನ್ನಡದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದರು. ಕನ್ನಡಿಗರು ತೀವ್ರವಾಗಿ ಪ್ರತಿಭಟಿಸಿದರು. ಆಗ ಪರಿಷತ್ತಿನ ಸಾಹಿತಿಗಳೆಲ್ಲ ಒಂದುಗೂಡಿದರು. ಶಿವಮೂರ್ತಿಶಾಸ್ತ್ರಿ, ಬಿ. ಪುಟ್ಟಸ್ವಾಮಯ್ಯನವರು, ಶಂಬಾ ಜೋಶಿ, ಸುಜನಾ, ಕಲ್ಲೆ, ಹಂಪನಾ, ಜವಳಿ ಮೊದಲಾದವರು ತೀವ್ರವಾಗಿ ಪ್ರತಿಭಟಿಸಿದರೂ ಪರಿಷತ್ತಿನ ಅಧ್ಯಕ್ಷರು

ಮೌನವಹಿಸಿದ್ದರು. ಡಿವಿಜಿ, ರಾಜರತ್ನಂ, ಸಿದ್ದನವನಹಳ್ಳಿ ಮುಂತಾದವರು ಸಮರ್ಥನೆಗೆ ಹೊರಟಿದ್ದರು.

ಕರ್ನಾಟಕ ಸಂಯುಕ್ತರಂಗ, ಅನಕೃ, ರಾಮಮೂರ್ತಿ ನೇತೃತ್ವದಲ್ಲಿ ನಡೆಸಿದ ಕನ್ನಡ ಚಳುವಳಿ ಹೋರಾಟಗಳಲ್ಲಿ ವಿದ್ಯಾರ್ಥಿ ಯುವಕ ಮೇಳ, ಕನ್ನಡ ಯುವಜನ ಸಭಾ, ಕನ್ನಡ ಸಾಹಿತ್ಯ ವೇದಿಕೆ ಸಂಘ, ಕನ್ನಡ ಶಕ್ತಿ ಕೇಂದ್ರ ಮೊದಲಾದ ಕನ್ನಡ ಸಂಘಟನೆಗಳು ನಡೆಸಿದ ಕನ್ನಡ ಚಳವಳಿಗಳೆಲ್ಲಾ ಪರಿಷತ್ತಿನ ಆಚೆ ನಡೆದಿವೆ. ಪರಿಷತ್ತು ಇವುಗಳಿಗೆಲ್ಲಾ ಸಕ್ರಿಯವಾಗಿ ಸ್ಪಂದಿಸಿಲ್ಲ ಎಂಬುದು ವಿಷಾದದ ಸಂಗತಿಯಾದರೂ ವಾಸ್ತವದ ಸಂಗತಿ ಆಗಿದೆ. ಕರ್ನಾಟಕ ಏಕೀಕರಣ ಚಳವಳಿಯಲ್ಲಿ ತೋರಿಸಿದ ಆಸ್ಥೆಯನ್ನು ಈ ಚಳವಳಿಗಳಲ್ಲಿ ಪರಿಷತ್ತು ತೋರಿಸಿಲ್ಲ.

ಈ ಸಂದರ್ಭದಲ್ಲಿ ಕನ್ನಡ ಚಳವಳಿ ಎಂಬ ಮಾತಿನ ಬಗ್ಗೆ ಸ್ವಲ್ಪ ಚಿಂತಿಸುವುದು ಅಗತ್ಯ. "ಚಳವಳಿ ಎಂಬ ಪದಕ್ಕೆ ಹಲವಾರು ಅರ್ಥಗಳಿವೆ." ೧. ಚಲನೆ ಅಲ್ಲಾಡುವಿಕೆ, ಜರುಗುವಿಕೆ. ೨. ಚಟುವಟಿಕೆಯಿಂದ ನಡೆಸುವ ಸಾಮಾಜಿಕ ವಿದಾಯ, ಸಾಮೂಹಿಕ ಕ್ಷೋಭೆ, ಯಾವುದಾದರೂ ಒಂದು ಪದ್ಧತಿ ಕ್ರಮ ಅಥವಾ ಕಾನೂನಿನ ವಿಷಯವಾಗಿ ನಡೆಸುವ ಸಾಮೂಹಿಕ ಆಂದೋಲನ" (ಕನ್ನಡ ನಿಘಂಟು ಪು. ೨೭೮೮ ಸಂಪುಟ ೩ ಕನ್ನಡ ಸಾಹಿತ್ಯ ಪರಿಷತ್ ಪ್ರಕಟನೆ) ಮರಾಠಿ ಶಬ್ದ ಚಳವಳದಿಂದ ಬಂದ ಈ ಶಬ್ದ ಚಳವಳಿ, ಚಳುವಳಿ ಎಂಬ ಎರಡು ರೂಪಗಳಲ್ಲಿ ಕನ್ನಡದಲ್ಲಿ ಬಳಕೆ ಇದೆ.

ಕನ್ನಡದ ಸಂದರ್ಭದಲ್ಲಿ ಕನ್ನಡ ಚಳವಳಿ ಎಂಬುದನ್ನು ಡಾ. ಸಿ. ಆರ್. ಗೋವಿಂದರಾಜು ಅವರು ಸೊಗಸಾಗಿ ತಮ್ಮ 'ಕನ್ನಡ ಚಳವಳಿಗಳು' ಗ್ರಂಥದಲ್ಲಿ (ಪುಟ ೭) ಹೀಗೆ ವಿವರಿಸಿದ್ದಾರೆ:

"ಕನ್ನಡದ ಸಂದರ್ಭದಲ್ಲಿ ಭಾಷೆ, ವ್ಯಕ್ತಿ ಪ್ರದೇಶ ಹಾಗೂ ಸಾಂಸ್ಕೃತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಧಕ್ಕೆ ಒದಗಿರುವ ಯಾವುದೇ ಅಡ್ಡಿ ಆತಂಕಗಳನ್ನು ಪ್ರತಿಭಟಿಸುವ ಪ್ರಕ್ರಿಯೆಗೆ ಕನ್ನಡ ಚಳವಳಿ ಎಂದು ಕರೆಯಬಹುದು."

ಈ ಮಾತು ಪರಿಷತ್ತಿಗೆ ಹೆಚ್ಚಾಗಿ ಒಪ್ಪುತ್ತದೆ. ಏಕೀಕರಣದ ಚಳವಳಿಯು ಸಹ ಕನ್ನಡ ಚಳವಳಿ ಪರಿಧಿಗೆ ಬರುವಂಥದ್ದು ಎಂಬುದು ಮೇಲಿನ ವಿಚಾರದಿಂದ ತಿಳಿಯುತ್ತದೆ. ಆದರೆ ಏಕೀಕರಣ ಚಳವಳಿಯ ಆಶಯಕ್ಕೂ ಅನಂತರದ ಚಳವಳಿಗಳಿಗೂ ಕೆಲವು ಭಿನ್ನತೆಗಳು ಇಲ್ಲದಿಲ್ಲ. ರಾಜಕೀಯವಾಗಿ ಒಂದುಗೂಡುವುದೇ ಏಕೀಕರಣವಾದರೆ ಅನಂತರದಲ್ಲಿ ಕನ್ನಡ – ಕನ್ನಡಿಗ – ಕರ್ನಾಟಕಗಳ ಪ್ರಾತಿನಿಧ್ಯ, ಅಭಿವೃದ್ಧಿ ಅನನ್ಯತೆಗೆ ನಡೆದ ಚಳವಳಿಗಳು ಕನ್ನಡ ಚಳವಳಿಗಳಾಗಿ ರೂಪಗೊಂಡವು." ಇದಕ್ಕೆ ಕಾರಣ ಏಕೀಕರಣ ಚಳವಳಿ ಬ್ರಿಟಿಷ್ ಸರ್ಕಾರದ ವಿರುದ್ಧ ನಡೆಯಿತು. ಅನಂತರದ ಚಳವಳಿಗಳು ನಮ್ಮ ಸರ್ಕಾರದೊಳಗೇ ಅದರ ವಿರುದ್ಧವಾಗಿ ನಡೆದವು. ಆದ್ದರಿಂದ ಈ ವ್ಯತ್ಯಾಸ ಕಾಣುತ್ತದೆ. ಆದರೆ ಎಲ್ಲ ಕನ್ನಡ ಚಳವಳಿಗಳೂ ಕನ್ನಡಕ್ಕೆ, ಕರ್ನಾಟಕಕ್ಕೆ, ಕನ್ನಡಿಗರಿಗೆ ನ್ಯಾಯ ದೊರಕಿಸುವ ಹೋರಾಟಗಳಾಗಿವೆ.

ಕನ್ನಡ ಚಳವಳಿಗಳನ್ನು ಕನ್ನಡ ಸಂಘಟನೆಗಳು ತಮ್ಮದೇ ಆದ ಜಾಡಿನಲ್ಲಿ ನಡೆಸಿದರೆ, ಪರಿಷತ್ತು ತನ್ನದೇ ದಾರಿಯಲ್ಲಿ ನಡೆಸಿತು ಎನ್ನಬಹುದು. ಬಹುಮಟ್ಟಿಗೆ ಸಾಹಿತ್ಯಿಕ ಮತ್ತು ಭಾಷಿಕ ಚಳವಳಿ ಪರಿಷತ್ತಿನದು ಆಗಿತ್ತು ಮತ್ತು ಕನ್ನಡ ಸಂಘಟನೆಗಳ ಪ್ರಯತ್ನಗಳನ್ನು ತನ್ನ ಪ್ರಯತ್ನಗಳೊಂದಿಗೆ ಸಮೀಕರಿಸಲು ಪರಿಷತ್ತು ಯತ್ನಿಸಲಿಲ್ಲ. ಉದಾಹರಣೆಗೆ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಆದ ಪರಿಷತ್ತು ಕನ್ನಡ ಚಳವಳಿ, ಸಂಘಗಳನ್ನು ಸಭೆ ಕರೆದು ಸಮನ್ವಯಕ್ಕೆ ಯತ್ನಿಸಲಿಲ್ಲ. ಚಳವಳಿ, ಸಭೆಗಳಲ್ಲಿ ಭಾಗವಹಿಸುತ್ತಿದ್ದ ಪರಿಷತ್ತಿನ ಅಧ್ಯಕ್ಷರಲ್ಲಿ ಬಿ. ಶಿವಮೂರ್ತಿ ಶಾಸ್ತ್ರಿಗಳನ್ನು ಹೆಸರಿಸಬಹುದಷ್ಟೇ. ಕನ್ನಡ ಬಾವುಟವನ್ನು ರೂಪಿಸುವಲ್ಲಿ ಪರಿಷತ್ತು ತನ್ನದೇ ಧ್ವಜ ಇಟ್ಟುಕೊಂಡಿತು. ಕನ್ನಡ ಸಂಘಗಳು ಹಳದಿ ಕೆಂಪು ಧ್ವಜ ಬಳಸಿದಾಗ ಕನ್ನಡಕ್ಕೊಂದೇ ಧ್ವಜವಿರಲಿ ಎಂದು ಬಲವಾಗಿ ಪ್ರಯತ್ನಿಸಲಿಲ್ಲ. ಹೀಗಾಗಿ ಅನೇಕ ಚಳವಳಿಗಳಲ್ಲಿ ಪರಿಷತ್ತು ಪ್ರತ್ಯೇಕವಾಗಿತ್ತು, ಮೌನವಾಗಿತ್ತು, ಸೌಮ್ಯವಾಗಿ ವರ್ತಿಸಿತು ಎನ್ನಬಹುದು.

ಭಾಷಿಕ ಸಮಸ್ಯೆಯ ಗೋಕಾಕ್ ಚಳವಳಿ, ಏಕೀಕರಣ ಚಳವಳಿಯ ನಂತರ ನಡೆದ ಅತ್ಯಂತ ಮಹತ್ವದ ಚಳವಳಿ. ಇಂಥ ಚಳವಳಿಯಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘ ಪಾಲ್ಗೊಂಡಂತೆ ಕನ್ನಡ ಸಾಹಿತ್ಯ ಪರಿಷತ್ತು ಪಾಲ್ಗೊಳ್ಳಲಿಲ್ಲ. ಸಾಹಿತಿಗಳು ಕಲಾವಿದರು ಇತರ ಸಂಘಟನೆಗಳ ಮೂಲಕ ಈ ಚಳವಳಿಯಲ್ಲಿ ಪಾಲ್ಗೊಂಡರು. "ಕನ್ನಡ ಚಳವಳಿ

ನಾಯಕ ವಾಟಾಳ್ ನಾಗರಾಜ, ಪರಿಷತ್ತಿನ ಅಧ್ಯಕ್ಷ ಹಂಪನಾ ಹಾಗೂ ಹಾಮಾನಾ ಅವರುಗಳು ಚಳವಳಿಯನ್ನು ಬೆಂಬಲಿಸಲಿಲ್ಲ" ಎಂಬ ಸಂಗತಿ ನೋಡಿದಾಗ, ಕನ್ನಡ ಚಳವಳಿಗಳ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ ನೇರವಾಗಿ, ತೀವ್ರವಾಗಿ ಇರಲಿಲ್ಲ ಎಂದು ಹೇಳಬಹುದು. ಬಹುಶಃ ಪರಿಷತ್ತು ಸಾಹಿತ್ಯ ಸ್ವರೂಪಿಯಾಗಿ ಜನಸ್ಪಂದಿ ಆಗದೇ ಇದ್ದುದೇ ಕಾರಣವಿರಬಹುದು. ಪರಿಷತ್ತಿನ ಚಟುವಟಿಕೆಗಳನ್ನು ಅದರ ವಾರ್ಷಿಕ ವರದಿಗಳನ್ನು ಕಂಡಾಗ ಇದು ಸುವ್ಯಕ್ತವಾಗುತ್ತದೆ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಹೇಳಬಹುದಾದ ಮಾತೆಂದರೆ ಏಕೀಕರಣ ಚಳವಳಿಯಲ್ಲಿ ಪರಿಷತ್ತು ಪಾಲ್ಗೊಂಡಂತೆ ಏಕೀಕರಣದ ನಂತರದ ಕನ್ನಡ ಚಳವಳಿಗಳಲ್ಲಿ ಪರಿಷತ್ತು ಪ್ರಮುಖ ಪಾತ್ರವಹಿಸಿಲ್ಲ. ಆದರೂ ಇತರ ಕಾರಣಗಳಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಂಡಿದೆ. ತನ್ನದೇ ಆದ ಭವ್ಯ ಇತಿಹಾಸವನ್ನು ಹೊಂದಿದೆ.

❖❖

೧೦

ಅಧ್ಯಾಯ - ೧೦

ಪರಿಷತ್ತಿನ ಅಧ್ಯಕ್ಷರುಗಳ ಜೀವನ-ಸಾಧನೆಗಳು

(೧೯೧೫-೨೦೧೫)

ಕನ್ನಡ ಸಾಹಿತ್ಯ ಪರಿಷತ್ತು ಎಂಬ ಬೃಹದ್‌ರಥದ ಮಿಣಿ ಹಿಡಿದು ಮುನ್ನಡೆಸಿದವರಲ್ಲಿ ಕನ್ನಡ ಸಾಹಿತ್ಯ ಪ್ರಪಂಚದ ದಿಗ್ಗಜರು, ರಾಜವಂಶದವರು ಆಡಳಿತಾಧಿಕಾರಿಗಳು ಇದ್ದಾರೆ. ಅಧ್ಯಕ್ಷರಾಗಿ ಉಪಾಧ್ಯಕ್ಷರಾಗಿ, ಆಡಳಿತಗಾರರಾಗಿ ಇವರೆಲ್ಲಾ ತಮ್ಮ ಶಕ್ತ್ಯಾನುಸಾರ ಪರಿಷತ್ತಿನ ಪ್ರಗತಿಗೆ ನೆರವಾಗಿದ್ದಾರೆ. ಸಾಧನೆ ಮಾಡಿದ್ದಾರೆ.

ಇಂದು ಪರಿಷತ್ತು ಕರ್ನಾಟಕದ ಏಕೈಕ ಪ್ರಾತಿನಿಧಿಕ, ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಯಾಗಿ ಶತಮಾನೋತ್ಸವ ಆಚರಿಸಲು ಇವರೆಲ್ಲ ಕಾರಣಕರ್ತರಾಗಿದ್ದಾರೆ. ಇವರೆಲ್ಲರ ಸೇವೆ ಚಿರಸ್ಮರಣೀಯವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಮೊದಲಿನಿಂದಲೂ ರಾಜಾಶ್ರಯ ಸರ್ಕಾರದ ನೆರವು ಸಾರ್ವಜನಿಕರ ಪ್ರೋತ್ಸಾಹ, ಸಾಹಿತಿಗಳ ಬೆಂಬಲ ವಿದ್ವಾಂಸರ ಕೊಡುಗೆಗಳಿಂದ ನಾಡಿಗೆ ಅನುಪಮ ಸೇವೆ ಸಲ್ಲಿಸಿದೆ.

ಬೆಂಗಳೂರಿನ ಮೂಲೆಯೊಂದರ ಮನೆಯಲ್ಲಿ ಕಚೇರಿ ಹೊಂದಿ ಗ್ರಂಥ ರಚನೆ, ಪತ್ರಿಕಾ ಪ್ರಕಟನೆ, ವಿದ್ವಾಂಸರಿಗೆ ಪ್ರೋತ್ಸಾಹ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ನಿರತವಾದ ವಿದ್ವನ್ಮಂಡಲಿ ಆಗಿದ್ದ ಪರಿಷತ್ತು ಇಂದು ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಕಲೆ, ಇತಿಹಾಸ ಕ್ಷೇತ್ರಗಳಲ್ಲಿ ಕನ್ನಡಿಗರ ಆಶೋತ್ತರಗಳನ್ನು ಬಿಂಬಿಸುವ ಸಂಸ್ಥೆಯಾಗಿದೆ.

ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರೂ ಮೊದಲು ಅಧ್ಯಕ್ಷರೂ ಆದವರು. ಎಚ್. ವಿ. ನಂಜುಂಡಯ್ಯನವರು. ೧,೨,೩, ಸಮ್ಮೇಳನಗಳಿಗೆ ಅಧ್ಯಕ್ಷರಾದವರು. ೮೧ ಸಮ್ಮೇಳನಗಳಲ್ಲಿ ಉಳಿದೆಲ್ಲರು ಒಂದೊಂದು ಸಲ ಆಯ್ಕೆ ಆಗಿದ್ದಾರೆ. ಇವರೊಬ್ಬರು ಮಾತ್ರ ೩ ಬಾರಿ ಆಯ್ಕೆ ಆದ ಏಕೈಕ 'ಹ್ಯಾಟ್ರಿಕ್' ಅಧ್ಯಕ್ಷರಾಗಿದಾರೆ. ಪರಿಷತ್ತಿನ ಪ್ರಾರಂಭ ಕಾಲದಲ್ಲಿ ಆರ್ಥಿಕ ಅನುಕೂಲವಿಲ್ಲದಾಗ, ಸ್ವಂತ ಕಟ್ಟಡವಿಲ್ಲದಾಗ, ಪರಿಷತ್ತು ಆಗತಾನೇ ಸ್ಥಾಪನೆ ಆಗಿ ಜನರಲ್ಲಿ ಇನ್ನೂ ಪ್ರಸಿದ್ಧಿಗೆ ಬರದಿದ್ದಾಗ ಪರಿಷತ್ತಿನ ಪ್ರಗತಿಗೆ ಶ್ರಮಿಸಿದವರು ಎಚ್. ವಿ. ನಂಜುಂಡಯ್ಯನವರು ಆಗ ಮಹಾಯುದ್ಧದ ಧಗೆ ಬೇರೆ ಆವರಿಸಿತ್ತು. ಬ್ರಿಟಿಷರ ಆಡಳಿತ ಕಾಲದಲ್ಲಿ 'ಇಂಗ್ಲಿಷಿನ ಪ್ರಭಾವ ಎಲ್ಲೆಡೆ ಇದ್ದಾಗ ಕನ್ನಡಕ್ಕಾಗಿ ಶ್ರಮಿಸಿದರು. ಕನ್ನಡ ಪಂಡಿತರಿಗೆ ಉಳಿದವರಿಗಿಂತ ಕಡಿಮೆ ಸಂಬಳ ಇದ್ದಕಾಲ. ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆ, ಸಮ್ಮೇಳನಾಧ್ಯಕ್ಷರ ಭಾಷಣ ಸಹ ಇಂಗ್ಲೀಷಿನಲ್ಲಿ ಮಾಡಬೇಕಾದ ಪರಿಸ್ಥಿತಿ. ಇಂಥ ಕಾಲದಲ್ಲಿ ಎಚ್. ವಿ. ನಂಜುಂಡಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ಎಂ. ಶಾಮರಾಯರು ಉಪಾಧ್ಯಕ್ಷರಾಗಿದ್ದರು.

ಇವರ ಅನಂತರ ಅಧ್ಯಕ್ಷರಾದವರು ಎಂ. ಕಾಂತರಾಜ ಅರಸು ಅವರು (೧೯೨೦-೧೯೨೩) ಅವರಾದ ಮೇಲೆ ಯುವರಾಜ ಕಂಠೀರವ ಚಾಮರಾಜೇಂದ್ರ ಒಡೆಯರ್ ಪರಿಷತ್ತಿನ ಅಧ್ಯಕ್ಷರಾದರು. ಇವರ ನಂತರ ಒಂಟಿಮುರಿ ಶ್ರೀಮಂತ ಬಸವಪ್ರಭು ಸರದೇಸಾಯಿ ಅವರು (೧೯೪೧-೧೯೪೬) ಆಮೇಲೆ ಜಸ್ಟೀಸ್ ಲೋಕೂರು ನಾರಾಯಣರಾವ್ ಸ್ವಾಮಿರಾವ್ ಅವರು ಅಧ್ಯಕ್ಷರಾಗಿದ್ದರು.

"ಆಗ ನಿಬಂಧನೆಯಲ್ಲಿ "ರಾಜ್ಯಾಧಿಪತಿಗಳು, ಶ್ರೀಮಂತರು, ಉನ್ನತ ಪದವಿಯಲ್ಲಿರುವವರು ಮಾತ್ರ ಮಹಾಪೋಷಕರು ಅಥವಾ ಪೋಷಕರು ಆಗಿರಬೇಕು" ಇವರ ಪೈಕಿ ಅಧ್ಯಕ್ಷರನ್ನು ಆರಿಸಲಾಗುತ್ತಿತ್ತು. ೧೯೪೭ರ ನಂತರ ಈ ನಿಯಮ ರದ್ದಾಯಿತು.

ಈ ಅರಸರು ಅಥವಾ ಶ್ರೀಮಂತರು ಪರಿಷತ್ತಿನ ಅಧ್ಯಕ್ಷರಾದ ಕಾಲದಲ್ಲಿ ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಹೊಂದಿರುವ ವಿದ್ವಾಂಸರನ್ನು ಪರಿಷತ್ತಿನ ಆಜೀವ ಗೌರವ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿತ್ತು. ಇವರ ಪೈಕಿ ಒಬ್ಬರು ಪರಿಷತ್ತಿನ ಉಪಾಧ್ಯಕ್ಷರಾಗಿರುತ್ತಿದ್ದರು. ಹೀಗೆ ಉಪಾಧ್ಯಕ್ಷರೆನಿಸಿಕೊಂಡವರು ಕ್ರಮವಾಗಿ ಕರ್ಪೂರ ಶ್ರೀನಿವಾಸರಾವ್, ಡಿವಿಜಿ, ಬಿಎಂಶ್ರೀ, ಮಾಸ್ತಿ ಅವರು ವಾಸ್ತವಿಕದಲ್ಲಿ ಪರಿಷತ್ತಿನ ಕಾರ್ಯಗಳನ್ನೆಲ್ಲ ಅಧ್ಯಕ್ಷರ ಹೆಸರಿನಲ್ಲಿ ನಡೆಸಿದರು. ಪದನಾಮದಲ್ಲಿ ಮಾತ್ರ ಉಪಾಧ್ಯಕ್ಷರು ಅಷ್ಟೆ.

ಕಾಸರಗೋಡು ಸಮ್ಮೇಳನದಲ್ಲಿ ಈ ಪದ್ಧತಿ ರದ್ದಾಗಿ ತಿರುಮಲೆ ತಾತಾಚಾರ್ಯಶರ್ಮರು ಪರಿಷತ್ತಿನ ಅಧ್ಯಕ್ಷರಾದರು. ಆದರೆ ಸಮ್ಮೇಳನದ ಕಾಲದಲ್ಲೇ ವಾರ್ಷಿಕಾಧಿವೇಶನ ನಡೆಸುವುದು ಸಮ್ಮೇಳನಾಧ್ಯಕ್ಷರನ್ನೇ ಒಂದು ವರ್ಷ ಕಾಲ ಪರಿಷತ್ತಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಪದ್ಧತಿ ಇತ್ತು. ಒಂದು ವರ್ಷ ಅವಧಿ ಸಾಲದೆಂದು ಎಂ. ಆರ್. ಶ್ರೀ. ಅವರ ಕಾಲಕ್ಕೆ ಅಧಿಕಾರಾವಧಿ ೩ ವರ್ಷಗಳ ಅಧ್ಯಕ್ಷರ ಅವಧಿ ನಿರ್ಧಾರವಾಯಿತು. ಈಗಲೂ ಪರಿಷತ್ತಿನ ಅಧ್ಯಕ್ಷರ ಅಧಿಕಾರಾವಧಿ ೩ ವರ್ಷಗಳಿವೆ. ಒಮ್ಮೆ ೫ ವರ್ಷ ಅವಧಿ ಇರಬೇಕೆಂಬ ಸಲಹೆ ಬಂದು ತಿರಸ್ಕೃತವಾಯಿತು.

ಅನಂತರ ಉತ್ತಂಗಿ ಚೆನ್ನಪ್ಪನವರ ಕಾಲದಲ್ಲಿ ಅವರು ಧಾರವಾಡದಲ್ಲಿ ಇದ್ದು ಸಂಶೋಧನೆಯಲ್ಲಿ ನಿರತರಾಗಿ ಬೆಂಗಳೂರಿನಲ್ಲಿರುತ್ತಿರಲಿಲ್ಲ. ಅವರ ಪರ ಸಿದ್ಧವನಹಳ್ಳಿ ಶರ್ಮರೇ ಕಾರ್ಯದರ್ಶಿಯಾಗಿ ಕಾರ್ಯ ನಿಭಾಯಿಸಿದರು. ಅನಂತರ ಪರಿಷತ್ತಿನ ಅಧ್ಯಕ್ಷರು ಅಧಿಕಾರಾವಧಿಯಲ್ಲಿ ಬೆಂಗಳೂರಿನಲ್ಲಿ ವಾಸಿಸಬೇಕು ಎಂದಾಯಿತು.

ಹೀಗೆ ರಾಜ್ಯಾಧಿಪತಿಗಳೇ ಅಧ್ಯಕ್ಷರಾದ ಘಟ್ಟ, ಅರ್ಥಾತ್ ಉಪಾಧ್ಯಕ್ಷರ ಆಳ್ವಿಕೆ ಘಟ್ಟ, ಇದು ಮೊದಲ ಘಟ್ಟ ಉಪಾಧ್ಯಕ್ಷರ ಸ್ಥಾನ ರದ್ದಾಗಿ ಅಧ್ಯಕ್ಷರೊಬ್ಬರೇ ಪರಿಷತ್ತಿನ ಅಧಿಕಾರ ವಹಿಸಿಕೊಳ್ಳುವುದು ಎರಡನೇ ಘಟ್ಟ, ಸಮ್ಮೇಳನದಲ್ಲಿ ೧ ವರ್ಷಕ್ಕೆ ಆಯ್ಕೆ ಆಗುವುದು ತಪ್ಪಿ ೩ ವರ್ಷ ಅಧಿಕಾರಾವಧಿ ಜಾರಿಗೆ ಬಂದಿದ್ದು ೩ನೇ ಘಟ್ಟ ಹೀಗೆ ೩ ಪ್ರಮುಖ ಘಟ್ಟಗಳಲ್ಲಿ ಅಧಿಕಾರ ಇತಿಹಾಸ ಬೆಳೆದುಬಂದಿದೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಇತಿಹಾಸ ಗಮನಿಸಿದರೆ ಕೆಲವು ವಿಶೇಷಾಂಶಗಳು ಕಾಣುತ್ತವೆ.

ಎಲ್ಲ ಅಧ್ಯಕ್ಷರೂ ಸಂಬಳ ಸಾರಿಗೆ ಸವಲತ್ತುಗಳಿಗಾಗಿ ಅಧ್ಯಕ್ಷರಾಗಿರಲಿಲ್ಲ. ಸೇವಾ ಮನೋಭಾವದಿಂದ ಬಂದವರು ಕೆಲವು ಅಧ್ಯಕ್ಷರು ಉಳಿದ ಅಧ್ಯಕ್ಷರುಗಳಿಗಿಂತ ವಿಶಿಷ್ಟಕಾರ್ಯಗಳನ್ನು ಮಾಡಿ ಪ್ರಸಿದ್ಧರಾಗಿದ್ದಾರೆ. ಬಿಎಂಶ್ರೀ ಡಿವಿಜಿ, ಮಾಸ್ತಿ, ಜಿ. ನಾರಾಯಣ ಮೊದಲಾದವರು ಪರಿಷತ್ತನ್ನು ಸಾರ್ವಜನಿಕರ ಮನೆಬಾಗಿಲಿಗೆ ಒಯ್ಯಲು, ನಾಡಿನಾದ್ಯಂತ ಜನರಿಗೆ ಪರಿಚಯವಾಗಲು ಪ್ರಚಾರ, ಪ್ರಸಾರದ ಮೂಲಕ ಚಟುವಟಿಕೆಗಳನ್ನು ನಡೆಸಿದ್ದಾರೆ. ಹಿಂದಿನ ಅಧ್ಯಕ್ಷರ ಕಾರ್ಯ ಚಟುವಟಿಕೆಗಳ ಜತೆಗೆ ನೂತನ ಕಾರ್ಯಕ್ರಮಗಳನ್ನು ನಡೆಸಿದರು. ಉದಾಹರಣೆಗೆ, ನಾಡೆಲ್ಲಾ ಸುತ್ತಿ ಪರಿಷತ್ತನ್ನು ಪ್ರಚಾರ ಮಾಡಿದವರು. ಬಿಎಂಶ್ರೀ ಕಾವ, ಜಾಣ ಪರೀಕ್ಷೆಗಳನ್ನು ಪ್ರಾರಂಭಿಸಿದರು. ಅಚ್ಚುಕೂಟ ಪ್ರಾರಂಭಿಸಿದರು ಇತ್ಯಾದಿ ಡಿವಿಜಿ ಅವರು ವಸಂತೋತ್ಸವ, ಗಮಕ ತರಗತಿ ಪ್ರಾರಂಭ, ಸಂಚಾರೋಪನ್ಯಾಸ ಮಾಲೆ ಇತ್ಯಾದಿ ಪ್ರಾರಂಭಿಸಿದರು. ಮಾಸ್ತಿ ಅವರು ನಾಡೆಲ್ಲಾ ಸುತ್ತಿ ಸದಸ್ಯವರ್ಗವನ್ನು ಹೆಚ್ಚಿಸಿದರು.

ಕೆಲವು ಪರಿಷತ್ತಿನ ಅಧ್ಯಕ್ಷರ ತ್ಯಾಗಮನೋಭಾವವು ಉಲ್ಲೇಖನೀಯವಾಗಿದೆ. ಮಾಸ್ತಿ, ಪುನರೂರು ಪುಂಡಲೀಕ

ಮೊದಲಾದ ಪರಿಷತ್ತಿನ ಅಧ್ಯಕ್ಷರು ಪರಿಷತ್ತಿನ ನಿಯಮಾನುಸಾರ ಪಡೆಯಬೇಕಾದ ಪ್ರವಾಸಭತ್ಯೆ ಗೌರವ ಸಂಭಾವನೆ ಇತ್ಯಾದಿಗಳನ್ನು ಮುಟ್ಟಿಲ್ಲ. ತಮ್ಮದೇ ವೆಚ್ಚದಲ್ಲಿ ಪರಿಷತ್ತಿನ ಸೇವೆ ಮಾಡಿದ್ದಾರೆ. ಪರಿಷತ್ತಿನ ಅಧ್ಯಕ್ಷರು ಒಂದೇ ವರ್ಗಕ್ಕೆ ಸೇರಿದವರಲ್ಲ ೨೪ ಜನರಲ್ಲಿ ವಿದ್ವಾಂಸರಿದ್ದಾರೆ, ಪ್ರಾಧ್ಯಾಪಕರಿದ್ದಾರೆ ಕವಿಗಳಿದ್ದಾರೆ. ಆಡಳಿತಾಧಿಕಾರಿಗಳಿದ್ದಾರೆ. ಸಾಮಾಜಿಕ ಸೇವಾಕರ್ತರಿದ್ದಾರೆ, ಕೀರ್ತನಕಾರರಿದ್ದಾರೆ, ಶಿಕ್ಷಣ ತಜ್ಞರಿದ್ದಾರೆ. ಆದರೆ ಇದುವರೆಗೆ ಮಹಿಳೆಯರಾರು ಅಧ್ಯಕ್ಷರು ಆಗಿಲ್ಲ. ಸಮ್ಮೇಳನಾಧ್ಯಕ್ಷರಲ್ಲಿ ಹಲವರು ಮಹಿಳೆಯರಿದ್ದಾರೆ. ಮತ್ತೆ ಪರಿಷತ್ತಿನ ಅಧ್ಯಕ್ಷರಲ್ಲಿ ಕೆಲವರು ಸಮ್ಮೇಳನಾಧ್ಯಕ್ಷರು ಆಗಿದ್ದಾರೆ. ಎಚ್. ವಿ. ನಂಜುಂಡಯ್ಯ, ಎಂ. ಆರ್. ಶ್ರೀ., ಮಾಸ್ತಿ, ಎ. ಎನ್. ಮೂರ್ತಿರಾವ್, ಜಿ. ವೆಂಕಟಸುಬ್ಬಯ್ಯ, ತಿರುಮಲೆ ತಾತಾಚಾರ್ಯಶರ್ಮ, ಡಿವಿಜಿ, ಬಿ. ಎಂ.ಶ್ರೀ. ಪರಿಷತ್ತಿನ ಅಧ್ಯಕ್ಷರೂ ಆಗಿದ್ದಾರೆ ಸಮ್ಮೇಳನಾಧ್ಯಕ್ಷರೂ ಆಗಿದ್ದಾರೆ.

ಮಹಾರಾಜರ, ಸರ್ಕಾರದ ಅನುದಾನವನ್ನು ಪಡೆಯಲು ಪರಿಷತ್ತಿನ ಅಧ್ಯಕ್ಷರೆಲ್ಲ ಶಕ್ತ್ಯಾನುಸಾರ ಶ್ರಮಿಸಿದ್ದಾರೆ. ಆದರೆ ಕೆಲವು ಅಧ್ಯಕ್ಷರು. ಗೊರುಚ, ಪುಂಡಲೀಕ, ಮೊದಲಾದವರು ಪರಿಷತ್ತು ತನ್ನ ಕಾಲ ಮೇಲೆ ತಾನೇ ನಿಲ್ಲಬೇಕೆಂದು ಶಾಶ್ವತನಿಧಿಗಳ ಸ್ಥಾಪನೆಗೆ ಯತ್ನಿಸಿದ್ದಾರೆ.

ಎಲ್ಲ ಅಧ್ಯಕ್ಷರೂ ಪರಿಷತ್ತಿನ ಪ್ರಕಟನೆಗಳನ್ನು ತರಲು ಆಸಕ್ತಿ ತಳೆದಿದ್ದರೆ. ಆದರೆ ಪುಸ್ತಕ ಭಂಡಾರದ ಅಭಿವೃದ್ಧಿಗೆ ವಿಶೇಷ ಗಮನವಿತ್ತವರು ಕೆಲವೇ ಜನ. ಪುಸ್ತಕ ಭಂಡಾರಕ್ಕೆ ಕೆಲವರು ತಮ್ಮ ಅಧಿಕಾರಾವಧಿಯಲ್ಲಿ ನೂರಾರು ಪುಸ್ತಕಗಳನ್ನು ಕೊಂಡರೆ ಮತ್ತು ಕೆಲವರು ತಮ್ಮ ಅಧಿಕಾರಾವಧಿಯಲ್ಲಿ ಒಂದು ಪುಸ್ತಕವನ್ನು ಕೊಂಡಿಲ್ಲ. ದತ್ತಿನಿಧಿಗಳ ಸ್ಥಾಪನೆಗೆ ನಾಂದಿ ಹಾಡಿದವರು ಬಿಎಂಶ್ರೀ ಅವರು. ಅಲ್ಲಿಂದೀಚೆಗೆ ಎಲ್ಲ ಅಧ್ಯಕ್ಷರೂ ಹೆಚ್ಚಿಸಲು ಶ್ರಮಿಸಿದ್ದಾರೆ. ಕೆಲವು ಅಧ್ಯಕ್ಷರು ಪರಿಷತ್ತಿನ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ಪ್ರಯತ್ನಿಸಿದ್ದಾರೆ. ಪರಿಷತ್ತಿನ ಚಟುವಟಿಕೆಗಳು ಕೆಲವು ಅಧ್ಯಕ್ಷರು ಹೊಸ ಚಟುವಟಿಕೆ ಪ್ರಾರಂಭಿಸಿದರೆ ಉಳಿದವರು ಮುಂದುವರೆಸುವುದಿಲ್ಲ. ಉದಾಹರಣೆಗೆ ಜಿ. ನಾರಾಯಣರ ಕಾಲದಲ್ಲಿ ಸ್ಥಿರಪುಸ್ತಕ ಪ್ರದರ್ಶನ, ಶೀಘ್ರಲಿಪಿ ಬೆರಳಚ್ಚು ತರಗತಿಗಳು, ಸಂಶೋಧನ ವಿಭಾಗ ಮುಂತಾದವು ಪ್ರಾರಂಭವಾದವು. ಮುಂದಿನ ಅಧ್ಯಕ್ಷರು ಮುಂದುವರೆಸಲಿಲ್ಲ. ಶಿವಮೂರ್ತಿಶಾಸ್ತ್ರಿಗಳು ಭಾಷಣ ಕಲಾ ತರಗತಿಗಳನ್ನು ಪ್ರಾರಂಭಿಸಿದರು. ಮುಂದುವರೆಯಲಿಲ್ಲ. ಹಂಪನಾ ಅವರು ಗೌರವಸದಸ್ಯತ್ವ ನೀಡುವ ಪದ್ಧತಿ ಪ್ರಾರಂಭಿಸಿದರು. ಈಗ ಮುಂದುವರೆದಿಲ್ಲ. ಡಿವಿಜಿ ಅವರು ಗಮಕ ತರಗತಿಗಳನ್ನು ಪ್ರಾರಂಭಿಸಿದರು. ಈಚೆನವರೆಗೆ ನಡೆದು ಈಗ ನಿಂತು ಹೋಗಿದೆ. ಹೀಗೆ ಹಲವಾರು ಏರುಪೇರುಗಳನ್ನು ಅಧ್ಯಕ್ಷರ ಆಳ್ವಿಕೆಯಲ್ಲಿ ಕಾಣಬಹುದು.

ಒಟ್ಟಿನಲ್ಲಿ ಪರಿಷತ್ತಿನ ಅಧ್ಯಕ್ಷರೆಲ್ಲ ಕೈಲಾದಷ್ಟರಮಟ್ಟಿಗೆ ದುಡಿದು ಪರಿಷತ್ತಿನ ಇಂದಿನ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ ಎಂಬುದರಲ್ಲಿ ಬೇರೆ ಮಾತಿಲ್ಲ.

ಈ ಸಂದರ್ಭದಲ್ಲಿ ಮರೆಯಬಾರದ ಸಂಗತಿ ಒಂದಿದೆ. ಅದು ಎಂದರೆ ಪರಿಷತ್ತಿನ ಪದಾಧಿಕಾರಿಗಳ ಸೇವೆ ವಿಚಾರ. ಪರಿಷತ್ತಿನ ಪದಾಧಿಕಾರಿಗಳು ಎಂದರೆ ಅಧ್ಯಕ್ಷರ ಜತೆಗೆ ಹೆಗಲಿಗೆ ಹೆಗಲು ಕೊಟ್ಟು ಹಗಲಿರುಳು ಸೇವೆ ಸಲ್ಲಿಸುವ ಗೌರವ ಕಾರ್ಯದರ್ಶಿಗಳು (೨) ಗೌರವ ಕೋಶಾಧಿಕಾರಿಗಳು (೧) ಇವರು ಸೇನಾಧಿಪತಿಗಳಿದ್ದಂತೆ ಸೈನ್ಯವನ್ನು ನಡೆಸಿದಂತೆ ಪರಿಷತ್ತಿನ ಎಲ್ಲ ಚಟುವಟಿಕೆಗಳನ್ನು ಸಾಕ್ಷಾತ್ಕಾರಗೊಳಿಸಲು ಶ್ರಮಿಸಿದವರು. ಇವರಲ್ಲಿ ಸಹ ಅಧ್ಯಕ್ಷರುಗಳಂತೆ ತ್ಯಾಗಮನೋಭಾವದಿಂದ ಕೆಲಸ ಮಾಡಿದವರು ಇದ್ದಾರೆ. ಮಹಿಳಾ ಕಾರ್ಯದರ್ಶಿನಿಯರು ಇದ್ದಾರೆ. ಅಲ್ಪಕಾಲ ಕಾರ್ಯನಿರ್ವಹಿಸಿದವರು ಇದ್ದಾರೆ. ದೀರ್ಘಕಾಲ ಸೇವೆ ಸಲ್ಲಿಸಿದವರು ಇದ್ದಾರೆ. ಅಧ್ಯಕ್ಷರಿಗಿಂತ ಹೆಚ್ಚಾಗಿ ದುಡಿದವರಿದಾರೆ. ಇದುವರೆಗೆ ಪರಿಷತ್ತಿಗೆ ದುಡಿದ ಪದಾಧಿಕಾರಿಗಳ ಪಟ್ಟಿ ಹೀಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು

ಹೆಸರು	ಅಧಿಕಾರಾವಧಿ
೧. ರಾಜಮಂತ್ರಪ್ರವೀಣ ಶ್ರೀ ಎಚ್.ವಿ. ನಂಜುಂಡಯ್ಯ *	೧೯೧೫ - ೧೯೨೦
೨. ರಾಜಸೇವಾಧುರೀಣ ಸರ್. ಎಂ. ಕಾಂತರಾಜ ಅರಸ್	೧೯೨೦ - ೧೯೨೩
೩. ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್	೧೯೨೪ - ೧೯೪೦
೪. ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್	೧೯೪೦ - ೧೯೪೦
೫. ಶ್ರೀ ಒಂಟಮುರಿಯ ಶ್ರೀಮಂತ ಬಸವಪ್ರಭು ರಾಜಾ ಲಖಮನಗೌಡ ಸರದೇಸಾಯಿ ಬಹದ್ದೂರ್	೧೯೪೧ - ೧೯೪೬
೬ ಜಸ್ಟೀಸ್ ಶ್ರೀ ಲೋಕೂರ್ ನಾರಾಯಣರಾವ್ ಸ್ವಾಮಿರಾವ್	೦೮.೦೬.೧೯೪೭ - ೨೯.೧೨.೧೯೪೮
೭ ಶ್ರೀ ತಿರುಮಲೆ ತಾತಾಚಾರ್ಯಶರ್ಮ *	೨೯.೧೨.೧೯೪೮ - ೦೬.೦೩.೧೯೪೯
೮. ಶ್ರೀ ರೆವರೆಂಡ್ ಉತ್ತಂಗಿ ಚೆನ್ನಪ್ಪ *	೦೬.೦೩.೧೯೪೯ - ೧೭.೧೨.೧೯೫೦
೯. ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ *	೧೭.೧೨.೧೯೫೦ - ೧೬.೦೯.೧೯೫೩
೧೦. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ *	೩೦.೦೯.೧೯೫೩ - ೦೯.೦೫.೧೯೫೪
೧೧. ಪ್ರೊ. ಎ.ಎನ್. ಮೂರ್ತಿರಾವ್ *	೦೯.೦೫.೧೯೫೪ - ೧೭.೦೫.೧೯೫೬
೧೨. ಕೀರ್ತನಕೇಸರಿ ಪಂಡಿತ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ	೧೭.೦೫.೧೯೫೬ - ೨೫.೧೦.೧೯೬೪
೧೩. ಪ್ರೊ. ಜಿ. ವೆಂಕಟಸುಬ್ಬಯ್ಯ *	೨೫.೧೦.೧೯೬೪ - ೧೧.೦೬.೧೯೬೯
೧೪. ಶ್ರೀ ಜಿ. ನಾರಾಯಣ	೧೧.೦೬.೧೯೬೯ - ೨೩.೦೭.೧೯೭೮
೧೫. ಡಾ. ಹಂಪ ನಾಗರಾಜಯ್ಯ	೨೩.೦೭.೧೯೭೮ - ೧೯.೦೨.೧೯೮೬
೧೬. ಹೆಚ್.ಬಿ. ಜ್ವಾಲನಯ್ಯ	೧೯.೦೨.೧೯೮೬ - ೦೧.೧೧.೧೯೮೭
೧೭. ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ	೦೨.೦೨.೧೯೮೯ - ೧೪.೦೫.೧೯೯೨
೧೮. ಶ್ರೀ ಗೊ.ರು. ಚನ್ನಬಸಪ್ಪ	೧೪.೦೫.೧೯೯೨ - ೨೨.೦೬.೧೯೯೫
೧೯. ಡಾ. ಸಾ.ಶಿ. ಮರುಳಯ್ಯ	೨೨.೦೬.೧೯೯೫ - ೧೦-೦೭-೧೯೯೮
೨೦. ಶ್ರೀ ಎನ್. ಬಸವಾರಾಧ್ಯ	೧೦.೦೭.೧೯೯೮ - ೧೧.೦೭.೨೦೦೧
೨೧. ಶ್ರೀ ಹರಿಕೃಷ್ಣ ಪುನರೂರು	೧೧.೦೭.೨೦೦೧ - ೦೨.೧೧.೨೦೦೪
೨೨. ಪ್ರೊ. ಚಂದ್ರಶೇಖರ ಪಾಟೀಲ(ಚಂಪಾ)	೦೨.೧೧.೨೦೦೪ - ೩೦-೦೪-೨೦೦೮
೨೩. ಡಾ. ನಲ್ಲೂರು ಪ್ರಸಾದ್ ಆರ್.ಕೆ.	೨೭-೦೮-೨೦೦೮ - ೨೭-೦೨-೨೦೧೨
೨೪. ಶ್ರೀ ಪುಂಡಲೀಕ ಹಾಲಂಬಿ	೦೩-೦೫-೨೦೧೨ - ಈವರೆಗೆ

ಉಪಾಧ್ಯಕ್ಷರು

೧. ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಎಂ.ಶಾಮರಾವ್	೧೯೧೫-೧೯೧೯
೨. ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್ *	೧೯೧೯-೧೯೩೩
೩. ಶ್ರೀ ಡಿ.ವಿ. ಗುಂಡಪ್ಪ (ಡಿ.ವಿ.ಜಿ.) *	೧೯೩೪-೧೯೩೭
೪. ರಾಜಸೇವಾಸಕ್ತ ಶ್ರೀ ಬಿ.ಎಂ. ಶ್ರೀಕಂಠಯ್ಯ (ಬಿ.ಎಂ.ಶ್ರೀ) *	೧೯೩೮-೧೯೪೨
೫. ರಾಜಸೇವಾಸಕ್ತ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್	೧೯೪೩-೧೯೪೭

(೧೯೪೭ ಡಿಸೆಂಬರ್ ೨೯ನೇ ತಾರೀಖಿನಿಂದ ಉಪಾಧ್ಯಕ್ಷಸ್ಥಾನ ರದ್ದಾಯಿತು.)

*** ಈ ಗುರುತಿನ ಅಧ್ಯಕ್ಷರು, ಉಪಾಧ್ಯಕ್ಷರು ಸಮ್ಮೇಳನಾಧ್ಯಕ್ಷರೂ ಆಗಿದ್ದಾರೆ.**

ಆಡಳಿತಾಧಿಕಾರಿಗಳು

೧.	ಶ್ರೀ ಅ.ರಾ. ಚಂದ್ರಹಾಸಗುಪ್ತ	೦೨.೧೧.೧೯೮೭ - ೩೧.೦೩.೧೯೮೮
೨.	ಶ್ರೀ ಐ.ಎಂ. ವಿಠ್ಠಲಮೂರ್ತಿ	೩೧.೦೩.೧೯೮೮ - ೦೨.೦೨.೧೯೮೯
೩.	ಶ್ರೀ ವೆಂಕಟೇಶ ಮಾಚಕನೂರ	೩೦-೦೪-೨೦೦೮ - ೨೧-೦೭-೨೦೦೮
೪.	ಡಾ. ಮನು ಬಳಿಗಾರ್	೨೧-೦೭-೨೦೦೮ - ೨೭-೦೮-೨೦೦೮
		೨೭-೦೨-೨೦೧೨ - ೦೩-೦೫-೨೦೧೨

ಕಾರ್ಯದರ್ಶಿಗಳು

೧.	ಬಿ. ಕೃಷ್ಣಪ್ಪ	೦೫.೦೫.೧೯೧೫ - ೦೨.೧೧.೧೯೧೬
೨.	ಬಿ. ವೆಂಕಟನಾರಾಯಣಪ್ಪ	೦೭.೦೫.೧೯೧೬- ೨೯.೦೯.೧೯೧೬
೩.	ಆರ್. ರಘುನಾಥರಾವ್	೨೯.೦೯.೧೯೧೬ -೧೯೧೮
೪.	ಪಿ.ಎಸ್. ಅಚ್ಯುತರಾವ್	೦೨.೧೧.೧೯೧೬ - ೧೯೧೭
೫.	ಹೆಚ್. ಚನ್ನಕೇಶವಯ್ಯಂಗಾರ್	೧೯೧೮ - ೧೯೧೮
೬	ಎಂ.ಎಸ್. ಪುಟ್ಟಣ್ಣ	೧೯೧೮ - ೧೯೧೯
೭	ಎನ್. ವೆಂಕಟೇಶಯ್ಯಂಗಾರ್	೧೯೧೯ - ೧೯೨೧
೮.	ಬೆಳ್ಳಾವೆ ವೆಂಕಟನಾರಾಯಣಪ್ಪ	೧೯೨೧ - ೧೯೨೬
೯.	ಎನ್. ವೆಂಕಟೇಶಯ್ಯಂಗಾರ್	೧೯೩೦ - ೨೧.೦೩.೧೯೩೦
೧೦.	ಸಿ.ಕೆ. ವೆಂಕಟರಾಮಯ್ಯ	೨೧.೦೩.೧೯೩೦ - ೨೧.೦೩.೧೯೩೭
೧೧.	ಬಿ. ವೆಂಕೋಬರಾವ್	೧೯೪೦ - ೨೫.೦೨.೧೯೪೧
೧೨.	ಡಿ.ಸಿ. ಸುಬ್ಬರಾಯಪ್ಪ	೧೯೪೧ - ೧೯೪೨
೧೩.	ಬಿ. ವೆಂಕೋಬರಾವ್	೧೯೪೦ - ೨೫.೦೨.೧೯೪೧
೧೪.	ಡಿ.ಸಿ. ಸುಬ್ಬರಾಯಪ್ಪ	೧೯೪೧ - ೧೯೪೨
೧೫.	ಕ.ವೆಂ. ರಾಘವಾಚಾರ್	೧೯೪೨ - ೧೯೪೩
೧೬.	ಬಿ. ವೆಂಕೋಬರಾವ್	೧೯೪೩ - ೧೯೪೪
೧೭.	ಕ.ವೆಂ. ರಾಘವಾಚಾರ್	೧೯೪೪ - ೧೯೪೫
೧೮.	ಕೆ. ರೇವಣ್ಣ	೧೯೪೫ - ೧೯೪೬
೧೯.	ಕ.ವೆಂ. ರಾಘವಾಚಾರ್	೧೯೪೬ - ೧೯೪೭
೨೦.	ಗೋಪಾಲಕೃಷ್ಣರಾವ್	೧೯೪೭ - ೧೯೪೮
೨೧.	ಸಿ.ಕೆ. ನಾಗರಾಜರಾವ್	೦೮.೦೫.೧೯೪೭ - ೨೯.೧೨.೧೯೪೭
೨೨.	ಎಲ್. ಎಸ್. ಶೇಷಗಿರಿರಾವ್	೨೯.೧೨.೧೯೪೭ - ೧೭.೦೨.೧೯೫೦
೨೩.	ಸಿದ್ಧವನಹಳ್ಳಿ ಕೃಷ್ಣಶರ್ಮ	೦೬.೦೩.೧೯೪೯ - ೧೦.೦೬.೧೯೫೦
೨೪.	ಎಂ.ಎ. ನರಸಿಂಹಾಚಾರ್	೧೦.೦೬.೧೯೫೦ - ೧೩.೦೯.೧೯೫೦
೨೫.	ಕಾ.ಸ. ಧರಣೇಂದ್ರಯ್ಯ	೧೩.೦೯.೧೯೫೦ - ೦೧.೦೨.೧೯೫೨
೨೬.	ಸಿ.ಕೆ. ನಾಗರಾಜರಾವ್	೦೧.೦೨.೧೯೫೨ - ೩೦.೦೮.೧೯೫೩
೨೭.	ಎ.ಎನ್. ಮೂರ್ತಿರಾವ್ *	೩೧.೦೮.೧೯೫೩ - ೦೯.೦೫.೧೯೫೪

೨೮. ಡಿ.ಸಿ. ಸುಬ್ಬರಾಯಪ್ಪ	೦೯.೦೫.೧೯೫೪ – ೧೭.೦೬.೧೯೫೬
೨೯. ಜಿ. ವೆಂಕಟಸುಬ್ಬಯ್ಯ *	೦೯.೦೫.೧೯೫೪ – ೧೭.೦೬.೧೯೫೬
೩೦. ಡಿ.ಆರ್. ರಾಮಯ್ಯ	೧೭.೦೬.೧೯೫೬ – ೧೭.೦೬.೧೯೫೬
೩೧. ಸಿ.ಕೆ. ನಾಗರಾಜರಾವ್	೧೭.೦೬.೧೯೫೬ – ೨೦.೦೩.೧೯೬೧
೩೨. ಕೆ. ಗೋಪಾಲಕೃಷ್ಣರಾವ್	೨೮.೧೦.೧೯೫೬ – ೨೦.೦೩.೧೯೬೧
೩೩. ಜಿ. ಶ್ರೀನಿವಾಸನ್	೦೮.೧೦.೧೯೫೮ – ೨೭.೦೫.೧೯೫೬
೩೪. ಡಿ.ಆರ್. ರಾಮಯ್ಯ	೨೭.೦೫.೧೯೫೯ – ೨೪.೦೧.೧೯೬೦
೩೫. ಅನ್ನದಾನಯ್ಯ ಪುರಾಣಿಕ	೨೪.೦೧.೧೯೬೦ – ೨೫.೧೦.೧೯೬೪
೩೬. ಕೆ.ಎಂ. ಕೃಷ್ಣರಾವ್	೨೧.೦೩.೧೯೬೧ – ೨೫.೧೦.೧೯೬೪
೩೭. ಎಸ್. ಶಂಕರಪ್ಪ	೨೮.೦೯.೧೯೬೩ – ೨೫.೧೦.೧೯೬೪
೩೮. ಕೆ.ಎಸ್. ನಿರಂಜನ	೨೬.೧೦.೧೯೬೪ – ೧೨.೦೫.೧೯೬೫
೩೯. ಹೆಚ್.ಆರ್. ದಾಸೇಗೌಡ	೨೬.೧೦.೧೯೬೪ – ೨೦.೦೧.೧೯೬೫
೪೦. ಜಿ.ಕೆ. ಗುಂಡೂರಾವ್	೧೭.೦೫.೧೯೬೫ – ೩೦.೦೬.೧೯೬೫
೪೧. ಎಂ.ಎಚ್. ಕೃಷ್ಣಯ್ಯ	೦೧.೦೭.೧೯೬೫ – ೦೧.೧೦.೧೯೬೫
೪೨. ಬಿ.ಎನ್. ಶಾಸ್ತ್ರಿ	೦೧.೦೭.೧೯೬೫ – ೨೬.೧೦.೧೯೬೬
೪೩. ವೆಂಕಟೇಶ ಸಾಂಗಲಿ	೨೭.೧೦.೧೯೬೬ – ೦೫.೧೧.೧೯೬೭
೪೪. ಹಂಪ ನಾಗರಾಜಯ್ಯ	೨೭.೧೦.೧೯೬೬ – ೧೧.೦೫.೧೯೬೯
೪೫. ಅ.ರಾ. ಮಿತ್ರ	೧೨.೦೫.೧೯೬೯ – ೨೫.೦೮.೧೯೭೦
೪೬. ಹಂಪ ನಾಗರಾಜಯ್ಯ *	೧೨.೦೫.೧೯೬೯ – ೩೦.೦೯.೧೯೭೪
೪೭. ವೆಂಕಟೇಶ ಸಾಂಗಲಿ	೨೫.೦೮.೧೯೭೦ – ೩೧.೧೨.೧೯೭೫
೪೮. ಜಿ.ಕೆ. ಗುಂಡೂರಾವ್	೦೧.೧೧.೧೯೭೪ – ೨೬.೦೭.೧೯೭೮
೪೯. ಡಿ. ಲಿಂಗಯ್ಯ	೨೬.೦೭.೧೯೭೮ – ೧೬.೦೪.೧೯೮೨
೫೦. ಜಿ. ಅಶ್ವತ್ಥ ನಾರಾಯಣ	೨೬.೦೭.೧೯೭೮ – ೧೬.೦೯.೧೯೭೯
೫೧. ಲಕ್ಷ್ಮಣ್ ತೆಲಗಾವಿ	೧೭.೦೯.೧೯೭೯ – ೧೯.೦೨.೧೯೮೬
೫೨. ಹೊ.ವೆ. ನಾರಾಯಣಸ್ವಾಮಿ	೧೩.೦೫.೧೯೮೨ – ೦೯.೧೧.೧೯೮೪
೫೩. ಚಂದ್ರಕಾಂತ ಪಡೆಸೂರ	೧೭.೧೧.೧೯೮೪ – ೦೨.೧೧.೧೯೮೭
೫೪. ಜಿ.ವಿ. ಶಿವಸ್ವಾಮಿ	೨೦.೦೨.೧೯೮೬ – ೦೨.೧೧.೧೯೮೭
೫೫. ಸಾ.ಶಿ. ಮರುಳಯ್ಯ *	೨೨.೦೨.೧೯೮೯ – ೧೬.೧೦.೧೯೮೯
೫೬. ಟಿ. ಶ್ರೀನಿವಾಸರಾಜು	೨೪.೦೨.೧೯೮೯ – ೧೭.೦೨.೧೯೯೦
೫೭ ಗೊ.ರು. ಚನ್ನಬಸಪ್ಪ *	೧೬.೧೦.೧೯೮೯ – ೧೭.೦೨.೧೯೯೦
೫೮. ಟಿ. ರಾಮಯ್ಯ	೧೬.೦೪.೧೯೯೦ – ೧೪.೦೫.೧೯೯೨
೫೯. ಎಸ್. ಶ್ರೀನಿವಾಸನ್	೨೦.೦೫.೧೯೯೨ – ೨೨.೦೬.೧೯೯೫
೬೦. ಜಿ. ಚನ್ನವೀರಸ್ವಾಮಿ	೦೩.೦೬.೧೯೯೨ – ೨೨.೦೬.೧೯೯೫
೬೧. ಎಂ.ಜಿ. ನಾಗರಾಜ್	೧೩.೦೯.೧೯೯೩ – ೨೨.೦೬.೧೯೯೫
೬೨. ನರಹಳ್ಳಿ ಬಾಲಸುಬ್ರಹ್ಮಣ್ಯ	೨೬.೦೬.೧೯೯೫ – ೦೬.೧೨.೧೯೯೫
೬೩. ಕೆ.ಆರ್. ಇಕ್ಬಾಲ್ ಅಹಮದ್	೨೬.೦೬.೧೯೯೫ – ೦೩.೦೧.೧೯೯೭

೬೪.	ಶ್ರೀಮತಿ ವತ್ಸಲಾ ಪ್ರಭು	೦೬.೧೨.೧೯೯೫ – ೦೩.೦೧.೧೯೯೭
೬೫.	ಎಂ.ಆರ್. ವಿಶ್ವನಾಥರೆಡ್ಡಿ	೨೦.೦೧.೧೯೯೭ – ೧೬.೦೪.೧೯೯೭
೬೬.	ಪುಂಡಲೀಕ ಹಾಲಂಬಿ *	೧೯.೦೨.೧೯೯೭ – ೧೦.೦೭.೧೯೯೮
೬೭.	ಬೇಡರೆಡ್ಡಿಹಳ್ಳಿ ಪಂಪಣ್ಣ	೧೧.೦೬.೧೯೯೭ – ೧೦.೦೭.೧೯೯೮
೬೮.	ಡಾ. ಸಿ. ವೀರಣ್ಣ	೧೦.೦೭.೧೯೯೮ – ೧೫.೦೫.೨೦೦೧
೬೯.	ಡಾ. ಕೆ.ವಿ. ಚಂದ್ರಣ್ಣಗೌಡ	೧೦.೦೭.೧೯೯೮ – ೧೧-೦೭-೨೦೦೧
೭೦.	ಡಾ. ಸಿ. ವೀರಣ್ಣ	೧೮.೦೭.೨೦೦೧ – ೦೫.೦೬.೨೦೦೨
೭೧.	ಪುಂಡಲೀಕ ಹಾಲಂಬಿ	೧೮.೦೭.೨೦೦೧ – ೦೨.೧೧.೨೦೦೪
೭೨.	ಪ್ರೊ|| ಜಿ. ಶಂಕರಯ್ಯ	೧೪.೦೬.೨೦೦೨ – ೦೨.೦೭.೨೦೦೪
೭೩.	ಜರಗನಹಳ್ಳಿ ಶಿವಶಂಕರ್	೦೪.೧೧.೨೦೦೪ – ೩೦-೦೪-೨೦೦೮
೭೪.	ಡಾ|| ಎಚ್. ಜಯಮ್ಮ ಕರಿಯಣ್ಣ	೧೬.೧೧.೨೦೦೪ – ೩೦-೦೪-೨೦೦೮
೭೫.	ಶ್ರೀ ಹೆಚ್.ಕೆ. ಮಳಲೀಗೌಡ	೩೦-೦೮-೨೦೦೮ – ೨೭-೦೨-೨೦೧೨
೭೬.	ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ	೧೫-೦೯-೨೦೦೮ – ೧೬-೦೧-೨೦೧೧
೭೭.	ಶ್ರೀ ಸಂಗಮೇಶ ಬಾದವಾಡಗಿ	೧೬-೦೧-೨೦೧೧ – ೨೭-೦೨-೨೦೧೧
೭೮.	ಶ್ರೀ ಸಂಗಮೇಶ ಬಾದವಾಡಗಿ	೧೦-೦೫-೨೦೧೨ – ೧೭-೦೭-೨೦೧೪
೭೯.	ಡಾ. ಕೋ.ವೆಂ. ರಾಮಕೃಷ್ಣೇಗೌಡ	೧೭-೦೫-೨೦೧೨ – ೧೪-೦೪-೨೦೧೩
೮೦.	ಶ್ರೀ ಸಿ.ಕೆ. ರಾಮೇಗೌಡ	೧೫-೦೪-೨೦೧೩ – ಇಲ್ಲಿಯವರೆಗೆ
೮೧.	ಡಾ. ರಾಜಶೇಖರ ಹತಗುಂದಿ	೨೧-೦೭-೨೦೧೪ – ಇಲ್ಲಿಯವರೆಗೆ

ಗೌರವ ಕೋಶಾಧಿಕಾರಿಗಳು

೧.	ಪಿ.ಎಸ್. ಅಚ್ಯುತರಾವ್	೦೫.೦೫.೧೯೧೫ – ೦೭.೦೫.೧೯೧೬
೨.	ಟಿ. ಲಕ್ಷ್ಮೀನರಸಿಂಹರಾಯರು	೦೭.೦೫.೧೯೧೬ – ೧೯೧೮
೩.	ಬಿ. ವೆಂಕಟೇಶಯ್ಯಂಗಾರ್	೧೯೧೮ – ೧೯೨೦
೪.	ಎನ್. ವೆಂಕಟನಾರಾಣಪ್ಪ	೧೯೨೦ – ೧೯೨೧
೫.	ಎನ್. ವೆಂಕಟೇಶಯ್ಯಂಗಾರ್	೧೯೨೧ – ೧೯೨೬
೬	ಬೆಳ್ಳಾವೆ ವೆಂಕಟನಾರಾಣಪ್ಪ	೧೯೨೬ – ೧೮.೦೨.೧೯೩೪
೭	ವಿ. ಸೀತಾರಾಮಯ್ಯ	೨೯.೧೨.೧೯೩೪ – ೧೯೪೦
೮.	ಡಿ.ಸಿ. ಸುಬ್ಬರಾಯಪ್ಪ	೧೯೪೦ – ೧೯೪೪
೯.	ಜಿ.ಪಿ. ರಾಜರತ್ನಂ	೧೯೪೫ – ೧೯೪೫
೧೦.	ಕೆ. ರೇವಣ್ಣ	೧೯೪೬ – ೨೯.೧೨.೧೯೪೭
೧೧.	ಎಂ. ವಾಸುದೇವಮೂರ್ತಿ	೨೯.೧೨.೧೯೪೭ – ೦೬.೦೩.೧೯೪೯
೧೨.	ಸಿ.ಕೆ. ನಾಗರಾಜರಾವ್	೦೬.೦೩.೧೯೪೯ – ೨೫.೦೪.೧೯೫೨
೧೩.	ಎಚ್.ಎಸ್. ಸೀತಾರಾಂ	೨೫.೦೪.೧೯೫೨ – ೩೦.೦೮.೧೯೫೩
೧೪.	ಡಿ.ಸಿ. ಸುಬ್ಬರಾಯಪ್ಪ	೦೪.೦೯.೧೯೫೩ – ೦೮.೦೫.೧೯೫೪

೧೫.	ಎನ್. ವರದರಾಜನ್	೦೯.೦೫.೧೯೫೪ – ೧೭.೦೬.೧೯೫೬
೧೬.	ಎಚ್.ಎಸ್. ಸೀತಾರಾಂ	೧೭.೦೬.೧೯೫೬ – ೦೭.೦೨.೧೯೫೭
೧೭.	ಜಿ. ಶ್ರೀನಿವಾಸನ್	೧೭.೦೬.೧೯೫೯ – ೨೮.೦೮.೧೯೬೦
೧೮.	ಎಚ್.ಎಸ್. ಸೀತಾರಾಂ	೦೬.೦೯.೧೯೫೭ – ೨೧.೦೫.೧೯೫೯
೧೯.	ಜಿ. ಶ್ರೀನಿವಾಸನ್	೦೭.೦೨.೧೯೫೭ – ೦೬.೦೯.೧೯೫೭
೨೦.	ಆರ್. ಅನಂತರಾಮನ್	೨೯.೦೮.೧೯೬೩ – ೨೫.೧೦.೧೯೬೪
೨೧.	ಎ.ಸಿ. ಭೈರಪ್ಪ	೨೬.೧೦.೧೯೬೪ – ೨೫.೧೧.೧೯೬೬
೨೨.	ಎನ್. ವರದರಾಜನ್	೨೬.೧೨.೧೯೬೬ – ೦೩.೦೯.೧೯೭೭
೨೩.	ಶ್ರೀಮತಿ ಎಸ್. ಪ್ರಮೀಳಾ	೦೩.೦೯.೧೯೭೭ – ೨೨.೦೭.೧೯೭೮
೨೪.	ಎಂ.ಪಿ. ದೇವರಾಜ್	೨೨.೦೯.೧೯೭೮ – ೦೨.೧೧.೧೯೮೭
೨೫.	ಎಸ್.ವಿ. ಶ್ರೀನಿವಾಸರಾವ್	೨೪.೦೨.೧೯೮೯ – ೧೪.೦೫.೧೯೯೨
೨೬.	ಹೆಚ್.ಆರ್. ದಾಸೇಗೌಡ	೧೮.೦೫.೧೯೯೨ – ೨೨.೦೬.೧೯೯೫
೨೭.	ಎಂ. ಶ್ರೀರಾಮಯ್ಯ	೨೬.೦೬.೧೯೯೫ – ೦೩.೦೧.೧೯೯೭
೨೮.	ಕೆ.ಎಂ. ಸೀತಾರಾಮಯ್ಯ	೨೦-೦೧-೧೯೯೭ – ೧೦.೦೭.೧೯೯೮
೨೯.	ಆರ್.ಎಸ್. ನಾರಾಯಣ	೨೯.೦೭.೧೯೯೮ – ೧೩.೦೫.೧೯೯೯
೩೦.	ಬಿ.ಎನ್. ಸತ್ಯನಾರಾಯಣರಾವ್	೧೪.೦೫.೧೯೯೯ – ೧೧.೦೭.೨೦೦೧
೩೧.	ಡಾ॥ ನಲ್ಲೂರು ಪ್ರಸಾದ್	೧೮.೦೭.೨೦೦೧ – ೦೧.೦೯.೨೦೦೪
೩೨.	ಪುಂಡಲೀಕ ಹಾಲಂಬಿ	೧೮.೧೧.೨೦೦೪ – ೩೦-೦೪-೨೦೦೮
೩೩.	ಪುಂಡಲೀಕ ಹಾಲಂಬಿ	೩೦-೦೮-೨೦೦೮ – ೨೭-೦೨-೨೦೧೨
೩೪.	ಪಿ. ಮಲ್ಲಿಕಾರ್ಜುನಪ್ಪ	೧೦-೦೫-೨೦೧೨ – ಇಲ್ಲಿಯವರೆಗೆ

*** ಈ ಗುರುತಿನ ಗೌರವ ಕಾರ್ಯದರ್ಶಿಗಳು ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.**

ಪರಿಷತ್ತಿನ ಪರಿಷತ್ ಪತ್ರಿಕೆ, ನುಡಿ ಸಂಪಾದಕ ವರ್ಗ, ಪುಸ್ತಕ ಭಂಡಾರದ ಸಿಬ್ಬಂದಿ, ಅಚ್ಚುಕೂಟದ ಸಿಬ್ಬಂದಿ ಮತ್ತು ಮಾರಾಟ ವಿಭಾಗ ಈ ನಾಲ್ಕು ಪರಿಷತ್ತಿನ ಪ್ರಧಾನ ಚಟುವಟಿಕೆಗಳಿಗೆ ಆಧಾರಪ್ರಾಯವಾದುದು, ಪರಿಷತ್ತಿನ ಕಚೇರಿ ಸಿಬ್ಬಂದಿ ಮತ್ತು ನಿಘಂಟು ಸಮಿತಿ ಹಾಗೂ ಇತರ ಉಪಸಮಿತಿಗಳ ಸೇವೆ ಮರೆಯತಕ್ಕದ್ದಲ್ಲ. ಇವರೆಲ್ಲ ಒಂದಾಗಿ ಮುಂದಾಗಿ ಕರ್ತವ್ಯ ನಿರ್ವಹಣೆ ಮಾಡದಿದ್ದರೆ ಯಾವ ಅಧ್ಯಕ್ಷರು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಮತ್ತು ಪರಿಷತ್ತಿನ ಈ ವಿಭಾಗಗಳಲ್ಲಿ ಪ್ರತಿಭಾವಂತರಿದ್ದಾರೆ ಎಂಬುದನ್ನು ಮರೆಯಬಾರದು. ಇವರಲ್ಲಿ ಬಹುಮಂದಿ ಹಗಲು ರಾತ್ರಿ ಶ್ರಮಿಸಿದವರಾಗಿದ್ದಾರೆ. ನೂರು ವರುಷಗಳಲ್ಲಿ ಪರಿಷತ್ತು ಮಾಡಿದ ಸಾಧನೆಗಳ ಮೂಲಾಧಾರಶಕ್ತಿಗಳು ಇವರು.

ಇವರೆಲ್ಲರ ಪ್ರತಿಭೆ, ಸಾಮರ್ಥ್ಯಗಳನ್ನು ಯಶಸ್ವಿಯಾಗಿ ಬಳಸಿಕೊಂಡು ಅಧ್ಯಕ್ಷರು, ಪದಾಧಿಕಾರಿಗಳು ಅತ್ಯುತ್ತಮ ಸೇವೆಯನ್ನು ನಾಡಿಗೆ ನುಡಿಗೆ ಸಲ್ಲಿಸಿದ್ದಾರೆ. ಪರಿಷತ್ತು ೨೪ ಜನ ಅಧ್ಯಕ್ಷರ ಉಪಾಧ್ಯಕ್ಷರ ಹಾಗೂ ಆಡಳಿತಾಧಿಕಾರಿಗಳ ಜೀವನ – ಸಾಧನೆಗಳನ್ನು ಮುಂದೆ ಸಂಕ್ಷಿಪ್ತವಾಗಿ ತಿಳಿಸಿದೆ.

ಕನ್ನಡ ಪರಿಷತ್ತಿನ ಅಧ್ಯಕ್ಷರ ಸಾಧನೆಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧

ಅಧ್ಯಕ್ಷರು : ಹೆಚ್. ವಿ. ನಂಜುಂಡಯ್ಯ (೧೯೧೫-೧೯೨೦)

ಸಾಧನೆ :

ಹೆಚ್.ವಿ. ನಂಜುಂಡಯ್ಯನವರು (೧೯೧೫ರಿಂದ ೧೯೨೦ರವರೆಗೆ) ಪರಿಷತ್ತಿನ ಪ್ರಥಮ ಅಧ್ಯಕ್ಷರಾದರು. ಪರಿಷತ್ತಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೂರು ಸಮ್ಮೇಳನಗಳಿಗೆ ಅಧ್ಯಕ್ಷರಾದರು. ೧೦೦ ವರ್ಷಗಳಲ್ಲಿ ಪರಿಷತ್ತಿನ ೮೧ ಸಮ್ಮೇಳನಗಳಲ್ಲಿ ಅಧ್ಯಕ್ಷರಾದವರಲ್ಲಿ ಇವರನ್ನು ಬಿಟ್ಟರೆ ಉಳಿದವರೆಲ್ಲರೂ ಒಂದೊಂದೇ ಬಾರಿ ಸಮ್ಮೇಳನಾಧ್ಯಕ್ಷರಾಗಿದ್ದಾರೆ. ಇವರು ಅಧ್ಯಕ್ಷರಾದ ಕಾಲದಲ್ಲಿ ಅರಮನೆಯ ಬೆಂಬಲವಿದ್ದರೂ ಸರ್ಕಾರದ ಅಲ್ಪಸ್ವಲ್ಪ ಸಹಾಯ ದೊರಕಿದರೂ ಪರಿಷತ್ತಿನ ಚಟುವಟಿಕೆಗಳಿಗೆ ಧನದ ಅಭಾವ ವಿಪರೀತವಾಗಿತ್ತು. ಮಹಾಯುದ್ಧದ ಕಾಲ ಬೇರೆ ಮತ್ತು ಆಗತಾನೇ ಪ್ರಾರಂಭವಾದ ಪರಿಷತ್ತು ಹೆಚ್ಚು ಕಡಿಮೆ ವಿದ್ವನ್ಮಂಡಲ ಆಗಿತ್ತು. ಜನಸಾಮಾನ್ಯರೊಂದಿಗೆ ಮಿಳಿತಗೊಂಡ ಸಂಸ್ಥೆ ಆಗಿರಲಿಲ್ಲ. ಇಂಥ ಸನ್ನಿವೇಶದಲ್ಲಿ ಹೆಚ್. ನಂಜುಂಡಯ್ಯ ತಮ್ಮ ವೈಯ್ಯಕ್ತಿಕ ಪ್ರಭಾವದಿಂದ ಪರಿಷತ್ತನ್ನು ಮುನ್ನಡೆಸಿದರು. ಕನ್ನಡ ಹಸ್ತಪ್ರತಿಗಳ ಸಂಗ್ರಹ, ಸಂಪಾದನೆ, ಪರಿಷತ್ಪತ್ರಿಕೆ ಪ್ರಾರಂಭ, ಕನ್ನಡ ಗ್ರಂಥಗಳ ಪ್ರಕಟನೆ ಪ್ರಾರಂಭವಾದವು. ಮೊದಲು ಪರಿಷತ್ತಿಗೆ ಸ್ವಂತ ಕಟ್ಟಡವಿರಲಿಲ್ಲ. ಇವರ ಕಾಲದಲ್ಲಿ ಚಾಮರಾಜಪೇಟೆಯಲ್ಲಿದ್ದ ಒಂದು ಬಾಡಿಗೆ ಕಟ್ಟಡದಿಂದ ಶಂಕರಪುರದ ೪ನೇ ಅಡ್ಡರಸ್ತೆಯಲ್ಲಿದ್ದ ಇನ್ನೊಂದು ಬಾಡಿಗೆ ಕಟ್ಟಡಕ್ಕೆ ವರ್ಗಾವಣೆ ಆಯಿತು. ಪರಿಷತ್ತಿಗೆ ಸ್ವಂತ ಕಟ್ಟಡ ಪಡೆಯಲು ಪ್ರಯತ್ನ ಮೊದಲಾಯಿತು. ಪರಿಷತ್ತಿನ ಬಾಡಿಗೆ ಕಟ್ಟಡದಲ್ಲೇ ಗ್ರಂಥಭಂಡಾರ ವಾಚನಾಲಯವನ್ನು ನಂಜುಂಡಯ್ಯನವರು ಪ್ರಾರಂಭಿಸಿದರು.

ಉಪಾಧ್ಯಕ್ಷರು : ಎಂ. ಶಾಮರಾವ್



ಜೀವನ :

ಹೆಚ್.ವಿ. ನಂಜುಂಡಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ ಉಪಾಧ್ಯಕ್ಷರಾಗಿದ್ದವರು ಪ್ರಸಿದ್ಧ ಶಿಕ್ಷಣತಜ್ಞರೂ, ಇತಿಹಾಸ ತಜ್ಞರು, ಪರಿಷತ್ತಿನ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರೂ ಆಗಿದ್ದ ಎಂ. ಶಾಮರಾವ್ ಅವರು

ಮೈಸೂರು ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ೧೫-೮-೧೮೬೦ರಲ್ಲಿ ಶೇಷಾಚಾರ್ ನಾರಾಯಣರಾಯರ ಪುತ್ರರಾಗಿ ಜನಿಸಿದರು. ೧೮೭೫ರಿಂದ ಮೈಸೂರು ರಾಜಾ ಸ್ಕೂಲಿನಲ್ಲಿ ಶಿಕ್ಷಣವನ್ನು ಪಡೆದು ನಂತರ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ೧೮೮೦ರಲ್ಲಿ ಬಿಎ ಪದವಿ ಗಳಿಸಿದರು. ೧೮೮೫ರಲ್ಲಿ ಎಂ.ಎ. ಪದವಿ ಗಳಿಸಿದ ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಹಾಯಕ ಅಧ್ಯಾಪಕರಾಗಿ ಸೇರಿ ಅನಂತರ ೧೮೯೫ರಲ್ಲಿ ಅಸಿಸ್ಟೆಂಟ್ ಕಮೀಷನರ್ ಆದರು. ಮೈಸೂರು ಸಂಸ್ಥಾನದ ವಿವಿಧ ಕ್ಷೇತ್ರಗಳಲ್ಲಿ ಅಧಿಕಾರಿಗಳಾಗಿ ದುಡಿದರು. ಕೊನೆಗೆ ವಿದ್ಯಾಇಲಾಖೆಯ ಮುಖ್ಯಸ್ಥರಾಗಿ ೬ ವರ್ಷ ಕೆಲಸ ಮಾಡಿ ೧೯೧೮ರಲ್ಲಿ ನಿವೃತ್ತರಾದರು.

ಶಾಮರಾಯರ ಸೇವಾಕಾರ್ಯಗಳನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ೧೯೧೪ರಲ್ಲಿ ರಾವ್ ಬಹಾದ್ದೂರ್ ಪ್ರಶಸ್ತಿಯನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ೧೯೧೭ರಲ್ಲಿ ರಾಜಕಾರ್ಯಪ್ರಸಕ್ತ ಪ್ರಶಸ್ತಿಯನ್ನು ನೀಡಿದರು. ತಮ್ಮ ಆಡಳಿತದ ಅವಧಿಯಲ್ಲಿ ರಾಜ್ಯಾದ್ಯಂತ ಸಹಕಾರ ಸಂಘಗಳನ್ನು ಸಹಕಾರ ಚಳವಳಿಯನ್ನು ಪ್ರವರ್ಧಮಾನಕ್ಕೆ ತಂದು ಮೈಸೂರು ಸಂಸ್ಥಾನದ ಸಹಕಾರ ಚಳವಳಿಯ ಜನಕರು ಎಂಬ ಮನ್ನಣೆಗೆ ಪಾತ್ರರಾದರು. ಅಂದಿನ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾಗಿದ್ದ ಇವರು ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣವಾದ ವಿದ್ಯಾಸಮಿತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪರಿಷತ್ತಿನ ಪ್ರಥಮ ಉಪಾಧ್ಯಕ್ಷರಾಗಿ (೧೯೧೫-೧೯೧೯) ಕೂಡ ಸೇವೆ ಸಲ್ಲಿಸಿದರು.

ಶಿಕ್ಷಣ ಮತ್ತು ಸಾಹಿತ್ಯರಂಗಗಳಲ್ಲಿ ಅನುಪಮ ಸೇವೆ ಸಲ್ಲಿಸಿರುವ ಎಂ. ಶ್ಯಾಮರಾಯರು ಕರ್ಣಾಟಕ ಗ್ರಂಥ ಸಮಿತಿ ಎಂಬ ಸಾಹಿತ್ಯ ಪತ್ರಿಕೆಯನ್ನು ೧೮೯೩ರಲ್ಲಿ ಸ್ಥಾಪಿಸಿದರು. ವಿದ್ಯಾದಾಯಿನಿ ಎಂಬ ಶಿಕ್ಷಣ ಮಾಸಪತ್ರಿಕೆ ಸ್ಥಾಪನೆ ನಡೆಸಿದ ಶ್ರೇಯಸ್ಸು ಇವರದೇ. ಎಂ. ಶಾಮರಾಯರು, ಮೈಸೂರು ಸಂಸ್ಥಾನದ ಚರಿತ್ರೆ (ಕನ್ನಡ ಗ್ರಂಥ), **ಟೆನ್ ಇಯರ್ಸ್ ಆಫ್ ನೇಟಿವ್ ಇನ್ ಮೈಸೂರು** (೧೮೯೧) ದಿ ಇಂಡಿಯನ್ ಹಿರೋಸ್ (೧೯೨೨) ಮಾಡರ್ನ್ ಮೈಸೂರು (೨ ಸಂಪುಟಗಳು ೧೯೩೬) ಎಂಬ ಇಂಗ್ಲಿಷ್ ಗ್ರಂಥಗಳನ್ನು ರಚಿಸಿದ್ದಾರೆ. ಇವಲ್ಲದೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ರಚಿಸಿರುವ ಅನೇಕ ಲೇಖನಗಳು ಅಮೂಲ್ಯವಾಗಿವೆ. ಶಾಮರಾಯರ ಬಗ್ಗೆ ಮೊದಲು ವಿವರವಾಗಿ ಬರೆದಿರುವ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಹೇಳಿರುವ ಹಾಗೆ ಮಹಿಷಿ ಶಾಮರಾವ್ (ಎಂ. ಶಾಮರಾವ್) ಕನ್ನಡ ಭಾಷೆ ಸಾಹಿತ್ಯಗಳ ನವೋದಯ ಕಾಲದ ಅಗ್ರಗಣ್ಯ ಪುನರುಜ್ಜೀವಕರೂ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರೂ ಆಗಿದ್ದರು.

ಸಾಧನೆ :

ಕರ್ನಾಟಕ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪನೆಯಾದಾಗ ಮೊದಲ ಅಧ್ಯಕ್ಷರಾಗಿ ರಾಜಮಂತ್ರಪ್ರವೀಣ ಹೆಚ್.ವಿ. ನಂಜುಂಡಯ್ಯನವರು ಆಯ್ಕೆಯಾದರು.

ಗ್ರಂಥ ಪ್ರಕಟನೆ : ನಂಜುಂಡಯ್ಯನವರ ಕಾಲದಲ್ಲಿ ಗ್ರಂಥಪ್ರಕಟನೆ ಸಾಹಸದ ಕೆಲಸವಾಗಿತ್ತು. ಜೇಂಸ್ ಅಬ್ರಹಾಂ ಗಾರ್‌ಫೀಲ್ಡ್‌ನ ಚರಿತ್ರೆಯನ್ನು ಪ್ರಕಟಿಸಲು ಮತ್ತು ಪರಿಷತ್ ಪತ್ರಿಕೆ ಮುದ್ರಣಕ್ಕಾಗಿ ೪೨೦೦ರೂಗಳಿಗಾಗಿ ಸಾರ್ವಜನಿಕ ಪ್ರಕಟನೆ ಕೊಟ್ಟದ್ದನ್ನು ಕಾಣಬಹುದು.

ಇನ್ನು ವಿದ್ವಾಂಸರು ಪ್ರಕಟಿಸಲು ಉತ್ತಮ ಹಸ್ತಪ್ರತಿಗಳನ್ನು ತಂದರೂ ಆರ್ಥಿಕ ಕೊರತೆ ಕಾರಣದಿಂದ ತಿರಸ್ಕರಿಸಬೇಕಾದ

ಪರಿಸ್ಥಿತಿ ಇತ್ತು. ಉದಾಹರಣೆಗೆ ಹೇಳುವುದಾದರೆ ನಂಜುಂಡಯ್ಯನವರ ಕಾಲದಲ್ಲಿ ಹೊಸಕೆರೆ ಚಿದಂಬರಯ್ಯನವರು ಬೊಬ್ಬೂರು ರಂಗನ ಪರಶುರಾಮ ರಾಮಾಯಣವೆಂಬ ಅಪ್ರಕಟಿತ ಗ್ರಂಥವನ್ನು ಪ್ರಕಟನೆಗಾಗಿ ಪರಿಷತ್ತಿಗೆ ಸಲ್ಲಿಸಿದಾಗ ಪ್ರಕಟನೆಯ ಕಾರ್ಯ ನೋಡಿಕೊಳ್ಳುತ್ತಿದ್ದ ಬೆಳ್ಳಾವೆ ಅವರು. "ಕನ್ಯೆಯೇನೋ ಸಾಲಂಕೃತಳಾಗಿ ಯೋಗ್ಯಳಾಗಿದ್ದಾಳೆ. ಆದರೆ ಆಕೆಯ ಕಲ್ಯಾಣ ನಮ್ಮಿಂದ ಸಾಧ್ಯವಿಲ್ಲ ಎಂದು ವಿಷಾದದಿಂದ ತಿಳಿಸಬೇಕಾಗಿದೆ" ಎಂದು ಕಾವ್ಯಾತ್ಮಕ ಭಾಷೆಯಲ್ಲಿ ಹೇಳಿಕಳಿಸಿದರಂತೆ.

ಇವರ ಕಾಲದಲ್ಲಿ ಕರ್ನಾಟಕ ಭಾಷೆಯ ಉದ್ಗ್ರಂಥಗಳಾದ ಪಂಪಭಾರತ ಪಂಪರಾಮಾಯಣ ಗ್ರಂಥಗಳನ್ನು ಪರಿಶೋಧಿಸಿ ಶುದ್ಧಪ್ರತಿಗಳನ್ನು ಸಿದ್ಧಪಡಿಸಿ ಮುದ್ರಿಸಿಕೊಡಲು ಸರ್ಕಾರ ಪರಿಷತ್ತನ್ನು ಕೇಳಿತು. ಗಾರ್‌ಫೀಲ್ಡ್‌ನ ಗ್ರಂಥ ಪಠ್ಯವಾದದ್ದರಿಂದ (೧೯೧೯ರಲ್ಲಿ) ಪರಿಷತ್ತಿಗೆ ಸ್ವಲ್ಪಮಟ್ಟಿಗೆ ನೆರವು ಸಿಕ್ಕಿತು.

ನಂಜುಂಡಯ್ಯನವರು ಪರಿಷತ್ತಿನ ಧ್ಯೇಯವಾದ "ಕನ್ನಡ ನಾಡಿನ ಏಕೀಕರಣ ಮತ್ತು ಭಾಷಾ ಪ್ರಗತಿಗೆ, ಲೇಖಕರಿಗೆ ಪ್ರೋತ್ಸಾಹ ಗ್ರಂಥ ಪ್ರಕಟನೆಗೆ ಸಹಾಯ ಈ ಧ್ಯೇಯಗಳಿಗೆ ಶ್ರಮಿಸಿದರು.

ಇವರು ಅಧ್ಯಕ್ಷರಾಗಿದ್ದ ೫ ವರ್ಷಗಳ ಕಾಲದಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡಿದವರು. ಎಂ. ಶಾಮರಾವ್ ಅವರು. ಹೆಚ್.ವಿ. ನಂಜುಂಡಯ್ಯನವರ ಕಾಲದಲ್ಲಿ ಪರಿಷತ್ತಿನಿಂದ ಪಠ್ಯಗಳನ್ನು ವಿದ್ಯಾಇಲಾಖೆಗಾಗಿ ಸಿದ್ಧಪಡಿಸಲಾಗುತ್ತಿತ್ತು, ಆ ರೀತಿ ಸಿದ್ಧವಾದ ಗ್ರಂಥಗಳಿವು:

ಕನ್ನಡ ಭಾಗವತದ ೪ನೇ ಸ್ಕಂಧ, ಕನ್ನಡ ಭಾರತದ ಅರಣ್ಯ ಪರ್ವ, ಕನ್ನಡ ಭಾರತದ ದ್ರೋಣಪರ್ವ, ಇವುಗಳನ್ನು ಪಾಠಾಂತರ, ಟಿಪ್ಪಣಿಗಳೊಂದಿಗೆ ಪಂಡಿತರ ಸಹಾಯದಿಂದ ಸಿದ್ಧಪಡಿಸಲಾಗಿತ್ತು.

ಕಾರ್ಯಕ್ರಮಗಳು : ಆಗ ಕಾರ್ಯಕ್ರಮಗಳು ರೂಪಿತವಾಗುತ್ತಿದ್ದ ರೀತಿಗೆ ಒಂದು ಉದಾಹರಣೆ ಎಂದರೆ ೧೯೧೯ಡಿಸೆಂಬರ್ ೫ರಂದು ಸಂಜೆ ೪.೩೦ರಲ್ಲಿ ಸೇರಿದ್ದ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ನಡೆದ ಚರ್ಚೆಯಲ್ಲಿ ಅಂಗೀಕಾರವಾದ ವಿಷಯಗಳು ಹೀಗಿವೆ.

೧) ಜಿಜ್ಞಾಸಾರೂಪವಾಗಿ ಗ್ರಂಥ ವಿಮರ್ಶೆ ಮಾಡಿ ಹಂಪೆ ಹರಿಹರದೇವರ ಗಿರಿಜಾಕಲ್ಯಾಣದ ಮೇಲೆ ಚರ್ಚಾರೂಪವಾದ ಒಂದು ಲೇಖನವನ್ನು ೩ ತಿಂಗಳೊಳಗಾಗಿ ಬರೆದು ಕಳಿಸದವರಿಗೆ ೧೦೦ ರೂ ಬಹುಮಾನ ಕೊಡುವುದು.

೨) ನಮ್ಮ ಕನ್ನಡ ದೇಶದಲ್ಲಿ ಹೆಂಗಸರು, ಗಂಡಸರು ಸಹ ಮಕ್ಕಳಿಗೂ ದೊಡ್ಡವರಿಗೂ ಹೇಳುವ ಪುಡಿಕತೆಗಳಲ್ಲಿ ೧೦ ಕತೆಗಳಿಗೆ ಕಡಿಮೆಯಿಲ್ಲದಂತೆ ಬರೆದು ಕಳಿಸಿದವರಿಗೆ ಬಹುಮಾನ.

೩)ಕನ್ನಡ ಮಾತನಾಡತಕ್ಕ ಶೈಲಿಯಲ್ಲಿ ಲಾಲಿತ್ಯವಾಗಿ ಕಾವ್ಯ ಬರೆದವರಿಗೆ ಬಹುಮಾನ.

೪) ಕನ್ನಡದೇಶದ ನಕ್ಷೆಯನ್ನು ಬರೆಸುವುದು.

೫) ಇಂಗ್ಲಿಷ್ - ಕನ್ನಡ ನಿಘಂಟುವಿನ ವಿಚಾರವಾಗಿ ಶ್ರೀ ನಂಗಪುರಂ ವೆಂಕಟೇಶ ಅಯ್ಯಂಗಾರರು ಸಲಹೆ ಕೊಡತಕ್ಕದ್ದು.

ಸಮ್ಮೇಳನಗಳು : ಪರಿಷತ್ತಿನ ಅಧ್ಯಕ್ಷರೇ ೧, ೨, ೩ ನೇ ಸಮ್ಮೇಳನಗಳ ಅಧ್ಯಕ್ಷರೂ ಆಗಿದ್ದರು. ಆರ್. ನರಸಿಂಹಾಚಾರ್ ಅಧ್ಯಕ್ಷತೆಯ ಧಾರವಾಡದ ೪ನೇ ಸಮ್ಮೇಳನವನ್ನು ಅವರೇ ೧೯೧೯ರಲ್ಲಿ ನಡೆಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೨

ಅಧ್ಯಕ್ಷರು : ಎಂ. ಕಾಂತರಾಜ ಅರಸು ೧೯೨೦-೧೯೨೩)



ಜೀವನ :

ಕಾಂತರಾಜ ಅರಸು ಅವರು ೧೯೨೦-೧೯೨೩ ಅವಧಿಯಲ್ಲಿ ಪರಿಷತ್ತಿನ ಅಧ್ಯಕ್ಷರಾಗಿದ್ದರು. ವಿಶ್ವೇಶ್ವರಯ್ಯನವರ ನಂತರ ೧೯೧೯-೧೯೨೨ರವರೆಗೆ ದಿವಾನರಾದ ಇವರು ನಾಲ್ವಡಿ ಕೃಷ್ಣರಾಜ ಒಡೆಯರ ಸೋದರ ಮಾವಂದಿರು ಮತ್ತು ಅವರ ಸೋದರಿ ಜಯಲಕ್ಷ್ಮಮ್ಮಣಿ ಅವರ ಪತಿ. ಇವರು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣ ಪೂರೈಸಿದ ಮೇಲೆ ನಾನಾ ಹುದ್ದೆಗಳಲ್ಲಿ ಅಸಿಸ್ಟೆಂಟ್ ಕಮಿಷನರ್, ಆಪ್ತಕಾರ್ಯದರ್ಶಿ, ಸ್ಪೆಷಲ್ ಸಬ್ ಡಿವಿಷನ್ ಆಫೀಸ್ ಡೆಪ್ಯೂಟಿ ಕಮಿಷನರ್, ಮೊದಲಾದ ಹುದ್ದೆಗಳನ್ನು ನಿರ್ವಹಿಸಿದ ನಂತರ ದಿವಾನ್ ಪದವಿಯನ್ನು ೧೯೧೮ರಲ್ಲಿ ಅಲಂಕರಿಸಿದರು. ಇವರು ತಮ್ಮ ಅಧಿಕಾರಾವಧಿಯಲ್ಲಿ ಆರ್ಥಿಕ ಸೇವಾ ಸಮಿತಿಯನ್ನು ಪುನರ್ರಚಿಸಿದರು. ನ್ಯಾಯವಿಧಾಯಕ ಸಮಿತಿಯನ್ನು ವಿಸ್ತರಿಸಿದರು. ಗಣಿಕಾರ್ಯಗಳ ಅಧೀಕ್ಷಕ ಹುದ್ದೆಯನ್ನು ನಿರ್ಮಿಸಿದರು. ಸರ್ಕಾರಿ ಸೇವೆಯಲ್ಲಿ ಮೀಸಲಾತಿ ಬಗ್ಗೆ ಆದೇಶ ಹೊರಡಿಸಿದರು. ೧೯೨೧ರಲ್ಲಿ ಚಿಕ್ಕಜಾಜೂರಿನಿಂದ ಚಿತ್ರದುರ್ಗದವರೆಗೆ ರೈಲುಮಾರ್ಗ ಹಾಕಿಸಿದರು. ೧೯೧೭ರಲ್ಲಿ ಬ್ರಿಟಿಷ್ ಸರ್ಕಾರದಿಂದ ಸಿ.ಎಸ್.ಐ. ಪ್ರಶಸ್ತಿ ಪಡೆದರು. ೧೯೫೧ರಲ್ಲಿ ಜಪಾನಿಗೆ ತೆರಳಿ ಅಲ್ಲಿನ ಆಡಳಿತ ಪ್ರಗತಿಯನ್ನು ದೇಶದ ಮುನ್ನಡೆಯನ್ನು ಅಧ್ಯಯನ ಮಾಡಿಕೊಂಡು ಬಂದರು. ಪ್ರಾಥಮಿಕ ಮಾಧ್ಯಮಿಕ ತರಗತಿಗಳಿಗೆ ಪಾಠ ಶುಲ್ಕವನ್ನು ರದ್ದು ಮಾಡಿದರು. ಹೀಗೆ ನಾನಾ ಪ್ರಗತಿಪರ ಸುಧಾರಣೆಗಳನ್ನು ಕೈಗೊಂಡ ಕಾಂತರಾಜ ಅರಸು ಅವರು ೨-೧೦-೧೯೨೩ರಂದು ನಿಧನರಾದರು.

ಉಪಾಧ್ಯಕ್ಷರು : ಕರ್ಪೂರ ಶ್ರೀನಿವಾಸರಾವ್ (೧೯೨೦-೧೯೩೩)

ಸಾಧನೆ :

ಕರ್ನಾಟಕ ಸಾಹಿತ್ಯ ಪರಿಷತ್ತಿನ ಕನ್ನಡ ನಿರ್ಮಾಪಕರಲ್ಲಿ ಅಗ್ರಗಣ್ಯರು ಕರ್ಪೂರ ಶ್ರೀನಿವಾಸರಾಯರು ಅವರು ಪರಿಷತ್ತಿಗೆ ಮೊದಲು ಸ್ವಂತನೆಲೆ ಒದಗಿಸಿದವರು. ಡಿವಿಜಿ ಹೇಳಿರುವಂತೆ "ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಕಟ್ಟುವುದಕ್ಕಾಗಿ ಕರ್ಪೂರ ಶ್ರೀನಿವಾಸರಾಯರು ಪಟ್ಟಶ್ರಮ ಅಸಾಧ್ಯವಾದುದು. ಅವರು ಎಲ್ಲಿಂದಲೋ ಸದಸ್ಯರನ್ನೂ ಹಣವನ್ನೂ ತಂದು ಸೇರಿಸುತ್ತಿದ್ದರು. ಸಮಸ್ತ ಕರ್ನಾಟಕದ ವಿದ್ವಜ್ಜನದ ಪರಿಚಯವೂ ಅವರಿಗಿತ್ತು. ಅವರು ಪರಿಷತ್ತಿನ ಒಂದು ಸಮ್ಮೇಳನವನ್ನೂ ತಪ್ಪಿಸಿಕೊಂಡವರಲ್ಲ. ಪ್ರತಿಯೊಂದು ಸಮ್ಮೇಳನದಲ್ಲಿಯೂ ಹಾಜರಿದ್ದು ಭಾಷಣ ಮಾತ್ರದಿಂದಲೇ ಅಲ್ಲದೆ, ತಮ್ಮ ವ್ಯಕ್ತಿ ಪ್ರಭಾವದಿಂದಲೂ ಕಳೆಕಟ್ಟಿಸುತ್ತಿದ್ದರು" (ಜ್ಞಾ ಚಿಶಾ ಪು೬೬). ಈ ರೀತಿಯ ಶ್ರಮವಿದ್ದುದರಿಂದಲೇ ಶ್ರೀಕೃಷ್ಣರಾಜ ಪರಿಷನ್ಮಂದಿರ ನಿರ್ಮಾಣವಾಯಿತು.

ಪರಿಷತ್ತಿನ ಹಿತದ ಬಗ್ಗೆ ಹಗಲೂರಾತ್ರಿ ಚಿಂತಿಸುತ್ತಿದ್ದವರು ಅಧ್ಯಕ್ಷರಾದ ಕರ್ಪೂರರು. ಇದಕ್ಕೆ ನಿದರ್ಶನವಾಗಿ ಡಿವಿಜಿ ಪ್ರಸಂಗವೊಂದನ್ನು ಹೇಳಿದ್ದಾರೆ: "ಒಂದಾನೊಂದು ವರ್ಷ ಸಮ್ಮೇಳನದ ಅಧ್ಯಕ್ಷರ ಪದವಿಗೆ ಗುಂಪುಗಾರಿಕೆ ಮಾಡುತ್ತಿದ್ದ ವಿದ್ವಾಂಸರೊಬ್ಬರು ನಾಲ್ಕೈದು ವರ್ಷಗಳಿಂದ ಪ್ರಯತ್ನಿಸುತ್ತಿದ್ದರು. ಅವರು ಉಮೇದುವಾರಿಕೆ ಪತ್ರವನ್ನು ಕೊನೆಯ ದಿನ ಶಂಕರಪುರದಲ್ಲಿದ್ದ ಪರಿಷತ್ತಿನ ಕಚೇರಿಯಲ್ಲಿ ಹಾಕಿ ಹೋಗಿದ್ದರು. ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದು ಯಾರಿಗೂ ಇಷ್ಟವಿರಲಿಲ್ಲ. ಹಾಗಾಗಿ ಅಧ್ಯಕ್ಷರು ಚಿಂತಾಕ್ರಾಂತರಾದರು. ಮಾರನೇ ದಿನ ಬೆಳಿಗ್ಗೆ ಏಕಾಂತವಾಗಿ ಕುಳಿತು ಧ್ಯಾನ-ಪಾರಾಯಣ ಮಾಡುವ ಕಾಲದಲ್ಲಿ ಅವರಿಗೆ ಹೊಳೆಯಿತು. ಕೊನೆಯ ದಿನದ ಸೂರ್ಯಾಸ್ತಮದವರೆಗೆ ಅವರಿಗೆ ಸಮಯವಿದ್ದಿತು. ಆದರೆ ಅವರು ಸೂರ್ಯಾಸ್ತದ ನಂತರ ಉಮೇದುವಾರಿಕೆ ಸಲ್ಲಿಸಿದ್ದರು. ಆದ್ದರಿಂದ ತಿರಸ್ಕರಿಸಬಹುದು ಎಂದು ಹೊಳೆಯಿತಂತೆ. ಅದನ್ನು ಕೂಗಿಕೊಂಡು ಬಂದು ಮಿತ್ರರಿಗೆ ಹೇಳಿದ್ದರು. ಹೀಗೆ ಹಗಲೂ ರಾತ್ರಿ ಪರಿಷತ್ತಿನ ಬಗ್ಗೆ ಚಿಂತಿಸುತ್ತಿದ್ದ ಅಧ್ಯಕ್ಷರು ಕರ್ಪೂರ ಶ್ರೀನಿವಾಸರಾಯರು. ಪರಿಷತ್ತಿನ ಹಳೆಯ ಕಟ್ಟಡದ ಶಂಕುಸ್ಥಾಪನೆ ಅವರಿಂದಲೇ ಆಗಿದೆ.

ಕರ್ಪೂರ ಶ್ರೀನಿವಾಸರಾಯರ ಅಧಿಕಾರಾವಧಿಯಲ್ಲಿ ನಡೆದದ್ದು ಮುಖ್ಯವಾಗಿ ಎರಡು ಕೆಲಸಗಳು ಒಂದು, ಪರಿಷತ್ ಕಟ್ಟಡ ಸ್ಥಾಪನೆ; ಇನ್ನೊಂದು, ಹಳಗನ್ನಡ ಗ್ರಂಥಗಳ ಸಂಪಾದನೆ.

ಪಂಪನ ವಿಕ್ರಮಾರ್ಜುನ ವಿಜಯವನ್ನು ತಾಳೆಗರಿಗಳ ಆಧಾರದಲ್ಲಿ ಸಂಶೋಧಿಸಿದ ಪ್ರಕಟಿಸಿದ್ದು; ಪಂಪಭಾರತ, ಪಂಪ ರಾಮಾಯಣಗಳನ್ನು ವಿದ್ಯಾ ಇಲಾಖೆಗಾಗಿ ಸಿದ್ಧಪಡಿಸಿದ್ದು, ಪಂಪರಾಮಾಯಣ, ಸೋಮೇಶ್ವರ ಶತಕ, ಶಬ್ದಮಣಿದರ್ಪಣ, ಚಾವುಂಡರಾಯ ಪುರಾಣ, ಷಟ್ಪದಿ ಕಾವ್ಯಗಳ ನಿಘಂಟು, ಜ್ಯೋತಿರ್ವಿನೋದಿನಿ ಮುಂತಾದ ಗ್ರಂಥಗಳು ಅವರ ಅವಧಿಯಲ್ಲಿ ಸಂಶೋಧಿತವಾಗಿ ಪ್ರಕಟಗೊಂಡವು.

ಕರ್ಪೂರರರ ಅವಧಿಯಲ್ಲಿ ಬಹುಕಾಲ ಕಾರ್ಯದರ್ಶಿಗಳೂ, ೬ವರ್ಷಗಳ ಕಾಲ ಕೋಶಾಧಿಕಾರಿಗಳೂ ಆದವರು ಬೆಳ್ಳಾವೆ ವೆಂಕಟನಾರಣಪ್ಪನವರು. ಅವರ ದುಡಿಮೆ ಎಷ್ಟಿತ್ತು ಎಂದರೆ ಡಿ.ವಿ.ಜಿ. ಹೇಳುವಂತೆ ಬೆಳ್ಳಾವೆ ವೆಂಕಟ ನಾರಣಪ್ಪ ಎಂದರೆ ಪರಿಷತ್ತು ಎಂಬಷ್ಟರಮಟ್ಟಿಗೆ ಅವರು ದುಡಿಯುತ್ತಿದ್ದರು. ಇಂಥ ನಿಸ್ವಾರ್ಥ ಸೇವಕರ ಕಾಲ ಕರ್ಪೂರ ಶ್ರೀನಿವಾಸರಾಯರ ಅಧಿಕಾರಾವಧಿ ಆಗಿತ್ತು.

ಸಮ್ಮೇಳನಗಳು: ಕರ್ಪೂರ ಶ್ರೀನಿವಾಸರಾಯರು ಉಪಾಧ್ಯಕ್ಷರಾಗಿ ೧೯೨೦ರಿಂದ ೧೯೩೩ರವರೆಗೆ ೧೩ವರ್ಷಗಳ ಕಾಲ ಪರಿಷತ್ತನ್ನು ಮುನ್ನಡೆಸಿದರು. ಅವರ ಕಾಲದಲ್ಲಿ ಅಧ್ಯಕ್ಷರಾಗಿ ಎಂ. ಕಾಂತರಾಜ ಅರಸು (೧೯೨೦-೧೯೨೩) ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಪ್ರೋತ್ಸಾಹಕರಾಗಿ ಹಾಗೂ ನಂತರ ಪರಿಷತ್ತಿನ ಅಧ್ಯಕ್ಷರಾಗಿ ಇದ್ದರು. ೬ನೇ ಸಮ್ಮೇಳನದಿಂದ ೧೮ನೇ ಸಮ್ಮೇಳನದವರೆಗೆ ೧೩ ಸಮ್ಮೇಳನಗಳನ್ನು ನಡೆಸಿದರು. ಇದುವರೆಗೆ ಯಾವ ಪರಿಷತ್ತಿನ ಅಧ್ಯಕ್ಷರೂ ತಮ್ಮ ಅಧಿಕಾರಾವಧಿಯಲ್ಲಿ ಇಷ್ಟೊಂದು ಸಮ್ಮೇಳನಗಳನ್ನು ನಡೆಸಿಲ್ಲ. ಅವುಗಳ ವಿವರ ಹೀಗಿದೆ:

ಸಮ್ಮೇಳನ	ಇಸವಿ	ಸಮ್ಮೇಳನ ಅಧ್ಯಕ್ಷರು	ನಡೆದ ಸ್ಥಳ	ಪರಿಷತ್ತಿನ ಅಧ್ಯಕ್ಷರು, ಉಪಾಧ್ಯಕ್ಷರು
೬	೧೯೨೦	ರೊದ್ದಶ್ರೀನಿವಾಸರಾವ್	ಹೊಸಕೋಟೆ	ಅಧ್ಯಕ್ಷರು : ಎಂ. ಕಾಂತರಾಜಅರಸ್
೭	೧೯೨೧	ಕೆ.ಪಿ.ಪುಟ್ಟಣ್ಣಶೆಟ್ಟಿ	ಚಿಕ್ಕಮಗಳೂರು	" "
೮.	೧೯೨೨	ಎಂ.ವೆಂಕಟಕೃಷ್ಣಯ್ಯ	ದಾವಣಗೆರೆ	" "
೯.	೧೯೨೩	ಸಿದ್ಧಾಂತಿ ಶಿವಶಂಕರಶಾಸ್ತ್ರಿ	ವಿಜಾಪುರ	" "
೧೦.	೧೯೨೪	ಹೊಸಪೇಟೆ ಕೃಷ್ಣಶಾಸ್ತ್ರಿ	ಕೋಲಾರ	ಅಧ್ಯಕ್ಷರು: ಶ್ರೀಕಂಠೀರವ ನರಸಿಂಹರಾಜ ಒಡೆಯರ್

೧೧.	೧೯೨೫	ಬೆನಗಲ್ ರಾಮರಾವ್	ಬೆಳಗಾವಿ	”	”
೧೨.	೧೯೨೬	ಫ.ಗು. ಹಳಕಟ್ಟಿ	ಬಳ್ಳಾರಿ	”	”
೧೩.	೧೯೨೭	ಆರ್.ತಾತಾಚಾರ್ಯ	ಮಂಗಳೂರು	”	”
೧೪.	೧೯೨೮	ಬಿಎಂ.ಶ್ರೀಕಂಠಯ್ಯ	ಕಲಬುರ್ಗಿ	”	”
೧೫.	೧೯೨೯	ಮಾಸ್ತಿವೆಂಕಟೇಶ ಅಯ್ಯಂಗಾರ್	ಬೆಳಗಾವಿ	”	”
೧೬.	೧೯೩೦	ಆಲೂರ ವೆಂಕಟರಾಯರು	ಮೈಸೂರು	”	”
೧೭.	೧೯೩೧	ಮುಳಿಯ ತಿಮ್ಮಪ್ಪಯ್ಯ	ಕಾರವಾರ	”	”
೧೮.	೧೯೩೨	ಡಿ.ವಿ.ಗುಂಡಪ್ಪ	ಮಡಿಕೇರಿ	”	”

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೩

ಅಧ್ಯಕ್ಷರು : ಶ್ರೀ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ (೧೯೨೪-೧೯೪೦)



ಜೀವನ :

ಮೈಸೂರು ಮಹಾರಾಜರಾಗಿದ್ದ ಚಾಮರಾಜೇಂದ್ರ ಒಡೆಯರ್ ಅವರು ಸಾಹಿತ್ಯಪೋಷಕರೂ, ಕಲಾರಕ್ಷಕರೂ ಆಗಿದ್ದರು. ಇವರ ದ್ವಿತೀಯ ಪುತ್ರರೇ ಕಂಠೀರವ ನರಸಿಂಹರಾಜ ಒಡೆಯರ್, ಇವರು ೫-೭-೧೮೮೮ರಲ್ಲಿ ಜನಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಇವರ ಅಣ್ಣಂದಿರು, ಮೈಸೂರಿನಲ್ಲಿ ವ್ಯಾಸಂಗ ಮಾಡಿದ ನಂತರ ಉನ್ನತವ್ಯಾಸಂಗಕ್ಕಾಗಿ ಅಜ್ಮೀರಿನ ಮೇಯೋ ರಾಜಕುಮಾರ್ ಕಾಲೇಜನ್ನು ಸೇರಿದರು. ವಿದ್ಯಾಭ್ಯಾಸ ಮುಗಿದ ನಂತರ ೧೯೦೭ರಲ್ಲಿ ಯುವರಾಜಪಟ್ಟವನ್ನು ಅಲಂಕರಿಸಿದರು. ಆಡಳಿತಪಟುಗಳಾದ ಇವರು ಸೆರೆಮನೆ ವಿಭಾಗ, ನೈರ್ಮಲ್ಯ ವಿಭಾಗ, ವೈದ್ಯಕೀಯ ಶಾಖೆ, ಪೊಲೀಸು ದಳ, ಸೇನಾಖಾತೆಗಳು, ಆಡಳಿತ ನಿರ್ವಹಣೆ ಮಾಡುತ್ತಿದ್ದರು. ಸ್ಕೌಟ್ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಹಲವಾರು ಹರಿಜನ ವಿದ್ಯಾರ್ಥಿನಿಲಯಗಳ ಸ್ಥಾಪಕರಾದ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಪೋಷಕರಾಗಿದ್ದು ಅಧ್ಯಕ್ಷಸ್ಥಾನವನ್ನು ೧೯೨೪ ರಿಂದ ೧೯೪೦ ರವರೆಗೆ ಅಲಂಕರಿಸಿದ್ದರು. ಇವರ ಕಾಲದಲ್ಲಿ ಪರಿಷತ್ತಿನ ಉಪಾಧ್ಯಕ್ಷರಾಗಿ (ಒಂದು ರೀತಿಯಲ್ಲಿ ಕಾರ್ಯಾಧ್ಯಕ್ಷರಾಗಿ) ಡಿ.ವಿ. ಗುಂಡಪ್ಪನವರು ಪರಿಷತ್ತನ್ನು (೧೯೩೪-೧೯೩೭)

ಮುನ್ನಡೆಸಿದರು. ವಿದ್ವತ್ ಪ್ರೇಮಿಗಳಾಗಿ ಮಿಥಿಕ್ ಸೊಸೈಟಿಯ ಮುಖ್ಯ ಪೋಷಕರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರ್ ಅವರು ೧೧-೩-೧೯೪೦ರಲ್ಲಿ ಮುಂಬಯಿಯಲ್ಲಿ ಸ್ವರ್ಗಸ್ಥರಾದರು. ಕಂಠೀರವ ನರಸಿಂಹರಾಜ ಒಡೆಯರು ಆರ್ಥಿಕವಾಗಿ ಪರಿಷತ್ತಿಗೆ ಸಹಾಯ ಮಾಡುತ್ತಿದ್ದರು. ಕರ್ಪೂರ ಶ್ರೀನಿವಾಸ ರಾಯರ ಕಾಲದಲ್ಲಿ ಪರಿಷತ್ತಿನ ಕಟ್ಟಡ ನಿಧಿಗೆ ೩೦೦೦ರೂ.ಗಳನ್ನು ನೀಡಿದ್ದರು.

ಉಪಾಧ್ಯಕ್ಷರು: ಡಿ. ವಿ. ಗುಂಡಪ್ಪ (೧೯೩೪-೧೯೩೭)

ಸಾಧನೆ :

ವಿದ್ವಾಂಸರು, ಪತ್ರಿಕಾಸಂಪಾದಕರು ಸಾಹಿತ್ಯ ವಿದ್ವಾಂಸರ ನಿಕಟ ಪರಿಚಯವಿದ್ದ ಡಿ.ವಿ. ಗುಂಡಪ್ಪನವರು ೧೯೩೩ರಲ್ಲಿ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದ ಮೇಲೇ ಪರಿಷತ್ತಿಗೆ ನವದೆಸೆ ಉಂಟಾಯಿತು. ಪರಿಷತ್ತಿಗೆ ಭವ್ಯವಾದ ಶ್ರೀಕೃಷ್ಣರಾಜಪರಿಷ್ಮಂದಿರ ಕಟ್ಟಡ ನೆಲೆಯಾಗಿ ಸಿಕ್ಕಿತು. ಪರಿಷತ್ತಿನ ಕಾರ್ಯಾಲಯವನ್ನು ಸುವ್ಯವಸ್ಥೆಗೊಳಿಸಿದರು.

ಪ್ರತಿವಾರವೂ ಪರಿಷತ್ತಿನಲ್ಲಿ ಸಾರ್ವಜನಿಕವಾಗಿ ಭಾಷಣ, ಕಾವ್ಯವಾಚನ ಇತ್ಯಾದಿ ನಡೆಯತೊಡಗಿತು.

ಪರಿಷತ್ತು ಜನಪ್ರಿಯವಾಗಲು ಹೆಚ್ಚು ಹೆಚ್ಚು ಜನರು ಸದಸ್ಯರಾಗಬೇಕು ಎಂಬುದು ಡಿವಿಜಿ ಅವರ ಆಶಯವಾಗಿತ್ತು. ಅದಕ್ಕಾಗಿ ಸದಸ್ಯರ ಸಂಖ್ಯೆ ಹೆಚ್ಚಿಸಿದರು.

ಸಂಸ್ಥೆಯ ನಿಬಂಧನೆ ಎಂಬುದು ಸಂಸ್ಥೆಗೆ ದಿಕ್ಸೂಚಿ- ಅಂಕುಶವಿದ್ದಂತೆ. ಅದು ಸಕಾಲಿಕವಾಗಿರಬೇಕು, ಸಮರ್ಪಕವಾಗಿರಬೇಕು, ಮತ್ತು ಸಮಗ್ರವಾಗಿರಬೇಕು ಎಂದು ಅದುವರೆಗೆ ಹಲವಾರು ವಾರ್ಷಿಕಾಧಿವೇಶನಗಳಲ್ಲಿ ಆಗಿದ್ದ ನಿಬಂಧನೆಯ ತಿದ್ದುಪಡಿಗಳನ್ನೆಲ್ಲ ಸೇರ್ಪಡೆ ಮಾಡಿ ಒಂದೂಗೂಡಿಸಿ ನಿಬಂಧನಾವಳಿಯನ್ನು ಪ್ರಕಟಿಸಿದರು.

ಕನ್ನಡ ಕಾವ್ಯಗಳು ಜನರಲ್ಲಿ ಪ್ರಚಾರವಾಗಬೇಕಾದರೆ ಗಮಕ ಕಲೆಯೊಂದೇ ದಾರಿ ಗಮಕವಾಚನದಿಂದಲೇ ಹಳಗನ್ನಡ ನಡುಗನ್ನಡ ಕಾವ್ಯಗಳು ಜನಕ್ಕೆ ತಲುಪಲು ಸಾಧ್ಯ. ಗ್ರಂಥಗಳ ಮೂಲಕ ಜನಸಾಮಾನ್ಯರಿಗೆ ಕಾವ್ಯ ತಲುಪುವುದಿಲ್ಲ. ಕಾವ್ಯ ದೊರೆತರೂ ಜನಸಾಮಾನ್ಯರೂ ಅರ್ಥೈಸಿ ಕೊಳ್ಳಲಾರರು. ಆನಂದಿಸಲಾರರು ಗಮಕವಾಚನ ವ್ಯಾಖ್ಯಾನ ಕಾರ್ಯಕ್ರಮದಿಂದ ಅದು ಸಾಧ್ಯ ಎಂದು ನಂಬಿದ್ದರು. ಡಿ.ವಿ.ಜಿ. ಅದಕ್ಕಾಗಿ ಪರಿಷತ್ತಿನಲ್ಲಿ ಗಮಕ ತರಗತಿಗಳನ್ನು ಪ್ರಾರಂಭಿಸಿದರು. ಗಮಕಿಗಳು ತಯಾರಾಗ ತೊಡಗಿದರು. ಈ ತರಗತಿಗಳಿಂದ ಉತ್ತೀರ್ಣರಾಗಿ ಬಂದವರಲ್ಲಿ ನಾಡಿನ ಪ್ರಸಿದ್ಧ ಗಮಕ ಕಲಾವಿದೆಯಾದ ಶಕುಂತಲಾ ಬಾಯಿ, ಬಿಂದೂರಾವ್ ಅವರೂ ಸೇರಿದ್ದಾರೆ. ಅನೇಕ ಪ್ರಖ್ಯಾತ ಗಮಕಿಗಳು ಬಿಂದೂರಾಯರ ಶಿಷ್ಯರು ಎಂಬುದು ಗಮನಾರ್ಹ ಸಂಗತಿಯಾಗಿದೆ.

ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಪರವಾಗಿ ಪರಿಷತ್ತಿನ ಕಾರ್ಯಗಳನ್ನು ನಿರ್ವಹಿಸಿದವರು ೨ನೇ ಉಪಾಧ್ಯಕ್ಷರಾದ ಡಿ. ವಿ. ಗುಂಡಪ್ಪನವರು.

೧೯೩೩ರಲ್ಲಿ ಪರಿಷತ್ತಿನ ಉಪಾಧ್ಯಕ್ಷರಾಗಿ ಡಿವಿಜಿ ಅವರು ಆಯ್ಕೆಗೊಂಡರು.

ಕಚೇರಿ ವ್ಯವಸ್ಥೆ : ಪರಿಷತ್ತಿನ ಕಾರ್ಯಾಲಯವನ್ನು ಪುನರ್‌ಘಟಿಸಿ ವ್ಯವಸ್ಥಿತಗೊಳಿಸಿದರು. ಸಮಯ ಪಾಲನೆ, ವೇಷಭೂಷಣಗಳಲ್ಲಿ ಶಿಸ್ತನ್ನು ತಂದರು. ಒಮ್ಮೆ ಪರಿಷತ್ತಿನ ಸಿಬ್ಬಂದಿಯಲ್ಲಿದ್ದ ಪ್ರಸಿದ್ಧ ನಾಟಕಕಾರ ಕೈವಾರ ರಾಜಾರಾವ್ ಕಚ್ಚೆಪಂಚೆ ಉಡದೆ ದಟ್ಟಿಪಂಚೆಯನ್ನು ಉಟ್ಟು ಬಂದಾಗ, ಅವರನ್ನು ಒಳಕೋಣೆಗೆ ಕರೆದು ಕಚ್ಚೆ ಹಾಕಿಸಿ ಕಳಿಸಿದ್ದರು.

ಕಚೇರಿಯಲ್ಲಿ ಕೆಲಸ ಮಾಡುವವರು ವೇಷಭೂಷಣಗಳ ಕಡೆ ನಿಗಾ ಕೊಡಬೇಕು ಎಂದರು.

ನಿಬಂಧನೆ ಕ್ರೋಡೀಕರಣ : ಬೇರೆಬೇರೆ ವರ್ಷಗಳಲ್ಲಿ ಆದ ತಿದ್ದುಪಡಿಗಳನ್ನೆಲ್ಲ ಒಗ್ಗೂಡಿಸಿ ಹೊಸ ನಿಬಂಧನೆಗಳನ್ನು ಸಿದ್ಧಪಡಿಸಿದರು. ಸದಸ್ಯರಿಗೆಲ್ಲಾ ಅದನ್ನು ಪ್ರಕಟಿಸಲಾಯಿತು.

ವಾರದ ಕಾರ್ಯಕ್ರಮ : ಪ್ರತಿವಾರವೂ ಸಾರ್ವಜನಿಕ ಕಾರ್ಯಕ್ರಮವಾಗಿ ಉಪನ್ಯಾಸ, ಕಾವ್ಯವಾಚನಗಳ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಕ್ಕೆ ಪರಿಷತ್ತಿಗೆ ಬರುವ ಜನರು ಹೆಚ್ಚಾದರು. ಪರಿಣಾಮವಾಗಿ ಸದಸ್ಯರ ಸಂಖ್ಯೆ ಅಧಿಕವಾಯಿತು.

ಗಮಕ ಕಲಾ ತರಗತಿಗಳ ಪ್ರಾರಂಭ : ಕನ್ನಡ ಕಾವ್ಯಗಳು ಜನ ಸಾಮಾನ್ಯರಿಗೆ ಮುಟ್ಟುವುದು ಗಮಕ ವಾಚನದ ಮೂಲಕ ಸಾಧ್ಯ. ಶುದ್ಧ ಸಂಗೀತದಿಂದಲೇ ಕಾವ್ಯವನ್ನು ಇಡಿಯಾಗಿ ಪರಿಚಯಿಸಲಾಗದು. ಹೀಗಾಗಿ ಗಮಕದ ತರಗತಿಗಳನ್ನು ಭಾರತ ಸಾರೋದ್ಧಾರದ ಬಿಂದೂರಾಯರ ನೇತೃತ್ವದಲ್ಲಿ ನಡೆಸಿದರು. ಪ್ರಥಮ ತಂಡದ ಗಮಕ ಕಲಾ ತರಗತಿ ವಿದ್ಯಾರ್ಥಿಗಳಲ್ಲಿ ಗಮಕಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರೂ ಒಬ್ಬರು.

ಗ್ರಂಥ ಪ್ರದರ್ಶನ: ವಸಂತೋತ್ಸವ ಕಾರ್ಯಕ್ರಮವನ್ನು ಬೇಸಿಗೆ ಕಾಲದಲ್ಲಿ ನಡೆಸುವ ಪದ್ಧತಿಯನ್ನು ಜಾರಿಗೆ ತಂದಾಗ ಒಳ್ಳೆಯ ಪ್ರತಿಕ್ರಿಯೆ ದೊರೆಯಿತು. ನವೀನ ಉಪನ್ಯಾಸಗಳ ಜತೆಗೆ ಮನರಂಜನೆ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತಿದ್ದರು. ಮನೋವಿಲಾಸದ ಈ ಕಾರ್ಯಕ್ರಮದಲ್ಲೇ ಮನೋವಿಕಾಸದ ಅಂಗವಾಗಿ ಕನ್ನಡ **ಗ್ರಂಥ ಪ್ರದರ್ಶನ** ಏರ್ಪಾಟಾಯಿತು. ೧೯೩೪ರಲ್ಲಿ ಒಂದು ವಾರ ನಡೆದ ಗ್ರಂಥ ಪ್ರದರ್ಶನದಲ್ಲಿ ೨೪೩೨ ಕನ್ನಡ ಗ್ರಂಥಗಳ ಪ್ರದರ್ಶನವೆಂದರೆ ಆ ಕಾಲಕ್ಕೆ ಅದು ದೊಡ್ಡ ಗ್ರಂಥಪ್ರದರ್ಶನವೇ ಸರಿ. ಪರಿಷತ್ತಿನ ಎದುರಿಗಿರುವ ಸಂಸ್ಕೃತ ಕಾಲೇಜಿನಲ್ಲಿ ಏರ್ಪಾಟಾಗಿತ್ತು. ಜನರಿಗೆ ವಿನೂತನ ಅನುಭವವನ್ನು ಆ ಪ್ರದರ್ಶನ ಒದಗಿಸಿತು.

ವಸಂತೋತ್ಸವ : ಸಮಕಾಲೀನ ಜಗತ್ತಿನಲ್ಲಿ ಸಾಹಿತ್ಯ, ವಿಜ್ಞಾನ ಕಲೆಗಳ ಕ್ಷೇತ್ರಗಳಲ್ಲಿ ಆಗಿರುವ ಹೊಸಬೆಳವಣಿಗೆಗಳು ಜನಕ್ಕೆ ತಿಳಿಯಬೇಕೆಂದು **ವಸಂತೋತ್ಸವ**ವೆಂಬ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಿದರು. ನಾಟಕ, ನೃತ್ಯ ಸಂಗೀತಗಳ ಮನರಂಜನೆ ಕಾರ್ಯಕ್ರಮಗಳು ಇದರ ಜತೆ ಇದ್ದುದರಿಂದ ಜನರು ಆಕರ್ಷಿತರಾದರು.

ನಗರದಲ್ಲಿ ನಡೆದ ವಸಂತೋತ್ಸವ ಜನಪ್ರಿಯವಾಗಿ ಗ್ರಾಮಾಂತರ ಪ್ರದೇಶಗಳಲ್ಲೂ ನಡೆಸಲು ಒತ್ತಡ ಬಂದಿತು. ಅನವಟ್ಟಿ, ಗದಗ, ಕೊಳ್ಳೆಗಾಲ, ಹುಬ್ಬಳ್ಳಿ, ಶಿರಾಳಕೊಪ್ಪ ಮೊದಲಾದ ಕಡೆಗಳಲ್ಲಿ ವಸಂತೋತ್ಸವಗಳು ನಡೆದವು. ಅಲ್ಲೆಲ್ಲಾ ಪರಿಷತ್ತನ್ನು ಪರಿಚಯಿಸುವ ಕಾರ್ಯಕ್ರಮಗಳು ಏರ್ಪಟ್ಟವು. ಅಲ್ಲಿಯೂ ಗ್ರಂಥ ಪ್ರದರ್ಶನಗಳು ನಡೆದವು.

ಪರಿಷತ್ಪತ್ರಿಕೆ ವಿದ್ವತ್‌ಪತ್ರಿಕೆಯಾಗಿ ಪ್ರಕಟವಾಗಲು ಒಂದು ವ್ಯವಸ್ಥೆ ಮಾಡಬೇಕೆಂದು ಇಡೀ ಕರ್ನಾಟಕಕ್ಕೆ ಪ್ರಾತಿನಿಧ್ಯವಿರುವಂತೆ ೧೫ ಜನರ ಸಂಪಾದಕ ಮಂಡಲಿಯನ್ನು ಏರ್ಪಡಿಸಿದರು.

ಸಾಹಿತ್ಯ ಪರಿಷತ್ತಿನ ಕಾರ್ಯಗಳು ಮತ್ತು ಸಾಹಿತ್ಯ ಪರಿಚಯಗಳು ನಾಡಿನ ಮೂಲೆಮೂಲೆಗಳಲ್ಲಿ ಹಳ್ಳಿಹಳ್ಳಿಗೂ ಹಬ್ಬಬೇಕು ಎಂದು ಡಿವಿಜಿ ಅವರು ಒಂದು ಯೋಜನೆಯನ್ನು ರೂಪಿಸಿದರು. ಅದೇ **"ಸಂಚಾರೋಪನ್ಯಾಸ ಯೋಜನೆ"** ಹೇಮಾದ್ರಿ ಅವರು ಹೇಳಿದಂತೆ "ಹೀಗೆ ಹತ್ತು ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಷತ್ತಿನ ವ್ಯಾಪಕತೆಯನ್ನೂ ಪ್ರಭಾವವನ್ನೂ ಹೇಗೆ ಬೆಳೆಸಬಹುದು ಎಂಬುದನ್ನು ಡಿ. ವಿ. ಗುಂಡಪ್ಪನವರು ತೋರಿಸಿಕೊಟ್ಟರು."

ಕನ್ನಡದ ಕೆಲಸವನ್ನು ಎಲ್ಲರೂ ಸೇರಿ ಒಟ್ಟೊಟ್ಟಾಗಿ ಮಾಡಬೇಕು. ಆಗ ಸಾರ್ಥಕ ಸೇವೆ ಸಾಧ್ಯ. ಹೆಚ್ಚು ಜನರನ್ನು ಕಾರ್ಯಕ್ರಮಗಳು ತಲುಪುತ್ತವೆ ಎಂಬ ಹಿನ್ನೆಲೆಯಲ್ಲಿ ಕನ್ನಡಕ್ಕಾಗಿ ಶ್ರಮಿಸುತ್ತಿದ್ದ ಹಲವು ಹತ್ತು ಸಂಸ್ಥೆಗಳನ್ನು ಒಗ್ಗೂಡಿಸಿ, **ಅಖಿಲ ಕರ್ನಾಟಕ ಸಂಘಗಳ ಸಮ್ಮೇಳನ**ವನ್ನು ಸಂಘಟಿಸಿದರು.

ಕರ್ನಾಟಕ ಸಂಘಗಳ ಸಮ್ಮೇಳನ : ಕರ್ಣಾಟಕ ಸಂಘ ಮೊದಲು ಪ್ರಾರಂಭವಾದುದು ಸೆಂಟ್ರಲ್ ಕಾಲೇಜಿನಲ್ಲಿ ಎ.ಆರ್.ಕೃ. ಅವರು ಅದರ ಪ್ರಾರಂಭಕರ್ತರು. ಅನಂತರ ನಾಡಿನ ನಾನಾ ಕಡೆ ಕರ್ನಾಟಕ ಸಂಘಗಳು ಹುಟ್ಟಿಕೊಂಡವು. ಆಗ ಕನ್ನಡಕ್ಕಾಗಿ ದುಡಿಯುವ ಸಂಘ ಸಂಸ್ಥೆಗಳನ್ನು ಸೇರಿಸಿ ಡಿವಿಜಿ ಅವರು ಅಖಿಲ ಕರ್ಣಾಟಕ ಸಂಘಗಳ ಸಮ್ಮೇಳನ ಏರ್ಪಡಿಸಿದರು. ಇದರಿಂದ ಯುವ ಸಂಘಟನೆಯನ್ನು ವ್ಯವಸ್ಥಿತವಾಗಿ ಮಾಡಲು ಸಾಧ್ಯವಾಯಿತು. ಸಂಘ ಸಂಸ್ಥೆಗಳನ್ನು ಅಂಗಸಂಸ್ಥೆಗಳ ಸದಸ್ಯತ್ವವನ್ನು ಕುರಿತಂತೆ ಪರಿಷತ್ತು ತನ್ನ ನಿಬಂಧನೆಯಲ್ಲಿ ಸೇರ್ಪಡೆ ಮಾಡಿತ್ತು.

೧೯೩೪ರಲ್ಲಿ ಕನ್ನಡ ಸಂಘಗಳ ಸಮ್ಮೇಳನ ನಡೆದ ಮೇಲೆ ಡಿವಿಜಿ ಅವರು ಆ ಬಗ್ಗೆ ವಿಶೇಷ ಕಾಳಜಿವಹಿಸಿದರು. ೧೮ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಡಿಕೇರಿಯಲ್ಲಿ ನಡೆದಾಗ ಸಮ್ಮೇಳನದ ಅಧ್ಯಕ್ಷರಾದ ಡಿವಿಜಿ ಅವರು ಸ್ವಾಗತ ಸಮಿತಿಯವರಿಂದ ತಮಗೆ ಬರಬೇಕಾದ ಹಣವನ್ನು ಮತ್ತು ಪರಿಷತ್ತಿಗೆ ಬರಬೇಕಾದ ಹಣವನ್ನು ಕೊಡಗಿನ ಕರ್ನಾಟಕ ಸಂಘದ ಸ್ಥಾಪನೆಗೆ ನೀಡಿದರು. ಹೀಗೆ ಸ್ಥಾಪಿತವಾದ ಕರ್ಣಾಟಕ ಸಂಘಗಳು ಸಾಕಷ್ಟು ಕೆಲಸ ಮಾಡಿವೆ. ಶಿವಮೊಗ್ಗ ಕರ್ನಾಟಕ ಸಂಘ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವ್ಯವಸ್ಥೆ ಮಾಡಿದರೆ ಮೈಸೂರು ಮಹಾರಾಜ ಕಾಲೇಜ್ ಸಂಘ ೧೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಮೈಸೂರಿನಲ್ಲಿ ನಡೆದಾಗ ವ್ಯವಸ್ಥೆಯ ಭಾರವನ್ನೆಲ್ಲ ಹೊತ್ತಿಕೊಂಡಿತ್ತು. ಬಿಎಂಶ್ರೀ ಮತ್ತು ಮಾಸ್ತಿ ಅವರು ಕರ್ನಾಟಕವನ್ನೆಲ್ಲ ಸುತ್ತುವಾಗ ಕರ್ಣಾಟಕ ಸಂಘಗಳನ್ನು ಸಾಧ್ಯವಿದ್ದೆಡೆಗಳಲ್ಲಿ ಸ್ಥಾಪಿಸಲು ಪ್ರಯತ್ನಿಸಿದರು. ಈ ಪ್ರಯತ್ನಗಳ ಫಲವಾಗಿ ೧೯೫೬ರಲ್ಲಿ ಪರಿಷತ್ತಿನ ಅಂಗಸಂಸ್ಥೆಗಳ ಸಂಖ್ಯೆ ೧೦ ಇದ್ದುದ್ದು ೫೦ಕ್ಕೆ ಏರಿತು. ಕೆಲವು ಕಡೆ ಕರ್ನಾಟಕ ಸಂಘಗಳಿಗೆ ಅಂಗಸಂಸ್ಥೆಗಳಿದ್ದವು. ೧೯೪೫ರಲ್ಲಿ ಸ್ಥಾಪಿತವಾದ ಹೈದರಾಬಾದಿನ ಕರ್ನಾಟಕದ ಸಾಹಿತ್ಯ ಪರಿಷತ್ತಿಗೆ ಹಲವಾರು ಅಂಗ ಸಂಸ್ಥೆಗಳಿದ್ದವು. ಕರ್ನಾಟಕ ಸಂಘಗಳು ಸ್ಥಾಪನೆಗೊಂಡು ಪ್ರವರ್ಧಮಾನಕ್ಕೆ ಬಂದಿದ್ದರಿಂದ ಜನರಲ್ಲಿ ಕನ್ನಡ ಜಾಗೃತಿ ಹೆಚ್ಚಲು ಸಾಧ್ಯವಾಯಿತು. ಪರಿಷತ್ತಿನ ಕೆಲಸವನ್ನು ಈ ಸಂಸ್ಥೆಗಳು ಮಾಡಿದವು.

ಒಟ್ಟಿನಲ್ಲಿ ಹೇಮಾದ್ರಿ ಅವರು ಹೇಳುವಂತೆ "ಹತ್ತು ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಷತ್ತಿನ ವ್ಯಾಪಕತೆಯನ್ನು ಪ್ರಭಾವವನ್ನು ಹೇಗೆ ಬೆಳೆಸಬಹುದೆಂಬುದನ್ನು ಮೊದಲ ಬಾರಿಗೆ ಡಿವಿಜಿ ತೋರಿಸಿಕೊಟ್ಟರು.

ಸಮ್ಮೇಳನಗಳು: ಡಿವಿಜಿ ಅವರು ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ ನಾಲ್ಕು ಸಮ್ಮೇಳನಗಳು ನಡೆದವು.

೧೯ನೇ ಸಮ್ಮೇಳನ (ಹುಬ್ಬಳ್ಳಿ) – ೧೯೩೩ ವೈ. ನಾಗೇಶ ಶಾಸ್ತ್ರಿ (ಅಧ್ಯಕ್ಷರು)

೨೦ನೇ ಸಮ್ಮೇಳನ (ರಾಯಚೂರು) – ೧೯೩೪ ಪಂಜೆ ಮಂಗೇಶರಾಯರು(ಅಧ್ಯಕ್ಷರು)

೨೧ನೇಸಮ್ಮೇಳನ (ಮುಂಬಯಿ) – ೧೯೩೫ ಎನ್. ಎಸ್. ಸುಬ್ಬರಾವ್ (ಅಧ್ಯಕ್ಷರು)

೨೨ನೇ ಸಮ್ಮೇಳನ (ಜಮಖಂಡಿ) – ೧೯೩೭ ಬೆಳ್ಳಾವೆ ವೆಂಕಟನಾರಣಪ್ಪ(ಅಧ್ಯಕ್ಷರು)

ಡಿವಿಜಿ ಅವರು ೨೦, ೨೨ನೇಸಮ್ಮೇಳನಗಳ ಬಗ್ಗೆ ಅವರ ವೈಯಕ್ತಿಕ ಅನುಭವಗಳನ್ನು ಜ್ಞಾಪಕ ಚಿತ್ರಶಾಲೆ-೩ರಲ್ಲಿ (ಪುಟ ೧೩೬-೧೩೮) ಚಿತ್ರಿಸಿದ್ದಾರೆ. ರಾಯಚೂರು ಸಮ್ಮೇಳನದಲ್ಲಿ ಸ್ವಾಗತ ಸಮಿತಿಯಲ್ಲಿ ಎರಡು ಪಾರ್ಟಿಗಳಾಗಿ ಸಮ್ಮೇಳನ ಹೇಗೆ ನಡೆದೀತೋ ಎಂಬ ಚಿಂತೆಯಲ್ಲಿಯೇ ನಡೆದ ಸಂಗತಿಯನ್ನು ತಿಳಿಸಿದ್ದಾರೆ. ಸಮ್ಮೇಳನಗಳಲ್ಲಿ ಸ್ಥಳೀಯ ರಾಜಕೀಯ ಇರುತ್ತದೆ ಎಂಬುದನ್ನು ಈ ಪ್ರಸಂಗ ತಿಳಿಸುತ್ತದೆ.

ಪಂಜೆಯವರ ಬಗ್ಗೆ ಈ ಸಂದರ್ಭದಲ್ಲಿ ಬರೆಯುತ್ತಾ ತಿಳಿಸುತ್ತಾರೆ: ಅವರು ಸಮ್ಮೇಳನದ ಉಪಸಂಹಾರದ ಭಾಷಣದಲ್ಲಿ ಗದ್ಗದಧ್ವನಿಯಿಂದ ಆಡಿದ ಕಟ್ಟಕಡೆಯ ಮಾತು ಹೃದಯಸ್ಪರ್ಶಿಯಾದದ್ದು. ಅದು ಹೀಗೆ: "ನನ್ನ ಅವಸಾನ ಕಾಲದಲ್ಲಿ ಬಾಯಿಂದ 'ಕೃಷ್ಣ ಕೃಷ್ಣ' ಎಂಬ ಮಾತು ಹೊರಡುವಂತೆ, ಕನ್ನಡ, ಕನ್ನಡ ಎಂಬ ಮಾತೂ ಉಚ್ಚಾರಣೆಯಾಗಲಿ."

ಕನ್ನಡಾಭಿಮಾನ ಆ ಕಾಲದ ಹಿರಿಯರಲ್ಲಿ ಹೇಗಿತ್ತು ಎಂಬುದಕ್ಕೆ ಕೃಷ್ಣ ದೈವಭಕ್ತರಾದ ಪಂಜೆ ಅವರ ಮಾತು ಸಾಕ್ಷಿಯಾಗಿದೆ.

ಜಮಖಂಡಿಯಲ್ಲಿ ನಡೆದ ೨೨ನೆಯ ಸಮ್ಮೇಳನದಲ್ಲಿ(೨೨) ತರುಣ ಕವಿಗಳ ಗೋಷ್ಠಿ ಮಾನ್ವಿ ನರಸಿಂಗರಾಯರು (ಹೈದರಾಬಾದಿನಲ್ಲಿ ಕನ್ನಡಕ್ಕಾಗಿ ದುಡಿದವರು ೨೦ವರ್ಷದ ತರುಣರಾಗಿದ್ದರು) ಪದ್ಯ ಓದುವ ಮುಂಚೆ "ನಾನು ತಂದಿರುವುದು ಕವಿತ್ವ ಹೌದೋ ಅಲ್ಲವೋ ಎಂದು ನನಗೇ ಸಂದೇಹವಾಗಿದೆ, ಕ್ಷಮಿಸಬೇಕು" ಎಂದು ವಿನಯವನ್ನು ವ್ಯಕ್ತಪಡಿಸಿ ಕವಿತೆ ವಾಚಿಸಿದರು. ಆಗ ಸಮ್ಮೇಳನಾಧ್ಯಕ್ಷರು ಪಂಜೆ ಅವರು ಮಾನ್ವಿ ಪದ್ಯ ವಾಚಿಸಿದ ಕೂಡಲೇ "ತಾವು ಕುಳಿತಿದ್ದ ಕುರ್ಚಿಯಿಂದ ಥಟ್ಟನೆ ಎಗರಿ ದುಡುದುಡುನೆ ನರಸಿಂಗರಾಯರ ಬಳಿಗೆ ಹೋಗಿ ಮಹಾ ಭಯೋತ್ಪಾದಕವಾದ ಮುಖದಿಂದ "ಯಾರಯ್ಯಾ ನಿನಗೆ ಹೇಳಿದ್ದು ಇದು ಪದ್ಯ ಹೌದೋ ಅಲ್ಲವೋ ಎಂದು? ಅವರಿಗೆ ಬುದ್ಧಿಯಿಲ್ಲ" ರೇಗಾಟದ ಧ್ವನಿಯಿಂದ ಮುಖ ತಿವಿಯುವಂತೆ ಕೈಮಾಡಿಕೊಂಡು ಹೇಳಿದರು. ನರಸಿಂಹರಾಯರು ತಬ್ಬಿಬ್ಬಾದರು. ನಾವೆಲ್ಲ ಈ ನಾಟಕ ನೋಡಿ ಹೊಟ್ಟೆ ಬಿರಿದು ನಗುತ್ತಿದ್ದೆವು. ನರಸಿಂಗರಾಯರಿಗೆ ಅದರ ಭಾವ ಅರ್ಥವಾದ್ದು ಒಂದೆರಡು ನಿಮಿಷ ಕಳೆದ ಬಳಿಕ. ಮಂಗೇಶರಾಯರು ಅವರನ್ನು ಬಾಚಿ ತಬ್ಬಿಕೊಂಡು ಮೇಲಕ್ಕೆತ್ತಿದ್ದರು. (ಜ್ಞಾ.ಚಿ.ಶಾ.ಪು೧೩೭-೧೩೮)

ಡಿವಿಜಿ ಅವರು ತಾವು ಕಂಡ ಸಮ್ಮೇಳನಗಳ ರಸವತ್ತಾದ ಪ್ರಸಂಗಗಳನ್ನು, ಆಗ ಸಮ್ಮೇಳನಗಳು ಹೇಗೆ ನಡೆಯುತ್ತಿದ್ದವು ಎಂಬುದನ್ನು ಜ್ಞಾಪಕ ಚಿತ್ರಶಾಲೆಯಲ್ಲಿ ಚಿತ್ರಿಸಿದ್ದಾರೆ. ಸಮ್ಮೇಳನ ಕಂಡವರೆಲ್ಲ ಬರೆದಿರುವ ಪ್ರಸಂಗಗಳನ್ನು ಹಾಗೂ ಪತ್ರಿಕೆಗಳಲ್ಲಿ ಬಂದ ವಿವರಗಳನ್ನು ಸಂಗ್ರಹಿಸಿದರೆ ಅದೇ ಒಂದು ಪ್ರತ್ಯೇಕ ಗ್ರಂಥವಾಗುತ್ತದೆ. ಈ ಗ್ರಂಥದಲ್ಲಿ ಆಯಾ ಅಧ್ಯಕ್ಷರು ನಡೆಸಿದ ಸಮ್ಮೇಳನಗಳಷ್ಟೇ ಉಲ್ಲೇಖಮಾಡಿದೆ. ಆ ಸಂದರ್ಭದಲ್ಲಿ ರಸವತ್ತಾದ ಪ್ರಸಂಗಗಳು, ಸಂಘರ್ಷಗಳು ವಾದವಿವಾದಗಳು ಹೇಗಿವೆ ಎಂಬುದಕ್ಕೆ ನಿದರ್ಶನವಾಗಿ ಇಲ್ಲಿ ಎರಡು ಪ್ರಸಂಗಗಳನ್ನು ಉಲ್ಲೇಖಿಸಲಾಗಿದೆ.

ಸಮ್ಮೇಳನಗಳಲ್ಲಿ ಸಮಸ್ಯೆಗಳು ಸಾವಿರಾರು ಹೆಜ್ಜೆಹೆಜ್ಜೆಗೆ ಬರುತ್ತವೆ. ಇದು ಮೊದಲಿನಿಂದಲೂ ಇದ್ದುದೇ. ಅವುಗಳ ಪರಿಹಾರವೂ ಅಚಾನಕ್ಕಾಗಿ ಆಗಿರುತ್ತದೆ. ಅದಕ್ಕೊಂದು ನಿದರ್ಶನವನ್ನು ೧೯೨೨ ದಾವಣಗೆರೆ ಸಮ್ಮೇಳನದಲ್ಲಿ (ಎಂ. ವೆಂಕಟ ಕೃಷ್ಣಯ್ಯ ಅಧ್ಯಕ್ಷರು) ನಡೆದ ಪ್ರಸಂಗವನ್ನು ಉಲ್ಲೇಖಿಸಿದ್ದಾರೆ:

ಸಮ್ಮೇಳನ ನಡೆಯಲು ೨-೩ ದಿನ ಹಿಂದೆ ದಾವಣಗೆರೆಗೆ ಸಮ್ಮೇಳನದ ವ್ಯವಸ್ಥೆ ಪರಿಶೀಲನೆಗಾಗಿ ಪರಿಷತ್ತಿನ ಸಮಿತಿ ಹೋದಾಗ ಅಲ್ಲಿಯ ಸ್ಥಳೀಯರ ವೈಮನಸ್ಯದ ಕಾರಣ 'ದಾವಣಗೆರೆ ಬಂದ್' ಆಗಿತ್ತು ಆ ವೇಳೆಗೆ ೬೦-೭೦ ಮಂದಿ ಪ್ರತಿನಿಧಿಗಳು ಸಮ್ಮೇಳನಕ್ಕೆ ಬಂದು ಬಿಟ್ಟಿದ್ದರು. ಸಮ್ಮೇಳನದ ಸಿದ್ಧತೆ ಏನೇನೂ ಆಗಿರಲಿಲ್ಲ. ಡೆಪ್ಯುಟಿ ಕಮೀಷನರ್ ಜನಾಬ್ ಸೈಯದ್ ತಾಜ್ ಪಿರಾನ್ ಊರಲ್ಲಿ ಇರಲಿಲ್ಲ. ಊರಿನ ಪ್ರಮುಖರೆಲ್ಲ ಮತ್ತು ಸಮಿತಿಯವರು ಏನು ಮಾಡಬೇಕೆಂದು ಸಭೆ ಸೇರಿ ಚರ್ಚಿಸಿದರೂ ಫಲಕಾರಿ ಆಗಲಿಲ್ಲ. ಸ್ಥಳದ ಉನ್ನತಾಧಿಕಾರಿ ದಿವಾನರಿಗೇ ತಾರು ಕಳಿಸಿ ಕೇಳಿದರು. ವಿಚಾರಿಸಿ ಹೇಳುತ್ತೇವೆ ಎಂದರು ದಿವಾನರು.

ಪ್ರವಾಸದಲ್ಲಿದ್ದ ತಾಜ್ ಪಿರಾನ್ ಇದ್ದಕ್ಕಿದ್ದಂತೆ ಸಂಜೆಯೇ ಸಮಿತಿ ಬಿಡಾರ ಮಾಡಿದ್ದ ಸ್ಥಳಕ್ಕೆ ಬಂದರು "ಏನ್ ಸ್ವಾಮಿ ನಾನು ವೆಂಕಟಕೃಷ್ಣಯ್ಯನವರ ಶಿಷ್ಯ ಅವರಲ್ಲಿ ಓದಿದವನು. ಅವರು ಸಮ್ಮೇಳನಾಧ್ಯಕ್ಷರಾಗಿ ಬಂದಿರುವುದು ನನಗೆ ಬಹಳ ಸಂತೋಷ. ಅವರನ್ನು ನೋಡಲಿಕ್ಕಾಗಿಯೇ ನಾನು ಬಂದಿದ್ದೇನೆ" ಎಂದು ಹೇಳಿ ಬಂದ್ ಸಡಿಲ ಮಾಡಿಸಿ ಸಮ್ಮೇಳನಕ್ಕೆ ಅನುಕೂಲ ಮಾಡಿಕೊಟ್ಟರು. (ಜ್ಞಾ.ಚಿ.ಶಾ.ಪು೧೪೬)

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೪

ಅಧ್ಯಕ್ಷರು : ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹಾದೂರ್ (೧೯೪೦-೧೯೪೧)



ಜೀವನ :

ಕಂಠೀರವ ನರಸರಾಜ ಒಡೆಯರ್ ಮತ್ತು ಕೆಂಪ್ರ ಚೆಲುವಾಜಯಮ್ಮಣ್ಣಿ ಅವರ ಪುತ್ರರಾಗಿ ೧೮-೭-೧೯೧೯ ರಲ್ಲಿ ಜಯಚಾಮರಾಜ ಒಡೆಯರ್ ಜನಿಸಿದರು. ರಾಜಮನೆತನದ ರಾಯಲ್ ಹೈಸ್ಕೂಲಿನಲ್ಲಿ, ಪ್ರಾರಂಭದ ವಿದ್ಯಾಭ್ಯಾಸ ನಡೆದ ಮೇಲೆ ಕನ್ನಡ ವಿದ್ಯಾರ್ಥಿಯಾದ ಇವರು ೧೯೩೬ರಲ್ಲಿ ಮೈಸೂರು ಮಹಾರಾಜ ಕಾಲೇಜನ್ನು ಸೇರಿದರು. ೧೯೩೮ರಲ್ಲಿ ಬಿ.ಎ. ಪದವೀಧರರಾದರು. ಎಲ್ವಿನ್ ಅವರಿಂದ ಆಡಳಿತ ನಿರ್ವಹಣೆಯಲ್ಲಿ ವಿಶೇಷ ತರಬೇತಿ ಪಡೆದ ಇವರು ೧೯೩೯ರಲ್ಲಿ ವಿದೇಶ ಸಂಚಾರ ಮಾಡಿ ಲೋಕಜ್ಞಾನವನ್ನು ಹೆಚ್ಚಿಸಿಕೊಂಡರು. ೮-೯-೧೯೪೦ರಲ್ಲಿ ಮೈಸೂರು ಸಂಸ್ಥಾನದ ಮಹಾರಾಜರಾದರು. ಭಾರತಗಣರಾಜ್ಯವಾಗಿವೆಂದು ಘೋಷಿತವಾಗುವವರೆಗೆ ಮಹಾರಾಜರಾಗಿ ಮುಂದುವರೆದರು. ರಾಜ್ಯ ಪುರ್ನವಿಂಗಡಣೆ ಆದ ಮೇಲೆ ಪ್ರಥಮ ರಾಜ್ಯಪಾಲರಾದರು. (೧೯೫೬-೬೪) ಅನಂತರ (೧೯೬೪-೬೭) ಮದರಾಸು ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡರು. ಇವರು ಸಂಗೀತ ಸಾಹಿತ್ಯ ಕಲೆಗಳಲ್ಲಿ ಪರಿಣತರೂ ಪ್ರೋತ್ಸಾಹಕರೂ ಆಗಿದ್ದರು. ಜಯಚಾಮರಾಜೇಂದ್ರ ಗ್ರಂಥರತ್ನಮಾಲೆ ಮೂಲಕ ವೇದ ಪುರಾಣ ಇತಿಹಾಸ ಗ್ರಂಥಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಪಂಡಿತರಿಂದ ಅನುವಾದ ಮಾಡಿಸಿ ಪ್ರಕಟಿಸಿದರು. ಸ್ವತಃ ತಾವೇ, ದತ್ತಾತ್ರೇಯ ದಿ ವೇ ಅಂಡ್ ದಿ ಗೋಲ್ ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್, ದಿ ರಿಲಿಜಿಯನ್ ಅಂಡ್ ದಿ ಮ್ಯಾನ್ ಆತ್ಮ ಅಂಡ್ ಬ್ರಹ್ಮ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಪ್ರತಿಭೆಗಳನ್ನು ಮೆಚ್ಚಿ ೧೯೩೬ರಲ್ಲಿ ಆಸ್ಟ್ರೇಲಿಯದ ಕ್ವೀನ್ಸ್ ಲ್ಯಾಂಡ್ ವಿಶ್ವವಿದ್ಯಾಲಯ ೧೯೫೫ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯ ಡಿಲಿಟ್ ಪದವಿಯನ್ನು ೧೯೪೨ರಲ್ಲಿ ಬನಾರಸ್ ವಿಶ್ವವಿದ್ಯಾಲಯ ಡಾಕ್ಟರ್ ಆಫ್ ಲಾಸ್ ಪದವಿಯನ್ನು ನೀಡಿ ಗೌರವಿಟ್ಟವು. ಬ್ರಿಟಿಷ್ ಸರ್ಕಾರ ೧೯೪೫ರಲ್ಲಿ ಜಿ.ಸಿ.ಎಸ್.ಐ ಬಿರುದನ್ನು ೧೯೪೬ರಲ್ಲಿ ಜೆ.ಸಿ.ಬಿ.ಬಿರುದನ್ನು ನೀಡಿತು. ಇವರು ೨೩-೯-೧೯೭೪ರಲ್ಲಿ ನಿಧನರಾದರು.

ಉಪಾಧ್ಯಕ್ಷರು : ಬಿ. ಎಂ. ಶ್ರೀಕಂಠಯ್ಯ (೧೯೩೮-೧೯೪೨)

ಸಾಧನೆ :

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಲ್ಲಿ ಹೊಸಶಕೆಯನ್ನು ಡಿ.ವಿ.ಜಿ ಪ್ರಾರಂಭಿಸಿದರು. ಅನಂತರ ಬಿ.ಎಂ.ಶ್ರೀ ಅವರು ನವಚೈತನ್ಯದ ನವೀನ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಪ್ರಾರಂಭಿಸಿದರು. ಡಿ.ವಿ.ಜಿ. ಅವರು ಇದ್ದ ಕಡೆಯೇ ಬೆಂಗಳೂರಿನಲ್ಲಿ ಪರಿಷತ್ತನ್ನು ಪ್ರಬಲಗೊಳಿಸಿದರು. ಪರಿಷತ್ತಿಗೆ ಹೊಸಕಳೆ ತಂದರು. ಆದರೆ ಬಿ.ಎಂ.ಶ್ರೀ ಅವರಿ ನಾಡಿನಾದ್ಯಂತ ಸಂಚರಿಸಿ ತಮ್ಮ ಅಸಾಧಾರಣ ಪಾಂಡಿತ್ಯ, ಅಮೋಘ ಕಂಠ, ಅದ್ಭುತ ವಾಗ್ವೈಖರಿಗಳಿಂದ ಕನ್ನಡನಾಡಿನ ಜನರನ್ನು ಹುರಿದುಂಬಿಸಿ ಜಾಗೃತಗೊಳಿಸಿದರು. ಆ ಮೂಲಕ ಪರಿಷತ್ತನ್ನು ಜನಮಾನಸದಲ್ಲಿ ಉಳಿಯುವಂತೆ ಮಾಡಿದರು.

ಸಾಹಿತ್ಯ ಪರಿಷತ್ತು, ಸ್ಥಾಪನೆ ಆಗುವ ಕಾಲಕ್ಕೆ ತಿರುಮಲಾಂಬ ಎನ್ನುವ ಗಣ್ಯ ಲೇಖಕಿಯರು ಕನ್ನಡದಲ್ಲಿದ್ದರು. ಡಿ. ಬಿಂದೂಬಾಯಿ ಎನ್ನುವ ಉತ್ಸಾಹೀ ಲೇಖಕಿಯರಿದ್ದರು. ಆದರೆ ಅವರಿಗೆಲ್ಲ ವೇದಿಕೆ ಇರಲಿಲ್ಲ. ಅದರ ಕೊರತೆಯನ್ನು ಹೋಗಲಾಡಿಸಿದರು. ಬಿ.ಎಂ.ಶ್ರೀ ಅವರು ಮೊದಲಬಾರಿಗೆ ೧೯೩೪ರಲ್ಲಿ ಮಹಿಳಾ ಶಾಖೆಯನ್ನು ಡಿ. ಬಿಂದೂಬಾಯಿ ಅವರ ನೇತೃತ್ವದಲ್ಲಿ ಪರಿಷತ್ತಿನಲ್ಲಿ ಪ್ರಾರಂಭಿಸಿದರು. ಮಹಿಳಾ ಕಾರ್ಯಕ್ರಮಗಳಿಗೆ ಒಂದು ಸ್ವತಂತ್ರ ನೆಲೆಮಾಡಿಕೊಟ್ಟರು.

ಹೊಸ ಕಲ್ಪನೆಗಳು ಸೃಜನಕವಿಗಳಾದ ಬಿ.ಎಂ.ಶ್ರೀ ಅವರಲ್ಲಿ ಧಾರಾಳವಾಗಿದ್ದವು. ಅವರ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಲಾಂಛನ ಇರಬೇಕು. ಒಂದು ಧ್ಯೇಯವಾಕ್ಯ ಇರಬೇಕು ಎಂಬ ಉದ್ದೇಶದಿಂದ ಕಲಾವಿದ ಇನಾಮತಿ ಅವರಿಂದ ಪರಿಷತ್ತಿನ ಲಾಂಛನವೊಂದನ್ನು ಮಾಡಿಸಿದರು. ಅದರಲ್ಲೂ ಸಿರಿಗನ್ನಡಂಗೆಲ್ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲಿ ಒಬ್ಬರಾದ ರಾ.ಹ. ದೇಶಪಾಂಡೆಯವರು ವಿಶೇಷವಾಗಿ ಬಳಸಿದರು. ಪರಿಷತ್ತು ಮತ್ತು ಬಿ.ಎಂ.ಶ್ರೀ ಹಾಗೂ ಇತರರು ಇದಕ್ಕೆ ವ್ಯಾಪಕ ಪ್ರಚಾರವನ್ನು ನೀಡಿದರು ಹಾಗಾಗಿ ಎಲ್ಲ ಕಡೆ ಇದು ಪ್ರಚಾರಕ್ಕೆ ಬಂದಿತು.

ಪರಿಷತ್ತಿನಲ್ಲಿ ಅಚ್ಚುಕೂಟ ಪ್ರಾರಂಭಿಸಿದ್ದು ಬಿ.ಎಂ.ಶ್ರೀ ಮುಖ್ಯ ಸಾಧನೆಗಳಲ್ಲಿ ಒಂದು. ಪರಿಷತ್ತು ನಿರಂತರವಾಗಿ ನಿಯತಕಾಲಿಕೆಗಳನ್ನು ಪರಿಷತ್ಪತ್ರಿಕೆ ಮತ್ತು ಕನ್ನಡ ನುಡಿಗಳನ್ನು, ಕಾಲಕಾಲಕ್ಕೆ ಪರಿಷತ್ತಿನ ಗ್ರಂಥಗಳನ್ನು ಮತ್ತು ಇತರ ಪ್ರಕಟಣೆಗಳನ್ನು ಮುದ್ರಿಸಲು ಇತರರ ಮುದ್ರಣಾಲಯಗಳನ್ನು ಅವಲಂಬಿಸುವುದು ಕಷ್ಟ ಮತ್ತು ಕಾಲವಿಳಂಬವಾಗುತ್ತಿದೆ ಎಂಬ ಕಾರಣದಿಂದ ಪರಿಷತ್ತಿಗೆ ಸ್ವತಂತ್ರ, ಅಚ್ಚುಕೂಟವಿರಬೇಕೆಂದು ಅವರು ನಿರ್ಧರಿಸಿದರು. ಇದರ ಸ್ಥಾಪನೆಗಾಗಿ ೧೯೩೦ರಲ್ಲಿ ತಾವೇ ೫೦೦೦ರೂ.ಗಳನ್ನು ಮತ್ತು ಇತರ ಮೂಲಗಳಿಂದ ಹಣವನ್ನು ಸಂಗ್ರಹಿಸಿ ೧೨೦೦೦ರೂ.ಗಳ ವೆಚ್ಚದಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದರು. ಅದರ ಮೇಲ್ವಿಚಾರಣೆಗೆ ಆ ಕಾಲದಲ್ಲಿ ವಿದೇಶಕ್ಕೆ ಹೋಗಿ ಬಂದು ಮುದ್ರಣ ಕಲೆಯಲ್ಲಿ ನಿಷ್ಣಾತರಾಗಿ ಮೈಸೂರು ಸರ್ಕಾರದ ಗೌರ್ನಮೆಂಟ್ ಪ್ರೆಸ್ಸಿನಲ್ಲಿ ಮುಖ್ಯಾಧಿಕಾರಿಗಳಾಗಿ ದುಡಿದು ನಿವೃತ್ತರಾಗಿದ್ದ ಬಿ. ಪುಟ್ಟಯ್ಯನವರನ್ನು, ಬಿ.ಎಂ.ಶ್ರೀಯವರು ನೇಮಿಸಿದರು. ಅವರು ತಮ್ಮ ಅನುಭವದಿಂದ ಅಚ್ಚುಕೂಟವನ್ನು ಅಚ್ಚುಕಟ್ಟಾಗಿ ಕಟ್ಟಿ ಬೆಳೆಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ ಎಂದು ಮೊದಲಿಗೆ ಹೆಸರಿಸಿದ್ದು ಬಿ.ಎಂ.ಶ್ರೀ. ಅವರ ಅಧಿಕಾರಾವದಿಯ ನಂತರ ಆ ಅಚ್ಚುಕೂಟಕ್ಕೆ ಬಿ.ಎಂ.ಶ್ರೀ ಅಚ್ಚುಕೂಟವೆಂದು ನಾಮಕರಣ ಮಾಡಲಾಯಿತು. ಆ ಅಚ್ಚುಕೂಟಕ್ಕೆ ಅಧಿಕೃತವಾದ ಕಟ್ಟಡ ವಿನ್ಯಾಸವನ್ನೇ ನೀಡಲಾಯಿತು. ಈಗ ಅದು ಆಧುನೀಕರಣಗೊಂಡು ಹೊಸಕಟ್ಟಡವಾದ ಸುವರ್ಣಮಹೋತ್ಸವ ಭವನದಲ್ಲಿ ಸ್ಥಾಪಿಸಲ್ಪಟ್ಟಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ಕನ್ನಡ ಜನತೆಯಲ್ಲಿ ಆಸಕ್ತಿ ಅಭಿಮಾನ ಮೂಡುವಂತೆ ಮಾಡಿದವರಲ್ಲಿ ಬಿಎಂಶ್ರೀ ಅವರು ಅಗ್ರಗಣ್ಯರು. ಮೂಲೆಯೊಂದರಲ್ಲಿ ವಿದ್ವಜ್ಜನರ ಮಂಡಳಿಗೆ ಸೀಮಿತವಾದ ಸಂಸ್ಥೆಯನ್ನು ಜನತಾ ಸಂಸ್ಥೆಯಾಗಲು ಶ್ರಮಿಸಿದರು.

ಪರಿಷತ್ತಿನ ಬಗ್ಗೆ ನಿರ್ದಿಷ್ಟ ಗುರಿಗಳನ್ನು ಇಟ್ಟುಕೊಂಡು ಬಿಎಂಶ್ರೀ ಕೆಲಸ ಮಾಡಿದರು. ಅವರು ತಿಳಿಸಿದ ಪರಿಷತ್ತಿನ ಗುರಿಗಳು ಹೀಗಿವೆ:

“ಕನ್ನಡವನ್ನು ಬೆಳೆಸಿ, ಕನ್ನಡ ನಾಡಿನಲ್ಲೆಲ್ಲಾ ಒಂದು ರೂಪಕ್ಕೆ ತಂದು ಅದರ ಮೂಲಕ ಕನ್ನಡಿಗರನ್ನೆಲ್ಲಾ ಒಂದುಗೂಡಿಸುವುದು, ಈ ಹೊಸಕಾಲದಲ್ಲಿ ಕನ್ನಡಿಗರಿಗೆ ಬೇಕಾದ ತಿಳಿವಳಿಕೆಯನ್ನೆಲ್ಲಾ ಕೊಟ್ಟು ಅದರ ಮೂಲಕ ಕನ್ನಡಿಗರನ್ನೆಲ್ಲಾ ಒಂದುಗೂಡಿಸುವುದು. ಹಳೆಯ ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯದ ಪೋಷಣೆ, ವ್ಯಾಸಂಗ ಗೋಷ್ಠಿ, ಪರೀಕ್ಷೆ, ವಿಮರ್ಶೆ, ಪರಿಶೋಧನೆ: ಸಮ್ಮೇಳನ, ವಸಂತೋತ್ಸವ, ಉಪನ್ಯಾಸ, ನಾಟಕ, ಗಮಕ ಕಲೆ ಜನ ಸಂಸ್ಕೃತಿ, ವಿನೋದ, ಸ್ಪರ್ಧೆ, ಮಕ್ಕಳ ನಲಿವು, ಕನ್ನಡ ಸಂಘಗಳ ಒಕ್ಕೂಟ, ಮತ್ತು ಕೈವಾಡದಿಂದ ಊರೂರು ಹಳ್ಳಿಹಳ್ಳಿಗಳಲ್ಲಿ ಬೆಳಕು, ಹುರುಪು, ಹೊಸಬಾಳು, ಹಬ್ಬ ಇತ್ಯಾದಿ ಒಂದು ಮಾತಿನಲ್ಲಿ ಕನ್ನಡಿಗರ ಪುನರುಜ್ಜೀವನ ಒಟ್ಟಿನಲ್ಲಿ ಪರಿಷತ್ತು. ಕನ್ನಡಿಗರ ಸಾರ್ವಜನಿಕ ವಿದ್ಯಾಪೀಠ – ಹೀಗೆ ನಿರ್ದಿಷ್ಟ ಗುರಿಯಲ್ಲಿ ಪರಿಷತ್ತಿನ ಕೆಲಸವನ್ನು ಬಿಎಂಶ್ರೀ ಪ್ರಾರಂಭಿಸಿದರು. ಪ್ರಾರಂಭದಿಂದಲೂ ಪರಿಷತ್ತಿನ ಒಳಗನ್ನು ಹೊರಗನ್ನು ಚೆನ್ನಾಗಿ ಬಲ್ಲವರಾಗಿದ್ದರು ಬಿಎಂಶ್ರೀ.

ಅಚ್ಚುಕೂಟ ಸ್ಥಾಪನೆ : ಪರಿಷತ್ತಿನ ಪ್ರಕಟನೆಗಳಲ್ಲದೆ, ನುಡಿ, ಪರಿಷತ್ಪತ್ರಿಕೆಗಳನ್ನು ಪರಿಷತ್ತಿನಿಂದ ಹೊರಗೆ ಅಚ್ಚಿಗೆ ಕೊಡುತ್ತಿದ್ದುದರಿಂದ ಕಾರ್ಯವಿಳಂಬದ ಜತೆಗೆ ಅಚ್ಚಿನ ವೆಚ್ಚ ಅಧಿಕವಾಗುತ್ತಿತ್ತು ಹೀಗಾಗಿ ಪರಿಷತ್ತಿಗೇ ಒಂದು ಸ್ವಂತ ಅಚ್ಚುಕೂಟ ಆವಶ್ಯಕತೆ ಇದೆ ಎಂಬುದನ್ನು ಬಿಎಂಶ್ರೀ ಮನಗಂಡರು. ಈ ಬಗ್ಗೆ ಕಾರ್ಯಕಾರಿ ಸಮಿತಿ ಚರ್ಚಿಸಿ ನಿರ್ಧಾರ ತೆಗೆದುಕೊಂಡ ನಂತರ ೬೫೦೦ ರೂ ಅಂದಾಜು ವೆಚ್ಚದಲ್ಲಿ ಅಚ್ಚುಕೂಟವನ್ನು ಪ್ರಾರಂಭಿಸಲಾಯಿತು. ಆರಂಭದ ಬಂಡವಾಳಕ್ಕೆ ಬಿಎಂಶ್ರೀ ಅವರೇ ೫೦೦೦ರೂ ಗಳನ್ನು ಮತ್ತೆ ಮರುವರ್ಷ ೧೦೦೦ರೂಗಳನ್ನು ಕೊಟ್ಟರು. ಒಂದು ಕಾಲದಲ್ಲಿ ಅತಿಥಿ ಕೊಠಡಿಯಾಗಿದ್ದ ಭಾಗದಲ್ಲಿ ಮುದ್ರಣಾಲಯದ ಸ್ಥಾಪನೆ ಆಯಿತು. ಅದಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ೧೯೪೦ರಲ್ಲಿ ೧೨೦೦ರೂ ವೆಚ್ಚ ಮಾಡಲಾಯಿತು. ಮುದ್ರಣಾಲಯದ ಮೇಲ್ವಿಚಾರಣೆಗೆ ಮೈಸೂರು ಸರ್ಕಾರದ ಮುದ್ರಣಾಲಯದ ಮುಖ್ಯಾಧಿಕಾರಿಗಳಾಗಿದ್ದ ಬಿ.ಪುಟ್ಟಯ್ಯನವರನ್ನು ನೇಮಿಸಿದರು. ಮುದ್ರಣ ಕಲೆಯ ವಿಶೇಷ ವ್ಯಾಸಂಗಕ್ಕೆ ವಿದೇಶಕ್ಕೆ ಹೋಗಿ ಪರಿಣಿತಿ ಪಡೆದು ಬಂದಿದ್ದವರು ಪುಟ್ಟಯ್ಯನವರು. ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ ಎಂದು ಹೆಸರಾಗಿದ್ದುದನ್ನು ಬಿಎಂಶ್ರೀ ಅವರ ಅಧ್ಯಕ್ಷಾವಧಿ ನಂತರ ಬಿಎಂಶ್ರೀ ಅಚ್ಚುಕೂಟವೆಂದು ನಾಮಕರಣ ಮಾಡಲಾಯಿತು. ಇಂದು ಅಚ್ಚುಕೂಟವನ್ನು ವಿದ್ಯುನ್ಮಾನ ಯಂತ್ರಗಳಿಂದ ಆಧುನಿಕೀರಣಗೊಳಿಸಲಾಗಿದೆ. ಈಗ ಇದು ಹಳೆಯ ಕಟ್ಟಡದಿಂದ ಸ್ವರ್ಣಮಹೋತ್ಸವದ ನೆಲಮಹಡಿಯ ವಿಶಾಲ ಸಭಾಂಗಣಕ್ಕೆ ಬಂದಿದೆ. ಪರಿಷತ್ತಿನ ಪ್ರಕಟನೆಗಳು, ಪತ್ರಿಕೆಗಳು, ಗ್ರಂಥಗಳು, ನಿಘಂಟು ಮಾತ್ರ ಪರಿಷತ್ತಿನ ಮುದ್ರಣಾಲಯದಲ್ಲೇ ಮುದ್ರಣವಾಗುತ್ತಿವೆ. ಮೊದಲು ಪರಿಷತ್ತಿನ ಪ್ರಕಟನೆಗಳ ಜತೆಗೆ ಇತರರ ಗ್ರಂಥಗಳನ್ನು ಅಚ್ಚುಮಾಡಲಾಗುತ್ತಿತ್ತು. ಶೇಷನಾರಾಯಣರು ಮುದ್ರಣಾಲಯದ ಮೇಲ್ವಿಚಾರಕರಾಗಿದ್ದಾಗ, ಮಾಸ್ತಿ ಮೊದಲಾದ ಪ್ರಖ್ಯಾತರ ಗ್ರಂಥಗಳೆಲ್ಲ ಪರಿಷತ್ತಿನ ಮುದ್ರಣಾಲಯದಲ್ಲೇ ತಪ್ಪಿಲ್ಲದೆ ಅಚ್ಚಾಗುತ್ತಿದ್ದವು.

ಮಹಿಳಾ ಶಾಖೆ ಪಾರಂಭ : ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಇರಲಿಲ್ಲ. ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಒಬ್ಬರಾದರೂ ಮಹಿಳೆ ಪ್ರಾರಂಭದಲ್ಲಿ ಇರಲಿಲ್ಲ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮಹಿಳೆಯರಿಗೆ ಸಿಕ್ಕಿದ್ದು ಜಯದೇವಿ ತಾಯಿ ಲಿಗಾಡೆ ಅಧ್ಯಕ್ಷರಾದಂದಿನಿಂದ. ಪರಿಸ್ಥಿತಿ ಹೀಗಿದ್ದಾಗ ಮಹಿಳೆಯರ ಕಾರ್ಯಕ್ರಮಗಳನ್ನು ನಡೆಸಲು ಮತ್ತು ಪರಿಶೀಲಿಸಲು ಮಹಿಳಾ ಶಾಖೆಯೊಂದನ್ನು ಮೊದಲಿಗೆ ಪ್ರಾರಂಭಿಸಿದವರು ಬಿಎಂಶ್ರೀ ಅವರು ಡಿ. ಚಂಪಾಬಾಯಿ ಅವರು ಮೊದಲ ಕಾರ್ಯದರ್ಶಿನಿ ಆದರು. ಸಾಮಾಜಿಕ ಕಾರ್ಯಕರ್ತೆ ಆರ್. ಕಲ್ಯಾಣಮ್ಮನವರು ಸಕ್ರಿಯರಾಗಿ ಭಾಗವಹಿಸಿದರು. ಕೆಲವು ಕಾಲಾನಂತರ ಮಹಿಳಾ ಶಾಖೆ ಮುಂದುವರೆಯಲಿಲ್ಲ. ಬಹುಶಃ ನಮ್ಮ ನಾಡಿನಲ್ಲಿ ಸಾಕಷ್ಟು ಲೇಖಕಿಯರ ಸಂಘಗಳು ಪ್ರಾರಂಭವಾದುದು ಇದಕ್ಕೆ ಕಾರಣವಿರಬಹುದು.

ಪರಿಷತ್ತಿನ ಲಾಂಛನ ರೂಪಿಸಿದ್ದು : ಪರಿಷತ್ತನ್ನು ಜನ ಗುರುತಿಸಲು ಮತ್ತು ಪರಿಷತ್ತಿನ ಚಟುವಟಿಕೆಗಳು ಜನಕ್ಕೆ ತಿಳಿಯಲು ಸಂಸ್ಥೆಗೆ ಲಾಂಛನವೊಂದು ಅಗತ್ಯವಿದೆಯೆಂದು ಬಿ.ಎಂ.ಶ್ರೀ. ಅವರು ನಿರ್ಧರಿಸಿದರು. ಪ್ರಸಿದ್ಧ ಕಲಾವಿದ ಶ್ರೀ ಇನಾಮತಿ ಅವರು ಲಾಂಛನವನ್ನು ರೂಪಿಸಿದರು.

ಕನ್ನಡ ಬಾವುಟ ಪ್ರಕಟನೆ : ಪರಿಷತ್ತಿನ ವಿಶೇಷ ಕೊಡುಗೆಯಾಗಿ ಕನ್ನಡ ಬಾವುಟವೆಂಬ ಕಾವ್ಯ ಸಂಕಲನವೊಂದನ್ನು ಪರಿಶ್ರಮದಿಂದ ಸಿದ್ಧಪಡಿಸಿದರು ಇದರ ಪ್ರಕಟನೆಯ ಉದ್ದೇಶವನ್ನು ಹೀಗೆ ಹೇಳಿದ್ದಾರೆ :

"ಕನ್ನಡ ನಾಡು ಎಚ್ಚೆತ್ತು ಕೂಡಿಕೊಳ್ಳುತ್ತಿರುವ ದೊಡ್ಡ ಸಡಗರದಲ್ಲಿ ಕನ್ನಡ ನಾಡಿನ ಹೆಮ್ಮೆಯನ್ನು ಹಾಡಿರುವ ಕವಿಗಳಿಂದ ಆಯ್ದ ತಿರುಳೊಂದನ್ನು ಹಂಚಬೇಕೆಂಬ ಬಯಕೆ ಬಹುಕಾಲದಿಂದ ಕಡೆದು ಕುದಿಯುತ್ತಿತ್ತು. ಕನ್ನಡ ತಾಯಿ ಪಾದದಲ್ಲಿ ಹಿಂದಿನ ಹಿರಿಯ ಕವಿಗಳು, ಈಗಿನ ಕವಿಗಳು ಒಪ್ಪಿಸಿದ ಹೂಗಳನ್ನು ಬಾಚಿ ತೆಗೆದು ೩೦ ವರುಷಗಳಿಂದ ನನ್ನ ಎದೆಯಲ್ಲಿ ತುಂಬಿ ಚಿಮ್ಮುತ್ತಿದ್ದವುಗಳನ್ನು ಇಲ್ಲಿ ದಂಡೆಗಟ್ಟಿದ್ದೇನೆ.... ತಾಯಡಿಯ ಹೂವುಗಳಿವು ನಾನು ನಾರು", ೭ನೇ ಶತಮಾನದಿಂದ ಇತ್ತೀಚಿನವರೆಗೆ ಶಾಸನಗಳು, ಪೂರ್ವಸಾಹಿತ್ಯ, ನಾಡಪದಗಳು, ಇಂದಿನ ಹೊಸ ಕವಿತೆ ಎಂಬ ನಾಲ್ಕು ತೆನೆಗಳಲ್ಲಿ ಆಯ್ದ ಕವನಗಳು ಇಲ್ಲಿವೆ. ಹತ್ತಾರು ಮರುಮುದ್ರಣಗಳಾದ ಈ ಜನಪ್ರಿಯ ಕೃತಿ, ಪರಿಷತ್ತಿನ ಹೆಮ್ಮೆಯ ಪ್ರಕಟನೆಗಳಲ್ಲಿ ಒಂದು.

ಕನ್ನಡ ಸಾಹಿತ್ಯ ಪರೀಕ್ಷೆಗಳು : ಕನ್ನಡ ಸಾಹಿತ್ಯವನ್ನು ಶಾಲಾ ಕಾಲೇಜುಗಳಲ್ಲಿ ಓದಲಾಗದವರಿಗಾಗಿ ಅಕ್ಷರಾಭ್ಯಾಸದಿಂದ ಹಿಡಿದು ವಿಶ್ವವಿದ್ಯಾಲಯದ ಪದವೀಮಟ್ಟದವರೆಗೆ ಕನ್ನಡ ಸಾಹಿತ್ಯವನ್ನು ತಿಳಿಯುವ ಕಲಿಯುವ ಆಸಕ್ತರಿಗಾಗಿ ೧೯೪೦ ಜೂನ್‌ನಲ್ಲಿ ಕನ್ನಡ ಅಣುಗ, ಕನ್ನಡ ಕಾವ, ಕನ್ನಡ ಜಾಣ, ಎಂಬ ಪರೀಕ್ಷೆಗಳನ್ನು ಬಿಎಂಶ್ರೀ ಪ್ರಾರಂಭಿಸಿದರು. ಅತ್ಯಂತ ಪ್ರಾಥಮಿಕ ಹಂತವಾದ ಅಕ್ಷರ ಕಲಿಕೆಯ ಹಂತವಾದ ಅಣುಗ ಪರೀಕ್ಷೆಯನ್ನು ೧೯೪೮ರ ಸುಮಾರಿಗೆ ಕೈಬಿಡಲಾಯಿತು. ೧೯೭೨ರಲ್ಲಿ ಪ್ರವೇಶ ಎಂಬ ಹೆಸರಿನಲ್ಲಿ ಪರೀಕ್ಷೆ ಪ್ರಾರಂಭವಾಯಿತು. ೧೯೬೬ರಲ್ಲಿ ಕನ್ನಡರತ್ನ ಪರೀಕ್ಷೆಯನ್ನು ಪ್ರಾರಂಭಿಸಲಾಯಿತು. ಸರ್ಕಾರಿ ಉದ್ಯೋಗಕ್ಕೆ ಸೇರಿದವರು ಪಾಸುಮಾಡಬೇಕಾದ ಕನ್ನಡ ಪರೀಕ್ಷೆಗೆ ಸಮಾನ ಎಂದು ಪರಿಗಣಿಸಿ ಸರ್ಕಾರ ಈಚೆಗೆ ಮನ್ನಣೆ ಕೊಟ್ಟಿರುವುದರಿಂದ ಹೆಚ್ಚು ಜನರು ಈ ಪರೀಕ್ಷೆಗೆ ಕೂಡುತ್ತಾರೆ. ಪ್ರಾರಂಭದಲ್ಲಿ ಪರಿಷತ್ತಿನಲ್ಲಿ ಈ ಹಿಂದೆ ಪರೀಕ್ಷೆಗಳಿಗೆ ತರಗತಿಗಳು ನಡೆಯುತ್ತಿದ್ದವು. ಈಗ ಪರಿಷತ್ತು ಪರೀಕ್ಷೆಗಳನ್ನು ಮಾತ್ರ ನಡೆಸುತ್ತಿದೆ. ಈ ಪರೀಕ್ಷೆಗಳು ಒಂದು ಕಾಲದಲ್ಲಿ ಎಷ್ಟು ಜನಪ್ರಿಯವಾಗಿತ್ತು ಎಂದರೆ ಮನೆಯ ಮುಂದೆ ಕನ್ನಡ ಜಾಣ ಎಂದು ಬೋರ್ಡು ಹಾಕಿಕೊಳ್ಳುತ್ತಿದ್ದರು ಮತ್ತು ಪುಸ್ತಕಗಳಲ್ಲಿ ಹಾಗೆಂದು ಅಚ್ಚು ಮಾಡಿಸಿಕೊಳ್ಳುತ್ತಿದ್ದರು.

'ಕನ್ನಡನುಡಿ' ಪ್ರಾರಂಭ : ಪರಿಷತ್ತು ಮೊದಲಿನಿಂದಲೂ ಪರಿಷತ್ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಪರಿಷತ್ತಿನ ಸಮ್ಮೇಳನಗಳ ವಿವರ ಕಾರ್ಯಕಾರಿಸಮಿತಿ ವಾರ್ಷಿಕಾಧಿವೇಶನ ಸಾಧನೆಗಳು, ಗ್ರಂಥ ವಿಮರ್ಶೆ, ಹೊಸಪುಸ್ತಕಗಳ ಪಟ್ಟಿ, ವಿದ್ವತ್ಪೂರ್ಣ ವಿವರಗಳು, ಲೇಖನಗಳು ಇತ್ಯಾದಿ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು.

ಈ ಪತ್ರಿಕೆ ಬಹುಮಟ್ಟಿಗೆ ವಿದ್ವತ್ ಪತ್ರಿಕೆಯಾಗಿತ್ತು. ವಿದ್ವಜ್ಜನವಲ್ಲದ ಸಾಮಾನ್ಯ ಸದಸ್ಯರು ಮತ್ತು ಸಾರ್ವಜನಿಕರೊಡನೆ ಸಂಪರ್ಕ ಹೊಂದಲು ಒಂದು ಪ್ರತ್ಯೇಕ ಪತ್ರಿಕೆಯನ್ನು ಹೊರಡಿಸುವ ಯೋಚನೆ ಡಿವಿಜಿ ಅವರಿಗಿತ್ತು. ಆದರೆ ಅವರ ಕಾಲದಲ್ಲಿ ಆರ್ಥಿಕ ಕೊರತೆಯಿಂದ ಪ್ರತ್ಯೇಕ ಪತ್ರಿಕೆ ಹೊರಡಿಸಲಾಗಲಿಲ್ಲ. ಆದ್ದರಿಂದ ಪರಿಷತ್ ಪತ್ರಿಕೆಯ ಭಾಗಗಳನ್ನೇ ಸಂಗ್ರಹ ಪ್ರತಿಯಾಗಿ ಪ್ರಕಟಿಸುವ ಯೋಜನೆ ರೂಪಿತವಾಗಿತ್ತು. ಸಾಮಾನ್ಯ ಸದಸ್ಯರಲ್ಲಿ ೬ ರೂ ವಾರ್ಷಿಕ ಕೊಟ್ಟರೆ ಪರಿಷತ್ಪತ್ರಿಕೆ (ಪೂರಾ) ೩ರೂ ಚಂದಾ ಕೊಟ್ಟವರಿಗೆ ಸಂಗ್ರಹಪ್ರತಿ ಕೊಡುವ ವ್ಯವಸ್ಥೆ ಮಾಡಲಾಯಿತು. ಈ ಸಂಗ್ರಹಪ್ರತಿಯಲ್ಲಿ "ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಪರಿಷತ್ತಿನ ಸುದ್ದಿಗಳು, ಸಂಪಾದಕೀಯ ಟಿಪ್ಪಣಿಗಳು, ಕಾರ್ಯ ನಿರ್ವಾಹಕ ಮಂಡಳಿಯ ಮುಖ್ಯನಿರ್ಣಯಗಳು, ಪರಿಷತ್ತಿನ ಪ್ರಚಾರದ ದೃಷ್ಟಿಯಿಂದ ಆವಶ್ಯಕವೆಂದು ಕಂಡು ಬಂದ ಲೇಖನಗಳನ್ನು ಕೊಡಲಾಗುತ್ತಿತ್ತು.

ಬಿಎಂಶ್ರೀ ಅವರು ಉಪಾಧ್ಯಕ್ಷರಾದ ಕೂಡಲೇ ಈ ಸಂಗ್ರಹ ಪ್ರತಿಗೆ ಬದಲಾಗಿ ಪ್ರತ್ಯೇಕ ಪತ್ರಿಕೆಯನ್ನೇ ಪ್ರಾರಂಭಿಸಿದರು. ೧೯೩೮ ಅಕ್ಟೋಬರ್ ೪ ವಿಜಯದಶಮಿ ದಿನದಂದು 'ಕನ್ನಡ ನುಡಿ' ವಾರಪತ್ರಿಕೆ ಪ್ರಾರಂಭವಾಯಿತು. ಅನಕೃ ಅವರು ಪ್ರಥಮ ಸಂಪಾದಕರಾದರು. ಆಗಾಗಿನ ಪರಿಷತ್ತಿನ ಕಾರ್ಯಕಲಾಪಗಳು, ಉತ್ಸವಾದಿ ಉಪನ್ಯಾಸಗಳೂ ಸುದ್ದಿಗಳು ಕನ್ನಡ ಚಟುವಟಿಕೆಗಳು ಮಹಾಜನರ ಗಮನಕ್ಕೆ ಬರಲು ಇದರಿಂದ ಸಾಧ್ಯವಾಯಿತು. ಅನಂತರ ನಿಬಂಧನೆಗಳಲ್ಲಿ ಸದಸ್ಯರಿಗೆ

ಉಚಿತವಾಗಿ ಕೊಡತಕ್ಕದ್ದೆಂದು ನಿಯಮ ಸೇರಿತು. ಈಗಲೂ ಸದಸ್ಯರಿಗೆ ಕನ್ನಡ ನುಡಿ ಉಚಿತ. ಮೊದಲು ವಾರಪತ್ರಿಕೆಯಾಗಿ ಬರುತ್ತಿದ್ದ ಪತ್ರಿಕೆ ಆರ್ಥಿಕ ಅನಾನುಕೂಲತೆಯಿಂದ ಮಾಸಪತ್ರಿಕೆ ಆಯಿತು. ೧೯೬೯ರಿಂದ ಪಕ್ಷಪತ್ರಿಕೆಯಾಗಿ ೧೯೯೧ರಿಂದ ಮಾಸಪತ್ರಿಕೆ ಆಗಿರುತ್ತೆ. ಇದು ಈಗಲೂ ಮಾಸ ಪತ್ರಿಕೆಯಾಗಿ ಈಗಲೂ ಬರುತ್ತಿದೆ.

ಅನಕೃ ರಾಜೀನಾಮೆ ಪ್ರಸಂಗ : ಕನ್ನಡ ನುಡಿ ಸಂಪಾದಕರಾಗಿ ಅನಕೃ ಬಹುಕಾಲ ಮುಂದುವರೆಯಲಿಲ್ಲ. ಕೇವಲ ೪೨ ಸಂಚಿಕೆಗಳಿಗೆ ಅವರು ಸಂಪಾದಕರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದರು. ಅವರು ನುಡಿ ಸಂಪಾದಕರಾಗಿ ಮುಂದುವರೆಯದಿರುವ ಕಾರಣ ಅವರ ಕನ್ನಡಾಭಿಮಾನವಾಗಿದೆ.

೧೯೩೮ರಲ್ಲಿ ಬಳ್ಳಾರಿ ಸಾಹಿತ್ಯ ಸಮ್ಮೇಳನಕ್ಕೆ ರಂ. ರಾ. ದಿವಾಕರರು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಆದರು. ಆಗ ದೇಶದಲ್ಲೆಲ್ಲಾ ಹಿಂದಿ ಪ್ರಚಾರ ಭರಾಟೆಯಿಂದ ಆಗುತ್ತಿತ್ತು. ದಿವಾಕರ್ ಅವರು ಮೊದಲಿನಿಂದಲೂ ಹಿಂದೀ ಪ್ರೇಮಿಗಳು. ಬಳ್ಳಾರಿ ಸಾಹಿತ್ಯ ಸಮ್ಮೇಳನಕ್ಕೆ ರಂ. ರಾ ದಿವಾಕರರು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದ ಮೇಲೂ ಹಿಂದಿ ಪ್ರಚಾರ ಮಾಡುತ್ತಿದ್ದರು. ಇದನ್ನು ವಿರೋಧಿಸಿ ಅನಕೃ ಕನ್ನಡದಲ್ಲಿ ಸಂಪಾದಕೀಯ ಬರೆದರು : "…. ಇದೇ ವರ್ಷ (೧೯೩೮) ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪಟ್ಟವನ್ನು ಕಟ್ಟಿಸಿಕೊಂಡ ಶ್ರೀ ದಿವಾಕರರು ತಮ್ಮ ಕರ್ತವ್ಯವನ್ನು ಮರೆತುದು ಶೋಚನೀಯ. ಶ್ರೀಯುತರು ಕನ್ನಡ ಪ್ರಚಾರಕ್ಕೆ ಹೊರಡಬೇಕಾಗಿತ್ತು. ಕನ್ನಡ ನಾಡಿನ ಏಕೀಕರಣಕ್ಕೆ ಕುತ್ತು ಒದಗಿರುವಾಗ ಶ್ರೀ ದಿವಾಕರರು ಹಿಂದಿ ಪ್ರಚಾರಕ್ಕೆ ಹೊರಟಿದ್ದಾರೆ. ಸ್ವಂತ ಮನೆ ಹೊತ್ತಿ ಉರಿಯುವಾಗ ಪಕ್ಕದಮನೆಯಲ್ಲಿ ತೋಟ ಮಾಡುವುದಕ್ಕೆ ಹೋದ ಹಾಗೆ"ಆಯಿತು ಎಂದು ಬರೆದರು.

ಇದಕ್ಕೆ ದಿವಾಕರರು ಆಕ್ಷೇಪಣೆ ಎತ್ತಿದರು. ಪರಿಷತ್ತಿನ ಕಾರ್ಯಕಾರಿ ಮಂಡಳಿ ದಿವಾಕರರ ಪರವಾಗಿ ಹೇಳಿಕೆಯಿತ್ತಿತು. ಅನಕೃ ಅವರು ಈ ಬಗ್ಗೆ ಬರೆದ ಸಂಪಾದಕೀಯಕ್ಕಾಗಿ ಕ್ಷಮಾಪಣೆ ಬರೆದು ಪ್ರಕಟಿಸಬೇಕೆಂದು ಹೇಳಿದಾಗ ಅನಕೃ ಆತ್ಮಾಭಿಮಾನದಿಂದ ಆ ಕೋರಿಕೆಯನ್ನು ತಿರಸ್ಕರಿಸಿ ನುಡಿ ಸಂಪಾದಕತ್ವಕ್ಕೆ ರಾಜೀನಾಮೆ ಇತ್ತರು.

ಕರ್ಣಾಟಕ – ಕನ್ನಡ ಆದ ಪ್ರಸಂಗ

ಬಿ.ಎಂ.ಶ್ರೀ ಅವರು ೬ವರ್ಷಗಳ(೧೯೩೮–೧೯೪೩) ಉಪಾಧ್ಯಕ್ಷರಾದ ಕಾಲದಲ್ಲಿ ಅನೇಕ ಘಟನೆಗಳು ನಡೆದವು ಅವುಗಳಲ್ಲಿ ನ–ಣ ಪ್ರಸಂಗ ಒಂದು. ಕರ್ಣಾಟಕ ಸಾಹಿತ್ಯ ಪರಿಷತ್ತು ಎಂಬ ಹೆಸರು ಪರಿಷತ್ತು ಪ್ರಾರಂಭವಾದಾಗಿನಿಂದ ಬಿ.ಎಂ.ಶ್ರೀ ಅವರ ಕಾಲದವರೆಗೂ ಇತ್ತು. ಬಿಎಂಶ್ರೀ ಅವರು ರಜತೋತ್ಸವ ಸಂದರ್ಭದಲ್ಲಿ ಪರಿಷತ್ತಿನ ಕಟ್ಟಡದ ಮೇಲೆ ನಿಯಾನ್ಸ್ ಲೈಟಿನಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದು ಹಾಕುವಾಗ ಣಾಗೆ ಬದಲಾಗಿ ನಾ ಬಳಸಿದರು. ಕರ್ಣಾಟಕ ಹೋಗಿ ಕರ್ನಾಟಕ ಆಗಿತ್ತು ಈ ಪದದ ಬದಲಾವಣೆ ಬಗ್ಗೆ ನಾಡಿನಲ್ಲೆಲ್ಲಾ ವಿದ್ವಾಂಸರ ನಡುವೆ ಸಾಹಿತಿಗಳ ನಡುವೆ ದೊಡ್ಡ ಕೋಲಾಹಲದ ಚರ್ಚೆ ವಾದ ವಿವಾದಗಳಾದವು. ನಿಬಂಧನೆಯಲ್ಲಿರುವ ಹೆಸರಿನಲ್ಲಿ ಬದಲಾವಣೆಯನ್ನು ಸಕಲ ಸದಸ್ಯರ ಸಭೆಯ ಅನುಮತಿ ಇಲ್ಲದೆ ಬದಲಾಯಿಸಲಾಗದು ಎಂದು ಸದಸ್ಯರು ಹೇಳಿದರು. ಕೊನೆಗೆ ಈ ವಿಚಾರವನ್ನು ೧೯೩೮ನೇ ಡಿಸೆಂಬರ್‌ನಲ್ಲಿ ಬಳ್ಳಾರಿಯಲ್ಲಿ ನಡೆದ ಸಮ್ಮೇಳನದಲ್ಲಿ ಸಕಲ ಸದಸ್ಯರ ಸಭೆಯಲ್ಲಿ ಮಂಡಿಸಿದಾಗ ಬಿರುಸಿನ ಚರ್ಚೆ ನಡೆಯಿತು. ಕೊನೆಗೆ ನ–ಣವಾದದ ಎರಡೂ ಪಕ್ಷಗಳು ಒಮ್ಮತವಾಗಿ ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಾಯಿಸಲು ಸಕಲ ಸದಸ್ಯರ ಸಭೆ ಒಪ್ಪಿತು. ಅಂದಿನಿಂದ ಕರ್ಣಾಟಕ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ತು ಆಯಿತು. ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಆಯಿತು.

ರಜತಮಹೋತ್ಸವ ಮತ್ತು ಸಮವಸ್ತ್ರವಿಚಾರ

ಬಿ.ಎಂ.ಶ್ರೀ ಅವರು ಉಪಾಧ್ಯಕ್ಷರಾಗಿದ್ದಾಗ ಪರಿಷತ್ತಿಗೆ ೨೫ ವರುಷ ತುಂಬಿತು. ೩೦–೬–೧೯೪೦ರಿಂದ ೧–೭–೧೯೪೦ ರವರೆಗೆ ಬೆಂಗಳೂರು ಪುರಭವನದಲ್ಲಿ ಒಂದು ವಾರದ ಕಾಲ ವಿಜ್ರಂಭಣೆಯಿಂದ ಬೆಳ್ಳಿ ಹಬ್ಬದ ಕಾರ್ಯಕ್ರಮಗಳು ನಡೆದವು. ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾರಂಭವನ್ನು ಉದ್ಘಾಟಿಸಿದರು.


ಆ ಸಂದರ್ಭದಲ್ಲಿ ಸಮಸ್ಯೆಯೊಂದು ಉದ್ಭವಿಸಿತು. ಉದ್ಘಾಟನಾ ಸಮಾರಂಭಕ್ಕೆ ಮಹಾರಾಜರು ಆಗಮಿಸುತ್ತಿರುವುದರಿಂದ ಸಭೆಯಲ್ಲಿ ಪಾಲ್ಗೊಳ್ಳಬಯಸುವವರೆಲ್ಲ ಅರಮನೆ ಮನ್ನಣೆ ಇತ್ತಿರುವ ದರ್ಬಾರ್ ಉಡುಪಿನಲ್ಲೇ ಬರಬೇಕು ಎಂಬ ಮಾತು ಕೇಳಿಬಂತು ಆಗ ಸಮಾರಂಭದಲ್ಲಿ ಪಾಲ್ಗೊಳ್ಳಬಯಸಿದ್ದ ಬೊಂಬಾಯಿ ಮತ್ತು ಮದರಾಸು ಪ್ರಾಂತದ ಕನ್ನಡಿಗರು "ಅರಮನೆ ಕಟ್ಟಳೆ ಸಂಸ್ಥಾನರಿಗೆ ಇರುವಲ್ಲದ್ಯಾಕೆ ನಮಗದು ಅನ್ವಯಿಸುದಿಲ್ಲ" ಎಂಬ ನಿಲುವನ್ನು ತಳೆದರು. ಸಂಘಟಕರಿಗೆ ಆತಂಕ ಶುರುವಾಯಿತು. ಕೊನೆಗೆ ಅರಮನೆಯಿಂದ ಈ ಬಗ್ಗೆ ಪರಿಹಾರ ಮಾರ್ಗ ಸಿಕ್ಕಿತು"

ಪರಿಷತ್ತಿನ ರಜತೋತ್ಸವವು ಅಖಿಲ ಕರ್ಣಾಟಕದ ಉತ್ಸವವಾದುದರಿಂದಲೂ ರಾಜ್ಯದ ಹೊರಗಿನಿಂದ ಸಾಕಷ್ಟು ಮಂದಿ ಬರಬೇಕಾದುದು ಯುಕ್ತ ಹಾಗೂ ಉಚಿತ ಎಂದು ಭಾವಿಸಿರುವುದರಿಂದಲೂ ದರ್ಬಾರ್ ಉಡುಪು ಕಡ್ಡಾಯವಿಲ್ಲ ಎಂದು ವಿನಾಯಿತಿ ಸಿಕ್ಕಿತು. ಸಮಾರಂಭ ನಿರಾಳವಾಗಿ ನಡೆಯಿತು.

ಡಿವಿಜಿ ಅವರ ಕಾಲದಲ್ಲಿ ಸಾರ್ವಜನಿಕರಿಗೆ ಹೆಚ್ಚು ಹೆಚ್ಚಾಗಿ ತೆರೆದುಕೊಂಡ ಪರಿಷತ್ತು ಬಿಎಂಶ್ರೀ ಅವರ ಕಾಲದಲ್ಲಿ ನಾಡಿನಲ್ಲೆಲ್ಲಾ ವ್ಯಾಪಕವಾಗಿ ಪ್ರಚಾರವನ್ನು ಪಡೆಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೫

ಅಧ್ಯಕ್ಷರು : ರಾಜಾ ಲಕುಮನ ಗೌಡ ಸರ್‌ದೇಸಾಯಿ (೧೯೪೧ – ೧೯೪೬)



ಉಪಾಧ್ಯಕ್ಷರು : ಮಾಸ್ತಿ ವೆಂಕಟೇಶ ಅಯ್ಯಂಗಾರ್ (೧೯೪೩–೧೯೪೭)

ಸಾಧನೆ :

ಮೈಸೂರು ಸರ್ಕಾರದಿಂದ ನಿವೃತ್ತರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಪರಿಷತ್ತಿನ ಉಪಾಧ್ಯಕ್ಷರಾಗಿ ೧೯೪೩ರಲ್ಲಿ ಬಿಎಂಶ್ರೀ ಅವರ ನಂತರ ಅಧಿಕಾರವನ್ನು ಸ್ವೀಕರಿಸಿದರು.


ತಮ್ಮ ಸ್ವಂತ ವೆಚ್ಚದಿಂದಲೇ ಪ್ರವಾಸ ಮಾಡಿ ಪರಿಷತ್ತಿನ ಪ್ರಚಾರ ಮಾಡಿದರು. ಪರಿಣಾಮವಾಗಿ ಸದಸ್ಯರ ಸಂಖ್ಯೆ ಮೊದಲಬಾರಿಗೆ ೧೫೦೦ವರೆಗೆ ಏರಿತು. ಸಾಹಿತ್ಯೋತ್ಸವ, ಗಮಕ ಪ್ರಚಾರ, ಪರೀಕ್ಷೆಗಳು ಮೊದಲಾದ ಕಾರ್ಯಕ್ರಮಗಳು ಮುಂದುವರೆದವು. ಜೊತೆಗೆ ತಮ್ಮ ಪ್ರಭಾವದಿಂದ ಗಣ್ಯರಿಂದ ದತ್ತಿ ಪಡೆದು ದತ್ತಿಗಳನ್ನು ಹೆಚ್ಚಿಸಿದರು. ದತ್ತಿ ಹಣ ಎಂದರೆ ಸಂಸ್ಥೆಗೆ ಕಾಯಂ ಆಯಕ್ಕೆ ದಾರಿ ಎಂದರ್ಥ. ಬೆಳ್ಳಾವೆ ವೆಂಕಟನಾರಣಪ್ಪನವರ ನಿಧಿ. ಜಾವಳಿ ಗಣೇಶರಾಯರ ನಿಧಿ, ಸೋಸಲೆ ಗರಳಪುರಿ ಶಾಸ್ತ್ರಿಗಳ ಮತ್ತು ವೆಂಕಟಸುಬ್ಬಮ್ಮನವರ ದತ್ತಿ, ತೂಬುಗೆರೆ ನಂಜಪ್ಪನವರ ದತ್ತಿನಿಧಿ ಮೊದಲಾದ

ದತ್ತಿಗಳು ಪರಿಷತ್ತಿಗೆ ದೊರೆತು ಹಲವಾರು ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಯಿತು.

ಗಮಕ ತರಬೇತಿಯಲ್ಲಿ ಪರಿಷತ್ತು ಪ್ರೌಢ ತರಗತಿಗಳನ್ನು ಆರಂಭಿಸಿತು. ಬೇರೆಬೇರೆ ಭಾಗಗಳಿಂದ ಆರಿಸಿದ ೬ ಜನ ಗಮಕ ಅಧ್ಯಾಪಕರನ್ನು ಆಯ್ಕೆಮಾಡಿ ತರಬೇತಿ ನೀಡಿತು. ೩ ಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲಾಯಿತು. ಹೀಗೆ ತರಬೇತಿ ಹೊಂದಿದ ಗಮಕಿಗಳು ಊರೂರಿಗೆ ಹೋಗಿ ಗಮಕ ಪ್ರಚಾರ ಮಾಡಬೇಕಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೬

ಅಧ್ಯಕ್ಷರು : ಜಸ್ಟೀಸ್ ಲೋಕೂರ ನಾರಾಯಣರಾವ್ ಸ್ವಾಮಿರಾವ್ (೧೯೪೭ – ೧೯೪೭)



ಉಪಾಧ್ಯಕ್ಷರು : ಮಾಸ್ತಿ ವೆಂಕಟೇಶ ಅಯ್ಯಂಗಾರ್ (೧೯೪೭-೧೯೪೭)

ಸಾಧನೆ :

ಲೋಕೂರರು ಅಧ್ಯಕ್ಷರಾದಾಗಲೂ ಮಾಸ್ತಿ ಅವರು ಸ್ವಲ್ಪಕಾಲಕ್ಕೆ ಅಧ್ಯಕ್ಷರಾಗಿ ಮುಂದುವರೆದರು. ಕಾಸರಗೋಡು ಸಮ್ಮೇಳನದಲ್ಲಿ ತಿರುಮಲೆ ತಾತಾಚಾರ್ಯರು ಅಧ್ಯಕ್ಷರಾದಾಗ ಅವರಿಗೆ ಅಧಿಕಾರ ವಹಿಸಿಕೊಟ್ಟರು.

ಶರ್ಮರು ಅಧಿಕಾರ ಸ್ವೀಕಾರ ಮಾಡಿದ್ದು ೨೯-೧೨-೧೯೪೭ರಂದು (೬-೩-೧೯೪೯) ಅಲ್ಲಿಯವರೆಗೆ ಮಾಸ್ತಿ ಉಪಾಧ್ಯಕ್ಷರಾಗಿ ೨ನೇ ಬಾರಿಗೆ ಮುಂದುವರೆದಿದ್ದರು. ಅಲ್ಪಕಾಲಾವಧಿಯಲ್ಲಿ ಅಯ್ಯಂಗಾರ್ ಅವರಿಗೆ ಏನೂ ಸಾಧನೆ ಮಾಡಲಾಗಿಲ್ಲ.

ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳು ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಿದರು.

ಪರಿಷತ್ತಿನ ಕೆಲಸಕ್ಕಾಗಿ ಎಷ್ಟೇ ಪ್ರಯಾಣ ಕೈಗೊಳ್ಳುತ್ತಿದ್ದರೂ ಅದರ ಖರ್ಚು ವೆಚ್ಚಗಳಿಗಾಗಿ ಪರಿಷತ್ತಿನಿಂದ ಒಂದು ಕಾಸನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಹೀಗೆ ನಿಸ್ಪೃಹರಾಗಿ ಕೆಲಸ ಮಾಡಿದವರು ಮಾಸ್ತಿ ಅವರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೭

ಅಧ್ಯಕ್ಷರು : ತಿರುಮಲೆ ತಾತಾಚಾರ್ಯ ಶರ್ಮ (೧೯೪೭– ೧೯೪೮)

ಸಾಧನೆ :

ಮೊದಲಿಗೆ ಪರಿಷತ್ತಿನ ನಿಬಂಧನೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆದ ಕಾಲಕ್ಕೆ ಒಬ್ಬ ಅಧ್ಯಕ್ಷರು ಒಬ್ಬ ಉಪಾಧ್ಯಕ್ಷರನ್ನು ಸಕಲ ಸದಸ್ಯ ಸಭೆಯು ಆರಿಸುತ್ತಿತ್ತು. ಅನಂತರ (ಹೆಚ್. ವಿ. ನಂಜುಂಡಯ್ಯನವರ ನಂತರ ಅಧ್ಯಕ್ಷಸ್ಥಾನ ಗೌರವಸ್ಥಾನವಾಗಿ ರಾಜಮನೆತನದಲ್ಲಿ ಉಳಿಯಿತು. ಉಪಾಧ್ಯಕ್ಷರೇ ಎಲ್ಲ ಕಾರ್ಯವನ್ನು ನಿರ್ವಹಿಸುತ್ತಿದ್ದರು) ಆದುದರಿಂದ ನಿಯಮದಲ್ಲಿ ಬದಲಾವಣೆ ಆಗಿ "ಉಪಾಧ್ಯಕ್ಷರು ಇಬ್ಬರು ಗೌರವ ಕಾರ್ಯದರ್ಶಿಗಳು ಮತ್ತು ಗೌರವ ಕೋಶಾಧ್ಯಕ್ಷರು ಬೆಂಗಳೂರು ನಿವಾಸಿಗಳಾಗಿರತಕ್ಕದ್ದು" ಎಂದು ನಿಯಮಕ್ಕೆ ತಿದ್ದುಪಡಿ ಆಯಿತು.

೧೯೪೭ ಡಿಸೆಂಬರ್ ೨೯ರಲ್ಲಿ ಕಾಸರಗೋಡಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ಸಭೆ ನಡೆದಾಗ ಆ ಸಭೆಯಲ್ಲಿ ಆದ ನಿರ್ಣಯವಿದು. "ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೇ ಪರಿಷತ್ತಿಗೆ ಆಡಳಿತದ ಜವಾಬ್ದಾರರೂ ಅಧಿಕಾರಿಗಳೂ ಆಗಿರತಕ್ಕದ್ದು. ಈಗಿರುವ ಉಪಾಧ್ಯಕ್ಷಸ್ಥಾನ ಅಗತ್ಯವಿಲ್ಲ. ಅಧ್ಯಕ್ಷರು ತಮಗೆ ನಿರ್ವಹಿಸಲು ಅನನುಕೂಲವೆಂದು ತಿಳಿಸಿದ ಸಂದರ್ಭದಲ್ಲಿ ಕಾರ್ಯಸಮಿತಿ ಒಪ್ಪಿ ಒಬ್ಬ ಕಾರ್ಯಾಧ್ಯಕ್ಷನನ್ನು ನಿಯಮಿಸಿಕೊಳ್ಳತಕ್ಕದ್ದು. ಈ ವರ್ಷದಿಂದಲೇ (೧೯೪೭) ಈ ನಿರ್ಣಯ ಜಾರಿಗೆ ಬರತಕ್ಕದ್ದು."

ಈ ನಿರ್ಣಯಾನುಸಾರ ಸಮ್ಮೇಳನದ ಅಧ್ಯಕ್ಷರು ಪ್ರತಿವರ್ಷವೂ ಆಯ್ಕೆಯಾಗಬೇಕಾಗಿತ್ತು. ಕಾಸರಗೋಡಿನ ಸಮ್ಮೇಳನದ ಅಧ್ಯಕ್ಷರಾಗಿದ್ದ ತಿ. ತಾ. ಶರ್ಮ (೧೯೪೭–೧೯೪೮) ಅಧ್ಯಕ್ಷರಾದರು ಸಮ್ಮೇಳನದ ಅವಧಿಯೂ ಪರಿಷತ್ತಿನ ಅವಧಿಯಲ್ಲಿ ಒಂದೇ ವರ್ಷವಾದ್ದರಿಂದ ೧೯೪೯ರಲ್ಲಿ ನಡೆದ ಗುಲ್ಬರ್ಗ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಉತ್ತಂಗಿ ಚೆನ್ನಪ್ಪ ಅಧ್ಯಕ್ಷರಾದರು.

ಇವರಿಬ್ಬರ ಅಧ್ಯಕ್ಷಾವಧಿ ೧ ವರ್ಷವಾದ್ದರಿಂದ ಇಬ್ಬರೂ ಪರಿಷತ್ತಿನ ಕೆಲಸಗಳಲ್ಲಿ ಏನನ್ನೂ ಸಾಧಿಸಲಾರದವರಾದರು ೧೯೫೦ರಲ್ಲಿ ನಡೆದ ಸೊಲ್ಲಾಪುರದ ೩೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಎಂ. ಆರ್. ಶ್ರೀ ಅವರು ಆಯ್ಕೆಯಾದರು. ಅವರ ಕಾಲದಲ್ಲಿ ಸಕಲ ಸಭೆ ನಡೆದು ಉಪಾಧ್ಯಕ್ಷಸ್ಥಾನ ರದ್ದಾಯಿತು ಮತ್ತು ಅಧ್ಯಕ್ಷಸ್ಥಾನಾವಧಿ ೩ ವರ್ಷಗಳಾಯಿತು. ಈಗಲೂ ಪರಿಷತ್ತಿನ ಅಧ್ಯಕ್ಷರಾವಧಿ ೩ ವರ್ಷಗಳೇ ಇದೆ.

ಸಮ್ಮೇಳನಾಧ್ಯಕ್ಷರೇ ಪರಿಷತ್ ಅಧ್ಯಕ್ಷರಾಗಬೇಕೆಂದಾಗ ಅಧ್ಯಕ್ಷರ ಅವಧಿ ೧ ವರ್ಷವಾಯಿತು. ಆದರೆ ಪರಿಷತ್ತಿನ ಅಧ್ಯಕ್ಷರು ಬೆಂಗಳೂರಿನಲ್ಲಿ ವಾಸಿಸಬೇಕೆಂಬ ನಿಯಮವಿರದಿದ್ದರಿಂದಲೂ ಸಮ್ಮೇಳನಾಧ್ಯಕ್ಷರು ನಮ್ಮ ನಾಡಿನ ಯಾವ ಮೂಲೆಯವರಾದರೂ ಆಗಬಹುದಾದ್ದರಿಂದಲೂ ಧಾರವಾಡದ ಉತ್ತಂಗಿ ಚೆನ್ನಪ್ಪನವರು ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದರು. ಆದರೆ ಕಾರಣಾಂತರಗಳಿಂದ ಅವರು ಬೆಂಗಳೂರಿನಲ್ಲಿ ವಾಸಿಸಲಿಲ್ಲ.

ತಿ. ತಾ. ಶರ್ಮರ ಕಾಲದಲ್ಲಿ ಆದ ಕೆಲಸ

ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಎಲ್. ಎಸ್. ಶೇಷಗಿರಿರಾಯ ತಿ.ತಾ. ಶರ್ಮರ ಪರವಾಗಿ ಎಲ್ಲ ಕಾರ್ಯಗಳನ್ನೂ ನಿರ್ವಹಿಸಿದರು. ತಿತಾಶರ್ಮರು ಗಡಿನಾಡು ಪ್ರವಾಸದಲ್ಲಿ ನಿರತರಾದರು. ಶರ್ಮರ ಕಾಲದಲ್ಲಿ ಆದ ಕೆಲಸವೆಂದರೆ ಪರಿಷತ್ತಿಗೆ ದೂರವಾಣಿ ವ್ಯವಸ್ಥೆ ಆಯಿತು (ಈಗಿನಂತೆ ಸುಲಭವಾಗಿ ದೂರವಾಣಿ ಸಿಗುತ್ತಿರಲಿಲ್ಲ, ಪರಿಷತ್ತಿನ ಕಾರ್ಯಾವಧಿ ಪ್ರತಿದಿನ ಬೆಳಿಗ್ಗೆ ಎಂಟೂವರೆಯಿಂದ ಹನ್ನೊಂದೂವರೆ, ಮಧ್ಯಾಹ್ನ ನಾಲ್ಕೂವರೆಯಿಂದ ೭.೩೦ವರೆಗೆ ಬದಲಾಯಿಸಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೮

ಅಧ್ಯಕ್ಷರು : ಉತ್ತಂಗಿ ಚೆನ್ನಪ್ಪ (೧೯೪೯ – ೧೯೫೦)

ಸಾಧನೆ :

ಉತ್ತಂಗಿ ಚೆನ್ನಪ್ಪನವರ ಕಾಲದಲ್ಲಿ ಆದ ಕೆಲಸ

ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಕಾರ್ಯದರ್ಶಿಗಳಾಗಿ ಪರಿಷತ್ತಿನ ಕೆಲಸವನ್ನು ಅಧ್ಯಕ್ಷರಾದ ಉತ್ತಂಗಿ ಚೆನ್ನಪ್ಪನವರ ಪರವಾಗಿ ಚಾಚೂ ತಪ್ಪದೆ ನಿರ್ವಹಿಸಿದರು. ಚೆನ್ನಪ್ಪನವರು ಧಾರವಾಡದಲ್ಲಿ ನೆಲೆಸಿದ್ದರು ಸರ್ವಜ್ಞನ ವಚನಗಳ ಶೋಧದಲ್ಲಿ ನಿರತರಾಗಿದ್ದರು. ಹಾಗಾಗಿ ಅವರು ಅಧ್ಯಕ್ಷರಾದರೂ ಬೆಂಗಳೂರಿನಲ್ಲಿ ನೆಲೆಯೂರಲಿಲ್ಲ. ಪರಿಷತ್ತಿನ ಪ್ರಕಟನೆಗಳು ಯಥಾರೀತಿ ಪ್ರಕಟವಾದವು. ೧೯೫೦ರಿಂದ 'ನುಡಿ' ಮಾಸಿಕ ಪತ್ರಿಕೆ ಆಯಿತು. 'ಕರ್ನಾಟಕದ ಕಲೆಗಳು' ಎಂಬ ಲೇಖನ ಮಾಲೆ ಎಚ್. ಎಂ. ಕೃಷ್ಣ ಅವರಿಂದ ಬರೆಯಲ್ಪಟ್ಟ ಕನ್ನಡ ನುಡಿಯಲ್ಲಿ ಪ್ರಕಟವಾಯಿತು. ಆ ಮೇಲೆ ಗ್ರಂಥವಾಗಿ ಪರಿಷತ್ತಿನಿಂದ ಪ್ರಕಟ ಆಯಿತು.

ಉತ್ತಂಗಿ ಅವರ ಕಾಲದಲ್ಲಿ ಪರಿಷತ್ತಿನ ಆರ್ಥಿಕ ಸ್ಥಿತಿ ಹೇಗಿತ್ತೆಂದರೆ "ಪರಿಷತ್ತಿನ ನಿತ್ಯಗಟ್ಟಲೆಯ ತಿಂಗಳ ವೆಚ್ಚ ೫೦೦ರೂ. ಬರುವ ವರಮಾನ ೩೩೦ರೂ ತಿಂಗಳಿಗೆ ೧೭೦ ರೂ ನಷ್ಟ... ಇದಲ್ಲದೆ ಪ್ರವಾಸ ಕಾರ್ಯಸಮಿತಿ ವೆಚ್ಚ ಪ್ರಕಟನೆಗಳಿಗೆ ಬೇಕಾದ ಬಂಡವಾಳ ಜಾಣ, ಕಾವ ಪರೀಕ್ಷೆಗಳಿಗೆ ತಗಲುವ ವೆಚ್ಚ. ಕನ್ನಡ ಕೋಶಕ್ಕೆ ಸರಕಾರ ಕೊಡುವ ಹಣಕ್ಕಿಂತ ಜಾಸ್ತಿ ಮಾಡುವ ಖರ್ಚು... ಇವೆಲ್ಲಾ ತಿಂಗಳಿಗೆ ೧೫೦ರೂ ಗೆ ಕಡಿಮೆ ಇಲ್ಲದೆ ವೆಚ್ಚವಾಗುತ್ತದೆ.... ಇದರಿಂದ ಶಾಶ್ವತ ನಿಧಿಗಳ ಅಸಲನ್ನೇ ನಾವು ಬಳಸಿ ಕಾಲ ನೂಕುವಂತಾಗಿದೆ".

ಅಂತೂ ಉತ್ತಂಗಿ ಅವರ ಅವಧಿ ಮುಗಿದು ಸಮ್ಮೇಳನಾಧ್ಯಕ್ಷರಾಗಿ ಎಂ. ಆರ್. ಶ್ರೀ ಅವರು ಆಯ್ಕೆಯಾಗಿ ಪರಿಷತ್ತಿನ ಅಧ್ಯಕ್ಷರಾದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೯

ಅಧ್ಯಕ್ಷರು : ಎಂ. ಆರ್. ಶ್ರೀನಿವಾಸಮೂರ್ತಿ (೧೯೫೦ – ೧೯೫೩)

ಸಾಧನೆ :

ಮೊದಲ ಬಾರಿಗೆ ೩ ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಆಯ್ಕೆ ಆದರೂ ಆಕಸ್ಮಿಕ ಮರಣದಿಂದ ೨ ವರ್ಷ ೪ ತಿಂಗಳು ಮಾತ್ರ ಅಧ್ಯಕ್ಷರಾಗಿದ್ದವರು ಎಂ. ಆರ್. ಶ್ರೀ. ಅವರು.

ಇವರ ಅವಧಿಯಲ್ಲಿ ನಿಘಂಟು ರಚನೆಗೆ ಸರ್ಕಾರದಿಂದ ೧ ಲಕ್ಷ ರೂ. ನೆರವು ಸಿಕ್ಕಿತು. ಮೈಸೂರು ಸರ್ಕಾರದ ಸಂಸ್ಕೃತಿ ಪ್ರಸಾರ ಯೋಜನೆ ವಯಸ್ಕರ ಶಿಕ್ಷಣ ಸಮಿತಿಗೆ ಸಹಕಾರವನ್ನು ಪರಿಷತ್ತು ನೀಡಿತು. ಮೂಲತಃ ಉಪಾಧ್ಯಾಯರಾದ ಇವರು ಅಧ್ಯಾಪಕರ ಜ್ಞಾನವನ್ನು ಹೆಚ್ಚಿಸುವ ಅನೇಕ ಕಾರ್ಯಕ್ರಮಗಳನ್ನು ನಿಯೋಜಿಸಿದರು. ಪರಿಷತ್ತಿನಲ್ಲಿ ಕಾರ್ಯಕ್ರಮಗಳನ್ನು ಶಿಸ್ತಿನಿಂದ ಸಕಾಲಕ್ಕೆ ಪ್ರಾರಂಭಿಸುತ್ತಿದ್ದರು.

ಒಮ್ಮೆ ಗೋಕುಲನಿರ್ಗಮನ ಕಾವ್ಯ ವಾಚನವಿತ್ತು. ಪರಿಷತ್ತಿನ ಹಾಲಿನಲ್ಲಿ ಜಮಖಾನ ಹಾಸಲಾಗುತ್ತಿತ್ತು. ಅದರ

ಮೇಲೆ ಆ ಕಡೆ ಹೆಂಗಸರು ಈ ಕಡೆ ಗಂಡಸರು ಕೂಡುತ್ತಿದ್ದರು. ನಡುವೆ ಒಂದೂವರೆ ಅಡಿ ಎತ್ತರದ (ಸ್ಕ್ರೀನ್‌ಮರದ್ದು) ಅಡ್ಡ ಇರುತ್ತಿತ್ತು. ೪.೩೦ಗೆ ಕರಾರುವಕ್ಕಾಗಿ ಕಾವ್ಯವಾಚನ ಶುರುವಾಗುತ್ತಿತ್ತು. ಜವಾನ ಹನುಮಯ್ಯ ಪರಿಷತ್ತಿಗೆ ಬರುವುದು ತಡವಾಯ್ತು. ಎಂ. ಆರ್. ಶ್ರೀ. ಅವನಿಗೆ ಕಾಯಲಿಲ್ಲ- ರೀಡಿಂಗ್ ರೂಂನಲ್ಲಿದ್ದ ವಿದ್ಯಾರ್ಥಿಗಳನ್ನು ಕರೆದು ಅವರ ಸಹಾಯದಿಂದ ಜಮಖಾನ ಹಾಸಿದರು. ಸ್ವಲ್ಪ ಹೊತ್ತಿನಲ್ಲಿ ಜವಾನ ಬಂದು, ತಪ್ಪಾಯ್ತು ಮಹಾಸ್ವಾಮಿ ತಡವಾಯ್ತು ಎಂದ. ಆಗ ಅಧ್ಯಕ್ಷರಾದ ಎಂ. ಆರ್. ಶ್ರೀ. ಹೇಳಿದರು : ಅಪ್ಪಾ, ನಾನು ಈ ಸಂಸ್ಥೆಯಲ್ಲಿ ದೊಡ್ಡ ಜವಾನ ನೀನು ಚಿಕ್ಕ ಜವಾನ. ಕಾರ್ಯಕ್ರಮ ತಡವಾದರೆ ನಿನ್ನನ್ನಾರೂ ಕೇಳೋಲ್ಲ ನನ್ನ ಕೇಳ್ತಾರೆ" ಎಂದರು. ಎಂ. ಆರ್. ಶ್ರೀ ಅವರ ಪಾಲಿಗೆ ಪರಿಷತ್ತು ನಿಜಕ್ಕೂ ಸರಸ್ವತೀ ಮಂದಿರವೇ ಆಗಿತ್ತು. ಅವರು ತಮ್ಮ ಪಾದರಕ್ಷೆಗಳನ್ನು ಹೊರಗೆ ಬಿಟ್ಟು ಕಟ್ಟಡದ ಒಳಕ್ಕೆ ಬರುತ್ತಿದ್ದರು. ಅವಧಿಗೆ ಮೊದಲೇ ೧೬.೯.೫೩ರಲ್ಲಿ ನಿಧನರಾದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೦

ಅಧ್ಯಕ್ಷರು : ಮಾಸ್ತಿ ವೆಂಕಟೇಶ ಅಯ್ಯಂಗಾರ್ (೧೯೫೩ – ೧೯೫೪)

ಸಾಧನೆ :

ಉಪಾಧ್ಯಾಕ್ಷರಾಗಿ (೧೯೪೩-೧೯೪೭)ರಲ್ಲಿ ಅಧ್ಯಕ್ಷರಾದ ರಾಜಾ ಲಕುಮನ ಗೌಡ ಸರದೇಸಾಯಿ ಅವರ ಕಾಲದಲ್ಲಿ ಪರಿಷತ್ತಿನ ಕಾರ್ಯಕಲಾಪಗಳನ್ನು ಉಪಾಧ್ಯಕ್ಷರಾಗಿ ನಡೆಸಿದ ಮಾಸ್ತಿ ಅಧ್ಯಕ್ಷರಾಗಿ ಕಾರ್ಯಕಲಾಪಗಳನ್ನು ೮ ತಿಂಗಳು ಕಾಲ ನಡೆಸಲು ಬಂದಿದ್ದು ಆಕಸ್ಮಿಕ. ಏಕೆಂದರೆ ಅಧ್ಯಕ್ಷರಾಗಿದ್ದ ಎಂ. ಆರ್. ಶ್ರೀನಿವಾಸ ಮೂರ್ತಿ ಅವರು ಅವಧಿ ಮುಗಿಯುವ ಮೊದಲೇ ಅನಿರೀಕ್ಷಿತವಾಗಿ ದೈವಾಧೀನರಾದರು ಆಗ ಉಳಿದ ಅವಧಿಗೆ ೨ನೇ ಬಾರಿಗೆ ಮಾಸ್ತಿ ಆಯ್ಕೆಯಾದರು. ಮಾಸ್ತಿ ಅವರ ಅವಧಿ ಒಂದು ವರ್ಷಕ್ಕೂ ಕಡಿಮೆಯಾಗಿದ್ದಿದ್ದರಿಂದ ವಿಶೇಷ ಪ್ರಗತಿಯನ್ನು ಸಾಧಿಸಲಾಗಲಿಲ್ಲ. ನಡುವಣ ಅವಧಿಯ ರಕ್ಷಕ ಎಂಬಂತೆ ಪರಿಷತ್ತಿನ ಚಟುವಟಿಕೆಗಳನ್ನು ನಿರ್ವಹಿಸಿದರು. ಆದರೆ ಮಾಸ್ತಿಯವರು ಪೂರ್ಣಾವಧಿಯ ಉಪಾಧ್ಯಕ್ಷರಾಗಿದ್ದಾಗ ಎಷ್ಟು ಕೆಲಸ ಪರಿಷತ್ತಿಗೆ ಮಾಡಿದ್ದರು ಎಂಬುದನ್ನು ಗಮನಿಸಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೧

ಅಧ್ಯಕ್ಷರು : ಎ. ಎನ್. ಮೂರ್ತಿರಾವ್ (೧೯೫೪ – ೧೯೫೬)

ಸಾಧನೆ :

ಪರಿಷತ್ತಿನ ಅಧ್ಯಕ್ಷರಾಗಿದ್ದ ಎಂ. ಆರ್. ಶ್ರೀ ಅವರ ನಿಧನಾನಂತರ ೩ ವರ್ಷಗಳಲ್ಲಿನ ಉಳಿದ ಅವಧಿಗೆ ಅಧ್ಯಕ್ಷರಾದ ಮಾಸ್ತಿ ಅವರು ಸುಮಾರು ೮ ತಿಂಗಳ ಕಾಲ ಪರಿಷತ್ತನ್ನು ನಡೆಸಿದ ಮೇಲೆ ೯.೫.೧೯೫೪ರಿಂದ ೧೭.೫.೧೯೫೬ವರೆಗೆ ಶತಾಯುಷಿಗಳಾದ ಮತ್ತು ಇಂಗ್ಲಿಷ್ ಪ್ರಾಧ್ಯಾಪಕರಾದರೂ ಕನ್ನಡದಲ್ಲಿ ಶ್ರೇಷ್ಠಗ್ರಂಥಗಳನ್ನು ಬರೆದ ಎ. ಎನ್. ಮೂರ್ತಿರಾಯರು ಮಾಸ್ತಿ ಅವರಿಂದ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು.

ಇವರ ಕಾಲದಲ್ಲಿ ಹೊಸಯೋಜನೆಗಳು ಜಾರಿಗೆ ಬರಲಿಲ್ಲ. ಗ್ರಂಥ ಪ್ರಕಟನೆ ಮತ್ತು ದತ್ತಿನಿಧಿ ಕಾರ್ಯಕ್ರಮಗಳು ಮುಂದುವರೆದಿವೆ. ಇವರ ಅವಧಿಯಲ್ಲಿ ಆದ ಕೆಲಸವೆಂದರೆ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ಚಟುವಟಿಕೆಗಳಲ್ಲಿ ಪರಿಷತ್ತನ್ನು ಭಾಗಿಯನ್ನಾಗಿ ಮಾಡಿಕೊಂಡು ಅದರ ಗ್ರಂಥ ಪ್ರಕಟನೆಯ ಕಾರ್ಯವನ್ನು ಪರಿಷತ್ತಿಗೆ ವಹಿಸಿತು. ಪರಿಷತ್ತಿನ ಕೆಲವು ಗ್ರಂಥಗಳು ಪುನರ್ಮುದ್ರಣವಾದವು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೨

ಅಧ್ಯಕ್ಷರು : ಬಿ. ಶಿವಮೂರ್ತಿಶಾಸ್ತ್ರಿ (೧೯೫೬ – ೧೯೬೪)



ಜೀವನ :

ಕರ್ನಾಟಕಕ್ಕೆ ಏಕೀಕರಣಕ್ಕೆ ದುಡಿದವರೂ, ಕೀರ್ತನ ಕೇಸರಿಗಳೂ ಶರಣ ಸಾಹಿತ್ಯ ವಿದ್ವಾಂಸರೂ ಆದ ಬಿ. ಶಿವಮೂರ್ತಿಶಾಸ್ತ್ರಿಗಳು ಬಸವಯ್ಯ ಹುಲಿಕುಂಟೆಮಠ– ನೀಲಮ್ಮ ದಂಪತಿಗಳಿಗೆ ತುಮಕೂರಿನಲ್ಲಿ ೨೩–೨–೧೯೦೩ರಲ್ಲಿ ಜನಿಸಿದರು.

೧೯೨೩ರಲ್ಲಿ ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ೧೯೨೪ರಿಂದ ೧೯೨೫ರವರೆಗೆ ಗುಬ್ಬಿಯ ವೆಸ್ಲಿಯನ್ ಮಿಷನ್ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು.

೧೯೩೬ರಲ್ಲಿ ಮೈಸೂರು ಸಂಸ್ಥಾನದ ವಿದ್ವಾಂಸರಾದರು. ೧೯೫೬–೧೯೬೦ರಲ್ಲಿ ಸಾಹಿತ್ಯ ಪರಿಷತ್ತಿನ ಕನ್ನಡನುಡಿ ಮತ್ತು ಪರಿಷತ್ ಪತ್ರಿಕೆಗಳಿಗೆ ಸಂಪಾದಕರಾಗಿದ್ದರು. ೧೭–೬–೧೯೫೬ರಿಂದ ೨೪–೧೦–೧೯೬೪ರವರೆಗೆ ಮೈಸೂರು ಸರ್ಕಾರದ ಪ್ರತಿನಿಧಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿದ್ದರು. ಶರಣ ಸಾಹಿತ್ಯ ಮತ್ತು ಸ್ವತಂತ್ರ ಕರ್ನಾಟಕ ಪತ್ರಿಕೆಗಳ ಸ್ಥಾಪಕರೂ ಸಂಪಾದಕರೂ ಆಗಿ ಕಾರ್ಯ ನಿರ್ವಹಿಸಿದರು.

ಇವರ ಸೇವಾಕಾರ್ಯ ಮೆಚ್ಚಿ ಇವರಿಗೆ ಆಸ್ಥಾನ ವಿದ್ವಾನ್ ಬಿರುದಿನ ಜೊತೆಗೆ ಕೀರ್ತನ ಕೇಸರಿ ಎಂಬ ಬಿರುದೂ ಲಭಿಸಿತ್ತು. ೧೯೬೬ರಲ್ಲಿ ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ದೊರಕಿತು. ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿತು. ೧೯೬೮ರಲ್ಲಿ ಜನತೆ ದೇವಗಂಗೆ ಎಂಬ ಅಭಿನಂದನ ಗ್ರಂಥವನ್ನು ಅವರಿಗೆ ಸಮರ್ಪಿಸಿ ಗೌರವಿಸಿತು.

ಇವರು ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಅಮೂಲ್ಯಗ್ರಂಥಗಳನ್ನು ಸಂಪಾದಿಸಿದ್ದಾರೆ. ರಾಘವಾಂಕನ ವೀರೇಶ ಚರಿತೆ, ಕೋಡಿಹಳ್ಳಿ ಕೇಶೀರಾಜನ 'ಷಡಕ್ಷರ ಮಂತ್ರ ಮಹಿಮೆ' ಗುರುಸಿದ್ದನ ಮಾದೇಶ್ವರ ಸಾಂಗತ್ಯ ಇತ್ಯಾದಿ.

ಬಿ. ಶಿವಮೂರ್ತಿ ಶಾಸ್ತ್ರಿಗಳು ೧೫–೧–೧೯೭೬ರಲ್ಲಿ ನಿಧನರಾದರು.

ಸಾಧನೆ :

ಕರ್ನಾಟಕ ಏಕೀಕರಣಕ್ಕೆ ದುಡಿದವರು, ಕೀರ್ತನಕೇಸರಿಗಳಾಗಿ ನಾಡಿನಲ್ಲೆಲ್ಲಾ ಸಂಚರಿಸಿದವರು. ಪರಿಷತ್ತಿಗೆ ಅಖಿಲ ಕರ್ನಾಟಕದ ವ್ಯಾಪ್ತಿಯನ್ನು ತಮ್ಮ ಪ್ರಚಾರದಿಂದ ತಂದವರು ಬಿ. ಶಿವಮೂರ್ತಿ ಶಾಸ್ತ್ರಿಗಳು. ಇವರು ಅಧಿಕಾರಕ್ಕೆ ಬಂದ ಸ್ವಲ್ಪ ಕಾಲದಲ್ಲೇ ಕರ್ನಾಟಕ ರಾಜ್ಯೋದಯವಾಯಿತು (೧–೧೧–೫೬) ಈ ಸಂದರ್ಭದಲ್ಲಿ ಪರಿಷತ್ತಿಗಾಗಿ ದುಡಿದ ಹಿಂದಿನ ಸಮ್ಮೇಳನಗಳ ಅಧ್ಯಕ್ಷರುಗಳನ್ನು ಆಹ್ವಾನಿಸಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರಿಂದ ಅದರ ಉದ್ಘಾಟನೆಯನ್ನು ಮಾಡಿಸಿದರು.

ಕನ್ನಡ ನಿಘಂಟು ಕಾರ್ಯ : ಸ್ವತಃ ವಿದ್ವಾಂಸರಾದ ಶಾಸ್ತ್ರಿಗಳೂ ಪರಿಷತ್ತಿನಲ್ಲಿ ಸಾಗಿದ್ದ ನಿಘಂಟು ರಚನಾ ಕಾರ್ಯದಲ್ಲಿ

ಆಸಕ್ತಿ ತಳೆದರು. ಬೃಹತ್ ನಿಘಂಟು ಪೂರ್ಣವಾಗಿ ಸಿದ್ದವಾಗಲು ಸಾಕಷ್ಟು ಹಣದ ಆವಶ್ಯಕತೆ ಇದೆ ಮತ್ತು ಸೌಕರ್ಯಗಳನ್ನು ಈ ಸಮಿತಿಗೆ ಒದಗಿಸಬೇಕು ಎಂಬುದನ್ನು ಮನಗಂಡರು. ನಿಘಂಟಿನ ಕಾರ್ಯಕ್ಕೆ ಸ್ಥಳಾವಕಾಶ ಸಾಲದೆ ಇದ್ದುದನ್ನು ಗಮನಿಸಿದರು. ಪರಿಷತ್ತಿನ ಈಗಿನ ಮಾರಾಟ ವಿಭಾಗವಿರುವ ಸಭಾಂಗಣದ ಬಲಭಾಗದ ವರಾಂಡದಲ್ಲಿ ನಿಘಂಟು ಕಚೇರಿ ಇತ್ತು. ಪರಿಷತ್ತಿನ ಅಚ್ಚುಕೂಟದ ಮೇಲ್ಭಾಗದಲ್ಲಿ ಮಹಡಿಯನ್ನು ಹಾಕಿ ನಿಘಂಟು ಕಚೇರಿಗೆ ಪ್ರತ್ಯೇಕ ಸ್ಥಳ ಮಾಡಿಕೊಟ್ಟರು. ನಿಘಂಟು ರಚನಾ ಕಾರ್ಯಕ್ಕಾಗಿ ೧೫ ಲಕ್ಷ ರೂ.ಗಳನ್ನು ಸರ್ಕಾರದಿಂದ ಪರಿಷತ್ತಿಗೆ ದೊರಕಿಸಿದರು. ೧ ಲಕ್ಷರೂ ವೆಚ್ಚದಲ್ಲಿ ಮುದ್ರಣಯಂತ್ರ ಮತ್ತು ಇತರ ಯಂತ್ರೋಪಕರಣಗಳನ್ನು ಅಚ್ಚುಕೂಟಕ್ಕೆ ಒದಗಿಸಲಾಯಿತು. ೧೯೬೪ರಲ್ಲಿ ನಿಘಂಟಿನ ಪ್ರಥಮ ಸಂಚಿಕೆ ಹೊರಬಂದಿತು.

ಭಾಷಣ ಕಲಾತರಗತಿಗಳು : ಶಾಸ್ತ್ರಿಗಳು ಸ್ವತಃ ಶ್ರೇಷ್ಠವಾಗ್ಮಿಗಳು, ಕೀರ್ತನಕೇಸರಿ ಬಿರುದಾಂಕಿತರು. ಪ್ರಜಾಪ್ರಭುತ್ವದಲ್ಲಿ ಭಾಷಣಕಲೆಗೆ ವಿಶೇಷ ಮಹತ್ವವಿದೆ. ಜನತಾ ಪ್ರತಿನಿಧಿಗಳು, ಸಾಹಿತಿಗಳು ಪ್ರಭಾವ ಬೀರುವುದೇ ಭಾಷಣಗಳ ಮೂಲಕ ಜನರು ಅದ್ಭುತ ವಾಗ್ವೈಖರಿಗೆ ಸುಲಭವಾಗಿ ಮಾರುಹೋಗುತ್ತಾರೆ. ಭಾಷಣ ಕಲೆ ಅತ್ಯುತ್ತಮ ಮಾಧ್ಯಮವೆಂದು ತಿಳಿದಿದ್ದ ಅಧ್ಯಕ್ಷರು ಕನ್ನಡ ನಾಡಿನಲ್ಲೇ ಪ್ರಪ್ರಥಮವಾಗಿ ಭಾಷಣಕಲಾತರಗತಿಗಳನ್ನು ಪ್ರಾರಂಭಿಸಿದ ಹಿರಿಮೆ ಶಾಸ್ತ್ರಿಗಳದಾಗಿದೆ.

ಪರಿಷನ್ಮಂದಿರಲ್ಲಿ ಸುಧಾರಣೆಗಳು : ಪರಿಷತ್‌ಕಟ್ಟಡಗಳು ಭವ್ಯವಾಗಿರಬೇಕು ಎಂಬುದು ಅಧ್ಯಕ್ಷರ ಆಶಯವಾಗಿತ್ತು. ಪರಿಷತ್ತಿನ' ಬಿದ್ದುಹೋದ ಪೌಳಿಗೋಡೆಯನ್ನು ಕಟ್ಟಿದರು. ಸಭಾಭವನದಲ್ಲಿ ಕುರ್ಚಿಗಳಿರಲಿಲ್ಲ. ಅವುಗಳನ್ನು ತರಿಸಿದರು. ಪುಸ್ತಕ ಭಂಡಾರವನ್ನು ಪೀಠೋಪಕರಣಗಳಿಂದ ಸಜ್ಜುಗೊಳಿಸಿದರು, ಪರಿಷತ್ತಿನ ವೇದಿಕೆಯನ್ನು ಸಿಂಗಾರಗೊಳಿಸಿದರು.

ಪುಸ್ತಕ ಪ್ರಕಟನೆಗಳು : ಶಿವಮೂರ್ತಿ ಶಾಸ್ತ್ರಿಗಳ ಅವಧಿಯಲ್ಲಿ ಪುಸ್ತಕ ಭಂಡಾರಕ್ಕೆ ಸುಮಾರು ೪೦೦೦ ಪುಸ್ತಕಗಳ ಸೇರ್ಪಡೆ ಆಯಿತು. ಆರ್. ನರಸಿಂಹಾಚಾರ್ಯರ ಕವಿಚರಿತ್ರೆ ಪರಿಷ್ಕೃತವಾಗಿ ಪ್ರಕಟವಾಯಿತು. ಪ್ರಾಚೀನ ಕೃತಿಗಳು ಮರುಮುದ್ರಣಗಳಾದವು. ಆಧುನಿಕ ಸಾಹಿತ್ಯ ಮತ್ತು ಪ್ರಾಚೀನ ಸಾಹಿತ್ಯಗಳೆರಡಕ್ಕೆ ಪ್ರಕಟನೆಗಳಿಗೆ ಪ್ರಾಶಸ್ತ್ಯಕೊಡಲಾಯಿತು.

ಪರೀಕ್ಷೆಗಳು ಮತ್ತು ತರಗತಿಗಳು : ಭಾಷಣ ಕಲಾ ತರಗತಿಗಳನ್ನು ಪ್ರಾರಂಭಿಸಿದ ಹಾಗೆಯೇ ಹರಿದಾಸರ ಮತ್ತು ಶಿವಶರಣರ ಕೃತಿಗಳ ತರಗತಿಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ ಹಾಡಲು ಕಲಿಸುವ ಪ್ರಯತ್ನವನ್ನು ಇವರು ಎರಡು ವರ್ಷ ನಡೆಸಿದರು. ಕಾರಣಾಂತರಗಳಿಂದ ತರಗತಿಗಳು ನಿಂತಿತು. ಗಮಕ ತರಗತಿಗಳು ಚೆನ್ನಾಗಿ ನಡೆದು ನೂರಾರು ಜನ ಪರೀಕ್ಷೆಗೆ ಕುಳಿತರು. ೧೯೫೬ರಿಂದ ೧೯೬೪ರ ಅವಧಿಯಲ್ಲಿ ೫೨೨ಕ್ಕೂ ಹೆಚ್ಚು ಮಂದಿ ಉತ್ತೀರ್ಣರಾಗಿದ್ದಾರೆ.

ಕನ್ನಡ ಜಾಣ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಹೈದ್ರಾಬಾದ್ ಮುಂಬಯಿ ಭಾಗಗಳಲ್ಲಿ ಉಪಾಧ್ಯಾಯ ಹುದ್ದೆ ದೊರೆಯುತ್ತಿದ್ದ ಕಾರಣ ಹೆಚ್ಚು ಜನರು ಪರೀಕ್ಷೆಗೆ ಕೊಡುತ್ತಿದ್ದರು. ೧೯೫೬–೧೯೬೪ರ ಅವಧಿಯಲ್ಲಿ ೨೦೦೪ ಮಂದಿ ಪರೀಕ್ಷೆಗೆ ಕುಳಿತಿದ್ದರು.

ಕಾರ್ಯಕ್ರಮಗಳು : ದತ್ತಿನಿಧಿಗಳ ಹಣದಿಂದ ಅನೇಕ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಗಡಿನಾಡಿನ ಪ್ರದೇಶಗಳಲ್ಲಿ ಸಾಹಿತ್ಯೋತ್ಸವ ನಡೆಸಲಾಯಿತು. ಮಹಾನ್ ವ್ಯಕ್ತಿಗಳ, ಮಹಾಕವಿಗಳ ಜಯಂತೋತ್ಸವ ನಡೆಸಲಾಯಿತು. ರಾಷ್ಟ್ರಪತಿ ರಾಜೇಂದ್ರಪ್ರಸಾದರು ಪರಿಷತ್ತಿಗೆ ಭೇಟಿಕೊಡಲು ವ್ಯವಸ್ಥೆ ಮಾಡಲಾಯಿತು.

ಕನ್ನಡ ರಾಜ್ಯೋದಯದ ಸಂದರ್ಭದಲ್ಲಿ ಅದುವರೆಗೆ ನಡೆದ ಸಮ್ಮೇಳನಗಳ ಅಧ್ಯಕ್ಷರುಗಳಿಗೆ ಸನ್ಮಾನ ಏರ್ಪಡಿಸಿ ಗೌರವಿಸಲಾಯಿತು. ಇದೊಂದು ವಿಶಿಷ್ಟಕಾರ್ಯಕ್ರಮವಾಗಿತ್ತು.

ಸಮ್ಮೇಳನಗಳು : ಬಿ. ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ೬ ಸಮ್ಮೇಳನಗಳು ನಡೆದಿವೆ.

೩೯ ಧಾರವಾಡ – ಕೆ. ವಿ. ಪುಟ್ಟಪ್ಪ – ೧೯೫೭

೪೦ ಬಳ್ಳಾರಿ – ವಿ. ಕೃ. ಗೋಕಾಕ್ – ೧೯೫೮.

೪೧ ಬೀದರ್ – ಡಿ. ಎಲ್. ನರಸಿಂಹಮೂರ್ತಿ – ೧೯೬೦

೪೨ ಮಣಿಪಾಲ – ಅ. ನ. ಕೃಷ್ಣರಾವ್ – ೧೯೬೦

೪೩ ಗದಗ – ಕೆ.ಜಿ. ಕುಂದಣಗಾರ – ೧೯೬೧

೪೪ ಸಿದ್ಧಗಂಗಾ – ರಂ. ಶ್ರೀ. ಮುಗಳಿ – ೧೯೬೩

ಅ.ನ.ಕೃ ಅವರು ಅಧ್ಯಕ್ಷರಾದ ಮಣಿಪಾಲ ಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷ ಅನಕೃ ಅವರು ಮಾಡಿದ ಭಾಷಣ. ವಾದ ವಿವಾದಗಳಿಗೆ ಎಡೆಗೊಟ್ಟಿತು, ನಾಡಿನ ತುಂಬ ಚರ್ಚೆಗಳಾದವು.ಬೇರಾವ ಸಮ್ಮೇಳನದ ಅಧ್ಯಕ್ಷರ ಭಾಷಣವೂ ಇಷ್ಟೊಂದು ಚರ್ಚೆಗೆ ಒಳಗಾಗಿರಲಿಲ್ಲ.

ಪರಿಷತ್ತಿಗೆ ನಾಡಿನ ನಾನಾ ಸಂಸ್ಥೆಗಳಲ್ಲಿ ಆಕಾಶವಾಣಿ, ದೂರದರ್ಶನ, ಶಿಕ್ಷಣ ಇಲಾಖೆ ಸಂಸ್ಕೃತಿ ಇಲಾಖೆ ಮೊದಲಾದ ಕಡೆ ಪ್ರಾತಿನಿಧ್ಯವಿರುವಂತೆ ಮಾಡಿದ್ದು ಶಾಸ್ತ್ರಿಗಳ ಹೆಗ್ಗಳಿಕೆಗಳಲ್ಲಿ ಒಂದು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೩

ಅಧ್ಯಕ್ಷರು : ಜಿ. ವೆಂಕಟಸುಬ್ಬಯ್ಯ (೧೯೬೪ – ೧೯೬೯)

ಸಾಧನೆ :

ವಿದ್ವಾಂಸರೂ, ಶಿಕ್ಷಣತಜ್ಞರೂ, ನಿಘಂಟು ಪರಿಣತರೂ ಆದ ಜಿ. ವೆಂಕಟಸುಬ್ಬಯ್ಯನವರು ೧೩ನೇ ಅಧ್ಯಕ್ಷರಾಗಿ ಪರಿಷತ್ತಿನ ಹೊಣೆಗಾರಿಕೆಯನ್ನು ಹೊತ್ತರು. ಪ್ರಚಾರ ಕಾರ್ಯಕ್ಕೆ ಹೆಚ್ಚು ಒತ್ತು ನೀಡದೆ ನಿಘಂಟು ರಚನೆ ಬಗ್ಗೆ ಹೆಚ್ಚು ಆಸಕ್ತಿ ತಳೆದರು.

ಆರ್ಥಿಕ ತೊಂದರೆ ನಿವಾರಣೆ : ಪರಿಷತ್ತು ಆರ್ಥಿಕವಾಗಿ ಸಂಕಷ್ಟದಲ್ಲಿದಾಗ ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷರಾದರು ಸರ್ಕಾರದಿಂದ ದೊರೆಯುತ್ತಿದ್ದ ವಾರ್ಷಿಕ ಅನುದಾನವನ್ನು ೨೫೦೦೦ಕ್ಕೆ ಹೆಚ್ಚಿಸಿದ್ದು ಅವರ ಹೆಗ್ಗಳಿಕೆಯಾಯಿತು.

ನಿಬಂಧನೆಗಳ ತಿದ್ದುಪಡಿ : ಇವರ ಕಾಲದಲ್ಲಿ ನಿಬಂಧನೆಗಳು ತಿದ್ದುಪಡಿ ಆದುದು ಒಂದು ಮುಖ್ಯ ಘಟನೆಯಾಗಿದೆ. ೫೧ನೇ ಸಕಲ ಸದಸ್ಯರ ಸಭೆಯಲ್ಲಿ ಮ. ರಾಮಮೂರ್ತಿ ಅವರು "ಕರ್ನಾಟಕ ಏಕೀಕರಣಗೊಂಡು ೧೧ ವರ್ಷಗಳಿಂದಲೂ ಅಖಿಲ ಕರ್ಣಾಟಕ ಪ್ರಾತಿನಿಧ್ಯವಿಲ್ಲದಿರುವ ನಿಬಂಧನೆಗಳು ಜಾರಿಯಲ್ಲಿವೆ. ಅದನ್ನು ತಿದ್ದುಪಡಿ ಮಾಡಿ ನಂತರ ಚುನಾವಣೆ ನಡೆಸಿ" ಎಂದು ಒತ್ತಾಯಿಸಿದರು. ಅದರಂತೆ ನಿಬಂಧನೆಗಳು ತಿದ್ದುಪಡಿಯಾಗಿ ಮಹತ್ವದ ಮಾರ್ಪಾಟುಗಳಾದವು; ಕಾರ್ಯಕಾರಿ ಸಮಿತಿಯಲ್ಲಿ ಜಿಲ್ಲಾವಾರು ಪ್ರಾತಿನಿಧ್ಯ ದೊರೆಯಿತು. ಸರ್ಕಾರದ ವಿದ್ಯಾ ಇಲಾಖೆ ವಿಶ್ವವಿದ್ಯಾನಿಲಯ, ಪತ್ರಿಕಾಕರ್ತರು, ಮಹಿಳಾ ವರ್ಗ – ಇವರಿಗೂ ಕಾರ್ಯಕಾರಿ ಸಮಿತಿಯಲ್ಲಿ ಪ್ರಾತಿನಿಧ್ಯ ಸಿಕ್ಕಿತು. ಪರಿಷತ್ತಿನ ಕಾರ್ಯವ್ಯಾಪ್ತಿ ಹಿಗ್ಗಿತು.


ದತ್ತಿನಿಧಿ ವಿಚಾರ : ಅಧ್ಯಕ್ಷರಾದ ವೆಂಕಟಸುಬ್ಬಯ್ಯನವರ ಕರ್ಣಕರ್ಣಾಮೃತ ಸಂಗ್ರಹ ಪಿಯುಸಿಗೆ ಪಠ್ಯವಾದಾಗ ಅದರ ಹಣ ಸಂಪಾದಕರಿಗೆ ಸೇರಬೇಕೇ ಪರಿಷತ್ತಿಗೆ ಸೇರಬೇಕೇ ಎಂದು ಚರ್ಚೆಯಾಗಿ ಕೊನೆಗೆ ಶ್ರೀಮತಿ ಲಕ್ಷ್ಮಿ ಜಿ. ವೆಂಕಟಸುಬ್ಬಯ್ಯನವರ ಹೆಸರಿನಲ್ಲಿ ನಿಧಿಯಾಗಿಡಬೇಕೆಂದು ತೀರ್ಮಾನವಾಯಿತು. ಈ ನಿಧಿಮೊತ್ತ ಅದುವರೆಗೆ ಬಂದ ದತ್ತಿನಿಧಿಗಳಲ್ಲೇ ಅತಿ ಹೆಚ್ಚಿನ ಮೊತ್ತ (೮೦೦೦) ಆಗಿತ್ತು.

ಕಾರ್ಯಕ್ರಮಗಳು : ಪಾಕಿಸ್ಥಾನ ಭಾರತದ ಮೇಲೆ ಆಕ್ರಮಣ ಮಾಡಿದ ಕಾಲದಲ್ಲಿ ವೀರರಸ ಪ್ರಧಾನ ಗೀತೆಗಳನ್ನು ಹಾಡಿಸುವ ಪ್ರಸಂಗಗಳನ್ನು ನಿರೂಪಿಸುವ ಕಾರ್ಯಕ್ರಮಗಳನ್ನು ಪರಿಷತ್ತಿನಿಂದ ಹಮ್ಮಿಕೊಳ್ಳಲಾಯಿತು.

ಪುಸ್ತಕ ಭಂಡಾರ : ಪರಿಷತ್ತಿನ ಪುಸ್ತಕ ಭಂಡಾರದಲ್ಲಿ ಕನ್ನಡದಲ್ಲಿ ಪ್ರಕಟವಾಗುತ್ತಿರುವ ಎಲ್ಲಾ ಪುಸ್ತಕಗಳು ಸಿಗಬೇಕೆಂದು ಅದಕ್ಕಾಗಿ ಎಲ್ಲ ಪುಸ್ತಕಗಳ ಒಂದೊಂದು ಪ್ರತಿಯನ್ನು ಪರಿಷತ್ತು ಕೊಳ್ಳಬೇಕೆಂದು ನಿರ್ಧರಿಸಲಾಯಿತು. ಆ ಬಗ್ಗೆ ಕನ್ನಡ ನುಡಿಯಲ್ಲಿ ಪ್ರಕಟನೆ ಕೊಡಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೪

ಅಧ್ಯಕ್ಷರು : ಜಿ. ನಾರಾಯಣ (೧೯೭೯ – ೧೯೭೮)



ಜೀವನ :

ಕನ್ನಡ ದೇಶಭಕ್ತರೂ ಪತ್ರಿಕಾ ಸಂಪಾದಕರೂ ಕಾಂಗ್ರೆಸ್ ಭಕ್ತರೂ, ಸಂಘಟಕರೂ ಆದ ದೇಶಹಳ್ಳಿ ಜಿ.ನಾರಾಯಣ ಅವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿಗೆ ಸೇರಿದ ದೇಶಹಳ್ಳಿಯಲ್ಲಿ ೨-೯-೧೯೨೩ರಲ್ಲಿ ಜನಿಸಿದರು. ಅವರು ಮದ್ದೂರಿನಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದರು. ೧೯೪೨ರಲ್ಲಿ 'ಬ್ರಿಟಿಷರೇ' ಭಾರತ ಬಿಟ್ಟು ತೊಲಗಿ 'ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದ್ದರು. ೧೯೫೭ರಲ್ಲಿ ಬೆಂಗಳೂರು ಕಾರ್ಪೋರೇಷನ್ನಿನ ಕೌನ್ಸಿಲರ್ ಆಗಿದ್ದ ಇವರು ೧೯೬೪ರಲ್ಲಿ ಮೇಯರಾಗಿ ಚುನಾಯಿತರಾದರು. ಕನ್ನಡ ಪತ್ರಿಕಾ ಅಕಾಡೆಮಿ ಅಧ್ಯಕ್ಷರೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿದ್ದರು.

ಕಾಂಗ್ರೆಸ್ ಪಕ್ಷದ ವಾರ್ತಾಪತ್ರದ ವ್ಯವಸ್ಥಾಪಕರಾದ ಇವರು ತಮ್ಮದೇ ಆದ ಸ್ವತಂತ್ರ ಮುದ್ರಣಾಲಯವನ್ನು ಬೆಂಗಳೂರು ಚಾಮರಾಜಪೇಟೆಯಲ್ಲಿ ಸ್ಥಾಪಿಸಿ ವಿನೋದ ಮಾಸಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದರು. ಈಗಲೂ ಆ ಪತ್ರಿಕೆ ಪ್ರಕಟವಾಗುತ್ತಿದೆ. ಅನೇಕ ಸಂಘಸಂಸ್ಥೆಗಳ ಸ್ಥಾಪನೆಯಲ್ಲಿ ನಿರ್ವಹಣೆಯಲ್ಲಿ ಮಾರ್ಗದರ್ಶಕರಾಗಿದ್ದ ಇವರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

೧೯೭೯ರಿಂದ ೧೯೭೮ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ತ್ರೈವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳ ಮೂಲಕ ಪರಿಷತ್ತಿನ ಅಭಿವೃದ್ಧಿಗೆ ಕಾರಣಕರ್ತರಾದರು. ಬೆಂಗಳೂರು ನಗರಪಾಲಿಕೆ ಮುಂದೆ ಕೆಂಪೇಗೌಡನ ಪ್ರತಿಮೆಯನ್ನು ಸ್ಥಾಪಿಸಿದ ಹೆಗ್ಗಳಿಕೆ ಇವರದು. ಇವರ ಸಾರ್ವಜನಿಕ ಸೇವೆಗೆ ಸರ್ಕಾರ, ಸಂಘಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಪ್ರಶಸ್ತಿ ನೀಡಿವೆ. ೧೯೭೨ರಲ್ಲಿ ರಾಜ್ಯ ಸರ್ಕಾರದ ಪ್ರಶಸ್ತಿ ಇವರಿಗೆ ದೊರೆತಿದೆ.

ಇವರು ಅಕ್ಷರ ನೀವ್ ಕಲಿಯಿರಿ ಎಂಬ ಗೋವಿನ ಹಾಡಿನ ಧಾಟಿಯ ೧೦೦ ಪದ್ಯಗಳ ಗ್ರಂಥವನ್ನು ಬರೆದಿದ್ದಾರೆ. ವಿನೋದ ಪತ್ರಿಕೆಯಲ್ಲಿ ಸಂಪಾದಕೀಯಗಳನ್ನು ಸೊಗಸಾಗಿ ಬರೆಯುತ್ತಿದ್ದರು. ಅವರ ಭಾಷಣಗಳೆಲ್ಲಾ ಲಿಖಿತರೂಪದಲ್ಲಿದ್ದು ಅದನ್ನು ಪ್ರಕಟಿಸಿದರೆ ಸೊಗಸಾದ ಉಪಯುಕ್ತ ಲೇಖನ ಸಂಗ್ರಹವಾಗುತ್ತದೆ. ಮುಖ್ಯವಾಗಿ ಜಿ.ನಾರಾಯಣರು ನಿಸ್ವಾರ್ಥ ಸಾರ್ವಜನಿಕ ಸೇವಾ ಧುರೀಣರಾಗಿದ್ದರು.

ಸಾಧನೆ :

ಶ್ರೇಷ್ಠ ಸಂಘಟಕರೂ, ಸಾಮಾಜಿಕ ಕಾರ್ಯಕರ್ತರೂ ಆಗಿದ್ದ ಜಿ. ನಾರಾಯಣರು ಪರಿಷತ್ತಿನ ಅಧ್ಯಕ್ಷರಾಗಿ ಒಂದು ಹೊಸ ಶಕೆ ಪ್ರಾರಂಭಿಸಿದರು. ಸಾಹಿತಿಗಳು ವಿದ್ವಾಂಸರೂ ಅಲ್ಲದ ಪತ್ರಕರ್ತರೊಬ್ಬರು ಅಧ್ಯಕ್ಷರಾದುದು ಅದೇ ಮೊದಲು. ಪರಿಷತ್ತಿನ ಪ್ರಗತಿಗೆ ಕಾರ್ಯಚಟುವಟಿಕೆಗಳಿಗೆ ಯೋಜನೆಗಳನ್ನು ರೂಪಿಸಿ ಆ ಪ್ರಕಾರ ಯೋಜನಾಬದ್ಧವಾಗಿ ಕಾರ್ಯನಿರ್ವಹಿಸಿದ ಅಧ್ಯಕ್ಷರಲ್ಲಿ ಅವರೇ ಮೊದಲಿಗರು. ಅವರ ಕಾಲದ ಸಾಧನೆಗಳ ಸಂಕ್ಷಿಪ್ತ ಚಿತ್ರಣವನ್ನು ಹೀಗೆ ನಿರೂಪಿಸಬಹುದು. ಅವರ ಮೊದಲ ಅಧಿಕಾರಾವಧಿಯಲ್ಲಿ ತ್ರೈವಾರ್ಷಿಕ ಯೋಜನೆಯನ್ನು ಪರಿಷತ್ತಿನ ಅಭಿವೃದ್ಧಿಯ ಬಗ್ಗೆ ರೂಪಿಸಿದರು.

ಸುವರ್ಣಮಹೋತ್ಸವ : ಜಿ. ನಾರಾಯಣರು ನಡೆಸಿದ ಕಾರ್ಯಕ್ರಮಗಳಲ್ಲೆಲ್ಲಾ ಐತಿಹಾಸಿಕವೂ, ಅದ್ದೂರಿಯೂ ಆದ ಕಾರ್ಯಕ್ರಮ ಸುವರ್ಣಮಹೋತ್ಸವ ಮತ್ತು ಆ ಸಮಯದಲ್ಲಿ ಜರುಗಿದ ದೇಜಗೌ ಅಧ್ಯಕ್ಷತೆಯ ೪೭ನೇ ಕನ್ನಡ ಸಾಹಿತ್ಯ ಸಮ್ಮೇಳನ. ಬೆಂಗಳೂರು ಕೋಟೆ ಹೈಸ್ಕೂಲಿನ ಮೈದಾನದಲ್ಲಿ ಕಾರ್ಯಕ್ರಮ ನಡೆಯಿತು. ಅಂತರಭಾರತಿ ಎಂಬ ಸಾಹಿತ್ಯ ವಿಚಾರ ಸಂಕಿರಣ ನಡೆಯಿತು. 'ಚಿನ್ನದ ಬೆಳಸು' ಎಂಬ ಆಕರಗ್ರಂಥವಾಗುವಂತಹ ವಿಶೇಷ ಸಂಚಿಕೆ ಎಂ. ವಿ. ಸೀ. ಅವರ ಸಂಪಾದಕತ್ವದಲ್ಲಿ ಪ್ರಕಟವಾಯಿತು.

ಮಹಿಳಾ ವರ್ಷ ಆಚರಣೆ : ೧೯೭೫ನೇ ವರ್ಷವನ್ನು ಯುನೆಸ್ಕೊ ಅಂತರರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಿತು. ಇದರಂಗವಾಗಿ ಪರಿಷತ್ತು ೨೦೦ ಗೋಷ್ಠಿಗಳನ್ನು ನಡೆಸಿತು. ಮಹಿಳೆಯರಿಗೆ ಸಂಬಂಧಿಸಿದ ೨೫ ಪುಸ್ತಕಗಳನ್ನು ಪ್ರಕಟಿಸಲಾಯಿತು. ರಾಜ್ಯಮಟ್ಟದ ಮಹಿಳಾ ಸಮ್ಮೇಳನ ನಡೆಸಲಾಯಿತು. ೧೦೦೦ ರೂಗಳ ಮಹಿಳಾ ದತ್ತಿಯೊಂದನ್ನು ಮಹಿಳೆಯರ ಉತ್ತಮ ಕೃತಿಗಳಿಗೆ ನೀಡಲು ವ್ಯವಸ್ಥೆ ಮಾಡಿತು.

ಪ್ರಕಟನೆಗಳು : ಗ್ರಾಮಕಲೆಗಳು ನಶಿಸುತ್ತಿರುವ ಈ ಕಾಲದಲ್ಲಿ ಜಾನಪದ ಸಂಸ್ಕೃತಿಯ ವಿವಿಧ ಮುಖಗಳ ಅಭಿವ್ಯಕ್ತಿಯನ್ನು ಮುಂದಿನ ಪೀಳಿಗೆಗೆ ನೀಡಲು ಹಳ್ಳಿಹಳ್ಳಿಗೆ ಪದವೀಧರರನ್ನು ಕಳಿಸಿ ಮಾಹಿತಿ ಸಂಗ್ರಹಿಸಿ 'ಕರ್ನಾಟಕ ಜನಪದ ಕಲೆಗಳು' ಎಂಬ ಗ್ರಂಥವನ್ನು ಪ್ರಕಟಿಸಲಾಯಿತು.

ಕನ್ನಡ ನಿಘಂಟಿನ ೨ ಮತ್ತು ೩ನೇ ಸಂಪುಟಗಳ ಬಿಡುಗಡೆ ಆದವು. ಜನಸಾಮಾನ್ಯರ ಬಳಕೆಗಾಗಿ ಸಂಕ್ಷಿಪ್ತ ನಿಘಂಟು. ಮತ್ತು ವಿದ್ಯಾರ್ಥಿಗಳಿಗಾಗಿ 'ರತ್ನಕೋಶ'ವನ್ನು ಪ್ರಕಟಿಸಲಾಯಿತು. ಅಗ್ಗದ ಬೆಲೆಯಲ್ಲಿ ಜನರಿಗೆ ಕೊಡಲು ಸರ್ಕಾರ ಇವುಗಳಿಗೆ ಧನಸಹಾಯ ನೀಡಿತು.

ಪರಿಷತ್ತಿನ ಪ್ರಕಟನೆಗಳ ಜತೆಗೆ ಲೇಖಕರು, ಪ್ರಕಾಶಕರು, ದಾನಿಗಳಿಂದ ಗ್ರಂಥಗಳನ್ನು ಸಂಗ್ರಹಿಸಿ ಹೊರನಾಡಿನ ಕನ್ನಡ ಸಂಘಗಳಿಗೆ ಉಚಿತ ವಿತರಣೆ ಮಾಡಲಾಯಿತು. ಅಲ್ಲಿನವರಲ್ಲಿ ಕನ್ನಡಾಸಕ್ತಿ ಬೆಳೆಸಲು ಈ ಯೋಜನೆಯನ್ನು ಕೈಗೊಳ್ಳಲಾಯಿತು. ವಿದೇಶದ ಕನ್ನಡ ಸಂಘಗಳಿಗೂ ಕನ್ನಡ ಪುಸ್ತಕಗಳನ್ನು ವಿತರಿಸಲಾಯಿತು.

ಜಿ. ನಾರಾಯಣರ ಕಾಲದಲ್ಲಿ ಆದ ದೊಡ್ಡ ಕೆಲಸಗಳಲ್ಲಿ ಒಂದು ಕನ್ನಡ ಕಾವ್ಯಗಳ ಗದ್ಯಾನುವಾದಗಳು. ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳ ಗದ್ಯಾನುವಾದವನ್ನು ಮೂಲದೊಡನೆ ಕೊಡುವ ಯೋಜನೆಯನ್ನು ಜಾರಿಗೆ ತಂದು ಕನ್ನಡಾಭ್ಯಾಸಿಗಳಿಗೆ ಮೂಲ ಮತ್ತು ಅನುವಾದವಿರುವ ಗ್ರಂಥಗಳನ್ನು ಸುಲಭ ಬೆಲೆಗೆ ನೀಡಲಾಯಿತು. ಈ ಪ್ರಯತ್ನಕ್ಕೆ ಜನರಿಂದ ಭಾರಿ ಮೆಚ್ಚುಗೆ ಸಿಕ್ಕಿತು. ಸಮ್ಮೇಳನಾಧ್ಯಕ್ಷರ ಭಾಷಣಗಳ ೩ ಸಂಪುಟಗಳು ಇವರ ಕಾಲದಲ್ಲಿ ಪ್ರಕಟವಾದವು.

ವಜ್ರಮಹೋತ್ಸವ : ೧೯೭೭ರಲ್ಲಿ ಏಪ್ರಿಲ್ ೨೩ರಿಂದ ೨೮ರವರೆಗೆ ೬ ದಿನಗಳ ಕಾಲ ಪರಿಷತ್ತಿನ ವಜ್ರಮಹೋತ್ಸವ ನಡೆಯಿತು. ವಜ್ರಮಹೋತ್ಸವ ಕಟ್ಟಡದ ಶಂಕುಸ್ಥಾಪನೆ, ಅಂತರಭಾರತಿ ಸಾಹಿತ್ಯಗೋಷ್ಠಿ, ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಕೌಸ್ತುಭವೆಂಬ ಸಂಸ್ಕರಣ ಸಂಚಿಕೆ ಬಿಡುಗಡೆ, ಜ್ಞಾನಪೀಠ ಪುರಸ್ಕೃತರಿಗೆ ಸನ್ಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ, ಮುಂತಾದ ವಿಶೇಷ ಕಾರ್ಯಕ್ರಮಗಳು ಜರುಗಿದವು.

ಸಾಹಿತ್ಯ ಪ್ರಸಾರ ಯೋಜನೆ : ಪರಿಷತ್ತಿನಿಂದ ಪುಸ್ತಕ ವರ್ಷದ ಕಾರ್ಯಕ್ರಮಗಳನ್ನು ವಿಶಿಷ್ಟವಾಗಿ ಆಚರಿಸಲು ನಿರ್ಧರಿಸಿದ ಪ್ರಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಇದಕ್ಕಾಗಿ ಒಂದು ಯೋಜನೆಯನ್ನು ರೂಪಿಸಲಾಯಿತು. ಅದೇ ಸಾಹಿತ್ಯ ಪ್ರಸಾರ ಯೋಜನೆ. ಈ ಯೋಜನೆಯಡಿಯಲ್ಲಿ ಹಲವು ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಲಾಯಿತು.

ಹಳ್ಳಿಹಳ್ಳಿಗೆ ಪುಸ್ತಕಗಳ ಪ್ರದರ್ಶನ ಸಾಹಿತ್ಯಿಕ ಸ್ಪರ್ಧೆಗಳನ್ನು ಶಾಲಾ ಕಾಲೇಜುಗಳಲ್ಲಿ ವ್ಯವಸ್ಥೆ ಮಾಡುವುದು. ಪುಸ್ತಕೋದ್ಯಮದ ಬಗ್ಗೆ ಲೇಖಕರು, ಪ್ರಕಾಶಕರು, ಮಾರಾಟಗಾರರಿಂದ ವಿಚಾರಸಂಕಿರಣ, ಪ್ರತಿದಿನ ಪ್ರದರ್ಶನದ ಸ್ಥಳಗಳಲ್ಲಿ ಉಪನ್ಯಾಸ, ಚಲನಚಿತ್ರ ಪ್ರದರ್ಶನ, ಜಾನಪದ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಲಾಯಿತು.

ಪುಸ್ತಕ ಪ್ರಕಟನೆ, ಪುಸ್ತಕ ಪ್ರದರ್ಶನ, ಪುಸ್ತಕ ಮಾರಾಟ ಈ ರೀತಿ ಮುಮ್ಮುಖ ಕಾರ್ಯಕ್ರಮಗಳು ಇವರ ಅಧ್ಯಕ್ಷಾವಧಿಯಲ್ಲಿ ನಡೆದವು.

ಪುಸ್ತಕ ಪ್ರಕಟನೆಯ ಅಂಗವಾಗಿ ಪುಸ್ತಕಭಾಗ್ಯ, ಸ್ವಾತಂತ್ರ್ಯೋತ್ತರ ಸಾಹಿತ್ಯ, ಜನಪದ ಕಥೆಗಳು, ಕವನಗಳು, ಎಂಬ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಪುಸ್ತಕ ಪ್ರದರ್ಶನಕ್ಕಾಗಿ ವಿವಿಧ ಪುಸ್ತಕ ಸಂಸ್ಥೆಗಳಿಂದ, ಸರ್ಕಾರದ ಸಂಸ್ಥೆಗಳಿಂದ ಪುಸ್ತಕಗಳನ್ನು ಸಂಗ್ರಹಿಸುವ ಕಾರ್ಯ ಪ್ರಾರಂಭವಾಯಿತು. ಅದಕ್ಕಾಗಿ ಸಿಬ್ಬಂದಿ, ಪುಸ್ತಕಗಳ ಪ್ರದರ್ಶನಕ್ಕೆ ಕಬ್ಬಿಣದ ಸ್ಟ್ಯಾಂಡುಗಳು ಪ್ರದರ್ಶನ ಸ್ಥಳಕ್ಕೆ ಪುಸ್ತಕ ಒಯ್ಯಲು ವಾಹನ ವ್ಯವಸ್ಥೆ ಹೀಗೆ ನಾಡಿನಾದ್ಯಂತ ಪುಸ್ತಕಯೋಜನೆ ಕಾರ್ಯಗತವಾದರೆ ಬೆಂಗಳೂರಿನಲ್ಲಿ ಪುಸ್ತಕ ಪ್ರದರ್ಶನ-ಮಾರಾಟ ವಿಶಿಷ್ಟರೀತಿಯಲ್ಲಿ ಆಯಿತು. ೧೯೭೨ರ ಫೆಬ್ರವರಿ ೧೧ರಿಂದ ೩ ದಿನಗಳ ಕಾಲ ವಿವಿಧ ಬಡಾವಣೆಗಳಲ್ಲಿ ಲೇಖಕರು ಓದುಗರು ಪುಸ್ತಕಗಳನ್ನು ಬಗಲುಚೀಲಗಳಲ್ಲಿ ತುಂಬಿಕೊಂಡು ಮನೆಮನೆಗೆ ಪಾದಯಾತ್ರೆ ಮಾಡಿ ಮಾರಾಟಮಾಡಿದರು. ಸ್ವಾತಂತ್ರ್ಯಪೂರ್ವದಲ್ಲಿ ಗಳಗನಾಥರು ಬೆಂಗಳೂರಿನಲ್ಲಿ ತಲೆಮೇಲೆ ಪುಸ್ತಕ ಹೊತ್ತು ಅವರ ಕೃತಿಗಳನ್ನು ಮನೆಮನೆಗೆ ಮಾರಾಟ ಮಾಡಿದ್ದನ್ನು ಕೆಲವರು ನೆನಪಿಸಿಕೊಳ್ಳಬೇಕು.

ಸಾಹಿತ್ಯ ಪ್ರಸಾರ ಯೋಜನೆ, ಅಂತರಭಾರತಿ ಪುಸ್ತಕ ಪ್ರದರ್ಶನ ಕಾರ್ಯಕ್ರಮದೊಂದಿಗೆ ೧೯೭೩ ಆಗಸ್ಟ್‌ನಲ್ಲಿ ವಿಧಾನ ಸೌಧದಲ್ಲಿ ಸಮಾರೋಪವಾಯಿತು.

ಸಮ್ಮೇಳನಗಳು : ನಾಲ್ಕು ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಜಿ. ನಾರಾಯಣರ ಅಧಿಕಾರಾವಧಿಯಲ್ಲಿ ನಡೆಯಿತು.

೪೭	ಬೆಂಗಳೂರು	-	ದೇ. ಜವರೇಗೌಡ	- ೧೯೭೦
೪೮	ಮಂಡ್ಯ	-	ಜಯದೇವಿತಾಯಿ ಲಿಗಾಡೆ	- ೧೯೭೪
೪೯	ಶಿವಮೊಗ್ಗ	-	ಎಸ್. ವಿ. ರಂಗಣ್ಣ	- ೧೯೭೬
೫೦	ನವದೆಹಲಿ	-	ಜಿ. ಪಿ. ರಾಜರತ್ನಂ	- ೧೯೭೮

ಈ ಸಮ್ಮೇಳನಗಳಲ್ಲಿ ಮೊದಲಬಾರಿಗೆ ದೆಹಲಿಯಲ್ಲಿ ೧೯೭೮ರಲ್ಲಿ ಜಿ. ಪಿ. ರಾಜರತ್ನಂ ಅವರ ಅಧ್ಯಕ್ಷತೆಯ ೫೦ನೇ ಸಮ್ಮೇಳನವನ್ನು ಮಾಡಿದ್ದು ಪರಿಷತ್ತಿನ ಇತಿಹಾಸದಲ್ಲಿ ಒಂದು ದಾಖಲೆ ಆಗಿದೆ.

ಪರಿಷತ್ತಿನ ರಾಜ್ಯಮಟ್ಟದ ಸಮ್ಮೇಳನಗಳ ಜತೆಗೆ ಅಖಿಲ ಕರ್ನಾಟಕ ಕೀರ್ತನಕಾರರ ಸಮ್ಮೇಳನ ೧೯ ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ೩ ಹೊರನಾಡ ಸಮ್ಮೇಳನಗಳನ್ನು ಜಿ. ನಾರಾಯಣರು ನಡೆಸಿದರು. ಪರಿಷತ್ತಿನ ಅಧ್ಯಕ್ಷರುಗಳ ಪೈಕಿ ಅತಿ ಹೆಚ್ಚು ಸಮ್ಮೇಳನಗಳನ್ನು ನಡೆಸಿದರು ಎಂಬ ಕೀರ್ತಿಗೆ ಇವರು ಭಾಜನರಾಗಿದ್ದಾರೆ.

ಸುವರ್ಣ ಮಹೋತ್ಸವ ಕಟ್ಟಡ : ಪರಿಷತ್ತಿನ ಸುವರ್ಣ ಮಹೋತ್ಸವದ ನೆನಪಿಗೆ ಎರಡಂತಸ್ತಿನ ಕಟ್ಟಡಕ್ಕೆ ೧೯೭೦ರಲ್ಲಿ ಶಂಕುಸ್ಥಾಪನೆ ಆಗಿ ೨೯.೧೨.೧೯೭೩ರಲ್ಲಿ ಉದ್ಘಾಟನೆ ಆಯಿತು. ೧೫ ಲಕ್ಷಗಳ ವೆಚ್ಚದಲ್ಲಿ ನಿರ್ಮಾಣವಾದ ಈ ಕಟ್ಟಡದಲ್ಲಿ

ಆಡಳಿತ ಸಿಬ್ಬಂದಿ ಕಚೇರಿಗೆ, ಗಮಕ ತರಗತಿ ಕೋಣೆ, ಗ್ರಂಥಭಂಡಾರ, ವಾಚನಾಲಯ, ೨ನೇ ಅಂತಸ್ತಿನಲ್ಲಿ ವಸ್ತುಸಂಗ್ರಹಾಲಯ ಸ್ಥಿರಪುಸ್ತಕಪ್ರದರ್ಶನ, ನೆಲಮಾಳಿಗೆಯಲ್ಲಿ ದಾಸ್ತಾನು ಸಂಗ್ರಹ, ಆಂತರಿಕ ದೂರವಾಣಿ ಅಳವಡಿಕೆ ಇವುಗಳನ್ನು ಒಳಗೊಂಡಿತು. ಈ ಕಟ್ಟಡದಲ್ಲೇ ಕನ್ನಡ ಶೀಘ್ರಲಿಪಿ ಬೆರಳಚ್ಚು ತರಗತಿಗಳು ಪ್ರಾರಂಭವಾದವು.

ಪರಿಷತ್ತಿನ ಅಭಿಮಾನಿಗಳಾದ ಕಂಟ್ರಾಕ್ಟರ್ ಆಗಿ ಬಿ. ಎಂ. ರಾಘವೇಂದ್ರರಾಯರು, ದಿವಾಕರ್ ಅವರು. ವಿನ್ಯಾಸಕಾರರಾಗಿ ಕಟ್ಟಡ ನಿರ್ಮಾಣದ ಕಾರ್ಯನಿರ್ವಹಿಸಿದರು.

ವಿಶೇಷ ಕಾರ್ಯಕ್ರಮಗಳು : ಪರಿಷತ್ತಿನಲ್ಲಿ ದೃಶ್ಯಮಾಧ್ಯಮ ಶ್ರವ್ಯ ಮಾಧ್ಯಮಗಳಿಗೆ ಗಮನವಿತ್ತ ಅಧ್ಯಕ್ಷರು ಹೆಚ್ಚಿಲ್ಲ. ಏಕೆಂದರೆ ಅವರ ಕಾಲಕ್ಕೆ ಈಗಿನ ಕಾಲದಷ್ಟು ಆ ಮಾಧ್ಯಮಗಳು ಪ್ರಭಾವಶಾಲಿ ಆಗಿರಲಿಲ್ಲ. ಜಿ. ನಾರಾಯಣರ ಕಾಲಕ್ಕೆ ಸಾಕಷ್ಟು ಪ್ರಭಾವಶಾಲಿ ಮಾಧ್ಯಮವಾಗಿದ್ದವು. ೨೦೦ಕ್ಕೂ ಹೆಚ್ಚು ಮಂದಿ ಪ್ರತಿಭಾವಂತ ಸಾಹಿತಿ, ಕಲಾವಿದ, ಗಮಕಿ, ಕೀರ್ತನಕಾರರ ಮತ್ತು ಇತರರ ಧ್ವನಿ ಮುದ್ರಿಕೆಗಳನ್ನು ಸಂಗ್ರಹಿಸಲಾಯಿತು.

ಪರಿಷತ್ತಿನ ಕಾರ್ಯಕ್ರಮಗಳ, ಜನಪದ ಕಲೆಗಳ ಸಾಹಿತ್ಯ ದಿಗ್ಗಜರ ಜೀವನದ ಬಗೆಗೆ ಸಾಕ್ಷ್ಯಚಿತ್ರಗಳನ್ನು ಸಿದ್ಧಗೊಳಿಸಿ ಪ್ರದರ್ಶನಕ್ಕಾಗಿ ಪ್ರೊಜೆಕ್ಟರ್ ಇತ್ಯಾದಿ ಸಾಮಗ್ರಿಗಳನ್ನು ಪರಿಷತ್ತಿನಲ್ಲಿ ವ್ಯವಸ್ಥೆಮಾಡಿದರು.

೧೯೭೪ರಲ್ಲಿ ರಾಜ್ಯೋತ್ಸವ ಆಚರಣೆಯನ್ನು ಸರ್ವಜ್ಞ ಕವಿಯ ೪೦೦ನೇ ವರ್ಷದ ಉತ್ಸವಾಚರಣೆಯನ್ನು ಒಂದು ವಾರದ ಕಾಲ ನಡೆಸಲು ನಿರ್ಧರಿಸಲಾಯಿತು. ನಾಡಿನೆಲ್ಲೆಡೆ ಸರ್ವಜ್ಞನ ಬಗ್ಗೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ೧೦೦೦ ಆಯ್ದ ಸರ್ವಜ್ಞನ ವಚನಗಳನ್ನು ಮುದ್ರಿಸಿ ೫೦೦೦ ಪ್ರತಿಗಳನ್ನು ಹಂಚಲಾಯಿತು. ಸರ್ವಜ್ಞನ ಕಾರ್ಯಕ್ರಮವನ್ನು ವಿಶಿಷ್ಟವಾಗಿ ಆಚರಿಸಿದ್ದು ಇದೇ ಮೊದಲು.

ಸಾಂಸ್ಕೃತಿಕ ವಸ್ತುಸಂಗ್ರಹಾಲಯ : ೧೯೭೪ರಲ್ಲಿ ಈ ವಿಭಾಗ ಪ್ರಾರಂಭವಾಯಿತು ಕರ್ನಾಟಕದ ಭವ್ಯಪರಂಪರೆ ಸಾರುವ ಚಿತ್ರಸಂಗ್ರಹ, ಜನಪದ ವಾದ್ಯ ಸಂಗ್ರಹ ಇತ್ಯಾದಿಗಳನ್ನು ಒಳಗೊಂಡ ಈ ಸಾಂಸ್ಕೃತಿಕ ವಸ್ತು ಸಂಗ್ರಹಾಲಯಕ್ಕೆ ಕನ್ನಡಾಭಿಮಾನಿ ಮಾನ್ಯ ನಾರಾಯಣರು ತಮ್ಮಲ್ಲಿದ್ದ ಅನೇಕ ಅಪೂರ್ವ ವಸ್ತುಗಳನ್ನು ದಾನವಾಗಿ ಕೊಟ್ಟರು.

ಇವೆಲ್ಲದರ ಜತೆಗೆ ಪ್ರಾಚೀನ ಇತಿಹಾಸ ಲಿಪಿಯ ಅಧ್ಯಯನಕ್ಕಾಗಿ ಶಾಸನತರಗತಿಗಳನ್ನು ನಡೆಸಲು ನಿರ್ಧರಿಸಿದರು. ಶಾಸನ ತರಗತಿಗಳು ಇತಿಹಾಸದ ವಿಚಾರವಾಗಿ ಅದರ ವಿಭಾಗದ ಮುಖ್ಯರಾಗಿದ್ದ ದೇವರಕೊಂಡಾರೆಡ್ಡಿಯವರು ಹೇಳಿರುವ ಮಾತುಗಳಿವು.

ಶಾಸನ ಶಾಸ್ತ್ರದ ತರಗತಿಗಳು ೧೯೭೪ರಲ್ಲಿ ಮೊದಲ ತರಗತಿ ಆರಂಭವಾಯಿತು. ಈ ತರಗತಿಗಳಲ್ಲಿ ಶಾಸನ ಪಠ್ಯ, ಕರ್ನಾಟಕ ಸಾಂಸ್ಕೃತಿಕ ಚರಿತ್ರೆ ಶಾಸನಲಿಪಿ ಕಲಿಕೆ ಪಠ್ಯಗಳಾಗಿವೆ. ಅಣ್ಣಿಗೇರಿಯವರನ್ನು ಸಂಶೋಧನಾ ವಿಭಾಗಕ್ಕೆ ಮುಖ್ಯಸ್ಥರಾಗಿದ್ದರು. ಪ್ರಸಿದ್ಧ ಶಾಸನ ತಜ್ಞರಾದ ಶೇಷಶಾಸ್ತ್ರಿ, ಲಕ್ಷ್ಮಣ ತೆಲಗಾವಿ, ಹೆಚ್. ಎಸ್. ಗೋಪಾಲರಾವ್, ಪಿ. ವಿ. ಕೃಷ್ಣಮೂರ್ತಿ, ವಸಂತಲಕ್ಷ್ಮಿ, ಸ್ಮಿತಾ ದೇವರಾಜಸ್ವಾಮಿ ಅವರು ಶಾಸನ ತರಗತಿಗಳನ್ನು ನಡೆಸಿಕೊಂಡು ಬಂದಿದ್ದಾರೆ. ಇಲ್ಲಿ ಶಾಸನ ತರಗತಿಗಳಲ್ಲಿ ಅಭ್ಯಾಸ ಮಾಡಿದವರು ರಾಜ್ಯಮಟ್ಟದಲ್ಲಿ, ದೇಶಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಪಾಂಡಿತ್ಯ ಪೋಷಣೆಯನ್ನು ಪರಿಷತ್ತು ಮಾಡುತ್ತಿದೆ ಎಂಬುದಕ್ಕೆ ಈ ಶಾಸನ ತರಗತಿಗಳು ಸಾಕ್ಷಿಯಾಗಿವೆ.

ಸ್ಥಿರಪುಸ್ತಕಪ್ರದರ್ಶನ : ಜಿ. ನಾರಾಯಣರ ಕಲ್ಪನೆ ಇದು. ಈ ಸ್ಥಿರಗ್ರಂಥಪ್ರದರ್ಶನದಲ್ಲಿ ಆ ವರ್ಷ ಪ್ರಕಟಗೊಂಡ ಕನ್ನಡ ಪುಸ್ತಕಗಳನ್ನು ವಿಷಯಾನುಸಾರ ವಿಂಗಡಿಸಿ ಆಯಾ ಕಪಾಟುಗಳಲ್ಲಿ ಇಡುತ್ತಿದ್ದರು. ಅಧ್ಯಯನಶೀಲರಿಗೆ ಇದು ಬಹು ಅನುಕೂಲವಾಗಿತ್ತು. ವಿಮರ್ಶಕರಿಗಂತು ಅತ್ಯುಪಯುಕ್ತವಾಗಿತ್ತು.

ತಾಳೆಗರಿ ಸಂಗ್ರಹ : ೧೯೭೫-೭೬ರಲ್ಲಿ ಸಂಶೋಧನಾ ವಿಭಾಗದ ಅಂಗವಾಗಿ ತಾಳೆಗರಿಗಳ ಸಂಗ್ರಹವಿತ್ತು. ಅದನ್ನು ಕ್ರಮಬದ್ಧಗೊಳಿಸಿ ಹಸ್ತಪ್ರತಿ ಕ್ಯಾಟಲಾಗನ್ನು ಪ್ರಸಿದ್ಧ ತಾಳೆಗರಿ ತಜ್ಞ ಶಿವಣ್ಣನವರು ಸಿದ್ಧಪಡಿಸಿದರು. ಎಲ್ಲಿಯೂ ಇಲ್ಲದ


ಅಪರೂಪದ ಪ್ರತಿಗಳು ಕೆಲವು ಇಲ್ಲಿವೆ.

ಜಿ. ನಾರಾಯಣರು ವಿದ್ವಾಂಸರಲ್ಲದಿದ್ದರೂ ಶಾಸ್ತ್ರ ಪಾಂಡಿತ್ಯವಿಲ್ಲದಿದ್ದರೂ ಅವರ ಶಾಸ್ತ್ರಪ್ರೇಮ ವಿದ್ವತ್ ಪ್ರೇಮಕ್ಕೆ ಈ ಸಂಶೋಧನಾ ವಿಭಾಗದ ಕಾರ್ಯಗಳು ಸಾಕ್ಷಿಯಾಗಿವೆ.

ತಮ್ಮ ಅಧಿಕಾರಾವಧಿಯಲ್ಲಿ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ನಾನಾರೀತಿಯಲ್ಲಿ ಬೆಳೆಸಿದವರಲ್ಲಿ ಜಿ. ನಾರಾಯಣರು ಅಗ್ರಗಣ್ಯರಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೫

ಅಧ್ಯಕ್ಷರು : ಹಂಪನಾಗರಾಜಯ್ಯ (೧೯೭೮ – ೧೯೮೬)



ಜೀವನ :

ಭಾಷಾ ಶಾಸ್ತ್ರಜ್ಞರು, ಸಂಶೋಧಕರು, ಪ್ರಾಧ್ಯಪಕರು, ಜೈನ ವಿದ್ವಾಂಸರು ಆದ ಹಂಪನಾ ಅವರು (ಹಂಪಸಂದ್ರದ ಪದ್ಮನಾಥಯ್ಯನವರ ಪುತ್ರ ನಾಗರಾಜಯ್ಯ) ೭-೧೦-೧೯೩೬ರಲ್ಲಿ ಪದ್ಮನಾಭಯ್ಯ-ಪದ್ಮಾವತಮ್ಮ ದಂಪತಿಗಳಿಗೆ ೪ನೇ ಮಗುವಾಗಿ ಗೌರಿಬಿದನೂರಿನ ಹಂಪಸಂದ್ರದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಹಂಪಸಂದ್ರದಲ್ಲೂ ಪ್ರೌಢಶಿಕ್ಷಣ ಗೌರಿಬಿದನೂರು, ಮಧುಗಿರಿಗಳಲ್ಲಿ, ಕಾಲೇಜು ಶಿಕ್ಷಣ ಮಧುಗಿರಿ, ಮೈಸೂರುಗಳಲ್ಲಿ ಮುಂದುವರೆಯಿತು. ೧೯೫೯ರಲ್ಲಿ ಎಂ.ಎ. ಪದವಿ ಗಳಿಸಿ, ೧೯೫೯ರಲ್ಲಿ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಪ್ರಾರಂಭಿಸಿದ ಹಂಪನಾ ೧೯೭೦ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ, ಪ್ರವಾಚಕ, ಪ್ರಾಧ್ಯಾಪಕ, ಕೇಂದ್ರ ನಿರ್ದೇಶಕ ಹುದ್ದೆಗಳನ್ನು ಅಲಂಕರಿಸಿ ೧೯೯೬ರಲ್ಲಿ ನಿವೃತ್ತರಾದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿರುವ ಇವರು ೧೯೬೬ ರಿಂದ ೧೯೭೪ರವರೆಗೆ ೮ ವರ್ಷಗಳ ಕಾಲ ಗೌರವ ಕಾರ್ಯದರ್ಶಿಗಳಾಗಿ ಮತ್ತು ೧೯೭೮ ರಿಂದ ೧೯೮೬ರವರೆಗೆ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಇವರಿಗೆ ಹತ್ತಾರು ಪ್ರಶಸ್ತಿಗಳು ಲಭ್ಯವಾಗಿವೆ. ಸಾಹಿತ್ಯ ಪರಿಷತ್ತಿನ ಚಾವುಂಡರಾಯ ಪ್ರಶಸ್ತಿ, ಬೆಂಗಳೂರಿನ ತೇರಾಪಂಥಿ ಸಂಘ ನೀಡಿರುವ ಮಹಾಪ್ರಾಜ್ಞ ಜೈನಸಾಹಿತ್ಯ ಪ್ರಶಸ್ತಿ, ಶ್ರವಣಬೆಳಗೊಳದ ಜೈನ ಶಾಸನ ಸಾಹಿತ್ಯ ಪ್ರಶಸ್ತಿ, ಅಮೇರಿಕಾ ಸಂಯುಕ್ತ ಸಂಸ್ಥಾನದ ಜೈನ್ ವರ್ಲ್ಡ್ ಫೌಂಡೇಷನ್ ಸಂಸ್ಥೆ ನೀಡಿರುವ ಜ್ಯೂವೆಲ್ಸ್ ಆಫ್ ಜೈನ್ ಅವಾರ್ಡ್, ಹಂಪಿ ವಿಶ್ವವಿದ್ಯಾಲಯದ ನಾಡೋಜ ಗೌರವ ಮುಂತಾದವು.

ಕಾದಂಬರಿ, ಕಾವ್ಯ, ಇತಿಹಾಸ, ಭಾಷಾಶಾಸ್ತ್ರ, ಜೈನ ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿ ೬೫ಕ್ಕೂ ಹೆಚ್ಚು ಕೃತಿಗಳನ್ನು

ರಚಿಸಿರುವ ಹಂಪನಾ ಅವರು ಸಂಶೋಧಕರೆಂದೇ ಪ್ರಸಿದ್ಧರಾಗಿದ್ದಾರೆ.

ಇವರ ಕೆಲವು ಕೃತಿಗಳು ಹೀಗಿವೆ:

ದ್ರಾವಿಡ ಭಾಷಾವಿಜ್ಞಾನ, ನಾಗಕುಮಾರ ಚರಿತೆ, ಧನ್ಯಕುಮಾರ ಚರಿತೆ, ಸೌಳವ ಭಾರತ, ಚಂದ್ರಸಾಗರವರ್ಣಿಯ ಕೃತಿಗಳು, ರತ್ನಾಕರನ ಹಾಡುಗಳು, ಇತ್ಯಾದಿ ಜೈನ ಕೃತಿಗಳನ್ನು ಸಂಪಾದಿಸಿದ್ದಾರೆ. ನಾಗಶ್ರೀ (ಕಾದಂಬರಿ), ಚಾರುವಸಂತ (ಕಾವ್ಯ) ರಚಿಸಿದ್ದಾರೆ.

ಸಮಗ್ರ ಜೈನ ಸಾಹಿತ್ಯ ಸಂಪುಟಗಳ ಮಾಲಿಕೆಯಲ್ಲಿ ರನ್ನ, ಪೊನ್ನ, ಕಮಲಸಂಭವರ ಕೃತಿಗಳ ಸಂಪುಟಗಳನ್ನು ಸಂಪಾದಿಸಿದ್ದಾರೆ.

ಯಕ್ಷಯಕ್ಷಿಯರು, ಸಾಂತರು ಒಂದು ಅಧ್ಯಯನ, ಚಂದ್ರಕೊಡೆ, ನೋಂಪಿಯ ಕಥೆಗಳು, ಕರ್ನಾಟಕ ಟೀಕಾ ಗ್ರಂಥ, ಶಾಸನಗಳಲ್ಲಿ ಎರಡು ವಂಶಗಳು ಮುಂತಾದ ಕೃತಿಗಳು ಸಂಶೋಧನಾ ಕೃತಿಗಳಾಗಿವೆ.

ಸಾಧನೆ :

ರಾಜ್ಯ ಸಮ್ಮೇಳನಗಳು : ಇವರ ಅವಧಿಯಲ್ಲಿ ೭ ಸಾಹಿತ್ಯ ಸಮ್ಮೇಳನಗಳು ಇವರ ನೇತೃತ್ವದಲ್ಲಿ ನಡೆದಿದೆ.

ಸಮ್ಮೇಳನ ಸಂಖ್ಯೆ		
೫೧	ಧರ್ಮಸ್ಥಳ	– ಎಂ ಗೋಪಾಲಕೃಷ್ಣ ಅಡಿಗ ೧೯೭೯
೫೨	ಬೆಳಗಾವಿ	– ಬಸವರಾಜ ಕಟ್ಟೀಮನಿ ೧೯೮೦
೫೩	ಚಿಕ್ಕಮಗಳೂರು	– ಪು. ತಿ. ನರಸಿಂಹಾಚಾರ್ ೧೯೮೧
೫೪	ಮಡಿಕೇರಿ	– ಶಂ. ಬಾ. ಜೋಶಿ ೧೯೮೧
೫೫	ಶಿರಸಿ	– ಗೊರೂರು ರಾಮಸ್ವಾಮಿ ಅಯ್ಯಂಗಾರ್ ೧೯೮೨
೫೬	ಕೈವಾರ	– ಎ. ಎನ್. ಮೂರ್ತಿರಾವ್ ೧೯೮೪
೫೭	ಬೀದರ್	– ಹಾ. ಮಾ. ನಾಯಕ ೧೯೮೫

ಜಿಲ್ಲಾ ಸಮ್ಮೇಳನಗಳು : ಇವುಗಳಲ್ಲದೆ ೧೯ ಜಿಲ್ಲಾ ಸಮ್ಮೇಳನಗಳು ನಡೆದಿರುವುದು ಶ್ಲಾಘನೀಯ ಕಾರ್ಯವಾಗಿದೆ. ತೆರೆಮರೆಯ, ಪ್ರಚಾರಪ್ರಿಯರ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಗೌರವಿಸುವ ಕೆಲಸ ಜಿಲ್ಲಾ ಸಮ್ಮೇಳನಗಳಿಂದಾಗಿದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸತ್ಕರಿಸಿದಾಗ ನಾಡಿನ ಕವಿಋಣ ತೀರಿಸದಂತಾಗುತ್ತದೆ.

ವಿಶಿಷ್ಟ ಸಮ್ಮೇಳನಗಳು : ಅಖಿಲ ಕರ್ನಾಟಕ ವ್ಯಂಗ್ಯ ಚಿತ್ರಕಾರರ ೨ನೇ ಸಮ್ಮೇಳನ (೧೯೭೯), ಅಖಿಲ ಕರ್ನಾಟಕ ಕನ್ನಡ ಶೀಘ್ರಲಿಪಿ ಬೆರಳಚ್ಚುಗಾರರ ಸಮ್ಮೇಳನ (೧೯೭೯), ಕನ್ನಡ ಸಂಘ – ಸಂಸ್ಥೆಗಳ ಸಮ್ಮೇಳನ (೧೯೮೦), ಪರಿಷತ್ತಿನಿಂದ ನಡೆದುದು ವಿಶೇಷವಾಗಿದೆ. ಇದಲ್ಲದೆ ೩೦ ವಿಚಾರ ಸಂಕಿರಣಗಳು ವಿವಿಧ ವಿಷಯಗಳ ಬಗ್ಗೆ ನಡೆದಿರುವುದು ಪ್ರಶಂಸನೀಯ ಸಂಗತಿಯಾಗಿದೆ.

ಕಾರ್ಯಕ್ರಮಗಳು : ೧೯೭೯ರಲ್ಲಿ ಅಖಿಲ ಕರ್ನಾಟಕ ಗಮಕ ಸಮ್ಮೇಳನ, ೧೯೮೦ರಲ್ಲಿ ಅಖಿಲ ಕರ್ನಾಟಕ ಕೀರ್ತನಕಾರರ ಸಮ್ಮೇಳನ, ಹತ್ತುದಿನಗಳ ಗೀತಸಂಧ್ಯಾ ಕಾರ್ಯಕ್ರಮ, ಅಂತರಾಷ್ಟ್ರೀಯ ಮಕ್ಕಳ ವರ್ಷ (೧೯೭೯)ದ ಅಂಗವಾಗಿ ೧ ವಾರ ಕಾಲ ಮಕ್ಕಳ ಮೇಳ ಮತ್ತು ಸಮ್ಮೇಳನಗಳನ್ನು ಏರ್ಪಡಿಸಲಾಯಿತು.

ಶತಮಾನೋತ್ಸವಗಳು : ಆಲೂರು ವೆಂಕಟರಾಯರು, ಹಳಕಟ್ಟಿ, ಉತ್ತಂಗಿ ಚೆನ್ನಪ್ಪ, ಗೋವಿಂದ ಪೈ, ಡೆಪ್ಯೂಟಿ ಚೆನ್ನಬಸಪ್ಪ, ಬಿಎಂಶ್ರೀ, ಟಿಪಿಕೈಲಾಸಂ ಮೊದಲಾದವರ ಶತಮಾನೋತ್ಸವ ಕಾರ್ಯಕ್ರಮಗಳು ಇವರ ಅವಧಿಯಲ್ಲಿ ನೆರವೇರಿದವು.

ಕವಿಗಳ ವಿಚಾರ ಸಂಕಿರಣಗಳು : ಕುಮಾರವ್ಯಾಸ, ರನ್ನ, ಹರಿಹರ, ರಾಘವಾಂಕ, ಲಕ್ಷ್ಮೀಶ, ರುದ್ರಭಟ್ಟ, ಚಾಮರಸ ಮೊದಲಾದ ಹಳಗನ್ನಡ ಮತ್ತು ನಡುಗನ್ನಡ ಕವಿಗಳ ಬಗ್ಗೆ ಆಯಾ ಕವಿಗಳ ಹುಟ್ಟೂರುಗಳಲ್ಲಿ ಜೀವನಕೃತಿಗಳ ಬಗ್ಗೆ ವಿಚಾರ ಸಂಕಿರಣಗಳು ನಡೆದವು.

ವಜ್ರಮಹೋತ್ಸವ ಭವನದ ನಿರ್ಮಾಣ : ೧೯೮೧ರಲ್ಲಿ ನಿರ್ಮಿಸಲಾದ ವಜ್ರಮಹೋತ್ಸವ ಕಟ್ಟಡವು ಪರಿಷತ್ತಿನ ಚಟುವಟಿಕೆಗಳಿಗೆ ಅನುಕೂಲಗಳನ್ನು ಒದಗಿಸಿತು. ಪದಾಧಿಕಾರಿಗಳಿಗೆ ಪ್ರತ್ಯೇಕ ಕೊಠಡಿ, ಪುಸ್ತಕ ದಾಸ್ತಾನಿಗೆ ನೆಲಮಾಳಿಗೆ, ಅಂತಸ್ತುಗಳಿಗೇರಲು ಲಿಫ್ಟ್‌ಗಳು ಈ ಭವನದಲ್ಲಿವೆ.

ಗೌರವ ಸದಸ್ಯತ್ವ ನೀಡಿಕೆ : ಸಾಹಿತ್ಯ ಪುರಸ್ಕಾರಗಳಿಗಿಂತ ಭಿನ್ನವಾದ ಹಾಗೂ ಶ್ರೇಷ್ಠವಾದ ಮನ್ನಣೆಯನ್ನು ಜೀವಮಾನದ ಅವಿಸ್ಮರಣೀಯ ಸಾಧನೆ ಮಾಡಿದ ಮಹನೀಯರಿಗೆ ಗೌರವ ಸದಸ್ಯತ್ವ ನೀಡುವುದನ್ನು ಪ್ರಾರಂಭಿಸಲಾಯಿತು. ('ನಿಬಂಧನೆಗಳು' ಅಧ್ಯಾಯದಲ್ಲಿ ಇದರ ವಿವರಗಳಿವೆ) ಇದೊಂದು ವಿಶಿಷ್ಟಯೋಜನೆ ಆಗಿದೆ.

ಸಂಶೋಧನ ವಿಭಾಗ ಪ್ರಾರಂಭ : ಸಂಶೋಧಕರಿಗೆ ಒಂದು ಸುಸಜ್ಜಿತ ಗ್ರಂಥ ಭಂಡಾರ ಬೇಕೆಂಬ ದೃಷ್ಟಿಯಿಂದ ಪರಿಷತ್ತಿನ ಪುಸ್ತಕ ಭಂಡಾರ ಮತ್ತು ಸಂಶೋಧನ ಭಾಗದ ಆಕರಗ್ರಂಥಗಳನ್ನು, ಪತ್ರಿಕೆಗಳನ್ನು ಒಂದೆಡೆ ಜೋಡಿಸಿ, ಕನ್ನಡ ಸಂಶೋಧನಾ ವಿಭಾಗವನ್ನು ಪ್ರಾರಂಭ ಮಾಡಲಾಯಿತು. ಇದು ಹಲವು ಕಾಲ ಅಸ್ತಿತ್ವದಲ್ಲಿತ್ತು. ಅನಂತರ ಆ ಜಾಗದಲ್ಲಿ ಪುಸ್ತಕ ಭಂಡಾರ ಸಾಮಾನ್ಯವಿಭಾಗ ಬಂದು ಸಂಶೋಧನ ವಿಭಾಗ ಸ್ಥಗಿತಗೊಂಡಿತು.

ಹಸ್ತಪ್ರತಿ ವಿಭಾಗದ ಕಥೆ: ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ಪ್ರಾರಂಭವಾದ ಹಸ್ತಪ್ರತಿ ಸಂಗ್ರಹ ಕಾರ್ಯ ನಿರಂತರವಾಗಿ ನಡೆಯಲಿಲ್ಲ. ಸಂಗ್ರಹವಾದ ಹಸ್ತಪ್ರತಿಗಳ ಅಧ್ಯಯನಗ್ರಂಥ ವರ್ಣನಾಸೂಚಿ ತಯಾರಾದ ನಂತರ ಈ ವಿಭಾಗದ ಪರ್ಯಾವಸಾನವಾಯಿತು.

ತರಗತಿಗಳು ಮತ್ತು ಪರೀಕ್ಷೆಗಳು : ಜಾನಪದ ಸಾಹಿತ್ಯಕ್ಕಿಂತ ಶಿಷ್ಟಸಾಹಿತ್ಯಕ್ಕೆ ಪರಿಷತ್ತು ಪ್ರಾರಂಭದಲ್ಲಿ ಕೊಟ್ಟಿತ್ತು. ಆದರೆ ಕಾಲಾನುಕ್ರಮದಲ್ಲಿ ಜಾನಪದ ಸಾಹಿತ್ಯ ಸಂಗ್ರಹ ಬೆಳೆದು ಅಧ್ಯಯನ ವಿಷಯವಾಯಿತು. ವಿಶ್ವವಿದ್ಯಾನಿಲಯ ಜಾನಪದ ಎಂ.ಎ. ತರಗತಿಗಳೇ ಪ್ರಾರಂಭವಾದವು. ಅನೇಕ ಪಿಎಚ್‌ಡಿ ಪ್ರಬಂಧಗಳು ಜಾನಪದಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿವೆ. ಪರಿಷತ್ತು ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ಕೈಗೊಂಡಿತು. ಕಂಬಾರರ ಸಂಪಾದಕತ್ವದಲ್ಲಿ ಕನ್ನಡ ಜಾನಪದ ವಿಶ್ವಕೋಶ (೨ ಸಂಪುಟಗಳು ಸಿದ್ಧಗೊಂಡವು)

ಕನ್ನಡ ಜನಪದ ವೈದ್ಯಕೋಶ ತಯಾರಿಕೆಯ ಕಾರ್ಯ ಯಶಸ್ವಿಯಾಗಲಿಲ್ಲ. ಪರಿಷತ್ತಿನಲ್ಲಿ ಜಾನಪದ ಪ್ರವೇಶ ಪ್ರೌಢ ತರಗತಿ ಪ್ರಾರಂಭವಾದವು. ೧೯೭೯ರಲ್ಲಿ ರಾಜ್ಯಮಟ್ಟದ ಜಾನಪದ ಮೇಳವನ್ನು ನಡೆಸಲಾಯಿತು.

ಕೆಲವು ಹಿನ್ನಡೆಗಳು : ಸಾಕಷ್ಟು ವ್ಯಾಪಕವಾಗಿ ವೈವಿಧ್ಯಮಯವಾಗಿ ಕಾರ್ಯಕ್ರಮಗಳನ್ನು ನಡೆಸಿ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿಸಿದ ಹಂಪನಾ ಅವರ ಅವಧಿಯಲ್ಲಿ ಸರ್ಕಾರಕ್ಕೆ ದೂರು ಸಲ್ಲಿಕೆಯಾಗಿ ಪ್ರಕರಣ ನ್ಯಾಯಾಲಯದ ಮೆಟ್ಟಿಲು ಹತ್ತಿ ಶಾಮಸುಂದರ ಆಯೋಗ ತೀರ್ಪಿತ್ತ ಫಲವಾಗಿ ಪರಿಷತ್ತಿಗೆ ಆಡಳಿತಾಧಿಕಾರಿಗಳು ನೇಮಕವಾದರು.

ಇವರ ಅವಧಿಯಲ್ಲಿ ಗೋಕಾಕ ಚಳವಳಿಯಲ್ಲಿ ಪರಿಷತ್ತು ಸಕ್ರಿಯಪಾತ್ರವಹಿಸಲಿಲ್ಲ ಎಂಬ ಟೀಕೆಗೆ ಒಳಗಾಯಿತು.

ಶ್ರೀಕೃಷ್ಣರಾಜ ಪರಿಷನ್ಮಂದಿರವನ್ನು ಕೆಡವಿ ನೂತನ ಭವನ ನಿರ್ಮಾಣಮಾಡುವ ಹಂಪನಾ ಅವರ ಯೋಜನೆಗೆ ಸಾರ್ವಜನಿಕ ವಿರೋಧ ಬಂದು ಕಟ್ಟಡ ನಿರ್ಮಿತಿ ಯೋಜನೆ ರದ್ದಾಯಿತು. ಪರಿಷತ್ತಿನ ಅಧ್ಯಕ್ಷರ ಆಯ್ಕೆ ವಿಚಾರ ಗೊಂದಲಕ್ಕೆ

ಒಳಗಾಗಿ ಚುನಾವಣೆಯಲ್ಲಿ ಹಸ್ತಕ್ಷೇಪವಾಗಿದೆ, ಆರೋಪಗಳು ಬಂದು ನಿಷ್ಪಕ್ಷಪಾತ ಚುನಾವಣೆ ಅಲ್ಲ ಎಂದು ನಿರ್ಧಾರವಾಯಿತು. ಹೀಗೆ ಹಂಪನಾ ಅವರ ಅಧಿಕಾರಾವಧಿ ಸೋಲುಗೆಲುವುಗಳ ಕಥೆ ಆಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೬

ಅಧ್ಯಕ್ಷರು : ಹೆಚ್. ಬಿ. ಜ್ವಾಲನಯ್ಯ



ಜೀವನ :

ನಾಟಕಕಾರರು ಸಾಹಿತಿಗಳು, ಸಂಘಟಕರು ಆದ ಹೆಚ್.ಬಿ. ಜ್ವಾಲನಯ್ಯ ಅವರು ಹಾಸನದವರು. ಹಾಸನದಲ್ಲೇ ವಿದ್ಯಾಭ್ಯಾಸ ಪೂರೈಸಿದ ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ನಾಟಕ ಸಾಹಿತ್ಯದಲ್ಲಿ ಆಸಕ್ತಿ ತಳೆದರು. ಆಕಾಶವಾಣಿ ಮೂಲಕ ಇವರ ಅನೇಕ ನಾಟಕಗಳು ಪ್ರಸಾರವಾಗಿವೆ. ಮಹಾಶಿಲ್ಪಿ ಅರಿಷ್ಟನೇಮಿ ಎಂಬ ಚಲನಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ, ಗೀತೆಗಳನ್ನು ರಚಿಸಿದ ಇವರು ಮುಖ್ಯ ಪಾತ್ರವನ್ನು ವಹಿಸಿದ್ದಾರೆ.

ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರಲ್ಲಿ ಒಬ್ಬರಾದ ಇವರು ೧೬ ವರ್ಷಗಳ ಕಾಲ ಹಾಸನ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಹಾಸನ ನಗರಸಭಾ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಅವರು ಹಾಸನ ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದರು. ೧೯೫೨ರಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದಾರೆ. ರಾಜ್ಯದ ವಿಧಾನಸಭಾ ಸದಸ್ಯರಾಗಿ ಇದ್ದರು. ೧೯೮೬-೧೯೮೭ರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸರ್ಕಾರ ಆಡಳಿತಾಧಿಕಾರಿಗಳನ್ನು ಪರಿಷತ್ತಿಗೆ ನೇಮಿಸಿದ ಪ್ರಯುಕ್ತ ಪರಿಷತ್ತಿನ ನಿಬಂಧನೆ ಪ್ರಕಾರ ೩ ವರ್ಷಗಳ ಅಧ್ಯಕ್ಷಾಧಿಕಾರವನ್ನು ಪೂರೈಸಲಾಗಲಿಲ್ಲ.

ಶ್ರೇಷ್ಠ ನಾಟಕ ಸಾಹಿತಿಗಳಾದ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಕೆಲವು ಹೀಗಿವೆ: ಸೆಳವಿನಸುಳಿ, ದಿವ್ಯಧ್ವನಿ, ಮಹಾಶಿಲ್ಪಿ, ರಾಣಿ ರತ್ನಾಜಿ, ಆರ್ಯಚಾಣಕ್ಯ, ವೀರ ತೀರ್ಥಂಕರ ಹೇಮಾವತಿ ಇತ್ಯಾದಿ.

ಹೆಚ್.ಬಿ. ಜ್ವಾಲನಯ್ಯ ಅವರು ೩೦-೩-೧೯೯೫ರಲ್ಲಿ ನಿಧನರಾದರು.

ಸಾಧನೆ :

ಪ್ರವೇಶ ಪರೀಕ್ಷೆ : ಬಿ.ಎಂ.ಶ್ರೀ ಅವರ ಕಾಲದಲ್ಲಿ ಅಕ್ಷರಸ್ಥರಾಗಲು ಕನ್ನಡ ಬಾಲಬೋಧೆಯನ್ನು ಕಲಿಸುವ ರೀತಿಯ ಅಣುಗ, ಪರೀಕ್ಷೆ ಪ್ರಾರಂಭಿಸಲಾಗಿತ್ತು. ಆಮೇಲೆ ಅದು ಮುಂದುವರೆಯಲಿಲ್ಲ. ಜ್ವಾಲನಯ್ಯನವರು ಅದೇ ರೀತಿಯ ಪ್ರವೇಶ ಎಂಬ ಪರೀಕ್ಷೆಯನ್ನು ನಡೆಸಲು ನಿರ್ಧರಿಸಿ ಸಮಿತಿರಚಿಸಿ ಪಠ್ಯಪುಸ್ತಕವನ್ನು ಸಿದ್ಧಗೊಳಿಸಿದರು.

ಮಾರಾಟವ್ಯವಸ್ಥೆ: ಸ್ವತಃ ಲೇಖಕರಾಗಿ ಮಾರಾಟದ ಕಷ್ಟವನ್ನು ತಿಳಿದಿದ್ದ ಜ್ವಾಲನಯ್ಯ ಪರಿಷತ್ತಿನಲ್ಲಿ ನಾಡಿನ ಎಲ್ಲ ಪ್ರಕಾಶಕರ ಪುಸ್ತಕಗಳು ಒಂದೆಡೆ ಸಿಗಬೇಕೆಂಬ ಅಭಿಲಾಷೆಯಿಂದ ಇತರ ಲೇಖಕರ ಹಾಗೂ ಖಾಸಗಿ ಸಂಸ್ಥೆಗಳ ಪ್ರಕಾಶಕರ ಪುಸ್ತಕಗಳನ್ನು ಪರಿಷತ್ತಿನ ಮಾರಾಟ ವಿಭಾಗದಲ್ಲಿರಿಸಿ ಏಕಛತ್ರದಡಿ ಮಾರಾಟ ವ್ಯವಸ್ಥೆ (ಏಕಗವಾಕ್ಷಿ ವಹಿವಾಟಿನ ಹಾಗೆ) ಮಾಡಿದರು. ನಮ್ಮ ನಾಡಿನಲ್ಲಿ ಎಲ್ಲಾ ಬಗೆಯ ಪುಸ್ತಕಗಳು ಎಲ್ಲಾ ಲೇಖಕರ ಪುಸ್ತಕಗಳು ಒಂದೆಡೆ ಇಂದೂ ಸಿಗುವುದಿಲ್ಲ. ಆದ್ದರಿಂದ ಜ್ವಾಲನಯ್ಯ ಅಂಥ ಪ್ರಯತ್ನ ಮಾಡಿದರು. ಆದರೆ ಅನಂತರದಲ್ಲಿ ಆ ವ್ಯವಸ್ಥೆ ಮುಂದುವರೆಯಲಿಲ್ಲ. ಪರಿಷತ್ತಿನ ಪುಸ್ತಕಗಳ ವ್ಯಾಪಾರ-ವಹಿವಾಟೇ ಅಧಿಕವಾಯಿತು.

ಗಮಕ ಪ್ರಚಾರ : ಜ್ವಾಲನಯ್ಯನವರಿಗೆ ಗಮಕದಲ್ಲಿ ಆಸಕ್ತಿ ಇತ್ತು. ಪರಿಷತ್ತು ಗಮಕಕ್ಕೆ ಕೊಟ್ಟ ಪ್ರೋತ್ಸಾಹ ಪರಿಚಯವಿತ್ತು. ಪರಿಷತ್ತಿನಲ್ಲೇ ಗಮಕ ಕಾರ್ಯಕ್ರಮಗಳಿಗೆ ಎಲ್ಲರೂ ಬರಲು ಶಕ್ಯವಿಲ್ಲ. ಮತ್ತು ಮನೆಮನೆಗೆ ಗಮಕ ಪರಿಚಯ ಪ್ರಚಾರ ಆಗಬೇಕು ಎಂದು ಬೆಂಗಳೂರಿನ ಬಡಾವಣೆಗಳಲ್ಲಿ ಗಮಕ ಚಿತ್ರ ಕಾರ್ಯಕ್ರಮಗಳನ್ನು ನಡೆಸಿದರು. ಇದು ಜನಪ್ರಿಯ ಕಾರ್ಯಕ್ರಮವಾಯಿತು. ಗಮಕಿಗಳಿಗೆ ಪ್ರೋತ್ಸಾಹ ಸಿಕ್ಕಿತು.

ಶುಭಾಶಯ ಕಾರ್ಡುಗಳು : ವ್ಯಕ್ತಿಗಳಿಗೆ ಸಭೆ – ಸಮಾರಂಭಗಳಿಗೆ ಶುಭಾಶಯ ಕಳಿಸುವ ಪದ್ಧತಿ ಇರುವುದು ಎಲ್ಲರಿಗೂ ತಿಳಿದಿದೆ. ಈ ರೀತಿ ಶುಭಾಶಯಕಾರ್ಡುಗಳು ಅಂದಚೆಂದಗಳಿಂದ ಅರ್ಥಪೂರ್ಣವಾಗಿರಬೇಕು. ಕನ್ನಡಾಭಿಮಾನ ಮೂಡಿಸುವಂತಿರಬೇಕು ಎಂದು ಜ್ಞಾನಪೀಠ ಪ್ರಶಸ್ತಿ ವಿಜೇತರ ಹಾಗೂ ಕನ್ನಡನಾಡಿನ ಸಾಂಸ್ಕೃತಿಕ ಸ್ಮಾರಕಗಳ ಆಕರ್ಷಕ ಚಿತ್ರಗಳ ಶುಭಾಶಯಕಾರ್ಡುಗಳನ್ನು ಮುದ್ರಿಸಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಸಹಕಾರದೊಂದಿಗೆ ಮಾರಾಟಕ್ಕೆ ವ್ಯವಸ್ಥೆ ಮಾಡಿದರು.

ಆಡಳಿತಾಧಿಕಾರಿಗಳ ನೇಮಕ

ಹಂಪನಾ ಅವರ ಕಾಲದಲ್ಲಿ ನಡೆಯಬೇಕಾಗಿದ್ದ ೫೮ನೇ ಸಮ್ಮೇಳನವನ್ನು ೧೯೮೭ ಅಕ್ಟೋಬರ್‌ನಲ್ಲಿ ಸಿದ್ದಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ಕಲಬುರ್ಗಿಯಲ್ಲಿ ಜ್ವಾಲನಯ್ಯ ನಡೆಸಿ ಹಿಂತಿರುಗುತ್ತಿದ್ದ ಹಾಗೆ ಪರಿಷತ್ತಿನ ಆಡಳಿತಾಧಿಕಾರಿಗಳು ವಹಿಸಿಕೊಳ್ಳುವ ಆದೇಶ ಪ್ರಕಟವಾಯಿತು. ಜ್ವಾಲನಯ್ಯನವರ ಅಧಿಕಾರಾವಧಿ ಅರ್ಧದಲ್ಲಿ ಕೊನೆಗೊಂಡಿತು.

ಸರ್ಕಾರ ಹೊರಡಿಸಿದ ಆದೇಶದ ಪೂರ್ಣಪಾಠ ಕೊಟ್ಟಿದೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಆಡಳಿತಾಧಿಕಾರಿಗಳ ನೇಮಕದ ಆದೇಶ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕನ್ನಡ ಸಾಹಿತ್ಯ ಪರಿಷತ್ತಿಗೆ ಆಡಳಿತಾಧಿಕಾರಿಯ ನೇಮಕ.

ಓದಲಾಗಿದೆ: ೧. ಸರ್ಕಾರಿ ಅಧಿಸೂಚನೆ ಸಂಖ್ಯೆ ಆರ್ ಡಿ ೪೨ ಇಎನ್ ಎಫ್ ೮೫ (ಪಿ) ದಿನಾಂಕ ೫.೫.೧೯೮೩
೨. ಶ್ಯಾಮಸುಂದರ ಆಯೋಗ, ಬೆಂಗಳೂರು ಇವರ ಪತ್ರದ ಸಂಖ್ಯೆ ಟಿ.ನಂ.ವಿ:೮೭ ದಿನಾಂಕ ೨೭.೫.೧೯೮೭
೩. ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೨೩ ಇಎನ್ ಎಫ್ ೮೭ ದಿನಾಂಕ ೧೦-೯-೧೯೮೭

ಪ್ರಸ್ತಾವನೆ :

ಮೇಲೆ (೧)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ, ಅಧಿಸೂಚನೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತ ವ್ಯವಹಾರಗಳಲ್ಲಿ ಆರೋಪಿಸಿರುವ ಅಧಿಕಾರಗಳ ದುರುಪಯೋಗ, ನಿಧಿಗಳ ದುರುಪಯೋಗ ಮತ್ತು ಅಕ್ರಮಗಳ ಬಗ್ಗೆ ವಿಚಾರಣೆ ನಡೆಸುವುದಕ್ಕಾಗಿ ವಿಚಾರಣಾ ಆಯೋಗವೊಂದನ್ನು ರಚಿಸಲಾಗಿತ್ತು. ಆಯೋಗವು ಸರ್ಕಾರಕ್ಕೆ ೨೭-೫-೧೯೮೭ರಂದು ತನ್ನ ವರದಿಯನ್ನು ಸಲ್ಲಿಸಿತು. ಸರ್ಕಾರವು ಮೇಲೆ (೩)ರಲ್ಲಿ ತಿಳಿಸಿರುವ ತನ್ನ ಸರ್ಕಾರಿ ಆದೇಶದಲ್ಲಿ ಆಯೋಗದ ವಿಚಾರಣಾ ವರದಿಯಲ್ಲಿ ತಿಳಿಸಲಾದ ವಿವಿಧ ತೀರ್ಮಾನಗಳನ್ನು ಮತ್ತು ಶಿಫಾರಸ್ಸುಗಳನ್ನು ಒಪ್ಪಿದೆ; ಹಾಗೂ ಈ ಮುಂದಿನಂತೆ ಮಂಜೂರಾತಿ ನೀಡಿದೆ.

೧. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, ೧೯೬೦ರ ಉಪಬಂಧಗಳ ಮೇರೆಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಸಂಘಗಳ ರಿಜಿಸ್ಟ್ರಾರ್‌ರಿಗೆ ನಿರ್ದೇಶನ ನೀಡುವುದು.

೨. ವಿಚಾರಣಾ ಆಯೋಗವು ವಿವಿಧ ಆರೋಪಣೆಗಳನ್ನು ಸಾಬೀತು ಪಡಿಸಿರುವುದರಿಂದ ಶ್ರೀ ಹಂಪ ನಾಗರಾಜಯ್ಯ ಅವರ ವಿರುದ್ಧ ಕಾನೂನಿನ ಅಧಿಕಾರ ವ್ಯಾಪ್ತಿಯಲ್ಲಿ ಕ್ರಿಮಿನಲ್ ಪ್ರಾಸಿಕ್ಯೂಷನ್ ಹೂಡುವುದು.

೩. ವರದಿಯನ್ನು ಮುದ್ರಿಸಿ ಪ್ರಕಟಿಸುವುದು.

ವಿಚಾರಣಾ ಆಯೋಗ ಅಧಿನಿಯಮ, ೧೯೫೨ರ ಪ್ರಕಾರ ೩ರ ಉಪಪ್ರಕರಣ (೪)ರ ಮೇರೆಗೆ ಅಗತ್ಯಪಡಿಸಲಾದಂತೆ, ವಿಚಾರಣಾ ಆಯೋಗದ ವರದಿಯನ್ನು ಮೇಲೆ ತಿಳಿಸಿದ (೩) ಸರ್ಕಾರಿ ಆದೇಶದೊಂದಿಗೆ ವಿಧಾನ ಮಂಡಲದ ಮುಂದೆ ಇಡಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹಿಂದಿನ ಪರಿಷತ್ ಅಧ್ಯಕ್ಷ ಶ್ರೀ ಹಂಪ ನಾಗರಾಜಯ್ಯ ಅವರಿಗೂ ಆಯೋಗದ ವರದಿಯ ಒಂದೊಂದು ಪ್ರತಿಯನ್ನು ನೀಡಲಾಗಿದೆ.

ಆಯೋಗದ ವರದಿಯಿಂದ ಮತ್ತು ಅದರ ನಿರ್ಣಯಗಳನ್ನು ಸರ್ಕಾರವು ಒಪ್ಪಿರುವುದರಿಂದ ತೀವ್ರ ಮತ್ತು ವ್ಯಾಪಕವಾದ ಹಣಕಾಸಿನ ಅಕ್ರಮಗಳ ನಿದರ್ಶನಗಳು ಸ್ಪಷ್ಟವಾಗಿವೆ. ಕರ್ನಾಟಕದಲ್ಲಿ ಹೆಚ್ಚಿನ ಸಾರ್ವಜನಿಕ ಪ್ರಾಮುಖ್ಯತೆಯನ್ನು ಪಡೆದಿರುವಂತಹ ಮತ್ತು ಇತ್ತೀಚೆಗೆ ರಾಜ್ಯದ ಬೊಕ್ಕಸದಿಂದ ಗಣನೀಯವಾದ ಅಂದರೆ ಸಂಸ್ಥೆಯ ವಾರ್ಷಿಕ ಬಜೆಟ್‌ನಲ್ಲಿ ೮೦ ಪ್ರತಿಶತದಷ್ಟು ಮತ್ತು ಅದಕ್ಕೂ ಹೆಚ್ಚಿನ ಮೊಬಲಗನ್ನು ರಾಜ್ಯ ಸರ್ಕಾರದಿಂದ ಪಡೆಯುತ್ತಿರುವ ಪರಿಷತ್ತಿನ ವಿರುದ್ಧ ಅಧಿಕಾರದ ದುರುಪಯೋಗವು ಸ್ಥಾಪಿತವಾಗಿರುವುದರಿಂದ ಮತ್ತು ಎಲ್ಲಾ ಅಂಶಗಳನ್ನು ಗಮನಿಸಿ, ಸರ್ಕಾರವು ಪ್ರಸ್ತುತ ಇರುವ ವ್ಯವಸ್ಥಾಪಕ ಮಂಡಳಿಯು ಆಯೋಗವು ನೀಡಿರುವ ನಿರ್ದೇಶನಗಳನ್ನು ಪಾಲಿಸುವಲ್ಲಿ ಮತ್ತು ಪರಿಷತ್ತಿನ ವ್ಯವಹಾರಗಳನ್ನು ಸರಿಪಡಿಸಲು ಸಮರ್ಥವಾಗಿಲ್ಲ ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ ಸರ್ಕಾರವು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇದಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಒಬ್ಬ ಆಡಳಿತಾಧಿಕಾರಿಯನ್ನು ತಕ್ಷಣವೇ ಜಾರಿಗೆ ಬರುವಂತೆ ನೇಮಿಸುವುದು ಅಗತ್ಯವೆಂದು ಪರಿಗಣಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಆರ್ ಡಿ ೨೩ ಇಎಸ್‌ಎಫ್‌೮೭
ಬೆಂಗಳೂರು, ದಿನಾಂಕ ೨ನೇ ನವೆಂಬರ್, ೧೯೮೭

ತದನುಸಾರವಾಗಿ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, ೧೯೬೦ರ ಪ್ರಕರಣ ೨೭-ಎ (೧) (ಸಿ)ಯ ಮೇರೆಗೆ ನೀಡಲಾದ ಅಧಿಕಾರಗಳನ್ನು ಚಲಾಯಿಸಿ ಶ್ರೀ ಎ.ಆರ್. ಚಂದ್ರಹಾಸಗುಪ್ತ, ಐ.ಎ.ಎಸ್.. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ- ಇವರನ್ನು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇಲ್ಲಿಗೆ ಸರ್ಕಾರಿ ರಾಜ್ಯಪತ್ರದಲ್ಲಿ ಈ

ಆದೇಶ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ, ೬ ತಿಂಗಳ ಅವಧಿಗಾಗಿ ಅಥವಾ ಶ್ಯಾಮಸುಂದರ ವಿಚಾರಣಾ ಆಯೋಗವು ಎತ್ತಿ ತೋರಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ವ್ಯವಹಾರಗಳಲ್ಲಿ ನಡೆದಿರುವ ಅಕ್ರಮ ಮತ್ತು ಲೋಪಗಳು ಸರಿಯಾಗುವವರೆಗೆ ಯಾವುದು ಮುಂಚೆಯೋ ಅಲ್ಲಿಯವರೆಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ

ಮತ್ತು ಅವರ ಆದೇಶಾನುಸಾರ,

(ಸಿಸಿಲ್ ನರೋನ್ಹ)

ಕಂದಾಯ ಆಯುಕ್ತರು ಮತ್ತು

ಸರಕಾರದ ಕಾರ್ಯದರ್ಶಿ

ಕಂದಾಯ ಇಲಾಖೆ.

ಆಡಳಿತಾಧಿಕಾರಿಗಳ ಕಾಲದ ಪರಿಷತ್ತು : ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭದಿಂದಲೂ ಸಾಹಿತಿಗಳೂ ವಿದ್ವಾಂಸರು ಸಾರ್ವಜನಿಕ ಸೇವಾಧುರೀಣರ ನಾಯಕತ್ವ ಮಾರ್ಗದರ್ಶನದಲ್ಲಿ ಬೆಳೆದು ಬಂದ ಸಾಹಿತ್ಯಿಕ ಸಾಂಸ್ಕೃತಿಕ ಪ್ರಾತಿನಿಧಿಕ ಸಂಸ್ಥೆ, ಮೈಸೂರು ಒಡೆಯರ ಮತ್ತು ಅಂದಿನ ಮೈಸೂರು ಸರ್ಕಾರ, ಇಂದಿನ ಕರ್ನಾಟಕ ಸರ್ಕಾರಗಳು ಆರ್ಥಿಕ ನೆರವನ್ನು ಉದಾರವಾಗಿ ನೀಡುತ್ತಾ ಪೋಷಿಸುತ್ತಾ ಬಂದಿರುವ ಸಂಸ್ಥೆ. ಪರಿಷತ್ತಿನ ಇತಿಹಾಸದಲ್ಲಿ ಎಂದೂ ಸರ್ಕಾರ ತಲೆ ಹಾಕಿದಂತೆ ಕಂಡು ಬರುವುದಿಲ್ಲ. ಆದರೆ ದುರದೃಷ್ಟವಶಾತ್ ಅಧ್ಯಕ್ಷರಾದ ಹಂಪನಾ ಅವರ ಕಾಲದಲ್ಲಿ ಒಳ್ಳೆಯ ಕೆಲಸಗಳು ಆಗುವುದರ ಜೊತೆಗೆ ಅನುಚಿತ ಕಾರ್ಯಗಳು ನಡೆದಿದ್ದರಿಂದ ಆಡಳಿತಾಧಿಕಾರಿಗಳ ನೇಮಕವಾಯಿತು.

ಜ್ವಾಲನಯ್ಯ ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಹಿಂದಿನ ಅಧ್ಯಕ್ಷರಾಗಿದ್ದ ಹಂಪನಾ ಅವರ ಬಗ್ಗೆ ಬಂದ ಆರೋಪಗಳ ವಿಚಾರಣೆ ಪ್ರಯುಕ್ತ ಸರ್ಕಾರ ಹೊರಡಿಸಿದ ಆದೇಶಾನುಸಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಅ. ರಾ. ಚಂದ್ರಹಾಸಗುಪ್ತ ಅವರು ೨-೧೧-೧೯೮೭ರಲ್ಲಿ ಅಧಿಕಾರ ವಹಿಸಿಕೊಂಡರು. ಅವರ ನಂತರ ಐ.ಎಂ. ವಿಠ್ಠಲಮೂರ್ತಿ ಅವರು ೩೦-೩-೧೯೮೮ರಲ್ಲಿ ಪರಿಷತ್ತಿನ ಅಧಿಕಾರವಹಿಸಿಕೊಂಡರು. ಚುನಾವಣಾ ಅವಧಿಯಲ್ಲಿ ವೆಂಕಟೇಶ ಮಾಚನೂರ ೩೦-೪-೨೦೦೮ರಿಂದ ೨೧.೭,೨೦೦೮ರವರೆಗೆ ಮನುಬಳಿಗಾರ್ ೨೧.೭.೨೦೦೮ರಿಂದ ೨೭.೮.೨೦೦೮ರವರೆಗೆ ಮತ್ತೆ ೨೭.೨.೨೦೧೨ರಿಂದ ೩-೫-೨೦೧೨ವರೆಗೆ ಪರಿಷತ್ತಿನ ಅಧಿಕಾರವಹಿಸಿಕೊಂಡರು.

ಈ ಎಲ್ಲ ಅಧಿಕಾರಿಗಳು ಒಟ್ಟು ಅವಧಿಯಲ್ಲಿ ಆಡಳಿತದ ಹಿನ್ನೆಲೆಯಲ್ಲಿ ಪರಿಷತ್ತಿನ ಕಚೇರಿಯಲ್ಲಿ ಕೆಲವು ಸುಧಾರಣೆಗಳನ್ನು ತರಲಾಯಿತು. ಸರ್ಕಾರಿ ಆದೇಶಾನುಸಾರ ಶಾಮಸುಂದರ ಆಯೋಗದ ವರದಿಯನ್ನು ಪ್ರಕಟಿಸುವ ನಿಬಂಧನಾ ತಿದ್ದುಪಡಿ ಸಮಿತಿಯ ಪರಿಷ್ಕೃತ ನಿಬಂಧನೆ ಜಾರಿಗೆ ಬಂದಿತು.

ಆಡಳಿತಾಧಿಕಾರಿಗಳ ನೇಮಕ ಮಾಡುವ ಪರಿಸ್ಥಿತಿ ಪರಿಷತ್ತಿಗೆ ಬಂದದ್ದು ದುರದೃಷ್ಟಕರ ಸಂಗತಿ. ಮತ್ತೆ ಹಾಗಾಗದಂತೆ ಮಾಡುವ ಹೊಣೆ ಎಲ್ಲ ಮುಂದಿನ ಅಧ್ಯಕ್ಷರ ಹೊಣೆಯಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು - ೧೭

ಅಧ್ಯಕ್ಷರು : ಜಿ.ಎಸ್. ಸಿದ್ಧಲಿಂಗಯ್ಯ (೧೯೮೯-೧೯೯೨)



ಜೀವನ :

ಶಿಕ್ಷಣತಜ್ಞರೂ ಕವಿಗಳೂ ವಚನ ಸಾಹಿತ್ಯ ವಿದ್ವಾಂಸರೂ ಆದ ಜಿ.ಎಸ್. ಸಿದ್ಧಲಿಂಗಯ್ಯನವರು ತುಮಕೂರಿನ ಬೆಳ್ಳಾವೆಯಲ್ಲಿ ೨೦-೨-೧೯೩೧ರಲ್ಲಿ ಜನಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿಯನ್ನು, ವಿಶ್ವವಿದ್ಯಾನಿಲಯದಿಂದ ೧೯೬೧ರಲ್ಲಿ ಎಂ.ಎ. ಪದವಿ ಗಳಿಸಿದರು. ಸರ್ಕಾರಿ ಕಾಲೇಜಿಗೆ ಉದ್ಯೋಗಕ್ಕದ ಅಧ್ಯಾಪಕರಾಗಿ ಸೇರಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ೧೯೮೮ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ನಿವೃತ್ತರಾದರು.

೧೯೭೪ರಲ್ಲಿ ಚಿತ್ರದುರ್ಗದಲ್ಲಿ ಹಿಂದುಳಿಗ ವರ್ಗದವರ ವಸತಿಶಾಲೆಯನ್ನು ಪ್ರಾರಂಭಿಸಲು ಕಾರಣಕರ್ತರಾದರು. ೧೯೮೯ ರಿಂದ ೧೯೯೨ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ೧೭ನೇ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಕವಿಗಳೆಂದು, ವಿಮರ್ಶಕರೆಂದು ಹೆಸರು ಗಳಿಸಿರುವ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಕೆಲವು ಹೀಗಿವೆ.

ವಿಮರ್ಶೆ : ಮಹಾನುಭಾವ ಬುದ್ಧ, ಕವಿ ಲಕ್ಷ್ಮೀಶ, ಚಾಮರಸ, ಹೊಸಗನ್ನಡ ಕಾವ್ಯ.

ಕವನ ಸಂಕಲನ : ಉತ್ತರ, ಚಿತ್ರ-ವಿಚಿತ್ರ, ಐವತ್ತರ ನೆರಳು, ಋಷ್ಯಶೃಂಗ.

ಸಂಪಾದನೆ : ಶತಾಬ್ದಿ ದೀಪ, ಜಂಗಮಜ್ಯೋತಿ, ಇತ್ಯಾದಿ.

ಸಾಧನೆ :

ಪರಿಷತ್ತಿನ ಅಧ್ಯಕ್ಷರಾಗಿರುವರಲ್ಲಿ ಕನ್ನಡ ಪ್ರಾಧ್ಯಾಪಕರು ಸಾಕಷ್ಟು ಮಂದಿ ಇದ್ದಾರೆ. ಪರಿಷತ್ತು ಪ್ರಾರಂಭವಾದ ಕಾಲದಲ್ಲೂ ಸ್ಥಾಪಕವರ್ಗದಲ್ಲಿ ಸಾಕಷ್ಟು ಮಂದಿ ಶಿಕ್ಷಕ ವರ್ಗದವರು ಇದ್ದರು. ಬೆಳ್ಳಾವೆ ವೆಂಕಟನಾರಣಪ್ಪ, ಬಿ.ಎಂ. ಶ್ರೀ. ಮೊದಲಾದವರು, ಅನಂತರದ ಕಾಲದಲ್ಲಿ ಎ.ಎನ್. ಮೂರ್ತಿರಾವ್, ಜಿ. ವೆಂಕಟಸುಬ್ಬಯ್ಯ ಮೊದಲಾದವರು ಶಿಕ್ಷಕವರ್ಗಕ್ಕೆ ಸೇರಿದದವರು.

ಜಿ.ಎಸ್. ಸಿದ್ಧಲಿಂಗಯ್ಯನವರು ಪರಿಷತ್ತಿನ ಅಧಿಕಾರವಹಿಸಿಕೊಂಡಾಗ ಪರಿಷತ್ತು ಸಂದಿಗ್ಧ ಸನ್ನಿವೇಶದಲ್ಲಿತ್ತು ಸರ್ಕಾರದ ಆಡಳಿತಾಧಿಕಾರಿಗಳ ಆಡಳಿತ ಬಂದ ಮೇಲೆ ಹೇಗೆ ಸಾಗುತ್ತದೆ ಪರಿಷತ್ತು ಎಂಬ ಆತಂಕ ಇತ್ತು. ಅಂಥ ಸನ್ನಿವೇಶದಲ್ಲಿ ಅಧಿಕಾರ ಸ್ವೀಕರಿಸಿದ ಜಿ.ಎಸ್. ಸಿದ್ಧಲಿಂಗಯ್ಯನವರು "ನಾನು ಈ ಕ್ಷಣದವರೆಗೂ ಶುದ್ದವ್ಯಕ್ತಿಯಾಗಿ ನಡೆದುಕೊಂಡು ಬಂದಿದ್ದೇನೆ. ಆ ದೇವರೇ ಬಂದರೂ ನನ್ನನ್ನು ಭ್ರಷ್ಟನನ್ನಾಗಿಸಲಾರ." ಎಂಬ ಘೋಷಣೆ ಮಾಡಿದಾಗ, ಜನರಲ್ಲಿ ಆತಂಕ

ನಿವಾರಣೆ ಆಯಿತು.

ಪರಿಷತ್ತಿಗೊಂದು ಧ್ವಜ : ಬಿ.ಎಂ.ಶ್ರೀ. ಅವರ ಅವಧಿಯಲ್ಲಿ ಒಂದು ಲಾಂಛನ(ಎಂಬಲಮ್) ರೂಪಿಸಿ ಅಂಗೀಕರಿಸಿತ್ತು ಆದರೆ ಧ್ವಜದ ಅಗತ್ಯ ಕಂಡು ಸಿದ್ಧಲಿಂಗಯ್ಯನವರು ತಜ್ಞರ ಸಮಿತಿಯನ್ನು ನೇಮಿಸಿತು. ಧ್ವಜದ ಸ್ವರೂಪ ಲಕ್ಷಣಗಳನ್ನು ನಿರ್ಧರಿಸಿತು. ಕಲಾವಿದ ಕಮಲೇಶ್ ಅವರಿಗೆ ಧ್ವಜರೂಪಿಸುವ ಕಾರ್ಯವನ್ನು ವಹಿಸಿತು. ಅದನ್ನು ಕಾರ್ಯಸಮಿತಿ ೧೬-೧-೧೯೯೦ ರಲ್ಲಿ ಅಂಗೀಕರಿಸಿತು. ಅಂದಿನಿಂದ ಪರಿಷತ್ತಿನ ಸಮ್ಮೇಳನಗಳಲ್ಲಿ ಪ್ರಮುಖ ಸಮಾರಂಭಗಳಲ್ಲಿ ಹಾರಿಸಲು ಪ್ರಾರಂಭಿಸಿತು.

ಪ್ರಕಟನೆಗಳು : ಪ್ರಕಟನೆಗಳು ಪರಿಷತ್ತಿನ ಜೀವಾಳ. ಶಿಕ್ಷಕರಾದವರಿಗೆ ಇದರಲ್ಲಿ ಬಹು ಆಸಕ್ತಿ. ಅಧ್ಯಕ್ಷರು ಪುಸ್ತಕ ಆಸಕ್ತಿವುಳ್ಳವರು. ಹೀಗಾಗಿ ಇವರು ಸಹಜವಾಗಿಯೇ ಪ್ರಕಟನೆಗಳಿಗೆ ಪ್ರಥಮ ಪ್ರಾಶಸ್ತ್ಯ ನೀಡಿದರು. ಆಧುನಿಕ ಸಾಹಿತ್ಯದಲ್ಲಿ ಗಮನಾರ್ಹವಾದ ಸಾಧನೆ ಮಾಡಿದ ಮಹನೀಯರು ನಮ್ಮಲ್ಲಿ ಅನೇಕರಿದ್ದಾರೆ. ಅವರೆಲ್ಲರನ್ನು ಜನಸಾಮಾನ್ಯರಿಗೆ ಪರಿಚಯಿಸುವ ಉದ್ದೇಶದಿಂದ **ಹೊಸಗನ್ನಡ ಸಾಹಿತ್ಯ ದನಿ ನಿರ್ಮಾಪಕರು** ಮಾಲಿಕೆಯಡಿ ಪ್ರಸಿದ್ಧ ಲೇಖಕರಿಂದ ಬರೆಸಿ ಪ್ರಕಟಿಸಿದರು. ಈ ಮಾಲಿಕೆಯಲ್ಲಿ ೨೦ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾದವು. ಹಾಗೆಯೇ ಪ್ರಕಟನೆಗಳಲ್ಲಿ ವಿನೂತನ ಯೋಜನೆಯನ್ನು ಜಾರಿಗೆ ತಂದರು. ಅದೇಂದರೆ, **ಪಿಎಚ್‌ಡಿ ಸಂಶೋಧನಾ ಪ್ರಬಂಧಗಳ ಪ್ರಕಟನೆ.** ಕರ್ನಾಟಕದಲ್ಲಿ ಹಲವಾರು ವಿಶ್ವವಿದ್ಯಾಲಯಗಳಿವೆ. ಕನ್ನಡ ವ್ಯಾಸಂಗವಿರುವ ಸ್ನಾತಕೋತ್ತರ ಕೇಂದ್ರಗಳು ಕರ್ಣಾಟದಾಚೆಗೂ ಇವೆ. ಹೀಗಾಗಿ ವರ್ಷಕ್ಕೆ ಹತ್ತಾರು ಪ್ರಬಂಧಗಳು ಸಿದ್ಧವಾಗುತ್ತವೆ. ಇವುಗಳನ್ನು ಪ್ರಕಟಿಸುವ ಪ್ರಕಾಶಕರು ಅಪರೂಪ. ಹೀಗಾಗಿ ನೂರಾರು ಪಿಎಚ್.ಡಿ., ಗ್ರಂಥಗಳು ಅಪ್ರಕಟಿತವಾಗಿ ಉಳಿದಿದೆ. ಉತ್ತಮ ವಿಚಾರಗಳು ಸಂಶೋಧನಾತ್ಮಕ ವಿವರಗಳಿರುವ ಇಂಥ ಪ್ರಬಂಧಗಳನ್ನು ಪ್ರಕಟಿಸುವ ಯೋಜನೆಯನ್ನು ತಯಾರಿಸಲಾಯಿತು. ಸಂಗ್ರಹರೂಪದಲ್ಲಿ ಹತ್ತಾರು ಪ್ರಬಂಧಗಳು ಪರಿಷತ್ತಿನಿಂದ ಪ್ರಕಟವಾಯಿತು.

ಹೊಸದಾಗಿ ಅಕ್ಷರ ಕಲಿತ ವಯಸ್ಕರಿಗಾಗಿ ಪ್ರಾರಂಭಿಸಿದ ನವಸಾಕ್ಷರಮಾಲಿಕೆಯಲ್ಲಿ ೩೦ ಗ್ರಂಥಗಳು ಬೆಳಕು ಕಂಡವು.

ಪರಿಷತ್ತಿನ ಗೌರವ ಸದಸ್ಯತ್ವ ಪಡೆದ ಸಿಂಪಿ ಲಿಂಗಣ್ಣನವರ ಗೌರವಾರ್ಥ ಅವರ ಪ್ರಾತಿನಿಧಿಕ ಕೃತಿ **'ಸಾಗರಸಿಂಪಿ'** ಪ್ರಕಟವಾಯಿತು.

ಕಾರ್ಯಕ್ರಮಗಳು : ಸ್ವತಃ ಕವಿಗಳಾದ ಜಿ. ಎಸ್. ಸಿದ್ಧಲಿಂಗಯ್ಯನವರು ತಮ್ಮ ಅವಧಿಯಲ್ಲಿ ರಾಜ್ಯೋತ್ಸವ, ಯುಗಾದಿಯಂದು ಕವಿಗೋಷ್ಠಿ ಏರ್ಪಡಿಸುವ ಪದ್ಧತಿ ಪ್ರಾರಂಭಿಸಿದರು.

ಯುವ ಕವಿಗಳಿಗಾಗಿ ಕಾವ್ಯ ಕಮ್ಮಟ ಕಾರ್ಯಕ್ರಮ ಪ್ರಾರಂಭಿಸಿದರು. ಅಷ್ಟೇ ಅಲ್ಲದೆ ಯುವಕವಿಗಳಿಗಾಗಿಯೇ ಕತೆಗಾರರಿಗಾಗಿಯೇ ಸ್ಪರ್ಧೆ ಏರ್ಪಡಿಸಿ ಶ್ರೇಷ್ಠ ಕವನ ಸಂಕಲನವನ್ನು ಶ್ರೇಷ್ಠಕಥಾಸಂಕಲನವನ್ನು ಪ್ರಕಟಿಸತೊಡಗಿದರು.

ಪರಿಷತ್ತಿನ ಕನ್ನಡನುಡಿಯ ಸುವರ್ಣ ಸಂಚಿಕೆಯನ್ನು ಹೊರತಂದರು.

ಕನ್ನಡ ಕಾರ್ಯಕರ್ತರ ಸಂಘಸಂಸ್ಥೆಗಳ ಸಮಾಲೋಚನಾ ಸಭೆಗಳನ್ನು ನಡೆಸಿದರು. ಜಿಲ್ಲಾ - ತಾಲ್ಲೂಕುಮಟ್ಟದ ಸಮ್ಮೇಳನಗಳ ಜತೆಗೆ ಮಹಿಳಾ ಸಮ್ಮೇಳನಗಳನ್ನು ಸಂಘಟಿಸಿದರು.

ಬಂಡಾಯ ಸಮ್ಮೇಳನ : ಪರಿಷತ್ತು ಸಾಮಾನ್ಯವಾಗಿ ಚಳವಳಿಗಳಿಂದ ದೂರವೆಂಬ ಮಾತಿದೆ. ಆ ಮಾತು ಸ್ವಲ್ಪಮಟ್ಟಿಗೆ ನಿಜವೂ ಹೌದು. ಆದರೆ ಪೂರ್ಣಸತ್ಯವಲ್ಲ. ಬಂಡಾಯ ಸಾಹಿತ್ಯ ಚಳವಳಿಯ ಬರಹಗಾರರು ಪರಿಷತ್ತಿನಿಂದ ದೂರವಿದ್ದುದನ್ನು ಕಂಡು ಸಿದ್ಧಲಿಂಗಯ್ಯನವರು ಆ ಚಳವಳಿಯ ಸಾಹಿತಿಗಳನ್ನೆಲ್ಲ ಕರೆಯಿಸಿ ಮಾತನಾಡಿ ೩೦-೬-೧೯೯೦ ಮತ್ತು ೧-೭-೯೦ ರಂದು ಎರಡು ದಿನಗಳ ಕಾಲ ಸಾಹಿತ್ಯ ಸಮಾವೇಶವೊಂದನ್ನು ಪರಿಷತ್ತಿನಲ್ಲಿ ಏರ್ಪಡಿಸಿದರು. ಇದರಿಂದ ಸಾಹಿತ್ಯವಲಯದ ಒಂದು ವರ್ಗ ಪರಿಷತ್ತಿನಿಂದ ದೂರ ಉಳಿಯುವುದು ತಪ್ಪಿತು.

ನಿಬಂಧನೆಗಳ ತಿದ್ದುಪಡಿ : ಪರಿಷತ್ತಿನ ನಿಬಂಧನೆಗಳು, ತಿದ್ದುಪಡಿಯಾಗಬೇಕೆಂದು ಬಹಳ ಕಾಲದ ಕೋರಿಕೆ ಮೇರೆಗೆ ಅದಕ್ಕಾಗಿ ನೇಮಕಗೊಂಡ ತಜ್ಞರ ಸಮಿತಿ ಸಿದ್ಧಪಡಿಸಿ ಸದಸ್ಯ ಸಭೆಯಲ್ಲಿ ಅಂಗೀಕಾರವಾಗಿ ಜಾರಿಗೆ ಬಂದವು.

ಇದರ ಫಲವಾಗಿ ಕೆಲವು ಬದಲಾವಣೆಗಳು ನಿಬಂಧನೆಗಳಲ್ಲಿ ಕಂಡುಬಂದವು. ಮೊದಲನೆಯದಾಗಿ, ಮಹಾರಾಷ್ಟ್ರ ಕೇರಳಗಳಲ್ಲಿ ಪರಿಷತ್ತಿನ ವಿಶೇಷ ಘಟಕಗಳು ಸ್ಥಾಪನೆಯಾಗಲು ಅವಕಾಶವಾಯಿತು. ೧೦೦ಕ್ಕಿಂತ ಹೆಚ್ಚು ಮತದಾರರಿರುವ ಹೊರನಾಡಿನ ಪ್ರದೇಶಗಳಲ್ಲಿ ಪರಿಷತ್ತಿನ ವಿಶೇಷಘಟಕಗಳ ಸ್ಥಾಪನೆ, ೫೦ಕ್ಕಿಂತ ಹೆಚ್ಚು ಮತದಾರರಿದ್ದರೆ ಮತದಾನ ಕೇಂದ್ರ ನಿರ್ಮಾಣಕ್ಕೆ ಅವಕಾಶ, ತಾಲ್ಲೂಕು ಘಟಕ ಸ್ಥಾಪನೆ, ಇವೇ ಮೊದಲಾದ ತಿದ್ದುಪಡಿಗಳು ಜಾರಿಗೆ ಬಂದವು.

ಸಮ್ಮೇಳನಗಳು : ಇವರ ಕಾಲದಲ್ಲಿ ೩ ಕನ್ನಡ ಸಾಹಿತ್ಯ ಸಮ್ಮೇಳನಗಳು

೧೯೯೦	ಹುಬ್ಬಳ್ಳಿ	ಆರ್.ಸಿ. ಹಿರೇಮಠ	೫೯ನೇ ಸಮ್ಮೇಳನ	ಸಿದ್ಧಲಿಂಗಯ್ಯ
೧೯೯೧	ಮೈಸೂರು	ಕೆ. ಎಸ್. ನರಸಿಂಹಸ್ವಾಮಿ	೬೦ನೇಸಮ್ಮೇಳನ "	"
೧೯೯೨	ದಾವಣಗೆರೆ	ಜಿ.ಎಸ್. ಶಿವರುದ್ರಪ್ಪ	೬೧ನೇ ಸಮ್ಮೇಳನ "	"

ಈ ಸಮ್ಮೇಳನಗಳ ಪೈಕಿ ದಾವಣಗೆರೆ ಸಮ್ಮೇಳನದಲ್ಲಿ ಪ್ರೇಕ್ಷಕರೂ ಪಾಲ್ಗೊಳ್ಳುವ ಸಾಹಿತ್ಯ ಸಂವಾದ ಕಾರ್ಯಕ್ರಮ ಹೊಸ ಸಂಶೋಧನೆಗಳ ಬಗೆಗೆ "ಹೊಸಶೋಧ ಗೋಷ್ಠಿ ಏರ್ಪಡಿಸಿದ್ದು ಜನ ಪ್ರಶಂಸೆಗೆ ಪಾತ್ರವಾಯಿತು.

ಪುಸ್ತಕಭಂಡಾರ: ಪರಿಷತ್ತಿನ ಪುಸ್ತಕ ಭಂಡಾರ ೧೯೮೯ರ ವರದಿಯ ಪ್ರಕಾರ ಇದ್ದ ಪುಸ್ತಕಗಳ ಸಂಖ್ಯೆ ೫೬೪೬೭. ಹಿಂದಿನ ವರ್ಷದ ವರದಿಯ ಪ್ರಕಾರ ಕಾಣೆಯಾದ ಪುಸ್ತಕಗಳ ಸಂಖ್ಯೆ ೧೧೩೨೯ ಆಗಿತ್ತು. ಇದರ ಬಗ್ಗೆ ಹಿಂದಿನವರು ಯಾವ ಶಿಸ್ತು ಕ್ರಮವನ್ನೂ ಕೈಗೊಂಡಿರಲಿಲ್ಲ. ಪ್ರಸಕ್ತ ಅಧ್ಯಕ್ಷರು ಸೂಕ್ತಕ್ರಮ ಕೈಗೊಂಡರು.

ನಿಘಂಟು ಮಾರಾಟ : ಸರ್ಕಾರಿ ಮುದ್ರಣಾಲಯದ ದಾಸ್ತಾನು ಮಳಿಗೆ ಕೊಳೆಯುತ್ತಿದ್ದ ಪರಿಷತ್ತಿನ ಪ್ರಕಟನೆಯಾದ ಕನ್ನಡ ನಿಘಂಟು ಸಂಪುಟಗಳನ್ನು ಪರಿಷತ್ತಿಗೆ ತರಿಸಿ ಮಾರಾಟ ಮಾಡಲಾಯಿತು. ಇದರಿಂದ ಒಂದೂವರೆಲಕ್ಷದಷ್ಟು ಹಣ ಸಂಗ್ರಹವಾಯ್ತು.

ಅಮೃತಮಹೋತ್ಸವ : ಪರಿಷತ್ತಿಗೆ ೨೫, ೫೦, ೬೦ ವರುಷಗಳು ತುಂಬಿದಾಗಲೆಲ್ಲ ವಿಶೇಷ ಸಮಾರಂಭಗಳು ನಡೆದಿವೆ. ವಿಶೇಷ ಸಂಚಿಕೆಗಳನ್ನು ಹೊರತರಲಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ೭೫ ವರ್ಷಗಳ ಅಮೃತಮಹೋತ್ಸವ ಕಾರ್ಯಕ್ರಮಗಳನ್ನು ನಡೆಸಲು ೧೯೯೧ನವೆಂಬರ್ ೧೭,೧೮,೧೯ರಂದು ೩ ದಿನಗಳ ಕಾರ್ಯಕ್ರಮದಲ್ಲಿ ಗಣ್ಯರಿಗೆ ಸನ್ಮಾನ ರಾಷ್ಟ್ರೀಯ ಕವಿಗೋಷ್ಠಿ ಪುಸ್ತಕಮೇಳ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೮

ಅಧ್ಯಕ್ಷರು : ಗೊ. ರು. ಚನ್ನಬಸಪ್ಪ (೧೯೯೨–೧೯೯೫)



ಜೀವನ :

ಜಾನಪದ ಸಾಹಿತಿಯಾಗಿ ಸಂಘಟಕರೂ ಸಾರ್ವಜನಿಕ ಸೇವಾಗ್ರೇಸರರೂ ಆಗಿರುವ ಗೊ.ರು. ಚನ್ನಬಸಪ್ಪ ಅವರು

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಗೊಂಡೇದಹಳ್ಳಿಯಲ್ಲಿ ರುದ್ರಪ್ಪಗೌಡರು-ಅಕ್ಕಮ್ಮ ದಂಪತಿಗಳಿಗೆ ಪುತ್ರರಾಗಿ ೧೮-೫-೧೯೩೦ರಲ್ಲಿ ಹುಟ್ಟಿದರು. ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಇವರು ೧೮ನೇ ವಯಸ್ಸಿನಲ್ಲೇ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿಗೆ ಸೇರಿದರು. ಸರ್ಕಾರಿ ಸೇವೆಯ ಜತೆಜತೆಗೇ ವಿವಿಧ ಸಂಘಸಂಸ್ಥೆಗಳಿಗಾಗಿ ದುಡಿದರು.

ಗಾಂಧೀ ಗ್ರಾಮದಲ್ಲಿ ಸಮಾಜ ಶಿಕ್ಷಣವನ್ನು ಪಡೆದಿರುವ ಗೊರುಚ ಅವರು ಭೂದಾನ ಚಳವಳಿ, ವಯಸ್ಕರ ಶಿಕ್ಷಣ, ಸೇವಾದಳಗಳಲ್ಲಿ ಕೆಲಸ ಮಾಡಿದ್ದಾರೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಹೆಡ್‌ಕ್ವಾರ್ಟರ್ಸ್ ಕಮೀಷನರ್ ಆಗಿ ದುಡಿದಿರುವ ಇವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ.

ಪತ್ರಿಕಾವೃತ್ತಿ ಬಲ್ಲ ಇವರು 'ಜಾನಪದ ಜಗತ್ತು', 'ಪಂಚಾಯತ್ ರಾಜ್ಯ', 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ಮೊದಲಾದ ಪತ್ರಿಕೆಗಳಿಗೆ ಸಂಪಾದಕರಾಗಿ ವಿಶೇಷ ಸೇವೆ ಸಲ್ಲಿಸಿದ್ದಾರೆ.

೧೯೯೨ ರಿಂದ ೧೯೯೫ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ೧೮ನೇ ಅಧ್ಯಕ್ಷರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಕೊಪ್ಪಳ (೧೯೯೩), ಮಂಡ್ಯ (೧೯೯೪), ಮುಧೋಳಗಳಲ್ಲಿ (೧೯೯೫) ೬೨, ೬೩, ೬೪ನೇ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಇವರ ಅವಧಿಯಲ್ಲಿ ಅನೇಕ ಮೌಲಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿರುವ ಇವರ ಕೆಲವು ಕೃತಿಗಳು ಹೀಗಿವೆ :

ಕರ್ನಾಟಕ ಪ್ರಗತಿಪಥ, ಸಾಕ್ಷಿಕಲ್ಲು, ಬಾಗೂರು ನಾಗಮ್ಮ, ಗ್ರಾಮಗೀತೆಗಳು, ಕರ್ನಾಟಕ ಜನಪದ ಕಲೆಗಳು, ಹೊನ್ನ ಬಿತ್ತೇವು ನೆಲಕೆಲ್ಲ, ಇತ್ಯಾದಿ.

ಸಾಧನೆ :

ಪರಿಷತ್ತಿನ ಅಧ್ಯಕ್ಷರಾಗಿರುವವರಲ್ಲಿ ಒಬ್ಬೊಬ್ಬರು ಒಂದೊಂದು ವಿಷಯಕ್ಕೆ ಪ್ರಾಶಸ್ತ್ಯ ನೀಡಿ ತಮ್ಮ ಅಧಿಕಾರಾವಧಿಯಲ್ಲಿ ವಿಶೇಷ ಕೊಡುಗೆಯನ್ನು ಆಯಾ ವಿಷಯದಲ್ಲಿ ನೀಡಿದ್ದಾರೆ. ಆರ್ಥಿಕ ವಿಚಾರಗಳಿಗೆ ಕೆಲವರು ವಿಶೇಷ ಗಮನವಿತ್ತರೆ ಮತ್ತೆ ಕೆಲವರು ಭವನ ನಿರ್ಮಾಣ, ಸೌಕರ್ಯಗಳತ್ತ ಮನಮಾಡಿದ್ದಾರೆ. ಮತ್ತೆ ಹಲವರು ಪುಸ್ತಕ ಪ್ರಕಟನೆಗೆ ಗಮನವಿತ್ತರು. ಅಪರೂಪವಾಗಿ ಪುಸ್ತಕ ಭಂಡಾರದ ಬಗ್ಗೆ, ಸಿಬ್ಬಂದಿವರ್ಗದವರ ಸೌಕರ್ಯಗಳ ಬಗ್ಗೆ ಚಿಂತಿಸಿದವರೂ ಉಂಟು. ಆದರೆ ಎಲ್ಲ ಅಧ್ಯಕ್ಷರೂ. ಸಮ್ಮೇಳನಗಳನ್ನು ನಡೆಸುವುದರಲ್ಲಿ ದತ್ತಿನಿಧಿ ಕಾರ್ಯಕ್ರಮಗಳಲ್ಲಿ ಸಮಾನಾಸಕ್ತಿ ತೋರಿಸಿದ್ದಾರೆ. ಪರಿಷತ್ತಿನ ಸದಸ್ಯತ್ವ ಹೆಚ್ಚಳಕ್ಕೆ ಕೆಲವು ಅಧ್ಯಕ್ಷರಂತೂ ಚುನಾವಣಾ ಪ್ರಯುಕ್ತ ವಿಶೇಷ ಗಮನವಿತ್ತಿದ್ದಾರೆ. ಗೊ. ರು. ಚ. ಅವರು ಹಲವು ವಿಷಯಗಳಲ್ಲಿ ವಿನೂತನ ಸಾಧನೆ ಮಾಡಿದ್ದಾರೆ.

ಅಮೃತನಿಧಿ ಯೋಜನೆ : ಪರಿಷತ್ತು ತನ್ನ ಕಾಲಮೇಲೆ ತಾನು ನಿಲ್ಲಬೇಕು ಎಂಬುದು ಎಲ್ಲ ಅಧ್ಯಕ್ಷರ ಬಯಕೆ ಆದರೂ ಅದಕ್ಕಾಗಿ ವಿಶೇಷ ಯೋಜನೆ ನಿರೂಪಿಸಿದವರು ಕೆಲವೇ ಮಂದಿ. ಅವರಲ್ಲಿ ಗೊರುಚ ಒಬ್ಬರು. ಡಾ.ಹಾಮಾನಾ ಅವರು ಬೀದರ್ ಸಮ್ಮೇಳನದಲ್ಲಿ ೧೯೮೫ರಲ್ಲಿ ಸಮ್ಮೇಳನಾಧ್ಯಕ್ಷ ಸ್ಥಾನದಿಂದ ಪರಿಷತ್ತಿನ ಆರ್ಥಿಕ ಸ್ವಾವಲಂಬನೆಗಾಗಿ, **"ಒಬ್ಬ ಕನ್ನಡಿಗ – ಒಂದು ರೂಪಾಯಿ"** ಘೋಷಣೆ ಮೊಳಗಿಸಿದರು. ಇದಕ್ಕನುಸಾರವಾಗಿ ಅಮೃತನಿಧಿ ಚೀಟಿಗಳನ್ನು ಮುದ್ರಿಸಿ ಮಾರಾಟ ಮಾಡಿ ಹಣ ಸಂಗ್ರಹ ಮಾಡಲು ಹಂಪನಾ ಪ್ರಾರಂಭಿಸಿದರು. ಗೊರುಚ ಅವರ ಅವಧಿಯಲ್ಲಿ ೨೫ ಲಕ್ಷರೂ.ಗಳಷ್ಟು ಅಮೃತನಿಧಿ ಸಂಗ್ರಹವಾಯಿತು. ಮೂಲಹಣವನ್ನು ಬಳಸದೆ ಬಡ್ಡಿಯನ್ನು ಮಾತ್ರ ಕಾರ್ಯಕ್ರಮಗಳಿಗೆ ಬಳಸಲು ನಿಯಮವನ್ನು ರೂಪಿಸಲಾಗಿದೆ.

ದತ್ತಿನಿಧಿ ಸಾಧನೆ : ಪರಿಷತ್ತಿನಲ್ಲಿ ವರ್ಷಾದ್ಯಂತ ಕಾರ್ಯಕ್ರಮಗಳು ನಡೆಯಲು, ೩೦ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ನಡೆಯಲು ಮುಖ್ಯಾಧಾರ ದತ್ತಿನಿಧಿಗಳು ಎಂದರೆ ತಪ್ಪಲ್ಲ. ಮೂಲನಿಧಿಯನ್ನು ಬಳಸದೆ ಬಡ್ಡಿಯನ್ನು ಬಳಸುವುದರಿಂದ ಪ್ರತಿವರ್ಷವೂ ಕಾರ್ಯಕ್ರಮಗಳನ್ನು ನಡೆಸಲು ಶಕ್ಯ. ಸರ್ಕಾರದ ಸಾರ್ವಜನಿಕರ ಕೊಡುಗೆ ಅನುದಾನಗಳು

ಬಂದರೂ ಬರದಿದ್ದರೂ ಕಾರ್ಯಕ್ರಮಗಳನ್ನು ನಡೆಸಬಹುದು. ದತ್ತಿನಿಧಿಯ ಮಹತ್ವವನ್ನು ಅರಿತ ಗೊರುಚ ಅವರು ಇದರ ಸಂಗ್ರಹಕ್ಕೆ ಆದ್ಯ ಗಮನವಿತ್ತು ೨೦ ಲಕ್ಷದಷ್ಟು ಹಣದ ಮೊತ್ತದ ದತ್ತಿನಿಧಿಗಳನ್ನು ಸಂಗ್ರಹಿಸಿ ದಾಖಲೆ ಸ್ಥಾಪಿಸಿದರು. ವರ್ಷವೆಲ್ಲಾ ಕಾರ್ಯಕ್ರಮಗಳು ನಡೆಯುವಷ್ಟು ದತ್ತಿನಿಧಿಗಳನ್ನು ಸಂಗ್ರಹಿಸುವುದು ಅವರ ಗುರಿಯಾಗಿತ್ತು. ಅವರು ಮಾಡಿದ ಇನ್ನೊಂದು ಕೆಲಸ ಎಂದರೆ ದತ್ತಿನಿಧಿಗಳ್ಳು ಸುವ್ಯವಸ್ಥೆಗೊಳಿಸಿದ್ದು. ೧೫೦೦ಕ್ಕೂ ಮಿಕ್ಕ ದತ್ತಿಗಳನ್ನು ಜಿಲ್ಲಾವಾರು ವರ್ಗೀಕರಿಸಿ ಹಂಚುವುದರ ಜತೆಗೆ. ಪುಸ್ತಕ ಬಹುಮಾನ ದತ್ತಿ, ಪುಸ್ತಕಪ್ರಕಟನೆ ದತ್ತಿ, ಇತ್ಯಾದಿ ವರ್ಗೀಕರಿಸಿ ದತ್ತಿನಿಧಿಗಳ ಪುಸ್ತಕವನ್ನೇ ಪ್ರಕಟಮಾಡಿದರು. ದತ್ತಿದಾನಿಗಳು ದತ್ತಿಕೊಡುವಾಗ ತಮಗೆ ತೋಚಿದಂತೆ ಪತ್ರ ಬರೆದು ಕೊಡುತ್ತಿದ್ದರು ಎಷ್ಟೋ ವೇಳೆ ಅಗತ್ಯ ಮಾಹಿತಿಗಳೇ ಇರುತ್ತಿರಲಿಲ್ಲ. ಅದಕ್ಕಾಗಿ ದತ್ತಿಪತ್ರ ಮಾದರಿಯನ್ನು ಹಾಗೂ ದತ್ತಿ ನಿಯಮಾವಳಿಗಳನ್ನು ರಚಿಸಿದರು. ದತ್ತಿ ಮೊತ್ತ ಕಡಿಮೆ ಇದ್ದ ಕಾರಣದಿಂದ ನೂರಾರು ದತ್ತಿಗಳ ಬಡ್ಡಿಯಿಂದ ಇಂದು ಸ್ವತಂತ್ರವಾಗಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿಲ್ಲ ಹೀಗಾಗಿ ಹಲವಾರು ದತ್ತಿಗಳ ಬಡ್ಡಿಯನ್ನು ಒಗ್ಗೂಡಿಸಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

ಆಚರಣೆಯ ನಿದರ್ಶನ: ಪರಿಷತ್ತಿನ ಹಲವು ಅಧ್ಯಕ್ಷರು ಪರಿಷತ್ತಿನ ಆರ್ಥಿಕ ಪ್ರಗತಿಗೆ ಶ್ರಮಿಸುವಾಗ ತಮ್ಮ ಕೊಡುಗೆಯಿಂದ ಕೆಲವು ತ್ಯಾಗಗಳನ್ನು ಪರಿಷತ್ತಿಗಾಗಿ ಮಾಡಿದ್ದಾರೆ. ಸರಳ ವ್ಯಕ್ತಿತ್ವದಿಂದ ಮೆರೆದಿದ್ದಾರೆ. ಗೊ.ರು.ಚ. ಅವರು ತಮ್ಮ ಅಧಿಕಾರಾವಧಿಯಲ್ಲಿ ಕಾರ್ಯಕಾರಿ ಸಮಿತಿ ಸಭೆ, ಉಪಸಮಿತಿಸಭೆಗಳಲ್ಲಿ ತಮಗೆ ಕೊಡುತ್ತಿದ್ದಂಥ ಸಭಾ ಭತ್ಯವನ್ನು ಪರಿಷತ್ತಿಗೆ ಹಿಂದಿರುಗಿಸುತ್ತಿದ್ದರು.

ಸಮಾವೇಶಗಳು : ಸಾಹಿತ್ಯದ ಪ್ರಚಾರ, ಸಾಹಿತ್ಯದ ವಿಚಾರ, ಸಾಹಿತ್ಯದ ವಿಮರ್ಶೆ, ಸಾಹಿತ್ಯದ ರಸಾನುಭವ ಉಂಟು ಮಾಡುವ ಕಾರ್ಯಕ್ರಮಗಳು ಸಾಹಿತ್ಯಾಸಕ್ತರಿಗೆ ಪ್ರಿಯವಾದ ಕಾರ್ಯಕ್ರಮಗಳು. ಇವುಗಳ ಸಭೆಗಳಲ್ಲಿ ಬಹುಮಟ್ಟಿಗೆ ಏಕಮುಖಿ ನಿರೂಪಣೆ ಕಾಣುತ್ತೇವೆ ಎಂದರೆ ಉಪನ್ಯಾಸ ವಿಚಾರಮಂಡನೆ ಅನಂತರ ಒಮ್ಮೊಮ್ಮೆ ಒಂದೆರಡು ನಿಮಿಷಗಳ ಕಾಲ ಕೆಲವರ ಪ್ರತಿಕ್ರಿಯೆ ಕಾಣುತ್ತೇವೆ. ಸಹೃದಯರ ಪ್ರತಿಕ್ರಿಯೆಗೆ, ವಾದ-ಸಂವಾದಗಳಿಗೆ ಸಾಕಷ್ಟು ಅವಕಾಶವಿರುವುದಿಲ್ಲ. ಗೊರುಚ ಅವರು ಇದನ್ನು ಮನಗಂಡು ಸಾಕಷ್ಟು ಪ್ರತಿಕ್ರಿಯೆಗಳಿಗೆ ಅವಕಾಶವಿರುವ ರೀತಿಯಲ್ಲಿ ಸಾಹಿತ್ಯ ಸಮ್ಮೇಳನಗಳ ಹಾಗೆಯೇ ಊರೂರುಗಳಲ್ಲಿ ನಾಟಕ, ಶಿಕ್ಷಣ, ಹಾಸ್ಯ, ಅನುಭಾವ, ವಿಜ್ಞಾನ, ಸಂಶೋಧನ, ಮಹಿಳೆ, ಚಾರಣ, ಸಮೂಹ ಮಾಧ್ಯಮ ಕೀರ್ತನ ಮೊದಲಾದ ಸಾಹಿತ್ಯ, ಕಲೆ, ವಿಜ್ಞಾನ ಕ್ಷೇತ್ರಗಳ ಮಹತ್ವದ ವಿಷಯಗಳನ್ನು ಕುರಿತು ತೌಲನಿಕವಾಗಿ ಚರ್ಚೆ ಮಾಡುವ ರೀತಿಯಲ್ಲಿ ಕಲೆ, ಸಾಹಿತ್ಯ ಸಮಾವೇಶಗಳನ್ನು ಏರ್ಪಡಿಸಿದರು.

ಗೀತ ಸಂಗೀತ ಕಾರ್ಯಕ್ರಮ: ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ನಮ್ಮ ನಾಡ ಗೀತೆಗಳ ಪರಿಚಯ ಮಾಡಿಸಲು ಖ್ಯಾತ ಸಂಗೀತಗಾರರಿಂದ ಹಾಡಿಸಿ ಹಚ್ಚೇವು ಕನ್ನಡದ ದೀಪ ಎಂಬ ಧ್ವನಿಸುರುಳಿಯನ್ನು ಹೊರತರಲಾಯಿತು. ಒಂದು ಕವಿತೆ ಜನಕ್ಕೆ ರಸಪೂರ್ಣವಾಗಿ ಮುಟ್ಟಬೇಕಾದರೆ ಆನಂದಾನುಭವ ಆಗಲು ಕವಿಯಿಂದ ಕವಿತಾ ವಾಚನ, ಅದಕ್ಕೆ ವಾದ್ಯಗೋಷ್ಠಿ ಯೋಜನೆ ಗಾಯಕನ ಹಾಡುವಿಕೆ ಸೇರಿದರೆ ಸಾಹಿತ್ಯ ಸಂಗೀತಗಳ ಸಂಗಮವಾಗುತ್ತದೆ. ಕವಿ ಗಾಯಕರ ದರ್ಶನವಾಗುತ್ತದೆ. ಆಗ ಜನರಿಗೆ ನಿಜವಾದ ರಸಾನುಭವ ಆಗುತ್ತದೆ ಎಂಬ ಹಿನ್ನೆಲೆಯಲ್ಲಿ ಗೀತ ಸಂಗೀತ 'ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು ಪ್ರಚಂಡ ಯಶಸ್ಸನ್ನು ಗಳಿಸಿತು. ಮುಂದೆ ಸಮ್ಮೇಳನಗಳಲ್ಲಿ ಖಾಯಂ ಆಗಿ ಈ ಬಗೆ ಕಾರ್ಯಕ್ರಮಗಳು ನಡೆದವು. ಕಾವ್ಯ ಕಾವೇರಿ ಕಾರ್ಯಕ್ರಮ ಈ ರೀತಿ ಹೊಸರೂಪ ತಳೆಯಿತು.

ಗೌರವ ಸದಸ್ಯತ್ವ ಪ್ರದಾನ : ಪರಿಷತ್ತಿನ ಅತ್ಯುನ್ನತ ಮನ್ನಣೆ ಎನ್ನಿಸಿದ ಗೌರವ ಸದಸ್ಯತ್ವನ್ನು ಗೊರುಚ ಅವರ ಅಧಿಕಾರವಧಿಯಲ್ಲಿ ಪು.ತಿ.ನ., ವಿ.ಕೃ.ಗೋಕಾಕ, ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿ, ಶಾಂತಾದೇವಿ ಮಾಳವಾಡ, ಎಸ್. ವಿ. ಪರಮೇಶ್ವರ ಭಟ್ಟ ಅವರಿಗೆ ನೀಡಲಾಯಿತು. ಗೌರವ ಸದಸ್ಯರ ಒಂದೊಂದು ವಾಚಿಕೆಯನ್ನು ಪ್ರಕಟಿಸಲಾಯಿತು. ಆ ಪೈಕಿ ನವಿಲುಗರಿ, ಸಿಂಧುಶ್ರೀ, ವ್ಯಾಕರಣತೀರ್ಥ, ಶಾಂತಕಿರಣ ವಾಚಿಕೆಗಳು ಪ್ರಕಟವಾದವು.

ಸಂಶೋಧನಾ ಕೇಂದ್ರ : ಪರಿಷತ್ತು ಪಾಂಡಿತ್ಯ ಪೋಷಣೆಗೆ ಪ್ರಮುಖವಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು

ಎಂಬುದು ಪರಿಷತ್ತಿನ ನಿಬಂಧನೆಗಳಲ್ಲಿದೆ. ಆದರೆ ಆ ಬಗ್ಗೆ ವಿಶೇಷ ಗಮನವಿತ್ತವರು ಕೆಲವೇ ಅಧ್ಯಕ್ಷರು. ಅವರಲ್ಲಿ ಗೊರುಚ ಒಬ್ಬರು. ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿದವರಿಗೆ ಹೆಚ್ಚಿನ ಅವಕಾಶ ಸೌಕರ್ಯಗಳನ್ನು ಕಲ್ಪಿಸಲು, ಎಂ. ಚಿದಾನಂದಮೂರ್ತಿ ಅವರನ್ನು ಗೌರವ ನಿರ್ದೇಶಕರನ್ನಾಗಿ ನೇಮಿಸಿ ಸಂಶೋಧನಾ ಕೇಂದ್ರವನ್ನು ಗೊರುಚ ಅವರು ಪ್ರಾರಂಭಿಸಿದರು. ಪ್ರತಿ ತಿಂಗಳು ಕೊನೆ ಗುರುವಾರದಲ್ಲಿ ಸಂಶೋಧನಾತ್ಮಕ ವಿಷಯಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಯಿತು.

ಪ್ರಚಾರ ಕಾರ್ಯಗಳು : ಯುವಜನರಿಗೆ ಸಾರ್ವಜನಿಕರಿಗೆ ತಲುಪುವ ರೀತಿಯಲ್ಲಿ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಕಲಾಕಾರ್ಯಕ್ರಮಗಳನ್ನು ಏರ್ಪಡಿಸುವುದು ಅಗತ್ಯ. ಈ ಬಗೆಯ ಕೆಲಸಗಳನ್ನು ಪರಿಷತ್ತು ಸಮ್ಮೇಳನಗಳಲ್ಲಿ ಮಾಡಿಕೊಂಡು ಬರುವುದರ ಜತೆಗೆ ಇತರ ದಿನಗಳಲ್ಲಿ ಕಾರ್ಯಕ್ರಮಗಳನ್ನು ನಿರಂತರವಾಗಿ ವ್ಯವಸ್ಥೆ ಮಾಡಿದೆ. ಇದರ ಅಂಗವಾಗಿ ಪ್ರದರ್ಶನ ಫಲಕಗಳ ಮೂಲಕ ಪರಿಷತ್ತನ್ನು ಪರಿಚಯಿಸಲು ವ್ಯವಸ್ಥೆ ಮಾಡಲಾಯಿತು. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ರಂಗಾಸಕ್ತಿ ಉಂಟುಮಾಡುವ ಕಾರ್ಯಕ್ರಮ-ಸ್ಪರ್ಧೆಗಳನ್ನು ರಾಜ್ಯಮಟ್ಟದಲ್ಲಿ ನಡೆಸಲಾಯಿತು.

ಉದಯೋನ್ಮುಖ ಸಾಹಿತಿಗಳಿಗೆ ಮಾರ್ಗದರ್ಶನ ಸ್ಫೂರ್ತಿ ದೊರಕಲು ಆಯ್ದ ವಿಷಯಗಳ ಬಗ್ಗೆ ಮಕ್ಕಳ ಸಾಹಿತ್ಯ ರಚನಾ ಕಮ್ಮಟ (ವರ್ಕ್‌ಷಾಪ್), ನಾಟಕ ರಚನಾ ಕಮ್ಮಟ, ಸಂಶೋಧನಾ ಕಮ್ಮಟ ಇತ್ಯಾದಿ ಕಮ್ಮಟಗಳನ್ನು ಆಯೋಜಿಸಿದ್ದು ಯುವಪೀಳಿಗೆಗೆ ನೆರವಾದ ಕಾರ್ಯಕ್ರಮಗಳಾದವು.

ಪರಿಷತ್ತು೮೦ ಮಹೋತ್ಸವ : ಯಾವುದೇ ವ್ಯಕ್ತಿ, ಸಂಸ್ಥೆಗೆ ೮೦ ವರ್ಷಗಳು ತುಂಬುವುದು ಸಾಮಾನ್ಯ ಸಂಗತಿಯಲ್ಲ. ದೀರ್ಘಕಾಲದ ಬಾಳಿಕೆಗೆ ಅದೊಂದು ಸಾಂಕೇತಿಕ ವರ್ಷ. ವ್ಯಕ್ತಿ ಜೀವನದಲ್ಲಿ ಸಹಸ್ರಚಂದ್ರದರ್ಶನವೆಂಬ ಕಾರ್ಯಕ್ರಮ ನಡೆಸುತ್ತಾರೆ. ಹಾಗೆ ೮೦ರ ಸಂಭ್ರಮ ಪರಿಷತ್ತಿಗೆ ಉಂಟಾಗಿದೆ ಎಂಬುದನ್ನು ಜನಕ್ಕೆ ತಿಳಿಸಲು ಗೊರುಚ ಅವರು 'ಪರಿಷತ್ತು ೮೦' ಮಹೋತ್ಸವವನ್ನು ೧೯೯೫ಮೇ ೩,೪,೫ ನೇ ತಾರೀಖುಗಳಲ್ಲಿ ಅದ್ದೂರಿಯಾಗಿ, ಅರ್ಥಪೂರ್ಣವಾಗಿ ಆಚರಿಸಿದರು.

ಈ ಸಂದರ್ಭದಲ್ಲಿ ಪರಿಷತ್ತಿನ ಕನ್ನಡ ನುಡಿ ವಿಶೇಷ ಸಂಚಿಕೆಯನ್ನು 'ಪರಿಷತ್ತು-೮೦' ಎಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ಈ ಶತಮಾನದ 'ಕನ್ನಡ ಕಾವ್ಯ'ವೆಂಬ ವಿಚಾರ ಸಂಕಿರಣ ಏರ್ಪಾಟಾಗಿತ್ತು.

ಪ್ರಕಟನೆಗಳು : ಸಾಮಾನ್ಯ ಜನರಿಗೆ ಉಪಯುಕ್ತವಾಗುವ ರೀತಿಯಲ್ಲಿ ಸರಳವಾಗಿ ಸಂಕ್ಷಿಪ್ತವಾಗಿ ವಿವಿಧ ವಿಷಯಗಳ ಬಗ್ಗೆ ೧೦೦ ಪುಸ್ತಕಗಳನ್ನು ಪ್ರಕಟಿಸುವ ಸಮುದಾಯ ಸಾಹಿತ್ಯಮಾಲೆ ಪ್ರಾರಂಭವಾಗಿ ಕೆಲವು ಪ್ರಕಟನೆಗಳು ಹೊರಬಿದ್ದವು.

ಇವರ ಅವಧಿಯಲ್ಲಿ ೨೫ಕ್ಕೂ ಮಿಕ್ಕ ಮಹಾಪ್ರಬಂಧಗಳ ಪ್ರಕಟನೆಯ ಜೊತೆಗೆ ಪರಿಷತ್ತಿನ ಪುಸ್ತಕಗಳ ಮರುಮುದ್ರಣಗಳು ನಡೆಯಿತು. ಬಹಳ ಚರ್ಚೆಗೆ ಒಳಗಾದ ಎ.ಎನ್. ಮೂರ್ತಿರಾಯರ 'ದೇವರು' ಪುಸ್ತಕದ ಇಂಗ್ಲಿಷ್ ಅನುವಾದ ಪ್ರಕಟನೆ ಆಯಿತು.

ಆರ್ಥಿಕೋನ್ನತಿ : ಜಿಲ್ಲಾ ಘಟಕಗಳಿಗೆ ಸ್ಥಳೀಯವಾಗಿ ಸಂಗ್ರಹಿಸುವ ದೇಣಿಗೆಗಳ ಜತೆಗೆ ಪರಿಷತ್ತಿನ ದತ್ತಿನಿಧಿ ಬಡ್ಡಿಯನ್ನು ಸ್ವಲ್ಪಮಟ್ಟಿಗೆ ನೀಡುವುದರಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಖಾಯಂ ಆಗಿ ಪ್ರತಿವರ್ಷ ಮಾಡುವುದು ಕಷ್ಟವಾಗುತ್ತಿತ್ತು. ಇದನ್ನು ಮನಗಂಡ ಗೊರುಚ ಅವರು ರಾಜ್ಯಸರ್ಕಾರದೊಂದಿಗೆ ವ್ಯವಹರಿಸಿ ಪ್ರತಿವರ್ಷವೂ ೧ ಲಕ್ಷರೂಗಳನ್ನು ಜಿಲ್ಲಾ ಘಟಕಗಳಿಗೆ ಅನುದಾನ ನೀಡುವಂತೆ ಮಾಡಿದರು. ಇದರಿಂದ ಜಿಲ್ಲಾಘಟಕಗಳೂ ಸಾಕಷ್ಟು ಕಾರ್ಯಕ್ರಮಗಳನ್ನು ನಡೆಯಲು ಸಾಧ್ಯವಾಯಿತು.

ಪುಸ್ತಕ ಪ್ರಾಧಿಕಾರ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳಿಗೆ ಪರಿಷತ್ತಿನ ಭವನದಲ್ಲಿ ಜಾಗವನ್ನು ಬಾಡಿಗೆಗೆ ಕೊಟ್ಟು

ಪರಿಷತ್ತಿಗೆ ಮಾಸಿಕ ಆದಾಯ ಬರುವಂತೆ ಮಾಡಿದರು. ಈ ಹಣವನ್ನು ನಿರ್ವಹಣೆಯ ವೆಚ್ಚಕ್ಕೆ ಬಳಸಲಾಯಿತು.

ಸಮ್ಮೇಳನಗಳು : ಗೊರುಚ ಅವರ ಕಾಲದಲ್ಲಿ ೩ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ನಡೆದವು.


ಸಮ್ಮೇಳನ	ಸ್ಥಳ	ಸಮ್ಮೇಳನ ಅಧ್ಯಕ್ಷರು	ವರ್ಷ
೬೨	ಕೊಪ್ಪಳ	ಸಿಂಪಿಲಿಂಗಣ್ಣ	೧೯೯೩
೬೩	ಮಂಡ್ಯ	ಚದುರಂಗ	೧೯೯೪
೬೪	ಮುಧೋಳ	ಹೆಚ್. ಎಲ್. ನಾಗೇಗೌಡ	೧೯೯೫

ಕೆಲವು ನೂತನ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದರ ಜತೆಗೆ ಪರಿಷತ್ತಿನ ಆರ್ಥಿಕ ಭದ್ರತೆಗೆ ವಿಶೇಷ ಗಮನವನ್ನು ಕೊಟ್ಟಿದ್ದು ಗೊರುಚ ಅವರ ಅಧಿಕಾರಾವಧಿಯಲ್ಲಿ ಗಮನಿಸುವ ವಿಚಾರವಾಗಿದೆ.

ಪರಿಷತ್ತಿನ ಅಧ್ಯಕ್ಷರು ಕಾರ್ಯನಿಮಿತ್ತ, ಪ್ರವಾಸನಿಮಿತ್ತ, ಅಥವಾ ಇತರೇ ಕಾರಣಗಳಿಗಾಗಿ ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಪರಿಷತ್ತಿಗೆ ಬಂದು ಹೋಗುವುದೇ ಹೆಚ್ಚು. ಆದರೆ ಪರಿಷತ್ತಿನಲ್ಲೇ ಹೆಚ್ಚು ವೇಳೆ ಇದ್ದು ರಜಾ ದಿನಗಳಲ್ಲೂ ಪರಿಷತ್ತಿನಲ್ಲಿ ಕಾರ್ಯ ನಿರ್ವಹಣೆ ಮಾಡುವ ಅಧ್ಯಕ್ಷರೂ ಕೆಲವರು ಕಂಡು ಬರುತ್ತಾರೆ. ಅಂಥ ಕಾರ್ಯನಿಷ್ಠ ಕ್ರಿಯಾಶಾಲಿ ಅಧ್ಯಕ್ಷರಲ್ಲಿ ಒಬ್ಬರು ಗೊರುಚ ಅವರು. ಎಷ್ಟೋ ವೇಳೆ ಅನಾರೋಗ್ಯವನ್ನೂ ಲೆಕ್ಕಿಸದೆ ಪರಿಷತ್ತಿನ ಕಾರ್ಯ ನಿರ್ವಹಣೆಯಲ್ಲಿ ಭಾಗವಹಿಸಿರುವುದು ಅವರ ವೈಶಿಷ್ಟ್ಯವಾಗಿದೆ. ಜಿ. ನಾರಾಯಣರಂತೆ ತ್ರೈಮಾಸಿಕ ಯೋಜನೆಯನ್ನು ಸಿದ್ಧಪಡಿಸಿ ಪರಿಷತ್ತಿನ ಸೇವೆಗೆ ಕಾರ್ಯಪ್ರವೃತ್ತರಾಗಿದ್ದದ್ದು ಗಮನಾರ್ಹಸಂಗತಿ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೧೯

ಅಧ್ಯಕ್ಷರು : ಸಾ. ಶಿ. ಮರುಳಯ್ಯ (೧೯೯೫–೧೯೯೮)



ಜೀವನ :

ಕವಿಗಳೂ ವಿಮರ್ಶಕರೂ ಅಧ್ಯಾಪಕರೂ ಆಗಿರುವ ಸಾ.ಶಿ. ಮರುಳಯ್ಯ ಅವರು ತುಮಕೂರು ಜಿಲ್ಲೆಯ ಚಿಕ್ಕನಾಯನಹಳ್ಳಿ ತಾಲ್ಲೂಕಿನ ಸಾಸಲು ಗ್ರಾಮದಲ್ಲಿ ೨೮–೧–೧೯೩೧ರಲ್ಲಿ ಶಿವರುದ್ರಯ್ಯ–ಸಿದ್ದಮ್ಮ ದಂಪತಿಗಳಿಗೆ ಸುಪುತ್ರರಾಗಿ ಜನಿಸಿದರು. ಬಾಲ್ಯದ ವಿದ್ಯಾಭ್ಯಾಸವನ್ನು ಚಿಕ್ಕನಾಯಕನಹಳ್ಳಿಯಲ್ಲಿ ಮುಗಿಸಿದ ನಂತರ, ಕಾಲೇಜು ವಿದ್ಯಾಭ್ಯಾಸ ಮೈಸೂರಿನಲ್ಲಿ ಮುಂದುವರೆಸಿ ೧೯೫೫ರಲ್ಲಿ ಬಿ.ಎ. ಆನರ್ಸ್ ಪದವಿಯನ್ನು, ೧೯೫೬ರಲ್ಲಿ ಎಂ.ಎ. ಪದವಿಯನ್ನು ಗಳಿಸಿದರು. ಕಾಲೇಜು ಅಧ್ಯಾಪಕರಾಗಿ ಉದ್ಯೋಗಕ್ಕೆ ಸೇರಿದ ಇವರು ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

ರಾಜ್ಯ ಆಡಳಿತ ಭಾಷಾ(ವಿಧಾಯೀ) ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ೧೯೭೬-೧೯೮೩ರಲ್ಲಿ ವಿಶ್ವಕೋಶದ ಪ್ರಧಾನ ಸಂಪಾದಕರಾಗಿದ್ದರು. ೧೯೮೯-೧೯೯೦ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದ ಇವರು, ೧೯೯೫-೧೯೯೮ರ ಅವಧಿಯಲ್ಲಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು.

ಅನೇಕ ಶ್ರೇಷ್ಠ ಕೃತಿಗಳನ್ನು ರಚಿಸಿರುವ ಇವರ 'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ' ಕೃತಿಗೆ ೧೯೭೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ದೊರೆತಿದೆ. ಕೆಂಗನಕಲ್ಲು ಕೃತಿಗೆ ರಾಜ್ಯ ಸರ್ಕಾರ ಪ್ರಶಸ್ತಿ ಬಂದಿದೆ. ಭಾಸನ ಮಕ್ಕಳು ವಿಮರ್ಶಾ ಕೃತಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ ದೊರೆತಿದೆ.

ಕವಿತೆ, ವಿಮರ್ಶೆ, ನಾಟಕ, ಪ್ರಬಂಧ, ಜೀವನ ಚರಿತ್ರೆಗಳನ್ನು ರಚಿಸಿದ ಇವರು ಶಿವತಾಂಡವ, ಘೋಷವತಿ, ಬೃಂದಾವನಲೀಲೆ, ರಾಸಲೀಲೆ, ರೂಪಸಿ, ಚೈತ್ರಜ್ಯೋತಿ, ನನ್ನ ಕವನಗಳು, ಬಾರೋ ಮೈಲಾರಕೆ, ಸುರಭಿ, ಮರೀಚಿಕೆ, ವಿಯಜವಾತಾಪಿ, ಶಿವಲೀಲೆ, ಹೇಮಕೂಟ, ಮನಿಷಾ, ಅನುಶೀಲನೆ, ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತರು ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ಸಾಧನೆ :

ಪರಿಷತ್ತಿಗೆ ಸೌಕರ್ಯಗಳ ವ್ಯವಸ್ಥೆ : ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಕಚೇರಿಯ ಅಥವಾ ಕನ್ನಡದ ಆಧುನೀಕರಣ ಎಲ್ಲ ಅಧ್ಯಕ್ಷರ ಕಾಲದಲ್ಲೂ ನಡೆದಿಲ್ಲ. ಬೆಳ್ಳಾವೆ ವೆಂಕಟಪ್ಪನವರು ಕಾರ್ಯದರ್ಶಿಗಳಾಗಿದ್ದ ಕಾಲದಲ್ಲಿ ಅಂದರೆ ಕರ್ಪೂರ ಶ್ರೀನಿವಾಸರಾಯರ ಕಾಲದಲ್ಲಿ ಮಿರ್ಜಾ ಕೋಣೆಗಳ ಗೋಡೆ ಒಡೆಸಿ ಸಭಾಂಗಣ ನಿರ್ಮಿಸಿದ್ದೇ ಮೊದಲ ಸುಧಾರಣೆ ಎನ್ನಬಹುದು. ವಿಸೀ ಹೇಳುವ ಹಾಗೆ, ಪರಿಷತ್ತಿನ ವೇದಿಕೆ ಸಜ್ಜೀಕರಣ ೨ನೇ ಸುಧಾರಣೆ, ಜಿ. ನಾರಾಯಣರ ಕಾಲದಲ್ಲಿ ಸಾಕ್ಷ್ಯ ಚಿತ್ರನಿರ್ಮಾಣಕ್ಕೆ, ಧ್ವನಿಮುದ್ರಣ ಕಾರ್ಯಕ್ಕೆ ವ್ಯವಸ್ಥೆ ಮಾಡಿದ್ದು ಮತ್ತೊಂದು ಸುಧಾರಣೆ. ಹೀಗೆ ಕೆಲವೇ ಅಧ್ಯಕ್ಷರ ಕಾಲದಲ್ಲಿ ಕಟ್ಟಡ - ಕಚೇರಿಗಳ ನವೀಕರಣ ಕಾರ್ಯ ನಡೆದಿದೆ. ಸಾ.ಶಿ. ಮರುಳಯ್ಯನವರ ಅವಧಿಯಲ್ಲಿ ತಮ್ಮ ಮಗಳು ಅಳಿಯಂದಿರಿಂದ ಕಂಪ್ಯೂಟರ್, ಲೇಸರ್ ಪ್ರಿಂಟರ್‌ಕಿಟ್‌ಗಳನ್ನು ಪರಿಷತ್ತಿಗೆ ಕೊಡಿಸಿದ್ದು ಒಂದು ವಿನೂತನ ಹೆಜ್ಜೆಯಾಗಿದೆ. ಪ್ರಕಟನೆಗಳ ಕಾರ್ಯ ಶೀಘ್ರವಾಗಿ ಅಚ್ಚುಕಟ್ಟಾಗಿ ನಡೆಯಲು ಇದು ಸಹಕಾರಿಯಾಯಿತು. ಅಚ್ಚುಕೂಟಕ್ಕೆ ಆಧುನಿಕ ಯಂತ್ರೋಪಕರಣ ತರಿಸಿದ ಇನ್ನೊಬ್ಬ ಅಧ್ಯಕ್ಷರು ಎಂದರೆ ಪುಂಡಲೀಕ ಹಾಲಂಬಿ ಅವರು. ಪರಿಷತ್ತಿನ ಅಧ್ಯಕ್ಷರು ಕರ್ನಾಟಕಾದ್ಯಂತ ಕಾರ್ಯಕ್ರಮಗಳಿಗೆ, ಕರ್ತವ್ಯ ನಿರ್ವಹಣೆಗೆ ಸಮ್ಮೇಳನಕ್ಕೆ ಸಂಚರಿಸುವ ಅನಿವಾರ್ಯತೆ ಕಂಡುಬಂದದ್ದರಿಂದ ಸಂಸ್ಥೆಗೆ ತನ್ನದೇ ಆದ ವಾಹನವಿರಬೇಕೆಂದು ಮೊದಲು ಯೋಚಿಸಿದವರು ಸಾ. ಶಿ. ಮರಳಯ್ಯನವರು. ಅದರ ಫಲವಾಗಿ ಅಧ್ಯಕ್ಷರ ಓಡಾಟಕ್ಕೆಂದು ೧೯೯೬ರಲ್ಲಿ ಅಂಬಾಸಿಡರ್ ಡಿಸ್ಯೆಲ್ ಎಂಜಿನ್ ಕಾರನ್ನು ಪರಿಷತ್ತಿಗಾಗಿ ಕೊಂಡರು.

ಪರಿಷತ್ತಿಗೆ ನೀರಿನ ಕೊರತೆ ನಿವಾರಿಸಲು ಕೊಳವೆ ಬಾವಿ ತೋಡಿಸಿ ಮೋಟರನ್ನು ಅಳವಡಿಸಲಾಯಿತು. ಪರಿಷತ್ತಿನ ಧ್ವಜ ಲಾಂಛನದ ಬಗ್ಗೆ ಬಿಎಂಶ್ರೀ ಚಿಂತಿಸಿದಂತೆ ಮರುಳಯ್ಯನವರು ಬಿ.ಕೆ. ಶ್ರೀನಿವಾಸವರ್ಮ ಅವರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಾತಿನಿಧಿಕ ಸಂಕೇತದಂತೆ ಕರ್ನಾಟಕಮಾತೆಯ ವರ್ಣತೈಲಚಿತ್ರವನ್ನು ಬರೆಸಿದರು.

ಸಿಬ್ಬಂದಿ ಸಂಬಳಕ್ಕೆ ಸರ್ಕಾರದ ಅನುದಾನ: ಯಾವುದೇ ಖಾಸಗೀ ಸಂಸ್ಥೆಯಲ್ಲಿ ಸಂಬಳ ಸಾರಿಗೆಯನ್ನು ಸರ್ಕಾರದ ಸಂಸ್ಥೆಗಳಲ್ಲಿ ಕೊಡುವಂತೆ ಕೊಡಲು ಸಾಧ್ಯವಿಲ್ಲ. ಇದ್ದರೆ ಅದು ಅಪರೂಪದ ಉದಾಹರಣೆ ಅಷ್ಟೆ.

ಸಾಹಿತ್ಯ ಪರಿಷತ್ತು ಒಂದು ಕಾಲದಲ್ಲಿ ಮಿತ ಸದಸ್ಯರು ಸೀಮಿತ ಚಟುವಟಿಕೆಗಳಿಗೆ ತಮ್ಮ ಕೈಯಿಂದ ಕಾಸು

ಹಾಕಿಕೊಂಡು ಸಂಸ್ಥೆಯ ಕೆಲಸ ಮಾಡುತ್ತಿದ್ದ ಜನ. (ಅವರೆಲ್ಲ ಸಾಕಷ್ಟು ಅನುಕೂಲವಂತರಾಗಿದ್ದರು ಎಂದರೆ ತಪ್ಪಿಲ್ಲ) ಪರಿಷತ್ತಿನ ಸಿಬ್ಬಂದಿ ಎಂದರೆ ಒಬ್ಬಿಬ್ಬರು ನೌಕರರು ಅಷ್ಟೆ. ಪರಿಷತ್ತಿನ ಪ್ರಾರಂಭಕಾಲದ ಚಿತ್ರ ಇದು. ಆದರೆ ಪರಿಷತ್ತು ಬೆಳೆದು ಬಂದಂತೆಲ್ಲಾ ಜನರೂ ಹೆಚ್ಚಿದರು. ನೌಕರರ ಸಂಬಳ ಸಾರಿಗೆ ವೆಚ್ಚಗಳು ಅಧಿಕಗೊಳ್ಳುತ್ತಾ ಬಂದವು. ಹೀಗಾಗಿ ಪರಿಸ್ಥಿತಿ ನಿಭಾಯಿಸುವುದು ಕಷ್ಟವಾಯಿತು. ಕೆಲವೊಮ್ಮೆ ಸಂಬಳ ಕೊಡಲು ಪರಿಷತ್ತಿನಲ್ಲೇ ಹಣ ಇರುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಪರಿಷತ್ತಿನ ಅಧ್ಯಕ್ಷರು ಅಥವಾ ಗೌರವ ಕಾರ್ಯದರ್ಶಿಗಳು ತಮ್ಮ ವೈಯಕ್ತಿಕ ನೆಲೆಯಲ್ಲಿ ಸಾಲತಂದು ಸಿಬ್ಬಂದಿಗೆ ಸಂಬಳ ಕೊಟ್ಟಿದ್ದಾರೆ. ಇಂಥ ಪರಿಸ್ಥಿತಿ ತಪ್ಪಬೇಕೆಂದು ಪರಿಷತ್ತನ್ನು ಸರ್ಕಾರದ ಅನುದಾನದ ಸಂಹಿತೆಗೆ ಒಳಗಾಗಿಸಬೇಕೆಂದು ಮೊದಲಿನಿಂದಲೂ ಪ್ರಯತ್ನ ಮಾಡಲಾಗುತ್ತಿತ್ತು. ಆದರೆ ಆ ಪ್ರಯತ್ನ ಮರುಳಯ್ಯನವರ ಕಾಲದಲ್ಲಿ ಫಲಿಸಿತು. ೧೯೯೬ ಜೂನ್ ೧ ರಿಂದ ಜಾರಿಗೆ ಬಂದಿತು. ಪರಿಷತ್ತಿನ ೬೨ ಸಿಬ್ಬಂದಿಗಳಿಗೆ ಇದರಿಂದ ಅನುಕೂಲವಾಯಿತು.

ಪುಸ್ತಕ ಪ್ರಕಟನಾ ದತ್ತಿಗಳು : ಸುಮಾರು ಅರ್ಧಶಮಾತನದ ವಿದ್ವಾಂಸರ ಪರಿಶ್ರಮದ ಫಲವಾದ ಪರಿಷತ್ತಿನ ಕನ್ನಡ ನಿಘಂಟಿನ ೮ನೇ ಸಂಪುಟ ಮರುಳಯ್ಯನವರ ಕಾಲದಲ್ಲಿ ಪೂರ್ಣಗೊಂಡು ೨೯-೧೧-೧೯೯೫ರಲ್ಲಿ ಬಿಡುಗಡೆ ಆಯಿತು. ೮ ಸಂಪುಟಗಳ ಕನ್ನಡ ನಿಘಂಟು ಪರಿಷತ್ತಿನ ಹೆಸರನ್ನು ಆಚಂದ್ರಾರ್ಕಪರ್ಯಂತ ಸ್ಥಿರಗೊಳಿಸಿದ ಪ್ರಕಟನೆ ಆಗಿದೆ.

ದತ್ತಿದಾನಿಗಳು ಸಾಮಾನ್ಯವಾಗಿ ಉಪನ್ಯಾಸಗಳ ವ್ಯವಸ್ಥೆಗೆ ಬರುತ್ತಿದ್ದವು. ಹೆಚ್ಚು ಆದರೆ ಪುಸ್ತಕ ಪ್ರಕಟಿಸುವುದಕ್ಕೆ ದತ್ತಿ ಇಡುವಂತೆ ಮಾಡಿದ್ದು ವಿನೂತನ ಪ್ರಯತ್ನವಾಗಿತ್ತು. ಪ್ರತಿವರ್ಷ ಪುಸ್ತಕವನ್ನು ಪ್ರಕಟಿಸಲು ಅಗತ್ಯವಾದಷ್ಟು ಬಡ್ಡಿ ಹಣ ಬರುವಂತೆ ದೊಡ್ಡಮೊತ್ತದ ಪುಸ್ತಕ ದತ್ತಿನಿಧಿ ಇಡಿಸುವುದನ್ನು ಪ್ರಾರಂಭಮಾಡಿದವರು ಸಾತಿ ಮರುಳಯ್ಯನವರು. ರುದ್ರಾಕ್ಷಿಮಠದ ಸ್ವಾಮಿಗಳು ಪುಸ್ತಕ ದತ್ತಿನಿಧಿಯನ್ನು ಮೊದಲಿಗೆ ಇಟ್ಟರು. ಅನಂತರ ಭೂಪಾಲಂ ಚಂದ್ರಶೇಖರಯ್ಯನವರ ಪುಸ್ತಕ ಪ್ರಕಟನ ದತ್ತಿ ಬಂದಿತು. ಇವೆರಡು ಮರುಳಯ್ಯನವರ ಪ್ರಯತ್ನದ ಫಲ.

ಕನ್ನಡ ವರನಟ ರಾಜಕುಮಾರ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದಾಗ ಅದರ ಮೊತ್ತ ೧ ಲಕ್ಷವನ್ನು ಕಲಾಪ್ರಕಾರದ ಗ್ರಂಥ ಪ್ರಕಟನೆಗಾಗಿ ಪರಿಷತ್ತಿಗೆ ನೀಡಲಾಯಿತು. ಇದೂ ಒಂದು ಪುಸ್ತಕ ಪ್ರಕಟನಾ ದತ್ತಿನಿಧಿ.

ಕಾರ್ಯಕ್ರಮಗಳು : ಯಥಾಪ್ರಕಾರ ಸಾಹಿತ್ಯದ ನಾನಾ ವಿಷಯಗಳ ಬಗ್ಗೆ ದತ್ತಿನಿಧಿಗಳ ಭಾಷಣ ಮಾಲೆ ಇವರ ಅವಧಿಯಲ್ಲಿ ನಡೆದವು. ಈ ಪೈಕಿ ಉಪೇಕ್ಷಿತ ಸಾಹಿತ್ಯವನ್ನು ಕುರಿತು ಎಂದರೆ ಕನ್ನಡದಲ್ಲಿರುವ ಟೀಕುಸಾಹಿತ್ಯ, ಉದ್ಧರಣೆ ಸಾಹಿತ್ಯ, ಸೋಬಾನೆ ಸಾಹಿತ್ಯ ಮೊದಲಾದ ಶಾಸ್ತ್ರ ಸಾಹಿತ್ಯ - ಸಂಪ್ರದಾಯ ಸಾಹಿತ್ಯ ಕುರಿತು ಉಪನ್ಯಾಸಮಾಲೆ ಏರ್ಪಡಿಸಿ ಅವುಗಳ ಪ್ರಕಟನೆಗಳನ್ನು ಕೈಗೊಳ್ಳಲಾಯಿತು. ಕಾವ್ಯಕಾವೇರಿ ಎಂಬ ಗೀತ ಗಾಯನ ಕಾರ್ಯಕ್ರಮವನ್ನು ಜಿಲ್ಲಾ ಕೇಂದ್ರಗಳಿಗೂ ವಿಸ್ತರಿಸಲಾಯಿತು.

೬೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾಸನದಲ್ಲಿ ಚನ್ನವೀರಕಣವಿ ಅವರ ಅಧ್ಯಕ್ಷತೆಯಲ್ಲೂ, ೬೬ನೇ ಸಮ್ಮೇಳನ ಮಂಗಳೂರಿನಲ್ಲಿ ಕಯ್ಯಾರ ಕಿಞ್ಞಣ್ಣರೈ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಜಿವಿ ಅತ್ರಿ ನೀಡಿದ ಸಚಿತ್ರ ಚೆಲುವ ಕನ್ನಡ ನಾಡು ಎಂಬ ಧ್ವನಿಸುರುಳಿ ಪರಿಷತ್ತಿನಿಂದ ಬಿಡುಗಡೆಮಾಡಿತು. ಹೀಗೆ ಮರುಳಯ್ಯನವರು ಕೆಲವು ಹೊಸ ಕೊಡುಗೆಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೨೦

ಎನ್. ಬಸವಾರಾಧ್ಯ (೧೯೯೮–೨೦೦೧)



ಜೀವನ :

ನಿಘಂಟು ತಜ್ಞರೂ ಹಳಗನ್ನಡ ವಿದ್ವಾಂಸರೂ ವೀರಶೈವ ಸಾಹಿತ್ಯ ಪರಿಣತರೂ ಆದ ಎನ್. ಬಸವಾರಾಧ್ಯರು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ನಾರಸಿಂಹನಹಳ್ಳಿಯಲ್ಲಿ ನಂಜುಂಡಾರಾಧ್ಯ-ಗಿರಿಜಮ್ಮ ದಂಪತಿಗಳ ಸುಪುತ್ರರಾಗಿ ೨೦-೭-೧೯೨೬ರಲ್ಲಿ ಜನಿಸಿದರು. ಗೌರಿಬಿದನೂರಿನಲ್ಲಿ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸ ಮುಗಿಸಿ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಬೆಂಗಳೂರು ಕೋಟೆ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಡಿಗ್ರಿ ವ್ಯಾಸಂಗಕ್ಕೆ ಮೈಸೂರು ಮಹಾರಾಜ ಕಾಲೇಜಿಗೆ ಸೇರಿದರು. ೧೯೫೦ರಲ್ಲಿ ಎಂ.ಎ. ಪಾಸಾದರು.

ಅನಂತರ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸ್ನಾತಕ ವಿಶೇಷ ತಜ್ಞರಾಗಿ ಸೇರಿದ ಅವರು ಪರಿಷತ್ತಿನ ಕನ್ನಡ ನಿಘಂಟು ಯೋಜನೆಯಲ್ಲಿ ಉಪಸಂಪಾದಕ. ಸಂಪಾದಕ, ಮುಖ್ಯ ಸಂಪಾದಕ, ಪ್ರಧಾನ ಸಂಪಾದಕ ಹುದ್ದೆಗಳನ್ನು ಅಲಂಕರಿಸಿ ಪರಿಷತ್ತಿನ ೮ ಸಂಪುಟಗಳಲ್ಲಿ ನಿರಂತರವಾಗಿ ಕೆಲಸ ಮಾಡಿದ ವ್ಯಕ್ತಿಯಾದರು. ೧೯೮೬ರಲ್ಲಿ ನಿವೃತ್ತರಾದರು.

ಮೈಸೂರು ವಿಶ್ವವಿದ್ಯಾನಿಲಯ, ಸಾರ್ವಜನಿಕ ಶಿಕ್ಷಣ ಇಲಾಖೇ, ಕನ್ನಡ ಪಂಡಿತ ಪರೀಕ್ಷಾ ಮಂಡಳಿ, ಕಾಮರಾಜ ವಿಶ್ವವಿದ್ಯಾನಿಲಯದಲ್ಲಿ ವಿಶೇಷ ತಜ್ಞರು. ಇವರು ಪಠ್ಯಪುಸ್ತಕ ಸಮಿತಿ ಅಧ್ಯಕ್ಷರಾಗಿ ೧೯೮೦ರಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡದಲ್ಲಿ ಕಚೇರಿ ಕೈಪಿಡಿ, ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಸೇವೆಗೆ ಮೆಚ್ಚಿ ಅನೇಕ ಸಂಘಸಂಸ್ಥೆಗಳು ಸನ್ಮಾನಿಸಿವೆ. ಪ್ರಶಸ್ತಿಗಳನ್ನು ನೀಡಿವೆ. ಭಾರತ ಭಾಷಾಭೂಷಣ, ಶಿವರತ್ನ, ಶಿವಕಮಲ ಪ್ರಶಸ್ತಿಗಳು ಪ್ರಾಪ್ತವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವೀರಶೈವ ಸಾಹಿತ್ಯ ಶ್ರೇಷ್ಠ ಕೃತಿ ಪ್ರಶಸ್ತಿ, ದೇವರಾಜ ಬಹದ್ದೂರ್ ಬಹುಮಾನ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳು ಇವರಿಗೆ ದೊರೆತಿವೆ.

೨೦ನೇ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ (೧೯೯೮-೨೦೦೧) ಆಯ್ಕೆಯಾದ ಇವರು ಉಪಾಯನ, ದೇವಗಂಗೆ, ಅಮರವಾಣಿ, ಅಭಿನಂದನ ಗ್ರಂಥಗಳನ್ನು ಹೊರತಂದಿದ್ದಾರೆ. ಹಳಗನ್ನಡ ನಿಘಂಟು, ಸಚಿತ್ರ ಶಾಲಾ ನಿಘಂಟು (ಭಾಷಾಂತರ), ಕನ್ನಡ ಗದ್ಯಾವಲೋಕನ, ಶತಕ ಸಾಂಗತ್ಯಗಳು, ತ್ರಿಪುರ ದಹನ ಸಾಂಗತ್ಯ, ಹರಿಶ್ಚಂದ್ರ ಕಾವ್ಯ, ತೊರವೆ ರಾಮಾಯಣ ಗ್ರಂಥಗಳನ್ನು ಸಂಪಾದಿಸಿದ್ದಾರೆ. ೫೦ಕ್ಕೂ ಹೆಚ್ಚು ಸಂಪಾದಿತ ಕೃತಿಗಳನ್ನು, ೧೦೦ಕ್ಕೂ ಹೆಚ್ಚು ವಿದ್ವತ್ಪೂರ್ಣ ಲೇಖನಗಳನ್ನು ಬರೆದಿದ್ದಾರೆ.

ಕನ್ನಡ ನಿಘಂಟು ನಿಷ್ಣಾತರಾದ ಇವರು ದಿನಾಂಕ ೬-೧೨-೨೦೧೩ರಲ್ಲಿ ನಿಧನರಾದರು.

ಸಾಧನೆ :

ಪರಿಷತ್ತಿನ ಭವನಗಳು : ಕನ್ನಡ ಸಾಹಿತ್ಯ ಪರಿಷತ್ತಿನ, ಜಿಲ್ಲಾ ಘಟಕಗಳು ಮತ್ತು ತಾಲ್ಲೂಕು ಘಟಕಗಳಿಗೆ ತಮ್ಮದೇ ಆದ ಸ್ವಂತ ಕಟ್ಟಡಗಳು ಇರಬೇಕು ಎಂಬುದು ಮೊದಲಿನಿಂದಲೂ ಎಲ್ಲರೂ ಬಯಸುತ್ತಿರುವ ವಿಚಾರ. ಇದಕ್ಕೆ ಅನುಗುಣವಾಗಿ ಕೆಲವು ಜಿಲ್ಲಾ ತಾಲ್ಲೂಕು ಘಟಕಗಳು ಸ್ಥಳೀಯ ವ್ಯಕ್ತಿಗಳ ಹಾಗೂ ಸಂಸ್ಥೆಗಳ ನೆರವಿನಿಂದ ಸ್ವಂತ ನಿವೇಶನ ಪರಿಷತ್ತಿನ ಭವನಗಳು ಆಯಾ ಜಿಲ್ಲೆಯ / ತಾಲ್ಲೂಕಿನ ಅಧ್ಯಕ್ಷರ ಕೈವಾಡದಿಂದ ಖಾಸಗೀ ಟ್ರಸ್ಟಿಗೆ ಸೇರಿ ಪರಿಷತ್ತಿನ ಕೈತಪ್ಪಿ ಹೋಗಿವೆ. ಇದಕ್ಕೆ ನಿಯಮಗಳಲ್ಲಿ ಕಂಡು ಬರುವ ಲೋಪಗಳೇ ಕಾರಣವೆಂದು ತಿಳಿದು ಬಸವಾರಾಧ್ಯರು ಜಿಲ್ಲಾ / ತಾಲ್ಲೂಕು ಭವನಗಳ ಬಗ್ಗೆ ಕಟ್ಟಡದ ದಾಖಲೆ – ಕಟ್ಟಡ ವಿನ್ಯಾಸ ಹಕ್ಕುದಾರಿಕೆ ಮೊದಲಾದ ವಿಷಯಗಳ ಬಗ್ಗೆ ಉಪನಿಬಂಧನೆಗಳನ್ನು ರಚಿಸಿ ಜಾರಿಗೆ ತಂದರು.

ಪರಿಷನ್ಮಂದಿರದಿಂದ ಸುಧಾರಣೆ : ಹಳೆಯ ಕಟ್ಟಡ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಆಧುನಿಕ ಯಂತ್ರಗಳನ್ನು ಅಳವಡಿಸಿ ಧ್ವನಿ ವ್ಯವಸ್ಥೆಯನ್ನು ಸುಸಜ್ಜಿತಗೊಳಿಸಲಾಯಿತು. ಆಂತರಿಕ ದೂರವಾಣಿ ವ್ಯವಸ್ಥೆಯ ಮೂಲಕ ಎಲ್ಲಾ ವಿಭಾಗಗಳಿಗೂ ಸಂಪರ್ಕ ಇರುವಂತೆ ಮಾಡಲಾಯಿತು.

ಆರ್ಥಿಕ ಸುಧಾರಣೆ : ಪರಿಷತ್ತಿಗೆ ಆದಾಯ ಬರುವುದಕ್ಕಾಗಿ ವಜ್ರಮಹೋತ್ಸವ ಕಟ್ಟಡದ ನೆಲಮಹಡಿಯ ಸ್ವಲ್ಪಭಾಗವನ್ನು ಮೊದಲು ಪುಸ್ತಕ ಮಾರಾಟವಿದ್ದ ಭಾಗವನ್ನು ಬ್ಯಾಂಕೊಂದಕ್ಕೆ ಬಾಡಿಗೆಗೆ ಕೊಟ್ಟು ಪರಿಷತ್ತಿಗೆ, ವರಮಾನ ಬರುವಂತೆ ಮಾಡಿದರು. ನಿಘಂಟುಗಳ ಪರಿಷ್ಕೃತ ಮುದ್ರಣದ ಆವೃತ್ತಿ ತರಲು ಮತ್ತು ಆಯ್ದ ಪುಸ್ತಕಗಳನ್ನು ಪ್ರಕಟಿಸಲು ಯೋಜನೆಯೊಂದನ್ನು ಸಿದ್ಧಪಡಿಸಿ ಸರ್ಕಾರದಿಂದ ೨ ಕಂತುಗಳಲ್ಲಿ ೧ ಕೋಟಿ ರೂಪಾಯಿಗಳ ಧನ ಸಹಾಯವನ್ನು ಪಡೆದರು.

ಅಚ್ಚುಕೂಟದ ಪ್ರಗತಿ : ಮುದ್ರಣ ತಂತ್ರಜ್ಞಾನ ಬಹಳವಾಗಿ ಮುಂದುವರೆದು ಆಧುನಿಕ ಆಫ್‌ಸೆಟ್ ಮುದ್ರಣಗಳು ಬಂದಿದ್ದ ಕಾಲದಲ್ಲಿ, ಪರಿಷತ್ತಿನ ಅಚ್ಚುಕೂಟವು ಮೊಳೆಯಚ್ಚು ಸಿಲಿಂಡರ್ ಟ್ರೆಡಲ್‌ಗಳ ಹಳೆಯ ಯಂತ್ರಗಳ ಅಚ್ಚುಕೂಟವಾಗಿತ್ತು. ಬಸವರಾಧ್ಯರು ಹಳೆಯ ತಂತ್ರಜ್ಞಾನದಿಂದ ಅಚ್ಚುಕೂಟವನ್ನು ಮುಕ್ತಗೊಳಿಸಿ ಆಧುನಿಕ ಯಂತ್ರಗಳನ್ನು ಅಳವಡಿಸಿದರು. ಬಿಎಂಶ್ರೀ ಅಚ್ಚುಕೂಟ ಆಫ್‌ಸೆಟ್ ಎಂಬ ನೂತನ ಅಭಿದಾನ ನೀಡಿದರು. ಪರಿಷತ್ತಿಗೆ ಆದಾಯ ಮೂಲವಾಗಲಿ ಎಂಬ ಆಶಯದಿಂದಲೂ ಪರಿಷತ್ತಿನ ಮುದ್ರಣದ ಅಗತ್ಯಗಳನ್ನು ಶೀಘ್ರದಲ್ಲಿ ಪೂರೈಸಲೂ ಈ ಬದಲಾವಣೆಗಳನ್ನು ಮಾಡಿದರು.

ಪ್ರಕಟನೆಗಳು : ವಿದ್ವಾಂಸರಿಗೆ ಉಪಯುಕ್ತವೆನಿಸಿದ ಜ ಟಿ ನಿಘಂಟು ಇವರ ಕಾಲದಲ್ಲಿ ಅಚ್ಚಾಗಿ ಬಿಡುಗಡೆ ಆಯಿತು. ಕನಕಪುರ ಸಮ್ಮೇಳನದ ಸಂದರ್ಭದಲ್ಲಿ ೭೫ ಗ್ರಂಥಗಳನ್ನು ಪ್ರಕಟಿಸಲಾಯಿತು. ಇದರ ಕಾಗದ ವೆಚ್ಚವನ್ನು ಸಮ್ಮೇಳನದ ಸ್ವಾಗತ ಸಮಿತಿಯಿಂದ ಪಡೆಯಲಾಯಿತು. ಪರಿಷತ್ತಿಗೆ ಅಷ್ಟರಮಟ್ಟಿಗೆ ಆರ್ಥಿಕ ಲಾಭ ಆಯಿತು.

ಪ್ರತಿಮೆಯ ಸ್ಥಾಪನೆ: ವಸ್ತು ಸಂಗ್ರಹಾಲಯದಲ್ಲಿದ್ದ ಶ್ರೀಕೃಷ್ಣರಾಜ ಒಡೆಯರ್ ಪ್ರತಿಮೆಯನ್ನು ಗ್ರಾನೈಟ್ ಕಂಬದ ಪೀಠದಮೇಲೆ ಕಚೇರಿಯ ಬಾಗಿಲ ಬಳಿ ಪ್ರತಿಷ್ಠಾಪಿಸಲಾಯಿತು.

ಸಮ್ಮೇಳನಗಳು : ೨ ಸಮ್ಮೇಳನಗಳು ಇವರ ಅವಧಿಯಲ್ಲಿ ನಡೆದಿವೆ.

ಸಂಖ್ಯೆ	ಸ್ಥಳ	ಇಸವಿ	ಅಧ್ಯಕ್ಷರು
೬೭	ಕನಕಪುರ	೧೯೯೯	ಎಲ್. ಎಲ್. ಭೈರಪ್ಪ
೬೮	ಬಾಗಿಲಕೋಟೆ	೨೦೦೦	ಶಾಂತಾದೇವಿ ಮಾಳವಾಡ

ಕಾರ್ಯಕ್ರಮಗಳು : ವಿಶೇಷ ಕಾರ್ಯಕ್ರಮಗಳು ಇವರ ಅವಧಿಯಲ್ಲಿ ನಡೆದವು. ಜನ್ಮದಿನೋತ್ಸವಗಳ ಕಾರ್ಯಕ್ರಮಗಳ ಮಾಲೆಯನ್ನು ಪ್ರಾರಂಭಿಸಿದರು. ಈ ಜನ್ಮದಿನೋತ್ಸವ ಕಾರ್ಯಕ್ರಮದ ಅಂಗವಾಗಿ ಬೆಳ್ಳಾವೆ ವೆಂಕಟನಾರಣಪ್ಪ (೧೨೭ನೇ ಜನ್ಮದಿನ), ಗೋವಿಂದ ಪೈ ೧೧೭ನೇ ಜನ್ಮದಿನ ಹಾಗೂ ದ.ರಾ. ಬೇಂದ್ರ ಜನ್ಮದಿನೋತ್ಸವ ಮುಂತಾದ ಹಿರಿಯ


ಬರಹಗಾರ ನೆನಪು ಮಾಡಿಕೊಳ್ಳುವ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು.

ಎ. ಎನ್. ಮೂರ್ತಿರಾಯರಿಗೆ ಪರಿಷತ್ತಿನ ಗೌರವ ಪ್ರಶಸ್ತಿ ನೀಡಲಾಯಿತು. ೧೩೧ ದತ್ತಿನಿಧಿಗಳು ಹೊಸದಾಗಿ ಪರಿಷತ್ತಿನಲ್ಲಿ ಸ್ಥಾಪನೆ ಆದವು. ಸದಸ್ಯತ್ವದ ಸಂಖ್ಯೆ ೧೧೬೨೮ಕ್ಕೆ ಏರಿತು. ಅಮೃತ ನಿಧಿಗೆ ಇವರ ಕಾಲದಲ್ಲಿ ೨ ಲಕ್ಷಕ್ಕೂ ಮೀರಿ ಧನಸಂಗ್ರಹವಾಯಿತು. ಇನ್ಫೋಸಿಸ್ ಸಂಸ್ಥೆಯ ಶ್ರೀಮತಿ ಸುಧಾಮೂರ್ತಿ ಅವರಿಂದ ೨ ಕಂಪ್ಯೂಟರ್‌ಗಳನ್ನು ಹಾಗೂ ಪುಸ್ತಕ ಪ್ರಕಟನೆಗೆ ೧ ಲಕ್ಷ ದತ್ತಿಯನ್ನು ಪರಿಷತ್ತಿಗೆ ಪಡೆಯಲಾಯಿತು.

ಒಟ್ಟಿನಲ್ಲಿ ಬಸವಾರಾಧ್ಯರು ಪರಿಷತ್ತಿನ ಆರ್ಥಿಕ ಪ್ರಗತಿಗೆ ಶ್ರಮಿಸಿದರು ಮತ್ತು ಕೆಲವು ವಿನೂತನ ಕಾರ್ಯಕ್ರಮಗಳನ್ನು ಕೈಗೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೨೧

ಹರಿಕೃಷ್ಣ ಪುನರೂರು (೨೦೦೧–೨೦೦೪)



ಜೀವನ :

ವ್ಯವಹಾರ ಚತುರರೂ, ಸಾಹಿತ್ಯ ಪ್ರೇಮಿಗಳೂ, ಕಲಾಪೋಷಕರೂ ಆದ ಹರಿಕೃಷ್ಣ ಪುನರೂರು ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಜ ಸೇವೆಯಲ್ಲಿ ನಿರತರು. ಅವರು ತಮ್ಮ ಧಾರ್ಮಿಕ ಹಾಗೂ ಸಾಮಾಜಿಕ ಸೇವಾ ಚಟುವಟಿಕೆಗಳಿಗಾಗಿ ಧರ್ಮದರ್ಶಿ ಎಂಬ ಬಿರುದನ್ನು ಪಡೆದಿದ್ದಾರೆ. ಜನ ಅವರನ್ನು ಗುರುತಿಸುವುದೇ ಧರ್ಮದರ್ಶಿ ಹರಿಕೃಷ್ಣ ಪುನರೂರು ಎಂದರೆ ತಪ್ಪಿಲ್ಲ. ವಾಸುದೇವರಾವ್–ಲಕ್ಷ್ಮಿಅಮ್ಮ ದಂಪತಿಗಳ ಸುಪುತ್ರರಾಗಿ ಜನಿಸಿದ ಇವರು ಹೋಟೆಲ್ ಉದ್ಯಮಿಯಾಗಿ ವೃತ್ತಿರಂಗಕ್ಕೆ ಕಾಲಿಟ್ಟು ಉದ್ಯಮದಲ್ಲಿ ಮುನ್ನಡೆ ಸಾಧಿಸಿ ಇಂಡಿಯನ್ ಆಯಿಲ್ ವಿತರಕರಾಗಿ ಅಭಿವೃದ್ಧಿ ಹೊಂದಿದರು. ಅದರಿಂದ ಬಂದ ಶ್ರೀಮಂತಿಕೆಯನ್ನು ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆಯೊ ಎಂಬಂತೆ ಸಮಾಜೋದ್ಧಾರಕ್ಕಾಗಿ ಶಿಕ್ಷಣ ಕಲಾಭಿವೃದ್ಧಿಗೆ ಸದಾ ಶ್ರಮಿಸಿ ಅರ್ಥ ವಿನಿಯೋಗ ಮಾಡಿದ್ದಾರೆ. ಬಡಕೂಲಿಕಾರ ಮಕ್ಕಳಿಗೆ ಶಾಲೆ ನಿರ್ಮಿಸಿಕೊಟ್ಟಿದ್ದಾರೆ. ಮೂಲ್ಕಿ ಶಿಕ್ಷಣ ಸಂಸ್ಥೆ, ಶಾರದಾ ಶಿಕ್ಷಣ ಸಂಸ್ಥೆ, ನೇತ್ರ ಚಿಕಿತ್ಸಾ ಕೇಂದ್ರ, ನೃತ್ಯಕಲಾ ಸಂಸ್ಥೆ ಮೊದಲಾದ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಿದ್ದಾರೆ. ವಸತಿಹೀನರಿಗೆ, ಅಂಗಹೀನರಿಗೆ, ವೃದ್ಧರಿಗೆ ವಸತಿ ನಿರ್ಮಾಣ ಇವರ ಇನ್ನೊಂದು ದೊಡ್ಡ ಸಾಧನೆ.

ಸ್ವತಃ ಅನೇಕ ಸಂಸ್ಥೆಗಳಲ್ಲಿ ನಿರ್ದೇಶಕರು, ಉಪಾಧ್ಯಕ್ಷರು, ಕಾರ್ಯದರ್ಶಿ ಸದಸ್ಯರು ಆಗಿ ಸಕ್ರಿಯವಾಗಿ ಆ ಸಂಸ್ಥೆಗಳ ಪುರೋಭಿವೃದ್ಧಿಗೆ ನೆರವಾಗಿದ್ದಾರೆ. ಬ್ಯಾಂಕ್ ಮತ್ತು ಉದ್ಯಮ ಸಂಸ್ಥೆ, ಪರಿರಕ್ಷಣ ಸಂಘ, ಅರಣ್ಯ ಪೋಷಣೆ ಸಂಸ್ಥೆ, ಭಾರತ ಸೇವಾದಳ, ಮಹಾತ್ಮಾಗಾಂಧಿ ಶಾಂತಿ ಪ್ರತಿಷ್ಠಾನ, ಯಕ್ಷಭಾರತ ಮತ್ತು ಸಹಕಾರ ಸಂಸ್ಥೆಗಳು, ಲಯನ್ಸ್ ಸಂಸ್ಥೆ

ಮೊದಲಾದವುಗಳಲ್ಲಿ ಸಕ್ರಿಯ ಪಾತ್ರವಹಿಸಿದ್ದಾರೆ.

ಸಾಹಿತ್ಯ ಚಟುವಟಿಕೆಗಳಲ್ಲಿ ಸದಾಸಕ್ತರಾದ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ೨೦೦೧ ರಿಂದ ೨೦೦೪ರವರೆಗೆ ಶ್ರಮಿಸಿದ್ದಾರೆ.

ಸಾಹಿತ್ಯ, ಧರ್ಮ, ಕಲೆ ಮೂರರಲ್ಲೂ ಸಮಾನಾಸಕ್ತರಾಗಿ ಶ್ರದ್ಧೆಯಿಂದ ದುಡಿಯುವ ಪ್ರಾಮಾಣಿಕ ವ್ಯಕ್ತಿಯ ಸೇವೆಗೆ ಧರ್ಮದರ್ಶಿ ಹರಿಕೃಷ್ಣ ಪುನರೂರು ಒಂದು ಒಳ್ಳೆಯ ಮಾದರಿ ವ್ಯಕ್ತಿ ಆಗಿದ್ದಾರೆ.

ಸಾಧನೆ :

ಪ್ರಕಟನೆಗಳು : ಪರಿಷತ್ತಿನ ನಿಘಂಟುಗಳ ಮರುಮುದ್ರಣದ ಜತೆಗೆ ಕನ್ನಡ – ಕನ್ನಡ ಪರಿಷ್ಕೃತ ನಿಘಂಟನ್ನು (ಇಂಗ್ಲಿಷ್ ಲಿಪ್ಯಂತರ ಕನ್ನಡ ಪದಗಳು ಮತ್ತು ಇಂಗ್ಲಿಷ್ ಅರ್ಥಸಹಿತ) ಪ್ರಕಟಿಸಲಾಯಿತು. ಕುವೆಂಪು ಜನ್ಮಶತಮಾನೋತ್ಸವ ಮಾಲಿಕೆಯಲ್ಲಿ ೧೦೧ ಪುಸ್ತಕಗಳನ್ನು ಪ್ರಕಟಿಸಲಾಯಿತು.

ಇವರ ಅವಧಿಯಲ್ಲಿ ಷಾಣ್ಮಾಸಿಕವಾದ ಪರಿಷತ್ ಪತ್ರಿಕೆಯನ್ನು ತ್ರೈಮಾಸಿಕ ಮಾಡಲಾಯಿತು ಮತ್ತು ೩೩೭ ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು.

ಪಂಪಸಭಾಂಗಣ ನಿರ್ಮಾಣ : ವಜ್ರಮಹೋತ್ಸವ ಕಟ್ಟಡದ ಕಚೇರಿಗಳನ್ನು ಮೊದಲ ಮಹಡಿಗೆ ವರ್ಗಾಯಿಸಿ ಎರಡನೇ ಮಹಡಿಯ ವಿಶಾಲ ಜಾಗವನ್ನು ಸರಳ ಸಭಾಗೃಹವನ್ನಾಗಿ ಮಾರ್ಪಡಿಸಿ ಪಂಪ ಸಭಾಂಗಣವೆಂದು ಕರೆದು ಕನ್ನಡ ಕಾರ್ಯಕ್ರಮಗಳಿಗೆ ಕಡಿಮೆ ಬಾಡಿಗೆ ದರದಲ್ಲಿ ಕೊಡಲು ವ್ಯವಸ್ಥೆ ಆಯಿತು. ಅನಂತರ ಬಂದ ಅಧ್ಯಕ್ಷರು ಪಂಪ ಸಭಾಂಗಣವೆಂಬ ಅದರ ಹೆಸರನ್ನು ಕುವೆಂಪು ಸಭಾಂಗಣವೆಂದು ಬದಲಾಯಿಸಿದರು.

ಗೌರವಸದಸ್ಯತ್ವ ನೀಡಿಕೆ : ಪರಿಷತ್ತಿನ ಅತ್ಯುನ್ನತ ಗೌರವ ಮನ್ನಣೆಯಾದ **ಗೌರವ ಸದಸ್ಯತ್ವವನ್ನು** ಡಾ. ಪಾಟೀಲ ಪುಟ್ಟಪ್ಪ ಡಾ. ಎಸ್. ಕರೀಂಖಾನರಿಗೆ ಪ್ರದಾನ ಮಾಡಲಾಯಿತು.

ಪುಸ್ತಕಭಂಡಾರ : ರಾಜ್ಯದ ಕೇಂದ್ರ ಗ್ರಂಥಾಲಯ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದಲ್ಲಿ ಸದಸ್ಯರಾಗಿ ಭಾಗವಹಿಸುತ್ತಿದ್ದ ಪುನರೂರು ಅವರು ಅಲ್ಲಿ ಆಯ್ಕೆಗೆ ಬಂದ ಪುಸ್ತಕಗಳ ಒಂದೊಂದು ಪ್ರತಿ ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಸೇರಿಸುವ ವ್ಯವಸ್ಥೆ ಮಾಡಿದರು. ಮತ್ತು ಲೋಕಸಭಾ ಸದಸ್ಯರಾದ ಅನಂತಕುಮಾರ್ ಅವರಿಂದ ೧೫ ದೊಡ್ಡ ಕಪಾಟುಗಳನ್ನು ಕೊಡುಗೆಯಾಗಿ ಪುಸ್ತಕ ಭಂಡಾರಕ್ಕೆ ಕೊಡಿಸಿದರು. ವಿದ್ವತ್ ಕ್ಷೇತ್ರದಲ್ಲಿ ಸ್ವತಃ ವ್ಯವಸಾಯ ಮಾಡಿರದಿದ್ದರೂ ಪುನರೂರು ಅವರ ಗ್ರಂಥಪ್ರೇಮ ನಿಜಕ್ಕೂ ಮೆಚ್ಚುವಂಥದ್ದು.

ಸರಳ ವೆಚ್ಚದ ಅಧ್ಯಕ್ಷರು : ಹರಿಕೃಷ್ಣ ಪುನರೂರು ಅವರು ಪರಿಷತ್ತಿಗೆ ಅಧ್ಯಕ್ಷರಾದವರು ತ್ಯಾಗದ ಮನೋಭಾವದಿಂದ ಪರಿಷತ್ತಿನ ಮೇಲಿನ ಅಭಿಮಾನ ನಿಷ್ಠೆಗಳಿಂದ ಆದರ್ಶ ಆಚರಣೆಗಳನ್ನು ಅನುಸರಿಸಲು ಶಕ್ಯ ಎಂಬುದಕ್ಕೆ ನಿದರ್ಶನವಾಗಿದ್ದಾರೆ. ಯಾವುದೇ ರೀತಿಯಲ್ಲೂ ಪರಿಷತ್ತಿನಿಂದ ನ್ಯಾಯಬದ್ಧವಾಗಿ, ನಿಯಮಬದ್ಧವಾಗಿ ಪಡೆಯಬಹುದಾದ ವೆಚ್ಚವನ್ನೂ ತೆಗೆದುಕೊಳ್ಳದೆ ಪರಿಷತ್ತಿಗೆ ಸೇವೆ ಸಲ್ಲಿಸಿದವರಲ್ಲಿ ಹರಿಕೃಷ್ಣ ಪುನರೂರು ಅವರು ಒಬ್ಬರು.

ಹೇಮಾದ್ರಿ ಅವರು ಬರೆದಂತೆ "ಅಧ್ಯಕ್ಷರ ಮನೆಯ ಫೋನ್ ವೆಚ್ಚ, ಮನೆಗೆ ತರಿಸುವ ದಿನಪತ್ರಿಕೆಗಳ ವೆಚ್ಚ ಹೊರ ಊರುಗಳಿಗೆ ಹೋಗಿಬರಲು ಆಗುವ ಪ್ರಯಾಣ ವೆಚ್ಚ ಅಧ್ಯಕ್ಷರನ್ನು ಕಾಣಲು ಬರುವ ಅತಿಥಿಗಳಿಗೆ ಕಾಫಿ ತಿಂಡಿಗಳನ್ನು ಪರಿಷತ್ತಿನ ಹಣದಿಂದ ಭರಿಸಲು ನಿಯಮದಲ್ಲಿ ಅವಕಾಶವಿದೆ. ಆದರೆ ಪುನರೂರು ಅವರು ಇದಾವುದನ್ನೂ ಪಡೆಯದೆ ಈ ವೆಚ್ಚಗಳಿಗಾಗಿ ಸ್ವಂತ ಹಣವನ್ನು ವಿನಿಯೋಗಿಸಿದರು. ಬೇರೆಬೇರೆ ಸ್ಥಳಗಳಿಗೆ ಪರಿಷತ್ತಿನ ಕಾರ್ಯಗಳಿಗಾಗಿ ಹೋಗಿಬಂದಾಗಲೂ ತಮ್ಮ ಸ್ವಂತ ವಾಹನವನ್ನೇ ಬಳಸುತ್ತಿದ್ದರು"(ಪುಟ ೧೨೧ ಕನ್ನಡ ಸಾಹಿತ್ಯ ಪರಿಷತ್ತು).

ಪ್ರಗತಿಪರ ಹೆಜ್ಜೆಗಳು : ಪುನರೂರು ಅವರು ತಮ್ಮ ಅಧಿಕಾರಾವಧಿಯಲ್ಲಿ ೬೦೦೦ಕ್ಕೂ ಹೆಚ್ಚು ಸದಸ್ಯರನ್ನು ಪರಿಷತ್ತಿಗೆ

ಸೇರಿಸಿದರು. ತಾಲ್ಲೂಕು ಜಿಲ್ಲಾ ಸಮ್ಮೇಳನಗಳಿಗೆ ಹಣ ಬಿಡುಗಡೆ ಮಾಡಲು ಯೋಜನೆಯನ್ನು ಸರ್ಕಾರದ ಮುಂದೆ ಮಂಡಿಸಿದರು. ಪರಿಷತ್ತಿನ ಪ್ರಕಟನೆಗಳನ್ನು ರಿಯಾಯಿತಿ ದರದಲ್ಲಿ ಮಾರುವ ಮೂಲಕ ಹಳೆಯ ಪುಸ್ತಕ ದಾಸ್ತಾನು ಖರ್ಚಾಗುವಂತೆ ಮಾಡಿದರು. ಜಿಲ್ಲಾ ಅಧ್ಯಕ್ಷರು ಪರಿಷತ್ತಿಗೆ ಬಂದು ಹೋಗಲು ಉಚಿತ ಬಸ್‌ಪಾಸ್ ವ್ಯವಸ್ಥೆಯನ್ನು ಸಾರಿಗೆ ಸಂಸ್ಥೆಯಿಂದ ಮಾಡಿಸಿದರು.

ಎಸ್. ಎಸ್. ಎಲ್. ಸಿ.ಯಲ್ಲಿ ಅತ್ಯುನ್ನತ ಅಂಕಗಳಿಸಿದವರಿಗೆ ಕನ್ನಡದಲ್ಲಿ ಡಾಕ್ಟರೇಟ್ ಪಡೆದವರಿಗೆ ಸನ್ಮಾನ ಮಾಡುವ ವ್ಯವಸ್ಥೆ ಮಾಡಿದರು.


ಜಿಲ್ಲಾ ಸಮ್ಮೇಳನಗಳ ಜತೆಗೆ ತಾಲ್ಲೂಕು, ಹೋಬಳಿ, ಗ್ರಾಮ, ಮಟ್ಟದ ಸಮ್ಮೇಳನಗಳನ್ನು ನಡೆಸಿದರು. ಶ್ರೀಸಾಮಾನ್ಯನ ಪಾಲಿಗೆ ಪರಿಷತ್ತು ಪರಿಚಯವಾದಂತಾಯಿತು. ದತ್ತಿನಿಧಿಗಳನ್ನು ಹೆಚ್ಚಿಸಿದ ಅವರು ಪುಸ್ತಕ ಭಂಡಾರದಲ್ಲಿ ಗಣಕೀಕರಣ ವ್ಯವಸ್ಥೆ ಮಾಡಿದರು. ಅಚ್ಚುಕೂಟವನ್ನು ಅಭಿವೃದ್ಧಿಗೊಳಿಸಿದರು.

ಸಮ್ಮೇಳನಗಳು : ಪುನರೂರು ಅವರು ತಮ್ಮ ಅವಧಿಯಲ್ಲಿ ೩ ಸಮ್ಮೇಳನಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಸಮ್ಮೇಳನ ಸಂಖ್ಯೆ	ಸ್ಥಳ	ಅಧ್ಯಕ್ಷರು	ಇಸವಿ
೬೯	ತುಮಕೂರು	ಯು.ಆರ್. ಅನಂತಮೂರ್ತಿ	೨೦೦೨ ಫೆಬ್ರವರಿ
೭೦	ಬೆಳಗಾವಿ	ಡಾ. ಪಾಟೀಲ ಪುಟ್ಟಪ್ಪ	೨೦೦೩ ಮಾರ್ಚ್
೭೧	ಮೂಡಬಿದಿರೆ	ಡಾ. ಕಮಲಾ ಹಂಪನಾ	೨೦೦೩ ಡಿಸೆಂಬರ್

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೨೨

ಚಂದ್ರಶೇಖರ ಪಾಟೀಲ (ಚಂಪಾ) (೨೦೦೪–೨೦೦೮)



ಜೀವನ :

ಕನ್ನಡದ ಕವಿ, ನಾಟಕಕಾರ, ವಿಮರ್ಶಕ, ಹೋರಾಟಗಾರರಾದ 'ಚಂಪಾ' ನಮದಿಂದ ಪ್ರಖ್ಯಾತರಾದ ಚಂದ್ರಶೇಖರ ಪಾಟೀಲ ಅವರು ೧೯೩೯ರಲ್ಲಿ ಹಾವೇರಿ ಜಿಲ್ಲೆಯ ಹತ್ತಿಮತ್ತೂರಿನಲ್ಲಿ ಜನಿಸಿದರು. ಹತ್ತಿಮತ್ತೂರು–ಹಾವೇರಿಗಳಲ್ಲಿ ಕನ್ನಡ ಶಾಲೆ–ಹೈಸ್ಕೂಲ್ ಮುಗಿಸಿ, ೧೯೫೬ರಲ್ಲಿ ಕರ್ನಾಟಕ ಕಾಲೇಜಿಗೆ ಸೇರಿದವರು. ೧೯೬೦ರಲ್ಲಿ ಬಿ.ಎ. ಪೂರೈಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೬೨ರಲ್ಲಿ ಎಂ.ಎ. ಮಾಡಿದರು. ೧೯೬೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. ೧೯೬೬ರಲ್ಲಿ ಪ್ರೊಫೆಸರ್ ಮತ್ತು ಚೇರ್ಮನ್‌ರಾದರು.

೧೯೮೦-೮೩ರಲ್ಲಿ ಧಾರವಾಡದ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಗೋಕಾಕ್ ಚಳವಳಿಗೆ ಪ್ರೇರಣೆ ನೀಡಿದ ಪ್ರಮುಖರಲ್ಲಿ ಒಬ್ಬರು.

ನವೆಂಬರ್ ೨೦೦೪ ರಿಂದ ೨೦೦೮ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಇವರು ಅಂತರಂಗ ನಾಟಕ ಕೂಟ 'ಮ್ಯಾಳ' ಮುಂತಾದ ಸಂಸ್ಥೆಗಳ ಮೂಲಕ ರಂಗಚಳುವಳಿಯಲ್ಲಿ ಕ್ರಿಯಾಶೀಲರಾದವರು. ೧೯೭೦ರ ದಶಕದ ಸಾಂಸ್ಕೃತಿಕ ಆಂದೋಲನಗಳಲ್ಲಿ ಭಾಗವಹಿಸಿದ್ದಾರೆ.

ಬಾನು (ಕಾವ್ಯ-೧೯೬೦) ಕಾವ್ಯಕ್ಕೆ ಗೋಕರ್ಣದ ಗೌಡಶಾನಿ (ನಾಟಕ-೧೯೭೪), ಗಾಂಧೀಸ್ಮರಣ (ಕಾವ್ಯ-೧೯೭೬) ಇವುಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಂದೇಹ ಮಾಧ್ಯಮ ಪ್ರಶಸ್ತಿ ಇತ್ಯಾದಿ ಇವರಿಗೆ ಲಭ್ಯವಾಗಿವೆ. ದಿನಕರ ದೇಸಾಯಿ ಪ್ರಶಸ್ತಿ ಇವರ ಅರ್ಧಸತ್ಯದ ಹುಡುಗಿ ಕಾವ್ಯಕ್ಕೆ ದೊರೆತಿದೆ.

ಸಂಕ್ರಮಣ ಕಾವ್ಯವೆಂಬ ಪತ್ರಿಕೆಯನ್ನು ಕಳೆದ ೩೦ ವರ್ಷಗಳಿಂದ ನಿರಂತರವಾಗಿ ಪ್ರಕಟಿಸುತ್ತಿರುವ ಇವರು ಹತ್ತಕ್ಕೂ ಮಿಕ್ಕು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಬಾನುಲಿ, ಮಧ್ಯಬಿಂದು, ಹೂವು ಹಣ್ಣು ತಾರೆ, ಓ ಎನ್ನ ದೇಶ ಬಾಂಧವರೇ, ಗುಂಡಮ್ಮನ ಹಾಡು ಮೊದಲಾದ ಕವನ ಸಂಗ್ರಹ ಹೊರತಂದಿದ್ದಾರೆ. ಕೊಡೆಗಳು, ಗೋಕರ್ಣದ ಗೌಡಶಾನಿ, ವಂದಿಮಾಗಧ ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಬೇಂದ್ರೆ-ನಾನು ಕಂಡಂತೆ, ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ, ಚಂಪಾದಕೀಯ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇಂಗ್ಲಿಷಿನಲ್ಲಿ ಹತ್ತಾರು ನಿಯತಕಾಲಿಕೆಗಳಿಗೆ ಲೇಖಕರಾಗಿರುವ ಇವರು ಇಂಗ್ಲಿಷಿನಲ್ಲಿ ಪೊಯಮ್ಸ್ ಅಂಡ್ ಪ್ಲೇಸ್ ಎಂಬ ಗ್ರಂಥವನ್ನು (ಕನ್ನಡದಿಂದ ಅನುವಾದಿಸಿದ ಕೃತಿ) ಹೊರತಂದಿದ್ದಾರೆ.

ಸಾಧನೆ :

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದವರಲ್ಲಿ ನಾನಾ ಬಗೆಯ ವೃತ್ತಿಗಳನ್ನು ಅವಲಂಬಿಸಿದವರು ಇದ್ದಾರೆ. ಅವರಲ್ಲಿ ಇಂಗ್ಲಿಷ್ ಮತ್ತು ಕನ್ನಡ ಪ್ರಾಧ್ಯಾಪಕರು ಸಾಕಷ್ಟು ಮಂದಿ ಇದ್ದಾರೆ.

ಎಂ. ಆರ್. ಶ್ರೀ., ಜಿ. ವೆಂಕಟಸುಬ್ಬಯ್ಯ, ಹಂಪನಾ ಜಿ. ಎಸ್. ಸಿದ್ಧಲಿಂಗಯ್ಯ, ಸಾಶಿಮರುಳಯ್ಯ ನಲ್ಲೂರು ಪ್ರಸಾದ್ ಅವರು ಕನ್ನಡ ಅಧ್ಯಾಪಕರು(-ಪ್ರಾಧ್ಯಾಪಕರು) ಆಗಿ ಸಾಹಿತಿಗಳಾಗಿ ವಿದ್ವಾಂಸರಾಗಿ ಹೆಸರು ಪಡೆದವರು. ಬಿಎಂಶ್ರೀ, ಎ.ಎನ್. ಮೂರ್ತಿರಾವ್, ಚಂದ್ರಶೇಖರ ಪಾಟೀಲ ಅವರು ಇಂಗ್ಲಿಷ್ ಅಧ್ಯಾಪಕರು (ಪ್ರಾಧ್ಯಾಪಕರು) ಅಲ್ಲದೆ ಅವರು ಕನ್ನಡ ಸಾಹಿತಿಗಳೂ, ವಿದ್ವಾಂಸರೂ ಆಗಿದ್ದವರು. ಇವರಲ್ಲಿ ಪರಿಷತ್ತಿಗೆ ಸಂಬಂಧಿಸಿದಂತೆ ಬಹುಮುಖವಾಗಿ ಕಾರ್ಯಮಾಡಿದವರಲ್ಲಿ ಬಿ.ಎಂ. ಶ್ರೀ. ಅವರ ನಂತರ ಪ್ರಾಧ್ಯಾಪಕರೆಂದರೆ ಚಂಪಾ ಅವರು.

ಪರಿಷತ್ತನ್ನು ಪ್ರಬಲ ಹೋರಾಟದ ವೇದಿಕೆಯನ್ನಾಗಿ ತಮ್ಮ ಅವಧಿಯಲ್ಲಿ ರೂಪಿಸಿದರು. ಹಿಂದಿನವರು ಪರಿಷತ್ತನ್ನು ವಿದ್ವನ್ಮಂಡಲಿಯ ವೇದಿಕೆಯನ್ನಾಗಿ ರೂಪಿಸಿದ್ದರು. ಜಿ. ನಾರಾಯಣರ ಕಾಲದಲ್ಲಿ ಸಾಮಾಜಿಕ ಕಾರ್ಯಕರ್ತರ ನೆಲೆಯಾಯಿತು. ಜನಸಾಮಾನ್ಯರ ವೇದಿಕೆ ಆಯಿತು.

ಕ್ರಾಂತಿಕಾರಿ ಮನೋಭಾವದಿಂದ ಕೂಡಿದ ಕನ್ನಡ ಹೋರಾಟಗಾರ ಚಂಪಾ ಅವರು. ಪರಿಷತ್ತನ್ನು ಚಳುವಳಿ ಹೋರಾಟಗಳಲ್ಲಿ ತೊಡಗಿಸಿದರು.

ಮಾತೃಭಾಷಾ ಮಾಧ್ಯಮ ಚಳುವಳಿ :

ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡವೇ ಬೋಧನಾ ಮಾಧ್ಯಮವಾಗಿರಬೇಕು, ಬೇಕಿದ್ದರೆ ಇಂಗ್ಲಿಷನ್ನು ಪ್ರಾಥಮಿಕ ೫ನೇ ತರಗತಿಯಿಂದ (ಮಿಡ್ಲ್‌ಸ್ಕೂಲ್) ಕಲಿಸಬೇಕು, ಕೇಂದ್ರ ಪಠ್ಯಕ್ರಮದ (ಹಿಂದಿ ಇಂಗ್ಲಿಷ್) ಮಾಧ್ಯಮಗಳ ಶಾಲೆಗಳಲ್ಲಿ ಕರ್ನಾಟಕದಲ್ಲಿ ಕನ್ನಡವನ್ನು ಕಲಿಸಬೇಕು- ಎಂಬ ವಿಷಯಗಳ ಬಗ್ಗೆ ಚಂಪಾ ಅವರು ಸರ್ಕಾರದೊಡನೆ ಹೋರಾಡಿದರು.

ನಾಡಿನ ಶಿಕ್ಷಣತಜ್ಞರನ್ನು, ವಿದ್ವಾಂಸರನ್ನು ಕಾನೂನು ತಜ್ಞರನ್ನು ಕನ್ನಡ ಸಂಘಟನೆಗಳ ಪ್ರಮುಖರನ್ನು ಆಹ್ವಾನಿಸಿ ಸಮಾಲೋಚನಾ ಸಭೆ ಏರ್ಪಡಿಸಿ ಕನ್ನಡ ಮಾಧ್ಯಮದ ಸಮಸ್ಯೆಗಳನ್ನು ಚರ್ಚಿಸಿದರು. ಶಿಕ್ಷಣ ಸಚಿವರಾಗಿದ್ದವರೊಡನೆ ಸಭೆ ನಡೆಸಿದರು. ಕನ್ನಡ ಮಾಧ್ಯಮದಲ್ಲಿ ಶಾಲೆಯನ್ನು ನಡೆಸಲು ಅನುಮತಿ ಪಡೆದು ಆಂಗ್ಲಮಾಧ್ಯಮದಲ್ಲಿ ಶಾಲೆ ನಡೆಸುತ್ತಿದ್ದ ಸುಮಾರು ೨೨೧೫ ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಿಸುವಲ್ಲಿ ಚಂಪಾ ಅವರು ಯಶಸ್ವಿಯಾದವರು.

ಕನ್ನಡ ನುಡಿ – ಕನ್ನಡಗಡಿ ಜಾಗೃತಿ ಜಾಥಾ

ಚಂಪಾ ಅವರು ಕರ್ನಾಟಕದ ಗಡಿಪ್ರದೇಶಗಳಲ್ಲಿ ಜಿಲ್ಲಾ ಘಟಕಗಳ ಸಹಯೋಗದೊಡನೆ, ಸಾಹಿತಿ ಕಲಾವಿದರದೊಂದಿಗೆ ಜಾಗೃತಿ ಜಾಥಾ ನಡೆಸಿದರು. ಗಡಿನಾಡ ಸಮಸ್ಯೆಗಳ ಪರಿಹಾರಕ್ಕಾಗಿ ಹಿಂದಿನ ಅಧ್ಯಕ್ಷರಲ್ಲಿ ಒಬ್ಬರಾದ ಬಿ. ಶಿವಮೂರ್ತಿ ಶಾಸ್ತ್ರಿಗಳು ಹೋರಾಟ ಮಾಡಿದ್ದರು. ಆ ಕಾರ್ಯವನ್ನು ಚಂಪಾ ಮುಂದುವರಿಸಿದರು.

ಹೊಗೇನಕಲ್‌ನಲ್ಲಿ ತಮಿಳುನಾಡು ಸರ್ಕಾರ ಆರಂಭಿಸಿದ ವಿದ್ಯುತ್ ಯೋಜನೆಯನ್ನು ವಿರೋಧಿಸಿ ಇವರ ಅವಧಿಯಲ್ಲಿ ನಡೆದ ಚಳವಳಿಯಲ್ಲಿ ಪರಿಷತ್ತು ಪಾಲ್ಗೊಂಡಿತು.

ಗಡಿವಿವಾದದ ಬಗ್ಗೆ ಶಾಶ್ವತ ಪರಿಹಾರ ಕರಡುಕೊಳ್ಳಲು ಮಹಾಜನ್ ವರದಿಯನ್ನು ಜಾರಿಗೆ ತರಲು ಒತ್ತಾಯ ಮಾಡಲು ೪-೧೦-೨೦೦೬ರಲ್ಲಿ ಕರ್ನಾಟಕ ಬಂದ್‌ಗೆ ನಾಡಿನ ಸಂಘ ಸಂಸ್ಥೆಗಳು ಕರೆ ನೀಡಿದವು. ಪರಿಷತ್ತು ಈ ಬಂದ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿತು.

ಸಾಹಿತ್ಯಿಕ ಯೋಜನೆಗಳು :

ಶನಿವಾರದ ಪುಸ್ತಕ ಸಂತೆ ಕಾರ್ಯಕ್ರಮ

ಚಂಪಾ ಅವರು ಹಿಂದಿನ ಅಧ್ಯಕ್ಷರುಗಳಿಗಿಂತ ಭಿನ್ನವಾದ ಆಲೋಚನೆ ಮಾಡುವವರಾಗಿದ್ದರು. ಹಾಗಾಗಿ ಕೆಲವು ನೂತನ ಕಾರ್ಯಕ್ರಮಗಳನ್ನು ಜಾರಿಗೆ ತಂದರು ಅದರಲ್ಲಿ, ಶನಿವಾರದ ಪುಸ್ತಕಸಂತೆ ಕಾರ್ಯಕ್ರಮವೂ ಒಂದು ಪ್ರತಿಶನಿವಾರವೂ ಪರಿಷತ್ತಿನ ಅಂಗಳದಲ್ಲಿ ಕನ್ನಡ ಪುಸ್ತಕ ಪ್ರಕಾಶಕರನ್ನು ಮತ್ತು ಮಾರಾಟಗಾರರನ್ನು ಆಹ್ವಾನಿಸಿ ರಿಯಾಯಿತಿ ದರದಲ್ಲಿ ಓದುಗರಿಗೆ ಪುಸ್ತಕಗಳು ದೊರೆಯುವಂತೆ ವ್ಯವಸ್ಥೆ ಮಾಡಿದರು. ಈ ಪುಸ್ತಕಸಂತೆಯಲ್ಲಿ ಹೊಸ ಪುಸ್ತಕ ಪ್ರಕಾಶಕರು ಮತ್ತು ಮಾರಾಟಗಾರರ ಜತೆಗೆ ಹಳೆ ಪುಸ್ತಕ ವ್ಯಾಪಾರಿಗಳೂ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು. ಅಷ್ಟೇ ಅಲ್ಲದೆ ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸುತ್ತಿದ್ದ ಲೇಖಕರೂ ಇಲ್ಲಿ ತಮ್ಮ ಪುಸ್ತಕಗಳನ್ನು ತಂದು ಮಾರುತ್ತಿದ್ದರು. ಅಪರೂಪದ ಮತ್ತು ಅಲಭ್ಯ ಗ್ರಂಥಗಳು ಇಲ್ಲಿ ಸಿಗುತ್ತಿದ್ದವು. ಇದರ ಜತೆಗೆ ಪರಿಷತ್ತಿನ ಮುಂಭಾಗದಲ್ಲಿ ಹಾಡು, ನೃತ್ಯ, ಭಾಷಣ ಇತ್ಯಾದಿ ಕಾರ್ಯಕ್ರಮಗಳನ್ನು ಬಂದ ಜನರಿಗೆ ಮುದನೀಡಲು ವ್ಯವಸ್ಥೆ ಮಾಡಿದ್ದರು. ಸಾಹಿತ್ಯಪ್ರಿಯರ ಮೆಚ್ಚುಗೆ ಪಡೆದ ಈ ಯೋಜನೆ ೨೯ ಜನವರಿ ೨೦೦೫ರಲ್ಲಿ ಪ್ರಾರಂಭವಾಗಿ ಅವರ ಅಧಿಕಾರಾವಧಿಯ ಅಂತ್ಯದವರೆಗೂ ಚಾಲ್ತಿಯಲ್ಲಿತ್ತು.

ಅಧ್ಯಕ್ಷರ ಪುಸ್ತಕನಿಧಿ ಯೋಜನೆ

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನಾಡಿನ ಜನತೆಯ ಸಾಹಿತ್ಯಿಕ-ಸಾಂಸ್ಕೃತಿಕ ಪ್ರತಿನಿಧಿ, ಮಂತ್ರಿಗಳಿದ್ದ ಹಾಗೆ. ಅವರು ವರ್ಷವೆಲ್ಲಾ ನೂರಾರು ಸಭೆ-ಸಮಾರಂಭಗಳಲ್ಲಿ ನಾಡಿನಾದ್ಯಂತ ಭಾಗವಹಿಸುತ್ತಿರುತ್ತಾರೆ. ಚಂಪಾ ಅವರು ತಾವು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಜನ ಗೌರವ-ಸನ್ಮಾನಾರ್ಥವಾಗಿ ಹಾಕುತ್ತಿದ್ದ ಶಾಲು-ಹಾರಗಳ ಬದಲಿಗೆ (ಹಾರವು ಒಣಗುತ್ತದೆ, ಶಾಲು ಮುದುಡುತ್ತೆ) ಕನ್ನಡ ಪುಸ್ತಕಗಳನ್ನು ನೀಡಲು ಬಿನ್ನವಿಸಿದರು. ಹೀಗೆ ಸಂಗ್ರಹವಾದ ಪುಸ್ತಕನಿಧಿಯನ್ನು ಗಡಿನಾಡ ಕನ್ನಡ ಗ್ರಂಥ ಭಂಡಾರಗಳಿಗೆ, ಗ್ರಾಮೀಣ ಗ್ರಂಥ ಭಂಡಾರಗಳಿಗೆ ಹಂಚಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಗಡಿನಾಡ ಕನ್ನಡಿಗರ ಸಮಸ್ಯೆಗಳನ್ನು ಅರಿತಿದ್ದ ಪ್ರೊ|| ಚಂಪಾ ಪರಿಷತ್ತಿನಿಂದ ಕಿಂಚಿತ್ ರೂಪದಲ್ಲಿ ಅವರಿಗೆ ನೆರವಾಗಲು ಪ್ರಯತ್ನಿಸಿದರು. "ಅಧ್ಯಕ್ಷರ ಪುಸ್ತಕನಿಧಿ"ಯನ್ನು ಪ್ರಾರಂಭಿಸಿದರು. ತಾವು ಭಾಗವಹಿಸುವ ಸಮಾರಂಭಗಳಲ್ಲಿ ಶಾಲು, ಹಾರಗಳ ಬದಲಿಗೆ ಪುಸ್ತಕಗಳನ್ನು ನೀಡುವಂತೆ ವಿನಂತಿಸಿದರು. ಸಾರ್ವಜನಿಕವಾಗಿಯೂ ಮನವಿ ಮಾಡಿಕೊಂಡರು. ಸಾವಿರಾರು ಪುಸ್ತಕಗಳು 'ನಿಧಿ'ಗೆ ಸಂಗ್ರಹವಾದುವು. ಗಡಿನಾಡ

ಕನ್ನಡ ಗ್ರಂಥ ಭಂಡಾರಗಳಿಗೆ, ಗ್ರಾಮೀಣ ಗ್ರಂಥಾಲಯಗಳಿಗೆ ಉಚಿತವಾಗಿ 'ಪುಸ್ತಕನಿಧಿ'ಯಿಂದ ಗ್ರಂಥಗಳನ್ನು ಕಳುಹಿಸಿದರು.

ಕನ್ನಡ ಹೋರಾಟಕ್ಕೆ ಜಯ

೨೦೦೭ರಲ್ಲಿ ಶಿಕ್ಷಣ ಸಚಿವರಾದ ಬಸವರಾಜ ಹೊರಟ್ಟಿ ಅವರನ್ನು ಪರಿಷತ್ತಿಗೆ ಆಮಂತ್ರಿಸಿ, ಗಣ್ಯ ಸಾಹಿತಿಗಳ ಕನ್ನಡ ಪರ ಹೋರಾಟಗಾರರ ಸಮ್ಮುಖದಲ್ಲಿ ಸಭೆ ನಡೆಸಿದರು. ಕನ್ನಡ ಮಾಧ್ಯಮದಲ್ಲಿ ಶಾಲೆ ನಡೆಸಲು ಅನುಮತಿ ಪಡೆದು ಇಂಗ್ಲಿಷ್ ಮಾಧ್ಯಮದಲ್ಲಿಯ ೨೨೧೫ ಶಾಲೆಗಳನ್ನು ಕನ್ನಡ ದ್ರೋಹಿ ಶಾಲೆಗಳೆಂದು ಪರಿಗಣಿಸಿ ಇವುಗಳನ್ನು ರದ್ದು ಮಾಡಲು ಹಕ್ಕೊತ್ತಾಯ ಮಾಡಿದಾಗ ಸರ್ಕಾರ ಶಾಲೆಯ ಮಾನ್ಯತೆಯನ್ನು ರದ್ದುಮಾಡಿತು.


ಭಾರತ ಸರ್ಕಾರವು ತಮಿಳು ಭಾಷೆಯನ್ನು "ಶಾಸ್ತ್ರೀಯ ಭಾಷೆ"ಯೆಂದು ಘೋಷಿಸಿತು. ಒಂದು ಸಾವಿರ ವರ್ಷದ ಲಿಖಿತ ಇತಿಹಾಸವಿದ್ದು, ಮೌಲಿಕ ಸಾಹಿತ್ಯ ರಚನೆ ಆಗಿದ್ದ ಭಾಷೆಯನ್ನು ಶಾಸ್ತ್ರೀಯಭಾಷೆಯೆಂದು ಘೋಷಿಸಲಾಗುತ್ತದೆ. "ಶಾಸ್ತ್ರೀಯ ಭಾಷೆ" ಎಂಬ ಘೋಷಣೆಯ ಅಡಿಯಲ್ಲಿ ತಮಿಳುಭಾಷೆ ಸಂಸ್ಕೃತಿಯ ಅಭಿವೃದ್ಧಿಗೆ ಕೋಟಿಗಟ್ಟಲೆ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ತಮಿಳುನಾಡು ಅನುದಾನ ಪಡೆಯತೊಡಗಿತು. ತಮಿಳಿನಷ್ಟೇ ಪ್ರಾಚೀನವಾಗಿರುವ ಕನ್ನಡ ಭಾಷೆಗೂ ಶಾಸ್ತ್ರೀಯ ಭಾಷೆಯ ಸ್ಥಾನ ಸಿಗಬೇಕೆಂದು ಕನ್ನಡ ಅಭಿಮಾನಿಗಳು ಹೋರಾಟಕ್ಕಿಳಿದರು. 'ಚಂಪಾ' ನೇತೃತ್ವದ ಸಾಹಿತ್ಯ ಪರಿಷತ್ತು ಈ ಹೋರಾಟಕ್ಕೆ ನಾಯಕತ್ವವನ್ನು ಒದಗಿಸಿತು.

ಕಾನ್ವೆಂಟ್ ಶಾಲೆಯ ಮಕ್ಕಳು ಇಂಗ್ಲಿಷ್‌ನಲ್ಲಿ ಪರಿಣತಿ ಸಾಧಿಸಿ ಉನ್ನತ ಉದ್ಯೋಗಾವಕಾಶಗಳನ್ನು ಪಡೆಯುತ್ತಿದ್ದಾರೆ ಹಾಗೂ ಕನ್ನಡ ಮಾಧ್ಯಮಗಳ ಶಾಲೆಯ ಮಕ್ಕಳು ಇಂಗ್ಲಿಷ್ ಭಾಷಾ ಸಾಮರ್ಥ್ಯದಲ್ಲಿ ಹಿಂದುಳಿದ ಪರಿಣಾಮ ಉದ್ಯೋಗಾವಕಾಶ ಕಳೆದುಕೊಳ್ಳುತ್ತಾರೆ. ಆದ್ದರಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್‌ನ್ನು ಕಲಿಸಬೇಕೆಂಬ ಒತ್ತಾಯಕ್ಕೆ ಮಣಿದು ೨೦೦೭ ಜೂನ್‌ನಲ್ಲಿ ಸರ್ಕಾರ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್‌ನ್ನು ಕಡ್ಡಾಯವಾಗಿ ಕಲಿಸಲು ಆಜ್ಞೆ ಹೊರಡಿಸಿದಾಗ ಇದನ್ನು ವಿರೋಧಿಸಿ ೨೦೦೭ ಜೂನ್ ೧ ರಂದು ಪರಿಷತ್ತಿನ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಕಾವೇರಿ ನದಿ ನೀರು ಹಂಚಿಕೆಯಲ್ಲಿ ನ್ಯಾಯಮಂಡಳಿ ತೀರ್ಪನ್ನು ವಿರೋಧಿಸಿ ಹೊಗೇನಕಲ್‌ನಲ್ಲಿ ತಮಿಳುನಾಡು ಆರಂಭಿಸಿದ ವಿದ್ಯುತ್ ಯೋಜನೆ ವಿರೋಧಿಸಿ ಚಳವಳಿಯನ್ನು ಇವರ ನೇತೃತ್ವದಲ್ಲಿ ಪರಿಷತ್ತು ನಡೆಸಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೨೩

ನಲ್ಲೂರು ಪ್ರಸಾದ್ (೨೦೦೮-೨೦೧೨)



ಜೀವನ :

ಕನ್ನಡ ಅಧ್ಯಾಪಕರೂ ಕವಿಗಳೂ ಜಾನಪದ ವಿದ್ವಾಂಸರೂ ಆದ ಆರ್.ಕೆ. ನಲ್ಲೂರು ಪ್ರಸಾದ್ ಅವರು ೨೬-೧೧-೧೯೪೭ರಂದು ಸಂಜೀವಯ್ಯ-ಶಾಂತಮ್ಮ ದಂಪತಿಗಳಿಗೆ ಚೆನ್ನರಾಯಪಟ್ಟಣದ ನಲ್ಲೂರಿನಲ್ಲಿ ಜನಿಸಿದರು.

ಪ್ರೌಢವಿದ್ಯಾಭ್ಯಾಸವನ್ನು ಚೆನ್ನರಾಯಪಟ್ಟಣದಲ್ಲಿ ಮುಗಿಸಿ ಶ್ರವಣಬೆಳಗೊಳದ ಶ್ರೀಗೊಮ್ಮಟೇಶ್ವರ ವಿಶ್ವವಿದ್ಯಾಲಯದಲ್ಲಿ ಬಿಎ ಪದವಿ ಮತ್ತು ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿ ಗಳಿಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಗಳಿಸಿದರು.

೧೯೭೭ರಲ್ಲಿ ವಿಶ್ವೇಶ್ವರಪುರಂ ಕಲೆ ಮತ್ತು ವಾಣಿಜ್ಯ ಕಾಲೇಜಿಗೆ ಅಧ್ಯಾಪಕರಾಗಿ ಸೇರಿದ ಇವರು ೨೮ ವರ್ಷಗಳ ಕಾಲ ಸೇವೆಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜಾನಪದ ಪ್ರವೇಶ ಮತ್ತು ಪ್ರೌಢ ತರಗತಿಗಳಿಗೆ ಬೋಧನೆ ಮಾಡಿದ್ದರು.

೨೦೦೮ರಿಂದ ೨೦೧೨ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಇವರು ಪ್ರೇರಣಾ ಜಾನಪದ, ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ (ಚೆನ್ನರಾಯಪಟ್ಟಣ), ಜನಪದರು ಸಂಸ್ಥೆ ಪ್ರಜ್ಞಾ ಸಾಂಸ್ಕೃತಿಕ ವೇದಿಕೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟಕ್ಕೆ ೧೯೯೯ರಿಂದ ೨೦೦೨ರವರೆಗೆ ಕಾರ್ಯದರ್ಶಿಗಳಾಗಿ, ಕನ್ನಡನಾಡು, ಜಾನಪದ ಸಮಾವೇಶ, ಅನಿಕೇತನ, ಯುವ ಸಾಧನೆ ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಗೋಷ್ಠಿಗಳಲ್ಲಿ ಭಾಗವಹಿಸಿದ ಇವರು ಹಾಸನಜಿಲ್ಲೆಯ ವಚನಸಾಹಿತ್ಯ ಸಮ್ಮೇಳನದ ದೆಹಲಿಯ ರಾಷ್ಟ್ರೀಯ ಕನ್ನಡ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದಾರೆ. ಅಮೆರಿಕಾದ ನಾವಿಕ ಸಮ್ಮೇಳನ, ದುಬೈನ ಧ್ವನಿ ಪ್ರತಿಷ್ಠಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಇವರ ಸೇವೆಯನ್ನು ಮೆಚ್ಚಿ ಹತ್ತಾರು ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಪ್ರಶಸ್ತಿ ಪ್ರದಾನ ಮಾಡಿವೆ. ಗೌತಮ ಪ್ರಶಸ್ತಿ, ಜಾನಪದ ತಜ್ಞ, ಕರುನಾಡ ಸಿರಿ, ಕನ್ನಡದ ಕಾಯಕಯೋಗಿ ಪ್ರಶಸ್ತಿ, ಗೊಮ್ಮಟ ವಿದ್ಯಾಪೀಠ ಪ್ರಶಸ್ತಿ, ಜ್ವಾಲನಯ್ಯ ಸಾಹಿತ್ಯ ಪ್ರಶಸ್ತಿ. ಕುವೆಂಪು ಪ್ರಶಸ್ತಿಗಳು ಇವರಿಗೆ ಲಭಿಸಿವೆ.

ಇವರ ಕೃತಿಗಳಲ್ಲಿ 'ನೀನೆಂಬನಾನು' 'ಸೋನೆ ಮುಗಿಲು' 'ನವಿಲಜಾಗರ', ರೆಕ್ಕೆ ಬಡಿಯುವ ಮುನ್ನ, ಕವಿತಾ ಸಂಕಲನಗಳಾಗಿದ್ದರೆ ನಲ್ಲೂರು ದೊರೆ ಕಾಳಿ, ಗಂಗಾಡಿಕಾರ ಒಕ್ಕಲಿಗರು ಜನಪದ ಕೃತಿಗಳಾಗಿವೆ. ಕರ್ನಾಟಕ ಜಾನಪದ, ಜಾನಪದ ಭಾರತಿ, ಹೆಜ್ಜೆಗುರುತು, ಸಂಪಾದಿತ ಕೃತಿಗಳಾಗಿವೆ. ಕರ್ನಾಟಕದ ಒಕ್ಕಲಿಗರಲ್ಲಿ ಗಂಗಾಡಿಕಾರರು-ಒಂದು ಅಧ್ಯಯನ ಇವರ ಮಹತ್ವದ ಕೃತಿಯಾಗಿದೆ.

ಸಾಧನೆ :

ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದವರಲ್ಲಿ ಶಿಕ್ಷಣ ತಜ್ಞರು ಶಿಕ್ಷಕರು ಸಾಕಷ್ಟು ಮಂದಿ ಇದ್ದಾರೆ. ಹಿಂದಿನ ಅಧ್ಯಕ್ಷರುಗಳಲ್ಲಿ ಎಂ.ಆರ್.ಶ್ರೀ., ಜಿ. ವೆಂಕಟಸುಬ್ಬಯ್ಯ, ಹಂಪನಾ, ಎ. ಎನ್. ಮೂರ್ತಿರಾವ್, ಜಿ.ಎಸ್. ಸಿದ್ಧಲಿಂಗಯ್ಯ, ಸಾ. ಶಿ. ಮರುಳಯ್ಯ, ಚಂದ್ರಶೇಖರ ಪಾಟೀಲ ಇವರೆಲ್ಲರೂ ಶಿಕ್ಷಕರಾಗಿ ವೃತ್ತಿಯಲ್ಲಿದ್ದವರು. ನಲ್ಲೂರು ಪ್ರಸಾದರು ಈ ಗುಂಪಿಗೇ ಸೇರಿದವರು. ನಿವೃತ್ತರಾದ ಮೇಲೆ ಕನ್ನಡ ಸೇವೆಯ ಉತ್ಸಾಹದಲ್ಲಿ ಪರಿಷತ್ತಿನ ಚುನಾವಣೆಗೆ ನಿಂತು ಗೆದ್ದು ಬಂದರು.

ಕನ್ನಡ ನಿಧಿ : ನಲ್ಲೂರು ಪ್ರಸಾದರು ಸರ್ಕಾರದಿಂದ ನೆರವನ್ನು ತಂದರೂ ಪರಿಷತ್ತು ಆರ್ಥಿಕವಾಗಿ ತನ್ನ ಕಾಲಮೇಲೆ ತಾನು ನಿಲ್ಲಬೇಕೆಂದು ಕನ್ನಡನಿಧಿ ಎಂಬುದನ್ನು ಸ್ಥಾಪಿಸಿ, ೩ ತಿಂಗಳ ಅವಧಿಯಲ್ಲಿ ಹತ್ತುಲಕ್ಷ ಕೂಡಿಹಾಕಿದರು. ಹೋದಲ್ಲೆಲ್ಲ ಬಂದಲ್ಲೆಲ್ಲಾ, ಕನ್ನಡನಿಧಿಗೆ ದೇಣಿಗೆ ಕೇಳುತ್ತಿದ್ದರು. ಕೆಲವರು ಇವರನ್ನು 'ಕನ್ನಡದ ಮಾರ್ವಾಡಿ' ಎಂದು ಹಂಗಿಸಿದರೂ ಹಿಂಜರಿಯದೆ ಪರಿಷತ್ತಿನ ಹಿತವನ್ನು ಲಕ್ಷಿಸಿದರು.

ಗ್ರಾಮಿಸಿರಿ : ನಾಡಿನ ಜಾನಪದ ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳಸಿಕೊಂಡು ಹೋಗುವ ಉತ್ಕಟ ಬಯಕೆಯಿಂದ ಗ್ರಾಮಸಿರಿ ಎಂಬ ವಿನೂತನ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದರು.

ಸರ್ಕಾರದ ನೆರವು : ವಿನೂತನ ಕಾರ್ಯಕ್ರಮಗಳನ್ನು ಯೋಜಿಸಿ ಅದಕ್ಕೆ ಸರ್ಕಾರದಿಂದ ಹಣ ತರುವಲ್ಲಿ ಸಾಕಷ್ಟು ಯಶಸ್ವಿ ಆದರು. ನಲ್ಲೂರು ಪ್ರಸಾದ್ ೨೦೦೮-೦೯ರಲ್ಲಿ ನಾಲ್ಕುವಿಭಾಗಗಳಿಗೆ ೩ ಲಕ್ಷರೂ, ೭೫ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ೧ ಕೋಟಿ ರೂ, ೨೦೦೯-೧೦ರಲ್ಲಿ ಸಂಶೋಧನಾ ಕೇಂದ್ರ ಯೋಜನೆಗೆ ೧ ಕೋಟಿ, ಕನ್ನಡ - ಕನ್ನಡ ನಿಘಂಟು ಪ್ರಕಟನೆ ೧ ಕೋಟಿ, ಜಿಲ್ಲಾ ಕನ್ನಡ ಸಾಹಿತ್ಯಸಮ್ಮೇಳನಕ್ಕೆ ೧ ಕೋಟಿ ೪೮ ಲಕ್ಷ.... ಹೀಗೆ ಮೂರುವರೆ ವರುಷಗಳಲ್ಲಿ ಬೇಕಾದ ಹಿಂದಿನ ಅಧ್ಯಕ್ಷರ ಕಾಲದಲ್ಲಿ ಬರದಿದ್ದಷ್ಟು ಹಣವನ್ನು ಸರ್ಕಾರದಿಂದ ಪಡೆದಿದ್ದು ಸಾಹಸವೇ ಸರಿ.

ಪರಿಷತ್ತಿನ ಜಿಲ್ಲಾಘಟಕಗಳಿಗೆ ಮತ್ತು ಗಡಿನಾಡ ಘಟಕಗಳ ಕಾರ್ಯಕ್ರಮಗಳಿಗಾಗಿ ವಿಶೇಷ ಅನುದಾನ ಸರ್ಕಾರದಿಂದ ಪರಿಷತ್ತಿಗೆ ಇವರ ಅವಧಿಯಲ್ಲಿ ದೊರಕಿದೆ.

ಸದಸ್ಯತ್ವ : ಪರಿಷತ್ತು ಜನಪ್ರತಿನಿಧಿ ಆಗಬೇಕು ಎಂದರೆ ಸಾಕಷ್ಟು ಜನರು ಸದಸ್ಯರು ಸಂಸ್ಥೆಗೆ ಇರಬೇಕು. ಒಂದು ಕೈಹಿಡಿ ಅಷ್ಟು ಸದಸ್ಯರನ್ನು ಒಳಗೊಂಡ ಸಂಸ್ಥೆ ಪ್ರಾತಿನಿಧಿಕ ಸಂಸ್ಥೆ ಎನಿಸಿಕೊಳ್ಳಲಾರದು. ಇದನ್ನು ಅರಿತಿದ್ದ ನಲ್ಲೂರರು ಪರಿಷತ್ತಿನ ಸದಸ್ಯರ ಸಂಖ್ಯೆ ಹೆಚ್ಚಿಸಲು ನಿರ್ಧರಿಸಿದರು. ಇದರ ಫಲವಾಗಿ ೬೨೦೦೦ ಆಜೀವ ಸದಸ್ಯರ ಸಂಖ್ಯೆ ೧,೩೦,೦೦೦ಕ್ಕೆ ಏರಿತು. ೭೦೦೦೦ ಜನರು ಹೊಸದಾಗಿ ಸದಸ್ಯರಾದರು. ಆಜೀವ ಸದಸ್ಯತ್ವ ನಿಧಿ ೧,೯೧,೫೭,೧೨೧/- ರೂ. ಇದ್ದದ್ದು ೩,೦೮,೫೩,೪೩೩/- ರೂ. ಆದದ್ದು ಇವರ ಹೆಗ್ಗಳಿಕೆಯೇ ಸರಿ.

ಪುಸ್ತಕ ಪ್ರಕಟನೆ : ಶಿಕ್ಷಕರಾದ ಅಧ್ಯಕ್ಷರು ಪುಸ್ತಕ ಪ್ರಕಟನೆಗೆ ವಿಶೇಷ ಗಮನವೀಯುವುದು ಸಹಜ. ಮತ್ತು ಪರಿಷತ್ತು ಪ್ರಾರಂಭದಿಂದಲೂ ಗ್ರಂಥ ಪ್ರಕಟನೆಗೆ ವಿಶೇಷ ಗಮನ ಕೊಟ್ಟಿದೆ. ಇದರಿಂದ ೧೫೦೦ಕ್ಕೂ ಹೆಚ್ಚು ಗ್ರಂಥಗಳು ಪರಿಷತ್ತಿನಿಂದ ಪ್ರಕಟವಾಗಲು ಸಾಧ್ಯವಾಗಿದೆ. ನಲ್ಲೂರರ ಅವಧಿಯಲ್ಲಿ ೧೦೩ ಕೃತಿಗಳು ಮರುಮುದ್ರಣಗೊಂಡು ೧೨೦ ಹೊಸ ಕೃತಿಗಳು ಪ್ರಕಟವಾಗಿವೆ. ಪುಸ್ತಕ ಪ್ರಕಟನಿಧಿ ೫೬,೭೫,೦೦೦/- ರೂ ಇದ್ದದ್ದು ೧,೪೯,೧೫,೨೦೦/-ಕ್ಕೆ ಏರಿಸಿದ್ದಾರೆ. ಪರಿಷತ್ತಿನ ನಿಘಂಟುಗಳನ್ನು ಮರುಮುದ್ರಣ ಮಾಡಿಸಿದರು. ಆದರೆ ಅವುಗಳ ಪರಿಷ್ಕರಣಕ್ಕೆ ಯತ್ನಿಸಲಿಲ್ಲ. ಆ ಕಾರ್ಯವನ್ನು ಪ್ರಾರಂಭಿಸಬೇಕಿತ್ತು. ಇವರು ದ್ರಾವಿಡ ಭಾಷಾ ಜ್ಞಾತಿಪದಕೋಶದ ತಯಾರಿಕೆಗೆ ಯತ್ನಿಸಿದ್ದು ಶ್ಲಾಘನೀಯವಾದ ಕಾರ್ಯ.

ಸಮ್ಮೇಳನಗಳು : ೭೫ನೇ ಸಮ್ಮೇಳನ ಚಿತ್ರದುರ್ಗದಲ್ಲಿ ಎಲ್. ಬಸವರಾಜು ಅವರ ಅಧ್ಯಕ್ಷತೆಯಲ್ಲಿ, ೭೬ನೇ ಸಮ್ಮೇಳನ ಗದಗದಲ್ಲಿ ಗೀತಾನಾಗಭೂಷಣ ಅವರ ಅಧ್ಯಕ್ಷತೆಯಲ್ಲಿ, ೭೭ನೇ ಸಮ್ಮೇಳನ ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ, ೭೮ನೇ ಸಮ್ಮೇಳನ ಗಂಗಾವತಿಯಲ್ಲಿ ಸಿಪಿಕೆ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಹಾಗೂ ಸಾಹಿತ್ಯಸೇವಾ ಹಿನ್ನೆಲೆಯಲ್ಲಿ ಅಧ್ಯಕ್ಷರ ಆಯ್ಕೆಯಾದ್ದರಿಂದ ವಿವಾದಗಳು ಉಂಟಾಗಲಿಲ್ಲ. ಇದರ ಜತೆಗೆ ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳು ಎಂದಿನಂತೆ ನಡೆದವು.

ಸಂಶೋಧನೇ ಕಮ್ಮಟಗಳು : ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಸಂಶೋಧನಾ ಕಮ್ಮಟಗಳನ್ನು ನಾಡಿನಾದ್ಯಂತ ನಡೆಸುವ ಕ್ರಿಯಾಯೋಜನೆಯನ್ನು ರೂಪಿಸಿ ಹತ್ತಾರು ಕಮ್ಮಟಗಳನ್ನು ನಡೆಸಲಾಯಿತು. ಈ ಕಮ್ಮಟಗಳಲ್ಲಿ ಮಂಡಿಸಲಾದ ಪ್ರಬುದ್ಧ ಚರ್ಚೆಗಳು ಸಮಗ್ರವಾಗಿ ಗ್ರಂಥರೂಪದಲ್ಲಿ ಹೊರಬಂದಿದ್ದಿದ್ದರೆ ವಿದ್ವಾಂಸರಿಗೆ ಅದರಿಂದ ಉಪಯೋಗವಾಗುತ್ತಿತ್ತು.

ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ನಡೆದ ಪ್ರಾಚ್ಯ ಸಾಹಿತ್ಯ ಸಮಾವೇಶದ ಸಾಹಿತ್ಯ ಸಮಾವೇಶ, ವಚನ ಸಾಹಿತ್ಯ ಸಮಾವೇಶ, ಮಹಿಳಾ ಸಾಹಿತ್ಯ ಸಮಾವೇಶ, ಮಕ್ಕಳ ಸಾಹಿತ್ಯ ಸಮಾವೇಶಗಳು, ವಿಶಿಷ್ಟ ಕಾರ್ಯಕ್ರಮಗಳಾಗಿವೆ.

ಕುವೆಂಪು ಸಭಾಂಗಣ : ಪರಿಷತ್ತು ನಗರದ ಕೇಂದ್ರಸ್ಥಾನದಲ್ಲಿದ್ದು ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಲು ಮೊದಲು ಪರಿಷತ್ತಿನಲ್ಲಿ ಮಾಡಲು ಜನರು ಯತ್ನಿಸುತ್ತಾರೆ. ಸಾಮಾನ್ಯವಾಗಿ ಮಧ್ಯಮವರ್ಗದ ಸಂಸ್ಥೆಗಳು ಪರಿಷತ್ತಿನ ಸಭಾಂಗಣವನ್ನು ಹೆಚ್ಚಾಗಿ ಬಳಸುತ್ತವೆ. ಹೀಗಾಗಿ ಹಳೆಯ ಸಭಾಂಗಣ ಸಾಲದಾಯಿತು. ಅದಕ್ಕಾಗಿ ನಲ್ಲೂರು ಅವರು ಸಣ್ಣ ಪ್ರಮಾಣದ ಪುಸ್ತಕ ಬಿಡುಗಡೆ, ಚಿಂತನ ಕಾರ್ಯಕ್ರಮಗಳಂಥ ಸೀಮಿತ ವರ್ಗದ ಜನ ಬರುವವರಿಗಾಗಿ ವಜ್ರಮಹೋತ್ಸವದ ೩ನೇ ಮಹಡಿಯಲ್ಲಿ ಪುನರೂರರು ರೂಪಿಸಿದ್ದ. ಪಂಪ ಸಭಾಂಗಣದ ಹೆಸರನ್ನು ಬದಲಿಸಿದರು.

ಇಲ್ಲಿ ಹಾಕಿರುವ ಕನ್ನಡ ಸಾಹಿತಿಗಳ ಭಾವಚಿತ್ರಗಳು ನೋಟಕರ ಮನ ಸೆಳೆಯುತ್ತಿದೆ.


ಪರೀಕ್ಷೆಗಳು ಮತ್ತು ತರಗತಿಗಳು : ಸಾಹಿತ್ಯ ಪರಿಷತ್ತಿನ ಧ್ಯೇಯಕ್ಕೆ ಅನುಗುಣವಾಗಿ ಮೊದಲಿನಿಂದಲೂ, ಗಮಕ, ಕಾವ, ಜಾಣ, ರತ್ನ ಮೊದಲಾದ ಪರೀಕ್ಷೆಗಳನ್ನು, ತರಗತಿಗಳನ್ನು ನಡೆಸಿಕೊಂಡು ಬರುತ್ತಿತ್ತು. ಈಗ ಗಮಕ ತರಗತಿಗಳು ಪರೀಕ್ಷೆಗಳು ನಿಂತು ಹೋಗಿವೆ. ನಿಲ್ಲಬಾರದಿತ್ತು. ಹೊಸದಾಗಿ ಶಾಸನ ಡಿಪ್ಲೋಮಾ, ಜಾನಪದ, ಕನ್ನಡ ಪ್ರವೇಶ ಕಾವ ಜಾಣ, ರತ್ನ ಪರೀಕ್ಷೆಗಳು ನಡೆಯುತ್ತಿವೆ.

ಈ ಪರೀಕ್ಷೆಗಳಲ್ಲಿ ಕೆಲವು ಸುಧಾರಣೆಗಳನ್ನು ತಂದಿರುವುದು ಗಮನಾರ್ಹವಾಗಿದೆ. ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿದ್ದ ಪರೀಕ್ಷಾ ಕೇಂದ್ರಗಳನ್ನು ರದ್ದುಮಾಡಿ ಜಿಲ್ಲಾ ಕೇಂದ್ರದಲ್ಲಿ ಮಾತ್ರ ಪರೀಕ್ಷಾ ಕೇಂದ್ರ ವ್ಯವಸ್ಥೆಮಾಡಿದ್ದರಿಂದಲೂ, ಅಭ್ಯರ್ಥಿಯ ಭಾವಚಿತ್ರವನ್ನು ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳಲ್ಲಿ ಲಗತ್ತಿಸುವುದನ್ನು ಕಡ್ಡಾಯ ಮಾಡಿದ್ದರಿಂದಲೂ, ಸರ್ಕಾರಿ ಉದ್ಯೋಗಿಗಳು ಮೇಲಧಿಕಾರಿಗಳ ಮೂಲಕ ಪರೀಕ್ಷೆಗಳಿಗೆ ಅರ್ಜಿಸಲ್ಲಿಸುವ ಕ್ರಮವನ್ನು ಜಾರಿಗೆ ತಂದಿದ್ದರಿಂದಲೂ, ಪರೀಕ್ಷೆ ಪದ್ಧತಿಯಲ್ಲಿದ್ದ ಸಾಕಷ್ಟು ಲೋಪಗಳನ್ನು ಸರಿಪಡಿಸಲು ಸಾಧ್ಯವಾಗಿದೆ. ಇದು ಒಂದು ಮಟ್ಟದ ಸುಧಾರಣೆ ಎಂದರೆ ತಪ್ಪಲ್ಲ.

ಶ್ರೀವಿಜಯ ಪ್ರಶಸ್ತಿ ಸ್ಥಾಪನೆ : ಪರಿಷತ್ತು ಇತರರು ಇಟ್ಟ ದತ್ತಿನಿಧಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ತಾನೇ ಇಟ್ಟ ದತ್ತಿನಿಧಿ ಯಾವುದೂ ಇಲ್ಲ ಎಂಬುದನ್ನು ಗಮನಿಸಿ ೪೦ ವರ್ಷದ ಒಳಗಿನ ಯುವಕರಿಗಾಗಿ ೨೦ ಲಕ್ಷ ರೂ ಮೊತ್ತದ ಶ್ರೀ ವಿಜಯ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಇದರ ಬಡ್ಡಿಯಿಂದ ೧೧,೧೧೧/-ರೂ ಮೊತ್ತದ ಪ್ರಶಸ್ತಿ ಕೊಡಲು ಪ್ರಾರಂಭಿಸಿದ್ದು ಮೊದಲ ಬಾರಿಗೆ ಈ ಪ್ರಶಸ್ತಿ ವಿಕ್ರಮ ಎಸ್. ಜಿ. ಅವರಿಗೆ ದೊರೆತಿದೆ. ಈ ರೀತಿ ಕೆಲವು ನೂತನ ಯೋಜನೆಗಳ ಮೂಲಕ ಪರಿಷತ್ತನ್ನು ಪ್ರಗತಿಹಾದಿಯಲ್ಲಿ ಕೊಂಡೊಯ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು – ೨೪

ಪುಂಡಲೀಕ ಹಾಲಂಬಿ (೨೦೧೨-೨೦೧೫)



ಜೀವನ :

ಪ್ರಬುದ್ಧ ಸಂಘಟಕರು, ಹೋರಾಟಗಾರರು, ವಾಗ್ಮಿಗಳು ಕ್ರಿಯಾಶಾಲಿಗಳು ಆದ ಪುಂಡಲೀಕ ಹಾಲಂಬಿ ಅವರು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಾಲಾಡಿ ಗ್ರಾಮದಲ್ಲಿ ಚಂದ್ರಶೇಖರ ಹಾಲಂಬಿ ವಾಸಂತಿ ದಂಪತಿಗಳ ಸುಪುತ್ರರಾಗಿ ೨೧-೧-೧೯೫೧ರಲ್ಲಿ ಜನಿಸಿದರು. ಹಾಸನಜಿಲ್ಲೆಯ ಅರಕಲಗೂಡಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಮೇಲೆ ಕುಂದಾಪುರದಲ್ಲಿ ಓದನ್ನು ಮುಂದುವರೆಸಿ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿ ಕಾಲೇಜು ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಬಂದು ಎ.ಪಿ.ಎಸ್. ಸಂಸ್ಥೆಯೊಂದಿಗೆ ಸೇವೆ ಎಂಬಂತೆ, ಹೋಟೆಲ್ ಕಾರ್ಯಕರ್ತರಾಗಿ ಕಾರ್ಯ ನಿರ್ವಹಿಸುತ್ತಾ.

ಕಾಲೇಜು ವಿದ್ಯಾಭ್ಯಾಸವನ್ನು ಮುಂದುವರಿಸಿದರು. ೧೯೭೩ರಲ್ಲಿ ಬಿ.ಎ. ಪದವಿಯನ್ನು ಗಳಿಸಿದ ೧೯೭೫ರಲ್ಲಿ ಎಂ.ಎ. ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪಡೆದರು. ಅನಂತರ ಸ್ವಲ್ಪಕಾಲ ಬೆಂಗಳೂರು ಕ್ರೈಸ್ತ ಕಾಲೇಜಿನಲ್ಲಿ ಅಧ್ಯಾಪಕರಾಗಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಸಹಾಯಕರಾಗಿ ೫ ವರ್ಷಗಳ ಕಾಲ ಸೇವೆ ಸಲ್ಲಿಸಿದ ಮೇಲೆ, ೧೯೮೦ರಲ್ಲಿ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗಕ್ಕೆ ಪ್ರಕಟಣಾ ಸಹಾಯಕರಾಗಿ ನೇಮಕಗೊಂಡರು. ಕ್ರಮೇಣ ಸಹಾಯಕ ನಿರ್ದೇಶಕ, ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸಿ ೩೬.೫ ವರ್ಷಗಳ ಸೇವೆಯ ನಂತರ ೨೦೧೧ರಲ್ಲಿ ನಿವೃತ್ತರಾದರು.

ವಿದ್ಯಾರ್ಥಿ ಜೀವನ ಕಾಲದಲ್ಲಿ ಅಖಿಲ ಕರ್ನಾಟಕ ಕನ್ನಡ ಮಾಧ್ಯಮ ಸಮ್ಮೇಳನದ ಅಧ್ಯಕ್ಷರಾಗಿ, ಜ್ಞಾನಭಾರತಿಯ ಕರ್ನಾಟಕ ಸಾಹಿತ್ಯ ಸಂಘ, ನೌಕರರ ಸಂಘ, ಇವುಗಳ ಅಧ್ಯಕ್ಷರಾಗಿ ಕ್ರಿಯಾಶಾಲಿತನದಿಂದ ವಿದ್ಯಾರ್ಥಿ ಚಟುವಟಿಕೆಗಳನ್ನು ನಡೆಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಕನ್ನಡ ಸಾಹಿತ್ಯ, ಹೋಟಲ್ ಉದ್ಯಮದಾರರ ಸಹಕಾರ ಬ್ಯಾಂಕ್, ಬೆಂಗಳೂರು ವಿಶ್ವವಿದ್ಯಾನಿಲಯದ ನೌಕರರ ಗೃಹ ನಿರ್ಮಾಣ ಸಂಘ ಇವುಗಳ ಅಧ್ಯಕ್ಷರಾಗಿ ದಕ್ಷಿಣ ಕನ್ನಡದ ಕನ್ನಡಿಗರ ವೇದಿಕೆ ಮುಂತಾದ ಸಂಘಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ, ದಕ್ಷಿಣ ಕನ್ನಡ ಸನಾತನ ಧರ್ಮ ಸಂಸ್ಥೆಯ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಿದ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ ೧೯೯೭–೯೮ ರಲ್ಲಿ ಮತ್ತು ೨೦೦೧–೨೦೦೪ರಲ್ಲಿ ಸೇವೆ ಸಲ್ಲಿಸಿದ್ದರು. ೨೦೦೪ ರಿಂದ ೨೦೧೨ರವರೆಗೆ ಗೌರವ ಕೋಶಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ. ಅನಂತರ ೩–೫–೨೦೧೨ರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ೨೪ನೇ ಅಧ್ಯಕ್ಷರಾಗಿ ಶ್ರಮಿಸುತ್ತಿರುವ ಇವರು ಪರಿಷತ್ತಿಗೆ ಮಾಸ್ತಿ ಅವರಂತೆ ಯಾವ ಬಗೆಯ ಗೌರವ ಸಂಭಾವನೆಯನ್ನೂ ಪಡೆಯದೆ ಸೇವೆ ಸಲ್ಲಿಸಿದ್ದಾರೆ. ತಮಗೆ ಬಂದ ಗೌರವ ಸನ್ಮಾನದ ವಸ್ತುಗಳನ್ನೆಲ್ಲ ಪರಿಷತ್ತಿಗೆ ನೀಡಿದ್ದಾರೆ. ಅಷ್ಟೇ ಅಲ್ಲದೆ ಪರಿಷತ್ತಿನಿಂದ ಕಾರ್ಯಕ್ರಮಗಳ ನಿಮಿತ್ತ ಅಥವಾ ಪರಿಷತ್ತಿನ ಕಾರ್ಯ ನಿಮಿತ್ತಾ ಜಿಲ್ಲೆಗಳಿಗೆ ಭೇಟಿ ಕೊಟ್ಟಾಗ, ತಮ್ಮ ಊಟ ವಸತಿ ವೆಚ್ಚಗಳನ್ನು ತಾವೇ ಭರಿಸಿದ್ದಾರೆ. ಈ ರೀತಿಯ ತ್ಯಾಗ–ಉದಾರ ಭಾವದಿಂದ ಪರಿಷತ್ತಿನ ಅಧ್ಯಕ್ಷರಾಗಿ ಅವರು ಸಲ್ಲಿಸಿರುವ ಸೇವೆ ಆದರ್ಶಪ್ರಾಯವಾಗಿದೆ. ಇವರ ಕಾರ್ಯ ವಿಧಾನ ಹಿಂದಿನ ಹಿರಿಯ ಅಧ್ಯಕ್ಷರ ನೆನಪನ್ನು ತರುತ್ತದೆ. ಕೆಂಪೇಗೌಡ ಪ್ರಶಸ್ತಿಗೆ ಭಾಜನರಾದ ಇವರು ಅಚ್ಚುಕಟ್ಟಿನ ಶಿಸ್ತಿನ ಜೀವನಕ್ಕೆ ಹೆಸರಾಗಿದ್ದಾರೆ.

ಸಾಧನೆ :

ಕನ್ನಡದ ಹೋರಾಟಗಾರ, ಉತ್ತಮ ಸಂಘಟಕಕಾರರಾದ ಪುಂಡಲೀಕ ಹಾಲಂಬಿ ಅವರು ಪರಿಷತ್ತಿನ ಶತಮಾನೋತ್ಸವ ಸಂದರ್ಭದಲ್ಲಿ ಅಧ್ಯಕ್ಷರಾಗುವ ಯೋಗವನ್ನು ಪಡೆದವರು. ಒಂದು ಸಂಸ್ಥೆಯ ಇತಿಹಾಸದಲ್ಲಿ ರಜತವರ್ಷ, ಸ್ವರ್ಣವರ್ಷ, ವಜ್ರವರ್ಷ, ಅಮೃತವರ್ಷ, ಶತಮಾನ ವರ್ಷ ಐತಿಹಾಸಿಕ ಕಾಲಘಟ್ಟದ ಅಮೂಲ್ಯ ವರ್ಷಗಳಾಗಿರುತ್ತವೆ. ಹಿಂದಿನ ಅಧ್ಯಕ್ಷರುಗಳಾದ ಬಿ.ಎಂ. ಶ್ರೀ ಅವರಿಗೆ ಪರಿಷತ್ತಿನ ರಜತೋತ್ಸವ ಆಚರಿಸುವ ಭಾಗ್ಯ ಜಿ. ನಾರಾಯಣ ಅವರಿಗೆ ಸ್ವರ್ಣ ಮಹೋತ್ಸವ ಆಚರಣೆ ಭಾಗ್ಯ, ಹಂಪನಾ ಅವರಿಗೆ ವಜ್ರಮಹೋತ್ಸವ ಆಚರಿಸುವ ಅದೃಷ್ಟ, ಗೋರುಚ ಅವರಿಗೆ ಅಮೃತ ಮಹೋತ್ಸವ ಆಚರಿಸುವ ಪುಣ್ಯ ಒದಗಿದೆ. ಈ ವರ್ಷಗಳು ವಿಶಿಷ್ಟ ಕಾರ್ಯಕ್ರಮಗಳನ್ನು ಆಚರಿಸುವ ಮತ್ತು ಶಾಶ್ವತ ಯೋಜನೆಗಳನ್ನು ಪ್ರಾರಂಭಿಸುವ ಕಾಲವಾಗಿರುತ್ತವೆ. ಹಾಗೆಯೇ ಪುಂಡಲೀಕ ಹಾಲಂಬಿ ಅವರಿಗೆ ಪರಿಷತ್ತಿನ ಶತಮಾನೋತ್ಸವ ಆಚರಿಸುವ ಭಾಗ್ಯ ಅವರ ಅಧಿಕಾರಾವಧಿಯಲ್ಲಿ ಒದಗಿಬಂದಿದೆ.

ಸಮ್ಮೇಳನಗಳು : ಹಿಂದಿನಿಂದ ಬಂದ ದತ್ತಿನಿಧಿ ಕಾರ್ಯಕ್ರಮಗಳನ್ನು ತರಗತಿಗಳು ಮತ್ತು ಪರೀಕ್ಷೆಗಳನ್ನು ನಡೆಸಿಕೊಂಡು ಬರುವುದರ ಜತೆಗೆ, ಎಂದಿನಂತೆಯೇ ತಮ್ಮ ಅವಧಿಯಲ್ಲಿ ಇವರು ೩ ಸಮ್ಮೇಳನಗಳನ್ನು ಯಶಸ್ವಿಯಾಗಿ ಜರುಗಿಸಿದ್ದಾರೆ. ೨೦೧೩ರಲ್ಲಿ ವಿಜಾಪುರದಲ್ಲಿ ಕೋ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ೭೯ ನೇ ಸಾಹಿತ್ಯ ಸಮ್ಮೇಳನವನ್ನು, ೨೦೧೪ರಲ್ಲಿ

ಮಡಿಕೇರಿಯಲ್ಲಿ ನಾ. ಡಿಸೋಜ ಅವರ ಅಧ್ಯಕ್ಷತೆಯಲ್ಲಿ ೮೦ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು, ಶ್ರವಣಬೆಳಗೊಳದಲ್ಲಿ ೨೦೧೫ರಲ್ಲಿ ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ೮೧ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದ್ದಾರೆ. ಅಧ್ಯಕ್ಷರ ಆಯ್ಕೆಯಲ್ಲಿ ಯಾವ ಗೊಂದಲವೂ ಉಂಟಾಗಿದೆ. ಜನಮೆಚ್ಚುಗೆ ಪಡೆದುದು ಅಭಿನಂದನೀಯ ಸಂಗತಿಯಾಗಿದೆ.

ಇವರ ಕಾಲದಲ್ಲಿ ಪ್ರಾದೇಶಿಕನ್ಯಾಯ, ಪ್ರತಿಭಾನ್ಯಾಯ, ಸಾಮಾಜಿಕ ನ್ಯಾಯಗಳ ಸೂತ್ರವನ್ನು ಪಾಲಿಸಿರುವುದು ಗಮನಿಸುವಂಥ ಸಂಗತಿಯಾಗಿದೆ.

ನಿಬಂಧನೆಗಳ ತಿದ್ದುಪಡಿ : ಕಾಲಕಾಲಕ್ಕೆ ಬದಲಾದ ಸಾಮಾಜಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಜನರ ಪ್ರಾತಿನಿಧಿಕ ಸಂಸ್ಥೆಯ ನಿಬಂಧನೆಗಳಲ್ಲಿ ಮಾರ್ಪಾಟುಗಳಾಗಬೇಕಾದುದು ಅನಿವಾರ್ಯ. ೧೯೮೮ರಲ್ಲಿ ರಚಿತವಾಗಿ ಈಗ ಜಾರಿಯಲ್ಲಿರುವ ನಿಬಂಧನೆಗಳಲ್ಲಿ ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಹತ್ತಾರು ತಿದ್ದುಪಡಿಗಳು ಮತ್ತು ಸೇರ್ಪಡೆಗಳಾಗಬೇಕಾಗಿದೆ. ಒಂದು ಕಾಲದಲ್ಲಿ ಸಾಕಷ್ಟು ಸದಸ್ಯರೇ ಇಲ್ಲದೆ ಪರದಾಡುತ್ತಿದ್ದ ಪರಿಷತ್ತು ಇಂದು ತೆರೆದ ಬಾಗಿಲಾಗಿ ೨ ಲಕ್ಷಕ್ಕೂ ಮೀರಿ ಸದಸ್ಯರನ್ನು ಹೊಂದಿದೆ. ಇವರೆಲ್ಲರಿಗೂ ಉಚಿತವಾಗಿ ಕನ್ನಡ ನುಡಿ ಮಾಸಪತ್ರಿಕೆಯನ್ನು ಕೊಡುವುದು ಕಷ್ಟವಾಗಿದೆ. ಆದರೆ ನಿಬಂಧನೆ ಪ್ರಕಾರ ಅದನ್ನು ಉಚಿತವಾಗಿ ಸದಸ್ಯರಿಗೆ ಕೊಡಬೇಕಾಗಿದೆ. ಚಂದಾಬೆಲೆ ನಿರ್ಧರಿಸಲು ನಿಬಂಧನೆಗಳ ತಿದ್ದುಪಡಿ ಮಾಡಬೇಕಾಗಿದೆ. ತಾಲ್ಲೂಕು ಸಮಿತಿಗಳ ಅಧ್ಯಕ್ಷರನ್ನು ಈಗಿನ ನಿಯಮದಂತೆ ಜಿಲ್ಲಾ ಅಧ್ಯಕ್ಷರು ನೇಮಿಸುತ್ತಾರೆ. ಇದಕ್ಕೂ ಚುನಾವಣೆ ಆಗಬೇಕು ಎಂಬ ಕೂಗೆದ್ದಿದೆ. ಹೀಗೆ ಹತ್ತಾರು ವಿಷಯಗಳ ಮಾರ್ಪಾಟಿನ ಹಿನ್ನೆಲೆಯಲ್ಲಿ ನಿಬಂಧನೆಗಳ ತಿದ್ದುಪಡಿಗೆ ಉಪಸಮಿತಿಗಳನ್ನು ರಚಿಸಿದರು. ಅದು ಒಳ್ಳೆಯ ಪ್ರಯತ್ನ ಆದರೂ ಕೆಲಸ ಪ್ರಗತಿಯನ್ನು ಕಂಡಿಲ್ಲ.

ಕನ್ನಡ ಸಂಸ್ಥೆಗಳಿಗೆ ಪ್ರೋತ್ಸಾಹ : ಪರಿಷತ್ತು ಮೊದಲಿನಿಂದಲೂ ಅಂಗಸಂಸ್ಥೆಗಳಿಗೆ ಪ್ರಾಶಸ್ತ್ಯ, ಪ್ರಾತಿನಿಧ್ಯವನ್ನು ನೀಡಿದೆ. ಆದರೆ ನಾಡಿನ ಹೆಚ್ಚಿನ ಸಂಘ ಸಂಸ್ಥೆಗಳು ಸಕ್ರಿಯವಾಗಿ ಸ್ಪಂದಿಸಿಲ್ಲ. ಹಾಗೆ ನೋಡಿದರೆ ಜಿ. ನಾರಾಯಣರ ಕಾಲದಲ್ಲಿ ಸ್ವಲ್ಪಮಟ್ಟಿಗೆ ಸಂಘ ಸಂಸ್ಥೆಗಳಿಗೆ ಮಾನ್ಯತೆ ಸಿಕ್ಕಿತು ಎನ್ನಬಹುದು. ಹಾಲಂಬಿ ಅವರು ಸಂಘ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಹಾಗಾಗಿ ಅವರು ಪರಿಷತ್ತಿನ ಕುವೆಂಪು ಸಭಾಂಗಣವನ್ನು ಕನ್ನಡ ಸಂಘ- ಸಂಸ್ಥೆಗಳು, ಸಂಘಟನೆಗಳು ಏರ್ಪಡಿಸುವ ಕನ್ನಡ ಚಿಂತನ ಕಾರ್ಯಕ್ರಮಗಳಿಗೆ ಕನ್ನಡ ಪುಸ್ತಕಗಳ ಬಿಡುಗಡೆ ಸಮಾರಂಭಗಳಿಗೆ ಉಚಿತವಾಗಿ ನೀಡುವ ಅವಕಾಶವನ್ನು ಕಲ್ಪಿಸಿದ್ದಾರೆ. (ಕುವೆಂಪು ಸಭಾಂಗಣವನ್ನು ಈಗ ಕಾರ್ಯಕ್ರಮಗಳಿಗಾಗಿ ಬಾಡಿಗೆಗೆ ಕೊಡಲಾಗುತ್ತಿದೆ)

ಪುಸ್ತಕ ಭಂಡಾರ : ಪುಸ್ತಕಭಂಡಾರ ಸಾಹಿತ್ಯ ಪರಿಷತ್ತಿನ ಪ್ರತಿಷ್ಠೆಗಳಲ್ಲಿ ಒಂದು. ಅಪರೂಪವಾದ ಗ್ರಂಥಗಳಿರುವ ತಾಣ. ೧೦೮೭ ಸದಸ್ಯರು ಪುಸ್ತಕ ಭಂಡಾರಕ್ಕೆ ಓದುಗರಾಗಿದ್ದಾರೆ. ೨೦೧೩-೧೪ರ ಅಂತ್ಯದ ವೇಳೆಗೆ ೮೧೯೭೬ ಪುಸ್ತಕಗಳಿದ್ದವು. ೨೦೧೪-೧೫ರಲ್ಲಿ ೩೬೪೧ ಪುಸ್ತಕಗಳು ಬಂದಿವೆ. (ಇವೆಲ್ಲಾ ಉಚಿತವಾಗಿ ನುಡಿ ವಿಮರ್ಶೆಗೆ, ವಿನಿಮಯಕ್ಕೆ, ದಾನವಾಗಿ ಬಂದಿವೆ) ಪರಿಷತ್ತು ಕೊಂಡಿದ್ದು ಒಂದೂ ಇಲ್ಲ. ಅಂದಾಜು ಆಯವ್ಯಯಪಟ್ಟಿಯಲ್ಲಿ ಪುಸ್ತಕ ಖರೀದಿಯ ಪ್ರಸ್ತಾಪವೇ ಇಲ್ಲ. ಒಟ್ಟು ೨೦೧೫ರಲ್ಲಿ ಪುಸ್ತಕ ಭಂಡಾರದಲ್ಲಿರುವ ಪುಸ್ತಕಗಳು ೮೫,೬೨೦ ಪುಸ್ತಕಗಳು. ಹಾಲಂಬಿ ಅವರ ಕಾಲದಲ್ಲೂ ಹಿಂದಿನ ಅಧ್ಯಕ್ಷರ ಪರಿಸ್ಥಿತಿಯೇ ಮುಂದುವರೆದು ಒಂದೂ ಪುಸ್ತಕವನ್ನು ಖರೀದಿಸಿಲ್ಲ. ಆದರೆ ಪುಸ್ತಕ ಕೊಳ್ಳಲು ಇರುವ ದತ್ತಿನಿಧಿ ಎರಡರ ಅತ್ಯಲ್ಪ ಬಡ್ಡಿಯಿಂದ ಒಂದು ಪುಸ್ತಕ ಸೇರಿಸಿದೆ. ಆದರೆ ಇವರ ಕಾಲದಲ್ಲಿ ಒಂದು ಸುಧಾರಣೆ ಎಂದರೆ, ಸಂಶೋಧನ ವಿಭಾಗ ಇದ್ದ ಮಹಡಿಯ ಜಾಗದಲ್ಲಿ ಓದುಗರು ಮನೆಗೆ ಪುಸ್ತಕ ಕೊಂಡೊಯ್ಯುವ ಪುಸ್ತಕ ಭಂಡಾರದ ವಿಭಾಗವನ್ನು ತೆರೆದು ಆಕರಗ್ರಂಥಗಳ ವಿಭಾಗವನ್ನು ಪ್ರತ್ಯೇಕಗೊಳಿಸಿದುದು. ಇದರಿಂದ ಅಮೂಲ್ಯ ಗ್ರಂಥಗಳು ಉಳಿಯುವಂತಾಗಿದೆ. ಸ್ವರ್ಣ ಮಹೋತ್ಸವ ಕಟ್ಟಡದಲ್ಲಿ ೨, ೩ನೇ ಮಹಡಿಗಳಲ್ಲಿರುವ ಪುಸ್ತಕ ಭಂಡಾರಗಳಿಗೆ ಹೋಗಿಬರಲು ಹಿರಿಯ ನಾಗರಿಕ ಅನುಕೂಲಕ್ಕಾಗಿ ಲಿಫ್ಟ್‌ವ್ಯವಸ್ಥೆ ಇವರ ಕಾಲದಲ್ಲಾಯಿತು. ಬೃಹತ್ ನಗರ ಪಾಲಿಕೆಯ ಮೇಯರ್ ಅವರು ಕೊಡುಗೆಯಾಗಿ ಇದನ್ನು ನೀಡಿದ್ದಾರೆ.

ಶತಮಾನೋತ್ಸವ ಸಂಭ್ರಮದ ಕಾರ್ಯಕ್ರಮಗಳು

ಶತಮಾನೋತ್ಸವದ ವರ್ಷವೆಂದು ಪರಿಷತ್ತು ಸ್ಥಾಪನೆಯಾದ ೫ನೇ ಮೇ ೧೯೧೫ರಿಂದ ಒಂದು ವರ್ಷಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡದ್ದರ ಅಂಗವಾಗಿ ಹಲವಾರು ವಿಶೇಷ ಸಮಾವೇಶಗಳನ್ನು ನಡೆಸಿದ್ದಾರೆ. ಹೊರನಾಡ ಕನ್ನಡಿಗರ ಸಮಾವೇಶ, ಗಡಿಸಮಾವೇಶ, ಮಹಿಳಾ ಸಮಾವೇಶ, ಮಕ್ಕಳ ಸಮಾವೇಶ, ಮಾಧ್ಯಮ ಸಮಾವೇಶ, ವಚನ ಸಾಹಿತ್ಯ ಸಮಾವೇಶ, ದಾಸಸಾಹಿತ್ಯ ಸಮಾವೇಶ, ಬಂಡಾಯ ಸಾಹಿತ್ಯ ಸಮಾವೇಶ ಇತ್ಯಾದಿ ಸಮಾವೇಶಗಳನ್ನು ನಾಡಿನ ನಾನಾ ಭಾಗಗಳಲ್ಲಿ ನಡೆಸಲಾಯಿತು.

ಪ್ರಕಟನೆಗಳು : ಪ್ರಕಟನೆಗಳು ಪರಿಷತ್ತಿನ ಅವಿಭಾಜ್ಯಾಂಗ. ಏಕೆಂದರೆ, ಗ್ರಂಥಕರ್ತರ ಏಳಿಗೆಗೆ, ಹಾಗೂ ಗ್ರಂಥಗಳ ಪ್ರಕಟನೆಗಾಗಿಯೇ ಪರಿಷತ್ತು ಜನಿಸಿತು. ಹೀಗಾಗಿ ಪ್ರಾರಂಭದಿಂದಲೂ ಇಂದಿನವರೆಗೂ ಪ್ರತಿ ಅಧ್ಯಕ್ಷರ ಕಾಲದಲ್ಲೂ ತಪ್ಪದೆ ನಡೆದು ಬಂದಿರುವ ಕಾರ್ಯ ಇದೊಂದೇ ಎನ್ನಬಹುದು. ಒಬ್ಬೊಬ್ಬ ಅಧ್ಯಕ್ಷರ ಕಾಲದಲ್ಲೂ ಕೆಲವು ವಿಶೇಷ ಪ್ರಕಟನೆಗಳು ಹೊರಬಿದ್ದಿದೆ. ಹಾಲಂಬಿ ಅವರ ಕಾಲದಲ್ಲೂ ಕೆಲವು ವಿಶೇಷ ಪ್ರಕಟನೆಗಳು ಹೊರಬಿದ್ದಿವೆ.

ಕನ್ನಡ ಸಾಹಿತ್ಯ ಪರಿಷತ್ತು – ೧೦೦ ಎಂಬ ಗ್ರಂಥ ಪರಿಷತ್ತು ೧೦೦ ವರ್ಷಗಳಲ್ಲಿ ಬೆಳೆದು ಬಂದ ಬಗೆಯನ್ನು ವಿವರಿಸುವ ಪರಿಷತ್ತಿನ ಇತಿಹಾಸ ಗ್ರಂಥ ಇದನ್ನು ಬರೆಸಿ ಈ ವರ್ಷ ಪ್ರಕಟಿಸಲಾಗಿದೆ.

೧೦೦ ಗ್ರಂಥಗಳ ಪುನರ್ಮುದ್ರಣ : ಈ ಹಿಂದೆ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ ಕಾಲದಲ್ಲಿ ೧೦೦ ಕನ್ನಡ ಗ್ರಂಥಗಳ ಪ್ರಕಟನೆ ಆಗಿತ್ತು. ಕನ್ನಡದಲ್ಲಿ ಹೀಗೆ ಒಮ್ಮೆಗೆ ೧೦೦ ಗ್ರಂಥಗಳನ್ನು ಬಿಡುಗಡೆ ಮಾಡುವ ಯೋಜನೆಗೆ ಅತ್ಯಪರೂಪವಾದುದು. ಪರಿಷತ್ತು ಶತಮಾನೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಈ ರೀತಿ ೧೦೦ ಗ್ರಂಥಗಳನ್ನು ಶತಮಾನೋತ್ಸವದ ನೆನಪಿಗೆ ಪ್ರಕಟಿಸಲು ನಿರ್ಧರಿಸಿ ಆಯ್ಕೆಗೆ ಸಮಿತಿಯೊಂದನ್ನು ರಚಿಸಿದರು. ಆ ಸಮಿತಿ ಆಯ್ದ ಕನ್ನಡದ ಶ್ರೇಷ್ಠ ೧೦೦ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಇದೊಂದು ಸಾಧನೆಯೇ ಆಗಿದೆ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳ ಪ್ರಕಟನೆ :

ಶತಮಾನೋತ್ಸವದ ಅಂಗವಾಗಿ ನಮ್ಮ ನಾಡಿನಲ್ಲಿ ಕಾಲಕಾಲಕ್ಕೆ ಸಾಹಿತ್ಯ ಬೆಳೆದಂತೆ ಹೊಸ ಸಾಹಿತ್ಯ ಚರಿತ್ರೆ ಬರಬೇಕು. ಅಂಥ ಪ್ರಯತ್ನಗಳು ಬೆಂಗಳೂರು, ಮೈಸೂರು, ಹಂಪಿ ವಿಶ್ವವಿದ್ಯಾನಿಲಯಗಳಿಂದ ಪ್ರಾರಂಭಗೊಂಡರೂ ಪೂರ್ಣಗೊಳ್ಳಲಿಲ್ಲ. ಅದರಲ್ಲಿ ಆಧುನಿಕ ಚರಿತ್ರೆಗಳಿಗೆ ಆದ್ಯತೆ ಅವುಗಳಲ್ಲಿ ಸಿಗಲಿಲ್ಲ ಹೀಗಾಗಿ ೧೯ನೇ ಶತಮಾನ ಸೇರಿದಂತೆ ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ರೂಪಿಸಲು ಕಲೆ, ವಿಜ್ಞಾನ, ಮಾನವಿಕ ಬರಹಗಳನ್ನು ಸೇರಿಸಿ ೧೭ ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು. ಆ ೧೭ ಸಂಪುಟಗಳ ರೂಪರೇಷೆ ಹೀಗಿದೆ.

೧. ಮುಂಬೆಳಗು – ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಪೂರ್ವಪೀಠಿಕೆ (ಪ್ರಕಟವಾಗಿದೆ)

(೧೯ನೆಯ ಶತಮಾನದ ಕನ್ನಡ ಸಾಹಿತ್ಯ)

೨. ಆಧುನಿಕ ಕನ್ನಡ ಸಾಹಿತ್ಯದ ತಾತ್ತ್ವಿಕ ನೆಲೆಗಳು – (೨೦ನೆಯ ಶತಮಾನದ ಆರಂಭದಿಂದ ಈವರೆಗೆ)

೩. ಕಾವ್ಯ (ಮಹಾಕಾವ್ಯಗಳೂ ಸೇರಿದಂತೆ)

೪. ಸಣ್ಣಕಥೆ

೫. ಕಾದಂಬರಿ

೬ ನಾಟಕ

೭ ಸಾಹಿತ್ಯ ವಿಮರ್ಶೆ – ಸಾಹಿತ್ಯ ಮೀಮಾಂಸೆ

೮. ಜಾನಪದ – ಡಾ. ವೀರಣ್ಣ ದಂಡೆ (ಪ್ರಕಟವಾಗಿದೆ)

೯. ಮಕ್ಕಳಸಾಹಿತ್ಯ (ಪ್ರಕಟವಾಗಿದೆ)

೧೦. ಅನುವಾದ ಸಾಹಿತ್ಯ (ಪ್ರಕಟವಾಗಿದೆ)

೧೧. ಸಂಶೋಧನೆ – ಸಂ : ನಾಡೋಜ ಪ್ರೊ. ಕಮಲಾ ಹಂಪನಾ (ಪ್ರಕಟವಾಗಿದೆ)

೧೨. ಸಂಕೀರ್ಣ – ೧ [ಭಾಷಾಶಾಸ್ತ್ರ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆಗಳು, ನಿಘಂಟು, ವಿಶ್ವಕೋಶ, ಛಂದಸ್ಸು, ಶಾಸನಗಳು, ಹಸ್ತಪ್ರತಿಶಾಸ್ತ್ರ] (ಪ್ರಕಟವಾಗಿದೆ)

೧೩. ಸಂಕೀರ್ಣ – ೨ [ಲಲಿತ ಪ್ರಬಂಧ, ಹಾಸ್ಯ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ, ಅಂಕಣ ಬರಹ, ವಿಚಾರ ಸಾಹಿತ್ಯ, ಭಾಷಣಗಳು, ಮುನ್ನುಡಿಗಳು, ಅಭಿನಂದನಾ ಗ್ರಂಥಗಳು, ಪತ್ರಿಕೋದ್ಯಮ]

೧೪. ವಿಜ್ಞಾನ – ತಂತ್ರಜ್ಞಾನ : ಸಂ : ಟಿ. ಆರ್. ಅನಂತರಾಮು (ಪ್ರಕಟವಾಗಿದೆ)

೧೫. ಮಾನವಿಕಗಳು

೧೬. ಲಲಿತಕಲೆಗಳು (ಪ್ರಕಟವಾಗಿದೆ)

೧೭. ಸಂಸ್ಕೃತಿ ಅಧ್ಯಯನ

ಅಚ್ಚುಕೂಟದ ಸುಧಾರಣೆ : ವೆಬ್ ಆಫ್‌ಸೆಟ್ ಮುದ್ರಣ ಯಂತ್ರ ಫರ್‌ಫೆಕ್ಟ್ ಬೈಂಡಿಂಗ್ ಯಂತ್ರಗಳನ್ನು ಅಚ್ಚುಕೂಟಕ್ಕೆ ತರಿಸಿರುವುದು ಉತ್ತಮ ಸಾಧನೆ ಆಗಿದೆ. ೨ ಲಕ್ಷಕ್ಕೂ ಮೀರಿ ಪರಿಷತ್ತಿನ ಮುಖವಾಣಿ ಕನ್ನಡ ನುಡಿಯನ್ನು ಶೀಘ್ರವಾಗಿ ಪ್ರಕಟಿಸಲು ಇದರಿಂದ ಸಾಧ್ಯವಾಗಿದೆ.

ಶತಮಾನೋತ್ಸವ ಭವನದ ಶಂಕುಸ್ಥಾಪನೆ

ಪರಿಷತ್ತಿನ ಸ್ವರ್ಣ ಮಹೋತ್ಸವ, ವಜ್ರಮಹೋತ್ಸವ ಕಾಲಕ್ಕೆ ಆಯಾ ಕಾಲದ ಅಧ್ಯಕ್ಷರ ಪ್ರಯತ್ನದಿಂದ ಸರ್ಕಾರದ ಬೆಂಬಲದಿಂದ ಹೊಸ ಕಟ್ಟಡಗಳು ನಿರ್ಮಾಣವಾಗಿವೆ. ಆದರೆ ರಜತ ಮಹೋತ್ಸವ, ಅಮೃತಮಹೋತ್ಸವ ಸಂದರ್ಭಗಳಲ್ಲಿ ಹೊಸ ಕಟ್ಟಡಗಳ ನಿರ್ಮಾಣ ಆಗಿಲ್ಲ. ಆದರೆ ಶತಮಾನೋತ್ಸವದ ಸಂದರ್ಭದಲ್ಲಿ ಸರ್ಕಾರದ ನೆರವಿನಿಂದ ಪರಿಷತ್ತಿನ ಅಚ್ಚುಕೂಟವು ಇದ್ದ ಎಡೆಯಲ್ಲಿ ಶತಮಾನೋತ್ಸವ ಭವನದ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಗಿದೆ.

ವಿಶಿಷ್ಟಕಾರ್ಯಕ್ರಮಗಳು : ಶತಮಾನೋತ್ಸವ ವರ್ಷದಲ್ಲಿ ವಿನೂತನವಾಗಿ ನಡೆಸಿದ ೩ ಕಾರ್ಯಕ್ರಮಗಳನ್ನು ಹಿಂದೆ ಯಾರೂ ಮಾಡಿರಲಿಲ್ಲ. ಅದಾವುದೆಂದರೆ :

೧. ಜ್ಞಾನಪೀಠಪ್ರಶಸ್ತಿ ಪಡೆದ ಸಾಹಿತಿಗಳ ಬದುಕು-ಬರಹವನ್ನು ಕುರಿತ ವಿಚಾರಸಂಕಿರಣ

೨. ರಾಷ್ಟ್ರಕವಿಗಳ ಬದುಕು ಬರಹಗಳ ವಿಚಾರಸಂಕಿರಣ

೩. ನೃಪತುಂಗ ಪ್ರಶಸ್ತಿ ಪಡೆದವರ ಬದುಕು ಬರಹಗಳ ಬಗ್ಗೆ ವಿಚಾರಸಂಕಿರಣ

ಈ ೩ ವಿಚಾರ ಸಂಕಿರಣಗಳನ್ನು ಅರ್ಥಪೂರ್ಣವಾಗಿ ಯಶಸ್ವಿಯಾಗಿ ನಡೆಸಿದ ಹೆಗ್ಗಳಿಕೆ ಪುಂಡಲೀಕ ಹಾಲಂಬಿ ಅವರದಾಗಿದೆ.

ಹೀಗೆ ಶತಮಾನೋತ್ಸವ ಕಾರ್ಯಕ್ರಾಮಗಳನ್ನು ವೈಶಿಷ್ಟಪೂರ್ಣವಾಗಿ ನಡೆಸಿದ ಹೆಗ್ಗಳಿಕೆ ಪುಂಡಲೀಕ ಹಾಲಂಬಿ ಅವರದಾಗಿದೆ.

ಅನುಬಂಧ

ಜಿಲ್ಲಾವಾರು ದತ್ತಿನಿಧಿ ಸೂಚಿ

ಬೆಂಗಳೂರು ನಗರ ಜಿಲ್ಲಾ ದತ್ತಿನಿಧಿಗಳು				
೧.	೦೧ ೧೮-೦೮-೩೫	ಶ್ರೀ ಬಿ.ಎಂ. ಶ್ರೀಕಂಠಯ್ಯ ದತ್ತಿ ತಂದೆ ಡಾ. ಎಸ್.ಜಿ. ಶ್ರೀಕಂಠಯ್ಯನಂ.೬೪, ೧ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ ಮೈಸೂರು-೧೨	ರೂ.೧,೩೦೭	ಉದ್ದೇಶ : ಗಮಕ ಕಲೆಗೆ ಪ್ರೋತ್ಸಾಹ, ವಾಚನ, ಉಪನ್ಯಾಸ, ಗಮಕ ಶಿಕ್ಷಣ, ಸಾಹಿತ್ಯೋತ್ಸವ ವಿ.ಸೂ. :
೨.	೧೨ ೯-೬-೧೯೯೪	ಶ್ರೀಮತಿ ಸೋಸಲ್ ಗರಳಪುರಿ ವೆಂಕಟಸುಬ್ಬಮ್ಮ ಶಾಸ್ತ್ರಿಗಳ ದತ್ತಿ ಶ್ರೀಮತಿ ಅನಸೂಯ ಶಾಸ್ತ್ರಿ ನಂ. ೭. ಸಿಲಿಕಾನ್ ವ್ಯಾಲಿ ಕೃಷ್ಣರಾವ್ ರಸ್ತೆ, ಬಸವನಗುಡಿ ಬೆಂಗಳೂರು ನಗರ - ೫೬೦೦೦೪	ರೂ.೫,೦೩೧	ಉದ್ದೇಶ : ಮಹಿಳಾ ಸಾಹಿತ್ಯದ ಬಗೆಗೆ ಉಪನ್ಯಾಸ ವಿಸೂ. :
೩.	೧೩ ೯-೬-೯೪	ಶ್ರೀ ತೂಬುಗೆರೆ ನಂಜಪ್ಪನವರ ದತ್ತಿ ಶ್ರೀ ಕೆ. ಪಿ. ಶಿವಪ್ರಕಾಶ್ ನಂ. ೫೮, ೩ನೇ ಮುಖ್ಯರಸ್ತೆ ಚಾಮರಾಜಪೇಟೆ, ಬೆಂಗಳೂರು ನಗರ - ೫೬೦೦೧೮	ರೂ.೬,೨೯೧	ಉದ್ದೇಶ : ವೀರಶೈವ ಸಾಹಿತ್ಯಕ್ಕೆ ಪ್ರೋತ್ಸಾಹ ವಿಸೂ. : ಉಪನ್ಯಾಸ ಅಥವಾ ಬರಹ ರೂಪದಲ್ಲಾಗಲಿ ಇರಬೇಕು
೪.	೧೫ ೯-೬-೯೪	ಡಾ. ಎ. ಆರ್. ಕೃಷ್ಣಶಾಸ್ತ್ರಿಗಳವರ ದತ್ತಿ ನಂ. ೪೦, ಸರ್ವೇಯರ್ ಬೀದಿ ಬಸವನಗುಡಿ, ಬೆಂಗಳೂರು ನಗರ - ೫೬೦೦೦೪	ರೂ.೩,೧೪೯	ಉದ್ದೇಶ : ಹೆಣ್ಣುಮಕ್ಕಳಿಗಾಗಿ ದೇವರನಾಮಸ್ಪರ್ಧೆ ಮಹಾನವಮಿಯಂದು ಸರಸ್ವತಿ ಪೂಜೆ ಏರ್ಪಡಿಸುವುದು. ವಿಸೂ. :
೫.	೩೮ ೪-೨-೮೬	ಶ್ರೀಮತಿ ಕೆ. ಲಲಿತಾಂಬ ಶ್ರೀರಾಮುಲು ದತ್ತಿ ಶ್ರೀಮತಿ ಎಸ್. ಸುಭಾಷಿಣಿ ಪ್ರಶಾಂತಿ ನಿಲಯ ನಂ. ೨೩, ಸರ್ಪಂಟೀಸ್ ರಸ್ತೆ, ಕುಮಾರಪಾರ್ಕ್ ಪಶ್ಚಿಮ ಬೆಂಗಳೂರು ನಗರ - ೫೬೦೦೨೦	ರೂ.೯,೪೦೯	ಉದ್ದೇಶ : ಮಹಿಳೆಯರಿಗಾಗಿ ಪುರಂದರದಾಸರ ದೇವರನಾಮ ಸ್ಪರ್ಧೆ ವಿಸೂ. :
೬.	೪೩ ೧೮೭೪	ಶ್ರೀ ಕೆ. ಸೀತಾರಾಮರಾವ್ ಅವರ ಬಿ. ಕೃಷ್ಣಪ್ಪ ದತ್ತಿ ಶ್ರೀಮತಿ ಬಿ. ಕೆ. ಸರೋಜಮ್ಮ ನಂ. ೪೫, ೧೦ನೆಯ ಮುಖ್ಯರಸ್ತೆ ಎಂ. ಇ. ಎಸ್. ಕಾಲೇಜು ಎದುರು ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು-೫೫	ರೂ.೭,೦೫೬	ಉದ್ದೇಶ : ವಿಸೂ. :
೭.	೪೬ ೧೯೭೬	ಡಾ. ಎಂ. ಶಿವರಾಮ ಅವರ ಕೊರವಂಜಿ ಬಳಗದ ದತ್ತಿ ಶ್ರೀ ಎಂ. ಶಿವಕುಮಾರ್ ಅಪರಂಜಿ ಕಾರ್ಯಾಲಯ ನಂ. ೩೬, ೬ನೆಯ ಮುಖ್ಯರಸ್ತೆ	ರೂ.೮,೪೬೮	ಉದ್ದೇಶ : ಹಾಸ್ಯ ಸಾಹಿತ್ಯದ ಪ್ರಕಟಣೆ ಅಥವಾ ಉಪನ್ಯಾಸ ವಿಸೂ. :

		ಮಲ್ಲೇಶ್ವರಂ, ಬೆಂಗಳೂರು ನಗರ		
೮.	೫೦ ೨೮-೪-೭೭	ಶ್ರೀ ಕೆ. ಸುಬ್ಬರಾಯನ್ ಅವರ ಡಾ. ದ.ರಾ. ಬೇಂದ್ರೆ ದತ್ತಿ ನಂ. ೨೩೮೮, ೭ನೆಯ ಮುಖ್ಯರಸ್ತೆ ೨೨ನೆಯ ಕ್ರಾಸ್, ಬನಶಂಕರಿ ೨ನೆಯ ಹಂತ, ಬೆಂಗಳೂರು ನಗರ - ೫೬೦೦೭೦	ರೂ.೪,೨೩೩	ಉದ್ದೇಶ : ದ. ರಾ. ಬೇಂದ್ರೆ ಅವರ ಕೃತಿಗಳ ಬಗೆಗೆ ಉಪನ್ಯಾಸ ವಿಸೂ. :
೯.	೫೮ ೨೪-೭-೮೦	ಶ್ರೀ ಜನ್ಮಭೂಮಿ ಟ್ರಸ್ಟ್‌ನ ಬಿ. ಎನ್. ಗುಪ್ತ ದತ್ತಿ ಶ್ರೀ ಬಿ. ಎನ್. ಗುಪ್ತ ಬೆಂಗಳೂರು ನಗರ - ೫೬೦೦೦೧	ರೂ.೭,೦೫೬	ಉದ್ದೇಶ : ಪತ್ರಿಕೋದ್ಯಮದ ಬಗ್ಗೆ ಉಪನ್ಯಾಸ ವಿಸೂ. :
೧೦.	೭೨ ೧೯೯೦	ಶ್ರೀ ಎಂ. ಎಸ್. ರಾಮಯ್ಯ ದತ್ತಿ ಶ್ರೀ ಎಂ. ಎಸ್. ರಾಮಯ್ಯ ಸಂಸ್ಥಾಪಕ ಅಧ್ಯಕ್ಷರು ಗೋಕುಲ ಶಿಕ್ಷಣ ಪ್ರತಿಷ್ಠಾನ, ಗೋಕುಲ, ಬೆಂಗಳೂರು ನಗರ - ೫೬೦೦೫೪	ರೂ.೧೪,೧೧೪	ಉದ್ದೇಶ : ವಿಜ್ಞಾನ ಸಾಹಿತ್ಯ ಕುರಿತು ಉಪನ್ಯಾಸ ವಿಸೂ. :
೧೧.	೭೭ ೨೭-೪-೯೨	ಶ್ರೀ ಎಸ್. ಹನುಮಂತಪ್ಪ ದತ್ತಿ ಶ್ರೀಮತಿ ಎಚ್. ಸಾವಿತ್ರಮ್ಮ ನಿ. ಹಿಂದಿ ಪಂಡಿತೆ ನಂ. ೧೦೨೨-೧೦, ೭ನೇ ಮುಖ್ಯರಸ್ತೆ ೭ನೆಯ ಕ್ರಾಸ್, ಶ್ರೀರಾಮಪುರಂ ಬೆಂಗಳೂರು ನಗರ - ೫೬೦೦೪೦	ರೂ.೬,೪೭೪	ಉದ್ದೇಶ : ಜೀವನ ಮೌಲ್ಯ ಕುರಿತು ಉಪನ್ಯಾಸ ವಿಸೂ. :
೧೨.	೮೨ ೨೯.೬.೯೨	ಶ್ರೀ ವಿ. ಸೀತಾರಾಮಯ್ಯ ಮತ್ತು ಕ. ವೆಂ. ರಾಘವಚಾರ್ ದತ್ತಿ ಶ್ರೀ ಎಂ. ಮಲ್ಲಿಕಾರ್ಜುನಯ್ಯ ನಂ.: ೯೭೨, ೨ನೇ ಮುಖ್ಯರಸ್ತೆ ೪ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು ನಗರ - ೫೬೦೦೧೦	ರೂ.೧೪,೧೧೪	ಉದ್ದೇಶ : ಪ್ರಸಕ್ತ ವರ್ಷದ ಕಾವ್ಯ ಮತ್ತು ಸಂಶೋಧನೆ ಕುರಿತು ಚಿಂತನೆ ನಡೆಸುವುದು. ವಿ.ಸೂ : ಅಕ್ಟೋಬರ್ ತಿಂಗಳಲ್ಲಿ ನಡೆಸಬೇಕು.
೧೩.	೮೬ ೨೯-೯-೯೨	ಡಾ. ಲೀಲಾವತಿ ದೇವದಾಸ್ ದತ್ತಿ ಡಾ. ಲೀಲಾವತಿ ದೇವದಾಸ್ ನಂ. ೭೦, ಸೆಕ್ರೇಟರಿಯೇಟ್ ಲೇಔಟ್ ವಿಜಯನಗರ, ಬೆಂಗಳೂರು ನಗರ - ೫೬೦೦೨೧	ರೂ.೧೪,೧೧೪	ಉದ್ದೇಶ : ಆರೋಗ್ಯ ವಿಷಯ ಕುರಿತು ಉಪನ್ಯಾಸ ವಿಸೂ. :
೧೪.	೮೭ ೩೦-೧೧-೯೨	ಅಕ್ಕಂ ಸಾಕಮ್ಮ ನಂಜುಂಡಪ್ಪ ದತ್ತಿ ಶ್ರೀ ಬಸವರಾಜಪ್ಪ, ಅಕ್ಕಂ ಚಾರಿಟಬಲ್ ಟ್ರಸ್ಟ್ ೨೫೪, ಹಳೆತರಗುಪೇಟೆ, ಬೆಂಗಳೂರು ನಗರ	ರೂ.೧೪,೧೧೪	ಉದ್ದೇಶ : ಶರಣರ ವಚನ ಸಾಹಿತ್ಯ ಬಗ್ಗೆ ಉಪನ್ಯಾಸ. ವಿಸೂ. :
೧೫.	೮೯	ಶ್ರೀ ದುರ್ಗಂ ವೀರಪ್ಪ ನಂಜಮ್ಮ ಸ್ಮಾರಕ		ಉದ್ದೇಶ : ವೀರಶೈವ ಧರ್ಮ ಸಾಹಿತ್ಯ

	೨೧.೧೨.೯೨	ದತ್ತಿ ಶ್ರೀ ಡಿ. ಚಂದ್ರಶೇಖರಯ್ಯ ಅಪ್ಪೂರಾಯಪ್ಪ ಲೇನ್, ನಗರ್ತಪೇಟೆ ಬೆಂಗಳೂರು ನಗರ	ರೂ.೧೪,೧೧೪	ಕುರಿತು ಉಪನ್ಯಾಸ. ವಿ.ಸೂ :
೧೬.	೯೨ ೩೦-೧-೯೩	ಮಾತೃ ಶ್ರೀ ಸತ್ಯಮ್ಮ ಶ್ರೀನಿವಾಸ ಹತ್ವಾರ್ ದತ್ತಿ ಡಾ. ಕೆ. ನಾಗೇಶ ಹತ್ವಾರ್ ಸುಖಪ್ರದ, ನಂ. ೨೯, ೧ನೇ ಮುಖ್ಯರಸ್ತೆ ಚಾಮರಾಜಪೇಟೆ, ಬೆಂಗಳೂರು ನಗರ – ೫೬೦೦೧೩	ರೂ.೧೪,೧೧೪	ಉದ್ದೇಶ : ದಾಸ ಸಾಹಿತ್ಯಕ್ಕೆ ವಾದಿರಾಜರ ಕೊಡುಗೆ ಅವರ ಜೀವನ ಸಾಧನೆಗಳ ಬಗೆಗೆ ಉಪನ್ಯಾಸ ವಿಸೂ. : ಚೈತ್ರಶುಕ್ಲ ಪಂಚಮಿ ಚೈತ್ರಮಾಸದ ಅಮಾವಾಸ್ಯೆಯಂದು ನಡೆಸುವುದು
೧೭.	೯೪ ೩.೨.೯೩	ಶ್ರೀ ಬಸಪ್ಪ ಕೊಂಡಜ್ಜಿ, ಡಾ. ಎಸ್. ಸಿ. ಪಾಟೀಲ್ ಆರ್ ಎಫ್. ಪಾಟೀಲ್ ದತ್ತಿ ಶ್ರೀ ಚಂದ್ರಶೇಖರ್, ತಂದೆ ಬಿ. ಎಂ. ದೇವಸೂರ್ ನಂ. ೧೦೪೦, ೧೧ನೆಯ ಮುಖ್ಯರಸ್ತೆ ಆರ್. ಪಿ. ಸಿ. ಲೇಔಟ್, ವಿಜಯನಗರ ಬೆಂಗಳೂರು ನಗರ – ೫೬೦೦೪೦	ರೂ.೧೪,೧೧೪	ಉದ್ದೇಶ : ಸರ್ವಜ್ಞನ ವಚನಗಳು-ಜನಪದ ಸಾಹಿತ್ಯ ಕುರಿತಂತೆ ಉಪನ್ಯಾಸ. ವಿ.ಸೂ :
೧೮.	೧೧೫ ೧-೧೦-೯೩	ಶ್ರೀಮತಿ ಶಾಂತವೀರಮ್ಮ ಮರುಳಸಿದ್ಧಯ್ಯ ದತ್ತಿ ಡಾ. ಎಚ್. ಎಂ. ಮರುಳಸಿದ್ಧಯ್ಯ ನಂ. ೬೨, ಈಶಕೃಪ, ಮಂಜುನಾಥ ಕಾಲೋನಿ ಜೆ. ಪಿ. ನಗರ, ಬೆಂಗಳೂರು ನಗರ	ರೂ.೧೪,೧೧೪	ಉದ್ದೇಶ : ಸಮಾಜಕಾರ್ಯ ಅಥವಾ ಮಹಿಳೆ ಮತ್ತು ಮಕ್ಕಳ ಬಗೆಗೆ ಉಪನ್ಯಾಸ. ವಿಸೂ. : ರಾಜ್ಯದಾದ್ಯಂತ ನಡೆಸುವುದು.
೧೯.	೧೪೯ ೨೫.೭.೯೪	ಬೆಂಗಳೂರು ಮಂಡಿ ವರ್ತಕ ದಿ. ನಾರಸಂದ್ರ ಸಿದ್ದಪ್ಪ ದತ್ತಿ ಶ್ರೀಮತಿ ಸರೋಜ ಮತ್ತು ಎಸ್. ಮಹಾದೇವಯ್ಯ ನಂ. ೨೨೫, ನಿಹಾರಿಕೆ ೭ನೇ ಎ. ಮುಖ್ಯರಸ್ತೆ, ಆರ್. ಪಿ. ಸಿ. ಬಡಾವಣೆ, ವಿಜಯನಗರ, ೨ನೇ ಹಂತ, ಬೆಂಗಳೂರು ನಗರ	ರೂ.೧೪,೧೧೪	ಉದ್ದೇಶ : ೧೨ನೆಯ ಶತಮಾನದ ಸಾಹಿತ್ಯ ಕ್ರಾಂತಿ ಅಥವಾ ಕರ್ನಾಟಕದ ಆರ್ಥಿಕ ಬೆಳವಣಿಗೆಗೆ ವೀರಶೈವರ ಕೊಡುಗೆ. ವಿ.ಸೂ :
೨೦.	೧೬೪ ೨೯-೧೦-೯೪	ಶ್ರೀಮತಿ ಲಕ್ಕಮ್ಮ ಕೆ. ವೆಂಕಟಸ್ವಾಮಿ ದತ್ತಿ ಶ್ರೀ ಕೆ. ಸಿ. ರವೀಂದ್ರನಾಥ ಬಾಬು ನಂ. ೨೭೭, ಸ್ವಾತಿ, ೨೦ನೆಯ ಕ್ರಾಸ್ ೧೨ನೇ ಮುಖ್ಯರಸ್ತೆ, ೫ನೇ ಬ್ಲಾಕ್ ಎನ್. ಟಿ. ಬಿ. ಕಾಲೋನಿ ವಿದ್ಯಾರಣ್ಯಪುರಂ, ಬೆಂಗಳೂರು ನಗರ	ರೂ. ೭,೦೫೬	ಉದ್ದೇಶ : ಪರಿಸರ ಜಾನಪದ ಸಾಹಿತ್ಯ ರಾಜಕೀಯ ಪ್ರಜ್ಞೆ ರಂಗಭೂಮಿ ಕುರಿತ ಉಪನ್ಯಾಸ ವಿಸೂ. :
೨೧.	೧೭೨ ೯-೧೧-೯೪	ಶ್ರೀಮತಿ ಸುಶೀಲಮ್ಮ ಶಂಕರನಾರಾಯಣ ದತ್ತಿ	ರೂ.೧೪,೧೧೪	ಉದ್ದೇಶ : ಲಲಿತ ಕಲೆಗಳ ಬಗ್ಗೆ ಸಂಗೀತ ನೃತ್ಯ ನಾಟಕ ಇತ್ಯಾದಿ

		ಶ್ರೀ ಡಿ. ಸಿ. ಶಂಕರನಾರಾಯಣಪ್ಪ ನಂ. ೨೧೯, ಕಬ್ಬನಪೇಟೆ ಮುಖ್ಯರಸ್ತೆ ಬೆಂಗಳೂರು ನಗರ		ಉಪನ್ಯಾಸ ವಿಸೂ. :
೨೨.	೧೭೭ ೯-೩-೯೫	ಶ್ರೀ ಕೆ. ಎಚ್. ತಿಮ್ಮಾರೆಡ್ಡಿ ನಾಗಮ್ಮ ದತ್ತಿ ಡಾ. ಕೆ. ಹಿಮಂತರೆಡ್ಡಿ ನಂ. ೩೧, ಎಡ್ಮೌಂಟ್ ರೋಡ್ ಎಡಿಸನ್ ನ್ಯೂಜರ್ಸಿ, ಅಮೇರಿಕಾ - ೦೮೮೧೭	ರೂ.೨೦,೧೩೪	ಉದ್ದೇಶ : ವಿಜಯನಗರ ಇತಿಹಾಸ ಕುರಿತ ಉಪನ್ಯಾಸ ವಿಸೂ. : ೨೦೧೦-೨೦೧೧ನೇ ಸಾಲಿಗೆ
೨೩.	೧೯೩ ೧೭-೬-೯೫	ಶ್ರೀ ಪದ್ಮಚರಣೆ ದತ್ತಿ ಶ್ರೀ ಎಸ್. ಶಂಕರ್ ಕಾಯದರ್ಶಿ, ಪದ್ಮಚರಣ್ ಸನ್ಮಾನ ಸಮಿತಿ ಲಕ್ಷ್ಮೀ ನಂ. ೭೩, ಶಂಕರವನ ಶಂಕರಪುರಂ, ಬೆಂಗಳೂರು ನಗರ	ರೂ.೧೨,೯೪೯	ಉದ್ದೇಶ : ಕನ್ನಡ ಭಾವಗೀತೆಗಳ ಕುರಿತು ಉಪನ್ಯಾಸ ಹಿರಿಯ ಕಿರಿಯರಿಗೆ ಭಾವಗೀತೆ ಗಾಯನ ಸೃಷ್ಟಿ ಸಂಗೀತ ಸಂಯೋಜಕರಿಂದ ಮಾರ್ಗದರ್ಶನ ಕಮ್ಮಟ ವಿಸೂ. :
೨೪.	೨೧೩ ೧೨-೧೦-೯೫	ದಿ. ಬಿ. ಎಸ್. ಸುನೀಲಕುಮಾರ್ ದತ್ತಿ ಶ್ರೀಮತಿ ಚಂದ್ರಮತಿ ಎಸ್. ಸಿ. ಬಸವರಾಜ ನಂ. ೪೩೩, ವಿಶ್ವಭಾರತಿ, ೧೬ನೆಯ ಎ ಮುಖ್ಯರಸ್ತೆ ೪ನೆಯ ಟಿ. ಬ್ಲಾಕ್, ಜಯನಗರ ಬೆಂಗಳೂರು ನಗರ	ರೂ.೧೧,೯೯೦	ಉದ್ದೇಶ : ವಿಜ್ಞಾನ, ಕಲೆ ಸಾಹಿತ್ಯ ಧರ್ಮಕುರಿತು ಉಪನ್ಯಾಸ ವಿಸೂ. : ಪ್ರತಿವರ್ಷ ಮೇ ೧೭ ರಂದು ಅಥವಾ ಆಗಸ್ಟ್ ೧೬ರಂದು ನಡೆಸುವುದು
೨೫.	೨೧೮ ೯-೧-೯೬	ಮೆಕಾನ್ ಕನ್ನಡ ಸಂಘದ ದತ್ತಿ ಶ್ರೀ ಜಿ. ವಿ. ಅರುಣ ಕೇರಾಫ್ ಮೆಕಾನ್ ಇಂಡಿಯಾ ಲಿ. ನಂ. ೧೪-೩, ನೃಪತುಂಗ ರಸ್ತೆ ಬೆಂಗಳೂರು ನಗರ	ರೂ.೧೧,೯೯೦	ಉದ್ದೇಶ : ಲೋಹಶಾಸ್ತ್ರ ತಂತ್ರಜ್ಞಾನ ವಿಜ್ಞಾನ ಕುರಿತು ಉಪನ್ಯಾಸ ವಿಸೂ. :
೨೬.	೨೨೬ ೧೮-೫-೯೬	ಶ್ರೀ ಪ್ರಜಾ ದತ್ತಿ ಅಧ್ಯಕ್ಷರು ಪ್ರಜಾ ಕೋ ಆಫ್ ಸೊಸೈಟಿ ನಂ. ೨, ೧೫೭೬-೫೦, ೩ನೆಯ ಮುಖ್ಯರಸ್ತೆ, ನಾಗಪ್ಪ ಬ್ಲಾಕ್ ಶ್ರೀರಾಮಪುರಂ, ಬೆಂಗಳೂರು ನಗರ	ರೂ.೧೧,೯೯೧	ಉದ್ದೇಶ : ಆಧುನಿಕ ಕನ್ನಡ ಸಾಹಿತ್ಯ ಕುರಿತು ಉಪನ್ಯಾಸ ವಿಸೂ. :
೨೭.	೨೬೨ ೧೨-೧೦-೯೫	ಶ್ರೀಮತಿ ಶಾರದಮ್ಮ ದತ್ತಿ ಶ್ರೀ ಶಶಿಕುಮಾರ್, ಕೇರಾಫ್ ಮೀನಾ ಸುಬ್ರಹ್ಮಣ್ಯಂ ನಂ. ೪೩೩, ವಿಶ್ವಭಾರತಿ, ೧೬ನೆಯ ಎ. ಮುಖ್ಯರಸ್ತೆ, ೪ನೆಯ ಟಿ ಬ್ಲಾಕ್, ಜಯನಗರ, ಬೆಂಗಳೂರು	ರೂ.೧೨,೮೩೧	ಉದ್ದೇಶ : ಕರ್ನಾಟಕದ ನಾಡು ನುಡಿ ಬಗೆಗೆ ಕರ್ನಾಟಕ ಇಂದು ನಾಳೆ ಬಗೆಗೆ ಉಪನ್ಯಾಸ ವಿಸೂ. :
೨೮.	೨೬೬ ೨೯-೧೦-೯೭	ಶ್ರೀಮತಿ ವೇದಮ್ಮ ರಾಜ ಅಯ್ಯಂಗಾರ ದತ್ತಿ		ಉದ್ದೇಶ : ಜನಪದ ಸಾಹಿತ್ಯ ನಾಟಕ ಪುರಂದರದಾಸರ ಕೃತಿಗಳು

		ಡಾ. ಬಿ. ಆರ್. ಶ್ರೀನಿವಾಸ್ ನಂ. ೪೮-೪೯, ೫ನೆಯ ಮುಖ್ಯರಸ್ತೆ ಮೋದಿ ಆಸ್ಪತ್ರೆ ಹಿಂಭಾಗ, ಅರವಿಂದೋಮಂದಿರದ ರಸ್ತೆ ಕೊನೆ ನಾಗಪುರ, ಬೆಂಗಳೂರು ನಗರ	ರೂ.೧೩,೦೭೯	ಕನ್ನಡದಲ್ಲಿ ಗಣಿತ ಕುರಿತು ಉಪನ್ಯಾಸ. ವಿಸೂ. : (೨೦೧೦-೨೦೧೧ನೇ ಸಾಲಿಗೆ)
೨೯.	೨೭೫ ೫-೯-೯೮	ಡಾ. ಜ. ಚ. ನಿ. ದತ್ತಿ ಶ್ರೀಮತಿ ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳು ನಂ. ೨೨೧, ೬೮ನೆಯ ಅಡ್ಡರಸ್ತೆ (ರಸೀದಿನಂ. ೭೭೬೭/೭೭೬೮ ರೂ೧೦,೦೦೦=೦೦) ೫ನೆಯ ಬ್ಲಾಕ್, ರಾಜಾಜಿನಗರ (ರಸೀದಿ ನಂ.೯೦೦/೧೧.೧೧.೨೦೧೨ ರೂ೧೦,೦೦೦=೦೦ ಬೆಂಗಳೂರು ನಗರ	ರೂ. ೨೨,೬೭೩ ರೂ.೧೦,೦೦೦ ರೂ. ೩೦,೮೦೧	ಉದ್ದೇಶ : ಡಾ. ಜ. ಚ. ನಿ. ಅವರ ಸಾಹಿತ್ಯ ಪ್ರಕಾರದ ಕುರಿತು ವಿಚಾರಸಂಕಿರಣ ಏರ್ಪಡಿಸುವುದು ಡಾ. ಜ. ಚ. ನಿ ಅವರು ಸಿದ್ಧಾಂತ ಶಿಖಾಮಣಿ ಕುರಿತು ಬರೆದ ಕೃತಿ ಬಗ್ಗೆ ಉಪನ್ಯಾಸ ವಿಸೂ. : ಪ್ರತಿವರ್ಷ ನವೆಂಬರ್ ೫ ರಂದು ನಡೆಸುವುದು ಕನಿಷ್ಠ ೨ ವರ್ಷಕ್ಕೊಮ್ಮೆ ಬೆಂಗಳೂರಿನಲ್ಲಿ ನಡೆಸುವುದು.
೩೦.	೩೧೬ ೧೬-೬-೯೯	ಶ್ರೀಮತಿ ಕಮಲಮ್ಮ ಕೆ. ಪಿ. ಪರಮಶಿವಯ್ಯ ದತ್ತಿ ಕೆ. ಪಿ. ಗಂಗಾಧರಯ್ಯ ೧೮೪: ೧೮೫ ಚನ್ನಸೋಮೇಶ್ವರ ಕೃಪ, ೨ನೇ ಮೇನ್ ೨ನೇ ಕ್ರಾಸ್, ಚಾಮರಾಜಪೇಟೆ ಬೆಂಗಳೂರು-೧೮	ರೂ. ೬,೪೭೪	ಉದ್ದೇಶ : ವಚನ ಸಾಹಿತ್ಯ ಕುರಿತು ವಿಸೂ. (೨೦೧೦-೨೦೧೧ನೇ ಸಾಲಿಗೆ)
೩೧.	೩೧೮ ೯.೭.೯೯	ಶ್ರೀ ಟಿ. ವಿ. ವೆಂಕಟರಮಣಯ್ಯ ದತ್ತಿ ಟಿ. ವಿ. ವೆಂಕಟರಮಣಯ್ಯ ಇ. ಡಬ್ಲ್ಯೂ. ಎಸ್. ೨೧೮, ಕೆ. ಹೆಚ್. ಬಿ. ಕಾಲೋನಿ, ೨ನೇ ಹಂತ, ೫ನೇ ಕ್ರಾಸ್, ಬಸವೇಶ್ವರನಗರ, ಬೆಂಗಳೂರು೫೬೦೦೭೯	ರೂ.೧೨,೮೩೧	ಉದ್ದೇಶ : ಜನಪದ ಸಾಹಿತ್ಯ ವಿಶೇಷವಾಗಿ ಗಾದೆಗಳು ಪಡೆನುಡಿ ಮತ್ತು ಹಾಸ್ಯ ಸಾಹಿತ್ಯ ಕುರಿತು ಉಪನ್ಯಾಸ. ವಿ.ಸೂ :
೩೨.	೩೩೧ ೦೭-೧೦-೧೯೯ ೯	ರಾಜಾಜಿನಗರ ಕೋ ಆಪರೇಟಿವ್ ಬ್ಯಾಂಕ್ ಲಿ. ವ್ಯವಸ್ಥಾಪಕರು ರಾಜಾಜಿನಗರ ಕೋ ಆಪರೇಟಿವ್ ಬ್ಯಾಂಕ್ ಲಿ ೭೪೧, ೩ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು - ೫೬೦೦೧೦	ರೂ. ೧೭,೯೮೫	ಉದ್ದೇಶ : ವಿಸೂ. :
